ನಿಮ್ಮ ಇಂಗ್ಲೀಷ್ ಮತ್ತು ಕನಡಾ ಪ್ರಿಂಟಿಂಗ್ ರೂಲ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಇದ್ದ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ದಂತೆ ಅಗ್ರತೆಯಾಗಿಯೂ ಸುಲಭಧಾರಣೆಗೂ ಮಾಡಿ ಕೊಡಲ್ಪ

Saivas Electric Press,

MYSORE.

The Coorg Central Co-operative Bank, Ltd.,

(Registered under the Co-operative Societies Act)

	Rs.
Share Capital	50,000
Paid up Share Capital	6,310
Fixed Deposits paid	31,873

Amounts are lent mainly to Co-operative Societies in Coorg. The accounts are checked annually by The Registrar Co-operative Societies Coorg. Deposits for one year and more carry interest at [illegible] per annum and for smaller periods at [illegible] per annum.

Apply to the Secretary or Treasurer for further details.

President	*Treasurer*	*Secretary*
Kaveri'era C. [illegible] Rao Bahadur	Bhujanga Rao B A, B L,	C. M. Venkappayya B A, B L

Dated 25—3—1923

NOTICE.

Traveling Made Easy!

Cars can be hired at any time to any distance at reasonable rates.

Intending passengers are requested to book their cars in time to avoid disappointment.

For rates and full particulars apply to—

Mercara, 25th March 1923 } **F. P. LOBO,** Manager

Messrs **PAIS & Sons,**

12—11 **MERCARA**

ನೋಟೀಸು

ಸುಲಭಕರದ ಪಯಣ!

ನ್ಯಾಯವಾದ ಭಾಡಿಗೆಗಳ ಮೇಲೆ ಮೋಟಾರು ಬಂಡಿಗಳು ಎಲ್ಲಾ ಸ್ಥಳಗಳಿಗೂ ಎಲ್ಲಾ ಸಮಯದಲ್ಲಿಯೂ ಬಾಡಿಗೆಗೆ ಹೊಂದಬಹುದು.

ನಿರಾಶೆಯಾಗದಂತೆ ಇಚ್ಛೆಯುಳ್ಳ ಪ್ರಯಾಣಿಕರು ಬೇಗನೆ ಅರ್ಜಿದು ಕೊಡತಕ್ಕದ್ದು.

ಭಾಡಿಗೆಗೂ ಹೆಚ್ಚು ಸಂಗತಿಗಳಿಗೂ ಕೆಳಗಿನ ಅಡ್ರೆಸ್ಸಿಗೆ ಬರೆದುಕೊಳ್ಳಿ.

ಮಡಿಕೇರಿ { 25-3-23 { ಯಫ್. ಪಿ. ಲೋಬೋ, ಮೇನೇಜರ್.

ಮೆಸರ್ಸ್. ಪಯಸ್ ಅಂಡ್ ಸನ್ಸ್, ಮಡಿಕೇರಿ.

ಜಿಂಗಡಿ ಮತ್ತು ರುದ್ರಾಕ್ಷಿ ಅಂಚಿನ ಸೀರೆಗಳು

ಈ ಸೀರೆಗಳನ್ನು ಬಹು ಹಸನಾದ ನೂಲಿನಿಂದ ತಯಾರಿಸಿದೆ. 17 ಮೊಳ ಉದ್ದವೂ 2½ ಮೊಳ ಅಗಲವೂ ಇರುವುವು. ಅತಿ ಸುಂದರವಾದ ರೇಷ್ಮೆಯ ಸೆರಗು ಇರುವುವು. ನೋಡಲು ಅಲ್ಲೇಪೇಟೆಯ ಸೀರೆಯಂತೆ ಇರುವುವು. ಬಣ್ಣವು ಎಂದಿಗೂ ಹೋಗದು. ಇವನ್ನು ಮಾರಲಿಕ್ಕಾಗಿ ಕೆಲವೇ ಮಾತ್ರ ತಯಾರಿಸಿರುವುದರಿಂದ ಬೇಗನೆ ಕಳುಹಿಸುವವರಿಗೆ ಮಾತ್ರ ಸಿಕ್ಕುವವು.

ನಂ 1	7—6—0
ನಂ 2	6—8—0

RIPON WATCH CO.,
Triplicane,

25-15 MADRAS.

For your requirements of High Grade Arms, Ammunition, Wines and Spirits.

APPLY TO—

Mc. DOWELL & Co., Ltd.,

24—0 MERCARA.

ಜರ್ಮನ್ ಅಲಾರಂ ಟೈಂಪೀಸ್

ಈ ಅಲಾರಂ ಟೈಂಪೀಸ್ ಗಡಿಯಾರಗಳು ಜರ್ಮನಿ ದೇಶದಲ್ಲಿ ಬಹು ಒಳ್ಳೆ ಸಾಮಾನುಗಳಿಂದ ತಯಾರಿಸಲ್ಪಟ್ಟಿರುವುವು.

ತ್ರೈಯದ 4 ಇಂಚು ಇರುವವು. ಗಡಿಯಾರದ ಎತ್ತರ 7 ಇಂಚು ಇರುವವು. ಈ ಗಡಿಯಾರದಲ್ಲಿ ಯಾರೂ [illegible] ಗುರುತು ಓದಬಹುದು. ಒಂದಾವರ್ತಿ ಕೀ ಕೊಟ್ಟರೆ 30 ಗಂಟೆ ನಡೆಯುವವು. ಮತ್ತು ಸಮಯಕ್ಕೆ [illegible] ಗಂಟೆ ಹೊಡೆಯುವವು. ಎಂದಿಗೂ [illegible] ಗಡಿಯಾರಗಳು [illegible] ಇರುವವು. ಈ ಗಡಿಯಾರಕ್ಕೆ 3 ವರ್ಷ ಗ್ಯಾರಂಟಿ ಕೊಡುವವು.

ಕ್ರಯ ಗಡಿಯಾರ 1 ಕ್ಕೆ 4-12-0

ಎಲೆಕ್ಟ್ರೋ ಗೋಲ್ಡ್ ಪ್ಲೇಟ್ ರಿಸ್ಟ್ ವಾಚ್‌ಗಳು

ಈ ಚಿತ್ರದಲ್ಲಿ ಕಾಣುವಂತೆಯೇ ಇರುವ ಈ ಗಡಿಯಾರಗಳು ಸ್ವಿಜರ್ಲಾಂಡ್ ದೇಶದಲ್ಲಿ ತಯಾರಿಸಿದ್ದು. ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆ ನೋಡಬೇಕಾದರೆ ಬೆಳಕು ಬೇಕು.



ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿದ್ದರೂ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಸಮಯ ಕಾಣುವುದು. ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಮತ್ತು ಇದರ ಬಣ್ಣವು [illegible] ಚಿನ್ನದಂತೆ ಹೊಳೆಯುವವು. ಮುಖ್ಯವಾದ 3 ವರುಷ ಗ್ಯಾರಂಟಿ ಇರುವವು.

ಕ್ರಯ ಗಡಿಯಾರ 1 ಕ್ಕೆ 8—8—0

ಒಂದೇ ಸಲ 3 ಗಡಿಯಾರ ತರಿಸುವವರಿಗೆ 4 ಇಂಚು ತ್ರೈಯವುಳ್ಳ ಒಂದು ಜರ್ಮನ್ ಅಲಾರಂ ಟೈಂಪೀಸು ಇನಾಮಾಗಿ ಕೊಡುವವು.

ವಿಳಾಸ—ರಿಪನ್ ವಾಚ್ ಕಂಪನಿ,

52-43 ಪೋ|| ಬಾಕ್ಸ್ ನಂ 27 ಮದರಾಸು

ಮದ್ರಾಸು ಗವರ್ನಮೆಂಟಿನಿಂದ ರಿಜಿಸ್ಟರ್ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸನಿ

ಚೇಳು ಕಡಿದ ಸ್ಥಳದಲ್ಲಿ [illegible] ಚೇಳುಗಳ ವಿಷಧ್ವಂಸನಿ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ನ [illegible] ನೋವನ್ನು ಕಂಡ ಸರ್ಪವು ಓಡಿ ಹೋದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಬೇಗನೆ ಮಾಯವಾಗುವದು

ಇನಾಮು

ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ ರೂ 100 ಬಹುಮಾನ ಕೊಡುವವು

ಕ್ರಯ ಸೀಸೆ 1 ಕ್ಕೆ 8 ಆಣೆ ಡಜನ್ 1 ಕ್ಕೆ ರೂ 5

ವಿಳಾಸ—ವಿ. ಎ. ಎಸ. ಪಾಣಿ ಕಂಪನಿ,

52-43 ಸಾಹುಕಾರಪೇಟೆ ಮದರಾಸು

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್

ಕೋ ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ

	ರೂ
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,310
ಒಪ್ಪಿತ ಒಂದ ಠೇವಣಾತಿ	31,873

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲ್ಕುವರೆ 6½ ಬಡ್ಡಿ ದರದಲ್ಲಿ ಬಡ್ಡಿ ಕೊಡಲಾಗುವುದು. ಕಡಿಮೆ [illegible] ಠೇವಣಾತಿಗಳಿಗೆ ಶೇಕಡ [illegible] 5 ರ [illegible] ಕೊಡಲಾಗುತ್ತದೆ.

ಪ್ರತಿ [illegible] ಕೋ ಆಪರೇಟಿವ್ ರಿಜಿಸ್ಟ್ರಾರ್ [illegible]

ಪ್ರೆಸಿಡೆಂಟ	ಟ್ರೆಜರರ.
ಕೊಡಂದೆರ [illegible] ರಾಯ್ ಬಹದ್ದೂರ್	[illegible] ಭುಜಂಗರಾಯರು ಬಿ. ಎ., ಬಿ. ಎಲ್.,

ಸೆಕ್ರೆಟರಿ

ಸಿ. ಯಮ್. ವೆಂಕಪ್ಪಯ್ಯನವರು ಬಿ. ಎ. ಬಿ. ಎಲ್.

ತಾರೀಖು 25—3—1923

BUMPER CROPS.

Always follow on application of our Coffee Fertilizers!

ರೊಕ್ಕ ಕಾಫಿ ಪಸಲು

ನಿಶ್ಚಯವಾಗಿ ನಮ್ಮ ಕಾಫಿ ಫರ್ಟಿಲೈಜರ್‌ಗಳನ್ನು ಉಪಯೋಗಿಸಿರಿ!

ನಮ್ಮ ಕಾರ್ಖಾನೆಯಲ್ಲಿ ಎಲ್ಲಾ ತರಹದ ಹೊಸ ಗೊಬ್ಬರ (artificial manure) ಗಳನ್ನು ಗಡ್ಡೆ ಹಿಂಡಿ ಹರಳು ಹಿಂಡಿ, ಬೇವಿನ ಹಿಂಡಿ ಕೋಳಿ ಹಿಕ್ಕೆ, ಮೂಳೆ ಪುಡಿ ವಗೈರೆ ಕಾಫಿ ಫರ್ಟಿಲೈಜರ್‌ಗಳು ತಯಾರಾಗುತ್ತವೆ. ಪರದೇಶದಿಂದ ತರಿಸುವ ಕ್ರಯಕ್ಕಿಂತ ಕಡಿಮೆ ಕ್ರಯ ಸಹ ಕಡಿಮೆ ಮಾಡಿದೆ.

ತೋಟದಲ್ಲಿ ಪಸಲು ಕಡಿಮೆಯಾಗುವ ಪ್ಲಾಂಟರು ಮೇಲ್ಕಂಡ ಗೊಬ್ಬರವನ್ನು ಉಪಯೋಗಿಸಿದರೆ ದೊಡ್ಡ ಪಸಲು ಸಿಕ್ಕಿ ಕೊಂಡರೆ ಎಲ್ಲಾ ಪ್ರಕಾರವಾಗುವುದು.

M. M. SIDDEEK

12-8 *Proprietor* — Siddeek Manure Works, MERCARA

"ಕೊಡಗು"

೧೯೨೩ ನೇ ಇಸವಿ ಜೂನ್ ತಾ|| ೮ ನೇ ಶುಕ್ರವಾರ.

ಪ್ರೈಮರಿ ವಿದ್ಯಾಭ್ಯಾಸ.

ಮದ್ರಾಸಿನಲ್ಲಿ ವಿದ್ಯಾಭ್ಯಾಸಕ್ಕೆ ನಮ್ಮ ದೇಶದಲ್ಲಿರುವಷ್ಟು ಅನುಕೂಲವಿಲ್ಲವೆಂದು ಕೆಲವರ ಅಭಿಪ್ರಾಯವಿದೆ. ಆದರೆ ಪ್ರೈಮರಿ ವಿದ್ಯಾಭಿವೃದ್ಧಿಗೆ ಮದ್ರಾಸ್ ಸರಕಾರದ ವಿದ್ಯಾ ಇಲಾಖೆಯ ಮಂತ್ರಿಯು ಈಗ ಮಾಡುತ್ತಿರುವ ಏರ್ಪಾಡುಗಳನ್ನು ನೋಡಿದರೆ ಮದ್ರಾಸಿನ ಸ್ಥಿತಿಯು ಕೆಲವು ಮಟ್ಟಿಗೆ ಗೊತ್ತಾಗುತ್ತೆ. ಸುಧಾರಣೆಯ ಪ್ರಯೋಜನವು ತಿಳಿಯುತ್ತೆ. ನಮ್ಮ ದೇಶದಲ್ಲಿ ಜುಲುಮಿನಿಂದ ಮಾಫಿಯಾಗಿ ಪ್ರೈಮರಿ ವಿದ್ಯಾಭ್ಯಾಸ ಕೊಡಬೇಕೆಂತ ಕೇಳುವದು ಸಹ ಜನರಿಗೆ ಇನ್ನೂ ಸಾಧ್ಯವಿರುವಂತೆ ಕಾಣುವದಿಲ್ಲ. ಜಮಾನ್‌ದಾರರ ಸಂಘದಲ್ಲಿ ಮೂರು ಯಾ ನಾಲ್ಕು ವರ್ಷಗಳ ಕೆಳಗೆ ಒಟ್ಟು ದೇಶದಲ್ಲಿ ಮಾಫಿ ಪ್ರೈಮರಿ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಕೊಡಬೇಕೆಂತ ಠರಾವು ಪಾಸಾಯಿತು. ಅನಂತರ ಪ್ರತಿ ವರ್ಷವೂ ಕೇಳಬೇಕಾಗಿದ್ದ ಇಂಥಾ ಮುಖ್ಯವಾದ ಠರಾವು ಈ ವರ್ಷದವರೆಗೂ ಕಾಣಲೇ ಇಲ್ಲ. ಈ ವರ್ಷ ಮಾತ್ರ ಕಣಿವೆ ಹೋಬಳಿಗೆ ಈ ತರಹದ ವಿದ್ಯೆ ಕೊಡಬೇಕೆಂಬ ಠರಾವು ಆಗಿದೆ. ಈ ಸ್ಥಿತಿಯಲ್ಲಿ ನಮ್ಮ ದೇಶದವರು ಸಂಶಯ ಪಡುತ್ತಿರುವಾಗ್ಯೆ ಮದ್ರಾಸ್ ಮಂತ್ರಿಯು ತನ್ನ ಅಧಿಪತ್ಯದಲ್ಲಿ ಒಂದು ಗ್ರಾಮಕ್ಕೆ ಒಂದು ಶಾಲೆಯಂತೆ ಏರ್ಪಡಿಸಿ ನಾಲ್ಕೈದು ವರ್ಷಗಳ ನಂತರ ಜುಲುಂ ಪಡಿಸುವ ಕಾನೂನು ಸಹ ಮಾಡಿಕೊಳ್ಳಬೇಕೆಂತ ಅಭಿಪ್ರಾಯಪಟ್ಟಿರುತ್ತಾರೆ. ಈಗಾಗಲೇ ಇಪ್ಪತ್ತು ಮುನಿಸಿಪಾಲಿಟಿಗಳಲ್ಲಿ ಪ್ರೈಮರಿ ವಿದ್ಯಾಭ್ಯಾಸದ ಬಗ್ಗೆ ಸೆಸ್ ಹಾಕಿಕೊಳ್ಳಲು ಒಪ್ಪಿರುತ್ತಾರೆ. ಹತ್ತು ಮುನಿಸಿಪಾಲಿಟಿಗಳಲ್ಲಿ ಜುಲುಂ ಪದ್ಧತಿಯು ಪ್ರಾರಂಭವಾಗಿ ಹೋಗಿದೆ. ಇರುವ 125 ತಾಲೋಕು ಬೋರ್ಡುಗಳಲ್ಲಿ 62 ವಿದ್ಯಾ ಸೆಸ್ ಹಾಕಿಕೊಂಡಿವೆ. ಜುಲುಂ ನಡಿಸಲು ಬೇಕಾದ ಖರ್ಚಿನ ಬಗ್ಗೆ ಸರಕಾರದ ಸಹಾಯ ಎಷ್ಟು ಸಿಕ್ಕಬೇಕೆಂಬದು ನಿರ್ಣಯವಾಗದೆ ಇರುವದರಿಂದಲೇ ಜುಲುಂ ಪದ್ಧತಿ ಇನ್ನೂ ಪ್ರಾರಂಭವಾಗಿಲ್ಲವಂತೆ. ಹ್ಯಾಗಾದರೂ ದೇಶದಲ್ಲಿ ಓದುಬರಹ ತಿಳಿಯದವರೇ ಇಲ್ಲದಂತೆ ಮಾಡುವ ಪ್ರಯತ್ನದಲ್ಲಿದ್ದಾರೆಂತ ತಿಳಿಯಬರುತ್ತದಷ್ಟೆ.

ನಮ್ಮ ದೇಶದ ಜನರಿಗೂ ಸರಕಾರಕ್ಕೂ ಒಂದು ವಿಧದ ತಪ್ಪು ತಿಳುವಳಿಕೆ ಇದೆ. ಏನೆಂದರೆ—ಪ್ರೈಮರಿ ವಿದ್ಯೆ ನಮ್ಮ ದೇಶದಲ್ಲಿ ಸಿಕ್ಕುವದು ಸಾಕು ಎಂತ. ಇದು ಪೂರಾ ತಪ್ಪು ತಿಳುವಳಿಕೆ ಎಂಬದನ್ನು ಸರಕಾರದ ದಾಖ್ಲೆಗಳಿಂದ ಸಿಕ್ಕುವ ಸಂಖ್ಯೆಗಳ ಲೆಖ್ಖ ಹಾಕಿದರೆ ತಿಳಿಯುತ್ತೆ. 1921 ನೇ ಇಸ್ವಿಯ ಖಾನೆಷುಮಾರಿಯಲ್ಲಿ ದೇಶದಲ್ಲಿ ಗಂಡು ಜನಸಂಖ್ಯೆ 89,501 ಹೆಣ್ಣು ಜನಸಂಖ್ಯೆ 74337. ಇದರಲ್ಲಿ ಸ್ಕೂಲಿಗೆ ಹೋಗುವ ಪ್ರಾಯದ ಹುಡುಗರು ಸೇಕಡ 12½ಯಿಂದ 15ರ ವರೆಗೆ ಆಗಬಹುದೆಂತ ಮದ್ರಾಸ್ ಮಂತ್ರಿಗಳ ಲೆಖ್ಖದ ಮೇರೆ ನೋಡಿದರೆ 13 425 ಹುಡುಗರೂ 12150 ಹುಡುಗಿಯರೂ ಇರಬೇಕು. ವ್ಯವಸಾಯಕ್ಕಾಗಿಯೂ ಕೂಲಿ ಕಸಬಿಗಾಗಿಯೂ ಬಂದ ಗಂಡಸರು ನಮ್ಮ ದೇಶದಲ್ಲಿ ಹೆಚ್ಚಿರುವದರಿಂದ ಹುಡುಗರೂ 11 000 ಹುಡುಗಿಯರೂ ಅದೇ ಸಂಖ್ಯೆ ಇರಬಹುದೆಂದ ಹೇಳಬಹುದು. 5449 ಹುಡುಗರೂ 2260 ಹುಡುಗಿಯರೂ ಮಾತ್ರ ಪ್ರೈಮರಿ ಸ್ಕೂಲುಗಳಲ್ಲಿ ಓದುತ್ತಿದ್ದಾರಂತೆ. ಹಾಗಾದರೆ ಕಡಿಮೆ 550 ಹುಡುಗರಿಗೂ 5700 ಹುಡುಗಿಯರಿಗೂ ವಿದ್ಯೆ ಸಿಕ್ಕುತ್ತಿರುವದಿಲ್ಲವೆಂತ ಸ್ಪಷ್ಟವಾಯಿತು. ವಿದ್ಯಾಭ್ಯಾಸ ಸಿಕ್ಕಿದ ಜನರು ತಮಗೆ ವಿದ್ಯೆ ಇದೆ, ತಮ್ಮ ಮಕ್ಕಳಿಗೆ ವಿದ್ಯೆ ಸಿಕ್ಕುತ್ತೆ ಎಂತ ತೃಪ್ತರಾಗಿ ಕೂತುಕೊಂಡರೆ 14000 ಮಕ್ಕಳಿಗೆ ವಿದ್ಯೆ ಇಲ್ಲದೆ ಹೋಗುವದನ್ನು ಯಾರು ನೋಡಬೇಕು? ಓದುಬರಹವಿಲ್ಲದಿದ್ದರೆ ದೇಶದ ... ವ ಕಾರ್ಯವೂ ಜಿನ್ನಾಗಿ ನಡಿಯಲಿಕ್ಕಿಲ್ಲವೆಂಬದು ಎಲ್ಲರಿಗೂ ಪ್ರತ್ಯಕ್ಷ ವಿಷಯವಾಗಿದೆ.

... ರೀತಿ ಅಜ್ಞಾನಾಂಧಕಾರವನ್ನು ಹೋಗಲಾಡಿಸಬೇಕೆಂ... ವು ಕೇಳಿದ ಒಡನೇ ಹಣವೆಲ್ಲಿದೆ? ಮದ್ರಾಸಿನವರು ... ಕೊಳ್ಳುವಂತೆ ನೀವು ಸಹ ವಿದ್ಯಾ ಸೆಸ್ ಹಾಕಿಕೊಳ್ಳಿ ... ಎಂತ ಸರಕಾರವು ಕೇಳಬಹುದು. ಅದಕ್ಕೆ ನಮ್ಮ ಜವಾಬೇನೆಂದರೆ—ಮದ್ರಾಸಿನ ಒಂದೆರಡು ಜಿಲ್ಲೆಗಳು ವಿನಹ ಬೇರೆ ... ಲ್ಲಾ ಜಿಲ್ಲೆಗಳಲ್ಲೂ ಕಂದಾಯದ ರೂಪಾಯಿ ಒಂದರ ... ಗಿಂತ ಹೆಚ್ಚಿಗೆ ಸೆಸ್ ಹಾಕಿಕೊಂಡಿರುವದಿಲ್ಲ. ಅದ್ದರಿಂ... ವಿದ್ಯಾ ಸೆಸ್ ಹಾಕಿಕೊಂಡರೂ ಅಲ್ಲಿನ ಜನರಿಗೆ ಭಾರವಾ... ರದು. ಮತ್ತು ಅಲ್ಲಿ ವ್ಯಾಪಾರ ಕೈಗಾರಿಕೆ ಹೆಚ್ಚಾಗಿ ಮು...ದರಿಸಿರುವದರಿಂದ ನಮ್ಮ ದೇಶದ ಜನರನ್ನು ಅಲ್ಲಿನ ಸ್ಥಿತಿಗೆ ಹೋಲಿಸಲಿಕ್ಕೇ ಕೂಡದು. ನಮ್ಮ ದೇಶದಲ್ಲೂ ಮೊನ್ನೆ ತಾನೆ ಹೆಚ್ಚಿಸಿದ ಅಧಾರಣೆಯಿಂದ ಪ್ರೈಮರಿ ಸ್ಕೂಲ್ ಮಾ...ರುಗಳ ಸಂಬಳವನ್ನೇನೋ ಸ್ವಲ್ಪ ಹೆಚ್ಚಿಸಿದರು. ಆದರೂ ಬೇರೆ ಇಲಾಖೆಗಳಿಗೆ ...ಶೇಷವಾಗಿ ದೊಡ್ಡ ಉದ್ಯೋಗದವರಿಗೆ ಸಂಬಳ ಹೆಚ್ಚು ಕೊಡುವದರಿಂದ, ಖರ್ಚು ಮಾಡುವದರ ಬದಲು ಸರಕಾರಕ್ಕೆ ಹೆಚ್ಚಿನ ಭಾಗದ ಕಂದಾಯ ಕೊಡುವ ರೈತರ ದೇಶದ ಬೆನ್ನೆಲುಬಿನಂತೆ ಮುಖ್ಯಭಾಗವಾದ ರೈತರ ಮಕ್ಕಳಿಗೆ ವಿದ್ಯೆ ಕಲಿಸಲಿಕ್ಕೆ ಸರಕಾರದಿಂದಲೇ ಹಣ ದೊರೆಯಬೇಕು. ಟೆರಿಟೋರಿಯಲ್ ಪಟಾಲಮ್ಮಿಗಾಗಿ ಅಂದಾಜು ಒಂದು ಲಕ್ಷ ರೂಪಾಯಿ ಖರ್ಚು ಮಾಡಿರುವಾಗ ಪ್ರೈಮರಿ ವಿದ್ಯೆಗಾಗಿ ಅರ್ಧ ಲಕ್ಷ ಖರ್ಚು ಮಾಡಿದರೆ ಸರಕಾರದ ಇರುವಿಕೆಗೆ ಸಾಫಲ್ಯವಾಗುವದಿಲ್ಲವೇ? ಜನರಿಗೆ ಓದುಬರಹ ಕಲಿಸಲಿಕ್ಕೆ ಹಣವಿಲ್ಲದ ಸರಕಾರದಿಂದ ದೇಶಕ್ಕೆ ಪ್ರಯೋಜನವೇನು? ಸರಕಾರದ ಸಹಾಯಕ್ಕಾದರೂ ವಿದ್ಯೆ ಇರುವ ಜನರಾದರೆ ಅನುಕೂಲವಲ್ಲವೇ?

ಮದ್ರಾಸಿನಲ್ಲಿ ಡಿಸ್ಟ್ರಿಕ್ಟ್ ಎಜುಕೇಷನ್ ಕೌನ್ಸಿಲ್ ಮತ್ತು ಗ್ರಾಮದ ಸ್ಕೂಲ್ ಕಮಿಟಿಗಳನ್ನು ಚನ್ನಾಗಿ ಉಪಯೋಗಿಸಿಕೊಂಡು ಪ್ರೈಮರಿ ವಿದ್ಯೆಯನ್ನು ಪ್ರತಿಯೊಬ್ಬ ಹುಡುಗನಿಗೂ ಹುಡುಗಿಗೂ ಸಿಕ್ಕುವಂತೆ ಮಾಡುವ ಪ್ರಯತ್ನದಲ್ಲಿದ್ದಾರೆ. ನಮ್ಮ ದೇಶದಲ್ಲಿ ಸೆಸ್ ಹಾಕಿಯೂ ಹಣ ಸಾಲದೆ ಹೋಗಿರುವದರಿಂದ ವಿದ್ಯಾರ್ಥಿಗಳು ಕಡಿಮೆ ಇರುವ ಶಾಲೆಗಳನ್ನು ರದ್ದುಪಡಿಸುತ್ತಾರೆಂಬ ವರ್ತಮಾನವಿದೆ. ಕೆಲವು ಮಿಶನ್ ಸ್ಕೂಲ್‌ಗಳು ಸಹ ಮುಚ್ಚಲ್ಪಟ್ಟವು. ಶಾಲೆಗಳನ್ನು ಆಯಾ ಸ್ಥಳದಲ್ಲಿ ಸ್ಥಾಪಿಸುವಾಗ ಆಯಾ ಊರಿನ ಜನಸಂಖ್ಯೆ ನೋಡಿಯೇ ಸ್ಥಾಪಿಸಬೇಕು. ಹಾಗಾದರೆ ಈಗ ಶಾಲೆಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಲು ಕಾರಣವೇನಿರಬೇಕು? ಮನೆಯ ಬಡತನದ ದೆಸೆಯಿಂದ ಹುಡುಗರನ್ನು ಮನೆಯಲ್ಲಿ ಕೆಲಸಕ್ಕೆ ಇಟ್ಟುಕೊಳ್ಳುವ ಕಾರಣದಿಂದ ತಂದೆ ತಾಯಿಗಳು ಹುಡುಗರನ್ನು ಕಳುಹಿಸದೆ ಇರಬಹುದು. ಆದಕ್ಕೇನೇ ಜುಲುಂ ಪದ್ಧತಿ ಇರಬೇಕೆಂತ ನಾವು ಹೇಳುವದಾಗಿದೆ. ಇದರ ಬದಲಿಗೆ ಸ್ಕೂಲನ್ನೇ ತೆಗೆದುಹಾಕುವದರಲ್ಲಿ ಏನೂ ನ್ಯಾಯವಿಲ್ಲ.

(ಟ್ರೈನಿಂಗ್ ಸ್ಕೂಲ್ ಹೋಯಿತು. ಇದರ ಬದಲಿಗೆ ಮದ್ರಾಸಿನಲ್ಲಿ ಏರ್ಪಡಿಸಲು ಯೋಚಿಸಿರುವಂತೆ ನಮ್ಮಲ್ಲಿಯ ಸ್ಕೂಲ್ ಸ್ಪೆಸಲ್ ಕ್ಲಾಸ್‌ಗಳಲ್ಲಿ ಇಚ್ಛೆಪಡುವವರಿಗೆ ಟ್ರೈನಿಂಗ್ ಕೊಡುವ ಏರ್ಪಾಡು ಮಾಡಿದರೆ ಒಳ್ಳೇದು.

ಸರಕಾರಕ್ಕೆ ಪ್ರಯೋಜನವಿರುವ ಕೋರ್ಟ್ ಫೀಸ್ ಆಕ್ಟ್ ಸ್ಟಾಂಪು ಆಕ್ಟ್ ರಿಜಿಸ್ಟ್ರೇಶನ್ ರೂಲ್ಸ್ ವಗೈರೆಗಳನ್ನು ಮದ್ರಾಸಿನಿಂದ ಇಲ್ಲಿಗೆ ವ್ಯಾಪಕ ಮಾಡಿರುವಂತೆ ರೈತರಿಗೆ ಪ್ರಯೋಜನವಾಗುವ ಮದ್ರಾಸಿನ ನಿಯಮಗಳನ್ನು ರೈತರ ಆಲೋಚನೆ ತೆಗೆದುಕೊಂಡು ಇಲ್ಲಿಗೆ ವ್ಯಾಪಕ ಮಾಡಿಕೊಡಬೇಕು. ಇಂಥಾ ಉಪಯೋಗದ ಕೆಲಸಕ್ಕೆ ಕೌನ್ಸಿಲ್ ಬರಲಿ ಎಂತ ಹೇಳುತ್ತಾ ಕಾಲಹರಣ ಮಾಡುವದು ಉಚಿತವಲ್ಲ.

ಕಳೆದ ಜಮಾನ್‌ದಾರರ ಸಂಘದ ಮಹಾ ಸಭೆಯಲ್ಲಿ ಕಣಿವೆ ಹೋಬಳಿ ಜನರ ಸ್ಥಿತಿಯನ್ನು ವರ್ಣಿಸಿದ್ದು ಕೇಳಿ ಸಭೆಯ ಮನಸ್ಸು ಕರಗಿತು. ಆದ್ದರಿಂದಲೇ ಅಲ್ಲಿ ಜುಲುಮಿನಿಂದ ಪ್ರೈಮರಿ ವಿದ್ಯೆ ಕೊಡಬೇಕೆಂತ ಠರಾವು ಪಾಸಾಯಿತು. ನಂಜರಾಜಪಟ್ಣ ತಾಲೋಕಿನ ಸ್ಥಿತಿಯೆಲ್ಲಾ ಹೀಗೆಯೇ ಇದೆ. ಒಂದೇ ಸರಕಾರಕ್ಕೆ ಒಳಪಟ್ಟಿರುವ ಆ ಜನರನ್ನು ಹಿಂದೆ ಬಿಟ್ಟು ದೇಶದ ಇತರ ಭಾಗಗಳು ಎಷ್ಟು ಮುಂದರಿಸಿದರೂ ಪ್ರಯೋಜನವಿಲ್ಲ. ಮದ್ರಾಸ್ ಎಜುಕೇಶನ್ ರೂಲ್ಸನ್ನು ಇಲ್ಲಿಗೆ ಜಾರಿಗೆ ತರುವದರಲ್ಲಿದ್ದಾರೆಂತ ಎಡ್ಮಿನಿಸ್ಟ್ರೇಶನ್ ರಿಪೋರ್ಟಿನಲ್ಲಿದೆ. ಹಾಗಾದ್ದರೆ ಜನರು ಎಚ್ಚತ್ತು ಅಲ್ಲಿನ ರೂಲ್ಸ್‌ಗಳ ಪ್ರಯೋಜನವನ್ನು ಹೊಂದಲಿಕ್ಕೆ ಕೆಡಕನ್ನು ದೂರಮಾಡಲಿಕ್ಕು ಕೂಡಲೇ ಪ್ರಯತ್ನಿಸಬೇಕು.

ಸ್ಕೂಲು ಫೀಜು.

ಕಳೆದವಾರ ಕೊಡಗಿನಲ್ಲಿ ಸ್ಕೂಲು ಫೀಜುಗಳನ್ನು ಹೆಚ್ಚಿಸಿದ್ದಾರೆಂತ ವರ್ತಮಾನವಿದೆ ಎಂದು ಪ್ರಕಟಿಸಿದ್ದೆವು. ಆದರೆ ಅದು ನಿಜವಲ್ಲವೆಂದು ತಿಳಿಯಲು ಸಂತೋಷಪಡುತ್ತೇವೆ. ಸ್ಕೂಲು ಫೀಜನ್ನು ಹೆಚ್ಚಿಸಬೇಕೆಂಬ ವಿಷಯ ಅಧಿಕಾರಿಗಳು ಆಲೋಚಿಸಿದ್ದಾರಂತೆ. ಹ್ಯಾಗೂ ಅದು ಈ ವರ್ಷ ನಲ್ಲಿ ಜಾರಿಗೆ ಬರುವಂತಿಲ್ಲವಂತೆ. ಈಗಿರುವ ಫೀಜನ್ನು ಕೊಡಲಾರದೆ ಎಷ್ಟೋ ತಂದೆ ತಾಯಿಗಳು ಕಷ್ಟಪಡುತ್ತಿರುವರು. ಮಾಫಿಗಾಗಿ ಎಷ್ಟೋ ಅರ್ಜಿಗಳು ಅಧಿಕಾರಿಗಳಿಗೆ ಕಳುಹಿಸಲ್ಪಡುತ್ತವೆ. ಇದರ ಮಧ್ಯೆ ಸ್ಕೂಲು ಮಾಸ್ತರುಗಳ ಸಂಬಳವನ್ನು ಹೆಚ್ಚಿಸಲಿಕ್ಕೆ ಡಿಸ್ಟ್ರಿಕ್ಟ್ ಬೋರ್ಡ್ ಸೆಸ್ಸನ್ನು ಹೆಚ್ಚಿಸಲಾಯಿತು. ಇದರ ಮೇಲೆ ಫೀಜನ್ನು ಹೆಚ್ಚಿಸಿದ್ದೇ ಆದರೆ ಸರಕಾರದವರು ರೈತರ ಮಕ್ಕಳಿಗೆ ವಿದ್ಯೆಯನ್ನು ಕೊಡದೆ ಮಾಡಬೇಕೆಂಬ ಇರಾದೆ ಪಡುತ್ತಿದ್ದಾರೇನೋ ಎಂದು ಊಹಿಸಲು ಅವಕಾಶ ಕೊಟ್ಟಂತಾಗುವುದು. ಇದೂ ಅಲ್ಲದೆ ಮೊನ್ನೆ ತಾನೇ ಚೀಫ್ ಕಮಿಷನರವರು ಸೂಚಿಸಿದಂತೆ ವಿದ್ಯಾವಂತರು ಇನ್ನು ಮೇಲೆ ಸರಕಾರಿ ಉದ್ಯೋಗದ ಮೇಲೆ ಭರವಸೆ ಇಡುವುದು ಸುಮ್ಮನೆ. ಹೀಗಿರುವಲ್ಲಿ ಸ್ಕೂಲು ಫೀಜನ್ನು ಹೆಚ್ಚಿಸಿದ್ದೇ ಆದರೆ ಅನೇಕ ಬಡವರ ಹುಡುಗರು ವಿದ್ಯಾಹೀನರಾಗುವುದರಲ್ಲಿ ಸಂದೇಹವಿಲ್ಲ. ಇಂಥಾದಕ್ಕೆ ಅವಕಾಶ ಕೊಡದಂತೆ ಚೀಫ್ ಕಮಿಷನರವರೂ ಸ್ಕೂಲು ಇನ್‌ಸ್ಪೆಕ್ಟರವರೂ ಮತ್ತು ಹೈಸ್ಕೂಲು ಹೆಡ್ ಮಾಸ್ಟರವರೂ ಪ್ರಯತ್ನಿಸುವರೆಂದು ನಂಬುತ್ತೇವೆ.

ಹುದಿಕೇರಿ ಸ್ಕೂಲಿನ ಚಳವಳ.

(ಬರೆದು ಬಂದದ್ದು)

ಮಹಾಶಯರೆ ನಮ್ಮ ಶಾಲೆಗೆ ಈವರೆಗೂ ಹೆಡ್‌ಮಾಸ್ಟರನ್ನು ಸರ್ಕಾರವು ಕಳುಹಿಸದೆ ಇರುವದು ನೋಡಿದರೆ, ನಮ್ಮ ನಾಡಿನವರು ಕೇವಲ ಮೂಢರೆಂದು ಮತ್ತು ವಿದ್ಯಾಹೀನರೆಂದು ಸರ್ಕಾರದವರ ನಂಬಿಕೆ. ಆದ್ದರಿಂದಲೇ ಈ ತರದ ನಿರಾಶೆಪಡಿಸುವಿಕೆ. ಹೆ|| ಮಾಸ್ತರು ಖಾಲಿಯಾಗಿ ಒಂದು ವರ್ಷ ಆದಾಗ್ಯು ಒಬ್ಬರನ್ನು ಕಳುಹಿಸಿ ಕೊಡಲಿಕ್ಕೆ ಆಗಲಿಲ್ಲವೆ. ಇಂಥ ಚಿಕ್ಕ ಸ್ಕೂಲಿನಲ್ಲು ಹೆ|| ಮಾಸ್ತರು ಬರಲಿಕ್ಕೆ ಒಂದುವರ್ಷ ಆದಮೇಲೆ ದೊಡ್ಡ ದೊಡ್ಡ ಹೈಸ್ಕೂಲ್ ಕಾಲೇಜುಗಳ ಗತಿಯೇನು.

ನಾವು ಬಡ ರೈತರು ಬರೆಯುವ ಅರ್ಜಿಗಳು ಮತ್ತು ಪೇಪರುಗಳೆಲ್ಲಾ ನಮ್ಮ ಮುಖ್ಯ ಅಧಿಕಾರಿಗಳ ವೇಸ್ಟ್‌ಪೇಪರ್ ಬಾಸ್ಕೆಟ್ (Weast paper Basket) ನಲ್ಲಿ ಅಡಗಿಕೊಳ್ಳುತ್ತೆ. ನಮ್ಮ ನಾಡನವರು ಕಂದಾಯ ಕಟ್ಟುವುದಿಲ್ಲವೊ, ವರ್ಷಂಪ್ರತಿ ಹಾಕುವ ಸೆಸ್ ಕಟ್ಟುವುದಿಲ್ಲವೊ, ಯ, ಓದುವ ಮಕ್ಕಳ ಸ್ಕೂಲ್ ಫೀಸು ಕೊಡುವುದಿಲ್ಲವೊ, ಯಾವ ಕಾರಣದಿಂದ ನಮ್ಮ ಸರ್ಕಾರದವರು ನಮ್ಮ ಶಾಲೆಯ ಮೇಲೆ ಗಮನಕೊಡುವುದಿಲ್ಲವೆಂಬ ಸಂಗತಿ ನಮಗೆ ಗೊತ್ತಾಗುವುದಿಲ್ಲ. ದಯವಿಟ್ಟು ಒಡನೆ ಒಬ್ಬ ಹೆ|| ಮಾಸ್ತರನ್ನು ಕಳುಹಿಸಿಕೊಡಬೇಕಾಗಿ ಅತಿ ವಿನಯದಿಂದ ಬೇಡಿಕೊಳ್ಳುತ್ತೇನೆ.

ಮೇಲಾಗಿ ನಮ್ಮ ಹ|| ಚೀಫ್ ಕಮಿಷನರ್ ಸಾಹೇಬರವರಿಗೆ ಈ ಮೂಲಕ ಕೇಳಿಕೊಳ್ಳುವುದೇನಂದರೆ, ಕಮಿಷನರ್ ಸಾಹೇಬರವರಿಗೂ ಸ್ಕೂಲ್ ಡಿಪಾರ್ಟ್‌ಮೆಂಟಿನವರಿಗೂ ಹುದಿಕೇರಿ ಶಾಲೆಯನ್ನು ಲೋವರ್ ಸೆಕೆಂಡರಿ ವರೆಗೆ ಏರಿಸಿ ಕೊಡಬೇಕಾಗಿಯೂ ಮತ್ತು ಶಾಲಾ ಹೆ|| ಮಾಸ್ತರಿನ ವಿಷಯವಾಗಿ ಈ ಮೊದಲೆ ಎಷ್ಟೋ ಅರ್ಜಿ ಮತ್ತು ಮೆಮೋರಿಯಲ್ ಸಹ ಕಳುಹಿಸಿದೆವು. ಈವರೆಗೆ ಯಾವದೊಂದು ಹುಕುಂ ದೊರೆಯದ ಕಾರಣ ನಮ್ಮ ದಯಾಳುವಾದ ಹಜರತ್ ಚೀಫ್ ಕಮಿಷನರ್ ಸಾಹೇಬರವರಿಗೆ ಅರಿಕೆ ಮಾಡಿಕೊಳ್ಳಬೇಕೆಂಬ ಕುತೂಹಲದಿಂದ ನಮ್ಮ ಮೆಮೋರಿಯಲಿನ ನಕಲನ್ನು ಕೊಡಗು ಪೇಪರಿನಲ್ಲಿ ಪ್ರಕಟಿಸಿರುತ್ತೇವೆ.

ಕೊಡಗು ಹಜರತ್ ಕಮಿಷನರ್ ಸಾಹೇಬರವರ ಸನ್ನಿಧಿಗೆ—

ಕಿಗ್ಗಟ್ಟುನಾಡು ತಾಲೋಕು ಹುದಿಕೇರಿ ಇಂಗ್ಲಿಷ್ ಸ್ಕೂಲಿಗೆ ಸಮಂಧಪಟ್ಟವರು ಜಾಹೀರು ಮಾಡಿಕೊಳ್ಳುವುದೇನಂದರೆ—ಹುದಿಕೇರಿ ಪ್ರೈಮರಿ ಶಾಲೆಯನ್ನು ಲೋವರ್ ಸೆಕೆಂಡರಿ ಶಾಲೆಯಾಗಿ ಏರಿಸಿ ಕೊಡಬೇಕೆಂಬ ವಿಷಯದಲ್ಲು ತಾರೀಕು 6-2-23 ರಲ್ಲು ಇಲ್ಲಿ ಒಂದು ಮೀಟಿಂಗ್ ಮಾಡಿದಲ್ಲಿ ಆದಿನ ಸುಮಾರು ಇನ್ನೂರು ಜನರಿಗೆ ಸೇರಿದ್ದರು. ಮೆ|| ಇಟ್ಟೀರ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಚರ್ಚಿಸಲಾಯಿತು. ಮೆ|| ಚೊಟ್ಟೇರ ಕಾಳಪ್ಪಯ್ಯನವರು ಮೆ|| ಅಜ್ಜಮಾಡ ಬೋಪಯ್ಯನವರು ಮೆ|| ಪಿ. ಟಿ. ಕುಶಾಲಪ್ಪನವರು ಅನುಮೋದಿಸಿದ ಪ್ರಕಾರ ಈ ಕೆಳಗಿನ ಠರಾವುಗಳು ಪಾಸಾದವು.

1. ಘನಸರ್ಕಾರವನ್ನು ಕುರಿತು ಬೇಡಿಕೊಳ್ಳುವುದೇನಂದರೆ, ಈ ಶಾಲೆಯ ಹೆ|| ಮಾಸ್ತರು ಖಾಲಿಯಾಗಿ 6 ತಿಂಗಳ ಮೇಲಾದಾಗ್ಯು ಇವಾಜಿಗೆ ಮಾಸ್ತರನ್ನು ಕೊಟ್ಟಿರುವುದಿಲ್ಲ. ಇದೆ ಸಮಂಧ ತಾರೀಕು 11-11-22 ರಲ್ಲು ಅರ್ಜಿ ಕೊಡಲಾಯಿತು ಮತ್ತು ಅಮಾಲ್ದಾರ್ ಆಫೀಸರವರಿಗೂ ಜಾಹೀರು ಮಾಡಲಾಗಿ ತಾಬ್ ಮಾಸ್ತರು ಬರಲಿಲ್ಲ.

2. ಅ|| ಇ|| ರೂಬರೂ ಅರಿಕೆ ಮಾಡಿಕೊಂಡಲ್ಲಿ ಒಡನೆ ಹೆ|| ಮಾಸ್ತರನ್ನು ಕಳುಹಿಸಿ ಕೊಡುವುದಾಗಿ ಹೇಳಿದವರು ಕಳುಹಲಿಲ್ಲ.

3. ಸ್ಕೂಲ್ ಬೆಂಚು ಮತ್ತು ಕುರ್ಚಿ ಮೇಜಿನ ವಿಷಯದಲ್ಲಿ ಕೊಟ್ಟ ಅರ್ಜಿಗೆ ಸಹ ಏನೊಂದು ಹುಕುಂ ಸಿಕ್ಕಿರುವುದಿಲ್ಲ.

4. ಈ ಹುದಿಕೇರಿ ಇಂಗ್ಲಿಷ್ ಸ್ಕೂಲ್ ಸುಮಾರು 60-70 ವರ್ಷದಿಂದಲೂ ತಾಲೋಕಿಗೆ ಮಧ್ಯಸ್ಥಳವಾದ ಜಾಗದಲ್ಲಿರುವುದಲ್ಲದೆ, ಜನಭರಿತವಾಗಿಯೂ ಸುಮಾರು ಸರಾಸರಿ 250-300 ಹುಡುಗರು ಸದಾ ಓದುತ್ತಾ ಆಗಾಯಿತಿನಿಂದಲೂ (Good order) ನಲ್ಲು ಇರುತ್ತೆ.

5. ಸ್ಕೂಲ್ ಕಟ್ಟಡವು ತತ್ಕಾಲ ಏರ್ಪಡಿಸಬಹುದಾದ ಲೋವರ್ ಸೆಕೆಂಡರಿ ಕ್ಲಾಸುಗಳಿಗೆ ಅನುಕೂಲವಾದದ್ದೂ ಮೊದಲು ಈಗ ಗರ್ಲ್ಸ್ ಸ್ಕೂಲ್ ಇಟ್ಟಿರುವ ಶಾಲೆಯು ಆ ಮಾನ ಇರುವುದರಿಂದ ಅನುಕೂಲವಾಗಿರುತ್ತೆ.

6. ಲೋವರ್ ಸೆಕೆಂಡರಿ ಕ್ಲಾಸಿಗೆ ಸೇರುವ ಹುಡುಗರಿಗೆ ಬೋರ್ಡಿಂಗ್‌ಗಳಿಗಿಂತಲೂ ಅನುಕೂಲವಾದ ನೆಂಟರ ಸಹಾಯ ಇರುವ ಮನೆಗಳು ಸುತ್ತುಮುತ್ತಲೂ ಇರುವುದರಿಂದ ಯಾವ ಅಡಚಣೆಗಳಿಗೂ ಕಾರಣ ಇರುವುದಿಲ್ಲ.

7. ಈ ಹುದಿಕೇರಿ ಶಾಲೆಯನ್ನು ಕೆಲವು ವರ್ಷದಲೂ ತಾಲೋಕು ಕಚೇರಿಯು ಪೊನ್ನಂಪೇಟೆಗೆ ವರ್ಗಾಯಿಸಿದ ಸಬಾಬು ಲೋಕಲ್ ಫಂಡ್ ಶಾಲೆಯಾಗಿ ಪ್ರೈಮರಿ ಶಾಲೆ ಒಂದು ದಾಕಲು ಮಾಡಿದ್ದು ಪೂರಾ ಅನ್ಯಾಯವಾಗಿದೆ. ಈ ಸ್ಥಳವು ಪೊನ್ನಂಪೇಟೆಗಿಂತಲೂ ಮಧ್ಯಸ್ಥಳವಾಗಿಯೂ ಮತ್ತು ವಿದ್ಯಾಭಿವೃದ್ಧಿಗೆ ಅನುಕೂಲ ಸ್ಥಳವಾಗಿರುತ್ತೆ. ಈಗ ತಾಲೋಕು ಕಚೇರಿಯು ವರ್ಗಮಾಡಲ್ಪಟ್ಟಿರುತ್ತೆ.

8 ಇದ್ದರಿಂದ ಆಗಾಗಾಯಿತೆಂದಲೂ ಪ್ರಖ್ಯಾತಿ ಹೊಂದಿರುವ ಈ ಶಾಲೆಯನ್ನು ಸರ್ಕಾರಿ ಸ್ಕೂಲಾಗಿ ಮಾಡಿ ಸದರಿಗೆ ಕೊಡುವ 1, 2 3 ಫಾರಂಮಿನ ಕ್ಲಾಸುಗಳನ್ನು ಈ ಸ್ಕೂಲಿಗೆ ಏರ್ಪಡಿಸಿ ಕೊಟ್ಟು ಮಕ್ಕಳ ವಿದ್ಯಾಭಿವೃದ್ಧಿಗೆ ತುಂಬಾ ಪ್ರೋತ್ಸಾಹ ಕೊಡಬೇಕೆಂತಲೂ ಈ ಬಾಬಿಗೆ ಇನ್ನು ಹೆಚ್ಚು ಸಾವಕಾಶವಾದರೆ ಹೆ|| ಮಾಸ್ಟರನ್ನು ನೇಮಿಸಿಕೊಟ್ಟು ಈ ತಂದ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿಕೊಡಬೇಕೆಂದು ಅತ್ಯಂತ ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇವೆ ಇದೇ ರಿಜೊಲ್ಯುಶನ್ನು ಲೋಕಲ್ ಗವರ್ನಮೆಂಟ್ ಮುಖ್ಯಾಧಿಕಾರಿಗಳಿಗೂ ಮುಂದರಿಸಿ ಕೊಡಬೇಕು ಬೇಡುತ್ತೇವೆ.

ತಾರೀಕು 1—3—23

ಶೀಘ್ರಗಿ ಘನಸರ್ಕಾರದವರನ್ನು ಬೇಡಿಕೊಳ್ಳುವುದೇನೆಂದರೆ ಹುದಿಕೇರಿ ಕಚೇರಿಯು ಶ್ರೀಮಂಗಲಕ್ಕೆ ವರ್ಗವಾಗಿರುವುದರಿಂದ ಗರ್ಲ್ಸ ಸ್ಕೂಲನ್ನು ಕಚೇರಿಗೆ ವರ್ಗವಾಗಿ ಸಿಗ ಗರ್ಲ್ಸ ಸ್ಕೂಲಾಗಿರುವ ಶಾಲೆಯಲ್ಲಿ 1, 2, 3 ಫಾರಂ ವರಗೆ ಕ್ಲಾಸು ಇಟ್ಟು ಕೊಡಬೇಕಾಗಿ ಬೇಡುತ್ತೇವೆ

ಸ್ತ್ರೀ ದಯಾಳುವಾದ ಹುಜರತ್ ಚೀಫ್ ಕಮಿಷನರ್ ಸಾಹೇಬರವರು ಒಂದಾವೃತ್ತಿ ಈ ಶಾಲೆಗೆ ದಯಮಾಡಿಸಿ ಶಾಲೆ ಹೀನಸ್ಥಿತಿಯನ್ನು ನಾಡಿನವರ ಬಡಸ್ಥಿತಿಯನ್ನು ನೋಡಬೇಕಾಗಿ ಅತಿವಿನಯದಿಂದ ಬೇಡಿಕೊಳ್ಳುತ್ತೇವೆ

C. C. C.

ಕಳದ ಮೇ ತಾರೀಖು 15 ರಲ್ಲು ಮಡಿಕೇರಿ ಮುನ್ಸಿಪಲ್ ಆಫೀಸಿನಲ್ಲು ನಡೆದ ಕೊಡಗು ಒಬಿಸಾಸ್ತ್ರ ಸಂಘದ ಕಮಿಟಿ ಮೆಂಬರುಗಳ ಮಿಟಿಂಗಿನ ವಿವರ

ಹಾಜರಿದ್ದ ಮೆಂಬರುಗಳು—ಮೆ|| ಕೆ ಕುಟ್ಟಯ್ಯನವರು ಆರ್ ಪ್ರೆಸಿಡೆಂಟ್, 2 ಮೆ|| ಬಿದ್ದಂಡ ಸುಬ್ಬಯ್ಯನವರು, 3 ಮೆ|| ... ಚಿಣ್ಣಪ್ಪನವರು, 4 ಮೆ|| ಬಲ್ಲಚಂಡ ಬೆಳ್ಯಪ್ಪನವರು 5 ಮೆ|| ಚಂಗಂಡ ಕುಟ್ಟಪ್ಪನವರು ಮೆ|| ಕೋಕೇರಿರ ತಿಮ್ಮಪ್ಪನವರು 7. ಮೆ|| ಬಿದ್ದಾಟಂಡ ಮಾದಪ್ಪನವರು 8 ಮೆ|| ಕೆಂಬಡತಂಡ ಮೊಣ್ಣಪ್ಪನವರು ಮೆ|| ಯಸ್. ಯಂ. ಪಿಂಟೋರವರು 10. ಮೆ|| ಬಿ ಯಂ ಕಾರ್ಯಪ್ಪನವರು 11 ಮೆ|| ಸಿ ಯಸ್. ವೆಂಕಪ್ಪಯ್ಯನವರ, ಬಿ ಎ ಬಿ ಎಲ್

1. ಗವರ್ನಮೆಂಟ ಆಫ್ ಇಂಡಿಯಾದವರು ಬ್ರೀಟ ಆಫ್ ಕಂಟ್ರೋಲ್ ಅನ್ನು 1926 ನೇ ಇಸವಿ ಏಪ್ರಿಲ್ 1 ರಿಂದ ತೆಗೆಯುವದಾಗಿಯೂ, ಸ್ಥಳೀಯ ಸರ್ಕಾರದವರು ಬೇಕಾದ ಸ್ಟಾಫ್ ಅವಶ್ಯವಿರುವ ರೀತಿಯಿಂದ ಪ್ರತ್ಯೇಕ ಪ್ರತ್ಯೇಕ ಕಾನೂನು ಮಾಡಿಕೊಳ್ಳಬಹುದೆಂತಲೂ ತಿಳಿಸಿ ಈ ಸಂಗತಿಯನ್ನು ಇಟ್ಟು ಕೆಲಸಮಾಡಿಸುವ ಜನರಿಗೆಲ್ಲಾ ಮುಂದಾಗಿ ಈ ದೇಶದ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸಬೇಕೆಂದು ಒದಿದ ಕಾಗದವನ್ನು ಕಮಿಷನರ್ ಸಾಹೇಬರು ಸಂಘಕ್ಕೆ ಕಳುಹಿಸಿದ್ದರು ಇದರ ಮೇಲೆ ಚರ್ಚೆಗೆ ಗವರ್ನಮೆಂಟ ಆಫ್ ಇಂಡಿಯಾದವರು ಅದನ್ನು ದೃಢಪಡಿಸುವುದಕ್ಕೆ ಕಾರಣವಿಲ್ಲವೆಂತಲೂ, 1920 ನೇ ಇಸವಿಯಲ್ಲಿ ಆದ ಒಪ್ಪಂದಗಳಿಂದ ಆಳಿಟ್ಟು ಕೆಲಸಮಾಡುವವರಿಗೆ ಬಹಳ ತೊಂದರೆಯಾದ್ದರಿಂದ ಅದನ್ನು ಪಡಿಮಾರ್ಚದ ಅಕಿನರು ಸ್ಥಳೀಯ ಸರಕಾರದವರು ಅದನ್ನು ನಾಡಿಕೊಡಬೇಕೆಂತ ತಿಳಿಸಿಕೊಳ್ಳುವಂತೆ ಫೈಸಲಾಯಿತು

2 ಕೊಡಬೇಕಾದ ಕರುಮಾನುವ ಆರ್ಗನೈಜರ್ ಅವರು ಮಾಡುವ ಕೆಲಸದ ಶೇಕಡ 25 ರಷ್ಟು ಕಮಿಶನ್ ಕೊಡುವ ಶರತ್ತಿನ ಮೇಲೆ ನೇಮಿಸಬೇಕೆಂತ ಫೈಸಲಾಯಿತು

3 ಅಂಥಾ ಆರ್ಗನೈಜರಿಗೆ ತಿಂಗಳಿಗೆ 50 ರೂಪಾಯಿ, ರೆ 250 ರೂಪಾಯಿಗೆ ಜಾಮೀನು ಅವನು ಮೆಂಬರ್ ನ ಮೊಬಲಗಿನ ಕಮಿಶನಿಂದ ವಾಪಸು ಕೊಡುವ ಶರತ್ತಿನಿಂದ ಅದನ್ನು ಕೊಡಬಹುದೆಂತಲೂ. ಇದರ ಆತನು ಕಳಗಿನ ಶರತ್ತುಗಳಿಗೆ ಒಳಪಟ್ಟಿರಬೇಕೆಂತಲೂ ಫೈಸಲಾಯಿತು

(1) ಈ ಅಡ್ವಾನ್ಸು ಮೊಬಲಗನ್ನು ತನ್ನ ಕಮಿಷನ್ ಮೊಬಲಗಿನಿಂದ ಭರ್ತಿಮಾಡಿ ಕೊಡುವುದಕ್ಕೂ ತನ್ನ ಕೈಗೆ ಸಿಕ್ಕ ಹಣದ ಜವಾಬ್ದಾರಿಗೂ ಇಬ್ಬರನ್ನು ಜಾಮೀನು ಕೊಡಬೇಕು

(2) ಕಮಿಷನ್ ಮೊಬಲಗನ್ನು ಆಫೀಸಿನಿಂದ ಹೊಂದಬೇಕೇ ಹೊರತು ತಾನು ವಸೂಲ್ಮಾಡುವ ಮೊಬಲಗಿನಲ್ಲಿ ವಜಾಮಾಡಿಕೊಳ್ಳಕೂಡದು.

(3) ತನ್ನ ಕೈಯಲ್ಲಿ ಯಾವತ್ತಲೂ 50 ರೂಪಾಯಿಗಿಂತ ಹೆಚ್ಚಾಗಿರಕೂಡದು

(4) ಮುಂದಿನ ಜನರಲ್ ಮೀಟಿಂಗಿನವರೆಗೂ ಕೆಲಸ ಕೊಡುತ್ತಾ ಇರಬೇಕು

(5) ಕಮಿಟಿಯವರು ಯಾವತ್ತಲಾದರೂ ಇವರನ್ನು ಸದಿಂದ ವಜಾಮಾಡಬಹುದು.

(6) ಸಂಘದ ಉದ್ದೇಶಗಳನ್ನು ಪ್ರಚಾರವುಗಳನ್ನು ಜಾಹಿರಾತಿಗೆ ಬೇಕಾದ ಕೆಲಸಗಳನ್ನೆಲ್ಲ ಮಾಡಬೇಕು.

(7) ಆಫೀಸಿನ ಮೇನೇಜ್...

4. ಈ ಆರ್ಗನೈಜರ್ ಕೆಲಸಕ್ಕೆ ಇಚ್ಛೆ ಇರುವವರು ಮೇ ತಾರೀಖು 31 ರ ಒಳಗೆ ಅರ್ಜಿ ಬರೆದುಕೊಳ್ಳಬೇಕೆಂತ ಪ್ರಕಟಿಸಬೇಕು.

5 ಮೆ|| ಚಂಗಂಡ ಕುಟ್ಟಪ್ಪನವರ ಕೆಲಸವು ಮೇ ತಾರೀಖು ಆಖೈರಿಗೆ ಪೂರೈಸಿತು ಎಂತ ಫೈಸಲಾಯಿತು.

6 ಮೆ|| ಬಲ್ಯಂಡ ಪೂವಯ್ಯನವರು ತಮ್ಮ ಇತರ ಕೆಲಸದೊಂದಿಗೆ ಸಂಘದ ಕ್ಲಾರ್ಕ್ ಕೆಲಸ ಸಹ ಮಾಡುವ ದಕ್ಕೆ ಹತ್ತುರೂಪಾಯಿ ಎಲೋಪಿನ್ಸ ಕೊಡಬೇಕೆಂತ ಫೈಸಲಾಯಿತು. ಇದು ಹಂಗಾಮಿ ಏರ್ಪಾಡಾಗಿದೆ

ಕೆ ಕುಟ್ಟಯ್ಯ

ಪ್ರೆಸಿಡೆಂಟರು.

ಕಳದ ಮೇ ತಾರೀಖು 31 ರಲ್ಲು ಮಡಿಕೇರಿ ಮುನ್ಸಿಪಲ್ ಆಫೀಸಿನಲ್ಲಿ ನಡೆದ ಕೊಡಗು ಜಮಾಬಂದಿ ಸಂಘದ ಕಮಿಟಿ ಮೀಟಿಂಗಿನ ವಿವರ.

ಹಾಜರಿದ್ದ ಮೆಂಬರುಗಳು—ಮೆ|| ಕೆ ಕುಟ್ಟಯ್ಯನವರು ಆರ್. ಪಿ ಪ್ರೆಸಿಡೆಂಟರು 2 ಮೆ|| ಯಸ್ ಆರ್ ಸುಬ್ಬಯ್ಯನವರು, 3, ಮೆ|| ಯಸ್. ಯಂ. ಪಿಂಟೋರವರು, 4 ಬಿ ಯಂ ಕಾರ್ಯಪ್ಪನವರು. 5, ಮೆ|| ಚಂಗಂಡ ಕುಟ್ಟಪ್ಪನವರು. 6 ಮೆ|| ಕರ್ಣಕ್ಕಿ ಪುಟ್ಟಯ್ಯನವರು 7 ಮೆ|| ಚೋನಿರ ಕರುಂಬಯ್ಯನವರು 8 ಮೆ|| ಚಾಂಪು ಕಾಳಪ್ಪನವರು, 9, ಮೆ|| ಕೆಂಬಡತಂಡ ಮೊಣ್ಣಪ್ಪನವರ, 10 ಮೆ|| ಬಿದ್ದಾಟಂಡ ಮಾದಪ್ಪನವರು, 11 ಮೆ|| ಬಿದ್ದಂಡ ಸುಬ್ಬಯ್ಯನವರು 12 ಮೆ|| ಸಿ. ಯಸ್ ವೆಂಕಪ್ಪಯ್ಯನವರು, ಬಿ ಎ.ಬಿ ಎಲ್. ಸೆಕ್ರೆಟರಿ, ಮೆ|| ಮಾಚೀರ ಅಣ್ಣಯ್ಯನವರು

1. ಮೊದಲಿನ ಅಂದರೆ ತಾ|| 15—5—23 ರ ಮೀಟಿಂಗಿನ ಪ್ರೋಸಿಡಿಂಗ್ಸ್ ಓದಿ ಒಪ್ಪಲಾಯಿತು

2 ತಾರೀಖು 15 ರ ಮೀಟಿಂಗಿನ 3 ನೇ ಠರಾವಿನ ಶರತ್ತಿಗೆ ಅನುಗುಣವಾಗಿ ಮೆ|| ಬಿದ್ದಂಡ ಕಾರ್ಯಪ್ಪನವರನ್ನು ಆರ್ಗನೈಜರಾಗಿ ಏರ್ಪಾಡಾಯಿತು

3 ಮೆ|| ಚಂಗಂಡ ಕುಟ್ಟಪ್ಪನವರು ತಾನು ಆರ್ಗನೈಜರಾಗಿದ್ದಾಗ ತನಗೆ ಆದ ಒನ್ ಚಾರ್ಜ 27 ರೂಪಾಯಿಗಳನ್ನು ಕೊಡಿಸಿಕೊಡಬೇಕೆಂತ ಬರೆಕೊಂಡದ್ದಕ್ಕೆ ಒನ್ ಚಾರ್ಜ ಎಂತ ಕೊಡಲು ಆಗುವುದಿಲ್ಲವಾಗಿಯೂ, ಅವರು 800 ರೂಪಾಯಿವರೆಗೆ ವಸೂಲ್ಮಾಡಿ ಸಂಘಕ್ಕೆ ಒಳ್ಳೆ ಕೆಲಸ ಮಾಡಿದ್ದರಿಂದ ಉಚಿತವಾಗಿ 25 ರೂಪಾಯಿ ಕೊಡಬಹುದೆಂತ ಮಂಜೂರಾಯಿತು,

4 ಮೆ|| ಬಲ್ಲಚಂಡ ಪೊನ್ನಪ್ಪನವರು ಕಳದ ಏಪ್ರಿಲ್ ತಾರೀಖು 22 ರವರೆಗೆ ಕೆಲಸಮಾಡಿದ್ದರಿಂದ ಅವರಿಗೆ ಸಂಬಳ ಕೊಡಬೇಕಾಗಿ ಫೈಸಲ್ ಆಯಿತು

5 ಮೆ|| ನಿತ್ತ ಸುಬ್ಬಯ್ಯನವರು ತಮ್ಮಲ್ಲಿ ಸಂಘದ ಹಣ ಬಲವು ಇದೆ ಎಂತ ತಿಳಿಸದ್ದರಿಂದ ಜಾಗ್ರತೆಯಾಗಿ ಕಳುಹಿಸಿಕೊಡಬೇಕೆಂತ ಕಾಗದ ಬರೆಯಲಾಯಿತು

6 ಮೆ|| ಬಿದ್ದಂಡ ಕಾರ್ಯಪ್ಪನವರ ಆರ್ಗನೈಜರಾಗಿ ನೇಮಿಸಲ್ಪಟ್ಟಿದ್ದರಿಂದ ಅವರ ... ಮೆಂಬರತನ ... ಯಿತೆಂತ ಫೈಸಲ್ ಆಯಿತು

7 ಇನ್ನೊಂದು ಕಮಿಟಿ ಮೀಟಿಂಗನ್ನು ಪಿ ರಾರಾಜೇಂದ್ರಪೇಟೆಯಲ್ಲಿ ಮಾಡಬೇಕೆಂತ ತೀರ್ಮಾನವಾಯಿತು

ಕೆ. ಕುಟ್ಟಯ್ಯ

ಪ್ರೆಸಿಡೆಂಟರು.

ಕಳದ ಮೇ ತಾರೀಖು 31 ರಲ್ಲು ಮಡಿಕೇರಿ ಮುನ್ಸಿಪಲ್ ಆಫೀಸಿನಲ್ಲಿ ನಡೆದ ಕೊಡಗು ಡೈರೆಕ್ಟರುಗಳ ಮೀಟಿಂಗಿನ ವಿವರ

ಹಾಜರಿದ್ದವರು—(1) ಮೆ|| ಕೆ ಕುಟ್ಟಯ್ಯನವರು ಆರ್ ಪಿ ಅಧ್ಯಕ್ಷರು, (2) ಮೆ|| ಸಿ ಯಸ್. ವೆಂಕಪ್ಪಯ್ಯನವರು ಬಿ ಎ ಬಿ ಎಲ್ (3) ಯಸ್ ಆರ್ ಸುಬ್ಬಯ್ಯನವರು, (4) ಬಿ ಯಂ ಕಾರ್ಯಪ್ಪನವರು, (5) ಮೆ|| ಪಿ ಬಿ ವೇದಪ್ಪನವರು, ಬಿ ಎ ಬಿ ಎಲ್.

1 ಪ್ರೆಸ್ಸಿನ ಮಾಲೀಕರು ಕಳುಹಿಸಿದ ಒಪ್ಪಂದದ ಮಸೂದೆಯನ್ನು ಓದಿ ಅಧ್ಯಕ್ಷರು ಪತ್ರಿಕೆ ಎಡಿಟರ್ ಸಹ ಈ ಮಸೂದೆಯನ್ನು ಚೆನ್ನಾಗಿ ಪರೀಕ್ಷಿಸಿ ಒಪ್ಪಂದ ರಿಜಿಸ್ಟರು ಮಾಡಿಸಬೇಕಾಗಿ ಫೈಸಲಾಯಿತು.

2 ಪ್ರಿಂಟರಿಗೆ 600 ರೂಪಾಯಿ ಅಡ್ವಾನ್ಸನ್ನು ಕಂಪನಿಯಿಂದ ಕೊಟ್ಟು ಚಂದಾ ಮೊಬಲಗಿಂದ ಬರ್ತಿಮಾಡಿಕೊಳ್ಳಬೇಕಾಗಿ ಫೈಸಲಾಯಿತು.

3 ಶನಿವಾರಸಂತೆ, ಪೊನ್ನಂಪೇಟೆ, ಹುದಿಕೇರಿ, ಸೋಮವಾರಪೇಟೆ ನಾಪೋಕ್ಲು, ವೀರಾಜೇಂದ್ರಪೇಟೆ ಕೊಡ್ಲಿಪೇಟೆ, ಶ್ರೀಮಂಗಲ ಪೇಟೆ ಸಿದ್ದಾಪುರ ಪೇಟೆ, ಭಾಗಮಂಡಲ, ಈ ಸ್ಥಳಗಳಿಂದ ಕಾಲಂ ಬರೆ ಬರತಕ್ಕ ಕಳುಹಿಸಲಿಕ್ಕೆ ಏಜೆಂಟರನ್ನು ಏರ್ಪಡಿಸಬೇಕೆಂತಲೂ, ಅವರ ಈ ಕೆಲಸಕ್ಕೆ ಮತ್ತು ತಗಲುವ ಖರ್ಚಿಗೆ ಪ್ರತಿಯಾಗಿ ಪತ್ರಿಕೆಯನ್ನು ಮಾಫಿಯಾಗಿ ಕೊಡಬೇಕೆಂತಲೂ ಫೈಸಲಾಯಿತು

ಕೆ ಕುಟ್ಟಯ್ಯ,

ಕಾರ್ಯಾಧ್ಯಕ್ಷರು.

ಕೊಡಗು ದೇಶದಲ್ಲಿ ಹಾಲಿ ಉಪಯೋಗವಾಗುತ್ತಿರುವ ಅಳತೆ ಮಾನ, ಸೇರು, ಪರೆ, ತೂಕದ ಬಟ್ಟುಗಳು ಇತ್ಯಾದಿಗಳ ಕುರಿತು, (ಬರೆದು ಬಂದದ್ದು.)

ಈ ಕೊಡಗು ದೇಶದಲ್ಲಿ ದೇಶದಲ್ಲಿ ಯಾವದೊಂದು ನಿಯತ (definite) ಇಲ್ಲವೆಂದರೆ ಪ್ರತಿ ಒಂದು ವಿಶೇಷ (peculiar) ಮೊದಲಾದ ಯಾವ ದರೂ ಆದರೆ ಒಂದು ವಿಧದಲ್ಲಿ ಚೆನ್ನಾಗಿ ಆಲೋಚಿಸಿ ನೋಡಿದರೆ ಒಪ್ಪಬೇಕಾದ ಸಂಗತಿಯೇ ಸರಿ ಆ ಪ್ರಕಾರ ಅನೇಕದಲ್ಲಿ ಉಪಯೋಗಿಸುವ ಮಾನ ಸೇರು, ಪರೆ ತೂಕದಲ್ಲಿ ಉಪಯೋಗಿಸುವ ಬಟ್ಟುಗಳು, ಕಲ್ಲುಗಳು ಎಂದು ಹೇಳಬಹುದು ಇವುಗಳ ಬದ್ಧತೆ ನಿಂತಿತವಾಗಿರುವುದರಿಂದುಂಟಾಗುತ್ತಿರುವ ನಷ್ಟ ಸಂಗತಿಗಳನ್ನು ಇನ್ನೊಂದು ವರ್ತಮಾನದಲ್ಲಿ ಈ ದೇಶವು ಈ ದೇಶದ ಕಮಿಷನರಾಗಿದ್ದ ಡೇವಿಡ್ ಸಂನ್ ಧೊರೆಯವರು ಇಂಥ ನಷ್ಟಕಷ್ಟಗಳನ್ನು ಹೋಗಲಾಡಿಸುವ ಉದ್ದೇಶದಿಂದ ಇಡೀ ದೇಶದಲ್ಲಿ ಒಂದೇ ಪರಿಮಾಣದ ಅಳತೆಯ ಮಾನ, ಸೇರು, ಪರೆ ತೂಕದ ಬಟ್ಟುಗಳು ಕಲ್ಲುಗಳು ಸರ್ಕಾರಿ ಶೀಲ್ ಹಾಕಿ ಚಲಾಯಿಸಲ್ಪಡಬೇಕೆಂಬದಾಗಿ ಆಲೋಚಿಸಿ ಬಹಳ ಶ್ರಮತೆಗೆದುಕೊಂಡು ಆ ಬಗ್ಗೆ ಅವಶ್ಯವಾದ ಎಲ್ಲಾ ಸಂಗತಿಗಳನ್ನು ವಿವರಣಾಸಗಳನ್ನು (information) ಜೊತೆಗೂಡಿಸಿಕೊಂಡಿದ್ದರು ಆದಾಗ್ಯೂ ಕಡೆಗೆ ಯಾವ ಕಾರಣಕ್ಕಾಗಿಯೋ ಅವರ ಪ್ರಯತ್ನಗಳು ಸಫಲಗೊಳ್ಳದೆ ಹೋದವು. ಆಗಾಗಾಯಿತೆಂದ ಯಾವ ಬೇರೆ ಕಮಿಷನರುಗಳು ಸದರಿ ಸಂಗತಿಗಳನ್ನು ಕಡೆಗೆ ಹಚ್ಚಿಕೊಳ್ಳಲಿಲ್ಲ ಹ್ಯಾಗೂ ಈ ದೇಶದಲ್ಲಿ ಹಲವು ಕಡೆ ಹಲವು ತರದ ಅಳತೆಯ, ತೂಕದ ಸಾಮಾನುಗಳು ಉಪಯೋಗಿಸಲ್ಪಡುತ್ತಿವೆಯಾಗಿಯೂ ಇದರಿಂದ ಜನರೊಳಗೆ ಬಹಳ ಅಸಮಾಧಾನ ಇದೆಯಾಗಿಯೂ ಖಂಡಿತ ಹೇಳಬಹುದು. ಅಂಗಡಿ ವರ್ತಕನು ಅಳತೆ ಇಲ್ಲದೆ ತೂಗಿಕಟ್ಟಿದ್ದನ್ನು ಸಾಮಾನು ಕೊಳ್ಳುವವನು ತೆಗೆದುಕೊಂಡು ಹೋಗಬೇಕು. ಅಕ್ಕಿ ಭತ್ತ, ಕಾಫಿ ಇತ್ಯಾದಿ ಕೊಡುವವನು ವರ್ತಕನು ತರುವ ಸೇರು ಇಲ್ಲವೇ ಪರೆಯಲ್ಲಿ ಕೊಟ್ಟೇತೀರಬೇಕು. ಕಾಫಿ ಇಲಾಚಿ ತೂಗಿಕೊಡುವಾಗ ವರ್ತಕನು ತರುವ ಇಷ್ಟತ್ತೆಂಟೋ, ಇಪ್ಪತ್ತೇಳುವರೆಯೋ ರಾತ್ತಲ್ಲು ಎಂದು ಹೇಳಿ ತೂಗಿಸಿಕೊಂಡು ಮಣವಿನ ಕಲ್ಲು ಎಂದು ಇದೆ ಎಂದು ಕೊರಟು ಹೋಗುವನು. ಒಬ್ಬ ಕೃಷಿಯಿಂದ ಪದಾರ್ಥವನ್ನು ಬೆಳೆಯಿಸುವ ಬಡವ್ಯಕ್ತಿಗೆ ತನ್ನ ಸ್ವಂತ ತೂಕದ ಬಟ್ಟುಗಳ, ಮಣವಿನ ಕಲ್ಲುಗಳ, ಬೇರೆ ತೂಗುವ ಇಲ್ಲವೇ ಅಳತೆ ನೋಡಲಿಕ್ಕೆ ಅವಶ್ಯ ಇರುವ ತಕ್ಕಡಿ, ಸೇರು ಪರೆ ಇತ್ಯಾದಿಗಳ ಇಟ್ಟುಕೊಳ್ಳುವದು ಅವನ ಮೊದಲು ಕೊಂಡರೂ ಇಟ್ಟುಕೊಳ್ಳುವುದು ಪೂರಾ ಅಸಾಧ್ಯವೇ ಸರಿ ಕೊಳ್ಳುವ ವರ್ತಕನು ಹೇಳುವ ಮಾತು ಸರಿ, ತಪ್ಪು ಎಂಬದಾಗಿ ಪರೀಕ್ಷಿಸಲು ಅವನಿಗೆ ಯಾವ ದಾರಿಯೂ ಇಲ್ಲ ಸರ್ಕಾರಿ ಶೀಲಾದರೂ ಅಂಥ ಅಳತೆ, ಇಲ್ಲವೆ ತೂಗುವ ಸೇರು ಪರೆ, ಬಟ್ಟುಗಳು, ಮಣವಿನ ಕಲ್ಲುಗಳು ಇವೇ ಮೊದಲಾದವುಗಳ ಮೇಲೆ ಇರುವ ಪಕ್ಷ ಅವನಿಗೆಷ್ಟು ಮನಃಸಮಾಧಾನವಿರುತ್ತದು ಎಂಬುವತ್ತು, ಹನ್ನೆರಡು ಸೇರಿನ ಪರೆಗಳು ಇವೆ ಸೇರಿನಲ್ಲಿ ಹೆಚ್ಚು ಕಮ್ಮಿ ಇದೆ ಮಣವಿನ ಕಲ್ಲುಗಳ ಪರೀಕ್ಷಿಸಿದರೆ ಯಾವ ಎರಡು ಒಂದೇ ತರ ಕಲ್ಲುಗಳು ಸರಿ ತೂಗವು. ಅದಕ್ಕೇನಾದರೂ ಒಬ್ಬ ಮಜಾಯಿಸಿಗೆ ಒಂದೇ ಒಬ್ಬವುದು. ಸೇರು ಮಾನ ಪರೆಗಳು ಬಹಳ ದಿನ ಉಪಯೋಗಿಸುತ್ತಾ ಒಂದಲ್ಲಿ ... ಸವೆಯುತ್ತಾ ಬರುದು ಕೊಳ್ಳುವವನಿಗೆ ನಷ್ಟವುಂಟಾಗುವದೆಂದು ಹೇಳಬೇಕಿಲ್ಲ. ಅನುಮಾನ ಇದರು. ವರ್ತಕನು ತನ ಲಾಭವನ್ನೇ ಬಯಸುವವನಾಗಿರುತ್ತಾ, ತನ್ನ ಅನುಕೂಲಕ್ಕೆ ಸರಿಯಾದ ಅಳತೆ ಮತ್ತು ತೂಕದ ಸಾಮಗ್ರಿಗಳನ್ನು ಯಾವಾಗಲೂ ಬಳಸಿಕೊಂಡಿರುವನು ಆದ್ದರಿಂದ ಅವನು ಎಂದೂ ನಷ್ಟಹೊಂದನು ಎಲ್ಲಿ ಹೋದರೂ ಬಡವ್ಯಕ್ತಿ ಭಾರಣೆಯಲ್ಲೂ, ಕಡಿಮೆಯಲ್ಲೂ ನಷ್ಟಹೊಂದುವವನಾಗಿರುವನು ಕೊಡಗಿನ ಅಕ್ಕಪಕ್ಕದ ಪ್ರದೇಶಗಳಲ್ಲಿ ಸರ್ಕಾರದವರು ಶೀಲ್ ಹಾಕಿ ಕೊಟ್ಟಿರುವ ಸೇರು ಪರೆ ಬಟ್ಟುಗಳು ಮಣವಿನ ಕಲ್ಲುಗಳೇ ಜಾರಿಯಲ್ಲಿರುವುದಾಗಿ ತಿಳಿಯಬರುತ್ತದೆ ಉಪಯೋಗಿಸಿ ಉಪಯೋಗಿಸಿ ಬಹಳ ಸವೆದ ತೂಗುವ ಅಳತೆಯ ಮತ್ತು ತೂಗುವ ಸಾಮಗ್ರಿಗಳನ್ನು ಉಪಯೋಗಿಸತಕ್ಕದ್ದಲ್ಲ ಕಾನೂನು ಸಹ ಇದೆಯೆಂದು ಕೇಳಬರುತ್ತದೆ. ಸರ್ಕಾರದವರಿಂದ ಪದಾರ್ಥಗಳ ಬೆಲೆ ಸಿಕ್ಕೊಳ್ಳುವವರಾಗಲಿ ವ್ಯಾಪಾರ ಮಾಡುವ ಯಾರೇ ಆಗಲಿ ತಮ್ಮ ಸ್ವಂತ ಖರ್ಚಿನಿಂದ ಅಳತೆಯ ಮತ್ತು ತೂಗುವ ಅವರ ವಿವಿಧ ಸಾಧನಗಳನ್ನು (ಮಾನ ಸೇರು, ಪರೆ ಬಟ್ಟುಗಳು ಮಣವಿನ ಕಲ್ಲುಗಳು) ತಯಾರಿಸಿಕೊಂಡು ಅಳತೆ ಇಲ್ಲವೇ ತೂಕ ನೋಡಿದರಿಂದ ಸರ್ಕಾರಿ ಶೀಲ್ ಹಾಕಿಕೊಳ್ಳುವ ಕಾನೂನು ಮಾಡಿದರೆ ಮುಖ್ಯವಾಗಿ ಶೀಲ್ ಇಲ್ಲದೆ ಇರುವ ಯಾವ ಅಳತೆಯು ಇಲ್ಲವೇ ತೂಕದ ಸಾಧನಗಳ (neccessary measures and weights) ಯಾವದೂ ಈ ದೇಶದಲ್ಲಿ ಉಪಯೋಗಿಸಕೂಡದೆಂಬ ಕಾನೂನು ಇದ್ದೇ ಇರಬೇಕು ಸರ್ಕಾರದವರು ಸಹ ಒಬ್ಬನಿಗೆ ಲೈಸನ್ಸ್ ಕೊಟ್ಟು ಅವನ ಮೂಲಕವೇ ಅಂಥಾವುಗಳನ್ನು ಮಾಡಿಸಿ ಮಂಜೂರಿನಿಸಿದ ಸಾಕಷ್ಟು ಅವುಗಳಿಗೆ ಶೀಲ್ ಹಾಕಿಸಿ ಇಷ್ಟೇ ಕ್ರಯ ಕೊಡತಕ್ಕದ್ದರಿಂದ

ಲೈಸೆನ್ಸು ಶಾಸನ ಮೂಲಕ ನೋರಾಟವಾಗುವಂತೆ ಅನುಕೂಲಪಡಿಸಿ ಕೊಡಲೂ ಬಹುದು. ಅಂದರೆ ಮುಖ್ಯಾಂಶ, ಈ ದೇಶದಲ್ಲಿ ಒಂದೇ ತರದ ಅಳತೆ, ತೂಕದ ಸೇರು, ಪರೆ, ಒಟ್ಟುಗಳು, ಮಣವಿನ ಕಲ್ಲುಗಳು (Standard weights and measures) ಸರಕಾರ ಶೀಲ್ ಉಳ್ಳವುಗಳಾಗಿರಬೇಕೆಂಬದ್ದೇ. ಹಾಗಾದರೆ ಬಡಜನರಿಗೆ ಕ್ಷೇಮವಾಗುವುದು. ದೊಡ್ಡವರು ಅನುಕೂಲಸ್ಥರೆನಿಸಿಕೊಂಡಿರುವವರಾದರೋ ಮಣವಿನ ಕಲ್ಲುಗಳ, ಒಟ್ಟುಗಳ, ಪರೆ, ಸೇರುಗಳ ಪರೀಕ್ಷಿಸಿ ನೋಡಲು ಸಮಯವೂ ಅನುಕೂಲವೂ ಇರಬಹುದು. ಇಲ್ಲವೇ ಅವರು ಸ್ವಂತ ಸಾಹಿತ್ಯಗಳನ್ನು ಇಟ್ಟುಕೊಳ್ಳಲೂ ಬಹುದು. ಹ್ಯಾಗೂ ಒಂದೇ ತರದ ಅಳತೆ ಮತ್ತು ತೂಕದ ಸಾಹಿತ್ಯಗಳು (Uniform weights and measures) ಇಡೀ ದೇಶದಲ್ಲಿ ಇರುವುದು ಉತ್ತಮವೆಂದು ಸರ್ವರೂ ಒಪ್ಪಿಕೊಳ್ಳುವ ಸಂಗತಿಯಾಗಿದೆ. ಶೀಲ್ ಹಾಕಿ ಕೊಡುವ (weights and measures) ಸೇರು ಪರೆ, ಒಟ್ಟುಗಳು, ಇತ್ಯಾದಿಗಳನ್ನು ಐದು ವರ್ಷಕೊಂದಾವರ್ತಿ ಬದಲಾಯಿಸುವ ರೂಲ್ ಇರಬೇಕು. ಶೀಲ್ ಹಾಕಿದ Weights and measures ದೇಶಕ್ಕೆಲ್ಲ ಹಂಚಿದ ನಂತರ ಒಂದು ತಾರೀಖು ಗೊತ್ತುಮಾಡಿ ಆ ತಾರೀಖಿನಂತರ ಹಳೇ ನಮೂನೆಯ ಯಾವ ತರದ Weights and measures ಸೇರು, ಪರೆ ಒಟ್ಟುಗಳು ಮಣವಿನ ಕಲ್ಲುಗಳು ಉಪಯೋಗಿಸಬಾರದಾಗಿ ಸರ್ಕಾರದವರು ಇಸ್ತಿಹಾರ್ ಹಾಕಿಸಬೇಕು. ಈ ಮೇಲ್ಕಂಡ ಸಂಗತಿಗಳನ್ನು ಪ್ರಜಾಹಿತಚಿಂತಕರಾಗಿರುವ ಸರ್ಕಾರದವರು ಕೂಡಲೇ ಗಮನಕ್ಕೆ ತಂದು ಅವಶ್ಯ ತೋರಿದ ರೀತಿ ಜಾರಿಗೆ ತಂದಾರಾಗಿ ಕೋರಲ್ಪಟ್ಟಿದೆ.

ನಮ್ಮ ಆಶೆ.

ಅನುವಾದಕ.—ಗಣೇಶ ರಾಮ ಯಾಜಿ, ರಾಷ್ಟ್ರೀಯ ಶಾಲೆ ಕುಮಟೆ.

(ಜಯಕರ್ನಾಟಕದಿಂದ)

ನಮ್ಮಲ್ಲಿ ಬಾಹುಬಲವಿಲ್ಲ, ಯುದ್ಧೋಪಕರಣಗಳಿಲ್ಲ; ಶಿಕ್ಷಣವಿಲ್ಲ, ರಾಜಶಕ್ತಿಯಿಲ್ಲ, ಅಂದಬಳಿಕ ನಮ್ಮ ಆಶೆಯಾವುದು? ಆ ಬಲವೆಲ್ಲಿ? ಯಾತರ ಭರವಸೆಯಿಂದ ಪ್ರಬಲರೂ, ಸುಶಿಕ್ಷಿತರೂ ಆದ ಯುರೋಪಿಯ ಜನಾಂಗದವರು ಮಾಡುವ ಅಸಾಧ್ಯಕೃತ್ಯವನ್ನು ಸಾಧಿಸುವದಕ್ಕೆ ಕಷ್ಟಪಡುತ್ತಿದ್ದೇವೆ? ಪಂಡಿತರೂ, ಜ್ಞರೂ ಆದ ವ್ಯಕ್ತಿಗಳು ಇದು ಬಾಲಚೇಷ್ಟೆಯೆಂದು ಹೇಳುತ್ತಾರೆ. ಉಚ್ಚವಾದ ಆದರ್ಶದ ಮದದಿಂದ ಭ್ರಾಂತರೂ, ಅವಿವೇಕಿಗಳೂ ಆದ ಜನರಿಗೆ, ಯುದ್ಧವೊಂದೇ ಸ್ವಾತಂತ್ರ್ಯಸಂಪಾದನೆಯ ಮಾರ್ಗವೆಂದು ಕನಸುಬೀಳುತ್ತಿರುವುದು. ನಮ್ಮಲ್ಲಿ ಯುದ್ಧಮಾಡುವ ಶಕ್ತಿಯಿಲ್ಲ. ಯುದ್ಧಮಾಡುವದಕ್ಕೆ ನಮ್ಮ ಒಪ್ಪಿಗೆಯೂ ಇಲ್ಲ. ಆದರೆ ಬಾಹುಬಲವೇ ಶಕ್ತಿಯ ಮೂಲಾಧಾರವೋ ಅಥವಾ ಆ ಶಕ್ತಿಯು ಇನ್ನೂ ಗೂಢವೂ ಗಂಭೀರವೂ ಆದ ಉಗಮದ ದೆಸೆಯಿಂದ ಪ್ರಕಟೀಕೃತವಾಗುವದೋ? ಕೇವಲ ಬಾಹುಬಲದಿಂದಲೇ ಯಾವದೊಂದು ವಿರಾಟಕಾರ್ಯವನ್ನೆಸಗುವದು ಅಸಂಭವವೆಂಬುವದನ್ನು ಎಲ್ಲರೂ ಸಮ್ಮತಿಸುತ್ತಿರುವರು. ಒಂದುವೇಳೆ ಪರಸ್ಪರ ವಿರೋಧಿಗಳೂ ಬಲಶಾಲಿಗಳೂ ಆದ ಎರಡು ಜನಾಂಗಗಳಲ್ಲಿ ಸಂಘರ್ಷಣವುಂಟಾದರೆ, ಯಾವ ಜನಾಂಗದ ನೈತಿಕ ಮಾನಸಿಕ ಬಲವು ಅಧಿಕವಾದುದೋ, ಯಾವ ಜನಾಂಗದ ಐಕ್ಯ, ಸಾಹಸ, ಉದ್ಯೋಗ ಕುಶಲತೆ ಉತ್ಸಾಹ ದೃಢನಿಶ್ಚಯ ಸ್ವಾರ್ಥತ್ಯಾಗಗಳು ಮಿಗಿಲಾಗಿರುವವೋ, ಯಾವುದರ ವಿದ್ಯೆ, ಬುದ್ಧಿ, ಚಾತುರ್ಯ, ತೀಕ್ಷ್ಣದೃಷ್ಟಿ, ದೂರದರ್ಶಿತ್ವ, ಉದಾತ್ತಚಿಂತನ ಇತ್ಯಾದಿಗಳು ವಿಕಾಸಹೊಂದಿರುವವೋ ಆ ಜನಾಂಗಕ್ಕೇ ಜಯವು ನಿಶ್ಚಯವಾಗಿ ಲಭಿಸುವುದು. ಬಾಹುಬಲ, ಸಂಖ್ಯೆ, ಉಪಕರಣ ಮೊದಲಾದವುಗಳ ಕೊರತೆಯಿದ್ದರೂ ನೈತಿಕ ಮಾನಸಿಕ ಬಲಗಳ ಪ್ರಭಾವದಿಂದ ಪ್ರಬಲ ಪ್ರತಿರೋಧಿಯನ್ನು ಕೂಡಾ ಜಯಿಸಬಹುದು. ಇತಿಹಾಸದ ಪ್ರತಿಯೊಂದು ಪುಟದಲ್ಲಿಯೂ ಇದಕ್ಕೆ ನಿದರ್ಶನವು ದೊರೆಯುತ್ತಿರುವುದು. ಇದರಿಂದ ಬಾಹುಬಲಕ್ಕಿಂತ ಮಾನಸಿಕ ನೈತಿಕ ಬಲದ ಗುರುತ್ವವು ಮೇಲ್ಪಡುತ್ತದೆ. ಆದರೆ ಬಾಹುಬಲವಿಲ್ಲದಿದ್ದರೆ ನೈತಿಕ ಹಾಗೂ ಮಾನಸಿಕ ಬಲದ ಪ್ರಯೋಜನವೇನಾಗುವದೆಂದು? ಈ ಮಾತೇನೋ ನಿಜ. ಆದರೆ ಭಿನ್ನವಿಚಾರ ಭಿನ್ನಸಂಪ್ರದಾಯ, ಪರಸ್ಪರ ವಿರೋಧಭಾವಗಳುಳ್ಳ ಎರಡು ರಾಷ್ಟ್ರಗಳ ಸಂಘರ್ಷಣೆಯಲ್ಲಿ ಬಾಹುಬಲ, ರಾಜಶಕ್ತಿ, ಯುದ್ಧೋಪಕರಣ ಮುಂತಾದ ಸಾಧನಗಳಿಂದ ಪೂರ್ಣತೆಹೊಂದಿದ ರಾಷ್ಟ್ರಕ್ಕೆ ಪರಾಜಯವೂ ಇವುಗಳ ಅಭಾವವುಳ್ಳ ರಾಷ್ಟ್ರಕ್ಕೆ ವಿಜಯವೂ ಆಗಿರುವದು. ಈ ಮೇರೆಗೆ ವಿಷಮಫಲವುಂಟಾಗುವ ಕಾರಣವೇನು? "ಯತೋಧರ್ಮಸ್ತತೋಜಯಃ" ಎಂಬ ಉಕ್ತಿಗನುಸಾರವಾಗಿ ಧರ್ಮವಿದ್ದಲ್ಲಿ ಜಯವಾಗುವದು. ಆದರೆ ಧರ್ಮಕ್ಕೆ ಶಕ್ತಿಯ ಬೆಂಬಲವಿರತಕ್ಕದ್ದು. ಇಲ್ಲವಾದರೆ ಅಧರ್ಮದ ಅಭ್ಯುತ್ಥಾನವೂ, ಧರ್ಮದ ಗ್ಲಾನಿಯೂ ಸಂಘಟಿಸುವವು. ಕಾರಣವಿಲ್ಲದೆ ಕಾರ್ಯವಾಗದು. ಶಕ್ತಿಯೇ ಜಯಕ್ಕೆ ಕಾರಣವೆಂಬುದು ನಿಜ. ಆದರೆ ಯಾವ ಶಕ್ತಿಯಿಂದ ದುರ್ಬಲರು ಜಯಶಾಲಿಗಳಾಗುವರು ಹಾಗೂ ಪ್ರಬಲರು ಪರಾಜಿತರಾಗುವರು ಇಲ್ಲವೆ ನಾಶಹೊಂದುವರು? ನಾವು ಐತಿಹಾಸಿಕ ದೃಷ್ಟಾಂತಗಳನ್ನೆಲ್ಲ ಸೂಕ್ಷ್ಮರೀತಿಯಿಂದ ಪರೀಕ್ಷಿಸಿದರೆ, ಆಧ್ಯಾತ್ಮಿಕ ಶಕ್ತಿಯ ಬಲದಿಂದಲೇ ಇಂತಹ ಅಘಟಿತಕೃತ್ಯಗಳು ಘಟಿಸುವುವೆಂಬುದು ಗೊತ್ತಾಗುವುದು. ಆಧ್ಯಾತ್ಮಿಕಶಕ್ತಿಯೊಂದೇ ಬಾಹುಬಲವನ್ನು ತುಚ್ಛೀಕರಿಸಿ, ಈ ಜಗತ್ತು ಭಗವಂತನ ಲೀಲಾ ಭೂಮಿಯಾಗಿದ್ದು ಅಂಥವಾದ ಸ್ಥೂಲಪ್ರಕೃತಿಯು ಲೀಲಾಭೂಮಿಯಲ್ಲವೆಂಬುದನ್ನು ವ್ಯಕ್ತಪಡಿಸುತ್ತಿರುವುದು. ವಿಶುದ್ಧವಾದ ಆತ್ಮವೇ ಶಕ್ತಿಯ ಮೂಲಭೂತವಾದ ಝರಿಯು. ಯಾವ ಆದ್ಯ ಪ್ರಕೃತಿಯು ಗಗನಮಂಡಲದಲ್ಲಿ ಸಹಸ್ರಸೂರ್ಯರನ್ನು ಭ್ರಮಣಮಾಡಿಸಬಲ್ಲುದೋ, ಯಾವುದು ಅಂಗುಲಿಸ್ಪರ್ಶದಿಂದಲೇ ಭೂಮಂಡಲವನ್ನೆತ್ತಿ ಮಾನವಪ್ರಾಣಿಯು ಸೃಷ್ಟಿಸಿದ ಪೂರ್ವಗೌರವದ ಚಿಹ್ನಗಳೆಲ್ಲವನ್ನು ಧ್ವಂಸಪಡಿಸಬಹುವುದೋ, ಅಂತಹ ಆದ್ಯಪ್ರಕೃತಿಯು ವಿಶುದ್ಧವಾದ ಆತ್ಮಕ್ಕೆ ಅಧೀನವಾದುದು. ಅದೇ ಪ್ರಕೃತಿಯು ಅಸಂಭವವನ್ನಾಗಿಯೂ ಮೂಕನನ್ನು ವಾಚಾಳನನ್ನಾಗಿಯೂ, ಪಂಗುವನ್ನು (ಹೆಳವನನ್ನು) ಪರ್ವತವನ್ನುಲ್ಲಂಘನೆ ಮಾಡುವವನನ್ನಾಗಿಯೂ ಮಾಡಬಲ್ಲುದು. ಸಮಸ್ತವಾದ ಜಗತ್ತೂ ಆ ಶಕ್ತಿಯಿಂದಲೇ ಸೃಷ್ಟವಾಗಿರುವುದು. ಯಾರ ಆಧ್ಯಾತ್ಮಿಕಬಲವು ವಿಕಾಸಹೊಂದಿರುವುದೋ ಅವರಿಗೆ ಜಯಪ್ರಾಪ್ತಿಗೋಸುಗ ಬೇಕಾದ ಉಪಕರಣಗಳೆಲ್ಲವೂ ತಾವಾಗಿ ಲಭಿಸುವವು. ವಿಘ್ನಗಳು ತಮ್ಮಷ್ಟಕ್ಕೆ ತಾವೇ ಮರೆಯಾಗಿ ಅನುಕೂಲವಾದ ಅವಸ್ಥೆಯನ್ನೊದಗಿಸಿ ಕೊಡುವವು. ಕಾರ್ಯಸಂಪಾದಕತೆಯ ಸಾಮರ್ಥ್ಯವು ತಾನಾಗಿ ಉಂಟಾಗಿ ಅದು ತೇಜಸ್ವಿಯೂ, ತೀವ್ರಗಾಮಿಯೂ ಆಗುವದು. ಯುರೋಪವು ಈಗೀಗ ಈ ಆಧ್ಯಾತ್ಮಿಕಶಕ್ತಿ (Soul force) ಶೋಧವನ್ನು ಮಾಡುತ್ತಿರುವುದು. ಇನ್ನೂ ಅದರಲ್ಲಿ ವಿಶ್ವಾಸವಿಲ್ಲ. ಅದರ ಭರವಸೆಯಿಂದ ಕಾರ್ಯದಲ್ಲಿ ಉದ್ಯುಕ್ತರಾಗುವ ಪ್ರವೃತ್ತಿಯೂ ಇಲ್ಲ. ಆದರೆ ಭಾರತ ಭೂಮಿಯ ಶಿಕ್ಷಣ, ಸುಧಾರಣೆ, ಗೌರವ, ಬಲ, ಮಹತ್ವ ಇವೆಲ್ಲವುಗಳಿಗೆ ಆಧ್ಯಾತ್ಮಿಕಶಕ್ತಿಯೇ ಆಧಾರಭೂತವಾದುದು. ಯಾವ ಯಾವ ಸಂದರ್ಭದಲ್ಲಿ ಭಾರತರಾಷ್ಟ್ರದ ವಿನಾಶಕಾಲವು ಪ್ರಾಪ್ತವಾಗಿರುವುದೆಂದು ಸಕಲರಿಗೂ ಭಾಸವಾಗುತ್ತಿದ್ದಿತೋ ಆ ಸಂದರ್ಭದಲ್ಲೆಲ್ಲ ಆ ಗುಪ್ತವಾದ ಝರಿಯ ದೆಸೆಯಿಂದ ಆಧ್ಯಾತ್ಮಿಕ ಶಕ್ತಿಯ ಪ್ರಬಲಪ್ರವಾಹವು ಉಗ್ರವಾಗಿ ಪ್ರವಹಿಸಿ ಮೃತ್ಯು ಮುಖಕ್ಕೀಡಾಗಿದ್ದ ಭಾರತರಾಷ್ಟ್ರವನ್ನು ಪುನರುಜ್ಜೀವನಗೊಳಿಸಿ ಉಪಯುಕ್ತವಾದ ಇತರ ಶಕ್ತಿಗಳನ್ನೂ ಒದಗಿಸಿಕೊಟ್ಟಿರುವುದು. ಇಂದಿಗೂ ಆ ಝರಿಯು ಬತ್ತಿಹೋಗಿರುವದಿಲ್ಲ. ಈ ಹೊತ್ತಿಗೂ ಆ ಅದ್ಭುತವಾದ ಮೃತ್ಯುಂಜಯ ಶಕ್ತಿಯು ಕ್ರೀಡೆಯು ನಡೆಯುತ್ತಲೇ ಇರುವುದು.

ಆದರೆ ಸ್ಥೂಲಜಗತ್ತಿನ ಸಕಲ ಶಕ್ತಿಗಳ ವಿಕಾಸವು ಸಮಯಾನುಸಾರವಾಗಿಯೂ ಅವಸ್ಥಾನುಕ್ರಮವಾಗಿಯೂ ಸಮುದ್ರದ ವಿಲೆಗಳಂತೆ ವೃದ್ಧಿಕ್ಷಯಗಳನ್ನು ಹೊಂದುತ್ತ ತುತ್ತತುದಿಯಲ್ಲಿ ಸಂಪೂರ್ಣ ಸಾಫಲ್ಯವನ್ನು ಹೊಂದತಕ್ಕದ್ದು. ನಮ್ಮಲ್ಲಿಯೂ ಹಾಗೆಯೇ ಆಗುತ್ತಿರುವುದು. ಈಗಿನ ನಮ್ಮ ಇಳಿತವು ಅಥವಾ ಅವನತಸ್ಥಿತಿಯು ಭರತಿಯ ಇಪ್ಲವ ಅಭ್ಯುದಯದ ಸಮಯವನ್ನು ಹಾರೈಸುತ್ತಿರುವದು. ಮಹಾಪುರುಷರ ತಪಸ್ಯ, ಸ್ವಾರ್ಥತ್ಯಾಗಿಗಳ ಕಷ್ಟಸ್ವೀಕಾರ, ಸಾಹಸಿಗಳ ಆತ್ಮವಿಸರ್ಜನೆ, ಯೋಗಿಗಳ ಯೋಗಶಕ್ತಿ, ಜ್ಞಾನಿಗಳ ಜ್ಞಾನಸಂಚಾರ ಸಾಧನಗಳ ತುದಿತೆ ಇವುಗಳೇ ಆಧ್ಯಾತ್ಮಿಕ ಬಲದ ಝರಿಯು. ಈ ಝರಿಯೇ ಒಂದು ಕಾಲದಲ್ಲಿ ಪುಣ್ಯಮಯಿಯಾದ ಭಾರತಮಾತೆಯನ್ನು ಅಮೃತಸಂಜೀವನಿಯಿಂದ ತೇಲಿಸಿಬಿಟ್ಟು ಮೃತಪ್ರಾಯವಾದ ರಾಷ್ಟ್ರದ ಜೀವಿತ, ಬಲ, ತೇಜಸ್ಸುಗಳನ್ನು ಪುನರುಜ್ಜೀವನಗೊಳಿಸಿ, ಉದ್ಧಾರವಮಾಡಿದ್ದಿತು. ಪರಂತು ಪರಿಸ್ಥಿತಿಯ ದೋಷದಿಂದಲೂ ಸಮಯದೋಷದಿಂದಲೂ ಆ ಝರಿಯು ತನ್ನಲ್ಲಿಯೇ ನಿರುದ್ಧವಾಗಿ ಬಿಟ್ಟಿತು. ಆದರೆ ಅನೇಕ ಸಂವತ್ಸರಗಳಿಂದ ಸಹಿಸುತ್ತ ಬಂದಿದ್ದ ಕಷ್ಟ, ದುರ್ಬಲತೆ, ಪರಾಜಯಗಳ ಫಲದಿಂದ ಭಾರತವಾಸಿಗಳು ತಮ್ಮಲ್ಲಿನ ಈ ಶಕ್ತಿಯ ಝರಿಯನ್ನು ಪುನಃ ಶೋಧಿಸಲು ಕಲಿಯುತ್ತಿರುವರು. ವ್ಯಾಖ್ಯಾನದ ಉತ್ತೇಜನವಿಂದಲ್ಲ, ಮ್ಲೇಚ್ಛದತ್ತ ವಿದ್ಯೆಯಿಂದಲ್ಲ, ಸಭಾಸಮಿತಿಗಳ ವಿಚಾರಸಂಚಾರಣೆಯ ಶಕ್ತಿಯಿಂದಲ್ಲ, ವೃತ್ತಪತ್ರಿಕೆಗಳ ಕ್ಷಣಸ್ಥಾಯಿಯಾದ ಪ್ರೇರಣೆಯಿಂದಲ್ಲ; ಆದರೆ ಕೇವಲ ವಿಶಾಲವೂ ಶಾಂತಮಯವೂ ಆದ ಆತ್ಮದಲ್ಲಿ ಪರಮಾತ್ಮನ ಹಾಗೂ ಜೀವದ ಸಂಯೋಗದಿಂದ ಗಂಭೀರವೂ, ಸ್ಥಿರವೂ ಅಭ್ರಾಂತವೂ ನಿರ್ಮಲವೂ ಸುಖದುಃಖ ರಹಿತವೂ ಪಾಪಪುಣ್ಯ ವಿವರ್ಜಿತವೂ ಆದ ಯಾವ ಶಕ್ತಿಯು ಉದ್ಭವಿಸುವದೋ, ಅಂತಹ ಮಹಾಸೃಷ್ಟಿಕಾರಿಣಿಯೂ ಮಹಾಪ್ರಳಯಂಕರಿಯೂ, ಮಹಾಸ್ಥಿತಿಶಾಲಿಯೂ, ಜ್ಞಾನದಾಯಿಯಾದ ಮಹಾಸರಸ್ವತಿಯೂ ಐಶ್ವರ್ಯದಾಯಿನಿಯಾದ ಮಹಾಲಕ್ಷ್ಮಿಯೂ, ಶಕ್ತಿದಾಯಿನಿಯಾದ ಮಹಾಕಾಳಿಯೂ ಸಹಸ್ರ ತೇಜಸ್ಸುಗಳ ಸಂಯೋಗದಿಂದ ಏಕೀಭೂತಳೂ ಆದ ಮಹಾಚಂಡಿಯು ಪ್ರಕಟಳಾಗಿಭಾರತದ ಕಲ್ಯಾಣವನ್ನೂ, ಸಮಸ್ತ ಜಗತ್ತಿನ ಕಲ್ಯಾಣವನ್ನೂ ಮಾಡುವಳು. ಭಾರತಭೂಮಿಯ ಸ್ವಾತಂತ್ರ್ಯವು ಒಂದು ಗೌಣ ಉದ್ದೇಶ್ಯವಷ್ಟೇ ಆಗಿದ್ದು, ಭಾರತೀಯ ಸುಧಾರಣೆಯ ಶಕ್ತಿಯನ್ನು ಸಕಲ ಭೂಮಂಡಲಕ್ಕೂ ವ್ಯಕ್ತಪಡಿಸಿ, ಆ ಸುಧಾರಣೆಯ ವಿಸ್ತಾರವನ್ನೂ ವಿಧಿಶಾಲವನ್ನೂ ಪ್ರಸಾರಮಾಡುವದೇ ಮುಖ್ಯೋದ್ದೇಶವಾಗಿರುತ್ತದೆ. ನಾವು ಒಂದೊಮ್ಮೆ ಪಾಶ್ಚಾತ್ಯ ಸುಧಾರಣೆಯ ಬಲದಿಂದಲೂ, ಸಭಾಸಮಿತಿಗಳ ಬಲದಿಂದಲೂ ವ್ಯಾಖ್ಯಾನದ ಭರದಿಂದಲೂ ಸ್ವಾತಂತ್ರ್ಯವನ್ನು ಇಲ್ಲವೆ ಸ್ವಾಯತ್ತಶಾಸನವನ್ನು ಸಂಪಾದಿಸಬಹುದು. ಆದರೆ ಆ ಮುಖ್ಯ ಉದ್ದೇಶ್ಯವನ್ನು ಕೊನೆಗಾಣಿಸಿದಂತಾಗುವದಿಲ್ಲ. ಭಾರತೀಯ ಸುಧಾರಣೆಯ ಬಲದಿಂದಲೂ, ಆಧ್ಯಾತ್ಮಿಕ ಶಕ್ತಿಯಿಂದಲೂ, ಆಧ್ಯಾತ್ಮಿಕ ಶಕ್ತಿಯಿಂದ ಉದ್ಭವವಾದ ಸೂಕ್ಷ್ಮ ಹಾಗೂ ಸ್ಥೂಲ ಉಪಾಯಗಳಿಂದಲೂ ಸ್ವಾತಂತ್ರ್ಯಲಾಭವನ್ನು ಮಾಡಿಕೊಳ್ಳತಕ್ಕದ್ದು. ಆದದರಿಂದಲೇ ಭಗವಂತನು ಪಾಶ್ಚಾತ್ಯ ಭಾವವಿಶಿಷ್ಟವಾದ ಬಲವನ್ನು ಧ್ವಂಸಗೊಳಿಸಿ, ಬಹಿರ್ಮುಖಿಯಾದ ಶಕ್ತಿಯನ್ನು ಅಂತರ್ಮುಖಿಯನ್ನಾಗಿ ಮಾಡಿರುವನು. ಬ್ರಹ್ಮಬಾಂಧವ ಉಪಾಧ್ಯಾಯರು ದಿವ್ಯದೃಷ್ಟಿಯಿಂದ ಯಾವುದನ್ನು ಕಂಡುಕೊಂಡರೋ ಅಂತಃ ಶಕ್ತಿಯನ್ನು ಅಂತರ್ಮುಖಿಯನ್ನಾಗಿ ಮಾಡಿರುವರೆಂದು ಬಾರಬಾರಿಗೂ ಸಾರಿದರು. ಆದರೆ ಸಮಯದೋಷದಿಂದ ಆಗ ಯಾರೂ ಹಾಗೆ ಮಾಡುವ ಶಕ್ತರಾಗಿರಲಿಲ್ಲ. ಆದರೆ ಈ ಹೊತ್ತಿಗೆ ಭಗವಂತನು ಅನ್ನು ಸಂಘಟಿಸಿರುವನು. ಭಾರತದ ಶಕ್ತಿಯು ಅಂತರ್ಮುಖಿಯಾಗಿರುವುದು. ಪುನಃ ಅದು ಬಹಿರ್ಮುಖಿಯಾಯಿತೆಂದರೆ ಆ ಪ್ರವಾಹವು ಹಿಂದಿರುಗಲಾರದು, ಯಾರೂ ಅದನ್ನು ಪ್ರತಿಬಂಧಿಸಲೂ ಆರರು. ಆ ತ್ರಿಲೋಕಪಾವನೆಯಾದ ಗಂಗೆಯು ತನ್ನ ಪವಿತ್ರ ಪ್ರವಾಹದಿಂದ ಭಾರತವನ್ನೂ, ನಮ್ಮ ಪೃಥ್ವಿಯನ್ನೂ ಪವಿತ್ರೀಕರಿಸಿ, ಅಮೃತಸ್ಪರ್ಶದಿಂದ ಜಗತ್ತಿಗೆ ನವಯೌವನವನ್ನು ತಂದುಕೊಡಲಿ.

ವರ್ತಮಾನ ಸಂಗ್ರಹ

ಒಳದೇಶ.

ರಾಯಬಹದ್ದೂರ್ ಮನೆಯಪಂಡ ಮುತ್ತಣ್ಣನವರು ತಾರೀಖು 5ನೇ ಮಂಗಳವಾರ ಶಿವಾಧೀನರಾದರೆಂದ ತಿಳಿಸಲು ಬಹಳ ವಿಷಾದಿಸುತ್ತೇವೆ.

ಕೆಲವು ದಿನಗಳ ಹಿಂದೆ ತಾವಿನ ಮೂನಾಡು ಹೊಸರ ಗ್ರಾಮದ ಮುಕ್ಕಾಟಿರ ವ ಲ್ಲಿ ಒಬ್ಬ ಹುಡುಗನ ಮತ್ತು ಹುಡುಗಿಯ ಒಂಟಿ ... ದಿವಸ ಸಾಯಂಕಾಲ ಮದುವೆ ಹುಡುಗನು ಹೆಣ್ಣೆ ಮನೆಗೆ ಹೆಣ್ಣು ಕರಕೊಂಡು ಬರಲು ಹೊರಟು ಹೋದಾತರ ಅಕಸ್ಮಾತವಾಗಿ ಇವರ ಲೈನ್ ಮನೆಯ ಸುಡಿ ... ನಾಲಿಯು ಸುಟ್ಟು ಹೋಗಿ ಅಂದಾಜು 100-5 ರೂಪಾಯಿ ನಷ್ಟವಾಗಿದೆಯೆಂತಲೂ ಹುಡುಗಿಯ ಗಂಡು ಬಂದನಂತರ ಸದ್ರಿಯವರಿಬ್ಬರ ಮುಹೂರ್ತವನ್ನು ... ಮನೆಯಲ್ಲಿ ನಡಿಸಿದೆಂತಲೂ ಸುದ್ದಿ ಇದೆ.

ಮರೆನಾಡು ತೆರಾಲು ಗ್ರಾಮದ ಬೊಟ್ಟಂಗ ಪ ನಗೆ ಬಿಟ್ಟತ್ತುನಾಡು ಈಚೂರು ಗ್ರಾಮದ ಮಿತ್ರೀರ ಮನೆಯ ದ ಒಬ್ಬ ಹೆಂಗಸು ನೆಂಟರಾಗಿ ಹೋಗಿ ಮಾರಣೆ ದಿನ ವಾಪಸ್ಸು ಬರುವಾಗ್ಯೆ ... ಕೊಟ್ಟು 1 ಕುಪ್ಪಿ ಭತ್ತದ ಸಾರಾಯಿಯನ್ನು ಸಹ ತೆಗೆದುಕೊಂಡು ಬರುವಂಥಾ ಸಮಯದಲ್ಲಿ ಮಧ್ಯ ರಸ್ತೆಯಲ್ಲಿ ಗಮಾನಿಮೇರೆ ಪೋಲೀಸಿನವರ ಹಿಡಿದು ನೋಡುವಲ್ಲಿ 1 ಕುಪ್ಪಿ ಸಾರಾಯಿ ಕಂಡುಬಂತು ಕಾಡ್ಲೆ ಸದ್ರಿ ಹೆಂಗಸು ಅದನ್ನು ಚೆಲ್ಲಲು ಪ್ರಯತ್ನಮಾಡಿದಾಗ್ಯೂ ಪೋಲೀಸಿನವರು ಬಿಡದೇ ಬೊಟ್ಟಂಗಳ ಮನೆಗ ... ಜಪ್ತಿಮಾಡಿದಲ್ಲಿ ಅಲ್ಲಿಯೂ ಸಹ ಭತ್ತದ ಸಾರಾಯಿ ಸಿಕ್ಕಿದ್ದರಿಂದ ಪೊನ್ನಂಪೇಟೆ ತರಡ್ ಕ್ಲಾಸ್ (IIIrd class) ಮೇಜಿಸ್ಟ್ರೇಟವರಲ್ಲಿ ಕೇಸಾಗಿ ತೆಗೆಸಿಕೊಳ್ಳುವು ಬಂದ ಹೆಂಗಸಿಗೂ ... ತ್ತು ಬೊಟ್ಟಂಗಳ ಮನೆ ಪಟ್ಟೆದಾರನಿಗೂ ಸಹ ಹದಿನೈದು ದಿನೈದು ರೂಪಾಯಿ ಜುಲ್ಮಾನೆ ಆಯಿತಂತೆ. ಕಾನೂನಿಗೆ ವಿರೋಧವಾಗಿ ಈ 'ಬಸವಾ' ತನ್ನ ಪಟೇಲತನಕ್ಕೆ ಹಾನಿ ತಂದದ್ದಲ್ಲದೆ ಹೆಂಗಸಿನ ಧೈರ್ಯಕ್ಕೆ ಆಶ್ಚರ್ಯಪಡಬೇಕಾಗಿದೆ.

ಕಳೆದ ಕೆಲವು ದಿನಗಳಲ್ಲಿ ವೀರರಾಜೇಂದ್ರಪ್ಯಾಟೆಯಲ್ಲಿ ನಾಟಕವಾಡಿದ ದಿನ ರಾತ್ರಿವೇಳೆಯಲ್ಲಿ ಅಕಸ್ಮಾತಾಗಿ ಅಕ್ಕ ಸಾಲೆಯವರೊಬ್ಬರ ಮನೆಗೆ ಬೆಂಕಿಬಿದ್ದು ಹೋಗಿ ಬೆಂದು ಹೋಗಿದೆ. ಬೆಂಕಿಯ ಕಾರಣ ಗೊತ್ತಿಲ್ಲ. ಮನೆ ಬಿಟ್ಟು ನಾಟಕಕ್ಕೆ ಹೋಗುವ ಉದಿಶ್ಯ ಈ ಅನಾಹುತಕ್ಕೆಲ್ಲ ಕಾರಣವಾಗಿರುತ್ತದೆ.

ವರುಣ ದೇವರು ಕಣ್ಣು ತೆರೆದು ಕಳೆದ ವಾರ ದೇಶದಲ್ಲಿ ನಾಲ್ಕೈದು ಮಳೆ ಬಿದ್ದದ್ದರಿಂದ ಭೂಮಿ ಎಲ್ಲಾ ಹಸಿಯಾದ್ದರಿಂದ ನಾಡು ಕಡೆಜನರು ಉಳಲಿಕ್ಕೆ ಪ್ರಾರಂಭಿಸಿರುವರು.

ಇನ್ನೊಂದು ಕಡೆ ಪ್ರಕಟಿಸಿದ ಕೊಡಗು ಕಂಪೆನಿ ಶೇರುದಾರರುಗಳ ಮೀಟಿಂಗಿನ 3 ನೇ ರೆಜಲೇಶನ್ ಮೇರೆ ಬಯಸುವ ಸ್ಥಳಗಳಿಂದ ಚುಕ್ತಿದಾರರಾಗಲು ಅಪೇಕ್ಷೆ ಇರುವರು, ಎಡಿಟರಿಗೆ ಬರೆದುಕೊಳ್ಳಬೇಕೆಂತ, ಕಾರ್ಯದರ್ಶಿಯವರು ಕೋರುತ್ತಾರೆ.

ಕಳೆದ ಸರ್ವೇ ಇಂಜನೀಯರಿಂಗ್ ತರಬೇತನ್ನು ಪೂರೈಸಿಬಂದ ಮೆ|| ಬೊಪ್ಪೇರಿಯಂಡ ಮುತ್ತಣ್ಣನವರನ್ನು ಕೊಡಗಿನ ಡಿ. ಪಿ. ಡಬ್ಲ್ಯು. ಇಲಾಖೆಯವರು ಗತಿಸಿಹೋದ ಮೆ|| ವೈದ್ಯನಾಥ ಅಯ್ಯರವರ ಬದಲಿಗೆ ಸೆಕ್ಷನ್ ಆಫೀಸರಾಗಿ ನೇಮಿಸಿರುವರು.

ಟ್ರೈಯಿನಿಂಗ್ ಸ್ಕೂಲಿನಲ್ಲಿದ್ದ ಕಾರ್ಪೆಂಟ್ರಿ ಮಾಸ್ಟರಿಗೆ ಕೆಲಸವಿಲ್ಲವೆಂತ ನೋಟೀಸ್ ಒಂದಿದ್ದರೂ ಪುನಃ ಮಡಿಕೇರಿ ಪ್ರೋಡಲ್ ಸ್ಕೂಲಿನಲ್ಲಿ ಕೆಲಸಮಾಡಬೇಕೆಂತ ಹುಕುಂ ಬಂದಿದೆ. ಟ್ರೈನಿಂಗ್ ಸ್ಕೂಲು ಮಾಸ್ಟರುಗಳು ಬೆಂಗಳೂರಿಗೆ ಕಲಸ ಬರಬೇಕೆಂತ ಒಂದು ದಫ ಹುಕ್ಕುಂ ಮಾಡಿ ಎರಡನೇ ಟೆಲಿಗ್ರಾಫ್ ಮೂಲಕ ಬರುವದು ಬೇಡವೆಂತ ಹುಕ್ಕುಂ ಬಂತು.

ಮಡಿಕೇರಿ ಸಬ್‌ಸಿವಿಲ್ ಕೋರ್ಟಿಗೆ ವರ್ಗವಾದ ಕಾರಣದಿಂದ ಎಲ್ಲಾ ಕೇಸುಗಳಲ್ಲೂ ಸಮನ್ಸಿಗೆ ಎಂಟಾಣೆ ಬದಲಿಗೆ ಒಂದು ರೂಪಾಯಿ, ವಾರಂಟಿಗೆ 1 ರೂಪಾಯಿ ಬದಲಿಗೆ 2 ರೂಪಾಯಿ ಸಹ ಕೊಡಬೇಕಾಗಿದೆ. ಈ ರೀತಿ ಮಾಡಕೂಡದು ವೀರರಾಜಪೇಟೆ ಕೋರ್ಟಿನವರಿಗೆ ಇರುವ ಹಕ್ಕಿನ ಮೇ 2500 ರೂಪಾಯಿವರೆಗಿನ ದಾವಾದವರಿಗೂ ಸಮನ್ಸಿಗೆ ಎಂಟಾಣೆ ವಾರಂಟಿಗೆ 1 ರೂಪಾಯಿದರದಲ್ಲಿಯೂ ಇರುವಂತೆ ಮಾಡಬೇಕೆಂತ ಲಾಯರ್‌ಗಳು ಕಮಿಶನರಿಗೆ ಬರಕೊಂಡಿದ್ದಾರೆ.

ಸರಕಾರದವರು ಮಡಿಕೇರಿಯಲ್ಲಿ ಒಂದು ಗೂಳಿಯನ್ನಿಟ್ಟು ಒಂದು ತಿಂಗಳಾಯಿತು. ಅದು ವೆಟರಿನರಿ ಡಾಕ್ಟರವರ ಚಾರ್ಜಿನಲ್ಲಿಡಲ್ಪಟ್ಟಿದೆ. ಅದು ಒಳ್ಳೇ ಹಾಲು ಕೊಡತಕ್ಕಂಥ ತಳಿಯನ್ನು ಹುಟ್ಟಿಸುವ ಗೂಳಿಯಂತೆ. ಸುತ್ತಮುತ್ತಲಿನ ಪಟ್ಟಣಿಗರೂ ಗ್ರಾಮಸ್ಥರೂ ತಮ್ಮ ಹಸುಗಳನ್ನು ಗೂಳಿಯ ಬಳಿಗೆ ತಂದು ಅದರ ಪ್ರಯೋಜನವನ್ನು ಹೊಂದಿಕೊಳ್ಳುವರಾಗಿ ಸಂಬಳವಿಲ್ಲ.

ಕಳೆದ ವಾರದೊಳಗಿನಲ್ಲಿ ಅನೇಕ ಮರಣಗಳು ಸಂಭವಿಸಿದವು. ಹಾಗೆ ಮೃತಪಟ್ಟವರಲ್ಲಿ ಮೆ|| ಕುಪ್ಪಂಡಗಣಪತಿ, ಬಿ. ಎ. ಯವರು (ಬಿಟ್ಟಂಗಾಲದಲ್ಲಿ) ಮೆ|| ಯಂ. ವಿ. ಕೃಷ್ಣರಾಯರು (ಮಡಿಕೇರಿಯ ರಿಟಯರ್ಡ್ ಲಾಯರು— ಬೆಂಗಳೂರಿನಲ್ಲಿ) ಮೆ|| ಚೆನ್ನಿಂಗರಾಯರು (ರಿಟಯರ್ಡ್ ಮೇನೇಜರು—ಮಡಿಕೇರಿಯಲ್ಲಿ) ಮೆ|| ಪಟ್ಟಮಾಡ ಸುಬ್ಬಯ್ಯನವರು (ರಿಟಯರ್ಡ್ ಎಕ್‌ಸೈಸ್ ಸಬ್ ಇನ್ಸ್‌ಪೆಕ್ಟರು—ಮಡಿಕೇರಿಯಲ್ಲಿ) ಇವರಾಗಿರುವರು.

ವೀರರಾಜಪೇಟೆಯಲ್ಲಿ VI ಫಾರಂ ತೆರೆದದ್ದರ ಫಲಿತಾಂಶವಾಗಿ ಮೂರು ಗ್ರಾಜ್ಯುವೇಟ್ಸ್ ಟೀಚರ್ಸ್ ಉದ್ಯೋಗಗಳು ನಿರ್ಮಾಣವಾದವು. ಅವುಗಳಿಗೆ ಮೆ|| ಪಟ್ಟಮಾಡ ಎಮ್. ಉತ್ತಪ್ಪ ಬಿ. ಎ. ಯವರನ್ನು ವೀರರಾಜಪೇಟೆ ಹೈಸ್ಕೂಲಿಗೂ, ಮೆ|| ಬಿದ್ದಂಡ ಕುಶಾಲಪ್ಪ, ಬಿ. ಎ. ಯವರನ್ನು ಮಡಿಕೇರಿ ಹೈಸ್ಕೂಲಿಗೂ ನೇಮಿಸಿದರು. ಇನ್ನೊಬ್ಬರನ್ನು ನೇಮಿಸಬೇಕಾಗಿದೆ. ಕೆಲ ದಿವಸಗಳ ಹಿಂದೆ ಮೃತಪಟ್ಟ ಮೆ|| ಚೋನಿರ ಕಾರ್ಯಪ್ಪನವರ ಬದಲಿಗೆ ಮೆ|| ಕೋಟೆರ ಮುತ್ತಣ್ಣ ಬಿ. ಎ. ಯವರು ವೀರರಾಜಪೇಟೆ ಹೈಸ್ಕೂಲಿನ ಉಪಾಧ್ಯಾಯರಾಗಿ ನೇಮಿಸಲ್ಪಟ್ಟಿರುವರು.

ಸಿಬ್ಬಂದಿ ಬೋಷು ಫಲಿತಾಂಶವಾಗಿ ಕೊಡ್ಲಿಪೇಟೆಯ ಪೋಲೀಸ್ ಸ್ಟೇಶನ್ ತೆಗೆಯಲ್ಪಟ್ಟಿದೆ. ಅಲ್ಲಿಯ ಸಬ್ ಇನ್ಸ್‌ಪೆಕ್ಟರವರು ಈಗ್ಗೆ ಮಡಿಕೇರಿಯಲ್ಲಿರುವರು. ಮೂರು ಸಬ್ ಇನ್ಸ್‌ಪೆಕ್ಟರುಗಳ ಉದ್ಯೋಗವು ತೆಗೆದುಹಾಕಲ್ಪಡುವುದೆಂದು ವದಂತಿ.

ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದಂತೆ ಕೊಡಗಿನ ಯುವಕರ ಪೈಕಿ ಬಿ. ಎ. ಪರೀಕ್ಷೆಯಲ್ಲಿ ಪೂರ್ತಿ ಪಾಸಾದ ನಾಲ್ಕು ಜನರಲ್ಲದೆ ಮೆ|| ಪಟ್ಟಮಾಡ ಪೂವಯ್ಯನವರು ಮತ್ತು ಮೆ|| ಪೆಮ್ಮಂಡ ಪೊನ್ನಪ್ಪನವರು. ಇಂಗ್ಲೀಷಿನಲ್ಲಿ ಪಾಸಾಗಿರುವರು. ಹ್ಯಾಗೂ ಬಿ. ಎ. ಪರೀಕ್ಷೆಯಲ್ಲಿ ಪೂರ್ತಿ ಸೋತವರು ನಮ್ಮವರಲ್ಲಿ ಯಾರೂ ಇಲ್ಲ.

ತಾ. 4 ರಲ್ಲು ರಾತ್ರಿ ಸಾರಿಸ್ಟ್ ಇಲಾಖೆಯವರು ಮಡಿಕೇರಿ ಪ್ರೆಸ್ ಹಾಲಿನಲ್ಲಿ ಜನರು ಮಹನೀಯರಿಗೆ ಒಂದು ಎಂಟರ ಟೈನ್‌ಮೆಂಟನ್ನು ಕೊಟ್ಟರು. ನಂತರ ಮಾವುಕೂಟದಲ್ಲಿ ಟ್ರಾಮ್‌ವೇ ಮೂಲಕವೂ ಆನೆಗಳ ಮೂಲಕವೂ ಮರಗಳನ್ನು ಸಾಗಿಸುವದನ್ನು ಸಿನೆಮೊಟೊಗ್ರಾಫ್ ಮತ್ತು ಮೇಜಿಕ್‌ಲೆಂಟನ್ ಪಿಕ್ಚರುಗಳ ಮೂಲಕ ತೋರಿಸಿದರಂತೆ.

ಹಿಂದೂದೇಶ

ಟಿಬೇಟು ದೇಶದ ಜಯಸ್ಥಾನಕ್ಕಾಗಿ ಹೋಗಿದ್ದ ಮೇಜರ್ ಕ್ಲಾರ್ಕ್‌ರವರು ಗೋಕದ ಪಂಜೆಮನಲ್ಲಿ ಒಂದು ಮೀಟಿಂಗಿನಲ್ಲಿ ಹೇಳಿದೇನೆಂದರೆ— "240 ವರ್ಷ ಪ್ರಾಯದ ಒಬ್ಬ ಪುರೋಹಿತನನ್ನು ನಾನು ಕಂಡೆನು. ಅವನು ಆಶ್ಚರ್ಯಕರವಾದ ಬುದ್ಧಿಶಕ್ತಿಯುಳ್ಳವನು. ಅವನೇ ಥಿಯೊಸೋಫಿಕಲ್ ಸೊಸೈಟಿಯನ್ನು ಹೊರಡಿಸಿದ ಮೇಡಂ ಬ್ಲಾವಟ್‌ಸ್ಕಿಯವರ ಗುರು. ಅವನು ಗಣಿತಶಾಸ್ತ್ರದಲ್ಲಿ ಬಹಳ ಗಟ್ಟಿಗನು. ಅವನು ಮನಸ್ಸಿಗೆ ಇಚ್ಛೆ ಅದೃಶ್ಯವಾಗುವನು ಮತ್ತು ಕಾಣಿಸಿಕೊಳ್ಳುವನು ಮತ್ತು ತನ್ನ ಅವಯವಗಳನ್ನು ಧೀರ್ಘವಾಗಿ ನೀಡಬಲ್ಲನು. ಅವನು ಗುಹ್ಯತಂತ್ರಜ್ಞಾನದಲ್ಲಿ ಬಹು ನಿಪುಣನು. 27 ನೇ ಮತ್ತು ಸಂತರ ವರ್ಷಗಳಲ್ಲಿ ಒಂದು ದೊಡ್ಡ ಯುದ್ಧವಾಗುವುದೆಂದೂ ಮತ್ತು ಕಠಿಣವಾದ ಕ್ಷಾಮ ಉಂಟಾಗುವುದೆಂದೂ ಅವನು ಸೂಚಿಸುವನು."

ನಾಗಪುರದಲ್ಲಿಯೂ, ಜಬ್ಬಲ್‌ಪುರದಲ್ಲಿಯೂ ರಾಷ್ಟ್ರೀಯ ಧ್ವಜವನ್ನು ಹಾರಿಸುವುದಕ್ಕೆ ಸ್ವಯಂ ಸೇವಕರು ನಡಿಸುತ್ತಿರುವ ಹೋರಾಟವು ಎಡೆಬಿಡದೆ ಮುಂದುವರಿಯುತ್ತಿದೆ. ಮೇ ತಾ 31 ರಲ್ಲು ನಾಗಪುರದಲ್ಲಿ 20 ಜನ ಸ್ವಯಂ ಸೇವಕರು ಸೆರೆ ಹಿಡಿಯಲ್ಪಟ್ಟು ಶಿಕ್ಷಿಸಲ್ಪಟ್ಟರು. ಗುಂಪುಗಳು ಒಂದರನಂತರ ಒಂದಾಗಿ ಹುಕುಮನ್ನು ಉಲ್ಲಂಘಿಸಿ ಸೆರೆ ಹಿಡಿಯಲ್ಪಡುತ್ತಿರುವರು. ರಾಜಗೋಪಾಲಚಾರಿ ಮೊದಲಾದ ಮುಂದಾಳುಗಳು ಅಲ್ಲಿಗೆ ತಲಪಿರುವರು.

ಬಿಜಾಪುರದಲ್ಲಿ ವಿಷ್ಣು ರಾಮಚಂದ್ರ ಆಗಕಿಂಡಿ ಎಂಬ ಒಬ್ಬ ಅಸಹಕಾರಿಗೆ ತನ್ನ ಸ್ಟೇಟ್‌ಮೆಂಟನ್ನು ಬರೆದುಕೊಡಲು ಒಂದು ಗಂಟೆಯಾದರೂ ಅವಕಾಶ ಕೊಡದೆ ಮೇಜಿಸ್ಟ್ರೇಟರು ಒಂದು ವರ್ಷ ಕಠಿಣಸಜೆಯನ್ನು ವಿಧಿಸಿದರಂತೆ.

ರಂಗೂನಿನ ಕಾಪೊಂಗ್ಯೊ ಎಂಬಲ್ಲಿ ಒಂದು ಅಕ್ಕಿ ಗಿರಣಿಗೆ ತಾ. 31 ರಲ್ಲು ಬೆಂಕಿ ಬಿದ್ದು ಸುಮಾರು 9½ ಲಕ್ಷ ರೂಪಾಯಿಯಷ್ಟು ನಷ್ಟವಾಗಿದೆ. ಒಂದು ದಿನಕ್ಕೆ ಮೊದಲು ಡಲ್ಲಾ ಎಂಬಲ್ಲಿ ಒಂದು ಗಿರಣಿಯು ಬೆಂದುಹೋಗಿ ಸುಮಾರು ಮೂರು ಲಕ್ಷ ರೂ. ನಷ್ಟವಂತೆ.

ಸೆಂಟ್ರಲ್ ಖಿಲಾಫತ್ ಕಮಿಟಿಯ ಪ್ರೆಸಿಡೆಂಟರಾಗಿದ್ದ ಮೆ|| ಸೇಟ್ ಚೋಟಾನಿಯವರು, ಆ ಕಮಿಟಿ ಕೊಡಬೇಕಾಗಿದ್ದ ಸುಮಾರು 16½ ಲಕ್ಷ ರೂಪಾಯಿಗಳಿಗಾಗಿ ಮರಕುಯ್ಯುವ ತನ್ನ ಎರಡು ಗಿರಣಿಗಳನ್ನು ಕಮಿಟಿಗೆ ವಹಿಸಿಬಿಡಲು ಒಪ್ಪಿರುವರಂತೆ. ಚೋಟಾನಿಯವರು ಅನಾರೋಗ್ಯದ ದೆಸೆಯಿಂದ ಅಧ್ಯಕ್ಷ ಪದವಿಗೆ ರಾಜಿನಾಮೆ ಕೊಟ್ಟಿರುವರು. ಡಾಕ್ಟರ್ ಅನ್ಸಾರಿಯವರು ಆ ಪದವಿಗೆ ನೇಮಿಸಲ್ಪಟ್ಟಿರುವರು.

ದೇಶಬಂಧು ಚಿತರಂಜನ ದಾಸರವರು ಮೇ ತಾರೀಕು 30 ರಲ್ಲು ಮದ್ರಾಸಿಗೆ ಬಂದು ತಲಪಿದರು. ಅಲ್ಲಿಯ ಪಟ್ಟಣವಾಸಿಗಳು ಅವರಿಗೆ ತಕ್ಕದಾದ ಸ್ವಾಗತವನ್ನೀಡಿದರು. ಮರುದಿನ ಅವರು ಸಮುದ್ರದ ತೀರದಲ್ಲಿ ನೆರೆದಿದ್ದ ದೊಡ್ಡ ಸಭೆಗೆ ಸ್ವಾರಸ್ಯವಾದ ಒಂದು ಭಾಷಣವನ್ನು ಮಾಡಿದರು. ಅಲ್ಲದೆ ಅವರು ಬೇರೆ ಮುಖ್ಯಪಟ್ಟ ಅನೇಕ ಸ್ಥಳಗಳನ್ನು ಸಂದರ್ಶಿಸಿದರು.

ಲಾರ್ಡ್ ರೀಡಿಂಗ್‌ರವರು ವೈಸರಾಯಿ ಪದವಿಗೆ ರಾಜಿನಾಮೆ ಕೊಡುತ್ತಾರೆಂಬ ವರ್ತಮಾನದಲ್ಲಿ ಎಳ್ಳಷ್ಟು ನಿಜವಿಲ್ಲವಂತೆ.

ಎಪ್ರಿಲ್ ಅಂತ್ಯದ ವರೆಗೆ ತಿಲಕ ಸ್ವರಾಜ ಫಂಡಿಗೆ 13 ಲಕ್ಷ ರೂಪಾಯಿಯೂ, ಕಾಂಗ್ರೆಸಿಗೆ 10 000 ಸ್ವಯಂ ಸೇವಕರೂ ಜಮೆಯಾಗಿದೆಯಂತೆ.

ಅಖಿಲಭಾರತ ಕಾಂಗ್ರೆಸ್ ಕಮಿಟಿಯವರು ತಮ್ಮ ಕಳೆದ ಮೀಟಿಂಗಿನಲ್ಲಿ ಮೈನಾರ್ಟಿ ಪಾರ್ಟಿಯವರು (ದಾಸರ ಪಾರ್ಟಿಯವರು) ಕೌನ್ಸಿಲುಗಳಿಗೆ ಮೆಂಬರುಗಳಾಗಿ ನಿಲ್ಲುವುದಕ್ಕೆ ಮೆಜಾರಿಟಿ ಪಾರ್ಟಿಯವರು ಅಡ್ಡಿ ಮಾಡಕೂಡದೆಂದೂ ಈ ವಿಷಯದಲ್ಲಿ ಮೆಜಾರಿಟಿ ಪಾರ್ಟಿಯವರು ಸುಮ್ಮನಿದ್ದು ಕಾಂಗ್ರೆಸಿನ ಪ್ರೋಗ್ರಾಮಿನ ಬೇರೆ ಕೆಲಸಗಳನ್ನು ಮಾಡುತ್ತಿರಬೇಕೆಂದೂ ಬಹುಮತದಿಂದ ತೀರ್ಮಾನಿಸಿದರಂತೆ. ಕೂಡಲೆ ಸಿ. ರಾಜಗೋಪಾಲಚಾರಿ ಮೊದಲಾದ ಕೆಲವು ಮೆಜಾರಿಟಿ ಪಾರ್ಟಿಯವರು ಕಮಿಟಿ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟರು. ಕಾಂಗ್ರೆಸ್ ಕಾನ್‌ಫರೆನ್ಸಿನಲ್ಲಿ ತೀರ್ಮಾನವಾದ ಈ ವಿಷಯವನ್ನು ಪುನಹ ಚರ್ಚಿಸುವ ಹಕ್ಕು ಕಾಂಗ್ರೆಸ್ ಕಮಿಟಿಯವರಿಗೆ ಇಲ್ಲವೆಂದು ಅವರವಾದ. ಚಿತ್ತರಂಜನ ದಾಸರವರು ಕಮಿಟಿಯ ಅಧ್ಯಕ್ಷಪದವಿಗೆ ರಾಜಿನಾಮೆ ಕೊಟ್ಟಿರುವರು.

ವಿದೇಶ.

ಜರ್ಮನಿಯವರು ಕೊಡಬೇಕಾದ ನಷ್ಟವನ್ನು ನಿಷ್ಕರ್ಷೆ ಮಾಡಲು ಒಂದು ಕಮಿಷನ್ ಮಾಡಲಿಕ್ಕೆ ಒಪ್ಪಿಕೊಂಡದ್ದರಿಂದ ಜರ್ಮನಿಯ ರೂಹರ್ ಪ್ರಾಂತ್ಯದಲ್ಲಿ ಮುಷ್ಕರ ಹಿಡಿದಿದ್ದ ಕೆಲಸಗಾರರೆಲ್ಲರೂ ಪುನಃ ಕೆಲಸಕ್ಕೆ ತೊಡಗಿರುವರು.

ಬ್ರಿಟನಿನ ಹೊಸ ಮಂತ್ರಿಯಾದ ಮೆ|| ಬಾಲ್ಡ್‌ವಿನ್‌ರವರು ಇಂಡಿಯಾದಲ್ಲಿ ಉಪ್ಪಿನ ಸುಂಕವನ್ನು ಹೆಚ್ಚಿಸಿದ ವಿಷಯ ಪಾರ್ಲಿಮೆಂಟಿನಲ್ಲಿ ಚರ್ಚಿಸಲು ಬಿಡಲಿಕ್ಕಾಗುವದಿಲ್ಲವೆಂದು ಲೇಬರ್ ಪಾರ್ಟಿ ಮೆಂಬರುಗಳಿಗೆ ಉತ್ತರ ಕೊಟ್ಟಿರುವರು.

ಮೃತಪಟ್ಟ ಮಿಲ್ ವಾರ್ಸನ್‌ರವರ ಬದಲಿಗೆ ಪಿನೇನ್ಸ್ ಮಂತ್ರಿಯಾಗಿದ್ದ ಬೆಗ್ಗ್ ಎಂಬವರು ಸ್ವೀಡನಿನ ಮುಖ್ಯ ಮಂತ್ರಿಯಾಗಿರುವರು.

ತುರ್ಕಿ ದೇಶದಲ್ಲಿರುವ ವೈ. ಎಂ. ಸಿ. ಎ. ಯವರ ಶಾಖೆಗಳನ್ನೆಲ್ಲಾ ಮುಚ್ಚುವಂತೆ ಸರಕಾರದವರು ಹುಕುಂ ಮಾಡಿರುವರು.

ಕಡೇಗೆ ಐರ್ಲೆಂಡಿನ ರಿಪಬ್ಲಿಕನ್ ಪಾರ್ಟಿಯವರು ಸೋತಂತೆ ಕಾಣುತ್ತದೆ. ಅವರ ಮುಂದಾಳಾದ ಮೆ|| ಡಿವೇಲರವರು, ಇನ್ನು ಮುಂದೆ ಆಯುಧಗಳಿಂದ ಯುದ್ಧಮಾಡುವದರಿಂದ ಏನೊಂದೂ ಪ್ರಯೋಜನವಿಲ್ಲವೆಂತಲೂ, ಆದುದರಿಂದ ಯುದ್ಧ ಮಾಡುವದನ್ನು ನಿಲ್ಲಿಸಿ ಆ ಯುಧಗಳನ್ನೆಲ್ಲಾ ಅಡಗಿಸಿಡಬೇಕೆಂತಲೂ, ತಮ್ಮ ದೇಶದ ಹಕ್ಕು ಬಾಧ್ಯತೆಗಳನ್ನು ಕಾಪಾಡಲು ಬೇರೆ ವಿಧಾನಗಳನ್ನು ಕಂಡು ಹಿಡಿಯಬೇಕೆಂತಲೂ ಅವರ ಪಂಗಡದವರಿಗೆ ಹುಕುಂ ಮಾಡಿರುವರಂತೆ.

(ವರ್ಣಿಯಸೋದೀವನವನು—ಎಂಬಂತೆ)

ಕೊಡಗು,

ಬೋಡುವಿನಾ ಜಗದಂಬೆಯೆ ।
ವಸಾದ್ ಸಿಗುಣದುಗ್ರಾಂಟಿಯೆ ॥ ಅ ॥ ಪ ॥

ಆದಿಶಕ್ತಿ ಮಹಸ್ಸ್ರೂತಿಯೆ ।
ವೇದಮೂಲದಾನ ಧೃತಿಯೆ ॥
ಯೇದು ಜೀವರಾಶಿಯುಕು ।
ಆಧಾರದಾನ ಆದಿಮಾಯೆ ॥ ೧ ॥

ಹರಿಹರಬ್ರಿಜ ಸುರನರಕು ।
ಪರವ್ಯೊಕೂಡ್ ಪರಮೇಶ್ವರಿಯೆ ॥
ಸರ್ವಲೋಕ ಪೂಜ್ಯಳೆ ।
ಶಾರದೇಯೆ ಸಾವಿತ್ರಿಯೆ ॥ ೨ ॥

ಧರ್ಮರೂಪಳಾನ ಮಾತೆ ।
ಕರ್ಮನಾಶಕೀಯೆ ಕವಿತೆ ॥
ಚರ್ಮಾಂಬರನೊಡುದಿಪ ಶಿವೆಯೆ ।
ನಿರ್ಮಲೆಯೆ ಸದ್ಗುಣಿಯೆ ॥ ೩ ॥

ಘೋರವತಾರೆದ್‌ಕ ಗೌರಿ ।
ಕ್ರೂರ ರಕ್ಕಸಕ್ ವೈರಿ ॥
ವಾರಹಿಯೆ ವಾಣಿಯೆ ।
ವಾರುಣಿಯೆ ಧಾರುಣೀಯೆ ॥ ೪ ॥

ಕ್ರೋಧರೂಪಿ ಭೈರವೀಯೆ ।
ಸಾದಗಾನಪ್ರಿಯೆ ಪ್ರತಿಭೆ ॥
ವಾದನಂಬ್ ನರದಾಸಂಗ್ ।
ಮಾದೇವಿ ಗುಣತನಾಂಗ್ ॥ ೫ ॥

ಹರಿದಾಸ—ಅಪ್ಪಚ್ಚಕವಿ.

ಜಮೀನ್ದಾರ ಸಂಘದ ಠರಾವುಗಳು ಮುಂದುವರಿಸಿದ್ದು.

34 ಮಡಿಕೇರಿ ಪಬ್ಲಿಕ್ ವರ್ಕ್ಸ್ ಫಾರೆಸ್ಟಿನಿಂದ ಸೌದೆಯನ್ನು ಉದ್ಯೋಗಸ್ಥರಿಗೆ ಮನಸ್ಸು ಬಂದವರಿಗೆ ಕೊಡಬಾರದು ಹರಾಜು ಮಾಡಬೇಕು.

ಮೆ ಬಿದ್ದಂಡ ಕಾರ್ಯಪ್ಪನವರು ಸೂಚಿಸಿ ಮೆ| ಎ. ಅಯ್ಯಣ್ಣನವರು ಅನುಮೋದಿಸಿ ಮಂಜೂರಾಯಿತು.

35 ರಿಜರ್ವ್ ಫಾರೆಸ್ಟ್ ನೊಳಗೆ ಇರುವ ಭತ್ತದ ವ್ಯವಸಾಯಕ್ಕೆ ಅನುಕೂಲವಾದ ಜಾಗಗಳನ್ನು ರೈತುವಾರಿ ಜಮೀನಾಗಿ ಮಾರಿ ಕೊಡಬೇಕು. ಅಧ್ಯಕ್ಷರು ಸೂಚಿಸಿ ಮಂಜೂರಾಯಿತು. ಈಗ ಕೊಡುವಂತಾದ್ದು ಗೇಣಿ ರೂಪದಲ್ಲಿ ಮಾತ್ರವೆಂತು ವಿವರಿಸಲ್ಪಟ್ಟಿತು.

36. ಮದ್ರಾಸ್ ಎಗ್ರಿಕಲ್ಚರಲ್ ಡಿಸ್ಟ್ರಿಕ್ಟ್ ಮತ್ತು ಪೆಸ್ಟ್ ಆಕ್ಟ್ ಎಂಬುವನ್ನು ದೈತನನ್ನು ಕೇಳದೆ ಕೊಡಗಿಗೆ ವ್ಯಾಪನಗೊಳಿಸುವದಕ್ಕೆ ಸಂಘವು ವಿರೋಧಿಸುತ್ತದೆ ಮತ್ತು ಒಂದು ವರ್ಷದಲ್ಲಿ ಏನು ಏನು ತೆಗೆಯಬೇಕೆಂತ ಮಾಡಿರುವುದು ಬಹಳ ಹೆಚ್ಚಾಯಿತೆಂತಲೂ ಸೂಚಿಸುತ್ತದೆ.

ಮೆ|| ಸಿದ್ದದ ಸುಬ್ಬಯ್ಯನವರು ಸೂಚಿಸಿ ಮೆ|| ಕೊರವಂಡ ಪೊನ್ನಪ್ಪನವರು ಅನುಮೋದಿಸಿ ಮಂಜೂರಾಯಿತು.

37 ಡಿಸ್ಟ್ರಿಕ್ಟ್ ಬೋರ್ಡಿನವರು ರೂಪಾಯಿ ೧ ಕ್ಕೆ ಅರ್ಧ ಆಣೆ ಪುನಹ ಬೆಳೆಗೆ ಸೆಸ್ ಹಾಕಬೇಕೆಂತ್ತ ಯೋಚಿಸಿದ್ದಕ್ಕೆ ಈ ಸಂಘವು ಆಕ್ಷೇಪಿಸುತ್ತದೆ. ಅಧ್ಯಕ್ಷರಿಂದ ಸೂಚಿಸಿ ಮಂಜೂರಾಯಿತು.

38 ಈ ದೇಶಕ್ಕೆ ಸಿಕ್ಕಬೇಕಾದ ಸುಧಾರಣೆಗಳ ವಿಷಯದಲ್ಲಿ ವೈಸರಾಯರಿಗೆ ಸಂಘದಿಂದ ಕಳುಹಿಸುವ ಒಂದು ಡಿಪುಟೇಶನ್ ಮೂಲಕ ಕೊಡುವ ಬಗ್ಗೆ ಒಂದು ಮೆಮೋರಿಯಲ್ ಅರ್ಜಿಯನ್ನು ತಯಾರಿಸಬೇಕು. ಅರ್ಜಿ ತಯಾರಾದ ನಂತರ ಡಿಪುಟೇಶನ್ ಮೆಂಬರುಗಳನ್ನು ಕಮಿಟಿಯವರೇ ಚುನಾಯಿಸಿಕೊಳ್ಳಬೇಕು.

ಮೆ|| ಕೊದಾಂತ ಉತ್ತಯ್ಯನವರು ಸೂಚಿಸಿ ಮೆ|| ಕೋಟೆರ ಪೊನ್ನಪ್ಪನವರು ಅನುಮೋದಿಸಿ ಮಂಜೂರಾಯಿತು.

39. ದೇವನೂರು ನಾಲೆಯನ್ನು ರಿಪೇರಿಮಾಡಿ ಕೊಡಬೇಕು.

ಮೆ ಅಜ್ಜೇರಿರ ಪೂವಯ್ಯನವರು ಸೂಚಿಸಿ ಮೆ, ಪೊಕ್ಕವಾಡ ಸೋಮಪ್ಪನವರು ಅನುಮೋದಿಸಿ ಮಂಜೂರಾಯಿತು.

ಸ

40 ವೀರರಾಜೇಂದ್ರ ಪ್ಯಾಟೆ ಸ್ಕೂಲನ್ನು ಶೀಘ್ರದಲ್ಲೇ ಪೂರ್ತಿ ಹೈಸ್ಕೂಲ್ ಮಾಡಿಕೊಡಬೇಕೆಂತಲೂ, ಹಳೇ ತಾಲ್ಲೋಕು ಹೆಡ್ ಕ್ವಾರ್ಟರ್ಸ್‌ಗಳಲ್ಲೂ ಮತ್ತು ಮೂರ್ನಾಡಿನಲ್ಲೂ, ಮಡಿಕೇರಿಯಲ್ಲೂ ಲೋವರ್ ಸೆಕೆಂಡರಿ ಸ್ಕೂಲ್ ಮಾಡಿ ಕೊಡಬೇಕೆಂತ್ತಲೂ ಅಧ್ಯಕ್ಷರೇ ಸೂಚಿಸಿ ಮಂಜೂರಾಯಿತು

41 ಕೊಡಗಿನಿಂದ ಮಂಗಳೂರಿಗೆ ಓದಲಿಕ್ಕೆ ಹೋಗುವ ವಿದ್ಯಾರ್ಥಿಗಳಿಗೆ ಉಳಕೊಳ್ಳಲಿಕ್ಕೆ ಹಾಸ್ಟೆಲ್ ಏರ್ಪಾಡಿಸಬೇಕೆಂಬ ಆಲೋಚನೆಗೆ ದೇಶದವರು ಸಹಾಯ ಮಾಡಬೇಕೆಂತ್ತ ಸಂಘವು ಕೇಳಿಕೊಳ್ಳುತ್ತದೆ

ಅಧ್ಯಕ್ಷರ ಅನುಮತಿಯಿಂದ ಮೆ|| ಮಡಿಕೇರಿಯಂಡ ಸುಬ್ಬಯ್ಯನವರು ಮಾತನಾಡಿದ ನಂತರ ಠರಾವು ಮಂಜೂರಾಯಿತು

42 ಎಷ್ಟು ಭೂಮಿಯ ಮಾಲೀಕರಾದರೂ ಉ... ದ ಎತ್ತುಗಳಿಗೆ ಅನಾಕ್ಯುಲೇಶನ್ ಮಾಡಿಸಿದರೆ ಚಾರ್ಜು ಕೊಡಲು ಬದ್ಧನಾಗಿರುವುದು ಅಧ್ಯಕ್ಷರು ಸೂಚಿಸಿ ಮಂಜೂರಾಯಿತು

43 ಅಮ್ಮತ್ತಿ ಬಾಲಬಾಲಕಿಯರ ಶಾಲೆಗಳ ಉಪಯೋಗಕ್ಕೂ ವೀರರಾಜೇಂದ್ರಪ್ಯಾಟೆ ಮೋಡೆಲ್ ಮತ್ತು ಬಾಳ್ಳಿಯರ ಶಾಲೆಗಳ ಉಪಯೋಗಕ್ಕೂ ಭೂಮಿಗಳನ್ನು ತೋಡಿಸಿಕೊಡಬೇಕು

ಮೆ|| ಎಸ್ ದೇವಯ್ಯನವರು ಸೂಚಿಸಿ ಮೆ|| ಕುಟ್ಟಂಡ ತಮ್ಮಯ್ಯನವರು ಅನುಮೋದಿಸಿ ಮಂಜೂರಾಯಿತು

44 ವೀರರಾಜೇಂದ್ರ ಪ್ಯಾಟೆಯಲ್ಲಿ ಒಬ್ಬ ಅಸಿಸ್ಟೆಂಟ್ ಸರ್ಜನರನ್ನು ಮತ್ತು ವೀರರಾಜೇಂದ್ರ ಪ್ಯಾಟೆ ಮತ್ತು ಮಡಿಕೇರಿ ಆಸ್ಪತ್ರೆಗಳಲ್ಲಿ ಲೇಡಿ ಡಾಕ್ಟರುಗಳನ್ನು ಮತ್ತು ಎಲ್ಲಾ ಆಸ್ಪತ್ರೆಗಳಲ್ಲಿ ಕೂಲಿಗಿತ್ತಿಯರನ್ನು ನೇಮಿಸಿಕೊಡಬೇಕು ಅಧ್ಯಕ್ಷರು ಸೂಚಿಸಿ ಮಂಜೂರಾಯಿತು

45 ಹಾಸ್ಟೆಲುಗಳು ಕಾಯಿಲಸ್ಥರ ಮನೆಗೆ ಹೋದರೆ ಅವರಿಗೆ ಕೊಡಬೇಕಾದ ಭತ್ಯ ಮತ್ತು ಫೀಸನ್ನು ನಿಶ್ಚಯಿಸಿ ಇಡಬೇಕು ಅಧ್ಯಕ್ಷರು ಸೂಚಿಸಿ ಮಂಜೂರಾಯಿತು

46 ಹಾರಂಗಿ ನಾಲೆಯನ್ನು ಸಮ್ಮಂದಪಡುವ ಧೈಕರಿಗೆ ಸದರಿತೆ ತೆಗೆದುಕೊಂಡುದರ ಪರಿಹಾರ ಕೊಡಬೇಕು

ಮೆ ಗುಡಿಯಟ್ಟ ಮರಿಯಪ್ಪನವರು ಸೂಚಿಸಿ ಮಾಸ್ಟರ್ ... ಪ್ಪನವರು ಅನುಮೋದಿಸಿ ಮಂಜೂರಾಯಿತು

47 ... ಯೂರನ್ನು ಜೂಡಾಳ ನಂಬಿತ ... ನೆಪಿಂದ ಹೊಳತ್ತು ನೀರು ... ಗೆ ಕುಂಜಂತ ಮಾಡಿಕೊಡಬೇಕು ... ಯಲ್ಲಿ ... ಯಿಂದ ಕೆಳಗೆ ... ಸದಿ ... ಉಪಯೋಗಿಸುವವರಿಗೆ ... ದಿಸಿ ಕೊಡಬೇಕು

ಮಾಸ್ಟರ್ ಬೊನ್ನಪ್ಪನವರು ಸೂಚಿಸಿ ಮೆ ಪುಲಿಯಂಡ ತಿಮ್ಮಯ್ಯನವರು ಅನುಮೋದಿಸಿ ಮಂಜೂರಾಯಿತು

48 ಕಾಲೇಜ್ ಬೋಳಳವಲ್ಲಿ ... ದಲ್ಲೂ ... ಸಾಧ್ಯವಾಗಿಯೂ ಕ್ರಮವರಿ ವಿದ್ಯಾಭ್ಯಾಸ ಕೊಡುವ ಏರ್ಪಾಡು ಮಾಡಬೇಕು ಅಧ್ಯಕ್ಷರ ಸೂಚಿಸಿ ಮಂಜೂರಾಯಿತು

49 ಇರ್ಸಾಲ ಸಾಗುವಳಿಗೆ ಜಮ್ಮದ ರೈತರನ್ನು ಜುಲುಮೆಯಿಂದ ಹಿಡಿಯಬಾರದು,

ಮೆ|| ಬಿದ್ದಂಡ ಕಾರ್ಯಪ್ಪನವರು ಸೂಚಿಸಿ ಮೆ|| ... ಡ ಮೊಣ್ಣಪ್ಪನವರು ಅನುಮೋದಿಸಿ ಮಂಜೂರಾಯಿತು

50 ರೆವಿನ್ಯೂ ರೆಗ್ಯುಲೇಶನನ್ನು ಗಜೆಟ್ಟಿನ ಒಂದನೇ ಭಾಗವನ್ನು ಕನ್ನಡದಲ್ಲಿ ಪ್ರಕಟಿಸಬೇಕು ಅಧ್ಯಕ್ಷರು ಸೂಚಿಸಿ ಮಂಜೂರಾಯಿತು

51 ಜಮ್ಮ ಬಾಣೆಗಳನ್ನು ಮಾರಲಿಕ್ಕೆ ಬಿಡಬಾರದು

ಮೆ|| ಕೊರವಂಡ ಪೊನ್ನಪ್ಪನವರು ಸೂಚಿಸಿ ಮೆ ... ಮೊಣ್ಣಪ್ಪನವರು ಅನುಮೋದಿಸಿ ಮಂಜೂರಾಯಿತು ಮೆ|| ಬಿದ್ದಂಡ ಸುಬ್ಬಯ್ಯನವರು ಮಾತ್ರ ವಿರೋಧಿಸಿದರು

52 ಸಂಘದ ಉದ್ದೇಶಗಳನ್ನು ಚೆನ್ನಾಗಿ ನೆರವೇರಿಸಲಿಕ್ಕೆ ಒಂದು ಸಬ್ ಕಮಿಟಿಯನ್ನು ಎಗ್ಜಿಕ್ಯೂಟಿವ್ ಕಮಿಟಿಯವರು ನೇಮಿಸಬೇಕು

ಮೆ|| ಕೇರಿರಾಂಡ ಉತ್ತಯ್ಯನವರು ಸೂಚಿಸಿ ಮೆ|| ಬಿದ್ದಂಡ ಕಾರ್ಯಪ್ಪನವರು ಅನುಮೋದಿಸಿ ಮಂಜೂರಾಯಿತು

53 ಸಂಘದ ವಾರ್ಷಿಕ ಜನರಲ್ ಮೀಟಿಂಗುಗಳನ್ನು ಹಳೇ ತಾಲ್ಲೋಕು ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಮಾಡಬೇಕು ಅಧ್ಯಕ್ಷರು ಸೂಚಿಸಿ ಮಂಜೂರಾಯಿತು

54 ಅರ್ಗನೈಜರುಗಳನ್ನು ಇಟ್ಟುಕೊಳ್ಳುವ ವಿಷಯ ಕಮಿಟಿಯವರಿಗೆ ಬಿಟ್ಟದೆ ಅಧ್ಯಕ್ಷರು ಸೂಚಿಸಿ ಮಂಜೂರಾಯಿತು

55 ಸಂಘದ ಎಗ್ಜಿಕ್ಯೂಟಿವ್ ಕಮಿಟಿಯು ಚುನಾವಣೆ ಆಯಿತು ಹೆಸರುಗಳು ಇನ್ನೊಂದುವಾರ ಪ್ರಕಟವಾಗುತ್ತದೆ

56 ಮಡಿಕೇರಿ ಹೈಸ್ಕೂಲ್ ಹೆಡ್ ಮಾಸ್ಟರು ಮತ್ತು ಅಸಿಸ್ಟೆಂಟ್ ಅಸಿಸ್ಟೆಂಟರು ಮೋಡೆಲ್ ಸ್ಕೂಲ್ ಹಾಲನ್ನು ಮತ್ತು ಬೋರ್ಡಿಂಗ್ ಮನೆಯನ್ನು ಸಂಘದ ಉಪಯೋಗಕ್ಕಾಗಿ ಕೊಟ್ಟದ್ದಕ್ಕೆ ಅವರಿಗೆ ಸಂಘದ ವಂದನೆ ಇದೆ

ಮೆ ಬಿ ಎಂ ಕಾರ್ಯಪ್ಪನವರು ಸೂಚಿಸಿ ಮೆ|| ಕೋಟೆರ ಚಂಗಪ್ಪನವರು ಅನುಮೋದಿಸಿ ಮಂಜೂರಾಯಿತು

ಅಧ್ಯಕ್ಷರಿಗೂ ಸ್ವಾಗತಮಂಡಲಿಗೂ ಸ್ವಯಂ ಸೇವಕರಿಗೂ, ಬೆಂಬಲಿಸಿ ಠರಾವುಗಳು ಮಂಜೂರಾದ ನಂತರ ಅಧ್ಯಕ್ಷರ ಉಪಸಂಹಾರ ಭಾಷಣದೊಡನೆ ಸಭೆಯು ಮುಕ್ತಾಯವಾಯಿತು

ಪ್ರೆಸಿಡೆಂಟರು

ಮೆ|| ಕೊಂಗಂಡೇರ ... ಯ್ಯನ ಆರ್ ಬಿ

ವೈಸ್ ಪ್ರೆಸಿಡೆಂಟರು

ಮೆ|| ಯನ್ ಆರ್ ಸುಬ್ಬಯ್ಯನವರು
ಮೆ|| ಕೇಳಪಂಡ ಅಚ್ಚಯ್ಯನವರು

ಜನರಲ್ ಸೆಕ್ರೆಟರಿ

ಮೆ ಸಿ ಯನ್ ಮೊಣ್ಣಪ್ಪನವರು, ಬಿ ಎ ಬಿ ಎಲ್

ಜಾಯಿಂಟ್ ಸೆಕ್ರೆಟರಿಯವರು

ಮಡಿಕೇರಿ ತಾಲ್ಲೋಕಿಗೆ ಮೆ ... ಉತ್ತಯ್ಯನವರು ಬಿ ಎ ಎಲ್ ಎಲ್ ಬಿ

ನಂಜರಾಯಪಟ್ಟಣ ತಾಲ್ಲೋಕಿಗೆ ... ಎನ್ ಕೃಷ್ಣಪ್ಪನವರು

ಯೆಡೆನಾಲ್ಕುನಾಡು ತಾಲ್ಲೋಕಿಗೆ ಮೆ|| ಮುಂಡೇಯಂಡ ... ಟ್ಟಪ್ಪನವರು

ಪಾಡಿನಾಲ್ಕುನಾಡು ತಾಲ್ಲೋಕಿಗೆ ಮೆ ... ಮಾದಪ್ಪನವರು

ಟ್ರೆಜರರ್.

ಮೆ ಮನೆಯಪಂಡ ಬೆಳ್ಳಪ್ಪನವರು

ಕಮಿಟಿ ಮೆಂಬರ್‌ಗಳು

ಮೆ|| ... ಡ ... ಯ್ಯನವರು ಆರ್ ಬಿ
ಮೆ|| ಡಾ|| ತಿರುಮಲಚಾರ್ ಬಿ ಎ ಬಿ ಎಲ್
ಮೆ|| ... ಸಂಜೀವಯ್ಯನವರು
ಮೆ|| ... ಅಪ್ಪಯ್ಯನವರು
ಮೆ|| ಕೊರವಂಡ ಪೊನ್ನಪ್ಪನವರು
ಮೆ|| ... ಪೊನ್ನಯ್ಯನವರು
ಮೆ|| ಬಿದ್ದಂಡ ಕಾರ್ಯಪ್ಪನವರು
ಮೆ|| ... ಪೂಣಚ್ಚನವರು

ನಂಜರಾಯಪಟ್ಟಣ ತಾಲ್ಲೋಕು ಕಮಿಟಿ ಮೆಂಬರುಗಳು

೧ ಮೆ|| ಗುಡಿಯಟ್ಟ ಮರಿಯಪ್ಪನವರು ೨ ಮೆ|| ಚಿಮ್ಮಂಗೆ ಮುತ್ತಣ್ಣನವರು ೩ ಮೆ|| ಹೆಬ್ಬಾಲೆ ಕಾಶಿ ತಿಮ್ಮಣ್ಣನವರು ೪ ಮೆ|| ... ಕಾಳಪ್ಪನವರು ೫ ಮೆ|| ಬಾಚೆಮಂಡ ಕಾಳಪ್ಪನವರು ೬ ಮೆ|| ಕತ್ತಿನಳ್ಳಿ ಕೃಷ್ಣಯ್ಯನವರು

ಯೆಡೆನಾಲ್ಕುನಾಡು ತಾಲ್ಲೋಕು ಕಮಿಟಿ ಮೆಂಬರ ಗಳು

೧ ಮೆ|| ಸಿ ಎಸ್ ಉತ್ತಯ್ಯನವರು ೨ ಮೆ|| ಪಿ ಐ ಬೆಳ್ಯಪ್ಪನವರು ೩ ಮೆ|| ಬಲ್ಲಚಂಡ್ರ ಬೆಳ್ಯಪ್ಪನವರು ೪ ಮೆ|| ಬಿಟ್ಟಿಯಂಡ ನಂಜಪ್ಪನವರು ೫ ಮೆ|| ಮಡಿಕೇರಿಯಂಡ ಸೋಮಯ್ಯನವರು ೬ ಮೆ|| ಯಸ್ ಯಂ ಪಿಟೀಲರವರು ೭ ಮೆ|| ಪಟ್ಟಚಂಡ ಮುದ್ದಪ್ಪನವರು ೮ ಮೆ|| ಚೆಂಬಾಂಡ ಮುಂವಣ್ಣನವರು

ಪಾಡಿನಾಲ್ಕುನಾಡು ತಾಲ್ಲೋಕು ಕಮಿಟಿ ಮೆಂಬರುಗಳು

೧ ಮೆ|| ಕೋಟೇರ ಐಯಪ್ಪನವರು ೨ ಮೆ|| ಬಿದ್ದಾಟಂಡ ಮಾದಪ್ಪನವರು ೩ ಮೆ|| ಮೂದಂಡ ಮುತ್ತಣ್ಣನವರು ೪ ಮೆ|| ಪಟ್ಟಮಾಡ ಪೊನ್ನಯ್ಯನವರು ೫ ಮೆ|| ಯಸ್ ಯನ್ ಶಂಕರನಾರಾಯ್ಯನವರು ೬ ಮೆ|| ಉದಿಯಾಂಡ ಮಾಚಯ್ಯನವರು ... ಮೆ|| ಕದಂಬಾಡಿ ಸುಬ್ರಾಯರು ೮ ... ಮೂಟೆ ಅಣ್ಣಯ್ಯನವರು

ಕಿಗ್ಗಟ್ಟುನಾಡು ತಾಲ್ಲೋಕು ಕಮಿಟಿ ಮೆಂಬರುಗಳು

೧ ಮೆ|| ಮನೆಯಪಂಡ ನಂಜಪ್ಪನವರು ೨ ಮೆ|| ಮಾರುವಂಗಳ ಕುಶಾಲಪ್ಪನವರು ೩ ಮೆ|| ಕೊಡಂದೇರ ಮೇದಪ್ಪನವರು ೪ ಮೆ|| ಪಜ್ಜಿ ಮರ್ಗಂಟ್ಟಪ್ಪನವರು ೫ ಮೆ|| ಮಳಿಂಡ ಬೆಳ್ಳಪ್ಪನವರು ೬ ಮೆ|| ಚೊನೀರ ಕರುಂಬಯ್ಯನವರು ೭ ಮೆ|| ... ಪ್ಪನವರು (ಮರೆನಾಡು) ೮ ಮೆ|| ತತ್ತಮನೆ ... ಯ್ಯನವರು

(೫೦ ನೇ ಸಂಚಿಕೆಯಿಂದ ಮುಂದರಿದುದು)

"ಕೊಡಗು ಪತ್ರಿಕೆ"

ಮಹನೀಯರೇ—ನನ್ನ ಭಾಷೆಯಲ್ಲಿ ಪರಿಚಯಿಸಿ ನಾಲ್ಕುವ ಮೊದಲು ಒಂದೆ ಎರಡು ಸಂಗತಿಗಳನ್ನು ಸೂಚಿಸಬೇಕೆಂದಿದ್ದೇನೆ ಒಂದನೇದು ನಮ್ಮ ಕೊಡಗು ಪತ್ರಿಕೆ, ಈ ಪತ್ರಿಕೆಯು ಸುಪ್ರಸಿದ್ಧ ನಮ್ಮ ದೇಶದಲ್ಲಿ ಒಂದು ಶುಭನಕ್ಷತ್ರ ಉದಯಿಸಿದಂತೆ ಆದೆ ಐವತ್ತು ವರ್ಷಗಳಲ್ಲಿ ಜನರ ಸುಖಿತ್ವವನ್ನು ಮಾಡುವ ಕಾರ್ಯವನ್ನು ಈ ಪತ್ರಿಕೆಯು ಒಂದೇ ಒಂದು ವರ್ಷದಲ್ಲಿ ಮಾಡಿರುತ್ತದೆ. ಈ ಪತ್ರಿಕೆಯ ಸಂಪಾದಕರು ದೇಶದ ಸರ್ವ ಕಷ್ಟ ಸುಖಗಳನ್ನು ಸರಕಾರದ ಮುಂದೆ ಮುಚ್ಚುಮರೆ ಇಲ್ಲದೆ ಇಡುತ್ತಾರೆ ಅದನ್ನು ನಾವು ಪುನಃ ಪುನಃ ಹೇಳಬೇಕಾಗಿಲ್ಲ ಸಂತೋಷದ ಸಹ ಈ ಪತ್ರಿಕೆಯು ಒಳ್ಳೆ ಜನಗಳ ... ದೇಶದು ಬರೆದಿರುತ್ತಾರೆ ಈ ಪತ್ರಿಕೆಯನ್ನು ಪ್ರತಿಯೊಬ್ಬ ದೇಶಾಭಿಮಾನಿಯೂ, ಗರೀಬನೂ ಐಶ್ವರ್ಯವಂತನೂ ಎಂಬ ಭೇದವಿಲ್ಲದೆ ಪ್ರೋತ್ಸಾಹಿಸಬೇಕಾಗಿ ನನ್ನ ಮುಖ್ಯ ಪ್ರಾರ್ಥನೆ ಪತ್ರಿಕೆಯನ್ನು ಓದಿ ಜೋಕಾಲ ಯೆಷದ ಮಹನೀಯರು ದಯವಿಟ್ಟು ಕಾಣಿಕೆಯನ್ನು ಪಾವತಿ ಮಾಡಿ ಪತ್ರಿಕೆಯನ್ನು ದೀರ್ಘಾಯುವಾಗಿ ಮಾಡಲಿಕ್ಕೆ ಆಶೀರ್ವದಿಸಬೇಕಾಗಿ ಪ್ರಾರ್ಥಿಸುವೆ—ಈ ಪತ್ರಿಕೆಯ ಪರಿಪಾಲಕರಿಗೂ, ... ಕರಿಗೂ, ... ದಕರಿಗೂ, ದೇವಿಯರ ... ಎಷ್ಟು ಆಶೀರ್ವದಿಸಿದರೂ ಸಾಲದು ಇಷ್ಟು ದೀರ್ಘ ... ನಮ್ಮ ... ವ ಪತ್ರಿಕೆಗೆ ಭಗವಂತನು ದೀರ್ಘಾಯುಷ್ಯವನ್ನೀಯಲಿ!

' ... '

ಕೊಡಗು ಪತ್ರಿಕೆಯ ... ನಂತರ ಕೊಡಗು ದೇಶವು ಕರ್ನಾಟಕದ ಒಂದು ಭಾಗವೆಂದು ... ಕರಿಗೆ ... ನಮ್ಮ ದೇಶವು ... ಕಲ್ಯಾಗಳಲ್ಲಿ ... ಬಿದ್ದಿದೆಂದನಿಸು ... ತ್ತೇವೆ ಆದರೂ ಕರ್ನಾಟಕದ ... ಬಾಷೆಯೂ ... ರ ... ಸಂಬಂಧವು ... ಗು ದೇಶವೂ ಸಹ, ಕನ್ನಡ ... ದಲ್ಲಿಯೂ ... ಕರ್ನಾಟಕಸರ ... ಕನ ... ಆಗುತ್ತೇನ ನಾವು ಎಷ್ಟು ಆನ್ಯರ ವಿದ್ಯೆ ... ನಮ್ಮ ಭಾಷೆಯ ಷ್ಟು ಸುಲಭದಿಂದ ನಮಗೆ ಯಾವುದೂ ತಿಳಿಯುವುದಿಲ್ಲ ಭಾಷೆಯೊಂದರ ವಿಷಯಗಳನ್ನು ... ದ ... ಮಾಡುವ ... ಮಾಡಿಗಿದೆ

... ಟಕಕ್ಕೆ ಜಯವಾಗಲೆಂದು ... ಕರ್ನಾಟಕ ... ಎಂದಾಗ ಪ್ರತ್ಯೇಕ ... ಸಂಸ್ಥೆಗಳನ್ನು ಸ್ಥಾಪಿಸಲೆಂಬುದೇ ನನ್ನ ಪ್ರಾರ್ಥನೆ

"ಜಮ್ಮ"

ನಾನು ಇದುವರೆಗೆ ಹೇಳುತ್ತಾ ಬಂದದ್ದು ಯಾವದೂ ನನ್ನ ಸ್ವಂತ ಅಭಿಪ್ರಾಯವಲ್ಲ ಏತಕೆಂದರೆ ನಾನು ಹೇಳಿದ ಎಲ್ಲಾ ವಿಷಯಗಳು ನಮ್ಮ ಈ ಸಂಘದಲ್ಲಿ ಠರಾವು ರೂಪದಲ್ಲಿ ... ಕಾರಕ್ಕೆ ಅನೇಕಾವರ್ತಿ ಹೋಗಿವೆ ಹೇಳಿದ್ದನ್ನೇ ಪುನಃ ಪುನಃ ಹೇಳುವುದಕ್ಕೆ ಕ್ಷಮಿಸಬೇಕು ಆದ ಅನೇಕ ವರ್ಷದಿಂದ ಚರ್ಚಿಸಲ್ಪಟ್ಟ ಒಂದು ವಿಷಯವನ್ನು ತಮ್ಮ ಮುಂದಿಡುತ್ತೇನೆ ಅದು ನಮ್ಮ ಜಮ್ಮ ವಿಷಯ ... ರ ಸರಕಾರದ ವರದಿಯನ್ನು ನೋಡಿದರೆ ಒಳ್ಳ ವ್ಯಸನವಾಗುತ್ತದೆ ಅದರಲ್ಲಿ ಬರೆದದ್ದು ಒಹಳ ಸಂಗತಿ ನಿಜವಲ್ಲವೆಂದೇ ತೋರುತ್ತೆ ಇಂಥಾ ನಿಜವಲ್ಲದ ಸಂಗತಿಗಳು ಬರೆಯಲ್ಪಟ್ಟರೆ ಅಂಥಾದ್ದದನ್ನು ಯಾವ ಜರೇಗೆ ನಮಗೆ ಸರಕಾರದವರೊಡನೆ ಆಲೋಚನೆ ಮಾಡಲಿಕ್ಕೆ ಅಸ್ಪದ ದೊರೆಯುವುದಿಲ್ಲವೋ ಅವರೇಗೆ ಸಂಕಾರದವರು ಬರೆದದ್ದೆಲ್ಲಾ ಸರಿಯೊನೆ ಆಗುತ್ತೆ

ಅವರು ಬರೆದಿರುವುದೇನೆಂದರೆ:—To effect a it enhancement, not so much for the of the additional income, as an ord- learly to assert the right of the state ssessment on Jemma lands, in respect hich a claim of permanent settlement been raised by the holders but disa- ved by the Government of India

" Since by 1898 all appearance of com- d agitation had disappeared, it is safe issure that the settlement involed no burdeh on the cultivator. "

ಸರಕಾರದವರು ಕಳೆದ ಸೆಟಲ್‌ಮೆಂಟ್ ಮಾಡಿ ಜಮ್ಮ ಭೂಮಿಗೆ ಕಂದಾಯ ಹಾಕಿದ್ದು, ಭೂಮಿಯ ಸರಕಾರದ ದ್ದೆಂದು ಸ್ಥಾಪಿಸಲಿಕ್ಕೆ, ಆಗ, ಲಕ್ಕ ಅಲ್ಪಸ್ವಲ್ಪ ಕಂದಾಯ ಹಾಕಿದ್ದಾಗಿದೆ. ಖಾ ಸೆಟಲ್‌ಮೆಂಟ್ ಮಾಡಬೇಕೆಂಬ ಹಕ್ಕು ಬಾಧ್ಯತೆ ನ್ನು ಕೆಲವರು ಎತ್ತಿದರು. ಆದರೆ ಇಂಡಿಯಾ ಸರ ಕಾರದವರು ಅದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ೧೮೯೮ ರಿಂದ ಈಚೆಗೆ ಜನರು ಸೆಟಲ್‌ಮೆಂಟ ಮಾಡು ವಿಷಯಕ್ಕಾಗಿ ಯಾವ ಚಳವಳನ್ನು ಮಾಡದ್ದರಿಂದ, ಸೆಟಲ್‌ಮೆಂಟ್ ಮಾಡಿದ್ದರಿಂದ, ರೈತನಿಗೆ ಯಾವ ವಿಧ ದಲ್ಲಿಯೂ ಹೆಚ್ಚಿಗೆ ಹೊರೆ ಆಗಲಿಲ್ಲವೆಂದೇ ಹೇಳಬೇ ಕಾಗಿದೆ. ಈ ಬರಹವು ಎಷ್ಟು ವಿಷಾದಿಸಿದರೂ ಸಂ ... ಏಕೆಂದರೆ, ಸೆಟಲ್‌ಮೆಂಟ್ ಕಟ್ಟಿ ಹೊರಟೆಂದಿ ... ರೈತ ... ಸೆಟಲ್‌ಮೆಂಟ್ ಮಾಡುವ ... ಇಲ್ಲವೆಂಬುದಾಗಿಯೂ, ಸಿಸ್ತು ನಿರೂಪವನ್ನು ... ಮಾಡುವ ಹಕ್ಕು ಸಹ ಸರಕಾರಕ್ಕೆ ಯಾವ ದಲ್ಲಿಯೂ ಇಲ್ಲವಾಗಿಸಹ ಎಷ್ಟು ಚಳವಳ ನಡಿಸಿ ದರೂ, ಸರಕಾರವು ಗಣನೆಗೆ ತರಲಿಲ್ಲ ಜಮ್ಮಾ ... ಸಂಘದ ಪ್ರತಿನಿಧಿ ಜನರಲ್ ಮೀಟಿಂಗಿನ ... ಈ ಸಂಗತಿ ಸರಕಾರಕ್ಕೆ ರೈತರ ಪುಕಾರವು ... ಗುತ್ತಲೇ ಇದೆ ... ೧೯೨೦ ರ ಮಡಿಕೇರಿ ಮೀಟಿಂಗಿನಲ್ಲಿ ಒಂದು ಪ್ರತ್ಯೇಕ ಕಮ್ಮಿಟಿಯನ್ನು ಸಹ ... ಸೆಟಲ್‌ಮೆಂಟನ್ನು ರದ್ದುಮಾಡಲಿಕ್ಕೆ ತಕ್ಕ ಸಲ ಹೆಗಳನ್ನು ನಿರ್ಧರಿಸಿ ಮಾಡಬೇಕೆಂದು ತೀರ್ಮಾನವಾ ... ಹೀಗಿದ್ದರೂ ಸರಕಾರದವರು ಹೀಗೆ ಒರಿಯು ... ರೈತರ ದುರಾದೃಷ್ಟವೇ ಸರಿ ಇದೇ ಕಟ್ಟಿಗಳ ... ದಿಂದ ಇನ್ನೊಂದು ಸೆಟಲ್‌ಮೆಂಟನಲ್ಲಿ ಕಂದಾಯ ... ಕರಿಗೆ ಬಹಳ ಹೆಚ್ಚುವದು ನಿಜ. ಆಗ, ರೈತರ ಭೂಮಿಯೆಲ್ಲವೂ ಸರ್ಕಾರ ಪಾಲಾಗುವುದೆಂದು ತೋ ... ಸರಕಾರಕ್ಕೆ ಕಂದಾಯವನ್ನು ವಿಧಿಸುವ ಹಕ್ಕು ... ಇರುವುದಿಲ್ಲ. ನಮ್ಮ ಜಮ್ಮಭೂಮಿಯನ್ನು ... ರಾಜನು ಬಹಳ ಚೆನ್ನಾಗಿ ಹದ್ದುಬಸ್ತು ವಿಂಗಡಿಸಿ, ... ತೆಯಿಂದ ಕಂದಾಯ ಹಾಕಿಸಿಸ್ತು ನಿರೂಪ ಕೊಟ್ಟಿ ... ದೆ ಕೊಡಗು ದೇಶವು ೧೮೩೪ ರಲ್ಲಿ ಕಂಪೆನಿ ಸರಕಾರಕ್ಕೆ ಸೇರಿಸಲ್ಪಟ್ಟ ಕಾಲದಲ್ಲಿ ಆಗಿನ ಅಧಿಕಾರಿ ಯಾಗಿದ್ದ ಕರ್ನಲ್ ಫ್ರೇಸರ್‌ರು, ಸೂರ್ಯಚಂದ್ರ ರು ಸಾಕ್ಷಿಯಾಗಿ ನಿಮ್ಮ ದೇಶದ ಹಕ್ಕು ಬಾಧ್ಯತೆ, ಸಿಸ್ತು ... ವಗೈರೆಯನ್ನು ಎಂದೂ ಜನರ ಮನಸ್ಸಿಗೆ ವಿ ರೋಧವಾಗಿ ಬದಲು ಮಾಡುವುದಿಲ್ಲವೆಂದೂ, ಅವುಗಳ ನ್ನು ಚೆನ್ನಾಗಿ ಕಾಪಾಡುತ್ತೇವೆಂದು ವಾಗ್ದಾನ ಮಾಡಿರುತ್ತಾರೆ. ಆ ವಾಗ್ದಾನವು ಈಗ ಎಲ್ಲಿ ಹೋ ಯಿತು ? ಇತ್ತಲಾಗಿ ಅನೇಕ ಚೀಫ್ ಕಮಿ ಷನರವರು ಜಮ್ಮಕ್ಕೆ ಹೆಚ್ಚು ಕಂದಾಯ ಹಾಕಕೂಡ ದಾಗಿ ಅಭಿಪ್ರಾಯಪಟ್ಟಿದ್ದಾರೆ ಅದ್ದರಿಂದ ನಾವು ... ಈ ಬಾಬಿನಲ್ಲಿ ಹಣ ಶೇಖರಿಸಿ ಕಳೆದ ಸೆಟಲ್‌ ಮೆಂಟನ್ನು ರದ್ದುಮಾಡಲು ತಕ್ಕ ಪ್ರಯತ್ನ ಮಾಡದೆ ಹೋದರೆ, ಇದರಿಂದ ನಮ್ಮ ಮುಂದಿನ ಕಾಲದಲ್ಲಿ ಹರಿ ... ಪಡಬೇಕಾಗುವುದು

"ಪರಿಸಮಾಪ್ತಿ"

... ಬಾಂಧವರೆ;

ಬಹಳ ಹೊತ್ತು ಪ್ರಸಂಗಿಸಿ ತಮಗಳಿಗೆಲ್ಲ ಬೇಸ ರ ಹುಟ್ಟಿಸಿದೆನು. ಈ ಮೊದಲು ಹೇಳಿದಂತೆ ಕಳೆದ ... ಕಾನ್ಫರೆನ್ಸಿನಲ್ಲಿ ಅನೇಕ ಮುಖ್ಯ ಠರಾವುಗ ... ಅಂದರೆ, ಜಮೀನುದಾರ ಸಂಘದ ಕೆಲಸವನ್ನು ... ಸ್ಥಿತಿಯಲ್ಲಿ ಮಾಡುವುದು, ... ಪರಸ್ಪರ ... ವಿಷ್ಣು, ವಿವಾಹ ನಿಷೇಧ, ಪಂಚಾಯಿತಿ ಅಸ್ಪೃಶ್ಯತೆ, ... ದಲಾದ ಸಂಗತಿಗಳಲ್ಲಿ ಜನರನ್ನು ಶಿಕ್ಷಿತರನ್ನಾಗಿ ಮಾಡುವುದು ವಗೈರೆ ಆಗಿವೆ ಸಂಘದ ಉದ್ದೇಶಗ ಳನ್ನು ಪೂರ್ತಿ ನೆರವೇರಿಸುವುದಕ್ಕಾಗಿ ಜನ್ನರು ನಮ್ಮ ಸಂಘದವರು ಮುಂದಕ್ಕೆ ಒಂದು ಈ ಬಗ್ಗೆ ತಕ್ಕ ವಿಚಾರ ಗಳನ್ನು ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ. ಈ ... ದಲ್ಲಿ ಹೇಳಿದಂತೆ ಯಾವಾಗಲು ಅರ್ಜಿ ಬರೆದು ಬೇ

...ಹುವ ಕಾಲವು ಕಳೆದುಹೋಯಿತು. ಈಗ ದೇವರು ನಮ್ಮೆಲ್ಲರನ್ನು ಜನಿಸಿದ್ದು ಸ್ವತಂತ್ರತೆಯಿಂದ ಚೆನ್ನಾಗಿ ಬಾಳಿ ಬದುಕಲಿಕ್ಕೆ ಆಗಿದೆ, ಎಂಬುದು ಪ್ರತ್ಯಕ್ಷ ಬೇರೆ ದೇಶದ ಉದಾಹರಣೆಗಳಿಂದ ತೋರುತ್ತಿದೆ. ಸರಕಾರ ದವರನ್ನು ಪ್ರತಿ ಒಂದಕ್ಕೂ ಬೇಡುವುದರ ಬದಲಾಗಿ, ನಾವು ಸ್ವಾಭಿಮಾನದಿಂದಲೂ, ಒಗ್ಗಟ್ಟಿನಿಂದಲೂ, ನ ಮ್ಮಿಂದ ಆಗುವ ಕೆಲಸವು ಏನೂ ಇಲ್ಲವೆಂದೂ, ಸರಕಾ ರಕ್ಕೆ ನಮ್ಮ ಯೋಗ್ಯತೆಯನ್ನು ತೋರ್ಪಡಿಸಿಕೊಂಡರೆ, ಯಾವ ಸರಕಾರವುಹಾಗೆ ನಮ್ಮ ಕೋರಿಕೆಯನ್ನು ನೆರ ವೇರಿಸಲಿಕ್ಕಿಲ್ಲ ಅದ್ದರಿಂದ ತಮಗೆ ಈ ದಿನ ನಾನು ಹೇಳುವ ಅಲ್ಪವಾದ ಬುದ್ಧಿವಾದವೇನೆಂದರೆ—ಸ್ವಾಭಿ ಮಾನವನ್ನು ಸ್ವಮರ್ಯಾದೆಯನ್ನು ದಯೆಯನ್ನು. (Self Knowledge, Self respect and Self Control) ಯಾವಾಗಲು ಬಿಡಬೇಡಿ. ಯಾವ ಜನಾಂ ಗವು ಈ ಮರ್ಯಾದೆಗಳನ್ನು ಕಳಕೊಳ್ಳುತ್ತವೋ, ಆ ಜನಾಂಗವು ಆಳುಗಳಾಗಿರಲಿಕ್ಕೆ ಯೋಗ್ಯರೆ ಹೊರತು ಅನ್ಯಥಾ ಅಲ್ಲ.

"ಸಹೋದರತ್ವ."

ಸಹೋದರಭಾವವನ್ನು ಅನೇಕರು ಅಂದರೆ ನನ ಗಿಂತ ಮುಂದೆ ಅಧ್ಯಕ್ಷ ಪದವಿಯನ್ನಲಂಕರಿಸಿದವರು ವಿವರಿಸಿರುತ್ತಾರೆ ಆದರೆ ಈ ವಿಷಯ ಮಿ|| ಕೇಳಪಂಡ್ರ ಅಚ್ಚಯ್ಯನವರು ಹೇಳಿರುವುದೇನೆಂದರೆ-ಗಂಡಹೆಂಡಿರ ನ್ನು, ಮನೆ ಮಕ್ಕಳನ್ನು, ಜಾತಿ ವಿಜಾತಿಗಳನ್ನು ಒಡೆದು ಬಿಂಬಿಕೊಂಡು ವಿರೋಧಿಸುವ ಚಳವಳಕ್ಕೂ, ಅವಿ ಪ್ರಾಯಕ್ಕೂ ಯಾರೂ ನಿಗ ಕೊಡಬಾರದಾಗಿ ಕೇಳಿ ಕೊಳ್ಳುತ್ತೇನೆ

ಸಹೋದರತ್ವದ ವಿಷಯ ಒಬ್ಬಾನೊಬ್ಬ ಪುಣ್ಯಾತ್ಮ ನು ಈ ರೀತಿ ಹೇಳುತ್ತಾನೆ.

" Brothern, meet together ! talk toge ther ! let your minds apprehend alike com- mon be your prayer; common be your as- sembly's end and aim, common be your purpose; common be your deliberation, I advise you to have a common policy Common be your desire, united be your hearts, united be your intention, so that there may be a through union among you May almighty grant this;

ಸಂಗಚ್ಛಧ್ವಂ ಸಂವದಧ್ವಂ ಸಂವೋಮನಾಂಸಿ ಜಾನ ತಾಂ, ಸಮಾನೋ ಮಂತ್ರಸ್ಸಮಿತಿ ಸಮಾನಂ ಮನಸ್ಸ ಹ ಚಿತ್ತಮೇಷಾಂ ; ಸಮಾನಂ ಮಂತ್ರ ಮಭಿಮಂತ್ರ ಏವಃ ಸಮಾನೀವ ಆಕೂತಿ ಸ್ಸಮಾನ ಹೃದಯಾನಿವಃ ಸಮಾನ ಮಸ್ತುವೋ ಮನೋಯಥಾ ವಸ್ಸು ಸಹಾಸತಿ "

ಓ, ಸಹೋದರರೆ; ಒಂದುಕೂಡಿ, ಒಟ್ಟಿಗೆ ಮಾತ ನಾಡಿ, ನಿಮ್ಮೆಲ್ಲರ ಮನಸ್ಸು ಒಂದಾಗಿರಲಿ ನಿಮ್ಮ ಪ್ರಾರ್ಥನೆಯು ಒಂದೇಯಾಗಿರಲಿ; ನಿಮ್ಮ ಸಭೆಯ ಉ ದ್ದೇಶವು ಏಕರೀತಿಯಾಗಿರಲಿ ನಿಮ್ಮ ಕಾರ್ಯವು ಒಂದೇತರದಲ್ಲಿರಲಿ ನೀವು ನಡಿಸುವ ಕಾರ್ಯ ಕ್ರ ಮವು ಒಂದೇಯಾಗಿರಲಿ ನಿಮಗೆಲ್ಲರಿಗೆ ಹಿತವಾದ ಕಾ ರ್ಯವನ್ನು ಮಾಡಬೇಕೆಂದು ಬುದ್ಧಿವಾದಗಳನ್ನು ಹೇ ಳುತ್ತೇನೆ. ನಿಮ್ಮ ಆಶೆಯಲ್ಲವೂ, ಹೃದಯವೂ ಯಾ ವಾಗಲು ಒಗ್ಗಟ್ಟನ್ನಿಟ್ಟುಕೊಳ್ಳುವುದಕ್ಕೆ ಒಂದುಗೂಡಿ ರಲಿ, ಇಂಥಾದ್ದರಲ್ಲಿ ಸರ್ವಶಕ್ತನಾದ ದೇವರು ನಿಮ್ಮ ನ್ನು ಕಾಪಾಡುವನು.

ಜಗದೀಶ್ವರನಾದ ದೇವರು ಹ್ಯಾಗೆ ಎಲ್ಲರನ್ನು ತ ನ್ನಂತೆ ಭೇದವಿಲ್ಲದೆ ನೋಡುತ್ತಾನೋ, ಹಾಗೆಯೇ ನ ಮ್ಮೆಲ್ಲರ ಆತ್ಮದಲ್ಲಿ ಆ ದೇವರು ನೆಲೆಗೊಂಡದ್ದರಿಂದ, ಯಾವಾಗಲೂ ನಾವು ಸಹೋದರರೆಂದು ಬಂಡಿಗವಾ ಗಿಯೂ ತಿಳಿಯತಕ್ಕದ್ದು. ಅದ್ದರಿಂದ ಪುನಃ ನಿಮ್ಮಲ್ಲಿ ವಿನಯಪೂರ್ವಕದಿಂದ ಬೇಡುವುದೇನೆಂದರೆ—

" ವಿಂಗಡಿಸಿ ಆಳಲಿಕ್ಕೆ ಆಸ್ಪದ ಕೊಡಬೇಡಿ, ಎಲ್ಲಾ ಪಂಗಡಗಳ ಜನರನ್ನು ಸರಿಸಮಾನವಾಗಿ ಕಾ ಣಿರಿ "

As for myself gentlemen, I am an Ind'an first, a native of Coorg after- wards, and a Coorg last.

ಮಹನೀಯರೆ:—

ನಾನಾದರೋ, ಯಾವಾಗಲು ಮೊದಲು ಹಿಂದೀಯ ನೆಂದೂ ಎರಡನೆ ಕೊಡಗು ದೇಶಸ್ಥನೆಂದೂ ಕಡೆಯಲ್ಲಿ ಕೊಡಗನೆಂದೂ ಮನಃಪೂರ್ವಕವಾಗಿ ನಂಬಿದ್ದೇನೆ ಭಾರತಮಾತೆಗೆ ಜಯವಾಗಲಿ,

ಶ್ರೀ ಮೂಲಕಾವೇರಿ ಪುತ್ರಿಗೆ ಮಂಗಳವಾಗಲಿ.

ವಂದೇ ಮಾತರಂ

Vande Manram.
Bittiandra Naujappa.

ಪತ್ರವ್ಯವಹಾರಗಳು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ [ಎಡಿಟರ್]

ಅಪ್ಪನೆರವಂಡ್ರ ಮನೆಯಲ್ಲಿ ಒಬ್ಬರು ಮೃತಪಟ್ಟು ನಾಲ್ಕು ದಿವ ಸದಲ್ಲಿ ಸಡಕ ತೀರುವ ಮೊದ್ಲೆ ಅದೇ ಕುಟುಂಬದ ಮಂದಪ್ಪನೆಂಬವ ರಿಗೆ ಒಲ್ಲಚಂಡ್ರ ಮನೆಯಿಂದ ಹೆಣ್ಣು ತರುವ ಬಗ್ಗೆ ಮದುವೆ ಕುರಿ ಸಲಾಗಿದ್ದಾಗಿ ತಿಳಿಯಬರುತ್ತೆ ಈ ವಿಷಯ ತಕ್ಕಯುಕ್ತ ನಾಡಿನವರು ಮತ್ತು ಕಿರುಂದಾಡು ಗ್ರಾಮಸ್ಥ ಸಹ ತಕ್ಕ ವಿಚಾರಣೆ ಮಾಡಬೇ ಕಾಗಿ ಒಬ್ಬ ನಾಡಿನವನ ಕೋರಿಕೆ

" ನಾಡಿನವ

ಬಲಮುರಿ ಹೊಳೆಕಡವಿಗೆ ದೋಣಿ ಇಲ್ಲದೆ ಪ್ರಯಾಣಿಕರಿಗೆ ಬಹು ಬಾ ತೊಂದ್ರೆಯಾಗಿರುತ್ತೆ. ಸರಕಾರದವರು ಪಡಿಸಿ ಪತ್ರಿಕದವಿಗೆ ನೋಡಿ ಸಲ್ಪ ಮಾಡಿ ಪ್ರಯಾಣಿಕರಿಗೆ ತೊಂದ್ರೆ ಇಲ್ಲದೆ ರೀತಿ ವಸ್ತ್ರ ವಿಚಾರಣೆ ಮಾಡಬೇಕಾಗಿ ಒಬ್ಬ ರೈತನ ಕೋರಿಕೆ.

" ರೈತ "

ಅಯ್ಯಾ,

ಮಡಿಕೇರಿ ಮುನಿಸಿಪಾಲಿಟಿಯ ಕೆಲಸವು ನಾನ್ ಅಫಿಷಿಯಲ್ ಪ್ರೆಸಿಡೆಂಟರ ಸ್ವಾಧೀನಕ್ಕೆ ಸಿಕ್ಕಂದಿನಿಂದ ಬಹಳ ಚೆನ್ನಾಗಿ ನಡೆಯು ತ್ತ ಇದೆ ಮುನಿಸಿಪಾಲಿಟಿಯು ಮಾದರಿಯಾಗಿ ಕೆಲಸಮಾಡುತ್ತಿರು ವೆ ಈಚೆಗೆ ರಾಯಬಹದ್ದೂರು ಕೆ. ಕುಟ್ಟಯ್ಯನವರು ಪಾಣೆ ಮಟ್ಟಿಗೆ, ನೀರು ಸರಬರಾಜು ತನ್ನ ಸ್ವಂತ ಖರ್ಚಿನಿಂದ ಮಾಡಿಸಿದ್ದಕ್ಕಾಗಿ ಅವರ ಧರ್ಮಪತ್ನಿಯವರ ಹೆಸರನ್ನು ಈ ಬ್ಲಾಕಿಗೆ, ದೇಚಮ್ಮ ಎಂಬು ದಾಗಿ ಕೊಟ್ಟರು. ಇದೇ ದೇಚಮ್ಮನ ಒಂದು ಭಾಗಕ್ಕಲ್ಲದೆ ಇತರ ಎಲ್ಲಾ ಭಾಗಕ್ಕೂ ಪಂಪ್ ನೀರು ಸರಿಯಾಗಿದೆ ಹೀಗೆಯೇ ಈ ಮು ನಿಸಿಪಾಲಿಟಿಯು ಎಲ್ಲಾ ಕಡೆಗೂ ಇದೆ ಆದರೆ ದೇಚಮ್ಮ ಬ್ಲಾಕಿನ ಸ್ಕೂಲ ಪಕ್ಕದ ಭಾಗದಲ್ಲಿರುವ ಏಳೆಂಟು ಮನೆಗಳಿಗೆ ಯಾವ ನೀರು ಸರಬರಾಜೂ ಇರುವುದಿಲ್ಲ ಈ ಬಗ್ಗೆ ಪ್ರೆಸಿಡೆಂಟರಿಗೂ ಮತ್ತು ಮು ನಿಸಿಪಾಲಿಟಿ ಮೆಂಬರುಗಳಿಗೆ ಅರ್ಜಿಬರೆದು ಸಾಕಾಯಿತು ಪೈಪ್ ಇಡಲು ... ಆದರೆ ಹಣವಿಲ್ಲವಂತೆ ಇಡೀ ಮುನಿಸಿಪಾಲಿಟಿಯಲ್ಲಿರುವ ಎಲ್ಲಾ ಭಾಗಕ್ಕೂ ಪಂಪ್ ನೀರ್ ಒದಗಿ ಸಿಕೊಟ್ಟು ಏಳೆಂಟು ಮನೆಗೆ ನೀರು ಇಲ್ಲದೆ ಮಾಡುವುದು ಯಾವ ಧ ರ್ಮ. ರಾಯಬಹದ್ದೂರು ಕುಟ್ಟಯ್ಯನವರು ಇದೇ ಬಾಗೆತೊಟ್ಟಿ ಬ್ಲಾಕಿಗೆ ನೀರು ಒದಗಿಸಿ ದೇಚಮ್ಮ ಎಂಬ ಹೆಸರು ಕೊಟ್ಟು ಕೆಲವು ಮನೆಗಳಿಗೆ ನೀರಿಲ್ಲದೆ ತೊಂದರೆಯಲ್ಲಿರುವುದು ಅವರ ಚಿತ್ತಕ್ಕೆ ಬರಲಿ ಲ್ಲವೋ ? ಇನ್ನಾದರೂ ಪ್ರೆಸಿಡೆಂಟರೂ ಮತ್ತು ಮೆಂಬರುಗಳೂ ಈ ದೇಚಮ್ಮ ಬ್ಲಾಕಿನ ಕೆಲವು ಮನೆಗಳ ತೊಂದರೆಗಳನ್ನು ನೋಡಿ ಅವರು ಕೊಡುವ ಮುನಿಸಿಪಲ್ ಕಂದಾಯಕ್ಕೆ ತಕ್ಕ ಪ್ರತಿಫಲ ದೊರಕಿಸುವರೋ?

ನೊಂದವ

ಅಯ್ಯಾ,

ಕಳೆದ ಜಮೀನುದಾರ ಸಂಘದ ವಾರ್ಷಿಕ ಸಭೆಯು ವಿರಾಜಪೇಟೆಯು ಮೀಟಿಂಗಿನಲ್ಲಿ ಕೊಡಗನ್ನು ಮದ್ರಾಸು ಅಧಿಪತ್ಯದ ಒಂದು ಜಿಲ್ಲೆಯಾಗಿ ಸೇರಿಸಬೇಕೆಂದು ಈ ಬಗ್ಗೆ ವೈಸರಾಯರ ಸರಕಾರಕ್ಕೆ ಒಂದು ಡೆಪ್ಯು ಟೇಶನ್ ಒಡನೇ ಕಳುಹಿಸಬೇಕೆಂದು ಈ ಬಗ್ಗೆ ಮೆಮೋರಿಯಲ್ ತಯ್ಯಾ ರುಮಾಡಿ ಜನರ ದಸ್ತಕತ್ತು ತೆಗೆಯಲು ಕಮಿಟಿಯವರು ಒಡನೇ ಒಂದು ಕಮಿಟಿ ಮೀಟಿಂಗ್ ಮಾಡಿ ಈ ಕೆಲಸವನ್ನು ಮುಂದರಿಸಬೇಕೆಂತಲೂ. ಇದಾದನಂತರ ಒಂದು ಸ್ಪೆಶಲ್ ಕಾನ್‌ಫರೆನ್ಸ್ ಒಡನೇ ವಿರಾಜಪೇಟೆ ಯಲ್ಲಿ ಮಾಡಿ ಡೆಪ್ಯುಟೇಶನ್ ಹೊರಡಿಸಬೇಕೆಂತಲೂ ತೀರ್ಮಾನವಾಯಿತು.

ಆದರೆ ಇತ್ತೀಚೆಗೆ ಪ್ರೆಸಿಡೆಂಟ್ ಕಮಿಟಿಯವರು ಎರಡು ಮೀಟಿಂ ಗನ್ನು ಮಡಿಕೇರಿಯಲ್ಲಿ ಮಾಡಿದರೂ ಈ ಸಂಗತಿ ಚರ್ಚೆಗೆ ತರಲಿಲ್ಲ. ಕಮಿಟಿಯವರನ್ನು ನೇಮಕ ಮಾಡಿದ್ದು ಜನರಲ್ ಬಾಡಿಯವರಿಗಾಗಿ ಕಾರ್ಯಕ್ರಮಗಳನ್ನು ಸಕಾಲದಲ್ಲಿ ಮಾಡಲಿಕ್ಕೇನೇ ಆಗಿದೆ. ಹೀಗಿ ರುವಾಗ ಕಮಿಟಿಯವರು ಮತ್ತು ಪ್ರೆಸಿಡೆಂಟರು ಈ ವಿಷಯದಲ್ಲಿ ಉ ದಾಸೀನರಾಗಿರುವುದಕ್ಕೆ ಕಾರಣವೇನು ಈ ಆಗಾಯಿತ್ತಿನಿಂದ ೧೫ ದಿನದಲ್ಲಿ ಒಡನೇ ಈ ವಿಷಯ ವಿರಾಜಪೇಟೆಯಲ್ಲಿ ಮೀಟಿಂಗು ಮಾಡ ಹೋದರೆ, ಜನರಲ್ ಬಾಡಿಯವರು ಈ ವಿಷಯ ತಕ್ಕ ಏರ್ಪಾಡದ್ದಲ್ಲ ದ ವಿಧಿ ಕಾಣುತ್ತದಿಲ್ಲ. ಅದ್ದರಿಂದ ಇನ್ನಾದರೂ ಪ್ರೆಸಿಡೆಂಟರು ಈ ವಿಷಯ ಮುಂದರಿಸುವರೆಂದು ನಂಬುತ್ತೇನೆ

ಸಂಘದ ಮೆಂಬರು.

ಅಯ್ಯಾ,

ಕಳೆದವಾರ ಹಜರತ್ ಚೀಫ್ ಕಮೀಷನರು ನಾಲ್ಕು ನಾಡು ಕಡೆ ಹೋಗಿದ್ದರೆಂದೂ ತಿಳಿಯುತ್ತೇವೆ ಆದರೆ ಜನರನ್ನು ಕರೆಸಿ ರೈ ತರ ಕಷ್ಟಸುಖಗಳನ್ನು ವಿಚಾರಿಸಿದಂತೆ ತಿಳಿಯುವುದಿಲ್ಲ ಈ ಮೊದ ಲು ಇದ್ದ ಚೀಫ್ ಕಮೀಷನರು ಅಲ್ಲಲ್ಲಿ ಕಾಲೋಚಿತ ಮಧ್ಯದಲ್ಲಿ ಜನರ ಮೀಟಿನಾಡಿ ಅವರ ಕಷ್ಟಸುಖಗಳನ್ನು ವಿಚಾರಿಸುತ್ತಿದ್ದರು. ಈ ಗಿನ ಕಮೀಷನರು ಚೀಫ್ ಕಮೀಷನರು ಮೇಲೂರುಗಳಲ್ಲಿ ತಿರುಗಿ ನೊ ರಗೆ ಹೋದಲ್ಲಿ ತಮ್ಮ ಸಮಯಗಳನ್ನು ಶಿಕಾರಿ, ಹಕ್ಕಿ ಹೊಡೆಯುವು ದು ವಗೈರೆಗಳಲ್ಲಿ ಕಳೆಯುತ್ತಾರೆ ಒಡೆಯೊಬ್ಬನು ಚೀಫ್ ಕಮಿ ಷನರಿಗೆ ಕೆಲವು ವಾರಗಳ ಹಿಂದೆ ಒಂದು ಬಹಿರಂಗ ಪತ್ರವನ್ನು ಬರೆದು ಅದರಲ್ಲಿ ಕೆಲವು ಸಂಗತಿಗಳನ್ನು ಚೀಫ್ ಕಮೀಷನರು ಗಣನೆಗೆ ತೆಗೆದು ಕೊಳ್ಳಬೇಕೆಂದು ಬರೆದಿದ್ದರು. ಆದರೆ ನಮ್ಮ ಚೀಫ್ ಕಮೀಷನರು ಕಳೆದ ಎರಡು ಮೂರು ತಿಂಗಳಿಂದ ಮಡಿಕೇರಿಯಲ್ಲಿದ್ದಾರೆ, ರೈತರ ಕಷ್ಟ ಸುಖಗಳನ್ನು ಚೆನ್ನಾಗಿ ತಿಳಿಯಲಿಕ್ಕೆ ಪ್ರಯತ್ನಿಸಿದಂತೆ ಕಾಣುವು ದಿಲ್ಲ ವಿರಾಜಪೇಟೆ ಕೋಆಪರೇಟಿವ್ ಕಾನ್‌ಫರೆನ್ಸಿನಲ್ಲಿ ಅಧ್ಯಕ್ಷರಾ ಗಿದ್ದು, ತಮ್ಮ ಭಾಷಣವನ್ನು ಕೊಟ್ಟು ಒಡನೇ ಸಮಯವಿಲ್ಲವೆಂದು ಎದ್ದು ಹೋದರು ಕಮಿಷನರ್ ಕ್ರಿಕೆಟ್ ಮ್ಯಾಚಿನ ತ್ವರಿತದಿಂದ ಅವರೂ ಸಹ ಸಮಯವಿಲ್ಲವೆಂದು ಕರ್ತವ್ಯವು ರಾಜ ಪ್ರತಿನಿಧಿಗಳಿಗೆ ರೈತರ ಕಷ್ಟ ಸುಖಗಳನ್ನು ವಿಚಾರಿಸುವುದಕ್ಕಿಂತ ಹೆಚ್ಚಾಗಿ, ಈಗಿನ ಕಾಲದಲ್ಲಿ ಬ್ರಿಜ್ ಆಟವೇ ಪ್ರಾಮುಖ್ಯವಾಗಿದೆ. ಇದೆಲ್ಲಾ ನಮ್ಮ ಬಡದೇಶದ ದುರಾದೃಷ್ಟವಾಗಿದೆ ನಮಗೆ ಯಾವಾಗ ಜವಾಬ್ದಾರಿ ಸರಕಾ ರವು ಸಿಕ್ಕುತ್ತದೋ ಎಂಬುದನ್ನು ಎದುರುನೋಡುತ್ತೇವೆ.

ಒಬ್ಬ ರೈತ.

ಕುಯ್ಯಂಗೇರಿನಾಡು ತಕ್ಕರಾದ ಚಪ್ಪೀರ ಮ|| ಅಪ್ಪಯ್ಯನವರು ತಮ್ಮ ನಾಡಿನಲ್ಲಿ ತಮ್ಮ ತಮ್ಮ ಜನಗಳಲ್ಲಿ ನೀಂದಿ ಇಳಿಸಬಾರದ್ದಾಗಿಯೂ ಶುಭಾ ಅಶುಭಾ ಹಬ್ಬ ವಗೈರೆ ಮುಖ್ಯಕಾರ್ಯಗಳಲ್ಲಿ ಮಧುಪಾನವನ್ನು ಉಪಯೋಗಿಸಬಾರದಾಗಿ ನಾಡು ನಿರ್ಬಂಧ ವಗೈರೆ ಮಾಡಿದ್ದು, ಸಂತೋಷದ ಸಂಗತಿ. ಇದರ ಪೆ|| ಅಪ್ಪಯ್ಯನವರ ಮುಗಳ ಮದುವೆಯಲ್ಲು ಮಧುಪಾನದ ಆಗಬಹುದಿತ್ತೆಂದು ವರ್ತಮಾನವ ನಸಸ್ಸು ಒಂದುಕರ ತಿರಿಗಿಸಿ ನುಡಿಯುಂತ ನಡೆಯನ್ನು ಆಚರಿಸಿದ್ದು ನಮಗೆ ... ಸಂ.

ಕೇಳಿದವ.

ಕೊಡಗಿನ ಎಡ್ಮಿನಿಸ್ಟ್ರೇಶನ್ ರಿಪೋರ್ಟು ಮತ್ತು ಅಮೃತಬಜಾರ್ ಪತ್ರಿಕೆಯು.

ಅಯ್ಯಾ ಸಂಪಾದಕರೇ,

ಕೊಡಗು ದೇಶದ ಆಡಳಿತದ ವರದಿಯನ್ನು ನೀವು ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಿದ್ದುದನ್ನು ಓದಿ ಮುಂದಿಟ್ಟು ಮಾಡಿಕೊಂಡಿರಬಹುದಲ್ಲವೆ? ಹಾಗೆ ಒಂದು ವೇಳೆ ತಿಳಿಯದಿದ್ದರೂ ಅದನ್ನು ನಮ್ಮ ಮನಸ್ಸಿನೊಳಗೆ ಚಿತ್ರಿತವಾಗುವಂತೆ ಮಾಡಲು "ಅಮೃತಬಜಾರ್" ಪತ್ರಿಕೆಯು ಕೈಕೊಂಡ ಕಾರ್ಯಕ್ಕೆ ನಾವು ಸಂತೋಷಿಸಬೇಕೆ? ಅಥವಾ ನಮ್ಮ ಮಂದಬುದ್ಧಿಗೆ ವಿಷಾದಿಸಬೇಕೆ? ವಾಚಕರೇ ಹೇಳಿರಿ.

ತಾ|| ೨೫-೫-೨೩ರ ಪತ್ರಿಕೆಯು ಹೇಳುವುದೇನು? "ಕಳೆದ ವರ್ಷದ ಕೊಡಗಿನ ಆಡಳಿತದ ವರದಿಯು ಇತರ ಪ್ರಾಂತ್ಯದ ಐ. ಸಿ. ಎಸ್. ಪದವೀಧರರಿಗೆ ಕೊಡಗು ತನ್ನ ಆಡಳಿತಕ್ಕೆ ಒಳಪಡದೇ ಹೋದುದಕ್ಕೆ ವಿಷಾದವನ್ನುಂಟುಮಾಡುವುದೇನೋ ವಾಸ್ತವವೇ. ಗತವರ್ಷದ ಪ್ರಾರಂಭದಲ್ಲಿ ತಮ್ಮ ದೇಶವನ್ನು ಮದ್ರಾಸಾಧಿಪತ್ಯಕ್ಕೆ ಸೇರಿಸಬೇಕೆಂಬ ಚಳವಳಿಕ್ಕೆ ಕೊಡಗು ನಿವಾಸಿಗಳಲ್ಲಿ ಮೂರ್ತ ಮತ್ತಾಗಿ ತಲೆದೋರಿತ್ತೆಂದು ವರದಿಯು ಹೇಳುತ್ತ ಆದರೆ ಹಜರತ್ ಚೀಫ್ ಕಮಿಷನರು ಮತ್ತು ಕಮಿಷನರು ಜನರಿಗೆ ಈ ವಿಷಯದಲ್ಲಿ ಸರ್ಕಾರದ ಅಭಿಪ್ರಾಯವನ್ನು ವಿವರಿಸಿದ ಮೇಲೆ 'ಚಳವಳಿಯು ಕೂಡಲೇ ನಿಂತುಹೋಯಿತು' ಸಾಲದುದಕ್ಕೆ ಇನ್ನೊಂದಾಶ್ಚರ್ಯ! ಈ ಕಾಲದಲ್ಲಿ ಇಡೀ ಹಿಂದೂಸ್ಥಾನವೇ, ಏಕೆ ಮಧ್ಯಪ್ರಾಂತಗಳೂ ಸಹ ಹೊಸ ಸುಧಾರಣೆಗಳು ನಿಷ್ಪ್ರಯೋಜನವೆನ್ನುತ್ತಿರುವಾಗ ನಮ್ಮ ಕೊಡಗಿನ ಜನರು ಮುಂದೆ ಸಿಕ್ಕಬಹುದಾದ ಸುಧಾರಣೆಗೋಸ್ಕರ ಸಂತೋಷದಲ್ಲಿ ಹಿಗ್ಗುತ್ತಿರುವಂತೆ ತೋರುತ್ತದೆ—"

'ಇಂತಹ ಒಪ್ಪಿಗೆಗಳಿಗೋಸ್ಕರ ಆ ಪ್ರಾಂತ್ಯದ ಜನರು ತೃಪ್ತಿಪಟ್ಟು ಆತ್ಮರೆಯಿಂದ ಸ್ವೀಕರಿಸಿದರು. ಹಾಗೆ ಸ್ವೀಕರಿಸಿದರೆ ಸ್ವಲ್ಪ ಸಮಯದಲ್ಲಿಯೇ ಕೊಡಗು ತನ್ನ ಸರ್ಕಾರದ ಸುಧಾರಣೆಗಳಲ್ಲಿ ತೃಪ್ತಿಗೊಳ್ಳುವುದರಲ್ಲಿ ಯಾವ ಸಂದೇಹವೂ ಇಲ್ಲ.' ಮಹಾಶಯರೇ, ತಾವೇನೂ ಹೆದರಬೇಕಾದುದಿಲ್ಲ. ಬರೇ ಮಕ್ಕಳನ್ನು ಮಾತ್ರ ನೀವು ಕೆಲಸಕ್ಕೆ ಬಾರದ ಇರತಕ್ಕ ಆಟದ ಸಾಮಾನುಗಳಿಂದ ತೃಪ್ತರನ್ನಾಗಿ ಮಾಡಬಹುದೇ? ಹೊರತು ಅಂತಹ ವಿನೋದಕರವಾದ ವಸ್ತುಗಳಿಂದ ಇಡೀ ಪ್ರಾಂತ್ಯದ ಜನರನ್ನು ಮರುಳುಮಾಡಬಹುದೆಂದು ನೀವು ಯೋಚಿಸಬೇಡಿರಿ. ಆಹಾ! ಆದರೇನು! ಕೊಡಗೇ, ನಿನ್ನಲ್ಲಿ ಅನೇಕರಾರಿಗಳಿದ್ದರೆ—" ಇತರ ಜನರು ನಮ್ಮನ್ನು ಎಚ್ಚರಿಸುವಾಗಲಾದರೂ ನಾವು ಎಚ್ಚರಗೊಳ್ಳುವುದು ನಮ್ಮ ಕರ್ತವ್ಯವಲ್ಲವೆ? ಆಲೋಚಿಸಿರಿ. ... ರಿಪೋರ್ಟಿನಲ್ಲಿ ... ಸರಕಾರದವರು ಕೊಡಬಹುದಾದ ಕೌನ್ಸಿಲ್‌ನ ರೂಪವು ಏನು! ತುಂಬಾ ವ್ಯಾಪ್ತಿಯುಂಟುಮಾಡದೆ ಅದನ್ನು ಒಪ್ಪಿಕೊಂಡರೆ ಕೌನ್ಸಿಲ್‌ನ ಸಹಾಯದಿಂದ ನಡೆಯುವ ಸರಕಾರದಿಂದ ಕಡ್ಡಾಯಕ್ಕಾದರೂ ಕೊಡಗಿಗೆ ತೃಪ್ತಿಯಾಗುತ್ತೆ" ಎಂತ ಬರೆದಿದೆ—ಅಯ್ಯಾ, ಬಸ್ಸೊಂದು ಹಿಗ್ಗಬೇಡಿರಿ—ಬರೇ ಮಕ್ಕಳನ್ನು ಮಾತ್ರ ಕೆಲಸಕ್ಕೆ ಬಾರದೆ ಇರತಕ್ಕ ಆಟದ ಸಾಮಾನುಗಳಿಂದ ತೃಪ್ತರನ್ನಾಗಿ ಮಾಡಬಹುದೇ ಹೊರತು ಅಂತಹ ವಿನೋದದ ವಸ್ತುಗಳಿಂದ ಇಡೀ ಪ್ರಾಂತ್ಯದ ಜನರನ್ನು ಮರುಳುಮಾಡಬಹುದೆಂದು ನೀವು ಯೋಚಿಸಬೇಡಿರಿ. ಅಯ್ಯಾ! ಕೊಡಗೇ! ನಿನ್ನಲ್ಲಿ ಅನೇಕ ರಾರಿಗಳಿಲ್ಲವಲ್ಲಾ!'

ನಮ್ಮ ಹೀನಸ್ಥಿತಿಯನ್ನು ನೋಡಿ ಬಂಗಾಳ ಪ್ರಾಂತ್ಯದ ಕಲ್ಕತ್ತಾ ಪಟ್ಟಣದ ಪತ್ರಿಕೆಯು ಸಹ ಮೊರೆಯಿಡುತ್ತದೆ—ನಮ್ಮ ಸ್ಥಿತಿಯನ್ನು ನಮ್ಮ ದೇಶವು ಯಾವಾಗ ಅರಿತುಕೊಂಡೀತು?

ಓದಿದವ.

ಕೊಡಗಿನ ಆಸ್ಪತ್ರೆಗಳು.

ಅಯ್ಯಾ,

ನಾನು ಕಳೆದ ವಾರ ಮಡಿಕೇರಿ ಸಿವಿಲ್ ಸರ್ಜನ್ನರವರ ಹತ್ತಿರ ಒಂದು ಮಗುವನ್ನು ಪರೀಕ್ಷಿಸಿ ಕಾಯಿಲೆಗೆ ಔಷಧಿ ತೆಗೆಯಬೇಕೆಂದು ಹೋದೆನು. ಆಸ್ಪತ್ರೆಯಲ್ಲಿ ಅಸಿಸ್ಟೆಂಟ್ ಸರ್ಜನ್ನರು ಬಂದು ಕಾಯಿಲೆಯನ್ನು ನೋಡಿ, ಬಂದ ಸಂಗತಿಯನ್ನು ಸಿವಿಲ್ ಸರ್ಜನ್ನರಿಗೆ ತಿಳಿಸಿ, ಅವರು ಪರೀಕ್ಷೆ ಮಾಡಿದರೆ, ಅವರ ಫೀಜು ಕೊಡಬೇಕಾಗಬಹುದೆಂದು ಹೇಳಿದರು. ಇದನ್ನು ಕೇಳಿ ನನಗೆ ವ್ಯಸನವೂ, ನಗೆಯೂ ಬಂದು ಅವರನ್ನು ಧರ್ಮದ ಆಸ್ಪತ್ರೆಯೆಂಬುದರ ಅರ್ಥವೇನೆಂಬುದನ್ನು ಕೇಳಿದೆನು. ಅಲ್ಲದೆ, ಫೀಜು ನಾನು ಕೊಡಲು ಶಕ್ತನಲ್ಲವೆಂದೂ, ಕೊಡುವುದಿಲ್ಲವೆಂದೂ ಛಂದೋಕ್ತವಾಗಿ ಹೇಳಿ, ಡಾಕ್ಟರವರನ್ನು ಕಂಡು ಮಾತಾಡಬೇಕೆಂದು ಚೀಟಿ ಕಳುಹಿಸಿದೆನು. ಕೂಡಲೇ ಅವರು ಬಂದು ಪರೀಕ್ಷೆ ಮಾಡಿ ಔಷಧಿಗೆ ಚೀಟಿ ಕೊಟ್ಟರು. ಡಾಕ್ಟರವರ ಹತ್ತಿರ ಖಾಸಗಿ ಪರೀಕ್ಷೆ ಮಾಡಿಸಲು ಯೋಗ್ಯರವರು ಫೀಜು ಕೊಡಬೇಕೆಂಬುದಾಗಿ ರೂಲ್ಸ್‌ಗಳು ಮಾಡಿದ್ದರೆ ಬಡಜನರ ಪಾಡೇನಾಗಬೇಕು. ಒಂದು ವೇಳೆ ಯಾರೇ ಆಗಲೀ ಮನೆಗೆ ಕರೆಸಿದಲ್ಲಿ ಫೀಜು ಕೊಡಬೇಕು. ಈ ತರದ ರೂಲ್ಸ್‌ಗಳನ್ನು ಸರಕಾರದವರು ಮಾಡಿದ್ದು ಬಹಳ ವ್ಯಸನಕರ. ಇದರಿಂದ ಆಸ್ಪತ್ರೆಗಳೆಲ್ಲವೂ ಹೆಸರಿಗೆ ಮಾತ್ರ ಗರೀಬರಿಗೆಂಬದಾಗಿಯೂ, ಯಾರಿಗೆ ಹಣ ಕೊಡಲು ಚೈತನ್ಯವಿದೆಯೋ ಅವರು ಮಾತ್ರ ಇದರ ಪೂರ್ಣ ಪ್ರಯೋಜನ ಹೊಂದುತ್ತಾರೆಂದೇ ಹೇಳಬೇಕಾಗಿದೆ. ಇದರ ಜೊತೆಗೆ ಮೆಡಿಕಲ್ ಉದ್ಯೋಗಸ್ಥರನ್ನು ಕರೆಸಿದರೆ, ಫೀಜು ಕೊಡುವುದನ್ನು ಎಂದು ಕರೆಯುವರೂ ಒತ್ತಾಯದ ಮಾಡಬೇಕೆಂದಿರುವ ರೂಲ್ಸ್‌ಗಳು ಸಹ ತಿಳಿಯುವವಾಗ ಈ ಡಿಪಾರ್ಟುಮೆಂಟ್ ಒಂದು ವ್ಯಾಪಾರದ ಅಂಗಡಿಯೆಂದೇ ಹೇಳಬೇಕಾಗಿದೆ. ಆದ್ದರಿಂದ ಇಂಥಾ ನ್ಯೂನತೆಗಳನ್ನು ಖಂಡಿತವಾಗಿಯೂ ನಮ್ಮ ಚೀಫ್ ಕಮಿಷನರ್‌ರವರು ಹೋಗಲಾಡಿಸಿ, ಧರ್ಮದ ಆಸ್ಪತ್ರೆಯು ಗರೀಬರಿಗೆಂಬುದನ್ನು ವ್ಯಕ್ತಪಡಿಸಬೇಕಾಗಿ ಹಾರೈಸುತ್ತೇನೆ. ಹೆಚ್ಚಿಗೆ ಸಿಕ್ಕುವ ಫೀಜಿನ ಆಶೆಯಿಂದ, ಎಲ್ಲ ಜನರು ಕರೆಸುತ್ತಾರೋ ಅವರ ನಿರೀಕ್ಷಣೆಯು ಮತ್ತು ಅವರನ್ನೇ ಉಪಚರಿಸುವ ಕಾರಣಗಳು ಹೆಚ್ಚಾಗುತ್ತವೆ. ಇಂಥಾ ಅಡಚಣೆಗಳನ್ನು ತಪ್ಪಿಸಲು ಏನಾದರೂ ಒಂದು ಏರ್ಪಾಡು ಮಾಡಿದರೆ ದೇಶದವರಿಗೆ ಬಹಳ ಉಪಕಾರವಾಗುವುದು.

ಅಲ್ಲದೆ ಪ್ರತಿ ಸಂತೆ ದಿನ ವಿರಾಜಪೇಟೆ, ಮಡಿಕೇರಿ ಆಸ್ಪತ್ರೆಗಳಲ್ಲಿಯೂ, ಇತರ ಜಾಗದಲ್ಲಿಯೂ ಸಹ ಎರಡು ನೂರರಿಂದ ಮೂನ್ನೂರು ಕಾಯಿಲಸ್ಥರವರೆಗೆ ಬೆಳಿಗ್ಗೆ ಒಂಬತ್ತು ಗಂಟೆಯಿಂದ 11 ಘಂಟೆಯವರೆಗೆ ಬರುತ್ತಲೇ ಇರುತ್ತಾರೆ. ಈ ಎರಡು ಮೂರು ಗಂಟೆಗಳ ಮಧ್ಯೆ, ಒಬ್ಬ ಅಸಿಸ್ಟೆಂಟ್ ಸರ್ಜನ್ನರು ಈ ಜನರನ್ನೆಲ್ಲಾ ಸುಧಾರಿಸಬೇಕಾಗುತ್ತೆ. ಪರೀಕ್ಷೆ ಮಾಡಿ ಔಷಧಿ ಕೊಡಲಿಕ್ಕೆ ಆಗುವುದಿಲ್ಲ. ಕಾಯಿಲೆ ಏನೆಂದು ಕೇಳುವುದು ಔಷಧಿ ಕೊಡುವುದು ಮಾತ್ರ ಕಾಣುತ್ತೆ. ಇಂಥಾ ಕಷ್ಟವನ್ನು ತಪ್ಪಿಸಿ, ಕಾಯಿಲೆಗಾರರನ್ನು ಚೆನ್ನಾಗಿ ಪರೀಕ್ಷೆ ಮಾಡಿ ಔಷಧಿ ಕೊಡುವಂತೆ ಸಿವಿಲ್ ಸರ್ಜನ್ನರು ತಕ್ಕ ಏರ್ಪಾಡು ಮಾಡುವುದು ಅತ್ಯಾವಶ್ಯಕ.

ಆದ್ದರಿಂದ ಮೇಲಿನ ವಿಷಯದಲ್ಲಿ ನಮ್ಮ ಚೀಫ್ ಕಮಿಷನರವರು ದಯಮಾಡಿ ತಕ್ಕ ಏರ್ಪಾಡು ಮಾಡಬೇಕಾಗಿ ಕೋರುತ್ತೇನೆ. ಅಲ್ಲದೆ, ಈಗಿನ ಸಿವಿಲ್ ಸರ್ಜನ್ನರು, ಮೊದಲಿನ ಸಿವಿಲ್ ಸರ್ಜನ್ನರಾದ ಮೇಜರ್ ವಾನ್‌ಸಲರಂತೆ, ಹೆಚ್ಚಿನ ಜನರ ಪ್ರೀತಿಗೆ ಪಾತ್ರರಾಗಬೇಕಾಗಿಯೂ, ಆಸ್ಪತ್ರೆಯು ಬಡಜನರ ಪ್ರಯೋಜನಕ್ಕೆ ಸ್ಥಾಪಿತವಾಗಿರುವುದೆಂಬುದನ್ನು ಕಾರ್ಯತಃ ತೋರಿಸಬೇಕಾಗಿಯೂ ಕೋರುತ್ತೇನೆ.

ಹಾಡಂದ್ರವ.

ದಿ. ಮೈಸೂರು ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಂಡ್ ಮ್ಯಾರೆಜ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್, ಮೈಸೂರು

ಸಬ್ ಆಫೀಸ್, ಮಡಿಕೇರಿ, ಕೊಡಗು.

ಈ ಕಂಪೆನಿಯಲ್ಲಿ ಇನ್ಶೂರ್ ಮಾಡಿರುವ ಪಾಲಿಸಿ ಉಳ್ಳವರಿಗೆ ಅವರವರ ಸ್ಥಿರಾಸ್ತಿಗಳ ಮೇಲೆ ಸಾಲ ಕೊಡಲ್ಪಡುವುದು. ಆದುದರಿಂದ ಅಂತಹ ಸಾಲವನ್ನು ಹೊಂದಬೇಕೆಂದು ಅಪೇಕ್ಷಿಸುವ ಕೊಡಗಿನ ಪಾಲಿಸಿದಾರರು ಈ ಕೆಳಗಣವರದ ತಕ್ಕ ವಿವರಗಳನ್ನು, ಭರ್ತಿಮಾಡಿ ಕೆಳಗಿನ ವಿಳಾಸಕ್ಕೆ ಜಾಗ್ರತೆ ಕಳುಹಿಸಬೇಕಾಗಿದೆ.

ವಿ. ಸೂ.—1 ಆಣೆ ಚೀಟನ್ನು ಅಂಚೆ ಖರ್ಚಿಗಾಗಿ ಕಳುಹಿಸಬೇಕಾಗಿದೆ.

ಬಿ. ಎಸ್. ಅಂಬಾರ್ಯ,

ಸ್ಪೆಷಿಯಲ್ ರೆಪ್ರೆಸೆಂಟೇಟಿವ್ ಲೈಫ್ ಅಂಡ್

4–1 ಮ್ಯಾರೆಜ ಎಸ್ಯೂರೆನ್ಸ್,

ಸಬ್ ಆಫೀಸ್—ಮಹದೇವಪೇಟೆ, ಮಡಿಕೇರಿ

ಒಳ್ಳೇ ಸಮಯ!'

ಹರಾಜು ನೋಟೀಸು

ಸನ್ 1923 ನೇ ಇಸವಿ ಜೂನ್ ತಾರೀಖು 2... ದಿನ ಬೆಳಿಗ್ಗೆ 8ರ ಅವಧಿಯಲ್ಲಿ ... ಈ ... ಸಾಮಾನುಗಳು ಮೈಸೂರು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಮೇಲು ಕಂಟ್ರ್ಯಾಕ್ಟರ್ ಮ|| ರಾ|| ಖಾಸ್ ದಸ್ತೂರ್ ಪಾಲಂಜಿಯವರ ಒಂಗಲಿಯ ... ಮುಂದೆ ... ರಂಗವಾಗಿ ಹರಾಜು ಹಾಕಲ್ಪಡುತ್ತೆ. ಮೋಟಾರು ಬಸ್ಸುಗಳು, ಮೋಟಾರು ಕಾರುಗಳು 4 ಚಕ್ರದ ಕಾರ್ಟ, ಕುದುರೆ ಜೂಲುಗಳು, ಗಾಡಿಗೆ ಹಾಕುವ ... ಸುಮಾರು 50 ಟನ್‌ಗಳಷ್ಟು ... ಕಬ್ಬಿಣಗಳು, ... ಗಳು, ಕುರ್ಚಿಗಳು, ಮತ್ತು ಇನ್ನೂ ಇತರ ... ಸಾಮಾನುಗಳು

"ನಗದು ಹಣ."

ಹರಾಜು ಆ ದಿನ ಪೂರ್ತಿಯಾಗದಿದ್ದಲ್ಲಿ ಮರುದಿವಸ ಕೂಡಾ ನಡೆಯುತ್ತೆ.

M. Sundaran & Son.,

Auctioneer,

MYSORE

ದಸನ್ ರೇಶ್ಮೆ ವಸ್ತ್ರಗಳು

ಈ ರೇಶ್ಮೆ ವಸ್ತ್ರಗಳನ್ನು ಮಸನಾದ ರೇಶ್ಮೆಯಿಂದ ತಯಾರಿಸಿದೆ. ... ಮೊಳ ಉದ್ದವೂ, 2½ ಮೊಳ ಅಗಲವೂ ಇರುವದು. ಮೇಲೆ ಹೊದಿಯಲು, ಬಹಳ ಚೆನ್ನಾಗಿರುವದು. ಎಲ್ಲಾ ಭಾಗಗಳಲ್ಲಿಯೂ ಸಿಕ್ಕುವವು. ಮತ್ತು ಬ್ರಾಹ್ಮಣ ಮಕ್ಕಳಿಗೆ ದಾವಣಿಗಳಿಗೆ ಸಹ ಉಪಯೋಗಿಸಬಹುದು.

ಕ್ರಯ 1 ಕ್ಕೆ 3—1—0 ರೂಪಾಯಿ

ಒಂದೇ ಆವರ್ತಿ 3 ತರಿಸಿದರೆ 10—0—1 ರೂಪಾಯಿ

ಇಮಿಟೇಷನ್ ವಜ್ರದ ಉಂಗರಗಳು

ಈ ಉಂಗರಗಳು ವಿಶಿಷ್ಟತೆಯಲ್ಲಿ ತಯಾರಿಸಿದ ಅತ್ಯುತ್ತಮವಾದ ವಜ್ರದ ಕಲ್ಲುಗಳನ್ನು ಇಟ್ಟು ಸೀಭಂಗಾರದಿಂದ ತಯಾರಿಸಿ ಕೀಲುಗಳೆ ಅಪರಂಜಿ ಭಂಗಾರದ ಗಿಲೀಟುಮಾಡಿದೆ. ನೋಡಲು ಒಳ್ಳೆ ಲಕ್ಷಣವಾಗಿ ಕಾಣುವದು. ಇದು ಶ್ರೀಮಂತರಿಗೂ ಗರೀಬರಿಗೂ ಉಪಯುಕ್ತವಾದದ್ದು.

ಕ್ರಯ 1 ಕ್ಕೆ ರೂ 2—3—0, 3 ಕ್ಕೆ 5—5—0

ವಿಳಾಸ—ಎಸ್. ಎಸ್. ವಾಚ್ ಕಂಪನಿ,

52–43 ಪೋ|| ಬಾ|| ನಂ 1೬5 ಮದರಾಸು

Just Received! New Invention

Electric Reary Spring Fans.

ವಿದ್ಯುಚ್ಛಕ್ತಿಯ ರೋಟರಿ ಬೀಸಣಿಗೆ.

ಇದು ಜರ್ಮನಿ ದೇಶದಲ್ಲಿ ಹೊಸದಾಗಿ ಕಂಡುಹಿಡಿಯಲ್ಪಟ್ಟು ಈಗತಾನೆ ಬರುತ್ತೆ. ಬಹು ಆಶ್ಚರ್ಯಕರವಾಗಿದೆ. ಇದು ಎಲೆಕ್ಟ್ರಿಕ್ ಪಂಕಾ ಹಾಗೆ ತಂಪಾದ ಗಾಳಿಯನ್ನು ಬೀಸುವದು. ಗಾಳಿ ಬೇಕಾದಾಗ ಗುಂಡಿಯನ್ನು ಒತ್ತಿದರೆ ತನಗೆ ತಾನೇ ಸುತ್ತಿ ಗಾಳಿಯನ್ನು ಬೀಸುವದು. ಈ ಬೇಸಗೆ ಕಾಲದಲ್ಲಿ ಬಹಳ ಉಪಯೋಗವಾದದ್ದು. ಇದರಲ್ಲಿ ಅತಿ ಚಮತ್ಕಾರವಾದ ... ಗು ಇಟ್ಟಿರುವದರಿಂದ ಬೇಕಾದಾಗ ತಂಪಾದ ಗಾಳಿಯನ್ನು ಬೀಸುವದು. ಪ್ರತಿ ಒಂದು ಮನೆಯಲ್ಲಿಯೂ, ಶಾಲೆಯಲ್ಲಿಯೂ ಇಡಲು ಬಹು ಚೆನ್ನಾಗಿರುವದು.

ಕ್ರಯ ರೋಟರಿ ಬೀಸಣಿಗೆ (Fan) ರೂ. 4—0—

ನಮ್ಮ ವಿಳಾಸ:—

ಮಹರಾಜ ಟ್ರೇಡಿಂಗ್ ಕಂಪನಿ.

22. ತಿರುಪಳ್ಳಿ ಬೀದಿ

12–9 ಜಿ. ಟಿ. ಮದರಾಸು

ESTATE TOOLS, GREATLY REDUCED.

		Usual Price.	Reduced Price
Sawn neck mamuties 5 lbs.	Rs.	3—8—0	3—0—0
„ „ 6 „		3—12—0	3—4—0
Pilting mamooties 4 „		3—8—0	3—0—0
„ „ 4½ „		3—12—0	3—4—0
„ „ 5 „		4—2—0	3—6—0

SPECIAL TERMS FOR LARGE QUANTITIES.

52–34

SPENCER & Co., Ltd,

MERCARA & POLLAIBETT

Printed and Published by D.S. Krishnaswamie Proprietor, Sreenivas Electric Press, Mysore "for Kodagu" Ltd., Mercara—8-6-1923.

"Kodagu Office, Mercara"
Reg. No. M. 1550.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾನೀತಿ ಪ್ರಯತ್ನತಃ । ಜನಪತ್ಯೇನದೇಶನಂ ಸುಸ್ಥಿರಾ ರಾಜ್ಯಸಂಪದಃ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

"ಎಡಿಟರ್ ಗುಡ್ಡೆಮಂಡ ಐ. ಬೆಳ್ಯಪ್ಪ"

ಪುಸ್ತಕ 4] ಕೊಡಗು, ಸನ್ ೧೯೨೩ ನೇ ಜೂನ್ ತಾರೀಖು ೧೫ ನೆಯ ಶುಕ್ರವಾರ. [ಸಂಚಿಕೆ 4

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನಡಾ ಪ್ರಿಂಟಿಂಗ್ ಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ರೂ ನಮ್ಮಗೆ ಕಳುಹಿಸಿದಲ್ಲಿ ನಿಮ್ಮ ಇಚ್ಛಾನುಸಾರ ಚಾಗ್ರತೆಯಾಗಿಯೂ ಸುಲಭಛಾರ್ಜಿಯೂ ಮಾಡಿ ಡುತ್ತೇವೆ

Srinivas Electric Press,
MYSORE.

The Coorg Central Co-operative Bank, Ltd.,

(Registered under the Co-operative Societies Act)

		Rs.
Share Capital	....	50,000
Paid up Share Capital	....	6,310
Fixed Deposits paid	....	31,873

Amounts are lent mainly to Co-operative Societies in Coorg. The accounts are checked annually by The Registrar of Co-operative Societies Coorg Deposits for one year and more carry interest at 6¼% per annum and for smaller periods at 5% per annum.

Apply to the Secretary or Treasurer for further details.

President	*Treasurer*	*Secretary*
Kodendera Cootiah Rao Bahadur	Bhujanga Rao, B A, B L.,	C N Venkappaya B A, B L

Dated 25—3—1923

NOTICE.

Travelling Made Easy!

Cars can be hired at any time to any distance at reasonable rates.

Intending passengers are requested to book their orders in time to avoid disappointment.

For rates and full particulars apply to—

Mercara, **F. P. LOBO,**
5th March 1923. Manager.
Messrs M. PAIS & Sons.,
2—12 **MERCARA.**

ನೋಟೀಸು

ಸುಲಭಕರದ ಪಯಣ !

ನ್ಯಾಯವಾದ ಧಾರಣೆಗಳ ಮೇಲೆ ಮೋಟಾರು ಬಂಡಿಗಳು ಎಲ್ಲಾ ಸ್ಥಳಗಳಿಗೆ ಎಲ್ಲಾ ಸಮಯದಲ್ಲಿಯೂ ಬಾಡಿಗೆಗೆ ದೊರೆಯುವುದು.

ನಿರಾಶೆಯಾಗದಂತೆ ಪ್ರಯಾಣಿಕರು ಬೇಗನೆ ಆರ್ಡರು ಕೊಡತಕ್ಕದ್ದು.

ಧಾರಣೆಗೂ, ಹೆಚ್ಚು ವಿವರಗಳಿಗೂ ಕೆಳಗಿನವರಿಗೆ ಬರೆಯಬೇಕು.

ಮಡಿಕೇರಿ, } ಎಫ್. ಪಿ. ಲೋಬೋ,
26—3—23 } ಮೇನೇಜರ್,
ಮೆಸರ್ಸ್. ಎಂ. ಪಯಸ್ ಅಂಡ್ ಸನ್ಸ್, ಮಡಿಕೇರಿ.

ಬುಗಡಿ ಮತ್ತು ರುದ್ರಾಕ್ಷಿ ಅಂಚಿನ ಸೀರೆಗಳು.

ಈ ಸೀರೆಗಳನ್ನು ಬಹು ಹಸನಾದ ನೂಲಿನಿಂದ ತಯಾರಿಸಿದೆ. 17 ಮೊಳ ಉದ್ದವೂ, 1¼ ಮೊಳ ಅಗಲವೂ ಇರುವುವು. ಅತಿ ಸುಂದರವಾದ ರೇಷ್ಮೆಯ ಸೆರಗು ಇರುವುದು ನೋಡಲು ಆರೇಳು ರೂ ಬೆಲೆಯಂತೆ ಇರುವವು. ಬಣ್ಣವು ಎಂದಿಗೂ ಹೋಗದು. ಇವನ್ನು ಮಾದರಿಗಾಗಿ ಕೆಲವು ಮಾತ್ರ ತಯಾರಿಸಿರುವುದರಿಂದ ಬೇಗನೆ ಅರಿಕೆಮಾಡುವವರಿಗೆ ಮಾತ್ರ ಸಿಕ್ಕುವವು.

ನಂ 1	....	7—8—0
ನಂ 2	....	6—8—0

RIPON WATCH CO.,
Triplicane,
25—16 **MADRAS.**

For your requirements of High Grade Arms, Ammunition, Wines and Spirits.

APPLY TO:—

Mc. DOWELL & Co., Ltd.,
24—7 **MERCARA.**

ಜೋಲಾಕ್

ಈ ಜೋಲಾಕ್ ಗಳು ವಿಲಾಯಿತಿಯಲ್ಲಿ ಅಮೆರಿಕನ್ ವಜ್ರದ ಕಲ್ಲುಗಳಿಂದ ... ಮಾಡಲ್ಪಟ್ಟಿರುವುವು ... ಇವು ...

... ಇವುಗಳ ಬಣ್ಣವು ಎಂದಿಗೂ ಹೋಗದು ಇದನ್ನು ಚಿಕ್ಕವರೂ ದೊಡ್ಡವರೂ ಸಹ ಉಪಯೋಗಿಸಬಹುದು. ಮತ್ತು ಎಲ್ಲಾ ಹೆಂಗಸರಿಗೂ ಬಹು ಅನುಕೂಲವಾದದ್ದು.

ಜೋಲಾಕ್ ಜೊತೆ 1 ಕ್ಕೆ 1—8—0

ಅಮೆರಿಕನ್ ವಜ್ರದ ಪೆಂಡೆಂಟ್ ಜೊತೆ 3—0—0

ಸೀಮೆಬಂಗಾರದ ಕತ್ತಿನಸರ 3—8—0

ಬಂಗಾರದ ಗಿಲೀಟಿನ ಉಂಗುರ.

ಈ ಉಂಗುರಗಳನ್ನು ಒಂದು ವಿಧವಾದ ಲೋಹದಿಂದ ಮಾಡಿ ಬಂಗಾರದಿಂದ ಗಿಲೀಟುಮಾಡಿದೆ. ಮೇಲು ಭಾಗದಲ್ಲಿ ಕೆಂಪು ಹಸಿರು ಮುಂತಾದ ಅಮೆರಿಕನ್ ವಜ್ರದಕಲ್ಲುಗಳು ಅಚ್ಚುಕಟ್ಟಾಗಿ ಕಟ್ಟಲ್ಪಟ್ಟಿವೆ. ನೋಡಲು ನಿಜವಾದ ವಜ್ರದ ಉಂಗುರವೆಂದೇ ಹೇಳಬೇಕು. ಬೇಕಾದವರು ಬೆರಳಿನ ಅಳತೆಯನ್ನು ಕಳುಹಿಸಿರಿ.

ಕ್ರಯ 1 ಕ್ಕೆ 2—4—0
ಕ್ರಯ 3 ಕ್ಕೆ 5—0—0

ವಿಳಾಸ:—
ಪೀಟರ್ ವಾಚ್ ಕಂಪೆನಿ,
52—44 ಪೋ॥ ಬಾ॥ ನಂ. 27 ಮದರಾಸು.

18 ಕ್ಯಾರೆಟ್ಟು ಗೋಲ್ಡ್ ಪ್ಲೇಟ್ ರೇಡಿಯಂ ರಿಸ್ಟ್ ವಾಚ್.

ಈ ಚಿತ್ರದಲ್ಲಿ ತೋರುವಂತೆಯೇ ಇರುವ ಈ ಗಡಿಯಾರಗಳು ಸ್ವಿಟ್ಜರ್ಲಾಂಡ್ ದೇಶದಲ್ಲಿ ತಯಾರಿಸಿದ್ದು. ಇತರ ಗಡಿಯಾರಗಳಲ್ಲಿ ರಾತ್ರಿವೇಳೆ

ಗಂಟೆ ನೋಡಬೇಕಾದರೆ ಬೆಳಕುಬೇಕು ಆದರೆ ಈ ಗಡಿಯಾರಗಳಿಗೆ ಬೆಳಕುಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವವು ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಮತ್ತು ಇವರ ಬಣ್ಣವು ಕೆಡದಂತೆ ವಿಶ್ವಕರ್ಮ್ಯದ ಹಸನಾದ ಬಂಗಾರದ ಗಿಲೀಟು ಮಾಡಿರುವದು ಮತ್ತು ಖಾತ್ರಿಯಾದ 3 ವರುಷದ ಗ್ಯಾರಂಟಿ ಇರುವದು.

ಕ್ರಯ ಗಡಿಯಾರ 1 ಕ್ಕೆ 8—8—0 ಬೆಳ್ಳಿಯದು 9—8—0

ವಿಳಾಸ:—ವಿ. ಎಸ್. ವಾಚ್ ಕಂಪನಿ,
52—44 ಪೋ॥ ಬಾ॥ ನಂ. 105 ಮದರಾಸು

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟ್ರಾರಾಗಿದೆ

	ರೂ.
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,310
ಜಮಾ ಬಂದ ಠೇವಣಾತಿ	31,873

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6¼ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ... ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ವರ್ತಮಾನಕ್ಕೆ ಕೋ ಆಪರೇಟಿವ ರಿಜಿಸ್ಟ್ರಾರವರು ಲೆಕ್ಕ ...

ಪ್ರೆಸಿಡೆಂಟರು	ಟ್ರೆಜರರ್.
ಕೊಡಂದೆರ ಕುಟ್ಟಪ್ಪನವರು ರಾಯ್ ಬಹದ್ದೂರ್.	... ಂಗರಾಯರು ಬಿ. ಎ., ಬಿ. ಎಲ್.,

ಸೆಕ್ರೆಟರಿ.
ಸಿ. ಯನ್. ವೆಂಕಪ್ಪಯ್ಯನವರು, ಬಿ. ಎ; ಬಿ. ಎಲ್.
ತಾರೀಕು 25—3—1923

BUMPER CROPS.

Always follow on application of our Coffee Fertilizers!

ದೊಡ್ಡ ಕಾಫಿ ಫಸಲು

ಸಿಕ್ಕಬೇಕಾದರೆ ನಮ್ಮ ಕಾಫಿ ಫರ್ಟಿಲೈಸರುಗಳನ್ನು ಉಪಯೋಗಿಸಿರಿ!

ನಮ್ಮ ಕಾರ್ಖಾನೆಯಲ್ಲಿ ಎಲ್ಲಾ ತರಹದ ಹಸನಾದ ಹೊಸ ಗೊಬ್ಬರ (artificial manure) ಅಂದರೆ ನೆಲಗಡ್ಲೆ ಹಿಂಡಿ, ಹರಳು ಹಿಂಡಿ, ಬೇವಿನ ಹಿಂಡಿ, ಹೊಂಗೆ ಹಿಂಡಿ, ಮೂಳೆ ಹುಡಿ ವಗೈರೆ ಕಾಫಿ ಫರ್ಟಿಲೈಸರುಗಳು ತಯಾರಾಗುತ್ತವೆ. ಪರದೇಶದಿಂದ ತರಿಸುವ ಬಾಡಿಗೆ ಉಳಿಯುತ್ತದೆ. ಕ್ರಯ ಸಹ ಕಡಿಮೆ ಮಾಡಿದ್ದೇವೆ.

ತೋಟದಲ್ಲಿ ಫಸಲು ಕಡಿಮೆಯಾಗುವ ಕಾಲದಲ್ಲಿ ಮೇಲ್ಕಂಡ ಗೊಬ್ಬರವನ್ನು ಉಪಯೋಗಿಸಿದರೆ ದೊಡ್ಡ ಫಸಲು ಸಿಕ್ಕಿ ಕೊಂಡರೆ ಎಲ್ಲಾ ಪರಿಹಾರವಾಗುವುದು.

M. M. SIDDEEK,
Proprietor:—**Siddeek**
12-9 **Manuare Works, MERCARA**

" ಕೊಡಗು "

೧೯೨೩ ನೇ ಇಸವಿ ಜೂನ್ ತಾ|| ೧೫ ನೇ
ಶುಕ್ರವಾರ

ಗತಿಸಿದ ಮನೆಯಪಂಡ ಮುತ್ತಣ್ಣನವರು.

ದೇಶಪ್ರೀತಿಯನ್ನು ಸಂಪಾದಿಸಿದ್ದ ಮನೆಯಪಂಡ ಮುತ್ತಣ್ಣನವರು ಈ ತಾ|| 5 ನೇ ಮಂಗಳವಾರ ಬೆಳಿಗ್ಗೆ ೯½ ಗಂಟೆಗೆ ಮಡಿಕೇರಿಯಲ್ಲಿರುವ ಅವರ "ಫರ್ನ್‌ಬ್ಯಾಂಕ್" ಭವನದಲ್ಲಿ ಶಿವಾಧೀನರಾದರು. ಅವರು ಸುಮಾರು ಎರಡುವರೆ ವರ್ಷಗಳಿಂದ ದೇಶದ ಕೆಲಸ ಮಾಡಲಾರದಂತೆ ಪಾರ್ಶ್ವವಾಯು ರೋಗದಿಂದ ಪೀಡಿತರಾಗಿ ಇದ್ದದ್ದು ದೇಶದವರೆಲ್ಲರಿಗೂ ತಿಳಿದ ಸಂಗತಿಯಾಗಿದೆ. ಈಗ ಸಾಧಾರಣ ಒಂದು ತಿಂಗಳಿಂದ ಅವರ ಕಾಯಿಲೆಯು ಹೆಚ್ಚಾಗಿ ಒಂದು ವಾರದ ನಂತರ ಫಕ್ಕನೆ ವಾಸಿಯಾದಂತಾಯಿತು. ಆದರೆ ಪುನಃ ಕಾಯಿಲೆಯು ಹೆಚ್ಚುತ್ತಾ ಕೆಲವುವೇಳೆ ಫಕ್ಕನೆ ಕಡಿಮೆಯಾಗುತ್ತಾ ಯಾವ ಸಿವಿಲ್ ಸರ್ಜನರಿಂದಲೂ ರೋಗವು ಗುಣಪಡಿಸಲಾಗದೆ ಅಂತ್ಯಕಾಲವು ಸಂಭವಿಸಬಹುದೆಂತ ತೋರುತ್ತಿತ್ತು. ಅವರ ಸಂಸಾರದವರು ಅವರ ಅಂತ್ಯದವರೆಗೂ ಪ್ರೀತಿಪೂರ್ವಕವಾದ ಉಪಚಾರಗಳನ್ನು ಮಾಡಿ ಅವರಿಗೆ ಹೆಚ್ಚು ಕಷ್ಟತೋರದಂತೆ ಮಾಡಿದರು. ಪ್ರಾಣಬಿಡುವ ಕಾಲದಲ್ಲಿ ಅವರ ಮಕ್ಕಳೆಲ್ಲರೂ ಹಾಜರಿದ್ದದ್ದು ಅವರಿಗೆ ತೃಪ್ತಿಯನ್ನುಂಟುಮಾಡಿರಬಹುದು.

ಅವರು 1854 ನೇ ಇಸವಿ ಆಕ್ಟೋಬರು ತಿಂಗಳಲ್ಲಿ ಹುಟ್ಟಿ ವಿ. ಡಿ. ಹೈಸ್ಕೂಲಿನಲ್ಲೂ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲೂ ವಿದ್ಯಾಭ್ಯಾಸ ಹೊಂದಿ ಎಫ್. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. 1875 ರಲ್ಲಿ ಬೆಂಗಳೂರಲ್ಲಿ ಆಗತಾನೇ ಸ್ಥಾಪಿತವಾದ ಇಂಜಿನಿಯರಿಂಗ್ ಮತ್ತು ಕೆಮಿಸ್ಟ್ರಿ ಸಯನ್ಸಿನ ಪಾಠಶಾಲೆಗೆ ಸೇರಿ 1876 ನೇ ಇಸವಿಯಲ್ಲಿ ಆಸಿಸ್ಟೆಂಟ್ ಕನ್‌ಸರ್ವೇಟರ ಕೆಲಸಕ್ಕೆ ಡಿಪ್ಲೋಮ ಪಡೆದರು. ಆ ವರ್ಷವೇ ಕೊಡಗಿನ ಫಾರೆಸ್ಟ್ ಇಲಾಖೆಯಲ್ಲಿ ಸಬ್ ಆಸಿಸ್ಟೆಂಟ್ ಕನ್‌ಸರ್ವೇಟರ್ ಕೆಲಸಕ್ಕೆ ನೇಮಕರಾದರು. ಆರು ವರ್ಷಗಳ ನಂತರ ಆಸಿಸ್ಟೆಂಟ್ ಕನ್‌ಸರ್ವೇಟರ ಕೆಲಸವನ್ನು ಬದಲಿ ನೋಡಿದರು. ಈ ಗೌರವವು ಇಂಡಿಯನರಿಗೆ ದೊರಕಿದ್ದು ಇದೇ ಮೊದಲು. ಅನಂತರ ಮಧ್ಯಪ್ರಾಂತ್ಯ (ಸೆಂಟ್ರಲ್ ಪ್ರಾವಿನ್ಸಸ್) ದಲ್ಲಿ ಫಸ್ಟ್ ಗ್ರೇಡ್ ಆಸಿಸ್ಟೆಂಟ್ ಕನ್‌ಸರ್ವೇಟರ್ ಕೆಲಸಕ್ಕೆ ವರ್ಗವಾದರು. ಅಲ್ಲಿ ಅವರು 1899 ನೇ ಇಸವಿವರೆಗೆ ಕೆಲಸಮಾಡಿದರು. ಅಲ್ಲಿ ಅವರ ಮೇಲಾಧಿಕಾರಿಗಳಾದ ಕರ್ನಲ್ ಬ್ಲೂಮ್‌ಫೀಲ್ಡ್ ದೊರೆಗಳು ಬರೆದಿರುವುದೇನೆಂದರೆ — "ಮ|| ಮುತ್ತಣ್ಣನವರು ಅದ್ಭುತಶಕ್ತಿ ಮತ್ತು ಉತ್ಸಾಹದಿಂದ ಕೆಲಸಮಾಡಿರುತ್ತಾರೆ. ನನ್ನ ತಾಬೆಯಲ್ಲಿ ಕೆಲಸಮಾಡಿದವರಲ್ಲಿ ಇವರಷ್ಟು ಚೆನ್ನಾಗಿ ಕೆಲಸಮಾಡಿದವರು ಯಾರೂ ಇಲ್ಲ. ಇಲಾಖೆಯ ಟೆಕ್ನಿಕಲ್ ತಿಳುವಳಿಕೆಯಲ್ಲಿ ಸ್ವಲ್ಪ ಲೋಪವಿರಬಹುದಾದರೂ ಅವರ ಉತ್ಸಾಹವೂ, ಶಕ್ತಿಯೂ, ಸೂಕ್ಷ್ಮವಿಚಾರವೂ ಬೇರೆಯಾರಿಗೂ ಇಲ್ಲ. ಇಲಾಖೆಯ ಉತ್ಪತ್ತಿಯು ಎರಡರಷ್ಟು ಆಗುವಂತೆ ಮಾಡಿದ್ದು ಸಂಪೂರ್ಣವಾಗಿ ಮುತ್ತಣ್ಣನವರೊಬ್ಬರೇ. ಸರ್ಕಾರದ ಕ್ಷೇಮವನ್ನು ಕಾಪಾಡುವದರಲ್ಲಿಯೂ ಹಿಂಜರಿಯಲಿಲ್ಲ" ಅವರ ಕೆಲಸವನ್ನು ಮೆಚ್ಚಿ ಅವರ ಮೇಲಾಧಿಕಾರಿಗಳು ಮಾತ್ರವಲ್ಲ. ಡಿಪ್ಯುಟಿ ಕಮಿಷನರುಗಳೂ, ಚೀಫ್ ಕಮಿಷನರುಗಳೂ ಬರೆದಂತ ಪತ್ರಗಳು ಅನೇಕ ಇವೆ. 1899 ರಲ್ಲಿ ಅವರು ಮಧ್ಯಪ್ರಾಂತ್ಯದಿಂದ ಮದ್ರಾಸು ಅಧಿಪತ್ಯಕ್ಕೆ ವರ್ಗವಾದಾಗ ಮಧ್ಯಪ್ರಾಂತ್ಯದ ಕನ್‌ಸರ್ವೇಟರು "ಇವರು ಹೋದ ಕೊರತೆಯು ಆ ಇಲಾಖೆಯಲ್ಲಿ ಅನೇಕ ವರ್ಷಗಳವರೆಗೆ ತೋರಬಹುದೆಂತಲೂ ಇವರ ಸ್ವಂತ ಅಪೇಕ್ಷೆಯ ಮೇಲೆ ಬಿಡುವದಲ್ಲದಿದ್ದರೆ ಇವರ ವರ್ಗಕ್ಕೆ ಒಪ್ಪುತ್ತಿರಲಿಲ್ಲವೆಂತ" ಬರೆದಿರುತ್ತಾರೆ. ಆ ವರ್ಷದ ಆ ಸರ್ಕಾರದ ಆಡಳಿತವರದಿಯಲ್ಲಿ "ಉತ್ಸಾಹಿ ಮತ್ತು ತುಂಬಾ ಶಕ್ತಿಯುಳ್ಳ ಆಫೀಸರಾಗಿದ್ದ ಮ|| ಮುತ್ತಣ್ಣನವರು ವರ್ಗವಾದುದರಿಂದ ಫಾರೆಸ್ಟ್ ಇಲಾಖೆಗೆ ಬಹಳ ನಷ್ಟವಾಯಿತೆಂತಲೂ ಅವರ ಒಳ್ಳೇ ಕೆಲಸಕ್ಕಾಗಿ ರಾಯಿಬಹದ್ದೂರ್ ಟೈಟಲನ್ನು ಸರ್ಕಾರವು ಕೊಟ್ಟಿದೆಯಾಗಿಯೂ" ಬರೆದಿದೆ. 1895 ನೇ ಇಸ್ವಿಯಲ್ಲಿ ಇಂಗ್ಲೆಂಡಿನಲ್ಲಿರುವ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಸಹ ಅವರ ಒಳ್ಳೇ ಕೆಲಸವನ್ನು ಮೆಚ್ಚಿದ್ದಾರೆ.

ಇಂಪೀರಿಯಲ್ ಫಾರೆಸ್ಟ್ ಸರ್ವಿಸಿಗೆ ಸೇರಿದ ಇಂಡಿಯನರಲ್ಲಿ ಇವರೇ ಮೊದಲನೆಯವರು. ಅವರು ಈ ಪರತಂತ್ರದಲ್ಲಿರುವ ಭಾರತ ಭೂಮಿಯಲ್ಲಿ ಹುಟ್ಟಿದವರಲ್ಲದಿದ್ದರೆ ಆ ಇಲಾಖೆಯ ಅತ್ಯುನ್ನತ ಪದವಿಯನ್ನು ಅನುಭವಿಸುತ್ತಿದ್ದರೆಂಬುದರಲ್ಲಿ ನಮಗೇನೂ ಸಂಶಯವಿಲ್ಲ. ಈ ಗೌರವವು ಬ್ರಿಟಿಷ್ ಇಂಡಿಯಾದಲ್ಲಿ ದೊರೆಯದಿದ್ದರೂ ಕೂಡ ಶೀಘ್ರದಲ್ಲೇ ಮೈಸೂರು ಮಹಾರಾಜರವರ ಸರಕಾರದಲ್ಲಿ ಇವರಿಗೆ ಲಭಿಸಿತು. ಸಾಧಾರಣವಾಗಿ ಬ್ರಿಟಿಷ್ ಸರಕಾರವು 'ದೇಶೀಯರಿಗೆ ಇಲಾಖೆಗಳ ಉನ್ನತಪದವಿಗಳನ್ನು ಕೊಟ್ಟರೆ ಇಲಾಖೆಯ ಯೋಗ್ಯತೆಯು (ಎಫಿಶಿಯನ್ಸಿ) ಕೆಡುತ್ತದೆ' ಎಂತ ಆಗಿಂದಾಗ್ಗೆ ಹೇಳುತ್ತದೆ. ಇದಕ್ಕಾಗಿಯೇ ಮೇಲಧಿಕಾರಿಗಳ ಪದವಿಯನ್ನು ಯೂರೋಪಿಯನರಿಗೆ ಕಾಪಾಡುವದಂತೆ. ಭಾರತೀಯರ ಎಂಥಾ ದುರ್ಭಾಗ್ಯಸ್ಥಿತಿ! ಈ ಮುತ್ತಣ್ಣನಂತವರಿಗೂ ಸಹ ಬ್ರಿಟಿಷ್ ಸರಕಾರದಲ್ಲಿ 530 ರೂಪಾಯಿಗಳಿಗಿಂತ ಹೆಚ್ಚಿಗೆ ಸಂಬಳ ಸಿಕ್ಕುವ ಅವಕಾಶವಿಲ್ಲದೆ ಹೋಯಿತು!

1899 ರಲ್ಲಿ ಬಳ್ಳಾರಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾಗಿ ನೇಮಿಸಲ್ಪಟ್ಟು 1901 ರವರೆಗೆ ಆ ಉದ್ಯೋಗದಲ್ಲಿದ್ದರು. ಆ ವರ್ಷ ಮೈಸೂರು ದರ್ಬಾರಿನ ಕೋರಿಕೆ ಮೇರೆ ಮೈಸೂರು ಫಾರೆಸ್ಟು ಇಲಾಖೆಯಲ್ಲಿ ಕನ್‌ಸರ್ವೇಟರ್ ಪದವಿಗೆ ಬಂದರು. 1914 ನೇ ಇಸವಿಯಲ್ಲಿ ಅವರು ರಿಟಯರ್ ಆಗುವವರೆಗೂ ಆ ಪದವಿಯಲ್ಲೇ ಇದ್ದರು. ಮೈಸೂರಲ್ಲಿ ನ್ಯಾಯವಿಧಾಯಕ ಸಭೆಯು ಏರ್ಪಾಡಾದಂದಿನಿಂದ ರಿಟೈರ್ ಆಗುವವರೆಗೂ ಆ ಸಭೆಯ ಮೆಂಬರಾಗಿದ್ದರು. 1913 ನೇ ಇಸ್ವಿಯ ದಸರಾ ದರ್ಬಾರಿನಲ್ಲಿ ಮೈಸೂರು ಮಹಾರಾಜರವರು ರಾಜಕಾರ್ಯಪ್ರಸಕ್ತ ಎಂಬ ಬಿರುದನ್ನೂ ಅದರ ಸಂಗಡ ನವರತ್ನಖಚಿತವಾದ ಒಂದು ಅಮೂಲ್ಯವಾದ ಪದಕವನ್ನೂ ಮತ್ತು ಇತರ ರಾಜಮರ್ಯಾದೆಗಳನ್ನೂ ಅವರಿಗೆ ದಯಪಾಲಿಸಿದರು. 1912 ನೇ ಇಸವಿಯಲ್ಲಿ ನಡದ ಡೆಲ್ಲಿ ದರ್ಬಾರಿಗೆ ಹೋಗಿದ್ದರು. ಈಗಿನ ನಮ್ಮ ಚಕ್ರವರ್ತಿಯವರು ಯುವರಾಜರಾಗಿ 1906 ನೇ ಇಸವಿಯಲ್ಲಿ ಮೈಸೂರಿಗೆ ಬಂದಾಗ್ಗೆ ಕಾಕನಕೋಟೆಯಲ್ಲಿ ಆನೆಗಳನ್ನು ಹಿಡಿಯುವ ಖೆಡ್ಡಾ ಏರ್ಪಾಡುಗಳನ್ನು ಅವರು ಮಾಡಿದ್ದಕ್ಕೆ ಯುವರಾಜರಿಗೆ ತೃಪ್ತಿಯಾಗಿ ಮೆಡಲ್ ಮತ್ತು ಇತರ ಇನಾಮುಗಳನ್ನು ಕೊಟ್ಟರು. ಲಾರ್ಡ್ ಮಿಂಟೋ ಮತ್ತು ಲಾರ್ಡ್ ಹಾರ್ಡಿಂಜ್ ಪ್ರಭುಗಳು ಇಂಡಿಯಾ ದೇಶದ ವೈಸರಾಯಿಗಳಾಗಿ ಮೈಸೂರು ದೇಶಕ್ಕೆ ಬಂದಾಗ ಅವರು ಮಾಡಿದ ಖೆಡ್ಡಾ ಏರ್ಪಾಡುಗಳಿಗೆ ಮೆಚ್ಚಿ ಬಹುಮಾನಗಳನ್ನು ಕೊಟ್ಟಿದ್ದಾರೆ. ಅವರು ಮೈಸೂರು ಸರಕಾರದ ಉದ್ಯೋಗದಿಂದ 1914 ರಲ್ಲಿ ರಿಟೈರ್ ಆಗಿ ಬಿಡುವಾಗ್ಗೆ ಬೆಂಗಳೂರು ಲಾಲ್ ಬಾಗಿನ ಆಲ್‌ಬರ್ಟ್ ವಿಕ್ಟರ್ ಹಾಲಿನಲ್ಲಿ ದಿವಾನರೇ ಮೊದಲಾದ ಮಹನೀಯರು ನೆರೆದಿದ್ದ ಮಹಾಸಭೆಯಲ್ಲಿ ಬಹುಮಾನ ಪತ್ರವನ್ನು ಪಡೆಯುವ ಸಂದರ್ಭದಲ್ಲಿ ಮಾಡಿದ ಭಾಷಣಗಳು ಅಲ್ಲಿಯ "ಡೈಲಿಪೋಸ್ಟ್" ಪತ್ರಿಕೆಯನ್ನು ಪ್ರಕಟವಾಗಿರುವುದನ್ನು ನೋಡಿದರೂ ಅವರು ಮೈಸೂರು ದೇಶದ ಫಾರೆಸ್ಟು ಇಲಾಖೆಯನ್ನು ವಿಶೇಷವಾಗಿ ಅಭಿವೃದ್ಧಿಗೊಳಿಸಿ ಉತ್ಪತ್ತಿಯನ್ನು ಎರಡರಷ್ಟು ಹೆಚ್ಚಿಸಿದರೆಂಬುದೂ ಮತ್ತು ಇಲಾಖೆಯ ಉನ್ನತಸ್ಥಿತಿಯು ಶಾಶ್ವತವಾಗಿ ನಿಲ್ಲುವಂತೆ ತಕ್ಕ ಏರ್ಪಾಡುಗಳನ್ನು ಮಾಡಿದ್ದರೆಂತಲೂ ವಿಶದವಾಗುತ್ತದೆ. ಇವರು ರಿಟೈರ್ ಆಗಿ ಬಂದ ನಂತರವೂ ಮೈಸೂರು ಸರ್ಕಾರಿ ಉದ್ಯೋಗಗಳ ವಿಷಯ ಏರ್ಪಾಡಾದ ಕಮಿಷನಿಗೆ ಇವರನ್ನು ಮೆಂಬರಾಗಿ ಕರೆಯಿಸಿಕೊಂಡದ್ದರಿಂದ ಮಹಾರಾಜರವರಿಗೆ ಅವರ ಮೇಲಿದ್ದ ಗೌರವವು ಎಷ್ಟರಮಟ್ಟಿಗೆ ಇತ್ತೆಂಬುದು ತಿಳಿಯುತ್ತದೆ.

ನಮ್ಮ ದೇಶದಲ್ಲಿ ಹುಟ್ಟಿ ಅವರ ಜೀವಕಾಲದ ಉತ್ತಮಭಾಗವನ್ನೆಲ್ಲಾ ಮೇಲೆ ಸೂಚಿಸಿದಂತೆ ಶ್ಲಾಘನೀಯ ರೀತಿಯಿಂದ ಪರಪ್ರಾಂತ್ಯಗಳಲ್ಲಿ ಸರಕಾರಿ ಉದ್ಯೋಗ ಮಾಡುವುದರಲ್ಲಿ ಕಳೆದರು. ಆಯಾ ಪ್ರಾಂತ್ಯಗಳ ಇಲಾಖೆಗಳಿಗೆ ಪ್ರಯೋಜನವೂ ಆಯಿತು. ಅವರಿಗೆ ಗೌರವವೂ ದೊರೆಯಿತು. ಈ ಶಕ್ತಿಯೆಲ್ಲಾ ನಮ್ಮ ದೇಶದ ಉದ್ಧಾರಕ್ಕಾಗಿ ಉಪಯೋಗಿಸಲ್ಪಟ್ಟಿದ್ದರೆ ನಮ್ಮ ದೇಶದ ಸ್ಥಿತಿಯು ಈಗಿನದಕ್ಕಿಂತ ಬಹಳ ಔನ್ನತ್ಯವನ್ನು ಪಡೆಯುತ್ತಿತ್ತು. ಆದರೂ ನಮ್ಮ ಸೌಭಾಗ್ಯದೆಶೆಯಿಂದಲೂ ಕಾವೇರಮ್ಮನ ದಯದಿಂದಲೂ 1914 ನೇ ಇಸ್ವಿಯಿಂದ 1920 ನೇ ಇಸ್ವಿ ವರೆಗೆ ಅವರ ಸೇವೆಯು ದೇಶಕ್ಕೆ ದೊರೆಯಿತು. 1914 ರಲ್ಲಿ ಕೊಡಗಿಗೆ ಬಂದೊಡನೆಯೇ ಜಮಾನ್ದಾರರ ಸಂಘದ ಕೆಲಸವನ್ನು ತನ್ನ ಹೆಗಲಮೇಲೆ ಹೊತ್ತುಕೊಂಡು ತನ್ನ ಮನೆಸ್ಥಿತಿ ಕೆಲಸಕ್ಕಿಂತ ಹೆಚ್ಚಾಗಿ ಹಗಲಿರುಳು ಎನ್ನದೆ ತನ್ನ ದೇಹಸೌಖ್ಯವನ್ನೆಣಿಸದೆ ತನ್ನ ಭವನದ ನಿವೇಶನದಲ್ಲೇ ಆಶ್ರಯ ಕೊಟ್ಟು ದೇಶಸೇವೆ ಮಾಡಿದ್ದು ಯಾರಿಗೆತಾನೆ ತಿಳಿಯದು. ಜಮಾನುದಾರ ಸಂಘದ ಅಧ್ಯಕ್ಷರಾಗಿ 1916 ರಲ್ಲಿ ಚುನಾಯಿಸಲ್ಪಟ್ಟು ಅನಾರೋಗ್ಯದ ದೆಶೆಯಿಂದ ಆ ಪದವಿಯನ್ನು 1920 ರಲ್ಲಿ ಬಿಡಬೇಕಾಗಿಬಂತು. ಆದರೆ ಅವರು ದೇಶದ ಕೆಲಸ ಮಾಡಲು ಜಮಾನ್ದಾರ ಸಂಘದ ಅಧ್ಯಕ್ಷರಾಗಿ ಚುನಾಯಿತರಾಗಬೇಕೆಂದು ಕಾಯಲಿಲ್ಲ. ಅಧ್ಯಕ್ಷರಾದನಂತರವೂ ಬರೇ ರುಜು ಹಾಕುವ ಕೆಲಸ ಮಾತ್ರ ಮಾಡುತ್ತಿರಲಿಲ್ಲ. ಮೀಟಿಂಗುಗಳ ಪ್ರೊಸೀಡಿಂಗ್ಸುಗಳನ್ನು ತಯಾರಿಸಲಿಕ್ಕೂ ಸರಕಾರಕ್ಕೆ ಬರೆಯಬೇಕಾದ ಕಾಗದ ಪತ್ರಗಳನ್ನು ತಯಾರಿಸಲಿಕ್ಕೂ ದೇಶದ ಎಲ್ಲಾ ಭಾಗಗಳಲ್ಲಿರುವ ಮೆಂಬರುಗಳಿಗೆ ಪತ್ರಗಳನ್ನು ಬರೆಯಲಿಕ್ಕೂ ಅವರು ಸೆಕ್ರೆಟರಿಯನ್ನಾಗಲೀ ಗುಮಾಸ್ತನನ್ನಾಗಲೀ ಕಾಯುತಿದ್ದಿಲ್ಲ. ಅವರು ತಯಾರಿಸಿದ ಪತ್ರಗಳಿಗೆ ಸೆಕ್ರೆಟರಿಗೆ ರುಜು ಹಾಕುವ ಕೆಲಸ ಮಾತ್ರ ಇತ್ತು. ಅವರು ಬರೆದ ಪತ್ರಗಳನ್ನು ಜೋಡಿಸಿರುವುದೇ ಗುಮಾಸ್ತನ ಕೆಲಸವಾಗಿತ್ತು. ಯಾವನಿಗೇ ಆಗಲಿ ಯಾವ ಸಮಯದಲ್ಲೇ ಆಗಲೀ ಅವರು ಮಾತಾಡಲಿಕ್ಕೆ ದೊರೆಯುತ್ತಿದ್ದರು. ಇಷ್ಟು ಉತ್ಸಾಹಯುಕ್ತ ಕೆಲಸಗಾರರು ಸಾಧಾರಣವಾಗಿ ತನ್ನ ಮತವೇ ಮೇಲೆಂದು ವಾದಿಸಿ ಹಾಗೆ ನಡಿಸುವುದು ಸ್ವಾಭಾವಿಕವಾಗಿದೆ. ಆದರೆ ಅವರು ಯಾವ ಸಂಗತಿಯನ್ನು ತೀರ್ಮಾನಿಸಬೇಕಾದರೂ ಸಂಘದ ಮೆಂಬರುಗಳಲ್ಲಿ ಯಾರನ್ನಾದರೂ ಕೇಳದೆ ಇರುತ್ತಿರಲಿಲ್ಲ. ಒಬ್ಬ ಮೆಂಬರಿಯ ಸಲಹೆಯ ತೆಗೆದುಕೊಳ್ಳುವುದು ಅವರಿಗೆ ತೃಪ್ತಿ ತೋರದಿದ್ದರೆ ಮೆಂಬರುಗಳ ಮನೆಗೆ ತಾವಾಗಿಯೇ ಹೋಗಿ ಅಭಿಪ್ರಾಯವನು ತೆಗೆದುಕೊಳ್ಳುತ್ತಿದ್ದರು.

ಈ ರೀತಿ ರೈತರ ಹಿತಚಿಂತನೆಗಾಗಿ ಕೆಲಸಮಾಡಿ ಸರಕಾರಕ್ಕೆ ಆಗಾಗ್ಗೆ ಬರೆಯುತ್ತಾ ಇದ್ದದರಿಂದ ಸರಕಾರಕ್ಕೆ ಇವರಲ್ಲಿ ಪ್ರೀತಿ ಹೆಚ್ಚುವಂತೆ ಇರಲಿಲ್ಲ. ರೈತರ ಹಿತಕ್ಕಾಗಿ ಕೆಲಸ ಮಾಡುವಾಗ ಸರಕಾರದಲ್ಲಿ ಪ್ರೀತಿಯನ್ನು ಸಂಪಾದಿಸುವುದಕ್ಕೆ ಅಂಜುತ್ತಿರಲಿಲ್ಲ. ರೈತರ ಸಭೆಯಲ್ಲಿ ಒಂದು ಮಾತು, ಉದ್ಯೋಗಸ್ಥರ ಮುಂದೆ ಒಂದು ಮಾತು ಇರಲಿಲ್ಲ. ಇವರು ಉದ್ಯೋಗದಲ್ಲಿದ್ದಾಗಲೇ ಯೂರೋಪಿಯನರ ಸಂಗಡಲೇ ಆಗಲೀ ಇಂಡಿಯನರ ಸಂಗಡಲೇ ಆಗಲೀ ತನ್ನ ಮನಸಾಕ್ಷಿಗೆ ಸರಿಯೆಂದು ತೋರಿದನ್ನು ಸಮರ್ಥಿಸಲಿಕ್ಕೆ ಹೋರಾಡುತ್ತಿದ್ದರಂತೆ. ಉದ್ಯೋಗದಲ್ಲಿದ್ದಾಗ ಗರೀಬರನ್ನು ಮರೆತಿರಲಿಲ್ಲ. 1912 ನೇ ಇಸವಿಯಲ್ಲಿ ಇವರು ಮೈಸೂರು ಕೆಲಸವನ್ನು ವಿಮರ್ಶಿಸುವಾಗ "ಮದ್ರಾಸ್ ಮೈಲ್" ಪತ್ರಿಕೆಯು ಅವರು ಮಜೂರಿದಾರರು ಮತ್ತು ಕೂಲಿಗಳ ಸಂಬಳವನ್ನು ಹೆಚ್ಚಿಸಬೇಕೆಂದು ಬರೆದು ಒಂದು ಶ್ಲಾಘನೀಯವಾದ ಸಂಗತಿಯೆಂದು ಪ್ರಕಟಿಸಿದೆ. ... ಸಮಯದಲ್ಲಿ ಮೈಸೂರಿನಲ್ಲಿ ಬಡ ರೈತರಿಗೆ ತೊಂದರೆಯಾಗದಂತೆ ರಿಸರ್ವ್ ಫಾರೆಸ್ಟುಗಳಲ್ಲಿ ದನ ಮೇಯಲಿಕ್ಕೆ ಅನುಕೂಲ ಮಾಡಿರಲಿಲ್ಲವೆಂದು ತಿಳಿಯುತ್ತೆ. ಕೊಡಗಿನಲ್ಲಿ ರೈತ್ವಾರಿ ಸನದು ಬದಲಾಯಿಸಬೇಕೆಂದು ಸರಕಾರದವರು ಹೊರಟಿದ್ದಾಗ ಅವರು ಬಹಳವಾಗಿ ಚಳವಳ ಎಬ್ಬಿಸಿ ಅದನ್ನು ನಾಶ ಮಾಡಿದ್ದು ಜ್ಞಾಪಕವಿರಬಹುದು. ಗರೀಬರಿಗೆ ಮುಖ್ಯವಾಗಿ ಬಾಧಿಸುವ ವಿಷಯಗಳಿಂದ ದೇಶದ ಆರೋಗ್ಯಸ್ಥಿತಿ, ಆಹಾರಸಾಮಗ್ರಿ ಒದಗಿಸುವ ವಿಷಯ ಹಿಡಿದಿಕ್ಕಿರುವ ಅಬಕಾರಿ ಮುಂತಾದ ಸಂಗತಿಗಳಲ್ಲಿ ಪ್ರತಿವರ್ಷ ಸಂಘದ ಸಭೆಗಳಲ್ಲಿ ವಾದಿಸುತ್ತಿದ್ದದ್ದು ಎಲ್ಲಾ ಮೆಂಬರುಗಳಿಗೂ ತಿಳಿದ ಸಂಗತಿಯಾಗಿದೆ. ವಿದ್ಯಾರ್ಥಿಗಳ ಕ್ಷೇಮವನ್ನು ಬಹಳ ಮುತುವರ್ಜಿಯಿಂದ ಪಾಲಿಸಿಕೊಳ್ಳುತ್ತಿದ್ದರು. ಜಾತಿಪಂಥಭೇದಗಳು ಹುಟ್ಟದಂತೆ ಬಹಳ ಎಚ್ಚರಿಕೆಯಿಂದ ಕಾದುಕೊಳ್ಳುತ್ತಿದ್ದರು. ... ಗಳ ಕಥನ ಮಾ... ವರ್ಧಿಸುವಂತಿಲ್ಲ.

ಹೀಗೆ ಕೆಲಸಮಾಡಿ ರಾಜಕೀಯ ಚಳವಳವೆಂಬುದನ್ನು ಜನರಿಗೆ ತಿಳಿಸಿಕೊಟ್ಟರು. ಜಮಾನ್ದಾರ ಸಂಘವೇ ತನ್ನ ಸರ್ವಸ್ವವೆಂದು ನಂಬಿದ್ದರೆಂಬುದು ಅವರ ಮರಣಕಾಲದಲ್ಲಿ ಹೇಳಿದ ಅವರ ಮಾತಿನಿಂದಲೇ ಸ್ಪಷ್ಟವಾಗಿದೆ. "ತನ್ನ ಅಲ್ಪದೇಶಸೇವೆಯನ್ನು ದೇಶದವರು ಸ್ಮರಿಸಿಕೊಳ್ಳಬೇಕೆಂದಿದ್ದರೆ ಜಮಾನ್ದಾರ ಸಂಘವನ್ನು ಉನ್ನತ ಸ್ಥಿತಿಯಲ್ಲಿ ಇಡುವದೇ ಅಂಥಾ ಸ್ಮಾರಕದ ರೂಪವಾಗಿರಬೇಕೆಂತ" ಹೇಳಿದರಂತೆ.

ಇಂಥಾ ಮಹಾಪುರುಷರು ದೇಹವನ್ನು ಬಿಟ್ಟದ್ದರಿಂದ ದೇಶ ಸೇವಕರ ಕ್ಷಾಮವಿರುವ ಈ ನಮ್ಮ ದೇಶಕ್ಕೆ ಬಹಳ ಕಾಲದವರೆಗೆ ದೊಡ್ಡ ನಷ್ಟವೇಸರಿ. ಈ ನಷ್ಟವನ್ನು ಯೋಚಿಸಿ ವ್ಯಸನಪಡುತ್ತಾ ಸುಮ್ಮನಿರುವದರಿಂದ ಪ್ರಯೋಜನವಿಲ್ಲ. ಅವರ ಮಹಾಶಕ್ತಿ ಇಲ್ಲವಾದರೂ ತಮಗಿರುವ ಅಲ್ಪಶಕ್ತಿಯಿಂದ ಅವರ ಕೆಲವು ಗುಣಗಳನ್ನಾದರೂ ಹಿಂಬಾಲಿಸಿ ಕೆಲವರಾದರೂ ದೇಶಸೇವೆ ಮಾಡಿದರೆ ಈ ನಷ್ಟದ ಪರಿಣಾಮವು ಕಡಿಮೆಯಾದೀತು. ಅವರ ಸ್ಥೂಲದೇಹವು ನಾಶವಾದರೂ ಅವರ ಚೈತನ್ಯವು ನಮ್ಮ ದೇಶದ ಮುಂದಿನ ಅಭಿವೃದ್ಧಿಯ ಕಾರ್ಯಗಳಲ್ಲಿ ದೇಶಸೇವಕರಿಗೆ ಉತ್ಸಾಹ ಹುಟ್ಟಿಸಲೆಂತ ಹಾರೈಸುತ್ತೇವೆ. ಭಗವಂತನು ಅವರ ಆತ್ಮಕ್ಕೆ ಮೋಕ್ಷವೀಯಲಿ. ಶ್ರೀ ಕಾವೇರಮ್ಮನವರು ಅವರ ಕುಟುಂಬಕ್ಕು ಮತ್ತು ದೇಶಕ್ಕು ಈ ನಷ್ಟವನ್ನು ಸಹಿಸಲು ಸಾಕಷ್ಟು ಧೈರ್ಯವನ್ನೂ ಮತ್ತು ಶಕ್ತಿಯನ್ನು ಈಯಲಿ.

(ಸ್ವಂತ ಬಾತ್ಮಿದಾರರಿಂದ)

ಕಳೆದ ತಾರೀಕು 6 ನೇ ಬುಧವಾರ ವಿರಾಜಪೇಟೆಯಲ್ಲಿ ದಕ್ಷಿಣ ಕೊಡಗಿನವರ ಪರವಾಗಿ ಮ|| ಅಪ್ಪಾರಂಡ ಬಿ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ರಾಯಬಹದ್ದೂರು ಮನೆಯಪಂಡ ರಾಜಕಾರ್ಯಪ್ರಸಕ್ತ ಮುತ್ತಣ್ಣನವರು ಶಿವಾಧೀನ ಹೊಂದಿದ್ದಕ್ಕಾಗಿ ವ್ಯಸನಸೂಚಕ ಮೀಟಿಂಗ್ ಮಾಡಲಾಯಿತು. ಮೀಟಿಂಗಿಗೆ ಅನೇಕ ಜನರು ಹಾಜರಿದ್ದರು. ಅಧ್ಯಕ್ಷರು ಈ ದಿನದ ಮೀಟಿಂಗಿನ ಉದ್ದೇಶವನ್ನು ವಿವರಿಸಿ, ದಿವಂಗತ ಮುತ್ತಣ್ಣನವರು ದೇಶಕ್ಕೆ ಜಮಾನುದಾರ ಸಂಘದ ಮೂಲಕ ಮಾಡಿದ ಅಪರಿಮಿತ ದೇಶಸೇವೆಯನ್ನು ಕುರಿತು ಭಾಷಣಮಾಡಿದರು.

ಮ|| ಕೋದಂಡ ಪೆಮ್ಮಯ್ಯನವರು ಭಾಷಣ ಮಾಡಲಿಕ್ಕೆ ಪ್ರಾರಂಭಿಸುವಾಗ ಅವರ ಗಂಟಲಿನಿಂದ ಚೆನ್ನಾಗಿ ಶಬ್ದವೇ ಹೊರಡುತ್ತಿರಲಿಲ್ಲ. ಹ್ಯಾಗೂ ಅತ್ಯಂತ ವ್ಯಸನದಿಂದ ಮ|| ಮುತ್ತಣ್ಣನವರು ನಮ್ಮ ದೇಶಕ್ಕೆ ಅವರು ರಿಟೈರ್ ಆದನಂತರ, ವಿಶ್ರಾಂತಿಯಿಲ್ಲದೆ ಹಗಲಿರುಳು ಮಾಡಿದ ಕೆಲಸವನ್ನು ವಿವರಿಸಿದರು. ಅದೆ, ಮ|| ಮುತ್ತಣ್ಣನವರು ಮೈಸೂರು ದೇಶಕ್ಕೆ ಮಾಡಿದ ಅಸಾಧಾರಣ ಕೆಲಸವನ್ನೂ, ಅವರು ಮಹಾರಾಜರ ಪ್ರೀತಿಗೆ ಎಷ್ಟರಮಟ್ಟಿಗೆ ಪಾತ್ರರಾಗಿದ್ದರೆಂಬುದನ್ನೂ, ಹಿಂದೂದೇಶದ ಸರ್ವಭಾಗದಲ್ಲಿ ಅಂದರೆ ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ ಇರುವ

...ಷ್ಟು ದೊಡ್ಡ ಪ್ರಾಂತ್ಯಗಳಲ್ಲಿ ಅವರು ಮಾಡಿದ ಕೆಲಸವ ವಿವರಿಸಿದರು. ಮೆ॥ ಕೆ. ಪಿ. ಚಿಣ್ಣಪ್ಪನವರು ಸಹ, ...ಮ್ಮ ದೇಶಕ್ಕೆ ಮೆ॥ ಮುತ್ತಣ್ಣನವರಂತ ಮುಂದಾಳುಗಳು ಸಿಕ್ಕುವುದು ದುರ್ಲಭವೆಂದೂ, ಅವರು ಸಾವಿಗೆ ಬಿದ್ದಂದಿನಿಂದ ದೇಶದಲ್ಲಿ ಅನೇಕ ಪಂಗಡಗಳಾದುವೆಂದೂ, ಐಕಮತ್ಯದ ನಾಶಕ್ಕೆ ಈ ಮಹನೀಯರೇ ಜೀವಕಳೆಯೆಂದೂ, ...ಶದಲ್ಲಿ ಈಗಾಗಲೇ ಹುಟ್ಟುತ್ತಿರುವ ಎಲ್ಲಾ ಚಳವಳಿಗಳ್ಗೂ ...ವವರೂ ಈ ಮುತ್ತಣ್ಣನವರೇ ಮೂಲಪುರುಷರು ...ಬೇಡಾಗಿ ವಿಸ್ತರಿಸಿ ಮಾತಾಡಿದರ. ಅನಂತರ ಅಧ್ಯಕ್ಷರು ...ಳಗಿನ ಠರಾವುಗಳನ್ನು ತಂದದ್ದನ್ನು ಎಲ್ಲರೂ, ಅತ್ಯಂತ ...ನದಿಂದ ಮಂಜೂರು ಮಾಡಿದರು.

(1) ಕೊಡಗಿನ ದೇಶಾಭಿಮಾನಿಗಳಲ್ಲಿ ಅಗ್ರಗಣ್ಯರೆ ...ಸಿಕ್ಕೊಂಡ ರಾಜಕಾರ್ಯ ಪ್ರಸಕ್ತ ರಾಯಬಹದ್ದೂರು ...ನೆಯವರ್ತ ಮುತ್ತಣ್ಣನವರ ಅಕಾಲಮರಣಕ್ಕೆ, ದಕ್ಷಿಣ ...ಡಗಿನವರು ಈ ದಿನ ವಿರಾಟಿಂಗ ಸೇರಿ ಬಹಳ ಪರಿತಾಪ ...ಡುವವರಾಗಿದ್ದಾರೆ. ಅಲ್ಲದೆ ಅವರ ಆತ್ಮಕ್ಕೆ ಶಾಂತಿ ಪ್ರ...ದಾನವನ್ನು ಭಗವಂತನು ನೀಡಲೆಂದೂ, ಪ್ರಾರ್ಥಿಸುತ್ತೇವೆ ...ಮ್ಮ ಅವರ ಸತಿ ಪುತ್ರರ ದುಃಖಗಳಲ್ಲಿ ನಾವು ಸಹ ಭಾಗಳಾಗಿರುತ್ತೇವೆ.

ಮೇಲೆ ...ರದ ಠರಾವನ್ನು ತಂತಿ ... ಕುಟುಂಬಕ್ಕೆ ಕಳಿಸುವಂತೆಯೂ ವಿರಾಟಿಂಗಿನ ಪ್ರೊಸೀಡಿಂಗ್ಸನ್ನು ಕೊಡಗು ಪತ್ರಿಕೆಯಲ್ಲಿ ಪ್ರಕಟಿಸುವಂತೆಯೂ ತೀರ್ಮಾನವಾದುತರ ಸಭೆಯು ಮುಕ್ತಾಯವಾಯಿತು.

ಕರ್ನಾಟಕ ರಾಷ್ಟ್ರೀಯ ವಿಶ್ವವಿದ್ಯಾನಿಲಯ.

(ಜಯಕರ್ನಾಟಕದಿಂದ)

ಭರತ ವರ್ಷದ ಎಲ್ಲಾ ಭಾಗಗಳೂ ಅಖಿಲಭಾರತರಾಷ್ಟ್ರೀಯ ಪುನರುಜ್ಜೀವನಕಾರ್ಯದಲ್ಲಿ ಶ್ರೇಷ್ಠತೆಯನ್ನು ಪಡೆಯಬೇಕೆಂದು ಹೋರಾಡುತ್ತಿರುವಾಗ ನಮ್ಮ ಕರ್ನಾಟಕ ದೇಶವು ಈ ವಿಷಯದಲ್ಲಿ ಹೆಚ್ಚಿನ ಉತ್ಸಾಹವನ್ನೂ ಉದಾರತನವನ್ನೂ ತೋರಿಸದೆ ಇರುವುದು ಕನ್ನಡ ಜನರ ಕೆಟ್ಟ ...ಮಗಳ ಫಲವೇ ಎಂದು ತಿಳಿಯಬೇಕು. ಭಾರತವಾತೆಯನ್ನು ಸ್ವರಾಜ್ಯ ಸಿಂಹಾಸನದಲ್ಲಿ ನೆಲೆಗೊಳಿಸಿ ಧನ್ಯರಾಗಬೇಕೆಂದು ಬಂಗಾಳಿಜನರೂ ... ಪಂಜಾಬಿಜನರೂ, ಆಂಧ್ರರೂ ಮಹಾರಾಷ್ಟ್ರದವರೂ ಮೊದಲಾದವರು ಉತ್ಸಾಹದಿಂದ ರಾಷ್ಟ್ರೀಯ ಪುನರುಜ್ಜೀವನ ಕಾರ್ಯದಲ್ಲಿ ಸುಮಾರು ೫೦-೬೦ ವರ್ಷಗಳಿಂದ ಕೆಲಸಮಾಡುತ್ತಿರುವರು. ಆಧುನಿಕ ಭರತವರ್ಷದಲ್ಲಿ ರಥಿಕರೆಂದೂ, ಪಂಡಿತರೆಂದೂ ತತ್ವಜ್ಞರೆಂದೂ ಮಹಾಪುರುಷರೆಂದೂ ಕೀರ್ತಿಹೊಂದಿದ ...ನವರಲ್ಲಿ ಮಾಡಿದ್ದೂ ಮಹಾರಾಷ್ಟ್ರವೂ ಪಂ...ಜಾಬೂ ... ಪ್ರಾಂತಗಳೂ—ಮೊ...ಲಾಗಿ ಬಹುಮಂದಿಯನ್ನು ದೇಶೋದ್ಧಾರಕ್ಕಾಗಿ ಸಮರ್ಪಿಸಿವೆ. ಕರ್ನಾಟಕದೇಶವು ಈ ವಿಷಯದಲ್ಲಿ ಎಷ್ಟರ ...ಟ್ಟಿಗಿದೆಯೆಂದು ವಿಚಾರಮಾಡಿದರೆ ಕನ್ನಡ ಜನರಿಗೆ ಯಾವ ವಿಧದಲ್ಲಿಯೂ ಗೌರವ ಸದಸ್ಯ ಉಂಟಾಗಿಲ್ಲ.

ರಾಷ್ಟ್ರೀಯ ... ರಾಷ್ಟ್ರೀಯ ಪುನರುಜ್ಜೀವನ ಕಾರ್ಯಕ್ಕೆ ಬಹಳ ಮುಖ್ಯವಾದುದು ರಾಷ್ಟ್ರೀಯ ಶಿಕ್ಷಣವೆಂಬದೇನು. ಇದರಿಂದ ರಾಷ್ಟ್ರದ ಏಳಿಗೆಯು ಹೇಗೆ ನಡೆಯುವುದು. ಇವೆರಡರ ಪರಸ್ಪರ ಸಂಬಂಧವೇನು? ...ಂಬ ಅಂಶಗಳನ್ನು ಸ್ಪಷ್ಟಗೊಳಿಸಬೇಕು. ಒಂದು ರಾಷ್ಟ್ರದ ಅಥವಾ ಒಂದೇಶದ ಅದವಾ ಒಂದು ಜನಾಂಗದ ಸಾಧುವಾದ ಮತ್ತು ಸ್ಥಿರವಾದ ಏಳಿಗೆಗೆ ಸಹಕಾರ ಮಾಡುವುದು ರಾಷ್ಟ್ರೀಯಶಿಕ್ಷಣವೆನಿಸಿಕೊಳ್ಳುವುದು. ಜಗತ್ತಿನ ಇತಿಹಾಸತರಂಗದ ಅನೇಕ ಜನಾಂಗಗಳು ಅವರವರ ಅಧರ್ಮವಾದ ಕರ್ಮದಿಂದ ಅದೃಶ್ಯವಾಗಿ ಹೋಗಿರೆ ಭಾರತೀಯ ಜನಾಂಗವು ಇನ್ನೂ ರೆಗೂ ಚಿರಂಜೀವಿಯಾಗಿ ಬಾಳಿಕೊಂಡು ಬಂದು ಹಿಂದುಸ್ಥಾನದ ಆರ್ಯದ ನಾಗರೀಕತೆಯ ಪ್ರಭಾವದಿಂದಲೇ ಆಗಿದೆ. ಭಾರತೀಯ ನಾಗರೀಕತೆಯು ... ಪ್ರಾಚೀನಕಾಲದಿಂದಲೂ ಸತ್ಯ ಧರ್ಮ, ... ಅಸ್ತಿತ್ವ ಅಹಿಂಸಾ ಪರಮೋಧರ್ಮ, ... ಕಲ್ಯಾಣ, ಸ್ವಾರ್ಥತ್ಯಾಗ—ಮೊದಲಾದ ಉತ್ತಮ ಲಕ್ಷಣಗಳನ್ನು ಶಾಶ್ವತವಾಗಿರುವಂತೆ ಅವಲಂಬಿಸಿದೆ. ಆರ್ಯ ಮಹರ್ಷಿಗಳೂ ಧರ್ಮಶಾಸ್ತ್ರಜ್ಞರೂ, ಭಾರತೀಯ ಜನಾಂಗದ ನಾಗರೀಕತೆಯ ಸಾಂಪತ್ತಿಕ ಮತ್ತು ಧಾರ್ಮಿಕ ಅಂಶಗಳು ಆಚರಣೆಯಲ್ಲಿರುವಂತೆ ಯೋಗ್ಯವಾದ ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸಿದರು. ಆರ್ಯ—ಹಿಂದು ನಾಗರೀಕತೆಯ ಅಸ್ತಿಭಾರವು ಪವಿತ್ರಸನಾತನವರ್ಷದ ಉತ್ತಮ ಲಕ್ಷಣಗಳಮೇಲೆಯೇ ಅಂಕುರಿಸಿ, ಭರತವರ್ಷದ ಧಾರ್ಮಿಕ ಮತ್ತು ದೈವಿಕ ನಾಗರೀಕತೆಯಲ್ಲಿ ವೈದಿಕ ಧರ್ಮಗಳ ನಾಗರೀಕತೆಯೂ, ಜೈನಮತ ಮತ್ತು ಬೌದ್ಧಮತಗಳ ನಾಗರೀಕತೆಯೂ, ಇವುಗಳ ಪವಿತ್ರ ಸಂಬಂಧದಿಂದ ಉಂಟಾದ ಹಿಂದು ನಾಗರೀಕತೆಯೂ ಅನಂತರದಲ್ಲಿ, ಬಂದು ನೆಲೆಗೊಂಡ ಮಹಮ್ಮದೀಯ ನಾಗರೀಕತೆಯ ಕೆಲವು ಉತ್ತಮವಾದ ಅಂಶಗಳೂ ಯೋಗ್ಯತೆಯಲ್ಲಿ ಸಂಗಮವಾಗಿವೆ. ಜಗತ್ತಿನ ನಾಗರೀಕತೆಗಳ ಉತ್ತಮವಾದ ಧಾರ್ಮಿಕ ಅಂಶಗಳೆಲ್ಲವೂ ಭಾರತೀಯ ನಾಗರೀಕತೆಯಲ್ಲಿ ಸಂಗಮವಾಗುತ್ತಾ, ಇವೆ. ಪವಿತ್ರವಾದ ಮತ್ತು ಪ್ರಸಿದ್ಧವಾದ ಗಂಗಾನದಿಗೆ ಯಮುನಾ—ಗಂಡಕಿ—ಕೋಸಾ ಮೊದಲಾದ ಉಪನದಿಗಳು ಸಂಗಮವಾದರೂ, ಗಂಗಾನದಿಯೆಂಬ ಹೆಸರು ಹೇಗೆ ಹೋಗುವದಿಲ್ಲವೋ, ಅದೇ ರೀತಿಯಲ್ಲಿ ಹಿಂದುಸ್ಥಾನದ ಆರ್ಯ ಹಿಂದು ನಾಗರೀಕತೆಗೆ ಐತಿಹಾಸಿಕ ಪ್ರವಾಹದಲ್ಲಿ ಅನ್ಯ ನಾಗರೀಕತೆಗಳ ಕೆಲವು ಅಂಶಗಳು ಸಂಗಮವಾದರೂ, ಭಾರತೀಯ ನಾಗರೀಕತೆಯಲ್ಲಿ ವೈದಿಕ ಧರ್ಮಗಳ ತತ್ವರಹಸ್ಯಗಳೂ ನೈತಿಕ ಸಿದ್ಧಾಂತಗಳೂ ಸ್ಥಿರವಾಗಿವೆ.

ಆದುದರಿಂದ ಹಿಂದುಸ್ಥಾನದ ರಾಷ್ಟ್ರೀಯ ಶಿಕ್ಷಣವಾದಿಗಳು ಭಾರತೀಯ ನಾಗರೀಕತೆಯ ಅಸ್ತಿಭಾರಸ್ವರೂಪವಾದ ಮುಖ್ಯ ಲಕ್ಷಣಗಳನ್ನು ಗಮನದಲ್ಲಿಟ್ಟು ಅದಕ್ಕೆ ಅನುಸಾರವಾಗಿ ರಾಷ್ಟ್ರೀಯ ಶಿಕ್ಷಣಕ್ರಮವನ್ನು ನಿರ್ಧರಿಸಬೇಕು. ರಾಷ್ಟ್ರೀಯ ಶಿಕ್ಷಣದಲ್ಲಿ ಕೇವಲ ವೈದಿಕ ಧರ್ಮಗಳ ಮತ್ತು ವೇದಕಾಲಗಳ ನಾಗರೀಕತೆಯನ್ನು ಮಾತ್ರವೆ ಪ್ರಬಲಗೊಳಿಸುವುದೇ ಆಗಲಿ ಅಥವಾ ಕೇವಲ ಜೈನ ಮತ್ತು ಬೌದ್ಧ ಧರ್ಮಗಳನ್ನು ಮಾತ್ರವೇ ಪ್ರಬಲಗೊಳಿಸುವುದೇ ಆಗಲಿ ಅಥವಾ ಕೇವಲ ಮಹಮ್ಮದೀಯ ಮತಧರ್ಮಗಳನ್ನು ಮತ್ತು ಮಹಮ್ಮದೀಯ ನಾಗರೀಕತೆಯನ್ನು ಮಾತ್ರವೇ ಪ್ರಬಲಗೊಳಿಸುವುದೇ ಆಗಲಿ, ಈಗಿನ ಕಾಲದ ವಿದ್ಯಮಾನಗಳಿಗೆ ಯೋಗ್ಯವಾದುದೆಂದು ಕಾಣುವುದಿಲ್ಲ. ರಾಷ್ಟ್ರೀಯ ಶಿಕ್ಷಣದ ಮುಖ್ಯವಾದ ಉದ್ದೇಶವು, ಭಾರತೀಯ ಜನಾಂಗದ ಶ್ರೇಯಸ್ಸು ಮತ್ತು ಸ್ಥಿರವಾದ ಅಭಿವೃದ್ಧಿಯೂ ಆಗಿರುವುದರಿಂದ ರಾಷ್ಟ್ರೀಯ ಶಿಕ್ಷಣದಲ್ಲಿ ಆ ಅವಶ್ಯಕವಾದ ಲಕ್ಷಣಗಳು ಇದ್ದೇ ಇರಬೇಕು. ಭಾರತೀಯ ಜನಾಂಗವು ತನ್ನ ಸ್ವಜವಾದ ಧಾರ್ಮಿಕ ಮತ್ತು ದೈವಿಕ ಚೈತನ್ಯವನ್ನೂ ಅದರ ಸ್ವರೂಪವನ್ನೂ ಚೆನ್ನಾಗಿ ಅರಿತುಕೊಂಡು ಹೊರತು ಭಾರತೀಯರು ಮಾತೃಭೂಮಿಯ ಸೇವೆಯನ್ನಾಗಲೀ ಅಥವಾ ಮಾನವಕುಟುಂಬದ ಸೇವೆಯನ್ನಾಗಲಿ ಶ್ಲಾಘ್ಯವಾದ ರೀತಿಯಲ್ಲಿ ನೆರವೇರಿಸಲಾರರು.

ರಾಷ್ಟ್ರೀಯ ಶಿಕ್ಷಣವು, ಭಾರತೀಯ ಜನಾಂಗದ ಸ್ವಜವಾದ ಮತ್ತು ಸ್ವಾಭಾವಿಕವಾದ ಧಾರ್ಮಿಕ ಸ್ವರೂಪವನ್ನು ವ್ಯಕ್ತಗೊಳಿಸಬೇಕು. ಭರತವರ್ಷದ ಇತಿಹಾಸ ಚರಿತ್ರೆ ಇವುಗಳನ್ನು ಭಾರತೀಯಜನಾಂಗದ ಸ್ಥಿರವಾದ ಅಭ್ಯುದಯದ ದೃಷ್ಟಿಯಿಂದ ಬೋಧಿಸಬೇಕು. ಭಾರತೀಯ ಜನಾಂಗದ ಅ ಸ್ವರೂಪಗಳಾದ ಕರ್ನಾಟಕ ಆಂಧ್ರ, ವಂಗ ಮಹಾರಾಷ್ಟ್ರ ತಮಿಳ, ಗುಜರಾತಿ—ಮೊದಲಾದ ಭಾಷಾನ್ವಯವಾಗಿ ಜನರು ಐಕಮತ್ಯದಿಂದ ಒಡಗೂಡಿ ಭಾರತ ಮಾತೆಯನ್ನುದ್ಧಾರಮಾಡಲು ಸಾಧನಗಳನ್ನು ಕಲ್ಪಿಸಬೇಕು. ನಿಜವಾದ ಜ್ಞಾನಾಭಿವೃದ್ಧಿಗೂ ಶಾಸ್ತ್ರಾಭ್ಯಾಸಕ್ಕೂ ಅಸ್ತಿತ್ವಕ್ಕೂ ರಾಷ್ಟ್ರೀಯ ಶಿಕ್ಷಣವು ಬೆಂಬಲವಾಗಿರಬೇಕು. ... ವಿಚಾರಗಳಲ್ಲಿ ಪರಸ್ಪರ ಉದಾರಭಾವವನ್ನೂ ಸಮುದ್ರದೃಷ್ಟಿಯನ್ನೂ ಸತ್ಯಾರ್ಥಪ್ರಕಾಶವನ್ನೂ ಅಭಿವೃದ್ಧಿಗೊಳಿಸಬೇಕು. ದೇಶಾಭಿಮಾನ ಸ್ವಾರ್ಥತ್ಯಾಗ ಲೋಕಸೇವೆ ... ದ ... ದ ಉತ್ತಮ ಗುಣಗಳನ್ನು ... ಬೆಳೆಸಬೇಕು. ... ಮೊದಲಾದ ಮಾರ್ಗಗಳ ... ಸಾಧಿಸಬೇಕು. ... ರಾಷ್ಟ್ರೀಯ ಶಿಕ್ಷಣವನ್ನು ಪಡೆದ ಯುವಕರೇ ... ಯುವತಿಯರೇ ಆಗಲಿ ಬ್ರಹ್ಮಚರ್ಯದ ತೇಜಸ್ಸಿನಿಂದ ರಾಜಿಸುತ್ತಿರಬೇಕು. ರಾಷ್ಟ್ರೀಯ ಶಿಕ್ಷಣವು ವ್ಯಕ್ತಿಯ ಸಮಾಜದ ಮತ್ತು ಜನಾಂಗದ ಸ್ವಾತಂತ್ರ್ಯವನ್ನು ಸಾಧಿಸುವ ಮತ್ತು ಸಾತ್ವಿಕ ಪ್ರವೃತ್ತಿಗೆ ಸಾಧಕವಾದ ಮಾರ್ಗಗಳಲ್ಲಿ ನಡೆಯಬೇಕು. ಇದರಿಂದ ಭಾರತೀಯ ಜನಾಂಗವು ತನ್ನ ನಿಜವಾದ ಸ್ವರೂಪವನ್ನು ಅರಿತುಕೊಂಡ ಮಾನವ ಕುಟುಂಬಕ್ಕೆ ಪ್ರಾಚೀನಕಾಲದಂತೆ ಉಪಕಾರಿಯಾಗುವುದು. ಜಗತ್ತಿನ ಕಲ್ಯಾಣಕ್ಕೆ ಭಾರತೀಯರು ತಮ್ಮ ಕರ್ತವ್ಯವನ್ನು ಯೋಗ್ಯರೀತಿಯಿಂದ ಮಾಡಲು ಅವಕಾಶವುಂಟಾಗುವುದು.

ಕರ್ನಾಟಕದ ಪ್ರಾಚೀನ ಇತಿಹಾಸವನ್ನು ನೋಡಿದರೆ ಪೂರ್ವ ಕಾಲದಲ್ಲಿ ಕರ್ನಾಟಕವು, ಬಹಳ ಪ್ರಸಿದ್ಧಿಯಾಗಿತ್ತೆಂದೂ ಭಾರತಮಾತೆಯ ಸೇವೆಯನ್ನೂ ಜಗತ್ತಿನ ಕಲ್ಯಾಣವನ್ನೂ ನೆರವೇರಿಸಿತೆಂದೂ ವ್ಯಕ್ತವಾಗುತ್ತದೆ. ಕರ್ನಾಟಕದಲ್ಲಿ ಸಾಂಪತ್ತಿಕ ನಾಗರೀಕತೆಯೂ ಧಾರ್ಮಿಕ ನಾಗರೀಕತೆಯೂ ಪರಸ್ಪರ ಅಭಿವೃದ್ಧಿ ಹೊಂದಿದವು. ಸಾಂಪತ್ತಿಕ ನಾಗರೀಕತೆಯು ಧಾರ್ಮಿಕ ನಾಗರೀಕತೆಗೆ ಅಸ್ತಿಭಾರಸ್ವರೂಪವಾದುದರಿಂದಲೂ, ಸಾಧುವ್ಯಕ್ತಿಗಳ ಮೂಲಕ ಸಾಧಕವಾದುದರಿಂದಲೂ, ಕರ್ನಾಟಕದ ಇತಿಹಾಸದಲ್ಲಿ ಪ್ರಖ್ಯಾತಿಗೊಂಡ ರಾಜ್ಯಗಳ ಕಾಲಗಳಲ್ಲಿ ಸಾಂಪತ್ತಿಕ ನಾಗರೀಕತೆಯು ಮತ್ತು ಧಾರ್ಮಿಕ ನಾಗರೀಕತೆಯು ಹೆಚ್ಚು ಉನ್ನತಪದವಿಯನ್ನು ಪಡೆದವು.

ಟೀಪುವಿನ ಮರಣಾನಂತರ ಕರ್ನಾಟಕದ ಭಾಗಗಳು ಛಿನ್ನವಾಗಿಮಾಡಲ್ಪಟ್ಟು ರಾಜ್ಯದಾಸೆಯಿಂದ ಮತ್ತರಾದವರಿಂದ ಹಂಚಿಕೊಳ್ಳಲ್ಪಟ್ಟವು. ಅಂದಿನಿಂದ ಇದುವರೆಗೂ ಕರ್ನಾಟಕವು ಛಿನ್ನವಾಗಿಯೇ ಇದೆ. ಕನ್ನಡ ಜನರು ತಮ್ಮ ರಾಷ್ಟ್ರೀಯ ಏಕತ್ವವನ್ನು ಮರೆತುಬಿಟ್ಟಿದಾರೆ. ಕರ್ನಾಟಕಕ್ಕೆ ಬೋಧೆಯು ಹೆಚ್ಚುತ್ತಾ ಬಂದಿದೆ. ಕನ್ನಡ ಜನರು ಈ ವಿಚಾರದಲ್ಲಿ ಎಚ್ಚತ್ತುಕೊಂಡು ತನ್ನ ರಾಷ್ಟ್ರದ ಗೌರವವನ್ನೂ ಐಕ್ಯಮತ್ಯವನ್ನೂ ನೆಲೆಗೊಳಿಸಬೇಕು.

ಕರ್ನಾಟಕಕ್ಕೆ ರಾಷ್ಟ್ರೀಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿ ಅಭಿವೃದ್ಧಿಗೊಳಿಸಿದರೆ, ಕರ್ನಾಟಕದ ರಾಷ್ಟ್ರೀಯ ಏಕತ್ವವು ತಕ್ಕ ಪುಷ್ಟಿಗಾದರೂ ಸಫಲವಾಗುವುದು. ಕರ್ನಾಟಕ ರಾಷ್ಟ್ರದಲ್ಲಿ ಸುಮಾರು ಒಂದೂವರೆ ಕೋಟಿ ಜನರಿದ್ದಾರೆ. ಮೈಸೂರು ದೇಶವೂ, ಮದ್ರಾಸಾಧಿಪತ್ಯದ ದಕ್ಷಿಣಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳೂ, ಬೊಂಬಾಯಾಧಿಪತ್ಯದ ಧಾರವಾಡ, ಉತ್ತರಕನ್ನಡ ಬೆಳಗಾಂವ ಬಿಜಾಪುರ, ಜಿಲ್ಲೆಗಳೂ ಹೈದರಾಬಾದು ಸಂಸ್ಥಾನದ ರಾಯಚೂರು, ಕೊಪ್ಪಳ, ಗುಲ್ಬರ್ಗ ಪ್ರಾಂತಗಳೂ ಆಧುನಿಕ ಕರ್ನಾಟಕದ ಛಿನ್ನವಾದ ರಾಜಕೀಯ ವಿಭಾಗಗಳು. ಇವುಗಳ ರಾಜಕೀಯ ಏಕೀಕರಣವು ಸತತ್ಕೊಡ ಕಾರ್ಯಸಾಧನೆಯಲ್ಲಿ ನಿಂಬದ ಮತ್ತು ಕಷ್ಟವಾದ ವಿಷಯವಾದುದರಿಂದ ಈ ಪ್ರಾಂತಗಳ ಕನ್ನಡ ಜನರೆಲ್ಲರೂ ರಾಜಕೀಯ ವಿಷಯವಲ್ಲದ ಬೇರೆ ವಿಚಾರಗಳಲ್ಲಿ ಕರ್ನಾಟಕ ರಾಷ್ಟ್ರದ ಅಭ್ಯುದಯದ ಸಲುವಾಗಿ ಪರಸ್ಪರ ವಿಶ್ವಾಸದಿಂದಲೂ, ಸಹೋದರಭಾವದಿಂದಲೂ, ಕೆಲಸನಡಿಸುವುದು ಅಗತ್ಯವಿದೆ. ಕನ್ನಡ ಭಾಷಾಸೇವೆಯೂ ಪ್ರಾಚೀನ ಕರ್ನಾಟಕದ ಐತಿಹಾಸಿಕ ವೈಭವದ ಕೀರ್ತಿಯೂ, ಕರ್ನಾಟಕದ ಎಲ್ಲಾ ಜನರಿಗೂ ಬೆಂಬಲವಾಗಿವೆ, ಅಖಿಲಕರ್ನಾಟಕಕ್ಕೆ ಸಂಬಂಧಪಟ್ಟ ಸಂಸ್ಥೆಗಳು ಹುಟ್ಟಿದ ಹಾಗೆಲ್ಲ ಕನ್ನಡ ಜನರಲ್ಲಿ ರಾಷ್ಟ್ರೀಯ ಚೈತನ್ಯದ ಪ್ರಭಾವವು ಹೆಚ್ಚು ಪ್ರಕಾಶಹೊಂದುವುದು. ಕರ್ನಾಟಕ ರಾಷ್ಟ್ರದ ದೇಶಾಭಿಮಾನಿಗಳೂ ಶ್ರೀಮಂತರೂ ಒಡಗೂಡಿ ಅಖಿಲಕರ್ನಾಟಕದ ಪುನರುಜ್ಜೀವನಕ್ಕೆ ಸಹಾಯಕವಾಗಿರುವ ರಾಷ್ಟ್ರೀಯ ವಿಶ್ವವಿದ್ಯಾನಿಲಯವನ್ನು ಏರ್ಪಡಿಸಬೇಕು. ಇಂತಹ ವಿದ್ಯಾಭಿಮಾನ ಸಂಸ್ಥೆಯಲ್ಲಿ ಕರ್ನಾಟಕ ರಾಷ್ಟ್ರದ ಮಹನೀಯರೆಲ್ಲರೂ ಪರಸ್ಪರ ವಿಶ್ವಾಸದಿಂದ ರಾಷ್ಟ್ರದ ಜಾಗೃತಿಯನ್ನು ಸಫಲಗೊಳಿಸಲು ಅವಕಾಶವಿರಬೇಕು. ಕರ್ನಾಟಕದ ಎಲ್ಲಾ ಪ್ರಾಂತಗಳಿಂದ ವಿದ್ಯಾರ್ಥಿಗಳೂ, ಉಪಾಧ್ಯಾಯರೂ, ವಿದ್ಯಾಭಿಮಾನಿಗಳೂ ಈ ರಾಷ್ಟ್ರೀಯ ವಿಶ್ವವಿದ್ಯಾನಿಲಯದಲ್ಲಿ ಸೇರುವಂತೆ ಅನುಕೂಲತೆಗಳನ್ನು ಕಲ್ಪಿಸಬೇಕು. ಭರತವರ್ಷದ ಇತರ ಭಾಗಗಳಲ್ಲಿ ರಾಷ್ಟ್ರೀಯ ವಿಶ್ವವಿದ್ಯಾನಿಲಯಗಳು ಏರ್ಪಟ್ಟು ಭಾರತೀಯ ಜನಾಂಗದ ಪುನರುಜ್ಜೀವನಕಾರ್ಯದಲ್ಲಿ ಸಹಾಯಕವಾಗಿವೆ. ಕರ್ನಾಟಕದ ... ಈ ವಿಚಾರದಲ್ಲಿ ತಾತ್ಸಾರಮಾಡದೆ, ರಾಷ್ಟ್ರೀಯ ಶಿಕ್ಷಣವು ರಾಷ್ಟ್ರದ ಉದ್ಧಾರಕ್ಕೆ ಅವಶ್ಯಕವೆಂದು ತಿಳಿದು, ಕರ್ನಾಟಕಕ್ಕೆ ರಾಷ್ಟ್ರೀಯ ವಿಶ್ವವಿದ್ಯಾನಿಲಯವೊಂದನ್ನು ಶೀಘ್ರದಲ್ಲಿಯೇ ಸ್ಥಾಪಿಸಲು ಒಟ್ಟುಗೂಡಬೇಕು.

ಹಿಂದುಸ್ಥಾನದ ರಾಷ್ಟ್ರೀಯ ವಿಶ್ವವಿದ್ಯಾನಿಲಯಗಳಲ್ಲಿ ಕೆಲವು ಬಹಳ ಪ್ರಸಿದ್ಧವಾಗಿವೆ. ಇವುಗಳಲ್ಲಿ ಕೆಲವು ಈ ೧೦-೨೦ ವರ್ಷಗಳ ಹಿಂದೆಯೇ ಸ್ಥಾಪಿಸಲ್ಪಟ್ಟವು. ಆಂಗ್ಲೇಯ ವಿದ್ಯಾಭ್ಯಾಸದಿಂದಲೂ ಸರ್ಕಾರದವರು ಏರ್ಪಡಿಸಿರುವ ವಿದ್ಯಾಭ್ಯಾಸ ಪದ್ಧತಿಗಳಿಂದ ... ಉಂಟಾಗಿರುವ ... ದೂರ ... ದೇಶಾಭಿಮಾನಿಗಳು ರಾಷ್ಟ್ರೀಯ ಶಿಕ್ಷಣದ ... ಅಸ್ತಿತ್ವವನ್ನು ಕೊಟ್ಟರು. ... ವರು ಸ್ಥಾಪಿಸಿರುವ ... ವಿಶ್ವವಿದ್ಯಾನಿಲಯವೂ, ... ರವೀಂದ್ರನಾಥ ಠಾಕೂರರವರು ಸ್ಥಾಪಿಸಿದ ... ಶಾಂತಿನಿಕೇತನ ವಿಶ್ವಭಾರತಿ ವಿದ್ಯಾನಿಲಯವೂ, ಮಹಾತ್ಮ ಗಾಂಧಿಯವರು ಸ್ಥಾಪಿಸಿದ ಸಾಬರಮತಿ ಸತ್ಯಾಗ್ರಹ ಆಶ್ರಮವೂ, ಗುಜರಾತು ವಿದ್ಯಾಪೀಠವೂ, ಕಾಶಿ ವಿದ್ಯಾಪೀಠವೂ, ಮೌಲಾನಾ ಮಹಮ್ಮದಲಿ ಮತ್ತು ಮಹಾತ್ಮ ಗಾಂಧಿ ಇವರುಗಳು ಸ್ಥಾಪಿಸಿದ ಅಲಿಘಡದ ರಾಷ್ಟ್ರೀಯ ಮುಸ್ಲಿಮ ವಿಶ್ವವಿದ್ಯಾನಿಲಯವೂ ಪ್ರಸಿದ್ಧಿಯಲ್ಲಿವೆ. ಡಾ॥ ಪಿ. ಸಿ. ರಾಯ್ ರವರು ಭಾರತೀಯ ರಸಾಯನ ಶಾಸ್ತ್ರಪಂಡಿತರೆಂದು ಲೋಕವಿಖ್ಯಾತರಾಗಿರುವ ಆಚಾರ್ಯ ಪ್ರಫುಲ್ಲ ಚಂದ್ರರಾಯರವರು, ಅಲಿಘಡ ಮುಸ್ಲಿಮ ವಿಶ್ವವಿದ್ಯಾನಿಲಯದಲ್ಲಿ ... ಭಾಷಣದಲ್ಲಿ ರಾಷ್ಟ್ರೀಯ ಶಿಕ್ಷಣ ... ವಿಷಯಗಳನ್ನು ವ್ಯಕ್ತಗೊಳಿಸಿರುವರು ... ಸ್ತರದ ... ಎಲ್ಲಾ ಅಂಶಗಳಿಗೆ ... ನಮ್ಮ ದೇಶದ ನಾಗರೀಕತೆಯ ಅಂಶಗಳನ್ನು ಮಾತ್ರವೇ ಮುಖ್ಯವಾಗಿ ಬೋಧಿಸುವುದು ರಾಷ್ಟ್ರೀಯ ಶಿಕ್ಷಣವೆನಿಸಿಕೊಳ್ಳುವುದಿಲ್ಲ. ನಮ್ಮ ದೇಶದ ರಾಷ್ಟ್ರೀಯ ಶಿಕ್ಷಣವಾದಿಗಳಲ್ಲಿ ಈ ಅಭಿಪ್ರಾಯವನ್ನುಳ್ಳವರು ಇದ್ದರೆ ಅದು ಆಶ್ಚರ್ಯಕರವಾದ ವಿಷಯವಲ್ಲ. ಏತಂದರೆ ಕಳೆದ ೧೯ನೆಯ ಶತಮಾನದಲ್ಲಿ ಅಂದರೆ ಈಗ ಸುಮಾರು ೩೦ ವರ್ಷಗಳ ಹಿಂದಿನ ಕಾಲದವರೆಗೂ, ನಮ್ಮವರು ಪಾಶ್ಚಿಮಾತ್ಯನಾಗರೀಕತೆಯ ಪ್ರಭಾವಕ್ಕೆ ಬೆರಗಾಗಿ, ಅದರ ಆಡಂಬರಗಳಿಗೆ ಮರುಳಾಗಿ, ಕೆಲವುಕಾಲ ಪಾಶ್ಚಿಮಾತ್ಯ ನಾಗರೀಕತೆಯ ದಾಸರಾಗಿದ್ದರು. ಮತ್ತೆ ಕೆಲವರಲ್ಲಿ, ಈ ಕಾರಣದಿಂದ ಅದಕ್ಕೆ ವಿರೋಧವಾದ ಭಾವವುಂಟಾಗಿ ಪಾಶ್ಚಿಮಾತ್ಯ ನಾಗರೀಕತೆಯಲ್ಲಿ—ಗುಣಗಳೇ ಇರಲಿ ದೋಷಗಳೇ ಇರಲಿ, ಅದನ್ನ ಸಂಪೂರ್ಣವಾಗಿ ತ್ಯಜಿಸಬೇಕೆಂದು ನಿಶ್ಚಯಜ್ಞಾನವುಂಟಾಯಿತು. ಇವೆರಡು ಅಭಿಪ್ರಾಯಗಳು ಪರಸ್ಪರ ವಿರೋಧವಾದ ಅಭಿ...

ಅಂಶಗಳು. ರಾಷ್ಟ್ರೀಯ ಎಂಬ ಶಬ್ದಕ್ಕೆ ಸಮಂಜಸವಾದ ಅರ್ಥವನ್ನು ಮಾಡಬೇಕು. ರಾಷ್ಟ್ರೀಯ ಶಿಕ್ಷಣವೆಂದರೆ ಕೆಲವರು ತಮಗೆ ತೋರಿದಂತೆ ಅರ್ಥಮಾಡುತ್ತಾರೆ. ದೇಶಾಭಿಮಾನಿಗಳಾದ ಕೆಲವು ಹಿಂದುಗಳು ಪ್ರಾಚೀನ ವೇದಗಳ ಕಾಲದ ಅಥವಾ ರಾಮಾಯಣ ಮಹಾಭಾರತ ಕಾಲದ ಸ್ಥಿತಿಗತಿಗಳನ್ನು ಪುನಃ ನೆಲೆಗೊಳಿಸುವದರಿಂದ ರಾಷ್ಟ್ರೀಯತ್ವವುಂಟಾಗುವುದೆಂದು ತಿಳಿಯುತ್ತಾರೆ. ಮಹಮ್ಮದೀಯರಲ್ಲಿ ಕೆಲವರು ಮಹಮ್ಮದೀಯ ನಾಗರೀಕತೆಯ [illegible] ಮಹಮ್ಮದೀಯ ಮತದ ಉನ್ನತಾಭಿವೃದ್ಧಿ ಕಾಲದ ಸ್ಥಿತಿಗತಿಗಳನ್ನು ನೆಲೆಗೊಳಿಸುವುದರಿಂದ ರಾಷ್ಟ್ರೀಯತ್ವವುಂಟಾಗುವುದೆಂದು ಹೇಳುತ್ತಾರೆ; ಆದರೆ ಇವೆರಡು ಪಕ್ಷದವರೂ ಒಂದು ಮುಖ್ಯ ವಿಷಯವನ್ನು ಮರೆತಿದ್ದಾರೆ. ಆಧುನಿಕಕಾಲದ ವಿದ್ಯಮಾನಗಳನ್ನು ಅಲಕ್ಷ್ಯಮಾಡಿ—ಮರೆತುಬಿಟ್ಟು—ಹಿಂದಿನ ಕಾಲದ ಸ್ಥಿತಿಗತಿಗಳನ್ನು ಮಾತ್ರವೇ ಪುನಃ ನೆಲೆಗೊಳಿಸುವುದು ಮಾನವ ಕುಟುಂಬದ ಮತ್ತು ಮಾನವನಾಗರೀಕತೆಯ ಸ್ವಭಾವದ ಅಭಿವೃದ್ಧಿಗೆ ಸಂಬಂಧಪಟ್ಟ ಸಿದ್ಧಾಂತಕ್ರಮಗಳಿಗೆ ವ್ಯತಿರಿಕ್ತವಾದುದು. ಭಾರತೀಯನಾಗರೀಕತೆಯ ಅಭ್ಯುದಯ [illegible]ವನ್ನು ಹಿಂದಕ್ಕೆ ತಿರುಗಿಸುವುದು ಸಾಧ್ಯವಿಲ್ಲ. ಪರಜನಾಂಗಗಳ ಸಂಬಂಧವಿಲ್ಲದ, ನಮ್ಮ ಜನಾಂಗದ ಇರುವಿಕೆಯನ್ನು ಸಾಗರಮಧ್ಯದಲ್ಲಿರುವ ದ್ವೀಪಾಂತರವಾಸಿಯಲ್ಲಿ ಕಾಪಾಡುವುದು ಶಕ್ಯವಲ್ಲ. ಪಾಶ್ಚಿಮಾತ್ಯನಾಗರೀಕತೆಯ ತೆರೆಗಳು ಜಗತ್ತಿನಲ್ಲೆಲ್ಲವನ್ನು ವ್ಯಾಪಿಸಿರುವಾಗ, ನಮ್ಮವರು ಈ ವಿಷಯವನ್ನು ಗಮನಿಸದೆ ಸುಮ್ಮನಿರುವುದು ಸರಿಯಾದುದಲ್ಲ. ಸತ್ಯ—ಧರ್ಮ—ಕರ್ಮ ಮೊದಲಾದವು ಎಲ್ಲಾ ಜನಾಂಗಗಳಲ್ಲಿಯೂ, 'ವರವರ ಯೋಗ್ಯತಾನುಸಾರವಾಗಿ ಅಭಿವೃದ್ಧಿಯಾಗಿರುವವು. ಬುದ್ಧಿವಂತರಾಗಿರುವವರು 'ಹಂಸಕ್ಷೀರನ್ಯಾಯದಂತೆ' ದೋಷಗಳನ್ನು ತ್ಯಜಿಸಿ ಗುಣಗಳನ್ನೇ ಪರಿಗ್ರಹಿಸಬೇಕು. . . .[illegible] ಮನ್ಸೂರನ ಕಾಲದಲ್ಲಿ ಅವನ ಆಸ್ಥಾನದಲ್ಲಿ ಹಿಂದುಸ್ಥಾನದ ಪಂಡಿತರು ಆಯುರ್ವೇದ ವೈದ್ಯ ವಿಷಯ ಗ್ರಂಥಗಳನ್ನು ಅರಬಿ ಭಾಷೆಗೆ ಭಾಷಾಂತರಗೊಳಿಸಿದರು. ಘಜ್ನಿ ಮಹಮ್ಮದನ ಆಸ್ಥಾನದಲ್ಲಿ ಅಲ್ಬೆರೂನಿ ಎಂಬ ಕವಿಯು ಗ್ರೀಕಭಾಷೆಯಲ್ಲಿಯೂ ಸಂಸ್ಕೃತಭಾಷೆಯಲ್ಲಿಯೂ ಪ್ರವೀಣನಾಗಿದ್ದನು. [illegible]ಕ್ಷೇತ್ರದಲ್ಲಿ ಅಲ್ಬೆರೂನಿಯು ಸ್ವತಃ ವ್ಯಾಸಂಗವನ್ನು ಮಾಡಿದನು. ಗ್ರೀಕರು ಜ್ಯೋತಿಶ್ಶಾಸ್ತ್ರವನ್ನು ಭಾರತೀಯ ಪಂಡಿತರಿಗೆ ತಿಳಿಸಿಕೊಟ್ಟರು....ಆದುದರಿಂದ ರಾಷ್ಟ್ರೀಯ ಶಿಕ್ಷಣದಲ್ಲಿ ಸತ್ಯ ಧರ್ಮ ಜ್ಞಾನ ಇವುಗಳ ಅಭಿವೃದ್ಧಿಗೆ, ಆದಷ್ಟು ಸಂಪೂರ್ಣವಾದ ಅವಕಾಶವಿರಬೇಕು. ರಾಷ್ಟ್ರೀಯ ಶಿಕ್ಷಣ ಪಡೆದ ವಿದ್ಯಾರ್ಥಿಗಳು ದೇಶಾಭಿಮಾನಿಗಳಾಗಬೇಕು. ರಾಷ್ಟ್ರದ ಮತ್ತು ಜನಾಂಗದ ಗೌರವವನ್ನು ರಕ್ಷಿಸುವ ಯೋಗ್ಯತೆಯನ್ನು ಪಡೆಯಬೇಕು. ರಾಷ್ಟ್ರೀಯ ಶಿಕ್ಷಣದ ಸಂಸ್ಥೆಗಳು ಯಾವ ವಿಧವಾದ ಪರಕೀಯ ಬಂಧನದಲ್ಲಿರಕೂಡದು... ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಕೋಟ್ಯಾಂತರ ರೂಪಾಯಿಗಳು ಬೇಕೆಂಬುದು ಅನಾವಶ್ಯಕ. ಅದರ ನಿಯಂತ್ರಕ ಕಟ್ಟಡಗಳೂ, ಸಾವಿರಾರು ರೂಪಾಯಿಗಳನ್ನು ತಿನ್ನುವ ಅಧಿಕಾರಿಗಳೂ ಉಪಾಧ್ಯಾಯರುಗಳೂ ಆವಶ್ಯಕವಿಲ್ಲ. ವಿದ್ಯಾರ್ಥಿಗಳಿಂದ ತಿಂಗಳು ತಿಂಗಳಿಗೆ ಮೌಲ್ಯವನ್ನು ತೆಗೆದುಕೊಂಡು ವಿದ್ಯಾವಿಕ್ರಯವನ್ನು ಮಾಡುವುದೂ ವಿದ್ಯಾರ್ಜನೆಗಾಗಿ ವಿಶೇಷ ದ್ರವ್ಯವನ್ನು ವೆಚ್ಚಮಾಡತಕ್ಕ ಶಿಕ್ಷಣವನ್ನು ಏರ್ಪಡಿಸಿ, ಸಾಮಾನ್ಯ ಜನರಿಗೆ ವಿದ್ಯೆಯು ಸಿಗದಂತೆ ಮಾಡುವುದೂ, ವಿದ್ಯಾರ್ಥಿಗಳು [illegible]ದಲ್ಲಿ ತಯಾರಾಗಿ ವಿಷಯಾಸಕ್ತಿಗಳಲ್ಲಿ ಮಗ್ನರಾಗುವುದೂ ನಮ್ಮ ಭರತವರ್ಷದ ವಿದ್ಯಾಭ್ಯಾಸಂಗದ ವಾತಾವರಣಕ್ಕೆ ಕೇವಲ ವಿರೋಧವಾದುವು. ವಿದ್ಯಾವಂತರು ವಿನಯಸಂಪನ್ನರಾಗಿಯೂ ಬಡಜನರ ಸುಖದುಃಖಗಳಲ್ಲಿ ಭಾಗಿಗಳಾಗಿಯೂ, ಸದ್ಗುಣಸಂಪನ್ನರಾಗಿಯೂ ಸತ್ಯ, ಧರ್ಮ, ಆಸ್ತಿಕಮತ, ಜಗತ್ತಿನ ಕಲ್ಯಾಣ, ಇವುಗಳಿಗೆ ಬೆಂಬಲರಾಗಿಯೂ, ಇರಬೇಕು. ಇಂಗ್ಲೆಂಡು ದೇಶದ ಆಕ್ಸಫರ್ಡ್-ಕೇಂಬ್ರಿಡ್ಜ್ ಮೊದಲಾದ ವಿದ್ಯಾನಿಲಯಗಳ ದುಂದುಗಾರಿಕೆಯ ಪದ್ಧತಿಗಳು ನಮ್ಮ ಜನರಿಗೆ ಅಯೋಗ್ಯವು. ಸರಸ್ವತಿದೇವಿಯ ಕೃಪೆಗೆ ಸರ್ವರೂ ಪಾತ್ರರಾಗಬೇಕು. ಭರತವರ್ಷದ ಪ್ರಾಚೀನ ತಪೋವನಗಳ ಗುರುಕುಲಗಳ ಮತ್ತು ಬ್ರಹ್ಮಚರ್ಯದ ಪವಿತ್ರವಾದ ವಾತಾವರಣವು, ರಾಷ್ಟ್ರೀಯ ಶಿಕ್ಷಣದಲ್ಲಿ ಪುನರುಜ್ಜೀವನ ಹೊಂದಬೇಕು" ಈ ಅಂಶಗಳನ್ನು ವ್ಯಕ್ತಗೊಳಿಸಿ, ಆಚಾರ್ಯ ಪ್ರಫುಲ್ಲ ಚಂದ್ರರಾಯರವರು ಉಪನ್ಯಾಸಮಾಡಿದರು. ಕರ್ನಾಟಕಕ್ಕೆ ರಾಷ್ಟ್ರೀಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವವರು ಇವುಗಳನ್ನು ಜ್ಞಾಪಕದಲ್ಲಿಡಬೇಕು. ಕರ್ನಾಟಕವು ಪ್ರಾಚೀನಕಾಲದಲ್ಲಿ ಬಹಳ ಉನ್ನತಸ್ಥಿತಿಯಲ್ಲಿದ್ದು, ಅನಂತರದಲ್ಲಿ ಹೀನದೆಸೆಗೆ ಬರುತ್ತಾ, ಈಗ ಛಿನ್ನವಾಗಿ ತನ್ನ ಇರುವಿಕೆಯನ್ನು ಮರೆತಿರುವುದು. ಕರ್ನಾಟಕದಲ್ಲಿ ರಾಷ್ಟ್ರೀಯೈಕ್ಯತೆಯು ವಿಕಾಸಹೊಂದಿ ಕನ್ನಡ ಜನರಲ್ಲಿ ಪರಸ್ಪರ ಐಕಮತ್ಯವೂ ದೇಶೋದ್ಧಾರದ ಕಾರ್ಯಗಳಲ್ಲಿ ಆಸಕ್ತಿಯೂ, ಕನ್ನಡ ಭಾಷಾಸೇವೆಯೂ ನಡೆಯುತ್ತಾ ಬಂದರೆ, ಕರ್ನಾಟಕವು ಭರತವರ್ಷದ ಇತರ ಭಾಗಗಳಂತೆ ಭಾರತಮಾತೆಯ ಸೇವೆಯನ್ನು ನೆರವೇರಿಸಲು ಯೋಗ್ಯವಾಗುವುದು. ಈ ಪವಿತ್ರವಾದ ಮತ್ತು ಶ್ಲಾಘ್ಯವಾದ ಕಾರ್ಯವನ್ನು ಸಾಂಗಗೊಳಿಸಲು ಅಖಿಲಕರ್ನಾಟಕಕ್ಕೆ ಸಾಮಾನ್ಯವಾದ ಮತ್ತು ಸಂಬಂಧಪಟ್ಟ ಸಂಸ್ಥೆಯೊಂದನ್ನು ಏರ್ಪಡಿಸಬೇಕು. ಕರ್ನಾಟಕದ ಈಗಿನ ವಿದ್ಯಮಾನಗಳನ್ನು ನೋಡಿದರೆ ಇಂತಹ ಸಂಸ್ಥೆಯು ತತ್ಕಾಲದ ರಾಜಕೀಯವಿಚಾರಗಳಲ್ಲಿ ಹೋರಾಡುವುದು ಉಚಿತವಲ್ಲ. ಕರ್ನಾಟಕದ ದೇಶಭಕ್ತರು ರಾಷ್ಟ್ರೀಯ ವಿಶ್ವವಿದ್ಯಾನಿಲಯವನ್ನು ಏರ್ಪಡಿಸಿ [illegible]ದನ್ನು ಅಭಿ[illegible] ಕರ್ನಾಟಕದ ಶ್ರೇಯಸ್ಸನ್ನುಂಟುಮಾಡುವ ಮಹಾಕಾರ್ಯವನ್ನು [illegible] ಮಾಡಬೇಕು. ಈ ಸಂಬಂಧವಾಗಿ ಈ ಕೆಳಗಿನ ಮುಖ್ಯ ವಿಷಯಗಳನ್ನು ಸೂಚಿಸುವೆವು:

(೧) ಕರ್ನಾಟಕದ ಎಲ್ಲಾ ಭಾಗಗಳ ವಿದ್ಯಾಭಿಮಾನಿಗಳೂ, ದೇಶಭಕ್ತರೂ ಶ್ರೀಮಂತರೂ, ಕರ್ನಾಟಕಕ್ಕೆ ರಾಷ್ಟ್ರೀಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದರ ಸಲುವಾಗಿ ಒಂದು ಸಭೆಯನ್ನು ಕೂಡಿಸಿ, ಆ ಕಾರ್ಯವನ್ನು ನೆರವೇರಿಸಲು ಒಂದು ಸಂಘವನ್ನು ಏರ್ಪಡಿಸಬೇಕು.

(೨) ಈ ಸಂಘದಲ್ಲಿ ಕರ್ನಾಟಕರಾಷ್ಟ್ರದ ಎಲ್ಲಾ ಭಾಗಗಳ ಪ್ರತಿನಿಧಿಗಳಿರಬೇಕು.

(೩) ಕರ್ನಾಟಕದ ಎಲ್ಲಾ ಭಾಗಗಳಿಗೂ ಕೇಂದ್ರಸ್ಥಾನವಾಗಿರುವ ಮತ್ತು ಕರ್ನಾಟಕದ ಇತಿಹಾಸದಲ್ಲಿ ಪ್ರಸಿದ್ಧಿಗೊಂಡಿರುವ ಸ್ಥಳಗಳಲ್ಲಿ (ಉದಾ – ಬನವಾಸಿ, ವಿಜಯನಗರ) ಅನುಕೂಲವಾದ ಸ್ಥಾನದಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕು.

(೪) ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಸಂಘದ ಮಹನೀಯರು ಕರ್ನಾಟಕದ ಎಲ್ಲಾ ಪ್ರಾಂತಗಳಿಗೂ ಪ್ರಯಾಣಮಾಡಿ ಕನ್ನಡ ಜನರಿಗೆ ಇದರ ಆವಶ್ಯಕತೆಯನ್ನು ತಿಳಿಸಿ ಈ ವಿಚಾರದಲ್ಲಿ ಸಹಾಯವನ್ನು ಪಡೆಯಬೇಕು.

(೫) ಈ ವಿಶ್ವವಿದ್ಯಾನಿಲಯವು ಕರ್ನಾಟಕದಲ್ಲಿರುವ ರಾಷ್ಟ್ರೀಯಶಿಕ್ಷಣದ ಸಂಸ್ಥೆಗಳಿಗೆಲ್ಲಾ ಮುಖ್ಯಸ್ಥಾನವಾಗಿರಬೇಕು.

(೬) ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಅಧಿಕಾರಿಗಳೂ, ಉಪಾಧ್ಯಾಯರೂ ವಿದ್ಯಾರ್ಥಿಗಳೂ ಕರ್ನಾಟಕದಲ್ಲಿ ಸಂಚಾರಮಾಡಿ ತಾವು ಕನ್ನಡಜನರಲ್ಲಿ ಏಕಮತ್ಯವನ್ನೂ ದೇಶಹಿತದ ಕಾರ್ಯಗಳನ್ನು ಮಾಡುವ ಬುದ್ಧಿಯನ್ನೂ ಉಂಟುಮಾಡಬೇಕು.

(೭) ಶಿಕ್ಷಣವನ್ನು ಕನ್ನಡಭಾಷೆಯಲ್ಲಿಯೇ ಕಲಿಸಬೇಕು. ಭರತವರ್ಷದ ಸಾಮಾನ್ಯ ಭಾಷೆಯಾದ ಹಿಂದಿಯನ್ನು ಎಲ್ಲಾ ವಿದ್ಯಾರ್ಥಿಗಳಿಗೆ ಕಲಿಸಬೇಕು. ಸಂಸ್ಕೃತ ಭಾಷೆಯ ಅಭಿವೃದ್ಧಿಗೂ ವ್ಯಾಸಂಗಕ್ಕೂ ವಿಶೇಷವಾದ ಪ್ರೋತ್ಸಾಹವು ಇರಬೇಕು. ಪಾಶ್ಚಿಮಾತ್ಯ ಭಾಷೆಗಳಲ್ಲಿ ಮತ್ತು ಇತರ ಭಾಷೆಗಳಲ್ಲಿ ಪ್ರವೀಣರಾದ ಉಪಾಧ್ಯಾಯರು ಕನ್ನಡಕ್ಕೂ ಹಿಂದಿ ಭಾಷೆಗೂ ಅನ್ಯನಾಗರೀಕತೆಗಳ ಉತ್ತಮ ಅಂಶಗಳನ್ನು ಭಾಷಾಂತರಗೊಳಿಸಬೇಕು.

(೮) ಕರ್ನಾಟಕ ರಾಷ್ಟ್ರದ ಎಲ್ಲಾ ವಿದ್ಯಾರ್ಥಿಗಳು, ಜಾತಿಭೇದ ವಿಚಾರಗಳ ನಿರ್ಬಂಧವಿಲ್ಲದೆ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗಮಾಡಲು ಅನುಕೂಲತೆಗಳಿರಬೇಕು.

(೯) ಸರಸ್ವತಿದೇವಿಯ ತೇಜಸ್ಸನ್ನು ಪ್ರಕಾಶಮಾಡುವ ವಾತಾವರಣ, ಕರ್ನಾಟಕ ರಾಷ್ಟ್ರದ ಅಭಿವೃದ್ಧಿ, ಭಾರತಮಾತೆಯ ಸೇವೆ ಜಗತ್ತಿನ ಕಲ್ಯಾಣ ಇವುಗಳು ವಿಶ್ವವಿದ್ಯಾನಿಲಯದ ಹೆಗ್ಗುರುತುಗಳಾಗಿರಬೇಕು.

ವರ್ತಮಾನ ಸಂಗ್ರಹ.

ಒಳದೇಶ

ಮೆ॥ [illegible] ಸಿ ಸುಬ್ಬಯ್ಯನವರು ಬಿ. ಎ. ಹಾನರ್ಸ್ ಎರಡನೇ ವರ್ಷದ (ಇಂಗ್ಲೀಷು) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರು.

ಪೋಲೀಸು ಸಬ್ ಇನಸ್ಪೆಕ್ಟರ್ [illegible] ಗಿರಿ— ಕೊಣ್ಣಂಪೇಟೆಯಲ್ಲಿ ಮೆ॥ ಚೆಂಬಾಂಡ ಕಾರ್ಯಪ್ಪನವರನ್ನು ಕುಂಟಿಕೊಪ್ಪಕ್ಕೂ, ಅಲ್ಲಿದ್ದ ಮೆ॥ [illegible]ಚಂಡ ನಂಜಪ್ಪನವರನ್ನು ಮಡಿಕೇರಿಗೂ, ಮೆ॥ [illegible]ಡ ಕಾರ್ಯಪ್ಪನವರನ್ನು ಮಡಿಕೇರಿಯಿಂದ ವಿರಾಜಪೇಟೆಗೂ ವರ್ಗಮಾಡಿರುವರು.

ಇದೇ ತಾರೀಕು ೫ ಬಲು ಬೆಳಗ್ಗೆ ೬½ ಗಂಟೆಗೆ ರಾಜಕಾರ್ಯಪ್ರಸಕ್ತ, ರಾಯಬಹದ್ದೂರ್ ಮನೆಯಪಂಡ ಮುತ್ತಣ್ಣನವರು ಮಡಿಕೇರಿಯಲ್ಲಿ ಸ್ವರ್ಗಸ್ಥರಾದರು. ಸಾಯಂಕಾಲ ೩½ ಗಂಟೆಗೆ ಅವರ ದೇಹವನ್ನು ಮೆರವಣಿಗೆಯಲ್ಲಿ ಮಡಿಕೇರಿ ಸಿದ್ದಾಪುರದ ರಸ್ತೆಯಲ್ಲಿರುವ ಉಕ್ಕಡದ ಒಳಿಯ ಶ್ಮಶಾನಕ್ಕೆ ಒಯ್ದು ಅಲ್ಲಿ ಸಮಾಧಿ ಮಾಡಿದರು. ಅನೇಕ ಜನರು ಹಾಜರಿದ್ದರು. ಎಲ್ಲಾ ಮತಸ್ಥರು ನೆರೆದಿದ್ದರು. ವ್ಯಸನ ಸೂಚಕವಾದ ಕೆಲವು ತಂತೀವರ್ತಮಾನಗಳು ಸಿಕ್ಕಿದವು. ಅವುಗಳ ಪೈಕಿ ಮೈಸೂರು ಮಹಾರಾಜರವರದು ಒಂದಾಗಿತ್ತು. ಆ ದಿನ ಹೈಸ್ಕೂಲಿಗೆ ರಜೆ ಬಿಡಲ್ಪಟ್ಟಿತ್ತು. ಸರ್ಕಾರಿ ಆಫೀಸುಗಳು ಸಾಯಂಕಾಲ ನಾಲ್ಕು ಗಂಟೆಗೆ ಮುಚ್ಚಲ್ಪಟ್ಟಿದ್ದವು.

ಮೆ॥ [illegible] ಮುತ್ತಣ್ಣನವರನ್ನು ಮೆ॥ [illegible] ತಿಂಗಳವರೆಗೆ ಮೆ॥ [illegible]ನವರ ಕೈಕೆಳಗೆ [illegible] ಜೊತೆಯಲ್ಲಿ [illegible] ಮಡಿಕೇರಿಯಲ್ಲಿ [illegible]

[illegible]

[illegible] ಉದ್ಯೋಗಸ್ಥರಲ್ಲಿ ವರ್ಗಾ[illegible] ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ತಿರುಗಿಸುವರು. ಆದರೆ ಪ್ರಯೋಜನದ [illegible] ತೋರುವುದಿಲ್ಲವಂತೆ. [illegible] ಸೋಮವಾರಪೇಟೆಯಿಂದ ಮೆ॥ [illegible] ಮಡಿಕೇರಿಗೆ ಮೆ॥ [illegible] ನಾಪೋಕ್ಲಿಗೂ, [illegible] ವಿರಾಜಪೇಟೆಗೂ, [illegible] ಕುಂಟಿಕೊಪ್ಪಕ್ಕೂ, [illegible] ಗೂ ವರ್ಗಾಯಿಸಿರುವರು.

ರಾ॥ ಬಾ॥ ಮನೆಯಪಂಡ ಮುತ್ತಣ್ಣನವರ [illegible] ವ್ಯಸನ ಸೂಚಿಸಲು ತಾ॥ ೬ ರಲ್ಲಿ [illegible]ಯಲ್ಲಿಯೂ, ತಾ॥ ೧೦ ರಲ್ಲಿ ಮಡಿಕೇರಿಯಲ್ಲಿಯೂ ಪಬ್ಲಿಕ್ ಮೀಟಿಂಗುಗಳು ನಡೆದವು.

ಮೆ॥ [illegible] ಬೊಂಬಾಯಿಯ [illegible] ಆರ್ಟ್ಸ್ [illegible] ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ.

ಕಳೆದವಾರ [illegible] ಆದರೆ ಮಳೆಯು [illegible] ಗಾಳಿ [illegible] ನೆ ನಿವಾರಣೆಯಾಗುವುದು.

[illegible] ವಿರಾಜಪೇಟೆಯಲ್ಲಿ ಪೋಲೀಸ್ ಸಬ್ ಇನ್ಸ್ಪೆಕ್ಟರ ಮೆ॥ ಕೊಳ್ಳಿಮಾಡ ಅಚ್ಚಯ್ಯನವರನ್ನು [illegible] ವರ್ಗ ಮಾಡಿರುವರು.

ಹಿಂದೂದೇಶ

ಸೂರತ್ ಡಿಸ್ಟ್ರಿಕ್ಟಿನ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯೂ, 'ನವಯುಗ'ದ ಸಂಪಾದಕರೂ ಆದ ಶ್ರೀಯುತ ಕಲ್ಯಾಣ್ಜೀ ವಿಠಲಬಾಯಿ ಮೆಹ್ತರವರನ್ನು 'ನವಯುಗ'ದ 6 ನೇ ಮತ್ತು 11 ನೇ ಪತ್ರಿಕೆಗಳಲ್ಲಿ ಪ್ರಕಟವಾದ ರಾಜದ್ರೋಹಕರವಾದ ಲೇಖನಗಳಿಗೋಸ್ಕರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು 124-ಎ ಸೆಕ್ಷನ್ ಪ್ರಕಾರ ಕೈದುಮಾಡಲು ಹುಕುಂ ಕೊಟ್ಟ ಮೇರೆ ಕೈದುಮಾಡಿರುವರು. ಸಂಪಾದಕರನ್ನು ಪೊಲೀಸಿನವರು ಮೋಟರಿನಲ್ಲಿ ಕೂರಿಸಿಕೊಂಡು ಹೋಗಿ ಕಾಗದಗಳಿಗೋಸ್ಕರ ಅವರ ಮನೆಯನ್ನು ಶೋಧಿಸಿದರು.

ಕಳೆದ 4 ನೇ ತಾರೀಕಿನ ರಾಮಪಟ್ಟಣದಲ್ಲಿ 42 ಮನೆಗಳು ಬೆಂಕಿಹತ್ತಿ ಸುಟ್ಟುಹೋದುವು. ಈ ಮನೆಗಳೆಲ್ಲಾ ಸಾಮಾನ್ಯವಾಗಿ ಬಡಕೂಲಿಕಾರರದೇ ಆಗಿದ್ದು ಅವರೂ ಈಗ ಮನೆ ಮಠಗಳಿಲ್ಲದೂ ಸಹಾಯಕರಿಲ್ಲದೆಯೂ ದ್ರವ್ಯವಿಲ್ಲದೆಯೂ ಅಲೆದಾಡುತ್ತಿರುವರು. ಸುಮಾರು ಸಾವಿರ 345 ರೂಪಾಯಿಗಳಷ್ಟು ನಷ್ಟವಾಗಿದೆಯಂತೆ.

ಬೊಂಬಾಯಿಯಲ್ಲಿ ಮುಷ್ಕರ ಹಿಡಿದ ಕೂಲಿಕಾರರು ಎಂಟು ತಿಂಗಳು ವೇತನ ಕಳೆದರೂ ಸಹ ತೆಗೆದುಕೊಳ್ಳುವಂತೆ ಒಪ್ಪಂದಮಾಡಿ ಆ ಕೆಲಸಕ್ಕೆ ಪ್ರಾರಂಭಿಸಿರುವರು.

ಕೌನ್ಸಿಲಿಗೆ ಬಹಿಷ್ಕಾರ ಹಾಕುವುದರ ವಿಷಯ ಘೋಷಿಸಕೂಡದೆಂದೂ ಇಷ್ಟವಿದ್ದವರು ಕೌನ್ಸಿಲಿಗೆ ಸೇರಬಹುದೆಂದೂ ಅಖಿಲಭಾರತ ಕಾಂಗ್ರೆಸ್ ಕಮಿಟಿಯವರು ಮಾಡಿದ ಠರಾವು ಕಾಂಗ್ರೆಸ್ಸಿನ ಠರಾವಿಗೆ ವಿರೋಧವಾದುದೆಂದು ಬಂಗಾಳ ಕಾಂಗ್ರೆಸ್ ಕಮಿಟಿಯವರು ಠರಾವು ಮಂಜೂರು ಮಾಡಿರುವರು. ಅಲ್ಲದೆ ನಾಗಪುರದ ಸತ್ಯಾಗ್ರಹಿಗಳ ಕಾರ್ಯವು ಜಯವಾಗಲೆಂದು ಪ್ರಾರ್ಥಿಸಿದರು.

ನಾಗಪುರದ ಸತ್ಯಾಗ್ರಹಕ್ಕೆ ಸ್ವಯಂಸೇವಕರನ್ನು ಸೇರಿಸಲು ಪ್ರಯತ್ನಿಸಿದ [illegible] ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟರುಗಳನ್ನೂ, ಸೆಕ್ರೆಟರಿಗಳನ್ನೂ ಸರ್ಕಾರದವರು [illegible] ಎಂಬಲ್ಲಿ ಸೆರೆಹಿಡಿದರು.

ನಾಗಪುರದಲ್ಲಿ ರಾಷ್ಟ್ರೀಯ ಪತಾಕವನ್ನು ಹಾರಿಸಿ ವ್ರ ತ ವನ್ನು ಪ್ರಾರಂಭ ಮಾಡುತ್ತಿರುವ ಸತ್ಯಾಗ್ರಹಿಗಳನ್ನು ಪ್ರತಿದಿನವೂ ಹಿಡಿಯುತ್ತಿರುವರು. ತಾ|| ೬ ವರೆಗೆ 524 ಸ್ವಯಂಸೇವಕರು ಸೆರೆಹಿಡಿಯಲ್ಪಟ್ಟಿರುವರು. ಅಲ್ಲಿಯ ಜೈಲಿನಲ್ಲಿ ಸ್ಥಳ ಸಾಲದೆ ಅಕೋಲಾ ಜೈಲಿಗೆ ಕಳುಹಿಸಿ ಕೊಡುವರು. ತಿರಸ್ಕಾರ ಹೊಂದಿದ ಸ್ವಯಂಸೇವಕ ರ ನ್ನು ಪತ್ತೆ ಮಾಡಿ ಹೋಗಲು ಬಿಡದೆ ಕರೆದೊಯ್ಯುತ್ತಿದ್ದಾರೆ. ಮದು ವೆಯಿಂದ ಪಡೆದ ಮನ್ನಣೆಯ 50 ವರ್ಷ ಪ್ರಾಯದ ವ್ಯಕ್ತಿಯೊಬ್ಬರು ಸತ್ಯಾಗ್ರಹಿಗಳ ನ್ನು ಸೇರಿಸಿಕೊಂಡಿರುವರು.

ಒಪ್ಪಿ ಪ್ರಾರಂಭಿಸಿದ ಸತ್ಯಾಗ್ರಹಿಗಳ ಪೈಕಿ ಕೆಲವು ಸ್ವಯಂಸೇವಕರಿಗೆ ಆರು ತಿಂಗಳ ಸೆರೆಯೂ, ನಾಲ್ಕು ಮಂದಿಗೆ ಒಂಭತ್ತು ತಿಂಗಳ ಸೆರೆಯೂ ಸಜೆ ವಿಧಿಸಿರುವರು.

ತಾ|| 7 ರವರೆಗೆ ಮದ್ರಾಸು ಪ್ರಾಂತ್ಯದಲ್ಲಿ ತಿಲಕ ಸ್ವರಾಜ್ಯನಿಧಿಗೆ ರೂ 52023-15-6 ಜಮೆಯಾಗಿದೆ.

ಡಾಕ್ಟರ್ ಅನಿಬೆಸೆಂಟ್ ರವರಿಗೆ ಒಂದು ಹುಳವು ಕಚ್ಚಿದ್ದುದರಿಂದ ಸುಮಾರು ಎರಡು ವಾರಗಳಿಂದ ಕಾಯಿಲೆಯಾಗಿರುವರು. ಆದರೆ ಈಗ ತಕ್ಕಮಟ್ಟಿಗೆ ವಾಸಿಯಾಗುತ್ತಾ ಬರುವರಂತೆ.

ಮೈ|| ಕೆ. ಸಿ. ರೆಡ್ಡಿಯವರು ಮತ್ತು ಡಾ|| ಟಾ|| ಸುಬ್ಬರಾಯನ್ ರವರು ಲೆಜಿಸ್ಲೇಟಿವ್ ಎಸೆಂಬ್ಲಿ ಮೆಂಬರತನಕ್ಕೆ ಸರ್ ಎಲೆಕ್ಸೆಂಡರ್ ಮುಡ್ಡಿಯವರು ಕೌನ್ಸಿಲ ಆಫ್ ಸ್ಟೇಟ್ ಮೆಂಬರತನಕ್ಕೆ ರಾಜೀನಾಮೆಯನ್ನು ಕೊಟ್ಟಿರುವರು.

ಅಹ್ಮದಾಬಾದಿನ ಗಿರಣಿಗಳ ಕೆಲಸಗಾರರೆಲ್ಲರೂ ಎರಡು ವಾರಗಳಿಂದ ಮುಷ್ಕರ ಹಿಡಿದಿದ್ದರು. ಈಗ ನಾಲ್ಕು ಗಿರಣಿಗಳಲ್ಲದೆ ಬಾಕಿ ಎಲ್ಲವುಗಳ ಕೂಲಿಗಾರರೆಲ್ಲರೂ ಕೆಲಸಕ್ಕೆ ಪ್ರಾರಂಭಿಸಿರುವರು.

ಶಾಮಾಜಿ ಸದಾಚಾರವನ್ನು ಅವಲಂಭಿಸಿ ನಡೆಯುವ ಪಾರ್ಸಿಗಳ ಶಿಕ್ಷಣಕ್ಕಾಗಿ ಒಂದು ಕಮಿಟೀಯನ್ನು ಕಟ್ಟಬೇಕೆಂದು ಬೊಂಬಾಯಿ ಮ್ಯುನಿಸಿಪಾಲಿಟಿಯವರು ಒಂದು ಪ್ರತ್ಯೇಕ ಸ್ಥಳವನ್ನು ನೀಡುತ್ತೇವೆಂದು ಸೂಚಿಸಿದಕ್ಕೆ ಹಳೇ ಪದ್ಧತಿಯನ್ನನುಸರಿಸಿ ನಡೆಯುವ ಪಾರ್ಸಿಗಳು ಈಗಿರುವ ಶವಸಂಸ್ಕಾರ ಪದ್ಧತಿಯು ಆರುಸಾವಿರ ವರ್ಷಗಳಿಂದ ನಡೆದು ಬಂದದ್ದಾದ್ದರಿಂದ ಅದನ್ನು ಬದಲಾಯಿಸಲಿಕ್ಕೆ ಕೂಡದೆಂದು ಪ್ರತಿಭಟಿಸಿರುವರು.

ಬಂಗಾಳದ ಕಲ್ಕತ್ತಾ ಜಿಲ್ಲಾಭಾಗದಲ್ಲಿ ಬಿರುಗಾಳಿಯಿಂದ ಉಂಟಾದ ನಷ್ಟವು ಅಂದಾಜು ಮಾಡಿದಕ್ಕಿಂತ ವಿಶಾಲವಿದೆ. 19357 ನಿವಾಸಿಗಳಿದ್ದ ಪ್ರದೇಶಗಳು 30, 40 ಮೈಲಿಗಳ ವರೆಗೆ ನೀರು ಮುಳುಗಿಹೋಗಿತ್ತು. 5830 ಮನೆಗಳು ಪೂರ್ತಿ ನಾಶವಾದವು. ಸುಮಾರು ನಾಲ್ಕುಸಾವಿರ ದನಗಳು ಕೊಚ್ಚಲ್ಪಟ್ಟವು. ಸರಕಾರದವರು 25000 ರೂ. ಎಗ್ರಿಕಲ್ಚರ್ ಸಾಲ ಮಂಜೂರು ಮಾಡಿರುವರು. ಇದು ಸಾಲದ್ದಕ್ಕೆ ಬೇರೆ ಚಂದಾ ಎತ್ತಿ 5,000 ರೂ. ವಸೂಲು ಮಾಡಬೇಕೆಂದು ಒಂದು ಕಮಿಟಿಯ ಏರ್ಪಾಡಾಗಿದೆ.

ಶ್ರೀಮತಿ ಸಾರೋಜಿನಿ ದೇವಿಯ ಅಧ್ಯಕ್ಷತೆಯಲ್ಲಿ ನಡೆದ ಬೊಂಬಾಯಿ ಕಾಂಗ್ರೆಸ್ ಕಮಿಟಿಯ ಮೀಟಿಂಗಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಕೌನ್ಸಿಲ್ ಬಹಿಷ್ಕಾರದ ವಿಷಯ ಪುನರ್ವಿಮರ್ಶಿಸಬೇಕೆಂದು ಮಾಡಿದ ಠರಾವನ್ನು ಒಪ್ಪಿರುವರು. ನಗರ ಬಡವ ಕಾಂಗ್ರೆಸಿಗೆ ಮೂಲಕಾರ ರುಸ್ತುಮ್ ಜಿ ಅವರನ್ನು ಅಧ್ಯಕ್ಷರಾಗಿ ಚುನಾಯಿಸಬೇಕೆಂದು ತೀರ್ಮಾನಿಸಿದರು.

ಹೆಚ್ಚಿನ ಕೆಲಸವೇನೂ ಇಲ್ಲದ್ದರಿಂದ ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನ ಆಗಸ್ಟು ತಿಂಗಳ ಮೀಟಿಂಗನ್ನು ವಜಾ ಮಾಡಿರುವರು.

ಹಿಂದೂ ಡಿಲಿಬಿಯ್ಯೂ ಎಂಡೌ ಮೆಂಟ್ ಮಸೂದೆಗೆ ವಿರೋಧಿಸಿ ಅನೇಕ ಸಭೆಗಳು ವೈಸರಾಯರವರಿಗೆ ತಲುಪುತ್ತಿದೆ. ಇದರಿಂದ ಈ ವಿಷಯದಲ್ಲಿ ಬೇಕಾದ ಅಕ್ಷೇಪ ಯಾವ ಮಟ್ಟದವರೆಗೆ ತಿಳಿಯುತ್ತದೆ.

ಪಂಜಾಬದ ಜಲಂಧರು ಮತ್ತು ಹೊಶ್ಯಾರ್‌ಪುರ ಡಿಸ್ಟ್ರಿಕ್ಟುಗಳಲ್ಲಿ ದಂಗೆಕೋರರ ಹಾವಳಿಯು ಜೋರಾಗುತ್ತಿದೆ. ಸರಕಾರದವರು ಪೋಲೀಸರ ಸಂಖ್ಯೆಯನ್ನು ಹೆಚ್ಚಿಸಿ ಅವರನ್ನು ಸೆರೆಹಿಡಿಯಲು ಪ್ರಯತ್ನಿಸುತ್ತಿದ್ದಾರೆ. ಆಯುಧ ವಾಹಿನಿಗಳಾದ ಕಾರು ಬೇಲದ ಅಫೀಸರುಗಳ ಮನೆಯಲ್ಲಿ ಪಹರೆ ಇರುವರು.

ಡಿ|| ದಾಸರವರು ಇಂಗ್ಲೆಂಡಿಗೆ ಹೋಗಿ ಮೈ|| ಲಂಡನಿಂದ ಪೋಲಕರನ್ನು ಭೇಟಿಮಾಡಿದರು. ಕೌನ್ಸಿಲಿಗೆ ಸೇರುವುದರ ವಿಷಯ ಪೋಲಕರ ಅಭಿಪ್ರಾಯ ತನ್ನ ಅಭಿಪ್ರಾಯಕ್ಕೆ ಒಪ್ಪಿತವಾಗಿದೆಯೆಂದು ದಾಸರವರು ಸೂಚಿಸಿರುವರು.

ಬಂಗಾಳದ ಚಿಟ್ಟಗೊಂಗ ಡಿಸ್ಟ್ರಿಕ್ಟಿನ ಕಾಕ್ಸ್‌ಬಜಾರಿನ ಬಂದರದಲ್ಲಿ ಕಳೆದ ತಿಂಗಳ ಅಂತ್ಯದಲ್ಲಿ ಸಂಭವಿಸಿದ ಬಿರುಗಾಳಿಯಿಂದ ವಿಪರೀತ ನಷ್ಟವುಂಟಾಗಿದೆ. ಸುಮಾರು 200 ಚದರಮೈಲುಗಳ ವಿಸ್ತೀರ್ಣ ಆದರ ಪೆಟ್ಟಿಗೆ ತಗಲಿದೆ. 25000 ಜನರ ಪೈಕಿ ಗಿಡ ಮಾತಗಳಿಲ್ಲದೆ ಅಲೆದಾಡುತ್ತಿರುವರು. ಮೂರು ಸಾವಿರ ದನಕರಗಳೂ ಮೂರು ಸಾವಿರ ಶಕೆಯ ತೋಟಗಳಿಂತಿಹವು. ಧಾನ್ಯಗಳು, ಊಟದ ಸಾಮಗ್ರಿಗಳು, ವಸ್ತುಗಳು ಮತ್ತು ಉಪಕರಣಗಳೆಲ್ಲವೂ ಕೊಚ್ಚಲ್ಪಟ್ಟಿವೆ.

ವಿದೇಶ

ಇಂಡಿಯಾ ಸ್ಟೇಟ್ ಸೆಕ್ರೆಟರಿಯಾದ ಲಾರ್ಡ್ ಓಲಿವರವರು ಒಂದು ಕೋರ್ಟಿನಲ್ಲಿ ಹೇಳಿದೇನೆಂದರೆ — "ಕಾಪರೇಟಿವ ಚಳವಳಿಯಲ್ಲಿ ಸಿಸ್ಟಮ್ ಯೋಜನೆಯಾಗಿ ಹಾಳು ಮಾಡಿ, ಕ್ರಿಮಿನಲ್ ಶಾಸನವನ್ನು ಹಿಂದೆಗೆಯಬೇಕೆಂದು ಅವರ ಪ್ರತಿರೋಧದ ಸಾಧಿಯನ್ನು ಉಪಯೋಗಿಸಿದ್ದರೆ ಹಿಂದೂದೇಶದ ಸ್ಥಿತಿಯು ಈಗಿನದಕ್ಕಿಂತ ಉತ್ತಮವಾಗಿರುತ್ತಿತ್ತು. ಅಲ್ಲಿಯ ಉಪ್ಪಿನ ಸುಂಕವನ್ನು ಹೇಳಿದರು. ಕಾಂಗ್ರೆಸ್ಸಿನವರು ಶಾಸನವನ್ನು ಕೈಗೊಳ್ಳದೆ ಪ್ರತಿಭಟಿಸಿದರೆ ಭೋಧಿಸುವುದಕ್ಕೆ ಜನ್ಮವೂ ಬುದ್ಧಿವಾದ ಮುಖ್ಯವೂ ಇಲ್ಲ."

ಮೊರಾಕ್ಕೋದಲ್ಲಿ ಸ್ಪೈನಿನವರಿಗೂ ಅಲ್ಲಿಯ 'ರಿಫ್' ಎಂಬ ನಿವಾಸಿಗಳಿಗೂ ನಡೆಯುತ್ತಿರುವ ಯುದ್ಧದಲ್ಲಿ ಸ್ಪೈನಿನವರು ಕೆಲವು ಕಡೆಗಳಲ್ಲಿ ಸೋಲಿಸಲ್ಪಟ್ಟಿರುವರು.

ತುರ್ಕಿಯವರಿಗೂ ಮಿತ್ರಮಂಡಲಿಯವರಿಗೂ ಆಗುತ್ತಿರುವ ಲೋಸಾನಿ ಕಾಲಿನ ಪರ್ಯಾಲೋಚನೆಯು ದಿನಸಹ ಒಂದು ತರವಾಗಿದೆ. ಒಮ್ಮೆ ಬೇಗನೆ ತೀರ್ಮಾನವಾಗುವಂತೆ ತೋರುತ್ತದೆ. ಇನ್ನೊಮ್ಮೆ ಸಂಧಿಸಲು ರಾಜಿಗೆ ಸಂಭವವು ಸ್ವಲ್ಪ ದೂರವಾಗಿದೆಯೆಂದು ಬರೆಯುತ್ತಾರೆ.

ಜೈಲಿನಿಂದ ಬಿಡುಗಡೆ ಹೊಂದಿದ ಜಗ್ಲುಲ್‌ಪಾಷಾರವರು ಈಜಿಪ್ಟಿನ ಅಧಿಕಾರಿಗೆ ಶಿಕ್ಷೆ ಮಾಡಬೇಕೆಂದು ಪ್ರೈಮ್ ಮಿನಿಸ್ಟರ ಜಗ್ಲುಲ್‌ರವರಿಗೆ ಬರೆದದ್ದಕ್ಕೆ ಇಜಿಪ್ಟ್ ಸರ್ಕಾರದವರು ಹಾಗೆ ಮಾಡಲಿಕ್ಕಾಗುವುದಿಲ್ಲವೆಂದೂ ಅಲ್ಲಿ ಜನರಿಗೆ ಜೈಲಿಗಳು ತೋರಿದರೆ ಕೊಡದಂತೆ ನೋಡಿಕೊಳ್ಳಬೇಕೆಂದು ಜವಾಬು ಕೊಟ್ಟಿರುವರು.

ಈಗ ಲಂಡನಿನಲ್ಲಿರುವ ಮೈ|| ಶಾಸ್ತ್ರಿಯವರು ಇಂಗ್ಲೆಂಡಿನ ಪ್ರಸಂಗಗಳ ಏರ್ಪಾಡುಗಳನ್ನು ಬಿಟ್ಟು ವಿಶ್ರಾಂತಿಗಾಗಿ ಒಂದು ವಾರದ ಮೇಲೆ ಎರಡು ವಾರದ ಮಟ್ಟಿಗೆ ಸೇರಿರುವರು.

ಇಂಗ್ಲೆಂಡಿನ ಕಳೆದ ಮಾರ್ಚಿ 1ನೇ ತಾರೀಖಿನಲ್ಲಿ 7,79,000 ಮೋಟಾರು ವಾಹನಗಳ ಲೈಸೆನ್ಸು ಕೊಡಲ್ಪಟ್ಟು ಸುಮಾರು ಕೋಟಿ ಐವತ್ತು ಲಕ್ಷ ಪೌಂಡು ಲೈಸೆನ್ಸ್ ಫೀಜು ವಸೂಲಾಯಿತೆಂದೂ ತಿಳಿಸಲ್ಪಟ್ಟಿದೆ.

ಇಂಗ್ಲೆಂಡಿನ ಲೀಡ್ಸ್ ವಿಶ್ವವಿದ್ಯಾನಿಲಯವು ಪ್ರೊ. ವಿನ್ನಿಸಿಂದ ಅನಾಥವಾದ ಅವರ ಕುಟುಂಬಕ್ಕೆ ಸಹಾಯವಾಗಿ ಸಂಗ್ರಹಿಸುವುದರಿಂದ ಆವರ ಕಡೆಗೆ ಪ್ರೊಫೆಸರಿಗೆ 75,000 ರೂಪಾಯಿಗಳನ್ನು ಕಳುಹಿಸಿ ಕೊಟ್ಟರು ಎಂಬ ಸುದ್ದಿ ಇದೆ.

ಲಂಡನ್ ಪಟ್ಟಣದ ರಿಜೆಂಟ್ ವಿ. ಎ. ಪಿಕ್ಚರ್ ಪ್ಯಾಲೆಸ್ ಸ್ಟೋರ್ ಎಂಬ ಎಂ. ಕಂಪನಿಯು ಒಂದು ಪಟ್ಟಣದಲ್ಲಿ ಒಂದು ಅಮೂಲ್ಯವಾದ ಚಿತ್ರ ಪ್ರದರ್ಶನ ಗಳನ್ನು ಕಳ್ಳರು ನುಗ್ಗಿ ಒಯ್ದು ಹೊಡೆದಿರುವದು. ಇದು ಕಳುವು ಮಾಡಿದ್ದುದಾಗಿಯೂ, ಅವುಗಳ ಬೆಲೆ ಸುಮಾರು ಏಳು ಲಕ್ಷ ರೂಪಾಯಿಗಳೆಂಬುದಾಗಿ ವರದಿಯಾಗಿದೆ.

ಸ್ವಾಟ್ಲೆಂಡಿಗೆ ಸೇರಿದ ಗ್ಲಾಸ್ಗೋ ಪಟ್ಟಣದ ಮೋಲ್ಬರ್ನ್ ಕಂಪನಿಯು ಮಿ. ಜಾನ್ ರಂಸೇ ಎಂಬೊಬ್ಬ ಐಶ್ವರ್ಯವಂತನು ತನ್ನ ಉಯಿಲಲ್ಲಿ 75 ಲಕ್ಷ ಪೌಂಡುಗಳನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನ ಬರೆದಿರುವುದಲ್ಲದೆ, ಈ ಹಣದಲ್ಲಿ ಒಂದು ಮಕ್ಕಳ ಆಸ್ಪತ್ರೆಗೆ ಏಳೂವರೆ ಲಕ್ಷ ರೂಪಾಯಿ ದೊರಕುವಂತೆ ಇದೆಯಂತೆ.

ಪುಣ್ಯಾಕರವಾದ

ಮಹಾ ಶಿವರಾತ್ರಿಯ ಕಥೆಯು.

೧ ಪಾಪಪುಣ್ಯಗಳು

ಸತ್ಕರ್ಮವನ್ನು ಮಾಡುವುದರಿಂದ ಪುಣ್ಯವುಂಟಾಗುವುದು. ದುಷ್ಕರ್ಮವನ್ನು ಮಾಡುವುದರಿಂದ ಪಾಪವುಂಟಾಗುವುದು. ಪಾಪಪುಣ್ಯಗಳು ಒಂದುತರದ ಅದೃಶ್ಯ ಶಕ್ತಿಗಳು. ಇವು ಮುಂದಿನ ಜನ್ಮದಲ್ಲಿ ಸುಖದುಃಖ ರೂಪವಾದ ಫಲವನ್ನು ಕೊಡುವುವು. ಈ ಜನ್ಮದಲ್ಲಿ ಮಾಡಿದ ಪುಣ್ಯವು ಮುಂದಿನ ಜನ್ಮದಲ್ಲಿ ಸುಖರೂಪವಾದ ಫಲವನ್ನು ಕೊಡುವುದು. ಈ ಜನ್ಮದಲ್ಲಿ ಮಾಡಿದ ಪಾಪವು ಮುಂದಿನ ಜನ್ಮದಲ್ಲಿ ದುಃಖರೂಪವಾದ ಫಲವನ್ನು ಕೊಡುವುದು. ಈ ಪುಣ್ಯಪಾಪಗಳು ಉತ್ಕಟವಾಗಿದ್ದರೆ ಅಂದರೆ ಅತಿಶಯ ಜೋರಿನವಾಗಿದ್ದರೆ ಇದೇ ಜನ್ಮದಲ್ಲಿ ಫಲವನ್ನು ಕೊಡುವುವೆಂದು ಹೇಳುವರು.

ಈ ಜನ್ಮದ ಪಾಪಪುಣ್ಯಗಳು ಮುಖ್ಯವಾಗಿ ಮುಂದಿನ ಜನ್ಮಕ್ಕೆ ಸಂಬಂಧಪಡುವವಾದರೂ ಇದೇ ಜನ್ಮದ ಲ್ಲಿಯೂ ಅವುಗಳ ಫಲವು ಸ್ವಲ್ಪಮಟ್ಟಿಗೆ ಆಗುತ್ತಿರುವುದು. ನಾವು ಪುಣ್ಯವನ್ನು ಮಾಡಿದಾಗಳೆಲ್ಲ ಅದರ ಒಳ್ಳೆಯ ಸತ್ಕರ್ಮವನ್ನು ಮಾಡಿದಾಗಳೆಲ್ಲ ನಮ್ಮ ಮನಸ್ಸು ಆನಂದಗೊಳ್ಳುತ್ತದೆ. ನಾವು ಪಾಪವನ್ನು ಮಾಡಿದಾಗಳೆಲ್ಲ ಅಂದರೆ ನಾವು ದುಷ್ಕರ್ಮವನ್ನು ಮಾಡಿದಾಗಳೆಲ್ಲ ನಮ್ಮ ಮನಸ್ಸು ದುಃಖಿಸುತ್ತದೆ. ಯಾವ ಕಾರ್ಯವನ್ನು ನಡಿಸಿದ ಒಳಿತು ಮನಸ್ಸಿಗೆ ಆನಂದವಾಗುವುದೋ ಅದು ಸತ್ಕರ್ಮವೆಂದೂ, ಯಾವ ಕರ್ಮವನ್ನು ಮಾಡಿದ ಬಳಿಕ ಮನಸ್ಸಿಗೆ ದುಃಖವಾಗುವುದೋ ಅದು ದುಷ್ಕರ್ಮವೆಂದು ಹೇಳಬಹುದು. ನಾವು ಸತ್ಕರ್ಮವನ್ನು ನಡಿಸಿದ್ದರೆ ಅದು ನೆನಪಿಗೆ ಬಂದಾಗ ಸಹ ನಮಗೆ ಆನಂದವಾಗುತ್ತದೆ. ದುಷ್ಕರ್ಮವನ್ನು ಮಾಡಿದ್ದರೆ ಅದು ನೆನಪಿಗೆ ಬಂದಾಗ ಸಹ ನಮಗೆ ದುಃಖವಾಗುತ್ತದೆ. ಯಾವ ಕರ್ಮವನ್ನು ಮಾಡಿದ ಬಳಿಕ ಮತ್ತು ಅದನ್ನು ನೆನೆಸಿಕೊಂಡಾಗ ಪಶ್ಚಾತ್ತಾಪವಾಗುತ್ತದೆಯೋ ಅದು ದುಷ್ಕರ್ಮವು, ಪಾಪ-ಕರ್ಮವನ್ನು ಮಾಡಿದ ಬಳಿಕ ಪಶ್ಚಾತ್ತಾಪವಾದರೆ ಅದನ್ನು ನೆನೆಸಿಕೊಂಡಾಗಳೆಲ್ಲ ನಮ್ಮ ಮನಸ್ಸು ಪ್ರಸನ್ನವಾಗುತ್ತದೆಯೋ ಅದು ಸತ್ಕರ್ಮವು. ಹೀಗೆ ಪಾಪಪುಣ್ಯಕರ್ಮಗಳ ಫಲಗಳು ಇದೇ ಜನ್ಮದಲ್ಲಿಯೇ ಮನಸ್ಸಿನಮೇಲೆ ಆಗುತ್ತಿರುತ್ತವೆ.

ಹಸಿವಿನಿಂದ ಬಳಲಿ ಕಷ್ಟಪಡುತ್ತಿರುವ ಬಡವನಿಗೆ ಅನ್ನವನ್ನು ಕೊಡುವುದು ಸತ್ಕರ್ಮವು. ಯಾಕೆಂದರೆ ಇದರಿಂದ ಉಂಟಾದ ಪುಣ್ಯವು ಮುಂದಿನ ಜನ್ಮದಲ್ಲಿ ನಮಗೆ ಸುಖ ಸ್ವರೂಪವಾಗುವುದು. ಇದಲ್ಲದೆ ಹಸಿದವನಿಗೆ ಅನ್ನದಾನ ಮಾಡಿದ ಬಳಿಕ ನಮ್ಮ ಮನಸ್ಸಿಗೆ ಆನಂದವೆನಿಸುವುದು, ಮತ್ತು ಆ ಅನ್ನವನ್ನು ಕೊಟ್ಟದ್ದು ನಮ್ಮ ನೆನಪಿಗೆ ಬಂದಾಗಳೆಲ್ಲ ಏನೋ ಪಶ್ಚಾತ್ತಾಪವಾಗದೆ ಆನಂದವೇ ಆಗುವುದು. ಮಂದಿಯ ಹಣವನ್ನು ಕದಿಯುವುದು ದುಷ್ಕರ್ಮವು. ಯಾಕೆಂದರೆ ಇದರಿಂದ ಉಂಟಾದ ಪಾಪವು ಮುಂದಿನ ಜನ್ಮದಲ್ಲಿ ದುಃಖವನ್ನು ಕೊಡುವುದು. ಆ ಜನ್ಮದಲ್ಲಿ ಕಳುವಿನ ಆ ಕೆಲಸವನ್ನು ಎಸಗಿದ ಬಳಿಕ ಮನಸ್ಸಿಗೆ ಸಮಾಧಾನವಾಗುವುದಿಲ್ಲ. ಕಳವು ಮಾಡಿದರೆ ಮನಸ್ಸು ಕುದಿಯುತ್ತಿರುವುದು. ಕಳವು ಮಾಡಿದ ಬಳಿಕ ಪಶ್ಚಾತ್ತಾಪವಾಗುವುದು. ಕಳವು ಮಾಡಿದ್ದನ್ನು ನೆನೆಸಿಕೊಂಡಾಗಳೆಲ್ಲ ನಮಗೆ ಅಸಮಾಧಾನವೇ ಆಗುವುದು.

ಕಳವು ಮಾಡಿದ ಬಳಿಕ ಸಹ ಬಹಳ ಸಿಗೆ ಆನಂದವಾಗಬಹುದು. ಆದರೆ ಅದು ಕಳವಿನಿಂದ ಉಂಟಾದ ಆನಂದವಲ್ಲ, ಕಳವು ಮಾಡಿ ದೊರಕಿಸಿದ ದ್ರವ್ಯದಿಂದ ಆದ ಆನಂದವು. ಆ ದ್ರವ್ಯವು ಸಿಗೆ ಕಳವಿನಿಂದ ದೊರೆಯದೆ ಅಷ್ಟೇ ಹಣವು ನ್ಯಾಯದ ರೀತಿಯಿಂದ ದೊರೆತಿದ್ದರೆ ಅವನಿಗೆ ಆನಂದ ಇನ್ನೂ ಹೆಚ್ಚಾಗಿ ಇರುತ್ತಿತ್ತು. ಮತ್ತು ಕಳವು ಮಾಡಿದ ಬೇರೆ ರೀತಿಯಿಂದ ಅಷ್ಟು ಹಣವು ಇನ್ನು ಒಂದಕ್ಕೆ ಸ್ವಲ್ಪ ಕಡಿಮೆ ಹಣವು ದೊರೆಯುತ್ತಿದ್ದರೂ ಅವನು ಕಳವನ್ನು ಮಾಡುತ್ತಿರಲಿಲ್ಲ. ಆದರೆ ಕಳವು ಸತ್ಕರ್ಮವೇ? ಸುಳ್ಳು ಹೇಳುವವನ ಮನಸ್ಸಿಗೆ ತಾನು ಸುಳ್ಳು ಹೇಳಿದೆನೆಂಬುದು ಯಾವಾಗಲೂ ಕಚ್ಚುತ್ತಿರುತ್ತದೆ. ನಾನು ಇಂಥ ಪ್ರಸಂಗದಲ್ಲಿ ಸುಳ್ಳು ಹೇಳಿದೆನೆಂಬುದು ನೆನಪಾದ ಕೂಡಲೆ ಪಶ್ಚಾತ್ತಾಪವಾಗುತ್ತದೆ. ಕಳ್ಳರಿಗೂ ಸುಳ್ಳರಿಗೂ ತಾವು ಮಾಡುವ ಕಳವು ಸುಳ್ಳುಗಳು ಒಳ್ಳೆಯವುಗಳೆಂದು ಎಂದೂ ಅನಿಸುವುದಿಲ್ಲ.

ಪುಣ್ಯವು ಕ್ರಮವಾಗಿ ಮನುಷ್ಯನನ್ನು ಉಚ್ಚಸ್ಥಿತಿಗೆ ಒಯ್ಯುವುದು. ಪುಣ್ಯದಿಂದ ನರನು ದೇವನಾಗಬಹುದು. ಪುಣ್ಯದಿಂದ ನರನು ನಾರಾಯಣನಾಗಬಹುದು. ಪಾಪವು ಯಾವಾಗಲೂ ಮನುಷ್ಯನನ್ನು ಅಧೋಗತಿಗೆ ಒಯ್ಯುವುದು. ಪಾಪದಿಂದ ನರನು ಗುರಿಯಾಗಬಹುದು, ಪಾಪದಿಂದ ನರನು ನರಕಿಯಾಗಬಹುದು.

(ಮುಂದುವರಿಯುವದು)

(ಸ್ವಂತ ಬಾತ್ಮೀದಾರರಿಂದ)

ಜೂನ್ ತಾ. ೧೦ ನೇ ಶನಿವಾರದಂದು ಶ್ರೀಮಂಗಲ ಶಾಲೆಯ ವಠಾರಿನಲ್ಲಿ ತಾ|| 5 ರಲ್ಲಿ ಗತಿಸಿಹೋದ ಜಾಯಿಂಟ್ ಕಮಿಷನರ್ ರಾಜಕಾರ್ಯ ಸ್ವಸಕ್ತ ಮನೆಯ ಪಂಡ ಮುತ್ತಣ್ಣನವರ ಮರಣದ ವಿಷಯ ವ್ಯಸನ ಸೂಚಿಸಲಿಕ್ಕಾಗಿ ಒಂದು ಪಬ್ಲಿಕ್ ಮೀಟಿಂಗು ನಡೆಯಿತು. ಪುರನಿವಾಸಿಗಳಾದ ಉದ್ಯೋಗಸ್ಥರೂ, ರಿಟಯರ್ಡ್ ಉದ್ಯೋಗಸ್ಥರೂ, ಜಮಾಯರುಗಳೂ, ವ್ಯಾಪಾರಿಗಳೂ ಸೇರಿ ಅನೇಕರು ನೆರೆದಿದ್ದರು. ಎಲ್ಲಾ ಜಾತಿಗಳ ಜನರು ನೆರೆದದ್ದು ನೋಡಿದರೆ ಅವರಿಗೆ ಎಲ್ಲಾ ಜಾತಿಯವರ ಮೇಲಿದ್ದ ಪ್ರೀತಿಯನ್ನು ಸೂಚಿಸುತ್ತಿತ್ತು.

ಮೈ ರಾ|| ಬಾ|| ಕೊಡಂದೇರ ಕುಟ್ಟಯ್ಯನವರು, ಎಮ್. ಸಿದ್ದಿಕ್ ಸಾಹೇಬರು ಮೀಟಿಂಗಿನ ಅಧ್ಯಕ್ಷರು,

ಗಳಾಗಿದ್ದರು. ಕೊಡಂದೇರ ಕುಟ್ಟೈಯ್ಯನವರು ಮೀಟಿಂಗಿನ ಉದ್ದೇಶವನ್ನು ವಿವರಿಸಿ ಮೆ|| ಮುತ್ತಣ್ಣನವರ ಬಾಲ್ಯಾವಸ್ಥೆಯ ವಿಷಯಗಳನ್ನು ಕುರಿತು ಕೆಲವು ಸಂಗತಿಗಳನ್ನು ಹೇಳಿದರು. ಕುಟ್ಟೈಯ್ಯನವರು ಮೆ|| ಮುತ್ತಣ್ಣನವರ ಸಹಪಾಠಿಗಳಾಗಿದ್ದುದರಿಂದ ಅವರ ಗುಣಗಳನ್ನು ತಕ್ಕಮಟ್ಟಿಗೆ ವಿವರಿಸಿ ಹೇಳಿದರು. ಮೆ|| ಮುತ್ತಣ್ಣನವರಿಗಿದ್ದ ದೇಶವಾತ್ಸಲ್ಯದಿಂದ ಅವರು ದೇಶಸೇವೆಯನ್ನು ಯಾವ ರೀತಿಯಲ್ಲಿ ಮಾಡಿ ಹಿಂಬಾಲಿಸುವವರಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟರೆಂಬುದನ್ನು, ಜಾತಿ, ಮತದ್ವೇಷಗಳಿಂದ ಅವರು ಎಷ್ಟರಮಟ್ಟಿಗೆ ದೂರವಾಗಿದ್ದರೆಂಬುದನ್ನು ಕುರಿತು ಮೆ|| ಯಂ. ಸಿದ್ದೇಶರು ಹೇಳಿದರು.

ಮ|| ರಾ|| ಬಾ|| ಕೋಳಿಮಾಡಯಂಡ್ರ ಸುಬ್ಬಯ್ಯನವರನ್ನು ಸಭೆಯ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಮೆ|| ಬಿ. ಯಂ. ಕಾರ್ಯಪ್ಪನವರು ಸೂಚಿಸಲು ಮೆ|| ಟಿ. ಕುಶಾಲಪ್ಪನವರು ಅನುಮೋದಿಸಿದರು. ಮ|| ಸುಬ್ಬಯ್ಯನವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ ಮ|| ರಾ|| ಮುತ್ತಣ್ಣನವರ ಜೀವಚರಿತ್ರೆಯನ್ನು ವಿವರಿಸಿದರು. ಮುತ್ತಣ್ಣನವರು ಮೊದಲು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ತಮ್ಮ ವಿದ್ಯಾಭ್ಯಾಸಂಗವನ್ನು ಪೂರ್ತಿಗೊಳಿಸಿ ಮುಂದಕ್ಕೆ ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಓದಿದರು. ತರುವಾಯ ಕೊಡಗು ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಸೇರಿ ಮುಂದಕ್ಕೆ ಕೀರ್ತಿವಂತರನ್ನಾಗಿ ಮಾಡುವ ಉದ್ಯೋಗಕ್ಕೆ ಸೇರಿದರು. ಇಲ್ಲಿ ಕೆಲವು ವರ್ಷಗಳತನಕ ಕೆಲಸಮಾಡಿ ಸೆಂಟ್ರಲ್ ಪ್ರಾವಿನ್ಸಿಗೆ ಹೋದರು. ಅಲ್ಲಿ ಅವರು ಯಾವ ರೀತಿಯಲ್ಲಿ ಶ್ರದ್ಧೆಯಿಂದ ಕೆಲಸವನ್ನು ಮಾಡಿದರೆಂಬುದನ್ನು ಅವರಿಗೆ ಸರಕಾರದವರು ದಯಪಾಲಿಸಿದ 'ರಾಯಬಹದ್ದೂರ್' ಎಂಬ ಬಿರುದಿನಿಂದಲೇ ವ್ಯಕ್ತವಾಗುತ್ತದೆ. ಮುಂದೆ ಮದ್ರಾಸ್ ಗವರ್ನ್‌ಮೆಂಟಿನಲ್ಲಿ ಕೆಲಸ ಮಾಡಿ ಮೈಸೂರು ಸರಕಾರದ ಫಾರೆಸ್ಟ್ ಇಲಾಖೆಯಲ್ಲಿ ಸೇರಿದರು. ಅವರ ಕೆಲಸದ ಮಾತುವರ್ಜಿತೆಯನ್ನು ನೋಡಿ ಮಹಾರಾಜರವರು 'ರಾಜಕಾರ್ಯ ಪ್ರಸಕ್ತ' ಎಂಬ ಬಿರುದನ್ನು ಕೊಟ್ಟರು. ನಮ್ಮ ದೇಶದವರಲ್ಲೊಬ್ಬರು ಪರದೇಶಗಳಲ್ಲಿ ಶ್ರದ್ಧೆಯಿಂದ ಕೆಲಸಮಾಡಿ ಬಿರುದುಗಳನ್ನು ಪಡೆದರು. ಅವರು ರಿಟಯರ್ ಆದಮೇಲೆ ನಮ್ಮ ದೇಶಕ್ಕೆ ಎಡೆಬಿಡದೆ ಕೆಲಸಮಾಡಿದಕ್ಕೆ ನಾವು ಈಗ ಬಹುಮಾನಿಸಲಿಕ್ಕಾಗಿ ನಾವು ಈ ದಿನ ನೆರೆದದ್ದಾಗಿದೆ. ಅವರ ಮರಣದ ವಿಷಯ ವ್ಯಸನ ಸೂಚಿಸುವುದೇ ನಮ್ಮ ಕರ್ತವ್ಯವಾಗಿದೆ.

ಮೆ|| ಮುತ್ತಣ್ಣನವರು ತಮ್ಮ ಉದ್ಯೋಗದಿಂದ ನಿವೃತ್ತರಾಗಿ ಕೊಡಗಿಗೆ ಬಂದಮೇಲೆ ತನಗೆ ಆದ ಪರಿಚಯಗಳನ್ನು ಕುರಿತು ಮೆ|| ಸಿ. ಬಿ. ವೆಂಕಪ್ಪಯ್ಯನವರು ಹೇಳಿದರು. ಕೊಡಗು ಜಮಾಸುದಾರರ ಸಂಘವನ್ನು ಉಚ್ಚಸ್ಥಿತಿಗೆ ತರಲು ಅವರು ತಮ್ಮ ಸ್ವಾರ್ಥತೆಯನ್ನು ತೆತ್ತುಬಿಟ್ಟು ಬಹಳವಾಗಿ ಅನ್ನ ಜಲವನ್ನು ತ್ಯಾಗ ಮಾಡಿರುವರು. ಅವರು ಯಾವಾಗಲೂ ದೇಶಸೇವೆಯನ್ನು ತನ್ನ ಮನೆ ಕೆಲಸಕ್ಕಿಂತಲೂ ಹೆಚ್ಚಾಗಿ ಶ್ರದ್ಧೆಯಿಂದ ಕೆಲಸಮಾಡುತ್ತಿದ್ದರು ಎಂದು ಮುಂತಾಗಿ ವಿವರಿಸಿ ವೆಂಕಪ್ಪಯ್ಯನವರು, ಮುತ್ತಣ್ಣನವರು ಮೈಸೂರು ಫಾರೆಸ್ಟ್ ಇಲಾಖೆಯಲ್ಲಿ ಮಾಡಿದ ಕೆಲಸವನ್ನು ಶ್ಲಾಘಿಸಿ ಬರೆದ ಲೇಖನಗಳನ್ನು "ಮದ್ರಾಸು ಮೈಲ" ಮತ್ತು "ಡೈಲಿಪೋಸ್ಟ್" ಪತ್ರಿಕೆಗಳಿಂದ ಓದಿ ಹೇಳಿದರು.

ಹೈಸ್ಕೂಲ್ ಹೆಡ್ಮಾಸ್ಟರಾದ ಮೆ|| ಬಿ. ಮಂಗೇಶರಾಯರು ಮುತ್ತಣ್ಣನವರ ಶಕ್ತಿಯನ್ನೂ, ಯೋಗ್ಯತೆಯನ್ನೂ, ಗುಣಗಳನ್ನು ಕುರಿತು ಮಾತನಾಡಿದರು. "೧೯೨೬ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕೂಟವು ಸೇರಿದಾಗ ಕೊಡಗಿನಿಂದ ಪ್ರತಿನಿಧಿಗಳಾಗಿ ಯಾರೂ ಹೋಗಿರಲಿಲ್ಲ. ಆದರೂ ಸಹ ಕೊಡಗಿನಿಂದ ಯಾರಾದರೂ ಒಬ್ಬರನ್ನು ಚುನಾಯಿಸಬೇಕೆಂದು ಅವರು ಯೋಚಿಸಿ, ಎಲ್ಲರೂ ಸೇರಿ ಮೆ|| ಮುತ್ತಣ್ಣನವರನ್ನು ಚುನಾಯಿಸಿದರು. ಅವರೆಲ್ಲರಿಗೂ ಮನೆಯಪಂಡ ಮುತ್ತಣ್ಣನವರಲ್ಲಿ ದೊಡ್ಡ ಅಭಿಪ್ರಾಯವಿದ್ದದ್ದನ್ನು ನನಗೆ ನೋಡಿ ಮುತ್ತಣ್ಣನವರನ್ನು ನೋಡಬೇಕೆಂಬ ಕುತೂಹಲ ನನ್ನಲ್ಲಿ ಹುಟ್ಟಿ, ಎಡ್ಯುಕೇಷನ್ ಕಮಿಟಿಯಲ್ಲಿ ಬರೆದಿದ್ದ ಕೆಲವು ವಿಷಯಗಳನ್ನು ಕುರಿತು ಸರಕಾರಕ್ಕೆ ವಿರೋಧವಾಗಿದ್ದರೂ ಕೂಡ ಮುತ್ತಣ್ಣನವರು ಧೈರ್ಯದಿಂದ ಪ್ರತಿಪಾದಿಸಿದ್ದರು. ಆವಾಗ ನನಗೆ ಅವರ ಪರಿಚಯವಾಯಿತು. ಈಗ ನಮಗೆ ಸರಕಾರದಿಂದ ದೊರೆಯುವ ವಿದ್ಯೆಯು ಪ್ರಯೋಜನಕರವಲ್ಲವೆಂದು ಹೇಳಿದವರು ಅವರೇ. ಟ್ರೈನಿಂಗ್ ಸ್ಕೂಲ್, ಅನ್ಸ್‌ಪೆಕ್ಟರು, ಯೂರೋಪಿಯನ್ ಹೆಡ್ಮಾಸ್ಟರನ್ನು ತೆಗೆಯಬೇಕೆಂದು ಸೂಚಿಸಿದವರು ಅವರೇ. ಈಗೆ ಅನೇಕ ವಿಧಗಳಲ್ಲಿ ಆಲೋಚನಾ ಸಹಾಯವನ್ನು ಅವರು ಮಾಡಿರುವರು. ಮುತ್ತಣ್ಣನವರ ಗುಣಗಳಲ್ಲಿ ಮೂರು ಮೂರ್ತಿ ಪುತ್ರನಾಗಿ ಕಾಣುತ್ತಿತ್ತು. ಅವರು ಯಾವಾಗಲೂ ಉದ್ಯೋಗಶೀಲರಾಗಿರುತ್ತಿದ್ದರು. ಸ್ವಲ್ಪ ಸಮಯವನ್ನು ಸಹ ವಿನೋದವಾಗಿ ಕಳೆದು ತಮ್ಮ ಆಯುಷ್ಯವನ್ನು ಹಾಳುಮಾಡಿರುವುದಿಲ್ಲ. ಎರಡನೆಯದು ಅವರ ದೇಶವಾತ್ಸಲ್ಯ. ಜಮಾಸುದಾರರ ಸಂಘದಲ್ಲಿ ಅವರು ಮಾಡಿದ ಕೆಲಸವು ಅವರ ದೇಶವಾತ್ಸಲ್ಯವನ್ನು ಸೂಚಿಸಲು ಸಾಕಾಗಿದೆ. ಮೂರನೆಯದು, ಅವರ ಉದಾರಬುದ್ಧಿ ಮತ್ತು ಭೇದವಿಲ್ಲದಿರುವಿಕೆ. ಅವರಿಗೆ ಬಡವರನ್ನು ತುಚ್ಛೀಕರಿಸುವುದು, ಅವಮರ್ಯಾದೆ ಮಾಡುವುದು ಮುಂತಾದುವುಗಳು ಆಗುತ್ತಿದ್ದಿಲ್ಲವೆಂದು" ಮಂಗೇಶರಾಯರು ವಿವರಿಸಿದರು.

ಮೆ|| ಮುತ್ತಣ್ಣನವರು ಮೈಸೂರಿನಲ್ಲಿ ಕನ್ಸರ್ವೇಟರಾಗಿದ್ದಾಗ ಅನ್ನವಸ್ತ್ರನಿಗೆ ಕೆಲಸ ಕೊಡಿಸುವುದರಲ್ಲಿ ಮಾಡಿದ ಸಹಾಯವನ್ನೂ, ಅವರ ಅಭೇದ ಬುದ್ಧಿಯನ್ನು ವಾತ್ಸಲ್ಯವನ್ನು ಕುರಿತು ಮೆ|| ಮದ್ರಾಸು ಅಬ್ದುಲ್ ರಹಿಮಾನ್ ಸಾಹೇಬರು ಹೇಳಿದರು.

ಅಧ್ಯಕ್ಷರು ಠರಾವನ್ನು ಓದಿ ಹೇಳಲು ಎಲ್ಲರೂ ನಿಂತುಕೊಂಡು ಠರಾವನ್ನು ಮಂಜೂರು ಮಾಡಿದರು.

ಠರಾವು:—ಮೀಟಿಂಗಿನಲ್ಲಿ ನೆರೆದಿರುವ ಮಡಿಕೇರಿ ಪುರನಿವಾಸಿಗಳು ಮೆ|| ಮನೆಯಪಂಡ, ರಾಯಬಹದ್ದೂರ್, 'ರಾಜಕಾರ್ಯ ಪ್ರಸಕ್ತ' ಮುತ್ತಣ್ಣನವರ ಮರಣದಿಂದ ದೇಶಕ್ಕೆ ಉಂಟಾದ ದೊಡ್ಡ ನಷ್ಟವನ್ನು ಮನವರಿಕೆಮಾಡುವುದಲ್ಲದೆ, ಅವರ ದುಃಖದಲ್ಲೊಳಪಟ್ಟಿರುವ ಸಂಸಾರಕ್ಕೆ ವ್ಯಸನವನ್ನು ಸೂಚಿಸಿ ದಯಾಳುವಾದ ಭಗವಂತನನ್ನು, ಅವರಿಂದಾದ ದುಃಖವನ್ನು ಸಹಿಸಿಕೊಂಡು ಸಮಾಧಾನಮಾಡಿಕೊಳ್ಳುವ ಶಕ್ತಿಯನ್ನು, ಧೈರ್ಯವನ್ನು ಅವರ ಸಂಸಾರಕ್ಕೆ ದಯಪಾಲಿಸಲು ಪ್ರಾರ್ಥಿಸುತ್ತಾರೆ.

ಮೆ|| ಕುಟ್ಟೈಯ್ಯನವರು ಈ ಠರಾವನ್ನು ಮುತ್ತಣ್ಣನವರ ಕುಟುಂಬಕ್ಕೆ ಬರೆದು ಕಳುಹಿಸಬೇಕೆಂದು ಸೂಚಿಸಲು ಮೆ|| ಸುಬ್ಬಯ್ಯನವರು ಅನುಮೋದಿಸಿದರು.

ಅನಂತರ ಸಭೆಯು ಮುತ್ತಣ್ಣನವರ ಆತ್ಮಕ್ಕೆ ಶಾಂತಿಯುಂಟಾಗಲೆಂದು ಪ್ರಾರ್ಥಿಸಿ ಮುಕ್ತಾಯವಾಯಿತು.

ಕಳೆದ ಏಪ್ರಿಲ್ ತಿಂಗಳಲ್ಲಿ ವಿರಾಜಪೇಟೆಯಲ್ಲಿ ಆದ ಕೊಡಗು ಜಮಾಸುದಾರರ ಸಂಘದ ವಾರ್ಷಿಕ ಜನರಲ್ ಮೀಟಿಂಗಿನ ಸ್ವಾಗತದ ಜಮಾ ಖರ್ಚಿನ ವಿವರ.

ಯೆಡೆನಾಲ್ಕುನಾಡಿನ ಜಮ

	ಅಕ್ಕಿ ಪಲ್ಲ	ಅಕ್ಕಿ ಸೇರು	ಹಣ ರೂ	ಹಣ ಆ	ಹಣ ಪೈ
[1] ಮಂಡೇಪಂಡ ಮಾದಪ್ಪನವರಿಂದ [ಕುಕ್ಲೂರು]	....	25	....		
[2] ಮುಕ್ಕಾಟ್ಟಿರ ಪೂವೈಯ್ಯನವರಿಂದ [ದೇವಣಗೇರಿ, ಹಾಲುಗುಂದಕ್ಕಾಗಿ]	1	70	....		
[3] ಕೊಳುವಂಡ್ರ ಜಿ. ಸಂಜಪ್ಪನವರ ಮೂಲಕ [ಪೊದಕೋಟೆ ಚೆಂಬೆಬೆಳಿಯೂರಿಗಾಗಿ]	1	$8\frac{1}{4}$	6	10	0
[4] ಕೊಳುವಂಡ್ರ ಐ. ಸಂಜಪ್ಪನವರಿಂದ ಕುಕ್ಲೂರು ಗ್ರಾಮಕ್ಕಾಗಿ	....	50	10	5	0
[5] ಬಟ್ಟೆಯಂಡ್ರ ಗಣಪತಿಯವರಿಂದ [ಅಂಬಟ್ಟಿ ಗ್ರಾಮಕ್ಕಾಗಿ]	....	$76\frac{1}{4}$	....		
[6] ಮಳವಂಡ್ರ ಚೆಣ್ಣಪ್ಪನವರಿಂದ ಬಿದ್ರುಗುಪ್ಪೆ ಬಾಡಗಕ್ಕಾಗಿ	....	80	....		
ಕೊಂಗಂಡ್ರ ಮೇದಯ್ಯನವರಿಂದ ಬಿದ್ರುಗುಪ್ಪೆಗಾಗಿ	....		4	0	0
[7] ಪಿ. ಎಮ್. ಕುಟ್ಟಪ್ಪನವರಿಂದ ಮಗ್ಗುಲ ಗ್ರಾಮಕ್ಕಾಗಿ	...	$26\frac{1}{2}$	10	5	0
[8] ಕೋಟ್ಟವಂಡ್ರ ಕಾರ್ಯಪ್ಪನವರಿಂದ	....	15	....		
[9] ಚೇಂದಂಡ್ರ ಕಾಳಪ್ಪನವರಿಂದ ಚೆಂಬೆಬೆಳಿಯೂರು ಗ್ರಾಮಕ್ಕಾಗಿ	..	$69\frac{1}{2}$	2	14	0
[10] ಪಟ್ಟಡ ಮಾಚಯ್ಯನವರಿಂದ ಬೇಟೋಳಿ ಗ್ರಾಮಕ್ಕಾಗಿ	...	58	....		
[11] ಕೆ. ಮಾಚಯ್ಯನವರಿಂದ ,,	...	$25\frac{1}{4}$	....		
[12] ಚೆಂಬಾಂಡ್ರ ಮಂದಣ್ಣನವರಿಂದ ಪೊದಕೋಟೆಗಾಗಿ	....	41	4	8	0
[13] ಬಟ್ಟಿಯಂಡ್ರ ಸಂಜಪ್ಪನವರಿಂದ	..	48	....		
[14] ನಾಯಡ ಬೆಳ್ಳಪ್ಪನವರಿಂದ ಬಿಟ್ಟಂಗಾಲ ಗ್ರಾಮಕ್ಕಾಗಿ	1	56	6	0	0
ಪ್ರತ್ಯೇಕ ಆಸಾಮಿಗಳಿಂದ ಚಿಲ್ಲರ ವಸೂಲಿ	....		6	0	0
ಜುಮ್ಲ	9	$4\frac{7}{4}$	50	10	0

ಅಮ್ಮತ್ತಿನಾಡು

	ಅಕ್ಕಿ ಪಲ್ಲ	ಅಕ್ಕಿ ಸೇರು	ಹಣ ರೂ	ಹಣ ಆ	ಹಣ ಪೈ
[1] ಕುಟ್ಟಂಡ್ರ ಗಣಪತಿಯವರು ಕಾರ್ಮಾಡು	...	$49\frac{1}{2}$	...		
[2] ಅಮ್ಮತ್ತಿನಾಡು ಮಹಾದೇವರ ಯೋಗಕ್ಷೇಮ ಸಭೆಯ ಪ್ರೆಸಿಡೆಂಟರ ಮೂಲಕ	5	$29\frac{1}{4}$	....		
[3] ಬಿಳುಗುಂದ ಮುಸಲ್ಮಾನರಿಗಾಗಿ ದಾವುದ್ ಖಾನ್ ಕೈಸಗೀಯವರಿಂದ	....		17	6	0
[4] ಪುಲಿಯಂಡ್ರ ಉತ್ತಪ್ಪನವರಿಂದ (ಪೊಳ್ಳಿಬೆಟ್ಟಕ್ಕಾಗಿ)	....		20	0	0
ಜುಮ್ಲ	5	79	37	0	0

ಬೆಪ್ಪುನಾಡು

	ಅಕ್ಕಿ ಪಲ್ಲ	ಅಕ್ಕಿ ಸೇರು	ಹಣ ರೂ	ಹಣ ಆ	ಹಣ ಪೈ
[1] ಕಂಡ್ರತಂಡ್ರ ಬೋಪೈಯ್ಯನವರಿಂದ ಅರಮೇರಿ ಗ್ರಾಮಕ್ಕಾಗಿ	....	63	....		
[2] ಐಚಟ್ಟಿರ ಕೆ. ಚಂಗಪ್ಪನವರಿಂದ ವೈತಾಡಿ ಗ್ರಾಮಕ್ಕಾಗಿ	1	$4\frac{1}{3}$	....		
[3] ಚೊಟ್ಟೆರ ಉತ್ತಯ್ಯನವರಿಂದ ಕುಂಜಿಲಗೇರಿ ಗ್ರಾಮಕ್ಕಾಗಿ	...	$49\frac{1}{4}$	....		
[4] ಪಳಂಗಂಡ್ರ ಮುತ್ತಣ್ಣನವರಿಂದ ಕಡಂಗಮರೂರು ಗ್ರಾಮಕ್ಕಾಗಿ	....	$17\frac{1}{4}$	4	0	0
[5] ಪುಟ್ಟಿಚಂಡ್ರ ಮುದ್ದಪ್ಪನವರಿಂದ ಬೆಳ್ಳರಿಮಾಡು	....	$31\frac{1}{4}$	2	8	0
[6] ಬಲ್ಲಚಂಡ್ರ ಪೊನ್ನಪ್ಪನವರಿಂದ	....	$20\frac{1}{2}$	2	8	0
ಜುಮ್ಲ	2	86	6	8	0

ಆಡಿಯತ್ತುನಾಡು.

	ಅಕ್ಕಿ ಪಲ್ಲ	ಅಕ್ಕಿ ಸೇರು	ಹಣ ರೂ	ಹಣ ಆ	ಹಣ ಪೈ
[1] ಬಿದ್ದಂಡ್ರ ಸುಬ್ಬಯ್ಯನವರು	1	....	....		
[2] ,, ಸದರಿಯವರ ಮೂಲಕ ಕೊಣಂಜಗೇರಿ, ಬಾವಲಿ, ಕೈಕಾಡು ವಗೈರೆ ಗ್ರಾಮಗಳಿಂದ	2	....	....		
[3] ಶಂಕರನಾರಾಯಣಯ್ಯನವರಿಂದ	....	50	4	4	0
ಚೇಲವಾರ, ನಲ್ವಂದಡ ಗ್ರಾಮಕ್ಕಾಗಿ	....	$27\frac{1}{4}$	2	0	0
[4] ಬಿ. ಪಿ. ದೇವಯ್ಯನವರಿಂದ	....	$13\frac{1}{4}$	1	0	0
[5] ಕೋಟೆರ ಐಯಪ್ಪನವರಿಂದ ಬಲಮುರಿ ಗ್ರಾಮಕ್ಕಾಗಿ	....		15	0	0
[6] ಕೋಡಿರ ಮಂದಣ್ಣನವರಿಂದ ಪೊವನಾಡಕ್ಕಾಗಿ	....		4	10	0
ಜುಮ್ಲ	3	$90\frac{1}{4}$	26	14	0

ಬೆಟ್ಟತ್ತುನಾಡು.

	ಅಕ್ಕಿ ಪಲ್ಲ	ಅಕ್ಕಿ ಸೇರು	ಹಣ ರೂ	ಹಣ ಆ	ಹಣ ಪೈ
[1] ಕೊಡಂದೆರ ಚಂಗಪ್ಪನವರ ಮೂಲಕ ಕುಂದ, ಈಚೂರಿಗಾಗಿ	....	3[illegible]	13	8	0
[2] ಚಮ್ಮಟ್ಟಿರ ಮಾದಪ್ಪನವರ ಮೂಲಕ ಕೈಕೇರಿ ಗ್ರಾಮಕ್ಕಾಗಿ	....	[illegible]	....		
[3] ಮನೆಯಪಂಡ್ರ ಐ. ಮೇದಯ್ಯನವರ ಮೂಲಕ ಅರವತ್ತೊಕ್ಲು ಮುಗುಟಗೇರಿಗಾಗಿ	1		....		
[4] ಮನೆಯಪಂಡ್ರ ನಾಣಯ್ಯನವರು ನೋಕಿಯ	....		8	0	0
ಬಿದ್ದಪ್ಪನವರು ಮುಗುಟಗೇರಿಗಾಗಿ	....		4	0	0
ಜುಮ್ಲ	2	[illegible]	25	8	0

ಹತ್ತುಗಟ್ಟುನಾಡು

		ರೂ.	ಆ.	ಪೈ.
[1] ಬಾಳೆಲೆ ಗ್ರಾಮಕ್ಕಾಗಿ ಕಳ್ಳಿಚಂಡ್ರ ಪೊನ್ನಪ್ಪನವರ ಮೂಲಕ	....	14	0	0
[2] ಸದರಿಯವರಿಂದ (ಸ್ವಂತ) ಒಂದು ಪಲ್ಲ ಅಕ್ಕಿಯ ಕ್ರಯ	....	10	0	0
[3] ನಿಟ್ಟೂರು ಗ್ರಾಮಕ್ಕಾಗಿ ಅಜ್ಜಿಕುಟ್ಟಿರ ಪೊನ್ನಪ್ಪನವರಿಂದ	....	20	0	0
[4] ಪೃಶ್ನಮನೆ ಗಣಪಯ್ಯನವರಿಂದ	....	5	0	0
ಕಿರುಗೂರಿಗಾಗಿ	....	6	8	0
	ಜುಮ್ಲ	55	8	0

ಶ್ರೀಮಂಗಲನಾಡು.

[1] ಚೋನಿರ ಕರುಂಬಯ್ಯನವರ ಮೂಲಕ ಅಂಜಿಗೇರಿ ನಾಡಿಗಾಗಿ	....	44	8	0
[2] ನಡಿಕೇರಿ ಗ್ರಾಮಕ್ಕಾಗಿ ಕೋಳೆರ ಐಯಮ್ಮನವರಿಂದ	....	10	0	0
[3] ಕೊಟಂಬೆರ ಮೇದಪ್ಪನವರಿಂದ ಕೋತೂರು	....	10	0	0
[4] ಅಜ್ಜಮಾಡ ಮಾದಪ್ಪನವರಿಂದ ಕುರ್ಚಿ	....	5	0	0
	ಜುಮ್ಲ	69	8	0

ಜಮಾ.				ಖರ್ಚು.			
ನಾಡುವಾರ್ ವಸೂಲಾದ ಜುಮ್ಲ ಹಣ	271	14	0	ಗಾಡಿಬಾಡಿಗೆ, ಅಡಿಗೆಯವರ ಸಂಬಳ ಇತ್ಯಾದಿ ಖರ್ಚು	39	13	0
ವಿರಾಜಪೇಟೆ ಶಿವ್ರನ್ ವಸೂಲಿ	83	0	6	ಪ್ರಿಂಟಿಂಗ್, ಪ್ರಕಟಣೆ ವಗೈರೆ	77	10	0
ಮಿಕ್ಕಿದ ಸಾಮಾನುಗಳನ್ನು ಹರಾಜುಮಾಡಿ ಸಿಕ್ಕಿದ ಹಣ	51	9	4	ಸಾಮಾನುಗಳ ನಷ್ಟ ಕೊಟ್ಟದ್ದು	18	2	0
ಒಟ್ಟು ಅಕ್ಕಿ ಜಮಾ 24 ಪಲ್ಲ 92¼ ಸೇರು				ಮಾಂಸಕ್ಕೆ	93	1	6
ಇದರಲ್ಲಿ ಖರ್ಚು 5 ಪಲ್ಲ 50 ಸೇರು				ತರಕಾರಿ, ರೊಟ್ಟಿ, ಎಣ್ಣೆ, ಬೆಲ್ಲ ಸಕ್ಕರೆ, ತುಪ್ಪ ವಗೈರೆ ಇತ್ಯಾದಿ ಸಾಮಾನುಗಳಿಗೆ	303	5	6
ಬಾಕಿ ಬಾಕಿ 19 ಪಲ್ಲ 42¼ ಸೇರು ಮಾರಿಬಂದ ಮೊಬಲಗು	274	9	5	ಜುಮ್ಲ ಖರ್ಚು	532	0	0
ಜುಮ್ಲ ಜಮೆ	681	1	3	ಒಟ್ಟು ಹಣ	532	0	0
ಸರಿಯಾದ ಖರ್ಚಿಗೋಲೆ ಮೆ|| ಪಿಂಟೋರವರು ಸ್ವಾಗತಕ್ಕೆ ಕೊಟ್ಟ ಮೊಬಲಗು	160	2	3	ಚಿಲ್ಲರೆ ಸಾಮಾನು ಹರಾಜಿನಿಂದ ಬಂದ ಹಣ	51	9	4
				ಸರಿಯಾದ ಖರ್ಚು	480	6	8
				ಇದರ ⅓ ನೇ ಭಾಗ ಮೆ|| ಪಿಂಟೋರವರಿಂದ ಜಮೆಗೆ ಬಂದದ್ದು	160	2	3
ಜುಮ್ಲ ಜಮಾ	841	3	6				
,, ಖರ್ಚು	532	0	0				
ಬಾಕಿಬಾಕಿ	309	3	4				

Sd. ಯಸ್. ಯಮ್. ಪಿಂಟೋ,
ಸ್ವಾಗತಮಂಡಳಿಯ ಅಧ್ಯಕ್ಷ.

Sd. ಪಿ ಟಿ ಲಿಸೀಬೋ,
ಟ್ರೆಜರರ್.

ಪ್ರಸಿಡೆಂಡ ಮೆ|| ಪಿಂಟೋರವರಲ್ಲಿ ಡಿಪಾಜಿಟ್ಟು ಇಡಬೇಕೆಂದು ತೀರ್ಮಾನವಾದ ರೀತಿ ಇಟ್ಟದ್ದು

ಈ ಲೆಕ್ಕವನ್ನು ಕಳೆದ ತಿಂಗಳಲ್ಲಿ ಸ್ವಾಗತ ಮಂಡಳಿಯವರು ಮೀಟಿಂಗ್ ಮಾಡಿ ಚೆಕ್ ಮಾಡಿ ಮಂಜೂರ್ ಮಾಡಿರುತ್ತಾರೆ ಸ್ವಾಗತಮಂಡಳಿಯ ಮೀಟಿಂಗಿನಲ್ಲಿ, ಸ್ವಾಗತದ ವಿಷಯ ಧಾರಾಳ ಹೃದಯದಿಂದ ಸಹಾಯಮಾಡಿದ, ಅಧ್ಯಕ್ಷರು ಮೆ|| ಪಿಂಟೋರವರಿಗೆ ದಕ್ಷಿಣ ಕೊಡಗು ತಾಲೋಕಿನ ಪರವಾಗಿ ವಂದನೆಗಳನ್ನು ರಿಕಾರ್ಡು ಮಾಡಿದರು, ಅಲ್ಲದೆ ಬಾಕಿ ಇರುವ ಹಣವನ್ನು ಇನ್ನೊಂದು ಏರ್ಪಾಡು ಮಾಡುವವರೆಗೆ ಪ್ರೆಸಿಡೆಂಟರಲ್ಲಿ ಡಿಪಾಜಿಟ್ಟು ಇಡುವಂತೆ ತೀರ್ಮಾನವಾಯಿತು, ಸ್ವಾಗತಕ್ಕೆ ಏರ್ಪಾಡುಮಾಡಿದ ನಾಡು ಮತ್ತು ಊರು ಸಬ್‌ಕಮಿಟಿಯವರು ಅಕ್ಕಿ ಯಾ, ಹಣವನ್ನು ವಸೂಲ್ಮಾಡಿ ಟ್ರೆಜರರಿಗೆ ಪಾವತಿಮಾಡದೆ ಇದ್ದ ಪಕ್ಷ, ಅಥವಾ, ಮೇಲಣ ನಾಡುವಾರ್ ಪಟ್ಟಿಯಲ್ಲಿ ಪಾವತಿ ಮಾಡಿದವರ ಹೆಸರು ಕಾಣದಪಕ್ಷ, ಸ್ವಾಗತಮಂಡಳಿಯ ಪ್ರಸಿಡೆಂಟರಿಗಾಗಲೀ, ಸೆಕ್ರೆಟರಿಗಾಗಲೀ, ಕೂಡಲೇ ಬರೆಯಬೇಕು, ಜೊತೆಗೆ ಅಂಥಾವರ ಹೆಸರನ್ನು ಕೊಡಗು ಪತ್ರಿಕೆಗೂ ಸಹ ಬರೆಯಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ

ವಿರಾಜಪೇಟೆ,
ತಾರೀಕು 6—6—1923

ಕೆ. ಪಿ ಚಿಣ್ಣಪ್ಪ,
ಸ್ವಾಗತಮಂಡಳಿಯ ಜನರಲ್ ಸೆಕ್ರೆಟರಿ

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ಕಣಿವೆ ಹೋಬಳಿಯ ಸ್ಥಿತಿ.

(ವೀರರಾಜೇಂದ್ರ ಪೇಟೆಯಲ್ಲಿ ನಡೆದ ಜಮಿಾನ್‌ದಾರರ ಸಂಘದ ಮೀಟಿಂಗ್‌ನಲ್ಲಿ ಓದಿ ಎಲ್ಲರ ಮನಸ್ಸನ್ನು ಕರಗಿಸಿದ ಪತ್ರ.)

ದೇಶಬಾಂಧವರೇ,

ಈ ದಿವಸ ಇಲ್ಲಿ ನೆರೆದಿರತಕ್ಕ ನಮ್ಮ ದೇಶಬಾಂಧವರಲ್ಲಿ ನನ್ನ ಕೃತಜ್ಞತೆ ಅರಿಕೆಮಾಡುವದೇನಂದರೆ ನಮ್ಮ ಹೋಬಳಿ ಅಂದರೆ ಕಣಿವೆ ಹೋಬಳಿಯು ಹಾಲಿ ಸ್ಥಿತಿಯಲ್ಲೇ ಇದ್ದರೆ ಮೂರು ನಾಲ್ಕು ವರುಷದಲ್ಲಿ ಕಾಲಾಂತರವಾಗಹುದೆಂದು ನನ್ನ ಮನಸ್ಸಿಗೆ ಸ್ಪಷ್ಟ ತೋರುತ್ತದೆ ಯಾಕೆಂದರೆ ಮನುಷ್ಯನಿಗೆ ಪ್ರತ್ಯೇಕ ನಡಾವಳಿಕೆಯಲ್ಲಿ ಸುಶೀಲತೆಗಳಿಂದೊಡಗೂಡಿದ ನವನಾಗರಿಕತೆಯೇ ಮುಖ್ಯವಾದದ್ದು ಇಂಥಾ ನಾಗರಿಕತೆ ಯಿರಬೇಕಾದರೆ ಮೊದಲನೇ ವಿದ್ಯಾಭಿವೃದ್ಧಿ ಮುಖ್ಯವಾಗಿರತಕ್ಕದ್ದು ಎರಡನೇ ಕ್ಕೆ ಮುಟ್ಟಿನ ಅನುಕೂಲತೆಯಿಂದ ಕೂಡಿದ ನಾಗರಿಕತೆ. ಈ ನಾಗರಿಕತನದಿಂದ ಕೂಡಿದ ಹವ, ನೀರು, ತಿಂಡಿ, ಮುಖ್ಯವಾದ ವಿಷಯಗಳಿಗೆ ತಕ್ಕ ಯೋಗ್ಯರಿಕೆ.

ಈ ಪ್ರಕಾರವಾಗಿ ತಕ್ಕಮಟ್ಟಿಗೆ ಇರೋಣವೆಂದರೆ ನಾವು ವಿದ್ಯದ ಗಮನವನ್ನೇ ಅರಿತಿಲ್ಲವು ವಿದ್ಯಗಮನ ವನ್ನು ಬಯಸೋಣವೆಂದರೆ ತಕ್ಕ ಸಾಮರ್ಥ್ಯಗಳಿಲ್ಲವು ಅಲ್ಲದೆ ಇಂಥಾ ಅಪರೂಪವಾದ ವಸ್ತುವು ಕೊಂಚ ನಮಗೆ ದೊರೆತಿದ್ದ ಪಕ್ಷದಲ್ಲಿ ನಾವು ಯಾವುದಾದರು ಹೊಸವಿಷಯಗಳನ್ನ ಕಲ್ಪಿಸಿಕೊಂಡು ಕೈಗಾರಿಕೆ ವ್ಯಾಪಾರ ಗಳಲ್ಲದೇ ವಿದ್ಯಾ ಲಾಭದಿಂದ ಸಿಕ್ಕುವ ಬೇರೆ ಯಾವದಾದರು ಒಳ್ಳೆ ವ್ಯವಹಾರಗಳಿಂದ ನಾವು ನಾಗರೀಕರಾಗಬಹುದಾಗಿತ್ತು.

ಹವ ಬದಲಾವಣೆಯ ವಿಷಯದಲ್ಲಿ ನಮ್ಮ ಹೋಬಳಿಯಲ್ಲಿ ೩೦-೪೦ ರಷ್ಟು ಪಾಳು ಗ್ರಾಮಗಳೇ ತುಂಬಿ ಸಂಪೂರ್ಣವಾಗಿ ಉಷ್ಣ ಮುಳ್ಳಿರುವುದರಿಂದ ನಮಗೆ ಒಳ್ಳೆ ಹವವು ದೊರೆಯಲು ಅವಕಾಶವಿಲ್ಲ. ಈ ರೀತಿಯಾದ ಹೆಚ್ಚಿನ ಸಂಗತಿಯನ್ನು ಮಹಾಸಭೆಯಲ್ಲಿ ವಿಜ್ಞಾಪಿಸಿಕೊಳ್ಳುತ್ತೇನೆ. ಅದೇನಂದರೆ ನಮ್ಮ ಹೋಬಳಿಯಲ್ಲಿ ಗ್ರಾಮಗಳ ಅಜುಬಾಜು ಫಾರೆಸ್ಟ್‌ಗಳೇ ಬಹಳವಾಗಿ ಕಾಡು ಮೃಗಗಳ ಕಾಟದಿಂದ ಜನರು ರಾತ್ರಿಯೆಲ್ಲಾ ನಿದ್ರೆಕೆಟ್ಟು ಜನರಿಗೆ ದೇಹಾರೋಗ್ಯವೇ ಕಾಣದೆ ತುಂಬಾ ನಷ್ಟಪಟ್ಟದೆ ಕಾರಣವಾಗಿರುತ್ತದೆ.

ನೀರು ಎಂದರೆ ನಮ್ಮ ಹೋಬಳಿಯಲ್ಲಿ ಹರಿಯುವ ಕಾವೇರಿ ತೀರ್ಥವೇ ನಮಗೆ ಅಪರೂಪವಾದ ಪ್ರವೇಶವಾಗಿರುತ್ತದೆ ಇಂಥಾ ಪ್ರಸಾದಕ್ಕೆ ನಾಲ್ಕು ವರ್ಷಗಳಿಂದ ನಮ್ಮ ಹೋಬಳಿಯಲ್ಲಿ ಸೇರಿಕೊಂಡಿರುವ ಎಲ್ಲಿ ಸಾತ್ವೀಕರ ಬಹಳ ಹೊಸತೀರ್ಥವೇ ನಮ್ಮ ಹೋಬಳಿಯನ್ನೇ ಮಟ್ಟಮಾಡುವಂತದ್ದಾಗಿದೆ ಈ ವಿಷಯದಲ್ಲಿ ಹಿಂದೆಯೇ ನಾವು ಎಷ್ಟು ಅರ್ಜಿಗಳನ್ನು ನಮ್ಮ ಸಂಘಕ್ಕು ಗೌವರ್ನಮೆಂಟಿಗೂ ಸಹ ಬರೆದುಕೊಂಡೆವು. ಇದುವರೆಗೂ ಯಾವ ವಿಷಯವು ಮುಂದುವರಿಯಲಿಲ್ಲ. ಆದುದರಿಂದ ಕಾವೇರಿಗೆ ಬೀಳುವ ಹೊಸ ತೀರ್ಥವನ್ನೇ ತಪ್ಪಿಸುವ ಏರ್ಪಾಡು ಯಿಲ್ಲವೇ ಹೊಸದಾಗಿ ಕೆರೆ ಯಾ ಬಾವಿಗಳನ್ನೇ ಕಲ್ಪಿಸತಕ್ಕ ಏರ್ಪಾಡಿಸಬೇಕೆಂಬ ಪ್ರಾರ್ಥನೆ

ತಿಂಡಿಯೆಂದರೆ ನಮ್ಮಲ್ಲಿ ಕೃಷಿಯ ವಿಷಯದಲ್ಲಿ ಕಾಲಾನುಗುಣಕ್ಕೆ ಅನುಸಾರವಾಗಿ ವರ್ಷ ವರ್ಷ ಮಳೆಯಿಂದ ಪೈರುಪಚ್ಚೆಗಳು ಹಿಂಜರಿಯುತ್ತಿದೆ ತಿನ್ನುವ ಅನ್ನ, ಉಡುವ ವಸ್ತ್ರಕ್ಕೆ ಗತಿಯಿಲ್ಲದೆ ಜಮಿಾನ್‌ದಾರ್ ಸಂಘವೊಂದಿದೆಂಬ ವಾರ್ತೆಯನ್ನು ಕೇಳಿ ನಾಲ್ಕು ವರ್ಷಗಳಿಗಿಂದೆಯೇ ಈ ಸಂಘಕ್ಕೆ ಬಂದು ಬಿದ್ದೆವು. ಈ ಕಡೆ ಕೂಗನ್ನಾದರೂ ನಮ್ಮ ಸಂಘವು ಇಲ್ಲಿಂದ ಮುಂದೆಯಿರುವ ದೊಡ್ಡ ಚಿತ್ತಕ್ಕೆ ತೆಗೆದುಕೊಂಡು ನಮ್ಮ ಹೋಬಳಿಯಲ್ಲಿ ಸ್ವಂತ ನಡಾವಳಿಕೆಯನ್ನೇ ಬಹಳ ಹಿಂದೆಯೇ ನಿಲ್ಲಿಸಿರುವ ಪವಾಂತರ ನಂಬಿಯಿಂದ ಹೋಗಲಾಡಿಸಿ ನವನಾಗರಿಕತೆಯನ್ನೇ ಹೊಂದಬಹುದೆಂಬ ನಮ್ಮಗಳ ಆಸೆಗಳನ್ನು ತುಂಬಿಸತಕ್ಕ, ಸಾಮ್ರಾಜ್ಯವನ್ನೇ ಪಡೆದ ನಮ್ಮ ಇಂಡ್ಯಾ ಸರಕಾರದವರ ಚಿತ್ತಕ್ಕೆ ಕೊಟ್ಟು ಘನವನ್ನು ಹೊಂದಿದ ನಮ್ಮ ಈ ಸಂಘವು ಪ್ರೋತ್ಸಾಹನೆ ಕೊಟ್ಟಲ್ಲಿ ನಮ್ಮ ನಾಗರಿಕತ್ವವನ್ನೇ ಕಾಪಾಡಿಕೊಳ್ಳಬಹುದು. ಇಂಥಾ ಕಡೆಕೂಗನ್ನು ನಮ್ಮ ಸ್ವಾಗತ ಮಂಡಳಿಯಲ್ಲಿ ಉಲ್ಲಂಘಿಸಿದ ಕ್ಷಣದ ನಮ್ಮ ದೇಶದಲ್ಲಿ ಹುಟ್ಟಿ ಅನ್ಯದೇಶಸ್ಥರನ್ನು ಲಾಲಿಸತಕ್ಕ ಕಾವೇರಮ್ಮನ ನಮ್ಮ ಕಷ್ಟಕ್ಕೆ ಕಾವಲಾಗಬೇಕೆಂಬ ಸಪ್ಪಕ್ಷತಾನೇಕ ವಿಜ್ಞಾಪನೆ

ಅಲ್ಲದೆ ಮಹಾಸಭೆಯು ಈ ವಿಷಯದಲ್ಲಿ ತುಂಬಾ ನಿಗ ತೆಗೆದುಕೊಂಡು ಬಹಳ ಹಿಂದೆ ಬಿದ್ದಿರುವ ನಮ್ಮ ಹೋಬಳಿಯ ವಿದ್ಯಾಭಿವೃದ್ಧಿ, ಹವ, ನೀರು, ತಿಂಡಿ, ಮೊದಲಾದುವುಗಳಿಂದೊಡಗೂಡಿದ ನಾಗರಿಕತೆಯನ್ನೇ ಬದಲಾಯಿಸಿಕೊಳ್ಳುವ ಬಗ್ಗೆ ಹಾರಂಗಿ ನಾಲಾ ವಿಷಯದಲ್ಲಿ ಗಮನಕೊಟ್ಟಲ್ಲಿ ನಮ್ಮ ದೇಶಬಾಂಧವರೇ ನಾವು ಆಶಿಸುತ್ತಾ ಇರುವ ನವನಾಗರಿಕತೆಯನ್ನೇ ಕಾಪಾಡಿಕೊಳ್ಳುತ್ತೇವೆಂಬ ಸಂತೋಷಕ್ಕೆ ನಮ್ಮ ಹೋಬಳಿಯಲ್ಲಿ ಅರ್ಧ ಗ್ರಾಮಗಳಲ್ಲಿ ಮನೆಮನೆಗೂ ಚಂದಾದಾರರಾಗಬೇಕೆಂಬ ನನ್ನ ಸಂತೋಷಕ್ಕೆ ಯಿಲ್ಲಿ ನೆರೆದಿರತಕ್ಕ ಮಹಾಸಭೆಯರಿಗೆ ವಂದನೆಯನ್ನು ವಿಜ್ಞಾಪಿಸಿಕೊಳ್ಳುತ್ತೇನೆ.

ಹಿತಚಿಂತಕ. ಪೊನ್ನಪ್ಪ.
ಹೆಬ್ಬಾಲೆ.

ಆಯ್ಯಾ ಸಂಪಾದಕರೇ

ಕೊಡಗಿಗೆ ದೊರೆಯ ಬಹುದಾದ ನ್ಯಾಯವಿಧಾಯಕ ಸಭೆಯ ವಿಷಯ ನಿಮಗೇನಾದರೂ ತಿಳುವಳಿಕೆ ಇದೆಯೇ? ತಮ್ಮ ಅಗ್ರಲೇಖನದಲ್ಲಿ ಕೊಡಗಿಗೆ ಕೌನ್ಸಿಲ್ ಇದುವರೆಗೆ ದೊರೆಯದ್ದರಿಂದ ಅಮಾಲ್ಗಮೇಶನ್ ಕಳವಳವು ಜೋರಾಯಿತ್ತೆಂದು ತಾವು ಬರೆದದ್ದು ನನ್ನ ನೆನಪಿಗೆ ಬರುತ್ತದೆ ಇದಕ್ಕೆ ಬಹಳ ವ್ಯಸನಪಡುತ್ತೇನೆ ಇಲ್ಲಿಗೆ ಸಿಕ್ಕುವ ಕೌನ್ಸಿಲು ಬಹಳ ಒಳ್ಳೆಯದೆಂದು ಕೌನ್ಸಿಲ್ ಸಿಕ್ಕಿದರೆ ಅಮಾಲ್ಗಮೇಶನ್ ಬೇಡವೆಂದೂ ತಮ್ಮ ಅಭಿಪ್ರಾಯವೆಂದು ನೆನಸುತ್ತೇನೆ, ಆದರೆ ದೇಶದವರ ಅಭಿಪ್ರಾಯ ಅದಲ್ಲ, ನಮಗೆ ಕೊಡಬಹುದಾದ ಸಭೆಯು ಎಷ್ಟುಮಾತ್ರಕ್ಕೂ ಪ್ರಯೋಜನವಾಗಲಾರದು ಅದು ಡಿಸ್ಟ್ರಿಕ್ಟ್ ಬೋರ್ಡಿನಂತೆ ಇರಬಹುದಲ್ಲದೆ ಅನ್ಯಥ ಇರಲಿಕ್ಕಿಲ್ಲವೆಂದು ನೆನಸುತ್ತೇನೆ. ನಮಗೆ ಕೌನ್ಸಿಲ್ ಕೊಡುವುದು ನಿಜವಾಗಿದ್ದರೆ, ಹೀಗೆಲ್ಲಾ ರಿಟ್ರೆಂಚ್‌ಮೆಂಟ್ ಮಾಡುತ್ತಿದ್ದರೇನು? ಬರೀ ಎರಡು ತಾಲೋಕು ಆಯಿತು. ಬಡಪಾಯಿಗಳಾದ ಉದ್ಯೋಗಸ್ತರನೇಕರು ಮನೆಗೆ ಹೋದರು. ಆದರೆ, ಎರಡು ತಾಲೋಕುಗಳನ್ನು ಆಳಲಿಕ್ಕೆ, ಒಬ್ಬ ಕಮಿಾಷನರ್ ಒಬ್ಬ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್, ಸಿವಿಲ್ ಸರ್ಜನ್ ಎಗ್ಸಿಕ್ಯುಟಿವ್ ಇಂಜನೀಯರ್, ಅನೇಕ ಫಾರೆಸ್ಟ್ ಇಂಪೀರಿಯಲ್ ಉದ್ಯೋಗಸ್ತರು ಬೇಕೇ? ಈ ಉದ್ಯೋಗಸ್ತರು ಮಾಡಲಿಕ್ಕಿರುವ ಕೆಲಸವು ಏನು. ಇಂಡಿಯಾ ಸರಕಾರದವರ ಗೋಚರಕ್ಕೆ ಇದು ಬರಲಿಲ್ಲವೇ. ಇದರ ಜೊತೆಗೆ ಇಲ್ಲಿರುವ ಗಜೆಟೆಡ್ ಉದ್ಯೋಗಸ್ತರಿಗೆ ವರ್ಗವೇ ಇಲ್ಲ. ಎರಡು ತಾಲೋಕಾಧ್ವರು ಸುಭೇದಾರರಿಗೆ ಬೇಕಾದನ್ನು ಬಳ್ಳೇದು ಮತ್ತು ಕೆಲಸ (ವರ್ಗಾವರ್ಗಿ ಇಲ್ಲದ್ದರಿಂದ) ಮಾಡಲಿಕ್ಕೆ ಅನುಕೂಲವಿದೆ ಹೀಗಿರುವಾಗ, ಮುನಸೀಫ್, ಸಬ್‌ಜಡ್ಜ್, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಪೋಲೀಸ್ ಸೂಪರಿಂಟೆಂಡ್ ಉದ್ಯೋಗಗಳ ವಿಷಯ ಹೇಳಬೇಕೇ? ಚೀಫ್

ಅವಿಶ್ವಾಸದ ವಾಗ್ವಾದವು ಕೌನ್ಸಿಲ್ ವಿಷಯ ಈಗ ಎಲ್ಲಿಯವರೆಗೆ ಇದೆ? ನರಿಯ ಕೂಗು ಗಗನಕ್ಕೆ ಮುಟ್ಟೀತೇ ಎಂಬಂತೆ, ದೇಶದವರ ಕೂಗು ಚೀಫ್ ಕಮಿಷನರಿಂದ ಆಚೆ ಇಲ್ಲ. ಇದರಿಂದ ಮುಖ್ಯವಾಗಿ ಇನ್ನು ಯಾವ ಬಾಬರೊಂದು ಹಾದಿಯನ್ನು ಹುಡುಕುವಿರಿ? ಯಾವ ರಾಜ್ಯಕ್ಕೂ ಆಗಲೀ ರಾಜಕೀಯ ಸ್ವತಂತ್ರವು ಸಿಕ್ಕದ ಹೊರತು ಅಭಿವೃದ್ಧಿಯಾಗುವ ಸಾಧನವಿಲ್ಲವೆಂದು ತಮಗೆ ತಿಳಿಯದೋ? ನಮ್ಮ ಸರಕಾರವು ನಮ್ಮನ್ನು ಎಷ್ಟರವರೆಗೆ ಈ ಶೋಚನೀಯ ಸ್ಥಿತಿಯಲ್ಲಿ ಜನರ ಪ್ರತಿನಿಧಿಗಳಿಗೆ ಗೌರವ ಕೊಡದೆ ಇಡುತ್ತೀರೋ ತಿಳಿಯುವುದಿಲ್ಲ.

ಇದರಿಂದ ಪಾರಾಗಬೇಕಾದರೆ, ನಾವೆಲ್ಲರೂ ಒಂದು ಕೂಡಿ ಆಲೋಚಿಸಿ, ನಾವಾಗಿ ಬಿಟ್ಟುಕೊಟ್ಟ ರಾಜ್ಯವನ್ನು ನಮ್ಮ ವಶಕ್ಕೆ ಬಿಟ್ಟುಕೊಡಬೇಕೆಂದು ಕೇಳುವುದು ಒಳ್ಳೆಯದಲ್ಲವೋ? ಅಥವಾ ಮದ್ರಾಸಿಗೆ ನಮ್ಮ ರಾಜ್ಯವನ್ನು ಸೇರಿಸುವುದೋ? ನಮ್ಮ ದೇಶದ ಈಗಿನ ಸ್ಥಿತಿಯನ್ನು ಯಾವ ರೀತಿಯಿಂದ ನಿವಾರಣೆ ಮಾಡಬೇಕೆಂಬುದನ್ನು ಯಾರಾದರೂ ಬಲ್ಲವರು ಈ ಪತ್ರಿಕೆ ಮೂಲಕ ತಿಳಿಸಿದರೆ, ಚಿರಸ್ಮರಣೀಯನಾಗುವೆನು.

ಅಭಿವೃದ್ಧಿ

ಸುಧಾರಣೆ.

ಮಹನೀಯರೆ,

ನಮ್ಮ ವಿದ್ಯಾವಂತರು ರಾಜ್ಯಾಡಳಿತೆಯ ಸುಧಾರಣೆಗಾಗಿ ಅಂದರೆ ಹೊಸ ಲೆಜಿಸ್ಲೇಟಿವ್ ಕೌನ್ಸಿಲ್, ಅಥವಾ ಕೊಡಗನ್ನು ಮದ್ರಾಸಾಧಿಪತ್ಯಕ್ಕೆ ಸೇರಿಸುವುದರ ವಿಷಯ ಬಹಳ ತೊಂದರೆ ತೆಗೆದುಕೊಂಡು ಕಷ್ಟಪಡುತ್ತಿದ್ದಾರೆ. ಇದಕ್ಕಾಗಿ ಜಮೀನ್ದಾರ ಸಂಘವು ಅನೇಕ ಠರಾವುಗಳನ್ನು ಪಾಸುಮಾಡಿತು. ಇದರ ಮಧ್ಯೆ ಕೂಡುವ ಸಭೆಯೂ ಉಂಟಾಯಿತು. ಆದರೆ ನಮ್ಮ ಸಾಂಪತ್ತಿಕ ಸ್ಥಿತಿಯನ್ನು ಅಭಿವೃದ್ಧಿಗೊಳಿಸುವ ಈವರೆಗೆ ಯಾರೂ ಏನೊಂದು ಸುಧಾರಣೆಗಾಗಿ ಪ್ರಯತ್ನಿಸಿರುವುದು ಕಂಡುಬರುವುದಿಲ್ಲ.

ಕೊಡಗನ್ನು ಮದ್ರಾಸಿಗೆ ಸೇರಿಸಿದರೆಯಾಗಲೀ ಅಥವಾ ಕೊಡಗಿಗೊಂದು ಪ್ರತ್ಯೇಕ ಕೌನ್ಸಿಲು ಕೊಟ್ಟರಾಗಲೀ ನಮ್ಮ ಧನವು ಹೆಚ್ಚಲಾರದು, ನಮ್ಮ ದೇಶದ ಐಶ್ವರ್ಯವು ವೃದ್ಧಿಯಾಗಲಾರದು. ಇದರಿಂದ ದೊಡ್ಡವರಲ್ಲಿ ಕೆಲವರಿಗೆ ಮಾತ್ರ ಎಂ ಎಲ್ ಸಿ ಎಂಬ ಟೈಟ್ಲು ದೊರೆಯಬಹುದು. ಈ ಸುಧಾರಣೆಗಿಂತ ಅತ್ಯಗತ್ಯವಿರುವ ಬೇರೆ ವಿಷಯಗಳು ಅನೇಕ ಇವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಸೂಚಿಸುತ್ತೇನೆ. ನಮ್ಮ ದೇಶದ ವ್ಯವಸಾಯ ವೃದ್ಧಿ, ವ್ಯಾಪಾರ ವೃದ್ಧಿ, ಕೈಗಾರಿಕೆಯ ವೃದ್ಧಿ ಇವುಗಳು ವೃದ್ಧಿಯಾದರೇನೇ ನಮ್ಮ ದೇಶದ ಸ್ಥಿತಿಯು ಉತ್ತಮವಾಗುವುದು ನಮ್ಮ ಜನಗಳು ಮುಂದಕ್ಕೆ ಬರುವರು.

ಈ ಮೇಲ್ಕಂಡ ಸಂಗತಿಗಳು ವೃದ್ಧಿಯಾಗಬೇಕಾದರೆ, ವಿದ್ಯಾಭಿವೃದ್ಧಿಯೇ ಮುಖ್ಯ ಕಾರಣವೆಂದು ಕೆಲವು ಧುರೀಣರು ಹೇಳುತ್ತಿರುವರು. ಆದರೆ ನಮ್ಮ ಯುವಕರಿಗೆ ಈಗ ಸ್ಕೂಲು ಕಾಲೇಜುಗಳಲ್ಲಿ ದೊರೆಯುತ್ತಿರುವ ವಿದ್ಯೆಯಿಂದ ದೇಶವೃದ್ಧಿಯಾಗುವುದು ಅಸಾಧ್ಯ. ನಮ್ಮ ದೇಶದಲ್ಲಿ ಎಫ್. ಎ., ಬಿ. ಎ., ಎಂ. ಎ. ಪರೀಕ್ಷೆ ತೇರ್ಗಡೆ ಹೊಂದಿದವರು ಎಷ್ಟಿದ್ದರೂ ನಮ್ಮ ವ್ಯವಸಾಯ, ವ್ಯಾಪಾರ ಮತ್ತು ಕೈಗಾರಿಕೆಯ ಸುಧಾರಣೆ ಏನಾದರೂ ಈವರೆಗೆ ಆಗಿದೆಯೇ?

ನಮ್ಮ ದೇಶಸ್ಥರಲ್ಲಿ ಕೆಲವರು ವ್ಯವಸಾಯ ವಿದ್ಯೆಯಲ್ಲಿ ತರಬೇತು ಹೊಂದಿ ಡಿಪ್ಲೋಮ ಪಡೆದು ಬಂದಿರುತ್ತಾರೆ. ಆದರೆ ಅವರು ಇಲ್ಲಿಗೆ ಬಂದನಂತರ ನಮ್ಮ ರೈತರಿಗೆ ತಮ್ಮ ಕೆಲಸದ ಉದಾಹರಣೆಯಿಂದಾಗಲೀ, ಉಪನ್ಯಾಸಗಳಿಂದಾಗಲೀ ಬೋಧನೆ ಕೊಟ್ಟು ವ್ಯವಸಾಯದ ಕ್ರಮವನ್ನು ಉತ್ತಮರೀತಿಗೆ ಬದಲಾಯಿಸಲು ಪ್ರಯತ್ನಿಸಿರುವರೋ?

ಈಗ ಮುಂದೆ ಮಾಡಲು ಅನುಕೂಲವಿರುವ ವ್ಯವಸಾಯ ವೃದ್ಧಿಮಾಡಿ ಬಡರೈತರಿಗೆ ಉಪಕಾರ ಮಾಡಲಿಕ್ಕೆ ಈ ಕೆಳಗಿನ ಕೆಲವು ಸಂಗತಿಗಳನ್ನು ನಮ್ಮ ದೇಶಹಿತೈಷಿಗಳು ಜಾರಿಗೆ ತರಲು ಪ್ರಯತ್ನಿಸುವರಾಗಿ ನನ್ನ ಕೋರಿಕೆ.

೧. ಹೆಚ್ಚಿನ ಬೆಳೆ (ಭತ್ತವಗೈರೆ) ಬೆಳೆಯುವ ಕ್ರಮಗಳನ್ನು ಸಣ್ಣ ಸಣ್ಣ ಪುಸ್ತಕಗಳಲ್ಲಿ ಛಾಪಿಸಿ ಸಹಕಾರಿ ಸಂಘಗಳ ಮೂಲಕ ರೈತರಿಗೆ ಹಂಚುವುದು

೨ ದೊಡ್ಡ ದೊಡ್ಡ ಸಭೆ ಸೇರಿದಾಗಲೂ ಜಮೀನುದಾರ ಸಂಘದ ವಾರ್ಷಿಕ ಮೀಟಿಂಗುಗಳಲ್ಲೂ ವ್ಯವಸಾಯ ಕ್ರಮಗಳ ವಿಷಯ ಉಪನ್ಯಾಸ ಕೊಡುವಂತೆ ಜನರನ್ನು ಪ್ರೇರಿಸುವುದು ಸಾಧ್ಯವಾದರೆ ಅಂಥವರನ್ನು ಬೇರೆ ದೇಶಗಳಿಂದ ಕರೆಯಿಸುವುದು

"ಕೊಡಗು" ಪತ್ರಿಕೆಯಲ್ಲಿ ತಿಳಿದವರು ವ್ಯವಸಾಯ ಅಭಿವೃದ್ಧಿ ವಿಷಯ ಲೇಖನಗಳನ್ನು ಬರೆಯುವುದು ಅಲ್ಲದೇ ಬೇರೆ ವ್ಯವಸಾಯದ ವಿಷಯ ಬರೆಯುವ ಪತ್ರಿಕೆಗಳಿಂದ ಲೇಖನಗಳನ್ನು ಚುನಾಯಿಸಿ ಬರೆಯುವುದು.

೪ ವ್ಯವಸಾಯದಲ್ಲಿ ಅನುಭವವಿರುವವರು ತಮ್ಮ ಅನುಭವಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುವುದು.

೫ ಸಹಕಾರ ಸಂಘದಿಂದ ಬೀಜ, ಹೆಚ್ಚು ಫಸಲು ಕೊಡುವಂಥ ಗೊಬ್ಬರ, ನೇಗಿಲು ವಗೈರೆ ಸಾಮಾನುಗಳನ್ನು ತರಿಸಿ ಲಾಭವಿಲ್ಲದೆ ರೈತರಿಗೆ ಸಾಲವಾಗಿ ಕೊಡುವುದು

ಈ ಮೇಲ್ಕಂಡ ಸಂಗತಿಗಳನ್ನು ಮಾಡಲು ನಮ್ಮ ಹಿತೈಷಿಗಳು ಪ್ರಯತ್ನಿಸಿದರೆ ಅದರಿಂದ ರಾಜ್ಯಾಡಳಿತೆಯ ಸುಧಾರಣೆಗಿಂತಲೂ ಬಡರೈತರಿಗೆ ಹೆಚ್ಚಿನ ಪ್ರಯೋಜನ ದೊರೆತೀತೆಂಬುದರಲ್ಲಿ ಸಂಶಯವಿಲ್ಲ.

ಎಂ ಎಂ ಸಿದ್ದೀಕ್

ದಿ. ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಂಡ್ ಮ್ಯಾರೇಜ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್, ಮೈಸೂರು

ಸಬ್ ಆಫೀಸ್, ಮಡಿಕೇರಿ, ಕೊಡಗು.

ಈ ಕಂಪೆನಿಯಲ್ಲಿ ಇನ್ಶೂರ್ ಮಾಡಿಸುವ ಪಾಲಿಸಿ ಉಳ್ಳವರಿಗೆ ಅವರವರ ಸ್ಥಿರಾಸ್ತಿಗಳ ಮೇಲೆ ಸಾಲ ಕೊಡಲ್ಪಡುವುದು. ಆದುದರಿಂದ ಅಂತಹ ಸಾಲವನ್ನು ಹೊಂದಬೇಕೆಂದು ಅಪೇಕ್ಷಿಸುವ ಕೊಡಗಿನ ಪಾಲಿಸಿದಾರರು ಈ ಕೆಳಗಣವರಿಂದ ತಕ್ಕ ಫಾರಮುಗಳನ್ನು ತರಿಸಿ ಭರಾಯಿಸಿ ಕೆಳಗಿನ ವಿಳಾಸಕ್ಕೆ ಜಾಗ್ರತೆ ಕಳುಹಿಸಬೇಕಾಗಿದೆ.

ವಿ ಸೂ.—1 ಆಣೆ ಚೀಟನ್ನು ಅಂಚೆ ಹಾಸಲಿಗಾಗಿ ಕಳುಹಿಸಬೇಕಾಗಿದೆ

ಬಿ. ಎಸ್. ಆರಾಧ್ಯ,
ಸ್ಪೆಷಿಯಲ್ ರೆಪ್ರೆಸೆಂಟೇಟಿವ್ ಲೈಫ ಅಂಡ್
4—2 ಮ್ಯಾರೇಜ್ ಎಷ್ಯೂರೆನ್ಸ್,
ಸಬ್ ಆಫೀಸ್—ಮಹದೇವಪೇಟೆ, ಮಡಿಕೇರಿ

ಒಳ್ಳೇ ಸಮಯ! ತ್ವರೆಮಾಡಿರಿ!!

ಹರಾಜಿನ ನೋಟೀಸು

ಸನ್ 1923 ನೇ ಇಸವಿ ಜೂನ್ ತಾರೀಖು 25 ನೇ ದಿನ ಬೆಳಿಗ್ಗೆ 8ರ ಲಾಗಾಯ್ತು ಈ ಕೆಳಗೆ ಕಾಣಿಸಿರುವ ಸಾಮಾನುಗಳು ಮೈಸೂರು ಚರ್ಚರೋಡಿನಲ್ಲಿರುವ ಗವರ್ನ್‌ಮೆಂಟ್ ಮೇಲು ಕಂಟ್ರಾಕ್ಟರ್ ಮ|| ರಾ|| ಖಾನ್ ಮಹಿದ್ದೂರ್ ವಾಲಿಂಚಿಸುವರ ಬಂಗಲೆಯ ಕಾಂಪೌಂಡಿನಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ. ಮೋಟಾರ್ ಬಸ್ಸುಗಳು, ಮೋಟಾರು ಲಾರಿಗಳು, 4 ಚಕ್ರದ ಡಾಗ್ ಕಾರ್ಟ್, ಕುದುರೆ ಜೀನುಗಳು, ಗಾಡಿಗೆ ಹಾಕುವ ದೀಪಗಳು ಸುಮಾರು 50 ಟನ್ ಗಳಷ್ಟು ರೈಲ್ವೇ ಕಲ್ಲಿದ್ದಲು, ಬೀರುಗಳು, ಕುರ್ಚಿಗಳು, ಮತ್ತು ಇನ್ನೂ ಇತರ ಚಿಲ್ಲರೇ ಸಾಮಾನುಗಳು 4—3

"ನಗದು ಹಣ"

ಹರಾಜು ಆ ದಿನ ಪೂರ್ತಿಯಾಗದಿದ್ದಲ್ಲಿ ಮರುದಿವಸ ಕೂಡಾ ನಡೆಯುತ್ತೆ

M. Sundaram & Son.,
Auctioneers,
MYSORE.

ವಾಸುದೇವ ಕಪ್.

ಇದು ಹಿತ್ತಾಳೆಯಿಂದ ಮಾಡಿದ ಬಟ್ಟಲು ಇದರ ಮಧ್ಯದಲ್ಲಿ ಶ್ರೀ ವಾಸುದೇವನು ಶ್ರೀಕೃಷ್ಣನನ್ನು ಕೈಯಲ್ಲಿ ಎತ್ತಿಕೊಂಡು ನಿಂತಿರುವ ವಿಗ್ರಹ ಇರುವದು. ಇದರ ಆಶ್ಚರ್ಯವೇನಂದರೆ ಕೃಷ್ಣನು ಜನ್ಮವನ್ನು ಎತ್ತಿದ ಕೂಡಲೆ ಕಂಸನಿಗೆ ವಾಸುದೇವನು ಭಯಪಟ್ಟು ಕೃಷ್ಣನನ್ನು ಯಮುನಾದಿಂದ ಗೋಕುಲಕ್ಕೆ ಎತ್ತಿಕೊಂಡು ಹೋಗುವಾಗ ದಾರಿಯಲ್ಲಿ ನದಿಯು ಸಿಕ್ಕಿ ಅದರ ತುಂಬಾ ನೀರು ತುಂಬುತ್ತಿರುವುದನ್ನು ಕಂಡು ವಾಸುದೇವನು ಭಯಪಡದೆ ಆ ನದಿಯಲ್ಲಿ ಬಹಳ ಕಷ್ಟದಿಂದ ನಡೆದುಕೊಂಡು ಹೋಗುತ್ತಿರುವಾಗ ಶ್ರೀಕೃಷ್ಣನ ಕಾಲು ನದಿಯ ನೀರು ತಗಲಿತು. ಆ ಕೂಡಲೆ ನದಿಯ ನೀರು ಕಡಮೆಯಾಗಿ ವಾಸುದೇವನು ನದಿಯನ್ನು ದಾಟಿ ಬಹುಬೇಗನೆ ಗೋಕುಲವನ್ನು ಸೇರಿದನು. ಈ ಸಂಗತಿಯು ನಮ್ಮ ಜನರಿಗೆ ತಿಳಿಯದ ವಿಷಯವಲ್ಲ. ಆದರೆ ಈಗ ಈ ವಿಷಯವನ್ನು ಕಣ್ಣಾರ ನೋಡಿ ಸಂತೋಷಪಡುವಂತೆ ಇದನ್ನು ತಯಾರಿಸಿರುವವು. ಈ ಬಟ್ಟಲಿನಲ್ಲಿ ನೀರನ್ನು ಹಾಕಿದರೆ ಒಂದು ತೊಟ್ಟಾದರೂ ಬೀಳುವುದಿಲ್ಲ. ಯಾವಾಗ ಕೃಷ್ಣನ ಕಾಲಿಗೆ ನೀರು ತಗಲುತ್ತದೋ ಆಗ ತನ್ನಷ್ಟಕ್ಕೆ ತಾನೇ ನೀರು ಕೆಳಭಾಗದಿಂದ ಸುರಿದು ಹೋಗುವದು. ಈ ಬಟ್ಟಲಿನಲ್ಲಿ ರಂಧ್ರವಿಲ್ಲ ಇದನ್ನು ನೋಡುವವರಿಗೆ ಆನಂದವನ್ನುಂಟುಮಾಡುವವು.

ಕ್ರಯ 1 ಕ್ಕೆ 2—

ವಿಳಾಸ—ವಿ ಎ ಎಸ ಪಾಣಿ ಕಂಪೆನಿ

52—44 ಸಾಹುಕಾರ ಪೇಟೆ ಮದರಾಸು.

Just Received! New Invention!

Electric Rotary Spring Fans.

ವಿದ್ಯುಚ್ಛಕ್ತಿಯ ರೋಟರಿ ಬೀಸಣಿಗೆ.



ಇದು ಜರ್ಮನಿ ದೇಶದಲ್ಲಿ ಹೊಸದಾಗಿ ಕಂಡುಹಿಡಿಯಲ್ಪಟ್ಟು ಈಗತಾನೇ ಬಂದಿರುತ್ತೆ ಬಹು ಆಶ್ಚರ್ಯವಾಗಿರುವದು ಇದು ಎಲೆಕ್ಟ್ರಿಕ್ ಪಂಖಾಗಳ ಹಾಗೆ ತಂಪಾದ ಗಾಳಿಯನ್ನು ಬೀಸುವದು ಗಾಳಿ ಬೇಕಾದಾಗ ಗುಂಡಿಯನ್ನು ಅದುಮಿದರೆ ತನಗೆ ತಾನೇ ಸುತ್ತಿ ಗಾಳಿಯನ್ನು ಬೀಸುವದು. ಈ ಬೇಸಿಗೆ ಕಾಲದಲ್ಲಿ ಬಹಳ ಉಪಯೋಗವಾದದ್ದು. ಇದರ ಅತಿ ಚಮತ್ಕಾರವಾದ ಸ್ಪ್ರಿಂಗು ಇಟ್ಟಿರುವದರಿಂದ ಬೇಕಾದಾಗ ತಂಪಾದ ಗಾಳಿಯನ್ನು ಬೀಸುವದು. ಪ್ರತಿ ಒಂದು ಮನೆಯಲ್ಲಿಯೂ, ಆಫೀಸಿನಲ್ಲಿಯೂ ಇರಲು ಬಹು ಯೋಗ್ಯವಾಗಿರುವದು

ಕ್ರಯ ರೊಟರಿ ಬೀಸಣಿಗೆ (Fan) ರೂ. 4—0—0.

ನಮ್ಮ ವಿಳಾಸ:—
ಮದ್ರಾಸ್ ಟ್ರೇಡಿಂಗ್ ಕಂಪೆನಿ.
32. ತಿರುಪಳ್ಳಿ ಬೀದಿ.
12—10 ಜಿ. ಟಿ ಮದರಾಸ್

ESTATE TOOLS, GREATLY REDUCED.

	Usual Price.	Reduced Price
Sawn neck mamuties 5 lbs.	Rs. 3— 8—0	3—0—0
„ „ 6 „	3—12—0	3—4—0
Pilting mamooties 4 „	3— 8—0	3—0—0
„ „ 4½ „	3—12—0	3—4—0
„ „ 5 „	4— 2—0	3—6—0

SPECIAL TERMS FOR LARGE QUANTITIES.

52—45 **SPENCER & Co., Ltd.**
MERCARA & POLLAIBETT

Printed and Published by D.S. Krishnaswamiengar Proprietor, at Srinivas Electric Press, Mysore "for Kodagu" L.M [illegible]—15 6-1923.

If not delivered please return to "Kodagu Office, Mercara"
Reg. No. M. 1550.

ಕೊಡಗು.

ಸತ್ಯೇನ ಘೋಷದಯಯಾ ವಿದ್ಯಾಸ್ತೀತಿ ಪ್ರಯುತ್ನತಃ । ಐಕಮತ್ಯೇನ ದೇಶಾನಾಂ ಸುಸ್ಥಿರಂ ರಾಜ್ಯಸಂಪದ

ಪ್ರತಿ ಶುಕ್ರವಾರ ಪತ್ರಿಕಾ ಪ್ರಕಟಿಸಲ್ಪಡುವುದು.

" ಎಡಿಟರ್, ಪಂದ್ಯಂಡ ಐ. ಬೆಳ್ಯಪ್ಪ

ಸಂಪುಟ ೩] ಕೊಡಗು, ಸನ್ ೧೯೨೩ ನೇ ಜೂನ್ ತಾರೀಖು ೨೨ ನೆಯ ಶುಕ್ರವಾರ. [ಸಂಚಿಕೆ ೯

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡಾ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಇದ್ದರೂ ನಮ್ಮಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರದಂತೆ ಜಾಗ್ರತೆಯಾಗಿಯೂ ಸುಲಭಬೆಲೆಯಿಂದಲೂ ಮಾಡಿ ಕೊಡುತ್ತೇವೆ.

Srinivas Electric Press,
MYSORE.

The Coorg Central Co-operative Bank, Ltd.,

(Registered under the Co-operative Societies Act)

	Rs.
Share Capital	50,000
Paid up Share Capital	6,310
Fixed Deposits paid	31,873

Amounts are lent mainly to Co-operative Societies in Coorg. The accounts are checked annually by The Registrar of Co-operative Societies Coorg. Deposits for one year and more carry interest at 6¼% per annum and for smaller periods at 5% per annum.

Apply to the Secretary or Treasurer for further details.

President	*Treasurer*	*Secretary*
Kodendera Ganapaiah Rao Bahadur.	Ranga Rao, B. L.,	C. N. Venkappaya B.A., B.L.

Dated 25--3--1923

NOTICE.

Travelling Made Easy !

Cars can be had at any time to any distance at reasonable rates.

Intending passengers are requested to book their orders in time to avoid disappointment.

For rates and full particulars apply to—

Mercara, 5th March 1923. } F. P. LOBO, Manager.
Messrs M. ... IS & Sons, MERCARA.

2—13

ನೋಟೀಸು

ಅಲ್ಪಖರ್ಚಿನ ಪಯಣ !

ನ್ಯಾಯವಾದ ಧಾರಣೆಗೆ ಮೇರೆ ಮೋಟಾರು ಗಾಡಿಗಳು ಎಲ್ಲಾ ಸ್ಥಳಗಳಿಗೂ ಎಲ್ಲಾ ಸಮಯದಲ್ಲಿಯೂ ಬಾಡಿಗೆಗೆ ದೊರೆಯುವುದು.

ನಿರಾಶೆಯಾಗದಂತೆ ಇಚ್ಛುಳ್ಳ ಪ್ರಯಾಣಿಕರು ಬೇಗನೆ ಆರ್ಡರು ಕೊಡತಕ್ಕದ್ದು.

ಧಾರಣೆಗೂ ಹೆಚ್ಚು ಸಂಗತಿಗೂ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ,

ಮಡಿಕೇರಿ, 5–3–23 } ಯಫ್. ಲೋಬೋ, ಮೇನೇಜರ್.
ಮೆಸರ್ಸ್. ಮು... ಮಯಸ್ ಅಂಡ್ ಸನ್ಸ್, ಮಡಿಕೇರಿ.

ಬುಗಡಿ ಮತ್ತು ಬನಾರಸಿ ಅಂಚಿನ ಸೀರೆಗಳು.



ಈ ಸೀರೆಗಳನ್ನು ಬಹು ಹೊಸದಾದ ನೂಲಿನಿಂದ ತಯಾರಿಸಿದೆ. 17 ಮೊಳ ಉದ್ದವುಳ್ಳ ಸೀರೆ ಅಗಲವುಳ್ಳದ್ದು. ಅತಿ ಸುಂದರವಾದ ಬೇಸ್ತೆಯ ಸೆರಗು ಇದೆ. ನೋಡಲು ಅರಳೀಸೀರೆಯ ಹಾಗೆಯೇ ಇರುವವು, ಬಣ್ಣವು ಎಂದಿಗೂ ಹೋಗದು. ಇವನ್ನು ಮಾರಲಿಕ್ಕಾಗಿ ಈಗ ತಯಾರಿಸುವುದರಿಂದ ಬೇಗನೆ ತರಿಸಿಕೊಂಡವರಿಗೆ ಮಾತ್ರ ಸಿಕ್ಕುವವು.

ನಂ 1	....	7—8—
ನಂ. 2	....	6—8—

RIPON WATCH CO.,
Triplicane,
25–17 MADRAS.

"Still a further reduction in prices"

For your requirements of High Grade Arms, Ammunition, Wines and Spirits.

APPLY TO:

Mc. DOWELL & Co., Ltd.,
24—8 MERCARA.

ಗೋಲ್ಡ್...

ಈ ಬೋಲ್ಡ್ ಗೋಲ್ಡ್ ಗಳು ವಿಲಾಯಿತಿಯಲ್ಲಿ ಇಮಿಟೇಷನ್ ವಜ್ರದ ಕಲ್ಲು ... ಗಳಿಂದಲೂ ಇಂಗ್ಲೀಷು ನಮೂನೆಯಲ್ಲಿ ತಯಾರಿಸಿದೆ. ಇದರ ಬಣ್ಣವು ಎಂದಿಗೂ ಕೆಡದು ಇದನ್ನು ಒಳ್ಳೆ ದೊಡ್ಡವರೂ ಸಹ ಉಪಯೋಗಿಸುವರು. ... ಮತ್ತು ಎಲ್ಲಾ ... ಗೂ ಬಹು ಅನುಕೂಲವಾದದ್ದು.



ಲೋಲಾಕ್ ಜೊತೆ 1 ಕ್ಕೆ 1—8—0

ಇಮಿಟೇಷನ್ ವಜ್ರದ ಪೆಂಡೇಟ್ ಜೊತೆ 3—0—0

ಸೀಮೆಬಂಗಾರದ ಕತ್ತಿನಸರ 3—8—0

ಬಂಗಾರದ ಗಿಲೀಟಿನ ಉಂಗುರ.

ಈ ಉಂಗುರಗಳನ್ನು ಒಂದು ಅಪೂರ್ವವಾದ ಲೋಹದಿಂದ ಪಕ್ಕಾ ಬಂಗಾರದಂತೆ ಗಿಲೀಟುಮಾಡಿದೆ. ಮೇಲು ಭಾಗದಲ್ಲಿ ಕೆಂಪು, ಹಸುರು ಮುಂತಾದ ಇಮಿಟೇಷನ್ ವಜ್ರದ ಕಲ್ಲುಗಳು ಇಟ್ಟು ಕಟ್ಟಿದೆ. ಕಟ್ಟಿರುವದು ನೋಡಿದರೆ ನಿಜವಾದ ವಜ್ರದ ಉಂಗುರವೆಂದೇ ಹೇಳಬೇಕು. ಬೇಕಾದವರು ಬೆರಳಿನ ಅಳತೆಯನ್ನು ಕಳುಹಿಸಿರಿ.

ಕ್ರಯ 1 ಕ್ಕೆ 2—0—0
ಕ್ರಯ 3 ಕ್ಕೆ 5—8—0

ವಿಳಾಸ:—
ಪೀಟರ್ ವಾಚ್ ಕಂಪೆನಿ.
52–45 ಪೋ|| ಬಾ|| ನಂ. 27 ಮದರಾಸು.

18 ಕ್ಯಾರೆಟ್ಟು ಗೋಲ್ಡ್ ಪ್ಲೇಟ್ ರೇಡಿಯಂ ರಿಸ್ಟ್ ವಾಚ್.

ಈ ಚಿತ್ರದಲ್ಲಿ ತೋರಿಸಲ್ಪಟ್ಟಿರುವ ಈ ಗಡಿಯಾರಗಳು ಸ್ವಿಟ್ಜರ್‌ಲ್ಯಾಂಡ್ ದೇಶದಲ್ಲಿ ತಯಾರಿಸಿದ್ದು. ಸಾಧಾರಣ ಗಡಿಯಾರಗಳಲ್ಲಿ ರಾತ್ರಿ ವೇಳೆ



ಗಂಟೆ ನೋಡಬೇಕಾದರೆ ಬೆಳಕು ಬೇಕು ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವವು. ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು. ಮತ್ತು ಇದರ ಬಣ್ಣವು ಕೆಡದಂತೆ ವಿದ್ಯುಚ್ಛಕ್ತಿಯ ಸಹಾಯದಿಂದ ಬಂಗಾರದ ಗಿಲೀಟು ಮಾಡಿರುವದು. ಮತ್ತು ಖಾತ್ರಿಯಾದ 3 ವರುಷದ ಗ್ಯಾರಂಟಿ ಇರುವದು,

ಕ್ರಯ ಗಡಿಯಾರ 1 ಕ್ಕೆ 8—8—0 ಬೆಲ್ಟಿಯದು 9—8—0

ವಿಳಾಸ:—ವಿ. ಎಸ್. ವಾಚ್ ಕಂಪನಿ,
52–45 ಪೋ|| ಬಾ|| ನಂ. 105 ಮದರಾಸು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ.
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,310
ಜನರು ಇಟ್ಟ ಠೇವಣಾತಿ	31,873

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ನೂರಕ್ಕೆ ಸಾಲಿಯಾನ 6¼ ಬಡ್ಡಿ ದರದಲ್ಲಿ ಬಡ್ಡಿ ಕೊಡಲಾಗುತ್ತದೆ. ಅದಕ್ಕಿಂತ ಕಡಿಮೆ ಅವಧಿಯ ಠೇವಣಾತಿಗಳಿಗೆ ನೂರಕ್ಕೆ ಸಾಲಿಯಾನ 5 ರ ಬಡ್ಡಿ ಕೊಡಲಾಗುತ್ತದೆ.

ಹೆಚ್ಚಿನ ವಿವರಗಳಿಗೆ ... ಅಥವಾ ಟ್ರೆಜರರ್ ... ರವರಿಗೆ ಬರೆಯಬೇಕು.

ಪ್ರೆಸಿಡೆಂಟ್.		ಟ್ರೆಜರರ್.
ಕೊಡಂದೇರ ಗಣಪಯ್ಯನವರು ರಾವ್ ಬಹದ್ದೂರ್		... ರಂಗರಾಯರು, ಬಿ. ಎ., ಬಿ. ಎಲ್.,

ಸೆಕ್ರೆಟರಿ.
ಸಿ. ಯನ್. ವೆಂಕಪ್ಪಯ್ಯನವರು, ಬಿ. ಎ. ಬಿ. ಎಲ್.
ತಾರೀಕು 25—3—1923

BUMPER CROPS.

Always follow on application of our Coffee Fertilizers!

ದೊಡ್ಡ ಕಾಫಿ ಫಸಲು.

ಸಿಕ್ಕಬೇಕಾದರೆ ನಮ್ಮ ಕಾಫಿ ಫರ್ಟಿಲೈಸರುಗಳನ್ನು ಉಪಯೋಗಿಸಿರಿ!

ನಮ್ಮ ಕಾರ್ಖಾನೆಯಲ್ಲಿ ಎಲ್ಲಾ ತರಹದ ಹೊಸದಾದ ಹೊಸ ಗೊಬ್ಬರ (artificial manure) ಅಂದರೆ ನೆಲಗಡಲೆ ಹಿಂಡಿ, ಹರಳು ಹಿಂಡಿ, ಬೇವಿನ ಹಿಂಡಿ, ಹೊಂಗೆ ಹಿಂಡಿ, ಮೂಳೆ ಹುಡಿ ವಗೈರೆ ಕಾಫಿ ಫರ್ಟಿಲೈಸರುಗಳು ತಯಾರಾಗುತ್ತವೆ. ಪರದೇಶದಿಂದ ತರಿಸುವ ಬಾಡಿಗೆ ಉಳಿಯುತ್ತದೆ. ಕ್ರಯ ಸಹ ಕಡಿಮೆ ಮಾಡಿದ್ದೇವೆ.

ತೋಟದಲ್ಲಿ ಫಸಲು ಕಡಿಮೆಯಾಗುವ ಪ್ಲಾಂಟರು ಮೇಲ್ಕಂಡ ಗೊಬ್ಬರವನ್ನು ಉಪಯೋಗಿಸಿದರೆ ದೊಡ್ಡ ಫಸಲು ಸಿಕ್ಕಿ ಕೊಂಡರೆ ಎಲ್ಲಾ ಪರಿಹಾರವಾಗುವುದು.

M. M. SIDDEEK,
12-10 *Proprietor:*—**Siddeek Manuare Works, MERCARA.**

"ಕೊಡಗು"

೧೯೩೪ ನೇ ಇಸವಿ ಜೂನ್ ತಾ|| ೨೨ ನೇ ಶುಕ್ರವಾರ

ಹಜರತ್ ಚೀಫ್ ಕಮಿಷನರವರು.

ಕೊಡಗು ದೇಶದ ಚೀಫ್ ಕಮಿಷನರಾದ ಮಿ|| ಪಟ್ಲ ಜಾಕ್ಸನ್‌ರವರು ಮಾರ್ಚಿ ತಾರೀಕು 22 ರಲ್ಲಿ ಮಡಿಕೇರಿಗೆ ಬಂದು ಇಲ್ಲಿ ಸುಮಾರು ಮೂರು ತಿಂಗಳುಗಳ ವರೆಗಿದ್ದು ಜೂನ್ ತಾರೀಕು 18 ರಲ್ಲಿ ವಾಪಾಸು ಬೆಂಗಳೂರಿಗೆ ಹೋದರು. ಕೊಡಗಿನ ಸ್ಥಳೀಯ ಸರಕಾರದ ಮುಖ್ಯಾಧಿಕಾರಿಯಾದ ಚೀ|| ಕಮಿಷನರವರು ಕೊಡಗಿಗೆ ಬಂದರು ಇಲ್ಲಿ ಇದ್ದರು ಮತ್ತು ವಾಪಾಸು ಹೋದರು, ಇಷ್ಟು ಮಾತ್ರವಲ್ಲದೆ ದೇಶದ ಆಡಳಿತೆಯ ಸ್ಥಿತಿಯೂ ಸಾಂಪತ್ತಿಕ ಸ್ಥಿತಿಯೂ, ಮೊದಲು ಇದ್ದಂತೆಯೇ ಇದೆ ಹೊರತು ಏನೊಂದು ಬದಲಾವಣೆ ಹೊಂದಿದ ಹಾಗೆ ಕಾಣುವುದಿಲ್ಲ. ಅಂದರೆ ಅವರು ಮಡಿಕೇರಿಯ ಹವವು ಬೇಸಿಗೆಕಾಲದಲ್ಲಿ ಶೀತವಾಗಿರುವುದರಿಂದ ಹವ ಬದಲಾಯಿಸಿಕೊಂಡು ಆರೋಗ್ಯವನ್ನು ಪಡೆವ ಲಕ್ಷ್ಯದಿಂದ ಬಂದಿದ್ದು ಬೋರ್ಡು ಬಂಗ್ಲೆಯಲ್ಲಿಯೇ ವಿಶ್ರಾಂತಿ ಪಡೆದರೆಂದಲ್ಲ. ದೇಶದ ಜನರು ಅವರಿಂದ ಆಗಬೇಕೆಂದು ಅಪೇಕ್ಷಿಸಿದ್ದ ಮುಖ್ಯವಾದ ಸಂಗತಿಗಳಲ್ಲಿ ಅವರು ಮನಸ್ಸನ್ನು ತಾಳಿದ್ದರೂ ಕೂಡ ಹೆಡ್‌ಮಾಸ್ಟರವರ ಕೋರಿಕೆಯ ಮೇರೆ ಅವರು ತಾ|| 7-4-23 ರಲ್ಲಿ ನಡದ ಮಡಿಕೇರಿ ಹೈಸ್ಕೂಲಿನ ಇನಾಮು ಒಟವಾಡೆಯ ದಿನ ಅಧ್ಯಕ್ಷಪದವಿಯನ್ನು ವಹಿಸಿಕೊಂಡಿದ್ದರು. ಅಲ್ಲಿ ಅವರು ಮಾಡಿದ ಭಾಷಣವನ್ನು ಒಂದಲ್ಲ ಎರಡು ಸಾರಿ ವಿವರವಾಗಿ ಪ್ರಕಟಿಸಿದ್ದೆವು. ಆ ಬಗ್ಗೆ ಅವರ ಮೇಲೆ ನಮ್ಮ ಅಭಿಪ್ರಾಯವನ್ನು ಸೂಚಿಸಿದ್ದೆವು. ಅದು ನಿಜವಾಗಿಯೂ ಒಂದು ಮುಖ್ಯವಾದ ಭಾಷಣವಾಗಿದ್ದರೂ ಕೂಡ ಅದು ದೇಶದ ಜನರ ಸಂತೃಪ್ತಿಯನ್ನುಂಟು ಮಾಡಿತ್ತೆಂದು ಹೇಳಲಾಗುವುದಿಲ್ಲ. ಅಲ್ಲದೆ ಅವರು ಆಗ ವಿದ್ಯಾಭ್ಯಾಸದ ವಿಷಯ ಮಾಡಿದ ಸೂಚನೆಗಳು ಮುಖ್ಯಾಧಿಕಾರಿಗಳಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟಂತೆ ತೋರಲಿಲ್ಲ.

ನಂತರ ದೇಶದ ಸಹಕಾರಿ ಸಂಘಗಳ ಉತ್ಸಾಹಿಗಳ ಆಮಂತ್ರಣ ತಾ|| 21-4-34 ರಲ್ಲಿ ವೀರರಾಜಪೇಟೆಯಲ್ಲಿ ನಡೆದ ಕೋ ಆಪರೇಟಿವ್ ಸೊಸೈಟಿಗಳ ಕಾನ್ಫರೆನ್ಸಿನಲ್ಲಿ ಅಧ್ಯಕ್ಷರಾಗಿದ್ದರು. ಅಲ್ಲಿ ಅವರ ಮುಂದೆಯೇ ತೀರ್ಮಾನಿಸಬೇಕೆಂದಿದ್ದ ಜಮ್ಮಾ ಪಗ್ಯೆರಿ ಇನಾಮತಿ ಹಿಡುವಳಿಯನ್ನು ಕೋ ಆಪರೇಟಿವ್ ಸಾಲಗಳಿಗೆ ಗಿರ್ವಿಕೊಡುವ ವಿಷಯ ಎತ್ತಿದುದನ್ನು ಚರ್ಚಿಸಿ ತೀರ್ಮಾನಿಸಲು ಅವಕಾಶ ಕೊಡದೆ ಅದರಿಂದುಂಟಾಗುವ ಕೆಡಕುಗಳನ್ನು ಸೂಚಿಸಿ ವೋಟಿಂಗನ್ನು ಅದಕ್ಕೆ ಬಿಟ್ಟು ಹೋದದ್ದು ಅಲ್ಲಿ ನೆರೆದಿದ್ದವರ ಆಶೆಯನ್ನು ನಿರಾಶೆಯನ್ನಾಗಿ ಮಾಡಿತು. ಈ ವಿಷಯವು ಸಹಕಾರಿ ಸಂಘಗಳ ಮೆಂಬರುಗಳಿಗೆ ಮಾತ್ರವಲ್ಲದೆ ದೇಶದ ಇನಾಮತಿ ಹಿಡುವಳಿದಾರರಿಗೆಲ್ಲಾ ಸಂಬಂಧಪಟ್ಟದೆಂದು ಚೀ| ಕಮಿಷನರವರು ಹೇಳಿದ್ದು ನಿಜವೆ. ಈ ಪ್ರಶ್ನೆಯು ದೇಶದಲ್ಲಿ ಅನೇಕ ವರ್ಷಗಳಿಂದ ಚರ್ಚಿಸಲ್ಪಟ್ಟು ಇನ್ನೂ ತೀರ್ಮಾನಕ್ಕೆ ಬಾರದೆ ಇರುವುದರಿಂದ ಚೀ| ಕಮಿಷನರವರೇ ಇದಕ್ಕೆ ಸಂಬಂಧಪಟ್ಟ ದೇಶೀಯರೆಲ್ಲರ ಒಂದು ಸಭೆಮಾಡಿ ಅಲ್ಲಿ ತೀರ್ಮಾನಿಸಿ ಅನುಕೂಲವಿತ್ತು. ಆದರೆ ಅದಕ್ಕೆ ಅವರು ಗಮನ ಕೊಡಲಿಲ್ಲ. ಆ ಕೋ ಆಪರೇಟಿವ್ ಕಾನ್ಫರೆನ್ಸಿನಲ್ಲಿ ಅವರು ಸಹಕಾರಿ ಸಂಘಗಳ ಅಭಿವೃದ್ಧಿಯ ವಿಷಯವಾಗಿಯೂ ಸಾಲವನ್ನು ನಾಶಮಾಡುವದರ ವಿಷಯವಾಗಿಯೂ ಹೇಳಿದ ಆಲೋಚನೆಗಳು ದೇಶದ ರೈತರ ಹಿತಚಿಂತನೆಗೆಂದು ಹೇಳುವದರಲ್ಲಿ ಸಂಶಯವಿಲ್ಲ. ಅವುಗಳನ್ನು ನಮ್ಮ ದೇಶದ ಸಹಕಾರಿ ಸಂಘಗಳ ಮೆಂಬರುಗಳು ಮರೆತು ಬಿಡದೆ ಜಾರಿಗೆ ತರಲು ಪ್ರಯತ್ನಿಸಿದರೆ ಅವರ ಸ್ಥಿತಿಯು ಖಂಡಿತವಾಗಿಯೂ ಉತ್ತಮವಾಗುವುದು. ನಮ್ಮ ಚೀಫ್‌ಕಮಿಷನರವರಿಗೆ ಕೋ ಆಪರೇಟಿವ್ ಚಳವಳಿಯಲ್ಲಿಯೂ ಋಣದ ನಾಶದಲ್ಲಿಯೂ ಬಹಳ ಉತ್ಸಾಹವಿದೆ ಎಂಬುದು ಅವರು ಕೃಷಿತೆಗೆಗು ಕೊಂಡ ಉತ್ಸಾಹದಿಂದ ವಿಶದವಾಗುತ್ತದೆ. ಟೆಂಟ್‌ಪೆಗ್ಗಿಂಗ್ ಪಂದ್ಯಾವಳಿಯ ಬಹುಮಾನ ಇನಾಮು ಬಟವಾಡೆಯ ಸಮಯ ಕ. ಚುಟ್ಟಿಯ್ಯನವರು ಕೊಟ್ಟ ಟೀ ಪಾರ್ಟಿಯಲ್ಲಿಯೂ ಕೊಡಗಿನ ಸಿಪಾಯಿಗಳ ಕಾರ್ಯಗಳನ್ನು ಶ್ಲಾಘಿಸಿ ಒಂದೆರಡು ಮಾತುಗಳನ್ನಾಡಿದರು.

ಒಂದು ದಿನ ಅವರು ಶ್ರೀ ಕಾವೇರಮ್ಮನ ಮೂಲಸ್ಥಾನವನ್ನು ಸಂದರ್ಶಿಸಲಿಕ್ಕಾಗಿ ತಲಕಾವೇರಿಗೆ ಹೋಗಿದ್ದರು. ಮತ್ತೊಂದು ದಿನ ನಾಪೋಕ್ಲಿಗಾಗಿ ವೀರಾಜಪೇಟೆಗೆ ಹೋಗಿ ಅಲ್ಲಿಯ ಶಾಲೆಯನ್ನು ಸಂದರ್ಶಿಸಿ ವಾಪಾಸು ಬಂದರು. ಅಲ್ಲಿ ಹೆಚ್ಚಿನ ಕೆಲಸಗಳನ್ನೇನು ಮಾಡಿದ್ದು ನಮಗೆ ತಿಳಿಯಬಂದಿರುವುದಿಲ್ಲ. ಫಾರೆಸ್ಟ್ ಇಲಾಖೆಯ ಅಧಿಕಾರಿಗಳ ಅಪೇಕ್ಷೆ ಮೇರೆ ಅವರು ತಾರೀಕು 4—6—23 ರಲ್ಲಿ ಮಡಿಕೇರಿಯಲ್ಲಿ ಮಾವುಕೂಟ ಟ್ರಾವೆಲ್ಲೆಯ ವಿಷಯ ನಡೆದ ಎಂಟರ್‌ಟೈನ್‌ಮೆಂಟಿನಲ್ಲಿ ಅವರು ಗೌರ್ಮೆಂಟಾಗಿ ಫಾರೆಸ್ಟಿನ ಉತ್ಪತ್ತಿಯ ವಿಷಯ ಕೆಲವು ಮಾತುಗಳನ್ನಾಡಿದರು. ಅಲ್ಲಿಂದ ಮೊನ್ನೆ ತಾನೇ ನಾಗರಹೊಳೆ ಫಾರೆಸ್ಟಿಗೆ ಹೋಗಿ ಅಲ್ಲಿ ಎರಡು ಮೂರು ದಿವಸ ಬೇಟೆಯಾಡಿ ವಾಪಾಸು ಬಂದರು. ನಮಗೆ ತಿಳಿದು ಬಂದ ಮಟ್ಟಿಗೆ ಇವಿಷ್ಟು ಅವರ ಪಬ್ಲಿಕ್ ಕೆಲಸಗಳಾಗಿವೆ. ಇದರ ಮಧ್ಯೆ ಅನೇಕ ಮಹನೀಯರು ಅವರ ಬಳಿಗೆ ಹೋಗಿ ಪ್ರೈವೇಟ್ ಭೇಟಿ ಕೊಟ್ಟು ಅನೇಕ ವಿಷಯಗಳ ಕುರಿತು ಮಾತನಾಡಿದ ನಂತರ ಹೀಗೆ ಭೇಟಿ ಕೊಟ್ಟವರಲ್ಲಿ ಮುಖ್ಯವಾಗಿ ಮುಡಿಕೇರಿಯವರು ಬೇರೆ ಊರಿನವರು ಮಾತ್ರ ಆಗಿದ್ದರೆಂದು ಕಂಡುಬರುತ್ತದೆ.

ಸ್ಥಳೀಯ ಸರಕಾರದ ಪಬ್ಲಿಕ್ ಅಧಿಕಾರಿಗಳು ಪ್ರತಿ ವರ್ಷಕ್ಕೆ ಬಂದಾಗ ತಮಗೆ ಬೇಕಾಗಿರುವ ಮುಖ್ಯ ಸಂಗತಿಗಳ ಕುರಿತು ಪಬ್ಲಿಕ್ ಮೀಟಿಂಗುಗಳಲ್ಲಿ ಮಾತಾಡುವರೆಂದೂ ತಮಗೆ ಬೇಕಾದ ನಿಯಮಾವಳಿಗಳನ್ನು ಕೊಡುವರೆಂದೂ ತಮ್ಮ ಕಷ್ಟ ನಷ್ಟಗಳನ್ನು ವಿಚಾರಿಸಿ ಅವುಗಳ ಪರಿಹಾರದ ಬಗ್ಗೆ ತಕ್ಕ ಏರ್ಪಾಡುಗಳನ್ನು ಮಾಡುವರೆಂದೂ ಪ್ರಜೆಗಳು ಎದುರು ನೋಡುತ್ತಿರುವುದು ಸಹಜವಾಗಿದೆ. ಕೆಲವು ವರ್ಷಗಳ ಹಿಂದೆ ಚೀಫ್‌ಕಮಿಷನರವರು ಕೊಡಗಿಗೆ ವರ್ಷಕ್ಕೊಂದಾವರ್ತಿ ಬಂದಲ್ಲಿ ಬಂದು ದರ್ಬಾರನ್ನು ಮಾಡಲಿಲ್ಲ. ದೇಶದ ಎಲ್ಲಾ ಭಾಗಗಳ ಪ್ರಜೆಗಳ ಕಷ್ಟನಷ್ಟಗಳ ಅರ್ಜಿಗಳನ್ನು ಕೇಳಿ ಅವುಗಳಿಗೆ ತಕ್ಕ ಪರಿಹಾರವನ್ನು ಕೂಡಲೆಯಾಗಲೀ ಕೆಲವು ದಿವಸಗಳ ನಂತರವಾಗಲೀ ಮಾಡಿಕೊಡುತ್ತಿದ್ದರು. ಕೆಲವು ವರ್ಷಗಳ ನಂತರ ಅರ್ಜಿಗಳನ್ನು ಕೆಲವು ದಿವಸಗಳಿಗೆ ಮುಂಚಿತವಾಗಿಯೇ ಸಾಹೇಬರವರ ತಿಳುವಳಿಕೆಗೆ ಕಳುಹಿಸಬೇಕೆಂತಲೂ ಹಾಗೆ ಕಳುಹಿಸದೆ ಹಠಾತ್ತನೆ ದರ್ಬಾರಿನಲ್ಲಿ ಅರ್ಜಿ ಕೊಡಕೂಡದೆಂತಲೂ ಹುಕುಂ ಆಯಿತು. ತರುವಾಯ ದರ್ಬಾರ್ ಅರ್ಜಿಯನ್ನು ಕೇಳುವ ಪದ್ಧತಿಯೇ ನಿಂತುಹೋಗಿ ದೇಶದ ಮುಖಂಡರುಗಳನ್ನಿ ಸಿಕೊಂಡ ವಿದ್ಯಾವಂತರೂ, ಐಶ್ವರ್ಯವಂತರೂ ಆದ ಮಹನೀಯರುಗಳಿಗೂ ದೊಡ್ಡ ಉದ್ಯೋಗಸ್ಥರಿಗೂ ಒಂದು ಟೀ ಪಾರ್ಟಿಯ ರೂಪಕ್ಕಿಳಿಯಿತು. ಅದೂ ಕೂಡ ಈಗ ಎರಡು ವರ್ಷಗಳಿಂದ ಮನ್ನಾ ಮಾಡಿ ಆದದರಿಂದ ಈಗ ಚೀಫ್‌ಕಮಿಷನರವರು ಮಡಿಕೇರಿಗೆ ಬಂದು, ಅಲ್ಲಿ ಎರಡು ಮೂರು ತಿಂಗಳು ಇದ್ದು ವಾಪಾಸು ಹೋದರೆಂದು ಪತ್ರಿಕೆಗಳು ಮೂಲಕವಾಗಲೀ ಯಾರಾದರೊಬ್ಬರ ಹೇಳಿಕೆಯಿಂದಾಗಲೀ ಗ್ರಾಮಾಂತರಗಳ ಜನರಿಗೆ ತಿಳಿದು ಬರುವದೇ ಹೊರತು ಅನ್ಯಥಾ ಇಲ್ಲ.

ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆಗೆ ಎರಡಾಣೆ ವರೆಗೆ ನೆಸ್ ಹೆಚ್ಚಿಸುತ್ತಲೆಂದು ದೇಶದ ಜನರು ಬಹಳ ಏನೋ ಅಸಮಾಧಾನಪಟ್ಟಿದ್ದಾರೆಂಬುದು ಚೀ|| ಕಮಿಷನರವರು ಅರಿತವರು. ಇದು ನಿಜವೋ ಎಂದು ಅಲ್ಲಲ್ಲಿ ಚಿಕ್ಕ ಸಭೆ ಕಟ್ಟಿ ಪಟ್ಟಿಗಳಲ್ಲಿ ರೈತರ ಮೀಟಿಂಗು ಮಾಡಿ ಅವರ ಅಭಿಪ್ರಾಯವನ್ನು ಕೇಳಬಹುದಾಗಿತ್ತು. ನ್ಯಾಯ ವಿಥಾಯದ ಸಭೆಯು ಕಳೆದ ಡಿಸೆಂಬರ್ ತಿಂಗಳೊಳಗೇನೇ ಅವರಿಗೆ ದೂರುಕೊಟ್ಟದ್ದೆಂದು ಕಳೆದ ವರ್ಷ ಈ ಸಮಯದಲ್ಲಿ ಇಲ್ಲಿಗೆ ಬಂದಿದ್ದಾಗ ಹೇಳಿದ್ದು ಇನ್ನೂ ಯಾಕೆ ಜರಿಗಿಲ್ಲವೆಂಬುದನ್ನೂ ತಿಳಿಸಿ. ಅದಕ್ಕಾಗಿ ತನ್ನ ಸ್ವಂತ ಹಣದಲ್ಲಿ ಜಗುವನ್ನು ಸ್ವಮತ್ತ ನಡೆಸುತ್ತಿದ್ದೇನೆಂದೂ ಆದು ತವವಾದಿಗಳಿಕ್ಕೆ ಬೇಲಿನ ಸರಕಾರದವರೇ ಕಾರಣರೆಂಕೆ ನುಡಿದ ಅವರ ತಕರಾರುಗಳಿಕ್ಕೆ ಇಂಥಾ ಕಾರಣಗಳೆಂತಲೂ ಖಚಿತ ದೇವರಿಗೆ ವಿವರಿಸಿ ಹೇಳಬಹುದಾಗಿತ್ತು. ಹೀಗೆ ವಿವರಿಸಿ ಹೇಳಲು ವೀರಾಜಪೇಟೆಯಲ್ಲಿ ನಡೆದ ಜಮಾಬಂದಿ ಕಾರ್ಯದ ಸಂಘದ ವಾರ್ಷಿಕ ಸಮ್ಮೇಳನವು ಒಂದು ಅನುಕೂಲವಾದ ಸಂದರ್ಭವಾಗಿತ್ತು. ಆ ಸಭೆಗೆ ದಯಮಾಡಿಸಿ ಎಂದು ಅವರಿಗೆ ಬಿನ್ನಹ ಪತ್ರವನ್ನು ಕಳುಹಿಸಿದ್ದರೂ ಕೂಡ ಅವರಿಗೆ ಅಲ್ಲಿಗೆ ಬರಲು ಸಮಯವಾಗಲಿಲ್ಲವೋ ಅಥವಾ ಅವರಿಗೆ ಮನಸ್ಸಾಗಲಿಲ್ಲವೋ ತಿಳಿಯದು. ಯುದ್ಧವಾದನಂತರ ಜಬ್ಬನು ನಸ್ಟ ಜೀವನ ನಡೆಸಲು ಬಂದವಕ್ಕೆ ಎರಡರಷ್ಟು ಖರ್ಚುಮಾಡಬೇಕೆಂಬುದನ್ನು ಸರಕಾರದವರು ಅರಿತುಕೊಂಡು ಸರ್ಕಾರಿ ಉದ್ಯೋಗಸ್ಥರ ಸಂಬಳವನ್ನು ಹೆಚ್ಚಿಸಿದರು. (ಅದರ ಪ್ರತಿಫಲವಾಗಿ ಈಗ ಅನೇಕ ಚಿಕ್ಕ ಉದ್ಯೋಗಸ್ಥರನ್ನು ಮನೆಗೆ ಕಳುಹಿಸುತ್ತಿರುವರು.) ಆದರೆ ರೈತರಿಗೂ ಜೀವಿಸುವುದು ಕಷ್ಟವೆಂದು ಗವರ್ನ್‌ಮೆಂಟಿನವರು ತಿಳಿದುಕೊಳ್ಳಲಿಲ್ಲ. ಅವರ ಉತ್ಪತ್ತಿಯನ್ನು ಹೆಚ್ಚಿಸಲು ಯಾವ ದಾರಿಯನ್ನು ತೋರಿಸಿಕೊಡದೆ ಅವರ ಮೇಲೆ ಹೊರೆಯನ್ನು ಹೆಚ್ಚಿಸಲಾರಂಭಿಸಿದರು. ಹೀಗಿರಲು ಚೀ|| ಕಮಿಷನರವರು ಗ್ರಾಮಾಂತರಗಳಿಗೆ ಹೋಗಿ ರೈತರ ವ್ಯವಸಾಯ ಕ್ರಮವನ್ನೂ ಅದಕ್ಕೆ ಉಂಟಾಗುವ ಕಷ್ಟನಷ್ಟಗಳನ್ನು ವಿಚಾರಿಸಿ ತಿಳಿದು ಕೊಂಡು ಅವುಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಪರಿಹಾರವನ್ನು ಆಲೋಚಿಸಲು ಇದೀಗ ತಕ್ಕ ಸಮಯವಾಗಿತ್ತು. ಈ ದೇಶದ ಜನರು ಕುಡುಕತನದಿಂದ ಎಷ್ಟೋ ಕೆಡುತ್ತಾ ಬಂದಿದ್ದಾರೆಂಬುದನ್ನು ಅವರು ಕೇಳದೆ ಇರಲು ಕಾರಣವಿಲ್ಲ. ಸರ್ಕಾರದವರ ಉತ್ಪತ್ತಿಯನ್ನು ಒಂದೇ ಸಲ ಥಕ್ಕನೆ ಇಳಿಸಿದಡೆ ಈ ದುರಭ್ಯಾಸವನ್ನು ಕಡಿಮೆ ಮಾಡುವುದು ತ್ಯಾಗ ಎಂಬುದನ್ನು ಆಯಾಯ ನಾಡಿನ ಜನರನ್ನು ಕೂಡಿಸಿ ಪರ್ಯಾಲೋಚನ ಬಹುದಾಗಿತ್ತು. ಅಲ್ಲಲ್ಲಿ ಒಂದು ಎಕ್ಸೈಸ್ ಕಮಿಟಿಯನ್ನು ಏರ್ಪಡಿಸಿ ಅವರು ಆಗಿಂದಾಗ್ಯೆ ಈ ವಿಷಯದಲ್ಲಿ ಕೊಡುವ ಅಭಿಪ್ರಾಯವನ್ನು ಸರಕಾರದವರು ಚೆನ್ನಾಗಿ ಆಲೋಚಿಸಿ ಅವುಗಳನ್ನು ಜಾರಿಗೆ ತರಬಹುದಾಗಿತ್ತು. ನಂಜರಾಜಪಟ್ನ ತಾಲೋಕಿನಲ್ಲಿ ತಿರುಗಾಡಿ ಅಲ್ಲಿಯ ಜನರ ಮೂಢತನವನ್ನು ಮುಖ್ಯವಾಗಿ ವಿಚಾರಿಸಿ ತಿಳಿದುಕೊಂಡು ಅವರ ಮೂಢತನವನ್ನು ಹೋಗಲಾಡಿಸಲು ಅವಶ್ಯವಾಗಿರುವ ವಿದ್ಯಾಭ್ಯಾಸಕ್ಕೆ ತಕ್ಕ ಏರ್ಪಾಡುಗಳನ್ನೂ ಅದರ ಕಡೆಯ ಲಕ್ಷ್ಯ ಬೇಕಾಗಿರುವ ನೀರನ್ನು ಒದಗಿಸಲು ಅನುಕೂಲತೆಗಳನ್ನೂ ಮಾಡಬಹುದಾಗಿತ್ತು. ನಾಲ್ಕು ನಾಡಿನ ಕಡೆ ಹೋಗಿ ಅಲ್ಲಿ ಜನರು ಅನೇಕ ವರ್ಷಗಳಿಂದ ತಮ್ಮ ಯಾತ್ರೆಗೆ ಮಳೆಗಾಲ ವಿಪರೀತ ನೋಡಿಹುದ್ದಾರೆ ಕಷ್ಟಗಳನ್ನು ವಿವರಿಸಿ ಕೇಳಬಹುದಾಗಿತ್ತು.

ಮೇಲೆ ಸೂಚಿಸಿದಂಥಾ ದೇಶಕ್ಕೆ ಅತ್ಯವಶ್ಯವಾದ ಸಂಗತಿಗಳಿಗೆ ಯಾವುದಕ್ಕೂ ಗಮನ ಕೊಡದೆ ಹೋದುದರಿಂದ ಚೀಫ್‌ಕಮಿಷನರವರ ಸಂದರ್ಶನವು ನಮ್ಮ ದೇಶಕ್ಕೆ ಹೇಳುವ ಪ್ರಯೋಜನವನ್ನುಂಟು ಮಾಡಿದೆಯೆಂದು ಹೇಳಲಾಗುವುದಿಲ್ಲ. ದೇಶದ ಜನರ ಮೌನತೆಯನ್ನೂ ರಾಜಭಕ್ತಿಯನ್ನೂ ಅವರ ಸೌಭಾಗ್ಯ ವ ತೃಪ್ತಿಯ ಸೂಚನೆಯೆಂದು ಚೀ| ಕಮಿಷನರವರು ಊಹಿಸಿಕೊಂಡರೆ ಕೇವಲ ತಪ್ಪು. ತಾನು ಅವರ ಮಧ್ಯದಲ್ಲಿ ಮೂರು ತಿಂಗಳು ಇದ್ದರೂ ಅವರು ಯಾವನೊಂದೂ ಅಸಮಾಧಾನವನ್ನು ಅತೃಪ್ತಿಯನ್ನು ಸೂಚಿಸಲಿಲ್ಲ. ಆದುದರಿಂದ ಪ್ರಜೆಗಳು ಸಂತುಷ್ಟರಾಗಿದ್ದಾರೆಂದು ಚೀ|| ಕಮಿಷನರವರು ಎಂದಿಗೂ ತಿಳಿದುಕೊಳ್ಳಬಾರದು. ಅವರು ಹಾಗೆ ತಿಳಿದುಕೊಂಡ ಪಕ್ಷಕ್ಕೆ ಅವರಿಗೆ ದೇಶದವರ ನಿಜ ಅಭಿಪ್ರಾಯವು ಇನ್ನೂ ಮನವರಿಕೆಯಾಗಿರುವುದಿಲ್ಲವೆಂದು ನಾವು ದೃಢವಾಗಿ ಹೇಳಬಲ್ಲೆವು. ಈ ದೇಶದವರಿಗೆ ಸರಕಾರದವರ ಮೇಲಿರುವ ವಿಶ್ವಾಸವನ್ನು ಸಮಾಧಾನ ಭಾವನೆಯನ್ನೂ ಸರಕಾರದವರು ಎಂದಿಗೂ ಕೆಡಿಸಬಾರದೆಂದು ಹಾರೈಸುತ್ತೇವೆ.

ಆಳವಿನ ಕೂಳ್.

ಭಗವಾನ್ ಶ್ರೀಕೃಷ್ಣನ ದೇವಾಲಯವು. ಗರ್ಭಗುಡಿಯಲ್ಲಿ ವೃದ್ಧಪುರೋಹಿತನು ಗೋಪಾಲನ ಪ್ರತಿಮೆ ಯ ಕಾತರಭಾವದಿಂದ ನೋಡುತ್ತ "ಎಲೈ ಗೋಪಾಲ! ಭಕ್ತವತ್ಸಲ ಇದೇನು ಮಾಡಿದೆ? ಎಂದು ಚಿಂತಿಸುತ್ತಿದ್ದಾನೆ. ದೇವಮಂದಿರದ ಇತರ ಸೇವಕರು ಪ್ರಾಂಗಣದಲ್ಲಿ ದೀವಟಿಗೆಗಳನ್ನು ಹಿಡಿದುಕೊಂಡು ಗರ್ಭಗುಡಿಯ ಹೊರಭಾಗದ ಸಂದಿಗಳನ್ನು ಹುಡುಕುತ್ತ ಇದ್ದಾರೆ. ಇಂದು ಸಂಜೆಯ ಹತ್ತಿರ ಪಟ್ಟ ಉಬ್ಬಸ ಸೂರ್ಯನು ದೀಪ ಉರಿಯುತ್ತಲಿದೆ. ಸೇವಕರು ಗುಡಿಯೊಳಗೆ ದಲ್ಲಿ ಸ್ಥಳವನ್ನು ಬಿಡದೆ ಹುಡುಕುತ್ತ ಹೋಗುತ್ತಾರೆ. ಮತ್ತೆ ಹುಡುಕಿದರು. ಯಾರ ಮುಖದಿಂದಲೂ ಮಾತು ಹೊರಡಲಿಲ್ಲ. ಪುರೋಹಿತನ ತಲೆಗೆ ದಿನಾಲು ಚೀರಿ ಬೀರುವ ಹೂಗಳನ್ನು ಹಾಕುತ್ತಿದ್ದೇನೆ. ಬೇರೊಬ್ಬ ಬ್ರಾಹ್ಮಣನು ದೇವರ ಎದುರಿನಲ್ಲಿ ಕಲ್ಲಿನ ಮೇಲೆ ಬಿದ್ದುಕೊಂಡಿದ್ದಾನೆ. ನಡುನಡುವೆ ಅಯ್ಯೋ ಪ್ರಭುವೆ, ನಮ್ಮ ಮೇಲೆ ಮುನಿಸೇಕೆ?" ಎಂದು ಅಳುತ್ತಿದ್ದಾನೆ.

ಬೆಳಗಾಗುತ್ತಿತ್ತು. ಆಕಾಶದ ತಾರೆಗಳು ಉಷಃಕಾಲಕ್ಕೆ ಪ್ರಭೆಗೆಟ್ಟು ಪೂರ್ವಗಗನಾಂಗಣದಲ್ಲಿ ಮಿನುಗುತ್ತಿದ್ದವು. ಪೂರ್ವದಿಕ್ಕು ಅರುಣನ ಚಿತ್ರವಿಚಿತ್ರ ವರ್ಣಗಳಿಂದ ಶೋಭಾಯಮಾನವಾಗಿತ್ತು. ಇಂದು ದಿನದಂತೆ ದೇವಾಲಯದಲ್ಲಿ ಆರತಿಯ ಶಬ್ದವು ಕೇಳಿಬರಲಿಲ್ಲ. ಗ್ರಾಮದ ಬಳಿಯ ಬಹುಜನರು ಗುಡಿಯ ಘಂಟಾನಾದವನ್ನು ಕೇಳಿಯೇ ಎದ್ದೇಳುತ್ತಿದ್ದರು. ಆದರೆ ಇಂದು ಬೆಳಗಾದರೂ ಅದೇಕೆ ಇನ್ನೂ ನಾದ ಕೇಳಿಸಲಿಲ್ಲವೆಂದು ಬಹಳ ಜನರು ಗುಡಿಯ ಕಡೆಗೆ ಬರುತ್ತಿದ್ದರು.

ಶ್ರೀಕೃಷ್ಣನ ಕೋಲ್ಮಿಂಚಿನಂಥ ಪ್ರಿಯ ಸೂರ್ಯೋದಯದ ಮೊದಲೆ ಗ್ರಾಮದಲ್ಲೆಲ್ಲಾ ಹಬ್ಬಿತು. ಜನರು ಗಾಬರಿಯಾದರು. ಭಾವಿಕರ ಭಕ್ತಿಯ ಅನಿಷ್ಟದ ಆತಂಕದಿಂದ ಭಯಕಂಪಿತರಾದರು. ಆತಂಕದಿಂದ ಬೇರೆ ಬೇರೆ ತಂಡಗಳಾಗಿ ಕಳವಳದಿಂದ ನೂಕುನುಗ್ಗಲಾಗಿ ಜನರು ಗುಡಿಯ ಕಡೆಗೆ ಓಡಿದರು.

ನೋಡನೋಡುವಷ್ಟರಲ್ಲಿ ಗುಡಿಯು ಜನರಿಂದ ತುಂಬಿಹೋಯಿತು. ಆ ಪಾಪ ತೋಟದ ನೆರೆಯವನು ಬಂದು ತನ್ನ ದಲವನ್ನು ನಿಲ್ಲಿಸಿ ಹಾಗೂ ಊರಿನವರನ್ನು ಕರೆದು ನಿಲ್ಲಿಸಿ, ಅನೇಕ ಭಕ್ತರು ಬಾಗಿಲಬಳಿಯಲ್ಲಿ ನಿಂತು ಕೈಗಳನ್ನು ಜೋಡಿಸಿ, "ಶರಣಾಗತರಕ್ಷಕನೂ ದೀನಪಾಲಕನೂ ಆದ ಶ್ರೀಕೃಷ್ಣ ನಮ್ಮ ಕಾಪಾಡು" ಎಂದು ಬೇಡಿಕೊಳ್ಳಹತ್ತಿದರು. ವೃದ್ಧ ಪುರೋಹಿತನು ಇನ್ನೂ ಸರಿಗೆ ಹಾಗೆ ನಿಂತುಕೊಂಡೇ ದೇವರ ದಯವನ್ನು ಯಾಚಿಸುತ್ತಿದ್ದನು. ಅವನ ದನಿಯು ಒಡೆದು ಹೋಗಿತ್ತು. ಮೈಯು ನಡುಗಿಹೋಗಿತ್ತು. ಆ ಮಹಾಮಹಿಮನು ಆ ಪುರೋಹಿತನಿಗೆ ತನ್ನ ಕರುಣೆಯ ಭಿಕ್ಷೆಯನ್ನು ನೀಡಲಿಲ್ಲ! ಆ ಕಲ್ಲಿನ ಮೂರ್ತಿಯು ಎಂದಿನಂತೆ ಸ್ಥಿರ ನಿಶ್ಚಲ. ಆ ಹಿರಿದಾದ ಕಣ್ಣುಗಳು ದಿನದಂತೆ ಉದಾಸೀನ!

ಎಷ್ಟೇ ಹುಡುಕಿದರೂ, ಶ್ರೀ ಕೃಷ್ಣನ ಆನುವಂಶಿಕ ಮುರಳಿಯು ಸಿಗಲಿಲ್ಲ. ಎಷ್ಟೇ ಪ್ರಾರ್ಥಿಸಿಕೊಂಡರೂ, ವಂತನು ತನ್ನ ಮುರಳಿಯನ್ನು ಮತ್ತೆ ಧರಿಸಿ, ಜನರನ್ನು ಸಮಾಧಾನಗೊಳಿಸಲಿಲ್ಲ. ಕೂಡಿದ ಜನರು ಬೇಸತ್ತು ಮನೆಬ

[illegible]ಕ್ಕೆ ಮನೆಗೆ ಹೊರಟರು. " ಕೊಳಲು ಎಲ್ಲಿ [illegible]ಗಬೇಕು? [illegible]ಯಲ್ಲಿರುತ್ತಿದ್ದ ಯಶವನ್ನು ಜನರ ಮ[illegible]ನ್ನು ಚನ್ನಾಗಿ ಹುಡುಕಿಸಿದರೆ ತಾನೇ ಸಿಗುವುದು! " [illegible]ದೇ ಜನರ [illegible] ಸಾಧ್ಯವಾಗಿತ್ತು.

ಶ್ರೀಮತಿಯು ವೃದ್ಧ ಪುರೋಹಿತನ ಏಕಮಾತ್ರ ಪುತ್ರಿ. [illegible] ಮುದುಕನ ಮನೆಯಲ್ಲಿ ಇವಳ ಹೊರತು ಬೇರೆ ಯಾ[illegible] ಇರಲಿಲ್ಲ. [illegible] ಪುರೋಹಿತನಿಗೆ ಮುಂಬರೀಧರನ ಕರುಣೆ[illegible]ದ ಯಾವುದ[illegible] ಕೊರತೆಯಿದ್ದಿಲ್ಲ. ವೃದ್ಧನು ಮಾ[illegible]ನಳಾದ ಈ [illegible]ಳನ್ನು ಅತ್ಯಂತ ಪ್ರೀತಿಯಿಂದ ಪಾಲ[illegible] ಶ್ರೀಮತಿಯು ತಂದೆಯ ಪ್ರತಿ[illegible] ಹಾಯಕಳಾಗಿದ್ದಳು. [illegible] ತಂದೆಯನ್ನು ಸದಾ ಸಂತೋಷಪಡಿ[illegible] ಭಗವತವನ್ನು ಓದಿತೊಡಗಿದನೆಂದರೆ, [illegible] ಒಂದು [illegible] ಏಕಾಗ್ರಮನದಿಂ[illegible] ಗೋಪಾಲನ ಲೀಲೆಗಳನ್ನು ಕೇಳಿ ಅವಳ [illegible] ಕಣ್ಣುಗಳಿಂದ ಆನಂದಾಶ್ರುಗ[illegible]. ಪ್ರಫುಲ್ಲವಾದ ಗಾಳಿಯ ಹೊಡ[illegible] ಸಿಕ್ಕಲತೆಯಂತೆ [illegible] ದೇಹವು ನಡುಗುವುದು. [illegible] ವೃದ್ಧನು ತನ್ನ ಈ ಆದರ[illegible] ಹಾಸುಗೆಯ ಮೇಲೆ ಮಲಗಿಸುವನು. " [illegible] ಇದೇನು ನಿನ್ನ [illegible]ಯು? ನಿಜವಾದ ನಾನು [illegible] ಮಹಿಮೆಯನ್ನು [illegible]ಯುವುದೆಂತು? " ಎಂದು ಅನ್ನು[illegible]

ಶ್ರೀಮತಿಗೆ ಹದಿನ[illegible] ವರುಷಗಳಾಗಿದ್ದರೂ ವಿವಾಹ[illegible]ಲ್ಲ. [illegible] ಮುದುಕ[illegible] ಮಗಳ ಮದುವೆ [illegible] ಈ ಬಗ್ಗೆ ವೃದ್ಧನನ್ನು [illegible]ರಾದರೂ [illegible] ಅವನೆಂದೇಕೆ? ಇವಳ [illegible] ಮಗಳು [illegible]ವುದು. [illegible] ಹೋಗಿ [illegible] ಉತ್ತರ [illegible] ನೆರೆಹೊರೆಯ ಜನರು [illegible] ಅವಸರಮಾಡಿ [illegible] ಎಂದು [illegible] ಶ್ರೀಮತಿ [illegible] ಕಾರ್ಯಗಳಿಂದ [illegible] ವಿಸ್ಮಿತರಾಗಿದ್ದರು. ಅವ[illegible] ನಗುವಳು, ಒಮ್ಮೆ ಅಳುವಳು. [illegible] ಅನಂತವಾದ [illegible] ಆಕಾಶದ ಕಡೆಗೆ ಒಂದೇ [illegible] ಸಮಯದಲ್ಲಿ [illegible] ಮುದುಗಿಯ ರೋಗ ವಿಚಿತ್ರವೂ ಭಯಂಕರವೂ [illegible] ಎಂದು ಜನರು ಭಾವಿಸಿದ್ದರು.

ಶ್ರೀಮತಿಯು ರೂಪವತಿ[illegible] ಇವಳ ಲಾವಣ್ಯಪ್ರಭೆ[illegible] ಬ್ರಾಹ್ಮಣನ ಮನೆಯ [illegible] ಶೋಭಾಯಮಾನವಾಗಿ[illegible] ಸಾಯಂಕಾಲದ ಆರತಿ [illegible] ಸಮಯದಲ್ಲಿ ಶ್ರೀಮತಿ [illegible] ಕಟ್ಟಿದ [illegible] ಮಾಲೆಯನ್ನು ಗೋ[illegible] ಯಾತ್ರಿಕರು ಶ್ರೀಮತಿಯ [illegible] ವಿಸ್ಮಯದಿಂದ ನೋ[illegible]. ಶ್ರೀಮತಿಯ [illegible] ಕೇಳಬರುತ್ತಿರು[illegible] ಪೋಭೆಯೂಗುವದು! [illegible] ಸೌರಭದಿಂದ ವ್ಯಾ[illegible] ಈ ದೇವಾಲಯದಲ್ಲಿ ಶ್ರೀಕೃಷ್ಣನು ಪ್ರತಿಮೆಯ [illegible]ದ್ದರೂ, ಲಕ್ಷ್ಮಿಯು ನ[illegible]ಗಿರುವಳೆಂದು [illegible] ತಾವು ಲಕ್ಷ್ಮಿಯ [illegible] ದರ್ಶನದಿಂದ ಪುನೀತರಾ[illegible] ತಿಳಿಯುತ್ತಿ[illegible] ಆನಂದಿತನಾದ ವೃದ್ಧಪುರೋ[illegible]ನು ಕೈಜೋಡಿಸಿ [illegible]ದಿಂದ ತನ್ನ ಈ ಮಗಳಿಗೆ [illegible] ದೇವರ ಬಳಿ [illegible] ಭಿಕ್ಷೆಯನ್ನು ಬೇಡುತ್ತಿ[illegible].

[illegible]ಮತಿಯು ತಂದೆಯ ನಿರ್ಜನ[illegible] ಕಾಲಕಳೆದಿ[illegible] ಸ್ವಭಾವಿಕವಾದ [illegible] ಬೆಡಗಿನ [illegible] [illegible]

ಶ್ರೀಮತಿಗೆ ತನ್ನ ಹಾಸುಗೆಯನ್ನು ಸಿದ್ಧಪಡಿಸಿಕೊಳ್ಳುವದೂ ಒಂದು ಮಹತ್ವದ ಕಾರ್ಯವಾಗಿತ್ತು. ಅವಳ ಮಲಗುವ ಮನೆಯು ಸದಾ ಸ್ವಚ್ಛವೂ ಸುವಾಸಿತವೂ ಆಗಿರುತ್ತಿತ್ತು. ಶ್ರೀಮತಿಯು ಬಿಮ್ಮಯು [illegible]ವಾಗಿ ರದಿದ್ದರೂ, ಅತ್ಯಂತ ಸ್ವಚ್ಛವಾಗಿರುತ್ತಿತ್ತು. ಪ್ರೇಮ[illegible] [illegible]ದ ಬಾಲಿಕೆಯು ಮನೋರಮಣನ ಮಾರ್ಗಪ್ರತೀಕ್ಷೆಯ [illegible]ದ್ದೇಶದಿಂದ ಸುಸಗೆಯಟ್ಟು ಹಾಸುಗೆಯನ್ನು [illegible] ವಂತೆ ಶ್ರೀಮತಿಯು ದಿನಾಲು ತನ್ನ ಹಾಸುಗೆಯನ್ನು ಸಿದ್ಧಪಡಿಸುವಳು. [illegible] ಗ್ರಾಮದ ಯಾತ್ರಾ ಜನರು ಮಲಗಿದ [illegible] ರಾತ್ರಿಯಲ್ಲಿಯೂ ಶ್ರೀಮತಿಯು [illegible] ದೀಪದ [illegible] ಮಾಲೆಗಳನ್ನು ಹಿಡಿದುಕೊಂಡು ದೇವರ ಪ್ರಾರ್ಥನೆಯ [illegible] ಕುಳಿತಿರುತ್ತಿದ್ದಳು. [illegible] [illegible] ಶ್ರೀಮತಿಗೆ ಕನಸಿನಲ್ಲಿ [illegible] [illegible]ವುದು [illegible] ಇಂಥಾದ [illegible] ಸ್ಪಷ್ಟಸ್ಪಷ್ಟತರವಾಗುತ್ತ ನಡೆಯಿತು. [illegible] ಮುರಲೀಧರನು [illegible] ಒಂದ [illegible] ಶ್ರೀಮತಿಯು ಈ ಸುಖಸ್ವಪ್ನವನ್ನು [illegible] ಗಾಢವಾದ ನಿದ್ರೆಗೊಳಗಾಗುವಳು. [illegible] ವನ್ನು [illegible] ಲಂಕೃತವಾಗಿರುತ್ತಿದ್ದುದನ್ನು ನೋಡುವಳು.

ಶ್ರೀಕೃಷ್ಣನ [illegible] [illegible] ವೃದ್ಧಪುರೋಹಿತನ [illegible] [illegible] ರಾಜಸೇವಕರು ಕೊಳಲಿನ [illegible]ಯನ್ನು [illegible] ಶ್ರೀಮತಿಯು ಗತರಾತ್ರಿಯ ಸುಖಸ್ವಪ್ನವನ್ನು ನೆನೆಯುತ್ತ ಹಾಸಿಗೆಯ ಮೇಲೆ ಹೊರಳಾಡುತ್ತಿದ್ದಳು. ಸಿಪಾಯಿಗಳ ಗದ್ದಲವನ್ನು ಕೇಳಿ ನೆರೆಹೊರೆಯ ಜನರು ಕೂಡಹತ್ತಿದರು. ವೃದ್ಧಬ್ರಾಹ್ಮಣನು ಬೇರೆ ಒಣಗಿಸಿಕೊಂಡು ಸಿಪಾಯಿಗಳ ಒಳಗೆ ಹೋದನು.

ಕುಸುಮೋತ್ಸವದ ಮೇಲೆ ಶ್ರೀಮತಿಯು ಶಯ್ಯೆಯನ್ನು ತ್ಯಜಿಸಿ, ಕಿಡಿಕಿಯ ಒಳಿಯಲ್ಲಿ ನಿಂತು ನೋಡಿದಳು. [illegible] ಗದ್ದಲವು ಒಮ್ಮೆಲೆ ಇಲ್ಲದಂತಾಗಿ [illegible] ಲಿಗೊಂಡಿತು. ಕಳೆದ ರಾತ್ರಿಯ ಸ್ವಪ್ನದ ಸ್ಮೃತಿಯಿಂದ ಈಗಲೂ ಅವಳ ಮುಖದಲ್ಲಿ [illegible] ಅವಳ ನಿಷ್ಕಳಂಕಮುಖದಲ್ಲಿ ಸಂದೇಹಕ್ಕೆ ಸ್ವಲ್ಪಾದರೂ ಸ್ಥಳವಿರಲಿಲ್ಲ.

ಮುಖ್ಯ ಸಿಪಾಯಿಯು ಕುಸುಮೋತ್ಸವ [illegible] ಬಳಿಕ ತನ್ನ ಜನರಿಗೆ ಪುರೋಹಿತನ ಮನೆಯನ್ನು ಹೊಗುವದಕ್ಕೆ ಅನುಜ್ಞೆಯ ಕೊಟ್ಟನು. ಬ್ರಾಹ್ಮಣನು ಮಾರ್ಗದರ್ಶಕನಾಗಿ ಹೋದನು. ಶ್ರೀಮತಿಯು ತಂದೆಯ ಬಳಿಗೆ ಬಂದು ನಿಂತುಕೊಂಡಿದ್ದಳು.

ಶ್ರೀಮತಿಯ ಶಯನಗೃಹದಲ್ಲಿ ಶಯ್ಯೆಯ ಕೆಳಗೆ ಮುರಲಿಯು ಸಿಕ್ಕಿತು. ಮುಖ್ಯಸಿಪಾಯಿಯು ಈ ಸುದ್ದಿಯನ್ನು ಪುರೋಹಿತನಿಗೆ ತಿಳಿಸಿದನು. ಪುರೋಹಿತನು ಮಗಳ ಕಡೆಗೆ ಒಮ್ಮೆ [illegible] ನೋಡಿದನು. ಅವಳ ಮುಖದಲ್ಲಿ ಅಪರಾಧದ [illegible] ತೋರಲಿಲ್ಲ. ಮುದುಕನು [illegible] ಕಳಂಕವನ್ನು ಮರೆದು, ಮುರಲಿಯನ್ನು ಹೊತ್ತ [illegible] ಸಿಪಾಯಿಯನ್ನು ಕೇಳಿದನು. " ತಾವು ಮುದುಕನ [illegible] ಕಾರಣ ನಿಮ್ಮನ್ನು ಬಂಧಿಸುವದಿಲ್ಲ. ನಿಮ್ಮ ಮಗಳನ್ನು ಹೊಡಿರಿ. " ಎಂದು ಹೇಳಿ ಮುಖ್ಯ ಸಿಪಾಯಿಯು ಸಂಕೇತ ಮಾಡಿದನು. ಇಬ್ಬರು ಸಿಪಾಯಿಗಳು ಬಂದು ಬ್ರಾಹ್ಮಣನ ಕೈಯನ್ನು ಹಿಡಿದರು. ಬ್ರಾಹ್ಮಣನ ಕಣ್ಣುಗಳಿಂದ ಆಶ್ರುಗಳು [illegible] ಅವನು ಕಾತರತೆಯಿಂದ " ಮಗು ಇದೇನು ಮಾಡಿದೆ? " ಎಂದೆಂದು ಹೊರಟನು. ಸಿಪಾಯಿಗಳು ಅವನನ್ನು ಮುಂದೆ ಹಾಕಿಕೊಂಡು ನಡೆದರು. ಶ್ರೀಮತಿಯು ಆಕಾಶದ ಕಡೆಗೆ ನೋಡುತ್ತಿದ್ದಳು. ಅವಳ ಮುಖದಿಂದ [illegible] ಆಲಿಕೆಯಾದ [illegible] ಪ್ರಜಾ[illegible] ನೋಡುತ್ತಿದ್ದರು.

ಶ್ರೀಮತಿಯು ರಾತ್ರಿಯಲ್ಲಿ ಹಾಸು[illegible] [illegible] ಕೊಳಲು [illegible] [illegible] ಹೊರೆಸಿದು [illegible] ಹಿಮದ [illegible] ಶ್ರೀಮ[illegible] ಕಾರದ ತಂದೆಯು [illegible] ಕಳಂಕ [illegible] [illegible] ಕೂಡಿದ ಜನರು ತಮ್ಮ ತಮ್ಮ ಮನೆಗೆ ಹೋದರು.

ವೃದ್ಧಪುರೋಹಿತನು ನಿರ್ಜನವಾದ ಗಾಢವಾದ [illegible] ಕೈಜೋಡಿಸಿ ಪ್ರಾರ್ಥಿಸುತ್ತಿದ್ದನು. " ಲಕ್ಷ್ಮೀರಮಣ, ಇದೇನು ಮಾಡಿದೆ? ನನ್ನ ಮಗಳು ನಿರಪರಾಧಿಯು. ಅವಳ ಮೇಲೆ ಈ ಕಳಂಕವನ್ನು ಹೊರಿಸುವದಕ್ಕೆ ನಿಕೆ ಮನಸುಮಾಡಿದೆ? ಅವಳ ಮೇಲೆ ಅಪರಾಧವನ್ನು ಹೊರಿಸಿದರೇನೇ

ನಿನಗೆ ಆನಂದವಾಗುತ್ತಿದೆಯೇ? ಇಂತಹ ಕೆಟ್ಟ ಆಟವನ್ನು ಯಾಕೆ ಹೂಡಿದೆಯಪ್ಪ? ನನ್ನ ಮಗಳ ಅವಸ್ಥೆಯು ಈ ಹೃದಯವಿದಾರಕ ಸಂಗತಿಯಿಂದ ಏನಾಗಿದೆಯೋ ಯಾರು ಹೇಳಬೇಕು? ಅವನು ಒದಗಿರುವಳೋ ಇಲ್ಲವೋ? ದಯಾಘನ, ಈ ಪ್ರಸಂಗದಿಂದ ನನ್ನನ್ನು ಪಾರುಮಾಡು. ಮಗಳ ಮೇಲೆ ಹೊತ್ತ ಕಳಂಕವನ್ನು ಕಳೆದು ರಕ್ಷಿಸು! "

ಶಾಸ್ತ್ರ[illegible]ದ ಬೇಗನೆ [illegible] ಬಾಗಿಲವು ಝಗ್[illegible] [illegible] ಬ್ರಾಹ್ಮಣನು [illegible] [illegible] ನೋಡಿ ಅತ್ಯಂತ [illegible] ಬಲ್ಲೆಯನ್ನೆತ್ತಿ ಅರಸನಿಗೆ ಆಶೀರ್ವಾದಮಾಡಿದನು.

ಅರಸನು ಬ್ರಾಹ್ಮಣನನ್ನು ಆದರದಿಂದ ಕರೆತಂದು ಉಚ್ಚಾಸನದಲ್ಲಿ ಕುಳ್ಳಿರಿಸಿದನು. ತನ್ನ ಸ್ವಪ್ನದ ಸಂಗತಿಯನ್ನು ನಿವೇದಿಸಿದನು. " ನನ್ನ ಕನಸಿನಲ್ಲಿ ಸಾಕ್ಷಾತ್ ಶ್ರೀಕೃಷ್ಣನು ಕಾಣಿಸಿಕೊಂಡು ಶ್ರೀಮತಿಯ [illegible] ಸಾಕ್ಷಾತ್ [illegible] ಯ ಅಪರಾಧದಿಂದಲೂ, ಕೊಳಲಿನ [illegible] ಶ್ರೀಮತಿಯಾಗಲೀ ಪುರೋಹಿತನಾಗಲಿ ಅಪರಾಧಿಗಳಲ್ಲ. [illegible] ವನ್ನು ಹೂಡಿದವನು ನಾನು! ಅರ್ಥಾತ್ ಈ ವಿಷಯದಲ್ಲಿ ನಾನೇ ಅಪರಾಧಿಯು! " ಎಂದು ಹೇಳಿದನು.

ಇದನ್ನು ಕೇಳಿ ಬ್ರಾಹ್ಮಣನ ವಿಸ್ಮಯ [illegible] ಅತಿಶಯವಾಯಿತು. [illegible] [illegible] ಮರೆದು ಬಿದ್ದುಬಿಟ್ಟನು. ರಾಜನ ಅಪ್ಪಣೆ ಮೇರೆಗೆ ಸೇವಕರು ಉಪಚಾರಮಾಡಿದರು. ಪುರೋಹಿತನು ಪುನಃ ಎಚ್ಚತ್ತನು. ಗತಸಂಗತಿಗಳನ್ನು ಸ್ಮರಿಸಿ " [illegible] ನಿನ್ನ [illegible] ಅಗಾಧವಾದುದು! " ನಾನು ಧನ್ಯನಾದೆನು [illegible] ಯ ಆದರಿಸಿಕೊಂಡನು.

ವೃದ್ಧನು [illegible] ನನ್ನ [illegible] ಅಪ್ಪಣೆಕೊಟ್ಟರೆ ನಾನು ಮನೆಗೆ ಹೋಗುವೆನು. " ಎಂದು ಕೇಳಿದನು.

" ಹೋಗಲಿಕ್ಕೆ ಅಡ್ಡಿಯೇನೂ ಇಲ್ಲ, ಆದರೆ ಕುಸುಮ ತಡೆಯಿರಿ. ನಿಮಗೋಸುಗ ಏನನ್ನು ಸಿದ್ಧಪಡಿಸಲು ಸೇವಕರಿಗೆ ಅಪ್ಪಣೆ ಮಾಡಿದ್ದೇನೆ. ಕನಸಿನಲ್ಲಿ ಭಗವಂತನು ನನಗೆ ಒಂದು ಅಪ್ಪಣೆಯನ್ನು ಮಾಡಿದ್ದಾನೆ. ಆ ಅಪ್ಪಣೆಯ ಮೇರೆಗೆ ನಾನು ಮಹಾ ಸಮಾರೋಹದಿಂದ ಗುಡಿಗೆ ಬಂದು, ಶ್ರೀಕೃಷ್ಣನ ಮೂರ್ತಿಯ ಬಳಿಯಲ್ಲಿ ಲಕ್ಷ್ಮೀಸ್ವರೂಪಿಣಿಯಾದ ನಿಮ್ಮ ಮಗಳನ್ನು ಕುಳ್ಳಿರಿಸಿ ಬರಬೇಕಾಗಿದೆ. ಇಂದು ಇಲ್ಲಿಯೇ ನಿಮ್ಮ ಆತಿಥ್ಯವಾಗಲಿ. ಸಾಯಂಕಾಲದಲ್ಲಿ ನಾವೂ ನೀವೂ ಕೂಡಿಯೇ ಹೊರಡೋಣ " ಎಂದು ಅರಸನು ಹೇಳಿದನು. ಇದಕ್ಕೆ ಪುರೋಹಿತನು ಒಪ್ಪಲಿಲ್ಲ. ಅರಸನು ಹಾಗೇ ಆಗಲೆಂದು ಹೇಳಿ, ಬ್ರಾಹ್ಮಣನನ್ನು ಮುಂದೆ ಕಳುಹಿಕೊಟ್ಟನು.

ಪೊಡವಿಪನು ಪ್ರದೋಷಕಾಲಕ್ಕೆ ತನು[illegible]ದಿಂದ ಗುಡಿಗೆ ಬಂದನು. ರಾಜವೈಭವದಲ್ಲಿ ಯಾವುದರ ಕೊರತೆಯೂ ಇರಲಿಲ್ಲ. ಮುಂಭಾಗದಲ್ಲಿ ಅನುಪಮ ವಾದ್ಯಗಳು ಬಾರಿಸುತ್ತಿದ್ದು, ಗ್ರಾಮದ [illegible] ಕೇವ್ವರ[illegible] ಬಿಟ್ಟವು. ಅಂಬಾರಿಯಲ್ಲಿ ಮೆರೆಯುತ್ತ ಬರುತ್ತಿದ್ದ ಅರಸನ ಎಡಬಲಭಾಗಗಳಲ್ಲಿ ರಾಜ್ಯದ ಪ್ರಮುಖಜನರು ನೂತನ ವೇಷಭೂಷಣದಿಂದ ಶೋಭಿಸುತ್ತ ವಾಹನಗಳನ್ನೇರಿಕೊಂಡಿದ್ದರು. ಅರಸನ ಹಿಂಗಡೆಯಲ್ಲೂ ಮುಂದೂ ಶಸ್ತ್ರಧಾರಿಗಳಾದ ಸೈನಿಕರಿದ್ದರು. ಗುಡಿಯ ಒಳಿಯಲ್ಲಿ ಒಂದ[illegible] ಅರಸನು [illegible] ಪ್ರಮುಖಜನರೊ[illegible] ರಮಾಡಿದನು. ಗುಡಿಯಲ್ಲಿ ಸಾಯಂಕಾಲದ ಆರತಿಯು [illegible]ದೆಯಿತು. ಪುರೋಹಿತನು ಅರ್ಚನೆಯ ಕೆಲಸ ಮುಗಿದ ಬಳಿಕ ಫಲಪುಷ್ಪ[illegible]ಗಳನ್ನು ಕೊಟ್ಟು ಅರಸನನ್ನು ಆಶೀರ್ವದಿಸಿದನು.

ಜಾನಕಮುನಿ[illegible] " ಕಾಶವು [illegible]ವಾಗಿತ್ತು. ಸ್ವಚ್ಛವಾದ ಬೆಳದಿಂಗಳು ಬಿದ್ದಿತ್ತು. ಅರಸನು ಪುರೋಹಿತನ [illegible] ಶ್ರೀಮತಿಯನ್ನು ಕರೆತರುವದಕ್ಕೆ ನಡೆದನು. ಪುರೋಹಿತನು ಅರಸನನ್ನು ಆದರದಿಂದ [illegible] ಕುಳ್ಳಿರಿಸಿದನು. [illegible] [illegible] ಬ್ರಾಹ್ಮಣನು, ಶ್ರೀ[illegible]

[illegible] ಎಂದು [illegible] ಒಂದು [illegible] ವಿವಾಹ, ' ಎಂದು [illegible] ಹೇಳಿದನು. [illegible] ಶ್ರೀಕೃಷ್ಣನು ತನ್ನನ್ನು [illegible] ಅರಸನು ಪ್ರಸ್ತ[illegible] ಸಾಧ್ಯ[illegible] [illegible] ನ ನಂಬಾವಿಟ್ಟ [illegible] ಅರಸನೂ ಪುರೋಹಿತನೂ ಆಶ್ಚರ್ಯಚಕಿತರಾದರು.

ಅರಸನೂ, ಪುರೋಹಿತನೂ ಬಳಿ[illegible] ಹೋಗಿ ನೋಡಿದರು. ಶ್ರೀಮತಿಯು ಪ್ರಾಣವು ದೇಹವನ್ನು ಬಿಟ್ಟು

ಹೋಗಿತ್ತು. ನಿಶ್ಚೇಷ್ಟವಾದ ದೇಹವು ಸ್ವಚ್ಛವಾದ ಸ್ಥಳದಲ್ಲಿ ಬಿದ್ದಿತ್ತು. ಈ ದೇಹದ ಮೇಲೆ ಸೂರ್ಯರ ಸುವಾಸನೆಯ ಹೂಗಳು ಹರಡಿದ್ದವು. ಶವದ ಮುಖದಲ್ಲಿ ಮಂದಹಾಸವು ಮಿನುಗುತ್ತಲಿತ್ತು.

ಅರಸನು ಪುಷ್ಪೋಂಡು ಸುಮುಹೂರ್ತದಲ್ಲಿ ಅಸ್ತವಾತವಿನ ಶ್ರೀಮತಿಯ ಪ್ರತಿಮೆಯನ್ನು ಮಾಡಿಸಿ ಇದನ್ನು ಶ್ರೀಕೃಷ್ಣನ ಗುಡಿಯಲ್ಲಿ ಸ್ಥಾಪಿಸಿದನು.

"ಜಯಕರ್ನಾಟಕ"

ವರ್ತಮಾನ ಸಂಗ್ರಹ

ಒಳದೇಶ.

ಮಳೆಗಾಲವಾದುದರಿಂದ ಜುಲೈ ತಾರೀಖು ಒಂದರಿಂದ ಪಂಚನೇಯ ಬಸ್ಸು ಸರ್ವೀಸು ವೀರಾಜಪೇಟೆಯಿಂದ ಒಜೇಲಿಗೆ ವಾರಕ್ಕೆ ಮೂರು ದಿವಸ ಮಾತ್ರ ಅಂದರೆ ಸೋಮವಾರ ಗುರುವಾರ ಮತ್ತು ಶನಿವಾರ, ನಡೆಯುವುದೆಂದು ತಿಳಿಯಬರುತ್ತದೆ.

ನಾಗರಹೊಳೆಯಿಂದ ಮಡಿಕೇರಿಗೆ ಚೀಫ್ ಕಮಿಷನರವರು ತಾ|| 12 ರಲ್ಲಿ ಕಮಿಷನರವರು ತಾ|| 14ರಲ್ಲಿಯೂ ವಾಪಾಸು ಬಂದರು.

ಕಳೆದ ವಾರ ಇಂಡಿಯಾ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ರವರು ಮದ್ರಾಸು ಚೀಫ್ ಕನ್ಸರ್ವೇಟರು ಮತ್ತು ಬಲವು ಸರ್ಕಲ್ ಕನ್ಸರ್ವೇಟರ ಗಳೊಡನೆ ದಕ್ಷಿಣ ಕೊಡಗಿನ ಕಾಡುಗಳನ್ನು ಪರೀಕ್ಷೆ ಮಾಡಿದರಂತೆ. ಮೂರು ವರ್ಷಕ್ಕೊಮ್ಮೆ ಇಂಥಾ ಪರೀಕ್ಷೆಯು ನಡೆಯುವುದು.

ಈ ತಾರೀಖು 15 ನೇ ಶುಕ್ರವಾರದಿನ ಕೊಡಗಿನ ಉಪಾಧ್ಯಾಯರುಗಳ ಸಂಘದ ಪ್ರತಿನಿಧಿಗಳಾದ ಮ|| ರಾ|| ಯಂ ಸುಬ್ರಾಯರು, ವೆ|| ಬಿ ಎಸ್ ಮಾದಪ್ಪನವರ ಮ|| ಎ ಆರ್ ಮಂಜುನಾಥರಾಯರ ಮತ್ತು ವೆ|| ಸೈಯ್ಯದ್ ಬುಡನ್ ಸಾಹೇಬರವರು ಹುಜೂರ್ ಚೀಫ್ ಕಮಿಷನರವರಿಗೆ ಭೇಟಿಕೊಟ್ಟು ಬೋರ್ಡ್ ಶಾಲಾ ಉಪಾಧ್ಯಾಯರುಗಳ ಕಷ್ಟವನ್ನು ವಿವರಿಸಿ ಸರ್ಕಾರಿ ಶಾಲೆಗಳ ಉಪಾಧ್ಯಾಯರ ಸಂಬಳದ ಮಟ್ಟಕ್ಕೆ ಇವರದ್ದು ಸಹ ತರಬೇಕೆಂದು ಅರಿಕೆ ಮಾಡಿಕೊಂಡದ್ದಕ್ಕೆ ಈ ಸಾರಿ ಸೆಸ್ ಹಾಕಿದ ಪೂರ್ತಿ ಮೊಬಲಗನ್ನು ಉಪಾಧ್ಯಾಯರುಗಳ ಸಂಬಳದ ಬಗ್ಗೆಗೆ ಉಪಯೋಗಿಸಲು ಸಹಾಯ ಮಾಡುತ್ತೇನೆಂಬದಾಗಿ ಚೀ|| ಕಮಿಷನರು ಅಪ್ಪಣೆ ಕೊಟ್ಟರೆಂದು ವರ್ತಮಾನ.

ಕಳೆದ ವಾರ ಬಿಸಗೂರು ಗ್ರಾಮದಲ್ಲಿ ಪ್ಲೇಗಿನಿಂದ ಒಂದು ಮರಣವಾಯಿತ್ತೆಂದು ತಿಳಿಯಬರುತ್ತದೆ.

ಕಳೆದ ವಾರ ಚೀಫ್ ಕಮಿಷನರ್ ಮತ್ತು ಇತರರು ನಾಗರಹೊಳೆ ಫಾರೆಸ್ಟಿನಲ್ಲಿ ಶಿಕಾರಿಯಿಂದ, ಚೀಫ್ ಕಮಿಷನರು ಒಂದು ಕಾಡುಕೋಣವನ್ನೂ ಇಂಜಿನೀಯರ್ ಸಾಹೇಬರು ಒಂದು ಕರಡಿಯನ್ನೂ ಕಮಿಷನರು ಒಂದು ದೊಡ್ಡ ಕರಡಿಯನ್ನೂ ಗುಂಡು ಹೊಡೆದಿರುತ್ತಾರೆ.

ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ಕಳೆದ ತಾರೀಖು 11-12-13 ರಲ್ಲಿ ಮಳೆ ಸಾಧಾರಣ ಹೊಡೆದು ಈಗ ಬಿಸಿಲು ಕಾಯುತ್ತಿತ್ತು. ಶನಿವಾರ ಸಾಯಂಕಾಲದಿಂದ ಪುನಃ ಸ್ವಲ್ಪ ಮಳೆ ಶುರುವಾಗಿದೆ.

ರಾಜಕಾರ್ಯ ಪ್ರಸಕ್ತ ರಾಯಬಹದ್ದೂರು ಮರ್ಯಾಯ ಪಂಡ್ರ ಮುತ್ತಣ್ಣನವರ ಅಕಾಲಮರಣಕ್ಕಾಗಿ ಕಳೆದ ತಾರೀಖು 11 ರಲ್ಲಿ ಪೊನ್ನಂಪೇಟೆಯಲ್ಲಿ ಮ|| ಪುತ್ತಮನೆ ಗಣಪಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗು, ಹುದಿಕೇರಿಯಲ್ಲಿ ತೀತು ಮ|| ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಇನ್ನೊಂದು ಮೀಟಿಂಗೂ, 12 ರಲ್ಲಿ ಅಮ್ಮತ್ತಿಯಲ್ಲಿ ಮ|| ಕುಟ್ಟಂಡ್ರ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಮೂರ್ನಾಡಿನಲ್ಲಿ ಒಂದು ಮೀಟಿಂಗೂ ನಡೆದು ವ್ಯಸನಸೂಚಕ ಠರಾವುಗಳು ಅವರ ಕುಟುಂಬಕ್ಕೆ ಕಳುಹಿಸಲ್ಪಟ್ಟವು. ತಪಶೀಲನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ.

ಪೋಲೀಸು ಸಬ್ ಇನ್‌ಸ್ಪೆಕ್ಟರಾದ ವೆ|| ಮಾಡೆರ ಉತ್ತಪ್ಪನವರಿಗೆ ಹಲವು ಕೇಸುಗಳನ್ನು ಚಮತ್ಕಾರದಿಂದ ಪತ್ತೇ ಮಾಡಿದಕ್ಕಾಗಿ ಒಂದು ಚಿನ್ನದ ಮೆಡಲನ್ನೂ ಮಡಿಕೇರಿ ಮುನ್ಸಿಪಲ್ ಚೇರ್ಮನರಾದ ಮ|| ಮಾದಂಡ ಪೂವಯ್ಯನವರು ಜೂಜಾಟದ ಒಂದು ಕೇಸಿನ ಪತ್ತೆಯದಲ್ಲಿ ಪೋಲೀಸಿನವರಿಗೆ ಸಹಾಯ ಮಾಡಿದಕ್ಕೆ ಅವರಿಗೆ ಒಂದು ಬೆಳ್ಳಿಯ ಮೆಡಲನ್ನು ಸರ್ಕಾರದವರು ಕೊಡಲು ಮಂಜೂರು ಮಾಡಿರುವರು.

ಮಾರ್ಚಿ ತಾರೀಖು 22 ರಲ್ಲಿ ಮಡಿಕೇರಿ ಬಂದ ಚೀಫ್ ಕಮಿಷನರವರು ಜೂನ್ ತಾರೀಖು 18 ರಲ್ಲಿ ಮೈಸೂರಿಗೆ ವಾಪಾಸು ಹೋದರು.

ಶ್ರೀಮಂಗಲನಾಡು ಕುಮಟೂರು ಗ್ರಾಮದ ದೇಶತಕ್ಕರಾದ ಕಳ್ಳಂಗಳ ಕಾಳಪ್ಪನವರು ಸುಮಾರು ಒಂದು ಸಾವಿರ ರೂಪಾಯಿ ಖರ್ಚು ಮಾಡಿ ಕಟ್ಟಿಸಿದ ಪ್ರೈಮರಿ ಶಾಲೆಯು ತಾ|| 13-6-23 ರಲ್ಲಿ ತೆರೆಯಲ್ಪಟ್ಟಿತ್ತೆಂದು ತಿಳಿಯಬರುತ್ತದೆ. ಶ್ರೀಮತಿ ಕಾಳಪ್ಪನವರಿಗೆ ವಿದ್ಯೆಯ ಮೇಲಿರುವ ಪ್ರೀತಿಯೂ ಉದಾರತ್ವವೂ ಹಿಂಬಾಲಿಸತಕ್ಕದ್ದಲ್ಲವೇ.

ಮಡಿಕೇರಿಯಲ್ಲಿ ಪಬ್ಲಿಕ್ ಮೀಟಿಂಗು ಮಾಡಿ ಮ|| ಮನೆಯಪಂಡ ಮುತ್ತಣ್ಣನವರ ಮರಣಕ್ಕೆ ವ್ಯಸನಸೂಚಕದ ಠರಾವನ್ನು ಅವರ ಸಂಸಾರಕ್ಕೆ ಕಳುಹಿಸಿದಕ್ಕೆ ಅವರ ಪುತ್ರ ಮ|| ಮಾಚಯ್ಯನವರು ಅದಕ್ಕೆ ತಮ್ಮ ತಾಯಿಯವರ ಮತ್ತು ಕುಟುಂಬದ ಬೇರೆ ಮೆಂಬರುಗಳ ಕೃತಜ್ಞತೆಯನು ಸೂಚಿಸಿ ಅಧ್ಯಕ್ಷರಾದ ವೆ|| ಕ ಸುಬ್ಬಯ್ಯನವರಿಗೆ ಜವಾಬನ್ನು ಕೊಟ್ಟಿರುವರು.

ತಾ|| 25-5-23 ರಲ್ಲಿ ಪ್ರಕಟವಾಗಿದ್ದ 'ಪೊನ್ನಪ್ಪ ಮೆಬ್ಸಾಲೆ' ಯವರ ಬಾಕ್ಕಿಯು ಕೈತಪ್ಪಿನಿಂದ ಪುನಃ ತಾರೀಖು 15-6-23 ರಲ್ಲಿ ಪ್ರಕಟವಾದದಕ್ಕೆ ವ್ಯಸನಪಡುತ್ತೇವೆ.

ಕೊಡಗು ಡಿಸ್ಟ್ರಿಕ್ಟ್ ಪ್ರೆಸ್ಸಿನ ಛಾಪಿಸುವ ಯಂತ್ರಗಳನ್ನು 3234 ರೂಪಾಯಿಗಳಿಗೆ ಮಾರಾಟಕ್ಕೆ ಇಟ್ಟಿದೆಯೆಂದು ಪ್ರಕಟಿಸಲ್ಪಟ್ಟಿತ್ತು. ಅವುಗಳನ್ನು ನಮ್ಮ ಕಂಪೆನಿಗೆ 2500 ರೂಪಾಯಿಗಳಿಗೆ ಕೊಡಬೇಕೆಂದು ಕೇಳಿದಕ್ಕೆ ಆಗಬಹುದೆಂದು ಹುಜೂರ್ ಚೀಫ್ ಕಮಿಷನರವರು ಜವಾಬು ಕೊಟ್ಟಿರುವರು. ಪ್ರಿಂಟು ಮಾಡುವಕ್ಕೆ ಬೇಕಾಗುವ ಅಕ್ಷರದ ಅಚ್ಚುಗಳು ಮೊದಲಾದುವುಗಳನ್ನು ತರಿಸಲಿಕ್ಕಾಗಿ ಹಣ ಬೇಕಾಗಿರುವುದರಿಂದ ಶೇರುದಾರರು ತಮ್ಮ 2 ನೇ ಮತ್ತು 3 ನೇ ಕಂತುಗಳ ಹಣವನ್ನು ಬೇಗನೆ ಪಾವತಿ ಮಾಡಬೇಕಾಗಿ ಕೋರಿಕೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಕ್ಲಾರ್ಕರಾಗಿದ್ದ ಮ|| ಕೊರವಂಡ ಪೊನ್ನಪ್ಪನವರು ಪಾರ್ಶವಾಯು ರೋಗ ಬಂದ ಪೀಡಿತರಾಗಿದ್ದು ಪಕ್ಕಮಟ್ಟೆಗ ವಾಸಿಯಾಗುತ್ತಾ ಬಂದ ಘಕ್ಕನ ಜಾಸ್ತಿಯಾಗಿ ತಾ|| 17 ರಲ್ಲಿ ದೈವಾಧೀನವಾದರೆಂದು ತಿಳಿಯಬರುತ್ತದೆ.

ಮಡಿಕೇರಿ ಹುಡುಗಿಯರ ಸೆಕೆಂಡರಿ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದ ಮ|| ಮಾಚಿಮಾಡ ಚಂಗಪ್ಪ ಬಿ ಎ ಯವರನ್ನು ಸೆಂಟ್ರಲ್ ಹೈಸ್ಕೂಲಿನಲ್ಲಿಯೂ ಮ|| ಕಂಬೀರಂಡ ಮುತ್ತಣ್ಣ ಬಿ ಎ ಯವರನ್ನು (ಆಗಸ್ಟು ತಾ|| 1 ರಿಂದ) ಹುಡುಗಿಯರ ಶಾಲೆಯಲ್ಲಿಯೂ ಉಪಾಧ್ಯಾಯರುಗಳಾಗಿ ನೇಮಿಸಿರುವರು.

ಕೊಡಗಿನ ಸಶನ್ ಜಡ್ಜಿಯವರು ಅಮ್ಮತ್ತಿಯಲ್ಲಿದ್ದ ಪೋಸ್ಟುಮಾಸ್ಟರವರಿಗೆ ಅವರ ಕೇಸಿನಲ್ಲಿ ತಾ|| 18 ರಲ್ಲಿ ಆರುತಿಂಗಳು ಕಠಿಣಕೆಲಸ ಮತ್ತು 50 ರೂ ಜುಲುಮಾನೆ ತಪ್ಪಿದರೆ ಮೂರು ತಿಂಗಳ ಶಿಕ್ಷೆಯನ್ನು ವಿಧಿಸಿದರು.

ಹಿಂದೂದೇಶ

ಆರನೇ ಮೊಡರೇಟ್ ಕಾನ್ಫರೆನ್ಸ್ ಡಿಸೆಂಬರು 30 ಗಿಲ್ಲಿ ಪೂನಾಪಟ್ಟಣದಲ್ಲಿ ನಡೆಯಲಿಕ್ಕಿರುವುದು. ಇದಕ್ಕಾಗಿ ರಾಷ್ಟ್ರೀಯ ಲಿಬರಲ್ ಫೆಡರೇಶನ್‌ನವರು ಒಂದು ಪ್ರಬಲವಾದ ಸ್ವಾಗತ ಮಂಡಲಿಯನ್ನು ಏರ್ಪಡಿಸಿರುವರು. ಸರ್ವಸಮ್ಮತದಿಂದ ಸರ್ ಹಾರ್ಮಸ್ಜಿ ವಾಡ್ಯರವರು ಆ ಮಂಡಲಿಯ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು.

ನೇಶನಲ್ ಲಿಬರಲ್ ಫಡರೇಶನ ಕೌನ್ಸಿಲಿನವರು ಉಪ್ಪಿನ ಸುಂಕವನ್ನು ವೈಸರಾಯರು ಸರ್ಟಿಫೈ ಮಾಡಿದಂತೆ ಇಂಗ್ಲೆಂಡಿನಲ್ಲಿ ಚಳವಳಿಯೆಬ್ಬಿಸಲು ಸರ್ ಟೇಜ್ ಬಹುದ್ದೂರ ಸಾಪ್ರುರವರನ್ನು ತಮ್ಮ ಪ್ರತಿನಿಧಿಯಾಗಿ ನೇಮಿಸಿರುವರು. ಆ ಏರ್ಪಾಡನ್ನು ಕಾಯಂಮಾಡಲಿಕ್ಕೆ ಬೊಂಬಾಯಿಯಲ್ಲಿ ತಾ|| 21 ರಲ್ಲಿ ಒಂದು ಅಪರೂಪ ಮೀಟಿಂಗು ಮಾಡಲ್ಪಡುವುದು.

ತಾ|| 10 ರಲ್ಲಿ ಡೆಲ್ಲಿಯಲ್ಲಿ ಪೋಲೀಸು ಸೂಪರಿಂಟಂಡರಾದ ಮ|| ಬ್ಲಂಡನ್‌ರವರ ಮನೆಯೊಳಕ್ಕೆ ಕಳವು ಕಳ್ಳರು ನುಗ್ಗಿ 30 ರೂ ನ್ನೂ ಕೆಲವು ಆಫೀಸು ಪೇಪರುಗಳುಳ್ಳ ಒಂದು ಪೆಟ್ಟಿಯನ್ನು ಬೀಗದಕೈಗಳ ಗೊಂಚಲನ್ನು ಕಳವು ಮಾಡಿರುವರು.

ಗಾಂಧಿ ದಿನವಾದ ತಾ|| 18 ರಲ್ಲಿ ನಾಗಪುರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಬಾವುಟೆ ಸತ್ಯಾಗ್ರಹಕ್ಕೆ ಹಿಂದೂ ದೇಶದ ಪ್ರತಿಯೊಂದು ಪ್ರಾಂತ್ಯದಿಂದ ಆರು ಸ್ವಯಂ ಸೇವಕರನ್ನು (ಸಾಧ್ಯವಿದ್ದಷ್ಟು ಎಲ್ಲಾ ಮತದವರನ್ನು) ಸ್ವೀಕರಿಸುವಂತೆ ತೀರ್ಮಾನವಾಗಿದೆ.

ತಾ|| 11 ರಲ್ಲಿ ಕೆಲವು ಕಾಂಗ್ರೆಸ್ ಮುಂದಾಳುಗಳು ಜೆಟ್ಟಿನಾಗು ತಿರುಪಕ್ಕೂರಿನಲ್ಲಿ ಉಪನ್ಯಾಸವಾದ ಸ್ತ್ರೀಗಳು ವಾಗ ಪೋಲೀಸಿನವರು ಸೆಕ್ಷನ್ 144 ರ ಮೇರೆ ಮಾತಾಡಕೂಡದೆಂದು ನೋಟೀಸು ಕೊಟ್ಟರು. ಮುದುರದಿಂದ ಇನ್ನು ಕೆಲವರು ಬಂದು ಅಲ್ಲಿ ಉಪನ್ಯಾಸಮಾಡತೊಡಗಿದರು. ಅವರಿಗೂ ನೋಟೀಸು ಜಾರಿಯಾಯಿತು. ಇನ್ನು ಜನರು ಮಾತಾಡಲಿಕ್ಕೆ ಬರುತ್ತಿರುವುದಲ್ಲದೆ ಕಾಯಿದೆ ಭಂಗಮಾಡಲು ಏರ್ಪಾಡು ಮಾಡುತ್ತಿದ್ದಾರಂತೆ. ಮಧುರದಲ್ಲಿಯೇ ಅದಕ್ಕೆ 200 ಸ್ವಯಂ ಸೇವಕರು ತಯಾರಾಗಿರುವರು.

ಡಾಕ್ಟರ್ ಅನ್ಸಾರಿ ಮತ್ತು ಶ್ರೀಮತಿ ಸರೋಜಿನಿ ದೇವಿಯವರ ಸೂಚನೆಮೇರೆ ಆಲ್ ಇಂಡಿಯ ಕಾಂಗ್ರೆಸ್ ಕಮಿಟಿ ಸೆಕ್ರೆಟರಿಗಳು, ಒಕ್ಕಿದಿನದಲ್ಲಿ ಗೋವಧೆಯನ್ನು ನಿಲ್ಲಿಸಲಿಕ್ಕೆ ಏರ್ಪಾಡುಗಳನ್ನು ಮಾಡಲಿಕ್ಕೆ ಹಿಂದೂ ದೇಶದಲ್ಲಿರುವ ಪತ್ರಿಕೆಗಳ ಪ್ರತಿನಿಧಿಗಳ ಒಂದು ಕಾನ್ಫರೆನ್ಸನ್ನು ಜೂನ್ 28 ರಲ್ಲಿ ಅಲ್ಲಾಹಬಾದಿನಲ್ಲಿ ನಡೆಸಲು ಏರ್ಪಾಡು ಮಾಡುತ್ತಿದ್ದಾರೆ.

ಮಹಾತ್ಮಗಾಂಧಿಯವರ ಆರೋಗ್ಯವು ಚೆನ್ನಾಗಿ ಈಗ ಅವರ ತೂಕವು ಸ್ವಲ್ಪ ಹೆಚ್ಚಾಗಿದೆಯಂತೆ. ದಿವಸ ಮೂರು ನಾಲ್ಕು ಗಂಟೆ ಚರ್ಕದಲ್ಲಿ ನೂಲು ಮಾಡುದ್ದಾರೆ. ಅಲ್ಲದೆ ತನ್ನ ಅಂಗಸಾಧನೆಗೆ ಒಳ್ಳೆಯ ದಂಧಾನ್ಯಬೀಸುವ ಕಲಿಕೆಯನ್ನು ಕಲಿಯುತ್ತಿದ್ದಾರಂತೆ.

ಈಗ ಮದ್ರಾಸಿನಲ್ಲಿ ಪ್ರಥಮ ವಿದ್ಯಾಭ್ಯಾಸದ ಚಾರದಲ್ಲಿ ಹುಡುಗರಿಗೆ ಎಷ್ಟರಮಟ್ಟಿನ ಅನುಕೂಲ ಕೊಡಲ್ಪಡುವುದೋ ಅಷ್ಟೆ ಹುಡುಗಿಯರಿಗೂ ಕೊಡಬೇಕೆಂದ ಹತ್ತು ವರ್ಷ ಪ್ರಾಯದವರೆಗೆ ಹುಡುಗಿಯರೂ ಹುಡುಗರ ಒಟ್ಟಿಗೆ ವಿದ್ಯಾಭ್ಯಾಸ ಮಾಡಬಹುದೆಂದು, ಗ್ರಾಮಸ್ಕೂಲುಗಳಿಗೆ ಹುಡುಗರ ಶಾಲೆಯೆಂಬ ನಾಮವನ್ನು ತೆಗೆದು ಹಾಕಬೇಕೆಂದೂ ಮಂತ್ರಿಯಾಗಿ ಮದ್ರಾಸಿನಲ್ಲಿರುವ ಹಿಂದೂ ದೇಶದ ಹೆಂಗಳ ಪಕ್ಷದ ಸೆಕ್ರೆಟರಿ ವಿದ್ಯಾ ಇಲಾಖೆಯ ಮಂತ್ರಿಗೆ ಕಾಗದ ಬರೆದಿರುತ್ತಾರೆ.

ಕರಾಚಿ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರು ಕೌನ್ಸಿಲು ಬಹಿಷ್ಕಾರ ಚಳವಳಿವನ್ನು ನಡೆಸಬೇಕೆಂದು ತಾ|| ರ ಮೀಟಿಂಗಿನಲ್ಲಿ ತೀರ್ಮಾನಿಸಿರುವರು.

ನಾಗಪುರದ ಸತ್ಯಾಗ್ರಹಿಗಳಲ್ಲಿ ಸೆರೆಹಿಡಿದವರಲ್ಲಿ ಕೆಲವರಿಗೆ ಆರಾರು ತಿಂಗಳು ಕಠಿಣ ಸಜೆಯನ್ನು ವಿಧಿಸಿದರು. ಹಿಂದೂ ದೇಶದ ಎಲ್ಲಾ ಭಾಗಗಳಿಂದಲೂ ಸ್ವಯಂ ಸೇವಕರು ತಾ|| 16 ರಲ್ಲಿ ನಾಗಪುರದಲ್ಲಿ ಸತ್ಯಾಗ್ರಹವನ್ನು ಅವಲಂಬಿಸಲು ಹೋಗಿದ್ದರು.

ಕಳೆದ ಎರಡು ವಾರಗಳಲ್ಲಿ ಡೆಲ್ಲಿಯಲ್ಲಿ ಅನೇಕ ಕಳವುಗಳು ನಡೆಯಲ್ಪಟ್ಟವು. 11 ನೇ ತಾರೀಕಿನ ರಾತ್ರಿ ನಾಲ್ಕು ಕಳವುಗಳು ಆದವಂತೆ. ಹೆಚ್ಚಾಗಿ ಯೂರೋಪಿಯನರ ಮನೆಗಳೇ ಕದಿಯಲ್ಪಟ್ಟಿರುವವು.

ತಾ|| 20 ರಲ್ಲು ಕೊಯಮುತ್ತೂರಿನಲ್ಲಿ ಆಗುವ ತಾಲ್ಲೂಕು ಟೇಬಲ್ ಕಾನ್ಫರೆನ್ಸಿಗೆ ತ್ರಿಯುತ ದಾಸರವರು ಮುಂದಾಳಾಗಿ ಬರಲಿಕ್ಕಿರುವರು.

ಕಳೆದ ಮೂರು ವಾರಗಳಿಂದ ಅಸ್ವಸ್ಥರಾಗಿದ್ದ ಮಹಾತ್ಮಾ ದಾಸರವರ ಸಂಟಪ್ಪನವರಿಗೆ ಈಗ ವಾಸಿಯಾಗಿದೆ. ಅವರು ಬೊಂಬಾಯಿಗೆ ಒಂದು ಮೀಟಿಂಗಿಗೆ 19 ರಲ್ಲಿ ಹೋಗುವರಂತೆ.

ಸರ ಚಿಮನ್‌ಲಾಲ್ ಸೆಟಲ್ವಾಡರವರು ಲಿಜಿಸ್ಲೇಟಿವ್ ಎಸೆಂಬ್ಲಿಗೆ ಮೆಂಬರುತನಕ್ಕೆ ಉಮೇದುವಾರರಾಗಿ ನಿಲ್ಲಬೇಕೆಂದು ... ಗ್ರಾಜುಯೇಟ್ ಕಾನ್ಸ್ಟಿಟ್ಯುಯೆನ್ಸಿಯ ಮೆಂಬರ ಜನಕ್ಕೆ ರಾಜೀನಾಮೆ ಕೊಟ್ಟರು. ಅದನ್ನು ಗವರ್ನರು ಅಂಗೀಕರಿಸಿರುವರು.

ಮೈಸೂರು ಪ್ರಾಂತ್ಯ ... ಕ್ಕೆ ಒಳಪಟ್ಟ ... ಯ ವಿಷಯ ಚರ್ಚಿಸಲು ಮೈಸೂರಿನಲ್ಲಿ ಮ|| ಎಂ ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ತಾ|| 14 ರಲ್ಲಿ ಒಂದು ಕಾನ್ಫರೆನ್ಸು ನಡೆಯಿತು.

ಮಲಬಾರು ಡಿಸ್ಟ್ರಿಕ್ಟ್ ಬೋರ್ಡಿನವರು ತೆ ಕಡ ರನ್ನು ಸೇಂದಿ ಮತ್ತು ಸರಾಯಿ ಅಂಗಡಿಗಳನ್ನು ಕಡಿಮೆ ಮಾಡಬೇಕೆಂದು ತೀರ್ಮಾನಿಸಿರುವರು.

ಕಲ್ಕತ್ತದ ಇಂಡಿಯ ಸ್ಟೇಟ್ ಗಿರಣಿಯಲ್ಲಿನ ಕೂಲಿಕಾರರು ಅವರ ಹೆಡ್ ಸರದಾರನನ್ನು ಡಿಸ್‌ಮಿಸ್ ಮಾಡಬೇಕೆಂದು ಕೇಳಿಕೊಂಡರೆ ಜಾರಿಮಾಡಲಿಲ್ಲವೆಂದು ಸುಮಾರು 500 ಜನರು ತಾ|| 12 ರಿಂದ ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿರುವರು.

ಶ್ರೀಮತಿ ಮಣಿಬೆನ್ ಪಟೇಲ್ ಅವರು ತಾ|| 14 ರಲ್ಲಿ ಮ... ಗುಜರಾಥಿನಿಂದ ನಾಗಪುರ ಸತ್ಯಾಗ್ರಹಕ್ಕೆ ಹೊರಟರು. ದಕ್ಷಿಣ ಕನ್ನಡದಿಂದ 15 ಜನರು ಸೇರಿರುವರು. ಅವುಗಳ ಪೈಕಿ 10 ಜನರು ಮಂಗಳೂರಿನಿಂದಲೇ ಹೆಸರು ಕೊಟ್ಟಿರುವರು.

ಮ|| ಬಿಪಿನ್ ಚಂದ್ರಪಾಲರವರು ತಾ|| 11 ರಲ್ಲಿ ಕಾಂಗ್ರೆಸ್ ಧ್ಯೇಯಕ್ಕೆ ದ್ರೋಹಕರಾಗಿರುವರೆಂದು "ಸರ್ವೆಂಟ್" ಪತ್ರಿಕೆಯು ಸೂಚಿಸಿದೆ.

ಸೂರತಿನ ಡಿಸ್ಟ್ರಿಕ್ಟ್ ಜಡ್ಜಿಯವರು "ನವಯುಗ" ಪತ್ರಿಕೆಯ ಸಂಪಾದಕರಾದ ವೆ|| ಕಲ್ಯಾಣಜಿ ಮೆಹ್ತಾರವರನ್ನು ಎರಡು ವರ್ಷದ ಕಠಿಣ ಸಜೆಗೆ ಗುರಿಮಾಡಿರುವರು.

ಸರ ಜಾರ್ಜ್ ಲಾಯಿಡ್‌ರವರು ಬಿಡುವಾಗ್ಗೆ ಬೊಂಬಾಯಿ ಗವರ್ನರ್ ಪದವಿಗೆ ಲಾರ್ಡ್ ವಿಲ್ಲಿಂಗ್ಡನ್‌ರವರು ಬರುವರೆಂದು "ಸಂಡೆ ಎಕ್ಸ್‌ಪ್ರೆಸ್" ಪತ್ರಿಕೆಯು ಸೂಚಿಸುತ್ತದೆ.

ವಿದೇಶ

ಪರ್ಷಿಯದ ಮಿತ್ರಮಂಡಲಿಯು ರಾಜೀನಾಮೆ ಕೊಟ್ಟಿದೆ. ಹೊಸ ಮಿತ್ರಮಂಡಲಿಯು ಇನ್ನು ಏರ್ಪಡಾಗಿರುವುದಿಲ್ಲ.

ಪೋಲೆಂಡಿನ ಈಗಿನ ಆಡಳಿತೆಯು ಸಮ್ಮತವಲ್ಲದುದರಿಂದ ಹೊಸ ಕಮಿಟಿಯ ಮಹಮ್ಮದೀಯ ಮಂತ್ರಿ ಮಂತ್ರಿಮಂಡಲಿಗಳು ರಾಜೀನಾಮೆ ಕೊಟ್ಟಿರುವರು.

ದೇವರು ಹೆಚ್ಚಿನ ಕರ್ಚನ್ನು ಕಡಿಮೆಮಾಡಲಿಕ್ಕೆ ಇಟಲಿಯ ಸರಕಾರದವರು ಆಹಾರ ಸಾಮಗ್ರಿಗಳ ಮೇಲಿರುವ ಸುಂಕವನ್ನು ತೆಗೆದುಹಾಕುವದಾಗಿ ಅಥವಾ ಬಹಳ ಕಡಿಮೆ ಮಾಡುವ ಹಾಗೆ ತೀರ್ಮಾನಿಸಿರುವರು.

ಚೀನಾದೇಶದ ಮುಖ್ಯ ಪಟ್ಟಣವಾದ ಪೆಕಿಂಗಿನಲ್ಲಿ ಈಗ ಮಂತ್ರಿಮಂಡಲಿಯೂ ಇಲ್ಲ, ಪ್ರೆಸಿಡೆಂಟರೂ ಇಲ್ಲ. ಇವರೆಲ್ಲರೂ ರಾಜೀನಾಮೆ ಕೊಟ್ಟಿರುವರು. ಸೈನ್ಯವನ್ನು ತಂದು ಮುತ್ತಿಗೆ ಹಾಕಿಸುತ್ತೇವೆಂದು ಹೆದರಿಸಿದುದರಿಂದ ಪ್ರೆಸಿಡೆಂಟರಾದ ಲಿಯುವಾನ್ ಹಂಗ್‌ರವರು ರಾಜೀನಾಮೆ ಕೊಟ್ಟು ಟೀನ್‌ಸ್ಟೀನಿಗೆ ರೈಲು ಹತ್ತಿದರು. ಅವರು ಪ್ರೆಸಿಡೆಂಟರ ಸೀಲನ್ನು ಕೊಡದಕ್ಕೆ ಅಲ್ಲಿಯ ಗವರ್ನರು ಅವರನ್ನು ಸೆರೆಹಿಡಿಸಿದರು. 'ಟಿಟೆಯುರ್' ಆದ ಕೆಲವು ಮಂತ್ರಿಗಳು ಈಗ ಪೆಕಿಂಗಿನಲ್ಲಿ ಆಡಳಿತೆಯನ್ನು ನಡಿಸುತ್ತಿರುವರು.

ಜೂನ್ ತಾ|| 14 ರಲ್ಲಿ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಹಿಂದುದೇಶದಲ್ಲಿ ಉಪ್ಪಿನ ಕರವನ್ನು ಏರಿಸಿದ ವಿಷಯು ಚರ್ಚೆಯಾಯಿತು.

ರಷ್ಯಾದ ಸೋವೈಟ್ ಸರಕಾರಕ್ಕೂ ಬ್ರಿಟಿಷ್ ಸರಕಾರಕ್ಕೂ ಒಪ್ಪಂದ ಕರಾರುಗಳು ತೀರ್ಮಾನವಾಗಿವೆ.

ತಾ|| ರಲ್ಲಿ ಬಲ್ಗೇರಿಯದ ಸರಕಾರವನ್ನು ಮಿಲಿಟರಿಯವರು ಗೆದ್ದು ಹಾಕಿರುವರು. ಕೆಲವು ಮಂತ್ರಿಗಳನ್ನು ಸೆರೆಹಿಡಿದಿರುವರು. ಆ ಸರಕಾರದ ಆಡಳಿತವು ಜನರಿಗೆ ತೃಪ್ತಿಕರವಲ್ಲವೇ ಇದಕ್ಕೆ ಕಾರಣವಂತೆ. ಮುಖ್ಯ ಮಂತ್ರಿಯಾದ ಸ್ಟಾಂಬೋಲಿಸ್ಕಿಯವರು ತಪ್ಪಿಸಿಕೊಂಡಿರುವರು. ಯುನಿವರ್ಸಿಟಿ ಪ್ರೊಫೆಸರರಾದ ಜಾಂಕೋಫ್‌ರವರು ಮುಖ್ಯ ಮಂತ್ರಿಯಾಗಿ ಹೊಸ ಸರಕಾರವನ್ನು ನಿರ್ಮಿಸಿರುವರು. ದೇಶದಲ್ಲಿ ಗಲಿಬಿಲಿ ಏನೂ ಇಲ್ಲದೆ ಎಲ್ಲಾ ಶಾಂತವಾಗಿದೆಯೆಂದು ಒಂದು ವರ್ತಮಾನ. ಸ್ಟಾಂಬೋಲಿಸ್ಕಿಯವರು ಗುಪ್ತ ಮಾರ್ಗಗಳಿಂದ ಹೋಗಿ ಸುಮಾರು 20007 ರೈತರನ್ನು ಸೇರಿಸಿಕೊಂಡು [illegible] ಪಟ್ಟಣವನ್ನು ಮುತ್ತಿಗೆ ಹಾಕಲು ನಿರ್ಧರಿಸುತ್ತಿದ್ದಾರೆಂದೂ ಅಲ್ಲಲ್ಲಿ ಯುದ್ಧವು ನಡೆಯುತ್ತಿದೆಯೆಂದೂ ಇನ್ನೊಂದು ವರ್ತಮಾನ.

ತಾ|| 9 ರಲ್ಲಿ ಕ್ರಿಸ್ಟಿಯನ ರಾಜಕುಮಾರಿಯು ಲಂಡನಿನಲ್ಲಿ ಮೃತಪಟ್ಟಳು.

The Indian Territorial Force

ಹಿಂದೂಸ್ಥಾನದ ಟೆರಿಟೋರಿಯಲ್ ಪಟಾಲಾಂ

ಟೆರಿಟೋರಿಯಲ್ ಸೈನ್ಯ ಎಂದರೇನು ? ಇದರ ಉದ್ದೇಶವೇನು [illegible] ಸೇರಿದರೆ [illegible] ತಿಳಿದಿರುವುದಿಲ್ಲ. ಕೆಲವರು ತಪ್ಪು ಅಭಿಪ್ರಾಯಗಳನ್ನು ಮಾಡಿಕೊಂಡಿದ್ದಾರೆ. ಅಂಥಾ ತಪ್ಪು ಅಭಿಪ್ರಾಯಗಳ ಹೋಗಲಾಡಿಸುವುದಕ್ಕಾಗಿ ಜನರಲ್ ಸ್ಟಾಫ್ ಬ್ರಾಂಚಿನವರು ಈ ಸೈನ್ಯದ ಕೆಲಸ ಜವಾಬ್ದಾರಿಗಳು ಮೊದಲಾದ ವಿಷಯಗಳನ್ನು ವಿವರವಾಗಿ ಪ್ರಕಟಿಸುತ್ತಾರೆ.

ಕೆಲವು ವರ್ಷಗಳಲ್ಲಿ ಈ ಸೈನ್ಯವು ಸೇರಿ ಎರಡು ವರ್ಷವಾದ [illegible] ಯಾತಕ್ಕೋಸ್ಕರ ಇಡಲ್ಪಟ್ಟಿರೆಂಬುದು ಇನ್ನು ಕೆಲವರಿಗೆ ವಿಶದವಾಗಿತ್ತಿಲ್ಲ. ೧೯೨೦ನೇ ಇಸವಿಯಲ್ಲಿ ಎಸ್ಸೆಂಬ್ಲಿ ಕೌನ್ಸಿಲ್ ಮೀಟಿಂಗಿನಲ್ಲಿ ಮುಖ್ಯ ಸೇನಾಧಿಪತಿಯವರು ಸೈನ್ಯದ ಉದ್ದೇಶವನ್ನು ವಿವರಿಸಿದ್ದರು. ಈ ಸೈನ್ಯವು ಖಾಯಂ ಆಗಿ ಇಡಲ್ಪಟ್ಟ ಸೈನ್ಯಕ್ಕೆ ಸಂಬಂಧಪಟ್ಟು ಅದಕ್ಕೆ ಎರಡನೆಯದಾಗಿರುತ್ತದೆ. ಅದ್ದರಿಂದ ಇದರ ಶಿಕ್ಷಣವು ಖಾಯಂ ಸೈನ್ಯದವರ ಸಲಹೆಗಳಿಗೆ ತಕ್ಕಹಾಗೇ ಇದೆ. ಸಮಯ ಸಂದರ್ಭಗಳು ಬಂದೊದಗಿದರೆ ಈ ಎರಡು ಸೈನ್ಯಗಳೂ ಜೊತೆ ಸೇರುವ ಹಾಗೆ ಶಿಕ್ಷಣವು ದೊರೆಯುತ್ತದೆ. ಹಾಗಾದರೆ ಖಾಯಂ ಸೈನ್ಯದವರಿಗೂ ಈ ಪಟಾಲಮ್ಮಿಗೂ ಇರುವ ವ್ಯತ್ಯಾಸವೇನು ? ಏನೂ ಇಲ್ಲ. ಈ ಎರಡು ಭಾಗದವರ ಸಂಬಳವು ಒಂದೇ ರೀತಿಯಾಗಿ ಇರಬೇಕಲ್ಲವೆ ? ಈ ಪಟಾಲದವರಿಗೆ ಖಾಯಂ ಸೈನ್ಯದವರಂತೆ ತಿಂಗಳ ಸಂಬಳ ದೊರೆಯುತ್ತದೆ. ಎಷ್ಟೇ [illegible] ಗಳೂ ಕಷ್ಟಗಳೂ ಒದಗಿದರೂ ಖಾಯಂ ಸೈನ್ಯದವರಂತೆ ಇವರೂ ಎದುರಿಸುವುದಕ್ಕೆ ತಯಾರಾಗಿರಬೇಕು. ಈ ರೀತಿ ಸಂಬಳದಿಂದ ಕಷ್ಟಗಳನ್ನೆದುರಿಸಲಾಗದವರು ಈ ಪಟಾಲಕ್ಕೆ ಸೇರುವುದು ಅನಾವಶ್ಯಕವಾಗಿದೆ. ಖಾಯಂ ಸಿಪಾಯಿಗಳಿಗೆ ಕೊಡುವಂತೆ ಈ ಸೈನ್ಯದವರಿಗೂ ಸಂಬಳ ಕೊಟ್ಟು ಇಟ್ಟುಕೊಳ್ಳಲು ಸರಕಾರಕ್ಕೂ ಪ್ರಜೆಗಳಿಗೂ ಕಷ್ಟವಾಗುವುದರಿಂದ ಈ ರೀತಿಯಾಗಿ ಮಾಡಿರುತ್ತಾರೆ. [illegible] ಈ ಟೆರಿಟೋರಿಯಲ್ ಪಟಾಲಕ್ಕೆ ಬಂದುಸೇರಿ ಸೇರಿದ ಮೇಲೆ ಇಂಗ್ಲೀಷ್ ಸೈನ್ಯಕ್ಕೆ ಸಿಕ್ಕುವ ಸಂಬಳವು ತಮಗೂ ಸಿಕ್ಕಬೇಕೆಂದು ಹಿಡಿದುಕೊಳ್ಳುವುದು ನಿಷ್ಪ್ರಯೋಜನ. ಈ ಪಟಾಲಾಂ ಹಿಂದೂದೇಶದ ಖಾಯಂ ಸೈನ್ಯದ ಒಂದು ಭಾಗವಾಗಿದ್ದು, ಇದರ ಸೈನಿಕನಾಗಲಿ, ಉದ್ಯೋಗಸ್ಥನಾಗಲಿ ಅಮೇಲೆ ಸೇರಲಾಗುವುದಿಲ್ಲವೆಂದು ಹೇಳಿದರೆ [illegible] ಶಿಕ್ಷೆಗೆ ಒಳಗಾಗಬೇಕಾಗಲೂ ಬಹುದು. ಈ ಹೊಸ ಕರಾರುಗಳಿಗೂ, ಜವಾಬ್ದಾರಿಕೆಗಳಿಗೂ ಒಪ್ಪಿಕೊಂಡು ಸೇರಿದರೆ ಮಾತ್ರ ಮುಂದಕ್ಕೆ ಹಿಂದೂದೇಶದ ಸೈನ್ಯದ ಜಾತಿಗೆ ಪ್ರಯೋಜನವಾಗಬಹುದು.

(ಸ್ವಂತ ಬಾತ್ಮಿದಾರರಿಂದ)

ದಿವಂಗತ ರಾಯ್ ಬಹದೂರು ರಾಜಕಾರ್ಯಪ್ರಸಕ್ತ ಮನೆಯಪಂಡ ಮುತ್ತಣ್ಣನವರ ಮರಣಕ್ಕಾಗಿ ಆದ ವ್ಯಸನಸೂಚಕ ಮೀಟಿಂಗ್‌ಗಳು.

ಪೊನ್ನಂಪೇಟೆ

ಪೊನ್ನಂಪೇಟೆ ನಾಡಿನವರು ಪೊನ್ನಂಪೇಟೆಯಲ್ಲಿ ಮೆ|| [illegible] ಗಣಪಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ವ್ಯಸನಸೂಚಕ ಠರಾವುಗಳನ್ನು ದಿವಂಗತ ಮುತ್ತಣ್ಣನವರ ಕುಟುಂಬಕ್ಕೆ ಕಳುಹಿಸಿದರು. ಮೆ|| ಗಣಪಮ್ಮಯ್ಯನವರು ಹೇಳಿದ್ದೇನೆಂದರೆ, ಸಭಿಕರೇ, ಕೊಡಗಿನಲ್ಲಿ ಮೆ|| ಮುತ್ತಣ್ಣನವರನ್ನು ತಿಳಿಯದ ಮನುಷ್ಯರಿಲ್ಲ. ಅವರು ಜಮೀನುದಾರಸಂಘದ ಪ್ರೆಸಿಡೆಂಟರಾಗಿ ದೇಶಕ್ಕೆ ಮಾಡಿದ ಕೆಲಸವು ಚಿರಸ್ಮರಣೀಯವಾದುದು. ಕೊಡಗಿನಲ್ಲಿ ಎಲ್ಲಾ ಜಂಗಳಗಳಲ್ಲಿಯೂ ಒಗ್ಗಟ್ಟನ್ನಿತ್ತ [illegible] ಈ ಮಹನೀಯರ [illegible] ಇಲ್ಲ. [illegible] ಅವರ [illegible] ದೇಹಾರೋಗ್ಯವು ಕೆಡುವುದರಿಂದ ಅವರು ಜಮೀನುದಾರಸಂಘದ ಅಧ್ಯಕ್ಷ ಪದವಿಯನ್ನು ಬಿಟ್ಟರೋ, ಅಂದಿನಿಂದ ದೇಶದಲ್ಲಿ ಅನೇಕ ಜಂಗಳಗಳು [illegible] ಆದರೂ ಈ ಪ್ರಸ್ತುತ [illegible] ಸಭೆಯು [illegible] ಬಹಳ [illegible] ದೇವರು ನಮ್ಮ [illegible] ಇವರು ಮಾಡಿದ ದೇಶಸೇವೆಯ ದೆಸೆಯಿಂದ ಇವರ ಹೆಸರನ್ನು ದೇಶದಲ್ಲಿ ಚಿರಕಾಲ ನಿಲ್ಲುವುದಾಗಿ [illegible] ಹೇಳುತ್ತೇನೆ. ನೀವು ಎಲ್ಲರೂ ದೇಶಕ್ಕೆ ಉಂಟಾಗಿರುವ ಈ ನಷ್ಟಕ್ಕೆ [illegible] ವ್ಯಸನವನ್ನು ಅವರ ಕುಟುಂಬಕ್ಕೆ ಸೂಚಿಸುವುದರಲ್ಲಿ ಮುಂದಕ್ಕೆ ಬರುವಿರೆಂದು ನಂಬಿದ್ದೇನೆ ಎಂಬುದಾಗಿ ಭಾಷಣಮಾಡಿದರು. ಬಳಿಕ ಸಭೆಯಾಗಿ ಮೆ|| [illegible] ಮೀಟಿಂಗ್‌ಗೆ [illegible] ನವರೂ, [illegible] ಮೊದಲಾದವರನ್ನು [illegible] ವ್ಯಸನಸೂಚಕ ಠರಾವುಗಳನ್ನು ಕಳುಹಿಸಿದರು.

ಹುದಿಕೇರಿ.

ಶ್ರೀಮಂಗಲ ನಾಡಿನವರು ಕಳೆದ ತಾರೀಖು ೧೧ ರಲ್ಲಿ, ಹುದಿಕೇರಿಯಲ್ಲಿ ಮೆ|| [illegible] ಅಧ್ಯಕ್ಷತೆಯಲ್ಲಿ ಮೀಟಿಂಗ್ ಮಾಡಿದರು. ಅಧ್ಯಕ್ಷರು ಹೇಳಿದ್ದೇನೆಂದರೆ, ಮಹಾಶಯರೇ, ನಮ್ಮ ದೇಶದಲ್ಲಿ ಸರಕಾರಕ್ಕೆ ಸರಿಯಾದ ಮೆಚ್ಚಿಗೆಯ ಕೆಲಸ ಮಾಡಿದವರಿಗೆ ಸರಕಾರದವರು ದೊಡ್ಡ ಪದವಿಗಳನ್ನು ಕೊಡುತ್ತಾರೆ. ಆದರೆ ಈಗಿನ ಕಾಲದಲ್ಲಿ ದೇಶಸೇವೆಯಷ್ಟು ದೊಡ್ಡ ಪುಣ್ಯಕೆಲಸವು ಯಾವುದೂ ಇಲ್ಲ. ಯಾರು ಜನರ ಪ್ರೀತಿಗೆ ಪಾತ್ರರೋ, ಅವರು ಸರಕಾರಕ್ಕೆ ವಿರೋಧಿಗಳು. ದೇಶದ ಜನರ ಪ್ರೀತಿಗೆ ಪಾತ್ರರಾಗಿ ತನುಮನ ಧನವನ್ನು ದೇಶಕ್ಕೆ ಸಮರ್ಪಿಸಿದವರನ್ನು ದೇಶದವರು ಜೀವವಿರುವಾಗಲೂ, ಸತ್ತನಂತರ ಅವರ ಆತ್ಮತೃಪ್ತಿಗೆ ಇನ್ನು ಹೆಚ್ಚಾಗಿಯೂ ಮರ್ಯಾದೆ ಮಾಡಬೇಕು. ಅದ್ದರಿಂದ ಮೆ|| ಮುತ್ತಣ್ಣನವರು ಮಾಡಿದ ಕೆಲಸದ ನೆನಪಿಗಾಗಿ ನಾವು ಅವರ ಆತ್ಮಕ್ಕೆ ತೃಪ್ತಿಗೊಳಿಸಲು ಇಂಥಾ ಸಭೆ ಸೇರಿ ಆ ಮೂಲಕ ಅವರ ಕುಟುಂಬವನ್ನು ಸಂತೈಸದೆ ಹೋದರೆ ನಾವೆಲ್ಲರೂ ದೇಶದ್ರೋಹಿಗಳಾಗಲಿಕ್ಕಿಲ್ಲವೋ ? ಅದ್ದರಿಂದ ನಮಗೆ ಅವರ ಮೇಲಿರುವ ನಂಬಿಗೆಯನ್ನು ಈದಿನ ಬಹಿರಂಗವಾಗಿಯೂ ಸೂಚಿಸಬೇಕಾಗಿದೆ ಎಂಬುದಾಗಿ ಹೇಳಿದ್ದನ್ನು ಅನುಮೋದಿಸಿ [illegible] ಮೆ|| ಕರುಂಬಯ್ಯನವರು [illegible] ಮೆ|| [illegible] ಯವರು ವಗೈರೆಯವರು ಮಾತಾಡಿ ವ್ಯಸನಸೂಚಕ ಠರಾವುಗಳನ್ನು ಕಳುಹಿಸಿದರು.

ಅಮ್ಮತ್ತಿ.

ಮೆ|| ಕುಟ್ಟಂಡ [illegible] ಯ್ಯನವರು, ಮೆ|| ಅಬ್ದುಲ್ ಗಫೂರ್‌ಖಾನ್ ವಗೈರೆ ಸೂಚಿಸಿದಂತೆ ಅಧ್ಯಕ್ಷಸ್ಥಾನವನ್ನು ಅಲಂಕರಿಸಿ ಈ ಕೆಳಗಿನ ರೀತಿ ಭಾಷಣ ಮಾಡಿದರು. ಸಭಿಕರೇ, ಈದಿನ ನಾವೆಲ್ಲರೂ ನೆರೆದದ್ದು ಯಾತಕ್ಕೆಂದು ಹೇಳುವುದು ಆವಶ್ಯಕವಾಗುವುದಿಲ್ಲ. ರಾಜಕಾರ್ಯ ಪ್ರಸಕ್ತ ಮನೆಯಪಂಡ ಮುತ್ತಣ್ಣನವರು ಸ್ವರ್ಗಸ್ಥರಾದದ್ದು ನಿಮಗೆ ತಿಳಿದೇ ಇದೆ. ಈ ಪ್ರಖ್ಯಾತ ಪುರುಷರು ಕೊಡಗು ಜಮೀನುದಾರ ಸಂಘಕ್ಕೆ ಜೀವಕಳೆಯನ್ನಿತ್ತಿದ್ದರು. ದೇಶದಲ್ಲಿ ಜಮೀನುಸಂಘದ ಮೂಲಕ ಈ ಮಹನೀಯರು ಸರಕಾರದವರೊಡನೆ ಹೋರಾಡಿ ಅನೇಕ ರಿಯಾಯಿತಿಗಳನ್ನು ಕೊಡಿಸಿದ್ದು ನಿಮಗೆ ತಿಳಿದೇ ಇದೆ. ಜಮೀನುದಾರ ಸಂಘದ ಹೆಸರು ಯಾರಿಗೆ ತಿಳಿದಿದೆಯೋ ಅವರಿಗೆ ಮೆ|| ಮುತ್ತಣ್ಣನವರನ್ನು ತಿಳಿದಿದೆ. ದೇಶದವರಿಗೆ ಅವರ ಮೇಲಿನ ಅಭಿಮಾನವನ್ನು ತೋರಿಸುವುದಕ್ಕೂ ಅವರ ಜೀವಾತ್ಮಕ್ಕೆ ಶಾಂತಿಯನ್ನು ಕೊಡುವ ಬಗ್ಗೆ ಹಾಗೂ ಅವರ ಕುಟುಂಬದವರನ್ನು ಸಂತೈಸುವುದು ಅತ್ಯವಶ್ಯವಲ್ಲವೇ ಎಂಬುದಾಗಿ ಹೇಳಿದರು. ಮೆ|| ಅಬ್ದುಲ್ ಗಫೂರ್ ಖಾನರು ಅದನ್ನು ಅನುಮೋದಿಸಿ, ಕೊಡಗಿನಲ್ಲಿ ಈ ಪ್ರಖ್ಯಾತರು, ರೈಲ್ವೆ ಸೆಸ್ಸನ್ನು ತೆಗೆಯಲಿಕ್ಕೂ [illegible] ಆಕ್ಟನ್ನು ರದ್ದುಪಡಿಸಲಿಕ್ಕೂ ಇನ್ನು ಹೆಚ್ಚಿನ ಕೆಲಸವನ್ನು ರೈತರಂತೆ ಮಾಡಿದ್ದು ಇವರೇ. ದೇಶದ ಅಭಿವೃದ್ಧಿಗೆ ಇವರು ಬಹಳ ಹಂಬಲರಾಗಿದ್ದರು. ಒಗ್ಗಟ್ಟೇ ಮುಖ್ಯವಾದ ಇವರಧ್ಯೇಯವಾಗಿತ್ತು. ಕೊಡಗು ಸಭೆಗೆ ಸೇರದೆ, ಸಭೆಯು ಅವಶ್ಯವಿಲ್ಲವೆಂದು ಕೊಡಗು ಪತ್ರಿಕೆಯಲ್ಲಿ ಬಹಿರಂಗವಾಗಿ ಬರೆದದ್ದರಿಂದ ಇವರು ಒಗ್ಗಟ್ಟನ್ನು ಎಷ್ಟು ಬಯಸುತ್ತಿದ್ದರೆಂಬುದು ತಿಳಿಯುತ್ತದೆ. ಇವರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲಿ ಎಂಬುದಾಗಿ ಹೇಳಿದ ನಂತರ ವ್ಯಸನಸೂಚಕ ಠರಾವಾಗಿ, ಅವರ ಕುಟುಂಬಕ್ಕೆ ಕಳುಹಿಸಲಾಯಿತು.

ಮೂರ್ನಾಡು.

ಮೆ|| [illegible] ದೇವಯ್ಯನವರ ಅಧ್ಯಕ್ಷತೆಯಲ್ಲಿ ಮೀಟಿಂಗ್ ಆಗಿ ಮೆ|| ಮುತ್ತಣ್ಣನವರ ಕುಟುಂಬಕ್ಕೆ ವ್ಯಸನಸೂಚಕ ಠರಾವುಗಳು ಕಳುಹಿಸಲ್ಪಟ್ಟವು. ಮೆ|| ದೇವಯ್ಯನವರು ಮುತ್ತಣ್ಣನವರು ಜನರಿಗೆ ದೇಶಕ್ಕೆ ಜಮೀನುದಾರ ಸಂಘದ ಮೂಲಕ ಮಾಡಿದ ಕೆಲಸವನ್ನು ವಿವರಿಸಿದರು. [illegible] ವಾರ್ಷಿಕ [illegible] ಯಾವಾಗ, ಮೆ|| ಮುತ್ತಣ್ಣನವರು ಸಭೆಗೆ ಬರುತ್ತಿದ್ದರೋ ಆಗ ಆ ಸಭೆಯು [illegible] ಅವರಿಗೆ ದೇಶದ ಜನರ ಮೇಲೆ ಎಷ್ಟರಮಟ್ಟಿಗೆ ಅಭಿಮಾನವಿತ್ತೆಂಬುದು [illegible] ಅವರ ಮನೆಗೆ ಹೋದಾಗ, ದೇಶದ ವಿಷಯ ಮತ್ತು ಮದ್ರಾಸು ಅಸೆಂಬ್ಲಿ ಮೆಂಬರ ಇತ್ಯಾದಿ ವಿಷಯಗಳನ್ನು ಮಾತಾಡುತ್ತಿದ್ದುದು, ಜನರನ್ನು ಉಪಚರಿಸುತ್ತಿದ್ದುದು ವಗೈರೆಯಿಂದ ತಿಳಿಯುತ್ತಿತ್ತು. ದೇಶಕ್ಕೆ ಇಂಥಾ ಮುಖಂಡರು ಸಿಕ್ಕುವುದು ದುರ್ಲಭ. ಇವರಂತೆ [illegible] ದೇಶದ ಕೆಲಸದಲ್ಲಿ [illegible] ಗಳಾಗಿ [illegible] ಸಂಪಾದಿಸಿದ ಕೀರ್ತಿಯನ್ನು [illegible] ಆಶಿಸುತ್ತೇವೆ. ಹಾಗೂ ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ ಎಂಬುದಾಗಿ ಮಾತಾಡಿ ಅವರ ಕುಟುಂಬಕ್ಕೆ ವ್ಯಸನಸೂಚಕ ಠರಾವನ್ನು ಕಳುಹಿಸಿಕೊಡಬೇಕಾಗಿ ಹೇಳಿದುದಕ್ಕೆ ಎಲ್ಲರೂ ಅನುಮೋದಿಸಿದರು. ನಂತರ ಮೀಟಿಂಗ್ ಮುಕ್ತಾಯವಾಯಿತು.

ಕೊಡಗಿನಲ್ಲಿ ಓಟುಗಳು

(ಓದಿದ್ದು, ಬರೆದದ್ದು.)

ಕೆಲವು ವರುಷಗಳಿಂದ ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂದೂ, ಇಲ್ಲದ ಪಕ್ಷದಲ್ಲಿ ಒಂದು ಸಭೆ ಕೊಡಬೇಕೆಂದೂ ಚಳವಳವು ಬಹಳ ಜೋರಾಗಿ ನಡೆಯುತ್ತಿತ್ತು. ಈ ಜೋರನ್ನು [illegible] ಚಳವಳಕ್ಕೆ ಹೋಲಿಸಿದರೆ ಆಜಗಜಾಂತರ ವ್ಯತ್ಯಾಸವೇ ಸರಿ! ಆದರೂ ಆ ಚಳವಳಿಯಲ್ಲಿ ಮೊದಲು ಮೊದಲು ಎಲ್ಲರೂ ಭಾಗಿಗಳಾಗಿದ್ದು, ಈಗೀಗ ಬೆರಳಿನಲ್ಲಿ ಎಣಿಸಲ್ಪಡುವವರಷ್ಟಾಗಿರುವುದು ಬಹಳ ವಿಷಾದಕರ. ಅಂತೂ ಸಭೆ ಇಂದೋ ನಾಳೆಯೋ ಬರುವುದಂತೆ!!

ಈ ಸಭೆಯ ವಿಷಯವಾದರೂ ಹಾಗಿರಲಿ. ಈಗ ಹಿಂದೂ ದೇಶದ ಎಲ್ಲಾ ಪ್ರಾಂತ್ಯಗಳಲ್ಲೂ ಪ್ರಾಂತಿಕ ಸಭೆಗಳಿಗೆ [illegible] ಎಂದು ಉಮೇದ್ವಾರರುಗಳಾಗುವರು. ಹಾಗೆಯೇ ಇಡೀ ಹಿಂದೂದೇಶದ ಸಭೆಯಾದ ನ್ಯಾಯವಿಧಾಯಕ ಸಭೆಗೂ ಜನರು ಹೋಗುತ್ತಿರುವರು. ಪ್ರಾಂತಿಕಸಭೆಗಳಿಗೆ ಆಯಾಯ ಪ್ರಾಂತ್ಯಗಳಿಂದಲೂ, ಅಖಿಲಭಾರತಸಭೆಗೆ ಭಾರತದ ಎಲ್ಲಾ ಭಾಗಗಳಿಂದಲೂ ಉಮೇದ್ವಾರರುಗಳಿಗೆ ಪ್ರಜೆಗಳು ಓಟುಗಳನ್ನು ಕೊಡುವರು. ಆದರೆ ಪಾಪ ಕೊಡಗಿನವರೆಲ್ಲಾ ಎಲ್ಲಿಂದ! ಕೊಡಗು ಹಿಂದೂ ದೇಶದೊಳಗೆ ಇದೆಯೋ ಇಲ್ಲವೋ ಎಂದು ದೇಶದ ಮುಂದಾಳುಗಳೂ ವಿದ್ಯಾವಂತರೂ ಇದರ ರಾಷ್ಟ್ರಸಭೆಗಳಿಗೂ ಒಡನಾಡಿಗಳಿಗೂ ಸಹ ತಿಳಿಯದು. ಇದು ಮದ್ರಾಸಿಗೆ ಯಾವ ವಿಧದಲ್ಲಿಯೂ ಸೇರಲಿಲ್ಲ! ಅದುದರಿಂದ ಮದ್ರಾಸಿಗೆ ಉಮೇದ್ವಾರರುಗಳನ್ನು ಕಳುಹಿಸುವ ಮತ್ತು ಓಟು ಕೊಡುವ [illegible] ಇಲ್ಲ. ಎಸಂಬ್ಲಿಯಲ್ಲಿ ಏನಾದರೊಂದು ಕಾನೂನು ಪಾಸಾದರೆ ಹಿಂದೂದೇಶದೊಳಗಿರುವ ಕೊಡಗಿಗೂ ವ್ಯಾಪಿಸುವುದು; ಅದೇ ಸಭೆಯು ಕೊಡಗಿನ ಆದಾಯವೆಚ್ಚವನ್ನು ಬಹು ಬುದ್ಧಿವಂತಿಕೆಯಿಂದ ನೋಡಿಕೊಳ್ಳುವುದು; ಇನ್ನೂ ಅನೇಕ ವಿಷಯಗಳನ್ನು ಕೊಡಗಿನ ಪರವಾಗಿ ನೋಡಿಕೊಳ್ಳುತ್ತಾ ಇದೆ. ಹೀಗಿರುವ ಸಭೆಗೆ ಹಿಂದೂದೇಶದಿಂದ ಸಭಿಕರನ್ನು ಚುನಾಯಿಸಿ ಕಳುಹಿಸೋಣವಾಗುವುದು.

ಇಂಥಾ ಸಭೆಗೆ ಕೊಡಗು ಒಬ್ಬನನ್ನಾದರೂ ಕಳುಹಿಸದಿರಬಹುದೇ ? ಯಾರನ್ನು ಕಳುಹಿಸದಿದ್ದರೂ ಕೊಡಗಿನಿಂದ ಒಬ್ಬನು ಉಮೇದ್ವಾರನಾಗಲು ಯೋಗ್ಯನಿಲ್ಲವೇ ? ಅದಂತೂ ಆಗದಲಿ ಕೊಡಗಿನವರು ಯಾರೂ ಓಟು ಕೊಡಲು ಯೋಗ್ಯರಲ್ಲವೆಂದು ತೋರುತ್ತೆ ಇದರಿಂದ ಕೊಡಗಿಗೆ ದೊಡ್ಡ ಅಪಮಾನವಲ್ಲವೇ ? ಸಾವಿರಾರ್ಟ್ಲಿಯಾಗಿಯೂ ಲಕ್ಷಲಕ್ಷವಾಗಿಯೂ ಹಣವನ್ನು ಕೊಡತಕ್ಕವರೂ ಕೂಡ ಓಟು ಕೊಡಲು ಯೋಗ್ಯರಲ್ಲವೆಂದು ಆಯಿತಲ್ಲ ಬೇರೆ ಪ್ರಾಂತ್ಯಗಳಲ್ಲಿ ವರ್ಷ ಒಂದರ ಒಂದು ಸಾವಿರ ರೂಪಾಯಿ ಉತ್ಪತ್ತಿಯಿರುವವರೂ ಕೂಡ ಓಟು ಕೊಡಲು ಯೋಗ್ಯರು. ಆದರೆ ನಮ್ಮಲ್ಲಿ ಸಾವಿರ ಭಟ್ಟಿ ಭೂಮಿ ಇರುವವರೂ ಕೂಡ ಓಟು ಕೊಡುವುದಿಲ್ಲವಲ್ಲ ! ಇವರು ಅರ್ಹರಲ್ಲವೆ ?

ದೇಶಾಭಿಮಾನಿಗಳೇ ಕೊಡಗಿನ ಮುಂದಾಳುಗಳೇ ನಿಮಗೆ ಸಭೆಗೆ ಉಮೇದ್ವಾರರನ್ನು ಕಳುಹಿಸುವ ಹಕ್ಕೂ, ಓಟು ಕೊಡುವ ಹಕ್ಕು ಬೇಡವೇ . ಬೇರೆ ಕಡೆ ಸ್ತ್ರೀಯರೂ ಸಹ ಓಟು ಕೊಡಲು ಅಧಿಕಾರ ಹೊಂದಿದ್ದಾರೆ ಪಡೆದಿರುವರು ಆದರೆ ಇಲ್ಲಿನ ಪುರುಷರಿಗೂ ಸಹ ಈ ವಿಷಯವು ತಲೆಗೆ ಹೋಗದೇ ಇರುವುದು ಮಹದಾಶ್ಚರ್ಯ

ನಿಮಗೆ ಓಟು ಕೊಡಲು ಮತ್ತು ಸಭೆಗೆ ಉಮೇದ್ವಾರರುಗಳನ್ನು ಕಳುಹಿಸುವ ಹಕ್ಕು ಬೇಕೋ ಬೇಡವೋ ? ಬೇಕಾದರೆ ನ್ಯಾಯವಾದ ರೀತಿಯಲ್ಲಿ ಚಳವಳಿ ನಡೆಸುವದು ಅಗತ್ಯ.

ಕೊಡಗಿನಿಂದ ವಿದ್ಯಾಭ್ಯಾಸಕ್ಕಾಗಿ ಬೇರೆ ಪ್ರಾಂತ್ಯಗಳಿಗೆ ಹೋಗಿ ಎರಡು ಅಕ್ಷರಗಳನ್ನು (ಬಿ ಎ) ಪಡೆದು ತಮ್ಮ ಹೆಸರನ್ನು [illegible] ಕೊಂಡವರಿಗೆ ಮಾತ್ರ ಮದ್ರಾಸು ಸಭೆಗೆ ಯುನಿವರ್ಸಿಟಿ ಮೂಲಕ ಉಮೇದ್ವಾರರುಗಳಿಗೆ ಓಟು ಕೊಟ್ಟು [illegible] ಕಾಂಗ್ರೆಸ್ [illegible] ತೋರುತ್ತೆ

ಕೊಡಗು ಜಮೀನ್ದಾರರ ಸಂಘ

(By Orgnnising Secretary)

No 1.

ನಮ್ಮ ಸಂಘವು ಸ್ಥಾಪಿಸಲ್ಪಟ್ಟು ಸುಮಾರು ವರ್ಷಗಳಾದರೂ 8-10 ವರ್ಷಗಳಿಂದ ದೇಶಕ್ಕೆ ತಿಳುವಳಿಕೆಯೂ ಮತ್ತು ಪ್ರಯೋಜನಕರವಾದ ಅನೇಕ ಕಾರ್ಯಗಳನ್ನು ಕೈಕೊಂಡು ಸಾಧಿಸಲು ಯತ್ನಿಸಿದಲ್ಲಿ ತಕ್ಕಮಟ್ಟಿಗೆ ಪರಿಣಾಮವೂ ಉಂಟಾಗಿದೆ. ಈ ವಿಷಯಗಳನ್ನು ಬೇರೆ ಲೇಖನದಲ್ಲಿ ವಿವರಿಸುತ್ತೇನೆ

ಈದಕ್ಕೆ ನಾವು ಇಲ್ಲಿ ಮುಖ್ಯವಾಗಿ ಯೋಚಿಸಬೇಕಾದದ್ದು ನಮ್ಮ ಸಂಘದ ಅಭಿವೃದ್ಧಿಯಾಗಿರುತ್ತೆ ಸಂಘವು ದೇಶದ ಪ್ರಯೋಜನಕ್ಕಾಗಿರುವದರಿಂದ ಸಂಘದ ಅಭಿವೃದ್ಧಿಯನ್ನು ಆಲೋಚಿಸುವಾಗ, ನಮ್ಮ ದೇಶದ ಸ್ಥಿತಿಯನ್ನು ಜೊತೆಯಲ್ಲೇ ಆಲೋಚಿಸಬೇಕಾಗಿದೆ, ದೇಶಕ್ಕೆ ನಾನಾ ಕಾರಣಗಳಿಂದ ಒಂದಂಥ ಕಷ್ಟಗಳನ್ನು ಹೋಗಲಾಡಿಸಲಿಕ್ಕಾಗಿ ಒಗ್ಗಟ್ಟಿನಿಂದ ಸಂಘಗಳನ್ನು ಏರ್ಪಡಿಸಿಕೊಂಡು ಅಭಿವೃದ್ಧಿ ಹೊಂದುವದು ಕಲಿಯುಗದ ಧರ್ಮವಾಗಿದೆ ನಮ್ಮ ಸಂಘವನ್ನು ಯಾವ ವಿಧದಲ್ಲಿ ಅಭಿವೃದ್ಧಿಪಡಿಸಬೇಕೆಂಬದರ ಮೊದಲು ದೇಶದ ಕಷ್ಟಸುಖಗಳನ್ನು ಪರ್ಯಾಲೋಚಿಸಿ ತಿಳಿದುಕೊಂಡರೇನೆ ಸಂಘದ ಅಭಿವೃದ್ಧಿಗೆ ದಾರಿಕಂಡು ಹಿಡಿಯಲಾಗುವದು. ಆದ್ದರಿಂದ ಈಗಿನ ದೇಶದ ಸ್ಥಿತಿಗತಿಗಳು ಹ್ಯಾಗಿವೆಂದು ನೋಡುವ.

ನಮ್ಮ ದೇಶವು ಮೊದಲು ಬಹಳ ಅಭಿವೃದ್ಧಿ ಸ್ಥಿತಿಯಲ್ಲಿ ಇತ್ತೆಂದು ಈಗ ಬಹಳ ಹೀನಸ್ಥಿತಿಗೆ ಬಂದಿದೆ ಎಂದೂ ಹೇಳುವದು ಪೂರ್ವವಾಡಿಕೆಯೂ ನಿಶ್ಚಯವೂ ಆಗಿದೆ ಹಾಗಾದರೆ ನಾವು ಈ ಸ್ಥಿತಿಗೆ ಬರಲಿಕ್ಕೆ ಯಾರು ಜವಾಬ್ದಾರರು ಯಾವ ಕಾರಣಗಳಿಂದ ನಮ್ಮ ನಾಡು ಹೀಗಾಯಿತು ? ನಮ್ಮ ಮುಂದಿನ ಗತಿಯೇನು !! ಮನನೀಯರೇ — ಬಿತ್ತನ್ನು ಬಿತ್ತಿದರೆ ಕಾಫಿಯಾಗಲಿಕ್ಕಿಲ್ಲ, ಅಥವ ರಾಗಿ ಬಿತ್ತಿದರೆ ಎಳ್ಳಾಗುವದಿಲ್ಲ ಹಾಕಿದ ಬೀಜದ ಪ್ರತಿಫಲವು ದೊರೆಯುತ್ತೆ ಆದ್ದರಿಂದ ನಾವು ತಿಳಿದುಕೊಳ್ಳಬೇಕಾದದ್ದು ಏನಂದರೆ, ಈಗಿನ ನಮ್ಮ ಸ್ಥಿತಿಗಳು ಹ್ಯಾಗೆ ಹಿಂದಿನ ನಡವಳಿಕೆಯು ಫಲವಾಗಿರುತ್ತೋ ಹಾಗೆಯೇ ನಮ್ಮ ಮುಂದಿನ ಅಭಿವೃದ್ಧಿಯು ಯಾ ಹೀನಸ್ಥಿತಿಯು ಈಗಿನ ನಡವಳಿಕೆಯ ಪ್ರತಿಫಲವಾಗಿರುತ್ತೆ. ಹಾಗಾದರೆ ಹಿಂದಿನ ಅನುಭವದಿಂದ ನಾವು ಕಲಿಯತಕ್ಕದ್ದೇನು ? ಹಿಂದಿನ ಅನುಭವವು ನಮಗೆ ಮುಂದಿನ ಕೆಲಸದಲ್ಲಿ [illegible] ಬಲ್ಲದೆ ನಮಗೆ ಒಳ್ಳೇ ಉದಾಹರಣೆಯೂ ಆಗಿದೆ ಹಿಂದಿನ ನಡವಳಿಕೆಗಳಲ್ಲಿ ಕಟ್ಟಿದ್ದ ತಪ್ಪುಗಳ್ಯಾವವು ಈಗ ಅವನು ಬಿಡಬೇಕಾಗಿದೆ ಎಲ್ಲದೆ ಹೊಸ ಒಳ್ಳೇ ನಡವಳಿಕೆಗಳನ್ನು ಕಾಪಾಡಿ ಕಾಲಕ್ಕೆ ಸರಿಯಾಗಿ ಉಪಯೋಗಿಸಬೇಕಾಗಿದೆ ನಮ್ಮ ಒಳ್ಳೇ ಕಾಲಗಳು ಕಳೆದು ಹೋದವು ಇನ್ನು ನಮಗೆ ಮುಂದಕ್ಕೆ ಸುಖವಿಲ್ಲವೆಂದು ಹೇಳುವವರ ಅಭಿಪ್ರಾಯವು ಪೂರ ತಿಳುವಳಿಕೆ ಇಲ್ಲದ್ದಾಗಿರುತ್ತೆ. ನಮಗಳ ಹೀನಸ್ಥಿತಿಯನ್ನು ಹೋಗಲಾಡಿಸಬಹುದೆಂದು ಧೈರ್ಯದಿಂದ ಕಾರ್ಯವನ್ನು ನಡೆಸುವದೇ ಬುದ್ಧಿವಂತಿಕೆಯಾಗಿದೆ, ನಾವು ಮೊದಲು ಒಳ್ಳೇ ನಡವಳಿಕೆಯಲ್ಲಿ ಇರುವಾಗ್ಗೆ ನಮ್ಮ ಸ್ಥಿತಿಗತಿಗಳು ಅದಕ್ಕೆ ತಕ್ಕದಾಗಿದ್ದವು ಈಗಿನ ನಮ್ಮ ಸ್ಥಿತಿಗತಿಗಳು ನಮ್ಮ ತಪ್ಪು ನಡವಳಿಕೆಗಳ ಫಲಿತಾಂಶವಾಗಿರುತ್ತೆ ಅಂದರೆ, ನಮ್ಮ ಪೂರ್ವಜರಲ್ಲು ಧೈರ್ಯ ಮತ್ತು ಕರುಣ ಸ್ವಭಾವವು ಹೆಚ್ಚು ತುಂಬಿ ತುಳುಕುತಿದ್ದ ಕಾರಣ ದೇಶದ ಸ್ವತಂತ್ರವೂ ಸುಭಿಕ್ಷವೂ ಮಿತಿಮೀರಿದ್ದಾಗಿತ್ತು ಜಯಕ್ಕೆ ಕಾರಣವಾದಂಥ ಮೇಲಣ ಗುಣಗಳು ನಮ್ಮಲ್ಲು ವಿಶೇಷ ಕಮ್ಮಿಯಾದ ಕಾರಣ ನಮ್ಮ ದೇಶವು ಈಗ ಬಲಹೀನತೆಯಿಂದಲೂ ಬಡತನದಿಂದಲೂ ಮತ್ತು ಜಗಳಗಳಿಂದಲೂ ನರಳುತ್ತಿದೆ ಆದ್ದರಿಂದ ನಮ್ಮ ಒಳ್ಳೇ ಕಾಲ ಅಥವ ಕೆಟ್ಟಕಾಲವೆಂಬದು ನಮ್ಮ ನಡವಳಿಕೆಯ ಪ್ರತಿಫಲವಾಗಿರುತ್ತೆ ಇನ್ನು ಕೆಲವರು ನಮ್ಮ ಈಗಿನ ಸ್ಥಿತಿಗೆ ಅದೃಷ್ಟವೇ ಮುಖ್ಯ ಕಾರಣವೆನ್ನುತ್ತಾರೆ ? ಇದಕ್ಕಿಂತಲೂ ದೊಡ್ಡ ತಪ್ಪು ಅಭಿಪ್ರಾಯವು ಬೇರೆ ಯಾವುದೂ ಇಲ್ಲ ದೇವರು ನಮಗೆ ಜ್ಞಾನವನ್ನು ಕೊಟ್ಟಿರುತ್ತಾನೆ ಚೆನ್ನಾಗಿ ಆಲೋಚಿಸಿ ನೋಡಿದರೆ ಎಲ್ಲಾ ನಮ್ಮ ನಡವಳಿಕೆಗಳ ಫಲವಾಗಿರುತ್ತೆ ಅದೃಷ್ಟವೆಂದು ಹೇಳುವ ತಪ್ಪು ಅಭಿಪ್ರಾಯವನ್ನು ನಮಗಳ ಮನಸ್ಸಿನಿಂದ ಒಡನೇ ತೆಗೆದು ಹಾಕಬೇಕೆಂಬದ್ದು ಬಹಳ ಅವಶ್ಯವಾಗಿದೆ ನಾವು ಕ್ಷೀಣಗತಿಗೆ ಬರಲಿಕ್ಕೆ ಮೊದಲೇ ನಾವು ತಪ್ಪು ಮಾಡಲಿಕ್ಕೆ ಶುರುಮಾಡಿದುದಾಗ್ಯೆ ನಮ್ಮ ತಪ್ಪಿನ ಪ್ರತಿಫಲದ ಅನುಭವವನ್ನು ದೇವರ ಮೇಲೆ ಹಾಕಿದರೆ, ಇನ್ನು ಮುಂದಕ್ಕೂ ನಾವು ಹೀನಸ್ಥಿತಿಗೆ ಬರಲಿಕ್ಕೆ ಸಹಾಯಮಾಡಿದಂತೆ ಆಗ ಮದಿಲ್ಲವೇ ? ಎಲ್ಲಾ ಅದೃಷ್ಟವೆಂದು ಹೇಳಿಕೊಳ್ಳುವದು ಇನ್ನು ಮುಂದಕ್ಕೂ ಕಾಲಕ್ಕನುಗುಣವಾಗಿ ನಮ್ಮ ಸ್ಥಿತಿಯನ್ನು ಅಭಿವೃದ್ಧಿಪಡಿಸಲು, ಪ್ರಯತ್ನ ಮಾಡಬೇಕಾದುದಾದನ್ನು ತಪ್ಪಿಸಿದಂತೆ ಆಗುವದಿಲ್ಲವೇ ? ಆದ್ದರಿಂದ ಈಗಿನ ನಮ್ಮ ಸ್ಥಿತಿಯು ಹಿಂದೆ ನಮ್ಮ ನಡವಳಿಕೆಯ [illegible] ತಿಳಿಯುವದಲ್ಲವೆ ಇನ್ನು [illegible] ಹೋದಲ್ಲಿ ನಾವು ಈಗಿನದಕ್ಕಿಂತಲೂ ಹೀನಸ್ಥಿತಿಗೆ ಬರುವದರಲ್ಲಿ ಯಾವ ಸಂದೇಹವೂ ಇರಬದಿಲ್ಲವೆಂಬದನ್ನು ತಿಳಿದುಕೊಳ್ಳುವದು ನಮ್ಮ ಮುಖ್ಯ ಕರ್ತವ್ಯವಾಗಿದೆ

ಹಾಗಾದರೆ ನಮ್ಮ ಹಿರಿಯರು ನಡೆದುಕೊಂಡ ರೀತಿಯಲ್ಲು ಈಗ ನಾವು ನಡೆದುಕೊಂಡರೆ ನಾವು ಈಗಲೂ ಮತ್ತು ಮುಂದಕ್ಕೂ ಸಹ ನಮ್ಮ ಹಿರಿಯರ ಹಿಂದೆ ಬದುಕಿದ ರೀತಿಯಲ್ಲು ಬದುಕಬಹುದೋ ಹ್ಯಾಗೆ ? ಕಳೆದು ಹೋದ ಕಾಲವು ಕಳೆದುಹೋದವುಗಳೇ ಹಿಂದಿನ ಸ್ಥಿತಿಗೆ ತರುವದು ಪೂರ ಅಸಾಧ್ಯ ಈಗಿನ ಕಾಲವೇ ನಮ್ಮದಾಗಿದೆ ಈಗಿನ ಪ್ರಯತ್ನದ ಪ್ರತಿಫಲವು ಮುಂದಕ್ಕೆ ಬರುವದಾಗಿದೆ ನಮ್ಮ ದೇಶವೂ ಮತ್ತು ಹೊರಗಣ ದೇಶಗಳು ನೂರಾರು ವರ್ಷಗಳಿಗೆ ಮುಂಚೆ ಇದ್ದಹಾಗೆ ಇರುವದಿಲ್ಲ, ಪ್ರಪಂಚವೆಲ್ಲಾ ನೂರಾರೂ ವರ್ಷಗಳಿಗೆ ಮೊದಲಿನ ರೀತಿಗೆ ಬಂದಲ್ಲು ಆಗಬಹುದು ಅದು ಅಸಾಧ್ಯ ಯಾಕಂದರೆ — ಹಾಗೆ ಆಗಬೇಕಾದರೆ ಭೂಗೋಳವನ್ನೇ ನೂರಾರು ವರ್ಷಗಳಿಗೆ ಮೊದಲು ಇದ್ದಹಾಗೆ ಬದಲಾಯಿಸಲು ಸಾಧ್ಯವಾದಲ್ಲು ನಮ್ಮಗಳ ಜ್ಞಾನ ಮತ್ತು ಶರೀರ ವೃದ್ಧಿಯನ್ನು ಮೊದಲಿನಂತೆಯೇ ಮಾಡಲು ಸಾಧ್ಯವಾಗಿ ನಮ್ಮ ಎಲ್ಲಾ ನಡವಳಿಕೆಗಳನ್ನು ಪೂರ್ವ ಒರ ರೀತಿಗೆ ತಂದು, ಪ್ರಪಂಚದ ಇತರ ದೇಶಗಳ ಒನಾಂಗವನ್ನು ನೂರಾರು ವರ್ಷಗಳ ಹಿಂದೆ ಇದ್ದ ಮೌಢ್ಯಕ್ಕೆ (ignorence) ತಂದಲ್ಲು ಸಾಧ್ಯವಾಗಬಹುದು ಆದರೆ ಇವುಗಳೆಲ್ಲಾ ಪೂರ ಅಸಾಧ್ಯವಾಗಿರುತ್ತೆ ಹಾಗಾದರೆ ಹಿಂದಲ ಸ್ಥಿತಿಗಳನ್ನು ತಿಳಿದದ್ದರಿಂದ ಪ್ರಯೋಜನವೇನು ? ನಾವು ಈಗ ಯಾವ ಕಾರಣದಿಂದ ಈ ಸ್ಥಿತಿಯಲ್ಲು ಇದ್ದೇವೆಂಬದನ್ನು ತಿಳಿದುಕೊಳ್ಳುವದೇ ಆಗಿರುತ್ತದೆ ಆದ್ದರಿಂದ ನಾವು ಯಾವ ಕಾರಣದಿಂದ ಅಥವ ನಡವಳಿಕೆಯಿಂದ ಈಗಿನ ಸ್ಥಿತಿಯಲ್ಲು ಇರುತ್ತೇವೆಂಬದನ್ನು ಅತಿಪ್ರಯತ್ನದಿಂದ ಕಂಡುಹಿಡಿದು, ಸಾಧ್ಯವಾದ ಪಕ್ಷಕ್ಕೆ ನಾವು ಈಗಿನ ನಡೆವಳಿಕೆಯಲ್ಲಿ ಹಿಂದೆ ಮಾಡಿದ ತಪ್ಪುಗಳನ್ನು ಕಾಲಕ್ಕನುಗುಣವಾಗಿಯೂ, ನಮ್ಮ ದೇಶಕ್ಕೆ ತಕ್ಕ ಹಾಗೆಯೂ, ಮುಂದಕ್ಕೆ ಅಭಿವೃದ್ಧಿ ಹೊಂದುವ ರೀತಿಯಲ್ಲೂ ತಿದ್ದಿಕೊಂಡು ನಮ್ಮ ಮುಂದಿನ ಸ್ಥಿತಿಯನ್ನು ಅಭಿವೃದ್ಧಿಪಡಿಸುವದರಲ್ಲು ನಾವು ವಿಶ್ವಪ್ರಯತ್ನವನ್ನು ಮಾಡಬೇಕಾದದ್ದು ನಮ್ಮ ಮುಖ್ಯ ಕರ್ತವ್ಯ.

ಸಂಘದ ಕೆಲಸ

ದೇಶದ ಮಹನೀಯರಲ್ಲಿ ವಿನಂತಿ —

ಜಮೀನ್ದಾರರ ಸಂಘವನ್ನು ಬದ್ರಪಡಿಸಿ, ಅದರ ಪ್ರಯೋಜನವನ್ನು ಸಂಘದ ಉದ್ದೇಶಕ್ಕೆ ಅನುಗುಣವಾಗಿ ಪಡೆಯುವದರ ಉದ್ದೇಶ್ಯದವಾಗಿ ಒಂದು ಆರ್ಗನೈಸಿಂಗ್ ಶಾಖೆಯನ್ನು (Organising Branch) ಏರ್ಪಡಿಸಿರುವದು ಎಲ್ಲರಿಗೂ ತಿಳಿದಸಂಗತಿಯಾಗಿರುತ್ತೆ

ಸಂಘದ ಅಭಿವೃದ್ಧಿಯು ದೇಶದ ಸಾಂಪತ್ತಿಕ ಸ್ಥಿತಿಯು ಅಭಿವೃದ್ಧಿಯಾಗುವದಲ್ಲದೆ ದೇಶದ ಸ್ಥಿತಿಯು ಅಭಿವೃದ್ಧಿ ಹೊಂದುವದೆಂದರೆ, ದೇಶದ ಪ್ರತಿಯೊಬ್ಬ ಜಮೀನ್ದಾರರು ಅವರ ಜೊತೆಯಲ್ಲು ಅವರ ಸಹಾಯಕರೂ ಸಹ ಅಭಿವೃದ್ಧಿ ಹೊಂದಬೇಕಾದದ್ದು ಅವಶ್ಯ. ಜಮೀನ್ದಾರರ ಸ್ವಪ್ರಯತ್ನದಿಂದಲೆ, ಅಭಿವೃದ್ಧಿ ಹೊಂದತಕ್ಕಂಥ ಜಮೀನ್ದಾರರ ಸಂಘದ ಮುಖ್ಯವಾದ ಐದು ಉದ್ದೇಶ್ಯಗಳು ಯಾವವೆಂದರೆ —

(1) ಜಮೀನ್ದಾರರ ಸ್ಥಿತಿಯನ್ನು ಉನ್ನತಿಗೆ ತರುವ ಬಗ್ಗೆ ತರಬೋದು ಮಾಡುವುದು.

(2) ಕೃಷಿಮಾಡುವ ಮತ್ತು ಜಾನುವಾರುಗಳ ಸಾಕುವ ಸಮ್ಮಂಧವಾದ ಪುಸ್ತಕಗಳನ್ನೂ ವರ್ತಮಾನಗಳನ್ನು ಹೊಂದಿಸಿ ಸಂಗ್ರಹಿಸಿ ಪ್ರಚಾರಗೊಳಿಸೋಣ

(3) ಧಾನ್ಯ ದವಸಗಳ ಮತ್ತು ಸಲಗಿಡಗಳ ಬೀಜಗಳನ್ನು ಹೊಂದಿಸಿ ಹಂಚುವದಕ್ಕೆ ನುತಾಲಿಕ (ಬ್ಯಾಂಕ್) ಮಾಡಗೋಣ

(4) ಒಳ್ಳೆ ಜಾತಿ ದನಗಳ ತಂದು ಜಾನುವಾರುಗಳನ್ನು ಒಳ್ಳೆ ಸ್ಥಿತಿಗೆ ತರೋಣ

(5) ನಮ್ಮ ತಮ್ಮ ಒಳಜಗಳಕ್ಕೆ ಸಮ್ಮಂಧಿಸಿದ ಪಂಚಾಯಿತಿ ಮತ್ತು ವಿವೇಕವಾರ್ಗಗಳ ಸಮ್ಮಂಧ ಬರುವ ವಿಷಯವಾದ ಸಂಗತಿಗಳನ್ನು ಆಲೋಚಿಸೋಣ

ಈ ಮೇಲಣ ನಮ್ಮ ಉದ್ದೇಶ್ಯಗಳನ್ನು ಕೈಗೂಡಿಸುವದಕ್ಕೆ ಬೇಕಾದರೆ 18 ವರ್ಷಗಳಿಗೆ ಮೇಲ್ಪಟ್ಟ ಪ್ರತಿಯೊಬ್ಬ ಜಮೀನ್ದಾರನು ವರ್ಷಕ್ಕೆ ವಾರ್ಷಿಕ ಚಂದಾ ಒಂದು ರೂಪಾಯಿಯನ್ನು ಕೊಟ್ಟು ಒದಗಿದ ದ್ರವ್ಯನಿಧಿದಿಂದ ವಿನಹ ಅನ್ಯಥ ಸಾಧ್ಯವಲ್ಲ ಈ ಉದ್ದೇಶವನ್ನು ನೆರವೇರಿಸುವದಕ್ಕೋಸ್ಕರ ದೇಶವನ್ನು ಭಾಗಗಳಾಗಿ ವಿಂಗಡಿಸಿ ಸುಲಭರೀತಿಯಿಂದ ನಮ್ಮ ಕಾರ್ಯವನ್ನು ಸಾಧಿಸಲು ಪ್ರಯತ್ನ ಮಾಡಬೇಕಾಗಿದೆ

ಪ್ರತಿವರ್ಷವೂ ಜಮೀನ್ದಾರರ ಸಂಘದ ವಾರ್ಷಿಕ ಸಮ್ಮೇಳನದಲ್ಲಿ ಮತ್ತು ಕಮಿಟಿ ಮೀಟಿಂಗುಗಳಲ್ಲೂ ಸಹ ತೀರ್ಮಾನ ನಿರ್ಧಾರಗಳನ್ನು ಮಂಜೂರು ಮಾಡಿದರೇ ವಿನಾಯಿ ಅವುಗಳನ್ನು ಕಾರ್ಯದ ಫಲಿತಾಂಶಕ್ಕೆ ತರುವ ಬಗ್ಗೆ ಯಾವ ಪ್ರಯತ್ನವನ್ನು ಮಾಡದೆ ಇರುವದ ಮುಗ್ಗಲಿಗೂ ಬಹಳ ಅನಿವಾರ್ಯವೆಂಬುವದನ್ನು ಎಲ್ಲವರೂ ಒಪ್ಪತಕ್ಕದ್ದಾಗಿದೆ ಹೀಗಿರುವಲ್ಲಿ ನಾವು ಇನ್ನಾದರೂ ಒಟ್ಟುಗೂಡಿ ಸ್ವಸಹಾಯವೇ ಉತ್ತಮ ಸಹಾಯವಬು (Self help is the best help) ದನ್ನು ಚೆನ್ನಾಗಿ ಮನಸ್ಸಿಗೆ ತೆಗೆದುಕೊಂಡು ಜಮೀನ್ದಾರರ ಸಂಘದ ವಶದಲ್ಲು ದೇಶವನ್ನು ಉನ್ನತ ಸ್ಥಿತಿಗೆ ತರುವಂಥಾ ವಿಷಯಗಳಲ್ಲು ತುಂಬಾ ಸಹಾಯವನ್ನು ಕೊಟ್ಟು ವಿಶ್ವಾಸಪೂರ್ವಕವಾಗಿ ಭಾಗಿಗಳಾಗಬೇಕೆಂದು ಕೋರಿಕೆ.

ದೇಶವನ್ನು ಭಾಗಮಾಡುವಾಗ್ಯೆ ನಮ್ಮ ಪ್ರತಿಯೊಂದು ಪಟೇ ನಾಡಿಗೆ ಒಂದೊಂದು ಕಮಿಟಿಯನ್ನು ಸ್ಥಾಪಿಸುವದು ಒಳ್ಳೇದಾಗಿದೆ ಯಾಕಂದರೆ, ಅಲ್ಲಾ ನಾಡು ಕಮಿಟಿಗಳನ್ನು ಸ್ಥಾಪಿಸಲು ಸಾಧ್ಯವಾದಲ್ಲು ಕಮ್ಮಿ ತೊಂದರೆಯಿಂದ ಪದೇ ಪದೇ ಜನರು ಸೇರುವದಕ್ಕೆ ಅನುಕೂಲವಾಗುತ್ತೆ. ಈ ವಿಷಯದಲ್ಲು (ಯಾವ ತರದಲ್ಲು ಕಮಿಟಿಗಳನ್ನು ಏರ್ಪಡಿಸಬಹುದು) ದೇಶದವರು ಕೊಡಗು ಪತ್ರಿಕೆಯ ಮೂಲಕ ಅಭಿಪ್ರಾಯಗಳನ್ನು ಕೊಟ್ಟು [illegible] ದೇಶಾಭಿಮಾನಿಗಳಾಗಬೇಕೆಂದು ಕೋರುತ್ತೇನೆ

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ.

[ಎಡಿಟರ್]

ಆರ್ಯ್ಯ,

ಅನುಮತ್ತಿ ಸಿದ್ಧಪುರನಾಡು [illegible] ಗಾರರಾದ ಮಾ|| ಶ್ರೀ|| [illegible]ತಿಯಂಡ, ಬೆಳ್ಯಪ್ಪನವರು ಈ ನಾಡಿನಿಂದ [illegible] ನಾಡಿಗೆ ಇಲ್ಲಿಗೆಂತಲೂ [illegible] ವನ್ನು [illegible] ಗವಾಗಿ ಹೋಗುವ ಸಂಗತಿಯು, ಈ ನಾಡಿನ ಪ್ರಾಮುಖ್ಯರಾದ ಕೆಲವು ಮಹಾಶಯರು ಮತ್ತು ಅವರ ಇಷ್ಟಮಿತ್ರರು ಸಹ ಸೇರಿ ಶ್ರೀ|| ಬೆಳ್ಯಪ್ಪನವರು ಈ ನಾಡಿನ ಕ್ಷೇಮಯೋಗಕ್ಷೇಮ ಹೆಚ್ಚು ಗಮನ ಕೊಟ್ಟು ಜನರ ಪ್ರೀತಿಗೆ ಪಾತ್ರರಾದಕ್ಕಾಗಿ ತಾರೀಖು [illegible] ರಾತ್ರಿ ಅಂದ ತ್ತಿಯಲ್ಲಿ [illegible] ಕೊಡಗು ಸೇವಾ [illegible] ಶಾಲಿನಲ್ಲಿ [illegible] ದು ಔತಣವನ್ನು ಕೊಟ್ಟು ಅಲ್ಲಿ [illegible] ಕೆಲವರು ಅವರು [illegible] ಶ್ರೀ|| [illegible] ಸ್ವಭಾವವನ್ನು ಸೈವರನ್ನು [illegible] ಹೊಗಳಿಕೆಯಿಂತಿದ್ದ (ನವರಸಿಯ [illegible]) ಅವರು ವರ್ಗವಾಗಿ [illegible] ನಾಲ್ಕು ನಾಡುಗಳಲ್ಲೂ ಸಹ [illegible] ಸಂಘ ದ ಪ್ರತಿನಿಧಿಯಾಗಿ ಒಳ್ಳೆ ಕೆಲಸಗಳನ್ನು ನಡಸಿ ರೈತರ ಮತ್ತು [illegible] ಕಾರಣ [illegible] ಮಾತ್ರವಾಗಿ ಯನ್ನು ಸ್ವಸ್ವ ಹೆಚ್ಚಿನ ಅಭಿವೃದ್ಧಿಯ [illegible] ಮೇಲಿನ ಪದವಿಗೆ ಬರುವಂತೆ [illegible] ಲೆಂದು, ಈ ದೇಶದ ಸ್ಥಾನಬಲ ಮಾತೆಯ [illegible] ಪ್ರಾರ್ಥಿಸಿ ಹಣ್ಣು ಹಂಪಲು [illegible] ಗಳನ್ನು ನೀಡಿಸಿ ಸಭೆಯು ಬರಖಾಸ್ತಾಯ್ತು. ಈ ಊಟ ಉಪಚಾರಕ್ಕೆ ದೇಶದಲ್ಲಿ ವಿಸ ಪ್ರಸಂಗವೇ ಏನಲಿಲ್ಲ

ಬೋರರ್

ಮಹಾನೀಯರೇ,

ಕಿತ್ತಳೆ ಗಿಡಕ್ಕೆ ತಗಲುವ ಬೋರರ್ ಹುಳವನ್ನು ನಾಶಪಡಿಸಲಿಕ್ಕೂ ಮತ್ತು ಪುನಹ ಮುಂಕ್ಕೆ ತಗಲದಂತೆ ನಿವಾರಿಸಲಿಕ್ಕೂ ಔಷದ ಹೇಳಿ ಕೊಟ್ಟವರಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡುವುದಾಗಿ ಒಬ್ಬರು ಕೆಲವು ದಿವಸಗಳ ಹಿಂದೆ ಈ ಪತ್ರಿಕೆಯಲ್ಲಿಯೇ ಪ್ರಕಟಿಸಿದ್ದರು. ಈ ಕೆಳಗಿನ ಔಷಧಿಯನ್ನು ಉಪಯೋಗಿಸಿದರೆ ಬೋರರ್ ನಾಶವಾಗುವುದು.

ಕಿತ್ತಳೆಯ ಗಿಡಕ್ಕೆ (ಅಡಿಮರಕ್ಕೆ, Stem) ಬೇವಿನ ಎಣ್ಣೆ ಉಜ್ಜಬೇಕು. ಅದರ ಬುಡಕ್ಕೆ ಹಾಕುವ ಔಷಧಿ ನಮ್ಮಲ್ಲಿ ತಯಾರಾಗುತ್ತದೆ. ಅದನ್ನು ಒಂದು ಗಿಡಕ್ಕೆ ಒಂದೂವರೆ ರಾತಲಿನಂತೆ ಸುತ್ತಲೂ ಗುಂಡಿ ತೆಗೆದು ಹಾಕಿದರೆ ಹುಳವು ತಗಲುವುದಿಲ್ಲ. ಈ ಔಷಧವು ಟನ್ನಿಗೆ ೧೨೫ ರೂಪಾಯಿಯ ಲೆಕ್ಕದಲ್ಲಿ ನಮ್ಮಲ್ಲಿ ದೊರೆಯುವುದು.

Sidleek's Manure Works,
Mercara.

ಅಯ್ಯಾ,

ನಮ್ಮ ಈ ಕೊಡಗು ಪ್ರಾಂತ್ಯದಲ್ಲಿ ಬಹು ವರುಷಗಳ ಹಿಂದೆ ಅಕ್ಕಿ ಕಾಳಿನ ಅನುಕೂಲವಾದ ಮಳೆಯು ನೀರಿನಿಂದಲೂ ಮತ್ತು ಭೂಮಿಯ ಸತ್ವದಿಂದಲೂ, ಸಾಧಾರಣವಾಗಿ ಆಹಾರ ಬೆಳೆಗಳು ನಾನಾವಿಧದ ರೀತಿಯಲ್ಲಿ ಬೆಳೆಯುತ್ತಿದ್ದವು. ಹಾಗೆ ಬೆಳೆದ ಬೆಳೆಯಿಂದ ಇಲ್ಲಿನ ಜನರು ಸುಖದಿಂದ ಜೀವಿಸುತ್ತಿದ್ದರು. ಆದರೆ ಕ್ರಮೇಣ ಭೂಮಿಯ ಉತ್ಪತ್ತಿಯು ಕಡಿಮೆಯಾಗುತ್ತಿರುವುದು ಕಂಡುಬರುತ್ತದೆ. ಇದೇ ರೀತಿ ಇನ್ನು ನಾವು ವ್ಯವಸಾಯದ ವಿಷಯದಲ್ಲಿ ನಿಗವನ್ನು ತೋರಿಸದ ಪಕ್ಷದಲ್ಲಿ ಇಲ್ಲಿನ ಜನರೆಲ್ಲರೂ ಕ್ರಮೇಣ ನಾಶವಾಗಿ ಹೋಗುವುದರಲ್ಲಿ ಸಂಶಯವಿರುವುದಿಲ್ಲ.

ಈ ರೀತಿಯಾಗಿ ಉತ್ಪತ್ತಿಯು ಕಡಿಮೆಯಾಗಲು ಮುಖ್ಯ ಕಾರಣ ಏನೆಂದರೆ:—

೧ ನಮ್ಮ ಭೂಮಿಯಲ್ಲಿ ಬೆಳೆಯುವ ನಾನಾವಿಧದ ಬೆಳೆಯು ಮುಖ್ಯವಾದ ಅಂಶವು ಪರದೇಶಕ್ಕೆ ಹೋಗುತ್ತದೆ. ಹಾಗೆ ಹೋಗುವುದರಿಂದ ನಮ್ಮ ಭೂಮಿಯು (ಪಸೆ) ಶಕ್ತಿ (Fertilizing Matters) ಯು ಹೊರಗೆ ಹೋಗುತ್ತದೆಂದು ಹೇಳಬೇಕಾಗಿದೆ,

೨. ಇಲ್ಲಿ ಬೆಳೆಯುವ ಪೈರುಗಳ ಪೈಕಿ ಎಣ್ಣೆ ತೆಗೆಯುವ ಬೀಜ ಅಂದರೆ ಹರಳು, ನೆಲಗಡ್ಲೆ, ತೆಂಗಿನ ಕಾಯಿ ವಗೈರೆಗಳು ಪರದೇಶಕ್ಕೆ ಕಳುಹಿಸಲ್ಪಡುತ್ತದೆ. ಹಾಗೆ ಕಳುಹಿಸಲ್ಪಟ್ಟ ಅವುಗಳು ಸೀಮೆಯಲ್ಲಿ ಅವನ್ನು ಯಂತ್ರಗಳ ಮೂಲಕ ಎಣ್ಣೆಯನ್ನು ತೆಗೆದು ಅವನ್ನು ಪುನಹ ನಾವು ಮೊದಲಿನ ಕ್ರಯಕ್ಕಿಂತ ಹೆಚ್ಚಿಗೆ ಕೊಟ್ಟು ಕೊಂಡುಕೊಳ್ಳುತ್ತೇವೆ. ಆದುದರಿಂದ ನಾವು ಹೆಚ್ಚಿನ ಪ್ರಯತ್ನದಿಂದ ಇಲ್ಲಿಯೇ ಎಣ್ಣೆಯನ್ನು ತೆಗೆಯುವ ಯಂತ್ರವನ್ನು ಸ್ಥಾಪಿಸಬೇಕು. ಅದೂ ಅಲ್ಲದೆ ಅದರಿಂದ ಮಿಕ್ಕಿದ ಹಿಂಡಿಯನ್ನೂ ನಮ್ಮ ಪ್ರಯೋಜನಕ್ಕೆ ತೆಗೆದುಕೊಳ್ಳಬೇಕಾಗುವುದು. ಅಲ್ಲದೆ ನಮ್ಮ ದೇಶದಲ್ಲೇ ಆ ಯಂತ್ರಗಳಿದ್ದ ಪಕ್ಷದಲ್ಲಿ ಆ ಹಿಂಡಿಗಳನ್ನು ಕಮ್ಮಿ ಕ್ರಯಕ್ಕೆ ಖರೀದಿಗೆ ತೆಗೆದುಕೊಂಡು, ದನಗಳಿಗೆ ಗೊಬ್ಬರವಾಗಿ ಹಾಕಿದರೆ ನಮಗೆ ಹಾಲು, ಮೊಸರು ಮೊದಲಾದುವುಗಳಿಂದ ಸಂತೋಷಪಡಬಹುದು.

೩. ನಮ್ಮ ದೇಶದಿಂದ ಉತ್ಪತ್ತಿಯಾದ ನಾನಾತರದ ಗೊಬ್ಬರಗಳನ್ನು ಪರದೇಶಕ್ಕೆ ಕಳುಹಿಸಿ ನಾವು ಹಾಳಾಗುವುದನ್ನು ನೋಡಿ ನನಗೆ ಬಹಳ ವ್ಯಸನವಾಗುತ್ತದೆ. ೧೯೨೨ ನೇ ಇಸವಿಗಳಲ್ಲಿ ಇದೇ ಹಿಂದೂಸ್ಥಾನದಿಂದ ಲಕ್ಷಾಂತರ ಟನ್ನು ಗೊಬ್ಬರವನ್ನು ಪರದೇಶಕ್ಕೆ ಕಳುಹಿಸಲ್ಪಟ್ಟಿತು. ಹೀಗೆ ನಮ್ಮ ದೇಶದಿಂದ ಈ ರೀತಿಯಾಗಿ ಗೊಬ್ಬರವು ಪರದೇಶಕ್ಕೆ ವರ್ಷವರ್ಷವೂ ಕಳುಹಿಸಲ್ಪಟ್ಟರೆ ನಮ್ಮ ಗತಿಯು ಏನಾಗುವುದೆಂದು ನೀವೇ ಊಹಿಸಬಹುದು. ನಾವು ಖಂಡಿತವಾಗಿ ಅಭಿವೃದ್ಧಿ ಹೊಂದಲಾರೆವು.

ಪರದೇಶಸ್ಥರು ಇಲ್ಲಿನ ಸರಕುಗಳನ್ನು ಹೊಂದಿ ವ್ಯಾಪಾರಸ್ಥರಾಗಿ ದೊಡ್ಡ ದೊಡ್ಡ ಐಶ್ವರ್ಯವಂತರಾಗಿದ್ದಾರೆ. ಆದ್ದರಿಂದ ನಾವೆಲ್ಲರೂ ನಮ್ಮ ದೇಶದಲ್ಲಿ ಸಿಕ್ಕುವ ಗೊಬ್ಬರ ಮೊದಲಾದುವುಗಳಿಂದ ನಮ್ಮ ಭೂಮಿ, ತೋಟ ಮೊದಲಾದುವುಗಳನ್ನು ಅಭಿವೃದ್ಧಿಸಿದರೆ ನಾವು ಸಹ ಅವರಂತೆಯೇ ಅನುಕೂಲಸ್ಥರಾಗಿ ಜೀವಿಸಬಹುದು ತಾನೇ ಉಚಿತವಾಗಿ ಸುಖಪಡಬಹುದಲ್ಲವೇ?

ವ್ಯಾಪಾರಸ್ಥರು ಅನ್ಯದೇಶದಿಂದ ಇಲ್ಲಿಗೆ ಬಂದು ಪರದೇಶದ ವ್ಯಾಪಾರವನ್ನು ಹೆಚ್ಚಿನ ಲಾಭದಿಂದ ಮಾಡಿ ಅವರ ಜೀವನವನ್ನು ಪಡೆಯುವಂತವರ ಹತ್ತರ ಹೋಗಿ ಕೊಂಡುಕೊಳ್ಳುತ್ತಾರೆ. ಆದರೂ ನಮ್ಮ ದೇಶದಲ್ಲಿಯೇ ಸುಲಭ ಕ್ರಯಕ್ಕೆ ದೊರೆಯುವ ಮತ್ತು ಬಹು ಲಾಭಕರವಾದ ಗೊಬ್ಬರಗಳನ್ನು ಉಪಯೋಗಿಸುವುದಿಲ್ಲ. ಇನ್ನುಮುಂದಾದರೂ ರೈತರು ಇದಕ್ಕೆ ಗಮನ ಕೊಡುವರಾಗಿ ನಂಬುತ್ತೇನೆ.

"ಸಿದ್ದೀಕ್"

ಅಯ್ಯಾ ಸಂಪಾದಕರೇ, ತಮ್ಮ ಮೇ ತಾರೀಕು ೧೯ರ ಸಂಚಿಕೆ ೫೯ ರಲ್ಲಿ "ಒಬ್ಬ ಕೊಡಗ" ನೆಂಬ ಬಾತ್ಮಿದಾರನು ಕೇಳುವ ಪ್ರಶ್ನೆಗಳಿಗೆ ಕೊಡಗರ ಪದ್ಧತಿ ಪ್ರಕಾರ ತಿಳಿಸುವವನಾದಾಗ್ಯೂ, ನನಗೆ ತಿಳಿದಮಟ್ಟಿಗೆ ಕೆಲವು ಅರಿತದ್ದನ್ನು ಈ ಕೆಳಗೆ ವರ್ಣಿಸುತ್ತೇನೆ. ಇದರಲ್ಲೇನಾದರೂ ದೋಷಾರೋಪಣೆಗಳಿದ್ದರೆ, ಹಂಸ ಪಕ್ಷಿಯು ನೀರು ಮಿಶ್ರವಾದ ಕ್ಷೀರದಲ್ಲಿ ನೀರನ್ನು ತ್ಯಜಿಸಿ ಕ್ಷೀರವನ್ನೇ ಸೇವಿಸುವಂತೆ ಈ ಪತ್ರಿಕೆ ವಾಚಕ ಮಹಾಶಯರು ಅಂಗೀಕರಿಸಿ ಕೊಳ್ಳಬೇಕಾಗಿ ನನ್ನ ಪ್ರಾರ್ಥನೆ.

೧ ಒಂದು ಕುಟುಂಬದಲ್ಲಿ ಒಬ್ಬ ಮನುಷ್ಯನು ಮೃತಪಟ್ಟರೆ ೫ ಅಥವ ೭ ನೇ ದಿನದಲ್ಲಿ (ಸಾವು ಕಟ್ಟಿ) ಕ್ರಿಯೆಯನ್ನು ಆ ಕುಟುಂಬದಲ್ಲಿ ದಿನದ ಮನೆಯವರು ಒಂದು ನಮ್ಮ ಪೂರ್ವಪದ್ಧತಿಯಂತೆ ಅನುಷ್ಠಾನಗಳನ್ನನುಸರಿಸಿದನಂತರ ಆ ಮನೆಯಲ್ಲಿ ಹಿಟ್ಟು ರೊಟ್ಟಿ ದೋಸೆ ಮಿಠಾಯಿ, ಮಾಂಸ ವಗೈರೆ ಆಹಾರ ಪದಾರ್ಥಗಳನ್ನು ಮಾಡುವುದೂ ಒಲೆಗೆ ಬೆಂಕಿ (ದೋಸೆ ಮತ್ತು ರೊಟ್ಟಿ ಸುಡುವ ಪಾತ್ರೆ) ಉಪಯೋಗಿಸುವುದೂ, ಗೊಂಬೆಯಾಟ ರಕ್ತ ಒಗ್ಗರಣೆ ವಗೈರೆ ಮಾಡಬಾರದು, ಆ ದಿವಸ ಆ ಕುಟುಂಬದ ಅಗಸನು ಬಂದು (ಪ್ರೇತವಾಚಿ) ಸತ್ತವನ ಮೈಲಿಗೆಗಳನ್ನು ತೆಗೆದುಕೊಂಡು ಮನೆಗುಡಿಸಿ ಪದ್ಧತಿಗನುಸಾರವಾಗಿ ಆಚರಣೆಗಳನ್ನು ನಡಿಸಿ ಮನೆಯನ್ನು ಶುದ್ಧಿಗೊಳಿಸುವನು. ಅನಂತರ ೧೧ ನೇ ದಿನದಲ್ಲಿ (ಸಪ್ಪಂಡಿವೋ) ಕರ್ಮಾನುಷ್ಠಾನವ ಪೂರೈಸುತ್ತಾರೆ. ಅನಂತರ ೧೨ ನೇ ದಿವಸದಿಂದ ೧೮ ನೇ ದಿವಸ ಈ ಮಧ್ಯದ ದಿವಸಗಳ ಪೈಕಿ ಕಾಲಕ್ಕನುಸಾರವಾಗಿ ಅವರವರ ಅನುಕೂಲವರಿತು ಒಂದು ದಿನ "ಒಮ್ಮೆ ಕೊಳ್ಳಲಿತರುಕಳಾಟ" ವೆಂಬ ಕರ್ಮಾಂತರವನ್ನು ನಡಿಸಿ ಮಾರನೇ ದಿವಸ ("ಮಾದ") ತಿಥಿ ಕರ್ಮಾಂತರವನ್ನು ನಡಿಸಿ ಅದಿನ ಪುಷ್ಪಾಕ್ಷತ ನಮ್ಮ ಆಚರಣೆಗಳನ್ನನುಸರಿಸಿ ಆ ಮನೆಯಲ್ಲಿರುವ ಕೈಕಾಲು ತೊಳೆದು ("ನೆಲ್ಲಕ್ಕಿ ನಡುಬಾಡೆ") ನೆಲ್ಲಕ್ಕಿ ಬಳಿ ನಿಂತು ಕೆಲವು ಸ್ತೋತ್ರಗಳನ್ನು ಹೇಳಿ ನಮ್ಮ ಮುದ್ದಳೆ ತಾಳಗಳನ್ನು ("ದುಡಿ ತಾಳ") ಬಾರಿಸಿ ಅಲ್ಲಿ ನೆರೆದಿದ್ದವರ ಪೈಕಿ ನಾಲ್ಕು ಜನ ಗಂಡು ಮತ್ತು ಹೆಂಗಸರಿಗೆ ಮುಡಿವಾಳಗಳನ್ನು ಕಟ್ಟುವನು. ಅವರು ಗತಿಸಿಹೋದವನ ಅಥವ ಅವಳ ಗುಣಗಳನ್ನು ಸ್ತುತಿಸಿ ಆತ್ಮಕ್ಕೆ ಮುಕ್ತಿಯು ಪ್ರಾಪ್ತಿ ಯಾಗಲಿ ಎಂದು ಕೋರಿ ಜನರಿಗಳನ್ನು ತೀರಿಸಿ ನೆಂಟರು ಬಂಧುಬಳಗಗಳನ್ನು ಕೈಗೊಂಡನಂತರ ಬಂದು ಮಿತ್ರರು ತೆರಳುವರು. ಇದನಂತರ ಉಳಿದ ಆ ಕುಟುಂಬದ ಆಪ್ತ ಬಂಧುಮಿತ್ರರೂ ನೆರೆಕರೆಯವರೂ ಅಂಗಸರುವನೂ ಸೇರಿ ಸಹಭೋಜನಾದಿಗಳನ್ನು ಮಾಡುವನಂತ್ರ ನಮ್ಮ ಆಚರಣೆಗಳನ್ನನುಸರಿಸಿ ಗತಿಸಿದವನ ಪ್ರತ್ಯಕ್ಷಳೆಯನ್ನು ("ಪ್ರೇತಿಜೆಮಾರುವೆ") ವ್ರಾತ ಕಾಲವದವರಿಗೆ ಸ್ತುತಿಸಿ ಪವಿತ್ರವಾದ ಸಮಾಧಿಯನಂತರ ಶುದ್ಧಾಶೋಧನದ ಹಾಡುಗಳನ್ನಾಡಿ ನಿಲ್ಲಿಸುವರು. ಈಗ ಕಾಲವಿಳಂಬ ಮಾಡದೆ ಮೇಲೆ ಹೇಳಿದ ನಮೂನೆ ಕರ್ಮಾಂತರವನ್ನು ೧೧ ನೇ ದಿನದಲ್ಲೇ "ಮಾದ" ತೀರಿಸುತ್ತಾರೆ ("ಮಾದ" ತಿಥಿ ಕಳೆದನಂತರ ಯಾವ ವಿಘ್ನವೂ ಕುಟುಂಬಸ್ಥರಿಗೆ ವಿಧಿಯಿಲ್ಲ). ಆದರೆ ಗಂಡ ಸತ್ತರೆ ಹೆಂಡತಿಗೆ ಆರು ತಿಂಗಳು ದೀಕ್ಷೆ ವಿಧಿತ ಈ ಆರು ತಿಂಗಳೊಳಗೆ ಕಾವೇರಿ ಸ್ನಾನಕ್ಕೆ ಪ್ರಯಾಣ ಮಾಡಿ ಕಾವೇರಿ ಸಂಕ್ರಮಣ ವೇಳೆಯಲ್ಲಿ ಸ್ನಾನಮಾಡಿ ತೀರ್ಥ ದಿನವಾಗಿ ಸ್ನಾನಮಾಡಬೇಕಾದುದರಿಂದ ಆ ಕಾವೇರಿ ಪೂಜೆ ದಿವಸಗಳ ಪೈಕಿ ಒಂದು ದಿನದಲ್ಲಿ ಆ ವಿಧವೆಯು ಶ್ರೀ ಮೂಲ ಲಕ್ಷ್ಮೀ ಕಾವೇರಿ ಮಹಾತಾಯಿಯ ತೀರ್ಥಸ್ನಾನವನ್ನು ಮಾಡಿ ಗತಿಸಿದವನ ಹೆಸರಿನಲ್ಲಿ ಪಿಂಡತರ್ಪಣೆಯನ್ನು ಮಾಡಿ ಗತಿಹೊಂದಿಸಿದನಂತ್ರ ಆಕೆಯ ದೀಕ್ಷೆಯು ತೀರಿತು. ಗಂಡಸರಿಗೆ ಯಾವ ಆಕ್ಷೇಪಣೆಯೂ ಇಲ್ಲದಿದ್ದರೂ ಕೂಡ ಆತನು ಹೆಂಡತಿ ಸತ್ತರೆ ಗಂಡನು ಈಗಿನ ಕಾಲಕ್ಕನುಸಾರವಾಗಿ ಮೂರು ಅಮವಾಸೆ ಅಥವ ಮೂರು ಪಕ್ಷ "ಮೂಂದಾಬಾವು" ದೊಳಗೆ ಆತನ ಆತುರಕ್ಕನುಸಾರವಾಗಿ, ಒಂದು ದಿನ ಕಾವೇರಿ ತೀರ್ಥಸ್ನಾನವನ್ನು ಮಾಡಿ ಪಿಂಡತರ್ಪಣೆಯನ್ನು ಮಾಡಿ, ಸತಿಯನ್ನು ಗತಿಹೊಂದಿಸಿದನಂತ್ರ ಪುನರ್ ವಿವಾಹವಾಗಬಹುದು.

೨ ಪತಿಯು ಸತಿಯನ್ನು ತ್ಯಜಿಸಿದರೆ ಅಥವ ಮೃತಪಟ್ಟರೆ ಆ ಸತಿಯು ಪುನರ್ ವಿವಾಹವಾಗಬೇಕಿಂದರೆ ಒಂದು ವರ್ಷ ಅವಧಿ ಯಾತಕೆಂದ್ರೆ ಒಂದುವೇಳೆ ಆ ವಿಧವೆಯು ಗರ್ಭ ಧರಿಸಿದ್ದರೆ ಪ್ರಸವ ಕಾಲಕ್ಕೆ ಹತ್ತು ತಿಂಗಳೂ ಆನಳ ಉದಭಾರಕ್ಕೆ ಎರಡು ತಿಂಗಳೂ ಅಂತು ೧೨ ತಿಂಗಳು ಅವಧಿಯು ಸಂದ್ರೆ ಪುನರ್ ವಿವಾಹವಾಗಬಹುದು. ಈ ಆಚರಣೆಗಳೆಲ್ಲವು ಹೆಂಗಸರಿಗೆ ಮಾತ್ರವಲ್ಲದೆ ಗಂಡಸರಿಗೆ ಯಾವ ವಿಧದಲ್ಲೂ ಇರುವಂತೆ ಕಾಣುವದಿಲ್ಲ. ಆದರೆ ಒಂದು ನಾಣ್ಣುಡಿಯು ನನ್ನ ನೆನಪಿಗೆ ಬರುತ್ತದೆ. "ಚಕ್ಕಾಂಗ್ ಅರ್ತಿಂಗ" "ಬುಟ್ಟಾಂಗ್ ಬಿಟ್ಟಿಂಡ" ಇದಕ್ಕೆ ಯಾವ ಅರ್ಥವೂ ಕಾರಣ ಬರುವದಿಲ್ಲ ಮತ್ತು ಕೊಡಗು ಭಾಷೆಗೆ ವ್ಯಾಕರಣವಿರುವಂತೆ ಕಾಣುವದಿಲ್ಲ. ಮತ್ತು ವೇದಪುರಾಣ ವಗೈರೆ ಗ್ರಂಥದ ಮೂಲ ಇಲ್ಲದಿರುವದರಿಂದಲೂ, ಗುರುಪ್ರಣೀತವಲ್ಲದ ಇರುವದರಿಂದಲೂ ಸಹ ಯಾವದೂ ಸಿದ್ಧ ಪಡಿಸಲು ಅಸಾಧ್ಯ.

೩ ಸತಿ ಸತ್ತರೆ ಪತಿಯು ಒಂದು ವರ್ಷದೊಳಗೆ ಪುನರ್ ವಿವಾಹ ಮಾಡಬೇಕಾಗಿಯೂ ಈ ಅವಧಿ ಬೇಗನೆ ಮುಗಿದರೆ ಮೂರು ವರ್ಷ ಕಳೆಯಬೇಕೆಂಬ ಕಟ್ಟಳೆಯು ಮನ ಕೇಳುವದನ್ನು ಕೇಳಿದ್ದೇನೆ. ಇದಕ್ಕೆ ಯಾವ ಆಧಾರವೂ ಕಾಣುವದಿಲ್ಲ.

"ಕುಲಧರ್ಮ ಹಿಂಬಾಲಕ"

ಕೊಡಗು ವಿದ್ಯಾಭಿವೃದ್ಧಿನಿಧಿ

ಬಂಧುಗಳೇ,

'ಕೊಡಗು ವಿದ್ಯಾಭಿವೃದ್ಧಿನಿಧಿ' ಯ ಪೋಷಕರು ಕೊಡಗಿನ ಬ್ರಾಹ್ಮಣರು ಇವರುಗಳಲ್ಲಿ ಹಲವು ಜಾತಿಗಳು. ಇಂಥಾವರುಗಳಲ್ಲಿ ಒಂದಾದ ಹವ್ಯಕ ಬ್ರಾಹ್ಮಣರು ತಮ್ಮೆಲ್ಲರಿಗಿದ್ದ ಕೆಲವರ ಸ್ವ ದೈವಾನುಗ್ರಹದಿಂದ ರಾಜಿಸಾಧಿಕೊಂಡರು. ಇಂದಾ ರಾಜಿಯಾದನಂತರ ಈ ನಿಧಿಯ ಕೆಲಸವು ಚೆನ್ನಾಗಿ ನಡೆಯುವುದೆಂದು ಕೆಲವರು ತಿಳಿದಿದ್ದರು. ಆದರೆ ಇಂಥಾ ಅಭಿಪ್ರಾಯವು ಈಗಿನ ಸ್ಥಿತಿಯನ್ನು ನೋಡಿದರೆ ನಿಸ್ಸಂಶಯವಾಗಿಯೂ ತಪ್ಪೆಂದು ಹೇಳಬಹುದು.

ಇದರ ಸದ್ಯ ಸ್ಥಿತಿಯನ್ನು ಸ್ವಲ್ಪ ನೋಡೋಣ. ಕಳೆದ ಏಪ್ರಿಲ್ ತಿಂಗಳಲ್ಲಿ ನಿಧಿಯ ಹಿತೈಷಿಗಳ ವಾರ್ಷಿಕ ಸಭೆಯು ನಡೆಯುವುದೆಂದು ಇದೇ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಆದರೆ ಸಭೆಗೆ ಹಾಜರಿದ್ದವರ ಸಂಖ್ಯೆಯು ಬಹಳ ಸ್ವಲ್ಪ. ಇವರುಗಳಲ್ಲಿ ನಿಧಿಯ ಸಭೆಗಾಗಿ ಬಂದವರು ಯಾರೂ ಇಲ್ಲ. ಆ ಸಭೆಯು ಜರಗಲಿಲ್ಲ. ಇನ್ನು ಸಂಘದ ಕಾರ್ಯದರ್ಶಿಗಳ ವರದಿಯೇ ಪತ್ತೆಯೇ ಇಲ್ಲ! ಎರಡು ವರ್ಷದ ಲೆಕ್ಕಪತ್ರಗಳು ಕಾಣೆ! ಹಣವೇನಾಯಿತೆಂದು ತಿಳಿಯದು!!! ಇಷ್ಟೇ? ಇನ್ನು ಇದೆ. ಹುಡುಗರಿಗಾಗಿ ಸ್ಥಾಪಿಸಿದ ವಿದ್ಯಾರ್ಥಿ ಭವನದಲ್ಲಿ ಊಟಕ್ಕೂ ನೀರಿಗೂ ಹುಡುಗರು ಇರುವಲ್ಲಿ ಈಗ ಒಂದು ಡಜನ್ ಸಹ ಇಲ್ಲ. ತಡಮಾಡದೆ ಇದರ ಕಾರ್ಯವಾಹಕರು ಎಚ್ಚರಿಸಿ (ದೇವರೆ! ಹುಡುಗರ ಹೊಟ್ಟೆ ಪಾಡಿಗೆ ಮಾತ್ರ ಹೀಗೆಯೇ) ಮಾತನಾಡಿದರೆ "ನಿಮ್ಮ ಹುಡುಗರನ್ನು ಈ ಪಡುಕುವ ನೆಲದಲ್ಲಿರಿಸಿ ನೋಡಿರಿ!! ಜಾಗ್ರತೆ"

ಬಹುಕಾಲ ಹಿಂದಿನಿಂದ ಪ್ರತಿವರ್ಷವೂ ಚಂದಾಕಟ್ಟಣವನ್ನು ಕೊಡುತ್ತಿದ್ದವರು, ಕಳೆದ ವರ್ಷದಿಂದ ಕೊಡುವುದನ್ನು ನಿಲ್ಲಿಸಿರುವರು. ಮೊದಲು ಜಾವಾ ಎತ್ತಿದ ಹಣವು ಕೆಲಸಕ್ಕೆ ಸಾಕಾಗದೆ ಇದ್ದಾಗ ಆದರೆ ಆ ವರ್ಷ ಕೂಡಿಸಿದ್ದರಿಂದ ಮೊದಲಿಗೆ ಹೋಗುವ ವಿದ್ಯಾರ್ಥಿಗಳಿಗೆ ಎಲ್ಲಿಂದ ವೇತನ ಕೊಡುವುದು. ಹಿಂದಿನ ಹಣವನ್ನು ಎಲ್ಲಿ ಇಟ್ಟಿರುವುದೋ? ಕೆಲವು ತಿಂಗಳ ಹಿಂದೆ ಇದೇ ಹೆಸರಿನಿಂದ ಇದೇ ಪತ್ರಿಕೆಯಲ್ಲಿ ಒಂದು ಪತ್ರವಿತ್ತು. ಅದನ್ನು ನೋಡಿಯೂ ಏನೂ ಕೆಲಸ ಮಾಡದೇ ಇದ್ದರು. ಬಹಳ ವಿಷಾದಕರವೇ ಸರಿ! ಚಂದೆಯಲ್ಲಿ ಹಣವೂ ಕೆಲಸವನ್ನು ನ್ಯಾಯವಾಗಿ ಇವಕ್ಕೆ ಸಂಬಂಧಪಟ್ಟ ಅಧಿಕಾರಿಗಳು ನಡಿಸುವರಾಗಿ ನಂಬುತ್ತೇವೆ. ಮತ್ತು ಬೇರೆ ಬೇರೆ ಕಡೆಗಳಲ್ಲಿರುವವರೆಲ್ಲರೂ, ಇದರ ವಿಷಯವಾಗಿ ಈ ಪತ್ರಿಕೆಯಲ್ಲಿ ಬರೆದು ಜನರಲ್ಲಿ ಜಾಗೃತಿಯನ್ನುಂಟು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಹಿತೈಷಿ

ದೇಶಪ್ರೇಮಿ ಲೇಟ್ ಮನೆಯ ಪಂಡ ಮುತ್ತಣ್ಣನವರು.

ವಾಚಕಮಹಾಶಯರೇ,

ಮೊನ್ನೆ ತಾನೇ ಇಹವನ್ನು ಬಿಟ್ಟು ಪರಲೋಕವನ್ನೈದಿದ ರಾಜಕಾರ್ಯ ಪ್ರಸಕ್ತ ಮನೆಯಪಂಡ ಮುತ್ತಣ್ಣ ರಾಯಬಹದ್ದೂರರವರಿಗೆ ನಮ್ಮ ದೇಶೀಯರ ಮೇಲೆ ಎಷ್ಟು ಪ್ರೀತಿ ಇತ್ತೆಂಬುದು ಅವರ ದೇಹವನ್ನು ಸಮಾಧಿಗೆ ತೆಗೆದುಕೊಂಡು ಹೋಗುವಾಗ್ಗೆ ಅದನ್ನು ಹಿಂಬಾಲಿಸಿದ ಜನಸಂಖೆಯಿಂದಲೂ ರಸ್ತೆಯ ಎರಡುಪಾರ್ಶ್ವಗಳಲ್ಲಿ ನಿಂತು ನೋಡುತ್ತಿದ್ದ ಜನಸಮೂಹದಿಂದಲೂ ವಿಶದವಾಗುತ್ತದೆ. ಅವರ ಅಂತ್ಯ ಮುಖವನ್ನು ಕಡೇಸಾರಿಗೆ ನೋಡಿಕೊಳ್ಳಬೇಕೆಂದು ಆತುರದಿಂದ ರಸ್ತೆ ಬಾಜುಗಳಲ್ಲಿ ನಿಂತಿದ್ದ ಜನರ ಆಕೆಯು ನಿರಾಶೆಯಾಗಲು ಕಾರಣರು ಯಾರೆಂದು ತಿಳಿಯದು. ಪರದೇಶ

ಸ್ವರ ಪದ್ಧತಿಯನ್ನನುಸರಿಸಿ ಕಾಫಿಸ್ [ಕೆಟ್ಟಿಗೆ] ನಲ್ಲಿ ಹಣವನ್ನು ಹಾಕಿ ಟೋಲಗಳಲ್ಲಿ ಪೋಣಿಸಿಕೊಂಡು ಹೋಗುವುದರ ಬದಲು ನಮ್ಮ ಕೊಡಗು ಪದ್ಧತಿಯನ್ನು ಕೈಕೊಂಡು ಕುರ್ಚಿಯಮೇಲೆ ಹಣವನ್ನು ಕೂಡಿಸಿಕೊಂಡು ಬಿಸರು ಮೆಗಲಲ್ಲಿ ಹೊತ್ತುಕೊಂಡು ಹೋಗುವುದು ... ಮೇಜರ್ ... ಸ್ಮಾರಕ ... ಮುತ್ತಣ್ಣನವರು ಜಮೀನ್ದಾರ ಸಭೆಯ ಮೂಲಕ ನಮ್ಮ ದೇಶಕ್ಕೆ ಎಷ್ಟೋ ಒಳ್ಳೆಯ ಕೆಲಸವನ್ನು ಇವರಷ್ಟು ನಮ್ಮ ದೇಶಕ್ಕೆ ಕೆಲಸಮಾಡಿದವರು ಬೇರೆ ಯಾರೂ ಇಲ್ಲವೆಂದು ಹೇಳಿದರೆ ತಪ್ಪಾಗದು ...

ಮೆ|| ಮುತ್ತಣ್ಣನವರು ನಮ್ಮ ದೇಶದಲ್ಲಿ ಸರ್ವ ಜನರ ಪ್ರೀತಿಗೆ ಪಾತ್ರರೂ, ಯಾ ಅವರಿಗೆ ಮರ್ಯಾದೆಯು ದೊರೆಯುತ್ತಿತ್ತೋ ... ಸರ್ ಎಂ ವಿಶ್ವೇಶ್ವರಯ್ಯ ... ಮೈಸೂರು ದಿವಾನರಾದ ಮ|| ... ಬಿ ಎಲ್ ... ಇವುಗಳ ಪೈಕಿ ಸರ್ ಎಂ ವಿಶ್ವೇಶ್ವರಯ್ಯನವರ ಪತ್ರದ ಸಾರಾಂಶವನ್ನು ವಾಚಕರಿಗೆ ತಿಳಿಸಲು ಇಚ್ಛೈಸುತ್ತೇನೆ

“ ನನ್ನ ಹಳೇ ಮತ್ತು ಅಮೂಲ್ಯವಾದ ಸ್ನೇಹಿತ ರಾಜಕಾರ್ಯಸ್ಥ ಎಂ ಮುತ್ತಣ್ಣ ... ಮರಣವಾರ್ತೆಯನ್ನು ಕೇಳಿ ಬಹಳ ವ್ಯಸನಪಡುತ್ತೇನೆ ನನಗೆ ಅವರನ್ನು 1876 ರಿಂದ ಗೊತ್ತಿತ್ತು. ಅವರು ಮೈಸೂರಿಗೂ ಮತ್ತು ಕೊಡಗಿಗೆ ಮಾಡಿದ ಕೀರ್ತಿಕರವಾದ ಸರ್ವೀಸಿನಿಂದಲೂ ಮತ್ತು ಕಡೆಗೆ ತನ್ನ ಆಫೀಸ್ ಮತ್ತು ದೇಶದ ಕೆಲಸಗಳಲ್ಲಿದ್ದ ಶಕ್ತಿ ಮತ್ತು ಉತ್ಸಾಹದಿಂದ ಇವೆರಡು ಪ್ರಾಂತ್ಯಗಳ ಜನರಿಗೆ ತೋರಿಸಿರುವ ಉತ್ತಮವಾದ ಉದಾಹರಣೆಯಿಂದಲೂ ಅವರ ಹೆಸರು ಚಿರಸ್ಮರಣೀಯವಾಗಿರುವುದು

ನಿಮಗೂ ಮತ್ತು ಕುಟುಂಬಕ್ಕೂ ಸಂಭವಿಸಿರುವ ದೊಡ್ಡ ದುಃಖಕ್ಕೆ ನಾನೂ ಬಹಳ ವ್ಯಸನಪಡುತ್ತೇನೆ

ಇಂತಿ

S/d ಸರ್ ಎಂ ವಿಶ್ವೇಶ್ವರಯ್ಯ

ಮೇಲಿನ ಪತ್ರಗಳಿಂದ ಪರಪ್ರಾಂತ್ಯಗಳ ದೊಡ್ಡ ಮಹನೀಯರುಗಳಿಗೆ ಮುತ್ತಣ್ಣನವರ ಮೇಲಿದ್ದ ಅಭಿಮಾನವು ವ್ಯಕ್ತವಾಗುವುದು ... ಕೊಡಗು ವರ್ತಮಾನ ಪತ್ರಿಕೆಯು ... ವ್ಯಸನಸೂಚಕ ಪತ್ರಿಕೆ ... ಸಂತೋಷಪಡಬೇಕಾಗಿದೆ

(ವಿ ತಾರಕ)

ಬಳ್ಳುಪಿನವರಲ್ಲಿ ... ಸಡಕೊಳ್ಳಿ

ನಮ್ಮ ಕಾರ್ಖಾನೆಯಲ್ಲಿ ... ಬಹು ... ಯಂತ್ರ ಇತ್ಯಾದಿ ಒಕ್ಕಲಿಗರಿಗೆ ಬಹು ಉಪಯುಕ್ತವಾದ ಸಾಮಾನುಗಳು ತಯಾರಾಗುತ್ತವೆ ಸಾವಿರಾರು ರೈತರು ಉಪಯೋಗಿಸುತ್ತಿರುವರು ಸಚಿತ್ರ ಕ್ಯಾಟ ಲಾಗು ... ಕೊಳ್ಳಿ

ನಮ್ಮ ವಿಳಾಸ —

ಕಿರ್ಲೋಸ್ಕರ್ ಬಂಧು ಲಿಮಿಟೆಡ್

ಪ್ರೋ ಕಿರ್ಲೋಸ್ಕರವಾಡಿ

12—1 ಜಿಲ್ಲಾ— ಸಾತಾರಾ

ದಿ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಂಡ್ ಮ್ಯಾರೆಜ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಹೆಡ್ ಆಫೀಸ್, ಮೈಸೂರು

ಸಬ್ ಆಫೀಸ್, ಮಡಿಕೇರಿ, ಕೊಡಗು

ಈ ಕಂಪೆನಿಯಲ್ಲಿ ಇನ್ಶ್ಯೂರ್ ಮಾಡಿರುವ ಪಾಲಿಸಿ ... ಅವರವರ ಸ್ವಂತ ... ಕೊಡಗಿನ ಪಾಲಿಸಿದಾರರು ಈ ಕಂಪೆನಿ ... ಜಾಗ್ರತೆ ಕಳುಹಿಸಬೇಕಾಗಿದೆ

... ಇತ್ಯಾದಿ ... ಕಳುಹಿಸಬೇಕಾಗಿದೆ

ಬಿ ... ಅಯ್ಯಣ್ಣ

ಸ್ಪೆಷಿಯಲ್ ರೆಪ್ರಸೆಂಟೇಟಿವ್ ಲೈಫ್ ಅಂಡ್

4—3 ಮ್ಯಾರೆಜ್ ಎಶ್ಯೂರೆನ್ಸ್,

ಸಬ್ ಆಫೀಸ್—ಮಹದೇವಪೇಟೆ, ಮಡಿಕೇರಿ

ಒಳ್ಳೇ ಸಮಯ !

ಸ್ವರಿಮಾಡಿರಿ !!

ಹರಾಜಿನ ನೋಟೀಸು

ಸರ್ 1923 ನೇ ಇಸವಿ ಜೂನ್ ... 26 ನೇ ದಿನ ಬೆಳಿಗ್ಗೆ 8ರ ಘಂಟೆಗಾಯ್ತು ... ಮೈಸೂರು ... ಮೋಟಾರ್ ... ಕಾರುಗಳು, ... ಕುದುರೆ ಬಂಡಿಗಳು, ಗಾಡಿ ... ಕುರ್ಚಿಗಳ ಮತ್ತು ಇತರ ... ಸಾಮಾನುಗಳು ... 4—1

“ ನ ಗ ದು ಹ ಣ ”

ಹರಾಜು ಆ ದಿನ ಪೂರ್ತಿಯಾಗದಿದ್ದಲ್ಲಿ ಮರುದಿನ ... ಮುಂದುವರಿಸಲ್ಪಡುವುದು

M. Sundaram & Son.,

Auctioneers,

MYSORE

ವಾಸುದೇವನ ...



ಇದು ... ವಸುದೇವನು ಶ್ರೀಕೃಷ್ಣನನ್ನು ... ಎತ್ತಿಕೊಂಡು ... ಕೃಷ್ಣನು ... ವಾಸುದೇವನು ... ನದಿಯ ... ಯಮುನಾ ... ನಮ್ಮ ಜನರಿಗೆ ತಿಳಿಯದ ವಿಷಯವು ... ಕನ್ನಡದ ... ಅನುಭವವನ್ನುಂಟುಮಾಡುವುದು

ಕ್ರಯ 1 ... —0 ...

... ವಾಣಿ ಕಂಪೆನಿ

12—4 ... ದರಿಬಾ

Just Received ! New Invention

Electric Rotary Spring Fans.

ವಿದ್ಯುಚ್ಛಕ್ತಿಯ ರೋಟರಿ ಬೀಸಣಿಗೆ



ಇದು ... ದೇಶದಿಂದ ... ಬಹು ಆಶ್ಚರ್ಯವಾಗಿರುವುದು ... ಹಾಗೆ ತಂಪಾದ ಗಾಳಿಯನ್ನು ಬೀಸುವದು ಗಾಳಿ ಬೇಕಾದಾಗ ಗುಂಡಿಯನ್ನು ಅದುಮಿದರೆ ತನಗೆ ತಾನೇ ಸುತ್ತಿ ಗಾಳಿಯನ್ನು ಬೀಸುವದು. ಈ ಬೇಸಿಗೆ ಕಾಲದಲ್ಲಿ ಬಹಳ ಉಪಯೋಗವಾದದ್ದು. ಇದರಲ್ಲಿ ಅತಿ ಚಮತ್ಕಾರವಾದ ಸ್ಪ್ರಿಂಗು ಇಟ್ಟಿರುವದರಿಂದ ಬೇಕಾದಾಗ ತಂಪಾದ ಗಾಳಿಯನ್ನು ಬೀಸುವದು. ಪ್ರತಿ ಒಂದು ಮನೆಯಲ್ಲಿಯೂ, ಸಾಫುಗಳಲ್ಲಿಯೂ ಇಡಲು ಬಹು ಚೆನ್ನಾಗಿರುವುದು

ಕ್ರಯ ರೋಟರಿ ಬೀಸಣಿಗೆ (Fan) ರೂ. 4—0—0.

ನಮ್ಮ ವಿಳಾಸ,—

ಮಹರಾಜ ಟ್ರೇಡಿಂಗ್ ಕಂಪೆನಿ

22. ತಿರುಪತಿ ಬೀದಿ.

12—11 ಕೆ ಜಿ ಮದರಾ

ESTATE TOOLS, GREATLY REDUCED.

		Usual Price	Reduced Price
Sawn neck mamooties 5 lbs.	Rs	3— 8—0	3—0—0
„ „ 6 „		3—12—0	3—4—0
Pilting mamooties 4 „		3— 8—0	3—0—0
„ „ 4½ „		3—12—0	3—4—0
„ „ 5 „		4— 2—0	3—6—0

SPECIAL TERMS FOR LARGE QUANTITIES

52-36 **SPENCER & Co., Ltd,**

MERCARA & POLLAIBETT

Printed and Published by D.S. Krishnaswamie Proprietor, at Sreenivas Electric Press, Mys for Kodagu" Ltd., Mercara—22 6 1923.

If not delivered please return to "Kodagu Office, Mercara" Reg. No. M. 1550.

ಕೊಡಗು.

ಸತ್ಯೇನ ಪಾಲಿತಮಿದಂ ವಿದ್ಯಾ ನೀತಿ ಪ್ರಯುಕ್ತತಃ । ಐಕಮತ್ಯೇನ ಸದೇಶಂ ಸುಸ್ಥಿರಾ ರಾಜ್ಯಸಂಪದಃ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು. "ಎಡಿಟರ್ ಸುಬ್ಬಯ್ಯ ಐ. ಬೆಳ್ಯಪ್ಪ"

ಸಂಪುಟ 4] ಕೊಡಗು, ೧೯೨೩ನೇ ಜೂನ್ ತಾರೀಖು ೨೯ನೆಯ ಶುಕ್ರವಾರ. [ಸಂಚಿಕೆ

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ದಂತೆ ಜಾಗ್ರತೆಯಾಗಿಯೂ ಸುಲಭಬೆಲೆಗೂ ಮಾಡಿ ಕೊಡುತ್ತೇವೆ

Srinivas Electric Press,
MYSORE.

The Coorg Central Co-operative Bank, Ltd.,

(Registered Under the Co-operative Societies Act)

Share Capital	50,00
Paid up Share Capital	6,10
Fixed Deposits paid	31,?3

Amounts are lent mainly to Co-operative Societies in Coorg. The accounts are checked annually by The Registrar of Co-operative Societies Coorg. Deposits for one year and more carry interest at 6% per annum and for smaller periods at 5% per annum.

Apply to the Secretary or Treasurer for further details.

President	Treasurer	Secretary
Kodendera Cootiah Rao Bahadur	Bhujanga Rao, B.A., B.L.,	C. N. Venkappa B.A., B.L.

Dated 25—3—1923

ವಾಸುದೇವ ಶಿಶು.

ಇದು ಉತ್ತಮ ಶಿಲೆಯಿಂದ ಮಾಡಿದ ಬಟ್ಟಲು, ಇದರ ಮಧ್ಯದಲ್ಲಿ ಶ್ರೀ ವಾಸುದೇವನು ಶ್ರೀಕೃಷ್ಣನನ್ನು ಕೈಯಲ್ಲಿ ಎತ್ತಿಕೊಂಡು ನಿಂ

ತಿರುವ ವಿಗ್ರಹ ಇರುವದು. ಇದರ ಅಕ್ಕ ಪಕ್ಕ ... ವಾಸುದೇವನು ಭಯದಿಂದ ... ಶ್ರೀಕೃಷ್ಣನನ್ನು ಯಮುನಾನದಿಯನ್ನು ದಾಟಿ ... ನದಿಯ ನೀರು ಹರಿಯುತ್ತಿರುವುದನ್ನು ... ವಾಸುದೇವನು ... ಬಹಳ ಚಮತ್ಕಾರ ... ನೀರು ... ಆ ಕಾಲದ ... ದಾಟಿ ... ಈ ಸಂಗತಿಯನ್ನು ನಮ್ಮ ಜನರಿಗೆ ... ಈ ವಿಷಯವನ್ನು ... ಈ ಬಟ್ಟಲಿನಲ್ಲಿ ನೀರನ್ನು ಹಾಕಿದರೆ ... ಯಾವಾಗ ಕೃಷ್ಣನ ಕಾಲಿಗೆ ನೀರು ತಗಲುತ್ತದೋ ... ಈ ಬಟ್ಟಲಿನಲ್ಲಿ ... ಇದನ್ನು ...

ಕ್ರಯ 1 ಕ್ಕೆ 2—0—0

ವಿಳಾಸ:—ವಿ. ವಿ. ಎಸ್. ವಾಚ್ ಕಂಪೆನಿ,

52—46 ... ಪೇಟೆ, ಮದರಾಸು.

ಬುಗಡಿ ಮತ್ತು ರುದ್ರಾಕ್ಷಿ ಅಂಜನ ನೀಲಿಗಳು

ಈ ನೀಲಿಗಳು ... 17 ... ಅತಿ ಸುಂದರವಾದ ... ಮನೆಯಲ್ಲಿ ... ಶುದ್ಧ ರುದ್ರಾಕ್ಷಿ ...

7—8—0
6—8—0

RIPON WATCH CO.,
Triplicane,
25—18 MADRAS.

"Still a further reduction in prices"

For your requirements of High Grade Arms, Ammunition, Wines and Spirits.

APPLY TO —

Mc. DOWELL & Co., Ltd.,

24—9 MERCARA.

ಪೋಲೀಸು

ಈ ... ಗಳು ... ಇಮಿಟೇಷನ್ ವಜ್ರದ ... ಇಂಗ್ಲೀಷು ...

ನೋಡಲು ... ಇದರ ... ಉಪಯೋಗಿಸ ... ಮತ್ತು ... ಅನುಕೂಲವಾದದ್ದು

ಪೋಲಿಸ್ ಚೈನ 1 ಕ್ಕೆ 1—8—0

... ವಜ್ರದ ಪೆಂಡೇಂಟ್ ಜೊತೆ 3—0—0

... ಹಾರ 3—8—0

ಬಂಗಾರದ ಗಿಲೀಟಿನ ಉಂಗುರ,

ಈ ಉಂಗುರಗಳನ್ನು ... ಇಮಿಟೇಷನ್ ... ಉಂಗುರ ...

ಕ್ರಯ 1 ಕ್ಕೆ 2—0—0
ಕ್ರಯ 3 ಕ್ಕೆ 5—8—0

ವಿಳಾಸ:—
ಪೀಟರ್ ವಾಚ್ ಕಂಪೆನಿ,
ಪೋ|| ಬಾ|| ನಂ. 27 ಮದರಾಸು

18 ಕ್ಯಾರೆಟ್ ಗೋಲ್ಡ್ ಪ್ಲೇಟ್ ರಿಂಗ್ ... ರಿಸ್ಟ್ ವಾಚ್

ಈ ಚಿತ್ರದಲ್ಲಿ ... ಈ ಗಡಿಯಾರಗಳು ...



... ಗಂಟೆ ... ಈ ಗಡಿಯಾರ ... ಬಿದ್ದು ... ಕೆಡದೆ ... ವರ್ಷ ಗ್ಯಾರಂಟಿ ಇರುವದು

ಕ್ರಯ ಗಡಿಯಾರ 1 ಕ್ಕೆ 8—8—0 ಚೈನ ... 0—8—0

ವಿಳಾಸ—ವಿ ಎಸ್ ವಾಚ್ ಕಂಪನಿ,

52—46 ಪೋ|| ಬಾ|| ನಂ. 105 ಮದರಾಸು

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ

	ರೂ.
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,310
ಜಮಾ ಬಂದ ಠೇವಣಾತಿ	31,873

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಮುಖ್ಯವಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6 ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ತನಿಖೆ ಮಾಡುತ್ತಾರೆ

ಪ್ರೆಸಿಡೆಂಟರ — ಟ್ರಿಜರರ್,
ಕೊಡಂದೇರ ಕುಟ್ಟಯ್ಯನವರು, — ಭುಜಂಗರಾಯರು
ರಾಯ ಬಹದ್ದೂರ್ — ಬಿ. ಎ., ಬಿ. ಎಲ್.,
ಸೆಕ್ರೆಟರಿ.
ಸಿ. ಎನ್. ವೆಂಕಪ್ಪಯ್ಯನವರು ಬಿ. ಎ., ಬಿ. ಎಲ್.
ತಾರೀಖು 25—3—1923

BUMPER CROPS.

Always follow on application of our Coffee Fertilizers!

ದೊಡ್ಡ ಬೆಳೆ ಬಹಳ

... ನಮ್ಮ ಕಾಫಿ ... ಉಪಯೋಗಿಸಿರಿ!

ನಮ್ಮ ಕಾರ್ಖಾನೆಯಲ್ಲಿ ... ಕೃತಕ ಗೊಬ್ಬರ (artificial manure) ಅಂದರೆ ನೆಲಗಡ್ಲೆ ಹಿಂಡಿ, ಹರಳು ಹಿಂಡಿ, ಬೇವಿನ ಹಿಂಡಿ, ಹೊಂಗೆ ಹಿಂಡಿ, ಮೂಳೆ ಹುಡಿ ವಗೈರೆ ಕಾಫಿ ಪರ್ಟಿಲೈಸರುಗಳು ತಯಾರಾಗುತ್ತವೆ ... ಕ್ರಯ ... ಮಾಡಿದ್ದೇವೆ.

ತೋಟದಲ್ಲಿ ... ಗೊಬ್ಬರವನ್ನು ... ಪರಿಹಾರವಾಗುವುದು

M. M. SIDDEEK,
12—11 Proprietor—Siddeek Manuare Works, MERCARA.

" ಕೊಡಗು "

೧೯೨೩ ನೇ ಇಸವಿ ಜೂನ್ ತಾ|| ೨೯ ನೇ ಶುಕ್ರವಾರ.

ಹೊಸ ಹೊರೆ.

ಚೀಫ್ ಕಮಿಶನರ್ ಸಾಹೇಬರು ಪುನಃ ರೂಪಾಯಿಗೆ ಅರ್ಧ ಆಣೆ ಲೋಕಲ್‌ಫಂಡ್ ಸೆಸ್ ಮಂಜೂರು ಮಾಡಿದರೆಂತಲೂ, ನಾಡುಬಚೇರಿಯವರು ಈ ಹೊಸ ಕಂದಾಯವನ್ನು ಬರುವ ವರ್ಷವೇ ವಸೂಲ್ ಮಾಡಬೇಕೆಂಬ ಹುಕ್ಕುಂ ಬಂದಿದೆಯೆಂತಲೂ ತಿಳಿಯುತ್ತೇವೆ. ಗಜೆಟಿನಲ್ಲಿ ನೋಟಿಫಿಕೇಶನ್ ಇನ್ನೂ ಬಂದಿಲ್ಲ. ಈ ವಿಷಯದಲ್ಲಿ ರೈತರ ಅಭಿಪ್ರಾಯ ಕೇಳುವ ಪದ್ಧತಿಯೂ ಇಲ್ಲವೇ ಇಲ್ಲ. ಯಾಕೆಂದರೆ ಉದ್ಯೋಗಸ್ಥರೆಲ್ಲರೂ ಡಿಸ್ಟ್ರಿಕ್ಟ್‌ಬೋರ್ಡ್ ಮೀಟಿಂಗಿನಲ್ಲಿ ಸೆಸ್ ಹೆಚ್ಚಿಸಬಹುದೆಂದು ಓಟ್ ಕೊಟ್ಟಿದ್ದಾರೆ. ಉದ್ಯೋಗಸ್ಥರಲ್ಲದವರು ಓಟ್ ಕೊಡದಿದ್ದರೆ ಏನು? ಬಹುಮತ ಅವರ ಕಡೆಯಲ್ಲ! ಮೀಟಿಂಗಿನಲ್ಲಿ ಮೆಜಾರಿಟಿ ಸಿಕ್ಕಿದ್ದರಿಂದ ರೈತರ ಒಪ್ಪಿಗೆ ಸಿಕ್ಕಿದಂತೆಯೇ ಆಯಿತಂತೆ. ಇದರಲ್ಲಿಯೂ ನಮಗೆ ಹಾಸ್ಯವಾಗಲಿ ಆಶ್ಚರ್ಯವಾಗಲೀ ತೋರುವದಿಲ್ಲ. ಮೊನ್ನೆ ತಾನೇ ಲೆಜಿಸ್ಲೇಟಿವ್ ಎಸೆಂಬ್ಲಿ ಎಂಬ ಡಿಲ್ಲಿ ನ್ಯಾಯವಿಧಾಯಕ ಸಭೆಯಲ್ಲಿ ಎಂದಾವತ್ತೂ ಬಡಬಡವರಿಗೇನೇ ಬಹು ಕಷ್ಟ ಕೊಡುವ ಉಪ್ಪಿನ ಕಂದಾಯವನ್ನು ವೈಸರಾಯ್ ಪ್ರಭುಗಳು ಸರ್ಟಿಫಿಕೇಟ್ ಮೂಲಕ ಮಂಜೂರು ಮಾಡಲಿಲ್ಲವೇ? ಸರಕಾರದವರು ಹೊಸ ಕಂದಾಯ ಹಾಕಬೇಕೆಂತ ನಿಶ್ಚಯ ಮಾಡಿದರೆ ಯಾವ ಕಾರಣದಿಂದಲೂ ಒಂದು ನೆಪ್ಪನಿನ ಸಹಾಯ ಸಿಕ್ಕಿಯೇ ಸಿಕ್ಕುತ್ತೆ. ರೈತರ ಪ್ರತಿನಿಧಿಗಳು ತಯಾರಿಸಿದ ಕಾನೂನಾದರೆ ಇಂಥಾ ಪಕ್ಷಪಾತಗಳನ್ನು ಇಡುತ್ತಿರಲಿಲ್ಲ. ಮಾಡತಕ್ಕದ್ದೇನು? ರೈತರಿಗೆ "ತಾಯಿತಂದೆ" ಯೋಪಾದಿಯಲ್ಲಿ ಇರುವ ಸರಕಾರವು ಕಂದಾಯ ಹಾಕಿತೆಂದರೆ ಕೊಟ್ಟುಬಿಡಬೇಕು. ಯಾಕೆಂದರೆ ರೈತರಲ್ಲಿ ಸರಕಾರದ ಮೇಲಿನ ಭಿಂವಸೆ ಕಡಿಮೆ ಏನೂ ಆಗಲಿಲ್ಲ. ಹೀಗೆ ನಡೆಸುತ್ತಾ ಬಂದರೆ ಸರಕಾರದಿಂದ ರೈತರ ಕಷ್ಟ ನಿವಾರಣೆಯಾಗುವುದು ಕಷ್ಟವೆಂತ ಪ್ರತಿಯೊಬ್ಬ ರೈತನು ಅಥವಾ ಹಳ್ಳಿಯ ಜನರಾದರೂ ತಿಳಿದುಕೊಂಡು ಕಲಿತು ಮಾಡಿದರು. ಆ ಮಾತ್ರ ಈ ಸರಕಾರದ ಆಡಳಿತವನ್ನು ನಡಿಸುವ ಉದ್ಯೋಗಸ್ಥರು ರೈತರ ಅಭಿಪ್ರಾಯಕ್ಕೆ ಬೆಲೆ ಕೊಟ್ಟಾರೆಂತ ನಮಗೆ ತೋರುತ್ತೆ. ಮಾತ ಮಾತಿಗೆ ಸರಕಾರವನ್ನು ಕೇಳುವದನ್ನು ಬಿಡಬೇಕು. ಸಾಧ್ಯವಾದಷ್ಟಿಗೆ ಸರಕಾರಕ್ಕೆ ಅರ್ಜಿ ಬರೆಕೊಳ್ಳುವದು ಬಿಡಬೇಕು. ಕೋರ್ಟಿಗೆ ಹೋಗುವದನ್ನು ಬಿಡಬೇಕು. ಇದು ಸಾಧ್ಯವಾಗಬೇಕಾದರೆ ಜನರಲ್ಲಿ ಬಹಳಷ್ಟಿಗೆ ದೈವಭಕ್ತಿ ಬೆಳೆಯಬೇಕು. ಸ್ವಲ್ಪಮಟ್ಟಿಗಾದರೂ ತ್ಯಾಗ (Sacrifice) ಕ್ಕೆ ತಯಾರಾಗಿರಬೇಕು. ಪ್ರಾಪಂಚಿಕ ಮೇಲ್ಮೆಗೆ ಇರುವ ಮೇಲಾಟ ಕಡಿಮೆಯಾಗಬೇಕು. ಈ ಗುಣಗಳೆಲ್ಲಾ ರೈತರಲ್ಲಿ ಹುಟ್ಟಿದರೆ ದೇಶದಲ್ಲಿ ಒಗ್ಗಟ್ಟು ಬಹಳ ಚನ್ನಾಗಿ ಏರುತ್ತದೆಂತ ನಾವು ಹೇಳಬೇಕಾದ್ದು. ಈ ರೀತಿ ಒಂದೊಂದರ ಹೊರೆಯನ್ನು ಹೆಚ್ಚಿಸುತ್ತಾ ಹೋದಂತೆ ಸರಕಾರದವರು ರೈತರ ಅದರಲ್ಲೂ ಬಡವಬತ್ತೆಗಳು ಎಂತ ಹೇಳಿಕೊಳ್ಳುವ ಮಾತು ಟೊಳ್ಳಾಗುತ್ತಾ ಹೋಗಿ ಇಂಡಿಯಾ ದೇಶದ ಸ್ವಭಾವ ಗುಣವಾದ ತತ್ವವಿಚಾರಕ್ಕೆ ಹೊರಟಾರು ಎಂತ ಯೋಚಿಸಿ ಸಮಾಧಾನಮಾಡಿಕೊಳ್ಳಬೇಕಾಗುತ್ತೆ.

ಆದರೂ ರೈತರು ಈ ರೀತಿ ದೇವರ ಮೇಲೆ ಭಾರವಿಟ್ಟು ಸಮಾಧಾನ ಮಾಡಿಕೊಳ್ಳುತ್ತಾರೆ ಎಂಬ ಕಾರಣದಿಂದ ಚೀಫ್ ಕಮಿಶನರ್ ಸಾಹೇಬರು ರೈತರ ಅಭಿಪ್ರಾಯಕ್ಕೆ ಎಳ್ಳಷ್ಟು ಬೆಲೆ ಕೊಡದೆ ಸರ್ ಇದೆ ಎಂಬ ಒಂದೇ ಕಾರಣದಿಂದ ಈ ಹೆಚ್ಚಿನ ಸೆಸ್ಸನ್ನು ಮಂಜೂರು ಮಾಡಿದರು. ಬಾರದಿತ್ತು. ಸ್ಕೂಲ ಮಾಸ್ತರುಗಳು ನಿಮ್ಮವರಲ್ಲವೇ? ಅವರಿಗೆ ಸಂಬಳ ಹೆಚ್ಚಿಸಲಿಕ್ಕಾಗಿಯೇ ಈ ಸೆಸ್ಸನ್ನು ಹೆಚ್ಚಿಸಿದ್ದಾಗಿದೆಯೆಂತ ಹೇಳಿ ಸ್ಕೂಲ್ ಮಾಸ್ತರುಗಳು ರೈತರ ಕೂಗನ್ನು ಅಡಗಿಸುವಂತೆ ಮಾಡುತ್ತಾರೆ. ಸ್ಕೂಲ್ ಮಾಸ್ತರುಗಳ ಸಂಬಳವನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸಿದ್ದಾರೆ. ಇದು ಕೃಷಿಕರವೇ ಆದರೆ ರೈತರ ಮಕ್ಕಳಿಗೆ ಪಾಠ ಹೇಳುವ ಮಾಸ್ತರುಗಳಿಗೆ ದಿನಕೂಲಿ ಮಾಡುವ ಆಳುಗಳ ಸಂಬಳದಷ್ಟು ಸಂಬಳವನ್ನಾದರೂ ಕೊಡಲಿಕ್ಕೆ ರೈತರಿಗೆ ಹೊಸ ಹೊರೆ ಹೊರಿಸಬೇಕೇ? ಈ ಸರಕಾರಕ್ಕೆ ರೈತರು ಕೊಡುವ ಭೂಮಿ ಕಂದಾಯ, ಆಹಾರ ಸಾಮಗ್ರಿಗಳ ಮೇಲೆ ಕೊಡುವ ಸುಂಕ, ಉಡುವ ಬಟ್ಟೆಯಮೇಲೆ ಕೊಡುವ ಸುಂಕ, ಸಿಕ್ಕುವ ನ್ಯಾಯ ಪೈಸಲಿಗೆ ಕೊಡುವ ಕೋರ್ಟು ಫೀ, ಮಾಡುವ ಉತ್ಪತ್ತಿಯ ಮೇಲೆ ಹಾಕುವ ಇನ್‌ಕಂಟ್ಯಾಕ್ಸ್, ಬರೆಯುವ ಕಾಗದಗಳ ಮೇಲೆ ಕೊಡುವ ದುಡ್ಡು, ನಮ್ಮ ದೇಶದಲ್ಲಿ ಬೆಳೆಯುವ ಮರ ಮಾರಿ ಸಿಕ್ಕುವ ಉತ್ಪತ್ತಿ, ಮಾಡುವ ಪ್ರಯಾಣಕ್ಕಾಗಿ ಕೊಡುವ ಚಾರ್ಜು, ಕುಡಿಯುವ ನಿಶಾ ಪದಾರ್ಥಗಳ ಮೇಲೆ ಕೊಡುವ ಡ್ಯೂಟಿ ಇವೆಲ್ಲಾ ತೆಗೆದುಕೊಂಡು ರೈತರಿಗೆ ಕೊಡುವದೇನು? ವಿದ್ಯೆ, ಔಷಧಿ, ನೀರ್ತೆ ಈ ಮುಖ್ಯವಾದ ಸರಕಾರದಿಂದ ರೈತರಿಗೆ ಸಿಕ್ಕುವ ಪ್ರಯೋಜನಗಳು. ಇವನ್ನು ರೈತರಿಗೆ ಕೊಡುವದು ಡಿಸ್ಟ್ರಿಕ್ಟ್ ಬೋರ್ಡ್. ಡಿಸ್ಟ್ರಿಕ್ಟ್ ಬೋರ್ಡಿನ ಉತ್ಪತ್ತಿಯೇನು? ಕಂದಾಯ ರೂಪಾಯಿ 1ರ ಮೇಲೆ ಹಾಕುವ ಎರಡಾಣೆ ಸೆಸ್, ಟೋಲ್‌ಗೇಟ್ ಉತ್ಪತ್ತಿ, ದೋಣಿ ಚಾರ್ಜು, ಸ್ಕೂಲ್ ಫೀಸ್ ಮತ್ತು ಕಸಬು ಕಂದಾಯ. ಇವೆಲ್ಲಾ ಕಾಸು ಲೆಖ್ಖದ ಉತ್ಪತ್ತಿ. ಇದರ ಮೇಲೆ ಇಂಪೀರಿಯಲ್ ಉತ್ಪತ್ತಿಯಿಂದ ಸರಕಾರದವರು ದಯವಿಟ್ಟು ಕೊಡುವದಾನ. ಇಂಥಾ ಅಲ್ಪ ಸ್ವಲ್ಪ ಉತ್ಪತ್ತಿಯಿಂದ ಮಾತ್ರ ರೈತರಿಗೆ ಸಿಕ್ಕುವ ಪ್ರಯೋಜನ. ಮೇಲೆ ಬರೆದ ದೊಡ್ಡ ಉತ್ಪತ್ತಿಗಳ ಮೇಲೆ ರೈತರಿಗೆ ಹಕ್ಕಿಲ್ಲವೇನು? ಅದರಿಂದ ಮಾಸ್ತರುಗಳಿಗೆ ಸಂಬಳ ಕೊಡಲಿ. ಮಿಲಿಟರಿ ಇಲಾಖೆಗಾಗಿ ಇಂಡಿಯಾ ಸರಕಾರದವರು ಖರ್ಚು ಮಾಡುವ ಸುಮಾರು 60 ಕೋಟಿ ರೂಪಾಯಿ ಪೈಕಿ ಎಂದೋ, ಯಾವಾಗಲೋ ಉಪಯೋಗಕ್ಕೆ ಬರುತ್ತೋ ಇಲ್ಲವೋ ಎಂಬ ಟೆರಿಟೋರಿಯಲ್ ಫೋರ್ಸಿಗಾಗಿ ಒಂದು ಲಕ್ಷ ರೂಪಾಯಿ ನಾವು ಕಂಡಂತೆ ಪೆನ್ಸೆ ತಾನೇ ಈ ದೇಶದಲ್ಲೇ ಖರ್ಚು ಮಾಡಲಿಲ್ಲವೇ? ಈ ರೀತಿ ಹಣವನ್ನು ನೀರಿನಂತೆ ಖರ್ಚುಮಾಡುವ ಸರಕಾರಕ್ಕೆ ಬಡತನವೆಂದರೆ ರೈತರು ನಂಬುತ್ತಾರೋ? ಇಂಪೀರಿಯಲ್ ಉದ್ಯೋಗಸ್ಥರಿಗೆ ಇರುವ ಸಂಬಳಗಳೂ ಭತ್ಯಗಳೂ ಎಲ್ಲೋ ಪೆನ್ಷನ್‌ಗಳು ಕೊಡಲಿಕ್ಕೆ ಹಣವಿದೆ. ಇದು ಸಾಲದಂತೆ ಇವರ ಅನುಕೂಲಗಳನ್ನು ಹೆಚ್ಚಿಸಲಿಕ್ಕಾಗಿ ೩ ಲಕ್ಷ ರೂಪಾಯಿ ಖರ್ಚು ಆಗುವಂತ ಕಮಿಶನ್ ಒಂದು ಏರ್ಪಾಟಾಗಿದೆ. ಇದಕ್ಕೆಲ್ಲಾ ಹಣವಿದೆ. ಮಾಸ್ತರುಗಳ ಸಂಬಳ ಹೆಚ್ಚಿಸಲಿಕ್ಕೆ ಮಾತ್ರ ರೈತರ ಮೇಲೆ ಪುನಃ ಹೊರೆ! ಇದು ಯಾವ ನ್ಯಾಯ!

ಸರಕಾರದವರು ಹೊಸ ಹೊಸ ಹೊರೆ ಹೊರಿಸುತ್ತಾ ಬಂದಹಾಗೆಯೇ ರೈತರ ಉತ್ಪತ್ತಿ ಹೆಚ್ಚಿಸಲಿಕ್ಕೆ ಸರಕಾರದವರು ಏನು ಮಾಡುತ್ತಿದ್ದಾರೆ? ಹೊಸ ವ್ಯಗಾರಿಕೆಗಳನ್ನೂ ಕಲಿಸುವದಿಲ್ಲ. ದನಗಳು ಸಾಕಲಿಕ್ಕೆ ಸಾಕಾದಷ್ಟು ಸಹಾಯ ಕೊಡುತ್ತಿರುವದಿಲ್ಲ. ಏವಸಾಯದ ಇಲಾಖೆಯೇ ಈವರೆಗ ಇಲ್ಲ. ನಿವ್ವಳವಾಗಿ ಒಂದು ಇಟ್ಟಿದ್ದರೂ ಅದರಿಂದ ರೈತರಿಗೆ ಏನೂ ಪ್ರಯೋಜನ ಸಿಕ್ಕಲಿಲ್ಲ. ಆದ್ದರಿಂದ ಈ ಬಗ್ಗೆಯಲ್ಲಿಯೂ ಸರಕಾರದ ಸಹಾಯ ಸಿಕ್ಕುವದಿಲ್ಲ. ರೈತರು ಸ್ವಸಹಾಯದ ಮೇಲೆಯೇ ನಿಲ್ಲಬೇಕಾಗಿದೆ. ದೇವರ ಮೇಲೆ ಭಾರ ಹಾಕಿ ಧೈರ್ಯ ತಾಳಿ ಸ್ವತಂತ್ರ ಪ್ರಾಪ್ತಿಗೆ ಪ್ರಯತ್ನಿಸಬೇಕಾದದ್ದೇ ರೈತರ ಕರ್ತವ್ಯವಾಗಿದೆ.

ಅಶಿಕ್ಷಿತರೋ ಅಜ್ಞಾನಿಗಳೋ.

(ಡಾ॥ ನಾ. ಸಾ. ಹರ್ಡೀಕರ)

ಪರಸ್ಪರಾನುಕೂಲ್ಯದಿಂದ ಉತ್ಪನ್ನವಾದ ಸಾಮರ್ಥ್ಯವು ಪ್ರತಿಯೊಬ್ಬನ ದೇಶದಲ್ಲಿ ಬೇರೂರಬೇಕಾದರೆ ಮೊದಲು ಜನರನ್ನು ಸುಶಿಕ್ಷಿತರನ್ನಾಗಿ ಮಾಡಬೇಕಾಗುವುದು. ಮತ್ತು ಇಂಥಾ ಸಾಮರ್ಥ್ಯವು ಒಮ್ಮೆ ದೃಢವಾಯಿತೆಂದರೆ ಅದನ್ನು ಶಕ್ಯವಿದ್ದಷ್ಟು ಉತ್ತಮ ರೀತಿಯಿಂದ ರಕ್ಷಿಸಿ ಸ್ವಂತದ್ದು ಮತ್ತು ದೇಶದ್ದು ಉದ್ಧಾರಾರ್ಥವಾಗಿ ಸ್ವೀಕೃತ ಕಾರ್ಯವನ್ನು ಒಂದೇ ರೀತಿಯಿಂದ ಸಾಧ್ಯವಾದಷ್ಟು ಶೀಘ್ರ ಜನತೆಯು ಪ್ರವರ್ತಿಸಬೇಕು. ಅಂದರೆ ಜನರಿಗೆ ಶಿಕ್ಷಣವನ್ನು ಕೊಟ್ಟು ಅದರಲ್ಲಿ ಸಂಘಶಕ್ತಿಯನ್ನು ಹುಟ್ಟಿಸುವುದು ಮೊದಲನೇ ಕಾರ್ಯವು ಮತ್ತು ಆ ಸಂಘಶಕ್ತಿಯ ಉಪಯೋಗವನ್ನು ಮಾಡಿ ಆದ್ಯ ಪತಿವ್ರತ್ಯವನ್ನು ಮಾರ್ಗದ ಕಡೆಗೆ ಒಯ್ಯುವುದು ಎರಡನೇ ಕಾರ್ಯವು.

ಯಾವ ದೇಶದ ಉನ್ನತಿ ಅಥವಾ ಅವನತಿಯು ಆ ದೇಶದ ಜನತೆಯ ಶಿಕ್ಷಣದ ಮೇಲೆ ಅವಲಂಬಿಸಿರುವದೆಂಬುದು ನಿರ್ವಿವಾದವಾದ ಮಾತು. ಆದರೆ ಕೇವಲ ಶಾಲೆಗೆ ಹೋಗಿ ದೊರಕಿದ ವಿದ್ಯೆಗೆ ಶಿಕ್ಷಣವೆಂದು ಮಾತ್ರ ಯಾರೂ ತಿಳಿಯತಕ್ಕದ್ದಲ್ಲ. ಹಾಗಾದರೆ ನಮ್ಮ ದೇಶದಲ್ಲಿ ಶಿಕ್ಷಣವನ್ನು ದೊರಕಿಸದೇ ಇದ್ದ ೧೦೦ ಕ್ಕೆ ೯೦ ಜನರು ಏನೇನೂ ಸಮರ್ಥರಿದ್ದು ಅವರಿಂದ ನಮ್ಮ ದೇಶದ ಉನ್ನತಿಗೆ ಏನೂ ಸಹಾಯವಾಗುವುದಿಲ್ಲೆಂಬ ಅನ್ವರ್ಥ ಕಾರಣ. ಬರೆಯಲಿಕ್ಕೂ ಓದಲಿಕ್ಕೂ ಬಾರದ ಜನರಿಗೆ ಒಂದು ವೇಳೆ "ಅಶಿಕ್ಷಿತ" ರೆಂಬ ವಿಶೇಷಣವನ್ನು ಹಚ್ಚಿದರೂ ಈ ಗರೀಬರು 'ಅಜ್ಞಾನಿ' ಗಳು ಮಾತ್ರ ಎಂದೂ ಆಗಲಾರರೆಂದು ನಮ್ಮ ಪ್ರಮಾಣಿಕ ತಿಳುವಳಿಕೆ ಇದೆ. ಯಾಕೆಂದರೆ ಇವರು ತಮ್ಮ ಪ್ರತಿದಿನದ ವ್ಯವಹಾರಗಳನ್ನು ಕಾಗದದ ಆಧಾರವಿಲ್ಲದೆ ಬಾಯಿಮಾತಿನಿಂದಲೇ ಉತ್ಕೃಷ್ಟವಾಗಿ ನಡೆಸುವದನ್ನು ಪ್ರಸಂಗ ಒದಗಿದರೆ ಎಷ್ಟೋ ಗಹನವಿಷಯಗಳ ಮೇಲೆ ಒಳ್ಳೇ ಸುಶಿಕ್ಷಿತರನ್ನು ಸುಶಿಮೆಯರಕೂಡ ಯೋಗ್ಯವಾಗಿ ಚರ್ಚೆಮಾಡಿ ಅವರನ್ನು ಆಶ್ಚರ್ಯ ಚಕಿತರನ್ನಾಗಿ ಮಾಡುವದನ್ನು ನಾವು ಅನೇಕ ಸಾರೆ ಕಂಡಿದ್ದೇವೆ. ಹಳ್ಳಿಗಳಲ್ಲಿಯವರಿಗೆ ಜೀವಿಕ ಬಗ್ಗೆ ಇರುವಷ್ಟು ಜ್ಞಾನವು ಶಹರದ ಸುಶಿಕ್ಷಿತರಿಗೂ ಕೂಡ ಇರುತ್ತದೋ ಇಲ್ಲವೋ ಎಂಬ ಸಂಶಯಾಸ್ಪದವೇ ಇರುತ್ತದೆ. ಆದರೆ ಹಳ್ಳಿಯವರ ನ್ಯಾಯಯುಕ್ತ ಜ್ಞಾನಕ್ಕಿಂತ ಶಹರವಾಸಿಗಳ ಜ್ಞಾನವು ಕುಂದು ಕಡಿದ ಸಂಸ್ಕೃತಿಯನ್ನು ಹೊಂದಿರುತ್ತದೆಂಬುದನ್ನು ಮಾತ್ರ ನಾವು ಸಮ್ಮತಿಸುವೆವು. ಹೀಗಿರಲು ಕೇವಲ ಓದು ಬರಹಗಳನ್ನು ಬಲ್ಲವರಿಗೆ ಮಾತ್ರ ಸುಶಿಕ್ಷಿತರನ್ನುವುದೂ ಶಿಕ್ಷಿತರರು ಕೇವಲ ನಿರುಪಯೋಗಿಗಳೆನ್ನುವುದೂ ಎಷ್ಟರ ನ್ಯಾಯವು? ಮತ್ತು ಅಕ್ಷರಶೂನ್ಯರಿದ್ದವರಿಗೆ ಅಕ್ಷರದಗುರುತು ಮಾಡಿಕೊಟ್ಟರೇನೇ ದೇಶದ ಉದ್ಧಾರವಾಗುವುದು ಇಲ್ಲವಾದರೆ ಇಲ್ಲವೆನ್ನುವುದಾದರೂ ಹೇಗೆ ಸಮಂಜಸವಾಗಿ ಕಂಡೀತು?

ಹಿಂದೂಸ್ತಾನದಲ್ಲಿ ಬ್ರಿಟಿಷ ಸಾಮ್ರಾಜ್ಯ ಸ್ಥಾಪನೆಯ ಪೂರ್ವದಲ್ಲಿ ಹಳ್ಳಿಗಳಲ್ಲಿಯ ಎಲ್ಲ ವ್ಯವಸ್ಥೆಯನ್ನು ಅಲ್ಲಿಯ ಪಂಚರೇ ಮಾಡುತ್ತಿದ್ದರೆಂದು ಇತಿಹಾಸದಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಆಗಿನ ಕಾಲಕ್ಕೆ ಜನರು ಸಂತುಷ್ಟರಿದ್ದು ಊಟ ಉಡಿಗೆಗಳ ವಿಷಯದಲ್ಲಿ ಈಗಿನಕಿಂತ ಹೆಚ್ಚು ಸುಖಿಗಳಿದ್ದರು. ಇಷ್ಟೇ ಅಲ್ಲದೆ ತಮ್ಮ ತಮ್ಮ ಗ್ರಾಮಗಳನ್ನು ಚನ್ನಾಗಿ ಸಂರಕ್ಷಿಸಿಕೊಂಡು, ಆತ್ಮಹಿತ, ಜನಹಿತ, ತದ್ವಾರ ದೇಶದ ಹಿತ ಇವುಗಳನ್ನು ಸಂಪಾದಿಸುವುದರಲ್ಲಿ ನಿಪುಣರಾದರೂ ಇದ್ದರು. ಅವರಲ್ಲಿ ಸಾಕ್ಷರತೆಯ ಪ್ರಮಾಣವು ಎಷ್ಟೇ ಕಡಿಮೆಯು ಕರಗತಿಯುದ್ದಿತ್ತೆಂದು ಕಲ್ಪಿಸಿದಾಗ್ಯೂ ಕೂಡ (ಇತಿಹಾಸವಂತೂ ಇದರ ವಿರುದ್ಧ ಪ್ರತಿಪಾದಿಸುತ್ತದೆ) ಹಳ್ಳಿಗಳ ವ್ಯವಸ್ಥೆಯನ್ನಿಡುವ ಪಂಚರೂ, ಅವರನ್ನು ಆರಿಸುವ ಜನರೂ ಅಜ್ಞಾನಿಗಳಿದ್ದರೆಂದು ಮಾತ್ರ ಯಾರಿಗೂ ಹೇಳಲಿಕ್ಕಾಗದು. ಈ ಮಾತಿಗೆ ಪುರಾವೆಯಾಗ ಬೇಕಾದರೆ ನಮ್ಮ ಧಾರ್ಮಿಕ, ನೈತಿಕ, ಮತ್ತು ಸಾಮಾಜಿಕ, ಶಿಕ್ಷಣಗಳೇ ಕಾರಣಗಳೆಂದು, ಬೇರೆ ಹೇಳುವ ಅವಶ್ಯಕತೆಯು ಇಲ್ಲ.

ಮೇಲಿನ ವಿವೇಚನದಿಂದ ದೇಶದಲ್ಲಿ ಸಾಕ್ಷರತೆಯ ಹಬ್ಬುಗೆಯು ವಿರುದ್ಧ ನಮ್ಮ ಮತ ಇರುತ್ತದೆಂದು ಮಾತ್ರ ಯಾರೂ ತಿಳಿಯಲಾಗದು.

ನಮ್ಮ ಅಭಿಪ್ರಾಯವಿಷ್ಟೇ—ಜನತೆಯು ಅಶಿಕ್ಷಿತವಿದ್ದ ಮಾತ್ರಕ್ಕೆ ಅಜ್ಞಾನಿಯು ಮಾತ್ರ ನಿಜವಾಗಿ ಆಗಲಾರದು. ತನ್ನ ಹಿತಾಹಿತ ಮತ್ತು ಹಿತಾಹಿತಗಳ ಬಗ್ಗೆ ಅದಕ್ಕೆ ಪೂರ್ಣ ಅರಿವು ಇದ್ದೇ ಇರುತ್ತದೆ. ಓದು ಬರಹ ಬಲ್ಲ ಜನರನ್ನೂ ಸದ್ಯಸ್ಥಿತಿಯನ್ನು ಮತ್ತು ಸಂಘಟಿತ ಶಿಕ್ಷಣವನ್ನು ಜನತೆಗೆ ಕೊಟ್ಟರೆ ಅದು ಹಳ್ಳಿಯ ದೇಶದ ಅಮೂಲ್ಯ ಸೇವೆಯಾಗದೇ ಇರದು. ಇದೇ ನಮ್ಮ ಮತವು.

ಹಿಂದೂಸ್ತಾನದ ಸ್ವಾತಂತ್ರ್ಯದ ಉಪಾಯ ಈಗ ಅನೇಕ ವರ್ಷಗಳಿಂದ ನಡೆಯುತ್ತಿರುವ ಚಳವಳಿಗಳಲ್ಲಿ ಅತಿ ತರಾದರೂ ಅಜ್ಞಾನಿಗಳಲ್ಲದ ನಮ್ಮ ಬಂಧು ಭಗಿನಿಗಳು ಭಾಗ ತೆಗೆದುಕೊಂಡಿದ್ದರೆ ನಮಗೆ ಸುಖವೆಂದೇ ಪ್ರಾಪ್ತವಾಗುತ್ತಿತ್ತು.

ಅನೇಕ ವರ್ಷಗಳಿಂದಲೂ ನಾನಾ ನಾನಾ ತರದ ಕಷ್ಟಗಳಿಗೀಡಾಗಿದ್ದರೂ ದಿನದಿನಕ್ಕೆ ನಮ್ಮ ಸ್ಥಿತಿಗತಿಯು ಸುಧಾರಿಸದೆ ಅಧೋಗತಿಗೆ ಮಾತ್ರ ಇಳಿಯುತ್ತಲಿದೆ. ಇದರ ಕಾರಣವನ್ನೂ ಅದನ್ನು ಹೋಗಲಾಡಿಸುವ ಉಪಾಯವನ್ನೂ ಎಲ್ಲ ಜನತೆಗೆ ತಿಳಿಸಿ ಹೇಳುವದು ಸುಶಿಕ್ಷಿತರ ಆದ್ಯ ಕರ್ತವ್ಯವಾಗಿದೆ. ಇತ್ತೀಚೆಗೆ ಈ ಕಾರ್ಯಕ್ಕಾಗಿ ಅನೇಕ ಸಂಸ್ಥೆಗಳು ಸ್ಥಾಪಿಸಲ್ಪಟ್ಟಿದ್ದರೂ ಆಗಬೇಕಾದಷ್ಟು ಕಾರ್ಯವು ಅವುಗಳಿಂದ ಆಗುವದಿಲ್ಲೆಂಬುದು ನಮಗೆ ತೋರುತ್ತದೆ.

ಈ ದೃಷ್ಟಿಯಿಂದ ಶಕ್ಯವಿದ್ದಷ್ಟು ಪ್ರಯತ್ನವನ್ನು ಮಾಡಬೇಕೆಂದು ನಿಶ್ಚಯಿಸಿ ಇಂಥ ಲೇಖನ ಮಾಲೆಯನ್ನು ಬರೆಯಲುದ್ಯುಕ್ತರಾಗಿದ್ದೇವೆ.

ಸ್ವರಾಜ್ಯದ ಬಾಗಿ

(ಆಚಾರ್ಯ ಪಿ. ಸಿ ರೇಯವರ ಉಪದೇಶ).

ಈಗಿನಕಾಲದ ಇಂಡಿಯಾದೇಶದ ಇತಿಹಾಸದಲ್ಲಿ ಪ್ರಾಮುಖ್ಯವಾದ ಮಹಾತ್ಮಾ ಗಾಂಧಿಯವರು ಜೈಲಿಗೆ ಹೋದ ಮಾರ್ಚ 18 ನೇ ತಾರೀಕಿನ್ನ ಆ ಪಾವನಪುರುಷನ ಸ್ಮರಣೆ ಬರದೆ ಇರುವುದಿಲ್ಲ. ಈಗ ಒಂದು ವರ್ಷದಿಂದ ಇಂಡಿಯಾದೇಶದ ಎಲ್ಲಾ ಭಾಗಗಳನ್ನೂ ಬಂಗಾಳದ ಮೂಲೆಯಲ್ಲಿರುವ ಗ್ರಾಮಗಳನ್ನೂ ಸುತ್ತಿದ್ದರಿಂದ ನಮ್ಮ ದೇಶದ ಈಗಿನ ಸ್ಥಿತಿಯು ನಿಜ ಅವಸ್ಥೆಯನ್ನು ತಿಳಕೊಂಡಿದ್ದೇನೆಂತ ಹೇಳಬಹುದು. ನಮ್ಮ ದೇಶದವರು ಸತ್ಯ ಮತ್ತು ಶಾಶ್ವತವಾಗಿಂಥಾದ್ದನ್ನು ಕಂಡುಹಿಡಿಯಲಿಕ್ಕೆ ಸರಿಯಾದ ದಾರಿ ಹಿಡಿದಿದ್ದರೆಂತ ನನ್ನ ಮನಸ್ಸಿಗೆ ಖಂಡಿತವಾಗುತ್ತಿದೆ. ಮಹಾತ್ಮಜೀಯವರು ಪ್ರಪಂಚಕ್ಕೆ ಕೊಟ್ಟ ಬೋಧನೆಯಾದ ಆ ಸತ್ಯಾಗ್ರಹ—ಅಂದರೆ ಸತ್ಯದಮೇಲೆ ಮನಃಪೂರ್ವ ಪ್ರೀತಿ ಮತ್ತು ಸಾಧನೆ. ಇಂಡಿಯಾದೇಶದ ಅಂತರಾತ್ಮನಿಂದ ಹೊರಡುವ ಧ್ವನಿಯೋ ಇದಾಗಿದೆ. ಮಹಾತ್ಮಜೀಯವರ ಪವಿತ್ರ ಸಹವಾಸದಿಂದ ಉತ್ತೇಜಿತರಾಗಿ ಕೆಲವು ಮಹಾಪುರುಷರು ಅವರ ಬೋಧನೆಯೇ ಸತ್ಯದ ಬೋಧನೆಯೆಂದು ಸ್ವೀಕರಿಸಿ ಕಠಿಣಸಾಧ್ಯವಾದ ಆತ್ಮತ್ಯಾಗವನ್ನು ಕೈಕೊಂಡು ಅದರಿಂದಲೇ ದೇಶಸೇವೆ ಸಾಧ್ಯವೆಂತ ನಿಶ್ಚೈಸಿದರು. ಈಗ ದುರಾದೃಷ್ಟ ವಶಾತ್ ಕೆಲವರು ಈ ಉತ್ತಮ ಧ್ಯೇಯವನ್ನು ಬಿಟ್ಟುಬಿಟ್ಟಿದ್ದರೂ ದೇಶವು ಬಹಳ ಮುಂದರಿಸಿದೆಯೆಂತಲೂ, ಮುಂದರಿಸುತ್ತಲೂ ಇದೆಯೆಂತಲೂ ಒಪ್ಪಬೇಕಾಗಿದೆ. ಉತ್ಸಾಹಿಗಳಾದ ಯುವಕರು ಮೂಲೆಮೂಲೆಯಲ್ಲಿರುವ ಗ್ರಾಮಗಳಲ್ಲಿ ಸಹ ಬಹಳ ಕಷ್ಟವನ್ನು ಸಹಿಸಿಕೊಂಡು ಹೆಸರನ್ನಾಗಲಿ ಪ್ರಖ್ಯಾತಿಯನ್ನಾಗಲೀ ಬಯಸದೆ

ಶಂಸವೆಗಾಗಿ ಸನ್ಯಾಸಿಗಳಂತೆ ತ್ಯಾಗಿಗಳಾಗಿ ಕೆಲಸ ಮಾಡುವುದನ್ನು ನೋಡಿದ ನನಗೆ ದೇಶದ ಈಗಿನ ಸ್ಥಿತಿಯ ವಿಷಯದಲ್ಲಿ ಅಧೈರ್ಯ ತೋರುವುದಿಲ್ಲ. ನಿಜವಾದ ದೇವಭಕ್ತಿಯು ಮಹಾತ್ಮಜೀಯವರಲ್ಲಿ ಅವತರಿಸಿ ದೇಶಕ್ಕಾಗಿ ಜೀವವನ್ನೇ ಅರ್ಪಿಸುವ ಹೊಸ ರೂಪವನ್ನು ತಾಳಿ ರಾಷ್ಟ್ರೀಯ ಉನ್ನತಿಯ ಕಡೆಗೆ ಇಂಡಿಯಾ ದೇಶವನ್ನು ಸಾಗಿಸುತ್ತಿದೆ.

ರಾಜಕೀಯ ವಿಷಯಕ್ಕಾಗಲೀ ಸಾಮಾಜಿಕ ವಿಷಯಕ್ಕಾಗಲೀ ಮತವಿಷಯಕ್ಕಾಗಲೀ ಬೇರೆ ಮುಖ್ಯ ವಿಷಯವೇನೆಂದರೆ—ಸತ್ಯ-ದೇವವನ್ನು ಪ್ರತ್ಯೇಕಪ್ರತ್ಯೇಕ ಅಂಶಗಳಾಗಿ ವಿಂಗಡಿಸಲಿಕ್ಕಾಗುವುದಿಲ್ಲ. ಎಲ್ಲವನ್ನೂ ಅವರ ಕೊಂಡು ಇರುವಂಥಾದ್ದು ಸತ್ಯವಾಗಿದೆ. ಅಸತ್ಯ, ಅನ್ಯಾಯ, ತಂತ್ರ ಇವನ್ನು ಗಡೀಪಾರು ಮಾಡಿಬಿಡಬೇಕು. ಇದೇ ಮಹಾತ್ಮಜೀಯವರ ಬೋಧನೆ. ಪಾರತಂತ್ರ್ಯದ ಕಟ್ಟಿನಿಂದಲೂ ದ[illegible]ದಿಂದಲೂ ಶಾಂತತಾ ಯುಕ್ತವಾದ [illegible] ಬಿಡುಗಡೆ ಹೊಂದಲು ಬೇರೆ ದಾರಿಯೇ ಇಲ್ಲ.

ಸ್ವರಾಜ್ಯದ ದಾರಿಯು, ಮಹಾತ್ಮಜೀಯವರ ಬೋಧನೆಯ ಸಾಧನದ ದಾರಿಯು ಕೌನ್ಸಿಲುಗಳ ಪಾರ್ಲಿಮೆಂಟಿನ ದಾರಿಯಲ್ಲಿ ಬೇರೆಯಲ್ಲ. ಪೂರ್ಣ ಸ್ವರಾಜ್ಯದ ದಾರಿಯು ಗ್ರಾಮವಾಸಿಗಳ ನಿರ್ದೋಷವಾದ ಬಡತನದ ರೀತಿಯಲ್ಲಿಯೇ ಇದೆ. ಐಹಿಕ ಐಶ್ವರ್ಯ ಮತ್ತು ಸುಖದಿಂದ ಮನಸ್ಸು ಕಟ್ಟಿರುವ ನಾವು ಪರದೇಶದ ನಾಗರಿಕತೆಯ ನಿಷ್ಪ್ರಯೋಜನವಾದ ಸಾಮಾನುಗಳನ್ನು ತ್ಯಜಿಸಬೇಕು. [illegible] ಇಂಡಿಯಾ ದೇಶವು ಸ್ವಶಕ್ತಿಯ ಮೇಲೆಯೇ ನಿಲ್ಲಲಿಕ್ಕೆ ಕಲಿಯುತ್ತಾ ಇದೆ. ಗ್ರಾಮಾಂತರಗಳಲ್ಲಿ [illegible] ನಿಸ್ವಾರ್ಥ ತ್ಯಾಗಿಗಳಾಗಿ ಕೆಲಸ ಮಾಡುತ್ತಿರುವದನ್ನು ನೋಡಿದರೆ ಆತ್ಮವಿಚಾರಕ್ಕೆ ದೇಶದವರು ಪ್ರಾರಂಭಿಸಿದ್ದಾರೆಂದೆನಿಸದೇ ಹೇಳಬಹುದು. ಪರೇಪ್ರಾರ್ಥನೆಯಿಂದ ಸ್ವರಾಜ್ಯಪ್ರಾಪ್ತಿಯಾದೀತೆಂಬ ಅಭಿಪ್ರಾಯವಿರುವ ಜನರು ಆ ತಪ್ಪು ಅಭಿಪ್ರಾಯವನ್ನು ಕಿತ್ತುಬಿಸುಡಬೇಕು. ಅಧಃಪಾತಕ್ಕೆ ಬಿದ್ದಿರುವ, ದಬ್ಬಾಳಿಕೆಗೆ ಗುರಿಯಾಗಿರುವ, ಅನೇಕ ಪಂಗಡಗಳಾಗಿರುವ ಇಂಡಿಯಾ ದೇಶವು ಆತ್ಮಾವಲಂಬನೆ (Self dependence) ಮತ್ತು ಸ್ವಶಕ್ತಿಯಲ್ಲಿ ನಂಬಿಕೆಯಿಂದಲೇ ಸ್ವಾತಂತ್ರ್ಯವನ್ನು ಸಂಪಾದಿಸಲಿ.

ರೈತನ ಬಡತನದ ಮೂರು ಕಾರಣಗಳು

ಹಿಂದೂ ದೇಶದಲ್ಲಿನ ರೈತನ ಬಡತನಕ್ಕೆ ಹಲವು ಅರ್ಥಶಾಸ್ತ್ರಜ್ಞರು ಹಲವು ಬಗೆಯ ಕಾರಣಗಳಿವೆಯೆಂದು ಅಭಿಪ್ರಾಯಪಟ್ಟಿರುತ್ತಾರೆ. ಸಹಕಾರಿ ಚಳವಳಿಯಲ್ಲಿ ಸೇರಿಕೊಂಡವರೊಳಗೆ ಅತ್ಯಧಿಕ ಅಂಶದವರು ಬಡವರೇ ಆಗಿದ್ದು ಸಹಕಾರಿ ಕಾರ್ಯಾಲಿಗಳು ಹೆಚ್ಚಾಗಿ ಬಡತನದಲ್ಲಿರುವವರೊಂದಿಗೇನೇ ಒಡನಾಡಿಕೊಂಡಿರುವ ಸಂದರ್ಭಗಳಿರುವುದರಿಂದ, ರೈತರ ಬಡತನದ ವಿಷಯವಾಗಿ ನಿಜಸ್ಥಿತಿಯನ್ನು ಕಂಡುಹಿಡಿದು ಸತ್ಯಶೋಧನೆಮಾಡಲಿಕ್ಕೆ ಸಹಕಾರಿ ಕಾರ್ಯಾಲಿಗಳಿಗೆ ಸುಲಭಸಾಧ್ಯವಾಗಿದೆ. ಅಂತಹ ಸೌಲಭ್ಯದಿಂದ ಸಾಧ್ಯವಿದ್ದಷ್ಟು ಮಟ್ಟಿಗೆ ಪೂರ್ಣ ಪ್ರಯೋಜನವನ್ನು ಪಡೆದು ಸಹಕಾರಿಗಳು ಇಂದಿನವರೆಗೆ ನಡಿಸಿದ ಶೋಧನೆಯಿಂದ ದೊರಕಿದ ಅನುಭವದಲ್ಲಿ ರೈತನ ಬಡತನಕ್ಕೆ ಮುಖ್ಯವಾಗಿರುವ ಕಾರಣಗಳು ಮೂರೆಂದು ಕಂಡುಬಂದಿದೆ. ಅವು ಯಾವುವೆಂದರೆ:—ಸಾಗುವಳಿಯ ಕೆಲಸಗಳನ್ನು ನಡಿಸುವುದರಲ್ಲಿ ರೈತನಿಗೆ ಅಗತ್ಯವಿರುವ ದ್ರವ್ಯಸಹಾಯಕ್ಕಾಗಿ ಅವನು ಹೊರಗಿನಿಂದ ಪಡೆಯಬೇಕಾಗುವ ಸಾಲಗಳ ಮೇಲೆ ಅತ್ಯಧಿಕವಾದ ದರದಲ್ಲಿ ಬಡ್ಡಿ ಕೊಡುವುದೆಂದು, ರೈತರ ಮನೆತನದ ಉಪಯೋಗಕ್ಕಾಗಿ ಹಾಗೂ [illegible] ಕಾರ್ಯಗಳಿಗಾಗಲಿ ಅಗತ್ಯವಿರುವ ಸಾಹಿತ್ಯ ಸಾಮಗ್ರಿಗಳಿಗೆ ಅತಿ ಹೆಚ್ಚು ಕ್ರಯ ಕೊಡಬೇಕಾಗುವುದೊಂದು, ರೈತರು ಬೆಳೆಸಿದ ಉತ್ಪತ್ತಿಯನ್ನು ಮಾರಾಟಮಾಡುವಾಗ್ಗೆ ಅದಕ್ಕೆ ಅತ್ಯಂತ ಕನಿಷ್ಠ ಕ್ರಯ ಸಿಗುವುದೊಂದು.

ರೈತನ ಕಸಬು ವಿಶಿಷ್ಟವಾದ್ದಾಗಿದೆ. ಇತರ ಕಸಬುಗಳಲ್ಲೆಲ್ಲಾ ಸಾಮಾನ್ಯವಾಗಿ ದಿನಂಪ್ರತಿ ಯಾ ಮಾಸಂಪ್ರತಿ ಸಂಪಾದ್ಯವಾಗುತ್ತದೆ. ಹೀಗಾಗಿ ಕಸಬು ನಡಿಸುವ ಪ್ರಾರಂಭದಲ್ಲಿ ಸ್ವಲ್ಪ ಹಣದ ಅಡಚಣೆಯಿದ್ದರೂ, ಕಸಬು ನಡಿಸುತ್ತಿರುವಾಗಲೇ ಆಗಾಗ್ಗೆ ಹಣ ಹುಟ್ಟಿ ಬರುತ್ತಿರುವುದರಿಂದ, ಹಣದ ಅಡಚಣೆಯ ವೇಳ್ಯ ಸಾಲ ಪಡೆದ ಹಣವನ್ನು ಬಹು ಬೇಗನೆ ಕೊಟ್ಟು ತೀರಿಸುವುದಕ್ಕೆ ಸುಲಭಸಾಧ್ಯವಾಗುತ್ತದೆ. ವ್ಯಾಪಾರ, ಕೈಗಾರಿಕೆ, ಮುಂತಾದ ಕಸಬುಗಳಿಗೆ ಬೇಕಾಗುವ ಧನಸಹಾಯಮಾಡಲಿಕ್ಕೆ ಸ್ಥಾಪಿಸಲ್ಪಟ್ಟಿರುವ ವ್ಯಾಪಾರಿ ಬೇಂಕುಗಳಲ್ಲಿ ಈ ಕಾರಣದಿಂದ ಯಾವುದೊಂದು ಸಾಲದ ಮೇಲಾದರೂ ಮೂರು ತಿಂಗಳುಗಳಿಗಿಂತ ಹೆಚ್ಚಿಗೆ ವಾಯಿದೆ ಕೊಡುವುದಿಲ್ಲ, ಮತ್ತು ಅಂತಹ ಸಮಸ್ತ ಸಾಲಗಳನ್ನು ಹೆಚ್ಚಾಗಿ ಮೂರು ತಿಂಗಳೊಳಗೇನೇ ಸಂದಾಯಮಾಡಲಿಕ್ಕೆ ಅಡ್ಡಿಯಾಗುವುದಿಲ್ಲ. ಸದರಿ ಮೂರು ತಿಂಗಳುಗಳ ವಾಯಿದೆಯು ಸಲುವಳಿಯುಳ್ಳುವವಾಗ್ಗೆ ಕೂಡಾ (ವ್ಯಾಪಾರಿಗಳ ಬಾಬಿನಲ್ಲಿ) ವ್ಯಾಪಾರಕ್ಕಿಟ್ಟ ವಸ್ತುಗಳು (ಕೈಗಾರಿಕೆಗಳ ಬಾಬಿನಲ್ಲಿ) ಕಾರ್ಖಾನೆಗಳಲ್ಲಿ ತಯಾರಾಗುತ್ತಿರುವ ವಸ್ತುಗಳು ಮುಂತಾಗಿ ಸಾಕಷ್ಟು ಭದ್ರತೆಯ ಸಹ ಜವಾಗಿರುತ್ತದೆ. ಬೇಸಾಯದ ಕಸಬಿನಲ್ಲಿ ಹೀಗಲ್ಲ. ಸಾಗುವಳಿಯ ಕೆಲಸಗಳನ್ನು ಮುಗಿಸಿದ ಮೇಲೆ, ಬೆಳೆಯು ಕೊಯ್ಲಿಗೆ ತಯಾರಾಗಬೇಕಾದರೆ ಕನಿಷ್ಠಪಕ್ಷಕ್ಕೆ ೩–೪ ತಿಂಗಳುಗಳಷ್ಟು ಕಾಲವಾದರೂ ಕಳೆಯದೇ ಆಗುತ್ತದೆ; ಕೊಯ್ಲಿಗೆ ತಯಾರಾದ ಮೇಲೆ ಅದನ್ನು ಕುಯ್ದು, ಅನಂತರ ಮಾರಾಟಕ್ಕೆ ಸಿದ್ಧಪಡಿಸಬೇಕಾದರೆ ಇನ್ನೂ ಒಂದೆರಡು ತಿಂಗಳುಗಳಷ್ಟು ಕಾಲವು ಬೇಕಾಗುತ್ತದೆ. ಬೆಳೆಗಳು ಸಹ ಇಡೀ ವರ್ಷದಲ್ಲಿ ಸಾಮಾನ್ಯವಾಗಿ ಒಂದೇ ಸಲ, ಅಸ್ವಲ್ಪ ಉತ್ತಮವಾಗಿದ್ದರೆ ಎರಡು ಸಲ, ಅತ್ಯುತ್ತಮವಾದರೆ ಮೂರು ಸಲ ಮಾತ್ರ ಕೈಸೇರುತ್ತವೆ. ಬೇಸಾಯದ ಕೆಲಸಗಳನ್ನು ಸಮರ್ಪಕವಾಗಿ ನಡಿಸಿದರೂ ಬೆಳೆಯು ಸರಿಯಾಗಿ ಕೈಗೆ ಸಿಕ್ಕೀತೆಂದು ದೃಢವಾಗಿ ನಂಬಿರಬಹುದೇ? ಇದು ಸಾಧ್ಯವಿಲ್ಲ. ಮಳೆಯೇ ಸಾಕಷ್ಟು ಬಾರದಿರಬಹುದು; ಒಂದರೂ ವಿಪರೀತವಾಗಿ ಬರಬಹುದು. "ತೀರ್ಥ ತೆಗದುಕೊಂಡರೆ ಶೀತ ಆರತಿ ತೆಗೆದುಕೊಂಡರೆ ಉಷ್ಣ' ಎಂಬ ಗಾದೆಯಂತೆ ಬೆಳೆಗೆ ಬೇಕಾದ ಮಳೆಯು ಹೆಚ್ಚಿಗೆ ಬಂದರೂ ಹಾನಿ, ಕಡಿಮೆ ಬಂದರೂ ಹಾನಿ. ಸಮದಲ್ಲಿ ಬಂದರೂ ಕೂಡಾ ಕೊನೆಗೆ ಬೆಳೆಯು ಹುಳು ಹಿಡಿದು ಹಾಳಾಗುವುದೂ ಉಂಟು. ರೈತನು ಎಷ್ಟು ಪಟುತ್ವದಿಂದಲೂ ಶ್ರದ್ಧೆಯಿಂದಲೂ ತನ್ನ ಕೆಲಸವನ್ನು ಮಾಡಿದರೂ ಕೂಡ, ಬಹಳ ಮಟ್ಟಿಗೆ ಅವನ ಕೊನೆಯ ಶ್ರೇಯಸ್ಸು ಗಾಳಿ ಮಳೆ ಬಿಸಿಲು ಮುಂತಾದ ಸಂಚಲಿತಗಳ ಮೇಲೆಯೇ ಹೊಂದಿಕೊಂಡಿದೆ. ಇಂತಹ ಪರಿಮಾಣಗಳಲ್ಲಿ ರೈತನ ಪಾಲು ಗೋಳೇ ಸೈ. ಹೀಗಾದ್ದರಿಂದ ಅವನಿಗೆ ಬೇಕಾದ ಹಣವನ್ನು ಸಾಲಕೊಡುವವರಿಗೆ ಇತರ ಕಸಬುಗಳಿದ್ದುದಕ್ಕಿಂತಲೂ ಕಡಿಮೆ ಭದ್ರತೆಯಿರುತ್ತದೆ. [illegible] ಹೆಚ್ಚುವುದು ಸಹಜವಾದ ಸಾಂಪತ್ತಿಕ ತತ್ತ್ವವಷ್ಟೇ. ನಗದಿನ ಬದಲಿಗೆ ಅಕ್ಕಿಯನ್ನಾಗಲಿ ಭತ್ತವನ್ನಾಗಲಿ ಸಾಲಪಡೆದರೆ ರೈತನು "ಕಾಲುಹೊಲಿ" ಯಾ "ಕಳಸಿಗೆಹೊಲಿ" ಯ ದರದಲ್ಲಿ ತೆರಬೇಕಾಗುತ್ತದೆ. "ಕಾಲುಹೊಲಿ" ಯೆಂದರೆ ಸಾಲ ಪಡೆದಂದಿನಿಂದ ಸದರಿ ಅಕ್ಕಿ ಯಾ ಭತ್ತವನ್ನು ಮರುಪಾವತಿ ಮಾಡುವವರೆಗೆ ಮುಡಿ ಒಂದರ ಕಾಲು ಮುಡಿಯನ್ನು ಕೂಡಿಸಿ ಕೊಡಬೇಕು. ಮರುಪಾವತಿಯ ಕಾಲವು ೫–೬ ತಿಂಗಳುಗಳಿಗಿಂತ ಹೆಚ್ಚಾಗುವುದಿಲ್ಲವಾದುದರಿಂದ, ಅಷ್ಟು ಕಾಲಕ್ಕೇನೇ ಕಾಲುಹೊಲಿಯೆಂದರೆ ವರ್ಷ ಒಂದರ ಸೇಕಡಾ ೫೦ ಕ್ಕಿಂತಲೂ ಜಾಸ್ತಿಯಾಗುತ್ತದೆ. ಅಷ್ಟೇ ಕಾಲಕ್ಕೆ "ಕಳಸಿಗಹೊಲಿ" ಯಾದರೆ ವರ್ಷ ಒಂದರ ಸೇಕಡಾ ೬೬ ಕ್ಕಿಂತಲೂ ಹೆಚ್ಚಾಗುತ್ತದೆ. ಒಮ್ಮೊಮ್ಮೆ ಸಾಗುವಳಿಯ ಕಾಲದ ಪ್ರಾರಂಭದಲ್ಲಿ ಪಡೆದ ೪–೫ ರೂಪಾಯಿಗಳಿಗೆ ಸುಗ್ಗಿಯ ಹಸ್ತಿಯ ವಾಯಿದೆಗೆ ಒಂದೊಂದು ಮುಡಿ ಅಕ್ಕಿ ಕೊಡಬೇಕೆಂಬ ಕರಾರು ಮಾಡುತ್ತಾರೆ. ಈ ದರವನ್ನೆಣಿಸಿದರೂ ವರ್ಷ ಒಂದರ ಸೇಕಡಾ ೪೦–೫೦ ರ ದರವಾಗುತ್ತದೆ. ಇಷ್ಟು ಹೆಚ್ಚಿಗೆ ದರದಲ್ಲಿ ಬಡ್ಡಿ ಕೊಟ್ಟ ರೈತನು ಬಡವನಾಗದೆ ಮತ್ತೇನಾದಾನು?

ರೈತರಿಗೆ ಬೇಕಾಗುವ ಸಾಹಿತ್ಯಸಾಮಗ್ರಿಗಳಿಗೆ ಅತಿ ಹೆಚ್ಚು ಕ್ರಯಕೊಡುವುದರಿಂದಲೂ ರೈತರಿಗೆ ಬಹಳ ನಷ್ಟವಾಗುತ್ತದೆ. ವ್ಯಾಪಾರ, ಕೈಗಾರಿಕೆ ಮೊದಲಾದ ಇತರ ಯಾವ ಕಸಬುಗಳನ್ನು ನಡಿಸಲಿಕ್ಕೆ ಬೇಕಾಗುವ ಸಾಹಿತ್ಯ ಸಾಮಗ್ರಿಗಳನ್ನಾದರೂ ರಖಮಾಗಿ ಕೊಂಡುಕೊಳ್ಳುವುದೇ ವಾಡಿಕೆಯಾಗಿದೆ. ವಸ್ತ್ರದ ಗಿರಣಿಯ ಮಾಲಿಕರು ತಮಗೆ ಬೇಕಾದ ನೂಲನ್ನು, ಒಂದಿಷ್ಟು ಒಂದಿಷ್ಟಾಗಿಯೇ ತರಿಸುವುದಿಲ್ಲ, ಸಾವಿರಗಟ್ಲೆಯಿಂದ ಕೊಂಡುಕೊಳ್ಳುತ್ತಾರೆ. ಹತ್ತಿಯನ್ನು ಕೊಂಡುಕೊಂಡು ನೂಲು ಮಾಡಿಸುವವರು ಒಂದೊಂದು ರಾತ್ಲ ಹತ್ತಿಯನ್ನೇ ಒಮ್ಮೊಮ್ಮೆಗೆ ತರಿಸುವುದಿಲ್ಲ. [illegible] ಲೆಕ್ಕದಿಂದಲೇ ಕೊಂಡುಕೊಳ್ಳುತ್ತಾರೆ. ಚಿಲ್ಲರೆ ಬೆಂಕಿಪೆಟ್ಟಿಗೆಗಳ ವ್ಯಾಪಾರದವರಾದರೂ ಕೂಡ ಒಂದೆರಡು ಬೆಂಕಿಪೆಟ್ಟಿಗೆಗಳನ್ನು ಮಾತ್ರ ತಂದಿಡುವುದಿಲ್ಲ, ಗ್ರೋಸ್ ಕಟ್ಟೆಯಿಂದಲೇ ಕೊಂಡುಕೊಂಡಿಡುತ್ತಾರೆ. ಹಳ್ಳಿಯ ಬಡರೈತನಾದರೋ, ತನ್ನ ವೃತ್ತಿಗೆ ಬೇಕಾದ ಹಾರೆ, ನೇಗಿಲು ಮುಂತಾದ ಉಪಕರಣಗಳನ್ನಾದರೂ ಒಂದೊಂದಾಗಿ ಕೊಂಡುಕೊಳ್ಳುತ್ತಾನೆ. ಮನೆವಸ್ತ್ರ ಬೇಕಾದ [illegible] [illegible] ಕೊಂಡುಕೊಂಡಿದೆ. [illegible] ಅಂಗಡಿಯಲ್ಲಿ [illegible] ಆಗುತ್ತದೆ. ಇಷ್ಟುಮಾತ್ರವಲ್ಲ, ಒಬ್ಬೊಬ್ಬನು ಪ್ರತ್ಯಪ್ರತ್ಯೇಕವಾಗಿ ಕೊಂಡುಕೊಳ್ಳುವುದಾದಾಗ ಒಳ್ಳೇತರದ ಸಾಹಿತ್ಯ ಸಾಮಗ್ರಿಗಳು ಸಿಗುವುದೂ ದುರ್ಲಭ, ಮತ್ತು ತೂಕ ಅಳತೆಗಳಲ್ಲಿ ಮೋಸವಾಗುವುದೂ ಇದೆ. ಬೇಕಾದ ವಸ್ತು ಪದಾರ್ಥಗಳನ್ನು ಹಲವು ರೈತರು ಒಗ್ಗಟ್ಟಾಗಿ ಜಂಟಿಖರೀದಿ ಮಾಡಿದರೆ, ಈ ತ್ರಿವಿಧ ನಷ್ಟಗಳೂ ತಪ್ಪುತ್ತವೆ. ಹಾರೆ, ಪಿಕಾಸು, ನೇಗಿಲು, ಮುಂತಾದ ಉಪಕರಣಗಳ ಬಾಬಿನಲ್ಲಿ ಕೂಡಾ, ಹಲವರು ಒಟ್ಟುಗೂಡಿ, ಪ್ರತ್ಯೇಕಪ್ರತ್ಯೇಕವಾಗಿ ಪ್ರತಿಯೊಬ್ಬನಿಗೆ ಬೇಕಾದ ವಸ್ತುಗಳ ಸಂಯುಕ್ತಖಾತೆಯೊಂದು ಯಾದಿಯನ್ನು ತಯಾರಿಸಿ, ಅಂತಹ ವಸ್ತುಗಳ ಮಾರಾಟದ ದೊಡ್ಡ ರಖಂಕಟ್ಟೆಯ ವರ್ತಕರಲ್ಲಿಗೇನೇ ಹೋಗಿ ನೋಡಿದ್ದಲ್ಲಿ ತನ್ನಲ್ಲಿ ಹೆಚ್ಚು ವ್ಯಾಪಾರವಾಗುವ ಸಂಭವವಿದೆಯೆಂದು ಅಂತಹ ವರ್ತಕರೂ ತಿಳಿದುಕೊಂಡು ಕೇಳಿ ಮನ್ನಣೆಯಿಂದ ವರ್ತಿಸುತ್ತಾರೆ; ಮತ್ತು ಒಂದು ವೇಳೆ ಬೇಕೆಂಬ ತರದ ವಸ್ತುಗಳು ತನ್ನಲ್ಲಿ ತಯಾರಿಲ್ಲದಿದ್ದರೂ ಕೂಡ, ಬೇಕಾದ ಸಂಯುಕ್ತ ಯಾದಿಗೆ ಬೇಕಾಗಿ [illegible] ಇತರ ಕಡೆಗಳಿಂದ ತರಿಸಿಯಾದರೂ ಒದಗಿಸಿಕೊಡುತ್ತಾರೆ. ಪ್ರತಿಯೊಬ್ಬ ರೈತನು ತನಗೊಬ್ಬನಿಗೆ ಬೇಕಾದ ಒಂದೆರಡು ವಸ್ತುಗಳನ್ನು ಮಾತ್ರ ಹುಡುಹುಡುಕಿ ಹೋದರೆ ಎಷ್ಟು ಮನ್ನಣೆಯನ್ನು ಗಮನವನ್ನೂ ಕೊಟ್ಟು ನಡೆಸುವವರಾರು?

ರೈತರ ಉತ್ಪತ್ತಿಗೆ ಹೀನಕ್ರಯ ಸಿಗುವುದು ರೈತರ ಬಡತನಕ್ಕೆ [illegible] ಕಾರಣವಾಗಿದೆ. ಯಾವನೊಬ್ಬ ರೈತನ ಸಾಮಾನ್ಯ ಜೀವನಕ್ರಮವನ್ನು ನಾವು ಪರಿಶೀಲಿಸಿ ನೋಡಿದರೆ, ಅವನ ಬೆಳೆಯು ಕೊಯ್ಲಾಗುವಷ್ಟರೊಳಗೆ, ಹಿಂದೆ ಅವನಿಗೆ ಸಾಲಕೊಟ್ಟವನಾಗಲಿ ಅಂಥವನ ಮುತಾಲಿಕನಾಗಲಿ ಬಂದು ಹೊಲದಲ್ಲೇ ಪಹರೆ ಕೂತುಕೊಳ್ಳುವುದನ್ನು ಕಾಣಬಹುದು. [illegible] ಕ್ಷಣಕ್ಕೆ ಪಸಿಪಸಿಯಾಗಿರುವ ಉತ್ಪತ್ತಿಗೆ ನ್ಯಾಯವಾದ ಕ್ರಯವನ್ನು ಯಾರು ಕೊಟ್ಟಾರು? ಸಾಲ ಕೊಟ್ಟವನ ಬಾಗಿಲದೆಯನ್ನು ಸ್ವಲ್ಪಮಟ್ಟಿಗಾದರೂ ಸಮಾಧಾನಪಡಿಸಬೇಕಾದರೆ ಉತ್ಪತ್ತಿಯನ್ನು ಕೂಡಲೇ ಅಳೆದು ಕೊಡಲೇಬೇಕು. ಅಳತೆಗೆ ಸಹಾಯ ಪಾತ್ರಗಳೂ ಸಾಲಕೊಟ್ಟವನು ತಂದವುಗಳೇ. ಅವುಗಳಲ್ಲಿ ವ್ಯತ್ಯಾಸವಿದ್ದರೂ ಇರಬಹುದು. ಒಂದು ವೇಳೆ ಕೊಯ್ದೊಡನೆ ಕೂಡ ವಾದನ್ನು ತಪ್ಪಿಸಿಕೊಂಡರೂ ವೈಶಾಖದ ಕಾಲದ ಒಳಗಾದರೂ ಕೊಡಲೇಬೇಕು. [illegible] ದಲ್ಲಿ ಸಹಜವಾಗಿ ಕ್ರಯವು ಕಡಿಮೆಯಿರುತ್ತದೆ. ಸಾಲಗಳು ತಗಾದೆ [illegible] ರೊಳಗೆ ತೀರ್ವೆ ಪಾವತಿಯ ಸಮಯ ಬಂತು. ತೀರ್ವೆ ಸಲ್ಲಿಸಲಿಕ್ಕೆ ಕೈಯಲ್ಲಿ ನಗದು ಹಣ ಕಾಸು ಇಲ್ಲದುದರಿಂದ ಆಗ ಆ ಉತ್ಪತ್ತಿಯನ್ನು ಒತ್ತಾಯಪಟ್ಟು ಮಾರಬೇಕಾಗುತ್ತದೆ. ಎಲ್ಲ ಕಡೆಗಳಲ್ಲಿ ತೀರ್ವೆಯ ಸಮಯವು ಒಂದೇಯಾದದರಿಂದ, ಮಾರಾಟದ ಒತ್ತಾಯವು ಸರ್ವತ್ರ ವ್ಯಾಪಿಸಿ, ಆ ಕಾರಣದಿಂದಲೂ ಕ್ರಯವು ತಗ್ಗುತ್ತದೆ. ತೀರ್ವೆಯ ತಗಾದೆಯು ಕಳೆದನಂತರದಿಂದ ಉತ್ಪತ್ತಿಗೆ ಕ್ರಮೇಣವಾಗಿ ಕ್ರಯವೇರುತ್ತಾ ಹೋಗುತ್ತದೆ. ಹಾಗೆ ಕ್ರಯವು ಏರಿದ ಮೇಲೆ ಮಾರಾಟಮಾಡುವುದಕ್ಕೂ ಮೊದಲೇ ಒತ್ತಾಯಪಟ್ಟು ಮಾರಾಟಮಾಡುವುದಕ್ಕೂ ಎಷ್ಟು ಭೇದವಿದೆಯೆಂದು ಗ್ರಹಿಸಿ ನೋಡಿದರೆ, ರೈತರಿಗೆ ಈ ದೆಸೆಯಿಂದ ಉಂಟಾಗುವ ನಷ್ಟದ ಅಂದಾಜು ಮಾಡಬಹುದು. ಅಕ್ಕಿಯ ಮುಡಿ ಒಂದರ ೪–೫ ತಿಂಗಳುಗಳೊಳಗೆ ಒಂದೇ ರೂಪಾಯಿಯ ಫರಕ ನ್ನೆಣಿಸಿದರೂ, ಸೇಕಡಾ ಸುಮಾರು ೩೦–೪೦ ರಷ್ಟು ನಷ್ಟವಾಗುತ್ತದೆ ಎನ್ನಬೇಕು. ತೀರ್ವೆಯ ಕಾಲದಲ್ಲಿ ಮಾರಾಟ ಮಾಡದೆ ತೀರ್ವೆಯ ಹಣವನ್ನು ಕಟ್ಟಲಿಕ್ಕೆ ಹೊರಗಿನಿಂದ ಸಾಲಮಾಡಿದರೂ ಮತ್ತೆ ಉತ್ಪತ್ತಿಗೆ ಕ್ರಯವೇರುವವರೆಗೆ ಸದರಿ ಸಾಲದ ಮೇಲೆ ತೆರಬೇಕಾಗುವ ಬಡ್ಡಿಗಿಂತ ಮೊದಲೇ ಮಾರಾಟಮಾಡುವುದರಿಂದಾಗುವ ನಷ್ಟವು ಎಷ್ಟೋ ಜಾಸ್ತಿಯಾಗುತ್ತದೆ.

ಈ ಮೂರು ಬಗೆಯ ಕಾರಣಗಳಿಂದ ಸಂಭವಿಸುವ ನಷ್ಟಗಳನ್ನು ಪರಿಹರಿಸುವುದಕ್ಕೆ ಸಹಕಾರದ ದೆಸೆಯಿಂದ ಹೇಗೆ ಸಾಧ್ಯವಿದೆಯೆಂದು ಸಹಕಾರವು ಸಾಧಾರಣ ಮಟ್ಟಿಗಾದರೂ ಬೆಳೆದುಕೊಂಡಿರುವ ಈಗಿನ ಕಾಲದಲ್ಲಿ ಬಿಡಿಸಿ ಹೇಳಬೇಕೆಂದಿಲ್ಲ. ಆದರೆ ಸಹಕಾರವನ್ನು ಪ್ರಯೋಗಿಸುವಾಗ ಕೂಡಾ ಒಂದೇ ಬೇರೆಯಾದೇವಿಯ ಒಂದು ಪಥವನ್ನು ಮಾತ್ರ ಅವಲಂಬಿಸಿ ವಿಶೇಷ ಫಲವಾಗದು. ಮೆಂಬರರಿಗೆ ಬೇಕಾದ ಸಾಲಗಳನ್ನು ಮಾತ್ರ ಒದಗಿಸಿಕೊಟ್ಟು ಅವರ ಇತರ ವ್ಯವಹಾರಗಳ ಮಟ್ಟಿಗೆ ಅಲಕ್ಷ್ಯಮಾಡಿದರೆ, ಹಣವನ್ನು ಒದಗಿಸಿ ಕೊಟ್ಟದ್ದರ ಫಲವೂ ಕೆಟ್ಟುಹೋಗುವ ಸಂಭವವಿದೆ. ರಖಮಾಗಿ ಮಾರಾಟಮಾಡದಿದ್ದರೆ ಉಂಟಾಗುವ ನಷ್ಟವನ್ನು ಹಣ ಸಾಲಕೊಡುವುದರಿಂದ ತಪ್ಪಿಸಲಾಗುವುದೇ? ರಖಮಾಗಿ ಕೊಂಡುಕೊಳ್ಳದಿರುವುದರಿಂದ ಸಂಭವಿಸುವ ನಷ್ಟವನ್ನು ಹಣ ಸಾಲಕೊಡುವುದರಿಂದ ತಪ್ಪಿಸಲಾಗುವುದೇ?

ಸಹಕಾರಿ ಸಂಘಗಳು ರಾಷ್ಟ್ರೋನ್ನತಿಯ ಕೆಲಸವನ್ನಾಗಲಿ ಪತಿಕೋದ್ಧಾರದ ಕಾರ್ಯವನ್ನಾಗಲಿ ಅಪೂರ್ಣ [illegible] ಬಾಧೆಯನ್ನು ಮಾತ್ರ ತಪ್ಪಿಸಲಿಕ್ಕೆ [illegible] ನಿರ್ಮಿಸಿದ [illegible] ಮಾಡಿದ [illegible] ಸಾಹಿತ್ಯ ಸಾಮಗ್ರಿಗಳ [illegible] ಉತ್ಪತ್ತಿ ವಿಕ್ರಯದ [illegible] ರೈತರು ಪಡುವ ನಷ್ಟ ಕಷ್ಟ ಸಂಕಷ್ಟಗಳು ಸಾಲಗಳ ಬಾಧೆಗಿಂತಲೂ ಕಠಿಣತರವಾಗಿದೆ. ಸಾಲಗಳ ಮೇಲೆ ಕೊಡುತ್ತಿರುವ ಬಡ್ಡಿಯ ಹಣವು ಕಣ್ಣಿಗೆ ಸ್ಪಷ್ಟವಾಗಿ ಕಾಣುತ್ತವೆ; ಸಾಹಿತ್ಯ ಸಾಮಗ್ರಿಗಳನ್ನು ಕೊಂಡುಕೊಳ್ಳುವುದರಲ್ಲಿ ಉಂಟಾಗುವ ತ್ರಿವಿಧ ಬಾಧೆಗಳಾಗಲಿ ಉತ್ಪತ್ತಿಯನ್ನು ವಿಕ್ರಯಿಸುವುದರಲ್ಲಿ ಅನುಭವಿಸುವ ಬಹು ವಿಧ ಪೀಡೆಗಳಾಗಲಿ ಕಣ್ಣಿಗೆ ಕಾಣಿಸುವುದಿಲ್ಲ. ಹೀಗಾಗಿ ಅಂತಹ ಕಷ್ಟನಷ್ಟಗಳು ಕಣ್ಮರೆಯಾಗಿಯೇ ಹೋಗಿ, ಕೇವಲ ಅಲಕ್ಷ್ಯದಿಂದಲೇ ಬೆಳೆಯುತ್ತಿವೆ. ಹತ್ತೆಂಟು ಕಾಡುಮೃಗಗಳಿಂದ ಉಪದ್ರವವನ್ನನುಭವಿಸುತ್ತಿರುವ ರೈತನನ್ನು ಒಂದೆರಡು ಕಾಡುಮೃಗಗಳಿಂದ ಮಾತ್ರವೇ ತಪ್ಪಿಸಿದರೆ ರಕ್ಷಿಸಿದಂತಾಗುತ್ತದೆಯೇ? ಋಣಬಾಧೆಯಿಂದ ತಪ್ಪಿಸುತ್ತ

ವೆಂದರೆ ಬಹಳ ಮಟ್ಟಿಗೆ ಬಾಹ್ಯೋಪಚಾರ ಮಾಡಿದಂತೆ ಮಾತ್ರವಾದೀತು ದೇಹದೊಳಗಿನ ರಕ್ತವೇ ಕೆಟ್ಟುಹೋ ಗುತ್ತಿರಲು, ಹೊರಗೆ ಕಾಣಿಸಿಕೊಂಡ ಹುಣ್ಣುಗಳಿಗೆ ಮಾತ್ರ ಲೇಪವನ್ನೊರಸಿ ಚಿಕಿತ್ಸೆ ಮಾಡಿದರೆ, ಒಳಗಿನ ರೋಗವು ಉಪಶಮನವಾಗಲಾರದು ಒಂದುವೇಳೆ ಒಳಮದ್ದನ್ನು ಕೊಟ್ಟು ರಕ್ತವನ್ನು ಶುದ್ಧೀಕರಿಸಿದರಾದರೂ ಹೊರಗಿನ ಹುಣ್ಣುಗಳು ಅವಶ್ಯಕವೇಣವಾಗಿ ಗುಣವಾದಾವು. ರೈತರ ಬಳ್ಳಿ ಕೆಸ್ಸು ಸಾಧಿಸುವುದಾದರೆ ಅವರ ಬಡತನಕ್ಕೆ ಕಾರಣಗಳಾಗಿರುವ ಪರಿಗಳನ್ನು ಪೂರ್ಣವಾಗಿ ಶೋಧಿಸಿ, ಅವುಗಳಲ್ಲಿ ಪರಿಹಾರವಾಗುವಂತೆ ವರ್ತಿಸುವುದು ಅತ್ಯಗತ್ಯವಾದುದನ್ನು ಸಹಕಾರ ಸಂಘಗಳ ಚಾಲಕರು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗಿದೆ.

(ಕನ್ನಡ ಸಹಕಾರಿ)

ವರ್ತಮಾನ ಸಂಗ್ರಹ.

ಒಳದೇಶ

೨೫ನೇ ತಾರೀಕು 18 ರಲ್ಲು ಮಡಿಕೇರಿ ಮಿಲ್ಟ ಶಾಪಿನ ಕೆಳಗೆ ಇರುವ ಸ್ನಾ ಕಟಿಯಲ್ಲಿ ಒಂದು ಶವವು ತೇಲಾ ಡುತ್ತಿದ್ದದ್ದು ಕಂಡು ಬಂತು ಅದು ಒಬ್ಬ ಪುರುಷನ ಶವವಾಗಿಯೂ, ತಲೆ ಲ್ಲಿಯೂ ಕೊರಳಿನಲ್ಲಿಯೂ ಒಂದೊಂದು ಗಾಯದಿಂದ ಕೂಡಿದ್ದಾಗಿಯೂ ಇತ್ತು. ಡಾಕ್ಟರವರು ಪರೀಕ್ಷಿಸಿ ಅವನು ಅಕಸ್ಮಾತ ಕರೆಗೆ ಬಿದ್ದದ್ದಾಗಿರಬಹುದೆಂದು ಹೇಳಿದರಂತೆ ಕಡಗ ಅವನು ಮೈ, ಕೋದಂಡತಿಮ್ಮೈಯ್ಯನವರ ಗಾಡಿಯವನೆಂತಲೂ ಅವನು ಅಮಲಿನಲ್ಲಿ ಬೀಡಿ ಕಸಣಾಗಿದ್ದದರಿಂದ ಕೆರೆಗೆ ಹೋಗಿದ್ದಾಗ ಆಕಸ್ಮಿಕ ಬಿದ್ದು ಸತ್ತಿರಬೇಕೆಂತಲೂ ನಿಶ್ಚೈಸಲಾಯಿತಂತೆ

ಮಡಿಕೇರಿ ಹೈಸ್ಕೂಲ ಫೈನಲ್ ಪರೀಕ್ಷೆಯ ಫಲಿತಾಂಶವು ತಾ|| 24 ರಲ್ಲಿ ತಿಳಿಯಲಾಯಿತು 65 ವಿದ್ಯಾರ್ಥಿಗಳ ಪೈಕಿ 17 ಹುಡುಗರ ಮಾತ್ರ ಕೇಗಡೆ ಹೊಂದಿರು ವರು ಗಣಿತ ಶಾಸ್ತ್ರದಲ್ಲಿ ಪಾಸಾದವರು —1 ಗುಮ್ಮಟ್ಟೀರ ಗಣಪತಿ, 2 ನಾಪಂಡನಂಡಬೋಪೈಯ್ಯ 3 ಮಲಚೀರ ಪೂವಯ್ಯ 4 ಕೋಳೇರ ಅಪ್ಪಯ್ಯ 5 ತೀತಿಂ..ದಪ್ಪ 6 ಎ ಕ ಶಿವರಾಮ 7. ಎಚ್ ಎಸ ಶಿವರಾಮ 8 ಎಚ್ ಎಸ್ ವೆಂಕಟಯ್ಯ 9 ಎಚ್ ಎಸ್ ವೆಂಕಟಸುಬ್ಬಯ್ಯ 10 ಕೆ ಎ ಅನಂದತೀರ್ಥ 11 ಎಸ್ ರುದ್ರಪ್ಪ 12 ಎಚ್ ಎಮ್ ಅಪ್ಪಣ್ಣಯ್ಯ.

ಚರಿತ್ರೆಯಲ್ಲಿ ಪಾಸಾದವರು —1 ಸೋಮೆಯಂಡ ಸುಬ್ಬಯ್ಯ 2. ದೇಯಂಡದೇವೈಯ್ಯ 3 ಮೂಡೆರಕುಟ್ಟಪ್ಪ 4. ಡಿ ಕಣ್ಣಪ್ಪ 5 ಕೃಷ್ಣಮಲ್ಲಯ್ಯ

ಕೋ ಆಪರೇಟಿವ್ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ|| 29 ರಲ್ಲಿ ಮಡಿಕೇರಿಯಲ್ಲಿ ನಡೆಯುವುದು

ಮಡಿಕೇರಿಯಲ್ಲಿ ಸುಮಾರು ಮೂರುಸಾವಿರ ರೂಪಾಯಿ ಕಳವು ಮಾಡಿದನೆಂದು ಗುಮಾಸ್ತನಮೇಲೆ ಎಲ್ಲನವರ ಸುಬ್ಬಪ್ಪನನ್ನು ಹಿಡಿಯುವುದಕ್ಕೆ ಪುತ್ತೂರಿಗೆ ಹೋಗಿದ್ದ ಊರಿನ ಕಾನ್ಸಟೇಬಲರಾದ ಗೌಡುಗಳ ಸಡುವಟ್ಟಿರ ಬಿದ್ದಪ್ಪನೂ ಮತ್ತು ಪುತ್ತೂರಿನ ಪೋಲೀಸಿನವರೂ ಸೇರಿ ಸಿಕ್ಕಿದ ಸುಮಾರು ಮೂರುಸಾವಿರ ರೂಪಾಯಿಗಳಲ್ಲಿ ಸುಮಾರು ಎರಡು ಸಾವಿರ ರೂಪಾಯಿ ಸಿಕ್ಕಿತ್ತೆಂದು. ಹಳೆ ನ ಮಾರು ಒಂದು ಸಾವಿರ ರೂಪಾಯಿಗಳನ್ನು ಅವರೊಳಗೆ ಹಂಚಿಕೊಂಡದ್ದು ಬಿದ್ದಪ್ಪನು ಮಡಿಕೇರಿಗೆ ಬಂದಾಗ ಅವನಲ್ಲಿ ಸಿಕ್ಕಿದ ಸುಮಾರು 100 ರೂ ಇದೇ ಗುರ್ತುಸಿಯಾಗಿ ಅವನ ಮೇಲೆ ಕೇಸು ನಡೆದು ಬಿದ್ದಪ್ಪನಿಗೂ ಪುತ್ತೂರು ಕಚೇರಿಯವನಿಗೂ ಮೂರು, ಮೂರು ವರ್ಷ ಸಜವು ವಿಧಿಸಲಾಗಿದೆ

ಕಳೆದವಾರ ನಾಡು ಕಡೆಗಳಲ್ಲಿ ಮಳೆಯಿಲ್ಲದೆ ರೈತರಿಗೆ ಅಂದಾಜು ಬಹಳ ತೊಂದರೆಯಾಗಿತ್ತು ತಾರೀಕು 22 ರಿಂದ ಆರಿದ್ರಮಳೆ ಪ್ರಾರಂಭಿಸಿದರಿಂದ ಗದ್ದೆಗಳಿಗೆ ಸ್ವಲ್ಪ ನೀರಾಯಿತು ಜೀರುಸಾಕಲು ಶರಮಾಯಿತೆಂದು ರೈತರು ಯಾತಗಳನ್ನು ಹಸನು ಮಾಡಲು ತೊಡಗಿದರು ಆದರೆ ಮಡಿಕೇರಿಗೆ ಕೆಳಗಿನ ಭಾಗದ ಅಂತ್ಯಭಾಗದಲ್ಲು ಮಳೆಯು ಜೋರಾಗಿ ಬಿದ್ದರೂ ಕೂಡ ನಾಡು ಕಡೆಗಳಲ್ಲಿ ಮಳೆಯು ಕಡಿಮೆಯಾಗಿತ್ತು. ಒಂದೊಂದು ಮಳೆ ಬಿದ್ದರೂ ಕೂಡಲೆ ಬಿಸಿಲು ಕಾಯುತ್ತಿದ್ದುದರಿಂದ ಈ ಮಳೆಯನ್ನು ನಂಬಿ ನೇಜಿ ಹಾಕಲಿಕ್ಕೆ ಎಷ್ಟೋ ರೈತರು ಹೆದರುತ್ತಾರೆ ಹ್ಯಾಗೂ ನ್ಯಾಯವಾದ ಮಳೆಗಾಲವು ಪ್ರಾರಂಭವಾಗಿದೆಯೆಂದು ಹೇಳಲಾಗುವುದಿಲ್ಲ.

ಮಡಿಕೇರಿನಾಡು ಅರವತ್ತೊಕ್ಲು ಗ್ರಾಮದಲ್ಲಿ ನಡೆದ ಖೂನಿ ಕೇಸಿನಲ್ಲಿ ಅಪರಾಧಿಗಳು ಜುಡಿಶಿಯಲ್ ಕಮೀಷನರಿಗೆ ಅಪೀಲ್ ಮಾಡಿದ್ದರು. ಮಡಿಕೇರಿಯಲ್ಲಿ ಚೀಫ್‌ಕಮಿಷನರು ಇದ್ದಾಗಲೇ ಆರ್ಗ್ಯುಮೆಂಟ್ ಆಗಿ ಶೊದವರ ಪೂವೈಯ್ಯ ಮತ್ತು ಸಂಜುಂಡಪ್ಪನಿಗೆ ಸಹ ಇದ್ದ ಸಜ 1 ವರ್ಷದಿಂದ ಆರು ತಿಂಗಳಿಗೆ ಕಡಿಮೆ ಮಾಡಿದರು. ಬಲ್ಲೀಂಡ ನಾಣಪ್ಪನಿಗೆ 4 ವರ್ಷ ಸಜವನ್ನು ಕಾಯಂ ಮಾಡಿದರು

ಕಳೆದವಾರ ಕೊಡ್ಲಿಪೇಟೆಯಿಂದ ಸೋಮವಾರಪೇಟೆಯವರೆಗೆ ದಾರಿಯಲ್ಲಿರುವ ಮನೆಗಳಿಗೆ ರಾತ್ರಿ ಹೊತ್ತಿನಲ್ಲಿ ಯಾರೋ ಕೆಲವರು ಕಲ್ಲುಗಳನ್ನು ಎಸೆಯುತ್ತಾ ಬರುತ್ತಿದ್ದರೆಂದೂ, ಅವರು ಜೋರಿ, ದರೋಡೆ ಮುಂತಾದ ಕೆಲಸಗಳೇನೂ ಮಾಡದೆ ಸುಮ್ಮನೆ ಮನೆಗಳಿಗೆ ಕಲ್ಲುಗಳನ್ನು ಮಾತ್ರ ಎಸೆಯುತ್ತಿದ್ದರೆಂದೂ ವರ್ತಮಾನವಿದೆ ಇದರ ನಿಜಸ್ಥಿತಿಯೂ, ಕಾರಣಗಳೂ ಇನ್ನು ತಿಳಿದು ಬಂದಿರುವುದಿಲ್ಲ

ಹಿಂದೂದೇಶ

ಎಪ್ರಿಲ್ ತಾರೀಕು 3 ರಲ್ಲು ಎಕ್ಸ್‌ಪ್ರೆಸ್, ಪರೀಕ್ಷೆ ಮಾಡುವುದಕ್ಕೆ ಮುಂಚೆ ಅಕಲ್ಕೋಟೆ ರಾಜರಿಗೆ ಎಚ್ಚರ ತಪ್ಪಿ ವಿಷಹಾಕಿ ಅವರ ಮರಣಕ್ಕೆ ಕಾರಣರಾದುದರಿಂದ ಡಾಕ್ಟರ ಜಿ ಕೆ ನಾಯುಡುರವರ ಟೈಟಲು, ಸರ್ಟಿಫಿಕೇಟು ಮತ್ತು ಮೆಡಿಕಲ್ ಪ್ರಾಕ್ಟೀಸನ್ನು ಸಹ ವಜ ಮಾಡಿರುವುದಲ್ಲದೆ ಮೂರು ತಿಂಗಳು ಸಾದಾ ಸಜವನ್ನು ವಿಧಿಸಿರುವರು

ಸರ್ ಸುರೇಂದ್ರನಾಥ ಬೆನರ್ಜೀಯವರು ಅಮೃತ ಬಜಾರ ಪತ್ರಿಕೆಯ ಮೇಲೆ 25000 ರೂಪಾಯಿಗಳಿಗೆ ಹೊರಿಸಲ್ಪಟ್ಟ ದಾವ ಹಾಕಿದ ಕೇಸು ರಾಜಿಯಾಗುವಹಾಗೆ ಇರುವುದರಿಂದ ಒಂದು ವಾರದವರೆಗೆ ವಿಚಾರಣೆಯನ್ನು ಮುಂದರಿಸಿರುವರು

ಅಹ್ಮದಾಬಾದಿನ ಹತ್ತಿ ಗಿರಣಿಗಳ ಕೂಲಿ ಆಳುಗಳ ಮುಷ್ಕರವು ಇನ್ನೂ ಸಂಪೂರ್ಣವಾಗಿ ನಿಂತಿರುವುದಿಲ್ಲ ಅದರ ಸುದ್ದಿ ಗಿರಣಿಗಳಿಂದ ಮಾಡಿದ ಬಟ್ಟೆಗಳನ್ನು ಕೊಂಡುಕೊಳ್ಳುವವರು ಕಡಿಮೆಯಾಗಿರುವುದರಿಂದ ಅಲ್ಲಿ ತಯಾರಾದ ಬಟ್ಟೆ ಭಂಡಾರಿನ ಉಗ್ರಾಣಗಳೇ ಹೆಚ್ಚುತ್ತಲಿದೆ

ಕೊಯಮುತ್ತೂರಿನಲ್ಲಿ ಒಂದು ಗಿರಣಿಯನ್ನು ತೆರೆಯಲಿಕ್ಕೆ ಮದ್ರಾಸು ಗವರ್ನರು ಒಪ್ಪಿಕೊಂಡಿದ್ದರಂತೆ ಅದರ ಕಂಪೆನಿಯ ಅಧ್ಯಕ್ಷರಾದ ಮಿ|| ಆರ್ ಕೆ ಷಣ್ಮುಗಂ ಶೆಟ್ಟಿ ಎಮ್ ಎಲ್ ಸಿ ಯವರು ದೇಶಬಂಧು ದಾಸರವರಿಗೆ ಸ್ವಾಗತವನ್ನೀಡಲು ಹೆದ್ದ ಮೆರವಣಿಗೆ ತೆಗೆದುಕೊಂಡದರಿಂದ ತನಗೆ ಗಿರಣಿಯನ್ನು ತೆರೆಯಲು ಆಗುವುದಿಲ್ಲವೆಂದು ಗವರ್ನರು ಹೇಳಿದರಂತೆ ಅಧಿಕಾರಿಂದಲೇ ಗಿರಣಿಯನ್ನು ತೆರೆಯ ಸಲು ಧೈರ್ಯರು ಕೇನೂ ಮಾಡಿರುವಂತೆ

ಅಮೇರಿಕ ದೇಶದ ರಿಪಬ್ಲಿಕ್ ಪ್ರಸಿಡೆಂಟರಾದ ಹಾರ್ನಿಂಗ್ರವರ ಪುತ್ರ ಮಿ|| ಹರ್ಬರ್ಟ್ ಹೂವರ್ ರವರು ಕೆಲ ತಿಂಗಳಲ್ಲಿ ಅಮೇರಿಕದಿಂದ ಜಪಾನ್, ಚೈನಾ, ಫಿಲಿಪ್ಪೈನ್ಸ್ ಫೆಡರೇಟಡ್ ಮಲೆಯಸ್ಟೇಟ್ ಸಿಂಗಪೂರ ಸುಮಾತ್ರ ಜಾವ ಮತ್ತು ಕೋಲಂಬೋಕ್ಕಾಗಿ ಇಂಡಿಯಾಕ್ಕೆ ಬಂದು ಕೆಲವು ದಿವಸಗಳಿದ್ದು ಬೊಂಬಾಯಿಯಿಂದ ಯೋಪ್ ಮಾರ್ಗವಾಗಿ ವಾಪಾಸು ಹೋಗುವರು ಅವರು ಅಮೇರಿಕದ ವ್ಯಾಪಾರದ ಪ್ರಚಾರದ ಅಭಿವೃದ್ಧಿಯನ್ನು ವಿಚಾರಿಸಲು ಬರುತ್ತಿದ್ದಾಗಿದೆ ಪುನಹ ಇಂಡಿಯಾಕ್ಕೆ ಬರುವರಂತೆ

ಒಲಿಂಡರಿನ ಬಳಿ ಇರುವ ಗ್ರಾಮಸ್ಥರಿಗೆ ಹಿಂದರೆ ಕೊಡುತ್ತಿರುವ ದಂಗೆಕೋರರ ಒಬ್ಬ ಮುಖಂಡನಾದ ಚಾಬರಾಸಿಂಗ್‌ನನ್ನು ನೆರೆ ಹಿಡಿದಿರುವರು

ಸರ್ ಟಿಜ್ ಬಹದ್ದೂರ್ ಸಪ್ರುರವರು ತನ್ನ ಸಕ್ರೆಟರಿಯಾದ ಮೆ|| ಲುಪಟ್ರಿಕ್ ವಿಲಿಯಮ್ಸ್‌ರವರ ಜೊತೆ ಬೊಂಬಾಯಿಯಿಂದ ಇಂಗ್ಲೆಂಡಿಗೆ ಹೊರಟುಹೋದರು

ಬೊಂಬಾಯಿ ಮಹಾರಾ ಸಂಘದ ಹಾಲುಳ್ಳ ನಾಗಪೂರದ ಸತ್ಯಾಗ್ರಹದಲ್ಲಿ ಸೆರೆ ಹಿಡಿಯಲ್ಪಟ್ಟ ಸ್ವಯಂಸೇವಕರ ಕುಟುಂಬದ ಸಂರಕ್ಷಣೆಗಾಗಿ ಮಿ|| ಮನಿಲಾಲ್ ಕೊಠಾರಿಯವರ ಕೈಯಲ್ಲಿ ಕೆಲ್ಲವನ್ನೂ 1001 ರೂ ವಸೂಲಿಯಾಯಿತು

ಒಳುವ ಕಾಂಗ್ರೆಸ್ ಖಿಲಾಫತ್ ವರ್ಕಿಂಗ್ ಕಮಿಟಿಯ ಮೀಟಿಂಗ್ ಸತ್ಯಾಗ್ರಹದ ವಿಷಯವಾಗಿ ನಾಗಪೂರದಲ್ಲಿ ನಡೆಯಲಿಕ್ಕಿರುವುದಂತೆ

ಕನ್ನ ಶಕ್ತಿಗಾರರ ಒತ್ತಾಯದ ಮೇಲೆ ತಾಸು ಮೊದಲು ಸೂಚಿಸಿದಂತೆ ಲಾಯರು ಕೆಲಸವನ್ನು ಈಗ ನಮ್ಮಕ್ಕೆ ಬಿಡಬೇಕಾಗುವುದಿಲ್ಲವೆಂತಲೂ ಅದರ ಬದಲು 1000 ರೂಪಾಯಿನ್ನು ತಿಲಕ ಸ್ವರಾಜ್ಯ ನಿಧಿಗೂ, ಕಾಂಗ್ರೆಸಿನ ಪ್ರಚಾರ ಕೆಲಸಕ್ಕೆ ಬರುವ ಕಾಂಗ್ರೆಸಿನ ಶಾಸನಪ್ರಿಯ್ಯ ವರೆಗೆ ತಿಂಗಳು ಒಂದರ ನೂರು ರೂಪಾಯಿಯಂತೆ ಕೊಡುತ್ತಾ ಬರುತ್ತೇನೆಂದು ಮದುರಿನ ಮೆ|| ಎ ವೈದ್ಯನಾಥ ಅಯ್ಯರವರು ಒಪ್ಪಿರುವರು

ಒಪಪಡಿ ಪಾರ್ಟಿರವರು, ಪುರುಷೋತ್ತಮದಾಸ್ ಟಂಡನ್ ಶ್ರೀಯುತ ಜೋಷಿ ಚಾರ್ ಬೋಪಟ್ ಮತ್ತು ಭರುಚಾ ನ್ನವರ ಹೊಂದಬಾರದವರು ರಾಷ್ಟ್ರೀಯ ಬಾವುಟವನ್ನ ಹಾರಿಸಲಿಕ್ಕಾಗಿ ಕೈಕೊಂಡಿರುವ ಸತ್ಯಾಗ್ರಹವನ್ನು ಸಾಗುವಷ್ಟು ಪ್ರಯತ್ನಿಸಿ ಸಾಧಿಸಬೇಕೆಂದೂ, ಇಡೀ ಹಿಂದೂದೇಶದವರು ಸಹಾಯ ಮಾಡಲೂ ತಯಾರಾಗಿದ್ದಾರೆಂದೂ ನಾಗಪೂರದ ನಿವಾಸಿಗಳಿಗೆ ಅಪೀಲು ಮಾಡಿರುವರು.

ಡಾಕ್ಟರು ವರದರಾಜುಲು ನಾಯುಡುರವರು 527-10-0 ಕಂದಾಯ ಕೊಡಲಿಲ್ಲವೆಂದು ಅವರ ಭೂಮಿಯನ್ನು ತಾ|| 20 ರಲ್ಲಿ ಹರಾಜು ಮಾಡಿದರು. ಸರಕಾರದವರು ಅಂದಾಜು ಮಾಡಿದ ಒಂದು ಸಾವಿರ ರೂಪಾಯಿಯ ಆಸ್ತಿಗಳು 535 ರೂಪಾಯಿಗಳಿಗೆ ಕೂಗಲ್ಪಟ್ಟಿತಂತೆ ಮೂರು ನಾಲ್ಕು ಜನರು ಮಾತ್ರ (ಸರಕಾರಿ ಉದ್ಯೋಗಸ್ಥರು ಸೇರಿ) ಹರಾಜಿನಲ್ಲಿ ಸೇರಿಗಿದರಂತೆ.

ಕರಾಚಿಯ ಸಿಟಿ ಮ್ಯಾಜಿಸ್ಟ್ರೇಟರು ರಾಜದ್ರೋಹದ ಭಾಷಣ ಮಾಡಿದನೆಂದು ಮೌಲ್ವಿ ಅಬ್ದುಲ್ ಹಾಯಿಯವರಿಗೆ ಒಂದು ವರ್ಷ ಕಠಿಣಸಜೆಯನ್ನು ವಿಧಿಸಿದರು

ಬ್ರಾಹ್ಮಣ ಸಂಗಡಕ್ಕೆ ಬ್ರಾಹ್ಮಣೇತರರ ಸಂಗಡಕ್ಕು ಉಂಟಾಗಿರುವ ಭಿನ್ನಾಭಿಪ್ರಾಯಗಳನ್ನು ಇಲ್ಲದೆ ಮಾಡಿ ಎರಡು ಸಂಗಡಗಳೂ ರಾಷ್ಟ್ರದ ಉನ್ನತಿಗಾಗಿ ಕೆಲಸಮಾಡಲು ಉಪಾಯವನ್ನು ಕಂಡು ಹಿಡಿಯಲಿಕ್ಕಾಗಿ ದೇಶಬಂಧು ದಾಸರವರ ಸೂಚನೆ ಮೇರೆಗೆ ಸೇಠ್ ಗೋವಿಂದದಾಸರ ... ತಾ|| ಎ ನಾಯುಡುರವರು ... 20 ರಲ್ಲು ... ಮದ್ರಾಸಿನಲ್ಲಿ ಒಂದು ರೌಂಡ ಟೇಬಲ್ ಕಾನ್‌ಫರೆನ್ಸನ್ನು ನಡಿಸಿದರು ನೆರೆದಿದ್ದ ಜನರು ಪಡಿಪಾಡಿಯಾಗಿದ್ದರೂ ಎಲ್ಲಾ ಸಂಗಡಗಳ ಜನರು ಸೇರಿದ್ದರು

ಪಂಡಿತ ಮೋತಿಲಾಲ್ ನೆಹರುರವರಿಗೆ ಪುನಹ ಮಲೇರಿಯ ಜ್ವರವು ಸುರುವಾಗಿರುವದರಿಂದ ಒಂದು ತಿಂಗಳವರಿಗೆ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಡಾಕ್ಟರವರು ಹೇಳಿರುವರು ಅವರ ... ಸಾನಿಟೋರಿಯಮಿಗೆ ಹೋಗುವರು

ನಾಗಪುರದ ಸತ್ಯಾಗ್ರಹದ ವಿಷಯ ಮುಂದಾಳಾದ ಸೇಠ ಜಮ್ನಾಲಾಲ ಬಜಾಜ್ ಮತ್ತು ಮಿ|| ನೀಲಕಂಠರಾವ್ ದೇಶಪಾಂಡೆ ಇವರಿಬ್ಬರೂ ... ಸ್ವಯಂಸೇವಕರೂ ಸೆರೆ ಹಿಡಿಯಲ್ಪಟ್ಟಿರುವರು.

ವಿದೇಶ.

ರೂರ್ ಪ್ರಾಂತ್ಯದ ಕೆಲವು ಪ್ರತ್ತಿಕೆಗಳಿಗೆ ಆಹಾರ ಸಾಮಗ್ರಿಗಳನ್ನು ಕಳುಹಿಸುವುದನ್ನು ಫ್ರಾನ್ಸಿನ ಸರಕಾರದವರು ನಿಲ್ಲಿಸಿದ್ದಾರೆಂದು ಜರ್ಮನಿ ಪತ್ರಿಕೆಗಳು ಪ್ರಕಟಿಸಿದ್ದು ಪೂರಾ ಸುಳ್ಳೆಂದು ಫ್ರೆಂಚ್ ಪತ್ರಿಕೆಗಳು ಹೇಳುತ್ತವೆ.

ವೇಲ್ಸ್ ನ ಪ್ರಿನ್ಸ ಜೊತೆ ಡರ್ಬ್ಯಾಗಲ್ಲಿದ್ದ ಒಂದು ಬ್ರಿಟಿಷ್ ಸೈನ್ಯವನ್ನು 9000 ವಾಹಬಿರನಧೀರರು ಮುತ್ತಿಗೆಹಾಕಿ ಪೂರಾ ನಾಶಮಾಡಿದರಂತೆ

ವರ್ನಿಂಗ್ ಹೋಮಿನಲ್ಲಿದ್ದ ಮಿ|| ಪ್ರೇಸಿಡಾಂಟರು ಯವರು ಕ್ಲುಪ್ತ ಕಟ್ಟಿಗೆ ಆರೋಗ್ಯವನ್ನು ಹೊಂದಿರ ಪರುತೆ ಅವರು ... ಕೆಲಸವನ್ನು ಕೈಕೊಳ್ಳ ಪರಂತೆ

ತಾ|| 19 ರಲ್ಲು ಇಟಲಿಯಲ್ಲಿರುವ ಎಟ್ನಾ ಜ್ವಾಲಾಮುಖಿಯು ಉಗಿಯಲಿಕ್ಕೆ ಪ್ರಾರಂಭಿಸಿದ ಸುತ್ತಮುತ್ತಲಿನ ಗ್ರಾಮಗಳೆಲ್ಲಾ ಉರಿಯುತ್ತಿರುವ ಲಾವದಿಂದ ಮುಚ್ಚಲ್ಪಟ್ಟು ಎಲ್ಲವೂ ನಾಶವಾಗಲ್ಪಟ್ಟಿತು. ಸುಮಾರು 30 000 ಜನರು ಮನೆ ಮಠಗಳಿಲ್ಲದೆ ಕಷ್ಟಪಡುತ್ತಿರುವರು. ಇಟಲಿಯ ರಾಜರೇ ನಾಶವಾಗಿರುವ ಸ್ಥಳವನ್ನು ನೋಡಲಿಕ್ಕೆ ಕಷ್ಟ ಪರಿಹಾರಗಳಿಗೆ ತಕ್ಕ ಏರ್ಪಾಡುಗಳನ್ನು ಮಾಡುತ್ತಿರುವರಂತೆ

ಲಾರ್ಡ ರೀಡಿಂಗ್‌ರವರ ನಂತರ ಇಂಡಿಯಾದ ವೈಸರಾಯಿ ಪದವಿಗೆ ಡ್ಯೂಕ್ ಆಫ್ ಡಿವಾನ್‌ಷಯರನ್ನು ಸರಕಾರದವರು ಇಚ್ಛೈಸುತ್ತಾರೆಂದೂ ವಸಾಹತುಗಳ ಸೆಕ್ರೆಟರಿ ಪದವಿಯನ್ನು ಆಸ್ಟಿನ ಚೇಂಬರಲೇನ್‌ರವರಿಗೆ ಕೊಡುವರೆಂದೂ " ಲಂಡನಿನ ಅನೇಕ ಪತ್ರಿಕೆಗಳು ಪ್ರಕಟಿಸಿವೆ

ಲಂಡನಿನ ಟಯಿಮ್ಸ್ " ಪತ್ರಿಕೆಯ ಪ್ರಕಾರ ಲಾರ್ಡ ಚೆಲ್ಮ್ಸ್‌ಫರ್ಡ್‌ರವರು ಆಸ್ಟ್ರೇಲಿಯ ಬ್ಯಾಂಕಿನ ಬೋರ್ಡಿನ ಮೆಂಬರಾಗಿ ಚುನಾಯಿಸಲ್ಪಟ್ಟಿರುವರು.

ಗ್ರೀಕ್ ಎಂಬ ... ಮಿ ಸೆನ್ ಸಿಪಾಯಿ ... ಒರ್ಮನಿಯವರು ... ಮೇತರವರೆಂದೂ ಇಬ್ಬರು ವ್ಯಕ್ತಿಗಳವರೆಂದೂ ...

ಲಾರ್ಡ್ ರೀಡಿಂಗ್‌ರವರ ವೈಸರಾಯಿ ಪದವಿಯನ್ನು ಬೇಗನೆ ಬಿಡುವರೆಂಬ ವರ್ತಮಾನವು ನಿಜವಲ್ಲವೆಂದು ಕೆಲವು ಪತ್ರಿಕೆಗಳು ಸೂಚಿಸುತ್ತವೆ

ಭೂಲೋಕದಲ್ಲಿ ಹೆಚ್ಚಾಗಿ ಸಿಗುತ್ತಿಗುಂಡಿಟರ ಮತ್ತು 11 ಕಿಲೋ ತೂಕವುಳ್ಳ ರತ್ನವೊಂದು ದಕ್ಷಿಣ ಆಫ್ರಿಕದ ಒಬ್ಬ ವ್ಯಾಪಾರಿಯ ಆಗರದ ಪೇರ ಬೇಗನೆ ಕೇಪ್ ಟೌನಿನಿಂದ ಇಂಡಿಯಾಕ್ಕೆ ಕಳುಹಿಸಲ್ಪಡುವುದಂತೆ ಅಮೇರಿಕಾ ಮತ್ತು ಯೂರೋಪಿನಿಂದ ಅದಕ್ಕೆ ಎಷ್ಟು ದೊಡ್ಡ ಬೆಲೆಯ ಆಧಾರ ಒಂದೂ ಬಂದನು ಅಲ್ಲಿಗೆ ಕಳುಹಿಸಲ್ಲವಂತೆ ಇಂತಹ ವಜ್ರವು ಭೂಲೋಕದಲ್ಲಿ ಬೇರೊಂದೂ ಇಲ್ಲವಂತೆ

ಪ್ರಶ್ನೋತ್ತರ ಗಳು ... ದಸು.

ಸಂತೆ.

(ಮಾರ್ನೇ ಸಂಚಿಕೆಯಿಂದ ಮುಂದರಿದುದು)

೩. ಜ್ಞಾನಕೃತವೂ, ಅಜ್ಞಾನಕೃತವೂ

ಇದು ಸತ್ಕರ್ಮವು, ಇದು ದುಷ್ಕರ್ಮವು ಎಂಬದನ್ನು ತಿಳಿದು ನಾವು ಆ ಕರ್ಮವನ್ನು ಮಾಡಿದರೆ ಅದರಿಂದ ನಮಗೆ ಪುಣ್ಯಪಾಪಗಳು ಉಂಟಾಗುವವೆಂದೂ, ತಿಳಿಯದೆ ಮಾಡಿದರೆ ಅದರಿಂದ ಪಾಪಪುಣ್ಯಗಳಿಲ್ಲವೆಂದೂ ಹೇಳುತ್ತಾರೆ ನಾವು ಕಳೆದುಕೊಂಡ ಒಂದು ರೂಪಾಯಿಯು ಹಸುಡು ಬಳಲುವ ಒಬ್ಬ ಮನುಷ್ಯನ ಕೈಗೆ ಸಿಕ್ಕಿ ಅವನು ಆ ರೂಪಾಯಿಯಿಂದ ಹೊಟ್ಟೆತುಂಬ ಊಟಮಾಡಿದರೆ ನಮಗೆ ಅನ್ನ

ಹತ್ತಿ ಮಲಗಿದ್ದಾಗ ನಮ್ಮ ಮೈಯ ಭಾರದಿಂದ ಒಂದೆರಡು ಸಣ್ಣ ಕ್ರಿಮಿಗಳು ಸತ್ತುಹೋದರೆ ಅದರಿಂದ ನಮಗೆ ಜೀವಹಿಂಸೆಯ ಪಾಪವು ಬರುವುದೇ? ಕರ್ಮದಲ್ಲಿ ಮನಸ್ಸು ತೊಡಗಿದ್ದರೆ ಮಾತ್ರ ಅಂದರೆ ನಾವು ತಿಳಿದು ಮಾಡಿದ್ದರೆ ಮಾತ್ರ ನಮಗೆ ಆ ಕರ್ಮಗಳ ಸಂಬಂಧವುಂಟಾಗುವದೆಂದೂ, ಹೀಗಿಲ್ಲದೆ ಅಜ್ಞಾನದಿಂದ ಮಾಡಿದ ಸತ್ಕರ್ಮಕ್ಕೆ ಪುಣ್ಯವೂ ಅಜ್ಞಾನದಿಂದ ಮಾಡಿದ ದುಷ್ಕರ್ಮಕ್ಕೆ ಪಾಪವೂ ಇಲ್ಲವೆಂದೂ ಕೆಲವರ ಅಭಿಪ್ರಾಯವು. ಇದೇ ಮೇರೆಗೆ ಒಬ್ಬರಿಗೆ ಪರೋಪಕಾರಮಾಡುವ ಆಗ್ರಹದಿಂದ ಮಾಡಿದ ಕರ್ಮಕ್ಕೆ ಪಾಪಪುಣ್ಯಗಳಿಲ್ಲವೆಂದು ಹೇಳುವರು.

ಆದರೆ ಸತ್ಕರ್ಮವನ್ನಾಗಲಿ ದುಷ್ಕರ್ಮವನ್ನಾಗಲಿ ತಿಳಿದು ಮಾಡದಿದ್ದರೂ ಅವು ಫಲಗಳನ್ನು ಕೊಡುವುದು ನಮ್ಮ ಅನುಭವಕ್ಕೆ ಬರುವದು. ಬೇನೆಬಿದ್ದ ಒಬ್ಬ ಹುಡುಗನಿಗೆ ನಾವು ಬರಿಯ ನೀರೆಂದು ಹೇಳಿ ಔಷಧಬೆರೆತ ನೀರನ್ನು ಕೊಟ್ಟೆವೆಂದು ತಿಳಿಯುವ. ಆ ಹುಡುಗನು ತಾನು ನೀರು ಕುಡಿದೆನೆಂದು ತಿಳಿದರೂ ಅಂದರೆ ಔಷಧವನ್ನು ತೆಗೆದುಕೊಂಡೆನೆಂದು ತಿಳಿಯದಿದ್ದರೂ ಅದರಿಂದ ಅವನ ಬೇನೆಯು ವಾಸಿಯಾಗಬಹುದು. ಬೆಂಕಿಯನ್ನು ನಾವು ತಿಳಿಯದೆ ಮುಟ್ಟಿದರೂ ಅದು ನಮ್ಮ ಮೈಯನ್ನು ಸುಡುವುದು. ಅಂದರೆ ಈ ಕರ್ಮವು ಒಳ್ಳೆಯದು ಇಲ್ಲವೆ ಕೆಟ್ಟದು ಎಂಬ ಜ್ಞಾನವಿಲ್ಲದಿದ್ದರೂ ಅದು ಫಲವನ್ನು ಕೊಟ್ಟೇ ತೀರುತ್ತದೆಯೆಂಬುದು ಈ ಉದಾಹರಣೆಗಳಿಂದ ತಿಳಿಯಬರುವುದು.

ಇದೇ ಮೇರೆಗೆ ಸತ್ಕರ್ಮವನ್ನಾಗಲಿ, ದುಷ್ಕರ್ಮವನ್ನಾಗಲಿ ಮಾಡುತ್ತ ಮಾಡುತ್ತ, ಯಾರಿಗೆ ಯಾವ ತರದ ಕರ್ಮವನ್ನು ಮಾಡುವುದು ಸ್ವಭಾವವಾಗಿ ಹೋಗಿರುತ್ತದೆಯೋ ಅಂಥವರಿಗೆ ತಾವು ಕರ್ಮವನ್ನು ಮಾಡುವಾಗ ಸತ್ಕರ್ಮವನ್ನು ಮಾಡುತ್ತೇವೆ ಇಲ್ಲವೆ ದುಷ್ಕರ್ಮವನ್ನು ಮಾಡುತ್ತೇವೆ ಎಂಬುದು ಲಕ್ಷ್ಯಕ್ಕೆ ಬರುವುದಿಲ್ಲ. ಒಬ್ಬನು ದಾರಿಯಲ್ಲಿ ಹೋಗಹೋಗುತ್ತ ಹಸಿದು ಬಳಲಿದ ಒಬ್ಬ ತಿರುಕನಿಗೆ ತನ್ನಲ್ಲಿದ್ದ ಒಂದು ರೊಟ್ಟಿಯ ತುಣುಕನ್ನು ಕೊಟ್ಟನು, ಕೆಳಗೆ ಬಿದ್ದ ಒಬ್ಬ ಮುದುಕನನ್ನೆಬ್ಬಿಸಿದನು, ದಣಿದು ಹೋಗುತ್ತಿದ್ದ ಒಬ್ಬ ದನಗಾಹಿಗೆ [illegible] ಹೇಳಿ ಬಡಿಸಿದನು; ದಾರಿಯಲ್ಲಿ ಬಿದ್ದ ಒಂದು ಮುಳ್ಳಿನ ಬೇಲಿಯನ್ನು ತೆಗೆದು ಬದಿಗೆ ಸರಿಸಿಟ್ಟನು. ಈ ಕೆಲಸಗಳನ್ನು ಮಾಡುವಾಗೆಲ್ಲ ತಾನು ಒಳ್ಳೆಯ ಕೆಲಸಗಳನ್ನು ಮಾಡುತ್ತೇನೆಂಬ ಭಾವನೆಯು ಅವನಿಗೆ ಜಾಗ್ರತವಾಗಿ ಇರಲಿಲ್ಲವೆಂದು ಅಂದರೆ ಇಂಥ ಕೆಲಸಗಳನ್ನು ಮಾಡುವುದು ಅವನ ಸ್ವಭಾವವಾಗಿದೆಯೆಂದು ಗ್ರಹಿಸುವ. ಇನ್ನೊಬ್ಬನು ದಾರಿಯಲ್ಲಿ ಹೋಗಹೋಗುತ್ತ ತಂಬಾಕು ಸೇದಿ ಬಂಡಿಯ ಬೋರೆಯ ಮೇಲೆ ಹೊಗೆಯು ಬಿಟ್ಟನು, ಬಂದಿಯ ಕಾಲಗಳಿಗೂ ಬಟ್ಟೆಗಳಿಗೂ ಸಿಡಿಯುವಂತೆ ಉಗುಳಿದನು, ಸೇದಿದ ಕೊರೆಚುಟ್ಟನ್ನು ಅಲ್ಲಿಯೇ ಒಣಹುಲ್ಲಿನಮೇಲೆ ಬಿಸಾಟಿದನು. ಮೊದಲಿನವನು ಕೊಟ್ಟ ರೊಟ್ಟಿಯ ತುಣುಕಿನಿಂದ ಹಸಿದ ತಿರುಕನು ತಿಂದು ತೃಪ್ತಿಹೊಂದಿದ್ದರಿಂದ ಆತನಿಗೆ ಸಮಾಧಾನವೆನಿಸಿತು. ಎರಡನೆಯವನು ತಂಬಾಕ ಸೇದಿ ಬಿಟ್ಟ ಹೊಗೆಯು ಒಬ್ಬನ ಗಂಟಲಲ್ಲಿ ಸೇರಿ ಅವನು ಕೆಮ್ಮತೊಡಗಿದ್ದರಿಂದ ಅವನಿಗೆ ಅಸಮಾಧಾನವಾಯಿತು. ಮೊದಲಿನವನು ಬಿದ್ದ ಮುದುಕನನ್ನೆಬ್ಬಿಸಿದ್ದರಿಂದ ಆ ಮುದುಕನಿಗೆ ಸಮಾಧಾನವಾಯಿತು. ಎರಡನೆಯವನ ಚುಟ್ಟದ ಬೆಂಕಿಯಿಂದ ಒಣಹುಲ್ಲು ಸುಡಲು ಆರಂಭಿಸಿದ್ದರಿಂದ ಊರಿಗೆ ಅಸಮಾಧಾನವಾಯಿತು.

ಮೇಲೆ ಹೇಳಿದ ಉದಾಹರಣೆಗಳಲ್ಲಿ ಒಬ್ಬನು ತಿಳಿಯದೆ ಸತ್ಕರ್ಮವನ್ನು ಮಾಡಿರುತ್ತಾನೆ; ಇನ್ನೊಬ್ಬನು ತಿಳಿಯದೆ ದುಷ್ಕರ್ಮವನ್ನು ಮಾಡಿರುತ್ತಾನೆ. ಇದರ ಇವರ ಕರ್ಮಗಳಿಂದ ಪುಣ್ಯಪಾಪಗಳು ಉಂಟಾಗುವವೋ ಇಲ್ಲವೋ? ಉಂಟಾಗಲೇಬೇಕು. ಇದಲ್ಲದೆ ಈ ಕೆಲಸಗಳನ್ನು ಮಾಡಿದವರು ತಮ್ಮ ಕೆಲಸಗಳ ಪರಿಣಾಮವನ್ನು ನೋಡಿದಾಗ ಒಂದನೆಯವನು ತಾನು ಕೊಟ್ಟ ರೊಟ್ಟಿಯನ್ನು ತಿಂದ ಭಿಕ್ಷುಕನ ತೃಪ್ತಿಯ ಮುಖಮುದ್ರೆಯನ್ನು ನೋಡಿದಾಗ, ಮೊದಲಿನವನ ಮನಸ್ಸಿಗೆ ಸಮಾಧಾನವೆನಿಸಿತು. ಹೊಗೆ ಗಂಟಲಲ್ಲಿ ಸೇರಿ ಪೀಡಿತನಾದ ಮನುಷ್ಯನನ್ನು ನೋಡಿ ಎರಡನೆಯವನ ಮನಸ್ಸಿಗೆ ಅಸಮಾಧಾನವಾಯಿತು. ಒಬ್ಬನು ನೀರಿಗಾಗಿ ತಂಬಿಗೆಗೆ ಹಗ್ಗವನ್ನು ಕಟ್ಟಿ ಬಾವಿಯಲ್ಲಿ ಇಳಿಯಬಿಟ್ಟನು; [illegible] ದ ಹಾಗ ಆ ತಂಬಿಗೆಗುಂಟ ಆ ಬಾವಿಯಲ್ಲಿ ಬಿದ್ದು ಸಾವಿನ ಹಾದಿ ಹಿಡಿದ ಒಂದು ಚೇಳು ಮೇಲಕ್ಕೆ ಬಂದಿತು. ಅಲ್ಲಿ ಆತನು ತಿಳಿಯದೆ ಆ ಚೇಳನ್ನು ಮೇಲೆ ತೆಗೆದನು. ಅವನ ಉದ್ದೇಶವು ಚೇಳನ್ನು ಮೇಲೆ ತೆಗೆಯಬೇಕೆಂಬುದಿರಲಿಲ್ಲ. ಮೇಲೆ ಬಂದ ಚೇಳು ಆತನನ್ನು ಕೃತಜ್ಞತಾದೃಷ್ಟಿಯಿಂದ ನೋಡಿ ತನ್ನ ದಾರಿಯ ಹಿಡಿದು ಹೋಗಲು ಅವನ ಮನಸ್ಸಿಗೆ ಬಹಳ ಸಮಾಧಾನವಾಯಿತು.

ಆದದರಿಂದ ನಮ್ಮಿಂದಾಗುವ ಕರ್ಮಗಳಿಗೆ ಫಲವು ಕಟ್ಟಿದ್ದು: ಸತ್ಕರ್ಮಕ್ಕೆ ಪುಣ್ಯವೂ, ದುಷ್ಕರ್ಮಕ್ಕೆ ಪಾಪವೂ ಉಂಟಾಗುತ್ತಿರಲೇಬೇಕು. ನಾವು ಆ ಕರ್ಮವನ್ನು ಜ್ಞಾನದಿಂದಲೇ ಮಾಡಲಿ, ಅಜ್ಞಾನದಿಂದಲೇ ಮಾಡಲಿ ಕರ್ಮವು ಫಲವನ್ನು ಕೊಟ್ಟೇ ಕೊಡುತ್ತದೆ. ಇದರಿಂದಲೇ ನಾವು [illegible] ಕುಟ್ಟುವಾಗ ನಡೆದಾಡುವಾಗ ತಿಳಿಯದೆ ಕ್ರಿಮಿಕೀಟಗಳು ಸಾಯುವದರಿಂದ ತಮಗೆ ಪಾಪವುಂಟಾಗುವದೆಂದು ಕೆಲವರು ದಿನಾಲು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವರು. ರಾತ್ರಿಯಲ್ಲಿ ಉಂಡರೆ ಕಾಣದೆ ಕ್ರಿಮಿಕೀಟಕಗಳು ನಾಶವಾದಾವೆಂದು ಅಂಜಿ ಕೆಲವರು ಹೊತ್ತಿರುವಾಗಲೇ ಊಟಮಾಡುವರು. ಕೆಲವರು ತಾವು ಕುಳಿತುಕೊಳ್ಳುವಾಗ ಆ ಸ್ಥಳದಲ್ಲಿರುವ ಕ್ರಿಮಿಕೀಟಕಗಳು ನಾಶವಾದಾವೆಂದು ಒಗೆದು ನವಿಲುಗರಿಯ ಬೀಸಣಿಗೆಯಿಂದ ಆ ಸ್ಥಳವನ್ನು ಗುಡಿಸಿ ಕುಳಿತುಕೊಳ್ಳುವರು. ಪಾಪಪುಣ್ಯಗಳ ವಿಚಾರವು ಬಹು ಸೂಕ್ಷ್ಮವಾಗಿರುವದು.

೩ ಮಹಾ ಶಿವರಾತ್ರಿಯೂ ಅದರ ಮಹಾತ್ಮ್ಯವೂ.

ಲೋಕವ್ಯವಹಾರದಲ್ಲಿ ನಾವು ನಿತ್ಯದ ಮಾಡುವ ಕೆಲಸಗಳಲ್ಲಿ ಕೆಲವು ಪುಣ್ಯದವೂ ಕೆಲವು ಪಾಪದವೂ ಇರುವವು. ದೇವರ ವಿಷಯವಾಗಿ ನಾವು ಮಾಡುವ ಕೆಲಸಗಳೆಲ್ಲ ಪುಣ್ಯಕರವಾಗಿಯೇ ಇರುವವು. ಅವುಗಳಲ್ಲಿ ಪಾಪದಲೇಶವೂ ಇರುವದಿಲ್ಲ. ಅವಕ್ಕೆ ಪಾಪದ ಸಂಪರ್ಕವೇ ಇರುವದಿಲ್ಲ. ದೇವರಿಗೆ ನಾವು ಒಮ್ಮೆ ಕೈಮುಗಿದರೂ ಸಾಕು. ಇಷ್ಟೇ ಕೆಲಸವು ಪುಣ್ಯವನ್ನೇ ಉಂಟುಮಾಡುತ್ತದೆ. ಯಾಕಂದರೆ ಈ ಕರ್ಮಗಳಿಂದ ಯಾವಾಗಲೂ ಮನುಷ್ಯನ ಮನಸ್ಸು ಪ್ರಸನ್ನವಾಗುತ್ತದೆ. ಯಾವಾಗಲೂ ಮನುಷ್ಯನು ಈ ಕರ್ಮಗಳಿಂದ ಉಚ್ಚಸ್ಥಿತಿಯನ್ನೇ ಹೊಂದುತ್ತಾನೆ. ಆದದರಿಂದ ಜಗತ್ತಿನ ಜನ್ಮ ಸ್ಥಿತಿ ಲಯಗಳಿಗೆ ಕಾರಣನಾದ ಪರಮೇಶ್ವರನನ್ನು ನಾವು ಎಷ್ಟು ಬಗೆಯಿಂದ ಪೂಜಿಸಿದರೂ ಸಾಲದು. ಎಷ್ಟು ಕಾಲ ಆರಾಧಿಸಿದರೂ ತೀರದು. ಆದರೆ ಮನುಷ್ಯನು ಇತರ ಸಾಂಸಾರಿಕ ಕರ್ಮಗಳನ್ನು ಮಾಡಬೇಕಾದದರಿಂದ ಕೆಲಕೆಲವು ದಿವಸಗಳಲ್ಲಿ ತನ್ನನ್ನು ವಿಶೇಷವಾಗಿ ಆರಾಧಿಸೆಂದು ಪರಮೇಶ್ವರನು ಬೋಧಿಸಿದನು. ಆ ದಿವಸಗಳಲ್ಲಿ ಆತನನ್ನು ವಿಶೇಷವಾದ ವಿಧಾನದಿಂದ ಆರಾಧಿಸುವದು ಆರಂಭವಾಯಿತು. ಇಂಥ ಕೆಲಕೆಲವು ದಿವಸಗಳು ಈ ರೀತಿಯಾಗಿ ಶ್ರೇಷ್ಠವೆನಿಸಿಕೊಂಡವು. ಮಹಾ ಶಿವರಾತ್ರಿಯು ಇಂಥ ಶ್ರೇಷ್ಠ ದಿವಸಗಳೊಳ್ಳೊಂದಾಗಿರುವದು.

ಒಂದಾನೊಂದು ದಿವಸ ಜಗಜ್ಜನನಿಯಾದ ಪಾರ್ವತಿಯು ಪಂಚವಕ್ತ್ರನೂ ತ್ರಿನೇತ್ರನೂ, ಫಣೀಂದ್ರಭೂಷಿತಗಾತ್ರನೂ ಸರ್ವಭೂಷಣನೂ ಕೋಟಿಸೂರ್ಯಪ್ರಕಾಶನೂ ಆದ ಶಂಕರನು [illegible] ಒಳ್ಳೆ [illegible] ಬಳಿಕ ಶಾಂತನಾಗಿ ಕುಳಿತಿರಲು ಜಗಜ್ಜನನಿಯಾದ ಪಾರ್ವತೀದೇವಿಯು ಆ ಶಿವನನ್ನು ಕುರಿತು, ಜಗತ್ತಿನ ಕಲ್ಯಾಣಕ್ಕಾಗಿ ದೇವಾ! ನಿನ್ನ ಆರಾಧನೆಯ ಪ್ರಕಾರಗಳನ್ನೂ, ವಿಶಿಷ್ಟ ದಿವಸಗಳನ್ನೂ ನೀನು ಎಷ್ಟೋ ಹೇಳಿರುವೆ; ಅವುಗಳಲ್ಲಿ ನಿನಗೆ ಬಹಳ ಪ್ರಿಯವಾದದ್ದು ಯಾವದು? ಎಂದು ಪ್ರಶ್ನೆಮಾಡಿದಳು. ಆಗ ಶಂಕರನು ತನಗೆ ಕೃಷ್ಣಪಕ್ಷದ ಚತುರ್ದಶೀ ತಿಥಿಯು ಪ್ರಿಯವಾದದ್ದೆಂದು ಹೇಳಿದನು. ಮತ್ತು ಆ ದಿವಸ ಅಭಿಷೇಕ ಪ್ರದೋಷಕಾಲ ಪೂಜೆ, ಬಿಲ್ವದಳಾರ್ಪಣ, ಜಾಗರಣ ಭಜನ ಮೊದಲಾದ ಪೂಜಾವಿಧಿಗಳು ತನಗೆ ಪ್ರಿಯವಾದವುಗಳೆಂದು ಹೇಳಿದನು. ಅದರಿಂದ ಪ್ರತಿ ತಿಂಗಳು ಕೃಷ್ಣ ಚತುರ್ದಶಿಯು ಮಾಸ ಶಿವರಾತ್ರಿಯೆಂದು ಹೇಳಲ್ಪಡುವುದು. ಮಾಘ ಕೃಷ್ಣ ಚತುರ್ದಶಿಯು ಮಹಾ ಶಿವರಾತ್ರಿಯೆಂದು ಹೇಳಲ್ಪಡುವದು. ಇದು [illegible] ಸ್ಮರಣ ಮಾಡಬೇಕು; ತ್ರಿಗುಣಗಳಿಂದ ಬಿಟ್ಟಿರುವನೆಂದು ತಿಳಿಯಲ್ಪಡುತ್ತದೆ. ಬಹು ಪ್ರಾಚೀನ ಕಾಲದಿಂದ ಅನೇಕ ವಿಧವಾಗಿ ನಡೆದುಬಂದಿರುವ ಎಲ್ಲ ಜಾತಿಗಳ ಹಿಂದೂಜನರು ಈ ದಿವಸ ಬಹು ಭಕ್ತಿಭಾವದಿಂದ ಪರಮೇಶ್ವರನನ್ನು ಆರಾಧಿಸುತ್ತ ಬಂದಿರುವರು. ಈ ದಿವಸ ಎಲ್ಲೆಲ್ಲಿ ನೋಡಿದರೂ ಅಭಿಷೇಕಪ್ರಿಯನಾದ ಆ ಗಂಗಾಧರನಿಗೆ ಸಂತತ ಧಾರೆಯಾಗಿ ಅಭಿಷೇಕವು ನಡೆಯುವದು. ವನಸ್ಪತಿ ಪ್ರೇಮಿಯಾದ ಆ ಮಹೇಶ್ವರನ ತಲೆಯಮೇಲೆ ಬಿಲ್ವದಳಗಳ ರಾಶಿ [illegible] ಜನರು ಶಿವಮಂದಿರಗಳಿಗೆ ಹೋಗಿ ಭಜನವನ್ನು ಮಾಡುವರು. ಜಗತ್ತಿಗೆಲ್ಲ ಆಧಾರವಾದ ಆ ಪರಮಾತ್ಮನ [illegible] ಸರ್ವಪ್ರಾಣಿಗಳೂ [illegible] ಲೋಕನಾಗಿರುವ ಆ ಲೋಕರಕ್ಷಕನನ್ನು [illegible] ಸಂತೋಷಪಡಿಸುವರು; ಎಲ್ಲೆಲ್ಲಿ ನೋಡಿದರೂ 'ಓಂ ನಮಃ ಶಿವಾಯ' ಎಂಬ ಪಂಚಾಕ್ಷರಿ ಮಂತ್ರದಿಂದ ಆಕಾಶವೂ ದಿಕ್ಕುಗಳೂ ತುಂಬಿಹೋಗಿ ಸಘೋಷವಾಗಿ ಪ್ರತಿಧ್ವನಿಗೊಡುತ್ತಿರುವದು!

ಒಮ್ಮೆ [illegible] ಪಾರ್ವತಿಯು ಶಂಕರನನ್ನು ಕುರಿತು—ದೇವಾ! ಶಿವರಾತ್ರಿಯಲ್ಲಿ ನಿನ್ನ ಪೂಜೆಯು ಅಜ್ಞಾನದಿಂದ ಘಟಿಸಿದರೂ ಕೂಡ ಫಲವಾಗುವುದು, ಭಕ್ತಿಪೂರ್ವಕವಾಗಿ ಪೂಜೆಮಾಡಿದರಂತೂ ಕೇಳುವದೇನು! ಶಿವರಾತ್ರಿಯಲ್ಲಿ ನಿನ್ನ ಪೂಜೆಯು ಘಟಿಸಿದವನಿಗೆ ಯಮನ ಅಂಜಿಕೆಯು ತಪ್ಪುವದು; ಯಜ್ಞ, ದಾನ, ತಪ ಮೊದಲಾದವುಗಳಿಗಿಂತ ಇದು ಹೆಚ್ಚಿನದು. ಈ ಮೇರೆಗೆ ಶಿವರಾತ್ರಿಯ ಮಹಾತ್ಮ್ಯವನ್ನು ನಿರೂಪಿಸುತ್ತಿರಲು ಪಾರ್ವತಿಯು ನಡುವೆ ಬಾಯಿಹಾಕಿ—ನಾಥಾ, ಆ ದಿವಸ ಅಜ್ಞಾನದಿಂದ ಪೂಜೆ ಘಟಿಸಿದರೂ ಫಲವಾಗುವದೆಂದು ನಿರೂಪಿಸಿದಿರಿ; ಇದು ಹೇಗೆ? ಎಂದಾದರೂ ಹೀಗೆ ಆಗಿರುವದೇ? ದಯಮಾಡಿ ಹೇಳಬೇಕೆನಲು, ಪರಮೇಶ್ವರನು ಅಜ್ಞಾನದಿಂದ ಪೂಜೆ ಘಟಿಸಿದವನಿಗೆ ಶಿವಲೋಕವಾಸವು ದೊರೆತ ಒಂದು ಕಥೆಯನ್ನು ಹೇಳಲಾರಂಭಿಸಿದನು:—

೪. ಮೃಗಾಂತಕನೆಂಬ ಬೇಡನು.

ಒಂದಾನೊಂದು ದೊಡ್ಡ ಅಡವಿಯು ಸೇರಿರುವ ಪ್ರದೇಶದಲ್ಲಿ ಒಬ್ಬ ಬೇಡನು ವಾಸಮಾಡಿಕೊಂಡಿದ್ದನು. ಆತನಿಗೆ ಮೃಗಾಂತಕನೆಂದು ಹೆಸರು. ಮೈಮೇಲಿನ ಕೂದಲುಗಳು [illegible] ದವನ್ನು ಸೊಂಟಕ್ಕೆ ಆತನು ಕಟ್ಟಿಕೊಂಡಿದ್ದನು. ಕಂಡದಂತೆ ಕೆಂಪಾದ ಗುಳ್ಳೆಗಣ್ಣುಗಳೂ, ಬೆಳೆದ ಬಿರುಸಾದ ಕೂದಲುಗಳೂ, ಕೋರೆಯಾಗಿರುವ ಹಲ್ಲುಗಳೂ ಎತ್ತರವಾದ ನಿಲುವಿಕೆಯೂ ಇದ್ದವು. [illegible] ಇದ್ದನು. ಕೈಯಲ್ಲಿ ಬಿಲ್ಲುಗಳನ್ನು ಹಿಡಿದುಕೊಂಡು ಅಡವಿಯ ಸೇರಿದ ಕೂಡಲೆ ಪಶುಪಕ್ಷಿಗಳ ಕೈಕಾಲೇ ನಡುಗುವವು. ಮೃಗಾಂತಕನು ಹೆಸರಿಗೆ ತಕ್ಕಂತೆ ಮೃಗಗಳಿಗೆ ಅಂತಕಪ್ರಾಯನೇ ಆಗಿದ್ದನು.

ಆತನಿಗೆ ಬೇಟೆಯಾಡುವದೊಂದೇ ಅಲ್ಲದೆ ಬೇರೆ ಕೆಲವು ವ್ಯಸನಗಳೂ ಅಂಟಿಕೊಂಡಿದ್ದವು. ಆದುದರಿಂದ ಅವನಿಗೆ ಯಾವಾಗಲೂ ದುಡ್ಡಿನ ಕೊರತೆ ತಪ್ಪುತ್ತಿದ್ದಿಲ್ಲ. ಮನೆಯಲ್ಲಿ ಕಾಳುಕಡಿಗಳಿಲ್ಲ, ಪಾತ್ರೆಪಗಡಗಳಿಲ್ಲ, ಹೀಗೆ ತಾಬೇ[illegible] ಹೀಗೆ ಕಷ್ಟಜೀವನ. ಈ ತರದ ಸ್ಥಿತಿಯು ಅವನಿಗಿತ್ತು. ಮನೆಯಲ್ಲಿ ಹೆಂಡತಿ ಐದಾರು ಮಕ್ಕಳು. ಯಾವಾಗಲೂ ಗೋಳಾಡುತ್ತಿದ್ದರು. ಆತನು ಬೇಟೆ ಬ್ರಹ್ಮೇತಿ ಜೊತೆ, ಎಂಬಂತೆ ಜೂಜಿನ ವ್ಯಸನದಿಂದ ಎತ್ತಿದಲ್ಲಿ ಸಾಲವು ಇತ್ತು. ಮನೆಯಲ್ಲಿದ್ದರೆ ಸಾಲಗಾರರ ಕಾಟವು ತಪ್ಪುತ್ತಿದ್ದಿಲ್ಲ. ಅವನಿಗೆ ಹೊರಗೆ ಬೇಟೆಯ ಆಟ ಮನೆಗೆ ಬಂದರೆ ಜೂಜಿನ ಆಟ, ಎಂಥ ವ್ಯಸನಿಯ ಬಾಳ್ವೆಯು ಇದೊಂದು ಬಾಳ್ವೆಯೋ!!

ಎಂದಿನಂತೆ ಬಂದ ದಿವಸ ಆತನು ಬಿಲ್ಲುಬಾಣಗಳನ್ನು ಸಜ್ಜುಮಾಡಿಕೊಂಡು [illegible] ಹೊರಟನು. ಮನೆಯಲ್ಲಿ [illegible] ಬೆಳಗಾಗುತ್ತಲೇ ಹೊರಡಲೇಬೇಕಾಗಿತ್ತು.

ಆ ದಿನ ಮಹಾ ಶಿವರಾತ್ರಿಯು [illegible] ಅಲ್ಲಿ ಒಂದು ಪ್ರಸಿದ್ಧ ಶಿವಾಲಯ [illegible] ಆ ಶಿವಾಲಯದ ಸುತ್ತಲು ಈ ದಿವಸ [illegible] ಜಾತ್ರೆ ನೆರೆದಿತ್ತು. ದೇವಾಲಯದಲ್ಲಿ [illegible] ಮಂತ್ರಪಠನ [illegible] ಜಾತ್ರೆಯಲ್ಲಿ ಜೂಜುಗಾರರು [illegible] ಅಲ್ಲಿ ನಡೆದ ಜೂಜು ನೋಡುತ್ತಿದ್ದರು; ಮೃಗಾಂತಕನ [illegible] ದೇವಾಲಯದ ಬಳಿಯಲ್ಲಿರುವ ದಾರಿಯಿಂದ ಅಡವಿಗೆ ಹೊರಟ ಮೃಗಾಂತಕನು ಅವರ ಕಣ್ಣಿಗೆ ಬಿದ್ದನು. ಮೃಗಾಂತಕನು ತಮಗೆ ಸಾಲವನ್ನು ಕೊಡಬೇಕಾದದರಿಂದ ಅವರು ಆತನನ್ನು ನೋಡಿದೊಡನೆ [illegible] ಹಣವನ್ನಾದರೂ ಕೊಡು, ಇಲ್ಲವೆ ಆಟಕ್ಕಾದರೂ ಬಾ, ಎಂದು ಆತನನ್ನು ಬಲಾತ್ಕಾರದಿಂದ ಕರೆದೊಯ್ದರು. ಗುಡಿಯ ಹೊರಗಿನಲ್ಲಿ ಆಟವು ಆರಂಭವಾಯಿತು. ಮೃಗಾಂತಕನಿಗೆ ಮಧ್ಯಾಹ್ನಕ್ಕೆ ಗತಿಯಿಲ್ಲವೆಂಬುದೊಂದು ಚಿಂತೆ; ಆಟಕ್ಕೆ ಹಣವಿಲ್ಲವೆಂಬುದೊಂದು ಚಿಂತೆ; ಹೀಗಾಗಿ ಆಟದ ಕಡೆಗೆ ಮನಸ್ಸಾಗದೆ ಹಾಗೆಯೇ ಕುಳಿತಿರಲು, ದೇವಾಲಯದೊಳಗಿನ ಎಡೆಬಿಡದ ಶಿವನಾಮೋಚ್ಚಾರವು ಅವನ ಕಿವಿಗೆ ಬಿತ್ತು. [illegible] ಹೊತ್ತಿನ ಬಳಿಕ ಮೃಗಾಂತಕನು ಹಾಗೂ ಹೀಗೂ ತನ್ನ ಸಂಗಡಿಗರ ಅಪ್ಪಣೆಪಡೆದು ಹೊರಟನು. ಆಗ ಹೊತ್ತು ಏರಿತ್ತು; ಬೇಗನೆ ಬೇಟೆಗಾಗಿ ಅಡವಿಗೆ ಹೋಗುವುದು ಅವಶ್ಯವಾದದರಿಂದ ನೆಟ್ಟಗೆ ಅಡವಿಯ ಹಾದಿಯನ್ನು ಹಿಡಿದನು. ದೇವಾಲಯದೊಳಗೆ ಹೋಗುವಾಗಲೂ, ತಿರುಗಿ ಹೊರಡುವಾಗಲೂ ಆತನಿಗೆ ಶಿವಲಿಂಗದರ್ಶನವು ತಾನಾಗಿಯೇ ಆಯಿತು.

ಕತ್ತಲೆಯಾಗುವದರೊಳಗೆ ಬೇಟೆಯು ದೊರಕಿಸಬೇಕೆಂದು ಆ ಬೇಡನು ಗೊಂಡಾರಣ್ಯವನ್ನು ಸೇರಿ ಮೃಗಗಳ ಸುಳಿವನ್ನೂ ಹೆಜ್ಜೆಯ ಗುರುತುಗಳನ್ನೂ ಅತ್ತಿತ್ತ ನೋಡುತ್ತ ದೇಶವನ್ನು ತಿರುಗಿದನು. ಬಿಲ್ಲನ್ನು ಹೂಡಿಕೊಂಡು ಕುಳಿತನು. ಏನಾದರೂ ಈ ದಿವಸ ಒಂದು ಬೇಟೆಯೂ ಎದುರಿಗೆ ಬರಲೊಲ್ಲದು. ಇತ್ತ ಸೂರ್ಯನು ಅಸ್ತಾಚಲವನ್ನೇರಿದನು. ಕ್ರಮವಾಗಿ ಮಬ್ಬುಗತ್ತಲೆಯಾಯಿತು. ಮೃಗಗಳ ಸುಳಿವೇ ಇಲ್ಲ. ಕೊನೆಗೆ ಮೃಗಾಂತಕನು ಮೃಗಗಳು ನೀರಿಗೆ ಬರುವ ವೇಳೆಯಾಗಿರುವದರಿಂದ ಸಮೀಪದಲ್ಲಿರುವ ಸರೋವರದ ದಂಡೆಗೆ ಹೋಗಿ ಕುಳಿತುಕೊಂಡರೆ ಕೆಲವಾದರೂ ಸಿಗುವವೆಂದು ಆ ಸರೋವರದ ಹತ್ತರ ಬಂದನು. ಅದರ ದಂಡೆಗೆ ಒಂದು ಕಡೆಯಲ್ಲಿ ಅತಿಶಯವಾಗಿ ದಟ್ಟವಾದ ಮೆಳೆಯು ಹಬ್ಬಿತ್ತು. ಗಿಡಬಳ್ಳಿಗಳು ಇಡಿಕಿರಿದು ಅದು ಒಂದು ಗವಿಯಾಗಿತ್ತು. ಆ ಮೆಳೆಯೊಳಗೆ ಕುಳಿತುಕೊಂಡರೆ ತಾನು ಮರೆಯಾಗುವದರಿಂದ ನೀರಿಗೆ ಬರುವ ಮೃಗಗಳನ್ನು ಸಹಜವಾಗಿ ಹೊಡೆಯಬಹುದೆಂದು ಅಲ್ಲಿಗೆ ನಡೆದನು.

ಆ ಮೆಳೆಯೊಳಗೆ ಒಂದು ಸ್ವಯಂಭು ಶಿವಲಿಂಗವಿತ್ತು. ಅದರ ಬಳಿಯಲ್ಲಿಯೇ ಒಂದು ದೊಡ್ಡ ಬಿಲ್ವವೃಕ್ಷವು ಆ ಮೆಳೆಯೊಳಗೆಲ್ಲ ತನ್ನ ಶಾಖೋಪಶಾಖೆಗಳನ್ನು ಚಾಚಿತ್ತು. ಆ ಮರದ ಸುತ್ತಲು ಇನ್ನೂ ಹಲವು ಗಿಡಬಳ್ಳಿಗಳು ಹಬ್ಬಿದ್ದವು. ಇಂಥ ಭಯಂಕರವಾದ ಮೆಳೆಯೊಳಗೆ ಸೇರಿ ಆ ಬೇಡರವನು ತನಗೆ ನಿಂತುಕೊಳ್ಳುವದಕ್ಕೆ ಸ್ವಲ್ಪ ಸ್ಥಳವನ್ನು ಮಾಡಿಕೊಂಡು ಮೃಗಗಳು ಕಾಣಿಸುವದಕ್ಕೂ ಬಾಣವನ್ನು ಬಿತ್ತರಿಸಲಿಕ್ಕೂ ಅನುಕೂಲವಾಗುವಂತೆ ಒಂದು ಕಿಂಡಿಯನ್ನು

ಮಾಡಿಕೊಳ್ಳುವದಕ್ಕಾಗಿ ಆ ಬಿಲ್ವವೃಕ್ಷದ ಎಲೆಗಳನ್ನು ಹರಿದು ಪಕ್ಕದಲ್ಲಿ ಚಲ್ಲತೊಡಗಿದನು. ಅವನು ಹರಿದೊಗಿದ ಬಿಲ್ವದಳಗಳು ನೆಟ್ಟಗೆ ಆ ಸ್ತಂಭದಿಂದ ಮೇಲೆ ಹೋಗಿ ಬೀಳುತ್ತಿದ್ದವು. ಈ ಮೇರೆಗೆ ಶಿವರಾತ್ರಿಯ ದಿವಸ ಪ್ರದೋಷಕಾಲದಲ್ಲಿ ಶಿವಪೂಜೆಯು ಆ ಬೇಡರವನ ಕೈಯಿಂದ ತಿಳಿಯದೆ ಆಗಿಹೋಯಿತು.

ಪಶುಗಳ ಘ್ರಾಣೇಂದ್ರಿಯವು ಬಲು ತೀಕ್ಷ್ಣವಿರುವದು. ಅವುಗಳಿಗೆ ಹುಲಿಯವಾಸನೆಯು ಬಹಳ ದೂರದಿಂದಲೇ ಹತ್ತುವದು. ಈ ಬೇಡನ ವಾಸನೆಯು ಹತ್ತಿದದರಿಂದ ಆ ಜಲಾಶಯಕ್ಕೆ ಮೃಗಗಳೇ ಬಾರದಾಗಿದ್ದವು. ಈ ಬೇಡನು ಬೆಳಿಗ್ಗೆಯೇ ಮನೆಯಿಂದ ಹೊರಬಿದ್ದದರಿಂದ ಊಟವಾಗಿರಲಿಲ್ಲ. ದೇವಾಲಯದಲ್ಲಿ ಸಿಕ್ಕಿ ಬಿದ್ದದರಿಂದ ಮಧ್ಯಾಹ್ನಕ್ಕೂ ಊಟವಿಲ್ಲ. ರಾತ್ರಿಯಾಗುತ್ತ ಬಂದಿತು; ಹೊಟ್ಟೆಗಿಲ್ಲದ್ದರಿಂದಲೂ ಬೇಟೆಯು ಸಿಗದ್ದರಿಂದಲೂ ತಳಮಳಿಸುತ್ತಿದ್ದನು. ಬೆಳಗಾಗುವದರೊಳಗೆ ಒಂದು ಚಿಗರೆಯನ್ನು ಸಹಜವಾಗಿ ಅಡಗಿಸುವ ಹೊಟ್ಟೆಯಲ್ಲಿ ಈ ದಿವಸ ಅಡಿಕೆಯು ಬಿಟ್ಟದಷ್ಟು ತತ್ತಿಯೂ ಬಿದ್ದಿರಲಿಲ್ಲ. ನಾಲ್ಕೈದು ಗಳಿಗೆ ರಾತ್ರಿಯಾಯಿತು. ಮೃಗಾಂತಕನಿಗೆ ಚಿಂತೆಯಾಗಹತ್ತಿತು. ಶಿವಶಿವಾ! ಈ ದಿವಸ ಬೇಟೆಯು ಸಿಗಬಾರದೆಂದು ದೇವರ ಸಂಕೇತವಿರಬಹುದೇ!! ಎಂದು ಕಳವಳಪಡಹತ್ತಿದನು. ಈ ಮೇರೆಗೆ ಶಿವನಾಮೋಚ್ಚಾರವೂ ಸಹಜವಾಗಿ ಆತನ ಬಾಯಿಂದ ಆಯಿತು.

ಇಷ್ಟರಲ್ಲಿ ಒಂದು ಹರಯದ ಹೆಣ್ಣು ಚಿಗರೆಯು ಆ ಸರೋವರಕ್ಕೆ ನೀರು ಕುಡಿಯಲಿಕ್ಕಾಗಿ ಬಂದಿತು. ಬಿದರುಗಣ್ಣಿನಿಂದ ಸುತ್ತಲು ನೋಡುತ್ತ ಮೆಲ್ಲಮೆಲ್ಲನೆ ಬರುತ್ತಿರುವ ಆ ಚಿಗರೆಯನ್ನು ಕಂಡು ಮೃಗಾಂತಕನು ಬಾಣದ ಅಲಗನ್ನು ಒಳಗೆ ಒಂದ ಕೂಡಲೆ ಹೂಡಹಬೇಕೆಂದು ಸಿದ್ಧನಾಗಿದ್ದನು. ಅಡ್ಡಬರುವ ಗಿಡದೆಲೆಗಳನ್ನು ಹರಿದು ಕಿಂಡಿಯನ್ನು ಸರಿಪಡಿಸಿಕೊಂಡನು. ಮತ್ತೆ ಈ ಬೇಡನು ಚಲ್ಲಿದ ಬಿಲ್ವದಳಗಳು ಶಿವಲಿಂಗದ ಮೇಲೆ ಬಿದ್ದವು. ಯಾಮಪೂಜೆ ಘಟಿಸಿತು.

(ಮುಂದುವರಿಯುವದು.)

(ಕರುಣಾಸಾಗರಪೊರೆಯೊ—ಎಂಬಂತೆ)

ಕೊಡಗು :—

ಗುಣತಯಿಾಶ್ವರ | ಮನತಾಲ್ ನಾನೆನಪಿತಂಕ ಗಾ ||ಪ|| ಮನೆಸೀಬಗತಾಲ್ ಮುಹಕಡನೀ | ಪಣತ್‌ಲ್ ಅದಿದೊರೆನೀ | ಜನಕ್‌ಲೊಮುಹಶಿವನೀ ||ಅ|ಪ|| ನೆತ್ತಿಕಣ್ಣುನೆಲಚೆನೀರನೀರಗ್ನಿನೀನಲ್ಲತ್ಕೆಕೀಳ್ || ವುತ್ತ್‌ನಡ್ ಪಳಭೂಸೂತ್, ಪಡತ್‌ಲ್ ನೀಮುತ್ತ್‌ಕಾಣಕನೀಕಾತ್ ||೧|| ದುಂಬಕೇಳ್ ನೆನಪನೇ ಹರದಾಸಳ್ ಗುಣಾಳ್ಕೆ || ನಂಜಕಯಿಾಗ್‌ಲೊ ನೀಅಂಬನಂಬಿನೊ ನೀಯಿಾಬಬಂಬಕುನೀಶಂಭು ||೨||

(ದೇವನೀಪಾಲಿಸೊ—ಎಂಬಂತೆ).

ಪರಮೇಶಬೋಡುವಿ ||ಪ|| ಹೂರನೆಭವಹರಧೀರನೆಹರನೆ ||ಅ|ಪ|| ಗಿರಿಸುತೆನರಪತಿ | ಸುರನರಭೂಪತಿ || ಕ್ರೂರಾಕ್ಷಶಿಕ್ಷ | ಶರಣಾಗತರಕ್ಷ ||೧|| ಗಣಪತಿಪ್ರಿಯನೆ | ನೆನಪಿನೊದೇವನೆ || ಫಣಿಭೂಷಣನೆ | ಗುಣಾವಾಶೀಶನೆ ||೨|| ಈಶಮಹೇಶ್ವರ | ದೋಷನಾಶಕಹರ || ಆನೆಶ್‌ಕುದಿಪರ | ದಾಸರರಕ್ಷಕ ||೩||

ಹರದಾಸ,—ಅಪ್ಪಚ್ಚಕವಿ.

ಕೊಡಗು ಜಮಿಾನ್ದಾರರ ಸಂಘ

(ಪ್ರಚಾರಕ ಕಾರ್ಯದರ್ಶಿಯವರಿಂದ.)

No. 2.

ಕಳೆದ ಸಂಚಿಕೆಯಲ್ಲಿ ನಮ್ಮ ಈಗಿನ ಸ್ಥಿತಿಗೆ ಯಾರು ಜವಾಬ್ದಾರರೆಂಬ ವಿಷಯವನ್ನು ವಿವರಿಸಿದ್ದಾಯಿತು. ಹಾಗಾದರೆ ನಮ್ಮ ಈಗಿನ ಸ್ಥಿತಿಗಳು ಹ್ಯಾಗೆ ಹೊಂದಿದವೆಂಬದನ್ನು ನೋಡುವ. ಒಟ್ಟಾರೆ ನಮ್ಮ ದೇಶವು, ನಮ್ಮ ನಡತೆಯಿಂದಲೇ ಈಗ ಅನ್ಯ ಸರಕಾರದವರ ಅಧೀನದಲ್ಲಿ ಸಿಕ್ಕಿ ನಮಗೆ ಹಿತನೆಂದ ಆ ರಾಜ್ಯಭಾರದವರ ಕಾರ್ಯಕ್ಕೆ ಜನಗಳು ಅರಕ್ಷರಾಗಿರುತ್ತೇವೆ. ಅಂದರೆ ನಮ್ಮನ್ನಾಳುವವರು ನಮ್ಮನ್ನು ಶಿಶುಗಳಂತೆ ಪಾಲಿಸುತ್ತಿರುತ್ತಾರೆಂತಲೂ, ಅವರ ಕ್ರಮಗಳೆಲ್ಲಾ ನಮ್ಮ ಹಿತಕ್ಕೆಂದು ಹೇಳಿಕೊಂಡು, ನಮ್ಮನ್ನು ಸ್ವರಾಜ್ಯಕ್ಕೆ ತಯ್ಯಾರು ಮಾಡುವ ನೆಪದಿಂದ ಅವರ ಹಿತವನ್ನು ಮುಂದಿಟ್ಟು ನಮ್ಮನ್ನು ಹಿಂಬಾಲಿಸಲಿಕ್ಕೆ ಉತ್ತೇಜನ ಮಾಡುತ್ತಾರೆ. ಈ ಸ್ಥಿತಿಗೆ ನಾವಲ್ಲವೇ ಜವಾಬ್ದಾರರು? ನಮ್ಮ ಮಿತವ್ಯಯದಿಂದ ಜೀವಿಸುವದನ್ನು ಬಿಟ್ಟು, ಪಶ್ಚಿಮಾತ್ಯರ ನಾಗರೀಕತೆಯೆಂಬ ಅವರ ನಡವಳಿಕೆಗಳ ಸೊಬಗನ್ನು ಮೋಹಿಸಿ ಅವರ ನಡವಳಿಕೆಗಳನ್ನು ಆಚರಿಸುವದರಲ್ಲಿ, ನಮ್ಮ ಸಾಂಪತ್ತಿಕ ಅಭಿವೃದ್ಧಿಯನ್ನು ಮರೆತದ್ದರಿಂದ, ನಮ್ಮಗಳ ಬಡತನದಿಂದುಂಟಾಗಿರುವ ಕಷ್ಟಗಳಲ್ಲವೇ ಅನುಭವ? ಪಶ್ಚಿಮಾತ್ಯರ ನಾಗರೀಕತೆಯನ್ನು ಈಗ ಅನೇಕ ವರ್ಷಗಳಿಂದ ನಾವು ಹಿಂಬಾಲಿಸಿದಕಾರಣ, ಈಗ ನಮ್ಮ ದಿನಚರ್ಯದ ಜೀವನೋಪಾಯಕ್ಕೆ ಅವರ ಸಹಾಯವನ್ನೇ ಹಾರೈಸಿಕೊಂಡಿರಬೇಕಾಗಿಲ್ಲವೆ? ಪೂರ್ವದಲ್ಲಿ ನಮ್ಮ ಗ್ರಾಮಗಳಲ್ಲಿ ವಿಮರ್ಶೆಯಾಗುತಿದ್ದಂಥ ವ್ಯವಸ್ಥೆಗಳು, ಈಗ ಅನೇಕ ದ್ರವ್ಯವ್ಯಯದಿಂದ, ಈಗಿನ ಕೋರ್ಟುಗಳನ್ನು ಮೋಹಿಸಿ, ಯಾವಾಗಲೂ ಕಷ್ಟನಷ್ಟ ಭ್ರಷ್ಟತ್ವವನ್ನು ಅನುಭವಿಸುವವರಾಗಿಲ್ಲವೇ? ಸ್ವಾರ್ಥತೆಗೆ ಹೆಚ್ಚು ಬೆಲೆಕೊಟ್ಟು, ನಮಗಳಲ್ಲಿ ಪ್ರೀತಿಭಾವವು ಕಡಿಮೆಯಾಗುತ್ತಾ ಬಂದಕಾರಣ, ಕುಟುಂಬದಲ್ಲಿ ಒಡಹುಟ್ಟಿದವರನ್ನೇ ಮರೆತುಕೊಂಡು ಬರುವಾಗ್ಯೆ, ದೇಶದಲ್ಲಿ ಐಕಮತ್ಯವು ಹ್ಯಾಗೆತಾನೆ ವೃದ್ಧಿಹೊಂದುವದು? ನಮ್ಮ ಈಗಿನ ಕೆಟ್ಟುಹೋದ ನಡವಳಿಕೆಗಳಿಂದಲ್ಲವೇ ಕುಟುಂಬಗಳಲ್ಲಿ ಮಮತೆ ಇಲ್ಲದೆ, ನಮ್ಮ ಅನೇಕ ಕುಂದುಕೊರತೆಗಳಿಗೆ ಕಾರಣವಾಗಿರುವದು? ಹೆಚ್ಚಿಗೆ ಹೇಳುವದೇನು. ಎಲ್ಲವರಿಗೂ ನಮ್ಮತನವಾಗಲೀ, ಯಾ, ಅಗದಿರಲಿ, ನಾವು ಪಶ್ಚಿಮಾತ್ಯರ ನಡವಳಿಕೆಗಳಲ್ಲಿ ಪ್ರಯೋಜನಕರವಾದವುಗಳನ್ನು ಬಿಟ್ಟು, ಅವರ ಕೆಟ್ಟ ನಡವಳಿಕೆಗಳನ್ನೇ ವಿಶೇಷವಾಗಿ ತೆಗೆದುಕೊಂಡಿರುತ್ತೇವೆ. ಈಗಿ (Science) ವಿಜ್ಞಾನದ ಜ್ಯೋತಿಯು ನಮ್ಮ ಕಣ್ಣುಗಳನ್ನು ತೆರದು ನೋಡದಕೂಡದ ಹಾಗೆ ಮಾಡಿರುತ್ತದೆ. ಪಾಶ್ಚಿಮಾತ್ಯರ ನಾಗರೀಕತ್ವವೂ, ಅವರ ಅತಿಯಾದ ಐಶ್ವರ್ಯವೂ, ಅವರ ಪಶುಬಲಶಕ್ತಿಯೂ, ಅವರ ವಿಲಾಸಕ್ಕೆ ಮಾಡುವ ಅತಿ ವ್ಯಯವೂ (Luxuries) ನಮ್ಮನ್ನು ಕುರುಡರನ್ನಾಗಿ ಮಾಡುತ್ತಾ ಇವೆ. ನಾವು ಅವರ ಬಹಳ ಬೆಲೆಬಾಳುವ ಮಧ್ಯಪಾನ, ಅತಿ ಬೆಲೆಬಾಳುವ ಸೌಂದರ್ಯದ ಬಟ್ಟೆಗಳಿಂದ ಮಾಡಿದಂಥಾ ಉಡುಪುಗಳು, ಅತ್ಯಾಶ್ಚರ್ಯದ ವಾಹನಗಳು ಇತ್ಯಾದಿಗಳನ್ನು ಮೋಹಿಸತೊಡಗಿ, ನಮ್ಮ ಮಿತವ್ಯಯದ ಕುಚೆಯಾದ ಉಡುಪುಗಳನ್ನೂ, ಶರೀರಕ್ಕೆ ಪುಷ್ಟಿಕರಿಸುವಂತಾ ಆಹಾರ ನಡವಳಿಕೆಗಳನ್ನೂ, ಮರೆತು ನಮ್ಮನ್ನು ನಾವೇ ಬಡವರಾಗಿಯೂ ಮೂರ್ಖರಾಗಿಯೂ ಮಾಡಿಕೊಂಡಿಲ್ಲವೇ? ನಮ್ಮ ಅತಿ ಬಲಾಪರಾಕ್ರಮವೂ ಇತರ ಜನಾಂಗದವರು ಬೆಲೆಕೊಡುತ್ತಿದ್ದ ಅತಿಥಿ ಸತ್ಕಾರಗಳಲ್ಲಾ ಏನಾದವು? ನಾವು ಪಶ್ಚಿಮಾತ್ಯರ, ಇರಾದೆ, ಭಾಷೆ, ಆಹಾರ, ಉಡುಪು, ವಗೈರೆಗಳನ್ನು ಪ್ರೋತ್ಸಾಹಿಸಿದ್ದರಿಂದ, ಕತ್ತೆಯು ಸಿಂಹದ ಚರ್ಮವನ್ನು ಧರಿಸಿದ ಮಾತ್ರಕ್ಕೆ ಸಿಂಹವಾಗುವದುಂಟೇ? ನಮ್ಮ ವರ್ಣಾಶ್ರಮಧರ್ಮಗಳೆಲ್ಲಾ ಹಾಳಾಗಿವೆ. ಸ್ವಾಮಿ ವಿವೇಕಾನಂದರವರು ಹೇಳಿದ ಮೇರೆ "ನಮಗೆ ಜ್ಞಾನವನ್ನು ವಿದ್ಯವನ್ನು ಕೊಡುವಂಥ ಬ್ರಾಹ್ಮಣನು, ಬಾಹುಬಲವಿದ್ದು ಯುದ್ಧಮಾಡತಕ್ಕಂಥಾ ಕ್ಷತ್ರಿಯನೂ, ವ್ಯಾಪಾರ ಮಾಡತಕ್ಕಂಥ ವೈಶ್ಯನೂ, ಎಲ್ಲವೂ ಪಾಶ್ಚಿಮಾತ್ಯರೇ ಅಂದರೆ ಇಂಗ್ಲಿಷ್‌ನವರೇ ಆಗಿರುತ್ತಾರೆ. ಅಲ್ಲದೆ ನಮ್ಮಲ್ಲಿ ಉಳಿದಿರುವ ಸ್ವಭಾವವು ಬರೇ ಶೂದ್ರರದಾಗಿರುತ್ತೆ. ಅಲ್ಲದೆ ನಮ್ಮ ಈಗಿನ ಸ್ಥಿತಿಯನ್ನು ಬಹಳ ವಿಶೇಷವಾಗಿ ವರ್ಣಿಸಿರುತ್ತಾರೆ. ಸಾರಾಂಶ ಏನಂದರೆ:—ನಮ್ಮನ್ನು ಮುಂದುಗಾಣದ ಮೌಢ್ಯದ ದೊಡ್ಡ ಕತ್ತಲೆಯು ಮೋಹವು ಮುಚ್ಚಿಕೊಂಡಿದೆ. ನಮ್ಮ ಉದ್ದೇಶ್ಯಗಳಲ್ಲಿ ಧೈರ್ಯವಿಲ್ಲ. ಮನಸಿನಲ್ಲಿ ಸ್ಥೈರ್ಯವಿಲ್ಲ. ನಮ್ಮನ್ನು ಇತರರು ಹಿಂಸಿಸುವದರಲ್ಲಿ ಆಕ್ಷೇಪಣೆ ಇಲ್ಲ. ಗುಲಾಮಗಿರಿಯು ಅಹಿತವಾಗಿಲ್ಲ. ಹೃದಯದಲ್ಲಿ ಪ್ರೀತಿ ಇಲ್ಲ. ಮನುಷ್ಯರಾದೇವೆಂಬ ಭಾವನೆ ಇಲ್ಲ. ನಮ್ಮಲ್ಲಿರುವ ಸ್ವಭಾವಗಳು ಯಾವವೆಂದರೆ:—ಅಳವಾಗಿ ಬೇರೂರಿದ ಹೆಚ್ಚು. ಒಬ್ಬರನ್ನೊಬ್ಬರು ಕಂಡರೆ ಆಗದಿರುವಿಕೆ. ಹ್ಯಾಗಾದರೂ ಗರೀಬನನ್ನು ಅಥವ ಬಲಹೀನನನ್ನು ಮೋಸಪಡಿಸುವದು. ಬಲಿಷ್ಠನ ಕಾಲನ್ನು ನಾಯಿಯ ಹಾಗೆ ನೆಕ್ಕುವದು, ಮತ್ತು ಐಶ್ವರ್ಯ ಉದ್ಯೋಗ ಸಂಪಾದನೆಯಲ್ಲಿ, ಭೋಗ ತೃಪ್ತಿಯು ಸ್ವಾರ್ಥ ಸಂಪಾದನೆಯಲ್ಲಿ, ಅತಿ ವಿಶ್ವಾಸವೂ; ಸಾಧನೆ ಕ್ರೂರ ಮತ್ತು ಕಿರಿದಾದ ಅಭ್ಯಾಸ ಆಗ್ರಹ, ಅನ್ಯರ ಗುಣಗಳನ್ನು ಗುರುತಿಸದೆ; ನಾಗರೀಕತೆ ಇತರ ಜನಾಂಗದವರ ಕೆಟ್ಟದನ್ನು ಅಭ್ಯಾಸಿಸುವದರಲ್ಲಿ; ಮಾತುಗಾರಿಕೆ ಸ್ತುತಿ ಪ್ರಯೋಗದಲ್ಲಿ, ಭಕ್ತಿಯು, ಐಶ್ವರ್ಯವಂತರನ್ನು ಹೊಗಳುವದರಲ್ಲಿ; ಹೀಗಿರುವಾಗ್ಯೆ ಶೂದ್ರರ ವಿಷಯ ಏನೆಂದು ಹೇಳಲಿ. ಇದೇ ಜನಾಂಗವೇ ಶೂದ್ರರ ಸ್ಥಿತಿಗೆ ಬಂದಿರುತ್ತಾರೆ" ಇನ್ನು ಹೆಚ್ಚಾಗಿ ಹೇಳುವದೇನು. ನಮ್ಮ ಹೀನಗುಣಗಳಿಂದ, ನಮ್ಮ ದೇಶದಲ್ಲಿ ಎಷ್ಟು ಧಾನ್ಯಗಳು ಬೆಳೆದರೂ, ಅದಕ್ಕೆ ಎಷ್ಟೇ ಬೆಲೆ ಸಿಗುತ್ತದೆಂದು ಹೇಳಿದರೂ, ಮತ್ತು ನಾವು ಪೂರ್ಣ ಸ್ವತಂತ್ರರಾಗಿ ಇದ್ದೇವೆಂದು ಭಾವಿಸಿಕೊಂಡರೂ ಸಹ ಏನು ಪ್ರಯೋಜನ? ಒಂದು ಗುಳ್ಳನರಿಯು ಹೇಳಿದ ಹಾಗೆ ರಾಜ್ಯವೆಲ್ಲಾ ನಮ್ಮದು, ಹಗಲು ಮಾತ್ರ ಸರಿಯಾಗಿ ಓಡದು ಎಂಬುವ ಸಮಾಚಾರವಾಗಿದೆ. "ಎಲ್ಲಾ ಇದೆ ಎಂದು ಭಾವನೆ, ಹೊಟ್ಟೆಗೆ ಅನ್ನವಿಲ್ಲ" ಮೈಗೆ ಬಟ್ಟೆಯಿಲ್ಲ. ನಮಗೆ ಸ್ವತಂತ್ರ ಪೂರಾ ಇದೆ ಅಂದದನ್ನು ಕಂಡಹಾಗೆ, ತಿಳಿದದನ್ನು ತಿಳಿದಹಾಗೆ ಮಾತ್ರ ಹೇಳಕೂಡದು. ಇದರಿಂದೆಲ್ಲಾ ಮುಖ್ಯವಾಗಿ ತಿಳಿದುಕೊಳ್ಳಬೇಕಾದದ್ದು ಏನೆಂದರೆ—ಯಾವ ಮಹತ್ತಾದ ಕಾರ್ಯವನ್ನು ಮಾಡಲಿಕ್ಕೆ ನಮ್ಮಲ್ಲಿ ಪ್ರ.ಪೂ ಚೈ ಸ್ಯವೂ ಇಲ್ಲದಂಥಾಗಿದೆ. ಈ ಗುಣಗಳನ್ನು ಸಂಪಾದಿಸಲಿಕ್ಕೆ ಶರೀರ ಪುಷ್ಟಿಯು ಬೇಕಾಗಿದೆ. ಈ ಸಂಪಾದನೆಗೆ ಹೊಟ್ಟೆತುಂಬಾ ಅನ್ನವೇ ಮುಖ್ಯವಾದದ್ದು. ಹೊಟ್ಟೆತುಂಬ ಅನ್ನ ಸಿಕ್ಕದ್ದೇ ನಮ್ಮ ದೇಶದ ದೊಡ್ಡ ಕೊರತೆಯಾಗಿದೆ. ಹೊಟ್ಟೆ ಹಸಿದುಕೊಂಡಿರುವ ಮನುಷ್ಯನಿಗೆ ಯಾವ ಬುದ್ಧಿವಂತಿಯನ್ನು ಹೇಳಿದರೆ ತಾನೆ ಪ್ರಯೋಜನವಾಗುವದು. ಈ ಹೊಟ್ಟೆ ಹಸುವಿಕೆಯು ಕೋಟ್ಯಾಂತರ ರೂಪಾಯಿಗಳನ್ನು ನಾವು ಇತರ ರಾಜ್ಯದವರಿಗೆ ಅವರ ಬಟ್ಟೆ ಕನ್ನಡಿ ವಗೈರೆ ಅನೇಕ ಸಾಮಗ್ರಿಗಳನ್ನು ಕೊಂಡುಕೊಳ್ಳುವದರಿಂದಾಗಿದೆ. ಹೀಗಿರುವಾಗ್ಯೆ ಒಗ್ಗೂಡಿಸಿ ಹಸ್ತದಲ್ಲಿ ದುಡಿಯಬೇಕು ಬಂಗಡಗಾಳಾಗಿಕೊಂಡು ಹೊಟ್ಟೆಗೆ ಸಿಕ್ಕುವಂಥ ಸ್ವಲ್ಪ ಲಾಭದಲ್ಲೇ ತೃಪ್ತರಾಗಿ, ನಮ್ಮ ಮುಂದಿನ ಪೀಳಿಗೆಯನ್ನು ನೆನಪಿನಲ್ಲಿ ಇಡದೆ ದಿನೇ ದಿನೇ ಹೆಚ್ಚು ಪರಾಧೀನಕ್ಕೆ ಬರುತ್ತಿದ್ದೇವಲ್ಲವೇ. ಅದ್ದರಿಂದ ಸ್ವಸಹಾಯವೇ ಉತ್ತಮ ಸಹಾಯವೆಂದು ತಿಳಿದುಕೊಂಡು, ನಮ್ಮ ಪೂರ್ವಿಕರ ಅಭಿವೃದ್ಧಿಸ್ಥಿತಿಗೆ ಕಾರಣವಾದ ಮತ್ತು ನಾವು ಮರೆತಂಥಾ ಗುಣಗಳಲ್ಲಿ ನಿಗದಿಷ್ಟ ಈಗಿನ ಸ್ಥಿತಿಗೆ ತಕ್ಕಂತೆ ಹೊಸ ಪ್ರಯೋಜನಕರವಾದಂಥಾ ವಿಧಾನಗಳನ್ನು ಹುಡಿ, ದೇಶದ ಹಿತವನ್ನು ಬಯಸುವದರಲ್ಲಿ ನಾವೆಲ್ಲರೂ ನಿಗಾ ಕೊಡಬೇಕಾದ ಧರ್ಮವಾಗಿದೆ.

ಸಂಘದ ಕೆಲಸ.

ಕಳೆದ ಸಂಚಿಕೆಯಲ್ಲಿ ಜಮಿಾನ್ದಾರರ ಸಂಘವನ್ನು ಉತ್ತಮಸ್ಥಿತಿಗೆ ತರುವ ಬಗ್ಯೆ ಹಳೇ ನಾಡುಗಳಲ್ಲಿ ಕಮಿಟಗಳನ್ನು ಏರ್ಪಡಿಸುವದು ಉತ್ತಮವೆಂದು ಸೂಚಿಸಿದ್ದಾಯಿತು. ಈ ಏರ್ಪಾಡಿನಿಂದಲೆ ನಮ್ಮ ಇತರ ಎಲ್ಲಾ ಉದ್ದೇಶ್ಯಗಳನ್ನು ನೆರವೇರಿಸಬೇಕಾದ ಕಾರಣ ಈ ಏರ್ಪಾಡುಗಳಲ್ಲಿ ಅದಷ್ಟುಮಟ್ಟಿಗೆ ತಪ್ಪುಗಳು ಮಾಡದೆ ನಡೆದುಕೊಳ್ಳಬೇಕಾಗಿದೆ. ಪ್ರತಿನಾಡುಗಳಿಗೆ ಲಗತ್ತಾದಂಥ ದೇವಾಲಯಗಳೂ ಅಂಬಲಗಳೂ ಮಂದುಗಳೂ ಇರುವದು ಎಲ್ಲವರಿಗೂ ತಿಳಿದ ಸಂಗತಿಯಾಗಿರುತ್ತೆ. ಈ ಸ್ಥಳಗಳಲ್ಲಿ ನಾಡಿನವರಿಗೆ ಪರ್ವಪದೇ ಮತಸಮ್ಮಂದವಾಗಿಯೂ ಮತ್ತು ಇತರ ಸಂಬಂಧವಾಗಿಯೂ ಸೇರಬೇಕಾದ ಅನೇಕ ಸಂದರ್ಭಗಳು ವರ್ಷದಲ್ಲಿ ಒದಗುವದು ಎಲ್ಲವರಿಗೂ ತಿಳಿಯದಂತ ಸಂಗತಿಯಲ್ಲ. ಅದ್ದರಿಂದ ನಾಡು ಕಮಿಟಗಳನ್ನು ಏರ್ಪಡಿಸುವಾಗ್ಯೆ ನಾಡುಗಳಿಗೆ ಸೇರಿದಂಥ ಪ್ರತಿಗ್ರಾಮಗಳಲ್ಲೂ ಜನಸಂಖ್ಯೆಗೆ ತಕ್ಕಹಾಗೆ ಮೆಂಬರುಗಳನ್ನು ಕಟ್ಟಿಗೆ ಚುನಾಯಿಸಿಕೊಡು, ಅಂಥಾ ಚುನಾಯಿಸಲ್ಪಟ್ಟಂಥಾ ಕಮಿಟಿಯವರ ಪೈಕಿ ಒಬ್ಬ ಅಧ್ಯಕ್ಷನನ್ನು, ಖಜಾಂಜಿಯನ್ನು ಮತ್ತು ಕಾರ್ಯದರ್ಶಿಯನ್ನು ಏರ್ಪಡಿಸಿಕೊಂಡರೆ, ಸಂಘದ ಮುಖ್ಯವಾದ ಅಧೀನದವರಲ್ಲಿ ಗದಪತ್ರಗಳ ಮೂಲಕ ತಪ್ಪುಸುದ್ದಿಗಳನ್ನು ಸಮಯವನ್ನು ಕಳೆಯದೇ ತಿಳಿಸುವದಕ್ಕೂ ಮತ್ತು ಸಂಘದ ಅನೇಕ ಉದ್ದೇಶ್ಯಗಳನ್ನು ಗ್ರಾಮಾಂತರಗಳಲ್ಲಿ ಪ್ರಚಾರಗೊಳಿಸುವದಕ್ಕೂ ಸಾಕಾ ಸುಲಭರೀತಿಯಿಂದ ಅನುಕೂಲವಾಗುವದು. ಹ್ಯಾಗಂದರೆ:—ವ್ಯವಸಾಯ ಸಮಾಚಾರವಾಗಿ ದೇಶದವರು ಪ್ರೋತ್ಸಾಹಿಸಿದಲ್ಲಿ, ನಮ್ಮ ದೇಶದ ವ್ಯವಸಾಯಕ್ರಮವನ್ನು ವೃದ್ಧಿಪಡಿಸಲಿಕ್ಕೆ ಬಹುಕಾಲದವರು ಗೊತ್ತುಮಾಡಿ ಮತ್ತು ಒಳ್ಳೇ ಬೀಜಗಳನ್ನು ಕೊಡಿಸುವ ಪ್ರಯತ್ನ ತೆಗೆದುಕೊಳ್ಳುವಾಗ್ಯೆ ಈ ಏರ್ಪಾಡುಗಳು ಇಲ್ಲದೆ ಪಕ್ಷಕ್ಕೆ ಪ್ರತಿಗ್ರಾಮದ ಕ್ಷೇಮ ಸಮಾಚಾರ ತಿಳಿಸುವದು ಇವುಗಳನ್ನು ಕೇಳಿಸುವದು ಅಸಾಧ್ಯವಲ್ಲವೇ? ಹೀಗೆ ಪ್ರತಿಗ್ರಾಮಗಳ ಅಭಿವೃದ್ಧಿಯ ಏರ್ಪಾಡಿನಲ್ಲಿ ತನ್ನದ ಕಮಿಟಿಯ ಮೂಲಕ ಸುಲಭರೀತಿಯಿಂದ ವಿಧದ ಕೆಲಸಗಳನ್ನು ಕಮ್ಮಿಸಮಯದಲ್ಲಿ ಮಾಡ ಸಾಧ್ಯವಾಗುವದು. ಈ ಸಂಘದ ಚಂದಾ ವಸೂಲಿ ವಿಷಯ—ಸಂಘಕ್ಕೆ ಪರವಾಗಿ ಜನರು ಬಂದು ಎಷ್ಟು ಸಲ ಕಟ್ಟಿಗೆ ಸಂಘದ ಮೆಂಬರರಿಂದ ಚಂದಾ ವಸೂಲು ಮಾಡುವದೆಂದು ತಾವೇ ಯೋಚಿಸಿ ಒಂದು ವರ್ಷ ಪ್ರಯತ್ನದಿಂದ ವಸೂಲಾದರೂ ಮಾರಣೇವರ್ಷದೇ ತರದ ವಸೂಲಿ ಕ್ರಮವನ್ನು ಜಾರಿಗಿಸಬೇಕಲ್ಲವೇ? ಈ ತರದ ಕಮಿಟಿ ಮೆಂಬರುಗಳು ಗ್ರಾಮಗಳಲ್ಲಿ ಇರುವಾಗ್ಯೆ, ಅಂಥಾ ಗ್ರಾಮದ ಕಮಿಟಿ ಮೆಂಬರುಗಳು ಗ್ರಾಮದಲ್ಲಿ ಮೆಂಬರು ಆಗಲು ಅರ್ಹರಾದಂಥವರನ್ನು ಮೆಂಬರುಗಳಾಗಿ ಮಾಡಿ, ಚಂದಾ ಲಾತಿಯಿಂದ ನಾಡು ಕಮಿಟಿಯ ಕೋಶಾಧ್ಯಕ್ಷ

ಹಿಸಿದಲ್ಲಿ, ಸುಲಭರೀತಿಯಿಂದ ಸಂಘದ ಉದ್ದೇಶ್ಯ ಸ್ಸಿ ನೆರವೇರಿಸಲಿಕ್ಕೆ ಬಂಡವಾಳವನ್ನು ಒದಗಿಸಬಹುದು. ಈ ಸಂದರ್ಭದಲ್ಲಿ ದೇಶದವರು ವಿಶೇಷ ನಿಂದ ತಿಳಿದುಕೊಳ್ಳಬೇಕಾದದ್ದು ಏನಂದರೆ, ಸಂಘದ ದ್ದೇಶ್ಯಗಳು ನೆರವೇರಬೇಕಾದರೆ, ಅಂದರೆ ನಮಗಳ ತಿಯೊಬ್ಬನ ಸ್ಥಿತಿಯು ಅಭಿವೃದ್ಧಿ ಹೊಂದಬೇಕಾದರೆ ಪ್ರತಿಯೊಬ್ಬರು ಅವರು ಅನುಭವಿಸುವ ಕಷ್ಟವನ್ನೇ ಶದ ಜನರೆಲ್ಲರೂ ಅನುಭವಿಸುತ್ತಾರೆಂಬುದನ್ನು ತಿಳಿಕೊಂಡು, ಅಂಥಾ ಕಷ್ಟಗಳನ್ನು ನಿವಾರಣೆ ಮಾಡಲಿ ಪ್ರತಿಯೊಬ್ಬರು ಸಹಕಾರಿಗಳಾದರೇನೇ ಸಾಧ್ಯವಾದೆಂಬುದನ್ನು ತಿಳಿದುಕೊಳ್ಳದ ಹಕ್ಷ ಪ್ರತಿಯೊಬ್ಬ ಅವರ ಅಭಿವೃದ್ಧಿಗೆ ಮಾಡಬೇಕಾದ ಕೆಲಸಗಳನ್ನು ಕದಂಥಾ ತಪ್ಪಿತಕ್ಕೆ ಗುರಿಯಾಗಿ ಅದರಿಂದ ದೇಶದ ನಿಗತಿಗೆ ಭಾಗಿಗಳಾಗುವರು. ನಮ್ಮ ದೇಶವು ಬಹೀನಸ್ಥಿತಿಗೆ ಬಂದಿದೆ. ಅನೇಕರು ಈಗಲೇ ಅವಿಲ್ಲದೆ ಸಂಕಟಪಡುತ್ತಿದ್ದಾರೆ. ಬಡತನದ ಬೇಗೆಯಿಂದ ಕೆ ರೋಗಗಳಿಗೆ ತುತ್ತಾಗಿ ಜನಸಂಖ್ಯೆಯೂ ಸಹ ಕ್ಷೀಣವಾಗುತ್ತಾ ಬರುತ್ತಿದೆ. ಹೀಗಿರುವ ಸ್ಥಿತಿಯು ದೇಶದ ಜನರು ಸಂಘವನ್ನು ಪ್ರೋತ್ಸಾಹಿಸದೆ ಮುಂದೆ ಹೋದಲ್ಲಿ ಸಂಘವನ್ನು ಏರ್ಪಡಿಸಿದ್ದ ದ ಪ್ರಯೋಜನವಿಲ್ಲ. ಈ ಬಡತನವೂ ಕಷ್ಟವೂ ನಗಳ ಪೂರ್ವಾರ್ಜಿತ ನಡವಳಿಕೆಯ ಪ್ರತಿಫಲವೆಂದೇ ತಿಳಿದುಕೊಳ್ಳದ್ದಲ್ಲದೆ, ಈ ಕಷ್ಟದಿಂದ ಪಾರಾಗಬೇಕಾದರೆ, ನ್ನ ಪ್ರಯತ್ನದಿಂದಲೇ ಸಾಧ್ಯವೆಂಬುದನ್ನು ಮಂಡಿತ ಳಬೇಕಾಗಿದೆ. ಹಾಗೆ ತಾನೆ ಸಹಾಯ ಮಾಡಿಕೊಳ್ಳುವವರಿಗೆ ದೇವರು ಸಹಾಯ ಮಾಡುವನು. [illegible] ದೇಶದವರು ದೇಶದ ಸ್ಥಿತಿಯನ್ನು ನಿರೀಕ್ಷಿಸಿ ಸಹಾಯ ಮಾಡಿ [illegible] ಪ್ರಯತ್ನ [illegible] [illegible] ಸಹಾಯವು [illegible] ನಿರ್ಧರಿಸಿ [illegible] ಕೆಲಸವಾಗ [illegible] ಉನ್ನತಿ [illegible] ಮುಂದು [illegible] ಅವಶ್ಯ [illegible] ರಿತಿ [illegible] ಆದಷ್ಟು ಬೇಗ [illegible] ಸಹಾಯವನ್ನು ಕೊಟ್ಟು ಸಂಘವನ್ನು ಉನ್ನತಸ್ಥಿತಿಗೆ ತರಬೇಕಾದದ್ದು ಎಲ್ಲರ ಕರ್ತವ್ಯವಾಗಿದೆ.

(ಬೆಟ್ಟ ವಾರ್ತಾಹರರಿಂದ)

ಇದೇ ಜೂನ್ ತಿಂಗಳು 4 ನೇ ಫಾರೆಸ್ಟ್ ಇಲಾಖೆಯವರು [illegible] ಲೆಕ್ಚರಿನಲ್ಲಿ ಅಧ್ಯಕ್ಷರಾಗಿದ್ದ ಚೀಫ್ ಕಮೀಷನರ್ ಸಾಹೇಬರು ಮಾಡಿದ ಭಾಷಣದ ಸಾರಾಂಶ

[illegible] ದಿನ [illegible] ಉದ್ದೇಶ [illegible] ಜನರಿಗೆ [illegible] ಗಳು ಇದ್ದಾರೆ. ಅವರೆ [illegible] ಯಾಗಿ ಪ್ರಯೋಜನಕಾರಿಯನ್ನಾಗಿ ಮಾಡಿಕೊಳ್ಳಲಿಕ್ಕೆ [illegible] ಇನ್ನು ಮುಂದೆ [illegible] ಫಾರೆಸ್ಟ್ ಇಲಾಖೆ [illegible] ವಿಷಯಗಳ ಮೂಲಕ ಉತ್ಪತ್ತಿ [illegible] ಅದನ್ನು ಹೆಚ್ಚಿಸಿಕೊಳ್ಳುವ [illegible] ಉತ್ಪತ್ತಿಯನ್ನು ಪ್ರತಿಷ್ಠಿಸಲಿಕ್ಕೆ [illegible] ಇಲಾಖೆಗೆ [illegible] ಅಭಿವೃದ್ಧಿಗೆ [illegible] ನಮ್ಮ ಫಾರೆಸ್ಟಿನಲ್ಲಿ [illegible] ಅದನ್ನು [illegible] ತಂದುಕೊಳ್ಳುವದೆಂಬುದನ್ನು ತೋರಿಸುವದೇ ಈ ದಿನ ಏರ್ಪಡಿಸಿದ ಪ್ರದರ್ಶನದ ಉದ್ದೇಶವಾಗಿದೆ. ದೇಶದವರು [illegible] ಫಾರೆಸ್ಟಿನ ವಿಷಯ ಆಲೋಚನೆ ಮಾಡುವಂತೆ ಹಿತವಾಗಿ ಸಂಬಂಧವೇ [illegible] ಸ್ಥಾಪಿತವಾಗ ದೇಶದವರು ಈ ಇಲಾಖೆಗೆ [illegible] ನನ್ನ ಅಪೇಕ್ಷೆ.

ಇಲಾಖೆಯ ಮೇಲಿನ ಉದ್ಯೋಗಸ್ಥರನ್ನೆಲ್ಲಾ ಹೆಸರು ಹೇಳಿ ಹೊಗಳಿ ಭಾಷಣವನ್ನು ಮುಗಿಸಿದರು.

ಅನಂತರ ಮಿಷನರಿ ಸಾಹೇಬರು ನಕ್ಷೆಗಳು ತೋರಿಸುತ್ತಾ ವಿವರಿಸುತ್ತಾ ಹೋದರು. ಮಾಳುಟು ಫಾರೆಸ್ಟಿನಿಂದ ಮರವನ್ನು ಫ್ಯಾಕ್ಟರಿಗಳಿಗೆ ಕೊಡುವ ಒಪ್ಪಂದ ನಡೆಯುತ್ತಿರುವಾಗ ಇಂಡಿಯಾ ಸರಕಾರದವರು ಕರಡುಗಳನ್ನು ಪ್ರಕಟಪಡಿಸಿ ಫಾರೆಸ್ಟ್ ಕರಡುಗಳನ್ನು ಕೇಳುವವರಿಗೆ ಕಂಟ್ರಾಕ್ಟ್ ಕೊಡಬಹುದೆಂತ ಹೇಳಿದ್ದರಿಂದ ಈಗ ಪ್ರಕಟಿಸುವದಾಗಿದೆ ಎಂತ ಹೇಳಿದರು. ಗಂಧದ ಮರಗಳು (ಈಗ ಬಾವಿ ಇರುವದು) ೧೧ ಕೋಟಿ ಗಳಿಯ ಬಾಳಬಹುದೆಂತ ಅಂದಾಜು ಮಾಡಲ್ಪಟ್ಟಿದೆಯಾಗಿಯೂ ಅವೆಲ್ಲಾ ತೀರಿದನಂತರ ಏನು ಇಲ್ಲದೆ ಹೋಗಬಾರದೆಂಬುದಕ್ಕಾಗಿಯೇ ತೋಟಗಳನ್ನು ಮಾಡುತ್ತಿರುವದಾಗಿ ಹಗ್ಗಿನ ಹೇಳಿದರು. ಉಗ್ಗದಕೊಡಗು, ಪೂರ್ವಕೊಡಗು, ಪಶ್ಚಿಮಕೊಡಗು ಫಾರೆಸ್ಟಿನ ಉತ್ಪತ್ತಿಯನ್ನೆಲ್ಲಾ ಕೆಲವು ಮಟ್ಟಿಗೆ ವಿವರಿಸಿದರು.

ತಾ। ೧೬-೬-೨೩ ನೇ ಶನಿವಾರ ದಿನ ಶನಿವಾರಸಂತೆಯಲ್ಲಿ ಈ ಕೆಳಗೆ ಕಾಣಿಸಿದಂತೆ ಮುಖ್ಯಸ್ಥರೂ ಇತರ ದೊಡ್ಡ ಮನುಷ್ಯರೂ ಸಭೆ ಸೇರಿ ಒಂದು ಮೀಟಿಂಗ್ ನಡಿಸಿದರು. ರಾವ ಬಹದ್ದೂರ್ ಮನೆಯ ಪಂಢ ಮುತ್ತಣ್ಣನವರು ಇದೇ ತಾರೀಖು ೩ ೬-೨೩ ನೇ ದಿನ ಮಡಿಕೇರಿಯಲ್ಲಿ ದೈವಾಧೀನರಾದದ್ದು ತಿಳಿದು ಅವರ ಒಗ್ಗೆ ನಮಗಳ ವ್ಯಸನವನ್ನು ಸೂಚಿಸಲು ಈ ಸಭೆಯು ಸೇರಿದ್ದಾಗಿದೆ. ಮಾ ॥ ಶ್ರೀ ಕನ್ನಸಿ ಮುತ್ತಣ್ಣನವರು ನಮ್ಮ ಇಡೀ ಕೊಡಗು ದೇಶಕ್ಕೆ ಯಾವ ರೀತಿ ಹಿತವಾಗಿರುವರೆಂದು ನಮ್ಮ ಜಮೀನ್ದಾರ ಸಂಘವನ್ನು ಉತ್ತಮವಾದ ಸ್ಥಿತಿಗೆ ತಂದು ದೇಶದ ರೈತರುಗಳಿಗೆ ಅವರವರ ಹಾಲಿಹವಾಲುಗಳ ಯಾವ ರೀತಿಯಲ್ಲಿ ಸರಕಾರದವರ ಗಮನಕ್ಕೆ ತಂದು ಪರಿಹಾರ ಹೊಂದಬೇಕೆಂಬ ಮಾರ್ಗವನ್ನು ತೋರಿಸಿಕೊಟ್ಟು [illegible] ದೇಶಕ್ಕೆ [illegible] ಉಪಕಾರವಾಗಿದೆ [illegible] [illegible] ಹೋಗೆ ಅಭಿಪ್ರಾಯ ಜನಗಳ [illegible] ಗೌರವಕ್ಕೆ ಪಾತ್ರರಾಗಿ ಸಾಕ್ಷ ನಾಡ ಕೀರ್ತಿ ಮುನ್ನು ಹೊರಡಿದರು [illegible] ವಿಷಯಗಳನ್ನು ಸೂಚಿಸ್ತು [illegible] ಅವರ ಮರಣದಿಂದ ನಮ್ಮ ದೇಶಕ್ಕೆ ಆದ ದೊಡ್ಡ ನಷ್ಟದಿಂದಲೂ ಈ ಬಗ್ಗಿನ ಎಲ್ಲ ವ್ಯಸನವನ್ನು ಅಷ್ಟೇ ಎಂತಲೂ, ನಮ್ಮ ಅಭಿಪ್ರಾಯವನ್ನು ಸೂಚಿಸಿ ಅವರ ಮನೆಯವರಿಗೆ ನಮ್ಮ ದುಃಖಪ್ರದರ್ಶನ ಮಾಡಬೇಕೆಂತ ಹೇಳಿ ಈ ಸಭೆಗೆ ಮುದ್ದಿನಕಟ್ಟೆ ಮಠದ ಸಿದ್ಧಲಿಂಗಸ್ವಾಮಿಗಳವರನ್ನು ಅಧ್ಯಕ್ಷರಾಗಬೇಕೆಂತ ಸೂಚಿಸಿ, ಅದು ಸರ್ವಸಮ್ಮತದಿಂದ ಒಪ್ಪಿತವಾಗಿ ಸ್ವಾಮಿಗಳವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ ನಂತರ ಈ ಕೆಳಗೆ ಕಂಡ ಠರಾವನ್ನು ತಂದರು.

ದೇಶಭಕ್ತರೂ, ದೇಶೋಪಕಾರಿಗಳೂ ಆದ ರಾ॥ ಬ॥ ಮನೆಯ ಪಂಢ ಮುತ್ತಣ್ಣನವರ ಮರಣದಿಂದ ನಮ್ಮ ಕೊಡಗು ದೇಶದ ಹಿರಿಯರ ಅದೃಶ್ಯವಾದಂತಾಗಿ ನಮಗಳಿಗೆ ಬಹಳ ವ್ಯಸನವನ್ನುಂಟುಮಾಡಿದೆ. ಇವರ ಅತ್ಮಕ್ಕೆ [illegible] ಪರಮೇಶ್ವರನು [illegible] ವಿಶಕಲಂದಿಂದ ತಮಗಳ ಸದಾ [illegible] ಪೂರ್ವಕವಾದ ಅಭಿಪ್ರಾಯವನ್ನು ಸೂಚಿಸಿ ಈ ಠರಾವನ್ನು ಸಭೆಯ ಕೊಡಗು ಜಮೀನ್ದಾರ ಸಂಘಕ್ಕೆ ಕಳುಹಿಸಿ ಅಲ್ಲದೆ ಕೊಡಗು ಪತ್ರಿಕೆಗೆ ಕಳುಹಿಸಿ ಕೊಡಬೇಕೆಂತ ಮಂಜೂರಾಯಿತು.

ರಾವಬಹದ್ದೂರ್ ಮನೆಯ ಪಂಢ ಮುತ್ತಣ್ಣನವರ [illegible] ಪ್ರತಿ [illegible] ಸ್ಮಾರಕ ಫಂಡಾಗಲಿ ಬೇರೆ ಯಾವ [illegible] ತಿ ಅವರ ಹೆಸರು [illegible] ಮಾಡಬೇಕೆಂತ ಮತ್ತೊಂದು ಠರಾವು ಸರ್ವಾನುಮತದಿಂದ ಮಂಜೂರಾಯಿತು.

ಸಿದ್ಧಲಿಂಗಸ್ವಾಮಿ,
ಅಧ್ಯಕ್ಷರು.

ಹಾಜರಿದ್ದವರು

ಪಿ. ಎಸ್ ಮಲ್ಲಣ್ಣನವರು
ಕೆ ಎಸ್ ಬಸಪ್ಪನವರು
[illegible] ಸುಬ್ಬರಾಜುಗೌಡರು
ಬಿ ಕಾಂತಪ್ಪನವರು.
ಜಿ ಸೋಮೇಗೌಡರು
ಚಿ ನಿಂಗಮಾಣಿಪ್ಪನವರು
ಬಸವರಾಜುಗೌಡರು
ದೇವೇಗೌಡರು
ಸೋಮೇಗೌಡರು
ಬಿ ಎಸ್ ಕೃಷ್ಣಪ್ಪನವರು
ಕೆ ಮಲ್ಲೇಗೌಡರು ಪ ಟ. ಡಿ
ಪ. ಬಸಪ್ಪಗೌಡರು.
ಪೊನ್ನಪ್ಪಗೌಡರು.
ಪ ರಾಮೇಗೌಡರು.

ಪತ್ರವ್ಯವಹಾರಗಳು.

ಬಾಹ್ಯದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ [ಎಡಿಟರ್]

ವಿರಾಜಪೇಟೆ ನಾಡು ಬಾಡಗ ಗ್ರಾಮದಲ್ಲಿ ಹೊಸತಾಗಿ ಒಂದು [illegible] ಲ್ ಹುಟ್ಟಿ ವರ್ಷದ ಮೇಲಾದಾಗ್ಯೂ ಸರಕಾರದಿಂದ ಸ್ಕೂಲ್ ಸಂಬಂಧ ಯಾವ ಸಾಮಾನು ಕಳುಹಿಸದೆ ವಿದ್ಯಾರ್ಥಿಗಳು ನೆಲದಲ್ಲಿ ಕೂತ್ತು ವರ್ಷವನ್ನು ಕಳೆದಿದ್ದಾರೆ. ಈ ಸ್ಕೂಲಿನ ಮಾಸ್ಟರು ಸ್ವಾರ್ಥಸಾಧನಾಗಿ ನಿದ್ರಾವಸ್ಥೆಯಲ್ಲಿರಬಹುದೆಂದೂ ಪಂಚಾಯ್ತಿಯು ಸ್ವಪ್ನಾವಸ್ಥೆಯಲ್ಲಿರಬಹುದೆಂದು, ಶಾಲಾಧಿಕಾರಿಗಳ ದೃಷ್ಟಿ ಸ್ಕೂಲ್ ಇನ್ನೂ ಬೀಳದಂತಿದೆಂದೂ, ಸ್ಕೂಲನ್ನು ಅಭಿವೃದ್ಧಿಗೆ ತರುವ ಮಾಸ್ಟರಿನ ಮತ್ತು ಪಂಚಾಯ್ತಿ ಗುಣವನ್ನು ಇದು ಸೂಚಿಸುತ್ತಿದೆ. [illegible] ಈ ಹರಿಯಂತ್ರ ಸಾಮಾನುಗಳನ್ನು [illegible] ಇರುವದು ಶೋಚನೀಯವೇನೆ ದೂ ಇನ್ನಾದರೂ ನಮ್ಮ ಸ್ಕೂಲುಗಳ ಪ್ರೆಸಿಡೆಂಟರು ಗಮನಕ್ಕೆ ತಂದು ಹಳ್ಳಿ ಬಡ ವಿದ್ಯಾರ್ಥಿಯರಿಗೆ [illegible] ಸ್ಕೂಲ್ ಅಭಿವೃದ್ಧಿಗೆ [illegible] [illegible] ದೆಂದು [illegible] ಒಬ್ಬ ಹಿತೈಷಿಯ ಪ್ರಾರ್ಥನೆ

"A"

ಅಯ್ಯಾ,

[illegible] ಉದ್ಧಾರ ಪತ್ರಿಕೆ [illegible] ಲೈಬ್ರರಿಗೂ [illegible] [illegible] ಮಾಡಿದ [illegible] ದೇಶದ ಏಳಿಗೆಗೆ [illegible] ಉತ್ಸಾ [illegible] ಸ್ವರ್ಗ [illegible] ನಮ್ಮ ಸಂಘ [illegible] ಅಭಿವೃದ್ಧಿ [illegible] ರಾಜಕೀಯ [illegible] ತೀರಿ ಹೋ [illegible] ದೇಶದ [illegible] ದಲ್ಲಿ ದಿವ ಗತರಿಗೆ ಒದಗಿದ ಅಕಾಲ ಮರಣಕ್ಕೆ ಎಲ್ಲ [illegible] ಸ್ವಲ್ಪ [illegible] ಪರಲೋಕದಲ್ಲಿ ಸೂರ್ಯಕಾಂತಿ ದೊರೆವ ಹಾಗೆ ಪತಿಲೋಕದಲ್ಲಿ ನರಳುತ್ತಿರುವ ಅವರ ಪತ್ನಿಯವರಿಗೂ ಪಿತೃಹೀನಶೋಕದಲ್ಲಿ ನರಳುತ್ತಿರುವ ಅವರ ಮಕ್ಕಳಿಗೂ ಧೈರ್ಯ ಮತ್ತು ಶಾಂತಿಯನ್ನು ದಯಪಾಲಿಸಲೆಂದು ಭಗವಂತನಲ್ಲಿ ನಮ್ಮ ಪ್ರಾರ್ಥನೆ.

ಬಲಮುರಿ
ಯುವಕರ ಸಂಘ
ತಾ ॥ ೬ ॥ ೩

ಚಂಗಂಡ ಕುಟ್ಟಪ್ಪ,
ಗೌ ಕಾರ್ಯದರ್ಶಿ.

ಪಂಚಶಮಹಾಸಭೆ

ತಾರೀಖು 2-5-2 ರ ನಂಬರ 50 ನೇ ಕೊಡಗು ಪತ್ರಿಕೆಯ ಸಂಚಿಕೆಯಲ್ಲಿ ಕೊಡಗು ದೇಶದ ಇತರೆ ಜನಾಂಗದವರು ಏರ್ಪಡಿಸಿದ ಸಭೆಗಳನ್ನು ಮುಂದರಿಸುವೆ ಇದ್ದ ಪಕ್ಷದಲ್ಲಿ ಕೊಡಗರು ಏರ್ಪಡಿಸಿದ ಕೊಡವ ಸಭೆಯನ್ನು ಇತರರು ಸಹ ಮುಂದರಿಸುವದಿಲ್ಲವೆಗಿ ರಾಯಬಹದೂರ್ ಕೇಳಿದಂತೆ ಮಾಡ್ದೈವಾಧೀನರಾದ [illegible] ಕೇಳಿದಂತೆ ಅಧ್ಯಕ್ಷನವರಿಗೆ ಕಾರದ ಒರಗೆ ಸಂಗತಿಯಾಗಿ ಜಮೀನ್ದಾರ ಸಂಘದ ಮೀಟಿಂಗಿನಲ್ಲಿ ಕೊಡವ ಸಭೆ ಅವಶ್ಯವಿಲ್ಲವೆಂದು ತೀರ್ಮಾನವಾಯಿತೆಂದು ಒಗ್ಗಟ್ಟು ಎಂಬವರು ಬರೆದ ಲೇಖನವನ್ನು ನೋಡಿಕೊಂಡೆನು. ಒಗ್ಗಟ್ಟು ಎಂಬವರು ಬರೆದ ಲೇಖನದ ಮೇಲೆ ಕೊಡಗು ದೇಶದ ಇತರ ಜನಾಂಗದವರು ಏರ್ಪಡಿಸಿದ ಸಭೆ [illegible] ಸಂಘಗಳು ಇರುವ ಕಡೆಗೆ ಹೋಗುಗಳು [illegible] ಸಭೆಗಳನ್ನು ಮುಂದರಿಸುವುದಿಲ್ಲವೆಂದು ಕೊಡವ ಸಭೆಯ ಮೂಲಕದಿಂದ ಏನೆ ಯಾವ ಸರ್ವಾಲೋಚನೆ ಮಾಡದೆ ತಮ್ಮ ಕಾರ್ಯಗಳನ್ನು ಒಗ್ಗಟ್ಟಿನಿಂದ ಮುಂದರಿಸುವ ಸಂಗತಿ ತಿಳಿಯುತ್ತೇನೆ. ಇದು ನೋಡುವಾಗ ಕೊಡವ ಸಭೆಯನ್ನು ಅಭಿವೃದ್ಧಿಪಡಿಸದ ರೀತಿ ಆಡಚಣೆ ನಾಡವದಾಗಿದೆ. ಆದುದರಿಂದ ಕೊಡವ ಸಭೆಯ ಮುಖಂಡರು ಮತ್ತು ಕೊಡವ ಸಭೆಯನ್ನು ಆಪೇಕ್ಷಿಸುವ ನಮ್ಮ ಜನಾಂಗದವರೆಲ್ಲರೂ ತಮಗಳ ಅಭಿಪ್ರಾಯಕ್ಕೆ ಮೀರಿ ಬಂದಾ ಹೋಬಳಿಗಳನ್ನು ಸಮಾಲೋಚನೆಗೆ ಒಡವ ಕೊಡವ ಸಭೆ ಆರ್ಗನೈಜರ್ ಸಿಕ್ರೆಟರಿಯವರಿಗೆ ಪಾವತಿಪಡಿಸಿ ಸ್ವೀಕರಿಸಿ ಹೊಂದಿಕೊಂಡು ಈ ಸಭೆಯನ್ನು ವೃದ್ಧಿಪಡಿಸಬೇಕಾಗಿ ಕೋರುವ,

"ಸಭಿಕ"

ಕೊಡಗು ವಿದ್ಯಾಫಂಡಿನ ಪ್ರೆಸಿಡೆಂಟರಿಗೂ ಸೆಕ್ರೆಟರಿಯವರಿಗೂ ವಿನಂತಿ

ಕೊಡಗಿನ ವಿದ್ಯಾಫಂಡಿನ ಅಭಿವೃದ್ಧಿಗೊಳಿಸಲು ತಾವು ತಮ್ಮ ಅನುಭವಗಳನ್ನು ಅನೇಕ ವರುಷಗಳಿಂದ ಉಪಯೋಗಿಸುತ್ತಿರುವದರಿಂದ ನಮ್ಮ ಜಿಲ್ಲೆ ಜನಾಂಗದ ಏಳಿಗೆಗೆ ಉಪಯೋಗವಾದ ಉತ್ಸಾಹ ಮತ್ತು ಸಹಾಯವನ್ನು [illegible] ಕೊಂಡವರ ನಮ್ಮ ಬಾಳಿಗೆ ಸಿಕ್ಕಿಸಿಕೊಂಡಿರುವ ಈ ಫಂಡು [illegible] ವರುಷಗಳಿಂದ ತಕ್ಕ ಪ್ರೋತ್ಸಾಹವಿಲ್ಲದೆ ಇರುವದು ವ್ಯಸನಕರ. ಇದರ ವಿಷಯ ಕೊಡಗು ಪತ್ರಿಕೆಯಲ್ಲಿಯಾಗಲಿ ಮೀಟಿಂಗುಗಳಲ್ಲಿಯಾಗಲಿ ಕಾಣದೆ ಇರುವದು ಇನ್ನು ಆಶ್ಚರ್ಯ. ಫಂಡದ ಅಭಿವೃದ್ಧಿಗೆ ಅನೇಕ ದೇಶಾಭಿಮಾನಿಗಳು ಅನೇಕ ವಿಧದಲ್ಲಿ ಹಿಂದೆ ಸಹಾಯ ಕೊಡುತ್ತಿದ್ದರು. ಸರಾಯಿ ಗೆಲನ್ ಲೆಕ್ಕದಲ್ಲು ಕೆಲವು ಹಣ ಇವರು ಒದಗಿಸುತ್ತಿದ್ದು ಜನಮುಖ ಸಲಿಕೆಗೆಯೋ ಸರಕಾರದ ಪ್ರೀತಿಗೋ ಏನೋ ಸಂಬಂತೆ ಈಗ ಆ ಕ್ರಮವು ಸರಾಯಿ ಗೆಲನ್ ಕಟ್ಟೆ ಮಂಜೂರು ಮಾಡುವ ಅಧಿಕಾರಸ್ಥರಿಂದ ನಿಲ್ಲಿಸಲ್ಪಟ್ಟಂತೆ ಕಾಣುತ್ತೆ. ಹೀಗಾದರೆ ನಮ್ಮ ಜನಾಂಗದ ಗತಿ ಏನು. ಈ ವಿಷಯದಲ್ಲು ಅನೇಕ ದೇಶಹಿತೈಷಿಗಳ ಅಭಿಪ್ರಾಯ ಪಡೆದು ಈ ಕೆಳಗಿನ ಸಲಹೆಗಳನ್ನು ತಮ್ಮ ಮುಂದೆ ಇಡಲು ಇಚ್ಛಿಸುವೆನು. ಮಡಿಕೇರಿ ಮಾತ್ರ ಸೆಂಟ್ರಲ್ ಹೈಸ್ಕೂಲಿನಲ್ಲಿ ೬೦೦ ವಿದ್ಯಾರ್ಥಿಗಳು ಓದುತ್ತಿರುವರು. ಇವರೇ ನಮ್ಮ ದೇಶದ ಮುಂದಿನ ಜನಾಂಗ. ಈ ವಿದ್ಯಾರ್ಥಿಗಳು ನಮ್ಮ ಸ್ಕೂಲ್ ಮೀಟಿಂಗಲ್ಲಿ Sportfee-ಎಂದರೆ ಕ್ರಿಕೆಟ ಹಾಕಿ ವಗೈರೆ ಆಟಗಳಿಗಾಗಿ ವರ್ಷ ೧ರ ತಲಾ ೧-೪-೦ ಮೇರೆ ಖರ್ಚು ಮಾಡುತ್ತಿರುವರು. ಈ ಖರ್ಚಿನ ಜೊತೆಗೆ ಪ್ರತಿ ಒಬ್ಬ ಕೊಡವ ವಿದ್ಯಾರ್ಥಿಯು ವರುಷಕ್ಕೆ ೦-೪-೦ ಆಣೆ ಮೇರೆ ತಮ್ಮ ಪ್ರಯೋಜನಕ್ಕಾಗಿ ಇಟ್ಟಿರುವ ವಿದ್ಯಾ ಫಂಡಿಗೆ ಸಂತೋಷದಲ್ಲಿ ದೈವಸಹಾಯ [illegible] ಕೇಳಿಕೊಂಡರೆ ಹಿಂದಕ್ಕೆ ನಿಲ್ಲಲಾರರು. ಆದರಲ್ಲೂ ಹೈಸ್ಕೂಲು ಉಪಾಧ್ಯಾಯರು ಹೆಚ್ಚಾಗಿ ದೇಶಿಯರು. ಈ ವಿಷಯ ಮುತುವರ್ಜಿ ಇರತಕ್ಕವರು. ಸ್ಕೂಲು ಫೀಜಿನ ಜೊತೆಯಲ್ಲೇ ಈ ಫಂಡಿನ ೦-೪-೦ ಆಣೆಯನ್ನು ವಸೂಲು ಮಾಡಲು ಹಿಂಜರಿಯಲಾರರು. ಅವಶ್ಯವಿದ್ದರೆ ವಿದ್ಯಾ ಇಲಾಖೆಯ ಮಂಜೂರಾತಿ ಪಡೆಯಲೂ ಸಾಧ್ಯವಿದೆ. ಆದರೆ ಮುಂದಾಗಿ ನಮ್ಮ ಹೈಸ್ಕೂಲುಗಳ ವಿದ್ಯಾರ್ಥಿಗಳು ಅಭಿಪ್ರಾಯಪಟ್ಟು ಈ ಸಂಗತಿ ಮೀಟಿಂಗ್ ಮೂಲಕ ತೀರ್ಮಾನಿಸಿ ಅವರ ಸಮ್ಮತವನ್ನು ವಿದ್ಯಾ ಫಂಡಿನ ಪ್ರೆಸಿಡೆಂಟರಿಗೂ ಕಾಲೂ ಹೆಡ್‌ಮಾಸ್ಟರುಗಳಿಗೂ ತಿಳಿಸಿದರೆ ಎಲ್ಲವೂ ಆಗುತ್ತೆ. ಈ ಸಂಗತಿಯಲ್ಲಿ ವಿದ್ಯಾರ್ಥಿಗಳು ಹಿಂಜರಿಯಲಾರರೆಂದು ನನ್ನ ನಂಬಿಕೆ.

ಬ್ರಾಹ್ಮಣ ಮತ್ತು ಇತರ ವರ್ಣದ ಬಾಲಕರು ಸಹ ತಮ್ಮ ತಮ್ಮ ವಿದ್ಯಾ ಫಂಡಿಗೆ ಈ ರೀತಿ ಸಹಾಯ ಮಾಡಬಹುದಲ್ಲವೇ. ಬೇರೆ ದೇಶದಲ್ಲಿ ಕಾಲೇಜು ಮಕ್ಕಳು ಅವರ ವಿರಾಮ ಕಾಲವನ್ನು ಸ್ಕೂಲುಗಳ ಒಗ್ಗೆ ಫಂಡು ಸ್ಥಾಪಿಸಲು ಊರೂರು ಮನೆ ಮನೆ ತಿರುಗಿ ಚಂದಾ ಎತ್ತಿ ಅನೇಕ ಶಾಲೆಗಳನ್ನು ನಡಿಸುತ್ತಿರುತ್ತಾರೆ. ತಮ್ಮ ಪ್ರಯೋಜನದ ಫಂಡಿಗೆ ನಮ್ಮ ಯುವಕರು ಸಹಾಯ ಮಾಡಬಾರದೇ-ಇದೇ ರೀತಿ ಪ್ರೈಮರಿ ಶಾಲೆಗಳ ಬಾಲಕ ಬಾಲಕಿಯರಿಂದಲೂ ೦-೪-೦ ಆಣೆ ೦-೨-೦ ಆಣೆ ಚಂದಾ ವರುಷಕ್ಕೆ ಚಂದಾ ಹಾಕುವ ಏರ್ಪಾಡು ಮಾಡಿದಲ್ಲಿ ವಿದ್ಯಾ ಫಂಡಿಗೆ ೧ ವರ್ಷಕ್ಕೆ ಒಂದು ಸಾವಿರ ರೂಪಾಯಿ ಉಟ್ಪುವಳಿಯು ಯಾರಿಗೂ ನೋವಿಲ್ಲದೆ ಸಿಕ್ಕುವದರಲ್ಲಿ ಸಂದೇಹವಿಲ್ಲ.

ಇದಲ್ಲದೇ ಪ್ರತಿ ಒಂದು ಮದ್ವೆಗೆ ಒಂದು ರುಪಾಯಿ ಕಮ್ಮಿ ಇಲ್ಲದೆ ವಿದ್ಯಾ ಫಂಡಿಗೆ ಧನಸಹಾಯ ಮಾಡಬೇಕೆಂದು ದೇಶದವರಿಗೆ ತಿಳಿಸಿ ಆ ಬಗ್ಗೆ ಪ್ರತಿ ಗ್ರಾಮಕ್ಕೆ ಒಬ್ಬೊಬ್ಬ ಯೋಗ್ಯರನ್ನು ನೇಮ ಮಾಡಿದಲ್ಲಿ ಇನ್ನೊಂದು ಸಾವಿರ ರುಪಾಯಿ ಜಮೆ ಆಗುವದರಲ್ಲಿ ಸಂಶಯವಿಲ್ಲ. ಕಾವೇರಿ ದೇವಸ್ಥಾನದ ತರಿಗೆ ವಸೂಲು ಮಾಡುವ ಏಜೆಂಟರುಗಳಿಗೆ ಕಮಿಶನ್ ಕೊಟ್ಟು ಒಂದೊಂದು ರಶೀತಿ ಪುಸ್ತಕಗಳನ್ನು ಕೊಟ್ಟು ಅವರ ಮೂಲಕವೂ ಕೆಲವು ಹಣ ಜಮೆಗೆ ಬರಬಹುದು. ಈ ಮೇಲ್ಕಂಡಂತೆ ವಸೂಲಾತಿಗೆ ತಕ್ಕ ನೂತನ ಕ್ರಮಗಳನ್ನು ಕಂಡು ಹಿಡಿಯದೆ ಇರುವ ಫಂಡನ್ನೇ ವ್ಯಯಮಾಡುತ್ತಾ ಬರುವದು ಉಚಿತವಲ್ಲ. ನಾವು ನಮ್ಮನ್ನೇ ನಂಬಿಕೊಳ್ಳಬೇಕಲ್ಲದೆ ಇತರರು ಸಹಾಯ ಕೊಡುವ ಕಾಲವು ಇದಲ್ಲ.

ಮಹಾಶಯರೇ-ಈ ಸಂಗತಿಯಲ್ಲಿ ತಕ್ಕ ಏರ್ಪಾಡುಗಳನ್ನು ಮಾಡುವಿರಾಗಿಯೂ ವಿದ್ಯಾಫಂಡಿನ ವಿಷಯ ಉದಾಸೀನಮಾಡದೆ ಇರುವಿರಾಗಿ ಕೋರುವ

I. P. C.

ಅಯ್ಯಾ,

ಕೊಡಗು ಸೆಂಟ್ರಲ್ ಕೋಓಪರೇಟಿವ್ ಬೇಂಕಿನವರು, ಪ್ಲೇಂಟರ್ಸ್ ಕೋಓಪರೇಟಿವ್ ಸೊಸೈಟಿಗೆ ಹಣ ಕೊಡುವದಿಲ್ಲ ವಗೈರೆ ಯಾಗಿ ಕೊಡಗಿನ ಒಬ್ಬ ಬಾತ್ಮೀದಾರರು "ಸಹಕಾರಿ" ಪತ್ರಿಕೆಗೆ ಬರೆದಿರುವರಾಗಿ ನಾನು ತಿಳಿದಿದ್ದೇನೆ. ಪ್ಲೇಂಟರ್ಸ್ ಕೋಓಪರೇಟಿವ್ ಸೊಸೈಟಿಯು ಈವರೆಗೆ ಬೇಂಕಿನಲ್ಲಿ ಶೇರ್ ತಕ್ಕೊಂಡಿಲ್ಲ ಮೆಂಬರ್ ಆಗಿಲ್ಲ. ಶೇರ್‌ದಾರರಾದರೆ ಮಾತ್ರ ಸೊಸೈಟಿಗಳಿಗೆ ಹಣದೊರೆಯುತ್ತೆ. ಈ ರೀತಿ ಸುಳ್ಳು ಕಲ್ಪನೆಗಳನ್ನು ಉಂಟುಮಾಡಿ ಬೇರೆ ಊರುಗಳಲ್ಲಿ ಪತ್ರಗಳನ್ನು ಪಬ್ಲಿಕ್ ಮಾಡುವದು "ಸಹಕಾರಿ" ಯ ಕೊಡಗು ಬಾತ್ಮೀದಾರನಿಗೆ ಯೋಗ್ಯವಾದದ್ದಲ್ಲ. "ಸಹಕಾರಿ" ಯು ಸಹಕಾರದ ಉದ್ದೇಶಗಳಿಗಾಗಿ ಸ್ಥಾಪನೆಯಾದ ಸಂಸ್ಥೆಗಳ ವಿಷಯವಾಗಿ ಸಂಗತಿಗಳನ್ನು ಸರಿಯಾಗಿ ತಿಳಕೊಳ್ಳದೇ ಬಾತ್ಮೀಗಳನ್ನು ಪ್ರಕಟಿಸುವದು ನ್ಯಾಯವಾದ್ದಲ್ಲ.

ಎಂ ಭುಜಂಗರಾವ್,

ಮೇನೇಜರ್ ಸೆಂಟ್ರಲ್ ಕೋಓಪರೇಟಿವ್‌ಬೇಂಕ್,

ಮಡಿಕೇರಿ, ತಾ॥ ೧೧-೬-೨೩.

ಅಯ್ಯಾ,

ಕಳೆದವಾರ ಪತ್ರಿಕೆಯಲ್ಲಿ ಕೊಡಗಿನ ಆಸ್ಪತ್ರೆಗಳ ವಿಷಯ ಕೆಲವು ಸಂಗತಿಗಳನ್ನು ಯಾರೋ ಬರೆದಿದ್ದರು. ಅದನ್ನು ಓದುವಾಗ ಬಹಳ ವ್ಯಸನವಾಗುತ್ತದೆ. ನಾವು ಈ ಮೊದಲೇ ಕೊಡಗಿಗೆ ಬಾರೀ ಸಂಬಳವಿರುವ ಐ. ಎಂ. ಎಸ್ ಉದ್ಯೋಗಸ್ಥನು ಆಸ್ಪತ್ರೆಗಳಿಗೆ ಸಿವಿಲ್ ಸರ್ಜಿಯನ್ ಆಗುವದು ಅವಶ್ಯವಿಲ್ಲವೆಂದು ಕೇಳಿಕೊಂಡಿದ್ದೆವು. ಸರಕಾರದವರು ಹಣವಿಲ್ಲ ಸಿಬ್ಬಂದಿ ಕೋತೆ, ಆಸ್ಪತ್ರೆಗಳನ್ನು ಮುಚ್ಚಬೇಕು. ಸಬ್ ಅಸಿಸ್ಟೆಂಟ್ ಸರ್ಜಿಯನ್ನರನ್ನು ಕಡಿಮೆ ಮಾಡಬೇಕು. ಆಸ್ಪತ್ರೆಗಳಿಗೆ ಕೊಟ್ಟು ಗ್ರಾಂಟನ್ನು ಕಡಿಮೆ ಮಾಡಬೇಕು ಎಂಬುದಾಗಿ ಹೇಳುತ್ತಾರೆ. ಹೀಗೆ ಅನ್ನುವದರ ಬದಲಾಗಿ ಒಂದು ವರ್ಷಕ್ಕೆ ಸುಮಾರು ೨೦,೦೦೦ ರೂಪಾಯಿ ಸಂಬಳ ತೆಗೆದುಕೊಳ್ಳುವ ಸಿವಿಲ್ ಸರ್ಜಿಯನ್ನರನ್ನು ತಗೆದುಬಿಟ್ಟು ಅವರ ಬದಲಾಗಿ ೫,೦೦೦ ರೂಪಾಯಿ ವರ್ಷಕ್ಕೆ ಸಂಬಳದಲ್ಲಿ ಅಡಗುವ ಒಬ್ಬ ಮೆಡಿಕಲ್ ಗ್ರಾಜ್ಯುಯೇಟನ್ನು ಕಳುಹಿಸಿದರೆ ಸಾಕಾಗುವುದಿಲ್ಲವೋ. ಹೀಗೆ ಮಾಡಿದರೆ ೧೫,೦೦೦ ರೂಪಾಯಿ ಸರಕಾರಕ್ಕೆ ಉಳುವರಿಯಾಗುವುದಲ್ಲದೆ, ಇಂಡಿಯನ್ ಗ್ರಾಜ್ಯುಯೇಟ್ ನಮ್ಮ ಜನರೊಡನೆ ಚೆನ್ನಾಗಿ ವಿಳಕದಿಂದ ಕೆಲಸಮಾಡಬಹುದು. ಇನ್ನಾದರೂ ಸರಕಾರದವರು ಈ ದೊಡ್ಡ ತಲೆಯನ್ನು ಕಡಿಮೆಮಾಡಿದರೆ, ಉಳುವರಿಯಾಗುವಹಣದಿಂದ ಆಸ್ಪತ್ರೆಗಳನ್ನು ಹೆಚ್ಚಿಸಬಹುದಲ್ಲವೇ ? ಇದೇ ರೀತಿ ಇಂಜನೀಯರ್ ಸಾಹೇಬನ್ನು ಸುಮಾರು ೨೦,೦೦೦ ರೂಪಾಯಿ ಸಂಬಳ ವರ್ಷಕ್ಕೆ ಖರ್ಚುಮಾಡಿ ಏಕೆ ಇಟ್ಟಿರುತ್ತಾರೋ ತಿಳಿಯದು. ಒಬ್ಬ ಇಲಾಖೆಯ ಸಿಬ್ಬಂದಿಗಾಗುವ ಖರ್ಚು ಕಾಮಗಾರಿ ಕೆಲಸಕ್ಕೆ ಆಗುವ ಖರ್ಚಿಗಿಂತ ವಿಪರೀತವಾಗುತ್ತದೆಯಂತೆ. ಇಂತಾ ತಲೆಭಾರದ ಸರಕಾರವನ್ನು ಯಾಕೆ ಇಟ್ಟಿರುತ್ತಾರೋ ತಿಳಿಯದು. ತಾಲೋಕು ಎರಡಾಯಿತು, ಬಡನವುಕರರನೇಕರು ಮನೆಗೆ ಕಳುಹಿಸಲ್ಪಟ್ಟರು. ಸಿಬ್ಬಂದಿ ಕೋತೆ ಎಂಬುದು ಬಡಪಾಯಿಗಳಾದ ಗುಮಾಸ್ತರು, ವಗೈರರಿಗೆ ಮಾತ್ರ. ಈ ತಲೆಭಾರದ ಸರಕಾರವನ್ನು ನಮ್ಮ ಚೀಫ್ ಕಮಿಶನರು ಗಮನಿಗೆ ತರುವರೋ.

"ರೈತ"

ಒಕ್ಕಲತನದಲ್ಲಿ ಹೆಚ್ಚು ಲಾಭ ಪಡೆಕೊಳ್ಳಿ

ನಮ್ಮ ಕಾರಖಾನೆಯಲ್ಲಿ ಸುಧಾರಿಸಿದ ರೆಂಟೆಗಳೂ ಕಬ್ಬಿನ ಗಾಣಗಳೂ, ಮೇವು ಯಂತ್ರ ಇತ್ಯಾದಿ ಒಕ್ಕಲಿಗರಿಗೆ ಬಹು ಲಾಭದಾಯಕವುಳ್ಳವುಗಳು ಸಾಮಾನುಗಳು ತಯಾರಾಗುತ್ತವೆ.

ಸಾವಿರಾರು ರೈತರು ಕೊಡುತ್ತಿರುವರು. ಸಚಿತ್ರ ಕ್ಯಾಟಲಾಗು ತರಿಸಿಕೊಳ್ಳಿ.

ನಮ್ಮ ವಿಳಾಸ —

ಕಿರ್ಲೋಸ್ಕರ್ ಬಂಧು ಲಿಮಿಟೆಡ್,

ಪೋ. ಕಿರ್ಲೋಸ್ಕರವಾಡಿ

12—2 ಜಿಲ್ಲಾ— ಸಾತಾರ

Just Received! New Invention

Electric Rotary Spring Fans.

ವಿದ್ಯುಚ್ಛಕ್ತಿಯ ರೋಟರಿ ಬೀಸಣಿಗೆ

ಇದು ಜರ್ಮನಿ ದೇಶದಲ್ಲಿ ಹೊಸದಾಗಿ ಕಂಡು ಹಿಡಿಯಲ್ಪಟ್ಟು ಈಗ ತಾನೇ ಬಂದಿರುತ್ತೆ. ಬಹು ಆಶ್ಚರ್ಯವಾಗಿದೆ. ಇದು ಎಲೆಕ್ಟ್ರಿಕ್ ಪಂಕಾದಂತೆ ತಂಪಾದ ಗಾಳಿಯನ್ನು ಬೀಸುವದು. ಗಾಳಿ ಬೇಕಾದಾಗ ಗುಂಡಿಯನ್ನು ಅದುಮಿದರೆ ತನಗೆ ತಾನೇ ಸುತ್ತಿ ಗಾಳಿಯನ್ನು ಬೀಸುವದು. ಈ ಬೇಸಗೆ ಕಾಲದಲ್ಲಿ ಬಹಳ ಉಪಯೋಗವಾದದ್ದು. ಇದರಲ್ಲಿ ಅತಿ ಚಮತ್ಕಾರವಾದ ಸ್ಪ್ರಿಂಗು ಇಟ್ಟಿರುವದರಿಂದ ಬೇಕಾದಾಗ ತಂಪಾದ ಗಾಳಿಯನ್ನು ಬೀಸುವದು. ಪ್ರತಿ ಒಂದು ಮನೆಯಲ್ಲಿಯೂ, ಶಾಲೆಗಳಲ್ಲಿಯೂ ಇಡಲು ಬಹು ಚೆನ್ನಾಗಿರುವದು.

ಕ್ರಯ ರೋಟರಿ ಬೀಸಣಿಗೆ (Fan) ರೂ 4—0—0

ನಮ್ಮ ವಿಳಾಸ:—

ಮಹಾರಾಷ್ಟ್ರ ಟ್ರೇಡಿಂಗ್ ಕಂಪೆನಿ

22. ತಿರುಪಳ್ಳಿ ಬೀದಿ

12–12 ಜಿ ಟಿ ಮದರಾಸ

ದಿ. ಮೈಸೂರು ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಂಡ್ ಮ್ಯಾರೆಜ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಹೆಡ್ ಆಫೀಸ್, ಮೈಸೂರು

ಸಬ್‌ಆಫೀಸ್ ಮಡಿಕೇರಿ, ಕೊಡಗು

ಈ ಕಂಪೆನಿಯಲ್ಲಿ ಇನ್ಶೂರ್ ಮಾಡಿರುವ ಪಾಲಿಸಿದಾರರುಗಳಿಗೆ ಅವರವರ ಸ್ಥಿರಾಸ್ತಿಗಳ ಮೇಲೆ ಸಾಲ ಕೊಡಲ್ಪಡುವುದು. ಆದುದರಿಂದ ಅಂತಹ ಸಾಲವನ್ನು ಹೊಂದಬೇಕೆಂದು ಅಪೇಕ್ಷಿಸುವ ಕೊಡಗಿನ ಪಾಲಿಸಿದಾರರು ಈ ಕೆಳಗಣಿಂದ ತಕ್ಕ ಫಾರಮುಗಳನ್ನು ತರಿಸಿ ಭರ್ತಿಮಾಡಿಸಿ ಕೆಳಗಿನ ವಿಳಾಸಕ್ಕೆ ಜಾಗ್ರತೆ ಕಳುಹಿಸಬೇಕಾಗಿದೆ.

ಎ ಸೂ.—1 ಆಣೆ ಚೀಟನ್ನು ಅಂಚೆ ಹಾಸಲಿಗಾಗಿ ಕಳುಹಿಸಬೇಕಾಗಿದೆ

ಬಿ ಎಚ್ ಆಚಾರ್ಯ,

ಸ್ಪೆಷಿಯಲ್ ರಿಪ್ರೆಸೆಂಟೇಟಿವ್ ಲೈಫ್ ಅಂಡ್

4–4 ಮ್ಯಾರೆಜ್ ಎಶ್ಯೂರೆನ್ಸ್

ಸಬ್ ಆಫೀಸ್—ಮಹದೇವಪೇಟೆ ಮಡಿಕೇರಿ

ESTATE TOOLS, GREATLY REDUCED

		Usual Price	Reduced Price
Swan neck mamuties 5 lbs		Rs 3— 8—0	3—0—0
" " 6 "		3—12—0	3—4—0
Pilting mamooties 4 "		3— 8—0	3—0—0
" " $4\frac{1}{2}$ "		3—12—0	3—4—0
" " 5 "		4— 2—0	3—6—0

SPECIAL TERMS FOR LARGE QUANTITIES

52–37 **SPENCER & Co., Ltd,**

MERCARA & POLLAIBETTA

Printed and Published by D S Krishnaswamiengar Proprietor, at Sreenivas Electric Press, Mysore for Kodagu Ltd Mercara—29 6 1923

If not delivered please return to "Kodagu Office, Mercara"
Reg. No. M. 1550.

ಕೊಡಗು.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪುಟ ೪] ಕೊಡಗು, ಸನ ೧೯೨೩ ನೇ ಜುಲೈ ತಾರೀಖು ೬ ನೆಯ ಶುಕ್ರವಾರ [ಸಂಚಿಕೆ ೬

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡ ಪ್ರಿಂಟಿಂಗ್ ... ಬೈಂಡಿಂಗ್ ಕೆಲಸಗಳು ... ನಿಮ್ಮ ಇಷ್ಟಾನುಸಾರ ... ಜಾಗ್ರತೆಯಾಗಿಯೂ ಸುಲಭವಾಗಿಯೂ ಮಾಡಿ ಕೊಡುತ್ತೇವೆ

Srinivas Electric Press,
MYSORE

The Coorg Central Co-operative Bank, Ltd.,

(Registered under the Co-operative Societies Act)

Share Capital	50,000
Paid up Share Capital	6 310
Fixed Deposits paid	31,873

Amounts lent mainly to Co-operative Societies in Coorg. The accounts are checked annually by The Registrar of Co-operative Societies Coorg. Deposits for one year and more carry interest at 6½% per annum and for smaller periods at 5% per annum.

Apply to the Secretary or Treasurer for further details.

President	Treasurer	Secretary
Mandera Cootiah Rao Bahadur	Bhojanga Bn. BA BL	C N Venkappaya BA BL

Dated 25-3-1923

...

... ಶ್ರೀ ಕೃಷ್ಣನ ... ತೊಟ್ಟಿಲು ... ಶ್ರೀ ಕೃಷ್ಣನ ಬಾಲಲೀಲೆ ...

ಕ್ರಯ ೧ ಕ್ಕೆ ೨-೦-೦

ಸೆಕ್ರಟರಿ— ಪಿ. ವಿ. ಎಸ್. ವಾಣಿ ಕಂಪೆನಿ
ಸಾಹುಕಾರ ಪೇಟೆ ಮದರಾಸು.

ಓಂ.

The Mysore Government Security

Life & Marriage Assurance Co., Ltd.,

Head Office: Life and Marriage Assurance Buildings MYSORE

ನೋಟೀಸು.

ಈ ಕಂಪೆನಿಯ ... 1000 ರೂಪಾಯಿ ... 1922 ನೆ ಡಿಸೆಂಬರ್ 31 ... 21 ನೇ ... 6 30 ಗಂಟೆ ... ಶ್ರೀಮಾನ್ ... ಜನರಲ್ ಸೆಕ್ರೆಟರಿ ... ರೂಪಾಯಿ 10—0—0 ... 25 ವರುಷಗಳವರೆಗೆ ಕೊಡುತ್ತಾ ಬರುವುದು

ಹೆಸರು ವಿಳಾಸ	ಬಾಂಡು ನಂಬರು	ಸಾಲ ಕೊಡಲ್ಪಡುವ ಮೊಬಲಗು
1 ಮ ...	5472	ರೂ 1000—0—0
2 ...	331	ರೂ 1000—0—0
3 ಮ ...	6074	ರೂ 1503—0—0
4 ಮ ...	5886	ರೂ 1000—0—0
5 ... (ಮೈಸೂರು)	4626	ರೂ 800—0—0

ಈ ... 2—0—0 ... 0—6—0 ... 5—0—0 ...

...

FORM OF APPLICATION FOR BONDS

To
THE GENERAL SECRETARY The Mysore Govt Security
LIFE & MARRIAGE ASSURANCE Co Ltd MYSORE

Gentlemen,
I the undersigned hereby ... bonds of Rs. 50 each in the General Investment Department above-named Company upon the terms and conditions contained in the detailed prospectus of the same ... the Articles of Association of the Company and to accept the same or any smaller number that may be allotted to me.
I beg to send herewith the sum of Rs ... being a deposit at the rate of Rs. 5 per bond towards ... bonds applied for by me and ... annual fee of Rs. 1 per ... year ...

Station
The ... Usual Signature

Please write distinctly:
Name in full
Profession or business
Address in full
Post Office
District or Province

ಈ ಕಂಪೆನಿಯ ವಿವರಕ್ಕೆ ಬರೆಯಿರಿ — ಬಿ ಎಸ್. ಆಚಾರ್ಯ, ಸ್ಪೆಷಿಯಲ್ ರಿಪ್ರಸೆಂಟೇಟಿವ್ ಮಡಿಕೇರಿ (ಕೊಡಗು ಜಿಲ್ಲೆ)

ಹೆಚ್ಚಿನ ವಿವರಕ್ಕೆ ... ಬರೆದು ... ಬಿ ಎಸ್ ಆಚಾರ್ಯ ಸ್ಪೆಷಿಯಲ್ ರಿಪ್ರಸೆಂಟೇಟಿವ್ ಮೈಸೂರು ... ಲೈಫ್ ಅಂಡ್ ಮ್ಯಾರೇಜ್ ಎಶ್ಶೂರೆನ್ಸ್ ಕಂಪೆನಿ ... ಮಡಿಕೇರಿ

— ಅಥವಾ —

ಜನರಲ್ ಸೆಕ್ರೆಟರಿ ಲೈಫ್ ಅಂಡ್ ಮ್ಯಾರೇಜ್ ಎಶ್ಶೂರೆನ್ಸ್ ಬಿಲ್ಡಿಂಗ್,
ಸಯ್ಯಾಜಿರಾವ್ ರೋಡು ಮೈಸೂರು

5—1

“ ಕೊಡಗು ”

೧೯೨೩ ನೇ ಇಸವಿ ಜುಲೈ ತಾ|| ೬ ನೇ ಶುಕ್ರವಾರ.

ಮಳೆ ಇಲ್ಲ; ಮಳೆ ಇಲ್ಲ.

‘ ಮಳೆ ಇಲ್ಲ ಮಳೆ ಇಲ್ಲ ’ ವೆಂದು ದೇವರ ಪ್ರಾರ್ಥನೆಗಿಂತಲೂ ಹೆಚ್ಚು ಶ್ರದ್ಧೆಯಿಂದ ನಿರಂತರವೂ ಪಾರಾಯಣ ಮಾಡುತ್ತಿರುವುದು ಸರ್ವಸಾಧಾರಣವಾಗಿ ಯೂರೋಪಿನ ಮಹಾಯುದ್ಧವಾದಂದಿನಿಂದೀಚೆಗೆ ಜನ ಸಾಮಾನ್ಯದಲ್ಲಿ ವಾಡಿಕೆಯಾಗಿದೆ. ‘ ಮಳೆ ಇಲ್ಲ ’ ವೆಂದೋ, ಹಾಗಾದರೆ ಅನ್ನ ತಿನ್ನುವುದು ಹೇಗೆ ಎಂದೋ, ಇಲ್ಲವೇ, ದೇವರ ಪ್ರೀತಿಯೇ ಇಲ್ಲ, ಎಂದು ಮುಂತಾಗಿ ದಿನಾಲು ಹೇಳುವ ಸಾವಿರಾರು ಮಂದಿಯನ್ನು ನೋಡುತ್ತಿರುವೆವು. ಈ ಬಾಯಿಪಾಠವು ನಿಜವಾಗಿ ನೋಡಿದರೆ ಕೇವಲ ಹಾಸ್ಯಾಸ್ಪದವಾಗಿಯೂ ಸ್ವಲ್ಪವೂ ಮನಸ್ಸಿನಲ್ಲಿ ವಿಚಾರಿಸದೆ ನಿಷ್ಪಕ್ಷಪಾತಿಯಾದ ಜಗದೀಶನ ಮೇಲೆ ತಪ್ಪನ್ನು ಹೊರಿಸುವುದಾಗಿಯೂ ಇರುತ್ತದೆ ದು ದೃಷ್ಟಾಂತರವನ್ನು ಸೂಚಿಸಿ ಹೇಳುವೆವು.

ಬೆಲ್ಲವನ್ನು ದೂರದಲ್ಲಿ ಕೂರಿಸಿಯೋ, ಅಥವಾ ಒಂದೇ ಚೂರು ಬೆಲ್ಲವನ್ನು ಹಾಕಿಯೋ, ಕಾಫಿಯು ಸಿಹಿಯಾಗಿಲ್ಲವೆಂದು ಹೇಳುವವರಿಗೆ ಯಾವ ಬಿರುದಿನಿಂದ ಸನ್ಮಾನಿಸಬೇಕೆಂದು ಹೇಳಿರಿ ! ನಾವಂತೂ ಇವರನ್ನು ಸೋಮಾರಿಗಳೆಂದೂ ಮೂರ್ಖರೆಂದೂ ನಿಸ್ಸಂಕೋಚವಾಗಿ ಕರೆಯುತ್ತೇವೆ “ ಕಾಸಿಗೆ ತಕ್ಕ ಕಜ್ಜಾಯ ” ಬೆಲ್ಲ ಹಾಕಿದಷ್ಟು ಸಿಹಿ ” ಎಂದು ತಿಳಿದಿಲ್ಲವೆ ನಿಮಗೆ. ಮಳೆ ಏಕ ಇಲ್ಲ; ಇದೇಕೆ ಹೀಗಾಯಿತು ? ಎನ್ನುವ ಕಲಿಕಾಲ ” ಎಂದು ಹೇಳುವವರಿಗೆ ಮಳೆ ಬಾರದ ಕಾರಣವನ್ನು ವಿಚಾರ ಮಾಡಲು ನಮ್ಮ ಯಥಾಶಕ್ತಿ ತಿಳಿಸಲು ಪ್ರಯತ್ನಿಸುವೆವು.

ತತ್ವ ವಾಕ್ಯಗಳಿಗೆ ಭಂಡಾರಗಾರವಾದ ಭಗವದ್ಗೀತೆಯಲ್ಲಿ “ ಫಲಾಪೇಕ್ಷೆ ಇಲ್ಲದೆ ಕರ್ಮಕ್ಕೋಸ್ಕರ ಕರ್ಮವನ್ನು ಮಾಡು ” ಎಂದು ಶ್ರೀಕೃಷ್ಣನು ಬೋಧಿಸಿರುವುದನ್ನು ಆಂಗ್ಲೇಯ ತತ್ವ ಜ್ಞಾನಿ “ Do your duty for duty's sake and not for the result ” ಎಂಬ ವಾಕ್ಯವನ್ನು ನಾವೆಲ್ಲರೂ ಓದಿರುತ್ತೇವೆ. ನಾವು ಮಾಡುವ ಕರ್ಮಕ್ಕೆ ಎಂದೂ ಫಲವನ್ನು ಇಚ್ಛಿಸದೆ ಭಗವಂತನಲ್ಲಿ ಪೂರ್ಣ ಭಕ್ತಿ ಇಟ್ಟು ನಮ್ಮ ಕರ್ತವ್ಯಗಳನ್ನು ಮಾಡುತ್ತಾ ಹೋದರೆ [illegible] ಕರ್ಮಕ್ಕೆ ತಕ್ಕ ಫಲವನ್ನು [illegible] ಕಾರ್ಯಗಳನ್ನು ಮಾಡದೆ [illegible] ಫಲವನ್ನು ಪಡೆದೆನೆಂದು ನಮ್ಮಲ್ಲಿ ಉಂಟಾಗುವ ಆನಂದವೇ ನಮಗೆ ನಿಜವಾದ ಉತ್ಕೃಷ್ಟ ಫಲವಾಗಿರುವುದು ಇದಕ್ಕಿಂತಲೂ ಹೆಚ್ಚಾಗಿ ಇನ್ನಾವುದಕ್ಕೂ ಆಶಿಸಬಾರದು. ಚೆನ್ನಾಗಿ ಶ್ರದ್ಧೆಯಿಂದ ವ್ಯವಸಾಯ ಮಾಡಿ ಕಾಲಕ್ಕೆ ಸರಿಯಾಗಿ ನಾಟಿಯನ್ನು ನೆಟ್ಟು, ನೆಟ್ಟಿನಿಂದುಂಟಾಗುವ ಸಂತೋಷವೇ ಕಣ್ಣಿಗೆ ಗೋಚರವಾಗುವ ಫಲಕ್ಕಿಂತಲೂ ಅಮೂಲ್ಯವಾದುದೆಂದು ತಿಳಿಯಬೇಕು. ಬಹಳ ಪ್ರಾಚೀನಕಾಲದಿಂದಲೂ ಅಂದರೆ ಋಷಿಗಳ ಕಾಲದಿಂದ ಮೊದಲ್ಗೊಂಡು ನಮ್ಮ ಭಾರತ ವರ್ಷದಲ್ಲಿ ನಡೆದು ಬರುತ್ತಿದ್ದ ಯಜ್ಞಯಾಗಾದಿಗಳೇ ಮೊದಲಾದ ಸತ್ಕರ್ಮಗಳಿಗೆಲ್ಲಾ ತಕ್ಕ ತಿಲಾಂಜಲಿಯನ್ನಿತ್ತು ಕೈಬಿಟ್ಟು ಕುಳಿತುಕೊಂಡಿರುವೆವು. ದಾನ ಧರ್ಮ, ಅತಿಥಿ ಸತ್ಕಾರಗಳೆಲ್ಲಕ್ಕೂ ಚಟ್ಟಿಂಚಿ ಮೆಂಟು ಒಂದು ಇವುಗಳಿಂದ ಸಾಕಷ್ಟು ನಿವೃತ್ತರಾಗಿ ಕುಳಿತಿರುವೆವು. ಇನ್ನು ಜನ ಪ್ರೀತಿ, ಸತ್ಯ, ಪ್ರಾಮಾಣಿಕತೆ, ಪ್ರಾಣಿ ದಯೆ ಮುಂತಾದ ಸದ್ಗುಣಗಳಲ್ಲಿ ಕೆಲವಕ್ಕೆ ಬಹಿಷ್ಕಾರವನ್ನೂ, ಇನ್ನು ಹಲವಕ್ಕೆ ತುಚ್ಛೀಕಾರವನ್ನೂ, ಕುಲದೈವಗಳಿಗೆ ಹಾಹಾಕಾರವನ್ನೂ, ಕೊಟ್ಟು ತೋರಿಸಿ, ದೂರದಲ್ಲಿ ಇಣಿಕಿನೋಡದಷ್ಟು ದೂರ ಕುಳಿತ್ತಿದ್ದೇವೆ. ಸರ್ವವಿಧದಲ್ಲಿಯೂ, ಎಲ್ಲಾ ಕಾರ್ಯಗಳಿಗೆ, ಬೇರೆ ಬೇರೆ ತರದ ಮಾರ್ಗದಿಂದ ದೂರವಾಗಿರುವೆವು. ನಾಲದುದಕ್ಕೆ ಇನ್ನು ಹೇಳುವುದೇನು ? ಮಳೆ ಇಲ್ಲ, ದೇವರ ದಯವೇ ಇಲ್ಲ ’ ವೆಂಬ ಪಾರಾಯಣವೇ ಹೊರತು ಮತ್ತೇನೂ ಇಲ್ಲ.

ಗೀತೆಯಲ್ಲಿ ಶ್ರೀಕೃಷ್ಣನು ಹೇಳಿರುವುದೇನೆಂದರೆ—

“ ಸೃಷ್ಟಿಕರ್ತನು ಪ್ರಜೆಗಳನ್ನೂ ಯಜ್ಞವನ್ನೂ ಸೃಷ್ಟಿಸಿ, ಯಜ್ಞವೇ ನಿಮಗೆ ಕಾಮಧೇನುವಾಗಲಿ, ಯಜ್ಞದಿಂದ ನೀವು ವೃದ್ಧಿ ಹೊಂದಿರಿ, ಯಜ್ಞಗಳಿಂದ ದೇವತೆಗಳನ್ನು ಸಂತೋಷಪಡಿಸಿರಿ, ಅವರು ನಿಮ್ಮನ್ನು ಸಂತೋಷಪಡಿಸಲಿ ; ಯಜ್ಞದಿಂದ ಪೂಜಿತರಾದ ದೇವತೆಗಳು ನಿಮಗೆ ಬೇಕಾದ ಸುಖಗಳನ್ನು ಕೊಡುವರು. ಅವರು ಕೊಟ್ಟ ಪದಾರ್ಥಗಳನ್ನು ಅವರಿಗೆ ಅರ್ಪಿಸದೆ ಉಂಬುವವನು ಕಳ್ಳನೇ ಸರಿ. ಯಾರು ತಮಗೋಸ್ಕರವೇ ಪಾಕಗಳನ್ನು ಮಾಡುವರೋ ಅವರು ಪಾಪಗಳನ್ನು ಉಣ್ಣುವರು. ಪ್ರಾಣಿಗಳು ಅನ್ನದಿಂದ ಹುಟ್ಟುವವು. ಅನ್ನವು ಮಳೆಯಿಂದ ಹುಟ್ಟುವುದು. ಯಜ್ಞದಿಂದ ಮಳೆಯು ಬರುವುದು. ಕರ್ಮದಿಂದ ಯಜ್ಞವು ಆಗುವುದು. ಈರೀತಿ ನಡೆಯುತ್ತಿರುವ ಜಗತ್ತೆಂಬ ಚಕ್ರವನ್ನು ಯಾವನು ಅನುಸರಿಸಿ ನಡೆಯುವುದಿಲ್ಲವೋ ಆ ಪುರುಷನು ಜೀವಿಸುವುದು ಪಾಪರೂಪ. ಅವನು ಇಂದ್ರಿಯ ಸುಖಗಳಲ್ಲಿಯೇ ರಮಿಸುವನು. ಅವನ ಬದುಕುವಿಕೆ ವ್ಯರ್ಥ. ” ಈ ಬೋಧನೆಗೆ ಅನುಸರಿಸಿ ಜೀವಿತವನ್ನು ನಡಿಸುವವರು ಎಷ್ಟು ಜನರಿದ್ದಾರೆ ? ನಾನು ಕಷ್ಟ ಪಟ್ಟಿದೆ, ನಾನು ಸಂಪಾದಿಸಿದೆ ನಾನು ಊಟಮಾಡಿದೆ ಎಂದು ಹೇಳುವವರೇ ಹೆಚ್ಚು. ಪರಮಾತ್ಮನ ದಯದಿಂದ ನಮ್ಮ ಜೀವದ ಉತ್ಪತ್ತಿಯು ಅದಕ್ಕೆ ಬೇಕಾದ ಅನುಕೂಲಗಳು ಆಗುವವೆಂಬುದನ್ನು ಜ್ಞಾಪಕದಲ್ಲಿಟ್ಟಿದ್ದರೆ ಈ ರೀತಿ ಆಸ್ತಿಕರ ಭಯಕ್ಕೆ ಎಡೆ ಇರುತ್ತಿರಲಿಲ್ಲ. ಬೆಟ್ಟಗಳಲ್ಲಿದ್ದ ಮರ ಕಾಡುಗಳನ್ನು ನಿರ್ಮೂಲ ಮಾಡಿದ್ದರಿಂದ ಮಳೆ ಕಡಿಮೆಯಾಯಿತ್ತೆಂದು ಅನೇಕರ ಅಭಿಪ್ರಾಯ. ಇದೂ ಆಗಬಹುದು. ಆದರೂ ದೇವರ ದಯವಿಲ್ಲದಿದ್ದರೆ ಮರ ಕಾಡು ಇದ್ದರೂ ನಮಗೆ ಮಳೆ ಬರಲಾರದು. ಪೂರ್ವದ ಯಜ್ಞಗಳನ್ನು ಮಾಡಲು ಸಾಧ್ಯವಿಲ್ಲದಿದ್ದರೂ ನಾವು ಮಾಡುವ ಸರ್ವ ಕಾರ್ಯಗಳೂ ದೇವರಿಗೆ ಅರ್ಪಿತವೆಂತ ಫಲಾಪೇಕ್ಷೆಯಿಲ್ಲದೆ ಮಾಡಿದರೆ ಅದೇ ಈಗಿನ ಕಾಲಕ್ಕೆ ಯಜ್ಞವಾಗಿದೆ.

ಇದೇನೋ ಪತ್ರಿಕೆಯಲ್ಲಿ ಸ್ಥಳವಿದೆಯೆಂದು ಪುರಾಣದ ಕಥೆ ಹಾಗಿಗಳನ್ನೇ ಕುರಿತು ಹೇಳಿದೆವೆಂದು ಆಕ್ಷೇಪಿಸಬೇಡಿ. ನಾವು ನೋಡಿದಂತೆಯೇ ಕೆಲವು ಕಾಲದ ಹಿಂದೆ ಅಂದರೆ ಸುಮಾರು ಮೂವತ್ತು ನಲವತ್ತು ವರ್ಷಗಳ ಹಿಂದೆ ನಮ್ಮ ದೇಶದ ಕೆಲವು ದೇವಸ್ಥಾನಗಳಲ್ಲಿ ರುದ್ರಾಭಿಷೇಕ ಪೂಜೆಗಳನ್ನು ನಡಿಸಿದಾದರೆ ಇಡೀ ದೇಶಕ್ಕೇ ಮಳೆಯು ಸಾಕಷ್ಟು ಸುರಿಯುತಿತ್ತು. ಈಗ ಅಂತಹ ಪೂಜೆಗಳನ್ನು ನಡಿಸಿದರೆ (ನಡಿಸುವುದೂ ಅಪರೂಪ) ಆ ಸ್ಥಳದಲ್ಲಿ ಆ ಕಾಲದಲ್ಲಿ ಮಾತ್ರ ಮಳೆ ಬೀಳಲೂ, ಕೆಲವು ವೇಳೆಗಳ ಮಳೆ ಬಾರದೆ ಇರಲೂ, ಕಾರಣವನ್ನಾದರೂ ಹೇಳುವಿರಾ. ಇಲ್ಲವೇ ಒಣಗಿಲ್ಲ ನಿದ್ದೆಗೇಡೆಂದು ದೇವರ ಮೇಲೆ ತಪ್ಪನ್ನು ಹೊರಿಸುವಿರಾ, ಹೇಳಿ.

ಮೇಲೆ ಹೇಳಿದವುಗಳಿರಾ [illegible] ಜೀವರಾಶಿಯನ್ನು [illegible] ನಿರುವನೆಂದು ನಂಬುವ [illegible] ವಿನಹ ದೇವರೇ ಇಲ್ಲ [illegible] ಸ್ವಾಭಾವಿಕವೆಂದು ಹೇಳುವವರಿಗೆ ಇದೊಂದೂ ಸಮಂಜಸ [illegible] ಅಂಧನ [illegible] ಗೋಚೆಗೆ ಹೋಗ [illegible]

[illegible] ಹೇಳುವುದಾದರೆ, ನಾವು ಶ್ರದ್ಧಾ ಭಕ್ತಿಯಿಂದಲೂ ಭಕ್ತಿಯಿಂದಲೂ ಕರ್ಮಕ್ಕೋಸ್ಕರ ಕರ್ಮವನ್ನು ಮಾಡುತ್ತಾ, ಪ್ರತಿ ಫಲಕ್ಕೆ ಲಕ್ಷ್ಯ ಕೊಡದಿದ್ದರೆ ನಾವು ಎಲ್ಲವೂ ಸಿದ್ಧಿಯಾಗುವುದರಲ್ಲಿ ಸಂದೇಹವೇ ಇಲ್ಲ. ದೇವರ ಮೇಲೆ ಭಾರಹಾಕಿ [illegible] ಪ್ರಾಮಾಣಿಕತೆ, ನಿಷ್ಕಪಟ ನಿಷ್ಠೆ [illegible] ಮುಂತಾದ [illegible] ದೇಶಸೇವಕನು ತನ್ನ ಕರ್ಮವನ್ನು ಮಾಡಿದಂತಾಗುವುದು [illegible] ಯಜ್ಞಯಾಗಾದಿಗಳನ್ನಾಗಲೀ, ಜಪ ಮಾಡುವ [illegible] ದೇವರಿಗೆ ನಾವೆಲ್ಲರೂ ಮಕ್ಕಳಾಗಿದ್ದು ನಾವು ಸನ್ಮಾರ್ಗದಲ್ಲಿ ನಡೆಯುವುದನ್ನು ನೋಡಿ ಆತನು ಸಂತೋಷಪಡುವಂತೆ ಮಾಡುವ ದೇಶ ಸೇವಕನು ಬೇರೆ ವಿಧದ ತಪಸ್ಸನ್ನು ಮಾಡಿ ದೇವರನ್ನು ತೃಪ್ತಿಪಡಿಸಲಾರನು. ಆದ್ದರಿಂದಲೇ ದೇಶ ಸೇವೆಯೇ ಈಶ ಸೇವೆಯೆಂದು ತಿಳಿದು ಇವುಗಳಲ್ಲಿ ಉತ್ತಮವಾದ ದೇಶಸೇವೆಯನ್ನು ಕೈಕೊಳ್ಳಿರಿ. ಹಾಗೆ ಕೈಕೊಂಡ ನಂತರ ಮಳೆ ಇಲ್ಲ, ದೇವರ ದಯೆ ಇಲ್ಲವೆಂದು ನೀವಾರೂ ಗೊಣಗುಟ್ಟಲಾರಿರಿ. ಲೌಕಿಕ ಮಾರ್ಗದಲ್ಲೇ ವೇದಾಂತವನ್ನು ಉಪಯೋಗಿಸಿ ಹೇಗೆ ಕೃತಾರ್ಥರಾಗಬಹುದೆಂದು ಹೇಳಲು ಇಲ್ಲಿ ಸ್ಥಳವಿಲ್ಲ. ಹಾಗೆ ತಿಳಿಯಲು ಕುತೂಹಲವಿರುವವರು ಸ್ವಾಮಿ ರಾಮ ತೀರ್ಥರ ಉಪನ್ಯಾಸವನ್ನು ಒಮ್ಮೆ ಓದಿನೋಡಿದರೆ ಮನವರಿಕೆಯಾಗಬಹುದು.

ಆದುದರಿಂದ ಯಾವ ಕಾರ್ಯವನ್ನೇ ಆಗಲಿ ಮಾಡುವಾಗ ಕಾರ್ಯದ ಫಲಕ್ಕೆ ದೃಷ್ಟಿಗೊಡದೆ ತಾನು ಕಾರ್ಯ ಮಾಡುತ್ತಿರುವನೆಂದು ತನಗೆ ತಿಳಿಯದಷ್ಟು ಕಾರ್ಯದಲ್ಲಿ ಮಗ್ನನಾಗಿ ಕೆಲಸಮಾಡುತ್ತಿದ್ದು ಮುಂದಿನ ಜನಾಂಗಕ್ಕೆ ದಾರಿ ತೋರಿಸಿ ಕೊಡಬೇಕಲ್ಲದೆ ಅನ್ಯಥಾ ದೇವರನ್ನು ದೂರುತ್ತಾ ಕುಳಿತುಕೊಳ್ಳುವುದರಿಂದ ಏನೊಂದೂ ಪ್ರಯೋಜನವಿಲ್ಲವೆಂದು, ನಾವು ಪುನಃ ಪುನಃ ಹೇಳುತ್ತೇವೆ.

ಸ್ಕೂಲು ಫೈನಲ್ ಪರೀಕ್ಷೆಯ ಫಲಿತಾಂಶ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಿಂದ ಈ ವರ್ಷ ಸ್ಕೂಲು ಫೈನಲ್ ಪರೀಕ್ಷೆಗೆ ಹೋದ ೪೪ ವಿದ್ಯಾರ್ಥಿಗಳ ಪೈಕಿ ಹದಿನೇಳು ಮಂದಿ ತೇರ್ಗಡೆ ಹೊಂದಿರುತ್ತಾರೆಂದು ಕೆಳದವಾರವೇ ಪ್ರಕಟಿಸಿದ್ದೆವು. ಇದರಲ್ಲಿ ಗಣಿತಶಾಸ್ತ್ರದಲ್ಲಿ ಪರೀಕ್ಷೆಗೆ ಹೋದವರ ಪೈಕಿ 12 ಮಂದಿಯೂ ಚರಿತ್ರೆಯಲ್ಲಿ ಹೋದವರ ಪೈಕಿ 5 ಹುಡುಗರೂ ಪಾಸಾಗಿರುವರು. ಆದರೆ ಕಮರ್ಷಿಯಲ್ ಭಾಗ ತೆಗೆದುಕೊಂಡವರಲ್ಲಿ ಒಬ್ಬನು ಮಾತ್ರ ತೇರ್ಗಡೆ ಹೊಂದಿರುವನು. ಒಟ್ಟಾರೆ ಈ ವರ್ಷ ಶೇಕಡ 26 ರಷ್ಟು ಮಾತ್ರ ತೇರ್ಗಡೆ ಹೊಂದಿರುವುದು ವ್ಯಸನಕರವೇ ಸರಿ. ಕಳೆದ ವರ್ಷ 50 ವಿದ್ಯಾರ್ಥಿಗಳ ಪೈಕಿ 22 ಮಂದಿ ಪಾಸಾಗಿ ಶೇಕಡ 44 ರಷ್ಟು ಒಳ್ಳೇ ಫಲಿತಾಂಶ ದೊರಕಿತ್ತು. ಆದುದರಿಂದ ಎಲ್ಲರೂ ಸ್ಕೂಲಿನವರನ್ನು ಅಂದರೆ ಉಪಾಧ್ಯಾಯರುಗಳನ್ನೂ ವಿದ್ಯಾರ್ಥಿಗಳನ್ನೂ ಸಂತೋಷದಿಂದ ಅಭಿವಂದಿಸಿದರು. ಆದರೆ ಈ ವರ್ಷ ಅಂಥಾ ಅಭಿವಂದನೆಗೆ ಕಾರಣವೇನೂ ಕಾಣುವುದಿಲ್ಲ. ಅದಕ್ಕೆ ಬದಲು ವ್ಯಸನವನ್ನು ಸೂಚಿಸಲು ಎಡೆಕೊಟ್ಟಂತೆ ಕಾಣುತ್ತದೆ. ವರ್ಷವರ್ಷವೂ ಶಾಲೆಯು ಉತ್ತಮಸ್ಥಿತಿಗೆ ಬರತಕ್ಕದ್ದಾಗಿರಬೇಕಲ್ಲದೆ ಕೆಳಕ್ಕೆ ಇಳಿಯಬಾರದು. ಈ ವರ್ಷದ ಇಂಥಾ ಅಲ್ಪ ಫಲಿತಾಂಶಕ್ಕೆ ಜವಾಬ್ದಾರರು ಯಾರೆಂದು ಕೇಳುವ ಮಕ್ಕಳ ತಂದೆತಾಯಿಗಳ ಸಹಜವಾದ ಪ್ರಶ್ನೆಗೆ ಉತ್ತರ ಯಾವುದು ? ಇದಕ್ಕೆ ಜವಾಬ್ದಾರರು ವಿದ್ಯಾರ್ಥಿಗಳೆಂದು ಉಪಾಧ್ಯಾಯರೂ, ಉಪಾಧ್ಯಾಯರುಗಳೆಂದು ವಿದ್ಯಾರ್ಥಿಗಳೂ ಹೇಳುವುದು ಸಾಧಾರಣವಾಗಿ ಕೇಳಬರುತ್ತದೆ. ಆದರೆ ಇವರು ಎರಡು ಕಡೆಯವರೂ ಇದಕ್ಕೆ ಜವಾಬ್ದಾರರೆಂದೇ ತಂದೆತಾಯಿಗಳ ಅಭಿಪ್ರಾಯವಾಗಿದೆ. [illegible] ರಲ್ಲೂ ಈ ಜವಾಬ್ದಾರಿಕೆಯು ಸಮಭಾಗವಾಗುವುದೋ ಎಂಬುದೊಂದು ಪ್ರಶ್ನೆ ಹುಟ್ಟುತ್ತದೆ. ಇದಕ್ಕೆ ಉತ್ತರವನ್ನೀಯುವುದು ಸ್ವಲ್ಪ ಕಷ್ಟವೆಂದು ತೋರಬಹುದು. ಆದರೆ ಕಾಲೇಜು ಕ್ಲಾಸುಗಳಲ್ಲಿ ವಿದ್ಯಾರ್ಥಿಗಳು ಪ್ರಬುದ್ಧರಾಗಿ ಯುವಕರಾಗಿರುವುದರಿಂದ ಬೇರೊಬ್ಬ ಗಾರ್ಡಿಯನ ಎಚ್ಚರಿಕೆಯಲ್ಲಿರುವ ಅವಶ್ಯಕತೆ ಇಲ್ಲದೆ ಇರುವುದರಿಂದಲೂ ಅವರು ತಮ್ಮ ಜವಾಬ್ದಾರಿಯನ್ನು ಚೆನ್ನಾಗಿ ತಿಳಿದಿರಲಾರರು. ದುರ್ವ್ಯಾರೆ ಎಲ್ಲಿ ಪರೀಕ್ಷೆಯು ಫಲಿತಾಂಶದ ಭಾರವು ಹೆಚ್ಚಾಗಿ ವಿದ್ಯಾರ್ಥಿಗಳ ಮೇಲೆ ಬೀಳುವುದು. [illegible] ಲ್ಲ ಯಾದರೂ, ಹಾಗಿಲ್ಲ. ವಿದ್ಯಾರ್ಥಿಗಳೆಲ್ಲರೂ ಪ್ರಬುದ್ಧರಾಗಿರುವುದಿಲ್ಲ. ಗಾರ್ಡಿಯನರ ಎಚ್ಚರಿಕೆಯಲ್ಲಿರುವವರಾಗಿರುತ್ತಾರೆ. ಇವರನ್ನು ತರಬೇತು ಪಡಿಸುವ ಭಾರವು ಹೆಚ್ಚಾಗಿ ಉಪಾಧ್ಯಾಯರುಗಳದ್ದಾಗಿದೆ. ಅಂದರೆ ವಿದ್ಯಾರ್ಥಿಗಳಿಗೆ ಜವಾಬ್ದಾರಿ ಇಲ್ಲವೆಂದಲ್ಲ. ಅವರಿಗೂ ತಕ್ಕಷ್ಟು ಇದ್ದೇ ಇದೆ. ಆದರೆ ಸ್ವಲ್ಪ ಹೆಚ್ಚಿಗೆ ಉಪಾಧ್ಯಾಯರುಗಳ ಜವಾಬ್ದಾರಿಕೆಯು ಮೀರಿರುತ್ತದೆ. ಇಂಗ್ಲೀಷು ಪರೀಕ್ಷೆಯ ಫಲಿತಾಂಶದಲ್ಲಿ ಇದು ಸ್ಪಷ್ಟವಾಗುತ್ತದೆ. [illegible] ಇಂಗ್ಲೀಷು ಒಂದರಲ್ಲಿ ಮಾತ್ರ ಸುಮಾರು 30 ಮಂದಿ ಫೇಲಾದರೆಂದು ಸೋದರವಂತೆ. ಕಳೆದ ವರ್ಷ ಸ್ಕೂಲ್ ಫೈನಲ್ ಕ್ಲಾಸಿಗೆ ವರ್ಷದ ಪ್ರಾರಂಭದಿಂದ ಅಂತ್ಯದವರೆಗೆ ಒಬ್ಬ [illegible] ಉಪಾಧ್ಯಾಯ [illegible] ಇದ್ದಿದ್ದರೆ [illegible] ಹೇಳಬಹುದು. ಆದುದರಿಂದ ಉಪಾಧ್ಯಾಯರುಗಳೂ ವಿದ್ಯಾರ್ಥಿಗಳೂ ತಮ್ಮ ಜವಾಬ್ದಾರಿಯನ್ನು ಚೆನ್ನಾಗಿ ಅರಿತುಕೊಳ್ಳಬೇಕೆಂದು ನಾವು ಸೂಚಿಸುತ್ತೇವೆ. ಆರ್ಜಿಸಿದ ಹಣವನ್ನು ತಮ್ಮ ಮಕ್ಕಳ ವಿದ್ಯಾರ್ಜನೆಗಾಗಿ ತಂದೆತಾಯಿಗಳು ವೆಚ್ಚಮಾಡುವುದು ಏನೊಂದೂ ಆಶ್ಚರ್ಯವಿಲ್ಲ. ಸರಕಾರದ ದೇಶ ಎಲ್ಲಾ ಶಾಖೆಗಳಲ್ಲಿ ನಿಷ್ಠಾವಿಧಿ ಹೋಗುತ್ತಿರುವಾಗ ಇದ್ದರೂ [illegible] ವಿದ್ಯಾ [illegible] ಸಂಬಳ ಹೆಚ್ಚು [illegible] ಕಾಲದಲ್ಲೂ ಉಪಾಧ್ಯಾಯರು [illegible] ಸ್ವಲ್ಪ [illegible] ಹೆಚ್ಚಾಗಿ ವಹಿಸಬೇಕೆಂದು ಹೇಳಬೇಕಾಗಿದೆಯೆ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರೂ ಕಳೆದ ಬಟ್ಟೆಂಬೆಂಟಿನ ದೆಸೆಯಿಂದ ಉದ್ಯೋಗವು ಎಲ್ಲಿಯೂ ದೊರೆಯುವುದಿಲ್ಲವೆಂಬ ಚಿಂತೆಯೊಂದು ತಂದೆತಾಯಿಗಳನ್ನು ಕಷ್ಟ ಪೀಡಿಸುತ್ತಿದೆ. ಇದರೊಂದಿಗೆ ತಮ್ಮ ಮಗ ಪಾಸಾದನು ಎಂಬ ತೃಪ್ತಿಯನ್ನೂ ಸಹ ಇಲ್ಲದಂತೆ ಮಾಡಿ ಅವರ ಮನೋವ್ಯಥೆಯನ್ನು ಹೆಚ್ಚಿಸದಂತೆ ಉಪಾಧ್ಯಾಯರುಗಳೂ ವಿದ್ಯಾರ್ಥಿಗಳೂ ಮುಂದಿನಾಗಿಯೂ ಪ್ರಯತ್ನಿಸಬೇಕಾಗಿದೆ. ಕಳೆದುದಂತು ಕಳೆದು ಹೋಯಿತು. ಆದರೆ ಬರುವ ವರ್ಷದ ಪರೀಕ್ಷೆಗೆ ತಯಾರಿಲ್ಲ. ಸ್ಕೂಲಿನ ವರ್ಷ ಈಗ ತಾನೇ ಪ್ರಾರಂಭವಾಗಿದೆ. [illegible] ಪರೀಕ್ಷೆಯ [illegible] ಯಶಸ್ಸು, ಮೂರರಷ್ಟು [illegible] ಫಲಿತಾಂಶವನ್ನು ಪಡೆಯಬೇಕೆಂಬ ದೃಢಮನಸ್ಸಿನಿಂದ ಗುರುಗಳೂ ಶಿಷ್ಯರೂ ಈಗಲೇ ಕೆಲಸ ಪ್ರಾರಂಭಿಸಿದರೆ ಮಾತ್ರವಾಗಿಯೂ ಒಳ್ಳೆಯ ಫಲ ದೊರೆಯಬಹುದು.

ಗಣಿತಾಗ್ರಗಣ್ಯ ಶ್ರೀಯುತ ರಾಮಾನುಜಾಚಾರ್ಯರು

ಮದ್ರಾಸಿನಲ್ಲಿ ಎಸ್. ಶ್ರೀನಿವಾಸಾಚಾರ್ಯರೆಂಬವರು ಬಿ. ಎ. ಇದಸ್ಪೆಕ್ಟರು. ಇವರ ಮಗನೇ ನಾರಾಯಣ ಎಂಬ ಬಾಲಕನು. ಬಾಲಕನೇನೋ ಹೌದು. ಇನ್ನೂ ಹನ್ನೆರಡು ವರ್ಷ ಪ್ರಾಯವೇ [illegible] ಆತನು ಗಣಿತ ಮತ್ತು ಇಂಗ್ಲೀಷಿನಲ್ಲಿ ಅಗ್ರಗಣ್ಯನಾಗಿರುತ್ತಾನೆಂದರೆ ಆಶ್ಚರ್ಯವಲ್ಲವೇ ? ನ್ಯಾಯವಾಗಿ ಶಾಲಾ ಶಿಕ್ಷಣವಿಲ್ಲದೆಯೇ ಈ ಚಿಕ್ಕ ಬಾಲಕನು ಇಂಗ್ಲೀಷ್ ಪುಸ್ತಕಗಳೆಲ್ಲವನ್ನು ಅಭ್ಯಾಸಮಾಡಿ ಹೈಯರ್ ಆಲ್ಜಿಬ್ರ ಟ್ರಿಗನಾಮಿಟ್ರಿ ಮುಂತಾದ ಎಲ್ಲಾ ಲೆಕ್ಕಗಳನ್ನು ಕಲಿತು ಪೂರೈಸಿ ಎಲ್ಲರೂ ಮರುಳಾಗುವಂತೆ ಮಾಡಿರುತ್ತಾನೆ. ಅತ್ಯಾಶ್ಚರ್ಯಕರ ಶಕ್ತಿಯ ಬಾಲಕನು ಟ್ರಿಪ್ಲಿಕೇನಿನಲ್ಲಿದ್ದುಕೊಂಡು ಗಣಿತದ ಅಭ್ಯಾಸಕ್ಕಾಗಿ ಜರ್ಮನ್ ಮತ್ತು ಫ್ರೆಂಚ್ ಭಾಷೆಗಳನ್ನು ಕಲಿಯುತ್ತಿದ್ದಾನೆ. ಇವನ ಶಕ್ತಿಯನ್ನು ಗಣಿತ ಪ್ರವೀಣರುಗಳಾದ ಶ್ರೀಯುತ, ಬಿ|| ರಾಮ. ಐಯ್ಯಂಗಾರ್ ಮತ್ತು ಶೇಷ ಐಯ್ಯರ್‌ಗಳಿಂದ ಪರೀಕ್ಷೆ ಮಾಡಲ್ಪಟ್ಟು ಎಲ್ಲರೂ ಈತನ ಶಕ್ತಿಗೆ ಮೆಚ್ಚಿ ಮರುಳಾಗಿರುತ್ತಾರೆ.

ಇವರುಗಳ ಮತ್ತು ಬಾಲಕನ ಸ್ನೇಹಿತರುಗಳ ಪ್ರಯತ್ನದಿಂದ ಸರಕಾರವು ಬಂದು ವರ್ಷದವರೆಗೆ ತಿಂಗಳಿಗೆ 7

…ತನಕೊಡುತ್ತಿದ್ದವರು ಈತನ ಅಭಿವೃದ್ಧಿಯನ್ನು ಹೆಚ್ಚಿಸ… ಈತನನ್ನು ಮದ್ರಾಸು ಕಾಲೇಜಿಗೆ ಸೇರಿಸಬೇಕೆಂದು …ರಕಾರವು ಯೋಚಿಸುತ್ತಿರುವುದು. ಅದರೆ ಇದೇನು? …ಸ್ಕಂದೇಯನಗಾರದ ಈತನು ವಿಶ್ವವಿದ್ಯಾಲಯದ ತರಗತಿಗಳೆಲ್ಲವನ್ನು ಪೂರೈಸಿರುವನಾದ ಮೇಲೆ ಪುನಃ ಕಾಲೇಜಿಗೆ ಸೇರಿಸುವ ಪ್ರಯತ್ನ ವಹಿಸುವುದು ನಿಷ್ಪ್ರಯೋಜನವಲ್ಲದೆ ಈತನ ದಾರಿಗೆ ಮುಳ್ಳು ಹಾಕಿದಂತೆಯೇ ಸರಿ. ಈತನು …ಗ ಪ್ರಪಂಚದ ಶೋಧಿಸುವಂತೆ ಮಾಡಬೇಕಾದರೆ ಪರಿಶೋಧಕ ಕಾರ್ಯಗಳ ಮೇಲೆ ಈ ಎಳೆಯ ಬಾಲಕನನ್ನು ಕಳುಹುವುದು ಸರಕಾರದವರ ಪಾಲಿಗೆ ಬಿದ್ದಿರುವುದು. ಈಗಾಗಲೇ ಈತನ ಪರಿಶೋಧಕಗಳಲ್ಲಿ ಕೆಲವನ್ನು ಇವನ ಹಿತಚಿಂತಕರ ಮೂಲಕ ಕೇಂಬ್ರಿಡ್ಜಿನ ಗಣಿತಶಾಸ್ತ್ರಜ್ಞ ಶ್ರೀ ಹಾರ್ಡಿಯವರಿಗೆ ಕಳುಹಿಸಲ್ಪಟ್ಟಿರುವವು.

ಬಾಲಕನು ಇಂಗ್ಲೀಷಿನಲ್ಲಿ ಮಾತನಾಡಲು ಮತ್ತು ಬರೆಯಲು ಸಮರ್ಥನಾಗಿರುತ್ತಾನೆ. ಷೇಕ್ಸ್‌ಪಿಯರ್ ರಚಿಸಿದ ನಾಟಕಗಳೆಲ್ಲವನ್ನೂ ಅಭ್ಯಾಸಿಸಿ ಈಗ ಇತರ ಇಂಗ್ಲೀಷು ಸಾಹಿತ್ಯದ ಗ್ರಂಥಮಾಲೆಗಳನ್ನು ಕಲಿಯುತ್ತಿದ್ದಾನೆ. ಬಾಲಕನ ತಂದೆಯು ಸ್ವಲ್ಪ ಕಾಲದವರೆಗೆ ಸರಕಾರದ ಸಹಾಯವೇನಾದರೂ ಸಿಕ್ಕಬಹುದೋ ಎಂದು … ವಿಲಾಯತಿಗೆ ಕಳುಹಿಸುವ ವಿಚಾರ ಬಿಟ್ಟಿರುವರೇ.

ಹೇಗಿರಲಿ ಮುಂದೆ ಸಿಗಬೇಕಾದ ತನ್ನ ಕಾರ್ಯಸಿದ್ಧಿಯಲ್ಲಿ … ನುಗಯಿದೆ. ಉದಾರಬುದ್ಧಿಯಿಂದ ನೋಡಿದರೆ ಇಂತಹ ದರಿದ್ರಸ್ಥಿತಿಯ ಬಾಲನ ಕಾಂತಿಯು ಕಳೆಗುಂದದಂತೆ … ದ ಎಚ್ಚರಿಕೆ ತೆಗೆದುಕೊಳ್ಳುವುದು ಸರಕಾರ ವಿಶ್ವವಿದ್ಯಾನಿಲಯಗಳ ಮತ್ತು ಈ ಪ್ರಾಂತ್ಯದ ಪ್ರಜೆಗಳ ಪಾಲಿಗೆ ಬಿದ್ದಿರುವುದು. "ಹಿಂದೂ ಪತ್ರಿಕೆಯಿಂದ"

ಇಂಗ್ಲೆಂಡಿನ "ಲಂಡನ್ ಟೈಮ್ಸ್" ಮೊದಲಾದ ಅನೇಕ ಪ್ರಮುಖ ಪತ್ರಿಕೆಗಳ ಮಾಲೀಕರಾಗಿದ್ದ ಲಾರ್ಡ್ ನಾರ್ತ್ ಕ್ಲಿಫ್ ಪ್ರಭುಗಳು ಬರೆದ ಡೈರಿಯಿಂದ

ಜನವರಿ 7–1922 ಇಂಡಿಯಾ ದೇಶದಲ್ಲಿ ಪ್ರಯಾಣೀಕರು ತಿಳಕೊಳ್ಳತಕ್ಕ ವಿಷಯಗಳು ಬಹಳ ಇವೆ. ನಾವು ಪ್ರಯಾಣ ಮಾಡುವಾಗ ಎಲ್ಲಾ ಅನುಕೂಲ ಪಡಿಸಿಕೊಂಡಿದ್ದರೂ ಬಹಳ ಆಯಾಸಕರವಾದದೆಂತಹಾ ಈ ದೇಶವನ್ನು ನಾನು ಮೆಚ್ಚುವದಿಲ್ಲ.

(1) ಉದಾಹರಣೆಗಾಗಿ ತೆಗೆದುಕೊಂಡರೆ ಎಷ್ಟು ಪ್ರಯಾಣ ಮಾಡಿದರೂ ನೇಟಿವ್ ಜನರ ಅಸಹ್ಯಕರವಾದ ಉಗುಳುವ ಶಬ್ದವನ್ನು ನಿಲ್ಲಿಸಲಿಕ್ಕಾಗುವದಿಲ್ಲ.

(2) ಎಷ್ಟು ಹಣವಿದ್ದರೂ ಗುಟ್ಟಿನಲ್ಲಿರಲಿಕ್ಕೆ ಸಾಧ್ಯವಿಲ್ಲ. ಎಲ್ಲೆಲ್ಲಿಯೂ ನೇಟಿವ್ ಜನರಿದ್ದಾರೆ. ನಿಮ್ಮ ವಿಷಯದಲ್ಲಿ ಬಹಳ ಕುತೂಹಲದಿಂದ ತಿಳಕೊಳ್ಳಲು ಅಪೇಕ್ಷಿಸುತ್ತಾರೆ. ಅವರು ನಿಮ್ಮ … ಗವರ್ನರುಗಳ ಬಂಗ್ಲೆಗಳಲ್ಲಿ ಕಳ್ಳರಿದ್ದಾರೆ. ಪ್ರತಿಕೋಣೆಯಲ್ಲೂ ಎಲ್ಲಾ ಸಾಮಾನುಗಳನ್ನು ಬೀಗ ಹಾಕಿ ಇಟ್ಟುಕೊಳ್ಳಬೇಕೆಂತ ಸೂಚನೆ ಹಾಕಿರುತ್ತೆ. ನನ್ನದು ಏನು ಕಳವಾಗಲಿಲ್ಲವೇಕೆಂದರೆ ನಾನು ನನ್ನ ಸಂಗಡ ಹಣವೇನೂ ತೆಗೆದುಕೊಂಡು ತಿರುಗುವದಿಲ್ಲ. ಸ್ನೇಹಿತರ ಮತ್ತು ಜೊತೆಗಾರರ ಖರ್ಚಿನಲ್ಲೇ ನಾನು ಪ್ರಯಾಣ ಮಾಡುತ್ತಿದ್ದೆ.

(3) ನಾನಾ ವಿಧದ ಹುಳಗಳ ಕಾಟ, ಬಾವಲಿ … ಸೊಳ್ಳೆಗಳ ಕಾಟ.

ನಮ್ಮ ಗಾಡಿಯಲ್ಲಿ ಸ್ವಂತ ಅಡಿಗೆಯವನಿಲ್ಲ. … ಸ್ಟೇಷನುಗಳ ಕೆಳಗೆ ನಾವು ಇಂಗ್ಲೆಂಡಿನಲ್ಲಿ ಮಾಡುತ್ತಿದ್ದಂತೆ ರೈಲ್ವೇಸ್ಟೇಷನುಗಳಲ್ಲಿ ಊಟಮಾಡುತ್ತಾರೆ. ಕೆಲವು … ಅವು ಬೇರೆ ಜನರು ಸೇರುವ ಸ್ಥಳವಾಗಿದೆ. ನಮ್ಮನ್ನು ನೋಡಲಿಕ್ಕೆ ಅನೇಕರು ಇಲ್ಲಿಗೆ ಬರುತ್ತಿದ್ದರು.

ಇಂಡಿಯಾವು ಬಹಳ ಗಲಭೆ ಎದ್ದಿರುವ ಸ್ಥಿತಿಯಲ್ಲಿದೆ. … ಸಲಿಗೆಯಾಗಿ ಮಾತಾಡುವ ನೇಟೀವ್ ಯಾವನಾದರೂ ಒಂದಲ್ಲಿ ಮಾತನಾಡತೊಡಗುವನು. ಅವನಿಗೆ ನಾನು ಏನು ಕೇಳುತ್ತಿದ್ದೆನೆಂದರೆ—"ಹಿಂದೂಗಳು ಮುಸಲ್ಮಾನರು … ಕತ್ತರಿಸಿಕೊಳ್ಳಬೇಕೆಂತ ಇದ್ದರೆ … ವರ್ಗದ … ಪೂರೈಸಬೇಕೆಂತ ಇದ್ದರೆ ನೀವು ಯಾಕೆ ತಡೆಯಬೇಕೆಂತ ನನಗೆ ಗೊತ್ತಾಗುವದಿಲ್ಲ." ನಾನು ಒಂದು ವೇಳೆ ಯೋಚಿಸುವದೇನೆಂದರೆ—ನಾವು ಮದ್ರಾಸ್, ಬೊಂಬಾಯಿ, ಕಲ್ಕತ್ತಾ ಮತ್ತು ಕರಾಚಿಯನ್ನು ಮಾತ್ರ ನಮ್ಮ ವಶದಲ್ಲಿ ಇಟ್ಟುಕೊಂಡರೆ ಸಾಕೆಂತ. ನೇಟಿವ್ ಜನರಿಗೆ ನಾನು ಯಾವಾಗಲೂ ಹೇಳುತ್ತಿದ್ದೆನೆಂದರೆ—"… ನಿಮ್ಮನ್ನು ಮೊದಲಂತೆ ತಡೆದಿರುವ … ಸೈನ್ಯಕ್ಕೆ ನೀವು ಬಂದು ಕಾಸು ಕೊಡುವದಿಲ್ಲವಲ್ಲ".

… ಜರ್ಮನರ ಲಂಗ್ವೆಯಲ್ಲಿ ಇರುವ ರಾಜಕೀಯ … ಇಂಥಾ ಶೀಘ್ರ ಇಂಡಿಯಾದಲ್ಲಿ ಅವಶ್ಯವಿದೆ ಎಂತ ತೋರುತ್ತೆ ಎಂತ ಬರೆದಿದೆ.

ಮದ್ರಾಸ್ ಸೆಂಟ್ ಥೋಮಸ್ ಚರ್ಚಿನ ವಿಷಯ ಬರೆಯುತ್ತಾ—… ಕಟ್ಟಡಕ್ಕೆ ಎಷ್ಟು ಕಲೆಯಿಂದ ಸೊಗಸಾದ … ವ್ಯವಸ್ಥಾಪಕರು … ದ್ದಾರೆ! ದೇವರೇ! ಇಂಡಿಯಾದಲ್ಲಿ ನಾವು ಎಷ್ಟು ಬ್ರಿಟಿಷ್ ರಕ್ತವನ್ನು ಚೆಲ್ಲಿದ್ದೇವೆ! ಎಷ್ಟು ಅಸ್ವಾರ್ಥತೆಯಿಂದ!

ತಾ|| ಜನವರಿ 11—1922.

ನಾನು ಇಂಡಿಯಾವನ್ನು ಮೆಚ್ಚುವದಿಲ್ಲ. ಬೆಟ್ಟಗಳು ವಿನಹ ಇತರ ಭಾಗವೆಲ್ಲಾ ಬಹಳ ಕಷ್ಟ ಪ್ರದೇಶವಾಗಿದೆ. ಸೊಗಸಾದ … ಗಾಗಲಿ ಸೊಗಸಾದ ಚಿಕ್ಕ ನ್ಯೂಜೀಲ್ಯಾಂಡಿಗಾಗಲೀ ಹೋಲಿಸಿ ನೋಡಿ! ನಮಗೆ ಇಂಡಿಯಾ ಯಾಕೆ ಬೇಕು? ಗೌರವ? ಅಧಿಕಾರವು? ಹಣ? ಅದರಿಂದ ನಮಗೆ ಹಣವೇನೂ ಸಿಕ್ಕುವದಿಲ್ಲ. ಇಲ್ಲಿಗೆ ಬಂದಿರುವ ಸಾವಿರಾರು ಶಕ್ತ ಇಂಗ್ಲೀಷರು ಬೇರೆ ಎಲ್ಲಿಯಾದರೂ ಇದಕ್ಕಿಂತ ಹೆಚ್ಚಿಗೆ ಪ್ರಯೋಜನ ಮಾಡಿಕೊಂಡಾರು. ಉದಾಹರಣೆಗೆ ನ್ಯೂಜೀಲ್ಯಾಂಡ್, ಕೆನಡಾ, … ನಾಡದಲ್ಲಿಯಾದರೂ ಸರಿಯೆ. ನಿಜವಾಗಿ ನೋಡಿದರೆ ಬ್ರಿಟಿಷ್ ಯುವಕನು ಇಂಡಿಯಾಕ್ಕೆ ಬರುವದಕ್ಕೇ ನಿಲ್ಲಿಸಿದ್ದಾನೆ. ಅವನಿಗೆ ನೇಟಿವರು ಮಾಡುವ ಅವಮರ್ಯಾದೆಯನ್ನು ಸಂಕರಿದವರು ಉತ್ತಾಸ ಕೊಡದೆ ಇರುವದನ್ನೂ ಸಹಿಸಲಿಕ್ಕಾಗುವದಿಲ್ಲ.

ರೈಲ್ವೇ ಪುಸ್ತಕ ಅಂಗಡಿಗಳು ಬಹಳ ಕಡಿಮೆ. ಒಂದೇ ವರ್ತಮಾನಪತ್ರ ಸ್ವದೇಶೀಯ ಪತ್ರಿಕೆಗಳೆಲ್ಲಾ ಬರುತ್ತೆ. ಮುಖ್ಯವರ್ತಮಾನ … ಈಗ ಈ ದೇಶ ಇಂಡಿಯಾದಲ್ಲಿ ಬಹಳ ದೊಡ್ಡ ಮನುಷ್ಯನಾಗಿದ್ದಾನೆ. ಅವನನ್ನು ಗಾಂಧಿ (ಅಥವಾ ತಾನೇ ಕರೆಸಿಕೊಳ್ಳುವಂತೆ ಮಹಾತ್ಮಾ ಗಾಂಧಿ) ಗೆ ಹೋಲಿಸುತ್ತಾರೆ. ಚಿಕ್ಕ ಗ್ರಾಮಗಳಲ್ಲಿ ನೇಟೀವ ಜನರು ಬಹಳ ಮರ್ಯಾದೆವಂತರಾಗಿದ್ದಾರೆ. ಎರಡು ಕೈಯಿಂದಲೂ ಬಗ್ಗಿ ಸಲಾಂ ಮಾಡುತ್ತಾರೆ. … ಕುದುರೆ ಬಿಟ್ಟರು. ನಾನು ಎರಡು ಗಂಟೆ ಸಮಯ ಬಂದು ಮರದ ಕೆಳಗೆ ಇಂಡಿಯಾದ ವಿಷಯ ಮತ್ತು ಈ ಕೃಷ್ಣ ಜನರನ್ನು ಕಾಪಾಡುವ ಜವಾಬ್ದಾರಿ ವಿಷಯವನ್ನು ಯೋಚಿಸುತ್ತಾ ಕೂತುಕೊಂಡೆ.

ಇಂಡಿಯಾ ದೇಶವು ಬಹಳ ದೊಡ್ಡದು. ಈ ನೂರಾರು ಮಿಲಿಯನ್ ಜನರ ಮಧ್ಯದಲ್ಲಿ "8" ಸಾವಿರ ಬಿಳೀ ಜನರು ನಮ್ಮ ಸೈನ್ಯ ಸಹ ಸೇರಿ ಇದ್ದಾರೆ. ಈ ಅಸಾಧ್ಯ ಕೆಲಸವು ಹೇಗೆ ಸಾಧ್ಯವಾಗಿದೆ?

ಜನವರಿ 16—1922

ಮೋಪ್ಲಾ ಯುದ್ಧವಾದ ನಂತರ ನನಗೆ ಭೇಟಿಗೆ ಸಿಕ್ಕದೆ ಇದ್ದ ಲಾರ್ಡ್ ರಾಲಿನ್‌ಸನ್ ಕಮಾಂಡರ್ ಇನ್ ಚೀಫ್ ಸಂಗಡ ಊಟ ಬಿಟ್ಟು. ಇಂಡಿಯಾ ಜನರ ಇಚ್ಛೆಗೆ ವಿರೋಧವಾಗಿ ನಾವು ಪೋಲೀಸ ಇಟ್ಟು ನೋಡಿಕೊಳ್ಳಲಿಕ್ಕಾಗುವದಿಲ್ಲ. ನಮ್ಮ ಐಶ್ವರ್ಯ ಯುಕ್ತವಾದ ಬೊಂಬಾಯಿ, ಮದ್ರಾಸ್, ಕಲ್ಕತ್ತಾ, ಕರಾಚಿ ಮತ್ತು ಇನ್ನು ಕೆಲವು ಪಟ್ಟಣಗಳನ್ನು ಮಾತ್ರ ನಮ್ಮ ವಶದಲ್ಲಿ ಇಟ್ಟುಕೊಂಡರೆ ಸಾಕೆಂಬ ವಿಷಯದಲ್ಲಿ ಸಹ ಕಮಾಂಡರ್ ಇನ್ ಚೀಫರ ಏನೂ ಅಭಿಪ್ರಾಯ ಪಟ್ಟಿರುವದಿಲ್ಲವೆಂತ ಹೇಳಿದರು. ಇಂಡಿಯಾ ದೇಶದವರ ವ್ಯವಹಾರದ ಇಂಡಿಯಾಕ್ಕೆ ಬ್ರಿಟಿಷರ … ಇಷ್ಟ ಹಣದಿಂದ ಇಂಡಿಯಾವನ್ನು ಕಾಪಾಡಿಕೊಳ್ಳುವದು ಕಷ್ಟ. ನಾವು ದೊಡ್ಡ ಪಟ್ಟಣಗಳನ್ನು ಮಾತ್ರ ಕಾಪಾಡಿಕೊಳ್ಳುವ ಯೋಚನೆಯಿಂದ ಒಳದೇಶದಿಂದ ಹೊರಟುಬಿಟ್ಟರೆ ಒಳದೇಶದಲ್ಲಿ ಒಳ್ಳೇ ಗಲಭೆ ಇದ್ದೀತು. ಇಂಡಿಯಾ ದೇಶದ ವಾಯವ್ಯ ಪ್ರಾಂತ್ಯದಲ್ಲಿ ನಾವು ಕಳಕೊಳ್ಳುವ ಪ್ರಾಣಗಳನ್ನು ಅನ್ಯಾಯವಾಗಿ ಯಾಕೆ ಕಳಕೊಳ್ಳಬೇಕು? ಅಲ್ಲಿ ನಾಶವಾಗುವ ಪ್ರಾಣಗಳ ವಿಷಯ ನಮಗೆ ವರ್ತಮಾನ ಬರುವದಿಲ್ಲ. ಬಹಳ ತೋರುತ್ತೆ. ಅಲ್ಲಿನ ಜನಾಂಗಗಳು ಆಧುನಿಕ ಆಯುಧಗಳಿಂದ ಕೂಡಿ ಇದ್ದಾರೆ. … ದಲ್ಲಿರುವ ಪುಂಡು ಜನರ ಹಾವಳಿಯನ್ನು … ಗಳಾಗಲೀ, ಮದ್ರಾಸಿಯಾಗಲೀ ಅಥವಾ ಇತರರಾಗಲಿ ಯಾಕೆ ಎದುರಿಸಬಾರದು.

ಜನವರಿ 17—1922

ಈ ಸಮಯದಲ್ಲಿ ಇಂಡಿಯಾದಲ್ಲಿ ಬಹಳ ಬಹಳ ಕಷ್ಟವಿರುವ … ವೈಸರಾಯರಿಗೆ ಬೇರೆ ಇಲ್ಲ. ತನ್ನ … ರನ್ನು ಸಹ ನಗಿಸುತ್ತಾರೆ. ಅವನ "ದಬ್ಬಾಳಿಕೆ"ಗೆ ನೇಟಿವ್ ಪತ್ರಿಕೆಗಳು ಅವನನ್ನು … ಮಳೆಗಂತೆ ಮುತ್ತುತ್ತವೆ. ಸರಕಾರಕ್ಕೆ ವಿರುದ್ಧವಾದ ಜನರಿಂದ ಜೈಲುಗಳೆಲ್ಲಾ ತುಂಬಿ ಹೋಗಿವೆ. ವಿಲಾಯತಿಯಲ್ಲೂ ಇದೇ ತಪ್ಪು ಮಾಡಿದ್ದರೆ ಅದೇ ಶಿಕ್ಷೆಯನ್ನು ಅನುಭವಿಸುತ್ತಿದ್ದರು. ಬಹಳ ವರ್ಷದ … ಮಾತ್ರವಿರುವ … ಯಿಂದಲೂ, ಯಾವ ಕೆಲಸವನ್ನಾದರೂ ಮಾಡಿಯೇವೆಂಬ ನೇಟಿವ್ ಗರ್ವದಿಂದಲೂ ಈ ಸ್ಥಿತಿಗೆ ಬಂದಿದ್ದಾರೆ.

ವೈಸ್‌ರಾಯರಿಗೆ ಸಿಕ್ಕುವ 25000 ಪೌಂಡುಗಳಿಂದ 1000 ಆಳುಗಳನ್ನೂ ಅನೇಕ ಮನೆಗಳನ್ನೂ ಇಟ್ಟುಕೊಳ್ಳಬೇಕು. ಖಂಡಿತವಾಗಿಯೂ ಅದು ಸಾಧ್ಯವಿಲ್ಲ........ಒಬ್ಬ ಯೂರೋಪಿಯನನು ಮಾಡಬಹುದಾದ ಕೆಲಸಕ್ಕೆ ಐದು ಜನ ನೇಟಿವರು ಬೇಕು.

ಈಗ (swaggering) ಜಂಬಕೊಚ್ಚುವ, ತಮ್ಮನ್ನು ತಾವೇ ಹೊಗಳಿಕೊಳ್ಳುವ, ವಿಸ್ಕಿ ಸೋಡ ಕುಡಿಯುವ, ಕೊಂಬಿನ ಅಂಚು ಇರುವ ಕನ್ನಡಕ ಹಾಕುವ, ಫೌಂಟೆನ್ ಪೆನ್ ಧರಿಸುವ ಬಾಬು ಜನರು ಹೆಚ್ಚಾಗಿದ್ದಾರೆ. ಇವರು ಬೇರೆಯವರಂತೆಯೇ ನಟಿಸುವ ಶಕ್ತಿಯಿಂದಲೂ ಟೈಪ್‌ರೈಟಿಂಗ್ ಪೇಪರಿನಂತೆ ಇರುವ ಮನಸ್ಸು ಇರುವದರಿಂದ ಪರೀಕ್ಷೆ ಪಾಸಾಗುವದರಿಂದಲೂ ತಾವು ಇಂಗ್ಲೀಷ್ ಜನರಿಗೆ ಸಮಾನರೆಂತ ತಿಳಕೊಳ್ಳುತ್ತಾರೆ. ತಮ್ಮ ಕೀಳುಸ್ಥಿತಿಯನ್ನು ತಿಳಿದವರಾದ್ದರಿಂದ ಬಹಳ ನೋವುಳ್ಳವರು. ಅಪಾಯಕರವಾದರೂ ಆಗಿದ್ದಾರೆ. ಇವು ನನ್ನ ಮಾತುಗಳಲ್ಲ; ತನ್ನ ಜನರನ್ನು ತಿಳಿದ ಒಬ್ಬ ಇಂಡಿಯಾ ದೇಶದ ಮಹಿಳೆಯ ಮಾತಾಗಿದೆ.

ಮಾನಸಿಕಧೈರ್ಯ.

(ಬರೆದುಬಂದದ್ದು.)

ಮಾನಸಿಕ ಧೈರ್ಯವೆಂಥಾದ್ದು? ಇದನ್ನು ಅರ್ಜಿಸುವ ಬಗೆಹೇಗೆ? ದೇಶದ ನಮ್ಮೆಲ್ಲರ ಜನರು ಇಂತಹ ಮಾನಸಿಕ ಧೈರ್ಯದ ಕೊರತೆಯುಳ್ಳವರಾಗಿರುತ್ತಾರೆ? ವಾಸ್ತವವಾಗಿಯೂ ನಮ್ಮಲ್ಲಿ ಕಡಿಮೆಯೆಂದೇ ಹೇಳಬೇಕು. ಈ ಮಾನಸಿಕ ಧೈರ್ಯಕ್ಕೂ ದೇಶೋನ್ನತಿ, ಸಮಾಜೋದ್ಧಾರಕ್ಕೂ ಸಂಬಂಧವಿದೆಯೆ? ನೋಡುವ.

ಅಧಿಕಾರಬಲ, ಧನಬಲವುಳ್ಳ ಒಂದು ವ್ಯಕ್ತಿಯೇ ಆಗಲಿ, ಸಾಹಿತ್ಯ ಸೌಂದರ್ಯ ಸಂಪತ್ತುಗಳಿಂದ ಕೂಡಿದ ವ್ಯಕ್ತಿಯೇ ಆಗಲಿ, ಅಥವಾ ಇನ್ನಾವ ಸದ್ಗುಣಗಳಿಂದ ಕೂಡಿದವನೇ ಆಗಲಿ ಆತನ ಶಕ್ತಿಯು ನಿಜವಾದ ಆತನ ಯೋಗ್ಯತೆಯು, ಮೇಲೆ ಹೇಳಿದವುಗಳ ಸುತ್ತಿಕೊಂಡಿರುವುದಿಲ್ಲವೆಂದು ವೃಥಾ ಹೇಳಬಹುದು. ಅಧಿಕಾರಬಲದಿಂದಿರುವ … ಹಳ್ಳಿಯಲ್ಲಿರುವ ಬಡರೈತನಿಗೆಷ್ಟು ಸ್ವಾತಂತ್ರ್ಯವೋ, ಎಷ್ಟು ಶಕ್ತಿಯೋ, ಅಷ್ಟೇ ಅಲ್ಲದೆ ಹೆಚ್ಚಿನದೇನೂ ಇಲ್ಲ. ಬಡರೈತನು ಊಟಮಾಡುವದು, ನಿದ್ರೆಮಾಡುವದು, … ಇವನ ಬಾಯಿ ಕೈಕಾಲುಗಳಲ್ಲಿಯ ಹೊರತು ಅಧಿಕಾರಿಯ ಸಂಪತ್ತಿಗೆ ಸಿಗೊಳಪಟ್ಟಿರುವದಿಲ್ಲ. ಆದರೂ ಏಕೆ ಜನರು ಹೀಗೆನ್ನುತ್ತಿರುವರು? ಎಷ್ಟೋ ಜನರು "ನಾನು ಈ ದಿನ ಆ ಸಾಹುಕಾರರ ಹತ್ತಿರ ಹೋಗಬೇಕಲ್ಲ! ಹೇಗಪ್ಪ ಆತನ ಸಂಗಡ ಮಾತನಾಡುವುದು. ಅಯ್ಯೋ ಆತನೆಲ್ಲಾದರೂ ಗದರಿಸಿಬಿಟ್ಟರೆ, ಛೆ, ನನಗೆ ಏನಾಗಿಯೂ ಹೋಗುವುದಿಲ್ಲ" ಎಂಬುದಾಗಿಯೂ "ಈ ದಿನ ಡೆಪ್ಯುಟಿ ಕಮೀಷನರನ್ನು ಅಥವಾ ಇನ್ನಾವ ಅಧಿಕಾರಿಯನ್ನಾದರೂ ಹೇಗೆ ಕಾಣಹೋಗುವುದಪ್ಪಾ! ನಾಯಿ, ಯಾರು ಹೋಗುತ್ತಾರೆ. ಅಶ್ವಮೇಧಯಾಗವನ್ನಾದರೂ ಮಾಡಬಹುದು. ಇದು ನನ್ನಿಂದಾಗಲಾರದಪ್ಪ" ಎಂದು ಮುಂತಾಗಿ ಅನ್ನುವುದನ್ನು ನಾವೆಷ್ಟೋ ಕೇಳಿರುವದಿಲ್ಲವೇ? ವಾಚಕರೇ, ನಿಮಗೆಷ್ಟು ಮಂದಿಯಾಗಿ ಹೇಳಲಿ. ನಿಮಗೆ ಇಂಥಾ ಕೆಟ್ಟದೆ ಇಲ್ಲದಿರಲು ಏನು ಕಾರಣ? ಬಾಲ್ಯಶಿಕ್ಷಣ ಬಿದ್ದಿಲ್ಲವಲ್ಲವೇ? ಬರೇ ಕಾ, ಕಾ, ಕೀ, ಕೀ, ಅಥವಾ ಎ ಬಿ ಸಿ ಡೀ. ಕಲಿತಮಾತ್ರಕ್ಕೆ ಇಂತಹ ಧೈರ್ಯವು ಎಲ್ಲಿಂದ ಕಾಣೇ ಬಂದೀತು?

ಇದೇನಾಶ್ಚರ್ಯ! ಅಧಿಕಾರಿಯನ್ನು ಕಾಣಹೋಗುವುದು ತನ್ನ ಕಾಲಿನಲ್ಲಿಯೇ, ಸಂಭಾಷಿಸುವುದು ತನ್ನ ನಾಲಿಗೆಯಲ್ಲಿಯೇ, ಆಲೋಚನಾಶಕ್ತಿಯು ಭಗವಂತನು ದಯಪಾಲಿಸಿದ ತನ್ನ ಮಿದುಳಿನಲ್ಲಿಯೇ ಹೊರತು ಅಧಿಕಾರಿಯದಲ್ಲ. ಹೀಗಿದ್ದರೂ ಈ ಹೆದರಿಕೆಯು ಏಕೆ? ದೇವರು ನಮಗೆ ಎಲ್ಲವನ್ನು ನಿರಾಯಾಸವಾಗಿ ಕೊಟ್ಟಿದ್ದಾನೆ. … ಯೋಚಿಸುವುದು ಸೋಮಾರಿತನದ ಲಕ್ಷಣ. ಪರಮಾತ್ಮನು ಮಾತನಾಡುವುದಕ್ಕೂ ಆಲೋಚಿಸುವುದಕ್ಕೂ ಸಾಧನಗಳನ್ನೊದಗಿಸಿಕೊಟ್ಟಿರುತ್ತಾನೆ. ಇವುಗಳನ್ನಭಿವೃದ್ಧಿಪಡಿಸಿಕೊಳ್ಳುವುದು ನಮ್ಮ ಕರ್ತವ್ಯವಲ್ಲದೆ ದೇವರದಲ್ಲ. ಹಾಗಾದರೆ ನಾವು ಮಾನಸಿಕ ಧೈರ್ಯವನ್ನುಂಟುಮಾಡಿಕೊಳ್ಳಲಿಕ್ಕೆ ಯಾವ ಶಕ್ತಿ, ಅಧಿಕಾರಿಯದೇ ದೇವರದೇ ಅಥವಾ ನಮ್ಮದೇ? ಅಧಿಕಾರಿಯಲ್ಲಿ ಅಗೌರವಾದ ತಪ್ಪಿತಸ್ಥರನ್ನು ಶಿಕ್ಷಿಸುವ ದೊಡ್ಡ ಅಧಿಕಾರವಿದೆಯೆಂದ ಮಾತ್ರಕ್ಕೆ ನಾವು ಆತನಿಗೆ ಹೆದರಿ ನಡೆಯಬೇಕೆ? ಆತನ ಅಧಿಕಾರವು ತಪ್ಪಿತಸ್ಥರಿಗೆ ಭಯವನ್ನುಂಟುಮಾಡುವುದು ಸ್ವಾಭಾವಿಕವೂ ನ್ಯಾಯವೂ ಆದದ್ದೇ. ನಿರಪರಾಧಿಗಳಾದರೂ ಈ ಭಯವೇಕೆ? ಇದೇ ನಮ್ಮ ಶಕ್ತಿಹೀನತೆ, ಇದೇ ನಮ್ಮ ಕೊರತೆ. ನಮ್ಮ ಅಭಿವೃದ್ಧಿಗೆ ಮುಳ್ಳು. ನಿರಪರಾಧಿಗಳಲ್ಲಿ ಈ ಅಂಜಿಕೆ ಎಂದಿಗೂ ಸಮಂಜಸವಾಗಲಾರದು. ಬರೇ ಬೆಲೆಯುಳ್ಳ ಉಡುಪುಗಳನ್ನುಟ್ಟು ಕೇವಲ ಹೊರಗಿನ ನೋಟಕ್ಕೆ ಮಾತ್ರ ಗಾಂಭೀರ್ಯದಿಂದಿದ್ದರೆ ನಮ್ಮಲ್ಲಿರುವ ಮಾನಸಿಕ ಶಕ್ತಿ ಮೇಲೆ ಏರಿ ಹೋಗಬೇಕು? ಇಷ್ಟೆಲ್ಲಾ ಹೇಳಿದ ಮಾತ್ರಕ್ಕೆ ಅಧಿಕಾರಿಗಳಿಗೆ ಅಥವಾ ಧನಿಕರಿಗೆ ಗೌರವವಿಲ್ಲವೆಂದಾಗಲಿ ಅವರಿಗೆ ಮರ್ಯಾದೆ ಮಾಡಬಾರದೆಂದಾಗಲಿ ಅರ್ಥವಾಗಲಾರದು. ಅವರಿಗೆ ಸಲ್ಲುವ ಮರ್ಯಾದೆಗಳು, ಸಿಕ್ಕುವ ಮಾನಮರ್ಯಾದೆಗಳು ಸಿಕ್ಕಲೇ ಬೇಕು. ಮುಖ್ಯವಾಗಿ ತಾತ್ಪರ್ಯವೇನೆಂದರೆ, ಯಾವ ದೊಡ್ಡ ಮನುಷ್ಯನೇ ಆಗಲಿ ಅಧಿಕಾರಿಯೇ

ಜಗಲಿ ಅವನ ಅಧಿಕಾರಕ್ಕೋಸ್ಕರ ನಮ್ಮಲ್ಲಿರುವ ಧೈರ್ಯವನ್ನು ಕಳೆದುಕೊಳ್ಳಬಾರದು. ಊರುಗಳಲ್ಲಿ ಹೋಗುವ ಅಧಿಕಾರಿಗಳಿಗೆ ನಾವು ನಮಸ್ಕಾರ ಅಥವಾ "ಗುಡ್ ಮಾರ್ನಿಂಗ್" ಅನ್ನುತ್ತೇವೆ. ಕೇವಲ ಅವರ ಅಧಿಕಾರಕ್ಕಾಗಿ ನಾವು ಅವರಿಗೆ ಸಲಾಮು ಮಾಡುವುದಲ್ಲ. ಅವರಲ್ಲಿರುವ ಪಾವನವಾದ ಶಾಂತಮಯವಾದ ಮತ್ತು ಆನಂದಮಯವಾದ ಪರಮಾತ್ಮನಿಗೋಸ್ಕರ ನಾವು ನಮಸ್ಕರಿಸುತ್ತೇವೆ. ಹಾಗೆಯೇ ನಾವು ಯಾರ ಸಂಗಡಲೇ ಆಗಲಿ ಧೈರ್ಯದಿಂದ ವರ್ತಿಸಬೇಕಾದರೆ ಅವರು ನಮ್ಮಂತೆಯೇ ಮನುಷ್ಯರು ನಾವು ಅವರಂತೆಯೇ ಸರ್ವಸ್ವಾತಂತ್ರ್ಯವುಳ್ಳವರು ಎನ್ನುವುದನ್ನು ಮನಸ್ಸಿನಲ್ಲಿ ಸಿದ್ಧಾಂತಮಾಡಿಕೊಳ್ಳದೆ ಹೋದರೆ ನಾವು ಅಂಜುಬುರುಕರಾಗುವೆವು. ನಾವು ಇಂಥಾ ಅಂಜುಬುರುಕತನವನ್ನು ಚಿತ್ತಗಳಿಂದ ವ್ಯಸನಗಳನ್ನು ಮಾಡುತ್ತಿರಬೇಕು. [illegible] ಒಂದು ಸಾರಿ ಮನೋಧೈರ್ಯವುಂಟಾದರೆ ಆಕ್ಷಣವೇ ನಮ್ಮ ಬಂಧನವು ಹೋಗಿ ಸ್ವತಂತ್ರರಾಗುವುದರಲ್ಲಿ ಸಂಶಯವು ಲೇಶಮಾತ್ರವೂ ಇರುವುದಿಲ್ಲ.

ಇಂತಹ ದೇಶೋನ್ನತಿಗೆ ಸಹಾಯವಾಗುವ ಮಾನಸಿಕ ಧೈರ್ಯವು ಜಾಗ್ರತೆಯುಂಟಾಗಲು ಶಾಲೆಗಳಲ್ಲಿ ಚಿಕ್ಕ ಬಾಲಕರಿಂದಲೇ ಪ್ರಾರಂಭವಾಗತಕ್ಕದ್ದು. ಚಿಕ್ಕ ಬಾಲಕರನ್ನು ಬಾಲ್ಯದಿಂದಲೂ ಇದ್ದವರೂ ತಗೆದುಕೊಂಡು ಹೋಗುವುದು ಸುಲಭ. ಉಪಾಧ್ಯಾಯರುಗಳು ಚಿಕ್ಕ ಬಾಲಕರಲ್ಲಿ ಜ್ಞಾನ ತುಂಬುವಂತೆ ಪ್ರಯತ್ನಿಸಬೇಕು. ಅದರೆ ಧೈರ್ಯವಾಗಿ ಮಾತನಾಡುವುದೆಂದರೆ ದೊಡ್ಡ ಸ್ವರದಿಂದಾಗಲಿ, ಅಗೌರವದಿಂದಾಗಲಿ, ಗರ್ವದಿಂದಾಗಲಿ ಮಾತನಾಡದ ಹಾಗೆ ಎಚ್ಚರಿಸುವುದೂ ಅವಶ್ಯಕವು. ಯಾವಾಗಲೂ ಬಾಲಕರು ಚಂಚಲಬುದ್ಧಿಯಿಂದ ಒಹು ಜಾಗ್ರತೆಯಾಗಿ ಹೇಗೆ ತಿಳಿದುಕೊಳ್ಳುತ್ತಾರೋ ಅದೇ ರೀತಿಯಲ್ಲಿ ತಪ್ಪು ತಿಳುವಳಿಕೆಯಲ್ಲಿ ಸಹ ಅವರ ಮನಸ್ಸು ಓಡುವುದು ವಾಡಿಕೆಯಾಗಿದೆ. ಆದ್ದರಿಂದ ಬಾಲಕರಿಂದಲೇ ಪ್ರಾರಂಭವಾಗಿ ದೇಶದ ಪ್ರಜೆಗಳೆಲ್ಲರೂ ಭಕ್ತಿಯಿಂದ ಮಾನಸಿಕ ಧೈರ್ಯವನ್ನು ಕೊಂಚ ಕೊಂಚವಾಗಿ ಬೆಳೆಸಿದರೆ ಸ್ವಾತಂತ್ರ್ಯವು ಸಮೀಪಿಸಿದಂತೆಯೇ ಆಯಿತೆಂದು ದೃಢವಾಗಿ ಹೇಳುವೆನು. [illegible] ಮಾನಸಿಕ ಧೈರ್ಯಕ್ಕೆ [illegible] ಎಂದು ಎಚ್ಚರಿಸುವ.

ವರ್ತಮಾನ ಸಂಗ್ರಹ

ಒಳದೇಶ.

ಟ್ರೆಜರಿ ಅಸಿಸ್ಟೆಂಟ್ ಕಮಿಷನರ್ ಆಗಿರುವ ರಾವ್ ಸಾಹೇಬ್ ಹೆಚ್. ಎನ್. ಕಾಮತ್ತರವರಿಗೆ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಪವರ್ ಕೊಡಲ್ಪಟ್ಟಿದೆಯಾಗಿಯೂ ಉತ್ತರಕೊಡಗಿನ ಸುಬೆದಾರರ ಫೈಲಿನಲ್ಲಿರುವ ಹಳೇ ಮಡಿಕೇರಿ ತಾಲೋಕಿನ 1 ನೇ ಕ್ಲಾಸ್ ಕೇಸುಗಳೆಲ್ಲಾ ಕೂಡಲೆ ಟ್ರೆಜರಿ ಅಸಿಸ್ಟೆಂಟ್ ಕಮಿಷನರಿಗೆ ವರ್ಗಾಯಿಸ ಪಡಬೇಕೆಂತಲೂ ಹುಕುಂ ಆಗಿದೆಯಂತೆ.

ಜೂನ್ ತಾ|| 29 ರಲ್ಲು ನಡೆಯಬೇಕಾಗಿದ್ದ ಕೋಆಪರೇಟಿವ್ ಸೆಂಟ್ರಲ್ ಬ್ಯಾಂಕಿನ ಮೀಟಿಂಗು ಕೋರಂ ಇಲ್ಲದ್ದರಿಂದ ಮೀಟಿಂಗು ಆಗಲಿಲ್ಲ. ಅದೇ ಮೀಟಿಂಗು ಜುಲೈ ತಾರೀಖು 11 ರಲ್ಲು ಮಡಿಕೇರಿಯಲ್ಲು ನಡೆಯುವುದು.

ಮೆ|| ಸಿ. ಅಚ್ಚುತರಾಯರಿಗೆ ಮಡಿಕೇರಿ ಪ್ರೈಮರಿ ಸ್ಕೂಲಿನಲ್ಲಿ 7 ವರ್ಷ ಸರ್ವಿಸ್ ಆಗಿದ್ದವರು ಟ್ರೈನಿಂಗ್ ಸ್ಕೂಲನ್ನು ತೆಗೆಯುವಾಗ ಕೆಲಸವಿಲ್ಲವೆಂದು ಮನೆಗೆ ಕಳುಹಿಸಲ್ಪಟ್ಟಿದ್ದರು. ಅವರಿಗೆ ಹೈಸ್ಕೂಲಿನಲ್ಲಿ ರೈಟರ್ ಕೆಲಸ ಈಗ ಪುನಹ ಕೊಟ್ಟಿದ್ದಾರೆ.

ಬ್ರಾಹ್ಮಣ ವಿದ್ಯಾಭಿವೃದ್ಧಿ ನಿಧಿಯ ಮೀಟಿಂಗು ತಾರೀಖು 1-7-23 ರಲ್ಲಿ ನಡೆದು ಮೈಸೂರು ಕಾಲೇಜ್ ಎಂಟ್ರೆನ್ಸ್ ಪರೀಕ್ಷೆಯಲ್ಲಿ ಪಾಸಾದ ಬಿ. ಡಿ. ಪರಮೇಶ್ವರಯ್ಯನಿಗೆ ತಿಂಗಳಿಗೆ 10 ರೂಪಾಯಿ ಸ್ಕಾಲರ್ ಶಿಪ್ ಮಂಜೂರಾಯಿತು.

ಮಡಿಕೇರಿಯ ಮುನಸೀಫ್ ಕೋರ್ಟಿನಲ್ಲಿ ನಡೆಯುತ್ತಿದ್ದ ವ್ಯಾಜ್ಯಗಳಲ್ಲಿ ಸಮನ್ಸಿಗೆ 8 ಆಣೆ ಸ್ಟಾಂಪೂ, ವಾರಂಟಿಗೆ 1 ರೂಪಾಯಿಯ ಸ್ಟಾಂಪೂ ಸಬ್ ಜಡ್ಜಿ ಕೋರ್ಟಿನಲ್ಲಿ ನಡೆಯುವ ವ್ಯಾಜ್ಯಗಳಿಗೆ ಸಮನ್ಸಿಗೆ 1 ರೂ, ವಾರಂಟಿಗೆ 2 ರೂ ಸ್ಟಾಂಪೂ, ಕೊಡಬೇಕೆಂತ ಕಾನೂನು ಇತ್ತು. ಈಗ ಮುನಸೀಫ್ ಕೋರ್ಟಿನಲ್ಲಿ ನಡೆಯುವುದಾಗಿದ್ದ ಕೇಸುಗಳಿಗೂ ಹೆಚ್ಚಿನ ದರದಲ್ಲಿ ಸ್ಟಾಂಪು ಕೊಡಬೇಕಾಗಿ ಬಂದದಕ್ಕೆ ಲಾಯರುಗಳು ಕಮಿಷನರಿಗೆ ಬರಕೊಂಡದ್ದರಿಂದ 1000 ರೂ ವರೆಗಿನ ಬೆಲೆಯ ಕೇಸುಗಳಲ್ಲಿ ಕಡಿಮೆ ದರವೂ, ಅದಕ್ಕಿಂತ ಹೆಚ್ಚಿನ ಬೆಲೆಯ ಕೇಸುಗಳಲ್ಲಿ ಹೆಚ್ಚಿನ ದರವೂ ಕೊಡಬೇಕೆಂತ ರೂಲ್ ಮಾಡಿದ್ದಾರಂತೆ. ದಕ್ಷಿಣ ಕೊಡಗಿನ ಕೋರ್ಟಿನಲ್ಲಿ 2500 ರೂ ವರೆಗಿನ ಬೆಲೆಯ ಕೇಸುಗಳಲ್ಲಿ ಕಡಿಮೆ ದರ ವಿಧಿವಾಗ ಉತ್ತರ ಕೊಡಗಿನವರಿಗೆ ಸಂಪೂರ್ಣ ನ್ಯಾಯ ಸಿಕ್ಕಿದಂತಾಗಲಿಲ್ಲ.

ಮಡಿಕೇರಿ ಹುಡುಗಿಯರ ಸೆಂಟ್ರಲ್ ಶಾಲೆಯು ಮಳೆಗಾಲದ ರಜೆಗಾಗಿ ಜೂನ್ 29 ರಿಂದ ಆಗೋಸ್ಟು 5 ರ ವರೆಗೆ ಮುಚ್ಚಲ್ಪಟ್ಟಿದೆ.

ಮಡಿಕೇರಿ ಹೈಸ್ಕೂಲಿನ ಡಿಬೇಟಿಂಗ ಸೊಸೈಟಿಯ ಮೀಟಿಂಗು ಒಂದು ಜೂನ್ ತಾ|| 17 ರಲ್ಲು ಮೆ|| ಬಿ. ಎಸ್. ಕಾಶೀಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ನಡೆದು ಈ ವರ್ಷದ ಸೊಸೈಟಿಯ ಆಫೀಸರುಗಳನ್ನು ಚುನಾಯಿಸಿದರು. ಮೆ|| ಕಾಶೀಶಾಸ್ತ್ರಿಯವರು ಪ್ರೆಸಿಡೆಂಟರು. ಇನ್ನೊಂದು ಮೀಟಿಂಗು ಜೂನ್ ತಾ|| 21 ರಲ್ಲು ನಡೆಯಿತು. ಮೆ|| ಆರ್. ಹೆಚ್. ಕಣ್ಣಾಯಿಯವರು ಅಧ್ಯಕ್ಷರಾಗಿದ್ದರು. ಅಲ್ಲಿ ಹಾಜರಿದ್ದ ಮೆ|| ಕಂಪೇರಿಂದ ಗಣಪತಿ [illegible]ರವರು ಪರದೇಶದ ತಮ್ಮ ಅನುಭವವನ್ನು ಸೂಚಿಸಿ ಸಂಘದ ಮೆಂಬರುಗಳಿಗೆ ಉಪಯೋಗವಾದ ಕೆಲವು ಮಾತುಗಳನ್ನು ಹೇಳಿದರು.

ಕಳೆದವಾರ ಹಾಕತ್ತೂರುಗ್ರಾಮದ ಒಬ್ಬ ಒಂಟಿವನು ವೀರಾಜಪೇಟೆಯಲ್ಲು ಕಪ್ಪ ಸಂತೆಯರಿಗೆ ಹೋಗಿದ್ದು ಕಾಯಿಲೆಯವನಾಗಿ ವಾಪಾಸು ಬರುತ್ತಿರುವಾಗ್ಗೆ ಬೇತರಿ ಕಡವಿನಲ್ಲಿ ಹೊಳೆ ದಾಟುವಾಗ್ಗೆ ದೋಣಿಯಲ್ಲು ಮೃತಪಟ್ಟನಂತೆ.

ಈ ತಾರೀಖು 2 ರಲ್ಲು ಕೊಡಗು ವಿದ್ಯಾಭಿವೃದ್ಧಿ ಫಂಡು ಕಮಿಟಿಯ ಮೀಟಿಂಗು ಮಡಿಕೇರಿಯಲ್ಲು ನಡೆಯಿತು.

ಕಳೆದವಾರವೂ ದೇಶದಲ್ಲಿ ಮಳೆಯು ಚೆನ್ನಾಗಿ ಬೀಳಲಿಲ್ಲ. ಕೆಲವು ಕಡೆಗಳಿಗೆ ಒಂದೊಂದು ಅಡ್ಡಮಳೆಯು ಬೀಳುತ್ತಿತ್ತು. ಬಿಸಿಲು ಎಲ್ಲಾ ಕಡೆಗಳಲ್ಲಿಯೂ ಕಾಯುತ್ತಿತ್ತು. ಮಡಿಕೇರಿಯಲ್ಲಿ ಒಂದುದಿನ ಸರಿಯಾದ ಮಳೆಗಾಲವು ಸುರಿದಾದಂತೆಯೂ ಮತ್ತೊಂದುದಿನ ಮಳೆಯು ಪೂರ್ತಿ ಹೋಗಿಬಿಟ್ಟಂತೆಯೂ ತೋರುತ್ತಿತ್ತು. ರೈತರಿಗೆ ಬೀಜ ಹಾಕಲು ನೀರಿನ ತೊಂದರೆಯು ಕಡಿಮೆಯಾಗಿಲ್ಲ.

ಭಾಗಮಂಡ್ಲ ನಾಡಿಗೆ ಸೇರಿದ್ದ ಪೆರವನಾಡ ಗ್ರಾಮದ ರೈತರು ತಮ್ಮ ಗ್ರಾಮವನ್ನು ಮಡಿಕೇರಿ ನಾಡಿಗೆ ಸೇರಿಸಿಕೊಡಬೇಕೆಂತ ಅರ್ಜಿ ಬರಕೊಂಡಮೇರೆ ಆ ಗ್ರಾಮವನ್ನು ಮಡಿಕೇರಿ ನಾಡಿಗೆ ತಾ|| 1-7-23 ರಿಂದ ಸೇರಿಸಿದ್ದಾರೆ.

ನಮ್ಮ ಕಂಪೆನಿಗೆ ಪ್ರೆಸ್ಸನ್ನು ನಡೆಸಿಕೊಡುವವರು ಕೊಡುವುದಾಗಿ ನಮ್ಮ ಜೊತೆಯಲ್ಲಿ ತಿಳಿದು ಒಂದ ಸಂಕರ [illegible] ತಮ್ಮ [illegible] ಮತ್ತು 3 ನೇ ಕಿಸ್ತಿನ ಹಣವನ್ನು ಕೂಡ ತಾ... ಒರುತ್ತಿರುವುದಲ್ಲದೆ ಸೇವಕನು ಹೊಸ ಸೇರುಗಳನ್ನು ತೆಗೆದುಕೊಳ್ಳುತ್ತಲೂ ಇದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ. ಬಾಕಿ ಶೇರುದಾರರೂ ಹಿತಚಿಂತಕರೂ ಅವರ ಉದಾರಪರತೆಯನ್ನು ಹಿಂಬಾಲಿಸುವರಾಗಿ ಕೋರಿಕೆ. ಅಲ್ಲದೆ ಕಳೆದ ತಿಂಗಳ ಪ್ರಾರಂಭದಲ್ಲಿ ಪತ್ರಿಕೆಯನ್ನು ಪ್ರಿಂಟುಮಾಡಲಿಕ್ಕಿರುವ ಕಂಟ್ರಾಕ್ಟುದಾರರಿಗೆ ಅಡ್ವಾನ್ಸು ಐನೂರು ರೂಪಾಯಿಗಳನ್ನು ಶೇರು ಹಣದಿಂದ ಕೊಡಲ್ಪಟ್ಟಿತ್ತು. ಆ ಹಣವು ಈಗ ಪತ್ರಿಕೆಯ ಚಂದಾ ಹಣದಿಂದ ಒಪ್ಪಿಸಲ್ಪಟ್ಟಿದೆಯೆಂದು ತಿಳಿಸಲು ಸಹ ಸಂತೋಷಪಡುತ್ತೇವೆ. ಮುಂದೆ ಚಂದಾದಾರರಾಗಲು ಇಚ್ಛೆಯುಳ್ಳವರು ಆದಷ್ಟುಬೇಗನೆ ತಮ್ಮ ಚಂದಾ ಹಣವನ್ನು ಪಾವತಿ ಮಾಡಬೇಕಾಗಿಯೂ ಯಾ ವಿ. ಪಿ. ಮುಖಾಂತರ ಪತ್ರಿಕೆಯನ್ನು ಕಳುಹಿಸಬೇಕೆಂದು ನಮ್ಮ ಆಫೀಸಿಗೆ ಒಡನೆ ತಿಳಿಸಬೇಕಾಗಿಯೂ ಕೋರಿಕೆ.

ಹಿಂದೂದೇಶ

ಮದ್ರಾಸಿನಿಂದ ನಾಗಪುರ ಸತ್ಯಾಗ್ರಹಕ್ಕೆ ಕಳುಹಿಸಲ್ಪಟ್ಟ ಮೊದಲನೇ ಪಾರ್ಟಿಯ 16 ಮಂದಿ ಸ್ವಯಂ ಸೇವಕರ ಪೈಕಿ 14 ಮಂದಿ ನಾಗಪುರದ ಹತ್ತಿರವಿರುವ ವಾರ್ಧಾ ವೆಂಬ ಸ್ಥಳದಲ್ಲಿ ಇಳಿದರು. ಅಲ್ಲಿ ಅವರೆಲ್ಲರನ್ನೂ ತಾರೀಖು 27-6-23 ರಲ್ಲು ಸೆರೆ ಹಿಡಿದು ವಿಚಾರಿಸಿ ಪ್ರತಿಯೊಬ್ಬನೂ 100 ರೂ ಜುಲ್ಮಾನೆ ಕೊಡಬೇಕೆಂದು ಕೇಳಿದಾಗ ಅವರು ಆಗುವುದಿಲ್ಲವೆಂದು ಹೇಳಿದಕ್ಕೆ ಅವರಿಗೆ ಆರಾರು ತಿಂಗಳು ಕಠಿಣ ಸಜೆಯನ್ನು ವಿಧಿಸಿರುವರು.

ಮಿ|| ಸಿ. ಆರ್. ದಾಸ್‌ರವರು ತಿರುಪತಿಯಿಂದ ನೆಲ್ಲೂರಿಗೆ ಹೋಗುತ್ತಿರುವಾಗ ದಾರಿಯಲ್ಲಿರುವ ವೆಂಕಟಗಿರಿಯ ಸ್ಟೇಷನಿನಲ್ಲಿ ಸಾವಿರಾರು ಜನರು ನೆರೆದು ದಾಸರವರನ್ನು ಅಲ್ಲಿ ಇಳಿದು ಅವರ ಪಟ್ಟಣವನ್ನು ದರ್ಶಿಸಬೇಕೆಂದು ಬಹಳ ಒತ್ತಾಯಪಡಿಸಿದರಂತೆ. ಕೆಲವು ಅವರ ಕಾಲಮೇಲೆ ಅಡ್ಡಬಿದ್ದರು. ಇನ್ನು ಕೆಲವರು ಟ್ರೈನಿನ ಮುಂದುಗಡೆಯಲ್ಲಿ ಲೈನಿನಲ್ಲಿ ಮಲಗಿ ಟ್ರೈನನ್ನು ನಿಲ್ಲಿಸಲು ಪ್ರಯತ್ನಿಸಿದರಂತೆ. ದಾಸರವರು ತನಗೆ ಅಲ್ಲಿ ಇಳಿಯಲು ಅನುಕೂಲವಿಲ್ಲವೆಂದೂ ಜನರಿಗೆ ಅದು ಸಮಾಧಾನವಾಗಲಿಲ್ಲವಂತೆ. ಅವರ ಉತ್ಸಾಹಕ್ಕೆ ಪಾರವೇ ಇರಲಿಲ್ಲ. ಆದರೂ ದಾಸರವರಿಗೆ ಅಲ್ಲಿ ಇಳಿಯಲು ಸಮಯವಾಗಲಿಲ್ಲ.

ಮಧುರ ಡಿಸ್ಟ್ರಿಕ್ಟ್ ಕಾಂಗ್ರೆಸ್ ಎಗ್ಸಿಕ್ಯುಟಿವ್ ಕಮಿಟಿಯವರು ಕಾಯಿದೆ ಭಂಗಮಾಡಲು ಮಧುರ ಡಿಸ್ಟ್ರಿಕ್ಟು ತಯಾರಾಗಿದೆಯೆಂದೂ ಅವರು ಕೌನ್ಸಿಲು ಬಹಿಷ್ಕಾರವನ್ನು ಸಂಪೂರ್ಣವಾಗಿ ಸಾಧಿಸಲು ಪ್ರಯತ್ನಿಸುವರೆಂದೂ ತಮಿಳುನಾಡು ಕಾಂಗ್ರೆಸ್ ಕಮಿಟಿಗೆ ತಿಳಿಸಿರುವರು.

ಜೂನ್ ತಾರೀಖು 22 ರಲ್ಲು ಬರ್ಮಾದೇಶದ [illegible] ಎಂಬ ಪಟ್ಟಣದಲ್ಲಿ ನೀರಿನ ಪ್ರವಾಹವು ಹೆಚ್ಚಾಗಿ ಎಷ್ಟೋ ಗುಡಿಸಲುಗಳು ಕೊಚ್ಚಲ್ಪಟ್ಟವು. ಅನೇಕ ಜನರು ಮನೆಗಳಿಲ್ಲದಾಗಿರುವರು. ಆಹಾರ ಸಾಮಗ್ರಿಗಳಿಗೂ ದನಗಳಿಗೂ ನಷ್ಟವು ಉಂಟಾಗಿದೆ. ಒಬ್ಬ ಹೆಂಗಸೂ ಒಂದು ಮಗುವೂ ಮುಳುಗಿ ಸತ್ತು ಹೋದರು. ಒಂದು ಮಗ ಕಾಣದಾಗಿದೆ.

ತಮಿಳುನಾಡಿನ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರಾದ ಶ್ರೀಯುತ ಸಿ. ರಾಜಗೋಪಾಲಾಚಾರ್ಯರವರು ನಾಗಪುರದ ಸತ್ಯಾಗ್ರಹವು ಸ್ಥಳೀಯ ಸಂಗತಿಯಲ್ಲ, ಇದು ಹಿಂದೂದೇಶದ ಮರ್ಯಾದೆಯನ್ನು ಕಾಪಾಡುವ ಸಂಗತಿಯಾಗಿದೆ, ರಾಷ್ಟ್ರೀಯ ಧ್ವಜವನ್ನು ಹಾರಿಸುವುದು ಮನುಷ್ಯನಾಗಿ ಹುಟ್ಟಿರುವ ಪ್ರತಿಯೊಬ್ಬನ ಹಕ್ಕಾಗಿ, ಖಾದಿಯ ಬಟ್ಟೆಯಲ್ಲಿ ಕೆಂಪು, ನೀಲ ಮತ್ತು ಬಿಳುಪು ಬಣ್ಣಗಳಿಂದ ಮಾಡಿರುವ ರಾಷ್ಟ್ರೀಯ ಧ್ವಜವು ಯಾವ ಪಕ್ಷಕ್ಕೆ ವಿರೋಧವಾದುದಲ್ಲ. ಆದುದರಿಂದ ಗಾಂಧೀ ದಿನವಾದ ಜುಲೈ 18 ರಲ್ಲು ಹಿಂದೂದೇಶದ ಪ್ರತಿಯೊಂದು ನಗರದಲ್ಲೂ ಪ್ರತಿಯೊಂದು ಹಳ್ಳಿಯಲ್ಲೂ ಜನರು ಖಾದಿಯ ಅಥವಾ ಕಾಗದದಿಂದ ಮಾಡಿದ ರಾಷ್ಟ್ರೀಯ ಬಾವುಟಗಳಿಂದೊಡಗೂಡಿದ ಮೆರವಣಿಗೆಯನ್ನು ಮಾಡುವುದು ಪ್ರತಿಯೊಬ್ಬ ಹಿಂದೀಯನ ಕರ್ತವ್ಯವೆಂದು ದೇಶದವರಿಗೆ ಅಪೀಲು ಮಾಡಿರುವರು.

ಡಾಕ್ಟರ್ ವರ್ದರಾಜುಲು ನಾಯುಡುರವರು ಸ್ವರಾಜ್ಯ ಪಾರ್ಟಿಯ ಫಂಡಿಗೆ ಏನೊಂದು ಚಂದಾ ಕೊಟ್ಟಿರುವುದಿಲ್ಲ. ಶ್ರೀ ದಾಸರವರು ಮಹಾತ್ಮಗಾಂಧಿಯವರನ್ನು ಜೈಲಿನಿಂದ ಬಿಡುಗಡೆ ಮಾಡುವ [illegible]ವನ್ನ ಬಿಟ್ಟುಬಿಡುವದಾದರೆ ತಾನು ಅದಕ್ಕೆ 5000 ರೂ. ಕೊಡುತ್ತೇನೆಂದು ನಾಯುಡುರವರು ಹೇಳಿರುವರು.

ಕರ್ನಾಟಕದ ಕೆಲವು ಮುಂದಾಳುಗಳಿಂದ ಬರೆಯಲ್ಪಡುವ ಒಂದು ಇಂಗ್ಲೀಷು ವಾರಪತ್ರಿಕೆಯು ಧಾರವಾರದಿಂದ ಬೇಗನೆ ಹೊರಡಲಿಕ್ಕಿರುವುದು. ಅದರಲ್ಲಿ ಹೆಚ್ಚಾಗಿ ಕರ್ನಾಟಕ ಪ್ರಾಂತ್ಯದ ವಿಷಯ ಬರೆಯಲ್ಪಡುವುದು. ವಾರ್ಷಿಕ ಚಂದಾ ಐದು ರೂಪಾಯಿ ಮಾತ್ರ.

ಕಳೆದ ತಾರೀಖು 28 ರಲ್ಲು ಪಂಡಿತ ಮದನಮೋಹನ ಮಾಳವೀಯರು ಹಿಂದೂ ಮುಸಲ್ಮಾನರ ಐಕ್ಯಮತ್ಯದ ವಿಷಯ ಲಾಹೋರಿನಲ್ಲಿ ಒಂದು ಉಪನ್ಯಾಸವನ್ನು ಮಾಡಿದರು. ಅನೇಕ ಜನರು ನೆರೆದಿದ್ದರು. ಪಂಡಿತ ಸಂತಾನಮ್ ನವರು ಮಾತಾಡಲು ಎದ್ದಾಗ ಸ್ವಲ್ಪ ಗಲಾಟೆಯಾಯಿತು. ಶುದ್ಧಿ ಚಳವಳಿಯಿಂದಲೇ ಒಗ್ಗಟ್ಟಿಗೆ ಭಂಗವಾಗಲು ಕಾರಣವೆಂದು ಒಬ್ಬ ಮುಸಲ್ಮಾನನು ಹೇಳಿದನು. ನಂತರ ಶಾಂತಿಯಿಂದ ಮೀಟಿಂಗು ಮುಕ್ತಾಯವಾಯಿತು.

ಟಾಟಾ ಇಂಡಸ್ಟ್ರಿಯಲ್ ಬ್ಯಾಂಕು ಇಂಡಿಯಾ ಸೆಂಟ್ರಲ್ ಬ್ಯಾಂಕಿಗೆ ಬೇಗನೆ ಸೇರಿಸಲ್ಪಡುವುದೆಂಬ ತೀರ್ಮಾನವಾಗಿದೆ.

ಲಾಲಾ ಲಜಪತ್ ರಾಯಿಯವರು ಕೆಲವು ದಿವಸದಿಂದ ಕಾಯಿಲೆಯಾಗಿದ್ದು ಈಗೀಗ ಜೋರಾಗುತ್ತಿದೆ. ಅವರ ಕಾಯಿಲೆಯು ಕ್ಷಯರೋಗವೆಂದು ತೋರುತ್ತಿರುವ ವರ್ತಮಾನವು ವ್ಯಸನಕರವಾದದ್ದಾಗಿದೆ.

ಲೇಟ್ ಸರ್ ಚಂದಾವರ್ಕರ್‌ರವರ ಮರಣದ ವಿಷಯ ವ್ಯಸನ ಸೂಚಿಸಲಿಕ್ಕೆ ಕಳೆದ ತಾ|| 28 ರಲ್ಲು ಬೊಂಬಾಯಿಯಲ್ಲಿ ನಡೆದ ಮೀಟಿಂಗಿನಲ್ಲಿ ಗವರ್ನರು ಅಧ್ಯಕ್ಷರಾಗಿದ್ದರು.

ಪಂಜಾಬಿನ ವಿದ್ಯಾ ಇಲಾಖೆಯ ಮಂತ್ರಿಯಾದ ಮಿಯಾನ್ ಫಾಜಿ ಹುಸೇನ್‌ರವರ ಮತ್ತು ಅವರ ಇಬ್ಬರು ಸಹೋದರರ ಮೇಲೆ ತಮ್ಮ ತಂದೆಯ ಆಸ್ತಿಯ ಪಾಲಾಗಿ ಬೇರಿಬ್ಬರು ಸಹೋದರರು ದಾವೆ ಹಾಕಿರುವರು.

ತಮಿಳು ಪ್ರಾಂತಿಕ ಕಾನ್ಫರೆನ್ಸಿನ ಅಧ್ಯಕ್ಷಸ್ಥಾನವನ್ನು ಮೆ|| ಜಾರ್ಜ್ ಜೋಸೆಫ್‌ರವರು ಒಪ್ಪಿಕೊಂಡಿರುವರು.

ನಾಗಪುರದ ರಾಷ್ಟ್ರೀಯ ಧ್ವಜದ ಸತ್ಯಾಗ್ರಹದಲ್ಲಿ ಪ್ರತಿದಿನವೂ ಸ್ವಯಂ ಸೇವಕರು ಜೈಲಿಗೆ ಹೋಗುತ್ತಿರುವರು. ಅವರಲ್ಲಿ ಅನೇಕರಿಗೆ ಆರಾರು ತಿಂಗಳು ಕಠಿಣ ಸಜೆಯೂ ವಿಧಿಸಲ್ಪಡುತ್ತಿದೆ.

ಕಲಕತ್ತಾದಲ್ಲಿ 250 ಮಹಮ್ಮದೀಯ ಅನಾಥ ಬಾಲಕರು ವಾಸವಾಗಿದ್ದ 3 ಅಂತಸ್ತಿನ ಕಟ್ಟಡವು ಸರಿಪಡಿಸಲ್ಪಡುತ್ತಿರುವಾಗ ಒಂದು ಭಾಗವು ಕಳೆದ ತಾ|| 27 ರ ಮಧ್ಯಾಹ್ನ 3 ಘಂಟೆಗೆ ಬಿದ್ದು ಹೋಯಿತು. ಇದರ ಶಬ್ದವನ್ನು ಕೇಳಿ ಉಪಾಧ್ಯಾಯನು ಹುಡುಗರು ಹೊರಗೆ ಬರುವಂತೆ ಕೂಗಿಕೊಂಡನು. ಅಷ್ಟರಲ್ಲಿ 70 ಹುಡುಗರು ಗೋಡೆಗಳ ಕೆಳಗೆ ಸಿಕ್ಕಿ ಬಿದ್ದು 40 ಹುಡುಗರೂ ಒಬ್ಬ ಅಡಿಗೆಯವನೂ ಕೂಡಲೆ ಸತ್ತು ಹೋದರು. ಮತ್ತೆ 31 ಜನರಿಗೆ ಅಪಾಯಕರವಾಗಿಯೂ 20 ಜನರಿಗೆ ಸಾಮಾನ್ಯವಾಗಿಯೂ [illegible]ರುವುದು. ಈ ಅನಾಥಾಲಯವು ಹಿಂದೆ ಸ್ಮಾಲ್ ಕಾಜ್ ಕೋರ್ಟಿನ ಚೀಫ್ ಜಡ್ಜರಾಗಿದ್ದು ನಿವೃತ್ತರಾಗಿರುವ [illegible]ಬ್ದುಲ್ ಹುಸೇನ್ ಖಾನರವರಿಂದ 30 ವರ್ಷಗಳ ಹಿಂದೆ ಧರ್ಮಾರ್ಥವಾಗಿ ಕಟ್ಟಿಸಲ್ಪಟ್ಟದ್ದಾಗಿತ್ತು.

ಜುಲೈ 18 ರಲ್ಲಿ ಹಿಂದೂದೇಶದ ಎಲ್ಲಾ ಕಡೆಗಳಲ್ಲಿಯೂ ಜನರು ರಾಷ್ಟ್ರೀಯ ಧ್ವಜವನ್ನು ಮೆರವಣಿಗೆ ಮಾಡಬೇಕೆಂದು ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಡಾಕ್ಟರ್ ಅನ್ಸಾರಿಯವರು ಹಿಂದೀಯರಲ್ಲಿಗೆ ಅಪೀಲು ಮಾಡಿರುವರು.

ಚಕ್ರ ಪ್ರಾಂತ್ಯದಲ್ಲಿ ಸಾರದ ಸಾಲೆಯೊಬ ಒಂದು ಧ್ವಂಸಾವಶೇಷವು ನಡೆಯುತ್ತಿದೆ. ನಾಲೆಯು ಉದ್ದ 400 ಮೈಲು; ಅಲ್ಲದೆ ಆದರಿಂದ ಎರಡು ಪಾರ್ಶ್ವಗಳಲ್ಲಿಯೂ ಹೋಗುವ ಕಾಲುವೆಗಳು 1700 ಮೈಲು ಗುತ್ತವೆ ಎಂದು [illegible] ಕೋಟಿ ರೂಪಾಯಿ.

ಬ್ರಿಟಿಷ್ ಪಂಡಿತನಾದ ಲೆಡಿಸ್ ಎಂಬುವರು [illegible] ಮಹಾ [illegible]ನ ಪಿನಾಮನಸವೆಂಬಲ್ಲಿ ಜೂನ್ 28 ರಲ್ಲಿ [illegible]ಗತಿಯು ಅಲ್ಲಿಯ ಎಲ್ಲಾ ಮತಸ್ಥರಿಗೂ ಬಹಳ [illegible]ವನ್ನುಂಟುಮಾಡಿದೆ. ಅಲ್ಲದೆ ಬೌದ್ಧಮತದವರಿಗೆಲ್ಲಾ [illegible]ವಾಗಿದೆ. ಅವರು 77 ವರ್ಷ ಪ್ರಾಯದವರು [illegible] ಪುರೋಹಿತಿಕೆಯನ್ನು ಕೈಕೊಂಡು 57 ವರ್ಷಗಳಲ್ಲಿ ಗ್ರೇಟ್‌ಬ್ರಿಟನ್ ಮತ್ತು ಐರ್ಲೆಂಡಿನ ಬೌದ್ಧ[illegible] ವೈಸ್‌ಪ್ರೆಸಿಡೆಂಟರಾಗಿದ್ದರು.

ಸರ್ [illegible] ಬೋಸ್ ರವರನ್ನು ನಾಗಪುರದ ವಿಶ್ವವಿದ್ಯಾಲಯದ ವೈಸ್‌ಛಾನ್ಸಲರಾಗಿ ನೇಮಿಸುವರೆಂದು ವರ್ತಮಾನ.

ಮೌಲಾನಾ ಮಹಮ್ಮದ್ ಅಲಿ ಯವರನ್ನು ಆಗಸ್ಟ್ ಎರಡನೇ ವಾರದಲ್ಲಿ ಡಾಕ್ಟರ್ ಕಿಚ್ಲು ರವರನ್ನು [illegible] ರಲ್ಲಿಯೂ ಸೆರೆಯಿಂದ ಬಿಡುಗಡೆ ಮಾಡುವರಾಗಿ ತಿಳಿಯಬರುತ್ತದೆ.

ವೈಸರಾಯಿ ಗವರ್ನರಿಗೂ ಮಾತ್ರ ಸ್ವಾಗತವೀಯಲು ನಿಶ್ಚಯಿಸಿಯವರು ಹಣ ಖರ್ಚುಮಾಡಕೂಡದೆಂದು ಯಾರಿಗೂ ಕೂಡದೆಂದು ಸಂಯುಕ್ತಪ್ರಾಂತ ಸರ್ಕಾರದ ಹುಕುಮಿಗೆ ವಿರೋಧವಾಗಿ ಲಕ್ನೋ ಪಟ್ಟಣದ ಮ್ಯುನಿಸಿಪಾಲಿಟಿಯು ಸೆಂಟ್ರಲ್ ಮತ್ತು ಪ್ರಾಂತಿಕ ಸರಕಾರದ ಹಿಂದುದೇಶದ ಜನರ ವಿಶ್ವಾಸವನ್ನು ಕಳೆದುಕೊಂಡಿದ್ದರಿಂದ ವೈಸರಾಯರಿಗಾಗಲೀ ಗವರ್ನರರಿಗಾಗಲೀ ಸ್ವಾಗತವನ್ನಿತ್ತೂಡಲು ಹಣ ಖರ್ಚು ಮಾಡಕೂಡದೆಂದು ತೀರ್ಮಾನಿಸಿದರು.

ಪುರ ಡಿಸ್ಟ್ರಿಕ್ಟಿನಲ್ಲಿರುವ ಅಮಲು ಪದಾರ್ಥದ ಅಂಗಡಿಗಳನ್ನು ಪಿಕೆಟಿಂಗ್ ಜುಲೈ ೭ ರಿಂದ ಪ್ರಾರಂಭಿಸಲಿಕ್ಕೆಂದು ಅಲ್ಲಿಯ ಕಾಂಗ್ರೆಸ್ ಸ್ವಯಂ ಸೇವಕರು [illegible]ವರು.

ದೇಶ.

[illegible] ಸ್ಥಾನದ ಸರ್ಕಾರದವರು ಅಲ್ಲಿ ಅಮಲು ಪದಾರ್ಥ [illegible] ಮಾರಲೂ ಕೂಡದು ಎಂದು ನಿಷೇಧಿಸಿದ್ದಾರೆ. ಇದರಿಂದ ಅಲ್ಲಿ ಇರುವ ಇಂಗ್ಲೀಷರ ಮತ್ತು ಇತರ ಯೂರೋಪಿಯನರ [illegible] ದ ಕಂಪೆನಿಗಳೂ ಅಂಗಡಿಗಳೂ ಮುಚ್ಚಲ್ಪಡಬೇಕಾಗುವವು ಕೂಡಲೇ [illegible].

[illegible]ಲೆಂಡ್ ದೇಶದಲ್ಲಿ ಅಲ್ಲಿಯ ರಾಣಿಯವರ ಇರಾದೆ [illegible]ಗಳಿಗೆ ಸಬಳ ಕೊಡ ವರಿಸ [illegible] ರುವ ಅಂಗಡಿಗಳಲ್ಲಿ ಅಮಲು ಪದಾರ್ಥವನ್ನು ಮಾರಬಾರದೆಂದು ಹುಕುಂ ಮಾಡಿರುವರು.

[illegible] 27 ರ ರಾತ್ರಿ ಬೆಂಕಿ ಬಿದ್ದು ಚೈನಾ ದೇಶದ [illegible] ಚಕ್ರವರ್ತಿಯವರಾಗಿದ್ದವರ [illegible] ಸಂ[illegible]ವಾಗಿ ಸುಟ್ಟು ಹೋಯಿತಂತೆ. ಬೆಂಕಿಯನ್ನು ಆರಿಸಲು ಮಾಡಿದ ಮಹಾಪ್ರಯತ್ನವು ನಿಷ್ಫಲವಾಯಿತು.

[illegible]ಡಿಯಾವನ್ನು ಡೊಮಿನಿಯನ್ ಮಟ್ಟಕ್ಕೆ ತರುವುದರ [illegible] ಚರ್ಚಿಸಲು ಲಂಡನಿನಲ್ಲಿ ತಾ|| 26-6-23 ರಲ್ಲು ಹಾವ್ಸ್ ಪೀಕ್ ಡೊನಾಲ್ಡ್ ರವರ ಅಧ್ಯಕ್ಷತೆಯಲ್ಲಿ [illegible] ಮೀಟಿಂಗು ನಡೆಯಿತು. ವಿ|| ಶ್ರೀನಿವಾಸಶಾಸ್ತ್ರಿಯು ಮುಖ್ಯ ಉಪನ್ಯಾಸಕರಾಗಿದ್ದರು. ಆದರೆ ಆ [illegible]ಗಳು ರಾಷ್ಟ್ರೀಯವ [illegible] ಕೆಲವು ಮಾತುಗಳನ್ನು ಪ್ರಕಟಿಸೀ ಹೊರತು ಶಾಸ್ತ್ರಿಯವರನ್ನು ಲಕ್ಷ್ಯಕ್ಕೇ ತರಲಿಲ್ಲ.

ಸಮುದ್ರದಲ್ಲಿ ಮುಳುಗಿ ಹೋದ "ಟ್ರಿವೆಜ್" ಎಂಬ ಹಡಗಿನವರು (5 ಆಫೀಸರುಗಳು ಮತ್ತು 10 ಆಳುಗಳು) ದೋಣಿಯಲ್ಲಿ ರೋಡ್ರಿಗಸ್ ಎಂಬಲ್ಲಿ ಬಂದು ನೆಲ ಸೇರಿದರು. [illegible]ವರ ಜೊತೆಯ ಇನ್ನೊಂದು ದೋಣಿಯ ವಿಷಯ ಏನೂ ತಿಳಿದಿರುವುದಿಲ್ಲ. ಅವರು ದೋಣಿಯಲ್ಲಿ ಕಡೆ [illegible]ಲಾ ಮಳೆಗಾಳಿಯಲ್ಲಿ ಸಮುದ್ರದಲ್ಲಿ 23 ದಿವಸವಿದ್ದರಂತೆ. [illegible]ಬ್ಬರು ಸತ್ತುಹೋದರಂತೆ. ಸಿಗರೇಟ್ ಟಿನ್ನಿನ [illegible] ಒಂದು ಭಾಗ ನೀರೂ [illegible] ಟಿನ್ನಿನ ಮುಚ್ಚಳದ [illegible] ಟಿನ್ನ ಹಾಲು ಎರಡು ಸಾರಿ ಮತ್ತು ಒಂದು ಬಿಸ್ಕೀಟ್ ಅವರೊಬ್ಬೊಬ್ಬರ ಒಂದು ದಿನದ ಆಹಾರವಂತೆ!

ಕುಳಿಯ ಕಾಲಿಫರವರಿಗೆ ಅವರ ಸಾರೋಟಿನ ಕುದುರೆಯು ಎಡ ಕೈಗೆ ಕಚ್ಚಿದೆಯೆಂದೂ ಅದರಿಂದ ಏನೊಂದು ತೊಂದರೆಯಾಗುವ ಹಾಗಿಲ್ಲವೆಂದೂ ವರ್ತಮಾನ.

[illegible]ಂಡಿನ ಪಾರ್ಲಿಮೆಂಟಿನಲ್ಲಿ (ಹೌಸ್ ಆಫ್ ಕಾಮನ್ಸ್) ಚರ್ಚೆ ನಡೆಯುತ್ತಿರುವಾಗ "ಕೊಲೆಪಾತಕ" "[illegible]" ಮುಂತಾಗಿ ಒಬ್ಬರನ್ನೊಬ್ಬರು [illegible] ಮೂರು ನಾಲ್ಕು ಮೆಂಬರುಗಳನ್ನು ಸಸ್ಪೆಂಡ್ ಮಾಡಿದರು.

[illegible]ಯುದ್ಧ ಒಬ್ಬ ಮಂತ್ರಿಯಾದ ರಾಜಕುಮಾರ [illegible] ರಂಗ್ಯೆರವರು ಜೂನ್ ತಾ|| 29 ರಲ್ಲು ಶಿವಾಧೀನವಾ[illegible]

ಕೆಲವು ದಿವಸಗಳ ಹಿಂದೆ ಅಮೇರಿಕದ ಯುನೈಟೆಡ್ ಸ್ಟೇಟ್ಸಿನವರು ತಮ್ಮ ದೇಶದ ಸುತ್ತಲು ಸಮುದ್ರದ 3 ಮೈಲಿಯೊಳಗೆ ಯಾರೂ ಔಷಧಿಯ ಉಪಯೋಗಕ್ಕೆ ವಿನಹ ಅಮಲು ಪದಾರ್ಥವನ್ನು ತರಕೂಡದೆಂದು ಶಾಸನ ಮಾಡಿರುವರು. ಅದನ್ನು ಪರೀಕ್ಷಿಸಬೇಕೆಂದು ಇಂಗ್ಲೆಂಡಿನ ಎರಡು ಹಡಗುಗಳು ಬೇಕಾದಷ್ಟು ಅಮಲು ಪದಾರ್ಥವನ್ನು ತೆಗೆದುಕೊಂಡು ಯುನೈಟೆಡ್ ಸ್ಟೇಟ್ಸಿನ ಬಂದರಿಗೆ ಹೋದವು. ಹಡಗಿನ ಕ್ಯಾಪ್ಟನಿನ ಇರಾದೆಗೆ ವಿರೋಧವಾಗಿ ನಿಷಾಪದಾರ್ಥವೆಲ್ಲವೂ ಕಸ್ಟಮ್ ಆಫೀಸರುಗಳಿಂದ ಹಿಡಿದು ತೆಗೆಯಲ್ಪಟ್ಟವು. ಫ್ರಾನ್ಸಿನ ಕೆಲವು ಹಡಗುಗಳೂ ನಿಷಾಪದಾರ್ಥದೊಂದಿಗೆ ಅಮೇರಿಕಕ್ಕೆ ಹೋಗುತ್ತಿವೆ.

ಮುಳುಗಿ ಹೋದ "ಟ್ರಿವೆಸ್" ಹಡಗಿನ ಎರಡನೇಯ ದೋಣಿಯು 16 ಜನರೊಂದಿಗೆ ರೋಡ್ರಿಗಸ್ ಎಂಬಲ್ಲಿಗೆ ತಾ|| 29-6-23 ರಲ್ಲಿ ಬಂದು ತಲಪಿದೆಯಂತೆ.

ಶ್ರೀಮದ್ವಂಶ್ಯಯ್ಯ ಮಹಾಸಭೆ (ಮುಂದರಿಸಿದ್ದು)

ತಾರೀಖು ೨೪-೫-೨೩ ನೇ ಗುರುವಾರ ಮ|| ರಾಜಪ್ಪನವರ ಮೋಷನ್ನನ್ನು ಅನುಸರಿಸಿ ಸಭಾಧ್ಯಕ್ಷರ ಸ್ವಾರಸ್ಯವಾದ ಉಪನ್ಯಾಸ [illegible] ಮಹಾನಿಯರುಗಳು ತಮ್ಮತಮ್ಮಗಳ ಉದಾರತ್ವದಿಂದ ಸಮಾಜ ಅಭಿವೃದ್ಧಿಯಾಗಲೆಂದು ಜಗದೀಶನನ್ನು ಪ್ರಾರ್ಥಿಸ ತಾ[illegible] ಉದಾರಾರ್ಥವಾಗಿ ಮೊಬಲಗನ್ನು ಕೊಟ್ಟಿದ್ದು ಅಲ್ಲದೆ ತಮಗಳ ಜೀವಮಾನದವರೆಗೆ ಪ್ರತಿ ವರ್ಷ [illegible] ಹಣವನ್ನು ಕೊಡುವವರಾಗಿ ವಾಗ್ದಾನ ಮಾಡಿರುತ್ತಾರೆ. ಶ್ರೀ ಜಗದೀಶನು ಇಂತಾ ಸದ್ಗುಣ ನಿಧಾನಗಳಿಗೆ ಸರ್ವದಾ ಆಯುರಾರೋಗ್ಯೈಶ್ವರ್ಯಗಳನ್ನಿತ್ತು ಕಾಪಾಡಲೆಂದು ಇಡಿ ಸಮಾಜವೇ ಬೇಡುತ್ತದೆ. ಇಂತ ಇಡೀ ಸಮಾಜದ [illegible] ಈ ವಿದ್ಯಾನಿಧಿಯೊಬ್ಬ ತಿನುವಿಗೆ ಉಂಟಾದದ್ದು ದೈವ ಸಂಕಲ್ಪವೇ ಸರಿ.

ಸಮಾಜ ಭಾ ಧವರ ತಾರೀಖು ೧೪-೬-೨೩ ರಲ್ಲು ಕನಿವಾರ ಸಭೆಯಲ್ಲು ಕೂಡಿ ನಡಿಸಿದ ಮೀಟಿಂಗಿನಲ್ಲಿ ಎಫ್. ಎ. [illegible] ಹಾಜಿ ತೈಯಾರಿರುವ ಅಥವಾ ಬಂದು ವರುಷದೊಳಗೆ ತೈಯಾರಾಗುವ ೩ ಮಂದಿ ವಿದ್ಯಾರ್ಥಿಗಳಿಗೆ ಈ ಸಂಘದಿಂದ ಈ ವರುಷ ಸಹಾಯ [illegible] [illegible] ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಹೆಚ್ಚು [illegible] ಇಲ್ಲದ್ದರಿಂದ [illegible] ಆಲೋಚಿಸಿ ಮೋಷನ್ [illegible] ವರಿ [illegible] ಜುಲೈ ತಾರೀಖು [illegible] [illegible] ಸಲ್ಲುವ [illegible] ಹೆಸರು [illegible] ಗ್ರಾಮ ತಾಲೂಕು [illegible] ಎಲ್ಲ ವಿವರಗಳನ್ನು ತಪ್ಪದೆ [illegible] ಸಿ [illegible] ಟರಿಯವರಿಗಾಗಲಿ ಪ್ರೆಸಿಡೆಂಟರಿಗಾಗಲಿ ಅರ್ಜಿ ಕೊಟ್ಟು ನಂತರ ೫-೭ ರ ದಿನ ಆ ಹುಡುಗರು ತಮ್ಮ ಪ್ರಾಕ್ಟರ್ ಸರ್ಟಿಫಿಕೇಟುಗಳೊಡನೆ ತಮ್ಮ ತಂದೆ ಸಹಿತ ಹಾಜರಾಗಬೇಕು. ತಂದೆ ಇಲ್ಲದೆ ಇದ್ದವರು ಅವರಿಗೆ ಸಮೀಪದ ಸಂಬಂಧಿಕರ[illegible] ಕರೆದುಕೊಂಡು ಮೇಲ್ಕಂಡ ೫ ನೇ ತಾರೀಖು ಗುರುವಾರ ಹಾಜರಾಗಬೇಕು.

ಸೆಕ್ರೆಟರಿ.

ತಾರೀಖು 23—4—1923 ರಲ್ಲು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಜನರಲ್ ಮೀಟಿಂಗು ನಡೆದು 1923 ನೇ ಇಸವಿ ಜುಲೈಯಿಂದ 1924 ನೇ ಇಸವಿ ಜೂನ್ ಆಖೈರು ವರೆಗೆ ಬ್ಯಾಂಕಿನ ಸಾಲಮಾಡುವ ಮಿತ್ತು 50 ಸಾವಿರ ರೂಪಾಯಿ ಆಗಿರಬೇಕೆಂತಲೂ, ಅದೇ ಕಾಲದಲ್ಲಿ ಈ ಕೆಳಗಿನವರು ಡೈರೆಕ್ಟರುಗಳಾಗಿರಬೇಕೆಂತಲೂ ಫೈಸಲಾಯಿತು.

ಬಿಡುವೆಂಟರುಗಳ ಪ್ರತಿನಿಧಿಗಳು

ಮ|| ಕೊಡಂದೇರ ಕುಟ್ಟಯ್ಯನವರು, ಅಧ್ಯಕ್ಷರು
ಮ|| ಯಂ ಭುಜಂಗರಾಯರು (ಗೌ ಟ್ರೆಜರರ್)
ಮ|| ರಾವಸಾಹೇಬ್ ಕೆ. ಸುಬ್ಬಯ್ಯನವರು
ಮ|| ಮನೆಯಪಂಡ ಚಿಣ್ಣಪ್ಪನವರು.
ಮ|| ಸಿ ಯಮ್ ವೆಂಕಪ್ಪಯ್ಯನವರು, (ಗೌ ಕಾರ್ಯದರ್ಶಿ)

ಸಂಘಗಳ ಪ್ರತಿನಿಧಿಗಳು.

ಮ|| ರಾವ್‌ಸಾಹೇಬ್ ಕೇಟೋಳಿರ ಚಂಗಪ್ಪನವರು
ಮ|| ಪಟ್ಟಮಾಡ ಪೊನ್ನಪ್ಪನವರು
ಮ|| ನಡಿಕೇರಿಯಂಡ ಸೋಮಯ್ಯನವರು.
ಮ|| ಯನ್. ಯಂ. ಪಿಂಟೋರವರು.
ಮ|| ಕೋಳಿರ ಚಿಣ್ಣಪ್ಪನವರು.
ಮ|| ಪಂದ್ಯಂಡ ಬೆಳ್ಯಪ್ಪನವರು
ಮ|| ಉದಿಯಂಡ ಪಾಚ್ಛೆಯ್ಯನವರು.

ಅಂತು ಒಟ್ಟು 12 ಜನರು.

ವಿಮುಕ್ತರಾದ ಡೈರೆಕ್ಟರುಗಳಿಗೆ ವಂದನೆಗಳನ್ನು ಸಹ ಸಮರ್ಪಿಸಲಾಯಿತು.

ಕೆ. ಕುಟ್ಟಯ್ಯ,

(ಕಾರ್ಯಾಧ್ಯಕ್ಷರು).

ರವೀಂದ್ರನಾಥ ಟಾಗೋರರ ಪತ್ರ.

(1917 ನೇ ಇಸ್ವಿಯಲ್ಲಿ ಮೋಡರ್ನ್ ರಿವ್ಯೂವಿನಲ್ಲಿ ಪ್ರಕಟವಾದದ್ದು)

ಇಂಡಿಯಾದೇಶವು ರಾಜಕೀಯ ಕ್ಷಾಮದಿಂದ ಬಹು ಕಾಲದಿಂದ ಕಷ್ಟಪಡುತ್ತಾ ಆಕಾಶದಕಡೆಗೆ ಮಳೆಗಾಗಿ ನೋಡುತ್ತಾ ಇದೆ. ರಾಜಕೀಯ ಜ್ಯೋತಿಷ್ಯರು ಬಲವಾದ ಸ್ವರಾಜ್ಯದ ಮಳೆಯಿಂದ ಕೂಡಿದ ಗಾಳಿಯು ಅರಬೀಸಮುದ್ರ ದಾಟಿದೆಯೆಂತಲೂ ಬಲವಾದ ಮಳೆ ಸುರಿಯಬಹುದೆಂತಲೂ ಹೇಳುತ್ತಾರೆ. ಆಗ ಅಗೋ! ನೋಡಿ! ಬಿಹಾರಿನಲ್ಲಿ ಹಿಂದುಗಳು ಮುಸಲ್ಮಾನರಮೇಲೆ ಮಾಡಿದ ದಾಂಗೆಮಳೆ ಬಲವಾದಮಳೆ ಸುರಿಯಿತು.

ಬೇರೆ ದೇಶಗಳಲ್ಲೂ ಜಾತಿಜಗಳಗಳು ಮೇಲಾಟದಿಂದಾಗಲೀ ಸಿಡುಕಿನಿಂದಾಗಲೀ ಆಗುತ್ತಿರುವದು ನಾವು ಕೇಳುತ್ತೇವೆ. ನಮ್ಮಷ್ಟು ಮತವಿಷಯದಲ್ಲಿ ಸ್ವತಂತ್ರ ಕೊಟ್ಟಿರುವವರು ಪ್ರಪಂಚದಲ್ಲಿ ಬೇರೆ ಯಾರೂ ಇಲ್ಲವೆಂತ ಹೇಳಿಕೊಳ್ಳುತ್ತಿರುವೆವಾದರೂ ಇಲ್ಲಿ ನಡೆಯುವ ಜಗಳಗಳಲ್ಲಿ ಕಷ್ಟನಷ್ಟವು ನಮಗಾಗಿಯೇ ಇವೆ. ಈಗಿನ ಯೂರೋಪಿನಲ್ಲಿ ಇರುವ ಕಚ್ಚಾಟಗಳು ಆರ್ಥಿಕ ಕಾರಣವುಳ್ಳವುಗಳಾಗಿವೆ. ಅಲ್ಲಿ ಖನಿಜಗಳಲ್ಲಿಯೂ ರೈಲ್‌ಗಳಲ್ಲಿಯೂ ಹಡಗುಗಳಲ್ಲಿಯೂ ಕೆಲಸಮಾಡುವವರಿಂದ ಜಗಳ ಅನೇಕಸಾರಿ ಪ್ರಾರಂಭವಾಗುತ್ತೆ. ಅದಕ್ಕಾಗಿ ಏನೇನೋ ಮಾಡಬೇಕಾಗುತ್ತೆ. ಶಾಸನ ಮಾಡಬೇಕಾಗುತ್ತೆ. ಶಾಸನ ರದ್ದುಮಾಡಬೇಕಾಗುತ್ತೆ. ಸ್ವಪ್ನವನ್ನು ಆಚೆಗೆ ಕರೆಯಬೇಕಾಗುತ್ತೆ. ರಕ್ತ ಚೆಲ್ಲಬೇಕಾಗುತ್ತೆ. ಆದರೆ ಅಲ್ಲಿ ಇಂಥಾ ಜಗಳಗಳಲ್ಲಿ ಎರಡೇ ಪಂಗಡವಿರುತ್ತೆ. ಒಂದು ಜಗಳವೆಬ್ಬಿಸುವದು ಇನ್ನೊಂದು ಜಗಳವನ್ನು ನಿಲ್ಲಿಸಲಿಕ್ಕೆ ಪ್ರಯತ್ನಿಸುವದು. ಇಲ್ಲಿನ ಹಾಗೆ ಜಗಳವಾಡುತ್ತಿರುವ ಪಂಗಡಗಳನ್ನು ಬರಿದು ಅಣಕಿಸುವ ಮೂರನೇ ಪಂಗಡ ಅಲ್ಲಿ ಇಲ್ಲ.

ಇಂಗ್ಲೆಂಡಿನಲ್ಲಿ ರಾಜಕೀಯ ಯಂತ್ರವು ಇನ್ನೂ ಚೆನ್ನಾಗಿ ಸುಧಾರಿಸಲ್ಪಡದೆ ಇದ್ದಾಗ ಪ್ರೊಟೆಸ್ಟೆಂಟರಿಗೂ ರೋಮನ್ ಕೆಥೋಲಿಕರಿಗೂ ಜಗಳವಾಗುತ್ತಿದ್ದ ಒಂದಾನೊಂದು ಕಾಲವಿತ್ತು. ಅಂಥಾ ಜಗಳದಲ್ಲಿ ಒಂದು ಪಂಗಡದಿಂದ ಇನ್ನೊಂದಕ್ಕೆ ನ್ಯಾಯ ಸಿಕ್ಕುತ್ತಿತ್ತೆಂತ ಹೇಳಲಿಕ್ಕಾಗುವದಿಲ್ಲ. ಬಹುಕಾಲದವರೆಗೆ ಕಥೋಲಿಕರು ಬಹಳ ಕಷ್ಟಗಳನ್ನು ಅನುಭವಿಸಿದರು. ಆದರೆ ಈಗ ಬಂದ ಜಾತಿಯ ಸ್ವಭಾವದಿಂದ ಇನ್ನೊಂದಕ್ಕೆ ಕಡಿತಿದ್ದರೂ ಇಂಥಾ ಜಗಳಗಳಿಗೆ, ಹೊಡೆದಾಟಕ್ಕೆ ಕಾರಣಗಳು ಹೊರಗೆ ತೋರಬಂದರೂ ಅವುಗಳಿಂದ ಕಠಿಣವಾಗುವದಿಲ್ಲವೇಕೆ? ಯಾಕೆಂದರೆ ಎಲ್ಲಾ ಪಂಗಡಗಳೂ ತಮ್ಮನ್ನು ಆಳಿಕೊಳ್ಳುವ ಕೆಲಸದಲ್ಲಿ ಒಗ್ಗಟ್ಟಾಗಿದ್ದಾರೆ. ಇಂಗ್ಲಿಷ್ ಜನರಿಗೂ ಸ್ಕಾಟ್ಲ್ಯಾಂಡ ಜನರಿಗೂ ಜನಾಂಗಭೇದ ಭಾಷೆಯಭೇದ ಇತಿಹಾಸಭೇದ ಆಧಿರುಚಿಭೇದವಿಂದ ಅವರೊಳಗೆ ಕಚ್ಚಾಟಗಳು ಕಡಿಮೆ ಇಲ್ಲದೆ ಇದ್ದ ಕಾಲವಿತ್ತು. ಇಲ್ಲಿಯೂ ಅವರೊಳಗೆ ರಾಜಿಯಾದದ್ದು ಹ್ಯಾಗೆಂದರೆ—ತಮಗೆ ಒಟ್ಟಾಗಿ ಸ್ವರಾಜ್ಯ ಸಿಕ್ಕಿದ್ದರಿಂದ ತಮ್ಮ ಶಕ್ತಿಗಳನ್ನು ದೇಶದ ಅಭಿವೃದ್ಧಿಗೂ ರಕ್ಷಣೆಗೂ ದುರಾಗ್ರಹವನ್ನು ಉಪಯೋಗಿಸುತ್ತಿದರು. ಆದರೆ ಬ್ರಿಟನಿಗೂ ಐರ್ಲ್ಯಾಂಡಿಗೂ ಇನ್ನೂ ಯಾಕೆ ಇಂಥಾ ಒಗ್ಗಟ್ಟಾಗಲಿಲ್ಲ. ಇದಕ್ಕೆ ರಾಜಕೀಯ ಹಕ್ಕುಗಳಲ್ಲಿ ಸಮಾನತ್ವವಿಲ್ಲದೆ ಇರುವದೇ ಕಾರಣವಾಗಿದೆ.

ನಮ್ಮ ದೇಶದಲ್ಲಿ ಹಿಂದೂ ಮುಸಲ್ಮಾನರೊಳಗೆ ಜಗಳಕ್ಕೆ ಇನ್ನೊಂದುವಿಧದ ಕಾರಣವಿದೆಯೆಂತ ಒಪ್ಪತಕ್ಕ ವಿಷಯವಾಗಿದೆ. ಎಲ್ಲಿಯಾದರೂ ಪ್ರಾಣಿಹಿಂಸೆಯನ್ನು ವಿಚಾರಿಸಿ ಪಾಪವಿದೆ. ಪಾಪವಾದರೆ ಶಿಕ್ಷೆ ಇದೆ. ಮತವು ತತ್ವದಾಟಕ್ಕೆ [illegible] ತಮ್ಮ [illegible] ಗಳಿಗೂ ಹೋರಿಕೆಯ ಕರ್ಮಗಳಿಗೇನೇ ಪ್ರಾಮುಖ್ಯತೆ ಕೊಡುತ್ತಾ ಹೋದರೆ ಶಾಂತಿಭಂಗಕ್ಕೆ ಇದಕ್ಕಿಂತ ಹೆಚ್ಚಿನ ಕಾರಣ ಬೇಡ. ಯೂರೋಪಿನ ಇತಿಹಾಸವು ಮತದ ಬಾಹ್ಯಕಾರ್ಯಗಳಿಗಾಗಿ ಆದ ಜಗಳಗಳಿಂದ ರಕ್ತಮಯವಾಗಿ ಹೋಗಿದೆ. ಅಹಿಂಸೆಯು ನಿಮ್ಮ ಮತದ ಬೋಧನೆಯಾದರೆ ಅದನ್ನು ಸಂಪೂರ್ಣವಾಗಿ ಸಾಧಿಸುವದು ಅಸಾಧ್ಯವಾದರೂ ಆ ತತ್ವವನ್ನು ಯಾವಾಗಲು ಎದುರಿನಲ್ಲಿಟ್ಟುಕೊಳ್ಳಬೇಕು. ಮತದ ಹೆಸರು ಹೇಳಿ ಒಂದು ಜಾತಿ ಮೃಗವನ್ನು ನೀವು ಕೊಲ್ಲುತ್ತಾ ಇರುವಾಗ್ಯೆ ಇನ್ನೊಂದು ಮತದವರು ಇನ್ನೊಂದು ಜಾತಿ ಮೃಗವನ್ನು ಮತಕ್ಕಾಗಿ ಕೊಂದರೆ ಆ ಜಾತಿಯವರನ್ನೇ ನೀವು ಕೊಲ್ಲಲಿಕ್ಕೆ ತಯಾರಿರುವಾಗ ಅದಕ್ಕೆ ದಬ್ಬಾಳಿಕೆಯೆಂತಲೇ ಹೆಸರು. ನಮ್ಮ ಮತವು ಒರೇ ಕರ್ಮಗಳಿಂದ ತುಂಬಿದ್ದೇ ಸರ್ವಕಾಲಕ್ಕೂ ಆಗಿರಲಾರದೆಂತ ನಮ್ಮ ಆಶೆ. ಇನ್ನೊಂದು ಆಶೆ ಇದೆ ಏನೆಂದರೆ— ಹಿಂದೂ ಮುಸಲ್ಮಾನರು ಒಂದೇ ರಾಜಕೀಯ ಧ್ಯೇಯಕ್ಕಾಗಿ ಕೆಲಸಮಾಡಬೇಕೆಂತ-ಆಗ್ಯೆ ಹೊರಗಿನ ವ್ಯತ್ಯಾಸಗಳೆಲ್ಲಾ ಅಲ್ಪವಾಗುತ್ತವೆ. ಇಷ್ಟು ನಮ್ಮ ದುಃಖ ಮತ್ತು ಆಶೆ ವಿಷಯವಾಯಿತು. ಮೇಲಿಂದ ನೋಡುತ್ತಿರುವ ಮೂರನೇ ಪಂಗಡದವರು ಇದರಲ್ಲಿ ಎಷ್ಟರಮಟ್ಟಿಗೆ ಭಾಗಿಗಳಾಗಿದ್ದಾರೆಂತ ನೋಡೋಣ.

(ಸಶೇಷ)

ಕೊಡಗು ಜಮ್ಮಾದಾರರ ಸಂಘ

(ಪ್ರಚಾರಕ ಕಾರ್ಯದರ್ಶಿಯವರಿಂದ)

" ಅವರ (ಹಿಂದೀಜನರ) ಅಭಿವೃದ್ಧಿಯಲ್ಲಿ ನಮ್ಮ ಬಲವೂ, ಅವರು ತೃಪ್ತಿಹೊಂದುವದರಲ್ಲಿ ನಮ್ಮ ಭದ್ರತೆಯೂ ಮತ್ತು ಅವರ ಕೃತಜ್ಞತೆಯಲ್ಲಿ ನಮ್ಮ ಉತ್ಕೃಷ್ಟ ಪ್ರತಿಫಲವೂ ಆಗಿರುತ್ತೆ "

ವಿಕ್ಟೋರಿಯ R I

" ಒಂದು ಒಟ್ಟು ಜನಾಂಗವನ್ನು ದಣ್ಣಗರನ್ನಾಗಿ ಮಾಡಕೂಡದು. ಮುಟ್ಟಬಾರದು "

ಪಿ. ಯಂ ನೇತ್ರಾ

No. 3

ಕಳೆದ ಸಂಚಿಕೆಯಲ್ಲಿ ನಮ್ಮ ಈಗಿನ ಸ್ಥಿತಿಯನ್ನು ವಿವರಿಸಲಾಯಿತು. ನಾವು ಬಡತನದಲ್ಲಿ ಸಿಕ್ಕಿ ದಿನೇದಿನೇ ಹೆಚ್ಚಿನ ಅಧೀನತೆಗೆ ಸಿಕ್ಕಿಬರುತ್ತಿದ್ದೇವೆಂಬುದು ಸ್ಪಷ್ಟವಾಯಿತು. ಹಾಗಾದರೆ ನಮ್ಮ ಮುಂದಿನ ಗತಿಯೇನು? ಈ ವಿಷಯವನ್ನು ಆಲೋಚಿಸುವದಕ್ಕೆ ಮೊದಲು, ನಾವೆಲ್ಲರು ಆಶಿಸುವದೇನು? ಪ್ರಪಂಚದ ಇತರ ಕಡೆಗಳಲ್ಲಿ ಇರುವ ಜನಾಂಗಗಳಹಾಗೆಯೇ ನಮ್ಮ ಜನಾಂಗವೂ ಕೂಡ ಬಲಿಷ್ಟರಾಗಿ, ಇತರ ಜನಾಂಗದವರ ಎದುರಿಗೆ ತಲೆಬಗ್ಗಿಸದೇನೇ ಇರಬೇಕೆಂದಲ್ಲವೇ? ಈ ಉದ್ದಿಶ್ಯವನ್ನು ಸಾಧಿಸಬೇಕಾದರೆ, ನಮಗೆಲ್ಲರ (ಅಂದರೆ ಗಂಡಸರೂ ಹೆಂಗಸರೂ ಸಹ ಸೇರಿ) ಪ್ರಯತ್ನದಿಂದಲೇ ಆಗಬೇಕಾಗಿರತ್ತೆ. ಈ ಉದ್ದಿಶ್ಯವನ್ನು ಸಾಧಿಸುವ ಮೊದಲು ನಮ್ಮವರಲ್ಲಿ ಎಷ್ಟು ಜನರು ಈ ಉದ್ದಿಶ್ಯವನ್ನು ನೆರವೇರಿಸುವ ಉತ್ಸಾಹವುಳ್ಳವರಾಗಿದ್ದಾರೆ? ಎಷ್ಟು ಜನರು ಅವರವರ ಜೀವಮಾನಕಾಲದಲ್ಲಿ ಒಂದಾವರ್ತಿಯಾದರೂ, ನಮ್ಮ ದೇಶದ ಮುಂದಿನ ಗತಿ ಏನೆಂದು ಆಲೋಚಿಸಿ, ವ್ಯಸನಪಟ್ಟಿರುತ್ತಾರೆ? ನಮ್ಮ ದೇಶದ ಹೆಚ್ಚಿನ ಜನರು ಇತರ ಜನಾಂಗದವರ ಶಕ್ತಿಯನ್ನೂ ಐಶ್ವರ್ಯವನ್ನೂ, ಚಮತ್ಕಾರವನ್ನೂ ಸಹ ತಿಳಿದವರಾಗಿರುತ್ತಾರೋ? ಮತ್ತು ನಮ್ಮ ಹೆಚ್ಚಿನ ಜನರು, ನಮ್ಮ ದೇಶದ ಬಡತನವನ್ನೂ ಅನಾನುಕೂಲಗಳನ್ನೂ ಮತ್ತೂ ನಮ್ಮ ದೇಶದ ಮುಂದಿನ ಸ್ಥಿತಿ ಹೇಗೆ ಆಗಬೇಕೆಂಬದನ್ನೂ ಆಲೋಚಿಸಲು ಶುರುಮಾಡಿದ್ದಾರೊ? ನಮಗೆ ತಿಳಿದಹಾಗೆಯೇ ಈ ತರದ ಆಲೋಚನೆಯಲ್ಲಿ ಮಗ್ನರಾಗಿರುವವರು ಬಹಳ ಕಮ್ಮಿಯಾಗಿದೆ ಮತ್ತು ಈ ಆಲೋಚನೆಗೆ ಶುರುಮಾಡಿದವರು ಪಶ್ಚಿಮಾತ್ಯರ ವಿದ್ಯೆಯನ್ನು ಕಲಿತವರೇ ಆಗಿರುತ್ತಾರೆಂಬುದು ನಿಜವಾದ ಸಂಗತಿಯಾಗಿದೆ. ಹಾಗಾದರೆ ಮುಖ್ಯವಾಗಿ ಪ್ರಪಂಚದ ಇತರ ಜನಾಂಗಗಳ ಮುಂದೆ, ನಮ್ಮ ಜನಾಂಗವು, ಇತರ ಜನಾಂಗದವರ ಹಾಗೆ ಬಲಿಷ್ಟರಾಗಿಯೂ ಸ್ವತಂತ್ರರಾಗಿಯೂ, ಇರಬೇಕೆಂಬ ಉದ್ದಿಶ್ಯವನ್ನು, ನಮ್ಮ ದೇಶದ ಹೆಚ್ಚಿನ ಜನರಲ್ಲಿ ಹುಟ್ಟಿಸಬೇಕಾಗಿದ್ದು ನಮ್ಮ ಮುಖ್ಯ ಕೆಲಸವಾಗಿದೆ. ಇದು ಸುಲಭಸಾಧ್ಯವಲ್ಲ. ಲಕ್ಷಾಂತರ ಜನಗಳಲ್ಲಿ, ಈಗ ಇಲ್ಲದೆಯೂ ತಿಳಿಯದೆಯೂ ಇರುವಂಥ ಈ ಮಹತ್ವವಾದ ಉದ್ದೇಶವನ್ನು ನಮ್ಮ ಜನಾಂಗದವರಲ್ಲಿ ಪ್ರಚುರಗೊಳಿಸಿ, ಅವರನ್ನು ಇದೇ ಕಾರ್ಯದಲ್ಲಿ ದೃಢಮನಸ್ಕರನ್ನಾಗಿ ಮಾಡುವದೆಂದರೆ ವಿಶ್ವಪ್ರಯತ್ನವನ್ನು ಮಾಡಬೇಕಾಗಿದೆ. ಈ ಕೆಲಸವನ್ನು ನಮಗೆ ಧ್ಯೇಯಕ್ಕೆ ತಕ್ಕ ರೀತಿಯಲ್ಲಿ, ಸಾಧಿಸಬೇಕಾದಲ್ಲಿ, ನಮ್ಮ ಜನಾಂಗಕ್ಕೆ ತಕ್ಕ ವಿದ್ಯೆಯನ್ನೂ, ತಿಳುವಳಿಕೆಯನ್ನು ಕೊಡುವದರಿಂದಲೇ ಸಾಧ್ಯವಾಗುವದು. ಈ ವಿದ್ಯೆಯನ್ನು ಕೊಡುವಂಥಾ ಭಾರವನ್ನು ಸರಕಾರದವರ ಮೇಲೇ ಹಾಕಿದಲ್ಲಿ, ಅವರಿಗೆ ಸಾಧ್ಯವಾಗಲಾರದು. ಆದ್ದರಿಂದ ನಮ್ಮ ಜನಾಂಗಕ್ಕೆ ವಿದ್ಯೆಯನ್ನು ಕೊಡಲಿಕ್ಕಾಗಿ ಯಥೇಚ್ಛವಾಗಿ ಧನವನ್ನು ಕೂಡಿಸುವದರಿಂದಲೂ ದೇಶಾಭಿಮಾನಿಗಳ ಕೆಲಸದಿಂದಲೂ ಆಗಬೇಕಾಗಿದೆ. ಆದ್ದರಿಂದ ನಮ್ಮ ಮುಂದಿನ ಸ್ಥಿತಿಯು ನಮ್ಮ ಇರಾದೆಯಂತೆ ಆಗಬೇಕಾದರೆ ದ್ರವ್ಯಸಹಾಯವೂ ಮತ್ತು ಜನಸಹಾಯವೂ ಆಗಬೇಕು.

ದ್ರವ್ಯಸಹಾಯವೂ ಮತ್ತು ಜನಸಹಾಯವೂ ಯಥೇಚ್ಛವಾಗಿ ದೊರಕಿತೆಂದು ಭಾವಿಸುವ. ಅಲ್ಲದೆ ಹೆಚ್ಚಿನ ಜನರಲ್ಲಿ ನಮ್ಮ ಜನಾಂಗವು ಬಲಿಷ್ಟರೂ ಮತ್ತು ಸ್ವತಂತ್ರರೂ ಆಗಬೇಕೆಂಬ ಆಶೆಯನ್ನು ಹುಟ್ಟಿಸಿದ ಪಕ್ಷಕ್ಕೆ ನಮ್ಮ ಉದ್ದೇಶವು ನೆರವೇರುವದೋ ಹ್ಯಾಗೆ ಎಂದು ಯೋಚಿಸುವಾಗ್ಯೆ ನಾವು ಒಂದು ಜನಾಂಗವಾಗಿದ್ದೇವೋ ಎಂಬುವ ಪ್ರಶ್ನೆಯು ಹುಟ್ಟುತ್ತದೆ. ರಾಜಕೀಯ ವಿಷಯದಲ್ಲಿ ಮಾತ್ರ ನಾವು ಅರ್ಜಿ ಬರಿಯಲು, ಒಗ್ಗಟ್ಟಾಗಿ ಇದ್ದರೆ ಒಂದು ಜನಾಂಗವಾಗಲಾರೆವು. ಜನಾಂಗವಾಗಬೇಕಾದರೆ ದೇಶದ ಎಲ್ಲ ಜನರಲ್ಲಿ ಎಲ್ಲವರ ಸುಖಕ್ಕೆ ಮಧ್ಯ ಬರುವಂಥಾ ಸಂದರ್ಭವನ್ನು ಹೋಗಲಾಡಿಸಲಿಕ್ಕೆ, ನಮ್ಮಗಳ ಚಿಕ್ಕ ಚಿಕ್ಕ ಭೇದಗಳನ್ನೆಲ್ಲಾ ಮರೆತು, ನಮ್ಮ ಎಲ್ಲವನ್ನೂ ಮತ್ತು ಪ್ರಾಣವನ್ನೂ ಸಹ ಕಳೆದುಕೊಳ್ಳುವಷ್ಟರ ಮಟ್ಟಿಗೆ, ತಯ್ಯಾರಾಗಿರಬೇಕಾಗಿದೆ. ಅಲ್ಲದೆ ಎಷ್ಟುಭೇದಗಳಿದ್ದರೂ ಸಂದರ್ಭ ಬೀಳುವಾಗ್ಯೆ ದೇಶದ ಜನರೆಲ್ಲಾ ಒಬ್ಬನಂತೆಯೇ (as one man) ನಿಂತು ದೇಶವನ್ನು ಕಾಪಾಡಲು ಸಿದ್ಧರಾಗಿರಬೇಕು. ಅನೇಕ ಸಂದರ್ಭಗಳಲ್ಲಿ ಎಲ್ಲರವರ ಕಷ್ಟಸುಖಗಳು ಒಂದೇ ಎಂಬದಾಗಿಯೂ, ಮತ್ತು ನಮ್ಮ (Social, Religious and Domestic) ಸಾಮಾಜಿಕ, ಮತವಿಚಾರ, ಮತ್ತು ಗೃಹಕೃತ್ಯಗಳಲ್ಲಿ) ಕ್ರಮಗಳು ಎಲ್ಲಾ ಒಂದೇ ಉದ್ದೇಶ್ಯವನ್ನುಂಟು ಮಾಡುವಂಥಾದ್ದಾಗಿಯೂ ಇರಬೇಕು. ಅಲ್ಲದೆ ದೇಶದ ಕಷ್ಟಕಾಲದಲ್ಲಿ ಎಲ್ಲವರನ್ನೂ ಒಟ್ಟುಗೂಡಿಸುವಂಥಾ ಶಕ್ತಿಯಿಂದ ಕೂಡಿದ್ದಾಗಿರಬೇಕು. ಈ ಗುಣಗಳಲ್ಲಿ ನಮ್ಮ ದೇಶವು ಹಿಂದೆ ಬೀಳುವ ಪಕ್ಷಕ್ಕೆ ವಿದ್ಯೆಯನ್ನು ಕೊಡುವಾಗ ಈ ಮೇಲಣ ಗುಣಗಳ, ಅಭಿವೃದ್ಧಿ ಆಗುವಂಥಾ ವಿದ್ಯೆಯನ್ನು ಕೊಡಬೇಕಾಗಿದೆ. ದೇವರು ಸ್ವಪ್ರಯತ್ನ ಮಾಡುವವರಿಗೇನೆ ಸಹಾಯವನ್ನು ಮಾಡುತ್ತಾನೆ. ನ್ಯಾಯಕ್ಕೆ ಸರಕಾರದವರೇ ಈ ತರದ ವಿದ್ಯೆಯನ್ನು ಕೊಡಬೇಕಾದುದಾದಾಗ್ಯೂ ಬಹುಶ ಈಗಿನ ಸ್ಥಿತಿಯಲ್ಲಿ ಅವರಿಗೆ ಸಾಧ್ಯವಿಲ್ಲದಿರಬಹುದು. ಯಾವ ಸರಕಾರವೂ ಜನಾಂಗವನ್ನು ಸ್ಥಾಪಿಸಲಿಲ್ಲ. ಜನಾಂಗವು ಸರಕಾರವನ್ನು ಸ್ಥಾಪಿಸಿದ್ದಾಗಿರುತ್ತೆ. ಆದಕಾರಣ ದೇಶದ ಜನರಲ್ಲಿ ಜನಾಂಗವಾಗಲಿಕ್ಕೆ ಬೇಕಾದ ಗುಣಗಳನ್ನು, ನೆಲೆಗೊಳಿಸುವದೇ ದೇಶದ ಮುಖಂಡರ ಮತ್ತು [illegible] ಕೆಲಸವಾಗಿರುತ್ತೆ. ಈಗಿನ ಸ್ಥಿತಿಯಲ್ಲಿ ನಮ್ಮ ದೇಶದ ಮುಖಂಡರು ಮತ್ತು ವಿದ್ಯಾವಂತರು, ರೈತಾಪಿಜನರ ಕಷ್ಟ ಸುಖಗಳೆಂದು ತಿಳಿದುಕೊಂಡದನ್ನ ರೈತಾಪಿಜನರ ಪರವಾಗಿ ನಿವಾರಿಸಲು ಪ್ರಯತ್ನ ಮಾಡುತ್ತಾರೆ. ರೈತಾಪಿಜನರನ್ನು ಹೋಗಿ ಕೇಳಿದರೆ ದೇಶದ ಮುಖಂಡರು ಮಾಡುವ ಕೆಲಸಗಳಿಗೆಲ್ಲಾ ಅವರು ಅಭಿಮಾನದಿಂದ ಒಪ್ಪಬಹುದು. ಆದರೆ ಈ ರೈತಾಪಿಜನರು ತಮ್ಮ ಮುಂದಾಳುಗಳು ಮಾಡುವದನ್ನು ಚೆನ್ನಾಗಿ ಅರಿತುಕೊಂಡಿದ್ದಾರೆಂದು ಹೇಳಲಸಾಧ್ಯ. ಆದರೆ ಮುಂದಾಳುಗಳು ಈ ದಿನ ಯೋಚಿಸುವದನ್ನು ನಾಳೆ ರೈತಾಪಿ ಜನರು ಯೋಚಿಸುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಈಗಿನ ನಮ್ಮ ಸ್ಥಿತಿಯಲ್ಲಿ ನಾವು ನಮ್ಮ ಜಾತಿ, ನಮ್ಮ ಊರು, ನಮ್ಮ ಜಿಲ್ಲೆ, ನಮ್ಮ ಕಷ್ಟಸುಖ ಇಷ್ಟರಲ್ಲೇ ತೃಪ್ತಿಹೊಂದಿದವರಾಗಿರುತ್ತೇವೆ. ಆ ಕಾರಣದಿಂದಲೇ ನಮ್ಮಲ್ಲಿ ನಾವೇ ಅನೇಕ ಪಂಗಡಗಳಾಗಿಕೊಂಡಿರುತ್ತೇವೆ. ಅನೇಕಾವರ್ತಿ ನಮ್ಮ ವಿದ್ಯಾವಂತರು, ತಪ್ಪು ಹೋಲಿಕೆಗಳನ್ನು ಸೂಚಿಸಿ ಸಂತೋಷಪಡುವವರಾಗಿರುತ್ತಾರೆ. ಈ ಸೂಚನೆಯಲ್ಲಿ ಬ್ರಿಟಿಷ್ ಜರ್ಮನ್ ಮತ್ತು ಇತರ ದೇಶಗಳಲ್ಲಿ ಇಂಥಾ ಪಂಗಡಗಳಿವೆಂದು ಅನುತ್ತಾರೆ. ಆದರೆ ದೇಶದ ಎಲ್ಲವರಿಗೂ ಬರಲುವಂಥಾ ಕಷ್ಟಕಾಲ ಬಂದಲ್ಲಿ ಆ ಜನಾಂಗವು ಒಬ್ಬ ಮನುಷ್ಯನಂತೆ ಪ್ರವರ್ತಿಸುವ ಗುಣವು ನಮ್ಮಲ್ಲಿ ಇದ್ದದ್ದನ್ನು ಕಳೆದುಕೊಂಡಿರುತ್ತೇವೆಂಬುದನ್ನು ಅವರು ಮರೆತ ಹಾಗೆ ಕಾಣುತ್ತೆ. ತಪ್ಪು ನಡವಳಿಕೆಗಳಿಲ್ಲದ ಜನಾಂಗಗಳಾವವೂ ಇಲ್ಲ. ಆದರೆ ಒಗ್ಗಟಿಗೆ ಬಲಕೊಡುವ ಗುಣಗಳು ಹೆಚ್ಚೋ ಅಥವಾ ಕಲಹಕ್ಕೆ ಪ್ರೋತ್ಸಾಹಿಸುವ ಗುಣಗಳು ಹೆಚ್ಚೋ ಯೆಂಬುದನ್ನ ನೋಡಬೇಕಾಗಿದೆ. ಒಗ್ಗಟ್ಟಿಗೆ ಪ್ರೋತ್ಸಾಹಿಸುವ ಗುಣಗಳು ಹೆಚ್ಚಾದ ಪಕ್ಷಕ್ಕೆ ಜನಾಂಗವಾಗುತ್ತೇವೆ. ಆದಕಾರಣ ಜನಾಂಗವಾಗಲಿಕ್ಕೆ ಇರತಕ್ಕ ಗುಣಗಳನ್ನು ಹುಟ್ಟಿಸುವದಲ್ಲದೇ ಮತ್ತು ಈ ಗುಣಗಳನ್ನು ನಮ್ಮ ಜನರಲ್ಲಿ ಹುಟ್ಟಿಸಬೇಕಾದರೆ ವಿದ್ಯೆಯಿಂದಲೇ ಆಗಬೇಕಾಗಿದೆ. ಯಾಕೆ ಪ್ರತಿಯೊಂದು ಕಷ್ಟನಿವಾರಣೆಯು ನಮ್ಮ ಪ್ರಯೋಜನಕ್ಕೆ ತಕ್ಕದಾದ ವಿದ್ಯೆಯನ್ನು ರೈತಾಪಿ ಜನರಿಗೆ ಕೊಡುವದರಿಂದಾಗಿದೆ. ಆದರೆ ಈ ಬರಿ ಆಶೆಯನ್ನು ಹುಟ್ಟಿಸಿದ ಮಾತ್ರಕ್ಕೇನೇ ನಮಗೆ ಜಯವಾಗಲಾರದು. ಯಾಕೆಂದರೆ, ಆಶೆ ಎರಡು ತರದ್ದಾಗಿದೆ. ಒಂದನೇ — ಪ್ರಯತ್ನಪಡದೆ ಬರೀ ಆಶೆ ಇದರಿಂದ ಯಾವ ಫಲಿತಾಂಶವಾಗಲಿಕ್ಕಿಲ್ಲ. ಎರಡನೇದು ತುಂಬಿ ತುಳುಕುವ ಆಶೆ ಇದ್ದು ಆ ಆಶೆಯನ್ನು ನೆರವೇರಿಸಲಿಕ್ಕಾಗಿ, ವಿಶ್ವಪ್ರಯತ್ನ ಮಾಡುವುದು. ಅಂದರೆ ದೇಶದ ಈಗಿನ ಉದ್ದೇಶಗಳನ್ನ (ideals) ಪೂರಾ ಬದಲಾಯಿಸಬೇಕಾಗಿದೆ. ಇದು ಬಹಳ ಕಷ್ಟದ ಕೆಲಸವೆ, ಸರಿ. ಆದರೆ ಕಷ್ಟವೆಂದು ಬಿಟ್ಟುಬಿಡಬಾರದು. ಈ ಅದ್ಭುತ ಕೆಲಸವನ್ನು ಹ್ಯಾಗೆ ಶುರುಮಾಡುವದು!

ಸಂಘದ ಕೆಲಸ

ಹಿಂದಿನ ಸಂಚಿಕೆಯಲ್ಲಿ ಸಂಘದ ಉದ್ದೇಶವನ್ನು ಪ್ರಚುರಗೊಳಿಸುವದಕ್ಕೂ ಅದರ ಮೂಲಕ ಪ್ರತಿಯೊಬ್ಬನ ಸ್ಥಿತಿಯನ್ನು ಅಭಿವೃದ್ಧಿಪಡಿಸಲಿಕ್ಕಾಗಿ ನಾಡುಕಮಿಟಿಗಳನ್ನು ಏರ್ಪಾಡು ಮಾಡಬೇಕೆಂದು ಕೇಳಿಕೊಂಡದ್ದಾಯಿತು. ಈ ಏರ್ಪಾಡಿನಲ್ಲಿ ಪ್ರತಿಯೊಬ್ಬನು ಅವನು ದೇಶಕ್ಕೆ ಮಾಡಬೇಕಾದಂತ ಕೆಲಸದ ಜವಾಬ್ದಾರಿಕೆಯನ್ನು ವಹಿಸಿಕೊಳ್ಳಬೇಕಾಗಿದೆ. ಜನಾಂಗವು ಹಳ್ಳಿಯ ಗುಡಿಸಲುಗಳಲ್ಲಿ ವಾಸಿಸುತ್ತದೆಂಬುದನ್ನು ಮರೆತು ಬಿಡಬಾರದು. ಸುಮಾರು ಒಂದೂವರೆ ಶತಮಾನಗಳ ಹಿಂದೆ ಇಂಗ್ಲಾಂಡುದೇಶಕ್ಕೆ ದೊಡ್ಡ ಆಪತ್ತು ಒದಗಿದ ಕಾಲದಲ್ಲಿ ಇಂಗ್ಲಾಂಡುದೇಶದ ದೊಡ್ಡ ನಾವಿಕ ಸೇನಾಪತಿಯು ನಾವಿಕ ಸೈನಿಕರಿಗೆ ಸೂಚಿಸಿ ಹೇಳಿದ್ದೇನಂದರೆ,— " ಇಂಗ್ಲಾಂಡು ದೇಶ ಪ್ರತಿಯೊಬ್ಬನು ಅವನ ಕರ್ತವ್ಯವನ್ನು ಮಾಡಬೇಕೆಂದು ನಿರೀಕ್ಷಿಸುತ್ತದೆ " ಹಾಗೆಯೇ ನಮಗೆ ಒದಗಿದಂಥ ಕಷ್ಟಗಳದ ಪಾರಾಗಬೇಕಾದರೆ ನಮ್ಮ ಗುಡಿಸಲುಗಳಲ್ಲಿ ವಾಸಿಸುವ ಪ್ರತಿಯೊಬ್ಬನು ದೇಶವು ನಿರೀಕ್ಷಿಸುವಂತಾ ಕೆಲಸವನ್ನು ಮಾಡದ ಹೊರತು ನಾವು ಉನ್ನತಸ್ಥಿತಿಗೆ ಬರಲಾರೆವು. ನಮ್ಮ ರಾಜಕೀಯ ಅಭಿಲಾಷೆಯಲ್ಲಿ, ಸ್ವರಾಜ್ಯವನ್ನು ಸ್ಥಾಪಿಸುವದೇ ನಮ್ಮ ಉದ್ದೇಶ್ಯವಾಗಿದೆ. ಈ ಸ್ವರಾಜ್ಯವು ಹಳ್ಳಿ ಗುಡಿಸಲುಗಳಲ್ಲಿ ವಾಸಮಾಡುವವರಿಗಲ್ಲದೆ ಬರೆಪಟ್ಟಣಿಗಳಿಗಲ್ಲ. ಹಾಗಿರುವಾಗ್ಯೆ ಅಂಥಾ ಹಳ್ಳಿಗಳ ಗುಡಿಸಲುಗಳಲ್ಲಿ ವಾಸಿಸುವ ಜನರ ಸ್ವರಾಜ್ಯಕ್ಕೆ ಆ ಹಳ್ಳಿಗಳಲ್ಲಿ ವಾಸಿಸುವ ಜನರು ಸಹ ಪ್ರಯತ್ನಪಡಬೇಕಾಗಿದೆ. ಈಗಿನ ಸರಕಾರವು ನಾವು ಸ್ವರಾಜ್ಯ ಸಂಸ್ಥೆಗಳನ್ನು ಕೇಳುವಾಗ್ಯೆ ' ನೀವು ಅಂಥಾ ಸಂಸ್ಥೆಗಳಿಗೆ ಅರ್ಹರಲ್ಲ. ನಮ್ಮ ಕ್ರಮದಂತೆ ನಿಮ್ಮ ಅರ್ಹರಾಗಿ ಮಾಡಬೇಕೆಂಬದೆ ನಮ್ಮ (ಸರಕಾರದವರ) ಪ್ರಯತ್ನ ' ಎಂದು ಹೇಳುವರು. ಆದಕಾರಣ ನಾವು ಅರ್ಹರೆಂದು ಬರೇ ಬಾಯಿಮಾತಿನಲ್ಲಿ ಹೇಳಿದ ಮಾತ್ರಕ್ಕೇನೆ ಸರಕಾರದವರು ಒಪ್ಪುವವರಾಗಿಲ್ಲ. ನಮ್ಮ ನಮಗಳ ನಡತೆಯಲ್ಲಿ ತೋರಿಸುವದೆ ಅರ್ಜಿ ಬರೆಯುವದಕ್ಕಿಂತಲೂ ಉತ್ತಮ ಕೆಲಸವಾಗಿದೆ. ಈ ಕೆಲಸವನ್ನು ಹಳ್ಳಿಯ ಗುಡಿಸಲುಗಳಲ್ಲಿರುವ ಜನರು ಹ್ಯಾಗೆ ಮಾಡಿ ತೋರಿಸುವದು. ಈ ಅರ್ಹತೆಯನ್ನು ಕೃತಪಡಿಸಲಿಕ್ಕೆ ಸಹಕಾರವೇ ಮುಖ್ಯವಾದದ್ದು. ಅಂದರೆ ಗ್ರಾಮಗಳಲ್ಲಿ ಪ್ರತಿಯೊಂದು ಉದ್ದೇಶ್ಯವನ್ನು ಸಂಪಾದಿಸಬೇಕಾದರೆ ಗ್ರಾಮದವರೆಲ್ಲಾ ಒಬ್ಬ ಮನುಷ್ಯನಂತೆ ವರ್ತಿಸಬೇಕು. ಒಬ್ಬ ಮನುಷ್ಯನಂತೆ ವರ್ತಿಸಬೇಕಾದರೆ ಈ ವರ್ತನೆಗೆ ಒಂದು ಕ್ರಮಬೇಕಾಗಿದೆ. ಈ ಕ್ರಮವನ್ನು ಗ್ರಾಮಗಳಲ್ಲಿ ಪ್ರಚಲಿತಗೊಳಿಸುವದೇ ಜಮ್ಮಾದಾರರ ಸಂಘದ ಮುಖ್ಯ ಉದ್ದೇಶವಾಗಿತ್ತೆ. ಆದ್ದರಿಂದ ಹಳ್ಳಿಗಳ ಗುಡಿಸಲುಗಳಲ್ಲಿರುವ ಪ್ರತಿಯೊಬ್ಬ ಮನುಷ್ಯನು (ಗಂಡಸರೂ ಹೆಂಗಸರೂ) ಸಂಘದವರು ಹೇಳುವಂಥಾ ಪ್ರತಿಯೊಂದು ಅಂಶವನ್ನು ಚೆನ್ನಾಗಿ ಮನಸ್ಸಿಗೆ ತೆಗೆದುಕೊಂಡ ನಡಿಸದಿದ್ದಲ್ಲಿ ನಮ್ಮ ಅರ್ಹತೆಯನ್ನು ಸ್ಥಾಪಿಸುವದು ಸಾಧ್ಯವಾಗಲಾರದು. ಸಂಘದವರೇನು ಅಸಾಧ್ಯವಾದ ಕೆಲಸಗಳನ್ನು ಮಾಡಬೇಕೆಂದು ಹೇಳುವವರಲ್ಲ. ಸಂಘದವರು ಹೇಳುವದೇನಂದರೆ ಹಳ್ಳಿಗಳ ಗುಡಿಸಲುಗಳಲ್ಲಿ ಅತಿ ಕಷ್ಟದಿಂದ ವಾಸಿಸುವ ನೀವು ವೃಥಾ ಶಕ್ತಿ [illegible] ಬೇಡಿ. ದುರದೃಷ್ಟದಿಂದ ಕಷ್ಟ ಒಂದು ಬಂದ ತಕ್ಷಣಕ್ಕೆ ನಿಮ್ಮ ಹಳ್ಳಿಗಳಲ್ಲೇ ತಿಳುವಳಿಕೆ ಇರುವವರು ಇದ್ದರೆ, ಅಂಥವರ ಸಹಾಯದಿಂದ ವಿಚಾರಮಾಡಿಸಿಕೊಳ್ಳಿ. ನಮ್ಮ ಹಿರಿಯರ ಕಾಲದಲ್ಲಿ ಹೀಗೆಯೇ ಗ್ರಾಮಗಳಲ್ಲಿ ತೀರಿಸಿಕೊಳ್ಳುತ್ತಿದ್ದರು. ವ್ಯವಸಾಯಕಾಲದಲ್ಲಿ ಎಲ್ಲವರು ತಮ್ಮತಮ್ಮೊಳಗೆ ಸಹಾಯಕರಾಗಿರಿ, ಹಿರಿಯರು ಈ ರೀತಿಯಿಂದಲೇ ಅಭಿವೃದ್ಧಿಯನ್ನು ಹೊಂದುತ್ತಿದ್ದರು. ಮಿತವ್ಯಯದಿಂದಲೂ ಸ್ವಪ್ರಯತ್ನದಿಂದಲೂ, ಹೊಟ್ಟೆತುಂಬ ಅನ್ನವನ್ನು ಮೈಗೆ ಬೇಕಾದ ಬಟ್ಟೆಯನ್ನು ಕಾಪಾಡಿಕೊಳ್ಳಿ. ನಮ್ಮ ದನಗಳ ಕೊಟ್ಟಿಗೆಯನ್ನು ಚೊಕ್ಕಗಟ್ಟುಕೊಂಡು ತುಂಬಾ ಹಾಲು ಮೊಸರನ್ನುಂಡು ಧಷ್ಟಪುಷ್ಟರಾಗಿ ನಿಮ್ಮ ಅಪ್ಪಂದಿರ ಹಾಗೆ ಬೆಳೆಯಿರಿ. ಹೀಗೆಯೇ ನಮ್ಮ ಪ್ರಯೋಜನವನ್ನು ನಮ್ಮ ಸ್ವಪ್ರಯತ್ನದಿಂದಲೇ ಒದಗಿಸಿಕೊಳ್ಳಲಿಕ್ಕೆ ಅಭ್ಯಾಸವಾದರೆ, ಸ್ವರಾಜ್ಯವು ಸರಕಾರದವರ ಕೈಯ್ಯಲ್ಲಿ ನಿಲ್ಲುವದೂ ಇಲ್ಲ. ನಮ್ಮಲ್ಲಿ ಸ್ವರಾಜ್ಯವು ಬಿಟ್ಟುಹೋಗುವದೂ ಇಲ್ಲ. ಇದನ್ನು ಚೆನ್ನಾಗಿ ಆಲೋಚಿಸಿದರೆ ಸುಲಭಸಾಧ್ಯವಲ್ಲವೇ? ಮನಸ್ಸಿದ್ದಲ್ಲಿ ದಾರಿ ಇದೆ ಎಂದು ತಿಳಿದುಕೊಂಡರೆ ಕಷ್ಟವೆ ಸುಕರವಾದೀತು. ಈ ಸಾಧನೆಗೋಸ್ಕರ ದೇಶದ ಮೇಲೆ ಪ್ರೀತಿ ಇಟ್ಟು ತನ್ಮೂಲಕ ತನ್ನ ಅಭಿವೃದ್ಧಿಯನ್ನು ಕೋರುವಂಥಾ ಪ್ರತಿಯೊಬ್ಬನು ಸಂಘದ ವಾರ್ಷಿಕ ಚಂದ ಒಂದು ರೂಪಾಯಿಯನ್ನು ಕೊಟ್ಟು ಮೆಂಬರಾಗಿ, ದೇಶವನ್ನು ಕಾಪಾಡಬೇಕಾಗಿ ಕೋರಿಕೆ.

(ಗೌರೀ[illegible]—ಎಂಬಂತೆ).

ಕನ್ನಡ :—

ಪಾಲಿಸು ಶ್ರೀಪತಿಯೆ ||ಪ|| ... ಹರಿಯೆ ಹರಿಯೆ ||ಅ|ಪ|| ಅನಾಥರಕ್ಷಕದೇವ | ಆನಂದಮೂರ್ತಿಯೆ || ದೀನದಯಾಳುವೆ | ಶ್ರೀನಿವಾಸನೆ ಪೊರೆ ||೧|| ಮಾಂ ಕೂರನಪಿತ | ನಾರದಪೂಜಿತ || ನಾರಸಿಂಹನೆ ಕೃಪೆ | ದೋರು ನಾರಾಯಣ ||೨|| ಸರಸೀಜನೇತ್ರನೆ | ಕರುಣಾಸಮುದ್ರನೆ || ಹರದಾಸನ ಮನೋಹರ | ವರಗೋವಿಂದನೆ ||೩||

(ಕರೆರೇ ಶ್ರೀಕನಬೇಗ—ಎಂಬಂತೆ).

ಕಾಯೆ ಕಾಮಾಕ್ಷಿದೇವಿಯೆ ||ಪ|| ಮಾಯಮೋಹಕರಿಯೆ ಮಂಗಳರೂಪಿಯೆ ||ಅ|ಪ|| ರಮಣಾದೇವಿಯೆ | ವಿಮಲೆಯೆ ಸೀತೆಯೆ || ಕಾಮುಕಿದೇವಿಯೆ | ಕಮಲೆಯೆ ಕಾಳಿಯೆ ||೧|| ಪರಮಕಲ್ಯಾಣಿಯೆ | ಗೌರೀಭವಾನಿಯೆ || ತಾರಾದೇವಿಯೆ ಕಂಧಿಕುಮಾರಿಯೆ ||೨|| ವರಕುಲವಾಣಿಯೆ | ಪುರುಗಸವೇಣಿಯೆ || ಹರದಾಸನನುತಿ [illegible] | [illegible] ||೩||

ಹರದಾಸ—ಅಪ್ಪಚ್ಚಕವಿ

ಪತ್ರವ್ಯವಹಾರಗಳು.

[illegible]ದು ಪತ್ರದ ಅಭಿಪ್ರಾಯಗಳಿಗೆ ಪತ್ರಕಾರರು ಉತ್ತರ[illegible] [ಎಡಿಟರ್]

ಸಂಪಾದಕ

ಅಯ್ಯಾ,

ಈಚೆ ಗತ ಮಾಸದಲ್ಲಿಟ್ಟಿದ್ದ ಒಂದು ಬ್ರಾಂಚ್ ಪೋಷ್ಟಾಫೀಸು ಇಲ್ಲಿಂದ ಕೊಯನಾಡಿಗೆ ನಿಸ್ಕಾರಣವಾಗಿ ಹೋದುದರಿಂದ ಒರೇ ಒಂದು ರ[illegible] ಪಾತ್ರ ಪ್ರಯೋಜನವಾಗಿದುದ್ದಲ್ಲದೆ ಇದಕ್ಕಿಂತ ಹತ್ತು ಹನ್ನೆರಡು ಗ್ರಾಮಗಳಿಗೂ [illegible] ಪಹಿವಟಿಕೆ [illegible] ಕಷ್ಟನಷ್ಟಗಳು ಸಂಭವಿಸುವ ವಿವರವನ್ನು ನಮ್ಮ ಇಲಾಖಾಧಿಕಾರಿಗಳಿಗೆ [illegible] ಪತ್ರಗಳ ಮೂಲಕ ಕೂಡ ಅರಿಕೆ[illegible] ಮಾಡಿ [illegible] ಅಂತವೇ ಸರಿ

ಅದರಿಂದ ಸಂಬಂಧಿಸಿಗೆ ಆಫೀಸು ಬರುವ ಸಂಭವ ಉಂಟೆಂದಾದರೂ [illegible]? [illegible] ಇಲ್ಲದೆ [illegible] ಕೊಯನಾಡಿಗೆ ಆಫೀಸು ಇರುವುದು [illegible] ಕಾರಣವಾಗಿದೆ. ಇಂತಹ [illegible] ನಿರ್ಧರವಾದ [illegible] ದವರು [illegible] ಕೊಂಡು [illegible] ಮೇಲಿಂತ [illegible] ಇನ್ನಾದರೂ ಈ ಆಫೀಸನ್ನು [illegible] ಬಂದ್ಯತರ [illegible] ಕೋರುವ,

ಸತ್ಯಸತ್ಯರೋಯ

ಅಯ್ಯಾ,

ದಿವಂಗತರಾದ [illegible] ಸವರಿಗಾಗಿ ಕೋರುವ [illegible] ಯೂನಿಯನ ಜೀವದ ಪರಿಚಯ —

ನಮ್ಮ ಹಿಂದಿನ [illegible] ತಿಸಿದ [illegible], ತಿಳಿದಂತೆ ನಮ್ಮ [illegible] ನಮ್ಮ ದೇಶದಲ್ಲಿ [illegible] ತಿಸಿದ [illegible] ನರು ಸಹ [illegible] ರಾಗಿರುವರು. [illegible] ಸ್ತ್ರನ ಜೀವಚರಿತ್ರ [illegible] ಕಳೆದ ವಾರದ [illegible] ಪತ್ರಿಕೆಯಲ್ಲಿ ಪ್ರಕಟಿಸಿದ್ದೆ. ಅವರ [illegible] ವಿವರಿಸಲು ನಾವು ಶಕ್ತರು. ಅವರು ದೇಶದ [illegible] ತೋರಿಸಿ ಕೊಟ್ಟ [illegible] ಯನ್ನು ಉತ್ಕರ್ಷದ ಉಪ[illegible] ಸಿಕೊಳ್ಳುವುದೇ ನಮಗಳ ಮುಖ್ಯಕರ್ತವ್ಯವಾಗಿದೆ.

ಇಂಥಾ ಮಹಾತ್ಮರು ಕಳೆದುಕೊಂಡಂಥ ಅವರ [illegible] ಈ ದುಃಖವನ್ನು ಸಹಿಸಿಕೊಳ್ಳುವಷ್ಟು [illegible]ವನ್ನು ಶ್ರೀ [illegible] ಅನುಗ್ರಹಿಸಬೇಕೆಂದು ಅನವರತ ಪ್ರಾರ್ಥಿಸುತ್ತೇವೆ [illegible] ನಾವು ಸಭಾಂಗಗಳಾಗಿದ್ದೇವೆ

ಕೆ. ಮೋಣಪ್ಪ,

(ಸ ಭವನದಿಗಾಗಿ)

ಅಯ್ಯಾ,

ನಾನು ಅನೇಕ ಊರುಗಳನ್ನು ಸುತ್ತಿಕೊಂಡು ನನ್ನ ಕಾರ್ಯದಲ್ಲಿದ್ದಾಗ 'ಕೊಡವ' ಸಭೆಯ ವಿಷಯ ಅನೇಕರು ವಿನಾಯಿತು ಎಂಬುದನ್ನು ಕೇಳಿದರು. ಕೂಡಲೇ ಅನೇಕ ಮಹನೀಯರು [illegible] ಕೋದಂಡ್ರ [illegible] ದೈಯ್ಯನವರ ದೊಡ್ಡಸ್ಥಿಕೆಯನ್ನ, ಉದಾರಭಾವವನ್ನು, ಅವರು ಕೊಡವ ಸಭೆಯು [illegible], [illegible]ಯಲ್ಲಿ [illegible] ಕಳುಹಿಸಿದ [illegible] ಹೇಳಿದರು. ಈಗ ಕೊಡಗು ದೇಶ[illegible]ವಾಗಿದೆ. ಯಾವ ಪಂಗಡಕ್ಕೆ ಅಗಲೀ ಯಾವ [illegible] ಇರುವುದಿಲ್ಲ. "ಸೇವಾ ಸಭೆಯು" [illegible] ಕೊಡಗೇತರರ ಯಾವ ಸುದ್ದಿಯೂ ಇಲ್ಲ. ಈ [illegible] ಮೂಲಕ [illegible] ರಾಯಬಹದ್ದೂರು [illegible] ಕೋದಂಡ [illegible] ದೈಯ್ಯನವರೇ ಯಾವಾಗ [illegible] ಈ ನವೀನ ಸಭೆಯು ಬೇಕೆಂದು [illegible] ಬರೆದು ಕಳುಹಿಸಿದರೋ, ಅದೇ ಕೊಡಗಿನ ಪುಣ್ಯದಿನ. ಅದರ ಈಚೆಗೆ ಕೊಡಗು ಪತ್ರಿಕೆಯಲ್ಲಿ ಈ ಸಭೆಯು ಇದೆ. ಅಂಗ[illegible] ಕಟ್ಟಿಯುವರಿಗೆ ಚಂದಾ ಕೊಡಬೇಕು ಎಂಬುದಾಗಿ ಬರೆದಿದ್ದರು. ಇದನ್ನು ನೋಡುವಾಗ ದೇಶದಲ್ಲಿ ಪುನಃ ಬಿಕ್ಕಟ್ಟುಗಳುಂಟಾಗುವವೋ ಎಂಬುದು ನನಗ ತೋರಿತು. [illegible] ದೈಯ್ಯನವರು ಈ ವಿಷಯ ವನ್ನು ಉದಾರ ಹೃದಯದಿಂದ ಕೂಡಿದ ಘನತೆಯನ್ನು [illegible] ಮೂಲಕ ಬರೆದು ತಿಳಿಸುವರೋ

ಹಿತಾಭಿಲಾಷಿ

"ಸಖಿಕ" ರಿಗೆ ಜವಾಬು

ಅಯ್ಯಾ,

ಕಳೆದವಾರದ ಸಂಚಿಕೆಯಲ್ಲಿ ಪ್ರಕಟವಾದ "ಸಖಿಕ" ರ ಪತ್ರ ಓದಿ ನನಗೆ [illegible]ವಾಗಿದೆ. ಕೊಡ[illegible] ರಲ್ಲದವರು ಯಾವ ವಿಷಯದಲ್ಲಿ [illegible] ನಿಂದ ಮುಂದರಿಸಿದ್ದಾರೆಂಬುದನ್ನು ಸಖಿಕರು ತಿಳಿಸುವದಿಲ್ಲ. ಕೊಡಗರಲ್ಲದವರಿಗೆ ರಾಜಕೀಯ ವಿಷಯದಲ್ಲಿ ಸಭೆಯೇ ಇಲ್ಲವೆಂತ [illegible] ಕೊಡವರು [illegible] ನಡೆದ ವಿವಾಹಗಳಲ್ಲಿ ಕೊಡಗರಲ್ಲದವರು [illegible] ಅಂಥಾ ಸಭೆಗಳು ಕೊಡಗರಲ್ಲದವರಲ್ಲಿ ಇದೆಯೆಂದು [illegible] ತಿಳಿದಿದೆ ಎಂಬುದನ್ನು ತಿಳಿಸದೆ ಸುಮ್ಮನೆ "ಗುಟ್ಟಿನಿಂದ ಮುಂದರಿಸುವ" ಎಂತ ಬರೆದುದರಿಂದ ಏನೂ ಪ್ರಯೋಜನ ವಾಗಲಾರದು. "ಸಖಿಕ" ರ ಪತ್ರದಂತ ಬಂದು ಗುಟ್ಟು ಮಾತ್ರ [illegible] ಕೊಡವ ಸಭೆಯು [illegible] ಪ್ರವೇಶ [illegible] ಬಿಟ್ಟಿದ್ದಾರೆಂಬುದು [illegible] ಅವರು [illegible] ಆಗಿರುವ [illegible] ರಾಜಕೀಯ ಸಭೆ [illegible] ಸಂಗ[illegible] ಬಿಡಲು [illegible]

[illegible]

[illegible] ಆಲೋಚಿಸಿ [illegible] ಹಾಗೆ [illegible] ಇದ್ದರೆ ಅವನ್ನು [illegible] ದವರಿಗೆ ಕೊಡವ ಸಭೆಯು [illegible] ಬೇಕು [illegible] ಎನ್ನುವದನ್ನು [illegible] ಗಳು ಕುಲ ಮತ ಹಿತವನ್ನು ಸಾಧಿಸಲಿಕ್ಕೆ [illegible] ದೇಶದ [illegible] ಸ್ಥಿತಿಯನ್ನು ನಾವೆಲ್ಲರಿಗೆ [illegible] ಜಾತಿಭೇದವಿಲ್ಲದೆ ಎಲ್ಲಾ [illegible] ಕೆಲಸವಮಾಡಿದರೆ ನಮ್ಮ ಸಮಾಜದವರ ಏಳಿಗೆಯು [illegible] ಆಗುತ್ತೆ

'A

ಅಯ್ಯಾ ಸಂಪಾದಕರೇ,

[illegible] ಅನುಭವದ ಮತ್ತು [illegible] ವಾದ ಬಂದುದರಿಗೇ [illegible] ಗವರ್ನಮೆಂಟ್ ಸ್ಕೂಲ್ [illegible] ಮತ್ತು ದೇಶೀಯ [illegible] ಸ್ಕೂಲುಗಳು [illegible] ಮಕ್ಕಳಿಗೆ ದನಸಮಯ [illegible] ದೇಶೀಯ ಭಾಷೆಯಿಂದಲ್ಲಾದರೆ [illegible] ಬರುವುದಿಲ್ಲ. ಅಂದರೂ ನಮಗೆ ತಿಳಿದ ಮಟ್ಟಿಗೆ ಕೆಲವು [illegible] ಸ್ಕೂಲಿನ ನಿಧಿ [illegible] ಗಳು [illegible] ಇರುವ ಶಿಕ್ಷಕರುಗಳು [illegible] ವಿಲ್ಲದೆ [illegible] ಅಸಾಧ್ಯವಾಗಿದೆ. [illegible] ಯಾವ ಶಿಕ್ಷಕರು [illegible] ಇಲ್ಲ. [illegible] ಯಾವ [illegible] ಇಲ್ಲದ [illegible] ವಿಲ್ಲ. [illegible] ಮೂಲಕ [illegible] ಜಾರಿಯಾಗುವ [illegible] ಸರಕಾರೀ ಸ್ಕೂಲಿನ ನಿಧಿ ಫಂಡಿಗೆ ಸಂಬಂಧಪಟ್ಟ ಹಿತ ಮಾಸ್ತರರೂ, ದೇಶೀಯ ಸ್ಕೂಲಿನ ನಿಧಿ ಫಂಡಿಗೆ ನೇಮಿಸಲ್ಪಟ್ಟವರು [illegible] ಇಂತಹ ಒರೇ ಶಿಕ್ಷಕರು [illegible] ಗಳ [illegible] ಯೋಗ್ಯತೆ[illegible] ಗರೀಬರ ಎದೆಗೆ ಸಮಾಧಾನವಾದ [illegible] ಭಾಗಿಗಳಾಗದಿರಲೆಂದು ನಾವು ಪೂರ್ಣ [illegible] ನಂಬಿಕೆಯು ನಿರಾಶೆಯಾಗದೆಂದು ನಂಬಿರುವ,

ನಾನು—ನಾನೇ

ದೇಶಮಹಾಸೀಯರೇ ಮತ್ತು ನಮ್ಮ ದೇಶದ ಅಧಿಕಾರದ ಗೌರ್ನಮೆಂಟು ದೊಡ್ಡ ಉದ್ಯೋಗಸ್ಥರೇ ಕಳಗೆ ನನ್ನ ವಿಜ್ಞಾಪನ ಪತ್ರವನ್ನು ಚೆನ್ನಾಗಿ ಪರಿಶೀಲಿಸಿ ಓದಿ [illegible] ಕ್ಕೆ ತೆಗೆದುಕೊಳ್ಳಬೇಕೆಂದು ನನ್ನ ವಿಜ್ಞಾಪನೆ. ನಮ್ಮ ಹೋಬಳಿ ಎಂದರೆ [illegible] ಹೋಬಳಿಯಲ್ಲಿ ಈಗ್ಗೆ ಸುಮಾರು ಒಂದುವರೆ ತಿಂಗಳಲ್ಲಿ ಕೊಂಚ ಮಳೆ ಬಿದ್ದ ಸಂಭವವನ್ನು ಜನರು ತಿಳಿದು ಭೂಮಿಯಲ್ಲಿ ಬೀಜ ಬಿತ್ತನಗಳನ್ನು ಹಾಕಿದ್ದಾಯಿತು. ಆ [illegible] ಬೀಜಗಳು ಮೊಳಕೆ ತೋರಿ ತೋರಿ [illegible] ಬಂದು ಮಳೆಯ ಮುಖವನ್ನು ಕಾಣದೆ [illegible] ಮಳೆಯು ಇಲ್ಲದೆ, ಪೈರುಗಳೆಲ್ಲಾ [illegible] ಹೋದ [illegible] ಇಲ್ಲ! [illegible] ನಿರಿನಲ್ಲಿ ಬೆಳ್ಳುಮಡಗಿ [illegible] ಬೇರೆ ಯಾವ ಪ್ರಯೋಜನವೇ ಇಲ್ಲದ್ದಾಗಿದೆ. ಜನಕರುಗಳಿಗೆ ಮೇವು ಇಲ್ಲದೆ [illegible] ಇರುತ್ತೇವೆ. [illegible] ಇದೇ ರೀತಿಯಾಗಿ [illegible] ದೊಡ್ಡದಾಗಿ [illegible] ಹೋದ [illegible] ಆರಂಭವು ಫಲಿತವಾಗಲಿಲ್ಲ. ಇನ್ನು [illegible] ಕೃಷಿಯನ್ನು [illegible] ಹೋಣಾವೆಂದರೆ, ನಮ್ಮ ತಿಳುವಳಿಕೆಗೆ ಯಾವದೂ ತೋರುವದಿಲ್ಲ. [illegible] ಇದೇ ರೀತಿ ನೋಡಿ ನೋಡಿ, [illegible] ಬೇಸರವೇ [illegible] ಕೊಡಗು [illegible] ಕಾಫಿ ತೋಟಗಳಲ್ಲಿ [illegible] ಕೂಲಿ ಕೆಲಸವನ್ನಾದಿ [illegible] ಗೌರ್ನಮೆಂಟು ಕಂದಾಯದ ಬೀತಿಯನ್ನು [illegible] ಮಹಾಸೀಯರು [illegible] ಇದಿಲ್ಲದಾದರೆ ಈ ಕೆಲಸವು ಸಾಧ್ಯವಿಲ್ಲ [illegible] ಈ ಹೋಬಳಿಯಲ್ಲಿ ಬರಗಾಲವೇ [illegible] ಅಲ್ಲದೆ ಗ್ರಾಮಕಾರಿಗಳಲ್ಲಿ ಜನರ ಹೊಟ್ಟೆಗಿಲ್ಲದ [illegible] ಒಂದು [illegible] "ಬಗ್ಗಿದ್ದಕ್ಕೆ ಮುಷ್ಟಿಣಮೇ ಸುಖ" [illegible] ಹೇಳಿಕೆಗೆ ಅನುಸಾರವಾಗಿ, ನಾವು ಇಲ್ಲಿ [illegible] ಅನ್ಯಥಾ [illegible] ಇಲ್ಲವು [illegible] ನಮ್ಮ [illegible] ಸ್ಥಿತಿಯನ್ನು [illegible] ಗೌರ್ನಮೆಂಟು [illegible] ಉದ್ಯೋಗಸ್ಥರು [illegible]

[illegible] ಅವರ ಸುಖಕ್ಕೆ ಅನುಕೂಲವಿ[illegible] ದೊಡ್ಡ [illegible] ದೊಡ್ಡ ಬಂಗಲೆಗಳು ಇರುವ ಸ್ಥಳ, [illegible] ಸ್ಥಳ, [illegible] ನಮ್ಮ ಹೋಬಳಿಯ ಸ್ಥಿತಿಯನ್ನು [illegible] ಮತ್ತು [illegible] ಅವರಿಗೆ ಅವಕಾಶವಾಗಿಲ್ಲವೇನೋ? [illegible] ವ್ಯವಸ್ಥೆಯಲ್ಲಿರುವ ನಮ್ಮ [illegible] ದೊಡ್ಡ [illegible] ಇಲ್ಲ. ದೊಡ್ಡ ಪಟ್ಟಣಗಳು ಇಲ್ಲ. [illegible] ಇಲ್ಲ. [illegible] ಸ್ಥಳ [illegible] ಇಲ್ಲ [illegible] ಅವರ ಮನಸ್ಸಿಗೆ [illegible] ಆದ್ದರಿಂದ ನಮ್ಮ [illegible] ಸ್ಥಿತಿಗಳನ್ನು [illegible] ಸಿಕೊಡತಕ್ಕದ್ದು. ಅಲ್ಲದೆ [illegible] ರೀತಿಯಾಗಿ [illegible] ನೋಡಿದರೆ ನಮಗೆ [illegible] ದಿಲ್ಲ. [illegible] ಇಲ್ಲಿಯೇ [illegible] ನಮ್ಮ [illegible], [illegible] ಇತ್ಯಾದಿಗಳನ್ನು [illegible] ವ್ಯವಸ್ಥೆಯನ್ನು [illegible] ಕಾಗಿ [illegible], ಅಲ್ಲದೆ ನಮ್ಮ ಹೋಬಳಿಯ ವಿಷಯವನ್ನು ಕೈಗೆದುಕೊಳ್ಳದೆ ಹೋದ[illegible] ಲ್ಲಿ ಮುಂದೆ ಇನ್ನು ಕೊಂಚ [illegible] ವಿಷಯ [illegible] ಜ್ಞಾಪಕಕ್ಕೆ [illegible] ತರಬೇಕಾಗ [illegible]

[illegible]

SCIENTIFIC MANURING

ಗಿಡಗಳ ಆಹಾರ—ಗಿಡಗಳಿಗೆ ಅನೇಕತರದ ಆಹಾರವು ಬೇಕು. ಇವುಗಳಲ್ಲಿ ಮುಖ್ಯವಾದವುಗಳು ಮೂರು ವಿಧದ್ದು ನೈಟ್ರೋಜೆನ್ (Nitrogen) ಪೊಟೇಷ್ (Potash) ಮತ್ತು ಫಾಸ್‌ಫರಿಕ್ಸ್ ಏಸಿಡ್ಡು (Phosphoric acid)

೧ ನೈಟ್ರೋಜೆನ್—ಇದು ಮುಖ್ಯವಾಗಿ ಗಿಡಗಳ ಆಹಾರವಾಗಿದೆ. ಭೂಮಿಯಲ್ಲಿ ಯಾವ ಸ್ಥಳದಲ್ಲಿ ನೈಟ್ರೋಜೆನ್ ಹೆಚ್ಚಾಗಿದೆಯೋ, ಅಲ್ಲಿ ಬೆಳೆದ ಗಿಡಗಳ ಎಲೆಗಳು ಕಪ್ಪಾಗಿಯೂ, ದೊಡ್ಡದಾಗಿಯೂ ಬೆಳೆಯುವವು. ಯಾವ ಗಿಡದ ಎಲೆ ಅಂಸಿನ ವರ್ಣವಾಗಿಯೂ, ಸಣ್ಣದಾಗಿಯೂ ಇದೆಯೋ ಆ ಗಿಡಕ್ಕೆ ನೈಟ್ರೋಜೆನ್ ನಿಂದ ಕೂಡಿದ ಗೊಬ್ಬರವು ಅತ್ಯಾವಶ್ಯಕವು ನೈಟ್ರೋಜೆನ್ ಹೆಚ್ಚಿಗೆ ಇರುವ ಗೊಬ್ಬರವು ಯಾವುವೆಂದರೆ—ಹಿಂಡಿ, (ಹರಳು, ನೆಲಗಡ್ಲೆ, ಹೊಂಗೆ, ಹಿಪ್ಪೆ, ಬೇವು ವಗೈರೆ) ಹಟ್ಟಿಗೊಬ್ಬರ (ದನವಿನ ಗೊಬ್ಬರ), ಮೀನು, ಮೂಳೆ, ಪೆಟ್ಲುಪ್ಪು (Salt Peter) ನೈಟ್ರೇಟ್ ಆಫ್ ಸೋಡ (Nitrate of Soda) ವಗೈರೆ ಕೊಳತ ಎಲೆಗಳಲ್ಲಿಯೂ ಸ್ವಲ್ಪ ಮಟ್ಟಿಗೆ ನೈಟ್ರೋಜನ್ ಇದೆ ಮೂಳೆಗಳಲ್ಲಿ ನೈಟ್ರೋಜನ್ ಇದ್ದಾಗ್ಯೂ ಅದು ಬೇಗನೆ ಕರಗುವುದಿಲ್ಲವಾದ್ದರಿಂದ ಗಿಡಕ್ಕೆ ಅದರ ನೈಟ್ರೋಜೆನ್ ಥಕ್ಕನೆ ಸಿಕ್ಕುವುದಿಲ್ಲ.

ಪೊಟೇಷ್—ಇದು ಗಿಡ ಕಡ್ಡಿಗಳ ಆಹಾರವಾಗಿದೆ ಇದು ಭೂಮಿಯಲ್ಲಿ ಹೆಚ್ಚಾಗಿ ಇದ್ದರೆ ಗಿಡಗಳು ದಪ್ಪವಾಗಿ ಬೆಳೆಯುವುದು ಈ ಆಹಾರವು ಸುಡುಮಣ್ಣು, ಬೂದಿ, ಪೆಟ್ಲುಪ್ಪು (Salt Peter), ಮ್ಯೂರಿಯೇಟ್ ಆಫ್ ಪೊಟೇಷ್ (Muriate of Potash), ಸಲ್ಫೇಟ್ ಆಫ್ ಪೊಟೇಷ್ (Sulphate of Potash) ವಗೈರೆಯಲ್ಲಿದೆ ಆದರೆ ಇದನ್ನು ಗಿಡಗಳು ಎಳೆದುಕೊಳ್ಳಬೇಕಾದರೆ ನೈಟ್ರೋಜೆನ್ ಸಹಾಯ ಬೇಕು ಪ್ರದೇಶದಲ್ಲಿ ಕೊಡಗಿನ ಮಣ್ಣಿನಲ್ಲಿ ಪೊಟೇಷು ಸಾಕಷ್ಟು ಇದೆ ಆದರೆ ಅದು ಗಟ್ಟಿಯಾಗಿದೆ. ಆದರೂ ಮಳೆ, ಬಿಸಿಲುಗಳಲ್ಲಿ ಅದು ಕರಗಿ ಗಿಡಕ್ಕೆ ಆಹಾರವನ್ನುಂಟುಮಾಡುತ್ತದೆ ಆದ್ದರಿಂದ ಇಲ್ಲಿನ ಮಣ್ಣಿಗೆ ಪ್ರತ್ಯೇಕವಾಗಿ ಪೊಟೇಷ್ ಸೇರಿಸುವುದು ಆವಶ್ಯವಿಲ್ಲ.

ಫಾಸ್ಫರಿಕ್ಸ್ ಏಸಿಡ್ಡು—ಇದು ಹೂವು ಮತ್ತು ಫಲಗಳ ಮುಖ್ಯವಾದ ಆಹಾರವಾಗಿದೆ, ಎಲೆಗಳಿಗೂ, ಕಡ್ಡಿಗಳಿಗೂ ಇದು ಆವಶ್ಯವು ಇದಿಲ್ಲದಿದ್ದರೆ ಹೂವು ಫಲ ಕಡಿಮೆಯಾಗುವುದು ಇದು ಮುಖ್ಯವಾಗಿ ಇವುಗಳಲ್ಲಿರುವುದು ಮೂಳೆ, ಮೀನು, ಸುಪರ್‌ಫಾಸ್‌ಫೇಟ್ (Superphosphate) ಬ್ಯಾಸಿಕ್ಸ್ ಸ್ಲಾಗ್ (Basic slag) ಇದು ದನವಿನ ಗೊಬ್ಬರದಲ್ಲಿ ಅಪೂರ್ವ ಮೂಳೆಯಲ್ಲಿ ಇದು ಬಹಳವಿದೆ ಸೂಪರ್‌ಫಾಸ್‌ಫೇಟಿನಲ್ಲಿ ಮಾತ್ರ ಸಾಧಾರಣವಾಗಿದ್ದಾಗ್ಯೂ, ಇದು ವಿಲಾಯಿತಿಯಿಂದ ಬರುವುದರಿಂದ ಅಸ್ಪಷ್ಟವಾಗಿ (Pure) ಬರುವುದಿಲ್ಲ ಮಣ್ಣು, ಬೂದಿ, ವಗೈರೆ ಬೆರೆಕೆಯಾಗಿರುವುದರಿಂದಲೂ ಮೂಳೆ ಇಲ್ಲಿ ನಮಗೆ ಅಗ್ಗವಾಗಿ ಸಿಕ್ಕುವುದರಿಂದಲೂ, ಸುಪರ್‌ಫಾಸ್‌ಫೇಟ್ ಖರೀದಿ ಮಾಡುವ ಆವಶ್ಯವಿಲ್ಲ, ಫಾಸ್ಫರಿಕ್ಸ್ ಗೊಬ್ಬರದ ಜೊತೆಯಲ್ಲಿ ಹಿಂಡಿ, ಮೂಳೆ ವಗೈರೆ ಜೊತೆಯಲ್ಲಿ ನೈಟ್ರೋಜೆನ್ ಗೊಬ್ಬರ ಸೇರಿಸಿ ಉಪಯೋಗಿಸಿದರೆ ಗಿಡವು ಥಕ್ಕನೆ ಬೆಳೆದು ಒಳ್ಳೆ ಫಲವನ್ನು ಕೊಡುವುದು ಮತ್ತು ಗಿಡಲಾಚಾರು Exhaust ಬರುವುದು ಕಡಿಮೆಯಂತ ಅನುಭೋಗಸ್ಥರು ಹೇಳಿದ್ದಾರೆ

"Siddeek"

ಬುಗಡಿ ಮತ್ತು ರುದ್ರಾಕ್ಷಿ ಅಂಚಿನ ಸೀರೆಗಳು

ಈ ಸೀರೆಗಳನ್ನು ಬಹು ಹಸನಾದ ನೂಲಿನಿಂದ ತಯಾರಿಸಿದೆ. 17 ಮೊಳ ಉದ್ದವೂ, 2½ ಮೊಳ ಅಗಲವೂ ಇರುವುದು, ಅತಿ ಸುಂದರವಾದ ರೇಷ್ಮೆಯ ಸೆರಗು ಇರುವುದು ನೋಡಲು ಅರಶೀನ ಸೀರೆಯಂತೆ ಇರುವುವು ಬಣ್ಣವು ಎಂದಿಗೂ ಹೋಗದು ಇವನ್ನು ಮಾದರಿಗಾಗಿ ಕೆಲವು ಮಾತ್ರ ತಯಾರಿಸಿರುವುದರಿಂದ ಬೇಗನೆ ತರಿಸಿಕೊಂಡವರಿಗೆ ಮಾತ್ರ ಸಿಕ್ಕುವವು.

ನಂ 1 . 7—8—0
ನಂ 2 6—8—0

RIPON WATCH CO.,
Triplicane,
25-19 **MADRAS.**

"Still a further reduction in prices"

For your requirements of High Grade Arms, Ammunition, Wines and Spirits.

APPLY TO—

Mc. DOWELL & Co., dtL.,

24—10 **MERCARA.**

BUMPER CROPS.

Always follow on application of our Coffee Fertilizers!

ದೊಡ್ಡ ಕಾಫಿ ಪಸಲು

ಸಿಕ್ಕಬೇಕಾದರೆ ನಮ್ಮ ಕಾಫಿ ಪರ್ಟಿಲೈಸರ್‌ಗಳನ್ನು ಉಪಯೋಗಿಸಿರಿ!

ನಮ್ಮ ಕಾರ್ಖಾನೆಯಲ್ಲಿ ಎಲ್ಲಾ ತರಹದ ಹಸನಾದ ಹೊಸ ಗೊಬ್ಬರ (artificial manure) ಅಂದರೆ ನೆಲಗಡ್ಲೆ ಹಿಂಡಿ, ಹರಳು ಹಿಂಡಿ, ಬೇವಿನ ಹಿಂಡಿ, ಹೊಂಗೆ ಹಿಂಡಿ, ಮೂಳೆ ಹುಡಿ ವಗೈರೆ ಕಾಫಿ ಪರ್ಟಿಲೈಸರುಗಳು ತಯಾರಾಗುತ್ತವೆ ಪರದೇಶದಿಂದ ತರಿಸುವ ಬಾಡಿಗೆ ಉಳಿಯುತ್ತದೆ ಕ್ರಯ ಸಹ ಕಡಿಮೆ ಮಾಡಿದ್ದೇವೆ

ತೋಟದಲ್ಲಿ ಪಸಲು ಕಡಿಮೆಯಾಗುವ ಪ್ಲಾಂಟರು ಮೇಲ್ಕಂಡ ಗೊಬ್ಬರವನ್ನು ಉಪಯೋಗಿಸಿದರೆ ದೊಡ್ಡ ಪಸಲು ಸಿಕ್ಕಿ ಕೊಂದರೆ ಎಲ್ಲಾ ಪರಿಹಾರವಾಗುವುದು

M. M. SIDDEEK,
12-12 *Proprietor* —**Siddeek**
Manuare Works, MERCARA.

ಬಳ್ಳ ಲಕ್ಷನದಲ್ಲಿ ಹೆಚ್ಚು ಲಾಭ ಪಡೆಕೊಳ್ಳಿ

ನಮ್ಮ ಕಾರಖಾನೆಯಲ್ಲಿ ಸುಧಾರಿಸಿದ ಕಂಟೆಗಳೂ ಕಬ್ಬಿನ ಗಾಣಗಳೂ ಮೇವು ಯಂತ್ರ ಇತ್ಯಾದಿ ಒಕ್ಕಲಿಗರಿಗೆ ಬಹು ಲಾಭದಾಯಕವುಳ್ಳವುಗಳೇ ಸಾಮಾನುಗಳು ತಯಾರಾಗುತ್ತವೆ

ಸಾವಿರಾರು ರೈತರು ಹೊಗಳುತ್ತಿರುವರು. ಸಚಿತ್ರ ಕ್ಯಾಟಲಾಗು ತರಿಸಿಕೊಳ್ಳಿ

ನಮ್ಮ ವಿಳಾಸ —
ಕಿರ್ಲೋಸ್ಕರ್ ಬಂಧು ಲಿಮಿಟೆಡ್,
ಪೋ ಕಿರ್ಲೋಸ್ಕರವಾಡಿ
12—3 ಜಿಲ್ಲಾ— ಸಾತಾರಾ.

Spencers——for everything.

Whisky :—Matchless	Rs 7	6	0	per bottle
King George C/L	7	1	0	„
Old highland Malt	6	0	0	„
Brandy —Exshaw's No 1	7	4	0	„
Exshaw's No. 2	6	7	0	„
Vermouth :—Noilly Prath (French)	4	10	0	„
Cigars —Flo-rde Spencer Specials	3	12	0	50s „
Trichy Specials	2	8	0	100s „

Buy Your Stores from Spencers, they are fresh and cheap

52-35 **SPENCER & Co., Ltd,**
MERCARA & POLLAIBETTA

---

18 ಕ್ಯಾರೆಟ್ಸ್ ಗೋಲ್ಡ್ ಪ್ಲೇಟ್ ರೇಡಿಯಂ ರಿಸ್ಟ್ ವಾಚ್.

ಈ ಚಿತ್ರದಲ್ಲಿ ಕಾಣುವಂತೆಯೇ ಇರುವ ಈ ಗಡಿಯಾರಗಳು ಸ್ವಿಟ್ಜರ್ಲಾಂಡ್ ದೇಶದಲ್ಲಿ ತಯಾರಿಸಿದ್ದು ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು ಆದರೆ ಈ ಗಡಿಯಾರಗಳಿಗೆ ಬೆಳಕುಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವದು ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು ಮತ್ತು ಇದರ ಬಣ್ಣವು ಕೆಡದಂತೆ ವಿದ್ಯುಚ್ಛಕ್ತಿಯ ಬಲದಿಂದ ಭಂಗಾರದ ಗಿಲೀಟು ಮಾಡಿರುವದು ಮತ್ತು ಖಾತ್ರಿಯಾದ 3 ವರುಷದ ಗ್ಯಾರಂಟಿ ಇರುವದು

ಕ್ರಯ ಗಡಿಯಾರ 1 ಕ್ಕೆ 8—8—0 ಬೆಲ್ಟಿನದು 9—8—0

ವಿಳಾಸ.—ಪಿ ಎಸ್ ವಾಚ್ ಕಂಪನಿ,
52-47 ಪೋ|| ಬಾ|| ನಂ 105 ಮದರಾಸು

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ ಅಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ

	ರೂ.
ಶೇರ್ ಬಂಡವಾಳ	50 000
ವಸೂಲಾದ ಶೇರ್ ಮೊಬಲಗು	6,310
ಜಮಾ ಬಂದ ಠೇವಣಾತಿ	31,873

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6½ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ, ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ಸರ್ಕಾರದ ಕೋ ಅಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು ಟ್ರೆಜರರ್.
ಕೊಡಂದೆರ ಕುಟ್ಟಯ್ಯನವರು, ಎಂ ಮಂಗರಾಯರು
ರಾಯ್ ಬಹದ್ದೂರ್ ಬಿ ಎ ಬಿ ಎಲ್,

ಸೆಕ್ರೆಟರಿ

ಸಿ. ಎನ್ ವೆಂಕಪ್ಪಯ್ಯನವರು, ಬಿ ಎ, ಬಿ ಎಲ್
ತಾರೀಕು 25—3—1923

ಲೋಲಾಕ್

ಈ ಲೋಲಾಕ್‌ಗಳು ವಿಲಾಯಿತಿಯಲ್ಲಿ ಇಮಿಟೇಷನ್ ವಜ್ರದ ಕಲ್ಲುಗಳಿಂದಲೂ ಮತ್ತು ಸೀಮೆ ಮುತ್ತುಗಳಿಂದಲೂ ಇಂಗ್ಲೀಷು ನಮೂನೆಯಲ್ಲಿ ತಯಾರಿಸಿದೆ ಇವರ ಬಣ್ಣವು ಎಂದಿಗೂ ಕೆಡದು ಇವನ್ನು ಚಿಕ್ಕವರೂ ದೊಡ್ಡವರೂ ಸಹ ಉಪಯೋಗಿಸಬಹುದು ಮತ್ತು ಎಲ್ಲಾ ಮಹಸ್ತ್ರೀಗಳಿಗೆ ಬಹು ಅನುಕೂಲವಾದದ್ದು



ಲೋಲಾಕ್ ಜೊತೆ 1 ಕ್ಕೆ 1—8—0

ಇಮಿಟೇಷನ್ ವಜ್ರದ ಬೆಂಡೋಲಿ ಜೊತೆ 3—0—0

ಸೀಮೆ ಭಂಗಾರದ ಕತ್ತಿನಹಾರ 3—8—0

ಭಂಗಾರದ ಗಿಲೀಟಿನ ಉಂಗುರ



ಈ ಉಂಗುರಗಳನ್ನು ಒಂದು ವಿಧವಾದ ಲೋಹದಿಂದ ಮಾಡಿ ಭಂಗಾರದಂತೆ ಗಿಲೀಟುಮಾಡಿ ಮೇಲು ಭಾಗದಲ್ಲಿ ಕೆಂಪು ಹಸುರು ಮುಂತಾದ ಇಮಿಟೇಷನ್ ವಜ್ರದ ಕಲ್ಲುಗಳು ಇಟ್ಟು ಕಟ್ಟಿದೆ ಕಟ್ಟಿರುವದು ನೋಟಕ್ಕೆ ನಿಜವಾದ ವಜ್ರದ ಉಂಗುರವೆಂದೇ ಹೇಳಬೇಕು. ಬೇಕಾದವರು ಬೆರಳಿನ ಅಳತೆಯನ್ನು ಕಳುಹಿಸಿರಿ.

ಕ್ರಯ 1 ಕ್ಕೆ 2—0—0
ಕ್ರಯ 3 ಕ್ಕೆ 5—8—0

ವಿಳಾಸ—
ಪೀಟರ್ ವಾಚ್ ಕಂಪೆನಿ,
52-47 ಪೋ|| ಬಾ|| ನಂ 27 ಮದರಾಸು

Printed & Published by D. S. Krishnaswamiengar Proprietor, at Sreenivas Electric Press, Mysore "for Kodagu" Ltd., Mercara—6-7-1923

If not delivered please return to "Kodagu Office, Mercara"

Reg. No. M. 1550.

ಕೊಡಗು.

ಸತ್ಯೇನ ಧೂತದಯಯಾ ವಿದ್ಯಾನೀತಿ ಪ್ರಯುತ್ನತಃ । ಏಕಮತ್ಯೇನದೇಶಾನಾಂ ಸುಸ್ಥಿರಾ ರಾಜ್ಯಸಂಪದ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು. "ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ"

ಪುಟ ೩] ಕೊಡಗು, ಸನ್ ೧೯೨೩ ನೇ ಜುಲೈ ತಾರೀಖು ೧೩ ನೆಯ ಶುಕ್ರವಾರ. [ಸಂಚಿಕೆ ೭

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನಡಾ ಪ್ರಿಂಟಿಂಗ್ ...ಲಿಂಗ್ ಮತ್ತು ಬೈಂಡಿಂಗ್ ಕಲಸಗಳು ಯಾವದೇ ...ದೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ... ಜಾಗ್ರತೆಯಾಗಿಯೂ ಸುಲಭಭಾರ್ಜಿನಿಂದ ಮಾಡಿ ...ಡುತ್ತೇವೆ

Srinivas Electric Press,
MYSORE.

...he Coorg Central Co-operative Bank, Ltd.,

(...egistered under the Co-operative Societies Act)

...are Capital	...	50,000
...id up Share Capital	....	6,310
...xed Deposits paid	...	31,873

Amounts are lent mainly to ...-operative Societies in Coorg. The ...counts are checked annually by The ...egistrar of Co-operative Societies Coorg ...eposits for one year and more carry ...terest at 6¼% per annum and for smaller ...riods at 5% per annum.

Apply to the Secretary or Treasurer ... further details.

President	*Treasurer*	*Secretary*
...ndera Gootiah ...Rao ahadur.	Bhajanga Rao, B.A., B.L.,	C. N Venkappaya B.A., B.L.

Dated 25—3—1923

ವಾಸುದೇವ ಕಟ್,

ಇದು ಹಿತ್ತಾಳೆಯಿಂದ ಮಾಡಿದ ಬಟ್ಟಲು. ಇದರ ಮಧ್ಯದಲಿ ವಾಸುದೇವನು ಶ್ರೀಕೃಷ್ಣನನ್ನು ಕೈಯಲ್ಲಿ ಎತ್ತಿಕೊಂಡು ನಿಂ...

...ರುವ ವಿಗ್ರಹ ವಿರುವದು. ಇದರ ಆಶ್ಚರ್ಯ ವೇನಂದರೆ, ಕೃಷ್ಣನು ಜನ್ಮವನ್ನು ಎತ್ತಿದ ಕೂಡಲೆ ಕಂಸನಿಗೆ ವಾಸುದೇವನು ಭಯಪಟ್ಟು ಕೃಷ್ಣನನ್ನು ಯಮುನಾದಿಂದ ಗೋಕುಲಕ್ಕೆ ಎತ್ತಿಕೊಂಡು ಹೋಗುವಾಗ ದಾರಿಯಲ್ಲಿ ನದಿಯು ತುಂಬಿ ಅದರ ತುಂಬಾ ನೀರು ಹರಿಯುತ್ತಿರುವುದನ್ನು ಕಂಡು ವಾಸುದೇವನು ಭಯಪಡದೆ, ಆ ನದಿಯಲ್ಲಿ ... ಪರದುಕೊಂ...ಡು ಹೋಗುತ್ತಿರುವಾಗ ಶ್ರೀಕೃಷ್ಣನ ಕಾಲಿಗೆ ನದಿಯ ನೀರು ತಗಲಿತು. ...ಕೂಡಲೆ ನದಿಯ ನೀರು ಕಡಮೆಯಾಗಿ ವಾಸುದೇವನು ನದಿಯನ್ನು ದಾಟುತ್ತಲೇ ... ಗೋಕುಲವನ್ನು ಸೇರಿದನು. ಈ ಸಂಗತಿಯು ... ತಿಳಿಯುತ ವಿಷಯವಲ್ಲ. ಆದರೆ ಈ ವಿಷಯವನ್ನು ... ಸಂತೋಷಪಡುವಂತೆ ಇದನ್ನು ತಯಾರಿಸಿರುವೆವು. ...ದರಲ್ಲಿ ನೀರನ್ನು ಹಾಕಿದರೆ ... ಕೃಷ್ಣನ ಕಾಲಿಗೆ ನೀರು ತಗಲುತ್ತಲೇ ... ನೀರು ... ಹೋಗುವುದು. ಈ ಬಟ್ಟಲು ... ಇದನ್ನು ನೋಡುವವರಿಗೆ ಆನಂದವನ್ನು ಕೊಡುವುದು

ಕ್ರಯ 1 ಕ್ಕೆ 2—0—0

ವಿಳಾಸ:—ವಿ. ಪಿ. ಎಸ್. ಶಾಣೆ ಕಂಪೆನಿ,
ಸಾಹುಕಾರ್ಪೇಟೆ, ಮದರಾಸು.

ಓಂ.

The Mysore Government Security

Life & Marriage Assurance Co., Ltd.,

Head Office —Life and Marriage Assurance Buildings, MYSORE.

ನೋಟೀಸ್.

ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ:—ಈ ಕಂಪೆನಿಯ ಬಾಂಡು ಮತ್ತು ಪಾಲುದಾರರಿಗೆ ನಮ್ಮ ಪರ್ಸನಲ್ ಇನ್ವೆಸ್ಟ್‌ಮೆಂಟ್ ಕ್ರಮದಮೇರೆ 1000 ರೂಪಾಯಿಗಳನ್ನು ಸಾಲ ಕೊಡುವುದಕ್ಕೆ ನಿಶ್ಚೈಸುವುದಕ್ಕೋಸ್ಕರ ಚೀಟಿ ಎತ್ತುವುದು 1922 ನೇ ಡಿಸಂಬರ್ 31 ರಲ್ಲಿ ನಡೆಯಬೇಕಾಗಿದ್ದು ಈ ಕಂಪನಿಯ ಮೈಸೂರಿನ ಭವ್ಯವಾದ ಕಟ್ಟಡದಲ್ಲಿ ಇದೇ ಜೂನ್ ತಿಂಗಳ 20 ನೇ ಬುಧವಾರ ಸಾಯಂಕಾಲ 6-30 ಗಂಟೆ ಸಮಯದಲ್ಲಿ ಮದರಾಸಿನ ಗೌರವ ಮೆಜಿಸ್ಟ್ರೇಟ್, ರಾವುಸಾಹೇಬ್ ಸಿ. ಕುಂದಸ್ವಾಮಿ ಮೊದಲಿಯಾರ್‌ರವರ ಮತ್ತು ಮೈಸೂರು ಪಟ್ಟಣದ ಗೌರವ ಮೆಜಿಸ್ಟ್ರೇಟ್ ಶ್ರೀಮನ್ ಎಸ್. ಸಿದ್ದೋಜಿರಾವ್‌ರವರ, ಅಲ್ಲದೆ ನೆರದಿದ್ದ ಹಲವು ಬಾಂಡ್ ಮತ್ತು ಪಾಲುದಾರರ, ಮತ್ತು ಕಂಪೆನಿಯ ಡೈರೆಕ್ಟರರ ಸಮಕ್ಷಮದಲ್ಲಿ ಚೀಟಿ ಎತ್ತಲಾಗಿ ಈ ಕೆಳಗಣ ಬಾಂಡು ಮತ್ತು ಪಾಲುದಾರರ ಚೀಟಿಗಳು ಎತ್ತಲ್ಪಟ್ಟುದರಿಂದ ಕಂಪೆನಿಯ ರೂಲ್ಸುಗಳಿಗನುಸರಿಸಿ ಅವರಿಗೆ ಅವರ ಸ್ವಂತ ಜವಾಬ್ದಾರಿಯಮೇಲೆ ಸಾಲ ಕೊಡಲ್ಪಡುವುದು. ಈ ಹಣವನ್ನು ಬಡ್ಡಿ ಇಲ್ಲದೆ ಮೂರುತಿಂಗಳುಗಳಿಗೊಂದಾವೃತ್ತಿ 10—0—0 ರೂಪಾಯಿನಂತೆ 25 ವರುಷಗಳವರೆಗೆ ಕೊಡುತ್ತಾ ಬರುವುದು.

ಹೆಸರು, ವಿಳಾಸ	ಬಾಂಡು ನಂಬರು	ಸಾ ಕೊಡಲ್ಪಡುವ ಬಲಗು
1. ಮೆ ವಿಕ್ರಮಸಿಂಗ್, ವ್ಯಾಪಾರಿ, ಡಿಕ್ವೆಲ್ಲ, ಸಿಲೋನ್.	5472.	ರೂ 1000—
2. ಮೆ. ಸಿ. ವೆಂಕಟರಾಮಣ್ಣಶಾಸ್ತ್ರಿ, ತೆಲುಗುಪಂಡಿತ, ಬೋರ್ಡ್ ಹೈಸ್ಕೂಲ್ ಅಮಲಾಪುರ. ಗೋದಾವರಿ ಡಿಸ್ಟ್ರಿಕ್ಟ್.	331.	ರೂ. 1000—
3. ಮೆ. ಬಾಕಿ ನರಸಿಂಹಮ್ ಎನ್‌ಗ್ರೇವರ್, ಕೋಕನಾಡ	6074.	ರೂ 1000—
4. ಮೆ ಮುದಿಮೊನೆಬಾಬು ನೊನಪೆರೆರ, ಕೊಲೊಂಬೊ.	5886.	ರೂ 1000—
5. ಮೆ. ಪ್ರಧಾನ, ಇಂದ್ರಜಿತ್, C/o ಮೆ ಬಿ ಹರಿಹರ ಪ್ರಸಾದ್ ಎಕ್ಸೈಸ್ ಇನ್ಸ್‌ಪೆಕ್ಟರ್, ಹಜಾರಿಬಾಗ್, (ಬಿಹಾರ್+ಒರಿಸ್ಸ)	4626	ರೂ. 800

ಲಾಹೋರ ದೇವಸಮಾಜದ ಕಾರ್ಯದರ್ಶಿಯವರು ಕುಡುಕರಿಗೆ ಉಪದೇಶಮಾಡಿ ಒಳ್ಳೇ ಮಾರ್ಗಕ್ಕೆ ತರುವ ಕೆಲಸವನ್ನು ನಡೆಸಿರುವರು. ಹೋದ ವರುಷ ೧೫೭ ಜನರನ್ನು ಹಾದಿಗೆ ತಂದರು. ಈ ವರ್ಷ ೧೩೯ ಜನರು ಸನ್ಮಾರ್ಗಕ್ಕೆ ಹತ್ತಿರುವರು.

ಪರದೇಶೀ ಸರಕುಗಳನ್ನು ಮಾರುವ ಲಾಯಸೆನ್ಸಗಳು (ಲಿಲಾವಿನಲ್ಲಿ, ಹರಾಜು) ಬಹಳ ಬೆಲೆಗೆ ಹೋದವೆಂದು ಕೇಳಿದ್ದೇವೆ. ಮುಂಬೈ ಇಲಾಖೆಯಲ್ಲಿಯೇ ಇದು ಬಹಳ ಏರಿರುವದು. ಯುರೋಪದಲ್ಲಿ ಸರಾಯಿಯು ಕಡಿಮೆಯಾಗಿದೆ. ಅಮೇರಿಕೆಯಲ್ಲಂತೂ ಅದಕ್ಕೆ ಅರ್ಧಚಂದ್ರವು ಸಿಕ್ಕಿರುವದು. ಕಾನಡಾದಲ್ಲಿಯೂ ಇದೇ ಹಾಡು ! ಅದ್ದರಿಂದ ಹಿಂದುಸ್ಥಾನದಲ್ಲಿ ಮತ್ತು ಏಶ್ಯಾ ಖಂಡದಲ್ಲಿಯ ದೇಶಗಳಲ್ಲಿ ಸರೆಯ ವ್ಯಾಪಾರವನ್ನು ಬೆಳೆಸುವ ಯತ್ನವು ನಡೆದಂತೆ ತೋರುತ್ತದೆ.

ದಿಲ್ಲಿಯಲ್ಲಿ ಮೂರು ಅಂಗಡಿಗಳು ಮುಚ್ಚಲ್ಪಟ್ಟವೆ. ಕೆಲವು ಹಿಂದು ಮುಸಲ್ಮಾನ ಹಬ್ಬಗಳ ದಿನ ಎಲ್ಲವೂ ಮುಚ್ಚಲ್ಪಡಬೇಕೆಂದು ಠರಾವಾಗಿದೆ.

ಮದ್ಯದ ವಿರುದ್ಧ ಯುದ್ಧವು

ಆಸ್ಟ್ರೇಲಿಯಾದಲ್ಲಿ ಮೇ ತಿಂಗಳಲ್ಲಿ ಮದ್ಯಪಾನ ನಿಷೇಧ ಕಾಂಗ್ರೆಸ ಎಂಬದು ಕರೆಯಲ್ಪಟ್ಟಿತು. ಮದ್ಯ ನಿಷೇಧದ ಭಾವನೆಯು ಕಸುವಿನಿಂದ ಬೆಳೆಯಹತ್ತಿದೆ. ಕರೆಗಾರರೂ ಕರೆಮಾರುವವರೂ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗಹತ್ತಿದ್ದಾರೆ. ಈ ಮೊದಲು ಕರೆಮಾರುವವರು ಸಭ್ಯರೆಂದು ತಿಳಿಯಲ್ಪಡುತ್ತಿದ್ದರು.

ಬಲ್ಗೇರಿಯಾದಲ್ಲಿ ಮದ್ಯಾದಿಗಳ ಮಾರಾಟದ ವಿರುದ್ಧ ಲೋಕಮತವು ಹೆಚ್ಚಾಗುತ್ತಲಿದೆ. ಸೋಫಿಯಾದಲ್ಲಿ ಅಮೇರಿಕನ ನಿಷೇಧದ ೩ ನೇ ವಾರ್ಷಿಕ ವರ್ಧಂತ್ಯುತ್ಸವವು ಮಾಡಲ್ಪಟ್ಟಿತು. ದೇಶದಲ್ಲಿಯ ನಾಲ್ಕು ಐದಾಂಶದಷ್ಟು ಅಂಗಡಿಗಳನ್ನು ಮುಚ್ಚಬೇಕೆಂದು ಒಂದು ಸೂಚನೆಯು ನ್ಯಾಯವಿಧಾಯಕ ಸಭೆಯಲ್ಲಿ ತರಲ್ಪಟ್ಟಿದೆ.

ಮೆಕ್ಸಿಕೋದಲ್ಲಿ ೫೦ ಮೈಲು ಅಡ್ಡಗಲಾದ ಅಮೇರಿಕೆಗೆ ಹತ್ತಿರದ ಭೂಪ್ರದೇಶದಲ್ಲಿ ಕರೆಯನ್ನು ಪೂರ್ಣ ನಿಲ್ಲಿಸಿಬಿಟ್ಟಿರುವರು. ಕೆಳವಿನಿಂದ ಅಮೇರಿಕೆಯಲ್ಲಿ ಮದ್ಯವನ್ನು ಒಯ್ಯಬೇಕೆಂಬುವ ಲೋಭಿ ವರ್ತಕರ ಸಂತೆಯೇ ಅಲ್ಲಿ ನೆರೆದಿತ್ತು! ಅವರ ಆಶೆಯು ಈಗ ಕುಗ್ಗಿತು.

ಸ್ಪೇನದೇಶವೆಂದರೆ ಉತ್ತಮೋತ್ತಮ ಮದ್ಯವನ್ನು ಸಿದ್ಧಪಡಿಸಿ ಮಾರುವದೇಶವದು, ಅದರೆ ಅಮೇರಿಕೆಯ ಸಂಗತಿಯಿಂದ ಅವರ ವ್ಯಾಪಾರವು ಭೂಮಿಗೆ ನೆಲಕ್ಕೆ ಬಿದ್ದಿರುವದೆಂದು ಅಲ್ಲಿಯ ವರ್ತಕರು ಒಪ್ಪಿಕೊಳ್ಳುತ್ತಾರೆ.

ಇವಲ್ಲದೆ ದೇಶದಲ್ಲಿಯೆಲ್ಲ ಈ ಚಳವಳಿಯು ತಲೆಯೆತ್ತಹತ್ತಿರುತ್ತದೆ.

ಸ್ಕಾಟಲಂಡದಲ್ಲಿ ಇಂಡಿಪೆಂಡೆಂಟ ಕಾರ್ಮಿಕರಪಕ್ಷದವರಲ್ಲಿ ೯೩ ಅನುಕೂಲ ೨೬ ಪ್ರತಿಕೂಲ ಇದರಂತೆ ಮದ್ಯದ ಪೂರ್ಣ ನಿಷೇಧದ ಠರಾವು ಪಾಸಾಯಿತು. ಆಯಾ ಸ್ಥಳದವರಿಗೆ ಮದ್ಯವನ್ನು ನಿಲ್ಲಿಸುವ ಅಧಿಕಾರವು ಕೊಡಲ್ಪಡಬೇಕೆಂದು ಸ್ಕಾಟಲಂಡದ ಜನರು ಯತ್ನಿಸಹತ್ತಿರುವರು.

ಇಟಾಲಿಯಲ್ಲಿ ಈ ಚಳವಳಿಯು ಮುಂದಾಗಹತ್ತಿದೆ. ಸೈನ್ಯದ ಹಾಗೂ ಹಡಗುಪಡೆಗಳಲ್ಲಿಯ ದೊಡ್ಡ ಅಧಿಕಾರಿಗಳು ಇದಕ್ಕೆ ಸಹಾಯ ಧೋರಣೆಯನ್ನು ತೋರಿಸಹತ್ತಿದ್ದಾರೆ.

ಪೋಲಂಡದಲ್ಲಿ ೧೯೨೨ ರಲ್ಲಿ ಚುನಾವಣೆಯು ... ಲಕ್ಕೆ ಮಂತ್ರಿಗಳು ಮದ್ಯ ನಿಷೇಧದ ಹುಕುಮು ಕೊಟ್ಟರು. ಡಾ. ಗರ್ಜಬಕ್ ಇವರು ಅಂದದ್ದೇನಂದರೆ, "ಮದ್ಯದ ವ್ಯಾಪಾರವು ನೀತಿಗೆ ಅತ್ಯಂತ ಘಾತಕವು ಉದ್ಯೋಗದ ಪ್ರಗತಿಗೆ ಪ್ರತಿಬಂಧಕವು ಈ ಸತ್ಯವನ್ನು ಪೋಲ್ಸರು ಕಂಡು ಹಿಡಿದಿದ್ದಾರೆ. ಆ ರಾಜಕೀಯ ನಷ್ಟವಾದರೂ ಇರುವದು. ಆದರಿಂದ ಸಮಾಜವೆಲ್ಲವೂ ಕೆಟ್ಟು ಹಾಳಾಗುತ್ತದೆ. ಆ ನಷ್ಟವನ್ನು ಕಿತ್ತಿಹಾಕುವದೇ ನಮ್ಮ ಕರ್ತವ್ಯವು"

ಜರ್ಮನಿಯಲ್ಲಿ ೧೯೩೦ ರಾಚೆಗೆ ಕರೆಯನ್ನು ಸಿದ್ಧಮಾಡಗೊಡಿಸಲಿಕ್ಕಿಲ್ಲವೆಂದು ಎಷ್ಟೋ ಜನರು ಭವಿಷ್ಯವನ್ನು ಮಾಡಿದ್ದಾರೆ, ದೊಡ್ಡ ಪಂಡಿತರು, ವ್ಯಾಪಾರಸ್ಥರು ಧಾರ್ಮಿಕರು ಮದ್ಯದ ವಿರುದ್ಧ ಕೆಲಸವನ್ನು ಕೈಕೊಂಡಿರುವರು. ತಮ್ಮ ಅನ್ನವನ್ನು ಕರೆಗಾರರು ಹಾಳುಮಾಡುತ್ತಿರುವರೆಂದು ಜರ್ಮನರ ಮನವರಿಕೆಯಾಗಿರುವದು.

ಹಾಲಂಡದ ಮಹಾರಾಣಿಯು ಮದ್ಯ ನಿಷೇಧ ಪಕ್ಷಕ್ಕೆ ಸೇರಿರುವದರಿಂದ ಅಲ್ಲಿಯ ಜನರಿಗೆ ಬಹಳ ಆನಂದವಾಗಿದೆ. ಕಣಿಯಲ್ಲಿಯ ಕೂಲಿಕಾರರಿಗೆ ಸಂಬಳ ದೊರೆಯುವ ದಿನ ಕರೆ ಅಂಗಡಿಗಳನ್ನು ಮುಚ್ಚಬೇಕೆಂದು ಹೊಸ ಸ್ಟ್ರೈಕ್ ಮುನಸಿಪಾಲಿಟಿಯವರು ನಿಶ್ಚಯಿಸಿರುತ್ತಾರೆ.

ಝೆಕೋಸ್ಲೋವಾಕಿಯಾದಲ್ಲಿ ಪರಕೀಯ ದೇಶದ ಕರೆಯು ಬರಕೂಡದೆಂದು ಕಾನೂನು ಮಾಡಲ್ಪಟ್ಟಿದೆ. ಎಲ್ಲ ಶಾಲೆಗಳಲ್ಲಿ ಮದ್ಯದ ನಿಷೇಧವಾಗುವ ಬಗ್ಗೆ ಜ್ಞಾನವನ್ನು ಕೊಡುವ ವ್ಯವಸ್ಥೆಯಾಗಿರುವದು.

ಫಿನಲಂಡದಲ್ಲಿ ಪೂರ್ಣ ಮದ್ಯಪಾನ ನಿಷೇಧವಿರುವದು. ಆ ಕಾಯದೆಯನ್ನು ರದ್ದುಮಾಡಬೇಕೆಂದು ಅಲ್ಲಿಯ ಕುಡುಕರೂ ಕರೆಗಾರರೂ ಯತ್ನಿಸಹತ್ತಿದ್ದಾರೆ. ಆದರೆ ಅದು ಸಾಧ್ಯವಿಲ್ಲ.

ಚಿಲಿಯ ಅಧ್ಯಕ್ಷನು ಪೂರ್ಣ ನಿಷೇಧಕ್ಕೆ ಹಾನುಭೂತಿಯುಳ್ಳವನಿರುವನು. ತೀವ್ರವೇ ಆ ನಿಷೇಧದ ಕಾನೂನು ಅಲ್ಲಿ ಪಾಸಾಗಬಹುದು.

ತ್ರಾವಣಕೋರವು ಮುಂದೆ ಸಾಗಿತು.

ಕರೆ ಶೇಂದಿ ಮದ್ಯಾದಿಗಳ ಸಂಬಂಧದಿಂದ ಬರೆಯುವಾಗ ತ್ರಾವಣಕೋರದ ದಿವಾಣಸಾಹೇಬರು ಬರೆದದ್ದೇನಂದರೆ, (೧) ದೇಶೀ ಕರೆಯ ಕಸುವು ಕಡಿಮೆಮಾಡಲ್ಪಟ್ಟಿದೆ. (೨) ತಾಡಿಯ ಹಾಗೂ ಶಿಂದೀಗಿಡದ ತೆರಿಗೆಯು ಬೆಳೆಸಲ್ಪಟ್ಟಿದೆ. (೩) ತಾಡೀ ಶಿಂದೀ ಅಂಗಡಿಗಳ ಸಂಖ್ಯೆಯು ಕಡಿಮೆಮಾಡಲ್ಪಟ್ಟಿದೆ. (೪) ಅಂಗಡಿಗಳನ್ನು ದಿನಾಲು ತೀವ್ರ ಮುಚ್ಚಬೇಕೆಂದು ಅಪ್ಪಣೆಕೊಡಲ್ಪಟ್ಟಿದೆ. ಗಾಂಜೆ ಅಫುಗಳ ಉತ್ಪನ್ನವು ೪ ಲಕ್ಷ ರೂಪಾಯಿಗಳಿಂದ ಕಡಿಮೆಯಾಗಿದೆ. ತೀವ್ರವೇ ಭಾವನಗರ, ಪಾಲ್ಲಿಟಾನಾ ಭೋಪಾಲ ಈ ಸಂಸ್ಥಾನಗಳಂತೆ ತ್ರಾವಣಕೋರ ಇದರೂ ಪೂರ್ಣ ನಿಷೇಧದ ಧೋರಣವನ್ನು ಸ್ವೀಕರಿಸುವದೆಂದು ಆಶಿಸುತ್ತೇವೆ.

ಜಗತ್ತಿನಲ್ಲಿ ಮದ್ಯಾದಿ ದುಷ್ಟ ಪದಾರ್ಥಗಳ ವಿಷಯಕ್ಕೆ ಯಾವ ಯತ್ನಗಳು ನಡೆಯುವವೆಂಬದು ಇದರ ಮೇಲಿಂದ ಸ್ಪಷ್ಟವಾದೆ. ಆದರೆ ನಮ್ಮ ಹಿಂದುಸ್ಥಾನ ಸರಕಾರದ ಆದಾಯದ ಲೆಕ್ಕಪತ್ರವನ್ನು ತೆಗೆದು ನೋಡಿದರೆ ದುರ್ದೈವದಿಂದ ಅಲ್ಲಿ ಕರೆಯಿಂದ ಆಗುವ ಉತ್ಪನ್ನವು ಹೆಚ್ಚುತಲೇ ಇರುವದು ; ಮೇಲೆ ಸರಕಾರದವರು ಕರೆ ಶಿಂದಿಗಳನ್ನು ಕಡಿಮೆ ಮಾಡಲಿಕ್ಕೆ ಯತ್ನಿಸುತ್ತಿರುವರಂತೆ ! ಇದರಲ್ಲಿ ವಿಶ್ವಾಸವಿದ್ದವರಾದರೂ ನಮ್ಮಲ್ಲಿ ಇನ್ನೂ ಇರುವರು.

ಅದರೆ ಇಷ್ಟಕ್ಕೆ ಈ ಮಾತು ಬಿಟ್ಟು ಉಪಯೋಗವೇನು ? ಈ ದುಷ್ಟ ವ್ಯಸನಗಳ ಘಾತಕ ಪರಿಣಾಮಗಳನ್ನು ಜನರಿಗೆ ತಿಳಿಸಿ ಹೇಳುವದು ಸುಶಿಕ್ಷಿತರ ಕರ್ತವ್ಯವಾಗಿದೆ. ತಮ್ಮ ಸಮಾಜವು ಸರ್ವಸುಂದರವಾಗಬೇಕೆಂದು ಹಾರೈಸುವವರು ಇತ್ತಕಡೆಗೆ ಲಕ್ಷ ಗೊಡಲಿಕ್ಕೆ ಬೇಕು. (ಕರ್ಮವೀರದಿಂದ.)

ಕೊಡಗು ಜಮೀನ್ದಾರರ ಸಂಘ

In working for India, we shall only be working for the land of our birth, for the land of our forefathers, for the land of our children —G K Gokhale

ಹಿಂದುದೇಶದ ಕೆಲಸ ಮಾಡುವದೆಂದರೆ ನಮ್ಮ ಜನ್ಮಭೂಮಿಯ, ನಮ್ಮ ಪೂರ್ವಿಕರ ಜನ್ಮಭೂಮಿಯ, ನಮ್ಮ ಮಕ್ಕಳ ಜನ್ಮಭೂಮಿಯ ಕೆಲಸ ಮಾಡುವದಾಗಿದೆ — ಜಿ ಕೆ ಗೋಕಲೆ

Good Government could never be a substitute for Government by the people themselves —Sir H C Bannerman

ಒಳ್ಳೇ ಸರಕಾರವು ಜನರಿಂದ ನಡಿಸಲ್ಪಡುವ ಸರಕಾರಕ್ಕೆ ಸರಿಯೆಂದು ಎಂದೂ ಹೇಳಕೂಡದು — ಸರ್ ಸಿ ಬ್ಯಾನರ್‌ಮ್ಯಾನ್

No. 5.

ಈಗಿನ ಶಿಕ್ಷಣಕ್ರಮಗಳು ನಮ್ಮನ್ನು ಜನಾಂಗವನ್ನಾಗಿ ಮಾಡಲಿಕ್ಕೆ ಸಹಕಾರಿಯಾಗದಂಥಾ ವಿಷಯಗಳನ್ನು ಕಲ್ಪಿಸಲಿಕ್ಕೆ ನಮ್ಮ ಉದ್ದೇಶಕ್ಕನುಗುಣವಾಗಿ ಪ್ರಯತ್ನಗಳನ್ನು ಮಾಡಬೇಕು. ಈಗ ನಮಗೆ ಸದ್ಯ ಪ್ರಾರಂಭಿಸಲಿಕ್ಕೆ, ಕೆಲವು ವರ್ಷಗಳ ಪ್ರಯತ್ನದಿಂದ ಸ್ಥಾಪಿಸಿದ ಅಮ್ಮತ್ತಿ ರಾಷ್ಟ್ರೀಯ ಶಾಲೆಯನ್ನು ನಮ್ಮ ಪ್ರಯೋಜನಕ್ಕೆ ಆಗುವಂಥಾ ವಿದ್ಯೆಯನ್ನು ಕೊಡಲಿಕ್ಕಾಗಿ ರಚಿಸಬೇಕಾಗಿದೆ. ಈಗ ಆ ಶಾಲೆಯಲ್ಲು ಇತರ ಸರಕಾರಿ ಶಾಲೆಗಳ ಕ್ರಮಗಳನ್ನೇ ಅನುಸರಿಸುತ್ತಾರಾಗಿ ತಿಳಿಯುತ್ತೆ. ಆದ್ದರಿಂದ ಆ ಕ್ರಮವನ್ನು ಹೋಗಲಾಡಿಸಿ, ಆ ಶಾಲೆಯ ಕಮಿಟಿಯವರು, ರಾಷ್ಟ್ರೀಯ ಶಿಕ್ಷಣಕ್ರಮವನ್ನು ಅನುಸರಿಸದೆ ಹೋದದಕ್ಕೆ ಆ ಶಾಲೆಗೆ ಪ್ರೋತ್ಸಾಹಕರು ಸಿಕ್ಕಲಾರರು. ಈಗಿನ ಕ್ರಮಗಳನ್ನು ನೋಡಿದರೆ ಕಮಿಟಿಯವರು ತಮ್ಮ ಶಾಲೆಯನ್ನು ಸರಕಾರದವರು ಒಪ್ಪಬೇಕೆಂಬ ಇರಾದೆಯುಳ್ಳವರಾಗಿದ್ದಾರೆಂದು ತೋರುತ್ತೆ. ಇದು ಸರಿಯಾದ ಪಕ್ಷ [illegible] ಕೂಡ್ಲೆ ಆ ಶಾಲೆಯನ್ನು ಸಾಧ್ಯವಾದಮಟ್ಟಿಗೆ ರಾಷ್ಟ್ರೀಯ ಶಿಕ್ಷಣದ ಕ್ರಮಕ್ಕೆ ತರುವದು ಅತ್ಯವಶ್ಯಕವಾಗಿದೆ. ಈಗಿನ ಸ್ಥಿತಿಯಲ್ಲು ಈ ಉದ್ದೇಶವನ್ನು ನೆರವೇರಿಸುವದು ಸುಲಭಸಾಧ್ಯ. ಯಾತಕ್ಕೆಂದರೆ —ಇನ್ನು ಮುಂದಕ್ಕೆ ಸರಕಾರದ ಉದ್ಯೋಗದ ಆಶೆಯನ್ನು ಬಿಡಬೇಕಲ್ಲವೆ! ಕೊಡಗು ಪತ್ರಿಕೆಯು ಕಳೆದ ಸಂಚಿಕೆಯಲ್ಲು "ನವಯುವಕ" ಹೇಳಿದ ರೀತಿ, ಬೇಕಾದ ದ್ರವ್ಯವನ್ನು ವ್ಯಯಮಾಡಿ ಪಾಠಶಾಲೆಗೆ ಹೋಗಿ ಕೊಂಡುಕೊಳ್ಳುವ ವಿದ್ಯೆಯು ತಿಂಗಳಿಗೆ 20 ರೂಪಾಯಿಗಳನ್ನು ಸಂಪಾದನೆಮಾಡುವದಾದರೆ ಏನು ಪ್ರಯೋಜನ? ಎಂದಿನವರೆಗೆ ನಾವು ಸರಕಾರದ ಉದ್ಯೋಗಕ್ಕೆ ಆಶಿಸುತ್ತೇವೋ ಅಂದಿನವರೆಗೆ ನಾವು ಸ್ವತಂತ್ರ ವಿದ್ಯೆಯನ್ನು ಕಲಿಯುವವರಾಗಿಲ್ಲ. ಆದಕಾರಣ ಕೂಡ್ಲೆ ಕಮಿಟಿಯವರು ನಮ್ಮ ಅಮ್ಮತ್ತಿ ಶಾಲೆಯಲ್ಲು ಶಿಕ್ಷಿತರಾಗುವ ಯುವಕರಿಗೆ ಸ್ವತಂತ್ರರನ್ನಾಗಿ ಮಾಡುವ ವಿದ್ಯೆಯನ್ನೇ ಕೊಡಬೇಕಾಗಿದೆ. ಅಂಥಾ ಶಿಕ್ಷಣವನ್ನು ಕೊಟ್ಟ ವಿನಹ ನಮ್ಮ ದೇಶದಮೇಲೆ ತ್ಯಾಗಿತನದ ಯುವಕರಿಗೆ ಪ್ರೀತಿ ಹುಟ್ಟುವದು. ಈ ಶಾಲೆಯಲ್ಲು ಶಿಕ್ಷಣವನ್ನು ಹೊಂದಿದ ಯುವಕರು ನಮ್ಮ ಮುಂದಣ ದೇಶದ ಕೆಲಸಗಳಲ್ಲು ಸಹಾಯಕರಾಗಬೇಕಾದದ್ದು ಬಹಳ ಅವಶ್ಯವಾಗಿದೆ. ಆದಕಾರಣ ನಾವು ಕೊಡುವ ಶಿಕ್ಷಣಾಕ್ರಮವನ್ನು ದೇಶದಲ್ಲಿ ಕ್ಷಾಬಾದಂಥಾ ವಿದ್ಯೆಯನ್ನು ಕೊಡಬೇಕೆಂದು ಅಪೇಕ್ಷಿಸುವಂಥಾವರು, ಅಂದರೆ ನಮ್ಮ ದೇಶದಲ್ಲು ಕೊಡುವಂಥಾ ವಿದ್ಯೆಯಿಂದ ನಮ್ಮ ದೇಶದ ಸ್ವತಂತ್ರ ಸ್ಥಾಪನೆಯ ಪ್ರಯತ್ನಗಳಲ್ಲು ಸಹಕಾರಿಯಾಗಬೇಕೆಂದು ಯೋಚಿಸುವವರು, ಕೂಡ್ಲೆ ನಿಗಕೊಟ್ಟು ಒಂದು ಕ್ರಮವನ್ನು ನಿರ್ಧರಿಸಬೇಕು. ಈ ವಿಷಯದಲ್ಲು ನಿಗ ಕೊಡದೆ ಹೋದ ಪಕ್ಷ ಈಗ ಇರುವ ಶಾಲೆಗಳಿಗೆ ಈ ಅಮ್ಮತ್ತಿ ಶಾಲೆಯು ಜಾಸ್ತಿ ಮತ್ತೊಂದು ಶಾಲೆಯನ್ನು ಸೇರಿಸಿದ್ದರಿಂದ ಉಂಟಾಗುವ ದೋಷಕ್ಕೆ ಗುರಿಯಾಗುವದಲ್ಲದೆ ಮತ್ತಾವ ಪ್ರಯೋಜನವೂ ಹೊಂದಿದಹಾಗೆ ಆಗುವದಿಲ್ಲ. ಈಗ ಶಾಲೆಗಳಲ್ಲಿರುವ ಕ್ರಮಗಳಲ್ಲು ಮತ್ತು ರಾಷ್ಟ್ರೀಯಕ್ರಮಗಳಲ್ಲು ಉತ್ಕೃಷ್ಟವಾದದ್ದು ಯಾವದೆಂಬುದರ ವಿಷಯ ಬಿನ್ನಾಭಿಪ್ರಾಯವಿರಬಹುದು. ಆದರೆ ನಮ್ಮ ದೇಶದ ಧೃತಾಗ್ನಿ ಒಡೆಯನರು ಎಷ್ಟು ಈಗಿನ ವಿದ್ಯೆಯಲ್ಲಿ ಅನುಭವಸ್ಥರಾಗಿದ್ದರೂ ರಾಷ್ಟ್ರೀಯ ಕ್ರಮಗಳನ್ನು ವಿರ್ಧರಿಸುವಾಗ್ಯೆ ಅ[illegible]ರ ಇರಾದೆಯನ್ನು ತಿಳಿದರೆ, ಆ ಕ್ರಮಗಳನ್ನು ವಿರ್ಧರಿಸುವ ವೇಳೆ, ಅವರ ಅನುಭವದ ಇರಾದೆಯಿಂದ ಪ್ರಯೋಜನವಾಗದೆ ಇರಲಾರದು. ಅವನು (ಶಿಷ್ಯನು) ಅತ್ಯಧೀನನಾದರೂ ಬಲ್ಲವನಾಗಿರುತ್ತಾನೆ. ಆದ್ದರಿಂದ ಅವನಿಗೆ ಯಾವ ತರಹದ ವಿದ್ಯೆ ಉತ್ತಮವೆಂಬದನ್ನು ಅವನನ್ನೇ ಕೇಳಿ ತಿಳಿಯುವದು ಉತ್ತಮ. ನಮ್ಮ ವಿಳಿಗಿರ ಕಾಲಗಳಲ್ಲು ಅವನ ಇರಾದೆಯನ್ನು ಕೇಳಲಿಕ್ಕೆ ಉಪೇಕ್ಷೆ ಮಾಡಿದಕಾರಣ ನಾವು ಅಧೀನರಾಗಿ ಬಿಟ್ಟಿರುತ್ತೇವೆ. ಈಗಿನ ಶಿಕ್ಷಣಕ್ರಮಗಳಲ್ಲು ನಮ್ಮ ಯುವಕರಲ್ಲು ನೆಲೆಗೊಳಿಸಲು ಪ್ರಯತ್ನಿಸುವ ಸ್ವಭಾವಗಳು, ದಯಾಳುವಾಗಿಯೂ, ಸಾಧುವಾಗಿಯೂ ಮತ್ತು ತೃಪ್ತರಾಗಿಯೂ ಇರಲಿಕ್ಕೆ ಆಗಿದೆ. ನಮ್ಮ ಶಿಕ್ಷಣಕ್ರಮವು, ನಮ್ಮ ಯುವಕರಿಗೆ ಅವರ ಪ್ರತಿಜ್ಞೆ ಮತ್ತು ಹಕ್ಕು ಬಾಧ್ಯತೆಗಳನ್ನು ಗೌರವದಿಂದ ಕಾಪಾಡಲಿಕ್ಕೂ ಅವರ ಉತ್ಕೃಷ್ಟವಾದ ಯೌವನವನ್ನು ಮತ್ತು ಶಕ್ತಿಯನ್ನು ಧ್ಯೇಯವಾದ ಗೌರವದಿಂದ ರಕ್ಷಿಸುವದಕ್ಕೂ ಮರ್ಯಾದೆಯಿಂದ ಕೂಡಿದ ಗೌರವದಿಂದಿರಲಿಕ್ಕೂ, ಇರುವ ಅನುಕೂಲತೆಗಳಲ್ಲಿ ದೇವರ ಪ್ರೀತಿಯಿಂದ ತೃಪ್ತರಾಗಿರಲಿಕ್ಕೂ, ಲೋಕಪ್ರಿಯವಾದ ಕೆಲಸಗಳನ್ನು ಅತಿ ಧೈರ್ಯದಿಂದ ಮಾಡಲಿಕ್ಕೂ ಸಹಾಯವಾಗಿರಬೇಕು. ಆದಕಾರಣ ನಮ್ಮ ಅಧೀನತೆಯನ್ನು ಹೋಗಲಾಡಿಸುವಂಥಾ ಮತ್ತು ಅಧೀನತೆಯನ್ನು ಹೋಗಲಾಡಿಸಲಿಕ್ಕೆ ಬೇಕಾದ ಗುಣಗಳನ್ನು ಅಭಿವೃದ್ಧಿಪಡಿಸುವಂಥಾ ಕ್ರಮಗಳಿಗೆ ಬಹಳ ನಿಗ ಕೊಟ್ಟ ವಿನಹ ನಾವು ಬೇರಾವ ಕೆಲಸವನ್ನು ಮಾಡಿದಂತೆ ಆಗುವದಿಲ್ಲ.

ಸಂಘದ ಕೆಲಸ

ಒಂತಾವನ್ನು ತೆಗೆಯುವ ವಿಷಯ ಸ್ವಲ್ಪ ಸಾವಕಾಶದಿಂದ ಚರ್ಚಿಸಲು ಅವಕಾಶ ಕೊಡಬೇಕು. ಈಗ ವಾಚಕಮಹಾಶಯರ ಮುಂದೆ ಇನ್ನೊಂದು ವಿಷಯವನ್ನು ಎಲ್ಲರ ಆಲೋಚನೆಗೆ ಮುಂದಿಡಬೇಕಾಗಿದೆ. ಅದೇನೆಂದರೆ.—1917 ನೇ ಇಸವಿ ಏಪ್ರೀಲ್ ತಾರೀಖು 4 ರಲ್ಲು ನಡೆದ ಜಮೀನ್ದಾರರ ಸಂಘದ ವಾರ್ಷಿಕ ಸಮ್ಮೇಳನದಲ್ಲು ಏಕೀಭಾವದಿಂದ ಮಂಜೂರಾದ ಠರಾವು, ಜನರ ಸಾಂಪತ್ತಿಕ ಸ್ಥಿತಿಯ ಕುಂದು ಕೊರತೆಗಳನ್ನು ವಿಚಾರಿಸಿ ಅವರ ಬಡತನವನ್ನೂ ಮತ್ತು ಬದ್ಧತೆಯನ್ನೂ ಹೋಗಲಾಡಿಸುವ ವಿಧಾನಗಳನ್ನು ಸೂಚಿಸುವ ಬಗ್ಗೆ ಎರಡು ಉದ್ಯೋಗಸ್ಥರು ಮತ್ತು ಮೂರು ಉದ್ಯೋಗಸ್ಥರಲ್ಲದವರಿಂದ ಕೂಡಿದ ಒಂದು ಕಮಿಟಿಯನ್ನು ಸರಕಾರದವರು ಏರ್ಪಡಿಸಬೇಕೆಂದಾಗಿದೆ. ಈ ಠರಾವನ್ನು ಸರಕಾರಕ್ಕೆ ಕಳುಹಿಸಿದ್ದಕ್ಕೆ 14-3-20 ರಲ್ಲು ನಮ್ಮ ಕಮಿಷನರ ಸಾಹೇಬರವರಿಂದ ಈ ವಿಷಯವು ಚೀಫ್ ಕಮಿಷನರ್ ಸಾಹೇಬರವರ ಎಣಿಕೆಯಲ್ಲಿದೆಯೆಂದಾಗಿಯೂ ಮತ್ತು ಈ ವಿಷಯದಲ್ಲು ಯಾವದಾದರೂ ರಿಪೋರ್ಟುಗಳ ಪ್ರತಿಗಳನ್ನು ಹೊಂದುವ ಬಗ್ಗೆ ಮೈಸೂರು ಮತ್ತು ಸಾಮ್ಯಕ್ಕೆ ಸಂಸ್ಥಾನಗಳ ಗವರ್ನಮೆಂಟುಗಳಿಗೆ ಬರೆಯುತ್ತೇವೆಂಬದಾಗಿಯೂ ಅಪ್ಪಣೆ. ಸ್ವಲ್ಪ ಕಾಲ ಕಳೆಯಲು ಅಂದರೆ 6-5-20 ರಲ್ಲು ನಮ್ಮ ಇದೇ ಕಮಿಷನರ್ ಸಾಹೇಬರವರು ದಯವಿಟ್ಟು ಕೊಟ್ಟ ಕಡೆತರದ ಅಪ್ಪಣೆ ಏನಂದರೆ—ನಿಮ್ಮ ಸಂಘದ 1917 ನೇ ಇಸವಿಯ ೧ ನೇ ಠರಾವುಮೇರೆ ಈಗಿನ ಕೊಡಗುದೇಶದ ಸ್ಥಿತಿಯಲ್ಲಿ ಅಂಥಾ ವಿಚಾರಣೆ ಏನು ಅವಶ್ಯವಾಗಿ ಕಂಡುಬರುವದಿಲ್ಲ. ಅಂಥಾ ಅವಶ್ಯಕತೆಯು ಕಂಡುಬಂದ ಪಕ್ಷಕ್ಕೆ ನಾನು ಆ ವಿಷಯ [illegible] ತಿಳಿಸುವವನಾಗಿದ್ದೇನೆ. ಹ್ಯಾಗೂ ಚೀಫ್ ಕಮಿಷನರ ಬಾಬ್ತವನ್ನು ಕಮಿಷನರ್ ಸಾಹೇಬರು ವಹಿಸಿಕೊಂಡದನ್ನು ನೋಡಿ, ನಾವೂ ಸಹ ಹೀಗೆಯೇ ಮೇಲು ಅಧಿಕಾರಿಗಳಿಗೆ ಅನಾವಶ್ಯ ತೊಂದರೆ ಕೊಡದ ಇರಬೇಕಾದದ್ದು ಅವಶ್ಯ! ಈ ಉಪದೇಶಸೂಚನೆಗೆ ಮಹಾ [illegible] ನಮ್ಮ ದೇಶದ ಏನು ಸುದಿ! ಎಂಥಾ ಅಧಃಸ್ಥಿತಿ! ಇದೇ 1920 ನೇ ಇಸವಿ ನಮ್ಮ ಸೂಟರ ಕಮಿಷನರ್ ಸಾಹೇಬರವರು ಅವಶ್ಯಕತೆ ಇಲ್ಲವೆಂದು ಹೇಳುವ [illegible] ಕೋಪತರವಾದ ಮತ್ತು ಸುಪತ್ತನ [illegible] ಡ, ಫೇಬ್ರುವರಿ ಮಾರ್ಚ್, ಏಪ್ರೀಲ್, [illegible] ತಿಂಗಳುಗಳಲ್ಲು ಪ್ರತೀಕ ಜನಾಂಗದವರಲ್ಲ [illegible], 730, 302, 374, ಜನಸಂಖ್ಯೆಕಲಿತ ಮರಣ ಹೆಚ್ಚಿಗೆಯಾಗಿದೆ. ಈ ಸಂಗತಿ ಕೊಡಗು ಗೆಜೆಟ್‌ನಲ್ಲು ಪ್ರಕಟಿಸಿರುತ್ತಾರೆ. ಏನು ಆಶ್ಚರ್ಯ? ದೇಶವು ಇಂಥಾ ದುರ್ದೆಶೆಯಲ್ಲು ಇದ್ದರೂ ಕೂಡ ಸಾಂಪತ್ತಿಕ ಸ್ಥಿತಿ ಮತ್ತು ಬಡತನದ ವಿಷಯವನ್ನು ವಿಚಾರಿಸುವ ಆವಶ್ಯಕತೆಯು ಕಂಡುಬರಲಿಲ್ಲ. ಅವರು ಬರೆದದ್ದು ಪೂರ ನ್ಯಾಯವಲ್ಲವೇ? ಅವರ ಕಣ್ಣಿಗೆ 1672 ಜನರು 5 ತಿಂಗಳುಗಳಲ್ಲು ಜನಸಂಖ್ಯೆಕಿಂತ ಹೆಚ್ಚಿಗೆ ಮರಣಪಟ್ಟವರನ್ನು ಕಾಣಲಿಲ್ಲ. ಅಲ್ಲದೆ ಅವರು ಹೋಗುವ ಕಡೆಗಳಲೆಲ್ಲಾ ಗೋಳಾಡುವ ಜನರನ್ನು ಕಾಣುವುದರ ಬದಲು ಸಂತೋಷದಿಂದ ಒಳ್ಳೆ ಉಡುಪುಗಳನ್ನು ಧರಿಸಿಕೊಂಡು ತಿರುಗುವವರನ್ನು ಕಾಣುವದು ತಪ್ಪಲ್ಲ. ಬಹುಶಃ ಅವರು ತಿರುಗುವ ಕಡೆ ಜನರನ್ನು ಕಾಣದೇನೇ ಇದ್ದ ಪಕ್ಷಕ್ಕೆ ಮೇಲಿನ ಅವಶ್ಯಕತೆಯು ಕಂಡುಬರದಿದ್ದಿರಬಹುದಾಗಿತ್ತು. ಕಂಡದನ್ನು ಕಂಡಹಾಗೆ ತಿಳಿದದನ್ನು ತಿಳಿದಹಾಗೆ ಹೇಳುವದು ಈಗಿನ ಕಾಲದಲ್ಲು ತಪ್ಪೆಂದು ಗೊತ್ತಿದೆ. ಮಾತೇತಕ್ಕೆ ಬೇಕು? ನಾಯಿಮೂಗಿನ ಮೇಲಾಗಿನದೆಂದು ಹೇಳದೆ ಹೋದರೆ ಕಂಬದ ನಾಯಿ ಮಾಂಸ ತಿನ್ನುತ್ತಾನೆ. ಹೇಳಿದರೆ ತಾಯಿ ತಲೆ ಹೋಗುತ್ತೆ. ಏನೂ ಆಗಲಿ, ಹೇಳಿಯಾಯಿತು. ಆದರಿಂದಲೆ ಈ ನಮ್ಮ ಕಮಿಷನರ್ ಸಾಹೇಬರವರ ಉತ್ತರದಿಂದ ನಾವು ಕಲಿಯತಕ್ಕದೇನು? ನಮ್ಮ ಬಡತನವನ್ನೂ, ಕಷ್ಟವನ್ನೂ ನಿವಾರಿಸಲು ಪ್ರಯತ್ನಪಡಲು ಅವರಿಗೆ ಯಾತಕ್ಕೋಸ್ಕರ ಮನಸು ಬರಲಿಲ್ಲ? ಇಂಥಾ ಅವಸ್ಥೆಗೆ ಯಾರು ಜವಾಬ್ದಾರರು? ಈ ದುರವಸ್ಥೆಯನ್ನು ಹೋಗಲಾಡಿಸಲಿಕ್ಕೆ ಮುಂದೇನುಗತಿ? ಈ ಕಮಿಷನರ ಸಾಹೇಬರವರ ಉತ್ತರವು ಹಿಂದಿನ ಸಂಚಿಕೆಗಳಲ್ಲು ಸೂಚಿಸಿದ ಮೇರೆ ಸ್ವಸಹಾಯವೇ ಉತ್ತಮ ಸಹಾಯವೆಂಬದನ್ನು ದೃಢಪಡಿಸುವುದಿಲ್ಲವೇ?

ಅಲ್ಲದೆ ನಮ್ಮ ಕಷ್ಟಸುಖಗಳನ್ನು ಅನ್ಯಜನರ ಸಹಾಯದಿಂದ ನಿವೃತ್ತಿ ಹೊಂದಲಿಕ್ಕೆ ಅವಕಾಶವಿಲ್ಲವೆಂಬದನ್ನು ದೃಢಪಡಿಸುತ್ತೆ. ಕಮಿಷನರ ಸಾಹೇಬರವರು ನಮ್ಮ ಗ್ರಾಮಗಳಲ್ಲಿರುವ ಗುಡಿಸಲುಗಳನ್ನು ಗುಡಿಸಲುಗಳಲ್ಲಿ ವಾಸಿಸುವ ಜನರ ಬಡತನವನ್ನು ನೋಡಿದ್ದ ಪಕ್ಷಕ್ಕೆ ಇಂಥಾ ಉತ್ತರವನ್ನು ದಯಪಾಲಿಸುತ್ತಿರಲಿಲ್ಲ. ಅವರ ಕಣ್ಣುಗಳಿಗೆ ನಮ್ಮ ಕಷ್ಟದ ಬಗೆಯು ಗೋಚರವಾಗುವದು ಸುಲಭ ಸಾಧ್ಯವಲ್ಲ. ಯಾಕೆಂದರೆ ನಮ್ಮ ಕಷ್ಟಸುಖಗಳ ನಿವಾರಣೆಯಿಂದ ಅವರಿಗೆ ಪ್ರಯೋಜನವಾಗುವಂತಿಲ್ಲ. ಅದ್ದರಿಂದಲೇ ಆವಶ್ಯಕತೆಯು ಅವರ ಕಣ್ಣಿಗೆ ಕಂಡು ಬರಲಿಲ್ಲ. ಈ [illegible]ಪ್ಪದ ಅನುಭವವೂ ನಮ್ಮ ಕರ್ಮದ ಪ್ರತಿಫಲವಲ್ಲವೇ? ಮಾಡಬೇಕಾದದನ್ನು ಮಾಡದೆ ಮಾಡಬಾರದ್ದನ್ನು ಮಾಡಿಕೊಂಡು ಬಂದದ್ದರಿಂದ ನಾವು ಹೀಗೆ ಸಂ[illegible]ತಲ್ಲವೇ? ಹಾ! ಹಾ! ಇನ್ನು ಮುಂದಕ್ಕೂ ಹೀಗೆ [illegible]ವು ಅನ್ಯಜನರ ಮೇಲೆ ಭಾರಹಾಕಿ ಕುಳಿತುಕೊಂಡ [illegible] ಕ್ಕೆ ಕೊಡಗು ದೇಶವು ಪೂರಾ ದರಿದ್ರವಾದನ್ನು [illegible]ಲ್ಲು ಯಾವ ಸಂತಸವೂ ಕಾಣುವದಿಲ್ಲ. ಆದಕಾರಣ ಎಲ್ಲವರು ಇನ್ನಾದರೂ ಕಣ್ಣುತೆರೆದು ನಮ್ಮ ದರಿದ್ರವನ್ನು ಹೋಗಲಾಡಿಸಲಿಕ್ಕೆ ಬೇಕಾದ [illegible] ಕೂಡಿದ ಗುಣಗಳನ್ನು ವೃದ್ಧಿಪಡಿಸುವದು ಬೇಡವೇ? ಈ ವಿಷಯದಲ್ಲೂ ಕಮಿಷನರ್ [illegible] ಭದಲ್ಲು ಅವರ ಕೆಲಸವನ್ನು ಮಾಡಿರುತ್ತಾರೆ [illegible] ಈಗ ನಮ್ಮ ವಂದನೆ. ಅವರು ಪ್ರಯತ್ನ [illegible] ನಾವು ಕಣ್ಣು ತೆರೆಯದೆ ಸೋಮಾರಿ[illegible]ತ್ತಿದ್ದರೆ. ಇನ್ನಾದರೂ ಜಮೀನ್ದಾರರ ಸಂ[illegible] ಕಾರ್ಯನಿರ್ವಾಹಕ ಮಂಡಲಿಯವರು ಅವರೊಳಗಿಂದಲೇ [illegible] ಸಂಘದಿಂದಲೇ ಒಂದು ಕಮಿಟಿಯನ್ನು ಏರ್ಪಡಿಸಿ, ನಮ್ಮ ಸಾಂಪತ್ತಿಕ ಸ್ಥಿತಿಯ ಕುಂದು ಕೊರತೆಗಳನ್ನು ಕಂಡುಹಿಡಿದ, [illegible] ತೆಗೆದುಕೊಳ್ಳಬೇಕಾದದ್ದು [illegible] ಘದ ಬಂದನೇ [illegible] ಸೂಚಿಸಬೇಕಾಗಿದೆ. ಅಲ್ಲದೆ ಅಂಥಾ ಸಂಘದ ಪ್ರಯತ್ನದಿಂದ ದೇಶದ ಜನರೆಲ್ಲವರೂ ಸಹಾಯಕರಾಗಿ [illegible] ವಿಷಯದಲ್ಲು ಸಂತಸಪಡಬೇಕಾದ ಅವಶ್ಯವಿಲ್ಲ. ಈ ವಿಷಯವನ್ನು ಇದೇ 22 ನೇ ತಾರೀಕಿನಲ್ಲು ಆಗುವ ಕಮಿಟಿ ಮೀಟಿಂಗಿನಲ್ಲಿ [illegible] ನಿಸುವದು ಉತ್ತಮವಾಗಿದೆ.

[illegible]

[illegible] ಸರಕಾರದ [illegible] ಇಂಡಿಯನ್ನು [illegible] ಇಂಡಿಯಾ ಸರಕಾರದ ನಿಮಾ[illegible] ಸೆಕ್ರೆಟರಿಯವರು ಮತ್ತು [illegible] ಇಂಗ್ಲಿ[illegible] ಉದ್ಯೋಗಸ್ಥರಿಗೆ ದೇಶವನ್ನಾಗಿ ಈಜಿಗೆ ಕೊಟ್ಟ [illegible] ಸ್ಥಿತಿಗೆ ಅಸಂಭವವಾದ ಅಪಾರವಾದ [illegible] ನವು ಇದ್ದರೂ [illegible] ವಿದ್ಯಾರ್ಥಿಗಳು [illegible] ಯಾಗಿವೆ. [illegible] ಉದ್ಯೋಗಸ್ಥರಿಗೆ [illegible] ನ ಅನುಕೂಲ [illegible] ಮುಂತಾದ್ದರ ತೆರಿಗೆಯಲ್ ಸರಕಾರಕ್ಕೆ [illegible] ಇಲ್ಲ. ಇಂಪೀರಿಯಲ್ ಸರಕಾರದ ಮುಂಗಡಪತ್ರಕ್ಕೆ ಅಂದರೆ ಮಿಲಿಟ್ರಿಗೂ, ಪೀರಿಯಲ್ ಉದ್ಯೋಗಸ್ಥರಿಗೂ ಬೇಕಾದ ಖರ್ಚು ವಿದ್ಯೆ, ಆರೋಗ್ಯ, ಬಡಜನಗಳಿಗೆ ಅನಾದರ. ಹೀಗೆ [illegible] ಕಾರಣವೇನೆಂದರೆ —ಇಂಡಿಯಾದ ಬಜೆಟ್ಟನ್ನು ಜನರ ಪ್ರಯೋಜನಕ್ಕಾಗಿ ತಯಾರಿಸುವುದಲ್ಲ, ಬ್ರಿಟಿಷ್ ಬಂಡವಾಳಗಾರರಿಗಾಗಿ (Capitalists) ತಯಾರವಾಗಿದೆ. [illegible] ಕೌನ್ಸಿಲಿನಲ್ಲಿ ಬಜೆಟ್ಟನ್ನು ಇಂಡಿಯಾ ಸರಕಾರವಲ್ಲ, ಸೆಕ್ರೆಟರಿ ಆಫ್ ಸ್ಟೇಟ್ ಎಂಬ ಬ್ರಿಟಿಷ್ ಮಂತ್ರಿಯವರು ಇಂಡಿಯಾಕ್ಕೆ ಸಂಬಂಧವಿಲ್ಲದವರ ಪ್ರಯೋಜನಕ್ಕಾಗಿ ತಯಾರಿಸಿದ್ದರೋ ಎಂಬ ಭಾವ ಸೂಚಿಸಲ್ಪಟ್ಟಿತು. ಇದು ನಿಜವಲ್ಲವೆಂತ ಗೌರ್ನಮೆಂಟಿನವರು ಆಕ್ಷೇಪಿಸಿದರು. ಇಂಡಿಯಾ ಕೌನ್ಸಿಲಿನ ವೈಸರಾಯರ ಕೌನ್ಸಿಲಿನಲ್ಲಿ ಕೆಲಸಮಾಡಿದವನಿಗೆ ಆ

[illegible] ಕಾಲವನ್ನು [illegible] ಹೊಂಗಿನ [illegible] ಇಂಗ್ಲೆಂಡಿನ [illegible] ಕೆಲಸವನ್ನು [illegible] ಇಂಡಿಯಾದಲ್ಲಿ [illegible] ಈ ದೇಶದ ಅಭಿವೃದ್ಧಿ [illegible] ಇಂಗ್ಲೆಂಡು [illegible] ಇಂಗ್ಲೆಂಡಿನ [illegible] ಅದ್ದರಿಂದ [illegible] ಇಲ್ಲ.

ಪತ್ರವ್ಯವಹಾರಗಳು.

ವಾತ್ತಿದಾರರು ಪತ್ರದ ಅಭಿಪ್ರಾಯಗಳಿಗೆ ಪತ್ರಾಧಿಪತಿಗಳು ಉತ್ತರವಾದಿಗಳಲ್ಲ [ಎಡಿಟರ್]

ಸಂಪಾಜೆ

ಈ ನಾಡಿಗೆ ಸಮ್ಮಂದಪಟ್ಟ [illegible] ಇದ್ದರಿಂದ [illegible] ಪೂರ್ಣ [illegible] ಸದು.

[illegible]

ತಿಮ್ಮಯ್ಯ ನಾಯಕ

ಮಡಿಕೇರಿ ಮುನ್ಸಿಪಾಲಿಟಿ

[illegible] ಕಾರಣ ಬಾಗಿಲೇ ಬಾಕ್ಸ್? [illegible] ನಮ್ಮ ಮುನ್ಸಿಪಾಲಿಟಿಯ [illegible] ಮುನ್ಸಿಪಾಲಿಟಿ [illegible] ತಿಳಿಯದು [illegible] ಮುನ್ಸಿಪಾಲಿಟಿಯ [illegible] ಈ ಲೋಕದ [illegible]

[illegible] ಪೂರ್ವ ಭಾಗದ ಬಸ್ತಿಯಿಂದ ಕಾನ್ವೆಂಟ್ [illegible] ಕ್ಲಬ್ಬಿನ ಗೇಟಿನವರೆಗೆ ನೆಲದಿಂದ ಅರ್ಧ ಅಡಿ ಎತ್ತ [illegible] ಮಧ್ಯದಲ್ಲಿ [illegible] ಹೋಗುವ ಬಳದಾರಿಯು [illegible] ದಾರಿಯು [illegible] ಇಲ್ಲಿಗಾಗಿ ಎಷ್ಟೋ ಜನರು ತಿರುಗಾ [illegible] ದಾರಿಗಾಗಿ [illegible] ಮಳೆಗಾಲದಲ್ಲಿ [illegible] ಇದ್ದರೂ [illegible] ಇದ್ದ ದಾರಿಯು [illegible] ಮುನ್ಸಿಪಾಲಿಟಿಯವರು [illegible]

ಪುರವಾಸಿ

ಗೋಣಿಕೊಪ್ಪಲು ಪತ್ರ

(1) [illegible] ಜನರು [illegible]

(2) [illegible] ಗೋಣಿಕೊಪ್ಪಲು [illegible] ದರ್ಸಿಂಗರಿಗೆ [illegible] ಸ್ವೀಕರಿಸಿ ಅವರಿಗೆ [illegible]

(3) ಈ ವರ್ಷ [illegible]

(4) [illegible]

(5) [illegible]

ಗೋಣಿಕೊಪ್ಪಲ

[illegible]

ಅಯ್ಯಾ

[illegible]

ತ್ತಿಂಬುದನ್ನು ತಿಳಿಯಲು ನಮಗೆ ತುಂಬಾ ಸಂತೋಷ ವಾಗುವುದು. ಆಂಜನೇಯ ದೇವರಿಗೆ ಹಣ್ಣು ಕಾಯಿಗಳನ್ನು ಪ್ರತಿದಿವಸವೂ ಒಪ್ಪಿಸುವವರು [illegible] ದೇವರ ದರ್ಶನಕ್ಕಾಗಿ [illegible] ಅದು ಹೇಗೆ? ಸದಾ ಕಾಲವೂ ದೇವರು [illegible] ಬಾಗಿಲು [illegible] ಇದೇ ಪ್ರಕಾರ ದೇವರನ್ನು [illegible] ಈ ದೇವರ [illegible] ಎಂದು ನಮಗೆ ಸಂಶಯವಾಗಿದೆ. [illegible] ದೇವಸ್ಥಾನವನ್ನು [illegible] ತಿಳಿಯುವೆವು.

ಅಲ್ಲದೆ [illegible] ಆಂಜನೇಯ [illegible] ರಾತ್ರಿ ಪೂಜೆಗೂ ದೇವರು [illegible] ದೇವರ [illegible] ಶ್ರೀ ಭಗವಂತನ ಕೃಪಾಕಟಾಕ್ಷಕ್ಕೆ ಪಾತ್ರರಾಗುವರೆಂದು ನಮ್ಮ ನಂಬಿಕೆ.

ಭಕ್ತರ [illegible]

ಮಹಾನಿಸುರೆ,

[illegible] ಹುಡುಗಿಯರು [illegible] ಜೋಡಿಸುತ್ತೇವೆ.

ಹುಡುಗಿಯರ ತಾಯಿ

[illegible] ವಿದ್ಯೆಯಲ್ಲಿ [illegible]

[illegible]

ಅಭಿನಂದನೆ.

ಮಡಿಕೇರಿ ಗೌರ್ನಮೆಂಟು ಪೆನ್ಶನರ್ ಮತ್ತು ಮುನಿಸಿಪಲ್ ಕಮಿಶನರಾದ ಮಹಾರಾಜಶ್ರೀ ಆರ್. ಜಿ ಮಂಜಯ್ಯನವರನ್ನು ಸ್ಪೆಶಿಯಲ್ ಮೆಜಿಸ್ಟ್ರೇಟರಾಗಿ ಚೀಫ್ ಕಮಿಶನರ್ ಸಾಹೇಬರು ನೇಮಿಸಿದ್ದಾರೆ ಮ|| ರಾ|| ಶ್ರೀ|| ಮಂಜಯ್ಯನವರು ಉದ್ಯೋಗದಲ್ಲಿ ಇರುವಾಗ್ಯೆ ಮೆಜಿಸ್ಟ್ರೇಟರ ಪದವಿಗೆ ಯೋಗ್ಯರಾಗಿ ನಿರೀಕ್ಷಣೆಯಲ್ಲಿದ್ದವು ಆದರೆ ಈಗಲಾದರೂ ಅವರನ್ನು ಮೆಜಿಸ್ಟ್ರೇಟರಾಗಿ ನೇಮಿಸಿದ್ದಕ್ಕಾಗಿ ನಾವೆಲ್ಲರೂ ತುಂಬಾ ಸಂತೋಷಪಡುತ್ತೇವೆ. ಇವರ ಪಂಥದಲ್ಲಿ ಇಂತಾ ಪದವಿಗೆ ಬಂದದ್ದು ಇವರು ಮೊದಲನೆಯವರಾಗಿದ್ದಾರೆ. ದೇವರು ಅವರಿಗೆ ದೀರ್ಘಾಯುಸ್ಸ ಕೊಡಲಿಯೆಂತ ನಾವು ಪ್ರಾರ್ಥಿಸುತ್ತೇವೆ

ದೇಶಸ್ಥ.

ನೋಟೀಸು.

ಕೊಡಗು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟಿನಲ್ಲಿ

ಸ್ಮಾ. ಕ. ನಂಬರು 110/1923

ವಾದಿ—ಫ್ರೆಜರ್‌ಪೇಟೆಯಲ್ಲಿರುವ ವ್ಯಾಪಾರ ಕಸಬಿನ ಅಬ್ಬು ಖಾದರ್ ಸಾಹೇಬರು

ಪ್ರತಿವಾದಿ—ಬೆಂಗಳೂರು ಸಿಟಿ ಬಸಪ್ಪ ಪೇಟೆಯಲ್ಲು ಇರುವ ಜವುಳಿ, ಊದುಬತ್ತಿ ವಗ್ಯೆರೆ ವ್ಯಾಪಾರಸ್ತರು ಎ. ಜಿ ದಗೆ, ಅಂಡ್ ಬ್ರದರ್ಸ್, ಇವರ ಪೈಕಿ ಪಾಲುದಾರ ಎ. ಜಿ. ರಾಮಕೃಷ್ಣಪ್ಪ.

ಸಿ ಪ್ರೋ. ಕೋಡ್ ಆರ್ಡರ್ 5 ರೂಲ್ 20 ಕ್ಕೆ ಸರಿಯಾಗಿ ನೋಟೀಸು—

ಕೊಡಗು ಸಬಾರ್ಡಿನೇಟು ಜಡ್ಜಿಯವರ ಕೋರ್ಟಿನಲ್ಲು ಮೇಲ್ಕಂಡ ನಂಬ್ರು ಪ್ರತಿವಾದಿಯ ಹಾಜರಾತಿ ಬಗ್ಯೆ ತಾರೀಕು 23-7-23 ಕ್ಕೆ ಮುದ್ದತ್ ಆಗಿದೆ. ಸದರಿ ದಿನ ಪ್ರತಿವಾದಿಯು ಸದರಿ ಕೋರ್ಟಿಗೆ ಹಾಜರಾಗಬೇಕಾಗಿದೆ ತಪ್ಪಿದರೆ ಸದರಿ ನಂಬ್ರು, ಏಕಪಕ್ಷ ಡಿಕ್ರಿ ಆಗುತ್ತೆಯಾದ ಸಂಗತಿ ಪ್ರಕಟಿಸಿದೆ.

(Sd) Bhujanga Rao,
13—7—23
Pleader for Plaintiff.

ನೋಟೀಸು.

1923 ನೇ ಇಸವಿ ಜುಲೈ ತಾರೀಖು 22 ನೇ ಆದಿತ್ಯವಾರ ದಿನ 12 ಘಂಟೆಗೆ ವೀರರಾಜೇಂದ್ರಪೇಟೆಯಲ್ಲಿ ಕೊಡಗು ಜಮೀನ್ದಾರ ಸಂಘದ ಎಗ್ಜಿಕ್ಯೂಟಿವ್ ಕಮಿಟಿ ಮೀಟಿಂಗ್ ನಡಿಯುವುದನ್ನು ಈ ಮೂಲಕ ತಿಳಿಸಲಾಗಿದೆ

ತಾರೀಖು 11—7—1923.

ಚರ್ಚಿಸತಕ್ಕ ವಿಷಯಗಳು—

1. ದೇಶಕ್ಕೆ ಸಿಕ್ಕಬಹುದಾದ ಮಂತ್ರಾಲೋಚನ ಸಭೆಯ ವಿಷಯ, ವೈಸರಾಯರವರಿಗೆ ಅರ್ಜಿ ಬರೆಯುವ ವಿಷಯ
2 ಜಮೀನ್ದಾರಸಂಘದ ಶಾಖೆಗಳನ್ನು ದೇಶದ ಎಲ್ಲಾ ಕಡೆಗಳಲ್ಲಿಯೂ ಏರ್ಪಡಿಸುವ ವಿಷಯ
3. 1924 ನೇ ಇಸವಿಯಲ್ಲಿ ವಸ್ತುಪ್ರದರ್ಶನವನ್ನು ಮಾಡುವ ವಿಷಯ.
4. ಸಂಘದ ಕಾರ್ಯನಿರ್ವಾಹಕಮಂಡಲಿಯಲ್ಲಿ ಒಂದು ಚಿಕ್ಕ ಕಮಿಟಿಯನ್ನು ಏರ್ಪಾಡು ಮಾಡುವ ವಿಷಯ

ಸಿ ಎನ್. ವೆಂಕಪ್ಪಯ್ಯ,
(ಜನರಲ್ ಸೆಕ್ರೆಟರಿ)

ಕೊಡವ ವಿದ್ಯಾಭಿವೃದ್ಧಿ ಸಂಘದ ತಾ|| 2-7-23 ರಲ್ಲಿ ನಡೆದ ಕಮಿಟಿ ಮೀಟಿಂಗ್ ಪ್ರೊಸೀಡಿಂಗ್

1. ಸಂಘದಲ್ಲು ಹಣವಿಲ್ಲದ ಕಾರಣ ಹೊಸ ದರಖಾಸ್ತುದಾರರಿಗೆ ಸ್ಕಾಲರ್‌ಶಿಪ್ ಕೊಡಲಿಕ್ಕಾಗುವುದಿಲ್ಲ.

2 ಈ ಸಂಘದ ಹಾಲಿ ವರುಷದ ಜನರಲ್ ಮೀಟಿಂಗು ಬರುವ ಆಗಸ್ಟು ತಾರೀಖು 5 ನೇ ಆದಿತ್ಯವಾರ ದಿನ ಮಧ್ಯಾಹ್ನ 1 ಗಂಟೆಗೆ ವೀರರಾಜಪೇಟೆ ಮೊಡಲ್ ಸ್ಕೂಲಿನಲ್ಲು ನಡಿಸಲ್ಪಡುವದು ಎಲ್ಲ ಚಂದಾದಾರರು ಮತ್ತು ಮೆಂಬರುಗಳು ಸಹ ಹಾಜರಾಗಬೇಕಾಗಿ ಕೇಳಿಕೊಳ್ಳೋಣ ಆಗಿದೆ.

M. Bheemaiah, Hon. Secretary — K Coottiah, President.
3—2 — 3—7—23.

ಬಗಡಿ ಮತ್ತು ರುದ್ರಾಕ್ಷಿ ಅಂಚಿನ ಸೀರೆಗಳು

ಈ ಸೀರೆಗಳನ್ನು ಬಹು ಹಸನಾದ ನೂಲಿನಿಂದ ತಯಾರಿಸಿದೆ 17 ಮೊಳ ಉದ್ದವೂ, 2¼ ಮೊಳ ಅಗಲವೂ ಇರುವುದು, ಅತಿ ಸುಂದರವಾದ ರೇಷ್ಮೆಯ ಸೆರಗು ಇರುವುದು ನೋಡಲು ಅರಳೇಪೇಟೆಯ ಸೀರೆಯಂತೆ ಇರುವವು. ಬಣ್ಣವು ಎಂದಿಗೂ ಹೋಗದು ಇವನ್ನು ಮಾದರಿಗಾಗಿ ಕೆಲವು ಮಾತ್ರ ತಯಾರಿಸಿರುವುದರಿಂದ ಬೇಗನೆ ತರಿಸಿಕೊಂಡವರಿಗೆ ಮಾತ್ರ ಸಿಕ್ಕುವವು.

ನಂ. 1	..	7—8—0
ನಂ. 2	.	6—8—0

RIPON WATCH CO.,
Triplicane,
MADRAS.

24–21

A Great Reduction in Prices of Arms and Mamooties.

	Old Price	Present Price
D.B.B L. Guns		
12 bore each	Rs. 250	165
D.B M.L. do	„ 130	85
S B M L. do	„ 100	65
Mamooties 5 lbs each	4/8	3/6

APPLY TO:—

Mc. DOWELL & Co., Ltd,.
24—12 **MERCARA.**

ಒಕ್ಕಲತನದಲ್ಲಿ ಹೆಚ್ಚು ಲಾಭ ಪಡೆಕೊಳ್ಳಿ

ನಮ್ಮ ಕಾರಖಾನೆಯಲ್ಲಿ ಸುಧಾರಿಸಿದ ರೆಂಟೆಗಳೂ ಕಬ್ಬಿನ ಗಾಣಗಳೂ, ಮೇವು ಯಂತ್ರ ಇತ್ಯಾದಿ ಒಕ್ಕಲಿಗರಿಗೆ ಬಹು ಲಾಭದಾಯಕವುಳ್ಳವುಗಳೇ ಸಾಮಾನುಗಳು ತಯಾರಾಗುತ್ತವೆ

ಸಾವಿರಾರು ರೈತರು ಕೂಡುತ್ತಿರುವರು ಸಚಿತ್ರ ಕ್ಯಾಟಲಾಗು ತರಿಸಿಕೊಳ್ಳಿ

ನಮ್ಮ ವಿಳಾಸ :—
ಕಿರ್ಲೋಸ್ಕರ ಬಂಧು ಲಿಮಿಟೆಡ್,
ಪೋ. ಕಿರ್ಲೋಸ್ಕರವಾಡಿ
ಜಿಲ್ಲಾ—ಸಾತಾರಾ

12—5

18 ಕ್ಯಾರೆಟ್ಸ್ ಗೋಲ್ಡ್ ಪ್ಲೇಟ್ ರೇಡಿಯಂ ರಿಸ್ಟ್ ವಾಚ್

ಈ ಚಿತ್ರದಲ್ಲಿ ಕಾಣುವಂತೆಯೇ ಇರುವ ಈ ಗಡಿಯಾರಗಳು ಸ್ವಿಟ್ಸರ್‌ಲ್ಯಾಂಡ್ ದೇಶದಲ್ಲಿ ತಯಾರಿಸಿದ್ದು ಇತರ ಗಡಿಯಾರಗಳಲ್ಲಿ ರಾತ್ರಿವೇಳೆ



ಗಂಟೆ ನೋಡಬೇಕಾದರೆ ದೀಪ ಬೇಕು ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿದ್ದರೂ ಅದು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವದು ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವವು ಮತ್ತು ಇದರ ಬಣ್ಣವು ಕೆಡದಂತೆ ವಿದ್ಯುಚ್ಛಕ್ತಿಯ ಸಹಾಯದಿಂದ ಭಂಗಾರದ ಗಿಲೀಟು ಮಾಡಿರುವದು ಮತ್ತು ಖಾತ್ರಿಯಾದ 3 ವರುಷದ ಗ್ಯಾರಂಟಿ ಇರುವದು

ಕ್ರಯ ಗಡಿಯಾರ 1 ಕ್ಕೆ 8—8—0 ಬೆಳ್ಳಿಯದು 9—8—0

ವಿಳಾಸ—ಎ ಎಸ್. ವಾಚ್ ಕಂಪನಿ,
52–49 ಪೋ|| ಬಾ|| ನಂ 105 ಮದರಾಸು

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್

ಲಿಮಿಟೆಡ್

ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ

	ರೂ
ಶೇರ್ ಬಂಡವಾಳ	50,00
ವಸೂಲಾದ ಶೇರ್ ಮೊಬಲಗು	6,31
ಜಮಾ ಬಂದ ಠೇವಣಾತಿ	31,87

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ರಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6¼ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು — ಟ್ರೆಜರರ್.
ಕೊಡಂದೆರ ಕುಟ್ಟಯ್ಯನವರು, — ಯಂ ಭುಜಂಗರಾಯರು
ರಾಯ್ ಬಹದ್ದೂರ್ — ಬಿ ಎ. ಬಿ ಎಲ್.,

ಸೆಕ್ರೆಟರಿ

ಸಿ. ಯನ್ ವೆಂಕಪ್ಪಯ್ಯನವರು, ಬಿ ಎ ಬಿ ಎಲ್.
ತಾರೀಕು 25—3—1923

ಲೋಲಾಕ್.

ಈ ಲೋಲಾಕ ಗಳು ವಿಲಾಯಿತಿಯಲ್ಲಿ ಇಮಿಟೇಸ್ ವಜ್ರದ ಕಲ್ಲುಗಳಿಂದಲೂ ಮತ್ತು ಸೀಮೆ ಮುತ್ತುಗಳಿಂದಲೂ ಇಂಗ್ಲಿಷು ನಮೂನೆಯಲ್ಲಿ ತಯಾರಿಸಿದೆ. ಇದರ ಬಣ್ಣ ಎಂದಿಗೂ ಕೆಡದು ಇದನ್ನು ಬಡವರೂ ದೊಡ್ಡವರೂ ಸಹ ಉಪಯೋಗಿಸಬಹುದು ಮತ್ತು ಎಲ್ಲಾ ಮಗುವಿಗೂ ಬಹು ಅನುಕೂಲವಾದದ್ದು.

ಲೋಲಾಕ್ ಜೊತೆ 1 ಕ್ಕೆ 1-
ಇಮಿಟೇಷನ್ ವಜ್ರದ ಬೆಂ... ಜೊತೆ 3
ಸೀಮೆಭಂಗಾರದ ಕಂಠಹಾರ 3

ಭಂಗಾರದ ಗಿಲೀಟಿನ ಉಂಗರ,

ಈ ಉಂಗರಗಳನ್ನು ಒಂದು ವಿಧವಾದ ಲೋಹದಿಂದ ಭಂಗಾರದಂತೆ ಗಿಲೀಟು ಮಾಡಿದೆ, ಮೇಲು ಭಾಗದಲ್ಲಿ ಕಾಂತಿಯುಳ್ಳ ಇಮಿಟೇಷನ್ ವಜ್ರದ ಕಲ್ಲುಗಳು ಇಟ್ಟು ಕಟ್ಟಿದೆ. ನೋಡುವರು ನೋಡಿದರೆ ಅಸಲಾದ ವಜ್ರದ ಉಂಗರವೆಂದೇ ತಿಳಿಯುವರು. ಬೇಕಾದವರು ಬೆರಳಿನ ಅಳತೆಯನ್ನು ಕಳುಹಿಸಿರಿ.

ಕ್ರಯ 1 ಕ್ಕೆ 2—0—0
ಕ್ರಯ 3 ಕ್ಕೆ 5—8—0

ವಿಳಾಸ—
ಸಿಟಿಜನ್ ವಾಚ್ ಕಂಪೆನಿ
52–49 ಪೋ|| ಬಾ|| ನಂ. 27 ಮದರಾಸು

Spencers—for everything.

Whisky :—Matchless	Rs. 7	6	0	per bottle
King George C/L	7	1	0	„
Old highland Malt	6	0	0	„
Brandy :—Exshaw's No. 1	7	4	0	„
Exshaw's No. 2	6	7	0	„
Vermouth :—Noilly Prath (French)	4	10	0	„
Cigars :—Flor-de-Spencer Specials	3	12	0	50s „
Trichy Specials	2	8	0	100s „

Buy Your Stores from Spencers, they are fresh and cheap.

SPENCER & Co., Ltd,
MERCARA & POLLAIBETTA

Printed & Published by D. S. Krishnaswami, Proprietor, at Sreenivas Electric Press, M... 'for Kodagu' Ltd., Mercara—20.7.1923

"Kodagu Office, Mercara"
Reg. No. M. 1550.

ಕೊಡಗು.

ಪ್ರತಿ ಶುಕ್ರವಾರ ಪತ್ರಿಕೆಯಾಗಿ ಪ್ರಕಟಿಸಲ್ಪಡುವುದು.

ಸಂಪುಟ ೩] ಕೊಡಗು, ಸನ್ ೧೯೨೩ನೇ ಜುಲೈ ತಾರೀಖು ೨೭ ನೆಯ ಶುಕ್ರವಾರ [ಸಂಚಿಕೆ ೮

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡಾ ಪ್ರಿಂಟಿಂಗ್ ... ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ... ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ... ಮಾಡಿ ಕೊಡುತ್ತೇವೆ

Srinivasa Electric Press,
MYSORE

The Coorg Central Co-operative Bank, Ltd.,

(Registered under the Co-operative Societies Act)

Authorised Capital	50,000
Paid up Share Capital	6,310
Fixed Deposits	31,873

Lends amounts at ... cent mainly to Co-operative Societies in Coorg. The accounts are checked annually by The Registrar of Co-operative Societies, Coorg. Deposits for one year and ... carry interest at 6½% per annum and for ... periods at ... per ...

Apply to the Secretary or Treasurer for further details.

President	Treasurer	Secretary
Kodendera Ceetrih Rao Bahadur	Bhujanga Rao B.A. B.L.	C. H. ... B.A. B.L.

Dated ..-3-1923

ವಾಸುದೇವ ಕಷ್

ಇದು ... ವಾಸುದೇವನು ಶ್ರೀಕೃಷ್ಣನನ್ನು ...

... ಶ್ರೀಕೃಷ್ಣನ ... ವಾಸುದೇವನು ...

ಕ್ರಯ 1 ಕ್ಕೆ 2—0—0

ವಿಳಾಸ:—ವಿ. ವಿ. ಎಸ್. ಪಾಣಿ ಕಂಪೆನಿ,
ಸಾಹುಕಾರ ಪೇಟೆ, ಮದರಾಸು.

52—50

ಓಂ.

The Mysore Government Security

Life & Marriage Assurance Co., Ltd.,

Head Office — Life and Marriage Assurance Buildings, MYSORE.

ನೋಟೀಸ್.

ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ — ಈ ಕಂಪೆನಿಯ ಬಾಂಡು ಮತ್ತು ಪಾಲು ... 1000 ರೂಪಾಯಿ ... 1923 ನೇ ಡಿಸೆಂಬರ್ 31 ರಲ್ಲು ... ಈ ಕಂಪೆನಿಯ ... 20 ನೇ ... ಸಾಯಂಕಾಲ 6-30 ಗಂಟೆ ಸಮಯದಲ್ಲಿ ... ಮೈಸೂರು ... 10—0—0 ರೂಪಾಯಿಗಳಂತೆ 25 ವರುಷಗಳವರೆಗೆ ... ಬರುವುದು.

ಹೆಸರು ವಿಳಾಸ	ಬಾಂಡು ನಂಬರು	...
1 ಮೆ ...	5477	ರೂ 1000—0—0
2 ...	531	...
3 ...	6074	... 0—0
4 ...	5886	... 0—0
5 ...	5626	...

... 50—0—0 ... 1—8—0 ...

ಜಾಗ್ರತೆಮಾಡಿರಿ! ... ಸುಲಭವಾಗಿ ...

FORM OF APPLICATION FOR BONDS.

To
THE GENERAL SECRETARY The Mysore Govt Security
LIFE & MARRIAGE ASSURANCE Co., Ltd., MYSORE.

Gentlemen,

I the undersigned hereby agree to take up ... bonds of Rs. 50 each in the Personal Investment Department of the abovenamed Company upon the terms and conditions contained in the detailed prospectus of the same as well as in the Articles of Association of the Company and to accept the same or any small number that may be allotted to me.

I beg to send herewith the sum of Rs ... being a deposit at the rate of Rs. 3/8 per bond (Rs. 2 to ... admission fee and Rs. ... towards the cost of bond) on the number of bonds applied for by me and I agree to pay Re. 1 per bond every month for the next 50 months as well as annual fee of Rs. 1/8 per bond every year only for 4 years.

Station ...
The ... 192 ... Usual signature

Name in full
Profession or Business
Address in full
Post Office
District or Province

ಈ ... ವಿಳಾಸಕ್ಕೆ ಬರೆಯಿರಿ — ಬಿ. ಎಸ್. ಅವಾಧ್ಯ, ಸ್ಪೆಷಲ್ ರಿಪ್ರಸೆಂಟೇಟಿವ್ ಮಡಿಕೇರಿ, (ಕೊಡಗು ಜಿಲ್ಲೆ)

ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಮೆ|| ಬಿ. ಎಸ್. ಅವಾಧ್ಯ, ಸ್ಪೆಷಲ್ ರಿಪ್ರಸೆಂಟೇಟಿವ್, ಮೈಸೂರು ಗವರ್ನ್‌ಮೆಂಟ್ ಸೆಕ್ಯೂರಿಟಿ, ಲೈಫ್ ಅಂಡ್ ಮ್ಯಾರೇಜ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ... ಮಡಿಕೇರಿ.

— ಅಥವಾ —

ಜನರಲ್ ಸೆಕ್ರೆಟರಿ ಲೈಫ್ ಅಂಡ್ ಮ್ಯಾರೇಜ್ ಎಶ್ಯೂರೆನ್ಸ್ ಬಿಲ್ಡಿಂಗ್ಸ್, ಸಯಾಜಿರಾವ್ ರೋಡು, ಮೈಸೂರು.

5—4

" ಕೊಡಗು "

೧೯೨೩ ನೇ ಇಸವಿ ಜುಲೈ ತಾ|| ೨೭ ನೇ ಶುಕ್ರವಾರ.

ಸಹಕಾರಿ ಸಂಘಗಳ ಸೂಪರ್‌ವೈಜರುಗಳ ಫಂಡು

ಕಳೆದ ಎರಡು ವರ್ಷಗಳಿಂದಲೂ ಸಹಕಾರಿ ಸಂಘಗಳ ಕಾನ್‌ಫರೆನ್ಸಿನಲ್ಲಿ ಸೂಪರ್‌ವೈಜರುಗಳನ್ನು ಇಡಲಿಕ್ಕಾಗಿ ಒಂದು ಫಂಡನ್ನು ಸ್ಥಾಪಿಸಬೇಕೆಂದು ಚರ್ಚೆ ನಡೆದು ಈ ವರ್ಷ ಏಪ್ರಿಲ್ ತಿಂಗಳಲ್ಲಿ ವೀರಾಜಪೇಟೆಯಲ್ಲಿ ನಡೆದ ಸಹಕಾರಿಗಳ ಸಭೆಯಲ್ಲಿ ಸಂಘಗಳ ಭಂಡವಾಳದಮೇಲೆ ಶೇಕಡ ಹನ್ನೆರಡಾಣೆಯಂತೆಯೂ, ಸೆಂಟ್ರಲ್ ಬ್ಯಾಂಕಿನಿಂದ ಸಾಲ ಕೊಡಲ್ಪಟ್ಟಿರುವ ಮೊಬಲಗಿನ ಮೇಲೆ ಶೇಕಡ ಆರಾಣೆಯಂತೆಯೂ ಹದಲಿಕೆ ಕೊಟ್ಟು ಈ ಫಂಡನ್ನು ಏರ್ಪಡಿಸಬೇಕೆಂತ ಸಹಕಾರಿಗಳು ಒಮ್ಮನಸ್ಸಿನಿಂದ ತೀರ್ಮಾನಿಸಿಕೊಂಡರು. ಆ ತೀರ್ಮಾನದ ಆಧಾರದಮೇಲೆ ರಿಜಿಸ್ಟ್ರಾರರವರು ಎಲ್ಲಾ ಸಂಘಗಳಿಗೂ ಅವುಗಳ 1922 ನೇ ಇಸವಿ ಜೂನ್ ಆಖೈರಿನಲ್ಲಿದ್ದ ಭಂಡವಾಳದಮೇಲೆ ಮೇಲೆ ಸೂಚಿಸಿದ ದಾಮಾಶಾಯ ಮೇರೆ ಆಗುವ ಮೊಬಲಗನ್ನು ಸೆಂಟ್ರಲ್ ಬ್ಯಾಂಕಿನ ಸೆಕ್ರೆಟರಿಯವರಿಗೆ ಕಳುಹಿಸಿಕೊಡಬೇಕೆಂತ ಇಸ್ತಿಹಾರ್ ಕಳುಹಿಸಿದ್ದಾರೆಂತಲೂ ಸೆಂಟ್ರಲ್ ಬ್ಯಾಂಕಿನ ಸೆಕ್ರೆಟರಿಯವರಿಗೆ ಈ ತಾ|| 22 ರ ವರೆಗೆ 28 ಸಂಘಗಳಿಂದ ಜುಮ್ಲಾ ರೂ. 457—15—0 ತಲಪಿದೆಯಾಗಿಯೂ ತಿಳಿಯುತ್ತೇವೆ.

ಕೊಡಗು ದೇಶದಲ್ಲಿ 1922 ನೇ ಇಸವಿ ಜೂನ್ ಆಖೈರಿನಲ್ಲಿದ್ದ 143 ಸಂಘಗಳ ಆಗಿನ ಭಂಡವಾಳ 264588 ರೂಪಾಯಿ ಮೇಲೆ 1984 ರೂಪಾಯಿ ವಸೂಲಾಗಬೇಕು. ಇದರಿಂದ ಆರು ಸೂಪರ್‌ವೈಜರುಗಳನ್ನು ತಿಂಗಳಿಗೆ 160 ರೂ. ಖರ್ಚಿನಿಂದ ನೇಮಿಸುವ ಏರ್ಪಾಡಿನಲ್ಲಿದ್ದಾರೆಂತ ತಿಳಿಯಬರುತ್ತದೆ. ಈ ಸೂಪರ್‌ವೈಜರುಗಳ ಅವಶ್ಯಕತೆಯನ್ನು ಸ್ವಲ್ಪ ಮಟ್ಟಿಗೆ ವಿವರಿಸಬೇಕಾಗಿದೆ. ಸಹಕಾರಿಗಳ ಕಾನ್‌ಫರೆನ್ಸಿನಲ್ಲೂ ಪ್ರಾರಂಭದಲ್ಲಿ ಈ ಹದಲಿಕೆ ಕೊಡುವ ವಿಷಯದಲ್ಲಿ ಕೆಲವರ ತಕರಾರು ಇತ್ತು. ಸೂಪರ್‌ವೈಜರುಗಳೆಂದರೆ ಮೇಲ್ವಿಚಾರಕರೆಂದರ್ಥ. ಸಂಘಗಳ ಮೇಲ್ವಿಚಾರ ಮಾಡುವುದು ಮತ್ತು ಅವುಗಳಿಗೆ ಬೇಕಾದ ಸಹಾಯ ಕೊಡುವುದೂ ಸಹ ಈ ಉದ್ಯೋಗಸ್ಥರ ಕೆಲಸವಾಗಿದೆ. ಈ ದೇಶದಲ್ಲಿ ಸಹಕಾರ ಪತ್ತಿನ (ಕ್ರೆಡಿಟ್) ಸಂಘಗಳು ಗ್ರಾಮಕ್ಕೊಂದು ಆಗದಿದ್ದರೂ ಅಕ್ಕಮಟ್ಟಿಗೆ ಸ್ಥಾಪಿಸಲ್ಪಟ್ಟವೆಯೆಂದು ಹೇಳಬಹುದು. ಆದರೆ ಸ್ಥಾಪಿತವಾದ ಸಂಘಗಳಲ್ಲಿ ಕೆಲಸವು ಚೆನ್ನಾಗಿ ನಡೆದರೇನೇ ಸಹಕಾರ ಚಳವಳದ ಪ್ರಯೋಜನವು ರೈತರಿಗೆ ದೊರೆಯುವುದು. ಈ ಚಳವಳಕ್ಕೆ ಉತ್ತೇಜನ ಕೊಡಲು ರಿಜಿಸ್ಟ್ರಾರರಿಗೆ ಇದ್ದ ಸಿಬ್ಬಂದಿಯು ಸಾಲದೆಂಬ ಕೊರಗು ಕೆಲವು ವರ್ಷಗಳಿಂದಲೇ ಇದೆ. ಅದರಲ್ಲೂ ಈಗಿನ ರಿಟ್ರೆಂಚ್‌ಮೆಂಟ್ ಕೊಡಲಿಯು ಅವರ ಸಿಬ್ಬಂದಿಯಮೇಲೆ ಬಿದ್ದಂದೆ ಇರಲಾರದು, ಅವರ ಪ್ರಯಾಣದ ಬತ್ಯಕ್ಕೂ ಈ ಕೊಡಲಿಯ ಪೆಟ್ಟು ತಗಲಿರುವುದರಿಂದ ಅವರ ಮೇಲ್ವಿಚಾರಣೆಯು ಮತ್ತಷ್ಟು ಕಡಿಮೆಯಾಗದೆ ಇರದು. ಈ ವಿಚಾರವು ಸರಕಾರದವರ ಗೋಚರಕ್ಕೆ ಬಾರದೆ ಇರುವುದು ವ್ಯಸನಕರ. ಅವರ ಸಿಬ್ಬಂದಿಯು ಪೂರಾ ಮೊದಲಿನಂತೆಯೇ ಇದ್ದು, ಇಬ್ಬರು ಇನ್‌ಸ್ಪೆಕ್ಟರುಗಳು ಏರ್ಪಾಡಾದರೂ, ಆನರರಿ ಆರ್ಗನೈಜರುಗಳು ಕೆಲವರು ನೇಮಿಸಲ್ಪಟ್ಟರೂ ಕೂಡ ಸೂಪರ್‌ವೈಜರುಗಳ ಅವಶ್ಯಕತೆಯು ಇದ್ದೇ ಇದೆ. ಈ ಸಿಬ್ಬಂದಿಯೆಲ್ಲಾ ಮದ್ರಾಸಿನ ಈ ಇಲಾಖೆಯಲ್ಲಿ ಕೆಲವು ವರ್ಷಗಳಿಂದಲೇ ಇದೆ. ಈಗತಾನೆ ಇಲ್ಲಿನ ಸರಕಾರದವರು ಮೆ|| ಅಪ್ಪಂಡ ಬೆಳ್ಯಪ್ಪನವರನ್ನು ಎಡೆನಾಲ್ಕುನಾಡು ಸಂಘಗಳ ಗೌರವ ಆರ್ಗನೈಜರಾಗಿ ನೇಮಿಸಿದ್ದಾರೆಂತ ತಿಳಿಯುತ್ತೇವೆ. ಇದಕ್ಕೆ ದೇಶದವರ ಕೃತಜ್ಞತೆಯನ್ನು ಈ ಮೂಲಕ ನಾವು ಸೂಚಿಸುತ್ತೇವೆ. ಅವರ ಪ್ರಯಾಣದ ಬತ್ಯವನ್ನು ಕೊಡುವ ಏರ್ಪಾಡನ್ನು ಸಹ ಸರಕಾರದವರು ಶೀಘ್ರದಲ್ಲಿಯೇ ಮಾಡಿಯಾರೆಂತ ನಂಬುತ್ತೇವೆ. ಇನ್‌ಸ್ಪೆಕ್ಟರುಗಳನ್ನು ನೇಮಿಸಿಕೊಡಬೇಕೆಂದು ಸಹಕಾರಿಗಳು ಕೇಳಿಕೊಂಡದ್ದಕ್ಕೆ ಒಬ್ಬ ಇನ್‌ಸ್ಪೆಕ್ಟರ ಹುದ್ದೆಯು ಮಂಜೂರಾಗಿದೆ ಎಂದು ವರ್ತಮಾನ ಹುಟ್ಟಿತ್ತು. ಆದರೆ ಈ ವಿಷಯ ಕಮಿಷನರನ್ನು ಕಳೆದ ಕೋಆಪರೇಟಿವ್ ಕಾನ್‌ಫರೆನ್ಸಿನಲ್ಲಿ ಕೇಳಿದಕ್ಕೆ ಸರಿಯಾದ ಜವಾಬು ಸಿಕ್ಕಲಿಲ್ಲ. ಆದರೂ ಈ ಉದ್ಯೋಗಕ್ಕೆ ಒಬ್ಬನನ್ನಾದರೂ ನೇಮಿಸಲಿಕ್ಕೆ ಸಹಕಾರ ಚಳವಳದಲ್ಲಿ ಬಹಳ ಆಸಕ್ತಿಯುಳ್ಳ ಚೀಫ್ ಕಮಿಷನರವರು ಮನಸ್ಸು ಮಾಡಿಯಾರೆಂತ ನಂಬುತ್ತೇವೆ. ಇದೂ ಅಲ್ಲದೆ ಸಂಘಗಳ ಲೆಕ್ಕ ಆಡಿಟ್ ಮಾಡಲಿಕ್ಕೆ ಪಾರುಪತ್ಯಗಾರರುಗಳಿಗೆ ಕಳೆದವರ್ಷದಿಂದ ಅಧಿಕಾರ ಕೊಟ್ಟಿದ್ದಾರೆ. ರೆವಿನ್ಯು ಆಫೀಸರ್ ಮೇಜಿಸ್ಟ್ರೇಟ್ ಮತ್ತು ಸಬ್‌ರಿಜಿಸ್ಟ್ರಾರ್ ಸಹ ಆಗಿರುವ ಈ ಪಾರುಪತ್ಯಗಾರರುಗಳಿಗೆ ಈ ಲೆಕ್ಕ ಆಜಮಾಯಿಸಲಿಕ್ಕೆ ಸಮಯ ದೊರೆಯುವುದೇ ದುರ್ಲಭ. ಆದುದರಿಂದ ತಮ್ಮ ಕಚ್ಚೇರಿಗೆ ಲೆಕ್ಕ ಪುಸ್ತಕಗಳನ್ನು ತರಬೇಕೆಂದು ಸಂಘದ ಸೆಕ್ರೆಟರಿಗಳಿಗೆ ಹೇಳುವರು. ಈ ಲೆಕ್ಕ ಚೆಕ್ಕಿಂಗ್ ಕೆಲಸವು ಕಾರಣಾಂತರಗಳಿಂದ ಒಂದೇ ಸಲಕ್ಕೆ ತೀರದೆ ಇರುವುದರಿಂದ ಸೆಕ್ರೆಟರಿಗಳಿಗೆ ತೊಂದರೆಗೆ ಕಾರಣವಾಗುತ್ತದೆ. ಹ್ಯಾಗೂ ಇಂಥಾ ಆಡಿಟಿಂಗಿನಿಂದ ಪ್ರಯೋಜನವು ಬಹಳ ಕಡಿಮೆ. ಲೆಕ್ಕ ಚೆಕ್ಕ್ ಮಾಡಿದರೂ, ಸಂಘಗಳು ಸಹಕಾರಿ ತತ್ವಗಳಿಗೂ, ಬೈಲಾಗಳಿಗೂ ಕಾನೂನಿಗೂ ಅನುಸಾರವಾಗಿ ನಡೆಯುತ್ತಿವೆಯೋ ಹಾಯಿದೆಗೆ ಸರಿಯಾಗಿ ಸಾಲದ ಹಣವು ವಸೂಲಾಗುತ್ತಿದೆಯೋ ಎಂತ ನೋಡುವುದೂ, ಇಲ್ಲದಿದ್ದರೆ ಸರಿಯಾದ ದಾರಿ ಹೇಳಿಕೊಡುವುದೂ ಮುಂತಾದ ಕೆಲಸಗಳು ಇದ್ದೇ ಇವೆ. ಈ ಕೆಲಸಕ್ಕೆ ಇನ್‌ಸ್ಪೆಕ್ಟರುಗಳೂ ಆರ್ಗನೈಜರುಗಳೂ ಸೂಪರ್‌ವೈಜರುಗಳೂ ಅತ್ಯವಶ್ಯ. ಅನೇಕ ಸಂಘಗಳಲ್ಲಿ ಕೆಲಸವು ಸರಿಯಾಗಿ ನಡೆಯುತ್ತಿಲ್ಲವೆಂತ ತಿಳಿಯಬರುತ್ತದೆ. ಪ್ರೆಸಿಡೆಂಟರಲ್ಲಿರುವ ಸಂಘದ ಹಣವನ್ನು ಮೆಂಬರುಗಳಿಗೆ ಕಾಲಕ್ಕೆ ಸರಿಯಾಗಿ ಬಟವಾಡೆ ಮಾಡದೆ ಇರುವುದೂ, ಕಮಿಟಿ ಮೆಂಬರುಗಳು ಸಂಘದಿಂದ ಸಾಲ ತೆಗೆದುಕೊಳ್ಳಕೂಡದೆಂಬ ಬೈಲಾವನ್ನು ತಪ್ಪಿಸಿಕೊಳ್ಳಲಿಕ್ಕಾಗಿ ಅವರು ಬೇರೆಯವರ ಹೆಸರಿನಲ್ಲಿ ಸಾಲ ತೆಗೆದುಕೊಳ್ಳುವುದೂ ಸಾಲ ಮಂಜೂರು ಮಾಡುವುದರಲ್ಲಿ ಕಮಿಟಿಯವರು ಪಕ್ಷಪಾತವನ್ನು ತೋರಿಸುವುದೂ, ಸೆಕ್ರೆಟರಿ ಮತ್ತು ಪ್ರೆಸಿಡೆಂಟರು ಸಂಘದ ಹಣವನ್ನು ದುರುಪಯೋಗಪಡಿಸುವುದೂ, ಅನೇಕ ವರ್ಷಗಳಿಂದ ಬಾಕಿ ಇರುವ ಸಾಲ ವಸೂಲಿಗೆ ತರದೂದು ಮಾಡದೆ ಇರುವುದೂ ಮುಂತಾದ ಅನೇಕ ಕೊರತೆಗಳು ಕಂಡು ಬಂದವೆಯೆಂತ ತಿಳಿಯುತ್ತೇವೆ. ಇಂಥಾ ದೋಷಗಳು ಪ್ರಾರಂಭದಲ್ಲಿ ಬರುವುದೇನೂ ಆಶ್ಚರ್ಯವಲ್ಲ. ಕಮಿಟಿ ಮೆಂಬರುಗಳಿಗೂ ಸಂಘದ ಮೆಂಬರುಗಳಿಗೂ ತಮ್ಮ ಕರ್ತವ್ಯವೂ ಜವಾಬ್ದಾರಿಕೆಯೂ ತಿಳಿಯದೆ ಇರುವುದರಿಂದ ಹೀಗೆ ಅನೇಕಸಲ ಆಗುತ್ತೆ.

ಸಹಕಾರಿ ಸಂಸ್ಥೆಗಳು ಕ್ರಮವಾಗಿ ನಡೆಯಬೇಕಾದರೆ ಯೂನಿಯನ್‌ಗಳು ಇರಬೇಕು. ಈಗಾಗಲೇ ಕಿಗ್ಗಟ್ಟುನಾಡು ತಾಲೋಕಿನಲ್ಲಿ ಪೊನ್ನಂಪೇಟೆ ನಾಡಿಗೊಂದು ಶ್ರೀಮಂಗಲ ನಾಡಿಗೊಂದು ಅಂತು ಎರಡು ಯೂನಿಯನ್‌ಗಳು ಏರ್ಪಟ್ಟಿರಾಗಿವೆ. ಬೇರೆ ಕಡೆಗಳ ಸಂಘಗಳೂ ಸಹ ಯೂನಿಯನ್‌ಗಳನ್ನು ಮಾಡಲಿಕ್ಕೆ ತಯಾರಾಗಿವೆ. ಈ ಯೂನಿಯನ್ ಸಂಘಗಳನ್ನು ಏರ್ಪಡಿಸಲಿಕ್ಕೆ ಸೂಪರ್‌ವೈಜರುಗಳು ಅಗತ್ಯವಾಗಿಯೂ ಬೇಕು. ಕಿಗ್ಗಟ್ಟುನಾಡಿನಲ್ಲಿ ಭಂಡವಾಳದ ಶೇಕಡ ಒಂದು ರೂಪಾಯಿ ಹದಲಿಕೆ ಹಾಕಿ ಸೂಪರ್‌ವೈಜರನ್ನು ಕೆಲವು ವರ್ಷಗಳ ಹಿಂದೆಯೇ ಇಟ್ಟುಕೊಂಡದ್ದರಿಂದ ಅಲ್ಲಿನ ಸಂಘಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಿವೆಯೆಂತಲೂ ಮೊದಲನೇ ಯೂನಿಯನ್‌ಗಳು ಆ ತಾಲೋಕಿನಿಂದ ರಿಜಿಸ್ಟರಾಗಲು ಇದೇ ಕಾರಣವೆಂತಲೂ ವಿಶದವಾಗುತ್ತದೆ.

ಸೆಂಟ್ರಲ್ ಬ್ಯಾಂಕಿನಿಂದ ಸುಮಾರು ನಲುವತ್ತು ಸಾವಿರ ರೂ. ಸಂಘಗಳಿಗೆ ಸಾಲ ಕೊಡಲ್ಪಟ್ಟಿದೆ. ಈ ಮೊಬಲಗೆಲ್ಲಾ ಮೆಂಬರುಗಳಿಗೆ ಸರಿಯಾಗಿ ಬಟವಾಡೆಯಾಗುತ್ತಿದೆಯೋ, ಹಾಗೆ ಕೊಡುವ ಸಾಲಗಳಿಗೆ ಸರಿಯಾದ ಆಧಾರ ತೆಗೆದುಕೊಳ್ಳುತ್ತಿದ್ದಾರೋ, ಸಾಲ ಮಂಜೂರು ಮಾಡಬೇಕಾದರೆ ಸಾಲ ಕೇಳುವ ಮೆಂಬರುಗಳ ಪತ್ತನ್ನು ಸರಿಯಾಗಿ ಅಜಮಾಯಿಸಿದ್ದಾರೋ, ಸಾಲ ಕೊಡುವ ಸೊತ್ತಿಗೆ ಸಂಬಂಧಪಟ್ಟವರ ಅನುಮತಿಯನ್ನು ಪಡೆದಿದ್ದಾರೋ, ಬ್ಯಾಂಕಿಗೆ ಮರುಪಾವತಿಗೆ ಬೇಕಾದಷ್ಟು ಹಣ ಕಾಲಕ್ಕೆ ಸರಿಯಾಗಿ ಮೆಂಬರುಗಳಿಂದ ವಸೂಲು ಬರುವಂತೆ ಏರ್ಪಾಡು ಮಾಡಿಕೊಂಡಿದ್ದಾರೋ, ಬ್ಯಾಂಕಿಗೆ ಸಾಲಕ್ಕೆ ಅರ್ಜಿ ಬರೆಕೊಂಡ ಸಂಘದ ಪತ್ತು ತೃಪ್ತಿಕರವೋ ಎಂಬ ಮೊದಲಾದ ಸಂಗತಿಗಳನ್ನು ತಿಳಿಸುವ ಅನೇಕ ಕೆಲಸಗಳಿವೆ. ಗ್ರಾಮದ ಸಂಘಗಳು ಹೆಚ್ಚಾಗಿ ಅಮಿತ ಜವಾಬ್ದಾರಿಯದಾಗಿವೆ. ಅಂಥಾ ಸಂಘಗಳು ಪಡೆದ ಸಾಲವನ್ನು ಕಾಲಕ್ಕೆ ಸರಿಯಾಗಿ ಮರುಪಾವತಿ ಮಾಡಲು ತಪ್ಪಿದರೆ ಸಂಘದ ಪ್ರತಿ ಮೆಂಬರನ ಪೂರ್ತಿ ಸೊತ್ತು ಜವಾಬ್ದಾರಿಯಿಂದ ಅಂಥಾ ಸಾಲದ ಮೊಬಲಗು ವಸೂಲ್ಮಾಡಲ್ಪಡುವುದು. ಆದುದರಿಂದ ಕಾಲಕ್ಕೆ ಸರಿಯಾಗಿ ಸಂಘಗಳು ಪಡೆದ ಸಾಲ ಮರುಪಾವತಿಯಾಗಬೇಕಾದದ್ದು ಪ್ರತಿಮೆಂಬರನ ಕ್ಷೇಮಕ್ಕಾಗಿದೆ. ಸಂಘದ ಮೇಲ್ವಿಚಾರಣೆ ಬ್ಯಾಂಕಿನ ಪ್ರಯೋಜನಕ್ಕೆ ಮಾತ್ರವಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಬ್ಯಾಂಕಿನ ಪ್ರಯೋಜನಕ್ಕೆಂತಲೇ ಆದರೂ, ಬ್ಯಾಂಕಿನ ಶೇರುಭಂಡವಾಳವು ಹೆಚ್ಚಾಗಿ ಸಂಘಗಳದ್ದೇ. ಆದುದರಿಂದ ಬ್ಯಾಂಕು ಕೆಟ್ಟರೆ ಸಂಘಗಳ ಆಶ್ರಯವು ಕೆಡುವುದಲ್ಲದೆ ಅವುಗಳ ಹಣವೂ ಸಹ ಹೋಗುತ್ತೆ.

ಆಯಾಯ ಸ್ಥಳಗಳ ಸಂಘಗಳಿಂದ ವಸೂಲಾಗುವ ಹದಲಿಕೆಯ ಹಣವು ಅಲ್ಲಿಯ ಸೂಪರ್‌ವೈಜರಿಗೆ ಮಾತ್ರ ಖರ್ಚು ಮಾಡತಕ್ಕದೆಂದೂ ಬೇರೆಕಡೆಯ ಸೂಪರ್‌ವೈಜರಿಗೆ ಉಪಯೋಗಿಸಕೂಡದೆಂದೂ ಕೆಲವರು ಆಕ್ಷೇಪಿಸುತ್ತಿರುವರು. ಇಲ್ಲಿ ಸಹಕಾರ ಚಳವಳದ ಈ ಬಾಲಪ್ರಾಯದಲ್ಲಿ ದೇಶದ ಎಲ್ಲಾ ಕಡೆಗಳ ಸಂಘಗಳು ಒಂದೇ ಸರಿಸದಲ್ಲಿ ಇರುವುದಿಲ್ಲ. ಮಾತ್ರವಲ್ಲದೆ ಎಲ್ಲಾ ಗ್ರಾಮಗಳಲ್ಲಿಯೂ ಸಂಘಗಳು ಸ್ಥಾಪಿಸಲ್ಪಟ್ಟಿರುವುದಿಲ್ಲ. ಆದುದರಿಂದ ಪ್ರಾರಂಭದಲ್ಲಿ ಮೇಲಿನ ಅಭಿಪ್ರಾಯವನ್ನು ಜಾರಿಗೆ ತರುವುದು ಸಾಧ್ಯವಲ್ಲ. ಹಾಗೆ ಆಕ್ಷೇಪಿಸುವವರು ಸಹಕಾರ ಚಳವಳದ ಮುಖ್ಯ ತತ್ವವಾದ ಪರಸ್ಪರ ಸಹಾಯವನ್ನು ಕಣ್ಣೆದುರಿಗೆ ಇಟ್ಟುಕೊಂಡು ಎಲ್ಲಾ ಸಂಘಗಳು ಒಗ್ಗಟ್ಟಾಗಿ ಕೆಲಸ ಮಾಡಲಿಕ್ಕೆ ಅಡ್ಡಿ ಮಾಡಲಿಕ್ಕಿಲ್ಲವಾಗಿ ಹಾರೈಸುತ್ತೇವೆ. ಆದುದರಿಂದ ಸಂಘಗಳೆಲ್ಲವೂ ತಮ್ಮ ಹದಲಿಕೆಯನ್ನು ಆದಷ್ಟು ಶೀಘ್ರದಲ್ಲೇ ಕಳುಹಿಸಿಕೊಟ್ಟು ಸೂಪರ್‌ವೈಜರುಗಳ ನೇಮಕಕ್ಕೆ ಅನುಕೂಲ ಪಡಿಸಿಯಾರೆಂತ ನಮ್ಮ ನಂಬಿಕೆ.

ಹಾರಂಗಿ ನಾಲೆ

ಕೆಲವು ವರ್ಷಗಳ ಹಿಂದೆ ಹಾರಂಗಿ ನಾಲೆಯ ಕೆಲಸವನ್ನು ಮಾಡಲು ಖರ್ಚಾಗಬಹುದಾದ ಹಣವನ್ನು ಅಂದಾಜುಮಾಡಿ ಸರ್ವೆ ಪ್ಲಾನು ವಗೈರೆಗಳನ್ನು ತಯಾರಿಸಿ, ಕೆಲಸವನ್ನು ಪ್ರಾರಂಭಿಸಿ ಸರಕಾರದವರು ಕೆಲಸ ಮುಂದರಿಸುವುದನ್ನು ಯಾವ ಕಾರಣದಿಂದ ಬಾಕಿ ಮಾಡಿದರೋ ತಿಳಿಯದು. ಸರಕಾರಕ್ಕೆ ಉತ್ಪತ್ತಿಯಾಗುವ ಕೆಲಸಕ್ಕೆ ಅವರು ಹೇರಳ ಹಣ ಖರ್ಚುಮಾಡುವುದು ವಾಡಿಕೆಯಾಗಿದೆ. ಹಾಗೆಯೇ ಮಾವುಕೂಟದ ಟ್ರಾಮ್‌ವೇ ಲೈನಿಗೆ ಸುಮಾರು ಹತ್ತು ಲಕ್ಷ ರೂಪಾಯಿ ಖರ್ಚುಮಾಡಿರುವರು. ಆದರೆ ಈ ವರೆಗೆ ಅದರಿಂದ ಏನೊಂದೂ ಉತ್ಪತ್ತಿಯಾಗಿರುವುದಿಲ್ಲವೆಂದು ತಿಳಿಯಬರುತ್ತದೆ. ಆದರೂ ಕೂಡ ಅದಕ್ಕೆ ಇನ್ನೂ ಹೆಚ್ಚು ಖರ್ಚು ಮಾಡುತ್ತಲೇ ಇದ್ದಾರೆ. ಆದರೆ ಇದರಿಂದ ಸರಕಾರಕ್ಕೆ ಆದಾಯ ಹೆಚ್ಚಬಹುದೇ ಹೊರತು ರೈತರಿಗೆ ಪ್ರತ್ಯಕ್ಷ ಪ್ರಯೋಜನವೇನೂ ಕಾಣುವುದಿಲ್ಲ. ಇನ್ನು ಮುಂದೆ ಸರಕಾರಕ್ಕೆ ಉತ್ಪತ್ತಿ ಜಾಸ್ತಿಯಾಗಬಹುದೆಂದು ಊಹಿಸಲಾಗಿರುವ ಇಂಥಾ ಕೆಲಸಕ್ಕೆ ಯಥೇಚ್ಛ ಹಣ ವ್ಯಯಮಾಡಿದರೂ ಕೂಡ, ಈ ದೇಶದ ಸರಕಾರದವರು ಪಾಳು ಬಿದ್ದ ಅನೇಕ ಗ್ರಾಮಗಳೂ ರಿಸರ್ವ್ ಫಾರೆಸ್ಟಿನ ಭಾಗಗಳೂ ಸಾಗುವಳಿಗೆ ಬಂದು, ಸಾವಿರಾರು ಪ್ರಜೆಗಳು ಬದುಕಿ ಸರಕಾರಕ್ಕೂ ಎಲ್ಲಾ ವಿಧದಲ್ಲೂ ಸ್ಥಿರವಾದ ಉತ್ಪತ್ತಿ ದೊರೆಯುವಂತ ಈ ನಾಲೆಯ ವಿಷಯ ನಿಗಕೊಡದೇ ಇರುವುದು ಬಹಳ ವ್ಯಸನಕರವೇ ಸರಿ.

ಬೇರೆ ತಾಲೋಕುಗಳಿಗಿಂತ ಬಹಳ ಹಿಂದೆ ಬಿದ್ದಿರುವ ಈ ನಂಜರಾಯಪಟ್ಣ ತಾಲೋಕಿನ ಮೇಲೆ ಸರಕಾರದವರು ಹೆಚ್ಚಿಗೆ ನಿಗಕೊಡದಿದ್ದರೆ ಈ ತಾಲೋಕು ನಿವಾಸಿಗಳು ಇನ್ನೂ ಕ್ಷೀಣಗತಿಯನ್ನು ಹೊಂದುವುದೇ ಸರಿ. ಈ ತಾಲೋಕಿನವರ ಕಷ್ಟವನ್ನು ಹೋಗಲಾಡಿಸಲು ಒಡನೇ ನ್ಯಾಯದ ಪ್ರಾಥಮಿಕ ಶಿಕ್ಷಣವನ್ನು ಕೊಡುವುದಕ್ಕೂ ದನದ ಕೊಟ್ಟಿಗೆಯನ್ನು ಜನರು ವಾಸಿಸುವ ಮನೆಯೊಳಗಿಂದ ತಪ್ಪಿಸಲಿಕ್ಕೂ ತಕ್ಕ ಏರ್ಪಾಡುಗಳನ್ನು ಮಾಡುವುದು ಅಗತ್ಯವಾಗಿದೆ. ಅಲ್ಲದೆ ಹಾರಂಗಿ ನಾಲೆಯ ಕೆಲಸವನ್ನು ಕೂಡಲೆ ಪ್ರಾರಂಭಿಸಬೇಕಾಗಿದೆ. ಮಾವುಕೂಟದ ಟ್ರಾಮ್‌ವೇಯಿಂದ ಸರಕಾರಕ್ಕೆ ಹೆಚ್ಚಿಗೆ ಆದಾಯ ಸಿಕ್ಕಬಹುದಾದರೂ, ಈ ಧನರೂಪದ ಆದಾಯಕ್ಕಿಂತ ಬಹಳ ಅಮೂಲ್ಯವಾದ ಪ್ರಜೆಗಳ ತೃಪ್ತಿಯೂ, ಅವರ ಪ್ರೀತಿಯೂ ಈ ನಾಲೆಯಿಂದ ಸರಕಾರಕ್ಕೆ ಸಂಪಾದನೆಯಾಗುತ್ತದೆ. ಸರಕಾರದವರು ಅತ್ಯವಶ್ಯವಾದ ಈ ವಿಷಯದಲ್ಲಿ ಸಹಾಯ ಮಾಡದಿದ್ದರೆ ಪ್ರಜಾ ಸಂತತಿಗೆ ಪಾಪವಿಲ್ಲದಾಗುತ್ತೆ. ಈ ವಿಷಯದಲ್ಲಿ ಜಮಾಸುದಾರರ ಸಂಘದವರು ಪ್ರತಿವರ್ಷ ದರಖಾಸ್ತು ಮಾಡುತ್ತಾ ಇರುವುದಕ್ಕೆ ಸರಕಾರದವರು ಈವರೆಗೆ ಗಮನಕೊಡದೇ ಇರುವುದು ಶೋಚನೀಯ. ಮೂರು ನಾಲ್ಕು ವರ್ಷಗಳ ಮೊದಲು ಮೆ|| ವೈಸನ್‌ರವರು ಎಗ್ಸಿಕ್ಯುಟಿವ್ ಇಂಜಿನಿಯರ್ ಆಗಿದ್ದಾಗ್ಯೆ ಅವರು ಮತ್ತು ಕಮಿಷನರವರು ಈ ವಿಚಾರದಲ್ಲಿ ಜಮಾಸುದಾರರ ಸಂಘದ ಪ್ರತಿನಿಧಿಗಳಿಗೆ ಭೇಟಿಕೊಟ್ಟು ನಾಲೆಯ ಕೆಲಸವನ್ನು ಪ್ರಾರಂಭಿಸುವೆವೆಂದು ಆಶೆತೋರಿಸಿದ್ದರು. ಆದರೆ ಅವರು ಹೋದ ನಂತರ ನಿರಾಕರಣೆಯೇ ಕಾಣುತ್ತೆ. ಈ ವರ್ಷ ರೈತರ ಸಂಘದ ಕಾನ್‌ಫರೆನ್ಸಿನಲ್ಲಿ ಈ ನಾಲೆಯಿಂದ ಪ್ರಯೋಜನ ಹೊಂದುವ ಜನರ ಪ್ರತಿನಿಧಿಗಳು ಈ ನಾಲೆಯ ಖರ್ಚಿನ ಕೆಲವು ಮಟ್ಟಿಗೆ ಹಣವನ್ನು ಅಲ್ಲಿಯ ರೈತರು ಕೊಡಲು ತಯಾರಾಗಿರುವರೆಂದು ಸಹ ಹೇಳಿದರು. ಈಗಲಾದರೆ ಸರಕಾರದವರು ಈ ಹೋಬಳಿಯ ರೈತರ ಕಷ್ಟನಿವಾರಣೆಗೆ ಸಹಾಯಕರಾಗುತ್ತಾರೋ ನೋಡೋಣ.

ಭಯಂಕರವಾದ ನೆರೆ ನೀರು !

ದಕ್ಷಿಣ ಕನ್ನಡದ ಉಡುಪಿ ತಾಲೂಕಿನ ಕರಾವಳಿಯಲ್ಲಿನ ಸುಮಾರು ೩೦೦೦ ಕ್ಕಿಂತ ಹೆಚ್ಚಿನ ಮನೆಗಳು ತೇಲಿಹೋದವು !

೧೦೦೦೦ ಕ್ಕಿಂತ ಹೆಚ್ಚಾದ ಜನರು ಮನೆಮಾರುಗಳನ್ನೂ, ತಮ್ಮ ಎಲ್ಲಾ ಅರ್ಜನೋಪಾಯಗಳನ್ನೂ, ಕಳೆಕೊಂಡು ಊಟ ಉಡಿಗೆಗಳನ್ನೂ ಆಶ್ರಯಸ್ಥಾನವನ್ನೂ [illegible] ಬೇಡುತ್ತಿರುವರು !!

ಈ ವರೆಗೂ ಯಾರೂ ಕೇಳಿರದಂತಹ ಪ್ರಲಯರೂಪವಾದ ಪ್ರಚಂಡ ನೆರೆಯೊಂದು ಉಡುಪಿ ತಾಲೂಕಿನ ಕರಾವಳಿಯಲ್ಲಿ ಮತ್ತು ನದಿಯ ದಡದಲ್ಲಿ ವಿಸ್ತರಿಸಿ ಮೇಲೆ ಕಾಣಿಸಿದ ಭಯಂಕರವಾದ ಅವಸ್ಥೆಗಳು ನಡೆದುವು. ಹದಿನೆಂಟು ಘಂಟೆಗಳೊಳಗೆ ಈ ಹೃದಯವಿದಾರಕವಾದ ಪರಿವರ್ತನೆಗಳು ನಡೆದು ಹೋದುವು. ಅನೇಕ ಸುಖವಾಗಿ ಜೀವಿಸುತ್ತಿದ್ದ ಕುಟುಂಬಗಳು ಆ ದಿವಸ ಸರ್ವಸ್ವವನ್ನೂ ಕಳೆ

ಡು ನಿಸ್ಸಹಾಯಕರಾಗಿ ಅಲೆಯುತ್ತಿರುವರು ಜನ ಈ ದುರ್ದಶೆಯಲ್ಲಿ ಸರ್ವರೂ ಸಹಾನುಭೂತಿಯಿಂದ ಆ ಸಹಾಯವನ್ನು ನೀಡುವುದು ಎಲ್ಲರ ಕರ್ತವ್ಯವಾಗಿದೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈಗ ಸು ರುವ ನಾವೂ ಈಶ್ವರನ ಯಾವ ಇಚ್ಛೆಯಿಂದ ಕ್ಷಣ ದೊಳಗೆ ಅಂತಹ ದುರ್ದಶೆಗೆ ಬೀಳಬಹುದೊ, ಅದೇ ಯಿಂದ ಇನ್ನೊಂದು ಜನಮಂಡಳಿಯು ಅನಾಥವಾಗಿ ಯಿತು. ಈಶ್ವರನು ನಮ್ಮ ಮೇಲೆ ಇಟ್ಟಿರುವ ದ ಯನ್ನು ಭಾವಿಸಿ ಕೃತಜ್ಞತಾಪೂರ್ವಕವಾಗಿಯಾದರೂ ವು ನಮ್ಮಿಂದ ಸಾಧ್ಯವಾದಷ್ಟು ಸಹಾಯವನ್ನು ಮಾ ಕು. ಆ ಪ್ರಚಂಡ ಜಲಪ್ರವಾಹದ ಆ ವೇಗದಲ್ಲಿ ಾದ ನಾಶವನ್ನು ನೋಡಿದ್ದಲ್ಲಿ ಯಾವ ಕಲ್ಲೆದೆಯಾದ ನೀರಾಗದಿರದು. ಈಶ್ವರನ ಹೆಸರಿನಲ್ಲಿ- ಅನಾಥರಾ ಹೋದ ಅಸಂಖ್ಯ ಜನರ ಹೆಸರಿನಲ್ಲಿ- ನಾವು ಸಹಾಯ ಗ ಬೇಡುವೆವು. ನಮ್ಮೊಡನೆ ಈ ಚಿತ್ರವನ್ನು ಚಿತ್ರಿಸುವ ಸಾಮರ್ಥ್ಯವಿಲ್ಲ. ಆ ಘೋರತೆಯನ್ನು ಚಿತ್ರರೂಪದಲ್ಲಿ ನಿ ಮ್ಮ ಮುಂದಿಡುವಷ್ಟು ಅದು ಕ್ಷುದ್ರವಾಗಿಲ್ಲ. ಆ ರಿಂದ ಮಕ್ಕಳು ಮನೆಗಳಿದ್ದ ನಿಮ್ಮ ಹೃದಯದ ಭಾವ ನಾವು ನಮ್ಮ ಪ್ರಾರ್ಥನೆಗಳನ್ನು ಕಳುಹಿಸುವೆವು. ಇ ಜನರಿಗೆ ಒದಗಿದ ಈ ದುರ್ದಶೆಯನ್ನು ಉಪೇಕ್ಷಿಸಲು ಶಕ್ತಿಯಿಲ್ಲ ನಿಮಗೂ ಸಾಧ್ಯವಾಗದು. ನಿಮ್ಮಲ್ಲಿ ಒಂದಿ ಕರುಣೆಯಿದ್ದರೆ ಇದನ್ನು ಉಪೇಕ್ಷಿಸಲಾರಿರಿ. ನಿಮ ಸಾಧ್ಯವಾಗುವ ಬಹಳ ಹಣಸಹಾಯವನ್ನೂ, ವಸ್ತ್ರಸಹಾ ಯ ವಸ್ತುಸಹಾಯವನ್ನೂ, ಎಲ್ಲವನ್ನೂ ಎಷ್ಟೇ ಕ ... ದರೂ ಸಹ ಕಳುಹಿಸಿರಿ. ನಿಮ್ಮ ದಾನವು ಒ ... ಗಿಲ್ಲ- ಹತ್ತು ಸಾವಿರ ಜನರಿಗೆ ದಾನಮಾಡುವಿರಿ. ಒ ರು ಕೃತಜ್ಞರಾಗುವುದಿಲ್ಲ- ಹತ್ತು ಸಾವಿರ ಜನರು ಕೃತಜ್ಞ ಗುವರು. ಒಬ್ಬರ ಕೃತಜ್ಞತೆಯಲ್ಲ—ಹತ್ತು ಸಾವಿರ ಜ ಕೃತಜ್ಞತೆಯು ನಿಮ್ಮ ಮುಂದಿನ ಜೀವನವನ್ನು ಹಿಂಬಾ ವುದು.

ನೀವು ಈ ಘೋರಸಂಕಷ್ಟವನ್ನು ಉಪೇಕ್ಷಿಸಲಾರಿರಿ ದೂ ಈ ನಮ್ಮ ಪ್ರಾರ್ಥನೆಯನ್ನು ನಿರಾಕರಿಸಲಾರಿರಿ ದೂ ನಮಗೆ ಸ್ಥಿರ ನಂಬಿಕೆಯಿದೆ.

ಸಹಾಯವನ್ನು ಮ ಭೀಮರಾವ್, ಕಾರ್ಯದರ್ಶಿ ಸಿ ರಿಲೀಫ್ ಉಡುಪಿ ಇವರಿಗೆ ಕಳುಹಿಸಬಹುದು.

ಉಡುಪಿ ತಾಲೂಕು ಕಾಂಗ್ರೆಸ್ ರಿಲೀಫ್ ಕಮಿಟಿ,

ತಾ|| ೧೭-೭-೧೯೩೩.

... ಕೃಷ್ಣ ಕಲ್ಯಾಣಶೆಟ್ಟಿ (ಅಧ್ಯಕ್ಷ)

... ನರಸಿಂಹ ನಂಬಿಯಾರ (ಉಪಾಧ್ಯಕ್ಷ)

ವಾಸುದೇವ ಪಡಿಯಾರ, ಭೀಮರಾವ್ (ಖಜಾಂಚಿ)	(ಕಾರ್ಯದರ್ಶಿಯರು)

ಜೀ ... ಎಂಬುವ ... "ಡೈಲಿ ಹೆರಾಲ್ಡ್" ಎಂಬ ಪತ್ರಿಕೆಗೆ ಬರೆದ ಕಾಗದದ ಅರ್ಥವು

ಚಾರ್ಲಿಮೆಂಟಿನಲ್ಲಿ ನಡೆದ ಉಪ್ಪಿನ ಸುಂಕದ ಬಗ್ಗೆ ಒಬ್ಬರು ಬರೆದಿರುವುದು ಹೀಗೆಂದರೆ -

ಪೂರ್ವದಿಂದಲೂ ಉಪ್ಪಿನ ಸುಂಕಕ್ಕೆ ಚಾರ್ಲಿಮೆಂಟಿನಲ್ಲಿ ಆಕ್ಷೇಪಿಸಿದ ... ಈಗ ಹೊಸದಾದ ಕಾರಣಗಳನ್ನೇ ಕೊಟ್ಟು ಉಪ್ಪಿನ ಸುಂಕವನ್ನು ಏರಿಸ ಬೇಕಾದ ಅವಶ್ಯಕತೆಯನ್ನು ಸ್ಥಾಪಿಸುತ್ತಿದ್ದರು ... ಡಿಯಾ ಸರಕಾರ ನಡೆಯಬೇಕಾದರೆ ಹಣಬೇಕು ... ಬೇರೆ ದಾರಿಯಾವದೂ ಇಲ್ಲದ್ದರಿಂದ ಉಪ್ಪಿನ ... ಹಾಕಿರುವದಾಗಿದೆ. ಇದಕ್ಕೆ ಆಕ್ಷೇಪಿಸಿದವರು ... ರ್ವದಿಂದಲೂ ಹೇಳುತ್ತಿದ್ದದ್ದೇನೆಂದರೆ —ಸೈನ್ಯಕ್ಕೆ ... ರ್ಚು ಕಡಿಮೆ ಮಾಡಿದರೆ ಹಣ ಬೇಕಾದಷ್ಟು ಉಳಿ ತ್ತೆ.

ಬ್ರಿಟೀಷ ಜನರು ರಾಜ್ಯವನ್ನು ಆಳುವ ದುಂದು ವೆಚ್ಚ ವನ್ನು ಇಂಡಿಯಾಕ್ಕೆ ವಹಿಸಕೊಳ್ಳಲಿಕ್ಕೆ ಸಾಧ್ಯವಿಲ್ಲವೆಂದು ಪೂರ್ವದಿಂದಲೇ ಇರುವ ಆಕ್ಷೇಪವಾಗಿದೆ. ಮ ... ದ ಭತ್ಯೆ, ಸಂಬಳ ಮಾತ್ರವಲ್ಲ. ಉದ್ಯೋಗದ ಸ್ಥಾನ ದಾರಿದ್ರ್ಯ ಪಟ್ಟಿ—ಇದರಿಂದ ಇಂಡಿಯಾ ದೇಶದ ... ತ್ತು ಸಿಳಿದು ಹೋಗುತ್ತೆ.

ಇದೂ ಅಲ್ಲದೆ ಹಾಯೆಯ್ಯ ಸರಹದ್ದಿನಲ್ಲಿ ನಾವು ... ನುವ ಅಡಳಿತದ ತಪ್ಪಿನಿಂದಲೂ, ಅವಿಸ್ವಾಸಿಕ್ಕ ನಡ ... ದ ನಮಗೆ ಇರುವ ಸಂಬಂಧದ ಸ್ಥಿತಿಯಿಂದಲೂ ... ದರಿಂದ ನೋಡಿ ಇಂಡಿಯಾ ರೈತನ ಮೇಲೆ ಹೊರೆ ... ತ್ತಲೇ ಬಂತು.

ಅದ್ದರಿಂದ ಇಂಡಿಯಾವು ಇಂಡಿಯಾದವರಿಗೆ ಇದ ... ಕೆಲ್ಪ ಹಕ್ಕನ್ನು ಸ್ಥಾಪಿಸಲಿಕ್ಕೆ ಕೆಲವು ವರ್ಷ ... ದೆಯೇ ನಾವು (ಕಾರ್ಮಿಕರ ಪಾರ್ಟಿ) ಕೇರಿದ್ದಾಗಿ ... ಬಹಳ ವರ್ಷ ಕೆಲಸಮಾಡಿ ಬಳಕದ ನಡಿಸಿ ಸ್ವ ... ಕ್ಕು ಸಿಕ್ಕಿದೆ. ಮುಂದು ವರ್ಷಗಳಲ್ಲಿ ಬಾಸಕ್ಕ ... ಸುವ ಹಕ್ಕು ಮತ್ತು ಕಂದಾಯ ಹಾಕುವ ಹ ... ಸಹ ನ್ಯಾಯವಿಧಾಯಕ ಸಭೆಗಳಿಗೆ ಸ್ಥಾಪಿತವಾಗಿ ವೆ. ಆದರೂ ಆ ಸಭೆ ಳ ತೀರ್ಮಾನನ್ನು ನ್ಯಾಸ ರಾಜ ರು ರದ್ದುಪಡಿಸಬಹುದು.

ಸೈನ್ಯದ ಹೊರೆ.

ಜನರಿಂದ ವಿರೋಧಿಸಲ್ಪಟ್ಟ ಉಪ್ಪಿನ ಸುಂಕವನ್ನು ಹೆಚ್ಚಿಸಲಿಕ್ಕೆ ಸಭೆಯಲ್ಲಿ ... ಬಂತು. ಎ ... ಯೂ ಸಭೆಯಿಂದ ತಿರಸ್ಕರಿಸಲ್ಪಟ್ಟದು. ರೀಡಿಂಗ್ ಪ್ರಭುಗಳು ಆ ಸುಂಕವನ್ನು ಮುಂಜೂರ್ ಮಾಡಿದರು. ಅವರು ಮತ್ತು ವಿಂಟರ್‌ಟನ್ ಪ್ರಭುಗಳು (ಇಂಡಿಯಾ ಸ್ಟೇಟ್ ಸೆಕ್ರಟರಿ)ಸಹ ಅದಾಯ ವೆಚ್ಚದ ಕಮ ಟ್ಟಿಯನ್ನು ಸಮರ್ಥಿಸಮಾಡಲಿಕ್ಕೆ ಈ ಸುಂಕ ಅವಶ್ಯವಿದೆ ಎಂದ ಆಸ್ತ್ರಿಕ್ರೆ. ಇಂಡಿಯಾದವರು ಹೇಳುವದೇನೆಂದರೆ- ಸೈನ್ಯದ ಖರ್ಚು ಕಡಿಮೆಮಾಡಿ ಸಿವಿಲ್ ಸರ್ವಿಸಿನ ರೀ ತಿಯನ್ನು ಬದಲಾಯಿಸಿರಿ. ದೇಶದ ರಾಜ್ಯಾಧಿಕಾರವನ್ನೂ ದೇಶವನ್ನೂ ಪರರಾಷ್ಟ್ರದಿಂದ ಕಾಪಾಡಿಕೊಳ್ಳುವ ಕೆಲಸ ವನ್ನು ಸಹ ಇಂಡಿಯನರಿಗೇನೇ ಕೊಟ್ಟುಬಿಡಿ. ಇಂ ಚ್‌ಕೇಪ್ ಪ್ರಭುಗಳು ಸೈನ್ಯದ ಖರ್ಚನ್ನು ಕಡಿಮೆಮಾ ಡಬೇಕೆಂತ ಬರೆದದ್ದನ್ನು ನೋಡಿ ಎಂತ ಹೇಳುತ್ತಾರೆ. ಅವರ ಶಿಫಾರಸ್ಸಿಗಿಂತ ಬಹಳ ಹೆಚ್ಚು ಖರ್ಚನ್ನು ಮಿ ಲಿಟರಿಇಲಾಖೆಗೆ ಇಟ್ಟಿದ್ದಾರೆ. ೧೯೧೪ ನೇ ಇಸವಿಯು ಖ ರ್ಚಿಗಿಂತ ಈಗ ಮಿಲಿಟರಿಗಾಗಿ ೨೦ ಮಿಲಿಯನ್ ಪೌಂಡು ಅಂದರೆ ೩೦ ಕೋಟಿ ರೂಪಾಯಿ ಹೆಚ್ಚಿಗೆ ಇಂಡಿಯಾ ದೇಶವು ಜುಲುಮಿನಿಂದ ಖರ್ಚುಮಾಡುವಂತೆ ಬ್ರಿಟಿಷರು ಮಾಡುತ್ತಾರೆ. ಮಿಲಿಟರಿ ಖರ್ಚನ್ನು ತಾವೇ ಮಾಡಿ ಕೊಳ್ಳುವದಾದರೆ ಇದರಲ್ಲಿ ಬಹಳ ಹೆಚ್ಚಿನ ಭಾಗವನ್ನು ಕಡಿಮೆಮಾಡಬಹುದೆಂತ ಇಂಡಿಯನರು ನಂಬುತ್ತಾರೆ.

"ಡೆಯಿಲಿ ಹೆರಾಲ್ಡಿನ" ವಾಚಕರಿಗೆ ಇದರಿಂದ ಗೊತ್ತಾಗಬಹುದೇನೆಂದರೆ—ಇಂಡಿಯನರ ಹೋರಾಟವು ಪೂರ್ವದಲ್ಲಿ ನಾವು ಸ್ಟುವರ್ಟ ಮನೆತನದ ರಾಜರ ಮೇಲೆ ಮಾಡಿದ ಹೋರಾಟಕ್ಕೆ ಹೋಲುತ್ತಿರೆಯೆಂತ ಗೊತ್ತಾಗಬಹುದು. ಬ್ರಿಟಿಷ್ ಜನರ ಇರಾದೆಗೆ ವಿ ರೋಧವಾಗಿ, ನೇಚಾರ್ಲ್ಸ ದೊರೆಯವರು ಸೈನ್ಯದ ಖರ್ಚಿಗಾಗಿ "ಶಿಫ್‌ಮನಿ" ಎಂಬ ತೆರಿಗೆಯನ್ನು ಹಾಕಿ ದರು. ಆ ರಾಜರು ಅದರಿಂದ ತಮ್ಮ ರಾಜ್ಯವನ್ನೂ ತ ಲೆಯನ್ನೂ ಸಹ ಕಳಕೊಂಡರು. ಅವರ ವಂಶೀಕರು ಯುರೋಪಿನಲ್ಲಿ ಅಲೆದಾಡುತ್ತಿದ್ದಾರೆ. ಬ್ರಿಟಿಷ್ ಜ ನರು ಇಂಡಿಯಾದ ವಿಷಯದಲ್ಲಿ ನಾವು ರಾಜನೀತಿಯ ವ ನ್ನು ಬದಲಾಯಿಸದಿದ್ದರೆ ಇಂಡಿಯಾವನ್ನು ಆಳುವದನ್ನು ಅದರಿಂದ ಪ್ರಯೋಜನ ಹೊಂದುವದನ್ನು ಅಲ್ಲದೆ ಇ ರತ್ತೊಂತಲೂ ಹೆಚ್ಚು ಅನುಭವಿಸಿದ ೩ ಕೋಟಿ ಜನ ರ ಸ್ನೇಹವನ್ನೂ ಸಹ ಕಳಕೊಳ್ಳುತ್ತೇವ.

ರೀಡಿಂಗ್ ಪ್ರಭುಗಳಿಗೆ ಎರಡು ದಿನ ... ... ಆಯಿತು. ಅದರೆ ಅಲ್ಲಿಗೆ ತಿರುಗಿ ... ಉಳಿಸಬೇ ಕು. ಅಹವನರಾಯರೂ, ಗಾಂಧಿಯವರೂ ಧೈರ್ಯದಿಂ ದ ಇರಬಹುದು. ಯಾಕೆಂದರೆ, ಅವರು ಇಂಗ್ಲೀಷರ ಧೃಷ್ಟಭಗಿನಿಯರು ಇಂಡಿಯಾದ ಸ್ವಾತಂತ್ರ್ಯಕ್ಕಾಗಿ ಹೋ ರಾಡುವರು ನೋಡಿಯಲಿಸ್ಟ್ ಮತ್ತು ಕಾರ್ಮಿಕರ ಪಾರ್ಟಿಯವರು ತಮ್ಮ ಹೋರಾಟವೆಂತಲೇ ಭಾವಿಸಿ ದ್ದಾರೆ. ಇಂಡಿಯಾದವರ ಸಾಹಸದ ಹೋರಾಟದಲ್ಲಿ ನಾವು ಯಾವಾಗಲೂ ಭಾಗಿಗಳಾಗಿದ್ದು ಬ್ರಿಟಿಷರ ಮ ತ್ತು ಇಂಡಿಯನ್ ಜನರಿಗೆ ಈರ ಒಟ್ಟು ಮನುಷ್ಯಜಾತಿ ಯನ್ನೇ ಉದ್ಧಾರಮಾಡಬೇಕೆಂತ ನಮ್ಮ ಆಶೆ ಇದೆ.

ಬ್ರಿಟಿಷ್ ಕಾಮನ್‌ವೆಲ್ತ್ ಎಂಬ ಸಾಮ್ರಾಜ್ಯದೊಳಗೆ ಮನಃಪೂರ್ತಿಯಾಗಿ ಸೇರಿಕೊಂಡ ಹಿಸ್ಸೆದಾರನನ್ನಾಗಿ ಇಂಡಿಯಾವನ್ನು ಇಟ್ಟುಕೊಳ್ಳಬೇಕೆಂತ ನಂಸ ಆಶೆ ನಮ್ಮ ಸಂಗಡ ಇಂಡಿಯಾ ದೇಶವು ಇರುವದಾದರೆ ಇಂ ಡಿಯಾದವರು ಮನಃಪೂರ್ತಿ ಒಪ್ಪಿ ಇರಬೇಕು. ನಾ ವು ಎರಡು ಜನಾಂಗದವರು ಸೇರಿದರೆ ಈಗಿನ ನಾಗರೀಕ ತೆಗಿಂತ ಉತ್ತಮವಾದ ನಾಗರೀಕತೆಯನ್ನು ಉಂಟುಮಾ ಡಬಹುದೆಂತ ನಾನು ನಂಬಿದ್ದೇನೆ. ಅದರ ನಮ್ಮ ಮಾ ಬುವಂತೀಗೆ ಸಮಾನ ಹಕ್ಕಿನವಾಗಿಂಬೇಕು.

ಉಪ್ಪಿನ ಸುಂಕದ ಚರ್ಚೆಯ ... ... ವ್ ಮತ್ತು ... ... ಗೊತ್ತಾಯಿತು. ಇಂಡಿಯಾಕ್ಕೆ ಕ್ಷೇಮ ಯಾವುದೆಂಬು ದು ಇಂಡಿಯಾದವರಿಗಿಂತಲೂ ತಮಗೆ ಗೊತ್ತೆಂತ ಭಾವಿ ಸಿದ್ದಾರೆ. ಅಲ್ಲಿ ನಾವು ಅಂದರೆ ಕಾರ್ಮಿಕರ ಪಕ್ಷ ದವರು ರಾಜ್ಯವಾಳಲಿಕ್ಕೆ ಅನರ್ಹರೆಂತ ಭಾವಿಸು ರುವರು ಹೀಗೆಯೇ. ಟೋರಿ (ಕನ್‌ಸರ್ವೆಟಿವ್) ಪಾರ್ಟಿ ಯವರು ಇಂಥಾ ಅಭಿಪ್ರಾಯವನ್ನು ಬಿಟ್ಟುಬಿಡ, ಏಕು ಇಂಡಿಯಾದವರ ಮಾತಿನಲ್ಲಿ ಮಾತ್ರವಲ್ಲ ಕಾರ್ಯತಃ ಸಹೋದರರೆಂತಲೇ ನಾವು ಎಣಿಸಬೇಕು. ಇಂಡಿ ಯಾದಲ್ಲಿ ಕೆಲವರು ಮಾತ್ರ ರಾಜ್ಯವಾಳಲಿಕ್ಕೆ ಅರ್ಹ ರೆಂತ ಹೇಳುತ್ತಾರೆ. ಅವರೆ ಅದೇ ಮಾತನ್ನು ಇಲ್ಲಿ ಯೂ ಹೇಳುತ್ತಾರೆ. ಒಂದೇ ಮ್ಯಗಜಿನಿಂದ ಬಯಸು ಲ್ಪಟ್ಟ ಜನಾಂಗವು ನಮ್ಮ ಸ್ವಾಧೀನದಲ್ಲಿದ್ದರೆಂತ ಊಹಿಸುವ ಅವರಿಗೆ ಅವರ ಸ್ವಾತಂತ್ರ್ಯವನ್ನು ಪುನಃ ಕೊಟ್ಟು ಅವರ ರಾಷ್ಟ್ರೀಯ ಜೀವನದ ಬೆಳವಣಿಗೆಗೆ ಸಹಾಯಮಾಡಬೇಕಾದದು ನಮ್ಮ ಕರ್ತವ್ಯವಾಗಿದೆ. ಹೀ ಗೆ ಮಾಡಿದರೆ ಆ ಡಿಯಾ ಮಿತ್ರತ್ವವು ನಮಗೂ ಒಟ್ಟು ಪ್ರಪಂಚಕ್ಕೂ ಶಾಂತಿಯನ್ನು ಉಂಟುಮಾಡು ಯುತ್ತೇವೆ.

ಉಡಿಕವು

ಮದ್ಯಪಾನವನ್ನು ಸೇವಿಸುವುದು ದೇಹಕ್ಕೆ ಹಾನಿಕರ ವೆಂದೂ, ವಿದ್ಯೆಯು ಕೆಟ್ಟು ಹೋಗುವುದೆಂದೂ ಮುಂತಾಗಿ ಗತವರ್ಷದಲ್ಲಿ 'ಕೊಡಗು' ಪತ್ರಿಕೆಯು ಹೊರಡಿಸುತ್ತಿತ್ತು. ಕೊಡಗು, ಮದ್ಯವನ್ನು ಎಷ್ಟೇ ನಿಷೇಧಿಸಿ ಬರೆದಾಗ್ಯೂ, ಮದ್ಯ ಸೇವನೆಯು ಕಡಿಮೆಯಾಗದಿದ್ದ ಮಾತ್ರಕ್ಕೆ ಆ ಪ್ರಯ ತ್ನವನ್ನು ನಿಲ್ಲಿಸಲಾಗುವುದಿಲ್ಲ. ಸರ್ವ ಸಾಧಾರಣವಾಗಿ ಪ್ರಪಂಚದ ಇತರ ಭಾಗಗಳಲ್ಲೆಲ್ಲಾ ಮದ್ಯಪಾನವು ಬಹಳ ವಾಗಿ ನಿಲ್ಲಿಸಲ್ಪಟ್ಟಿದೆಯಾದರೂ ನಮ್ಮ ಕೊಡಗಿನಲ್ಲಿ ಮಾತ್ರ ಮದ್ಯವನ್ನು ಬಾಯಲ್ಲಿ ನಿಷೇಧಿಸಿದರೂ ಸೇವನೆಯೇನೂ ಕಡಿಮೆ ಯಾಗದಿರುವುದು ಶೋಚನೀಯವೇ ಸರಿ. ಕುಡಿತ ದಿಂದುಂಟಾಗುವ ದುರ್ದಶೆ, ಸ್ಮೃತಿತಪ್ಪುವುದು ಮುಂತಾ ದ ಹಾನಿಗಳನ್ನು ಜನಸಾಮಾನ್ಯವು ಅರಿತಿದೆ. ಆದರೆ ಈಗ ಶಿಲ್ಪಶಾಸ್ತ್ರಗಳನ್ನು ಎತ್ತಿ ತೆಗೆದು ಮದ್ಯಪಾನವು ಎಂತಹ ಘೋರವಾದ ಪಾಪಕೃತ್ಯವೆಂದು ನಮ್ಮ ವಾಚಕ ವೃಂದಕ್ಕೆ ತಿಳಿಸಲು ನಮಗೆ ಸಂತೋಷ ವುಂಟಾಗುತ್ತದೆ. ಇನ್ನೇ ಅಲ್ಲ ಪಾಪ ... ವನ್ನರಿತು ಪಾನಮಾಡಲು ಹೆದರಿ ಕುಡಿತವನ್ನು ನಿಲ್ಲಿಸಿದರೆ ಇನ್ನೂ ಪರಮಾನಂದವೇ ಉಂಟಾಗುವುದರಲ್ಲಿ ಸಂದೇಹವಿಲ್ಲ.

("ಸೀಮಂತಿನಿಯಿಂದ")

"ಮದ್ಯಮ ಪೇಯಮದೇಯಮ ಗ್ರಾಹ್ಯಂ"

ಮದ್ಯವು ಪಾನಕ್ಕೂ ದಾನಕ್ಕೂ ಸ್ವರ ಇತರರಿಗೆ ಕೊ ಡಲ್ಪಡುವುದಕ್ಕೂ ಇತರರಿಂದ ಸ್ವೀಕರಿಸಲ್ಪಡುವುದಕ್ಕೂ ಯೋಗ್ಯವಾದುದಲ್ಲ. ಸ್ಮೃತಿಗಳಲ್ಲಿ ಅನೇಕ ಇದೇಪ್ರಕಾರ ದ ನಿಷೇಧ ನಿಯಮಗಳಿವೆ. ಇವುಗಳಲ್ಲಿ ಸಾಧಾರಣವಾಗಿ ಮದ್ಯ ಪಾನವು ಪಂಚಮಹಾ ಪಾತಕಗಳಲ್ಲಿ ಒಂದಾಗಿದೆ ಎಂದು ಶುಕ್ರಾಚಾರ್ಯರು ನಿಶ್ಚಯಿಸಿ

ಯೋಬ್ರಾಹ್ಮಣೋದ್ಯ ಪ್ರಭೃತೀ ಕಶ್ಚಿನ್ಮೋಹಾ ತ್ಸುರಾಂ ಪಾಸ್ಯತಿ ಮಂದಬುದ್ಧಿಃ ಅಪೇತ ಧರ್ಮಾ ಬ್ರ ಹ್ಮಹಾಚೈವ ಸಸ್ಯಾದಸ್ಮಿನ್ ಲೋಕೇಗರ್ಹಿತಃ ಸ್ಯಾತ್ಪರೇ ಚ || ಮಯಾಚೈತಾಂ ವಿಪ್ರಧರ್ಮೋಕ್ತಿಸೀಮಾಂ ಮರ್ಯಾದಾಂವೈ ಸ್ಥಾಪಿತಾಂ ಸರ್ವಲೋಕೇ। ಸಂತೋಪಿ ಪ್ರಾ ... ... ದೇವಾ ಲೋಕಾಶ್ಚ ಶ್ರುಣ್ವಂತು ಸರ್ವೇ ||

ವೇದ ಶಾಸ್ತ್ರಗಳ ನಿಯಮಗಳಿಗೆ ವಿಧೇಯರಾಗಿ ನಡೆ ದುಕೊಳ್ಳುವ ಬ್ರಾಹ್ಮಣ ಕ್ಷತ್ರಿಯ ವೈಶ್ಯರುಗಳು ಯಾರಾದರೂ ಮೂರ್ಖತನದಿಂದ ಮದ್ಯಪಾನವನ್ನು ಮಾಡುವರೋ ಅವ ರು ಧರ್ಮಾನು ವರ್ತನೆಯಿಂದ ಹಳಸಿದ ಬ್ರಹ್ಮವೆನ್ನಿಸಿವನ್ನು ಕಳೆದುಕೊಳ್ಳುವರು. ಆ ದುರಾತ್ಮರು ಬ್ರಹ್ಮ ಹತ್ಯಾಪಾತಕದ ಅಪರಾಧಿಗಳಾಗಿ ಇಹಪರಗಳಲ್ಲೂ ಬಹಿಷ್ಕೃತರಾಗುವರು ... ಧರ್ಮ ಪರಾಯಣರಿಂದ ಬ್ರಹ್ಮ ಕ್ಷತ್ರಿಯ, ವೈಶ್ಯ ರುಗಳು ತಮ್ಮ ತಮ್ಮ ಗುರುದೇವತೆಗಳು ಇದೆಗೂ ಸಕಲರ ಕಡೆಗೂ ಯಾವ ಧರ್ಮದಲ್ಲಿ ನಡೆದುಕೊಳ್ಳಬೇಕೋ ಆ ಧ ರ್ಮದಲ್ಲಿ ಅಣ್ಣಯಿಟ್ಟು ಈ ವಿಶ್ವದಲ್ಲಿ ಸರ್ವತ್ರ ಜನಗಳೂ ಇವರ ನಡೆವಳಿಕೆಗೋಸ್ಕರ ಪ್ರಚುರಪಡಿಸಿದ ಈ ನಿಯಮ ವನ್ನು ಅನುಸರಿಸಿ ನಡೆದುಕೊಳ್ಳಲಿ ಎಂದು ವಿಧಿಸಿರುವರು ಇದಲ್ಲದೆ:-

"ಸುರಾಪಾನೆ ಬ್ರಾಹ್ಮಣೋ ರಾಜ್ಯನ್ಯಾಮ್ಸ ನೀಸ ಕಾಮತಸ್ತತ ವಹ್ನಿಕಲ್ಪಂ ಪೀತ್ವಾ ಶರೀರಂತ್ಯಾಗ ತಾತ್ಪ್ರ ಯತೇ"

ಈ ಮೂರು ಮತದವರು, ಸುರಾಪಾನ ಮಾಡಿದರೆ ಬೆಳ್ಳಿ, ತಾಮ್ರ ಅಥವಾ ಸೀಸವನ್ನು ಕರಗಿಸಿ ಕುಡಿದು ಶರೀರತ್ಯಾಗ ಮಾಡಬೇಕು. ಎಂದು ದೇವಲ ಋಷಿಗಳ ವಿಧಿಸಿವಾದ ನಿಯಮವಿದೆ. ಮದ್ಯಪಾನವೇ ಅಲ್ಲ ಮದ್ಯ ಘಟದಲ್ಲಿದ್ದ ನೀರನ್ನಾದರೂ ಕುಡಿಯುವುದು. ನಿಷಿದ್ಧವು ಕೂಡದರೆ,

"ಮದ್ಯ ಭಾಂಡಸ್ಥಿತಂ ತೋಯಂ ಯದಿಕಶ್ಚಿತ್ ಪಿಬೇದ್ದ್ವಿಜಃ ಪದ್ಮೋದುಂಬರ ಬಿಲ್ವಾನಾಂ ಪಲಾಶಸ್ಯ ಕುಶಸ್ಯ ಚ ! ಏತೇಷಾಮುದಕಂ ಪೀತ್ವಾ ತ್ರಿರಾತ್ರೇಣ ವಿಶು ದ್ಧತಿ ||"

ಪದ್ಮ, ಔದುಂಬರ, ಬಿಲ್ವ, ಪಾಲಾಶ, ಕುಶ ಈ ಐದು ಪತ್ರಿಗಳ ನೀರನ್ನು ಮೂರು ರಾತ್ರಿ ಕುಡಿದು ದೇಹ ಶುದ್ಧಿ ಯನ್ನು ಮಾಡಿಕೊಳ್ಳಬೇಕು. ಈ ಪ್ರಕಾರವಾದ ಪ್ರಾಯ ಶ್ಚಿತ್ತವು ವಿಧಿಸಲ್ಪಟ್ಟಿದೆ. ಶ್ರುತಿ ಸ್ಮೃತಿ ಪುರಾಣಗಳಲ್ಲಿ ಇನ್ನೂ ಅನೇಕ ನಿಷೇಧನಿಯಮಗಳಿವೆ. ಆದರೆ ಈಗ ಎತ್ತಿ ತೋರಿಸಲ್ಪಟ್ಟವುಗಳಿಂ ತಮ್ಮತಮ್ಮ ದುರ್ದಶೆಗಳನ್ನು ತಿದ್ದಿ ಕೊಳ್ಳಲು ಸಾಕಾಗಿವೆ. ಆದುದರಿಂದ ಈ ನಿಯಮಗಳನ್ನು ಉಲ್ಲಂಘಿಸಿ ಯಾವನೊಬ್ಬ ಬ್ರಾಹ್ಮಣ, ಕ್ಷತ್ರಿಯ ಅಥವಾ ವೈಶ್ಯನು ಮದ್ಯಪಾನ ಮಾಡಿದರೆ ಅದು ಪಾಪಕೃತ್ಯ ಮತ್ತು ದುರ್ದಶೆ ಎಂದೇ ನಿರ್ಣಯವು.

ವರ್ತಮಾನ ಸಂಗ್ರಹ.

ಒಳದೇಶ.

ಉತ್ತರ ಕೊಡಗಿನ ಡಿ. ಪಿ. ಡಬ್ಲು ಇಲಾಖೆಯ ಸಬ್ ಡಿವಿಜನಲ್ ಆಫೀಸರಾಗಿದ್ದ ಮೆ|| ಶಿಂಬ್ರಿಯವರು ಪ್ರೋಶಿಫ್ ಪೆನ್ಶನ್ ಸಮೇತ ಈ ತಾ|| 20 ರಲ್ಲಿ ರಿಟಯರ್ ಆದರು. ಅದರ ಹುದ್ದೆಗೆ ಮೆ|| ಹೇಗ್ ಎಂಬವರು ಬಂದಿರುವರು. ಮೆ|| ಶಿಂಬ್ರಿಯವರು ತಾ|| 23 ರಲ್ಲು ಮಡಿಕೇರಿಯನ್ನು ಬಿಟ್ಟರು. 26 ವರ್ಷಗಳಿಂದ ಕೊಡಗಿನಲ್ಲಿ ಉದ್ಯೋಗವಮಾಡಿದ ಮೆ|| ಶಿಂಬ್ರಿಯವರು ಜನರ ಪ್ರೀತಿಗೆ ಪಾತ್ರರಾಗಿದ್ದುದರಿಂದ ಕೊಡಗನ್ನು ಬಿಡಲು ಅವರಿಗೆ ಬಹಳ ದುಃಖವುಂಟಾದದ್ದು ಮಾತ್ರವಲ್ಲ ಜನರಿಗೂ ಸಹ ಅವರ ಅಗಲುವಿಕೆಯಿಂದ ವ್ಯಸನವುಂಟಾಗಿದೆ.

ನಂಬರು ಡಿ/7 02622 ಮದ್ರಾಸು ಸರ್ಕಲಿನ ನೂರು ರೂಪಾಯಿಯ ಒಂದು ಕರೆನ್ಸಿ ನೋಟು ಕಳೆಯಲ್ಪಟ್ಟಿದೆಯಾ, ಕಾಣದೆ ಹೋಗಿದೆ ಅದನ್ನು ಕಂಡು ಹಿಡಿದವರಿಗೆ ಮೆ|| ಸಾಗರಕ್ಷಪಿಳ್ಳೆ ಬಿ.ಎ., ಬಿ.ಎಲ್. ರವರು ತಕ್ಕದಾದ ಇನಾಮನ್ನು ಕೊಡುವರೆಂದು ಪೋಲೀಸು ಇಲಾಖೆಯವರು ನಮಗೆ ತಿಳಿಸಿರುವರು

ಗೋಣಿಕೊಪ್ಪಲು ಅಮ್ಮತ್ತಿ ಮತ್ತು ನಾಪೋಕ್ಲು, ಈ ಮೂರು ಸ್ಥಳಗಳಲ್ಲಿದ್ದ ಸಬ್ ಪೋಸ್ಟಾಫೀಸುಗಳನ್ನು ಬ್ರಾಂಚ್ ಪೋಸ್ಟಾಫೀಸುಗಳಾಗಿ ಮಾಡಿರುವುದರಿಂದ ಸುತ್ತುಮುತ್ತಲಿನ ಜನರಿಗೆ ಟಪ್ಪಾಲಿನ ವಿಷಯದಲ್ಲಿ ಬಹಳ ತೊಂದರೆಯಾಗಿದೆಯೆಂದು ಜನರ ಕೂಗು; ನಮ್ಮ ಪತ್ರಿಕೆಯೂ ಚಂದಾದಾರರಿಗೆ ಸರಿಯಾಗಿ ಬಟವಾಡೆಯಾಗುವುದಿಲ್ಲವೆಂದು ಅನೇಕರ ದೂರು.

ತಾ|| 18 ರಲ್ಲು ನಡೆಯಬೇಕಾಗಿದ್ದ "ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ಕೋರಂ ಇಲ್ಲದ್ದರಿಂದ ಬಾಕಿಯಾಯಿತು. ಅದೇ ಮೀಟಿಂಗು ತಾ|| 25 ರಲ್ಲಿ ಮಡಿಕೇರಿಯಲ್ಲಿ ನಡೆಯಲಿಕ್ಕಿದೆ

ಮಡಿಕೇರಿ ಹೈಸ್ಕೂಲು ನಾಟಿ ಕೆಲಸದ ರಜೆಕ್ಕಾಗಿ ಈ ತಾ|| 21 ರಿಂದ ಆಗೊಸ್ತು ತಾ|| 12 ರವರೆಗೆ ಮುಚ್ಚಲ್ಪಟ್ಟಿದೆ. ಆದರೆ ವೀರರಾಜಪೇಟೆ ಹೈಸ್ಕೂಲಿನವರು ತಾ|| 28 ರಿಂದ ರಜೆ ಬಿಡುವರಂತೆ ಇದೀಗ ಈ ವರ್ಷದ ನಾಟಿ ಕೆಲಸದ ರಜೆಗೆ ತಕ್ಕದಾದ ಸಮಯ.

ಮೊದಲು ಎರಡಾವರ್ತಿ ಕಳವಿಗೆ ಸಜ ಆಗಿದ್ದ ಬಿಕ್ಕಲಿಗರ ಭೀಮ ಎಂಬವನು ಮಡಿಕೇರಿಯಲ್ಲಿ ಮೆ|| ಮಾರ್ಗನ್ ಸಾಹೇಬರ ಬಂಗ್ಲೆಯಲ್ಲಿ ಕೆಲಸಮಾಡುತ್ತಿದ್ದಾಗ ನೂರು ರೂಪಾಯಿಯ ಒಂದು ಕರೆನ್ಸಿ ನೋಟನ್ನು ಕಳವುಮಾಡಿದಕ್ಕೆ ಅವನಿಗೆ ಒಂದು ವರ್ಷ ಸಜವೂ, ಮುನ್ನೂರು ರೂ ಜುಲುಮಾನೆಯೂ ಸಹ ಸಬ್‌ಜಡ್ಜಿಯವರ ಕೋರ್ಟಿನಲ್ಲಿ ವಿಧಿಸಲ್ಪಟ್ಟಿದೆ.

17 ನೇ ಗಾಂಧೀ ದಿನವೂ ಅಖಿಲಭಾರತ ರಾಷ್ಟ್ರೀಯದಿನವೂ ಆದ ಈ ತಾ|| 18 ನೇ ದಿನ ವೀರರಾಜಪೇಟೆಯಲ್ಲಿ ಕಾಗದದಿಂದ ಮಾಡಿದ ರಾಷ್ಟ್ರೀಯ ಬಾವುಟವು ಅಲ್ಲಲ್ಲಿ ಹಾರಿಸಲ್ಪಟ್ಟಿತ್ತು.

ಸಬ್‌ಜಡ್ಜಿಯವರ ಕೋರ್ಟಿನಲ್ಲಿ ಕಾಳುಯಾನೆ ಮೂಸ ಎಂಬ ಹೊಲೆಯನು ಬೆಳ್ಳುಮಾಡಿನಲ್ಲಿ ಬಬ್ಬ ಅಗಸನ ಮನೆಯಿಂದ ಒಂದು ಉಪ್ಪುಕ ಕದ್ದುದಕ್ಕಾಗಿ ಅವನಿಗೆ 18 ತಿಂಗಳು ಕಠಿಣ ಸಜೆ ವಿಧಿಸಲ್ಪಟ್ಟಿದೆ ಅವನಿಗೆ ಇದಕ್ಕೆ ಮೊದಲು ಕಳವಿನಲ್ಲಿ ನಾಲ್ಕು ಸಾರಿ ಸಜೆ ಆಗಿದೆ

ಕಳೆದವಾರ ಮಡಿಕೇರಿಯಲ್ಲಿ ಮಳೆಯು ಜೋರಾಗಿತ್ತು ಮಳೆಗಿಂತ ಗಾಳಿಯ ರಭಸವು ಜೋರಾಗಿತ್ತು. ದೇಶದಲ್ಲೆಲ್ಲಾ ಮಳೆಯು ಸರಿಯಾಗಿ ನಡೆಯುತ್ತೆಂದು ತಿಳಿಯುತ್ತೇವೆ ಆದರೂ ಈ ವರ್ಷ ಹುಚ್ಚುವಾಗಿ ಕಿಗ್ಗಟ್ಟುನಾಡು ತಾಲೋಕು ಕಡೆ ಆರಂಭವಾಗಿದೆ ಹೇಳಬೇಕು. ಮಡಿಕೇರಿಯಲ್ಲಿ ತಾ|| 23 ರವರೆಗೆ ಒಟ್ಟು ಮಳೆ 76.11 ಇಂಚು; ಕಳೆದವಾರದ ಮಳೆ 11 21 ಇಂಚು; ತಾ|| 20 ರಲ್ಲು 6 75 ಇಂಚು ಮಳೆಯಾಗಿದೆ.

ರಿಟೆಯರ್ ಆಗಿ ಹೋಗುವ ಸಂದರ್ಭದಲ್ಲಿ ಡಿ. ಪಿ. ಡಬ್ಲ್ಯು ಇಲಾಖೆಯವರು ಮೆ|| ಶಿಂಬ್ರಿಯವರಿಗೆ ತಾ|| ೨೦ ರಲ್ಲು ಮಡಿಕೇರಿಯ ಬೋರ್ಡ್ ಬಂಗ್ಲೆಯಲ್ಲಿ ಒಂದು ಭಂಗಾರದ ಕೈಗಡಿಯಾರ ಮತ್ತು ಒಂದು ಪೀಠಿಕೆತ್ರಿಯೊಂದಿಗೆ ಒಂದು ಅಡ್ರೆಸ್ಸನ್ನು ಕೊಟ್ಟು ತಿಂಡಿತೀರ್ಥಗಳನ್ನು ಸ್ವೀಕರಿಸಿದರು. ಆದರೆ ಅಲ್ಲಿಗೆ ಆ ಇಲಾಖೆಯವರಿಗಲ್ಲದೆ ಬೇರೆ ಯಾರಿಗೂ ಆಮಂತ್ರಣ ವಿಲ್ಲದಿದ್ದರೂ ಸಿಪಾಯಿಗೆ ಸ್ವಾಗತವಿತ್ತಂತೆ !.

ಈ ತಾ|| ೨೧ ರಲ್ಲು ನಾಪೋಕ್ಲು ನಾಡು ನೆಲಜಿ ಗ್ರಾಮದ ಬಾಳೆಯಡ ದೇವಯ್ಯನವರ ದನಗಳ ಕೊಟ್ಟಿಗೆಯಲ್ಲಿ ಮಳೆ ಚಳಿಗಾಗಿ ಬೆಂಕಿ ಹಾಕಿ, ರಾತ್ರಿ ಬೆಂಕಿಯನ್ನೆಲ್ಲಾ ಆರಿಸಿ ಕೊಳ್ಳಿಗಳನ್ನು ಕೊಟ್ಟಿಗೆಯ ಬೇಲಿಯಲ್ಲಿ ಸಿಕ್ಕಿಸಿ ಇಟ್ಟು ಹೋದ ನಂತರ ಆ ರಾತ್ರಿ ಆ ಕೊಳ್ಳಿಯಲ್ಲಿದ್ದ ಬೆಂಕಿಯು ಹೊತ್ತಿಕೊಂಡು ಕೊಟ್ಟಿಗೆಯು ಸುಟ್ಟು ಹೋಗಿ ಮೂರು ರಾಸುಗಳು ಕೊಟ್ಟಿಗೆಯಲ್ಲಿಯೇ ಸತ್ತಿದ್ದವೆಂತಲೂ, ಬಾಕಿ ಉಳಿದ ಸುಮಾರು ೧೫ ರಾಸುಗಳಿಗೆ ಮೈಯೆಲ್ಲಾ ಸುಟ್ಟು ಹೋಗಿದೆಯೆಂತಲೂ ವರ್ತಮಾನ ಬಂದಿದೆ.

ತಾ|| 22 ರಲ್ಲಿ ವೀರರಾಜಪೇಟೆಯಲ್ಲಿ ಜಮೀನುದಾರರ ಸಂಘದ ಎಗ್ಸಿಕ್ಯುಟಿವ್ ಕಮಿಟಿ ಮೀಟಿಂಗು ನಡೆಯಿತು. ಅದರ ವಿವರವನ್ನು ಬರುವವಾರ ಪ್ರಕಟಿಸುವೆವು

ಈ ತಾ|| ೧೯ ರಲ್ಲು ಕೊಡಗಿನ ಯೂರೋಪಿಯನ್ ಪ್ಲಾಂಟರುಗಳೂ ಮಡಿಕೇರಿಯ ಕೆಲವು ಮಹನೀಯರೂ ಸೇರಿ ಮಡಿಕೇರಿ ಡಿಸ್ಟ್ರಿಕ್ಟ್ ಪ್ರೆಸ್ಸ್ ಹಾಲಿನಲ್ಲಿ ಕಮಿಶನರವರ ಅಧ್ಯಕ್ಷತೆಯಲ್ಲಿ ಮೆ|| ಶಿಂಬ್ರಿಯವರಿಗೆ ಒಂದು ಟೀ ಪಾರ್ಟಿಯನ್ನು ಕೊಟ್ಟರು.

ಹಿಂದೂದೇಶ

ಮಧುರದಲ್ಲಿ ಸಾರಾಯಿ ಮತ್ತು ಸೇಂದಿ ಅಂಗಡಿಗಳ ಪಿಕೆಟಿಂಗ್ ಶಾಂತವಾಗಿ ನಡೆಯುತ್ತಿದೆ. ತಾ|| 19 ರ ವರೆಗೆ ಪಿಕೆಟ್ ಮಾಡುತ್ತಿದ್ದ ನೂರು ಸ್ವಯಂ ಸೇವಕರು ಸೆರೆ ಹಿಡಿಯಲ್ಪಟ್ಟಿರುವರು. ಇವರ ಪೈಕಿ 38 ಜನರು ವಿಚಾರಕ್ಕಾಗಿ ರಿಮೇಂಡಿನಲ್ಲಿಡಲ್ಪಟ್ಟಿರುವರು.

ಅಖಿಲಭಾರತ ರಾಷ್ಟ್ರೀಯ ಧ್ವಜದ ದಿನವೂ, ೧೭ ನೇ ಗಾಂಧೀ ದಿನವೂ ಆದ ತಾ|| ೧೮ ನೇ ದಿನವನ್ನು ಹಿಂದೂ ದೇಶದ ಎಲ್ಲಾ ಪಟ್ಟಣಗಳೂ ವಿಶೇಷ ದಿನವಾಗಿ ಆಚರಿಸಿರುವವು ಮನೆಗಳಲ್ಲಿಯೂ ಅಂಗಡಿಗಳಲ್ಲಿಯೂ ಖಾದಿಯ ಬಟ್ಟೆಯಿಂದ ಅಥವಾ ಕಾಗದದಿಂದ ಮಾಡಿದ ರಾಷ್ಟ್ರೀಯ ಬಾವುಟಗಳನ್ನು ಹಾರಿಸಿದಲ್ಲದೆ ಅವುಗಳೊಂದಿಗೆ ಸಾವಿರಾರು ಜನರು ಸೇರಿ ಮೆರವಣಿಗೆಗಳನ್ನು ಮಾಡಿದರು ಅನೇಕ ಕಡೆಗಳಲ್ಲಿ ಮೀಟಿಂಗು ಮಾಡಿ ಮುಂದಾಳುಗಳು ರಾಷ್ಟ್ರೀಯ ಧ್ವಜದ ಪ್ರಾಮುಖ್ಯತೆಯ ವಿಷಯ ಭಾಷಣ ಮಾಡಿದರು.

ಆಲ್ ಇಂಡಿಯ ಕಾಂಗ್ರೆಸ್ ಕಮಿಟಿಯ ಮೀಟಿಂಗು ಆಗೊಸ್ತು ೩ ರಲ್ಲಿ ವಿಜಾಗ ಪಟ್ಣದಲ್ಲಿ ನಡೆಯುವುದು

ತುರ್ಕಿಯವರಿಗೂ ವಿತ್ರಮಂಲಿಯವರಿಗೂ ನಡೆಯುತ್ತಿದ್ದ ಸಂಧಿಯ ಶರತ್ತುಗಳೆಲ್ಲವೂ ಎರಡು ಕಡೆಗೂ ಒಪ್ಪಿಗೆಯಾದುದರಿಂದ ಉಂಟಾಗಿರುವ ಸಂತೋಷವನ್ನು ಸೂಚಿಸುವುದಕ್ಕಾಗಿ ಹಿಂದೂ ದೇಶದ ಎಲ್ಲಾ ಭಾಗದಲ್ಲಿಯೂ ಹಿಂದೂಗಳೂ, ಮುಸಲ್ಮಾನರೂ ಪಾರ್ಶಿಗಳೂ, ಕ್ರೈಸ್ತರೂ ಎಲ್ಲಾ ಪಂಗಡದವರೂ ಸೇರಿ ಒಕ್ರಿದಾ ದಿನವಾದ ತಾ|| ೩೧ ನೇ ದಿನದಲ್ಲಿ ಎಲ್ಲರೂ ದೇವರಿಗೆ ಪ್ರಾರ್ಥನೆಯನ್ನು ಅರ್ಪಿಸಿ ಮರುದಿನ ರಾಷ್ಟ್ರೀಯ ಧ್ವಜಗಳ ಸಮೇತ ಮೆರವಣಿಗೆಯನ್ನು ಮಾಡಿ ಅಲ್ಲಲ್ಲಿ ಮೀಟಿಂಗು ಮಾಡಬೇಕೆಂದೂ ಡಾಕ್ಟರ ಅನ್ಸಾರಿ, ಸಿ. ಆರ್. ದಾಸ್, ಸಿ ರಾಜಗೋಪಾಲಚಾರಿ ಮೊದಲಾದ ಸುಮಾರು ೧೫೦ ಮುಂದಾಳುಗಳು ರುಜು ಮಾಡಿ ದೇಶದವರಿಗೆ ಒಂದು ಅಪ್ಪೀಲು ಮಾಡಿರುವರು.

ಮಧುರ ಪಟ್ಣದ ಹಜಾಮರೂ, ದರ್ಜಿಗಳೂ ಪಂಚಾಯ್ತಿಯನ್ನು ಮಾಡಿ ಕೊಂಡು ಅವರೊಳಗೆ ಅಮಲು ಪದಾರ್ಥವನ್ನು ಸೇವಿಸುವವರನ್ನು ಬಹಿಷ್ಕಾರ ಹಾಕುವಂತೆ ನಿರ್ಧಾರ ಮಾಡಿಕೊಂಡಿರುವುದಲ್ಲದೆ, ಅವರೆಲ್ಲರೂ ಖಾದಿ ಬಟ್ಟೆಯನ್ನೇ ಧರಿಸಬೇಕೆಂತಲೂ, ತಮ್ಮವರಲ್ಲಿ ಕೆಲವರು ಕಾಂಗ್ರೆಸ್ ಸ್ವಯಂಸೇವಕರಾಗಿ ಸೇರಿ ಸಾರಾಯಿ ಸೇಂದಿ ಅಂಗಡಿ ಪಿಕೆಟಿಂಗಿಗೆ ಹೋಗಬೇಕೆಂತಲೂ ನಿರ್ಧರಿಸಿಕೊಂಡಿರುವರು.

ರಾಷ್ಟ್ರೀಯ ಧ್ವಜದ ದಿನ ನಾಗಪುರದಲ್ಲಿ ೪೮ ವಾಲಂಟೀಯರುಗಳನ್ನು ಸೆರೆಹಿಡಿದದಲ್ಲದೆ ರೈಲ್ವೆ ಸ್ಟೇಶನಿನಲ್ಲಿ ೩೨ ಜನರನ್ನು ಕೈದುಮಾಡಿದರು.

ಈ ತಿಂಗಳ ಎರಡನೇ ವಾರದಲ್ಲಿ ಹೊಡೆದ ವಿಪರೀತ ಮಳೆಯಿಂದ ಉಡುಪಿ ತಾಲೋಕಿನ ಹೊಳೆಗಳು ನೆರೆಯಿಂದ ತುಂಬಿ ಅವುಗಳ ದಡಗಳಲ್ಲಿದ್ದ ಸಾವಿರಾರು ಮನೆಗಳು ನಾಶವಾದುವು; ನೂರಾರು ಜಾನುವಾರುಗಳು ತೇಲಿಹೋದುವು ಸುಮಾರು ೩೦೦೦ ಮನೆಗಳ ನಾಶವಾಗಿರಬಹುದೆಂದೂ. ಸುಮಾರು ೧೦ ಸಾವಿರ ಮನೆಗಳಿದ್ದೆಡೆಯೂ ಬಟ್ಟೆ ಆಹಾರಗಳಿಲ್ಲದೆಯೂ ನರಳುತ್ತಿರುವರೆಂದೂ ಅಂದಾಜು ಮಾಡಲ್ಪಟ್ಟಿದೆ ಮುಖ್ಯವಾಗಿ ಉದ್ಯಾವರ ಮಟ್ಟಿ, ಕೋಸ್ಟೆ. ಉಪ್ಪೂರು, ಬಾರಕೂರು, ಬೆಣ್ಣೆಕುದುರೆ, ಪುತ್ತಿಗೆ, ಮುಹಾಯಿ—ಮುಂತಾದ ಕಡೆಗಳಲ್ಲಿ ವಿಶೇಷ ನಷ್ಟ ಸಂಭವಿಸಿದೆ ಎಂದು ತಿಳಿಯಬರುತ್ತದೆ ಇದಕ್ಕೆ ಸಹಾಯಾರ್ಥವಾಗಿ ಒಂದು ಅಪ್ಪೀಲನ್ನು ಇನ್ನೊಂದು ಕಡೆ ಪ್ರಕಟಿಸಿರುವೆವು

ತಾ|| ೧೭ ರಲ್ಲು ಸಿಮ್ಲದಲ್ಲಿ ನಡೆದ ಲೆಜಿಸ್ಲೇಟಿವ್ ಎಸೆಂಬ್ಲಿಯ ಮೀಟಿಂಗಿನಲ್ಲಿ ಇಂಡಿಯಾ ಸರಕಾರದವರು ಸಿಮ್ಲಾದ ಎಲೈಯನ್ಸ್ ಬ್ಯಾಂಕಿನ ಕೇಸಿಗೆ ಕೈಹಾಕಿದ್ದು ನ್ಯಾಯವಲ್ಲ" ವೆಂಬ ಸರ್ ಶಿವಸ್ವಾಮಿಯವರ ಠರಾವು ೩೯ ಓಟುಗಳಿಗೆ ವಿರೋಧವಾಗಿ ೪೮ ಓಟುಗಳಿಂದ ಪಾಸಾಯಿತು.

ಲೆಫ್ಟಿನೆಂಟ್ ಕರ್ನಲ್ ಲೆಸ್ಲಿ ವಿಲ್ಸನ್‌ರವರು ಸರ್ ಜಾರ್ಜ್ ಲಾಯಿಡ್‌ರವರ ನಂತರ ಬೊಂಬಾಯಿ ಪ್ರಾಂತ್ಯದ ಗವರ್ನರ್ ಆಗುವರೆಂದು ಲಂಡನಿನ "ಡೈಲಿಟೆಲಿಗ್ರಾಫ್" ಪತ್ರಿಕೆಯು ಸೂಚಿಸುತ್ತದೆ.

ತಾ|| ೧೫ ನೇ ರಾತ್ರಿ ೧೦ ಗಂಟೆಗೆ ಲಕ್ನದಲ್ಲಿ ಬಬ್ಬ ವೈಸ್ ವ್ಯಾಪಾರಿಯು ಸಾವಿರ ರೂಪಾಯಿಗಳನ್ನು ಅಂಗಡಿಯಿಂದ ತನ್ನ ಮನೆಗೆ ತೆಗೆದುಕೊಂಡು ಹೋಗುತ್ತಿರುವಾಗ್ಯೆ ಅವನನ್ನು ರಸ್ತೆಯಲ್ಲಿ ಯಾರೋ ಗುಂಡು ಹೊಡೆದು ಕೊಂದು ಅವನಲ್ಲಿದ್ದ ಹಣವನ್ನು ಕಸಕೊಂಡು ಹೋದರು ಕಳ್ಳನು ಇನ್ನ ಪತ್ತೆಯಾಗಿರುವುದಿಲ್ಲ.

ಬೀರರಾರನ್ನು ಪುನಹ ಸ್ವಜಾಮನ ಜಡಕೆಕಕ್ಕೆ ಕೊಳ್ಳುವ ಏರ್ಪಾಡಿಗಾಗಿ ಲಂಡನಿಗೆ ಹೋಗಿರುವ ಆಲಿ ಇಮಾಂರವರ ಪ್ರಯತ್ನವು ಸಫಲವಾಗುವಂತಿರುವುದಿಲ್ಲವೆಂದು ವರ್ತಮಾನ

ಜೂಲೈ ೧೮ ರ ಲೆಜಿಸ್ಲೇಟಿವ್ ಎಸೆಂಬ್ಲಿಯ ಮೀಟಿಂಗಿನಲ್ಲಿ "ಈಗಿನ ಕಾನೂನಿಗೆ ಒಳಪಟ್ಟು ಇಂಡಿಯಾಕ್ಕೆ ಬರುವುದಾದ ಹೆಚ್ಚಿನ ಸುಧಾರಣೆಗಳನ್ನು ಕೊಡಲು ಏರ್ಪಾಡುಗಳನ್ನು ಮಾಡುವಂತೆ ಸ್ಟೇಟ್ ಸೆಕ್ರೆಟರಿಯು ವೈಸರಾಯರವರು ಬರೆಯಬೇಕು" ಎಂಬ ಡಾಕ್ಟರ್ ...ರವರ ಠರಾವು ೩೦ ಓಟುಗಳಿಗೆ ವಿರೋಧವಾಗಿ ೪.. ಓಟುಗಳಿಂದ ಮಂಜೂರಾಯಿತು

ಜೋರಾದ ಮಳೆಯ ನೀರಿನಿಂದ ಉಂಟಾದ ... ಮತ್ತು ಭದ್ರ ನದಿಗಳ ನೆರೆಯಿಂದ ಶಿವಮೊಗ್ಗದ ಬಳಿ ಸುಮಾರು ೩೦೦ ಮನೆಗಳು ನಾಶವಾಗಿ ಅನೇಕ ಜನರು ಕಷ್ಟಪಡುತ್ತಿರುವರು ಭದ್ರಾವತಿ ನದಿಯ ನೆರೆಯು ಆ ಕಬ್ಬಿಣದ ಕಾರ್ಖಾನೆಯಲ್ಲಿ ಸುಮಾರು ಒಂದು ಲಕ್ಷ ರೂಪಾಯಿಯಷ್ಟು ನಷ್ಟ ಉಂಟುಮಾಡಿದೆಯಂತೆ.

ಜೈಲಿನಲ್ಲಿರುವ ಲಾಲಾ ಲಜಪತರಾಯರ ಕಾಯಿಲೆ ಜೋರಾಗುತ್ತಿದೆ ಯಾದರೂ ಅವರನ್ನು ಉಪಚರಿಸ... ವೈದ್ಯರನ್ನು ಆಗಾಗ್ಗೆ ಅವರಲ್ಲಿಗೆ ಹೋಗಲು ಬಿಡುವಂತೆ

ಕಾರಾಗೃಹ ವಾಸಿಯಾಗಿರುವ ಸೇಠ್ ಜಮ್ನಾಲಾಲ್ ಬಜಾಜ್‌ರವರ ೩೦೦೦ ರೂಪಾಯಿ ಜುಲುಮಾನೆಯ ವಸೂಲಿಮಾಡಲಿಕ್ಕಾಗಿ ಅವರ ವಾರ್ಧಾ ಮನೆಯಿಂದ ರೂಪಾಯಿಯನ್ನು ಅವರ ಮೋಟಾರನ್ನು ಟೋಂಗವನ್ನು ಜಪ್ತಿಮಾಡಿರುವರು.

ಬೆರಿಯಾ ಕ... ಶಾಲೋಕು ಕಾಂಗ್ರೆಸ್ ... ತಾ|| ೨೧ ರಲ್ಲು ಉ...ಫಲಮಿನಲ್ಲಿ ಡಾಕ್ಟರ್ ... ರಾಜಲು ನಾಯಡುರವರ ಅಧ್ಯಕ್ಷತೆಯಲ್ಲಿ ನಡೆಯುತ್ತ ಆದರೆ ಅವರು ಮಧುರ ಡಿಸ್ಟ್ರಿಕ್ಟಿನಲ್ಲಿ ಎಲ್ಲೂ ಭಾಷಣ ಮಾಡಕೂಡದೆಂದು ಸರ್ಕಾರದವರು ಹುಕುಂ ಮಾಡಿರುವರು ಅದನ್ನು ಅವರು ಉಲ್ಲಂಘಿಸುವರೊ ನೋ ನೋಡಬೇಕು

ವಿದೇಶ.

ಫ್ರಾನ್ಸ್‌ದೇಶದಲ್ಲಿ 1023 ರಿಂದ ಒಂಭತ್ತು ಶತಮಾನಗಳವರೆಗೆ ಒಂದು ಜಮೀನು ತಂದೆಯಿಂದ ಮಗನಿಗೆ ಬರುತ್ತಾ ಇಂದಿನವರೆಗೆ ಒಂದೇ ಕುಟುಂಬದ ಅನುಭವದಲ್ಲಿದ್ದು ಕಂಡು ಬಂದಿದೆ. ಆದರೆ ಚೈನಾದೇಶದಲ್ಲಿ ಪೆಕಿಂಗ್ ಪಟ್ಟಣದ ದಕ್ಷಿಣ ಭಾಗದ ಒಬ್ಬ ರೈತನು ಒಂದು ಸಣ್ಣ ಜಾಗವನ್ನು ತನ್ನ ಕುಟುಂಬದವರು ಎರಡುಸಾವಿರ ವರ್ಷಗಳಿಂದಲೂ ಅನುಭವಿಸುತ್ತಾ ಬರುತ್ತಿದ್ದಾರೆಂದು ಒಬ್ಬ ಪರದೇಶಸ್ಥನೊಡನೆ ಹೇಳಿದನಂತೆ !

ಭೂಲೋಕದಲ್ಲೆಲ್ಲಾ ದೊಡ್ಡದಾದ ಭಾವ ಚಿತ್ರ ತೆಗೆಯುವ ಕಮರವು ಅಮೇರಿಕದೇಶದ ವಾಷಿಂಗ್‌ಟನ್ ಪಟ್ಟಣದಲ್ಲಿದೆ. ಅದರ ತೂಕವು 7000 ಪೌಂಡುಗಳು ! ಅದನ್ನು ಇಡಲಿಕ್ಕೆ ಎರಡು ಕೋಣೆಗಳ ಸ್ಥಳಬೇಕು. ಅದರಿಂದ ಒಂದು ... ಅಗಲದ ಫೋಟೋ ತೆಗೆಯಬಹುದಂತೆ

ಇಹಲೋಕದಲ್ಲೆಲ್ಲಾ ಅತಿ ಚಿಕ್ಕದಾದ ವಿಮಾನು ಫಿಲಿಪೈನ್ ದ್ವೀಪಗಳ ಲುಜೋನ್ ಎಂಬ ಸ್ಥಳದ ಪರ್ವತ ಪ್ರದೇಶದ ಬ... ಎಂಬಲ್ಲಿದೆ. ಅದನ್ನು ಅಲ್ಲಿಯವರು "ಸ್ವಪ್ನ" ಎಂದು ಹೇಳುವರು. ಅದರ ಉದ್ದವು ಅರ್ಧ ಇಂಚಿನಷ್ಟು ಅದರ ತೂಕವು ಅರ್ಧ ಗ್ರೈನನ್ನು ಮೀರುವುದಿಲ್ಲವಂತೆ !

ಬರುವ ವರ್ಷ ಮೆ|| ಮಾಂಟೇಗ್ಯುರವರು ತನ್ನ ಪತ್ನಿಯ ಸಮೇತ ಇಂಡಿಯಾದೇಶಕ್ಕೆ ಬಂದು ಎರಡು ತಿಂಗಳವರೆಗೆ ಇಲ್ಲಿ ಪ್ರಯಾಣ ಮಾಡುತ್ತಿರುವರಂತೆ

ಕೆನ್ಯಾದಲ್ಲಿರುವ ಹಿಂದೀಯರ ಸ್ಥಿತಿಯ ವಿಷಯ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಆಗುತ್ತಿರುವ ತೀರ್ಮಾನವು ಹಿಂದೀಯರಿಗೆ ಹಿತವಾದದ್ದಲ್ಲವೆಂತಲೂ ಅದನ್ನು ವಿರೋಧಿಸಲು ಇಂಡಿಯಾದಿಂದ ಹೋದ ಡೆಪ್ಯುಟೇಶನ್ ಮೆಂಬರುಗಳು ಆದಷ್ಟು ಪ್ರಯತ್ನಿಸುತ್ತಿರುವರೆಂತಲೂ ಅಲ್ಲಿಂದ ವರ್ತಮಾನವಿದೆ.

ಜರ್ಮನಿ ದೇಶದ ಜನರಲ್ಲಿ ಒಳಜಗಳವು ಉಂಟಾಗುವುದೆಂದು ಹೊರಟಿದ್ದ ವರ್ತಮಾನ ಪ್ರೋತ್ಸ್ ಸುಳ್ಳೆಂದು ತಿಳಿಯಬರುತ್ತದೆ.

ಅನೇಕ ವರ್ಷಗಳವರೆಗೆ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಸುಪ್ರಸಿದ್ಧರಾದ ಡಾಕ್ಟರ್ ವಿಲ್ಲಿಯಮ್ ಮಿಲ್ಲರವರು ತಾ|| 15 ರಲ್ಲಿ ಸ್ಕಾಟ್‌ಲೆಂಡಿನ ತಮ್ಮ ಭವನದಲ್ಲಿ ಮೃತಪಟ್ಟರು.

ಚೈನಾದ ಮೊದಲಿನ ಚಕ್ರವರ್ತಿಯವರ ಅರಮನೆಯ ಅಮೂಲ್ಯವಾದ ಆಭರಣಗಳು ಕಾಣದೆ ಹೋದಕಾರಣ ಅವರು ಅಲ್ಲಿ ಕೆಲಸ ಮಾಡಿಕೊಂಡಿದ್ದ ಎರಡುಸಾವಿರ 'ಕಂಡಿ' ಗಳನ್ನು 'ಡಿಸ್‌ಮಿಸ್' ಮಾಡಿರುವುದರಿಂದ ಅವರು ಅಲ್ಲಿ ಎಲ್ಲಿಯೂ ಕೆಲಸವಿಲ್ಲದೆ ಪೆಕಿಂಗ್ ಪಟ್ಟಣದಲ್ಲಿ ಅತ್ತಿತ್ತ ಅಲೆದಾಡುತ್ತಿರುವರಂತೆ.

ರವೀಂದ್ರನಾಥ ಟಾಗೂರರವರ ಚಕ್ರ-ಪೋರ್ಣಂ ರಿವ್ಯೂ ಪಿನಿಂದ- (ಮುಂದರಿಸಿದ್ದು.)

ಅದರಿಂದಲೇ ಈಚೆಗೆ ನಮ್ಮ ಯುವಕರು ಸಮಾಜಸೇವಕರಾಗಲಿಕ್ಕೆ ಮುಂದುವರಿಯುತ್ತಿರುವರು. ಮನುಷ್ಯನು ನಿಸ್ಸಾರವಾದ ಶಾಂತತೆಯಲ್ಲಿ ಸದಾ ಇರಬಾರದು. ಬೆಳವಣಿಗೆ ಯಾಗಲಿಕ್ಕೆ ಅವಕಾಶಬೇಕಾದದ್ದೇ ಆತನ ಬಹಳ ಅವಶ್ಯವಾದ ವಿಷಯವಾಗಿದೆ. ಇದರ ಬಾಹ್ಯ ನಿದರ್ಶನವೇನೆಂದರೆ.—ದೊಡ್ಡಧ್ಯೇಯಕ್ಕಾಗಿ ಆತ್ಮತ್ಯಾಗ ಮಾಡಿ ಕಷ್ಟ ಸಹಿಸುವದು. ಎಲ್ಲಾ ಮಹಾ ಜನಾಂಗಗಳ ಈ ಬೆಳವಣಿಗೆಯ ಹೋರಾಟವು ಜಯಸೋಲೆಂಬ ಹಳ್ಳದಿಣ್ಣೆಗಳಲ್ಲಿ ಬೋರ್ಗರೆದು ನೊರೆಯಿದ್ದು ಎಲ್ಲಾ ಅಡಚಣೆಗಳನ್ನು ದಾಟುತ್ತವೆ. ಈ ಇತಿಹಾಸದ ಸೌಂದರ್ಯದರ್ಶನವನ್ನು ನಮ್ಮಂಥ ಅಸ್ವತಂತ್ರರ ದೃಷ್ಟಿಗೆ ಗೋಚರವಾದಂತೆ ಮಾಡಲು ಸಾಧ್ಯವಿಲ್ಲ. ಜೀವನದ ಸ್ವಭಾವವಾದ ಉತ್ಸಾಹದಿಂದ ಕೂಡಿದ ಮಹಾಪುರುಷರ ವಾಕ್ಯಗಳನ್ನು ಕೇಳಿ ಹುರಿದುಂಬಿಸಲ್ಪಟ್ಟ ಚರಿತ್ರೆಯ ಪಾಠ ಓದಿದ ಯುವಕರಿಗೆ ವರ್ತಿಯುವ ಕೆಲಸವಿಲ್ಲದಿರುವಿಕೆಯೆಂದರೆ ಪಾಪಗಿಂತ ಕಡೆಯಲ್ಲವೇ. ಒಂದು ಕಾಲದಲ್ಲಿ ಪ್ರಸಿದ್ಧಿಯಾಗಿದ್ದ ನಜ್ಜದನೆಂದ ಗುಪ್ತನೆಂಬವನ್ನು ಆತ್ಮಹತ್ಯ ಮಾಡಿಕೊಳ್ಳುವ ಮುಂಚೆ ಬರೆದಿಟ್ಟ ಕಾಗದದಿಂದ ಈ ಮಾತು ಪ್ರತ್ಯಕ್ಷವಾಗಿದೆ. ಆದರೆ ಮನುಷ್ಯ ವಿಚಿತ್ರ ಸ್ವಭಾವದಿಂದ ಹುಟ್ಟುವ ಉತ್ಸಾಹವನ್ನು ತೃಪ್ತಿಗೊಳಿಸಲಿಕ್ಕೆ ಪ್ರವಾಹ ಅಥವಾ ಕ್ಷಾಮದ ಸಮಯದಲ್ಲಿ ಜನಸೇವೆಮಾಡಲು ದೊರಕುವ ಅವಕಾಶದಿಂದ ತೃಪ್ತಿಯಾಗುವದಿಲ್ಲ. ಈ ಉತ್ಸಾಹಕೆ ಪ್ರತಿನಿತ್ಯದ ಕೆಲಸದಲ್ಲಿ ಎಡೆಬಿಡದೆ ವಿಧವಿಧದಲ್ಲಿ ಭಾಗಿಯಾಗುವದರಿಂದಲೇ ತೃಪ್ತಿಯಾದೀತು. ಇಲ್ಲವಾದರೆ ಈ ಉತ್ಸಾಹವೆಲ್ಲಾ ಅವಳಗೇನೇ ಕೆಲಸಮಾಡಿ ಮನಸ್ಸನ್ನು ವಿಷಮಯ ಮಾಡಿ ದೇಶಕ್ಕೆ ಕೇಡನ್ನುಂಟುಮಾಡುತ್ತಿರುವ ಗುಪ್ತಕಾರ್ಯಗಳಿಗೆ ಅವಕಾಶವಾಗುತ್ತೆ. ಆದರಿಂದಲೇ ಉತ್ತಮ ಧ್ಯೇಯಗಳನ್ನಿಟ್ಟುಕೊಂಡು ಅವಕ್ಕಾಗಿ ಕೆಲಸಮಾಡುವವರ ಮೇಲೆಯೂ ಅಧಿಕಾರಿಗಳ ದೃಷ್ಟಿಯು ಬೀಳುತ್ತೆ. ಸ್ವಾರ್ಥಪರರಾಗಿ ಪ್ರಮಾಣಿಕತೆ ಇಲ್ಲದ, ಉತ್ಸಾಹವಿಲ್ಲದವರಿಗೇನೇ ಈಗಿನ ಗೂಢಚಾರ ಪದ್ಧತಿಯಲ್ಲಿ ಭಯಪಡಬೇಕಾದದ್ದೇನೂ ಇಲ್ಲ. ಅವರಿಗೇನೇ ಪ್ರಯೋಜನವಾಗುತ್ತೆ. ಮೇಲಮೇಲಕ್ಕೆ ಏರುತ್ತಾರೆ. ಬೇರೆಯವರಿಗಾಗಿ ಸ್ವಾರ್ಥತ್ಯಾಗ ಬುದ್ಧಿಯಿಂದ ಮಾಡುವ ಕಾರ್ಯಗಳನ್ನು ವಿವರಿಸಲಿಕ್ಕೆ ಬಹಳ ಕಷ್ಟ. ವಿಚಾರಶೀಲರಾದ ಅಧಿಕಾರಿಗಳ ಈ ಕೆಳಗಿನ ಸವಾಲಿಗೆ ಹೇಗೆ ತಾನೇ ಜವಾಬು ಕೊಡುವದು. "ದೊಡ್ಡ ಕಾರ್ಯಗಳಿಗೂ ನಿನಗೂ ಸಂಬಂಧವೇನು? ನಿನನ್ನು ಬಾಡಿಗೆ ಕೊಟ್ಟು ದೊರೆಯುವ ಸ್ವಲ್ಪ ಅಥವಾ ದೊಡ್ಡ ಉತ್ಪತ್ತಿಯಿಂದ ನಿನ ಅನ್ನಬಟ್ಟೆ ಒದಗಿಸಿಕೊಂಡು ಸುಲಭವಾಗಿ ಜೀವಿಸಲು ಅನುಕೂಲವಿರುವಾಗ ನಿಂನ ಸ್ವಂತ ಖರ್ಚಿನಿಂದ ಇಂಥಾ ಅನಾವಶ್ಯವಾದ ಕೆಲಸಗಳಿಗೆ ಯಾಕೆ ಕೈಹಾಕುತ್ತಿ?"

ಅಧಿಕಾರಿಗಳು ಏನೇ ಹೇಳಲಿ ನಾನು ಕೇಳುವದೇನೆಂದರೆ—ಈ ಬೆಳಕಾಗಲೀ ಕಟ್ಟುವಾಗಲೀ ಇಲ್ಲದ, ನ್ಯಾಯವಿಲ್ಲ, ತಪ್ಪಿಸಿಕೊಳ್ಳಲಿಕ್ಕೆ ನ್ಯಾಯವಾದ ದಾರಿಯಿಲ್ಲದ ಈ ನೆಲಮಾಳಿಗೆಯ ದಾರಿಯು ಸರಕಾರಕ್ಕೆ ನ್ಯಾಯವಾದ ದಾರಿಯೇ? ದೇಶದ ಎಲ್ಲಾ ಉತ್ತಮತರದ ಬಳವಳವನ್ನು ವಿಚಾರವಿಲ್ಲದೆ ಹೂಳಿಡಬಹುದು. ಆದರೆ ಆದರ ಪಿಶಾಚಿಯನ್ನು ಈ ರೀತಿ ಹೂಳಲಿಕ್ಕೆ ಸಾಧ್ಯವಾದೀತೋ? ಒಳಗಿನ ಹಸಿವೆಗೆ ತಿಕ್ಕೆಯ ಕಲ್ಲಿನಿಂದ ಪರ್ಯಾಗದೆ ರೊಪಕೊಡುವದು ಒಳ್ಳೆಯದೂ ಅಲ್ಲ ಬುದ್ಧಿವಂತಿಕೆಯೂ ಅಲ್ಲ.

ಈ ನೆಲಮಾಳಿಗೆಯ ಧೋರಣೆಯು ಪ್ರಬಲವಾಗಿ ವಾಗ ಸಮುದ್ರದಾಚೆಯಿಂದ ಸ್ವರಾಜ್ಯದ ಮಸೂದೆಯು ತಯಾರಾಗುತ್ತಿದೆಯೆಂಬ ವರ್ತಮಾನ ಬರುತ್ತಿದೆ. ತಟವಮಾಡುತ್ತಿರುವ ಪಿಶಾಚಿಗೆ ಒರೇದಬ್ಬಾಳು ಮಂತ್ರ ಹಚ್ಚುವದಿಲ್ಲವೆಂತಲೂ, ಸಮಾಧಾನಪಡಿಕೊಳ್ಳುವದೂ ಅವಶ್ಯವಿದೆಯೆಂತ ಮೇಲಧಿಕಾರಿಗಳಿಗೆ ತೋರಿದಂತೆ ಕಾಣುತ್ತೆ. ಈ ದೇಶವು ನಂನದು—ನಾನು ಅದರಲ್ಲಿ ಹುಟ್ಟಿದ ಕಾರಣದಿಂದ ಮಾತ್ರವಲ್ಲ, ಅದಕ್ಕೆ ನನ್ನ ವಿಶ್ವಪ್ರಯತ್ನವನ್ನೂ ಆದರ ಯೋಜನವನ್ನೂ ಸ್ವೀಕರಿಸಲಿಕ್ಕೆ ಹಕ್ಕಿದೆ. ಈ ತತ್ವವನ್ನು ಈ ದೇಶದ ಜನರು ಸಾಧಿಸಲಿಕ್ಕೆ ಉತ್ತೇಜನಕೊಟ್ಟರೇನೇ ಬ್ರಿಟಿಷ್ ಸಾಮ್ರಾಜ್ಯವು ಇಂಡಿಯಾದಲ್ಲಿ ಸ್ಥಿರವಾಗಿದ್ದೀತು. ಇಂಥಾ ದೊಡ್ಡ ಪ್ರದೇಶವನ್ನು ಅಶಕ್ತತೆಯಲ್ಲಿಯೂ, ನಿಸ್ಸಾರವಾಗಿಯೂ, ರಾಜ್ಯಕಾರ್ಯದಲ್ಲಿ ಅಶ್ರದ್ಧೆಯಲ್ಲಿಯೂ, ಇಟ್ಟುಕೊಂಡರೆ ಅವಶ್ಯಬಿದ್ದಾಗ ಅವರ ಸಹಾಯವು ನಿಷ್ಪ್ರಯೋಜನವಾದದ್ದೂ, ಅವರ ಭಾರವು ವಹಿಸಲು ಅಸಾಧ್ಯವಾದದ್ದೂ ಆಗುತ್ತೆ. ಅಲ್ಲದೆ ಅತ್ಯಂತ ಅಬಲರನ್ನಾದರೂ ಸದಾ ಅತೃಪ್ತರನ್ನಾಗಿಟ್ಟುಕೊಳ್ಳುವದು ದೋಣಿಯಲ್ಲಿ ಬಿಳ್ಳತೂತು ಇಟ್ಟುಕೊಂಡಂತೆಯೇ ಸರಿ. ಛಾಳಿಮಳೆ ಇಲ್ಲದಾಗ ನೀರನ್ನು ಗೋಜಿ ಚೆಲ್ಲುತ್ತಿದ್ದರೆ ಅಪಾಯವಾಗುವದಿಲ್ಲ. ಆದರೆ ಬಿರುಗಾಳಿ ಮಳೆ ಹೊಡೆಯುತ್ತಿರುವಾಗ ಕೆಲಸಗಾರರಿಗೆಲ್ಲಾ ದೋಣಿ ನಡಿಸುವದು, ಹಾಯಿಯನ್ನು ಸರಿಪಡಿಸುವದು, ಬಿಳ್ಳ ಸರಿಪಡಿಸುವದು ವಗೈರೆ ಕೆಲಸಗಳು ಧಾರಾಳ ಇರುವಾಗ ಚಿಕ್ಕ ತೂತಕ್ಕಾಗಿ ಸೋರಿಬರುವ ನೀರಿನಿಂದಲೇ ಅಪಾಯವಾಗಬಹುದು. ಆಗ ಶಿಕ್ಷಿದ್ದು ಪೋಲೀಸಿನವರ ಕಾನೂನಿಗೆ ಬಳ್ಳಬಟ್ಟ ದೊಣ್ಣೆಯಿಂದಾಗಲೀ ಕಾನೂನಿಗೆ ವಳಪಡದ ದೊಣ್ಣೆಯಿಂದಾಗಲೀ ಮರ್ದಿಸಿದರೆ ಇನ್ನೂ ಕೆಡಕೇ ಆಗಬಹುದು. ಚಿಕ್ಕ ತೂತವನ್ನು ಕೂಡಲೇ ಮುಚ್ಚುವ ಖರ್ಚನ್ನು ಮಾಡಿಬಿಟ್ಟರೆ ಹಿಂದಿನಿಂದ ಆಗಬಹುದಾದ ದೊಡ್ಡ ಖರ್ಚು ಉಳಿಯಬಹುದು. ಈ ತತ್ವವು ಇಂಗ್ಲೀಷ್ ರಾಜಕಾರ್ಯದಕ್ಷರಿಗೆ ತಿಳಿಯದೆ ಇರಲಾರದು. ಅವರಿಗೆ ತಿಳಿದಿರುವದರಿಂದಲೇ ಸ್ವರಾಜ್ಯಕೊಡುವ ಮಾತು ಈಗ ಹೊರಟಿರುವದಾಗಿದೆ.

ಆದರೆ ಮನುಷ್ಯನ ಹಳ್ಳಸ್ವಭಾವವು ಕುರುಡಾದದ್ದು. ಅದು ತತ್ಕಾಲದ ವಿಷಯಕ್ಕೆ ಪ್ರಾಮುಖ್ಯತೆ ಕೊಟ್ಟು ಹಿಂದಿನಿಂದ ಬರಬಹುದಾದ ವಿಷಯಗಳನ್ನು ಮರೆಯುತ್ತೆ. ಸತ್ಯ ನ್ಯಾಯ ಎಂತ ಮಾತಾಡುವದು ಬರೀ ಹೇಡಿತನ ಅಥವಾ ಮೂರ್ಖತನವೆಂತ ಭಾವಿಸುತ್ತೆ. ಮುಂದೆ ಪ್ರಯೋಜನವಾಗಬಹುದೆಂಬ ದೂರ್ದ್ದಾಶೆಯಿಂದ ಉಬ್ಬಿ ಇಂಡಿಯಾವು ಬ್ರಿಟಿಷ್ ಆಳಿಕೆಯೆಂಬ ವಿರೋಧಿಯನ್ನು ಹಗುರವಾಗಿ ಭಾವಿಸಿದೆ. ಆಂಗ್ಲೋ ಇಂಡಿಯನ್ನನು ಇಂಡಿಯಾದಲ್ಲಿ ಇರುವ ಇಂಗ್ಲಿಷ್ ಮನುಷ್ಯನು ಸರಕಾರಿ ಉದ್ಯೋಗಸ್ಥನಾಗಿಯಾಗಲೀ ವ್ಯಾಪಾರಿಯಾಗಿಯಾಗಲೀ ಪವರ್ ಮತ್ತು ಹಣದ ಆಶೆಯಿಂದ ಕುಂದಿರುವವನಾಗಿದ್ದಾನೆ. ಆದರೆ ಅವನ ಈ ಗುಣವನ್ನು ಕಂಡು ಹಿಡಿಯಲಿಕ್ಕೆ ಇಂಡಿಯನ್ ಜನರಿಗೆ ಬಹಳ ಸಮಯವಾಗಿ ಹೋದನು. ಇಂಗ್ಲೀಷನ ನವೀನ ಸೃಷ್ಟಿಗೆ ಅವನ ಪವರ ಮತ್ತು ಐಶ್ವರ್ಯ ಮಾತ್ರ ದೊಡ್ಡದಾಗಿ ಕಾಣುತ್ತಿಯೇ ದೊರತು ಇಂಡಿಯಾ ದೇಶದ ಜನರು ಮತ್ತು ಅವರ ಸುಖ ದುಃಖಗಳು ಮಂಜಿಯಂತೆಯೋ ನೆರಳಿನಂತೆಯೋ ತೋರುತ್ತಾರಷ್ಟೆ. ಇದರಿಂದ ನನಗೆ ಏನು ಭಯವಿದೆಯೆಂದರೆ ಇಂಡಿಯಾ ದೇಶಕ್ಕೆ ತನ್ನ ಪುರುಷತ್ವವನ್ನು ವಾಪಸು ಕೊಡಬಹುದಾಗಿದ್ದ ವರವು ಇಲ್ಲಿಗೆ ತಲಪುವ ಮುಂಚೆ ಕತ್ತರಿಸಿ ಸೂಕ್ಷ್ಮಮಾಡಲ್ಪಟ್ಟು ರಕ್ತವಿಲ್ಲದ್ದಾಗಿಯೂ ಆಗಬಹುದು. ಅಥವಾ ದಾರಿಯಲ್ಲೇ ಮಂಜು ಹೊಂದಿ ಇಂಡಿಯಾದ ಅದೃಷ್ಟವೆಂಬ ಸಮುದ್ರದ ದಾರಿಯಲ್ಲಿ ಬಿದ್ದಿರುವ ಒಳ್ಳೆ ಉದ್ದೇಶಗಳೆಂಬ ಮುಳುಗು ಬಂಡೆಗಳ ಜೊತೆಗೆ ಸೇರಿ ಹೋಗುತ್ತೋ ಎಂಬ ಭಯವಿದೆ.

ಕಾಡೆಮಾಡುವ ಆಯುಧ ಧಾರಿಯಾದ ಆಂಗ್ಲೋ ಇಂಡಿಯನನು ಪವರಿನಿಂದ ಮತ್ತನಾಗಿ ಪರಂಪರಾಗತ ಉದ್ಯೋಗ ಕ್ರಮದಿಂದ ಇಂಡಿಯಾದ ಜೀವನವೇನೆಂತ ತಿಳಕೊಂಡವನಲ್ಲ. ಅವನಿಗೆ ಇಂಡಿಯಾವೆಂದರೆ ಒಂದು ಸರಕಾರ ಅಥವಾ ವ್ಯಾಪಾರದ ಭಂಡಸಾಲೆಯೆಂತ ಮಾತ್ರ ತೋರುತ್ತೆ. ಆದರೆ ನನ್ನ ಅನ್ನಪ್ಪಕ್ಕೆ ಆಕಾರಕೊಡುವ ಸಮುದ್ರದ ಆಚೆ ಇರುವ ಇಂಗ್ಲೀಷು ಜನರು ಇವರ ರಕ್ತ ಸಂಬಂಧಿಗಳಾಗಿದ್ದಾರೆ. ಅವನ ಕೈಗೆ ಅವರ ಕೈಯ್ಯಲ್ಲಿದೆ. ಅವರ ತುಟಿಯು ಅವರ ಕಿವಿಯಲ್ಲಿದೆ. ಅವರ ಆಲೋಚನಾ ಸಭೆಗಳಲ್ಲಿ ಅವನಿಗೆ ಕೂಡಲಿಕ್ಕೆ ಸ್ಥಳವಿಲ್ಲದೆ, ರಾಜಕೀಯ ಕಾರ್ಯಲಯದ ಹಿಂದಿನ ಕೋಣೆಗೆ ಹೋಗಲಿಕ್ಕೆ ಅನುಮತಿ ಇದೆ. ಅವನ್ನು ತನ್ನ ದೇಶಕ್ಕೆ ಆಗಿಂದಾಗ್ಯೆ ಹೋಗಿ ತನ್ನ ಅಭಿಪ್ರಾಯಗಳನ್ನು ಅಲ್ಲಿ ಹರಡುತ್ತಾನೆ. ಅಲ್ಲಿನ ಮನೋಭಾವವನ್ನೇ ಬದಲಾಯಿಸುತ್ತಾನೆ. ತನ್ನ ಮುಪ್ಪಿನನ್ನೂ ಬಹುಕಾಲದ ಅನುಭವವನ್ನೂ ಎತ್ತಿ ಹೇಳಿ ಸಾಮ್ರಾಜ್ಯವನ್ನು ಈಗಿನ ಉಚ್ಚಸ್ಥಾನಕ್ಕೆ ಏರಿಸಲಿಕ್ಕೆ ಕಾರಣಭೂತನಾದ ತನಗೆ ವಿಶೇಷ ಅನುಕೂಲಗಳನ್ನೂ ಕೊಡಬೇಕೆಂತ ಕೇಳುತ್ತಾನೆ. ಇಂಥಾ ಬಲವತ್ತರವಾದ ಆತ್ಮಸ್ಥಾಪನೆಯ ಹಿಂದೆ ನಮ್ಮ ಮಾತು, ಆಶೆ ಅಥವಾ ಇರುವಿಕೆಯೇ ಹ್ಯಾಗೆ ತಾನೇ ಕಾಣಬಂದೀತು? ಉದ್ಯೋಗ ಉನ್ನತನಾದ ಗೋಣಿ ಆಚೆ ಇರುವ ೩೦ ಕೋಟಿ ಜನರ ಮನುಷ್ಯತ್ವವನ್ನು ಕಂಡು ಹಿಡಿಯುವಷ್ಟು ಸೂಕ್ಷ್ಮವಿಚಾರವು ಇಂಗ್ಲೀಷ್ ಮನುಷ್ಯನಲ್ಲಿ ಇದ್ದೀತೆಂತ ಹ್ಯಾಗೆ ನಾವು ಭಾವಿಸುವದು?

(ಸಶೇಷ).

ಶ್ರೀರಾಮಪುರಕಣಿವೆ ಸಭೆ.

1923 ನೇ ಜುಲೈ ತಾರೀಕು 2 ರಲ್ಲು ಸಂಜವಾಪ ಪಟ್ಟಣದ ತಾಲ್ಲೂಕು ಫ್ರೇಜರ್‌ಪೇಟೆ ಹೋಬಳಿ ರಾಂಪುರಪೇಟೆ ಶ್ರೀರಾಮಲಿಂಗೇಶ್ವರ ದೇವಸ್ಥಾನದಲ್ಲು ಜಮಾಯಿಸಲ್ಪಟ್ಟ ಈ ಕೆಳಗೆ ಸೈನ್ ಮಾಡಲ್ಪಟ್ಟು ಇರುವ ಮುಳ್ಳುಸೋಗೆ, ಗುಮ್ಮನಕೊಲ್ಲಿ, ಕೂಡ್ಲೂರು, ಮಂಗಳೂರು, ಬಸವನತ್ತೂರು, ಕೂಡಿಗೆ, ರಾಂಪುರಪೇಟೆ, ಹುಲುಸೆ, ಹೆಬ್ಬಾಲೆ, ಶಿರಂಗಾಲ, ಹೊಸಕೋಟೆ, ಮಣಜೂರು, ಗದ್ದೆಹೊಸಳ್ಳಿ, ನಲ್ಲೂರು ಗ್ರಾಮಸ್ಥರೆಲ್ಲಾ ಮ|| ರಾ|| ಶ್ರೀ|| ಹೆಬ್ಬಾಲೆ ಜವಳಿ ಅಂಗಡಿ ಹೊನ್ನಪ್ಪನವರ ತಾ|| 20-6-23 ರ ಪತ್ರಿಕಾ ಮೇರೆ ಈ ದಿವಸ ಈ ದಿವ್ಯ ಕ್ಷೇತ್ರಕ್ಕೆ ಸೇರಿದ ಸಭೆಯವರ ಅಭಿಮತಾನುಸಾರವಾಗಿ ಹೆಬ್ಬಾಲೆ ಗ್ರಾಮದ ಕಾಶಿ ತಿಮ್ಮೆಗೌಡನಾದ ನನ್ನನ್ನು ಸಭಾದಕ್ಷನನ್ನಾಗಿ ಮಾಡಿದ ಮೇರೆ ಸಭೆಯು ಕೂಡಿದ ಉದ್ದೇಶಕ್ಕಾಗಿ ನಮ್ಮ ಹೋಬಳಿಯ ಹೀನಸ್ಥಿತಿಯ ಕಾರಣವನ್ನು ಮುಂದೆ ಭಾಷಣದಲ್ಲಿಯೇ ಎಚ್ಚರಿಸಿಕೊಳ್ಳಲು ಬೇಕಾದ ಸೌಖ್ಯಗಳನ್ನು ಕಲ್ಪಿಸುವ ಉಪಾಯಗಳನ್ನು ನನ್ನ ಅಲ್ಪ ತಿಳುವಳಿಕೆಗೆ ಕಂಡಮೋರೆ ಭಾಷಣ ಮಾಡಿದರ ಮೇಲೆ ಸಭೆಯು ಅನುಮೋದಿಸಿದರು. ಮ|| ರಾ|| ಶ್ರೀ|| ಹೆಬ್ಬಾಲೆ ಗ್ರಾಮದ ಗುಡಿಹಟ್ಟಿ ಮರಿಯಪ್ಪನವರು ಮಾಡಿದ ಪ್ರಸ್ತಾಪವು ಏನೆಂದರೆ—ಮೊದಲು ಈ ಸಂಘವು ಸ್ಥಾಪನೆ ಮಾಡಬೇಕಾಗಿಯೂ ನಾರೋದ್ಧಾರವಾಗಿ ಈ ಸಂಘವು ನಡೆಯುತ್ತಾ ರೈತರ ಕಷ್ಟ ಸುಖಂಗಳಿಗೆ ಬಾಧ್ಯರಾಗಿ ಈ ಸಂಘಕ್ಕೆ ಪ್ರತಿ ಗ್ರಾಮದ ಒಬ್ಬೊಬ್ಬರು ಏಕಮತದಿಂದ ಸೇರಿ ಸಂಘದ ಪ್ರೆಸಿಡೆಂಟರು ಟ್ರೆಜರರ್ ಕರ್ಣೀಕರು ಈ ಮೂವರನ್ನು ಚುನಾಯಿಸಬೇಕಾಗಿ ಹೊನ್ನಪ್ಪನವರ ಅಭಿಪ್ರಾಯದಂತೆ ಸಭೆಯವರು ಅನುಮೋದಿಸಿ ಪ್ರತಿ ಗ್ರಾಮದಲ್ಲಿ ಒಬ್ಬೊಬ್ಬರನ್ನು ಚುನಾಯಿಸಿ ಅವರವರಿಗೆ ಚರ್ಚೆ ನಡೆದು ವಯಸ್ಸಿನಲ್ಲು ಅನುಭವದಲ್ಲು ವೃದ್ಧರಾದ ಮುಳ್ಳುಸೋಗೆ ಗ್ರಾಮದ ಪಟೇಲರು ಮ|| ರಾ|| ಶ್ರೀ|| ಕಪನಿಗೌಡರನ್ನು ಪ್ರಸಿಡೆಂಟರಾಗಿಯೂ ಕೂಡ್ಲೂರು ಗ್ರಾಮದ ದೇವಯ್ಯನವರನ್ನು ಕರಣೀಕರಾಗಿಯೂ ರಾಂಪುರಪೇಟೆ ಮ|| ರಾ|| ಶ್ರೀ|| ಕೃಷ್ಣಶೆಟ್ಟರನ್ನು ಟ್ರೆಜರರಾಗಿಯೂ ನೇಮಿಸಿದ ಮೇರೆ ಸಭೆಯವರು ಅನುಮೋದಿಸಿದರು. ಈ ಸೈಕಿ ಕರಣೀಕರಾದ ಮ|| ರಾ|| ಶ್ರೀ|| ದೇವಯ್ಯನವರು ಕಾರಣಾಂತರದಿಂದ ಗೈರುಹಾಜರಾದ್ದರಿಂದ ಇವರ ಒಪ್ಪಿಗೆಯನ್ನು ಮ|| ರಾ|| ಶ್ರೀ|| ಪಟೇಲ್ ಕಂಚೆಗೌಡರು ಕೆಗೆದುಕೊಳ್ಳುವಂತೆ ನಾವು ಕೇಳಿಕೊಳ್ಳೋಣವಾಗಿ ಒಪ್ಪಿಗೆ ಮಾಡಿದ್ದಾಯಿತು. ಈ ದಿವಸ ಸಭೆಯಲ್ಲಿ 200 ಜನರು ಸೇರಿದ್ದಾಯಿತು.

1 ಈ ಸಭೆಯಲ್ಲಿ ಹೆಬ್ಬಾಲೆ ಹೊನ್ನಪ್ಪನವರು ಹೇಳಿದ್ದು ನಾವು ಜಡತನವನ್ನು ಹೋಗಲಾಡಿಸಿಕೊಳ್ಳಬೇಕಾದ ಬಗ್ಗೆ ಪ್ರಥಮ ನಮ್ಮನ್ನು ಪರಿಪಾಲನೆ ಮಾಡುತ್ತಿದ್ದ ಹಜರತ್ ಕಮಿಷನರ ಸಾಹೇಬರವರಿಗೆ ನಮ್ಮ ಹೋಬಳಿಯ ಹೀನಸ್ಥಿತಿಯನ್ನು ಈ ಕೂಡ್ಲೆ ಅರಿಕೆಮಾಡಿಕೊಂಡು ಹಾರರಾಗಿ ನಾಳೆಯನ್ನು ಸುಜಾಗ್ರತೆಯನ್ನು ಕೊಟ್ಟು ಈ ಕೂಡ್ಲೆ ನಮ್ಮನ್ನು ಉದ್ಧಾರಮಾಡಬೇಕಾಗಿ ಕಂಡ ಠರಾವಿಗೆ ಸಭೆಯು ಅನುಮೋದಿಸಿ ಮಂಜೂರಾಯಿತು.

2 ಈ ಸಂಘವು ಮುಂದೆ ಮಾಡುವ ಕೆಲಸವೆಲ್ಲವೂ ನಮ್ಮ ದೇಶದ ಜಮಾನ್‌ದಾರ ಸಂಘದ ಮುಖಾಂತರವೇ ಇಲ್ಲವೇ ನಮ್ಮ ತಿಳುವಳಿಕೆಯಿಲ್ಲದ ಇದೇ ವಾಡೇ ಎಂಬ ಎಲ್ಲಾ ವಿಷಯಗಳನ್ನು ನಮ್ಮ ದೊಡ್ಡ ಸಂಘವನ್ನು ಕೇಳಬೇಕೆಂಬ ವಿಷಯವನ್ನು ಮ|| ರಾ|| ಶ್ರೀ|| ಗುಡಿಹಟ್ಟಿ ಮರಿಯಪ್ಪನವರು ಎಚ್ಚರಿಸಿದಮೇರೆ ಸಭೆಯು ಅನುಮೋದಿಸಿತು.

3. ನಮ್ಮ ಹೋಬಳಿಯಲ್ಲಿ ಸುಮಾರು 40 ಗ್ರಾಮದ ಕಲ್ಲಿನ ಜಮಾನ್‌ದಾರರೆಲ್ಲರೂ ಕೊಡಗು ಜಮಾನ್‌ದಾರು ಸಂಘಕ್ಕೆ ಚಂದಾದಾರರ ಸಬೇಕೆಂಬ ಹೊನ್ನಪ್ಪನವರ ಠರಾವಿಗೆ ಸಭೆಯೆಲ್ಲಾ ಅನುಮೋದಿಸಿತು.

4 ಶೀಗೇಹೊಸೂರು ಜಯತಾಳ (ರಾಕಾಸೆಯಿಂದ ಬರುವ ಕಟ್ಟೆ ನೀರನ್ನು ಕಾವೇರಿಗೆ ತಪ್ಪಿಸುವದು ಇಲ್ಲವೇ ನಮಗೆ ಹೊಸದಾಗಿ ಬಾವಿ ಯಾ ಕೆರೆಗಳನ್ನು ಕಲ್ಪಿಸಕೂಡಲು ಸಬೇಕೆಂದ ಠರಾವಿಗೆ ಸಭಾದಕ್ಷರು ಒಪ್ಪಿಗೆಕೊಟ್ಟರು.

ಮೇಲ್ಕಂಡ ಎಲ್ಲಾ ವಿಷಯಗಳ ಸಾರವಾದ ಠರಾವುಗಳನ್ನು ಕೂಡ್ಲೆ ಹಜರತ್ ಕಮಿಷನರ್ ಕೇಳ್ಪದು ಮತ್ತು ಕೊಡಗು ಜಮಾನ್‌ದಾರ ಸಂಘದಲ್ಲಿ ಹೋಗಿ ಸಂಘಕ್ಕೆ ನಮ್ಮಿಂದಾ ಮೇಲ್ಕಂಡ ಠರಾವುಗಳಲ್ಲಿ ಆಗತಕ್ಕ ವಿಷಯ ಮತ್ತು ಅಲ್ಲಿಂದ ನಮಗೆ ಬೇಕಾಗುವ ಎಲ್ಲಾ ವಿಷಯಗಳನ್ನ ಕೇಳ್ವ ಬಗೆ ಮ|| ರಾ|| ಶ್ರೀ|| ಮರಿಯಪ್ಪನವರು ಮ|| ರಾ|| ಶ್ರೀ|| ಹೊನ್ನಪ್ಪನವರು ಹೋಗ್ಬೇಕೆಂತ ಸಭೆಯಲ್ಲಿ ತೀರ್ಮಾನವಾಯಿತು.

ತಾ|| 30—7—23 ರಲ್ಲಿ ಕಣಿವೆ ಶ್ರೀರಾಮ ದೇವಸ್ಥಾನದಲ್ಲಿ ಸೇರುವ ಮಹಾಸಭೆಗೆ ಸರ್ವರೂ ದಯಮಾಡಿ ಆ ದಿವಸದ ವಿಷಯಗಳನ್ನು ಚರ್ಚಿಸುವ ಬಗ್ಗೆ ಎಲ್ಲಾ ಮಹಾಶಯರಿಗೆ ಸಭಾದಕ್ಷರೇ ವಿಜ್ಞಾಪಿಸಿಕೊಂಡು ಅಲ್ಲಿವರೆಗೆ ನಡೆಯಬೇಕಾದ ಎಲ್ಲಾ ಸಲಕರಣೆ ಬಗ್ಗೆ ಗ್ರಾಮವಾರು ಪಟೇಲರು ಒಂದೊಂದು ರೂಪಾಯಿ ಗ್ರಾಮವಾರಕ್ಕೆ ಚಂದಾ ತಪ್ಪಂತೆ ಒಪ್ಪಿಗೆ ಮಾಡಿ ಶ್ರೀರಾಮ ಮಂಗಳ ಪಾಡಿ ಸಭೆ ಮುಕ್ತಾಯವಾಯ್ತು. ಸಭಾದಕ್ಷ.

ಕೊಡಗು ಜಮ್ಮಾದಾರರ ಸಂಘ

(ಪ್ರಚಾರಕ ಕಾರ್ಯದರ್ಶಿಯವರಿಂದ)

"England has educated us, has awakened in our minds ambitions, which e is bound to satisfy" Surendranath Bannerji

"ಇಂಗ್ಲಾಂಡು ನಮ್ಮನ್ನು ಸುಶಿಕ್ಷಿತರನ್ನಾಗಿ ಮಾಡಿ, ನಮ್ಮ ಮನಸ್ಸಿನಲ್ಲಿ ಪ್ರತಿಷ್ಠೆಯನ್ನು ಎಬ್ಬಿಸಿರುತ್ತ ದ್ದರಿಂದ ನಮ್ಮ ಪ್ರತಿಷ್ಠೆಯನ್ನು ತೃಪ್ತಿಪಡಿಸಲು ಅಲ್ಲಿಯವರು ಬದ್ಧರಾಗಿರುತ್ತಾರೆ"

ಸುರೇಂದ್ರನಾಥ ಬನರ್ಜಿ

"To know how to die in one century is to live for all centuries to come"

Girdano Bumo

"ಒಂದು ಶತಮಾನದಲ್ಲಿ ಪ್ರಾಣತ್ಯಾಗದ ಪ್ರಯೋಜನವನ್ನು ತಿಳಿಯುವದೆಂದರೆ ಮುಂದೆ ಬರುವ ಶತಮಾನಗಳೆಲ್ಲಾ ಗೌರವದಿಂದ ಜೀವಿಸುವದೆಂದಾಗಿದೆ"

ಗಿರ್ಡಾನೊ ಬ್ರೂನೊ.

No. 6.

ನಮ್ಮ ದೇಶದಲ್ಲಿ ರಾಷ್ಟ್ರೀಯ ವಿದ್ಯೆಯನ್ನು ಕಲ್ಪಿಸಿದ ಮಾತ್ರಕ್ಕೇನೆ, ನಮ್ಮಲ್ಲಿ ಇರುವ ಇತರ ಕುಂದುಕೊರತೆಗಳನ್ನು ಪರಿಹಾರಮಾಡಲು ನೀಗಿಕೊಡಲು ಹಿಂಜರಿದರೆ, ನಾವು ನಮ್ಮ ಉದ್ದೇಶವನ್ನು ನೆರವೇರಿಸಲಾರೆವು. ನಮ್ಮ ಈಗಿನ ಅಧೀನತೆಗೆ ನಮ್ಮ ದೇಶದಲ್ಲಿ ಈಗ ಅನುಸರಿಸುವ ಜಾತಿಭೇದದ ಕ್ರಮಗಳು ಒಂದು ದೊಡ್ಡ ಕಾರಣವಾಗಿರುತ್ತೆ. ನಮ್ಮಲ್ಲಿರುವ ವಿದ್ಯಾವಂತರೂ ಕೂಡ ಈ ವಿಷಯದಲ್ಲಿ ಪಕ್ಷಪಾತದಿಂದ ಆಲೋಚಿಸುವವರಾಗಿರುತ್ತಾರೆ. ನಮ್ಮ ಈಗಿನ ಜಾತಿಭೇದದ ಕ್ರಮದಲ್ಲಿ ನಮ್ಮೊಳಗೇನೆ ಪ್ರತಿಯೊಂದು ಜಾತಿಯಲ್ಲಿ ಬಹಿಷ್ಕಾರ ಗುಣವು ವಿಶೇಷವಾಗಿ ಪ್ರಬಲವಿರುತ್ತೆ. ಜಾತಿಭೇದವು ಗ್ರಹಕೃತ್ಯಸಂಬಂಧವೆಂದೂ ದೇಶದ ಏಳಿಗೆಗೆ ಅಡಚಣೆ ಆಗುವದಿಲ್ಲವೆಂದೂ ಎಷ್ಟು ವಾದಿಸಿದರೂ, ಅದರಲ್ಲಿರುವ ಅವಗುಣಗಳನ್ನು ಎಂದೂ ತೆಗೆದಹಾಗೆ ಆಗುವದಿಲ್ಲ. ನಮ್ಮ ವರ್ಣಾಶ್ರಮಧರ್ಮವು ಮೊದಲಿನ ಉತ್ತಮಸ್ಥಿತಿಯಿಂದ ಈಗಿನ ಹೀನಸ್ಥಿತಿಗೆ ಬಂದದರ ದೆಸೆಯಿಂದಲೇ ನಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಪರತಂತ್ರಕ್ಕೊಳಗಾಗಿ ಕಷ್ಟಪಡಬೇಕಾಗಿದೆ. ಪ್ರತಿ ಜನಾಂಗದಲ್ಲಿಯೂ ದೇಶದ ಒಸರ ಸ್ಥಿತಿಯನ್ನು (Status) ನಿಲಿಗೊಳಿಸುವ ಕ್ರಮಗಳಿಲ್ಲವೆಂದಲ್ಲ. ಆದರೆ ಈಗಿನ ಸ್ವತಂತ್ರ ಜನಾಂಗದವರಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ, ಸಾಧನೆಯಿಂದ ಉತ್ತಮ ಮತ್ತು ಉನ್ನತಸ್ಥಿತಿಗೆ ಬರಲು, ಇರುವಂಥ ಅನುಕೂಲತೆಗಳು, ನಾವು ಸ್ವತಂತ್ರ ಜನಾಂಗವಾಗಿರುವಾಗ, ನಮ್ಮಲ್ಲಿದ್ದದನ್ನು, ನಾವು ಈಗ ಮರೆತಿರುತ್ತೇವೆ. ಆದ್ದರಿಂದ ನಮ್ಮ ಈಗಿನ ಜಾತಿಭೇದದ ಕ್ರಮದಲ್ಲಿ, ಕೀಳುಜಾತಿಯೆಂದನ್ನುವವರಿಗೆ, ಮೇಲುಜಾತಿಯವರಮೇಲೆ ವಿಶ್ವಾಸಕ್ಕೆ ಆಸ್ಪದ ಕಮ್ಮಿಯಾಗಿರುವದ್ದರಿಂದ ನಾವು ಸ್ವತಂತ್ರರಾಗಲಿಕ್ಕೆ ಬೇಕಾದ ಮುಖ್ಯ ಗುಣವಾದ ಒಗ್ಗಟ್ಟನ್ನು ಸಾಧಿಸಲು ದಾರಿ ಇಲ್ಲದಾಗಿರುತ್ತೆ. ಇತರ ಜನಾಂಗದವರಲ್ಲಿ ಜಾತಿ ಐಶ್ವರ್ಯದ ಅನುಕೂಲಗಳಿಲ್ಲದಿದ್ದರೂ, ಒರೇ ಯೋಗ್ಯತೆಯಿಂದ ಉತ್ತಮನೆಂದೆನ್ನಿಸಿಕೊಳ್ಳಬಹುದು. ಈ ಅನುಕೂಲವನ್ನು ನಮ್ಮ ಈಗಿನ ಜಾತಿಕ್ರಮದಲ್ಲಿ ಇಟ್ಟಿರುವದಿಲ್ಲ. ಆದ್ದರಿಂದ ಕಾಲಕ್ಕೆ ಸರಿಯಾಗಿ, ನಮ್ಮವರಲ್ಲಿ, ಪ್ರತಿಯೊಂದು ಜಾತಿಗೂ ಅವರ ಯೋಗ್ಯತಾನುಸಾರ ದೇಶದ ಅಭಿವೃದ್ಧಿಗೂ ಮತ್ತು ಸ್ವತಂತ್ರಸ್ಥಾಪನೆಗೂ ಸಹಕಾರಿಯಾಗುವಂಥಾ ರೀತಿಗಳನ್ನು ಏರ್ಪಡಿಸಿ, ನಮ್ಮ ಜಾತಿಕ್ರಮಗಳಲ್ಲಿ ಇರುವಂಥಾ ಕಲ್ಪಿತ ನಿಯಮಗಳನ್ನು ಬದಲಾಯಿಸದೆ ಹೋದರೆ, ನಾವು ಒಂದು ಜನಾಂಗವಾಗಲಿಕ್ಕೆ ಅವಕಾಶವಿರಲಾರದು. ಈಗ ನಮ್ಮಲ್ಲಿರುವ, ಕಠಿಣವಾದ ಕಲ್ಪಿತ ನಿಯಮಗಳಿಂದ ಕೂಡಿದ ಬಂಧನಗಳನ್ನು ಸಡಲಿಸಬೇಕಾದರೆ ನಮ್ಮ ಹೆಂಗಸರೂ ಕೂಡ ಸಹಕಾರಿಗಳಾಗದ ಪಕ್ಷಕ್ಕೆ ಸಾಧ್ಯವಾಗಲಾರದು. ನಮ್ಮ ಪವಿತ್ರವಾದಂಥ ಮನೆಗಳಲ್ಲಿ ಗಂಡಸರೂ ಮತ್ತು ಹೆಂಗಸರೂ ಕೂಡ, ಮುಖ್ಯವಾಗಿ ಜಾತಿ ಸಮ್ಮಂಧದಲ್ಲಿ, ನಮ್ಮ ಧರ್ಮವನ್ನು ಮರೆಯದೆ ಏಕೀಭಾವದಿಂದ ವರ್ತಿಸದ ಪಕ್ಷಕ್ಕೆ, ನಮ್ಮ ಜಾತಿಯ ಕಲ್ಪಿತ ನಿಯಮಗಳನ್ನು ಸಡಲಿಸಲು ಸಾಧ್ಯವಾಗಲಾರದ. ಆದಕಾರಣ ನಮ್ಮ ಹೆಂಗಸರನ್ನೂ ಶಿಕ್ಷಿತರನ್ನಾಗಿ ಮಾಡಿ ಅವರ ಸಹಾಯವನ್ನು ಪಡೆಯುವ ಬಗ್ಗೆ ನಾವು ಒಮಾಯಿಸುವ ದ್ರವ್ಯದಲ್ಲಿ ಒಂದಂಶವನ್ನು ಖರ್ಚುಮಾಡಬೇಕಾಗಿದೆ. ಈ ರಚನಾಕ್ರಮದಲ್ಲಿ, ಈಗಿನ ವಿದ್ಯಾವಂತರೂ ಮತ್ತು ಉತ್ತಮವರ್ಗದವರೂ ಕೂಡ ಬಹಳಮಟ್ಟಿಗೆ ಸ್ವಾರ್ಥತ್ಯಾಗವನ್ನು ಮಾಡಬೇಕಾಗಿ ಬರುತ್ತೆ. ನಾವು ಜನಾಂಗವಾಗಲಿಕ್ಕೆ ಈ ಸ್ವಾರ್ಥತ್ಯಾಗವನ್ನು ಮಾಡುವದು ಬಹಳ ಅವಶ್ಯವಲ್ಲವೇ? ಅಲ್ಲದೆ ನಮ್ಮ ದೇಶದಲ್ಲಿ ಜಾತಿಭೇದದ ಅನಾನುಕೂಲಗಳಲ್ಲದೆ, ದೇಶದ ಪ್ರತಿ ಕಡೆಗಳಲ್ಲೂ ಒಂದೊಂದು ನಡವಳಿಕೆಯಾಗಿರುತ್ತೆ. ಆದಕಾರಣ ದೇಶದ ಹಿತಚಿಂತಕರು ಕಲೆತು ಇಡೀ ನಮ್ಮ ದೇಶಕ್ಕೆ ಒಂದೇ ತರದ ನಡವಳಿಕೆಯನ್ನು ಸ್ಥಾಪಿಸುವದು ಬಹಳ ಅವಶ್ಯ. ಈ ನಮ್ಮ ಜಾತಿಭೇದದ ಕ್ರಮಗಳನ್ನು ತಪ್ಪಿಸಿದ ಮಾತ್ರಕ್ಕೇನೆ ನಾವು ಸ್ವತಂತ್ರವುಳ್ಳ ಮತ್ತು ಬಲಿಷ್ಠರಾದ ಜನಾಂಗವು ಎಂದೂ ಆಗಲಾರೆವು. ಆದರೆ ಈಗಿನ ಕಲ್ಪಿತ ಕ್ರಮಗಳಿರುವವರೆಗೆ, ನಾವು ಇತರ ವಿಷಯಗಳಲ್ಲಿ ಅಭಿವೃದ್ಧಿ ಹೊಂದಿದರೂ ಕೂಡ ನಮ್ಮ ಅಧೀನತೆಯನ್ನು ತಪ್ಪಿಸಲು ಸಾಧ್ಯವಾಗಲಾರದು. ಯಾಕೆ? ನಾವು ಈಗಿನ ಜಾತಿಭೇದವನ್ನು ಇಟ್ಟುಕೊಂಡಿರುವಾಗ್ಯೆ ಬ್ರಿಟಿಷ್ ಚಕ್ರಾಧಿಪತ್ಯದ ಆಡಳಿತವನ್ನು ನಮ್ಮ ಕೈಗೆ ಕೊಟ್ಟು, ನಮ್ಮನ್ನು ಯಜಮಾನರನ್ನಾಗಿ ಮಾಡಿ, ಬ್ರಿಟಿಷ್ ಜನಾಂಗವು ನಮ್ಮ ಕೈಕೆಳಗೆ ಅಧೀನತೆಯಲ್ಲಿ ಇರಲು ಒಪ್ಪಿಕೊಂಡರೂ ಕೂಡ ಕೆಲವು ಕಾಲಗಳಲ್ಲೇ ಅವರು ಪುನಹ ಯಜಮಾನರೂ ನಾವು ಆಶ್ರಿತರೂ ಆಗುವದರಲ್ಲಿ ಯಾವ ಸಂದೇಹವೂ ಇಲ್ಲ. ಅಂದರೆ ಅವರು ನಮಗೆ ಸ್ವತಂತ್ರವನ್ನು ಎಷ್ಟು ಕಷ್ಟವಿಲ್ಲದೆ ಕೊಡುತ್ತಾರೋ ಅಷ್ಟೇ ಸುಲಭದಲ್ಲಿ ನಾವು ಕಳೆದುಕೊಳ್ಳುವೆವು.

ನಾವು ನಮ್ಮ ದೇಶದಲ್ಲಿ ಜಾತಿಭೇದದ ಕಠಿಣವಾದ ಕಲ್ಪಿತ ನಿಯಮಗಳಿಂದ, ಅನ್ಯರಿಗೆ ಆಶ್ರಿತರಾಗಿರುವಾಗ್ಯೆ ಬ್ರಿಟಿಷ್ ಚಕ್ರಾಧಿಪತ್ಯದ ಸಂರಕ್ಷಣೆಗೆ ಜವಾಬ್ದಾರರಾಗಿರುವ ಕಾರಭಾರಿಗಳು ಚಕ್ರಾಧಿಪತ್ಯದಲ್ಲಿ ವರ್ಣಭೇದದಿಂದ ಕೂಡಿದ ಜಾತಿಗಳನ್ನು ಕಲ್ಪಿಸಲು ಶುರು ಮಾಡಿರುವರು. ಈ ಕಲ್ಪನೆಯನ್ನು ಚಕ್ರಾಧಿಪತ್ಯವನ್ನು ಸ್ಥಾಪಿಸಲು ಸಹಕಾರಿಗಳಾದ ನಮ್ಮ ಜನಾಂಗದವರಮೇಲೆ ಅತಿ ಕಠಿಣವಾದ ರೀತಿಯಿಂದ ಪ್ರಯೋಗಿಸಲು ವಿಶ್ವಪ್ರಯತ್ನವನ್ನು ಮಾಡುವವರಾಗಿರುತ್ತಾರೆ. ಈಗ ಬ್ರಿಟಿಷ್ ಜನಾಂಗವು ನಮ್ಮ ಜನಾಂಗದವರ ಸಹಾಯದಿಂದ ಅತಿ ಬಲಿಷ್ಠರಾದ ಕೂಡ್ಲೆ ಮಹಾಂಧರಾಗಿ ಅವರ ಜವಾಬ್ದಾರಿಕೆಯನ್ನು ಮರತು, ಚಕ್ರಾಧಿಪತ್ಯವನ್ನು ಕಳೆದುಕೊಳ್ಳುವ ಸಂಭವವನ್ನು, ಈಗ ಅವರನ್ನು ಮುಚ್ಚಿಕೊಂಡಿರುವ ಮಾಂದ್ಯತ್ವವು ತಿಳಕೊಳ್ಳದಹಾಗೆ ಮಾಡುವರೀತಿ ಕಾಣುತ್ತೆ. ಈಗ ದಕ್ಷಿಣ ಆಫ್ರೀಕದಲ್ಲಿ ಕೆನ್ಯಾ ಸಂಸ್ಥಾನ ಮತ್ತು ಇತರ ಬ್ರಿಟಿಷ್ ಚಕ್ರಾಧಿಪತ್ಯದ ಸ್ವತಂತ್ರ ಸಂಸ್ಥಾನಗಳಲ್ಲಿ ನಮ್ಮ ಜನಾಂಗವನ್ನು ವರ್ಣಭೇದವನ್ನಿಟ್ಟುಕೊಂಡು ಬಹಳ ಆಕ್ಷೇಪಿಸುವವರಾಗಿರುತ್ತಾರೆ. ಕಳೆದ ಘೋರ ಯುದ್ಧದಲ್ಲಿ, ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಅಪಾಯ ಒದಗಿರುವಾಗ್ಯೆ, ನಮ್ಮ ಕಷ್ಟಕಾಲದಲ್ಲಿ ನೀವು ಒಂದು ನಮಗೆ ಸಹಾಯಮಾಡಿರಿ. ಇದಕ್ಕೆ ಪ್ರತಿಯಾಗಿ ನಿಮಗೆ ಸ್ವರಾಜ್ಯದಿಂದ ಸಿಕ್ಕುವ ಸ್ವತಂತ್ರದ ಗೌರವಕ್ಕೆ ಅರ್ಹರಾಗುವಿರಿ" ಎಂಬದಾಗಿ ಹೇಳಿ ನಮ್ಮ ಸಹಾಯವನ್ನು ಇತರ ಬ್ರಿಟಿಷ್ ಚಕ್ರಾಧಿಪತ್ಯದ ಸ್ವತಂತ್ರ ಸಂಸ್ಥಾನಗಳಿಂದ ಹೊಂದಿದ ಸಹಾಯಕ್ಕಿಂತಲೂ ಅತಿ ಹೆಚ್ಚಾಗಿ ಹೊಂದಿಕೊಂಡು, ಅವರಿಗೆ ಜಯಪ್ರದವಾದನಂತರ ನಮಗೆ ಅವರು ಕೊಟ್ಟ ಭಾಷೆಯನ್ನು ಮರೆತಹಾಗೆ ಕಾಣುತ್ತೆ. ಈ ವಿಷಯದಲ್ಲಿ ನಮ್ಮ ದೇಶದಲ್ಲಿ ದೊಡ್ಡ ಅಸಮಾಧಾನವು ಸಂಶಯವೂ ಸಹ ಉಂಟಾಗಿದೆ. ನಾವು ಹೆಸರಿಗೆ ಮಾತ್ರ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿದ ಪ್ರಜೆಗಳಾಗಿದ್ದರೂ ಹೊರತು ಚಕ್ರಾಧಿಪತ್ಯದ ಇತರ ಜನಾಂಗದವರು ನಮ್ಮನ್ನು ಅವರ ಸಮಾನರಾಗಿಯೂ ಮತ್ತು ಸಹೋದರಭಾವದಿಂದಲೂ ಕಾಣುವವರಾಗಿಲ್ಲ. ಸಾಮ್ರಾಜ್ಯಧಾರ ನೀತಿವಿಚಾರಕಶಾಸ್ತ್ರಿಗಳು ಈ ಚಕ್ರಾಧಿಪತ್ಯದ ತತ್ವಗಳು (ideals) ಎರಡೆಂದು ವಿವರಿಸುತ್ತಾರೆ. ಅವು ಯಾವವೆಂದರೆ (1) "ಚಕ್ರಾಧಿಪತ್ಯದ ಎಲ್ಲಾ ಜನಾಂಗಗಳಲ್ಲಿ ಚಕ್ರಾಧಿಪತ್ಯದ ಏಳಿಗೆಯೂ ಮತ್ತೂ ಪ್ರಪಂಚದ ಉದ್ಧಾರಕ್ಕೂ, ಅವರವರ ಶಕ್ತ್ಯಾನುಸಾರ ಸಹಾಯಕರಾಗಲಿಕ್ಕೆ ಆಸ್ಪದ ಕೊಡುವ ವಿಶ್ವಾಸವೂ ಮರ್ಯಾದೆಯಿಂದ ಕೂಡಿದ ಸಮಾನತ್ವವೂ (equality) ಮತ್ತು ಸಹೋದರಭಾವವೂ. (2) ಈ ಚಕ್ರಾಧಿಪತ್ಯದ ಸ್ಥಾಪನೆಯಿಂದ ಆಗುವ ಪ್ರಯೋಜನವೂ ಮತ್ತೂ ಲಾಭವೂ ಹೆಚ್ಚಾಗಿ ಬಿಳೀ ಜನಾಂಗಕ್ಕೇನೇ ಆಗಬೇಕೆಂದು, ಮತ್ತು ಸ್ವಲ್ಪ ಪ್ರಯೋಜನದಲ್ಲೇ ಚಕ್ರಾಧಿಪತ್ಯದ ಇತರ ಜನಾಂಗದವರು ತೃಪ್ತರಾಗಿರಬೇಕೆಂದು, ಆದರೆ ಈ ಚಕ್ರಾಧಿಪತ್ಯವನ್ನು ಉಚ್ಚಸ್ಥಾನದಲ್ಲಿಟ್ಟು ಚಕ್ರಾಧಿಪತ್ಯದ ಪ್ರಯೋಜನಕ್ಕೂ, ಸಮಸ್ತ ಪ್ರಪಂಚದ ಪ್ರಯೋಜನಕ್ಕೂ ಉಪಯೋಗವಾಗಬೇಕಾದರೆ ಎರಡನೇ ತತ್ವವನ್ನು ಬಿಟ್ಟು ಒಂದನೇ ತತ್ವವನ್ನು ಮರೆಮಾಚದೆಯೂ, ಮತ್ತು ಯಾವ ಕಟ್ಟುಗಳೂ ಇಲ್ಲದೆಯೂ ಅನುಸರಿಸಬೇಕು. ದಕ್ಷಿಣ ಆಫ್ರೀಕದಲ್ಲಿ ಬಿಳೀ ಜನರು ನಮ್ಮವರನ್ನು ಸಮಾನರಾಗಿ ಕಾಣುವದಿಲ್ಲ. ಈ ತರದ ಭಿನ್ನಭೇದಗಳಿಗೆ ಆಸ್ಪದ ಕೊಟ್ಟಲ್ಲಿ ಖಂಡಿತವಾಗಿಯೂ ನಮ್ಮ ದೇಶವು ಚಕ್ರಾಧಿಪತ್ಯದೊಳಗೆ ಇರುವದು ಅಸಾಧ್ಯವು, ಮತ್ತು ಯೋಗ್ಯತೆಯೂ ಸಹ ಆಗಿರುವದಿಲ್ಲ. ಈಸ್ಟ್ ಆಫ್ರೀಕದ ಕೆನ್ಯಾ ಪ್ರಾಂತ್ಯದಲ್ಲೂ ಕೂಡ ನಮ್ಮ ದೇಶದವರನ್ನು ಬಹಳ ಕಮ್ಮಿಯಾಗಿ ಕಾಣುತ್ತಾರೆ. ಚಕ್ರಾಧಿಪತ್ಯವು ಬಲಿಷ್ಠತೆಯನ್ನು ಹೊಂದಿಕೊಂಡು ಬಂದ ಹಾಗೆ ಈ ವ್ಯಾಧಿಯು ಚಕ್ರಾಧಿಪತ್ಯದ ಸ್ವತಂತ್ರ ಸಂಸ್ಥಾನಗಳ ಜನಾಂಗಗಳಲ್ಲಿ ಪ್ರಬಲಿಸಿಕೊಂಡು ಬರುತ್ತಿದೆ. ಈ ವರ್ಣದ ಜಾತಿಭೇದದ ರೋಗವನ್ನು ತೆಗೆದುಹಾಕದೆ ಹೋದ ಪಕ್ಷಕ್ಕೆ ಖಂಡಿತವಾಗಿಯೂ ಚಕ್ರಾಧಿಪತ್ಯವು ಪೂರ್ವದ ಅನೇಕ ಬಲಿಷ್ಠವಾದಂಥ ಚಕ್ರಾಧಿಪತ್ಯಗಳು ಬಿದ್ದಹಾಗೆ ಬಿದ್ದು ಒಡೆದುಹೋಗುವದರಲ್ಲಿ ಏನೊಂದು ಸಂಶಯವಿಲ್ಲ. ಹಿಂದೀ ಜನರಿಗೆ ಚಕ್ರಾಧಿಪತ್ಯದ ಸ್ವತಂತ್ರ ಸಂಸ್ಥಾನಗಳಲ್ಲಿ ಸಮಾನತ್ವದಿಂದ (equality) ಕಂಡು ನಮ್ಮ ಹಿಂದ ದೇಶಕ್ಕೆ ಸ್ವರಾಜ್ಯವನ್ನು ಕೊಟ್ಟು ಚಕ್ರಾಧಿಪತ್ಯವನ್ನು ಉಳಿಸುತ್ತಾರೋ ಯಾ, ಹಿಂದುದೇಶವು ವರ್ಣದ ಜಾತಿಭೇದದಿಂದ ಚಕ್ರಾಧಿಪತ್ಯವನ್ನು ಬೇಸರದಿಂದ ಬಿಡುವಹಾಗೆ, ಬ್ರಿಟಿಷ್ ಚಕ್ರಾಧಿಪತ್ಯದ ಕಾರಭಾರಿಗಳು ಮಾಡುತ್ತಾರೋ ಹ್ಯಾಗೆಂಬದನ್ನು ಇನ್ನು ಮುಂದೆ ನೋಡಬೇಕಾಗಿದೆ.

ಸಂಘದ ಕೆಲಸ

ನಮ್ಮ ದೇಶವನ್ನು ಈಗಿನ ಹೀನಸ್ಥಿತಿಯಿಂದ ಅಭಿವೃದ್ಧಿಸ್ಥಿತಿಗೆ ತರಬೇಕಾದರೆ ದ್ರವ್ಯ ಮತ್ತು ಜನಸಹಾಯವೂ ಆಗಬೇಕೆಂದು ಮೊದಲೇ ಸೂಚಿಸಿರುತ್ತೆ. ಅಲ್ಲದೆ ದ್ರವ್ಯಸಹಾಯವು ಒದಗಿದ ಕೂಡ್ಲೆ ಜನಸಹಾಯಕ್ಕೆ ಕಷ್ಟ ಬರಲಾರದೆಂದು ಸಹ ವಿವರಿಸಿದ್ದಾಯಿತು. ಹಾಗಾದರೆ ನಮ್ಮ ಉದ್ದೇಶಗಳನ್ನು ನೆರವೇರಿಸಲಿಕ್ಕೆ ಹ್ಯಾಗೆ ದ್ರವ್ಯಾರ್ಜನೆಯನ್ನು ಮಾಡುವ? 1916ನೆ ಇಸವಿಯ ಸಂಘದ ವಾರ್ಷಿಕ ಸಮ್ಮೇಳನದಲ್ಲಿ 10ನೇ ಠರಾವು ನಮ್ಮ ದೇಶಕ್ಕೆ ಒಂದು ರಾಷ್ಟ್ರೀಯ ಬ್ಯಾಂಕನ್ನು (National Bank) ಸ್ಥಾಪಿಸಬೇಕೆಂಬದಾಗಿದೆ. ಆದರೆ ಈಗ ನಮ್ಮ ದೇಶದ ಒಸ ಸ್ಥಿತಿಯಲ್ಲಿ, ಒಂದು ರಾಷ್ಟ್ರೀಯ ಬ್ಯಾಂಕನ್ನು ರಾಷ್ಟ್ರೀಯದ ಪ್ರಯೋಜನಕ್ಕಾಗಿ ಸ್ಥಾಪಿಸುವದು ಸುಲಭವಲ್ಲವೆಂಬುವದು ಠರಾವನ್ನು ಕಾರ್ಯಥಃ ನಡಿಸದೆ ಇರುವದರಿಂದ, ತಿಳಿಯಬೇಕಾಗಿದೆ. ಎಷ್ಟು ಕಷ್ಟದಲ್ಲಿದ್ದರೂ ನಮ್ಮ ಕಷ್ಟದಿಂದ ಪಾರಾಗಬೇಕಾದರೆ ದ್ರವ್ಯವನ್ನು ಕೂಡಿಸುವದರಿಂದಲೇ ಆಗಬೇಕಲ್ಲವೆ? ಆದಕಾರಣ ಯಾರಿಗೂ ತೊಂದರೆ ಆಗದೆ (ಅಂದರೆ ಚಂದಾ ಎತ್ತದೆ) ದೇಶದ ಜನರೆಲ್ಲರೂ ಒಗ್ಗಟ್ಟಿನಿಂದ ವರ್ತಿಸಲು ಮನಸುಮಾಡಿದರೆ ಈಗ ನಮ್ಮ ದೇಶದಲ್ಲಿ ಸತ್ತ ಜಾನುವಾರುಗಳ ಚರ್ಮವನ್ನು ಮಾರುವದರಿಂದ ಬರುವ ಲಾಭವನ್ನು ನಾವು ಒಂದುಗೂಡಿಸಲು ಪ್ರಯತ್ನಪಟ್ಟರೆ ಕನಿಷ್ಠಪಕ್ಷಕ್ಕೆ ವರ್ಷಕ್ಕೆ 35 ರಿಂದ 40 ಸಾವಿರ ರೂಪಾಯಿಗಳವರೆಗೆ ಸಂಪಾದನೆ ಆಗುವದರಲ್ಲಿ ಯಾವ ಸಂದೇಹವೂ ಇರುವದಿಲ್ಲ. ಹ್ಯಾಗೆಂದರೆ—ಸರಕಾರಿ ಲೆಖ್ಖಗಳ ಪ್ರಕಾರ 10 ವರ್ಷದ ಸರಾಸರಿ (Average) ತೆಗೆದು ನೋಡಿದರೆ ನಮ್ಮ ದೇಶದಲ್ಲಿ 10,000 ಜಾನುವಾರುಗಳು ಪ್ರತಿವರ್ಷವೂ ಮೃತಪಡುತ್ತವೆ. ಲೆಖ್ಖಕ್ಕೆ ಸಿಕ್ಕದೆ ಸತ್ತದು ಅನೇಕವಿರಬಹುದು ಎಂಬುವದರಲ್ಲಿ ಸಂಶಯವಿಲ್ಲ. ಈ 10 000 ಜಾನುವಾರುಗಳ ಚರ್ಮವನ್ನು ಸಂಘದ ಮೂಲಕ ಒಂದುಗೂಡಿಸಿ ಮಾರಲು ಸಾಧ್ಯಮಾಡಿಸಿದರೆ 35 ಯಾ 40 ಸಾವಿರ ರೂಪಾಯಿಗಳ ಸಂಪಾದನೆ ಆಗುವದರಿಂದ ಏನು ಸಂದೇಹ? ಅಲ್ಲದೆ ಈ 10,000 ಜಾನುವಾರುಗಳ ಮೂಳೆಯನ್ನ ಜಮಾಯಿಸಿದರೆ ಕನಿಷ್ಟಪಕ್ಷಕ್ಕೆ ವರ್ಷಕ್ಕೆ 150 ಟನ್ನು ಮೂಳೆಯು ಜಮೆಯಾಗುವದರಲ್ಲಿ ಸಂಶಯವಿಲ್ಲ. ನಮ್ಮ ದೇಶದಲ್ಲೇ ಗೊಬ್ಬರದ ಕಾರ್ಖಾನೆ ಇರುವದರಿಂದ ಈ ಮೂಳೆಯನ್ನು ಇಲ್ಲಿಯೇ ಗೊಬ್ಬರದ ಪುಡಿ ಮಾಡಿಸಿ ರೈತರಿಗೆ ಸುಲಭಕ್ರಯದಲ್ಲಿ ಮಾರಾಟ ಮಾಡಿದರೆ, ನಮ್ಮ ಬಂಡವಾಳವು ಕಮ್ಮಿ ಪಕ್ಷ ಮೂಳೆಯ ಕ್ರಯದಿಂದಲೇ 7500 ರೂಪಾಯಿಗಳಿಂದ ಹೆಚ್ಚುವದಲ್ಲದೆ 1000 ಎಕರೆ ಭತ್ತದ ಜಮೀನಿಗೆ ಈ ಮೂಳೆ ಗೊಬ್ಬರವನ್ನು ಹಾಕಲು ಸುಲಭರೀತಿಯಲ್ಲಿ ಪ್ರತಿ ವರ್ಷವೂ ಒದಗಿಸಿಕೊಟ್ಟಲ್ಲಿ ದೇಶದ ಸಾಂಪತ್ತಿಕಸ್ಥಿತಿಯೂ ಎಷ್ಟರಮಟ್ಟಿಗೆ ಅಭಿವೃದ್ಧಿ ಹೊಂದಬಹುದೆಂಬದನ್ನು ವಾಚಕ ಮಹಾಶಯರು ಸ್ವಲ್ಪ ತಾಳ್ಮೆಯಿಂದ ಆಲೋಚಿಸಿ ನೋಡಿ. ಹ್ಯಾಗೂ ಸತ್ತ ಜಾನುವಾರುಗಳ ಚರ್ಮ ಮತ್ತು ಮೂಳೆಯ ಉತ್ಪತ್ತಿಯಿಂದ ಕನಿಷ್ಟ ಪಕ್ಷಕ್ಕೆ ವರ್ಷಕ್ಕೆ 50,000 ರೂಪಾಯಿಗಳನ್ನು ಒದಗಿಸುವದರಲ್ಲಿ ಯಾವ ಕಷ್ಟವೂ ಇರಲಾರದು. ಇದೊಂದು ಬಾಬಿನಲ್ಲಿಯೇ ರಾಷ್ಟ್ರೀಯ ಬ್ಯಾಂಕನ್ನು ಸ್ಥಾಪಿಸುವದು ಸುಲಭಸಾಧ್ಯವಲ್ಲವೇ? ವಾಚಕ ಮಹಾಶಯರಲ್ಲಿ ಅನೇಕರು ಕಾರ್ಯತಃ ಮಾಡುವದು ಹೇಳುವಷ್ಟು ಸುಲಭವಾಗಿಲ್ಲವೆಂದು ಆಕ್ಷೇಪಿಸಬಹುದು. ಮನಸ್ಸಿರುವಲ್ಲಿ ದಾರಿ ಇದೆ ಎಂಬುವ ನಾಣ್ಣುಡಿಯು ಎಲ್ಲರಿಗೂ ತಿಳಿಯದ್ದಲ್ಲ. ನಾವು ಒಗ್ಗಟ್ಟಿನಿಂದ ಈ ಲಾಭಕರವಾದ ಕೆಲಸವನ್ನು ದೇಶದ ಪ್ರಯೋಜನಕ್ಕಾಗಿ ಏರ್ಪಡಿಸಲು, ಅಸಾಧ್ಯವಾದ ಪಕ್ಷಕ್ಕೆ ಸತ್ತ ಜಾನುವಾರುಗಳ ಮತ್ತು ಅಂಥಾ ಜಾನುವಾರುಗಳಿಂದ ಹೊಂದಬಹುದಾದ ಉತ್ಪತ್ತಿಯ ತಪ್ಪಲ್ಲ. ಯಾವ ಕಾರಣದಿಂದ ಅಸಾಧ್ಯವೆಂದು ಕಾಣುತ್ತೋ ಅಂಥಾ ಕಾರಣಗಳನ್ನು ನಮ್ಮ ನಡವಳಿಕೆಗಳಿಂದ ತೆಗೆದುಹಾಕಿದರೆ ಯಾತಕ್ಕೆ ಅಸಾಧ್ಯವೆಂದು ಯೋಚಿಸಬೇಕೆಂಬದು ಗೊತ್ತಾಗುವದಿಲ್ಲ. ಪ್ರಪಂಚದಲ್ಲಿ ಈಗ ಬಲಿಷ್ಠರಾಗಿರುವ ಜನಾಂಗದವರಲ್ಲಿ ಎಷ್ಟು ಜನರು ಅವ

ಪ್ರಾಣಕ್ಕೂ ಕೂಡ ಲಕ್ಷ್ಯಕೊಡದೆ ಎಂಥಾ ಅದ್ಭುತ ಕೆಲಸಗಳನ್ನು ಪ್ರತಿದಿನವೂ ಮಾಡುತ್ತಲಿದ್ದಾರೆ ನಮ್ಮ ಪುರಾಣ ಇತಿಹಾಸಗಳಲ್ಲು ಎಷ್ಟು ಅದ್ಭುತ ಕೆಲಸಗಳನ್ನು ಸಾಧನೆಯಿಂದ ಮಾಡಿರುತ್ತಾರೆ. ನಮ್ಮ ಪೂರ್ವಿಕರು ಈಗ ನಾವು ಉತ್ಕೃಷ್ಟ ಭಕ್ಷ್ಯವನ್ನು ಬೆಳೆಸುವ ಭೂಮಿಗಳನ್ನು ಎಷ್ಟು ಕಷ್ಟಪಟ್ಟು ರೂಢಿಪಡಿಸಿರಬಹುದು? ಈಗಲೂ ಸ್ವಾರ್ಥತೆಗೋಸ್ಕರ ನಾವು ಎಷ್ಟು ಕಷ್ಟಪಡುವವರಾಗಿದ್ದೇವೆಂಬದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ ಮಹಾಶಯರೇ ಪ್ರಪಂಚದಲ್ಲು ಯಾವದು ಅಸಾಧ್ಯವಾಗಿರುವದಿಲ್ಲ. ಅಸಾಧ್ಯವೆಂಬ ಶಬ್ದವನ್ನೇ ನಮ್ಮ ಭಾರತಭೂಮಿಯ ಭಾಷೆಗಳಿಂದ ತೆಗೆದು ಹಾಕಬೇಕಾಗಿದೆ ನಮ್ಮ ಈಗಿನ ಶಿಕ್ಷಣಕ್ರಮಗಳಿಂದಲೇ ನಮಗೆ ಪ್ರತಿಯೊಂದು ಕೆಲಸವೂ ಅಸಾಧ್ಯವಾಗಿ ಕಂಡುಬರುವದು. ಪಶ್ಚಿಮರಾಜ್ಯದ ಜನಾಂಗದವರಿಗೆ 230 ಮೈಲು ವೇಗದಲ್ಲು ಹೋಗುವಂಥಾ ಆಕಾಶ ವಿಮಾನಗಳನ್ನು ರಚಿಸಲು ಸಾಧ್ಯವಾಗುವಾಗ್ಯೆ, ದೊಡ್ಡದಾದ ಹಡಗುಗಳು ಹೋಗಲಿಕ್ಕೆ ಅಮೇರಿಕ ದೇಶದಲ್ಲು ಪನಾಮ ಎಂಬುವ ಕಾಲವೆಯನ್ನು ನೂರಾರು ಮೈಲುಗಳು ಬೆಟ್ಟಗುಡ್ಡಗಳನ್ನು ತೆಗೆದು ಮಾಡಲು ಸಾಧ್ಯವಾಗಿರುವಾಗ್ಯೆ ನಮ್ಮ ಕಾವೇರಿ ಹೊಳೆಗೆ ಮೈಸೂರು ಸರಕಾರದವರು ಅಡ್ಡಕಟ್ಟೆಕಟ್ಟಿ ಕೃಷ್ಣರಾಜಸಾಗರವೆಂಬ ಪ್ರಪಂಚದಲ್ಲಿ ಕಲ್ಪಿತಸಾಗರಗಳಲ್ಲಿ ದೊಡ್ಡ ಸಾಗರವನ್ನಾಗಿ ಏರ್ಪಡಿಸಿ ಲಕ್ಷಾಂತರ ಎಕರೆ ಜಮೀನುಗಳನ್ನು ವ್ಯವಸಾಯಕ್ಕೆ ತರಲು ಸಾಧಿಸಿರುವಾಗ್ಯೆ, ಅಲ್ಲದೆ ಇನ್ನೂ ಅನೇಕ ಅದ್ಭುತ ಕೆಲಸಗಳು ದಿನನಿತ್ಯ ಈ ಪ್ರಪಂಚದಲ್ಲು ಸಾಧ್ಯವಾಗುತ್ತಿರುವಾಗ್ಯೆ, ನಮ್ಮ ದೇಶದ ಜನರಿಗೆ ಈ ಚಿಕ್ಕ ಕೆಲಸವು ಅಸಾಧ್ಯವಾಗಿ ಕಂಡುಬಂದರೆ ನಾವು ಮನುಷ್ಯರೆಂಬ ಹೆಸರಿನಿಂದ ಈ ಪ್ರಪಂಚದಲ್ಲು ಜೀವಿಸಲು ಅರ್ಹರಲ್ಲವೆಂಬದರಲ್ಲು ಯಾವ ಸಂಶಯವೂ ಪಡಬೇಕಾದ ಅವಶ್ಯವಿಲ್ಲ

ಕಳೆದ ಸಂಚಿಕೆಯಲ್ಲು "ಸಂಘದ ಕೆಲಸ" ವೆಂಬ ಲೇಖನದಲ್ಲು—ಅವರ ಎಣಿಕೆಗೆ 1672 ಜನರು ಎಂಬದನ್ನು 972 ಜನರೆಂದು ಓದಬೇಕು

ವೀರರಾಜನ ಪಶ್ಚಾತ್ತಾಪ.

[ಕೊಡಗಿನ ಕೊನೆಯ ಅರಸನಾದ ಚಿಕ್ಕವೀರರಾಜನು ಇಂಗ್ಲೆಂಡಿನಲ್ಲಿ ತನ್ನ ಮುದ್ದು ಕುವರಿಯೊಡನೆ ವಾಸಿಸುತ್ತಿದ್ದನಷ್ಟೆ ರಾಜಕುವರಿಗೆ ಇಂಗ್ಲಿಷ್ ಭಾಷೆಯನ್ನು ಕಲಿಸಿದ್ದುದರಿಂದ ಮಾತೃಭಾಷೆಯು ಮರೆತುಹೋಯಿತು ತನ್ನ ಅಂತಿಮ ಕಾಲದಲ್ಲಿ ವೀರರಾಜನು ಮಗಳೊಡನೆ ಮಾತಾಡಲು ಪ್ರಯತ್ನಿಸುವ ನೋಟ ಕೇ ಈ ನೋಟು ಪ್ರಯತ್ನ

ಇತಿ ಬರೆದವ]

ಎನ್ನ ಮಣಿಪುತ್ಥಳಿಯೆ।
ಎನ್ನೊಡನೆ ಮಾತೊಂದು।
ಚೆನ್ನ! ಮಾತಾಡು! ಮುದ್ದು! ಬಾಯ್ಬಿಡು॥
ಇನ್ನು ನಾ ಪೋಪೆನು
ಸನ್ನಿಹಿತವಾಗಿರ್ಪುದು।
ನಿನ್ನ ಮರಣವೆನಗೆ ಕಾಯ್ದಿರುವ್ಪುದು ॥೧॥
ಸೀರೆಯನ್ನುಟ್ಟು!
ಬಾರೆ! ಕಿವಿಗಾಣಿಯೊಲು।
ತೋರೆನಗೆ ನಿನ್ನ ಮುದ್ದುಮೊಗವನೂ
ಸಾರಿಪೇಳ್ವೆನು ಸುಕು
ಮಾರಿ ಕೇಳೆನ್ನ ನುಡಿ
ನಿಮ್ಮಾರದೆ ಕಾಯೆನ್ನ ಪ್ರಾಣ! ಕುವರಿ ಗೌರಿ ॥೨॥
ಸುಲಿದ ಬಾಳೆಯ ಹಣ್ಣ
ಸೊಬಗಿನವಿಯು ನಿನ್ನವಾಕ್ಯ
ದೊಲು ಕನ್ನಡ ನುಡಿ ಕನ್ನಡಿಯ ಪೋಲು।
ಸುಲಲಿತವಾಗಿರ್ಪುದು
ಲಲಿತಾಂಗಿ ಮನವೊಲಿದು।
ಒಲಿದು ಕನ್ನಡವ ಮಾತಾಡು ಬಾಯ್ಬಿಟ್ಟು ॥೩॥
ಪೂಡವಿಪನಾನಾಗಿ।
ಪೊಡಮಡುವೆ ನಿನ್ನಡಿಗೆ
ಬಿಡು ಲಜ್ಜೆ! ನಿನ್ನ ಪರಭಾಷೆ ತಿಳಿಯೆನಾಂ॥
ಕಿಡುದೈನ್ಯದೀ ನುಡಿವೆ।
ಒಡನೆ ಮಾತಾಡಮ್ಮ।
ಮಡದಿ! ಪ್ರಿಯಳಾ! ಮಾತಾಡು ಕನ್ನಡದಿ॥೪॥
ಕಡುಗಲಿಗಳೆನಿಸಿರ್ದ।
ಕೊಡಗರ ಒಡೆಯನೆನಿಸಿ।
ಪೊಡವಿಯೊಳಿರುವ ಸುಖವನಾಂ ಸನುಭವಿಸಿ॥
ಪಡುಗಡಲ ರಾಣಿಯಲಿ।
ಒಡಲ ಸುಕುಮಾರಿಯನು।
ಬಿಡೆಗರವಿತ್ತು ಪೋದಪೆನೆಂಬುದೆಲ್ಲಿ? ॥೫॥
ಅಂದು ಉಪ್ಪಂಗೆಯಲಿ।
ಚೆಂದದಿಂ ಮೆರೆದು ನಾ।
ಇಂದು ತಿಪ್ಪರಿಗೆಯಲಿ ಬಿದ್ದೆ ಹೆಸಕಟ॥
ಅಂದದಿಂ ಪೇಳ್ದ।
ಅಂದಿನಾ ಮಾತುಗಳ।
ಮುಂದಮತಿ ನಾ ಕೇಳದಾದೆ ಶಂಕರಾ ॥೬॥
ಸಂಕಟವೇರುತ್ತಿದೆ
ಶಂಕರ ತಾಳಲಾರೆ।
ಕಿಂಕರ ನಾ ದೆನೆಗೆ ಬೇಡೀ ಅರಸು ಜನ್ಮವೂ॥
ಸಂಕಟದಲಿರುತಿರಲು
ಕಿಂಕರರು ಸತಿಸುತರು।
ಶಂಕರ! ನೀನಲ್ಲದಿನ್ನಾರಿಲ್ಲ! ಕರುಣಾ ॥೭॥

"ಚೆನ್ನಕೇಶವ"

ಪತ್ರವ್ಯವಹಾರಗಳು.

ಬಾಕ್ಷಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ [ಎಡಿಟರ್]

ಅಯ್ಯಾ,

ನಮ್ಮ ಈ ಬಾಡಗ ಗ್ರಾಮಸ್ಥರು ೧೨೦ ಬಟ್ಟಿ ಭೂಮಿಗೆ ೨ ೯-೦ ರಾ ಮೇರೆ ಚಂದಾ ಹಾಕಿ ಒಂದು ಸ್ಕೂಲನ್ನು ಕಟ್ಟಿಸಿದೆವು ಅದು ಮಳೆ ವರ್ಷದಿಂದ ಬಿದ್ದು ನಾಶವಾಯಿತು ನಮ್ಮ ಗ್ರಾಮದಲ್ಲಿ ಒಂದು ಷೇರ್ ಫಂಡ್ ಇಟ್ಟಿದ್ದೆವು ಆ ಬಾಬ್ತು ೨೦೦ ರೂ. ಗಳನ್ನು ಪುನಃ ಸ್ಕೂಲ್ ಕಟ್ಟಲಿಕ್ಕಾಗಿ ಮೆ॥ ಕೊಂಗಂಡ ಕುಟ್ಟಪ್ಪನವರ ಕೈಯ್ಯಲ್ಲಿ ಇಟ್ಟೆವು ಎಲ್ಲರೂ ಸೇರಿ ಸ್ಕೂಲ್ ಕಟ್ಟತವಾಯಿತು ಖರ್ಚು ಕಳೆದು ೩೦೯ ಇವರಲ್ಲಿ ಉಳಿಯಿತು. ಅಲ್ಲದೆ ಈ ಸ್ಕೂಲಿಗಾಗಿ ಮೆ॥ ಕೊಂಗಂಡ ಮೇದಪ್ಪನವರ ಜೇರೆಕಡೆ ಮಹಾನು ಭಾವರುಗಳಿಂದ ೪೧-೦-೦ ಚಂದಾ ಎತ್ತಿ ತಂದು ಇದನ್ನು ಮೆ॥ ಕೊಂಗಂಡ ಪಟೇಲರು ಕಾಳಪ್ಪನವರ ಸ್ವಾಧೀನದಲ್ಲಿ ಇಟ್ಟಿರುತ್ತೇವೆ ಮೇಲಂಡ ಕುಟ್ಟಪ್ಪನವರಲ್ಲಿ ಉಳಿದ ೩೦-೯-೯ ನ್ನು ನಾವು ಕೇಳಿದರೆ ಎಷ್ಟು ತಗಾದಿಸಿದಾಗ್ಯೂ ಕೊಡದೆ ಸತಾಯಿಸುತ್ತಾರೆ ಈ ಹಣವನ್ನು ಒಟ್ಟಿಗೆ ಕೊಟ್ಟರೆ ಇದು ಸ್ಕೂಲ್ ಅಭಿವೃದ್ಧಿಗೆ ಸಹಾಯವಾಗುತ್ತಿರಲಿಲ್ಲವೋ?

ನಾ ಗಣಪತಿ

ಅಯ್ಯಾ,

ಕಳೆದ ಜಮೀನುದಾರ ಸಂಘದ ಕಾನ್ಫರೆನ್ಸಿನ ಮಾರನೇ ದಿವಸ ಅವರ ಕೊಡಗು ಸೋಷಿಯಲ್ ಕ್ಲಬ್ ಮತ್ತು ಮದ್ಯನಿಷೇಧ ಸಂಘದ ಠರಾವುಗಳು ಏನಾದವು? ಅವನ್ನು ಮುಂದಕ್ಕೆ ತಂದು ಅದರಂತೆ ಆಚರಿಸಲಿಕ್ಕೆ ಆ ಸಂಘಗಳ ಪ್ರೆಸಿಡೆಂಟರಾದ, ಮೆ॥ ಕೇಳಪ್ಪಂಡ ಅಚಿಯ್ಯನವರೂ, ಮತ್ತು ಅಪ್ಪಾರಂಡ, ಬಿ. ಅಂಗಪ್ಪನವರೂ, ಮತ್ತು ಸೆಕ್ರೆಟರಿ ಮೆಂಬರುಗಳು ಏನು ಮಾಡುತ್ತಾರೆ? ಇದರ ವಿಷಯ ಇದುವರೆಗೆ ಅವರು ಏನಾದರೂ ಅಡಿನಂತೆ ನಡೆದು ತೋರಿಸಲು ಮುಂದಕ್ಕೆ ಬಂದಿದ್ದಾರೋ? ಬಿಟ್ಟಿದ್ದರೆ ದಯವಿಟ್ಟು ಅವರು ಈ ವರೆಗೆ ಈ ವಿಷಯ ಏನೇನು ಕೆಲಸಮಾಡಿದರೆಂಬುದನ್ನು ದಯಮಾಡಿ ತಿಳುವಳಿಕೆ ಇದ್ದವರು ಈ ಪತ್ರಿಕೆಯ ಮೂಲಕ ತಿಳಿಸಬೇಕಾಗಿ ಕೇಳುತ್ತೇನೆ ಕೊಡಗಿನಲ್ಲಿ ಅನೇಕ ಮೀಟಿಂಗುಗಳಿಗೆ ಅಧ್ಯಕ್ಷರಾಗಿ ಭಾಷಣ ಮಾಡುವವರು ಅನೇಕರು ಇದ್ದಾರೆ ಅದರೆ ಅದರಂತೆ ಆಚರಿಸಲು ಮುಂದಕ್ಕೆ ಎಷ್ಟುಜನ ಇದ್ದಾರೋ? ಕೊಡಗಿನಲ್ಲಿ ಇನ್ನಾದರೂ ಆಡಿದ್ದನ್ನು ಮಾಡಿ ತೋರಿಸುವವರು ಯಾರೇ ಮುಂದಕ್ಕೆ ಬಂದರೆ ನಮ್ಮ ದೇಶದ ಅಭಿವೃದ್ಧಿಯಲ್ಲಿ ಸ್ವಲ್ಪವಿದೆಯೋ? ಇಂಥಾ ನಡವಳಿಕೆಯು ನಮ್ಮ ದೇಶದ ದುರ್ಭಾಗ್ಯವೇ ಸರಿ ಇಂಥಾದ್ದನ್ನು ತಪ್ಪಿಸಲು, ಮೇಲಿನ ಪ್ರೆಸಿಡೆಂಟರವರು ಮುಂದಕ್ಕೆ ಬರ ಬೇಕೆಂದು ನಂಬುತ್ತೇನೆ

ಸೋಮಯ್ಯ

ಅಯ್ಯಾ,

ಕೋಕೇರಿ ನಾಲ್ನೇರಿ ಯೂನಿಯನ ಸಂಘದ ತಾರೀಖು ೨೩-೬-೨೩ರ ಮೀಟಿಂಗಿನಲ್ಲು ನಮ್ಮ ಉಭಯ ಗ್ರಾಮಗಳಿಗಾಗಿ ಪ್ರಥಮ ಸ್ಕೂಲ್ ಪೈನಲ್ ಪರೀಕ್ಷೆಯಲ್ಲು ಈ ವರ್ಷ ತೇರ್ಗಡೆ ಹೊಂದಿರುವ ಎಚ್. ಎಮ್. ಅಪ್ಪಣ್ಣಯ್ಯನವರಿಗೆ ನಮ್ಮ ಯೂನಿಯನ್ನಿನ ಜ್ಞಾಪಕಾರ್ಥವಾಗಿ ೨ ಪವನಿನ ಚಿನ್ನದ ಮೆಡಲನ್ನು ಬಹುಮಾನವಾಗಿ ಕೊಡಲು ತೀರ್ಮಾನಿಸಿರುತ್ತೇವೆ ಸದರಿ ವಿದ್ಯಾರ್ಥಿಯು ವಿದ್ಯಾಭ್ಯಾಸಂಗವನ್ನು ಮುಂದರಿಸಲು ಬೆಂಗಳೂರಿಗೆ ಹೋಗಿರುತ್ತಾರೆ ಸದರಿ ಅಪ್ಪಣ್ಣಯ್ಯನವರಿಗೆ ವಿದ್ಯಾಭ್ಯಾಸಂಘಕ್ಕೆ ಉತ್ತೇಜನ ಕೊಟ್ಟು ಉನ್ನತಪದವಿಯ ತೇರ್ಗಡೆಯನ್ನು ಹೊಂದುವ ಸಾಮರ್ಥ್ಯವನ್ನು ಶ್ರೀ ಕಾವೇರಿಯಮ್ಮನವರು ದಯಪಾಲಿಸಲೆಂದು ನಾವು ಅನುದಿನವೂ ಪ್ರಾರ್ಥಿಸುತ್ತೇವೆ.

ಕೊ ಮೇದಪ್ಪ
ಯೂನಿಯನ್ ಸಂಘದ ಪ್ರೆಸಿಡೆಂಟ್

ಅಯ್ಯಾ,

ತನ್ಮದ್ದು ಅಪ್ಪನೆರವಂಡ ಮನೆಯವರು ಆಚಾರ ಧರ್ಮಕ್ಕೆ ತಪ್ಪಿ ಕ್ಷಯಸೂತಕದಲ್ಲಿ ಲಗ್ನಕ್ಕೆ ಕುರಿವಾಡಿದ್ದು ತಪ್ಪೆಂದು ಬರದದ್ದು ನೋಡಿದೆ ಇದು ಸತ್ಯವೆ. ಆದರೆ ಇವರು ಯೆರಡು ಮನೆಯಲ್ಲೂ ವಾಸವಾಗಿ ತಕ್ಕವರಾಗಿಯೂ ಕೇವಲ ರಕ್ತಸಮ್ಮಂದಿಗಳಾಗಿಯೂ ಇದ್ದ ಜಿದ್ದಿನಿಂದ ಮೇಲೆ ಮನೆಯವರು ನಮ್ಮ ಮತಾಚಾರಕ್ಕೆ ವಿರೋಧ ಮಾಡಿರುವದರಿಂದ ನಾವು ತಕ್ಕ ಮುಖ್ಯಸ್ಥರೂ ಶ್ರೀಮಂತರಾದ ನಡಿಕೇರಿಯಂಡ ಮತ್ತು ಬಿದ್ದಂಡ ಮನೆಯವರು ಸಹ ಅರಪಟ್ಟ ದೇವಸ್ಥಾನದಲ್ಲು ಸೇರಿದ್ದಾಗ್ಯೆ ತಪ್ಪಿಯಿಂದ ತಕ್ಕ ಪ್ರಾಯಶ್ಚಿತ್ತ ಮಾಡಿಸ್ಯರಾಗಿ ನಂಬುತ್ತೇನೆ

"ನಾಚುರ್ಯೆತ"

ಕೊಡಗಿನ ಜೈಲ್ ಆಡಳಿತ.

ಮಹಾಶಯರೆ,

ಕೊಡಗಿನ ಜೈಲ್ ಆಡಳಿತವು ಹೇಗೆ ಇರುವುದೆಂಬುದು ಯಾರಿಗೂ ಗೊತ್ತಿರುವುದಿಲ್ಲ ಜೈಲಿನಲ್ಲಿ ಶಿಕ್ಷಣಕ್ರಮವು ಹೇಗಿದೆ? ಕೆಟ್ಟ ನಡತೆಗಾರರನ್ನು ಕಳ್ಳರನ್ನು ಒಳ್ಳೆ ನಡತೆಗೆ ತರುತ್ತಾರೋ? ಕೈಗಾರಿಕೆಗಳೇನಿವೆ! ಎಂಬುದನ್ನು ತಿಳುವಳಿಕೆ ಇರುವವರು ಯಾರಾದರೂ ತಿಳಿಸಬೇಕಾಗಿ ಅಪೇಕ್ಷಿಸುತ್ತೇನೆ. ಇಲ್ಲಿನ ಜೈಲಿನಲ್ಲಿ ಹಿಂದುಗಳು, ಮುಸಲ್ಮಾನರು, ಮತ್ತು ಇತರ ಜಾತಿಯವರಿಗೂ ಯೂರೋಪಿಯನ್ ಯಾ, ಯೂರೋಪಿಯನ್ನರಿಗೆ ಬೇಧವಿದೆಯೋ? ಜೈಲಿನ ಆಡಳಿತವನ್ನು ನೋಡಲಿಕ್ಕೆ ಉದ್ಯೋಗಸ್ಥರಲ್ಲದ ಮೆಂಬರು ಯಾರಾದರೂ ಇದ್ದಾರೋ? ಹೊರಗಣ ದೇಶದಲ್ಲಿ ಉದ್ಯೋಗಸ್ಥರಲ್ಲದವರು ಹೋಗಿ ಆಗಾಗ್ಗೆ ಸಂದರ್ಶಿಸುವುದಿಲ್ಲವೋ? ಇಲ್ಲಿಯೂ ಸಹ ಯಾಕೆ ಉದ್ಯೋಗಸ್ಥರಲ್ಲದವರನ್ನು ಆಗಾಗ್ಗೆ ಸಂದರ್ಶಿಸಿ, ಕೈದಿಗಳಿಗಿರುವ ತೊಂದರೆಗಳನ್ನು ಏಕೆ ಕೇಳಕೂಡದು?

ಜೈಲ್ ಆಡಳಿತವನ್ನು ಯಾರಾದರೂ ತಿಳಿಯಬೇಕೆಂದಿದ್ದರೆ, ಜೈಲ್ ಸುಪರಿಂಟೆಂಡೆಂಟರ ಸಮ್ಮತಿಯಿಂದ ಹೋಗಬಹುದೋ? ಈ ಪ್ರಶ್ನೆಗಳಿಗೆ ಸರಕಾರದವರಾಗಲೀ, ಯಾ, ತಿಳುವಳಿಕೆ ಇರುವ ಜನರಾಗಲೀ ಪತ್ರಿಕೆಯ ಮೂಲಕ ತಿಳಿಸಬೇಕಾಗಿ ಕೋರುತ್ತೇನೆ

ಉಪಕಾರಿ.

ಮಾಪಾರ್ಡುಗಳು

ಅಯ್ಯಾ,

ನಮ್ಮ ದೇಶದ ಮಹನೀಯರು ಕೆಲವರೂ, ಪದವಿಧರರೂ, ದೇಶವನ್ನು ಮದ್ರಾಸು ಅದಿಪತ್ಯಕ್ಕೆ ಸೇರಿಸಬಾರದೆಂದೂ, ಜನಾಂಗತ್ವವನ್ನುಳಿಸಲಿಕ್ಕೆ ಪ್ರತ್ಯೇಕ ಕೌನ್ಸಿಲ್ ಸಿಕ್ಕುವುದರಿಂದ ನಾವು ಪ್ರತ್ಯೇಕವಿರುವುದು ಒಳ್ಳೆಯದೆಂದೂ ಆಗಾಗ್ಗೆ ಹೇಳುತ್ತಿದ್ದರು ಅಲ್ಲದೆ, ನಮ್ಮ ಕಮಿಶನರು ಮತ್ತು ಚೀಫ಼್ ಕಮಿಶನರು ಕೌನ್ಸಿಲ್ ಒಡನೇ ಕೊಡುವುದೆಂದು ವಾಗ್ದಾನ ಮಾಡಿರುತ್ತಾರೆ ಅವರ ವಾಕ್ಯಗಳು ವೇದವಾಕ್ಯಗಳು ಆದ್ದರಿಂದ ಅವರು ಹೇಳುವಂತೆ ನಡೆಯಬೇಕಲ್ಲದೆ ಅನ್ಯಥಾ ಕೂಡದು ಎಂಬುದಾಗಿ ಹೇಳುತ್ತಿದ್ದರು ಈ ವಾಗ್ದಾನವು ತಪ್ಪಿ ತಿಂಗಳು ಹೋಗಿ ವರ್ಷಕ್ಕಿಂತಲೂ ವಿಶಾರದ ಸಕಾಲದ ಪ್ರೀತಿಗೂ ಅಭಿಮಾನಕ್ಕೂ ಪಾತ್ರರಾದ ದೇಶಕ್ಕೆ ಕೌನ್ಸಿಲ್ ಕೊಡಿಸುತ್ತೇವೆ ಅಮಾಲ್ಗಮೇಶನ್ ಬೇಡವೆಂದು ಯಜು ಹಾಕಿಸಿದ ಮೆ॥ ಮಾಗ್ಯಯ್ಯನವರೇ ಮೊದಲಾದವರು ಏನು ಮಾಡುತ್ತಾರೆ? ಅವರು ಈ ಸಮಯದಲ್ಲಿ ಹೀಗೆ ಮೌನತೆ ತಾಳಿರುವುದರ ಅರ್ಥವೇನು? ಕೌನ್ಸಿಲ್ ಸಿಕ್ಕದಿರುವುದು ಒಳ್ಳೆದೆಂದು ಅವರ ಅಭಿಪ್ರಾಯವೋ? ಇಲ್ಲವೇ, ದೇಶದಲ್ಲಿ ಅನಾಚಾರಕ್ಕೆ ಹೆಚ್ಚು ಜಾಗವಾಗಲಿ ಎಂಬುದಾಗಿಯೇ ಎಂಬುದು ತಿಳಿಯುವುದಿಲ್ಲ ಮದ್ರಾಸು ಅಮಾಲ್ಗಮೇಶನ ಠರಾವನ್ನು ಜಮೀನುದಾರ ಸಂಘದ ಪ್ರೆಸಿಡೆಂಟರು ಮತ್ತು ಸೆಕ್ರೆಟರಿಯವರು ಮುಂದರಿಸದಿರುವುದು ಏತಕ್ಕೆ? ನಮ್ಮ ಜಮೀನುದಾರ ಸಂಘದ ಪ್ರತಿನಿಧಿಗಳು ಸರಕಾರದವರಂತೆ ನಿರಂಕುಶಪ್ರವರ್ತನವನ್ನು ವಹಿಸಿದ ಕಾರಣವೇನು? ನಮ್ಮ ಕಮಿಶನರವರು ಆಗಾಗ್ಗೆ ಕೌನ್ಸಿಲ್ ವಿಷಯ ಮಾತಾಡುತ್ತಿದ್ದವರೂ ಸಹ ಮೌನವನ್ನು ತಾಳಿರುವುದೇತಕ್ಕೆ? ಚೀಫ಼್ ಕಮಿಶನರು ಮೂರು ತಿಂಗಳು ಇದ್ದು, ಒಂದು ಮಾತನ್ನಾದರೂ ಈ ವಿಷಯ ಎಕೆ ಆಡಲಿಲ್ಲ? ಇದೆಲ್ಲಾ ಮಕ್ಕಳಿಗೆ ಬಾಳೆತನ್ನು ತೋರಿಸುವ ರೀತಿ ಅಲ್ಲವೆ ಎರಡು ತಾಲೋಕು ಇರುವ ಒಂದು ದೇಶಕ್ಕೆ ಎಂದಾದರೂ ನ್ಯಾಯವಿಧಾಯಕಸಭೆಯು ದೊರೆಯುವುದೋ? ದೊರೆತರೆ ಕೆಲಸ ಮಾಡಲು ಸಾಧ್ಯವಿರುವುದೋ? ದೇಶೀಯರೇ ಇನ್ನಾದರೂ ಎಚ್ಚತ್ತು ಬೇರೆ ದೇಶಗಳ ಕಡೆಗೆ ನೋಡಿ

("ದೈತ")

ಲೇಟ್ ... ಕರುಂಬಯ್ಯನವರು ... ಮೆಡಿಕಲ್ ಕಾಲೇಜು ವಿದ್ಯಾರ್ಥಿ

[illegible]

'No farther seek his merits to disclose
Or draw his frailties from their dread abode
There they alike in trembling hope repose
The bosom of his Father and his God
Gray

ಬೊಂಬಾಯಿ ಕೊಡಗ

COORG FOREST DEPARTMENT
SOUTH DIVISION

TIMBER SALE NOTICE.

Mercara, the 13th July 1923

It is hereby notified for general information that the following quantities of sawn timber will be sold by auction at noon at Tittimatti on 13th August 1923

Teak	175 Pieces	1690 8 c f
Honne	246 Pieces	1284 3 c ft
Mattı	7 Pieces	83 6 c ft

For further Particulars apply to the Divisional Forest Officer, South Coorg Mercara

ನೋಟೀಸು.

ಕೊಡಗು ವಿದ್ಯಾರ್ಥಿಗಳ ಸಂಘದ ... ಆಗಸ್ಟು ತಾರೀಖು 5 ರಲ್ಲಿ ... ಕ್ಕೆ ಮುಂಬರುಗುವ ಆ ದಿನ ... ತಿಳಿಸಿದ್ದರಿಂದ ರದ್ದುಪಡಿಸಿದೆ ... ಗೊತ್ತುಮಾಡಿ ತಿಳಿಸಲಾಗುವುದು

Sd/ K Coottiah
President

M Bhimayya,
Hon Secretary 2-1

ಒಡಗಿ ಮತ್ತು ರುದ್ರಾಕ್ಷಿ ಅಂಚಿನ ಸೀರೆಗಳು

ಈ ಸೀರೆಗಳನ್ನು ಬಹು ಹಸನಾದ ... 17 ಮೊಳ ... ಶಿಸಿಕೊಂಡವರಿಗೆ ಮಾತ್ರ ...

ನಂ 1 7-8-0
ನಂ 2 6-8-0

RIPON WATCH CO,
Triplicane,
MADRAS.

24-22

A Great Reduction in Prices of Arms and Mamooties.

		Old Price	Present Price
D B L Guns,			
12 bore each	Rs	250	165
D B M L	do	130	85
S B M L	do	100	65
Mamooties 5 lbs each		4/8	3/6

APPLY TO —

Mc. DOWELL & Co., Ltd.,
24—13 MERCARA

ಒಕ್ಕಲುತನದಲ್ಲಿ ಹೆಚ್ಚು ಲಾಭ ಪಡೆಯಿರಿ

ನಮ್ಮ ಕಾರಖಾನೆಯಲ್ಲಿ ... ಮೇವು ಯಂತ್ರ ಇತ್ಯಾದಿ ಒಕ್ಕಲಿಗರಿಗೆ ... ತಯಾರಾಗುತ್ತವೆ ... ಕ್ಯಾಟಲಾಗು ತರಿಸಿಕೊಳ್ಳಿ

ನಮ್ಮ ವಿಳಾಸ —
ಕಿರ್ಲೋಸ್ಕರ್ ಬಂಧು ಲಿಮಿಟೆಡ್
ಪೋ. ಕಿರ್ಲೋಸ್ಕರವಾಡಿ
ಜಿಲ್ಲಾ — ಸಾತಾರಾ

12—6

18 ಕ್ಯಾರೆಟ್ ಗೋಲ್ಡ ಪ್ಲೇಟ್ ರೇಡಿಯಂ ರಿಸ್ಟ ವಾಚ್



ಈ ... ತಡೆಯುವ ... ಗ್ಯಾರಂಟಿ ಇರುವದು
ಕ್ರಯ ಗರಿಷ್ಠ 1 ಕ್ಕೆ 8—3—0 ಬೆಳ್ಳಿಯದು 9—8—

ವಿಳಾಸ — ವಿ ಎಸ್ ವಾಚ್ ಕಂಪನಿ
52-50 ಪೋ|| ಬಾ|| ನಂ 105 ಮದರಾಸು

ಪ್ರಕಟಣೆ.

ಕೊಡಗು ... ಬ್ಯಾಂಕ್ ಲಿಮಿಟೆಡ್ ... ರಿಜಿಸ್ಟರಾಗಿದೆ

ಶೇರ್ ಒಂದರ ...	50 0
...	

[illegible]

ತಾರೀಖು 25 ... 19

ಜೋಲಿ



[illegible]

ಭಂಗಾರದ ಗಿಲೀಟಿನ ಉಂಗುರ

ಈ ಉಂಗುರಗಳನ್ನು ... ಭಂಗಾರದಂತೆ ... ಕರಿಸಿಕೊಳ್ಳಿ
ಕ್ರಯ 1 ಕ್ಕೆ 2—0—0
ಕ್ರಯ 3 ಕ್ಕೆ 5—8—0

ವಿಳಾಸ —
ಪಿಟರ್ ವಾಚ್ ಕಂಪೆನಿ
52-50 ಪೋ|| ಬಾ|| ನಂ 27 ಮದರಾಸು

Spenceers——for everything.

Whisky —Matchless	Rs 7 6 0	per bottle
King George C/L	7 1 0	,
Old highland Malt	6 0 0	,
Brandy —Exshaw's No 1	7 4 0	,,
Exshaw's No 2	6 7 0	,,
Vermouth —Noilly Prath (French)	2 10 0	,
Cigars —Flo rde Spencer Specials	3 12 0	50s ,,
Trichy Specials	2 8 0	100s ,,

Buy Your Stores from Spencers, they are fresh and cheap

52-41 SPENCER & Co., Ltd,
MERCARA & POLLAIBETTA

Printed & Published by D S Krishnaswami Proprietor, at Sreenivas Electric Press, M "for Kodagu" Ltd Mercara—27 7 1923

Kodagu Office, Mercara. Reg. No. M. 1550.

ಕೊಡಗು.

ಸತ್ಯೇನ ಧಾರ್ಮಿಕಯಾ ವಿದ್ಯಾವಿನೀತಿ ಸ್ಸೌಜನ್ಯತಃ । ಐಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

" ಎಡಿಟರ್ ಸಂಬಂಧ ... "

[... 4] ಕೊಡಗು, ೧೯೨೩ ನೇ ಆಗಸ್ಟ್ ತಾರೀಖು 4 ನೆಯ ಶುಕ್ರವಾರ. [ಸಂಚಿಕೆ ...]

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನಡಾ ಪ್ರಿಂಟಿಂಗ್ ಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಆ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ಚಾಗ್ರತೆಯಾಗಿಯೂ ಸುಲಭಬೆಲೆಗೂ ಮಾಡಿ ಕ್ಕೇವೆ

rinivas Electric Press,
MYSORE.

: Coorg Central Co-operative Bank, Ltd.,

istered under the Co-operative Societies Act)

are Capital	...	50,000
id up Share Capital	...	6,310
xed Deposits paid	....	31,873

Amounts are lent mainly to -operative Societies in Coorg. The counts are checked annually by The gistrar of Co-operative Societies Coorg eposits for one year and more carry erest at 6½% per annum and for smaller riods at 5% per ann....

Apply to the Secretary or Treasurer r further details.

President	*Treasurer*	*Secretary*
Indendera Cootiah Rao Bahadur	Bhajanga Rao, B A, B L,	C N Venkappaya B A, B L.

Dated 25—3—1923

ವಾಸುದೇವನ ಆಟ

ಇದು ಹಿತ್ತಾಳೆಯಿಂದ ಮಾಡಿದ ಬಟ್ಟಲು. ಇದರ ಮಧ್ಯದಲ್ಲಿ ಶ್ರೀ ವಾಸುದೇವನು ಶ್ರೀಕೃಷ್ಣನನ್ನು ಕೈಯಲಿ ಎತ್ತಿಕೊಂಡು ನಿಂತಿ

ರುವ ವಿಗ್ರಹ ಇರುವದು ಇದರ ಆಶ್ಚರ್ಯವೇನೆಂದರೆ ಕೃಷ್ಣನು ಜನ್ಮವನ್ನು ಎತ್ತಿದ ಕೂಡಲೆ ಕಂಸನಿಗೆ ವಾಸುದೇವನು ಭಯ ಪಟ್ಟು ಕೃಷ್ಣನನ್ನು ಜಮುನಾದಿಂದ ಗೋಕುಲಕ್ಕೆ ಎತ್ತಿಕೊಂಡು ಹೋಗುವಾಗ ದಾರಿಯಲ್ಲಿ ನದಿಯು ಸಿಕ್ಕಿ ಅದರ ತುಂಬಾ ನೀರು ಹರಿಯುತ್ತಿರುವದನ್ನು ನೋಡಿ ವಾಸುದೇವನು ಭಯಪಡದೆ, ಆ ನದಿಯಲ್ಲಿ ಬಹಳ ಕಷ್ಟದಿಂದ ನಡೆದುಕೊಂಡು ಹೋಗುತ್ತಿರುವಾಗ ಶ್ರೀಕೃಷ್ಣನ ಕಾಲಿಗೆ ನದಿಯ ನೀರು ತಗಲಲು, ಆ ಕೂಡಲೆ ನದಿಯ ನೀರು ಕಡಮೆಯಾಗಿ ವಾಸುದೇವನು ನದಿಯನ್ನು ದಾಟಿ ಒಹುದೇಗನ ನೋಡುವನ್ನು ಸೇರಿದನು. ಈ ಸಂಗತಿಯನ್ನು ನಮ್ಮ ಜನರಿಗೆ ತಿಳಿಯದ ವಿಷಯವಲ್ಲ. ಆದರೆ ಈಗ ಈ ವಿಷಯವನ್ನು ಕಣ್ಣಾರ ನೋಡಿ ಸಂತೋಷಪಡುವಂತೆ ಇದನ್ನು ತಯಾರಿಸಿರುವೆವು. ಈ ಬಟ್ಟಲಿನಲ್ಲಿ ನೀರನ್ನು ಹಾಕಿದರೆ ಒಂದು ತೊಟ್ಟಾದರೂ ಚೆಲ್ಲುವುದಿಲ್ಲ. ಯಾವಾಗ ಕೃಷ್ಣನ ಕಾಲಿಗೆ ನೀರು ತಗಲುತ್ತೋ ಆಗ ತನ್ನಷ್ಟಕ್ಕೆ ತಾನೇ ನೀರು ಕೆಳಭಾಗದಿಂದ ಸುರಿದು ಹೋಗುವದು. ಈ ಬಟ್ಟಲಿನಲ್ಲಿ ದಂಪತಿಗಳು ಇದನ್ನು ನೋಡುವವರಿಗೆ ಆನಂದವನ್ನುಂಟುಮಾಡುವದು.

ಕ್ರಯ 1 ಕ್ಕೆ 4—0—0

ವಿಳಾಸ:—ವಿ. ಎ. ಎಸ್. ವಾಣಿ ಕಂಪೆನಿ,

52—51 ಸ್ವಾಮಿ ಸ್ಟ್ರೀಟ್ ಪೇಟೆ ಮದರಾಸು. 5—5

೬೦.

The Mysore Government Security

Life & Marriage Assurance Co., Ltd.

Head Office —Life and Marriage Assurance Buildings, MYSORE.

ನೋಟೀಸ್.

ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ:—ಈ ಕಂಪೆನಿಯ ಬಾಂಡು, ಮತ್ತು ಪಾಲು ದಾರರಿಗೆ ನಮ್ಮ ಪರ್ಸನಲ್ ಇನ್ವೆಸ್ಟ್‌ಮೆಂಟ್ ಕ್ರಮದಮೇರೆ 1000 ರೂಪಾಯಿಗಳನ್ನು ಸಾಲ ಕೊಡುವುದಕ್ಕೆ ನಿಶ್ಚಯಿಸುವುದಕ್ಕೋಸ್ಕರ ಚೀಟಿ ಎತ್ತುವುದು 1922 ನೇ ಡಿಸೆಂಬರ್ 31 ರಲ್ಲು ನಡೆಯಬೇಕಾದದ್ದು ಈ ಕಂಪನಿಯ ಮೈಸೂರಿನ ಭವ್ಯವಾದ ಕಟ್ಟಡದಲ್ಲಿ ಇದೇ ಜೂನ್ ತಿಂಗಳ 20 ನೇ ಬುಧವಾರ ಸಾಯಂಕಾಲ 6-30 ಗಂಟೆ ಸಮಯದಲ್ಲಿ ಮದರಾಸಿನ ಗೌರವ ಮೆಜಿಸ್ಟ್ರೇಟ್, ರಾವ್ ಸಾಹೇಬ್ ಸಿ. ಕುಂದಸ್ವಾಮಿ ಮೊದಲಿಯಾರ್‌ರವರ ಮತ್ತು ಮೈಸೂರು ಪಟ್ಟಣದ ಗೌರವ ಮೆಜಿಸ್ಟ್ರೇಟ್ ಶ್ರೀಮಾನ್ ಎಸ್. ಸಿದ್ಧೋಜಿರಾವ್‌ರವರ, ಅಲ್ಲದೆ ನೆರೆದಿದ್ದ ಹಲವು ಬಾಂಡ್ ಮತ್ತು ಪಾಲುದಾರರ ಮತ್ತು ಕಂಪೆನಿಯ ಡೈರೆಕ್ಟರರ ಸಮಕ್ಷಮದಲ್ಲಿ ಚೀಟಿ ಎತ್ತಲಾಗಿ ಈ ಕೆಳಗಣ ಬಾಂಡು ಮತ್ತು ಪಾಲುದಾರರ ಚೀಟಿಗಳು ಎತ್ತಲ್ಪಟ್ಟುದರಿಂದ ಕಂಪೆನಿಯ ರೂಲ್ಸ್‌ಗಳಿಗನುಸಾರ ಅವರಿಗೆ ಅವರ ಸ್ವಂತ ಜವಾಬ್ದಾರಿಯಮೇಲೆ ಸಾಲ ಕೊಡಲ್ಪಡುವುದು. ಈ ಹಣವನ್ನು ಬಡ್ಡಿ ಇಲ್ಲದೆ ಮೂರುತಿಂಗಳುಗಳಿಗೊಂದಾವೃತ್ತಿ 10—0—0 ರೂಪಾಯಿನಂತೆ 25 ವರುಷಗಳವರೆಗೆ ಕೊಡುತ್ತಾ ಬರುವುದು.

ಹೆಸರು, ವಿಳಾಸ.	ಬಾಂಡು ನಂಬರು.	ಸಾಲ ಕೊಡಲ್ಪಡುವ ಮೊಬಲಗು.
1. ಮಿ ವಿಕ್ರಮಸಿಂಗ್, ವಿದ್ಯಾಪಾರಿ, ಡಿಕ್ವೆಲ್ಲಾ, ಸಿಲೋನ್.	5472.	ರೂ 1000—0—0
2. ಮಿ. ಸಿ ವೆಂಕಟರಾಮಣ್ಣ ಶಾಸ್ತ್ರಿ, ತೆಲುಗುಪಂಡಿತ, ಬೋರ್ಡ್ ಹೈಸ್ಕೂಲ್ ಅಮಲಾಪುರ, ಗೋದಾವರಿ ಡಿಸ್ಟ್ರಿಕ್ಟ್.	331.	ರೂ. 1000—0—0
3. ಮಿ. ಬಾಕೆ ನರಸಿಂಹರಾವ್ ಎನ್ಸ್‌ಗ್ರೇವರ್, ಕೋಕನಾಡ	6674.	ರೂ. 1000—0—0
4 ಮಿ ಮುಡಿಮೊನೆಬಾಬು ಮೊನಪೆರಿ, ಕೊಲೊಂಬೊ	5886.	ರೂ. 1000—0—0
5. ಮಿ. ಪ್ರಧಾನ, ಇಂದ್ರಜಿತ್, C/o ಮಿ ಬಿ ಹರಿಹರ ಪ್ರಸಾದ್ ಎಕ್ಸೈಸ್ ಇನ್ಸ್‌ಪೆಕ್ಟರ್, ಹಜಾರಿಬಾಗ್, (ಬಿಹಾರ್-ಒರಿಸ್ಸ)	4626.	ರೂ. 800—0—0

ಈ ಲಾಗಾಯ್ತು ಪ್ರತಿ ವರ್ಷದಲ್ಲಿ ಎರಡುಸಾರಿ ಸಾಲ ಕೊಡಲು ಚೀಟಿ ಎತ್ತಿ ನಿಶ್ಚಯಿಸಬೇಕಾಗಿರುವುದರಿಂದಲೂ, ಈ ವರ್ಷದ ಆಗಸ್ಟ್ ತಿಂಗಳು 31 ನೇ ತಾರೀಖಿನ ದಿವಸ ಮತ್ತೊಂದಾವೃತ್ತಿ ಚೀಟಿ ಎತ್ತುವುದರಿಂದಲೂ, ನಮ್ಮ ಈ ಪರ್ಸನಲ್ ಇನ್ವೆಸ್ಟ್‌ಮೆಂಟ್ ಕ್ರಮದ ಮೇರೆ ಯಾತರ ಬಡ್ಡಿ ಮುಂತಾದ್ದು ಇಲ್ಲದೆ ಕೇವಲ ಜವಾಬ್ದಾರಿಯಮೇಲೆ ಸಾಲ ಪಡೆಯಲಿಚ್ಛೈಸುವವರು ಬಾಂಡುಗಳಿಗೆ ಪ್ರವೇಶಫೀಸು ರೂಪಾಯಿ 2—0—0 ಸ್ಟಾಂಪಿಗೋಸ್ಕರ 0—8—0, ಆಗಷ್ಟು ತಿಂಗಳ ಕಂತು ರೂ 1—0—0, ಮತ್ತು 50—0—0 ರೂಪಾಯಿಗಳ ಪತ್ರದಮೇಲಿನ ಬಡ್ಡಿ ರೂಪಾಯಿ 1—8—0 (ಪ್ರತಿ ತಿಂಗಳಿಗೆ 0—4—0 ಆರುತಿಂಗಳುಗಳಿಗೆ ಬಡ್ಡಿ) ಕೊಟ್ಟು ಈ ಕೆಳಗೆ ಪ್ರಕಟಿಸಿರುವ ದರಖಾಸ್ತಿನಲ್ಲಿ ಬರೆದು ಕಳುಹಿಸಿ ಈ ಕೆಳಗಣ ವಿಳಾಸಕ್ಕೆ ಜಾಗ್ರತೆಯಾಗಿ ಕಳುಹಿಸಿದರೆ ಹಳೆಯ ಬಾಂಡು, ಪಾಲುದಾರರೊಡನೆ ಹೊಸಬರ ಹೆಸರನ್ನು ಸೇರಿಸಿ ಚೀಟಿ ಎತ್ತಲಾಗುವುದು. ಸೇರಬೇಕೆನ್ನುವವರೆಲ್ಲರೂ ಜಾಗ್ರತೆಯಾಗಿ ದರಖಾಸ್ತು ಕಳುಹಿಸಬೇಕಾಗಿದೆ

"ಜಾಗ್ರತೆಪಡಿರಿ!" "ಬಡ್ಡಿ ಇಲ್ಲದೆ ಸಾಲ ಪಡೆದು ಧನಿಕರಾಗಿರಿ!" ಘುಟುಕನಕ್ಕು ನಿಮ್ಮದಾಗಲಿ

FORM OF APPLICATION FOR BONDS.

To THE GENERAL SECRETARY, The Mysore Govt Security,
LIFE & MARRIAGE ASSURANCE Co., Ltd., MYSORE

Gentlemen

I, the undersigned, hereby agree to take up ______ bonds of Rs. 50 each in the Personal Investment Department abovenamed Company upon the terms and conditions contained in the detailed prospectus of the same as well as in the Articles of Association of the Company and to accept the same or any smaller number that may be allotted to me.

I beg to send herewith the sum of Rs. ______ being a deposit at the rate of Rs 5/8 per bond (Rs. 2 towards admission fee and As. 8 towards the cost of bond) on the number of bonds applied for by me and agree to pay Re. 1 per bond every month for the next 50 months as well as annual fee of Rs 1/8 per bond every year only for 4 years.

Station ....
The 192

Usual Signature ....

Write Legibly:
Name in full ....
Profession or Business ....
Address in full ....
Post Office ....
District or Province ....

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.—ಬಿ ಎನ್. ಆರಾಧ್ಯ, ಸ್ಪೆಷಲ್ ರಿಪ್ರೆಸೆಂಟೆಟಿವ್, ಪೇಟೆ ಮಡಿಕೇರಿ, (ಕೊಡಗು ಜಿಲ್ಲೆ)

ಹೆಚ್ಚಿನ ಮಾಹಿತಿಯನ್ನು ಈ ಕೆಳಗಣ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಮಿ॥ ಬಿ ಎನ್ ಆರಾಧ್ಯ, ಸ್ಪೆಷಿಯಲ್ ರಿಪ್ರಸೆಂಟೇಟಿವ್ ಮೈಸೂರು ಗವರ್ನ್‌ಮೆಂಟ್ ಸೆಕ್ಯೂರಿಟಿ. ಲೈಫ್ ಅಂಡ್ ಮ್ಯಾರೇಜ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್. ಸಬ್ ಆಫೀಸ್, ಮುಹಮ್ಮದ್ ಪಟ್ಟಿ ಮಡಿಕೇರಿ

—: ಅಥವಾ :—

ಜನರಲ್ ಸೆಕ್ರಟರಿ, ಲೈಫ್ ಅಂಡ್ ಮ್ಯಾರೇಜ್ ಎಷ್ಯೂರೆನ್ಸ್ ಬಿಲ್ಡಿಂಗ್ಸ್, ಸಯ್ಯಾಜಿರಾವ್ ರೋಡು, ಮೈಸೂರು

ಮತ್ತೆ ೪ ಕಂಡಿ

" ಕೊಡಗು "

೧೯೨೩ ನೇ ಇಸವಿ ಆಗಸ್ಟ್ ತಾ॥ ೩ ನೇ ಶುಕ್ರವಾರ

ಕೆನ್ಯಾದಲ್ಲಿರುವ ಹಿಂದೀಯರು.

ಈ ವಿಷಯವಾಗಿ ನಾವು ಎರಡು ವಾರಗಳ ಹಿಂದೆ ತಾನೇ ವಿವರವಾಗಿ ಬರೆದಿದ್ದೆವು. ಆದರೆ ಆಗ ಅಲ್ಲಿಯ ಹಿಂದೀಯರ ಸ್ಥಿತಿಯು ಹ್ಯಾಗಿತ್ತೆಂಬುದನ್ನೂ ಅದರ ಪರಿಹಾರಕ್ಕಾಗಿ ಅಲ್ಲಿ ಹಿಂದೀ ನಿವಾಸಿಗಳೂ ಹಿಂದೂ ದೇಶದಲ್ಲಿರುವ ಅವರ ಸಹೋದರರೂ ಹಿಂದೂ ದೇಶದ ಸರಕಾರದವರೂ ಮಾಡುತ್ತಿದ್ದ ಪ್ರಯತ್ನಗಳನ್ನು ಮಾತ್ರ ಸೂಚಿಸಿದ್ದೆವು ಆದರ ವಿಷಯ ಪರ್ಯಾಲೋಚಿಸುತ್ತಿದ್ದ ಬ್ರಿಟಿಷ್ ಗವರ್ನ್‌ಮೆಂಟಿನವರು ಅವರ ತೀರ್ಮಾನವನ್ನು ಈಗತಾನೇ ಪ್ರಕಟಿಸಿರುವರು. ಈ ತೀರ್ಮಾನವು ಹಿಂದೀಯರಿಗೆ ಬಹಳ ಅತೃಪ್ತಿಕರವಾದದ್ದು ಮತ್ತು ಅಸಮಾಧಾನಕರವಾದದ್ದು ಆಗಿರುವುದರಿಂದ ಈ ವಿಷಯ ಪುನಃ ಬರೆಯಬೇಕಾಗಿ ಬಂತು.

ಕೊಲೋನಿಯಲ್ ಆಫೀಸಿನ ಮೆಮೋರಾಡಂ ಕೆನ್ಯಾದ ಹಿಂದೀಯರಲ್ಲಿ ಮಾತ್ರವಲ್ಲ ಹಿಂದೂ ದೇಶದ ಎಲ್ಲಾ ಭಾಗಗಳಲ್ಲಿಯೂ ಜನರ ಮನಸ್ಸನ್ನು ಬಹಳಮಟ್ಟಿಗೆ ಕಲ್ಲಣಿಸಿದೆ ಬಾಕಿ ಎಲ್ಲಾ ವಿಷಯಗಳಿಗಿಂತಲೂ ಈ ವಿಷಯ ಇಂಡಿಯಾದಲ್ಲಿ ಪ್ರಾಮುಖ್ಯತೆಯನ್ನು ಹೊಂದಿದೆ. ವಿಕ್ರಮಂಗಲಿಯವರೊಡನೆ ತರ್ಕಯವರಿಗ ಉಂಟಾಗ ರಾಜಿ [illegible] ಬಯಕ್ಕೆ [illegible] ಜನರು [illegible] ಗಮನಕೊಡದೆ ಕೆನ್ಯಾದ ವಿಷಯ ಯೋಚಿಸುತ್ತಿರುವರು. ಬ್ರಿಟಿಷ್ ಸರ್ಕಾರದವರ ತೀರ್ಮಾನದ ಪ್ರಕಾರ ಕೆನ್ಯಾದ ನ್ಯಾಯವಿಧಾಯಕಸಭೆಯಲ್ಲಿ ಕೂಡುವವರು ಪ್ರತಿನಿಧಿಗಳಲ್ಲಿ ಯೂರೋಪಿಯನರ ಪರವಾಗಿ ಹನ್ನೊಂದು ಮೆಂಬರುಗಳೂ ಹಿಂದೀಯರ ಪರವಾಗಿ ಐದು ಜನರೂ, ಅರೇಬಿಯನ ಪರವಾಗಿ ಒಬ್ಬನೂ ಉದ್ಯೋಗಸ್ಥರಲ್ಲದವರಿಂದ ಚುನಾಯಿಸಲ್ಪಡುವರು. ಯೂರೋಪಿಯನರನ್ನೂ ಹಿಂದೀಯರನ್ನೂ ಪ್ರತ್ಯೇಕಿಸಿ ಇಡುವುದು ಅವಶ್ಯವಿಲ್ಲವೆಂದಾಗಿದೆ. ಹೈಲ್ಯಾಂಡ (ಎತ್ತರ ಪ್ರದೇಶವ)ನ್ನು ಯೂರೋಪಿಯನರಿಗೇನೇ ಇಟ್ಟು 'ಲೋಲೇಂಡಿ' (ತಗ್ಗು ಪ್ರದೇಶ) ದಲ್ಲಿ ಹಿಂದೀಯರಿಗೆ ಕೆಲವು ಪ್ರದೇಶ ಪ್ರತ್ಯೇಕ ಮೀಸಲಾಗಿ ಇಡಲ್ಪಡುವುದು. ಪರದೇಶಗಳಿಂದ ಅಲ್ಲಿ ನೆಲೆಗೊಳ್ಳಲಿಕ್ಕೆ ಹೋಗುವ ಜನರ ಪ್ರವೇಶವು ಅಲ್ಲಿಯ ಸರ್ಕಾರದ ಹತೋಟಿಯಲ್ಲಿರುವುದು ಇವೇ ಈ ತೀರ್ಮಾನದ ಮುಖ್ಯ ಅಂಶಗಳು

1921 ನೇ ಇಸವಿಯ [illegible] ಕೆನ್ಯಾದಲ್ಲಿ 7651 ಯೂರೋಪಿಯನರೂ 22822 ಹಿಂದೀಯರೂ 10102 ಅರೇಬಿಯನರೂ [illegible] ಆಫ್ರಿಕನರೂ ಇರುವರು. [illegible] ಜನಾಂಗಗಳ ಜನಸಂಖ್ಯೆಯ ತಾರತಮ್ಯವು ಹೀಗಿರುವಲ್ಲಿ 9651 ಯೂರೋಪಿಯನರಿಗೆ ಹನ್ನೊಂದು ಪ್ರತಿನಿಧಿಗಳನ್ನು 2 822 ಹಿಂದೀಯರಿಗೆ ಐದು ಪ್ರತಿನಿಧಿಗಳನ್ನು 10,02 [illegible] ರಿಗೆ ಒಬ್ಬ ಪ್ರತಿನಿಧಿಯನ್ನೂ ಕೊಟ್ಟಿರುವುದು ಎಷ್ಟು ಅನ್ಯಾಯವೆಂದು ಎಂಥಾ ಮೂಢನಿಗಾದರೂ ತಿಳಿಯದೆ ಹೋಗದು. ಇದಕ್ಕಿಂತಲೂ ಹೆಚ್ಚಾಗಿ ಹೃದಯವನ್ನು ಖಂಡಿಸುವಂಥ ಅನ್ಯಾಯವು ಆಫ್ರಿಕನರಿಗ ಆಗಿದೆ. [illegible] ಮಿಲಿಯಕ್ಕಿಂತ ಹೆಚ್ಚಿರುವ ಆಫ್ರಿಕನರ ಪ್ರತಿನಿಧಿಯು ಒಬ್ಬ ಮಿಷನರಿಯಂತೆ! ಇಷ್ಟು ಮಾತ್ರವಲ್ಲದ ಈ ಏರ್ಪಾಡನ್ನು ಮಾಡಿಕೊಂಡಿರುವ ಅಲ್ಲಿಯ ಸರಕಾರದ ಉದ್ದೇಶವು ಆಫ್ರಿಕನರ ಹಿತವನ್ನು ಕಾಪಾಡುವುದಂತೆ! ನ್ಯಾಯಶಾಲಿಗಳೆಂದು ಹೇಳಿಕೊಳ್ಳುವ ಬ್ರಿಟಿಷ್ ಸರಕಾರದವರು ಕೆನ್ಯಾದಲ್ಲಿ ಬಿಳಿ ಜನರ ಪ್ರಯೋಜನಾರ್ಥವಾಗಿ ಎಲ್ಲವನ್ನೂ ಏರ್ಪಡಿಸಿಕೊಂಡು ಅದನ್ನು ಹಾಗೆಂದು ಒಪ್ಪಿಕೊಳ್ಳದೆ ಅಲ್ಲಿಯ ಮೂಲನಿವಾಸಿಗಳಾದ ಆಫ್ರಿಕನರ ಹಿತಕ್ಕೆಂದು ಕಾರಣ ಹೇಳುವುದು ಅವರ ಮರ್ಯಾದೆಗೆ ತಕ್ಕದಾದುದೇ? ಇದರ ಮೇಲೂ ನ್ಯಾಯವಿಧಾಯಕಸಭೆಯಲ್ಲಿ ಉದ್ಯೋಗಸ್ಥರಲ್ಲದವರ ಸಂಖ್ಯೆಗಿಂತ ಉದ್ಯೋಗಸ್ಥ ಮೆಂಬರುಗಳ ಸಂಖ್ಯೆಯು ಹೆಚ್ಚಾಗಿರುವುದು ಅಲ್ಲ ಬೊಡ್ಡ ಉದ್ಯೋಗಸ್ಥರು ಹೆಚ್ಚಾಗಿ ಯೂರೋಪಿಯನರಾಗಿರುವರು ಒಟ್ಟಾರೆ ನ್ಯಾಯವಿಧಾಯಕಸಭೆಯು ಯೂರೋಪಿಯನರಿಂದ ತುಂಬಲ್ಪಟ್ಟಿರುವುದು

ಕೆನ್ಯಾದ ಸಾಂಪತ್ತಿಕ ಹಿತಕ್ಕಾಗಿ ಪರದೇಶದ ನಿವಾಸಿಗಳು ಅಲ್ಲಿ ಹೋಗಿ ನೆಲೆಗೊಳ್ಳುವ ವಿಷಯವು ಅಲ್ಲಿಯ ಸರಕಾರದವರ ಹತೋಟಿಯಲ್ಲಿರುವುದಂತೆ. ಇದೇನೋ ಎಲ್ಲಾ ಪರದೇಶದವರಿಗೆ ವ್ಯಾಪಿಸುವಂತೆ ಕಾಣುತ್ತದೆ. ಆದರೆ ಇಷ್ಟರವರೆಗಿನ ಅನುಭವದಿಂದ ಕಂಡುಬಂದಂತೆ ಈ ಕಾನೂನು ಹೆಚ್ಚಾಗಿ ಹಿಂದೂದೇಶದವರ ವಿಷಯದಲ್ಲಿ ಜಾರಿಗೆ ತರಲ್ಪಡುವುದೇ ಹೊರತು ಅನ್ಯಥಾ ಇಲ್ಲ. ಯೂರೋಪಿಯನರನ್ನೂ ಹಿಂದೀಯರನ್ನೂ ಪ್ರತಿ ಪಟ್ಟಣಗಳಲ್ಲಿ ಪ್ರತ್ಯೇಕವಾಗಿ ಇಡುವ ಪದ್ಧತಿಯನ್ನು ಮಂತ್ರಿಮಂಡಲಿಯವರು ತಿರಸ್ಕರಿಸಿರುವುದೇನೋ ನಿಜವೆಂದು ಮೆಮೋರಾಂಡಮಿನಲ್ಲಿ ಕಾಣುತ್ತದೆ. ಆದರೆ ಅದರೊಂದಿಗೇನೇ 'ಹೈಲೇಂಡ'ನ್ನು ಯೂರೋಪಿಯನರಿಗೂ 'ಲೋಲೇಂಡಿ'ನ ಕೆಲವು ಭಾಗವನ್ನು ಹಿಂದೀಯರಿಗೂ ಪ್ರತ್ಯೇಕವಾಗಿ ಇಡಲ್ಪಡುವುದು ಎಂದು ಸೂಚಿಸುವುದರ ಅರ್ಥವೇನು? ಎಷ್ಟಾದರೂ ಹಿಂದೀ ಜನರಿಗೂ ಮತ್ತು ಬೇರೆ ಕಪ್ಪುಜನರಿಗೂ ಬಿಳಿಜನರೊಂದಿಗೆ ಸಮಾನತ್ವವನ್ನು ಕೊಡಬಾರದೆಂಬುದೇ ಅದರ ತಾತ್ಪರ್ಯ. ಕಪ್ಪುಜನರನ್ನು ಬಿಳಿಜನರು ಪಂಚಮರಂತೆ ಕಾಣಬೇಕೆಂಬುದೇ ಅವರ ಅಭಿಪ್ರಾಯ. ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಹಿಂದೀಯರಿಗೆ ಬೇರೆಯವರೊಂದಿಗೆ ಸರಿಸಮಾನತ್ವವನ್ನು ಕೊಡಬೇಕೆಂಬ ಬ್ರಿಟಿಷ್ ಸರಕಾರದ ಭಾಷೆಯು ಈಗ ಎಲ್ಲಿ ಹೋಯಿತು? ಇಂಪೀರಿಯಲ್ ಕಾನ್‌ಫರೆನ್ಸಿನಲ್ಲಿ ಸಮಾನತ್ವದ ವಿಷಯ ಮಂಜೂರಾದ ರೆಸಲ್ಯೂಷನ್ ಏನಾಯಿತು? ಎಲ್ಲವೂ ಕೆಲಸಕ್ಕೆ ಬಾರದ ಕಾಗದ ಚೂರುಗಳೆಂದು ಎಸೆದ ಬಿಟ್ಟರೆಂದು ಕಾಣುತ್ತದೆ. ಯುದ್ಧದ ಸಮಯದಲ್ಲಿ ಬೆಲ್ಜಿಯಮ್ ಪತ್ರಗಳನ್ನೆಲ್ಲಾ ಜರ್ಮನಿಯವರು ಕೆಲಸಕ್ಕೆ ಬಾರದ ಕಾಗದದ ಚೂರುಗಳಂತೆ ಎಣಿಸಿದರೆಂದು ಇದೇ ಬ್ರಿಟಿಷರು ಜರ್ಮನಿಯವರ ಮೇಲೆ ದೋಷಾರೋಪಣೆ ಹೊರಿಸಲಿಲ್ಲವೇ? ಅಂಥಾ ಜರ್ಮನಿಯವರ ಉದಾಹರಣೆಯನ್ನು ಈಗ ಇವರೇ ಹಿಂಬಾಲಿಸುತ್ತಿರುವುದು ಎಷ್ಟು ವ್ಯಸನಕರ

ಸೆಗ್ರಿಗೇಶನ್ 'ಸೆಗ್ರೆಗೇಷನ್' ಅಂದರೆ ಹಿಂದೀಯರನ್ನು ಪ್ರತ್ಯೇಕ ಇಡುವುದರ ವಿಷಯ ಅಲ್ಲಿಯ ಮುಖ್ಯ ಮಂತ್ರಿಯಾದ ಜನರಲ್ ಸ್ಮಟ್ಸ್‌ರವರು ಒಂದು ಕಾಂಗ್ರೆಸಿನಲ್ಲಿ ಮಾತಾಡಿದಾಗ "ಹಿಂದೂದೇಶದಲ್ಲಿ ಒಂದು ಜಾತಿಯವರನ್ನು ಇನ್ನೊಂದು ಜಾತಿಯವರು ಮುಟ್ಟಕೂಡದು. ಪ್ರತ್ಯೇಕವಾಗಿ ಇರಬೇಕೆಂಬ ಪದ್ಧತಿಯು ಜಾರಿಯಲ್ಲಿರುವಾಗ್ಗೆ ಹಿಂದೀಯರು ಆಫ್ರಿಕದಲ್ಲಿ ಸಮಾನತ್ವ ಮತ್ತು ಸ್ವಾತಂತ್ರ್ಯ ಬೇಕೆನ್ನುವುದರ ಅರ್ಥವೇನು? ನಮ್ಮ ಮನಸ್ಸಿನಲ್ಲಿ ನಾವು ಯಜಮಾನರು. ನಮ್ಮ ಅಭಿಪ್ರಾಯದ ಪ್ರಕಾರ ಆಫ್ರಿಕವನ್ನು ಆಳಬೇಕು" ಎಂದು ಧೈರ್ಯವಾಗಿ ಹೇಳಿದರು. ಅವರು ಹಿಂದೂದೇಶದಲ್ಲಿ ಜಾತಿಗಳ ವಿಷಯ ಹೇಳಿದ್ದು ಪೂರ್ಣ ನಿಜವಲ್ಲ. ಹಿಂದೂದೇಶದಲ್ಲಿ ಪಂಚಮರನ್ನು ಮಾತ್ರ ಪ್ರತ್ಯೇಕಿಸಿಟ್ಟಿರುವರೇ ಹೊರತು, ಬೇರೆ ಯಾವ ಜಾತಿಯವರನ್ನು ಹಾಗೆ ಮಾಡಿರುವರಲ್ಲ. ಹೀಗೆ ಮಾಡುವುದು ಪೂರಾ ತಪ್ಪೆಂದು, ಅದನ್ನು [illegible] ಆದಷ್ಟು ಮಟ್ಟಿಗೆ ಹಿಂದೂದೇಶದ ನಿವಾಸಿಗಳು ಪ್ರಯತ್ನಿಸುತ್ತಿರುವಲ್ಲು ಜನರಲ್ ಸ್ಮಟ್ಸ್‌ರವರು ಅದನ್ನ ಕಾರಣವಾಗಿ ಸೂಚಿಸಿರುವುದರಲ್ಲಿ ಏನೊಂದೂ ನ್ಯಾಯವಿಲ್ಲವೆಂದ ಹೇಳಬೇಕಾಗಿಲ್ಲ. ಹಿಂದೂದೇಶದಲ್ಲಿ ಪಂಚಮರನ್ನು ಬೇರೆ ವರ್ಗದ ಜನರು ಕೀಳು ಜನರೆಂದು ಕಾಣುವುದರ ಫಲಿತಾಂಶವಾಗಿ ಬಿಳೀ ಜನರು ಕಪ್ಪು ಜನರನ್ನು ಹಾಗೇ ಕಾಣುವರೆಂದು ಮಹಾತ್ಮ ಗಾಂಧಿಯವರೇ ಮೊದಲಾದ ಮುಂದಾಳುಗಳು [illegible] ಅದರಂತೆಯೇ ಆಫ್ರಿಕದಲ್ಲಿ [illegible] ಪ್ರತ್ಯಕ್ಷ [illegible] ಹಿಂದೀಯರು ಬ್ರಿಟಿಷ್ [illegible] ದಲ್ಲಿ ಪಂಚಮ[illegible] ಎಣಿಸಲ್ಪಡುವುದಿಲ್ಲವೇ? ಇದರಿಂದ ಹಿಂದೂ[illegible]ನ್ನು ಎಷ್ಟರಮಟ್ಟಿಗೆ [illegible] ಕೆನ್ಯಾದ [illegible] ತೀರ್ಮಾನಿಸಲ್ಪಟ್ಟ [illegible] ಬ್ರಿಟಿಷರ ನ್ಯಾಯಶೀಲತೆಯು [illegible] ಹಿಂದೂ ದೇಶದ [illegible] ಈ [illegible] ಸ್ಮಟ್ಸ್‌ರವರು ಹೇಳಿದಂತೆ ನಮ್ಮ ಮನಸ್ಸಿನಲ್ಲಿ ನಾವು ಯಜಮಾನರು. ನಮ್ಮ ದೇಶವನ್ನು ನಮ್ಮ ಇಚ್ಛೆಯಂತೆ ಆಳಬೇಕು ಎಂಬ ತತ್ವವನ್ನು ಜಾರಿಗೆ ತಂದ ವಿನಹ ಹಿಂದೀಯರ ಹೀನಸ್ಥಿತಿಯು ಪರಿಹಾರಕ್ಕೆ ದಾರಿ ಇಲ್ಲ. [illegible] ಈ ಉದ್ದೇಶವನ್ನು ನೆರವೇರಿಸಲಿಕ್ಕಾಗಿ ಒಗ್ಗಟ್ಟನ್ನು ಸಂಪಾದಿಸಲಿಕ್ಕೆ ಪ್ರಯತ್ನಿಸುವುದೇ ಪ್ರತಿಯೊಬ್ಬನ ಧರ್ಮವಾಗಿದೆ

ಕೊಡಗು [illegible] ಕಮಿಷನರ್ ಸಾಹೇಬರ ಹುಜೂರ್ ಜನಾಬ್

ನಂಜರಾಯಪಟ್ಟಣದ ತಾಲೋಕು ಫ್ರೇಜರ್‌ಪೇಟೆ ಹೋಬಳಿಯಲ್ಲಿರುವ ಗ್ರಾಮ ಮುಳ್ಳುಸೋಗೆ, ಗುಮ್ಮನಕೊಲ್ಲಿ ಕೂಡ್ಲೂರು, ಮಾಗಳೂರ ಬಸವನಹಳ್ಳಿ ಕೂಡಿಗೆ, ರಾಂಪುರ ಹುಲುಸೆ, ಹೆಬ್ಬಾಲೆ, ಶಿರಂಗಾಲ, ಗದ್ದೆಹೊಸಳ್ಳಿ ಮಣಜೂರು, ಶಿರಂಗಾಲದ ಗ್ರಾಮದ ನಿವಾಸಿಗಳು ಬರೆಕೊಂಡ ಮೆಮೋರಿಯಲಿನ ನಕಲು.

(1) ನಮ್ಮ ಸುತ್ತಮುತ್ತಲೂ ಇರುವ ಅನೇಕ ಗ್ರಾಮಗಳು ಹಾಳುಬಿದ್ದ ರಿಜರ್ವ್ ಫಾರೆಸ್ಟ್ ಆಗಿ ಕಾಡುಜಾತಿಗಳ ಹಾವಳಿಯನ್ನು ತಪ್ಪಿಸುವದು ಅಸಾಧ್ಯವಾದ್ದರಿಂದ ಈ ಹಾಳುಬಿದ್ದ ಗ್ರಾಮಗಳನ್ನು ರೈತರಿಗೆ ವ್ಯವಸಾಯಕ್ಕೆ ಕೊಟ್ಟಲ್ಲದೆ ನಮಗೆ ಅಭಿವೃದ್ಧಿಯಾಗುವ ಮಾರ್ಗವಿಲ್ಲ

(2) ಜನರು ಕೇವಲ ಬಡತನದಲ್ಲಿ ಮುಳುಗಿಹೋಗಿರುವದರಿಂದ ಎಲ್ಲಾದಕ್ಕೂ ಸರ್ಕಾರವನ್ನೆ ನಿರೀಕ್ಷಿಸುವದರಲ್ಲಿ ಇದ್ದಾರೆ.

(3) ಕುಡಿಯುವ ನೀರಿಲ್ಲದ್ದರಿಂದ ನೀರಿನ[illegible]ಕ್ಕಾಗಿ ಎಲ್ಲರೂ ಹೊಳೆಯ ಬದಿಯಲ್ಲೆ ವಾಸಮಾಡ[illegible] ವಿಧಿಯಿಲ್ಲಾ.

(4) ದನದ ಕೊಟ್ಟಿಗೆ ಕಟ್ಟಲಿಕ್ಕೆ ತಕ್ಕ ಜ[illegible] ಹೋಗಿ ದನಗಳನ್ನು ಮನೆಯೊಳಗೆ ಕಟ್ಟುವ ಮತ್ತು ಅದರಿಂದ ಉಂಟಾಗುವ ಕೇಡುಗಳು ನೀ[illegible] ದರಗಾರು ಹೊಳೆಬದಿ ವಾಸವಿದ್ದು ದಿನಂಪ್ರತಿ ಎರ[illegible]ರು ಮೈಲಿ ದೂರದ ಜಮೀನಿಗೆ ಹೋಗಿ ಬಂದು ನಾಗುವಳಿ ಉಂಟಾಗುವ ತೊಂದರೆ

(7) ಸಕಾಲದಲ್ಲಿ ಮಳೆಯಾಗದೆ ಇದ್ದದರಿಂದ ಕ್ಷಾಮವು ಮತ್ತು ಬಡತನ

(8) ಕಾಡುಜಾತಿಯ ಹಾವಳಿಯನ್ನು ತಪ್ಪಿಸಲು ರಾತ್ರಿಯಲ್ಲಾ ಹೊಲದಲ್ಲಿ ಕಾಯಬೇಕಾಗಿರುವ[illegible]ದರಿಂದ ಜ್ವರವಾಗಲು ನಿದ್ರೆಗೆಟ್ಟ ಜನರ ಅಕಾಲ ಮರಣ.

(9) ಎಲ್ಲಿಯವರೆಗೆ ಬರ ಒತ್ತಾಳಿಕಾರ್ ತಾನ ನಮ್ಮ ಗಳಿಗ ಉಂಟಾಗುವ ಕೆಡಕುಗಳು ಮೊದಲಾದವುಗಳು ನಮ್ಮನ್ನು ಬಹಳ ಹೀನಸ್ಥಿತಿಗೆ ತಂದು ವ್ಯಾಧಿಯಲ್ಲಿಟ್ಟಿರುವುದು. ಘನ ಸರಕಾರಕ್ಕೆ ವೇದ್ಯವಿದು. ಮೇಲಣ ತೊಂದರೆಗಳನ್ನ ಹೋಗಲಾಡಿಸಬೇಕಾದರೆ ಮಾಡಲು ನಾಗುವಳಿಗೂ ಮತ್ತು ಕುಡಿಯಲಿಕ್ಕೂ ಸಾಕಷ್ಟು ನೀರು ಸಂಪನ್ನವಾದ ಪಕ್ಷದಲ್ಲಿ ಖಂಡಿತವಾಗಿಯೂ [illegible] ಗಳಾಡಿಸಬಹುದು. ಈ ಬಗ್ಗೆ ಈ ಮೊದಲೇ ಎಂದ[illegible] ವರುಷಕ್ಕೆ ಹಿಂದೆ ಪ್ರಾರಂಭಿಸಿದ ಹಾರಂಗಿ ನಾಲೆಯನ್ನ ಪುನಃ ಸರಕಾರದವರು ಕೈಗೊಂಡು ನಾಲೆಗಳನ್ನು ಗ್ರಾಮಗಳ ಮಧ್ಯಕ್ಕಾಗಿ ತಂದ ವಿನಹ ನಮ್ಮ ಅಭಿವೃ[illegible] ಬೇರೆ ವಿಧಿ ಇರುವುದಿಲ್ಲಾ. ನಾಲೆಗೆ ನಾಲ್ಕೈದು ರೂಪಾಯಿ ಕರ್ಚವಾದರೆ ಖಂಡಿತವಾಗಿಯೂ ಸರ[illegible]ಕ್ಕೆ ಹಾಳುಬಿದ್ದ ಗ್ರಾಮಗಳು ನಾಗುವಳಿಯಿಂದಲೂ, [illegible] ಕಂದಾಯದಿಂದಲೂ ಇತರ ವ್ಯಾಪಾರಗಳ ಹುಟ್ಟುವಳಿ[illegible]ದಿಲೂ ಕರ್ಚುಮಾಡಿದ ಒಟ್ಟು ಹಣಕ್ಕೆ ನೇಕಡಾ 3 [illegible] ಒಡ್ಡಿ ರೂಪದಲ್ಲಿ ದೊರೆಯಲು ಅಭ್ಯಂತರವಿಲ್ಲಾ. [illegible] ಪ್ರಜೆಯ ನೆಮ್ಮದಿ ಸರಕಾರಕ್ಕೆ ಹೆಚ್ಚಿನ ಆದಾಯ[illegible] ನಮ್ಮ ಈ ಹೋಬಳಿಯ ಜನರ [illegible] ಯಾವ ತರದಲ್ಲಿ ವೃದ್ಧಿಗೆ ತರಬಹುದೆಂಬುದೆಂಬುದನ್ನು ನಾವು ಬಹಳ ಸ[illegible] ಆಲೋಚಿಸಿರುವಲ್ಲು ಈ ನಾಲೆ ವಿನಹ ನಮ್ಮ ಅಭಿವೃದ್ಧಿ[illegible] ಬೇರೆ ಉಪಾಯವೇ ಇಲ್ಲವೆಂದು ನಾವು ನಿರ್ಧರಿಸಿರುತ್ತೇ[illegible] ಅಂಗಾ [illegible] ಕೂಡದ ಬ್ರಿಟಿಷ್ ರಾ[illegible] ಭಾರದಲ್ಲಿ ಈ ಹಳೆ ಸುಮಾರಾದ ಸಾವುಗಳು ನಿವೃತ್ತಿಯಿ[illegible] [illegible] ಅಕಾಲಿಯಾಗಿ ಮೃಗಗಳಿಂದ ಹಾಳಾಗುವುದನ್ನು ತಪ್ಪಿಸಲು ನಾಲೆಯಾದ ಪಕ್ಷ ನಮ್ಮ ನಮ್ಮ ಹೊಲ[illegible] ಮಧ್ಯದಲ್ಲಿ ಮನೆ ಕೊಟ್ಟಿಗೆಗಳನ್ನು ಕಟ್ಟಿಕೊಂಡು ನಮ[illegible] ಸುಖವಾಗಿ ಜೀವಿಸ [illegible] ಅನುಕೂಲವಾಗಬಹುದು. ನಮ[illegible]ನ್ನು ಈ ಸ್ಥಿತಿಯಲ್ಲಿ ಇಟ್ಟಿರುವದು ಬ್ರಿಟಿಷ್ ಜನರ ದೊ[illegible] [illegible]

[illegible] ಇಂಥಾ ಸಾರ್ವಜನಿಕ ಕಾರ್ಯದ[illegible]ವನ್ನು [illegible] ಈ ಫ್ರೇಜರ್‌ಪೇಟೆ ಹೋಬಳಿಯ[illegible] [illegible] ಗ್ರಾಮಗಳಿಗೆ ಬಿಟ್ಟು [illegible] [illegible]

ದಯಾ ಸರಕಾರದವರು ನಮಗಳ ಮೊರೆಯನ್ನೇ ಲಕ್ಷಿಸಬೇಕಾಗಿ ಈ ಮೂಲಕ ಅರಿಕೆಮಾಡಿಕೊಳ್ಳುತ್ತೇವೆ.

ಗ್ರಾಮನಿವಾಸಿಗಳು

ಹಿಂದೂ ಮುಸಲ್ಮಾನರ ಐಕಮತ್ಯ.

(ಲಾಹೋರಿನಲ್ಲಿ ತಾ॥ 28—6—23 ರಲ್ಲಿ ಮದನಮೋಹನ ಮಾಳವೀಯರು ಮಾಡಿದ ಭಾಷಣದಿಂದ)

ಹಿಂದೂ ಮುಸಲ್ಮಾನರ ಒಗ್ಗಟ್ಟು.

ಈಗಿನ ಸಂದರ್ಭದಲ್ಲಿ ಎರಡೇ ದಾರಿ ಇರುವವು. ಒಂದು—ಈ ದೇಶದಲ್ಲಿ ದಂಗಡಗಳೇ ಸ್ವಭಾವವಾದ್ದರಿಂದ ಸಂರಾಶೆಯಿಂದ ಸುಮ್ಮನೇ ಕೂಡುವದು ಇನ್ನೊಂದು—ಧೈರ್ಯತಾಳಿ ಈಗಿನ ಮನಸ್ತಾಪಗಳನ್ನು ಹೋಗಲಾಡಿಸಿಕೊಳ್ಳುವಿಕೆ. ಜನರು ನಿರಾಶರಾಗದೆ ದಂಗಡಗಳೆಂಬ ರೋಗವನ್ನು ಹೋಗಲಾಡಿಸಲಿಕ್ಕೆ ಪ್ರಯತ್ನಿಸಿಯಾರೆಂತ ಆಶಿಸುತ್ತೇನೆ.

upplement to this issue.

ಕೋದಂಡರಾಮ ಪ್ರೆಸ್ ಮತ್ತು ಬುಕ್ ಡಿಪೋ, ಸಂತೇಪೇಟೆ, ಮೈಸೂರು.

ಈ ಡಿಪೋವಿನಲ್ಲಿ ಕನ್ನಡ ವೇದಾಂತ ಗ್ರಂಥಗಳು, ಕಾವ್ಯಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜ್ಯೋತಿಷ್ಯ ಗ್ರಂಥ ಯಕ್ಷಗಾನ ಗ್ರಂಥಗಳು, ವೀರಶೈವ ಮತಗ್ರಂಥಗಳು, ನಾಟಕಗಳು, ಇನ್ನೂ ಅನೇಕ ವಿಧವಾದ ಪುಸ್ತಕಗಳು, ಸ್ಕೂಲ್ ಬುಕ್ಕುಗಳೂ, ಕಸ್ಟಮ್ ಬುಕ್ಕುಗಳೂ, ಸ್ಟೇಷನರಿ ನೋಟ್ ಬುಕ್ಕುಗಳು ಮುಂತಾದ ಯಾವ ಪುಸ್ತಕಗಳಾದರೂ ಸುಲಭಕ್ರಯಕ್ಕೆ ದೊರೆಯುತ್ತವೆ

ಮೈಸೂರು ಮಹಾರಾಜಾ ಕಾಲೇಜ್ ಹೈಸ್ಕೂಲ್ ಕನ್ನಡ ಸೀನಿಯರ್ ಪಂಡಿತರಾದ ಆಸ್ಥಾನ ಮಹಾವಿದ್ವಾನ್ ಭಾಷಾರತ್ನಂ ಸಿ. ಆರ್. ಕಾಳಿಂಗಶಾಸ್ತ್ರಿಗಳಿಂದ ರಚಿಸಲ್ಪಟ್ಟ

ಕರ್ಣಾಟಕ ಜೈಮಿನಿ ಭಾರತ.

(ಈ ಪುಸ್ತಕವು ಮೈಸೂರು ಯೂನಿವರ್ಸಿಟಿಯವರಿಂದ [illegible] ಟೆಕ್ಸ್ಟ್ ಬುಕ್ಕಾಗಿ ಗೊತ್ತುಮಾಡಿರುತ್ತಾರೆ)

ಬೆಲೆ ರೂ 1—೮—0.

ಬೆಲೆ] ಸೌಂದರಪುರಾಣ (ಕನ್ನಡ) [1 ೪ 0

ಮೈಸೂರು ಮಹಾರಾಜಾ ಕಾಲೇಜ್ ಹೈಸ್ಕೂಲ್ ಕನ್ನಡ ಸೀನಿಯರ್ ಪಂಡಿತರಾದ ಆಸ್ಥಾನ ಮಹಾವಿದ್ವಾನ್ ಭಾಷಾರತ್ನಂ ಸಿ. ಆರ್. ಕಾಳಿಂಗಶಾಸ್ತ್ರಿಗಳಿಂದ ರಚಿಸಲ್ಪಟ್ಟಿರುವ

ಶಿವಪೂಜಾವಿಧಿ.

ಈ ಪುಸ್ತಕದಲ್ಲಿ ಶಿವಪೂಜಾ ಮತ್ತು ಶಿವ ರಾತ್ರಿಯಿಗೆ ಸಂಬಂಧವಾದ ಎಲ್ಲಾ ವಿಷಯ ಗಳೂ ಅಡಕವಾಗಿವೆ ಈ ಪುಸ್ತಕದ ಬೆಲೆ [illegible]

ಬೆಲೆ] ಶಿವಗೀತೆ. [2 ಆಣೆ

ಆಸ್ಥಾನ ಸಂಗೀತ ವಿದ್ವಾನ್ ಸುಬ್ಬಣ್ಣ ಮೈಸೂರ್ ಅವರಿಂದ ರಚಿಸಿರುವ

ಸಂಗೀತ ಸಮಯಸಾರ.

ಈ ಪುಸ್ತಕವು ಸಂಗೀತಾಭ್ಯಾಸಿಗಳಿಗೂ ಹಾರ್ಮೋನಿಯಂ ಕಲಿಯುವವರಿಗೂ ಅನುಕೂಲವಾಗುವಂತೆ ತಾಳ ವರಸೆ ಮತ್ತು 45 ಕವನ ರಾಗಗಳ ಹಾರ್ಮೋನಿಯಂ ಛಾಯಾಚಿತ್ರಗಳಿಂದಲೂ ಅಡಕವಾಗಿದೆ

ಬೆಲೆ ರೂ 1—8—0.

ಸಂಗೀತ ಪಾರಿಜಾತ.

ಬೆಲೆ 6 ಆಣೆ

ಸುಂದರವಾದ ಅಕ್ಷರಗಳಿಂದ ಮುದ್ರಿಸಿರುವ ಪುಸ್ತಕಗಳು.

[illegible]	0 . 3
[illegible]	0 0
ಶಿವಭಕ್ತಿಸಾರ	0 1-0
[illegible]	0-1-0
[illegible]	0 1 0
[illegible]	0 1 0
ಮಂಗಳಗೌರಿಹಾಡು	0 1 0
[illegible]	0 1-0
ನವರತ್ನ ಚಿಂತಾಮಣಿ	0 2 0
[illegible]	0 1-0
[illegible]	0 1-0
[illegible]	0 1 0
ಶ್ರೀ [illegible] ಸೂಕ್ತ	0 2 0
[illegible]	0 1 3
[illegible]	0 2 0
[illegible]	0 2 0
[illegible]	0 2 0

[illegible] ರೂಪಾಯಿಗಳಿಗೆ [illegible] ತಗೆದುಕೊಳ್ಳುವವರಿಗೆ [illegible] ದೊರೆಯುತ್ತದೆ

ಕೋದಂಡರಾಮ್ ಬುಕ್‌ಡಿಪೋ, ಮೈಸೂರು

ಜ್ಯೋತಿಷ್ಯಸರ್ವವಿಷಯಾಮೃತ.

ಅತ್ಯುತ್ತಮವಾದ ಜಾತಕಪದ್ಧತಿ ಈ ಜ್ಯೋತಿಷ್ಯಶಾಸ್ತ್ರವು ಅತ್ಯವಶ್ಯಕವಾದುದು. [illegible] ಪುಸ್ತಕವು ಕನ್ನಡಿಗರ ಉಪಯೋಗಾರ್ಥವಾಗಿಯೇ ಸಂಗ್ರಹಿಸಲ್ಪಟ್ಟು ಸುಲಭವಾದ ಕನ್ನಡ ಭಾಷೆಯಲ್ಲಿ ಬರೆಯಲ್ಪಟ್ಟಿದೆ ಇದರಲ್ಲಿ ಪ್ರಶ್ನೆಭಾಗಗಳೂ, [illegible] ನಷ್ಟ [illegible] ಸೂಚಿಸುವ ಪಟ್ಟಿಯೂ, ಜಾತಕಗ್ರಹ ನಿರ್ಣಯಕ್ರಮವೂ, ಅನೇಕ ರೋಗಗಳಿಗೂ ಭೂತಗಳಿಗೂ ಉಚ್ಚಾಟನಕರವಾದ ಯಂತ್ರಗಳೂ ಮಂತ್ರಗಳೂ, ಶಕುನಗಳ ಫಲಾಫಲಗಳೂ, ಸ್ತ್ರೀವಶ್ಯ [illegible] ಮೊದಲಾದ [illegible] ಯಂತ್ರಗಳೂ ಅವುಗಳ ಕ್ರಮಗಳೂ [illegible], [illegible] ಇವುಗಳ ಯಂತ್ರಗಳೂ ಸಾಮುದ್ರಿಕಶಾಸ್ತ್ರವೂ [illegible] ಕ್ರಮವೂ, [illegible] ಸುಮಂಗಲಿ, ವಿಧವೆ, ಪತಿವ್ರತೆ [illegible] ಲಕ್ಷಣಗಳೂ, [illegible] ತಿಥಿ [illegible] ನಕ್ಷತ್ರ [illegible], [illegible] ಫಲಾಫಲಗಳೂ [illegible] ಕ್ಷೌರ, [illegible] [illegible] ನಕ್ಷತ್ರಗಳಿಗೆ [illegible] ಕ್ರಮವೂ, ಗೌಳಿ [illegible] ಪಂಚಾಂಗವೂ ನೆರವಿಂದಲೇ ಕಾಲವನ್ನು ತಿಳಿಯುವ ಕ್ರಮವೂ ಇವೇ ಮೊದಲಾದ [illegible] ಅಡಕವಾಗಿವೆ ಈ ಪುಸ್ತಕವೊಂದಿದ್ದರೆ ಜ್ಯೋತಿಷ್ಯರನ್ನೂ, ವೈದ್ಯರನ್ನೂ ಅಪೇಕ್ಷಿಸುವ ಅವಶ್ಯಕವಿರುವುದಿಲ್ಲ **ಒಂದೂವರೆ ರೂಪಾಯನ್ನು ಕೊಟ್ಟು ಇದನ್ನು ಕೊಂಡುಕೊಂಡರೆ [illegible] ಗಿಯೂ ಒಂದೂವರೆ ಸಾವಿರ ರೂಪಾಯಿನ ಫಲವನ್ನು ಹೊಂದಬಹುದು!** ಧರ್ಮಶಾಸ್ತ್ರ, ಸ್ವರಶಾಸ್ತ್ರ, [illegible] ಶಾಸ್ತ್ರ, ವಾಸ್ತುಶಾಸ್ತ್ರ [illegible] [illegible]ಶಾಸ್ತ್ರ [illegible], [illegible] ಇವುಗಳೆಲ್ಲಾ ಇದರಲ್ಲಿ ಗರ್ಭಿತವಾಗಿದೆ! [illegible] ಪುಟಗಳುಳ್ಳ ಈ ಮಹಾಗ್ರಂಥದ ಬೆಲೆ 1—8—0 ಮಾತ್ರ ಜಾಗ್ರತೆಯಾಗಿ ಬರೆದು ತರಿಸಿಕೊಳ್ಳಿರಿ. ಟಪಾಲು ಹಾಸಲು ಪ್ರತ್ಯೇಕ

[illegible]	
[illegible]	4-0 0
[illegible]	2 8 0
[illegible] ಸುಗಂಧ[illegible]	1 8 0
[illegible] ಕಥೆ	2 4 0
[illegible] ನಾವೆಲ್	0 12 0
[illegible] ಜ್ಯೋತಿಷ್ಯ	1-8 0
[illegible]	0-6-0
[illegible]	1 4-0
[illegible]	1 0-0
[illegible]	1-8 0
[illegible]	0 4 0
[illegible]	0-8 0
[illegible]	0 6 0
[illegible]	1 1. 0
[illegible]	1 8 0
[illegible]	0 0 0
[illegible] ಕಥೆ	0 4 0
[illegible] ಕಥೆ	0 4 0
[illegible] ಕಥೆ	0 4 0
[illegible] ಕಥೆ	0-4 0
[illegible] ಕಥೆ	0 4 0
[illegible] ಕಥೆ	0 4 0
[illegible] ಕಥೆ	0 8 0
[illegible] 100ಕ್ಕೆ	0 10 0
[illegible]	0 5 0
[illegible]	0 4 0
[illegible]	0 6 0

ನರಳಿಯೂರಿನ ರಹಸ್ಯದರ್ಪಣ.

96 ಪುಟಗಳುಳ್ಳ ಈ ಪುಸ್ತಕದ ಬೆಲೆ 8 ಆಣೆ

[illegible] ಮುದ್ರಿಸಲ್ಪಟ್ಟಿದೆ

ಈ ಪುಸ್ತಕದಲ್ಲಿ [illegible] ಭಾಗದ [illegible] ದರ ಪರಂಪರೆಗಳನ್ನು [illegible] ಮುಕ್ತಿ ಪಡೆಯುವ ದಾರಿಯನ್ನು ಸಚಿತ್ರವಾಗಿ ನಿರೂಪಿಸಿರುತ್ತದೆ ಕೆಲವು ಪ್ರತಿಗಳನ್ನು ಮಾತ್ರವೇ ಅಚ್ಚುಹಾಕಿಸಿರುವುದರಿಂದ [illegible] ಜಾಗ್ರತೆಯಾಗಿ ಪುಸ್ತಕವನ್ನು ತರಿಸಿ

ಸೀತಾರಾಮ.

(ಕನ್ನಡ [illegible] ನಾವೆಲ್)

[illegible] ಸೀತಾರಾಮನು [illegible] ಯಾವ ಅವಸ್ಥೆಯಿಂದ ಜೀವನಕಾಲವನ್ನು ಕಳೆದನು, ಯಾವ ಪ್ರಕಾರವಾದ [illegible] ಪ್ರಖ್ಯಾತನಾಗಿದ್ದನೆಂಬುವದು ಮತ್ತು ಆಗಿನ ಕಾಲದಲ್ಲಿ ದೇಶದ ಅನ್ಯಂತರಿಕ ಅವಸ್ಥೆಯೂ [illegible] ರೀತಿನೀತಿಗಳೂ ವಿಶದವಾಗಿ ವರ್ಣಿತವಾಗಿವೆ [illegible] ಈ ಜಗತ್ತಿನಲಿ ಸಜ್ಜನಾಶಕ್ತಿಯನ್ನು ವೃದ್ಧಿಪಡಿಸಿಕೊಂಡರೆ ಅವರ [illegible] ಹೇಗೆ ಸುಖಮಯವಾಗುವದೆಂಬ ವಿಷಯವೂ ಅಡಕವಾಗಿದೆ ಬೆಲೆ 1 4 0

ಪ್ರಶ್ನೋತ್ತರ ಲೋಕಬೋಧಿನಿ.

(ಈಗಲೇ ಮುದ್ರಿತವಾಗಿ ಸಲ್ಪ ಕಾಪಿಗಳು ಉಳಿದಿವೆ)

ಈ ಪುಸ್ತಕದಲ್ಲಿ [illegible] ಮನವಾ[illegible]ಗಳು [illegible] [illegible] [illegible] ಮುಂದೆ [illegible] [illegible] ಮುಂತಾದುವುಗಳನ್ನು ಬರೆಯುವ ವಿಧಾನವೂ [illegible] [illegible] ವಿಷಯಗಳೂ [illegible] [illegible] ಮುಂತಾದ ಎಲ್ಲಾ [illegible]ಗಳಿಗೆ ಸಂಬಂಧಪಟ್ಟ ವಿಷಯಗಳು ಕೂಡಿವೆ.

ಬೆಲೆ ರೂ 1—8—0

ಬೆಲೆ] ಪಾರಿಜಾತ [ಆ. 10

Kothandram Press, Publisher, Bookseller, Santhepet, Mysore.

1. 1923 ನೇ ಜೂಲೈ 20 ರವರೆಗಿನ ಕಂಪೆನಿಯ ಹಣದ ಲೆಕ್ಕವೂ, ಚಿಲ್ಲರೆ ಅಚ್ಚುಹಾಕುವ ಕೆಲಸಕ್ಕಾಗಿ ಒಂದು ಮುದ್ರಾಲಯವನ್ನು ಏರ್ಪಡಿಸಲಿಕ್ಕೆ ತಯಾರಿಸಿದ ಅಂದಾಜುಪಟ್ಟಿಯೂ ಓದಲಾಯಿತು

ನಾಲ್ಕು ಸಾವಿರ ರೂ ಕರ್ಚಿನೊಳಗೆ "ಟ್ರೆಡ್ಲ್ ಮೆಷಿನ್" ಎಂಬ ಒಂದು ಪ್ರೆಸ್ಸನ್ನು ಅಚ್ಚುಹಾಕಲಿಕ್ಕೆ ಅವಶ್ಯವಿರುವ ಬೇರೆ ಸಾಮಾನುಗಳನ್ನು ತೆಗೆಯುವಂತೆಯೂ ಮುದ್ರಾಲಯಕ್ಕೆ ಯೋಗ್ಯವಾದ ಒಂದು ಕಟ್ಟೋಣವನ್ನು ಏರ್ಪಡಿಸುವಂತೆಯೂ ಕಾರ್ಯಾಧ್ಯಕ್ಷರಿಗೆ ಅಧಿಕಾರ ಕೊಡಲ್ಪಟ್ಟಿತು.

2. "ಟಬ್ಬರ್ ಕ್ರೌನ್" ಪ್ರೆಸ್ಸಿನ ಕ್ರಯದ ಒಂದಂಶವನ್ನು ಈಗ ತೆಗೆದುಕೊಳ್ಳುವಂತೆ ಒಪ್ಪಿ ಬರೆದ ಕಮಿಷನರವರ ಪತ್ರವು ಓದಲಾಯಿತು.

ಅದಕ್ಕೆ ಸರ್ಕಾರವನ್ನು ವಂದಿಸುವಂತೆಯೂ, ಸರಕಾರಕ್ಕೆ ಈಗ ಒಂದು ಸಾವಿರ ರೂ ಕೊಡುವಂತೆ ಕಾರ್ಯಾಧ್ಯಕ್ಷರಿಗೆ ಅಧಿಕಾರ ಕೊಡುವಂತೆಯೂ ತೀರ್ಮಾನವಾಯಿತು.

3. ಸಂಪಾದಕರ ಸಂಬಳವನ್ನು ಆಗಸ್ಟು ಒಂದರಿಂದ ತಿಂಗಳಿಗೆ 30 ರೂಪಾಯಿಗೆ ಹೆಚ್ಚಿಸುವಂತೆ ತೀರ್ಮಾನವಾಯಿತು

ಮಡಿಕೇರಿ, ಕೆ ಕುಟ್ಟಯ್ಯ,
25—7—23 (ಕಾರ್ಯಾಧ್ಯಕ್ಷರು).

ಪತ್ರವ್ಯವಹಾರಗಳು.

ದಾರರು ಕೊಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಗಳಲ್ಲ [ಎಡಿಟರ್]

ನಿಮ್ಮ ಹೆಬ್ಬಾಲೆ ಗ್ರಾಮದ ದೇವಸ್ಥಾನದಲ್ಲಿ ಸೇರಿದ ಸಭೆಯಲ್ಲಿ ನಮ್ಮ ಕೃಷ್ಯವರ್ಗ ನಮ್ಮ ಗ್ರಾಮಕ್ಕೆ ದಯಮಾಡಿದ ಮ|| ರಾ|| ಶ್ರೀ|| ಕೋದಂಡರವರನ್ನು ನಾವು ಈ ದಿವ್ಯ ಜೋಡಿಯಾಗಿ ಆಗ ನಾವು ಅಭಿಪ್ರಾಯಪಟ್ಟೆವು. ಮ|| ರಾ|| ಶ್ರೀ|| [illegible] ನಮ್ಮಗಳ ಸ್ಥಿತಿಗತಿಗಳನ್ನು ನೋಡಿದ ಮೇಲೆ [illegible] ನಮ್ಮ ತಿಳುವಳಿಕೆಗೆ ತಂದಿಟ್ಟ ಮೇಲೆ [illegible] ಕೋ ಆಪರೇಟಿವ್ ಸಂಘದ ಯೆಲ್ಲಾ ಲೆಕ್ಕ ನೋಡಿ ಬಹಳ ಸಂತೋಷಪಟ್ಟು ಸಂಘದ [illegible] ಇನ್ನು ಬಹಳವಾಗಿ ಸಂಘದಿಂದ ಫಲ [illegible] ನಮಗೆ ತುಂಬಾ ಅಭಿಪ್ರಾಯ ಬೋಧಿಸಿಕೊಟ್ಟರು ಮತ್ತು ತಾ|| 2-7 23ರಲ್ಲಿ [illegible] ದೇವಸ್ಥಾನದಲ್ಲಿ ನಡೆದ ವಿಚಾರಿಗಿನ [illegible] ನೋಡಿ ನಿಮ್ಮ ಜೋಡಿಗೆ 1ನೇ [illegible] ಮನುಷ್ಯನಿಗೆ ಬೇಕಾಗುವ ನಾಗರಿಕತೆಗೆ [illegible] ಯೆಲ್ಲಾ ಬಾಬುಗಳನ್ನು ಕಲ್ಪಿಸಿಕೊಳ್ಳುವ [illegible] ನಾನಾ ವಿಷಯದಲ್ಲಿ ತುಂಬಾ [illegible] ನಾವು [illegible] ಸೆಂಟ್ರಲ್ ಬ್ಯಾಂಕಿನಿಂದ [illegible] ಸಂದೇಹವಿಲ್ಲವೆಂದು [illegible] ಮಡಿಕೇರಿಯಲ್ಲಿ [illegible] ಸೆಂಟ್ರಲ್ [illegible] ಬ್ಯಾಂಕಿನಿಂದ [illegible] ಕೊಡಗು ಪತ್ರಿಕೆಯ ವಿಷಯಗಳನ್ನು [illegible] ಸೂಚಿಸಿದರು, ಪತ್ರಿಕೆಯಿಂದ ನಾವು [illegible] ವಿಷಯಗಳ [illegible] ದೇಶದ ಸ್ಥಿತಿಗಳನ್ನು ತಿಳಿಯಬೇಕಾಗಿ [illegible] ನಮ್ಮ ದೇಶದಲ್ಲಿ ಪ್ರಕಟಿಸಿದಂಥಾದ್ದಾದ್ದರಿಂದ ಕೊಡಗು ದೇಶದ ಪತ್ರಿಕೆಯನ್ನು ಪ್ರತಿ ಒಬ್ಬನು [illegible], ಮಹಾಶಯರು ತಮ್ಮ ದೇಶದ ಅಭಿವೃದ್ಧಿ [illegible] ಯಾ ಪತ್ರಿಕೆಯನ್ನು ತಿಳಿಯಬೇಕೆಂದು ಪ್ರೋ [illegible] ನಮ್ಮ ಕೊಡಗು ದೇಶದ ಜವಾನ್‌ದಾರ [illegible] ನಮಗೆ ದೊರೆಯದಂತಾದ ಸಂಸ್ಥೆ [illegible] ಬೋಧಿಸಿಕೊಟ್ಟರೂ ನೀವು ನಾಳೆಯೆಂಬ [illegible] ಬರೇ ನಾಳೆಗೆಂದ ಮಾತನಾಡುವ ನಂಬುವ [illegible] ಇಂಥಾ ಹೀನಸ್ಥಿತಿಯಲ್ಲಿದ್ದು ನಿಮ್ಮ [illegible] ಬೇಕಾಗುವ ಸೌಕರ್ಯವನ್ನೆ ಕಲ್ಪಿಸಿಕೊಳ್ಳಲು [illegible] ಯಾವ ಸಲಕರಣೆಯು ಇಲ್ಲ ಮತ್ತು ಬಹು [illegible] ಯಿರುತ್ತೀರಿ ಅಲ್ಲದೆ ಸ್ವಲ್ಪ ಶ್ರದ್ಧೆ ತೆಗೆದು [illegible] ನಿಮ್ಮ ನಾಳೆ ಬರ್ಬ ವಿಷಯ ಯಾವದೂ ಇಲ್ಲವೆಂದು ನುಡಿದರು ಮ|| ರಾ|| ಶ್ರೀ|| ಕೋದಂಡಪ್ಪನವರ ಸಂಭಾಷಣವನ್ನು ನಾವುಗಳು ಕೇಳುತ್ತಿರುವಲ್ಲಿ ಯೆಲ್ಲಾ ಅನುಭವಗಳ ತಿಳಿದೋ ರುತ್ತ [illegible] ಪತ್ರಿಕೆಗಳನ್ನ ಓದುವವರು ಮತ್ತು ಇವಿಷ [illegible] ಚಂದಾದಾರರಾಗಲು ನಾವುಗಳೆಲ್ಲರೂ ಕುತೂಹಲಪಟ್ಟಿರುತ್ತೇವೆ. "ಗ್ರಾಮನಿವಾಸಿ"

ಕೊಡಗು ಮಿತ್ರನೆ,

ತಮ್ಮ 29-6-1923ರ ಪತ್ರಿಕೆಯಲ್ಲಿ ಬಾಡಗ ಸ್ಕೂಲಿನ ಹಿತೈಷಿಯು ಹೇಳುವ ಈ ಸ್ಕೂಲ್ ಮಾಸ್ಟರು ಇದಕ್ಕೆ ಮೊದಲು 5-6 ಸ್ಕೂಲ್‌ಗಳಲ್ಲಿ ಕೆಲಸಮಾಡಿ ತನ್ನ ಸ್ವಾರ್ಥತೆಯನ್ನು ಸಿದ್ಧಿಯನ್ನು ಕೋರಿಸದೆ ಸ್ಕೂಲ್‌ಗಳನ್ನು ಅಭಿವೃದ್ಧಿಗೆ ತಂದದ್ದು ಆಯಾ ಪ್ರಾಂತ್ಯದ ಜನರಿಗೂ ಮೇಲಧಿಕಾರಿಗಳಿಗೂ ನಮಗೆಲ್ಲಾ ಚನ್ನಾಗಿ ಗೊತ್ತಿರುವ ಸಂಗತಿಯಾಗಿದೆ

ಈ ಬಾಡಗ ಸ್ಕೂಲ್ 2-4 1922ರಲ್ಲಿ ತೆರೆದದ್ದಾಗಿದೆ ಸರಕಾರದವರು ಸ್ಕೂಲಿಗೆ ಸಾಮಾನು ಕೊಡದೆಹೋದದ್ದು ಸ್ಕೂಲ್ ಮಾಸ್ಟರ ಮತ್ತು ಪಂಚಾಯ್ತರ ತಪ್ಪೋ? ಈ ಸ್ಕೂಲಿನಲ್ಲಿರುವ ಮತ್ತು ಸ್ಕೂಲಿಗೆ ಬೇಕಾದ ಸಾಮಾನುಗಳಿಗ ಈವರೆಗೆ 10 11 ರಿಪೋರ್ಟ್ ಬರಕೊಂಡದ್ದಾಗಿ ತಿಳಿಯುತ್ತೇನೆ. ಕಳೆದ ಜೂನ್ ತಿಂಗಳಲ್ಲಿ ಸಾಮಾನು ಕಳುಹಿಸಿಕೊಡುವಂತೆ ಹುಕುಂ ಆಗಿದೆ. ಸಾಮಾನು ಕಳುಹಿಸಿಕೊಡಲು ತಡವಾದ್ದಕ್ಕೆ ಕಾರಣ ಗೊತ್ತಿಲ್ಲ ಹಿತೈಷಿಯು ಯಾವದೊಂದು ನಿಜ ಸಂಗತಿಯನ್ನು ಚನ್ನಾಗಿ ತಿಳಿದುಕೊಳ್ಳದೆ ಇತರರನ್ನು ಮನಸ್ಸಿಗೆ ನೋಯಿಸಿದ್ದು ವ್ಯಸನಕರ ಸಂಗತಿಯಾಗಿದೆ ಹಿತೈಷಿಯು ಸ್ವಾರ್ಥತೆಯನ್ನು ಬಿಟ್ಟು ಪರೋಪಕಾರದಲ್ಲಿಯೇ ನಿರತರಾಗಿರುವವರೋ ಎಂಬುದು ತಿಳಿಯಬೇಕೆನ್ನುತ್ತೇನೆ

ಕೆ ಎ. ಮೇದಪ್ಪ

ಇದಕ್ಕೇನನ್ನುವಿರಿ !!

ಅಯ್ಯಾ! ಬಿ ಎಸ್ ಕುಶಾಲಪ್ಪನವರೆ! ವ್ಯಸನ ಸೂಚಕವಲ್ಲಿಯ ತಮ್ಮ ಕುಶಲ ಲೇಖನವನ್ನು ನೋಡಿದರೆ ಯಾರಿಗೂ ಬಹು ನಗೆ ಹುಟ್ಟಾಗದಿರದು ತಾವು ಮಾಸಾಲು ಇರುವ ಕುಶಾಲಪ್ಪನವರು ನಾನಂದರೆ ಕುಶಾಲು ಇಲ್ಲದ ಕುಶಾಲಪ್ಪನು ತಮ್ಮ ಅವಸರದ ಬರೆಯ ಮೇರೆ ಆಚಾರ ಉಚಾರ ಆಕಾರಕ್ಕೆ ದಾರಿ ಎಳೆದು ಒದುವರೆ ನಿಮ್ಮ [illegible] ವಿಷಯಗಳನ್ನೊಂದು ತರುವಾಯ ಏನೆಂದು ಬರೆದಕ್ಕೆ ಮತ್ತು ರುಜುಕರ ಉಳ್ಳ [illegible] ವಿಚಾರಿಸುತ್ತೇನೆ. [illegible] ಬಿಡಿದರೂ ಮೈಸೂರಿನ ಹುಡುಗರ ಕುರಿತು [illegible] ದೇವರಿಗೆ ಕಾಗದ ಬರೆಯ [illegible] ನಾವು ಬರೆಯ [illegible] ಹುಡುಗನ ಕುರಿತು [illegible] ದೇವರಿಗೆ ಸೂರಾಸ್ತ [illegible] ಕಾಗದ ಬರೆಯ ಅವನ [illegible] ಸಮಯವನ್ನು ಹಾಳುಮಾಡಿ [illegible] ಹುಡುಗನ [illegible] ಕೇಳಿ [illegible] ತೊಂದರೆ ಕೊಡುವವರಿ [illegible] ಎಲ್ಲಾ ಹುಡುಗರ ಕುರಿತು ಒಂದು ಕಾಗದ ಬರೆದು ಯಾವ ಯಾವ ಹುಡುಗನ ಅವಸ್ಥೆ [illegible] ಗಿದೆ [illegible]

ಮಾರಣೆದಿನ ಬಂದ ಪ್ರವಾಹವು ಕಳೆದ ನಲವತ್ತು ವರ್ಷದಿಂದೀಚೆಗೆ ಬಾರದಂತ ಕಠಿಣ ಪ್ರವಾಹವಾಗಿತ್ತು. ಮಾರಣೆ ದಿನವೇ ಹೊಳೆಯ ಬದಿ ಎತ್ತರವಾದ ಬಾಣೆಯನ್ನು ಹತ್ತಿ ನೋಡುವಾಗ, ಹೊಳೆಕರೆಯಲ್ಲಿ ಮಾಪಿಳ್ಳೆಯವರ ಕೋಲಾಹಲಧ್ವನಿಯೂ ಮಾದಿಗರ ಕೂಗೂ, ಹಂದಿ, ಆಡು ದನಗಳ ಕೂಗೂ ಕೇಳುತ್ತಿತ್ತು. ಜೊತೆಗೆ ಮಾಪಿಳ್ಳೆಯವರ ಮನೆ ಬೀಳುವ ಶಬ್ದವು ಮತ್ತಷ್ಟು ವ್ಯಸನವನ್ನುಂಟುಮಾಡುತ್ತಿತ್ತು ಬೆಳಗ್ಗೆ ಎಂಟುಗಂಟೆಗೆ ಮೊದಲೇ, ಕೋಟೆರ ಚಿಣಪ್ಪನವರು ಹೋಗಿ ದೋಣಿ ಕಾರನನ್ನು ಕೂಗಿ ಕೂಗಿ ಕರೆದು ಸ್ವಲ್ಪ ಹೊತ್ತಿನಂತೆ ಆ ಭಯಂಕರ ಪ್ರವಾಹದಲ್ಲಿ ದೋಣಿಯನ್ನು ನಡಿಸಿಕೊಂಡು ಬಂದನು ಅಷ್ಟರಲ್ಲಿ ದೇವಸ್ಥಾನದಲ್ಲಿರುವ ಬ್ರಾಹ್ಮಣ ಅರ್ಚಕರ ಕೂಗೂ ಒಂದು ಕಡೆಯಲ್ಲಿಯೂ, ತೊತ್ತಿಯಂಡ್ರ ಮನೆಯವರ ದನದ ಕೊಟ್ಟಿಗೆಯಲ್ಲಿರುವ ದನಗಳು ತೀರ ಹೊಳೆಯೊಳಗೆ ಆದ್ದರಿಂದ ಅವರ ಕೂಗೂ ಒಂದೇ ರೀತಿ ಕೇಳುತ್ತಿತ್ತು ಇದನ್ನು ಕಂಡು ಕೋಟೆರ ಚಿಣ್ಣಪ್ಪನವರು ಕೊಂಗೀರಂಡ್ರ ದೇವಯ್ಯನವರು, ದೋಣಿಯವನ ಸಮೇತ ಒಡನೇ ಅರ್ಧ ಮೈಲಿ ದೂರವಿದ್ದ ದನದ ಕೊಟ್ಟಿಗೆಗೆ ದೋಣಿಯಲ್ಲಿ ಹೋಗಿ ದನಗಳನ್ನು ಬಿಡಿಸಿದರು. ದನಗಳನ್ನು ಬಿಡಿಸಿದ ಜಾಗದ ಹತ್ತಿರ ಇದ್ದ ಒಕ್ಕ ಸಮಿಪಕೂಡದಾಗಿತ್ತು ದೋಣಿ ಮಗುಚುವ ಸಂಭವವಿದ್ದೂ, ಎಚ್ಚರದಿಂದ ಬಂದರು. ಅಷ್ಟರವರೆಗೆ, ಬೆಳ್ಳಿಚೆಟ್ಟಿರ ಅಚ್ಚಯ್ಯನವರು ಮಾದಂಗನವರು ಕೋಟೆರ ಐಯಪ್ಪನವರು ಮತ್ತು, ಪಾಲಂದಿರ ಪೂವಯ್ಯನವರು ಆಚೆಕರೆಯಲ್ಲಿ ಕೂಗುತ್ತಿರುವ ಜನರ ಸಂಕಟವನ್ನು ಕಂಡು ಅಲ್ಲಿಗೆ ಹೋಗಲಿಕ್ಕೂ ಬ್ರಾಹ್ಮಣ ಅರ್ಚಕರನ್ನು ಮತ್ತು ಪರಸ್ಪರಸಹಾಯದ ಸಂಘದ ರಿಕಾರ್ಡುಗಳನ್ನು ತೆಗೆಯಲಿಕ್ಕೂ ಬಂದವರು ದೋಣಿಕಾರನನ್ನು ಎಡೆಬಿಡದೆ ಕರೆಯುತ್ತಿದ್ದರು ಕೂಡಲೇ ಕೊ॥ ದೇವಯ್ಯನವರು ಏನ ಹ ಬಾಕಿ ಐದು ಜನರು ಆಚೆಕರೆಗೆ ಹೊರಟು ರಕ್ಷಣೆಗಾಗಿ ಕೂಗುತ್ತಿರುವ ನೀರಿನಿಂದ ಬಳಸಿ ಹೋದ ಮಾದಿಗರನ್ನು ದೋಣಿಯಲ್ಲಿ ತಂದರು. ಮಾಪಿಳ್ಳೆಯವರನ್ನೆಲ್ಲಾ ಮುಕ್ಕಟ್ಟಿರ ಮನೆಯಲ್ಲಿರುವಂತೆ ಹೇಳಿ ಅವರಿಗೆ ಬೇಕಾಗುವ ಊಟದ ಖರ್ಚಿಗೆ ತಕ್ಕ ಏರ್ಪಾಡು ಮಾಡಿ ಹಿಂದಕ್ಕೆ ಹೊರಟು ದೇವಸ್ಥಾನದಲ್ಲಿರುವ, ಬ್ರಾಹ್ಮಣರನ್ನು, ಗೋವುಗಳನ್ನು ದಾಟಿಸುವ ಕುತೂಹಲದಲ್ಲಿದ್ದರು ಹೊಳೆಯ ಅಡ್ಡಗಲವು ಸುಮಾರು ಒಂದು ಮೈಲಿಯಿತ್ತು. ಮಾಪಿಳ್ಳೆಯವರ ಮನೆ ಬೀಳುವ ಶಬ್ದವನ್ನು ಅವರ ಗೋಳನ್ನು ಕಣ್ಣಾರೆ ಕಂಡದ್ದರಿಂದ ಉಡುಪಿ ಮೊದಲಾದ ಸ್ಥಳಗಳಲ್ಲಿ ಆದ ಪ್ರಳಯವು ಯೋಚನೆಗೆ ಬರುತ್ತಿತ್ತು. ದೋಣಿಯನ್ನು ಆ ಭಯಂಕರ ಪ್ರವಾಹದಲ್ಲಿ ಹಾಕುವ ಗಜ ಸಾಗಿಸುವುದೇ ಅತ್ಯಂತ ಅಪಾಯಕರವೆಂದು ಕಾಣುತ್ತಿತ್ತು. ಹ್ಯಾಗಾದರೂ ಮಾಡಿ ಪ್ರಾಣದಾಶೆಯಿಲ್ಲದೆ ದೇವಸ್ಥಾನದಲ್ಲಿರುವ ಗೋಬ್ರಾಹ್ಮಣರನ್ನು ಬದುಕಿಸುವುದೇ ಈ ಐದು ಜನರ ಉದ್ದೇಶವಾಗಿತ್ತು ಆದರೆ ಆ ಪ್ರವಾಹವನ್ನು ಒಕ್ಕನ ರಭಸವನ್ನು ನೋಡಿದ್ದರೆ ಮನುಷ್ಯಮಾತ್ರದವನು ಅಂಥಾ ಕಾರ್ಯಗಳಿಗೆ ಕೈಹಾಕುತ್ತಿರಲಿಲ್ಲ ಹೇಗೂ, ಎರಡು ಜನ ಮಾಪಿಳ್ಳೆಯವರನ್ನು ಕರೆದುಕೊಂಡು ದೋಣಿಗೆ ಹತ್ತಿ ಬಹಳ ಸಂಕಟದಿಂದ ಬಂದರು. ದೋಣಿಯು ಹೊಳೆಯ ಮಧ್ಯಭಾಗಕ್ಕೆ ಬಂದೊಡನೇ, ಸುಳಿಯಿಗೆ ಸಿಕ್ಕಿ ಹಿಂದಕ್ಕೆ ಬಹಳ ವೇಗದಿಂದ ಹೋಯಿತು. ಎಷ್ಟೇ ಪ್ರಯತ್ನ ಪಟ್ಟರೂ ದೋಣಿಯನ್ನು ತಿರುಗಿಸಲಿಕ್ಕೆ ಆಗಲೀ ಮೇಲೆ ತರಲಿಕ್ಕೆ ಆಗಲೀ ಆಗಲಿಲ್ಲ. ದೋಣಿಯು ತುಂಬು ದೋಣಿಯಾದ್ದರಿಂದ ಒಡಕುಗಳಲ್ಲಿ ನೀರು ಬರುತ್ತಿತ್ತು. ದೋಣಿಯು ಮಿಂಚಿನ ವೇಗದಿಂದ ಸರ್ಪನೇ ಒಂದು ಮರಕ್ಕೆ ಬಡಿಯುವಂತಾ ಸ್ಥಿತಿಗೆ ಬಂ[illegible] ಕೂಡಲೇ ಈ ಜನರೆಲ್ಲರು ಕೂಡಿ ಒಂದೇ ಪಟ್ಟಿನಿಂದ [illegible]ದು ತಲೆಯಲ್ಲಿಯೂ ಸಿಕ್ಕಿದ ಮರಗಳನ್ನು ನೂಕಿ, ದೋ[illegible] ಮರಕ್ಕೆ ತಗಲದಂತೆ ಏಕ್ಯಪ್ರಯತ್ನ ಮಾಡಿದರು. ಆದ[illegible] ಪ್ರವಾಹದ ವೇಗದಿಂದ ದೋಣಿಯು ಮರಕ್ಕೆ ಬಡಿದೇ ಬಿ[illegible]ಯಿತು. ದೋಣಿಯು ಮುಳುಗಿಯೇ ಮುಳುಗಿತು ಈ [illegible]ಮಯದಲ್ಲಿ ದೋಣಿಯಲ್ಲಿದ್ದಂತ ಇಬ್ಬರು ಮಾಪಿಳ್ಳೆ[illegible] ಕೋಟೆರ ಚಿಣ್ಣಪ್ಪನವರು, ಐಯಪ್ಪನವರು, ಬೆಳ್ಳಿಚೆಟ್ಟಿರ [illegible]ಚೆಯ್ಯನವರು, ಮಂದಂಣನವರು ಮತ್ತು ಪಾಲಂದಿರ ಪೂ[illegible]ಯ್ಯನವರ ಗತಿ ಏನಾಗಿದ್ದಿರ ಬಹುದೆಂಬುದನ್ನು ವಾಚಕ[illegible] ಊಹಿಸಬೇಕು. [illegible]ಲ್ಲರೂ ನೀರಿನಲ್ಲಿ ದುಮುಕಿ ಪ್ರಾ[illegible]ಕ್ಷಣೆಗಾಗಿ ಒದ್ದಾಡಿ ಕೈಗೆ ಸಿಕ್ಕಿದ ಮರದ ಕೊಂಬೆಗಳ[illegible] ಹಿಡಿದರು ದೋಣಿ ಮಗುಚಿದ ಜಾಗವಾದರೋ, ಅತ್ಯ[illegible] ವೇಗದಿಂದ ಕೂಡಿದ ಪ್ರವಾಹವುಳ್ಳ ಅಪಾಯಕರವಾದ [illegible]ಗವಾಗಿದ್ದಿತು. ಆದರ ದೇವಸ್ಥಾನದ ಹತ್ತಿರವಾಗಿದ್ದ[illegible] ದೇವಸ್ಥಾನದ ಸುತ್ತಲಾದರೋ ಒಂದಾಳು ನೀರು ಇ[illegible] ಸುತ್ತಲೂ ಒಕ್ಕ ಬಹಳ ಜೋರಾಗಿತ್ತು. ಮಾ[illegible]ಯರ ಪೈಕಿ ಮಮ್ಮು ಎಂಬೊಬ್ಬನು ಒಡನೇ ದು[illegible] ಈಜಿಕೊಂಡು ದೇವಸ್ಥಾನಕ್ಕೆ ತಲಪಿದನು ಬಾ[illegible]ವರ ಪೈಕಿ ದೇವಸ್ಥಾನಕ್ಕೆ ಆರು ಮಾರು ದೂರದಲ್ಲಿ [illegible]ಟೆರ ಐಯ್ಯಪ್ಪನವರು, ಬೆಳ್ಳಿಚೆಟ್ಟಿರ ಅಚೆಯ್ಯನವರು [illegible]ತದಲ್ಲಿ ಹೋರಾಡುತ್ತಾ, ಮರಗಳನ್ನು ಹಿಡಿಯುತ್ತಾ, [illegible]ಯಿಂದ ತಪ್ಪುತ್ತಾ ದಡವನ್ನೇರುವ ಪ್ರಯತ್ನದಲ್ಲಿದ್ದ[illegible] ಇದನ್ನು ಕಂಡ ಬ್ರಾಹ್ಮಣ ವಿಷ್ಣುಮೂರ್ತಿ ಜ್ಯೋ[illegible]ರು ಒಡನೇ ಪ್ರವಾಹಕ್ಕೆ ಹಾರಿ ಹೆದರಬೇಡಿ ನಾ[illegible] ಬದುಕಿಸುತ್ತೇನೆಂದು ಹೇಳಿ, ದೊಡ್ಡ ಬಡಿಗೆಗಳನ್ನು [illegible]ಯಲಿಕ್ಕೆ ಕೊಟ್ಟು ಇವರಿಬ್ಬರನ್ನು ಬಹಳ ಪ್ರಯತ್ನ[illegible]ದ ದಾಟಿಸಿದರು ಕೂಡಲೇ ಬೆಳ್ಳಿಚೆಟ್ಟಿರ ಅಚೆಯ್ಯ[illegible] ಮತ್ತು ವಿಷ್ಣುಮೂರ್ತಿಯವರು ಸಾಧಾರಣ ಹು[illegible] ಮಾರಿಗೆ ಬಡಿಗೆಗಳನ್ನು ಒಂದಕ್ಕೊಂದು ಕಟ್ಟಿ ಪ್ರವಾ[illegible] ಸಿಕ್ಕಿಕೊಂಡು ಗೋಳಿಡುವ ಪಾಲಂದರ ಪೂವ್ವಯ್ಯ[illegible]ನ್ನೂ, ದಡಕ್ಕೇರಿಸಿದರು ಮರದಮೇಲೆ ಇದ್ದ, ಕೋ[illegible]ರ ಚಿಣ್ಣಪ್ಪನವರು ಮತ್ತು ಬೆಳ್ಳಿಚೆಟ್ಟಿರ ಮಂದಂಣನ[illegible] ಮತ್ತು ಮೈದಂಗುಂಡಿ ಎಂಬ ಮಾಪಿಳ್ಳೆಯವರು ಪ್ರಾ[illegible] ಮೇಲೆ ಆಶೆಯುಡದೆ ಹಾರಿ ಅವರು ತೋರಿಸಿದ ಒಡಿಗೆ[illegible] ಹಿಡಿದು ದಡವೇರಿದರು. ಆ ಪ್ರವಾಹದಲ್ಲಿ ಬದುಕಿ[illegible] ಏರಿದ್ದು, ಆ ಮಹದೇವರ ದಯೆಯಿಲ್ಲದೆ, ಮತ್ತ್ಯಾ ಪ್ರಯ[illegible]ವೆಂದು ತಿಳಿಯಿತು ಈ ತನ್‌ಮಧ್ಯೆ, ಮನುಷ್ಯಪ್ರ[illegible]ವಿಲ್ಲದೆ ದೈವಯೋಗವು ಬರವುದಿಲ್ಲವೆಂದೂ ಸಿದ್ಧಾ[illegible]ಯಿತು ಆ ವಿಷ್ಣುಮೂರ್ತಿ ಜ್ಯೋತಿಷ್ಯರೇ, [illegible] ಸುಭದಲ್ಲಿ ದೇವಾರಾಧನ ಮಾಡಿದವರು ಹೀಗೆ[illegible] ತನ್ನ ಪ್ರಾಣವನ್ನು ತೃಣಮಾತ್ರ ಕಂಡು ಬೇರೆಯವ[illegible]ಣವನ್ನುಳಿಸಲಿಕ್ಕೆ ಪ್ರಯತ್ನಪಟ್ಟ ಬೆಳ್ಳಿಚೆಟ್ಟಿರ ಅಚ್ಚೆಯ[illegible]ರ ಪ್ರಯತ್ನಕ್ಕೆ ಆ ದೇವರೇ ತಕ್ಕ ಫಲ ಕೊಡಬೇಕಲ್ಲ[illegible] ಮನುಷ್ಯಮಾತ್ರದವರಿಂದ ಸಾಧ್ಯವಿಲ್ಲ ನಂಬಿದವ[illegible] ಬಿಡನೆಂಬ ವಾಕ್ಯವು ಇಲ್ಲಿ ಒಂದಿತವಾಯಿ[illegible]

ಆಮೇಲೆ ಎಲ್ಲರೂ ಆ ರಾತ್ರಿಯೂ, ಮಾರಣೆಯೂ ದೇವಸ್ಥಾನದಲ್ಲೇ, ಬಹಳ ಸಂಕಟದಿಂದ [illegible] ಪ್ರವಾಹದ ವೇಗವೂ ಅಲೆಗಳು ಬಡಿಯುವ ಶಬ್ದಗ[illegible] ಕಾಪರಿಗಾದರೂ ಅತಿ ಭಯಂಕರವನ್ನುಂಟುಮಾಡ[illegible] ಎರಡು ರಾತ್ರಿ ಕಳೆದು ಮಾರನೇ ದಿನ ಬೆಳಗ್ಗೆ ಒ[illegible] ನೀರಿನಲ್ಲಿ ದಾಟಿಕೊಂಡು ಮನೆಸೇರಿದರು [illegible] ಪಾಂಡಿವಗ್ಗೆರೆ ಮೂಲಕ ದೇವಸ್ಥಾನ ಸೇರಬೇಕೆಂದ[illegible]ಡಿದ ಪ್ರಯತ್ನವು ವ್ಯರ್ಥವಾಯಿತು. ಯಾವ ಪ್ರಾ[illegible] ಹೋಗಿದೆಯೋ ಎಂಬ ಇವರ ಕುತೂಹಲವು ಸಹಿ[illegible]ವಾಗಿತ್ತು

ಇದಂತಿರಲಿ ಹೊಳೆ ಬದಿ ಮಾಪಿಳ್ಳೆಯವರ[illegible] ವರ್ಣಿಸಲಸಾಧ್ಯವಾಗಿದೆ ಸುಮಾರು ಐದುಸಾವಿರ[illegible]ಯಿಗಿಂತ ಹೆಚ್ಚು ನಷ್ಟವಾಗಿರಬಹುದಾಗಿದೆ. ಇಂ[illegible]ಕ್ಕಟ್ಟನಲ್ಲಿ ಮನೆಮಾರು, ಅನ್ನ ಬಟ್ಟೆ ಇಲ್ಲದೆ ಸರ[illegible] ಜನರಿಗೆ ತಕ್ಕ ಪರಿಹಾರವು ಅವಶ್ಯಕ. ಒಡನೇ ಸರ[illegible]ರು ಹೊಳೆಗೆ ದೋಣಿಕರಿಸಿ, ಈ ಬಡಜನರಿಗೆ ತ[illegible]ಯವನ್ನು ಮಾಡುವರೆಂದು ನಂಬಿದ್ದೇವೆ.

ಪ್ರತ್ಯ[illegible]

ಮತಸ್ಥರಿನ ದೇವಸ್ಥಾನ

ಅಯ್ಯಾ,

ತಕ ಮೇಲೆ ಹೇಳಿದ ದೇವಸ್ಥಾನವು ಕೆಲ[illegible]ಗಳಿಂದ ಹಿಂದೆ ಬಹಳ ಉನ್ನತ ಸ್ಥಿತಿಯಲ್ಲಿ[illegible] ಬಹಳ ಹೀನಸ್ಥಿತಿಯಲ್ಲಿರುವುದನ್ನು ನೋಡಿದ[illegible] ದುಃಖಕರವಾಗಿ ಕಂಡು ಬರುತ್ತದೆ. [illegible] ಆ ನಾಡಿನ ತಕ್ಕ ಮುಖ್ಯಸ್ಥರ ಉದಾಸೀನವ[illegible] ಮೂಲಕಾರಣ.

ಕಳೆದವರ್ಷ ಈ ದೇವಸ್ಥಾನವನ್ನು [illegible] ಸಲಿಕ್ಕಾಗಿ ಹಣ ಜಮೆಮಾಡಿದರು [illegible] ನಾಡಿನವರಿಗೆ ಕೊಡುವ, ಭಾರತನ್ನದೆಂದು[illegible] ಒಬ್ಬ ಮಹನೀಯರು ಅದಕ್ಕೆ ಬೇಕಾದ್ದ[illegible]

...ಸುಡಿಸಿ ಕುರುವಿನಲ್ಲಿ ತುಂಬಾ ಶ್ರದ್ಧೆ ತೆಗೆದು
...ವಂತೆ ಮಾಡಿ ದೇವರ ಗರ್ಭ ಗುಡಿಯ ಸುತ್ತಿದ್ದ
...ವನ್ನು ಕಿತ್ತು ನೆಲಸಮಮಾಡಿದಲ್ಲದೆ ಇಷ್ಟರವ
...ವತರದ ರಿಪೇರಿಯು ಆಗಿರುವುದಿಲ್ಲ. ಸುಟ್ಟ
... ಈ ಹೇಳಲಾಸಾಧ್ಯವಾದ ಮಳೆಗೆ ಹೇಗಿತ್ತೋ
...ದೀತು! ಅದಂತು ಹಾಗಿರಲಿ! ದೇವರ ಈ ವರ್ಷ
...ವಕ್ಕೆ ಉಪವಾಸವಾಯ್ತು! ಹೀಗಾಗಿ ಆಗುತ್ತಿ
...ವನ್ನು ಆಗದ ಹಾಗೆ ಮಾಡಿದರು. ಆದರೆ ಇ
... ಭಾರವನ್ನು ವಹಿಸಿಕೊಂಡ ಮಹನೀಯರು
...ಳ ನಿಧಾನವಾದ ಮೇಲಾದರು ಸ್ವಲ್ಪ ತೊಂದರೆ
...ಕೊಂಡು ಆ ದೇವಾಲಯವನ್ನು ಉತ್ತಮ ಸ್ಥಿತಿಗೆ
...ನಾಡಿನ ಜನರನ್ನು ಎಚ್ಚರಿಸಿ ಇನ್ನು ಮುಂದಕ್ಕಾ
...ಲಸವು ವಿಯೋಗ್ಯರೀತಿಯಲ್ಲಿ ನಡೆಸುವಂತೆ ಮಾ
...ಾಗಿ ನನ್ನ ಪ್ರಾರ್ಥನೆ

"ಪ್ರತ್ಯಕ್ಷ ದರ್ಶಿ"

...ತಗು ಪತ್ರಿಕೆಯಲ್ಲಿ ನನ್ನ ವೈಸರಾಯಿ
...ು ನಮ್ಮ ನೆರೆರಾಜ್ಯವಾದ ಮೈಸೂರಿಗೆ ಬರು
...ಯೂ ನಮ್ಮ ಜಮೀನ್ದಾರ ಸಂಘದವರು ಅವ
...ು ಡೆಪ್ಯುಟೇಶನ್ ಕಳುಹಿಸುತ್ತಾರಾಗಿಯೂ
ನನಗೆ ಈ ಕೆಳಗಿನ ಸಂಗತಿ ನೆನಪಿಗೆ ಬಂತು.
...ಲ್ಲಿ ಕರುಣಾ ಹೃದಯನಾಗಿ ಕಷ್ಟವನ್ನು ಅನು
...ವರ ಸಹ ಕಾಣದೇ ಕೇಳದೆ ಸರ್ವ ವಿಧಸಂಪ
...ಡಗೂಡಿ ಅರಮನೆಯಲ್ಲಿ ಬೆಳೆಯುತ್ತಿದ್ದ
...ನೆಂಬ ರಾಜಕುಮಾರನು ಒಂದುದಿನ ರಾಜಧಾನಿ
ನೋಡಲಿಚ್ಛೈಸಿ ತನ್ನ ತಂದೆಯ ಅಪ್ಪಣೆ ಪಡ
...ಂದೆಯು ಮೃದು ಹೃದಯನಾದ ತನ್ನ ಕುಮಾ
...ನು ಸಂಚಾರ ಮಾಡುವಾಗ ಯಾವ ತರದ ಕಷ್ಟ
...ಾಗಿ ಅನುಭವಿಸುತ್ತಿರುವವರು ಇವನ ಕಣ್ಣಿಗೆ
...ವಾಗದಂತೆ ಮಾಡಬೇಕೆಂದು ಅಪ್ಪಣೆಯಾದಂತೆ
...ನ್ನ ಮರೆಮಾಚಿ ರಾಜಕುಮಾರನ ಕಣ್ಣಿಗೆ
...ದ ಯುಕ್ತವಾದ ಸಂಗತಿಗಳೇ ಗೋಚರವಾಗು
...ನ್ನು ಕಂಡು ಲೋಕದ ಜನರೆಲ್ಲಾ ಇದೇರೀತಿ
...ನಂದದಲ್ಲಿರುವರೆಂದೂ ಮನುಷ್ಯ ಜನ್ಮವು ಎಷ್ಟು
...ವಾದದೆಂದೂ ಯೋಚಿಸುತ್ತಾ ಆನಂದ ಪಡುವ
...ದಲ್ಲಿ ಅತಿ ವೃದ್ಧನಾಗಿ ಹೆಜ್ಜೆ ಇಡಲು ತ್ರಾಣ
...ಚರ್ಮ ಸುಕ್ಕುಬಿದ್ದು ಬಡವಾಗಿ ಮೈಯಲ್ಲಿ
...ಗಿ ಜೀರ್ಣವಾದ ಬಟ್ಟೆಯಿಂದೊಡಗೂಡಿದ
ತನ್ನ ಗುಡಸಲಿನಿಂದ ಒಮ್ಮಿಂದೊಮ್ಮೆ ಹೊರ
...ರ್ಮರೇ ಭಿಕ್ಷನೀಡಿ! ಧರ್ಮರೇ ಹಿಟ್ಟಿಗೊಂದು
...ಡಿ! ಇಂದೋ ನಾಳೆಯೋ ಸಾಯುವ ಮುದು
...ದು ಕಾಸು ಧರ್ಮವಾಗಿ ಎಂದು ಕೂಗಿದ್ದನ್ನು
...ನು ಕೇಳಿ ಅವನ ಸಂಗತಿಯನ್ನು ವಿಚಾರಿಸಿ
...ರು ಈ ರೀತಿ ಕಷ್ಟದಲ್ಲಿರುವರೇ ಮನುಷ್ಯನ
...್ನು ಪರಿಹರಿಸಲು ಯಾವದಾದರೂ ದಾರಿ ಇದೆ
...ಬದನ್ನು ಕಂಡುಹಿಡಿಯಲು ಪ್ರಯತ್ನಿಸಿ ಕಡೆ
...ಮತ ಸ್ಥಾಪಕನಾದನು. ಆ ವೃದ್ಧನು ಸಿದ್ಧಾ
...ಣ್ಣಿಗೆ ಕಾಣಿಸಿಕೊಳ್ಳದೆ ಇದ್ದಿದ್ದರೆ ಲೋಕ
...ದ್ಧಮತವೇ ಸ್ಥಾಪನೆಯಾಗುತ್ತಿರಲಿಲ್ಲ ಮತ್ತು
...ನ ಚರಿತ್ರೆಯು ಬೇರೆ ವಿಧವಾಗುತ್ತಿತ್ತು.

...ಇದೇರೀತಿಯಲ್ಲಿ ಸಕಲ ಭಾಗ್ಯ ಸಂಪತ್ತಿನಿಂದೊ
...ಷ್ಟವನ್ನು ಕಾಣದೆ ಇರುವ ನಮ್ಮ ಘನವೈಸ
ಭೇಟಿಕೊಟ್ಟು ನಮ್ಮ ದೇಶದ ನಿಜಸ್ಥಿತಿಯ
...ರುಗಳಿಗೆ ತಿಳಿಸಬೇಕೆಂಬ ಇರಾದೆ ಇದ್ದಲ್ಲಿ
ಇಂಥ ಭೇಟಿಗೆ ಕಳುಹಿಸಿದಂತೆ ಐಶ್ವರ್ಯ
ವಿದ್ಯಾವಂತರೂ ಆಗಿ ಭೇಟಿಯಾಗುವ ಪ್ರಭು
...ನ್ನೇ ಕಾಣುವಂತ ಉಡುಪನ್ನು ಧರಿಸಿ ಇಂ
...ದ ಉಡುಪನ್ನೇ ಧರಿಸಿಕೊಂಡು ಹೋಗಬೇ
...ಂಧಪಿಡದೆ ಭೇಟಿಕೊಡಲು ಹೋಗುವವರಿಗೆ
...ಉಡುಪನ್ನು ಒದಗಿಸುವ ಕಷ್ಟವನ್ನು ಕೊಡ
...ಗಳ ಕಣ್ಣು ಕಿವಿಗಳನ್ನು ಮೋಸಮಾಡದೆ
...ರ್ ರಾಜರ ಆಳಿಕೆಯಲ್ಲಿ ಅನುಕೂಲಸ್ಥ
...ಕೆಗೆ ನಮ್ಮ ಘನಸರಕಾರದ ಆಡಳಿತಕ್ಕೆ
...ಕೆ ಒಳಪಟ್ಟ ಅಸಂತರ ಅಸ್ತಿಬಟ್ಟೆಗಳಿಲ್ಲದೆ
...ರಾರಿರುವ ಕೆಲವರನ್ನು ದೇಶದ ಪ್ರಜೆಗಳೇ
...ನ ಆದರವರು ಧರಿಸಿಕೊಂಡಿರುವ ಉಡುಪಿ
...ಹಿಸುವಂತೆ ಮಾಡಿದರೆ ಅವರ ಸ್ಥಿತಿಯನ್ನು
...ದೇಶದವ ಸ್ಥಿತಿಯನ್ನು ಗಣಿಸಿ ಪರಿಹಾರ ಬಗ್ಗೆ
...ಸರಾದ ಪ್ರಭುಗಳು ತಕ್ಕ ಯೋಚನೆಯ
...ಬಹುವರೆಂಬುದು ಯಾವ ಸಂದೇಹವೂ ಇರ

ಐ. ಬಿ. ಮಾದಪ್ಪ.

(ಸಿಬ್ಬಂದಿ ಕೋತ)

ಸಿಬ್ಬಂದಿ ಕೋತೆಯ ವಿಷಯವಾಗಲೀ ಮತ್ತಷ್ಟು
ಖರ್ಚು ಮಾಡುವ ಉದ್ದೇಶವನ್ನು ಸರಕಾರವು ಕೈ
ಕೊಂಡಂತೆ ತಿಳಿಯುತ್ತೇವೆ. ಈ ಬಾಬಿನಲ್ಲಿ ಕೆಲವು
ನ್ಯೂನಾತಿರಿಕ್ತಗಳನ್ನು ಸರಕಾರದ ಮುಂದಿಡಬೇಕಾಗಿ
ರುವುದರಿಂದ ಇದುವರೆಗೆ ಆದ ಎಲ್ಲಾ ಡಿಪಾರ್ಟ್‌ಮೆಂಟಿನ
ಖರ್ಚು ಕೋತೆಯನ್ನು ಪ್ರತ್ಯೇಕ ತೋರಿಸಬೇಕಾಗಿದೆ.
ಆದ್ದರಿಂದ ಮೊದಲು ಒಂದೊಂದಾಗಿ ಬರೆಯಬೇಕಾಗಿದೆ.
ವಿದ್ಯಾ ಇಲಾಖೆ ಮತ್ತು ಔಷಧ ಇಲಾಖೆಗಳಲ್ಲಿ
ಇದುವರೆಗೆ ಹೆಚ್ಚಿಗೆ ಕೋತೆ ಮಾಡಿದ್ದು ಪಬ್ಲಿಕ್ಕಿಗೆ ಕಾ
ಣದಿದ್ದರೂ ಅನೇಕ ಸಾವಿರ ರೂಪಾಯಿ ಉಳಿಸಿರುತ್ತಾ
ರೆಂದು ವರ್ತಮಾನ. ಕಳೆದ ಘೋರ ಯುದ್ಧವು ಮು
ಕ್ತಾಯವಾದೊಡನೇ ಇಂಗ್ಲೆಂಡಿನಲ್ಲಿ ಸಿಬ್ಬಂದಿ ಕೊ
ತೆಯ ಪ್ರಾರಂಭವಾದಾಗ ಪಾರ್ಲಿಮೆಂಟಿನವರು ಈ
ಎರಡು ಡಿಪಾರ್ಟ್‌ಮೆಂಟುಗಳಲ್ಲಿ ಯಾವ ಕೋತೆಯು
ಇರಕೂಡದು ಎಂಬುದಾಗಿ ತೀರ್ಮಾನಿಸಿದರು. ಆದ
ರೂ ನಮ್ಮಲ್ಲಿರುವ ಈ ಎರಡು ಇಲಾಖೆಗಳಲ್ಲಿ ಖರ್ಚು
ಕೋತೆ ಮಾಡುತ್ತಿರುವುದು ಬಹಳ ವ್ಯಸನಕರ. ಶಾಲಾ
ಇಲಾಖೆಯಲ್ಲಿ ಟ್ರೇಯಿನಿಂಗ್ ಸ್ಕೂಲ್ ಮಾತ್ರ ತೆಗೆಯ
ಲ್ಪಟ್ಟಿತು ಮತ್ತು ಹೆಡ್‌ಮಾಸ್ಟರ ಪದವಿಯು ಯಾರಿಗೆ
ಆಗುವುದೆಂದು ಇನ್ನೂ ನಿಷ್ಕರ್ಷೆಯಾಗಿರುವುದಿಲ್ಲ. ಇನ್ಸ್
ಪೆಕ್ಟರ ಹುದ್ದೆಯನ್ನು ಕೊಡಗಿಗೆ ಬೆಂಗಳೂರಿಗೂ ಒಬ್ಬ
ನನ್ನು ಇಟ್ಟಿರುತ್ತಾರೆ. ಇಷ್ಟು ದೊಡ್ಡ ಹಣ ಕೊಡಗಿ
ನಿಂದ ಬೆಂಗಳೂರಲ್ಲಿರುವ ಇನ್ಸ್‌ಪೆಕ್ಟರಿಗೆ ಹೋಗುವು
ದು ಬಹಳ ವ್ಯಸನಕರ. ಇದಕ್ಕೆ ಬದಲಾಗಿ ಮಡಿಕೇರಿ
ಹೈಸ್ಕೂಲ್ ಹೆಡ್‌ಮಾಸ್ಟರನ್ನೇ ಕೊಡಗಿನ ಶಾಲೆಗಳ
ಇನ್ಸ್‌ಪೆಕ್ಟರನ್ನಾಗಿ ಮಾಡಿದರೆ ಬಹಳ ಉಪಕಾರವಾ
ಗುತ್ತೆ. ಟ್ರೇಯಿನಿಂಗ್ ಶಾಲೆ ತೆಗೆದರ ಫಲಿತಾಂಶವು
ಅನೇಕ ಕೊಡಗು ದೇಶ ನಿವಾಸಿಗಳಾದ ಉಪಾಧ್ಯಾಯ
ರುಗಳಿಗೆ ಚಾಕರಿ ಇಲ್ಲದಂತಾಯಿತು. ಹತ್ತು ವರ್ಷಗಳ
ವರೆಗೆ ಸರ್ವೀಸು ಮಾಡಿ ಈಗ ಅನೇಕರಿಗೆ ಕೆಲಸವಿಲ್ಲದೆ
ಅಲೆದಾಡುವ ಸಮಯವಾಯಿತು. ಆದರೆ ಅದೇ ಟ್ರೇ
ಯಿನಿಂಗ್ ಸ್ಕೂಲಿನಲ್ಲಿದ್ದ ಇಬ್ಬರು ಮಂಗಳೂರು ಗ್ರಾ
ಜುಯೇಟುಗಳು ಖಾಯಂವಾಗಿಯೂ ಕೆಲಸದಿಂದ ಬಿಡು
ಗಡೆಯಾಗಬೇಕಾಗಿತ್ತು. ಇಲ್ಲವೇ ಬೆಂಗಳೂರು ಟ್ರೇ
ಯಿನಿಂಗ್ ಸ್ಕೂಲಿಗೆ ವರ್ಗವಾಗಬೇಕಾಗಿತ್ತು. ಅದರ
ಐವಾಜಿಗೆ ಇಲ್ಲಿರುವ ಗ್ರಾಜ್ಯುಯೇಟುಗಳಿಗೆ ಕೆಲಸವಿ
ಲ್ಲದಾಯಿತು. ಮಂಗಳೂರವರು ಮಡಿಕೇರಿ ಶಾಲಾ
ಹೆಡ್‌ಮಾಸ್ಟರಾದ ಪ್ರತಿಫಲವು, ದೇಶೀಯರಿಗೆ ಕೆಲಸವಿ
ಲ್ಲದಂತೆ ಮಾಡಿತು. ಬೇರೆ ಎಲ್ಲಾ ಡಿಪಾರ್ಟ್‌ಮೆಂಟು
ಗಳಲ್ಲಿಯೂ, ಆಯಾಯ ಇಲಾಖೆಯು ಹೋಗುವಾಗ
ಆಯಾಯ ಕೆಲಸದವರೂ ಹೋದರು. ಆದರೆ ಇದು
ಮಂಗಳೂರವರಿಗೆ ಪ್ರಾಪ್ತ ವ್ಯಾಪಿಸಲಿಲ್ಲ. ವಿರಾಜಪೇ
ಟೆಯನ್ನು ಹೈಸ್ಕೂಲಾಗಿ ಮಾಡಿದ್ದು ಬಹಳ ಉಪಕಾರ
ವಾಯಿತು. ಆದರೆ ಅದನ್ನು ಮಡಿಕೇರಿ ಹೈಸ್ಕೂಲ್
ಹೆಡ್‌ಮಾಸ್ಟರ ಕೈಕೆಳಗೆ ಇಡದೆ ಸ್ವತಂತ್ರವಾಗಿ ಇನ್ಸ್
ಪೆಕ್ಟರವರ ಅಧೀನದಲ್ಲಿಟ್ಟರೆ ಶಾಲೆಯು ಒಡನೇ ಪ್ರವ
ರ್ಧಮಾನಕ್ಕೆ ಬರುವಲ್ಲಿ ಸಂದೇಹವಿಲ್ಲ.

ಪೋಲೀಸು ಇಲಾಖೆ

ಪೋಲೀಸು ಇಲಾಖೆಯಲ್ಲಿ ಸಿಬ್ಬಂದಿ ಕೋತೆ ಅಂ
ದರೆ, ಸಬ್ ಇನ್ಸ್‌ಪೆಕ್ಟರುಗಳನ್ನು ಕಡಿಮೆ ಮಾಡಬಾ
ರದಾಗಿತ್ತು. ಅದರ ಐವಾಜಿಗೆ ಹಾಲಿ ಇರುವ ಎರಡು
ಡಿವಿಜನ್ ಇನ್ಸ್‌ಪೆಕ್ಟರನ್ನು ತೆಗೆದುಬಿಡುವುದು ಒಳ್ಳೇದು.
ಈಗಾಗಲೇ ಒಬ್ಬರು ಹೋಗುತ್ತಾರಂತೆ. ಮತ್ತೊಬ್ಬ
ರನ್ನು ಏಕೆ ಇಡ್ಸಿರುತ್ತಾರೋ ತಿಳಿಯುವುದಿಲ್ಲ. ಈ
ಎರಡು ಡಿವಿಜನ್ ಇನ್ಸ್‌ಪೆಕ್ಟರುಗಳಿಬ್ಬರು ಇತರ ಸಬ್
ಇನ್ಸ್‌ಪೆಕ್ಟರುಗಳಂತೆಯೇ ವೆಲ್ಲೂರು ಟ್ರೇಯಿನಿಂಗ್
ಆದವರಾಗಿರುವುದರಿಂದ ಯಾವ ಬಾಬಿನಲ್ಲಿಯೂ ಸಬ್
ಇನ್ಸ್‌ಪೆಕ್ಟರಿಗಿಂತ ಉತ್ತಮರಲ್ಲ. ಅಲ್ಲದೆ ಅವರು
ಸಬ್ ಇನ್ಸ್‌ಪೆಕ್ಟರುಗಳ ರಿಪೋರ್ಟು ಮತ್ತು ಇತರ
ಕರೆಸ್‌ಪಾಂಡೆನ್ಸುಗಳ ಆ ಸೂಪರಿಂಟೆಂಡೆಂಟರಿಗೆ ಬರೇ
ಕಳುಹಿಸುವ, ಯಾ, ಹಿಂದಕ್ಕೆ ಸಬ್ ಇನ್ಸ್‌ಪೆಕ್ಟರಿಗೆ
ಮೇಲಿಂದ ಬಂದದ್ದನ್ನು ವಾಪ್ಸು ಮಾಡುವ ಏಜಂಟರಾಗಿ
ರುತ್ತಾರೆ. ಆದ್ದರಿಂದ ಒಬ್ಬನನ್ನು ಮಾತ್ರ ಇಟ್ಟು ಇ
ನ್ನೊಬ್ಬನನ್ನು ಸರ್ವೀಸು ಪೂರ್ತಿ ಪೆನ್‌ಶನ್ನಿಗೆ ಆಗದಿದ್ದ
ರೂ ತೆಗೆಯುವುದರ ಅರ್ಥವನ್ನು ತಿಳಿಯುವುದಿಲ್ಲ.
ಪೋಲೀಸ್ ಮೇಲಧಿಕಾರಿಗಳು ತೋರಿಸುವ ಈ ತರದ
ಸಲಿಗೆಗಳು ನಮ್ಮ ಕಮಿಶನರ್ ಮತ್ತು ಚೀಫ್ ಕಮಿಶ
ನರಿಗೆ ಹೇಗೆ ಒಪ್ಪುವದೆಂದು ತಿಳಿಯುವುದಿಲ್ಲ. ಪೋಲೀ
ಸು ಡಿಪಾರ್ಟುಮೆಂಟಿನಲ್ಲಿ ಎಲ್ಲಿ ಕೋತ ಮಾಡಬೇಕೋ
ಅಲ್ಲಿ ಮಾಡದೆ ಬಡ ಪೋಲೀಸಿನವನನ್ನು ಸಬ್ ಇನ್ಸ್
ಪೆಕ್ಟರನ್ನು ತೆಗೆಯುವುದು ಆಡಳಿತಕ್ಕೆ ಕೊರತೆಯಾಗು
ತ್ತದೆ. ಇದೇ ಡಿಪಾರ್ಟಮೆಂಟಿನಲ್ಲಿ ಮೂವತ್ತು ವರ್ಷ
ಕ್ಕಿಂತ ಮೀರಿದ ಅಧಿಕಾರಿಗಳನ್ನು ಪೆನ್ಷನ್ ಪಡಿಸದೆ,
ಸರ್ವೀಸ್ ಆಗದವರನ್ನು ನಿವೃತ್ತಿ ಮಾಡಿಸುವುದು ಯಾವ
ಧರ್ಮ. ಇಂಥಾ ಸಂಗತಿಯು ಚೀಫ್ ಕಮಿಶನರ ಚಿ
ತ್ತಕ್ಕೆ ಬರಲಿಲ್ಲವೋ?

ರೆವಿನ್ಯೂ ಇಲಾಖೆ

ಪೋಲೀಸು ಇಲಾಖೆಯಂತೆಯೇ ಎರಡು ಸುಬೇ
ದಾರರುಗಳು ಈಗ ಬರೀ ಮೇಲೆ, ಮತ್ತು ಕೆಳಗೆ ಕರೆ
ಸ್‌ಪಾಂಡೆನ್ಸುಗಳನ್ನು ಕಳುಹಿಸುವ ಏಜಂಟರಾಗಿದ್ದಾರೆ.
ಹಾಲಿ ಇರುವ ಪಾರುಪತ್ಯಗಾರರುಗಳು ಈ ಸುಬೇದಾ
ರರಷ್ಟೇ ಯೋಗ್ಯರಾಗಿರುತ್ತಾರೆ. ದೇಶವು ಎರಡು
ತಾಲೋಕಾಯಿತು. ಈ ಎರಡು ತಾಲೋಕಿನ ಮೇಲು
ಉಸ್ತುವಾರಿಯನ್ನು ಕಮಿಶನರ್ ಮತ್ತು ಅಸಿಸ್ಟೆಂಟ್
ಕಮಿಶನರುಗಳಿಗೆ ನೋಡಲಿಕ್ಕೆ ಸಾಧ್ಯವಿದೆ. ಆದ್ದರಿಂದ
ಈ ತರದ ರೆವಿನ್ಯೂ ಇನ್ಸ್‌ಪೆಕ್ಟರುಗಳನ್ನು ಸರಕಾರದ
ವರು ಏಕೆ ಇಟ್ಟಿರುತ್ತಾರೋ ತಿಳಿಯದು. ಇವರನ್ನು
ತೆಗೆದುಬಿಟ್ಟು ಕೆಲವು ಪಾರುಗಾರರಿಗೆ ಅವಶ್ಯವಿದ್ದರೆ ಸಂಬಳ
ಹೆಚ್ಚು ಮಾಡುವುದು ಒಳ್ಳೆದು.

ಫಾರೆಸ್ಟ್ ಇಲಾಖೆ.

ಯಾವಾಗಲೂ ಉತ್ಪತ್ತಿಯಾಗುವ ಇಲಾಖೆಯಾಗಿ
ರುವುದರಿಂದ ಕೋತೆ ಈ ಇಲಾಖೆಗೆ ಇಲ್ಲವಂತೆ. ಅದು
ಒಳ್ಳೇದೆ. ಆದರೆ ಎರಡು ರೇಂಜರಿಗೊಬ್ಬ ಆಫೀಸರು
ಗಳನ್ನು ಏಕೆ ಇಟ್ಟಿರುತ್ತಾರೋ ತಿಳಿಯುವುದಿಲ್ಲ. ಫಾ
ರೆಸ್ಟಿನಲ್ಲಿ ಖರ್ಚು ಬಹಳ ಕಡಿಮೆ ಮಾಡಿರುತ್ತಾರೆಂದು
ವರ್ತಮಾನ. ವರ್ಷಾವಧಿ ಸುಮಾರು ಒಂದೆರಡು ಲಕ್ಷ
ರೂಪಾಯಿ ಖರ್ಚು ಮಾಡುವುದನ್ನು ಬಹಳ ಕಡಿಮೆ
ಮಾಡಿರುತ್ತಾರಂತೆ. ಹಾಗಾದರೆ ಇರುವ ಕೆಲಸವನ್ನು
ಉಸ್ತುವಾರಿ ನೋಡಲಿಕ್ಕೆ ರೇಂಜರುಗಳು ಸಾಲದೇ. ಈ
ಆಫೀಸರುಗಳು ಮಾಡತಕ್ಕ ಕೆಲಸವೇನು. ಇವರ ಸಂ
ಬಳವು ಮತ್ತು ಭತ್ಯವು, ಇನ್ನು ಮುಂದೆ ವರ್ಷಕ್ಕೆ ಇ
ಲಾಖೆಯಲ್ಲಿ ಉತ್ಪತ್ತಿ ಬಗ್ಗೆ ಖರ್ಚು ಮಾಡುವ ಹಣಕ್ಕಿಂ
ತ ಮೀರಬಹುದು. ಇಂಥಾದ್ದು ನಮ್ಮ ಚೀಫ್ ಕಮಿ
ಶನರ ಯೋಚನೆಗೆ ಬರಲಿಲ್ಲವೋ. ಒಬ್ಬ ಡೆಪ್ಯುಟಿ ಕಾ
ನ್‌ಸರ್‌ವೇಟರಿಗೆ ಮಾಡುವಷ್ಟು ಕೆಲಸವು ಪೂರ್ತಿ ಇಲ್ಲ
ದಿರುವುದರಿಂದ ಹೀಗೆ ನಾಲ್ಕೈದು ಆಫೀಸರುಗಳನ್ನಿಟ್ಟಿ
ರುವುದು ಹಾಸ್ಯಾಸ್ಪದವಲ್ಲವೇ.

ಇಂಜನೀರಿಂಗ್ ಇಲಾಖೆ.

ಈ ಇಲಾಖೆಯಲ್ಲಿ ಖರ್ಚು ಕಡಿಮೆಯಾಗುತ್ತಾ
ಬರುತ್ತದೆ. ಆದರೆ ಒಟ್ಟು ಸಿಬ್ಬಂದಿಗೆ ಆಗುವ ಖರ್ಚು
ಕಾಮಗಾರಿ ಕೆಲಸಕ್ಕೆ ಆಗುವುದಕ್ಕಿಂತ ಮೀರಿರುತ್ತದೆ
ಯಂತೆ. ಇಷ್ಟು ದೊಡ್ಡ ಸಂಬಳ ಕೊಟ್ಟು, ಯಾವ
ಭಾರೀ ಕೆಲಸವೂ ಇಲ್ಲದೆ ಎಗ್ಸಿಕ್ಯುಟಿವ್ ಇಂಜನೀ
ಯರನ್ನಿಟ್ಟಿರುವುದು ವ್ಯಸನಕರ. ಇವರ ಬದಲಾಗಿ
ಒಬ್ಬ ಅಸಿಸ್ಟೆಂಟ್ ಇಂಜನೀಯರೇ ಸಾಕಾಗಿರುತ್ತೆ.

ಲೆಂಡ್ ರೆಕಾರ್ಡ್ ಇಲಾಖೆ

ಈ ಇಲಾಖೆಯಲ್ಲಿ ಕೋತೆ ಮಾಡಲಿಕ್ಕೇನೇ ಕೂ
ಡದು. ಅಗ್ರಿಕಲ್ಚರಲ್ ಇನ್ಸ್‌ಪೆಕ್ಟರುಗಳೂ, ಡಿಮಾ
ನ್ಸ್‌ಟ್ರೇಟರುಗಳೂ ಅನೇಕರು ಬೇಕಾಗಿವೆ. ಬೇರೆ
ಇಲಾಖೆಯಲ್ಲಿ ಉಳಿತಾಯವಾಗುವ ಹಣದಿಂದ ರೈತರ
ಆದಾಯವನ್ನು ಹೆಚ್ಚಿಸುವುದು ಸರಕಾರಕ್ಕೆ ಮೇಲ
ಲ್ಲವೇ. ವೆಟರಿನರೀ ಇಲಾಖೆಯವರೂ ಇನ್ನಷ್ಟು ಹೆಚ್ಚಾ
ಗಬೇಕು. ಕಡಿಮೆ ಪಕ್ಷ ಹಳೇ ಐದು ತಾಲೋಕಿಗೆ
ಐದು ಜನರೂ, ತಿರುಗಲಿಕ್ಕೆ ಐದು ಜನರೂ ಅತ್ಯಾವ
ಶ್ಯಕ. ಹೀಗೆಯೇ ಕೋಪರೇಟಿವ್ ಇಲಾಖೆಗೂ ಅನೇ
ಕ ಸಿಬ್ಬಂದಿಗಳು ಇತರ ದೇಶಗಳಲ್ಲಿರುವಂತೆ ಅತ್ಯಾವ
ಶ್ಯಕ. ಈ ಇಲಾಖೆಗಳನ್ನು ವೃದ್ಧಿಪಡಿಸದ ವಿನಹ ರೈತ
ರು ಚೆನ್ನಾಗಿ ಬದುಕುವುದಿಲ್ಲ. ರೈತರು ಒಳ್ಳೆ ಸ್ಥಿತಿ
ಯಲ್ಲಿದ್ದರೆ ಸರಕಾರದ ಕೀರ್ತಿಯು ಹೆಚ್ಚುತ್ತೆ. ಆದ್ದ
ರಿಂದ ಈ ಡಿಪಾರ್ಟುಮೆಂಟುಗಳಿಗೆ ಲಕ್ಷಗಟ್ಲೆ ರೂಪಾಯಿ
ಖರ್ಚು ಮಾಡುವುದು ಅತ್ಯಾವಶ್ಯಕ.

ಸಿಬ್ಬಂದಿ ಕೋತೆಯಿಂದ ಅನೇಕರಿಗೆ ಸಹಿಸಲಾರ
ದಷ್ಟು ಕಷ್ಟನಷ್ಟಗಳುಂಟಾಗಿವೆ. ಸರಕಾರದವರು ತಪ್ಪಿ
ಯಿಂದ ಅನೇಕ ಜನರಿಗಾದ ಪಕ್ಷಪಾತಗಳನ್ನು ಸರಿಪಡಿ
ಸಿದ್ದಲ್ಲದೆ ವಿಧಿ ಇಲ್ಲ. ಸರಕಾರದ ಎದುರಿನಲ್ಲಿ ಸರ್ವ
ರೂ ಒಂದೇ. ಎಲ್ಲರೂ ಸರಕಾರದ ಪ್ರಜೆಗಳೇ.
ಆದ್ದರಿಂದ ನಮ್ಮ ದೂರನ್ನು ದೊರೆಯವರಿಗೆ ಕಳುಹಿಸು
ತ್ತೇವೆ. ರಾಜ್ಯ ಪ್ರತಿನಿಧಿಗಳು ನ್ಯಾಯಮಾಡ್ಯಾರೆಂದು
ನಂಬುತ್ತೇವೆ. ಅಲ್ಲದೆ ಸಿಬ್ಬಂದಿ ಕೋತೆಯಲ್ಲಿ ಉಳಿ
ತಾಯವಾಗುವ ಎಲ್ಲಾ ಹಣವನ್ನು ದೇಶದವರ ಕ್ಷೇಮಕ್ಕೇ
ನೇ ಖರ್ಚುಮಾಡುವುದು ಅತ್ಯಾವಶ್ಯಕ. ಎರಡು ತಾ
ಲೋಕಾದ ಇಷ್ಟು ಚಿಕ್ಕ ದೇಶಕ್ಕೆ ಈ ದೇಶದಲ್ಲಿರು
ವಷ್ಟು ಗೆಜೆಟೆಡ್ ಉದ್ಯೋಗಸ್ಥರು, ಹಿಂದೂದೇಶದ
ಯಾವ ಭಾಗದಲ್ಲಾದರೂ ಇದ್ದಾರೆಯೋ. ಇಂಥಾ ತಲೆ
ಭಾರದ ಸಂಬಳವನ್ನು ಸರಕಾರದ ಪ್ರತಿನಿಧಿಯಾದ
ಚೀಫ್ ಕಮಿಶನರು ಕಡಿಮೆ ಮಾಡ್ಯಾರೆಂದು ನಂಬು
ತ್ತೇವೆ.

(ರೈತ.)

ಮದ್ರಾಸು ಅಮಾಲ್ಗಮೇಶನ್.

ಬರುವ ಡಿಶಂಬರು ತಿಂಗಳಲ್ಲಿ ವೈಸರಾಯರು ಮೈಸೂರಿಗೆ ಚಿತ್ತೈಸುವಾಗ ಜಮಾನುದಾರ ಸಂಘದ ಪರವಾಗಿ ಒಂದು ಡೆಪ್ಯುಟೇಶ ಕಳುಹಿಸುತ್ತಾರೆಂದು ವರ್ತಮಾನ. ಹಾಗಾದರೆ ಜಮಾನುದಾರ ಸಂಘದವರು ಕಳೆದ ವಿರಾಜಪೇಟೆ ಮೀಟಿಂಗಿನಲ್ಲಿ ನಮ್ಮ ದೇಶವನ್ನು ಮದ್ರಾಸು ಅಧಿಪತ್ಯಕ್ಕೆ ಸೇರಿಸಬೇಕೆಂದೂ, ಈ ಬಗ್ಗೆ ವೈಸರಾಯರಲ್ಲಿಗೆ ಡೆಪ್ಯುಟೇಶನ್ ಕಳುಹಿಸಬೇಕೆಂದೂ ಠರಾವು ಮಾಡಿದ್ದನ್ನು ಮುಂದರಿಸಲಿಕ್ಕೆ ಅನುಕೂಲವಾಯಿತು. ಆದ್ದರಿಂದ ಈ ವಿಷಯ ಮೆಮೋರಿಯಲ್ ಬರೆಯಲಿಕ್ಕೆ ಒಡನೇ ಒಂದು ಸಬ್ ಕಮಿಟಿಯನ್ನೂ, ಈ ಠರಾವು ತಂದ ಮೆ|| ಸಿ. ಯಸ್. ಉತ್ತಯ್ಯನವರ ಸಮೇತ ಕೂಡಿಸಿ ತಯಾರ್ಮಾಡಿ ಮುಂದಾಗಿ ಪ್ರತಿಯನ್ನು ಚೀಫ್ ಕಮಿಶನರಿಗೆ ಕಳುಹಿಸುವುದು ಮೇಲು. ಈ ವಿಚಾರದಲ್ಲಿ ಜಮಾನುದಾರ ಸಂಘದ ಕಮಿಟಿ ಪ್ರೆಸಿಡೆಂಟ್, ಸೆಕ್ರೆಟರಿಗಳು ಏನುಮಾಡುತ್ತಾರೆ? ಬಹಳ ಉತ್ಸಾಹದಲ್ಲಿದ್ದ ಮೆ|| ಸಿ. ಯಸ್. ಉತ್ತಯ್ಯನವರು ಏನು ಮಾಡುತ್ತಾರೋ ತಿಳಿಯದು. ಇವರ ಉದಾಸೀನಕ್ಕಾಗಿ ಕೇರು ಬಾರರ ಎಕ್ಸ್‌ಪ್ರೆಸ್ ಉಸರಲ್ ಮೀಟಿಂಗ್ ಒಂದನ್ನು ಮಾಡಲು ಈ ಸಪ್ಟಂಬರ್ ಎರಡನೇ ವಾರದಲ್ಲಿ ಮಾಡಲು ತೀರ್ಮಾನಿಸಿರುತ್ತೇವೆ. ಆದ್ದರಿಂದ ಅದರೊಳಗೆ ಎಗ್ಜಿಕ್ಯುಟಿವ್ ಕಮಿಟಿಯವರು ಖಂಡಿತವಾಗಿಯೂ ಮೆಮೋರಿಯಲ್ಲನ್ನು ಟೆಂಪರನಸಾರವಾಗಿ ತಯಾರ್ಮಾಡುವರೆಂದು ನಂಬಿಕೆ ಇದೆ.

ಆದರೆ ಈಚೆಗೆ ವಿರಾಜಪೇಟೆಯಲ್ಲಿ ಆದ ಕಮಿಟಿ ಮೀಟಿಂಗಿನಲ್ಲಿ, ನಾಮಪರ್ದಾರುಗಳಿಗೆ ಕೊಡಲು ಇದ್ದ ಅಪೀಲಿ ಅಮಾಲ್ಗಮೇಶನ್ನಿಗೆ ವಿತ್ತ್ರಯಮಾಡಬೇಕೆಂದಾಗಿ ಮೆಮೋರಿಯಲ್ ಬರೆಯಬೇಕೆಂದು ತೀರ್ಮಾನ ಮಾಡಿರುತ್ತಾರಂತೆ. ಸಂಘದ ಕಮಿಟಿಯವರಿಗೆ ಜನರಲ್ ಬಾಡೀಯವರ ಠರಾವನ್ನು ಮೀರಲು ಎಳ್ಳಷ್ಟು ಅಧಿಕಾರವಿಲ್ಲ. ಹೀಗೆ ಮಾಡಲು ಕಾರಣವೇನೆಂದು ತಿಳಿಯುವುದಿಲ್ಲ. ಕೌನ್ಸಿಲು ವಿಚಾರವು ದೇಶೀಯರಿಗೆ ಬೇಡವೇ ಬೇಡ. ಅದಲ್ಲದೆಹೋದರೆ ಇದು ಒಂದು ಮಾತು ಬೇಡವು ಬೇಡ. ಖಂಡಿತವಾಗಿಯೂ ನಮ್ಮ ದೇಶವನ್ನು ಮದ್ರಾಸು ಅಧಿಪತ್ಯಕ್ಕೆ ಸೇರಿಸಿಯೇ ಸೇರಿಸಬೇಕು.

ನಮ್ಮಲ್ಲಿರುವ ಒಬ್ಬ ಮನುಷ್ಯನ ಆಳಿಕೆಯಿಂದ ಪಾರಾಗುವ ಬಗೆ ಹೇಗೆ? ಕ್ರಮಕ್ಕೆ ಬಾರದ ಸ್ವಾರ್ಥಿಕ್ಷೆ ಪರದ ಕಟ್ಟಹೆಸರನ್ನು ತಪ್ಪಿಸುವುದು ಹೇಗೆ? ತಪ್ಪಾದ ಸರಕಾರವನ್ನು ಕಡ್ಡಿಸು ಮಾಡುವುದು ಹೇಗೆ? ಹೊರಗಿನ ದೇಶದವರು ಹೊಂದುತ್ತಲೇ ಇರುವ ಮಾರ್ಪಾಟೂ, ನಮ್ಮ ದೇಶವೂ ಇದ್ದಕ್ಕಿದ್ದಹಾಗೆ ಹೆಚ್ಚಿಗೆ ನಿರುದ್ಯೋಗಪ್ರಪತ್ತಿಯಲ್ಲಿ ಇಳಿಯುವುದಕ್ಕೆ ಏನು ಜವಾಬು ಕೊಡುತ್ತೀರಿ? ಇನ್ನು ಡಿಸ್ಟ್ರಿಕ್ಟ್ ಬೋರ್ಡ್ ಯಾರ ಅಧೀನಕ್ಕೆ ಸಿಕ್ಕಿದೆಯೋ? ಕೌನ್ಸಿಲ್ ಪ್ರಸ್ತಾಪವು ಹುಟ್ಟಿ ಎಷ್ಟು ವರ್ಷವಾಯಿತು. ನಮಗೆ ಕೊಡುವುದೆಂದು ಹೇಳುವ ಸಭೆಯಾವುದು? ಆದರಿಂದ ಪ್ರಯೋಜನವುಂಟೋ? ಸ್ಥಳೀಯ ಸರಕಾರಾಧಿಕಾರಿಗೆ ಈ ಸಭೆಯಿಂದ ಮತ್ತಷ್ಟು ಹೆಚ್ಚು ಅಧಿಕಾರ ಸಿಕ್ಕಲಿಕ್ಕಿಲ್ಲವೋ? ಒಂದು ತಾಲೋಕಾದ ಈ ಚಿಕ್ಕ ದೇಶಕ್ಕೆ ಕೌನ್ಸಿಲು ಸಿಕ್ಕುವ ಸಂಭವವು ಎಲ್ಲಿಯಾದರುಂಟೋ? ಈ ಕಾರಣಗಳನ್ನು ಚೆನ್ನಾಗಿ ಆಲೋಚಿಸಿ ಒಡನೇ, ಜಮಾನುದಾರ ಸಂಘದ ಎಗ್ಜಿಕ್ಯುಟಿವ್ ಮೆಂಬರುಗಳು ಒಡನೇ ಜನರಲ್ ಮೀಟಿಂಗಿನಲ್ಲಿ ಆದ ಠರಾವಿನಂತೆ ಮೆಮೋರಿಯಲ್ ಬರೆದು, ಬರುವ ಎಕ್ಸ್‌ಪ್ರೆಸ್ ಉಸರಲ್ ಜನರಲ್ ಮೀಟಿಂಗಿನ ಮುಂದಿಡುವರೆಂದು ಹಾರೈಸುತ್ತೇನೆ.

ಸಂಘದ ಮೆಂಬರ ಗೌರವದಾಗಿರುವವ.

ಧರ್ಮೋಪದೇಶ.

ಸ್ವಾಮಿ ಕೊಡಗು ಪತ್ರಿಕೆ ಧನಿನ್ನು ಹೊಂದಿದ ನಮ್ಮ ಸರಕಾರದವರು ಪ್ರಜೆಗಳ ಜ್ಞಾನಾಭಿವೃದ್ಧಿಗಾಗಿ ಪ್ರತಿ ವರುಷದಲ್ಲಿಯೂ ಬಹಳ ಹಣವನ್ನು ವೆಚ್ಚಮಾಡಿ ಪ್ರತಿ ಗ್ರಾಮಗಳಲ್ಲಿಯೂ ಸ್ಕೂಲುಗಳನ್ನು ಸ್ಥಾಪಿಸುತ್ತಾ ಇರುತ್ತಿದ್ದಾರೆ ಯುವತಿಯರಿಗೂ ಯುವಕರಿಗೂ ಹಿಂದುಳಿದ ವರ್ಣದವರಿಗೂ ಕುರುಡ ಮೂಗರಿಗೂ ವಿದ್ಯೆ ಕಲಿಸಲಿಕ್ಕೆ ಅನುಕೂಲ ಪಡಿಸಿಕೊಟ್ಟಿರುವದರಿಂದ ರಗ ವಿದ್ಯೆ ಕಲಿತವರು ಸಿಭಾರ್ಗ್ಯಶಿಸ್ನ ಬಹುದು. ಕೆಲವು ವರುಷಗಳಲ್ಲಿಯೇ ನಮ್ಮ ದೇಶದಲ್ಲಿ ವಿದ್ಯಾವಂತರ ಸಂಖ್ಯೆಯು ಬಹುಮಟ್ಟಿಗೆ ಹೆಚ್ಚಬಹುದು. ಈ ಸಂದರ್ಭದಲ್ಲಿಯೇ ಧರ್ಮೋಪದೇಶಕ್ಕೂ ಸ್ವರ ಸ್ವಲ್ಪಮಟ್ಟಿಗೆ ಗಮನಕೊಡುವದು ಅಗತ್ಯವು. ಪೂರ್ವಕಾಲದ ಚಕ್ರವರ್ತಿಗಳಾದ ಅಶೋಕ ಚಂದ್ರಗುಪ್ತಾದಿಗಳೂ ಶಿವಾಜಿ ಮುಂತಾದ ಮಹಾರಾಜರುಗಳೂ ಧರ್ಮಬೋಧನೆಗೂ ನಿತ್ಯಾಚರಣೆಗೂ ಬಹುಮಟ್ಟಿಗೆ ಶ್ರದ್ಧೆ ವಹಿಸಿ ಜನರನ್ನು ಸನ್ಮಾರ್ಗಕ್ಕೆ ತಂದಿತ್ತಿದ್ದಂತೆ ಇತಿಹಾಸಗಳಿಂದ ತಿಳಿಯಬರುವದು. ಈಗಿನ ದಿನದಲ್ಲಿ ಅಗಮ್ಯಗಮನ, ಅಪೇಯಪಾನ ಅಭಕ್ಷ್ಯಭಕ್ಷಣ ಅಕೃತ್ಯಕರಣ ಮುಂತಾದ, ಹಲವು ದುರ್ಗುಣಗಳು ಪ್ರಬಲಿಸಿ ಬೇರುಬಿಡುತ್ತಿವೆ. ಧರ್ಮವೆಂದರೆ ಸ್ನಾನಮಾಡುವದೇ ಎಂದು ತಿಳಿದಿರುವ ಜನರೆ ಮುಕ್ಕಾಲುವಾಸಿಯವರು. ತಮ್ಮ ಕರ್ತವ್ಯವೇನು? ಮಾನವ ಧರ್ಮವೇನು? ಸ್ತ್ರೀಧರ್ಮ ಯಾವುದು? ಮುಂತಾದ ವಿಚಾರಗಳೇ ತಿಳಿಯದೆ ಅನೇಕ ಜನರು ತಿರ್ಯಗ್ಜಂತುಗಳಂತೆಯೇ ಇದ್ದಾರೆ. ವಿದ್ಯಾಧಿಕರಲ್ಲಿ ಕೂಡ ಅನೇಕರು ಅಸತ್ಯ, ಅಸೂಚಿ, ದಂಬ, ಹಿಂಸೆ, ಅಪಕಾರ ಮುಂತಾದ ದುಷ್ಕೃತ್ಯಗಳಲ್ಲಿಯೇ ಮನಸ್ಸಿಟ್ಟಿರುವರೆಂದು ಹೇಳಲು ವ್ಯಸನವಾಗುವದು. ಜನಸ್ಥಿತಿಯು ಹೀಗೆ ಬದಲಾಯಿಸಲಿಕ್ಕೆ ಬಲವಾದ ಕಾರಣಗಳು ಇರಲೇಬೇಕಷ್ಟೆ. ಅಂಥವುಗಳನ್ನು ವಿಚಾರಮಾಡೋಣ. ಏಳೆಂಟು ಶತಮಾನಗಳಿಂದೀಚೆಗೆ ಉತ್ತರ ಹಿಂದೂಸ್ಥಾನದಲ್ಲಿ ರಾಮಾನಂದ, ಕಬೀರ, ನಾನಕ್, ರಾಮದಾಸ, ವಿವೇಕಾನಂದ, ಮೊದಲಾದ ಮಹನೀಯರು ಹುಟ್ಟಿ ಭಕ್ತಿರಸಪ್ರದಾನವಾದ ಗ್ರಂಥಗಳನ್ನು ಬರೆದು ಜನರಲ್ಲಿ ದೈವಭಕ್ತಿಯನ್ನು ಉತ್ತಮ ಧರ್ಮಗಳನ್ನು ಬೋಧಿಸಿ ತಾವೂ ಅದರಂತೆ ಆಚರಿಸುತ್ತಾ ಬಂದರು. ಜನರು ಧರ್ಮಾಧರ್ಮಸ್ವರೂಪಗಳನ್ನು ತಿಳಿದುಕೊಂಡು ಎಷ್ಟು ಕಷ್ಟನಷ್ಟಗಳು ಬಂದರೂ ಎಂಥ ಆಪತ್ತು ಬಂದರೂ ಧರ್ಮವನ್ನು ಬಿಡದೆ ವೀರರೂ ಶೂರರೂ ತ್ಯಾಗಿಗಳೂ ಶುಚಿವ್ರತರೂ ಆಗಿ ಹೆಸರುಗೊಂಡಿದ್ದಾರೆ. ಇದಲ್ಲದೆ ನಮ್ಮ ದಕ್ಷಿಣದೇಶವು ಮತಸ್ಥಾಪಕರನ್ನು ಪಡೆದು ಹೆಸರುಗೊಂಡಿತು. ಮತ್ತು ಇವೀಶ್ವರನೇಕರು ಗ್ರಂಥಗಳ ಮೂಲಕ ಧರ್ಮಬೋಧೆಯನ್ನು ಪ್ರಕಟಿಸಿರುವರು. ಇಂಥ ಗ್ರಂಥಗಳಿಂದ ಭಗವದ್ಭಕ್ತಿ ಮತ್ತು ನೀತಿಯ ಉಪದೇಶಗಳನ್ನು ಹೆಕ್ಕಿ ತೆಗೆಯುವುದು ಸಮುದ್ರದ ತಳದಲ್ಲಿರುವ ಮಣಿಗಳನ್ನು ಹುಡುಕಿ ತರುವಷ್ಟು ಕಷ್ಟವೇ ಸರಿ. ಅರ್ಧ ಶತಮಾನದಿಂದೀಚೆಗೆ ಇಂಗ್ಲೀಷ್ ವಿದ್ಯಾಭ್ಯಾಸವು ಈ ದೇಶದಲ್ಲಿ ಪ್ರಬಲಿಸುತ್ತಾ ಬಂದು ಪಾಶ್ಚಾತ್ಯರ ವಿಜಯ ಸಹಾವಾಸಗಳು ಹೆಚ್ಚುತ್ತಾ ಬಂದವು. ನಮ್ಮವರು ಈ ಜನರ ಸದಾಚಾರ್ಯ ವ್ಯವಹಾರಾಧಿಗಳನ್ನು ಅನುಕರಿಸುವಕ್ಕೆ ಬದಲು ಅವರ ನಡೆನುಡಿಗಳನ್ನೇ ಅನುಕರಿಸುತ್ತಾ ಸ್ವಧರ್ಮವನ್ನು ದೂರಕ್ಕೆ ತಳ್ಳುತ್ತಾ ಬಂದರು. ರಾಜಭಯವಾಗಲಿ, ಗುರುಹಿರಿಯರ ಭಯವಾಗಲಿ ಇಲ್ಲದೆಹೋದುದರಿಂದ ಸದಾಚಾರ ಸದ್ಧರ್ಮಗಳಿಗೆ ಇವರ ಮನಸ್ಸಿನಲ್ಲಿ ಸ್ಥಳ ಸಿಕ್ಕದೆಹೋಯ್ತು. ಸರಕಾರದ ಪಾಠಶಾಲೆಗಳಲ್ಲಿ ಧರ್ಮ ನೀತಿಬೋಧನೆಗಳನ್ನು ಉಪದೇಶಿಸಬೇಕೆಂಬ ವಿಧಿ ಇದ್ದರೂ ತಕ್ಕಮಟ್ಟಿಗೆ ನಿರಕ್ಷೇಪವಾಗಿ ಬೋಧಿಸಲ್ಪಡುತ್ತವಿಲ್ಲ. ಪೂರ್ವಕಾಲದಲ್ಲಿ ದೇವಸ್ಥಾನಗಳಲ್ಲಿಯೂ ಮಠಗಳಲ್ಲಿಯೂ ಬಹಿರಂಗವಾದ ಜಗತಿಯ ಕಟ್ಟೆಗಳಲ್ಲಿಯೂ ಅಗಾಗ್ಗೆ ಸದಾಚಾರಸಂಪನ್ನರಾದ ಪಂಡಿತರಿಂದ ಪುರಾಣ ಹೇಳಿಸುವ ಪದ್ಧತಿಯಿತ್ತು. ಆಗ ದೊಡ್ಡವರೂ ಚಿಕ್ಕವರೂ ಹೆಂಗಸರೂ ಬಂದು ಕೇಳಿ ನೀತಿಗಳನ್ನು ತಿಳಿದುಕೊಂಡು ತಮ್ಮ ನಡತೆಗಳಲ್ಲಿಯ ದೋಷಗಳನ್ನು ತಿದ್ದಿಕೊಳ್ಳುತ್ತಾ ಧರ್ಮಾಧೀನರುಗಳಾಗಿದ್ದರು. ಈಗ ಅಂಥಾ ಏರ್ಪಾಡಾಗಲಿ ಅವುಗಳನ್ನು ಹೇಳಿದರೆ ಕೇಳುವ ಪ್ರಕ್ರಿಯಾಗಲಿ ನಮ್ಮವರಲ್ಲಿ ಕಾಣಬರುವುದಿಲ್ಲ. ಧನ ಸರಕಾರದವರು ಪಾಠಶಾಲೆಗಳಲ್ಲಿ ಕಡ್ಡಾಯವಾಗಿ ನೀತಿಗಳನ್ನೂ ಧರ್ಮಗಳನ್ನೂ ಬೋಧಿಸಲು ಏರ್ಪಡಿಸುವದರ ಜೊತೆಗೆ ಪ್ರತಿ ತಾಲೋಕ್ಕಿನ ಅಭಿವೃದ್ಧಿ ಸಂಘದವರು ಒಬ್ಬೊಬ್ಬ ಪಂಡಿತರನ್ನು ನಿಯಮಿಸಿ ಗ್ರಾಮಾಂತರಗಳಲ್ಲಿ ಅಗಾಗ್ಗೆ ಕಾಲಕ್ಕೆ ತಕ್ಕಂತೆ ಹಿತವಾಗಿಯೂ, ಯುಕ್ತವಾಗಿಯೂ ಇರುವ ಧರ್ಮ ವಿಷಯವಾದ ಉಪನ್ಯಾಸಗಳನ್ನೂ ಕೊಡಿಸುತ್ತಾ ಬಂದಲ್ಲಿ ಕೆಲವು ಕಾಲದಲ್ಲಿಯಾದರೂ ಈಗಿನ ದುಷ್ಕೃತ್ಯಗಳು ತೊಲಗಿ "ಸ್ವಧರ್ಮೇ ನಿಧನಂ ಶ್ರೇಯಃ" ಎಂಬ ಪ್ರತೀತಿಯು ಸಾರ್ಥಕವಾಗಬಹುದೆಂದು ನಂಬುವೆನು.

ತಮ್ಮ ವಿಧೇಯ. ಸಿ ಪಿ. ಮುತ್ತಣ್ಣ

ಮ್ಯುನಿಸಿಪಲ್ ಕೆರೆ.

ಅಯ್ಯಾ ಕೊಡಗು ಸಂಪಾದಕರೇ—

ಕಳೆದ ಶುಕ್ರವಾರ ಮ್ಯುನಿಸಿಪಲ್ ಸಭೆ ಒಂದು ಜರುಗಿತು. ಅನೇಕ ಸಂಗತಿಗಳು ಚರ್ಚಿಸಲಾಗಿ ... ಕೆರೆಯನ್ನು ಮುಚ್ಚಬೇಕೆಂಬ ಅಭಿಪ್ರಾಯದ ... ಚರ್ಚಿಸತೊಡಗಿದರು. ಈ ಕೆರೆಯನ್ನು ಮುಚ್ಚಬೇಕೆಂದು ರೇಟ್ ಪೇಯರುಗಳು ಅರ್ಜಿ ಬರಕೊಂಡಿದ್ದರಂತೆ ...ರವರು ರೇಟ್ ಪೇಯರುಗಳ (... ಅಭಿಪ್ರಾಯದಂತೆ ಮುಚ್ಚಬೇಕೆಂದು ಮ್ಯುನಿಸಿಪಲ್ ಪ್ರೆಸಿಡೆಂ... ...ದ್ದರಂತೆ. ಇದರಪ್ರಕಾರ ಪ್ರೆಸಿಡೆಂಟರು ರೇಟ್‌ಪೇಯರುಗಳ ಅಭಿಪ್ರಾಯವನ್ನು ಪುನಃ ಕೇಳಲು ಅವರು ಮುಚ್ಚುವದೇ ಒಳ್ಳೇದೆಂದು ಅಭಿಪ್ರಾಯ ಬರದುಕೊಟ್ಟರು. ಆದರೆ ಶುಕ್ರವಾರದ ಸಭೆಯಲ್ಲಿ ರೇಟ್‌ಪೇಯರುಗಳ ಅಭಿಪ್ರಾಯವನ್ನು ಓದಲೇ ಇಲ್ಲ. ಇಂದಿ ಈ ಸಭೆಯ ಮೆಡಿಕಲ್ ಮೆಂಬರು ಕೆರೆಯ ನೀರನ್ನು ಪರಿಶೋಧಿಸಿ ಅದರಲ್ಲಿ ಸಾವಿರಾರು ಮಲೆ ಜ್ವರದ ಕ್ರಿಮಿಗಳು ಇವೆ ಎಂದೂ ಅದನ್ನು ಮುಚ್ಚಿ ಅಕ್ಕಪಕ್ಕದಲ್ಲಿರುವ ಜನಗಳ ಆರೋಗ್ಯವನ್ನು ಕಾಪಾಡಬೇಕೆಂತಲೂ ಅಭಿಪ್ರಾಯ ಕೊಟ್ಟರು. ಆಗ ಪ್ರೆಸಿಡೆಂಟು, ಬೇಸಿಗೆಯಲ್ಲಿ ಗಾಡಿ ಎತ್ತುಗಳಿಗೆ ನೀರು ದೊರಕಿಸುವುದು ಹೇಗೆ ಎಂದರು. ಮ|| ರಾ|| ರಾ|| ಬಿ|| ಅಪ್ಪಯ್ಯನವರು. ಸಾವಿರಾರು ದನ. ಕರು. ಎತ್ತು ಮುಂತಾದ ಮೂಕ ಜಂತುಗಳಿಗೆ ನೀರು ಎಲ್ಲಿಂದ ದೊರಕಿಸುತ್ತೀರಿ ಎಂದು ಘರ್ಜಿಸಿದರು. ಮೆಡಿಕಲ್ ಮತ್ತು ಅಸಿಸ್ಟೆಂಟ್ ಇಂಜಿನಿಯರ್ ಮೆಂಬರುಗಳು ಎತ್ತುಗಳಿಗೋಸ್ಕರ ಕೆರೆಯ ಕೆಳಗಿರುವ ಬಡ ಜನಗಳು ಮಲೆ ಜ್ವರದಿಂದ ಪೀಡಿತರಾಗಿ ನರಳುವುದು ಸರಿ ಅಲ್ಲವೆಂದೂ, ಎತ್ತುಗಳಿಗೆ ಬಂಡಿ ಮಾಳದ ಪಕ್ಕದಲ್ಲಿ ನೀರು ಒದಗಿಸಬೇಕೆಂದೂ ಹೇಳಿದರು. ಆಗ ಪ್ರೆಸಿಡೆಂಟರು ಅಂಥಾ ನೀರು ಅಲ್ಲಿ ಎಲ್ಲಿದೆ ಎಂದು ಪ್ರಶ್ನೆ ಮಾಡಲು, ಅಸಿಸ್ಟೆಂಟು ಇಂಜಿನಿಯರು ತಾನು ಅಂಥಾ ಸ್ಥಳವನ್ನು ನೋಡಿ ಹೇಳುವೆನೆಂದು ಅಂದರು. ಇದೂ ಅಲ್ಲದೆ ಕೆರೆಯನ್ನು ಮು... ದಾದರೆ ಎಷ್ಟು ಖರ್ಚಾಗಬಹುದೆಂದು ಅಂದಾಜು ನ... ಬೇಕೆಂದೂ ತೀರ್ಮಾನವಾಯಿತು.

ಅಯ್ಯಾ ಸಂಪಾದಕರೇ! ಮ|| ರಾ|| ರಾ|| ...ಯ್ಯನವರ "ಸಾವಿರಾರು ದನಕರುಗಳು ನೀರು... ...ತ್ತೆ" ಎಂಬುದು (ಎಂಥಾ ಅಸತ್ಯಕರವಾದ) ಅತಿ... ಎಂದು ನಾನು ಹೇಳಲೇ? ಈ ಮಹನೀಯರು ... ...ರುವ ವಾರ್ಡಿಗೆ ಮೆಂಬರಂತೆ! ಈ ಕೆರೆಯ ... ಜನರ ಅಭಿಪ್ರಾಯವನ್ನು ಈವರೆಗೂ ಇವರು ... ಇಲ್ಲ! ಇಂಥವರು ಈ ವಾರ್ಡಿನ ಪ್ರತಿನಿಧಿಗಳು. ನೀರು ಪಶುಪ್ರಾಣಿಗಳು ಕುಡಿಯಲು ಯೋಗ್ಯವಾ... ಅಥವಾ ಕುಡಿದರೂ ಮ|| ರಾ|| ರಾ|| ಬಿ|| ಅಪ್ಪ... ಸಾವಿರಾರು ದನಕರುಗಳು ಕನಸಿನ ಗಂಟೇ ಬಂದ... ಎತ್ತುಗಳೂ ಸಹ ಇಲ್ಲಿಗೆ ಬರುವುದು ಬಹಳ ಅಪರೂ... ವಾ ಬಂದರೂ ಬಂದುಸಲ ಬಂದ ಗಾಡಿಯವನು ... ದುಸಲ ಬರುವುದಿಲ್ಲ. ನೀರು ಅಷ್ಟು ಯೋಗ್ಯತೆಯ...

ಇವರ ಅನುಚಿತ್ತ ಪ್ರಲಾಪವನ್ನು ನೋ... ರೇಟ್ ಪೇಯರಲ್ಲಿ ಒಬ್ಬರು ತಾವು ದಿಟವಾದ... ...ಯನ್ನು ಸಭೆಯ ಮುಂದೆ ಅರಿಕೆಮಾಡಿಕೊಳ್ಳುವರೆ ... ಕೊಡಬೇಕೆಂದು ಕೇಳಿಕೊಂಡರು. ಅಂಥಾ ಅನುಮ... ...ಲಾಗುವುದಿಲ್ಲವೆಂದು ಪ್ರೆಸಿಡೆಂಟರೂ ಮ|| ರಾ|| ಅ... ವರೂ ಅಂದರು ಮತ್ತೊಬ್ಬ ರೇಟ್ ಪೇಯರು ... ...ಲು ಪ್ರೆಸಿಡೆಂಟರು ರೇಟ್‌ಪೇಯರನ್ನು ಸಭೆಗೆ ಬ... ...ಪ್ಪೆಂದು ಗಟ್ಟಿಯಾಗಿ ಗುಡುಗುಟ್ಟಿದರು. ಉಳಿದ ... ...ಯರುಗಳು ಅರ್ಧಚಂದ್ರ ಪ್ರಯೋಗವಾಗ ಬ... ಸುಮ್ಮನಿರ ಬೇಕಾಯಿತು. ಮ|| ರಾ|| ಅಪ್ಪ... ಸಾವಿರಾರು ದನಕರುಗಳೂ ಮೂಕಪ್ರಾಣಿಗಳೂ ... ನೀರನ್ನು ಕಂಡವುಗಳಲ್ಲದಿದ್ದರೂ ಅವರ ಸ್ವರ... ...ತ್ತಲೇ ಇರಬೇಕಾಯಿತು.

ಸಂಪಾದಕರೇ! ಸ್ವರಾಜ್ಯಬೇಕೇ? ಸ್ವರಾ... ...ವೆ ಎಂಥಾದ್ದು! ರೇಟ್ ಪೇಯರುಗಳಿಂದ ... ...ಸೂಲಿಮಾಡುವುದು. ಬೇಕಾದ ರಸ್ತೆಗಳಿಗೂ ... ಪಕ್ಷದ ವಿರುವ ಎತಿಗಳಿಗೂ ಖರ್ಚುಮಾಡುವುದು... ...ಪೇಯರುಗಳ ಅರ್ಜಿಬಂದರೆ ಸುಮ್ಮನಿರುವುದು... ...ದ್ದು ತಮ್ಮ ... ...ಗಳನ್ನು ತಿಳಿಸಲು ... ...ರೆ "ಇವನನ್ನು ಬಿಟ್ಟದ್ದೇ ತಪ್ಪೆಂದು" ಪ್ರೆಸಿಡೆಂ... ...ಯನ್ನು ಮ|| ರಾ|| ಅಪ್ಪಯ್ಯನವರಿಂದ ... ...ಕೂಡ ಹೇಳಿಸಿಕೊಂಡು ಮ... ...ಡುವುದು.

ಸಂಪಾದಕರೇ! ಸ್ವರಾಜ್ಯದ ಪ್ರಥಮ ... ...ಸೀಪಾಟಿ ಇದರ ಪಾಡೇ ಹೀಗಾದಮೇಲೆ ... ...ಏನುಹೇಳಲಿ! ರೇಟ್‌ಪೇಯರುಗಳು ತಮ್ಮ ಅ... ...ಗಳನ್ನು ಮುದ್ದು ಸಭೆಗೆ ಅರಿಕೆಮಾಡಲು ... ...ಯಾವ ಕಾನೂನು ಇದೆ? ಅಥವಾ ಹಾಗೆ ... ...ನೂನು ಎಷ್ಟುಮಟ್ಟಿಗೆ ನ್ಯಾಯವಾದುದು?

ಪ್ರೆಸಿಡೆಂಟರಿಗೂ ಕೆಲವು ಮೆಂಬರುಗ... ...ಮುಚ್ಚಿಸುವ ಅಭಿಪ್ರಾಯವು ಇಲ್ಲದೆ ... ...ಪೇಯರುಗಳ ಅಭಿಪ್ರಾಯವನ್ನು ... ...ಪ್ರೆಸಿಡೆಂಟರು ... ...ಬೇಕಾದ್ದೆಂದು ... ...ಕ್ತಿಸ್ಪತ್ತಿ! ಪ್ರೆಸಿಡೆಂಟರು ಯಾರ! ರೇಟ್... ಪ್ರತಿನಿಧಿ ... ... ಕಾರಣವೇನು? ... ಜನಗಳು ... ...ನರಳುವುದೂ ... ...ಯುವುದೂ ... ... ಪ್ರೆಸಿಡೆಂಟರೇ! ... ಕರಿದೇಕವೆಂದು ... ... ಸಾವಿರಾರು ದನಕರು ಎತ್ತುಗಳ... ...ವಾದಿ ದಯವೇಲೋ? ನ್ಯಾಯತಿಳಿದವರು ...

ಅಯ್ಯಾ! ಸಂಪಾದಕರೇ! ಮ್ಯುನಿಸಿಪಾ... ...ದು ದನಕರುಗಳಿಗೋಸ್ಕರವೋ ಮನುಷ್ಯರಿಗೆ... ...ಕರದಾಯ ಕೆರೆಯದು. ದನಕರುಗಳೋ ಮ... ...ಜನರ ಕಷ್ಟ ... ತಮ್ಮ ... ...ರುವ ಕಮಿಷನರ ... ಹಾಗೂ ಅಸಿಸ್ಟೆಂಟ್ ...ದ್ ಆಫ್ ಪ್ರೋಸೀಸರಿಗ ಮುದ್ದು ಕೊಂದರೆ ... ರೇಟ್ ಪೇಯರುಗಳ ಅಭಿಪ್ರಾಯದಂತೆ ಕೆ... ...ಕೆಂದು ಪ್ರಸಿಡೆಂಟರನ್ನು ... ದನಗಳಿಗೆ ...ತ್ತೀರಿ ಹೇಳಿ ಈ ಪ್ರಶ್ನೆ ಸರಿಯೇ?

ಬೆಂಗಳೂರು ಮೊದಲಾದ ದೊಡ್ಡ ಪಟ್ಟಣ... ...ಹುರ ಕಗಳಿದ ದೊಡ್ಡ ದೊಡ್ಡ ಕೆರೆಗಳನ್ನು ... ...ಕರವೆಂದು ತಿಳಿದು ಮುಚ್ಚಿದ್ದಾರೆ. ... ...ಲಿದ್ದಾರೆ.

ಸಂಪಾದಕರೇ! "Spare me from my ... ...ನನ್ನ ಸ್ನೇಹಿತರಿಂದ ನನ್ನನ್ನು ರಕ್ಷಿಸು ... ...ಸರುವೆಂದು ಈಗ ನಂಬಿಕೆಯಾಯಿತು. ರೇಟ್‌ಪ...

Ra...

Printed & Published by D. S. Krishnasw...
Proprietor, at Sreenivas Elkric Press,
"for Kodagu" Ltd., Merca—17-8-192..

"Kodagu Office, Mercara
Reg. No. M. 1550.

ಕೊಡಗು.

ವಾರ್ಷಿಕ ಚಂದಾ ೩—೮—೦ ರೂ.

ಸತ್ಯೇನ ಭೂಃಕದಯುಯಾ ವಿಸ್ಫೀತಿ ಪ್ರಯತ್ನತಃ । ಏಕಮತ್ಯೇನದೇಶಾನಾಂ ಸುಸ್ಥಿರಾ ರಾಜ್ಯಸಂಪದ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

"ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ"

ಸಂ ೩] ಕೊಡಗು, ಸನ್ ೧೯೨೩ ನೇ ಆಗಸ್ಟ್ ತಾರೀಖು ೨೪ ನೆಯ ಶುಕ್ರವಾರ. [ಸಂಚಿಕೆ ೧೬

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನಡಾ ಪ್ರಿಂಟಿಂಗ್ ಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಊ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ಚಾಗ್ರಕೆಯಾಗಿಯೂ ಸುಲಭಬೆಲೆಗೂ ಮಾಡಿ ತ್ತೇವೆ

'inivas Electric Press,
MYSORE.

Coorg Central Co-operative Bank, Ltd.,

(...stered under the Co-operative Societies Act)

...e Capital	..	50,000
...up Share Capital	...	6,310
...d Deposit paid	....	31,873

...mounts are lent mainly to ...operative Societies in Coorg. The ...unts are checked annually by The ...strar of Co-operative Societies Coorg ...osits for one year and more carry ...est at 6½% per annum and for smaller ...ods at 5% per annum.

Apply to the Secretary or Treasurer ...urther details.

...esident	Treasurer	Secretary
...ndera Cootiah	Bhajanga Rao,	C N Venkappaya
...o ahadur	B A, B L,	B A, B L

Dated 25—3—1923

...ಕಲ ಕನಸಿನಲ್ಲಿ ಹೆಚು ಲಾಭ ಪಡೆಕೊಳ್ಳಿ

ನಮ್ಮ ಕಾರಖಾನೆಯಲ್ಲಿ ಸುಧಾರಿ ...ಂಟಿಗೂ ಕಬ್ಬಿನ ಗಾಣಗಳೂ, ...ವು ಯಂತ್ರ ಇತ್ಯಾದಿ ಒಕ್ಕಲಿಗರಿಗೆ ...ಲಾಭದಾಯಕವುಳ್ಳವುಗಳೇ ಸಾ ...ಟುಗಳು ತಯಾರಾಗುತ್ತವೆ ...ವಿರಾರು ರೈತರು ಹೊಡುತ್ತಿರುವ ...ಚಿತ್ರ ಕ್ಯಾಟಲಾಗು ತರಿಸಿಕೊಳ್ಳಿ.

...ವಿಳಾಸ :—

ಕಿರ್ಲೋಸ್ಕರ ಬಂಧು ಲಿಮಿಟೆಡ್,
ಪೋ. ಕಿರ್ಲೋಸ್ಕರವಾಡಿ
—10 ಜಿಲ್ಲಾ—ಸಾತಾರಾ

...reat Reduction in Prices of Arms and Mamooties.

		Old Price	Present Price
B.L. Guns			
...bore each	Rs.	250	165
M.L do	„	130	85
M.L. do	„	100	65
...mooties 5 lbs each		4/8	3/6

...PLY TO:—

...c. DOWELL & Co., Ltd,.
...—17 **MERCARA.**

Spencers——for everything.

	Rs.			
Whisky :—Matchless	7	6	0	per bottle
King George C/L	7	1	0	„
Old highland Malt	6	0	0	„
Brandy —Exshaw's No. 1	7	4	0	„
Exshaw's No. 2	6	7	0	„
Vermouth —Noilly Prath (French)	2	10	0	„
Cigars :—Flo-rde Spencer Specials	3	12	0	50s „
Trichy Specials	2	8	0	100s „

Buy Your Stores from Spencers, they are fresh and cheap.

52—45 **SPENCER & Co., Ltd,**
MERCARA & POLLAIBETTA

When you think of going to Bombay.
THINK OF

THE WELCOME HOTEL.

Girgaum Back Road, BOMBAY.

Most airy accomodation—Most Central situation—Excellent Meals
Every Convenience

ವೆಲ್ಕಂ ಹೋಟೆಲ್

ಗಿರ್ಗಾಂವ ಬ್ಯಾಕ್‌ರೋಡ, ಬೊಂಬಾಯಿ

ರೈಲಿನಿಂದಿಳಿದೊಡನೆ ... ಇಲ್ಲಿಯೊದು ನಿಶ್ಚಿತ. ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಯೋಗ್ಯವಾದ ಕೋಣೆಗಳು ಬೇಕೆಂದಿದ್ದ... ಮುಂಬಾಯಿಪಟ್ಟದ ಮಧ್ಯಸ್ಥಳದಲ್ಲಿರುವ ವೆಲ್ಕಂಹ ಹೋಟೇಲಿನಲ್ಲಿಳಿಯಲು ಮರೆಯಬೇಡಿರಿ. ಯೋಗ್ಯವಾದ ಊಟ, ಗಾಳಿಗನುಕೂಲವಾದ ಕೊಠಡಿ 15 ಮಿನಿಟಿಗೊಮ್ಮೆ ತಿರುಗುವ ಟ್ರಾಮಿನ ಸೌಕರ್ಯ. ಅಂತೂ ಪ್ರಯಾಣಿಕರಿಗೆ ಉಳಿದುಕೊಳ್ಳಲು ಅನುಕೂಲವಾದ ಉಡುಪಿ ಬ್ರಾಹ್ಮಣರ ಭೋಜನಾಲಯ

ಹೆಚ್ ಶ್ರೀನಿವಾಸರಾವು,
[12—1] ಮೇನೇಜರ್.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ

	ರೂ.
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,310
ಜಮಾ ಬಂದ ಠೇವಣಾತಿ	31,873

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ಮಾಯಿದೆ ಅಥವಾ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6½ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು. ಟ್ರೆಜರರ್.
ಕೊಂಡೀರ ಕುಟ್ಟಯ್ಯನವರು, ಯಂ ಭುಜಂಗರಾಯರು
ರಾಯ್ ಬಹದ್ದೂರ್ ಬಿ ಎ ಬಿ.ಎಲ್.,

ಸೆಕ್ರೆಟರಿ.
ಸಿ. ಯನ್ ವೆಂಕಪ್ಪಯ್ಯನವರು, ಬಿ. ಎ; ಬಿ. ಎಲ್.
ತಾರೀಖು 25—3—1923

ಸುಂದರ ವಿಲಾಸ ಪ್ರೆಸ್, ಮಡಿಕೇರಿ.

(ಸ್ಥಾಪಿತ ಇಸವಿ 1912)

ಕೊಡಗು ಮಹಾ ಜನರನ್ನು ಕಳೆದ ಹನ್ನೊಂದು ವರ್ಷಗಳಿಂದ ಒಂದೇ ಸಮನೆ ಸೇವಿಸಿ ಕೊಡಗಿನ ಪ್ರಧಾನ ಪಟ್ಟಣವಾದ ಮಡಿಕೇರಿಯಲ್ಲಿ ಸ್ಥಾಪಿತವಾಗಿರುವ ನಮ್ಮ ಮುದ್ರಾಲಯವು ಮತ್ತೊಮ್ಮೆ ತಮ್ಮನ್ನು ಸೇವಿಸಲು ಸಿದ್ಧವಾಗಿದೆ. ಅಂದವಾದ ಅಕ್ಷರಗಳಿಂದ, ಮುದ್ದಾದ ಮುದ್ರಣದಿಂದ ಸೊಗಸಾದ ಕಾಗದಗಳಲ್ಲಿ ಮುದ್ರಿಸುವ ನೂತನ ಅನುಕೂಲತೆಗಳನ್ನು ಸಿದ್ಧಪಡಿಸಿದೆ

ಪರಸ್ಥಳದವರಿಗೆ ಎಲ್ಲಾ ಅನುಕೂಲತೆಗಳನ್ನು ಒದಗಿಸಿ ಕೊಡುವ ಸ್ವದೇಶೀಯ ಮುದ್ರಾಲಯಕ್ಕೆ ಸ್ವದೇಶ ಬಂಧು ಭಗಿನಿಯರು ಪ್ರೋತ್ಸಾಹ ಕೊಡಬೇಕಾಗಿದೆ.

ಬಗೆ ಬಗೆಯ ಸ್ಟೇಶನರಿ, ಸಾಮಾನು ಶಾಲಾ ಪುಸ್ತಕ ಸಾಹಿತ್ಯಗಳೆಲ್ಲವೂ ಶೇಖರಿಸಿ ಇಡಲ್ಪಡುತ್ತವೆ. ನಮ್ಮ ದರಗಳು ಅಲ್ಪ! ನಮ್ಮ ಕೋರಿಕೆ, ಸೇವೆ! ವಿಶೇಷ ಲಾಭವಿಲ್ಲ

ವಿಶೇಷ ಮಾಹಿತಿಗೆ ಮುದ್ರಾಲಯದ ಅಧಿಕಾರಿಗಳಿಗೆ ಬರೆದು ತಿಳಿದುಕೊಳ್ಳುವುದು

ಸುಂದರ ವಿಲಾಸ ಪ್ರೆಸ್,
ಮಡಿಕೇರಿ
ತಾ|| 24—7—23.

ಆರ್. ಸುಂದರಸಿಂಗ್,
ಪ್ರೊಪ್ರೈಟರ್.
12—4

ಮದ್ರಾಸು ಅಮಾಲ್ಗಮೇಶನ್.

ಬರುವ ಡಿಶಂಬರು ತಿಂಗಳಲ್ಲಿ ವೈಸರಾಯರು ಮೈಸೂರಿಗೆ ಚಿತ್ತೈಸುವಾಗ ಜಮಾನುದಾರ ಸಂಘದ ಪರವಾಗಿ ಒಂದು ಡೆಪ್ಯುಟೇಶ ಕಳುಹಿಸುತ್ತಾರೆಂದು ವರ್ತಮಾನ ಹಾಗಾದರೆ ಜಮಾನುದಾರ ಸಂಘದವರು ಕಳೆದ ವಿರಾಜಪೇಟೆ ಮೀಟಿಂಗಿನಲ್ಲಿ ನಮ್ಮ ದೇಶವನ್ನು ಮದ್ರಾಸು ಅಧಿಪತ್ಯಕ್ಕೆ ಸೇರಿಸಬೇಕೆಂದೂ, ಈ ಬಗ್ಗೆ ವೈಸರಾಯರಲ್ಲಿಗೆ ಡೆಪ್ಯುಟೇಶನ್ ಕಳುಹಿಸಬೇಕೆಂದೂ ಟರಾವು ಮಾಡಿದ್ದನ್ನು ಮುಂದರಿಸಲಿಕ್ಕೆ ಅನುಕೂಲವಾಯಿತು ಆದ್ದರಿಂದ ಈ ವಿಷಯ ಮೆಮೋರಿಯಲ ಬರೆಯಲಿಕ್ಕೆ ಒಡನೇ ಒಂದು ಸಬ್ ಕಮಿಟಿಯನ್ನೂ, ಈ ಟರಾವು ತಂದ ಮೆ|| ಸಿ ಯಸ್ ಉತ್ತಯ್ಯನವರ ಸಮೇತ ಕೂಡಿಸಿ ತಯಾರ್ಮಾಡಿ ಮುಂದಾಗಿ ಪ್ರತಿಯನ್ನು ಚೀಫ್ ಕಮಿಶನರಿಗೆ ಕಳುಹಿಸುವುದು ಮೇಲು ಈ ವಿಚಾರದಲ್ಲಿ ಜಮಾನುದಾರ ಸಂಘದ ಕಮಿಟಿ ಪ್ರೆಸಿಡೆಂಟ್, ಸೆಕ್ರೆಟರಿಗಳು ಏನುಮಾಡುತ್ತಾರೆ? ಬಹಳ ಕುತೂಹಲವಿದ್ದ ಮೆ|| ಸಿ ಯಸ್ ಉತ್ತಯ್ಯನವರು ಏನು ಮಾಡುತ್ತಾರೋ ತಿಳಿಯೆ ಇವರ ಉದಾಸೀನಕ್ಕಾಗಿ ಶೀಘ್ರದಲ್ಲಿ ಎಕ್ಸ್‌ಟ್ರಾರ್ಡಿನರೀ ಜನರಲ್ ಮೀಟಿಂಗ್ ಒಂದನ್ನು ಮಾಡಲು ಈ ಸಪ್ಟಂಬರ್ ಎರಡನೇ ವಾರದಲ್ಲಿ ಮಾಡಲು ತೀರ್ಮಾನಿಸಿರುತ್ತೇವೆ. ಆದ್ದರಿಂದ ಅದರೊಳಗೆ ಎಗ್ಜಿಕ್ಯುಟಿವ್ ಕಮಿಟಿಯವರು ಖಂಡಿತವಾಗಿಯೂ ಮೆಮೋರಿಯಲ್ಲನ್ನು ಟರಾವಿಗನುಸಾರವಾಗಿ ತಯಾರ್ಮಾಡುವರೆಂದು ನಂಬಿಕೆ ಇದೆ.

ಆದರೆ ಈಚೆಗೆ ವಿರಾಜಪೇಟೆಯಲ್ಲಿ ಆದ ಕಮಿಟಿ ಮೀಟಿಂಗಿನಲ್ಲಿ ಮಾಪಾರ್ಡರಿಗೆ ಮಾದಲು ಕೇಳಿ ಅಮೇಲೆ ಅಮಾಲ್ಗಮೇಶನ್ನಿಗೆ ಮಿತ್ಯಯಪಡಿಸಬೇಕೆಂಬುದಾಗಿ ಮೆಮೋರಿಯಲ್ ಬರೆಯಬೇಕೆಂದು ತೀರ್ಮಾನ ಮಾಡಿರುತ್ತಾರಂತೆ ಸಂಘದ ಕಮಿಟಿಯವರಿಗೆ ಜನರಲ ಬಾಡಿಯವರ ಟರಾವನ್ನು ಮೀರಲು ಎಳ್ಳಿನಷ್ಟು ಅಧಿಕಾರವಿಲ್ಲ ಹೀಗೆ ಮಾಡಲು ಕಾರಣವೇನೆಂದು ತಿಳಿಯುವುದಿಲ್ಲ ಕೌನ್ಸಿಲು ವಿಚಾರವು ಪಾರ್ಟಿಯರಿಗೆ ಬೇಕಾದರೆ ಬೇಡ ಅದಲ್ಲದೆಯೋ ಪರೆ ಒಂದು ಎಂಬ ಮಾತು ಬೇಡವು ಬೇಡ ಖಂಡಿತವಾಗಿಯೂ ನಮ್ಮ ದೇಶವನ್ನು ಮದ್ರಾಸು ಅಧಿಪತ್ಯಕ್ಕೆ ಸೇರಿಸಿಯೇ ತೀರಬೇಕು.

ನಮ್ಮಲ್ಲಿರುವ ಒಬ್ಬ ಮನುಷ್ಯನ ಆಸೆಯಿಂದ ವ್ಯಾಪಾರವ ಬಗೆ ಹೇಗೆ? ಕ್ರಿಮಿನಲ್ ಚಾರದ ಪ್ರಾಂಕ್ಟ್ ಮೆಂಟ ಕಟ್ಟ ಹೆಸರನ್ನು ತಪ್ಪಿಸುವುದು ಹೇಗೆ? ಜಲಿಘಾರದ ಪರಿಕಾರವನ್ನು ಕಡಿಮೆ ಮಾಡುವದು ಹೇಗೆ? ಹೊರಗಿನ ದೇಶದವರು ಹೊಂದುತ್ತಲೇ ಇರುವ ಮಾರ್ಪಾಟೂ ನಮ್ಮ ದೇಶವೂ ಇದ್ದಕ್ಕಿದ್ದಹಾಗೆ ಹೆಚ್ಚಿಗೆ ಸಿರ ರ್ಕ ಪ್ರವರ್ತನಕ್ಕೆ ಇರವು ವೃದ್ಧಿಗೆ ಏನು ಒಪಾಯ ಕಾಣುತ್ತೀರಿ? ಇನ್ನು ಡಿಸ್ಟ್ರಿಕ್ಟ ಬೋರ್ಡ ದೈತರ ಅಧೀನಕ್ಕೆ ಸಿಕ್ಕಿದೆಯೋ? ರ್ಕೌನ್ಸಿಲ್ ಪ್ರಸ್ತಾಪವು ಹುಟ್ಟಿ ಎಷ್ಟು ವರ್ಷವಾಯಿತು ನಮಗೆ ಕೊಡುವುದೆಂದು ಹೇಳುವ ಸ್ಥಿತಿಯಾವದು? ಆದರಿಂದ ಪ್ರಯೋಜನವುಂಟೋ? ಸ್ಥಳೀಯ ಸರಕಾರದಧಿಕಾರಿಗೆ ಈ ನಿಯಮದ ಮೂಲಕವು ಹೆಚ್ಚು ಅಧಿಕಾರ ಸಿಕ್ಕಲಿಕ್ಕಿಲ್ಲವೋ? ಇದು ವಾಲಿಟಿಕಲ್ ಚಿಕ್ಕ ದೇಶಕ್ಕೆ ಕೌನ್ಸಿಲು ಸಿಕ್ಕುವ ಸಂಭವವು ಎಲ್ಲಿಯಾದರುಂಟೋ? ಈ ಕಾರಣಗಳನ್ನು ಚೆನ್ನಾಗಿ ಆಲೋಚಿಸಿ ಒಡನೇ ಜಮಾನುದಾರ ಸಂಘದ ಎಗ್ಜಿಕ್ಯುಟಿವ್ ಮೆಂಬರುಗಳು ಒಡನೇ ಜನರಲ್ ಮೀಟಿಂಗಿನಲ್ಲಿ ಆದ ಟರಾವಿನಂತೆ ಮೆಮೋರಿಯಲ್ ಬರೆದು ಬರುವ ಎಕ್ಸ್‌ಟ್ರಾರ್ಡಿನರೀ ಜನರಲ ಮೀಟಿಂಗಿನ ಮುಂದಿಡುವರೆಂದು ಹಾರೈಸುತ್ತೇನೆ

ಸಂಘದ ಮೆಂಬರ ಗಳರಲ್ಲೊಬ್ಬನು.

ಧರ್ಮೋಪದೇಶ

ಸ್ವಾಮಿ ಕೊಡಗು ಮಿತ್ರನೇ ಘನವನ್ನು ಹೊಂದಿದ ನಮ್ಮ ಸರಕಾರದವರು ಪ್ರಜೆಗಳ ಜ್ಞಾನಾಭಿವೃದ್ಧಿಗಾಗಿ ಪ್ರತಿ ವರುಷದಲ್ಲಿಯೂ ಬಹಳ ಹಣವನ್ನು ಖರ್ಚುಮಾಡಿ ಪ್ರತಿ ಗ್ರಾಮಗಳಲ್ಲಿಯೂ ಸ್ಕೂಲುಗಳನ್ನು ಸ್ಥಾಪಿಸುತ್ತಾ ಬರುತ್ತಿದ್ದಾರೆ ಯುವತಿಯರಿಗೂ ಯುವಕರಿಗೂ ಹಿಂದಿನದ ವರ್ಣದವರಿಗೆ ಸೇರುವ ಮಕ್ಕಳಿಗೂ ವಿದ್ಯೆ ಕಲಿಯಲಿಕ್ಕೆ ಅನುಕೂಲಪಡಿಸಿಕೊಟ್ಟಿರುವದರಿಂದ ಈಗ ವಿದ್ಯೆ ಕಲಿಯುವವರು ನಿರ್ಭಯವಾಗಿ ಕೆಲವು ವರುಷಗಳಲ್ಲಿಯೇ ನಮ್ಮ ದೇಶದಲ್ಲಿ ವಿದ್ಯಾವಂತರ ಸಂಖ್ಯೆಯು ಒಹಳ ಹೆಚ್ಚಬಹುದು ಈ ಸಂದರ್ಭದಲ್ಲಿಯೇ ಧರ್ಮೋಪದೇಶಕ್ಕೋಸ್ಕರ ಸ್ವಲ್ಪಮಟ್ಟಿಗೆ ಗಮನಕೊಡುವದು ಅಗತ್ಯವು ಪೂರ್ವಕಾಲದ ಚಕ್ರವರ್ತಿಗಳಾದ ಅಶೋಕ ಚಂದ್ರಗುಪ್ತಾದಿಗಳೂ ಶಿವಾಜಿ ಮುಂತಾದ ಮಹಾರಾಜರುಗಳೂ ಧರ್ಮಬೋಧನೆಗೂ ನಿತ್ಯಾಚರಣೆಗೂ ಬಹುಮಟ್ಟಿಗೆ ಶ್ರದ್ಧೆ ವಹಿಸಿ ಜನರನ್ನು ಸನ್ಮಾರ್ಗಕ್ಕೆ ತರುತ್ತಿದ್ದಂತೆ ಇತಿಹಾಸಗಳಿಂದ ತಿಳಿಯಬರುವದು ಈಗಿನ ಜನರಲ್ಲಿ ಅಗಮ್ಯಾಗಮನ, ಅಪೇಯಪಾನ ಅಭಕ್ಷ್ಯಭಕ್ಷಣ ಅಕೃತ್ಯಕರಣ ಮುಂತಾದ ಹಲವು ದುರ್ಗುಣಗಳು ಪ್ರಬಲಿಸಿ ಬೇರುಬಿಡುತ್ತಿವೆ. ಧರ್ಮವೆಂದರೆ ದಾನಮಾಡುವದೇ ಎಂದು ತಿಳಿದಿರುವ ಜನರೆ ವಿದ್ಯಾಶಾಲೆಗಳಲ್ಲಿರುವವರು ತಮ್ಮ ಕರ್ತವ್ಯವೇನು? ಜಾತಿಧರ್ಮವೇನು? ಸ್ತ್ರೀಧರ್ಮ ಯಾವುದು? ಮುಂತಾದ ವಿಚಾರಗಳನ್ನೇ ತಿಳಿಯುವ ಅನೇಕ ಜನರು ತಿರ್ಯಗ್ಜಂತುಗಳಂತೆಯೇ ಇದ್ದಾರೆ ವಿದ್ಯಾರ್ಥಿಗಳಲ್ಲಿ ಕೂಡ, ಅನೇಕರು ಅಸತ್ಯ, ಅಶುಚಿ, ದಂಬ, ಹಿಂಸೆ, ಅಪಕಾರ ಮುಂತಾದ ದುಷ್ಕೃತ್ಯಗಳಲ್ಲಿಯೇ ಮನಸ್ಸಿಟ್ಟಿರುವರೆಂದು ಹೇಳಲು ವ್ಯಸನವಾಗುವದು. ಜನರ ಸ್ಥಿತಿಯು ಹೀಗೆ ಬದಲಾಯಿಸಲಿಕ್ಕೆ ಒಬವಾದ ಕಾರಣಗಳು ಇರಲೇಬೇಕಷ್ಟೆ. ಅಂಥವುಗಳನ್ನು ವಿಚಾರಮಾಡೋಣ ಏಳೆಂಟು ಶತಮಾನಗಳಿಂದೀಚೆಗೆ ಉತ್ತರ ಹಿಂದೂಸ್ಥಾನದಲ್ಲಿ ರಾಮಾನಂದ, ಕಬೀರ, ನಾನಕ್, ರಾಮದಾಸ, ವಿವೇಕಾನಂದ, ಮೊದಲಾದ ಮಹನೀಯರು ಹುಟ್ಟಿ ಭಕ್ತಿರಸಪ್ರಧಾನವಾದ ಗ್ರಂಥಗಳನ್ನು ಬರೆದು ಜನರಲ್ಲಿ ದೈವಭಕ್ತಿಯನ್ನು ಉತ್ತಮ ಧರ್ಮಗಳನ್ನು ಬೋಧಿಸಿ ತಾವೂ ಅದರಂತೆ ಆಚರಿಸುತ್ತಾ ಬಂದರು ಜನರು ಧರ್ಮಾಧರ್ಮಸ್ವರೂಪಗಳನ್ನು ತಿಳಿದುಕೊಂಡು ಎಷ್ಟು ಕಷ್ಟನಷ್ಟಗಳು ಬಂದರೂ ಎಂಥ ಆಪತ್ತು ಬಂದರೂ ಧರ್ಮವನ್ನು ಬಿಡದೆ ವೀರರೂ ಶೂರರೂ ತ್ಯಾಗಿಗಳೂ ಎನಿಸಿದರು ಆಗಿ ಹಸರುಕೊಂಡಿದ್ದಾರೆ ಇದಲ್ಲದೆ ನಮ್ಮ ದಕ್ಷಿಣದೇಶವು ಮತಸ್ಥಾಪಕರನ್ನು ಪಡೆದು ಹೆಸರುಗೊಂಡಿತು ಮತ್ತು ಸರ್ವಶ್ರೇಷ್ಠರು ಗ್ರಂಥಗಳ ಮೂಲಕ ಧರ್ಮಬೋಧೆಯನ್ನು ಪ್ರಕಟಿಸಿರುವರು. ಇಂಥ ಗ್ರಂಥಗಳಿಂದ ಭಗವದ್ಭಕ್ತಿ ಮತ್ತು ನೀತಿಯ ಉಪದೇಶಗಳನ್ನು ಹೆಕ್ಕಿ ತೆಗೆಯುವುದು ಸಮುದ್ರದ ತಳದಲ್ಲಿರುವ ಮಣಿಗಳನ್ನು ಹುಡುಕಿ ತರುವಷ್ಟು ಕಷ್ಟವೇ ಸರಿ ಅರ್ಧ ಶತಮಾನದಿಂದೀಚೆಗೆ ಇಂಗ್ಲೀಷ್ ವಿದ್ಯಾಭ್ಯಾಸವು ಈ ದೇಶದಲ್ಲಿ ಪ್ರಬಲಿಸುತ್ತಾ ಬಂದು ಪಾಶ್ಚಾತ್ಯರ ಪರಿಚಯ ಸಹವಾಸಗಳು ಹೆಚ್ಚುತ್ತಾ ಬಂದವು ನಮ್ಮವರು ಈ ಜನರ ಸದಾಚಾರ್ಯ ವ್ಯವಹಾರಾದಿಗಳನ್ನು ಅನುಸರಿಸುವಕ್ಕೆ ಬದಲು ಅವರ ನಡೆನುಡಿಗಳನ್ನೇ ಅನುಕರಿಸುತ್ತಾ ಸ್ವಧರ್ಮವನ್ನು ದೂರಕ್ಕೆ ತಳ್ಳುತ್ತಾ ಬಂದರು. ರಾಜಭಯವಾಗಲಿ, ಗುರುಹಿರಿಯರ ಭಯವಾಗಲಿ ಇಲ್ಲದೆಹೋದುದರಿಂದ ಸದಾಚಾರ ಸದ್ವರ್ತನೆಗಳಿಗೆ ಇವರ ಮನಸ್ಸಿನಲ್ಲಿ ಸ್ಥಳ ಸಿಕ್ಕದೆಹೋಯ್ತು. ಸರಕಾರದ ಪಾಠಶಾಲೆಗಳಲ್ಲಿ ಧರ್ಮ ನೀತಿಬೋಧನೆಗಳನ್ನು ಉಪದೇಶಿಸಬೇಕೆಂಬ ವಿಧಿ ಇದ್ದರೂ ತಕ್ಕಮಟ್ಟಿಗೆ ನಿರಾಕ್ಷೇಪವಾಗಿ ಬೋಧಿಸಲ್ಪಡುತ್ತಿಲ್ಲ ಪೂರ್ವಕಾಲದಲ್ಲಿ ದೇವಸ್ಥಾನಗಳಲ್ಲಿಯೂ ಮಠಗಳಲ್ಲಿಯೂ ಬಹಿರಂಗವಾದ ಬಗೆಯ ಕಟ್ಟೆಗಳಲ್ಲಿಯೂ ಆಗಾಗ್ಗೆ ಸದಾಚಾರಪರರಾದ ಪಂಡಿತರಿಂದ ಪುರಾಣ ಹೇಳಿಸುವ ಪದ್ಧತಿಯಿತ್ತು ಆಗ ದೊಡ್ಡವರೂ ಚಿಕ್ಕವರೂ ಹೆಂಗಸರೂ ಒಂದು ಬಗೆ ನೀತಿ ಯನ್ನು ತಿಳಿದುಕೊಂಡು ತಮ್ಮ ನಡತೆಗಳಲ್ಲಿಯ ದೋಷಗಳನ್ನು ತಿದ್ದಿಕೊಳ್ಳುತ್ತಾ ಪಾಪಭೀತರುಗಳಾಗಿದ್ದರು ಈಗ ಅಂಥಾ ಏರ್ಪಾಡುಗಳಾಗಲಿ ಅವುಗಳನ್ನು ಹೇಳಿದರೆ ಕೇಳುವ ಪ್ರವೃತ್ತಿಯಾಗಲಿ ನಮ್ಮವರಲ್ಲಿ ಕಾಣಬರುವುದಿಲ್ಲ ಘನ ಸರಕಾರದವರು ಪಾಠಶಾಲೆಗಳಲ್ಲಿ ಕಡ್ಡಾಯವಾಗಿ ನೀತಿಗಳನ್ನೂ ಧರ್ಮಗಳನ್ನೂ ಬೋಧಿಸಲು ಏರ್ಪಡಿಸುವದರ ಜೊತೆಗೆ ಪ್ರತಿ ತಾಲೂಕಿನ ಅಭಿವೃದ್ಧಿ ಸಂಘದವರು ಒಬ್ಬೊಬ್ಬ ಪಂಡಿತರನ್ನು ನಿಯಮಿಸಿ ಗ್ರಾಮಸಂತೆಗಳಲ್ಲಿ ಆಗಾಗ್ಗೆ ಕಾಲಕ್ಕೆ ತಕ್ಕಂತೆ ಹಿತವಾಗಿಯೂ ಯುಕ್ತವಾಗಿಯೂ ಇರುವ ಧರ್ಮವಿಷಯವಾದ ಉಪನ್ಯಾಸಗಳನ್ನೂ ಕೊಡಿಸುತ್ತಾ ಬಂದಲ್ಲಿ ಕೆಲವು ಕಾಲದಲ್ಲಿಯಾದರೂ ಈಗಿನ ದುಷ್ಕೃತ್ಯಗಳು ತೊಲಗಿ 'ಸ್ತ್ರೀಮೇವೋದ್ಧರಾಮ್ಯಹಂ' ಎಂಬ ಪ್ರತಿಜ್ಞೆಯು ಸಾರ್ಥಕವಾಗಬಹುದೆಂದು ನಂಬುವೆನು.

ತಮ್ಮ ವಿಧೇಯ ನೆ ಮಾ ಮುತ್ತಣ್ಣ

ವ್ಯುನಿಸಿಪಲ್ ಕೆರೆ

ಅಯ್ಯಾ ಕೊಡಗು ಸಂಪಾದಕರೇ—

ಕಳೆದ ಶುಕ್ರವಾರ ಮ್ಯುನಿಸಿಪಲ್ ಸಭೆ ಕೂಡಿದ್ದಾಗ ತು ಅನೇಕ ಸಂಗತಿಗಳು ಚರ್ಚಿಸಲಾಗಿ [illegible] ಕೆರೆಯನ್ನು ಮುಚ್ಚಬೇಕೆಂಬ ಅಭಿಪ್ರಾಯದ [illegible] ತೊಡಗಿದರು ಈ ಕರೆಯನ್ನು ಮುಚ್ಚಬೇಕೆಂದು ರೇಟ್ ಪೇಯರುಗಳು ಅರ್ಜಿ ಬರಕೊಂಡಿದರು [illegible] ರವರು ರೇಟ್ ಪೇಯರುಗಳ ([illegible]) ದಂತೆ ಮುಚ್ಚಬೇಕೆಂದು ಮ್ಯುನಿಸಿಪಲ ಪ್ರಸಿಡೆಂಟ [illegible] ದಿದ್ದರಂತೆ. ಇದರಪ್ರಕಾರ ಪ್ರೆಸಿಡೆಂಟರು ರೇಟ್ ಪೇಯರುಗಳ ಅಭಿಪ್ರಾಯವನ್ನು ಪುನಃ ಕೇಳಲು ಅವರು ಮುಚ್ಚುವದೇ ಒಳ್ಳೇದೆಂದು ಅಭಿಪ್ರಾಯ ಬರದುಕೊಟ್ಟರು ಆದರೆ ಶುಕ್ರವಾರದ ಸಭೆಯಲ್ಲಿ ರೇಟ್ ಪೇಯರುಗಳ ಅಭಿಪ್ರಾಯವನ್ನು ಓದಲೇ ಇಲ್ಲ ಇದಲ್ಲದೆ ಸಭೆಯು ಮೆಡಿಕಲ್ ಮೆಂಬರು ಕೆರೆಯ ನೀರನ್ನು ಪರಿಶೋಧಿಸಿ ಆದರಲ್ಲಿ ಸಾವಿರಾರು ಮಲೇರಿಯದ ಕ್ರಿಮಿಗಳು ಇವೆ ಎಂದೂ ಅದನ್ನು ಮುಚ್ಚಿ ಅಲ್ಲಿನ ಪ್ರಾಂತ್ಯದಲ್ಲಿರುವ ಜನಗಳ ಆರೋಗ್ಯವನ್ನು ಕಾಪಾಡಬೇಕೆಂತಲೂ ಅಭಿಪ್ರಾಯ ಕೊಟ್ಟರು ಆಗ ಪ್ರೆಸಿಡೆಂಟು ಬೇಸಿಗೆಯಲ್ಲಿ ಗಾಡಿ ಎತ್ತುಗಳಿಗೆ ನೀರು ದೊರಕಿಸುವುದು ಹೇಗೆ ಎಂದರು ಮ|| ರಾ|| ರಾ|| ಬಿ|| ಅಪ್ಪಯ್ಯನವರು ಸಾವಿರಾರು ದನ ಕರು ಎತ್ತು, ಮುಂತಾದ ಮೂಕ ಜಂತುಗಳಿಗೆ ನೀರು ಎಲ್ಲಿಂದ ದೊರಕಿಸ ತ್ತೀರಿ ಎಂದು ಘರ್ಜಿಸಿದರು. ಮೆಡಿಕಲ್ ಮತ್ತು ಅಸಿಸ್ಟೆಂಟ್ ಇಂಜಿನಿಯರ್ ಮೆಂಬರುಗಳು ಎತ್ತುಗಳಿಗೋಸ್ಕರ ಕೆರೆಯ ಹತ್ತಿರವಿರುವ ಬಡ ಜನಗಳು ಮಲೇರಿಯದಿಂದ ಪೀಡಿತರಾಗಿ ಸಾಯುವುದು ಸರಿಯಲ್ಲವೆಂದೂ ಎತ್ತುಗಳಿಗೆ ಬಂಡಿಮಾಳದ ಹತ್ತಿರದಲ್ಲಿ ನೀರು ಒದಗಿಸಬೇಕೆಂದೂ ಹೇಳಿದರು ಆಗ ಪ್ರಸಿಡೆಂಟರು ಅಂಥಾ ನೀರು ಅಲ್ಲಿ ಎಲ್ಲಿದೆ ಎಂದು ಪ್ರಶ್ನೆ ಮಾಡಲು ಅಸಿಸ್ಟೆಂಟು ಇಂಜಿನಿಯರು ತಾವು ಅಂಥಾ ಸ್ಥಳವನ್ನು ನೋಡಿ ಹೇಳುವೆನೆಂದು ಅಂದರು. ಇದೂ ಅಲ್ಲದೆ ಕೆರೆಯನ್ನು ಮುಚ್ಚುವದಾದರೆ ಎಷ್ಟು ಖರ್ಚಾಗಬಹುದೆಂದು ಅಂದಾಜನ್ನು ಬೇಕೆಂದೂ ತೀರ್ಮಾನವಾಯಿತು

ಅಯ್ಯಾ ಸಂಪಾದಕರೇ! ಮ|| ರಾ|| ರಾ|| ... ಯ್ಯನವರ 'ಸಾವಿರಾರು ದನಕರುಗಳು ನೀರು ... ತ್ತೆ" ಎಂಬುದು (ಎಂಥಾ ಅಸತ್ಯಕರವಾದ) ಅತಿಶ... ಎಂದು ನಾನು ಹೇಳಲೇ? ಈ ಮಹನೀಯರು ... ರುವ ವಾರ್ಡಿಗೆ ಮೆಂಬರರಂತೆ! ಈ ಕರೆಯ ... ಜನರ ಅಭಿಪ್ರಾಯವನ್ನು ಈವರೆಗೂ ಇವರು ಕೇ... ಇಲ್ಲ! ಇಂಥವರು ಈ ವಾರ್ಡಿನ ಪ್ರತಿನಿಧಿಗಳು ನೀರು ಪಶುಪ್ರಾಣಿಗಳು ಕುಡಿಯಲು ಯೋಗ್ಯವೇ ಅಥವಾ ಕುಡಿದರೂ ಮ|| ರಾ|| ರಾ|| ಬಿ|| ಅಪ್ಪ... ಸಾವಿರಾರು ದನಕರುಗಳು, ಹನಸಿನ ಗಂಟೆ ಒಂದ... ಎತ್ತುಗಳೂ ಸಹ ಇಲ್ಲಿಗೆ ಬರುವುದು ಬಹಳ ಅಪರೂ... ವಾ ಒಂದರೂ ಒಂದುಸಲ ಒಂದ ಗಾಡಿಯವನು ... ದುಸಲ ಬರುವುದಿಲ್ಲ ನೀರು ಅಷ್ಟು ಯೋಗ್ಯತೆಯ...

ಇವರ ಅಸಂಬದ್ಧ ಪ್ರಲಾಪವನ್ನು ನೋ... ರೇಟ್ ಪೇಯರುಗಳಲ್ಲಿ ಒಬ್ಬರು ತಾವು ದಿಟವಾಗ... ಯನ್ನು ಸಭೆಯ ಮುಂದೆ ಅರಿಕೆಮಾಡಿಕೊಳ್ಳುವರೆ... ಕೊಡಬೇಕೆಂದು ಕೇಳಿಕೊಂಡರು ಅಂಥಾ ಅನುಮ... ಲಾಗುವದಿಲ್ಲವೆಂದು ಪ್ರಸಿಡೆಂಟರೂ ಮ|| ರಾ|| ಅ... ವರೂ ಅಂದರು ಮತ್ತೊಬ್ಬ ರೇಟ್ ಪೇಯರು ... ಬು ಪ್ರಸಿಡೆಂಟರು ರೇಟ್ ಪೇಯರನ್ನು ಸಭೆಗೆ ಬಿ... ಷ್ಟೆಂದು ಗಟ್ಟಿಯಾಗಿ ಗುಡುಗಿಟ್ಟಿದರು ಉಳಿದ ... ಯರುಗಳು ಅರ್ಧಚಂದ್ರ ಪ್ರಯೋಗವಾಗ ... ಸುಮ್ಮನಿರ ಬೇಕಾಯಿತು ಮ|| ರಾ|| ಅಪ್ಪ... ಸಾವಿರಾರು ದನಕರುಗಳೂ ಮೂಕಪ್ರಾಣಿಗಳೂ ನೀರನ್ನು ಕಂಡವುಗಳಲ್ಲದಿದ್ದರೂ ಅವರ ಪ್ರಕಾರ... ತ್ತಲೇ ಇರಬೇಕಾಯಿತು.

ಸಂಪಾದಕರೇ! ಸ್ವರಾಜ್ಯಬೇಕೇ? ಸ್ವರಾ... ಮೆ ಎಂಥಾದ್ದು! ರೇಟ ಪೇಯರುಗಳಿಂದ ... ಸೂಲುಮಾಡುವದು ಬೇಕಾದ ರಸ್ತೆಗಳಿಗೂ ಷತ್ತರ ವಿರುವ ಎತಿಗಳಿಗೂ ಖರ್ಚುಮಾಡುವುದ ಪೇಯರುಗಳ ಅರ್ಜಿಬಂದರೆ ಸುಮ್ಮನಿರುವುದು ಬಿದ್ದು ತಮ್ಮ ಅನಾನುಕೂಲ ನ್ನು ತಿಳಿಸಲು ಸರೆ ಇವರನ್ನು ಬಿಟ್ಟದ್ದೇ ತಪ್ಪೆಂದು" ಪ್ರಸಿಡೆಂಟರ ಯನ್ನು ಮ|| ರಾ|| ಅಪ್ಪಯ್ಯನವರಿಂದ 'ಸ್ವ... ಕೂಕುಕೂ ಎ ದೂ ಹೇಳಿಸಿಕೊಂಡು ಮನೆ ಡುವುದು

ಸಂಪಾದಕರೇ! ಸ್ವರಾಜದ ಪ್ರಥಮ ಮೆಟ್ಟ... ಇದರ ಪಾಡೇ ಹೀಗಾದಮೇಲೆ ಇ... ಬಹುದೇಲಿ! ರೇಟ್ ಪೇಯರುಗಳು ತಮ್ಮ ಅರ್ಜಿಗಳನ್ನು ಮುದ್ದು ಸಭೆಗೆ ಅರಿಕೆಮಾಡಲು ... ಯಾವ ಕಾನೂನು ಇದೆ? ಅಥವಾ ಹಾಗೆ ಇದ್ದ... ನೂನು ಎಷ್ಟರ ಮಟ್ಟಿಗೆ ನ್ಯಾಯವಾದುದು?

ಪ್ರಸಿಡೆಂಟರಿಗೂ ಕೆಲವು ಮೆಂಬರುಗಳಿಗೂ ... ಮುಚ್ಚಿಸುವ ಅಭಿಪ್ರಾಯವು ಇಲ್ಲದೆ ರೇಟ್ ಪೇಯರುಗಳ ಅಭಿಪ್ರಾಯವನ್ನು ... ಪ್ರೆಸಿಡೆಂಟರು ... ಬೇಡವೆಂದು ... ಸ್ವಸ್ತಿ! ಪ್ರಸಿಡೆಂಟರು ಯಾರ? ರೇಟ್ ... ಕಾರಣವೇನು ... ಜನಗಳು ... ನರ ... ಯಾವು ... ಪ್ರಸಿಡೆಂಟರೇ! ಮೆಂಬರು! ಕಲಿಬೇಡವೆಂದು ... ಕೊಂಡಾಗೂ ಸಾವಿರಾರು ದನಕರು ಎತ್ತುಗಳಿಗೆ ... ದಂತೋ? ನ್ಯಾಯತಿಳಿದವರು

ಅಯ್ಯಾ! ಸಂಪಾದಕರೇ! ಮ್ಯುನಿಸಿಪಾಲಿಟಿ ದನಗಳಿಗೋಸ್ಕರವೋ ಮನುಷ್ಯರಿಗೆ ... ಕೆರುವುದು ದನಕರುಗಳಿಗೋ ಮ... ಜನರ ಕಷ್ಟ ... ತನ್ನ ಕಷ್ಟ ... ರುವ ಕಮಿಷನರ ... ಆಸಿಸ್ಟೆಂಟ್ ... ಡ್ ಆಫ್ ಪೋಲೀಸರು ಬಿದ್ದು ತೋರಿದರೆ ... ರೇಟ್ ಪೇಯರುಗಳ ಅಭಿಪ್ರಾಯದಂತೆ ... ಕೆಂದು ಪ್ರಸಿಡೆಂಟರನ್ನು ಕೇಳಿದ! ದನಗಳಿಗೆ ... ತ್ತೀರಿ ಹೇಳಿ ಈ ಪ್ರಶ್ನೆ ಸರಿಯೇ?'

"ಬೆಂಗಳೂರು ಮೊದಲಾದ ದೊಡ್ಡ ಪಟ್ಟಣಗಳು ... ಬಾಹಿರ ಆಗಿರುವ ದೊಡ್ಡ ದೊಡ್ಡ ಕೆರೆಗಳನ್ನು ... ಕರವೆಂದು ತಿಳಿದು ಮುಚ್ಚಿದ್ದಾರೆ ... ಇದ್ದಾರೆ ...

ಸಂಪಾದಕರೇ! "Spare me from my ... ನನ್ನ ಸ್ನೇಹಿತರಿಂದ ನನ್ನನ್ನು ರಕ್ಷಿಸುವುದು ... ಸರಿಯೆಂದು ಈಗ ನಂಬಿಕೆಯಾಯಿತು" ರೇಟ್ ಪೇ...

Printed & Published by D S Krishna... Proprietor, at Sreenivas Electric Pres "for Kodagu" Ltd Merca—17 8 19..

"Kodagu Office, Mercara"
Reg. No. M. 1550.

ಕೊಡಗು.

ಸತ್ಯೇನ ಧೂಕದಯುವಾ ವಿದ್ಯಾನೀತಿ ಪ್ರಯತ್ನತಃ । ಐಕಮತ್ಯೇನದೇಶಾನಂ ಸುಸ್ಥಿರಾ ರಾಜ್ಯಸಂಪದ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು. " ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ"

ಟ 4] ಕೊಡಗು, ಸ೯ ೧೯೨೩ ನೇ ಆಗಸ್ಟ್ ತಾರೀಖು ೨೪ ನೆಯ ಶುಕ್ರವಾರ. [ಸಂಚಿಕೆ ೧೩

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನಡಾ ಪ್ರಿಂಟಿಂಗ್ ಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಸಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ಜಾಗ್ರತೆಯಾಗಿಯೂ ಸುಲಭಬೆಲೆಗೂ ಮಾಡಿ ತ್ತೇವೆ

'inivas Electric Press,
MYSORE.

Coorg Central Co-operative Bank, Ltd.,

stered under the Co-operative Societies Act)

Capital	50,000
up Share Capital	6,310
d Deposits paid	31,873

Amounts are lent mainly to operative Societies in Coorg. The unts are checked annually by The strar of Co-operative Societies Coorg osits for one year and more carry est at 6¼% per annum and for smaller ods at 5% per annum.

Apply to the Secretary or Treasurer urther details

resident	*Treasurer*	*Secretary*
ndera Ceetiah	Bhajanga Rao,	C N Venkappaya
ao ahadur	B A, B L,	B A B L

Dated 25–3–1923

Spencers——for everything.

	Rs.			
Whisky —Matchless	7	6	0	per bottle
King George C/L	7	1	0	„
Old highland Malt	6	0	0	„
Brandy —Exshaw's No 1	7	4	0	„
Exshaw's No 2	6	7	0	„
Vermouth —Noilly Prath (French)	2	10	0	„
Cigars —Flo-rde Spencer Specials	3	12	0	50s „
Trichy Specials	2	8	0	100s „

Buy Your Stores from Spencers, they are fresh and cheap

52–45 **SPENCER & Co., Ltd,**
MERCARA & POLLAIBETTA

When you think of going to Bombay
THINK OF

THE WELCOME HOTEL.

Girgaum Back Road, BOMBAY.

Most airy accomodation—Most Central situation—Excellent Meals
Every Convenience

ವೆಲ್‌ಕಂ ಹೊಟೇಲ್

ಗಿರ್ಗಾಂವ, ಬ್ಯಾಕ್‌ರೋಡ, ಬೊಂಬಾಯಿ

ಟ್ರೈಲಿನಿಂದಿಳಿದೊಡನೆ ... ಇಲ್ಲಿಯೊದು ಸುತ್ತದೆ ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಯೋಗ್ಯವಾದ ಕೋಣೆಗಳು ಬೇಕೆಂದಿದ್ದ ... ಬಾಯಿಪಟ್ಟಣದ ಮಧ್ಯಸ್ಥಳದಲ್ಲಿರುವ ನೋಲ್ಕಂಡ ಹೋಟೇಲಿನಲ್ಲಿಳಿಯಲು ಮರೆಯಬೇಡಿರಿ ಯೋಗ್ಯವಾದ ಊಟ ಗಾಳಿಗನುಕೂಲವಾದ ಕೊಠಡಿ 15 ಮಿನಿಟಿಗೊಮ್ಮೆ ತಿರುಗುವ ಟ್ರಾಮಿನ ಸೌಕರ್ಯ ಅಂತೂ ಪ್ರಯಾಣಿಕರಿಗೆ ಉಳಿದುಕೊಳ್ಳಲು ಅನುಕೂಲವಾದ ಉತ್ತಮ ಬ್ರಾಹ್ಮಣರ ಭೋಜನಾಲಯ

ಹೆಚ್ ಶ್ರೀನಿವಾಸರಾವ್,
ಮೇನೇಜರ್.

[12—1]

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್

ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಷ್ಟರಾಗಿದೆ

	ರೂ.
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,310
ಜಮಾ ಬಂದ ಠೇವಣಾತಿ	31,873

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6¼ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಖ್ಖ ಅಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು	ಟ್ರೆಜರರ್
ಕೊಡಂದೆರ ಕುಟ್ಟಯ್ಯನವರು,	ಯಂ ಭುಜಂಗರಾಯರು
ರಾಯ್ ಬಹದ್ದೂರ್	ಬಿ ಎ ಬಿ ಎಲ್.,

ಸೆಕ್ರೆಟರಿ
ಸಿ ಯನ್ ವೆಂಕಪ್ಪಯ್ಯನವರು, ಬಿ ಎ, ಬಿ ಎಲ್.
ತಾರೀಕು 25—3—1923

ಸುಂದರ ವಿಲಾಸ ಪ್ರೆಸ್, ಮಡಿಕೇರಿ.

(ಸ್ಥಾಪಿತ ಇಸವಿ 1912)

ಕೊಡಗು ಮಹಾ ಜನರನ್ನು ಈಗ್ಗೆ ಹನ್ನೊಂದು ವರ್ಷಗಳಿಂದ ಒಂದೇ ಸಮನೆ ಸೇವಿಸಿ ಕೊಡಗಿನ ಪ್ರಧಾನ ಪಟ್ಟಣವಾದ ಮಡಿಕೇರಿಯಲ್ಲಿ ಸದ್ಯ ಸ್ಥಾಪಿತವಾಗಿರುವ ನಮ್ಮ ಮುದ್ರಾಲಯವು ಮತ್ತೊಮ್ಮೆ ತಮ್ಮನ್ನ ಸೇವಿಸಲು ಸಿದ್ಧವಾಗಿದೆ ಅಂದವಾದ ಅಕ್ಷರಗಳಿಂದ, ಮುದ್ದಾದ ಮುದ್ರಣದಿಂದ ಸೊಗಸಾದ ಕಾಗದಗಳಲ್ಲಿ ಮುದ್ರಿಸುವ ನೂತನ ಅನುಕೂಲತೆಗಳನ್ನು ಸಿದ್ಧಪಡಿಸಿದೆ

ಪರಸ್ಥಳಕರಿಗೆ ಎಲ್ಲಾ ಅನುಕೂಲತೆಗಳನ್ನು ಒದಗಿಸಲು ಏರ್ಪಡಿಸಿದೆ ದೇಶೀಯ ಮುದ್ರಾಲಯಕ್ಕೆ ಸ್ವದೇಶ ಬಂಧು ಭಗಿನಿಯರು ಪ್ರೋತ್ಸಾಹ ಕೊಡಬೇಕಾಗಿದೆ.

ಬಗೆ ಬಗೆಯ ಸ್ಟೇಶನರಿ ಸಾಮಾನು ಶಾಲಾ ಪುಸ್ತಕ ಸಾಹಿತ್ಯಗಳೆಲ್ಲವೂ ಶೇಖರಿಸಿ ಇಡಲ್ಪಡುತ್ತವೆ ನಮ್ಮ ದರಗಳು ಅತ್ಯಲ್ಪ! ನಮ್ಮ ಕೋರಿಕೆ ಸೇವೆ! ವಿಶೇಷ ಲಾಭವಲ್ಲ

ವಿಶೇಷ ಮಾಹಿತಿಗೆ ಮುದ್ರಾಲಯದ ಅಧಿಕಾರಿಗಳಿಗೆ ಬರೆದು ತಿಳಿದುಕೊಳ್ಳುವುದು

ಸುಂದರ ವಿಲಾಸ ಪ್ರೆಸ್,	ಅರ್ ಸುಂದರಸಿಂಗ್,
ಮಡಿಕೇರಿ	ಪ್ರೊಪ್ರೈಟರ್.
ತಾ॥ 24–7–23,	12—4

ಕೆಲ ಕಸಬಲ್ಲಿ ಹೆಚ್ಚು ಲಾಭ ಪಡೆಕೊಳ್ಳಿ

ನಿಮ್ಮ ಕಾರಖಾನೆಯಲ್ಲಿ ಸುಧಾರಿಸಿದ ಕಬ್ಬಿಣ ಗಾಣಗಳೂ, ... ಯಂತ್ರ ಇತ್ಯಾದಿ ಒಕ್ಕಲಿಗರಿಗೆ ಲಾಭದಾಯಕವೃಳ್ಳವುಗಳೇ ಸಾಮಗ್ರಿಗಳು ತಯಾರಾಗುತ್ತವೆ ... ವಿದಾರು ರೈತರು ಕೂಡುತ್ತಿರುವ ... ಕ್ಯಾಟಲಾಗು ತರಿಸಿಕೊಳ್ಳಿ.

ವಿಳಾಸ :—
ಕಿರ್ಲೋಸ್ಕರ ಬಂಧು ಲಿಮಿಟೆಡ್,
ಪೋ. ಕಿರ್ಲೋಸ್ಕರವಾಡಿ
2—10 ಜಿಲ್ಲಾ—ಸಾತಾರಾ

Great Reduction in Prices of Arms and Mamooties.

		Old Price	Present Price
B. L. Guns			
2 bore each	Rs	250	165
M L do	„	130	85
M L. do	„	100	65
mooties 5 lbs each		4/8	3/6

PLY TO —
Mc. DOWELL & Co., Ltd,.
MERCARA.

" ಕೊಡಗು "

೧೯೨೫ ನೇ ಇಸವಿ ಆಗಸ್ಟ್ ತಾ|| ೨೮ ನೇ ಶುಕ್ರವಾರ.

ಈಗೇನು ಮಾಡಬೇಕು ?

ದೇವರು ಕಠಿಣನಲ್ಲ, ನಿಷ್ಪಕ್ಷಪಾತಿ, ಸಹಾಯಕನು, ದಯಾಳು. ಅವನಲ್ಲಿ ಒಳ್ಳೆ ಗುಣಗಳಲ್ಲದೆ ಕೆಟ್ಟ ಗುಣಗಳೇನು ಇರುವದಿಲ್ಲ. ಅಂದರೆ ಅವನು ಯಾವಾಗಲು ಲೋಕೋಪಕಾರದ ಕೆಲಸವನ್ನೇ ಮಾಡುವವನು. ಹೀಗಿರುವ ಮೇಲೆ ನಮ್ಮ ದೇಶದಲ್ಲಿ ಕಳೆದ ಕೆಲವು ದಿವಸಗಳಲ್ಲಿ ಬಿದ್ದ ಅತಿ ವೃಷ್ಟಿಯಿಂದ ಬಂದಂಥಾ ನಷ್ಟ ಕಷ್ಟಗಳು, ನಮ್ಮ ದೇಶದ ಒಳ್ಳೇದಕ್ಕೇನೆ ಬಂದಿರುತ್ತೆಂದು ಭಾವಿಸಬೇಕಲ್ಲವೇ ? ಈ ನಷ್ಟಕಷ್ಟಗಳು ನಮ್ಮ ಕರ್ಮದ ಪ್ರತಿಫಲವೆಂದರೆ ತತ್ವವೇನು ? ನಷ್ಟಕಷ್ಟಗಳಿಂದ ನಾವು ತಿಳಿದುಕೊಳ್ಳತಕ್ಕದ್ದೇನು ? ನಾವು ನಮ್ಮ ನಷ್ಟಕಷ್ಟಗಳಿಂದ ಪಾರಾಗಬೇಕಾದರೆ ಏನು ಮಾಡಬೇಕು ? ಈಗ ದೇಶದಲ್ಲೆಲ್ಲಾ ಜನರಲ್ಲಿ ಇದೇ ಒಂದನೇ ಯೋಚನೆಯಾಗಿದೆ. ನಮ್ಮ ದುರ್ದೆಶೆಗೆ, ಅತಿವೃಷ್ಟಿ ಒಂದು ದೇಶದಲ್ಲೆಲ್ಲಾ ಈಗ ಎಣಿಸಲಸಾಧ್ಯವಾದಷ್ಟು ನಷ್ಟವು ಸಂಭವಿಸಿತು. ಹಿಂದೂದೇಶದ ಇತರ ಪ್ರಾಂತ್ಯಗಳಲ್ಲಿ ಅತಿ ವೃಷ್ಟಿಯಿಂದ ಸಂಭವಿಸಿದ ಕಷ್ಟಗಳಂತೆ ನಮಗೆ ಈಗ ಕೂಡ್ಲೆ ನಷ್ಟವು ಅತಿಯಾಗಿ ತೋರಬಹುದಾದರೂ ಕೂಡ, ಈಗಲಿಂದಲೇ ನಾವು ಮುಂದಿನ ಎಚ್ಚರಿಕೆಯನ್ನು ಎಣಿಕೆಯಲ್ಲಿಡದಿದ್ದಲ್ಲಿ ನಾವು ಬರುವ ವರ್ಷ ಯೋಚಿಸಿದಂಥ ಕಷ್ಟಗಳನ್ನು ಕಣ್ಣಾರೆ ನೋಡಬೇಕಾಗಿ ಬರುತ್ತೆಂಬದು ಯಾರಿಗೂ ತಿಳಿಯದ ಸಂಗತಿಯಾಗಿರಲಾರದು. ನಮ್ಮ ದೇಶದಲ್ಲಿ ಅತಿ ವೃಷ್ಟಿಯಿಂದ ಅನೇಕ ತರದ ನಷ್ಟಗಳು ಸಂಭವಿಸಿವೆ. ಉತ್ತರ ಕೊಡಗಿನಲ್ಲಿ ರಾಗಿ ಬೆಳೆ ಎಲ್ಲಾ ಹಾಳಾಗಿವೆ. ಭತ್ತದ ಗದ್ದೆಗಳಿಗೆ ನಷ್ಟವಿಲ್ಲದಿಲ್ಲ. ದಕ್ಷಿಣ ಕೊಡಗಿನಲ್ಲಿ ನಾಲ್ಕು ತರಹದ ನಷ್ಟಗಳು ಸಂಭವಿಸಿವೆ.

(1) ಅನೇಕ ಕಡೆಗಳಲ್ಲಿ ಪ್ರವಾಹದ ನೀರು 2) ದಿನಗಳವರೆಗೆ ಅಗಾಧಿ (ಯಾಗಲು) ಗಳ ಮೇಲೆ ನಿಂತು, ಮತ್ತು ಬೆಟ್ಟಗಳ ದೆಸೆಯಿಂದ ಅಗಾಧಿಗಳ ಮೇಲೆ ಮಣ್ಣು ಮುಚ್ಚಿಕೊಂಡು, ಪೈರೆಲ್ಲಾ ಕೊಳೆತು ಹೋದ ಕಾರಣ ನೆಡಲು ಪೈರು ಇಲ್ಲದೆ ಬರುವ ವರ್ಷಕ್ಕೆ ಬೆಳೆ ಇಲ್ಲದ್ದರಿಂದುಂಟಾಗುವ ನಷ್ಟ; (2) ಹೊಳೆ ತೋಡುಗಳ ನೀರಿನ ಪ್ರವಾಹದ ದೆಸೆಯಿಂದ ತೋಡುಗದ್ದೆ ತೆವರಿಗಳು ಒಡೆದು ಬರೆಗಳು ಜರಿದು ಗದ್ದೆಗಳಲ್ಲಿ ಗುಂಡಿಗಳು ಬಿದ್ದು, ನಾಟಿ ಮೇಲೆ ಮಣ್ಣು ಹೊಯಿಗೆ ನಿಂತು ಉಂಟಾಗಿರುವ ನಷ್ಟ. (3) ಅನೇಕ ದಿನಗಳ ಅತಿವೃಷ್ಟಿಯಿಂದ ಮುಖ್ಯವಾಗಿ ಕೂಡುವ ದನಗಳು ಮೃತಪಟ್ಟ ನಷ್ಟ. (4) ವಾಸದ ಮನೆಗಳಲ್ಲಿಯೂ ಅಂಗಳದಲ್ಲಿಯೂ ಜಲವೆದ್ದು ಬರೆಗಳು ಬಿದ್ದು ಬಂದೂ ಮನೆಗಳಿಗುಂಟಾಗಿರುವ ಅಪಾಯ ಮುಖ್ಯವಾಗಿ ಉಂಟಾಗಿರುವ ಈ ನಾಲ್ಕು ತರಹದ ನಷ್ಟಗಳಿಗೆ ನಿವಾರಣೆ ಬಗ್ಗೆ ಕೂಡ್ಲೆ ಸಿಗ ಕೊಡಬೇಕಾದದ್ದು ಬಹಳ ಅವಶ್ಯವಲ್ಲವಾಗಿದೆ. 'ಧೈರ್ಯಂ ಸರ್ವತ್ರ ಸಾಧನಂ' ಎಂದು ಹೇಳುವ ಹಾಗೆ ನಾವು ಅಧೈರ್ಯಪಡದೆ ಪೈರು ಕಳೆದುಕೊಂಡವರು ಕೂಡ್ಲೆ ಬೀಜ ಹಾಕಿ ಪೈರು ಬೆಳಸಿ ಕನ್ಯಾರು ತಿಂಗಳಲ್ಲಾದರೂ ನೆಡದಿದ್ದಲ್ಲಿ ಬರುವ ವರ್ಷದಲ್ಲಿ ಊಟಕ್ಕೆ ಇಲ್ಲದೆ ಪಡಬೇಕಾಗುವ ಕಷ್ಟವು ಯಾರಿಂದಲೂ ನಿವಾರಿಸಲ್ಪಡಲಾರದು. ಕನ್ಯಾರು ತಿಂಗಳು ಅಕ್ಟೋಬರವರೆಗೆ ನೆಟ್ಟರೂ ಕೂಡ ಚೆನ್ನಾಗಿ ಜಲವಿದ್ದಿರುವ ಕಾರಣ ನೀರಿಗೆ ತೊಂದರೆ ಬಾರದೆ ಸ್ವಲ್ಪವಾದರೂ ಬೆಳೆಯದೆ ಇರಲಾರದು. ಗ್ರಾಮದಲ್ಲಿ ಪೈರೂ ಬೀಜಕ್ಕೆ ಒಳ್ಳೇ ಭತ್ತವೂ ಇಲ್ಲದಂಥವರಿಗೆ ಇರುವವರು ಒಡನೆ ಸಹಾಯಮಾಡಿ ಗ್ರಾಮದವರೆಲ್ಲಾ ಸಹೋದರ ಭಾವದಿಂದ ಒಟ್ಟುಗೂಡಿ ಕೆಲಸ ನಡೆಸಿದರೆ, ನಮಗೆ ಮುಂದಕ್ಕೆ ಬರುವಂಥಾ ಕಷ್ಟಗಳನ್ನು ಬಹಳಮಟ್ಟಿಗೆ ಕಡಿಮೆ ಮಾಡಿಕೊಳ್ಳಬಹುದು. ಈ ರೀತಿಯಲ್ಲಿ ನಡೆದುಕೊಂಡರೆ ಮೇಲೆ ಸೂಚಿಸಿದ ಮೊದಲನೇ ಕಷ್ಟವು ಈಗಿನ ಮಟ್ಟಿಗೆ ನಿವಾರಣೆ ಆಗುವದರಲ್ಲಿ ಯಾವ ಸಂಶಯವೂ ಇಲ್ಲ. ಈ ಅನ್ಯೋನ್ಯ ಪರಸ್ಪರ ಪ್ರೀತಿಭಾವದ ನಮ್ಮ ಹಿರಿಯರಲ್ಲಿದ್ದ ನಡವಳಿಕೆಗಳನ್ನು ಈಗ ನಾವು ಸ್ವಾರ್ಥತೆಯಿಂದ ಬಹಳಮಟ್ಟಿಗೆ ಬಿಟ್ಟು ಮರೆಯುತ್ತಾ ಬಂದ ಕಾರಣ ದೇವರು ನಮ್ಮಲ್ಲಿ ಅಂಥಾ ಹಿರಿಯರಲ್ಲಿದ್ದ ಉತ್ತಮ ಗುಣಗಳನ್ನು ಉಜ್ಜೀವಿಸಪಡಿಸಲಿಕ್ಕಾಗಿ ಈ ರೀತಿ ವರ್ತಿಸಿರುತ್ತಾನೆಂದರೆ ನ್ಯಾಯವಾಗಿ ತೋರುವುದಿಲ್ಲವೇ ? ಊಟಕಿಲ್ಲದ ಕಷ್ಟವು ಅತಿ ಕಷ್ಟವೆಂದು ವರ್ಣಿಸಬೇಕಾದ ಅವಶ್ಯವಿರುವದಿಲ್ಲ. ಅನ್ನವಿಲ್ಲವೆಂದರೆ ಖಾಯಿಲೆಯಿದೆ ಎಂದರ್ಥ. ಅನ್ನವಿಲ್ಲದೆ ಖಾಯಿಲೆ ಬಂದರೆ ಸಾವು ಎಂದು ಖರೆ. ಈಗಾಗಲೇ ನಮ್ಮ ದೇಶದಲ್ಲಿ ಜನಸಂಖ್ಯೆಯು ಕಡಿಮೆಯಾಗುತ್ತಾ ಬಂದಿದೆ. ಆದ್ದರಿಂದ ಈ ವಿಷಯದಲ್ಲಿ ಬಹಳ ಎಚ್ಚರಿಕೆ ! ಎಚ್ಚರಿಕೆ !! ಎಚ್ಚರಿಕೆ !!!

ಭೂಮಿಗಳನ್ನು ಪುನಃ ರೂಪಿತಕ್ಕೆ ತರುವ ವಿಷಯ ಎರಡನೇ ಆಲೋಚನೆ. ಇಷ್ಟರಮಟ್ಟಿಗೆ ಸಿಕ್ಕಿದ ವರ್ತಮಾನದಲ್ಲಿ ಭೂಮಿರೂಪಿತಕ್ಕೆ ಕನಿಷ್ಟಪಕ್ಷ ನಾಲ್ಕು ಲಕ್ಷ ರೂಪಾಯಿಗಳು ಬೇಕಾಗುವವು. ಈ ಕೆಲಸಗಳನ್ನು ಪರಜಿಲ್ಲೆಗಳಿಂದ ಬರುವ ಜನರ ಸಹಾಯದಿಂದ ಮಾಡುವದೆಂದರೆ, ನಮ್ಮ ದೇಶವು ಎಷ್ಟರಮಟ್ಟಿಗೆ ಒತ್ತಡಕ್ಕೆ ತುತ್ತಾಗುವದೆಂದು ಯೋಚಿಸುವದು ಅಸಾಧ್ಯ. ಬೀಜ ಬಿತ್ತಿ, ನೆಟ್ಟು, ಸ್ವಲ್ಪಮಟ್ಟಿಗೆ ಬೆಳೆ ಬೆಳಸಿದರೂ ಕೂಡ, ಕಾಲತಪ್ಪಿ ನೆಡುವದರ ದೆಸೆಯಿಂದ ಉತ್ಪತ್ತಿ ಕಡಿಮೆಯಾಗುವದರ ನಷ್ಟ ಒಂದು; ಕೂಡುವ ಮತ್ತು ಇತರ ದನಕರುಗಳನ್ನು ಕಳೆದುಕೊಂಡದರ ನಷ್ಟವೆರಡು; ಭೂಮಿ ರೂಪಿತಕ್ಕಾಗಿ ಖರ್ಚುಮಾಡಬೇಕಾದ ದ್ರವ್ಯದ ನಷ್ಟ ಮೂರು. ಮನೆಗಳ ಅಪಾಯದ ನಷ್ಟ ನಾಲ್ಕು. ಅಂತು ಒಟ್ಟು ಸುಮಾರು ಲಕ್ಷರೂಪಾಯಿಗಳ ನಷ್ಟವನ್ನು ಧೈರ್ಯದಿಂದ ಸಹಿಸಿ ಕಷ್ಟದಿಂದ ಪಾರಾಗಬೇಕಲ್ಲವೆ ! ನಮ್ಮ ಈ ಚಿಕ್ಕದೇಶದಲ್ಲುಂಟಾಗಿರುವ ಇಷ್ಟು ದೊಡ್ಡ ನಷ್ಟದಿಂದ ನಿವಾರಣೆ ಹೊಂದಬೇಕಾದರೆ, ಪ್ರತಿ ಗ್ರಾಮದವರು ಅನ್ಯೋನ್ಯಪ್ರೀತಿಯ ಸಹೋದರಭಾವದಿಂದ ಒಟ್ಟಾಗಿ ಈ ಕಷ್ಟವನ್ನರಿತು ಪರಸ್ಪರ ಸಹಾಯಮಾಡಿಕೊಳ್ಳಬೇಕಾಗಿದೆಯೆಂದು ಎಷ್ಟು ಹೇಳಿದರೂ ಸಾಲದು. ನಮ್ಮ ಹಿರಿಯರು ಈಗ ತಾವು ಅನುಭವಿಸುವ ಭೂಮಿಗಳನ್ನು ಪರಜಿಲ್ಲೆಯವರ ಸಹಾಯವಿಲ್ಲದೆ ಸ್ವತಃ ಪರಸ್ಪರ ಸಹಾಯಮಾಡಿಕೊಂಡು ಅವರ ಕೈಯಿಂದಲೇ ರೂಪಿಸಿದ್ದಾಗಿದೆ. ಹಾಗಿರುವಾಗ್ಯೆ ಯಾಕೆ ಈಗ ನಾವು ನಮ್ಮ ಹಿರಿಯರನ್ನು ಹಿಂಬಾಲಿಸಿ ಗ್ರಾಮಸ್ಥರೆಲ್ಲಾ ಒಂದುಗೂಡಿ ನಮ್ಮ ಹಿರಿಯರಹಾಗೆಯೇ ಸ್ವಪ್ರಯತ್ನದಿಂದ ಪರರ ಸಹಾಯ ನಿರೀಕ್ಷಿಸದೆ ಹಾಳಾದ ಭೂಮಿಗಳನ್ನು ರೂಪಿಸಬಾರದು ? ಹೀಗೆ ನಾವು ನಡೆದುಕೊಂಡ ಪಕ್ಷಕ್ಕೆ ನಷ್ಟವೂ ಕಷ್ಟವೂ ಕಡಿಮೆಯಾಗಿ ನಮ್ಮ ಹಿರಿಯರ ಅಭಿವೃದ್ಧಿಗೆ ಕಾರಣವಾಗಿದ್ದ ಮತ್ತು ಈಗ ನಾವು ಮರೆತಿರುವಂಥ ಒಗ್ಗಟ್ಟಿನ ರಹಸ್ಯವನ್ನು ಜನರು ತಿಳಿದುಕೊಳ್ಳುವದರಿಂದ ದೇವರ ಉದ್ದೇಶವು ಸಹ ನೆರವೇರಿದಂತಾಗುವುದು. ದೇವರ ಉದ್ದೇಶವನ್ನು ನೆರವೇರಿಸಲು ನಾವು ಸಹಾಯಕರಾದರೆ ನಾವು ಬಹಳ ದೊಡ್ಡ ಕೆಲಸವನ್ನು ಮಾಡಿದಂಥ ಪುಣ್ಯಕ್ಕೆ ಪಾತ್ರರಾಗುವೆವು. ಒಗ್ಗಟ್ಟಿನ ಪ್ರಯೋಜನವನ್ನು ಮರೆತು ಸ್ವಾರ್ಥತೆಯಲ್ಲಿ ಮುಳುಗಿ ಕೊಡುತ್ತಾ ಬರುವ ಶ್ರೀ ಕಾವೇರಿ ಮಾತೆಯ ಮಕ್ಕಳಿಗೆ ಆಕೆಯು ಅದನ್ನು ತನ್ನ ಕಣ್ಣೀರಿನ ಪ್ರವಾಹದಿಂದಲ್ಲದೆ ಇನ್ನು ಹೇಗೆ ತಿಳಿಸಲು ಸಾಧ್ಯ ! ಸುಖವನ್ನು ಅನುಭವಿಸುತ್ತಿರುವಾಗ್ಯೆ ಒಗ್ಗಟ್ಟಿನ ಪ್ರಯೋಜನವನ್ನು ಮರೆತು ಕಷ್ಟ ಬರುತ್ತೆಂಬದನ್ನು ತಿಳಿಯದೆ ಕಷ್ಟಕ್ಕೆ ಗುರಿಯಾಗಿರುವೆವು. ಈಗ ಕಷ್ಟ ಬಂದಿರುವಾಗ್ಯೆ ಒಗ್ಗಟ್ಟಿನ ಪ್ರಯೋಜನವನ್ನು ಅರಿತು ನಾವು ಸುಖಪಡಬಹುದಾಗಿದೆ. ಈ ಕಷ್ಟದಿಂದ ನಿವೃತ್ತರಾಗಲಿಕ್ಕಾಗಿ ನಾವು ಒಗ್ಗಟ್ಟಿನಿಂದ ನಡೆದುಕೊಂಡರೆ ಸ್ವರಾಜ್ಯ ಪಡೆಯಲಿಕ್ಕೆ ಬೇಕಾದ ಗುಣಗಳನ್ನು ನಮ್ಮಲ್ಲಿ ಅಭಿವೃದ್ಧಿಪಡಿಸಿದಾತೆ ಆಗುತ್ತೆ. ಈ ನಷ್ಟಕಷ್ಟಗಳನ್ನು ಆಗುವಷ್ಟು ಕಡಿಮೆ ಮಾಡಲಿಕ್ಕಾಗಿ ಒಬ್ಬಿಬ್ಬರಿಂದ ಸಂಘದವರು ಪ್ರಯತ್ನಪಡುತ್ತಿರುವದಲ್ಲದೆ ಇದು ಸಂಘದ ಮುಖ್ಯ ಕೆಲಸವಾದ ಕಾರ್ಯನಿರ್ವಾಹಕ ಮಂಡಲಿಯವರು ಯೋಚಿಸತಕ್ಕ ವಿಷಯಗಳನ್ನು ಮಾಡಬೇಕಾದುದು. ಬಹಳ ಅವಶ್ಯ ಸಂಘದವರ ದೇಶದಲ್ಲೆಲ್ಲಾ ಎಷ್ಟರಮಟ್ಟಿಗೆ ನಷ್ಟ ಕಷ್ಟಗಳು ಆಗಿವೆ ಎಂಬದನ್ನು ತಿಳಿಯಲು ಮುಖ್ಯ ದ್ರವ್ಯ ಸಹಾಯವು ಕೊಡಲು ಸಾಧ್ಯವಿಲ್ಲದವರು ಒಗ್ಗಟ್ಟಿನಿಂದ ಸಾಧ್ಯವಾಗುವಂಥಾ ವಿಚಾರಗಳನ್ನು ಜನರಿಗೆ ಬೋಧಿಸಿದರೆ ಬಹಳಮಟ್ಟಿಗೆ ಜನರ ಕಷ್ಟವು ನಿವಾರಣೆಯಾಗುವದೆ. ಹ್ಯಾಗೂ ದೇಶದ ಜನರೂ ಮತ್ತು ಸಂಘದವರೂ ಸಹ ಈ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದಲೂ ತ್ವರೆಯಿಂದಲೂ ಸಿಗಕೊಟ್ಟು ನಡೆದುಕೊಳ್ಳದ ಪಕ್ಷ, ಕಳೆದ ಹತ್ತುವರ್ಷಗಳಿಂದ ಕಡಿಮೆ ಬಂದ ಜನಸಂಖ್ಯೆಗಿಂತಲೂ ನಮ್ಮ ಜನಸಂಖ್ಯೆಯು ಬರುವ ಒಂದೇ ವರ್ಷದಲ್ಲಿ ಕಡಿಮೆ ಬರುವದು ಮಾತ್ರವಲ್ಲದೆ ದೇಶವು ಎರಡು ತಿಂಗಳುಗಳ ಹಿಂದೆ ಇದ್ದ ಸ್ಥಿತಿಗೆ ಬರಲಿಕ್ಕೆ ಇನ್ನು ಅನೇಕ ವರ್ಷಗಳು ಬೇಕಾಗುವವು.

ದೇಶದ ದುರ್ಬಲತ್ವಕ್ಕೆ ಪ್ರಾಧಾನ್ಯ ಕಾರಣ ಯಾವುದು ?

ಇದೊಂದು ವಿಷಯದಲ್ಲಿ ಅನೇಕ ಜನರು ಬಹುವಿಧವಾಗಿ ಅಭಿಪ್ರಾಯಪಡುತ್ತಾರೆ. ಸಾಧಾರಣವಾಗಿ ಕೆಲವರ ಅಭಿಪ್ರಾಯವು ಒಂದೊಂದು ವಿಧದಲ್ಲಿ ಮುಖ್ಯ ಕಾರಣವಾದರೂ ಅದನ್ನೇ ಪ್ರಾಮುಖ್ಯವೆಂದು ಹೇಳುವರ ಕೆಲವು ಅಸಂಗತವಾಗಿರುತ್ತವೆ. ಪ್ರಕೃತದೇಶದ ದುರ್ಬಲತ್ವಕ್ಕೆ, ಒಂದನೇ ದುರ್ಮಾರ್ಗಾಧಿಕಾರಿಯೆಂದೂ, ಕೆಲವರು ಐಕ್ಯಮತ್ಯವಿಹೀನತೆಯೇ ಕಾರಣವೆಂದೂ, ಇನ್ನೂ ಕೆಲವರು ಮತವೈಷಮ್ಯಗಳೆಂದೂ, ಅಸೂಯೆಯೇ ಕಾರಣವೆಂದೂ, ವಿದ್ಯಾವಿಹೀನತೆಯೆಂದು ಮುಂತಾಗಿ ಅಭಿಪ್ರಾಯಪಡುತ್ತಾರೆ. ಆದರೆ ನಿಜವಾಗಿ ಪರ್ಯಾಲೋಚಿಸಿದರೆ ದೇಶದ ಹೀನಸ್ಥಿತಿಗೆ ಈ ಕಾರಣಗಳಾವುದೊಂದೊಂದೂ ಸಕಾರಣಗಳಾಗಿರುವುದಿಲ್ಲ. ಮುಖ್ಯವಾಗಿ ದೇಶವು ನಿಜೋನ್ನತಸ್ಥಿತಿಗೆ ಬರಬೇಕಾದರೆ ದೇಶೀಯರೆಲ್ಲರೂ ಪರಸ್ಪರ-ಅನುರಾಗ ಉಳ್ಳವರಾಗಿರಬೇಕು. ಈ ಅನುರಾಗಕ್ಕೆ ಪ್ರೀತಿಯೇ ಮುಖ್ಯಕಾರಣ. ಈ ಪ್ರೀತಿಯೆ ದೇಶದ ಏಳಿಗೆಯ ಪ್ರಥಮ ಸೋಪಾನವು. ಈ ಮಹತ್ಪ್ರೀತಿಯು ವಿದ್ಯೆಯಿಂದಾಗಲಿ, ಧನದಿಂದಾಗಲಿ ಮತಗಳಿಂದಾಗಲಿ, ಬಂಧುತ್ವದಿಂದಾಗಲಿ ಉಂಟಾಗುವಂಥಾದ್ದಲ್ಲದೆ ತಮ್ಮ ತಮ್ಮ ನಡತೆಗಳ ಮೂಲಕವಾಗಿಯೂ ತಾವು ಅನುಭವಿಸುವ ಕಷ್ಟಸುಖಗಳ ಪಾರಂಪರ್ಯಾನುಭವ ಮೂಲಕವಾಗಿ ಬಾಹ್ಯಗೋಚರದ ಮೂಲಕ ಸಂಭವಿಸುವದಾಗಿದೆ. ಈ ಪ್ರೀತಿಯಾದರೊ ಸಜಾತಿ ವಿಜಾತಿಯರನ್ನು ಪ್ರಾಣಕ್ಕೆ ಪ್ರಾಣವನ್ನೊಪ್ಪಿಸುವಂಥಾದ್ದಾಗಿದೆ. ಇಂಥ ಪ್ರೀತಿಯು ಯಾವದೇಶದ ಹೆಚ್ಚಿನ ದೇಶೀಯರಲ್ಲಿ ಸ್ಥಿರವಾಗಿ ಅನುಬಂಧಿಸಿಕೊಂಡಿರುವದೋ ಅಂಥಾ ದೇಶವು ಸ್ವರ್ಗಕ್ಕಿಂತ ಮಿಗಿಲೆನ್ನಿಸಿಕೊಳ್ಳುತ್ತದೆ. ಮತ್ತು ಯಾವ ಸ್ಥಿತಿಯಲ್ಲೂ ಒಂದು ದೇಶದ ದೇಶೀಯರೆಲ್ಲರೂ ನೀತಿ ಶಾಸ್ತ್ರಾಧಾರ ಎಂದಿಗೂ ನಡೆಯುವುದಿಲ್ಲ. ಯಾವದೇಶವು ಸ್ವಾತಂತ್ರ್ಯದಲ್ಲಿದೆಯೆಂದೆನ್ನಿಸಿಕೊಳ್ಳುತ್ತದೋ ಆ ದೇಶದ ದೇಶೀಯರೆಲ್ಲರೂ ಒಂದೇ ತರದವರಾಗಲಿ ಅಥವಾ ಒಂದೇ ಅಭಿಪ್ರಾಯ ಉಳ್ಳವರಾಗಲಿ ಊಹಿಸಲಿಕ್ಕಾಗುವದು; ಪರಂತು ಆ ದೇಶದ ದೇಶೀಯರಲ್ಲಿ ಹೆಚ್ಚಿನ ಭಾಗದವರು ಮಾತ್ರ ಸತ್ಪ್ರಾಣಿಗಳೆಂದು ಊಹಿಸಬೇಕಾಗುತ್ತದೆ. ಇಲ್ಲಿಯೂ ಕೆಲವು ವಿಷಯಗಳಲ್ಲಿ ಮಾತ್ರ ಮುಖಂಡರು ಒಂದೇ ತರದ ಅಭಿಪ್ರಾಯಪಡುವವರಾಗಿರುತ್ತಾರೆ. ಇಂಥ ದೇಶದ ಉನ್ನತಿಕೆಗೆ ಕೆಲವರು ದೇಶದ ದೇಶೀಯರೆಲ್ಲಾ ಒಂದೇ ಜಾತಿಯವರಾಗಬೇಕೆಂದೂ ಒಂದೇ ಮತದವರಾಗಬೇಕೆಂದೂ, ಧನಿಕ ದರಿದ್ರರೆಂಬ ಭೇದವಿರಕೂಡದೆಂದೂ, ಆಚಾರವಿಚಾರ ವ್ಯವಹಾರಗಳೆಲ್ಲಾ ಒಂದೇಯಾಗಬೇಕೆಂದಾಗಿ ಸಹ ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯವು ಶುದ್ಧ ತಪ್ಪಾಗಿರುತ್ತದೆ. ದೇಶವು ಒಗ್ಗಟ್ಟಿಗೆ ಬರಬೇಕಾದರೆ ಆಚಾರ ವಿಚಾರಗಳಾಗಲಿ ಮತ ಜಾತಿ ಕುಲಗೋತ್ರಗಳಾಗಲಿ ಯಾವದೊಂದೂ ಪ್ರತಿಬಂಧಕವಲ್ಲ. ಇದು ಪ್ರತಿಬಂಧಕವಾಗಿದ್ದರೆ ಆಚಾರ ವಿಚಾರ ಮತ ಜಾತಿ ಕುಲಗೋತ್ರೀಯರೊಂದಾಗಿರುವ ಬಾಧುಗಳೊಳಗೆ ಕಲಹವು ಜಾತಿ ಮತಾಚಾರ ಆಹಾರಗಳೊಂದಾಗಿರುವ ವಿದೇಶೀಯರೊಳಗೆ ಯುದ್ಧಗಳು ಹುಟ್ಟಲಿಕ್ಕೆ ಕಾರಣವೇನು ? ಅಷ್ಟೇ ಒಂದೇ ರಕ್ತಸಂಬಂಧಿಕರಾಗಿರುವ ಅಣ್ಣತಮ್ಮಂದಿರೊಳಗೂ ತಂದೆತಾಯಿಗಳೊಳಗೂ ಅತ್ಯದ್ಭುತವಾದ ಆಮರಣಪರ್ಯಂತಿಕ ದ್ವೇಷವಿರುವ ಕುತ್ಸಿತ ಸಂಗತಿಯು ಹುಟ್ಟುವುದಿಲ್ಲವೇನು ?

ಇನ್ನು ದೇಶದ ದುರ್ಬಲತ್ವಕ್ಕೆ ಧನಿಕ ದರಿದ್ರರೆಂಬ ಭೇದವೆ ಮುಖ್ಯಕಾರಣವೆಂದಾಲೋಚಿಸಿದರೆ ಈ ಭೇದವು ಒಂದೊಂದು ದೇಶದಲ್ಲಿ ಮಾತ್ರವಲ್ಲ, ದೇವರು ಸೃಷ್ಟಿಸಿದ ಇಡೀ ಪ್ರಪಂಚದಲ್ಲೇ ಈ ಮಹಾವ್ಯಾಧಿಯು ತಲೆದೋರಿಕೊಂಡಿರುತ್ತದೆ. ಈ ಭೇದವನ್ನು ಇಲ್ಲದಾತೆ ಮಾಡುವ ಆಲೋಚನೆ ಸಾಧ್ಯವಿಲ್ಲ. ಯಾಕಂದರೆ ಪ್ರಪಂಚದಲ್ಲಿ ಒಂದು ದರಿದ್ರರೇ ಆಗಬೇಕು. ಇಲ್ಲವೆ ಧನಿಕರೇ ಸರ್ವರೂ ಆಗಬೇಕು. ಇದು ಕನಸ್ಸಿಗೆ ಮಾತ್ರವೇ ಉತ್ಪತ್ತಿ. ಜನ್ಮಗುಣಮೂಲಕವಾಗುವದಲ್ಲದೆ ಕರ್ಮಮೂಲಕವಾಗಿಯಾಗಲಿ ವಿದ್ಯಾ ಮೂಲಾದ ಯಾವದು ಮೂಲಕವು ಆಗುವುದಿಲ್ಲ. ಧನ್ಯನಾಗಲಿ ದರಿದ್ರನಾಗಲಿ ನಿಜವಾಗಿ ಯಾವಾಗಲೂ ಒಂದೇ ಸ್ಥಿತಿಯಲ್ಲಿ ಇರತಕ್ಕವರಲ್ಲ. "ಚಕ್ರವನ್ನೇ ಪರಿವರ್ತಂತೇ" ಇದು ಪೂರ್ವದ ಇಂದು ಒಬ್ಬ ಧನಿಕನಾಗಲಿ ಬಡವನಾಗಲಿ ಇದ್ದವರು ನಾಳೆ ಹಾಗೆಯೇ ಇರುವುದು ಇಲ್ಲ. ಧನವು ಚಂಚಲವಾದದ್ದು. ದೇಶದಲ್ಲಿ ಆಕ್ರಮಿಸುತ್ತದೆ. ಯಾವಾಗಲೂ ಪ್ರಪಂಚವು ಒಂದೇ ರೀತಿಯಾಗಿರಲಿಕ್ಕಿಲ್ಲ ಇದು ಸ್ವಾಭಾವಿಕ. ಈಗಿರುವ ಸಂಪತ್ತಿಗೆ ನೆಲೆಗೊಂಡ ವಿಶೇಷ ಸ್ಥಿತಿಯನ್ನು ನಾವು ಆಲೋಚಿಸಿದರೂ ಅಲ್ಲಿಯೂ ಕೂಡ ಲಾರ್ಡ್ಸ್ ಪಾರ್ಟಿ ಕಾಮನ್ಸ್ ಪಾರ್ಟಿ ಲೇಬರ್ ಪಾರ್ಟಿ ಮುಂತಾದ ಪಕ್ಷಗಳು ಕಾಣಸಿಗುತ್ತವೆ. ಮತ್ತು ಯಾವ ದೇಶದಲ್ಲಿ ಕೂಲಿಗಳು ಇರುವುದಿಲ್ಲವೋ ಆ ದೇಶವನ್ನು ಒಂದು ಮೇಲ್ಮೈ ಭೇದವಿಲ್ಲದ ದೇಶವೆಂದು ಹೇಳಬಹುದು. ಅಂಥಾ ದೇಶವು ಈ ಪ್ರಪಂಚದಲ್ಲಿ ಎಷ್ಟು ಹುಡುಕಿದರೂ ಸಿಕ್ಕುವುದಿಲ್ಲ. ದುರ್ಲಭವಾದ್ದರಿಂದ ಧನಿಕ ದರಿದ್ರರೆಂಬ ಭೇದ ಕಲ್ಪನೆಯ ಗುಣದಿಂದ ದೇಶದ ಹೀನಸ್ಥಿತಿಯನ್ನು ಬದಲಿಸಲಿಕ್ಕಾಗುವುದಿಲ್ಲ. ಮತ್ತು ಆಚಾರ ವಿಚಾರ ವ್ಯವಹಾರಗಳೊಂದೇಯಾಗಬೇಕೆಂಬ ಅಭಿಪ್ರಾಯವು ತಪ್ಪಾಗಿರುತ್ತದೆ. ಪ್ರಪಂಚದ ಯಾವ ಭಾಗದಲ್ಲೂ ಜಾತಿ ವರ್ಣಭೋಜನಾದಿಗಳೊಂದಾಗಿದ್ದ ಎಷ್ಟೋ ಪಂಗಡ ಮತಭೇದಗಳಿರುತ್ತವೆ. ಪಂಗಡಗಳೊಂದೇಯಾಗಿಯೋ, ಮತ ಒಂದೇಯಾಗಿಯೋ ಸ್ತ್ರೀ ಪುರುಷರೆಂಬ ಎರಡೆ ಭೇದ ಇರುವ ಪ್ರಪಂಚವು ಇನ್ನೆಲ್ಲಿ ಹುಡುಕಿದರೂ ಸ್ವರ್ಗವಲ್ಲದೆ ಇತರೆತ್ರ ದೊರೆಯುವುದು ಅಪೂರ್ವ. ಆದರೆ ಪಾಶ್ಚಿಮಭಾಗ ಉತ್ತರಖಂಡಗಳಲ್ಲಿ ಸಾಧಾರಣ ಆಚಾರ ವಿಚಾರ ವರ್ಣಗಳೊಂದಾಗಿರುವ ದೇಶವೆಂದರೂ ಅಲ್ಲಿಯೂ ಕೂಡ ತಮ್ಮ ನಡತೆಯು (ಪದ್ಧತಿ) ಸಮಂದವಾದ ಯಾವದಾದರೊಂದು ತರದ ಪಂಗಡ ಭೇದ ಇದ್ದೇ ಇರುತ್ತದೆ. ದುಂದುಗಾರಿಕೆಯ ವಿಷಯ ಆಲೋಚಿಸಿದರೆ ಇದೂ ಸಹ ಒಂದೇ ಕಾರಣವಾಗಿರುವುದಿಲ್ಲ. ಅಂದರೆ ಈ ದುಂದುಗಾರಿಕೆಯೂ ಸಹ ಅವರವರ ದೊಡ್ಡ ಸಾಂಪತ್ತಿಕ ಉಳ್ಳ ದೇಶದಲ್ಲಿ ನೆಲೆಗೊಂಡ ಒಂದು ಸಂಗತಿಯಾಗಿದೆ. ಆದರೆ ಅನಾರೋಗ್ಯತ್ವವಾಗಿಯೂ ಕ್ಷೀಣಗತಿಯನ್ನು ಹೊಂದಿರುವ ದೇಶಗಳ ಏಳಿಗೆಗೆ ಮಾತ್ರ ದುಂದುಗಾರಿಕೆ ವಿದ್ಯಾವಿಹೀನತ್ವ, ಮದ್ಯಪಾನಾಧಿಕತ್ವ ಎಂಬಿವೇ ಮೊದಲಾದವುಗಳು ದೊಡ್ಡ ಸಾಂಕ್ರಾಮಿಕ ರೋಗವಾಗಿ

ಪರಿಣಮಿಸುವದು. ಆದ್ದರಿಂದ ಇಂಥಾ ಭಯೋತ್ಪಾದನೆಗಳನ್ನು ನಿರ್ಮೂಲಿಸಿ ಕ್ಷೀಣಗತಿಯ ದೇಶವನ್ನು ತನ್ನ ನಿಜೋನ್ನತಸ್ಥಿತಿಗೆ ತರಬೇಕಾದರೆ ದೇಶದ ಹೆಚ್ಚಿನ ದೇಶೀಯರು ಒಗ್ಗಟ್ಟಾಗಬೇಕಾಗಿದೆ. ಹೀಗೆ ಒಂದು ಕೂಡಿ ಮೆಲ್ಲಮೆಲ್ಲಗೆ ದೇಶದ ಏಳಿಗೆಗೆ ಪ್ರಯತ್ನಪಡಬೇಕಲ್ಲದೆ ವೃತ್ತಪತ್ರಿಕೆಗಳಲ್ಲೊ ವಾಚಾಮುಖೇನವಾಗಲಿ ಯಾವದೊಂದನ್ನು ಗೂಷಿಸಿಕೊಂಡು ಮುಂದರಿ ಇದು ಬಹು ಕಷ್ಟಕೆಲಸವಾಗಿದೆ. ಯಾವುದನ್ನಾದರೂ ದೂಷಿಸಿ ಮಾಡುವ ಕೆಲಸದಲ್ಲಿ ಪಂಗಡಗಳು ಹುಟ್ಟಿಕೊಂಡು ತಮ್ಮತಮ್ಮೊಳಗೇನೆ ವಿರೋಧಿಸುವಸಿಗೆ ಅಳಿದುಹೋಗುತ್ತವೆ. ಇಂಥಾ ವಿಷಯಕ್ಕೆ ಹೆಚ್ಚು ಗಮನವಿಟ್ಟು ಮುಂದಾಳುಗಳಾಗಿ ವರ್ತಿಸುವವರೆಲ್ಲರೂ ಅತ್ಯದ್ಭುತ ಶಕ್ತಿಯುಳ್ಳ ಅನಿರ್ವಚನೀಯವಾದ ಒಂದರ ಸಹಾಯದ ಮೂಲಕ ಕೆಲಸಮಾಡಿದರೆ ಈ ಕೆಲಸಕ್ಕೆ ಯಾವಕಾಲಕ್ಕೂ ನಾಶ ಉಂಟಾಗುವದಿಲ್ಲ. ಇಂಥಾ ಅಪಾರ ಮಹಿಮೆಯುಳ್ಳ ಸಹಾಯವೇ ಪ್ರೀತಿ ಎಂಬುದು. ದ್ವೇಷಿಕರಲ್ಲಿ ದ್ವೇಷವನ್ನಿಡದೆ ಪ್ರೀತಿಸುವುದೆ ಪ್ರೀತಿಯ ಮುಖ್ಯ ಧರ್ಮವಾಗಿದೆ. ಇಂಥಾ ದೋಷರಹಿತವಾದ ಈ ಪ್ರೀತಿಯೊಂದನ್ನು ಸಹಾಯವನ್ನಿಟ್ಟುಕೊಂಡು ಯಾವ ಮನುಷ್ಯನೇ ಆಗಲಿ ತಾನು ಮಾಡುವ ಕಾರ್ಯವನ್ನು ನೆರವೇರಿಸುತ್ತಾ ಹೋದರೆ ಅದಕ್ಕೆ ಯಾವಕಾಲದಲ್ಲೂ ಯಾವದೊಂದು ತರದ ನಾಶ ಉಂಟಾಗಲಿಕ್ಕಿಲ್ಲ. ಇಂಥಾ ನಾಶರಹಿತವಾದ ಪ್ರೀತಿಯನ್ನೇ ನಮ್ಮ ದೇಶದಲ್ಲಿ ಮುಂದಾಳಾಗಿ ನಡೆಯುವವರು ಇಟ್ಟುಕೊಂಡರೆ ತಾವು ಮಾಡುವ ಕೆಲಸವು ಸುಲಭದಲ್ಲಿ ಪೂರೈಸುವದಕ್ಕೆ ಅಡ್ಡಿ ಇರಲಾರದು. ಆದರೆ ಈ ಮೂಲಕ ಮಾಡುವ ಕೆಲಸವು ನಿಧಾನವಾಗಿ ಆಗುವದಾದರೂ ಇದಕ್ಕೆ ಚ್ಯುತಿ ಇಲ್ಲ. ಅವಿಚಾರತ್ವ ಉಂಟಾಗಿ ಒಡನೆ ಸುಖವೆಂದು ಪರಿಣಮಿಸಿ ಕೊನೆಗೆ ನಿಷ್ಫಲವೆನಿಸುವ ಯಾವದಾದರೊಂದು ತರದ ಸಾಧನೆಯು ದೇಶದ ಹಿತೇಚ್ಛೆಗೆ ಸುಖಕರವಲ್ಲ. ದೇಶದ ಸ್ವಾತಂತ್ರ್ಯತೆಗೆ ಒಗ್ಗಟ್ಟೇ ಕಾರಣವಾದರೂ ಈ ಒಗ್ಗಟ್ಟಿಗೆ ಪರಸ್ಪರ ಪ್ರೀತಿಯೆ ಮುಖ್ಯ ಕಾರಣ. ಇಂಥಾ ಪ್ರೀತಿವಿಹೀನವಾಗಿ ದೂಷಿಸಿಕೊಂಡೋ, ಭೂಷಿಸಿಕೊಂಡೋ ಮಾಡುವ ಯಾವ ಕಾರ್ಯವು ನಿಷ್ಫಲವೇ ಸರಿ !!

ಎಂದು ದೇಶದ ದೇಶೀಯರೊಳಗೆ ಪರಸ್ಪರ ಅನುರಾಗವು ಕಡಮೆಯಾಗುತ್ತದೊ ಅಂದಿನಿಂದ ದೇಶವು ದುರ್ಬಲಸ್ಥಿತಿಗಿಳಿಯ ಪ್ರಾರಂಭಿಸುತ್ತದೆ. ಯಾವದಾದರೊಂದು ದೇಶಗಳಲ್ಲಾಗಲಿ ಗ್ರಾಮ ಪಳ್ಳಿಗಳಲ್ಲಾಗಲಿ ಜಗಳ ಉಂಟಾಗಬೇಕೆಂದರೆ ಅಥವಾ ಉನ್ನತಸ್ಥಿತಿಗೆ ತರಬೇಕೆಂಬ ಕಟ್ಟು ಹುಟ್ಟಬೇಕಾದರೂ ಅಲ್ಲಿನವರು ಏನಾದರೂ ವಿಪರೀತಾವಸ್ಥೆಗೆ ಗುರಿಯಾಗಲೇಬೇಕು. ಕಷ್ಟನಷ್ಟಗಳನ್ನನುಭವಿಸಿಯೋ ಕ್ಷೀಣಗತಿಯನ್ನು ಹೊಂದಿರಬೇಕಾಗಿರುತ್ತದೆ. ಹಾಗೆ ಆದಂದಿನಿಂದ ಈ ಏಳಿಗೆಗೆ ಹೋರಾಡುವುದು ಪ್ರಾರಂಭವಾಗುತ್ತದೆ. ಯಾವಾಗಲೂ ಈ ಪ್ರಾರಂಭವು "ತಾರದೆ ಬಾಗದು" ಎಂಬ ಗಾದೆಯನುಸಾರವಾಗಿ ಕ್ಷೀಣಗತಿ ಹೊಂದಿದ ನಂತರವೇ ದೇಶದಲ್ಲೋ ನಾಡು ಪಳ್ಳಿಗಳಲ್ಲೊ ಯಾರಾದರೂ ಒಬ್ಬಿಬ್ಬರು ಮುಂದಣ ಅಭಿವೃದ್ಧಿಪಡಿಸುವದರ ವಿಷಯ [illegible] ಅಂಥಾವರಾಗಲಿ ಅವರ ಆಗಿನ ಅನುಚರರೆಂದು ವರ್ತಿಸುವವರಾಗಲಿ ಪೂರ್ಣ ಸ್ವಾರ್ಥಪರಿತ್ಯಾಗಿಗಳಾಗುವುದಿಲ್ಲ. ಹೀಗೆ ಪ್ರಯತ್ನಗಳು ಅಲ್ಲಲ್ಲಿ ಹುಟ್ಟಿ ಕೆಲವ ನಡೆಯುತ್ತಾ ಒಂದೊಂದುವೇಳೆ ಈ ಚಳವಳವು ನಿಮ್ಮಯಾಗಿಯೂ, ಇಲ್ಲದಾಗಿಯೂ, ಕಪಟ್ಯಾಗಿಯೂ ಒಂದ ರಾಗಲ್ಲಾ ಏರುಬರುತ್ತಾ ಜನರೆಲ್ಲರೂ ಕಷ್ಟಸುಖಗಳ ಪರಿಗಣನೆಯುಳ್ಳವರಾಗಿ ತಮ್ಮತಮ್ಮ ಕಾರ್ಯೋದ್ದೇಶ್ಯ ನೆರವೇರಿಸಾಗುತ್ತಾರೆ. ಯಾವದೇಶವು ಜೀರ್ಣಸ್ಥಿತಿಯಲ್ಲಿದ್ದು ಮುಂದಣ ಅಭಿವೃದ್ಧಿಗೆ ಹೋರಾಡಿ ಸ್ವಾತಂತ್ರ್ಯವನ್ನು ಹೊಂದಬೇಕಾದರೂ ಆರಂಭ ಮೊದಲುಗೊಂಡು ಪೂರ್ಣ ಸ್ವಾತಂತ್ರ್ಯವನ್ನು ಹೊಂದಬೇಕಾದರೆ ಎರಡು ಕಲಾಂತರಗಳಾದರೂ ಅಂದರೆ ನೂರುವರ್ಷವಾದರೂ ಪೂರ್ತಿ ಬೇಕಾಗುವದು.

ಯಾವದೇಶದಲ್ಲೊ, ಗ್ರಾಮನಾಡುಗಳಲ್ಲೊ ಯಾವಾಗಲೂ ಮುಂದಾಗಿ ನಡೆಯುವವರು ಬಹು ವಿರಳರು. ಅಂದರೆ ಕಮ್ಮಿ ಜನಸಂಖ್ಯೆಯುಳ್ಳಲ್ಲಿ ಒಬ್ಬಿಬ್ಬರು ಮಾತ್ರ ದೊರೆಯುತ್ತಾರೆ. ಆದರೆ ಅವರಲ್ಲು ಸಹ ಗುಣದೋಷಗಳು ಇದ್ದೇ ಇರುತ್ತವೆಯಾದರೂ ಅವರು ತಮ್ಮ ಸಮಾಪವರ್ತಿಗಳ ಪ್ರೀತಿಗೆ ಪಾತ್ರರಾಗಿದ್ದುಕೊಂಡು ಮುಂದಕ್ಕೆ ನಡಿಯುವುದಾದರೆ ಅವರ ಎಂಥಾ ಮಹತ್ಕಾರ್ಯವಾದರು ಕೈಗೂಡುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ದೇಶದ ದುರ್ಬಲತ್ವಕ್ಕೆ ದೇಶೀಯರೊಳಗಿನ ಅಪ್ರೀತಿಯೇ ಮುಖ್ಯ ಕಾರಣ.

ಬಿ. ಆರ್. ವಿ.

ರವೀಂದ್ರನಾಥ ಟಾಗೂರರ ಪತ್ರ—ಮೋಡರ್ನ್ ರಿವ್ಯೂವಿನಿಂದ—(ಹಿಂದೇ ಸಂಚಿಕೆಯಿಂದ ಮುಂದರಿಸಿದ್ದು)

ಇಂಗ್ಲೆಂಡಿನ ವರ್ಕ್‌ಹೌಸ್ (ಅಂದರೆ ಗತಿ ಇಲ್ಲದವರಿಗೆ ಇಟ್ಟಿರುವಂಥ ಸರಕಾರಿ ಮನೆಗಳು)ನ ನಿವಾಸಿಗೆ ಅನುಕೂಲ ಸಿಕ್ಕಿದರೆ ಓಡಿಹೋಗಿಬಿಡಬೇಕೆಂಬಷ್ಟು ಸ್ಪಷ್ಟರಾಗಿ ಯಾಕೆ ಇರುತ್ತಾರೆ? ಯಾಕೆಂದರೆ ಆ ವರ್ಕ್‌ಹೌಸ್ ಎಂಬುದು ಪ್ರಿಯವಾದ ಮನೆಯೂ ಅಲ್ಲ. ಮನೆ ಇಲ್ಲದೆ ಇರುವಿಕೆಯೂ ಅಲ್ಲ. ಸೂಕ್ಷ್ಮ ಲೆಖ್ಖಹಾಕಿ ನೋಡಿ ಕಂಡುಬಂದ ಅತ್ಯಂತ ಅವಶ್ಯಕತೆಗಳನ್ನು ಮಾತ್ರ ಒದಗಿಸಿಕೊಡುತ್ತವೆ. ಆಶ್ರಯದೊರಕಿದ್ದು ಬಹಳ ಪ್ರಯೋಜನಕರವೇ. ಆದರೆ ಮನುಷ್ಯರು ಮನುಷ್ಯರೇ. ಅತ್ಯವಶ್ಯವಾಗಿರುವ ವಸ್ತುಗಳಲ್ಲದೆ ಎಷ್ಟೋ ಅನೇಕ ಇತರ ವಿಷಯಗಳು ಅವರಿಗೆ ಬೇಕಾಗುತ್ತವೆ. ಇವು ಸಿಕ್ಕದಿದ್ದರೆ ತಪ್ಪಿಸಿಕೊಳ್ಳಲಿಕ್ಕೆ ನೋಡುತ್ತಾರೆ. ವರ್ಕ್‌ಹೌಸಿನ ಗಾರ್ಡಿಯನ್ ಆಗಿರುವವನು ಪೂರ್ಣ ದೃಷ್ಟಿ ಇಲ್ಲದ್ದರಿಂದ ಸಂಪೂರ್ಣ ಮನುಷ್ಯನಲ್ಲ. ಅವನಿಗೆ ಈ ಬಡವರ ಕೃತಘ್ನತೆಯನ್ನು ನೋಡಿ ಆಶ್ಚರ್ಯವಾಗುತ್ತೆ. ಮತ್ತು ಸಿಟ್ಟು ಬರುತ್ತೆ. ಈ ಬಡವರ ಮನಸ್ಸಿನಲ್ಲಿ ಉಕ್ಕಿಬರುವ ಆಶೆಗಳನ್ನು ಅಡಗಿಸಲಿಕ್ಕೆ ಸಾಧ್ಯವಿಲ್ಲವೆಂಬುದನ್ನು ಇವನು ತಿಳಿದುಕೊಳ್ಳಲು ಶಕ್ತಿ ಇಲ್ಲದ್ದರಿಂದ ವ್ಯಸನವನ್ನು ಅಡಗಿಸಲಿಕ್ಕೆ ಶಿಕ್ಷಿಸುತ್ತಾನೆ.

ಧಾರಾಳ ಮನಸ್ಸಿನ ಇಂಗ್ಲೀಷ್ ಮನುಷ್ಯನು ಇಂಡಿಯಾವಿನ ಸ್ಪರ್ಶ ಸ್ಪರ್ಶದಲ್ಲಿಲ್ಲ. ಇವರಮಧ್ಯೆ ಚಿಕ್ಕಮನಸ್ಸಿನ ಇಂಗ್ಲಿಷ್ ಮನುಷ್ಯನಿದ್ದಾನೆ. ಆದ್ದರಿಂದ ನಮಗೆ ಧಾರಾಳ ಮನಸ್ಸಿನ ಇಂಗ್ಲಿಷ್ ಮನುಷ್ಯನು ಚರಿತ್ರೆಯಲ್ಲಿಯೂ ಗ್ರಂಥಗಳಲ್ಲಿಯೂ ಮಾತ್ರ ಕಾಣಬರುತ್ತಾನೆ. ಅವನಿಗೆ ಇಂಡಿಯವು ಎಲ್ಲಿ ಇದೆಯೆಂದರೆ— ಆಫೀಸ್‌ಗಳಲ್ಲೂ ಸರಕಾರಿ ರಿಪೋರ್ಟುಗಳಲ್ಲೂ ಅಂದರೆ ಅವನಿಗೆ ಇಂಡಿಯಾವೆಂದರೆ ಲೆಖ್ಖಪಟ್ಟಿಗಳು. ಆದಾಯವು, ಜಮಾಖರ್ಚು, ಜನನಮರಣ, ಶಾಂತತೆಯನ್ನು ಕಾಪಾಡಲು ಬೇಕಾಗುವ ಪೋಲೀಸರ ಸಂಖ್ಯೆ, ಥಂಡರನ್ನು ಶಿಕ್ಷಿಸಲಿಕ್ಕೆ ಬೇಕಾಗುವ ಜೈಲ್‌ಗಳ ಲೆಖ್ಖ, ರೈಲ್ವೆ ಕಂಬಿಗಳ ಉದ್ದದ ಅಳತೆ, ವಿದ್ಯಾಸಂಸ್ಥೆಗಳ ಕಟ್ಟಡಗಳ ಎತ್ತರ ಸಹ ಕೊಡುವ ಲೆಖ್ಖಪಟ್ಟಿಗಳಿಂತಲೇ ಆಗಿದೆ. ಆದರೆ ಸೃಷ್ಟಿಯೆಂದರೆ ಇಂಥಾ ಜಠಾಕವೆಲ್ಲಾ ತುಂಬುವ ಲೆಖ್ಖಪಟ್ಟಿಗಳು ಮಾತ್ರ ಇರುವದಲ್ಲ. ಇಂಡಿಯಾದ ಜೀವಗರ್ಭಿತವಾದ ಇತರ ಶಕ್ತಿಗಳು ಇಂಗ್ಲೆಂಡಿನ ಧಾರಾಳ ಮನಸ್ಸಿನ ಮನುಷ್ಯನ ದೃಷ್ಟಿಗೆ ಗೋಚರವಾಗುವದೇ ಇಲ್ಲ.

ಹ್ಯಾಗಾದರೂ ಆಗಲೀ, ನಂಬಲಿಕ್ಕೆ ಎಷ್ಟೇ ಕಷ್ಟವಿದ್ದಲಿ ಧಾರಾಳ ಮನಸ್ಸಿನ ಬ್ರಿಟಿಷ್ ಜನರೆಂತ ಹೆಸರಾದ ಒಂದು ಜನಾಂಗವಿರುವ ಪ್ರದೇಶ ಒಂದು ಇದೆಯೆಂತ ನಮ್ಮ ದೇಶದವರು ತಿಳಿದಿರಬೇಕೆಂತ ನಾನು ಕೇಳಿಕೊಳ್ಳುತ್ತೇನೆ. ಅಬಲರು ಬಲಾಢ್ಯರಿಗೆ ಅನ್ಯಾಯಮಾಡಿದರೆ ಅಬಲರ ಅಶಕ್ತಿಯನ್ನೆ ತೋರಿಸುತ್ತದೆಯನ್ನೆ. ಇಂಥಾ ಅಶಕ್ತತೆಯನ್ನು ಬಿಟ್ಟರೆ ನಮ್ಮ ವ್ಯಸನಗೆ ಕಾರಣವಾಗುತ್ತೆ. ಈ ಧಾರಾಳಮನಸ್ಸಿನ ಇಂಗ್ಲಿಷ್ ಜನರು ದೊಡ್ಡವರೇ ನಿಜವಾದ ಮನುಷ್ಯರೇ ಎಂತ ನಾನು ಪ್ರಮಾಣಮಾಡಿ ಹೇಳುತ್ತೇನೆ. ಎಲ್ಲಾ ದೊಡ್ಡ ಜನಾಂಗಗಳನ್ನು ದೊಡ್ಡದಾಗಿ ಮಾಡಿದ ನಡತೆಯ ದೊಡ್ಡಸ್ತಿಕೆಯೇ ಈ ದೊಡ್ಡ ಇಂಗ್ಲಿಷ್ ಮನುಷ್ಯರನ್ನು ದೊಡ್ಡವರನ್ನಾಗಿ ಮಾಡಿದ್ದೆಂದು ನಿಜವಾಗಿದೆ. ಕತ್ತಿಯ ಶಕ್ತಿಯಿಂದಲೇ ದೊಡ್ಡವರಾದವರಾಗಲೀ, ಹಣದ ಚೀಲಗಳ ಮೇಲೆ [illegible] ಪ್ರಯೋಜನವಿಲ್ಲ [illegible] ಯುದ್ಧದಲ್ಲಿ ಶಕ್ತರಾದ್ದರಿಂದ ಅಥವ ಹಣ ಸಂಪಾದನೆ ಮಾಡುವ ಶಕ್ತಿಯಿಂದ [illegible] ದೊಡ್ಡವರಾದವರೆಂಬ ಮಾತನ್ನು ನಂಬಲಿಕ್ಕೆ ಆಗುವದಿಲ್ಲ. ನಡತೆಯ ದೊಡ್ಡಸ್ತಿಕೆ ಪಡೆಯದೆ ದೊಡ್ಡವರಾಗುವದು ಸಾಧ್ಯವೇ ಇಲ್ಲ. ಈ ದೊಡ್ಡ ಇಂಗ್ಲಿಷ್ ಜನರು ನ್ಯಾಯ ಸತ್ಯ ಸ್ವತಂತ್ರತೆಯ ತತ್ವಗಳನ್ನು ಸಂಪೂರ್ಣವಾಗಿ ನಂಬಿದ್ದಾರೆ. ಅವರ ಗ್ರಂಥಗಳಿಂದಲೂ ಚರಿತ್ರೆಯಿಂದಲೂ ಇದು ತಿಳಿದುಬರುತ್ತೆ. ಈ ತತ್ವಗಳಿಂದಲೇ ಈಗಿನ ಯುದ್ಧದಲ್ಲಿ ಇವರಿಗೆ ಶಕ್ತಿ ಬಂದಿರುವದಾಗಿದೆ.

ಈ ದೊಡ್ಡ ಇಂಗ್ಲಿಷ್ ಜನರು ಇದ್ದ ಸ್ಥಿತಿಯಲ್ಲೇ ಇಲ್ಲ. ಅಭಿವೃದ್ಧಿ ಹೊಂದುತ್ತಾ ಇದ್ದಾರೆ. ಅವರ ಜೀವನದ ಇತಿಹಾಸವು ಬದಲಾಗುತ್ತಾ ಇದೆ. ಯೂರೋಪಿನ ತ್ಯಾಗದ ವೃಕೋಚಿತದಂತೆ ಇದ್ದಾರೆ. ಯುದ್ಧದ ಅನುಭವ ನಿಷ್ಪ್ರಯೋಜನವಾಗಲಿಲ್ಲ. ಮನುಷ್ಯನ ಚರಿತ್ರೆಯನ್ನು ಹೊಸ ರೀತಿಯಿಂದ ನೋಡಲು ಪ್ರಾರಂಭಿಸಿದ್ದಾರೆ. ಹೀಯಾಳಿಸಲ್ಪಟ್ಟ ಮನುಷ್ಯಜಾತಿಯ ಮುಂದೆ ದೇಶಭಕ್ತಿಯ ತನ್ನ ಗರ್ವವನ್ನು ತೋರಿಸುವದರಿಂದ ಆಗುವ ಅಪಾಯವು ಅವರಿಗೆ ತಿಳಿದಿದೆ. ತಿಳಿದೋ ತಿಳಿಯದೆಯೋ ಒಂದು ದೇಶದ ದೇವರೇ ಎಲ್ಲಾ ದೇಶದ ದೇವರೆಂತ ಅವರಿಗೆ ಗೊತ್ತಾಗುತ್ತಾ ಇದೆ. ದೇವರ ಮುಂದೆ ಹಿಂಸಿಸಲ್ಪಟ್ಟ ಜನರನ್ನು ತೆಗೆದುಹೋದರೆ ದೇವರಿಗೆ ಸಿಟ್ಟು ಬರುತ್ತೆಂತ ತಿಳಿದಿದೆ. ಈಗ ಅವರಿಗೆ ಗೊತ್ತಾಗದಿದ್ದರೂ ಎಂದಾದರೂ ಅವರಿಗೆ ಗೊತ್ತಾಗುತ್ತೆ. ಏನೆಂದರೆ, ಗಾಳಿ ಕೆಳವಾಗಿರುವಲ್ಲಿ ಬಿರುಗಾಳಿ ಬೀಸುವಂತೆ ಅಬಲ ಜನಾಂಗವಿರುವಲ್ಲಿ ಕೊಳ್ಳೆ ಹೊಡೆಯುವ ಜನಾಂಗಗಳ ಹೋರಾಟವಾಗುವದು ಎಂತ. ಅಲ್ಲಿ ಮನುಷ್ಯನ ಮಹತ್ವವು ಪ್ರಕಾಶಿಸುವದಿಲ್ಲ. ಇನ್ನೂ ಕೆಳಕೆಳಗೇ ಹೋಗುತ್ತಾನೆ. ದೇವರ ಅಶಕ್ತಿಯನ್ನು ಅಣಕಿಸುತ್ತಾ ಸೈತಾನ ದೇವರ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಾನೆ. ದೊಡ್ಡ ಇಂಗ್ಲಿಷರು ಏನು ತಿಳಿದಿರಬೇಕೆಂದರೆ, ಮೇಲುಮೇಲೆ ಆತುರದಿಂದ ಕಟ್ಟಲಿಕ್ಕಾಗುವದಿಲ್ಲ. ಜೀಕಿಯವರ ಅಶಕ್ತತೆಯಿಂದ ತಮ್ಮ ಪವರ್ ಶಾಶ್ವತವಾಗಿರುವಂತೆ ಮಾಡಲಿಕ್ಕಾಗುವದಿಲ್ಲವೆಂತಲೂ ತಿಳಿಯಬೇಕು.

(ಮುಂದುವರಿಯುವುದು)

ಸೊಪ್ಪಿನ ಗೊಬ್ಬರ (ಮುಂದರಿಸಿದ್ದು)

Part II.

ಪ್ರಾಣಿಗಳಿಗೆ ಹೇಗೆ ಆಹಾರವು ಅವಶ್ಯವೋ ಹಾಗೆಯೇ ವನಸ್ಪತಿಗಳಿಗೂ ಆಹಾರವು ಅವಶ್ಯ. ಆದರೆ ಪ್ರಾಣಿಗಳು ತಮ್ಮ ಆಹಾರವನ್ನು ಇತರ ಪ್ರಾಣಿಗಳ ಆಶ್ರಯದಿಂದಲೂ ವನಸ್ಪತಿಗಳ ಆಶ್ರಯದಿಂದಲೂ ಹೊಂದಿಕೊಳ್ಳುತ್ತವೆ. ವನಸ್ಪತಿಗಳಾದರೋ ತಮ್ಮ ಆಹಾರವನ್ನು ಭೂಮಿಯಿಂದ ಹೊಂದಿಕೊಳ್ಳುತ್ತವೆ. ಭೂಮಿಯಲ್ಲಿ ವನಸ್ಪತಿಗಳಿಗೆ ಎರಡು ವಿಧವಾಗಿ ಆಹಾರವು ದೊರಕುತ್ತದೆ. ನಿರವಯವ ಪದಾರ್ಥಗಳ ರೂಪದಲ್ಲಿಯೂ (Inorganic) ಸಾವಯವ ಪದಾರ್ಥಗಳ ರೂಪದಲ್ಲಿಯು (Organic) ನಿರವಯವಪದಾರ್ಥಗಳು ಯಾವುವೆಂದರೆ ಪೋಟೇಶ್ (Potash) ನೈಟ್ರೇಟ್ (Nitrates) (Phosphates) ಫಾಸ್‌ಫೇಟ್ಸ್ ಸಾವಯವಪದಾರ್ಥಗಳು ಯಾವುವೆಂದರೆ—ಸಸ್ಯ ಮತ್ತು ಪ್ರಾಣಿಸಂಬಂಧವಾದ ವಸ್ತುಗಳ ನಾಶದಿಂದ ಉತ್ಪತ್ತಿಯಾದಂತ ಪದಾರ್ಥವು ಇದಕ್ಕೆ ಸಾಧಾರಣವಾಗಿ ಗೋಬರೆಂದು ಕರೆಯುವರು. ವನಸ್ಪತಿಗಳಿಗೆ ನಿರವಯವಪದಾರ್ಥಗಳ ರೂಪದಲ್ಲಿ ಭೂಮಿಯಲ್ಲಿ ಆಹಾರವು ದೊರಕರೂ ಸಾವಯವ ಪದಾರ್ಥಗಳು ಇಲ್ಲದೆ ಇದ್ದರೆ ನಿಷ್ಪ್ರಯೋಜನವು. ಆದ್ದರಿಂದ ಫಲವೃಕ್ಷಗಳನ್ನು ಬೆಳಸಬೇಕಾದರೆ ಸಾವಯವ ಪದಾರ್ಥಗಳೂ ಬಹಳ ಉತ್ಕೃಷ್ಟವಾದವು. ಸಾವಯವ ಪದಾರ್ಥಗಳೇ ನಮ್ಮ ದನವಿನ ಗೊಬ್ಬರ ಮತ್ತು ಕರಗಿದಂತ ಸೊಪ್ಪು.

ಗಿಡಗಳಿಗೆ ಮುಖ್ಯ ಆಹಾರಾಂಶಗಳಾದ ಸಾರಜನಕ, ರಂಜಕ, ಮತ್ತು ಪೊಟೇಶ್ (Potash) ನಾವು ಹಾಕುವಂಥ ಸೊಪ್ಪಿನ ಗೊಬ್ಬರದಲ್ಲಿ ಗಿಡಗಳ ಬೆಳವಿಕೆಗೆ ಉಪಯೋಗಿಸಿಕೊಳ್ಳುವಂಥ ರೂಪದಲ್ಲಿ ಇದೆ. ಸೊಪ್ಪಿನ ಗೊಬ್ಬರವನ್ನು ಹಾಕುವದರಲ್ಲಿ ಎರಡು ವಿಧಾನಗಳು.

(1) ಲೆಗ್ಯುಮಿನಸ್ (Legminus) ಜಾತಿಗೆ ಸೇರಿದ ದ್ವಿದಳಧಾನ್ಯಗಳನ್ನು ಕಣಬು, ಕಡಗಣೆ, (ಕಕ್ಕೆಸೊಪ್ಪು) ತಾಳೆಸೊಪ್ಪು ಡೇಂಚ, ಸನ್‌ಹೆಮ್ (Sunhemp). ಹುರುಳಿ ಹೊಂದವರೆ) ಮುಂತಾದವುಗಳನ್ನು ಬೆಳೆಸಿ ಭೂಮಿಯಲ್ಲಿ ಉತ್ತು ಕೊಳೆವಂತೆ ಮಾಡಿ ಉಪಯೋಗಿಸುವುದು. (Leguminus) ಲೆಗ್ಯುಮಿನಸ್ ಜಾತಿಗೆ ಸೇರಿದ ಗಿಡಗಳಿಗೆ ವಾಯುವಿನಿಂದ ವನಸ್ಪತಿಗಳಿಗೆ ಮುಖ್ಯ ಆಹಾರಾಂಶವಾದ ಸಾರಜನಕವನ್ನು ಉಪಯೋಗಿಸಿಕೊಳ್ಳುವ ಶಕ್ತಿಯು ಇದೆ. ಆದ್ದರಿಂದ ಭೂಮಿಯಲ್ಲಿ ಸೇಕವು ಉತ್ಪತ್ತಿಯಾದೊಡನೆ ಇವುಗಳನ್ನು ಉತ್ತಿ ಅವುಗಳು [illegible] ಮುಂದೆಯೇ [illegible] ಉಳ್ಳುಬಿಡಬೇಕು. ಈ ದ್ವಿದಳಧಾನ್ಯಗಳು ತಮ್ಮ ಬೆಳವಿಕೆಗೆ ಬೇಕಾದ ಆಹಾರಾಂಶಗಳನ್ನು ಭೂಮಿಯಿಂದ ತೆಗೆದ [illegible] ಸಾರಜನಕವನ್ನು ವಾಯುವಿನಿಂದ ತೆಗೆದುಕೊಳ್ಳುವುದರಿಂದ ಇದು ಸಾರಜನಕವನ್ನು [illegible] ಹೆಚ್ಚಿಸುತ್ತದೆ. ಇದಲ್ಲದೆ ಉತ್ತು ಕೊಳೆತನಂತರ ಸಸ್ಯಾಹಾರಾಂಶಗಳೆಲ್ಲವೂ ಇರುವದಾದರೂ ಬೆಳೆಗೆ ಸುಲಭವಾಗಿ ಒದಗುವಂತೆ ಆಗುವವು. ಈ ರೀತಿಯಾಗಿ ಭೂಮಿಗೆ ಸೇರಿಸಿದ ಸಸ್ಯಾಹಾರಗಳೇ ವೂ ಭೂಮಿಯಿಂದ ತೆಗೆದುಕೊಳ್ಳಲ್ಪಟ್ಟು ಮತ್ತೆ ಪುನಃ ಭೂಮಿಗೆ ಸೇರಿಸಲ್ಪಟ್ಟರೆ ಸಾರಜನಕ ಮಾತ್ರ ವಾಯುಮಂಡಲದಿಂದ ಬಂದಿರುವದರಿಂದ ಅಷ್ಟು ಸಾರಜನಕವು ನಮಗೆ ಲಾಭವಾಗಿ ದೊರಕಿತೆಂದು ಭಾವಿಸಬೇಕು.

(2) ನೆ ಯಾವದೆಂದರೆ:— ಗದ್ದೆಗಳ ಸುತ್ತುಮುತ್ತಲಿನ ಗಿಡಗಳಿಂದ ಎಲೆಗಳನ್ನು ತಂದುಹಾಕುವುದು. ಈ ವಿಧಾನದಲ್ಲಿ ಸಸ್ಯಾಹಾರಗಳನ್ನು ಬೇರೆ ಪ್ರದೇಶದಿಂದ ತಂದು ಭೂಮಿಗೆ ಸೇರಿಸಿದಂತೆ ಆಗುವುದು. ಈ ವಿಧಾನವು ಲೆಗ್ಯುಮಿನಸ್ ದ್ವಿದಳಧಾನ್ಯಗಳನ್ನು ಬೆಳೆಸಿ ಉತ್ತುಬಿಡುವುದಕ್ಕಿಂತಲೂ ಲಾಭಕರವಾದಂಥಾದ್ದು. ನಮ್ಮ ದೇಶದಲ್ಲಿ ಹೆಚ್ಚಾಗಿ ಮರಗಿಡಗಳಿರುವುದರಿಂದ ಈ ವಿಧಾನವನ್ನು ಪ್ರಚಾರಕ್ಕೆ ತರುವುದು ಬಹಳ ಉತ್ತಮವಾಗಿರುವುದೆಂದು ತೋರುತ್ತೆ.

ಈ ವಿಧಾನವನ್ನು ಎರಡು ವಿಧಗಳಲ್ಲಿ ಉಪಯೋಗಿಸಬಹುದು.

(1) ಸುತ್ತುಮುತ್ತಲು ಒದಗುವಂತ ಸೊಪ್ಪು ಮತ್ತು ಎಳೆ ದಂಟುಗಳನ್ನು ಅಲ್ಲಲ್ಲೇ ಗದ್ದೆಗಳ ಮಧ್ಯೆ ಗುಂಡಿಗಳನ್ನು ತೋಡಿ ಸೊಪ್ಪನ್ನು ತುಂಬಿಸಿ ಬೇಸಿಗೆಯಲ್ಲಿ ಮುಚ್ಚಿಡುವುದು ಮತ್ತು ವ್ಯವಸಾಯಕಾಲದಲ್ಲಿ ಎಂದುಕಾಲು ಉತ್ತನಂತರ ಅದನ್ನೆಲ್ಲಾ ತೆಗೆದು ಆಯಾ ಗದ್ದೆಗಳಿಗೆ ಹರಡಿ ಉತ್ತುಬಿಡುವುದು.

(2) ಗದ್ದೆಯನ್ನು ಎರಡುಕಾಲು ಉತ್ತು ನೀರನ್ನು ಕಟ್ಟುವಾಗ ಅಂದರೆ ಮೂರನೇ ಸಾಲು ಉಳುವುದಕ್ಕೆ ಮುಂಚೆಯೇ ಸೊಪ್ಪನ್ನು ಚಿಗುರು ದಂಟನ್ನು ಹರಡಿ ಕೊಳೆಯಲಿಕ್ಕೆ ಬಿಡಬೇಕು. ಎಂಟೊಂಬತ್ತು ದಿವಸಗಳೊಳಗೆ ಇದು ಸಂಪೂರ್ಣವಾಗಿ ಕರಗುವುದು. ಆಗ ಅದನ್ನು ಉತ್ತುಬಿಡುವುದು. ಸೊಪ್ಪಿನ ಗೊಬ್ಬರವು ಎಕರೆಗೆ ಮೂರು ಸಾವಿರ ಪೌಂಡು ಸೊಪ್ಪು ಬೇಕಾಗುತ್ತದೆ. ಸಾಧಾರಣವಾಗಿ ಉಪಯೋಗಿಸುವಂಥ ಸೊಪ್ಪುಗಳು ಯಾವುವೆಂದರೆ ತೊಂಗೆ, ಹೊನ್ನೆ, ಹೆಬ್ಬೆ, ನೇರಳೆ ಕಟ್ಟಿನ ಮುಂತಾದವು.

"M. B. & P."

ವರ್ತಮಾನ ಸಂಗ್ರಹ.

ಒಳದೇಶ.

ಕಳೆದ ಶನಿವಾರ ಮತ್ತು ಆದಿತ್ಯವಾರ ಕೊಡಗಿನ ಕ್ರಿಕೆಟ್ ಟೀಮಿಗೂ ಬೆಂಗಳೂರ ಜನಸ್ಥಾನ ಕ್ರಿಕೆಟ್ ಟೀಮಿಗೂ ಬೆಂಗಳೂರಿನಲ್ಲಿ ಕ್ರಿಕೆಟ್ ಪಂದ್ಯಾಟವು ನಡೆಯಿತು. ಅದರ ಫಲಿತಾಂಶವು ನಮಗೆ ತಿಳಿಯಬಂದಿರುವುದಿಲ್ಲ.

ಕಳೆದ ವಾರ ಹುಣಸೂರು ಸೇತುವೆಗೆ ಅಪಾಯವುಂಟಾಗಿ ಗಾಡಿಗಳೂ ಮೋಟಾರುಗಳೂ ದಾಟುವುದು ನಿಲ್ಲಿಸಲ್ಪಟ್ಟಿದೆ. ಆದರೆ ಅದರ ರಿಪೇರಿಯ ಕೆಲಸವು ಬಹು ಮುತುವರ್ಜಿಯಿಂದ ನಡಿಸಲ್ಪಡುತ್ತಿರುವುದರಿಂದ ಬೇಗನೆ ವಾಹನಗಳು ದಾಟಲು ತಾತ್ಕಾಲಿಕ ರಸ್ತೆಯು ಮಾಡಲ್ಪಡುವುದಂತೆ.

ತಾ| ೧೩, ೧೪ ಮತ್ತು ೧೫ ರಲ್ಲಿ ಕೊಡಗು ದೇಶದಲ್ಲೆಲ್ಲಾ ಅಪರಿಮಿತವಾದ ಮಳೆಯು ಸುರಿಯಿತು. ಸೋಮವಾರ ಬೆಳಗ್ಗಿನಿಂದ ಬುಧವಾರ ರಾತ್ರಿಯವರೆಗೆ ಮಳೆಯು ಸ್ವಲ್ಪವೂ ಎಡೆಬಿಡದೆ ಝೇಂಕರಿಸುತ್ತಿತ್ತು. ಇದರಿಂದ ದೇಶದ ಎಲ್ಲಾ ಭಾಗಗಳಲ್ಲಿಯೂ ವಿಪರೀತ ನಷ್ಟವುಂಟಾಗಿದೆ. ಅವುಗಳ ವರದಿಗಳನೇಕವು ನಮ್ಮ ಕೈಸೇರಿವೆ. ಸ್ಥಳಸಂಕೋಚದಿಂದ ಅವುಗಳನ್ನೆಲ್ಲಾ ಪ್ರಕಟಿಸಲು ಸಾಧ್ಯವಿಲ್ಲ. ಈ ಮೊದಲು ಹೀಗೆ ಎಡೆಬಿಡದೆ ಜೋರಾಗಿ ಮಳೆ ಬಿದ್ದು ದೇಶದಲ್ಲಿ ಇಷ್ಟರ ಮಟ್ಟಿಗೆ ನಷ್ಟವುಂಟುಮಾಡಿದ್ದು ಸರ್ವಸಾಧಾರಣ ಜೀವತರಾಗಿರುವವರ್ಯಾರಿಗೂ ಗೊತ್ತಿಲ್ಲವೆಂದೇ ಹೇಳುತ್ತಾರೆ!

ಅಮ್ಮತ್ತಿಯಿಂದ ವೀರಾಜಪೇಟೆಗೆ ಹೋಗುವ ರಸ್ತೆಯು ಕುಗ್ಗುಲದ ಬಳಿಯೂ ಕಾವಾಡಿಯ ಬಳಿಯೂ ಕುಸಿದು ಹೋಗಿರುವುದರಿಂದ ಅತ್ತಿತ್ತ ಗಾಡಿ ಮೋಟಾರು ಮುಂತಾದವುಗಳು ಓಡಲಿಕ್ಕಾಗುವುದಿಲ್ಲ. ಆದುದರಿಂದ ಕಳೆದವಾರ ಕೆಲವು ದಿವಸಗಳು ನಿಂತು ಹೋಗಿದ್ದ ಅಂಚೆಯ ಬಸ್ಸು ಸರ್ವೀಸು ಈ ವಾರದಲ್ಲಿ ಮಡಿಕೇರಿಯಿಂದ ಅಮ್ಮತ್ತಿಯವರೆಗೆ ನಡೆಯುತ್ತಿದೆ.

ಮಡಿಕೇರಿಯಲ್ಲಿ ನಡೆದ ರಿಲೀಫ್ ಫಂಡ್ ಮೀಟಿಂಗಿನಲ್ಲಿ ಉದ್ಯೋಗಸ್ಥರನೇಕರು ಹಾಜರಿರಲಿಲ್ಲವೆಂದು ಕಳೆದವಾರದ ಅಗ್ರಲೇಖನದಲ್ಲಿ ಸೂಚಿಸಲ್ಪಟ್ಟಿತ್ತು. ಆದರೆ ಈ ಫಂಡಿಗೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರೇ ಮೊದಲಾದ ಉದ್ಯೋಗಸ್ಥರನೇಕರು ಮೀಟಿಂಗಿಗೆ ಬಾರದಿದ್ದರೂ ಕೂಡ ಉದ್ಯೋಗಸ್ಥರಲ್ಲದವರಂತೆಯೇ ತಮ್ಮ ಶಕ್ತ್ಯಾನುಸಾರ ಚಂದಾ ಕೊಟ್ಟಿರುವುದು ಸಂತೋಷಕರವೇ ಸರಿ.

ಅತಿವೃಷ್ಟಿಯು ದೆಸೆಯಿಂದ ಕಡಿಯತ್ತ ನಾಡು ಪೊದವಾಡ ಗ್ರಾಮದ ನಂಬಿಯ ಪಂಡ ಮನೆಯು ಒರೆ ಜರೆಯು ಬಂದೂ, ಬೆಪ್ಪುನಾಡು ಬೆಳ್ಳುಮಾಡು ಗ್ರಾಮದ ಚಂಗುಲಂಡ ಮನೆಯು ಹೊಳೆಯ ಪ್ರವಾಹದಿಂದಲೂ ನೆಲಸಮ ಮಾಡಲ್ಪಟ್ಟಿವೆಯಂತೆ. ಕಡಿಯತ್ತು ನಾಡು ಕರಡ ಗ್ರಾಮದ ನೆರಪಂಡ ಮನೆಯೂ ಬಿದ್ದಿದೆಯಂತೆ. ಅಮ್ಮತ್ತಿ ನಾಡಿನ ಪೊಸೂರು ಗ್ರಾಮದಲ್ಲಿ ಮೊಳ್ಳೆರ ದೊಡ್ಡ ಮನೆಯ ಒಂದು ಭಾಗವು ಬಿದ್ದಿದೆ. ಅದೇ ಗ್ರಾಮದ ಪೂಧಿರಮಾಡ ಬೋರು ಮನೆಗೆ ಜೆಟ್ಟಿದ ಒಂದು ಭಾಗವು ಜರೆದು ಒಂದು ಗೋಡೆಗೆ ಮುಟ್ಟಿಕೊಂಡಿದೆ. ಹೀಗೆಯೇ ಇನ್ನೂ ಅನೇಕ ಸ್ಥಳಗಳಲ್ಲಿ ಅನಾಹುತಗಳು ನಡೆದಿವೆಯೆಂದು ತಿಳಿಯಬರುತ್ತದೆ. ಆದರೆ ಅವುಗಳ ವಿವರವು ಸವಿಸ್ತಾರವಾಗಿ ನಮಗೆ ಇನ್ನೂ ತಿಳಿಯಬಂದಿರುವುದಿಲ್ಲ.

ತಾ, ೧೮ ರಲ್ಲಿ ವೀರಾಜಪೇಟೆಯಲ್ಲಿ ನಡೆಯಬೇಕಾಗಿದ್ದ ಜಮೀನುದಾರರ ಸಂಘದ ಕಮಿಟಿ ಮೀಟಿಂಗು ಆದಿನ ನಡೆಯದೆ ಸೆಪ್ಟೆಂಬರ್ ೮ ಕ್ಕೆ ಅಲ್ಲಿಯೇ ನಡೆಯುವಂತೆ ಮುಂದರಿಸಲ್ಪಟ್ಟಿದೆ.

ಇದೇ ತಾರೀಖು ೨೭ ರಲ್ಲಿ ಮಡಿಕೇರಿಯಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು ಒಂದು ನಡೆಯಲಿಕ್ಕಿರುವುದು.

ಕೆಲವು ಕಡೆಗಳಲ್ಲಿ ಪೋಸ್ಟಾಫೀಸುಗಳನ್ನು ಎಕ್ಸ್ಟ್ರಾಡಿಪಾರ್ಟ್‌ಮೆಂಟಲಾಗಿ ಮಾಡಿ ಅಲ್ಲಿರುವ ಟಪ್ಪಾಲಿನವರನ್ನು ತೆಗೆದುಬಿಟ್ಟಿರುವುದರಿಂದ ಕಾಗದಗಳೂ ಪತ್ರಿಕೆಗಳೂ ಅಡ್ರೆಸುದಾರರಿಗೆ ಬಟವಾಡೆಯಾಗದೆ ಪೋಸ್ಟಾಫೀಸಿನಲ್ಲೇ ಬಿದ್ದಿವೆಯಂತೆ. ಅದುದರಿಂದಲೇ ಅನೇಕರು "ಕೊಡಗು" ಪತ್ರಿಕೆಯು ದೊರೆಯಲಿಲ್ಲವೆಂದು ಪುಕಾರುಮಾಡುತ್ತಿರುವುದು ಆಶ್ಚರ್ಯವಲ್ಲ. ಪೋಸ್ಟಾಫೀಸಿನವರೂ ನಮ್ಮ ಚಂದಾದಾರರೂ ಈ ವಿಷಯಕ್ಕೆ ಸ್ವಲ್ಪ ಗಮನಕೊಡುವರಾಗಿ ನಂಬುತ್ತೇವೆ.

೮೦ ಫ್ಲಡ್ ಫಂಡ್ ಕಮಿಟಿಯ ಮೀಟಿಂಗು ಲೆಕ್ಕಾಚಾರವನ್ನು ನೋಡಿ ದಕ್ಷಿಣ ಕನ್ನಡ ಜಿಲ್ಲೆಗೆ ಕಳುಹಿಸಬೇಕಾದ ಹಣವನ್ನು ನಿರ್ಣಯಿಸಲಿಕ್ಕೆ ತಾರೀಖು ೨೧ ರಲ್ಲಿ ಕೊಡಗು ಆಫೀಸಿನಲ್ಲಿ ನಡೆಯಿತು.

ಉಬುಟಿ ಸೇತುವೆಗೆ ಅಪಾಯವುಂಟಾಗಿರುವುದರಿಂದ ಈಗ ಕೊಡಗಿನಿಂದ ಮಂಗಳೂರಿಗೆ ಗಾಡಿ ಮೋಟಾರು ವಾಹನಗಳ್ಯಾವವೂ ಅಲ್ಲಿಂದಾಗಿ ದಾಟುವುದನ್ನು ನಿಲ್ಲಿಸಿರುವರು. ಕೊಡಗಿನಿಂದ ಹೊರಗೆ ಹೋಗುವಂಥ ಮೂರು ಮುಖ್ಯ ರಸ್ತೆಗಳಲ್ಲಿಯೂ ವಾಹನಗಳು ಸರಾಸರಿ ಹೋಗದಂತಾಗಿದೆ.

ಹಿಂದೂದೇಶ.

ಪಾಟ್ನಾ ಹೈ ಕೋರ್ಟಿನಲ್ಲಿ ಶ್ರೀಮತಿ, ಸುಧಾಂಶು ಬಾಲಾ ಹಜ್ರಾ ಎಂಬ ಯುವತಿ ಯೊಬ್ಬಳು ವಕೀಲೀ ಕೆಲಸಕ್ಕೆ ಪ್ರಾರಂಭಿಸುವಳು. ಶ್ಲಾಘನೀಯವಲ್ಲವೆ?

ಇದೇ ೨೪ ನೇ ತಾರೀಖಿನಲ್ಲಿ ಶ್ರೀಯುತ ಶ್ರೀನಿವಾಸರಾವ್ ಕೌಜಲಗಿಯವರನ್ನು ಜೈಲಿನಿಂದ ಬಿಡುಗಡೆ ಮಾಡಿಸಾರೆಂಬುದನ್ನು ನಿರೀಕ್ಷಿಸುತ್ತ ಅವರ ಸ್ವಾಗತ ಕ್ಕೋಸ್ಕರ ಸಕಲಸನ್ನಾಹಗಳಿಂದ ಬಿಜಾಪುರದವರು ಇದಿರು ನೋಡುತ್ತಿರುವರು. ವಾಚಕರೇ, 'ನೋಡಿರಿ, ಆ ಪ್ರೀತಿಯ ಮಹಿಮೆಯನ್ನು'!

ನೊಗಸಾದ ಮೊಗ್ಗ ಅರಳುವಷ್ಟರಲ್ಲಿಯೇ "ಟ್ರಿಬ್ಯೂನ್" ಪತ್ರಿಕೆಯ ಅಸಿಸ್ಟೆಂಟ್ ಎಡಿಟರೂ, ಚಾತುರ್ಯಪೂರ್ಣ ತರುಣರೂ ಆದ ಆನಂದ ನಾರಾಯಣಸಿಯಾಲ್‌ರವರು ತನ್ನ ೨೭ ನೇ ವಯಸ್ಸಿನಲ್ಲಿ ಮರಣ ಹೊಂದಿದರೆನ್ನುವುದು ವಿಷಾದಕರವೇ ಸರಿ.

ಮತಸಂಬಂಧವಾದ ,ಎಂಡೋವ್‌ಮೆಂಟ್' ಶಾಸನವನ್ನು ಪೂರಾ ವಿರೋಧಿಸುವುದಕ್ಕಾಗಿಯೂ, ಶಾಸನನ್ನು ತೆಗೆದೊಗೆಯಬೇಕೆಂದು ವೈಸರಾಯರನ್ನು ಬೇಡಿಕೊಳ್ಳುವುದಕ್ಕೂ ಪಚ್ಚಿ ಮಹಾರಾಜರು ಬಸ್ತರು 'ಉಳ್ಳಾಲ'ದಲ್ಲಿ ಸಭೆ ಸೇರಿದ್ದರು. ಶಾಸನದ ಪ್ರಕಾರ ದೇವಾಲಯಗಳಿಗೆ ಎಲ್ಲಾ ವಿಧಗಳಲ್ಲಿಯೂ ವಿಪತ್ತುಗಳು ಸಂಭವಿಸುವುದು ಕಂಡ ಹಾಗೆಯೇ ಇರುತ್ತದೆ.

ಡೆಲ್ಲಿಯ ಕಾಂಗ್ರೆಸ್ ಸ್ವಾಗತಮಂಡಲಕ್ಕೋಸ್ಕರ ಬೊಂಬಾಯಿ ಪ್ರಾಂತಿಕ ಕಾಂಗ್ರೆಸ ಕಮಿಟಿಯು ೨೫,೦೦೦ ರೂಪಾಯಿಗಳನ್ನು ಗೊತ್ತುಮಾಡಲು ಠರಾವನ್ನು ತಂದಿದೆ. ಇದೇ ಮಂಡಲಿಯಾ ದಕ್ಷಿಣ ಕನ್ನಡ ಪ್ರವಾಹ ಪೀಡಿತರ ರಕ್ಷಣೆಗಾಗಿ ೭,೦೦೦ ರೂಪಾಯಿಗಳನ್ನು ದಯಪಾಲಿಸಿರುವುದು.

ತಿರುಚನಾಪಳ್ಳಿ ತಾಲ್ಲೂಕು ಕಾವೇರೀ ನದಿಯ ಉಗ್ರಪ್ರವಾಹದಿಂದ ಮುಳುಗಿ ಹೋಗಿ, ದ್ವೀಪಗಳಂತೆ ಕಾಣುತ್ತವೆಯಂತೆ, ಎಮುಮತ್ತೂರಿನ ಪೂರ್ವಪಶ್ಚಿಮ ಭಾಗಗಳಲ್ಲಿ ಅನೇಕ ಮನೆಗಳು ಕೊಚ್ಚಿ ಹೋಗಿ ಕೆಲವು ಅದಿ ದ್ರಾವಿಡರಿಗೆ ಮನೆನಾರಿಲ್ಲದೆ ಅಲೆದಾಡುವ ಕಾಲ ಬಂದಿದೆಯಂತೆ. ಕಾವೇರೀ ನದಿಯು ಕೊಡಗಿನಲ್ಲೇ ಅನಾಹುತವನ್ನು ಮಾಡಿರುವಾಗ ಬೇರೇ ಕಡೆಗಳಲ್ಲಿ ಅದರ ಉತ್ಪಾತಗಳು ಹೆಚ್ಚಾಗಿ ಹೇಳುವಂತಿಲ್ಲ.

ಕಾವೇರೀ ನದಿಯನ್ನು ಕನ್ನಂಬಾಡೀ ಕಟ್ಟೆಯಲ್ಲಿ ನೋಡುವುದಕ್ಕಾಗಿ ಜನರು ಸಾವಿರಗಟ್ಟಲೆ ಗುಂಪು ಗುಂಪಾಗಿ ಹೋಗುತ್ತಿರುವರಂತೆ. ಅನೆಗೊಂದಿ, ಶೃಂಗೇರಿ ಮುಂತಾದ ಸ್ಥಳಗಳು ನೀರಾಗುತ್ತಿರುವುದು ಹೇಳಲಸದಳವೇ ಸರಿ.

ಶ್ರೀಮತಿ ಪದ್ಮಾಸನಿ ಅಮ್ಮನವರು ದಿಂಡಿಗಲ್ಲಿನಲ್ಲಿ ಮಹಿಳೆಯರ ಮುಂದೆ ಕಾಂಗ್ರೆಸಿನಧ್ಯೇಯವನ್ನು ಉಪನ್ಯಾಸದಲ್ಲಿ ವಿವರಿಸಲು ಹತ್ತು ಮಂದಿ ಸ್ತ್ರೀಯರು ಅಗಲೇ ಕಾಂಗ್ರೆಸ್ ಕಾರ್ಯಕ್ರಮಕ್ಕೆ ಕೈಹಚ್ಚಿರುವರಂತೆ. ಹಿಂದೀ ಯುವತಿಯರೆಲ್ಲರೂ ದೇಶ ಜವಾಬುದಾರಿಯನ್ನು ಇದೇ ರೀತಿ ಅರಿತುಕೊಂಡರೆ, ಆ ನಮ್ಮ ದೇಶವನ್ನು ಕೇಳಬೇಕೆ?

ಬರುವ ಗಾಂಧೀ ದಿನವನ್ನು ನಾಗಪುರದಲ್ಲಿ ಆಚರಿಸಲಿಕ್ಕಾಗಿ ಶ್ರೀಮತಿ ಕಸ್ತೂರಿ ಬಾಯಿ ಗಾಂಧಿಯವರು ಸ್ತ್ರೀ ಸ್ವಯಂ ಸೇವಕರನ್ನು ಗುಜರಾತಿನಲ್ಲಿ ಒಟ್ಟುಗೂಡಿಸುತ್ತಿರುವರು.

ನಾಗಪುರದಲ್ಲಿ ರಾಷ್ಟ್ರ ಗೀತೆಗಳನ್ನು ಹಾಡುತ್ತಾ ಬಾವುಟೆಯನ್ನು ಹಿಡಿದುಕೊಂಡು ಹೋಗುತ್ತಿದ್ದ ಮೂರು ಚಿಕ್ಕ ಹುಡುಗರನ್ನು ಒಬ್ಬ ಸಬ್ ಇನ್ಸ್‌ಪೆಕ್ಟರನು ಕಂಡು ಅವರನ್ನು ಪೋಲೀಸ ಸುಪರಿಂಟೆಂಡೆಂಟರ ಹತ್ತಿರಕ್ಕೆ ತಾನೂ ಒಂದು ಬಾವುಟೆಯನ್ನು ಹಿಡಿದುಕೊಂಡು ಕರೆದೊಯ್ದನು. ಸುಪರಿಂಟರು ಅವರನ್ನು ತನ್ನ ಬಂಗಲೆಯಲ್ಲಿ ಹತ್ತು ನಿಮಿಷಗಳವರೆಗೆ ನಿಲ್ಲಲು ಹೇಳಿ "ಹಿಂ ಸಾರಿ ಕೂತೇಳಿರಿ" ಎಂದು ಹೇಳಲು ಅವರು ಸ್ವಲ್ಪವೂ ಲಕ್ಷ್ಯಗೊಡದೆ ಅಪ್ಪಣೆಯನ್ನು ಉಲ್ಲಂಘಿಸಿದರಂತೆ. ಇದೊಂದು ಅವಮಾನವಲ್ಲವೆ?

ಜಮುನಾಲಾಲ್ ಜೇಜಾಮರ ಮೋಟಾರ ಬಂಡಿಯನ್ನು ಹರಾಜಿಗೆ ತಂದಾಗ ನೂರು ರೂಪಾಯಿಗೂ ಕೊಳ್ಳುವವರು ಮುಂದೆ ಬರಲಿಲ್ಲವಂತೆ!

ಹೂಗ್ಲಿ ಜೈಲಿನಲ್ಲಿರುವ ವಿದ್ಯಾಪುರದ ಶ್ರೀಯುತ ರಾಮ ಸುಂದರ ಸಿಂಗರವರು ತನ್ನ ಚತುರ್ಮಾಸಿಕ ವ್ರತಕ್ಕೆ ಭಂಗವುಂಟಾದುದರಕ್ಕಾಗಿ ೩೩ ದಿವಸಗಳಿಂದ ಆಹಾರವನ್ನು ತ್ಯಜಿಸಿ ತೂಕದಲ್ಲಿ ೨೦ ಪೌಂಡು ಕಡಿಮೆಯಾಗಿದ್ದರಂತೆ. ನಡೆಯಲು ತ್ರಾಣವಿದ್ದಿಲ್ಲ. ಇವರು ಮೊನ್ನೆ ೫ ನೇ ತಾರೀಕಿನಲ್ಲಿ ಲಕ್ಷ್ಮಣ ಕಾನೂರ ಸಿಂಗರವರ ಒತ್ತಾಯದ ಮೇಲೆ ಆಹಾರವನ್ನು ತೆಗೆದುಕೊಳ್ಳಲು ಪ್ರಾರಂಭಿಸಿದರಂತೆ. ಉಜ್ವಲಸತ್ಯಾಗ್ರಹವೇ ಸರಿ!

ಸರಲ ದೇವಿಯವರ ಪತಿ ಪಂಡಿತ ರಾಮಭಜದತ್ತ ಚೌಧುರಿಯವರ ಮತ್ತು ಬಾಬು ಶರಿಮಳ ಕಾಂತಿ ಘೋಷರುಗಳ ಮರಣ ವಾರ್ತೆಯು ಭಾರತೀಯರೆಲ್ಲರಲ್ಲಿಯೂ ವಿಷಾದವನ್ನುಂಟುಮಾಡುವುದಾಗಿದೆ.

ಅಸ್ಸಾಮಿನಲ್ಲಿ ಇಬ್ಬರು ಯೂರೋಪಿಯನರು ಮೋಟಾರು ಗಾಡಿಗಳನ್ನು ಬೆಳಕಿಲ್ಲದೆ ಬಹಳ ಜೋರಾಗಿ ಬಿಟ್ಟುಕೊಂಡು ಹೋಗುತ್ತಿದ್ದರು. ಇದನ್ನು ಕಂಡು ಪೋಲೀಸು ಅಧಿಕಾರಿಗಳು ಇವರನ್ನು ಹಿಡಿದು ವಿಚಾರಣೆಗೆ ಗುರಿಮಾಡಿರುವರು. ಅಪರಾಧಿಗಳನ್ನು ಜಡ್ಜಿಯು ಕರೆದು ಕುರ್ಚಿಗಳನ್ನು ಕೊಟ್ಟು ಕೂರಿಸಿದನು. ಜಡ್ಜಿಯು ಒಂದೆರಡು ಮಿನಿಟುಗಳ ತನಕ ಪಿರ್ಯಾದನ್ನು ಹುಬ್ಬುಗಳನ್ನು ಹಾರಿಸುತ್ತ, ಕೇಳುತ್ತಿದ್ದು ಕಡೆಗೆ ಅಪರಾಧಿಗಳನ್ನು ಕೋರ್ಟಿನ ಮೂಲಕ ವ್ಯಸನ ಸೂಚಿಸಿ ಹೋಗಿ ಹೇಳಿದನಂತೆ. ಇಂತಹ ಪಿರ್ಯಾದನ್ನು ತಂದದ್ದೇಕೆಂದು ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರನನ್ನೇ ಜಡ್ಜಿಯು ಕೇಳಿದನಂತೆ ಎಂಬುದಾಗಿ "ಅಮೃತ ಬಜಾರ" ಪತ್ರಿಕೆಯು ಹೇಳುತ್ತದೆ.

ಹೈದರಾಬಾದಿನ ಕಂಟೋನ್ಮೆಂಟ್ ಮೇಜಿಸ್ಟ್ರೇಟರ ಹತ್ತಿರ ಏನೋ ಒಂದು ಕೆಲಸದ ನಿಮಿತ್ತವಾಗಿ ಮಾನ್ಯಗೃಹಸ್ಥರಾದ ಮೌ. ಅಮಿನುದ್ದೀನ್ ಎಂಬುವರು ಗಾಂಧೀ ಟೊಪ್ಪಿಯನ್ನು ಹಾಕಿಕೊಂಡು ಹೋಗಿದ್ದರಂತೆ. ಈ ಟೊಪ್ಪಿಯನ್ನು ನೋಡಿದ ಕೂಡಲೆ ನ್ಯಾಯಾಧೀಶನಿಗೆ ಶರೀರವೆಲ್ಲಾ ರೋಮಾಂಚನವುಂಟಾದರೂ ಮನಸ್ಸನ್ನು ತಾಳಿದ್ದರಂತೆ. ಆದರೆ ಕೆಲಸ ಪೂರೈಸಿ ಅಮಿನುದ್ದೀನರು ಹೊರಡುವಷ್ಟರಲ್ಲಿಯೇ ಆ ಮೇಜಿಸ್ಟ್ರೇಟರು ಸಿಟ್ಟನ್ನು ತಡೆಯಲಾರದೆ ಅವರು ಇನ್ನು ಮುಂದೆ ಗಾಂಧಿ ತೊಪ್ಪಿಯನ್ನು ಧರಿಸಿ ತನ್ನ ಆಫೀಸಿಗೆ ಬರಲಾಗದೆಂದು ಹೇಳಿದರು. ಅಮಿನುದ್ದೀನರು ಮೇಲಿನ ಆರ್ಡರನ್ನು ಬರೆದುಕೊಡಬೇಕೆಂದು ಕೇಳಿದರಂತೆ. ಆಗ ಕೋಪವು ಉಕ್ಕಿಬಂದು ಆ ಮಹಾನ್ಯಾಯಾಧಿಪತಿಯು "ಹೊರಟು ಹೋಗು, ನನ್ನ ಆಫೀಸಿನಿಂದ" ಎಂದು ಘರ್ಜಿಸಿದರಂತೆ. ಇದೇನು, ಗಾಂಧೀ ತೊಪ್ಪಿಯಲ್ಲಿ ಸಾವಿರಾರು ಜನರು ಸೂಕ್ಷ್ಮದರ್ಶಕ ಯಂತ್ರದಲ್ಲಿ ನೋಡಿದರೂ ಏನೂ ಕಾಣದೇ ಇದ್ದು, ನೌಕರಶಾಹಿಯವರು ಮಾತ್ರ ಅದರಲ್ಲಿ ರಾಜದ್ರೋಹದ ಕ್ರಿಮಿಕೀಟಗಳನ್ನು ಕಾಣುವುದೆಂದರೆ ಆಶ್ಚರ್ಯವೆಂದು ಅದೇ "ಅಮೃತ ಬಜಾರವು" ಹೇಳುತ್ತದೆ.

ಕಳೆದ ೧೩ ನೇ ತಾರೀಕಿನಲ್ಲಿ ಲಾಲಾಲಜಪತರಾಯರನ್ನು ಜೈಲಿನಿಂದ ಬಿಡುಗಡೆ ಮಾಡಿದರು. ಈಗ ಅವರು ಬಹಳ ಲಾಚಾರಾಗಿರುತ್ತಾರೆ. ಮನೆಗೆ ಬರುವಾಗ ಮೋಟಾರಿನಲ್ಲಿ ಬಂದರಂತೆ.

ಮದ್ರಾಸ್ ಅರ್ಬನ್ ಕೋ ಆಪರೇಟಿವ್ ಸಂಘದ ವಾರ್ಷಿಕ ಮೀಟಿಂಗಿಗೆ ಕರೆಯಲ್ಪಟ್ಟ ಆಕ್ಟಿಂಗ್ ರಿಜಿಸ್ಟ್ರಾರರಾದ ಹುಡ ಸಾಹೇಬರು ಬಂದು ನೋಡುವಾಗ ಹಾಲ್‌ನ ಗೋಡೆಯ ಮೇಲೆ ರಾಷ್ಟ್ರೀಯ ಬಾವುಟಗಳನ್ನು ಹಾಕಿದ್ದದ್ದನ್ನು ಕಂಡು ಅದನ್ನು ತೆಗೆಸಿದರು. ಇದು ಅವರಿದ್ದ ಇತರರಿಗೆ ತಿಳಿದು ಪುನಃ ಹಾಕಿಸಿದರು. ಆಗ ರಿಜಿಸ್ಟ್ರಾರ್ ಸಾಹೇಬರು ಹೊರಟುಹೋಗಿಬಿಟ್ಟರು.

ಅನೇಕ ಕಾಲ ಮದರಾಸಿನಲ್ಲಿದ್ದು ಕ್ರಿಶ್ಚಿಯನ್ ಕಾಲೇಜನ್ನು ಸ್ಥಾಪಿಸಿ ಹಿಂದೂಸ್ಥಾನದ ಶ್ರೇಯೋಭಿವೃದ್ಧಿಗಾಗಿ ವಿದ್ಯಾರ್ಥಿಗಳನ್ನು ತರಬೇತು ಮಾಡಿ ಸ್ವದೇಶಕ್ಕೆ ಹೋಗಿ ಕಳೆದ ತಿಂಗಳ ಅಂತ್ಯಭಾಗದಲ್ಲಿ ಕಾಲವಾದ ಡಾ|| ಮಿಲ್ಲರ್ ಎಂಬ ಮಹನೀಯರು ಬರೆದಿಟ್ಟಿರುವ ಮರಣಶಾಸನವು ಸ್ವಲ್ಪಮಟ್ಟಿಗೆ ಪ್ರಕಟವಾಗಿರುತ್ತದೆ. ಅವರು ಸ್ಥಾಪಿಸಿ ಲೋಕ ಪ್ರಖ್ಯಾತಿಯಾಗುವಂತೆ ಮಾಡಿಟ್ಟಿರುವ ಮದರಾಸ್ ಕ್ರಿಶ್ಚಿಯನ್ ಕಾಲೇಜಿಗೆ ತಮ್ಮ ಆಸ್ತಿಯಿಂದ 20,000 ಪೌಂಡನ್ನು (ಸುಮಾರು ಮೂರುಲಕ್ಷ ರೂಪಾಯಿ) ಫಂಡು ಕೊಡತಕ್ಕದೆಂದು ಬರೆದಿಟ್ಟಿದ್ದಾರೆ. ಇದಲ್ಲದೆ ವಿದ್ಯಾಶಾಲೆಯ ವಾರ್ಷಿಕೋತ್ಸವವನ್ನು ನಡಿಸುವ ಫಂಡಿಗೆ 3,000 ರೂಪಾಯಿಯನ್ನು ಅವರು ಕೊಡುತ್ತಿದ್ದ ವಿದ್ಯಾರ್ಥಿವೇತನಗಳನ್ನು ಶಾಶ್ವತವಾಗಿ ನಡಿಸಿಕೊಂಡುಬರುವುದಕ್ಕೆ 15,000 ರೂಪಾಯಿಯನ್ನೂ ಬೆಂಗಳೂರಿನಲ್ಲಿ ದೇಶೀಯ ಕ್ರೈಸ್ತಬಾಲಕರು ವಾಸಮಾಡಿಕೊಂಡು ವಿದ್ಯೆ ಕ

ಯಂಥಾ ಪಾಠಶಾಲೆಯನ್ನು ಸ್ಥಾಪಿಸುವದಕ್ಕೆ ದ್ರವ್ಯ ವಿನಿಯೋಗಿಸಬೇಕೆಂದು ಏಳ್ ಒದೆಬರುವರಂತೆ ಉದ್ದೇಶದ ಶ್ರೇಯೋಭಿವೃದ್ಧಿಯ ವಿಷಯದಲ್ಲಿ ಈ ಪಾತ್ರರಾಗಿದ್ದ ಪ್ರೀತ್ಯಾಭಿಮಾನಗಳು ಸ್ತೋತ್ರಾರ್ಹ ಗಿರುವವು.

ವಿದೇಶ.

ಅಮೇರಿಕಕ್ಕೆ ಗುಟ್ಟಾಗಿ ತೆಗೆದುಕೊಂಡು ಹೋಗುತ್ತಿದ್ದ ಬ್ರಿಟಿಷರ ಮದ್ಯಪಾನ ತುಂಬಿರುವ ಹಡಗನ್ನು ಅಮೇರಿಕಾದವರು ಹಿಡಿದು ಹಾಕಿದುದು ನ್ಯಾಯವೆಂದು ಫೆಡರಲ್ ಕೋರ್ಟು ತೀರ್ಮಾನಿಸಿದೆ. ದೇಶಗಳ ಕಟ್ಟಳೆಗಳನ್ನು ಪರದೇಶದವರು ವಿಚಾರಿಸಬೇಕಾಗದಲ್ಲವೆ?

ಜರ್ಮನಿಯಲ್ಲಿ ಅನಾಯಕತ್ವವು ಹೆಚ್ಚುತ್ತಾ ದಂಗೆಗಳು ಪ್ರಬಲವಾಗುತ್ತಾ ಇವೆಯಂತೆ. ಬರ್ಲಿನಿನಲ್ಲಿ ಸಕ್ಕರೆ ಮುಷ್ಕರ ಹಿಡಿದವರನ್ನು ಪೋಲೀಸರು ಸೆರೆ ಹಿಡಿಯುವರಂತೆ. ದಂಗೆ ಕೋರರು ಕೆಲಸಗಾರರನ್ನು ಕೊಲ್ಲುವುದೂ, ಅಂಗಡಿಗಳನ್ನು ಲೂಟಿಮಾಡುವುದೂ ಮುಂತಾದ ಉಪದ್ರಗಳು ಜೋರಾಗುತ್ತಿವೆಯಂತೆ.

ಐರ್ಲೆಂಡಿನ ರಿಪಬ್ಲಿಕ್ ಪಾರ್ಟಿಯ ಮುಖಂಡರಾದ ವಲೆರಾರವರು ಫ್ರಿಸ್ಟೇಟ್ ಸಂಗಡದವರ ಹೆದರಿಕೆಗಾಗಿ ಈಗ ಹದಿಮೂರು ತಿಂಗಳುಗಳಿಂದ ಅಡಗಿಕೊಂಡಿದ್ದರಂತೆ. ಹಾಗೆ ಅವಿತುಕೊಂಡಿದ್ದರೂ ಕೂಡ ಅವರು ಎರಡು ದಿನಗಳಿಗೊಂದಾವರ್ತಿ ತನ್ನ ಕಡೆಯ ಜನರ ಸೇರಿಸಿ ಮೀಟಿಂಗು ಮಾಡಿ ತನ್ನ ಕೆಲಸವನ್ನು ಮಾಡುತ್ತಿದ್ದರು. ಆ ಮೇಲೆ ಅವಿತುಕೊಳ್ಳುತ್ತಿದ್ದರು. ಈಗ ಒಂದು ಪಬ್ಲಿಕ್ ಮೀಟಿಂಗಿಗೆ ಬರುವೆನೆಂದು ವಾಗ್ದಾನವನ್ನು ಮಾಡಿದ್ದರಂತೆ. ಆದೇ ಮೇರೆ ಅಧ್ಯಕ್ಷಸ್ಥಾನವನ್ನು ವಹಿಸಿ ಭಾಷಣಮಾಡುತ್ತಿದ್ದ ಕಾಲದಲ್ಲಿ ಒಂದು ಸಾವಿ ಫ್ರಿಸ್ಟೇಟ್ ಸೋಲ್ಜರುಗಳು ಆಯುಧಪಾಣಿಗಳಾಗಿ ಮೋಟಾರಿನಲ್ಲಿ ಬಂದು ಎದುರಿಗೆ ನಿಂತ ಕೂಡಲೇ ವಲೆರಾರವರು ಮೂರ್ಛೆ ಹೋದರು. ಇವನ್ನು ನೋಡಿ ಜನರೆಲ್ಲರೂ ಸುತ್ತುವರಿಯಲು ಸಿಪಾಯಿಗಳು ಗುಂಡುಗಳನ್ನು ಗಾಳಿಯಲ್ಲಿ ಹಾರಿಸಿದರಂತೆ. ಡಿವೇಲರವರಿಗೆ ಗುಂಡು ಹೊಡೆದರೆಂದು ಜನರೆಲ್ಲರೂ ಗಾಬರಿಯಾದರು. ಕಡೆಗೂ ಮೂರ್ಛೆ ತಿಳಿದದ್ದು ಮೇಲೆ ಶಾಂತರಾಗಿ ಅವರ ಕೈಗೆ ಡಿವೇಲರಾರವರು ಸೇರಿದರಂತೆ. ವಾರಂಟಿಗೆ ಅವರನ್ನೇ ಒಂದು ಮೆಂಬರಾಗಿ ಚುನಾವಣೆ ಮಾಡುವ ಭರವಸೆಯೂ ಇಲ್ಲಿಯವರಿಗಿದೆಯಂತೆ.

ಲಂಡನ್ ಪಟ್ಟಣದಲ್ಲಿ ಇಂಡಿಯಾದ ರೈಲ್ವೇಗಳ ಬಗ್ಗೆ ಸಾಲ ಎತ್ತಲಿಕ್ಕಾಗಿ ಪಾರ್ಲಿಮೆಂಟ್ ಮಂಜೂರಾತಿ ಪಡೆಯಲು ನಡೆದ ಚರ್ಚೆಯಲ್ಲಿ ಮೊನ್ನೆವರೆಗೆ ಬ್ರಿಟಿಷ್ ರಾಜ್ಯದ ಮಂತ್ರಿಗಳಾಗಿದ್ದ ಆಯಿಡ್ ಜಾರ್ಜರೂ ಮತ್ತು ಇಂಡಿಯಾ ಸೆಕ್ರೆಟರಿಯಾಗಿದ್ದ ಚೇಂಬರ್‌ಲೇನ್ ದೊರೆಗಳೂ ಈ ಲಂಡನ್ ಪಟ್ಟಣದಲ್ಲಿ ಎತ್ತುವ ಸಾಲದಲ್ಲಿ ಶೇಕಡ 75 ವನ್ನಾದರೂ ಇಂಗ್ಲೆಂಡಿನಲ್ಲಿ ಸಾಮಾನು ಕೊಳ್ಳಲಿಕ್ಕಾಗಿ ಖರ್ಚು ಮಾಡಬೇಕೆಂಬ ಶರತ್ತಿಗೆ ಒಪ್ಪಿದರೆ ಮಾತ್ರ ಸಾಲ ಕೊಡಲು ಬಿಡಬೇಕೆಂತ ವಾದಾ ಮಾಡಿದರು. ಈ ನಿರ್ಣಯವು ನ್ಯಾಯವಿಲ್ಲವೆಂತಲೂ, ಕಾರ್ಖಾನೆ ಶೇಕಡ ತೊಂಭತ್ತರಷ್ಟು ಇಂಗ್ಲೆಂಡಿನಲ್ಲೇ ಖರ್ಚಾಗುತ್ತಾ ಇದೆಯೆಂತ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಹೇಳಿದರು.

"ಸ್ವಾತಂತ್ರ್ಯ"

ಜೊಸೆಪ ಮಾಝಿನಿಯ ವಿಚಾರಗಳು

ನೀವು ಜೀವಿಸುವಿರಿ ನಿಮ್ಮಲ್ಲಿದ್ದ ಜೀವವು ಆಕಸ್ಮಾತ್ತಾಗಿ ಮೇಲಿಂದ ಬಿದ್ದದ್ದಲ್ಲ. ಸೃಷ್ಟಿಯಲ್ಲಿ ಆಕಸ್ಮಾತ್ತಾಗಿ ಏನೂ ಆಗುತ್ತಿರುವದಿಲ್ಲ. ಕೇವಲ ನಮ್ಮ ಅಜ್ಞಾನದಿಂದ ನಾವು ಕೆಲವು ಸಂಗತಿಗಳಿಗೆ "ಆಕಸ್ಮಾತ್ತಾಗಿ ಆದವು" ದು ಅನ್ನುತ್ತೇವೆ. ನಿಮ್ಮಲ್ಲಿದ್ದ ಜೀವವು ಪರಮಾತ್ಮನ ಪ್ರೇರಣೆಯಿಂದ ನಿಮ್ಮಲ್ಲಿ ವಾಸಿಸುವದು. ನಮ್ಮ ಉತ್ಪತ್ತಿ ಹುಟ್ಟು ಬೆಳವಣಿಗೆಗಳಿರುವವು. ನಿಮ್ಮ ಜೀವವು ವಿಕಾಸ ಹೊಂದುತ್ತಿರುವದು ಅದಕ್ಕೆ ಧ್ಯೇಯವಿರುವದು.

ಈಗ ಸಧ್ಯಕ್ಕೆ ಆಧ್ಯೇಯವು ನಿಮಗೆ ಗೊತ್ತಿರಲಿಕ್ಕಿಲ್ಲ ಮುಂದಿನ ಆಯುಷ್ಯದ ಧ್ಯೇಯವು ಚಿಕ್ಕಮಗುವಿಗೆ ಗೊತ್ತಿರುವದೇ ಇಲ್ಲ. ಆದರೂ ಅದು ಜೀವನ ಕ್ರಮದಲ್ಲಿ ಹೊಸ ಹೊಸ ಸಂಗತಿಗಳನ್ನು ಕಲಿಯುತ್ತಲೇ ಇರಬೇಕಾಗುವದು. ಗುಣವಿಕಾಸ, ಪ್ರಗತಿ, ಇವೇ ಮಾನವರ ಧ್ಯೇಯವೆಂದು ಈಗೀಗ ಜನರಿಗೆ ತಿಳಿಯಹತ್ತಿದೆ. ಈ ಮಾತು ತಿಳಿಯದಿದ್ದವರೇ ಬಹಳ. ತಿಳಿದವರು ತೀರ ಕಡಿಮೆ. ದೇವರು ದಯಪಾಲಿಸಿದ ಬುದ್ಧಿಶಕ್ತಿಯನ್ನು ಉಪಯೋಗಿಸುತ್ತ ಪ್ರಗತಿಯ ಮಾರ್ಗದಲ್ಲಿ ಸಾಗುತ್ತಿರುವಾಗಲೇ ನಮ್ಮ ಧ್ಯೇಯದ ದಿವ್ಯಸೋಟವು ನಮಗೆ ದೃಗ್ಗೋಚರವಾಗುವದು. ನಮ್ಮ ಶಕ್ತಿಗಳೆಂದರೆ ದೇವರು ಕೊಟ್ಟ ಸಾಧನಗಳು. ಆ ಸಾಧನ ಶಕ್ತಿಗಳ ಪ್ರಗತಿಯು ಸ್ವತಂತ್ರವಾಗಿ ಯಾವ ಅಡ್ಡಿ ತಡೆಗಳಿಲ್ಲದೇ ನಡೆಯುವದು ಅವಶ್ಯವಿದೆ.

ಸ್ವಾತಂತ್ರ್ಯವಿಲ್ಲದೆ ನೀವು ನಿಮ್ಮ ಕರ್ತವ್ಯಗಳನ್ನು ಸರಿಯಾಗಿ ತಿಳಿಯಲಾರಿರಿ. ಅಶಕ್ಯವು. ಆದ್ದರಿಂದ ಸ್ವತಂತ್ರರಿರುವದು ನಿಮ್ಮ ಜನ್ಮಸಿದ್ಧ ಹಕ್ಕು. ಆ ಸ್ವಾತಂತ್ರ್ಯವನ್ನು ಎರವಾಗಿಸುವ ಅಧಿಕಾರದಿಂದ ಯೋಗ್ಯವಾದ ಸಾಧನಗಳಿಂದ ಕಸಿದುಕೊಳ್ಳುವದು ನಿಮ್ಮ ಕರ್ತವ್ಯವಿರುವದು.

ಸ್ವಾತಂತ್ರ್ಯವಿಲ್ಲದಲ್ಲಿ ನೀತಿ ಇರಲಾರದು. ಒಳಿತು ಕೇಡುಗಳಲ್ಲಿ ಯಾವದನ್ನು ಆರಿಸಬೇಕು ಯಾವದನ್ನು ಬಿಡಬೇಕೆಂಬ ಸ್ವಾತಂತ್ರ್ಯವಿಲ್ಲದಿದ್ದರೆ ನೀತಿಯು ಎಲ್ಲಿಂದ ಬರಬೇಕು? ಏಕವಾದ ಸಮಾಜವು ಅಸ್ತಿತ್ವದಲ್ಲಿರಬೇಕಾದರೆ ಸ್ವಾತಂತ್ರ್ಯವು ಬೇಕೇಬೇಕು. ಸ್ವಾತಂತ್ರ್ಯವಿಲ್ಲದ ದೇಶದಲ್ಲಿ ಸಮಾಜ ಸಂಘಟನೆಯು ಇರಲಾರದೆಂದರೂ ಸಲ್ಲುವದು. ವ್ಯಕ್ತಿಯ ಜೀವನವೆಷ್ಟು ಪವಿತ್ರವೋ ಅಷ್ಟೇ ಸ್ವಾತಂತ್ರ್ಯವಾದರೂ ಪವಿತ್ರವು. ತನ್ನ ಸ್ವಾತಂತ್ರ್ಯವನ್ನು ಹೋಗಗೊಡುವ ಮನುಷ್ಯನು ಸ್ವಧರ್ಮದ ವಿರುದ್ಧ ವರ್ತಿಸುತ್ತಾನೆ. ದೇವದ್ರೋಹ ಮಾಡುತ್ತಾನೆ. ಸ್ವಾತಂತ್ರ್ಯವೆಂದರೆ ಸ್ವೈರವೃತ್ತಿಯಲ್ಲ. ಸ್ವಾತಂತ್ರ್ಯವೆಂದರೆ ಸ್ವಧರ್ಮದಂತೆ ನಡೆಯಲು ಅಡ್ಡಿ ಇರದೇ ಇರೋಣವು. ನಿಮ್ಮ ಸ್ವಧರ್ಮವು ಯಾವದೆಂಬುದನ್ನು ಹೇಳುವ ಅಧಿಕಾರವು ಏರಡನೇಯವರಿಗಿರಲಾರದು. ಅದನ್ನು ದೇವರೇ ನಿಮ್ಮ ಅಂತಃಕರಣಗಳಲ್ಲಿ ಪ್ರೇರೇಪಿಸಬೇಕು. ಈ ಪ್ರೇರಣೆಗಳಂತೆ ವ್ಯವಸ್ಥಿತವಾಗಿ ನಡೆಯಲಿಕ್ಕೆ ಯಾವ ಶಕ್ತಿಯು ಅನುಕೂಲವಾಗುತ್ತದೋ ಅದೇ ರಾಜಶಕ್ತಿ. ಆ ಶಕ್ತಿಯು ಯಾವದೇ ಒಬ್ಬ ಮನುಷ್ಯನಲ್ಲಿರಬಾರದು. ಯಾವದೇ ಒಂದು ವಂಶದಲ್ಲಿರಬಾರದು. ಯಾವದೇ ಒಂದು ಗುಂಪಿನಲ್ಲಿರಬಾರದು. ಅದು ಇಡೀ ಸಮಾಜದ ಸದಸದ್ವಿವೇಕ ಬುದ್ಧಿಯ ದ್ಯೋತಕವಾಗಿ ಎಂಥ ಜನರಲ್ಲಿಯೇ ಇರುವದು. ಆದ್ದರಿಂದ ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯೊಂದೇ ಯೋಗ್ಯವಾದ ರಾಜ್ಯಪದ್ಧತಿಯು. ಮಿಕ್ಕ ಪದ್ಧತಿಗಳೆಲ್ಲ ಬೇರೆಬೇರೆ ತರದ ಜುಲುಮಿಯ ವ್ಯವಸ್ಥೆಗಳೇ ಸೈ.

ನಮ್ಮ ದೇಶದಲ್ಲಿ ಈಗ ಜನರ ಸಮ್ಮತಿಯಿಲ್ಲದೇ ಆಳುವವರ ರಾಜ್ಯವಿರುವದು. ಇಂಥವರ ಕೈಯಲ್ಲಿ ಜನರ ಸ್ವಾತಂತ್ರ್ಯವು ಸುರಕ್ಷಿತವಾಗಿ ಹ್ಯಾಗೆ ಉಳಿಯಬೇಕು? ಸ್ವಾತಂತ್ರ್ಯವು ಸುರಕ್ಷಿತವಿಲ್ಲದಿದ್ದರೆ ಪ್ರಗತಿಯು ಹ್ಯಾಗಾಗಬೇಕು? ಪ್ರಗತಿಯಾಗದಿದ್ದರೆ ನಾವು ಮಾನವರಾಗಿ ಹುಟ್ಟಿ ಫಲವೇನು? ಪ್ರಗತಿಯಿಲ್ಲದೇ ನಮ್ಮ ಜೀವಿತವು ಕೃತಾರ್ಥವಾಗುವದು ಹ್ಯಾಗೆ?

ಆದ್ದರಿಂದ ಸ್ವಾತಂತ್ರ್ಯವನ್ನು ಪಡೆಯುವದು ನಮ್ಮ ಮೊದಲನೇ ಕರ್ತವ್ಯವು. ನೀವು ಯಾವತರದ ಜುಲುಮೆಗೂ ಒಳಗಾಗತಕ್ಕದ್ದು. ನಿಮ್ಮ ಸಮ್ಮತಿಯಿಂದ ನಡೆಯುವಂಥ ರಾಜ್ಯಪದ್ಧತಿಯನ್ನೇ ನೀವು ಸ್ಥಾಪಿಸಲಿಕ್ಕೆ ಬೇಕು. ಅಂದರೆ ಮಾತ್ರ ನೀವು ನಿಮ್ಮ ಕರ್ತವ್ಯವನ್ನು ಮಾಡಿದಂತಾಗುವದು. ನೀವು ಪರಮಾತ್ಮನ ಸಂಕಲ್ಪವನ್ನು ಕೊನೆಗಾಣಿಸಿದಂತಾಗುವದು. ಇಲ್ಲದಿದ್ದರೆ ನಿಮ್ಮ ಜನ್ಮವು ವ್ಯರ್ಥವು. ನಿಮ್ಮ ಜೀವಿತವು ನಿರರ್ಥಕವು. ನಿಮಗೆ ದೇವರು ಕೊಟ್ಟ ಶಕ್ತಿಗಳು ನಿಷ್ಫಲವಾದವುಗಳು.

(ಕರ್ಮವೀರ)

ಖಿಲಾಫತ್ ಫಂಡ್ ಮೀಟಿಂಗ್ ವಿವರ.

ಕೊಡಗಿನಲ್ಲೂ ದಕ್ಷಿಣ ಕನ್ನಡದಲ್ಲೂ ಸಂಭವಿಸಿರುವ ನೆರೆಯ ದೆಸೆಯಿಂದುಂಟಾದ ಕಷ್ಟ ನಿವಾರಣೆ ಬಗ್ಗೆ ವಿಚಾರ ಮಾಡಲಿಕ್ಕಾಗಿ ತಾ|| 11-8-23 ರಲ್ಲು ಮಡಿಕೇರಿಯಲ್ಲು ನಡೆದ ಪಬ್ಲಿಕ ಮೀಟಿಂಗಿನ ವಿವರ.—

ಮೆ|| ಕೆ. ಕುಟ್ಟಯ್ಯ ರಾ|| ಬಾ|| ರವರು ಮೀಟಿಂಗಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು.

ಕೊಡಗಿನಲ್ಲೂ ಮತ್ತು ದಕ್ಷಿಣ ಕನ್ನಡದಲ್ಲು ಉಂಟಾಗಿರುವ ನೆರೆಯ ನಷ್ಟಕ್ಕೆ ಒಳಗಾದವರ ಕಷ್ಟದಲ್ಲಿ ಈ ಮೀಟಿಂಗಿನಲ್ಲಿ ನೆರೆದಿರುವ ಮಡಿಕೇರಿ ಪಬ್ಲಿಕಿನವರ ಪೂರ್ಣ ಸಹಾನುಭೂತಿ ಇದೆ ಎಂದೂ ಈ ಕಷ್ಟ ಪರಿಹಾರ ಬಗ್ಗೆ ಪಬ್ಲಿಕಿನಿಂದ ಚಂದಾ ವಸೂಲಿ ಮಾಡಿ ಒಂದು ಫಂಡು ಮಾಡಬೇಕೆಂದೂ ತೀರ್ಮಾನವಾಯಿತು. ಮೆ|| ಕೋದಂಡ ತಿಮ್ಮಯ್ಯನವರಿಂದ ಸೂಚಿಸಲ್ಪಟ್ಟು ಮೆ|| ಎಂ. ಎಂ. ಸಿದ್ದೀಕ್‌ರವರಿಂದ ಅನುಮೋದಿಸಲ್ಪಟ್ಟ ಈ ಠರಾವು ಸರ್ವಸಮ್ಮತದಿಂದ ಪಾಸಾಯಿತು.

ಚಂದಾ ವಸೂಲಿ ಮಾಡಿ ಕಷ್ಟಕ್ಕೊಳಗಾದವರಿಗೆ ಹಂಚುವಂತೆ ಈ ಕೆಳಗಿನ ಕಮಿಟಿಯು ಏರ್ಪಾಡಾಯಿತು.

ಮ|| ರಾ|| ಕೆ ಕುಟ್ಟಯ್ಯನವರು ಆರ್. ಬಿ ಅಧ್ಯಕ್ಷರು

,, ಸಿದ್ದೀಕ್‌ರವರು

,, ಕೆ. ಎ ತಿಮ್ಮಯ್ಯನವರು

,, ಬಿ. ಎಂ ಕಾಡ್ಯಪ್ಪನವರು

,, ಎ ಅಬುದುಹಮ್ಮದ್ ಸಾಹೇಬರು

,, ಎ ಲಿಂಗಣಶೆಟ್ಟರು

,, ಸಿ. ಎಲ್. ಮೇರಪ್ಪಯ್ಯನವರು

ಈ ಕೆಳಗೆ ನಮೂದಿಸಿದ ಮಹಾನುಭಾವರಿಗೆ, ಬಲ ಮುರಿಯಲ್ಲಿ ಪ್ರವಾಹದಿಂದ ಜನರಿಗೆ ಆದಾಯವನ್ನು ತಪ್ಪಿಸಲಿಕ್ಕೆ ಕೆಲಸ ಮಾಡುವಾಗ್ಯೂ ಅಲಸ್ಯಾತು ಪ್ರಾಣಕ್ಕೆ ಅಪಾಯ ಬಾರದು ತಪ್ಪಿಸಿಕೊಂಡದಕ್ಕೆ ನಾವು ತುಂಬಾ ಕೃತಜ್ಞರಾಗಿದ್ದೇವೆ. ಅಲ್ಲದೆ ಅವರಿಗಾದ ನಷ್ಟವನ್ನು ಕುರಿತು ಅವರ ಬಳಿ ಕಳುಹಿಸಲು ಕತ್ತ ನಿಶ್ಚಯಿಸಿದ್ದೇವೆ. ಇನ್ನು ಸಹಾಯ ಬೇಕಾಗಿ ಕೇಳಿಕೊಳ್ಳುತ್ತೇವೆ.

ಮ|| ರಾ|| ಕೋದಂಡ ಅಪ್ಪಯ್ಯನವರು
ನಾಪಂಡದ ಪೂವಯ್ಯನವರು
ಬೊಳ್ಳಚೆಟ್ಟಿರ ಅಚ್ಚಯ್ಯನವರು
, ಬೊಳ್ಳಚೆಟ್ಟಿರ ಮಂದಣ್ಣನವರು
. ಕೋಡಿರ ಚಂಗಪ್ಪನವರು
ಮಾಪಿಳ್ಳೆ ಅಮ್ಮದೆ
,, ಮಾಪಿಳ್ಳೆ ಏಡಮೂ

ಕೊಡಗು ಸಂಪಾದಕರನ್ನು ಈ ಪಾಡಿಗೆ ಚಂದಾ ಕೊಡುವರಿಗಾಗಿ ದೇಶದವರಿಗೆ ಒಂದು ಅಪೀಲು ಮಾಡಬೇಕೆಂದೂ ಮತ್ತು ಚಂದಾ ಹಣ ಕಳುಹಿಸುವದು ಕಮಿಟಿ ಪ್ರಸಿಡೆಂಟ್ ಮ|| ಕುಟ್ಟಯ್ಯನವರಿಗೆ ಕಳುಹಿಸಬೇಕೆಂದು ಠರಾವು ಪಾಸಾಯಿತು.

ಮೀಟಿಂಗಿನಲ್ಲಿ ಚಂದಾ ಪಟ್ಟಿ ತೆರೆದು 71 ರೂಪಾಯಿ ವಸೂಲಾಗಲ್ಪಟ್ಟಿತು.

ಮಡಿಕೇರಿ, (ಸಹಿ) ಕೆ. ಕುಟ್ಟಯ್ಯ
ತಾ|| 12-8-23. ಪ್ರೆಸಿಡೆಂಟ್.

ಕನ್ನಡ ಜಿಲ್ಲೆ ಮತ್ತು ಕೊಡಗು ರಿಲೀಫ್ ಫಂಡು

ಮಾನ್ಯ ಸಂಪಾದಕರೇ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ನಮ್ಮ ದೇಶದಲ್ಲಿ ನಡೆದ ಅತಿ ವೃಷ್ಟಿಯಿಂದ ಪ್ರವಾಹದಿಂದ ಕಷ್ಟಕ್ಕೊಳಗಾದವರಿಗೆ ದೇಶದ ಮಹಜನರು ಸಹಾನುಭೂತಿ (sympathy) ತೋರಿಸಬೇಕಾಗಿ ಮಡಿಕೇರಿಯಲ್ಲಿ ಕಳೆದ 11 ನೇ ತಾರೀಕಿನಲ್ಲಿ ಸಭೆ ಸೇರಿ ಒಂದು ಕಮಿಟಿ ಏರ್ಪಟ್ಟಿದಲ್ಲಿ 12 ನೇ ತಾರೀಕಿನಲ್ಲು ಆಗಲಿ ಚಂದಾ ಹಣವನ್ನು ಕಮಿಟಿಯವರು ವಸೂಲಿ ಮಾಡಿದ್ದಾಯಿತು. ಆ ಕಮಿಟಿಯವರಿಂದ ಆಜ್ಞಾಪಿಸಲ್ಪಟ್ಟವರಾಗಿ ನಾವಿಬ್ಬರೂ ಇಲ್ಲಿಂದ ಕಾಟಿ ಅಕ್ಕಿ ಮತ್ತು ಚಿಕ್ಕನಾಪತಾಕಿಗಳನ್ನು 12 ನೇ ತಾರೀಕಿನಲ್ಲು ಮಧ್ಯಾಹ್ನದ ಮೇಲೆ ಸ್ಟೇಟು ಪಾಸ್ಟರ್ ಪಟ್ಟಣ ಉತ್ತರ ಸನರ ನನಿಕರದಿಂದ ಮತ್ತು ಕೊಟ್ಟಿದ ಆರು ಜನ ಸ್ವಾಲಗಳ ಸಹಾಯದಿಂದ ಮಡಿಕೇರಿಗೆ ಕಳುಹಿ ಮಾರನೆ ದಿನ ಬಲಮುರಿಯಲ್ಲಿ ಅನಾಹುತದ ದೆಸೆಯಿಂದ ಕಷ್ಟವನ್ನು ಜನರಿಗೆ ಕಾಟಿ ಬಟ್ಟೆ ಅಕ್ಕಿ ಸಾಮಾನುಗಳನ್ನು ಒಡಾವಣೆ ಮಾಡಿ ಬಂದೆವು. ಕನ್ನಡ ಜಿಲ್ಲೆಯಲ್ಲು ಕಷ್ಟಪಡುವವರಿಗೆ ಕೂಡ್ಲೆ ಸಹಾಯ ಕಳುಹಿಸುವ ಏರ್ಪಾಡು ಕಮಿಟಿಯವರು ಮಾಡುತ್ತಿದ್ದಾರೆ. ಬಲಮುರಿಯಲ್ಲಿ ಮ|| ಉತ್ತಪ್ಪನವರು ಬಟ್ಟೆ ಕೊಟ್ಟು ಸ್ವಾಲುಗಳ ಸಹಾಯಕ್ಕೆ ನಾವು ಬಹಳ ವಂದಿಸುತ್ತೇವೆ. ಅಲ್ಲದೆ ಈಗ 15 ದಿನಗಳಿಂದ 120 ಜನರು ಮಾಪಿಳ್ಳೆ ಮತ್ತು ಪಾತಿಮುರಿಗೆ ವಾಸಕ್ಕೆ ಸ್ವಂತ ಸಾಧನವಾದರೂ ಮನೆಮನೆಗಳಿಗೆ ಮತಭೇದವಿಲ್ಲದೆ ಸ್ಥಳಕೊಟ್ಟಂಥ ಮ|| ಮುಕ್ಕಾಟಿರ (ಪೊನ್ನಪ್ಪ) ಸೋಮಯ್ಯನವರಿಗೂ ನೆರವಂದ್ರ ಮತ್ತು ಚೆಟ್ಟಿಬೀರಂಡ ಮನೆಯವರಿಗೂ ನಮ ದೇಶಕ್ಕರು ಬಹಳ ಕೃತಜ್ಞರಾಗಿರಬೇಕಾಗಿದೆ.

ಮಡಿಕೇರಿ ಬಿ ಎಂ ಕಾಡ್ಯಪ್ಪ
ತಾ|| 15-8-23. ಎಂ. ಎಂ. ಸಿದ್ದೀಕ್.

(ಶ್ರೀ ಲೋಕದೇವಮ್ಮ-ಎಂಬಂತೆ)

ಕೊಡಗು.

ಆ. ಬಿ. ಶುಭು ಶಂಕರಾ ದೇವ
ಅವನೀಕ್ಷದವ ಒಂದಿದೆಲ್ಲೆ ||ಅ,ಪ||
ಯುವಜನ್ಮಶಾಲಾ ಒಬ್ಬಿತಾ ಬಹು ದುಃಖನಾ ಪಡುವಾವನ್ನೆ
ಅವನೀನಾತೇ ಕಾರ್ ಬೋರೆ ||೧||
ದೊರೆಯುವಾಯು ಪುಟ್ಟಿಬೇಗನೆ |
ಮಂಗಳಾ ಕುಶಲ್ಯವಿದ್ದೆ || ಸವಲ್ಯ ತಾತಿಲೆಸ್ನು ಗುಣ |೨|
ಪವನಗತಿರಾಪೆಬಳಿಸ್ಥಾರ್ ಪರಮಾಸರ ವಿನೋದಿತ್ ||
ಕರಕರೆತಾತ್ ಬಾರಾಯಿತ ||೩||

(ಚಾಮುಂಡಿಪಾಲಿನಿ-ಎಂಬಂತೆ)

ಕಾವೇರಿ ಕಾವೇರಿ, ಭಾವಾಲಾಪಿನೀ ||ಪ||
ಪಾವನ ತಿರಿಯಾಪೂರ್ ತ್ರಿ, ಲೋಕಮುದ್ರೆಯು ||ಅ ಪ||
ಯೋಗಿಕೃಪೆಯಾನ ಮಾಡುದೆಸ್ವಿತ್‌ನೀ ||
ಬೋಧಿಕೃಷ್ಣೆಯ ಕೊಡುವುದವಾಚೆ ' ಮೂಲಿತಾ ದೇವಿ ||
ದೇಶನಲ್ಲಾರ್, ಅರಿಬಿದಿಸೆಯು ||
ಊರಗೊಡಿ, ಅಗಸ್ತ್ಯ ಮತಿತೆ, ದಾಸಿತಾತಿಯ ||೨||
ವೇದಗಳ್ಳಾತು, ನೋಮುಮಲನ್‌ಇಷ ||
ಪಾವನನಿಪುರದಾನರಾ | ಮಹಾದೇವಿಯಿಯಾತ್ ||೩||

ಹುಲ್ಲಾರು ಅಪ್ಪಯ್ಯ ಕವಿ

ಕೊಡಗು ಜಮೀನ್ದಾರರ ಸಂಘ.

(ಪ್ರಚಾರಕ ಕಾರ್ಯದರ್ಶಿಯಿಂದ.)

"ಓ ಭರತ, ಹ್ಯಾಗೆ ಅಜ್ಞಾನಿಯು ಸ್ವಾರ್ಥತೆಯಿಂದ ವರ್ತಿಸುವನೋ ಹಾಗೆಯೇ ಜ್ಞಾನಿಯು ನಿಸ್ವಾರ್ಥತೆಯಿಂದ ಪ್ರಪಂಚದ ಹಿತಕ್ಕೋಸ್ಕರ ವರ್ತಿಸಬೇಕಾಗಿದೆ."

ಭಗವದ್ಗೀತೆ.

"Courag consists not in blindly overlooking danger, but in seeing it and conquering it". *Richter.*

"ಧೈರ್ಯವು ಅಪಾಯಕ್ಕೆ ಕಣ್ಣುಮುಚ್ಚಿಕೊಂಡು ಉದಾಸೀನನಾಗುವದರಲ್ಲಿಲ್ಲ ಅದರೆ ಕಂಡು ಅದನ್ನು ಜಯಿಸುವದರಲ್ಲದೆ."

ರಿಚ್‌ಟರ್.

No. 10.

ಸ್ವರಾಜ್ಯವು ಹಿಂದೂದೇಶಕ್ಕೆ ಲಭಿಸುವದೆಂದರೆ, ಹಿಂದೂದೇಶದ ಪ್ರತಿಯೊಂದು ಕುಲಸ್ಥರೂ (ಅಂದರೆ ಹಿಂದೂ ಮಹಮ್ಮದಿ, ಕ್ರೈಸ್ತರು, ಪಾರ್ಸಿಯರು etc) ಅಭಿವೃದ್ಧಿ ಹೊಂದುವದರಲ್ಲಿದೆ. ಭಾರತಭೂಮಿಯನ್ನು ಮಾತೃಭೂಮಿಯೆಂದು ನಂಬಿ, ಖಾಯಂ ವಾಸಸ್ಥರಾಗಿರುವ ಎಲ್ಲಾ ಕುಲಸ್ಥರು ಒಟ್ಟಾಗಿ ಗ್ರಹಿಸಲು ಸಂಶಯಪಟ್ಟರೆ ದೇಶದ ಅಭಿವೃದ್ಧಿಯು ಶಿಥಿಲವಾಗುವುದು. ಈ ಒಟ್ಟಾರೆ ಜನರಲ್ಲಿ ಆಗುವಷ್ಟು ಮನಸ್ತಾಪಗಳನ್ನು ಕಡಿಮೆಮಾಡಬೇಕಲ್ಲದೆ ಒಗ್ಗಟ್ಟನ್ನು ಹೆಚ್ಚಿಸುವದೇ ದೇಶದ ಮುಖಂಡರ ಮುಖ್ಯ ಕರ್ತವ್ಯವಾಗಿರತಕ್ಕದ್ದು. ಅಕಬರನು ಈ ವಿಷಯದಲ್ಲಿ ಬಹಳ ಸೂಕ್ಷ್ಮದೃಷ್ಟಿಯಿಂದ ನಡೆದುಕೊಳ್ಳುತ್ತಿದ್ದನು. ಅವನಕಾಲದಲ್ಲಿ ಮಹಮ್ಮದಿಯನಾದರೂ ಇತರ ಕುಲಸ್ಥರನ್ನು ನಿಷ್ಪಕ್ಷಪಾತದಿಂದ ನೋಡಿಕೊಂಡಿದ್ದನು. ಆಗ್ಯೆ ಅವನ ಚಕ್ರಾಧಿಪತ್ಯವು ಬಲಿಷ್ಟವಾಗಿತ್ತು. ಆದ್ದರಿಂದ ಅಕಬರನ ಮಾದರಿಯನ್ನು ಚನ್ನಾಗಿ ಪರಿಶೀಲಿಸಿ ನೋಡಿ ಈಗಿನಕಾಲಕ್ಕೆ ತಕ್ಕಹಾಗೆ ಒಗ್ಗಟ್ಟಿಗೆ ಅನುಕೂಲವಾಗುವ ಏರ್ಪಾಡುಗಳನ್ನು ನಮ್ಮ ಮುಖಂಡರುಗಳು ಕೂಡಿ ಮಾಡಬೇಕಾದದ್ದು ಅವಶ್ಯ. ಹಿಂದೂದೇಶದಲ್ಲಿ ಈಗ ಮತದ್ವೇಷವು ಬಹಳ ಕಡಿಮೆಯಾಗುತ್ತಾ ಬರುತ್ತಲಿದೆಯಾದರೂ ಇನ್ನೂ ಬಹುಮಟ್ಟಿಗೆ ಮುಂದಾಳುಗಳು ಈ ಬಾಬಿನಲ್ಲಿ ಕೆಲಸಮಾಡಲು ಬಾಕಿ ಇದೆ. ಮುಖ್ಯವಾಗಿ ಹಿಂದೂ ಮಹಮ್ಮದಿಯರಲ್ಲಿ, ಸಹೋದರಭಾವವು ಇನ್ನೂ ಬೇಕಾದಷ್ಟರಮಟ್ಟಿಗೆ ಅಭಿವೃದ್ಧಿಯಾಗಿರುವದಿಲ್ಲ. ಆದ್ದರಿಂದ ಎಲ್ಲಾ ಸಂಗಡದ ಮುಖಂಡರು ಸ್ವರಾಜ್ಯಸ್ಥಾಪನೆಗಾಗಿ ಅವರವರ ಸಂಗಡದವರನ್ನು ಮೊದಲು ಹಿಂದೀಯನಾಗಿ ವರ್ತಿಸಲು ಬೋಧಿಸಬೇಕಾಗಿದೆ. ಈ ಬೋಧನೆಯನ್ನು ಕೊಡಲಿಕ್ಕೆ ರಾಷ್ಟ್ರೀಯ ಶಾಲೆಗಳು ಬಹಳ ಪ್ರಯೋಜನವಾಗುವವು. ಎಲ್ಲಾ ಸಂಗಡದವರಿಗೂ ರಾಷ್ಟ್ರೀಯ ವಿದ್ಯೆಯನ್ನು ಒಂದೇರೀತಿಯಲ್ಲಿ ಕೊಟ್ಟದ್ದೇಯಾದರೆ ದೇಶವು ಅನೇಕ ಕಷ್ಟಗಳಿಂದ ನಿವಾರಣೆ ಹೊಂದುವದು ಸುಲಭಸಾಧ್ಯವಲ್ಲವೇ? ಎಲ್ಲಾ ಸಂಗಡಗಳಲ್ಲಿ ಕೆಲವರು ಈಗ ಬ್ರಿಟಿಷ್ ಸರಕಾರದ ಮೆಚ್ಚುವಿಕೆಯನ್ನು ನಾರಿನೋಡುವವರಾಗಿರುತ್ತಾರೆ. ಎಲ್ಲಾ ಸಂಗಡದವರು ಪ್ರತಿಯೊಂದು ಸಂಗಡದವರ ಅಭಿಮಾನಕ್ಕೆ ಹೆಚ್ಚಾಗಿ ಗಮನ ಕೊಡಬೇಕೇಹೊರ್ತು, ಸರಕಾರದ ಮೆಚ್ಚಿಕೆಗೆ ಆಶಿಸಿದರೆ ಎಲ್ಲವರೂ ಹೆಚ್ಚಿನ ಪರಾಧೀನತೆಗೆ ಒಳವರು. ಎಷ್ಟು ದಿನಗಳವರೆಗೆ ಒಂದು ಸಂಗಡದವರಲ್ಲಿ ಮತ್ತೊಂದು ಸಂಗಡದವರು ಸಂಶಯಪಡುತ್ತಲಿರುತ್ತಾರೋ ಅಷ್ಟರವರೆಗೆ ದೇಶದಲ್ಲಿ ಒಗ್ಗಟ್ಟು ಬರುವದು ಬಹಳ ಅಸಾಧ್ಯ. ಕೆಲವು ಸಂದರ್ಭದಲ್ಲಿ ಎಲ್ಲಾ ಸಂಗಡದವರು ಒಗ್ಗಟ್ಟಿನಿಂದ ವರ್ತಿಸಿದ ಮಹತ್ಕಾರ್ಯಕ್ಕೇನೆ ಹೆಚ್ಚಿನ ಪ್ರಯೋಜನವಾಗಲಾರದು. ಎಲ್ಲಾ ಮತಸ್ಥಾಪಕರು ಅನ್ಯರ ಮತಗಳನ್ನು ದೂಷಿಸುವವರಾಗಿಲ್ಲ. ಮುಕ್ತಿಮಾರ್ಗಗಳನ್ನು ಹೀಯ್ಯಾಳಿಸುತ್ತಾರೆಯೇ ಹೊರ್ತು ಇತರ ಮತಗಳಲ್ಲಿರುವ ಒಳ್ಳೇ ಗುಣಗಳಲ್ಲಿ ಅಸಹ್ಯಪಟ್ಟಿರುವದಿಲ್ಲ. ಈಚೆಗೆ ಪ್ರತಿ ಮತಸ್ಥರಲ್ಲಿ ಕೆಲವರು ಸ್ವಾರ್ಥತೆಯಿಂದ ಅವರವರ ಮತದಲ್ಲಿರುವಂಥಾ ಒಳ್ಳೇ ಬೋಧನೆಗಳಿಗೆ ವಿರೋಧವಾಗಿ ಭೇದಿಸಹತ್ತಿ, ಅವರವರ ಮತಸ್ಥಾಪಕರ ಶ್ರೇಷ್ಠವಾದ ಹೆಸರನ್ನು ಲೋಕಾಪವಾದಕ್ಕೆ ತರುವವರಾಗಿರುತ್ತಾರೆಯೇ ಹೊರ್ತು ಶ್ರೇಯಸ್ಸನ್ನು ಹೆಚ್ಚಿಸುವವರಾಗಿಲ್ಲ. ಯಾಕೆ? ಪ್ರತಿಸಂಗಡದವರಲ್ಲೂ, ಹಿಂದೂದೇಶದ ಅಭಿವೃದ್ಧಿಗಾಗಿ, ಸ್ವಾರ್ಥತೆಯನ್ನು ಬಿಟ್ಟು ಏಕ್ಯಪ್ರಯತ್ನವನ್ನು ಮಾಡಿದ ಮಹನೀಯರು ಅನೇಕರಿದ್ದರು. ಗತಿಸಿದ ಬದ್ರುದೀನ್ ಟಯಾಬ್ಜಿಯವರು, ಪಂಡಿತ ಅಯೋಧ್ಯನಾಥರು, ಗೋಕಲೆಯವರು, ಆನಂದಮೋಹನ ಬೋಸರು, ದಾದಾಬಾಯಿಯವರು, ಇವರೆಲ್ಲವರೂ ಮಹಮ್ಮದಿ, ಹಿಂದು, ಕ್ರೈಸ್ತ, ಪಾರ್ಸೀ ಕುಲದವರಾದರೂ ಕೂಡ, ಎಷ್ಟರಮಟ್ಟಿಗೆ ಅವರೆಲ್ಲರನ್ನು ಹಿಂದೂದೇಶದ ಮುಖಂಡರೆಂದು, ಹಿಂದೂದೇಶವು ಮಾನಿಸುತ್ತಿತ್ತೆಂದು ಎಲ್ಲವರಿಗೂ ತಿಳಿದ ಸಂಗತಿಯಾಗಿದೆ. ಈಗಲೂ ಸಹ ಎಲ್ಲಾ ಕುಲದವರಲ್ಲು ಹಿಂದೂದೇಶವು ಮಾತೃಭೂಮಿಯೆಂದು ಪ್ರೀತಿಸಿ ದೇಶಹಿತಕ್ಕಾಗಿ, ಕಾರಾಗೃಹಗಳಲ್ಲಿ ಕಷ್ಟಗಳನ್ನು ಸ್ವಲ್ಪವೂ ಎಣಿಕೆಗೆ ತರದೆ ವಾಸಿಸುವ ಮಹಾವೀರರು ಕಡಿಮೆಯಾಗಿರುವರೇ? ಆದರೆ ಮಾಡತಕ್ಕದ್ದೇನು. ಅಂಥವರು ಯಾತಕ್ಕೋಸ್ಕರ, ಯಾರಿಗೋಸುಗವಾಗಿ ನಿರ್ಬಂಧನದಲ್ಲಿ, ಕಷ್ಟಪಡುವವರಾಗಿರುತ್ತಾರೆಂಬದನ್ನು ತಿಳಿಯದೆ ಸ್ವಾರ್ಥತೆಯಿಂದ ದ್ವೇಷವನ್ನು ಬೆಳಸಿ ಆ ಬಂಧನದಲ್ಲಿ ಇರುವ ಹಿಂದೀವೀರರನ್ನು ನಿರ್ಭಾಗ್ಯರನ್ನಾಗಿ ಮಾಡಲು ಪ್ರಯತ್ನಿಸುವಕಾರಣ, ಹಾಗೆ ವರ್ತಿಸುವ ಪ್ರತಿಯೊಬ್ಬನೂ ಅವನ ಮತದ್ರೋಹಿಯಾಗುವವನಲ್ಲವೇ? ಬಹಳ ಕಷ್ಟಪಡುತ್ತಾ ಈಗ ಕಾರಾಗ್ರಹದ ಬಂಧನದಲ್ಲಿ ವಾಸಿಸುವಂಥಾ ಎಲ್ಲಾ ಸಂಗಡದವರಿಂದಲೂ ಪ್ರೀತಿಸಲ್ಪಟ್ಟ ಮಹಾಪುರುಷರು ಯಾತಕ್ಕೋಸ್ಕರ ಕಷ್ಟಪಡುತ್ತಿರುವರೆಂದು ಭಾವಿಸುತ್ತಿರುವಿರಿ? ಪ್ರತಿಯೊಬ್ಬರು ಅವರವರ ಮತಧರ್ಮವನ್ನು ಕಾಪಾಡಲಿಕ್ಕಲ್ಲದ ಪಕ್ಷ ಅವರು ಖಂಡಿತವಾಗಿಯೂ, ವೃಥಾ ಕಷ್ಟವನ್ನು ಅನುಭವಿಸುತ್ತಿರಲಿಲ್ಲ. ಪೂರ್ವದ ಪ್ರತಿಯೊಬ್ಬ ಮತಸ್ಥಾಪಕನು ದೇಶದ ಜನರು ಪರತಂತ್ರಕ್ಕೆ ಒಳಗಾದದನ್ನು ಕಂಡಲ್ಲವೇ ಸ್ವತಂತ್ರ್ಯವನ್ನು ಬೋಧಿಸಹತ್ತಿ, ಕಷ್ಟಕ್ಕೆ ಒಳಗಾಗಿ, ಸ್ವತಂತ್ರವನ್ನು ಸ್ಥಾಪಿಸಿ, ಪ್ರಪಂಚದಲ್ಲಿ ಕೀರ್ತಿಪಡೆದವರಾದರು. ಹಾಗಿರುವಾಗ್ಯೆ ಈಗ ಹಿಂದೂದೇಶವು ಪರತಂತ್ರಕ್ಕೊಳಗಾಗಿರುವ ಕಾರಣ, ಪ್ರತಿಯೊಂದು ಮತವೂ ಸ್ವತಂತ್ರಸ್ಥಾಪನೆಗಾಗಿ ಬೋಧಿಸಲ್ಪಟ್ಟದೆಂದರಿತು, ಈಗಿನ ಹಿಂದುಸ್ಥಾನದ ಸ್ವತಂತ್ರಸ್ಥಾಪನೆಯ ಹೋರಾಟದಲ್ಲಿ ಹಿಂದೂದೇಶವನ್ನು ಮಾತೃಭೂಮಿಯೆಂದು ಯೋಚಿಸುವ ಎಲ್ಲಾ ಸಂಗಡದವರು ಪರಸ್ಪರ ವಿಶ್ವಾಸದಿಂದ ಸಹೋದರಭಾವದಲ್ಲಿ ಒಗ್ಗಟ್ಟಿನಿಂದ ವರ್ತಿಸಿ, ನಮ್ಮ ಮಾತೆಯನ್ನು ವಿಮುಕ್ತಳನ್ನಾಗಿ ಮಾಡುವದು, ಅವಳ ಉದರದಲ್ಲಿ ಜನಿಸಿದ ಸುಪುತ್ರರಿಗೆ ಕೂಡಿದೆ.

ಸಂಘದ ಕೆಲಸ.

ಕಳೆದ ಸಂಚಿಕೆಯಲ್ಲಿ ಅತಿವೃಷ್ಟಿ ... ಅನಾಹತ ದೆಸೆಯಿಂದ ಬಂದಂಥ ನಷ್ಟಗಳನ್ನು ತಿಳಿಯಲು ಮತ್ತು ಹೋಗಲಾಡಿಸಲು, ಸಂಘದ ಒಂದು ಸೇನಾಂಗವಿದ್ದ ಪಕ್ಷ ಬಹಳ ಅನುಕೂಲವಿತ್ತೆಂದು ಸೂಚಿಸಿದ್ದಾಯಿತ್ತು. ಇತ್ತಲಾಗಿ ಇದೇ ತಿಂಗಳು 12 ನೇ ತಾರೀಕಿನಿಂದ 1೬ ವರೆಗೆ ಹೊಡೆದ ಮಳೆಯ ದೆಸೆಯಿಂದ ಅನೇಕ ಮನೆಮಠ ... ಭೂಮಿ ಪೈರು ವಗೈರೆ ನಷ್ಟವಾದದನ್ನು ವಿವರಿಸಲು ಬಹಳ ವ್ಯಸನಕರವಾಗಿದೆ. ಈಗ ಸಂಘದವರು ತಟಸ್ಥರಾಗಿದ್ದರೆ ಸಂಘದವರ ಉಪಕಾರಿಕೆ ಕೆಲಸಗಳನ್ನು ಮಾಡಿದಂತೆ ಆಗುವದಿಲ್ಲ. ಆದರೆ ದುರದೃಷ್ಟದವರ ಸಂಘದವರು ದೇಶದಲ್ಲು ಅದಂಥ ನಷ್ಟಕಷ್ಟಗಳನ್ನು ತಿಳಿದುಕೊಳ್ಳಲು ತಕ್ಕ ಏರ್ಪಾಡುಗಳು ಇಲ್ಲದ ಕಾರಣ, ಪ್ರತಿ ಗ್ರಾಮದಲ್ಲು ದೇಶಾಭಿಮಾನಿಗಳಾದ ಯಾರಾದರು ಅವರವರ ಗ್ರಾಮಗಳಲ್ಲು ಅದಂಥ ಅನಾಹುತಗಳನ್ನು ವಿವರವಾಗಿ ಜಮೀನ್ದಾರರ ಸಂಗದ ಕಾರ್ಯದರ್ಶಿಯವರಿಗೆ ತಿಳಿಸಿದಲ್ಲು, ದೇಶದ ನಷ್ಟಕಷ್ಟಗಳನ್ನು ಅಂದಾಜುಮಾಡಲಿಕ್ಕೂ ಮತ್ತು ಇನ್ನು ಮುಂದಕ್ಕೆ ಏನು ಏರ್ಪಾಡುಗಳನ್ನು ಮಾಡಬಹುದೆಂದು ಆಲೋಚಿಸುವದಕ್ಕೂ ಸಹ ಸಹಾಯಮಾಡಿದಂತೆ ಆಗುತ್ತೆ. ಈ ವಿಷಯದಲ್ಲಿ ಗ್ರಾಮಗಳಲ್ಲು ತಿಳುವಳಿಕೆ ಇರುವ ಮಹಾನುಭಾವರು ಪ್ರಯತ್ನ ತೆಗೆದುಕೊಳ್ಳದ ಪಕ್ಷ ಅಂಥವರು ದೇಶದ ಕೆಲಸವನ್ನು ಮಾಡಲು ಹಿಂಜರಿದ ಪಾಪಕ್ಕೆ ಗುರಿಯಾಗುವರು. "ಮನಸಿದ್ದಲ್ಲಿ ದಾರಿ ಇದೆ" ಎಂಬುವ ಗಾದೆಯಹಾಗೆ ಮನಸುಮಾಡಿದರೆ ಏನೂ ದೊಡ್ಡ ಕೆಲಸವಲ್ಲ. ಗ್ರಾಮದ ರೈತರು ಈ ಸಮಯದಲ್ಲು ಕೆಲಸವನ್ನು ಬಿಟ್ಟು ಎಲ್ಲಿಯೂ ಹೋಗದೆ ಇರುವ ಕಾರಣ, ಈ ಸಹಾಯಮಾಡಲು ಮನಸ್ಸಿರುವಂಥಾವರು ಕಡಿಮೆ ಒಂದುದಿನ ಬೆಳಿಗ್ಗೆ ಗ್ರಾಮದಲ್ಲಿ ಹೂಡುವ ಗದ್ದೆಯ ಬಳಿಗೆ ಹೋಗಿ ತಿಳಿದುಕೊಂಡರೆ ಬಹಳ ಸುಲಭದಿಂದ ಮಾಡಬಹುದು. ಅಲ್ಲದೆ ಸಂಘದವರು ಕ...
ಒಂದು ಕಮಿಟಿಯನ್ನು ಏರ್ಪಡಿಸಿ ದೇಶದಲ್ಲು ತಿರುಗಿ ...
ಯಿಂದ ಆಗಿರುವ ಲುಕ್ಸಾನುಗಳನ್ನು ನಿರ್ಧರಿಸಿ, ಹ್ಯಾಗೆ ...
ಲುಕ್ಸಾನುಗಳನ್ನು ಹೋಗಲಾಡಿಸುವದೆಂದು ತೀರ್ಮಾ...
ಬೇಕಾದದ್ದು ಬಹಳ ಅವಶ್ಯ. ಈ ಕೆಲಸವು ಸಂಘದವ...
ಸಾಧ್ಯವಾಗಬೇಕಾದರೆ ಗ್ರಾಮಗಳಲ್ಲಿರುವ ಪ್ರತಿಯೊಬ್ಬ...
ಸ್ವಾರ್ಥತೆಯನ್ನು ಮರೆತು ಕೆಲಸಮಾಡಿದರೇನೆ ಆಗುವ...
ಈ ವಿಷಯದಲ್ಲು ಪ್ರತಿಯೊಬ್ಬನೂ ತುಂಬಾ ಆಲೋಚಿಸ...
ಕಾದದ್ದು ಏನಂದರೆ—ಈ ಅತಿವೃಷ್ಟಿಯ ದೆಸೆಯಿಂದ ...
ವರ್ಷಕ್ಕೆ ಗ್ರಾಮಗಳಲ್ಲು ಕ್ಷಾಮವು ತಲೆದೋರುವ...
ಅನ್ನವಿಲ್ಲದೆ ಖಾಯಿಲೆಯು ಹೆಚ್ಚಿ ಜನರು ಮರಣಕ್ಕೆ ತು...
ಗುವರು. ಅಲ್ಲದೆ ಉಳಿದವರು ಊಟಕ್ಕೆ ತಕ್ಕಷ್ಟು ಇಲ್ಲ...
ಮುಂದಲ ಕೆಲಸಗಳನ್ನು ನಡಿಸಲಿಕ್ಕೆ ಶಕ್ತಿಯಿಲ್ಲದೆ, ದೇಶ...
ಬಹಳ ಹೀನಸ್ಥಿತಿಗೆ ಬಂದು ಗೋಳಾಡುವ ಸಂಧರ್ಭವನ...
ತಪ್ಪಿಸಬೇಕಲ್ಲವೆ? ದೇಶಬಾಂಧವರೆ ತಾಳ್ಮೆಯಿಂದ ಸ್ವ...
ಚೆನ್ನಾಗಿ ನಮಗೆ ಒದಗಿದ ಕಷ್ಟವನ್ನು ಆಲೋಚಿಸಿ. ...
ಧಾ ಕಷ್ಟಕ್ಕೆ ಒಳಗಾಗಿದ್ದೇವೆ! ಈಗಕ್ಕೆ ಅನ್ನವಿದೆ ಎಂ...
ಉದಾಸೀನಪಡಬೇಡಿ. ಪೂರ್ವಪುಣ್ಯದಿಂದ ಏನೂ ಲುಕ...
ಸುಹೊಂದದ ಕೆಲವರು ಲುಕ್ಸಾನು ಹೊಂದಿದವರವೇ...
ಸಹಾಯ್ಯತಾಪಪಡುವಿರಾ! ಕೈಲ್‌ಮುಹೂರ್ತಕ್ಕೆ ಮೊದ...
ಗದ್ದೆ ಕೆಲಸ ತೀರದ ಪಕ್ಷ ಹಿಂದೇಬಿದ್ದವರಿಗೆ ಸಹಾಯಪ...
ಡುವದು ಹಿರಿಯರ ಕಾಲದಲ್ಲು ದೇಶಪದ್ಧತಿಯಾಗಿತ್ತು. ...
ಅನೇಕರು ಮರತಿರುವ ಅಂಥಾ ನಡವಳಿಕೆಗಳನ್ನು ಅನುಸ...
ದೇಶವನ್ನು ಉದ್ಧಾರಮಾಡಲಿಕ್ಕೆ ಪ್ರಯತ್ನಿಸುವರಾ! ...
ಜದ ಭತ್ತವಿಲ್ಲದವನಿಗೆ ಬೀಜದ ಭತ್ತ, ಎತ್ತುಗಳಿಲ್ಲದವ...
ಹೂಡುವ ಎತ್ತು, ಆಳುಗಳಿಲ್ಲದವನಿಗೆ ಸ್ವತಃ ಕೆಲಸಮಾ...
ಸಹಾಯಕೊಟ್ಟು ದೇಶದ ಅನ್ನವನ್ನು ಕಾಪಾಡುವಿರಾ...
ನಮ್ಮ ಹಿರಿಯರು ಹೀಗೆಯೇ ಮಾಡಿರುತ್ತಾರೆ. ನಾ...
ಹಾಗೆ ಮಾಡಿದರೇನೇ ದೇಶವು ಉದ್ಧಾರವಾಗುವದು.

ಶ್ರೀಮತ್ ವೀರಶೈವಸಮಾಜ ವಿದ್ಯಾಭಿವೃದ್ಧಿ ಸಂಘ

ಅಯ್ಯಾ ಸಮಾಜ ಬಂಧುಗಳೇ ಈಗ್ಯೆ ಯರಡು ವ...
ಷಗಳ ಲಾಗಾಯ್ತು ಇದೊಂದು ಸಂಗವನ್ನು ದೊಡ್ಡ...
ಸಲಹೆ ಮೇರೆ ಸ್ಥಾಪಿಸಲು ಕೆಲರು ಕುರುವಿನಲ್ಲಿ ಬಹ...
ಉತ್ಸಾಹದಿಂದ ಕೈಕೊಂಡು ತದಾನ್ಯ ತಹಲ್‌ವರೆಗ...
ಹಾಗೂ ಹೀಗೂ ಸಂಘಕ್ಕೆ (2462-6 5 ಪೈಯನ್ನೂ ...
ಗ್ರಹಿಸ ಮಾಡಿದವರುಗಳಿಂದ ಜಮಾಯ್ಸಿ ಮೂಲಧನವನಾ...
ಗಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಯಿಟ್ಟಿದ್ದಾಯ್ತು. ಪರಂ...
ವರುಷ ಯಿರಡಾದರೂ ಚಂದಾ ವಾಗ್ದಾನವೆ ಪೂರ್ತಿ ವಸ...
ಲಾಗದೆ ಬಾಕಿಯಾಗಿರುತ್ತೆ. ಹೀಗೆ ಬಾಕಿ ಮಾಡಿಕೊಂ...
ಕೊಂಡಿರುವ ಸೋಮವಾರಪೇಟೆ ಕೊಡ್ಲಿಪೇಟೆ, ಮುತ...
ಗ್ರಾಮಾಂತರದ ನಮ್ಮ ಈ ಸಮಾಜದ ಸರ್ವ ಬಂಧುಗಳ...
ನನ್ನ ವಿನಂತಿಯೇನಂದ್ರೆ, ತಾವು ಈ ಸಂಘ ಶುರು ಮಾಡ...
ವಾಗ್ಯೆ ಎಷ್ಟು ಉತ್ಸಾಹಿಗಳಾಗಿ ಧಾರಾಳವಾದ ಬರೇ ಮ...
ತನ್ನಾಡಿದ್ದು ಬೆಟ್ಟ ಅಗದು ಇಲಿ ಹಿಡಿದಂತಾಯ್ತು. ಶಿವಾ...
ಇನ್ನೇನ ಪ್ರಯೋಜನವು ಕಂಡುಬರಲಿಲ್ಲವಾಯ್ತು. ಹೀ...
ವಾಗ್ದಾನಶೂರರಾದ ತಾವುಗಳು ಮುಂದಿಟ್ಟ ಕಾಲನ...
ಹಿಂದೆಗೆಯದೆ ತಮ್ಮ ತಮ್ಮ ಚಂದಾ ಮೊಬಲಗನ್ನು ಪಾವ...
ಮಾಗಿ ಮುಂದಾದರೂ ಕೀರ್ತಿಪರರಾಗಬೇಕಾಗಿ ಕೋರು...
ತ್ತೇನೆ. ಅಯ್ಯಾ ವಾಚಕಮಹನೀಯ್ಯರೆ ಕೇಳಿ ನಮ...
ಸೋಮವಾರಪೇಟೆ ವಗೈರೆ ಎಲ್ಲಾ ಕಡೆ ವೀರಶೈವ ಬಂಧ...
ಗಳು ತಮ್ಮ ಬಾಬ್ತು ಚಂದಾ ಮೊಬಲಗನ್ನು ಕೊಡಬೇ...
ಕೆಂದು ನಾನು ಮತ್ತು ಕೆಲವು ಮೆಂಬರುಗಳು ಕೇಳಿದಾಗ್ಯೆ...
ಆಗ ಈಗ ಯೆಂದು ಕಾಲಾಹರಣ ಮಾಡಿ ಆಡುವ ಮಕ್ಕ...
ಳಿಗೆ ಬಾಳೆಹಣ್ಣು ತೋರಿಸಿದಂತೆ ಮಾಡಿದರೆ ಹೊರ್ತು ತಮ...
ಗಳ ಘನತೆಗೆ ಸಾಕಾಗುವಂತೆ ನಡದುಕೊಳ್ಳದೆಯಿರುವದನ್ನು...
ನೋಡಿದರೆ ತುಂಬಾ ವಿಶಾದವಾಗುತ್ತೆ. ಯಿಂಥಾ ದೊಡ್ಡ...
ಮನುಷ್ಯರು ಹೀಗೆ ಉದಾಸೀನಮಾಡಿದ್ದಲ್ಲಿ ಈ ಸಂಘ...
ಹ್ಯಾಗೆತಾನೆ ವೃದ್ಧಿಯಾದೀತು. ಕೈಕೊಂಡ ಕೆಲ್ಸವನ್ನು...
ಮುಂದರಿಸಡೆ ಹಿಂಜರಿಯುವ ಮಾನವರಿಗೆ ಯಾವ ಕೀರ್ತಿ...
ತಾನೇ ದೊರೆಕೀತು. ತಾವುಗಳು ಧನ್ಯವಂತರಾಗಿಯೂ...
ಬುದ್ಧಿಶಾಲಿಗಳಾಗಿಯೂ ಅನ್ಯದೇಶದಲ್ಲಿ ಸಂಚರಿಸಿ ಆಸ್...
ಸುಖಗಳನ್ನು ತಿಳಿದವರಾಗಿಯೂ ಇದ್ದು ನಮ್ಮ ಈ ದೇಶ...
ಲ್ಲಿನ ವೀರಶೈವರಗತಿ ಮುಂದೇನಾಗುತ್ತೆಂಬದನ್ನು ಸ್ವಲ್ಪವ...
ಟ್ಟಿಗೆ ಆಲೋಚಿಸದೆ ಹೋದರೆ ತಮಗಳ ಪ್ರಾಜ್ಞತೆಗೆ ಕಾ...
ದದ್ದೆ. ಈ ದೇಶದಲ್ಲಿಯ ವಿದ್ಯೆಯಲ್ಲಿ ಮುಂದರಿದ ಇತರ ...
ಮಾಜವು ವಿದ್ಯೆಯಲ್ಲಿ ಹಿಂದೆಳಿದಿರುವ ನಮ್ಮನ್ನು ಏನೆನ್ನು...
ತ್ತಾರೆಂಬುದನ್ನು ನೀವು ತಿಳಿದಿಲ್ಲವೇ. ಯಾ ಕೇಳಿಲ್ಲವೆ ಮೈ...
ಸೂರು, ಧಾರವಾಡ, ಗದಗ, ಸೊಲ್ಲಾಪುರ, ಪ್ರಾಂತ್ಯ...
ವೀರಶೈವರು ಎಷ್ಟರಮಟ್ಟಿಗೆ ಮುಂದರಿದು ಬಂದರೆಂಬುದನ್ನು...
ನೀವುಗಳು ಪೇಪರುಗಳಿಂದಲಾದರು ಕೇಳಿಲ್ಲವೆ. ಇಂಥಾದ...
ನ್ನೆಲ್ಲಾ ಕಂಡೂ ಕೇಳಿಯೂ ಕೂಡ ನಮ್ಮೀದೇಶದ ...
ಸಮಾಜದ ಬಂಧುಗಳು ತಮ್ಮ ತಮ್ಮ ಸುಖಗಳೇ ದೊಡ್ಡದು...
ನನ್ನ ತೋಟ, ನನ್ನ ಮನೆ, ನನ್ನ ಹೆಂಡರು ಮಕ್ಕಳು ಎಂದ...
ಗರ್ವಿಸಿ ಈ ಸಮಾಜದ ದುಸ್ಥಿತಿಯನ್ನು ಕಣ್ಣೆತ್ತಿ ನೋಡ...
ಹೋದಲ್ಲಿ ತಮಗೇ ಕೀರ್ತಿ ಯತಕ್ಕುತಾನೇ ಮುಂದೆ ಹ್ಯಾ...

...ಉಳಿದೀತೆಂಬುದನ್ನು ಚೆನ್ನಾಗಿ ಆಲೋಚಿಸಿ ನೋಡಿ. ಇಂಥಾ ನವನಾಗರೀಕ ಕಾಲದಲ್ಲಿ ವಿದ್ಯೆಯಿಲ್ಲದೆಯೇ ಸಿದ್ಧರುತಾಸೇ ಮೇನು ಮರ್ಯಾದೆ ಶಿಕ್ಕೀತು. ಆದ್ದರಿಂದ ಸಮಾಜ ಬಂಧು ಗಳೆ ಮೇಲ್ಕಂಡ ಸಂಗ್ತಿಗಳನ್ನೆಲ್ಲಾ ತಾವು ದೀರ್ಘಾಲೋ ಚನೆ ಮಾಡಿ ಇನ್ನುಮುಂದಾದರೂ ಎಚ್ಚತ್ತು ವಿದ್ಯಾಭಿವೃ ದ್ಧಿಯೆಂಬ ಈ ಅನಾಥ ಶಿಶುವನ್ನು ಉದ್ಧಾರಮಾಡಿ ಪುಣ್ಯ ವಂತರಾಗಿರಿಯೆಂದು ತಮಗಳಲ್ಲಿ ಕೈಯೆತ್ತಿ ವಿನಯದಿಂದ ಕೇಳುಕ್ಕೊಳ್ಳೆನೆ ಮಹಾಸ್ವಾಮಿಗಳಿರಾ, ದೇಶಬಾಂಧವರೆ ಮತ್ತು ಸಮಾಜ ಸಹೋದರರೆ, ಏನೋ ಶನಿವಾರ ಸಂತೆ ಮಾಳಿ ಮಲ್ಲಿ ಕೆಲವರು ಈ ಸಂಗದ ಪ್ರಬಲಕ್ಕಾಗಿ ಶ್ರೇಯಾತಾಶತ್ತಾ [illegible] ಮೀಟಿಂಗುಗಳನ್ನು ಮಾಡುತ್ತಾ ಪ್ರತಿ ಮೀಟಿಂಗು ಗಳಿಗೂ ಸರ್ವ ಮೆಂಬರುಗಳಿಗೂ ದಯಮಾಡಿಸಬೇಕೆಂದು ಪತ್ರಗಳನ್ನು ಕಳುಹಿಸುತ್ತಾ ಇಷ್ಟರವರೆಗೆ ಮಾಡುತ್ತಾ ಈಗ ಯೆರಡು ಮೂರು ಮೀಟಿಂಗುಗಳಲ್ಲಿ ಚರ್ಚೆಯಿಂದ ತಾವು ಆದಂತೆ ಸಂಘಕ್ಕೆ ಹಾಜರಾಗಿ ದರಕಾಸ್ತು ಮತ್ತು ಸರ್ಟಿಫಿಕೆಟುಗಳು ದಾಖಲ್ ಮಾಡಿಕೊಂಡ ಮೂರು ವಿ ದ್ಯಾರ್ಥಿಗಳ ಪೈಕಿ ಯೆರಡು ವಿದ್ಯಾರ್ಥಿಗಳಿಗೆ ವೇತನವಾಗಿ ಎಸ್. ಎಸ್. ಎಲ್. ಸಿ. ಓದುವ ಹುಡ್ಲಿ ಗ್ರಾಮದ ಪುಷ್ಪ ಪ್ಪನಿಗೆ ತಿಂಗಳು ಒಂದರ 7-8-0 ಆಣದ ಮೇರೆಯು ಮತ್ತು ಮೆಟ್ರಿಕ್ಯುಲೇಷನ್ ಓದುವ ಕಿತ್ತೂರು ಮಲ್ಲಪ್ಪನಿಗೆ ತಿಂಗಳು ಒಂದರ 9-0-0 ರೂಪಾಯಿಯೂ ಇನ್ನೊಬ್ಬ ಅಂದರೆ ಹೆಬ್ಬಾಲೆ ರುದ್ರಪ್ಪನು ಹಾಜರಾಗದೆಯೂ ತನ್ನ ಸರ್ಟಿಫಿಕೇಟನ್ನು ಹಾಜರ್ ಪಡಿಸದೆಯೂ ಹೋದ್ದಕ್ಕಾಗಿ ಅವನ ದರಕಾಸ್ತು ಅಲಾಯ್ದ ಇಟ್ಟು ಮೇಲ್ಕಂಡಂತೆ ವೇತನ ಕೊಡಲು ಸಂಘದ ಪ್ರಸಿಡೆಂಟರು ಹಾಲಿ ಬ್ಯಾಂಕಿನಲ್ಲಿ ಇದ್ದ 100-0-0 ರೂಪಾಯಿಗಳನ್ನು ತೆಗೆದು ಹೆಚ್ಚು ಬಡ್ಡಿ ರೂಪಿ ನ ಬಡ್ಡಿಯಿಂದ ವೇತನ ಕೊಡಬೇಕೆಂದು ಮಸ್ಸು ಮಾಡಿ ದಂತೆ ಈ ತಾರೀಖು 1 ರಲ್ಲಿ ವಟ್ಟಾರೆ ತೀರ್ಮಾನವಾಯ್ತು. ಆ ತೀರ್ಮಾನದಂತೆ ಪ್ರಸಿಡೆಂಟರು ಶೇಕಡ ನಾಲಿಯಾನ [illegible]-0-0 ರೂಪಾಯಿ ಬ್ಯಾಜನ್ನು ಕೂಡಿಸಿಕೊಡುವಂತೆಯೂ ಪ್ರತಿ ತಿಂಗಳ ಬ್ಯಾಜಿನಿಂದ ವೇತನದ ವೊಬಲಗು ವಜಾ ಬಾಕಿ ಮೊಬಲಗನ್ನು ಬ್ಯಾಂಕಿನಲ್ಲಿಯೇ ಶೇಕರಿಸಬೇಕೆಂತಲೂ ಈ ಸಂಘದ ಇನ್ನೊಂದು ಜನರಲ್ ಮೀಟಿಂಗು ಬರುವ ಯಪ್ರಿಲ್ ತಿಂಗಳಲ್ಲಿ ಕೊಡ.ವಾಗ್ಗೆ ಅಸಲನ್ನು ಈ ಸಂಘಕ್ಕೆ ಪಾವತ ಮಾಡಬೇಕೆಂತಲೂ ಪ್ರಸಿಡೆಂಟರ ಶಬೂಲಾತಿ ಪೇಟೆಯಿಂದ ಏದು ಮೆಂಬರುಗಳಿಗೆ ಮಹಾಂಬಡಿಕೆ ಬಸ್ಸಿ ಹಣ ಇವರ ಸುಪರ್ದಿಗೆ ವಹಿಸಿದುಕ್ತೆ ಈ ತಿಂಗಳ ಅಗಾಯ್ತಿನಿಂದ ವೇತನ ಕೊಡಬೇಕು ಸಂಘದಲ್ಲಿ ಹೆಚ್ಚು ಒಂದವಾಳ ಇಲ್ಲ ದ್ದರಿಂದ ಹೆಚ್ಚು ಹುಡುಗರಿಗೆ ವೇತನ ಕೊಡಲು ಸಾಧ್ಯವಿಲ್ಲ ಈ ರೀತಿ ಇದೇ ತಾರೀಖು 1 ನೇ ದಿನ ಶನಿವಾರಸಂತೆ ಸ್ಕೂಲಿನಲ್ಲಿ ಮ|| ಶ್ರೀ|| ಕಿತ್ತೂರು ಪ|| ಮಲ್ಲೆಗೌಡ್ರ ಅಧ್ಯಕ್ಷತೆ ಯಲ್ಲಿ ಮೀಟಿಂಗು ನಡಿಸಿ ಮೀಟಿಂಗಿಗೆ ದಯಮಾಡಿಸಿದ್ದ ಮೆಂಬರುಗಳು ಮತ್ತು ಸಭಿಕರು ಸಹ ಸರ್ವಸಮ್ಮತದಿಂದ ಒಂಬೂರಾಧ್ಯಕ್ಷ ಪ್ರಸಿಡೆಂಟರು ಸಹ ಅನುಮೋದಿಸಿದರು ಸಂತ್ರ ಈ ಸಂಘವನ್ನು ರಿಜಿಸ್ಟರ್ ಮಾಡಿಸಬೇಕೆಂತಲೂ ಸಂಘದ ಬೈಲಾಗಳನ್ನು ತಯಾರಿಸಬೇಕೆಂತಲೂ ಈ ಬೈಲಾ ಗಳನ್ನು ಮ|| ಶ್ರೀ ಬೆಂಗಳೂರು ಅಡ್ವೋಕೇಟ್ ಸರ್ ... ಎ. ಬಿ. ಎಲ್ ರವರಿಂದ ಬರಿಸಿಕೊಳ್ಳಬೇಕೆಂತಲೂ ಮ|| ಶ್ರೀ|| ಸಂಕ್ಷೇರಿ ಪಣ್ಣಪ್ಪನವರು ಮ|| ಶ್ರೀ|| ಬೆಳಾರಳಿ ಬಸವಣ್ಣನವರು ತಂದ ಸಬ್ಜೆಕ್ಟನ್ನೂ ಸಹ ಕುದ್ರಾ... ಅನು ಮೋದಿಸಿ ಈ ಠರಾವನ್ನು ಮುಂದೆ ಒಂದು ಸೆಪಟಂಬರ್ ತಾರೀಖು 5 ರಲ್ಲಿ ಇಟ್ಟಿರುವ ಮೀಟಿಂಗಿನಲ್ಲಿ ತೀರ್ಮಾನಿಸ ಬೇಕೆ ಎಲ್ಲಾ ಮೆಂಬರುಗಳು ದಯಮಾಡಿಸುವಂತೆ ಕೇಳಿಕೊ ಳ್ಳಲಾಗುತ್ತೆ. ಸರ್ವ ಮೆಂಬರುಗಳು ದಯವಿಟ್ಟು ಉದಾ ಸೀನಮಾಡದೆ ಆ ದಿವಸ ದಯಮಾಡಿಸಬೇಕು ಹೀಗೆಂದು ಅ ಧ್ಯಕ್ಷರು ಅಪ್ಪಣೆ ಕೊಡಿಸಿದಂತೆ ಸರ್ವರು ಅನುಮೋದಿಸಿ ವಂದನೆಗಳಿಂದ ಸಭೆಯು ಬರಖಾಸ್ತಾಯಿತು.

ಒಬ್ಬ ಸಮಾಜಹಿತೈಷಿ

ಪತ್ರವ್ಯವಹಾರಗಳು.

ಬಾತ್ಮಿದಾರರು ಪತ್ರದ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬುದಾರರಲ್ಲ. [ಎಡಿಟರ್]

ಗೋಣಿಕೊಪ್ಪಲು ಯೂನಿಯನ್ನಿಗೆ ಮ|| ಮುಕ್ಕಾಟಿರ ಪೂಣಚ್ಚನವರು ಅನುಮತಿಯಾಗಿ ಕೊಡುವ ಕಪ್ಪಿನ ವಿಷಯ ಇದಕ್ಕೆ ಮೊದಲು ಪತ್ರಿಕೆಯಲ್ಲಿ ಪ್ರಕಟನೆ ಯಾದದ್ದು ಸರಿಯಷ್ಟೆ. ಸದರಿ ಕಪ್ಪಿನ ವಿಷಯ ಅದು ವಿಲೆವಾರಿಯನ್ನು ಕುರಿತು ಇದೇ ತಿಂಗಳ ೬ ನೇ ತಾರೀಕಿನಲ್ಲಿ ಸದರಿ ಯೂನಿಯನ್ನಿನಲ್ಲಿ I. P. M. ಗೆ ಮೀಟಿಂಗು ನಡಿಯುವದರಿಂದ ಟೀಮು ಹಾಕುವವರು ಹಾಜರಾಗಬೇಕಾಗಿಯೂ ಯಾ, ಪತ್ರದ ಮೂಲಕ ಸೆ ಕ್ರೆಟರಿಯವರಿಗೆ ತಿಳಿಸಬೇಕಾಗಿಯೂ ಸೆಕ್ರೆಟರಿಯವರ ಕರೆಸಿಕೆ ಸದ್ರಿ ಯೂನಿಯನ್ನಿಗೆ ಮ|| ಚೆಪ್ಪುಡಿರ ಎಸ್. ಮಾಚಯ್ಯನವರು ಅನುಮತಿಯಾಗಿ ಕೊಟ್ಟ ೫ ರೂಪಾಯಿಗಳನ್ನು ಮೆಂಬರುಗಳೆಲ್ಲರು ವಂದನೆ ಪೂರ್ವಕ ಸ್ವೀಕರಿಸಿಕೊಂಡರು.

ಯೂನಿಯನ್ ಮೆಂಬರ್

ಗೋಣಿಕೊಪ್ಪಲು ಸಂತೆ ವ್ಯಾಪಾರಿಗಳ ಕಷ್ಟ.

ಸರಕಾರದವರಾದರೋ ೨೦-೨೫ ಜನರಿಗೆ ಮಾತ್ರ ವ್ಯಾಪಾರಕ್ಕೆ ಅನುಕೂಲವಾಗುವಂತೆ, ಹಂಚಿನ ಲೈನನ್ನು ಕಟ್ಟಿಸಿರುತ್ತಾರೆ. ಬಾಕಿ ಉಳಿದ ವ್ಯಾಪಾರಿಗಳೆಲ್ಲಾ ಸುಮಾರು ೬ ಅಡಿ ಚಚೌಕ್ಕದ ಜಾಗಕ್ಕೆ ಕೂಲಿಯವರಿಗೆ ೫ ರೂಪಾಯಿನಿಂದ ೨೦ ರೂಪಾಯಿನವರೆಗೂ ಕೂಲಿ ಕೊಟ್ಟು ಕಟ್ಟಿಸಿಕೊಳ್ಳುತ್ತಾರೆ. ಇದು ಒಂದು ವರ್ಷದಲ್ಲಿ ೩ ಕ್ಕಿಂತ ಹೆಚ್ಚು ಸಾರಿ ಬೀಳುತ್ತ, ಬಿದ್ದಾಗಲೆಲ್ಲಾ ಮತ್ತೆ ಬೇರೆ ಕೂಲಿ ಕೊಡಬೇಕಾಗುತ್ತೆ. ಇದರ ಮೇಲೂ ಹುಲ್ಲಿನ ಗುಡಿಸಲಾದ್ದರಿಂದ, ಮಳೆಯಲ್ಲಿ ಸಾಮಾನುಗಳು ನಷ್ಟ. ಈ ರೀತಿ ಪರಸ್ಥಳದ ವ್ಯಾಪಾರಿಗಳಿಗೆ ನಷ್ಟಕೊಡುವದಲ್ಲದೆ ಇದು ಸರಕಾರಕ್ಕೆ ನಷ್ಟವಾಗಿದೆ, ಮೇಲೆ ಹೇಳಿದ ೬ ಅಡಿಯ ಜಾಗಕ್ಕೆ ಸುಂಕ ೬ ಪೈ ಸರಕಾರದವರು ಕಟ್ಟಿಸಿರುವ ೬ ಅಡಿಯ ಜಾಗಕ್ಕೆ ೩ ಆಣೆಯೂ ೪ ಆಣೆಯೋ ಇದೆ. ಈ ಸುಂಕವು ೧೦೦೦ ರೂಪಾಯಿ ಒಳಗೆ ಹೋಗುತ್ತದೆ. ವ್ಯಾಪಾರಿಗಳಿಗೆಲ್ಲರಿಗೂ, ಈ ರೀತಿ ಸ್ವಲ್ಪ ಮಹಡಿಯುವಂತ ಹಂಚಿನ ಲೈನನ್ನು ಮಾಳಿದಲ್ಲೆಲ್ಲಾ ಪೂರ್ತಿಯಾಗಿ ಮಾಡಿದ್ದೇ ಆದರೆ, ಮೂರು ಯಾ, ನಾಲ್ಕು ಸಾವಿರ ರೂಪಾಯಿ ಉತ್ಪತ್ತಿ ಸರ್ಕಾರಿ ಇರುವ ರೀತಿ ಕಂತು ಬರುತ್ತದೆ. ಇದರಿಂದ ವ್ಯಾಪಾರಿಗಳೂ, ತೊಂದರೆಯನ್ನು ತಪ್ಪಿಸಿಕೊಂಡ ಹಾಗಾಯಿತು. ಸರಕಾರಕ್ಕೂ ಲಾಭವಾದಂತಾಯಿತು

ಒಬ್ಬ ವ್ಯಾಪಾರಿ

ಗೋಣಿಕೊಪ್ಪಲು ಪೋಸ್ಟಾಫೀಸಿನಿಂದ ಪತ್ರಿಕೆಗಳೂ ಕಾಗದಗಳೂ ಸರಿಯಾಗಿ ತಕ್ಕ ಸಮಯಕ್ಕೆ ಬಟವಾಡೆಯಾಗಲು ತಡವೇನಕ್ಕೆಂದರೆ, ಕೊಳತರ ಬೈಗೋಡು ಗ್ರಾಮದಿಂದ ಆರುಚೌಕೂರುವರೆಗೂ, ಗೋಣಿಕೊಪ್ಪಲು ಟಪಾಸಿಗೂ ಆಗಿ ಪೋಸ್ಟು ಮ್ಯಾನುಗಳು ಇಬ್ಬರು ಒಬ್ಬನೇ ಇದು ಹಾಗೆ ತಾನೆ ಒಬ್ಬನಿಂದ ಸಾಧ್ಯವಾದೀತು. ಸಭಕ್ಕೆ ಟಪಾಸಿಗಾದರೂ ಒಬ್ಬನನ್ನು ಕೊಟ್ಟಿದ್ದರೆ, ಹ್ಯಾಗಾದರೂ ಮಾಡಬಹುದಿತ್ತು. ಇದಕ್ಕೆ ಸರಿಯಾದ ಏರ್ಪಾಡು ಸರಕಾರದವರು ಮಾಡದೆ ಇದ್ದರೆ, ಇಲ್ಲಿ ದ್ರವ್ಯದಿಂದ ರೈತರಿಗೆ ಪಡಾದ ತೊಂದರೆಯೂ, ನಷ್ಟವೂ, ಮಾಡಿದಂತೆ ಆಗುತ್ತದೆಂಬುದರಲ್ಲಿ ಸಂಶಯವಿಲ್ಲ

ಜಾಡಿನವ

ನೀರಿನಲ್ಲಿ ಎಚ್ಚರಿಕೆ.

ಯೆಂದ್ರೆ, ಮಹಾಸ್ವಾಮಿಯವರೆ ಈ ವಾರ್ತಾದಲ್ಲಿ ನೀರಿನ ಮಹಾಮದಿಂದ ಆಲಿ ಸಡೆದ್ದ [illegible] ಗಳನ್ನು ಕೇಳಿದರೆ ನೀರಿನಲ್ಲಿ ಹಾಯುವಾಗ [illegible] ಮುದ್ದೇ ಇರಬೇಕು [illegible] ಹೆಬ್ಬಾಲೆ ಒಳ ಇರುವ ದೊಡ್ಡ [illegible] ಹಳ್ಳಿಯೊಂದು ಜಾಗದಲ್ಲಿ ಕೆಸ್ವಮೋಡಿದು ಬೀಳಿ ಹುಲ್ಲು ಹನ್ನೆರಡು ದಿವಸ ನಡಿಸು ಪಡೆಯಿಂದ ಸಿಂತ ನೀರಿನಲ್ಲಿ ಹಾಯುವ ದಾರಿಗಾರರ ಅಪಾಯ ತೆಗೆ ಗೌವರ್ನಮೆಂಟು ಯೆಚ್ಚರ ಕೊಡಬಾರದೇ. ಇಂಥಾ ಪಬ್ಲಿಕ್ ಜಾಗದಲ್ಲಿ ಹಿಂದೆ ನಡೆದಿದ್ದಾಯಿತು ಅನಾಹುತಗಳ ನೆನಪು ನೋಡಬಾರದೆ. ಹಿಂದೆ ಏನಾದರೂ ಗೋಣಿಯಲ್ಲಿ ಹೋದವರ ಮಾಡಿಗೋಸ್ಕರ [illegible] ಜೊಳಗೆ ಸೇತುವೆ ಮಾಡಲಿಲ್ಲವೇ. ಯಾರೋ ಒಬ್ಬ ಮಾರಲೋಸಿಯರ್ ಈ ಕಡೇ ಮೋಟರ್ ತಂದು ಹಿಂದಕ್ಕೆ ಹೋಗಲಿಲ್ಲವೆ ನಮ್ಮ ಸೊಸೈಟಿಗಳ ರಿಜಿಸ್ಟರ್ವರೆಗೆ ಇದರಿಂದ ಉಂಟಾದ ಆಪಾಯ ಕೇಳಬಾರದೇ ಪತಿ ಬಿಬಿನಲ್ಲಿ ಯಾ, ಹೋಬಳಿಯ ಹೀನಸ್ಥಿತಿಯನ್ನೇ ನೆನಸಿದರೆ. ಹೋಬಳಿಗಾರರ ಧರ್ಮ ನ್ಯಾಯ ಸರಿ [illegible] ಮುಂದೆ ಯಿಂಥಾ ಅಪಾಯದ ಜಾಗಕ್ಕೆ [illegible] ಕಟ್ಟಿಸ ಬೇಕು ಗೌವರ್ನಮೆಂಟಿನವರು ಮಾಡಲ್ಲಿ ಎಂದು ನಂಬುತ್ತೇನೆ

ಊರಿನವ.

ಬಿಲಮುರಿ ದೋಣಿ ಕಡುವಿಗೆ ದೋಣಿಯನ್ನು ಈವರೆಗೂ ಕೊಟ್ಟಿರುವುದಿಲ್ಲ. ಇಲಾಖೆ ಮಾರುವೆಗ್ಗಾರರು ಖುದ್ದು ಬಂದು ನೋಡಿ ರಿಪೋರ್ಟು ಮಾಡಿದರೂ, ಸರಕಾರಕ್ಕೆ ಕಾರಣವೇನು? ಸಂಕಟದಿಂದ ನರಳುತ್ತಿರುವ ಮನೆಮಾರು ಕೊಚ್ಚೆ ಹೋದ ಜನರ ಕಷ್ಟವನ್ನು ಕೇಳುವದಿಲ್ಲ. ಆದ್ದರಿಂದ ಈ ಕಷ್ಟವನ್ನು ಬಿಡಿಸಲಿಕ್ಕೆ ಒಡನೇ ದೋಣಿಯನ್ನು ಸರಕಾರದವರು ಕಳುಹಿಸಬೇಕಾಗಿ ಕೇಳಿಕೊಳ್ಳುತ್ತೇವೆ. ಡಿಸ್ಟ್ರಿಕ್ಟ ಮೆಜಿಸ್ಟ್ರೇಟ್ ಸಾಹೇಬರು ಖುದ್ದು ಬಂದು ಈ ವಿಷಯ ಬಿಲಮುರಿಯಲ್ಲಿ ವಿಚಾರಿಸುವರೇ.

ಗ್ರಾಮಸ್ಥ.

ಹಿಂದೆ ಬಿದ್ದಿರುವವರ ಗೋಳಾಟ.

ಕೊಡಗು ಮಹಾನೀಯರೆ, ವಂದೇ ದೇಶದಲ್ಲಿ ನಾವು ಸೇರಿ ಇಂಥಾ ಗೋಳಾಟದ ಹೋಬಳಿಯಲ್ಲಿ ಕಾಡು ಮೃಗಗಳಂತೆ ನಾವು ಅಲೆಯುವದು. ನಮ್ಮ ಬಡತನದ ಬೈಲಲ್ಲವೇ. ಅಯ್ಯೋ ಇಂಥಾ ವ್ಯವಸ್ಥೆಯಲ್ಲಿರ್ವ ನಮ್ಮ ಹೋಬಳಿಯಲ್ಲಿ ಮುಂದೆ ಮೂರು ತಿಂಗಳಿಂದ ಮಳೆಯಿಲ್ಲದೇ ಗೋಳಾಟವಾಯಿತು. ಈಗ ತಿಂಗಳಿಂದ ಹಿಡಿದಿದ್ದ ಅಡಿಮಳೆಯಿಂದ ನಮ್ಮ ಪೈರು ಪಕ್ಕಗಳ ಬಾಡೀತು. ಕೊಂಬಟ್ಟೆಯೆಂಬ ರೋಗವು ರಾಗಿ ಪೈರಿಗೆಲ್ಲಾ ತುಂಬಾ ಹಿಡಿದೇ ಹೋಯಿತು. ದುರ್ವ್ಯವಸ್ಥೆಯಲ್ಲಿರು ನಮ್ಮ ಹೋಬಳಿಯ ಕೃಷಿಯ ವಿಷಯ ಈ ರೀತಿ ಎಲ್ಲಾದರೆ ಅಪರೂಪವಾದ ಬೆಳೆಯೊಂದು ಕೆಟ್ಟನಂತರ ಮುಂದೆ ನಮ್ಮ ಪಾಡೇನು. ಹಿಂದೆ ನಾವು ಹಜೀರತ್ ಕಮೀಷನರ್ ಬೇಟಿಯನ್ನು ಅಪೇಕ್ಷಿಸಿ ಕೊಡಗು ಪೇಪರಿನಲ್ಲಿ ಬರೆದಿದ್ದೆವು. ಈ ತಾಹಲ್ ವರಿಗೂ ದಯಮಾಡುವವರು ಇಲ್ಲವು ಬಡರೈತರಾದ ನಮ್ಮಗಳ ಗೋಳಾಟವನ್ನು ಆರಿಕಮಾಡಿಕೊಳ್ಳಬೇಕೆಂದರೆ, ಹಾಲಿ ದವ ಲು ವಿಚಾರಿಸುವ ಮಹಾನೀಯರೆ ಇಲ್ಲಾ. ವರ್ಷವೆಲ್ಲ ಹಗಲು ರಾತ್ರಿ ನಾವು ವಂದೇ ರೀತಿ ಕೆಲಸ ಮಾಡಿ ನಮ್ಮ ಸಂಸಾರ ತಾಪತ್ರಗಳನ್ನು ನೀಗಿಸಿಕೊಳ್ಳಬೇಕೆಂದರೆ, ಆರು ತಿಂಗಳ ಅನ್ನವೂ ಬಟ್ಟೆಯೂ ಇಲ್ಲದೆ ಕಾಡು ಮೃಗಗಳ ರೀತಿಯಿಂದ ನಾವು ಕಾಲಕಳೆಯಬೇಕು. ಅಲ್ಲದೆ ಇಂಥಾ ನಾಗರೀಕ ಕಾಲದಲ್ಲಿ ಬ್ರಿಟಿಷ್ ಆಡಳಿತದಲ್ಲಿ ಲೋಕಸುಖವನ್ನು ನಾವು ಅನುಭವಿಸದೆ ಮೃಗಗಳಂತೆ ಪ್ರೇರಾ ಪೇಟೆ ಹೋಬಳಿ ಅಲೆದಾಡುವ ನಮ್ಮ ಹೀನಸ್ಥಿತಿಗಳನ್ನು ಇನ್ಯಾವ ರೀತಿಯಿಂದ ಬದಲಾಯಿಸಿಕೊಳ್ಳಲು ನಮಗೆ ಯಾವ ಪಾಯವೂ ತೋರದೆ ಇರುವದರಿಂದ ಬೇರೆ ಕಡೆ ನಾವು ನೋಡುತ್ತಿರುವ ಮೈಸೂರು ಸೀಮೆಯ ನೀರಾವರಿಯನ್ನು ನೋಡಿದರೆ ನಮ್ಮ ಹೀನಸ್ಥಿತಿ ಬಗ್ಗೆ ಹಾರಂಗಿ ನಾಲೆಯೇ ಕಾವಲಾಗಬೇಕೇ ಹೊರತು ಬೇರೆ ಉಪಾಯವೇ ಇಲ್ಲಾ. ಇಂಥಾ ಪ್ರಜೆ ಸೌಕರ್ಯಕ್ಕೆ ಅನುಕೂಲವಿರುವ ಜಿಲ್ಲೆ ಕೆಲಸದಲ್ಲಿ ಗೌವರ್ನಮೆಂಟಿನವರು ನಿಗಾ ಕೊಡದೆ ಇರುವದು ನೋಡಿದರೆ ಹೋಬಳಿಯಲ್ಲಾ ರಿಪೇರಿ ಫೇರೆದ್ದು ಆಗಬೇಕೆಂದು ಅಪೇಕ್ಷೆಯಿದೆ ಎಂದು ತೋರುತ್ತದೆ. ಗೌವರ್ನಮೆಂಟಿಗೆ ಪ್ರಜೆಗಳ ಸುಖದಿಂದ ಉಂಟಾಗುವ ಲಾಭವೇ ಪ್ರತಿಫಲವನ್ನು ಕೊಡಬೇಕಲ್ಲದೆ ಬೇರೆ ಉತ್ಪತ್ತಿಯಿಂದ ಎಷ್ಟು ಬಂದರೂ ಕೂಡ ಅಷ್ಟೇ ಕ್ರಮತೆಗೆಯಬೇಕಾಗುತ್ತದೆ.

ಆತಿ ಚಿಂತಕ.

ಬಿಲಮುರಿಯಲ್ಲಿ ಮಳೆಯಿಂದ ಆದ ನಷ್ಟದ ಪರಿತಾಪ. ಆಶ್ಲೇಷ ನಕ್ಷತ್ರದ ೨ ನೇ ಪಾದದಲ್ಲಿ ತಾರೀಖು ೫ ರಲ್ಲಿ ಸುರುವಾದ ಎಡೆಬಿಡದೆ ಕುಂಬದ್ರೋಣವಾಗಿ ಹೊಡೆದ ಮಳೆಯಿಂದಲೂ ನಾಲ್ಕನೇ ಪಾದದಲ್ಲಿ ಸಹ ಆದ ಅನರ್ಥವನ್ನು ಅಂದು ಹೇಳಲಾಗದು. ಇಲ್ಲಿನ ಸಕಿ ವೃದ್ಧರೂ ಕೂಡ ತಮ್ಮ ಚಿಕ್ಕಂದಿನಿಂದ ಇಂಥಹ ಮಳೆ ಬಂದು ಈ ವಿಧವಾದ ಅನಾಹುತಗಳು ನಡೆದದ್ದು ತಾವು ನೋಡಲೂ, ಕೇಳಲೂ ಇಲ್ಲವಾಗಿ ಹೇಳುತ್ತಾರೆ ೧೮೯೦ ನೇ ಇಸವಿಯಲ್ಲಿ ಇಷ್ಟರವರೆಗೆ ನೀರು ಬಂದಿತ್ತೆಂದು ಇದ್ದರೂ ಕೂಡ ಇಷ್ಟರವರೆಗೆ ನಷ್ಟ ಆಗಲಿಲ್ಲವಾಗಿ ಹೇಳುತ್ತಾರೆ. ಇಲ್ಲಿ ಸುಮಾರು ಎರಡು ಸಾವಿರ ಎಕ್ರೆ ಭೂಮಿ ನಾಟಿ ನೆಟ್ಟಿದ್ದರು ಮಾರ ಹೊಳೆ ನೀರಿನಿಂದಲೂ ಇತರ ತೋಡು ಹರೆಪಗ್ಗೆರೆ ತುಂಡಾಗಿ ಗದ್ದೆ ಬೈಲಿಗಾಗಿ ಬಿದ್ದ ನೀರಿನ ಹಾವಳಿಯ ದೆಸೆಯಿಂದ ಪೂರ ನಾಟಿ ಕೊಳೆತು ನಷ್ಟವಾಯಿತು. ಇಲ್ಲಿ ಕೆಲವರ ಅಂಗಡಿ ಮನೆ ಕೊಟ್ಟಿಗೆ ವಗೈರೆ ಕಟ್ಟೋಣವು ನೆಲಸಮವಾಗಿ ಬಿದ್ದು ಹೋಯಿತು. ಕೆಲವರ ದನಕರುಗಳಿಗೆ ನಷ್ಟವಾಗಿದೆ ನಷ್ಟದ ಅಂದಾಜು ಎಂಟು ಸಾವಿರ ರೂಪಾಯಿವರೆಗೆ ಆಗಬಹುದು. ಬಾಣೆ ತೋಟ್ಟ ಮೇಲೆ ಸಹ ಜಲನೀರಾಗಿ ಕೆಲವರ ಮನೆಗಳಿಗೆ ಸಹ ಜಲನೀರಿನ ಹಾವಳಿಯಿಂದ ಮನೆಗಳಿಗೆ ವಾಸ ಇರಲಿಕ್ಕೂ ಪೂರ ಭಯಪಡುತ್ತಿದ್ದಾರೆ. ಭೂಮಿಯಿಂದ ಸುಮಾರು ಎಂಟೆಂಟು ಪರಲಾಂಗು ದೂರ ಬಾಣೆ ಜಾಗದಿಂದ ಭೂಮಿ ನೆಡಿನಿವಡದು ಹೋಗಿದೆ ನಷ್ಟ ಬಂದ ಸಂಗ್ತಿಯನ್ನು ಸರಕಾರದವರಿಗೆ ಸೂಚಿಸಿಕೊಂಡಿರುತ್ತಾರೆ. ಅನೇಕರ ಅಗಾಡಿ ಗದ್ದೆಗಳಲ್ಲಿ ರಕಕ್ಕ ಪೈರು ಸಹ ಕೊಳೆತು ಹೋಯಿತು. ಮುಂದೆ ಬರುವ ಆಕ್ಷಯನಾಮ ಸಂವತ್ಸರದ ಕ್ಷಾಮಗಾಲವು ಈಗಲೇ ತೋರಿಸಿ ಕೊಟ್ಟಿತು. ನಷ್ಟದ ಹಾವಳಿಯ ದೆಸೆಯಿಂದ ಮುಂದೆ ಜನರ ಜೀವನೋಪಾಯಕ್ಕೂ ಸರಕಾರದ ಕಂದಾಯ ಕಟ್ಟಲಿಕ್ಕೂ ಪೂರ ಮುಸ್ಕಿಲಾಗಿರುತ್ತೆ. ಈ ಸಂಗತಿಯಲ್ಲಿ ರೈತರ ಕಷ್ಟಗಳನ್ನು ನೋಡಿ ನಮ್ಮ ಘನ ಸರಕಾರದವರೂ ಪರಿಹರಿಸಬೇಕಾಗಿರುವಲ್ಲು ರೈತನ ಕೋರಿಕೆ.

15–8–23.

C. Kuttappa.

ಅಯ್ಯಾ,

ತಮ್ಮ ಅಮೂಲ್ಯವಾದ ಪತ್ರಿಕೆಯ ಕಳೆದ ವಾರದ ಒಳದೇಶದ ವರ್ತಮಾನದಲ್ಲಿ ನಮ್ಮ ಕಮಿಶನರಾಗಿರುವ ಮೆ|| ಸೂಟರ್ ಸಾಹೇಬರು ಈ ನವೆಂಬ್ರ ತಿಂಗಳಲ್ಲಿ ವರ್ಗವಾಗಿ ಹೋಗುತ್ತಾರೆಂದೂ ಬದಲಿಗೆ ಟಾಸ್ಕರ್ ಎಂಬವರು ಬರುತ್ತಾರೆಂದೂ ತಿಳಿದೆನು. ಮೆ|| ಸೂಟರ್ ಸಾಹೇಬರು ನಮ್ಮ ದೇಶಕ್ಕೆ ಐದು ವರ್ಷದಿಂದೀಚೆಗೆ ಮಾಡಿದ ಕೆಲಸವು ಎಲ್ಲರಿಗೆ ತಿಳಿದಿಯಾದ್ದರಿಂದ ಈ ವಿಷಯ್ಯ ಹೆಚ್ಚು ಬರೆಯುವುದು ಅವಶ್ಯ ಕಾಣುವುದಿಲ್ಲ. ಆದರೆ, ಟಾಸ್ಕರ್ ಸಾಹೇಬರು ಹೇಗಿದ್ದರೋ ತಿಳಿಯುವುದಿಲ್ಲ. ಇವರಿಗಿಂತ ನಮ್ಮ ಸರಕಾರದವರು ನಮಗೆಲ್ಲರಿಗೂ ಪರಿಚಿತರಾಗಿದ್ದ, ಕಳೆದ ವರ್ಷ ಅಕ್ಟಿಂಗ್ ಕಮಿಶನರಾಗಿದ್ದ, ಮೆ|| ಹಿಲ್ಟನ್ ಬ್ರೌನ್ ಸಾಹೇಬರನ್ನು ನಮ್ಮ ದೇಶಕ್ಕೆ ಕಳುಹಿಸಿದ್ದರೆ ದೇಶಕ್ಕೆ ಬಹಳ ಉಪಕಾರವಾಗುತ್ತಿತ್ತು. ಇವರಾದರೋ ನಮಗೆ ತಿಳಿದಮಟ್ಟಿಗೆ ಬಹಳ ಮುತುವರ್ಜಿಯಿಂದ ರೈತರ ಪರದಲ್ಲಿ ಕೆಲಸಮಾಡುವವರು. ರೈತರ ಕಷ್ಟಗಳನ್ನು ತಿಳಿಯಲಿಕ್ಕೆ ಹಳ್ಳಿಗಳಲ್ಲಿ ಜಮಾಬಂದಿ ಮಾಡಿ ಬಹಳಮಟ್ಟಿಗೆ ಪರಿಹಾರಮಾಡಿದರು. ಚೀಫ್ ಕಮಿಶನರಿಗೂ ವೈಸರಾಯರಿಗೂ ನಮಗೆ ದೊರೆಯಬಹುದಾದ ಕೌನ್ಸಿಲ್ ವಿಷಯ ಬಹಳ ನಟ್ಟಗೆ ಬರೆದು ಮಾತಾಡಿ ದೇಶದ ಜನರ ಇರಾದೆಯನ್ನು ತಿಳಿಸಿದರು. ಕೆಳಗಿನ ಅಧಿಕಾರಿಗಳ ಮಾತನ್ನು ಹೆಚ್ಚಿಗೆ ಕೇಳದೆ ತಾನೇ ಖುದ್ದಾಗಿ ಎಲ್ಲವನ್ನು ಪರಾಂಬರಿಸಿ ನ್ಯಾಯಮಾಡುತ್ತಿದ್ದರು. ಇದಕ್ಕಿಂತಲೂ ಹೆಚ್ಚಾಗಿ ವಿವರಿಸುವುದೇನು? ಅವರು ಬರೆದ ಆಡಳಿತ ವರದಿಯು ನಮೂನೆಯೇ ಬೇರೆ. ಪಂಡಿತವಾದಿಗಳ ಅವರಿಗೆ ನಮ್ಮ ದೇಶದವರ ಮೇಲಿನ ಪ್ರೇಮವು ಅವರು "ಬ್ಲಾಕ್‌ವುಡ್" ಮೆಗೆಜಿನ್ನಿನಲ್ಲಿ ಬರೆದ ಲೇಖನದಿಂದ ತಿಳಿಯುತ್ತೆ. ಅವರಲ್ಲಿ ಯಾವ ಕೊರತೆಯೂ ಇಲ್ಲವೆಂಬರ್ಥವಲ್ಲ. ಅವರು ಹಳ್ಳಿಯಲ್ಲಿ ಜಮಾಬಂದಿ ಮಾಡಿದಾಗ ರೈತರಿಗೆ ಬಹಳ ತೊಂದರೆಯಾಯಿತೆಂದು ಅನೇಕರು ಹೇಳಬಹುದು. ಆದರೆ ಈ ತೊಂದರೆಗೆ ಹೆಚ್ಚಾಗಿ ಆಯಾಯ ತಾಲೋಕು ಸುಭೇದಾರರೇ ಕಾರಣರೆಂದು ಈಚೆಗೆ ತಿಳಿಯಿತು. ವೈಸರಾಯರಿಗೆ ಬರುವ ನವಂಬರ್ ತಿಂಗಳಲ್ಲಿ ಹೋಗುವ ಡೆಪ್ಯುಟೇಶನ್ನಿನಲ್ಲಿ ಈ ಮಹನೀಯರನ್ನೇ ನಮ್ಮ ಕಮಿಶನರನ್ನಾಗಿ ಮಾಡಬೇಕೆಂದು ಒಂದು ಪೇರಾ ಸೂಚಿಸಿದರೆ ಒಳ್ಳೆದಾಗುತ್ತಿತ್ತು. ನಮ್ಮ ಚೀಫ್ ಕಮಿಶನರು ದಯವಿಟ್ಟು ಇಂಥಾ ಕಮಿಶನರನ್ನೇ ಕಳುಹಿಸಬೇಕಾಗಿ ಅರಿಕೆಮಾಡಿಕೊಳ್ಳುತ್ತೇವೆ. ಯಾವಾಗಲೂ ಖುದ್ದಾಗಿ ರೈತರ ಕ್ಷೇಮಚಿಂತನೆಗಳನ್ನು ವಿಚಾರಿಸುವವರೇ ನಮಗೆ ಬೇಕಾಗಿದೆ. ಯಾಕಂದರೆ ದೇಶದಲ್ಲಿ ಇದುವರೆಗೆ ಆದ ಆಡಳಿತದಿಂದ ನಮ್ಮ ಕೆಲವು ಉದ್ಯೋಗಸ್ತರ ಮಾತನ್ನು ನಂಬಿ, ದೇಶದ ರೈತರಿಗೆ ಕೇಡು ಬಂದಿರಬಹುದು. ನಮ್ಮ ಚೀಫ್ ಕಮಿಶನರ್ ಸಾಹೇಬರು ಅದನ್ನು ಗಮನಕ್ಕೆ ತಂದರೆ ದೇಶದವರಿಗೆ ಬಹಳ ಉಪಕಾರಮಾಡಿದಂತಾಗುವುದು.

ಪರಿಚಿತ

ಈಗ ತಾನೇ ಆದ ಅತಿವೃಷ್ಟಿಯಿಂದ, ದೇಶದ ಎಲ್ಲಾ ಕಡೆಗಳಲ್ಲಿಯೂ ವ್ಯವಸಾಯಗಾರರಾದ ರೈತರಿಗೆ ಸಹಿಸಲಾರದಷ್ಟು ನಷ್ಟವುಂಟಾಗಿದೆ. ಪ್ರತಿ ನೂರು ಬಟ್ಟಿ ಭೂಮಿ ಇರುವ ರೈತನಿಗೆ ಬರೇ ಬರದು ತೋಡುಬಿದ್ದು ಕಡಿಮೆ ಪಕ್ಷ ಐವತ್ತು ರೂಪಾಯಿ ನಷ್ಟವಾಗಿರಬಹುದು. ಇದರ ಜೊತೆಗೆ, ಹೊಳೆಕರೆ ಇರುವ ಭೂಮಿಗೆ ಹಾಕಿದ ಅಗೆ ತೀರ ಹೊಳೆಬಂದು ಕೊಳೆತುಹೋದ ಪರಿಣಾಮದಿಂದ ಎಷ್ಟು ಭೂಮಿ ಪಾಳುಬೀಳುವುದೋ ಗೊತ್ತಾಗುವುದಿಲ್ಲ. ಆದ್ದರಿಂದ ಸರಕಾರದವರು ಬಡನೇ ಇಲಾಖೆನಾಡು ಪಾರುಪತ್ಯಗಾರರ ಮೂಲಕ ತನಿಖೆ ಮಾಡಿ ಆಯಾಯ ನಾಡಿಗೆ ಎಷ್ಟು ನಷ್ಟವುಂಟಾಗಿದೆಯೆಂಬುದನ್ನು ತಿಳಿದು ಬರುವ ವರ್ಷದ ಭೂ ಕಂದಾಯವನ್ನು ಮಾಫಿ ಮಾಡುವುದು ಉತ್ತಮ. ಮತ್ತು, ಈ ತೆರದ ನಷ್ಟವಾದವರಿಗೆ ಟಕಾವಿ ಹಣ ಕೊಟ್ಟು ಭೂಮಿಯನ್ನು ಮರುಸ್ತು ಮಾಡಿಸುವುದು ಸರಕಾರದವರ ಕರ್ತವ್ಯವಾಗಿರುತ್ತೆ. ಕಡಿಮೆ ಪಕ್ಷ ಈ ಮಳೆಯಿಂದ ನಮ್ಮ ದೇಶಕ್ಕೆ ಎರಡು ಲಕ್ಷ ರೂಪಾಯಿ ನಷ್ಟವಾಗಿರಬಹುದು. ನಮ್ಮ ಸರಕಾರಕ್ಕೆ ರೈತರಿಂದ ಕಂದಾಯ ವಸೂಲ್ಮಾಡಲು ಕುತೂಹಲವೆಷ್ಟಿದೆಯೋ ಅದಕ್ಕಿಂತ ಇಮ್ಮಡಿಯಾಗಿ ರೈತರ ಕಷ್ಟಸುಖಗಳನ್ನು ತಿಳಿಯುವುದು ಅವರ ಕರ್ತವ್ಯವಲ್ಲವೋ? ಕಮಿಶನರು ಬರುವ ವರ್ಷಕ್ಕೆ ಕಡಿಮೆ ಪಕ್ಷ ಮೂರು ಲಕ್ಷ ರೂಪಾಯಿ ಟಕಾವಿ ಹಣ ದೊರಕಿಸಿದರೆ ಮಾತ್ರ ರೈತರು ಉದುಕಿಯಾರು. ಆದ್ದರಿಂದ ಈ ಕಷ್ಟಕಾಲದಲ್ಲಿ ಸರಕಾರದವರು ರೈತರ ಮೊರೆಯನ್ನು ಕೇಳುವರೋ?

ರೈತ.

ಬಲಮುರಿ ಪ್ರವಾಹದಲ್ಲಿ ಜನರಿಗೆ ಉಂಟಾದ ಕಷ್ಟ

ಬಲಮುರಿಯಲ್ಲಿ ಅನೇಕ ಮನೆಮಾರುಗಳು ಕೊಚ್ಚಿ ಹೋಗಿ ಜನರಿಗೆ ಉಂಟಾದ ಕಷ್ಟವನ್ನು ಪತ್ರಿಕೆಯಲ್ಲಿ ಓದಿರಬಹುದು. ಆದರೆ ಸರಕಾರವು ಈ ವಿಷಯದಲ್ಲಿ ಇನ್ನೂ ಯಾವ ಪರಿಹಾರವೂ ಜನರಿಗೆ ಕೊಡದ ವಿಷಯವು ಬಹಳ ವ್ಯಸನಕರ. ಸುಭೇದಾರರೇನೋ ಬಂದರು ನೋಡಿದರು, ಹೋದರು ಎಂಬ ಸಮಾಚಾರವು ಮಾತ್ರ ತಿಳಿಯಿತು. ಅಲ್ಲದೆ ಮೂರ್ನಾಡಿನಿಂದ ಬಹಳ ತೊಂದರೆ ತೆಗೆದುಕೊಂಡು ವಸೂಲ್ಮಾಡಿದ ಪಳಂಟು ರೂಪಾಯಿಯನ್ನು ವಾಪ್ಸು ತೆಗೆದುಕೊಂಡು ಹೋದರೆಂಬ ವರ್ತಮಾನ.

ಆದರೆ, ಮೆ|| ಬಿದ್ದಂಡ್ರ ಕಾರ್ಯಪ್ಪನವರು ನರಳುತ್ತಿರುವ ಜನರ ಸಂಕಟವನ್ನು ಪರಿಹರಿಸಲು ಬಲಮುರಿಗೆ ದಯಮಾಡಿಸಿ, ಕೂಡ್ಲೆ ಮಡಿಕೇರಿಗೆ ಹೋಗಿ ಅಲ್ಲಿಯ ಮಹಾನುಭಾವರದೊಂದು ಮೀಟಿಂಗ್ ನಡಿಸಿ, ಕಳೆದ ಆದಿತ್ಯವಾರ ಮೆ|| ಮಹಮ್ಮದ್ ಮಿರಾನ್ ಸಾಹೇಬರು, ಕಾರ್ಯಪ್ಪನವರೂ ಬಲಮುರಿಗೆ ದಯಮಾಡಿಸಿದರು. ಸಂಕಟದಿಂದ ಮನೆಮಾರು ಇಲ್ಲದೆ, ಅನ್ನಬಟ್ಟೆ ಇಲ್ಲದೆ ಬಿದ್ದಾಡುತ್ತಿರುವ ಜನರಿಗೆ ಅನ್ನಬಟ್ಟೆ ಕೊಟ್ಟು ತತ್ಕಾಲದ ಪರಿಹಾರವನ್ನು ಕೊಟ್ಟರು. ಈ ವಿಷಯದಲ್ಲಿ, ರಾಯಬಹದ್ದೂರು ಕೊಂಡೇರ ಕುಟ್ಟಯ್ಯನವರೂ, ಮತ್ತು ಇತರರೂ ಮಡಿಕೇರಿಯಲ್ಲಿ ತೆಗೆದುಕೊಂಡ ಶ್ರಮಕ್ಕೆ ಆ ದೇವರೇ ತಕ್ಕ ಫಲ ಕೊಡಬೇಕು. ಮಡಿಕೇರಿಯಿಂದ ಈ ಏರ್ಪಾಡು ಆಗದಿದ್ದರೆ ಜನರ ಸಂಕಟವು ಮತ್ತಷ್ಟು ಹೆಚ್ಚಾಗುತ್ತಿತ್ತು. ಸರಕಾರದಿಂದ ಇಹಲ್‌ವರೆಗೆ ಯಾವ ಪರಿಹಾರವಾಗಲೀ, ಇಲ್ಲವೇ, ತಕ್ಕ ಪರಿಹಾರವನ್ನು ಕೊಡುವ ಅನುಕೂಲ ಕಲ್ಪಿಸಲು ಹೊಳೆಗೆ ದೋಣಿಯನ್ನಾಗಲೀ, ಕೊಡದೆ ಇದ್ದುದು ಘೋರ ವ್ಯಸನಕರ. ಸರಕಾರದ ಈ ಆಚರಣೆಗೆ ಏನು ಕಾರಣವೋ ತಿಳಿಯುವುದಿಲ್ಲ. ಸುಭೇದಾರರ ರಿಪೋರ್ಟು ಯಾವ ತರದಲ್ಲಿದೆಯೋ ತಿಳಿಯದು. ಯಥಾ ಸಂಗತಿಯನ್ನು, ಮೆ ಕಾರ್ಯಪ್ಪನವರಾಗಲೀ, ಮೆ|| ಸಿದ್ದಿಕ್ ಮಿರಾನ್ ಸಾಹೇಬರಾಗಲೀ ಪತ್ರಿಕೆಯ ಮೂಲಕ ಬರೆದಿದ್ದರೆ ಈ ವಿಚಾರವು ಎಲ್ಲರಿಗೂ ವೇದ್ಯವಾಗಬಹುದು.

(ರಿಲೀಫ್)

ಮೈಸೂರು ಗೌರ್ನಮೆಂಟ್ ಸೆಕ್ಯೂರಿಟಿ ಮರೇಜ್ ಅಂಡ್ ಲೈಫ್ ಇನ್‌ಶೂರೆನ್ಸ್ ಕಂಪೆನಿ

ಇತ್ತಲಾಗೆ "ಮೈಸೂರು ಗೌರ್ನಮೆಂಟ ಲೈಫ್ ಇನ್‌ಶೂರೆನ್ಸ್ ಅಂಡ್ ಮೇರೆಜ ಕಂಪೆನಿ" ಯು ಮೈಸೂರಲ್ಲಿ ಮಾಡಿ, ಕರ್ನಾಟಕ ಪ್ರದೇಶದಲ್ಲಿಯೇ ಅಲ್ಲದೆ, ಭರತಖಂಡದ ನಾನಾ ಪ್ರಾಂತ್ಯಗಳಲ್ಲಿ ಮೆರೆಯುತ್ತದೆಂಬುದು ಹಲಕೆಲವರಿಗಾದರೂ ತಿಳಿಯದ ಸಂಗತಿಯಲ್ಲ. ನಮ್ಮ ಕೊಡಗು ಪ್ರಾಂತದಲ್ಲೂ ಈ ಕಂಪನಿಯು ತಕ್ಕಮಟ್ಟಿಗೆ ಗೋಚರಕ್ಕೆ ಬದಿದೆ. ಗತ ಚೈತ್ರಮಾಸದಲ್ಲಿ ಕಂಪನಿಯ ದಲ್ಲಾಲರೊಬ್ಬರು ಮಡಿಕೇರಿಗೆ ದಯಮಾಡಿಸಿ ಅನೇಕರನ್ನು ತಮ್ಮ ಕಂಪನಿಯ ಜೀವವಿಮೆಗೆ ಸೇರಿಸಿದರು. ಜೀವವಿಮೆಗೆ ಸೇರಿಸಲಿಕ್ಕೆ ಪ್ರಪಂಚದ ಯಾವ ದೇಶದಲ್ಲಿಯೂ ಪ್ರಚಾ[ರ]ದ ಹೊಸದೊಂದು ರೀತಿಯನ್ನು ಮೇಲಿನ ಕಂಪನಿಯವರು ಕಂಡು ಹಿಡಿದಿದ್ದಾರೆ. ಇದಕ್ಕೆ "ಬಾಂಡ್ ಸಿಸ್ಟಮ್" ಎಂದು ಹೇಳುತ್ತಾರೆ. ಬಾಂಡಿನ ಬೆಲೆ 50 ರೂಪಾಯಿಗಳು. ಬಾಂಡುಗಳ ಮೂಲಕ ದೊರತ ಮೊಬಲಗಿಗೆ ತಕ್ಕದಾಗಿ ಸೋಡ್ತಿ ಎತ್ತುವರು. ಈ ಸೋಡ್ತಿಯು ವರುಷಕ್ಕೆ ಎರಡಾವರ್ತಿಯಂತೆ. ಮೇಲಿನ ಕಂಪನಿಯು ಸ್ಥಾಪಿತವಾದ ಮೂರು ನಾಲ್ಕು ವರುಷಗಳಿಗಾಗಿ ಬಂದೇ ಸೋಡ್ತಿಯು ಎತ್ತಲಾಗಿದೆ. ಇದು ಕುರಿತ ಸಮಾಚಾರವು ಈ ಪತ್ರಿಕಾಗ್ರಾಹಕರಿಗೆ ವೇದ್ಯವಿದೆ. ಇದು ನವೀನ ಕಂಪನಿಯಾದುದರಿಂದ ಬದಲಾವಣೆಗಳು ಆಗಾಗ್ಗೆ ಆಗುತ್ತಿವೆ. ಬಾಂಡಿಗೆ ಪೂರ್ತಿ ಮೊಬಲಗನ್ನು ಸಲ್ಲಿಸಲು ಅನನುಕೂಲವಾದ ಬಾಂಡುದಾರರು, 5-8-0 ರೂಪಾಯಿಗಳನ್ನು ಪಾವತಿ ಮಾಡುವುದಾದರೆ, ಅಂಥವರ ಹೆಸರು ಸೋಡ್ತಿಗೆ ಸೇರಿಸಲಾಗುವುದು ಎಂಬುದೊಂದು ಹೊಸ ಮಾರ್ಪಾಟು. ಈ ಕಾರಣದಿಂದ ನಾನೊಬ್ಬ ಬಡವನು 5-8-0 ರೂ ಕೊಟ್ಟು ಒಂದು ಬಾಂಡು ಪಡೆಕೊಂಡೆನು. ನನಗೆ ಅನಾಯಾಸವಾಗಿ ಅದೃಷ್ಟಬಲದಿಂದ ಸೋಡ್ತಿಯೊಂದು ಬರಬಹುದೆಂದು ಎಣಿಸಿದ್ದೆ. ನನ್ನ ದುರ್ದೈವವು ನನ್ನ ಸಾವಿರ ರೂಪಾಯಿಯ ಪ್ರಾಪ್ತಿಗೆ ಅಡ್ಡಬಂತು. ಇನ್ನೊಮ್ಮೆ ನನ್ನ ದೈವಪರೀಕ್ಷೆ ಮಾಡಬೇಕು ಎನ್ನುವುದರೊಳಗಾಗಿ, "ಸೋಡ್ತಿಗೆ ಸೇರಬೇಕಾದರೆ ಇನ್ನೂ 1-8-0 ರೂ ನ್ನು ತೆರಬೇಕೆಂದು ಹೇಳುವ ಪತ್ರವೊಂದು ನನ್ನ ಕೈಸೇರಿತು. ಪತ್ರವನ್ನು ತಿರಿಗಿಸಿ ಮರುಗಿಸಿ ನೋಡಿದೆ. ಆಹಾ! "ಪ್ರೆಸ್ ನೋಟ್" ಎಂಬ ಲಿಖಿತವು ಕಂಗೊಳಿಸಿತು. ಮೇಲಾಗಿ, ಸೋಡ್ತಿ ಬಂದ ಐದು ಮಂದಿಯ ಹೆಸರು ತೋರಿತು. ಆಗ ನನಗೆ ಕೊಂಚ ಸಮಾಧಾನವಾಯಿತು. ಹೇಗೂ ಒಡ್ಡಿಗಾಗಿ 1-8-0 ರೂ ತೆರಬೇಕಾದ ವಿಚಾರವು ನನ್ನ ಮನಸನ್ನು ಬಿಡಲಿಲ್ಲ. ಕೂಡಲೆ ನನ್ನ ಆಪ್ತರೊಬ್ಬರಲ್ಲಿಗೆ ಹೋದೆ. ಇವರಿಗೆ ಗ… ತದಲ್ಲಿ ಸ್ವಲ್ಪ ಅನುಭವವಿದೆ. ಅವರಿಗೂ ನನಗೂ ಪ… ಸ್ಪರವಾದ ವಿವಾದವಾಯಿತು. ಕೆಲ ಮುಖ್ಯ ಪ್ರಶ್ನೆಗಳು ಈ ಕೆಳಗಿನವುಗಳು. ಕಂಪನಿಯ ದಲ್ಲಾಲರು ಸದುತ್ತರಗಳನ್ನು ಕೊಡುವರೆಂದು ಹಾರೈಸುತ್ತೇನೆ.

(1) ಮೇಲಿನ ಕಂಪನಿಯು ಸ್ಥಾಪಿತವಾದದ್ದು ಯಾವಾಗ? ಮತ್ತು ಎಷ್ಟು ಜೀವವಿಮೆಗಳು ದಾಖಲಾಗಿವೆ.

(2) ಎರಡು ವರುಷಗಳಿಗೆ ಹಿಂದೆ ಕಂಪನಿಯ… ಗಲಭೆ ಏನಾದರೂ ನಡೆದದ್ದುಂಟೋ?

(3) ಬಾಂಡುದಾರನೊಬ್ಬನಿಗೆ ಸೋಡ್ತಿಯು ಬ… ದಾಗ, ಅವನು ಮುದುಕನಾಗಿಯಾಗಲೀ, ರೋಗಿ… ನಾಗಿಯಾಗಲೀ, ಇರುವುದಾದರೆ, ಅಂಥವನನ್ನು ಜೀ… ವಿಮೆಗೆ ಸೇರಿಸುವಿರೋ? ವಿತರಣೆಯಿಲ್ಲದೆ ಮು… ಕರು, ರೋಗಿಗಳು ಸೇರುವುದರಿಂದ ಕಂಪನಿಗೆ ಬಾಧ… ತಟ್ಟುವುದಿಲ್ಲವೋ?

(4) ಮಡಿಕೇರಿಯಲ್ಲಿ, ಈಗ ತೆರಯಲ್ಪಟ್ಟ ಗ… ಆಫೀಸು ಹಂಗಾಮಿಯೋ ಇಲ್ಲ ಖಾಯಂವೋ?

(5) ಕೊಡಗಿನಲ್ಲಿ ಜಮ್ಮಗಾರರು ಹೆಚ್ಚು ಜಮ… ದ ಭೂಮಿಯನ್ನು ಈಡುಮಾಡಿಕೊಂಡು, ಕೃಷಿಕರ… ಸಾಲ ಕೊಡಲು ಅನುಕೂಲವುಂಟೋ?

(6) ವ್ಯಾಪಾರಕ್ಕೆ ಸರಕಾರದ ಬ್ಯಾಂಕುಗಳ… ಕಂಪನಿಯು ಪರವಾಗಿ ಅನುಕೂಲಿಸಿದೆಯೋ?

(7) ಪ್ರತಿ ಸೋಡ್ತಿಗೆ ಪೂರ್ತಿ ಬಾಂಡು ಹಣ ಕ… ದ ಬಾಂಡುದಾರನೂ 1 8 0 ರೂ ಕೊಡುವುದ… ತ್ಯವೋ? ಅವನು ಮೊದಲೇ ತೆತ್ತಿಲ್ಲವೋ?

ಹಿಂದು ದೇಶದಲ್ಲಿ ಬ್ಯಾಂಕುಗಳು ಇಲ್ಲದೆ, ದ… ಕವು, ಹಿಂದುಳಿಯಬೇಕಾಯಿತೆಂದು ಅರ್ಥಶಾಸ್ತ್ರಜ್ಞ… ಅಭಿಪ್ರಾಯಪಡುತ್ತಾ, ಮೈಸೂರಿನಲ್ಲಿ ಲೈಫ್ ಇನ್… ಶೂರೆನ್ಸ್ ಕಂಪನಿಯು ಸ್ಥಾಪಿತವಾಗಿ, ಕೊಡಗಿನವರಿ… ಸಹಾಯಮಾಡಲುದ್ಯುಕ್ತರಾಗಿರುವ ಮಹನೀಯರಿ… ನಾವು ಅಭಾರಿಯಾಗಿದ್ದೇವೆ. ಆದರೆ ಕಂಪನಿಯು… ಳಿಗೆ ಬರಬೇಕೆಂದು ನಾವು ಹಾರೈಸುವವರಾದುದರಿಂ… ಮೇಲಿನ ಅನುಮಾನಗಳನ್ನು ಕಂಪನಿಯವರ ಮುಂ… ಇಡಲಾಯಿತು. ಕಂಪನಿಯವರೂ ನಮ್ಮ ಮನಸ್ಸನ… ರಂಜಿಸದೆ ಇರಲಾರರು.

" ಲೆಖ್ಣಿಗ

New Agency! New Agency!

PONEP MEDAN & Coy.

General Merchants.

FOREIGN export, import and Consulting Agents

For further particulars apply to our representative at Mysore,

P. P. MADAYYA,

Representative, Bharat Insurance Company Ltd.,

Sayaji Rao Road, MYSORE

ಹೊಸ ಏಜನ್ಸಿ! ಹೊಸ ಏಜನ್ಸಿ

ಪೋನೆಪ್ ಮೆಡಾನ್ ಅಂಡ್ ಕಂಪೆನಿ,

ಜನರಲ್ ಮರ್ಚಂಟ್ಸ್, ಸರಕುಗಳನ್ನು ತರಿಸುವರು ರವಾನೇ ಮಾಡುವವರು ಮತ್ತು ವ್ಯಾಪಾರ ವಿಚಾರಗಳನ್ನು ತಿಳಿಸುವ ಏಜಂಟರುಗಳು.

ನಮ್ಮ ಏಜಂಟರು—

ಪಿ. ಪಿ. ಮಾದಯ್ಯ,

ಭಾರತ್ ಇನ್ಶೂರೆನ್ಸ್ ಕಂಪೆನಿ ಏಜಂಟರು,

[4—1] ಸಯ್ಯಾಜಿರಾವ್ ರೋಡ್, ಮೈಸೂರು

Printed & Published by D S Krishnaswamiengar Proprietor, at Sreenivas Electric Press, Mysore "for Kodagu" Ltd., Mercara—24 8 1923

If not delivered please return to "Kodagu Office, Mercara"
Reg. No. M. 1550

ಕೊಡಗು

[12—2]

Spencers Price List!

Brandy at its Best

	Rs 7 1 0	3 12 0
	6	3 0 0
Sundry of many cheap lines in Store		
		0 10 0
		1 2 0
		0
		2 4 0
		0 14 0
		0 0 0
Sunlight soap pkt		0 9 0
Sweets		0 7 0
		1 4 0
		0 1 0

SPENCER & Co., Ltd,

MERCARA & POLLIBETTA

MYSORE

The Coorg Central Co-operative Bank, Ltd.,

Apply to the Secretary or Treasurer

President	Treasurer	Secretary
	B A BL	C N Venkappayya B A BL

Dated 25—3—1923

THINK OF

THE WELCOME HOTEL.

Girgaum Back Road, Bombay.

ಕೋ ಆಪರೇಟಿವ್ ಸೊಸೈಟೀಸ್

(ಸ್ಥಾಪಿತ ಇಸವಿ 1912)

ತಾರೀಕು 25—3—1923

" ಕೊಡಗು "

೧೯೨೩ ನೇ ಇಸವಿ ಆಗಸ್ಟ್ ತಾ|| ೩೧ ನೇ
ಶುಕ್ರವಾರ

ಸರ್ಕಾರದ ಕರ್ತವ್ಯ.

ಕಳೆದ ಎರಡು ಸಂಚಿಕೆಗಳಲ್ಲು ಕೊಡಗು ದೇಶದಲ್ಲಿ ಈ ವರ್ಷದ ಅತಿವೃಷ್ಟಿಯಿಂದ ರೈತರ ತೋಟ ಗದ್ದೆಗಳಿಗೂ ಮನೆ ಮಠಗಳಿಗೂ ಉಂಟಾಗಿರುವ ನಷ್ಟಗಳನ್ನು ಸೂಚಿಸಿ ರೈತರಿಗೆ ಸಂಭವಿಸಿರುವ ಕಷ್ಟ ದುಃಖಗಳನ್ನು ವಿವರಿಸಿದ್ದಲ್ಲದೆ ಅದರ ನಿವಾರಣೆ ಬಗ್ಗೆ ದೇಶದವರು ಏನುಮಾಡಬೇಕೆಂಬು ದನ್ನೂ ಸಹ ಬರೆದದ್ದಾಯಿತು. 'ಸ್ವಸಹಾಯವು ಉತ್ತಮ ಸಹಾಯ' ವೆಂಬ ತತ್ವವನ್ನೇ ಇಷ್ಟರವರೆಗೆ ಬೋಧಿಸಿದೆವು. ಆದರೆ ದೇಶದವರಿಂದ ಹಲವು ವಿಧದಲ್ಲಿ ಕರ ಕಂದಾಯಗಳ ನ್ನು ವಸೂಲಿಮಾಡಿಕೊಂಡು ಅಂಥಾ ಹಣವನ್ನು ಪ್ರಜೆಗಳ ಪರಿಪಾಲನಾರ್ಥವಾಗಿ ವಿನಿಯೋಗಿಸಬೇಕಾದದು ಸರ್ಕಾರದವರು ಇಂಥಾ ವಿಪತ್ತಿನ ಕಾಲದಲ್ಲು ದೇಶದವರಿಗೆ ಮಾಡತಕ್ಕ ಕರ್ತವ್ಯವೇನಾದರೂ ಇಲ್ಲವೋ ? ಎಂಬ ಸಮಾಚಾರವನ್ನು ಇಲ್ಲಿ ಸ್ವಲ್ಪ ವಿಚಾರಿಸಬೇಕಾಗಿದೆ

ದೇಶದ ರೈತರ ಸ್ಥಿತಿಯು ಈಗಿರುವಹಾಗೆಯೇ ಇದ್ದು ಅಭಿವೃದ್ಧಿಹೊಂದದೆ ಹೋದರೆ ಬರುವವರ್ಷ ಕಂದಾಯ ಕೊಡುವುದು ಅನೇಕರಿಗೆ ಸುಲಭಸಾಧ್ಯವಲ್ಲ ಈ ವಿಷಯ ಸರಕಾರದವರ ಚೆನ್ನಾಗಿ ಚಿತ್ತಕ್ಕೆ ತೆಗೆದುಕೊಳ್ಳಬೇಕು ಈಗಿನ ಕಷ್ಟನಿವಾರಣೆ ಬಗ್ಗೆ ತಕ್ಕ ಏರ್ಪಾಡುಗಳನ್ನು ಮಾಡುವುದು ಎಲ್ಲಾ ವಿಧದಲ್ಲಿಯೂ ಸರ್ಕಾರದವರ ಮುಖ್ಯ ಕರ್ತವ್ಯವಾಗಿರುವುದರಿಂದ ಅಧಿಕಾರಿಗಳು ದೇಶಕ್ಕೆ ಉಂಟಾಗಿರುವ ನಷ್ಟವನ್ನು ಅಂದಾಜುಮಾಡಲು ಒಡನೆ ಹೊರಡಬೇಕಾಗಿದೆ ನಷ್ಟ ಸಂಭವಿಸಿರುವ ಪ್ರತಿಯೊಂದು ಸ್ಥಳವನ್ನು ಸುಬೇದಾರರೂ ಪಾರುಪತ್ಯಗಾರರೂ ಹೋಗಿ ನೋಡಬೇಕಲ್ಲದೆ ಹೆಚ್ಚು ನಷ್ಟವುಂಟಾಗಿರುವ ಹೊಲಗದ್ದೆಗಳನ್ನು ಕಮಿಷನರಾಗಲೀ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಲೀ ಖುದ್ದು ಹೋಗಿ ದರ್ಶಿಸುವುದು ಅವಶ್ಯಕ ನಷ್ಟಕ್ಕೊಳಪಟ್ಟಿರುವ ಮನೆಗದ್ದೆಗಳನ್ನು ಒಡನೆ ಹೋಗಿ ನೋಡದೆ ಹೋದರೆ ಅವುಗಳನ್ನು ದುರಸ್ತುಮಾಡಿದಮೇಲೆ ನಿಜವಾದ ನಷ್ಟವನ್ನು ಕಂಡುಹಿಡಿಯಲು ಕಷ್ಟವಾಗುವುದು ರೈತರು ಸಾಲ ಸೋಲ ಮಾಡಿ ತಮಗುಂಟಾಗಿರುವ ಅಪಾಯಗಳನ್ನು ದುರುಸ್ತುಮಾಡಿಸಿದನಂತರ ಉದ್ಯೋಗಸ್ಥರು ಹೋಗಿ ನೋಡಿ ಅಲ್ಪಸ್ವಲ್ಪ ನಷ್ಟಮಾತ್ರ ಉಂಟಾಗಿದೆ ಎಂದು ವರದಿ ಬರೆಯುವುದು ಎಂದಿಗೂ ನ್ಯಾಯವಲ್ಲ ಆದುದರಿಂದ ಸರ್ಕಾರದವರು ಒಡನೆ ಉದ್ಯೋಗಸ್ಥರು ಮತ್ತು ಉದ್ಯೋಗಸ್ಥರಲ್ಲದವರು ಸೇರಿದ ಒಂದು ಕಮಿಟಿಯನ್ನು ಏರ್ಪಡಿಸಬೇಕು ಈ ಕಮಿಟಿಯವರು ಪ್ರತಿ ಗ್ರಾಮದಲ್ಲಿಯೂ ಪಂಚಾಯ್ತರನ್ನು ನೇಮಿಸಿ ಅವರ ಮುಖಾಂತರ ಅಲ್ಲಿ ಉಂಟಾಗಿರುವ ನಷ್ಟವನ್ನು ಕುಲವಾರು ಪಟ್ಟಿ ಮಾಡಿಸಬೇಕು ಅಲ್ಲದೆ ಗದ್ದೆಗಳನ್ನು ಇನ್ನೂ ನೆಡದೆ ಇರುವ ರೈತರು ಹ್ಯಾಗೆ ವರ್ತಿಸುವುದು ಉತ್ತಮವೆಂಬುದನ್ನು ಸಹ ಅವರಿಗೆ ತೋರಿಸಿಕೊಡತಕ್ಕದ್ದು ಪಾಳುಬೀಳಬಹುದಾದಂತ ಭೂಮಿಗಳಲ್ಲಿ ಯಾವ ಕೃಷಿಯನ್ನು ಮಾಡಿದರೆ ಫಲಕಾರಿಯಾಗುವುದೆಂಬುದನ್ನು ಹೇಳಿಕೊಡುವುದಲ್ಲದೆ ಅನುಕೂಲವಿಲ್ಲದವರಿಗೆ ಅಂಥಾ ಬೆಳೆಯ ಬೀಜವನ್ನು ಸಹ ಸರ್ಕಾರದವರು ತರಿಸಿ ಉಚಿತಾರ್ಥವಾಗಿ ಹಂಚಬೇಕು

ಬರುವ ವರ್ಷದ ಕಂದಾಯದ ಮಾಫಿಗಾಗಿ ಸಾವಿರಾರು ರೈತರ ಅರ್ಜಿಗಳು ಅಧಿಕಾರಿಗಳ ಕೈಸೇರುವುದೆಂಬುದಕ್ಕೆ ಏನೊಂದೂ ಸಂದೇಹವಿಲ್ಲ ಅರ್ಹರಾದವರಿಗೆ ಮಾಫಿ ಕೊಡಬೇಕಾದುದು ಅವಶ್ಯವೆಂದು ಇಲ್ಲಿ ಹೇಳಬೇಕಾಗಿಲ್ಲ ಆದರೆ ಅರ್ಹರು ಯಾರೆಂಬುದನ್ನು ನಿಶ್ಚೈಸುವುದರಲ್ಲಿ ಅನ್ಯಾಯವು ನಡೆಯದ ಹಾಗೆ ನೋಡಿಕೊಳ್ಳತಕ್ಕದ್ದು ಸಾಲ ತೆಗೆದು ಭೂಮಿಯನ್ನು ರೂಪಿಸಿ ನೆಟ್ಟಿದ್ದರೂ ಕೂಡ, ನೆಟ್ಟಿರುವನೆಂಬ ಕಾರಣದಿಂದ ಕಂದಾಯ ಮಾಫಿ ಬಿಡದೆ ಇರುವುದೂ ನ್ಯಾಯವಲ್ಲ ನಷ್ಟವು ಸ್ವಲ್ಪವೆಂದೇ ತಿರಸ್ಕರಿಸಬಾರದು. ಬಡರೈತನಿಗೆ ಸ್ವಲ್ಪ ನಷ್ಟವೂ ಕೂಡ ದೊಡ್ಡ ಹೊರೆಯೆ. ನಷ್ಟದ ಅಂದಾಜನ್ನು ಈಗಲೇ ಮಾಡಿಕೊಂಡದ್ದಾದರೆ ಕಂದಾಯದ ಸಮಯದಲ್ಲಿ ಹೇಳಿಕೆಮಾತಿನ ಆಧಾರ ಶಿಫಾರಸ್ಸಿನಮೇಲೆ ಅರ್ಜಿಗೆ ತೀರ್ಪುಕೊಡುವ ಅವಶ್ಯವಿರುವುದಿಲ್ಲ. ಅಂದಾಜು ಪಟ್ಟಿಯಮೇರೆ ನಡೆದರೆ ಎಲ್ಲರಿಗೂ ನ್ಯಾಯವು ದೊರೆಯುವುದು.

ಮನೆಯ ಬೀಳುವಿಕೆಯಿಂದಲೂ, ಗದ್ದೆಗಳಿಗೆ ಬರೆ ಜಾರಿಯೂ ಅಥವಾ ಹೊಳೆ ಮತ್ತು ತೋಡುಗಳ ಪ್ರವಾಹದಿಂದಲೂ ಸಂಭವಿಸಿರುವ ವಿಪರೀತ ನಷ್ಟಕ್ಕೆ ಒಳಗಾದವರಿಗೆ ಕಮಿಷನರವರು ಮನಸೊಪ್ಪುವಂತೆ ಖರ್ಚುಮಾಡಲು ಇಟ್ಟಿರುವ (ಡಿಸ್‌ಕ್ರಿಶನರಿ ಗ್ರ್ಯಾಂಟು) ಐದುಸಾವಿರ ರೂಪಾಯಿಗಳಿಂದ ತಕ್ಕ ಸಹಾಯ ಬರುವ ವರ್ಷವಾದರೂ ಕೊಡುವರೆಂದು ನಂಬುತ್ತೇವೆ. ಈ ವರ್ಷದ ಗ್ರ್ಯಾಂಟಿನಿಂದ ಬಾಳುಮುರಿಯಲ್ಲಿ ಕಷ್ಟಕ್ಕೊಳಗಾದವರಿಗೆ ಇನ್ನೂರು ರೂಪಾಯಿಗಳನ್ನು ಕೊಟ್ಟಿದ್ದಾರೆಂದು ತಿಳಿಯಲು ಸಂತೋಷಪಡುತ್ತೇವೆ.

ಈ ವರ್ಷದ ಅನಾವೃಷ್ಟಿಯಿಂದ ಭೂಮಿಯು ಒಳ್ಳೇ ರೂಪಿತಕ್ಕೆ ಬರಬೇಕಾದರೆ ಕೈಯ್ಯಲ್ಲಿ ಹಾವಿರುವ ಅನುಕೂಲಸ್ಥಗಾದರೂ ಪ್ರತಿವರ್ಷವೂ ಭೂಮಿಯ ರೂಪಿತದ ಕೆಲಸಕ್ಕೆ ಹಣ ವೆಚ್ಚಮಾಡ ತ್ತಾ ಬಂದರೂ ನೂರಾರು ಹತ್ತು ವರ್ಷಗಳಾಗುವುವು ಹೀಗಿರುವಾಗ್ಗೆ ಸಾಲ ತೆಗೆದು ಬೇಸಾಯ ಮಾಡಬೇಕಾಗಿರುವ ಬಡರೈತನ ಪಾಡೇನು ? ಸಾಹುಕಾರರಿಂದ ಶೇಕಡ 25 ರಂತೆ (ಕೆಲವುಸಾರಿ 50 75 ರಂತೆಯೂ ಸಹ) ಬಡ್ಡಿಗೆ ಹಣ ಸಾಲ ತೆಗೆದು ಭೂಮಿ ರೂಪಿಸಲಿಕ್ಕೆ ಪ್ರಯತ್ನಿಸಿದರೆ ಅವನು ದುಡಿದು ಬೆಳೆಯುವುದೆಲ್ಲಾ ಸಾಹುಕಾರನ ಬಡ್ಡಿಗೇನೇ ಸಾಕಾಗುವುದಿಲ್ಲ. ಅವನು ಸಾಲಗಾರನಾಗಿಯೇ ಸಾಯಬೇಕಾಗುವುದು ಆದುದರಿಂದ ಅಂಥಾ ರೈತನು ಆಗುವಷ್ಟು ತಾನಾಗಿಯೇ ಕೆಲಸ ಮಾಡಬೇಕು ರೈತನಿಂದಲೇ ಸಾಧ್ಯವಾಗದ ಸಂದರ್ಭಗಳಲ್ಲಿ ಸರಕಾರದವರು ರೈತರ ಸಹಾಯಕ್ಕೆ ಹೋಗಬೇಕಾಗಿದೆ ಕಲವು ವರ್ಷಗಳಿಂದ ಟಕಾವಿ ಹಣವನ್ನು ಶೇಕಡ 6¼ ರಂತೆ ಬಡ್ಡಿಯಲ್ಲು ಸರ್ಕಾರದವರು ರೈತರಿಗೆ ಭೂಮಿ ರೂಪಿತಕ್ಕೆ ಸಾಲ ಕೊಡುತ್ತಿದ್ದಾರೆ ಇನ್ನು ಒಂದೆರಡು ವರ್ಷಗಳವರೆಗಾದರೂ ಬಡ್ಡಿಯಿಲ್ಲದೆಯೂ ಸುಲಭ ಕಂತುಗಳಲ್ಲೂ ರೈತರಿಗೆ ಬೇಕಾಗುವಷ್ಟು ಹಣವನ್ನು ಭೂಮಿ ದುರಸ್ತಿಗೆ ಸಾಲ ಕೊಡುವ ಏರ್ಪಾಡನ್ನು ಮಾಡ್ಯಾರೆಂದು ನಂಬುತ್ತೇವೆ ಟಕಾವಿ ಹಣ ಬೇಕೆಂದಿರುವ ರೈತರು ಬಹಳ ಎಚ್ಚರದಿಂದಿರಬೇಕು ತಮ್ಮ ಶಕ್ತಿಮೀರಿ ಸಾಲ ಪಡೆಕೊಳ್ಳಬಾರದು. ಪಡೆಕೊಂಡ ಸಾಲವನ್ನು ಕಂತಿಗೆ ಸರಿಯಾಗಿ ಸಲ್ಲಿ ಮಾಡಿ ತಮ್ಮ ಭೂಮಿಯನ್ನು ಉಳಿಸಿಕೊಳ್ಳಬೇಕು ಅಧಿಕಾರಿಗಳೂ ರೈತರ ಹಿತವನ್ನು ಬಯಸಿ ಆ ಸಾಲವನ್ನು ಸಾಧ್ಯವಾದಷ್ಟು ಅವರ ಬೆಳೆ ಫಸಲಿನಿಂದ ವಸೂಲಿ ಮಾಡಿಕೊಳ್ಳಲು ಪ್ರಯತ್ನಿಸಬೇಕು ತಮಗೆ ಅಧಿಕಾರವಿದೆಯೆಂದೂ ಖಾನೂನು ಇದೆಯೆಂದೂ ಕಂತು ತಪ್ಪಿದಾಕ್ಷಣ ಅವರ ಭೂಮಿಯನ್ನು ಹರಾಜಿಗಿಡಬಾರದು ಮನೆ ಬಿದ್ದುಹೋದವರಿಗೆ ಮನೆಗುರಿಮಾಡಬಾರದು ... ಕಟ್ಟಲು ಸರ್ಕಾರದವರು ಚಾರ್ಜಿಲ್ಲದೆ ಮರ ಕೊಡತಕ್ಕದ್ದು. ಇಂಥಾ ಬಿಕ್ಕಟ್ಟಿನ ಸಮಯದಲ್ಲಿ ಸರಕಾರವು ರೈತರಿಗೆ ಸಹಾಯಮಾಡದೆ ಹೋದರೆ ಸಹಾಯಮಾಡಲು ಇದಕ್ಕಿಂತ ಒಳ್ಳೇ ಸಮಯವು ಬೇರೊಂದು ದೊರಕಲಾರದು ಸರಕಾರದವರು ಪ್ರಜೆಗಳ ಪರಿಪಾಲಕರು, ಕ್ಷೇಮಚಿಂತಕರು ಎಂಬೀಮಾತುಗಳ ಸತ್ಯವನ್ನು ತಿಳಿಯಲು ಇದೀಗ ತಕ್ಕ ಸಮಯ

ಹಳೇ ವಿದ್ಯಾರ್ಥಿಗಳ ಸಂಘ

ಮಡಿಕೇರಿ ಹೈಸ್ಕೂಲಿನ ಹಳೇ ವಿದ್ಯಾರ್ಥಿಗಳ ಸಂಘವು ಪುನರ್ಜೀವಿತ ವಾಗಿರುವುದರಿಂದ ಆದಕ್ಕೆ ಆ ಶಾಲೆಯ ಹಳೇ ವಿದ್ಯಾರ್ಥಿಗಳೆಲ್ಲಾ ಮೆಂಬರುಗಳಾಗಬೇಕೆಂತಲೂ ಆ ಸಂಘದವರು ಹೊರಡಿಸಬೇಕೆಂದಿರುವ ಒಂದು ಪತ್ರಿಕೆಗೆ ಲೇಖನಗಳನ್ನು ಕಳುಹಿಸಿ ಪ್ರೋತ್ಸಾಹಿಸಬೇಕೆಂತಲೂ ಓದೀಯುವ ಆ ಸಂಘದ ಸೆಕ್ರೆಟರಿಯವರ ಅಪೀಲನ್ನು ಇನ್ನೊಂದು ಕಡೆ ಪ್ರಕಟಿಸಿರುವೆವು ಮಡಿಕೇರಿ ಹೈಸ್ಕೂಲಿನಲ್ಲಿ ಓದಿದ ಕೊಡಗಿನ ವಿದ್ಯಾವಂತರು ಅತಿ ವಿರಳ. ಆದುದರಿಂದ ಈ ಸಂಘವು ಅಭಿವೃದ್ಧಿಯಾಗದೆ ಹೋದರೆ ಕೊಡಗಿನ ವಿದ್ಯಾವಂತರಿಗೆ ಶ್ಲಾಘನೀಯವಲ್ಲ ಕೊಡಗಿನಲ್ಲಿ ಇನ್ನೊಂದು ಪತ್ರಿಕೆಯು ಹೊರಡುತ್ತವೆಂಬು ಬಹು ಸಂತೋಷಕರ ಅದಕ್ಕೆ ದೇಶೀಯರೆಲ್ಲರೂ ಉತ್ತೇಜನ ಕೊಡುವರಾಗಿ ನಂಬುತ್ತೇವೆ

ರಿಟ್ರೆಂಚ್‌ಮೆಂಟು

ಈ ವಿಷಯ ಕೆಲವು ತಿಂಗಳುಗಳ ಹಿಂದೆ ರಿಟ್ರೆಂಚ್‌ಮೆಂಟ್ ಆಫೀಸರಾದ ಮ|| ಕ್ಯಾಂಬೆಲ್‌ರವರು ಇಲ್ಲಿ ಇದ್ದಾಗ ಒಂದೆರಡು ಲೇಖನಗಳನ್ನು ಬರೆದಿದ್ದೆವು ನಮ್ಮ 12 ನೇ ಯ ಸಂಚಿಕೆಯಲ್ಲು 'ರೈತ'' ನು ಬರೆದ 'ಸಿಬ್ಬಂದಿ ಖೋತ' ಯ ಬಾತ್ಮಿಯು ಅನೇಕರನ್ನು ವಿಸ್ಮಯಗೊಳಿಸಿದೆ ಆದುದರಿಂದ ಈ ವಿಷಯ ನಮ್ಮ ಅಭಿಪ್ರಾಯವನ್ನು ಪುನಹ ಸೂಚಿಸಬೇಕಾದ ಅವಶ್ಯಕತೆಯು ತೋರಿಬಂದಿದೆ

ಈ ದೇಶಕ್ಕೆ ಮಾರ್ಪಾಡುಗಳೇನೂ ಕೊಡದೆ ಇರುವುದರಿಂದ, ಬೇರೆ ಪ್ರಾಂತ್ಯಗಳಿಗೆ ದೊರಕಿರುವಂಥ ರಿಯಾಯಿತುಗಳು ನಮಗೆ ದೊರಕುವವರೆಗೂ ಇಲ್ಲಿಯ ಸರ್ಕಾರದ ಇಲಾಖೆಗಳಲ್ಲಿ ಸಿಬ್ಬಂದಿ ಖೋತ ಮಾಡಕೂಡದೆಂತಲೇ ಮೊದಲಿನಿಂದಲೂ ನಮ್ಮ ಅಭಿಪ್ರಾಯ. ಈ ದೇಶಕ್ಕೆ ರಾಜಕೀಯ, ರಿಯಾಯಿತಿಯು. ದೊರಕಿದ ನಂತರ ಇಂಪೀರಿಯಲ್ ಸರಕಾರವು ಈ ಸ್ಥಳೀಯ ಸರಕಾರದ ಮೇಲ್ವಿಚಾರಣೆ ನೋಡುವುದರಿಂದಲೂ ದೇಶದ ಭದ್ರತೆಗಾಗಿ ಸ್ವಲ್ಪವನ್ನಿಟ್ಟಿರುವುದರಿಂದಲೂ ನಮ್ಮ ಪ್ರಾಂತ್ಯದಿಂದ ನಿರ್ಣಯಿಸಿ ದ ಒಂದು ಮೊತ್ತವನ್ನು ಇಂಪೀರಿಯಲ್ ಸರಕಾರಕ್ಕೆ ಕೊಡಬೇಕೆಂತ ಆಸರಕಾರವು ಕೇಳಬಹುದು ಈ ವೊಬಲಗು ದೇಶದ ಉತ್ಪತ್ತಿಯಲ್ಲಿ ಖರ್ಚು ಕಳೆದು ಉಳಿಯುವ ಉಳುವರಿಗನುಸಾರವಾಗಿ ನಿರ್ಣಯಿಸಲ್ಪಡುವುದು ಆದುದರಿಂದ ಈಗಲೇ ರಿಟ್ರೆಂಚ್ ಮೆಂಟನ್ನು ಜಾರಿಗೆ ತಂದು ದೇಶದ ಉತ್ಪತ್ತಿಯಲ್ಲಿ ಹೆಚ್ಚು ಉಳಿಕೆಯನ್ನು ತೋರಿಸಿದ ಪಕ್ಷ ನಮ್ಮ ದೇಶವು ಇಂಪೀರಿಯಲ್ ಸರಕಾರಕ್ಕೆ ಹೆಚ್ಚಿನ ಹಣ ಕೊಡಬೇಕಾಗಿಬರುವುದು. ಎಲ್ಲಾದಕ್ಕಿಂತಲೂ ಪ್ರಾಮುಖ್ಯವಾದ ಮಾರ್ಪಾಡುಗಳನ್ನು ಕೊಡುವ ವಿಷಯವನ್ನು ಸರ್ಕಾರದವರು ಮೂಲೆಗೆ ಒತ್ತಿ ಅಲ್ಪವಾದ ಈ ರಿಟ್ರೆಂಚ್‌ಮೆಂಟನ್ನು ಒಡಮುಂತುವರ್ಜಿಯಿಂದ ಜಾರಿಗೆ ತರುತ್ತಿರುವುದು ಬಹು ವ್ಯಸನಕರವಾದ ಸಂಗತಿಯಾಗಿದೆ ದೇಶಕ್ಕೆ ರಿಯಾಯಿತಿಗಳನ್ನು ಕೊಡುವ ವಿಷಯಕ್ಕೆ ಸರ್ಕಾರದವರು ಯಾಕೆ ಇದರಷ್ಟೇ ಮುತುವರ್ಜಿಯನ್ನು ವಹಿಸಿ ಕೆಲಸಮಾಡಬಾರದು ? ಇನ್ನಾದರೂ ಅಧಿಕಾರಿಗಳು ಸಿಬ್ಬಂದಿ ಖೋತೆಯನ್ನು ತಕ್ಕಾಲಕ್ಕೆ ನಿಲ್ಲಿಸುವರೇ !

ಈ ದೇಶದಲ್ಲಿ ಈಗ ನಿರಂಕುಶಪ್ರಭುತ್ವವಾದುದರಿಂದ ಸರಕಾರದವರು ಪ್ರಜೆಗಳ ಅಭಿಪ್ರಾಯಕ್ಕೆ ಸ್ವಲ್ಪವೂ ಗಮನ ಕೊಡದೆ ಬಹಳ ಮಟ್ಟಿಗೆ ರಿಟ್ರೆಂಚ್‌ಮೆಂಟನ್ನು ಜಾರಿಗೆ ತಂದಿರುವರು ಇನ್ನೂ ಹೆಚ್ಚಿಗೆ ಜಾರಿಗೆ ತರುವುದರಲ್ಲಿಯೇ ಇದ್ದಾರೆಂದು ತಿಳಿಯುಬರುತ್ತದೆ. ಹೀಗೆ ಜಾರಿಗೆ ತಾರದೆ ವಿಧಿ ಇಲ್ಲವೆಂದು ಅಧಿಕಾರಿಗಳಿಗೆ ಕಂಡುಬಂದಲ್ಲು ರಿಟ್ರೆಂಚ್‌ಮೆಂಟ್ ಕೊಡಲಿಯ ಪೆಟ್ಟು ಎಲ್ಲಿಗೆ ಬೀಳಬೇಕೆಂಬುದರ... ಯಾದರೂ ಜನರ ನ್ಯಾಯವಾದ ಅಭಿಲಾಷೆಗೆ ಕಿವಿಕೊಡಬಾರದೇಕೆ ? ಉತ್ಪತ್ತಿಯು ಕಡಿಮೆಯಾಗಿರುವ ನಮ್ಮ ಈ ಚಿಕ್ಕ ದೇಶದಲ್ಲಿ ಆಡಳಿತ ಕಾರ್ಯವನ್ನು ನಡಿಸುವುದಕ್ಕೆ ಬೇಕಾಗಿರುವುದಕ್ಕಿಂತ ಹೆಚ್ಚಾಗಿ ಗಜೆಟೆಡ್ ಆಫೀಸರುಗಳಿದ್ದಾರೆಂಬುದಕ್ಕೆ ಏನೊಂದೂ ಸಂಶಯವಿಲ್ಲ ಕಲೆಕ್ಟರ್... ವಾದ ಇಲ್ಲಿಯ ಸರಕಾರದ ಇಲಾಖೆಗಳ ತಳಮಾದ ... ಕ್ಕೆ ರಿಟ್ರೆಂಚ್‌ಮೆಂಟ್ ಕೊಡಲಿಯಿಂದ ಹೊಡೆಯುವುದರಿಂದ ಆಡಳಿತಕ್ಕೆ ಕುಂದಕವಲ್ಲದೆ ಪ್ರಯೋಜನವೇನೂ ಇಲ್ಲ. ... ದುದರಿಂದ 'ರೈತ'' ನು ತನ್ನ ಬಾತ್ಮಿಯಲ್ಲಿ ಸೂಚಿಸಿರುವಂತೆ ಫಾರೆಸ್ಟು, ಡಿ ಪಿ ಡಬ್ಲ್ಯು ಮೊದಲಾದ ಇಲಾಖೆಗಳಲ್ಲಿ ವರ್ಷಕ್ಕೆ ಸಾವಿರಾರು ರೂಪಾಯಿ ಸಂಬಳ ಹೊಂದ ತ್ತಿರುವ ಅನಾವಶ್ಯಕವಾದ ಗಜೆಟೆಡ್ ಆಫೀಸರುಗಳನ್ನು ತೆಗೆಯಬೇಕೆಂಬುದರಲ್ಲಿ ನ್ಯಾಯವಿದೆ ವಿದ್ಯಾ ಇಲಾಖೆಗಳಲ್ಲಿ ... ದಿಷ್ಟು ಸಿಬ್ಬಂದಿಖೋತೆ ಮಾಡಬಾರದೆಂಬ ಸಂಗತಿಯು ಎಲ್ಲರೂ ಒಪ್ಪತಕ್ಕದಾಗಿದ್ದರೂ ಸರ್ಕಾರದವರು ಈಗಲೇ ಈ ಇಲಾಖೆಗಳಲ್ಲಿ ಮಾಡಿರುವ ಯಥೇಚ್ಛ ಖೋತೆ ಸಾಲದೆಂದು ಪುನಹ ಖೋತೆ ಮಾಡಬೇಕೆಂದು ಯೋಚಿಸುತ್ತಿರುವುದು ಬಹಳ ಅತೃಪ್ತಿಕರ ಮೆಡಿಕಲ್ ಇಲಾಖೆಯಲ್ಲಿ ದೊಡ್ಡ ಸಂಬಳದ ಆಫೀಸರನ್ನು ಇಡುವದರ ... ಇಂಡಿಯನ್ ಯೂನಿವರ್ಸಿಟಿಗಳಲ್ಲಿ ತೇರ್ಗಡೆ ಹೊಂದಿದ ... ಫೀಸರನ್ನು ಇಟ್ಟರೆ ಸಾಕಾಗಿದೆ ಇದು ವಿನಹ ... ಲಾಖೆಯಲ್ಲಿ ಬೇರೆ ಯಾವ ಖೋತೆಯೂ ಮಾಡಕೂ... ಆಸ್ಪತ್ರೆಗಳು ಕೆಲವನ್ನು ತೆಗೆಯಬೇಕೆಂತ ಯೋಚಿಸುತ್ತಿರುವ ... ಯಂತೆ ಹೀಗೆ ಮಾಡಿದರೆ ರೈತನ ಕ್ಷೇಮಕ್ಕೆ ಸರಕಾರ ... ಗಮನ ಕೊಡುವದಿಲ್ಲವೆಂತಲೇ ಹೇಳಬೇಕಾದೀತು ... ಅತೃಪ್ತಿಗೆ ಪಾರವೇ ಇಲ್ಲವಾದೀತು ಆದರೆ, 'ರೈತ' ... ತನ್ನ ಬಾತ್ಮಿಯಲ್ಲಿ ಫಾರೆಸ್ಟು, ಡಿ ಪಿ ಡಬ್ಲ್ಯು, ... ಲ್ಯಾಂಡ್ ರಿಕಾರ್ಡ್ಸ್ ಮತ್ತು ಸಹಕಾರಿ ಇಲಾಖೆಗಳ ... ದ ಖೋತೆಯ ವಿಷಯ ನ್ಯಾಯವಾದ ಅಭಿಪ್ರಾಯ ... ದ್ದರೂ, ರೆವಿನ್ಯೂ ಮತ್ತು ಪೊಲೀಸ್ ಇಲಾಖೆಗಳಲ್ಲಿ ... ವರ ಅಭಿಪ್ರಾಯವನ್ನು ಸೂಚಿಸಿದಂತೆ ತೋರುವುದಿಲ್ಲ ... ಲೇಖನಗಳನ್ನು ತೆಗೆದರೆ ತಮಗೆ ಕೋರ್ಟು ಕೆಲಸ ... ಹಳ ತೊಂದರೆಯಿದೆ ಎಂದು ಬಾಯಿ ಬಡಿಯುತ್ತಿ... ರು ಈಗ ಇರುವ ಎರಡು ತಾಲೋಕು ಸುಬೇದಾರರನ್ನು ತೆಗೆದು ... ಸಾಕಬೇಕೆಂದು ಎಂದೂ ಹೇಳಲಾರೆವು ... ಶದ ಪ್ರಜೆಗಳ ಭದ್ರತೆಗೆ ಈಗಿರುವ ಪೊಲೀಸು ... ಸಿಬ್ಬಂದಿಯೇ ಸಾಲದಿರುವಾಗ್ಗೆ ಅದರಲ್ಲಿ ಸಬ್ ಇನ್‌ಸ್ಪೆಕ್ಟರುಗಳನ್ನು ತೆಗೆಯಬೇಕನ್ನುವುದು ಎಂದಿಗೂ ... ಈ ಎರಡು ಇಲಾಖೆಗಳಲ್ಲಿ ಉಂಟಾಗಿರುವ ... ಲ್ಲ ... ಚ್‌ಮೆಂಟಿಗೆ ವಿಷಾದಿಸಬೇಕಾಗಿದೆ ಅದೇ ... ರು ಹೈಸ್ಕೂಲು ಹೆಡ್ ಮಾಸ್ಟರವರ ವಿಷಯ ... ಗತಿಯು ನ್ಯಾಯಕ್ಕೆ ಒಪ್ಪುವಂತಾದದ್ದಲ್ಲ ಈ ... ಪ್ರೈವೇಟುಗಳಿಗೂ ಆ ಶಾಲೆಯಲ್ಲಿ ಸಾಧ್ಯವಾ... ಟ್ಟಿಗೆ ಸ್ಥಳವು ದೊರಕದೆ ವೃಥಾ ಪರಪ್ರಾಂತ... ದೂರುವುದರಿಂದ ಪ್ರಯೋಜನವಿಲ್ಲ ಯೋಗ್ಯ... ರ ಎಲ್ಲರೂ ತಮ್ಮ ನ್ಯಾಯವಾದ ಪದವಿಯನ್ನು ... ವರೆಂಬುದಕ್ಕೆ ಸಂದೇಹವಿಲ್ಲ ಒಟ್ಟಾರೆ ಸರ್ಕಾರದವರು ಇನ್ನಾದರೂ ಈ ಉದ್ಯೋಗಸ್ಥರ ರಿಟ್ರೆಂಚ್‌ಮೆಂಟನ್ನು ... ಸಿ ಜನರ ಅಭಿಪ್ರಾಯಕ್ಕೆ ಸ್ವಲ್ಪವಾದರೂ ... ರಾಗಿ ನಂಬುತ್ತೇವೆ

(Insect Pest On Paddy)

ಭತ್ತದ ಬೆಳೆಗೆ ಬೀಳುವ ಬೋರರ್

(Stem Borer of Paddy)

ಈ ಹುಳದ ದೆಸೆಯಿಂದ ಮದ್ರಾಸ್ ... ತ್ತದ ಪೈರಿಗೆ ಪ್ರತಿವರ್ಷವೂ ಶೇಕಡ 25 ... ನಷ್ಟವು ಇದೆಯೆಂದು ಕಂಡುಹಿಡಿದಿರುತ್ತಾರೆ ... ಲ್ಲಿ ಎರಡು ಮೂರು ವರ್ಷಗಳಿಂದ ನನಗೆ ... ಮಡಿಕೇರಿ ನಾಡಿನಲ್ಲಿ ಈ ಹುಳವು ಅಲ್ಲಲ್ಲೇ ... ಗುವಂತೆ ತೋರುತ್ತವೆ. ಆದುದರಿಂದ ನ... ಅದರ ಅಭಿವೃದ್ಧಿಗೆ ನಿವಾರಣೆಯನ್ನು ಮಾಡ... ದರಿಂದ ಉಂಟಾಗುವ ಕುಂದಕವು ಹೆಚ್ಚಾ... ಬೋರರ್ ಹುಳವು ಒಂದು ಜಾತಿಯ ಪ... ಉತ್ಪತ್ತಿಯಾಗುತ್ತದೆ.

ಜೀವಶಾಸ್ತ್ರ.

ಒಂದು ವಿಧವಾದ ಹಳದಿಬಣ್ಣವುಳ್ಳ ಪತಂಗದ ಹುಳವು ಗುಂಪುಗುಂಪಾಗಿ ಪೈರಿನ ಎಲೆಗಳಮೇಲೆ ಮೊಟ್ಟೆಗಳನ್ನು ಇಟ್ಟು, ಅವುಗಳನ್ನು ಹಳದಿಬಣ್ಣದ ಕೂದಲುಗಳಿಂದ ಮುಚ್ಚುತ್ತವೆ. ಈ ಮೊಟ್ಟೆಗಳು ಕೆಲವು ಕಾಲದಲ್ಲಿಯೇ ಬಿಸಿಲಿನ ಕಾವಿನಿಂದ ಒಡೆದು ಅನೇಕ ಸಣ್ಣ ಸಣ್ಣ ಬೆಳ್ಳಗಿರುವ ದೂರ ದಿಂದ ಬಿಳಿಯ ಬಣ್ಣವುಳ್ಳ ಕೂದಲಿನಿಂದ ಕೂಡಿದ ಕಂಬಳಿಹುಳಗಳು ಉತ್ಪತ್ತಿಯಾಗುತ್ತವೆ. ಕೂಡಲೆ ತಮ್ಮ ಆಹಾರಕ್ಕಾಗಿ ಸಮೀಪದಲ್ಲಿರುವ ಪೈರುಗಳ ದಳಗಳಿಗೆಲ್ಲಾ ಹರಡುತ್ತವೆ. ಅನಂತರ ಭತ್ತಾದಿ ಬೆಳೆಯ ಒಡವನ್ನು ಪ್ರವೇಶಿಸಿ ಕೊರೆದು ಅಲ್ಲಿ ಜೀವಿಸುತ್ತವೆ. ಕಂಬಳಿಹುಳವು ಸುಳಿಯ ಕಾಂಡವನ್ನು ತಿನ್ನುವುದರಿಂದ ಸುಳಿಯು ಸತ್ತುಹೋಗುತ್ತದೆ. ಅನಂತರ ಕೆಲವು ಕಾಲವಾದಮೇಲೆ ಅಲ್ಲಿಯೇ ಈ ಹುಳವು ಕೋಶಾವಸ್ಥೆಯನ್ನು ಹೊಂದಿ ಕೆಲವು ಕಾಲದಲ್ಲಿಯೇ ಪತಂಗವಾಗಿ ಹಾರಿಬಿಡುತ್ತದೆ.

ಇದರಿಂದ ಉಂಟಾಗುವ ನಷ್ಟಗಳು ಕಡಿಮೆಯೆನ್ನಿಸುತ್ತದೆ.

ಇವುಗಳ ನಿವಾರಣೆಯ ಕ್ರಮಗಳು —

1 ಪತಂಗದ ಮೊಟ್ಟೆಯು ಎಲೆಗಳ ಮೇಲೆ ಗುಂಪುಗುಂಪಾಗಿ ಇಡುವುದರಿಂದ ಸುಲಭವಾಗಿ ಕಾಣುತ್ತದೆ. ಒಡನೆ ಅವುಗಳನ್ನು ಕೈಯಿಂದ ಹಾರಿಸಿ ನಾಶಪಡಿಸಬೇಕು.

2 ಒಂದು ಕಟ್ಟೆಯಲ್ಲಿ ಸೀಮೆಎಣ್ಣೆ ಮಿಶ್ರವಾದ ನೀರನ್ನು ಇರಿಸಿ ಅದರ ಮಧ್ಯೆ ಒಂದು ಲಾಂದ್ರವನ್ನು (Light Trap) ಗದ್ದೆಯ ಮಧ್ಯದಲ್ಲಿ ಸ್ವಲ್ಪ ಎತ್ತರವಾದ ಸ್ಥಳದಲ್ಲಿ ಇಟ್ಟರೆ ಪತಂಗದ ಹುಳಗಳು ಬೆಳಕನ್ನು ನೋಡಿ ಬಂದು ಕಟ್ಟೆಯಲ್ಲಿ ಬಿದ್ದು ಸಾಯುವುವು.

ಈ ಹುಳಗಳ ಹಾವಳಿಯು ಮೈಸೂರು ದೇಶದಲ್ಲಿ ಕೂಡ ಪ್ರಬಲವಾಗಿದೆಯೆಂದು ತಿಳಿಯಬಂದಿದೆ. ಆದುದರಿಂದ ನಮ್ಮ ಎಗ್ರಿಕಲ್ಚರ್ ಇಲಾಖೆಯವರು ಕೂಡಲೇ ನಿವಾರಣಾ ಕ್ರಮ ವಿಚಾರಣೆಯನ್ನು ಮಾಡುವುದು ಉತ್ತಮ.

M. B. M.

ಪೂರ್ವಜನ್ಮದ ವೃತ್ತಾಂತ.

—

ಪುನರ್ಜನ್ಮ ಪ್ರತ್ಯಕ್ಷವಾಗಿ ತಿಳಿಸಿದ್ದು.

[illegible] ಮಹಾರಾಜರವರು ಪರೀಕ್ಷಿಸಿದರು

—

[illegible] ಸಂಸ್ಥಾನದಲ್ಲಿರುವ ಸಲಿಂಪೂರೆಂಬ ಗ್ರಾಮದಲ್ಲಿ ಬೈರತಿ ಎಂಬ ಬ್ರಾಹ್ಮಣನಿರುತ್ತಾನೆ. ಆತನಿಗೊಬ್ಬ ಮಗನು. ವಯಸ್ಸು ನಾಲ್ಕು ವರ್ಷ, ಹೆಸರು ಪ್ರಭು. ಹುಡುಗನು ತನ್ನ ಪೂರ್ವಜನ್ಮದ ವೃತ್ತಾಂತವನ್ನು ವಿವರಿಸಿ ತಿಳಿಸುತ್ತಾನೆಂದು ಭರತಪೂರು ಮಹಾರಾಜನಿಗೆ ತಿಳಿದು ಅದನ್ನು ತಿಳಿಯಬೇಕೆಂಬ ಇಚ್ಛೆಯಿಂದ ನಾಯಿಬು ತಾಸೀಲ್ದಾರರನ್ನು ಆ ವರ್ಷ ಮಾರ್ಚಿ ತಿಂಗಳಲ್ಲಿ ಆ ಬ್ರಾಹ್ಮಣನ ಬಳಿಗೆ ಕಳುಹಿಸಿದರು. ಅವರು ಹೋಗಿ ಆ ಹುಡುಗನನ್ನು ಪ್ರಶ್ನಿಸಲು ಆ ಬಾಲಕನು ಈರೀತಿ ತಿಳಿಸಿದನು:—

ಪೂರ್ವಜನ್ಮದಲ್ಲಿಯೂ ನಾನು ಬ್ರಾಹ್ಮಣನಾಗಿದ್ದೆ. [illegible]ಪುರ ಸಂಸ್ಥಾನದಲ್ಲಿ ಪತ್ತಾರಿ ಎಂಬ ಗ್ರಾಮದಲ್ಲಿ ವಾಸಿಸುತ್ತಿದ್ದನು. ನನ್ನ ಹೆಸರು ಹರಬುಕ್ಷ್ [illegible] ನನ್ನ ಮಕ್ಕಳು. ಒಬ್ಬನ ಹೆಸರು ಪೂರ್ಣ [illegible] ಎರಡನೆಯವನ ಹೆಸರು ಶಾಮಲಾಲು. ಇಬ್ಬರು ಹೆಣ್ಣುಮಕ್ಕಳು. ದೊಡ್ಡವಳ ಹೆಸರು ಕೋಕಿಲ, ಎರಡನೆಯವಳ [illegible] ಲೀಲಿ. ಅವರಿಬ್ಬರಿಗೂ ಮದುವೆ ಮಾಡಿದೆನು. [illegible] ಗಂಡನ ಹೆಸರು ರಂಘತು, ಶೇರ್ಲೀಗಾಮವಾಸಿ. ಎರಡನೆಯ ಅಳಿಯನ ಹೆಸರು ಗೋಕುಲನು, ವಾಸಸ್ಥಳ ನವಾ[illegible] ಕನ್ಯಾಶುಲ್ಕವನ್ನು ತೆಗೆದುಕೊಂಡೇ ದೊಡ್ಡ ಮಗಳನ್ನು ಕೊಟ್ಟೆನು, ಎರಡನೆಯ ಮಗಳನ್ನು ಉಚಿತವಾಗಿ ಕನ್ಯಾದಾನವನ್ನು ಮಾಡಿದೆನು.

[illegible]ರಿಯಲ್ಲಿ ನನಗೆ ಒಳ್ಳೆ ಮನೆ (ಹವೇಲಿ) ಇದೆ. ಆ ಮನೆ ಮಗ್ಗುಲಲ್ಲಿ ಸ್ವರೂಪಜಾತ [illegible] ಸ್ವರೂಪಜಾತನಿಗೆ ಒಬ್ಬ ಮಗ, ಒಬ್ಬ ಮಗಳು.

[illegible]ದ ಕಟ್ಟಲ್ಪಟ್ಟ ಎತ್ತರವಾದ ದೂರ್ಗವಿರುತ್ತದೆ. ದೊಡ್ಡಕೆರೆ ಆ ಊರಿನಲ್ಲಿದೆ. [illegible] ನಡುವೆ ಮೂರಂತಸ್ತು ಮಹಡಿಯು ಇದೆ. ಆ ಕೆರೆಗೆ ಇಳಿಯುವ ಬಾವಿಗಳಿವೆ. [illegible] ಬಾವಿಯ ಬಳಿ ಎರಡು ಅರಳೀಮರಗಳಿವೆ. [illegible] ಬಳಿ ಎಂಬ [illegible] ಮೂಲೆಯಲ್ಲಿ [illegible] ಶಿವ ಮಂದಿರವಿದೆ. ನಾನು [illegible] ಬಾರಿ [illegible] ಚಾಕರಿಯಲ್ಲಿದ್ದೆನು. ಹತ್ತಾರಿ [illegible] ಕೋಟೆಯಲ್ಲಿ ಒಂದು [illegible] ಆ ಕಾಲದಲ್ಲಿ, 1844 ನೇ ವರ್ಷ ಬರಬಂದ [illegible] ಆ ವಾಗ ಹತ್ತಾರೀ ಗ್ರಾಮದಲ್ಲಿದ್ದೆನು. ನನ್ನ [illegible] ಗಳಿದ್ದವು. ನಾನು ವ್ಯವಸಾಯ ಮಾಡ[illegible]

[illegible] ಬಳಿಕ ನಾನು ಪರಲೋಕದಲ್ಲಿದ್ದೆನು. [illegible] ಗೆ ಹೋಗೆಂದು ದೇವರೇ ನನ್ನನ್ನು [illegible]

ಹಿಸಿದ್ದ: (ಸಲೀಂಪುರ ಬಾಲಕನು ಹುಟ್ಟಿದ ಸ್ಥಳ)
ನನ್ನ ಹುಡತಿ ಹೆಸರು [illegible] (ಬಟ್ಟಕಲೆಯುಳ್ಳವಳು)
ನನ್ನ ತಂದೆಯ ಹೆಸರು [illegible] ನನ್ನ ಸೋದರಮಾವ
ಬಗ್ಗ ವಾಸ್ ಗ್ರಾಮದ [illegible] ನನ್ನ ಮಾವ (ಹೆಂಡತಿ
ತಂದೆ) ಒಪ್ಪವಾರಯಲ್ಲ

ಈ ರೀತಿಯಾಗಿ [illegible]ದಾಗಲೆಲ್ಲಾ ಮಧ್ಯೆಮಧ್ಯೆ ಆ ಹುಡುಗನು ಮುಗುಳುನಗುತ್ತಾ ಅರ್ಥವಿಲ್ಲದ ಮುದ್ದು ಮಾತುಗಳನ್ನು ಆಡುತ್ತಾನೆ ಎಂದು ನಾಯಬು ತಹಸೀಲ್ದಾರರು ರಿಪೋರ್ಟು ಮಾಡಿದರು. ಹೀಗೆ ಮಾಡಿದ ರಿಪೋರ್ಟನ್ನು ಮಹಾರಾಜರವರು ಒಡನೆಯೇ ಆ ಸಂಗತಿ ಎಷ್ಟು ಮಟ್ಟಿಗೆ ನಿಜವೆಂದು ನೋಡಬೇಕೆಂದು ಆಜ್ಞಾಪಿಸಿದುದರಿಂದ 23-4-23 ರಲ್ಲಿ ನಾಯಬು ತಾಸಿಲ್ದಾರರು ತಹಸೀಲ್ದಾರರುಗಳು ಬಾಲಕನನ್ನು ಕರೆದುಕೊಂಡು ಪತ್ತಾರೀ ಗ್ರಾಮಕ್ಕೆ ಅಲ್ಲಿ ನಡೆದ ಸಂಗತಿಯನ್ನು ಹೀಗೆ ತಿಳಿಸಿದರು.

ಮಹಾರಾಜರವರ ಅಪ್ಪಣೆ ಪ್ರಭು ಎಂಬ ಆ ಮಗುವನ್ನು ಪತ್ತಾರೀ ಗ್ರಾಮಕ್ಕೆ [illegible] ಬಂಡಿಯಲ್ಲಿ ಕರೆದುಕೊಂಡು ಹೊರಟು [illegible] ಸ್ಥಳಕ್ಕೆ ಆ ಗ್ರಾಮದ ಬಳಿ ನಿಂತೆವು. [illegible] ದೊಡ್ಡ ಕೆರೆ ಯಾವ ದಿಕ್ಕಿನಲ್ಲಿದೆಯೆಂದು ಕೇಳಿದರು. ಊರಿಗೆ ದಕ್ಷಿಣದಲ್ಲಿರುವುದಾಗಿ ಹೇಳಿದನು. ಆ ಬಂಡಿಯ ಹತ್ತಿರ ಆ ಗ್ರಾಮದೊಳಕ್ಕೆ ಹೋಗಿ ವಿಶ್ರಮಿಸಿಕೊಂಡೆವು. ಪರಿಚಿತ ಗ್ರಾಮದ ಮುಖ್ಯರು ಕರೆಸಿದೆನು. ಭಗವಾನ್ ಸಿಂಗ್ ಫೌಜುದಾರ್ ವಯಸ್ಸು ವರ್ಷ [illegible] ಸಿಂಗ್ ಪೌಜುದಾರ್ [illegible] 50 ವರ್ಷ, ಆಮಚಿಸಿಂಗ್ ಫೌಜುದಾರ್ 7 [illegible] ಹಂಸರಾಜ್ 49 ವರ್ಷ ಅವರೆದುರಾಗಿ ಪ್ರಭುವನ್ನು ಪ್ರಶ್ನಿಸಿದೆನು. ಆತನೀರೀತಿಯಾಗಿ ತಿಳಿಸಿದನು:

ನನ್ನ ಹೆಸರು ಹರಬುಕ್ಷ್ ತಂದೆಯ ಹೆಸರು ಮುಂದೇ. (ಇದು ನಿಜವೆಂದು ಎಲ್ಲರು ಹೇಳಿದರು) ನನಗಿಬ್ಬರು ಸಹೋದರರು ಅವರಲ್ಲೊಬ್ಬನು ಮೊದಲೇ ಸತ್ತುಹೋದನು. (ಇದೂ ನಿಜ [illegible] ಸಿದರು)

ನನ್ನ [illegible] ಇರುವಾಗಲೆ ಸತ್ತನು. [illegible] ಕೋಕಿಲ [illegible] ಮಕ್ಕಳು. (ಎಂದು ಬಾಲಕನು ಹೇಳಿ) ಅಳಿಯಂದಿರ ಹೆಸರು ಕನ್ಯಾಶುಲ್ಕದ ವಿಷಯವನ್ನು ಪುನಃ ಹೇಳಲಾಗಿ ಸಂಗತಿಗಳೆಲ್ಲವೂ ನಿಜವೆಂದೂ ಗ್ರಾಮಸ್ಥರು ಹೇಳಿದರು.

ನನಗೆ ಒಂದು ಹವೇಲಿ (ದೊಡ್ಡಮನೆ) ಇತ್ತು. ಮಗ್ಗುಲ ಮನೆಯಲ್ಲಿ ಸ್ವರೂಪಜಾತನಿದ್ದನು. ಆತನಿಗೆ ಒಬ್ಬ ಮಗನೂ, ಒಬ್ಬ ಮಗಳೂ [illegible] ಆ ಮನೆಯ ಮಗ್ಗುಲಲ್ಲಿ ಎತ್ತರವಾದ ಕಲ್ಲಿನಾ[illegible] (ಈ ಸಂಗತಿಯೆಲ್ಲವೂ ನಿಜವೇ ಹೌದು) ಇವೇ [illegible] ಎಂದು ಗ್ರಾಮಸ್ಥರು ಹೇಳಿದರು.

ಶಂಕರಮಹಾದೇವ [illegible] ಹಿಂದೆ ಅದರ ಬಳಿ ಎಡಬಿಡದೆ [illegible] ವಾಲಾ ಬಾವಿಯು [illegible] ವಾಲಾ ಬಾವಿಯ ಬಳಿ [illegible] (ಈ ಸಂಗತಿಗಳೆಲ್ಲವನ್ನೂ ಬಾಲಕನು ಸರಿಯಾಗಿಯೇ ಹೇಳಿದನೆಂದು ಗ್ರಾಮಸ್ಥರು ಒಪ್ಪಿದರು.)

[illegible] ಯಾವ ವರ್ಷದಲ್ಲಿ ಹುಟ್ಟಿದನೋ ಸರಿಯಾಗಿ ತಿಳಿಯಲಿಲ್ಲ. 1862 ನೇ ಸಂವತ್ 55 ನೇ ವಯಸ್ಸಿನಲ್ಲಿ ಆತ ಗತಿಸಿದನಾದ ದರಿಂದ 1818 ರಲ್ಲಿ ಹುಟ್ಟಿದವನಾಗಿರಬೇಕು. 1844 ರಲ್ಲಿ ಬರ ಬಂದಿದ್ದನ್ನು ಆಗ ನನ್ನ ಎರಡು ಎತ್ತುಗಳಿಂದ ನನ್ನ ಹೊಲದಲ್ಲಿ ವ್ಯವಸಾಯವನ್ನು ಮಾಡಿದೆನು. ಇದೆಲ್ಲವೂ ನಿಜ. ನನ್ನ ಸೋದರ ಮಾವ [illegible] ಸಂಸ್ಥಾನದಲ್ಲಿ ಹಿಸಿನ ತಾಲೂಕಿನ ಬೀಗ್ಗವಾಸ್ನಲ್ಲಿದ್ದನು. (ನಿಜ)

ಮಾತುಮಾನ ಹೆಂಡತಿಯ ತಂದೆಯೂ ಇರುವ ಗ್ರಾಮಗಳನ್ನು ಹೇಳಿದನೇ ಹೊರತು, ಅವರ ಹೆಸರುಗಳನ್ನು ಹೇಳಲಾರದೇ ಹೋದನು.

ನನ್ನ ಹೆಂಡತಿಗೆ ನಾನೇ ಗಂಜೋ ಎಂದು ಪ್ರತಿನಾಮವನ್ನು ಇಟ್ಟೆನು. (ನಿಜ) ಆಕೆಯ ನಿಜವಾದ ಹೆಸರು ಗೌರ. ಆಕೆಗೆ ಬೊಕ್ಕತಲೆ ಇದ್ದುದರಿಂದ ಆಕೆಯು ವಿಪರೀತ [illegible] ಬಕ್ಕ ಹಾಸ್ಯವಾಗಿ ಗಂಜೋ ಎಂದು ಯಾವಾಗಲೂ ಕೂಗುತ್ತಿದ್ದನು (ಎಲ್ಲಾ ನಿಜ)

ದೊಡ್ಡಕೆರೆಯ ನಡುವೆ ಮಹಡಿಮನೆ [illegible] ಆ ಕೆರೆಯಲ್ಲಿ ಮೂರಂತಸ್ತಿನ ಮಹಡಿ ಇದೆ [illegible] ನೀರಿನಡಿಯಲ್ಲಿದೆ. ಆ ಕರೆಯನ್ನು ಆ ಬಾಲಕನಿಗೆ ತೋರಿಸಲಾಗಿ ಅದನ್ನು ಹೋಲಿಸಿ ಹಿಂದಿನ ಕಥೆಯನ್ನು ಹೇಳಿದನು.

ನಾನು ಘಾಂಡುಗಾನ ಗ್ರಾಮಕ್ಕೆ ತಹಸೀಲಿನೂ ಆಗಿದ್ದೆನು (ನಿಜ) ಆತನ ಮಗ ಪೂರ್ಣ [illegible] ವಾಲಿಯದ ಆಪ್ತನಾಗಿದ್ದಾನೆ. [illegible] ಲ್ಲಿ ಶಿವಾಲಯವಿದೆ. ಅಲ್ಲೊಂದು ಘಟಸರ್ಪವಿದೆ. (ಇದೂ ನಿಜ)

ನಿನ್ನ ಮನೆಗೆ ದಾರಿಯನ್ನು ತೋರಿಸೆಂದು ಹುಡುಗನನ್ನು ಕೇಳಿದೆನು. ಆ ಹುಡುಗನು ನಾಲ್ಕು ಹೆಜ್ಜೆ ನಡೆದು ಆಲೋಚಿಸುತ್ತಾ ನಿಂತನು.

ಬಳಿಕ ಇನ್ನೊಂದು ಬೀದಿಗೆ ತಿರುಗಿದನು. ಅಲ್ಲಿ ನಿಂತು ಮತ್ತೆ ಕೆಲಹೊತ್ತು ಯೋಚಿಸಿ ಸರಿಯಾದ ದಾರಿಯಲ್ಲಿ ತನ್ನ ಮನೆಗೆ ಕರೆದುಕೊಂಡು ಹೋದನು. ಆ ದಾರಿಯು ತುಂಬಾ ಡೊಂಕುಡೊಂಕಾಗಿ ಬಹಳ ದೂರವಾಗಿದ್ದರೂ ಆ ಬಾಲಕನು ದಾರಿತಪ್ಪಲಿಲ್ಲ. ತನ್ನ ಮನೆಯ ಮಗ್ಗುಲ ಮನೆಗಳು ಶಿಥಿಲವಾಗಿದ್ದುದರಿಂದ ಆ ಮನೆಯ ಬಳಿ ನಿಂತು ಕೊಂಚಹೊತ್ತು ಅನುಮಾನಿಸಿ, ಬಳಿಕ ಗುರ್ತಿಸಿ ಒಳಕ್ಕೆ ಹೋಗಿ ಹರಬುಕ್ಷ್ನ ಕುಮಾರನಾದ ಪೂರ್ಣನನ್ನು ನೋಡಿ ಈತನೇ ನನ್ನ ಮಗನೆಂದು ಅವನ ಬೆರಳನ್ನು ಹಿಡಿದುಕೊಂಡನು. ಬಾಲಕನು ತನ್ನ ಪೂರ್ವಜನ್ಮಸ್ಥಿತಿಯನ್ನು ಹಿಡಿದು ಹೇಳಿದನೇ ಹೊರತು, ಯಾತು ಭೇದಿಸಲಿಲ್ಲ ಎಂದು ತಹಸೀಲ್‌ದಾರ್ ಬರೆದರು ಎಂದು ಅಲಹಾಬಾದ್ ಲೀಡರ್ ಪತ್ರಿಕೆಯಲ್ಲಿದ್ದುದನ್ನು ಬರೆದುದಾಗಿ 9-8-23 ನೇ ಗುರುವಾರದ ಆಂಧ್ರಪತ್ರಿಕೆಯಲ್ಲಿರುತ್ತದೆ.

"ಸಾಧ್ವಿ"

ಕೊಡಗಿನ ,ಬಿಬ್ಬಿ ಅಕೆಬುರುಕನ ಬಿಕ್ಕ.

—

೧೦ ನೇ ತಾ|| ನ ಕೊಡಗಿನಲ್ಲಿ "ಕೌನ್ಸಿಲ ಮೆಂಬರರಾಗಲು ಆಶೆ ಇರುವವ" ನೊಬ್ಬನು ಮೈಸೂರಿನವರಿಗೆ ಒದಗಿದ ವೈಸರಾಯರಿಗೆ ಕೊಡಗಿನೂ ದಯಮಾಡಿಸಬೇಕೆಂದು ಅಂಗಲಾಚಿ ಯೋಚಿಸಿದ್ದಾನೆ! ಮದ್ರಾಸ ಮುಂತಾದ ಪಟ್ಟಣಗಳಲ್ಲಿ (ಮೈಸೂರಿನಲ್ಲಿ) ಆಗಮನದ ದಿನ ಹರತಾಳ ಮಾಡುವರು. ನಾವು ಅದರಿಂದ (?) ಸ್ವಾಗತಮಾಡುವೆವು ಚಿಕ್ಕ ಸಬೇಕಂದು ಈ ಕೌನ್ಸಿಲದಾರನಿಗಾಗಿ ಬಾಯಿಗೆ ನೀರು ಬಿಟ್ಟವನಬಿಕ್ಕ.

ಅಯ್ಯೋ! ಆರಣ ಈ ಅನಾಹುತ ಮಹಾಪ್ರಸ್ಥವನ್ನು ಮನೆಗೆ ಕರಕಂದು ಮನೆಯನ್ನೇ ಹಾಳುಮಾಡಿಕೊಳ್ಳಬೇಕೆಂಬ ದುರ್ಬುದ್ಧಿ ಯಾಕೆ ಉಂಟಾಯಿತು? ವೈಸರಾಯರ ಆಗಮನವೇನು ಸುಮ್ಮನೆ ಆ ಕಕ್ಕದ್ದೆ? ಕನಿಷ್ಠ ಹತ್ತೆಂಟು ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕು. ಒಡವರು ಕರಕಂದಾಯಗಳ ರೂಪದಲ್ಲಿ ಕೊಟ್ಟ ಈ ಹಣವನ್ನು ಹೀಗೆ ಹಾಳುಮಾಡುವುದು ಸರಿಯಾದೀತೇ? ಕೌನ್ಸಿಲು ದೊರೆತ ಪ್ರಾಂತ್ಯಗಳಿಗಾದರೂ ದೊರೆತ ಸ್ವರಾಜ್ಯ ಸೌಖ್ಯವೇನು? ಕೌನ್ಸಿಲುಗಳಿಂದ ಸ್ವರಾಜ್ಯವು ಸಿಗುವದಿಲ್ಲವೆಂದೇ ಮಹಾತ್ಮಾಜೀಯವರು ಅಸಹಕಾರದ ಚಳವಳಿಯನ್ನಾರಂಭಿಸಿದೆಯಲ್ಲವೇ? ಇಂಥ ಸಮಯದಲ್ಲಿ ಕೂಡ ನಮ್ಮ ಬಾಂಧವರು ಅವಿಲ ಬಾವತೀಯರೊಂದಿಗೆ ಒತ್ತಟ್ಟಿನ ರಬೇಕಲ್ಲವೇ? ಯಾವನೋ ಒಬ್ಬ ಅಕೆಬುರುಕ ಕರಣನ ಮಾತು ಕೇಳಿ ಕೂರ್ಗ ಬಾಂಧವರು ವೈಸರಾಯರನ್ನು ಕರಿಸುವ ಮೋಸದ ಬಲೆಗೆ ಸಿಕ್ಕಿಕೊಳ್ಳಲಿಕ್ಕಿಲ್ಲವೆಂದು ನಮ್ಮ ವಿಶ್ವಾಸವು.

(ಕಮಾನೀರದಿಂದ)

The Old Student Association
C. H. School, Mercara.

ಮಡಿಕೇರಿ ಹೈಸ್ಕೂಲ್ ಹಳೇ ವಿದ್ಯಾರ್ಥಿಗಳ ಸಂಘವು ರಾವ್‌ಸಾಹೇಬ್ ಕೇಟೋಳಿರ ಚಂಗಪ್ಪನವರು ಪ್ರೆಸಿಡೆಂಟರಾಗಿ ಪುನರ್ಜೀವವನ್ನು ಹೊಂದಿರುವ ಸಂಗತಿಯು ಎಲ್ಲರಿಗೂ ತಿಳಿದಿದೆ ಎಂದು ನಂಬುತ್ತೇನೆ. ಸಂಘದ ವಾರ್ಷಿಕೋತ್ಸವವು ಈ ವರ್ಷದ ನವಂಬರ್ ಡಿಸೆಂಬರ್ ತಿಂಗಳೊಳಗಾಗಿ ನಡೆಯುವದು. ಅನೇಕ ಮಹನೀಯರುಗಳು ಶಾಲೆ ಬಿಟ್ಟು ದಿಕ್ಕು ದಿಕ್ಕು ಹೋಗಿರುವುದರಿಂದ ಅವರ ವಿಳಾಸವು ತಿಳಿಯದೆ ಅವರೆಲ್ಲರಿಗೂ ಪ್ರತ್ಯೇಕ ಕಾಗದ ಬರಿಯಲು ಆಗುವ ಕೆಲಸವಲ್ಲ. ಆದುದರಿಂದ ದಯವಿಟ್ಟು ಎಲ್ಲರೂ ಮೆಂಬರುಗಳಾಗುವಿರೆಂದು ಕೇಳಿಕೊಳ್ಳುತ್ತೇನೆ. ವಾರ್ಷಿಕ ಚಂದ (Minimum) ಕಮ್ಮಿ ಒಂದು ರೂಪಾಯಿ ಪರದೇಶದ ಶಾಲೆಗಳಲ್ಲಿಯ ಹಳೇ ವಿದ್ಯಾರ್ಥಿಗಳು ಜೀವನೋಪಾಯ ಮೊದಲಾದ ಕೃತ್ಯಗಳಿಗೆ ಎಷ್ಟೋ ದೂರ ಹೋಗಿದ್ದರೂ ಆಯಾ ಶಾಲೆಗಳ ಸಂಘದ ಸೆಕ್ರೆಟರಿಗಳಿಗೆ ಬರೆದು ತಿಳಿಸಿ ಮೆಂಬರುಗಳಾಗುತ್ತಾರೆ. ನಮ್ಮ ಶಾಲೆಯವರೂ ಹಾಗೆ ಮಾಡಿ ನನ್ನ ಕೆಲಸಕ್ಕೆ ಅನುಕೂಲಮಾಡಿ ತಮ್ಮ ಅಭಿಮಾನ ವಿಶ್ವಾಸವನ್ನು ತೋರಿಸಬೇಕೆಂದು ಕೋರಿಕೆ.

ಅನಲ್ಲದೆ ಒಂದು (Magazine) ಪತ್ರಿಕೆಯನ್ನು [illegible] ವರ್ಷಕ್ಕೆ ಮೂರಾವೃತ್ತಿಯಾದರೂ [illegible] ಮೊದಲನೇ ಪ್ರಯತ್ನವನ್ನು [illegible] ಉದ್ಯಮಿಸಬೇಕಂದಿದ್ದೇನೆ. [illegible] ಇಂಗ್ಲೀಷಿನಲ್ಲಿಯೂ [illegible] ವಿಷಯದಲ್ಲಿ ಯಾವುದಾದರೂ ಲೇಖನಗಳನ್ನು ನವಂಬರ ತಿಂಗಳು ಇಪ್ಪತ್ತನೇ ತಾರೀಖು ಒಳಗಾಗಿ ನನಗೆ ಕಳುಹಿಸಬೇಕಾಗಿ ಕೋರಿಕೆ. ಎಲ್ಲರೂ ಚಂದಾದಾರರಾಗುವಿರೆಂದೂ ನಂಬಿದ್ದೇನೆ.

B. S. Kushalappa,
Secretary Old Student's Association,
C. H. School, Mercara.

ಮಹಾಸೀಮೆಯಲ್ಲಿ ವಿನಂತಿ

ಈ ವರ್ಷದ ಅತಿವೃಷ್ಟಿಯಿಂದ ಸಂಭವಿಸಿದ ಅಪೂರ್ವವಾದ ಪ್ರವಾಹದ ದೆಸೆಯಿಂದ ಕೊಡಗಿನಲ್ಲಿಯೂ ನಮ್ಮ ನೆರೆಜಿಲ್ಲೆಗಳಾದ ಮಲಬಾರು ದಕ್ಷಿಣ ಕನ್ನಡ ಪ್ರಾಂತ್ಯಗಳಲ್ಲಿಯೂ ಉಂಟಾಗಿರುವ ವಿವರಿಸಲಶಕ್ಯವಾದ ನಷ್ಟವು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಕಷ್ಟಕ್ಕೊಳಗಾಗಿರುವವರಿಗೆ ಸಹಾಯ ಮಾಡುವುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯವಾಗಿದೆ. ಇದಕ್ಕಾಗಿ ಮಡಿಕೇರಿಯಲ್ಲಿ ಒಂದು ಮೀಟಿಂಗು ನಡೆದು ಸ್ವಲ್ಪ ಹಣ ಜಮಾಯಿಸಿ ಕಷ್ಟ ನಿವಾರಣೆ ಬಗ್ಗೆ ಕಳುಹಿಸಲ್ಪಟ್ಟಿದೆ. ಈಗಲೂ ಚಂದವು ಜಮೆಯಾಗುತ್ತಲಿದೆ. ತಮ್ಮ ಸಹೋದರರ ಕಷ್ಟವು ತಮ್ಮದೆಂದು ಯೋಚಿಸಿ ಪ್ರತಿಯೊಬ್ಬ ದೇಶೀಯನೂ ಉದಾರಭಾವದಿಂದ ತನ್ನ ಶಕ್ತ್ಯನುಸಾರ ಧನಸಹಾಯ ಮಾಡಬೇಕೆಂದು ಕೋರಿಕೆ. ಸಹಾಯ ಮಾಡಿದವರ ಪಟ್ಟಿಯು ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದು. ಹಣವನ್ನು ರಿಲೀಫ್ ಕಮಿಟಿಯ ಅಧ್ಯಕ್ಷರಾದ ರಾ॥ ಬಾ॥ ಕೊಡಂದೇರ ಕುಟ್ಟಯ್ಯನವರು, ಮಡಿಕೇರಿ, ಇವರಿಗೆ ಕಳುಹಿಸಿಕೊಡಬೇಕು.

ಮಡಿಕೇರಿ.
26-8-23

ಸಂಪಾದಕ,
"ಕೊಡಗು"

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗು ಬ್ರಾಹ್ಮಣರ ವಿದ್ಯಾಭಿವೃದ್ಧಿ ನಿಧಿಯು ರಿಜಿಸ್ಟರ್ ಮಾಡಲ್ಪಟ್ಟಿದೆ.

ಇಷ್ಟರವರೆಗೆ ಪ್ರೊನೋಟಿಗೆ ಒಂದಾಣೆ ಸ್ಟಾಂಪು ಉಪಯೋಗಿಸಿದರೆ ಸಾಕಾಗಿತ್ತು. ಆದರೆ 250 ರೂ ವರೆಗೆ ಒಂದಾಣೆ ಸ್ಟಾಂಪೂ 250 ರಿಂದ 1000 ರೂ ವರೆಗೆ ಎರಡಾಣೆ ಸ್ಟಾಂಪೂ, 1000 ರೂ. ಮೇಲೆ ನಾಲ್ಕಾಣೆ ಸ್ಟಾಂಪೂ ಉಪಯೋಗಿಸಬೇಕೆಂಬ ಕಾನೂನು ಶೀಘ್ರದಲ್ಲಿಯೇ ಜಾರಿಗೆ ಬರುವಂತಿದೆ.

ಈಗ ಒಂದೆರಡು ವರ್ಷಗಳಿಂದಲೇ ಕೊಡಗಿಗೆ ದೊರೆಯುತ್ತೆ ಎಂದೆನ್ನುತ್ತಿದ್ದ ಕೌನ್ಸಿಲು ಸ್ಟೇಟ್ ಸೆಕ್ರೆಟರಿಯವರಿಂದ ಮಂಜೂರಾಗಿದೆ ಯೆಂದು ಮಡಿಕೇರಿಯಲ್ಲೆಲ್ಲಾ ಗಲ್ಲು. ಇದು ಎಷ್ಟರಮಟ್ಟಿಗೆ ನಿಜವೋ ತಿಳಿಯದು. ಈ ಮುಖ್ಯವಾದ ಸಂಗತಿಯನ್ನು ತಿಳಿಯಲು ಜನರು ಬಹಳ ಕುತೂಹಲವುಳ್ಳವರಾಗಿರುವುದರಿಂದ ಕಮಿಷನರವರು ಒಡನೆ ನಿಜಸಂಗತಿಯನ್ನು ಪ್ರಕಟಿಸುವರಾಗಿ ನಂಬುತ್ತೇವೆ.

ಮಳೆಯ ದೆಸೆಯಿಂದ ಪೊನ್ನ ಬೆಟ್ಟದಲ್ಲಿರುವ ರೋಮನ್ ಕಥೋಲಿಕ್ ಚರ್ಚ ಕಟ್ಟೋಣದ ಹಿಂಭಾಗವೆಲ್ಲವೂ ಬಿದ್ದು ಹೋಗಿದೆಯಂತೆ.

ಮಡಿಕೇರಿ ಮುನಸಿಪಲ್ ಶಾಲೆಯಾದ ಹಿಂದೂಸ್ಥಾನಿ ಸ್ಕೂಲಿನ ಉಪಾಧ್ಯಾಯರಾದ ಮ॥ ಮಹಮ್ಮದ್ ಸಾಲೆಯವರು ತಾ॥ 23 ನೇ ಗುರುವಾರ ಮಧ್ಯರಾತ್ರೆ ವರೆಗೆ ಕ್ಷೇಮದಲ್ಲಿದ್ದು ಫಕ್ಕನೆ ಎದೆನೋವೆಂದು ಹೇಳಿ ಸ್ವಲ್ಪ ಹೊತ್ತಿನಮೇಲೆ ಮೃತಪಟ್ಟರು.

ಬೆಂಗಳೂರಿನಲ್ಲಿ ಆದ ಕ್ರಿಕೆಟ್ ಪಂದ್ಯಾಟದಲ್ಲಿ ಬೆಂಗಳೂರು ಜಮ್ಖಾನ ಟೀಮಿನವರು ಕೊಡಗಿನ ಟೀಮನ್ನು 5 ವಿಕ್ಕೆಟು 75 ರನ್ನುಗಳಿಂದ ಸೋಲಿಸಿರುತ್ತೆ. ಒಂದನೇ ಇನ್ನಿಂಗ್ಸಿನಲ್ಲಿ ಕೊಡಗಿನ ಟೀಮಿನದು 100, ಬೆಂಗಳೂರು ಟೀಮಿನದು 110 ರನ್ನುಗಳು 3 ನೇ ಇನ್ನಿಂಗ್ಸಿನಲ್ಲಿ ಕೊಡಗಿನ ಟೀಮಿನದು 107, ಬೆಂಗಳೂರು ಟೀಮಿನದು 4 ವಿಕ್ಕೆಟುಗಳಿಗೆ 172 ರನ್ನುಗಳು.

ಡಿಸ್ಟ್ರಿಕ್ಟ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ಕ್ಲಾರ್ಕ ಆಗಿದ್ದ ಮೆ॥ ಬೊಮ್ಮಂಡ ಕಾರ್ಯಪ್ಪನವರನ್ನು ಸೋಮವಾರ ಪೇಟೆ ನಾಡು ಆಫೀಸು ಕ್ಲಾರ್ಕಾಗಿ ವರ್ಗಾಯಿಸಿರುವರು.

ಅಪಾಯವಾಗಿದ್ದ ಹುಣಸೂರು ಸೇತುವೆಯು ಶಕ್ತ್ಯಾಲಕ್ಷ ದುರಸ್ತು ಆಗಿ ಈಗ ಗಾಡಿಗಳು ಅತ್ತಿತ್ತ ದಾಟುತ್ತಿವೆ. ವಿ... ನದಿಯನ್ನು ದಾಟಲು ಬಲಮುರಿಯಲ್ಲಿ ಪುನಃ ... ದೋಣಿಯನ್ನು ಹಾಕಿರುವರು.

... ದ ವೀರಾಜಪೇಟೆಗೆ ಹೋಗುವ ರಸ್ತೆಯ ... ದುರಸ್ತು, ಮಾಡಲ್ಪಟ್ಟು ಅಂಚೆಯ ಬಸ್ಸು ... ಈಗ ... ದಿನಂತೆ ಮಡಿಕೇರಿಯಿಂದ ವೀರಾಜಪೇಟೆಗೆ ... ದಿವಸಕ್ಕೊಂದರ ಪ್ರಕಾರ ನಡೆಯುತ್ತಿದೆ.

... ನೇರಿನದಿಯ ಪ್ರವಾಹದಲ್ಲಿ ಸಿಕ್ಕಿ ಮನೆಮಾರುಗಳ ... ಂಡಿರುವ ಬಲಮುರಿಯ ಕೆಲವು ಜನರ ಕಷ್ಟನಿವಾರಣೆಗೆ ... ಮಹಾಶಯರು ಡಿಸ್ಟ್ರಿಕ್ಟ ಗ್ರಾಂಟಿನಿಂದ ... ಹಾಯಿಗಳನ್ನು ಕೊಟ್ಟಿದ್ದಾರೆಂದು ವರ್ತಮಾನವಿದೆ.

ಮಡಿಕೇರಿ ... ಆಸ್ಪತ್ರೆಯಲ್ಲಿದ್ದ ಸಬ್ ಅಸಿಸ್ಟೆಂಟ್ ಸರ್ಜನ್ ಮೆ॥ ... ಕಾರ್ಯಪ್ಪನವರನ್ನು ರಿಲೀವಿಂಗ್ ... ರಕ್ತ ಇಂಜೆಕ್ಷನ್ ಮಾಡಲಿಕ್ಕಾಗಿ (ಮ... ಬರುವ) ... ತೋಕಿನಲ್ಲಿ ಸ್ಪೆಶ್ಯಲ್ ಡ್ಯೂಟಿಗೆ ಕಳುಹಿಸಿರುವರು. ನಂಜರಾಯ ಪಟ್ಟಣ ...

ಕೊಡಗಿನ ನೆರೆಯ ಕಷ್ಟನಿವಾರಣೆ ಕಮಿಟಿಯವರು ತಾ॥ 21 ರ ವರೆಗೆ ವಸೂಲಿಯಾದ 214 ರೂ ಗಳಲ್ಲಿ ಬಲಮುರಿಯವರ ಕಷ್ಟನಿವಾರಣೆ 100 ರೂ. ಖರ್ಚುಮಾಡಿ, 140 ರೂ ಯನ್ನು ದಕ್ಷಿಣ ಕನ್ನಡ ರಿಲೀಫ್ ಫಂಡಿಗೆ ಕಳುಹಿಸಿರುವರು ಹಣವು ಇನ್ನೂ ವಸೂಲಿಯಾಗುತ್ತಲೇ ಇದೆ.

ಕಳೆದ ಎರಡನೇ ನೆರೆಯಲ್ಲಿ ನಾಲ್ಕುನಾಡು ಕೊಳಕ್ಕೇರಿ ಗ್ರಾಮದ ಕೋಲೆಯರ ಅಂಬ ಎಂಬವನು ಅಲ್ಲಿಯ ಕೂಟೇರಿ ಎಂಬ ಹೊಳೆದಾಟುವಾಗ್ಗೆ ಕಾಲದಿಂದ ಜಾರಿ ಬಿದ್ದು ಗಂಗಾದೇವಿಗೆ ಆಹುತಿಯಾದನೆಂತಲೂ ಎರಡನೇ ದಿವಸದಲ್ಲಿ ಅವನ ಶ್ರವವು ಅಪ್ಪಾಂಡ ಬಿ. ಜಂಗಪ್ಪನವರ ಮನೆಬಳಿಯ ಹೊಳೆಯಲ್ಲಿ ದೊರೆತು ಪೋಲೀಸಿಗೆ ತಿಳಿಸಲಾಯಿತೆಂದು ಒಂದು ವಾರ್ತೆ.

ಕಳೆದ ಜವಾನನುದಾರ ಸಂಘದ ಕಾನ್ ಫರೆನ್ಸಿನ ಸ್ವಾಗತ ಖರ್ಚಿಗಾಗಿ ವಸೂಲಿಯಾದ ನಾಪೋಕ್ಲು ನಾಡು ಕೊಳಕೇರಿ ಗ್ರಾಮಸ್ಥರಿಂದ ಮೆ॥ ಬಿದ್ದಾಟಂಡ ಮಾದಪ್ಪನವರ ಮೂಲಕ 7-8-0 ನಾಪೋಕ್ಲು ಗ್ರಾಮಸ್ಥರಿಂದ ಚೇವಂಡ ಕಾಳಿಯಂಡ ಮೆ॥ ಸೋಮಯ್ಯನವರ ಮೂಲಕ 2-0-0 ಉದಿಯಾಂಡ 5-8-0 ಜುಮ್ಲ 15-0-0 ಹಣವನ್ನು ಸ್ವಾಗತ ಮಂಡಲಿಯ ಸೆಕ್ರೆಟರಿಗೆ ಕಳುಹಿಸಿ ಕೊಡುವುದಾಗಿ ಮೆ॥ ಉದಿಯಾಂಡ ಮಾಚಯ್ಯನವರು ಬರೆದಿರುತ್ತಾರೆ.

ಗೋಣಿಕೊಪ್ಪಲಲ್ಲಿ ದೇಶೀಯರನ್ನು ಪ್ರೋತ್ಸಾಹಿಸುತ್ತಿದ್ದ ಒಂದು ಬಟ್ಟೆಯ ಮಗ್ಗದ ಕೆಲಸವು ನಿಲ್ಲಿಸಲ್ಪಟ್ಟಿರುತ್ತೆ. ಇದು ತತ್ಕಾಲವಾದರೆ ಚಿಂತೆಇಲ್ಲ. ಖಾಯಂ ಮುಚ್ಚಲ್ಪಟ್ಟರೆ ವಿಷಾದಕರ.

ಮಳೆಯ ಹಾವಳಿಯಿಂದ ಕೊಟ್ಟಂಬುಡಿ ಗ್ರಾಮದ ಸ್ಲಂ 4 ಮಾಪಿಳ್ಳೆಯರ ಮನೆಗಳೂ, ನಾಪೋಕ್ಲು ಪೇಟೆಯಲ್ಲಿ 3 ಮನೆಗಳೂ, ಪಾಲೂರಿನಲ್ಲಿ ಎರಡು ಮನೆಗಳೂ, ತಕ್ಕಬೆಯಲ್ಲಿ 2 ಅಂಗಡಿಗಳ ಗೋಡೆಗಳೂ ಕೆದಮುಳ್ಳೂರು ಗ್ರಾಮದಲ್ಲಿ ಕೋಡಿರ ಮನೆಯೂ ಬಿದ್ದು ಹೋಗಿವೆಯಂತೆ. ಪೊದವಾಡದಲ್ಲಿ ಬಿದ್ದೇರಿಯಂಡ ಮನೆಯ ಗೋಡೆಯೂ, ಅಂಮೇರಿಯಲ್ಲಿ ಉದಿಯಾಂಡ ಮನೆಯ ಗೋಡೆಯು ಅಪಾಯಕರವಾಗಿರುವುದರಿಂದ ಮನೆಯಲ್ಲಿ ವಾಸಮಾಡುವುದು ಬಿಟ್ಟಿರುವರಂತೆ.

ನಿಟ್ಟೂರು ಗ್ರಾಮದಲ್ಲಿ ಮಲಚೀರ ಮನೆಗಳು ಕೊಟ್ಟಿಗೆ, ಪತ್ತಾಯವೂ, ಅಜಿಕಟ್ಟಿರ ಹಳೆ ಮನೆಯೂ, ಆದೇರಿಗಳ ಒಂದು ಮನೆಯೂ ನಹ ನೆಲಸಮವಾಗಿವೆ. ನಿಟ್ಟೂರು ಗ್ರಾಮದಲ್ಲಿ ಮನೆಗಳ ನಾಶದಿಂದಲೇ ಸುಮಾರು ಹತ್ತುಸಾವಿರ ರೂ ನಷ್ಟವಾಗಿದೆಯಂತೆ. ಹತ್ತುಗಟ್ಟು ನಾಡಿನಲ್ಲಿ ಪೈರು ಕೊಳೆತು ಸುಮಾರು ಐದುಸಾವಿರ ರೂ. ನಷ್ಟವಾಗಿದೆಯಂತೆ. ಕೆಲವರು ಈಗ ಪುನಹ ಬೀಜ ಹಾಕುತ್ತಿದ್ದಾರೆ.

ಕೆಲವು ದಿವಸಗಳ ಹಿಂದೆ ನಾಪೋಕ್ಲು ಪೇಟೆಯಲ್ಲಿ ನಿಷಾಸೇವಿತರಾಗಿ ಗಲಾಟೆ ಮಾಡುತ್ತಿದ್ದ ಇಬ್ಬರು ಯುವಕರನ್ನು ಪೋಲೀಸಿನವರು ಹಿಡಿದು ಬಂದಿಖಾನೆಗೆ ಹಾಕಿ ಜುಲುಮಾನೆ ಶಿಕ್ಷೆಗೆ ಗುರಿಮಾಡಿದರಂತೆ. ಅವರಿಗೆ ಇನ್ನಾದರೂ ಬುದ್ಧಿ ಬರಲಿಕ್ಕಿಲ್ಲವೇ?

ಟೆರಿಟೋರಿಯಲ್ ಪಟಲಾಮಿನಲ್ಲಿ ನಾನ ಕಮಿಷನ್ ಆಫೀಸರಾಗಿದ್ದ ಮೆ॥ ಕಂತ್ರಕಂಡ ತಿಮ್ಮಯ್ಯನವರನ್ನೂ ಮೆ॥ ಕೋದಂಡ ನಾಣ್ಯಯ್ಯನವರನ್ನೂ ಮೆ॥ ಮಾಚಿಮಂಡ ದೇವಯ್ಯನವರನ್ನೂ ಮೆ॥ ಪಾಲೆಕಂಡ ಪೊನ್ನಪ್ಪನವರನ್ನೂ ಸಹ ಕಳೆದವಾರ ತಿರುಚಿನಾಪಳ್ಳಿಗೆ ಬರುವ ಅಕ್ಟೋಬರ್ ತಾ॥ 24 ರ ವರೆಗೆ ಮಿಲಿಟರಿ ಟ್ರೇನಿಂಗ್‌ಗೆ ಕಳುಹಿಸಿರುವರು.

ಮಳೆಯು ಮಡಿಕೇರಿಯಲ್ಲಿ ಈ ವರ್ಷ ಕಳೆದ ಜನವರಿ ತಾ॥ 1 ರಿಂದ ಇದೇ ತಾ॥ 27 ರ ವರೆಗೆ 147-04 ಇಂಚೂ, ಕಂದವರ್ಷ ಇದೇಸಮಯಕ್ಕೆ 114-40 ಇಂಚೂ, ಆಗಿದೆ.

ತಾ॥ 27 ರಲ್ಲು ನಡೆದ ಡಿಸ್ಟ್ರಿಕ್ಟ ಬೋರ್ಡು ಮೀಟಿಂಗಿನಲ್ಲಿ ಬೋರ್ಡು ಶಾಲಾ ಉಪಾಧ್ಯಾಯರುಗಳಿಗೆ ಕಳೆದ ಎಪ್ರೈಲಿನಿಂದ 20, 25 30 ಮತ್ತು 40 ರೂ ದರದ ಸಂಬಳವೂ ಕಾಫಿ ತೋಟಗಳ ಮೇನೇಜರುಗಳು ಮತ್ತು ಸೂಪರಿಂಟೆಂಡೆಂಟರುಗಳು ಮನೆ ಕಂದಾಯ ಕೊಡಬೇಕಂತಲೂ ಮಂಜೂರಾದದಲ್ಲದೆ ಮೆ॥ ಪಾರ್ವಂಗಳ ಕುಶಾಲಪ್ಪನವರು ಡಿ. ಬೋರ್ಡಿನ ವೈಸ್ ಪ್ರೆಸಿಡೆಂಟಾಗಿ ಚುನಾಯಿಸಲ್ಪಟ್ಟರು. ಈ ಪದವಿಯು ಉದ್ಯೋಗಸ್ಥನಲ್ಲದ ಮೆಂಬರಿಗೆ ದೊರತಿದ್ದು ಇದೇ ಮೊದಲು. ಮೀಟಿಂಗಿನ ವಿವರವು ಮುಂದೆ ಬರುವ ಸಂಚಿಕೆಯಲ್ಲಿ ಪ್ರಕಟಿಸಲ್ಪಡುವುದು.

ತಾ॥ 16 ರಿಂದ ದೇಶವಲ್ಲೆಲ್ಲಾ ಮಳೆಯು ಕಡಿಮೆಯಾಗಿದೆ. ಸೂರ್ಯನು ಆಗಾಗ್ಗೆ ಮುಖವನ್ನು ತೋರಿಸುತ್ತಿದ್ದಾನೆ. ಇದರಿಂದ ರೈತರ ಕೃಷಿ ಕೆಲಸಕ್ಕೆ ಸ್ವಲ್ಪ ಅನುಕೂಲವಾಗಿದೆ. ಆದರೆ ಮಡಿಕೇರಿಯಲ್ಲಿ ಇದರ ಮಧ್ಯೆ ಒಂದೊಂದು ದಿನ ಮೋಡ ಕವಿದುಕೊಂಡು ಮಳೆ ಹನಿಕುತ್ತಲೂ, ಸುರಿಯುತ್ತಲೂ ಇದೆ. ಚಳಿಯು ಕಡಿಮೆ ಇಲ್ಲ.

ಹಿಂದೂದೇಶ.

ಬಿಹಾರ್ ಪ್ರಾಂತ್ಯದಲ್ಲಿ ಗಂಗಾ ಪ್ರವಾಹದಿಂದ ಬಹಳ ನಷ್ಟ ಕಷ್ಟಗಳು ಸಂಭವಿಸಿವೆ. 100 ಚದರ ಮೈಲು ಸ್ಥಳ ನೀರಿನಿಂದ ಮುಚ್ಚಿದೆಯಂತೆ.

ಕಾಶಿಯಲ್ಲಿ ಹಿಂದೂಮಹಾಸಭೆಯ ಅಧಿವೇಶನವು ಮದನಮೋಹನ ಮಾಳವೀಯರ ಅಧ್ಯಕ್ಷತೆಯಲ್ಲಿ ಕಳೆದವಾರ ನಡೆಯಿತು. ಅಧ್ಯಕ್ಷರು ಹಿಂದೂಮತದಲ್ಲಿ ಇರುವ ಕೆಟ್ಟ ಪದ್ಧತಿಗಳನ್ನು ತೆಗೆದುಹಾಕಿ ಶುದ್ಧಪಡಿಸಿಕೊಂಡು ಬೇರೆ ಮತದವರಿಂದ ಇದಕ್ಕೆ ಕೆಡಕು ಬಾರದಂತೆ ಕಾಪಾಡುಕೊಳ್ಳುವ ಶಕ್ತಿ ಬರುವಂತೆ ಮಾಡಿ ಬೇರೆ ಮತಗಳೊಂದಿಗೆ ಸ್ನೇಹದಿಂದಿರುವಂತೆ ಮಾಡಿಕೊಳ್ಳಬೇಕೆಂತ ಮುಂತಾಗಿ ಎರಡೂವರೆ ಘಂಟೆ ಸಮಯ ಸ್ವಾರಸ್ಯವಾದ ಭಾಷಣಮಾಡಿದ್ದಾರೆ. ಆ ಮಹಾಸಭೆಯಲ್ಲಿ ಪಾಸಾದ ಕೆಲವು ಠರಾವುಗಳ್ಯಾವವೆಂದರೆ—(1) ಹಿಂದೂಜಾತಿಯನ್ನು ಬಿಟ್ಟು ಬೇರೆ ಜಾತಿಯನ್ನವಲಂಬಿಸಿದವರನ್ನು ಶಾಸ್ತ್ರೋಕ್ತ ಪ್ರಾಯಶ್ಚಿತ್ತ ಮಾಡಿ ಹಿಂದೂಮತಕ್ಕೆ ತೆಗೆದುಕೊಳ್ಳಬಹುದು. (2) ಅಸ್ಪೃಶ್ಯ ವರ್ಗದವರು ಹಿಂದೂಮತದಲ್ಲೇ ಉಳಿಸಿಕೊಳ್ಳಲಿಕ್ಕಾಗಿ ಅವರಿಗೆ ಶುಚಿತ್ವ ಮತ್ತು ಸುವಿಚಾರದಲ್ಲಿ ಬೋಧನೆ ಕೊಡಬೇಕು, ಸ್ಕೂಲ್‌ಗಳಲ್ಲಿ ಓದಲಿಕ್ಕೂ, ಭಾವಿಗಳಿಂದ ನೀರು ತೆಗೆದುಕೊಳ್ಳಲಿಕ್ಕೂ ದೇವಸ್ಥಾನಗಳಲ್ಲಿ ದರ್ಶನ ತೆಗೆದುಕೊಳ್ಳಲಿಕ್ಕೂ, ಪಬ್ಲಿಕ್ ಮೀಟಿಂಗ್‌ಗಳಲ್ಲಿ ಕೂತುಕೊಳ್ಳಲಿಕ್ಕೂ ಬಿಡಬೇಕು. (3) ಚೈನ ಜಪಾನ್ ಮುಂತಾದ ದೇಶಗಳಿಂದ ಗಯಾ ಮತ್ತು ಕಾಶಿಗೆ ಬರುವ ಬೌದ್ಧ ಯಾತ್ರೀಕರಿಗೆ ಬಹಳ ಸಂತೋಷದಿಂದಲೂ, ಗೌರವದಿಂದಲೂ ಸ್ವಾಗತ ಕೊಡುತ್ತದೆ.

ವಿಷಯ ನಿಯಾಮಕ ಸಮಿತಿಯಲ್ಲಿ ಅಸ್ಪೃಶ್ಯರ ... ವು ಚರ್ಚಿಸುವಾಗ್ಯೆ ಪಂಡಿತರು ಕೆಲವರು ಶಾಸ್ತ್ರಗಳ ನಿರ್ಮೂಲವಮಾಡುವ ಈ ಸಭೆಯಲ್ಲಿ ಇರುವದಿಲ್ಲವೆಂತ ಹೊರಟುಹೋದರಾಗಿಯೂ ಅವರಿಗೆ ಸಮಾಧಾನ ಹೇಳಿ ... ಕ್ಷರು ವಾಪಸು ಕರತಂದರೆಂದೂ ತಿಳಿಯುತ್ತೆ.

ಕೆನ್ಯಾದಲ್ಲಿಯ ಹಿಂದೀಯರ ಪರವಾಗಿ ವಾದಿಸ ... ಇಂಗ್ಲೆಂಡಿಗೆ ಹೋಗಿದ್ದ ನಾಮದಾರ ಶ್ರೀನಿವಾಸಶಾಸ್ತ್ರಿ ಮೊದಲಾದವರು ಇಂಡಿಯಾಕ್ಕೆ ವಾಪಸು ತಿರುಗಿ ... ದ್ದಾರೆ.

ಕೆನ್ಯಾದ ಹಿಂದೀಯರನ್ನು ಸಾಮ್ರಾಜ್ಯದ ಪಂಕ್ತಿ ... ನ್ನಾಗಿ ಬಿಳೀಜನರು ಕಾಣುತ್ತಿರುವದಕ್ಕಾಗಿ ಇಂಡಿಯಾ ... ಲ್ಲೆಲ್ಲಿಯೂ ಇದೇ ತಾರೀಕು 27 ರಲ್ಲಿ ಹರತಾಳವು ನ ... ತು. ಈ ಸಂದರ್ಭದಲ್ಲಿ ಯೂರೋಪಿಯನ್ ವ್ಯಾಪಾರಿ ... ಸಹ ಅಂಗಡಿ ಮುಚ್ಚಬೇಕೆಂತ ಸಿ ... ರಾಜಗೋಪಾಲಾಚಾರ್ಯರು ಕೇಳಿಕೊಂಡಿದ್ದಾರೆ.

ನಾಗಪುರದಲ್ಲಿ ರಾಷ್ಟ್ರೀಯ ಬಾವುಟಗಾಗಿ ... ತ್ತಿದ್ದ ಸತ್ಯಾಗ್ರಹವು ರಾಷ್ಟ್ರೀಯ ಪಕ್ಷದವರಿಗೆ ... ದೊಡನೆ ಮುಕ್ತಾಯವಾಯಿತು. ಪಟ್ಟದ ಯಾವ ... ಕ್ಕಾಗಿ ಬಾವುಟ ಹಿಡಿದು ಮೆರವಣಿಗೆ ಹೋಗಬೇಕೆಂ ... ಕಾರಿ ಹುಕ್ಕುಂ ಇತ್ತೋ ಅಲ್ಲಿಗಾಗಿಯೇ 17 ನೇ ತಾ ... ನಲ್ಲಿ ಬಾವುಟ ಹಿಡಿದ 100 ಜನ ಸ್ವಯಂಸೇವಕರ ಮೆರವಣಿಗೆಯನ್ನು ಹೋಗಲಿಕ್ಕೆ ಬಿಟ್ಟರು.

ದಿಂಡಿಗಲ್ಲು ಎಂಬ ಊರಿನಲ್ಲಿ ಕೆಲವು ಹಿಂದೂ ... ಳನ್ನು ಮುಸಲ್ಮಾನರ್‍ಯಾರೋ ಪಡೆದುಹಾಕಿದರೆಂಬ ... ದಿಂದ ಹಿಂದೂ ಮುಸಲ್ಮಾನರೊಳಗೆ ಜಿಜ್ಞಾಸವು ... ತ್ತಿತ್ತು. ತರ್ಷಿನ ಮುಸಲ್ಮಾನರು ಸಭೆ ಸೇರಿ ಹಿಂ ... ಸ್ನೇಹ ಕೆಡಿಸಿಕೊಳ್ಳುವಂಥಾ ಕೆಲಸವನ್ನು ಮುಸಲ್ಮಾನರೂ ಮಾಡದಂತೆ ನೋಡಿಕೊಳ್ಳಲು ಒಂದು ಕಮಿಟಿ ಆರಿಸಿಕೊಂಡಿದ್ದಾರೆ.

ರಾಜಕೋಟೆ ಎಂಬ ದೇಶೀಯ ಸಂಸ್ಥಾನದ ... ಪ್ರಜಾಪ್ರತಿನಿಧಿಸಭೆಯೊಂದನ್ನು ಏರ್ಪಡಿಸಿ ಹೇಳಿದ್ದಂತೆ—ಈ ಸಭೆಯಲ್ಲಿ ರೈತರ ಇಷ್ಟವನ್ನು ಧೈರ್ಯದಿಂದಲೂ ಗಂಡಸ್ತನದಿಂದಲೂ ಹೇಳಿಕೊಳ್ಳಬೇಕೆಂತಲೂ ... ಕೂಳ್ಳದಿದ್ದರೆ ರೈತರ ತಪ್ಪೇ ಆಗಿರುತ್ತೆಂತಲೂ ... ಅನಂತರ ಆ ಸಭೆಯಲ್ಲಿ ರಾಜದ್ರೋಹದ ಕಾ ... ರದ್ದು ಮಾಡಬೇಕೆಂತರೆ ಠರಾವು ಪಾಸಾಯಿತು. ರಾಜರು ಆ ಕಾನೂನನ್ನು ರದ್ದುಪಡಿಸಿದರು.

ತಿನ್ನವಲ್ಲಿಯಲ್ಲಿ ಕೆನ್ಯಾ ಹರತಾಳದ ಸಂ ... ದೊಡ್ಡ ಮೀಟಿಂಗ್ ನಡೆದಲ್ಲಿ ಇಬ್ಬರು ಹೆಂಗಸರು ... ಮಾಡಿದರು. ಗಂಡಸರು ತಮ್ಮ ಕೆಲಸವನ್ನು ಗಂಡ ... ಮಾಡದೆಹೋದರೆ ಹೆಂಗಸರು ರಾಜಕೀಯ ಕೆಲಸ ... ಡಬೇಕಾಗುತ್ತೆಂತಲೂ, ಗಂಡಸರನ್ನು ರಾಜಕೀಯ ... ಗಳಿಗಾಗಿ ಜೈಲಿಗೆ ಹಾಕಿದರೆ ಹೆಂಗಸರು ಆ ... ಕೈಕೊಳ್ಳಬೇಕಂತಲೂ ಹೇಳಿದರು.

ಲಾಲಾಲಜಪತರಾಯರ ಆರೋಗ್ಯ ಸ್ಥಿತಿಯು ... ಮಟ್ಟಿಗೆ ಉತ್ತಮವಾಗಿದೆಯಾಗಿಯೂ ಶೀಘ್ರದಲ್ಲಿ ... ಮುಂದೆ ಮಾಡುವ ರಾಜಕೀಯ ಕಾರ್ಯಕ್ರಮ ... ದೇಶದಲ್ಲಿ ಇರುವ ಮತಭೇದಗಳ ತಮ್ಮ ಅಭಿಪ್ರಾಯವನ್ನು ಶೀಘ್ರದಲ್ಲೇ ಪ್ರಕಟಿಸುವದರಲ್ಲಿದ್ದಾರಂತೆ.

ಗೋರಕ್ಷಣೆ ಸಭೆಯವರು ಇಂಡಿಯಾ ... ಮಂತ್ರಿಶರ್ಮರ ಭೇಟಿ ತೆಗೆದುಕೊಂಡು ಗೋರ ... ಬೇಕೆಂದು ಕೇಳಿದಕ್ಕೆ ಪ್ರಾಯದಲ್ಲಿರುವ ಹಾ ... ಗೋವುಗಳನ್ನು ಕೊಲ್ಲದಂತೆ ಮಾಡಲು ಪ್ರಯ ... ಗಿಯೂ ಪಟ್ಟಣಗಳ ಸಮೀಪ ಗೋಮಾಳಗಳಿಗೆ ... ಗಿಸಿಕೊಡಲು ಸಹಾಯಮಾಡುವುದಾಗಿಯೂ ಮುನಿಸಿಪಾಲಿಟಿಗಳಲ್ಲಿ ಕಸಿ ಬಂದಂತೆ ಗೋವ ... ರುವದಕ್ಕೆ ವ್ಯಸನಪಡುವುದಾಗಿಯೂ ಹೇಳಿದರು.

ಬೊಂಬಾಯಿಯಲ್ಲಿ ಮಣಿಕುವರ್ ಭಾಯಿ ಎಂಬ ಐಶ್ವರ್ಯವಂತ ವಿಧವೆಯ ಮೇಲೆ ಮೋಸಕೃತ್ಯ ಮಾಡಿದಳೆಂಬ ಮೊಕದ್ದಮ್ಮೆ ನಡೆಯುತ್ತಿದೆ. ಅವಳ ಗಂಡನು ಸ್ವಲ್ಪ ದಿವಸದಲ್ಲಿ ಅವಳಿ ಹೆಣ್ಣು ಮಕ್ಕಳನ್ನು ಹಡೆದಳೆಂದೂ, ಅವುಗಳ ಪೈಕಿ ಒಂದನ್ನು ಮರೆಮಾಡಿ ಅದರ ಬದಲಿಗೆ ಯಾವುದೋ ಒಂದು ಗಂಡುಕೂಸನ್ನು ಇಟ್ಟುಕೊಂಡು ಅದೇ ತಾನು ಹಡೆದ ಕೂಸೆಂತ ಹೇಳಿ ತನ್ನ ಗಂಡನ ಸೊತ್ತಿನಲ್ಲಿ ತನ್ನ ಮಗನಿಗೆ ಸಿಕ್ಕಬೇಕೆಂತ ಕೇಳಿದಳೆಂತಲೂ ಅವಳ ಮೇಲಿನ ಅಪಾದನೆ.

ಡಾಕ್ಟರ್ ಕಚ್ಲೂ ಎಂಬ ಮುಸಲ್ಮಾನ ದೇಶಭಕ್ತರು ಜೈಲಿನಿಂದ ಬಿಡುಗಡೆಯಾಗಿ ಬಂದಂದಿನಿಂದಲೂ ಹಿಂದೂ ಮುಸಲ್ಮಾನರ ಒಗ್ಗಟ್ಟಿಗಾಗಿಯೂ ಸ್ವರಾಜ್ಯಕ್ಕಾಗಿಯೂ ಕೆಲಸಮಾಡುತ್ತಿದ್ದಾರೆ. ಇವರು ಹಿಂದೂ ಮುಸಲ್ಮಾನರ ಒಗ್ಗಟ್ಟನ್ನು ಸ್ಥಾಪಿಸುವದು ಸುಲಭವೆಂತಲೂ, ಕೌನ್ಸಿಲ್ ಪ್ರವೇಶಮಾಡಲೇ ಬಾರದೆಂತಲೂ ಹೇಳುತ್ತಾರೆ.

ಸೇಲಂ (ಶಾಲ್ಬ) ಪಟ್ಟಣದ ಮುನಿಸಿಪಲ್ ಕಮಿಟಿಯವರು 27 ನೇ ತಾರೀಖಿನ ದಿನ ತಮ್ಮ ಆಫೀಸಿಗೆ ರಜ ಕೊಟ್ಟು ಹರತಾಳವನ್ನು ನಡಿಸಬೇಕೆಂತಲೂ, ಎಂಪಯರ್ ಡೇ (ಸಾಮ್ರಾಜ್ಯ ದಿವಸ) ವೆಂಬ ರಜಾ ದಿನವನ್ನು ರಜಾ ಪಟ್ಟಿಯಿಂದ ವಜಾಮಾಡಬೇಕೆಂತಲೂ ತೀರ್ಮಾನ ಮಾಡಿಕೊಂಡಿದ್ದಾರೆ.

ಇಂಡಿಯಾದಲ್ಲಿ ಕ್ಷಯರೋಗದಿಂದ ವರ್ಷ ಒಂದಕ್ಕೆ ಹತ್ತು ಲಕ್ಷ ಜನರಾದರೂ ಕಡಿಮೆಪಕ್ಷ ಸಾಯುತ್ತಿದ್ದಾರೆಂತಲೂ ಇದಕ್ಕೆ ಅಶುಚಿ, ಬಡತನ, ಮತ್ತು ಗುಂಪು ಕೂಡುವಿಕೆ ಕಾರಣವೆಂತಲೂ, ಹೆಂಗಸರಿಗೆ ಚಿಕ್ಕ ಪ್ರಾಯದಲ್ಲಿ ಮದುವೆಯಾಗಿ ಮಕ್ಕಳ ಹೆತ್ತು ಬರುವ ಅಶಕ್ತತೆಯಿಂದಲೂ, ಮಲೇರಿಯಾದಿಂದಲೂ, ಕ್ಷಯರೋಗಪೀಡಿತರು ಸಿಕ್ಕಿದಲ್ಲೆಲ್ಲಾ ಉಗುಳುವದರಿಂದಲೂ, ಬಿಸಿಲು ಗಾಳಿಗೆ ಹೋಗದೇ ಮನೆಯೊಳಗೇ ಇರುವದರಿಂದಲೂ, ಇದಕ್ಕೆ ಸಹಾಯ ದೊರೆಯುತ್ತೆಂತಲೂ, ಈ ರೋಗ ಕಡಿಮೆಮಾಡಬೇಕಾದರೆ ಕೆಲಸಗಾರರಿಗೆ ಸಂಬಳ ಹೆಚ್ಚಿಸಿ ಬಡತನ ಕಡಿಮೆ ಮಾಡಬೇಕೆಂತಲೂ ಆರೋಗ್ಯಶಾಸ್ತ್ರವನ್ನು ಸಾರ ಹೇಳಬೇಕೆಂತಲೂ ಪಟ್ಟಣದಿಂದ ಹಳ್ಳಿಗಳಿಗೆ ಜನರು ಹಿಂತಿರುಗುವಂತೆ ಮಾಡಬೇಕೆಂತಲೂ ಮುಂತಾಗಿ ಕ್ಷಯರೋಗ ಪಂಡಿತರಾದ ಡಾಕ್ಟರ್ ಮುತ್ತು ಎಂಬವರು ಬರೆದಿದ್ದಾರೆ.

ಶಿವಮೊಗ್ಗಾದಲ್ಲಿ ಹರಿಯುವ ತುಂಗಾ ನದಿಯಲ್ಲಿ ಒಂದು ತೊಟ್ಟಿಲು ತೇಲಿ ಬರುತ್ತಿದ್ದದ್ದನ್ನು ಹಿಡಿದು ನೋಡುವಾಗ ಅದರಲ್ಲಿ ಜೀವಸಹಿತ ಇದ್ದ ಮಗುವೊಂದು ಇತ್ತೆಂತಲೂ ಇದು ೩೦ ಮೈಲು ದೂರವಿರುವ ತೀರ್ಥಹಳ್ಳಿಯಿಂದ ಬಂದದ್ದಾಗಿತ್ತೆಂತಲೂ ವರ್ತಮಾನವಿದೆ.

ಕಲ್ಕತ್ತಾಕ್ಕೆ ೯೦ ಮೈಲು ದೂರದಲ್ಲಿ ಎರಡು ಕೋಣಗಳು ಹಾದಾಡುತ್ತಿರುವಾಗ್ಯೆ ಒಂದು ರೈಲ್‌ವೇ ಟ್ರೈನ್ ಬಂತು. ಒಂದು ಕೋಣ ಹಾದರಭದಲ್ಲಿ ರೈಲ್ ಗಾಡಿಗೆ ತಗಲಿ ಆ ಗಾಡಿಯೂ ಮಗುಚಿದ್ದಲ್ಲದೆ ಅದರ ಜೊತೆಯಲ್ಲಿದ್ದ ಮೂರು ಗಾಡಿಗಳೂ ಮಗುಚಿದವಂತೆ.

ತಿರುಚಿನಾಪಳ್ಳಿಯಲ್ಲಿ ಬ್ರಾಹ್ಮಣೇತರರ ಸಭೆಯು ಬಹುವಾದಗಳುಳ್ಳದಾಗಿ ನಡೆಯಿತು. ಪೋಲೀಸ್ ಸಹಾಯ ಸಹ ಕರೆಯಬೇಕಾಗಿಬಂತು. ಕೌನ್ಸಿಲ್ ಮಾತ್ರ ಪದವಿ ಮುಂತಾದ ವ್ಯಕ್ತಿಪ್ರಯೋಜನದ ಚರ್ಚೆ ಹೆಚ್ಚುತ್ತೇ ಹೋಗುತ್ತ ಒಟ್ಟು ಜನಾಂಗದ ಕ್ಷೇಮಗಳ ಚರ್ಚೆಯಾದದ್ದು ಕಡಿಮೆಯೆಂತ ಕೆಲವರ ಮತ.

ವಿದೇಶ.

ಟಾಂಗನ್ಯಿಕ ಎಂಬ ರಾಜ್ಯದಲ್ಲಿ ಯುದ್ಧ ಕಾಲದಲ್ಲಿ ಸಿಂಹಗಳು ಮತ್ತು ಇತರ ಕಾಡುಮೃಗಗಳು ಸಹ ಮನುಷ್ಯ ಮಾಂಸ ತಿಂದು ಅಭ್ಯಾಸವಾದ್ದರಿಂದ ಈಗ ಅವು ಮನುಷ್ಯರನ್ನು ಬೆನ್ನಟ್ಟಿ ಹಿಡಿಯುತ್ತವೆಯೆಂತಲೂ, ಸುಮಾರು ೩೦೦ ಸಿಂಹಗಳನ್ನು ೮೦೦ ಚಿರತೆಗಳನ್ನು ಆರು ತಿಂಗಳೊಳಗೆ ಕೊಂದಿದ್ದಾರೆಂತಲೂ ತಿಳಿಯುತ್ತೆ.

ಅಂಗೋರಾ ಸರಕಾರವು ಲಾಸೇನ್ ಕರಾರನ್ನು ಅಂಗೀಕರಿಸಿತು.

ಕ್ಷಯರೋಗ ಪಂಡಿತರಾದ ಹಿಂದೀದೇಶದವರಾಗಿದ್ದು ಇಂಗ್ಲೆಂಡಿನಲ್ಲಿ ಕ್ಷಯರೋಗ ಚಿಕಿತ್ಸೆ ಮಾಡುತ್ತಿರುವ ಡಾಕ್ಟರ್ ಜಾರಿ ಮುತ್ತು ಎಂಬವರಿಗೆ ಇಂಗ್ಲೆಂಡಿನಲ್ಲಿ ತುಂಬಾ ಗೌರವ ದೊರೆತಿದೆ.

ಸಿಲೋನ್ ನ್ಯಾಯವಿಧಾಯಕ ಸಭೆಯಲ್ಲಿ ಪೆರೇರಾ ಎಂಬ ಮೆಂಬರು ನಿಜ ಬ್ರಿಟಿಷ್ ಜನ್ನವನ್ನು ನೋಡಬೇಕಾದರೆ ಇಂಗ್ಲೆಂಡಿಗೆ ಹೋಗಬೇಕೆಂತಲೂ ವಸಾಹತುಗಳಲ್ಲಿ ಇರುವದೆಲ್ಲ ಕಳಪೆ ಜನ್ನವೆಂತಲೂ, ನಿಜವಾದ ಉದಾರ ಮನಸ್ಸಿನ ಬ್ರಿಟಿಷ ಮನುಷ್ಯನು ಇಂಗ್ಲೆಂಡಿನಲ್ಲಿ ಮಾತ್ರ ಇರುತ್ತಾನೆಂತಲೂ ವಸಾಹತುಗಳಲ್ಲಿರುವ ಬ್ರಿಟಿಷರೆಲ್ಲರೂ ಹಲ್ಕ ಜನರೆಂತಲೂ ಅರ್ಥವಾಗುವಂತೆ ಭಾಷಣಮಾಡಿದ್ದಕ್ಕೆ ಗವರ್ನರ್ ಸಾಹೇಬರು ಅವರನ್ನು ಕ್ಷಮಾಪಣೆ ಕೇಳುವಂತೆ ಮಾಡಿದರು.

ಇಂಗ್ಲೆಂಡಿನ ಲಿಬರಲ್ ಪಾರ್ಟಿಯವರು ಮಾಂಟೇಗೂ ಸಾಹೇಬರು ಇಂಡಿಯಾದ ಸೆಕ್ರಿಟರಿಯಾಗಿ ಸಾಮ್ರಾಜ್ಯಕ್ಕೆ ಮಾಡಿದ ಉಪಕಾರಕ್ಕಾಗಿ ಬೆಳ್ಳಿಯಾಕ್ರೆಯೊಂದನ್ನು ಉಡುಗರೆಯಾಗಿ ಕೊಟ್ಟರು.

ಹಾಂಗ್‌ಕಾಂಗಿನಲ್ಲಿ ಒಂದು ಭಯಂಕರ ಬಿರುಗಾಳಿ ಎದ್ದು ಅರಮನೆಗಳಿಗೂ ಹಡಗುಗಳಿಗೂ ನಷ್ಟವಾಗಿದೆ.

ಬರ್ಮಾ ದೇಶದ ಎಡ್ಮಿರಲ್ ಬಾರ್ಟ ಡಿ ಮುಸಾಬುರೊಕಾಟೊ ಎ ಮೃತರಾಗಿದ್ದಾರೆ.

ಸ್ಪೈನ್ ರಾಜ್ಯದ ಮೊರೋಕೋ ಎಂಬಲ್ಲಿ ಚಿಕ್ಕದಾಗಿ ಒಂದು ಯುದ್ಧ ನಡೆಯುತ್ತಿದೆ. ಸ್ಪೈನಿನವರಿಗೆ ಜಯವಾಗುತ್ತಿದೆ.

ಲಂಡನ್ ಪಟ್ಟಣದಿಂದು ಜವಾಹಿರಿ ನಗಗಳ ಮಾರುವ ಅಂಗಡಿಯ ಮೇಲೆ ಕಳ್ಳರು ಅಡಗಿದ್ದು ರಾತ್ರಿವೇಳೆ ತೂತಮಾಡಿ ಇಳಿದು ಎಷ್ಟೋ ಸಾವಿರ ಪೌಂಡು ಬೆಲೆಯುಳ್ಳವನ್ನು ಕದ್ದುಕೊಂಡು ಹೋಗಿದ್ದಾರೆ.

ಕನ್‌ಸ್ಟಾಂಟಿನೋಪಲ್ಲಿದ್ದ ಇಂಗ್ಲಿಷ್ ಸೈನ್ಯವು ಹೊರಟುಹೋಗುತ್ತಲಿದೆ ಸೈನ್ಯಪೂರ್ತಿ ಹೊರಟು ಹೋಯಿತು.

ತಾರೀಖು 5—4—19 ದಿನದ ಕೊಡಗು ವೀರಶೈವ ಪ್ರಥಮಮಹಾಸಭೆಯ ವೀರಶೈವ ವಿದ್ಯಾನಿಧಿಫಂಡಿಗೆ ಚಂದಾ ಕೊಟ್ಟವರ ತಪಶೀಲ್ ಪಟ್ಟಿ.

ಕ್ರಮ ಸಂಖ್ಯೆ	ಹೆಸರುಗಳು	[illegible]	[illegible]
	ಮ॥ ರಾ॥ ಗಳಾದ		
1	ಬಿ. ಎಸ್. ಆರಾಧ್ಯರು ವೈ	ರೂ 5	.
2	ಶ್ರೀಮತಿ ಕಲ್ಲಳ್ಳಿ ಗಂಗಮ್ಮ ಕೊಡ್ಲಿಪೇಟೆ	ರೂ. 5	....
3	ಮುದ್ದ ಬಸಪ್ಪನವರು ಸೋಮವಾರಪೇಟೆ	..	ರೂ 2
4	ಮುಸಲ್ಮಾನರ ಬುಡನ್ ಸಾಹೇಬ ಶನಿವಾರಸಂತೆ	ರೂ 4	...
5	ನಂಜೇಗೌಡರು ಬೀಳೂರು	ರೂ. 5	ರೂ. 5
6	ಶಾಂತಮಲ್ಲಯ್ಯನವರು (ಗೊಟ್ಟ	ರೂ 1	ರೂ .
7	ವೈ. ಶಿವರುದ್ರಶಾಸ್ತ್ರಿಗಳು ಗೆತು	ರೂ 5	.
8	ಕೂಡಳ್ಳಿ ಮಲ್ಲಪ್ಪಶೆಟ್ಟರು ಉರು	ರೂ 10	..
9	ಕಟ್ಟೆಳ್ಳಿ ಬಸವಯ್ಯನವರು	ರೂ 5	..
10	ಹುಲುಗನಳೆ ಪುಟ್ಟನಂಜಪ್ಪನ	ರೂ 5	....
11	ಕಡ್ಲೆ ಬಸಪ್ಪನವರು ಹೊಸಬೆ	ರೂ 5	.
12	ಕಲ್ಲಳ್ಳಿ ಸಿದ್ದಬಸಪ್ಪನವರು ಕೊಡ್ಲಿಪೇಟೆ	...	ರೂ 5
13	ಚಿನುವಾರ ಬಸಪ್ಪನವರು ..	ರೂ 2	ರೂ 2
14	ಅರಿಸಿಣ ಶಂಭುಬಸಪ್ಪನವರು ,	..	ರೂ 5
15	ಕಡ್ಲೆ ಮಲ್ಲುಶೆಟ್ಟಪ್ಪನವರ ,	ರೂ 5	ರೂ 5
16	ಕೆಲ್ಲೂರು ತಿಮ್ಮಯ್ಯನವರು .	ರೂ 2	..
17	ಕಲ್ಲಳ್ಳಿ ನಂಜುಂಡಪ್ಪನ ,,	ರೂ 3	..
18	ಹುದಲ್ಲೂರು ಸೋಮಪ್ಪನವ ,,	..	ರೂ 2
19	ವಾಪಿನಳ್ಳಿ ಸಿದ್ದಬಸಪ್ಪನವ ,,	ರೂ 12	ರೂ 10
20	ಹುದಲ್ಲೂರು ವೀರಪ್ಪನವರ .	.	ರೂ 5
21	ಚಿನುವಾರ ಶಾಂತಮಲ್ಲಪ್ಪರು ,,	ರೂ 2	ರೂ 3
22	ಯೆ ಯಂ ಬಸಪ್ಪನವರು ,	ರೂ 2	ರೂ 2
23	ಬೆಟ್ಟದಪುರದ ಮಲ್ಲಿಕಪ್ಪನ ,,	..	ರೂ 2
24	ಶಾಂತಪುರದ ಬಸವಯ್ಯನ .	..	ರೂ 1
25	ವುದೂರು ನಂದಿ ಬಸಪ್ಪನವ ,	ರೂ 1	ರೂ 1
26	ಕಲ್ಲಳ್ಳಿ ಶಾಂತಮಲ್ಲಪ್ಪನ	ರೂ 1	ರೂ 1
27	ಬಿಲ್ಲವ ಸೋಮಪ್ಪನವರು ,	ರೂ. 2	ರೂ. 2
28	ಕೆಯ್ಯ ಸೋಮಶೇಖರಪ್ಪನವರು ,	ರೂ 5	ರೂ 2
29	ಶಾಂತಪ್ಪನವರು ನಂಜಪ್ಪನ ,,	ರೂ 2	ರೂ. 2
30	ಕಲ್ಲಳ್ಳಿ ಸಿದ್ದಲಿಂಗಪ್ಪನವರು .	ರೂ 2	ರೂ. 2
31	ರಾಚಶಂಭುಲಿಂಗಪ್ಪನವರ ಮಗ ಮಲ್ಲಪ್ಪನವರು ,	ರೂ 1	ರೂ. 1
32	ಮಾತಿನ ನಾಗಪ್ಪನವರು ,	ರೂ. 1	ರೂ. 1
33	ಹ್ಯಾ. ಮ. ಶಾಂತಪ್ಪನವರು ,	ರೂ 5	ರೂ 2
34	ಹುಲುಗನಳೆ ಬಳಸಪ್ಪನವರ .	ರೂ 5	ರೂ 2
35	ಪಟೇಲ್ ಕಳಸೇಗೌಡರು ,,	ರೂ. 2	..
36	ಉರೂರು ಗುತ್ತಿ ಬಸಪ್ಪನವ	ರೂ. 2	ರೂ 2
37	ಬಸಬಳ್ಳಿ ಶಂಭುಲಿಂಗಪ್ಪನವರು	ರೂ. 1	ರೂ 1
38	ಗುರುವೇಗೌಡರ ಸೋಮಪ್ಪನವರು ಸೋಮವಾರಪೇಟೆ	ರೂ 1	ರೂ. 1
39	ರಾಜಗೌಡರು ಗರುಗೂರು	ರೂ. 2	ರೂ. 2
40	ಮಹದೇವಮಲ್ಲಪ್ಪನವರು ಸೋಮವಾರಪೇಟೆ	ರೂ. 5	ರೂ. 5
41	ದೇಸುವೀರಪ್ಪನವರು ..	ರೂ. 5	ರೂ 5
42	ಕಲ್ಲಳ್ಳಿ ನಂಜಪ್ಪನವರು .	ರೂ. 2	ರೂ 2
43	ಶಾಂತಮಲ್ಲಪ್ಪನವರು ..	ರೂ 5	ರೂ 3
44	ಹೆಡ್ಮಾಸ್ಟರ್ ಶಂಭುಬಸಪ್ಪನವರು ..	....	ರೂ -
	ಮ॥ ರಾ॥ ಗಳಾದ		
45	ಹಾನುಬಾಳ ಈರಮ್ಮನವರು ,,	ರೂ 1	ರೂ. 1
46	ಶಾಂತಮಲ್ಲಪ್ಪನವರು ಕೊಡ್ಲೂರು ,,	ರೂ 3	ರೂ. 3
47	ತಲಕಾಂಡದೂರು ಮಠದ ಚನ್ನಬಸಪ್ಪನವರು ,,	ರೂ. 2	ರೂ. 5
48	ಬಿಳುವನೂರು ವೀರಪ್ಪನವರು	ರೂ. 5	ರೂ. 5
49	ಬೆಳ್ಳಳ್ಳಿ ಬಸವಣ್ಣಯ್ಯನವರು	ರೂ. 5	ರೂ. 1
50	ನಾಗವಾರದ ಶಾಂತಮಲ್ಲಯ್ಯನವರು	ರೂ 2	ರೂ. 2
51	ಹಂಡ್ಲಿ ಚನ್ನಮಲ್ಲಪ್ಪನವರು	ರೂ. 3	ರೂ. 3
52	ದೊಡ್ಡಕೊಳತೂರು ಪಟೇಲ್ ರುದ್ರೇಗೌಡರು	ರೂ 2	ರೂ. 2
53	ಹಂಡ್ಲಿ ಯು. ಮಲ್ಲೇಗೌಡರು	ರೂ. 2	ರೂ. 2
54	ಬ್ಯಾಡಗೊಟ್ಟದ ಸಿದ್ದಪ್ಪನವರು	ರೂ. 2	ರೂ. 2
55	ನೀರುಗುಂದ ಪಂಚ ಸ್ಕೂಲ್ ಮಾಸ್ಟರ್ ಸಂಗೇಗೌಡರು	ರೂ. 1	ರೂ. 1
56	ಸ್ಕೂಲು ಮಾಸ್ಟರು ಬಿ. ವೀರಭದ್ರಯ್ಯನವ	ರೂ. 1	....
57	ನೀರುಗುಂದದ ಚನ್ನೇಗೌಡರು	....	ರೂ. 1
58	ಶಿವಯ್ಯನವರ ಮಗ ಶಿವಯ್ಯನವರು	ರೂ. 1	ರೂ. 1
59	ಹೆಮ್ಮನೆ ಮುತ್ತಣ್ಣಯ್ಯನವರು	ರೂ. 1	ರೂ. 1
60	ಕರಿಬಸವಯ್ಯ ಮಾನೆ ಸಂಗಯ್ಯನವರು	ರೂ. 1	ರೂ. 1
61	ಬೇಡಗೊಟ್ಟದ ಸಂಗಯ್ಯನವರು	ರೂ. 1	ರೂ. 1
62	ನೀರುಗುಂದದ ಸುಬ್ಬಣ್ಣನವರು	ರೂ. 1	ರೂ. 1
63	ಜಂಗಮ ಬಸವಯ್ಯನವರು ಬೆಂಬಳೂರು	ರೂ	ರೂ. 1
64	ಚನ್ನಬಸಪ್ಪನವರ ಸಂಗಯ್ಯನವರು	ರೂ	ರೂ 1
65	ಕೆಲಗೊಡ್ಲಿ ಪುಟ್ಟಸೋಮೇಗೌಡರು	ರೂ.	ರೂ 2
66	ಕೊಮಾರಗೌಡರ ಬಸಪ್ಪನವರು	ರೂ. 1	ರೂ. 1
67	ಸರ್ಕಾರ್ ಪುಟ್ಟಣ್ಣನವರ ರುದ್ರಪ್ಪನವರು	ರೂ. 1	ರೂ. 1
68	ಸಿದ್ದಪ್ಪನವರ ಹೆಂಡ್ತಿ ಸಿದ್ದಮ್ಮನವರು	ರೂ 2	ರೂ 2
69	ಜಂಗಮ ಮಲ್ಲಪ್ಪನವರು	....	ರೂ 3
70	ಸಂತ್ಯೇರಿ ಸಣ್ಣಪ್ಪನವರು	ರೂ 5	ರೂ 5
71	ಪಟೇಲ್ ಈರೇಗೌಡರು ನಂದಿಗುಂದ	ರೂ 3	ರೂ
72	ಪಡ್ಯಾಳದ ಸಂಗೇಗೌಡರು	ರೂ 1	ರೂ
73	ಮೂಂತಶೆಟ್ಟರ ಮಕ್ಕಳು ಚನ್ನಬಸವಯ್ಯ	ರೂ 1	ರೂ
74	ಬಸವನೂರು ಮಾದಯ್ಯನವರು	ರೂ. 2	ರೂ.
75	ನಿರುವಾಣಿ ಬಸಪ್ಪಶೆಟ್ಟರು	...	ರೂ. .
76	ಕೊಡ್ಲಿಪೇಟೆ ಪುಟ್ಟಾಳು ಸಿದ್ದಲಿಂಗಮ್ಮನವರು	ರೂ. 1	...
77	ಶಿಕಲ್ಲೂರು ಮಲ್ಲೇಗೌಡರು	...	ರೂ 2
78	ಊರುಮರದ ಶಾಂತವೀರಯ್ಯನವರು	..	ರೂ. 1
79	ರುದ್ರೇಗೌಡರ ಮಕ್ಕಳು ಸೋಮೇಗೌಡರು	....	ರೂ. 1
80	ಕಿರೀಕೊಡ್ಲಿ ಮಠದ ಮಾಲಿಂಗಯ್ಯನವರು	...	ರೂ. 2
81	ದೊಡ್ಡಕೊಡ್ಲಿ ಮಲ್ಲೇಗೌಡರು	.	ರೂ. 1
82	ಬಸವೇಗೌಡರ ಮಗ ಪುಟ್ಟೇಗೌಡರು	..	ರೂ. 1
83	ಹೊಸಳ್ಳಿ ಮಲ್ಲಯ್ಯನವರು	ರೂ. 2	ರೂ. 2
84	ದರ್ಜಿ ಸಂಗೋಜಿರಾಯರು	ರೂ. 2	....
85	ಮಾಗಡಿ ಸ್ಕೂಲ್ ಮಾಸ್ಟರ್	....	ರೂ. 1
86	ಸೋಮವಾರಪೇಟೆಯಲ್ಲಿರುವ ಶಮುಕರು ರಾಚಪ್ಪನವರು	....	ರೂ. 2
87	ರಿಜಿಸ್ಟ್ರಾರ್, ಡಾಕ್ಟರ್ ಎ. ಎಸ್. ಸಿದ್ದಪ್ಪನವರು	ರೂ. 10	....

ಊರುಮರದ ಶಾಂತವೀರಯ್ಯನವರು ವಿದ್ಯಾನಿಧಿ ಫಂಡಿಗೆ 5 ರೂಪಾಯಿ ಉಚಿತಾರ್ಥವಾಗಿ ಕೊಡಲು ವಾಗ್ದಾನಮಾಡಿದ್ದಾರೆ. ಶಿರಂಗಾಲ ವಾಸದ ಶ್ರೀ. ಮಹಲಿಂಗಸ್ವಾಮಿಗಳವರು ಫಂಡಿಗೆ ಉಚಿತವಾಗಿ 5 ರೂಪಾಯಿ ಕೊಡಲು ವಾಗ್ದಾನಮಾಡಿರುತ್ತಾರೆ.

ಸೆಕ್ರೆಟರಿ.

ಜಮೀನುದಾರರ ಸಂಘ

ಈಕಾಲದ ಮುಖ್ಯ ಕೆಲಸ.

ನಮ್ಮ ದೇಶದಲ್ಲಿ ಕಳೆದ ಒಂದೂವರೆ ತಿಂಗಳಿಂದಲೂ ಎಡೆಬಿಡದೆ ಸುರಿದ ಮಳೆಯಿಂದ ಅಪೂರ್ವವಾದ ಹೊಳೆಯ ಪ್ರವಾಹಗಳು ಉಂಟಾದ ದರ ದೆಸೆಯಿಂದ ಪೈರಿನ ಮೇಲೆ ನೀರು ತುಂಬಿ ಕೊಳೆತು ಹೋಗಿಯೂ ಪೈರಿನ ಮೇಲೂ ಪಾತಿಯ ಮೇಲೂ ಮರಳು ಮುಚ್ಚಿ ನಾಶವಾಗಿಯೂ ಇರುವುದರಿಂದ ಗದ್ದೆಗಳನ್ನು ನೆಡುವುದಕ್ಕೆ ಪೈರು ಇಲ್ಲದೆಯೂ ಅನುಕೂಲವಿಲ್ಲದೆಯೂ ಅನೇಕ ರೈತರು ಕಷ್ಟ ಪಡುತ್ತಿದ್ದಾರೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಸಮಯದಲ್ಲಿ ಗ್ರಾಮ ನಿವಾಸಿಗಳು ಅನ್ಯೋನ್ಯ ಸಹಾಯಕರಾಗಿ ಮುಂದೆ ಬರುವ ಕ್ಷಾಮ ಬಾಧೆಯನ್ನು ಕಡಿಮೆಮಾಡಲು ಪ್ರಯತ್ನಿಸಬೇಕಾಗಿದೆ. ಈ ದೇಶದಲ್ಲಿ ಕಾವೇರಿಸಂಕ್ರಮಣದ ವರೆಗೂ ("ಕುಂದಕ್ ಬೆಟ್ಟಿಲ್ ಬೋಳ್ ಕೆಳೆ") ನಾಟಿ ನೆಡುವ ಪದ್ಧತಿ ಇದೆ. ಕಾವೇರಿ ಸಂಕ್ರಮಣಕ್ಕೆ ಇನ್ನೂ ಒಂದು ತಿಂಗಳು ಇಪ್ಪತ್ತೈದು ದಿವಸಗಳವರೆಗೆ ಬೀಜ ಹಾಕದೆ ಇರುವವರೂ, ಪೈರು ನಾಶವಾದವರೂ ಏನು ಕರ್ತವ್ಯವೆಂದು ಯೋಚಿಸದೆ ಕೂಡಲೇ ಬೀಜ ಹಾಕಬೇಕು. ಬೀಜದ ಭತ್ತವಿಲ್ಲವಾದವರು ಬಿತ್ತಿಗೆ ಇರುವ ಒಳ್ಳೇ ಭತ್ತವು ಆಗುತ್ತೆ. ಮತ್ತು ಬಿಟ್ಟ ಬೀಜ ಹಾಕದ

ಕಾದವರು ಕಮ್ಮಿ ಪಕ್ಷ ಐದು ಒಟ್ಟಿಯಾದರೂ ಹಾಕಬೇಕು. ಕೆಲವರಿಗಾದರೂ ಪೈರು ಹೆಚ್ಚಾಗಿರಬಹುದು. ಅಂಥಾ ಪೈರನ್ನು ಯಾಕಲು ನಡಬೇಕೆಂಬ ಕುರದಿಂದ ಕಿತ್ತು ಬಿಸಾಡದೆ ಇಟ್ಟಿರಬೇಕು. ದೂರದಿಂದಲಾದರೂ ಒಂದು ತೆಗೆದುಕೊಂಡು ಹೋದಾರು ಎತ್ತುಗಳಿಲ್ಲದವರಿಗೆ ಎತ್ತೂ ಆಳಿಲ್ಲದವರಿಗೆ ಆಳುಕೊಟ್ಟು ಸಹಾಯ ಮಾಡಬೇಕು. ಹೀಗೆ ಮಾಡಿದರೆ ಬಾರು ಬೆಳೆಯುವಲ್ಲಿ ಅರ್ಧವಾದರೂ ಬೆಳೆದು ಕ್ಷಾಮ ಬಾಧೆಯು ಕಡಿಮೆ ಯಾಗಬಹುದು. ನೆರೆ ಜಿಲ್ಲೆಗಳಾದ ಮಲಬಾರು, ದಕ್ಷಿಣ ಕನ್ನಡ ಮೊದಲಾದ ಪ್ರಾಂತ್ಯಗಳಲ್ಲೂ ಅತಿವೃಷ್ಟಿಯಾದುದರಿಂದಲ್ಲಿಯೂ ಕ್ಷಾಮ ಕಲಿದೋರದೆ ಇರದು. ಆದುದರಿಂದ ನಮ್ಮ ದೇಶಕ್ಕೆ ಬೇಕಾದಷ್ಟು ಧಾನ್ಯವನ್ನು ನಮ್ಮ ದೇಶದಲ್ಲಿಯೇ ಬೆಳೆಸಲು ಯತ್ನಿಸುವುದು ಅತ್ಯಾವಶ್ಯವಾಗಿದೆ.

ಈರೀತಿ ಅನೊನ್ಯ ಸಹಾಯ ಮಾಡಿಕೊಳ್ಳುವ ಪದ್ಧತಿ ಗ್ರಾಮದಲ್ಲಿ ಇನ ಇದೆ. ಕಾಲವಿಾರಿತೆಂಬ ಕಾರಣ ಒಂದಾಗಲೀ ಸ್ವಕೆಲಸ್ಸ್ ಪೂರ್ತಿ ಹಾಳಾಗಿದೆಯೆಂತ ನಿರಾಶೆಯಿಂದಾಗಲೀ ಕಟಸ್ಥರಾದವರಿಗೆ ಎಚ್ಚರಗೊಳಿಸುವುದೂ ಕಷ್ಟ ಕಿಮೆಯಾದವರನ್ನು ಕಷ್ಟಪಡುವವರ ಪರವಾಗಿ ಧರ್ಮಸಹಾಯ ಕೇಳುವುದೂ ನನ್ನ ಕರ್ತವ್ಯವೆಂತ ಭಾವಿಸಿ ಈ ವಿಜ್ಞಾಪನ ಪತ್ರವನ್ನು ಬರೆಕೊಂಡಿದ್ದೇನೆ. ಸರ್ವರೂ ಈ ವಿಜ್ಞಾಪನೆಗೆ ಗಮನಕೊಡುವರಾಗಿ ಬೇಡ್ತೇನೆ.

ಆಯಾ ಗ್ರಾಮದಲ್ಲಿ ಎಷ್ಟು ನಷ್ಟವಾಗಿದೆ ಎಂಬುವದನ್ನು ಲೆಕ್ಕೆದುಕೊಳ್ಳುವುದು ಅವಶ್ಯವೆಂತ ತೋರಿದೆ. ಪ್ರತಿಗ್ರಾಮದಲ್ಲಿ ಕೆಲವರು ಸೇರಿ ತಮ್ಮ ಗ್ರಾಮದಲ್ಲಿ ಆದ ನಷ್ಟದ ಅಜಮಾಯಿಷಿ ಲೆಕ್ಕವಾಗಿ ಪಟ್ಟಿಮಾಡಿ ಸಂಘಕ್ಕೂ ಕಾರ್ಯ ಬರೆಕೊಂಡರೆ ಬಹಳ ಪ್ರಯೋಜನವಿದೆಯೆಂದೆಣಿಸ್ತೇನೆ. ಈ ಕೆಲಸಕ್ಕೆ ಸಂಘದ ಕಮಿಟಿಯವುಗಳೂ ಇತರ ಮೆಂಬರುಗಳೂ ಸಹಾಯಕರಾಗಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಷಯಕ್ಕಾಗಿ ಆರ್ಗನೈಜಿಂಗ್ ಸರಿಯವರು ಸಾಧ್ಯವಾದಷ್ಟು ಗ್ರಾಮಗಳ ಮೇಲೆ ಸಂಚಾರಮಾಡುವರು.

ಮಡಿಕೇರಿ. ಕೆ. ಕುಟ್ಟಯ್ಯ

ತಾ|| 23-8-1923. ಪ್ರೆಸಿಡೆಂಟ್.

ಕೊಡಗಿನಲ್ಲಿ ಬಲಮುರಿಯಲ್ಲಿಯೂ, ಇನ್ನೂ ಹಲವು ಕಡೆಗಳಲ್ಲಿಯೂ, ದಕ್ಷಿಣಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿಯೂ ಪ್ರವಾಹದ ದೆಸೆಯಿಂದ ನಷ್ಟ ಉಂಟಾದ ಜನಗಳ ಕಷ್ಟನಿವಾರಣೆಗಾಗಿ ಉದಾರಮನಸ್ಸಿನಿಂದ ಚಂದಕೊಟ್ಟ ಮಹನೀಯರುಗಳ ತಪಶೀಲ್ ಪಟ್ಟಿ:—

ನಂಬರು	ಸಹಾಯಮಾಡಿದ ಜನರುಗಳ ಹೆಸರು.	ಮೊಬಲಗು		
1	ಮೆ|| ರಾಯಬಹದ್ದೂರ್ ಕೆ. ಕುಟ್ಟಯ್ಯನವರು	35	0	0
2	,, ಲಿಂಗಣ್ಣಸೆಟ್ರು ಉಪ್ಪು, ಮೆಣಸು, ವಗೈರೆ			
3	,, ಡಿ. ಸಿದ್ದಲಿಂಗಯ್ಯನವರು	1	0	0
4	,, ಸೂರ್ಯನಾರಾಯಣರಾಯರು	1	0	0
5	,, ಪುಟ್ಟಿಚಂಡ ಚಿಣ್ಣಪ್ಪನವರು	1	0	0
6	,, ಬಿ. ರಾಮಭಟ್ಟರು	1	0	0
7	,, ಬಿ.ಯಂ. ಕಾರ್‍ಯಪ್ಪನವರು 20 ಸೇರು ಅಕ್ಕಿ			
8	,, ಕೆ. ವೆಂಗಟಸುಬ್ಬಯ್ಯನವರು	1	0	0
9	,, ಯಂ. ಯು. ಚಿಣ್ಣಪ್ಪನವರು	5	0	0
10	,, ಯಂ. ಯಂ. ಶಿವ್ರಕನವರು 10 ಪಂಚೆಗಳು.			
11	,, ಪಿ. ಬಿ. ಚೆಂಗಪ್ಪನವರು	5	0	0
12	,, ಪಿ. ಮುತ್ತಣ್ಣನವರು	1	0	0
13	,, ಸಿ. ಬಿ. ಚೆಂಗಪ್ಪನವರು	2	0	0
14	,, ಕೆ. ಕೃಷ್ಣಮೂರ್ತಿಯರು	1	0	0
15	,, Sympathiser	2	0	0
16	,, ಸಿ.ಎನ್. ಮುತ್ತಣ್ಣನವರು Baratlaw	10	0	0
17	,, ಯಂ. ಯನ್. ಉತ್ತಯ್ಯನವರು	2	0	0
18	,, ಕೆ. ಕಾರ್‍ಯಪ್ಪನವರು	1	0	0
19	,, ಎ. ಯಂ. ಅಪ್ಪಚ್ಚನವರು	3	0	0
20	,, ಕೆ. ಸಿ. ತಿಮ್ಮಯ್ಯನವರು	10	0	0
21	,, [illegible] ಮಾದಯ್ಯನವರು ರಾಯಬಹದ್ದೂರ್	25	0	0
22	,, ಪಿ. ಅಪ್ಪಚ್ಚನವರು	5	0	0
23	,, ಸಿ. ಚೆಂಗಪ್ಪನವರು	1	0	0
24	,, ಸಿ. ಬಿ. ಬಿಯ್ಯಣ್ಣನವರು	3	0	0
25	,, ಪಿ. ಎ. ಮಂದಪ್ಪನವರು	1	0	0
26	,, ಬಿ. ಮುತ್ತಣ್ಣನವರು	0	4	0
27	,, ದೇವದಾಸನವರು	2	0	0
28	,, ಪಿ. ಬಿಯ್ಯಣ್ಣನವರು	0	8	0
29	,, ಕೆ. ಕಾಳಪ್ಪನವರು	0	4	0
30	,, ಸಂಜೀವರಾಯರು	1	0	0
	ಜುಮ್ಲ	110	0	0

(ಮುಂದುವರಿಯುವುದು).

ತಿದ್ದುಪಡಿಗಳು.

[ಕಳೆದ ವಾರದ ಅಗ್ರಲೇಖನದ ೨ ನೇ ಪ್ಯಾರಾದ ೧೪ ನೇ ಪಂಕ್ತಿಯಲ್ಲಿ „ಸಾಲು" ಎಂಬದನ್ನು „ನಾಲ್ಕು" ಎಂದೂ, ೧೬ ನೇ ಪಂಕ್ತಿಯಲ್ಲಿ „ಅನವಶ್ಯವಲ್ಲವಾಗಿದೆ" ಎಂಬದನ್ನು „ಅವಶ್ಯವಾಗಿದೆ" ಎಂದೂ, ೩ ನೇ ಪ್ಯಾರಾದ ೧೩ ನೇ ಪಂಕ್ತಿಯಲ್ಲಿ „ಸುಮಾರು ಲಕ್ಷ" ಎಂಬುದನ್ನು „ಸುಮಾರು ಹತ್ತು ಲಕ್ಷ" ಎಂದೂ ಓದತಕ್ಕದ್ದು. ಸಂ]

ಸೂಚನೆ.

ಮಡಿಕೇರಿ ಹೈಸ್ಕೂಲಿನ ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶದ ವಿಷಯ ಮೆ|| ಬಿ. ಎಸ್. ಕಾಳಪ್ಪನವರು ನಡಿಸಿದ ಪತ್ರವ್ಯವಹಾರದ ಸಮ್ಬಂಧ ಹಲವು ಟಾಕ್ಕಿಗಳು ಬಂದಿವೆ. ಅವುಗಳನ್ನು ಸ್ಥಳ ಸಂಕೋಚದಿಂದ ಪ್ರಕಟಿಸಲಾರೆವು. ಈ ವಿಷಯ ಇನ್ನು ಚರ್ಚಿಸಬೇಕೆಂದಿರುವವರು ತನ್ನೊಂದಿಗೆ ಪತ್ರವ್ಯವಹಾರ ನಡಿಸಬೇಕೆಂಬ ಮೆ|| ಕಾಳಪ್ಪನವರ ಕೋರಿಕೆಯನ್ನು ಮಾತ್ರ ಇಲ್ಲಿ ಸೂಚಿಸಲಿಚ್ಛೈಸುತ್ತೇವೆ.

ಸಂಪಾದಕ.

ಪತ್ರವ್ಯವಹಾರಗಳು.

ಟಾಕ್ಕಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರದಾದಿಗಳಲ್ಲ. [ಎಡಿಟರ್]

ಇದು ತರವೇ!

ಮಕ್ಕಳದಿರಿಗೆ ತಂದೆಯು ತಾಯಿಯನ್ನು ಬಯ್ಯುವುದಾಗಲಿ, ಹಿಯಾಳಿಸುವುದಾಗಲಿ ತರವೆ? ಮಕ್ಕಳ ಪುರೋಭಿವೃದ್ಧಿಯು ತಾಯಿಯಿಂದಲೇ ಆಗಬೇಕಲ್ಲವೆ? ಹೀಗಿರುವಾಗ ಬಾಲಕರಿಗೆ ತಾಯಿಯಲ್ಲಿ ಅಸಡ್ಡೆಯಾದರೆ ಹೇಗೆ ತಾನೇ ಒಳ್ಳೆಯ ಸಾತ್ಗುಣಗಳನ್ನು ಕಲಿತಾರು?

ವಿದ್ಯಾರ್ಥಿಗಳದಿರಿಗೆ ಹೆಡ್ಮಾಸ್ಟರು ಇತರ ಅ|| ಮಾಸ್ಟರುಗಳನ್ನು "ನೀನು ಆ ರೀತಿ ಕಲಿಸಿದುದು ಚೆನ್ನಾಗಿಲ್ಲ. ನಿನಗೆ ಅದು ಗೊತ್ತೇ ಇಲ್ಲ. ಇದು ಗೊತ್ತೇ ಇಲ್ಲ. ಎಂಬುದಾಗಿ ಹೇಳುತ್ತಿರುವುದು ನ್ಯಾಯವೆ? ವಿದ್ಯಾರ್ಥಿಗಳಿಗೆ ಮಾಸ್ಟರುಗಳಲ್ಲಿ ಗೌರವವೂ ಪ್ರೀತಿ ವಿಶ್ವಾಸವೂ ಇಲ್ಲದೇ ಹೋದರೆ ಹೇಗೆ ತಾನೇ ಕಾಲವನ್ನು ನೂಕುವುದು? ಆದುದರಿಂದ ಈ ಎರಡು ಮಾತುಗಳನ್ನು ತಂದೆಗಳೂ, ಹೆ|| ಮಾಸ್ಟರುಗಳೂ ಚೆನ್ನಾಗಿ ಮನಸ್ಸಿಗೆ ತೆಗೆದುಕೊಳ್ಳಬೇಕಾಗಿದೆ. ಬಾಲಕರದಿರಿನಲ್ಲಿ ತಂದೆಯು ತಾಯಿಯನ್ನು ವಿದ್ಯಾರ್ಥಿಗಳದಿರಿನಲ್ಲಿ ಹೆ|| ಮಾಸ್ಟರುಗಳು ಅ|| ಮಾಸ್ಟರುಗಳನ್ನೂ ಹಿಯಾಳಿಸುವುದಾಗಲಿ, ಬಯ್ಯುವುದಾಗಲಿ ಮಾಡಬಾರದೆಂದು ನಮ್ಮದೊಂದು ಪ್ರಾರ್ಥನೆ.

ಬಾಲಕರು, ವಿದ್ಯಾರ್ಥಿಗಳೂ.

ಮೊಹರಂ

ಅಯ್ಯಾ,

ವೀರಾಜಪೇಟೆ ಈ ಟವ್ನಿನಲ್ಲಿ ಮುಸಲ್ಮಾನರ ಮೊಹರಂ ಹಬ್ಬವು ಅತಿ ವಿಜೃಂಭಣೆಯಿಂದ ನಡೆಯಿತು. ಬೀದಿ ಬೀದಿ ಮೆರವಣಿಗೆ [illegible] ಬೀದಿಯೆಲ್ಲಾ ಪ್ರಕಾಶವಾಗಿತ್ತು. ಸುಮಾರು ಸಾವಿರದ ಮುನ್ನೂರು ಜನರು ಸೇರಿದ್ದರು. ನಾಡು, ಗ್ರಾಮಗಳಿಂದ ಜನರು ಬಂದು ತುಂಬಿಕೊಂಡಿದ್ದರು. ಜನವೆಲ್ಲಾ ಸಣ್ಣ ಸಣ್ಣ ಗುಂಪುಗುಂಪಾಗಿ ಕೂಡಿ ಸಂತೋಷಪಡುತ್ತಿದ್ದರು. ತೇರು ಹುಲಿವೇಷ ವಾದ್ಯಾದಿಗಳೂ ಮೆರೆಯುತ್ತಿತ್ತು. ಹಿಂದುಗಳು ಮತ್ತು ಮುಸಲ್ಮಾನರೂ ಅನ್ಯೋನ್ಯ ಪ್ರೀತ ಭಾವದಲ್ಲಿದ್ದರು. ಎಲ್ಲೆಲ್ಲಿಯೂ ಕೋಲಾಹಲಧ್ವನಿಯು ನಡೆಗೊಂಡಿತ್ತು. ವಿವಾದೇನೂ ಸಹ ಯೂರಬಿದ್ದಿದ್ದಿಲ್ಲ. ಅನೇಕತರದ ವೇಷಗಳನ್ನು ಧರಿಸಿಕೊಂಡಿದ್ದರು. ಹಿಂದುಗಳು ಮತ್ತು ಮುಸಲ್ಮಾನರೂ ವೇಷಧಾರಿಗಳಾಗಿದ್ದರು. ಹಿಂದುಗಳಲ್ಲೊಬ್ಬ ಬ್ರಾಹ್ಮಣತರುಣನು ಮುಸಲ್ಮಾನರೊಡನೆ ರೋಹಿಲ ಸ್ತ್ರೀಯ ವೇಷವನ್ನು ಧರಿಸಿ ನಟನೆಮಾಡುತ್ತಿದ್ದನು. ಅವನ ನಟನೆಯು ಸೊಗಸಾಗಿಯೂ, ಆಶ್ಚರ್ಯಕರವಾಗಿಯೂ ಇತ್ತು. ಮುಸಲ್ಮಾನರೊಡನೆ ವೇಷಧರಿಸಿದನ್ನು ನೋಡಿದರೆ ಸಂತೋಷಕರವಾಗಿದೆ. ಮೊಹರಂ ಹಬ್ಬವು ಈ ತಾರೀಖು ೨೪ ನೇ ಶುಕ್ರವಾರ ರಾತ್ರಿ ೨ ಗಂಟೆಗೆ ಮುಕ್ತಾಯವಾಯಿತು.

ಹಿಂದು.

ಅಯ್ಯಾ,

ಪೊಳ್ಳಿಬೆಟ್ಟದಿಂದ ಅಮ್ಮತ್ತಿಗೆ ಹೋಗುವ ರಸ್ತೆಯು ½ ರಿಂದ ¾ ಮೈಲಿನವರೆಗೆ ಇರತಕ್ಕ ಅಜುಬಾಜು ತೋಟಗಳು ಯೂರೋಪಿಯನ್ ಪ್ಲಾಂಟರುಗಳಿಗೆ ಸೇರಿವೆಯೆಂದು ತಿಳಿಯಬರುತ್ತದೆ. ಇಲ್ಲಿ ಪ್ರಯಾಣಸ್ಥರಿಗೆ ಸಂಚಾರ ಮಾಡಲು ಇರತಕ್ಕ ದುಸ್ಥಿತಿಯು ಹೇಳಬೇಕಾಗಿಲ್ಲ. ಯಾಕೆಂದರೆ ಈ ತೋಟಗಳಿಗೆ ಸಂಬಂಧಪಟ್ಟ ಮಾಲ ವಗೈರೆಗಳನ್ನು ಈ ತೋಟಗಾರರ ಮನಸ್ವಿಚ್ಛಾವಸ್ಥೆಗೆ ಕೊಟ್ಟಿರತಕ್ಕ ಅವಕಾಶವೆ ಕಾರಣವಾಗಿ ತೋರುತ್ತೆ. ದೇಶದ ಇತರ ಕಡೆಗಳಲ್ಲಿ ಸರಕಾರದವರು ತಮ್ಮ ಕಾನೂನುಗಳನ್ನು ಉಪಯೋಗಿಸಿ ಮಾಡಿದ ಕಟ್ಟು ಅಬಾದುಗಳು ಈ ಪ್ರಾಂತ್ಯದಲ್ಲಿ ಉಪಯೋಗ ಮಾಡಿದಂತೆ ತೋರುವುದಿಲ್ಲ. ಸರಕಾರದವರ ಕಾನೂನುಗಳು ಪ್ರಜಾಸಾಮಾನ್ಯಕೆಲ್ಲವೂ ಲಗಾವಾಗುವುದಿಲ್ಲವೇ? ಹಾಗೆ ಆಗುವ ಪಕ್ಷದಲ್ಲಿ ಈ ತೋಟಗಾರರಿಗೆ ಯಾಕೆ ಅನ್ವಯಿಸಿಲ್ಲ. ಪಾದಚಾರಿಗಳಾಗಿ ಸಂಚಾರಮಾಡದಕ್ಕೆ ಬರ ಪ್ರಜೆಗಳ ಸಂಖ್ಯೆಯು ಮೋಟಾರ್ ಯಂತ್ರದಲ್ಲಿ ತಿರುಗುವವರ ಸಂಖ್ಯೆಗಿಂತಲೂ ಬಹಳ ಅಧಿಕವೆಂಬ ಸಂಗ್ತಿಯು ನಿಸ್ಸಂದೇಹವಾದದ್ದು. ಬಡಪ್ರಜೆಗಳನ್ನು ಕಾಪಾಡುವ ಘನವೊಂದಿದ ಸರಕಾರದವರ ಕಾನೂನುಗಳಿಗೆ ಪಕ್ಷಪಾತವಿಲ್ಲೆಯದು? ಬಂದುವೇಳೆ ಸರಕಾರದವರಿಗೆ ಇವರ ಭಯವಿರಬಹುದೇ? ಯಾವ ಕಾರಣದಿಂದ ಈ ಪ್ರಾಂತ್ಯವು ಇವ್ಯಕೋಚನಿಯವಸ್ಥೆಯಲ್ಲಿ ಇಡಲ್ಪಟ್ಟಿರಬಹುದು? ಈ ಸಂಗ್ತಿಯನ್ನು ತಾವಾಗಲೀ ತಮ್ಮ ವಾಚಕರಾಗಲಿ ತಿಳಿಸಿದರೆ ಬಹಳ ಉಪಕಾರವಾದೀತು.

K. K, Kuttapa.

ನೇಪಲ್ಸ್ ಎಂಬ ಪಟ್ಟಣ. ನೆಪೋಲಿಯನ್ ಚಕ್ರವರ್ತಿಯ ಕಾಲ; ಅಂದರೆ ಸಾಧಾರಣ ಒಂದು ನೂರು ವರ್ಷದ ಕೆಳಗೆ ಅಲ್ಲಿ ಇಬ್ಬರು ಸಿಪಾಯಿಗಳು ಆ ಪಟ್ಟಣದಲ್ಲಿ ಮಾತನಾಡುತ್ತಿದ್ದರು. ಅವರಲ್ಲೊಬ್ಬನು ಫ್ರೆಂಚನು; ಇನ್ನೊಬ್ಬನು ಆಂಗ್ಲೇಯನು; ಆದರೂ ಸ್ನೇಹಿತರು.

ಏನೇನೋ ಮಾತನಾಡುತ್ತ, ಫ್ರೆಂಚನು ಮಿತ್ರನನ್ನು ಕುರಿತು, „ಫ್ರಾನ್ಸ್ ದೇಶಕ್ಕೇನಾದರೂ ವರ್ತಮಾನ ಕಳುಹಿಸುವುದಕ್ಕಿದೆಯೇ? ನಾನು ಅಲ್ಲಿ ಎರಡು ದಿನಗಳಲ್ಲಿರುತ್ತೇನೆ," ಎಂದು ಹೇಳಿದನು.

„ಏನು? ಫ್ರಾನ್ಸಿನಲ್ಲಿ! ನೀನು ರೋಮುಪಟ್ಟಣಕ್ಕೆ ಹೋಗುವುದಾಗಿ ನಾನು ತಿಳಿದಿದ್ದೆನಲ್ಲಾ'

„ಹೌದು, ನಾನು ರೋಮಿಗೇ ಹೋಗುವುದು. ಆದರೆ ರೋಮು ಪಟ್ಟಣವು ನೆಪೋಲಿಯನ್ ಚಕ್ರವರ್ತಿಯ ಬಂದು ಇಸ್ತಿಹಾರು ನಾಮೆಯಿಂದ ಫ್ರಾನ್ಸಿಗೆ ಸೇರಿ ಹೋಗಿದೆ"

„ಇಲ್ಲ, ವರ್ತಮಾನ ಕಳುಹಿಸುವುದಕ್ಕೇನೂ ಇಲ್ಲ. ಆದರೆ ನಾನು ಇಂಗ್ಲೆಂಡಿನಲ್ಲಿ ನಿನಗೇನಾದರೂ ಸಹಾಯ ಮಾಡುವುದಿದೆಯೋ? ಅಲ್ಲಿ ನಾನು ಅರ್ಧಗಂಟೆಯೊಳಗೆ ಇರುತ್ತೇನೆ," ಎಂದು ಆಂಗ್ಲೇಯ ಸಿಪಾಯಿಯು ಕೇಳಿದನು.

„ಏನು? ಇಂಗ್ಲೆಂಡಿನಲ್ಲಿ! ಅರ್ಧ ಗಂಟೆಯಲ್ಲಿ!!" ಇವಿಷ್ಟೇ ಆಶ್ಚರ್ಯಾನ್ವಿತನಾದ ಫ್ರೆಂಚನಿಂದ ಹೊರಟ ಶಬ್ದಗಳು.

„ಹೌದು; ಇಂಗ್ಲೆಂಡಿನಲ್ಲಿ ಅರ್ಧಗಂಟೆಯಲ್ಲಿ ನಾನು ಸಮುದ್ರದ ಮೇಲಿರುತ್ತೇನೆ. ಅಂದ ಮೇಲೆ ಇಂಗ್ಲೆಂಡಿನಲ್ಲಿದ್ದ ಹಾಗೆಯೇ. ಯಾಕೆಂದರೆ, ಸಮುದ್ರವು ವಿಂಗಡಿಸಲ್ಪಡದಂತೆ ಇಂಗ್ಲೆಂಡಿಗೆ ಸೇರಿ ಹೋಗಿ ಹೋಗಿದೆ," ಎಂದು ಆಂಗ್ಲೇಯನು ಹೇಳಿ ಮಿತ್ರನ ಆಶ್ಚರ್ಯವನ್ನು ಶಮಿತ್ರಮಾಡಿದನು

ಆಹಾ! ಈ ಇಬ್ಬರು ಸಿಪಾಯಿಗಳ ಸಂಭಾಷಣೆ ಕ್ರಮವು ಎಷ್ಟು ಚೆನ್ನಾಗಿದೆ! ಒಬ್ಬನು ವೃದ್ಧಿಯನ್ನೆಲ್ಲಾ ತನ್ನದೆಂದು ಹೇಳುವುದಾಯಿತು! ಇನ್ನೊಬ್ಬನು ಸಮುದ್ರವೆಲ್ಲಾ ತನ್ನ ಜನಾಂಗಕ್ಕೆಂದು ಒದರುವುದಾಯಿತು! ಅಂತು ಇಂತು ಉಳಿದುದು ವಾಯುಮಂಡಲವೊಂದೇ! ಇವರ ಹಕ್ಕನ್ನು ಸ್ಥಾಪಿಸಲು ಯಾರು ಯಾವಾಗ ಬರುವರೋ? ಹೇಳಿರಿ!

ಎಸ್. ಎಸ್. ಧರ

ಟ್ರೆಂಚ್ ಮೆಂಟು ? ಹೊಟ್ಟೆಕಿಚ್ಚೊ ?

ಸ್ಯ ಸಂಪಾದಕರೆ,

ಮಡಿಕೇರಿಯ ಶಾಲೆಯಲ್ಲಿ ಮಿ॥ ಥಾಮಸ್ ಎಂ ಬರೊಬ್ಬ ಹೆಡ್‌ಮಾಸ್ಟರರು ಇದ್ದರಂತೆ. ಅವರು ಶಾಲೆಗೆ ದೇಶೀಯ ಗ್ರೇಜುಯೇಟ್ಸನ್ನು ಕರೆಕ ಸಿ ತನ್ನ ಶಾಲೆಯಲ್ಲಿ ಕೆಲಸವನ್ನು ತೆಗೆದುಕೊಳ್ಳ ಕೆಂದು ಹೇಳಿದಲ್ಲಿ ಆಗುವುದಿಲ್ಲವೆಂದು ಹೇಳಿದ ವ ಯರು ಈಗಲೂ ಕೆಲಸದಲ್ಲಿ ಬೇರೆ ಇಲಾಖೆಗಳ ಇರುವರಂತೆ. ಅಗ ಸ್ಕೂಲ್ ಮೇಸ್ಟರರಿಗೆ ಒರೇ ಅಥವಾ ೬೦ ರೂಪಾಯಿ ಸಂಬಳ ಮಾತ್ರವಂತೆ ಗ ೧೦೦ ರಿಂದ ೨೫೦ ರ ವರೆಗೆ ಎಂಬುದು ರಿಟ್ರೆಂಚ್ ಮೆಂಟು ಎಂಬ ಪತ್ರ ಬರೆದು ಪ್ರಕಟಿಸಿದ ನಿಮ್ಮ ಬಾತ್ಮೀದಾರರ ಕಣ್ಣು ಕಾಣ್ಕಿತೆ ?

ಅಗ, ಬರುವುದಿಲ್ಲವೆಂದು ಹೇಳಿದ ಮೇಲೆ ಪತ್ರಿಕೆಗಳಲ್ಲಿ ಪ್ರಕಟಿಸಿ ಮಂಗಳೂರಿನಿಂದ ಇಬ್ಬರನ್ನು ಸ ಟ್ರೈನಿಂಗ್ ಕೊಡಿಸಿ ಕೆಲಸಕ್ಕೆ ನಿಲ್ಲಿಸಿದುದಾಗಿದೆ ದು ನಡೆದು ಒಂದೆರಡು ವರ್ಷಗಳಲ್ಲಿಯೇ ಮರೆತು ಹೋಗಿರುವ ನಿಮ್ಮ ಬಾತ್ಮೀದಾರರ ಜ್ಞಾಪಕಕ್ಕೆ ಇದ ಷ್ಟು ಬರೆದುದಾಗಿದೆ

ಕೊಡಗಿನ ಭವಿಷ್ಯತ್ತನ್ನು ನೋಡುವಾಗ ಈ ರನಾದ ಅಸೂಯೆಯು ದೇಶಹಿತಕ್ಕಲ್ಲ. ಅಸೂಯೆ ಯನ್ನು ವೃದ್ಧಿಪಡಿಸುವ ಲೇಖನ ಪ್ರಚಾರವೂ ವನ್ಯ ದ ಸಂಪಾದಕರಾದ ತಾವು ಉತ್ತೇಜನಕೊಡುವುದೂ ಚಿತವಲ್ಲ. ನಮ್ಮ ದೇಶದ ಹಿತಕ್ಕಾಗಿ ಹಗಲಿರುಳೂ ಕೆ ಲಸ ಮಾಡುವ ಸೆಂಟ್ರಲ್ ಬ್ಯಾಂಕಿನ ಪ್ರೆಸಿಡೆಂಟ್ ಮಿ॥ ಮಂಜುಂಗರಾಯರು ಮಂಗಳೂರವರು. ನಮ್ಮ ಬಾಲಕರ ಹಿತಕ್ಕಾಗಿ ಶ್ರಮಪಡುವ ಹೆಡ್‌ಮಾಸ್ಟರರೂ ಮಂಗಳೂರವರು. ನಮ್ಮ ಕಾಫಿಪ್ಲಾಂಟರರಿಗೆ ಆರೋಗ್ಯ ಕಡಿಮೆ ಬದ್ದಿಯಲ್ಲಿ ಸಾಲಕೊಡುವವರು ಮಂಗಳೂರಿನ ಮಿ॥ ನೆಲ್ಲಿಕ್ಕಾಯ ವೆಂಕಟರಾಯರು. ಹೀಗೆ ಪರಸ್ಪರ ಬಂಧುಗಳಂತಿರುವ ನಾವು ಗೊತ್ತೂ ಗೊತ್ತಿಲ್ಲದಂತೆ ದೂರುವುದು ಹಿತವಲ್ಲ! ತರವಲ್ಲ! ಸರಿಯಲ್ಲ!!

ಅಸಿಸ್ಟೆಂಟ್ ಇನ್ಸಪೆಕ್ಟರ ಪದವಿಯನ್ನು ಬಯಸಿದ ನಮ್ಮ ಗ್ರಾಜುಯೇಟರು ಮಕ್ಕಳ ಹಿತಕ್ಕಾಗಿ ಏಕೆ ಉಪಾಧ್ಯಾಯ ವೃತ್ತಿಯನ್ನು ಕೈಕೊಳ್ಳಲಿಲ್ಲ?

ಈಗಿನ ಕಾಲದಲ್ಲಿ ನಾನು ಕೈಕೇರಿಯವ, ನಾನು ಮೇಕೇರಿಯವ, ಎಂಬ ಬೇಧಗಳನ್ನು ಕಲ್ಪಿಸಿಕೊಳ್ಳುವ ಸಮಯವೇ ಅಲ್ಲ. ಅತ್ತ ಜಮೀನುದಾರರ ಸಂಘದಂತ ಸಾರ್ವಜನಿಕ ಸಂಸ್ಥೆಯದ್ಯೇಯವು ಮದರಾಸಿನೊಡನೆ ಒಂದಾಗುವುದಿರಲು ಇತ್ತ ಬೇಧಾಸೂಯೆಗಳನ್ನು ಕಾ ಶುವ ಈ ಚೆಂದವೆತ್ತ?

ಇತಿ ಬಂಧು

ಸ್ವರಾಜ್ಯವೆಂದರೇನು ?

ಈ ಹೆಸರಿನ ಬಾತ್ಮೀಯೊಂದನ್ನು "ಅಭಿಮಾನಿ" ಯು ಬರೆದಿದ್ದದ್ದನ್ನು ಓದಿ ನೋಡಿ ವ್ಯಸನವಾಗುತ್ತೆ. ದೇಶೀಯರಿಗೆ ಉದ್ಯೋಗ ಸಿಕ್ಕಿದರೆ ಸ್ವರಾಜ್ಯವೇ ಸಿಕ್ಕಿತೆಂತ ಯಾರೂ ಯೋಚಿಸುವವಲ್ಲ. ದೇಶೀಯರಿಗೆ ಕೆಲಸ ಸಿಕ್ಕಿದಾಗ ಸಂತೋಷವು ಸಂಪಾದಕರವನ್ನು ಅಭಿನಂದಿಸಿದ್ದು ಸ್ವರಾಜ್ಯ ಸಿಕ್ಕಿತೆಂತಲ್ಲ. ದೇಶದ ಆಡಳಿತ ನಡಿಸಲು ಯೋಗ್ಯತೆ ಇರುವ ದೇಶೀಯರಿರುವಾಗ ಅಂಥವರನ್ನು ನೇಮಿಸುವದನ್ನು ಬಿಟ್ಟು ವಿಪರೀತ ಸಂಬಳ ಬೇಕೆನ್ನುವ ಪರದೇಶೀಯರಿಗೆ ಕೊಡುವದು ನ್ಯಾಯವಲ್ಲವೆಂ ತ ಸ್ವರಾಜ್ಯ ಬೇಕೆನ್ನುವವರೂ ಹೇಳುತ್ತಿದ್ದ ವಿಷಯವಾಗಿದೆ. ಸಿವಿಲಿಯನ್ನರು ಯಾವಾಗಲೂ ನಿಷ್ಪಕ್ಷಪಾತಿಗಳೆಂತ "ಅಭಿಮಾನಿ" ಗಳು ಬರೆದಿದ್ದಾರೆ. ಯೂರೋಪಿಯನ್ನನಿಗೂ ದೇಶೀಯನಿಗೂ ವ್ಯಾಜ್ಯ ಬಂದಾಗ ಸಿವಿಲಿಯನ್ನನ ನಿಷ್ಪಕ್ಷಪಾತತ್ವವು ಎಲ್ಲಿ ಹೋಗುತ್ತೆ? ದೇಶೀಯ ಉದ್ಯೋಗಸ್ಥನು ರೈತನ ಕಷ್ಟಗಳನ್ನು ಸರಿಯಾಗಿ ಮೇಲಧಿಕಾರಿಗಳಿಗೆ ತಿಳಸಿದೆ ಇದ್ದರೆ ಅಂಥಾ ಅಧಿಕಾರಿಗೆ ಎಚ್ಚರಗೊಳಸಿರಿ. ಐದುವರ್ಷಕ್ಕಿಂತ ಹೆಚ್ಚು ಕಾಲ ಗಜೆಟೆಡ್ ಉದ್ಯೋಗಸ್ಥರು ಒಂದೇ ಸ್ಥಳದಲ್ಲಿರಕೂಡದೆಂತ ಕೇಳಕೊಳ್ಳಿರಿ. ಸ್ವರಾಜ್ಯ ಸಿಕ್ಕುವವರೆಗೂ ದೇಶೀಯರಿಗೆ ದೊಡ್ಡ ಉದ್ಯೋಗ ಸಿಕ್ಕಲೇ ಕೂಡದೆನ್ನುವದರಲ್ಲಿ ಏನೂ ನ್ಯಾಯವಿಲ್ಲ. ದೇಶೀಯ ಉದ್ಯೋಗಸ್ಥರಿಂದ ಕೆಡಕೇ ಹೊರತು ಒಳ್ಳೆಯದಿಲ್ಲವೆಂತ ಹೇಳುವುದು ಸಹ ಸರಿಯಲ್ಲ. ದೇಶೀಯ ಉದ್ಯೋಗಸ್ಥರು ತಮ್ಮ ಶಕ್ತಿಯನ್ನು ಉಪಯೋಗಿಸಿ ಹೇಗೆ ಹೇಗೆ ದೇಶಕ್ಕೆ ಗುಣಮಾಡಿದ್ದಾರೆಂಬದು ನಮಗೆ ತಿಳಿಯುವುದಿಲ್ಲ. ಎದೆ ಧೈರ್ಯವಿರುವ ದೇಶೀಯ ಉದ್ಯೋಗಸ್ಥರಾದರೆ ದೇಶಕ್ಕೆ ಬಹಳ ಪ್ರಯೋಜನ ಮಾಡಬಹುದು. ಸಂಬಳ ಕೊಡುವ ಸರಕಾರಕ್ಕೆ ವಿರೋಧ ಮಾಡಬೇಕೆಂತ ನಾವು ಹೇಳುವವಲ್ಲ. ರೈತನ ಸ್ಥಿತಿಯನ್ನು ಸ ತ್ಯವಾಗಿ ಮೇಲಕ್ಕೆ ತಿಳಸಿದರೆ ಸಾಕು. ನಮ್ಮ ಈಗಿನ ಉದ್ಯೋಗಸ್ಥರು ಹಾಗೆ ಮಾಡುತ್ತಿಲ್ಲವೆಂದು ಹೇಳಲಿಕ್ಕೆ ಸಾಧ್ಯವಿಲ್ಲ. ಮಾಡುತ್ತಿದ್ದಾರೆಂದು ಗೊತ್ತಾದರೆ ಅಂಥಾ ಉದ್ಯೋಗಸ್ಥರು ಕೆಲಸದಲ್ಲಿರಲೇ ಕೂಡದೆಂತ ಕೇಳಬಹುದು. ಹ್ಯಾಗೂ ಕೌನ್ಸಿಲ್ ಬಂದ ಮೇಲೆ ದೇಶೀಯ ಉದ್ಯೋಗಸ್ಥರಿಗೆ ಧೈರ್ಯ ಹೆಚ್ಚು ಬರಬಹುದು. ದೇಶೀಯರಿಗೆ ಕೆಲಸಕೊಟ್ಟರೆ ಪ್ರಯೋಜನವೇ ಹೊರತು ಕೆಡಕಿಲ್ಲ.

ದೇಶೀಯ ಪ್ರೇಮಿ

ಕೊಡಗಿನ ದೋಣಿಕಡುಗೆ ಒದಗಿಸಲ್ಪಡುವ ದೋಣಿಗಳು

ಮಹನೀಯರೆ,

ದೋಣಿಕಡುಗಳ ಉತ್ಪತ್ತಿಯು ಡಿಸ್ಟ್ರಿಕ್ಟ ಬೋರ್ಡಿಗೆ ಹೋಗುತ್ತಿರುವುದರಿಂದ ಡಿ ಬೋರ್ಡಿನವರೇ ದೋಣಿ ಚಾರ್ಜು ಕೊಡುತ್ತಾರೆ. ಆದರೆ ದೋಣಿಯನ್ನು ತರಿಸುವ, ಸರ್ಟಿಫೈಮಾಡುವ ಸರ್ವಹಕ್ಕು ಡಿಸ್ಟ್ರಿಕ್ಟು ಮೇಜಿಸ್ಟ್ರೇಟಲ್ಲಿ ಅಡಗಿರುತ್ತೆ. ಈ ಮೊದಲು ದೋಣಿಗಳನ್ನು ಡಿ ಪಿ. ಡಬ್ಲ್ಯು ಇಲಾಖೆದವರು ಪರೀಕ್ಷಿಸಿ, ಪ್ರಯಾಣಿಕರನ್ನು ದಾಟಸಲಿಕ್ಕೆ ಲಾಯಕ್ಕಾಗಿದೆಯೋ ಎಂಬುದನ್ನು ಸರ್ಟಿಫೈ ಮಾಡುತ್ತಿದ್ದರು. ಆದರೆ ಏಳೆಂಟು ವರ್ಷಗಳಿಂದ ಡಿ ಪಿ. ಡಬ್ಲ್ಯು ಇಲಾಖೆದವರ ಕೈಯಿಂದ ಈ ಕೆಲಸವು ತಪ್ಪಿದಂದಿನಿಂದ ದೋಣಿ ಕಡುವಿಗೆ ಯಾವ ಸಮಯದಲ್ಲಿ ದೋಣಿಗಳು ಸಿಕ್ಕದೆಯೂ, ಇರುವ ದೋಣಿಗಳು ಪ್ರಯಾಣಕ್ಕೆ ಲಾಯಕ್ಕಿಲ್ಲದೆಯೂ ಇರುತ್ತೆ.

ಈ ಇಲಾಖೆದರಿಗೆ ಯಾವ ದೋಣಿಯನ್ನು ಉಪಯೋಗಿಸಬಹುದು, ಕೂಡದ ಎಂಬ ಪರೀಕ್ಷೆಯು ಚೆನ್ನಾಗಿ ಗೊತ್ತಿರುವುದರಿಂದಲೂ, ಡಿಸ್ಟ್ರಿಕ್ಟು ಮೇಜಿಸ್ಟ್ರೇಟ್ ಸಾಹೇಬರಿಗೆ ಈ ವಿಷಯ ಅನುಭವ ಕಡಿಮೆಯಾಗಿರುವುದರಿಂದಲೂ, ಇನ್ನಾದರೂ ದೋಣಿಗಳ ಚಾರ್ಜನ್ನು ರೆವಿನ್ಯೂಅಧಿಕಾರಿಗಳಿಂದ ತಪ್ಪಿಸಿ, ಡಿ ಪಿ ಡಬ್ಲ್ಯು ಇಲಾಖೆದರಿಗೆ ಕೊಟ್ಟರೆ ಪ್ರಯಾಣಿಕರಿಗಿರುವ ಅಪಾಯವು ಹೋದರೆಯು ತಪ್ಪಿ, ಎಂದಿನಂತೆ ಸುರಕ್ಷಿತವಾಗಿರುವಲ್ಲಿ ಅಭ್ಯಂತರವಿಲ್ಲ. ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಈ ಉಸ್ತುವಾರಿಯು ಹೋದಂದಿನಿಂದ ಕಂಟ್ರಾಕ್ಟದರು ಆಯಾಯ ವರ್ಷ ದೋಣಿಯನ್ನು ಚೆನ್ನಾಗಿ ಕಾಪಾಡಿಯೂ, ತಾರುಯಿಕ್ಕೆ ಮೊದಲಾದವುಗಳನ್ನು ದೋಣಿಗೆ ಹಚ್ಚದೆ ದೋಣಿಯ ವಿಷಯ ಬಹಳ ಉದಾಸರಾಗಿದ್ದಾರೆ. ಇದು ಡಿಸ್ಟ್ರಿಕ್ಟ ಬೋರ್ಡು ಸಂಬಂಧವಾದ್ದರಿಂದ ಈ ಸಂಗತಿಯಲ್ಲಿ ಸದರಿ ಪ್ರೆಸಿಡೆಂಟರವರು ಕಮಿಟಿಯವರು ನಿಗವಿಡುವರೋ ?

ಪ್ರಯಾಣಿಕ

ಮುಕರಂಗನು

ಬಂದಾಪಮೋಬಂದು, ಇನ್ನೊಂದು, ಮತ್ತೊಂದು ಮೊದಲು ಜನರೂ ಒಟ್ಟು ಸೇರಿದಾ", ಮಳೆ ಇಲ್ಲ, ಮಳೆ ಇಲ್ಲವೆನ್ನವುದೂ ಈ ವರ್ಷ ಬೀಜ ಹಾಕುವುದು ಹೇಗೆ ಎಂಬ ಸಮಯ ಅನ್ನತಿನ್ನುವುದು ಹೇಗೆ ? ಎಂಬೀ ಮ ಬಹು ಶ್ರದ್ಧೆಯಿಂದ ಹೇಳುತ್ತಿದ್ದುದೇ ಬಂದನೆಶರಂಗ

ಇದಾಯಿತು, ಇದಮೇಲೆ ಮಳೆ ಪ್ರಾರಂಭವಾಯಿತು ಹೊಡೆಯಿತು ಹೊಡೆಯಿತು ವಿಪರೀತವಾಗಿ ಅಸಾಧಾರಣವಾಗಿ, ತಿವಾರಿ ಹೊಡೆಯಿತು. ಮನೆ ಮಾರು ಕೈರು ಬಚ್ಚೀಬಾವಿ ತೋಟ ತೊರೆ ಕರೆಗಳೆಲ್ಲವೂ ನೆಲಸಮವಾಯಿತು ದೇನು ಉಕ್ಕಿ ಬರುವುದೇನು ? ಮುರಿದು ಬೀಳುವುದೇನು ? ಅಂತೂ, ಮಳೆ ಸಾಕೋ ಸಾಕ, ಪಸಾಕೋ ಸಾಕು' ಎನಿಸಿತು. ನಾಲ್ಕು ಜನರು ಸೇರಲೂ, ಹೆಂಗಸರಲ್ಲಿಯೂ, ಮಕ್ಕಳಲ್ಲಿಯೂ, ಎಲ್ಲಾ ಕಡೆಗಳಲ್ಲಿಯೂ ಅತಿವೃಷ್ಟಿಯ ಹಾನಿ ಕುರಿತು ರಸವಾ ಹೇಳುತ್ತಿದ್ದುದು ಎರಡನೇ ತರಂಗ. ಈ ಪಪನೆರೆ ಹಾವಳಿ ಕುರಿತು ಉಪನ್ಯಾಸಬರೆಯಲಿಕ್ಕೆ ಕ್ಷೆಯಲ್ಲಿ ಪ್ರಶ್ನೆ ಬಂದರೆ ಉತ್ತರ ಕೊಡಲು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿರುವುದು (ಮಾಡದೆ ಇದ್ದರೂ ಮಾಡಬೇಕು) ಮೂರನೆಯ ತರಂಗವೆ ಎರಡನೇಂಗ

ಮಳೆ ಸ್ವಲ್ಪ ಕಮ್ಮಿಯಾಯಿತು ಅಷ್ಟರಲ್ಲಿ ಇನ್ನೊಂದು ತರಂಗ ! ಇದೆಲ್ಲಿ ಕೌನ್ಸಿಲು ಬಂದಿದೆಯಂತೆ ! ಕೊಡಗಿಗೆ ಸಿಕ್ಕಬಾರದು ಹೇಳಿ ಕವಿವನರು ಈಗ್ಗೆ ಎರಡು ವರ್ಷಗಂದೆ ಹೇಳಿದ ಆ ಕೌನ್ಸಿಲು ಬಂದಿದೆಯಂತೆ ! ಅಗರವಾಗಿ ಬಂತಂತೆ !!! ಇಲ್ಲ ಬಂದು ಬಿಟ್ಟದೆಯವೇ ಮುಖ್ಯವಾದ ವಿಷಯಗಳನ್ನು ಕೌನ್ಸಿಲಿನಲ್ಲಿ ಯಾರು ಚುನಾಯಿಸುವರು ? ಯಾವ ರೀತಿ ? ಹೇಗೆ ಇಂತಾದ ಪ್ರಶ್ನೆಗಳೂ ಕವಿಗಿಂ ಬಾಗುವಂತೆ ಮಾಡುತ್ತಿದ್ದಾರೆ. ಏನಾದರೂ ಆಗಲಿ ನೋಡಬೇಕು ಬೇಗ ಕೌನ್ಸಿಲು ಬಂದರೆ ಎಂದು ನನಗೆ ಎಲ್ಲಾ ಪುರುಷಾರ್ಥವೂ ಆಯಿತು. ನೋಡದುದನ್ನೂ ಕೇಳದುದನ್ನೂ ಕೇಳದೆ ನೋಡದೆ ಇನ್ನೇನು, ಇಂದೋ ನಾಳೆಯೋ ಬರುವ ಮುದಿಗೊಡ್ಡು, ಮುದಿ ಮುದುಕನಾದ ನಾನು ಸಾಯುವ ಮೊದಲು ಕೌನ್ಸಿ ಲೊಂದು ನೋಡಿದರೆ ಸಾಕು. ಇನ್ನೇನು ನೋಡಲು ಹೆಚ್ಚು ದಿವಸಗಳಿರಲಾರದಲ್ಲವೆ ? ಆಗಲಿ.

ಹಣ್ಣು ಹಣ್ಣು ಮುದಕ.

ಬುಡಮಟ್ಟ ಸಿಬ್ಬಂದಿಯೋತೆ.

ಅಯ್ಯಾ,

ಅಮ್ಮತ್ತಿಯ ಸಬ್ ಪೋಸ್ಟು ಆಫೀಸನ್ನು ಎಕ್ಸ್ ಟ್ರಾಡಿಪಾರ್ಟ್‌ಮೆಂಟಲ್ ಆಫೀಸಾಗಿ ಮಾಡಿ ಅಲ್ಲಿಯ ಟ್ರೂ ಪೋಸ್ಟು ಮ್ಯಾನನ್ನು ಸಿದ್ದಾಪುರಕ್ಕೂ, ವಿಲೇಜು ಪೋಸ್ಟು ಮ್ಯಾನನ್ನು ಪೊನ್ನಂಪೇಟೆಗೂ ಸುಮಾರು ಹತ್ತು ದಿನಗಳ ಹಿಂದೆ ವರ್ಗಮಾಡಿ ಅವರ ಬದಲಿಗೆ ಬೇರೆ ಯಾರನ್ನು ಇಡದೆ ಬರೇ ಅಫೀಸನ್ನು ತೋಟದ ಮರದಂತೆ ಇಟ್ಟಿರುತ್ತಾರೆ. ಬಂದ ಕಾಗದಗಳು ಅಫೀಸಿನಲ್ಲಿ ಬಿದ್ದಿದೆಯಂತೆ. ಬಟ್ಟ ವಿಲೇಜು ಪೋಸ್ಟುಮ್ಯಾನನ್ನು ನೇಮಿಸುವರಂತೆ, ಯಾವಾಗೆಂಬುದು ತಿಳಿಯದು. ಬಟ್ಟನನ್ನು ನೇಮಕಮಾಡುವದಕ್ಕೆ ಮೊದಲು ಇದ್ದವರನ್ನು ಬೇರೆ ಯಾವ ಕೆಲಸಕ್ಕೆ ವರ್ಗಾಯಿಸಿದ್ದು. ಅಮ್ಮತ್ತಿಯ ಕಾಗದ ಬಟವಾಡೆಯಾಗದೆ ಇರುದು ಪೊನ್ನಂಪೇಟೆ ಸಿದ್ದಾಪುರದ ಕಾಗದ ಹಾಗೆ ಇವೆಂದೇನು ? ಬಹುಷ್ಯ ಇಲ್ಲಿ ಕೇಳುವವರಿಲದೆ ಬೇರೆವರೇ ಇರಬಹುದು. ಅದು ವಿಶಹ ಎಂದೂ ಹೀಗಿತ್ತಿ ರಲಿಲ್ಲ. ಟಪ್ಪಾಲು ಹಾಸಲು ಜಾಸ್ತಿ ಆದಮೇಲ್ವಾದರೂ ಬಡ ಹಳ್ಳಿ ರೈತರ ಕಾಗದಗಳು ಸರಿಯಾಗಿ ಬಟವಾಡೆಯಾದಾತ್ತೆಂಬ ಯೋಚನೆಗೆ ಭಂಗವಾಯಿತು. ಇದನ್ನು ಪಡನೆ ಇಲಾಖೆಮೇಲು ಅಧಿಕಾರಿಗಳು ಸರಿ ಸುವರಾಗಿ ಕೋರುತ್ತೇನೆ

ಅವರೆ ನಾಗರೀಕತೆಯಲ್ಲಿ ಅಗ್ರಗಣ್ಯರಾಗಿ ಪ್ರಪಂಚದ ಧೊರೆತನಗಳಲೆಲ್ಲ ಬ್ರಿಟೀಷ್ ಧೊರೆತನವೇ ಉತ್ತಮೋತ್ತಮವೆಂದು ಹೊಗಳಸಿಕೊಂಡಿರುವ ಈ ಧೊರೆತನಕ್ಕೆ ನಮ್ಮ ಈ ಚಿಕ್ಕರಾಜ್ಯವು ದೈವಕೃಪೆಯಿಂದ ದೇಶನಿವಾಸಿಗಳ ಇರಾದೆಯಂತೆ ಒಳಪಟ್ಟು ಇಂದಿಗೆ ಸುಮಾರು ೯೦ ವರ್ಷಗಳಾಗಿ ಎಲ್ಲಾ ರಾಜಕೀಯ ಸಂಗತಿಗಳನ್ನು ಸರಿಪಡಿಸಲು ರೈತರಿಂದ ಆಗಲೀ ಅನ್ಯರಾಜರಿಂದ ಆಗಲೀ ಪೂರ್ವದಂತೆ ಯಾವ ತೊಂದರೆಯೂ ಇಲ್ಲದೇ ಅನುಕೂಲವಾದ ಸಮಯ ದೊರತೂ ಕೂಡ ೩೦—೪೦ ವರ್ಷಗಳ ಹಿಂದೆ ಅಮ್ಮತ್ತಿಯಲ್ಲಿ ಸಬ್ ಪೋಸ್ಟು ಆಫೀಸೂ ಮತ್ತು ಟೇಲಿಗ್ರಾಫ್ ಆಫೀಸೂ ಆಗಿ ಇದ್ದದ್ದು ಈ ಹೀನಸ್ಥಿತಿಗೆ ಇಷ್ಟೊಂದು ಸಮಯದಲ್ಲಿಯೇ ಇಳಿಯಲು ದೇಶದ ಬಡತನವೇ ಕಾರಣವೆಂದರೆ ಯಾರೂ ಒಪ್ಪಿಕೊಳ್ಳಲಾರರು. ಜನರು ದುಡ್ಡುಕೊಟ್ಟು ಕಾಗದ ವ್ಯವಹಾರಗಳನ್ನು ತಮ್ಮ ಇಚ್ಛೆಯಂತೆ ನಡಸಲಾರದಷ್ಟು ಗರೀಬರಾಗಿರುತ್ತಾರೆ. ದೇಶದಲ್ಲಿ ಮೊದಲು ಬೆಳೆಯುತ್ತಿದ್ದ ಕಾಫಿ ಕಿತ್ತಳೆ, ಬಾಳೆ ವಗೈರೆ ಈಗ ಬೆಳೆಯದೆ ಇರುವದಕ್ಕೆ ಸರಿಯಾಗಿ ಪರದೇಶದಿಂದ ಪಳಪಳನೆ ಹೊಳೆಯುತ್ತಿರುವ ಬಟ್ಟೆ, ಕಪ್ಪು ಸಾಮಾನು ವಗೈರೆ ಯಥೇಚ್ಛವಾಗಿ ಬಂದು ಇಲ್ಲಿಯ ಕೈಗಾರಿಕೆಯನ್ನು ಸೂರೆಗೊಳ್ಳತ್ತಿರಿಸಿ ,, ಸಟ್ಟುಗ '' ಮಾತಲು ಸಹ ನಮ್ಮನ್ನು ಅಯೋಗ್ಯರನ್ನಾಗಿ ಮಾಡಿ ನಾಟಕದಲ್ಲಿ ಅಂದಾಳವನ್ನು ಪಡ್ಡಿಕೊಂಡು ಇರುವ ಸ್ತ್ರೀಯನ್ನು ಮೋಹಿಸಿ ತನ್ನ ನಿಜಪತ್ನಿಯನ್ನು ತೊರೆದವರಂತೆ ಪರದೇಶೀ ಸಾಮಾನುಗಳಿಗೆ ಮೋಹಿಸಿ ಆಡಂಬರಗಳಿಗೊಳಗಾಗಿ ನಿರ್ಗತಿಕರಾಗಿ ಅಯ್ಯೋ ದೈವವೇ ಎಂದು ಬಾಯಿಬಿಡುತ್ತಿರುವ ನಮಗೆ ಹೆಚ್ಚೇನೂ ಬೇಡ ಕಾಲಾವಸ್ಥೆಯಿಂದ ನಶಿಸಿಹೋದ ಬೆಳೆಗಳ ಬದಲಿಗೆ ಈಗಿನ ಕಾಲಕನುಗುಣವಾದ ಬೆಳೆಯನ್ನು ಬೆಳಸುವದಕ್ಕೆ ತಕ್ಕ ಪ್ರೋತ್ಸಾಹವೂ, ಪರದೇಶದಿಂದ ಬರುವ ಸಾಮಾನುಗಳಲ್ಲಿ ಸದ್ಯಕ್ಕೆ ಒಟ್ಟಿಯನ್ನಾದರೂ ಸ್ವಲ್ಪ ಕಾಲದವರೆಗಾದರೂ ನಿಲ್ಲಿಸಿ ಇಲ್ಲಿಯೇ ಬಟ್ಟೆ ತಯಾರು ಮಾಡಲು ಸಹಾಯವೂ ಕೊಡದೇ ಹೋದರೆ ಸ್ವಲ್ಪ ಕಾಲದಲ್ಲಿಯೇ ಅಮ್ಮತ್ತಿ ಆಫೀಸಿನ ಸ್ಥಿತಿ ಬೇರೆ ಎಲ್ಲಾ ಆಫೀಸುಗಳೂ ಆಗುವದರಲ್ಲಿ ಯಾವ ಸಂಶಯವೂ ಇಲ್ಲ

ಅಹಾ ೩೦—೪೦ ವರ್ಷಗಳ ಹಿಂದೆ ದೇಶವೆಲ್ಲ ಸ್ವರ್ಣ ಚಿತ್ರವೆಂದು ಹೊಗಳಸಿಕೊಂಡಿದ್ದ ಶ್ರೀ ಕಾವೇರಮ್ಮನ ಜನ್ಮಭೂಮಿಯಾದ ಪವಿತ್ರ ಕೊಡಗೇ ನಿನಗೆ ಈ ಸ್ಥಿತಿ ಬಂದಾತ್ತೆಂದು ಅಂದು ಯಾರಾದರು ಭವಿಷ್ಯ ಹೇಳ ಇದ್ದಿದ್ದರೆ ಅವನನ್ನು ಹುಚ್ಚನೆಂದು ಹೇಳುತ್ತಿರಲಿಲ್ಲವೇ. ನಿನಗೆ ಸುದಿನವು ಎಂದು ಬಂದಾತ್ತೆಂದು ಹಾರೈಸುವ.

ಐ. ಪಿ ಮಾದಪ್ಪ.

ಓಂ

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಅಂಡ್ ಫೈರ್ ಅಶ್ಯೂರೆನ್ಸ್ ಕಂಪನಿ

ಲಿಮಿಟೆಡ

ಸುಭಾಷಿತ

[illegible] (Consulting Ac) [illegible] A. (Bom) A I A (Lond) [illegible] Humbug) [illegible] M B Ch B (Edin) D I H [illegible] L M & S M D (Ld) [illegible]

[illegible] ಪಾಲಿಸಿಗಳು [illegible]

ಕಂಪೆನಿಯ [illegible] ಲೈಫ್ ಅಂಡ್ ಫೈರ್ ಅಶ್ಯೂರೆನ್ಸ್ ಹೆಡ್ ಆಫೀಸ್, 25—8—23 [illegible] ರಿಪ್ರಸೆಂಟೇಟಿವ್ (ಚೀಫ್ ಏಜೆಂಟ್) ಮ್ಯಾನೇಜಿಂಗ್ ಡೈರೆಕ್ಟರ್

South Division Forest Office Coorg
Mercara the 3rd [August] 1923

NOTICE.

It is hereby notified [for] general information that the following quantities of sawn timber now lying [at the] Elephant Pit Depot Mercara will hereafter be sold to the public at the rates noted below —

Species: Teak, Honne, Nandi, Biti

Scantlings: 1720 c ft, 1209 c ft, 64 c ft, 21 c ft

Planks: 66 c ft, 33 2

Battens: 710 R ft, 222 R ft

at Rs 4 2 0 per c ft, [illegible] per 1000 R ft, [illegible]

Teak (rafters and planks), Honne (rafters and planks), Honne battens, Naral (rafters and planks), Biti (scantlings)

For further particulars apply to
The Division Forest Officer,
South C[oorg] MERCARA

ಆರೋಗ್ಯ ಜಾಹೀರು

ಇದು ಪ್ರಜಾಕ್ಷೇಮಕ್ಕಾಗಿ ಆರೋಗ್ಯವಾ [illegible] ಬೋಧಿಸುವ ಒಂದು ಪತ್ರಿಕೆ. ಈ ಮಾಸಪತ್ರಿಕೆಯು ಸಂಪಾದಕರ [illegible] ಪ್ರಸಿದ್ಧರಾದ ಡಾಕ್ಟರ್ [illegible] ಆಯುರ್ವೇದ ಪಂಡಿತರ [illegible] ಪ್ರಕಟವಾಗುವುವು

[illegible] ವರ್ಷಕ್ಕೆ 1—8—0 [illegible]

ವಿಳಾಸ —

ಏಜೆಂಟರು — ಮ. ರಾ. ರಾ. ಎಸ್. [illegible] ಭಾಗಮಂಡಲ, ಕೊಡಗು

ಮ್ಯಾನೇಜರ್, ಆರೋಗ್ಯ [illegible] 323 [illegible]

[1—1]

ಒಳಲು ಬಿಸಿನೆಸ್ [illegible]

ನಮ್ಮ [illegible] ಸಿದ್ಧ ಪಡಿಸುವ [illegible] ಮೇವು ಯಂತ್ರ ಇತ್ಯಾದಿ ಒಕ್ಕಲಿಗರಿಗೆ ಬೇಕಾಗುವ [illegible] ಸಾಮಾನುಗಳು [illegible]

ನಮ್ಮ ವಿಳಾಸ — ಕಿರ್ಲೋಸ್ಕರ್ ಬ್ರದರ್ಸ್ ಲಿಮಿಟೆಡ್, ಪೋ ಕಿರ್ಲೋಸ್ಕರವಾಡಿ, ಜಿಲ್ಲಾ — ಸಾತಾರಾ

13—11

For your requirements of high grade Arms, Ammunition, Wine and Spirits,

APPLY TO —

Mc. DOWELL & Co., Ltd.,
MERCARA

24—18

New Agency! New Agency!!

PONEP MEDAH & Coy.

General Merchants

FOREIGN export import and Consulting Agents

For further particulars apply to our representative at Mysore

P. P. MADAYYA,

Representative Bharat Insurance Company Ltd.,
Sayaji Rao Road MYSORE

ಹೊಸ ಏಜನ್ಸಿ! ಹೊಸ ಏಜನ್ಸಿ!

[illegible] ಕಂಪೆನಿ,

[illegible]

ನಮ್ಮ ಏಜೆಂಟರು

ಪಿ. ಪಿ. ಮಾದಯ್ಯ, ಭಾರತ್ ಇನ್ಸೂರೆನ್ಸ್ ಕಂಪೆನಿ ಏಜೆಂಟರು, ಸಯ್ಯಾಜಿರಾವ್ ರೋಡ್ ಮೈಸೂರು

[4—1]

Printed & Published by D. S. Krishnaswamiengar Proprietor at Sree [illegible] Electric Press Mysore for [illegible] —31 8 1923

If not delivered please return to
"Kodagu Office, Mercara"
Reg. No. M. 1550.

ಕೊಡಗು.

ಸತ್ಯೇನ ಧೂತಮಯಾ ವಿದ್ಯಾಸಿಂತಿ ಪುಸ್ತಕ ॥ ಐಕಮತ್ಯೇನ ದೋಷಾಣಾಂ ಸುಸ್ಥಿರಾ ರಾಜ್ಯಸಂಪದ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

"ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ"

ವಾರ್ಷಿಕ ಚಂದಾ ೩—೮—೦ ರೂ

ಸಂಪುಟ 4] ಕೊಡಗು, ಸನ್ ೧೯೨೩ನೇ ಸೆಪ್ಟಂಬರ್ ತಾರೀಖು ೭ ನೆಯ ಶುಕ್ರವಾರ. [ಸಂಚಿಕೆ ೧೫

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನಡಾ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರದಂತೆ ಜಾಗ್ರತೆಯಾಗಿಯೂ ಸುಲಭಕ್ರಯಕ್ಕೂ ಮಾಡಿ ಕೊಡುತ್ತೇವೆ

Srinivas Electric Press,
MYSORE.

The Coorg Central Co-operative Bank, Ltd.,

(Registered under the Co-operative Societies Act)

Share Capital	50,000
Paid up Share Capital	6,820
Fixed Deposits paid	39,849

Amounts are lent mainly to Co operative Societies in Coorg The accounts are checked annually by The Registrar of Co-operative Societies Coorg Deposits for one year and more carry interest at 6¼% per annum and for smaller periods at 5% per annum.

Apply to the Secretary or Treasurer for further details

President	*Treasurer*	*Secretary*
Kodendera Coottiah Rao Bahadur	Bhujanga Rao, B A, B L,	C N Venkappaya B A, B L

Dated 1—9—1923

ಜೀವವಿಮೆ

ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಯುಳ್ಳ ಯಜಮಾನನು ಮೃತಪಟ್ಟರೆ ಉಂಟಾಗಬಹುದಾದ ತೊಂದರೆಗಳನ್ನು ನಿವಾರಿಸುವುದೇ ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ

ಅತಿ ಕಡಿಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಸ್ವದೇಶೀಯ ಸರಕಾರದ ಭದ್ರತೆಯುಳ್ಳ, ಜೀವವಿಮೆ ಕಂಪೆನಿ

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲವಾಗಿ ಹಣವನ್ನು ಒದಗಿಸಿ ಸ್ಥಿರಾಸ್ತಿಗಳನ್ನೂ ಕೊಂಡುಕೊಟ್ಟು ದೇಶದ ಆರ್ಥಿಕ ಸಂಪತ್ತನ್ನು (Economic condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

ಸ್ತ್ರೀಪುರುಷರೀರ್ವರೂ ಜೀವವಿಮೆಯ ಸೌಕರ್ಯಗಳನ್ನು ಪಡೆಯಲು ಅನುಕೂಲವನ್ನು ಒದಗಿಸುವ ಸಂಸ್ಥೆಯಾದರೂ ಇದೊಂದೆ

ಒಂದು ದೇಶದ ಹಣವು ಮತ್ತೊಂದು ದೇಶದಲ್ಲಿ ಯವಾಗದಂತೆ ನೋಡಿಕೊಂಡು ವಿದೇಶದ ಧನವನ್ನು ವೃದ್ಧಿಗೊಳಿಸುವ ಸಹಕಾರಸಂಘ, ಬೇಂಕ ಮುನಿಸಿಪಾಲಿಟಿ ಮುಂತಾದ ಸಾರ್ವಜನಿಕ ಸಂಸ್ಥೆಗಳಿಗೆ ಸಾಲ ಕೊಡುವ ಅನುಕೂಲತೆಯುಳ್ಳ ಕಂಪೆನಿ ಇದೊಂದೆ.

ಹೆಚ್ಚಿನ ಮಾಹಿತಿಯನ್ನು ಕನ್ನಡ ನಾಡುಗಳ ಛೀಫ ಏಜೆಂಟರಾದ ಈ ಕೆಳಗಿನ ವಿಳಾಸದಿಂದ ಪಡೆಯಬಹುದಾಗಿದೆ

ಬಿ. ಎಸ್. ಆರಾಧ್ಯ,
ಲೈಫ್ ಅಂಡ್ ಮ್ಯಾರೇಜ್ ಆಫೀಸ್, ಮಡಿಕೇರಿ

Get Spencers Price List!

Brandy at its Best

	per bot	per pint
Exsha's No 1	Rs 7 4 0	3 12 0
Exsha's No 2	" 6 7 0	3 6 0

Some of many cheap line in Stores:—

Bovril oz bottle	0 10 0
" 1oz "	1 2 0
" oz "	2 0 0
Brand's essence of chicken	2 4 0
½lb pktPetit Beurre Biscuits	0 14 0
¼lb pktMeltis chocolate	0 9 0
¼ lb tinCadbury's cocoa	0 8 0
1 lb tinMoir's fresh herrings	0 7 0
Sunligt soap pkt	1 4 0
Sweetsier lb	0 11 0

Fresh Stores at revised prices

52—47 **SPENCER & Co., Ltd,**
MERCARA & POLLIBETTA

When you think of going to Bombay
THINK OF

THE WELCOME HOTEL.

Girgaum Back Road, BOMBAY.

Most airy accomodation—Most Central situation—Excellent Meals
Every Convenience

ವೆಲ್ಕಂ ಹೊಟೇಲ್,

ಗಿರ್‌ಗಾಂವ್ ಬ್ಯಾಕ್‌ರೋಡ್, ಬೊಂಬಾಯಿ

ರೈಲಿನಿಂದಿಳಿದ ಕೂಡಲೇ ಅಲ್ಲಿ ಇಳಿಯಿರಿ ಸುಖವೆ ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಯೋಗ್ಯವಾದ ಕೋಣೆಗಳು ಬೇಕೆಂದಿದ್ದರೆ ಬೊಂಬಾಯಿ ಪಟ್ಟಣದ ಮಧ್ಯಸ್ಥಳದಲ್ಲಿರುವ ವೆಲ್ಕಂ ಹೊಟೇಲಿನಲ್ಲಿಳಿಯಲು ಮರೆಯಬೇಡಿರಿ ಯೋಗ್ಯವಾದ ಊಟ ಗಾಳಿಗನುಕೂಲವಾದ ಕೊಠಡಿ 15 ಮಿನಿಟಿಗೊಮ್ಮೆ ತಿರುಗುವ ಟ್ರಾಮಿನ ಸೌಕರ್ಯ, ಆಗಂತುಕ ಪ್ರಯಾಣಿಕರಿಗೆ ಉಳಿದುಕೊಳ್ಳಲು ಅನುಕೂಲವಾದ ಉಡುಪಿ ಬ್ರಾಹ್ಮಣರ ಭೋಜನಾಲಯ

ಹೆಚ್ ಶ್ರೀನಿವಾಸರಾವ್,
ಮೇನೇಜರ್

[12—3]

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ

	ರೂ
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,820
ಜಮಾ ಬಂದ ಠೇವಣಾತಿ	39,849

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ವರುಷ ಮೇಲ್ಪಟ್ಟ ಅಥವಾ ಹೆಚ್ಚಿನ ಕಾಲದ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6¼ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ಕಾಲದ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ತನಿಖೆ ಮಾಡುತ್ತಾರೆ.

ಪ್ರೆಸಿಡೆಂಟರು	ಟ್ರೆಜರರ
ಕೊಡಂದೆರ ಕುಟ್ಟಯ್ಯನವರು ರಾಯ್ ಬಹದ್ದೂರ್	ಎಂ ಭುಜಂಗರಾಯರು ಬಿ ಎ, ಬಿ ಎಲ್.,

ಸೆಕ್ರೆಟರಿ
ಸಿ ಎನ್ ವೆಂಕಪ್ಪಯ್ಯನವರು, ಬಿ ಎ, ಬಿ ಎಲ್
ತಾರೀಖು 1—9—1923

ಸುಂದರ ವಿಲಾಸ ಪ್ರೆಸ್, ಮಡಿಕೇರಿ

(ಸ್ಥಾಪಿತ ಇಸವಿ 1912)

ಕೊಡಗು ಮಹಾ ಜನರನ್ನು ಹನ್ನೊಂದು ವರ್ಷಗಳಿಂದ ಒಂದೇ ಸಮನೆ ಸೇವಿಸಿ ಕೊಡಗಿನ ಪ್ರಧಾನ ಪಟ್ಟಣವಾದ ಮಡಿಕೇರಿಯಲ್ಲಿ ಸದ್ಯ ಸ್ಥಾಪಿತವಾಗಿರುವ ನಮ್ಮ ಮುದ್ರಾಲಯವು ಮತ್ತೊಮ್ಮೆ ತಮ್ಮನ್ನು ಸೇವಿಸಲು ಸಿದ್ಧವಾಗಿದೆ, ಅಂದವಾದ ಅಕ್ಷರಗಳಿಂದ, ಮನೋಹರವಾದ ಮುದ್ರಣದಿಂದ ಸೊಗಸಾದ ಕಾಗದಗಳಲ್ಲಿ ಮುದ್ರಿಸುವ ನೂತನ ಅನುಕೂಲತೆಗಳನ್ನು ಸಿದ್ಧಪಡಿಸಿದೆ

ಪರಸ್ಥಳದವರಿಗೆ ಎಲ್ಲಾ ಅನುಕೂಲತೆಗಳನ್ನು ಒದಗಿಸಲು ಏರ್ಪಡಿಸಿದ ದೇಶೀಯ ಮುದ್ರಾಲಯಕ್ಕೆ ಸ್ವದೇಶಬಂಧು ಭಗಿನಿಯರು ಪ್ರೋತ್ಸಾಹ ಕೊಡಬೇಕಾಗಿದೆ

ಒಗೆ ಒಗೆಯ ನೋಟಿಸು ಕಾರ್ಡುಗಳು ಶಾಲಾ ಮಕ್ಕಳ ಸಾಹಿತ್ಯಗಳೆಲ್ಲವೂ ಕೇವಲ ಕಡಿಮೆ ಕ್ರಯಕ್ಕೆ ದೊರೆಯುತ್ತವೆ ನಮ್ಮ ದರಗಳು ಅಲ್ಪ! ನಮ್ಮ ಕೋರಿಕೆ ಸೇವೆ! ವಿಶೇಷ ಲಾಭವಲ್ಲ

ವಿಶೇಷ ಮಾಹಿತಿಗೆ ಮುದ್ರಾಲಯದ ಅಧಿಕಾರಿಗಳಿಗೆ ಬರೆದು ತಿಳಿದುಕೊಳ್ಳುವುದು

ಸುಂದರ ವಿಲಾಸ ಪ್ರೆಸ್, ಮಡಿಕೇರಿ ತಾ॥ 24—7—23,	ಆರ್. ಸುಂದರಸಿಂಗ್, ಪ್ರೊಪ್ರೈಟರ್ 12—6

“ಕೊಡಗು”

೧೯೨೩ ನೇ ಇಸವಿ ಸೆಪ್ಟಂಬರ್ ತಾ|| ೭ ನೇ ಶುಕ್ರವಾರ.

ಮನೆ ತೆರಿಗೆ.

ಭೂಮಾಲೀಕರು, ಯಾ, ಕೃಷಿಗಾರರು ತಮ್ಮ ಆಸ್ತಿಯಮೇಲೆ ಕಂದಾಯವನ್ನೂ ಕೃಷಿಗಾರರಲ್ಲದವರು ತಮ್ಮ ಉತ್ಪತ್ತಿಯಮೇಲೆ ತೆರಿಗೆಯನ್ನೂ ಸರಕಾರದವರಿಗೆ ವರ್ಷಂಪ್ರತಿ ಕೊಡುತ್ತಾ ಬರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಆದರೆ ಕೃಷಿಗಾರರಲ್ಲದವರಲ್ಲಿ ವರ್ಷಕ್ಕೆ 2 ಸಾವಿರ ರೂ ಗಿಂತ ಕಡಿಮೆ ಉತ್ಪತ್ತಿ ಇರುವವರು ತಮ್ಮ ಆದಾಯದಮೇಲೆ ತೆರಿಗೆ ಕೊಡಬೇಕೆಂದಿಲ್ಲ. ಇಂಥವರಿಗೆ ಬಿಡುಗಡೆಯವರೆನ್ನುವರು. ಕೆಲವು ವರ್ಷಗಳ ಹಿಂದೆ ಬಿಡುಗಡೆಯಾದವರು ಸರ್ಕಾರದವರಿಗೆ ಏನೊಂದೂ ತೆರಿಗೆ ಕೊಡದೆ ಇರುವುದರಿಂದ ‘ಮೊಹತರ್ಫ’ ವೆಂಬ ಕಂದಾಯವನ್ನು ಅವರಿಂದ ವಸೂಲಿ ಮಾಡುವಂತೆ ಸರ್ಕಾರದವರು ತೀರ್ಮಾನಿಸಿದರು. ಪ್ರತಿಯೊಬ್ಬ ದಿನಕೂಲಿಯವನೂ ಸಹ “ಮೊಹತರ್ಫ” ಕೊಡುತ್ತಿದ್ದನು. ಆದರೆ 1912 ರಲ್ಲಿ ‘ಮೊಹತರ್ಫ’ ವನ್ನು ತೆಗೆದುಹಾಕಿ ಅದರ ಬದಲಿಗೆ ಮನೆ ತೆರಿಗೆಯನ್ನು ಜಾರಿಗೆ ತಂದರು. ಈ ಉತ್ಪತ್ತಿಯು ಡಿಸ್ಟ್ರಿಕ್ಟ್ ಬೋರ್ಡಿಗೆ ಹೋಗುತ್ತದೆ. ಈ ತೆರಿಗೆಯು ವರ್ಷಕ್ಕೆ ನೂರು ರೂಪಾಯಿಯ ಮೇಲೆ ಉತ್ಪತ್ತಿ ಇರುವವರಿಗೆ ಮಾತ್ರ [illegible]. ಆ ಸಮಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರು ಹೆಚ್ಚು ಕಮ್ಮಿ ಉತ್ಪತ್ತಿಯು 100 ರೂ. ಯಿಂದ 500 ರವರೆಗೆ ಇರುವವರಿಗೆ ಶೇಕಡ 1 ರಂತೆಯೂ, 500 ರಿಂದ 900 ರವರೆಗೆ ಶೇಕಡ ಸುಮಾರು 1½ ರಂತೆಯೂ, 900 ರಿಂದ 3000 ವರೆಗೆ 15 ರೂ ಯಂತೆಯೂ 3000 ಮೇಲೆ ಎಷ್ಟಾದರೂ 20 ರೂ. ಯಂತೆಯೂ ಮನೆ ತೆರಿಗೆಯ ದರವನ್ನು ನಿಶ್ಚೈಸಿದರು. ಈ ತೆರಿಗೆಯನ್ನು 30 ರೂ ಗಿಂತ ಹೆಚ್ಚಿಸಕೂಡದೆಂದು ಆಗ ಇಂಪೀರಿಯಲ್ ಸರ್ಕಾರದವರ ಹುಕುಂ ಇತ್ತಂತೆ. ಇದು ನ್ಯಾಯವಲ್ಲವೆಂದು ಥಕ್ಕನೆ ಯಾರಿಗೆತಾನೇ ತಿಳಿಯದೆ ಇರುವುದು? ಈ ತತ್ವವನ್ನು ಅನುಸರಿಸಿ ನಡಿಯುವುದರಿಂದ ಬಡವರಮೇಲೆ ಹೆಚ್ಚಿನ ಹೊರೆಯೂ ಅನುಕೂಲಸ್ಥರಮೇಲೆ ಸಮಗಟ್ಟಾಗಿ ಕಮ್ಮಿ ಹೊರೆಯೂ ಹಾಕಿದಂತಾಗುವುದಿಲ್ಲವೇ? ಮನೆ ತೆರಿಗೆಯನ್ನು 30 ರೂ ವರೆಗೆ ಏರಿಸಬಹುದಾಗಿದ್ದರೂ ಕೂಡ ನಮ್ಮ ಡಿ ಬೋರ್ಡಿನವರು 900 ರಿಂದ 3000 ವರೆಗೆ 15 ರೂ. 3000 ಮೇಲೆ 20 ರೂ ಎಂದೂ ತೀರ್ಮಾನಿಸಿದ್ದು ಎಷ್ಟರಮಟ್ಟಿಗೆ ಪಕ್ಷಪಾತವೆಂಬುದು ವಿಷದವಾಗುತ್ತದೆ. ದರದಲ್ಲಿ ಈ ತರಹದ ಭೇದವಮಾತ್ರವಲ್ಲ, ಇದಕ್ಕಿಂತ ದೊಡ್ಡ ಮತ್ತೊಂದು ಅನ್ಯಾಯಕ್ಕೆ ಬೋರ್ಡಿನವರು ಇಷ್ಟರವರೆಗೆ ಕಣ್ಣು ಮುಚ್ಚಿಕೊಂಡು ಇದ್ದದ್ದು ಬಹಳ ವ್ಯಸನಕರ. ಅದೇನೆಂದರೆ—ಕಾಫಿತೋಟಗಳ ಮೇನೇಜರುಗಳು ಮತ್ತು ಸುಪರಿಂಟೆಂಡೆಂಟರುಗಳಿಂದ ಮನೆತೆರಿಗೆ ಇಷ್ಟರವರೆಗೆ ವಸೂಲಿ ಮಾಡುತ್ತಲೇ ಇರಲಿಲ್ಲ. ಅವರು ಆದಾಯದಮೇಲೆ ತೆರಿಗೆ (ಇನ್‌ಕಮ್‌ಟೇಕ್ಸ್) ಕೊಡುವುದರಿಂದ ಅವರಿಂದ ಮನೆ ಕಂದಾಯ ವಸೂಲಿ ಮಾಡಕೂಡದೆಂದು ಕೆಲವರ ವಾದ. ಇದು ಎಷ್ಟರಮಟ್ಟಿಗೆ ನ್ಯಾಯವೆಂದು ನೋಡುವ. 1912 ರಲ್ಲಿ ಡಿ ಬೋರ್ಡಿನವರು “ಮೊಹತರ್ಫ” ದ ಬದಲಿಗೆ ಮನೆ ತೆರಿಗೆ ಹಾಕುವಾಗ್ಗೆ ಅದು ಒರೇ ಬಿಡುಗಡೆಯವರಿಗೆ ಮಾತ್ರ ಅನ್ವಯಿಸಲಿಲ್ಲ. ಹ್ಯಾಗೆಂದರೆ ಎರಡು ಸಾವಿರ ರೂಪಾಯಿಯಮೇಲೆ ಉತ್ಪತ್ತಿ ಇರುವವರೆಲ್ಲರೂ ಇನ್‌ಕಮ್ ಟೇಕ್ಸ್ ಕೊಡುತ್ತಿರುವರು. ಡಿ ಬೋರ್ಡಿನವರು ಅಂಥವರಿಂದಲೂ ಮನೆ ಕಂದಾಯ ವಸೂಲಿ ಮಾಡುತ್ತಿರುವಾಗ್ಗೆ ಕಾಫಿತೋಟದ ಮೇನೇಜರುಗಳಿಗೂ ಮತ್ತು ಸುಪರಿಂಟೆಂಡೆಂಟರುಗಳಿಗೂ ಈ ಮನೆ ತೆರಿಗೆಯು ಯಾಕೆ ಅನ್ವಯಿಸಲಿಲ್ಲವೆಂಬುದು ಗೊತ್ತಾಗುವದಿಲ್ಲ. ಭೂಮಾಲೀಕರು ಸರ್ಕಾರದವರಿಗೆ ಕಂದಾಯವನ್ನೂ ಡಿಸ್ಟ್ರಿಕ್ಟ್ ಬೋರ್ಡಿಗೆ ಸೆಸ್ಸನ್ನೂ ಕೊಡುತ್ತಿದ್ದಾರೆ. ಹಾಗೆಯೇ ಕೃಷಿಗಾರರಲ್ಲದವರು ಸರ್ಕಾರದವರಿಗೆ ಇನ್‌ಕಮ್ ಟೇಕ್ಸನ್ನೂ ಡಿ ಬೋರ್ಡಿಗೆ ಮನೆ ತೆರಿಗೆಯನ್ನೂ ಕೊಡಬೇಕಲ್ಲವೇ? ಹೀಗಿರುವಲ್ಲಿ ಕಾಫಿತೋಟದ ಮೇನೇಜರುಗಳೇ ಮೊದಲಾದವರು ಡಿ ಬೋರ್ಡಿಗೆ ಮನೆ ತೆರಿಗೆ ಕೊಡಬೇಕೆಂಬುದರಲ್ಲಿ ಆಶ್ಚರ್ಯವೇನಿದೆ? ಅನ್ಯಾಯವೇನಿದೆ? ಅವರ ಸಿಟ್ಟಿಗೆ ಕಾರಣವೇನಿದೆ? ಅವರ ಯಾವ ವಿಧದಲ್ಲೂ ಡಿ ಬೋರ್ಡಿಗೆ ತೆರಿಗೆ ಕೊಡುವುದಿಲ್ಲವೆಂದು ಹೇಳುವ ನ್ಯಾಯವಾದ ಕಾರಣಕ್ಕೆ, ಅವರು ಇಂಪೀರಿಯಲ್ ಸರಕಾರಕ್ಕೆ ಇನ್‌ಕಮ್‌ಟೇಕ್ಸ್ ಕೊಡುತ್ತಾರೆ ಇಂಪೀರಿಯಲ್ ಸರ್ಕಾರದವರು ಡಿ ಬೋರ್ಡಿಗೆ ಗ್ರಾಂಟ್ ಕೊಡುತ್ತಾರೆಂಬ ಉತ್ತರವಂತೆ! ಹಾಗೆಯೇ ಕೃಷಿಗಾರರು ಇಂಪೀರಿಯಲ್ ಸರ್ಕಾರಕ್ಕೆ ಕಂದಾಯ ಕೊಡುವುದಿಲ್ಲವೇ? ಮತ್ಯಾಕೆ ಅವರು ಡಿ. ಬೋರ್ಡಿಗೆ ಸೆಸ್ಸು ಕೊಡಬೇಕು? ಅದಕ್ಕೆ ಡಿ ಬೋರ್ಡಿನ ಉಪಯೋಗವೆಲ್ಲವೂ ರೈತರಿಗೆ ಮಾತ್ರವಲ್ಲದೆ ಕಾಫಿ ತೋಟದವರಿಗೆ ಕಡಿಮೆಯೆಂದು ಕೆಲವರು ಹೇಳುತ್ತಾರೆ. ಬೋರ್ಡಿನ ರಾಸ್ತೆಗಳಿಗೂ, ಆಸ್ಪತ್ರೆಗಳಿಗೂ ಕಾಫಿ ತೋಟದವರು ತಮ್ಮ ಮಕ್ಕಳನ್ನು ಶಾಲೆಗಳಿಗೂ ಕಳುಹಿಸುವುದರೊಂದಲೂ ಹೇಳುತ್ತಾರೆ. ಇದು ಸ್ವಲ್ಪಮಟ್ಟಿಗೆ ನಿಜವಾಗಿರಬಹುದು. ಆದರೆ ಅವರನ್ನು ಈ ಸಂಸ್ಥೆಗಳಿಂದ ಪ್ರಯೋಜನ ಹೊಂದಿಕೊಳ್ಳಬೇಡಿ ಎಂದು ಯಾರೂ ಆಟಂಕ ಮಾಡಿರುವುದಿಲ್ಲ. ಅವರಂತೆಯೇ ಬೋರ್ಡಿನಿಂದ ಪ್ರಯೋಜನಹೊಂದದ ರೈತರು ಮೂಲೆಯಲ್ಲಿರುವ ಗ್ರಾಮಗಳಲ್ಲಿಯೂ ಇರುವರು. ಅಂಥವರಿಂದ ಸೆಸ್ಸು ವಸೂಲಿಯಾಗದೆ ಏನೂ ಆಗಿರುವುದಿಲ್ಲ. ಇಷ್ಟುಮಾತ್ರವಲ್ಲ ಕಾಫಿ ತೋಟದವರ ಪ್ರಯೋಜನಕ್ಕಾಗಿ ಬೋರ್ಡಿನವರು ರಸ್ತೆ ದುರಸ್ತಿಗಾಗಿ ಹೆಚ್ಚು ಹಣ ವ್ಯಯಮಾಡುತ್ತಿರುವರು. ಈ ವಿಷಯದಲ್ಲಿ ರೈತರಿಗೆ ಹೆಚ್ಚೇನೂ ಪ್ರಯೋಜನ ಉಂಟಾಗುವುದಿಲ್ಲ. ಆದುದರಿಂದ ಕಾಫಿ ತೋಟದವರಿಗೆ ಡಿ ಬೋರ್ಡಿನಿಂದ ಏನೊಂದೂ ಪ್ರಯೋಜನವಿಲ್ಲವೆಂಬ ವಾದದಲ್ಲಿ ಅರ್ಥವಿಲ್ಲ. ಯಾವ ವಿಧದಲ್ಲಿ ಯೋಚಿಸಿದರೂ ತೋಟದ ಮೇನೇಜರುಗಳೇ ಮೊದಲಾದವರು ಮನೆ ತೆರಿಗೆಯು ಕೊಟ್ಟೇ ತೀರಬೇಕೆಂದು ಕಂಡುಬರುತ್ತದೆ. ಹೀಗೆ ತೆರಿಗೆ ಕೊಡದೆ ಇರುವವರು 46 ಜನರಿರುವರೆಂದು ತಿಳಿಯುತ್ತದೆ. ಇವರು ಶೇಕಡ 3 ರಂತೆ ತೆರಿಗೆ ಕೊಡುವದಾದಪಕ್ಷ ಸುಮಾರು ಆರು ಸಾವಿರ ರೂಪಾಯಿಯ ಮೇಲೆ ಬೋರ್ಡಿಗೆ ಉತ್ಪತ್ತಿಯಾಗುವುದು. ಈ ಸುಮಾರು ಹನ್ನೊಂದು ವರ್ಷಗಳಿಂದ ಇಷ್ಟು ಉತ್ಪತ್ತಿಯನ್ನು ಬೋರ್ಡಿನವರು ಕಳಕೊಂಡದ್ದು ನೋಡಿದರೆ ಇದಕ್ಕೆ ಪಕ್ಷಪಾತವೆಂದಲ್ಲದೆ ಬೇರೆ ಯಾವ ಹೆಸರಿಡಬೇಕೆಂದು ತಿಳಿಯುವುದಿಲ್ಲ. ಈಗ ಮೊನ್ನೆ ತಾನೇ ನಡೆದ ಡಿ ಬೋರ್ಡು ಮೀಟಿಂಗಿನಲ್ಲಿ ಉದ್ಯೋಗಸ್ಥರಲ್ಲದ ಮೆಂಬರುಗಳು ಈ ವಿಷಯ ವಿವರವಾಗಿ ಚರ್ಚಿಸಿ ಕಾಫಿ ತೋಟಗಳ ಮೇನೇಜರುಗಳೂ ಸುಪರಿಂಟೆಂಡೆಂಟರುಗಳೂ ಮನೆ ತೆರಿಗೆ ಕೊಡಬೇಕೆಂದು ಬೋರ್ಡಿನ ಬಹುಮತದಿಂದ ತೀರ್ಮಾನಿಸಿದ್ದು ನ್ಯಾಯವೇ ಸರಿ. ಈ ಠರಾವಿಗೆ ಪ್ರೆಸಿಡೆಂಟರು ವಿರೋಧವಾಗಿದ್ದರೂ ಕೂಡ ಉದ್ಯೋಗಸ್ಥರಲ್ಲದ ಹಾಜರಿದ್ದ ನಾಲ್ಕು ಮೆಂಬರುಗಳು ಪರವಾಗಿ ಓಟು ಕೊಟ್ಟರಂತಲೂ, ಉದ್ಯೋಗಸ್ಥ ಮೆಂಬರು ಒಬ್ಬರು ಮಾತ್ರ ವಿರೋಧವಾಗಿಯೂ ಬಾಕಿ ಇಬ್ಬರು ಯಾವ ಕಡೆಗೂ ಓಟು ಕೊಡದೆ ಸುಮ್ಮನೆ ಇದ್ದರಂತಲೂ ತಿಳಿಯಬರುತ್ತದೆ. ಈ ಓಟಿನ ಫಲಿತಾಂಶದಿಂದಲೇ ಈ ವಿಷಯದಲ್ಲಿ ಎಷ್ಟರಮಟ್ಟಿಗೆ ನ್ಯಾಯವಿದೆ ಎಂಬುದು ವಿಷದವಾಗುತ್ತದೆ. ಆದರೆ ‘ಕೈಗೆ ಬಂದದ್ದು ಬಾಯಿಗೆ ಬರಲಿಲ್ಲ’ ವೆಂಬ ನಾಣ್ಣುಡಿಯಂತೆ ಈ ಸಂಗತಿಯು ಬೋರ್ಡಿನಲ್ಲಿ ಮಂಜೂರಾದಾಕ್ಷಣ ಜಾರಿಗೆ ಬರುವುದೆಂದು ಹೇಳಲಿಕ್ಕಾಗುವುದಿಲ್ಲ. ಬೋರ್ಡಿನ ಈ ತೀರ್ಪನ್ನು ಚೀಫ್ ಕಮಿಷನರರು ಒಪ್ಪಬೇಕಾಗಿದೆ. ಅವರಿಗೆ ತಿರಸ್ಕರಿಸುವ ಹಕ್ಕು ಇದೆ. ಆದರೆ ಅವರು ಈ ಹಕ್ಕನ್ನು ಉಪಯೋಗಿಸುವುದು ಅಪರೂಪ. ಹ್ಯಾಗೂ ನ್ಯಾಯಕರವಾದ ಮತ್ತು ಬೋರ್ಡಿನ ಬಹುಮತದಿಂದ ಮಂಜೂರಾಗಿರುವ ಈ ಠರಾವಿಗೆ ಚೀಫ್ ಕಮಿಷನರವರು ತಮ್ಮ ಒಪ್ಪಿಗೆಯನ್ನು ಕೊಟ್ಟು ತಮ್ಮ ನ್ಯಾಯಶೀಲತೆಯನ್ನು ತೋರಿಸುವರಾಗಿ ನಂಬುತ್ತೇವೆ.

ಕಂದಾಯದ ರೂಪಾಯಿಗೆ ಒಂದಾಣೆಯ ದರದಲ್ಲಿದ್ದ ಸೆಸ್ಸು ಈಗ ಎರಡು ವರ್ಷಗಳಲ್ಲಿ ಎರಡಾಣೆಯಾದದ್ದು ತಿಳಿಯದವರಿಲ್ಲ. ಈ ವಿಷಯದಲ್ಲಿ ದೇಶದವರು ಎಷ್ಟು ವಿರೋಧಿಸಿದರೂ ಕೂಡ ಬೋರ್ಡಿನವರು ಉದ್ಯೋಗಸ್ಥ ಮೆಂಬರುಗಳ ಸಹಾಯದಿಂದ ಸ್ವಲ್ಪವೂ ಹಿಂಜರಿಯದೆ ಸೆಸ್ಸನ್ನು ಒಂದರಡು ಮಾಡಿದರು. ಇದರ ಉತ್ಪತ್ತಿಯ ಹೆಚ್ಚಿನ ಭಾಗವನ್ನು ಬೋರ್ಡು ಸ್ಕೂಲಿನ ಉಪಾಧ್ಯಾಯರುಗಳ ಸಂಬಳಕ್ಕಾಗಿ ಉಪಯೋಗಿಸಬೇಕೆಂದು ಕಳೆದ ಮೀಟಿಂಗಿನಲ್ಲಿ ತೀರ್ಮಾನಿಸಿರುವರು. ಸೆಸ್ಸನ್ನು ಹ್ಯಾಗೆ ಹೆಚ್ಚಿಸಿದರೋ ಹಾಗೆಯೇ ಮನೆ ತೆರಿಗೆಯನ್ನು ಹೆಚ್ಚಿಸಬೇಕಾದದ್ದು ನ್ಯಾಯವಷ್ಟೆ. ಆ ಸಂಗತಿಯೂ ತಾರೀಖು 27—8—23 ರ ಮೀಟಿಂಗಿನಲ್ಲಿ ದೀರ್ಘ ಚರ್ಚೆ ನಡೆದು, ವರ್ಷಕ್ಕೆ 100 ರೂಪಾಯಿಯಿಂದ 300 ರವರೆಗೆ ಉತ್ಪತ್ತಿ ಇರುವವರಿಗೆ ಶೇಕಡ ಒಂದರಂತೆಯೂ 300 ರಿಂದ 500 ವರೆಗೆ ಶೇಕಡ 1½ ರಂತೆಯೂ 500 ರಿಂದ 1000 ವರೆಗೆ ಶೇಕಡ 2 ರಂತೆಯೂ 1000 ರಿಂದ 2000 ವರೆಗೆ ಶೇಕಡ 2½ ರಂತೆಯೂ, 2000 ದ ಮೇಲೆ ಶೇಕಡ 3 ರಂತೆಯೂ ಮನೆ ತೆರಿಗೆಯ ದರವು ಮಂಜೂರಾಯಿತು ಎಂದು ತಿಳಿಯುತ್ತದೆ. ಈ ಠರಾವು ಬೋರ್ಡಿನ ಬಹುಮತದಿಂದ ಪಾಸಾದುದರಿಂದ ಇದನ್ನು ಚೀಫ್ ಕಮಿಷನರವರು ಅಸ್ವೀಕರಿಸಿಯಾರೆಂಬ ಭಯವಿಲ್ಲ. ಪ್ರಜೆಗಳಲ್ಲಿ ಬಿಳೀ ಜನರು ಕಪ್ಪು ಜನರೆಂದೂ ಬಡವರು ಐಶ್ವರ್ಯವಂತರೆಂದೂ ರೈತರು ಕಾಫಿತೋಟದವರೆಂದೂ ಭೇದವಿಲ್ಲದೆ ಎಲ್ಲರಿಗೂ ಸಮನಾಗಿ ನ್ಯಾಯ ಸಿಕ್ಕುವಂತೆ ನೋಡಿಕೊಳ್ಳುವುದು ಸರ್ಕಾರದವರ ಮುಖ್ಯ ಕರ್ತವ್ಯ.

ಕಡೆಗೂ ಹಳ್ಳಿ ವಾಸವೇ!

ಪ್ರಾಚೀನ ಭರತಖಂಡದಲ್ಲಿ ಹಳ್ಳಿವಾಸವು, ವ್ಯವಸಾಯಗಾರರ ಜೀವನವು ಅತ್ಯಂತ ಸುಖಕರವಾಗಿಯೂ ಶ್ರೇಷ್ಠವಾಗಿಯೂ ಇದ್ದಿತು. ಈಗಿನ ಪಾಶ್ಚಾತ್ಯರ ವಿವಿಧ ತಿದ್ದಿದ ವ್ಯವಸಾಯೋಪಕರಣಗಳೂ ತರತರದ ಯಂತ್ರತಂತ್ರಗಳೂ ಆಗಿನ ಕಾಲದಲ್ಲಿ ಹಳ್ಳಿಯ ವ್ಯವಸಾಯಗಾರರಿಗೆ ಅರಿಯದಿದ್ದರೂ, ಅವರು ತಮ್ಮ ಹಳೇ ಉಪಕರಣಗಳಲ್ಲಿಯೂ ಸಾಮಾನುಗಳಲ್ಲಿಯೋ ತಮ್ಮ ಸರ್ವಶಕ್ತಿಯನ್ನೂ ಹಾಕಿ ವ್ಯವಸಾಯಮಾಡಿ ಭೂಮಿಯಲ್ಲಿ ಬೆಳೆಯುವಷ್ಟು ಉತ್ಕೃಷ್ಟ ಬೆಳೆಯನ್ನು ತೆಗೆಯುತ್ತಾ ವ್ಯವಸಾಯೋಭಿವೃದ್ಧಿಗೆ ಕಾರಣರಾಗಿದ್ದರಲ್ಲದೆ, ಇಡೀ ಹಿಂದೂಸ್ಥಾನವೇ ಶಾಂತವಾಗಿ ಎಲ್ಲಾ ವಿಧಗಳಲ್ಲಿಯೂ ತೃಪ್ತಿಹೊಂದಿತ್ತು. ಹಳ್ಳೀವಾಸವು ಎಷ್ಟೊಂದು ಉತ್ತಮಸ್ಥಿತಿಯಲ್ಲಿತ್ತೆನ್ನುವುದಕ್ಕೂ, ಆ ಜೀವನಕ್ಕೆ ಕಾಲಿಕ್ಕುವುದಕ್ಕೆ ಎಷ್ಟು ಸಂತೋಷಪಡುತ್ತಿದ್ದರೆನ್ನುವುದಕ್ಕೂ ಒಳ್ಳೆಯ ಉದಾಹರಣೆಯಾಗಿ ಮಹಾಭಾರತದಲ್ಲಿ ಪಾಂಡವರು ತಮ್ಮ ರಾಜ್ಯಗಳನ್ನು ಕೌರವರಿಗೆ ಸಂಪೂರ್ಣವಾಗಿ ವಹಿಸಿ ತಾವು ಪಂಚಗ್ರಾಮಗಳನ್ನಿಟ್ಟುಕೊಂಡು ತೃಪ್ತಿಹೊಂದಿದುದನ್ನು ನೋಡಿದರೇ ವ್ಯಕ್ತವಾಗುವುದು. ಪ್ರಾಚೀನ ಹಿಂದೂಸ್ಥಾನದ ತೃಪ್ತಿಗೂ ಅತಿಥಿಸತ್ಕಾರಕ್ಕೂ ಈಗಿನ ಕಾಲವು ಹೊಟ್ಟೆಕಿಚ್ಚು ಪಡುವಂತಾಗಿದೆ.

ಇಂಗ್ಲದೇಶದಲ್ಲಿ ಹಳ್ಳಿಗಳಿಂದ ಜನರು ಪಟ್ಟಣಕ್ಕೆ ಗುಂಪು ಗುಂಪಾಗಿ ಹೋಗಿ ನೆಲಸಿದಾಗ್ಗೆ ಐರ್ಲೆಂಡಿನ ಗೋಲ್ಡ್‌ಸ್ಮಿತ್ ಎಂಬಾತನು ‘ಸ್ಮಶಾನವಾದ ಹಳ್ಳಿಗಳು’ ಎಂಬದಾಗಿ ಒಂದು ಪದ್ಯವನ್ನು ಬರೆದಿದ್ದಾನೆ. ನಮ್ಮ ಈಗಿನ ಹಿಂದೂಸ್ಥಾನದಲ್ಲಿಯಾದರೋ ಹಳ್ಳೀವಾಸದ ಸ್ಥಿತಿಯು ವ್ಯಸನಕರವಾಗಿಯೂ, ಕಷ್ಟವಾಗಿಯೂ ಪರಿಣಮಿಸಿದೆ. ಎಷ್ಟೋ ಹಳ್ಳಿಗಳಲ್ಲಿ ಜಮಾನುದಾರರು ತಮ್ಮ ಮನೆಗಳಿಗೆ ಬೀಗಹಾಕಿ ಮನೆಗಳನ್ನು ಇಲಿ ಹೆಗ್ಗಣಗಳಿಗೆ ಮಾರಿ ಏನು ವಿಶೇಷವೆಂದೋ, ಪಟ್ಟಣಗಳನ್ನು ಸೇರಿದರೆಂದರೆ ತಿರುಗಿ ತಮ್ಮ ಜಮಾನುಗಳೇನಾಗಿವೆ, ಸರಿಯಾಗಿ ವ್ಯವಸಾಯವಾಗಿದೆಯೋ ಎಂದು ನೋಡುವ ಆ ತೊಂದರೆಯಿಂದ ನಿವೃತ್ತರಾಗಿ ಸಿಟಿ ಹವವನ್ನು ಸೇವಿಸುತ್ತ ವಾಸಮಾಡುತ್ತಿರುವುದೆಂದರೆ ಶೋಚನೀಯವೇ ಸರಿ. ಗೇಣಿಕಾರರು ಹಣರೂಪದಲ್ಲಿ ಕೊಟ್ಟದ್ದನ್ನು ತಕ್ಕೊಂಡು ಸುಮ್ಮನೆ ಕುಳಿತಿರುವುದು ಸೋಮಾರಿತನವೇ ಸರಿ. ಎಷ್ಟೇ ಹೇಳಿದರೂ ಗೇಣಿಕಾರರು ತಮ್ಮ ಮನಃಪೂರ್ವಕವಾಗಿ ವ್ಯವಸಾಯ ಮಾಡುವುದು ಅಪೂರ್ವವಾಗಿದೆ. ಹೀಗಾಗಿ ಹಳ್ಳಿಗಳ ಸ್ಥಿತಿಯು ಬರಬರುತ್ತ ಹೀನಸ್ಥಿತಿಗೆ ಬಂದು ಕಡೆಗೆ ಸ್ಮಶಾನವಾಗುವ ಸಂಭವವೂ ಇದೆ.

ವ್ಯವಸಾಯಕ್ರಮಗಳಲ್ಲಿ ಅಜಾಗರೂಕರಾಗಿ, ಕೇವಲ ಯಂತ್ರೋಪಕರಣಗಳ ಕಡೆಗೇ ತಮ್ಮ ಸರ್ವಶಕ್ತಿಯನ್ನು ಖರ್ಚುಮಾಡಲು ಪ್ರಾರಂಭಿಸಿದುದರಿಂದಲೇ ಪಾಶ್ಚಿಮಾತ್ಯ ದೇಶಗಳ ಅಮಿತವ್ಯಯಕ್ಕೆ ಕಾರಣವೆಂದು ಅನೇಕರು ನಿರ್ವಿವಾದವಾಗಿ ಪ್ರತಿಪಾದಿಸುತ್ತಿರುವರು. ಈಗ ಹಾಲೆಂಡಿನಲ್ಲಿರುವ ಜರ್ಮನೀದೇಶದ ಚಕ್ರವರ್ತಿಯು, ತನ್ನ ಸ್ವಪ್ರಯತ್ನದಿಂದ ಯುದ್ಧೋಪಕರಣಗಳ ವಿಷಯದ ಕಡೆಗೆ ಎಷ್ಟು ಗಮನಕೊಟ್ಟಿದ್ದರೋ ಅಷ್ಟೇ, ಅದಕ್ಕಿಂತಲೂ ಹೆಚ್ಚು ಆಹಾರ ಸಾಮಗ್ರಿಗಳ ಕಡೆಗೂ, ವ್ಯವಸಾಯದ ಕಡೆಗೂ ಮನಸ್ಸು ಕೊಟ್ಟು ವ್ಯವಸಾಯವನ್ನು ಅಭಿವೃದ್ಧಿಗೊಳಿಸಿದುದರಿಂದಲೇ ಕಳೆದ ಘೋರ ಯುದ್ಧದಲ್ಲಿ ಜರ್ಮನಿಯು ಪ್ರಬಲಶತ್ರುಗಳನ್ನು ನಾಲ್ಕೈದು ವರ್ಷಗಳ ತನಕ ತಡೆಯುತ್ತಲಿದ್ದ, ಹೊಸ ಪರಿಶೋಧಕಗಳಿಂದಲ್ಲ. ಜರ್ಮನಿಯಲ್ಲಿ ಕೈಸರ್‌ರವರ ಸಾಹಸದಿಂದ ನೂರು ಪಾಲಷ್ಟು ಬೆಳೆಯು ಅಭಿವೃದ್ಧಿಗೊಂಡು ಪಟ್ಟಣಿಗರೂ ಅನೇಕರು ಹಳ್ಳೀವಾಸವನ್ನು ಆದರಿಸುತ್ತಿದ್ದರು.

ಪ್ರತಿಯೊಬ್ಬ ಜಮೀನುದಾರನೂ ಪಟ್ಟಣಗಳಿಗೆ ಹೋಗಿ ಗುಂಪುಗೂಡುವುದರ ಬದಲು ಹಳ್ಳಿಗಳಲ್ಲಿಯೇ ಇದ್ದು ತಮ್ಮ ಬೆಳೆಗಳ ಅಭಿವೃದ್ಧಿಗೆ ಪ್ರಯತ್ನಪಡುವುದು ಅವಶ್ಯವಾಗಿದೆ. [illegible] ಹಳ್ಳಿಗಳು ಅತ್ಯಂತ ಹೀನಸ್ಥಿತಿಗೆ ಬಂದಿರುವವು. ಹಳ್ಳಿಗಳಲ್ಲಿ ವಾಸಿಸುವುದೊಂದು ದೇಶಸೇವೆಯೆಂದೆಣಿಸಿ, ಹೊಸ ತನದೊಂದಿಗೆ ವಿಶ್ರಾಂತಿಯನ್ನು ಪಡೆದ [illegible] ತಮ್ಮ ಹಣದೊಂದಿಗೆ ಬಿಟ್ಟುಹೋದ ಹಳ್ಳಿ ಗ್ರಾಮಗಳಿಗೆ ಹೋಗಿ ವಾಸಿಸಿ ತಮ್ಮ ತಿಳುವಳಿಕೆಯಿಂದ ಹಳ್ಳಿಗಳನ್ನು ಉತ್ತಮದರ್ಜೆಗೆ ತರುವುದು ಅವಶ್ಯವಾಗಿದೆ. ಹಳ್ಳಿಗಳೆಂದರೇ ದೇಶವು [illegible] ಮಹಾತ್ಮಾ ಗಾಂಧಿಯವರ ತಮ್ಮ ಉಪದೇಶಗಳಲ್ಲಿ ಹಳ್ಳಿಯನ್ನು [illegible] ಆದ ವಿನಹ ದೇಶವು ಮುಂದುವರಿಯಲಾರದೆಂದು ಹೇಳಿರುವರು.

ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಹೋಗಿ ಮುದುಡಿಕೊಳ್ಳುವುದಕ್ಕಿಂತ ಗ್ರಾಮಾಂತರಗಳಿಗೆ ಸಾಗಿ ಸರ್ವಪ್ರಯತ್ನದಿಂದಲೂ ಸರ್ವಸಾಧನದಿಂದಲೂ ವ್ಯವಸಾಯಗಾರರು ಅದರ ಕ್ರಮವನ್ನೂ ಹಾನಿವೃದ್ಧಿಗಳನ್ನೂ [illegible] ವ್ಯವಸಾಯಮಾಡುವಂತೆ ಹೇಳಿ ಹಾಗೆ ಮಾಡಿಸಿದರೆ ದೇಶವು ಎಷ್ಟೋ ಅಭಿವೃದ್ಧಿಯಾಗಿ, ಇದುವರೆಗೆ ಕೇಳದೆ ಇದ್ದಂತಹ ಈ ಕ್ಷಾಮಬಾಧೆಯು ಸಹ ಸಂಪೂರ್ಣ ನಿವಾರಣೆಯಾಗುವುದರಲ್ಲಿ ಯಾವ ಅಡ್ಡಿಯೂ ಇರುವುದಿಲ್ಲ. ಹಿಂದೂಸ್ಥಾನದಲ್ಲಿ ಹಳ್ಳಿಗಳು ಬೆನ್ನೆಲುಬಿನ ಹಾಗೆ ಇವೆಯೆನ್ನಬೇಕು. ಆದ್ದರಿಂದ ಹಳ್ಳಿಗಳು ಆದಷ್ಟು ಬೇಗನೆ ಮುಂದುವರಿದು ನಮ್ಮ ಭರತಖಂಡದ ಉನ್ನತಿಗೂ ಸ್ವರಾಜ್ಯದ ಅಭ್ಯುದಯಕ್ಕೂ ಸಹಾಯವಾಗಲೆಂದು ಪ್ರಾರ್ಥನೆ.

“ಹಿಂದೂ”

ನಾಮ ಮಹಾತ್ಮ್ಯೆ

(ಸ್ವಾಮಿ ಶುದ್ಧಾನಂದ)

ಜಗತ್ತಿನಲ್ಲಿ ಎಷ್ಟು ಭಾವಗಳಿವೆಯೋ, ಎಷ್ಟು ಸ್ವರೂಪಗಳಿವೆಯೋ ಅವೆಲ್ಲವೂ ಸತ್ಯ. ಭಗವಂತನು ಸತ್ಯಸ್ವರೂಪನು, ಅವನು ಸೃಷ್ಟಿಸಿದ ಈ ಜಗತ್ತಿನಲ್ಲಿ ಅಸತ್ಯ ಯಾವುದೂ ಇರತಕ್ಕದ್ದಾಗುವುದಿಲ್ಲ. ಯಾವುದನ್ನು ನಾವು ಇಂದ್ರಜಾಲವೆಂತಲೂ ಭ್ರಮೆ ಅನ್ನುತ್ತೇವೋ ಅವು ಸಹ ವಾಸ್ತವಿಕ ಅಸತ್ಯವಲ್ಲ. ಒಂದಲ್ಲದಿದ್ದರೆ ಮತ್ತೊಂದು ಸತ್ಯದಲ್ಲಿ ಅವುಗಳು ಇದ್ದೇ ಇರುತ್ತವೆ. ಅನೇಕ ವಸ್ತುಗಳು ನಮ್ಮ ದೃಷ್ಟಿಗೆ ಅಸತ್ಯವಾಗಿಯೂ ಅಥವಾ ಸತ್ಯಾಸತ್ಯ ಮಿಶ್ರಿತವಾಗಿಯೂ ಕಂಡುಬರುವುದು [illegible] ಅವೆಲ್ಲವೂ ನಮ್ಮ ದೃಷ್ಟಿ ಹೀನತೆಯಿಂದಲ್ಲದೆ ಬೇರೆಯಲ್ಲ. ಅವುಗಳ ಸ್ವಭಾವವನ್ನೂ, ಸೌಂದರ್ಯವನ್ನೂ ತೋರ್ಪಡಿಸುವ ದೃಷ್ಟಿಯು ನಮ್ಮಲ್ಲಿಲ್ಲದಿರುವುದರಿಂದ ನಮಗೆ ಅವುಗಳನ್ನು ತಿಳಿಯಲಾಗುವುದಿಲ್ಲ. ಯಾವನು ಪ್ರಥಮದಲ್ಲಿ ಇದು ಸತ್ಯವೆಂದರಿತನೋ ಯಾರು ಈ ಸತ್ಯವನ್ನು ಎಲ್ಲಾ ವಸ್ತುಗಳಲ್ಲಿಯೂ ನೋಡಿದನೋ ಅವನೇ ಮಂತ್ರದ್ರಷ್ಟನು — The seer of Truth. ಅವನ ಹಾಗೆ ದೃಷ್ಟಿ ನಿಮಗೂ ನಮಗೂ ಇಲ್ಲದಿರುವುದರಿಂದ ನಾವೆಲ್ಲರೂ ಅತತ್ವಗಳೆಲ್ಲವೂ ಒಂದು ಭ್ರಮೆ ' ಅಂದು ಹೇಳುತ್ತೇವೆ. [illegible] ಇಲ್ಲದಿದ್ದರೆ ನಮಗೆ ತಿಳಿಯುವುದೋ ಯಾ ಇಲ್ಲವೋ [illegible] ಎಲ್ಲಾ ಅನುಭವಗಳಲ್ಲಿಯೂ ಸತ್ಯವನ್ನೇ ಸ್ಪರ್ಶಿಸುತ್ತೇವೆ. ನಮ್ಮ ಪ್ರತಿಭಾವ, ಮತ್ತೂ ಕಲ್ಪನೆ ಇವುಗಳೆಲ್ಲವೂ ಸತ್ಯದಿಂದ ಹೊರಟ ಬೆಳಕು ಮಾತ್ರ [illegible] ಆಯಾಯ ಸತ್ಯದ ವಿಕೃತ ದರ್ಶನ. ಇವುಗಳು ಭ್ರಮೆಯಲ್ಲ.

ಜ್ಞಾನಿಗೆ ಲೋಕವೆಲ್ಲವೂ ಭಾವಮಯವಾಗಿದೆ. ಆದುದರಿಂದ ಅವನಿಗೆ ಇಲ್ಲಿ ಯಾವುದೂ ಸಂಪೂರ್ಣ ಅಸತ್ಯವಾಗಿ ಕಂಡುಬರುವುದಿಲ್ಲ. ಪಾಪಾಚಾರಿಗಳ ಕಟ್ಟನಡತೆಗಳು ಕೂಡ ಸತ್ಯಾನುರಾಗದಿಂದಲೇ ಹುಟ್ಟಿದವುಗಳೆಂದು ಕಂಡುಕೊಳ್ಳುತ್ತಾನೆ. ಅವನಂತೆಯೇ ನಾವೂ ದೃಷ್ಟಿ ಸಂಪನ್ನರಾದರೆ ವಿಸ್ವಸಮುದಾಯವನ್ನು ಅದೇ ರೀತಿಯಲ್ಲಿ ನಾವು ನೋಡಲು ಸಾಧ್ಯವಾಗುತ್ತೆ. ಯಾರಿಗೆ ಅಂತಹ ದೃಷ್ಟಿ ವಿಕಾಸವಾಗಲಿಲ್ಲವೋ ಅವರಿಗೆ ಈ ಲೋಕದ ಭಾವತತ್ವದ ಒಳಗಿನ ಸತ್ಯ ಮತ್ತು ಸೌಂದರ್ಯ ಅಸಿಸಿಕ್ಕಲಾರದೆಂಬುದಕ್ಕೆ ಸಂದೇಹವಿಲ್ಲ.

ಎಲ್ಲಾ ವೇದ ದರ್ಮೇತಿಹಾಸಗಳನ್ನು ನೋಡಿದರೆ ತಿಳಿದುಬರುವುದೇನೆಂದರೆ — ಅವುಗಳಲ್ಲಿ ಬರೆಯಲ್ಪಟ್ಟ ಅನೇಕ ಘಟನೆಗಳು ನಮ್ಮ ಈಗಿನ ದೃಷ್ಟಿಗೂ ಯುಕ್ತಿಗೂ ಹೊಂದಿಕೆಯಾಗದಿರುವುದು [illegible] ನಮಗಳಿಗೆ ಹೋಲಿಕೆ ಬೀಳುವುದಿಲ್ಲ. ಅವುಗಳನ್ನು ಪಳ್ಳಿಯಿಡುವುದಕ್ಕೇನು ಕಾರಣ? ಯಾರು ಪ್ರಥಮದಲ್ಲಿ ಈ ಘಟನೆಗಳನ್ನು ಬರೆದು ಅವುಗಳನ್ನು ಯಾವ ದೃಷ್ಟಿಯಲ್ಲಿ ಮತ್ತು ಯಾವ ಭಾವದಲ್ಲಿ ನೋಡಬೇಕೆಂದು ಹೇಳಿಟ್ಟನೋ ಅದೇ ಭಾವದಲ್ಲಿ ನಾವೂ ಸರಿ ನೋಡಬೇಕು.

ಹಾಗಾದರೆ ಮಾತ್ರ ನಮಗೆ ಅವುಗಳಲ್ಲಿ ಯಾವುವೂ ಯುಕ್ತಿಗ ವಿರೋಧವಾಗಿ ಕಾಣಿಸಿಕೊಳ್ಳಲಾರವು. ಅವುಗಳನ್ನು ಅವರು ಯಾವ ಉದ್ದಿಶ್ಯ ಬರೆದಿಟ್ಟರೆಂದು ನೋಡಬೇಕು. ಒಂದು ವೇಳೆ ಹೃದಯದ ಸೌಂದರ್ಯವನ್ನು [illegible] ಬರೆದಿಟ್ಟಿರಬಹುದು. ಬುದ್ಧಿಯದ್ದಲ್ಲ. ಒಂದು ವೇಳೆ ಅವರು ಕಾರಣಗಳು ಹೃದಯ ರಾಜ್ಯದಿಂದ ಬುದ್ಧಿಯ ರಾಜ್ಯಕ್ಕೆ ಇಳಿಯುವಾಗ ಎಡವಿ ಅಸಂಗತ ದೋಷದಲ್ಲಿ ಬಿದ್ದಿರಬಹುದು.

ಈಗ ಉದಾಹರಣೆಗೋಸ್ಕರ ಪುರಾಣದಲ್ಲಿರುವ ಅಜಾಮಿಳನ ಕಥೆಯನ್ನು ತೆಗೆದುಕೊಳ್ಳೋಣ. ವಾಡಿಕೆಯಾಗಿ ಹೇಳುವುದು ಹೀಗೆ — ಅಜಾಮಿಳನು ಸಾಯುವಾಗ ಪುತ್ರನ ಹೆಸರಿಟ್ಟ ನಾರಾಯಣನೆಂದು ಕರೆದಷ್ಟು ಮಾತ್ರಕ್ಕೆ ಮುಕ್ತಿಯಾಯಿತಂತೆ. ಇದರಿಂದ ಅನೇಕರು ಸಾಧನ ಭಜನಗಳ್ಯಾವುದೂ ಇಲ್ಲದೆ ಮರಣವುಂಟಾಗುವಾಗ್ಯೆ [illegible] ಒಮ್ಮೆ ಉಚ್ಚರಿಸಿದರೆ [illegible] ಕಾರ್ಯವೂ ಕೈಗೂಡುವುದು, ಉತ್ತರಲಾಭವೂ ಉಂಟಾಗುವುದೆಂದು ಸಿದ್ಧಾಂತ ಮಾಡಿಕೊಳ್ಳುತ್ತಾರೆ. ಆದರೆ ಭಾಗವತವನ್ನು ಇನ್ನೊಮ್ಮೆ ತೆರೆದು ನೋಡಿದರೆ ಅನ್ಯರೂಪದಲ್ಲಿ ಕಾಣಬರುವುದು. ಅವನು ಒಬ್ಬ ಬ್ರಾಹ್ಮಣನಾಗಿ ಹುಟ್ಟಿದ್ದು ಮೊದಲು ತಿಳಿದು ಬರುವುದು. ಅವನು ಶಾಸ್ತ್ರಜ್ಞನಾಗಿಯೂ ಸುಂದರ ಸ್ವಭಾವವುಳ್ಳವನಾಗಿಯೂ ಇದ್ದನು. ಸದಾಚಾರಿಯಾಗಿಯೂ, ಯುವಕನಾಗಿಯೂ [illegible] ಯಾವಾಗಲೂ ವ್ರತಗಳನ್ನು ಆಚರಿಸುವವನಾಗಿಯೂ ಮೃದುಸ್ವಭಾವಿಯಾಗಿಯೂ, ಸತ್ಯವಾದಿಯಾಗಿಯೂ ಮಂತ್ರಜ್ಞನಾಗಿಯೂ, ಶುಚಿಯಾಗಿ ಇದ್ದನು. ಅಹಂಕಾರ ಶೂನ್ಯನಾಗಿ [illegible] ಅಗ್ನಿ, ಅತಿಥಿ ವಿದ್ವಾಂಸರು ಇವರ ಸೇವೆಯನ್ನು ಮಾಡುತ್ತಲೂ ಇದ್ದನು. ಸಕಲ ಪ್ರಾಣಿಗಳ ಸ್ನೇಹಭಾವವುಳ್ಳವನಾಗಿಯೂ, ಅತಿಸಾಧುವಾಗಿಯೂ, ಪರಿಮಿತಭಾಷಿಯಾಗಿಯೂ ಇದ್ದನು. ಯಾರಿಗೇ ಆಗಲಿ ಯಾವುದರ ಹಿಂಸೆಯನ್ನೂ ಕೊಡುತ್ತಿರಲಿಲ್ಲ.

ಪೂರ್ವಾವಸ್ಥೆಯಲ್ಲಿಯೆ ಎಂತಹ ಉದ್ದಿಗ್ನನಾಗಿದ್ದ ಅಜಾಮಿಳನಂತಾಗಲೀ ಆದರೆ ಅವನಿಗಿದ್ದಂತಹ ಸದ್ಗುಣಗಳಲ್ಲಿ ಅಲ್ಪಷ್ವಾದರೂ ಮುಲು ಸಿದ್ಧರಾಗಿರುವವರು ನಮ್ಮಲ್ಲಿ ಯಾರು? ಅವನು ದುಸ್ಸಂಗದಿಂದ ಹಾಳಾದನು. ತನ್ನ ದಾಸೀ ಗರ್ಭದಲ್ಲೇ ಅವನಿಗೆ ಹತ್ತು ಮಕ್ಕಳಾಯಿತು. ಕಡೆಯ ಮಗನ ಹೆಸರು ನಾರಾಯಣ. ಇವನು ಬ್ರಾಹ್ಮಣನ ಪುತ್ರನು, ಪುತ್ರನ ಹೆಸರು ನಾರಾಯಣನೆಂದಿರುವುದರಿಂದ ಬ್ರಾಹ್ಮಣನು [illegible] ಸಂಗದಲ್ಲಿ ಇದ್ದಿದ್ದರೂ, ಸತ್ ಮಾರ್ಗದಿಂದ ಬೇರೆಯಾಗಿದ್ದರೂ, ಪೂರ್ವದ ಭಗವಂತನ ಒಟ್ಟಾರೆ [illegible] ಬಿಡಲಿಕ್ಕಾಗಲಿಲ್ಲ.

ಆ ನಾರಾಯಣನ ಅವನ ಕಾಲಗಳಲ್ಲಿ ಪುತ್ರನ ಮೇಲಿನ ಸ್ನೇಹದ [illegible] ನಾರಾಯಣ ನಾಮಸ್ಮರಣೆ ಯಾವಾಗಲೂ [illegible] ಅವನನ್ನು [illegible] ಒಂದಿದ್ದರೆಂದು [illegible] ನಾರಾಯಣ ನಾಮವನ್ನೆತ್ತಿದಾಕ್ಷಣ [illegible] ಒಂದು ಸಂಶಯ. ಇಲ್ಲಿ ನಮ್ಮ ಹಠೇನುವರೆ — ಅವನ ಹೃದಯದಲ್ಲಿ ನಾರಾಯಣ ನಾಮದಿಂದ ಭಗವದ್ಭಕ್ತಿ ಕಿಂಚಿತ್ ಮಾತ್ರವೂ ಉದಯವಾಗಲಿಲ್ಲವೋ? ಹಾಗಿಲ್ಲದಿದ್ದರೆ ನಾವೂ ಸಹ ಅನೇಕ ಸಮಯ ನಾನಾ ಕಾರಣದಿಂದ ಭಗವಂತನ ನಾಮ ಹೇಳುವುದರಿಂದ [illegible] ಯಾಕೆ ಉದಯವಾಗುವುದಿಲ್ಲವೆನ್ನುವುದಕ್ಕೆ? ಇದರ ತಿಳಿವು ಬರುವುದು ಈ ಕಥೆಯ ಇತಿಹಾಸಿಕ ಘಟನೆಗಳಲ್ಲಿ. ಪುತ್ರನ ಹೆಸರು ನಾರಾಯಣ ಎಂದು ಉಚ್ಚರಿಸುತ್ತಾ [illegible] ಭಾವಯೋಗದ (By the law association of ideas) [illegible] ನಾರಾಯಣನ ಭಾವವು ಒಂದಿರಬೇಕು ಅಥವಾ [illegible] ರೋಗಿಯಾಗಿ [illegible] ಇದ್ದಾಗ ತನ್ನ ಮನಸ್ಸಿನಲ್ಲಿ ಪೂರ್ವಕಾಲದ ಸಂಸ್ಕಾರಗಳೂ ಹುಟ್ಟಿ ಒಂದಕ್ಕೊಂದು [illegible] ಸ್ವಪ್ನಾವಸ್ಥೆಯಲ್ಲಿರುವಾಗ ನಮಗೂ ಸಹ ಈ ತರದ ಅನುಭೋಗವು ಕಂಡುಬರುತ್ತದೆ. ಯಮದೂತರು ಅನ್ನುವರು "ಅನಾಯದ ಕಾರ್ಯಗಳನ್ನು ಮಾಡಿದುದರ ಶಿಕ್ಷೆಯನ್ನು ಹೊಂದಿರಿ" ವಿಷ್ಣುದೂತರು [illegible] "ಭಗವನ್ನಾಮದಿಂದ ನಿನ್ನ ಸರ್ವ ಪಾಪವೂ ನಾಶವಾಯಿತು."

ಸಾಧಾರಣವಾಗಿ ಜನರು ಅಜಾಮಿಳನು ಆ ಅವಸ್ಥೆಯಲ್ಲಿ ಸತ್ತು ವಿಷ್ಣುದೂತರಿಂದ ವೈಕುಂಠಕ್ಕೆ ಒಯ್ಯಲ್ಪಟ್ಟನೆಂದು ನಂಬಿದ್ದಾರೆ. ಆದರೆ ಭಾಗವತವು ಬೇರೆ ವಿಧದಲ್ಲಿ ಹೇಳಿದೆ. ಆಗ ರೋಗದಿಂದ ಬಿಟ್ಟು ಅವನಿಗೆ [illegible] ಆದರೆ ಯಮದೂತರ [illegible] ಅವರ ಮಾತುಗಳನ್ನು ಮರೆತು ಬಿಡಲಿಕ್ಕಾಗಲಿಲ್ಲ. ಅವುಗಳು ತನ್ನ ಪ್ರಾಣದಲ್ಲಿ ನಾಟಿಕೊಂಡವು. ಆತನು ತನ್ನ ಪೂರ್ವಾರ್ಜಿತ ಅನಾಚಾರಗಳ ಅತಿಶಯವಾಗಿ ಅನುತಾಪಗೊಳ್ಳುತ್ತಾ ಸುರುಮಾಡಿದನು, ಭಾವಿಸತೊಡಗಿದನು — ಆಹಾ! ಪುತ್ರನ ದ್ವಾರಾ ನಾರಾಯಣ ನಾಮಸ್ಮರಣೆ ಮಾಡಿದಷ್ಟು ಮಾತ್ರಕ್ಕೆ ನನಗೆ ಈ ರೀತಿ ಸಿದ್ಧಪುರುಷರ ದರ್ಶನವೂ ಸದುಪದೇಶ ಶ್ರವಣವೂ ದೊರಕಿತು. ನಾನು ಹೇಳುವುದು ಮೊದಲಿನಿಂದಲೂ ಭಗವನ್ನಾಮ ಸ್ಮರಣೆ ಮಾಡಿದ್ದರೆ ನಾನು ಎಷ್ಟು ದೂರ ಉನ್ನತನಾಗುತ್ತಿದ್ದೆನು! ಅತನು ಆ ರೀತಿ ನಿರ್ಧರಿಸಿದನು — [illegible] ಮೇಲೆ ಘೋರ ಪಾಪಗಳಲ್ಲಿ ನಿಮಗ್ನನಾಗುವುದಿಲ್ಲ. ಪ್ರಾಣ ಮನ ಮತ್ತು ಇಂದ್ರಿಯಗಳನ್ನು [illegible] ಆವಿದ್ಯವನ್ನು [illegible] ಸುಖದ ಯಮದ್ವಾರದಿಂದ [illegible] ಮಾಯೆಯಿಂದ ವಿಮೋಚನೆಮಾಡಿ [illegible] ಪಡೆಯುವೆನು. ಈಗಾಗಲೇ ನಾನು ಸತ್ಯವನ್ನು [illegible] ಸ್ಪರ್ಶಿಸಿರುವೆನು. ದೇಹದಲ್ಲಿ ನಾನು ನನ್ನದು ಎಂಬುವ ಅಭಿಮಾನವನ್ನು ವಿಸರ್ಜಿಸಿ, ಚಿತ್ತವನ್ನು ಭಗವತ್ಕೀರ್ತನಾದಿ ವ್ಯಾಪಾರದಲ್ಲಿ ಮಾಡಿ ಭಗವಂತನನ್ನು ಸ್ಥಾಪಿಸುವೆನು.

ಹಾಗೆಂದುಕೊಂಡು ಅವನು ಸಂಸಾರತ್ಯಾಗಮಾಡಿ ಹರಿದ್ವಾರಕ್ಕೆ ಹೊರಟುಹೋದನು. ಅಲ್ಲಿ ಅವನ ಕಲ್ಪನು ಪೂರ್ವತ ಯೋಗ ಸಾಧನದಲ್ಲಿ ಪ್ರವೃತ್ತನಾಗಿ ಇಂದ್ರಿಯವರ್ಗವನ್ನು ವಿಷಯಗಳಿಂದ ನಿವೃತ್ತಿಮಾಡಿ, ಆತ್ಮನಲ್ಲಿ ಮನಸ್ಸು ಯೋಗಮಾಡಿದನು. ಅನಂತರ ಚಿತ್ತದ ಏಕಾಗ್ರತೆಯಿಂದ ತನ್ನ ಆತ್ಮವನ್ನು ದೇಹೇಂದ್ರಿಯಗಳಿಂದ ತಪ್ಪಿಸಿ ಜ್ಞಾನಮಯ ಪರಬ್ರಹ್ಮನಲ್ಲಿ ಸೇರಿಸಿದನು.

ಆ ಸಮಯದಲ್ಲಿ ವಿಷ್ಣುದೂತರು ಬಂದು ಆತನನ್ನು ವೈಕುಂಠಕ್ಕೆ ಸಾಗಿಸಿದರು. ಯಾರು [illegible] ನಾಮವನ್ನು [illegible] ಗಳನ್ನೂ [illegible] ಗನಾಧನದಲ್ಲಿ ಮುಳುಗಲು ಬದ್ಧರಾಗುವರು?

ಹೀಗೆ ಭಾಗವತದಲ್ಲಿ ಹೇಳಲ್ಪಟ್ಟ ಅಜಾಮಿಳನ ಜೀವನೇತಿಹಾಸವು [illegible] ಕಥೆ ಎಷ್ಟೋ ವಿರೋಧವಾಗಿರುವುದು. ಭಗವಂತನ ನಾಮ ಮಹಾತ್ಮ್ಯದ ಮೇಲೆ [illegible] ವಿಶ್ವಾಸವು ಸಹ ಪರಿವರ್ತನೆ ಯೋಗ್ಯವಾಗಿರುವುದು. ಶಾಸ್ತ್ರದಲ್ಲಿರುವ ಭಿನ್ನ ಭಿನ್ನ ಕಥೆಗಳು ಯಾವ ದೃಷ್ಟಿಯಿಂದ ನೋಡಲ್ಪಡಬೇಕಾಗಿದ್ದವೋ ಅದೇ ದೃಷ್ಟಿಯಲ್ಲಿ [illegible] ನಮ್ಮಲ್ಲಿ ಯಾರು? [illegible] ತಮ್ಮಕ್ಕೆ [illegible] ಇಲ್ಲ. ನಮ್ಮ ದೇಶದ ಪಂಡಿತರಲ್ಲಿ ಧರ್ಮಾಧರ್ಮದ ದಾರಿಯನ್ನು ತೋರಿಸತಕ್ಕ ಭಾರವು ಅರ್ಪಣ ಮಾಡಲ್ಪಟ್ಟಿದ್ದರೂ, ಅವರು ಈ ವಿಷಯದಲ್ಲಿ ಸಂಪೂರ್ಣ ಉದಾಸೀನರಾಗಿದ್ದಾರೆ. ಸಕಲವನ್ನು ತಿಳಿದೂ ಮತ್ತು ಕೇಳಿಯೂ ಕೂಡ ಅವರು ಸಾಧಾರಣ ವಿಶ್ವಾಸವನ್ನು ಶಾಸ್ತ್ರದ ಯಾವ ದೃಷ್ಟಿಯ ಮೇಲೆ ಸ್ಥಾಪಿಸಬೇಕೆಂಬುದನ್ನರಿಯುವ ಶ್ರಮ ತೆಗೆದುಕೊಳ್ಳುವುದಿಲ್ಲ. ಅದರ ಮೇಲೂ ಗೃಹಸ್ಥರ ಶ್ರಮ ಸಂಕೂಲವೂ, ಯುಕ್ತಿ ವಿರೋಧಿಗಣನವೂ, ಮತ್ತು ಹಲವೆಗಳನ್ನು ಮಾನತಕ್ಕವರ ಯಥಾರ್ಥಶಾಸ್ತ್ರದಿಂದ ಬಹುದೂರದಲ್ಲಿ ಅವಸ್ಥಿತವಾದ ಮೂರ್ಖರ ಮನೋರಂಜನೆಯನ್ನುಂಟುಮಾಡುವ ಅಪರೂಪ ಶಾಸ್ತ್ರವ್ಯಾಖ್ಯೆಗಳೂ ಸಾಧಾರಣ ಜನರ ವಿಶೇಷವಾಗಿ ಹಿಂದೂ ಮಹಿಳೆಯರ ವಿಶ್ವಾಸವನ್ನು ಪಾತಾಳಕ್ಕೆ ತಳ್ಳಿರುವುದು.

ನೋಡುವವರ್‍ಯಾರು! ಈಗ ಸಾಧಾರಣರಿಗೆಲ್ಲಾ ಶಿಕ್ಷಣವನ್ನಿತ್ತಲ್ಲದೆ ಈ ಹೀನಸ್ಥಿತಿಯಿಂದ ಉದ್ಧಾರವಾಗುವುದಕ್ಕೆ ಅನ್ಯ ಉಪಾಯವಿಲ್ಲ.

ಭಗವಂತನ ನಾಮ ಮಹಾತ್ಮ್ಯದ ಮೇಲೆ ವಿಶ್ವಾಸವಿಡುವುದು ಯುಕ್ತಿಗೆ ವಿರೋಧವಾದುದಲ್ಲ. ನಿಜ ಆದರೆ ಸಾಧಾರಣಜನರು ಈ ವಿಷಯದಲ್ಲಿಟ್ಟ ನಂಬಿಕೆ ಸರಿಯಲ್ಲ. ಬಹುಕಾಲದಿಂದಲೂ ಸತ್ಯವೆಂದು ರೂಢಿಸಿರುವ ಅನೇಕ ಸಂಗತಿಗಳೂ, ಹೃದಯಪ್ರಿಯವಾಗಿರುವ ವಿಶ್ವಾಸಗಳೂ ಮತ್ತೊಂದು ಭಾವದಲ್ಲಿ ನೋಡಿದರೆ ಮಿಥ್ಯವಾಗಿಯೂ ಇನ್ನೊಂದು ದೃಷ್ಟಿಗೆ ಸತ್ಯವಾಗಿಯೂ ಪ್ರಮಾಣವಾಗುವುದು. ಪಾಠಕರೇ ಅಂತಹ ನೂತನ ದೃಷ್ಟಿಯನ್ನವಲಂಬಿಸಿ ಅವುಗಳನ್ನು ಜೀವನದಲ್ಲಿ ಅನುಷ್ಠಾನಿಸಲು ಸಿದ್ಧರಾಗುವಿರಾ?

(ತರ್ಜುಮೆ)

ಅದರಿಂದ ಬಾಬುಗಳ ಮುಲಾಜತ.

(ಪಾರ್ಶ್ವ ಪ್ರಸಾರಕ ಸಂಘ ಹುಬ್ಬಳ್ಳಿ)

ಬಾಬು ಅರವಿಂದ ಘೋಷರವರನ್ನು ಭೇಟಿಯಾಗಿ ಬಂದ ಗುಜರಾಥದ ಶ್ರೀ [illegible] ನಮ್ಮ ಪಾರ್ಶ್ವ ಪ್ರಸಾರಕ ಸಂಘದ ಪ್ರತಿನಿಧಿಗಳು ತೆಗೆದುಕೊಂಡ [illegible] ವಿಷಯಗಳು [illegible]

[illegible] ಮತ್ತು [illegible] ಪಾಂಡಿಚೇರಿ [illegible] ನಾನು [illegible] ನನಗೆ [illegible] ಬಾಬುಗಳ ಸನ್ನಿಧಿಯಲ್ಲಿ [illegible] ಬೇರೆ ಬೇರೆ ಭಾಗಗಳ [illegible] ದರ್ಶನ [illegible] ಸಾಯಂಕಾಲ [illegible] ಮೇಲೆ [illegible] ಸಂಜೆ [illegible] ಹೋಗುವವು.

[illegible] ತೆಗೆದುಕೊಳ್ಳಬೇಕು [illegible] ಪತ್ರದ್ವಾರ ಪರವಾನಗಿಯನ್ನು [illegible] ಬೇಕಾಗುತ್ತದೆ. ಇಷ್ಟು ಮೇಲೆ ಭಾವಚಿತ್ರ (ಫೋಟೋ) ವನ್ನು ಕಳಿಸಬೇಕಾಗುತ್ತದೆ. ಇಷ್ಟಾದ ಮೇಲೆ ಬಾಬುಗಳ ಮನಸಿಗೆ ಬಂದರೆ ಅರ್ಜಿ ಹಾಕಿಸಿದವರಿಗೆ ಮುಲಾಜತ ತೆಗೆದುಕೊಳ್ಳುವರು.

ಘೋಷ ಬಾಬುಗಳಿಗೆ ದೇಶದ [illegible] "[illegible] ವಿಷಯಕ್ಕೆ [illegible] ವಿಚಾರಗಳಲ್ಲಿ [illegible] ವಿಚಾರಗಳಲ್ಲಿಯೂ [illegible] ಬದಲಿಯೋ" ಎಂದು ನಾನು ಕೇಳಿದ್ದಕ್ಕೆ "[illegible] ಇಲ್ಲ" ವೆಂದು [illegible] ಉತ್ತರ [illegible] "[illegible]" ಎಂದು [illegible] "[illegible]" [illegible] ನಾನು [illegible] ದೇವ! [illegible] ನಾನು [illegible] ಎಂದು ಉತ್ತರವನ್ನು [illegible] ಮೇಲೆ [illegible] "[illegible]" [illegible] ಎಲ್ಲ [illegible] ಎಂದು ಅವರು [illegible] ತೆಗೆದರು.

ಮಹನೀಯರಲ್ಲಿ ವಿನಂತಿ.

ಈ ವರ್ಷದ ಅತಿವೃಷ್ಟಿಯಿಂದ ಸಂಭವಿಸಿದ ಅಪೂರ್ವವಾದ ಪ್ರವಾಹದ ದೆಸೆಯಿಂದ ಕೊಡಗಿನಲ್ಲಿಯೂ, ನಮ್ಮ ನೆರೆಜಿಲ್ಲೆಗಳಾದ ಮಲಬಾರು ದಕ್ಷಿಣ ಕನ್ನಡ ಪ್ರಾಂತ್ಯಗಳಲ್ಲಿಯೂ ಉಂಟಾಗಿರುವ ವಿವರಿಸಲಸದಳವಾದ ನಷ್ಟವು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಕಷ್ಟಕ್ಕೊಳಗಾಗಿರುವವರಿಗೆ ಸಹಾಯ ಮಾಡುವುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯವಾಗಿದೆ. ಇದಕ್ಕಾಗಿ ಮಡಿಕೇರಿಯಲ್ಲಿ ಒಂದು ಮೀಟಿಂಗು ನಡೆದು ಸ್ವಲ್ಪ ಹಣ ಜಮಾಯಿಸಲ್ಪಟ್ಟು ಕಷ್ಟನಿವಾರಣೆ ಬಗ್ಗೆ ಕಳುಹಿಸಲ್ಪಟ್ಟಿದೆ. ಈಗಲೂ ಚಂದವು ಜಮೆಯಾಗುತ್ತಲಿದೆ. ತಮ್ಮ ಸಹೋದರರ ಕಷ್ಟವು ತಮ್ಮದೆಂದು ಯೋಚಿಸಿ ಪ್ರತಿಯೊಬ್ಬ ದೇಶೀಯನೂ ಉದಾರಭಾವದಿಂದ ತನ್ನ ಶಕ್ತ್ಯಾನುಸಾರ ಧನಸಹಾಯ ಮಾಡಬೇಕೆಂದು ಕೋರಿಕೆ. ಸಹಾಯ ಮಾಡಿದವರ ಪಟ್ಟಿಯು ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದು. ಹಣವನ್ನು ರಿಲೀಫ್ ಕಮಿಟಿಯ ಅಧ್ಯಕ್ಷರಾದ ರಾ|| ಬಾ|| ಕೊಡಂದೇರ ಕುಟ್ಟಯ್ಯನವರು, ಮಡಿಕೇರಿ, ಇವರಿಗೆ ಕಳುಹಿಸಿಕೊಡಬೇಕು.

ಮಡಿಕೇರಿ. ಸಂಪಾದಕ,

26-8-23 "ಕೊಡಗು"

ವರ್ತಮಾನ ಸಂಗ್ರಹ.

ಒಳದೇಶ.

ಕೆಲವು ದಿವಸಗಳ ಹಿಂದೆ ಚೇಟೋಳಿ ಗ್ರಾಮದ ಪಟ್ಟಡ ಬಿದ್ದಮ್ಮನವರ ಚಿಕ್ಕಪ್ರಾಯದ ಮಗನೊಬ್ಬನು ಗದ್ದೆಯ ಆಳವಾದ ಒಂದು ಒಡವಿನಲ್ಲಿ ಬಿದ್ದು ಮೃತಪಟ್ಟನಂತೆ.

ಕೈಲ್ ಮುಹೂರ್ತ ಹಬ್ಬಕ್ಕಾಗಿ ಭತ್ತದ ಸರಾಯಿ ಕಾಸಿದನ್ನು ಹಿಡಿಯುವುದಕ್ಕಾಗಿ ಕಳೆದ ವಾರದಲ್ಲಿ ನಾಲ್ಕು ನಾಡಿನಲ್ಲಿ ಎಲ್ಲಿ ನೋಡಿದರೂ ಪೋಲೀಸಿನವರೇ ಕಾಣುತ್ತಿದ್ದರಂತೆ! ಐದಾರು ಮನೆಗಳಲ್ಲು ನಿಷಾದೇವಿಯು ವಾಸ ಇದ್ದಳಂತೆ!

ಕಳೆದ ತಾ|| ೩೦ ರಲ್ಲಿ ಮಡಿಕೇರಿಯಲ್ಲಿ ಪೂಜಾರಿ ರಾಮಯ್ಯನೆಂಬ ಗಾಳಿಯೊಬ್ಬನು ಮೃತಪಟ್ಟು ಅವನ ಶವದ ಮೆರವಣಿಗೆಯು ಬಹು ಸಂಭ್ರಮದಿಂದ ನಡೆಯಿತು. ಅವನಿಗೆ ಸಾಯುವಾಗ ಸುಮಾರು ೧೦೦ ವರ್ಷದ ಮೇಲೆ ಪ್ರಾಯವಾಗಿತ್ತೆಂಬು ತಿಳಿಯ ಬರುತ್ತದೆ. ಇಷ್ಟು ವಯಸ್ಸಿನವರು ಲೋಕದಲ್ಲಿ ಅಪರೂಪವಲ್ಲವೇ?

ಆಗೋಸ್ತು ತಿಂಗಳು ಅಂತ್ಯದವರೆಗೆ ಮಡಿಕೇರಿಗೆ ಆಕಾಶವೆಲ್ಲಾ ಮೋಡ ಕವಿದುಕೊಂಡು ಮಳೆಯು ಸುರಿಯುತ್ತಿದ್ದು ಈ ತಿಂಗಳಲ್ಲಿ ದೇಶದ ಬೇರೆ ಕಡೆಗಳಂತೆಯೇ ಬಿಸಿಲು ಚೆನ್ನಾಗಿ ಕಾಯುತ್ತಿದೆ.

ಸಪ್ಟಂಬರು ತಿಂಗಳ ೩೦ ರಲ್ಲಿ ಮಧ್ಯಾಹ್ನ ಮೈಸೂರಲ್ಲಿ ವ್ಯವಸಾಯಗಾರರು ಕೊಡಗು ಜಮೀನ್ದಾರರ ಸಂಘದ ಪ್ರತಿನಿಧಿಗಳ ಡೆಪ್ಯುಟೇಶನಿಗೆ ಭೇಟಿಕೊಡಲು ಒಪ್ಪಿಕೊಂಡಿರುವರು.

ಜಮೀನುದಾರರ ಸಂಘದ ಅಧ್ಯಕ್ಷರ ಕೋರಿಕೆಮೇರೆ ಕೆಲವು ಗ್ರಾಮಸ್ಥರು ತಮಗೆ ಉಂಟಾದ ನಷ್ಟದ ಅಂದಾಜುಪಟ್ಟಿಗಳನ್ನು ಈಗಾಗಲೇ ಕಳುಹಿಸಿ ಕೊಟ್ಟಿರುವರು. ಕಾಮಾಡಿ ೨೬೯೪ ರೂ. ಕಾರುಗುಂದ ೧೮೬೪ ರೂ. ಬಿಳಿಗುಂದ ೧೯೩೪ ರೂ. ಮೊಸರೂರು ಸುಮಾರು ೬೦೦೦ ರೂ. ನಷ್ಟವೆಂತ ಅಂದಾಜು ಪಟ್ಟಿಗಳು ಜಮೀನುದಾರರ ಸಂಘದ ಆಫೀಸಿಗೆ ತಲಪಿದೆ.

ವೀರರಾಜಪೇಟೆ ಕ್ರಿಶ್ಚಿಯನರ ಚರ್ಚ (ಗುಡಿಯು) ಅರ್ಧ ಅಡಿ ನೆಲದಲ್ಲಿ ತಗ್ಗಿ ಹೋಗಿದೆಯಂತೆ. ಕಟ್ಟಡಕ್ಕೆ ಏನು ಅಪಾಯ ವಿಲ್ಲದೆ ಈ ರೀತಿ ನೆಲದಲ್ಲಿ ಇಳಿದದ್ದು ಆಶ್ಚರ್ಯವೇ.

ಕೊಡಗು ಬ್ರಾಹ್ಮಣರ ವಿದ್ಯಾ ಫಂಡಿನ ಕಮಿಟಿ ಮೀಟಿಂಗ್ ೨-೯-೨೩ ರಲ್ಲಿ ನಡೆದು ಮ|| ಬಿ. ರಾಮಣ್ಣನವರಲ್ಲಿರುವ ರೂ. ೩೧೩ ನ್ನೂ ಮ|| ಕೆ. ನಾರಾಯಣರಾಯರಲ್ಲಿರುವ ರೂ. ೩೫೦ ನ್ನೂ, ಸೆಕ್ರೆಟರಿಯವರು ತೆಗೆದುಕೊಂಡು ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಇಡಬೇಕೆಂತ ನೈಸಲಾಗಿದೆ. ನಿಧಿಯಲ್ಲಿ ಹಾಲಿ ರೂ. ೧೩೬೦ ಇವೆಯೆಂತ ತಿಳಿಯುತ್ತೆ.

ರೈಲ್ವೇ ಬೋರ್ಡಿನವರು ಈ ಕೆಳಗಿನ ಸರ್ವೆ ಮಂಜೂರ್ ಮಾಡಿದ್ದಾರೆಂತ "ಮದ್ರಾಸ್ ಮೇಯಿಲ್ ಪತ್ರಿಕೆ" ಯಿಂದ ತಿಳಿಯುತ್ತೆ. ನಂಜನಗೂಡಿನಿಂದ ತಲಚೇರಿಗೆ—ನಂಜನಗೂಡು ಸಮೀಪದಿಂದ ಸಿದ್ದಾಪುರದ ಸಮೀಪ ಇರುವ ತ್ಯಾಗತ್ತೂರು ಅಥವಾ ಹೊಸಪಟ್ಟಣದ ಬಳಿವರೆಗೆ.

ಮಂಗಳೂರಿ ಮಡಿಕೇರಿಯಿಂದ ಹೋಗುತ್ತಿದ್ದ ಕುಂಟರ ಪಿಟ್ಟರ್ ಸ್ಪ್ರೆಸ್ ಪ್ರಸವ ಪ್ರಾರಂಭವಾಗಿದೆ. ಮಡಿಕೇರಿಯಿಂದ ಬೆಳಿಗ್ಗೆ ೧೧ ಗಂಟೆಗೆ ಹೊರಡುತ್ತೆ.

ಹಿಂದೂದೇಶ.

ಕಾಶಿಯಲ್ಲಿ ೯ನೇ ತಾರೀಖಿನಲ್ಲಿ ನಡೆದ ಸಮಾಜ ಸುಧಾರಣಾ ಮಹಾಸಭೆಯಲ್ಲಿ ತಿವಾರ ಸಂಸ್ಥಾನದ ರಾಜರು ಅಧ್ಯಕ್ಷರಾಗಿ ಮಾಡಿದ ಭಾಷಣದಲ್ಲಿ ಹಿಂದೂ ಸಮಾಜದ ದುರ್ಗುಣಗಳನ್ನು ಸುಧಾರಿಸಿಕೊಳ್ಳಬೇಕೇ ಹೊರತು ಹಿಂದೂ ಸಮಾಜ ಪದ್ಧತಿಯನ್ನೇ ನಿರ್ಮೂಲಪಡಿಸಿ ಬೇರೆ ಕ್ರಮವನ್ನು ಅನುಸರಿಸಬಾರದೆಂಬೂ ಮುಖ್ಯವಾಗಿ ಪರ್ದಾ ಪದ್ಧತಿಯನ್ನೂ, ಕುಡಿತವನ್ನೂ, ತ್ಯಾಜ್ಯಮಾಡುವ ಪದ್ಧತಿಯನ್ನೂ, ತೆಗೆದುಹಾಕಿ ಅಸ್ಪೃಶ್ಯರನ್ನು ಮೇಲಕ್ಕೆ ಎತ್ತಬೇಕೆಂತಲೂ, ಹುಡುಗಿಯರಿಗೆ ವಿದ್ಯೆ ಕೊಡಬೇಕೆಂತಲೂ, ಹುಡುಗರ ಮತ್ತು ಹುಡುಗಿಯರ ಮದುವೆ ಮಾಡತಕ್ಕ ಪ್ರಾಯವನ್ನು 18.16 ಕ್ಕಾದರೂ ಹೆಚ್ಚಿಸಬೇಕೆಂತಲೂ ಮುಂತಾಗಿ ಹೇಳಿದರು.

ಬರೋಡಾ ಗಾಯಕ್‌ವಾರ್ ಮಹಾರಾಜರು ಯೂರೋಪಿನಲ್ಲಿ ರೈಲಿನಲ್ಲಿ ಪ್ರಯಾಣಮಾಡುತ್ತಿದ್ದಾಗ ಆಕಸ್ಮಾತ್ತಾಗಿ ಬಾಯಿಲೆ ಬಿದ್ದು ಮೃತಪಟ್ಟರೆಂತ ಇಂಗ್ಲೆಂಡಿನಿಂದ ತಂತಿ ವರ್ತಮಾನ ಬಂದ ಮರಣದಿನವೇ ಮಹಾರಾಜರು ಮೃತರಾದ್ದಲ್ಲ ಅವರ ಮಗ ಜಯಸಿಂಹರಾವ್ ಗಯಕ್‌ವಾರ್ ಎಂಬವರು ಮೃತರಾದರೆಂತಲೂ ತಿಳಿದಿದೆ.

ಲಾಲಾ ಲಜಪತರಾಯರು ದೇಶದ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ. ನಾಗಪುರ ಕಾಂಗ್ರೆಸ್ಸಿನ ಠರಾವುಗಳನ್ನು ಜಾರಿಗೆ ತರಲು ಮಹಾತ್ಮಾ ಗಾಂಧಿಯಂಥ ಮಹಾಪುರುಷನೇ ಬೇಕೆಂತಲೂ, ಅವರ ಬೋಧನೆಯಂತೆ ದೇಶವು ವರ್ತಿಸಿದ್ದರಿಂದ ದೇಶದಲ್ಲಿ ದೊಡ್ಡ ಜಾಗೃತಿಯಾಗಿದೆಯೆಂತಲೂ ಕಾಂಗ್ರೆಸ್ಸಿನವರು ಕೌನ್ಸಿಲುಗಳಿಗೆ ಹೋಗದ್ದರಿಂದ ಮೋಡರೇಟ್ ಪಕ್ಷದವರು ಕೌನ್ಸಿಲನ್ನು ಉಪಯೋಗಿಸಿ ಅವರಿಗೂ ಅದರ ನಿಷ್ಪ್ರಯೋಜನವು ಬಿದ್ದೇ ಪ್ರಯೋಜನವಾಯಿತೆಂತಲೂ ಮಹಾತ್ಮರನ್ನು ಜೈಲಿನಿಂದ ಬಿಡಿಸುವ ಪ್ರಯತ್ನ ಮಾಡಬೇಕಾದದ್ದೂ, ಅವರ ಅಸಂಪ್ರ ಮಂದಾಳಾಗಿ ದೇಶದ ಕಾರ್ಯ ನಡಿಸುವವರಾ ಅವರಷ್ಟೇ ಶಕ್ತಿ ಇರುವವರೊಬ್ಬರನ್ನು ಕಂಡು ಹಿಡಿಯುವದೂ, ಸರಕಾರವು ಜನರ ಸಂಗಡ ರಾಜಿ ಮಾಡಿಕೊಳ್ಳುವಂತೆ ಮಾಡುವ ಬೇರೆ ಯಾವದಾದರೂ ದಾರಿ ಹುಡುಕುವದೂ, ಇದೇ ತತ್ಕಾಲದ ಕರ್ತವ್ಯಗಳೆಂತಲೂ, ಕೌನ್ಸಿಲಿನಿಂದ ಪ್ರಯೋಜನವಿಲ್ಲವಾದರೂ ದಾಸ್ ನೆಹ್ರು, ಅಜಮಲಖಾನ್ ಎಂಬಂಥವರು ಸರಕಾರದ ಉದ್ಯೋಗಗಳನ್ನು ವಹಿಸಿಕೊಳ್ಳದೆ ಅಸಹಕಾರವನ್ನೇ ಅನುಸರಿಸುವರಿರುವಾಗ್ಯೆ ಕೌನ್ಸಿಲಿಗೆ ಹೋದ್ದರಿಂದ ಕೆಡಕಿಲ್ಲವೆಂತಲೂ ಕಾಂಗ್ರೆಸ್ಸಿನವರು ಪೈಸಲ್ ಮಾಡುವ ಉದ್ದೇಶಗಳನ್ನು ನೆರವೇರಿಸಲಿಕ್ಕೆ ಹೋಗುತ್ತೇವೆನ್ನುವವರನ್ನು ಕೌನ್ಸಿಲಿಗೆ ಚುನಾಯಿಸಬೇಕೆಂತಲೂ ಮುಂತಾಗಿ ಹೇಳಿದ್ದಾರೆ.

ರೈಲ ವೇಗಳಲ್ಲಿ ಯೂರೋಪಿಯನರಿಗೆ ಮಾತ್ರವೆಂತ ಗಾಡಿಗಳನ್ನು ಪ್ರತ್ಯೇಕಿಸಿ ಇಡಲಿಕ್ಕೆ ರೈಲ್‌ವೇ ಕಂಪೆನಿಗಳಿಗೆ ಹಕ್ಕಿದೆಯೆಂತ ಕಲ್ಕತ್ತಾ ಹೈಕೋರ್ಟಿನಲ್ಲಿ ತೀರ್ಪು ಪೈಸಲಾಯಿತು.

ಹಿಂದೂ ಮಹಾಸಭೆಯಲ್ಲಿ ಆದ ತೀರ್ಪುಗಳಿಗೆ ವಿರೋಧವಾಗಿ ಕಾಶಿಯ ಕೆಲವು ಪಂಡಿತರು ಒಂದು ಸಭೆ ಕೂಡಿ ಠರಾವುಗಳನ್ನು ಪಾಸ್ ಮಾಡಿಕೊಂಡಿದ್ದಾರೆ.

ಮಾಯಾವರ ಎಂಬಲ್ಲಿನ ಒಬ್ಬ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯುತ್ತಿದ್ದ ಒಂದು ಕ್ರಿಮಿನಲ್ ಮೊಕದ್ದಮೆಯನ್ನು ಇನ್ನೊಂದು ಹುಕುಂ ಒಬ್ಬರಿಗೆ ಬಾಕಿ ಇಡಬೇಕೆಂತ ಹೈಕೋರ್ಟಿನವರು ಹುಕುಂ ಮಾಡಿ ಹುಕುಮನ್ನು ಟೆಲಿಗ್ರಾಮ್ ಮೂಲಕ ತಿಳಿಸಿದರೂ ಮೊಕದ್ದಮೆಯನ್ನು ಬಾಕಿ ಮಾಡಿದ್ದರಿಂದ ಹುಕುಂ ಉಲ್ಲಂಘನೆಗೆ ಮೇಜಿಸ್ಟ್ರೇಟರನ್ನು ಜೈಲಿಗೆ ಕಳುಹಿಸಬೇಕೆಂತ ಹೈಕೋರ್ಟಿನವರು ಮೊಕದ್ದಮೆ ನಡಿಸುವದರಲ್ಲಿ ಮೇಜಿಸ್ಟ್ರೇಟರು ಕ್ಷಮೆ ಕೇಳಿಕೊಂಡದ್ದರಿಂದ ನ್ಯಾಯ ಖರ್ಚು ಮೇಜಿಸ್ಟ್ರೇಟರನ್ನು ಕೊಡಬೇಕೆಂತ ಪೈಸಲ್ ಮಾಡಿ ಅವರಿಗೆ ಕುಲಾಸ್ ಮಾಡಿದರು.

ಉತ್ತರ ಹಿಂದೂಸ್ಥಾನದಲ್ಲಿ ಸಹರಾನ್ ಪುರ ಎಂಬಲ್ಲಿ ಮೊಹರಮ್ ಮೆರವಣಿಗೆ ಹೋಗುವಾಗ ಅವರ ಮುಂಟಪಕ್ಕೆ ಒಂದು ಅಶ್ವತ್ಥಮರದ ಕೊಂಬೆ ಅಡ್ಡಬರುತ್ತೆಂಬ ಕಾರಣದಿಂದ ಅದನ್ನು ಮುಸಲ್ಮಾನರು ಕತ್ತರಿಸಲು ಪ್ರಯತ್ನಿಸಲು ಪ್ರಯತ್ನಿಸುವಾಗ ಗೊಂದಲವೆದ್ದು ಆ ಊರಿನ ಹಿಂದೂಜನರ ಮನೆಗಳೂ ಅಂಗಡಿಗಳೂ ಕೊಳ್ಳೆ ಹೊಡೆಯಲ್ಪಟ್ಟು ಅಂದಾಜು 10 ಲಕ್ಷ ರೂಪಾಯಿನ ಸೊತ್ತು ಸೂರೆಯಾಗಿದೆಯೆಂತಲೂ ಎರಡು ಚಿಕ್ಕ ಮಕ್ಕಳನ್ನು ಉರಿಯುವ ಬೆಂಕಿಗೆ ಹಾಕಿ ಸುಟ್ಟರೆಂತಲೂ, ಅನೇಕ ಮಕ್ಕಳು ಹಾಳುಭಾವಿಗಳಿಗೆ ಹಾಕಲ್ಪಟ್ಟು ಸತ್ತವೆಂತಲೂ ಇನ್ನೂ ವಿಧವಿಧದ ಮನಮರುಗುವ ಕಾರ್ಯ ನಡದಿದೆಯೆಂತಲೂ ವರ್ತಮಾನ ಬಂದಿದೆ.

ಕನ್ಯಾದಲ್ಲಿ ಏರ್ಪಡಿಸಿದ ಪಕ್ಷಪಾತಕ್ಕಾಗಿ ಜಮ್ನಾದಾಸ್ ದ್ವಾರಕದಾಸರೂ ಮತ್ತು ನಾ ಶಾಸ್ತ್ರಿಗಳೂ ಸಹ ಸಾಮ್ರಾಜ್ಯದ ಪ್ರದರ್ಶ ಕಮಿಟಿ ಮೆಂಬರತನಕ್ಕೆ ರಾಜಿನಾಮೆ ಕೊಟ್ಟಿರುತ್ತಾರೆ.

ಆಗ್ರಾ, ಜಬ್ಬಲ್‌ಪುರ ಮುಂತಾದ ಸ್ಥಳಗಳಲ್ಲೂ ಸಹ ಹಿಂದೂ ಮುಸಲ್ಮಾನ್ ದೊಂಬಿಗಳಾಗಿವೆ.

ಮೌಲಾನಾ ಮಹಮ್ಮದಲ್ಲಿಯವರು ಜಾಮೀನಿನ ಎಂಬಲ್ಲಿ ಬಿಡುಗಡೆ ಹೊಂದಿದಾಗ ಅವರಿಗೆ ಮರ್ಯಾದೆ ಮಾಡಲೆಂದು ಕೂಡಿಸಿದ ಪತ್ರವ್ಯವಹಾರಗಳನ್ನು ತದೆದು ಮಹಾತ್ಮಾ ಗಾಂಧಿಯವರು ಜೈಲಿನಲ್ಲಿರುವವರೆಗೆ ತಾವು ಸಂತೋಷಪಡಕೂಡದೆಂತಲೂ ಚಿಕ್ಕ ಜೈಲಿನಿಂದ ಹಿಂದೂದೇಶವೆಂಬ ದೊಡ್ಡ ಜೈಲಿಗೆ ಬಿಡುಗಡೆಯಾಗಿದೆಯೆಂತಲೂ, ಮಹಾತ್ಮರನ್ನು ಕೂಡಿರುವ ಯೆರವಾಡಾ ಜೈಲಿನ ಬೀಗದ ಕೈ ಕಂಡು ಹಿಡಿಯುವವರೆಗೆ (ಅಂದರೆ ಮಹಾತ್ಮರನ್ನು ಬಿಡಿಸುವವರೆಗು) ತನಗೆ ವಿಶ್ರಾಂತಿ ಇಲ್ಲವೆಂತಲೂ, ಅಸಹಕಾರ ಹಿಂದೂ ಮುಸಲ್ಮಾನ್ ಒಗ್ಗಟ್ಟು ಮುಂತಾದ ತತ್ವಗಳಲ್ಲಿ ತನ್ನ ನಂಬಿಕೆ ಕಡಿಮೆಯಾಗಿಲ್ಲವೆಂತಲೂ, ಹಿಂದೂ ಮುಸಲ್ಮಾನರನ್ನು ಒಟ್ಟುಗೂಡಿಸಲಿಕ್ಕೆ ಸಾಧ್ಯವಾಗದಿದ್ದರೆ ತನ್ನ ಕರ್ತವ್ಯದಲ್ಲಿ ತಾನು ಸೋತೆನೆಂತಲೇ ಎಣಿಸುತ್ತೇನೆಂತಲೂ ಮುಂತಾಗಿ ಹೇಳಿದ್ದಾರೆ.

ನಾಮದಾರ್ ಶ್ರೀನಿವಾಸಶಾಸ್ತ್ರಿಗಳ ಆರೋಗ್ಯಸ್ಥಿತಿಯು ಚೆನ್ನಾಗಿಲ್ಲದ್ದರಿಂದ ಯಾವ ಚಳವಳಕ್ಕು ಅವರು ಸೇರಕೂಡದೆಂತ ಡಾಕ್ಟರ್ ಹೇಳಿದ್ದಾರಂತೆ. ಪಂಡಿತ ಮದನಮೋಹನ ಮಾಳವೀಯರಿಗೂ ಶ್ರೀಮತಿ ಸರೋಜಿನೀದೇವಿಯವರಿಗೂ ಅನಾರೋಗ್ಯವೇ.

ತಿರುಚಿನಾಪಳ್ಳಿ ಮುನಿಸಿಪಾಲಿಟಿಯಲ್ಲಿ ವೈಸ್‌ರಾಯರಿಗೆ ಎಡ್ರೆಸ್ ಕೊಡಬೇಕೋ ಬೇಡವೋ ಎಂತ ಚರ್ಚೆಯಾಗಿ ಮೆಜಾರಿಟಿಯಿಂದ ಕೊಡಬೇಕೆಂತ ಪೈಸಲಾಯಿತು.

ಬಿಹಾರ ನ್ಯಾಯವಿಧಾಯಕ ಸಭೆಯಲ್ಲಿ ರಾಜಕೀಯ ತಕ್ಸೀರುಗಳ ಕುರಿತು ಶಿಕ್ಷೆಯಾದವರಿಗೆಲ್ಲಾ ಕೌನ್ಸಿಲಿಗೆ ಮೆಂಬರಾಗಲು ಇರುವ ಅಡ್ಡಿಯನ್ನು ತೆಗೆದುಹಾಕಬೇಕೆಂಬ ಠರಾವು ಪಾಸಾಯಿತು.

ವಿದೇಶ.

ಸ್ಟೇಟ್ಸ್‌ಮ್ಯಾನ್ ಎಂಬ ಪತ್ರಿಕೆಗೆ ರೂಹರ್‌ಪ್ರಾಂತ್ಯದ ವಿಷಯಗಳಲ್ಲಿ ಬ್ರಿಟಿಷ್ ಮಂತ್ರಿಮಂಡಲಿಯಲ್ಲಿ ಒಗ್ಗಟ್ಟಿಲ್ಲದ್ದರಿಂದ ಮ|| ಬಾಲ್ಡ್ವಿನ್‌ರು ಮಂತ್ರಿಪದವಿಯನ್ನು ಬಿಡುವ ಸಂಭವವಿದೆಯೆಂತ "ಸ್ಟೇಟ್ಸ್‌ಮ್ಯಾನ್" ಎಂಬ ಪತ್ರಿಕೆಗೆ ವರ್ತಮಾನ ಬಂದಿದೆ.

ರೂಹರ್‌ಪ್ರಾಂತ್ಯವನ್ನು ಫ್ರೆಂಚರು ಸ್ವಾಧೀನಪಡಿಸಿಕೊಂಡಿರುವ ವಿಷಯದಲ್ಲಿ ಯೂರೋಪಿನ ರಾಜ್ಯಗಳೊಳಗೆ ಅತ್ತಿತ್ತ ಕಾಗದ ಪತ್ರಗಳು ಇನ್ನೂ ನಡಿಯುವದರಲ್ಲಿಯೇ ಇದೆ.

ಇಂಡಿಯಾದಲ್ಲಿ ಅಸಹಕಾರವು ನಿಂತುಹೋದ್ದರಿಂದ ವಿಲಾಯಿತಿಯ ಲಂಕಾಶೈರ್ ಎಂಬ ಬಟ್ಟೆ ತಯಾರಿಸುವ ಪ್ರಾಂತ್ಯದವರು ಇಂಡಿಯಾದಲ್ಲಿ ತಮ್ಮ ವ್ಯಾಪಾರ ಬಹುವಾಗಿ ನಡಿಯುತ್ತೆಂಬ ದೊಡ್ಡ ಆಶೆಯಲ್ಲಿದ್ದಾರಂತೆ. ಇದು ಇಂಡಿಯಾದವರನ್ನು ಉಬ್ಬಿಸಿ ಮೋಸಗೊಳಿಸುವದಕ್ಕೆ ಹೇಳುವದೋ ಎಂತ ಕೆಲವರು ಸಂಶಯಪಡುತ್ತಾರೆ.

ನಾಮದಾರ್ ಶಾಸ್ತ್ರಿಗಳು ಕೆನ್ಯಾ ವಿಷಯದ ಚಳವಳದ ಮುಂದಾಳಾದದ್ದಕ್ಕೆ ಅವರ ಪ್ರಿವಿ ಕೌನ್ಸಿಲರ್ ಪದವಿಯನ್ನು ತೆಗೆದುಬಿಡಬೇಕೆಂತ ವಿಲಾಯಿತಿಯ ಒಂದು ಪತ್ರಿಕೆಯು ಹೇಳುತ್ತೆ.

ಗ್ರೀಸ್‌ದೇಶಕ್ಕೆ ಸೇರಿದ ಅಲ್ಬೇನಿಯಾ ಎಂಬ ಪ್ರಾಂತ್ಯದಲ್ಲಿ ಇಟಲಿಯಿಂದ ಹೋಗುತ್ತಿದ್ದ ಮುಖಬೋಧಕರು ಐದು ಜನರನ್ನು ಯಾರೋ ಮರೆಯಲ್ಲಿ ಕೂತಿದ್ದು ಗುಂಡಿನಿಂದ ಹೊಡೆದು ಕೊಂದಿದ್ದಾರೆ. ಇದರಿಂದ ಇಟಲಿಯಲ್ಲಿ ತಬಾ ಮನಸ್ತಾಪ ಹುಟ್ಟಿ ಗ್ರೀಕ ಸರಕಾರದವರು ಇದಕ್ಕೆ ಮನ್ನಣೆಯನ್ನು 24 ಘಂಟೆಯೊಳಗೆ ಕೇಳಿಕೊಳ್ಳಬೇಕೆಂದು ಇಟಲಿಯಿಂದ ಪತ್ರ ಹೋಗಿದೆ.

ಐರ್ಲಾಂಡಿನ ಪಾರ್ಲಿಮೆಂಟಿಗೆ ಮೊನ್ನೆ ತಾನೇ ದಂಗೆಗಾರಿಯಾದ ಸುಪ್ರಸಿದ್ಧ ಡಿವೇಲೇರಾಯವರು ಕ್ಲಾರ್ ಎಂಬ ಪ್ರಾಂತ್ಯದಲ್ಲಿ ಅವಶ್ಯವಿರುವ ಮೂರರಷ್ಟು ವೋಟ್ ಸಿಕ್ಕಿ ಚುನಾಯಿತರಾಗಿದ್ದಾರೆ.

ಕಾನಡಾ ದೇಶದಲ್ಲಿ ಚೈನಾದವರೂ ವಿದ್ಯಾರ್ಥಿಗಳೂ ವ್ಯಾಪಾರಿಗಳೂ ಮಾತ್ರ ಬರಬಹುದೆಂತಲೂ ಅವರ ಮನೆಯವರು ಮಕ್ಕಳು ಸಹ ಬರಕೂಡದೆಂತ ಮಾಡಿದ ಹುಕ್ಕುಮಿನ ಸಂಬಂಧವಾಗಿ ಆ ದೇಶದಲ್ಲಿದ್ದ ಚೀನಾ ರಾಯಭಾರಿಯನ್ನು ಚೈನಾದೇಶಕ್ಕೆ ವಾಪಸು ಕರೆಸಿಕೊಂಡಿದ್ದಾರೆ.

ಅಮೇರಿಕಾದವರಿಗೆ ಕಪ್ಪು ಜನರಮೇಲೆ ಎಷ್ಟರಮಟ್ಟಿಗೆ ಕ್ರೋಧವಿದೆಯೆಂದರೆ—ಪೋವರ್ ಪಟ್ಟಣದಲ್ಲಿ ನೀಗ್ರೋ ಜನಾಂಗದ ರಾಜರ ಮನೆತನದವರು ಕೆಲವರನ್ನು ಅಮೇರಿಕಾದವರು ಕಂಡು ಅವರ ಮೇಲೆ ಬಿದ್ದು ಹಿಂಸೆಪಡಿಸಿದ್ದಾರೆ.

ಗ್ರೀಕ್ ದೇಶದೊಳಗೆ ಇಟಲಿ ಮುಖಬೋಧಕರನ್ನು ಕೊಂದ ಸಂದರ್ಭದಲ್ಲಿ ಇಟಲಿಗೂ ಗ್ರೀಕಿಗೂ ಯುದ್ಧವಾಗುತ್ತೆ ಎಂಬುವಂತೆ ತಾ|| 1-9-22 ರ ವರ್ತಮಾನವಿದೆ.

ವಿಮರ್ಷೆ-ಆರೋಗ್ಯಚಂದ್ರಿಕೆ.

ನಾವು ಈಗ್ಗೆ ಕೆಲವು ವಾರಗಳಿಂದ ಒಂದೆರಡು ನಗಳನ್ನು ಪ್ರಕಟಿಸುತ್ತಿದ್ದ ಶ್ರೇಷ್ಠ ಮಾಸಪತ್ರಿವ "ಆರೋಗ್ಯಚಂದ್ರಿಕೆ" ಯ ಮೊದಲನೇ ಸಂಯು ನಮ್ಮ ಕೈಸೇರಿದೆ. ನಮ್ಮ ವಿಮರ್ಷೆ ಪ್ರ ಇದರ ಲೇಖನಗಳೆಲ್ಲಾ ಉತ್ತಮವಾಗಿಯೂ ಮಾ ಆರೋಗ್ಯ ಪಾಲನೆಗೆ ಅವಶ್ಯವಾಗಿಯೂ ಇರುವು ಈ ಸಂಚಿಕೆಯ ಲೇಖನಗಳಲ್ಲಿ "ಮಲೇರಿ ಎಂಬ ಮೊರೆ ಜ್ವರಗಳ ನಿವಾರಣೆ, ಗರ್ಭಿಣಿಯ ರೋಗ್ಯ, ಎಳಮಕ್ಕಳಿಗೆ ಆಹಾರ ಕೊಡುವುದು, ಯವೆಂದರೇನು? ಕಾಫಿ ಎಂಬೀ ವಿಷಯಗಳನ್ನು ರು ಓದಿ ತಿಳಿದುಕೊಳ್ಳುವುದು ಅವಶ್ಯವಿದೆ. ಇ ಒಂದೆರಡು ಲೇಖನಗಳನ್ನು ಬರುವ ವಾರ ಪ್ರಕಟಿಕೆಂದಿದ್ದೇವೆ. ವಾಚಕರು ಇಂತಹ ಉತ್ಕೃಷ್ಟ ಕೆಯನ್ನು ಪ್ರೋತ್ಸಾಹಿಸಿದುದಾದರೆ, ಆರೋಗ್ಯಾಭಿಗೆ ಹೆಚ್ಚು ಹೆಚ್ಚು ಅವಕಾಶಕೊಟ್ಟಂತಾಗುವುದೆಂದು ಹೇಳಬೇಕಾಗಿಲ್ಲ. ಆರೋಗ್ಯಬಲವೇ ದೇಶಬಲ

ಕುಮಾರವ್ಯಾಸ ಮಹಾಕವಿ.

(ಬರೆದು ಬಂದದ್ದು.)

ಹಿಂದಿನ ಕರ್ನಾಟಕ ಕವಿಗಳ ಜೀವನ ಚರಿತ್ರೆಯನ್ನು ೂ ಸಂಗ್ರಹಿಸದಿರಲು ನವನಾಗರಿಕ ದೀರ್ಘೋತ್ಸಕರಾದ ಗೀಗೆ ಈಗ ಪಶ್ಚಾತ್ತಾಪವುಂಟಾಗಿದೆ. ಅನೇಕ ಚರಿತ್ರ ು ನಾನಾ ವಿಧಗಳಿಂದ ಕವಿಗಳ ಚರಿತ್ರೆಯನ್ನು ಸಂ ವಾಗಿ ಸಂಗ್ರಹಿಸಿರುವರು. ಎಲ್ಲವೂ ಸಂಶಯಾಸ್ಪದ ರುವುದರಿಂದ ಇನ್ನೂ ಅನೇಕ ನಿದರ್ಶನಗಳಿಂದ ಕವಿ ಗಳು ಹಲವು ವಿಧವಾಗಿ ನಮಗೆ ತಿಳಿಯುತ್ತಿರುವುದು. ಮಹಾಭಾರತ ಗ್ರಂಥಕರ್ತರಾದ ಕುಮಾರವ್ಯಾಸ ಬಿರುತ ಶ್ರೀ ನಾರಣಪ್ಪ ಮಹಾಕವಿಯು ಮಾಧ್ವನೆಂದೂ ಕೆಲವರು ಸ್ಮಾರ್ತಬ್ರಾಹ್ಮಣನೆಂದೂ ಸಂಶಯದಿಂದ ವರು. ಆದರೆ ಎರಡು ಕಡೆಯವರು ಅವರ ಊಹನೆಗೆ ಕ ನಿದರ್ಶನಗಳನ್ನು ತೋರಿಸುವುದರಿಂದ ನಾವು ಎದ ವಿಮರ್ಶಿಸುವಲ್ಲಿ ವಾಚಕರಿಗೆ ಯಾವುದು ಸರಿ, ಯಾ ತಪ್ಪೆಂಬೀ ಊಹೆಗಳು ಕಲಿದೋರದೆ ಹೋಗುವುದ ಅವರಚರಿತ್ರೆಯು ಪಾರಕರಅವಗಾಹನೆಗೆ ಇನ್ನು ವಿಶದ ತಿಳಿಯಲಾರದೆಂಬಭಯವು ನಮಗೆಲ್ಲರಿಗೂಕಲೆದೋರಿದೆ. ಕುಮಾರವ್ಯಾಸ ಕವಿಯು ಕೃಷ್ಣರಾಜನ ಆಸ್ಥಾನದ ೆಂದು ಕೆಲವರಿಂದಲೂ, ಕವಿಚರಿತ್ರೆಯಲ್ಲಿ ಕೃಷ್ಣರಾಜನ ನವರಾದ ದೇವರಾಯನ ಕಾಲದಲ್ಲಿದ್ದವನೆಂದೂ ತಿಳಿ ಯುವುದು. ಆದುದರಿಂದ ಇವನ ಜೀವನ ಕಾಲವೂ ದ್ದೆಂದು ಇನ್ನೂ ಚೆನ್ನಾಗಿ ತಿಳಿದು ಬಂದಿಲ್ಲ.

ಇವನ ವಿಷಯವಾಗಿರುವ ಒಂದು ಕಥೆಯಿರುವುದು ರವ್ಯಾಸನು; ಲಕ್ಷಬ್ರಾಹ್ಮಣ ಸಂತರ್ಪಣಾ ಕಾಲ ಪ್ರಶಂಸೆಯಾದ ಪಾಂಡವ ಕೌರವ ಕಥೆಯಿಂದ ಂತ ಬ ಬ್ರಾಹ್ಮಣನೊಬ್ಬನನ್ನು ಭೋಜನಾದನ ತರದಲ್ಲಿ ಳಿಸಿದನು. ಬಹಳ ದೂರ ಹೋದನಂತರ ಅತ್ಯಾತ್ಮ ಅವತಾರಿಯಾದ ಆ ಬ್ರಾಹ್ಮಣನು ಕುಮಾರವ್ಯಾಸನ ನುಗ್ರಹಿಸಿ ಸಮಾಚಾರವನ್ನಾ ರಲ್ಲಿಯಾದರೂ ಅರುಹಿದ ು ದೊರೆಯಲೆಂದು ಶಾಪ ಕೊಟ್ಟು ಮಾಯವಾದನು. ದೇವರಾಯನ ಆಸ್ಥಾನದಲ್ಲಿ ಚಾಮರಸ ಮತ್ತು ಕುವ್ಯಾಸ ಎಂಬಿಬ್ಬರು ಕವಿಗಳಿದ್ದರು. ರಾಜನಿಂದ ಪ್ರೇದ ಇಬ್ಬರೂ ಕವಿಗಳೂ ಮಹಾ ಭಾರತವನ್ನು ರಚಿಸಿ ಜ್ಞನರ ಮಧ್ಯದಲ್ಲಿ ವಿಮರ್ಶಿಸಲು, ಕವಿಜನರಿಂದ ಚಾನ ರಚನೆಯು ರಸಾಲಂಕಾರಗಳಿಂದ ಶೋಭಿಸುವುದ ಅದೇ ಉತ್ತಮವೆಂದು ಹೇಳಿದರು. ಆದರಿಂದ ಖಿನ್ನ ಕುಮಾರವ್ಯಾಸನು ತನ್ನ ಪತ್ನೀ ಮುಖೇನ ಚಾಮರ ಕವಿತೆಯನ್ನು ದಹಿಸಿ ತನ್ನ ತಿಲಕವನ್ನು ಅದರಿಂದ ಇರಿಂದು ತನ್ನ ಭಾರತವನ್ನೇ ವೃದ್ಧಿಗೊಳಿಸಿದನು. ಇದ ವ್ಯಸನಗೊಳ್ಳದೆ ಬೇರೊಂದು ಗ್ರಂಥವನ್ನು ಚಾಮರ ರಚಿಸಿ ರಾಜ ಸನ್ನಿಧಿಯಲ್ಲಿಡಲು; ಆನೆಯ ಮೇಲೆ ಕೂ ಚಾಮರಸನಿಗೆ ಊರಿನಲ್ಲಿ ಮೆರವಣಿಗೆಯಾಯಿತು. ಾರವ್ಯಾಸನ ಕವಿತೆಯಿಂದ ಸಂತೋಷಿತನಾಗಿದ್ದ ರಾ ಕವಿಗೆ ಕನಕಾಭಿಷೇಕವನ್ನು ಮಾಡುವುದಾಗಿ ನಿಶ್ಚ ದ್ದನು. ಆದರೆ ಚಾಮರಸನ ಪ್ರೇರಣೆಯಿಂದ ಅದು ವಾಗಿ ನಿಲ್ಲಿಸಲ್ಪಟ್ಟಿತು. ಕುಮಾರವ್ಯಾಸಕೃತ ಮಹಾ ತವು ವಿದ್ವಜ್ಜನರಿಂದ ಅನುಗ್ರಹೀತವಾಯಿತು. ಇದ ಮಹಾ ಸಂತೋಷಿತನಾದ ಕವಿಯು ತನಗೊದಗಿ ಅ ಮ ಸಂದರ್ಭವನ್ನು ತನ್ನ ಸ್ನೇಹಿಗಳೊಡನೆ ಒಹಿರಂ ಸಲು ಅದೇ ಕಾರಣದಿಂದ ಅಸು ದೊರೆದನು.

ಇಂಥ ಮಹಾಕವಿಗಳ ಚರಿತ್ರೆಯನ್ನು ಓದಲೂ ಕೇಳ ಬಹು ರಮ್ಯವೆನಿಸುವುದಿಲ್ಲವೆ. ವಾಚಕರೆ ನೀವೆಲ್ಲರೂ ಭಾಷಾಭಿಮಾನಿಗಳಾಗಿ ಭಾಷಾಸೇವೆಯಲ್ಲಿ ನಿರತ ಬೇಕಲ್ಲವೆ. ಬಹು ಹಿಂದಿನ ಕಾಲದಿಂದಲೂ ಮಹಾ ಕವಿಗಳಿಂದ ಸೇವಿಸಲ್ಪಡುತ್ತಿರುವ ಮತ್ತು ಅವರ ಲಂಕಾರಗಳಿಂದು ಭೂಷಿತಳಾದ ಕರ್ನಾಟಕ ಮಾತೆ ನಾವು ಪುರಸ್ಕರಿಸಬೇಕಲ್ಲವೆ?

ರವೀಂದ್ರನಾಥ ಟಾಗೂರರ ಪತ್ರ—ಮೊಡರ್ನ್ ರಿವ್ಯೂವಿನಿಂದ—(೧೩ ನೇ ಸಂಚಿಕೆಯಿಂದ ಮುಂದರಿಸಿದ್ದು.)

ಆದರೆ ಚಿಕ್ಕ ಮನಸ್ಸಿನ ಇಂಗ್ಲೀಷ್ ಮನುಷ್ಯನು ಚಲಿಸುವದಿಲ್ಲ. ಇದ್ದ ಸ್ಥಿತಿಯಲ್ಲೇ ಇರಬೇಕೆಂತ ಆತನು ವಿಧಿಸಿರುವ ದೇಶಕ್ಕೆ ಅನೇಕ ಶತಮಾನಗಳವರೆಗೆ ಕಟ್ಟಲ್ಪಟ್ಟಿದ್ದಾನೆ. ಆತನ ಜೀವನದ ಒಂದು ಭಾಗದಲ್ಲಿ ತನ್ನ ಉದ್ಯೋಗದ ಬಲವು ತೋರಬರುತ್ತದೆ. ಇನ್ನೊಂದು ಭಾಗದಲ್ಲಿ ತಾನು ಸುಖಿಸುವದು ತೋರಿಬರುತ್ತದೆ. ಮೊದಲಿನ ಭಾಗದಲ್ಲಿ ಇಂಡಿಯಾವನ್ನು ತನ್ನ ಆಯುಧದ ಬಲದಿಂದಲೂ, ವ್ಯಾಪಾರದ ಕುಶಲತೆಯಿಂದಲೂ ಇಂಡಿಯಾ ದೇಶವನ್ನು ತನ್ನ ಕೈಯಲ್ಲಿ ಇಟ್ಟುಕೊಂಡಿದ್ದಾನೆ. ಇನ್ನೊಂದು ಭಾಗವೇನೆಂತ ನಮಗೆ ತಿಳಿಯುವದಿಲ್ಲ. ಆತನೂ ತನ್ನ ಬಹು ಕಾಲದ ಅನುಭವಕ್ಕೆ ಯಾವದೂ ಸರಿಯಿಲ್ಲವೆನ್ನುತ್ತಾನೆ. ಇಂಡಿಯಾದ ಬ್ರಿಟಿಷ್ ಚರಿತ್ರೆಯ ಆರಂಭದಲ್ಲಿ ಕೆಲವು ಕುಶಲತೆಯ ಕೆಲಸಗಳನ್ನು ಮಾಡಿದನು. ಅಂದಿನಿಂದ ರಾಜಕೀಯ ಮತ್ತು ವ್ಯಾಪಾರದಲ್ಲಿ ಪಡೆದ ಪ್ರಾಬಲ್ಯಸ್ಥಿತಿಯನ್ನು ಕಾಪಾಡಿಕೊಳ್ಳವದರಲ್ಲೇ ಇದ್ದಾನಷ್ಟೆ. ಬೀಸುವ ಕಲ್ಲನ್ನು ತಿರುಗಿಸುವಂತೆ ಒಂದೇ ತರದ ಕೆಲಸವನ್ನು ಮಾಡಿ ಮಾಡಿ ಪ್ರಪಂಚದ ಅನುಭವವನ್ನು ಕುಂಟಾ ಪಡೆದಿದ್ದಾನೆ. ತನ್ನ ಉದ್ಯೋಗವನ್ನು ಜಬಾಯಿಸುವದರಲ್ಲಿ ತಪ್ಪಿಲ್ಲದೆ ನಡಿಸುವದೇ ಪ್ರಪಂಚದಲ್ಲಿ ಅತ್ಯದ್ಭುತ ಕೆಲಸವೆಂತ ತಿಳಕೊಂಡಿರುತ್ತಾನೆ. ಅಬಲರಾದ ಜನರ ಸಹವಾಸದಿಂದ ವರ್ತಮಾನ ಕಾಲದಲ್ಲಿ ಯಜಮಾನನಾಗಿರುವಂತೆ ಭವಿಷ್ಯತ್ತಿನ ಸ್ವತಂತ್ರ ಸಹ ಇರುವವನೆಂತ ಭಾವಿಸುವಂತೆ ಮಾಡಿದೆ. ಈಗ ಇಲ್ಲಿರುತ್ತೇನೆಂತ ಮಾತ್ರ ಹೇಳುವದೂ ಅಲ್ಲದೆ ಇಲ್ಲೇ ಇರಲಿಕ್ಕೆ ಬಂದಿರುವದೆಂತಲೂ ತಿಳುಕೊಳ್ಳುತ್ತಾನೆ.

ದೊಡ್ಡ ಮನಸ್ಸಿನ ಇಂಗ್ಲೀಷು ಮನುಷ್ಯನ ಧರ್ಮಬುದ್ಧಿಯೇ ಕಾಪಾಡತಕ್ಕದೆಂತ ನಂಬಿ ಚಿಕ್ಕಮನಸ್ಸಿನ ಇಂಗ್ಲೀಷ್ ಮನುಷ್ಯನ ಸ್ವಾಧೀನ ಇರುವ ಶಕ್ತಿಯನ್ನೆಲ್ಲಾ ಮರೆತು ಅವನಿಗೆ ಪ್ರತ್ಯುತ್ತರ ಕೊಡಲಿಕ್ಕೆ ನಮ್ಮ ಜನರು ಪ್ರಾರಂಭಿಸಿದ್ದಾರೆ. ಕೆಲವುವೇಳೆ ಪೂಜಾರಿಯನ್ನು ತೃಪ್ತಿಗೊಳಿಸಲಿಕ್ಕೆ ಬೇಕಾಗುವ ಸಾಮಗ್ರಿಗಳು ದೇವರಿಂದ ಸಿಕ್ಕಬಹುದಾದವರ ಪ್ರಸಾದಕ್ಕಿಂತ ಹೆಚ್ಚಿಗೆ ಬೆಲೆಯುಳ್ಳದ್ದಾಗಬೇಕಾಗುತ್ತೆಂಬದನ್ನು ನಮ್ಮ ಜನರು ಮರೆತಿದ್ದಾರೆ. ಈ ಮಧ್ಯಸ್ಥನ ಶಕ್ತಿ ಉಪಯೋಗದ ಉದಾಹರಣೆಗಳನ್ನೂ, ಅವನ ಸ್ವಭಾವಗುಣವನ್ನೂ ಸ್ವಲ್ಪ ವಿಚಾರಿಸೋಣ. ಆನ್ನಿ ಬಿಸೆಂಟಮ್ಮನು ತಪ್ಪಿತಸ್ಥಳೆಂತಲೇ ಊಹಿಸೋಣ. ಆದರೆ ಅವಳ ತಪ್ಪನ್ನು ದೊಡ್ಡ ಮನಸ್ಸಿನ ಇಂಗ್ಲೀಷ್ ಮನುಷ್ಯನು ಕ್ಷಮಿಸಿದ್ದನು. ಇದಕ್ಕಾಗಿ ಚಿಕ್ಕ ಮನಸ್ಸಿನ ಇಂಗ್ಲಿಷ್ ಮನುಷ್ಯನು ಹುಟ್ಟಿಸಿದ ಭೂಕಂಪವು ಪಾರ್ಲಿಮೆಂಟನ್ನೇ ಅಲುಗಿಸಿತು. ಚಿಕ್ಕ ಮನಸ್ಸಿನ ಇಂಗ್ಲಿಷ ಮನುಷ್ಯನಿಗೆ ಕ್ಷಮಿಸುವದು ಎಂಬ ದೊಡ್ಡ ತಪ್ಪನ್ನು ಸಹಿಸಲಿಕ್ಕಾಗುವದಿಲ್ಲ. ಅಕ್ರಮವಾಗಿ ಶಿಕ್ಷೆ ಕೊಟ್ಟರೂ ಕೇಳುವದಿಲ್ಲ. ಶಿಕ್ಷೆ ಕೊಟ್ಟಾಗಲೆಲ್ಲಾ ತಪ್ಪು ಅದಕ್ಕೆ ಹಾಲುವಾಗಿ ಇರಲೇಬೇಕೆಂತ ಅನ್ನುತ್ತಾನೆ. ಇದಕ್ಕೆ ವಿರೋಧವೇನಾದರೂ ಹೇಳುವವನು ಎಕ್ಸ್ಟ್ರೀಮಿಸ್ಟ್ ಅಂದರೆ ದುಡುಕಿ ಹೋಗುವನೆಂತ ಕರೆಯಲ್ಪಡುತ್ತಾನೆ! ಮತ್ತು ಇಂಪೀರಿಯಲ್ ನ್ಯಾಯವಿಧಾಯಕ ಸಭೆಯಲ್ಲಿ ಪಂಜಾಬ್ ಗವರ್ನರ್ ಸಾಹೇಬರು ಇಂಡಿಯಾ ಜನರ ಮೇಲೆ ಬಾಯಿಗೆ ಬಂದಂತೆ ಆಕ್ಷೇಪಿಸಿದಾಗ ವೈಸ್‌ರಾಯ್ ಸಾಹೇಬರು ನವರಿಗೆ ಸಮಾಧಾನದ ಬುದ್ಧಿವಾದ ಹೇಳಬೇಕಾಗಿ ಬಂತು. ಈ ಬುದ್ಧಿವಾದದಿಂದ ಚಿಕ್ಕಮನಸ್ಸಿನ ಇಂಗ್ಲೀಷು ಮನುಷ್ಯನಿಗೆ ತಡೆಯಲಾರದಷ್ಟು ದೊಡ್ಡ ಪೆಟ್ಟಾಯಿತು. ಇಂಡಿಯಾದ ಆಳರಸರಮೇಲೆ ಕೆಲವು ಇದ್ದ ಸಂಗತಿಗಳನ್ನು ಮೋರ್ಲೇಗವ್ಯ ಸಾಹೇಬರು ಸ್ಟೇಟ್ ಸೆಕ್ರೆಟರಿಯಾಗುವ ಮುಂಚೆ ಆಡಿದ್ದರಿಂದ ಹುಟ್ಟಿದ ಸುಂಟರಗಾಳಿಯು ಸ್ಟೇಟ್ ಸೆಕ್ರೆಟರಿಯವರ ಪದವಿನ ತುಗುಳಿಯನ್ನೇ ಹಾರಿಸಿಬಿಟ್ಟಿತು. ಈ ರೀತಿಯು ಚಿಕ್ಕ ಮನಸ್ಸಿನ ಇಂಗ್ಲೀಷ್ ಮನುಷ್ಯನ ಪದವಿನ ಬಲವನ್ನು ಲಾರ್ಡ್ ರಿಪನ್, ಲಾರ್ಡ್ ಹಾರ್ಡಿಂಜ್ ಪ್ರಭುಗಳ ಕಾಲದಲ್ಲಿ ಮಾತ್ರವಲ್ಲ ಲಾರ್ಡ್ ಕ್ಯಾನಿಂಗ ಲಾರ್ಡ್ ಬೆಂಟಿಂಕರ ಕಾಲದಿಂದಲೇ ನೋಡುತ್ತೇವೆ.

ಆದ್ದರಿಂದಲೇ ನಮ್ಮ ಜನರಿಗೆ ನಾನು ಪುನಃ ಪುನಃ ಎಚ್ಚರಕೊಡುವದು ಹೇಗೆಂದರೆ— ಇಷ್ಟರ ಪಟ್ಟಿಗೆ ಪದವಿಗೆ ಎದುರುನಿಲ್ಲುವಂತೆ ಯಾವದು ನಿಮಗೆ ಧೈರ್ಯಕೊಟ್ಟದ್ದು? ನಿಮ್ಮ ಬಲವೋ? ನಿಮಗೆ ಬಲವೇನೂ ಇಲ್ಲ. ನಿಮ್ಮ ಕೂಗೋ? ನೀವು ತಿಳಕೊಂಡಷ್ಟು ಬಲವಾಗಿಲ್ಲ. ಯಾರಾದರೂ ಸಹಾಯಕರಿದ್ದಾರೋ? ಅದು ಬರೀ ಊಹಿಕೆ. ನಿಮ್ಮ ಉಪ್ಪೇಕವು ಧರ್ಮ ಯುಕ್ತವಾಗಿದ್ದರೆ ಅದೇ ನಿಮ್ಮನ್ನು ಕಾಪಾಡಬೇಕು. ಸ್ವೇಚ್ಛೆಯಿಂದ ಕಷ್ಟವನ್ನು ಅನುಭವಿಸುವ ನಿಮ್ಮ ಹಕ್ಕನ್ನು ಯಾರಿಂದಲೂ ತೆಗೆಯಲಿಕ್ಕಾಗುವದಿಲ್ಲ. ಕಲ್ಲುಮುಳ್ಳು ತುಂಬಿದ ದಾರಿಯಾದರೂ ಅಂತ್ಯದಲ್ಲಿ ಸತ್ಯಕ್ಕಾಗಿಯೂ ಧರ್ಮಕ್ಕಾಗಿಯೂ ಆತ್ಮವನ್ನೇ ಅರ್ಪಿಸಿದರೆಂಬ ಜಯವು ಇರುತ್ತದೆ. ಅಂತ್ಯದಲ್ಲಿ ವಿನಾದರೂ ವರಪ್ರಸಾದ ಸಿಕ್ಕಿದರೆ, ಅದು ನಿಮ್ಮ ಮನಸ್ಸಾಕ್ಷಿಯಿಂದಲೇ ನಿಮ್ಮ ಒಳಗಿರುವ ದೇವರಿಂದಲೇ ಸಿಕ್ಕಿದಂತಾಗುತ್ತೆ. ಇಂಡಿಯಾ ಸರಕಾರವು ಇಂಡಿಯನ್ನರ್ಕ್ಕೆ ಏನಾದರೂ ವರಪ್ರಸಾದ ಪಡೆಯುವೆವೆಂಬ ಪ್ರಯತ್ನಕ್ಕೆ ಸಹಾಯಕವಾಗಿದೆ ಎಂತ ಸಂದೇಹ ಹುಟ್ಟಿದ್ದರಿಂದ ಇಂಡಿಯಾದಲ್ಲಿರುವ ಇಂಗ್ಲೀಷರು ಕ್ರೋಧಯುಕ್ತನಾಗುವರೋ ಅದನ್ನು ಹೇಗೆ ಕೇಳುವದನ್ನು ನಾವು ನೋಡಿಲ್ಲವೇ?

"ಸರಕಾರವು ಏಕೆ ಕುಣಿದಾಡುವದಕ್ಕೆ ಹತ್ತಿದೆ. ಸಿಡಿಲು ಮಿಂಚುಹುಟ್ಟಿಸುವ ಇಲಾಖೆಯು ಮಳೆಸುರಿಸಲಿಕ್ಕೆ ಯಾಕೆ ಪ್ರಾರಂಭಿಸಿದೆ?" ಇಂಡಿಯಾದ ಚರಿತ್ರೆಯು ಎಷ್ಟರವರೆಗೆ ಸುತ್ತಬೇಕೆಂತ ಇವರ ಅಪೇಕ್ಷೆ ಇದೆಯೋ ಅದಕ್ಕೆ ವಿಶಾರಿ ಒಂದು ಗೆರೆಯಾದರೂ ದಾಟಿದರೆ ಕಟ್ಟಕೆಂತ ಕೂಗುತ್ತಾರೆ. ಹೀಗೆ ಮಾಡಿದರೆ ಜನರ ಅತೃಪ್ತಿಯು ಗುಪ್ತಗಾಮಿನಿಯಾಗುತ್ತೆ. ಆಗ್ಗೆ ಅದನ್ನು ಕಂಡು ಹಿಡಿಯುವ ಪ್ರಯತ್ನದಲ್ಲಿ ದೇಶದ ಎದೆಯನ್ನೇ ಸೀಳಬೇಕಾಗುತ್ತೆ.

ಕೊಡಗಿನಲ್ಲಿಯೂ ದಕ್ಷಿಣಕನ್ನಡ ಮತ್ತು ಮಲಬಾರುಜಿಲ್ಲೆಗಳಲ್ಲಿಯೂ ಪ್ರವಾಹದ ದೆಸೆಯಿಂದ ನಷ್ಟ ಉಂಟಾಗಿರುವ ಜನಗಳ ಕಷ್ಟನಿವಾರಣೆಗಾಗಿ ಉದಾರ ಮನಸ್ಸಿನಿಂದ ಚಂದಾ ಕೊಟ್ಟ ಮಹನೀಯರ ತಪಶೀಲು ಪಟ್ಟಿ.

ನಂಬರು	ಸಹಾಯಮಾಡಿದ ಅವರುಗಳ ಹೆಸರು	ಮೊಬಲಗು
	ಕಳೆದವಾರದಿಂದ ಮುಂದರಿಸಿದ್ದು	ರೂ. 110
31	ಮೆ|| ಪಿ ಸೋಮಯ್ಯನವರು	ಆಣೆ 8
32	ಯಂ. ಮುಂಡಪ್ಪನವರು	ಆಣೆ. 4
33	ಬಿ ಚಂಗಪ್ಪನವರು	ಆಣೆ. 8
34	ಪಿ ಎ ಕಾರ್ಯಪ್ಪನವರು	ಆಣೆ. 4
35	ಎಚ್. ಸಿ. ರಾಜರವರು	ಆಣೆ 8
36	ಯು ಆರ್. ಸುಬ್ಬನ್ನಯ್ಯನವರು	ಆಣೆ. 8
37	ನಾರಾಯಣರಾವುರವರು	ರೂ. 1
38	ಜಿ. ಸುಬ್ಬಯ್ಯನವರು	ರೂ 1
39	ಎನ್. ಕೆ ನಂಜಪ್ಪನವರು	ರೂ. 1
40	ಬಿ. ಪೊನ್ನಪ್ಪನವರು	ರೂ 1
41	ಸುಬ್ಬಯ್ಯನವರು	ಆಣೆ 8
42	ಡಿ. ಆರ್. ಜೋಸಿಯವರು	ಆಣೆ. 8
43	ಕೆ. ಮಾದಪ್ಪನವರು	ರೂ. 1
44	ಕೆ. ಯನ್. ಸುಬ್ಬರಾಯರವರು	ರೂ. 5
45	ಯಂ ಭುಜಂಗರಾಯರವರು	ರೂ. 10
46	ಯಂ. ಕಾರ್ಯಪ್ಪನವರು	ಆಣೆ. 8
47	ಕೊಲ್ಲಿರ ಸುಬ್ಬಯ್ಯನವರು	ಆಣೆ. 8
48	ಕೆ. ದೇವಯ್ಯನವರು	ರೂ. 1
49	ಎ ಆರ್ ನಾಯುಡುಯವರು	ರೂ. 3
50	ಶ್ರೀರಾಮನಾಗಪ್ಪ ಶೆಟ್ಟಿ	ರೂ. 2
1	ಕೆ ಯಂ. ಅಯ್ಯಣ್ಣನವರು	ಆಣೆ. 8
52	ಬಿ. ಪ್ಯಾಪ್ಲಿನ್'ರವರು	ಆಣೆ. 4
53	ಯಂ. ಅಬ್ದುಲ್ಲರವರು	ಆಣೆ 4
54	ಇದ್ದಿನ್' ಬೇರಿಯವರು	ರೂ. 1
55	ಎನ್. ಯಸ್' ತಮ್ಮಯ್ಯನವರು	ರೂ. 1
56	ಎನ್ ಯಸ್'. ಪೆರ್ನಾಂಡಿಸ್'ರವರು	ರೂ. 2
57	ಚಿನ್ನಸ್ವಾಮಿಯವರು	ಆಣೆ. 4
58	ಪಿ ಯಸ್. ಚಿಟ್ಟಿಯಪ್ಪನವರು	ರೂ. 1
59	ಆರ್. ಅಣ್ಣಪ್ಪಯ್ಯನವರು	ಆಣೆ. 4
60	ಇ. ಎ. ಟಂಗೇರವರು	ರೂ. 1
	ಜುಮ್ಲಾ	ರೂ. 168

(ಮುಂದುವರಿಯುವುದು.)

ಕೊಡಗು ಜಮಿನ್ದಾರರ ಸಂಘ.

(ಪ್ರಚಾರಕ ಕಾರ್ಯದರ್ಶಿಯವರಿಂದ.)

ವಾಚಕ ಮಹಾಶಯರೇ,

ಕಳೆದ ಸಂಚಿಕೆಯಲ್ಲಿ ಸುಮಾರು ಎರಡು ತಿಂಗಳಿಂದ ದೇಶದಲ್ಲಿ ಅತಿ ವೃಷ್ಟಿಯಿಂದುಂಟಾಗಿರುವ ನಷ್ಟಕಷ್ಟಗಳನ್ನು ತಿಳಿದು, ಕಷ್ಟಕಾಲದಲ್ಲಿ ಧೈರ್ಯಗುಂದದೆ ಗ್ರಾಮಗಳಲ್ಲಿ ಅನ್ಯೋನ್ಯ ಸಹಾಯಕರಾಗಿ ಆರಂಭ ಕೆಲಸವನ್ನು ನಡಿಸುವದು ಉಚಿತವೆಂದು ಸಂಘದ ಪರವಾಗಿ ಅಧ್ಯಕ್ಷರ ಕೋರಿಕೆಯ ಪ್ರಕಟನೆಯನ್ನು ಪ್ರಕಟಪಡಿಸಿದೆವು. ಆ ಪ್ರಕಟಣಾ ಪತ್ರದಲ್ಲಿ ಸೂಚಿಸಿದ ಮೇರೆ ಮಡಿಕೇರಿ ಪೆರಂಬಾಡಿ ರಸ್ತೆಯಲ್ಲಿ ವೀರರಾಜೇಂದ್ರಪೇಟೆವರೆಗೆ ಇರುವ ರಸ್ತೆ ಬದಿ ಗ್ರಾಮಗಳಲ್ಲಿ, ಕೆಲವು ಮುದ್ದು ಗ್ರಾಮಗಳ ಒಳಗೆ ಹೋಗಿಯೂ ಮತ್ತು ಕೆಲವು ಗ್ರಾಮಗಳಿಗೆ ದಸ್ಯೆಯಿಂದ ಸ್ವಲ್ಪ ದೂರ ತೋರಿಯೂ ಸಹ ನೋಡಿದ್ದಲ್ಲಿ ನಷ್ಟಕಷ್ಟಗಳು ಇಲ್ಲದಂಥಾ ಗ್ರಾಮಗಳು ಯಾವದು ಕಂಡು ಬರಲಿಲ್ಲವೆಂದು ಸೂಚಿಸಲು ವ್ಯಸನಪಡಬೇಕಾಗಿದೆ. ಈ ನಷ್ಟವು ಯಾವ ಗ್ರಾಮದಲ್ಲಾದರೂ 1500 ರೂಪಾಯಿಗಳಿಗೆ ಕಡಿಮೆ ಇರಲಾರದು. ಕೆಲವು ಗ್ರಾಮಗಳಲ್ಲಿ ಮೂರು, ನಾಲ್ಕು, ಐದು ಸಾವಿರ ರೂಪಾಯಿಗಳ ನಷ್ಟವಿದೆಯೆಂದು ಕಂಡು ಬಂದದ್ದು ದುರಾದೃಷ್ಟವೇ ಸರಿ. ಈ ಪ್ರಕಟಣಾ ಪತ್ರವು ಗ್ರಾ

ಮಗಳಲ್ಲಿ ಸೇರಿದ ನಂತರ, ಧೈರ್ಯದಿಂದ ಬೀಜ ಹಾಕಿದವರೂ ಮತ್ತು ಹೆಚ್ಚಿನ ಪೈರನ್ನು ಕೆಸಿ ಪೈರು ಇಲ್ಲದವರಿಗೆ ಕೊಟ್ಟು ಸಹಾಯಮಾಡಿದಕ್ಕಾಗಿಯೂ, ಮತ್ತು ಇನ್ನೂ ಇತರ ರಿಗೋಸ್ಕರವಾಗಿ ಅಗಾಡಿನೆಡದೆ ಪೈರಿಟ್ಟುಕೊಂಡಿರುವವರಿಗೂ ಸಹ ಸಂಘದ ಪರವಾಗಿ ವಂದಿಸಬೇಕಾದದ್ದು ಬಹು ಅವಶ್ಯವಾಗಿದೆ. ಹ್ಯಾಗೂ ಈಗ ತತ್ಕಾಲಕ್ಕೆ ಅನೇಕರು ಭೂಮಿಗಳನ್ನು ಕೈಲಾದಮಟ್ಟಿಗೆ ನೆಟ್ಟುವದರಿಂದ ಬಹಳ ಮಟ್ಟಿಗೆ ಬರುವ ವರ್ಷದ ಕ್ಷಾಮಬಾಧೆಯಿಂದ ಉಂಟಾಗಬಹುದಾದ ಕಷ್ಟವು ನಿವಾರಣೆಯಾಗಬಹುದೆಂದು ಯೋಚಿಸುವ ಆದರೆ ಪ್ರವಾಹದ ನೀರು ಬಿದ್ದು ಒರೆ ಒಡೆದು ಬಿದ್ದದರ ದೆಸೆಯಿಂದ ತೋಡುಗಳು ಒಡೆದು ಗದ್ದೆಗಳಿಗೆ ಉಂಟಾದ ನಷ್ಟಗಳನ್ನು ಸರಿಪಡಿಸಲಿಕ್ಕೆ ಗ್ರಾಮಗಳಲ್ಲಿ ಅನ್ಯೋನ್ಯ ಪರಸ್ಪರ ಸಹಾಯದಿಂದ ಹ್ಯಾಗೆ ನಡೆದುಕೊಳ್ಳಬೇಕೆಂಬದರ ವಿಷಯ ಈಗಿಂದಲೇ ಆಲೋಚಿಸತೊಡಗಬೇಕಾದದ್ದು ಬಹಳ ಅವಶ್ಯ. ಈ ವಿಷಯದಲ್ಲಿ ಸಂಘದ ಕಾರ್ಯನಿರ್ವಾಹಕ ಮಂಡಲಿಯವರು ಶಕ್ತಿ ನಿಗ [illegible] ವೀರರಾಜೇಂದ್ರಪ್ಯಾಟೆಯಲ್ಲಿ ದೇಶದವರ ಒಂದು ಮೀಟಿಂಗು ಮಾಡಿ ಒಂದಿಗೆ ಬೋಧಿಸಿ, ನಂತರ ಗ್ರಾಮಗಳಲ್ಲೂ ಸಹ ಈಗಲಿಂದಲೇ ಬೋಧಿಸಲು ಸುರುಮಾಡುವದ್ದರಿಂದ ದೇಶಕ್ಕೆ ಬಹಳ ಪ್ರಯೋಜನವಾಗುವದೆಂಶಲೂ ಈ ಪ್ರಯತ್ನವನ್ನು ಸಂಘದಾರ ಒಂದಿಕ ಕೈಕೊಳ್ಳಬೇಕೆಂತಲೂ ಸಹ ಅನೇಕರು ವೃದ್ಧರೂ ಮತ್ತು ಅನುಭವಶಾಲಿಗಳಾದವರ ಅಭಿಪ್ರಾಯವಾಗಿರುತ್ತೆ. ಸಂಘವು ದೇಶದ ಅಭಿವೃದ್ಧಿಗಾಗಿರುವ ಕಾರಣ ಈಗ ದೇಶಕ್ಕೆ ಬಿದ್ದಿದಂಥಾ ಕಷ್ಟಕಾಲದಲ್ಲಿ ಹಾಗೆ ಬಂದೊಟ್ಟಿಸಿದ ಕಷ್ಟವನ್ನು ಪರಿಹರಿಸಿಕೊಳ್ಳಬಹುದೆಂದು ಸಂಘದವರು ದೇಶದಕ್ಕೆ ಬೋಧಿಸಿ ಇವ್ಕ್ [illegible] ಹೆಚ್ಚಿನ ಪ್ರಯೋಜನವನ್ನು ಹೊಂದುವದಾಗ ಮಾಡುವದು ಸರಕಾರಕ್ಕೆ ಒಟಕಾಪಿ ಅರ್ಜಿ ಬರಿಯಲಿಕ್ಕೆ ಹೇಳಿಕೊಡುವದಕ್ಕಿಂತಲೂ ಉತ್ತಮವೆಂದು ಹೇಳಿದರೆ ಏನು ತಪ್ಪಾಗಬಹುದು? [illegible] ರೂಪಿತಕ್ಕ ಬೇಕಾಗಿರುವ 1-5 ಲಕ್ಷ ರೂಪಾಯಿಗಳನ್ನು ಟಕಾವಿ ಸಾಲದಿಂದಾಗಲಿ, ಅಥವ ಇತರಿಂದ ಸಾಲ ದೆಗೆದಾಗಲಿ ಮಾಡುವದ್ದರಿಂದ ದೇಶವು ಮತ್ತಷ್ಟು ಕಷ್ಟಕ್ಕೆ ಒಳಗಾಗುವ್ರಗು ಅಲ್ಲದೆ ಕನ್ನಡ ಜಿಲ್ಲೆ ಮುಕ್ಕಾ ಮಲೆಯಾಳ ದಿಂದ ಪ್ರವಾಹದದೆಸೆಯಿಂದ ಅಲ್ಲಿಯೇ ಬೇಕಾದ [illegible] ಸಿಕ್ಕದಾದ ಕಾರಣ ನಮ್ಮ ಹಳ್ಳಿಯ [illegible] ದನ್ನು ಸಿಕ್ಕುವದೂ ಸಂಶಯಾಸ್ಪದ. ಇವೆಲ್ಲಾ ಆರ್ಥಿಕದ ದೃಷ್ಟಿಯಿಂದ ಆಲೋಚಿಸಿ [illegible] ಸ್ಥಿತಿಯನ್ನು [illegible] ಒಡತನವು ಮತ್ತು ಸುಭದ್ರತೆಯೂ ಸಹ [illegible] ಮಾಡಬೇಕಾದದ್ದು ಸಂಘದವರ ಮುಖ್ಯಕರ್ತವ್ಯವಿದು. [illegible] ಸಹಾಯದಿಂದ ಪ್ರಯತ್ನಿಸಿದರೆ [illegible] ಯೋಚಿಸುವ ಅದರ ಅನೇಕರು [illegible] ಕಳೆದುಕೊಂಡವರಿರುವಾರ [illegible] ನ್ಯವೇನೆಂದು [illegible] ಯೋಚಿಸುವ [illegible] ಕಷ್ಟದಲ್ಲಿ [illegible] ವರಿಗೆ [illegible] ಕೊಂಬಲಿಕ್ಕಾಗಿ [illegible] ಒಂದು ಪರಿಹಾರನಿಧಿ (Relief Fund) [illegible] ಏರ್ಪಡಿಸಬೇಕಾದದ್ದು ಅವಶ್ಯವಾಗಿ ಕಾಣುತ್ತೆ. [illegible] ತಿಯಲ್ಲಿ ಸಹಾಯ ನೀಡುವದು [illegible] ಧಾರಣವಾಗಿವೆ [illegible] ಮಾಡುವದು ಅಸಾಧ್ಯ. ಅದರೂ [illegible] ಪಶ್ಚಾತ್ತಾಪಪಡುವ ಮನಸ್ಸಿಗೆ ತೆಗೆದುಕೊಂಡಷ್ಟಕ್ಕೆ [illegible] ಸಹಾಯ ಮಾಡಬಹುದು. [illegible] ಭೂಮಿಗಳಲ್ಲೂ ಸಹ [illegible] ಅಂಥವರು ವಿಕಕಾಲದಲ್ಲಿ ಎಡದು ಕರಿಸಿದ ನಷ್ಟವನ್ನು [illegible] ವದು ಕಷ್ಟವಲ್ಲವೇ? ಆದ್ದರಿಂದ ಈ ವಿಷಯದಲ್ಲಿ [illegible] ಸಂಘದವರು ಚನ್ನಾಗಿ ಆಲೋಚಿಸಿ ಇತ್ಯರ್ಥ ಮಾಡಬೇಕಾಗಿ ಕೋರಿಕೆ.

ಪತ್ರವ್ಯವಹಾರಗಳು.

ಬಾಹ್ಯರಾದು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ [ಎಡಿಟರ್]

ಅಯ್ಯಾ,

ನಮ್ಮ ಈ ಕೊಡಗಿನಲ್ಲಿ, ಎತ್ತುಗಳನ್ನು ಸೋಮವಾರ ಯಾತಕ್ಕಾಗಿ ಹೂಡಬಾರದು, ಮತ್ತು ಎತ್ತುಗಳನ್ನು ಯಾತಕ್ಕಾಗಿ ಗಾಡಿಗೆ ಕಟ್ಟಬಾರದು, ಕೋಣಗಳನ್ನು ಯಾತಕ್ಕಾಗಿ ಹೂಡಬಹುದು, ಕನ್ಯಾದು ಸಂಕ್ರಮಣ ಕಳದ ಮೇಲೆ ಯಾತಕ್ಕಾಗಿ ನಾಟಿ ಕೆಲಸ ಮಾಡಬಾರದು. ಬಿಸು ಸಂಕ್ರಮಣಕ್ಕೆ ಮೊದಲೇ ಯಾತಕ್ಕೆ ಹೂಡಬಾರದು, ಬ್ಯಾರೆ ದೇಶದಲ್ಲು ಹೆಂಗಸರು ಹೂಡುತ್ತಾರೆ, ನಮ್ಮ ದೇಶದಲ್ಲಿ ಅವರು ಯಾತಕ್ಕಾಗಿ ಹೂಡಬಾರದು ಕನ್ಯಾದು ಸಂಕ್ರಮಣಕ್ಕೆ ಯಾವ ಶಾಸ್ತ್ರವಿಧಿಪ್ರಕಾರ ಭೂಮಿಗೆ ಬೊತ್ತು ಹಾಕುವುದು ಒಂದೊಂದು ಕಡೆ ಒಂದೊಂದು ಜೋತ್ತು ಪ್ರಕಾರ ಹಾಕುತ್ತಾರೆ, ಅದು ಯಾಕೆ ಬೀಜ ಬಿತ್ತುವಾಗ್ಯೆ ಆಗೆ ಗದ್ದೆಯಲ್ಲು ಅರಸಿನ, ಕಸ, ಮುಂತಾದ್ದನ್ನು ನಡುವುದು ಯಾಕೆ, ಎಂಬ ಈ ಮೇಲ್ಕಂಡ ಪ್ರಶ್ನೆಗಳಿಗೆ ತಿಳಿದಂತ್ತ ಮಹನೀಯರು ಉತ್ತರ ಕೊಡಬೇಕಾಗಿ ಕೋರಿಕೆ

ಕೆ ಕರುಂಬೈಯ್ಯ.

ಸಂಪಾದಕರೆ,

ಹಾಲಿ ವರ್ಷದ ಹೆಚ್ಚಿನ ಮಳೆಯ ದೆಸೆಯಿಂದಲೋ ಯಾ, ಏನಾದರೂ ಕಾಲಿ ಮಹಿಮೆಯು ಕಟ್ಟೆಯಿಂದಲೋ ಬೆಟ್ಟದ ಕಡೆ ಮತ್ತು ಇತರ ಕಾಫಿ ತೋಟಗಳಲ್ಲು ಎಲೆ ಮತ್ತು ರೆಕ್ಕೆಗಳು ಸಹ ಕರಗಿ ಕಾಫಿ ಜಾಸ್ತಿಯಾಗಿ ನೆಲಕ್ಕೆ ಸುರಿದು ಅನೇಕ ನಷ್ಟ ಬಿಸಿರುತ್ತೆ. ಇದಕ್ಕೆ ಕೆಲವರು ಬ್ಲಾಕ್ ರಾಟ್ ಮತ್ತು ಫಂಗಸ್ ಎಂತಲೂ ಕೆಲವರು ಹಾಲಿ ವರ್ಷದ ಗೊಬ್ಬರದಲ್ಲಿ ಏನೋ ಮೋಸ ಮಾಡಿರುತ್ತಾರೆಂತಲೂ ಹೇಳುತ್ತಾರೆ. ಈಗ ಮಡಿಕೇರಿಯಲ್ಲಿ ಹೊಸದಾಗಿ ಗೊಬ್ಬರ ಕಾರ್ಖಾನೆ ಇಟ್ಟಿರುವ ಮಿ|| ಎಂ. ಎಂ. ಸಿದ್ದೀಕ್ ರವರಾಗಲಿ ಇಲ್ಲವೇ ಎಗ್ರಿಕಲ್ಚರ್ ಕಾಲೇಜಿನಲ್ಲಿ ಓದಿ ಪಾಸಾಗಿ ಬಂದವರಾಗಲಿ ಇದರ ಕಾರಣವನ್ನು ಪತ್ತು ಇದಕ್ಕೆ ತಕ್ಕ ಔಷಧಿ ಇಲ್ಲವೇ ಇಂಥ ಗೊಬ್ಬರವನ್ನು ಉಪಯೋಗಿಸಬೇಕೆಂಬದನ್ನು ನಮ್ಮ "ಕೊಡಗು" ಪೇಪರಿನಲ್ಲಿ ತಿಳಿಸಿದರೆ ಅನೇಕರು ಈ ನಷ್ಟದಿಂದ ಬಿಡುಗಡೆ ಹೊಂದುವರು. ಈ ಬ್ಲಾಕ್‌ರಾಟ್ ಕೊಡಗಿನ ಪೈರಿನ ಬೆಳವಣಿಗೆಗೆ ಬರುವುದಿಲ್ಲವಾಗಿ ಹೇಳುವದು ನಾನು ಕೇಳಿರುತ್ತೇನೆ. ಆದರೆ ಇಲ್ಲಿ ಇನ್ನೂ ಸಣ್ಣ ಗಿಡವಾದ್ದರಿಂದ ಕಣ್ಣಾರೆ ಪರೀಕ್ಷೆ ಮಾಡಿರುವುದಿಲ್ಲ

ಕೆ ಎಂ ಬೆಳ್ಯಪ್ಪ.

ಕೈಲ್ ಮುಹೂರ್ತ ಹಬ್ಬ

ಮಾನನೀಯರೆ,

ಈ ಹಬ್ಬವು ಕೊಡವರಿಗೆ ಒಂದು ಮುಖ್ಯವಾದ ಹಬ್ಬವಾಗಿರುತ್ತೆ. ಈ ಹಬ್ಬವು ಅನಾದಿಯ ನಾಡು ದೇವಸ್ಥಾನಗಳಲ್ಲು [illegible] ಪದ್ಧತಿಯಾಗಿರುತ್ತೆ. ಇದು ಬಹಳ ತಪ್ಪು. ಒಡೀ ಕೊಡಗಿಗೆ ಒಂದೇ ದಿನದಲ್ಲು ಮಾಡ [illegible] ಅತಿ ಅವಶ್ಯವಾಗಿರುತ್ತೆ. ಇದಕ್ಕೆ ಸರಕಾರಿ [illegible] ತಿಂಗಳು ಪದಿನಂಟಕ್ಕೆ ಆಗಿರುತ್ತೆ. [illegible] ನಾಡಿನವರ ಹಬ್ಬವು ೧೨ ಕ್ಕೆ ಕಳಿಯುತ್ತು. [illegible] ಹಬ್ಬವು ೧೩ ರ [illegible] ಬಾಕಿಯಲ್ಲು ೧೮ ಕ್ಕೆ ಆಗಿರುತ್ತೆ [illegible] ದಲ್ಲು ಸಲ್ಲುವ ಹಬ್ಬವನ್ನು ಸಹ ೧೮ ಕ್ಕೆ ನೆ ನಡಸಬೇಕಾಗಿ [illegible] ಲೋಕಲನು ಪಟವರುದಲ್ಲು ಸದರಿ ದಿನವು ಸರಿಬರಲ್ಲ [illegible] ನಾಡಿನವರ ಕೈಲ್ ಮುಹೂರ್ತದ [illegible] ಒಂದನ್ನು ಇದರ ಕೆಳಗೆ ವಿವರಿಸುವೆನು. ಸೆಪ್ಟೆಂಬರ್ [illegible] ನೇ ಇಸವಿ ಆಗಿಸ್ಟು ತಾರೀಖು [illegible] ನೇ ಅಂದರೆ ಚಿಙ್ಗ ಮಾಸ [illegible] ರಲ್ಲು ಜೇಬಾಗಿರುತ್ತೆ ೧೦ ರಲ್ಲು [illegible] ಪ್ಪ ದೇವರ ಆರಾಧನೆಯೂ ೧೮ [illegible] ಮಂಗಳವಾರ ದಿನ [illegible] ಗಂಟೆಗೆ ಆಯುಧ ಪೂಜೆ ಮಾಡಿ ಈ ದಿನ [illegible] ಮಾವಿನ ಮರಕ್ಕೆ [illegible] ಸದರಿ ದಿನ ೧೧ ಗಂಟೆಗೆ ಪೂಮ್ಮೆಯ್ಯ ಎಂ [illegible] ಗೆ ಜನರ ಕೂಡಿಸಿ ಎರಡು ಗಂಟೆಗೆ ಉತ್ಸವ [illegible] ಊರ ಮಾಸ್ತ್ಯದ ಕಾಡಿಗೆ ಬೇಟೆ [illegible] ತೆಂಗಿನ ಕಾಯಿಗಳಿಂದ [illegible] ತೆಂಗ ಹೊಡೆಸಿದಲ್ಲಿ [illegible] ಗೆ ಅಪಾಯವಿಲ್ಲ. ಬೋಡು ಲಂಬು, [illegible] ಮಾನಾಳು ಆಗಿರುವದಿಲ್ಲ. [illegible] ಗಣೇಶಚತುರ್ಥಿ [illegible] ತಿಂಗಳು ೬ ರಲ್ಲು [illegible] ಗೆ ಕರಿಯುವದು [illegible] ನೇ ಮಂಗಳವಾರ ಪೊಳ್ಯ [illegible] ಮಾವಿನ ಮುಂದ [illegible] ಹಾಕುವರು. ಅದೇ ಮರವನ್ನು ಕೈಲಿಗೆ ಕರ್ಣ ಕಾಬು ಹಾಕುವದು. ೧೦ ನೇ ಬುಧವಾರ ನಾಳು ಕಡಿಯಲು ಶುಭವಾಗಿದೆ. ಈ ಮೇರೆ ಹಬ್ಬದ ಪದ್ಧತಿಯಾಗಿರುತ್ತೆ.

ನಾಲ್ಕುನಾಡು ಕೊಡಗ.

ಮಾಚಿಕ ಸಂಪಾದಕರೆ!

ಕೆಲವು ವರ್ಷಗಳ ಹಿಂದೆ ನಮ್ಮ ಕಡಕಾಲು ಗ್ರಾಮವು ಬಹಳ ಹೀನಾವಸ್ಥೆಯನ್ನು ಹೊಂದುತ್ತಾ ನಿರ್ನಾಮವಾಗುವ ಕಾಲವು ಸಮೀಪಿಸುತ್ತಾ ಇತ್ತು. ಇತ್ತೀಚೆಗೆ ಮೂರು ನಾಲ್ಕು ವರ್ಷಗಳ ಬಾಗಮಿತ್ರ ಕೊಡಕಾಲು ಪಾಠಶಾಲೆಗಳಿಗೆಂದು "ಯೂನಿಯನ್" ಏರ್ಪಡಿಸಿಕೊಂಡು ಪ್ರೆಸಿಡೆಂಟರವರ ಉದಾರ ಗುಣದಿಂದಲೂ ಸಹಾಯ ಧಾತಿಯಿಂದಲೂ ಕಮಿಟಿ ಮೆಂಬರುಗಳ ಸಹಾಯದಿಂದಲೂ ದಿನೇ ದಿನೇ ಗ್ರಾಮಸ್ಥರಿಗೆ ಹಿತೋಪದೇಶಗಳನ್ನು ಕೊಡುತ್ತಾ ಅನೇಕರಿಂದ [illegible] ದಾಡಲ್ಪಡುತ್ತಿದೆ. ಈ ಯೂನಿಯನ್ನಿನ ಪ್ರೆಸಿಡೆಂಟರವರು ಬಹಳ ಮುತವರ್ಜಿಯಿಂದ ಪರೋಪಕಾರ್ಯ ಮಾಡಲುಪಕ್ರಮಿಸಿ ಶ್ರದ್ಧೆಯಿಂದ ಎರಡು ಗ್ರಾಮವನ್ನು ಉನ್ನತಸ್ಥಿತಿಗೆ ತರುವಂತೆ ಪ್ರಯತ್ನಿಸುವ [illegible] ಸುಗುಣಕ್ಕೆ ಎಷ್ಟು ವಂದಿಸಿದರೂ ಕಿಂಚಿತವೆ, [illegible] ತಿರಲು; ದೀಪದಡಿಯಲ್ಲಿ ಕತ್ತಲೆಯು ಇದ್ದೇ ಇದೆ. ಮತ್ತು ಸುಗುಣವನ್ನು ದುರ್ಗುಣವು ಹಿಂಬಾಲಿಸುತ್ತಾ ಇರುವದು ವಾಡಿಕೆ. ಈ ಯೂನಿಯನ್ನಿನ [illegible] ಗಳು ಸರಿಯಿಲ್ಲವಂತೆ; ಸಂಘಕ್ಕೆ ಕಳುಹಿಸುವ ಅರ್ಜಿ ಸರ್ಜಿಗಳಿಗೆ ನ್ಯಾಯವಾದ ತೀರ್ಪು [illegible] ವಂತೆ ಸಹಾಯ ಹೊಂದಿಕೊಳ್ಳತಕ್ಕವರು [illegible] ಸತಾವಣೆಯಂತೆ ಇನ್ನೂ ಅನೇಕ ತರದ ಪ್ರ [illegible] ಗಳು ಮಾಡತಕ್ಕದ್ದೇನು, "ಹೋಗ [illegible] ದಾವನ ಒಳಗೆ ಗೋಳ ಸೊಪ್ಪು" ಎಂದಂತಿದ್ದರೂ [illegible] ಬಾರ ಪಡಿಸುವದು ತಪ್ಪೆ? ಆದರೆ ಇನ್ನು ಮುಂದಾದರೂ ತಮ್ಮ ನ್ಯೂನಾರ್ಹಗಳನ್ನು ತಿದ್ದಿ ಸರಿಪಡಿಸಿಕೊಂಡು ಲೋಕೋತ್ತಮವಾದ ಕೀರ್ತಿಯನ್ನು ಪಡೆಯಲು [illegible] ತು ಹೋಗುವರೆ?

ಯೂನಿಯನ್ನಿನ ಪ್ರೆಸಿಡೆಂಟರವರು ಮತ್ತು [illegible] ರುಗಳು ಸಹ ಒಟ್ಟು ಸೇರಿಕೊಂಡು ಕೆಲಸವನ್ನು [illegible] ಡಿಸಲು ಪ್ರಯತ್ನಿಸಿ ಶೀಘ್ರವಾಗಿ ಬಡಜನ ಹಿತ ಪಕಾರಿಗಳಾಗಿ ಮುಂದುವರಿಯಲು ಇವರ ಆರೋಗ್ಯಕ್ಕಾದರೂ ಶ್ರೀ ಭಗವಂತನು ಭಾಗಿಯಾಗಲಾರನೆ!

[illegible]

ಭಯಂಕರವಾದ ಅನಾಹುತ!

ಮಹನೀಯರೇ,

ಕಳೆದ ಆಗಸ್ಟು ತಾ ೧೩, ೧೪ ಮತ್ತು ೧೫ ದಿವಸಗಳಲ್ಲಿ ಉತ್ತರ ಕೊಡಗು ಸೋಮವಾರ [illegible] ನಾಡು ಬಿಳಿಗೇರಿ ಗ್ರಾಮದಲ್ಲಿ, ಈ ವರ್ಷ ಎಂದೂ ನಡೆದಿರದಂತ, ಮಳೆಗಾಳಿಯು ಎಡೆಬಿಡದೆ ಜೋರಾಗಿ ಬಂದದ್ದರಿಂದ ಸುಮಾರು ಒಂದು [illegible] ದೂರದಿಂದ ಭೂಮಿಯು ದೊಡ್ಡ ದೊಡ್ಡ ಕಲ್ಲುಗಳು ಸಮೇತ ಕುಸಿದು ಬಂದು ಈ ಗ್ರಾಮದ ಬನಾಡು, ಗೌಡನ, ಪಿಸನೆಗೋಡಿ, ಬೈರು ಜನ [illegible] ಜತ್ತಿಕ್ಕೇರಿ ಮನೆಗಳವರ ಶೇತ್ರ ಭೂಮಿ [illegible] ಸುಮಾರು ಎಂದಾಜು, ೩೦೦ ಬಟ್ಟಿ ಭೂಮಿಯೂ, [illegible] ರಾ ಮಣ್ಣು, ಮರಗಳು ಕಲ್ಲುಗಳು ಸಹ [illegible] ಭೂಮಿಯ ರೂಪು ಕಾಣದ ಹಾಗೆ ಆಗಿದ [illegible] ನಾಶವನ್ನು ಬಾಯಿಂದ ಹೇಳಿ ಪೂರೈಸಲಿಕ್ಕೆ ಪ್ರದಿಲ್ಲ. ಅಲ್ಲದೆ, ಸುಮಾರು ೧೧ ಬಟ್ಟಿ [illegible] ದ (ಅಗೆ) ಆ ವರೆ ಬತ್ತದ ಸಸಿಯೂ ಪೂರಾ [illegible] ಮುಚ್ಚಿ ಮೇಲೆ ದೆಸೆಯಿಂದ ಆಗೆ ಇಲ್ಲದೆ ಸುಮಾರು [illegible] ಬಟ್ಟಿ ಭೂಮಿಯೂ ಪಾಳುಬಿದ್ದಿದೆ. ಮಹನೀಯ [illegible] ಈ ಗ್ರಾಮವು ಬಹಳ [illegible] ವಾಗಿದೆ. ಅಲ್ಲದೆ [illegible] ಜನರಿಗೆ [illegible] ಮುಂತಾದವು ಜನರಿಗೆ [illegible] ಗೆ ನ್ಯಾಯವಾದ ಊಟಕ್ಕೆ ಇರುವದಿಲ್ಲ [illegible] ಅವಸ್ಥೆಯಲ್ಲಿ ಇದೊಂದು ದೊಡ್ಡ ಅವಸ್ಥೆಯಾಗಿ ದಕ್ಕೆ ಅನೇಕ ಜನರಿಗೆ ಅನ್ನವಿಲ್ಲದೆ [illegible] ದಾರಿ ಬಿದಿದೆ. ಈ ಗ್ರಾಮದ ಪಟೇಲರು, [illegible] ಮೇಲ್ಕಂಡ ಓವರ್‌ಸಿಯರ್, ಮಾಡಿದ್ದರಮೇಲೆ, [illegible] ಒಂದು ರಾಬ್ ರಾಬ್ ಈ ಅನಾಹುತವನ್ನು ನೋಡಿ ನಷ್ಟಪಟ್ಟವರೆನ್ನೆಲ್ಲಾ ಕೇಳಿ ಬರೆದು ಹೋಗಿದ್ದರೆ ಮುಂದೆ ಏನಾಗುತ್ತೊ ಗೊತ್ತಿಲ್ಲ. [illegible] ಅನೇಕ ಜನರು [illegible] ತ್ತಿದ್ದಾರೆ. [illegible] ಘನಸರಕಾರದವರು ಗ್ರಾಮದಲ್ಲಿ ನಷ್ಟಪಟ್ಟಿರುವ ಜನರಿಗೆ, ಅವರ [illegible] ರ್ತ ಭೂಮಿಗಳ [illegible] ವನ್ನು [illegible] ಮಾಪಿ ಕೊಡಬೇಕಲ್ಲದೆ ಈ ಮಣ್ಣು ಮುಚ್ಚಿದ ಭೂಮಿಗಳಿಗೆ ಯಾವಾಗ್ಯೊ ಮಾಪಿ ಕೊಡಬೇಕು. ಈ ನಷ್ಟದಿಂದ ನರಳುತ್ತಿರುವವರಿಗೆ ಜೀವನಕ್ಕಾಗಿ [illegible] ಲ್ಪ ವ್ಯವಸ್ಥೆಯನ್ನು ಸರಕಾರದವರು ಮಾಡುತ್ತಾರೆ [illegible] ಬೇಕಾಗಿ ಬೇಡುತ್ತೇನೆ. ಮತ್ತು ಈ ಮಣ್ಣು ಮುಚ್ಚಿರುವ ಭೂಮಿಗಳನ್ನು ದುರಸ್ತಿಸುವವರಿಗೆ ಸರಕಾರದಿಂದ ಬಡ್ಡಿ ಇಲ್ಲದೆ ರೂಪಾಯಿಗಳನ್ನು ಸಾಲವಾಗಿ ಕೊಡುವಂತೆ ಹುಕುಂ ಆಗಬೇಕು. ನಮ್ಮ ಕಮಿಷನರ್ ಸಾಹೇಬರವರು ಬಂದಾಗಲಾದರೂ ಈ ಅನಾಹುತವನ್ನು ನೋಡಿದರೆ ಕೂಡಲೇ ಅವರ ಮನಸ್ಸು ಕರಗಿ [illegible] ರೈತರಿಗೆ ಅನೇಕ ತರದ ಸಹಾಯವನ್ನು ಮಾಡದೆ ಇರಲಾರರಾಗಿ ನಂಬಿದ್ದೇನೆ

ಬಿ. ಕಾಕೇಪ್ಪ

ಳಗಾಲದಲ್ಲಿ ಕಕ್ಷಿಗಾರರ ಗೋಳು

ಸಂಪಾದಕಯರೇ,

ಮಹಾಶಯರೇ, ಈ ದೇಶವು ಕಂಪೆನಿ ಸುಪರ್ದಿಗೆ ಸೇ ಅಲ್ಲಲ್ಲಿ ನಾಡು ಕಚೇರಿಗಳೂ ಅವ ಸರ ಕಾರೀ ಕಚೇರಿಗಳೂ ಇದ್ದವು. ಇತ್ತೀ ಚೆಗೆ ಬರುತ್ತಾ ಗ್ರಾಮಗಳನ್ನು ನಾ ಕಡಿಮೆ ಮಾಡುತ್ತಾ ಬಂದು ಈಗ ಬ್ರಿಟಿಷ್ ರಿಗೆ ತಾಲೋಕುಗಳನ್ನೇ ತಗೆದು ಹಾಕಿ ಉ ಗು, ದಕ್ಷಿಣಕೊಡಗೆಂದು ಎರಡು ತಾಲೋ ಮಾಡಿದ್ದರಿಂದ, (ಬೊಟ್ಟತ್ ಮಲೆ ಕು ಡಿಯೋಳ್ ' ಅಂದರೆ ಪೂರ್ವಭಾಗ್ಯಗಿಯಿಂದ ಬ್ರಹ್ಮಗಿರಿವರೆಗೆ ಬಂದು ತಾಲೋಕ ಮಾ ಸಾನವಾಗಿ ಮಧ್ಯಭಾಗ್ಯವಾದ ವೀರರಾ ಜಪೇಟೆಯನ್ನು ಮಾಡಿರುತ್ತಾರೆ. ಈ ಲೇಖಕ ನು ಕಳೆದ ಜೂಲೈ ತಾರೀಖು ೨೩-೨೪ ರ ಸಿಂಪ್ ಕೋರ್ಟಿಗೆ ಬಂದು ಸಾಕ್ಷಿಗಾ ಹೋ ಈ ಕೋರ್ಟಿಗೆ ಈ ಎರಡು ದಿನಗಳಲ್ಲಿ ಸ ರು ಜನರು ಕಕ್ಷಿಗಾರು, ಮುಖ್ಯವಾದವರನ್ನು ತೋರಿ ಕೋರ್ಟು ಮುಖಂ ಮೇರೆ ಬಂದ ಮ ರನ್ನು ಸಹ ನೋಡಿದೆನು. ಈ ನ್ಯಾಯಸ್ಥಾನದ , ನ್ಯಾಯಾಧಿಕಾರಿಗೂ ಇವರ ನವುಕರಿಗೂ ಇವರ ರಿಕಾರ್ಡುಗಳನ್ನು ಇಡಲಿಕ್ಕೆ ನ ಸ್ಥಳ ಇವಾಗಿರುತ್ತೆ. ಕಕ್ಷಿಗಾರರು ಮತ್ತು ಸಾಕ್ಷಿಯು ಗರೋ ಎಂಬ ಬಿರುಗಾಳಿ ಮಳೆಯಲ್ಲಿ ನೂಂಟ ರಕಾರಿ ಮಾರ್ಗದ ಮೇಲೆ ಬಂದಿರುವ ಪ್ರವಾಹ ಯಿಟ ಬಂದದ್ದರಿಂದ ಉಂಟಾದ ಚಳಿ ಒಂದು ಕಡೆ, ಸುವ ಛಾಳಿ ಬಂದು ಕಡೆ, ಹೊಡೆಯುತ್ತಿರುವ ನೀರು ಬಂದು ಕಡೆ ಅದಕ್ಕೆ ಸರಿಯಾದಕ್ಕಾಗಿನ ರೀಕಾನದ ಮಳೆಯು ಹನಿ ಬಿದ್ದರೆ ಅರ್ಜಿ ನೀ ಮೇಲೆ ಬೀಳುವಂತ್ತಾ ಬಟ್ಟೆ ಕೊಡೆಗಳ' ಇ ನ್ನ ಹಿಡಿದು ನಿಲ್ಲಲು ಸಹ ಜಾಗವಿಲ್ಲದೆ ಕೋ ಹೊರಗೆ ಕಿಂಚಿತವಾದ ೧೪ ಅಡಿ ಉದ್ದ ಅಡಿ ಅಗಲಹುದಾದ ಸ್ಥಳದಲ್ಲಿ ನಿಂತು ಕೊಂಡರೆ, ರು ಬಂದು ಮತಾಡಬ್ಯಾಡಿ ಹೊರಗೆ ಹೋಗಿರಿ, ಅಗಿಂದಾಗ್ಯೆ ಗದರಿಸುವರಲ್ಲದೆ, ಕೇಸತಗೆದು ವರ ಕಡೆ ಸಾಕ್ಷಿಯರನ್ನು ಕೋರ್ಟು ಗೇಟಿ ನಾಗಿರಿ ಎಂದು ಓಡಿಸುತ್ತಾರೆ ಹೀಂ ಳಂಮ್ಯೆಲ್ ಂದ ನಡದು ತೋಡು, ಹೊಳೆಗಳನ್ನೂ ಗುಡ್ಡ ನ್ನು ಹತ್ತಿ ಇಳಿದು ಬಂದು ಚಂಡಿಯಾದ ಮು ದಬಡವರ ಈ ಪಾಲ, ಪಚಾಲ್‌ಗಳನ್ನ ನೋ ರಾಗಲೀ ಕೇಳುವವರಾಗಲೀ ಈ ದೇಶದಲ್ಲಿ ಬ್ಬರು ಹುಟ್ಟಲಿಲ್ಲವೇ? ಹರಹರಾ ಭಗವಂತ ಲೋಕೋಪಕಾರಿಯಾದ ಲೋಕಮಾನ್ಯರೇ ದರೂ ಈ ಲೇಖಕನ ಮೇಲೆ ಅಂಥಾ ದಯವಿಟ್ಟು ಕಾರದವರು ಈ ಸಂಗ್ತಿಯನ್ನು ಗಣಿಸಿ ತರು ಮಾಡಿ ಕಕ್ಷಿಗಾರರಿಗೂ ಮತ್ತು ಸಾಕ್ಷಿಯವರಿ ಕೂರಲು ಬೆಂಚು ಕುರ್ಚೆಗಳೊಂದೊಡಗೂಡಿದ ಕಟ್ಟಡವನ್ನು ಈ ನ್ಯಾಯಸ್ಥಾನದ ಸಮೀಪಕರ ಳುವಂಥಾ ಸ್ಥಳದಲ್ಲಿ ಕಟ್ಟಿಸುವಂತೆ ಮಾಡು ಈ ಕೆಲಸಕ್ಕೆ ಹಣವಿಲ್ಲವೆನ್ನುವವರಿಗೆ ಅದ ದು ದಾರಿ ಸೂಚಿಸುತ್ತೇನೆ ನಾಡುಗಳನ್ನು ತಾ ಗಳನ್ನು ತೆಗದ ಸಂದರ್ಭದಲ್ಲಿ ಅನೇಕ ಕಟ್ಟ ಅನಾವಶ್ಯವಾದ ಕೆಲಸಗಳಿಗೆ ಉಪಯೋಗಿಸಲ್ಪ ವದರ ಬದಲಿ ಬಂದೆರಡು ಕಟ್ಟಡಗಳ ಮುಟ್ಟ ಇಲ್ಲಿ ಬಂದು ಕಟ್ಟಡಕಟ್ಟುವಂತೆ ಘನಸರಕಾ ಮನಸ್ಸಿಗೆ ತೋಕ್ಕಿಸುತ್ತಾಯಿ?

೫೭ ವಯಸ್ಸಿನ ಸಾಕ್ಷಿ.

ನಾಕ್ಕುನಾಡು ರೈತನ ಸ್ಥಿತಿ.

ಸಾಯ್ಯ, ಜಮಿಾನ್‌ದಾರರ ಸಂಘದವರೇ, ನಾಕ್ಕು ರೈತರು ಭತ್ತದ ಗದ್ದೆಗಳಲ್ಲಿ ದೊಡ್ಡ ದೊಡ್ಡ ಬರೆ ತೋಡು, ಹೊಳೆ, ನೀರಿನ ಹರಿವಿನಿಂದ ದಾರ ಸಂಘವು ಜಮಿಾನ್‌ದಾರರಾದ ರೈತರ ಕ್ಷೇ ಮಕ್ಕೋಸ್ಕರವೆಂತಲೂ ಈ ಸಂಘಕ್ಕೆ ಸೇರದವನು ವಿದ್ಯ ಬುದ್ಧಿಹೀನನಾದ ಪಶುವಿಗೆ ಸಮ, ಎಲ್ಲರು ಸೇರಿ, ನೂ ಸೇರಿ, ರೈತರ ಕ್ಷೇಮಕ್ಕಾಗಿ ಈ ಸಭೆ ಎಂದು ಪರ್ಕ್ಕೊಂದು ಉಪಾಯ ಕೊಂಡುಕೊಳ್ಳಗು ಸರಿಯೋ, ಯಾ, ಸಂಘದವರು ಈ ಬಾಬಿನಲ್ಲಿ ಏನು ಕೊಂಡರ ತಗೆದುಕೊಳ್ಳುವಿರಿ ' ಸರಕಾರದ ರೈತನು ಉಳ್ಳುವುದು ತಗೆದ ಕಷ್ಟ ಎಲ್ಲಾ ಹಂಗಾಮಿ ಬೈಗು ಬಿತ್ತಿದರೂ ಕೂಡ ಕಂದಾ ಯಿಸುತ್ತಾರೆ. ಸನ್ 1884 ನೇ ಇಸವಿ ಫರ್ವರಿ ತಾ. 26 ಕ್ಕೆ ಮೇಲ್ಪಟ್ಟ ವರ್ಗದಾರನಾದರೆ ಸೆಸ್ ದಾ

ಹುತ್ತಾರೆ. ಈ ಘೋರ ಮಳೆಯಲ್ಲಿ ಭೂಮಿ ಮೇಲೆ ಬರೆಹರದು ಮುಚ್ಚದೆ ತೋಡು, ಹೊಳೆ, ಬಿದ್ದ ಗೊಬ್ಬರವೆಲ್ಲ ಕೊಚ್ಚಿ ಹೋದದಲ್ಲದೆ ಮಣ್ಣು, ಮಳಲು, ಕಲ್ಲು ಮುಚ್ಚಿ ಹೋಗಿದೆ. ಬಿತ್ತಿದ ಪೈರು ಮೇಲೆ ನೀರು ನಿಂತು ಕೊಳತುಹೋದೆ. ಕೆಲವು ಮಣ್ಣಿನಿಂದ ಮುಚ್ಚಿ ಹೋಗಿವೆ. ಕೆಲವು ಕೊಚ್ಚಿ ಹೋಗಿವೆ. ಕೆಲವು ಮನೆಗಳ ಮೇಲೆ ಬರೆಹರದು ಬಿದ್ದು ನಷ್ಟ ಉಂಟಾಗಿವೆ. ಕೆಲವು ಅಂಗಡಿಗಳು ಪ್ರವಾಹದಿಂದ ಬಿದ್ದು ಹೋಗಿವೆ. ಕೊಡಗು ಪತ್ರಿಕೆಯಲ್ಲಿ ಆ ದೇಶದಲ್ಲಿ ಇಷ್ಟು ನಷ್ಟ ಇನ್ನೊಂದು ದೇಶದಲ್ಲಿ ಅಷ್ಟು ನಷ್ಟ ಅನ್ನುತ್ತಾರೆ. ಅವುಗಳನ್ನೆಲ್ಲ ಯೋಚಿಸಿದರೆ ಈ ನಮ್ಮ ಕೊಡಗು ದೇಶದಲ್ಲಿ ಏನೂ ನಷ್ಟವಿಲ್ಲವೆಂದು ಕೆಲವು ಕೊಡಗುದೇಶವನ್ನೇ ಪೂರಾ ನೋಡದ ಉದ್ಯೋಗಸ್ಥರು ನನ್ನಲ್ಲಿ ಹೇಳಿದರು. ಇದು ಅವರ ತಪ್ಪು ಅಭಿಪ್ರಾಯವಲ್ಲವೇ? ಬೇರೆ ದೇಶಗಳು ಊರು ಗುಪ್ಪೆಗಳೋ ಪಾದಿಯಲ್ಲಿ ಬಂದೆರಡು ಹೊಳೆಗಳಿಂದೊಡಗೂಡಿದ ಸಮನಾದ ಪ್ರದೇಶಗಳಾಗಿರುತ್ತೆ. ನಮ್ಮ ಈ ಕೊಡಗು ದೇಶವಾದರೋ ಬೆಟ್ಟ ಪ್ರದೇಶವಾಗಿಯೂ ಭೂಮಿಗಳೆಲ್ಲಾ ದೊಡ್ಡ ದೊಡ್ಡ ಬರೆಗಳ ಮಧ್ಯದ ಕೋವುಗಳಾಗಿವೆ. ನೂರಾರು ತೋಡು ಹೊಳೆಗಳಿಂದ ಕೂಡಿದ ಮಲೆನಾಡು ದೇಶವಾಗಿರುತ್ತೆ. ಹೀಗಿರುತ್ತಾ ನಮ್ಮ ಈ ಕೊಡಗಿನಲ್ಲಿ ಉಂಟಾದ ನಷ್ಟವನ್ನು ಗೊತ್ತು ಹಿಡಿಯಲು ಸರ್ವಸವರಿಾಸ್ಯವಲ್ಲ. ಅಯ್ಯಾ, ಕೊಡಗು ಜಮಿಾನ್‌ದಾರ್ ಸಂಘದವರೇ, ಈ ಲೇಖಕನು ತನ್ನ ಕೊಡಗಿನ ದರೆ ಗ್ರಾಮದ ಪರದಾಡ ಮನೆಯವರಾದ ದೇಶತಕ್ಕರ ಮನೆಯವರಿಗುಂಟಾದ ನಷ್ಟವನ್ನು ನೋಡಲು ಇಂದಿನ ವರೆಗೂ ಪ್ರಯತ್ನಿಸಿದ್ದಲ್ಲಿ ಹೊಳೆ ದಾಟಲು ಯತ್ನವಾಗಲಿಲ್ಲ. ಪ್ರತಿಬಬ್ಬರ ನಷ್ಟವನ್ನು ನಾನು ಇಲ್ಲಿ ನಮೋದಿಸಲು ತೊಡಗಿದರೆ ಈ ವಾರದ ಪತ್ರಿಕೆಯೇ ಸಾಲದಾದುದರಿಂದ ಜಮಿಾನ್‌ದಾರ್ ಸಂಘದವರನ್ನು ಈ ಮೂಲಕ ಕೇಳಿಕೊಳ್ಳುವದೇನೆಂದರೆ ಜಮಿಾನ್‌ದಾರ ಸಂಘದವರು ಘನ ವೈಸ್‌ರಾಯಿಯವರ ಭೇಟಿಗೆ ಹೋಗುವ ಯಾ ಅವರಿಗೆ ಬರಹ ಮೂಲಕವಾದ ಪತ್ರ ಕಳುಹಿಸುವ ಮೊದಲು, ಜಮಿಾನ್‌ದಾರರ ಸಂಘದ ಕಮಿಟಿಯವರು ಮತ್ತು ನಮ್ಮ ದೇಶದಲ್ಲಿ ಹಾಲಿ ಇರುವ 14 ಸಹಕಾರಿ ಸಂಘಗಳ ಪ್ರೆಸಿಡೆಂಟರ ಮೂಲಕ ಅವರ ಕಮಿಟಿ ಮೆಂಬರುಗಳಿಂದ ಸಹ ಪ್ರತಿ ಗ್ರಾಮದ ಪ್ರತಿ ಕುಳಗಳಿಗುಂಟಾದ ನಷ್ಟದ ಪಟ್ಟಿ ಬಂದನ್ನು ಈ ಕೆಳಗೆ ಕಂಡ ಮೇರೆ ತರಿಸಿಕೊಂಡು ಸದರಿ ನಷ್ಟವನ್ನು ಯಾ, ಅದಕ್ಕೆ ತಕ್ಕದಾದ ಕಂದಾಯವನ್ನಾದರು ಮಾಫು ಕೊಡುವಂತೆ ಬಂದು ಹೆಚ್ಚಿನ ಕಲಂ ಕೂಡಿಸಿಕೊಳ್ಳುವದು ಅತ್ಯವಶ್ಯಕವಾಗಿರುವುದರಿಂದ ಹೀಗೆ ಮಾಡುವುದು ಜಮಿಾನ್‌ದಾರ್ ಸಂಘದವರ ಮುಖ್ಯ ಕರ್ತವ್ಯವೆಂದು ನಾನು ನಂಬುತ್ತೇನೆ. ಕೊಂದಿಕೊಳ್ಳಬೇಕಾದ ಪಟ್ಟಿ ತಪಶೀಲು: (1) ಗ್ರಾಮದ ಹೆಸರು (2) ಕುಳದ ಹೆಸರು (3) ಪಟ್ಟೆದಾರ್ ಯಾ ಅನುಭವದಾರನ ಹೆಸರು (4) ಕಂದಾಯ ನಷ್ಟ ಭಿವಾಯಿಯಲ್ಲಿ, (5) ಭೂಮಿಯೋ? ನಾಟಿಯೋ? ಅಗಾಡಿ ಪೈರೋ? ತೋಡು ಬರವ್ವೋ? ಹೊಳೆಬಿದ್ದೋ? ಬರೆ ಜರಿದೋ? ಎಂಬ ವಗ್ಯೆರೆ ತಪಸೀಲ್ ಕೊಡುವಂತೆ ಕೇಳಿದರೆ ದಿನ 15 ರ ಒಳಗೆ ಈ ರಿಪೋರ್ಟು ದೊರೆಯುವಲ್ಲಿ ಯಾವ ಸಂದೇಹವೂ ಈ ಲೇಖಕನಿಗೆ ಕಾಣುವದಿಲ್ಲ. ಈ ಬಾಬಿನಲ್ಲಿ ನಾವಾ ಸಭೆಯು ಪ್ರೆಸಿಡೆಂಟರನ್ನ ಮದ್ರಾಸಿನ ಸಭೆಯ ಪ್ರೆಸಿಡೆಂಟನ್ನು ಇನ್ನು ಜನರೆಲ್ಲರ ಸಹಾಯ ಕೇಳಿಕೊಂಡು ಈ ಕೆಲ್ಸ ನಡೆಸಿದರೆ ಜಮಿಾನ್‌ದಾರ್ ಸಭೆಗೆ ಜೀವ ಕೊಡುವವರಲ್ಲಿ ಯಾವ ಸಂದೇಹವೂ ಇಲ್ಲ.

ದೇಶಹಿತೈಸಿ

ಮುನಸಿಪಲ್ ಕೆರೆ.

ಈ ಹೆಸರಿನ ಪತ್ರವನ್ನು 17-8-23 ನೇ ತಾರೀಖಿನ ಪತ್ರಿಕೆಯಲ್ಲಿ "ರೇಟ್ ಪೇಯರ್" ಎಂಬ ಹೆಸರಿನವರು ಬರೆದದ್ದನ್ನು ಓದಿ ನೋಡಿದ "ಪುರನಿವಾಸಿ" ಯಾದ ನನಗೆ ತುಂಬಾ ವ್ಯಸನವೆನಿಸುತ್ತದೆ. ಈ ಪತ್ರ ಬರೆದ ರೇಟ್ ಪೇಯರು ತುಂಬಾ ಅವಸರದಲ್ಲಿರುವಂತೆ ಕಾಣುತ್ತೆ. ಬಂದು ಮಿಾಟಿಂಗಿನಲ್ಲಿ ಮುನಸಿಪಲ್ ಕಮಿಟಿಯವರು ಈ ಕೆರೆ ಮುಚ್ಚಕೂಡದೆಂತ ಸೈಸಲ್ ಮಾಡಿದ ಕೂಡಲೇ ಸ್ವರಾಜ್ಯವೇ ಬೇಡವೆಂತ ಹೇಳುತ್ತಿದ್ದಾರೆ! ಸ್ವರಾಜ್ಯಕ್ಕೆ ಅರ್ಹತೆ ಬಹಳ ಜನಕ್ಕಾಗಿ ತಿಳಿಯಿತು. ಕಂದಾಯ ಕೊಡುವವರಲ್ಲಿ ಯಾವಾದರೂ ಬಂದು ಹನಾಲನ್ನು ಬರಕೂಡದರೆ ಅವನು ಕೂಡಲೇ ಮಂಜೂರ್ ಮಾಡಿದರೆ ಸ್ವರಾಜ್ಯಕ್ಕೆ ಅರ್ಹರಾದರು. ಜನರು ಚುನಾಯಿಸಿದ ಕಮಿಟಿ ಮೆಂಬರುಗಳ ಸಭೆಯಲ್ಲಿ ಕಂದಾಯ ಕೊಡುವವನನ್ನು ಮಾತಾಡಲಿಕ್ಕೆ ಬಿಡದೆ ಹೋದದ್ದೇ ತಪ್ಪಾಯಿತಂತೆ! ಹವಾಲುಗಳಿರುವ ರೇಟ್ ಪೇಯರುಗಳೆಲ್ಲಾ ಮುನಸಿಪಲ್ ಮಿಾಟಿಂಗಿನಲ್ಲಿ ಮಾತಾಡತಕ್ಕದಾದ ರೇಟ್ ಪೇಯರುಗಳ ಮಿಾಟಿಂಗಾಯಿತೇ ಹೊರತು ಕಮಿಟಿ ಮಿಾಟಿಂಗ್ ಆಗಲಿಲ್ಲ. ಈ ರೇಟ್ ಪೇಯರ ಅಭಿಪ್ರಾಯದಲ್ಲಿ ಸ್ವರಾಜ್ಯ ಬಂದಾಗ ಸ್ವರಾಜ್ಯ ಪಾರ್ಲಿಮೆಂಟಿನಲ್ಲಿ ದೈತರೆಲ್ಲರೂ ಮಾತಾಡಲು ಅನುಕೂಲವಿದ್ದರೆ ಆ ಸಭೆಯು ಗೊಂದಲದ ಸಭೆಯಾದೀತೇ ಹೊರತು ಪಾರ್ಲಿಮೆಂಟ್ ಆಗಲಾರದು.

"ರೇಟ್ ಪೇಯರ" ಪತ್ರದಲ್ಲಿ ಕೆರೆ ಮುಚ್ಚಬೇಕೆಂಬ ಅರ್ಜಿಗೆ ಎಷ್ಟು ಜನರು ಸೈನ್ ಹಾಕಿದ್ದರೆಂತ ಬರೆದಿಲ್ಲ. ಬಂದುವೇಳೆ ತುಂಬಾ ಜನರು ಸೈನ್ ಹಾಕಿದ್ದರೂ ಅರ್ಜಿಯಲ್ಲಿ ಏನು ಬರೆದಿದೆಯೆಂತ ತಿಳಿದು ಸೈನ್ ಹಾಕಿರಬಹುದೆಂತ ನನಗೆ ತೋರುತ್ತದೆ. ಅಥವಾ ಸೈನ್ ಹಾಕಿಸಲು ಹೋದ ಮನುಷ್ಯನ ದಾಕ್ಷಿಣ್ಯಕ್ಕೆ ಒಳಗಾಗಿ ಸೈನ್ ಹಾಕಿದ್ದರೂ ಇರಬಹುದು. ಈ ವಿಷಯವು ಬಹಳ ಪ್ರಾಮುಖ್ಯವಾದ ವಿಷಯವಾದರೆ ಒಟ್ಟು ರೇಟ್ ಪೇಯರುಗಳ ಮತವನ್ನು ಓಟ್ (ಬ್ಯಾಲಟ್) ಮೂಲಕ ತಿಳಿಯಬೇಕು. ಪುರನಿವಾಸಿಗಳು ಅಥವಾ ಅವರಲ್ಲಿ ಅಡಗಿದ ರೇಟ್ ಪೇಯರುಗಳ ಸೂಚನೆಗೆ ಪಾತ್ರರಾದ ಮುನಸಿಪಲ್ ಕಮಿಟಿ ಮೆಂಬರುಗಳು ತಮ್ಮ ಸ್ವಂತ ಬುದ್ಧಿಯನ್ನು ಉಪಯೋಗಿಸಿ ಕೆಲಸ ಮಾಡಲು ಅರ್ಹರಿದ್ದಾರೆ. ಆದರೆ ಅವರು ಅಂಥಾ ಕೆಲಸದಿಂದ ರೇಟ್ ಪೇಯರುಗಳಿಗೆ ಅತೃಪ್ತಿಯಾದರೆ ಮುಂದಿನ ಚುನಾವಣೆಯಲ್ಲಿ ಈ ಮೆಂಬರುಗಳಿಗೆ ಓಟ್ ಸಿಕ್ಕುವದಿಲ್ಲ. "ರೇಟ್ ಪೇಯರು" ಅವರಿಗೆ ಕಾದಿರಾಯಿತು.

ಕಮಿಶನರು ಮತ್ತು ಪೋಲೀಸ್ ಅಸಿಸ್ಟೆಂಟ್ ಸುಪರಿಂಟೆಂಡೆಂಟರೂ "ಜನರ ಕಷ್ಟಸುಖಗಳೇ ತಮ್ಮ ಕಷ್ಟಸುಖಗಳೆಂದು ತಿಳಿದಿ" ದ್ದಾರಂತೆ. ಇದು ಒಳ್ಳೇ ತರ್ಕವಾದವೇ ಸರಿ. ಜಮಿಾನ್‌ದಾರರ ಸಂಘದವರು ಪ್ರತಿ ವರ್ಷವೂ ಕಳುಹಿಸುವ 40 ಯಾ 50 ಠರಾವುಗಳಿಗೆ ಕಮಿಶನರಿಂದ ಯಾತಕ್ಕೆ ಪರಿಹಾರ ಸಿಕ್ಕಲಿಲ್ಲ! ಈ ಉದ್ಯೋಗಸ್ಥರು ಇಷ್ಟರಮಟ್ಟಿಗೆ ದೈತರ ಕ್ಷೇಮ ಬಯಸುವವರೇ ಆದರೆ ಸ್ವರಾಜ್ಯಕ್ಕಾಗಿ ನಾವು ಆಸೆ ಪಡಬೇಕಾದ ಅವಶ್ಯವೇ ಇಲ್ಲ. ಈ ಆಫೀಸರುಗಳೇ ದೇಶವನ್ನು ಆಳಿದರೆ ಸ್ವರಾಜ್ಯವಾಯಿತಷ್ಟೆ. ಆದರೆ ಇಂಥಾ ತಪ್ಪು ಅಭಿಪ್ರಾಯಕ್ಕೆ ಯಾವ ರೇಟ್ ಪೇಯರು ಮರುಳಾಗಬಾರದು. ಮುನಸಿಪಲ್ ಕಮಿಟಿಯವರು ಮಾಡಿದ ತೀರ್ಪಿಗೆ ವಿರೋಧವಾಗಿ ಕಮಿಶನರಾಗಲೀ ಚೀಫ್ ಕಮಿಶನರಾಗಲೀ ಬರೆಯಕೂಡದು. ಈ ಕೆರೆ ಮುಚ್ಚುವ ವಿಷಯದಲ್ಲಿ ಕಮಿಶರು ಬರೆದಿದ್ದರೆಂದರೆ "ರೇಟ್ ಪೇಯರು" ಸಹ ವ್ಯಸನಪಡಬೇಕಾದ ಸಂಗತಿಯಾಗಿದೆ.

ಮೆ॥ ರಾ ಬಾ. ಕ ಅಪ್ಪಯ್ಯನವರು ಈ ಕೆರೆಯಲ್ಲಿ ಸಾವಿರಾರು ದನಕರುಗಳು ನೀರು ಕುಡಿಯುತ್ತವೆ ಎಂತ ಹೇಳಿದ್ದು "ರೇಟ್ ಪೇಯರಿಗೆ" ಅಸತ್ಯಕರವಾದ ಅತಿಶಯೋಕ್ತಿಯಾದರೆ ಈ ಕೆರೆಯಲ್ಲಿ ಬಂದಾವರ್ತಿ ನೀರು ಕುಡಿದ ಎತ್ತು ಇನ್ನೊಂದಾವರ್ತಿ ಇದಕ್ಕೆ ಬರುವದಿಲ್ಲವೆನ್ನುವಷ್ಟು ಅಸತ್ಯವಾದ ನೀರು ಉಳ್ಳದ್ದು ಎಂಬ ಅತಿಶಯೋಕ್ತಿಯನ್ನು ಹೇಗೆ ವರ್ಣಿಸಬೇಕು! ಮುನಸಿಪಲ್ ರಿಜರ್ವಾಯರಿಂದ ವರ್ಷಕ್ಕೆ ಮೂರು ತಿಂಗಳು ನೀರು ಸಿಕ್ಕುವದಿಲ್ಲ. ಆಗಲೇ ಬಂಡಿಮೂಲದಲ್ಲಿ ಎತ್ತುಗಳು ಹೆಚ್ಚಾಗಿ ಜಮೆಯಾಗುವದು. ಆಗ ಪ್ರತಿಯೊಬ್ಬ ಗಾಡಿಯವನೂ ಈ ಕೆರೆಗೇನೇ ಎತ್ತನ್ನು ನೀರು ಕುಡಿಸಲಿಕ್ಕೆ ತರುತ್ತಾನೆ. ಹೀಗಿರುವಾಗ ಎತ್ತುಗಳಿಗೆ ನೀರಿಗೆ ಅನುಕೂಲ ತೋರಿಸಿ ಎಂಬ ಪ್ರಾಣಿದಯೆ ತೋರಿಸುವ ಮಾತನ್ನು ಪ್ರೆಸಿಡೆಂಟರು ಆಡಿದ್ದು ತಪ್ಪೇ? "ಕಂದಾಯ ತರುವರು ದನಕರುಗಳೋ ಮನುಷ್ಯರೋ" ಎಂಬ ಪ್ರಶ್ನೆ ಕೇಳಿದ್ದಾರೆ. ಮನುಷ್ಯ ವಿನಹ ಬೇರೆ ಜೀವಜಂತುಗಳಲ್ಲಿ ಪರಮಾತ್ಮನ ಅಂಶವಿದೆಯೆಂತ ಒಪ್ಪದ ಮತದವರೂ ಸಹ ಇಂಥಾ ನಿಷ್ಕಾರುಣ್ಯದ ಮಾತಾಡಲಾರರು. ಕಟುಕನ ಕತ್ತಿ ಬಾಯಿಗೆ ತಲೆ ಕೊಡುವ ಮೃಗಗಳಾದರೂ ಅವಕ್ಕೆ ಜೀವವಿರುವವರೆಗೆ ನೀರು ಕೊಡಬೇಕು. ಹೀಗಿರುತ್ತಾ ಹಿಂದುಗಳಿಂದ ವಿಶೇಷ ಭಕ್ತಿಯಿಂದ ಪೂಜಿಸಲ್ಪಡುವ ದನಕರುಗಳಿಗೆ ನೀರು ಕೊಡಬೇಕೆಂತ ಹೇಳಿದ್ದು ತಪ್ಪೇ? ದನಕರುಗಳಿಲ್ಲದಿದ್ದರೆ ಕಂದಾಯ ಕೊಡುವವರಾದ ಮನುಷ್ಯರ ಬಾಳು ಎಂಥಾದ್ದಿದ್ದೀತು?

ಈ ಕೆರೆಯು ರಾಜರ ಕಾಲದಿಂದಲೂ ಇರುವಂಥಾದ್ದು. ಎಷ್ಟೋ ಶತಮಾನಗಳಿಂದ ಈ ಕೆರೆ ಇದ್ದರೂ ಈವರೆಗೆ ಆಕ್ಷೇಪಣೆ ಬರಲಿಲ್ಲವೇಕೆ? ಈಗ ಎರಡು ಮರಣಗಳು ಅದರಲ್ಲಿ ಆದವೆಂಬ ಕಾರಣದಿಂದ ಪೋಲೀಸ್ ಆಫೀಸರ ಆಕ್ಷೇಪವಾಗಿರಬೇಕು. ಮರದ ಕೊಂಬೆಯಿಂದ ಯಾವನೋ ಕೂಡಹಾಕಿಕೊಂಡರೆ ದೇಶದಲ್ಲಿ ಮರಗಳೇ ಇರಕೂಡದೆಂತ ಹೇಳಿದಂತೆ ಆದೀತು. ಪುರನಿವಾಸಿಗಳೇ! ವ್ಯಕ್ತಿಗಳ ದಾಕ್ಷಿಣ್ಯಕ್ಕೆ ಒಳಗಾಗಿ ಅರ್ಜಿಗಳಿಗೆ ಸೈನ್ ಮಾಡಬೇಡಿರಿ. ಧರ್ಮಿಷ್ಟರು ಕೆರೆ ತೋಡಿಸುವದೇ ಪುಣ್ಯ ಕೆಲಸವೆನ್ನುವಾಗ ಕೆರೆ ಮುಚ್ಚಲಿಕ್ಕೆ ಸಮ್ಮತಿಸಬೇಡಿರಿ.

"ಪುರನಿವಾಸಿ."

ಸನಾತನತ್ವದಲ್ಲಿ ಸ್ವಾತಂತ್ರ್ಯಹೀನತೆ.

ಅಯ್ಯೋ! ಈಗ ಸದ್ಯಕ್ಕೆ ನಮ್ಮ ದೇಶದಲ್ಲಿ ಎರಡು ವ್ಯಸನ್ತಬುಳವೆ ಮಡಿಕೇರಿ ಹೈಸ್ಕೂಲಿನಲ್ಲಿ ಗಣಿತಶಾಖೆ ಮತ್ತು ಚರಿತ್ರಶಾಖೆ ಎಂಬ ಎರಡು ಭಾಗಗಳವೆ ವಿಂಗಡಿಸಬೇಕೆಯಲ್ಲದರೋ ಚರಿತ್ರಶಾಖೆ ಮಾತ್ರವಿದೆ. ಕಾಲೇಜುಮುಖೇನ ಇಲ್ಲಿಯೂ ಗಣಿತಶಾಖೆಯನ್ನಿಟ್ಟರೆ ಮ

ಡಿಕೇರಿ ಹೈಸ್ಕೂಲು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಕ್ಷೀಣಿಸುವುದೆಂಬುದಕ್ಕೆ ಏನೂ ಆಸ್ಪದವಿಲ್ಲ. ಒರೇ ಜಿಲ್ಲಾ ಶಾಲೆಯಲ್ಲಿಯೇ ಈ ವರ್ಷ ಸುಮಾರು ಮೂವತ್ತು ಹುಡುಗರವರೇಗಿದ್ದರೆ ಹೀಗಿರುವಲ್ಲಿ ಎರಡು ಕ್ಲಾಸುಗಳನ್ನು ವಿಂಗಡಿಸಬೇಕೆಯಲ್ಲಿ ತೆರೆದಿದ್ದು, ಹುಡುಗರ ಸಂಖ್ಯೆಯು ಎಷ್ಟರಮಟ್ಟಿಗೆ ಹೆಚ್ಚಾಗಬೇಕೆಂದನ್ನು ವಾಚಕರೇ ಊಹಿಸಿಕೊಳ್ಳಬಹುದು. ಪಿರಿಯಪಟ್ಟಣವು ಸರ್ವವಿಧಗಳಲ್ಲಿಯೂ ಕೊಡಗಿನ ಒಂದು ಮಧ್ಯ ಪ್ರದೇಶವಾಗಿದೆ. ವ್ಯಾಪಾರಗಳಿಗೆ ಅದ್ವಿತೀಯವಾದ ಸ್ಥಳವಾಗಿದೆ. ಅದಲ್ಲದೆ ಈ ಪಟ್ಟಣವು ಬಹಳ ಪ್ರಖ್ಯಾತಿಯನ್ನು ಹೊಂದಿಕೊಂಡಿದೆ. ಬಡಕೃಷಿಕರ ಸಾವಿರಾರು ಹುಡುಗರು ಈ ಪಟ್ಟಣದ ಸುತ್ತುಮುತ್ತಲಾಗಿ ಆರೇಳು ಮೈಲು ದೂರಗಳಿಂದ ದಿವಸಂಪ್ರತಿ ಶಾಲೆಗೆ ಬರುತ್ತಾರೆ. ಇದನ್ನೆಲ್ಲಾ ನೋಡುವಾಗ್ಯೆ ಇಲ್ಲಿನ ಜನರು ವಿದ್ಯೆಯನ್ನು ಕಲಿಯುವದರಲ್ಲಿ ಬಹಳ ಮುತುವರ್ಜಿವುಳ್ಳವರೆಂದು ವ್ಯಕ್ತವಾಗುವುದು. ಈಗಿನ ಹೆಡ್‌ಮಾಸ್ಟರರಾದ ಟಿ. ವೆಂಕಟಸುಬ್ಬಯ್ಯನವರು ಈ ವಿಷಯದಲ್ಲಿ ಬಹು ಶ್ರದ್ಧೆಯನ್ನೂ ಶ್ರಮವನ್ನೂ ತೆಗೆದುಕೊಂಡು ಜನರ ಮನೋರಥವನ್ನು ಈಡೇರಿಸಿದ್ದಕ್ಕೆ ನಾವೆಲ್ಲರೂ ಕೃತಜ್ಞರಾಗಿರುತ್ತೇವೆ. ಇನ್ನು ಮುಂದೆ ಅಭಿವೃದ್ಧಿಯು ಆಗ್ಯವೆಂಬ ಹೆಡ್‌ಮಾಸ್ಟರರ ಹಸ್ತಗತವಾಗಿಯೂ ಅವರ ಸಹಾಯಕರಾದ ಬೇರೆ ಉಪಾಧ್ಯಾಯರುಗಳಲ್ಲಿಯೂ ಇರುವದು ಪ್ರಕೃತ ಹೆಡ್‌ಮಾಸ್ಟರರಾಗಿರುವ ಮ|| ರಾಮರಾಯರು ಎಷ್ಟು ಮುತುವರ್ಜಿಯಿಂದ ಕೆಲಸಮಾಡುತ್ತಾರೆಂಬುದು ಸರ್ವರಿಗೂ ವೇದ್ಯವಾಗಿದೆ. ಮಾತ್ರವಲ್ಲ ಇವರು ತಮ್ಮ ಅಸಿಸ್ಟೆಂಟ್ ಉಪಾಧ್ಯಾಯರ ವಿದ್ಯಾರ್ಥಿಗಳ ಪ್ರೀತಿಗೆ ಬಹುದಿನ ಪಾತ್ರರಾಗಿರುವುದೆ ಸಾಕ್ಷಿಯಾಗಿದೆ. ನಮ್ಮ ಈ ದೇಶವು ಇವರ ಜನ್ಮಭೂಮಿಯಾದುದರಿಂದ ಇವರಿಗೆ ಈ ಸ್ಕೂಲಿನ ಮೇಲೆ ಇರುವ ಪ್ರೀತಿಯು ಮುನ್ನಾದಿಯಾಗಿದೆ.

ಇವರು ಇಲ್ಲಿ ಹೆಡ್‌ಮಾಸ್ಟರರಾಗಿ ಕಡಿಮೆ ಪಕ್ಷ ಹತ್ತು ವರ್ಷಗಳವರೆಗಾದರೂ ಇರಬೇಕೆಂದು ನಾವು ಘನಸರ್ಕಾರದವರನ್ನೂ ದೇವರನ್ನೂ ಪ್ರಾರ್ಥಿಸಿಕೊಳ್ಳುತ್ತೇವೆ. ಇಲ್ಲಿ ಈಗ ಹಾನೇ ಹೈಸ್ಕೂಲು ಏರ್ಪಾಡು ದುದರಿಂದ ಒಂದು ಹೊಸ ಶಾಲೆಗೆ ಅಂಟಿಕೊಂಡಲ್ಲಿ ಯಾವ ಯಾವ ತೊಂದರೆಗಳು ಇದ್ದುವೆಯೋ ಅವುಗಳು ಇಲ್ಲಿಯೂ ಕಾಣಬರುತ್ತವೆ. ಈ ಹಾಸ್ಟೆಲ್ ಇಲ್ಲಿ ಹುಡುಗರಿಗೆ ಓದುವದಕ್ಕೆ ಒಳ್ಳೇ ಲೈಬ್ರರಿ ಇರುವದಕ್ಕೆ ಬಂದು ಒಳ್ಳೆಯ ಮೈದಾನ ದಿನ ದಿನೇ ಹುಡುಗರ ಸಂಖ್ಯೆಯು ಹೆಚ್ಚಾಗುತ್ತಿರುವುದರಿಂದ ಸ್ಕೂಲಿನಲ್ಲಿಯೂ ಬೋರ್ಡಿಂಗಿನಲ್ಲಿಯೂ ಅನುಕೂಲವಾಗುವಷ್ಟು ಕೊಠಡಿಗಳು ಇಲ್ಲದಿರುವಿಕೆ, ಮುಂತಾದವು ಬಹಳ ಮುಖ್ಯವಾದವುಗಳಾಗಿವೆ. ಇನ್ನು ಸಾಧಾರಣವಾಗಿ ಹೆಚ್ಚಾಗಿರುವ ಅಲ್ಪವಾದ ತೊಂದರೆಗಳನ್ನು ಮ|| ರಾಮರಾಯರು ಅವರ ಸ್ವಬುದ್ಧಿ ಸಾಮರ್ಥ್ಯದಿಂದ ಸರಿಪಡಿಸಿಕೊಂಡು ಕೆಲಸವನ್ನು ಹೇಗಾದರೂ ನಡೆಸುತ್ತಾರೆ. ಇಷ್ಟೆಂದು ಬಹು ಕಠಿನವಾದ ಆಡಚಣೆಯು ಇದೆ. ಅದನ್ನು ಬೇಗನೆ ತಿದ್ದು ಪಾಡದೆ ಹೋದರೆ ಬಹಳ ಉಂದರೆ ಸಂಭವಿಸುವದು. ಏನಂದರೆ ಈ ಸ್ಕೂಲು ಮಡಿಕೇರಿ ಹೆಡ್‌ಮಾಸ್ಟರರ ಕೈಕೆಳಗೆ ಇದೆ. ಆದ್ದರಿಂದ ಮ|| ರಾಮರಾಯರಿಗೆ ಸ್ವತಂತ್ರ ಮನಸ್ಸಿನಿಂದ ಯುಕ್ತವಾದ ರೀತಿಯಲ್ಲಿ ತನಗೆ ಇಷ್ಟ ಬಂದಂತೆ ಸ್ಕೂಲನ್ನು ನಾನಾವಿಧಗಳಿಂದ ಉನ್ನತಸ್ಥಿತಿಗೆ ತರುವುದಕ್ಕೆ ಆತಂಕ ಬರುವದಾಗಿದೆ. ಈ ವಿಧದ ಕಿರುಕುಳಗಳನ್ನು ಹೇಳಿ ಬರೆದು ಪೂರೈಸುವ ಸಂಭರ್ಭವಲ್ಲ. ಪರಂತು ಅಷ್ಟಲ್ಲ ಕೆಲಸಕ್ಕೂ ಕೂಡ ಮಡಿಕೇರಿ ಶಾಲಾಧಿಕಾರಿಯ ಸಿಫಾರಿಸಿನ ನಿರೀಕ್ಷೆ ಬೇಕಾಗಿದೆ ಯೆಂದರೆ ಈ ಸ್ಕೂಲಿನ ಸಂಕಟವನ್ನು ಏನೆಂದು ಹೇಳಲಿ! ಇಲ್ಲಿಂದ ನಡೆಯುವ ಯಾವ ಪತ್ರವ್ಯವಹಾರಾದಿಗಳಲ್ಲವೂ ಮಡಿಕೇರಿ ಹೆಡ್‌ಮಾಸ್ಟರರ ಬಳಿ ಹೋಗಿ ಅಲ್ಲಿಂದ ಸಿಫಾರಸ್ಸು ಹೊಂದಿ ಇಲ್ಲಿಗೆ ಊರು ಸುತ್ತಿ ವಿದ್ಯಾಇಲಾಖೆಯ ಇನ್ಸ್‌ಪೆಕ್ಟರವರಿಗೆ ತಲ್ಪುವುದೆಂದರೆ ಅದು ಯಾವ ಕಷ್ಟವು? ಯಾವಾಗ ಇದು ಹೈಸ್ಕೂಲು ಎಂದೆನಿಸಿಕೊಂಡು ಮಡಿಕೇರಿ ಸ್ಕೂಲಿಗೆ ಸಮಾನವೆನಿಸಿಕೊಂಡಿತೋ ಅಂದಿನಿಂದ ಇದಕ್ಕೆ ಯಾಕೆ ಸ್ವತಂತ್ರ ಸಿಕ್ಕಬಾರದು? ಯಾವಾಗಲೂ ಪರಸ್ಪರ ಸಮಾನತ್ವ ಉಂಟಾದಾಗ ಅದು ಒಂದಕ್ಕೊಂದು ಅಧೀನವಾಗದೆ ಸ್ವಾತಂತ್ರ್ಯತೆಯಲ್ಲಿದ್ದರೇನೆ ಅದು ಪೂರ್ಣಾಯುಷ್ಯದಲ್ಲಿಯೂ ಸುಖದಲ್ಲಿಯೂ ಇರುವುದಲ್ಲದೆ ಹೀಗೆ ಸಂಕುಚಿತದಲ್ಲಿದ್ದರೆ ನಮ್ಮ ಪಿರಿಯಪಟ್ಟಣ ಹೈಸ್ಕೂಲು ಎಂದೂ ಸುಖವಾಗಿರದು. ಇದೂ ಹೇಳುವದಕ್ಕೂ ಸಹಿಸುವದಕ್ಕೂ ಅಶಕ್ಯವಾದ ಕಿರುಕುಳಕ್ಕೊಳಗೀಡಾಗಬೇಕಾಗುತ್ತದೆ. ಇನ್ನೂ ವಿದ್ಯಾರ್ಥಿಗಳೂ ಮಡಿಕೇರಿಯನ್ನೇ ಹಿರಿಯಕ್ಕನನ್ನಾಗಿಟ್ಟರೆ ಅದರ ಛಾಯೆಯೇ (ಎಂದರೆ ಗುಣವಾಗಲಿ, ಅವಗುಣವಾಗಲಿ) ಇದಕ್ಕೂ ಉಂಟಾಗುತ್ತದೆ. ಯಾಕಂದರೆ—ಅದಕ್ಕೊಳಗಾಗಿಯಾಗಲಿ ಅದರಂತೆಯಾಗಲಿ ಇಲ್ಲಿನ ಶಿಕ್ಷಣಕ್ರಮವು ಸಹ ಇರಬೇಕಲ್ಲದೆ ವ್ಯತ್ಯಸ್ತವಾಗಲು ಸಾಧ್ಯವಿಲ್ಲ ಮತ್ತು ಈ ಸ್ಕೂಲೂ, ಆ ಸ್ಕೂಲಿನ ಸರಿಸಮಾನವಾದ್ದರಿಂದ ಎರಡರ ಅಧಿಕಾರಿಗಳಿಗೂ ಮನಸ್ಸಿನೊಳಗೆ ಕಿಚ್ಚು ಹುಟ್ಟದಿರಲಾರವು ಎಂತೂ ಅದಕ್ಕಾಗಿ ನಡೆಯಬೇಕೆಂಬುವದು ನಿರ್ವಿವಾದವೇ ಸರಿ. ಹೀಗಾಗಿ ವಿದ್ಯಾರ್ಥಿಗಳಿಗೆ ಹ್ಯಾಗೂ ಸೌಕರ್ಯಹೀನತೆ. ಇದು ಮಡಿಕೇರಿ ಸ್ಕೂಲಿನಂತೆ ನಿರಂಕುಶ ಇಲ್ಲದ್ದಾಗಿ ನೇರಾ ಇಲ್ಲಿಂದ ಉಂಟಾಗುವ ಪತ್ರವ್ಯವಹಾರಗಳು ಇನ್ಸ್‌ಪೆಕ್ಟರವರ ಆಫೀಸಿಗೆ ಹೋಗುವದೂ ಇದರ ಉತ್ತರ ಆಪರೇ ತೆಗೆದುಕೊಳ್ಳುವುದಾಗಿ ಅದರ ಇಲ್ಲಿಯ ಶಿಕ್ಷಣವು ಸೌಕರ್ಯತ್ವವು ಬಹು ಜಲೋದಾಗಿ ಆಗುತ್ತದೆ. ಯಾಕಂದರೆ ಮಡಿಕೇರಿಗಿಂತ ಇಲ್ಲಿಯ ಅಭಿವೃದ್ಧಿಯು ಹೆಚ್ಚು ಪಡಿಸಿ ಕೀರ್ತಿಪಡೆಕೊಳ್ಳಬೇಕಂದೂ ಇಲ್ಲಿಗಿಂತ ತಾನೇ ಮುಂದಾಗಬೇಕೆಂಬುದಾಗಿ ಮಡಿಕೇರಿ ಸ್ಕೂಲೂ ಪ್ರೋತ್ಸಾಹಿಸುವದಲ್ಲದೆ ಉಭಯ ಸ್ಕೂಲುಗಳೂ ಸಿಪರ್ಧಿಗಳಾಗಿ ಪರಸ್ಪರ ಪ್ರೀತಿಯಿಂದ ಒಂದರಿಂದ ಮುಂದೆ ಒಂದು ಬರಬೇಕೆಂಬ ಅಪೇಕ್ಷೆಯೊಡನೆ ತಮ್ಮ ಕರ್ತವ್ಯಗಳನ್ನು ಮಾಡಿ ಕಡೆಗೆ ಎರಡೂ ಹಜೆನ ಅಭಿವೃದ್ಧಿಗೆ ಬರುತ್ತವೆ. ಯಾವಾಗಲೂ ಒಳ್ಳೆ ಅಧಿಕಾರಿಯ ಕೈಯೊಳಗೆ ಅಡಗಿರುವ ದೇಶವು ಸರಿಸಮಾನತ್ವ ಉಳ್ಳವರಲ್ಲಿ ಒಬ್ಬರಿಗೊಬ್ಬರು ಅಧೀನರಾಗಿರುವುದಾದರೆ ಅವರ ಗುಣದೋಷಗಳು ಪ್ರತ್ಯಕ್ಷ ಬಾರದದ್ದಾಗಿ ಒಂದನ್ನು ನೋಡಿಕೊಂಡು ಅದರಂತೆ ನಡೆಯುವ ಒಳ್ಳೇ ಒಳದ ವಸ್ತುವಿನಂತೆ ಅಲ್ಲದೆ ಸಹಾಯಗಳು ಎಂದಿಗೂ ಉಂಟಾಗಲಾರದು. ಅದ್ದರಿಂದ ನನ್ನ ಅಭಿಪ್ರಾಯದ ಪಟ್ಟಿಗೆ ವಿರಾಜಪೇಟೆಯು ಮಡಿಕೇರಿ ಸ್ಕೂಲಿನ ಅಧೀನವಾಗಿದ್ದರೆ ಸರ್ವವಿಧದಲ್ಲೂ ಹುಡುಗರ ಸೌಕರ್ಯ ಶಿಕ್ಷಣಕ್ಕೂ ಉಪಾಧ್ಯಾಯರುಗಳಿಗೂ ಸಹ ಹೇಳಲಸದಳವಾದ ದುಃಖಾಪತ್ತಿ ಉಂಟಾಗುವ ಸಂಭವ ಇರುವುದರಿಂದ ಈ ಸ್ಕೂಲಿನ ಉಪಾಧ್ಯಾಯರುಗಳಾಗಲಿ ಅಥವಾ ವಿರಾಜಪೇಟೆ ತಾಲೋಕಿನವರಾಗಲಿ ಸರಕಾರದವರೊಡನೆ ಅರಿಕೆ ಮಾಡಿಕೊಂಡು ಸಂಕಟವಾದ ಈ ಶಾಲೆಯನ್ನು ನಿರಂಕುಶವಾಗಿ ಬಡನೆ ಮಾಡುವುದು ಲೇಸೆಂದು ಕಾಣುತ್ತದೆ ಮತ್ತು ಈ ವಿಷಯದಲ್ಲಿ ನಮ್ಮ ಸರಕಾರವು ಕೂಡ ವಡನೆ ತಕ್ಕ ಪಕ್ಷಕ್ಕೆ ತೆಗೆದುಕೊಳ್ಳಬೇಕಾಗಿ ಕೋರಿಕೆ

ಅನುಭವದರ್ಶಿ

HEALTH IS WEALTH

WANTED all to improve health strength and vitality and thus save our nation from physical degeneracy Send half-anna stamp and get 13 specimen photographs with full particulars from

Director Physical Culture,

P O Basavanagudi,

BANGALORE CITY

ಕೊಡಗು ದೇಶದ ರೆಡ್ಡು ಕ್ರಾಸ್ ಸಂಘದ ಗೌರವ ಕಾರ್ಯದರ್ಶಿಯವರಿಂದ

ಕೊಡಗು ದೇಶದ ಮಹಾನುಭಾವರಿಗೂ ಮತ್ತು ಮಹಿಳೆಯರಿಗೂ ಸಹ ವಿನಂತಿ

ಕೊಡಗು ದೇಶದಲ್ಲು ಮುಖ್ಯವಾಗಿ ಶಿಸುಗಳ ಪಾಲನೆಗೂ ಮತ್ತು ಆಸ್ಪತ್ರೆಗಳಲ್ಲು ಚಿಕಿತ್ಸೆ ಹೊಂದಿಕೊಂಡು ನರಳುತ್ತಿರುವ ಬಡ ರೋಗಿಗಳಿಗೆ ಉಪಕರಣಗಳನ್ನು ಒದಗಿಸಿಕೊಡಲಿಕ್ಕೂ ಸಹ ರೆಡ್‌ಕ್ರಾಸ್ ಎಂಬ ಸಂಘ ಒಂದನ್ನು ಮಡಿಕೇರಿಯಲ್ಲು ಮ|| ಗೂಟರ್ ಸಹೇಬರವರು (ಕೊಡಗು ಕಮಿಶನರ್ ದೊರೆಗಳು) ಪ್ರೆಸಿಡೆಂಟರಾಗಿಯೂ, ಮಿಸೆಸ್ ಸೂಟರ್ ರವರು ಮತ್ತು ಮಿಸೆಸ್ ಕೊಡಂದೇರ ತಿಮ್ಮಯ್ಯನವರು ವೈಸ್‌ಪ್ರೆಸಿಡೆಂಟರಾಗಿಯೂ ಏರ್ಪಡಿಸಿರುತ್ತೆ.

ಮೇಲ್ಕಂಡ ಪರೋಪಕಾರದ ಕಾರ್ಯವನ್ನು ಕೃತ್ತಿಕರವಾಗಿ ನಡಿಸಲು ಮಹಾಶಯರ ಧಾರಾಳ ಧನಸಹಾಯವು ಅತ್ಯಗತ್ಯವಾಗಿದೆಂದದನ್ನು ಹೇಳುವುದು ಅನಾವಶ್ಯಕವಾಗಿದೆ.

ಆದ್ದರಿಂದ ದೇಶದ ಎಲ್ಲಾ ಮಹಾನುಭಾವರು ಮತ್ತು ಮಹಿಳೆಯರ ಸಹ ತಮ್ಮ ಶ್ರೇಯಸ್ಸಾದವ ಟ್ಟಿಗೆ ಈ ಸಂಘಕ್ಕೆ ಚಂದಾ ಕೊಟ್ಟು ಮೆಂಬರುಗಳಾಗಿ ಈ ಸಂಘದ ಉದ್ದೇಶವನ್ನ ಜರಿಗಿಸಲು ಸಹಕಾರಿಗಳಾಗಬೇಕಾಗಿ ಈ ಮೂಲಕ ಕೇಳಿಕೊಳ್ಳೋಣವಾದೆ [2—1]

ಮಡಿಕೇರಿ ಬಿ ಕಾರ್ಯಪ್ಪ

ತಾ|| 30—8—23. ಗೌರವಕಾರ್ಯದರ್ಶಿ

ಆರೋಗ್ಯ ಚಂದ್ರಿಕೆ

ದು ಪ್ರಜಾಶ್ರೇಯಸ್ಸಿಗಾಗಿ ಆರೋಗ್ಯವಾ… ಜಿವನ್ನೂ ಬೋಧಿಸುವ ಒಂದು ಸಚಿತ್ರ ಪತ್ರಿಕೆ. ಈ ಮಾಸಪತ್ರಿಕೆಯ ಸಂಪಾದಕರು ಸನಲ್ಲಿ ಪ್ರಸಿದ್ಧರಾದ ಡಾಕ್ಟರ್ ಯು ರಾ… ಎಮ್ ಎಲ್ ಸಿ ಯವರು ಇದರಲ್ಲಿ ಅನೇ… ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರ… ಆಗಿಂದಾಗ್ಗೆ ಪ್ರಕಟವಾಗುವುವು.

ಪಾಲ್ ಹಾಸಲು ಸೇರಿ ಈ ಪತ್ರಿಕೆಯ… ಕೊಡಗು ವರ್ಷಕ್ಕೆ 1—3—0 ಮಾತ್ರ … ದಾಗಕ್ಕವರು ವಿ ಪಿ ಮೂಲಕ ತರಿಸಿಕೊಳ್ಳು… ಹಣವನ್ನು ಮುಂಗಡವಾಗಿ ಕಳುಹಿಸ ವುದು ಉ…

ವಿಳಾಸ —

ಏಜೆಂಟರು —	ಮ್ಯಾನೇ…
ಮ ರಾ ರಾ ಎಸ್ ಈ ಈಶ್ವರಪ್ಪ, ಭಾಗಮಂಡ್ಲ, ಕೊಡಗು	ಆರೋಗ್ಯ… 323 ತಂಬು… ಮದರಾ…

[12—2]

ಬೆಲೆ ತನದಲ್ಲಿ ಹೆಚು ಲಾಭ ಪಡೆ…

ನಮ್ಮ ಕಾರಖಾನೆಯಲ್ಲಿ ಸುಧಾರಿಸಿದ ರಟೆಗಳೂ ಕಬ್ಬಿನ ಗಾಣಗಳೂ, ಮೇವ್ವರಯಂತ್ರ ಇತ್ಯಾದಿ ಒಕ್ಕಲಿಗರಿಗೆ ಬಹು ಸಾಧದಾಯಕವಲ್ಲವುಗಳೇ ಸಾಮಾನುಗಳು ತಯಾರಾಗುತ್ತವೆ.

ಸಾವಿರಾರು ರೈತರು ಹೂಡುತ್ತಿರುವರು ಚಿತ್ರ ಕ್ಯಾಟಲಾಗು ತರಿಸಿಕೊಳ್ಳಿ

ನಮ್ಮ ಶಾಖ —

ಕಿರ್ಲೋಸ್ಕರ ಬಂಧು ಲಿಮಿಟೆಡ್

ಪೋ ಕಿರ್ಲೋಸ್ಕ…

12—12 ಜಿಲ್ಲಾ —

For your requirements of h… grade Arms, Ammunition Wine and Spirits,

APPLY TO -

Mc. DOWELL & Co., Lt…

24—19 MERC…

New Agency! New Ag…

PONEP MEDAN & Co

General Merchants

FORRION export, import and Cons… Agents

For further particulars apply to representative at Mysore,

P. P. MADAYY…

Representative, Bharat Insu… Company Ltd,

Sayaji Rao Road, MYSOR…

ಹೊಸ ಏಜೆನ್ಸಿ! ಹೊಸ…

ಪ್ರೋನೆಪ್ ಮೇಡಾನ್ ಅಂಡ್ ಕಂಪೆನಿ,

ಜನರಲ್ ಮರ್ಚಂಟ್ಸ್ ಸರಕುಗಳನ್ನು ತರಿಸುವರು… ಮಾಡ ವರು ಮತ್ತು ವ್ಯಾಪಾರ ವಿಚಾರ… ತಿಳಿಸುವ ಏಜಂಟರುಗಳು.

ನಮ್ಮ ಏಜಂಟರು—

ಪಿ. ಪಿ. ಮಾದಯ್ಯ,

ಭಾರತ್ ಯಿನ್ಶೂರೆನ್ಸ್ ಕಂಪೆನಿ ಏಜ…

[4—3] ಸಯ್ಯಾಜಿರಾವ್ ರೋಡ್

Printed & Published by D S Krishnaswam… Proprietor, at Sreenivas Electric Press … "for Kodagu" Ltd, Mercara—7 9 1923

[illegible masthead]

ಸಂ [illegible]] [illegible] ಸೆಪ್ಟಂಬರ್ ತಾರೀಖು [illegible] ನೆಯ ಶುಕ್ರವಾರ [illegible]

[illegible]

ನಮ್ಮ [illegible] ಪ್ರಿಂಟಿಂಗ್ [illegible] ಮತ್ತು [illegible] ಕನ್ನಡದ [illegible] ಕೆಲಸ [illegible]

S[illegible] L[illegible] Press,
MY[illegible]E

The C[illegible] Co-operative [illegible] Ltd.,

[illegible] societies

[illegible]	5000
[illegible]	6 %
[illegible]	[illegible]

[illegible] The [illegible] The Registrar of Co-operative Societies [illegible] Deposits [illegible] interest at [illegible] per [illegible]

[illegible] Treasurer [illegible]

President	[illegible]	Secretary
[illegible]	[illegible]	C. M. [illegible]
Ra[illegible]	B. A. B.	B. A. B.

Dated 1–9–192[illegible]

[illegible]

[illegible] ಸಂಪಾದ[illegible] ವ್ಯಕ್ತಪಟ್ಟಿರೆ [illegible] ಬೇಕಾಗಿದೆ.

ವೃದ್ಧಾಪ್ಯಕಾಲದಲ್ಲಿ [illegible] ಕುಟುಂಬದ ಜೀವನಾ[illegible] ಸೌಖ್ಯ[illegible] ಒದಗಿಸುವುದೇ [illegible]

ಅತಿ ಕಡಿಮೆ ದರದಲ್ಲಿ [illegible] ಪದಲ್ಲಿ ಹಣವನ್ನು ಒದಗಿಸುವ [illegible] ಸೂಚಿಸ [illegible] ಭದ್ರತೆ [illegible]

ಬದುಕಿರುವಾಗಲೇ ಕುಟುಂಬದ ಜೀವನ[illegible] ಹಣವನ್ನು ಒದಗಿಸು [illegible] ದೇಶದ ಆರ್ಥಿಕ ಸಂಪತ್ತ[illegible] (Economic [illegible]dition) ವೃದ್ಧಿಗೊಳಿಸುವ [illegible]

ಸ್ತ್ರೀಪುರುಷ [illegible] ಸೌಕರ್ಯ [illegible] ಅನುಕೂಲವನ್ನು [illegible] ಸಂಸ್ಥೆಯಾ[illegible] ಇದೊಂದೆ

ಎಂದು ದೇಶದ ಹಣವು [illegible] ದೇಶದಲ್ಲಿ [illegible] ವೃದ್ಧಿಗೊಳಿಸುವ ಸಹಕಾರಸಂಘ, ಬ್ಯಾಂಕ, [illegible] ಸಾರ್ವಜನಿಕ ಸಂಸ್ಥೆಗಳಿಗೆ ಸಾಲ [illegible] ಅನುಕೂಲತೆಯುಳ್ಳ ಕಂಪೆನಿ ಇದೊಂದೆ.

[illegible] ಮಾಹಿತಿಯನ್ನು ಕನ್ನಡ ನಾಡುಗಳ [illegible] ಕೆಳಗಿನ ವಿಳಾಸದಾರರಿಂದ ಪಡೆಯ[illegible]

[illegible] ಎಸ್. [illegible]

[illegible] ಅಂಡ್ ವಸ್ಯಾಡೇಜ್ ಆಫೀಸ್, ಮಡಿಕೇರಿ.

[G]et Spencers Price List!

Brandy at its Best

	per bot	per pint
Exshaw's No [illegible]	Rs 7 4 0	3 12 0
Exshaw's No [illegible]	„ 6 7 0	3 6 0

Some of many cheap lines in Stores —

Bovril 1 oz bottle	0 10 0
2 oz „	1 2 0
[illegible]	2 0 0
Brand's es[illegible]	2 4 [illegible]
[illegible]lb [illegible] P[illegible] [illegible] Biscuits	0 14 [illegible]
[illegible]lb pk[illegible] Me[illegible] Chocolate	0 9 0
[illegible] lb [illegible] Cadbury's cocoa	0 6 0
1 lb tin [illegible] fresh herrings	0 [illegible] 0
Sunlight [illegible]	1 4 0
Sweets per [illegible]	0 11 0

[F]resh Stores at revised prices

[illegible]2–48

SPENCER & Co, Ltd,
[M]ERCARA & POLLA[illegible]

When you think of going to Bombay
THINK OF

THE WELCOME [H]OTEL!

Girgaum [B]ack Road, BO[M]BAY

Mo[illegible] Most Central situation — [illegible] Meals [illegible] Every Convenience

[illegible]

[illegible] ಬಾಂಬಾಯಿ

[illegible]

[12—4] –

[illegible]

[illegible] ಲಿಮಿಟೆಡ್

[illegible] ರಿಜಿಸ್ಟರಾಗಿದೆ

	ರೂ
ಶೇರ್ ಬಂಡವಾಳ	50 000
ವಸೂಲಾದ ಶೇರ್ ಮೊಬಲಗು	6 82[illegible]
ಜಮಾ ಬಂದ ಠೇವಣಾತಿ	[illegible]9 849

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ವರುಷ ಮಾಡಿದ ಅಥವಾ [illegible] ಠೇವಣಾತಿಗಳಿಗೆ [illegible] ಬಡ್ಡಿ [illegible] ಬಡ್ಡಿ [illegible] ತಿಂಗಳಿಗೆ [illegible] ಬಡ್ಡಿ [illegible]

[illegible] ರವರು [illegible] ಮಾಡುತ್ತಾರೆ

ಪ್ರೆಸಿಡೆಂಟರು	[illegible]
[illegible]	[illegible]
[illegible]	ಬಿ. ಎ., ಬಿ. ಎಲ್.,

ಸೆಕ್ರೆಟರಿ
[illegible] ವೆಂಕಟಪ್ಪಯ್ಯನವರು ಬಿ. ಎ., ಬಿ. ಎಲ್
ತಾರೀಖು 1—9—192[illegible]

[illegible] ವಿಲಾಸ ಪ್ರೆಸ್, ಮಡಿಕೇರಿ

(ಸ್ಥಾಪಿತ [illegible] 1912)

ಕೊಡಗು ಮಹಾ ಜನರನ್ನು ಈಗ್ಗೆ ಹದಿ[illegible] ವರ್ಷಗಳಿಂದ ಬಂದೇ ಸವನೆ ಸೇವಿಸಿ ಕೊಡಗಿನ ಪ್ರಾಧಾನ ಪಟ್ಟಣವಾದ ಮಡಿಕೇರಿಯಲ್ಲಿ ಸ್ಥಾಪಿತವಾಗಿರುವ ನಮ್ಮ ಮುದ್ರಾಲಯವು ಮತ್ತಷ್ಟು [illegible] ಸೇವಿಸಲು ಸಿದ್ಧವಾಗಿದೆ [illegible] ಮುದ್ರಾ[illegible] ಮುದ್ರಣದಿಂದ ಸೊಗಸಾದ [illegible] ಮುದ್ರಿಸುವ [illegible] ಅನುಕೂಲ [illegible] ಸಿದ್ಧವಾಗಿದೆ

[illegible] ಎಲ್ಲಾ ಅನುಕೂಲತೆಗಳನ್ನು [illegible]

[illegible]

[illegible] ವಿಶೇಷ ವಿವರಗಳಿಗೆ ಮುದ್ರಾಲಯದ ಅಧಿಕಾರಿಗಳಿಗೆ ಬರೆದು ತಿಳಿದುಕೊಳ್ಳುವುದು

ಸುಂದರ ವಿಲಾಸ ಪ್ರೆಸ್	[illegible] ಸುಂದರ[illegible]
ಮಡಿಕೇರಿ	ಪ್ರೊಪ್ರೈಟರ್
ತಾ॥ 24–7–2[illegible],	12—[illegible]

"ಕೊಡಗು"

೧೯೩೩ ನೇ ಇಸವಿ ಸೆಪ್ಟಂಬರ್ ತಾ|| ೧೫ ನೇ

ಶುಕ್ರವಾರ

ಜಪಾನ್ ದೇಶದಲ್ಲಿ ಭೂಕಂಪದ ಅನಾಹುತ.

ಅಷ್ಟು ಖಂಡದ ಜನ ಗೆಲ್ಲಲಿಗೂ ಉತ್ಸಾಹವನ್ನು ಕೊಟ್ಟು ಕೊಡುತ್ತಲೂ ಇರುವ ಜಪಾನ್ ದೇಶದಲ್ಲಿ ದೇವರ ಮಹಿಮೆಯಿಂದ ಒಂದು ದೊಡ್ಡ ಅನಾಹುತವು ಸಂಭವಿಸಿದ ಕಳೆದ 1 ನೇ ತಾರೀಕು ದಿನ ಮಧ್ಯಾಹ್ನದಲ್ಲಿ ಅದ್ಭುತವಾದ ಭೂಕಂಪವೊಂದು ಉಂಟಾಗಿ ಜಪಾನಿನ ಮುಖ್ಯಪಟ್ಟವಾದ ಟೋಕಿಯೋ ಮತ್ತು ಒಸಾಕಾ, ಯೋಕೊಹಾಮ ಮುಂತಾದ ಪಟ್ಟಣಗಳಿಗೆ ಬಹಳ ನಷ್ಟವಾಗಿದೆ. ಮನೆಗಳೆಲ್ಲಾ ಬಿದ್ದು ಬೆಂಕಿ ಹತ್ತಿಕೊಂಡು ಊರುಗಳೆಲ್ಲಾ ಸುಟ್ಟು ಹೋದವು ಸಮುದ್ರದಲ್ಲಿ ದೊಡ್ಡ ತೆರೆಯೊಂದು ಎದ್ದು ಅನೇಕ ಊರುಗಳನ್ನು ಮುಚ್ಚಿತು ಸಮುದ್ರದ ಮಧ್ಯದಲ್ಲಿದ್ದ ಒಶೀಮ ಎಂಬ ಒಂದು ದ್ವೀಪವೇ ಮಾಯವಾಗಿ ಹೋಗಿದೆಯಂತೆ ಆಹಾರ ಸಾಮಾನುಗಳಿಲ್ಲದೆ ಜನರು ಕ್ಷಾಮ ಪೀಡಿತರಾಗಿದ್ದಾರೆ ಎಲ್ಲಿ ನೋಡಿದರೂ ಹೆಣಗಳು! ಜಪಾನ್ ದೇಶದಲ್ಲಿ ಈ ಭಯಂಕರ ಭೂಕಂಪದಿಂದ ಕಡಿಮೆಪಕ್ಷ 15 ಲಕ್ಷ ಜನರಾದರೂ ಮೃತರಾಗಿದ್ದಾರಂತೆ ಉರಿಯುವ ಬೆಂಕಿಯಿಂದ ಉಂಟಾದ ಘೋರ ಶಿಖೆಯಿಂದ ಅನೇಕರ ಸಕ್ಕರಂತೆ ಸಂಕಟ ತಡೆಯಲಾರದೆ ಸೀಂಗ ಹಾರಿ ಅನೇಕರು ಪ್ರಾಣಬಿಟ್ಟರಂತೆ 2000 ಚದುರ ಮೈಲು ವಿಸ್ತೀರ್ಣದಲ್ಲಿ ಈ ಅನಾಹುತದ ಬಾಧೆಯುಂಟಾಗಿದೆ

ನಮ್ಮ ಈ ದೇಶದಲ್ಲಿ ಅತಿವೃಷ್ಟಿಯಿಂದ ಆದ ಸೊತ್ತು ನಷ್ಟದಿಂದಲೇ ನಮ್ಮ ತಲೆ ತಿರುಗುತ್ತಿರುವಾಗ ಈ ಅಘಾತಕಾರಣ ಅಲ್ಲೋಲಕಲ್ಲೋಲಕ್ಕೆ ಗುರಿಯಾದ ಜಪಾನ್ ದೇಶದ ಜನರ ಮನಸ್ಸು ಹೇಗಿರಬಹುದೆಂಬುದನ್ನು ಊಹಿಸಿಕೊಳ್ಳಬೇಕಷ್ಟೆ ಅವರ ಇಂಥಾ ಸಂಕಟ ಸಮಯದಲ್ಲಿ ದೇವರು ಅವರಿಗೆ ಧೈರ್ಯ ಕೊಟ್ಟು ಅವರ ಪ್ರಾಣಹಾನಿ ತಗೆ ಕೊರತೆಯಿಲ್ಲದಂತೆ ಮಾಡಿಕೊಳ್ಳಲು ಸಾಧ್ಯವಾಗಲಿ ಎಂತ ಒಟ್ಟು ಇಂಥಿಯಾದ ಪ್ರಾರ್ಥನೆಯೊಂದಿಗೆ ನಾವು ಸೇರಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯವಾಗಿದೆ

ಈ ದೈವ ಕೋಪಕ್ಕೆ ಗುರಿಯಾದ ಜನರ ಕಷ್ಟನಿವಾರಣೆಗೆ ಅಮೇರಿಕಾದವರೂ, ಆಸ್ಟ್ರೇಲಿಯಾದವರೂ, ಇಂಗ್ಲಿಷರೂ ಸಹ ಸಹಾಯಮಾಡಲು ನಿಶ್ಚೈಸಿದ್ದಾರೆ ಪೂರ್ವಸಮುದ್ರಗಳಲ್ಲಿದ್ದ ಹಡಗುಗಳನ್ನೆಲ್ಲಾ ಜಪಾನಿನ ಸಹಾಯಕ್ಕೆ ಬಿಟ್ಟು ಕೊಟ್ಟಿದ್ದಾರೆ ಔಷಧಿಗಳನ್ನೂ ಡಾಕ್ಟರುಗಳನ್ನೂ ಕಳುಹಿಸುತ್ತಲಿದ್ದಾರೆ ಆಹಾರ ಸಾಮಗ್ರಿಗಳನ್ನು ಒದಗಿಸುತ್ತಲಿದ್ದಾರೆ ಇಂಡಿಯಾದ ಮಹಾಜನರು ಸಹ ಇಂಡಿಯಾದಿಂದ ಸಾಧ್ಯವಾದ ಸಹಾಯ ಕಳುಹಿಸಬೇಕೆಂತ ಯೋಚಿಸುತ್ತಲಿದ್ದಾರೆ ಇಂಡಿಯಾ ವೈಸ್‌ರಾಯರು ಇವರ ಸಹಾಯಕ್ಕಾಗಿ ಒಂದು ಫಂಡನ್ನು ಏರ್ಪಡಿಸಿ 5000 ರೂಪಾಯಿ ಸ್ವತಃ ಕೊಟ್ಟಿದ್ದಾರೆ ದೇಶದವರೆಲ್ಲರೂ ಸಹಾಯ ಮಾಡಬೇಕೆಂತ ಕೇಳಿಕೊಳ್ಳುತ್ತಾರೆ ಬೇರೆ ಸಂದರ್ಭಗಳಲ್ಲಿ ಒಬ್ಬರಿಗೊಬ್ಬರಿಗೆ ಅನ್ಯೋನ್ಯ ಅಸೂಯೆ, ಭಯ ಮುಂತಾದ್ದು ಇರಬಹುದಾದರೂ ಈ ದೇವರು ಕೊಟ್ಟ ಕಷ್ಟವನ್ನು ಅನುಭವಿಸುವ ಈ ಸಮಯದಲ್ಲಿ ಪ್ರಪಂಚದ ಜನಾಂಗಗಳೆಲ್ಲರೂ ಒಗ್ಗಟ್ಟಾಗಿ ಸಹಾನುಭೂತಿ ತೋರಿಸುವದರಲ್ಲಿದ್ದಾರೆ ಈ ರೀತಿ ಸದಾ ಕಾಲವು ಪ್ರಪಂಚದಲ್ಲಿ ಪ್ರೀತಿಯೇ ತುಂಬಿದ್ದರೆ ಈ ಜಗತ್ತಿನ ಸುಖಕ್ಕೆ ಪಾರವಿರುತ್ತಿತ್ತೇ ?

ಪ್ರಪಂಚದಲ್ಲೆಲ್ಲಾ ಯಾರಿಗೂ ಹಿಂದೆ ಬೀಳದ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸರಿಸಮಾನರೆಂತ ಎನ್ನಿಸಿಕೊಳ್ಳುವಷ್ಟು ಪ್ರಖ್ಯಾತಿಯನ್ನು ಅಲ್ಪಕಾಲದಲ್ಲೇ ಸಂಪಾದಿಸಿದ ಈ ಜಪಾನ್ ದೇಶಕ್ಕೇನೇ ಈ ಅಮಾನುಷ ಕಷ್ಟಬಂದದ್ದರಿಂದ ಮನುಷ್ಯಜಾತಿಯು ತಿಳಕೊಳ್ಳತಕ್ಕದ್ದು ಏನೂ ಇಲ್ಲವೇ ? ಮನುಷ್ಯರು ಹೊಸಹೊಸದಾಗಿ ಕಂಡುಹಿಡಿದು ಉಪಯೋಗಿಸುವ ಆವಿ ವಿದ್ಯುಚ್ಛಕ್ತಿ ಮದ್ದುಗುಂಡಿನ ಶಕ್ತಿ ಮುಂತಾದ್ದೆಲ್ಲಾ ಶಕ್ತಿಗಳನ್ನೂ ಮೀರಿಸುವ ಶಕ್ತಿಯು ದೇವರ ಉಗ್ರಾಣದಲ್ಲಿ ಇದ್ದೇ ಇದೆಯೆಂತಾಯಿತು. ಹೊಸ ಶಕ್ತಿಗಳೇ ಇಂಥಾ ಸಂದರ್ಭದಲ್ಲಿ ಕೆಡಕಿಗೆ ಕಾರಣಗಳಾಗುತ್ತವೆ ಟೋಕಿಯೋ ಪಟ್ಟಣದಲ್ಲಿ ಭೂಕಂಪವಾಗುವಾಗ ಊರಿನಲ್ಲಿ ದೀಪಕ್ಕಾಗಿ ಕೊಳವೆಗಳ ಮೂಲಕ ಓಡಾಡುತ್ತಿದ್ದ ಗೇಸ್‌ಗೆ ಬೆಂಕಿಹಿಡಿದು ಊರಿಗೆ ಬೆಂಕಿ ಹಡಡಲಿಕ್ಕೆ ಅನುಕೂಲವಾಯಿತಂತೆ ವಿದ್ಯುಚ್ಛಕ್ತಿಯ ತಂತಿಗಳಿಂದಲೂ ಅಪಾಯ ಬಂತಂತೆ ರೈಲಿನಲ್ಲಿ ಜನರು ಪ್ರಯಾಣಮಾಡುತ್ತಿದ್ದ ರೈಲ್ ಬಂಡಿಗಳು ಸಮುದ್ರದಲ್ಲಿ ಬಿದ್ದು ಜನರು ನಾಶವಾದರಂತೆ ಯುದ್ಧಹಡಗುಗಳಾಗಲೀ ಆಕಾಶವಿಮಾನಗಳಾಗಲೀ ಈ ಅಸಾಧಾರಣ ದೈವೀಕಯುದ್ಧದಲ್ಲಿ ಜಪಾನಿನವರ ಸಹಾಯಕ್ಕೆ ಬರಲಿಲ್ಲವಷ್ಟೆ. ಮನುಷ್ಯನು ಸ್ವಪ್ರಯತ್ನದಿಂದ ಸಂಪಾದನೆಮಾಡಿದ್ದೆಲ್ಲಾ ದೇವರ ಮನಸ್ಸಿಗೆ ಬಂದರೆ ನಿಮಿಷಾರ್ಧದಲ್ಲಿ ಹಾಳಾಗುತ್ತೆ ಪ್ರಾಪಂಚಿಕ ಧರ್ಮಗಳನ್ನು ನಡಿಸುತ್ತಿರುವ ಪ್ರತಿನಿಮಿಷದಲ್ಲೂ ದೇವರ ಮಹಿಮೆಯನ್ನು ಜ್ಞಾಪಕದಲ್ಲಿಡಬೇಕೆಂತ ಇಂಥಾ ಪ್ರಳಯಗಳು ಕಲಿಸುತ್ತವೆ

ದಿವಂಗತ ಕೋಟೆರ ಉತ್ತಯ್ಯನವರು.

ಈ ವಿಷಯವು ನಮ್ಮ ದೇಶದಲ್ಲಿ ಯಾರನ್ನು ತಾನೆ ವಿಸ್ಮಯಗೊಳಿಸದೆ ಇರುವುದು! ಯಾರನ್ನು ತಾನ ವ್ಯಸನಸಂತಪ್ತರನ್ನಾಗಿ ಮಾಡದೆ ಇರುವುದು!! ದೇವರ ಮಾಯೆಯು ಪರಿಪರಿಯಾಗಿ ಮಾಡಿ ತೋರಿಸುವುದು! ಅದನ್ನು ವರ್ಣಿಸಲು ಯಾರನ್ನು ಎಂದು ಪಾರ ಬರುವುದು! ಅದನ್ನು ವರ್ಣಿಸಲು ಯಾರಿಂದ ತಾನೇ ಸಾಧ್ಯವಾಗುವದು !! ಮೊನ್ನೆ ತಾನೇ ಅಂದರೆ ತಾ|| 1 ನೇ ಮಂಗಳವಾರ ದಿನ ಕ್ಷೇಮದಿಂದಿದ್ದು ಕೋರ್ಟ್ ಕೆಲಸ ಮಾಡಿದ ಮೆ|| ಕೋಟೆರ ಉತ್ತಯ್ಯ ಬಿ ಎ ಎಲ್ ಎಲ್ ಬಿ. ಯವರು ತಾ|| 8 ನೇ ಶನಿವಾರ ದಿನ ಸಾಯಂಕಾಲ 3 ಗಂಟೆಗೆ ಮುಕ್ಕಾಟೀರ ಮನೆಯಲ್ಲಿ ಮೃತಪಟ್ಟರೆಂಬ ವಾರ್ತೆಯು ನಮ್ಮ ದೇಶೀಯರಿಗೆಲ್ಲಾ ದುಃಖಪ್ರದವಾದ ಆಶ್ಚರ್ಯವನ್ನುಂಟುಮಾಡದಿರಲಾರದು ಮುಂಜಾಗ್ರತೆಯಿಲ್ಲದೆ ಪ್ರಾರಂಭವಾದ ಮಲೇರಿಯ ಜ್ವರವು ಅವರ ಮೆದುಳಿಗೆ ಹತ್ತಿ ಅವರ ಅಂತ್ಯಕಾಲಕ್ಕೆ ಹೇತುವಾಯಿತೆಂದು ತಿಳಿಯಬರುತ್ತದೆ

ಇವರು ತನ್ನ ಚಿಕ್ಕ ವಯಸ್ಸಿನಲ್ಲೇ ಮಡಿಕೇರಿ ಹೈಸ್ಕೂಲಿನಲ್ಲಿ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮೈಸೂರು ಮಹಾರಾಜರ ಕಾಲೇಜಿನಲ್ಲಿ ಎಫ್ ಎ ಮತ್ತು ಬಿ ಎ ಪರೀಕ್ಷೆಗಳಲ್ಲಿ ಪಾಸಾದ ನಂತರ ಬೊಂಬಾಯಿಗೆ ಹೋಗಿ ಅಲ್ಲಿ ಎಲ್ ಎಲ್ ಬಿ ಕೋರ್ಸನ್ನು ಮುಗಿಸಿದರು ಕೂಡಲೆ ಇವರು ಮಡಿಕೇರಿಗೆ ಬಂದು ಲಾಯರ ಕೆಲಸವನ್ನು ಕೈಕೊಂಡರು. ಪ್ರೌಢ ವಿದ್ಯಾಭ್ಯಾಸವನ್ನು ಗಳಿಸಿದವರಾಗಿದ್ದರೂ ಇವರು ಸ್ವಲ್ಪವೂ ಅಹಂಕಾರವನ್ನು ತೋರಿಸದೆ ವಿದ್ಯಾವಂತರು ಮತ್ತು ಅವಿದ್ಯಾವಂತರಲ್ಲಿಯೂ ಐಶ್ವರ್ಯವಂತರು ಮತ್ತು ಬಡವರಲ್ಲಿಯೂ ಏನೂ ಭಿನ್ನಭೇದವೆಣಿಸದೆ ಎಲ್ಲರಲ್ಲಿಯೂ ಏಕರೀತಿಯಿಂದ ವರ್ತಿಸುತ್ತಿದ್ದುದರಿಂದ ಇವರು ಬೇಗನೆ ಜನರ ಪ್ರೀತಿಗೆ ಪಾತ್ರರಾದರು. ಇವರ ಸಾದುಗುಣಕ್ಕೆ ಇವರನ್ನು ಎಲ್ಲರೂ ಮೆಚ್ಚುತ್ತಿದ್ದರು ಎಂಟು ವರ್ಷ ತುಂಬುವದರೊಳಗಾಗಿ ಇವರು ನಮ್ಮ ಅಫೀಷಲ್ ನೀರಾಜಪೇಟೆಗೆ ವರ್ಗಾಯಿಸಿದರು ಅಲ್ಲಿ ಒಂದೆರಡು ತಿಂಗಳುಗಳಲ್ಲೇ ಜನರು ಇವರ ಸದ್ಗುಣಗಳನ್ನು ಕಂಡು ಇವರನ್ನು ಗೌರವದಿಂದ ಪ್ರೀತಿಸುತ್ತಿದ್ದರು ಇವರು ಲಾಯರ ವೃತ್ತಿಯನ್ನು ಈಗ ತಾನೇ ಪ್ರಾರಂಭಿಸಿದ್ದರೂ ಕೂಡ ತನ್ನ ವಾಕ್ಚಾತುರ್ಯ ಸೇವೆಯನ್ನು ಮರೆಯಲಿಲ್ಲ ಈ ದೇಶದ ಹಿತಸ್ಥಿತಿಯನ್ನು ಚೆನ್ನಾಗಿ ಅರಿತವರಾಗಿ ಅದರ ಅಭಿವೃದ್ಧಿಗೆ ತನ್ನ ಕೈಯ್ಯಲ್ಲಾಗುವಷ್ಟು ಮಟ್ಟಿಗೆ ಕೆಲಸ ಮಾಡಲು ತಯಾರಾಗಿದ್ದರು ದೇಶದ ಉಸ್ತುವಾರಿ ಸ್ಥಿತಿಯನ್ನು ಬಯಸಿ ರಾಜಕೀಯ ಚಳವಳದಲ್ಲಿಯೂ ತನ್ನ ಅಭಿಪ್ರಾಯವನ್ನು ಆಗಾಗ್ಗೆ ಸೂಚಿಸುತ್ತಾ ತನ್ನಿಂದ ಸಾಧ್ಯವಾದಷ್ಟು ಮಟ್ಟಿಗೆ ಸಹಾಯಮಾಡುತ್ತಿದ್ದರು ಆ ಕಾರಣದಿಂದಲೇ ಇವರು ಜಮಾಬಂದಾರರ ಸಂಘದ ತಾಲೂಕು ಜಾಯಿಂಟ್ ಸೆಕ್ರಟರಿಯಾಗಿ ಚುನಾಯಿಸಲ್ಪಟ್ಟರು. ಇವರು ನಮ್ಮ ದೇಶದ ಏಳಿಗೆಗೆ ಇನ್ನು ಮುಂದಕ್ಕೆ ಬಹಳ ಕೆಲಸವನ್ನು ನಡೆಸುವರೆಂಬ ನಂಬಿಕೆಯು ಜನರಲ್ಲಿ ಹುಟ್ಟಿತ್ತು. ಅಷ್ಟರಲ್ಲೇ ಜನರಿಗೆಲ್ಲರಿಗೂ ಬೇಕಾಗಿದ್ದ ಉತ್ತಯ್ಯನವರು ಅದ ಬರೆಂದಲೇ ಭಗವಂತನಿಗೂ ಬೇಕಾದವರಾದರು ಆದ ಕಾರಣ ಭಗವಂತನು ಅವರನ್ನು ಇಷ್ಟು ಚಿಕ್ಕವಯಸ್ಸಿನಲ್ಲೇ ತನ್ನ ಸನ್ನಿಧಿಗೆ ಕರೆದುಕೊಂಡನೆಂದು ಹೇಳಬೇಕಾಗಿದೆ ಇವರ ಮರಣವು ಈ ದೇಶಕ್ಕೆ ದೊಡ್ಡದೊಂದು ನಷ್ಟವೆಂದು ಯಾರು ತಾನೇ ಹೇಳದಿರುವರು. ಪ್ರೌಢವಿದ್ಯಾವಂತರು ಅತಿ ವಿರಳವಾಗಿರುವ ನಮ್ಮ ಈ ಚಿಕ್ಕ ದೇಶದಲ್ಲಿ ಈ ನಾಲ್ಕು ತಿಂಗಳೊಳಗಾಗಿ ಮೆ|| ಕುಪ್ಪಂಡ ಗಣಪತಿಯವರು ಮೆ|| ಕುಟ್ಟಂಡ ಕರುಂಬೈಯ್ಯನವರು ಮತ್ತು ಮೆ|| ಕೋಟೆರ ಉತ್ತಯ್ಯನವರು ಇಂತಹ ವಿದ್ಯಾವಂತರಾದ ಮೂರು ಯೌವ್ವನಸ್ಥರು ಇಹವನ್ನು ಬಿಟ್ಟು ಹೋದದ್ದು ಈ ದೇಶದ ದುರ್ದೆಶೆಯೆಂದು ಎಷ್ಟು ಹೇಳಿದರೂ ಸಾಲದು ಈ ವ್ಯಸನಕರವಾದ ವಿಷಯ ಮುಂದರಿಸಲು ಮನಸ್ಸಿಲ್ಲದವರಾದುದರಿಂದ ನಾವು ಇವರ ಅಗಲುವಿಕೆಯಿಂದ ದುಃಖಸಾಗರದಲ್ಲಿ ಮುಳುಗಿರುವ ಇವರ ಕುಟುಂಬದವರಿಗೂ ನೆಂಟರಿಷ್ಟರಿಗೂ ತಾಳ್ಮೆಶಕ್ತಿಯನ್ನೂ ಇವರ ಆತ್ಮಕ್ಕೆ ಶಾಂತಿಯನ್ನು ನೀಡಲೆಂದು ಭಗವಂತನಿಗೆ ಪ್ರಾರ್ಥಿಸಿ ಮುಗಿಸುತ್ತೇವೆ

ರವೀಂದ್ರನಾಥ ಟಾಗೂರರ ಪತ್ರ.

ಮುಂದರಿಸಿದ್ದು (ಮೋಡರ್ನ್ ರಿವ್ಯೂವಿನಿಂದ).

ಚಿಕ್ಕಮನಸ್ಸಿನ ಇಂಗ್ಲಿಷ್ ಮನುಷ್ಯನ ಆಕ್ಷೇಪಕ್ಕೆ ಈಚೆಗೆ ನಾನೂ ಗುರಿಯಾಗಿದ್ದೇನೆ ನೂರಾರು ಯುವಕರನ್ನು ವಿಚಾರವಿಲ್ಲದೆ ಸೈದಿಗೆ ಕಳುಹಿಸುವ ವಿಷಯದಲ್ಲಿ ನಾನು ಕೆಲವು ದಿವಸಗಳ ಕೆಳಗೆ ಒಂದು ಪತ್ರ ಬರೆದೆನು ಸುಳ್ಳುವರ್ತಮಾನವನ್ನು ಹರಡಿಸಿದೆನೆಂದು ಹೇಳಿ ನನ್ನನ್ನು ಎಕ್ಸ್‌ಟ್ರೀಮಿಸ್ಟ್ ಅಂದರೆ ದುಡುಕುವವನೆಂದು ಇಂಡಿಯಾದಲ್ಲಿರುವ ಇಂಗ್ಲಿಷರ ಪತ್ರಿಕೆಗಳು ಹೇಳಿದವು. ಇವರೂ ಸಹ ದುಷ್ಟ ಹಾಳ ಸಂಸಾರಿ ಉದ್ಯೋಗಸ್ಥರೇ ಅವರು ನನಗೆ ಹೆಸರಿಟ್ಟ ಹಾಳ ಸಂಸಾರಿ ... ದೃಷ್ಟಿ ಮನ್ನಿಸುತ್ತೇನೆ ನನ್ನ ಕವಿತೆಯಲ್ಲಿ ಅರ್ಥವಿಲ್ಲವೆಂತಲೂ ಗದ್ಯದಲ್ಲಿ ಸಾರವಿಲ್ಲವೆಂತಲೂ ಹೇಳುವ ನನ್ನ ದೇಶೀಯರಿಗಾದರೂ ನನ್ನ ಲೇಖನಗಳನ್ನು ಓದಿರುವವರಾದ್ದರಿಂದ ಸ್ವದೇಶದ ಚಳವಳ ಹುಟ್ಟಿದಂದಿನಿಂದಲೂ ದುಡುಕುವಿಕೆ Extremism

ಗೆ ವಿರೋಧವಾಗಿಯೇ ಬರೆಯುತ್ತಿದ್ದೇನೆಂಬುದು ಗೊತ್ತಾಗಬಹುದು ಕಡಕು ಮಾಡುವದರ ಫಲಿತಾಂಶವು ಅಂತ್ಯದಲ್ಲಿ ಪ್ರಯೋಜನಕಾರಿಯಾಗುವದಿಲ್ಲವೆಂತಲೂ ಯಾಕೆಂದರೆ ಪಾಪದ ಸಾಲವು ಅಂತ್ಯದಲ್ಲಿ ಬಹಳ ಭಾರವಾಗಿ ಪರಿಣಮಿಸುತ್ತದೆಂತಲೂ ಬರೆದಿದ್ದೇನೆ ನನ್ನನ್ನು ದೇಶೀಯರೇ ಆಗಲೀ ಇಂಗ್ಲೀಷರೇ ಆಗಲೀ ಆಕ್ಷೇಪಿಸಿದರೆ ನಾನು ಭಯಪಡುವನಿಲ್ಲ ದುಡುಕುವದು ಮರ್ಯಾದೆಗೆ ವಿರೋಧವಾಗಿ ಮೂರ್ಖತನಕ್ಕೆ ವಿರೋಧವಾಗಿಯೂ ಪ್ರಕಟಪಡಿಸದೆ ನಡಿಸುವ ದುಡುಕಾಟ ಸರಿಯಾದ ದಾರಿಯಲ್ಲವೆಂತಲೂ ಅಂಥಾ ಚಳವಳವನ್ನು ಅನಾಗರಿಕ ಬೇಕೆಂತಲೂ ನಾನು ಯಾವಾಗಲೂ ಬರೆದಿದ್ದೇನೆ ಈ ಗುಣವು ಸರಕಾರದವರಿಗೂ ಯೋಗ್ಯವಲ್ಲವೆಂತ ನನ್ನ ಅಭಿಪ್ರಾಯವಾಗಿದೆ

ಒಳದಾರಿ ಹುಡುಕುವರು ಪೂರ್ವದಲ್ಲಿ ರಾಡಿಯಿತ್ತು, ... ತಲೆ ತಿರುಗಿಸಿ ... ಎಂಬವೇ ... ದಾರಿ ಯೆಂತ ಬಾವಿಸಿದ್ದರು ಈ ದಾರಿಯಿಂದ ಬಹಳ ನಷ್ಟವಿದೆಯೆಂತ ಯುರೋಪಿನಲ್ಲಿ ಈಗ ತಿಳಿಯಲು ಸರಿಯಾಗಿದೆ ಕಷ್ಟ ಬಂದಾಗಲೂ ಆ ಸರವನ್ನೂ ಸಹ ನ್ಯಾಯಬೇಕೆಂತ ನಾಗರೀಕತೆಯು ಹೇಳುತ್ತೆ ನಾಗರೀಕ ಸಮಾಜದಲ್ಲಿ ಕೊಡುವ ಶಿಕ್ಷೆಗಳು ನ್ಯಾಯವೆಂದು ಬಂದರಿಯಲ್ಲಿ ಗಾಳಿಸಲ್ಪಟ್ಟು ಶಿಷ್ಟ ಪಕ್ಷಪಾತಗಳಿಂದ ವಿಮುಕ್ತಿಯುಳ್ಳದ್ದಾದ್ದರಿಂದಲೇ ಅದಕ್ಕೆ ದಂಗಿಯೋಗದ ಯಾಸಿನೂ ವರ್ತಿಸುವದಾಗಿದೆ ಕಷ್ಟಕಾಲವೆಂತ ಒಪ್ಪುತ್ತೇನೆ ದೇಶದ ಬೆಳವಣಿಗೆಗೆ ಇರುವ ಅಡ್ಡಿಗಳನ್ನು ಕಿತ್ತುಹಾಕಲಿಕ್ಕೆ ನಮ್ಮ ದೇಶದ ಕೆಲವು ಯುವಕರು ಹಿಡಿದಿರುವ ದಾರಿಗೆ ನಾವು ನಾಚಿಕೆಪಡಬೇಕಾಗಿದೆ ಧರ್ಮವನ್ನು ಬಿಟ್ಟು ... ವನ್ನೇ ನೋಡುವ ಪದ್ಧತಿಯು ಪಶ್ಚಿಮ ರಾಷ್ಟ್ರಗಳಿಂದಲೇ ಬಂದದ್ದಾದ್ದರಿಂದ ಇದನ್ನು ಹೆಚ್ಚಿಗೆ ವ್ಯಸನಪಡಬೇಕಾಗಿದೆ ರಾಜತಂತ್ರದ ಒಳಗಿನ ಮತ್ತು ಹೊರಗಿನ ಸುಳ್ಳು ... ರಾಜಕಾರ್ಯದಲ್ಲಿ ಮುಂಜಾಗರೂಕ ಪ್ರಕಟವಾಗಿ ಗುಟ್ಟಾಗಿ ಯುದ್ಧದ ಜಾಣರಿಗೆಲ್ಲಾ ಸಹ ಪಶ್ಚಿಮದಲ್ಲಿ ಜಾಲವನ್ನು ಗಟ್ಟಿಮಾಡಲಿಕ್ಕೆ ವೇಗವಾದ ಹಲ್ಕ ಲೋಕಗಳಿಂದ ಹಾಳುಪಡಿಸಲ್ಪಟ್ಟಿದೆ ಆದರಿಂದ ನಾವು ಕಲಿತಿರುವದೇನೆಂದರೆ—ದೇಶಭಕ್ತಿಯ ಸ್ವಾರ್ಥತೆಗಾಗಿ ಕೆಲಸಮಾಡುವಾಗ ಧರ್ಮದ ಯೋಚನೆಯಿಂದ ಮನಸ್ಸು ಕಲಕಲ್ಪಡಬಾರದೆಂದೂ ಧರ್ಮದ ಯೋಚನೆಯೂ ಒಳ್ಳೇ ಹುಟ್ಟಕನ ದುರ್ಬಲತೆಯೆಂದೂ ಕಲಿತಿದ್ದೇವೆ ನಾಗರೀಕತನವು ಘಟ್ಟಿಯಾಗಬೇಕಾದರೆ ಸ್ವಲ್ಪ ಮಟ್ಟಿಗಾದರೂ ರಾಕ್ಷಸೀಗುಣ ಬೆರಿಸಬೇಕೆಂತಲೂ ಸಂದರ್ಭಕ್ಕೆ ಸರಿಯಾಗಿ ಕೆಲಸಮಾಡಬೇಕಾದ ಗುಣವಾಯಿದೆ ಹದ ಕೊಟ್ಟಿರಬೇಕೆಂತಲೂ ನಮ್ಮ ಮನಸ್ಸಿಗೆ ದೃಢವಾಗಿದೆ ಇದರಿಂದ ಅಧರ್ಮವನ್ನು ನಾವು ಸಹಿಸಬೇಕಾಗಿ ಬಂದದೆ ಮಾತ್ರವಲ್ಲದೆ ನಮ್ಮ ಬೋಧಕರ ನೀಚಗುಣಗಳ ಮುಂದೆಯೂ ತಲೆ ಬಾಗಿಸಬೇಕಾಗಿದೆ ನಮ್ಮ ಬೋಧಕರು ನಿಂತಲ್ಲಿಗಿಂತಲೂ ಎತ್ತರವಾಗಿ ನಿಂತು—

> ಅಧರ್ಮೇಣೈಧತೇ ತಾವತ್ ತತೋ ಭದ್ರಾಣಿ ಪಶ್ಯತಿ
> ತತಸ್ಸಪತ್ನಾನ್ ಜಯತಿ ಸಮೂಲಸ್ತು ವಿನಶ್ಯತಿ ||

ಅಂದರೆ ಜನರು ಅಧರ್ಮದಿಂದ ಪ್ರಬಲರಾಗುತ್ತಾರೆ ಅಧರ್ಮದಲ್ಲೇ ಅವರ ಕ್ಷೇಮವೆಂತ ತೋರುತ್ತೆ ಅಧರ್ಮದಿಂದಲೇ ಶತ್ರುಗಳನ್ನು ನಾಶಪಡಿಸುತ್ತಾರೆ. ಆದರೆ ಬೇರಿನಿಂದಲೇ ನಾಶಹೊಂದುತ್ತಾರೆ ಎಂತ ಹೇಳಲಿಕ್ಕೆ ಧೈರ್ಯವನ್ನು ಸ್ವತಂತ್ರವನ್ನೂ ಕಳಕೊಂಡಿದ್ದೇವೆ

ಪಾಶ್ಚಿಮಾತ್ಯರ ಬೋಧನೆಯ ಮುಕ್ತಿಗೆಯಿಂದ ನಮ್ಮ ಧ್ಯೇಯಗಳು ಸಂಪೂರ್ಣವಾಗಿ ನೋಟವೆನ್ನುವದೇ ಅತ್ಯಂತ ವ್ಯಸನಕರ ನಮ್ಮ ದೇಶದಲ್ಲಿ ದೇಶಭಕ್ತಿಯ ದೀಪ ಹಚ್ಚಿಟ್ಟಾಗ ನಮ್ಮಲ್ಲಿದ್ದ ಅತ್ಯುತ್ತಮ ಗುಣಗಳೆಲ್ಲಾ ಪ್ರಕಾಶಿಸಿಯವೆಂತಲೂ ಬಹುಕಾಲದಿಂದ ಕೂಡಿಟ್ಟ ಮೂಲೆಯಲ್ಲಿದ್ದ ನಮ್ಮ ತಪ್ಪುಗಳೆಲ್ಲಾ ಹಾರಿಹೋದಾವೆಂತಲೂ ನಮ್ಮ ನಿಂತಿಯೆಂಬ ಮರುಭೂಮಿಯಲ್ಲಿ ಉತ್ಸಾಹವೆಂಬ ಒರತೆ ಹುಟ್ಟಿತೆಂತಲೂ, ಕತ್ತಲಿನಿಂದ ಮುಚ್ಚಿದ ಭವಿಷ್ಯತ್ತಿನಲ್ಲಿ ದಾರಿ ತೋರಿಸಿ ಕೊಟ್ಟೀತೆಂತಲೂ ನಮ್ಮ ಮನುಷ್ಯತ್ವವನ್ನೇ ಕುಗ್ಗಿಸಿದ ಪದ್ಧತಿಗಳೆಂಬ ಹೊರೆಗಳೆಲ್ಲಾ ಅನ್ಯೋನ್ಯ ಪ್ರೀತಿಯಿಂದ ಇಳಿಸಲ್ಪಟ್ಟು ಎತ್ತಿದ ತಲೆಯುಳ್ಳವರಾಗಿ ಗಲಿಗೆ ಹೊಗಲು ತಾಕತ್ ನಿಂತಾರೆಂತಲೂ ತುಂಬಾ ಆಶೆ ಇತ್ತು

ಆದರೆ ಅಯ್ಯೋ! ನಮ್ಮ ಅದೃಷ್ಟವು ನಮ್ಮನ್ನು ಮೋಸಗೊಳಿಸಿತು? ದೇಶಭಕ್ತಿಯ ದೀಪವೇನೋ ಹಚ್ಚಿಟ್ಟಿತು ಆದರೆ ಅದರ ಬೆಳಕಿನಿಂದ ಕಳವು ಸುಲಿಗೆ ಮಾತ್ರವೇ ನಮ್ಮ ಕಣ್ಣಿಗೆ ಬೀಳುತ್ತೆ ನಮ್ಮ ಪ್ರಾರ್ಥನೆಯಿಂದ ಒಲಿದು ಪ್ರತ್ಯಕ್ಷನಾದ ದೇವರು ನಾಪದ ನೈವೇದ್ಯವನ್ನು ಸ್ವೀಕರಿಸಲಿಕ್ಕೆ ಪ್ರತ್ಯಕ್ಷನಾದನೋ? ನಮ್ಮ ಸ್ಥಿತಿಯ ಮೇಲೆತ್ತಲಿಕ್ಕೆ ರಾಜಕೀಯ ಬಿಕ್ಷೆ ಬೇಡುವಿಕೆಯೇ ದಾರಿಯೆಂತಲೂ ಆದರಿಂದ ಅರ್ಜಿ ಬರೆಯುವ ವಿದ್ಯೆಯಲ್ಲಿ ಶೀಘ್ರ ಕುಶಲತೆ ಪಡೆಯಬೇಕೆಂತಲೂ ಯಾವ ಉತ್ಸಾಹ ಅಧೈರ್ಯದಿಂದ ನಂಬಿದ್ದೆವೋ ಅದೇ ಉತ್ಸಾಹ ಹೀನ ಧೈರ್ಯವು ರಾಜಕೀಯ ಕೊಲೆ ಇಂಥಾ ಪ್ರಾಪಂಚಿಕ ಬಿಟ್ಟು, ದೃಢಮನಸ್ಸಿನ ಆತ್ಮತ್ಯಾಗದ ಯುವಕರಿಂದ ಪ್ರಯೋಜನವಿರುತ್ತಿತ್ತು ಸೈದಿಯಾಗಿದ್ದ ಕವೀಂದ್ರನು ನಿರಾಶೆಯಿಂದ ಆತ್ಮತ್ಯಾಗಮಾಡಿಕೊಂಡಾಗ ಬದುಕಿದ್ದರೆ ಅವನಿಗೆ ಶಿಕ್ಷಿಸಿದ ಇಂಗ್ಲೀಷರ ರಾಜ್ಯದಲ್ಲಿ ಇದ್ದಿದ್ದರೆ ಅವನು ಯಶಸ್ವಿಯಾಗಿ ದೇವಿಸಿ ಯಶಸ್ಸನ್ನು ಸಹ ಪಡೆಯುತ್ತಿದ್ದನೆಂದು ಗೊತ್ತಾಗುತ್ತೆ.

ಸ್ತ್ರೀಯರೂ ಸ್ವರಾಜ್ಯವೂ.

ಲೇಖಕಿಯು:- 'ಭಾರತಿ'

ಹಿಂದುಸ್ಥಾನದಲ್ಲಿ ಎಷ್ಟೋ ಪ್ರಳಯಗಳುಂಟಾದುವು. ಸಾಂಘಿಕ ಪ್ರಳಯಗಳುಂಟಾ ಭರತಭೂಮಿಯಲ್ಲಿ ಸಾವಿರಾರು ಮತಗಳು ಹುಟ್ಟಿ ಬೇರಾಸೂಯೆಗಳಲ್ಲಿ ಕೊನೆಗಂಡಿತು! ಆರ್ಥಿಕಪ್ರಳಯ ಉಂಟಾಗಿ ಬಡವರ ಬಾಯಿಗೆ ಮಣ್ಣುಬಿದ್ದು ಭರತಮಾತೆಯು ರಣಗಳ ಗಂಟಲಲ್ಲಿ ಸಿಕ್ಕಿ ಹಲುಬುವುದರಲ್ಲಿ ಕೊನೆಗಂಡಿತು! ಆದರೆ ಎರಡು ವರ್ಷಗಳ ಹಿಂದೆ ಒಂದು ಪ್ರಳಯ ಉಂಟಾಯಿತು. ಹಲವರು ಇದನ್ನು ರಾಜಕೀಯ ಪ್ರಳಯವೆಂದರು! ಅನೇಕರು ಇದನ್ನು ಧಾರ್ಮಿಕ ಪ್ರಳಯವೆಂದರು! ಯಾರು ಯಾವ ಹೆಸರಿಂದಲಾದರೂ ಇದನ್ನು ಕರೆಯಲಿ ಈ ಪ್ರಳಯದಿಂದ ಆರ್ಯಾವರ್ತದ ಅಂತರಿಕ್ಷದಲ್ಲಿ ನವೀನವಾದ ಅರುಣೋದಯವಾಗಿದೆ. ಹಿಂದಿನ ರಾತ್ರಿಯ ತಪ್ಪೆಲ್ಲವೂ ನಿರ್ನಾಮವಾಗಿದೆ. ಭಾರತೀಯರ ಅಂತಃಕ್ಕರಣವು ವಿಕಾಸಗೊಂಡಿದೆ. ಆ ಪರಿಶುದ್ಧ ನಯನಂಗಳಿಂದ ಸರ್ವಲಕ್ಷಣ ಸಂಪನ್ನನೂ ಸರ್ವವ್ಯಾಪಿಯೂ ಅನಾದ್ಯನನೂ ಸ್ವಯಂಭೂತನೂ ಆನಂದಮಯನೂ ಆದ ಆ ಜಗದೀಶ್ವರನನ್ನು ಭಾರತೀಯರು ಕಂಡರು. ಕಂಡು ಕಂಬನಿದು ಆ ಜಲದಿಂದ ತಮ್ಮ ಕಲ್ಮಷಪೂರಿತ ನಯನಗಳನ್ನು ಪರಿಶುದ್ಧಗೈಸಿ ಭಾರತಮಾತೆಯನ್ನು ಪೂರ್ಣ ದೃಷ್ಟಿಯಿಂದ ನೋಡಿದರು. ಇವರ ಒಡಲಂತರಂಗದಲ್ಲಿ ದಿವ್ಯವೂ ನೂತನ ಚೈತನ್ಯವು ತಲೆದೋರಿತು. ಈ ಚೈತನ್ಯವು ಇವರನ್ನು ಸಿಂದಲ್ಲಿ ನಿಲ್ಲಿಸತು! ಕೂತಲ್ಲಿ ಕೂಡಿಸದು!

ಈ ಬಗೆಯ ಚಿತ್ತವೃತ್ತಿಯ, ಉತ್ತರಧ್ರುವ ದಕ್ಷಿಣಧ್ರುವಗಳಂತಿದ್ದ ಹಿಂದೂ ಮಹಮ್ಮದೀಯರನ್ನು ಒಂದುಗೂಡಿಸಿ ಭ್ರಾತೃಭಾವವನ್ನು ಹುಟ್ಟಿಸಿತು! ಚಂಡಾಲ! ಅಂತ್ಯಜ! ಪಂಚಮ! ಎಂಬೀ ಘೋರತಬ್ಬಗಳನ್ನು ಕೂಡಾ ಕೇಳಲಿಷ್ಟಪಡದೆ ಭಾರತೀಯರು ದೃಢಮನಸ್ಸಿನಿಂದ ಆ ತಬ್ಬಗಳನ್ನೇ ಭಾರತಭೂಮಿಯಿಂದ ತೊಡೆದುಹಾಕಿ "ಆತ್ಮವತ್ಸರ್ವಭೂತಾನಿ" ಎಂಬಂತೆ ಎಲ್ಲರನ್ನೂ ತಮ್ಮಂತೆಯೇ ಭಾವಿಸಲು ಕಂಕಣಕಟ್ಟಿರುವರು! ವಸ್ತ್ರಹೀನಳಾದ ತಮ್ಮ ತಾಯಿಯ ಮಾನಸಂರಕ್ಷಣೆಯ ಸ್ವಹಸ್ತದಿಂದ ನಿರ್ಮಿತವಾದ ಪರಿಶುದ್ಧ ಖಾದಿಯಿಂದಲೆ ಪರದೇಶಿಗಳ ಗಿರಣಿಗಳ ೭ ಕೋಟ್ಯಾಂತರ ಕೂಲಿಗಾರರ ಆಕ್ರಂದನದಿಂದಲೂ ರಕ್ತದಿಂದಲೂ ಅಪವಿತ್ರವಾದ ಪರದೇಶೀಯ ವಸ್ತ್ರಗಳು ಬೇಡವೆಂದು ತಿಳಿದು ತಮ್ಮ ಪಿತೃತ್ವದಿಂದ ಹಿಡಿದ ಚರಕವನ್ನು ಕೈಕೊಂಡು ತಾಯಿಯ ಮಾನಸಂರಕ್ಷಣೆಮಾಡಿ ಸನ್ನದ್ಧರಾಗಿರುವರು. ಅಪೇಯಪಾನ, ಅಭಕ್ಷ್ಯಭಕ್ಷಣಗಳಿಂದ ಅಧಃಪತನವು ಸಿದ್ಧವೆಂದು ತಿಳಿದು ಅವುಗಳ ವಿಸರ್ಜನೆಯಿಂದ ಜನಾಂಗದ ಆರೋಗ್ಯವೂ, ಧರ್ಮವೂ ಸ್ಥಿರವಾಗುವುದೆಂದು ನಿಶ್ಚಯಿಸಿ ಅವುಗಳ ನಿಷೇಧಕ್ಕಾಗಿ ಆಹರ್ನಿಶಿಯೂ ಬಿಡದು ಕೃಷಿಮಾಡುತ್ತಲಿರುವರು. ಇವೆಲ್ಲಕ್ಕಿಂತಲೂ ಉತ್ಕೃಷ್ಟವೂ ಅಮೌಲಿಕವೂ ಆದ ಅಹಿಂಸಾ ಮಾರ್ಗವನ್ನು ಹಿಡಿದು ಅರಿಷಡ್ವರ್ಗಗಳಿಗೆ ತಿಲೋದಕಗಳನ್ನು ಬಿಟ್ಟು "ಧರ್ಮಮೇವ ಜಯತೇನಾನೃತಂ" ಎಂಬ ವಾಕ್ಯದಲ್ಲಿ ಪೂರ್ಣ ನಂಬಿಕೆಯನ್ನೂ ವಿಶ್ವಾಸವನ್ನೂ ಇಟ್ಟು ಇಂದ್ರಿಯ ಬಲದಲ್ಲಿ ತಿರಸ್ಕಾರವನ್ನೂ ಆತ್ಮಬಲದಲ್ಲಿ ಅಧಿಕ ಗೌರವವನ್ನೂ ಇಟ್ಟವರಾಗಿ ಅಸ್ಪೃಶ್ಯತೆಯಿಂದ ದೇಶಸೇವೆಯೇ ದೇವಸೇವೆಯೆಂದು ತಿಳಿದು, ಸ್ವದೇಶ ಸ್ವಾತಂತ್ರ್ಯ ಹಕ್ಕಿನಸ್ಥಾಪನೆಗಾಗಿ ಭಾರತೀಯರೆಲ್ಲರೂ ನಡುಕಟ್ಟಿ ನಿಂತಿರುವರು. ಹಿಂದೀಯರ ಮಾನಸಿಕಪ್ರಪಂಚದ ಈ ಬದಲಾವಣೆಗೆ ಏನುಕಾರಣ? ಯರವಾಡ ಜೈಲಿನಲ್ಲಿ ಚಕ್ರಧಾರಿಯಾಗಿ ಕುಳಿತಿರುವ ಮಹಾತ್ಮನೇ ಕಾರಣ. ಎರಡು ವರ್ಷಗಳ ಹಿಂದೆ ಗಾಂಧಿಯೆಂದರೆ ಯಾರೋ ಎಲ್ಲಿಗಿರು ತಿಳಿದಿರಲಿಲ್ಲ. ಇಂದಾದರೋ ಅನೇಕ ಹಿಮಾಚಲವೂ ಆ ಕರ್ಮಚಂದ್ರನ ದರ್ಶನವನ್ನು ಕೆಗೆದುಕೊಂಡು ಕೃತಾರ್ಥರಾಗಲು ಹಗಲಿರುಳೂ ಸಮಯಕಾಯ್ದಿರುವ ಕೋಟ್ಯಂತರ ಭಾರತೀಯರಂತಿರಲಿ ಸಟ್ಟಂಡಗಳಲ್ಲೂ ಆ ಮಹಾತ್ಮನ ಕೀರ್ತಿಜ್ಯೋತಿಯು ಪ್ರಸರಿಸಿರುವುದು! ಕ್ರಿಸ್ತಮತೀಯರು ಆತನನ್ನು ಕ್ರಿಸ್ತನ ಅವತಾರವೆಂದೇ ನಂಬಿರುವರು! ಮೊದಲು ಮೊದಲು ಆತನನ್ನು ನೋಡಿ ನಾಡು ಆಡಿದು ಹಾಸ್ಯಮಾಡುತ್ತಿದ್ದರೋ ಅವರೇ ಈಗ ಆತನನ್ನು ಭಕ್ತಿವಿಶ್ವಾಸಗಳಿಂದ ಉಚ್ಚರಿಸುತ್ತಿರುವರು. ಯಾರು ಆತನ ಬೋಧನೆಗಳನ್ನು ಆತನಿಗೆ ಕರಲು ಆಗದೆ ಅರ್ಥಹಿಟಿಸುತ್ತಿದ್ದರೋ ಅವರೇ ಇಂದು ಅವುಗಳನ್ನು ಆಚರಣೆಗೆ ತರುವುದರಲ್ಲಿ ಅಗ್ರೇಸರರಾಗಿರುವರು. ಆತನ ಆಂದೋಳನಗಳಲ್ಲಿ ಯಾರು ಅರಾಜಕತ್ವದ ಚಿಹ್ನೆಗಳನ್ನು ಆರೋಪಿಸುತ್ತಿದ್ದರೋ ಅವರೇ ಈಗ ಆತನ ಉಪದೇಶಗಳಲ್ಲಿ ಶ್ರೀಭಗವಂತನು ಕುರುಕ್ಷೇತ್ರದಲ್ಲಿ ಪಾರ್ಥನಿಗೆ ಹೇಳಿದ ಗೀತಾದರ್ಶ ಧರ್ಮತತ್ವಗಳನ್ನೇ ನೋಡುತ್ತಾರು.

ಈ ಸಮಯದಲ್ಲಿ ನಮ್ಮ ಸೋದರೀ ವರ್ಗವೆಲ್ಲಿರುವುದು ಏನು ಮಾಡುತ್ತಿರುವುದು! ಇಂತಹ ಸಮಯದಲ್ಲಿ ಉದಾಸೀನದಿಂದ ಕತ್ತಲೆಯಲ್ಲಿ ಅಡಗಿರುವುದೇ ಮಹಿಳೆಯರ ಧರ್ಮವೋ? ಭಗಿನಿಯರೇ! ಒಮ್ಮೆ ಯೋಚಿಸಿ! ಈ ನೂತನ ಅರುಣೋದಯದ ಸೌಭಾಗ್ಯವನ್ನು ಒಂದು ಅನುಭವಿಸಿ! ಅರುಣೋದಯವಾಗುವ ವೇಳೆಗೆ ನಾವು ಎಚ್ಚತ್ತು ನಮ್ಮ ಸೋದರರನ್ನು ಮಕ್ಕಳನ್ನೂ ನಿದ್ರೆಯಿಂದ ಎಚ್ಚರಗೊಳಿಸಬೇಕಲ್ಲವೇ? ಹಾಗಲ್ಲದೆ ಪುರುಷರೆದ್ದು ಕಾರ್ಯೋನ್ಮುಖರಾಗಿರಲು ನಾವಿನ್ನೂ ನಿದ್ರಿಸುತ್ತಿರಬೇಕೆ? ಇದೇನು ನಾಚಿಕೆಗೇಡು! ಇನ್ನಾದರೂ ಕಣ್ತೆರೆಯುವಾ!

ಮಾತೆಯರೆ! ರಾಷ್ಟ್ರದ ವೃದ್ಧಿಕ್ಷಯಗಳಿಗೆ ಕಾರಣಭೂತರು ನಾವು! ದೇಶಸೇವೆಗೆ ತಕ್ಕ ಸಂತಾನವನ್ನು ಕೊಡುವ ಭಾಗ್ಯವು ನಮ್ಮದು! ಪುರುಷರು ನಮ್ಮ ಹೊಟ್ಟೆಯಲ್ಲಿ ಹುಟ್ಟಿ ನಮ್ಮ ತೊಡೆಯಮೇಲೆ ಬೆಳೆದು, ನಮ್ಮ ಮೊಲೆಹಾಲನ್ನುಂಡು ನಮ್ಮಿಂದ ಶಿಕ್ಷಿತರಾಗಿ ಅನಂತರವಲ್ಲವೆ ಜೀವನ ರಣಾಂಗಣವನ್ನು ಪ್ರವೇಶಿಸುವರು! ತಾಯಿಯರೆ! ರಾಷ್ಟ್ರಸೇವೆಗೆ ಯೋಗ್ಯವಾದ ಸಂತಾನಕ್ಕೆ ನಾವೇ ಕ್ಷೇತ್ರವು! ಫಲವು ಕ್ಷೇತ್ರಗುಣವನ್ನೇ ಹೆಚ್ಚಾಗಿ ಆಶ್ರಯಿಸುವುದರಿಂದ ನಾವು ಮೊದಲು ಜಾಗೃತಿಯನ್ನು ಹೊಂದಿ, ನಮ್ಮ ದೇಶದ ದುಃಸ್ಥಿತಿಯನ್ನು ತಿಳಿದು, ದೇಶಭಕ್ತರಾಗಿ, ಅನ್ಯಾರ್ಥತೆಯಿಂದ ರಾಷ್ಟ್ರಸೇವೆಯಲ್ಲಿ ಮೈಮರೆಯುವ! ನಮ್ಮ ಮಕ್ಕಳ ಸ್ವೀಯಸ್ವಭಾವವನ್ನರಿತು ಬಾಲ್ಯಾರಭ್ಯ ದೇಶಾಭಿಮಾನವು ಅವರ ಮನಸ್ಸಿನಲ್ಲಿ ಬೇರೂರುವಂತೆ ಶಿಕ್ಷಣವನ್ನು ಅವರಿಗೆ ಕೊಡುವ! ಸ್ವಭಾವತಃ ನಮ್ಮನ್ನೇ ಹೋಲುವ ಮಕ್ಕಳಿಗೆ ಇಂತಹ ಶಿಕ್ಷಣವು ದೊರತಮೇಲೆ "ಹುಟ್ಟು ಗುಣವು ಸುಟ್ಟರೂ ಹೋಗದು" ಎಂಬಂತೆ ಅವರೆಷ್ಟು ಬಿರಾತ ರೋಗಗಳಿಗೆ ಸಿಕ್ಕಿದರೂ ಅವರ ಸ್ವಭಾವದಲ್ಲಿ ಬದಲಾವಣೆಗಳಾಗಲಾರವು.

ಗೆಳತಿಯರೆ! ನಮ್ಮ ಸಹಾನುಭೂತಿಯಿಲ್ಲದೆ ಪುರುಷರ ಜೀವಯಾತ್ರೆಯು ಸಾಗುವುದೆಂತು? ಸತೀಪತಿಯರಲ್ಲಿ ಅರ್ಧಾಂಗಿ ಪೂರ್ಣತ್ವವುಂಟಲ್ಲವೆ? ಇಬ್ಬರೂ ಒಬ್ಬರೊಬ್ಬರ ಕೈಬಿಟ್ಟು ಯಾವ ಕೆಲಸವನ್ನೂ ಸಮಗ್ರವಾಗಿ ಮಾಡಲಾಗದು. ದೇಶಸೇವೆಗೆ ಪುರುಷರನ್ನು ಹುರಿದುಂಬಿಸುವ ಕರ್ತವ್ಯವು ನಮ್ಮದು. ದೇಶಹಿತಕ್ಕಾಗಿ, ಧರ್ಮೋದ್ಧಾರಕ್ಕಾಗಿ ಬದ್ಧಕಂಕಣರಾಗಿ ಲೋಕಕ್ಕೆ ಕರ್ತವ್ಯಪಥವನ್ನು ತೋರಿಸಿ ಚಿರಕೀರ್ತಿಯನ್ನು ಗಳಿಸಿದ ವೀರಮಾತೆಯರೂ ವೀರಪತ್ನಿಯರೂ ಜನ್ಮವೆತ್ತಿದ ಪುಣ್ಯಭೂಮಿಯಲ್ಲಿ ಅಲ್ಲವೆ ನಾವು ಜನ್ಮವನ್ನೆತ್ತಿರುವೆವು? ಅವರ ರಕ್ತದಲ್ಲಿನ ಒಂದು ಬಿಂದುವಾದರೂ ನಮ್ಮ ನಾಳಗಳಲ್ಲಿ ಪ್ರವಹಿಸುತ್ತಿಲ್ಲವೆ? ಸಾಧ್ವಿಮಣಿಯರೆ! ಪಾಂಡವರು ಕುಂತಿಯ ಸುಶಿಕ್ಷಣವಿಲ್ಲದೆ ಪಾಂಚಾಲಿಯ ಸಹಾಯವಿಲ್ಲದೆ ಸ್ವರಾಜ್ಯವನ್ನು ಸ್ಥಾಪಿಸಲು ಅರ್ಹರಾಗುತ್ತಿದ್ದರೆ? ಶಿವಾಜಿಯು ನಿಜವಾಗಿ ಸ್ವರಾಜ್ಯವನ್ನು ಸ್ಥಾಪಿಸಿದನಾದರೆ ಅದಕ್ಕೆ ಜಿಜಾಬಾಯಿಯೇ ಕಾರಣಳು. ಮಾತೆಯರೆ! ಏಳಿಗೂಡಾದ ಛತ್ರಪತಿಯನ್ನು ಪದ್ಮವ್ಯೂಹವನ್ನು ಭೇದಿಸಲು ರಣರಂಗಕ್ಕಟ್ಟಿದ ವೀರಮಾತೆಯಾದ ಸುಭದ್ರೆಯನ್ನು ಸ್ಮರಿಸಿ ದೇಶಾಭಿಮಾನವನ್ನು ತಾಳಿರಿ! ತಂದೆಯ ದೇಶದ್ರೋಹವನ್ನು ಸ್ಮರಿಸದೆ ಪತಿಯೊಂದಿಗೆ ವೀರಸ್ವರ್ಗವನ್ನು ಸೇರಿದ ವೀರಸತಿಯಾದ ಸಂಯುಕ್ತೆಯನ್ನು ಸ್ಮರಿಸಿ ದೇಶಸೇವಾಸಕ್ತರಾಗಿ!

ಗಾಂಧಿಯ, ಗಾಂಧಿಯೆನಿಸುವ ಆತನ ತಾಯಿಯ ಮೇಲೆ ಪಾಲೇ ಕಾರಣವು. ನಾವು ಅಸಹಕಾರಿಗಳು ಸ್ವಾರ್ಥತ್ಯಾಗಿಗಳಾಗಲು ಅವರ ಮಾತೆಯರ ಶಿಕ್ಷಣವೂ ಅವರ ಸತಿಯರ ಪ್ರೋತ್ಸಾಹವೂ ಮುಖ್ಯಕಾರಣವು. ಮಾತೃವರ್ಗ ರಕ್ಷಣೆಯನ್ನು ಮಾಡಲು ನೀವು ನಿಮ್ಮ ಗಂಡಂದಿರನ್ನೇ ನಿಮ್ಮ ಮಕ್ಕಳನ್ನೇ ಬಳಸಿಕೊಳ್ಳಿರೆಂದು ಯಾಚಿಸುವೆ! ಇನ್ನು ಗುಲಾಮರಾಗಿರಲು ಆಶಿಸದಿರಿ ನಿಮ್ಮ ಗರ್ಭದಲ್ಲಿ ಧರಿಸಬೇಡಿ! "ಕನ್ಯೆಯರೆ! ಭಾರತಮಾತೆಯ ಮಾನಸಂರಕ್ಷಣೆಯಲ್ಲಿ ಆಸಕ್ತರಾದವರನ್ನೇ ಕೈಹಿಡಿಯಿರಿ!" ತಾಯಿಯನ್ನು ತಿರಸ್ಕರಿಸಿ ಪರದೇಶೀಯರಿಗೆ ದಾಸನಾದವರನ್ನು ವರಿಸಬೇಡಿ!

ಭಗಿನಿಯರೆ! ಒಬ್ಬನೆಂದೂ ಕ್ರೈಸ್ತನೆಂದೂ ಕೃಷ್ಣನೆಂದೂ ಬಗೆಬಗೆಯ ಹೆಸರುಗಳಿಂದ ಭಕ್ತರಿಂದಾರಾಧಿಸಲ್ಪಡುತ್ತಿರುವ ಆ ಗಾಂಧಿಮಹಾತ್ಮನು ಎಲ್ಲಿರುವನೋ ಬಲ್ಲಿರಾ? ಕಾರಾಗೃಹದಲ್ಲಿ! ಏತಕ್ಕಾಗಿ ಆತನಲ್ಲಿರುವನು ಬಲ್ಲಿರಾ? ಭಾರತಮಾತೆಯನ್ನು ಪಾರತಂತ್ರ್ಯ ಶೃಂಖಲೆಗಳಿಂದ ಬಿಡುಗಡೆ ಮಾಡಲು ಪ್ರಯತ್ನಿಸಿದುದಕ್ಕಾಗಿ ಕೇಳಿದಿರಾ! ಕೇಳಿಯೂ ಸುಮ್ಮನೆ ಕುಳಿತಿರುವಿರಾ! ಎದ್ದೇಳಿ! ಕರ್ತವ್ಯವನ್ನು ವಿಚಾರಿಸಿ!

ಕರ್ನಾಟಕ ಪೂರ್ವಸುವಾಸಿನಿಯರೆ! ಜಾಡ್ಯದ ಪನ್ನವಿಗಾಗಿ ಹಲುಬುವ ಹವಣ ಸವನ್ನು ಬಿಟ್ಟು ಮಾತೃಸೇವೆಯಲ್ಲಿ ನಿರ್ಮರುಳುಗಳನ್ನು ಮಂಡಿಸಿ. ಅಂಧ್ರದೇಶೀಯರಿಗಿನ ನೂತನ ಚೈತನ್ಯವನ್ನಿತ್ತು ಜಡಿಗೆ ಕಾರಾಗೃಹವನ್ನು ಹೊಕ್ಕ ದುವ್ವೂರು ಸುಬ್ಬಮ್ಮನ ನಡೆದ ದಾರಿಯನ್ನು ಅನುಸರಿಸಿ! ಕರ್ನಾಟಕ ಸಾಧ್ವೀಮಣಿಗಳೆ! ಧಾರವಾಡದವನ್ನೇ ಬೆಂಗಳೂರು ಮಾಡಿ ಮಾತೃಸೇವೆಯಲ್ಲಿ ಮೈಮರೆತು ಹಗಲಿರುಳೂ ದೇಶೀಯರನ್ನು ಸ್ವರಾಜ್ಯೋದ್ಯಮಕ್ಕಾಗಿ ಪ್ರೋತ್ಸಾಹಿಸುತ್ತಿರುವ ಗುಂಟೂರಿನ ಯಾಮಿನೀಪೂರ್ಣತಿಲಕಾ ದೇವಿಯು ಹರಸಿನಾಲ್ಲವೆ? ಇದರೆ ನೀವೂ ಎದ್ದು ಆಕೆಯ ಸತ್ಪಥವನ್ನು ಹಿಡಿದು ಕರ್ನಾಟಕಮಾತೆಗೆ ಸತ್ಕೀರ್ತಿಯಂದಿನ್ನಿ ನಿಕೊಳ್ಳಿ!

ಕರ್ನಾಟಕ ಸಾಧ್ವೀಮಣಿಯರೆ! ಪ್ರಹ್ಲಾದ ಪ್ರಭುದೇಶಗಳನ್ನು ಆಚರಣೆಗೆ ತರಲು ನೀವು ಮುಂದುವರಿದಾದರೆ ಅತ್ಯಲ್ಪಕಾಲದಲ್ಲೇ ಭಾರತೀಯ ದುಃಖವು ಪರಿಹಾರವಾಗುವುದು. ಅಂಧ್ರ, ಮಹಾರಾಷ್ಟ್ರ, ಪಂಜಾಬು, ಗುಜರಾತು, ಬಂಗಾಳದಲ್ಲಿ ನಿಮ್ಮ ಸೋದರಿಯರು ಅನ್ನಪಾನಗಳನ್ನು ಬಿಟ್ಟು ಸ್ವರಾಜ್ಯಸ್ಥಾಪನೆಗೆ ಕೃಷಿಮಾಡುತ್ತಿರುವರು. ನೀವು ಸುಮ್ಮನಿರುವುದು ನ್ಯಾಯವೇ? ಇನ್ನು ಮುಂದೆ ಗಂಡಸರು ಮಾಡಬಹುದಾದ ಒಂದು ಕೆಲಸವನ್ನು ನೀವೊಬ್ಬರು ಮಾಡಬಲ್ಲಿರಿ. ನಿಮ್ಮ ಹೃದಯವು ಮೃದುವಾದುದು, ನಿರ್ಮಲವಾದುದು, ತಾಳ್ಮೆಯುಳ್ಳದು, ದೃಢವಾದುದು. ನಿಮ್ಮ ಶಕ್ತಿಯು ಅಮೋಘವಾದುದು, ಇದು ಸತ್ಯವು! ಸತ್ಯವು! ಹಾಗಾದರೆ ಸ್ವರಾಜ್ಯಧ್ವಜವನ್ನು ನಾವೆಲ್ಲರೂ ಕೈಲಿ ಹಿಡಿದು ಜಯಘೋಷದಿಂದ "ವಂದೇ ಮಾತರಂ" ಎಂದು ಏಕಕಂಠದಿಂದ ತಾಯಿಯನ್ನು ಪೂಜಿಸುವ.

"ಜಯಕರ್ನಾಟಕ"

Lanthana.

ಅಯ್ಯಾ, ಕೊಡಗು ಬಾಂಧವರೇ, ನಾನು ಈಗ ಕಳೆದ 4 ನೆಯವಾಂದ ಕೊಡಗು ಪತ್ರಿಕೆಯಲ್ಲಿ ಲಂಟಾನ ಬೈಲಾಯಾರೆ ಸೊಸೈಟಿ ಏರ್ಪಾಡಾಗುವ ಸಂಗತಿಯಲ್ಲಿ ಕೊಡಗು ಸಹಕಾರಿ ಸಂಘಗಳ ರಿಜಿಸ್ಟ್ರಾರಿಗಾಗಲಿ ಅದಿಯಾಂಡ ಮಾಜ್ಯೆಯವರಿಗಾಗಲಿ ಈ ಬಾಬಿನ ಸುಮರುಬಗಳನ್ನು ಯಾ ಆಗಬೇಕಾದ ಮಾರ್ಪಾಡುಗಳನ್ನು ಯಾ ಸರಕಾರದ ವರಿಂದ ಈ ಬಾಬಿನ ಸಹಕಾರಿ ಸಂಘಕ್ಕೆ ಆಗಬೇಕಾದ ಬಾಬಿನಲ್ಲಿ ಮೇಶೀಯರ ಇರಾದೆಯನ್ನು ತಿಳಿಸಬಹುದಾಗಿ ಜಮಿನ್‌ದಾರ ಸಂಘದ ಮುಂದಣ ಕೆಲಸದಲ್ಲಿ ಕಂಡಂತಾಯಿತು. ಈ ಬಾಬಿನಲ್ಲಿ ಲಂಟಾನ ಬೈಲಾ ಮಾಡಲು ಹಜರತ್ ಚೀಫ್‌ಕಮಿಷನರ್ ಸಹೇಬರವರ ಅಧ್ಯಕ್ಷತೆಯಲ್ಲಿ ಅವರು ಲಂಟಾನವನ್ನು ಎತ್ತಿ ಮಾತ್ರಾಡಿ ಈ ಮುಂದಿರುವ ಸನ್ 1924 ನೆ ಇಸವಿಯ ಒಕ್ಟೋಬರ್‌ನಲ್ಲಿ ಒಂದುಲಕ್ಷರೂಪಾಯಿ ಲಂಟಾನ ನಾಶಕ್ಕಾಗಿ ಈ ಕೊಡಗಿಗೆ ಮಂಜೂರು ಮಾಡಲು ಪ್ರಯತ್ನಿಸುತ್ತೇನೆ ಹ್ಯಾಗೂ 50 ಸಾವಿರ ರೂಪಾಯಿಗ ಕಮ್ಮಿ ಇಲ್ಲದಂತೆ ಮಂಜೂರ್ ಮಾಡಿಸುವದಾಗಿಯೂ ಈ ಲಂಟಾನ ನಾಶಕ್ಕಾಗಿ ಸರಕಾರ ಸಂಘಗಳ ಕೆರದು ಸದರಿ ಸಂಘಗಳ ಮುಖ್ಯ ಲಂಟಾನ ನಾಶಕ್ಕಾಗಿ ಆದ ಕರ್ಚಪೂರ ಸದರಿ 50 ಸಾವಿರ ರೂಪಾಯಿಗಳಿಂದ ಕೊಡುವದಾಗಿಯೂ ಸದರಿ ಹಣ ಈಗ ನಮ್ಮ ಕಮಿಷನರ್ ಸಾಹೇಬರವರು ಅವರ ಡಿಸ್ಕ್ರೆಷನ್ ಫಂಡಿನಿಂದ ಕೊಟ್ಟ ಮೇಲ್ಪಡ ಹ್ಯಾಗೆ ಹಿಂದಕ್ಕೆ ಕೊಡಬೇಕಾಗಿ ಇಲ್ಲವೋ ಅದೇ ಮೇರೆ ಸರಕಾರಕ್ಕೆ ಹಿಂದಕ್ಕೆ ಕೊಡಬೇಕಾದದಿಲ್ಲವಾಗಿ ಸಹ ನಮ್ಮ ಅವಗಾಹನಕ್ಕೆ ತಂದ ಮೇಲೆ ಈ ಬೈಲಾ ಮಾಡಲು ನನ್ನನ್ನು ಸಹ ರಿಜಿಸ್ಟ್ರಾರವರಿಗೆ ಸಹಾಯ ಕೊಡಬೇಕಾಗಿ ತೀರ್ಮಾನವಾದ ಮೇರೆಗೆ ಇದುವರೆಗೆ ಕಾದು ನೋಡಿದ್ದು. ದೇಶೀಯರ ಯಾರೊಬ್ಬರ ವಿರೋಧವೂ ಕಾಣದ ಕಾರಣದಿಂದ ಬೈಲಾ ಒಂದನ್ನು ಸನ್ 1922 ನೆ ಇಸವಿ ಸೆಪ್ಟಂಬರ್ ತಾ|| 22 ರ ನಂಬ್ರು 17 ನೆ ಸಂಚಿಕೆಯಲ್ಲು ಮತ್ತು 1922 ನೆ ಇಸವಿ ಅಕ್ಟೋಬರ್ 8 ರ ಸಂಚಿಕೆಯಲ್ಲು ಸಹ ಕಂಡ ಬೈಲಾ ನೋಡನೆಗೆ ಅನುಸಾರವಾಗಿ ನ್ಯಾಯವಾದ ಬೈಲಾ ತಯಾರುಪ್ರತಿ ಒಂದನ್ನು ಬರದು ಸಹಕಾರಿ ಸಂಘಗಳ ರಿಜಿಸ್ಟ್ರಾರವರಿಗೆ ಕಳುಹಿಸಿಕೊಟ್ಟದ್ದೇನೆ. ಇದನ್ನು ಮತ್ತು ಅವರ ಇರಾದೆ ಇಂದುಕಾಣಿಗೂಡಿದ ಹಜರತ್ ಚೀಫ್‌ಕಮಿಷನರ್ ಸಹೇಬರವರ ವಂಚನಾರೀತಿ ಒಗ್ಗೆ ಕಳುಹಿಸಿ ತಯಾರುಮಾಡಿದ ಬೈಲಾವನ್ನು ಅವರು ಮುಂದಕ್ಕೆ ಲಭಿಸುವ ಮೇರು. ಕೊಡಗು ಪತ್ರಿಕೆಯಲ್ಲು ಪ್ರಕಟಿಸುವದಾಗಿ ನಂಬುತ್ತೇನೆ ಅಯ್ಯಾ ಕೊಡಗು ಬಾಂಧವರೇ ಲಂಟಾನ ಭೂಮಾಲೀಕರೇ ನಾನು ಈ ಲಂಟಾನದ ಸಂತಾನ ಹೋಗಲಾಡಿಸಲು ಉಂಟಾದ ಸರಕಾರ ಆಕ್ಷ ಹುಟ್ಟುವ ಮೊದಲು ಅಂದರೆ ಮೇ ಹ್ಯಾರಿಸ್ ಸಹೇಬರ ಕಾಲದಿಂದ ಈ ಬಾಬಿನಲ್ಲಿ ಕುತೂಹಲ ಉಳ್ಳವನಾಗಿದ್ದೇನೆ. ಈಗ ನಾನು ಸರಕಾರ ನವ್ಕರಿಯಿಂದ ಬಿಡುಗಡೆಯಾಗಿ ಪಿಂಚಿನ್‌ನಲ್ಲಿ ಇದ್ದಾಗ್ಯೂ "ನಾ" ಈ ಲಂಟಾನ ನಾಶವಾಗುತ್ತಲಿದ್ದೇನ. ಈ ವರುಷ ಈ ಲಂಟಾನವು ಈ ಮಹಮಾರಿ ಮಳೆಯಿಂದ ಪೂರ ಕೊಳೆತುಹೋಗಿ ಹಾವಾಡಿಗರು ಹಾವಿನ ವಿಷದ ಹಲ್ಲು ತೆಗದ ಹ್ಯಾಗೆ ಹಾವು ಸಾಧುವಾಗಿರುತ್ತೋ ಹಾಗೆಯೇ ಆದರೆ ಲಂಟಾನವು ಬಹಳ ಸಾಧುವಾಗಿ ಅದರ ಮುಳ್ಳಿಗೆ ಏನೊಂದು ಸತ್ವವೂ ಇರುವದಿಲ್ಲ ಈ ಲಂಟಾನ ನಾಶಕ್ಕೆ ಇದೇ ವರುಷ ಸುಲಭ. ಈ ಸಮಯವನ್ನು ಕಳದರೆ ಇನ್ನು ಇಂಥಾ ಸಮಯ ದೊರೆಯುತಾ ಬಹು. ನೀವು ಸಂಘ ಸೇರಿರುವಿದ್ದರೆ ಒಬ್ಬೊಬ್ಬರಾಗಿ ಏನ ಕರ್ಚುಮಾಡಿ ಲಂಟಾನ ನಾಶಮಾಡಿದರೂ ಅದು ವ್ಯರ್ಥ. ಕೊಡಗಿನಾಗುವದಿಲ್ಲವಾಗಿ ಹಜರತ್ ಚೀಫ್‌ಕಮಿಷನರ್ ಸಹೇಬರ ಭಾಷಣದಲ್ಲೇ ಹೇಳಿರುವದರಿಂದ ಈ ಬೈಲಾವು ಮಂಜೂರು ಹೊಂದಿ ಸರಕಾರಕ್ಕೆ ಪ್ರತಿ ಗ್ರಾಮಗಳಲ್ಲು ಲಂಟಾನ ಸಂಘ ಸೇರಿ ಲಂಟಾನ ನಾಶಕ್ಕಾಗಿ ಪ್ರಯತ್ನಿಸುವಿರಿ. ಈ ವರುಷ ದಸರಾಗಳಿಗೆ ಈ ಘೋರ ಮಳೆಯಲ್ಲು ಹೆಚ್ಚಾಗಿ ಮೇಲ್ಪಿಲ್ಲದೆ ಎಷ್ಟು ದಸರಾ ವ್ಯಾಕಮಪ್ಪಿನೆನೆಯೆಂದಿದ್ದಷ್ಟು ಬೆಳ್ಳಾಗಿ ಗಣನೆಗೆ ತಂದ. ಸಂಘ ಸೇರುವವರಾಗಿ ದೇಶೀಯರನ್ನು ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ.

ಸುಬಿಯಂಡ ಮಾಚಯ್ಯ.

" ಕೊಡಗು "

೧೯೨೩ ನೇ ಇಸವಿ ಸೆಪ್ಟಂಬರ್ ತಾ॥ ೧೪ ನೇ ಶುಕ್ರವಾರ

ಜಪಾನ್ ದೇಶದಲ್ಲಿ ಭೂಕಂಪದ ಅನಾಹುತ.

ಅಪಜಯದ ಜನ ಗೆಲ್ಲಿಗೂ ಉತ್ಸಾಹವನ್ನು ಕೊಟ್ಟು ಕೊಡುತ್ತಲೂ ಇರುವ ಜಪಾನ್ ದೇಶದಲ್ಲಿ ದೇವರ ಮಹಿಮೆಯಿಂದ ಒಂದು ದೊಡ್ಡ ಅನಾಹುತವು ಸಂಭವಿಸಿದ. ಕಳೆದ 1 ನೇ ತಾರೀಕಿನ ದಿನ ಮಧ್ಯಾಹ್ನದಲ್ಲಿ ಅದ್ಭುತವಾದ ಭೂಕಂಪವೊಂದು ಉಂಟಾಗಿ ಜಪಾನಿನ ಮುಖ್ಯಪಟ್ಟಣವಾದ ಟೋಕಿಯೋ ಮತ್ತು ಯಕೋಹಾಮ ಮುಂತಾದ ಪಟ್ಟಣಗಳಿಗೆ ಬಹಳ ನಷ್ಟವಾಗಿದೆ. ಮನೆಗಳೆಲ್ಲಾ ಬಿದ್ದು ಬೆಂಕಿ ಹತ್ತಿಕೊಂಡು ಊರುಗಳೆಲ್ಲಾ ಸುಟ್ಟು ಹೋದವು. ಸಮುದ್ರದಲ್ಲಿ ದೊಡ್ಡ ತೆರೆಯೊಂದು ಎದ್ದು ಅನೇಕ ಊರುಗಳನ್ನು ಮುಳುಗಿಸಿತು. ಸಮುದ್ರದ ಮಧ್ಯದಲ್ಲಿದ್ದ ಒಶೀಮ ಎಂಬ ಒಂದು ದ್ವೀಪವೇ ಮಾಯವಾಗಿ ಹೋಗಿದೆಯಂತೆ. ಆಹಾರ ಸಾಮಾನುಗಳಿಲ್ಲದೆ ಜನರು ಕ್ಷಾಮ ಪೀಡಿತರಾಗಿದ್ದಾರೆ. ಎಲ್ಲಿ ನೋಡಿದರೂ ಹೆಣಗಳೇ! ಜಪಾನ್ ದೇಶದಲ್ಲಿ ಈ ಭಯಂಕರ ಭೂಕಂಪದಿಂದ ಕಡಿಮೆಯೆಂದರೆ 15 ಲಕ್ಷ ಜನರಾದರೂ ಮೃತರಾಗಿದ್ದಾರಂತೆ. ಉರಿಯುವ ಬೆಂಕಿಯಿಂದ ಉಂಟಾದ ಘೋರ ಶಕೆಯಿಂದ ಅನೇಕರ ಸಕ್ಕರಂತೆ ... ತಡೆಯಲಾರದೆ ನೀರಿಗೆ ಹಾರಿ ಅನೇಕರು ಪ್ರಾಣಬಿಟ್ಟರಂತೆ. 2000 ಚದುರ ಮೈಲು ವಿಸ್ತೀರ್ಣದಲ್ಲಿ ಈ ಅನಾಹುತದ ಬಾಧೆಯುಂಟಾಗಿದೆ.

ನಮ್ಮ ಈ ದೇಶದಲ್ಲಿ ಅತಿವೃಷ್ಟಿಯಿಂದ ಆದ ನಷ್ಟದಿಂದಲೇ ನಮ್ಮ ತಲೆ ತಿರುಗುತ್ತಿರುವಾಗ ಈ ಅಗಾಧಾರಣ ಅಲ್ಲೋಲಕಲ್ಲೋಲಕ್ಕೆ ಗುರಿಯಾದ ಜಪಾನಿನ ಜನರ ಮನಸ್ಸು ಹೇಗಿರಬಹುದೆಂಬುದನ್ನು ಊಹಿಸಿಕೊಳ್ಳಬೇಕಷ್ಟೆ. ಅವರ ಇಂಥಾ ಸಂಕಟ ಸಮಯದಲ್ಲಿ ದೇವರು ಅವರಿಗೆ ಧೈರ್ಯ ಕೊಟ್ಟು ಅವರ ಪ್ರಾಮುಖ್ಯತೆಗೆ ಕೊರತೆಯಿಲ್ಲದಂತೆ ಮಾಡಿಕೊಳ್ಳಲು ಸಾಧ್ಯವಾಗಲಿ ಎಂತ ಒಟ್ಟು ಇಂಡಿಯಾದ ಪ್ರಾರ್ಥನೆಯೊಂದಿಗೆ ನಾವು ಸೇರಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯವಾಗಿದೆ.

ಈ ದೈವ ಕೋಪಕ್ಕೆ ಗುರಿಯಾದ ಜನರ ಕಷ್ಟನಿವಾರಣೆಗೆ ಅಮೇರಿಕಾದವರೂ, ಆಸ್ಟ್ರೇಲಿಯಾದವರೂ, ಇಂಗ್ಲೀಷರೂ ಸಹ ಸಹಾಯಮಾಡಲು ನಿಶ್ಚೈಸಿದ್ದಾರೆ. ಪೂರ್ವ ಸಮುದ್ರಗಳಲ್ಲಿದ್ದ ಹಡಗುಗಳನ್ನೆಲ್ಲಾ ಜಪಾನಿನ ಸಹಾಯಕ್ಕೆ ಬಿಟ್ಟು ಕೊಟ್ಟಿದ್ದಾರೆ. ಔಷಧಿಗಳನ್ನೂ ಡಾಕ್ಟರುಗಳನ್ನೂ ಕಳುಹಿಸುತ್ತಲಿದ್ದಾರೆ. ಆಹಾರ ಸಾಮಗ್ರಿಗಳನ್ನು ಒದಗಿಸುತ್ತಲಿದ್ದಾರೆ. ಇಂಡಿಯಾದ ವರ್ತಕರು ಸಹ ಇಂಡಿಯಾದಿಂದ ಸಾಧ್ಯವಾದ ಸಹಾಯ ಕಳುಹಿಸಬೇಕೆಂತ ಯೋಚಿಸುತ್ತಲಿದ್ದಾರೆ. ಇಂಡಿಯಾ ವೈಸ್‌ರಾಯರು ಇವರ ಸಹಾಯಕ್ಕಾಗಿ ಒಂದು ಫಂಡನ್ನು ಏರ್ಪಡಿಸಿ 5000 ರೂಪಾಯಿ ಸ್ವತಃ ಕೊಟ್ಟಿದ್ದಾರೆ. ದೇಶದವರೆಲ್ಲರೂ ಸಹಾಯ ಮಾಡಬೇಕೆಂತ ಕೇಳಿಕೊಳ್ಳುತ್ತಾರೆ. ಬೇರೆ ಸಂದರ್ಭಗಳಲ್ಲಿ ಒಬ್ಬರಿಗೊಬ್ಬರಿಗೆ ಅನ್ಯೋನ್ಯ ಅಸೂಯೆ, ಭಯ ಮುಂತಾದ್ದು ಇರಬಹುದಾದರೂ ಈ ದೇವರು ಕೊಟ್ಟ ಕಷ್ಟವನ್ನು ಅನುಭವಿಸುವ ಈ ಸಮಯದಲ್ಲಿ ಪ್ರಪಂಚದ ಜನಾಂಗಗಳೆಲ್ಲರೂ ಒಗ್ಗಟ್ಟಾಗಿ ಸಹಾನುಭೂತಿ ತೋರಿಸುವದರಲ್ಲಿದ್ದಾರೆ. ಈ ರೀತಿ ಸದಾ ಕಾಲವು ಪ್ರಪಂಚದಲ್ಲಿ ಪ್ರೀತಿಯೇ ತುಂಬಿದ್ದರೆ ಈ ಜಗತ್ತಿನ ಸುಖಕ್ಕೆ ಪಾರವಿರುತ್ತಿತ್ತೇ ?

ಪ್ರಪಂಚದಲ್ಲೆಲ್ಲಾ ಯಾರಿಗೂ ಹಿಂದೆ ಬೀಳದ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸರಿಸಮಾನರೆಂತ ಎನ್ನಿಸಿಕೊಳ್ಳುವಷ್ಟು ಪ್ರಖ್ಯಾತಿಯನ್ನು ಅಲ್ಪಕಾಲದಲ್ಲೇ ಸಂಪಾದಿಸಿದ ಈ ಜಪಾನ್ ದೇಶಕ್ಕೇನೇ ಈ ಅಮಾನುಷ ಕಷ್ಟ ಬಂದದ್ದರಿಂದ ಮನುಷ್ಯಜಾತಿಯು ತಿಳಕೊಳ್ಳತಕ್ಕದ್ದು ಏನೂ ಇಲ್ಲವೇ ? ಮನುಷ್ಯರು ಹೊಸಹೊಸದಾಗಿ ಕಂಡುಹಿಡಿದು ಉಪಯೋಗಿಸುವ ಆವಿ, ವಿದ್ಯುಚ್ಛಕ್ತಿ, ಮದ್ದುಗುಂಡಿನ ಶಕ್ತಿ ಮುಂತಾದ್ದೆಲ್ಲಾ ಶಕ್ತಿಗಳನ್ನೂ ಮೀರಿಸುವ ಶಕ್ತಿಯು ದೇವರ ಉಗ್ರಾಣದಲ್ಲಿ ಇದ್ದೇ ಇದೆಯೆಂತಾಯಿತು. ಹೊಸ ಶಕ್ತಿಗಳೇ ಇಂಥಾ ಸಂದರ್ಭದಲ್ಲಿ ಕೆಡಕಿಗೆ ಕಾರಣಗಳಾಗುತ್ತವೆ. ಟೋಕಿಯೋ ಪಟ್ಟಣದಲ್ಲಿ ಭೂಕಂಪವಾಗುವಾಗ ಊರಿನಲ್ಲಿ ದೀಪಕ್ಕಾಗಿ ಕೊಳವೆಗಳ ಮೂಲಕ ಓಡಾಡುತ್ತಿದ್ದ ಗೇಸ್‌ಗೆ ಬೆಂಕಿಹಿಡಿದು ಊರಿಗೆ ಬೆಂಕಿ ಹತ್ತಲಿಕ್ಕೆ ಅನುಕೂಲವಾಯಿತಂತೆ. ವಿದ್ಯುಚ್ಛಕ್ತಿಯ ತಂತಿಗಳಿಂದಲೂ ಅಪಾಯ ಬಂತಂತೆ. ರೈಲಿನಲ್ಲಿ ಜನರು ಪ್ರಯಾಣಮಾಡುತ್ತಿದ್ದ ರೈಲ್ ಬಂಡಿಗಳು ಸಮುದ್ರದಲ್ಲಿ ಬಿದ್ದು ಜನರು ನಾಶವಾದರಂತೆ. ಯುದ್ಧಹಡಗುಗಳಾಗಲೀ ಆಕಾಶವಿಮಾನಗಳಾಗಲೀ ಈ ಅಸಾಧಾರಣ ದೈವೀಕಯುದ್ಧದಲ್ಲಿ ಜಪಾನಿನವರ ಸಹಾಯಕ್ಕೆ ಒದಗಿಲ್ಲವಷ್ಟೆ. ಮನುಷ್ಯನು ಸ್ವಪ್ರಯತ್ನದಿಂದ ಸಂಪಾದನೆಮಾಡಿದ್ದೆಲ್ಲಾ ದೇವರ ಮನಸ್ಸಿಗೆ ಬಂದರೆ ನಿಮಿಷಾರ್ಧದಲ್ಲಿ ಹಾಳಾಗುತ್ತೆ. ಪ್ರಾಪಂಚಿಕ ಧರ್ಮಗಳನ್ನು ನಡಿಸುತ್ತಿರುವ ಪ್ರತಿನಿಮಿಷದಲ್ಲೂ ದೇವರ ಮಹಿಮೆಯನ್ನು ಜ್ಞಾಪಕದಲ್ಲಿಡಬೇಕೆಂತ ಇಂಥಾ ಪ್ರಳಯಗಳು ಕಲಿಸುತ್ತವೆ.

ದಿವಂಗತ ಕೋಟಿರ ಉತ್ತಯ್ಯನವರು.

ಈ ವಿಷಯವು ನಮ್ಮ ದೇಶದಲ್ಲಿ ಯಾರನ್ನು ತಾನೆ ವಿಸ್ಮಯಗೊಳಿಸದೆ ಇರುವುದು! ಯಾರನ್ನು ತಾನೆ ವ್ಯಸನಕ್ಕೀಡುಮಾಡದೆ ಇರುವದು!! ದೇವರ ಮಾಯೆಯು ವರ್ಣಿಸಲಾಗದು! ಅದನ್ನು ವರ್ಣಿಸಲು ಯಾರಿಂದ ತಾನೇ ಸಾಧ್ಯವಾಗುವುದು!! ಮೊನ್ನೆ ತಾನೇ ಅಂದರೆ ತಾ॥ 1 ನೇ ಮಂಗಳವಾರ ದಿನ ಕ್ರೀಮಿನಲ್ ಕೋರ್ಟು ಕೆಲಸ ಮಾಡಿದ ಮ॥ ಕೋಟಿರ ಉತ್ತಯ್ಯ ಬಿ ಎ ಎಲ್ ಎಲ್ ಬಿ ಯವರು ತಾ॥ 8 ನೇ ಶನಿವಾರ ದಿನ ಸಾಯಂಕಾಲ 3 ಗಂಟೆಗೆ ಮುಕ್ಕಾಟಿರ ಮನೆಯಲ್ಲಿ ಮೃತಪಟ್ಟರೆಂಬ ವಾರ್ತೆಯು ನಮ್ಮ ದೇಶದಲ್ಲೆಲ್ಲಾ ದುಃಖಕರವಾದ ಆಶ್ಚರ್ಯವನ್ನುಂಟುಮಾಡದಿರಲಾರದು. ಮೊದಲು ಪ್ರಾರಂಭವಾದ ಮಲೇರಿಯ ಜ್ವರವು ಅವರ ಮೆದುಳಿಗೆ ಹತ್ತಿ ಅವರ ಅಂತ್ಯಕಾಲಕ್ಕೆ ಹೇತುವಾಯಿತೆಂದು ತಿಳಿಯಬರುತ್ತದೆ.

ಇವರು ತನ್ನ ಚಿಕ್ಕ ವಯಸ್ಸಿನಲ್ಲೇ ಮಡಿಕೇರಿ ಹೈಸ್ಕೂಲಿನಲ್ಲಿ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮೈಸೂರು ಮಹಾರಾಜರ ಕಾಲೇಜಿನಲ್ಲಿ ಎಫ್ ಎ ಮತ್ತು ಬಿ ಎ ಪರೀಕ್ಷೆಗಳಲ್ಲಿ ಪಾಸಾದ ನಂತರ ಬೊಂಬಾಯಿಗೆ ಹೋಗಿ ಅಲ್ಲಿ ಎಲ್ ಎಲ್ ಬಿ ಕೋರ್ಸನ್ನು ಮುಗಿಸಿದರು. ಕೂಡಲೆ ಇವರು ಮಡಿಕೇರಿಗೆ ಬಂದು ಲಾಯರು ಕೆಲಸವನ್ನು ಕೈಕೊಂಡರು. ಪ್ರೌಢ ವಿದ್ಯಾಭ್ಯಾಸವನ್ನು ಗಳಿಸಿದವರಾಗಿದ್ದರೂ ಇವರು ಸ್ವಲ್ಪವೂ ಅಹಂಕಾರವನ್ನು ತೋರಿಸದೆ ವಿದ್ಯಾವಂತರು ಮತ್ತು ಅವಿದ್ಯಾವಂತರಲ್ಲಿಯೂ ಐಶ್ವರ್ಯವಂತರು ಮತ್ತು ಬಡವರಲ್ಲಿಯೂ ಏನೊಂದೂ ಭಿನ್ನಭೇದವೆಣಿಸದೆ ಎಲ್ಲರಲ್ಲಿಯೂ ಏಕರೀತಿಯಿಂದ ವರ್ತಿಸುತ್ತಿದ್ದದರಿಂದ ಇವರು ಬೇಗನೆ ಜನರ ಪ್ರೀತಿಗೆ ಪಾತ್ರರಾದರು. ಇವರ ಸಾಧುಗುಣಕ್ಕೆ ಇವರನ್ನು ಎಲ್ಲರೂ ಮೆಚ್ಚುತ್ತಿದ್ದರು. ಎರಡು ವರ್ಷ ತುಂಬುವದರೊಳಗಾಗಿ ಅಮ್ಮತ್ತಿ ಸರ್ಕಲ್ ಪಂಚಾಯಿತಿಗೆ ಮೆಂಬರಾಗಿಯೂ, ಡಿಸ್ಟ್ರಿಕ್ಟ್ ಬೋರ್ಡ್‌ ಮೆಂಬರಾಗಿಯೂ ಆರಿಸಲ್ಪಟ್ಟರು. ಇವರ ಸದ್ಗುಣಗಳಲ್ಲಿ ಒಂದೆರಡು ತಿಂಗಳಲ್ಲೇ ಜನರು ಇವರ ಸದ್ಗುಣಗಳನ್ನು ಕಂಡು ಇವರನ್ನು ಗೌರವದಿಂದ ಪ್ರೀತಿಸುತ್ತಿದ್ದರು. ಇವರು ಲಾಯರು ವೃತ್ತಿಯನ್ನು ಈಗ ತಾನೇ ಪ್ರಾರಂಭಿಸಿದ್ದರೂ ಕೂಡ ತನ್ನ ವಾಕ್ಚಾತುರ್ಯ ಸೇವೆಯನ್ನು ಮರೆತು ಬಿಡಲಿಲ್ಲ. ಈ ದೇಶದ ಹೀನಸ್ಥಿತಿಯನ್ನು ಚೆನ್ನಾಗಿ ಅರಿತವರಾಗಿ ಅದರ ಅಭಿವೃದ್ಧಿಗೆ ತನ್ನ ಕೈಯ್ಯಲ್ಲಾಗುವಷ್ಟು ಮಟ್ಟಿಗೆ ಕೆಲಸ ಮಾಡಲು ತಯಾರಾಗಿದ್ದರು. ದೇಶದ ಉನ್ನತ ಸ್ಥಿತಿಯನ್ನು ಬಯಸಿ ರಾಜಕೀಯ ಚಳವಳದಲ್ಲಿಯೂ ತನ್ನ ಅಭಿಪ್ರಾಯವನ್ನು ಆಗಾಗ್ಗೆ ಸೂಚಿಸುತ್ತಾ ತನ್ನಿಂದ ಸಾಧ್ಯವಾದಷ್ಟು ಮಟ್ಟಿಗೆ ಸಹಾಯಮಾಡುತ್ತಿದ್ದರು. ಆ ಕಾರಣದಿಂದಲೇ ಇವರು ಜಮಾನ್ದಾರರ ಸಂಘದ ತಾಲೂಕು ಜಾಯಿಂಟ್ ಸೆಕ್ರಟರಿಯಾಗಿ ಚುನಾಯಿಸಲ್ಪಟ್ಟರು. ಇವರು ನಮ್ಮ ದೇಶದ ಏಳಿಗೆಗೆ ಇನ್ನು ಮುಂದಕ್ಕೆ ಬಹಳ ಕೆಲಸ ಮಾಡುವರೆಂಬ ನಂಬಿಕೆಯು ಜನರಲ್ಲಿ ಪೂರ್ತಿ ಹುಟ್ಟುತ್ತಿರುವಷ್ಟರಲ್ಲೇ ಜನರಿಗೆಲ್ಲರಿಗೂ ಬೇಕಾಗಿದ್ದ ಉತ್ತಯ್ಯನವರು ದೇವರಿಗೂ ಬೇಕಾದವರಾದರು. ಆದದರಿಂದಲೇ ಭಗವಂತನು ಅವರನ್ನು ಇಷ್ಟು ಚಿಕ್ಕವಯಸ್ಸಿನಲ್ಲೇ ತನ್ನ ಸನ್ನಿಧಿಗೆ ಬರಮಾಡಿಕೊಂಡರೆಂದು ಹೇಳಬೇಕಾಗಿದೆ. ಇವರ ಮರಣವು ಈ ದೇಶಕ್ಕೆ ದೊಡ್ಡದೊಂದು ನಷ್ಟವೆಂದು ಯಾರು ತಾನೇ ಹೇಳದಿರುವರು. ಪ್ರೌಢವಿದ್ಯಾವಂತರು ಅತಿ ವಿರಳವಾಗಿರುವ ನಮ್ಮ ಈ ಚಿಕ್ಕ ದೇಶದಲ್ಲಿ ಈ ನಾಲ್ಕು ತಿಂಗಳೊಳಗಾಗಿ ಮ॥ ಕುಪ್ಪಂಡ ಗಣಪತಿಯವರು ಮ॥ ಕುಟ್ಟಂಡ ಕರುಂಬಯ್ಯನವರು ಮತ್ತು ಮ॥ ಕೋಟಿರ ಉತ್ತಯ್ಯನವರು ಇಂತಹ ವಿದ್ಯಾವಂತರಾದ ಮೂರು ಯೌವ್ವನಸ್ಥರು ಇಹವನ್ನು ಬಿಟ್ಟು ಹೋದದ್ದು ಈ ದೇಶದ ದುರ್ದೆಶೆಯೆಂದು ಎಷ್ಟು ಹೇಳಿದರೂ ಸಾಲದು. ಈ ವ್ಯಸನಕರವಾದ ವಿಷಯ ಮುಂದರಿಸಲು ಮನಸ್ಸಿಲ್ಲದವರಾದುದರಿಂದ ನಾವು ಇವರ ಅಗಲುವಿಕೆಯಿಂದ ದುಃಖಸಾಗರದಲ್ಲಿ ಮುಳುಗಿರುವ ಇವರ ಕುಟುಂಬದವರಿಗೂ ನೆಂಟರಿಷ್ಟರಿಗೂ ತಾಳ್ಮೆಶಕ್ತಿಯನ್ನೂ ಇವರ ಆತ್ಮಕ್ಕೆ ಶಾಂತಿಯನ್ನೂ ನೀಡಲೆಂದು ಭಗವಂತನಿಗೆ ಪ್ರಾರ್ಥಿಸಿ ಮುಗಿಸುತ್ತೇವೆ.

ರವೀಂದ್ರನಾಥ ಟಾಗೂರರ ಪತ್ರ.

ಮುಂದರಿಸಿದ್ದು (ಮೋಡರ್ನ್ ರಿವ್ಯೂವಿನಿಂದ).

ಚಿಕ್ಕಮನಸ್ಸಿನ ಇಂಗ್ಲಿಷ್ ಮನುಷ್ಯನ ಆಕ್ಷೇಪಕ್ಕೆ ಈಚೆಗೆ ನಾನೂ ಗುರಿಯಾಗಿದ್ದೇನೆ. ನೂರಾರು ಯುವಕರನ್ನು ವಿಚಾರವಿಲ್ಲದೆ ಜೈಲಿಗೆ ಕಳುಹಿಸುವ ವಿಷಯದಲ್ಲಿ ನಾನು ಕೆಲವು ದಿವಸಗಳ ಕೆಳಗೆ ಒಂದು ಪತ್ರ ಬರೆದೆನು. ಸುಳ್ಳುವರ್ತಮಾನವನ್ನು ಹರಡಿಸಿದೆನೆಂದು ಹೇಳಿ ನನ್ನನ್ನೂ ಎಕ್ಸ್‌ಟ್ರೀಮಿಸ್ಟ್ ಅಂದರೆ ದುಡುಕುವವನೆಂದು ಇಂಡಿಯಾದಲ್ಲಿರುವ ಇಂಗ್ಲಿಷರ ಪತ್ರಿಕೆಗಳು ಹೇಳಿದವು. ಇವರೂ ಸಹ ದುಷ್ಟ ಶಾಸಕ ಸರಕಾರಿ ಉದ್ಯೋಗಸ್ಥರೇ. ಅವರು ನನಗೆ ಹೆಸರಿಟ್ಟದ್ದಕ್ಕೆ ಮನ್ನಿಸುತ್ತೇನೆ. ನನ್ನ ಕವಿತೆಯಲ್ಲಿ ಅರ್ಥವಿಲ್ಲವೆಂತಲೂ ಗದ್ಯದಲ್ಲಿ ಸಾರವಿಲ್ಲವೆಂತಲೂ ಹೇಳುವ ನನ್ನ ದೇಶೀಯರಿಗಾದರೂ ನನ್ನ ಲೇಖನಗಳನ್ನು ಓದಿರುವವರಾದ್ದರಿಂದ ಸ್ವದೇಶದಲ್ಲೂ ನನ್ನ ಲೇಖನಗಳನ್ನು ಓದಿರುವವರಾದ್ದರಿಂದ ಸ್ವದೇಶಿ ಚಳವಳಿ ಹುಟ್ಟಿದಂದಿನಿಂದಲೂ ದುಡುಕುವಿಕೆ Extremism ಗೆ ವಿರೋಧವಾಗಿಯೇ ಬರೆಯುತ್ತಿದ್ದೇನೆಂಬುದು ಗೊತ್ತಾಗಬಹುದು. ಕಡಕು ಮಾಡುವದರ ಫಲಿತಾಂಶವು ಅಂತ್ಯದಲ್ಲಿ ಪ್ರಯೋಜನಕಾರಿಯಾಗುವದಿಲ್ಲವೆಂತಲೂ ಯಾಕೆಂದರೆ ಪಾಪದ ಸಾಲವು ಅಂತ್ಯದಲ್ಲಿ ಬಹಳ ನಷ್ಟವಾಗಿ ಪರಿಣಮಿಸುವದೆಂತಲೂ ಬರೆದಿದ್ದೇನೆ. ನನ್ನನ್ನು ದೇಶೀಯರೇ ಆಗಲೀ ಇಂಗ್ಲೀಷರೇ ಆಗಲೀ ಆಕ್ಷೇಪಿಸಿದರೆ ನಾನು ಭಯಪಡುವನಲ್ಲ. ದುಡುಕುವದು ಮರ್ಯಾದೆಗೆ ವಿರೋಧವಾಗಿಯೂ, ಜ್ಞಾನಕ್ಕೆ ವಿರೋಧವಾಗಿಯೂ ಪ್ರಕಟಪಡಿಸದೆ ನಡಸುವ ದುಡುಕಾಟವು ಸರಿಯಾದ ದಾರಿಯಲ್ಲವೆಂತಲೂ ಆದಾಗ ಹಳವನ್ನು ಆಶ್ರಯಿಸಬೇಕೆಂತಲೂ ನಾನು ಯಾವಾಗಲೂ ಬರೆದಿದ್ದೇನೆ. ಈ ಗುಣವು ಸರಕಾರದವರಿಗೂ ಯೋಗ್ಯವಲ್ಲವೆಂತ ನನ್ನ ಅಭಿಪ್ರಾಯವಾಗಿದೆ.

ಬಲದಿಂದ ದುಡುಕುವದು ಪೂರ್ವದಲ್ಲಿ ರೂಢಿಯಿತ್ತು. ಅವನ ತಲೆ ತೆಗೆಯಿರಿ ಎಂಬವೇ ... ದಾರಿಯೆಂತ ಭಾವಿಸಿದ್ದರು. ಈ ದಾರಿಯಿಂದ ಬಹಳ ನಷ್ಟವಿದೆಯೆಂತ ಯೂರೋಪಿನಲ್ಲಿ ಈಗ ತಿಳಿಯಲು ಸರಿಯಾಗಿದೆ. ಕಷ್ಟ ಬಂದಾಗಲೂ ಆ ಕಷ್ಟದಲ್ಲೂ ಸಹ ನ್ಯಾಯಬೇಕೆಂತ ನಾಗರೀಕತೆಯು ಹೇಳುತ್ತೆ. ನಾಗರೀಕ ಸಮಾಜದಲ್ಲಿ ಕೊಡುವ ಶಿಕ್ಷೆಗಳು ನ್ಯಾಯವೆಂಬ ಒಂದರಿಂದಲ್ಲಿ ಗಾಳಿಸಲ್ಪಟ್ಟು ಶಿಷ್ಟ ಪಕ್ಷಪಾತಗಳಿಂದ ವಿಮುಕ್ತವಾಗಿಯುಳ್ಳದ್ದಾಗಿರಬೇಕು. ಆದಕ್ಕೆ ದಂಗೆಯೇಳುವ ಹುಸಿಯೂ ... ದಂತಾಗಿದೆ. ಕಷ್ಟಕಾಲವೆಂತ ಬರುತ್ತೇನೆ. ದೇಶದ ಬೆಳವಣಿಗೆಗೆ ಇರುವ ಅಡ್ಡಿಗಳನ್ನು ತಿಕ್ಕುಹಾಕಲಿಕ್ಕೆ ನಮ್ಮ ದೇಶದ ಕೆಲವು ಯುವಕರು ಹಿಡಿದಿರುವ ದಾರಿಗೆ ನಾವು ನಾಚಿಕೆ ಪಡಬೇಕಾಗಿದೆ. ಧರ್ಮವನ್ನು ಬಿಟ್ಟು ... ಪದ್ಧತಿಯು ಪಶ್ಚಿಮ ರಾಷ್ಟ್ರಗಳಿಂದ ಬಂದದ್ದಾದ್ದರಿಂದ ಇದನ್ನು ಹಿಂದೆಗೆ ವ್ಯಸನಪಡಬೇಕಾಗಿದೆ. ರಾಜತಂತ್ರದ ... ಮತ್ತು ... ರಾಜಕಾರ್ಯದಲ್ಲಿ ಮೋಸ ... ಪ್ರಕಟವಾ ... ಗುಟ್ಟಾಗಿಯೂ ... ದಾದ ... ಗಳಿಗೂ ನಮ್ಮ ಪತ್ರದಲ್ಲಿ ಚಿನ್ನವನ್ನು ಗಟ್ಟಿಮಾಡಲಿಕ್ಕೆ ಬೇಕಾದ ಪುಟ್ಟ ಲೋಹಗಳೆಂತ ಭಾವಿಸಲ್ಪಟ್ಟಿದೆ. ಆದರಿಂದ ನಾವು ಕಲಿತಿರುವದೇನೆಂದರೆ ದೇಶಭಕ್ತಿಯ ಸ್ವಾರ್ಥಕ್ಕಾಗಿ ಕೆಲಸಮಾಡುವಾಗ ಧರ್ಮದ ಯೋಚನೆಯಿಂದ ಮನಸ್ಸು ಕಲಕಲ್ಪಡಬಾರದೆಂದೂ ಧರ್ಮದ ಯೋಚನೆಯು ಒರೇ ಪುಸ್ತಕದ ದುರ್ಬಲತೆಯೆಂದೂ ಕಲಿತಿದ್ದೇವೆ. ನಾಗರೀಕತನವು ಘಟ್ಟಿಯಾಗಬೇಕಾದರೆ ಸ್ವಲ್ಪ ಮಟ್ಟಿಗಾದರೂ ರಾಕ್ಷಸೀಗುಣ ಬೆರೆದಿರಬೇಕೆಂತಲೂ, ಸುದರ್ಶನ ಸರಿಯಾಗಿ ಕೆಲಸಮಾಡಬೇಕಾದ ಗುಣವಾಚಕ ಹದ ಕೊಟ್ಟಿರಬೇಕೆಂತಲೂ ನಮ್ಮ ಮನಸ್ಸಿಗೆ ದೃಢವಾಗಿದೆ. ಇದರಿಂದ ಅಧರ್ಮವನ್ನು ನಾವು ಸಹಿಸಬೇಕಾಗಿ ಬಂದದೆ ಪಾಶ್ಚಾತ್ಯವಲ್ಲದೆ ನಮ್ಮ ಬೋಧಕರ ನೀಚಗುಣಗಳ ಮುಂದೆಯೂ ತಲೆ ಬಾಗಿಸಬೇಕಾಗಿದೆ. ನಮ್ಮ ಬೋಧಕರು ನಿಂತಲ್ಲಿಗಿಂತಲೂ ಎತ್ತರವಾಗಿ ನಿಂತು—

ಅಧರ್ಮೇಣೈಧತೇ ತಾವತ್ ತತೋ ಭದ್ರಾಣಿ ಪಶ್ಯತಿ
ತತಃ ಸಪತ್ನಾನ್ ಜಯತಿ ಸಮೂಲಸ್ತು ವಿನಶ್ಯತಿ ||

ಅಂದರೆ ಜನರು ಅಧರ್ಮದಿಂದ ಪ್ರಬಲರಾಗುತ್ತಾರೆ. ಅಧರ್ಮದಲ್ಲೇ ಅವರ ಕ್ಷೇಮವೆಂತ ತೋರುತ್ತೆ. ಅಧರ್ಮದಿಂದಲೇ ಶತ್ರುಗಳನ್ನು ನಾಶಪಡಿಸುತ್ತಾರೆ. ಆದರೆ ಬೇರಿನಿಂದಲೇ ನಾಶಹೊಂದುತ್ತಾರೆ ಎಂತ ಹೇಳಲಿಕ್ಕೆ ಧೈರ್ಯವನ್ನೂ ಸ್ವಾತಂತ್ರ್ಯವನ್ನೂ ಕಳಕೊಂಡಿದ್ದೇವೆ.

ಪಾಶ್ಚಿಮಾತ್ಯರ ಬೋಧನೆಯ ಮುತ್ತಿಗೆಯಿಂದ ನಮ್ಮ ಧ್ಯೇಯಗಳು ಸಂಪೂರ್ಣವಾಗಿ ಸೋತವೆನ್ನುವದೇ ಅತ್ಯಂತ ವ್ಯಸನಕರ. ನಮ್ಮ ದೇಶದಲ್ಲಿ ದೇಶಭಕ್ತಿಯ ದೀಪ ಹಚ್ಚಿಟ್ಟಾಗ ನಮ್ಮಲ್ಲಿದ್ದ ಅತ್ಯುತ್ತಮ ಗುಣಗಳೆಲ್ಲಾ ಪ್ರಕಾಶಿಯವೆಂತಲೂ ಬಹುಕಾಲದಿಂದ ಕೂಡಿಟ್ಟು ಮೂಲೆಯಲ್ಲಿದ್ದ ನಮ್ಮ ಶಕ್ತಿಗಳೆಲ್ಲಾ ಹಾರಿಹೋದಾವೆಂತಲೂ ನಮ್ಮ ನಿಂದ್ಯೆಯೆಂಬ ಮರುಭೂಮಿಯಲ್ಲಿ ಉತ್ಸಾಹವೆಂಬ ಒರತೆ ಹುಟ್ಟುತ್ತೆಂತಲೂ, ಕತ್ತಲಿನಿಂದ ಮುಚ್ಚಿದ ಭವಿಷ್ಯತ್ತಿನಲ್ಲಿ ದಾರಿ ತೋರಿಸಿ ಕೊಟ್ಟೀತೆಂತಲೂ ನಮ್ಮ ಮನುಷ್ಯತ್ವವನ್ನೇ ... ದಿಸಿ ಕುಗ್ಗಿಸಿದ ಪದ್ಧತಿಗಳೆಂಬ ಹೊರೆಗಳೆಲ್ಲಾ ಅನ್ಯೋನ್ಯ ಪ್ರೀತಿಯಿಂದ ಇಳಿಸಲ್ಪಟ್ಟು ಎತ್ತಿದ ತಲೆಯುಳ್ಳವರಾಗಿ ... ಗಳಿಗೆ ಹೆಗಲು ತಾಕಿ ನಿಂತಾರೆಂತಲೂ ತುಂಬಾ ಆಶೆ ಇತ್ತು.

ಆದರೆ ಅಯ್ಯೋ! ನಮ್ಮ ಅದೃಷ್ಟವು ನಮ್ಮನ್ನು ಮೋಸಗೊಳಿಸಿತು! ದೇಶಭಕ್ತಿಯ ದೀಪವೇನೋ ಹಚ್ಚಿಟ್ಟಿತು. ಆದರೆ ಅದರ ಬೆಳಕಿನಿಂದ ಕಳವು ಸುಲಿಗೆ ಪಾತಕವೇ ನಮ್ಮ ಕಣ್ಣಿಗೆ ಬೀಳುತ್ತೆ. ನಮ್ಮ ಸ್ವಾರ್ಥ ಬಲಿದು ಪ್ರತ್ಯಕ್ಷನಾದ ದೇವರು ಪಾಪದ ನೈವೇದ್ಯವ ಸ್ವೀಕರಿಸಲಿಕ್ಕೆ ಪ್ರತ್ಯಕ್ಷನಾದನೋ ? ನಮ್ಮ ಸ್ಥಿತಿಯ ಮೇಲೆತ್ತಲಿಕ್ಕೆ ರಾಜಕೀಯ ಬಿಕ್ಷೆಬೇಡುವಿಕೆಯೇ ದಾರಿ ಕಲೂ ಆದರಿಂದ ಅರ್ಜಿ ಬರೆಯುವ ವಿದ್ಯೆಯಲ್ಲಿ ಶೀಘ್ರ ಕುಶಲತೆ ಪಡೆಯಬೇಕೆಂತಲೂ ಯಾವ ಉತ್ಸಾಹ ... ಅಧೈರ್ಯದಿಂದ ನಂಬಿದ್ದವೋ ಅದೇ ಉತ್ಸಾಹ ಹೀನ ಧೈರ್ಯವು ರಾಜಕೀಯ ಕೊಳೆ ಇಂಥಾ ಪ್ರಾಪಂಚಿಕ ಬಿಟ್ಟು, ದೃಢಮನಸ್ಸಿನ ಆತ್ಮತ್ಯಾಗದ ಯುವಕರಿಂದ ಪ್ರಯೋಜನವಿರುತ್ತಿತ್ತು. ಖೈದಿಯಾಗಿದ್ದ ಕವೀಂದ್ರನು ನಿರಾಶೆಯಿಂದ ಆತ್ಮತ್ಯಾಗಮಾಡಿಕೊಂಡಾಗ ಬದುಕಿದರೆ ಅವನಿಗೆ ಶಿಕ್ಷಿಸಿದ ಇಂಗ್ಲೀಷರ ರಾಜ್ಯದಲ್ಲಿ ಇದ್ದಿದ್ದರೆ ಅವನು ಯಶಸ್ವಿಯಾಗಿ ದೇವಸಿ ಯಶಸ್ಸನ್ನು ಸಹ ಪಡೆಯುತ್ತಿದ್ದನೆಂದು ಗೊತ್ತಾಗುತ್ತೆ.

ಸ್ತ್ರೀಯರೂ ಸ್ವರಾಜ್ಯವೂ.

ಲೇಖಕರು "ಭಾರತಿ"

ಹಿಂದುಸ್ಥಾನದಲ್ಲಿ ಎಷ್ಟೋ ಪ್ರಳಯಗಳುಂಟಾದುವು ಸಾಂಘಿಕ ಪ್ರಳಯಗಳುಂಟಾ ಭರತಭೂಮಿಯಲ್ಲಿ ಸಾವಿರಾರು ಮತಗಳು ಹುಟ್ಟಿ ಧ್ವಂಸೂಯಗಳಲ್ಲಿ ಕೊನೆಗಂಡಿತು! ಅಧಿಕಾರಪ್ರಳಯ ಉಂಟಾಗಿ ಒಡವರ ಬಾಯಿಗೆ ಮಣ್ಣುಬಿದ್ದು ಒಂತಮಾತೆಯು ದಣಿಗಳ ಗಂಟಲಲ್ಲಿ ಸಿಕ್ಕಿ ತಬ್ಬಿಬ್ಬುವುದರಲ್ಲಿ ಕೊನೆಗಂಡಿತು ಆದರೆ ಎರಡು ವರ್ಷಗಳ ಹಿಂದೆ ಒಂದು ಪ್ರಳಯು ಉಂಟಾಯಿತು. ಕೆಲವರು ಇದನ್ನು ರಾಜಕೀಯ ಪ್ರಳಯವೆಂದರು! ಅನೇಕರು ಇದನ್ನು ಧಾರ್ಮಿಕ ಪ್ರಳಯವೆಂದರು (ಯಾರು ಯಾವ ಹೆಸರಿನಿಂದಲಾದರೂ ಇದನ್ನು ಕರೆಯಲಿ) ಈ ಪ್ರಳಯದಿಂದ ಆಯಾರ್ವರ್ತದ ಅಂತರಿಕ್ಷದಲ್ಲಿ ನವೀನವಾದ ಅರುಣೋದಯ ವಾಗಿದೆ. ಹಿಂದಿನ ರಾತ್ರಿಯ ಕಸ್ತಲ್ಲವೂ ನಿರ್ನಾಮವಾಗಿದೆ. ಭಾರತೀಯರ ಅಂತಃಕ್ಕರಣವು ವಿಕಾಸಹೊಂದಿದೆ. ಆ ಪರಿಶುದ್ಧ ನಯನಂಗಳಿಂದ ಸರ್ವಲಕ್ಷಣ ಸಂಪನ್ನನೂ ಸರ್ವವ್ಯಾಪಿಯೂ ಅನಾದ್ಯನನೂ ಸ್ವಯಂಭೂತನೂ ಆನಂದಮಯನೂ ಆದ ಆ ಜಗದೀಶ್ವರನನ್ನು ಭಾರತೀಯರು ಕಂಡರು ಕಂಡು ಕಂಬನಿದು ಆ ಜಲದಿಂದ ತಮ್ಮ ಕಲ್ಮಷಪೂರಿತ ನಯನಗಳನ್ನು ಪರಿಶುದ್ಧಗೈಸಿ ಭಾರತ ಮಾತೆಯನ್ನು ಪೂರ್ಣ ದೃಷ್ಟಿಯಿಂದ ನೋಡಿದರು. ಇವರ ಒಳಹೃದಯದ ಪರಿಸ್ಥಿತಿಯಲ್ಲಿ ಒಂದು ನೂತನ ಚೈತನ್ಯವು ಹೊರಹೊರಟಿತು. ಈ ಚೈತನ್ಯವೇ ಇವರನ್ನು ಒಂದಲ್ಲಿ ಸೇರಿಸಿದು! ಕೂತಲ್ಲಿ ಕೂಡಿಸಿದು!

ಈ ಬಗೆಯ ಚಿತ್ತವೃತ್ತಿಯು ಉತ್ತರಧ್ರುವ ದಕ್ಷಿಣಧ್ರುವಗಳಂತಿದ್ದ ಹಿಂದೂ ಮಹಮ್ಮದೀಯರನ್ನು ಒಂದುಗೂಡಿಸಿ ಭ್ರಾತೃಭಾವವನ್ನು ಹುಟ್ಟಿಸಿತು! ಚಂಡಾಲ! ಅಸ್ಪೃಶ್ಯ! ಪಂಚಮ! ಎಂಬೀ ಘೋರಶಬ್ದಗಳನ್ನು ಕೂಡಾ ಕೇಳಲಿಷ್ಟಪಡದೆ ಭಾರತೀಯರು ದೃಢಮನಸ್ಸಿನಿಂದ ಆ ಶಬ್ದಗಳನ್ನೇ ಭಾರತಭೂಮಿಯಿಂದ ಒದೆದುಹಾಕಿ "ಆತ್ಮವತ್ಸರ್ವಭೂತಾನಿ" ಎಂಬಂತೆ ಎಲ್ಲರನ್ನೂ ತಮ್ಮಂತೆಯೇ ಭಾವಿಸಲು ಕಂಕಣಕಟ್ಟಿರುವರು! ವಸ್ತ್ರಹೀನಳಾದ ತಮ್ಮ ತಾಯಿಯು ಮಾನಸಂರಕ್ಷಣೆಯ ಸ್ವಹಸ್ತದಿಂದ ನಿರ್ಮಿತವಾದ ಪರಿಶುದ್ಧ ಖಾದಿಯಿಂದಲೆ ಪರದೇಶಿಗಳ ಗಿರಣಿಗಳಲ್ಲಿ ಕೋಟ್ಯಾಂತರ ಕೂಲಿಗಾರರ ಆಕ್ರಂದನದಿಂದಲೂ ರಕ್ತದಿಂದಲೂ ಅಪವಿತ್ರವಾದ ಪರದೇಶೀಯ ವಸ್ತ್ರಗಳಿಂದಾಗದೆಂದು ತಿಳಿದು ತಮ್ಮ ಸ್ವಾತ್ಮಂದಿಗೆ ಹಿಡಿದ ಚಕ್ರವನ್ನು ಸ್ವೀಕರಿಸಿ ತಾಯಿಯ ಮಾನಸಂರಕ್ಷಣೆ ಮಾಡಲು ಸನ್ನದ್ಧರಾಗಿರುವರು. ಅಲ್ಲದೆ ಅಮಲೇರಿಸುವ ಪದಾರ್ಥಗಳಿಂದ ಅಧಃಪತನವು ಸಿದ್ಧವೆಂದು ತಿಳಿದು ಅವುಗಳ ವಿಸರ್ಜನೆಯಿಂದ ಜನಾಂಗದ ಆರೋಗ್ಯವೂ, ಧರ್ಮವೂ ಸ್ಥಿರವಾಗುವುದೆಂದು ನಿಶ್ಚಯಿಸಿ ಅವುಗಳ ನಿಷೇಧಕ್ಕಾಗಿ ಅಹರ್ನಿಶಿಯೂ ಜನರು ಕೃಷಿಮಾಡುತ್ತಲಿರುವರು. ಇವೆಲ್ಲಕ್ಕಿಂತಲೂ ಉತ್ಕೃಷ್ಟವೂ ಅಮೂಲ್ಯವೂ ಆದ ಅಹಿಂಸಾಮಾರ್ಗವನ್ನು ಹಿಡಿದು ಅರಿಷಡ್ವರ್ಗಗಳಿಗೆ ತಿಲೋದಕಗಳನ್ನು ಬಿಟ್ಟು "ಧರ್ಮವೇವ ಜಯತಿ ನಾನೃತಂ" ಎಂಬ ವಾಕ್ಯದಲ್ಲಿ ಪೂರ್ಣ ನಂಬಿಕೆಯನ್ನೂ ವಿಶ್ವಾಸವನ್ನೂ ಇಟ್ಟು ಇಂದ್ರಿಯ ಒಲವಿನಲ್ಲಿ ತಿರಸ್ಕಾರವನ್ನೂ ಆತ್ಮಬಲದಲ್ಲಿ ಅಧಿಕ ಗೌರವವನ್ನೂ ಇಟ್ಟವರಾಗಿ ಅನನ್ಯ ಧರ್ಮತೆಯಿಂದ ದೇಶಸೇವೆಯೇ ದೇವಸೇವೆಯೆಂದು ತಿಳಿದು ಸ್ವದೇಶ ಸ್ವಾತಂತ್ರ್ಯ ಪ್ರತಿಷ್ಠಾಪನೆಗಾಗಿ ಭಾರತೀಯರೆಲ್ಲರೂ ನಡುಕಟ್ಟಿ ನಿಂತಿರುವರು. ಹಿಂದೀಯರ ಮಾನಸಿಕ ಪ್ರಪಂಚದ ಈ ಬದಲಾವಣೆಗೆ ಏನು ಕಾರಣ? ಯರವಾಡ ಜೈಲಿನಲ್ಲಿ ಚಕ್ರಧಾರಿಯಾಗಿ ಕುಳಿತಿರುವ ಮಹಾತ್ಮನೇ ಕಾರಣ. ಎರಡು ವರ್ಷಗಳ ಹಿಂದೆ ಗಾಂಧಿಯೆಂದರೆ ಯಾರೋ ಎಲ್ಲರಿಗೂ ತಿಳಿದಿರಲಿಲ್ಲ. ಇಂದಾದರೋ ಅನೇಕ ಹಿಮಾಚಲವೂ ಆ ಕರ್ಮಚಂದ್ರನ ದರ್ಶನವನ್ನು ತೆಗೆದುಕೊಂಡ. ಕೃತಾರ್ಥರಾಗಲು ಹಗಲಿರುಳೂ ಸಮಯಕಾಯುತ್ತಿರುವ ಕೋಟ್ಯಂತರ ಭಾರತೀಯರಂತಿರಲಿ ಪಟ್ಟಣಗಳಲ್ಲೂ ಆ ಮಹಾತ್ಮನ ಕೀರ್ತಿಜ್ಯೋತಿಯು ಪ್ರಸರಿಸಿರುವುದು. ಕ್ರೈಸ್ತಮತೀಯರು ಆತನನ್ನು ಕ್ರೈಸ್ತನ ಅಪರಾವತಾರವೆಂದೇ ತಿಳಿದಿರುವರು! ಮೊದಲು ಮೊದಲು ಆತನನ್ನು ನೋಡಿ ನಕ್ಕು ಹಾಸ್ಯಮಾಡುತ್ತಿದ್ದರೋ ಅವರೇ ಈಗ ಆ ಹೆಸರನ್ನು ಭಕ್ತಿವಿಶ್ವಾಸಗಳಿಂದ ಉಚ್ಚರಿಸುತ್ತಿರುವರು. ಯಾರು ಆತನ ಬೋಧನೆಗಳನ್ನು ಆಚರಣೆಗೆ ತರಲು ಆಗದೆಂದು ಪ್ರತಿಭಟಿಸುತ್ತಿದ್ದರೋ ಅವರೇ ಇಂದು ಅವುಗಳನ್ನು ಆಚರಣೆಗೆ ತರುವುದರಲ್ಲಿ ಅಗ್ರೇಸರರಾಗಿರುವರು. ಆತನ ಬೋಧನೆಗಳಲ್ಲಿ ಯಾರು ಅವಾಚೀನತ್ವದ ಚಿಹ್ನೆಗಳನ್ನು ಆರೋಪಿಸುತ್ತಿದ್ದರೋ ಅವರೇ ಈಗ ಆತನ ಉಪದೇಶಗಳಲ್ಲಿ ಶ್ರೀ ಭಗವಾನನು ಕುರುಕ್ಷೇತ್ರದಲ್ಲಿ ಪಾರ್ಥನಿಗೆ ಹೇಳಿದ ಶಾಶ್ವತವಾದ ಧರ್ಮತತ್ವಗಳನ್ನೇ ನೋಡುತ್ತಾ ರಂಜಿಸುತ್ತಿರುವರು.

ಈ ಸಮಯದಲ್ಲಿ ನಮ್ಮ ಸೋದರೀ ವರ್ಗವೆಲ್ಲಿರುವುದು ಏನು ಮಾಡುತ್ತಿರುವುದು! ಇಂತಹ ಸಮಯದಲ್ಲಿ ಅಜ್ಞಾನದಿಂದ ಕತ್ತಲೆಯಲ್ಲಿ ಅಡಗಿರುವುದೇ ಮಹಿಳೆಯರ ಕರ್ತವ್ಯವೋ? ಭಗಿನಿಯರೇ! ಬನ್ನಿ ನೋಡಿರಿ! ಈ ನೂತನ ಉದಯದ ಸೌಭಾಗ್ಯವನ್ನು ಒಂದು ಅನುಭವಿಸಿ! ಅರುಣೋದಯವಾಗುವ ವೇಳೆಗೆ ನಾವು ಎಚ್ಚೆತ್ತು ನಮ್ಮ ಪುರುಷರನ್ನೂ ಮಕ್ಕಳನ್ನೂ ನಿದ್ದೆಯಿಂದ ಎಚ್ಚರಗೊಳಿಸಬೇಕಲ್ಲವೇ? ಹಾಗಲ್ಲದೆ ಪುರುಷರೆದ್ದು ಕಾರ್ಯಗಳನ್ನು ಮಾಡುತ್ತಾ ಇರಲು ನಾವಿನ್ನೂ ನಿದ್ರಿಸುತ್ತಿರಬೇಕೆ? ಇದೇನು ನಾಚಿಕೆಗೇಡು! ಇನ್ನಾದರೂ ಕಣ್ತೆರೆಯುವಾ!

ಮಾತೆಯರೆ! ರಾಷ್ಟ್ರದ ವೃದ್ಧಿಕ್ಷಯಗಳಿಗೆ ಕಾರಣಭೂತರು ನಾವು! ದೇಶಸೇವೆಗೆ ತಕ್ಕ ಸಂತಾನವನ್ನು ಕೊಡುವ ಬಾಧ್ಯತೆ ನಮ್ಮದು! ಪುರುಷರು ನಮ್ಮ ಹೊಟ್ಟೆಯಲ್ಲಿ ಹುಟ್ಟಿ ನಮ್ಮ ತೊಡೆಯಮೇಲೆ ಬೆಳೆದು, ನಮ್ಮ ಮೊಲೆಹಾಲನ್ನು ಉಂಡು ನಮ್ಮಿಂದ ಶಿಕ್ಷಿತರಾಗಿ ಅನಂತರವಲ್ಲವೆ ಜೀವನದ ರಣಾಂಗಣವನ್ನು ಪ್ರವೇಶಿಸುವರು! ತಾಯಿಯರೆ! ರಾಷ್ಟ್ರಸೇವೆಗೆ ಯೋಗ್ಯವಾದ ಸಂತಾನಕ್ಕೆ ನಾವೇ ಕ್ಷೇತ್ರವು! ಫಲವು ಕ್ಷೇತ್ರಗುಣವನ್ನೇ ಹೆಚ್ಚಾಗಿ ಆಕರ್ಷಿಸುವುದರಿಂದ ನಾವ ಮೊದಲು ಜಾಗ್ರತೆಯನ್ನು ಹೊಂದಿ, ನಮ್ಮ ದೇಶದ ಸ್ಥಿತಿಯನ್ನು ತಿಳಿದು, ದೇಶಭಕ್ತರಾಗಿ, ಅಸ್ವಾರ್ಥತೆಯಿಂದ ರಾಷ್ಟ್ರ ಸೇವೆಯಲ್ಲಿ ಮೈಮರೆಯುವ! ನಮ್ಮ ಮಕ್ಕಳ ಸ್ವಭಾವವನ್ನರಿತು ಬಾಲ್ಯಾರಭ್ಯ ದೇಶಾಭಿಮಾನವು ಅವರ ಮನಸ್ಸಿನಲ್ಲಿ ಬೇರೂರುವಂತೆ ಶಿಕ್ಷಣವನ್ನು ಅವರಿಗೆ ಕೊಡುವ! ಸ್ವಭಾವತಃ ನಮ್ಮನ್ನೇ ಹೋಲುವ ಮಕ್ಕಳಿಗೆ ಇಂತಹ ಶಿಕ್ಷಣವು ದೊರಕಿದಮೇಲೆ "ಹುಟ್ಟು ಗುಣವು ಸುಟ್ಟರೂ ಹೋಗದು" ಎಂಬಂತೆ ಅವರೆಷ್ಟು ಬದಲಾವಣೆಗಳಿಗೆ ಸಿಕ್ಕಿದಾಗ್ಯೂ ಅವರ ಸ್ವಭಾವದಲ್ಲಿ ಬದಲಾವಣೆಗಳಾಗಲಾರವು.

ಗೆಳತಿಯರೆ! ನಮ್ಮ ಸಹಾನುಭೂತಿಯಿಲ್ಲದೆ ಪುರುಷರ ಜೀವಯಾತ್ರೆಯು ಸಾಗುವುದೆಂತು? ಸತೀಪತಿಯರಲ್ಲಿ ಅಪೂರ್ಣ ಪೂರ್ಣತ್ವವುಂಟಲ್ಲವೆ? ಇಬ್ಬರೂ ಒಬ್ಬರೊಬ್ಬರ ಸಹಾಯವಿಲ್ಲದೆ ಯಾವ ಕೆಲಸವನ್ನೂ ಸಮಗ್ರವಾಗಿ ಮಾಡಲಾಗದು. ದೇಶಸೇವೆಗೆ ಪುರುಷರನ್ನು ಹುರಿದುಂಬಿಸುವ ಕರ್ತವ್ಯವು ನಮ್ಮದು. ದೇಶ ಹಿತಕ್ಕಾಗಿ ಧರ್ಮೋದ್ಧಾರಕ್ಕಾಗಿ ಬದ್ಧಕಂಕಣರಾಗಿ ಲೋಕಕ್ಕೆ ಕರ್ತವ್ಯಪಥವನ್ನು ತೋರಿಸಿ ಚಿರಕೀರ್ತಿಯನ್ನು ಗಳಿಸಿದ ವೀರಮಾತೆಯರೂ ವೀರಸತಿಯರೂ ಜನ್ಮವೆತ್ತಿದ ಪುಣ್ಯಭೂಮಿಯಲ್ಲಿ ಅಲ್ಲವೆ ನಾವು ಜನ್ಮವೆತ್ತಿರುವೆವು? ಅವರ ರಕ್ತದಲ್ಲಿನ ಒಂದು ಬಿಂದು ವಾದರೂ ನಮ್ಮ ನಾಳಗಳಲ್ಲಿ ಪ್ರವಹಿಸುತ್ತಿಲ್ಲವೆ? ಸಾಧ್ವಿಮಣಿಯರೆ! ಪಾಂಡವರು ಕುಂತಿಯ ಸುಶಿಕ್ಷಣವಿಲ್ಲದೆ ಪಾಂಚಾಲಿಯ ಸಹಾಯವಿಲ್ಲದೆ ಸ್ವರಾಜ್ಯವನ್ನು ಸ್ಥಾಪಿಸಲು ಅರ್ಹರಾಗುತ್ತಿದ್ದರೆ? ಶಿವಾಜಿಯು ನಿಜವಾಗಿ ಸ್ವರಾಜ್ಯವನ್ನು ಸ್ಥಾಪಿಸಿದನಾದರೆ ಅದಕ್ಕೆ ಜಿಜಾಬಾಯಿಯೇ ಕಾರಣಳು. ಮಾತೆಯರೆ! ಎಳೆಗೂಸಾದ ಅಭಿಮನ್ಯುವನ್ನು ಪದ್ಮವ್ಯೂಹವನ್ನು ಭೇದಿಸಲು ರಣರಂಗಕ್ಕಟ್ಟಿದ ವೀರಮಾತೆಯಾದ ಸುಭದ್ರೆಯನ್ನು ಸ್ಮರಿಸಿ ದೇಶಾಭಿಮಾನವನ್ನು ತ್ಯಜಿಸಿ! ತಂದೆಯ ದೇಶದ್ರೋಹವನ್ನು ಸೈರಿಸದೆ ಪತಿಯೊಂದಿಗೆ ವೀರಸ್ವರ್ಗವನ್ನು ಸೇರಿದ ವೀರಸತಿಯಾದ ಸಂಯುಕ್ತೆಯನ್ನು ಸ್ಮರಿಸಿ ದೇಶಸೇವಾ ಸನ್ನದ್ಧರಾಗಿ!

ಗಾಂಧಿಯು ಗಾಂಧಿಯೆನಿಸಲು ಆತನ ತಾಯಿಯ ಮೊಲೆ ಹಾಲೇ ಕಾರಣವು. ನೆಹರು ದಾಸ ಮೊದಲಾದ ಸ್ವಾರ್ಥತ್ಯಾಗಿಗಳಾದ ಅವರ ಮಾತೆಯರ ಶಿಕ್ಷಣವೂ ಅವರ ಸತಿಯರ ಪ್ರೋತ್ಸಾಹವೂ ಮುಖ್ಯಕಾರಣವು. ಮಾತೃಮಾನ ರಕ್ಷಣೆಯನ್ನು ಮಾಡಲು ಎತ್ತಿ ನಿಮ್ಮ ಗುಣಗಳನ್ನೇ ನಮ್ಮ ಮಕ್ಕಳಲ್ಲಿ ಎರೆಯಿರಿ ಮಾತೆಯರೆ! ಇನ್ನು ಗುಲಾಮರಾಗಿರಲು ಇಚ್ಛಿಸುವವರನ್ನು ನಿಮ್ಮ ಗರ್ಭದಲ್ಲಿ ಧರಿಸಬೇಡಿ! ಕನ್ಯೆಯರೆ! ಭಾರತಮಾತೆಯ ಮಾನಸಂರಕ್ಷಣೆಯಲ್ಲಿ ಆಸಕ್ತರಾದವರನ್ನೇ ವರಿಸಿರಿ! ತಾಯಿಯನ್ನು ತಿರಸ್ಕರಿಸಿ ಪರದೇಶೀಯರಿಗೆ ದಾಸರಾದವರ ಕೊರಳಿಗೆ ಮಾಲೆ ಹಾಕಬೇಡಿ!

ಭಗಿನಿಯರೇ! ಬುದ್ಧನೆಂದೂ ಕ್ರೈಸ್ತನೆಂದೂ ಕೃಷ್ಣನೆಂದೂ ಬಗೆಬಗೆಯ ಹೆಸರುಗಳಿಂದ ಪ್ರಕಟರಾಗುತ್ತಿರುವ ಆ ಗಾಂಧಿಮಹಾತ್ಮನು ಎಲ್ಲಿರುವನೋ ಬಲ್ಲಿರಾ? ಕಾರಾಗೃಹದಲ್ಲಿ! ಏತಕ್ಕಾಗಿ ಆತನಲ್ಲಿರುವನು ಬಲ್ಲಿರಾ? ಭಾರತಮಾತೆಯನ್ನು ಪಾರತಂತ್ರ್ಯ ಶೃಂಖಲೆಗಳಿಂದ ಬಿಡುಗಡೆ ಮಾಡಲು ಪ್ರಯತ್ನಿಸಿದುದಕ್ಕಾಗಿ ಕೇಳಿದಿರಾ! ಕೇಳಿಯೂ ಸುಮ್ಮನೆ ಕುಳಿತಿರುವಿರಾ! ಏಳಿರಿ! ಕರ್ತವ್ಯವನ್ನು ವಿಚಾರಿಸಿ!

ಕರ್ನಾಟಕ ಪೂರ್ವವಾಸಿನಿಯರೆ! ಬಾಲದ ಪದ್ಮವಿಗಾಗಿ ಹಲುಬುವ ಹವಣಿಕೆಯನ್ನು ಬಿಟ್ಟು ಮಹಾತ್ಮನ ಸೇವೆಯಲ್ಲಿ ಸರ್ವದುಃಖಗಳನ್ನು ಮರೆತು, ಆಂಧ್ರದೇಶೀಯರಿಗೆ ನೂತನ ಚೈತನ್ಯವನ್ನಿತ್ತು ಅದಕ್ಕೆ ಕಾರಾಗೃಹವನ್ನು ಹೊಕ್ಕ ದುರ್ಗಾಬಾಯಿ ಮುಂತಾದವರ ಸನ್ಮಾರ್ಗವನ್ನು ಅನುಸರಿಸಿ! ಕರ್ನಾಟಕ ನಾರೀಮಣಿಗಳೆ! ಭಾರತಮಾತೆಯನ್ನೇ ಬೆಂಗಾವಲು ಮಾಡಿ ಮಾತೃಸೇವೆಯಲ್ಲಿ ಮೈಮರೆತು ಹಗಲಿರುಳೂ ದೇಶೀಯರನ್ನು ಸ್ವರಾಜ್ಯೋದ್ಯಮಕ್ಕಾಗಿ ಪ್ರೋತ್ಸಾಹಿಸುತ್ತಿರುವ ಗುಂಟೂರಿನ ಯಾಮಿನೀಪೂರ್ಣತಿಲಕಾ ದೇವಿಯ ಹೆಸರನ್ನಾದರೂ ಕೇಳಿರುವಿರಾ? ಇದರೆ ನೀವೂ ಎದ್ದು ಆಕೆಯ ಸತ್ಪಥವನ್ನು ಹಿಡಿದು ಕರ್ನಾಟಕ ಮಾತೆಗೆ ಸತ್ಕೀರ್ತಿಯು ಬರುವಂತೆ ಮಾಡಿಕೊಳ್ಳಿ!

ಕರ್ನಾಟಕ ಸಾಧ್ವೀಮಣಿಯರೆ! ಮಹಾತ್ಮರ ಉಪದೇಶಗಳನ್ನು ಆಚರಣೆಗೆ ತರಲು ನೀವು ಮುಂದುವರಿದಿರಾದರೆ ಅತ್ಯಲ್ಪಕಾಲದಲ್ಲೇ ಭಾರತಿಯು ಬಿಡುಗಡೆ ಹೊಂದುವಳು. ಆಂಧ್ರ, ಮಹಾರಾಷ್ಟ್ರ, ಪಂಜಾಬು, ಗುಜರಾತು, ಬಂಗಾಳದಲ್ಲಿ ನಿಮ್ಮ ಸೋದರಿಯರು ಅಸ್ತವಾನಗಳನ್ನು ಬಿಟ್ಟು ಸ್ವರಾಜ್ಯಸ್ಥಾಪನೆಗೆ ಕೃಷಿಮಾಡುತ್ತಿರುವರು. ನೀವು ಸುಮ್ಮನಿರುವುದು ನ್ಯಾಯವೇ? ಹತ್ತು ಮಂದಿ ಗಂಡಸರು ಮಾಡಲಸಾಧ್ಯವಾದ ಒಂದು ಕೆಲಸವನ್ನು ನೀವೊಬ್ಬರು ಮಾಡಬಲ್ಲಿರಿ. ನಿಮ್ಮ ಹೃದಯವು ಮೃದುವಾದುದು, ನಿರ್ಮಲವಾದುದು, ತಾಳ್ಮೆಯುಳ್ಳುದು ದೃಢವಾದುದು, ನಿಮ್ಮ ಶಕ್ತಿಯು ಅಮೋಘವಾದುದು, ಇದು ಸತ್ಯವು! ಸತ್ಯವು! ಹಾಗಾದರೆ ಸ್ವರಾಜ್ಯಧ್ವಜವನ್ನು ನಾವೆಲ್ಲರೂ ಕೈಲಿ ಹಿಡಿದು ಜಯಘೋಷದಿಂದ "ವಂದೇ ಮಾತರಂ" ಎಂದು ಏಕಕಂಠದಿಂದ ತಾಯಿಯನ್ನು ಪೂಜಿಸುವ.

"ಜಯಕರ್ನಾಟಕ"

Lanthana

ಅಯ್ಯಾ, ಕೊಡಗು ಬಾಂಧವರೇ ನಾನು ಈಗ ಕಳೆದ 4 ನೆಯವಾರದ ಕೊಡಗು ಪತ್ರಿಕೆಯಲ್ಲು ಲಂತಾನ ಟ್ರೈಲಾಯಾನೆ ನೋಸ್ಟಿಟಿ ವಿಚಾರದಾಗುವ ಸಂಗತಿಯಲ್ಲು ಕೊಡಗು ಸಹಕಾರಿ ಸಂಘಗಳ ರಿಜಿಸ್ಟ್ರಾರಾಗಲಿ ಅದಿಯಾರಾದ ಮಾಜಿಸ್ಟ್ರೇಟನವರಾಗಲಿ ಈ ಬಾಬಿನ ಸುಬಿದುಃಖಗಳನ್ನು ಯಾ ಆಗಬೇಕಾದ ಮಾರ್ಪಾಡುಗಳನ್ನು ಯಾ ಸರಕಾರದವರಿಂದ ಈ ಬಾಬಿನ ಸಹಕಾರಿ ಸಂಘಕ್ಕೆ ಆಗಬೇಕಾದ ಬಾಬಿನಲ್ಲಿ ದೇಶೀಯರ ಇರಾದೆಯನ್ನು ತಿಳಿಸುವುದಾಗಿ ಚಮೋನ್‌ದಾರ ಸಂಘದ ಮುಂದಿನ ಕೆಲಸದಲ್ಲಿ ಕಾಣುತಾಯಿತು. ಈ ಬಾಬಿನಲ್ಲು ಲಂತಾನ ಟ್ರೈಲಾ ಮಾಡಲು ಹಜರತ್ ಚೀಫ್‌ಕಮಿಷನರ್ ಸಹೇಬರವರ ಅಧ್ಯಕ್ಷತೆಯಲ್ಲು ಅವರು ಲಂತಾನವನ್ನು ಎತ್ತಿ ಮಾತಾಡಿ ಈ ಮುಂದು ಬರುವ ಸನ್ 1924 ನೆ ಇಸವಿಯ ಬಡ್‌ಜೆಟ್‌ನಲ್ಲು ಒಂದುಲಕ್ಷ ರೂಪಾಯಿ ಲಂತಾನ ನಾಶಕ್ಕಾಗಿ ಈ ಕೊಡಗಿಗೆ ಮಂಜೂರ್ ಮಾಡಲು ಪ್ರಯತ್ನಿಸುತ್ತೇನೆ ಹ್ಯಾಗೂ 50 ಸಾವಿರ ರೂಪಾಯಿಗೆ ಕಮ್ಮಿ ಇಲ್ಲದಂತೆ ಮಂಜೂರ್ ಮಾಡಿಸುವದಾಗಿಯೂ ಈ ಲಂತಾನ ನಾಶಕ್ಕಾಗಿ ಸಹಕಾರಿ ಸಂಘಗಳ ಕೆಲಸ ನದರಿ ಸಂಘಗಳ ಮೂಲಕ ಲಂತಾನ ನಾಶಕ್ಕಾಗಿ ಬದ ಕರ್ಜಪೂರ ನದರಿ 50 ಸಾವಿರ ರೂಪಾಯಿಗಳಿಂದ ಕೊಡುವವನಾಗಿಯೂ ನದು ಹಣ ಈಗ ನಮ್ಮ ಕಮಿಷನರ್ ಸಾಹೇಬರವರು ಅವರ ಡಿಸ್‌ಕ್ರೇಷನ್ ಫಂಡಿನಿಂದ ಕೊಟ್ಟ ನೆರವುಗಳು ಹ್ಯಾಗೆ ಹಿಂದಕ್ಕೆ ಕೊಡಬೇಕಾಗಿ ಇಲ್ಲವೋ ಅದೇ ಮೇರೆ ಸರಕಾರಕ್ಕೆ ಹಿಂದಕ್ಕೆ ಕೊಡಬೇಕಾದದಿಲ್ಲವಾಗಿ ನದು ನಮ್ಮ ಅವಗಾಹನಕ್ಕೆ ತಂದ ಮೇರೆಯೂ ಟ್ರೈಲಾ ಮಾಡಲು ನನ್ನನ್ನು ನದು ರಿಜಿಸ್ಟ್ರಾರವರಿಗೆ ಸಹಾಯ ಕೊಡಬೇಕಾಗಿ ತೀರ್ಮಾನವಾದ ಮೇರೆಗೆ ಇದುವರೆಗೆ ಕಾದು ನೋಡಿದಲ್ಲಿ ದೇಶೀಯರ ಯಾರಿಂದಾದರೂ ವಿರೋಧವೂ ಕಾಣದ ಕಾರಣದಿಂದ ಟ್ರೈಲಾ ಒಂದನ್ನು ಸನ್ 1922 ನೆ ಇಸವಿ ಸೆಪ್ಟಂಬರ್ ತಾ|| 22 ರ ನಂಬ್ರ 17 ನೆ ಸಂಚಿಕೆಯಲ್ಲು ಮತ್ತು 1922 ನೆ ಇಸವಿ ಡಿಸಂಬರ್ 8 ರ ಸಂಚಿಕೆಯಲ್ಲು ನದು ಕಂಡ ಟ್ರೈಲಾ ಸೂಚನೆಗೆ ಅನುಸಾರವಾಗಿ ನ್ಯಾಯವಾದ ಟ್ರೈಲಾ ಕಂಡುಪ್ರತಿ ಒಂದನ್ನು ಬರದು ಸಹಕಾರಿ ಸಂಘಗಳ ರಿಜಿಸ್ಟ್ರಾರವರಿಗೆ ಕಳುಹಿಸಿಕೊಟ್ಟಿರುತ್ತೇನೆ. ಇದನ್ನು ಮತ್ತು ಅವರ ಇರಾದೆ ಇಂದಿನೊಡಗೂಡಿದ ಹಜರತ್ ಚೀಫ್‌ಕಮಿಷನರ್ ಸಹೇಬರವರ ಮಂಜೂರಾತಿ ಒಗ್ಗೆ ಕಳುಹಿಸಿ ತಯಾರ್ ಮಾಡಿದ ಟ್ರೈಲಾವನ್ನು ಅವರು ಮುಂದಕ್ಕೆ ಪ್ರಕಾಶಿಸುವ ಮುಂದು ಕೊಡಗು ಪತ್ರಿಕೆಯಲ್ಲು ಪ್ರಕಟಿಸುವರಾಗಿ ನಂಬುತ್ತೇನೆ. ಅಯ್ಯಾ ಕೊಡಗು ಬಾಂಧವರೇ ಲಂತಾನ ಭೂಮಾಲೀಕರೇ ನಾನು ಈ ಲಂತಾನದ ಸಂತಾನ ಹೋಗಲಾಡಿಸಲು ಉಂಟಾದ ಸರಕಾರಿ ಆಜ್ಞೆ ಹುಟ್ಟುವ ಮೊದಲು ಅಂದರೆ ಮೇ ಹ್ಯಾರಿಸ್ ಸಹೇಬರ ಕಾಲದಿಂದ ಈ ಬಾಬಿನಲ್ಲು ಕುತೂಹಲ ಉಳ್ಳವನಾಗಿದ್ದೇನೆ. ಈಗ ನಾನು ಸರಕಾರ ಸವ್ರಿಸ್‌ಯಿಂದ ಬಿಡುಗಡೆಯಾಗಿ ಪಿಂಚಿನ್‌ನಲ್ಲು ಇದ್ದಾಗ್ಯೂ ನಾ ಈ ಲಂತಾನ ನಾಶಪಡಿಸುತ್ತಲಿದ್ದೇನೆ. ಈ ವರುಷ ಈ ಲಂತಾನವು ಈ ಮಹಾಮಳೆಯಿಂದ ಪೂರ ಕೊಳೆತುಹೋಗಿ ಹಾಳಾದಿಗಳು ಕಾವಿನ ವಿಷದ ಹಲ್ಲು ಕಿತ್ತ ಹಾವು ಸಾಧುವಾಗಿರುತ್ತೋ ಹದೋಪಾಯಿಯಲ್ಲು ಲಂತಾನವು ಬರಿಯ ಸಾಧುವಾಗಿ ಅದರ ಮುಳ್ಳಿಗೆ ಏನೊಂದು ಸತ್ವವೂ ಇರುವದಿಲ್ಲ. ಈ ಲಂತಾನ ನಾಶಕ್ಕೆ ಇದೇ ವರುಷ ಸುಲಭ. ಈ ಸಮಯವನ್ನು ಕಳೆದರೆ ಇನ್ನು ಇಂಥಾ ಸಮಯ ದೊರೆಯಲಾರದು. ನೀವು ಸಂಘ ತೆರೆಯದಿದ್ದರೆ ಒಬ್ಬೊಬ್ಬರಾಗಿ ಏನು ಕೆಲಸಮಾಡಿ ಲಂತಾನ ನಾಶಮಾಡಿದರೂ ಅದು ಏನೂ ಕಾಣಲಾಗುವದಿಲ್ಲವಾಗಿ ಹಜರತ್ ಚೀಫ್‌ಕಮಿಷನರ್ ಸಹೇಬರ ಭಾಷಣದಲ್ಲೇ ಹೇಳಿದ ಪ್ರಕಾರ ಈ ಕೈಲಾಪೂರ್ತಿ ಹಬ್ಬ ಕಳೆದ ಕೂಡಲೆ ಪ್ರತಿ ಗ್ರಾಮಗಳಲ್ಲು ಲಂತಾನ ಸಂಘ ತೆರದು ಲಂತಾನ ನಾಶಕ್ಕಾಗಿ ಪ್ರಯತ್ನಿಸಬೇಕು. ಈ ವರುಷ ದನಕರುಗಳಿಗೆ ಈ ಘೋರ ಮಳೆಯಲ್ಲು ಹಾಳುರೋಗ ಬಂದು ಎಷ್ಟು ದನಕರ ಮೃತಪಟ್ಟವೆಂಬುದನ್ನು ದಯವಾಗಿ ಗಮನಿಸಿ ಸಂಘ ತೆರೆಯುವರಾಗಿ ದೇಶೀಯರನ್ನು ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ.

ಕಾಡಿಯಂಡ ಮಾಚಯ್ಯ.

ಮಹಸೀಲುಗಳಲ್ಲಿ ವಿನಂತಿ

ಈ ವರ್ಷದ ಅತಿವೃಷ್ಟಿಯಿಂದ ಸಂಭವಿಸಿದ ಅಪೂರ್ವವಾದ ಪ್ರವಾಹದ ದೆಸೆಯಿಂದ ಕೊಡಗಿನಲ್ಲಿಯೂ ನಮ್ಮ ನೆರೆಹೊರೆಗಳಾದ ಮಲಬಾರು ದಕ್ಷಿಣ ಕನ್ನಡ ಪ್ರಾಂತ್ಯಗಳಲ್ಲಿಯೂ ಉಂಟಾಗಿರುವ ವಿವರಿಸಲಸದಳವಾದ ನಷ್ಟವು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಕಷ್ಟಕ್ಕೊಳಗಾಗಿರುವವರಿಗೆ ಸಹಾಯ ಮಾಡುವುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯವಾಗಿದೆ. ಇದಕ್ಕಾಗಿ ಮಡಿಕೇರಿಯಲ್ಲಿ ಒಂದು ಮೀಟಿಂಗು ನಡೆದು ಸ್ವಲ್ಪ ಹಣ ಜಮಾಯಿಸಲ್ಪಟ್ಟು ಕಷ್ಟನಿವಾರಣೆಗೆ [illegible] ಕಳುಹಿಸಲ್ಪಟ್ಟಿದೆ. ಈಗಲೂ ಚಂದವು ಜಮೆಯಾಗುತ್ತಲಿದೆ. ತಮ್ಮ ಸಹೋದರರ ಕಷ್ಟವು ತಮ್ಮದೆಂದು ಯೋಚಿಸಿ ಪ್ರತಿಯೊಬ್ಬ ದೇಶೀಯನೂ ಉದಾರಭಾವದಿಂದ ತನ್ನ ಶಕ್ತ್ಯಾನುಸಾರ ಧನಸಹಾಯ ಮಾಡಬೇಕೆಂದು ಕೋರಲಾಗಿದೆ. ಸಹಾಯ ಮಾಡಿದವರ ಪಟ್ಟಿಯು ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದು. ಹಣವನ್ನು ರಿಲೀಫ್ ಕಮಿಟಿಯ ಅಧ್ಯಕ್ಷರಾದ ರಾ|| ಬ|| ಕೂಡಂಡೇರ ಕುಟ್ಟಯ್ಯನವರು ಮಡಿಕೇರಿ ಇವರಿಗೆ ಕಳುಹಿಸಿಕೊಡಬೇಕು.

ಮಡಿಕೇರಿ, 26-8-23 ಸಂಪಾದಕ, "ಕೊಡಗು"

ವರ್ತಮಾನ ಸಂಗ್ರಹ

ಸ್ವದೇಶ

ಈ ತಾರೀಖು 4 ರಿಂದ ಜ್ವರದಿಂದ ಪೀಡಿತರಾಗಿದ್ದ ಮೆ|| ಕೋಟೆರ ಅಪ್ಪಯ್ಯ ಬಿ. ಎ. ಎಲ್ ಎಲ್ ಬಿ ಯವರು ತಾ|| 8 ನೇ ಶನಿವಾರ ಮಧ್ಯಾಹ್ನದವೇಳೆ ಮೂರು ಗಂಟೆಗೆ ಮುಕ್ಕಾಟಿರ ಮನೆಯಲ್ಲಿ ಶಿವಾಧೀನರಾದರೆಂಬ ವಾರ್ತೆಯನ್ನು ಕೇಳಲು ಬಹಳ ವಿಷಾದಿಸುತ್ತೇವೆ. ಅದೇ ದಿನ ಅವರ ಶವವು ಅವರ ಮನೆಗೆ ಒಯ್ಯಲ್ಪಟ್ಟು ಮರುದಿನ ಸುಡಲ್ಪಟ್ಟಿತೆಂದು ತಿಳಿಯಬರುತ್ತದೆ. ಈ ಸಮಯದಲ್ಲಿ ನೆರೆದಿದ್ದ ಅನೇಕ ಜನರ ಸಮೂಹವೇ ಅವರು ಜನರ ಪ್ರೀತಿಗೆ ಎಷ್ಟರ ಮಟ್ಟಿಗೆ ಪಾತ್ರರಾಗಿದ್ದರೆಂಬುದನ್ನು ಸೂಚಿಸುತ್ತದೆ.

ವೀರರಾಜಪೇಟೆ ಆಸ್ಪತ್ರೆಯ ಚಾರ್ಜಿನಲ್ಲಿದ್ದ ಮೆ|| ಫ್ರಾನ್ಸಿಸ್ ಡಿಸಿಲ್ವಾರವರು ತಾ|| 10 ರಿಂದ ಒಂದು ತಿಂಗಳು ರಜೆಯಲ್ಲಿ ಹೋಗುವುದರಿಂದ ಅಲ್ಲಿದ್ದ ಮೆ|| ನಾಯಡುರವರು ಆ ಆಸ್ಪತ್ರೆಯ ಚಾರ್ಜಿನಲ್ಲೂ ಮಡಿಕೇರಿಯಲ್ಲಿದ್ದ ಮೆ|| ಕೋದಂಡ ಅಯ್ಯಪ್ಪನವರು ಮೆ|| ನಾಯಡುರವರಿಗೆ ಸಹಾಯಕರಾಗಿಯೂ ವೀರರಾಜಪೇಟೆಗೆ ವರ್ಗಾಯಿಸಲ್ಪಟ್ಟಿರುವರು.

ತಾ|| 8 ರಲ್ಲು ವೀರರಾಜಪೇಟೆಯಲ್ಲಿ ನಡೆದ ಜಮಾನು ದಾರರ ಸಂಘದ ಕಮಿಟಿ ಮೀಟಿಂಗಿನಲ್ಲಿ ಸಂಘದಿಂದ ವೈಸರಾಯರವರಿಗೆ ಕಳುಹಿಸತಕ್ಕಂಥ ಮೆಮೋರಿಯಲ್ ಮಂಜೂರಾದುದಲ್ಲದೆ ಸದರಿ ಮೆಮೋರಿಯಲನ್ನು ಒಪ್ಪಿಸಲು ಹೋಗುವುದಕ್ಕೆ ಈ [illegible] ನ ಮಹಸೀಲುದಾರು ಡೆಪ್ಯುಟೇಶನ್ ಮೆಂಬರುಗಳಾಗಿ ಚುನಾಯಿಸಲ್ಪಟ್ಟರು:—1 ರಾ|| ಬಾ|| ಕುಟ್ಟಯ್ಯನವರು 2. ಮೆ|| ಕೇಳಪಂಡ ಅಚ್ಚಯ್ಯನವರು 3 ಮೆ|| ಪಾರ್ವಂಗಡ ಕುಶಾಲಪ್ಪನವರು 4 ಮೆ|| ಎಂ ಎಂ ಸಿದ್ದೇಶ್ವರರು. 5 ಮೆ|| ಸಿ ಎಚ್ ವೆಂಕಪ್ಪಯ್ಯನವರು. 6 ಮೆ|| ಚೆಕ್ಕೆರ ಪೂವಯ್ಯನವರು. ಮೀಟಿಂಗಿನ ಬಾಕಿ ವಿವರವು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲ್ಪಡುವುದು.

ಹೊಸೂರು ಗ್ರಾಮದ ಬಿಳ್ಳಿಯಂಡ ಜೋಯಿಸ ಕೃಷ್ಣಯ್ಯನವರು ತಾ|| 7 ರಲ್ಲಿ ಮಧ್ಯಾಹ್ನ ಸಮಯದಲ್ಲಿ ಒಂದು ದಿನಕ್ಕೆ ಮುಂದಾಗಿ ಹುಲಿ ಹೊಡೆದು ಸ್ವಲ್ಪ ಗಾಯವಾಗಿದ್ದ ತನ್ನದೊಂದು ಹಸುವು ಕೊಟ್ಟಿಗೆಯಿಂದ ತಪ್ಪಿಸಿಕೊಂಡು ಹೋದದನ್ನು ಹುಡುಕಲಿಕ್ಕಾಗಿ ತನ್ನ ಮನೆಯ ಬಳಿಯಲ್ಲಿರುವ ಬೆಟ್ಟಕ್ಕೆ ಹೋಗಿದ್ದಾಗ ತನ್ನೊಂದಿಗೆ ಇದ್ದ ಎರಡು ನಾಯಿಗಳು ಬೊಗಳಿ ಎಬ್ಬಿಸಿದ ಒಂದು ದೊಡ್ಡ ಕಾಡುಹಂದಿಯು ಅವರ ಹಿಂದಿನಿಂದ ಬಂದು ಅವರನ್ನು ತಿವಿದು ಕೆಡವಿದೊಡನೆ ಪುನಹ ನಾಯಿಗಳು ಹಂದಿಯಮೇಲೆ ಬಿದ್ದು ಅದನ್ನು ಓಡಿಸಿಬಿಟ್ಟವೆಂತಲೂ ಬಹಳ ಜಖಂ ಆದ ಅವರ ಬೊಬ್ಬೆಯನ್ನು ಕೇಳಿ ಜನರು ಬಂದು ಅವರನ್ನು ಮನೆಗೆ ಹೊತ್ತುಕೊಂಡು ಹೋದರಂತಲೂ ಮರುದಿನ ಅವರನ್ನು ಊರವರು ವೀರರಾಜಪೇಟೆ ಆಸ್ಪತ್ರೆಗೆ ಸಾಗಿಸಿ, ಅಲ್ಲಿ ಚಿಕಿತ್ಸೆ ಹೊಂದುತ್ತಿರುವರೆಂತಲೂ ತಿಳಿಯಬರುತ್ತದೆ.

ಮಡಿಕೇರಿ ರೆವೆನ್ಯೂ ಆಫೀಸಿನಲ್ಲಿ [illegible] ಕ್ಲಾರ್ಕರಾಗಿದ್ದ ಮೆ|| ಕೊಂಗಂಡ ಸುಬ್ಬಯ್ಯನವರು ಲಿಸ್ಟಿಂಗ್ ಮೆಂಟಿಗಾಗಿ ಈ ತಾ|| 16 ರಿಂದ ನಾಲ್ಕು ತಿಂಗಳು ಪ್ರಿವಿಲೇಜ್ ರಜೆಯಲ್ಲಿ ಕಳುಹಿಸಲ್ಪಡುವರೆಂದೂ ನಂತರ ಇವರಿಗೆ ಪಿಂಚಿನ್ ದೊರೆಯುವುದೆಂದೂ ಇವರ ಉದ್ಯೋಗಕ್ಕೆ ಇಂಗ್ಲೀಷ್ ಆಫೀಸಿನಲ್ಲಿರುವ ಮೆ|| ಬಲ್ಲಟ್ಟಿ ಕಾಳಂಡ ಚಂಗಪ್ಪನವರನ್ನು ವರ್ಗಾಯಿಸಿರುವರೆಂದೂ ತಿಳಿಯುತ್ತೇವೆ.

ಜಮಾನುದಾರರ ಸಂಘವು ವೈಸರಾಯರಿಗೆ ಕಳುಹಿಸತಕ್ಕ ಮೆಮೋರಿಯಲಿನ ಮೂರು ನಕಲುಗಳನ್ನು ದಿನೆಮಾಡುವ್ಯೆಸಿಸಿಕೊಡಬೇಕೆಂದು ಪುನಹ ಕಮಿಷನರವರಲ್ಲಿ ಹಾಕಲಾದ ಒಂದು ಬಂದದರಿಂದ ಜನರಲ್ ಸೆಕ್ರೆಟರಿಯವರು ಮೆಮೋರಿಯಲಿನ ಮೂರು ನಕಲುಗಳನ್ನು ಕಮಿಷನರಲ್ಲಿಡಬೇಕೆಂದು ಹೇಳಿರುವರು.

ತಾ|| 9 ರಲ್ಲು ಮಡಿಕೇರಿಯಲ್ಲು ನಡೆದ ಕೋಆಪರೇಟಿವ್ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗಿನಲ್ಲಿ ಚೆಂಬೆಬೆಳ್ಳೂರು ಸೊಸೈಟಿಗೆ ಒಂದು ಸಾವಿರ ರೂಪಾಯಿ, ಕುತ್ತುನಾಡು ಸೊಸೈಟಿಗೆ ಒಂದು ಸಾವಿರ ರೂಪಾಯಿ, ಕುಡಿಯರು ಸೊಸೈಟಿಗೆ ಮುನ್ನೂರು ರೂಪಾಯಿ ಸಾಲವು ಮಂಜೂರಾದುದಲ್ಲದೆ ಹಾಕತ್ತೂರು ಸಂಘದ ಸಾಲದ ಅರ್ಜಿಯನ್ನು ಸರಿಯಾಗಿ ಬರೆದು ಕಳುಹಿಸಬೇಕೆಂದು ವಾಪಾಸು ಮಾಡಲ್ಪಟ್ಟಿತು.

ಅಮ್ಮತ್ತಿನಾಡು ಹೊಸೂರು ಗ್ರಾಮದ ಕುಂಜ್ಞಿಮಾನಿ ಕೋಟೆದಲ್ಲಿ ಹಂಗಾಮಿಯಾಗಿ ಇಡಲ್ಪಟ್ಟಿದ್ದ ದೊಡ್ಡ ಬಸ್ಸು ಈ ತಾರೀಖು 10 ರಿಂದ ಮುಚ್ಚಬೇಕೆಂದು ಹುಕುಂ ಆಗಿದೆಯೆಂದು ತಿಳಿಯಬರುತ್ತದೆ. ರೈತರ ಕೂಗಿಗೆ ಸರಕಾರದವರು ಸ್ವಲ್ಪವಾದರೂ ಗಮನಕೊಡದೆ ಇರಲಿಕ್ಕಿಲ್ಲವೆಂಬುದಕ್ಕೆ ಇದೊಂದು ದೃಷ್ಟಾಂತ.

ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಯೂರೋಪಿಯನ್ ಪ್ಲಾಂಟರುಗಳ ಪರವಾಗಿ ಮೆಂಬರಗಳಾಗಿದ್ದ ಮೆ|| ಬಾಲ್‌ರವರು ಮೃತಪಟ್ಟದ್ದರಿಂದಲೂ, ಮೆ|| ಜೇಕ್‌ಸನ್‌ರವರು ರಾಜೀನಾಮೆ ಕೊಟ್ಟದ್ದರಿಂದಲೂ ಉಂಟಾದ ಖಾಲಿ ಸ್ಥಳಗಳಿಗೆ ಉತ್ತರಕೊಡಗಿಗಾಗಿ ಮೆ|| ಜಿ ಆರ್ ಪೀಯರ್ಸ್‌ರನ್ನು ದಕ್ಷಿಣಕೊಡಗಿಗಾಗಿ ಮೆ|| ಪಿ ಜಿ ಟಿಪ್ಪಿಂಗರನ್ನು ಚೀಫ್ ಕಮಿಷನರವರು ನೇಮಿಸಿರುವರು. ಇವರು 1924 ನೇ ಮಾರ್ಚ್ ಅಂತ್ಯದವರೆಗೆ ಮೆಂಬರುಗಳಾಗಿರುವರು.

ಭಾಗಮಂಡಲನಾಡ ಭಾಗಮಂಡಲ ಗ್ರಾಮದಲ್ಲಿ ಬರುವ ತುಲಾಸಂಕ್ರಮಣದ ಸಮಯದಲ್ಲಿ ನಡೆಯುವ ತಲಕಾವೇರಿ ಜಾತ್ರೆಗೆ ಮೈಸೂರು ಮತ್ತು ಪ್ಲೇಗ್‌ರೋಗ ತಗಲಿದ ಇತರ ಪ್ರದೇಶಗಳಿಂದಲೂ ಬರುವ ಜನರನ್ನು ಸದರೀ ಸ್ಥಳದಲ್ಲು ಸೇರಲು ಬಿಟ್ಟರೆ ಪ್ಲೇಗ್‌ರೋಗವು ವ್ಯಾಪಿಸುವ ಅಪಾಯ ಉಂಟೆಂದು ಹಜರತ್ ಚೀಫ್ ಕಮಿಷನರ್ ಸಾಹೇಬರವರು ತಿಳಿಯುವುದರಿಂದ ಸನ್ 1897 ನೇ ಇಸವಿ ಸಾಂಕ್ರಾಮಿಕ ರೋಗಗಳ ಆಕ್ಟ್ ಅನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ, ಇದೇ ಅಕ್ಟೋಬರ್ ತಾ|| 7 ರಿಂದ ನವಂಬರ್ 20 ರವರೆಗೆ ಸದರೀ ಜಾತ್ರೆಗೆ ಮೈಸೂರು ಮತ್ತು ಪ್ಲೇಗ್ ತಗಲಿದ ಇತರ ಪ್ರದೇಶಗಳಿಂದಲೂ ಜನರು ಬರುವುದನ್ನು ಈ ಮೂಲಕ ನಿರೋಧಪಡಿಸಿದೆ. ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಸದರೀ ಜಾತ್ರೆಗೆ ಮೇಲೆ ನಮೂದಿಸಿದ ಪ್ರದೇಶಗಳಿಂದ ಜನರು ಬಂದಲ್ಲಿ ಅಂಥಾವರೆಲ್ಲರನ್ನು ಹಿಂದಕ್ಕೆ ಕಳುಹಿಸಲಾದೀತು ಎಂದು ಚೀಫ್ ಕಮಿಷನರವರ ಸೆಕ್ರೆಟರಿಯಾದ ಮೆ|| ಎ ಎಚ್ ಎಲ್ ಕೇಟರವರು ಗೆಜೇಟಿನಲ್ಲಿ ಪ್ರಕಟಿಸಿರುವರು.

ಮಡಿಕೇರಿ ಮುನ್ಸಿಪಲ್ ಕಮಿಟಿಯ ಮೆಂಬರುತನಕ್ಕೆ ಮೆ|| ಜೇಕಬ್ ಕ್ರಿಸ್ಟರವರು ರಾಜೀನಾಮೆ ಕೊಟ್ಟದ್ದರಿಂದ ಆ ಸ್ಥಳಕ್ಕೆ ಮೆ|| ಎಸ್ ಜೆ ಎಮ್. ಎ ಪಯಸ್‌ರವರು ಚುನಾಯಿಸಲ್ಪಟ್ಟದನ್ನು ಚೀಫ್ ಕಮಿಷನರವರು ಮಂಜೂರು ಮಾಡಿರುವರು.

ಕೊಡಗಿನಲ್ಲಿ ಸರಾಸರಿ ತಿಂಗಳು ಒಂದರ ಸುಮಾರು ನಾಲ್ಕುಸಾವಿರ ಗ್ಯಾಲನ್ ಸಾರಾಯವು ಖರ್ಚಾಗುತ್ತಿದೆ. ಈ ವರ್ಷ ಆಗೋಸ್ತು ತಿಂಗಳಲ್ಲು ಕಳೆದ ವರ್ಷದ ಅದೇ ತಿಂಗಳಿಗಿಂತ ಸುಮಾರು ಎಪ್ಪತ್ತು ಗ್ಯಾಲನ್ ಸಾರಾಯಿ ಖರ್ಚು ಕಡಿಮೆಯಂತೆ. ಕೈಲ್‌ಮುಹೂರ್ತ ಹಬ್ಬದಲ್ಲು ಜನರು ಎಲ್ಲಾದರೂ ಸಾರಾ ಸೇವನೆ ಕಡಿಮೆಮಾಡಿದ್ದು ಸಂತೋಷವೆ. ಏಪ್ರಿಲ್ ಪ್ರಾರಂಭದಿಂದ ಆಗೋಸ್ತು ಅಂತ್ಯದವರೆಗೆ ಈ ವರ್ಷ ಕಳೆದ ವರ್ಷಕ್ಕಿಂತ ಸುಮಾರು 800 ಗ್ಯಾಲನ್ ಸಾರಾಯಿ ಖರ್ಚು ಕಡಿಮೆಯಂತೆ. ಕೊಡಗು ಸೆಂಟ್ರಲ್ ಬ್ಯಾಂಕಿನ ಉಪಯೋಗಕ್ಕಾಗಿ ಕಮಿಷನರ್ ಸಾಹೇಬರು ಒಂದು ಕಬ್ಬಿಣದ ಪೆಟ್ಟಿಗೆ (ಸೇಫ್)ಯನ್ನು ಸೆಕ್ರೆಟರಿಯವರಿಗೆ ಕೊಟ್ಟಿದ್ದಾರೆ. ಅವರ ಅಪ್ಪಣೆ ತೆಗೆದುಕೊಂಡು ಖಜಾನೆಯಲ್ಲಿಯೇ ಈ ಪೆಟ್ಟಿಗೆಯನ್ನು ಇಟ್ಟಿದ್ದಾರೆಂತಲೂ ಬ್ಯಾಂಕಿನವರು ಕಮಿಷನರ್ ಸಾಹೇಬರಿಗೆ ಇದಕ್ಕಾಗಿ ಕೃತಜ್ಞರಾಗಿದ್ದಾರೆಂತಲೂ ಸೆಕ್ರೆಟರಿಯವರು ತಿಳಿಸಿದ್ದಾರೆ.

ಲೋಕಲ್ ಫಂಡ್ ಸ್ಕೂಲುಗಳಿಗೆ ಈ ಕೆಳಕಂಡ ಸ್ಕೂಲುಮಾಸ್ಟರುಗಳನ್ನು ನೇಮಕಮಾಡಿ ಕಳುಹಿಸಿರುತ್ತಾರೆ. ಮೆ|| ಮೂಡೇರ ಕುಟ್ಟಪ್ಪನವರು ಮೆ|| ಜಿ ಯಸ್ ಸುಬ್ಬಯ್ಯನವರು ಮೆ|| ಬಿ ಎ ಚಂಗಪ್ಪನವರು ಇವರು ಮೂವರನ್ನು ಕೊಡ್ಲಿಪೇಟೆ ಸ್ಕೂಲಿಗೂ, ಮೆ|| ಬಿ ಯಂ ತಂಗಪ್ಪನವರನ್ನು ಸೋಮವಾರಪೇಟೆ ಸ್ಕೂಲಿಗೂ ಮೆ|| ಒಲ್ಯಂಡ ಬಿದ್ದಯ್ಯನವರನ್ನು ತೋಳೂರು ಶೆಟ್ಟಳ್ಳಿ ಸ್ಕೂಲಿಗೂ, ಡಿ ಯಚ್ ಕೃಷ್ಣಯ್ಯನವರನ್ನು ಮೂರ್ನಾಡು ಸ್ಕೂಲಿಗೂ, ಮೆ|| ಯಂ ಪೂವಯ್ಯನವರನ್ನು ಹಾಕತ್ತೂರುಸ್ಕೂಲಿಗೂ, ಮೆ|| ಯಚ್ ಯಚ್. ಕಾಳಪ್ಪನವರನ್ನು ಹೊದ್ದೂರುಸ್ಕೂಲಿಗೂ, ಮೆ|| ಪಿ ಕೆ ವೆಂಕಪ್ಪಯ್ಯನವರನ್ನು ಪೆರಾಜೆಸ್ಕೂಲಿಗೂ ಮೆ|| ಯಂ ಯಂ ಕಾವೇರಪ್ಪನವರನ್ನು ಗೌಡಳ್ಳಿ ಸ್ಕೂಲಿಗೂ ಮೆ|| ಡಿ ಸಣ್ಣಪ್ಪನವರನ್ನು ಕಾಟಕೇರಿಸ್ಕೂಲಿಗೂ, ಮೆ|| ಕೆ ಪಿ ಮುತ್ತಿರಾಯರವರನ್ನು ಶನಿವಾರಸಂತೆ ಸ್ಕೂಲಿಗೂ ಮೆ|| ಯಂ ಯಂ. ಬೆಳ್ಳಪ್ಪನವರನ್ನು ತಿತ್ತಿಮತ್ತಿ ಸ್ಕೂಲಿಗೂ, ಹೊಸದಾಗಿ ಸ್ಕೂಲ್ ಮಾಸ್ಟರಾಗಿ ಕಳುಹಿಸಿರುತ್ತಾರೆ.

ಕಾಕೋಟುಪರಂಬು ಸ್ಕೂಲ ಮಾಸ್ಟರಾಗಿದ್ದ ಮೆ|| ಬಲ್ಲಟ್ಟಿ ಕಾಳಂಡ ಪೂವಯ್ಯನವರನ್ನು ಬಾಳೂರು ಸ್ಕೂಲಿಗೆ ವರ್ಗಮಾಡಿ ಅವರ ಬದಲಾಗಿ ಮೆ|| ಪುಟ್ಟಿಚಂಡ ಕಾಳಪ್ಪನವರನ್ನು ಕಳುಹಿಸಿರುವರು.

ಹಿಂದೂದೇಶ

ದಕ್ಷಿಣಕನ್ನಡ ಜಿಲ್ಲೆಯ ನೆರೆಯ ಅನಾಹುತಕ್ಕೆ ಒಳಗಾದವರ ಕಷ್ಟನಿವಾರಣೆಗಾಗಿ ಆಗೋಸ್ತು ಅಂತ್ಯದವರೆಗೆ ಚಂದಾ 14419-10-10 ವಸೂಲಿ ಮಾಡಲ್ಪಟ್ಟದ್ದರಲ್ಲಿ ಅನ್ನ ಮತ್ತು ಬಟ್ಟೆ ಕೊಡಲಿಕ್ಕಾಗಿ 2025-14-1 ಖರ್ಚಾಗಿ ಬಾಕಿ 12393-11-11 ಹಾಜರ್ ಇದೆಯಂತೆ. ಇದನ್ನು ಬೀಜ ತೆಗೆದುಕೊಡಲಿಕ್ಕೂ ಮನೆ ಕಟ್ಟಿಸಿಕೊಡಲಿಕ್ಕೂ ಉಪಯೋಗಿಸುವರಂತೆ. ಈ ಎರಡು ಮುಖ್ಯವಾದ ಕೆಲಸಗಳಿಗೆ ಕಮ್ಮಿಪಕ್ಷ ಎರಡು ಲಕ್ಷವೂ ಬೇಕಾಗುವುದೆಂದು ಅಂದಾಜು ಮಾಡಲ್ಪಟ್ಟದ್ದರಿಂದ ಎಲ್ಲರೂ ಸಹಾಯ ಮಾಡಬೇಕೆಂದು ರಿಲೀಫ್ ಕಮಿಟಿಯವರ ಕೋರಿಕೆ.

ಮೈಸೂರು ಮಹಾರಾಜರವರು ತಮ್ಮ ಕಾಶ್ಮೀರ ಪ್ರಯಾಣದಿಂದ ಈ ತಾ|| 1 ರಲ್ಲಿ ವಾಪಾಸು ತಮ್ಮ ರಾಜಧಾನಿಗೆ ಬಂದು ತಲಪಿದರು.

ಮೈಸೂರು ಡಿಸ್ಟ್ರಿಕ್ಟ್ ಸಭಾಸಭಾಸದರುಗಳ ವಾರ್ಷಿಕ ಕಾನ್ಫರೆನ್ಸು ತಾ|| 2 ರಂದು ಮೈಸೂರಿನಲ್ಲಿ ಡಿಪ್ಯುಟಿ ಕಮಿಷನರಾದ ಮೆ|| ಬಿ ಟಿ ಕೇಶವಯ್ಯಂಗಾರರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕೆನಡಾ ಆಸ್ಟ್ರೇಲಿಯ ದಕ್ಷಿಣ ಆಫ್ರಿಕ ಮತ್ತು ಕೆನಿಯಾ ದೇಶದವರ ವಿಷಯವಾಗಿ ಆ ದೇಶಗಳಿಗೆ ಹೋಗುವುದಕ್ಕೆ ವಿರೋಧವಾದ ಕಾನೂನುಗಳನ್ನು ಮಾಡಿಕೊಂಡಿರುವುದರಿಂದ ಕಲ್ಕತ್ತಾ ಮುನ್ಸಿಪಾಲಿಟಿಯಲ್ಲಿ ಉದ್ಯೋಗಕ್ಕೆ ಆ ದೇಶದವರನ್ನು ಹಾಕಿದಲ್ಲಿ ಅವರ ದೇಶದ ಈ ಕಾನೂನುಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಆ ಮುನ್ಸಿಪಾಲಿಟಿ ಕಮಿಟಿಯವರು ತೀರ್ಮಾನಿಸಿರುವರು.

ಬೊಂಬಾಯಿಯ ಎಂಟು ಮುನ್ಸಿಪಲ್ ಕಾರ್ಪೊರೇಟ್‌ರುಗಳು ವಿನಾಗಿ ಮಾಡಿ ಬರುವ ಹೊಸ ಗವರ್ನರಿಗೆ ಸ್ವಾಗತ ಬಿನ್ನಹವನ್ನು ಒಪ್ಪಿಸಲು ಆ ಮುನ್ಸಿಪಾಲಿಟಿಯವರು ತೀರ್ಮಾನಿಸದುದಕ್ಕೆ ವಿರೋಧಿಸಿ ಅಂಥಾ ತೀರ್ಮಾನಕ್ಕೆ ಕಾರಣರಾದ ಮೆಂಬರುಗಳು ರಾಜೀನಾಮೆ ಕೊಡಬೇಕೆಂದೂ ಸಹ ರಾವು ವಾಪಾಸು ಮಾಡಿದಲ್ಲದೆ ಈ ಗವರ್ನರವರು ಹೋಗುವಾಗ್ಗೆ ಅವರಿಗೂ ಕೂಡ ಬಿನ್ನಹವನ್ನು ಕೊಡಲು ವಿರೋಧಿಸಬೇಕೆಂದು ಮುನ್ಸಿಪಲ್ ಮೆಂಬರುಗಳನ್ನು ಕೇಳಿಕೊಳ್ಳುವತೆ ತೀರ್ಮಾನಿಸಿದರು.

ಮಹಾತ್ಮ ಗಾಂಧಿಯವರನ್ನು ಮೂರು ನಾಲ್ಕು ದಿನಗಳಲ್ಲಿ ಜೈಲಿನಿಂದ ಬಿಡುಗಡೆ ಮಾಡುವರೆಂಬ ಗಾಳಿ ವರ್ತಮಾನವು ಪೂನಾದಲ್ಲಿ ಹಬ್ಬಿಕೊಂಡಿದೆಯೆಂದು ತಾ|| 7 ರ ಬೊಂಬಾಯಿಯ ಲೋಕಮಾನ್ಯ ಪತ್ರಿಕೆಗೆ ಪೂನಾ ಬಾತ್ಮಿದಾರರೊಬ್ಬರು ಬರೆಯುವರಂತೆ. ಇದು ಎಷ್ಟು ಮಟ್ಟಿಗೆ ನಿಜವೆಂಬುದು ನೋಡಬೇಕಾಗಿದೆ.

ಹಿಂದೂದೇಶದ ಅನೇಕ ಭಾಗಗಳಲ್ಲಿ ಕಳೆದ ಅತಿಯಿಂದುಂಟಾದ ನೆರೆಯ ಅನಾಹುತಗಳ ಸಂಹಾರಕ್ಕೆ ಒಂದು ರಿಲೀಫ್ ಫಂಡು ಮಾಡಲಿಕ್ಕಾಗಿ ಬೊಂಬಾಯಿ ತಾ|| 6 ರಲ್ಲು ಸರ್ ಡಿನ್‌ಷಾ ಪೆಟಿಟ್ ಭೋಯಿಯ ಅಧ್ಯಕ್ಷತೆಯಲ್ಲಿ ಒಂದು ಪಬ್ಲಿಕ್ ಮೀಟಿಂಗು ನಡೆದು ಚಂದಾ ವಸೂಲಿಗಾಗಿ ಒಂದು ಕಮಿಟಿಯು ಏರ್ಪಾಡಾಯಿತು. ಹನ್ನೊಂದು ಸಾವಿರ ರೂ. ವರೆಗೆ ಚಂದಾವು ದೊರೆತಂತೆ ಅಲ್ಲಿಯೇ ವಾಗ್ದಾನವಾಯಿತು.

ಗುಜರಾತದ ವಿದ್ಯಾಪೀಠದ ರಾಷ್ಟ್ರೀಯ ವಿದ್ಯಾಲಯದ ಎರಡನೇ ಕಾನ್ವೊಕೇಶನು ನವಂಬರು 1 [illegible] ನಡಯಲಿಕ್ಕಿದೆ. ಮೌಲಾನಾ ಮಹ್ಮದ್ ಅಲಿಯವರು ಕಾನ್ವೊಕೇಶನ್ ಭಾಷಣ ಮಾಡುವರು.

ಜಪಾನಿನಲ್ಲಿ ಭೂಕಂಪನದಿಂದ ಉಂಟಾಗಿರುವ ಹುತದ ಸಂಹಾರಬಗ್ಗೆ ವೈಸರಾಯರವರು ಒಂದು [illegible] ಫಂಡನ್ನು ತೊಡಗಿಸಿರುವರು. ಅವರು ಮುಂದಾಗಿ [illegible] 5000 ರೂ ಕೊಟ್ಟಿರುವರು. ದೇಶದವರೆಲ್ಲರೂ ಅವರ ದನ್ನು ಸಹಾಯ ಕೊಡಬೇಕೆಂದು ಅವರ ಕೋರಿಕೆ.

ಡೆಲ್ಲಿಯಲ್ಲಿ ಈ ತಾ|| 15 ರಲ್ಲು ನಡೆಯುವ [illegible] ಕಾಂಗ್ರೆಸಿಗೆ ಮುಂಚಿತವಾಗಿ ತಾ|| 11 ಮತ್ತು 1[illegible] ಕಾಂಗ್ರೆಸಿನ ಎಲ್ಲಾ ಪಂಗಡಗಳ ಮುಂದಾಳುಗಳಿಗೂ, ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಮೀಟಿಂಗು ನಡೆಯುವುದು.

ದಕ್ಷಿಣಕನ್ನಡ ಜಿಲ್ಲಾ ಸುಳ್ಯ ಮಾಗಣೆ ಚೊಕ್ಕಾಡಿ ಒಳ್ಳಿ ಒಂದು ಬೆಟ್ಟದ ಬುಡದಲ್ಲಿದ್ದ ಒಂದು ಮನೆಯು ಬೆಟ್ಟ ಜಾರಿಬಂದು ಮುಚ್ಚಿ ಆ ಮನೆ ಮತ್ತು ಅದರ 17 ಜನರು 5 ದನಕರುಗಳು ಸಹ ಮುಚ್ಚಿಹೋದ ಆ ಮನೆಯ ಸಮೀಪದಲ್ಲಿದ್ದ ಅಡಿಕೆ ತೋಟ ಒಂದು ಮುಚ್ಚಿಹೋಗಿದೆಯೆಂದೂ ವರ್ತಮಾನ ಬಂದಿದೆ. ರೀತಿ ಮುಲಬಾರಿನಲ್ಲಿ ಒಂದು ದೇವಾಲಯವು ಪೂರ್ತಿವಾಗಿ ಬೆಟ್ಟ ಜಾರಿ ಮುಚ್ಚಿಹೋಗಿದೆಯೆಂತಲೂ ಬಂದಿದೆ.

ಲಾಹೋರಿನ "ವಂದೇಮಾತರಂ" ಪತ್ರಿಕೆಯ ಸಂಪಾದಕರಾದ ಲಾಲಾ ಲಾಲ್‌ಚಂದ್ ಫಲಕ್ ವರ್ನ 18 ತಿಂಗಳನಂತರ ತಾ|| 6 ರಲ್ಲಿ ಬರೋರಿ ಸೆಂಟ್ರಲ್ ಜೈಲಿನಿಂದ ಬಿಡುಗಡೆಯಾಗಿದರು.

ಮೌಲಾನಾ ಮಹಮ್ಮದ್ ಅಲಿಯವರು ಜೈಲಿನಿಂದ ಬಿಡುಗಡೆಯಾಗಿದರೂ ಕೂಡ ಇವರ ಮೈಗೆ ಕಾಯಿಲೆಯು ಜೋರಾಗಿರುವುದರಿಂದ ದೇಶ ಕೆಲಸಕ್ಕೆ ಈಗ ಹೆಚ್ಚಿನ ಸಮಯವನ್ನು ವಿನಿಯೋಗಿಸಲಿಕ್ಕೆ ಆಗುವುದಿಲ್ಲವೆಂದೂ ಆದರೂ ಕೂಡ ಸ್ಪೆಶಲ್ ಕಾಂಗ್ರೆಸ್ ಸಮಯದಲ್ಲಿ ತಮ್ಮ ಹತ್ತು ದಿವಸಗಳವರೆಗೆ ಡೆಲ್ಲಿಯಲ್ಲಿರುವೆನೆಂದೂ ಅವರು ಸೂಚಿಸಿರುವರು.

ಕೂನೂರಿನಲ್ಲಿ ಯೂರೋಪಿಯನ್ ವಿದ್ಯಾರ್ಥಿಗಳಿಗೆ ಮದ್ರಾಸ್ ಗವರ್ನರ್ ವಿಲ್ಲಿಂಗ್ಡನ್ ಪ್ರಭುಗಳು ಮಾಡಿದ ಭಾಷಣದಲ್ಲಿ ಹೇಳಿರುವದೇನೆಂದರೆ— "ಮನುಷ್ಯನ ಬಣ್ಣದಿಂದ ಮನುಷ್ಯನಾಗುವದಲ್ಲ ಮನುಷ್ಯನ ಬಣ್ಣ ಹೇಗಿದ್ದರೂ ಮನುಷ್ಯನ ನಡತೆಯೇ ಗಣನೆಗೆ ಬರುವಂಥಾದ್ದು. ನನ್ನ ಇಂಡಿಯಾದೇಶದ ಅನುಭವದಿಂದ ತಿಳಿದುಬಂದದ್ದೇನೆಂದರೆ—ಯೂರೋಪಿಯನ್ನರು ಈ ತತ್ವವನ್ನು ತಿಳಿದು ಬಣ್ಣದ ವಿಷಯದಲ್ಲಿ ಕೆಲವು ಮಟ್ಟಿಗಾದರೂ ತಾಳ್ಮೆಯಿಂದ ಇದ್ದಿದ್ದರೆ ಇಂಡಿಯಾವನ್ನು ಆಳುವ ಅಧಿಕಾರಿಗಳಿಗೆ ತೊಂದರೆ ಕಡಿಮೆ ಇರುತ್ತಿತ್ತು.

ಉತ್ತರ ಮಲಬಾರಿನಲ್ಲಿ ಒಬ್ಬ ತೀಯನು ತನ್ನ ತಾಯಿಯೂ ಅಣ್ಣನಮಗನೂ ಮನೆಯೊಳಗೆ ಇರುವಾಗ ಬಾಗಿಲು ಹಾಕಿ ಬೆಂಕಿ ಹಚ್ಚಿದನಂತೆ. ತಾಯಿಯೂ ಅಣ್ಣನಮಗನೂ ತಪ್ಪಿಸಿ ಓಡಲು ಪ್ರಯತ್ನಿಸಿದಾಗ ಅವರಿಗೆ ಕತ್ತಿಯಿಂದ ಹೊಡೆದು ಅಣ್ಣನಮಗನನ್ನು ಅಲ್ಲೆ ಕೊಂದನೆಂತಲೂ ತಾಯಿಯು ಆನಂತರ ಮೃತಳಾದಳೆಂತಲೂ ತನಗೂ ಗಾಯವಾಗಿ ಕೊಂಡನೆಂತಲೂ ಆನಂತರ ಮೆಜಿಸ್ಟ್ರೇಟರ ಮುಂದೆ ತನ್ನ ಹೇಳಿಕೆಯಲ್ಲಿ ತನ್ನ ಅಣ್ಣನು ಪ್ರತ್ಯೇಕ ಇದ್ದುಕೊಂಡು ತಾಯಿಗೆ ಜೀವನ ಕೊಡದ್ದರಿಂದ ಅವಳ ಕಷ್ಟ ಪರಿಹರಿಸಲಿಕ್ಕಾಗಿ ಹೀಗೆ ಮಾಡಿದೆನೆಂತ ಹೇಳಿದನು.

ಮೈಸೂರು ದೇಶದ ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ಮಳೆ ಇಲ್ಲದೆ ಬೆಳೆ ಇಲ್ಲ ಕ್ಷಾಮಬಾಧೆ ಜೋರಾಗಿದೆಯೆಂತಲೂ ಸರಕಾರದವರೂ ಇತರರೂ ಸಹಾಯ ಮಾಡುತ್ತಿದ್ದಾರೆಂತ ತಿಳಿದುಬಂದಿದೆ.

ಕೊಮಿಲ್ಲಾ ಎಂಬ ಊರಿನ ಜೈಲಿನಲ್ಲಿ ನಾಗೇಂದ್ರ ಚಕ್ರವರ್ತಿ ಎಂಬ ಸಜಾ ಆದ ಕಳ್ಳನು ಒಬ್ಬ ಸಬ್ ಇನ್ಸ್‌ಪೆಕ್ಟರನ್ನು ಕತ್ತಿಯಿಂದ ತಿವಿದು ಅಪಾಯಕರವಾದ ಗಾಯ ಮಾಡಿರುವನಂತೆ.

ಸಹರಾನ್ ಪುರದಲ್ಲಿ ಹಿಂದೂಗಳ ಅಂಗಡಿಗಳನ್ನು ತೆರೆಯಲಿಕ್ಕೆ ಇನ್ನೂ ಹೆದರುತ್ತಿದ್ದಾರೆಂತಲೂ ಕೆಲವು ಮುಖಂಡರು ಹೋಗಿ ಧೈರ್ಯ ಹೇಳುತ್ತಿದ್ದಾರೆಂತಲೂ ಮುಸಲ್ಮಾನರು ಹಿಂದೂಗಳಿಗೆ ಧೈರ್ಯ ಹುಟ್ಟುವಂತೆ ಏನೂ ಮಾಡುತ್ತಿಲ್ಲವೆಂತಲೂ ಪಂಜಾಬಿ ಬಾಲ ಸ್ವಸ್ಥದವರೂ ಪಾಠಸಮಿತಿಯವರೂ ಒಂದು ಕ್ಷಾಮನಿವಾರಣೆ ... ಬಹು ಶ್ರಮಕರವಾಗಿ ಮಾಡುತ್ತಿದ್ದಾರೆಂಬಲೂ ಲಾಲಾ ಬಜರಂಗರೂ ಅಲ್ಲಿನ ಕಷ್ಟನಿವಾರಣೆಗೆ 2000 ರೂಪಾಯಿ ಕೊಟ್ಟಿದ್ದಾರೆಂತಲೂ ಆಗಸ್ಟ ಹಬ್ಬದಲ್ಲು ಮುಸಲ್ಮಾನರು ಹಿಂದೂಗಳ ಮೇಲೆ ದೊಂಬಿ ನಡಸಿದ್ದಾರೆಂತಲೂ ವರ್ತಮಾನವಿದೆ.

ನಾಗಪುರದ ಸತ್ಯಾಗ್ರಹದ ಸಂಬಂಧ ಜೈಲಿಗೆ ಕಳುಹಿಸಲ್ಪಟ್ಟ ಸ್ವಯಂ ಸೇವಕರೆಲ್ಲರನ್ನೂ ಬಿಡುಗಡೆಮಾಡಿರುವರು. ಜಮನಾಲಾಲ್ ಬಜಾಜ್ ಮತ್ತು ಡಾ|| ಹರ್ಡಿಕರ್‌ರವರನ್ನು ಬಿಟ್ಟಿರುವರು.

ಜಪಾನಿಗೆ ಸಂಭವಿಸಿರುವ ಕಷ್ಟದಲ್ಲಿ ಹಿಂದೂದೇಶದ ಎಲ್ಲರೂ ಪೂರ್ತಿ ಸಹಾನುಭೂತಿಯುಳ್ಳವರಾಗಿದ್ದಾರೆಂದು ಇಂಡಿಯನ್ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರು ಜಪಾನ್ ಚಕ್ರವರ್ತಿಯವರಿಗೆ ತಂತಿ ವರ್ತಮಾನ ಕಳುಹಿಸಿರುವರು.

ಇಂಡಿಯಾದವರಿಗೆ ಕೆನ್ಯಾದಲ್ಲಿ ಸಮಾನ ಹಕ್ಕು ಸಿಕ್ಕದೆಂತ ಮಾಡಿದ್ದರಿಂದ ಇಂಡಿಯಾದವರು ಎಚ್ಚತ್ತು ... ಮಾಡಬೇಕೆಂತಲೂ ಕೌನ್ಸಿಲುಗಳಿಗೆ ಹೋಗಿ ಸ್ವರಾಜ್ಯವವರೆಗೂ ಅಡಚಣೆ ಮಾಡುತ್ತಿರಬೇಕೆಂತ ಮುಂತಾಗಿ ಬಹಳ ಸ್ವಾರಸ್ಯವಾದ ದೇಶಭಕ್ತಿಯಿಂದ ತುಂಬಿರುವ, ನಿರ್ಭೀತಿಯನ್ನು ಪ್ರತಿ ಪಂಕ್ತಿಯಲ್ಲೂ ತೋರಿಸಿರುವ ಒಂದು ಪತ್ರವನ್ನು ಪ್ರಕಟಿಸಿ ಅನಾರೋಗ್ಯದ ದೆಸೆಯಿಂದ ಬೆಂಗಳೂರಲ್ಲಿ ಆನರಬಲ್ ವಿ ಯಸ್. ಶಾಸ್ತ್ರಿಯವರು ವಿಶ್ರಾಂತಿಯನ್ನು ಹೊಂದುತ್ತಲಿದ್ದಾರೆ.

ವಿದೇಶ.

...ರ್ವಿಯದ ಮೇರಿ ರಾಣಿಯವರು ಒಂದು ಗಂಡು ಮಗುವನ್ನು ಹೆತ್ತಿರುವರು. ಆ ಮಗುವಿಗೆ ತಾತ್ಕಾಲಿಕ್ಕೆ ಸ್ಟೀವನ್ ಎಂದು ಹೆಸರಿಟ್ಟಿರುವರು.

...ನ್ಸ್ ಆಫ್ ವೇಲ್ಸ್‌ರವರು ತಮ್ಮ ಕೆನಡಾ ಪ್ರಯಾಣಕ್ಕಾಗಿ ...ಟನ್ ಪಟ್ಟಣವನ್ನು ತಾ|| 5 ರಲ್ಲಿ "ಎಂಪ್ರೆಸ್ ಆಫ್ ಫ್ರಾನ್ಸ್" ಎಂಬ ಹಡಗಿನಲ್ಲಿ ಬಿಟ್ಟಿರುವರು.

ಸೆಪ್ಟೆಂಬರ್ ಒಂದರಲ್ಲಿ ಜಪಾನ ದೇಶದಲ್ಲಿ ದೊಡ್ಡದಾದ ಒಂದು ಭೂಕಂಪ ಉಂಟಾಗಿ ಬಹಳ ಅನಾಹುತಗಳು ಉಂಟಾದುವು. ಮನೆಗಳು ಬಿದ್ದು ಬೆಂಕಿ ಹತ್ತಿಕೊಂಡು ಮುಖ್ಯ ಪಟ್ಟಣಗಳಾದ ಟೋಕಿಯೋ, ಯೋಕೊಹಾಮ ಮೊದಲಾದವುಗಳಲ್ಲಿ ವಿಪರೀತ ನಷ್ಟವುಂಟಾಗಿದೆ. ಎಲ್ಲಿ ನೋಡಿದರೂ ಹೆಣದರಾಶಿಗಳೆ! ಇಷ್ಟರವರೆಗೆ ತಿಳಿದು ಬಂದಲ್ಲಿ ಸುಮಾರು 15 ಲಕ್ಷ ಜನರು ಮೃತಪಟ್ಟಿರುವರಂತೆ. ಜಪಾನಿನ ತೀರದಿಂದ 30 ಮೈಲಿ ದೂರದಲ್ಲಿದ್ದ ಓಶಿಮಾ ಎಂಬ ದ್ವೀಪವು ಮುಳುಗಿ ಹೋಗಿದೆ. ಅದರಲ್ಲಿದ್ದ ಹತ್ತುಸಾವಿರ ಜನರೂ ಸಹ ನಾಶವಾದರು. ಇನ್ನೊಂದು ಪ್ರಾಂತ್ಯದಲ್ಲಿ ಹೊಸ ದ್ವೀಪಗಳು ಎದ್ದಿವೆಯಂತೆ. ಟೋಕಿಯೋ ಎಂಬ ಒಂದು ಪಟ್ಟಣದಲ್ಲಿ ಮಾತ್ರ 30 ಸಾವಿರ ಜನರು ಸತ್ತಿದ್ದಾರೆಂತಲೂ ಒಂದು ಲಕ್ಷ ಜನರಿಗೆ ಗಾಯವಾಗಿದೆಯೆಂತಲೂ 3 ಲಕ್ಷ 50 ಸಾವಿರ ಜನರಿಗೆ ಮನೆಗಳಿಲ್ಲದಾಗಿದೆಯೆಂತಲೂ ವರ್ತಮಾನ. ಅಲ್ಲದೆ ಆ ಪಟ್ಟಣಕ್ಕೆ ಬರುತ್ತಿದ್ದ ನೀರು ತಪ್ಪಿಹೋಗಿ ನೀರಿನ ಕ್ಷಾಮ ಉಂಟಾಗಿ ಜನರಿಗೆ ಆಹಾರವೇ ಇಲ್ಲದಂತಾಗಿದೆ. ಇದರ ದೆಸೆಯಿಂದ ಸಿಂಹಳದ್ವೀಪದಲ್ಲಿ ಕೂಡ ಅಕ್ಕಿಯ ಕ್ರಯ ಶೇಕಡ 75 ರಷ್ಟು ಕ್ರಯವು ಹೆಚ್ಚಿದೆ. ಜಪಾನ್ ಚಕ್ರವರ್ತಿಯವರಿಗೂ ಅವರ ಕುಟುಂಬದವರಿಗೂ ಏನೊಂದೂ ಅಪಾಯವುಂಟಾಗಿರುವುದಿಲ್ಲವೆಂತಲೂ ಆದರೆ ಅರಮನೆಯ ಕೆಲವು ಭಾಗ ಬಿದ್ದು ಹೋಗಿದೆಯೆಂತಲೂ ಸುದ್ದಿ.

ಕಳೆದವಾರ ಪ್ರಕಟಿಸಿದಂತೆ ಗ್ರೀಸ್ ಪ್ರಾಂತ್ಯದೊಳಗೆ ಆದ ಇಟಲಿಯ ಮುಖಂಡರ ಕೊಲೆಗಾಗಿ ಗ್ರೀಸಿಗೆ ಕಳುಹಿಸಿದ ಪತ್ರಕ್ಕೆ ಸರಿಯಾದ ಜವಾಬು ಬಾರದ್ದರಿಂದ ಇಟಲಿಯವರು ಮುಂದರಿಸಿರುತ್ತಾರೆ. ಕಾರ್ಫು ಎಂಬ ಗ್ರೀಸಿನ ದ್ವೀಪವನ್ನು ಹಿಡಕೊಂಡಿರುತ್ತಾರೆ. ಗ್ರೀಕರು ಈ ತಕರಾರನ್ನು ಸರ್ವರಾಷ್ಟ್ರಗಳ ಸಭೆ ತೀರಿಸಿಕೊಡಬೇಕೆಂತ ಕೇಳಿಕೊಂಡಿದ್ದಾರೆಂತಲೂ ಅವರ ತೀರ್ಮಾನದ ಮೇಲೆ ಯುದ್ಧವಾಗುವುದೋ ಇಲ್ಲವೋ ಎಂಬುದು ನಿಶ್ಚಯವಾಗುವುದೆಂತಲೂ ತಿಳಿಯಬರುತ್ತದೆ.

ಜಪಾನಿನಲ್ಲಿ ಈಗ ಆಗಿರುವ ಕಷ್ಟನಿವಾರಣೆಗಾಗಿ ಎಲ್ಲಾ ಜನಾಂಗದವರೂ ತಮ್ಮ ಶಕ್ತ್ಯಾನುಸಾರ ಸಹಾಯ ಕಳುಹಿಸುತ್ತಿದ್ದಾರೆ. ಬ್ರಿಟಿಷರೂ ಆಸ್ಟ್ರೇಲಿಯ ಮತ್ತು ಅಮೇರಿಕದವರೂ ಬಹಳ ಕೆಲಸ ಕೈಗೆತ್ತಿಕೊಂಡು ಜಪಾನಿನವರಿಗೆ ಸಹಾಯ ಮಾಡುತ್ತಿದ್ದಾರೆ.

ಫ್ರೆಂಚರು ಜರ್ಮನಿಯ ರೂರ್ ಪ್ರಾಂತ್ಯದಲ್ಲೇ ಇದ್ದಾರೆ. ಈ ವಿಷಯ ತೀರ್ಮಾನಕ್ಕಾಗಿ ಜರ್ಮನಿಯ ಹೊಸ ಮಂತ್ರಿಯು ಫ್ರೆಂಚ್ ಸರಕಾರದವರಿಗೆ ಒಂದು ಪತ್ರವನ್ನು ಬರೆದಿರುವರು. ಅದರ ಫಲಿತಾಂಶವನ್ನು ಕಾಯಬೇಕಾಗಿದೆ.

ಅಮೇರಿಕಾದಲ್ಲಿ ಪ್ರಖ್ಯಾತನಗರವೆನಿಸಿದ ನ್ಯೂಯಾರ್ಕ್ ಪಟ್ಟಣದ ಒಂದು ಹೋಟೇಲಿನಲ್ಲಿ ಒಂದು ವಿಚಿತ್ರವಾದ ಕಳ್ಳತನ ನಡೆದು ಹೋಯಿತು. ಬಫಲೋ ದೇಶದ ಜ್ಯೂಗೂಸೆಪಿಯಾ ಶಾಫ್ ಎಂಬ ಕೋಟ್ಯಾಧೀಶ್ವರನ ಪತ್ನಿಯು 15,00,000 ರೂಪಾಯಿನ ಬೆಲೆಯ ನಗಗಳನ್ನು ಧರಿಸಿ ಅಲಂಕಾರ ಮಾಡಿಕೊಂಡು ಹೋಟೆಲಿನಲ್ಲಿ ಒಂದು ದಿನ ರಾತ್ರಿ ಸ್ನೇಹಿತರುಗಳ ಕೂಡ ವಿನೋದ ನೃತ್ಯ ನಡೆಸಿ ರಾತ್ರಿಯಾದ ಬಳಿಕ ತನ್ನ ಬಂಗ್ಲೆಗೆ ಹೋಗಲು ಮಹಡಿಯಿಂದ ಇಳಿದು ಒಂದು ಹೋಟೇಲಿನ ಬಾಗಿಲಿನಲ್ಲಿ ಕಾದಿದ್ದ ಮೂರು ಮಂದಿ ಕಳ್ಳರು ಆಕೆಯನ್ನು ಹಿಡಿದುಕೊಂಡು ಪ್ರಜ್ಞೆ ತಪ್ಪುವ ಔಷಧಿಯನ್ನು ಬಲಾತ್ಕಾರವಾಗಿ ಕೊಟ್ಟು ಹೊತ್ತುಕೊಂಡು ಹೋಗಿ ಒಂದು ಕೋಣೆಯಲ್ಲಿ ಮಲಗಿಸಿ ಆಕೆಯ ಮೈಮೇಲಿದ್ದ ನಗಗಳನ್ನೆಲ್ಲಾ ಸುಲಿದುಕೊಂಡು ಹೋಟೆಲಿನ ಬಾಗಿಲಿಗೆ ಕಳ್ಳಕೀಲಿ ಹಾಕಿಹೋದರು. ಇಂಥಾ ಘಾತುಕ ಕೃತ್ಯವನ್ನು ನಡಿಸಿದ ಕಳ್ಳರನ್ನು ಪೋಲೀಸಿನವರು 10,000 ಮೈಲಿ ದೂರ ಅಟ್ಟಿಕೊಂಡು ಹೋಗಿ ಆ ಪೈಕಿ ಇಬ್ಬರನ್ನು ಹಿಡಿದಿರುತ್ತಾರಂತೆ.

ಕೊಡಗು ಸರಕಾರಿ ಸ್ಕಾಲರ್‌ಶಿಪ್‌ಗಳು

ಪ್ರಿಯ ಸಂಪಾದಕರೇ,

ಈ ವರ್ಷ ಕೊಡಗಿನ ಸರಕಾರಿ ಸ್ಕಾಲರ್‌ಶಿಪ್‌ಗಳನ್ನು ಹಂಚಿದ ವಿಷಯದಲ್ಲಿ ತುಂಬಾ ವ್ಯಸನದಿಂದ ಈ ಪತ್ರವನ್ನು ಬರೆಯುತ್ತಿದ್ದೇನೆ. ಕೆಲವು ವರ್ಷಗಳ ಹಿಂದೆ ಮಡಿಕೇರಿಯಲ್ಲಿ 2ನೇ ಗ್ರೇಡ್ ಕಾಲೇಜ್ ಒಂದನ್ನು ಸ್ಥಾಪಿಸುವ ವಿಷಯ ಆಲೋಚನೆಯಲ್ಲಿತ್ತು ಎಂಬ ಸಂಗತಿ ನಿಮ್ಮ ವಾಚಕರಿಗೆಲ್ಲರಿಗೂ ತಿಳಿದಿದೆ. ನಮ್ಮ ವಿದ್ಯಾವಿಷಯ ಆಸಕ್ತಿ ಇರುವವರಲ್ಲನೇಕರು ಕಾಲೇಜ್ ಆವಶ್ಯಕವೆಂತ ಯೋಚಿಸಲಾರಂಭಿಸಿದರು. ಹೈಸ್ಕೂಲಿನಿಂದ ಕಾಲೇಜಿಗೆ ಬೇಕಾದಷ್ಟು ವಿದ್ಯಾರ್ಥಿಗಳು ಪ್ರತಿ ವರ್ಷವೂ ಪಾಸಾಗುವರೇ ಸಂಶಯವೆನಿಸಿತು. ಕಾಲೇಜಿಗಾಗಿ ಖರ್ಚು ಮಾಡುವ ದೊಡ್ಡ ಹಣಕ್ಕೆ ತಕ್ಕ ಪ್ರಯೋಜನವಿರಲಾರದೆಂತ ಯೋಚಿಸಿದರು.

ಈ ಸಮಯದಲ್ಲಿ ಇದರ ಬದಲಿಗೆ ಇನ್ನೊಂದು ಏರ್ಪಾಡು ಯೋಚಿಸಲ್ಪಟ್ಟಿತು. ಕೊಡಗಿನ ಸ್ಥಿತಿ ತಿಳಿದ ಮದ್ರಾಸಿನಲ್ಲಿದ್ದ ವಿದ್ಯಾವಿಷಯ ಆಸಕ್ತಿ ಇದ್ದವರು ಕೊಡಗಿನ ಮುಖ್ಯಸ್ಥರು ಸಹ ಒಪ್ಪಿಕೊಂಡರು. ಈ ಏರ್ಪಾಡು ಏನೆಂದರೆ—ಕೊಡಗಿನ ಸರಕಾರಿ ಸ್ಕಾಲರ್‌ಶಿಪ್‌ಗಳ ಸಂಖ್ಯೆಯನ್ನೂ ಮೊಬಲಗನ್ನೂ ಹೆಚ್ಚಿಸುವುದು. ಪ್ರತಿ ವರ್ಷವೂ ಸ್ಕೂಲ್ ಫೈನಲ್‌ನಲ್ಲಿ ತೇರ್ಗಡೆ ಹೊಂದುವವರ ಸಂಖ್ಯೆ ಕಡಿಮೆ ಇರುವದರಿಂದ ಈ ಏರ್ಪಾಡಿನಿಂದ ಕೊಡಗಿನ ಉಚ್ಚವಿದ್ಯಾ (Higher Education) ವನ್ನು ವಿಸ್ತರಿಸಿದ ಪ್ರಯೋಜನವೇ ಅಧಿಕವೆಂತ ವಾದಿಸಿದರು. ಸ್ಕಾಲರ್‌ಶಿಪ್‌ಗಳ ಮೊಬಲಗು ಮಾಸಿಕ 25 ರೂ. ಮತ್ತು 30 ರೂ. ಇರಬೇಕೆಂತಲೂ ಸಂಖ್ಯೆಯನ್ನು 6 ಕ್ಕೆ ಹೆಚ್ಚಿಸಬೇಕೆಂತಲೂ ಇತ್ತು. ಇದರಿಂದ ವಿದ್ಯಾರ್ಥಿಗಳಿಗೆ ನಿರೀಕ್ಷಣೆಯು ತುಂಬಾ ಹೆಚ್ಚಿತು. ಹಿರಿಯರು ಶಿಫಾರಸು ಮಾಡಿದ ತಾರೀಖಿನಿಂದಲೇ ಈ ದರದಲ್ಲಿ ಸಿಕ್ಕುತ್ತೆಂತ ಹೇಳುತ್ತಿದ್ದರು.

ಆದರೆ ಈ ಮೊಬಲಗುಗಳಿಗಿಂತ ಇನ್ನೂ ಬೇರೆ ಅನೇಕ ಇತರ ಮೊಬಲಗುಗಳಂತೆ ಮೂಲೆಗೆ ಬಿತ್ತು. ಸಂಖ್ಯೆಯನ್ನು ಹೆಚ್ಚಿಸುವ ಬದಲು 1921-22 ರಲ್ಲಿ 3 ರಿಂದ ಒಂದಕ್ಕೆ ಇಳಿಸಲ್ಪಟ್ಟಿತು. ಕೊಡಗಿನ ಜನರಿಗೆ ವಿಶೇಷ ರಿಯಾಯ್ತಿ ಸಿಕ್ಕಿದ್ದು ಈ ರೀತಿ!

ಈ ವರ್ಷವಂತೂ ಇನ್ನೂ ಆಶ್ಚರ್ಯವನ್ನುಂಟುಮಾಡುವ ಬದಲಾವಣೆಗಳಾಗಿವೆ. ಸ್ಕಾಲರ್‌ಶಿಪ್ ತೆಗೆದುಕೊಳ್ಳುತ್ತಿದ್ದ ವಿದ್ಯಾರ್ಥಿಗಳ ಹೊಟ್ಟೆಗೆ ಕಠಿಣ ಪೆಟ್ಟುಗಳಾಗಿವೆ. ಒಂದು ವರ್ಷ ಪೂರ್ತಿ ಸಿಕ್ಕುತ್ತಿದ್ದ ಸ್ಕಾಲರ್‌ಶಿಪ್ ಈ ವರ್ಷ ಒಂಭತ್ತೇ ತಿಂಗಳು ಸಿಕ್ಕುವದಂತೆ! ಸ್ಕಾಲರ್‌ಶಿಪ್ ಇದ್ದ ಇಬ್ಬರು ವಿದ್ಯಾರ್ಥಿಯ ಇಂಟರ್‌ಮೀಡಿಯಟ್ ಪರೀಕ್ಷೆಯಲ್ಲಿ ಮೊದಲನೇ ವರ್ಗವೇ ತೇರ್ಗಡೆ ಹೊಂದಿ ಬಿ ಎ ಗೆ ಓದುತ್ತಿದ್ದರೂ ಅವನ ಸ್ಕಾಲರ್‌ಶಿಪ್ ನಿಲ್ಲಿಸಲ್ಪಟ್ಟಿದೆ! ಇದರಿಂದ ಅಕಾಲದಲ್ಲಿ ವಿದ್ಯಾರ್ಥಿಗೆ ತುಂಬಾ ಆಶಾಭಂಗವಾಗಿದೆ. ಇಷ್ಟು ಮಾತ್ರವಲ್ಲ ಈ ವರ್ಷ ಸ್ಕೂಲ್ ಫೈನಲ್ ಆದವರಿಗೆ ಸ್ಕಾಲರ್‌ಶಿಪ್ ಕೊಟ್ಟವರ ಪಟ್ಟಿಯಲ್ಲಿ ಕಂಡುಬರುವದಿಲ್ಲ.

ಈ ರೀತಿಯಾದರೆ ಇನ್ನು ನಾಲ್ಕೆಂಟು ವರ್ಷಗಳಲ್ಲಿ ಕೊಡಗಿನ ಹೊರಗೆ ಕಾಲೇಜ್‌ಗಳಲ್ಲಿ ಓದುವ ವಿದ್ಯಾರ್ಥಿಯೊಬ್ಬನೂ ಇಲ್ಲದೆಹೋದಾರೆಂತ ನನಗೆ ತೋರುತ್ತೆ. ಕೊಡಗಿನ ಯುವಕರು ಕಾಲೇಜ್ ನೋಡದೇ ಹೋಗಬೇಕಾದೀತು.

ಪ್ರಿಯವಾಚಕರೇ! ಸ್ಕಾಲರ್‌ಶಿಪ್ ಪಡೆಯುತ್ತಿದ್ದ ವಿದ್ಯಾರ್ಥಿಗಳಿಗೆ ಇದು ಬಹಳ ದೊಡ್ಡ ಪೆಟ್ಟಾಗಿದೆ. ಈಗಾಗಲೇ ಈ ವರ್ಷ ಮತ್ತು ಕಳೆದ ವರ್ಷ ಸ್ಕೂಲ್ ಫೈನಲ್ ಆದವರಲ್ಲನೇಕರು ಧನಸಹಾಯವಿಲ್ಲದೆ ಮನೆಯಲ್ಲಿ ಕೂರಬೇಕಾಗಿದೆ. ಮುಂದರಿಸುತ್ತಿರುವ ಯುವಕರಿಗೆ ಮದ್ರಾಸ್ ಮುಂತಾದ ತುಂಬಾ ಖರ್ಚು ಬೇಕಾದ ಸ್ಥಳಗಳಲ್ಲಿ ನಿರೀಕ್ಷಿಸಿದ್ದ ಸಹಾಯ ಅಕಸ್ಮಾತ್ತಾಗಿ ದೊರಕದೆಹೋದರೆ ಅವರ ಪಾಡೇನಾಗಬೇಕು? ಇದರಿಂದ ಸರಕಾರಕ್ಕೆ ಬಹಳ ಅಲ್ಪ ಉಳಿತಾಯ ಇರಬಹುದು. ಆದರೆ ಇದರಿಂದ ವಿದ್ಯಾರ್ಥಿಗಳ ಸ್ಥಿತಿಯು ಬಹಳ ಶೋಚನೀಯವಾದ್ದಾಗುತ್ತೆ.

ಕೆಲವು ವರ್ಷಗಳ ಹಿಂದೆ ಕೊಡಗಿನ ವಿದ್ಯಾರ್ಥಿಗಳು ಮರ್ಯಾದೆಯಲ್ಲಿ ಜೀವಿಸುತ್ತಿದ್ದರೆಂತ ಹೇಳುತ್ತಾರೆ. ಈಗ ಆದರೋ ಕೊಡಗು ವಿದ್ಯಾರ್ಥಿಗಳು ಬಹಳ ಬಡತನದಲ್ಲಿ ಜೀವಿಸುತ್ತಾರೆ. ಸನ್ಯಾಸಿಯ ಜೀವನ ನಡಿಸಿದರೂ ಆಗಿಂದಾಗ್ಗೆ ಕಷ್ಟದಲ್ಲಿ ಬೀಳುತ್ತಾರೆ. ಈಚೆಗೆ ಕೆಲವು ವರ್ಷಗಳಿಂದ ಕೊಡಗು ವಿದ್ಯಾರ್ಥಿಗಳು ಮದ್ರಾಸಿಗೆ ಹೋಗುವದೇ ಕಡಿಮೆಯಾಗಿದೆ. ಕಾರಣವನ್ನು ನಾನು ಹೇಳಬೇಕೆಂತ ಇಲ್ಲ. ಹಿಂದುಸ್ಥಾನದ ಇತರ ಯುವಕರಿಗೆ ವಿಲಾಯಿತಿ ಅಮೇರಿಕಾ ಹೇಗೋಹಾಗೆ ನಮ್ಮ ಯುವಕರಿಗೆ ಮದ್ರಾಸ್ ಆಗಿದೆ. ವಿಲಾಯಿತಿ ಅಮೇರಿಕಾ ದೇಶಗಳಲ್ಲಿ ವಿದ್ಯಾಭ್ಯಾಸಕ್ಕೆ ಸರಕಾರಿ ಸಹಾಯ ಸಿಕ್ಕೀತೆಂತ ನಮ್ಮ ಯುವಕರಿಗೆ ಸ್ವಪ್ನದಲ್ಲೂ ಆಶೆ ಇಲ್ಲ. ಇಂಥಾ ಮಹತ್ಕಾರ್ಯಕ್ಕೆ ಕೊಡಗು ಬಹಳ ಚಿಕ್ಕದೇಶವಾಗಿದೆ. ಮದ್ರಾಸಿನಲ್ಲಿ ನಮಗೆ ಸ್ಥಳವೇ ಇಲ್ಲ. ನಮ್ಮ ಬಡಕೂಗು ಇಂಡಿಯಾ ಸರಕಾರಕ್ಕೆ ತಲಪುವದೇ ಇಲ್ಲ.

ನಮ್ಮ ಯುವಕರ ದಾರಿಯಲ್ಲಿ ಇಂಥಾ ಕಗ್ಗತ್ತಲು ಮುಚ್ಚಿದೆ. ಉಚ್ಚವಿದ್ಯಾ ಇನ್ನು ನಾಕಷ್ಟು ಆಗಿ ಮುಂದೆ ಅದು ಸಿಕ್ಕದಂತೆ ಸಂಪೂರ್ಣ ಅಡಚಣೆಯಾದಂತೆಯಿತು. ವಿದ್ಯಾವಂತರಿಗೆ ಸಂಪಾದನೆಗೆ ದಾರಿಯೇ ಕಡಿಮೆಯಾಗಿರುವ ಹೀಗಾಗಿದ್ದ ಈ ಸಮಯದಲ್ಲಿ ವ್ಯಾಪಾರಗದ ಸಮಯದಲ್ಲಿ ಯಾವದರೂ ಧನಸಹಾಯ ದೊರೆಯದೆ ಇದ್ದರೆ ಕಾಲೇಜ ವಿದ್ಯೆಗೆ ಹೋಗುವವರೇ ಇಲ್ಲವಾಗುತ್ತೆ. ಈ ಸ್ಥಿತಿಯು ಬಹಳ ಶೋಚನೀಯವೇ ಸರಿ.

ರಾಜಭಕ್ತಿಯಲ್ಲಿ ಬೇರೆ ದೇಶಗಳಿಗಿಂತ ಹಿಂದೆ ಬೀಳದ ಈ ಚಿಕ್ಕದೇಶಕ್ಕೆ ಕೊಟ್ಟ ವಾಗ್ದಾನಗಳನ್ನು ನಡಿಸಿಕೊಡಬೇಕೆಂತ ಇನ್ನೂ ಆಶೆ ಇದೆ.

ಕೊಡಗು ದೇಶದ ಯುವಕರ ವಿಷಯದಲ್ಲಿ ದೇಶದ ಜನರೂ ಸರಕಾರವೂ ಸಹ ಹೆಚ್ಚಿಗೆ ಯೋಚನೆ ತೆಗೆದುಕೊಳ್ಳಬೇಕೆಂತ ನಾನು ಕೋರಿಕೊಳ್ಳುತ್ತೇನೆ. ಕೊಡಗು ದೇಶದ ಜನರ ಮುಂದೆ ವಿದ್ಯಾರ್ಥಿಗಳ ಕೆಲಸ ತೀರಿತು. ಯುವಕರ ಅಭಿವೃದ್ಧಿಗೆ ಮನಕೊಟ್ಟು ವಿನಹ ಯಾವ ಜನಾಂಗವೇ ಆಗಲೀ ಏಳಿಗೆಯಾಗದ್ದರಿಂದ ಯುವಕರ ಮೊರೆಯನ್ನು ದೇಶದವರು ಕೇಳದಿರಲಾರರೆಂತ ನಾನು ನಂಬುತ್ತೇನೆ. ಯುವಕರೇ ಮುಂದಿನ ಜನಾಂಗವು. ಯುವಕರು ಕೊಡಗರೇ ಆಗಲೀ ಕೊಡಗೇತರರೇ ಆಗಲೀ, ಬಡವರಾಗಲೀ ಐಶ್ವರ್ಯವಂತರಾಗಲೀ, ಅವರ ಅಭಿವೃದ್ಧಿಯನ್ನು ಕಾದುಕೊಳ್ಳಬೇಕು.

ನಾವೆಲ್ಲರೂ ಒಂದು ಮಹತ್ಕಾರ್ಯದ ಅಂಶಗಳು, ಮಹತ್ತಿನ ದೇಹವೇ ಪ್ರಕೃತಿ ದೇವರೇ ಆತ್ಮ " ಎಂತ ಒಬ್ಬ ಇಂಗ್ಲೀಷು ಕವಿಯು ಹೇಳಿದ್ದಾನೆ

ಬಿ. ಮುದ್ದಪ್ಪ

ಲಾ ಕಾಲೇಜ್

ಮದ್ರಾಸ್ ತಾ|| 25 8-23

(೧೨ ನೇ ಸಂಚಿಕೆಯಿಂದ ಮುಂದೆ ಸಾಗಿದ್ದು)

ಪ್ರಿಯ ಕೊಡವಬಾಂಧವರೇ !

" ಹೆಂಡತಿ ಸತ್ತು ಒಡನೆ ಮದುವೆಮಾಡಬಹುದೋ " ಎಂಬದರ ವಿಷಯವಾಗಿ ಕೊಡವ ಆಚಾರ ನಿರೂಪಣೆಯ ಉದ್ದೇಶ್ಯ ಹೊರಟು ನಮಗಿರುವ ಮತಾಚಾರ ವ್ಯವಹಾರವನ್ನು ಗುರುಪುರೋಹಿತರೆಂಬ ವಿಷಯವನ್ನು ಗತ ಲೇಖನದಲ್ಲಿ ಪ್ರತಿಪಾದಿಸಲ್ಪಟ್ಟಿದ್ದಾಯಿತು ಇಂದು ನಮ್ಮ ಮತ ಮತ್ತು ಗುರುಪುರೋಹಿತ್ಯದ ವಿಚಾರವಾಗಿ ತಿಳಿಸುವೆವು.

ನಾವು ಶಾಸ್ತ್ರಪುರಾಣ ಸಮ್ಮತಕ್ಕೊಳಪಟ್ಟವರಾಗಿ ಕ್ಷತ್ರಿಯರ ಶಾಖೆಗಳಾದ್ದರಿಂದ ನಮಗೆ ಶಾಸ್ತ್ರಸಮ್ಮತವಾದ ಆಚಾರವಿಯದೆಯೆಂದು ಇನ್ನೊಮ್ಮೆ ಹೇಳಬೇಕಾಗಿಲ್ಲ ಆದರೆ ನಮ್ಮ ಆಚಾರಗಳು ಪೂರ್ವಕ್ಕಿಂತ ಈಗ ಬಹು ವ್ಯತ್ಯಸ್ತ ರೂಪಗಳಾದ್ದರಿಂದ ಶಾಸ್ತ್ರಸಮ್ಮತವನ್ನು ನಮ್ಮ ಆಚಾರವಿಚಾರಕ್ಕೆ ಸರಿಹೋಲಿಸಿ ನಮ್ಮ ನಡತೆಯನ್ನು ತೋರಿಸಿ ಕೊಡಬೇಕಾಗಿರುತ್ತದೆ ಹಿಂದೂ ಜಾತಿಯಿಂದೊಡೆದು ಒಂದ ನಮ್ಮ ನಿಜವಾದ ಜಾತಿಯು ಉಗ್ರಜಾತಿಯೆಂದೆನ್ನಲ್ಪಡುತ್ತದೆ ದೇಶದ ಹೆಸರನ್ನೊಳಗೊಂಡ ಕೊಡಗ ಎಂಬ ವಾಚಕವು ಪರ್ಯಾಯ ಹೆಸರಾಗಿದೆ.

(ಉಗ್ರಜಾತಿ ಎಂದರೆ ಇದರ ವಿಷಯ ವಿಸ್ತಾರವು " ಕೊಡಗಿನ ಪ್ರಧಾನನಿವಾಸಿಗಳಾರು " ಎಂಬ ಲೇಖನದಲ್ಲಿ ಅಡಕವಾಗಿದೆ)

ನಮ್ಮ ಮತವು ಶೈವಮತವಾಗಿದೆ ನಾವು ಯಾವಾಗಲೂ ಭಜಿಸತಕ್ಕ ನಮ್ಮ ಕುಲದೇವರು ಶೈವ (ಅಂದರೆ— ಈಶ್ವರ, ಪಾರ್ವತಿ ಭಗವತಿ ಸಾಸ್ತಾವು ಗಣಪತಿ ಕಾವೇರಿ ಭದ್ರಕಾಳಿ, ಚಾಮುಂಡಿ ಮುಂತಾದ) ಸಂಬಂಧದ್ದಾಗಿದೆ ನಮಗೆ ಕ್ಷತ್ರಿಯರ ಸಂಪ್ರದಾಯದಂತೆ ಕುಲಗುರು ಪುರೋಹಿತತ್ವಾದಿಗಳು ಬ್ರಾಹ್ಮಣ್ಯದಲ್ಲಿದೆ ಒಂದು ಗ್ರಾಮವೇ ಕುಲ (ಸಮೂಹ) ವೆಂದೆನ್ನಿಸಿಕೊಂಡು ನಾವಿರುವ ಪ್ರತಿಗ್ರಾಮದಲ್ಲೂ ನಮ್ಮ ಕುಲದೇವತೆಯನ್ನು ಪ್ರತಿಷ್ಠಿಸಿ ಅದರ ಪೂಜೆಗೆ ಒಬ್ಬ ಬ್ರಾಹ್ಮಣನನ್ನು ನಿಯಮಿಸಿರುವೆವಷ್ಟೆ ! ಆ ಗ್ರಾಮದಲ್ಲಿ ಆ ಗ್ರಾಮದೇವತೆಯ ಯೋಗ್ಯನಾದ ಅರ್ಚಕನೇ ನಮ್ಮ ಕುಲಗುರು ಪುರೋಹಿತನಾಗಿದ್ದಾನೆಂದು ಭಾವಿಸಿಕೊಂಡು ಬರುವದಾಗಿತ್ತು ನಮ್ಮ ಒಳಗಿನ ನಡತೆಯ ಮಟ್ಟಿನ ಯಾವ ಸಂಗತಿ ಚರ್ಚೆಗೂ " ಗ್ರಾಮಣಿ " ಇರುವಂತೆ ನಮ್ಮ ಗ್ರಾಮದಲ್ಲಿ ತಕ್ಕನಂಬವನೊಬ್ಬನನ್ನು ನಿಯಮಿಸಿಕೊಂಡಿರುತ್ತೇವೆ ಈತನು ವಿಧಿಸಿದ ದಂಡಗಳಿಗೆ ಪಾತ್ರರಾಗಿ (ಗುರುಕಾಣಿಕೆ ಕೊಟ್ಟು ಗುರುವಿನಿಂದ ಪ್ರಸಾದ ಸ್ವೀಕರಿಸುವಂತೆ, ನಮ್ಮ ಗ್ರಾಮದೇವರಿಗೆ ಕಾಣಿಕೆ ಇಟ್ಟು ಆ ದೇವರ ಪ್ರಸಾದ ಸ್ವೀಕರಿಸಿ ಶುದ್ಧೀಭೂತರಾಗುತ್ತೇವೆ ಕ್ಷೇತ್ರದಲ್ಲಿ ಪಿಂಡಪ್ರದಾನ ಮಾಡುವದು ಸ್ನಾನಮಾಡುವುದು ಪೂಜೆಮಾಡಿಸುವುದು, ವೇದ ಉಕ್ತ ಶಾಂತಿ ಕರ್ಮಾದಿಗಳ ಮಾಡಿಸುವುದು ದಾನ ಮುಂತಾದ್ದು ಮಾಡಿಸುವುದು ಮುಂತಾದ್ದು ಪೌರೋಹಿತ್ಯರಿಂದಲೇ ಈವರೇಗೂ ನಡೆದುಬಂದಿದ ನಮಗೆ ಗುರುವೆಂಬೊಬ್ಬನು ಪ್ರತ್ಯೇಕವಾಗಿಲ್ಲವೆನ್ನುವುದು ಸಹಜ ಈ ಗುರುಕರ್ಮದ ಅರ್ಧಪೌರೋಹಿತ್ಯನಲ್ಲಿಯು ಮಿಕ್ಕಿದದ್ದನ್ನು ಗ್ರಾಮದೇವತೆಯ ಮೂಲಕ ನಡಸುವುದರಿಂದ ನಮಗೆ ಗುರುವು ಗ್ರಾಮದೇವರೆಂದೂ ಅರ್ಚಕನು ಪೌರೋಹಿತ್ಯನೆಂದೂ ಕಲ್ಪಿಸಬಹುದು ಗುರುವಿನ ಪ್ರಭಾವದಿಂದುಂಟಾಗತಕ್ಕ ಕರ್ಮವನ್ನು ದೇವರಿಂದಲೂ ಗುರುವಿನ ಕರ್ಮದಿಂದುಂಟಾಗತಕ್ಕದ್ದನ್ನು ಅರ್ಚಕನಿಂದ ಮಾಡಿಸುತ್ತೇವೆ ಅಂದರೆ ದಂಡಕಾಣಿಕೆ ತೀರ್ಥಸ್ವೀಕಾರ ಗುರುವಿನಿಂದ ತೆಗೆದುಕೊಳ್ಳುವುದಕ್ಕೆ ಬದಲಾಗಿ ದೇವರಿಂದ ಉಪಯೋಗಿಸುತ್ತೇವೆ ಮತ್ತು ಶುಭಾಶುಭಗಳಲ್ಲಿ ಗ್ರಾಮ ಪೌರೋಹಿತ್ಯನನ್ನು ಮನೆಗೆ ಬರಮಾಡಿಕೊಂಡು ದೇವರ ಪ್ರಸಾದ ಸ್ವೀಕರಿಸಿಕೊಳ್ಳುವದು ಶುದ್ಧಕ್ಕೋಸ್ಕರ ಪಂಚಗವ್ಯಾದಿಗಳ ಮಾಡಿಸಿಕೊಳ್ಳುವದೂ ಈಗಲೂ ಉಂಟು ನಾವು ಒಂದು ಗ್ರಾಮವನ್ನು ಒಂದೇ ಮನೆಯವರೆಂಬದಾಗಿಯೂ, ಒಂದೇ ಕುಲಯೆಂಬ (ಕುಲ ಎಂದರೆ ಕುಟುಂಬ, ಸಮೂಹ) ದಾಗಿ ಊಹಿಸಿಕೊಂಡು ಒಂದು ಒಗ್ಗಟ್ಟಿನ ಕಟ್ಟು (ನಿಯಮ) ಮಾಡಿಕೊಂಡಿರುತ್ತೇವೆ ಆ ಕಟ್ಟು ಪೂರ್ವಜನಿಂದಲೇ ಉಂಟಾಗಿದೆ ಒಂದು ಗ್ರಾಮವು ಒಂದೇ ಮನೆ ಯಾ, ಕುಟುಂಬಕ್ಕೆ ಸರಿಸಮಾನವೆಂಬ ಹೇಳುವರೆ ಕೆಲವು ಉಪಮಾನಗಳೂ ಈಗಲೂ ಕಾಣುತ್ತವೆ ಅವು ಯಾವವೆಂದರೆ—ಒಂದನೇದು ಸಾಧಾರಣವಾಗಿ ಹೆಣ್ಣು ಕೊಡುವುದು ತರುವುದು ಒಂದೇ ಗ್ರಾಮದಲ್ಲಿ ಮಾಡುವುದಿಲ್ಲ ಒಂದು ಗ್ರಾಮದಲ್ಲಿ ಯಾರಾದರು ಗ್ರಾಮಸ್ಥರು ಸತ್ತರೆ ದೇವಸ್ಥಾನದ ಪೂಜೆ ನಿಲ್ಲಿಸುವುದು ಮತ್ತು ಗ್ರಾಮಸ್ಥರೆಲ್ಲರೂ ತಮ್ಮ ತಮ್ಮ ಕೆಲಸಬಿಡುವದು (ಈಗ ಸಾಧಾರಣ ಗದ್ದೆ ಊಡುವ ಆರಂಭದ ಕೆಲಸವು ನಮಗೆ ಪ್ರಧಾನ ಕರ್ಮವಾದ್ದರಿಂದ ಅದನ್ನು ನಿಲ್ಲಿಸುವದು ಮಾತ್ರ ಇದೆ) ಮುಂತಾದ ಸೂಚನೆಗಳು ಇವೆ ಆದರೆ ಇವೆಲ್ಲವೂ ಈಗ ಬದಲುತ್ತಾ ನಾಮ ಮಾತ್ರ ಉಳಿದಿರುತ್ತವೆ ಹೀಗೆ ಗ್ರಾಮವನ್ನು ಮನೆಯ ಹಾಗೆ ಭಾವಿಸಿ ಗ್ರಾಮಸ್ಥನನ್ನು ಮನೆಯಜಮಾನನೆಂದು ಭಾವಿಸಿಕೊಂಡು ಪರಸ್ಪರ ಸಹಾಯಭೂತಿಗಳಾಗಿ ತಕ್ಕನ ಮಾತು ಮೀರದೆ ಯಾವ ವಿಧದ ಪಂಚಾಯಿತಿ ಮತಾಚಾರ ನಾಡಾಚಾರಗಳನ್ನು ಚರ್ಚಿಸಿ ಯಾವಾಗಲೂ ಊರುಬಂಬುಲಗಳಲ್ಲಿ ಸೇರಿಕೊಂಡು ಇರುವದು ನಮಗೆ ಮುಂದೆ ಇದ್ದ ಸಹಜ ಗುಣವಾಗಿದೆ ಇದೇ ನಮ್ಮ ಧರ್ಮವು ಮದುವೆ ಸತ್ತ ಸಂಸ್ಕಾರ, ಉತ್ತರ ಕರ್ಮ ಇವೆಲ್ಲಾ ಮಂತ್ರಗಳಿಲ್ಲದೆ ತಂತ್ರಮೂಲಕವಾಗಿ ಯಾಗುವುದರಿಂದ ಇದಕ್ಕೆ ಪೌರೋಹಿತ್ಯರು ಬೇಕಾದ ಅವಶ್ಯವಿಲ್ಲ ತತ್ರಾಪಿ, ಉತ್ತರ ಕರ್ಮದಲ್ಲಿ ಮೃತನ ಗತಿಗೋಸ್ಕರ ಮಾಡುವ ಪಿಂಡಪ್ರದಾನವನ್ನು ಮಂತ್ರಪೂರ್ವಕವಾಗಿಯೇ ಮಾಡುತ್ತೇವೆ ಇನ್ನು ಮಂತ್ರವಿಲ್ಲದೆ ತಂತ್ರಮೂಲಕ ಮಾಡುವ ಕರ್ಮವೆಲ್ಲವೂ ಹೋಲಿಸಿ ನೋಡಿದರೆ ಹೆಚ್ಚಾಗಿ ಶಾಸ್ತ್ರಸಮ್ಮತವಾದದ್ದಾಗಿಯೇ ಇದೆ ಇದರಲ್ಲಿ ವಿವಾಹ ಉತ್ತರಕ್ರಿಯಾದಿ ಸಂಸ್ಕಾರವು ತಂತ್ರಮೂಲಕವೇ ಮಾಡಬೇಕೆಂಬುದಕ್ಕೂ ವಿಧಿಯುಂಟು ಈವರೇಗೂ ನಾವು ನಮ್ಮ ಜಾತಿ ಯಾವುದು, ಕುಲಗೋತ್ರಗಳೇನು ನಮ್ಮ ಮತವಾವುದು ನಮಗಿರುವ ಗುರುಪುರೋಹಿತರುಗಳಾರು, ಗುರುಪುರೋಹಿತರೆಂದರೇನು, ನಮ್ಮ ನಡತೆ ಹ್ಯಾಗೆ, ನಾವು ಯಾವ ನಿರ್ಬಂಧಕ್ಕೆ ಒಳಪಟ್ಟವರಾಗಿರುತ್ತೇವೆ ವೇದವು ಧರ್ಮಸ್ಮೃತಿಶಾಸ್ತ್ರಾದಿಗಳು ನಮಗೆ ಸಂಬಂಧಿಸುವವೊ ಅಥವಾ ಇವುಗಳಾವುದೂ ನಮಗೆ ಇಲ್ಲವೊ ಯಾ, ನಾವು ನಾನು ಈಗ ನಡೆಯುವ ನಡತೆಯು ಯಾವ ನಿಬಂಧನೆಯನ್ನನುಸರಿಸಿದೆ, ಅಲ್ಲವೆ ನಮಗೆ ಯಾವ ನಿಯಮವೂ ಇಲ್ಲದೆ ನಮಗೆ ಮನಸ್ಸು ಬಂದ ಹಾಗೆ ವರ್ತಿಸಬಹುದೊ ಎಂಬ ಮುಂತಾದ ಪ್ರಶ್ನೆಗಳ ಸಂಶಯವನ್ನು ಪ್ರತಿಪಾದಿಸಿ ಇನ್ನು ನಮ್ಮ ಲೇಖನೋದ್ದೇಶವಾದ ಪತ್ನಿ ಮೃತಳಾದ ಪತಿಗೆ ವಿವಾಹ ಯಾವ ಸಮಯದಲ್ಲಿ ಹ್ಯಾಗೆ ಮಾಡಬಹುದೆಂಬ ವಿಚಾರಕ್ಕೆ ಹೊರಡುವ ಪದ್ಧತಿಯೆಂದರೇನು ಆಚಾರವೆಂಬದು ಯಾವದು, ನಡತೆಯೆಂಬುದರ ಅರ್ಥವೇನು ಸ್ತ್ರೀಪುರುಷರೆಂಬಲ್ಲಿ ಭೇದವಿದೆಯೋ ಎಂಬ ಸಂಗತಿ ಚರ್ಚಿಸಬೇಕಾಗಿದೆ, ಇನ್ನು ಆಚಾರವೆಂದರೆ ಶಾಸ್ತ್ರದಲ್ಲಿ ಹೇಳಲ್ಪಟ್ಟ ಕರ್ಮಗಳನ್ನು ಅವರವರ ಮತಕ್ಕೆ ತಕ್ಕಂತೆ ನಡೆದು ಆಚರಿಸುತ್ತಾ ಬರುವದೇ ಆಚಾರವಾಗಿದೆ ಶಾಸ್ತ್ರವು ಆಚಾರವನ್ನೂ ಆಚಾರವು ಶಾಸ್ತ್ರವನ್ನೂ ಬಿಟ್ಟಿರುವುದಿಲ್ಲ ಅವು ತಮ್ಮೊಳಗೆ ಪರಸ್ಪರ ಒಂದಕ್ಕೊಂದು ಸಂಬಂಧಿಸಿಕೊಂಡೇ ಇರುತ್ತದೆ ಇದೇ ಆಚಾರವು ಈ ಆಚಾರವು ದೇಶಕಾಲಭೇದಕ್ಕನುಗುಣವಾಗಿ ಸಮಯ ಹೋದ ಹಾಗೆಲ್ಲಾ ಆ ಸಮಯದ ಪ್ರಾಬಲ್ಯದಿಂದ ಅಲ್ಪ ಸ್ವಲ್ಪ ವ್ಯತ್ಯಸ್ತ ಪಡಿಸಿ ಆಗಾಗಿನ ಸಮಯಕ್ಕೆ ಅನುಕೂಲಿಸುವಂತೆಯೂ ಶಾಸ್ತ್ರಸಮ್ಮತವಾಗುವಂತೆಯು ತಿದ್ದುಪಡಿಪಡಿಸಿಕೊಂಡು ಆ ಪ್ರಕಾರ ನಡೆದು ಬರುವದೇ ಪದ್ಧತಿಯು ಆದ್ದರಿಂದ ಈ ಪದ್ಧತಿಯು ಒಂದೊಂದು ಗ್ರಾಮಗಳಲ್ಲಿ ಒಂದೊಂದು ತರವಾಗಿ ಆಚಾರಕ್ಕೆ ಅಲ್ಪಸ್ವಲ್ಪ ವ್ಯತ್ಯಾಸವುಳ್ಳದ್ದಾಗಿರುತ್ತದೆ

(ಮುಂದರಿಯುವದು)

ಪ್ರಕಟನೆ.

ಅಯ್ಯಾ,

ಸೋಮವಾರಪೇಟೆಯಲ್ಲಿ ಒಟ್ಟೆಯ ವ್ಯಾಪಾರ ಮಾಡಿಕೊಂಡಿರುವ ಚುನ್ನಿಲಾಲನು ತಿಳಿಯಪಡಿಸುವುದೇನಂದರೆ– ನಾನು ಎರಡುವರೆ ತಿಂಗಳಿಗೆ ಹಿಂದೆ ನನ್ನ ದೇಶವಾದ ಮಾರುವಾಡಿಗೆ ಹೋಗಿದ್ದೆನು, ಆಗ ನಾನು ಯಾರೊ ಜನರಿಂದ ಅವಸರದಲ್ಲು ಒಂದುನೂರು ರೂಪಾಯಿಯ ಒಂದು ನೋಟಿನ ನಂಬ್ರ ಬದಲಾವಣೆಯನ್ನು ನೋಡದೆ, ಕೆಲವು ನೋಟುಗಳೊಳಗೆ ಅದನ್ನೂ ಸಹ ಅಂಗಡಿಯಲ್ಲಿ ಇಟ್ಟು ಹೋಗಿದ್ದೆನು ಎರಡು ದಿವಸಕ್ಕೆ ಹಿಂದೆ ಬಂದು ನೋಡುವಾಗ್ಗೆ ಕಂಡು ಬಂದ ಈ ಬದಲಾವಣೆಯನ್ನು ಕೆಳಗೆ ನಮೂದಿಸಿರುತ್ತೇನೆ ಯಾರಾದರು ಪಿರ್ಯಾದ್ಯರ ಹತ್ತಿರ ಹೀಗೆಯೇ ಬದಲಾವಣೆಯಾಗಿರಬಹುದು ಅದನ್ನು ಒಡನೆ ತಿಳಿಸಿದರೆ ಸರಿಪಡಿಸಿಕೊಳ್ಳಬಹುದಾಗಿ ಕೋರಿಕೆ

B E.	B Ꞓ.
82 53621	82 53623

ಸೋಮವಾರಪೇಟೆ (Sd) ಚುನ್ನಿಲಾಲ್.

16—8—23.

ಕೊಡಗಿನಲ್ಲಿಯೂ, ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳಲ್ಲಿಯೂ ಪ್ರವಾಹದೆಸೆಯಿಂದ ನಷ್ಟವುಂಟಾಗಿರುವ ಜನಗಳ ಕಷ್ಟನಿವಾರಣಾಗಿ ಉದಾರ ಮನಸ್ಸಿನಿಂದ ಚಂದಾಕೊಟ್ಟ ಮಹನೀಯರ ತಪಸೀಲ್ ಪಟ್ಟಿ.—

ನಂಬರು	ಸಹಾಯಮಾಡಿದವರುಗಳ ಹೆಸರು	ಮೊಬಲಗು		
	ಕಳೆದ ವಾರದಿಂದ ಮುಂದರಿಸಿದ್ದು	148	0	0
61	ಮ|| ಪಟ್ಟಮಾಡ ದೇವಯ್ಯನವರು	5	0	0
62	ಸಿ ಯಂ. ಸೋಮಯ್ಯನವರು	6	4	0
63	,, ತಿಮ್ಮಯ್ಯನವರು	0	4	0
64	, ವೈ ಯಸ್ ರಾಮಯ್ಯನವರು	0	8	0
65	, ಯಂ ಬುಡನ್ ಸಾಹೇಬರವರು	0	8	0
66	,, ಹುಸೆನ್ ಖಾನ್ ಸಾಹೇಬು	0	8	0
67	, ಗೋವಿಂದರಾವರವ	0	4	0
68	,, ಅಬ್ದುಲ್ಲಾಕರಿಯವ	0	8	0
69	, ಕುಂಞಣ್ಣ ಯವ	1	0	0
70	ಅಮ್ಮಬನವರು	0	4	0
71	ಹೈದರ್ ಸಾಬು	0	8	0
72	,, ಪಿ ಮಂಗೇಶರಾಯ	10	0	0
73	, ಯಂ ಬೀರೈಯ್ಯನವರು	2	0	0
74	,, ಜಿ ಯಸ್. ಮುತ್ತಯವರು	1	0	0
75	, ಕೆ. ಸಿ ದೇವಯ್ಯನವರು	1	0	0
76	ಬಿ ವೆಂಕಟರಾಮಯ್ಯನವರು	0	8	0
77	,, ಜೆ. ಗಣೇಶರಾವ್	1	0	0
78	, ಸಿ ಡಿ ಅಪ್ಪಯ್ಯನವರು	0	4	0
79	,, ಪಿ ಯಿ ಪೂವಯ್ಯನವರು	0	8	0
80	, ಕೆ ಪಿ ಸುಬ್ಬರಾವರು	0	4	0
81	,, ಬಿ ಕೃಷ್ಣಮೂರ್ತಿಯವರು	0	8	0
82	,, ಪಿ ಯಸ್ ಸುಬ್ಬಯ್ಯನವರು	0	8	0
83	ಬಿ ಯಸ್ ಕಾಳಪ್ಪನವರು	1	0	0
84	ಆರ್ ಹೆಚ್ ನಯ್ಯನವರು ಅರುಗಲ ಉದ್ದದ 2 ಸೀರೆ			
85	ಯಂ ಎ ಚಂಗಪ್ಪನವರು	0	8	0
86	ಯಂ ಮಾಚಯ್ಯನವರು	0	4	0
87	ಸಿ ಯಸ್ ತಿಮ್ಮಯ್ಯನವರು	0	4	0
88	ಅಪ್ಪಸ್ವಾಮಿನಾಯಡುಯವರು	1	0	0
89	ವೀರಪ್ಪನಾಯುಡುವರು	1	0	0
90	ವಿರಾಯಿ ಕೋವಪ್ಪನವರು	2	0	0
91	, ಹೊಟೇಲ್ ಮಡಪ್ಪನವರು	2	0	0
92	ಕೊಡೂರು ನಾಕ್ಸೀ ಯೂನಿಯನ್ ಸಂಘದವರಿಗಾಗಿ ಕೊಡಂಡ ಮುದ್ದಯ್ಯನವರು	10	0	0
93	ಬೊಂಬಾಯಲ್ಲಿರು ಕೊಡಗು ಸಮಾಜ ಫಂಡಿನವರಿಗಾಗಿ ಮಾಮುಂಡ ನಂಜುಂಡನವರು	15	0	
	ಜುಮ್ಲಾ	208	0	

(ಮುಂದುವರಿಯುವುದು)

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ [ಎಡಿಟರ್]

ಮ್ಯುನಿಸಿಪಲ್ ಕೆರೆ

" ಪುರನಿವಾಸಿ 'ಗೆ ನನ್ನ ಪತ್ರ ಕಂಡು ವ್ಯಸನವಾಯಿತಂತೆ ನನಗಾದರೊ ಮ್ಯುನಿಸಿಪಲ್ ಬೈಲೊ 5 (a ರನ್ವಯವರ ಪತಿಮುರೆ ಪ್ರಸಿಡೆಂಟರು, ರೇಟ್ ಪೇಯರುಗಳನ್ನು ಸಭೆಗೆ ಬಿಟ್ಟಿದ್ದೇ ತಪ್ಪೆಂದು " ಹೇಳಿದವಲ್ಲಾ ಎಂದು ವ್ಯಸನ ಆಯಿತು ಪುರನಿವಾಸಿ " ಯು ನನ್ನ ಪತ್ರವನ್ನು ಅವಸರದಿಂದ ಓದಿದಂತೆ ಕಾಣುತ್ತದೆ, ಮ್ಯುನಿಸಿಪಲ್ ಕಮಿಟಿಯವರು ಕೆರೆ ಮುಚ್ಚ ಕೂಡದೆಂದು ಪ್ರೈಸಲ್ ಮಾಡಿದ್ದಲ್ಲಿ ಕೆರೆ ಮುಚ್ಚುವರೆ ಖರ್ಚು ಎಷ್ಟು ಎಂದು ಅಂದಾಜನ್ನು ಕೇಳಿದ್ದು ಯಾಕಲ್ಲದೆ ಕೆರೆ ಮುಚ್ಚಬೇಕೆಂದು ಕಮಿಟಿಯವರು ಪ್ರೈಸಲು ಮಾಡ್ದರೊ, ರೇಟುಪೇಯರುಗಳನ್ನು ಒಳಗೆ ಬಿಟ್ಟ ತಪ್ಪೆಂದು " ಅಭಿಪ್ರಾಯಪಡುವ ಸಭೆಯೋ ಆ ಸಭೆಯ ಪ್ರಸಿಡೆಂಟರೋ ಆಗಲಿ ಅಥವಾ ಇವರನ್ನು ಕೆಡಹುವ ಪುರನಿವಾಸಿಯಾಗಲಿ ಸ್ವರಾಜ್ಯದ ಹತ್ತಿರ ಒಪ್ಪುವಷ್ಟು ಕೂಡ ಯೋಗ್ಯತೆ ಇರುವವರಂತೆ ಕಾಣದಿಲ್ಲ ಮ್ಯುನಿಸಿಪಾಲಿಟಿ ಸ್ವರಾಜ್ಯದ ಪ್ರಥಮಮೆಟ್ಟಿ ಆ ಪ್ರಥಮಮೆಟ್ಟಲಲ್ಲಿ ಬೈಲೊ 5 (a) ಬಂದಿದೆ, ಆ ಪ್ರಕಾರ ರೇಟುಪೇಯರುಗಳು ಸಭೆಗೆ ಬರಬಹುದು ಬರಕೂಡದೆಂದು ಪ್ರಸಿಡೆಂಟರು " ಗುಟ್ಟಾಗ

...ವಾಸಿಯು ನಂಬಿಕೆಗೆ ಪಾತ್ರರಾದ ಎರಡುಗಳು ಯಾ... ಈ ವೈಲಕ್ಷಣ್ಯವನ್ನು ತೋರಿರಿ? ಅಷ್ಟರಿಂದ ನಾನು ಸ್ವರಾಜ ಬೇಕೇ ಎಂದು ಕೇಳುವೆನು.

ಪುರನಿವಾಸಿ! ಈಗ ನಿಮುನಿಸಿಪಲ್ ಗದ್ದಿ ನೀವಾಗಿಯೂ ನಿಮಗೆ ಸ್ವರಾಜ್ಯವೇ? ನೀವು ಅದಕ್ಕೆ ...ವರೇ? ಮಗು 'ಸಕ್ಕರೆ ಬೇಕು' ಅಳುವವನಾಗ ...ಕಾಡಬೇಡ ಅಂದಾಯ ಕೊಡುವ ... ಮೇಲೆ ...ಯಲ್ಲಿ ಸವಳ ಸೋರುತ್ತಿದ್ದ ...'ದನಗಳಿಗೇನು ಮಾಡುತ್ತೀರಿ'' ಎಂದು ಕೇಳಲಿಲ್ಲ' ಇವ...ವೇ ನಿಮ್ಮ ಸ್ವರಾಜ್ಯದಲ್ಲಿ ನೀವು ನಿಮ್ಮಂತೆ ಆಸ್ತಿ ...ಯು ಪಡುವವರೂ ಮಾಡುವ?

ಪುರನಿವಾಸಿಯು ಅಭಿಪ್ರಾಯಕ್ಕೆ ಪಾರ್ಲಿಮೆಂಟು (House of Commons) ಕೆ ಜನರ ಗುಟ್ಟಿನ ಸಭೆ ಎಂದು ತೋರುತ್ತದೆ. ಪಾರ್ಲಿಮೆಂಟು ಮೆಂಬರುಗಳು ನಿವಾಸಿಗಳಭಿಪ್ರಾಯಕ್ಕೆ ಸರಿಯಾಗಿ ಹೋಗದಿದ್ದರೆ ಕೂಡಲೆ ನಿವಾಸಿ ಜನರು ಆ ಸಭೆಯನ್ನು ಎಲ್ಲಾ ಕಡೆಗಳಲ್ಲಿಯೂ ನಿಮಿತ್ತ ಮಾಡುವರು. ಅಲ್ಲಿ ಗೊಂದಲವಾಗುವುದು ಅವರು ಯೋಚಿಸುವುದೂ ಇಲ್ಲ. ಮನೆ ಹಾಸಿಗೆವರೆಗೆ ...ಯುವುದೂ ಇಲ್ಲ.

ಪುರನಿವಾಸಿಯು ಅಭಿಪ್ರಾಯಕ್ಕೆ ಕೆರೆ ಮುಚ್ಚುವುದಕ್ಕೆ ಓಟು ಕೈಬಿಟ್ಟ ಮುಖ ನೀವು ನಿವಾಸಿ ...ಂತೆ ಇದೊಂದು ಹೊಸಕ್ರಮ. ...ವ ನಮ್ಮ ...ದ ಇದು ಪುರನಿವಾಸಿಗಳ ... ತೆ ... ಆದರೆ ... ಕಟ್ಟಿಗೆ ... ವಾರಿಮಾಡು... ಮನೆ ಹತ್ತಿರವಿರುವ ... ಅಂದವಾಗಿ ... ಕಟ್ಟಿಸಲಿಕ್ಕೆ ಓಟು ಕೈಬಿಟ್ಟ ... ಸ್ಪೆನ್ಸರ್ ಅಂಗಡಿಯ ... ದೇವಸ್ಥಾನದ ...ದಲ್ಲೂ ಇರುವ ಮಾರ್ಗಗಳಲ್ಲೂ ಮನ್ನಾ... ಅನೇಕ ಪರ ಗಳಿಂದ ... ಸಾಗಿದ್ದರೂ ...ವ ಕ್ಲಬ್ಬಿನ ರಸ್ತೆಯನ್ನು ಪುರನಿವಾಸಿ... ಓಟು ತೆಗೆದುಕೊಂಡು ಮಾಡಿರೊ ವಿನೊ? ಇವ... ಇತರ ಓಟು ಬೇಡವೇ? ಅಯ್ಯಾ

ಆದರೆ ಪುರನಿವಾಸಿಯು ಅಭಿಪ್ರಾಯದಂತೆ ಪ್ರಸಿಡೆಂಟರು ಮಾಡಲಿಲ್ಲ. ಅವರು ನಿಯಮಿತ ... ಕೌನ್ಸಿಲರುಗಳನ್ನು ಮಾತ್ರ ... ಅವರಲ್ಲಿ ಅನೇಕರು ಮುಚ್ಚಬೇಕೆಂದು ಬರೆದಿದ್ದಾರೆ. ಕೌನ್ಸಿಲರುಗಳ ಪಟ್ಟಿಯಲ್ಲಿ ಅನೇಕರು ಪಕ್ಷ ... ಪ್ರಸಿಡೆಂಟರು ಅಹುಜಾಜಿಜನರ ಅಭಿಪ್ರಾಯವನ್ನು ಮಾತ್ರ ಕೇಳಿದ್ದರಿಂದ ಉಳಿದವರಿಗೆ ಈ ಕೆರೆಯ ವಿಷಯ ಸಮ್ಮಂಧವಿಲ್ಲವೆಂದು ತಿಳಿಯಬೇಕಾಗಿದೆ. ಅಷ್ಟು ... ತಿಳಿಯದೆ ಅಥವಾ ದಾಕ್ಷಿಣ್ಯ ಮಾಡಿರಬಹುದೆಂ... ನಡುವ ಪುರನಿವಾಸಿಯ ಎಗರಿಗೆ ಎಡೆಯೇ ಇಲ್ಲ.

ಜಮೀನುದಾರರ ಸಂಪದ ಹಕ್ಕುಗಳಿಗೂ ಕೆರೆಯ ವಿಷಯದ ಸಮಾಚಾರಕ್ಕೂ ಯಾವ ಸಮ್ಮಂಧವೂ ಇಲ್ಲ.

ಪುರನಿವಾಸಿ! ಪ್ರಾಣಿದಯೆ ತೋರಿಸುವ ಪ್ರಸಿಡೆಂಟರು ಆದದ್ದು ತಪ್ಪಲ್ಲವೇ? ಮನುಷ್ಯರು ಪ್ರಾಣಿವರ್ಗಕ್ಕಿಂತ ಮೇಲಲ್ಲವೇ?

ಅವರು ಈ ಕೆರೆಯ ದೆಸೆಯಿಂದ ಅನುಭವಿಸುವ ಕಷ್ಟ ನಿಮಗೆ ಹಿತವೇ? 1915 ನೆ ಇಸವಿಯಲ್ಲಿ ಮದ್ರಾಸಿನಿಂದ ಒಬ್ಬ ಸಾನಿಟರಿ ಕಮಿಶನರ್ ಬಂದಿದ್ದರು. ಅವರು ಈ ಕೆರೆಯ ವಿಷಯ ಏನು ಅಭಿಪ್ರಾಯ ಪಟ್ಟರೆಂದು ಬಲ್ಲಿರೊ? ಬರುವ 15 ನೇ ತಾರೀಖಿನ ವಿಹಾರಕ್ಕಿಂಗೆ ಒನ್ನಿ ಅಗ ವೇದ್ಯವಾಗಬಹುದು. ಅಯ್ಯಾ ಪುರನಿವಾಸಿ! ನಿಮಗೂ ಪ್ರಸಿಡೆಂಟರಿಗೂ ಅದೇಕೆ ಅಷ್ಟು ಪ್ರಾಣಿದಯೆ ಇದೆ ಎಂದು ತೋರಿಸಿಕೊಳ್ಳುತ್ತೀರಿ? ಮ್ಯುನಿಸಿಪಲ್ ಹಾ ತೋಟದ ...ತು ರಾಜಸೀಟಿನ ...ಲ್ಲನ್ನು ಅದೇಕೆ ಹರಾಜ ಮಾಡುತ್ತೀರಿ? ಪ್ರಾಣಿಗಳಿಗೆ ಉಚಿತವಾಗಿ ಯಾಕೆ ಕೊಡಬಾರದು? ಪ್ರಾಣಿದಯೆ! ಒಹ ಅನ್ಯಾಯಿತು. ದೊಡ್ಡಿ ಬಾರ್ಡ್ ಹಚ್ಚಿದ್ದು ಅದಕ್ಕೊ? ದೊಡ್ಡಿಯಿಂದ ದನಗಳು ಹೊರಗೆ ಬರುವಾಗ ಒಳ್ಳೇ ಗೂಳಿಗಳಂತೆ ಬರುತ್ತವೆ ಅಲ್ಲವೇ? ದೊಡ್ಡಿ ಪಹಾರವಾಗಿ ಬಹಳಕಾಲವಾಯಿತು. ಜನರಿಗೆ ಪ್ರಾಣಿದಯೆ ಮರೆತುಹೋಗಿರೆ. ಈಗ ನೀವು ಅವರ ... ತರುವಂತೆ ತೋರುತ್ತದೆ. ಪ್ರಾಣಿಗಳಿಗೆ ಒಳ್ಳೆದಾಗಬಹುದೆಂದು ನಾವೂ ಕೋರಲೇಬೇಕು. ಆದರೆ ಪ್ರಾಣಿಗಳ ಮೇಲೆ ದಯೆ ತೋರಿಸುವಾಗ ಮನುಷ್ಯರನ್ನು ಮರೆಯಬೇಡಿ. ಮನುಷ್ಯರಿದ್ದರೇ ಪ್ರಾಣಿಗಳ ಉಪಯೋಗ.

ಅಯ್ಯಾ ಪುರನಿವಾಸಿ! ನಿಮ್ಮ ಸ್ವರಾಜ್ಯದಲ್ಲಿ ನೀವು ...ಡಿಕಲ್ ಪಾರ್ಲಿಮೆಂಟು ಇಟ್ಟುಕೊಳ್ಳುವುದಿಲ್ಲವೇ? ಅಥವಾ ಇಷ್ಟರೂ ಅವರ ಅಭಿಪ್ರಾಯದಂತೆ ನಡೆಯುವುದಿಲ್ಲವೊ? ನಡೆಯುವುದಾದರೆ 1915 ನೇ ಇಸವಿಯ ಸಾನಿಟರಿ ಕಮಿಶನರರ ರಿಪೋರ್ಟು ನೋಡಿ. ಈಗಿನ ಸಭೆಯ ಮೆಡಿಕಲ್ ಮೆಂಬರರ ರಿಪೋರ್ಟು ನೋಡಿ. ಮನುಷ್ಯರ ಆರೋಗ್ಯಕ್ಕೋಸ್ಕರ ಆ ರಿಪೋರ್ಟು ನೀವು ನೋಡಲೇಬೇಕು. ನೋಡಿದನ್ನು ಕಟುಕರೆಂದು ನಾನು ನಂಬುತ್ತಲಿಲ್ಲ.

ಪುರನಿವಾಸಿಗೆ ರಾಜನಲ್ಲಿರುವ ವಿಶ್ವಾಸಕ್ಕಿಂತ ಆತನ ಕೆರೆಯಲ್ಲಿ ಹೆಚ್ಚಾಗಿಯು ಕಾಣುತ್ತದೆ. ಈ ಕರಹದವನು ಅನೇಕರಿರುವರು. ಕೆಲವರಿಗೆ ದೇಶಭಕ್ತರಾಗಿ ... ಅವರ ಗುಟೆಸಮೇಲೆ ಆಶೆ ...

ಮನರಕೊಂಡೆಯಲ್ಲಿ ಕೂಗಿಕೊಳ್ಳುವನು ಬೇಕೆಂತ ಹಾಗೆ ನೋಡುತ್ತಾರೆ. ಈ ಸಮಯಕ್ಕೆ ಹೋಗುವವನು ಮಾತ್ರದಿಂದ ತುಪ್ಪಿಗೋಸ್ಕರ ಹೋಗುತ್ತಾನೆ. ಪಾರಿಬೀಳುತ್ತಾನೆ. ಇವು ಎರಡಕ್ಕೆ ಇರುವ ವ್ಯತ್ಯಾಸ ಇದೇ.

ಪುರನಿವಾಸಿಗಳೆಲ್ಲರೂ ಶ್ರದ್ಧೆಯಿಂದ ಧರ್ಮಿಷ್ಠರಾಗಿ ಪುಣ್ಯ ಕೆಲಸವನ್ನು ಮಾಡುವುದಾದರೆ ನಮ್ಮ ಆಕ್ಷೇಪ ವೂ ಏನೂ ಇಲ್ಲ. ನಾವೂ ಒಂದಿಷ್ಟು ಊರುವೆವು. ಧರ್ಮಿಷ್ಠರೇ! ಕೆರೆ ಮುಚ್ಚಬೇಡಿ. ಪ್ರಾಣಿಗಳಿಗೆ ಬೇಕು. ಪುಣ್ಯ ಕೆಲಸ ಮಾಡುವವರೇ! ಕೆರೆ ಮುಚ್ಚಬೇಡಿ! ಮುಚ್ಚಿದರೆ ನಿಮಗೆ ಬೇರೆ ಧರ್ಮಿಷ್ಠರೇ ಪುಣ್ಯ ಕೆಲಸವನ್ನು ಮಾಡುವವರೇ! ಕೆರೆ ಮುಚ್ಚಬೇಡಿ. ಏನು ಪುರಾತನ ಕೆರೆ! ಇದು ಬೀಳುವುದಕ್ಕೆ ಬೇಕು! ಬೋರ್ಡಿಗೆ ಹೋಗುವುದಕ್ಕೆ ಬೇಕು! ರಾಜರ ಕೆರೆ! ಕಡವೆಗಳಿಂದ ಇದ್ದ ಕೆರೆ! ಶೌಚಕ್ಕೆ ಬೇಕು. ಮುಚ್ಚಬೇಡಿ! ಅಷ್ಟನೆಟ್ಟ ಅಂದವಾದ ನೀರುಹಕ್ಕಿಗಳೂ ಇರೂ ಜಂತುವಿಲ್ಲ.

ರೇಟ್‌ಪೇಯರ್.

ಅಯ್ಯಾ ಒಬ್ಬನೊಬ್ಬನೇ

ಸುಬಾಯಿಯು ಬರೆದ ಲೇಖನವು ಎರಡು ನಮೂನೆಯಾಗಿಯೂ ಇದೆ. ಅವುಗಳಿಗೆ ಯಾವ ತರದ ಉತ್ತರವು ಅವಶ್ಯವಿರಲಿಲ್ಲ. ನಿಶುಮೆಯೂರಿಯಿಂದ ಬಿಡಿ ಕಟ್ಟಿ ಅಭಿಪ್ರಾಯವನ್ನು ಮನಸ್ಸಿಗೆ ತಂದುಕೊಂಡು ಉತ್ತರ ಕೊಟ್ಟದ್ದು ಬಹು ಮೋಸಕರ. ಒಬ್ಬನೊಬ್ಬ ಲೇಖನಿಯೇ ನೀನು ಗುರುವ ... ವೈದ್ಯನನ್ನು ಕಲಿಯುದ್ದರಿಂದ ಯೋಗ್ಯವೆನನನ್ನು ಉಪಯೋಗಿಸುವಿ. ಆದಕಾರಣ ಇನ್ನು ಮುಂದಕ್ಕಾದರು ಉತ್ತಮರ ಸಂಗವನ್ನು ಮಾಡಿ ಒಳ್ಳೆದು ಆಲಿಕೆಯಾಗಿ ನಂಬುತ್ತೇನೆ.

ನಿಮ್ಮ ಸಮಾಜ ಪ್ರೆಸಿಡೆಂಟರನ್ನು ಜನರಲ್ಲಿ ವಿವಾಹಗಳನ್ನು ಮಾಡುವುದಕ್ಕಿಂತ ಮೊದಲೇ ನಿತ್ಯ ಸ್ನೇಹಿತರೋ ಯಾರೋ ಆದ ಬಿಸ್ಡಿಂತ ಸುಪ್ರೆಮ್ಸವರು ಸಾಧಕ್ಕೆ ನಾನಿಡಿದ ಅಜ್ಞಾನಿಯೊ, ನ್ಯಾಯಕ್ಕೊ ಹೆದರಿದಾನು ಪ್ರೆಸಿಡೆಂಟನಾಗಿರುವವನಲ್ಲವಾಗಿ ಸಭೆಯ ಮುಂದೆ ಯಾವ ನಿಂತು ಹೇಳದ್ದು ಆ ಮೇಲೆ ಜನರಲ್ ಬಾಡಿಯವರು ಅವರನ್ನು ಸಮ್ಮಾನಿಸಿದ್ದ ವಗ್ಗೆರೆ ಪ್ರೊಸೀಡಿಂಗ್ ಆದ್ದು ನಾನು ಚೆನ್ನಾಗಿ ಬಲ್ಲೆನು. ಹ್ಯಾಗು ಸಮಾಜ ಪ್ರೆಸಿಡೆಂಟರು ಈಗಲೂ ಕೆಲಸ ಮಾಡುತ್ತಾರೆಂಬ ನಿಮ್ಮ ಸುಳ್ಳು ವಾರ್ತೆಗೆ ವಿಷಾದಿಸುತ್ತೇನೆ. ಊಟಕ್ಕಿಲ್ಲದ ಬಿಕ್ಷ ಎಂಬ ವ್ಯಕ್ತಿಗೆ ತರದ ಶಬ್ದಗಳನ್ನು ಈ ನಮ್ಮ ಶ್ರೇಷ್ಠವಾದ ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಿದನ್ನು ನೋಡಿದವರೆ ತನ್ನನ್ನು ತಾನೇ ಹೊರಪಡಿಸಿದಂತಾಗುವದು. ಊಟಕ್ಕಿಲ್ಲದ ಕ್ಯಾನುಬಾಗರೆಂದು ಅವರನ್ನು ಮುಂದಿಟ್ಟು ದೂಷಣೆ ಮಾಡಿದ್ದು ಅವಿವೇಕತನವಾಗಿದೆ. ಕ್ಯಾನುಬಾಗರ ಕಡೆಯಿಂದ ತಕ್ಕ ಜವಾಬು ಮುಂದುವರಿಯುವದರಲ್ಲಿ ಸಂದೇಹವೇನು.

ಒಬ್ಬನೊಬ್ಬನಿಗೊಬ್ಬ.

ಕೊಣಂಜಗೇರಿ.

ತಾ|| 5-8-23 ರ ಬಾಗಾಯಿತು ತಾ 16-8-23 ರ ವರೆಗೆ ಎಡೆಬಿಡದೆ ಹೊಡೆದ ಮಳೆಯ ದೆಸೆಯಿಂದ ಆದ ಅನರ್ಥಗಳನ್ನು ಹೇಳಲಾಗುವುದಿಲ್ಲ. ಇಲ್ಲಿನ ಮುದುಕಿಯೊಬ್ಬಳು ತನ್ನ ಚಿಕ್ಕಂದಿನಿಂದ ಇಂಥಹ ಭಯಂಕರವಾದ ಅನಾಹುತಗಳು ಉಂಟಾದುವನ್ನು ನೋಡಲೂ, ಕೇಳಲೂ ಇಲ್ಲವೆಂಗಿ ಹೇಳುತ್ತಾಳೆ. 1882 ನೇ ಇಸವಿಯಲ್ಲಿ ಉಂಟಾದ ಪ್ರವಾಹವು ಇದಕ್ಕೆ ತಕ್ಕಮಟ್ಟಿಗೆ ಹೋಲಿಸಬಹುದೆಂದೂ ಆದರೆ ಇಷ್ಟರಮಟ್ಟಿಗೆ ಕೊಡಗಿನಲ್ಲಿ ನಷ್ಟವುಂಟಾಗಲಿಲ್ಲವೆಂದೂ ಹೇಳುತ್ತಾಳೆ. ಈ ಗ್ರಾಮದ ಕೆಳಭಾಕ್ಕ್ಕದ ಬೈಲಿಗಾಗಿ ಒಂದು ದೊಡ್ಡ ತೋಡು ಇದೆ. ಈ ತೋಡಿನ ಪೂರ್ವಭಾಗದಲ್ಲಿದ್ದ ಎತ್ತರವಾದ ಬರೆಯು ಜರಿದುಬಿದ್ದು ಸುಮಾರು ಮುಕ್ಕಾಲು ಫರಲಾಂಗ್ ಉದ್ದವರೆಗೆ ತೋಡನ್ನು ಆಕ್ರಮಿಸಿಕೊಂಡಿದೆ. ತೋಡಿನ ನೀರುಗದ್ದೆಗಳ ಮಧ್ಯಕ್ಕಾಗಿ ಹರಿದುಹೋಗುತ್ತಿತ್ತು. ತೋಡಿನ ಬುತ್ತು ಕೊಳೆ ದಿಂಡಿನ ಹಾಸಳಿಯಿಂದ ಸಾಧಾರಣ ಐದಾರು ಬಟ್ಟೆ ಭೂಮಿಗೆ ನಡುವೆ ಅಗಾಡಿಯಲ್ಲಿದ್ದ ಸ್ಥೈರು ಮತ್ತು ನಾಟಿ ನಟ್ಟಿದ್ದದ್ದು ಸಹ ಕೊಚ್ಚಿಹೋಯಿತು. ಈ ಸಣ್ಣ ಬೈಲಿಗೆ ನುವರಾರು ನಾಲ್ಕು ಸಾವಿರ ರೂಪಾಯಿ ತನಕ ನಷ್ಟ ಆಗಿರುವುದು. ಬರೆ ಜರಿದು ಮಣ್ಣು ಮುಚ್ಚಿಕೊಂಡ ಹಳೇ ತೋಡನ್ನು ಬಿಡಿಸು ಸಾಧಿಸಲು ಅಸಾಧ್ಯವಾಗಿದೆ. ಈ ಬೈಲಿಗೆ ಸಮ್ಮಂಧಪಟ್ಟ ಜನರೆಲ್ಲರು ಸೇರಿ ಗದ್ದೆ ಯೊಳಗಾಗಿ ಹೊಸ ತೋಡನ್ನು ತೆಗೆದಿರುತ್ತಾರೆ. ಗ್ರಾಮದ ಪಟೇಲರ ... ಬಲ್ಯಾಟ್ಯಂಡ ನಾಚಪ್ಪನವರು ಅತಿ ಶ್ರಮ ತೆಗೆದುಕೊಂಡು ಹೊಸ ತೋಡು ಮಾಡಿಸಿದರೆ ಎಷ್ಟು ವಂದಿಸಿದರೂ ಸ್ವಲ್ಪವೇ. ಕೊಣಂಜಗೇರಿ ಗ್ರಾಮಕ್ಕೆ ಜವರಗ್ರಾಮವಾಗಿರುವ ಬಲಮುರಿ ಗ್ರಾಮದ ಎಕನಿವಾಸಿಗಳ ಮನೆಗಳನ್ನು ಬರೆದು ಪ್ರತ್ಯೆಕ ಸಂಬಂಧನಲ್ಲ ನಷ್ಟ ಕಷ್ಟಗಳಿಗೆ ಒಳಗಾಗಿರುತ್ತಾರೆ. ಬೇರೆ ಅವರನ್ನು ... ಬೇಕಾಗಿದೆ. ಕೊಣಂಜಗೇರಿ ಗ್ರಾಮದ ರೈತರು ತಮಗುಂಟಾದ ನಷ್ಟಗಳ ಕುರಿತು ಸರಕಾರದವರಿಗೆ ಸೂಚಿಸಿರುವದಿಲ್ಲ. ನಷ್ಟದ ಹಾವಳಿಯ ದೆಸೆಯಿಂದ ಮುಂದೆ ಈ ಊರ ಜನರ ಜೀವನೋಪಾಯಕ್ಕೆ ಪೂರ ಮುಷ್ಕಿಲಾಗುತ್ತದೆ. ಈ ಸಂಗತಿಯಲ್ಲಿ ರೈತರ ಕಷ್ಟನಷ್ಟಗಳನ್ನು ನೋಡಿ ನಮ್ಮ ಘನ ಸರಕಾರದವರು ಪರಿಹರಿಸಬೇಕಾಗಿರುವ ಒಬ್ಬ ರೈತನ ಕೋರಿಕೆ.

"ರೈತ"

ಅಯ್ಯಾ ಸಂಪಾದಕರೇ,

ತಮ್ಮ ತಾ 27 ನೇ ಜುಲೈ ತಿಂಗಳ ಪತ್ರಿಕೆಯಲ್ಲಿ ನಾ. ಗಣಪತಿ ಎಂಬ ಪತ್ರವನ್ನು ನೋಡಿದೆನು.

ವಾಚಕಮಹಾಶಯರೇ, ಈ ನಿರಕ್ಷರ ಕುಕ್ಷಿಗೆ ವಿನಯವಿರಿ. ಅಯ್ಯಾ ತಾ ಗಣಪತಿ ಎಂಬವರೇ ನಿಮ್ಮ ಪತ್ರ ವಾದರೂ ನಿಮ್ಮ ನಾಮದಂತೆ ... ವಾಗಿದೆ, ಲೆಕ್ಕ ... ಬೇಕೆಂದೊ ... ಸುಳ್ಳನ್ನು ಕಲ್ಪಿಸಿದ ... ಕತೆಯನ್ನು ಪ್ರಕಾಶಪಡಿಸಿದಂತೆ ಕಾಣುತ್ತಿದೆಯಲ್ಲಾ. ನಿಮ್ಮ ಹೇಳಿಕೆಯಂತೆ ... ರೂ ಇಟ್ಟದ್ದು ಅದರಲ್ಲಿ ಖರ್ಚು ಕಳೆದು ... ನನ್ನಲ್ಲಿ ಉಳಿಯಿತು ಎಂದು ವಗ್ಯೆರೆ ಲೇಖಿಸಿರುವುದು ಸರಿಯಷ್ಟೆ. ಹಾಗಾದರೆ ನಿಮ್ಮ ಲೆಕ್ಕದಂತೆಯೆ "ನನ್ನಲ್ಲಿ ಉಳಿಯಿತು" ಎಂಬ ಮೊಬಲಗು ಜಾತವಾಕಿ ... ರಲ್ಲಿ ... ಕೋವಿನ ಕೌಕೋಳು ಪೂರೈಸಿದ ಕಟ್ಟಡದ ಸರ್ವ ಕೆಲ್ಸವು ಆಗದಿರಲ್ಲದೆ ... ನೀವೇ ಆಗ್ಲಿ ಯಾರೂ ಊರಿಗೆ ಹುಲಿ ಬಿದ್ದಗೆ ... ನಿಮ್ಮ ಮುಖಂಡರೇ ಯಾಗ್ಲಿ ... ರಲ್ಲಿ ಕಟ್ಟಡ ಕಟ್ಟಿಸಿದರ ಪ್ಲಾನ್ ಲೆಕ್ಕವನ್ನಾದರೂ ತಿಳಿಸುವಿರಾ. ಅಲ್ಲ ಸ್ಕೂಲಿಗೆ ತಕ್ಕಷ್ಟು ಕಟ್ಟಿಸಲು ಹಣ ಹೊಂದಿಕೊಂಡು ತಕ್ಕಷ್ಟು ಮಿಲ್ಲ ಹಣವಿಲ್ಲದಂತೆ ಮಾಡಿದ ಘನಪಂಡಿತ ಮಹಾತನ ಲೆಕ್ಕವೋ ಅಲ್ಲ ನಿಮ್ಮದೊ ಅಲ್ಲ ಸೇರುವ ಮಾನದ ಲೆಕ್ಕವೋ ತಿಳಿಸೈಯ್ಯ. ತಮ್ಮ ಟನ್ನು ಕಟ್ಟಿಸಿಕೊಳ್ಳಲು ಯೋಗ್ಯತೆ ಇಲ್ಲದ ನರಕುರಿಗಳೇ ಎಂಬಂತೆ ಎಲ್ಲಾರು ಸೇರಿ ಕಟ್ಟಡವಾಯಿತ್ತೆಂಬದಕ್ಕೆ ನಾಚಿಕೆಯಾದರೂ ಆಗಲಿಲ್ಲವೆ. ನಾ. ಗಣಪತಿ ಎಂಬವರೇ ನನ್ನಲ್ಲಿ ಬಾಕಿಯಿದೆ ಎಂಬವರ ತಪ್ಸೀಲ್ ಖರ್ಚಿನ ಲೆಕ್ಕವನ್ನು ಪತ್ರಿಕೆಯಲ್ಲಿ ಪ್ರಕಟಿಸಿ ನನ್ನ ಬಾಕಿದಾರನಾಗಿ ಮಾಡಬೇಕು ಯಾ ಪತ್ರಿಕೆಯ ಮೂಲಕ ಕ್ಷಮೆ ಕೇಳಿಕೊಳ್ಳುವದು ಇಲ್ಲವೆ ನನಗೆ ಕುಂದನ್ನು ಉಂಟುಮಾಡಿದ ಸುಳ್ಳು ವಾರ್ತೆಯನ್ನು ಹೊರಡಿಸಿದರ ಕೂಡು ನಿಮ್ಮ ಮೇಲೆ ಕಾನೂನನ್ನು ಉಪಯೋಗಿಸಲು ಆಲೋಚನೆ ಮಾಡಲಾಗುತ್ತ ಯೆಚ್ಚರಿಸಿದೆ.

ಕೊಂಗಂಡ ಕುಟ್ಟ.

ಅಯ್ಯಾ,

ಕಳೆದ ತಿಂಗಳು ೨೬ ನೇ ಆದಿತ್ಯವಾರ ದಿನ ಬೊಂಬಾಯಿಯಲ್ಲಿ ಕೊಡಗು ಸಮಾಜದ ವಿಶಾಲಂಗಿನಲ್ಲಿ ಸೆಕ್ರೆಟರಿಯಾಗಿಯೂ, ಮೆಂಬರಾಗಿಯೂ ಬೊಂಬಾಯಿ ಕೊಡಗರ ಸಮಾಜವನ್ನು ಉಚ್ಛ್ರಾಯಸ್ಥಿತಿಗೆ ತರಲು ಬಹಳ ತೊಂದರೆ ತೆಗೆದುಕೊಂಡ ದಿವಂಗತ ಮ|| ರಾ|| ಕುಟ್ಟಂಡ ಕರುಂಬ್ಯಯ್ಯನವರ ನಾಮಸ್ಮರಣೆಯಾಗಿ, ಸಮಾಜದ ಪಂಡಿನಿಂದ ಹದಿನೈದು (೧೫) ರೂಪಾಯಿಗಳನ್ನು ಪ್ರವಾಹದ ದೆಸೆಯಿಂದ ಮನೆಮಾರುಗಳನ್ನು ಕಳೆದುಕೊಂಡು ಸಂಕಟ ಪಡುತ್ತಿರುವ ಬಡಪಾಯಿಗಳ ಕಷ್ಟ ನಿವಾರಣೆಗಾಗಿ ಕಳುಹಿಸಬೇಕೆಂಬ ಠರಾವು ಸರ್ವಸಮ್ಮತದಿಂದ ಮಂಜೂರಾಯಿತೆಂದು ಈ ಮೂಲಕ ತಿಳಿಸುತ್ತೇವೆ,

ಬೊಂಬಾಯಿ,
೧-೯-೨೩

ಎಂ. ಎಂ. ನಂಜುಂಡ
ಕಾರ್ಯದರ್ಶಿ.

P. W. D

ಅಯ್ಯಾ, ವಾಚಕಮಹಾಶಯರೇ, ನ[illegible] ಜವಿಸಾದಾರರ ಸಂಘವನು [illegible] (ಜವಿಸಾದಾರ, ಪಾರ್ಸಾಗ ನಡೆಸುತ್ತ[illegible] ಅದು ಪ್ಯಾಗ[illegible] [illegible]

[illegible]

ಯುವರಗಳ ಮಗ್ಗಕ್ಕಾಗಿ ಹೋಗುವ ರಸ್ತೆ [illegible] ದಾಪು ೫ ಅಡಿಯಿತ್ತರ ಸೀಗು ಕೆಲವು ಸನಯ [illegible] ತೆ ಸದಾರಣವಾಗಿ [illegible] ಪ್ರತಿದಿನವವೂ ಜಗಿಂದಿರ್ಡ್ನ ಮಳೆಗಾಲದಲ್ಲಿ [illegible] ದೆ ಈ ರಸ್ತೆಯು ಎರಡು [illegible] ಅಂಡಾ[illegible] ಅಡಿಗಳ ತಗ್ಗಿನ[illegible] ಗದ್ದೆಗಳೆಂದು [illegible] ಸೀಗು [illegible] ರಸ್ತೆಯ ಮೇಲೆ ನೀರು ಓಡಿದೆ ಆವಾದು [illegible] ವದು ಯೂ[illegible] ಎಂಬುದು ಗೊತ್ತಾಗುವದಿಲ್ಲ [illegible] ದರೆ, ಈ ರಸ್ತೆಯ ಎರಡು ಪಕ್ಕಗಳಲ್ಲು [illegible] ಗಳಾಗವಿಯಾ ಯಾವವಿದ ಅ[illegible] ಗಳು (Railings) ಇರುವದಿಲ್ಲ ಆದರಿಂದ ಈ ರಸ್ತೆಯನ್ನು [illegible] [illegible] ತರು ಕಡಿಯುವು ನಾಕು, ನಾಲ್ಕು ನಾಡಿನಿದ [illegible] ಕಚೇರಿಗೂ [illegible] ಗುವ ದೊಡ್ಡವರಿಗೂ, ಶಾಲೆಗೆ [illegible] ಸಹ ಯಾವ ಆತಂಕನೆಯೂ ಇರಲಾರದು. ಈ [illegible] ವು ಮುಂದಣ ಸಂ[illegible] ಸೆಂಡಿತವಾಗಿ ಮಾಡಿಯೇ [illegible] ರಬೇಕೆಂತಲೂ, ಈ [illegible] ಈ ರಸ್ತೆಯ ಎರಡು ಪಕ್ಕಗಳಲ್ಲು (Railings) [illegible] ಮರದ ೩ ಅಡಿ ಯೆತ್ತರದ ಕಂಬಗಳ ನೆಟ್ಟ [illegible] ತಂತಿಗಳ ಬೊಡೆ[illegible] ಈ ಸಲುಕೆಗಳ [illegible] ರವೂ ಇಲಾದು ಅಲ್ಲದೆ [illegible] ಲ್ಲಿನಿದ ಗದ್ದೆಗೆ [illegible] ರಸ್ತೆಯನ್ನು [illegible] ಕೆರೆಯ ಗದ್ದೆಗೆ ಇಳಿಯುವಂತೆ [illegible] ಜನ [illegible] ಅನುಕೂಲಿನ [illegible] ಗ್ಗಿ ಜಾರಿ ಬಿದ್ದು ಎಷ್ಟು ಹೆಂಗಸರು [illegible] ಕಷ್ಟವನ್ನು ಭೂಗಿಸಿ[illegible] ಯ ಸಮಯದಲ್ಲಿ ನೋಡುತ್ತಿದ್ದರೆ [illegible] ದುವರುವಿಗೆ ಈ [illegible] ಯ ನಮ್ಮ ಜವಿಸಾದಾರ ಸಂಘ [illegible] ಯಾ [illegible] ನೋಲಾ[illegible] ಈ ಸಂಗ್ತಿಯನ್ನು [illegible] ರದವ[illegible] ಇರುತ್ತಿಲ್ಲ [illegible] ಲ್ಲಾ ಮುಖ್ಯ ಕಾರಣವು ದೊಡ್ಡ ಮಳೆಗಾಲದಲ್ಲಿ [illegible] ದೊಡ್ಡ ಉದ್ಯೋ[illegible] [illegible] ಮನೆ ಬಿಟ್ಟು ಹೊರ[illegible] ಹೋಗುವದೇ ಮುಖ್ಯ ಕಾರಣವಾಗಿದೆ [illegible] ಬಾಧಿನಲ್ಲ ಇನ್ನುದಲು ಇವರು ಸಹ ಒದಿಯ[illegible] ಪೂರ್ಣ ನಂಬುತ್ತೇನೆ

ಮಳೆಗಾಲ ವ್ಯಯಾ[illegible]

ಸಬ್ಬಂದಿಕೋತೆ.

ಸಬ್ಬಂದಿಕೋತೆಯ ವಿಷಯ ಅನೇಕರು ಅನೇಕ ವಿಧದಲ್ಲಿ ಬರೆಯುತ್ತಲೇ ಇದ್ದಾರೆ [illegible] ಎಂಬುದಾಗಿ [illegible] ಎರಡು ಅದನ್ನು [illegible] ಜೇವಾ[illegible] ಎಂಗು, ಅನೇಕ ವರ್ಷಗಳಿಂದ ಕೊಡಗು ಜವಿಸಾದಾರರ ಸಂಘದ ಮೂಲಕ [illegible] ರಿ, [illegible] ಈ ಎಂಟು ಸ್ಥಳಗಳಲ್ಲಿ [illegible] ಮೆಜಿಸ್ಟ್ರೇಟ್ [illegible] ಬೇಕೆಂದು ಎಷ್ಟು ಕೇಳಿಕೊಂಡರೂ ಸರ್ಕಾರವು ವಹಿಸಲಿಲ್ಲ ಇದರ ಬದಲಾಗಿ ಅನೇಕ ಪಾರುಪತ್ಯಗಾರರಿಗೆ ಅವರಿಗೆ [illegible] ವಿಪರೀತ ಕೆಲಸದ ಜೊತೆಗೆ ಕ್ರಿಮಿನಲ್ ಅಧಿಕಾರ ಕೊಟ್ಟಿದಾರೆ. ಇದು ಬಹಳ [illegible] ಪೂರ್ವದಲ್ಲಿ ಈ ಅಧಿಕಾರಗಳೆಲ್ಲವೂ ಬಿಟ್ಟ ಪಾರುಪತ್ಯಗಾರನಲ್ಲಿದ್ದುದು ಚೆನ್ನಾಗಿ ನಡೆಯದೆ ಇದ್ದುದರಿಂದ, ಆ ಅಧಿಕಾರಗಳನ್ನು ತೆಗೆದು ರೆವಿನ್ಯೂ ಮಾತ್ರ ಕೊಟ್ಟಿದ್ದಾಗಿರುತ್ತೆ. ಪುನಃ ಸರಕಾರವು ನೀತಿಯಲ್ಲಿ ಹಿಂದಕ್ಕೆ ಹೋಗುವುದು ಸ್ಪಷ್ಟವಾಗಿ ಹಾಲಿ ಇರುವ ಎರಡು ಸುಭೇದಾರರುಗಳನ್ನು ಸ್ಪೇಶನರಿ ಮಜಿಸ್ಟ್ರೇಟರುಗಳನ್ನಾಗಿ ಮಾಡಿ ಪಾರುಪತ್ಯಗಾರರಿಗೆ ಯಾವ ಕ್ರಿಮಿನಲ್ ಪವರೂ ಕೊಡದೆ, ಸುಭೇದಾರರ ಚಾರ್ಜಿನಲ್ಲಿ, ರಿಜಿಸ್ಟ್ರೇಶನ್ ಮತ್ತು

ಸಬ್‌ಟ್ರೆಜರೀ ಕೆಲಸಗಳು, ರೈತರ ಅನೇಕ ತೊಂದರೆಗಳು ಕಡಿಮೆಯಾಗಿ, ಸರಕಾರಕ್ಕೂ ಸಹ ಅನುಕೂಲವಾಗು[illegible] ಅಲ್ಲದೇ ಪಾರುಪತ್ಯಗಾರ[illegible] [illegible]

[illegible]

ರೈ[illegible]

ಎಲೆಗಳ ರೋಗ

ಕಳೆದ ಸಂಚಿಕೆಯಲ್ಲಿ ಈ ವರ್ಷದ ಎಲೆಗಳ ರೋಗವನ್ನೂ, ಅದರ ಕಾರಣವನ್ನೂ [illegible] ನನ್ನೂ ತಿಳಿಸು ಬರೆದ ಕೆ ಎಂ ಬೆಳ್ಯಪ್ಪನವರ ಬಾತ್ಮಿಯನ್ನು ನೋಡಿದನು ನಾನು ನನ್ನ ತೋಟದ ಅನುಭವದಿಂದ ನಾನಾ ತರದ ಗೊಬ್ಬರಗಳನ್ನು ಹಾಕಿದ ತುಂಡುಗಳಲ್ಲಿಯೂ ಎಲೆಗಳು [illegible] ಯೋಗಿರುತ್ತವೆ, ಪಡಲು ಹಿಂಡಿ, ಹೊಂಗೆ, ಬೇವು, ಹಿಪ್ಪೆ, ನೆಲಗಡಲೆ ಹಿಂಡಿ, ಮೂಳೆ ಹುಡಿ, ಸುಪರ್ ಫಾಸ್ಫೇಟ್, ದನಗಳ ಗೊಬ್ಬರ, ಮೀನುಗೊಬ್ಬರ ಮುಂತಾದವುಗಳನ್ನು ಹಾಕಿದ ತುಂಡುಗಳಲ್ಲಿ ಎಲೆಗಳು ಕರಗಿಹೋಗಿರುವುದರಿಂದ ಮೇಲ್ಕಂಡ ಗೊಬ್ಬರಗಳಿಂದ ಈ ರೋಗವು ಉತ್ಪನ್ನವಾಯಿತೆನ್ನುವುದು ಪೂರಾ ತಪ್ಪಲ್ಲದೆ ಈ ಗೊಬ್ಬರಗಳಿಂದ ಅದರ ನಿವಾರಣೆಯಾಗುವುದೆಂದು ಹೇಳಲು ಸಾಧ್ಯವಿಲ್ಲ ಈ ಎಲೆಗಳ ರೋಗಕ್ಕೆ ಈ ವರ್ಷದ ವಿಪರೀತ ಒಂದೇಸಾರಿ ಹೊಡೆದ ಮಳೆಯೇ ಕಾರಣವೆಂದು ಹೇಳಬಹುದು ಕೇಟ್ನ ಕ್ರಿಬ್ಬಿಗೆ ಈ ರೋಗವು ಬರುವ ವಿಷಯದಲ್ಲಿ ನನ್ನ ಅನುಭವವು ಸಾಲದಾಗಿದ್ದೆ

ಎಂ ಎಂ ಸಿದ್ದೀಕ್,

ಪ್ರೊಪ್ರೈಟರ್, ಸಿದ್ದೀಕ್ಸ್ ಮೆನ್ಯೂರ್ ವರ್ಕ್ಸ್,

ಮಡಿಕೇರಿ

ಕ್ಲಬ್ [illegible] ವು

ಇದೇ ತಾರೀಖು [illegible] ಮುಕ್ತಿನಲ್ಲಿರುವ ಕೊಡಗು [illegible] ಹಿಡಿಸ್ಟಿ ಕಾಲೇಜಸಿನಲ್ಲಿ ಕ್ಲಬ್ ಮುಹೂರ್ತವು [illegible] ಯಿಂದ ನಡೆಯಿಸಿದರು

ಯುವಕ [illegible] ಸೇರಿ [illegible] ಇಪ್ಪತ್ತೈದು ಜನರು ಸೇರಿದ್ದರು ದಕ್ಷಿವು ಸುಮಾರು ಮೂರು ಗಂಟೆಗೆ [illegible] ಮೊದಲು ಆರಾಧ್ಯ ಪೂಜೆಯನ್ನು ತೀರಿಸಿದನಂತರ ಅಲ್ಲಿ ನೆರೆದ ಮಹನೀಯರೆಲ್ಲರೂ ತಿ. ಪಲಹಾರಗಳಿಂದ ವಿಶ್ರಾಂತಿ ಹೊಂದಿದರು. ಅನಂತರ ಒಂದು ಗಂಟೆಯವರೆಗೂ [illegible] ಗೀತ ಪದ, ಪದ್ಯಗಳಿಂದ ಆನಂದಗೊಂಡಿತು

ಇದೆಲ್ಲಾ ಕಳೆದನಂತರ ಮದ್ರಾಸಿನಲ್ಲಿ ಒಂದು ಕೊಡಗ ಸಭೆಯನ್ನು ಸ್ಥಾಪಿಸಬೇಕೆಂದು [illegible] ರುಗಳು ಅಭಿಪ್ರಾಯಪಟ್ಟರು [illegible] ಮ|| ರಾ|| ಶ್ರೀ ಯುತ ಗಣಪತಿ ಬಿ. ಎ [illegible] ಇವರನ್ನು ಸಭೆಯ ಅಧ್ಯಕ್ಷಸ್ಥಾನಕ್ಕೆ ಏರಿಸಿ [illegible] ಗರ ಸಭೆಯ ನಿರ್ಮಾಣದ ವಿಷಯ ಚರ್ಚಿಸಲಾಯಿತು ಈ ವಿಷಯದಲ್ಲಿ ಅನೇಕರ ಅಭಿಪ್ರಾಯವನ್ನು ತೆಗೆದುಕೊಂಡನಂತರ, ಒಂದು ಕೊಡಗು ಸಭೆಯು [illegible] ಕಲಾಯಿತು ಈ ಸಭೆಗೆ ಮ|| ರಾ|| ರಾ|| [illegible] ವರನ್ನು ಅಧ್ಯಕ್ಷರನ್ನಾಗಿಯೂ ಮ|| ರಾ|| ರಾ|| [illegible] ಮುತ್ತಣ್ಣ ಬಿ ಎ ಇವರನ್ನು ಕಾರ್ಯದರ್ಶಿಯರನ್ನಾಗಿಯೂ ಚುನಾಯಿಸಿದರು ಇದೆಲ್ಲವೂ ಕಳೆದನಂತರ ಅಧ್ಯಕ್ಷರು ಸಭೆಯನ್ನು ಸಂಗೀತ ವಂದನೆಯಿಂದ ಆನಂದಗೊಳಿಸಿದ ಯುವಕರನ್ನೂ ಯುವತಿಯರನ್ನೂ ಅಭಿವಂದಿಸಿ ಸಭೆಯನ್ನು ಕೊನೆಗಾಣಿಸಿದರು.

,, ಪ್ರತ್ಯಕ್ಷ ದರ್ಶಿ. "

HEALTH IS WEALTH

WANTED all to improve health strength and vitality and thus save our nation from physical degeneracy. Send half-anna stamp and get 13 specimen photographs with full particulars from

Director Physical Culture,

P.O Basavanagudi,

BANGALORE CITY

ಕೊಡಗು ದೇಶ[illegible] ಸೇವಾ[illegible] ಸಂಘದ ಗೌರವ [illegible]

ಕೊಡಗು ದೇ[illegible] ಸಂಘ ಸಭೆಯಿಂದ ಮುಕ್ತ್ಯ ಮೊದಲಿಗೂ ನಡ [illegible]

[illegible] ತ್ತಿರುವ [illegible] ಎಂಬ ಸಂಘ ಒಂದನ್ನು ಮ[illegible] ಕೇರಿಯಲ್ಲಿ ಪೆ|| [illegible] ಸಹೇಬರವರು (ಕೊಡಗು ಕಮಿಶನರ್ ದೊರೆಗಳು) [illegible] ರಾವನರು ಮತ್ತು [illegible] ಪ್ರೆಸಿಡೆಂಟರಾಗಿ [illegible]

ಮೇಲ್ಕಂಡ [illegible] ದಿನಂಪ್ರತಿ [illegible] ಅತ್ಯಗತ್ಯವಾದ [illegible]

ಆದ್ದರಿಂದ [illegible] ಮಹನೀಯರು ಸಹ [illegible] ಕೈಯ್ಯಲ್ಲಾದವ ಟ್ಟಿಗೆ ಈ ಸು[illegible] ಚಂದಾ ಕೊಟ್ಟು [illegible] ಈ ಸಂಘದ ಉದ್ದೇಶವನ್ನು ಜಯಗಿಸಲು [illegible] ಕೇಳಿಕೊಳ್ಳಲಾಗಿದೆ [2—2]

ಮಡಿಕೇರಿ [illegible] ಕಾರ್ಯಪ್ಪ

ತಾ|| 30—8—23 ಗೌರವಕಾರ್ಯದರ್ಶಿ

ಅರೋಗ್ಯ ಚಂದ್ರಿ [illegible]

ಇದು ಪ್ರಜಾಸ್ವೇಮಕ್ಕಾಗಿ ಆರೋ[illegible] ಶುಚಿತ್ವವನ್ನೂ ಬೋಧಿಸುವ ಒಂದು [illegible] ಪತ್ರಿಕೆ ಈ ಸಾಸಪತ್ರಿಕೆಯು ಸಂಪಾದ[illegible] ಸಿನಲ್ಲಿ ಪ್ರಸಿದ್ಧರಾದ ಡಾಕ್ಟರ್ [illegible] ಎದು [illegible] ಇದರಲ್ಲಿ ಅನೇಕ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತ[illegible] ಆಗಿಂದಾಗ್ಗೆ ಪ್ರಕಟವಾಗುವವು

[illegible] ಈ ಪತ್ರಿಕೆಯ ಚಂದಾ [illegible] ಮೊಬಲಗು [illegible] ಮಾತ್ರ ಚಂದಾದಾರರಾಗತಕ್ಕವರು [illegible] ಮೂಲಕ ಪರಿಸಿಕೊಳ್ಳುವುದಕ್ಕಿಂತ ಹಣವನ್ನು [illegible] ಹಿಸುವುದು ಉತ್ತಮ

ವಿಳಾಸ —

ಏಜೆಂಟರು —	ಮೇನೇಜರ್,
ಮ ರಾ ರಾ ಎಸ್ [illegible] ಅಪ್ಪ,	ಆರೋಗ್ಯ ಚಂದ್ರಿಕೆ
ಭಾಗಮಂಡಲ,	ಆಫೀಸು
[illegible]	32, [illegible]
[12—೨]	ಮದರಾಸು

For your requirements of high grade Arms, Ammunition, Wine and Spirits,

APPLY TO

Mc. DOWELL & Co., Ltd.,

24—20 MERCARA

New Agency! New Agency

PONEP MEDAN & Coy.

General Merchants.

FOREIGN export import and Consulting Agents

For further particulars apply to our representative at Mysore,

P. P. MADAYYA,

Representative, Bharat Insurance Company Ltd

Sayaji Rao Road, MYSORE

ಹೊಸ ಏಜನ್ಸಿ! ಹೊಸ ಏಜನ್ಸಿ

ಪೋನೆಪ್ ಮೆಡಾನ್ ಆಂಡ್ ಕಂಪೆನಿ,

ಜನರಲ್ ಮರ್ಚೆಂಟ್ಸ್ ಸರಕುಗಳನ್ನು ತರಿಸುವರು, ರಪ್ತು ಮಾಡುವರು ಮತ್ತು ವ್ಯಾಪಾರದ ವಿಚಾರಗಳನ್ನು ತಿಳಿಸುವ ಏಜೆಂಟರುಗಳು.

ನಮ್ಮ ಏಜಂಟರು—

ಪಿ. ಪಿ. ಮಾದಯ್ಯ,

ಭಾರತ್ ಯಿನ್ಶೂರೆನ್ಸ್ ಕಂಪೆನಿ ಏಜಂಟರು

[4—4] ಸಯ್ಯಾಜಿರಾವ್ ರೋಡ್, ಮೈಸೂರು

Printed & Published by D S Krishnaswami Proprietor, at Sreenivas Electric Press, My[illegible] "for Kodagu" Ltd, Mercara—14 9 1923

If not delivered please return to
"Kodagu Office, Mercara"
Reg. No. M. 1550.

ಕೊಡಗು.

ಸತ್ಯೇನ ಧೂತದಯಯಾ ವಿದ್ಯಾ ವಿತ್ತಿ ಪ್ರಯತ್ನತಃ । ಜಾತಪುತ್ರೀನದೋಷೇನಾ ಸುಸ್ಥಿರಾ ರಾಜ್ಯ ಸಂಪದ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು. "ಎಡಿಟರ್ ಪಂದ್ಯಂಡ ಐ ಬೆಳ್ಯಪ್ಪ"

ಸಂಪುಟ ೪] ಕೊಡಗು, ಸನ್ ೧೯೨೬ನೇ ಸೆಪ್ಟಂಬರ್ ತಾರೀಖು ೧೦ ನೆಯ ಶುಕ್ರವಾರ. [ಸಂಚಿಕೆ ೧೭

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನಡಾ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ದಂತೆ ಜಾಗ್ರತೆಯಾಗಿಯೂ ಸುಲಭಭಾವದಿಂದಲೂ ಮಾಡಿ ಕೊಡುತ್ತೇವೆ

Srinivas Electric Press,
MYSORE

The Coorg Central Co-operative Bank, Ltd.,

(Registered under the Co-operative Societies Act)

Share Capital	
Paid up Share Capital	6,820
Fixed Deposits paid	39,849

Amounts are lent mainly to Co-operative Societies in Coorg. The accounts are checked annually by The Registrar of Co-operative Societies Coorg. Deposits for one year and more carry interest at 6½% per annum and for smaller periods at 5½ per cent.

Apply to the Secretary or Treasurer for further details.

President	*Treasurer*	*Secretary*
Kotera Uthaiah Rao Bahadur	Bhujanga Rao B.A., B.L.,	C. M. Venkappaya B.A., B.L.

Dated 1—9—1926

ಜೀವವಿಮೆ.

ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಮಾಡುವ ಮಾನಸು ಮೃತಪಟ್ಟರೆ ಉಂಟಾಗಬಹುದಾದ ತೊಂದರೆಗಳನ್ನು ನಿವಾರಿಸುವುದೇ ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ

ಅತಿ ಕಡಿಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪೆನಿ.

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲವಾಗಿ ಹಣವನ್ನು ಒದಗಿಸಿ ಸ್ಥಿರಾಸ್ತಿಗಳನ್ನೂ ಕೊಂಡುಕೊಟ್ಟು ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

ಸ್ತ್ರೀಪುರುಷರೀರ್ವರೂ ಜೀವವಿಮೆಯ ಸೌಕರ್ಯಗಳನ್ನು ಪಡೆಯಲು ಅನುಕೂಲವನ್ನು ಒದಗಿಸುವ ಸಂಸ್ಥೆಯಾದರೂ ಇದೊಂದೆ

ಒಂದು ದೇಶದ ಹಣವು ಮತ್ತೊಂದು ದೇಶದಲ್ಲಿ ವ್ಯಯವಾಗದಂತೆ ನೋಡಿಕೊಂಡು ವಿಮೆದಾರರ ಧನಸಂಪತ್ತನ್ನು ವೃದ್ಧಿಗೊಳಿಸುವ ಸಹಕಾರಸಂಘ, ಬ್ಯಾಂಕ, ಮುನಿಸಿಪಾಲಿಟಿ ಮುಂತಾದ ಸಾರ್ವಜನಿಕ ಸಂಸ್ಥೆಗಳಿಗೆ ಸಾಲವಾಗಿ ಕೊಡುವ ಅನುಕೂಲತೆಯುಳ್ಳ ಕಂಪೆನಿ ಇದೊಂದೆ.

ಹೆಚ್ಚಿನ ಮಾಹಿತಿಯನ್ನು ಕನ್ನಡ ನಾಡುಗಳ ಛೀಫ್ ಏಜಂಟ್‌ರಾದ ಈ ಕೆಳಗಿನ ವಿಳಾಸದಾರರಿಂದ ಪಡೆಯಬಹುದಾಗಿದೆ.

ಬಿ. ಎಸ್. ಆರಾಧ್ಯ,
ಲೈಫ್ ಅಂಡ್ ಮ್ಯಾರೇಜ ಆಫೀಸ್, ವ

Get Spencers Price List!

Brandy at its Best.

		per bot.	per pint
Exshaw's No 1	Rs	7 4 0	3 12 0
Exshaw's No 2	„	6 7 0	3 6 0

Some of many cheap line in Stores:—

Bovril 1 oz. bottle	0 10 0
„ 2 oz „	1 2 0
„ 4 oz „	2 0 0
Brand's essence of chicken	2 4 0
½lb pkt Petit Beurre Biscuits	0 14 0
½lb pkt Meltis chocolate	0 9 0
¼ lb tin Cadbury's cocoa	0 8 0
1 lb tin Moir's fresh herrings	0 7 0
Sunlight soap pkt	1 4 0
Sweets per lb	11 0

Fresh Stores at revised prices

52-49

SPENCER & Co., Ltd,
MERCARA & POLLIBETTA

When you think of going to Bombay
THINK OF

THE WELCOME HOTEL.

Girgaum Back Road, BOMBAY.

Most ... odation Most Central situation—Excellent Meals
Every Convenience

ವೆಲ್ಕಂ ಹೋಟೇಲ್.

ಗಿರ್ಗಾಂವ್ ಬ್ಯಾಕ್‌ರೋಡ್, ಬೊಂಬಾಯಿ.

ರೈಲನಿಂದಿಳಿದೊಡನೆ ಅಲ್ಲಿ ಇಳಿಯಬಹುದು ಸುಸ್ಥಳ, ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಯೋಗ್ಯವಾದ ಕೋಣೆಗಳು ಬೊಂಬಾಯಿಪಟ್ಟಣದ ಮಧ್ಯಸ್ಥಳದಲ್ಲಿರುವ ಮೇಲ್ತರದ ಹೋಟೇಲುಗಳಲ್ಲಿಯೂ ಮದ್ಯ ಬೇಡದ ಯೋಗ್ಯವಾದ ಊಟ, ಗಾಳಿಗೆ ಅನುಕೂಲವಾದ ಕೊಠಡಿ 15 ನಿಮಿಷಗಳಿಗೊಮ್ಮೆ ತಿರುಗುವ ಟ್ರಾಮಿನ ಸೌಕರ್ಯ ಅಂತೂ ಪ್ರಯಾಣಿಕರಿಗೆ ಇಳಿದುಕೊಳ್ಳಲು ಅನುಕೂಲವಾದ ಉಡುಪಿ ಬ್ರಾಹ್ಮಣರ ಭೋಜನಾಲಯ

ಜೆ. ಶ್ರೀನಿವಾಸರಾವ್,
ಮೇನೇಜರ್.

[12—5]

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್

ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ

	ರೂ
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,820
ಜಮಾ ಬಂದ ಠೇವಣಾತಿ	39,849

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನೆ ೬½ ಬಡ್ಡಿ ಸದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನೆ ೫½ ರ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಖ್ಖ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು.	ಟ್ರೆಜರರ್.
ಕೊಟಂಡೆರ ಉತ್ತಯ್ಯನವರು, ರಾಯ್ ಬಹದ್ದೂರ್	ಎಂ ಭುಜಂಗರಾಯರು ಬಿ ಎ, ಬಿ ಎಲ್.,

ಸೆಕ್ರೆಟರಿ.
ಸಿ. ಎಮ್ ವೆಂಕಪ್ಪಯ್ಯನವರು, ಬಿ. ಎ, ಬಿ. ಎಲ್.

ತಾರೀಖು 1—9—1926

ಸುಂದರ ವಿಲಾಸ ಪ್ರೆಸ್, ಮಡಿಕೇರಿ.

ಕೊಡಗು ಮಹಾ ಜನರಿಗೆ ಈಗ್ಗೆ ಕೊಡಗಿನ ಪ್ರಾಧಾನಪಟ್ಟಣವಾದ ಮಡಿಕೇರಿಯಲ್ಲಿ ಸದ್ಯ ಸ್ಥಾಪಿತವಾಗಿರುವ ನಮ್ಮ ಮುದ್ರಾಲಯವು ತಮ್ಮನ್ನು ಸೇವಿಸಲು ಸಿದ್ಧವಾಗಿದೆ. ಆದರವಾದ ಅಕ್ಷರಗಳಿಂದ ಮುದ್ದಾದ ಮುದ್ರಣದಿಂದ ಸೊಗಸಾದ ಕಾಗದಗಳಲ್ಲಿ ಮುದ್ರಿಸುವ ನೂತನ ಅನುಕೂಲತೆಗಳನ್ನು ಸಿದ್ಧಪಡಿಸಿದ್ದೇವೆ!

ಪರಸ್ಥಳಕರಿಗೆ ಎಲ್ಲಾ ಅನುಕೂಲತೆಗಳನ್ನು ಒದಗಿಸಲು ಏರ್ಪಡಿಸಿದೆ ದೇಶೀಯ ಮುದ್ರಾಲಯಕ್ಕೆ ಸ್ವದೇಶಬಂಧು ಭಗಿನಿಯರು ಪ್ರೋತ್ಸಾಹ ಕೊಡಬೇಕಾಗಿದೆ.

ಬಗೆ ಬಗೆಯ ಸ್ಟೇಷನರಿ, ಶಾಲಾ ಕಾಲೇಜುಗಳ ಪುಸ್ತಕ ಸಾಹಿತ್ಯಗಳೆಲ್ಲವೂ ಲಭಿಸುವಂತೆ ಇಡಲ್ಪಡುತ್ತವೆ. ನಮ್ಮ ದರಗಳು ಅಲ್ಪ! ನಮ್ಮ ಕೋರಿಕೆ, ಸೇವೆ! ವಿಶೇಷ ಲಾಭವಲ್ಲ

ವಿಶೇಷ ಮಾಹಿತಿಗೆ ಮುದ್ರಾಲಯದ ಅಧಿಕಾರಿಗಳಿಗೆ ಬರೆದು ತಿಳಿದುಕೊಳ್ಳುವುದು

ಎಮ್ ಆರ್. ಕಣ್ಣಪ್ಪ ಮೊದಲಿಯಾರ್,
ಪ್ರೊಪ್ರೈಟರ್

ಸುಂದರ ವಿಲಾಸ ಪ್ರೆಸ್, ಮಡಿಕೇರಿ
ತಾ॥ 16—9—23

12—8

"ಕೊಡಗು"

೧೯೨೩ನೇ ಇಸವಿ ಸೆಪ್ಟಂಬರ್ ತಾ|| ೨೧ನೇ ಶುಕ್ರವಾರ.

ಇಟಲಿ ಮತ್ತು ಗ್ರೀಕ್ ಮನಸ್ತಾಪ.

ಸನ್ 1914 ನೇ ಇಸವಿಯಲ್ಲಿ ಯೂರೋಪಖಂಡದಲ್ಲಿ ಪ್ರಾರಂಭವಾದ ಘೋರಯುದ್ಧವು ಮುಗಿದು ಅನೇಕ ವರ್ಷಗಳೇನೂ ಆಗಿರುವುದಿಲ್ಲ. ಅದರ ಪರಿಣಾಮದ ಸೂಚಿತವಾದ ಜನಾಂಗಗಳು ಇನ್ನೂ ಕಲೆಯುತ್ತಿರುವುದಿಲ್ಲ. ಅದರಿಂದ ಉಂಟಾದ ಕಷ್ಟದುಃಖಗಳಿಂದ ಭೂಲೋಕದ ಸಾಮಾನ್ಯ ಜನರು ಇನ್ನೂ ಪಾರಾಗಿರುವುದಿಲ್ಲ. ಜೀವನದ ವೆಚ್ಚವಂತೂ ಮೊದಲಿನ ಮಟ್ಟಕ್ಕೆ ಬರುವಂತೆ ತೋರುವುದಿಲ್ಲ. ಆ ಮಹಾಯುದ್ಧದಿಂದುಂಟಾದ ಅನಾಹುತಗಳನ್ನು ಭೂಲೋಕದ ಜನಾಂಗಗಳೆಲ್ಲವೂ ಚೆನ್ನಾಗಿ ಅರಿತವರಾಗಿ ಇನ್ನು ಮುಂದೆ ಯುದ್ಧಗಳೇ ಸಂಭವಿಸದಂತೆ ತಕ್ಕ ಏರ್ಪಾಡುಗಳನ್ನು ಮಾಡಲು ಪ್ರಯತ್ನಪಡಲಾರಂಭಿಸಿದರು. ಇದಕ್ಕಾಗಿಯೇ ನಾನಾ ಜನಾಂಗಗಳು ಸೇರಿ ರಾಷ್ಟ್ರಕೂಟ (ಲೀಗ್ ಆಫ್ ನೇಷನ್ಸ್) ಒಂದನ್ನು ಏರ್ಪಡಿಸಿದ್ದಾಯಿತು. ಜನಾಂಗಗಳೆಲ್ಲವೂ ಆಗುವಷ್ಟುಮಟ್ಟಿಗೆ ತಮ್ಮ ಸೈನ್ಯ ಮತ್ತು ನೌಕಾಸೇನೆಯನ್ನೂ ಯುದ್ಧದ ಹಡಗುಗಳನ್ನೂ ಮತ್ತು ಇತರ ಯುದ್ಧಸಾಮಗ್ರಿಗಳನ್ನೂ ಕಡಿಮೆಮಾಡಬೇಕೆಂದು ತೀರ್ಮಾನಿಸುತ್ತಾ ಬಂದರು. ಆದರೆ ಇಂಥಾ ತೀರ್ಮಾನಗಳೆಲ್ಲವೂ ಕಾರ್ಯತಃ ಆಚರಣೆಗೆ ತರಲ್ಪಟ್ಟಿವೆಯೆಂದು ಹೇಳಲಾಗುವುದಿಲ್ಲ. ಹ್ಯಾಗೂ ಎಲ್ಲರಲ್ಲಿಯೂ ಯುದ್ಧವು ಬೇಡವೆಂಬ ಅಭಿಪ್ರಾಯವು ಅಂಕುರಿಸಿತ್ತೆಂದು ತೋರುತ್ತಿತು.

ಈ ಮಧ್ಯೆ ತುರ್ಕಿಯವರಿಗೂ ಗ್ರೀಸರಿಗೂ ಮನಸ್ತಾಪ ಉಂಟಾಗಿ ಯುದ್ಧವು ಪ್ರಾರಂಭವಾಯಿತು. "ಯೂರೋಪಿನ ರೋಗಿ" ಯೆಂದು ಕರೆಯಲ್ಪಡುತ್ತಿದ್ದ ತುರ್ಕಿ ರಾಜ್ಯವನ್ನು ಕೆಮಾಲ್ ಪಾಷಾರವರು ತಮ್ಮ ಅಸಾಮಾನ್ಯವಾದ ಜಯದಿಂದ ಯೂರೋಪಿನ ಬೇರೆ ಜನಾಂಗಗಳು ಸಮಾನ ಜನಾಂಗವೆಂದು ಸನ್ಮಾನಿಸುವಂತೆ ಮಾಡಿದರು. ಈ ವಿಷಯವು ಲೋಸಾನಿಯಲ್ಲಿ ಅನೇಕ ದಿವಸಗಳವರೆಗೆ ಚರ್ಚೆ ನಡೆದು ತುರ್ಕಿಯವರ ಬೇಡಿಕೆಯ ಕರಾರುಗಳೆಲ್ಲಾ ಒಪ್ಪಲ್ಪಟ್ಟು ಜಯವಾಸದಿಂದೊಡಗೂಡಿದ ರಾಜಿ ಕರಾರು ತೀರ್ಮಾನಿಸಲ್ಪಟ್ಟಿತು. ಇನ್ನಾದರೂ ಯುದ್ಧದ ಸಿಡಿಲಿನ ಭಯ ಅದೃಶ್ಯವಾದೀತೇ ಎಂದು ಜನಾಂಗಗಳು ನಿರೀಕ್ಷಿಸುತ್ತಿದ್ದುವು. ಆದರೆ ನಾನಾ ರಾಷ್ಟ್ರಗಳ ರಾಜಕಾರ್ಯ ಧುರೀಣರು ತಮ್ಮ ನಾಲಗೆಯಂತೆಯೇ ಹೃದಯವನ್ನೂ ಇಟ್ಟುಕೊಂಡವರಾದರೆ ಯುದ್ಧಕ್ಕೆ ಎಡೆಯಿಲ್ಲದಂತಾಗುವುದು. ನುಡಿಯಂತೆ ನಡೆ ಇಲ್ಲದಿರುವುದರಿಂದಲೇ ಯುದ್ಧದ ಭೀತಿಯು ಆಗಾಗ್ಯೆ ತೋರುತ್ತಿರುವುದು.

ಕಳೆದತಿಂಗಳ ಆಖೈರುವಾರದಲ್ಲಿ ಇಟಲಿಯವರ ಮಿಶನ್ನು ಒಂದು ಆಲ್ಬೇನಿಯಕ್ಕೂ ಗ್ರೀಸಿಗೂ ಮಧ್ಯದಲ್ಲಿರುವ ಒಂದು ಕಾಡುಮಾರ್ಗವಾಗಿ ಮೋಟಾರಿನಲ್ಲಿ ದಾಟುತ್ತಿರುವಾಗ್ಗೆ ಅಲ್ಲಿಯವರು ಗುಂಡುಹಾರಿಸಿ ಅದರಲ್ಲಿದ್ದ ಐದು ಜನರನ್ನು ಕೊಲೆಮಾಡಿದರೆಂಬುದೇ ಇಟಲಿಯ ಮತ್ತು ಗ್ರೀಸಿನ ಈಗಿನ ಮನಸ್ತಾಪಕ್ಕೆ ಕಾರಣವಾಗಿದೆ. ತುರ್ಕಿ ಗ್ರೀಸ್ ಯುದ್ಧದಲ್ಲಿ ಇಟಲಿಯವರು ತುರ್ಕಿಯವರ ಕಡೆಗೆ ಬಾಗಿದ್ದರೆಂದು ಯೋಚಿಸಿ ಗ್ರೀಸಿನವರು ಈ ಕೊಲೆಯನ್ನು ಮಾಡಿಸಿದರೆಂದು ಇಟಲಿಯವರು ರೇಗಿ ಈ ಕೊಲೆನಾಶಕಕ್ಕಾಗಿ ಗ್ರೀಸಿನವರು 50 ಮಿಲಿಯ ಲಯರುಗಳನ್ನು (3 ಕೋಟಿ ರೂಪಾಯಿ) ಕೊಡಬೇಕೆಂದೂ ಗ್ರೀಕ್ ಸರಕಾರದವರು ಇಟಲಿ ಸರಕಾರದವರ ಕ್ಷಮೆ ಕೇಳಿಕೊಳ್ಳಬೇಕೆಂದೂ ಮೊದಲಾದ ಏಳು ಕರಾರುಗಳನ್ನೊಳಗೊಂಡ ಒಂದು ಪತ್ರವನ್ನು ಗ್ರೀಸಿನವರಿಗೆ ಇಟಲಿಯ ಮುಖ್ಯ ಮಂತ್ರಿಯಾದ ಮುಸುಲೋನಿಯವರು ಕಳುಹಿಸಿದರು. ಈ ಕರಾರುಗಳಿಗೆಲ್ಲಾ ಒಪ್ಪುವುದು ತಮ್ಮ ಗೌರವಕ್ಕೆ ಹಾನಿಕರವೆಂದೂ ಅವುಗಳಲ್ಲಿ ನಾಲ್ಕಕ್ಕೆ ಮಾತ್ರ ಒಪ್ಪುವೆವೆಂದೂ ಗ್ರೀಸಿನವರ ಉತ್ತರವಾಗಿದೆ. ಇದನ್ನು ನೋಡಿದ ಮುಸುಲೋನಿಯವರು ಮನಸ್ಸು ಆಗ್ರಹಗೊಂಡು ತಮ್ಮ ಸೇನೆಯನ್ನು ಕಳುಹಿಸಿ ಗ್ರೀಸಿನವರ ಕಾರ್ಫೂ ಎಂಬ ದ್ವೀಪವನ್ನು ವಶತ್ತಿಗೆ ಹಾಕಿಸಿದರು. ಇಟಲಿಯ ಸೈನ್ಯದವರು ಅಲ್ಲಿಯ ಕೋಟೆಯ ಮೇಲೆ ಗುಂಡುಹಾರಿಸಿ ಕೆಲವರನ್ನು ಕೊಂದು ಅನೇಕರನ್ನು ಗಾಯಪಡಿಸಿ ದ್ವೀಪವನ್ನು ಕೈವಶಮಾಡಿಕೊಂಡರು. ಗ್ರೀಕರು ಇದಕ್ಕೆ ಪ್ರತಿಯಾಗಿ ಯುದ್ಧಕ್ಕೆ ಸನ್ನದ್ಧರಾಗದೆ ರಾಷ್ಟ್ರಕೂಟಕ್ಕೆ ತಮ್ಮ ಫಿರ್ಯಾದಿಯನ್ನು ಹೇಳಿಕೊಂಡರು. ಈ ವಿವಾದಾಂಶವು ತಮ್ಮ ಗೌರವಕ್ಕೆ ಸಮ್ಮಂದಪಟ್ಟದ್ದಾದುದರಿಂದ ಇದನ್ನು ತೀರ್ಮಾನಿಸುವ ಹಕ್ಕು ರಾಷ್ಟ್ರಕೂಟದವರಿಗಿಲ್ಲವೆಂತಲೂ ಆಲ್ಬೇನಿಯದಲ್ಲಿ ಕೊಲ್ಲಲ್ಪಟ್ಟ ಮಿಶನಿನವರು ನಾನಾ ರಾಜ್ಯದ ರಾಯಭಾರಿಗಳ ಸಂಘದಿಂದ ಕಳುಹಿಸಲ್ಪಟ್ಟವರಾದುದರಿಂದ ಆ ಸಂಘದವರೇ ಇದನ್ನು ತೀರಿಸಲು ಯೋಗ್ಯರೆಂತಲೂ ತಮ್ಮ ಕರಾರುಗಳಿಗೆಲ್ಲಾ ಗ್ರೀಸಿನವರು ಒಪ್ಪಿದರೆ ಮಾತ್ರವೇ ಕಾರ್ಫೂದ್ವೀಪವನ್ನು ಬಿಟ್ಟುಕೊಡುವೆವೆಂತಲೂ ಇಟಲಿಯವರು ಪ್ರತ್ಯುತ್ತರ ಕೊಟ್ಟದ್ದಲ್ಲದೆ ಆ ದ್ವೀಪದ ಸಮೀಪದ ಇನ್ನು ಕೆಲವು ದ್ವೀಪಗಳನ್ನು ಕೈವಶಮಾಡಿಕೊಂಡಿರುವರು. ಇಟಲಿಯವರು ರಾಷ್ಟ್ರಕೂಟವು ಇಂಥಾ ಸಂಗತಿಗಳನ್ನು ತೀರ್ಮಾನಿಸುವ ಹಕ್ಕುಳ್ಳದ್ದಲ್ಲವೆಂದು ಹೇಳುವುದರಿಂದಲೂ ಅವರು ಕಾರ್ಫೂ ದ್ವೀಪವನ್ನು ಹಿಡಿಯುವಾಗ್ಗೆ ನಡಿಸಿದ ಅತ್ಯಾಚಾರಗಳಿಗಾಗಿಯೂ ಬೇರೆ ಜನಾಂಗದವರು ಇಟಲಿಯನ್ನು ನಿಂದಿಸುತ್ತಿರುವರು.

ರಾಷ್ಟ್ರಕೂಟವು ಜಿನೀವಾಪಟ್ಟಣದಲ್ಲಿ ಈ ವಿಷಯ ಚರ್ಚಿಸಲು ಸಭೆ ಸೇರಿತು. ಇಂಥಾ ವಿಷಯಗಳನ್ನು ತೀರ್ಮಾನಿಸಲು ರಾಷ್ಟ್ರಕೂಟದವರು ಕೈಹಾಕದೆ ಹೋದರೆ ತಾವು ಆ ಕೂಟದಿಂದ ಹಿಂತೆಗೆಯುತ್ತೇವೆಯೆಂದು ನಾರ್ವೆ ಮತ್ತು ಸ್ವೀಡನ್ನಿನ ಪ್ರತಿನಿಧಿಗಳು ಸೂಚಿಸಿದರು. ಇದಕ್ಕೆ ಪ್ರತಿಯಾಗಿ ಇಟಲಿಯವರು ರಾಷ್ಟ್ರಕೂಟಕ್ಕೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸುವುದಿಲ್ಲವೆಂದು ಹೆದರಿಸಿರುವರು. ಇಂಥಾ ಬಿಕ್ಕಟ್ಟಿನ ಸಮಯದಲ್ಲಿ ಏನುಮಾಡಬೇಕೆಂದು ತೋಚದೆ ರಾಷ್ಟ್ರಕೂಟದವರು ಈ ತಾರೀಖು 6 ರಲ್ಲಿ ಸಭೆಸೇರಿ ಒಂದೂವರೆ ಗಂಟೆ ಹೊತ್ತಿನವರೆಗೆ ಚರ್ಚಿಸಿ ಈ ವ್ಯಾಜ್ಯವನ್ನು ರಾಯಭಾರಿಗಳ ವ್ಯವಸ್ಥೆಗೆ ಕಳುಹಿಸುವುದೇ ಸರಿಯೆಂದು ಯೋಚಿಸಿ ಹಾಗೆಯೇ ರಾಯಭಾರಿಗಳ ಸಂಘಕ್ಕೆ ತಿಳಿಸಿರುವರು. ಈ ವಿಷಯವನ್ನು ನಾನಾ ಜನಾಂಗದ ರಾಯಭಾರಿಗಳು ಪ್ಯಾರಿಸ್ ಪಟ್ಟಣದಲ್ಲಿ ಸಮಾಲೋಚಿಸುತ್ತಲಿರುವರು. ತನ್ನ ದೈಯಿಲೆಗೆ ಒಳಗಾದವರ ಸಂಸಾರದ ಪರಿಹಾರಕ್ಕಾಗಿ ಸ್ವಿಸರ್ ಲೆಂಡಿನ ಬ್ಯಾಂಕಿನಲ್ಲಿಟ್ಟಿರುವ ತಮ್ಮ 50 ಲಕ್ಷ ರೂಪಾಯಿಯನ್ನು ಕೊಡುವುದಾಗಿ ಒಪ್ಪಿರುವ ಗ್ರೀಸಿನವರ ಅಭಿಪ್ರಾಯವನ್ನೂ ತೀರ್ಮಾನಕ್ಕೆ ಅನುಕೂಲಿಸುವಂತ ಸಂದರ್ಭಗಳನ್ನೂ ರಾಯಭಾರಿಗಳ ಸಭೆಗೆ ರಾಷ್ಟ್ರಕೂಟದವರು ಕಳುಹಿಸಿರುವರು. ರಾಯಭಾರಿಗಳ ತೀರ್ಮಾನ ನಮ್ಮ ಒಪ್ಪಿಸುವೆವೆಂದೂ ಕಾರ್ಫೂದ್ವೀಪವನ್ನು ಬೇಗನೆ ಬಿಟ್ಟುಕೊಡುವೆವೆಂದೂ ಇಟಲಿಯವರು ವಾಗ್ದಾನಮಾಡಿರುವುದರಿಂದ ಯುದ್ಧಸಂಭವವೇನೂ ಕಾಣುವುದಿಲ್ಲವೆಂತಲೂ ಈ ವ್ಯಾಜ್ಯವು ಬೇಗನೆ ತೀರ್ಮಾನಿಸಲ್ಪಡುವುದೆಂತಲೂ ಈ ನಾಡಿನಲ್ಲಿಯೇ ಮಿತ್ರಮಂಡಲಿಯವರ ನಾಶದ ಕ್ಕೆ ಗ್ರೀಸಿನವರು ಸಹಾಯಮಾಡಿ ಬಹು ಮಾನಿಸುವ ಸಂಭ್ರಮವು ನಡೆಯುವುದೆಂತಲೂ ಬ್ರಿಟಿಷರು ಅಭಿಪ್ರಾಯಪಟ್ಟಿರುವರು. ಮುಸುಲೋನಿಯವರು ತನ್ನ ಮಂತ್ರಿಮಂಡಲಿ ಮುಂದೆ ರಾಯಭಾರಿಗಳ ಸಭೆಯು ತಾವು ಮೊದಲು ಗ್ರೀಸಿಗೆ ಕಳುಹಿಸಿದ ಕರಾರುಗಳಲ್ಲಿ ಹೆಚ್ಚು ಕಮ್ಮಿ ಎಲ್ಲವನ್ನೂ ಒಪ್ಪಿಕೊಂಡಿರುವರೆಂತಲೂ ಗ್ರೀಸ್ ಸರಕಾರವು ರಾಯಭಾರಿಗಳು ತೀರ್ಮಾನಿಸುವ ಕರಾರುಗಳನ್ನೆಲ್ಲಾ ಆಚರಣೆಗೆ ತಂದ ವಿನಹ ಕಾರ್ಫೂ ದ್ವೀಪವನ್ನು ಬಿಟ್ಟುಕೊಡಲಾರೆವೆಂತಲೂ ಇಟಲಿಯ ಒಗ್ಗಟ್ಟೂ ಧೈರ್ಯವೂ ಈ ಜಯಕ್ಕೆ ಕಾರಣವೆಂತಲೂ ಮುಂತಾಗಿ ತಮ್ಮನ್ನು ಹೊಗಳಿಕೊಳ್ಳುವ ಭಾಷಣ ಮಾಡಿರುವರಂತೆ. ಅಖೈರು ತೀರ್ಮಾನವು ಹೇಗಾಗುವುದೆಂದು ಇನ್ನು ನೋಡಬೇಕಾಗಿದೆ. ಯಾರನ್ನು ಯಾರು ಕೊಚ್ಚಿಕೊಂಡರೂ ಯುದ್ಧದ ಹಾವಳಿಯು ತಪ್ಪಿದರೆ ಸಾಕಾಗಿದೆಯೆಂಬುದೇ ಎಲ್ಲರ ಅಭಿಲಾಷೆಯಾಗಿದೆ.

ಕೃಷ್ಣರಾಜ ಸಾಗರಕಟ್ಟೆ

ಮೈಸೂರು ಸಂಸ್ಥಾನದ ಪ್ರತಿ ಒಬ್ಬರೂ ಕನ್ನಂಬಾಡಿ ಕಟ್ಟೆಯ ವಿಚಾರದಲ್ಲಿ ಕೇಳಿರುವರು. ಆದರೆ ಬಹು ಕಡಿಮೆ ಜನರು ಮಾತ್ರ ಅದನ್ನು ನೋಡಿರುವವರು. ಅಥವಾ ಆ ಕಟ್ಟೆಯ ಪರಿಮಾಣವೆಷ್ಟೆಂಬುದನ್ನು ತಿಳಿದಿರುವರು. ಆದರೆ ಮೈಸೂರು ರಾಜಧಾನಿಯಲ್ಲಿ ವಾಸಮಾಡುವ ನಾವೆಲ್ಲರೂ 13 ಮೈಲಿಗಳ ದೂರದಲ್ಲಿರುವ ಆ ಕಟ್ಟೆಯ ಮೇಲಿನಿಂದ ನೀರು ಉರುಳಿ ಬೋರೆಯುತ್ತಿರುವುದನ್ನು ಎರಡು ತಿಂಗಳುಗಳಿಂದ ಪ್ರತಿ ರಾತ್ರಿಯೂ ಕೇಳುತ್ತಿದ್ದೆವು. ಈ ಅದ್ಭುತವಾದ ನೋಟವನ್ನು ನೋಡುವುದಕ್ಕೆ ಸಾವಿರಾರು ಜನರು ಅಲ್ಲಿಗೆ ಹೋಗಿ ಬರುತ್ತಿದ್ದರು.

ಒಂದು ಸಾಧಾರಣ ಕೆರೆಯ ಏರಿಯನ್ನು ಮಣ್ಣಿನಿಂದ ಕಟ್ಟುವಂತೆ ಈ ಸಾಗರದ ಕಟ್ಟೆಯನ್ನು ಒಂದು ವಿಶಾಲವಾದ ಕಣಿವೆಯ ಮಧ್ಯದಲ್ಲಿ ಕಲ್ಲಿನಿಂದ ಕಟ್ಟಿದಾರೆ. ಆದರೆ ಈ ಕಟ್ಟೆಯು $1\frac{1}{4}$ ಮೈಲಿಗಳು ಉದ್ದವಾಗಿಯೂ 120 ಅಡಿಗಳ ಎತ್ತರವಾಗಿಯೂ ತಳಭಾಗದಲ್ಲಿ 120 ಅಡಿಗಳ ದಪ್ಪವಾಗಿಯೂ ಇರುತ್ತದೆ. ಇದರಲ್ಲಿ 3,30 0,000 ಘನ ಅಡಿಗಳ ಕಲ್ಲಿನ ಕೆಲಸವಿರುತ್ತದೆ. ನಾವು ಮೈಸೂರಿನ ಕಡೆಯಿಂದ ಅದರ ಸಮೀಪಕ್ಕೆ ಹೋದ ಹಾಗೆಲ್ಲಾ ಅದು ಒಂದು ದೊಡ್ಡ ಗೋಡೆ ಎಂತೆ ನಿಂತಿರುವುದನ್ನೂ ಅದರ ಮೇಲಿನಿಂದ ನೀರು ನದಿಯಂತೆ ಧುಮುಕಿ ಶ್ರೀರಂಗಪಟ್ಟಣದ ಕಡೆಗೆ ಚಂಚಲವಾದ ಪ್ರವಾಹದಂತೆ ನುಗ್ಗಿ ಹೋಗುತ್ತಿರುವುದನ್ನೂ ಕಾಣುವೆವು.

ಈ ಕಟ್ಟೆಯ ಪಕ್ಕದಲ್ಲಿ ಕಟ್ಟೆಯ ಮೇಲ್ಭಾಗಕ್ಕೆ ಹೋಗಲು ನಿಚ್ಚಣಿಗೆಯಂತಿರುವ ಮೆಟ್ಟಿಲುಗಳ ಒಂದು ಸಾಲನ್ನು ತಾತ್ಕಾಲಿಕ ಕಟ್ಟಿದ್ದಾರೆ. ಇದರ ಮೂಲಕ ನಾವು ಹತ್ತಿ ಕಟ್ಟೆಯ ಮೇಲ್ಭಾಗಕ್ಕೆ ಹೋದರೆ 10 ಮೈಲಿಗಳವರೆಗೂ ವ್ಯಾಪಿಸಿರುವ ವಿಶಾಲವಾದ ಆ ಸಾಗರವು ಕಾಣಿಸುವುದು. ಅದು ಈಗಾಗಲೇ 20 ಚದರ ಮೈಲಿಗಳ ವಿಶಾಲವುಳ್ಳದ್ದಾಗಿದೆ. ಇದರ ಕೆಲಸವು ಸಂಪೂರ್ಣವಾಗಿ ಪೂರೈಸಿದ ನಂತರ ದ 40 ಚದರ ಮೈಲಿಗಳ ವಿಶಾಲವುಳ್ಳದಾಗುವುದು. ಈ ಕಟ್ಟೆಯು 120 ಅಡಿಗಳ ಎತ್ತರವುಳ್ಳದ್ದಾಗಿದೆ. ಆದರೆ ಮಧ್ಯಭಾಗದಲ್ಲಿ 900 ಅಡಿಗಳ ಪಾಸಲೆ ಈ ಕಟ್ಟೆಯು 80 ಅಡಿಗಳ ಎತ್ತರ ಮಾತ್ರವಿರುತ್ತದೆ. ಈ ಭಾಗದ ಮೇಲಿನಿಂದಲೇ ನೀರು ಎರಡು ತಿಂಗಳುಗಳಿಂದಲೂ ಬೋರೆಯುತ್ತಾ ಉರುಳುತ್ತಿರುತ್ತದೆ. ಕೆಲವು ದಿನಗಳ ಕೆಳಗೆ ಹೀಗೆ ಕೋಡಿಯ ಮೇಲೆ ಉರುಳಿ ಬರುವ ನೀರಿನ ಮಟ್ಟವು 12 ಅಡಿಗಳ ಎತ್ತರವಿದ್ದಿತು. ಅಗ್ಗೆ ಕಟ್ಟೆಯ ಮೇಲೆ ನಿಂತು ನೋಡುವವರಿಗೆ ಆ ನೀರಿನ ಪ್ರವಾಹವು ಮೆಲ್ಲಗೆ ಕಟ್ಟೆಯ ಆ ಭಾಗದ ಮೇಲೆ ಉರುಳಿ 80 ಅಡಿಗಳ ಕೆಳಭಾಗದಲ್ಲಿರುವ ಬಂಡೆಗಳಿಗೆ ಒಂದು ಬಡಿಯುವ ನೋಟವು ಕೇವಲ ಅದ್ಭುತ ನೋಟವಾಗಿದ್ದಿತು. ಆ ಕಾಲದಲ್ಲಿ ಪ್ರತಿಕ್ಷಣಕ್ಕೂ $1\frac{1}{4}$ ಲಕ್ಷ ಘನ ಅಡಿಗಳ ನೀರು ಆ ಕಟ್ಟೆಯ ಮೇಲೆ ಉರುಳಿ ಹೋಗುತ್ತಿತ್ತು.

ಅದರ ಕೆಳಭಾಗದಲ್ಲಿರುವ ಯಂತ್ರಗಳ ಸಹಾಯದಿಂದ ಮುಚ್ಚಿ ತೆಗೆಯಬಹುದಾದ 8 ತೂಬುಗಳು ಆ ಕಟ್ಟೆಯ ತೀರ ಕೆಳಭಾಗದಲ್ಲಿರುತ್ತವೆ. ಈ ತೂಬುಗಳ ಮೂಲಕ ನೀರು ಅತಿ ಭಯಂಕರವಾದ ವೇಗದಿಂದ ನುಗ್ಗಿ ಬರುತ್ತದೆ. ಇಂಜನಿಯರುಗಳು ಅಲ್ಲಿ ನೀರು ಒಂದು ಕ್ಷಣಕ್ಕೆ 50 ಅಡಿಗಳ ವೇಗದಿಂದ ನುಗ್ಗಿ ಬರುವುದೆಂದು ಹೇಳುತ್ತಾರೆ. ಮೇಲಿಂದ ಒಬ್ಬನು ಕೆಳಭಾಗದಲ್ಲಿ ಉಕ್ಕಿಬರುವ ನೀರಿನ ಸುಳಿಗಳನ್ನು ನೋಡಿದರೆ ಅವನಿಗೆ ಭಯ ಗಿರ್ರನೆ ಸುತ್ತಿಹೋಗುವುದು.

ಪಾರಸಿ ಭಾಷೆಯಲ್ಲಿ ಕೆತ್ತಿರುವ ಒಂದು ದೊಡ್ಡ ಕಲ್ಲಿನ ಶಾಸನವು ಈ ಕಟ್ಟೆಯ ಕೆಳಭಾಗದಲ್ಲಿ ಇರುತ್ತದೆ. ಇದರಲ್ಲಿ ಹಿಂದೆ ಟಿಪ್ಪೂ ಸುಲ್ತಾನನು ಇದೇ ಸ್ಥಳದಲ್ಲಿ ಇಂಥಾ ಒಂದು ಕಟ್ಟೆಯನ್ನು ಕಟ್ಟಲು ಅಪೇಕ್ಷಿಸಿದನು. ಅವನಿಗೆ ಅದು ಅಸಾಧ್ಯವಾಯಿತು ಎಂದು ಜನರು ಹೇಳಿಕೊಳ್ಳುವರೆಂಬುದಾಗಿ ಬರೆದಿದೆ. ಈಗ ಒಬ್ಬನು ಈ ಕಟ್ಟೆಯ ಮೇಲೆ ನಿಂತು ಈ ಕಟ್ಟೆಯು ಈ ರೀತಿಯಲ್ಲಿಯೇ ಇರಬೇಕೆಂದು ಇದರ ನಮೂನೆಯನ್ನು ಊಹಿಸುವುದಕ್ಕೆ ಚತುರನಾದ ಒಬ್ಬನು ಮೈಸೂರಿನಲ್ಲಿಯೇ ಹುಟ್ಟಿ ಈ ಅದ್ಭುತಾಕಾರವಾದ ಕಾರ್ಯಭಾರವನ್ನು ನೆರವೇರಿಸಿದನೆಂದೂ ಮೈಸೂರು ಸರಕಾರದವರು ಈ ಸಲಹೆಯನ್ನು ಅನುಮೋದಿಸಿ ಇಷ್ಟು ಬೇಗನೆ ಈ ಅತಿ ಸಾಹಸ ಕಾರ್ಯವನ್ನು ಸಂಪೂರ್ತಿಗೊಳಿಸಿರೆಂದೂ ಯೋಚಿಸುವಾಗ ಅವನು ಹೆಚ್ಚಳಪಡದೆ ಇರುವುದಕ್ಕೆ ಆಗುವುದೇ ಇಲ್ಲ.

ರೈಲಿನಿಂದಿಳಿದೊಡನೆಯೇ ಅಲ್ಲಿ ಇಳಿಯೊದು ಸುಖದೆ, ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಯೋಗ್ಯವಾದ ಕೋಣೆಗಳು ಬೇಕಾಂದಿದ್ದರೆ ಬೊಂಬಾಯಿಪಟ್ಟಣದ ಮಧ್ಯಸ್ಥಳದಲ್ಲಿರುವ ಮೇಲ್ಕಂಡ ಹೋಟೇಲಿನಲ್ಲಿಳಿಯಲು ಮರೆಯಬೇಡಿರಿ ಯೋಗ್ಯವಾದ ಊಟ, ಗಾಳಿಗನುಕೂಲವಾದ ಕೊಠಡಿ 15 ಮಿನಿಟಿಗೊಮ್ಮೆ ತಿರುಗುವ ಟ್ರಾಮಿನ ಸೌಕರ್ಯ, ಅಂತೂ ಪ್ರಯಾಣಿಕರಿಗೆ ಉಳಿದುಕೊಳ್ಳಲು ಅನುಕೂಲವಾದ ಉಡುಪಿ ಬ್ರಾಹ್ಮಣರ ಭೋಜನಾಲಯ

ಹೆಚ್. ಶ್ರೀನಿವಾಸರಾವ್,

[12—6] ಮೇನೇಜರ್.

ಜೀವವಿಮೆ.

ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಯ ಯಜಮಾನನು ಮೃತಪಟ್ಟರೆ ಉಂಟಾಗತಕ್ಕದಾದ ತೊಂದರೆಗಳನ್ನು ನಿವಾರಿಸುವುದೇ ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ

ಅತಿ ಕಡಿಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪೆನಿ.

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲವಾಗಿ ಹಣವನ್ನು ಒದಗಿಸಿ ಸ್ಥಿರಾಸ್ತಿಗಳನ್ನೂ ಕೊಂಡುಕೊಟ್ಟು ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ।

ಸ್ತ್ರೀಪುರುಷ ಇಬ್ಬರೂ ಜೀವವಿಮೆಯ ಸೌಕರ್ಯಗಳನ್ನು ಪಡೆಯಲು ಅನುಕೂಲವನ್ನು ಒದಗಿಸುವ ಸಂಸ್ಥೆಯಾದರೂ ಇದೊಂದೆ

ಒಂದು ದೇಶದ ಹಣವು ಮತ್ತೊಂದು ದೇಶದಲ್ಲಿ ಸ್ಥಿರವಾಗದಂತೆ ನೋಡಿಕೊಂಡು ವಿಮೆದಾರರ ಭೂಸಂಪತ್ತನ್ನು ವೃದ್ಧಿಗೊಳಿಸುವ ಸಹಕಾರಸಂಘ, ಬೇಂಕ, ಮುನಿಸಿಪಾಲಿಟಿ ಮುಂತಾದ ಸಾರ್ವಜನಿಕ ಸಂಸ್ಥೆಗಳಿಗೆ ಸಾಲವಾಗಿ ಕೊಡುವ ಅನುಕೂಲತೆಯುಳ್ಳ ಕಂಪೆನಿ ಇದೊಂದೆ.

ಹೆಚ್ಚಿನ ಮಾಹಿತಿಯನ್ನು ಕನ್ನಡ ನಾಡುಗಳ ಚೀಫ್ ಏಜಂಟರಾದ ಈ ಕೆಳಗಿನ ವಿಳಾಸದಾರರಿಂದ ಪಡೆಯಬಹುದಾಗಿದೆ.

ಬಿ. ಎಸ್. ಆರಾಧ್ಯ,
ಚೈನ್ ಅಂಡ್ ಮ್ಯಾರೇಜ್ ಆಫೀಸ್, ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್
ಲಿಮಿಟೆಡ್

ಕೋ ಅಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ

	ರೂ.
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,820
ಜಮಾ ಬಂದ ಠೇವಣಾತಿ	39,819

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6¼ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಖ್ಖ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು	ಟ್ರೆಜರರ್.
ಕೊಡಂದೇರ ಕುಟ್ಟಯ್ಯನವರು, ರಾಯ್ ಬಹದ್ದೂರ್	ಯಂ. ಭುಜಂಗರಾಯರು ಬಿ ಎ ಬಿ ಎಲ್.,

ಸೆಕ್ರೆಟರಿ
ಸಿ. ಯನ್ ವೆಂಕಪ್ಪಯ್ಯನವರು ಬಿ ಎ, ಬಿ. ಎಲ್.
ತಾರೀಖು 1—9—1933.

ಸುಂದರ ವಿಲಾಸ ಪ್ರೆಸ್, ಮಡಿಕೇರಿ

ಕೊಡಗು ಮಹಾ ಜನರನ್ನು ಅಗ್ರ್ಯೆ ಕೊಡಗಿನ ಪ್ರಾಧಾನಪಟ್ಟಣವಾದ ಮಡಿಕೇರಿಯಲ್ಲಿ ಸದ್ಯ ಸ್ಥಾಪಿತವಾಗಿರುವ ನನ್ನ ಮುದ್ರಾಲಯವು ತಮ್ಮನ್ನು ಸೇವಿಸಲು ಸಿದ್ಧವಾಗಿದೆ ಅಂದವಾದ ಅಕ್ಷರಗಳಿಂದ, ಮುದ್ದಾದ ಮುದ್ರಣದಿಂದ ಸೊಗಸಾದ ಕಾಗದಗಳಲ್ಲಿ ಮುದ್ರಿಸುವ ನೂತನ ಅನುಕೂಲತೆಗಳನ್ನು ಸಿದ್ಧಪಡಿಸಿದೆ.

ಪರಸ್ಥಳಕಂಗೆ ಎಲ್ಲಾ ಅನುಕೂಲತೆಗಳನ್ನು ಒದಗಿಸಲು ಏರ್ಪಡಿಸಿದೆ ದೇಶೀಯ ಮುದ್ರಾಲಯಕ್ಕೆ ಸ್ವದೇಶ ಬಂಧು ಭಗಿನಿಯರು ಪ್ರೋತ್ಸಾಹ ಕೊಡಬೇಕಾಗಿದೆ

ಬಗೆ ಬಗೆಯ ಸ್ಟೇಶನರಿ, ಸಾಮಾನು ಶಾಲಾ ಮಕ್ಕಳ ಸಾಹಿತ್ಯಗಳೆಲ್ಲವೂ ಶೀಘ್ರದಲ್ಲಿ ಇಡಲ್ಪಡುತ್ತವೆ ನಮ್ಮ ದರಗಳು ಅತ್ಯಲ್ಪ! ನಮ್ಮ ಕೋರಿಕೆ, ಸೇವೆ! ವಿಶೇಷ ಲಾಭವಲ್ಲ

ವಿಶೇಷ ಮಾಹಿತಿಗೆ ಮುದ್ರಾಲಯದ ಅಧಿಕಾರಿಗಳಿಗೆ ಬರೆದು ತಿಳಿದುಕೊಳ್ಳುವುದು

ವಿ. ಆರ್. ಕಣ್ಣಪ್ಪ ಮೊದಲಿಯಾರ್

ಸುಂದರ ವಿಲಾಸ ಪ್ರೆಸ್
ಮಡಿಕೇರಿ.
ತಾ|| 10–9–23.

ಪ್ರೊಪ್ರೈಟರ್.
12—9

"ಕೊಡಗು"

೧೯೨೩ನೇ ಇಸವಿ ಸೆಪ್ಟಂಬರ್ ತಾ|| ೨೮ನೇ ಶುಕ್ರವಾರ.

ಸಂಘದ ಬಹುಮಾನಪತ್ರಕ್ಕೆ ತಿರಸ್ಕಾರ!

ಮೈಸೂರಿಗೆ ವೈಸ್‌ರಾಯ್ ಪ್ರಭುಗಳು ನವಂಬರ್ ತಿಂಗಳಲ್ಲಿ ಬರುವಾಗ ಜಮಾನ್‌ದಾರರ ಸಂಘದ ಪ್ರತಿನಿಧಿಗಳು ಅವರ ಭೇಟಿ ತೆಗೆದುಕೊಂಡು ಒಪ್ಪಿಸಬೇಕೆಂತ ಯೋಚಿಸಿದ್ದ ಬಹುಮಾನಪತ್ರವು ಚೀಫ್‌ಕಮಿಶನರ್ ಸಾಹೇಬರಿಂದ ತಿರಸ್ಕರಿಸಲ್ಪಟ್ಟಿದೆ. ಈ ಸಂಬಂಧವಾಗಿ ಕಮಿಶನರ್ ಸಾಹೇಬರಿಂದ ಜಮಾ‌ದಾರರ ಸಂಘಕ್ಕೆ ಬಂದ ಪತ್ರದ ಮತ್ತು ವೈಸ್‌ರಾಯ್ ಪ್ರಭುಗಳಿಗೆ ಒಪ್ಪಿಸಲು ತಯಾರಾಗಿದ್ದ ವಂದನಾಪತ್ರದ ತರ್ಜುಮೆಯನ್ನು ಸಂಘದ ಸೆಕ್ರೆಟರಿಯವರು ಪ್ರಕಟಣೆ ಬಗ್ಗೆ ಕಳುಹಿಸಿದ್ದನ್ನು ಇನ್ನೊಂದುಕಡೆ ಪ್ರಕಟಿಸಿದ್ದೇವೆ. ತಿರಸ್ಕಾರಕ್ಕೆ ಕಾರಣವೇನೆಂದರೆ—ಚೆಮ್ಸ್‌ಫರ್ಡ್ ಪ್ರಭುಗಳು ಸುಮಾರು ನಾಲ್ಕು ವರ್ಷಕ್ಕೆ ಮೊದಲು ಮೈಸೂರಿಗೆ ಬಂದಿದ್ದಾಗ ಸಂಘವು ದೇಶದ ಅಭಿಪ್ರಾಯವನ್ನು ಸೂಚಿಸುವದಕ್ಕೆ ಹೋಗುವದು ಅನಾವಶ್ಯವೆಂತ ಚೀಫ್‌ಕಮಿಶನರ್ ಸಾಹೇಬರಿಗೆ ತೋರಿತಂತೆ. ಅಂದರೆ ಸಂಘದ ಅಭಿಪ್ರಾಯವು ದೇಶದ ಅಭಿಪ್ರಾಯವೆಂತ ಹೇಳಲಿಕ್ಕಾಗುವದಿಲ್ಲ ಎಂಬ ಅರ್ಥವಿದೆ. ಈ ಅಭಿಪ್ರಾಯಕ್ಕೆ ಸರಕಾರದವರಿಗೆ ಏನು ಆಧಾರವಿದೆ? ಮೂರು ನಾಲ್ಕು ವರ್ಷಗಳ ಮುಂಚೆ ದೇಶದಲ್ಲಿ ಸಂಘವೊಂದು ವಿನಹ ಸಮುದಾಯದ ಅಭಿಪ್ರಾಯವನ್ನು ಸೂಚಿಸುವ ಬೇರೆ ಯಾವ ದಾರಿಯೂ ಇರಲಿಲ್ಲ. ಅದಕ್ಕೆ ಮೊದಲು 1918 ರಲ್ಲಿ ಮದ್ರಾಸಿಗೆ ಸ್ಟೇಟ್‌ಸೆಕ್ರೆಟರಿಯವರೂ, ವೈಸ್‌ರಾಯ್ ಪ್ರಭುಗಳೂ ದೇಶದ ಅಭಿಪ್ರಾಯ ತಿಳಿಯಲಿಕ್ಕೆಂತಲೇ ಬಂದಾಗ ಜಮಾ‌ದಾರರ ಸಂಘದ ಪ್ರತಿನಿಧಿಗಳೇ ದೇಶದ ಅಭಿಪ್ರಾಯ ತಿಳಿಸಲಿಕ್ಕೆ ಹೋದದ್ದಾಗಿದೆ. ಒಂದೆರಡು ವರ್ಷಗಳಲ್ಲೇ ಸಂಘದ ಅಭಿಪ್ರಾಯವು ದೇಶದ ಅಭಿಪ್ರಾಯವಾಗದೆ ಇರಲಿಕ್ಕೆ ಕಾರಣವೇನು? ದೇಶದಲ್ಲಿ ರಾಜಕೀಯ ವಿಷಯ ಆಲೋಚಿಸುತ್ತಿರುವ ಪ್ರತಿಯೊಬ್ಬನೂ ಜಮಾನುದಾರರ ಸಂಘದ ಮೆಂಬರಾಗಿದ್ದಾನೆಂತಲೇ ಹೇಳಬಹುದು. ರಾಜಕೀಯ ಸುಧಾರಣೆಯನ್ನು ಈ ದೇಶಕ್ಕೆ ಹೇಗೆ ಪಡೆಯಬೇಕೆಂಬದರಲ್ಲಿ ಸಂಘದ ಬಹುಮತ (majority view) ಕ್ಕೆ ಕೆಲವು ಜನರು ಒಪ್ಪುವದಿಲ್ಲ. ಈ ಕಾರಣದಿಂದಲೇ ಸಂಘವು ದೇಶದ ಸಾಧಾರಣ ಅಭಿಪ್ರಾಯ ಕೊಡುವ ಸಂಸ್ಥೆಯಲ್ಲವೆಂತ ಹೇಳಲಿಕ್ಕಾಗುವದಿಲ್ಲ. ಈ ಸಂಘದ ಅಭಿಪ್ರಾಯವಾಗಿರುವ ದೇಶದ ಬಹುಜನರ ಅಭಿಪ್ರಾಯವು ವೈಸ್‌ರಾಯ್ ಪ್ರಭುಗಳಿಗೆ ತಿಳಿಯುವ ಬಗೆ ಹೇಗೆ? ಸಂಘದಲ್ಲಿ 2000 ಕ್ಕೆ ಕಡಿಮೆ ಇಲ್ಲದಷ್ಟು ಮೆಂಬರುಗಳಿದ್ದಾರೆ. ಬಹುಕಾಲದಿಂದ ದೇಶದ ಕ್ಷೇಮಕ್ಕಾಗಿ ಕೆಲಸಮಾಡುತ್ತಿದೆ. ಇಂಥಾ ಸಂಸ್ಥೆಯ ಅಭಿಪ್ರಾಯವನ್ನು ಮೇಲಧಿಕಾರಿಗಳಿಗೆ ತಿಳಿಸಲು ಅವಕಾಶ ಕೊಡದೆ ಇರುವದರಲ್ಲಿ ಏನೂ ನ್ಯಾಯವಿಲ್ಲ. ಸಂಘದ ಅಭಿಪ್ರಾಯವನ್ನು ಹೇಳಿಕೊಳ್ಳಲಿಕ್ಕೆ ಬಿಟ್ಟು, ಅದಕ್ಕೆ ವಿರೋಧ ಮತವಿದೆಯೆಂತ ಸ್ಥಳೀಯ ಅಧಿಕಾರಿಗಳು ಹೇಳಿಕೊಡಬಹುದಿತ್ತು. ಈ ರೀತಿ ಜನರ ಪ್ರೀತಿಯನ್ನೂ ಗೌರವವನ್ನೂ ಪಡೆದಿರುವ ಈ ಮುಖ್ಯ ಸಂಸ್ಥೆಯನ್ನು ತಿರಸ್ಕರಿಸಿ ದೇಶವನ್ನೇ ತಿರಸ್ಕರಿಸಿದಂತಾಯಿತು. ಸಂಘದ ಬಹುಮತಕ್ಕೆ ವಿರೋಧವಿರುವ ಕೆಲವು ಮಹನೀಯರು ಸಹ ಸಂಘಕ್ಕೆ ಉಂಟಾಗಿರುವ ಈ ತಿರಸ್ಕಾರವನ್ನು ಸಹಿಸಲಾರರೆಂತ ನಾವು ನಂಬುತ್ತೇವೆ.

ಕಮಿಶನರ್ ಸಾಹೇಬರ ಕಾಗದದಲ್ಲಿ ಸರಕಾರದ ಕೋರಿಕೆಮೇರೆ ಸಂಘವು ವಂದನಾಪತ್ರವನ್ನು ಕೊಡಲಿಕ್ಕೆ ಒಪ್ಪಿದ್ದೆಂಬಂತೆ ತೋರುತ್ತೆ. ಸಂಘದ ವಂದನಾಪತ್ರವಿದೆಯೋ ಎಂತ ಸರಕಾರದವರು ಕೇಳಿದ್ದೇ ಹೊರತು ನಿಮ್ಮ ವಂದನಾಪತ್ರವನ್ನು ವೈಸ್‌ರಾಯ್ ಪ್ರಭುಗಳಿಗೆ ಕೊಡಿ ಎಂತ ಸರಕಾರವು ಸಂಘವನ್ನು ಕೇಳಲಿಲ್ಲ. ಒಂದುವೇಳೆ ಸರಕಾರದವರು ಸಂಘವನ್ನು ಕೇಳದೇ ಇದ್ದಿದ್ದರೂ ಸಂಘವು ದೇಶದ ಸಮಾಪಬರುವ ವೈಸ್‌ರಾಯರಿಗೆ ತಮ್ಮ ಕೋರಿಕೆಗಳನ್ನು ತಿಳಿಸಲು ಏರ್ಪಾಡು ಮಾಡದೇ ಇರುತ್ತಿರಲಿಲ್ಲ. ಸರಕಾರದವರ ಕೋರಿಕೆಮೇರೆ ಡೆಪ್ಯುಟೇಶನ್ ಹೋಗಲು ಏರ್ಪಾಡಾದದ್ದೆಂತ ಭಾವಿಸಿಕೊಂಡು ತಮ್ಮ ಮನಸ್ಸುಬಂದಂತೆ ಈ ಡೆಪ್ಯುಟೇಶನನ್ನು ನಿಲ್ಲಿಸಲಿಕ್ಕೆ ಅವಕಾಶ ಮಾಡಿಕೊಂಡಂತೆ ಕಾಣುತ್ತೆ. ಸಂಘದ ಕಳೆದ ಜನರಲ್ ಮೀಟಿಂಗಿನಲ್ಲಿಯೇ ವೈಸ್‌ರಾಯ್ ಪ್ರಭುಗಳಲ್ಲಿಗೆ ಸಂಘದ ಪ್ರತಿನಿಧಿಗಳ ಡೆಪ್ಯುಟೇಶನ್ ಹೋಗಬೇಕೆಂತ ತೀರ್ಮಾನವಾದದ್ದನ್ನು ಸರಕಾರಕ್ಕೆ ಮೊದಲೇ ತಿಳಿಸಿರುವಾಗ ಸಂಘವು ಸರಕಾರದ ಕಾಗದ ಯಾವದೂ ಇಲ್ಲದೆ ಮೈಸೂರಿಗೆ ಡೆಪ್ಯುಟೇಶನ್ ಕಳುಹಿಸುವ ಏರ್ಪಾಡು ಮಾಡಿಯೇ ಮಾಡುತ್ತಿದ್ದರು. ಇಂಡಿಯಾ ಸರಕಾರದ ಪ್ರತ್ಯಕ್ಷ ಆಡಳಿತದಲ್ಲಿ ಇರುವ ನಮ್ಮ ದೇಶಕ್ಕೆ ಇಂಡಿಯಾಸರಕಾರದ ಮುಖ್ಯ ಅಧಿಕಾರಿಗೆ ದೇಶದ ಹಾಲ್ ಹವಾಲುಗಳನ್ನು ದೇಶದ ಮುಖ್ಯ ಸಂಸ್ಥೆಯ ಮೂಲಕ ಹೇಳಲಿಕ್ಕೆ ಬಿಡದೆ ಹೋಗುವುದರಿಂದ ಚೀಫ್ ಕಮಿಶನರ್ ಸಾಹೇಬರು ಜನರ ಸಂಪೂರ್ಣ ಅತೃಪ್ತಿಗೆ ಗುರಿಯಾಗದೆ ಇರರು. ವಂದನಾಪತ್ರದ ಆಖೈರ್ ಭಾಗದಲ್ಲಿ ಹೇಳಿರುವಂತೆ ನಮ್ಮ ಕೋರಿಕೆಗಳನ್ನು ನಮ್ಮನ್ನಾಳುವ ವೈಸರಾಯರಿಗೆ ಬಿದ್ದಾಗಿ ತಿಳಿಸುವ ಬೇರೆ ಅನುಕೂಲಗಳೇ ಇಲ್ಲ. ನ್ಯಾಯವಿಧಾಯಕ ಸಭೆಗಳಲ್ಲಿ ನಮ್ಮ ಪ್ರತಿನಿಧಿಗಳಿಲ್ಲ.

ಚೆಮ್ಸ್‌ಫರ್ಡ್ ಪ್ರಭುಗಳು ಬಂದಾಗ ಯೂರೋಪಿಯನ್ ಪ್ರತಿನಿಧಿಗಳು ಬೆಂಗಳೂರಲ್ಲಿ ಅವರನ್ನು ನೋಡಿದಾಗ ವಂದನಾಪತ್ರವನ್ನು ಸಹ ಒಪ್ಪಿಸಿದ್ದರೆಂತ ವರ್ತಮಾನವಿತ್ತು. ಸಂಘದ ವಂದನಾಪತ್ರವೂ ಡೆಪ್ಯುಟೇಶನ್ ಸಹ ಬೇಡವೆಂತ ಚೀಫ್‌ಕಮಿಶನರ್ ಸಾಹೇಬರು ಬೇಡವೆಂದು ಮಾಡಲಿಕ್ಕೆ ವಂದನಾಪತ್ರದಲ್ಲಿ ಬರೆದಿದ್ದ ವಿಷಯಗಳು ಆಗಿನ ಚೀಫ್‌ಕಮಿಶನರ್ ಸಾಹೇಬರಿಗೆ ಒಪ್ಪಿಗೆಯಾಗದೆ ಇದ್ದದ್ದೇ ಕಾರಣವೆಂತ ನಾವು ನಂಬುತ್ತೇವೆ. ಆ ದೇಶದಲ್ಲಿ ದಂಗೆಗಳೇನೂ ಇರಲಿಲ್ಲ. ಮಾತ್ರವಲ್ಲ ದೇಶಕ್ಕೆ ಸುಧಾರಣೆ ಪಡೆಯುವ ವಿಷಯದಲ್ಲಿ ಸಂಘವು ಒಗ್ಗಟ್ಟಿನಿಂದಲೇ ಇತ್ತು. ಆದ್ದರಿಂದ ಸಂಘವು ದೇಶದ ಅಭಿಪ್ರಾಯವನ್ನು ಸೂಚಿಸುವದಿಲ್ಲವೆಂತ ಆಗ ಹೇಳಲಿಕ್ಕೆ ಕಾರಣವೇ ಇರಲಿಲ್ಲ. ಸಂಘಕ್ಕೆ ಬರೆದ ಆಗಿನ ಉತ್ತರದಲ್ಲಿ ಸಂಘಕ್ಕೆ ಯಾವ ವಿಧದ ಆಕ್ಷೇಪಣೆಯನ್ನೂ ಸೂಚಿಸಿರಲಿಲ್ಲ. ಏನೂ ಕಾರಣ ಕೊಡದೆ ಸಂಘದ ಡೆಪ್ಯುಟೇಶನನ್ನು ಅಂಗೀಕರಿಸಲಿಕ್ಕೆ ಆಗುವದಿಲ್ಲವೆಂತ ಮಾತ್ರ ಸೂಚಿಸಿದ್ದಂತೆ ನಮಗೆ ಜ್ಞಾಪಕ.

ಈಗಲಾದರೂ ಮದ್ರಾಸಿಗೆ ದೇಶವನ್ನು ಸೇರಿಸಿ ಸ್ವರಾಜ್ಯದ ಪ್ರಯೋಜನವನ್ನು ಪಡೆಯಬೇಕೆಂತ ಸಂಘವು ಕಳೆದ ಜನರಲ್ ಮೀಟಿಂಗಿನಲ್ಲಿ ಬಹುಮತದಿಂದ ತೀರ್ಮಾನಮಾಡಿಕೊಂಡಿದ್ದರೂ ಕೆಲವು ಮುಂದಾಳುಗಳು ಈ ಮತಕ್ಕೆ ವಿರೋಧಿಸುವವರಿದ್ದಾರೆ. ಆದರೂ ಸಂಘದ ಕಮಿಟಿಯವರು ಎರಡುಭಾಗಕ್ಕೂ ಒಪ್ಪುವಂತೆ ವಂದನಾಪತ್ರವನ್ನು ತಯಾರಿಸಿದ್ದಾರೆ. ಸಂಘವು 1918 ನೇ ಇಸ್ವಿಯಿಂದ 1922 ನೇ ಇಸ್ವಿವರೆಗೂ ಬೇರೆ ಪ್ರಾಂತ್ಯಗಳಿಗೆ ಕೊಟ್ಟಿರುವ ಸುಧಾರಣೆಗಳನ್ನು ನಮ್ಮ ದೇಶಕ್ಕೆ ಕೊಡಬೇಕು. ಇದು ಸಾಧ್ಯವಿಲ್ಲವೆಂತಾದರೆ ಮದ್ರಾಸಿಗೆ ಪ್ರತ್ಯೇಕ ಜಿಲ್ಲೆಯಾಗಿ ಸೇರಿಸಿಬಿಡಬೇಕು ಎಂತಲೇ ಕೇಳುತ್ತಾ ಬಂತು. 1922 ರಲ್ಲಿ ಮದ್ರಾಸಿಗೆ ಸೇರಿಸಿಬಿಡುವ ವಿಷಯದಲ್ಲಿ ಸಂಘದಲ್ಲಿ ಭಿನ್ನಾಭಿಪ್ರಾಯ ಹುಟ್ಟಿತು. ಚೀಫ್‌ಕಮಿಶನರ್ ಸಾಹೇಬರು ವರ್ಷದ ಆಖೈರ್‌ವಳಗೆ ಕೌನ್ಸಿಲ ಸ್ಥಾಪನೆಯಾಗುತ್ತೆಂತ ನಿಶ್ಚಯ ಹೇಳಿದ್ದರಿಂದ ಮದ್ರಾಸಿಗೆ ಸೇರಿಸಿಬಿಡಬೇಕೆನ್ನುವ ಒತ್ತಾಯವನ್ನು ಸಂಘದ ಬಹುಮತದ ಪಾರ್ಟಿಯವರು ಆಗಕ್ಕೆ ಬಿಟ್ಟುಬಿಟ್ಟರು. 1922 ನೇ ಇಸ್ವಿಗಿಂತ ಮೊದಲು ಸಹ 3 ತಿಂಗಳೊಳಗೆ ಯಾ 6 ತಿಂಗಳೊಳಗೆ ಕೌನ್ಸಿಲ್ ಬರುತ್ತೆ ಆಗಿಂದಾಗ್ಯೆ ಸರಕಾರದಿಂದ ನಿಶ್ಚಯ ವರ್ತಮಾನ ಬರುತ್ತಿತ್ತು. ಆದರೂ 1922 ನೇ ಇಸ್ವಿಯಲ್ಲಿ ಚೀಫ್‌ಕಮಿಶನರ ಮಾತಿಗೆ ದೇಶದ ಮುಂದಾಳುಗಳು ಬೆಲೆ ಕೊಟ್ಟು ಸಮಾಧಾನದಿಂದ 1923 ನೇ ಇಸ್ವಿ ಜನರಲ್ ಮೀಟಿಂಗಿನವರೆಗೂ ಕಾದರು. ಅವರೆಗೂ ಕೌನ್ಸಿಲಿನ ವರ್ತಮಾನವೇ ಇಲ್ಲ. ಚೀಫ್‌ಕಮಿಶನರ್ ಸಾಹೇಬರು ದೇಶದಲ್ಲೇ ಬಂದು ಇದ್ದರೂ ಕೌನ್ಸಿಲ್ ವರ್ತಮಾನವೇನನ್ನೂ ದೇಶಕ್ಕೆ ತಿಳಿಸದ್ದರಿಂದ ಸಂಘದ ಮೊದಲಿನ ಕೋರಿಕೆಯಾದ ಮದ್ರಾಸಿಗೆ ಸೇರುವಿಕೆಯಿಂದಲೇ ಹೊಸ ಸುಧಾರಣೆಯ ಪ್ರಯೋಜನ ಹೊಂದಲಿಕ್ಕೆ ಸಾಧ್ಯವಿದೆಯೆಂತ ಹೇಳುವವರ ಅಭಿಪ್ರಾಯವು ಸಂಘದಲ್ಲಿ ಮಂಜೂರಾಯಿತು. ಕೌನ್ಸಿಲನ್ನು ಮಂಜೂರ್‌ಮಾಡಿಸಿಕೊಡಲು ಮೂರು ನಾಲ್ಕು ವರ್ಷಗಳಿಂದಲೂ ಸಾಧ್ಯವಾಗಲಾರದಷ್ಟು ಕಷ್ಟವಾದದ್ದರಿಂದ ಸುಧಾರಣೆಯ ಪ್ರಯೋಜನವನ್ನು ಪಡೆಯಲು ಮದ್ರಾಸಿಗೆ ಸೇರಿಕೊಳ್ಳುವದು ಸುಲಭದಾರಿಯೆಂತ ದೇಶದವರು ನಂಬಲಿಕ್ಕೂ ಕಾರಣವಾಯಿತು. ಈ ರೀತಿ ಸಂಘದವರು ತೀರ್ಮಾನಿಸಿಕೊಂಡಿದ್ದರೂ ಕೌನ್ಸಿಲ್ ಜಾಗ್ರತೆ ಬರುತ್ತೆಂತ ವರ್ತಮಾನವು ಸಿಕ್ಕಿದ್ದರಿಂದಲೂ, ಕೌನ್ಸಿಲ್ ಮಂಜೂರಾಗುವದು ಸಾಧ್ಯವಾಗಿದ್ದರೆ 1924 ನೇ ಇಸ್ವಿ ಮಾರ್ಚಿ ಆಖೈರ್‌ವಳಗಾದರೂ ಬಂದೇಬರಬೇಕೆಂತಲೂ ಸಂಘದವರಿಗೆ ಮೈನಾರಿಟಿಪಕ್ಷದವರಿಗೂ ಸಹ ಒಪ್ಪಿಗೆಯಾಗುವಂತೆ ಪುನಃ ಕೌನ್ಸಿಲಿನಲ್ಲಿ ನಂಬಿಗೆಯನ್ನು ಸೂಚಿಸಿ 1924 ನೇ ಇಸ್ವಿ ಮಾರ್ಚಿವರೆಗೂ ಕೌನ್ಸಿಲನ್ನು ನಿರೀಕ್ಷಿಸಲು ದೇಶವು ತಯಾರಿದೆಯೆಂತ ಹೇಳಿ ಅವರೆಗೂ ಕೌನ್ಸಿಲ್ ಸಭೆಯನ್ನು ಮಂಜೂರ್ ಮಾಡಿಸಲಿಕ್ಕೆ ಸಾಧ್ಯವಿಲ್ಲದಿದ್ದರೆ ಸುಲಭದಾರಿಯಾದ ಮದ್ರಾಸ್ ಸೇರುವಿಕೆಯನ್ನು ಕೇಳಿದ್ದಾಗಿರಬೇಕು. ಈ ರೀತಿ ರಾಜಿ ಶರತ್ತುಗಳಿಂದ ತಯಾರಿಸಿದ ವಂದನಾಪತ್ರವು ಸಂಘದ ರಾಜಿಗೆ ವಿರೋಧವಾಗಿದೆ. ಅದನ್ನು ಸಂಘದ ಬಹುಮತದ ಮೆಂಬರುಗಳು ವಿರೋಧಿಸುತ್ತಾರೆಂತ ವಗೈರೆ ಅಭಿಪ್ರಾಯಗಳನ್ನು ಸೂಚಿಸುವ ಪತ್ರ ಒಂದು ಕಳೆದವಾರ ಪ್ರಕಟವಾದದ್ದು ವಾಚಕರ ಗೋಚರಕ್ಕೆ ಬಂದಿರಬಹುದು. ಈ ರೀತಿ ರಾಜಿ ಶರತ್ತುಗಳಿಂದ ಕೂಡಿದ ಕೋರಿಕೆಯೇ ಸರಕಾರಕ್ಕೆ ರುಚಿಸದಿದ್ದಾಗ ಶರತ್ತಿಲ್ಲದೆ ಮದ್ರಾಸಿಗೆ ಸೇರಿಸಿಬಿಡಿ ಎಂತ ಕೇಳಿದ್ದರೆ ಸಂಘಕ್ಕೆ ಯಾವ ವಿಧದ ಜವಾಬು ಬರುತ್ತಿತ್ತೋ ನಾವು ಹೇಳಲಾರೆವು.

ಸಂಘಕ್ಕೆ ಮೊದಲಿನ ತುಚ್ಛಕಾರದಿಂದ ಇನ್ನೂ ಬುದ್ಧಿ ಬರಲಿಲ್ಲವಂತೆ. ಅದಕ್ಕೆ ಈ ಸಾರಿ ಶಿಕ್ಷೆ ವಿಧಿಸಿರುವರಂತೆ! ಸಂಘವು ಸರಕಾರಕ್ಕೆ ಬಗೆಯಾಗುವಂತೆ ಸ್ವಲ್ಪವೂ ಅತೃಪ್ತಿ ತೋರಿಸದೆ ತಂದೆತಾಯಿಗಳಂತಿರುವ ಸರಕಾರವು ಮಾಡುವ ಎಲ್ಲಾ ಕಾರ್ಯಗಳೂ ದೇಶಕ್ಕೆ ತುಂಬಾ ತೃಪ್ತಿಯನ್ನುಂಟುಮಾಡಿದೆ, ಸಂಪೂರ್ಣವಾಗಿದೆ ಎಂದು ಮುಂತಾಗಿ ಬರೆದಿದ್ದರೆ ಚೀಫ್‌ಕಮಿಶನರ್ ಸಾಹೇಬರ (ಟೇಟ್ಸಿಗೆ) ರುಚಿಗೆ ಒಪ್ಪುತ್ತಿದ್ದಿತ್ತೋ ಏನೋ? ಇಷ್ಟರ ನಟ್ಟಿಗಲ್ಲದೆ ಹೋದರೂ ನಿಮಗೆ ಅನುಕೂಲವಾದಾಗ ಕೌನ್ಸಿಲ್ ಕೊಡಿ, ಯಾವತರದ ಕೌನ್ಸಿಲಾದರೂ ಚಿಂತೆಯಿಲ್ಲ, ಕೌನ್ಸಿಲ್ ಎಂಬದು ಸಿಕ್ಕಿದರೆ ಸಾಕು, ಮದ್ರಾಸಿನ ಹೆಸರನ್ನು ನಾವು ಎತ್ತುವದಿಲ್ಲವೆಂತಾದರೂ ಬರೆದಿದ್ದರೆ ಸ್ವೀಕಾರ ಮಾಡುತ್ತಿದ್ದರೋ ಏನೋ? ಚೀಫ್ ಕಮಿಶನರ್ ಸಾಹೇಬರು ನಮಗೆ 1922 ನೇ ಇಸ್ವಿ ಆಖೈರ್‌ವಳಗೆ ಕೌನ್ಸಿಲ್ ಮಂಜೂರಾಗುತ್ತೆಂತ ಹೇಳಿದರೆಂದು ಬರೆದ್ದರಿಂದಲೇ ವಂದನಾಪತ್ರಕ್ಕೆ ಆಕ್ಷೇಪಣೆಯೋ ಏನೋ ತಿಳಿಯುವದಿಲ್ಲ. [illegible] ಆಕ್ಷೇಪಕ್ಕೆ ಗುರಿಯೆಂಬದನ್ನು ತಿಳಿಸಿದ್ದರೆ ಸಂಘವೂ ದೇಶದವರೂ ಬೇಕೆಂತ ರೀತಿ ವಿಧವಿಧವಾಗಿ ಊಹಿಸಲು ಕಾರಣವಿರುತ್ತಿರಲಿಲ್ಲ. ಕೌನ್ಸಿಲ್ ಮಂಜೂರಾಗಿ ವಾಯಿದೆ ಹಾಕಿದ್ದು ತಪ್ಪೇ? ಮೂರುವರ್ಷದಿಂದಲೂ ಸರಕಾರದ ಅಧಿಕಾರಿಗಳು ವಾಯಿದೆ ಹೇಳುತ್ತಾ ಬಂದಿರುವಾಗ ಸಂಘದವರು ಒಂದು ವಾಯಿದೆ ಹೇಳಿದ್ದು ತಪ್ಪೇ? ಚೀಫ್‌ಕಮಿಶನರ್ ಸಾಹೇಬರಿಗೆ ರುಚಿಯಾಗದಿದ್ದರೂ ದೇಶದ ಅಭಿಪ್ರಾಯವನ್ನು ಸ್ಪಷ್ಟವಾಗಿ ಸಂಘದವರು ಹೇಳಬೇಕಾದದ್ದು ಸಂಘದ ಕರ್ತವ್ಯವಾಗಿದೆ. ಚೀಫ್‌ಕಮಿಶನರ್ ಸಾಹೇಬರ ಸ್ವಭಾವಕ್ಕೂ ಅಭಿರುಚಿಗೂ ಸರಿಬೀಳುವಂಥಾ ವಂದನಾಪತ್ರವನ್ನೇ ಸಂಘವು ಕೊಡಬೇಕಾಗಿದ್ದರೆ ಸಂಘವು ಜಮಾನ್‌ದಾರರ ಸಂಘವೆನಿಸಿಕೊಳ್ಳುವುದಿಲ್ಲ. ಚೀಫ್‌ಕಮಿಶನರ್ ಸಾಹೇಬರ ಹೇಳಿಕೆಯಂತೆ ಇರುವ ಕ್ಲಬ್‌ರೂಮು ಎನ್ನಿಸಿಕೊಳ್ಳುತ್ತಿತ್ತು. ದೇಶದ ಕೋರಿಕೆಗಳನ್ನೂ ಸರಕಾರದವರಿಗೆ ಒಪ್ಪಿಗೆಯಾಗುವಂತೆಯೇ ಹೇಳಿಕೊಳ್ಳಬೇಕೆನ್ನುವ ಕಾಲವು ಇಂಡಿಯಾದ ಇತರ ಭಾಗಗಳಲ್ಲಿ ಬಹಳ ಹಿಂದೆಯೇ ಕಳೆದುಹೋಗಿದೆ. ಮುನಿಸಿಪಾಲಿಟಿಗಳು ಸಹ ಸರಕಾರಕ್ಕೆ ಒಪ್ಪಿಗೆಯಿಲ್ಲದ ಕಾರ್ಯಗಳನ್ನು ಮಾಡಲು ಪ್ರಾರಂಭಿಸಿವೆ. ಹೀಗಿರುತ್ತಾ ಸರಕಾರಕ್ಕೆ ಯಾವ ವಿಧದಲ್ಲೂ ತಾಬೆದಾರಿಯಿಲ್ಲದ ಸಂಘವು ಸರಕಾರಕ್ಕೆ ರುಚಿಯಾಗುವಂತೆ ಅರ್ಜಿ ಬರಕೊಳ್ಳಬೇಕೆನ್ನುವಷ್ಟು ಹಿಂದೆಯೇ ನಮ್ಮ ಚೀಫ್‌ಕಮಿಶನರ್ ಸಾಹೇಬರು ಇದ್ದಾರೆ. ಚೆಮ್ಸ್‌ಫರ್ಡ್ ಪ್ರಭುಗಳ ಆಗಮನದ ಸಂದರ್ಭದಲ್ಲಿ ಸಂಘಕ್ಕೆ ಆದ ಅವಮರ್ಯಾದೆಯಿಂದ ಸಂಘಕ್ಕೆ ಬುದ್ಧಿ ಬರಬೇಕಿತ್ತು. ಸಂಘವು ಒಗ್ಗಟ್ಟಿನಿಂದ ಕೆಲಸನಾಶಿ ಚಳವಳವನ್ನು ಬಲವಾಗಿ ಎಬ್ಬಿಸಿ ಸರಕಾರದವರು ಸಂಘಕ್ಕೆ ಮಾಡಿದ ಅವಮರ್ಯಾದೆಯನ್ನು ಸಹಿಸುವದಿಲ್ಲವೆಂತಲೂ ಸೂಚಿಸಿ ವೈಸ್‌ರಾಯ ಪ್ರಭುಗಳಿಗೂ ಚೀಫ್‌ಕಮಿಶನರ್ ಸಾಹೇಬರಿಗೂ ತಿಳಿಸಬೇಕಿತ್ತು. ಈಗಲಾದರೂ ಸಂಘವೂ ದೇಶವೂ ಎಚ್ಚತ್ತೀತೋ ಎಂಬ ಆಶೆ ನಮಗಿದೆ. ಸ್ವಭಾವವೂ ಅಭಿರುಚಿಯೂ ಭಾಷಾಶೈಲಿಯಲ್ಲಿ ಕಂಡುಬರುವದಾದರೆ ಸಂಘದ ಮೆಂಬರುಗಳ ಮಾತೃಭಾಷೆಯು ಇಂಗ್ಲಿಷ್ ಅಲ್ಲವೆಂತ ತಿಳಿದಾದರೂ ಮನ್ನಿಸಬಹುದಿತ್ತು. ಕನ್ನಡ ಭಾಷೆಯಲ್ಲೇ ವಂದನಾಪತ್ರವನ್ನು ಬರೆಯಲು ಅನುಮತಿ ಕೊಟ್ಟು ಕನ್ನಡ ಭಾಷೆಯಲ್ಲಿ ಬರೆದ ಮಾತುಗಳು ನಮ್ಮದಾಗಿರದಿದ್ದರೆ ಈಗ ಸಂಘವು ತಪ್ಪುದಾರರೆಂತ ಒಪ್ಪಿಕೊಳ್ಳಬಹುದಿತ್ತು.

ಈಗಲೂ ನಮಗೆ ನಿರಾಶೆ ಆಗಿಲ್ಲ. ತಿರಸ್ಕಾರದ ಆಖೈರ್ ತೀರ್ಮಾನವು ವೈಸ್‌ರಾಯ್ ಪ್ರಭುಗಳಿಗೆ ಇಟ್ಟಿರುವಂತೆ ಕಾಣುತ್ತೆ. ನ್ಯಾಯಮೂರ್ತಿಯಾದ ಲಾರ್ಡ್ ರೀಡಿಂಗ್ ಪ್ರಭುಗಳು ಬೇರೆದೇಶದ ಅಸಹಕಾರದ ಚಳವಳವನ್ನು ನೋಡುತ್ತಿರುವವರಾದ್ದರಿಂದ ಬ್ರಿಟಿಷ್ ಚಕ್ರವರ್ತಿ ಸಾರ್ವಭೌಮರಲ್ಲಿ ಸಂಪೂರ್ಣ ರಾಜಭಕ್ತಿಯನ್ನಿಟ್ಟಿರುವ ನಮ್ಮ ದೇಶದ ಪ್ರತಿನಿಧಿಗಳ ವಂದನಾಪತ್ರವನ್ನು ಅವರಾದರೂ ಸ್ವೀಕರಿಸಿ ಜನರಲ್ಲಿ ಉಂಟಾಗಬಹುದಾದ ಅತೃಪ್ತಿಯನ್ನು ತಡೆವಾರೆಂತ ನಮಗೆ ಆಶೆ ಇದೆ.

ನೋಟೀಸು.

ಕೊಡಗು ಮತ್ತು ಕನ್ನಡಜಿಲ್ಲಾ ರಿಲೀಫ್ ಫಂಡು ಕಮಿಟಿ.

ಈ ಫಂಡಿನ ಲೆಕ್ಕಗಳನ್ನು ನೋಡಿ ಬಾಕಿ ಇರುವ ಮೊಬಲಗನ್ನು ಯಾವ ರೀತಿಯಲ್ಲಿ ಹಂಚಬೇಕೆಂಬದಕ್ಕೂ ಮತ್ತು ವಸೂಲ್ಮಾಡುವದನ್ನು ಮುಕ್ತಾಯ ಮಾಡುವದಕ್ಕಾಗಿಯೂ ಸಹ ಬರುವ ಅಕ್ಟೋಬರ್ ತಾ|| 3 ನೇ ಬುಧವಾರ ದಿವಸ ಬೆಳಗ್ಯೆ 9 ಘಂಟೆಗೆ ಸಮಯಕ್ಕೆ ಒಂದು ಚಂದಾದಾರರ ಸಭೆ 'ಕೊಡಗು' ಆಫೀಸಿನಲ್ಲಿ ನಡಿಸಲು ನಿಶ್ಚೈಸಿರುವದರಿಂದ ಆ ದಿವಸ ಎಲ್ಲಾ ಚಂದಾದಾರರು ದಯವಿಟ್ಟು ಅಲ್ಲಿ ಸೇರಿ, ಸಹಾಯಕರಾಗಬೇಕಾಗಿ ಕೋರಿಕೆ. ಅಲ್ಲದೆ ಚಂದಾ ಕೊಡಲು ಅಪೇಕ್ಷೆಯುಳ್ಳವರು ಆ ತಾರೀಕಿನ ಒಳಗೆ ತಕ್ಕಾನ್ಯನುಸಾರ ಸಹಾಯ ಕಳುಹಿಸಬೇಕಾಗಿ ವಿನಂತಿ.

ಮಡಿಕೇರಿ, 21—9—23.

ಬಿ. ಯಂ. ಕಾರ್ಯಪ್ಪ.
ಯಂ. ಯಂ. ಸಿದ್ದೀಕ್

The problem of medical relief in Coorg

ಔಷಧಿಯ ಮೂಲಕ ಜನರ ಕಷ್ಟವನ್ನು ಪರಿಹರಿಸೋಣ.

(ಬರೆದು ಬಂದದ್ದು)

ಕೊಡಗು ಪತ್ರಿಕೆಯು ಹೊರಟಂದಿನಿಂದ, ಈ ಪತ್ರಿಕೆಯು ಅಗ್ರಲೇಖನಗಳಲ್ಲಿ ಮೇಲಿನ ವಿಚಾರವನ್ನು ಆಗಾಗ್ಗೆ ಎತ್ತಿಕೊಂಡೇ ಇದ್ದಾರೆ. ಕೊಡಗಿನಲ್ಲಿ ಜನಸಂಖ್ಯೆಯು ಪ್ರತಿ ಹತ್ತು ವರ್ಷಕ್ಕೆ ಹತ್ತು ಸಾವಿರದಂತೆ ಕಡಿಮೆಯಾಗುತ್ತಾ ಬರುತ್ತಿರುವುದೂ, ಎಳೆಮಕ್ಕಳ ಮರಣಸಂಖ್ಯೆಯು ಶೇಕಡ 60 ಕ್ಕಿಂತ ಮೀರಿರುವುದೂ, ದೇಶದ ಯಾವ ಮನುಷ್ಯನ ಲಕ್ಷ್ಯವನ್ನು ತಾನೇ ಈ ವಿಚಾರಕ್ಕೆ ತಿರುಗಿಸದೆ ಬಿಡಲಿಕ್ಕಿಲ್ಲ. ಸರಕಾರದವರು ಈ ವಿಷಯದಲ್ಲಿ ಬಹಳ ಮುತುವರ್ಜಿ ತೆಗೆದುಕೊಂಡರೂ, ಆಸ್ಪತ್ರೆಗಳ ಸಂಖ್ಯೆಯನ್ನು ಹೆಚ್ಚಿಸಿದರೂ ದೇಶೀಯ ಔಷಧೋಪಚಾರಕರೂ ಬಹು ಇದ್ದರೂ, ಈ ರೀತಿ ಜನಸಂಖ್ಯೆ ಕಡಿಮೆಯಾಗುವುದಂದರೇನು? ಯಾವರೀತಿಯಲ್ಲೇ ಆಗಲಿ, ಇಂದಿನ ಸ್ಥಿತಿಯು ಚೆನ್ನಾಗಿದೆಯೆಂದು ಹೇಳಬೇಕಾದರೆ ಆ ದೇಶದ ಜನಸಂಖ್ಯೆಯು ಎಷ್ಟರ ಮಟ್ಟಿಗೆ ಏರುತ್ತಾ ಬರುತ್ತದೆ ಎಂಬ ಪ್ರಶ್ನೆಯನ್ನು ಗಣನೆಗೆ ತರುವುದರ ಮೂಲಕ ವಿವರವಾಗುತ್ತದೆ. ಪ್ರಜೆಗಳ ಆಯುಷ್ಯವು ದಿನೇ ದಿನೇ ಏರಿಕೊಂಡು ಅವರ ಅಭಿವೃದ್ಧಿಗೆ ಬರುವುದೇ ಸರಕಾರದ ಮುಖ್ಯ ಉದ್ದೇಶವಾಗಿರಬೇಕಲ್ಲದೆ, ಪ್ರಥಮ ಆಸ್ತಿಯೂ ಆಗಿರಬೇಕು.

ಸಾಮಾನ್ಯವಾಗಿ ಈ ದೇಶದಲ್ಲಿ ಐಶ್ವರ್ಯವಂತರ ಕುಟುಂಬದಲ್ಲಿ ಅಂದರೆ, ಔಷಧಿಯನ್ನು ಇಲಾಖಾ ಉದ್ಯೋಗಸ್ಥರನ್ನು ಕರೆಸಿ ಉಪಚರಿಸಿಕೊಳ್ಳುವವರಲ್ಲಿ ಹೆಂಗಸು ಮಕ್ಕಳ ಮರಣದ ಸಂಖ್ಯೆಯು ಬಹಳ ಕಡಿಮೆಯಾಗಿರುತ್ತೆ. ಯಾಕಿಗ ಈ ಅಸುಖ ಬಡವರಲ್ಲೇ ಅಂದರೆ ಸಾಮಾನ್ಯ ಜನರಲ್ಲಿಯೂ ಒಡಕೂಲೀ ಜನರಲ್ಲಿಯೂ ಮರಣಸಂಖ್ಯೆಯು ವರ್ಷಂಪ್ರತಿ ಹೆಚ್ಚುತ್ತಾ ಇದೆ. ಆಸ್ಪತ್ರೆಗಳಲ್ಲಿ ಗರೀಬರು ಐಶ್ವರ್ಯವಂತರು ಎಂಬ ಭೇದವಿಲ್ಲದೆ ಹೋದಾಗ ಮಾತ್ರ ನ್ಯಾಯವಾದ ಔಷಧೋಪಚಾರವು ದೊರೆತರೆ ಈ ಕಷ್ಟವು ಎಂದೂ ನಿವಾರಣೆಯಾಗಲಿಕ್ಕಿಲ್ಲ. ಎಲ್ಲಿ ಕಾಯಿಲೆಯಿದೆಯೋ ಆ ಜಾಗದಲ್ಲಿಯೇ ಜನರಿಗೆ ಔಷಧಿಯನ್ನು ದೊರಕಿಸುವಂತೆಯೂ, ಒಡನೇ ಔಷಧ ಚಿಕಿತ್ಸಕರ ಪ್ರತ್ಯಕ್ಷ ಹಾಜರಿಯೂ ತಕ್ಕ ಸಲಹೆಯೂ ಸಿಕ್ಕುವಂತೆ ತಕ್ಕ ಮಾರ್ಪಾಟುಗಳೂ, ಏರ್ಪಾಡುಗಳೂ ಅತ್ಯವಶ್ಯವಾಗಿದ್ದುವು.

ಕೊಡಗು ದೇಶದಲ್ಲಿ ಈಗ ಐದು ತಾಲೋಕುಗಳಾಗಿ ಹತ್ತು ನಾಡುಗಳಿವೆ. ಪ್ರತಿನಾಡಿನ ಮೂರು ಮೂರು ಗ್ರಾಮಕ್ಕೆ ಒಂದು ವೈದ್ಯಕ್ಕೇಂದ್ರವನ್ನು ಏರ್ಪಡಿಸಿ ಆ ಸ್ಥಳದಿಂದ ಒಬ್ಬೊಬ್ಬರನ್ನು, ಕಾಲವು ಮಟ್ಟಿಗೆ ಕಾಯಿಲೆ ಕಂಡುಹಿಡಿಯುವುದಕ್ಕೂ, ತತ್ಕಾಲದ ಕಾಯಿಲೆಗೆಗಿರುವ ಔಷಧಿಗಳನ್ನು ಕಲಿಸಿ ಸಿಧಿಲಹಾಕುವುದಕ್ಕೂ, ಸೂಲಗಿತ್ತಿ ಕೆಲಸವನ್ನೂ ಔಷಧ ಇಲಾಖೆಯ ಪ್ರಥಮ ಸಹಾಯಕ ಕೆಲಸಗಳಲ್ಲಿ ತರಬೇತು ಹೊಂದಿಸುವುದು ಅತ್ಯವಶ್ಯಕ. ಪಟ್ಟಣಗಳಲ್ಲಿರುವಂತೆ ಬೇಕಾದಷ್ಟು ಖರ್ಚುಮಾಡಿ ದೊಡ್ಡದೊಡ್ಡ ಆಸ್ಪತ್ರೆಗಳನ್ನು ಗ್ರಾಮಗಳಲ್ಲಿಡುವುದು ಅಸಾಧ್ಯ. ಹೀಗೆ ತರಬೇತಾಗುವ ಜನರು, ಆಯಾಯ ತಾಲೋಕಿನ ಸಬ್ ಅಸಿಸ್ಟೆಂಟ್ ಸರ್ಜಿಯನ್ನರ ಆಡಳಿತಕ್ಕೊಳಪಟ್ಟು ಕೆಲಸಮಾಡಬೇಕು. ಜೊತೆಗೆ ಮೂರು ನಾಲ್ಕು ಗ್ರಾಮಕ್ಕೊಬ್ಬೊಬ್ಬರು ಸೂಲಗಿತ್ತಿಯರನ್ನು ಸಹ ತರಬೇತು ಮಾಡಿಸಿಟ್ಟಿರಬೇಕು. ಹೀಗೆ ತರಬೇತಾಗಲ್ಪಡುವ ಜನರು ಕಡಿಮೆಪಕ್ಷ ಲೋವರ್‌ಸೆಕಂಡರೀಯಾದರೂ ತೇರ್ಗಡೆಯಾಗಿರಬೇಕಲ್ಲದೆ ಇಂಗ್ಲಿಷು ಮತ್ತು ಕನ್ನಡದ ತಿಳಿವು ಚೆನ್ನಾಗಿರಬೇಕು. ಇವರಿಗೆ ಎರಡುವರ್ಷದ ಶಿಕ್ಷಣವು, ಇಲಾಖೆಯವರಿಂದ ಕೊಡಲ್ಪಡಬೇಕು. ಇವರಲ್ಲಿ, ತತ್ಕಾಲದ ಎಲ್ಲಾ ಸೂಕ್ಷ್ಮ ಕಾಯಿಲೆಗೆ ಬೇಕಾದ ಎಲ್ಲಾ ಔಷಧಿಯೂ ಸ್ಟಾಕ್ ಇರಬೇಕು. ಬೇಕಾದಹಾಗೆ ಇಂಡೆಂಟ್‌ಮಾಡಿ ಹತ್ತಿರದ ಆಸ್ಪತ್ರೆಗಳಿಂದ ತರಿಸಿಕೊಳ್ಳಬೇಕು. ಇವರು ತಕ್ಕಮಟ್ಟಿಗೆ ಗಿಡಮೂಲಿಕೆಗಳ ಸಹಾ ಔಷಧಿಯನ್ನು ಸಹ ಕಲಿತಿರಬೇಕಲ್ಲದೆ ಸಾಧ್ಯವಾದರೆ ಈ ತರನಾದ ಔಷಧಿಶಾಸ್ತ್ರವೇ ಕಲಿಸಲ್ಪಡಬೇಕು. ಇವರ ಆಫೀಸು ಗ್ರಾಮಗಳ ಮಧ್ಯದಲ್ಲಿರಬೇಕು. ಕಾಯಿಲಸ್ತರ ವಾರೀಸುದಾರರು ಯಾವ ಸಮಯದಲ್ಲಿ ಒಂದು ಸಹಾಯಕೋರಿದರೂ, ತಕ್ಷ ಸಹಾಯಮಾಡಲು ಸಿದ್ಧರಾಗಿರಬೇಕು. ಮಗು ಹುಟ್ಟುವಕ್ಷಣವೇ, ಗ್ರಾಮದ ಎಲ್ಲಾ ಬಾಣಂತಿಯರನ್ನು, ಮಗುವನ್ನೂ ಖುದ್ದು ಹೋಗಿ ನೋಡಿ ಪರೀಕ್ಷಿಸಿ ತಕ್ಕ ಸಹಾಯದಿಂದ ಚಿಕಿತ್ಸೆ ಮಾಡಬೇಕು.

ಇಂಥಾ ಕೆಲಸದಲ್ಲಿ ಸೂಲಗಿತ್ತಿಯನ್ನು ಕರೆದುಕೊಂಡು ಹೋಗಬೇಕು. ಸೂಲಗಿತ್ತಿಯರು ಗ್ರಾಮದ ಮೆಡಿಕಲ್ ಏಜಂಟರ ಮೇಲ್ವಿಚಾರಣೆಯಲ್ಲಿರಬೇಕು. ತಮ್ಮಿಂದ ಗುಣಮಾಡಲು ಅಸಾಧ್ಯವಾದ ಕಾಯಿಲೆಯ ವಿಷಯ ಕೂಡಲೇ ಹತ್ತಿರ ಇರುವ ಸಬ್ ಅಸಿಸ್ಟೆಂಟ್ ಸರ್ಜಿಯನ್ನರಿಗೆ ತಿಳಿಸಬೇಕು. ಅವರನ್ನು ಕರೆಸಲು ಸಾಧ್ಯವಿಲ್ಲದ್ದರೆ, ಕಾಯಿಲಸ್ತರನ್ನು ಗ್ರಾಮದ ಪಂಚಾಯಿತರ ಸಹಾಯದಿಂದ ಆಸ್ಪತ್ರೆಗೆ ಹೊತ್ತು ತಕ್ಕ ಏರ್ಪಾಡು ಮಾಡಬೇಕು. ಮೆಡಿಕಲ್ ಏಜಂಟರ ಸ್ವಾಧೀನದಲ್ಲಿ ಕಷ್ಟಕಾಲದಲ್ಲಿ ಸಹಾಯಮಾಡಲು ಅಂದರೆ, ಸಿಡುಬು, ವಾಂತಿಬೇಧಿ, ಪ್ಲೇಗ್ ರೋಗ ನಿವಾರಣೆ ಅನುಕೂಲ ಕೊಡಲಿಕ್ಕೂ, ನಿರ್ಗತಿಕರಾದ ಕಾಯಿಲಸ್ತರನ್ನು ಆಸ್ಪತ್ರೆಗಳಿಗೆ ಒಯ್ಯಲು ಸಹಾಯವಾಗಲಿಕ್ಕೂ ಗ್ರಾಮದ ಪಂಚಾಯಿತರ ಆಡಳಿತಕ್ಕೊಳಪಟ್ಟ ಒಂದು ಸೇನಾಂಗವಿರಬೇಕು. ಈ ಮೆಡಿಕಲ್ ಏಜಂಟನಿಗೆ, ದನಗಳಿಗೆ ಕಾಯಿಲೆ ಬಂದಲ್ಲಿ ಸಿಧಿಲ ಹಾಕಲಿಕ್ಕೂ, ಕಾಲುಜ್ವರ ಬಾಯಿಜ್ವರ ಮೊದಲಾದ ಚಿಲ್ರೆ ಕಾಯಿಲಕ್ಕೂ ಔಷಧಿ ತಿಳಿದಿರಬೇಕು. ಗ್ರಾಮದ ಅನುಕೂಲಸ್ಥರಲ್ಲಿ ಕಾಯಿಲೆಗೆ ಹಾಜರಾದರೆ ಅಲ್ಪಮಟ್ಟಿಗೆ ಫೀಜು ಕೊಡುವ ಕಾನೂನು ಮಾಡಬೇಕು. ಈ ಏಜೆಂಟ ಮೂರು ಗ್ರಾಮಸ್ಥರಿಂದ ಆರಿಸಿದ ಪಂಚಾಯಿತರು ತಕ್ಕ ರೂಲ್ಸ್ ಮಾಡಬೇಕು. ಸರಕಾರದಿಂದ ಇಂಥಾ ಏರ್ಪಾಡಿಗೆ ಎಲ್ಲಾ ವಿಧದಲ್ಲಿಯೂ ಸಹಾಯವು ದೊರೆಯಬೇಕು. ಗ್ರಾಮದವರು ಕಡಿಮೆಪಕ್ಷ ಒಂದು ನೂರು ಬಟ್ಟಿ ಭೂಮಿಗೆ ಒಂದು ಬಟ್ಟಿ ಭತ್ತ ಪಂಚಾಯಿತರಿಗೆ ಕೊಡಬೇಕು. ಕಡಿಮೆಪಕ್ಷ ಹೀಗೆ ಪ್ರತಿ ಮೂರು ಯಾ, ನಾಲ್ಕು ಗ್ರಾಮಗಳಿಂದ ನೂರಿಂದ ಎರಡುನೂರು ಬಟ್ಟಿ ಭತ್ತದವರೆಗೆ ಜಮೆಯಾಗಬಹುದು. ಈ ಭತ್ತವನ್ನು ಒತ್ತಾಯದಿಂದ ವಸೂಲಿ ಮಾಡುವಂತೆ ಸರಕಾರದ ಕಾನೂನೂ ಇರಬೇಕು. ವಸೂಲಾದ ಭತ್ತದ ತಪಸೀಲ್ ಲೆಕ್ಕವನ್ನು ಪಂಚಾಯಿತರು ಇಟ್ಟಿರಬೇಕು. ಇದನ್ನು ಆಗಿಂದಾಗ್ಗೆ ಸರಕಾರದವರು ಚೆಕ್ ಮಾಡಬೇಕು. ಹೀಗೆ ಭತ್ತಮಾರಿ ದೊರೆತ ಹಣವನ್ನು ಪಂಚಾಯಿತರು ಇಷ್ಟಪಡುವ ಜಾಗದಲ್ಲಿ ಅಥವಾ ಸ್ಥಳೀಯ ಪರಸ್ಪರ ಸಹಕಾರದ ಸಂಘದಲ್ಲಿ ಯಾಗಲೀ ಪೋಸ್ಟಾಫೀಸ್ ಬ್ಯಾಂಕಿನಲ್ಲಿಯಾಗಲೀ ಇಡಬೇಕು. ಈ ಏಜಂಟರ ಸರ್ವೀಸು ಡಿಸ್ಟ್ರಿಕ್ಟು ಬೋರ್ಡಿಗೆ, ಒಳಪಟ್ಟ ತಾಲೋಕು, ಗ್ರಾಮಗಳ ಆಯಾಯ ಬೋರ್ಡು ಸದಸ್ಯರ ಮೂಲಕ ಕೆಲಸ ನಡಿಸಲ್ಪಡಬೇಕು. ಗ್ರಾಮದವರಿಂದ ವಸೂಲಾಗುವಷ್ಟೇ ಹಣವನ್ನು ಸರಕಾರದವರು ಪ್ರತಿವರ್ಷವೂ ಗ್ರಾಂಟುಮೂಲಕ ಕೊಡಬೇಕು. ಗ್ರಾಮಗಳ ಮೆಡಿಕಲ್ ಏಜಂಟನಿಗೆ ಇಪ್ಪತ್ತರಿಂದ ಮೂವತ್ತು ರೂಪಾಯಿ ಗುವರೆಗೂ, ಸೂಲಗಿತ್ತಿಗೆ ಹದಿನೈದು ರೂಪಾಯಿಯಿಂದ, ಇಪ್ಪತ್ತು ರೂಪಾಯಿವರೆಗೂ ಸಂಬಳವು ಕೊಡಲ್ಪಡಬೇಕು. ಅಲ್ಲದೆ ಮೆಡಿಕಲ ಇಲಾಖೆಯ ಇತರ ಉದ್ಯೋಗಸ್ಥರಂತೆ ಇತರ ಉತ್ತೇಜನಗೂ ಸಹ ಅರ್ಹರಾಗಿರಬೇಕು. ಈ ಪಂಚಾಯಿತರ ಅಧೀನದಲ್ಲಿ ಕಡಿಮೆ ಪಕ್ಷ ಗ್ರಾಮಕ್ಕೆ ಐದು ಜನರು ಸೇನಾಂಗ ವಿರಬೇಕು. ಈ ಸೇನಾಂಗದ ತ್ವರಿತ ಖರ್ಚಿಗಾಗಿ ಒಂದು ಫಂಡು ಪಂಚಾಯಿತರ ಅಧೀನದಲ್ಲಿ ಪ್ರತ್ಯೇಕವಿರಬೇಕು. ಸ್ಥಳೀಕ ಆಸ್ಪತ್ರೆಗಳ ಸಬ್ ಅಸಿಸ್ಟೆಂಟ್ ಸರ್ಜಿಯನ್ನರು ಕನಿಷ್ಠಪಕ್ಷ ತಿಂಗಳಿಗೊಂದಾವರ್ತಿಯಾದರೂ ಈ ಮೆಡಿಕಲ್ ಏಜಂಟರ ಸ್ಟೋರ್ ಮತ್ತು ಕೆಲಸಗಳನ್ನು ಚೆಕ ಮಾಡಬೇಕು. ನೇಕ್ನಾಟಿಬುಗಳ ಬಲಗಳ ಈ ಏಜಂಟರು ಮಾಡುವುದಾದ ಈ ಡಿಪಾರ್ಟುಮೆಂಟನ್ನೇ ತೆಗೆದುಬಿಟ್ಟು ಅದಕ್ಕೆ ಮಾಡುತ್ತಿದ್ದ ಖರ್ಚನ್ನು ಗ್ರಾಂಟಿನ ರೂಪದಲ್ಲಿ ಈ ಹೊಸ ಇಲಾಖೆಗೆ ಕೊಡಬೇಕು. ಕಡಿಮೆ ಪಕ್ಷ ನಲವತ್ತು ಏಜಂಟರಿಂದ ಈ ಕೆಲಸವು ಚೆನ್ನಾಗಿ ನೆರವೇರಬಹುದು. ಈ ಇಲಾಖೆಯು ವೇಲ್ಫೇರ್ ಬಾಕರಣೆಯು ಸಿವಿಲ್ ಸರ್ಜಿಯನ್ನರಿಗೊಳಪಟ್ಟು, ಪೂರ್ತಿಯಾಗಿ ಡಿಸ್ಟ್ರಿಕ್ಟು ಬೋರ್ಡಿನದಾಗಿರಬೇಕು. ಏಜಂಟರು ಆರೋಗ್ಯದ ವಿಷಯ ಮತ್ತು ಅಂಗಳ, ಬಾವಿ, ಮನೆ ದನದಕೊಟ್ಟಿಗೆಗಳನ್ನು ಚೊಕ್ಕಟವಾಗಿಡುವ ವಿಷಯ ಹದಿನೈದು ದಿನಕ್ಕೊಂದು ಸಲ ಗ್ರಾಮದ ಪ್ರತಿಮನೆಯನ್ನು ನೋಡಬೇಕು.

ಡಿಸ್ಟ್ರಿಕ್ಟು ಬೋರ್ಡಿನವರು ಔಷಧಿಯನ್ನು ಯಾವ ಚಾರ್ಜು ಇಲ್ಲದೆ ಆಯಾಯ ಗ್ರಾಮದ ಏಜಂಟರಿಗೆ ಸ್ಥಳೀಕ ಆಸ್ಪತ್ರೆಗಳ ಮೂಲಕ ಒದಗಿಸಿಕೊಡಬೇಕು. ಐಶ್ವರ್ಯವಂತರು ಔಷಧಿಯ ಚಾರ್ಜನ್ನು ಕೆರವಂತೆ ರೂಲ್ಸ್ ಮಾಡಬೇಕು. ಮೆಡಿಕಲ್ ಏಜಂಟರು ಗ್ರಾಮದಲ್ಲಿ ಮನೆಗಳ ಚೊಕ್ಕಟವನ್ನು ನೋಡಿ ಮನೆಯವರಿಗೆ ಅನೇಕಾವೃತ್ತಿ ಹೇಳಿ ಶುಚಿಮಾಡದೆ ಹೋದರೆ ತಕ್ಕ ಶಿಕ್ಷೆಗೆ ಗ್ರಾಮದ ಪಂಚಾಯಿತರಿಗೆ ಸಿಫಾರಸ್ಸುಮಾಡಬೇಕು. ಗ್ರಾಮಪಂಚಾಯಿತರಿಗೆ ಈ ಬಾಬಿನಲ್ಲಿ ಸರಕಾರದವರು ತಕ್ಕ ಅಧಿಕಾರ ಕೊಡಬೇಕು. ಹೀಗೆ ತರಬೇತಾಗುವ ಏಜಂಟರ ತಕ್ಕ ಯೋಗ್ಯತೆಗೆ ತಕ್ಕಷ್ಟು ಸಿವಿಲ್ ಸರ್ಜಿಯನ್ನಿರಿಂದ ಸರ್ಟಿಫಿಕೇಟು ಪಡೆದಿರಬೇಕು. ತರಬೇತು ಸಮಯದ ಖರ್ಚನ್ನು ಗ್ರಾಮ ಪಂಚಾಯಿತರು ತೆರಬೇಕು. ತಾಲೋಕು ಮೆಡಿಕಲ ಅಸಿಸ್ಟೆಂಟರು ಆಗಿಂದಾಗ್ಗೆ, ಕಡಿಮೆ ಪಕ್ಷ ತಿಂಗಳಿಗೊಮ್ಮೆ ಈ ಏಜಂಟರನ್ನು ಭೇಟಿಮಾಡಿಸಿ ಚೆಕ್ ಮಾಡಿ ಇನ್‌ಸ್ಪೆಕ್ಷನ್‌ವಗೈರೆ ಜಾನುವಾರುಗಳ ಕಾಯಿಲೆಯ ವಿಷಯ ತಕ್ಕ ರಿಪೋರ್ಟು ಕೊಟ್ಟುಕೊಂಡೇ ಇರಬೇಕು. ಅಲ್ಲದೆ ತಕ್ಕ ಔಷಧಿಗಳನ್ನು ಸಹ ಒದಗಿಸಿಕೊಡಬೇಕು.

ವಿನಿಮಯರೀತಿಯ ಸಂಘದವರು, ಪೇಟೆಯಲ್ಲಿ ಅಗ್ರಿಕಲ್ಚರಲ್ ಮತ್ತು ಔಷಧ ಇಲಾಖೆಗಳನ್ನು ವೃದ್ಧಿಪಡಿಸಲು ಅಷ್ಟಗಟ್ಟಲೆ ರೂಪಾಯಿ ಖರ್ಚುಮಾಡಬೇಕೆಂದು ಆಗಿಂದಾಗ್ಗೆ ಸರಕಾರದವರನ್ನು ಕೇಳಿಕೊಂಡೇ ಬರುತ್ತಾರೆ. ಈ ಮೇಲೆ ಸೂಚಿಸಿದ ಸಲಹೆಗಳನ್ನು ಜಾರಿಗೆ ತಂದರೆ ಲಕ್ಷಗಟ್ಟಲೆ ರೂಪಾಯಿಗಳು ದೇಶಕ್ಕೆ ಆದಾಯ ವಾಗುವುದು ಸಂದೇಹವಿಲ್ಲ. ಕೊಡಗಿನ ರೈತರು ಗರೀಬರಾದದ್ದು ವರ್ಷಂಪ್ರತಿ ಸಾಯುವ ದನಗಳ ಸಂಖ್ಯೆಯಿಂದಲೇ ಆಗಿರುತ್ತೆ. ಹೀಗಿರುವಾಗ ಈ ಗ್ರಾಮ ಏಜಂಟರುಗಳ ಮೂಲಕ ಈ ರೋಗನಿವಾರಣೆಯ ಕೆಲಸಗಳನ್ನು ಮಾಡಿದರೆ ಕೃಷಿಕರ ಸುಭಿಕ್ಷಕ್ಕೆ ಅಡ್ಡಿಯುಂಟೇ? ಯಾವಾಗ ಜಾನುವಾರುಗಳ ಮರಣ ಸಂಖ್ಯೆಯು ಕಡಿಮೆ ಆಗಿ ದನಕರುಗಳು ವೃದ್ಧಿಯಾಗುವುವೋ, ಆಗ ರೈತನಸ್ಥಿತಿಯು ಪೂರ್ವದಂತೆ ಆಗಲು ಅವಕಾಶವಾದರೂ ಸ್ವಲ್ಪ ಹಾಲು ಮೊಸರು ಬೆಣ್ಣೆಯು ಒದಗಿ ಮಕ್ಕಳು ಮರಿಗಳ ಮರಣ ಸಂಖ್ಯೆಯು ತನ್ನಿಷ್ಟಕ್ಕೆ ತಾನೇ ಕಡಿಮೆಯಾಗುತ್ತದೆ. ಚೀಫ ಕಮಿಶನರಾದ, ಮಿ|| ಬಾರ್ಟ್ಲಾರವರು ಜನಕರುಗಳನ್ನು ಸಾಕುವ ವಿಷಯ ಬಹಳ ಒತ್ತಿ ವಾದಗಳನ್ನು ಮಾಡುತ್ತಾರೆ. ಅವರು ಅಂತಹ ಕಿಗಡರ ದೇಶವು ಸುಭಿಕ್ಷಕ್ಕೆ ಬರುತ್ತದೆಂಬ ಅಭಿಪ್ರಾಯದಲ್ಲಿದ್ದಾರೆ. ಅದು ಅದಕ್ಕಿಂತ ಇನ್ನು ಹಿಯಾಗಿ ಈ ಮೇಲೆಸೂಚಿಸಿದವುಗಳನ್ನು ಜಾರಿಗೆ ತರುವುದಕ್ಕೆ ಸಹಾಯ ಮಾಡಿದರೆ ಅವರ ಹೆಸರು ಶಾಶ್ವತವಾಗಿ ನಿಲ್ಲುವಲ್ಲಿ ಸಂದೇಹವಿಲ್ಲ.

ಕೊಡಗಿನ ಗ್ರಾಮಗಳು ಪೂರ್ವದಿಂದಲೇ, ಎಲ್ಲಾ ಜಾಡಿನಲ್ಲಿಯೂ ತಮಗೆ ಬೇಕಾದ ಎಲ್ಲಾ ಅನುಕೂಲಗಳನ್ನು ಒದಗಿಸಿಕೊಂಡೇ ಬಂದಿರುತ್ತವೆ. ಇದಕ್ಕೆ ಪ್ರತಿ ಊರಲ್ಲಿಯೂ, ಅರ್ಚಕ, ಕಮ್ಮಾರ, ಒಡಿಗೆ ಅಗಸ, ಕ್ಷೌರಿಕ ವಗೈರೆಯವರನ್ನು ಗ್ರಾಮದವರು ಚಂದ ಹಾಕಿ ಇಟ್ಟುಕೊಂಡಿರುವುದು ಎಲ್ಲರಿಗೂ ವೇದ್ಯವಿದೆ. ಇದೇರೀತಿ ಎಲ್ಲರೂ ಕನಿಷ್ಠಪಕ್ಷ ಒಂದುನೂರು ಬಟ್ಟಿಗೆ ಅರ್ಧ ಅಥವಾ ಒಂದು ಬಟ್ಟಿ ಭತ್ತವನ್ನು ಚಂದಾ ಎತ್ತಿ ಆ ಮೂಲಕ ಕೆಲವುಮಟ್ಟಿಗೆ ದ್ರವ್ಯಗಳನ್ನು ಒದಗಿಸಿ ಸ್ವಸಹಾಯದಲ್ಲಿ ಯಾ, ಸ್ವಪ್ರಯತ್ನದಲ್ಲಿಯೂ ನಂಬಿಗೆ ಇಟ್ಟು, ವರ್ಷಂಪ್ರತಿ ಸಾಯುತ್ತಿರುವ ಜನರ ಮತ್ತು ದನಕರುಗಳ ಸ್ಥಿತಿಗಳನ್ನು ಲಕ್ಷಿಸದೆ ಹೋದರೆ, ಈ ಮೊದಲೇ ಆಗಾಗ್ಗೆ ಹೇಳಿದಂತೆ ಕೊಡಗು ದೇಶವು ಇನ್ನೊಂದು ಶತಮಾನದಲ್ಲಿ ನಿರ್ಜನಪ್ರದೇಶವಾಗುವುದು. ನಮ್ಮ ಸರಕಾರವು ಕಳೆದ ತೊಂಬತ್ತು ವರ್ಷದ ಆಳಿಕೆಯಲ್ಲಿ ಇಂಥಾ ಕೆಟ್ಟ ಸ್ಥಿತಿಯನ್ನು ಹೋಗಲಾಡಿಸಲಿಕ್ಕೆ ಮುಂದೆ ಬಾರದಿರುವುದು. ನಾವು ನಮ್ಮ ಯೋಗ್ಯತೆಯ ಮೇಲೆ ನಂಬಿಗೆ ಇಡದಿರುವುದರಿಂದಲೇ ಅದ್ದರಿಂದ ದೇಶದ ಎಲ್ಲಾ ಜನರೂ, ಏಕಕಂಠದಿಂದ ಈ ಅಭಿಪ್ರಾಯವನ್ನು ಪ್ರಚಾರಕ್ಕೆ ತರಲು ತಕ್ಕ ಸಹಾಯಮಾಡುವರಾಗಿ ನಂಬಿ ಈ ಸಲಹೆಯನ್ನು ಸೂಚಿಸಿದ್ದಾಗಿದೆ.

ನಮ್ಮ ದೇಶದ ಹೆಚ್ಚಾಗಿ ಹಳ್ಳಿಗಳಲ್ಲಿಯೂ ಅನೇಕ ಸಂದರ್ಭಗಳಲ್ಲಿ ಐಶ್ವರ್ಯವಂತರಲ್ಲಿಯೂ ಸಹ ಕಾಯಿಲೆ ಬಂದಾಕ್ಷಣವೇ, ಕೇರಿಡ ಎಷ್ಟಕ್ಕೆದು ಜನರು ಬಹು ಹಣವನ್ನು ಕಣಿಯರಿಗೂ, ಮಲೆಯರಿಗೂ ಪೂಜಾರಿಯವರಿಗೂ, ಬಲಿಗೂ, ಹರಕೆಗೂ ಖರ್ಚು ಮಾಡ ತ್ತಲೇ ಇದ್ದಾರೆ. ಹೀಗೆ ಖರ್ಚು ಮಾಡುವುದರ ನಾಲ್ಕರಲ್ಲಿ ಒಂದಂಶವನ್ನು ಈ ಫಂಡಿಗೆ ಕೊಟ್ಟರೆ ಸಾಕಾಗಿದೆ. ಹರಕೆಗಳ ಮೂಲಕ ಸಾವಿರಾರು ರೂಪಾಯಿ ಅನೇಕರು ಖರ್ಚು ಮಾಡುತ್ತಲೇ ಇದ್ದಾರೆ. ಎಂಥಾ ಅಜ್ಞಾನ ಮತ್ತು ಮೂಢನಂಬಿಕೆ, ಈ ನರಮನುಷ್ಯನು ದೇವರಿಗೂ ಸಹ ಲಂಚ ತೆಗೆದುಕೊಳ್ಳುವಷ್ಟು ಕಲಿಯುತ್ತಾನಲ್ಲವೇ! ಹಣ ಕೊಟ್ಟಕ್ಷಣ ಔಷಧೋಪಚಾರಗಳನ್ನು ಮಾಡದೆ ಕಾಯಿಲೆ ಎಂದಾದರೂ ಗುಣವಾದೀತೇ! ನಮ್ಮ ಈ ಜನರು ಇಂಥಾ ಅಜ್ಞಾನಗಳನ್ನು ದೂರ ಓಡಿಸಿದಹೊರತು, ದೇಶವು ಎಂದಿಗೂ ಮುಂದಿಯಾಗಲಿಕ್ಕಿಲ್ಲ. ಈ ಕಾರಣದಿಂದಲೇ ಅನೇಕ ವಿದ್ವಾಂಸರು ನಮ್ಮನ್ನು ಕಾಡುಜನರಿಗೆ ಹೋಲಿಸಿದ್ದಾಗಿದೆ.

ಕಡಿಮೆಪಕ್ಷ ಮೂವತ್ತರಿಂದ, ನಲವತ್ತು ಏಜಂಟರಿಗೆ ತಿಂಗಳಿಗೆ 25 ರಿಂದ 2 ರೂಪಾಯಿವರೆಗೆ ಸಂಬಳ ಕೊಡುವಂತೆಯೂ, ಸೂಲಗಿತ್ತಿಯರಿಗೆ 15 ರೂಪಾಯಿಯಿಂದ 20 ರೂ ವರೆಗೂ ಸಂಬಳ ಕೊಟ್ಟು ಏರ್ಪಾಡು ಮಾಡಲಿಕ್ಕೆ ಸುಮಾರು ಹದಿನಾರು ಸಾವಿರ ರೂಪಾಯಿ ಖರ್ಚು ಆಗಬಹುದು. ಈಗಾಗಲೇ ಖರ್ಚು ಮಾಡುತ್ತಿರುವ ವೇಕ್ಸಿನೇಶನ್ ಇಲಾಖೆಯನ್ನು ತೆಗೆದು ಅದಕ್ಕೆ ವರ್ಷಂಪ್ರತಿ ಖರ್ಚುಮಾಡುತ್ತಿರುವ ಸುಮಾರು ನಾಲ್ಕೈದುಸಾವಿರ ರೂಪಾಯಿಯನ್ನು ಈ ಇಲಾಖೆಗೆ ಕೊಡಬಹುದು. ಡಿಸ್ಟ್ರಿಕ್ಟುಬೋರ್ಡಿನವರು ಆಯಾಯ ಆಸ್ಪತ್ರೆಗಳ ವಿಷಯ ಎಲ್ಲಾ ಔಷಧಗಳನ್ನು ಚಾರ್ಜು ಇಲ್ಲದೆ ಒದಗಿಸಿಕೊಡಬೇಕು. ಒಟ್ಟು ಬೇಕಾಗುವ ಹಣದ ಅರ್ಧಭಾಗವನ್ನು ರೈತರೂ ಬಾಕಿ ಅರ್ಧವನ್ನು ಸರಕಾರವೂ ಕೆರಬಹುದು. ಈ ಸಲಹೆಗಳನ್ನು ಕಾರ್ಯತಃ ಆಚರಣೆಗೆ ತರಲಿಕ್ಕೆ ಬಹಳ ಅನುಕೂಲಗಳಿವೆ. ಈ ವಿಚಾರದಲ್ಲಿ ಪ್ರಜಾಪ್ರಮುಖರೂ ಡಿಸ್ಟ್ರಿಕ್ಟುಬೋರ್ಡಿನವರೂ, ಜವಾಬುದಾರಸಂಘದವರೂ ಸರಕಾರವೂ ಸಹ ವಿಶ್ವಪ್ರಯತ್ನಮಾಡಬೇಕಾಗಿದೆ. ವಾಚಕರ ಚೆನ್ನಾಗಿ ಮೇಲಿನ ಸಲಹೆಗಳನ್ನು ಓದಿ ಪತ್ರಿಕೆಯಲ್ಲಿ ಸ್ವಾನಾತಿಶಿಕ್ಷಗಳನ್ನು ಬರೆಯಬೇಕಾಗಿ ಕೇಳಿಕೊಳ್ಳುತ್ತೇನೆ. ಸಿವಿಲ್ ಸರ್ಜನ್ನರೂ ಮತ್ತು ಕಮಿಷನರೂ ಸಹ ಇದನ್ನು ಮನಸ್ಸಿಗೆ ತೆಗೆದುಕೊಂಡು ಎಷ್ಟರಮಟ್ಟಿಗೆ ಈ ಅಭಿಪ್ರಾಯವು ಸಾಧ್ಯವಾಗಬಹುದೆಂದು ಇದನ್ನು ಪತ್ರಿಕೆಯ ಮೂಲಕ ತಿಳಿಸಿದರೆ ಜನರಿಗೆ ದೊಡ್ಡ ಉಪಕಾರವಾಗುತ್ತೆ. ಈ ಮೊದಲು ಸಿವಿಲ ಸರ್ಜನ್ನರಾಗಿದ್ದ ಮೇಜರ್ ಮಾರ್ಶಲ್‌ರವರು ಪತ್ರಿಕೆಯಲ್ಲಿ ಪಿಪ್ಲಾರ್ಬ ಕಮೆಂಟ್ ಸಂಬಂಧ ಬರೆದ ಶ್ರಿಪ್ಪಣಿಕ್ಕೆ ಪ್ರತಿಪಾದಿಸು ತಿಳಿಸುತ್ತಿದ್ದರಲ್ಲದೆ ಕೊಡಗಿನ ಅಪಮೃತ್ಯು ಮರಣಗಳಿಗೆ, ಇಲ್ಲಿ ಇತರ ದೇಶಗಳಲ್ಲಿರುವಂತೆ ರೋಗನಿವಾರಣ ಇಲಾಖೆಯು ಇಲ್ಲದಿರುವಿಕೆಯು ಮಕ್ಕಳಿಗೆ ಎದೆಹಾಲು ಕೊಡದೇ, ಹುಟ್ಟಿದಾಕ್ಷಣವೇ ಅನ್ನ ತಿನ್ನಿಸುವುದು, ಒಡಕನವು ಕಾರಣವೆಂದು ಬರೆದಿದ್ದರು.

ಜಮಿನ್ದಾರ ಸಂಘದವರು ವರ್ಷವರ್ಷ ಠರಾವು ಮಾಡಿ ಹೀಗೆ ಜನಸಂಖ್ಯೆ ಕಡಿಮೆಯಾಗಲು ಕಾರಣವನ್ನು ಪರೀಕ್ಷಿಸಲು ಒಂದು ಕಮಿಟಿ ಏರ್ಪಡಿಸಬೇಕೆಂದೂ, ಸಾಂಕ್ರಾಮಿಕ ರೋಗಗಳ ವಿಚಾರದಲ್ಲಿ ತಕ್ಕ ಕ್ರಮ ಕೈಕೊಳ್ಳಬೇಕೆಂದೂ ಹೀಗೆ ಸತತವಾಗಿ ಠರಾವು ಪಾಸುಮಾಡುತ್ತಲೇ ಇದ್ದಾರೆ. ಆದರೆ ಇನ್ನು ಮುಂದಕ್ಕಾದರೂ ಸ್ವಾಭಿಮಾನವಿಲ್ಲದೆ ಬೇಡುವುದರ ಬದಲಾಗಿ, ನಮಗೆ ನಾವೇ ಮೊದಲು ಸಹಾಯಮಾಡಿಕೊಳ್ಳುವುದು ಉತ್ತಮವಲ್ಲವೇ? ದೇಶಾಭಿಮಾನಿಗಳೆಲ್ಲರೂ ಈ ವಿಚಾರದಲ್ಲಿ ಸದ್ಯಕ್ಕೆ ಇನ್ನೊಂದು ಶತಮಾನದಲ್ಲಿ ನಮ್ಮ ದೇಶದ ಪಾಡೇನಾಗಬೇಕು! ದೈವವಶಾತ್ ನಮಗೆ ಮುಂಜೂರಾಗಬಹುದಾದ ಕೌನ್ಸಿಲ್ ಬಂದರೆ, ಆ ಕೌನ್ಸಿಲಿನಲ್ಲಿ, ಈ ವಿಷಯವನ್ನು ಮಾಯವಿಲ್ಲದಲ್ಲಿ ಬಳಿಗೆ ತಂದು ಜನರ ಮರಣಸಂಖ್ಯೆಯನ್ನು ಕಡಿಮೆಮಾಡುವುದೇ ಆ ಕೌನ್ಸಿಲಿಗೆ ಮೆಂಬರಾಗಿ ಚುನಾಯಿತರಾಗುವವರ ಮೊದಲಿನ ಕರ್ತವ್ಯ. ಆ ಡಿಪಾರ್ಟ್‍ಮೆಂಟಿನ ಕೆಲಸದ ವಿಷಯದಲ್ಲಿ ಯಾವ ಅನುಭವವೂ ಇಲ್ಲದಿರುವುದರಿಂದ ಈ ಪ್ರಬಂಧದಲ್ಲಿರತಕ್ಕ ನ್ಯೂನಾತಿರಿಕ್ತಗಳನ್ನು ಸೂಚಿಸಿದರೆ ಚಿರಸ್ಮರಣೀಯರಾಗುವೆನು.

ಮಹನೀಯರಲ್ಲಿ ವಿನಂತಿ.

ಈ ವರ್ಷದ ಅತಿವೃಷ್ಟಿಯಿಂದ ಸಂಭವಿಸಿದ ಅಪೂರ್ವವಾದ ಪ್ರವಾಹದ ದೆಸೆಯಿಂದ ಕೊಡಗಿನಲ್ಲಿಯೂ, ನಮ್ಮ ನೆರೆಜಿಲ್ಲೆಗಳಾದ ಮಲಬಾರು ದಕ್ಷಿಣ ಕನ್ನಡ ಪ್ರಾಂತ್ಯಗಳಲ್ಲಿಯೂ ಉಂಟಾಗಿರುವ ವಿವರಿಸಲಸದಳವಾದ ನಷ್ಟವು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಕಷ್ಟಕ್ಕೊಳಗಾಗಿರುವವರಿಗೆ ಸಹಾಯ ಮಾಡುವುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯವಾಗಿದೆ. ಇದಕ್ಕಾಗಿ ಮಡಿಕೇರಿಯಲ್ಲಿ ಒಂದು ಮೀಟಿಂಗು ನಡೆದು ಸ್ವಲ್ಪ ಹಣ ಜಮಾಯಿಸಲ್ಪಟ್ಟು ಕಷ್ಟನಿವಾರಣೆ ಬಗ್ಗೆ ಕಳುಹಿಸಲ್ಪಟ್ಟಿದೆ. ಈಗಲೂ ಚಂದಾ ಜಮೆಯಾಗುತ್ತಲಿದೆ. ತಮ್ಮ ಸಹೋದರರ ಕಷ್ಟವು ತಮ್ಮದೆಂದು ಯೋಚಿಸಿ ಪ್ರತಿಯೊಬ್ಬ ದೇಶೀಯನೂ ಉದಾರಭಾವದಿಂದ ತನ್ನ ಶಕ್ತ್ಯಾನುಸಾರ ಧನಸಹಾಯ ಮಾಡಬೇಕೆಂದು ಕೋರಿಕೆ. ಸಹಾಯ ಮಾಡಿದವರ ಪಟ್ಟಿಯು ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದು. ಹಣವನ್ನು ರಿಲೀಫ್ ಕಮಿಟಿಯ ಅಧ್ಯಕ್ಷರಾದ ರಾ|| ಬಾ|| ಕೊಡಂದೇರ ಕುಟ್ಟಯ್ಯನವರು, ಮಡಿಕೇರಿ, ಇವರಿಗೆ ಕಳುಹಿಸಿಕೊಡಬೇಕು.

ಮಡಿಕೇರಿ. ಸಂಪಾದಕ,

26—8—23 "ಕೊಡಗು"

ವರ್ತಮಾನ ಸಂಗ್ರಹ.

ಒಳದೇಶ.

ಸಿಬ್ಬಂದಿಯೋತೆಯು ಪೋಲೀಸು ಇಲಾಖೆಗೂ ಹತ್ತಲಾರಂಭಿಸಿದೆ. ರೇಂಜರುಗಳಾಗಿದ್ದ ಮೆ|| ಅಪ್ಪನೆರವಂಡ ಕಾಳಪ್ಪನವರನ್ನು ಮತ್ತು ಮೆ|| ಮಾಳೇಟಿರ ದೇವಯ್ಯನವರನ್ನು ಈಗ ಮೂರು ತಿಂಗಳು ರಜೆಯಲ್ಲಿ ಕಳುಹಿಸಿರುವರು. ನಂತರ ಅವರಿಗೆ ಪೆನ್ಶನ್ ಕೊಡುವರು.

ತಾ|| 16 ರಲ್ಲು ಮೆ|| ಎಂ. ಎಸ್. ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ನಡೆದ ಬೊಂಬಾಯಲ್ಲಿರುವ ಕೊಡಗರ ಮೀಟಿಂಗಿನಲ್ಲು ಪಾಸಾದ ಠರಾವು, "ಮೆ|| ಕೋಟೆರ ಉತ್ತಯ್ಯ, ಬಿ. ಎ., ಎಲ್. ಎಲ್. ಬಿ., ಯವರ ಅಕಾಲ ಮತ್ತು ಅಕಸ್ಮಾತು ಮರಣಕ್ಕೆ ಬೊಂಬಾಯಿಯಲ್ಲಿರುವ ಕೊಡಗು ನಿವಾಸಿಗಳು ತಮ್ಮ ಅಗಾಧವಾದ ದುಃಖವನ್ನು ಸೂಚಿಸುವುದಲ್ಲದೆ, ಅವರ ಮರಣದಿಂದ ಕೊಡಗು ದೇಶವು ಅದರಲ್ಲೂ ಕೊಡವರು ವಿದ್ಯಾವಂತರೂ ನಿಷ್ಕಪಟಿಯೂ ಮತ್ತು ದೊಡ್ಡ ಮನಸ್ಸಿನವರೂ ಆದ ಶ್ರೇಷ್ಠ ಕೆಲಸಗಾರರನ್ನು ಕಳಕೊಂಡಿರುವರೆಂದೂ, ದುಃಖದಲ್ಲಿ ಮುಳುಗಿರುವ ಅವರ ಕುಟುಂಬಕ್ಕೆ ತಮ್ಮ ಪೂರ್ಣ ಸಹಾನುಭೂತಿ ಇದೆಯೆಂದೂ ತೀರ್ಮಾನವಾಯಿತು."

ಮೆ|| ರಸೂಲ್‍ಖಾನವರ ಅಭ್ಯಾಲತೋಟದಲ್ಲಿ ತಾ|| 20 ರಲ್ಲು ಒಂದು ಕೂಲಿ ಲೈನು ಬಿದ್ದು ಒಂದು ಮರಣವು ಸಂಭವಿಸಿದಲ್ಲದೆ ಆರು ಜನರಿಗೆ ಗಾಯವುಂಟಾಗಿದೆಯಂತೆ.

ಮಡಿಕೇರಿಯಿಂದ ಮಂಗಳೂರಿಗೆ ನಿಂತುಹೋಗಿದ್ದ ಕಂಕರ್ ವಿರಲ್ ಬಸ್ ಸರ್ವೀಸು ಪುನಹ ಓಡ್ಯಾಡಲು ತೊಡಗಿದೆ.

ಸೆಪ್ಟಂಬರ್ 14ನೇಯ ಸಂಚಿಕೆಯಲ್ಲಿ ಪ್ರಕಟವಾದ "ಕೊಡಗು ಸರಕಾರಿ ಸ್ಕಾಲರ್‍ಶಿಪ್" ಎಂಬ ಮೆ|| ಯನ್. ಮುದ್ದಪ್ಪನವರ ಲೇಖನವು ಇಂಗ್ಲೀಷಿನಲ್ಲಿ ಬರೆಯಲ್ಪಟ್ಟದರ ತರ್ಜುಮೆಯಾಗಿದೆ.

"ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ಬರುವ ಅಕ್ಟೋಬರು ತಾರೀಕು 7 ರಲ್ಲು ಮಡಿಕೇರಿ ಮುನ್ಸಿಪಲ್ ಹಾಲಿನಲ್ಲಿ ನಡೆಯಲಿಕ್ಕಿರುವುದು.

ಕೆಲವು ವರ್ಷಗಳ ಹಿಂದೆ ತಿಂಗಟ್ಟು ನಾಡು ತಾಲೋಕಿನ ಪರವಾಗಿ ಕೊಡಗು ಡಿಸ್ಟ್ರಿಕ್ಟ್‍ಬೋರ್ಡಿನ ಮೆಂಬರಾಗಿದ್ದ ಮೆ|| ಪ್ರಚ್ಛಮಾಡ ದೇವಯ್ಯನವರು ತಾ|| 20 ರಲ್ಲು ಮೃತಪಟ್ಟರೆಂದು ತಿಳಿಯಲು ವ್ಯಸನವಾಗುತ್ತದೆ.

ಕಳೆದವಾರ ಪೊಡಿ ನಾಲ್ಕು ನಾಡು ಕೊಡವಗ್ರಾಮದ ವೈದ್ಯಮಾಡಿಸಳ್ಳಿಯಲ್ಲು ಮಾಡಿಕ್ಕೆಯವರ ಒಂದು ಮದುವೆಯಾದ ನಡೆಯಿತೆಂತಲೂ, ಈ ಮದುವೆಯಲ್ಲಿ ಆಗುವ ಮಧ್ಯೆ ಕೊಡಗಿನ ಪದ್ಧತಿಗಳು ಏನು ಬಗೆ ಸ್ಥಿತಿಗಳು ಮಾರ್ಗವಾಯಿಯೋ ಅಥವಾ ಮರೆಯಾಗ್ಯ ಹೋಯಿತೋ ಎಂದರೆ ಕೊಡಗು ಪದ್ಧತಿಯೋ ಅಥವಾ ಮತ್ತೊಂದೋ ಎಂಬುದರ ವಿಷಯ ನಿರ್ಧರಿಸಬೇಕೆನ್ನುವ ನಡೆದ ಮೀಟಿಂಗಿನ ಸಾರಾಂಶವನ್ನು ಇಲ್ಲಿ ಪ್ರಕಟಿಸಿ ... ದಂತೆ ಕೊಡಗು ಪದ್ಧತಿಯಲ್ಲಿಯೇ ... ಬೇಕೆಂದು ಎಲ್ಲರೂ ಒಪ್ಪಿಕೊಂಡರೆಂತಲೂ ಒಂದು ಬಾತ್ಮಿ.

ಈ ತಾರೀಖು 17 ರಲ್ಲಿ ಮದ್ರಾಸಿನ ಕೊಡಗು ಯುವಕರು ಮಾ|| ರಾ|| ಶ್ರೀ|| ಮಾತಂಡಕುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿ, "ದಿವಂಗತ ಕೋಟೆರ ಉತ್ತಯ್ಯನವರ ಅಕಾಲ ಮರಣಹೊಂದಿದಕಾರಣ ದೇಶಕ್ಕೂ, ಅವರ ಕುಟುಂಬಕ್ಕು ಮತ್ತು ಅವರ ಹಿತಚಿಂತಕರಿಗೂ ಉಂಟಾದ ಕಷ್ಟನಷ್ಟಗಳಲ್ಲಿ ತಮ್ಮ ಪರಿತಾಪವನ್ನು, ದುಃಖವನ್ನೂ ಅವರ ಪ್ರಿಯಪತ್ನಿಯರಿಗೆ ಸೂಚಿಸಲು ತುಂಬಾ ವ್ಯಸನ ಪಡುತ್ತೇವೆ" ಎಂಬ ಠರಾವನ್ನು ಪಾಸು ಮಾಡಿದರೆಂದು ತಿಳಿಸಿಗುತ್ತಾರೆ.

ನವಂಬರು ತಿಂಗಳಲ್ಲು ಮೈಸೂರು ಮಹಾಪ್ರಭುಗಳು ಮೈಸೂರಿಗೆ ಬರುವಾಗ ಕೊಡಗು ಜಮೀನ್ದಾರರ ಸಂಘದವರು ಅವರಿಗೆ ಒಪ್ಪಿಸಬೇಕೆಂದಿದ್ದ ವಂದನಾಪತ್ರವನ್ನು ಸ್ಥಳೀಯ ಸರಕಾರದವರು ತಿರಸ್ಕರಿಸಿರುವರು. ಈ ವಿಷಯ ವಿವರವಾಗಿ ಅಗ್ರಲೇಖನದಲ್ಲಿ ಬರೆಯಲ್ಪಟ್ಟಿದೆ.

ಮಡಿಕೇರಿಯ ವಾಯುಗುಣವು ಬದಲಾಗುತ್ತಿದೆ. ಇಷ್ಟರವರೆಗೆ ಮೋಡ ಕವಿದುಕೊಂಡು ಮಳೆ ಜಿನುಗುತ್ತಾ ಇದ್ದ ಕಳೆದವಾರದ ಆಖೈರು ಭಾಗದಲ್ಲು ತಕ್ಕಮಟ್ಟಿಗೆ ಬಲವಾದ ಮಳೆ ಬಿದ್ದು ಈ ವಾರದಿಂದ ಬಿಸಿಲು ಕಾಯಲು ಪ್ರಾರಂಭಿಸಿದೆ. ದೇಶದ ಎಲ್ಲಾ ಭಾಗಗಳಲ್ಲಿಯೂ ಹೀಗೆಯೇ ಎಂದು ವರ್ತಮಾನ.

ಮೈಸೂರಾಯರಿಗೆ ಕಳುಹಿಸಬೇಕೆಂದಿರುವ ಜಮೀನ್ದಾರರ ಸಂಘದ ವಂದನಾಪತ್ರವು ಮದ್ರಾಸು ಅಸುಲ್ಲ ಮೇಕನಿನ ವಿಷಯದಲ್ಲಿ ಸಂಘದ ಜನರಲ್ ಮೀಟಿಂಗಿನ ಠರಾವಿಗೆ ವಿರೋಧವಾಗಿರುವುದರಿಂದ ಈ ವಿಷಯ ಚರ್ಚಿಸಲು ಸಂಘದ ಒಂದು ಸ್ಪೆಶಲ್ ಮೀಟಿಂಗನ್ನು ಮಾಡಬೇಕೆಂದು ಕೆಲವು ಮೆಂಬರುಗಳು ಕೇಳಿಕೊಂಡಿದ್ದಾರೆಂದು ಸೆಕ್ರೆಟರಿಯವರು ತಿಳಿಸುತ್ತಾರೆ. [ಅಷ್ಟರಲ್ಲೇ ವಂದನಾಪತ್ರವು ತಿರಸ್ಕರಿಸಲ್ಪಟ್ಟಿದೆ]

೧೯೨೪ನೇ ಜನವರಿ ೧ನೇ ರಲ್ಲು ೧೧|| ಇಂದ ೧೨|| ವಯಸ್ಸಿನೊಳಗೆ ಇರುವ ಹುಡುಗರು ೧೯೨೪ನೇ ಜನವರಿಯಲ್ಲಿ ಡೇರಾಡನ್ನಿನಲ್ಲಿರುವ ಪ್ರಿನ್ಸ್ ಆಫ್ ವೇಲ್ಸರವರ ರಾಯಲ್ ಇಂಡಿಯನ್ ಮಿಲಿಟರಿ ಕಾಲೇಜಿಗೆ ಸೇರಬಹುದೆಂತಲೂ, ವರ್ಷ ಒಂದಕ್ಕೆ ೧೫೦೦ ರೂಪಾಯಿ ಫೀಜಾಗುವುದೆಂತಲೂ ಹೆಚ್ಚಿನ ವಿವರವು ಕಮೀಷನರವರ ಇಂಗ್ಲೀಷ್ ಆಫೀಸಿನಿಂದ ದೊರೆಯಬಹುದೆಂತಲೂ, ಉಮೇದ್ವಾರರು ಅಕ್ಟೋಬರ ೫ರೊಳಗೆ ಕಮಿಷನರವರನ್ನು ಕಾಣಬೇಕೆಂತಲೂ ಒಂದು ನೋಟೀಸು ಪ್ರಕಟವಾಗಿದೆ.

ಜಮೀನುದಾರರ ಸಂಘದ ಕಮಿಟಿ ಮೀಟಿಂಗು ಬರುವ ಅಕ್ಟೋಬರು ೭ ರಲ್ಲು ಮಡಿಕೇರಿ ಮುನ್ಸಿಪಲ್ ಹಾಲಿನಲ್ಲಿ ನಡೆಯಲಿಕ್ಕಿದೆ.

ಹಿಮಾಲಯದ ರಾಜರಾಶಿ ಬಾಲಸನ್ಯಾಸಿ ಸ್ವಾಮಿಗಳವರು ಮೈಸೂರಿನಿಂದ ಕೊಡಗಿಗೆ ಬಂದಿರುವರೆಂದು ವರ್ತಮಾನ.

ಹಿಂದೂದೇಶ.

ಪಂಡಿತ ಜವಹರಲಾಲ್ ನೆಹರು, ಗಿಡ್ವಾನಿ ಮತ್ತು ಸಂತಾನಂ ಎಂಬ ಮೂರು ಕಾಂಗ್ರೆಸ್ ಮುಂದಾಳುಗಳನ್ನು ನಾಭ ಪ್ರಾಂತ್ಯದಲ್ಲಿ ತಾ|| 22 ರಲ್ಲಿ ಸೆರೆ ಹಿಡಿದಿರುವರೆಂದು ವರ್ತಮಾನ.

ತಾ|| 20 ರಲ್ಲು ಬೊಂಬಾಯಿಯಲ್ಲಿ ರಭಸವಾದ ಬಿರುಗಾಳಿಯೊಂದಿಗೆ ಜೋರಾದ ಮಳೆಯು ಬಿದ್ದು ಮಾರ್ಗಗಳಲ್ಲಿ ಮೂರು ನಾಲ್ಕು ಅಡಿ ನೀರು ನಿಂತಂತೆ ವ್ಯಾಪಾರಗಳೆಲ್ಲವೂ ನಿಂತು ಹೋಗಿದ್ದವೆಂದೂ, ಒಂದು ದಿನದಲ್ಲಿ 12 ಇಂಚು ಬಿತ್ತೆಂದೂ, ಕೆಲವು ಕಟ್ಟಡಗಳು ಬಿದ್ದು ಹೋಗಿವೆಯೆಂದೂ ಆದರೆ ಪ್ರಾಣನಷ್ಟವು ಒಂದು ಮಾತ್ರ ಆಗಿದೆಯೆಂದೂ ತಿಳಿಯಬರುತ್ತದೆ.

ರಾಜಕುಮಾರರ ಕೌನ್ಸಿಲಿನ ನವಂಬರು ಮೀಟಿಂಗನ್ನು ಬರುವ ವರ್ಷಕ್ಕೆ ಮುಂದರಿಸಿರುವರು.

ಸರ್ ಇಮಾಮ್ ಅಲಿಯವರು ಇಂಗ್ಲಾಂಡಿನಿಂದ ಬೊಂಬಾಯಿಗೆ ಅಕ್ಟೋಬರ್ 5 ರಲ್ಲಿ ಬಂದು ತಲಪಲಿಕ್ಕಿರುವರು. ಕೆಲವು ದಿವಸಗಳಲ್ಲಿಯೇ ಅವರು ಹೈದರಾಬಾದಿಗೆ ಹೋಗ ಪರಂತೆ.

ಮೆ|| ಅಬ್ದುಲ್ ಅಲಿಯವರು ಕೌನ್ಸಿಲ್ ಆಫ್ ಸ್ಟೇಟಿನ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿರುವರು.

ಮೈಸೂರಾಯರ ಜಪಾನ ರಿಲೀಫ್ ಫಂಡಿಗಾಗಿ ಸಿ ... ಕಳುಹಿಸಲ್ಪಟ್ಟ ಹಣವು ತಾ|| 20 ರ ವರೆಗೆ ... ವಿವರವಾಗಿದೆ.

ಬೊಂಬಾಯಿ ಯಲ್ಲಿರುವ ಗೌರವ ಮೇಜಿಸ್ಟ್ರೇಟರುಗಳಲ್ಲಿ 36 ಜನರನ್ನು ಒಡ್ಡೊಬ್ಬರಾಗಿಯೇ ನ್ಯಾಯತೀರ್ಪು ಮಾಡಬಹುದೆಂದು ಸರ್ಕಾರದವರು ಮಾಡಿದ ಹುಕುಮಿಗೆ ವಿರೋಧಿಸಲಿಕ್ಕಾಗಿ ಎಲ್ಲ ಗೌ|| ಮೇಜಿಸ್ಟ್ರೇಟರುಗಳು ಒಂದು ಮೀಟಿಂಗು ...

ಬಹಳ ದಿವಸಗಳ ... ಪೂರ್ಣ ವಿಶ್ರಾಂತಿಯನ್ನು ... ನಾಮದಾರ ಶ್ರೀನಿವಾಸಶಾಸ್ತ್ರಿಯವರ ಆರೋಗ್ಯವು ಬಹಳ ಒಳ್ಳೆಯದಾಗಿದೆಯಂತೆ. ಬೇಗನೆ ಅವರು ಪೂರ್ತಿ ಆರೋಗ್ಯವನ್ನು ಪಡೆಯುವರೆಂದು ಡಾಕ್ಟರುಗಳ ಅಭಿಪ್ರಾಯ.

ಡಿಲ್ಲಿಯಲ್ಲಿ ಸ್ಪೆಶಲ್ ಕಾಂಗ್ರೆಸ್ ಆದನಂತರ ಮೊದಲಿನ ಪದ್ಧತಿಯಂತೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯನು ಹೊಸದಾಗಿ ಚುನಾಯಿಸಲಿಲ್ಲ. ಕೋಕನಾಡ ಕಾಂಗ್ರೆಸು ಬೇಗನೆ ನಡೆಯಲಿಕ್ಕಿರುವದರಿಂದ ಹಳೇ ಕಮಿಟಿಯನ್ನೇ ಮಂಜೂರು ಮಾಡಿರುವರು.

ಸೆಪ್ಟಂಬರ್ ತಾರೀಖು 15 ರಲ್ಲು ಡೆಲ್ಲಿಯಲ್ಲಿ ಮೌಲಾನ ಅಬ್ದುಲ್ ಕಲಮ್ ಆಜಾದ್‍ರವರ ಅಧ್ಯಕ್ಷತೆಯಲ್ಲಿ ಸ್ಪೆಶಲ್ ಕಾಂಗ್ರೆಸ್ ನಡೆಯಿತು. ಕಾಂಗ್ರೆಸಿನವರಲ್ಲಿ ಇಷ್ಟವಿದ್ದವರು ಕೌನ್ಸಿಲಿಗೆ ಮೆಂಬರುಗಳಾಗಿ ಹೋಗಬಹುದೆಂತಲೂ ಮೆಂಬರುತನಕ್ಕೆ ಓಟು ಕೊಡಬಹುದೆಂತಲೂ ಠರಾವು ಪಾಸಾಗಿ ಸ್ವರಾಜ್ಯ ಪಾರ್ಟಿಯವರಿಗೂ ಕೌನ್ಸಿಲಿಗೆ ಬಹಿಷ್ಕಾರ ಹಾಕಬೇಕನ್ನುವ ಪಾರ್ಟಿಗೂ ರಾಜಿಯಾಗಿ ಕಾಂಗ್ರೆಸ್ಸಿನಲ್ಲಿ ಒಗ್ಗಟ್ಟು ಉಂಟಾಯಿತು. ಈ ರಾಜಿ ಠರಾವಿಗೆ ಮೌಲಾನಾ ಮಹಮ್ಮದ್ ಅಲಿಯವರೇ ಮುಖ್ಯ ಕಾರಣರು. ಮಹಾತ್ಮ ಗಾಂಧಿಯವರೂ ತನ್ನ ಬಹಿಷ್ಕಾರ ಪ್ರೋಗ್ರಾಮಿನಲ್ಲಿ ಅಗತ್ಯವಿದ್ದರೆ ಬದಲಾವಣೆ ಮಾಡಿಕೊಳ್ಳಬಹುದೆಂದು ಮಹಮ್ಮದ್ ಅಲಿಯವರಿಗೆ ತಿಳಿಸಿರುವರಂತೆ. ದೇಶದಲ್ಲಿ ನವಿನಯ ಕಾಯಿದೆ ಭಂಗಕ್ಕೆ ಜನರನ್ನು ತಯ್ಯಾರಿಸುವಂತೆ ಒಂದು ಕಮಿಟಿಯು ಏರ್ಪಾಡಾಯಿತು. ಇದಕ್ಕೆ ಪಂಡಿತ ಮಾಲವೀಯರು ಎಷ್ಟು ವಿರೋಧಿಸಿದರೂ ನಿಷ್ಫಲವಾಯಿತು. ಕೆನ್ಯಾದಲ್ಲಿ ಹಿಂದೀಯರಿಗ ತೋರಿಸುವ ತಿರಸ್ಕಾರಕ್ಕಾಗಿ ಬ್ರಿಟಿಷ್ ಸಾಮ್ರಾಜ್ಯದ ಸಾಮಾನುಗಳಿಗೆಲ್ಲಾ ಬಹಿಷ್ಕಾರ ಹಾಕಬೇಕೆಂದು ಬಹುಮತದಿಂದ ತೀರ್ಮಾನವಾಯಿತು. ಈ ತೀರ್ಮಾನಕ್ಕೆ ಗಾಂಧಿಯವರ ಶಿಷ್ಯರನೇಕರು ವಿರೋಧಿಸಿದರು. ಆದರೂ ಮಂಜೂರಾಗಿ ಹೋಯಿತು. ಇಂಡಿಯಾ ದೇಶವು ಸ್ವರಾಜ್ಯದೊರೆತ ನಂತರ ಬ್ರಿಟಿಷ್ ಸಾಮ್ರಾಜ್ಯದೊಳಗೆ ಇರಬೇಕೊ, ಯಾ, ಬೇಡವೋ ಎಂಬ ವಿಷಯದಲ್ಲಿ ಬಹಳ ಚರ್ಚೆ ನಡೆದು ಆ ವಿಷಯ ಈಗ ತೀರ್ಮಾನಿಸುವುದರಿಂದ ಏನೊಂದೂ ಪ್ರಯೋಜನವಿಲ್ಲವೆಂತಲೂ ನಾವು ಅತ್ರಿಕ ಜನಾಂಗವೆಂಬ ಕೊರತೆಯನ್ನು ಆಗುವಷ್ಟು ಬೇಗನೆ ಹೋಗಲಾಡಿಸಲು ಇಮ್ಮಡಿ ಮುತುವರ್ಜಿಯಿಂದ ಪ್ರಯತ್ನ ಸಬೇಕೆಂದು ನಿಶ್ಚೈಸಿದರು. ಹಿಂದೂ ಮುಸಲ್ಮಾನರಿಗುಂಟಾಗಿದ್ದನ್ನು ತೀರಿಸಿ ಒಗ್ಗಟ್ಟನ್ನುಂಟುಮಾಡಲಿಕ್ಕಾಗಿ ಒಂದು ಕಮಿಟಿ ನೇಮಿಕವಾಯಿತು.

ಕಾಂಗ್ರೆಸ್‍ಪಕ್ಷದವರು ಡಾ|| ಬೆಸೆಂಟಮ್ಮನವರ ಕೋರಿಕೆ ಮೇರೆ ಬೊಂಬಾಯಿಯಲ್ಲಿ ಒಂದು ಮೀಟಿಂಗುಮಾಡಿ ಕೆನ್ಯಾ ಅತೃಪ್ತಿಗಾಗಿ ಬ್ರಿಟಿಷ್ ಸಾಮಾನುಗಳಿಗೆ ಬಹಿಷ್ಕಾರ ಹಾಕಬೇಕೆಂದು ತೀರ್ಮಾನಿಸಿರುವರು.

ಮದ್ರಾಸಿನ ಹಿಂದೂ ಪತ್ರಿಕೆಯನ್ನು ಹೈದರಬಾದು ಪ್ರಾಂತ್ಯದೊಳಗೆ ತರಕೂಡದೆಂದು ಅಲ್ಲಿಯ ಅರಸರಾದ ನೈಜಾಮರವರು ಹುಕುಂ ಮಾಡಿರುವರು.

ವಿ ದೇ ಶ.

ರಷ್ಯಾದವರು ಜಪಾನಿನಲ್ಲಿ ಕಷ್ಟನಿವಾರಣೆಗಾಗಿ ಔಷಧಿಗಳನ್ನು ತುಂಬಿಸಿ ಕಳುಹಿಸಿದ "ಲೆನಿನ್" ಹಡಗಿನವರು ಜಪಾನಿನಲ್ಲಿ ಕಮ್ಯೂನಿಸ್ಟ್ ಪ್ರಚಾರವನ್ನು ಮಾಡುತ್ತಾರೆಂಬ ಸಂಶಯದಿಂದ ಹಡಗನ್ನು ಜಪಾನಿಂದ ಹೊರಟುಹೋಗುವಂತೆ ಜಪಾನಿನವರು ಹುಕುಂ ಮಾಡಿರುವುದರಿಂದ ರಷ್ಯಾದಲ್ಲಿ ಜನರು ಜಪಾನ್ ರಿಲೀಫ್ ಫಂಡಿಗೆ ಚಂದಾ ಕೊಡುವುದನ್ನು ಬಾಕಿ ಮಾಡಿರುವುದಲ್ಲದೆ ಕೊಟ್ಟ ಚಂದಾವನ್ನು ಸಹ ವಾಪಾಸು ಕೇಳುತ್ತಿರುವರಂತೆ.

ಇಂಗ್ಲೇಂಡಿನ ಮುಖ್ಯಮಂತ್ರಿಯಾದ ಮಿ "ಬಾಲ್ಡ್‌ವಿನ ರವರು ಫ್ರಾನ್ಸಿನ ಪ್ರಧಾನ ಮಂತ್ರಿಯಾದ ಮಿ" ಪೋಯಿಂಕೇರಿಯವರನ್ನು ಪ್ಯಾರಿಸಿನಲ್ಲಿ ಭೇಟಿ ಮಾಡಿ ಸಂಭಾಷಣೆ ಮಾಡಿದರ ಫಲಿತಾಂಶವಾಗಿ ಫ್ರೇಂಚರಿಗೂ ಜರ್ಮನಿಯವರಿಗೂ ರೂರ್‌ನಲ್ಲಿ ಉಂಟಾಗಿರುವ ಮನಸ್ತಾಪವು ಕೊನೆಗಾಣುವುದೆಂಬ ಸೂಚನೆ ಯಿದೆ.

ಸ್ಪೈನಿನ ಮಾಜಿ ಮಂತ್ರಿಗಳನ್ನು ವಿಚಾರಣೆಗೆ ಗುರಿ ಮಾಡುವರಂತೆ.

...ಗಿನ ಲಂಡನಿನಲ್ಲಿ ನಡೆಯುತ್ತಿರುವ ಇಂಪೀರಿಯಲ್ ಕಾನ್ಫರೆನ್ಸಿನಲ್ಲಿ ಡಾಕ್ಟರ್ ತೇಜ್ ಬಹದ್ದೂರು ಸಪ್ರುರವರು ಇಂಡಿಯನರಿಗೆ ಕೆನ್ಯಾದಲ್ಲಿ ಸಮಾನಾಧಿಕಾರ ದೊರೆಯಬೇಕೆಂಬ ಪ್ರಶ್ನೆಯನ್ನು ಪರ್ಯಾಲೋಚನೆಗೆ ತರುವ ಅಧಿಕಾರವನ್ನು ಹೊಂದಿರುತ್ತಾರೆ.

...ಮುದ್ರ ಪ್ರಾಂತ್ಯದಲ್ಲಿರುವ ಗಾಲ್ಫ್ ಮೊದಲಾದ ಸ್ಥಳಗಳಲ್ಲಿ ಪ್ರವಾಹವುಂಟಾಗಿ ಕೆಲವು ದಿವಸಗಳ ಹಿಂದೆ ಭೂಕಂಪದಿಂದ ಅನೇಕ ಅಂದರೆ ಹತ್ತು ನಷ್ಟಗಳೇನೂ ಉಂಟಾಗಿರುವುದಿಲ್ಲ.

...ರಿ ಗ್ರೀಸ ವಿವಾದವು ತೀರ್ಮಾನಿಸಲ್ಪಟ್ಟಿದೆ ... ರವರು ಕಾರ್ಫುದ್ವೀಪವನ್ನು ತಾ 27 ರಲ್ಲಿ ಬಿಟ್ಟಿರುವರು

...ನಾದೇಶದಲ್ಲಿ ಡಿರೆಕ್ಟರೆಂಬವರ ಎಂಟು ಸೇನಾ ... ಂದೊಡಗೂಡಿದ ಬಂದು ಹೈಡ್ರೋಪ್ಲೇನು ಮಾ... ಇಡೀ ದೇಶದಲ್ಲಿ 'ವಾರ್ಸಿಯಾ ...' ... ಸ್ಥಾನಗಳನ್ನು ಸ್ಥಾಪಿಸಿರುವರು. ಅಲ್ಲಿನ ಸ್ಥಳ ... ರು ಇದಕ್ಕೆ ಸಮ್ಮತಿಸಿರುವರು.

...ಪಾನಿನ ಟೋಕಿಯೊ ಮತ್ತು ಯೋಕೊಹಾಮ ... ರಗಳನ್ನು ಪುನಃ ಕಟ್ಟಿಸಲು ಸುಮಾರು ಹಿಂದು ... ಮಿಲಿಯನ್ ಪೌನುಗಳು ಬೇಕಾಗುವುವಂತೆ!

...ಜಿಪ್ಟ್ ದೇಶದ ಮುಂದಾಳಾದ ಜಗಲೂಲ್ ಪಾ... ನಿಂದ ವಾಪಸು ಈಜಿಪ್ಟಿಗೆ ಬಂದು ಸೇರಿರುವರು ... ಸಾವಿರಾರು ಜನರು ಸೇರಿ ಸ್ವಾಗತವನ್ನಿತ್ತರು ... ಎಲ್ಲಿಲ್ಲಿಯೂ ಸಂತೋಷದ ಸೂಚನೆಗಳು ಕಂಡವು. ... ಗೊ-ಡಿನಂತೆ

...ಪಾನಿನ ಟೋಕ್ಯೋ ನಗರಿ ಎಂಬ ಸ್ಥಳದಲ್ಲಿ ಜನರುಗಳಿಗೆ ... ಉಂಟಾದ ನೆರೆಹಾವಳಿಯಿಂದ ಅಲ್ಲಿಯ ಜನರು ಸಾ... ರು ಕಾಣದೆ ಆಗಿರುವರು

ಮಾನಿಭೂಮಿಗಳಲ್ಲಿ ರಾಗಿಯ ಪೈರನ್ನು ಬೆಳೆಸುವ ಕ್ರಮದ ವಿವರ.

1 ನೇರು ಬೀಜವನ್ನು ಬಿತ್ತನೆಮಾಡಿ ಸಸಿಗಳನ್ನು ಬೆಳೆಸಿ ... ಅಳತೆಯು 20'×20' ಅಡಿ ಇರುವ ಜಾಗವು ಸಾಕು. ಮೊದಲು ಈ ಜಾಗವನ್ನು ಅಗತೆಮಾಡಿ ಪಟ ... ಮಣ್ಣು ಚೆನ್ನಾಗಿ ಹುಡಿ ಆಗುವಹಾಗೆ ಮಾಡಿದನಂತರ ... ದನಗಳ ಗೊಬ್ಬರವನ್ನು ಹರಡಬೇಕು ಹಾಗೆ ಮಾಡಿದ ... ಅಧನ ಪಟಗಳಲ್ಲಿ ಗದ್ದೆಗೆ ಬೀಜ ಬಿತ್ತುವ ರೀತಿಯಲ್ಲಿ ... ದಪ್ಪವಾಗಿ ರಾಗಿಯನ್ನು ಚೆಲ್ಲಬೇಕು ಹಾಗೆ ಚೆಲ್ಲಿದ ... ಮೇಲೆ ತೆಳ್ಳಗೆ ಅದರ ಜಾಳಿಗೆಯ ಉದ್ದವಾದ ಎ... ಇಟ್ಟು 5-6 ದಿನಗಳವರೆಗೆ ಮುಚ್ಚಿ ಇಡಬೇಕು. ಈ ... ಯಲ್ಲಿ ಚೆಲ್ಲಿದ ರಾಗಿಯು ಮೊಳೆತೆದ್ದಾಗುತ್ತೆ. ಹಾಗೆ ... ಬಂದ ನಂತರ ಪಟಗಳ ಮೇಲೆ ಮುಚ್ಚಿದ ಹುಲ್ಲು ... ತಳೆಗಳನ್ನು ತೆಗೆಯಬೇಕು. ಮೊಳಕೆಯಾದ ಸಸಿ ... ಸ್ಥಿತಿಯಲ್ಲಿ ಬರಬೇಕಾದರೆ ಅಂದರೆ ಸುಮಾರು ಒಂದು ... ಉದ್ದ ಬೆಳೆಯಲಿಕ್ಕೆ ಅಂದಾಜು 25 ದಿವಸಗಳು ಬೇಕು. ಒಂದುವೇಳೆ ಮೊಳಕೆಯಾದ ಸಸಿಗಳು ರೋಗಿಷ್ಟವಾಗಿದ್ದರೆ ಅಂದಾಜು ಒಂದು ತಿಂಗಳಲ್ಲಿ ಸಸಿಗಳು ನಾಟಿ ಮಾಡಬಹುದು. ಹೀಗೆ ಬೆಳೆಯಿಸಿದ ಸಸಿಗಳನ್ನು ಮಾನಿಗದ್ದೆಯಲ್ಲಿ ನಾಟಿ ಮಾಡಬೇಕಾದರೆ ಮಾಮೂಲು ಪಕ್ಕದಲ್ಲಿ ನಾಟಿ ಮಾಡುವುದಕ್ಕೆ ಬೇಗೆ ಭೂಮಿಯನ್ನು ಹೂಡಿ ಹೊಡೆಯಬೇಕೋ ಹಾಗೆಯೇ ಮೂರು ಹೂಡೆತವನ್ನು ಒಡೆಯಬೇಕು. ಹಾಗೆ ನೀರನ್ನು ಒಡೆದು ... ಗಳಲ್ಲಿ ಗದ್ದೆಯಲ್ಲಿ ನೀರು ಹೋಗಿ ಸ್ವಲ್ಪ ಸ್ವಲ್ಪ ... ಕಾಗಾಗುತ್ತೆ. ಹಾಗೆ ಆದನಂತರ ಮೇಲೆ ಹೇ... ಯಲ್ಲಿ ಪಟದಲ್ಲಿ ಬೆಳೆಸಿದ ಸಸಿಗಳನ್ನು ಒಂದೊಂದೇ ... ನಾಲ್ಕು ಬೆಟ್ಟು ಅಗಲಕ್ಕೊಂದರಂತೆ ನಾಟಿ ಮಾ... ಹಾಗೆ ನಾಟಿ ಮಾಡುವುದಕ್ಕೆ ಗದ್ದೆಯಲ್ಲಿ ಕಾಲು ... ಟಾದ ಹಳ್ಳ ದಿಣ್ಣೆಗಳನ್ನು ಸಮವಾಡಿ ನಾಟಿ ಹೂ... ಹಾಗೆ ನಾಟಿ ಆದಮೇಲೆ ನೀರು ನಿಲ್ಲಿಸಬಾರದು ... ಹಾಗೆ ನಾಟಿ ಮಾಡಿದ ಗದ್ದೆಯು ಹದ ಆರಿ... ಬಿದ್ದ ಪಕ್ಕದಲ್ಲಿ ಮೇಲಿನ ನೀರನ್ನು ಹಾಯಿಸಿ ... ನೀರನ್ನು ಒಡೆದು ಬಿಡಬೇಕು. ಈ ರಾಗಿಯನ್ನು ... ತಿಂಗಳು 10 ರಿಂದ 15 ರೊಳಗೆ ಚೆಲ್ಲಿದನಂತರ ... ತಿಂಗಳಲ್ಲಿ ಪೈರು ಕುಯಿಲಿಗೆ ಬರುತ್ತೆ. ರಾಗಿ ನಾಟಿ ... ಗಳನ್ನು ದನಗಳ ಹಾವಳಿ ಇಲ್ಲದಂತೆ ಎಚ್ಚರಿಕೆ ... ಳ್ಳಬೇಕು. ಹಾಗೆ ನಾಟಿಮಾಡಿದ ಗದ್ದೆಯಲ್ಲಿ ಪೈ... ಲಿಗೆ ಬಂದ ಮೇಲೆ ತೆನೆಗಳನ್ನು ಕುಯಿದು ಕಣವು ... ಉಳಿಯಲ್ಲಾಗಲಿ ಅಥವ ಕಡಿಕೆಯಲ್ಲಾಗಲಿ ಮ... ಸ್ವಲ್ಪ ಮುಗ್ಗಿದನಂತರ ಸದ್ರಿ ತೆನೆಗಳನ್ನು ಕಣ... ಯಾಗಲಿ ಬೇರೆ ಜಾಗದಲ್ಲಿಯಾಗಲಿ ಬಿಸಿಲಿನಲ್ಲಿ ... ತೆನೆಯನ್ನು ಒರಳಲ್ಲಿ ಒನಕೆಯಿಂದ ಹಿಡಿದು ಕೇರಿ ... ಬೇಕು.

ಇದಕ್ಕಾಗಿ ಬೀಜದ ರಾಗಿಯು ಸ್ವಲ್ಪ ಸ್ವಲ್ಪವಾಗಿ 'ಕೊಡಗು' ಆಫೀಸಿನಲ್ಲಿ ದೊರೆಯುವುದು. ಇದರ ಪ್ರಯೋಗ ಮಾಡಲು ಇಷ್ಟಪಡುವವರು ಒಂದು ಪಡಕೊಳ್ಳಬಹುದು.

ಒಕ್ಕಲಿಗರ ಸಂಘ, ಮಡಿಕೇರಿ — ಕೆ ಕುಟ್ಟೈಯ್ಯ, (ಪ್ರೆಸಿಡೆಂಟ್)

21—9—23

(೧೭ ನೇ ಸಂಚಿಕೆಯಿಂದ ಮುಂದೆ ಬಂದದ್ದು).

ಪ್ರಿಯ ಕೊಡಗರ ಬಾಂಧವರೇ!!

ಪ್ರಸ್ತುತ ಕಾಲದ ವಿವಾಹಸಮಯವನ್ನುದ್ದೇಶಿಸಿ ಬರೆದ ... ಹಲವು ಗಮನಾರ್ಹವಷ್ಟೆ. ಇಂಥ ಪದ್ಧತಿ ... ನ್ನು ಪ್ರತಿಪಾದಿಸಿ ಬರೆಯುದ್ದೇಶಕ್ಕೆ ಕಾರಣವೆವೆ.

ಇನ್ನು ಬೇರೆ ಗ್ರಾಮದಲ್ಲಿಯೂ ಒಂದೊಂದು ಮನೆಯಲ್ಲಿ ಬೇರೆ ರೀತಿಯಾಗಿ ನಡೆಯುತ್ತಾ ಬರುತ್ತಿರೆ. ಇದರಿಂದ ನಡತೆ ಸಮುದ್ರ ಮುಂದಿನವರು ಈ ನಡತೆಯು ಪದ್ಧತಿಗೆ ಸ್ವಲ್ಪ ಹೆಚ್ಚು ಕಡಿಮೆಯಾಗಿರುತ್ತದೆ. ಪದ್ಧತಿಗೆ ಹೆಚ್ಚು ಕಡಿಮೆಯಾಗಿ ನಡತೆಯು ಒಂದೊಂದು ಮನೆಯಲ್ಲಿರುವದೇನೆಂದರೆ, ಆ ಮನೆಯಲ್ಲಿ ಪೂರ್ವದಲ್ಲಿ ಒಬ್ಬರೊಂದು ವಿಶೇಷ ಕಾರ್ಯಗಳಾಗಲಿ ಅಥವಾ, ಕೀರ್ತಿಪಟ್ಟವರಾಗಲಿ ಹುಟ್ಟಿ, ಅವರು ವಿನೋದದಿಂದು ವಿಶೇಷ ರಾಜ ಕಾರ್ಯ ಎನ್ನು ಕಲ್ಪಿಸಿ ... ದಲ್ಲಿ ... ನಡತೆಯೊಂದನ್ನಿಸಿಕೊಳ್ಳುತ್ತದೆ. ಹಾಗೆ ಕಾಲದಿಂದ ಆಚಾರವು ಆಚಾರದಿಂದ ಪದ್ಧತಿಯು, ಪದ್ಧತಿಯಿಂದ ನಡತೆಯೂ ಹುಟ್ಟಿತು. ಈ ಯಾವದನ್ನು ಪರಿಶೀಲಿಸಿ ನೋಡಿದರೂ, ಯಾವದೂ ಅವ್ಯವಸ್ಥೆ ಕೂಡಿಕೊಂಡಿರುವುದಲ್ಲದೆ ಒಂದಕ್ಕೊಂದು ವಿರೋಧವಾಗಿರುವುದಿಲ್ಲ. ಪದ್ಧತಿಯು ಸರ್ವಸಾಧಾರಣ ಒಂದೆಂದು ಗ್ರಾಮದಲ್ಲಿ ಒಂದೊಂದು ರೀತಿಯಾಗಿಯೂ, ನಡತೆಯು ಒಂದೊಂದು ಮನೆಯಲ್ಲಿ ಒಂದೊಂದು ವಿಧವಾಗಿಯೂ ನಡೆಯುತ್ತದೆ. ಪೂರ್ವದಿಂದಲೇ ನಡೆದುಬಂದ ಇವೆಲ್ಲವೂ ಸಿದ್ಧಾಂತಗಳೇ ಸರಿ. ಸತ್ತವನ ಸೂತಕವು ಅವನ ಸಮ್ಮಂಧಿಕರಿಗೆ ಹನ್ನೊಂದು ದಿನಗಳವರೆಗೆ ಇರುವದೆಂದೂ ಹನ್ನೆರಡರ ಒಳಗೆ ಅವನ ಉತ್ತರಕ್ರಿಯಾದಿಗಳೆಲ್ಲ ತೀರಿಹೋಗುತ್ತದೆಂಬುದು ಶಾಸ್ತ್ರಸಮ್ಮತವಷ್ಟೆ. ನಮ್ಮ ದೇಶಾಂತರದಲ್ಲಿ ಸತ್ತ ಸಂಬಂಧಿಕರಿಗೆ ಬಹಳ ದಿನಗಳ ನಂತರ ವರ್ತಮಾನ ಸಿಕ್ಕಿದರೂ, ಅಂಟುರೋಗಾದಿಗಳಿಂದ ಸತ್ತರೂ, ಸತ್ತ ಸಂಸ್ಕಾರ ಸುರುವಾದಂದಿನಿಂದ ದಿನಗಣನೆ ಮಾಡಲು ಸುರುಮಾಡುತ್ತಾರೆ. ಹೀಗೆ ... ಸಮ್ಮಂಧ ಅಂದರೆ "ಚಾವು ಹೊಲೆ" ತಗೆದನಂತರ ಸೂತಕದಿನ ಗಣನೆ ಸುರುಮಾಡುವರಿದಿಲ್ಲವಷ್ಟೆ. ನಮ್ಮಲ್ಲಿ ಸತ್ತ ಹನ್ನೊಂದು ಹನ್ನೆರಡನೆಯ ದಿನ ಈಗ ನಡೆಯುತ್ತಾ ಇದೆ. ಕೆಲವರು ಹನ್ನೊಂದನೆಯ ದಿನವೇ ಹನ್ನೆರಡನೇ ದಿನದ ಮಾರದ ಕಾರ್ಯವನ್ನು ಮಾಡಿಬಿಡುತ್ತಾರೆ. ಈ ಮಾರದ ಊಟ ಹನ್ನೆರಡನೆ ದಿನದಲ್ಲಿಯೇ ಆಗಬೇಕಾದ ಕರ್ಮವಾದರೂ, ಇದು ಸತ್ತ ವ್ಯಕ್ತಿಗೆ ಅಷ್ಟೊಂದು ಪ್ರಧಾನಕರ್ಮವಾಗಿ ರುವುದಿಲ್ಲ. ಸಪಿಂಡ ಪ್ರಧಾನಕರ್ಮವಲ್ಲವೆಂದು ಬೇರೆ ... ಕರ್ಮವೂ ಅಲ್ಲ. ಯಾವ ಕರ್ಮವು ಪ್ರಧಾನವಾಗಿರದೆ ಬಿಡತಕ್ಕ ... ಕರ್ಮವಲ್ಲವೋ ಆ ಕರ್ಮವು ಗೌಣ ಕರ್ಮವೆನ್ನಿಸಿಕೊಳ್ಳುತ್ತದೆ. ಮರಣವೇ ಬರೇ ಇಲ್ಲಿ ಗೌಣ ಕರ್ಮವು ಸತ್ತ ಪ್ರಾಣಿಯ ತೃಪ್ತಿಗೋಸ್ಕರವೂ, ಅನೇಕ ಜ್ಞಾನಿಕಾರ್ಯಕ್ಕಾಗಿಯೂ ವೃತ್ತನ ಮೇಲಿನ ... ತೋರಿಸುವದಕ್ಕೂ ಮಾಡುವ ದಿನಗಳನ್ನಿಸಿಕೊಳ್ಳುವ ಕರ್ಮವೇ ಮಾರವು. ಇದಕ್ಕೆ ನಿಯಮವಿಲ್ಲ. ಅನುಸರಿಸಿ ಅವನ್ನು ಮುಟ್ಟಿಗೆ ಉಭಯಾಧಿಕಾರಿಯ ಶಕ್ತಿಗೆ ಅನುಸಾರವಾಗಿ ಒಡನೆ ಮಾಡಬೇಕಾಗಿದೆ. ಆದಕಾರಣ ಪೂರ್ವಿಕರು ಹನ್ನೊಂದನೆ ಕ್ರಿಯೆ ತೀರಿದ ಮರುದಿನವೇ ಮಾಡಬೇಕೆಂಬುದಾಗಿ ಈ ಮಾರಕ್ಕೆ "ಹನ್ನೆರಡನೇ ದಿನ" ವೆಂಬದಾಗಿ ಸಹ ವರ್ಣಿಸಿಯ ವಿಸಂಸ್ಕರಿಸಿದರು. ತಾರ ಈ ಕ್ರಿಯೆಯು ಗೃಹಸ್ಥನ ಶಕ್ತ್ಯನುಸಾರವಾಗಿ ಅವನ ಎಲ್ಲಾ ಇಷ್ಟಮಿತ್ರರಿಂದಗಡಿ ಆಗಬೇಕಾದ್ದರಿಂದ ಪೂರ್ವಿಕರಲ್ಲಿ ಕೆಲವರು ತಮ್ಮ ಎಲ್ಲಾ ಅನುಕೂಲತೆಗೋಸ್ಕರ, ಸತ್ತ, ೧೫, ೨೫, ೩೦, ದಿನಗಳಲ್ಲಿ ಅಥವಾ, ಸಮಯಾನುಸಾರ ಕಾಲವರಿತು ಒಂದು ವರ್ಷದೊಳಗೂ ಸಹ ಮಾಡುತ್ತಿದ್ದರು. ಈಗಲೂ ಮಾಡುತ್ತಾರೆ. ಇನ್ನು ಕಮ್ಮ ಯಥಾಶಕ್ತ್ಯಾನುಕೂಲ ಒದಗಿದ ಕೆಲವರು ಹನ್ನೊಂದರಲ್ಲೇ ಮಾಡುವರು. ಈ ಮಾರದ ಒಂದಿಗು ಅನಿಯಮಿತ ಸಮಯದ ಕರ್ಮವಾದ್ದರಿಂದ ಇಂಥಾ ದಿನವೇ ಮಾಡಬೇಕೆಂಬದೊಂದು ಕಟ್ಟಲೆಯೇನೂ ಇರುವುದಿಲ್ಲ.

(ಸಶೇಷ).

ಕೊಡಗಿನಲ್ಲಿಯೂ, ದಕ್ಷಿಣಕನ್ನಡ ಮತ್ತು ಮಲಬಾರು ಜಿಲ್ಲೆಗಳಲ್ಲಿಯೂ ಪ್ರವಾಹದ ದೆಸೆಯಿಂದ ನಷ್ಟವುಂಟಾಗಿರುವ ಜನಗಳ ಸಹಾಯಾರ್ಥವಾಗಿ ಉದಾರರಿಂದ ಸಂಗ್ರಹಿಸಿದ ದ್ರವ್ಯದ ಪಟ್ಟಿ —

ನಂಬ್ರ	ಸಹಾಯಮಾಡಿದ ಜನಗಳ ಹೆಸರು	ರೂ	ಆ	ಪೈ
	ಕಳೆದ ವಾರದಿಂದ ಮುಂದಕ್ಕಿದ್ದು	242	0	0
1	ಮ॥ ಎನ್ ಗಣಪಯ್ಯನವರು	0	8	0
2	,, ಸಿ ಬಿ ಸೋಮಯ್ಯನವರು	2	0	0
3	,, ಕೃಷ್ಣರಾವ್ ರವರು	0	8	0
4	,, ಕೆ. ಟಿ. ನಾಣಯ್ಯನವರು	0	8	0
5	,, ಎಂ ಮಾದಪ್ಪನವರು	2	0	0
6	,, ಕೆ. ಎಂ ಸುಬ್ಬಯ್ಯನವರು	1	0	0
7	,, ಕೆ ಪಿ. ಕುಟ್ಟಪ್ಪನವರು	0	4	0
8	,, ಎಸ್ ಉತ್ತಯ್ಯನವರು	0	4	0
9	,, ಪಿ ಮುತ್ತಣ್ಣನವರು	0	8	0
10	,, ಸಿ. ಚಿಟ್ಯಪ್ಪನವರು	0	8	0
11	,, ಟಿ ಬಿ. ಉತ್ತಯ್ಯನವರು	0	4	0
12	,, ಎ ಎಸ್ ಬಂಗಪ್ಪನವರು	1	0	0
13	,, ಎಸ್ ಶಿವರಾಮಯ್ಯನವರು	1	0	0
14	,, ಪಿ ತಿಮ್ಮಯ್ಯನವರು	1	0	0
15	,, ಎಸ್ ದೇವದತ್ತನವರು	1	0	0
16	,, ಎಂ ಪೊನ್ನಪ್ಪನವರು	0	8	0
17	,, ಲೆಫ್ಟಿನೆಂಟ್ ಕೆ ಎಂ. ಕಾರ್ಯಪ್ಪನವರು	35	0	0
18	,, ನಾಲ್ನಾಡಿ ಸ್ಕೂಲ್ ಮಾಸ್ತರುಗಳು	1	12	0
19	,, ಬೋಕೇರಿ ತೋಟದವರಿಗಾಗಿ ಮ॥ ಕೆ ಎಂ. ಬೆಳ್ಯಪ್ಪನವರು	6	10	0
20	,, ಕೆ ಅಪ್ಪಯ್ಯನವರು K B.	5		
21	,, ಪುಟ್ಟಚಂಡ ಮಾದಯ್ಯನವರು	2	0	0
22	,, ಕೆ ಪೊನ್ನಪ್ಪನವರು	5	0	0
23	,, ಫಾರೆಸ್ಟ್ ಆಫೀಸಿನವರಿಗಾಗಿ ಎಸ್ ಸಿ ಮೊಣ್ಣಯ್ಯನವರು	1	4	0
24	,, ಪುತ್ತರನ ಗಣಪಯ್ಯನವರು	3	0	0
25	,, H M ರಾಮರಾವ್ R S.	2	0	0
26	,, ಸಿ ಎಂ ಅಪ್ಪಚ್ಚನವರು	2	0	0
27	,, ಎಂ. ಉತ್ತಯ್ಯನವರು	2	0	0
28	,, ಮಯಸಟ್ಟಿಯವರು	1	0	0
29	,, ಹಿರಿಜ್ಜ ಈರಪ್ಪಶೆಟ್ಟಿಯವರು	3	0	
30	,, ಕೆ ಮೊಹಿದಿನ್‌ಕುಟ್ಟಿ	1	0	
31	,, ಹಾಜಿ ಇಸ್ಮಾಯಿಲ್ ಸೇಟು	1	0	0
32	,, ಆರ್ ಪ್ರಾಂಜೇಯರವರು	2	0	0
33	ಶ್ರೀಮತಿ ಪಿ ತಿಮ್ಮಮ್ಮನವರು	10	0	0
	ಜುಮ್ಲಾ	317	6	0

(ಮುಂದುವರಿಯುವುದು).

ನೋಟೀಸು.

ಕೊಡಗು ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ಇದೇ ಅಕ್ಟೋಬರ್ ತಾರೀಖು 7 ನೇ ದಿನ ಹಗಲು 11 ಗಂಟೆಗೆ ಮಡಿಕೇರಿ ಮುನಿಸಿಪಲ್ ಹಾಲಿನಲ್ಲಿ ಈ ಕೆಳಗೆ ಕಂಡ ವಿಷಯಗಳನ್ನು ಚರ್ಚಿಸಲಿಕ್ಕಾಗಿ ನಡೆಯುವುದು

ಚರ್ಚಿಸತಕ್ಕ ವಿಷಯಗಳು —

1. ಪತ್ರಿಕೆಯ ಸಂಪಾದಕರಿಗೆ ಕೊಡಗು ಕಮಿಷನರ್, ಸಾಹೇಬರು ಮೊನ್ನೆ ತಾನೇ ಸೂಚಿಸಿರುವ ಎಚ್ಚರಿಕೆಯ ಮೇಲೆ ಪತ್ರಿಕೆಯ ಮುಂದಿನ ಧೋರಣೆಯ ಬಗ್ಗೆ ಏನು ಮಾಡಬೇಕೆಂಬುದನ್ನು ತೀರ್ಮಾನಿಸುವುದು.
2. ಕಂಪೆನಿಯ ಲೆಕ್ಕ ಪರಿಶೋಧನೆ.
3. ಪ್ರೆಸ್ಸನ್ನು ತೆಗೆದುಕೊಳ್ಳುವಿಕೆ ಮತ್ತು ಅವಶ್ಯವಿರುವ ಇತರ ಸಂಗತಿಗಳು.

ತಾರೀಖು 24-9-23 — ಕೆ. ಕುಟ್ಟಯ್ಯ, ಅಧ್ಯಕ್ಷರು.

ಕೊಡಗು ಜಮೀನ್ದಾರರ ಸಂಘ.

(ಪ್ರಚಾರಕ ಕಾರ್ಯದರ್ಶಿಯವರಿಂದ).

"ಫಲಾಪೇಕ್ಷೆಯಿಲ್ಲದೆ ಕ್ರಿಯೆಯನ್ನು ಎಡೆಬಿಡದೆ ಮಾಡುವದೇ ಧರ್ಮವಾಗಿದೆ"

"ಭಗವದ್ಗೀತೆ"

"The East is the parent of Muncipalities. Local-self Government, in the widest acceptation of the term, is as old as the East itself."

Chisholm Austey.

"ಪೂರ್ವ ಪ್ರದೇಶವು (ಏಶ್ಯಾಖಂಡ) ಮುನ್ಸಿಪಾಲಿಟಿಗಳ ಮಾತೃಭೂಮಿಯಾಗಿದೆ. ಸ್ಥಳೀಯ ಸ್ವರಾಜ್ಯವು ಅದರ ವಿಶಾಲವಾದ ಅರ್ಥದಲ್ಲಿ ಪೂರ್ವಪ್ರದೇಶದಷ್ಟೇ ಪ್ರಾಚೀನವಾಗಿದೆ.

ಸಿ ಆರ್ಸ್ಟೀ

No. 13.

ಭರತ ಖಂಡದಲ್ಲಿರುವ ದೇಶೀಯ ವೃತ್ತಪತ್ರಿಕೆಗಳು, ಭಾರತ ಮಾತೆಯ ಸೇವೆಯಲ್ಲಿ ಮುಖ್ಯವಾದ ಒಂದು ಅಂಗವಾಗಿರುತ್ತೆ. ವೃತ್ತಪತ್ರಿಕೆಗಳ ಕ್ರಮವು ಪಶ್ಚಿಮರಾಜ್ಯದ್ದಾಗಿರುತ್ತೆ. ಇದು ಬ್ರಿಟಿಷರು ನಮ್ಮ ರಾಜ್ಯಕ್ಕೆ ಬಂದಂದಿನಿಂದ ಸುರುವಾದದ್ದು. ಹಿಂದೂ ಅಥವ ಮಹಮ್ಮದೀಯರ ಆಳ್ವಿಕೆಯಲ್ಲಿ ಈ ತರಹದ ವೃತ್ತಪತ್ರಿಕೆಗಳಿದ್ದದ್ದು ಚರಿತ್ರೆಯಲ್ಲಿ ಕಂಡುಬರುವದಿಲ್ಲ. ವೃತ್ತಪತ್ರಿಕೆಗಳ ಅಭಿವೃದ್ಧಿಗೆ ಹಿಂದೀಯರು ಬಹಳ ಉತ್ತೇಜನ ಕೊಡಬೇಕಾದದ್ದು ಅವಶ್ಯ. ನಾವು ಇಷ್ಟರವರೆಗೆ ಕೊಟ್ಟಂಥಾ ಪ್ರೋತ್ಸಾಹವು ಬಹಳ ಕಡಿಮೆ ದೇಶೀಯ ವೃತ್ತಪತ್ರಿಕೆಗಳಿಗೆ ನಮ್ಮ ಪ್ರೋತ್ಸಾಹವು ಕಡಿಮೆಯಾದ ಕಾರಣ ದೇಶೀಯ ಜನಾಂಗವು ತಕ್ಕಷ್ಟು ಪ್ರಯೋಜನವನ್ನು ಹೊಂದಲಿಲ್ಲ ಆದರೆ ನಮ್ಮ ವೃತ್ತಪತ್ರಿಕೆಗಳು ಸರಕಾರದವರನ್ನು ಬಹಳ ಮಟ್ಟಿಗೆ ಎಚ್ಚರಗೊಳಿಸಿದೆಂಬದು ಎಲ್ಲವರಿಗೂ ತಿಳಿದ ಸಂಗತಿಯಾಗಿದೆ ಸರಕಾರ ಜವಾಬ್ದಾರಿಕೆ ಇರುವಂಥ ದೇಶೀಯ ಉದ್ಯೋಗಸ್ಥರು ಅವರ ಸ್ವಂತ ಜನರಿಂದ ನಡೆಸಲ್ಪಡುವಂಥಾ ವೃತ್ತಪತ್ರಿಕೆಗಳಿಗೆ ತಕ್ಕಷ್ಟು ಮರ್ಯಾದೆಯನ್ನೂ ಮತ್ತು ಉದಾರತ್ವವನ್ನೂ ತೋರಿಸುವವರಾಗಿಲ್ಲ. ಆದರೆ ಜವಾಬ್ದಾರಿಕೆಯುಳ್ಳ ವಿದೇಶಿ ಉದ್ಯೋಗಸ್ಥರು, ನಮ್ಮ ವೃತ್ತಪತ್ರಿಕೆಗಳಿಗೆ ಜವಾಬ್ದಾರಿಯ ದೇಶೀಯ ಉದ್ಯೋಗಸ್ಥರಿಗಿಂತ ಹೆಚ್ಚಿನ ಮರ್ಯಾದೆಯನ್ನು ಕೊಡುತ್ತಾರೆಂಬದು ನಿಜವಾದ ಸಂಗತಿಯಾಗಿರುತ್ತೆ. ಜವಾಬ್ದಾರಿಕೆಯುಳ್ಳ ದೇಶೀಯ ಉದ್ಯೋಗಸ್ಥರು ನಮ್ಮ ವೃತ್ತಪತ್ರಿಕೆಗಳಿಗೆ ಅನುಕೂಲವಿದ್ದರೂ ಸಹ ಚಂದಾ ಕೊಡಲು ಹಿಂಜರಿಯುತ್ತಾರೆ. ಹಿಂದೂ ದೇಶದ ಅನೇಕ ವೃತ್ತಪತ್ರಿಕೆಗಳ ಸಂಪಾದಕರು, ಅವರು ಮಾಡುವ ದೇಶಸೇವೆಯನ್ನು ಸ್ವಾರ್ಥತೆಯನ್ನು ತ್ಯಜಿಸಿ ಬಹಳ ಕಷ್ಟದಿಂದ ಮಾಡುತ್ತಾರೆಂಬದು ಎಲ್ಲವರಿಗೂ ತಿಳಿದ ಸಂಗತಿಯಾಗಿದೆ. ಇತರ ಜನಾಂಗಗಳಲ್ಲಿ ಧನಿಕರು ಒಗ್ಗಟ್ಟಿನಿಂದ ಹಣ ಜಮೆಮಾಡಿ, ದೇಶಸೇವೆ ಮಾಡುವ ವಿದ್ಯಾವಂತರಿಗೆ ಅನುಕೂಲವನ್ನು ಒದಗಿಸಿಕೊಡುತ್ತಾರೆ, ನಮ್ಮ ದೇಶದಲ್ಲಿ ಸ್ವಾರ್ಥತೆಯಿಂದ ಇರುವ ಒಡಕಿನ ದೆಸೆಯಿಂದ ಧನಿಕರಿಗೆ ವಿದ್ಯಾವಂತರಲ್ಲಿ ಅಭಿಮಾನವಿರುವದಿಲ್ಲ ದೇಶಸ್ಥರು ತಕ್ಕ ಪ್ರೋತ್ಸಾಹವನ್ನು ಕೊಡದ ಕಾರಣ, ಆಂಗ್ಲೋ ಇಂಡಿಯನ್ ಮತ್ತು ಇತರ ಇಂಗ್ಲೀಷ್ ಪತ್ರಿಕೆಗಳನ್ನು ಹೋಲಿಸುವ ರೀತಿಯಲ್ಲಿ ಪ್ರಕಟಿಸುವದು ಸಂಪಾದಕರಿಗೆ ಕಷ್ಟವಾಗಿದೆ ಎಷ್ಟರವರೆಗೆ ದೇಶೀಯ ಉದ್ಯೋಗಸ್ಥರ ಇರಾದೆಯಂತೆ ಪತ್ರವನ್ನು ಪ್ರಕಟಿಸಿ, ಅವರ ತಪ್ಪುಗಳನ್ನು ಮರೆಮಾಚುತ್ತಾ ಇರುತ್ತಾರೋ ಅಷ್ಟರವರೆಗೆ ಸಂಪಾದಕರಿಗೆ ಕೆಲವು ಮಟ್ಟಿಗೆ ಬೆಲೆಕೊಡುವರು ಆದ್ದರಿಂದ ಅವರ ಒಳ್ಳೇ ಇರಾದೆಯಿಂದ ಪ್ರಯೋಜನವಾಗಲೀ ಅವರ ಸಿಟ್ಟಿನಿಂದ ನಷ್ಟವಾಗಲೀ ಇಲ್ಲದಂತೆ ಆಗಿದೆ ವಿದ್ಯಾವಂತರಾದ ಐಶ್ವರ್ಯವಂತರ ಮಕ್ಕಳು, ಸರಕಾರ ಉದ್ಯೋಗಕ್ಕೆ ಮೋಹಿಸುವ ಕಾರಣ, ಸ್ವಂತಪತ್ರಿಕೆಗಳನ್ನು ಹೊರಡಿಸುವವರು ಸಿಕ್ಕುವದು ಕಷ್ಟವಾಗಿದೆ. ದೇಶಾಭಿಮಾನಿಯರಾದಂಥಾ ವಿದ್ಯಾವಂತರಿಗೆ ಪತ್ರರಚನೆಗೆ ಪ್ರಯತ್ನಪಟ್ಟರೆ ಅಂಥವರ ಪ್ರಯತ್ನಕ್ಕೆ ಉತ್ತೇಜನ ದೊರೆಯುವುದೇ ಇಲ್ಲ ಪತ್ರ ಸಂಪಾದಕರ ವೃತ್ತಿಯು ಮರ್ಯಾದೆ ಕಡಿಮೆಯಾದದ್ದೆಂದೂ, ತಕ್ಕ ಗುರುಯಾಗತಕ್ಕದ್ದೆಂದೂ ಅನುಕೂಲಸ್ಥರ ಅಭಿಪ್ರಾಯವಾಗಿರುತ್ತೆ ನಮ್ಮ ದೇಶಸ್ಥರು ವೃತ್ತಪತ್ರಿಕೆಗಳಿಗಿರುವ ಶಕ್ತಿಯನ್ನೂ ಮತ್ತು ಅದರ ಪ್ರಯೋಜನವನ್ನೂ ಸಹ ಇನ್ನೂ ಚೆನ್ನಾಗಿ ಅರಿತವರಾಗಿಲ್ಲ ಐಶ್ವರ್ಯವಂತರು ಹಣಕಾಸಿನಿಂದ ದ್ರವ್ಯಸಹಾಯ ಒದಗಿಸದ ಕಾರಣದಿಂದಲೂ ಮತ್ತು ದೇಶಸ್ಥರು ಚಂದಾ ಕೊಟ್ಟು ಪ್ರೋತ್ಸಾಹಿಸದ ಕಾರಣದಿಂದಲೂ, ನಮ್ಮ ದೇಶದ ವೃತ್ತಪತ್ರಿಕೆಗಳನ್ನು ಉತ್ತಮ ರೀತಿಯಲ್ಲಿ ಪ್ರಕಟಿಸುವದು ಅಸಾಧ್ಯವಾಗಿದೆ. ನಮ್ಮ ದೇಶದ ಅನುಭವಸ್ಥರು ವಾರ್ತೆಗಳನ್ನು ಬರೆದುಕಳುಹಿಸುವದರಲ್ಲಿ ಪ್ರೀತಿಯುಳ್ಳವರಾಗಿಲ್ಲ ಇತರ ಜನಾಂಗಗಳಲ್ಲಿ ಅನುಭವಶಾಲಿಗಳಾದ ವಿದ್ಯಾವಂತರು ವೃತ್ತಪತ್ರಿಕೆಗಳಿಗೆ ತಮ್ಮ ಅನುಭವದ ಅಭಿಪ್ರಾಯಗಳನ್ನು ಬರೆದು ಕಳುಹಿಸಿ ಬರೆಯುವದರಲ್ಲಿ ಗೌರವವಿದೆಯೆಂದು ತಿಳಿದಿರುತ್ತಾರೆ. ನಮ್ಮ ದೇಶದಲ್ಲಿ ವೃತ್ತಪತ್ರಿಕೆಗಳನ್ನು ಪ್ರೋತ್ಸಾಹಿಸುವ ವಾರ್ತೆದಾರರನ್ನು ಸಂಶಯದಿಂದ ಕಾಣುವದು ವಾಡಿಕೆ. ನಮ್ಮ ದೇಶದಲ್ಲಿ ಬ್ಯಾಸು ಸ್ವಂತ ಅಥವ ಸರಕಾರ ಉದ್ಯೋಗದಲ್ಲಿ ಅಭಿವೃದ್ಧಿ ಹೊಂದುತ್ತಾ ಬಂದ ಹಾಗೆ ವಾರ್ತೆ ಬರೆಯಲಿಕ್ಕೆ ತಿಳಿಯದವನಾಗುತ್ತಾನೆ; ಅಥವ ಮರ್ಯಾದೆಗೆ ಕಮ್ಮಿ ಎಂದು ಭಾವಿಸುತ್ತಾನೆ. ಹಣವನ್ನೂ ಮತ್ತು ಅನುಭವದ ಜ್ಞಾನವನ್ನೂ ವೃತ್ತಪತ್ರಿಕೆಗಳಿಗೆ ಸಹಾಯ ಕೊಡಲು, ನಮ್ಮವರು ಹಿಂಜರಿದರೆ, ಹ್ಯಾಗೆ ತಾನೆ ಇತರ ಜನಾಂಗಗಳ ಪತ್ರದ ರೀತಿಯಲ್ಲಿ ಪ್ರಕಟಿಸುವದು ಸಾಧ್ಯ. ಇಷ್ಟೆಲ್ಲಾ ಅಡಂಥರ್ಬಗಳು ಇದ್ದರೂ ಕೂಡ ದೇಶೀಯ ವೃತ್ತಪತ್ರಿಕೆಗಳು ಇಷ್ಟರಮಟ್ಟಿಗೆ ನಡಿಸಲ್ಪಟ್ಟು, ಸರಕಾರಕ್ಕೆ ಎಚ್ಚರಿಕೆ ಕೊಡುತ್ತಲು ದೇಶದಲ್ಲು ತಿಳುವಳಿಕೆಯನ್ನು ಹರಡಿಸುತ್ತಲೂ ಜೀವಿಸಿಕೊಂಡು ಅಭಿವೃದ್ಧಿ ಹೊಂದುತ್ತಿರುವದು ದೊಡ್ಡ ಅದ್ಭುತವೇ ಸರಿ ಪ್ರತಿಯೊಂದು ಆಂಗ್ಲೋ ಇಂಡಿಯನ್ ವೃತ್ತಪತ್ರಿಕೆಗಳಿಗೆ ಧ್ಯೇಯವಿದೆ. ಅಲ್ಲದೆ ಅವು ರಾಜಕೀಯ ಮತ್ತು ವ್ಯಾಪಾರದ ಪ್ರಯೋಜನವನ್ನು ಹೊಂದಲಿಕ್ಕಾಗಿ ನಡಿಸುವ ಏರ್ಪಾಟುಗಳಾಗಿವೆ ಆದರೆ ದೇಶೀಯ ವೃತ್ತಪತ್ರಿಕೆಗಳು ಗರೀಬರೈತರ ಕಷ್ಟಗಳನ್ನು ಹೊರಬೀಳಿಸುವದರಲ್ಲೇ ಸೇವೆಮಾಡುವದಾಗಿದೆ ಆದ್ದರಿಂದ ಅದರ (ದೇಶೀಯ ವೃತ್ತಪತ್ರಿಕೆಯ) ಧ್ಯೇಯವು ಕಷ್ಟಸೂಚಿಸುವುದೂ, ಪರಿಹಾರ ಹೇಳುವುದೂ ಸಹಾಯ ಕೇಳುವುದೂ ಮತ್ತು ತಪ್ಪು ಕಂಡು ಹಿಡಿಯುವದೂ ಆಗಿದೆ ಆದ್ದರಿಂದ ದೇಶೀಯ ಪತ್ರಗಳ ಸಂಪಾದಕರಾಗಲಿಕ್ಕೆ ಇಷ್ಟಪಡುವವರು ಕಡಿಮೆ ಯಾಕಂದರೆ ದೇಶೀಯ ಪತ್ರಗಳ ಸಂಪಾದಕರು ಕಂಡದನ್ನು ಕಂಡಹಾಗೆ ಹೇಳುವದರಿಂದ ನಿರಂಕುಶಪ್ರಭುಗಳ ಕ್ರೂರದೃಷ್ಟಿಗೆ ಬಿದ್ದು ಅವರ ಅಸಮಾಧಾನಕ್ಕೆ ಗುರಿಪಡಬೇಕಾಗುತ್ತೆ ಅಲ್ಲದೆ ಸಂಪಾದಕರು ಕಠಿಣವಾಗಿ ಬರೆಯುತಾನೆಂದಾಗಲೀ ಅಥವ ಸ್ವಾರ್ಥತೆಯಿಂದ ಬರೆಯುತ್ತಾನೆಂದಾಗಲೀ ಹೇಳಿಕೊಂಡು ದೇಶೀಯರಲ್ಲನೇಕರು ಒತ್ತಾಸೆ ಕೊಡುವುದಿಲ್ಲ

ಆದ್ದರಿಂದ ಹಿಂದಿಯರು ಮುಖ್ಯವಾಗಿ ತಿಳಿಯಬೇಕಾದದ್ದು ಏನೆಂದರೆ, ಹ್ಯಾಗೆ ರೈಲ್ವೆ ಹೊಗೆಹಡಗು ಮೋಟಾರು, ತಂತೀಟಪಾಲು ವಗೈರೆಗಳೆಲ್ಲಾ ದೇಶದ ಅಭಿವೃದ್ಧಿಗೆ ಬೇಕಾದವೆಂದು ಭಾವಿಸುವೆವೋ, ಹಾಗೆ ಹಿಂದೀ ಜನರಿಂದ ಹೊರಡಿಸಲ್ಪಡುವಂಥಾ ದೇಶೀ ವೃತ್ತಪತ್ರಿಕೆಗಳು ನಮಗಳ ಅಭಿವೃದ್ಧಿಗೆ ಅತ್ಯಾವಶ್ಯವಾದವೆಂದು ತಿಳಿಯಬೇಕು. ಪತ್ರಸಂಪಾದಕರ ಮತ್ತು ಉತ್ತಮ ವಾರ್ತೆಗಳನ್ನು ಬರೆಯುವ ಕೆಲಸವು ಇತರ ಎಲ್ಲಾ ಉದ್ಯೋಗಗಳಿಗಿಂತ ಗೌರವವಾದದ್ದು ಮತ್ತು ದೇಶದ ಪ್ರಯೋಜನಕರಂದು ತಿಳಿಯಬೇಕು ನಮ್ಮ ದೇಶದ ನಿಜವಾದ ಅಭಿವೃದ್ಧಿಯನ್ನು ಅಲ್ಲಿ ಪ್ರಕಟಿಸಲ್ಪಡುವ ಉತ್ತಮತರದ ದೇಶೀಯ ವೃತ್ತಪತ್ರಿಕೆಗಳಿಂದ ನಿರ್ಣಯಿಸಬಹುದು. ನಮ್ಮ ದೇಶದ ಬುದ್ಧಿವಂತರೂ ಮತ್ತು ಅನುಭವಶಾಲಿಗಳು ಪತ್ರರಚನೆಗೆ ಸಹಾಯಕರಾಗಿ ಉತ್ತೇಜನಕೊಡಬೇಕು. ಬಹಳ ತರದ ಜನ ಪ್ರಿಯವಾದ ಕೆಲಸಗಳನ್ನು ಮಾಡಲಿಕ್ಕೆ ಬಾಕಿ ಇದೆ ಸಂಪಾದಕರನ್ನು ಹೀಯ್ಯಾಳಿಸಿದ್ದರಿಂದ ದೇಶವು ಉಚ್ಚಸ್ಥಾನಕ್ಕೆ ಬರಲಾರದು ಪ್ರತಿಯೊಬ್ಬನು ಪತ್ರಸಂಪಾದಕನಾಗುವದು ಸಾಧ್ಯವಲ್ಲ ಉತ್ತಮ ಲಾಯರು, ಡಾಕ್ಟರು ಮತ್ತು ಸರಕಾರ ಉದ್ಯೋಗಸ್ಥನಾಗುವದಕ್ಕಿಂತಲೂ ಉತ್ತಮ ಸಂಪಾದಕನಾಗುವದು ಕಷ್ಟವಾಗಿದೆ ಪಶ್ಚಿಮ ಜನಾಂಗದವರು ಪತ್ರಸಂಪಾದಕರನ್ನು ಜವಾಬ್ದಾರಿ ಕೆಲಸಗಳಿಗೆ ಅನರ್ಹರಲ್ಲವೆಂದು ಭಾವಿಸುವರಿಲ್ಲ. ನಮ್ಮ ಈಗಿನ ಸರಕಾರವು ಪತ್ರರಚಕರನ್ನು ಪ್ರೋತ್ಸಾಹಿಸದೆ ಇರುವಾಗ್ಯೆ ನಮ್ಮ ದೇಶದ ಐಶ್ವರ್ಯವಂತರು ಪಶ್ಚಿಮರಾಜ್ಯದ ಐಶ್ವರ್ಯವಂತರಂತಾಗೆ ತಕ್ಕ ಸಹಾಯವನ್ನು ಕೊಡುವವರಾಗಿಲ್ಲ ಪಶ್ಚಿಮರಾಜ್ಯದ ದೊಡ್ಡ ದೊಡ್ಡ ಜವಾಬ್ದಾರಿಕೆಯುಳ್ಳ ಉದ್ಯೋಗಸ್ಥರು, ಪತ್ರಗಳಿಗೆ ವಾರ್ತೆ ಬರೆಯುತ್ತಾರೆ ಇಲ್ಲಿಯಾಣ ಉದ್ಯೋಗಸ್ಥರು ಸಂಶಯ ಪಟ್ಟು ಭಯದಿಂದ ಹಿಂಜರಿಯುತ್ತಾರೆ ಇವೆಲ್ಲಾ ಕಾರಣಗಳಿಂದ ದೇಶೀ ಪತ್ರಗಳು ಪ್ರಯೋಜನಕರವಾಗಬೇಕಾದರೆ ದೇಶದ ಜನರು ತುಂಬಾ ಚಂದಾದಾರರಾಗಬೇಕು ಮತ್ತು ವಿದ್ಯಾವಂತರು ಪತ್ರರಚನೆಯಲ್ಲು ಸಹಾಯಕರಾಗಬೇಕು. ಹಾಗಿಲ್ಲವಾದರೆ ದೇಶೀಯ ಪತ್ರಗಳಿಂದ ದೇಶಕ್ಕೆ ಪ್ರಯೋಜನವಾಗದಕ್ಕೆ ನಾವೇ ಜವಾಬ್ದಾರರಲ್ಲದೆ ಬೇರ್ಯಾರು ಅಲ್ಲವೆಂದು ಖಂಡಿತ ಹೇಳಬಹುದು.

ಸಂಘದ ಕೆಲಸ

ಈ ಮೊದಲು ಸಂಘ ಉದ್ದೇಶವನ್ನು ಕಾರ್ಯಕ್ಕೆ ತರಲಿಕ್ಕೆ ಸಂಘದ ಒಂದು ಸ್ವಯಂ ಸೇವಕ ಮಂಡಲಿ ಏರ್ಪಡಿಸುವದು ಅವಶ್ಯವೆಂದು ಸೂಚಿಸಿದ್ದಾರೆ. ಆ ಏರ್ಪಾಡನ್ನು ಹ್ಯಾಗೆ ಮಾಡಬೇಕೆಂಬದಕ್ಕೆ ದೇಶಸ್ಥರು ಗಳು ಇರಾದೆ ಕೊಟ್ಟು ಸಹಾಯ ಮಾಡಬೇಕಾಗಿ ಕೆಲಸವನ್ನು ತಕ್ಕ ಏರ್ಪಾಡಿನಿಂದ ತುಲಾಸಂಕ್ರಮಣದಲ್ಲು ಭಾಗಮಂಡಲದಲ್ಲು ಪ್ರಾರಂಭಿಸಿದರೆ ಶ್ರೀಯೂ ನಮ್ಮ ಸೇವೆಗೆ ಪ್ರೀತಿಸುವಳಲ್ಲವೆ? ಕಾವೇರಿ ಸಮಯದಲ್ಲು ಭಾಗಮಂಡಲದಲ್ಲು ದೊಡ್ಡ ಜನಸಂದಣಿ ಸೇರುತ್ತೆಂಬದು ಎಲ್ಲವರಿಗೂ ತಿಳಿದ ಸಂಗತಿಯಾಗಿದೆ ಆ ಜಾತ್ರೆ ಸಮಯದಲ್ಲು ಅನೇಕ ಯಾತ್ರಿಕರು ಅಲ್ಲಿ ಕಷ್ಟಪಡುತ್ತಾರೆಂಬದೂ ಸಹ ನಮಗೆಲ್ಲರಿಗೂ ತಿಳಿದ ಸಂಗತಿಯಾಗಿದೆ ಆದ್ದರಿಂದ ಅಂಥಾ ಕಷ್ಟಪಡುವವರಿಗೆ ನಮ್ಮ ಕೈಲಾದಮಟ್ಟಿಗೆ ಸಹಾಯ ಮಾಡಲು ಪ್ರಯತ್ನಿಸಿ ಶ್ರೀ ಕಾವೇರಿ ಮಾತೆಯ ಸೇವೆ ಮಾಡಿದಂತೆಯೇ ಆದರೆ ಏನು ಆಶ್ಚರ್ಯ ಸ್ವಾಮಿ ವಿವೇಕಾನಂದರವರು ದೇವಸ್ಥಾನ ದೇವಸ್ಥಾನದಲ್ಲಿರುವ ಕಲ್ಲಿನ ಸ್ಥಿರ ದೇವಸ್ಥಾನದಲ್ಲು ಇರುವ ನಾರಾಯಣನನ್ನು ಪೂಜಿಸಬೇಕೆಂದು ಅತಿಯುತ್ತಿರಲಿ ನಮ್ಮ ಸುತ್ತಲೂ ನಡೆಯುತ್ತಿರುವ ಅನೇಕ ನಾರಾಯಣರನ್ನು ಭಕ್ತಿಯಿಂದ ಪೂಜಿಸಿದ್ದಾದರೆ ಶ್ರೀ ನಾರಾಯಣನನ್ನು ಪೂಜಿಸಿದಂತೆ ಆಗುವದಿಲ್ಲವೆ? ಆದಕಾರಣ ಫಲಾಪೇಕ್ಷೆಯಿಲ್ಲದೆ ದುಃಖಿಗಳಾದವರ ಕಷ್ಟವನ್ನು ಹೋಗಲಾಡಿಸುವದೇ ಧರ್ಮ. ಅದೇ ನಮ್ಮ ಮತ ಅದೇ ನಮ್ಮ ಪೂಜೆ ಇದರ ಬಲದಿಂದಲೇ ಭಾರತಮಾತೆಯೂ ಎಷ್ಟು ಕಷ್ಟಪಟ್ಟರೂ, ಯುಗಾಂತರದಿಂದ ಕಷ್ಟದಿಂದ ಪಾರಾಗುತ್ತಿರುವಳು ಇದನ್ನು ಚೆನ್ನಾಗಿ ಅರಿತು ನಮ್ಮ ಶ್ರೀ ಮಾತೆಯ ಸೇವೆಯಲ್ಲು ನಿರುತ್ಸಾಹಿಗಳಾಗಿರುವ ಯುವಕರು ಈ ತತ್ವವನ್ನರಿತು, ಈ ಸ್ವಯಂ ಸೇವಕ ಮಂಡಲಿ ಏರ್ಪಡಿಸುವ ಸಾಹಾಯಕರಾಗಬೇಕಾಗಿ ಅತಿ ವಿನಯದಿಂದ ಕೋರುತ್ತೇನೆ ತುಲಾಸಂಕ್ರಮಣವು ಅಕ್ಟೋಬರ್ 16 ಕ್ಕೆ ಆಗುವದರಿಂದ ಮುಂಚೆ ಪೂರ್ವಕವಾಗಿ ಈ ಕೆಲಸವನ್ನು ಮಾಡಲು ಆಪೇಕ್ಷಿಸುವವರು ದಯವಿಟ್ಟು ಸಂಘದ ಪ್ರಚಾರಕ ಕಾರ್ಯದರ್ಶಿಯವರ ವಿಳಾಸಕ್ಕೆ ತಿಳಿಸಬೇಕಾಗಿ ಕೋರುತ್ತೇನೆ ಪ್ರೋತ್ಸಾಹ ಸಿಕ್ಕಿದ ಪಕ್ಷದಲ್ಲಿ ಜಾಗಗಳನ್ನೂ ಮತ್ತು ನಿಯಮಗಳನ್ನೂ ಸಹ ಪ್ರೋತ್ಸಾಹಿಸಿ ಸೇರಿ ನಿರ್ಧರಿಸಲಿಕ್ಕೆ ಅವಕಾಶ ಮಾಡಲಾಗುತ್ತೆ.

ನೋಟೀಸು.

1923 ನೇ ಇಸವಿ ಅಕ್ಟೋಬರ್ ತಾರೀಖು ಸಾಯಂಕಾಲ 3 ಘಂಟೆಗೆ ವೈಸರಾಯರವರಿಗೆ ಕೊಡಬೇಕೆಂದಿದ್ದ ವಂದನಾಪತ್ರವನ್ನು ಸ್ಥಳೀಯ ಸಿದ್ದವರು ತಿರಸ್ಕರಿಸಿರುವುದರ ವಿಷಯ ಚರ್ಚಿಸಲು ಕೋರ್ಟ ಮುನ್ಸಿಪಾಲ್ ಹಾಲಿನಲ್ಲಿ ಕೊಡಗು ಜಮೀನ್ದಾರರ ಸಂಘದ ಎಕ್ಸಿಕ್ಯೂಟಿವ್ ಕಮಿಟಿ ಮೀಟಿಂಗ್ ನಡಿಯುವುದರಿಂದ ಕಮಿಟಿ ಮೆಂಬರುಗಳೆಲ್ಲರೂ ಹಾಜರಾಗಬೇಕೆಂದು ಕೋರುತ್ತೇನೆ

ತಾರೀಖು 24—9—23. ಸಿ. ಎಸ್. ಪೊಂಕಪ್ಪ
ಜನರಲ್ ಸೆ

ಜಮೀನುದಾರರ ಸಂಘ ವೈಸರಾಯರು.

ವೈಸರಾಯ್ ಪ್ರಭುಗಳು ಮೈಸೂರಿಗೆ ಬರುವಾಗ ಜಮೀನ್‍ದಾರರ ಸಂಘದ ಪ್ರತಿನಿಧಿಗಳು ವಂದನಾ ಪತ್ರ ಒಪ್ಪಿಸಲಿಕ್ಕೆ ಹೋಗುತ್ತಾರೋ ಎಂಬುದಾಗಿ ಹೋದರೆಂತ ತಿಳಿಸಿದಮೇಲೆ ವಂದನಾ ಪತ್ರದ ನಕಲನ್ನು ಬೇಕೆಂದೂ 30 ನೇ ತಾರೀಖಿನಲ್ಲಿ ಭೇಟಿಯಾಗಬೇಕೆಂತಲೂ ಕಮಿಷನರ್ ಸಾಹೇಬರಿಂದ ಸಂಘಕ್ಕೆ ಕಾಗದ ಬಂದದ್ದರಿಂದ ಮುಂದುವರಿ ಕಮಿಟಿ ಮೀಟಿಂಗ ಮಾಡಿ ವಂದನಾ ಪತ್ರವನ್ನು ತಯಾರಿಸಿ ಕಳುಹಿಸಲು ಅದರ ಮೇಲೆ ಬಂದ ಜವಾಬನ್ನೂ ವಂದನಾ ಪತ್ರ ಇದರಡಿ ಮುಂಬರುಗಳ ತಿಳುವಳಿಕೆ ಬಗ್ಗೆ ಪ್ರಕಟಿಸುತ್ತೇನೆ.

ಮಡಿಕೇರಿ, ಸಿ. ಯಸ್. ಪೊಂಕಪ್ಪ
ತಾ|| 23—9—23 ಜನರಲ್

ಕಮಿಷನರ್ ಸಾಹೇಬರಿಂದ ಜನರಲ್ ಸೆಕ್ರೆಟರಿ ಯವರಿಗೆ ಬಂದ ರೆಫ್. ಸಿ. ನಂ $\frac{911}{ಇ. ಟ}$ ತಾ|| 22-9-23 ರ ತಾ

ನಿಮ್ಮ ವಂದನಾ ಪತ್ರದ ಸಮೇತ ಬಂದ ತಾ|| ರ ಕಾಗದಕ್ಕೆ ಈ ಜವಾಬು ಬರೆಯಲಿಕ್ಕಿದ್ದೇನೆ ಸಂಘದ ವತಿಯಿಂದ ವೈಸರಾಯರಿಗೆ ವಂದನಾ ಪತ್ರ ಕೊಡಬೇಕೆಂದು ಕೇಳಿಕೊಂಡದ್ದೇ ತಪ್ಪು ತಿಳುವಳಿಕೆ ಘನವೆತ್ತ ಫರ್ಸ್ ಪ್ರಭುಗಳು ಮೈಸೂರಿಗೆ ಬಂದಾಗ ಜಮೀನ್‍ದಾರರ ಸಂಘವು ಕೊಡಗು ದೇಶದ ಸಾಧಾರಣ ಸಮುದಾಯದ ಪ್ರತಿನಿಧಿಗಳಾಗಿ ವಂದನಾ ಪತ್ರವನ್ನು

...ಕ್ಕವೆಂತ ಆಗ ಚೀಫ್ ಕಮೀಷನರು ನಿಶ್ಚೈಸಿ ... ಪಕದಲ್ಲಿರಬಹುದು ಮೆ|| ಜಾರ್ಟನ ... ಯೋಚಿಸಿ ಆಗಿನ ಸೈಸಲಿಸಂತಯೇ ಈ ... ಕೊಳ್ಳುವದು ಉತ್ತಮವೆಂಕ ಸೈಸಲ್ ಮಾ... ಸಂಘಕ್ಕೆ ಉಂಟಾದ ಕೊಂದರೆಗೂ ಪಂದ ... ಕೂಡಬೇಕೆಂತ ಬರೆಯಲಿಕ್ಕೆ ಕಾರಣವಾದ ... ಗೂ ಮೆ|| ಜಾರ್ಟನ್ ಸಾಹೇಬರು ತುಂಬಾ ... ಕಳೆದ ಸಾರಿಯಂತೆಯೇ ದೇಶೀಯ ಮ... ಸಿಯನ್ ಸನುದಾಯದಿಂದ ಕೆಲವು ಪ್ರತಿ... ಮ ಖ್ಯಸ್ಥರು ವೈಸ್‌ರಾಯರ ಭೇಟಿ ತೆಗೆದು ... ದಗಿಗೆ ಸಂಬಂಧಪಡುವ ವಿಷಯಗಳನ್ನು ಸಾ... ನಾ...ದರೆ ಕೊಡಗಿನ ಅಕೃತ್ರಿಯ ... ಮೆ|| ಜಾರ್ಟನ್ ಸಾಹೇ... ಚೀಫ್ ಕಮಿಷನರ ಈ ಸೈಸಲ್... ತಿಳಿಸಿದ್ದೇನೆ. 2 ಈ ವಿಷಯವೂ ಅಲ್ಲದೆ ... ಧವಿಲ್ಲದ ಇನ್ನೊಂದು ಸಂಗತಿಯೇನೆಂದರೆ— ... ದಿಂದ ತಯಾರಿಸಿದ ವಂದನಾ ಪತ್ರವು ಸುತ... ರಿಸಲು ಅರ್ಹವಾದ್ದಲ್ಲ ಚೆಮ್ಸ್‌ಫರ್ಡ್ ಪ್ರ... ಸಲಿಕ್ಕಾಗಿ ಕಳುಹಿಸಿದ್ದ ವಂದನಾ ಪತ್ರದಲ್ಲಿ ... ಗಳೇ ಇದರಲ್ಲೂ ಪುನರುಕ್ತವಾಗಿವೆ ಆಕ್ಷೇಪ... ಭಾವವಿರುವ (objectionable in tone) ... ದೆಗೆ ಕೊರತೆಯಾದ (deplorable in ...) ... ದನಾ ಪತ್ರವನ್ನು ಪುನಃ ಸಂಘವು ಕಳುಹಿಸಿ ... ರವಾಗಿದೆ ಗವರ್ನ್‌ಮೆಂಟಿನ ಮುಂದೆ ತಪ್ಪಿದ ... ಸಂಪಡಿಸಿಕೊಳ್ಳಲಿಕ್ಕೆ ಈ ಅವಕಾಶ ದೊರೆ... ಫರ್ಡ್ ಪ್ರಭುಗಳು ಬರುವ ಸಂದರ್ಭದಲ್ಲಿ ಸಂ... ದ ಆಕ್ಷೇಪಣೆಯಿಂದ ಸಂಘಕ್ಕೆ ಇನ್ನೂ ಬುದ್ಧಿ... ವಂದನಾ ಪತ್ರವನ್ನು ತಿದ್ದಲಿಕ್ಕೆ ಇನ್ನೊಂದು ... ಸಲು ಮೆ|| ಜಾರ್ಟನ ಸಾಹೇಬರು ಒಪ್ಪುವ... ವಾದ ವಂದನಾ ಪತ್ರವನ್ನು ಅವರ ಒಪ್ಪಿ... ಸಲಾಗಿದೆಯೆಂದೂ, ಅದನ್ನು ಸ್ವೀಕರಿಸಲು ಒಪ್ಪ... ಅಭಿಪ್ರಾಯ ಸಹ ಕೊಟ್ಟು ವೈಸ್‌ರಾಯರಿಗೆ ... ನಾ ಸಾಹೇಬರು ... ತೆಯುತ್ತಾರೆ

...ಪ್ಯುಟೇಶನ್ ಹೋಗಲಿಕ್ಕೆ ನೇಮಿಸಲ್ಪಡುವ ಮ... ಹೆಸರನ್ನು ಕ್ರಮೇಣ ಪ್ರಕಟಿಸಲಾಗುತ್ತೆ.

ಕಮಿಷನರ್ ಸಾಹೇಬರ ಸೈನಿದೆ.

... ವಂದನಾ ಪತ್ರದ ತರ್ಜುಮೆ.

...ಮಾನಿತ ರೈಫಸ್ ಡೇನಿಯಲ್ ಪಿ. ಸಿ., ಜಿ. ಸಿ. ... ಯಸ್ ಐ., ಜಿ. ಸಿ. ಐ. ಯಿ., ಕೆ. ಸಿ. ವಿ. ಒ. ... ಪ್ರಭುಗಳಿಗೆ—

...ಗೌರವ ಯುಕ್ತ ಸನ್ನಿಧಾನದಲ್ಲಿ—

...ಸಮ್ಮುಖಮಾಡಿದ ಕೊಡಗು ಜವಿಂನ್‌ದಾರರು ಸಂ... ಧಿಗಳಾದ ನಾವು ನಮ್ಮ ನರ ದೇಶಕ್ಕೆ ತಾವು ... ತಮಗೆ ಮನಃ ಪೂರ್ತಿ ಸ್ವಾಗತವನ್ನು ಅರ್ಪಿಸಲು ... ಪ್ಪಿಗೆಯನ್ನು ಕೇಳಿಕೊಳ್ಳುತ್ತೇವೆ

...ವರ್ತಿ ಸಾರ್ವಭೌಮರಿಗೆ ನಾವು ಸಂಪೂರ್ಣ ರಾ... ಭಕ್ತರಾಗಿದ್ದೇವೆಂತ ತಮಗೆ ನಾವು ದೃಢೀಕರಿಸಿ... ವೆ ಮತ್ತು ಚಕ್ರವರ್ತಿ ಸಾರ್ವಭೌಮರಿಗೂ ಅವರ ... ನಕ್ಕೆ ನಮಗೆ ಇರುವ ಭಕ್ತಿಯನ್ನು ಅವರಿಗೆ ತಿಳಿಸ... ತಮ್ಮನ್ನು ಅತಿವಿನಯದಿಂದ ಕೇಳಿಕೊಳ್ಳುತ್ತೇವೆ.

...ಇಂಡಿಯಾದ ಇತರ ಭಾಗಗಳಲ್ಲಿ ಸ್ಥಾಪಿಸಿ... ಕಿಸಿದ ಸರಕಾರದ ಪದ್ಧತಿಯನ್ನು ನಮ್ಮ ದೇಶ... ವ್ಯಾಪಕವಾಗುವಂತೆ ಮಾಡದೆ ಇರುವದರಿಂದ ... ದಲ್ಲಿ ನಿರಾಶಾಯುಕ್ತವಾದ ಅಕೃಪ್ತಿಯುಂಟಾಗಿ... ತಮಗೆ ನಮ್ರತೆಯಿಂದ ತಿಳಿಸುತ್ತೇವೆ ನಮಗೆ ಸು... ಸರಕಾರಿ ಕ್ರಮವನ್ನು ಊಡಲಿಕ್ಕೆ ಸಾಧ್ಯವಿದ್ದಿ... ದೇಶದ ಪ್ರಾಮುಖ್ಯತೆಗಾಗಿ ಅದನ್ನು ಪ್ರತ್ಯೇಕ ... ಇಟ್ಟುಕೊಂಡು ಮದ್ರಾಸಿಗೆ ಸೇರಿಸಿ ಬಿಡಬೇ... ನೇ ಇಸ್ವಿಯಲ್ಲೇ ಇಂಡಿಯಾ ಸರಕಾರಕ್ಕೆ ವಿ... ಪತ್ರವನ್ನು ಒಪ್ಪಿಕೊಂಡೆವು ತನ್ಮಧ್ಯೆ ಸ್ಥಳೀಯ ... ದೇಶದ ಕೆಲವು ಮುಖ್ಯಸ್ಥರ ಆಲೋಚನೆ ತೆಗೆದು... ಪ್ರಿನ್ಸಿಯಲ್ ಕೌನ್ಸಿಲ್ ಒಂದನ್ನು ಈ ದೇಶಕ್ಕೆ ... ಒಪ್ಪಿಕೊಂಡರು. 1922 ರಲ್ಲಿ ಪ್ರಜಾಪ್ರತಿನಿಧಿ... ಜೆಟ್ಟಿನ ಆದಾಯ ವೆಚ್ಚದಮೇಲೆ ಅಧಿಕಾರ ... ಸೆಂಟ್ರಲ್ ಗವರ್ನ್‌ಮೆಂಟ್ ಕೌನ್ಸಿಲ್ ಒಂದು ವರ್ಷದ ... ಗೆ ಮಂಜೂರಾಗಿತ್ತೆಂತ ಚೀಫ್ ಕಮಿಷನರ್ ... 1922 ನೇ ಇಸ್ವಿಯಲ್ಲಿ ಮಾಡಿದ ಮಾತುಕೊ... 3 ನೇ ಎಪ್ರಿಲ್‌ವರೆಗೆ ಕಾದುನೋಡಿ ನಂತರ ... ಮದ್ರಾಸಿಗೆ ಸೇರಿಸಿಕೊಡಬೇಕೆಂಕಲೇ ತೀರ್ಮಾ... ಇಂಡಿಯಾದೇಶಕ್ಕೆ ಈ ಮೊದಲೇ ಸುಧಾರಣೆಗಳು ... ದ್ದ ಪ್ರಾಂತ್ಯಗಳು ಇನ್ನು ಹೆಚ್ಚಿಗೆ ಹಕ್ಕುಗಳನ್ನು ... ಕೇಳುತ್ತಿರುವ ಈ ಸಮಯದಲ್ಲಿ ಆಡಳಿತದ ... ಇಲ್ಲದ ಕೌನ್ಸಿಲಿನಿಂದ ನಮ್ಮ ದೇಶಕ್ಕೆ ತೃಪ್ತಿ... ದು ಆದ್ದರಿಂದ 1924 ನೇ ಇಸ್ವಿ ಮಾರ್ಚ ... ಗೆ ದೊಡ್ಡ ಪ್ರಾಂತ್ಯಗಳಿಗೆ ಸಿಕ್ಕಿರುವ ಸುಧಾರಣೆ... ಮಗೂ ಕೊಡಿಸಬೇಕೆಂಕಲೂ ಇದು ಸಾಧ್ಯವಾಗ... ನ್ನು ಪ್ರತ್ಯೇಕ ಜಿಲ್ಲೆಯಾಗಿ ಇಟ್ಟು ಮದ್ರಾಸು ಪ್ರಾಂತ್ಯಕ್ಕೆ ಸೇರಿಸಬೇಕೆಂತಲೂ ಪ್ರಾರ್ಥಿಸುತ್ತೇವೆ ನಮ್ಮ ದೇಶದ ಚುನಾಯಿತ ಮೆಂಬರುಗಳಿಗೆ ಇಂಡಿಯಾ ಸರಕಾರದ ಎರಡು ... ಸಭೆಗಳಲ್ಲೂ ಒಂದೊಂದು ಸ್ಥಳ ಕೊಡಬೇಕೆಂತಲೂ ಪ್ರಾರ್ಥಿಸುತ್ತೇವೆ

ನಮ್ಮ ದೇಶಕ್ಕೂ ಇಂಡಿಯಾ ಸರಕಾರಕ್ಕೂ ತಮ್ಮೊಳಗೆ ಆದಾಯ ವೆಚ್ಚದ ಒಪ್ಪಂದವಾಗುವಾಗ ನಮ್ಮ ದೇಶವು ... ದಿಂದ ಪೀಡಿಸಲ್ಪಟ್ಟು ಯಾವ ಶೃಂಗಾರಿಕೆ ತನಗೆ ಇಲ್ಲದ ... ಶವಾದ್ದರಿಂದ ಈ ದೇಶದ ಉತ್ಪತ್ತಿಯಿಂದ ಇಂಡಿಯಾ ಸರಕಾರಕ್ಕೆ ಸದಲಿಕೆ ... ಹಾಕಬಾರದೆಂತಲೂ, ಉತ್ಪತ್ತಿಯ ಯಾವ ಬಾಬನ್ನೂ ಇಂಡಿಯಾ ಸರಕಾರದ ಹಕ್ಕಾಗಿ ಮಾಡಿಕೊಳ್ಳಬಾರದೆಂತಲೂ ನಮ್ರತೆಯಿಂದ ಕೇಳಿಕೊಳ್ಳುತ್ತೇವೆ

... ಸ್ವರಾಜ ವಿದ್ಯಾ, ನೀರಾವರಿ ಕಾಮಗಾರಿ ... ಮುಂತಾದ ಆಡಳಿತದ ತಪಶೀಲ್ ಭಾಗಗಳಲ್ಲೂ ನಮ್ಮ ಕೋರಿಕೆಗಳು ಇವೆ ಆದರೆ ಅವನ್ನೆಲ್ಲಾ ಒಪ್ಪಿ ... ಸರಕಾರ ಪದ್ಧತಿಯು ನಮಗೆ ಸಿಕ್ಕಿದನಂತರ ಸುಧಾರಿಸಿಕೊಳ್ಳುತ್ತೇವೆಂಬ ಧೈರ್ಯ ನಮಗಿದೆ ಆದ್ದರಿಂದ ಅವುಗಳನ್ನೆಲ್ಲಾ ಇಲ್ಲಿ ವಿವರಿಸಿ ತಮ್ಮ ಅಮೂಲ್ಯ ಸಮಯವನ್ನು ಕಳೆಯುವದಿಲ್ಲ.

ಜವಿಂನ್ ಹಿಡುವಳಿದಾರರ ಮನಸ್ಸನ್ನು ಬಹಳ ಕಳವಳಗೊಳಿಸಿದ ವಿಷಯವಾದ ಜಮ್ಮಾ ಹಿಡುವಳಿಯನ್ನು ಸೆಟಲ್‌ಮೆಂಟಿಗೆ ಒಳಪಡಿಸಿದ ಸಂಗತಿಯಲ್ಲಿ ನಮಗೆ ಹೇಳಲಿಕ್ಕೆ ಇರುವದನ್ನು ತಮ್ಮ ಅವಗಾಹನೆಗೆ ತರಲು ಅನುಮತಿ ಬೇಡುತ್ತೇವೆ ಈ ... ಮೇಲೆ ... ಕಾಲದಲ್ಲೇ ... ಯಿಸಿದ ಕಂದಾಯದ ದರವು ಶಾಶ್ವತವೆಂತಲೂ ಅದನ್ನು ಸ್ವತ್ವಾಸ ಮಾಡಲಿಕ್ಕೆ ಸಾಧ್ಯವಿಲ್ಲವೆಂತಲೂ ನಾವು ಯಾವಾಗಲೂ ನಂಬಿದ್ದೆವು ಚೀಫ ಕಮಿಷನರ್ ಸಾಹೇಬರುಗಳು ಒಬ್ಬರಮೇಲೊಬ್ಬರು ಹೀಗೆಯೇ ತಿಳಿದಿದ್ದರು. ನಿನ್ನ ದುಗಳ ಆಧಾರದಮೇಲೆ ... ಆಕ್ಷೇಪಣೆಯನ್ನು ಹೇಳಿಕೊಂಡರೂ ನಮಗೆ ತುಂಬಾ ಭಯವನ್ನುಂಟುಮಾಡುವಂತೆ ಕಳೆದ ಸೆಟಲ್‌ಮೆಂಟಿನಲ್ಲಿ ಈ ಶಾಶ್ವತ ಹಿಡುವಳಿಯ ಕಂದಾಯದ ದರವನ್ನು ವ್ಯತ್ಯಾಸಮಾಡಿ ಹೆಚ್ಚಿಸಿ ಬಿಟ್ಟರು ಸರಕಾರದ ವಾಗ್ದಾನಗಳಲ್ಲಿ ತುಂಬಾ ನಂಬಿಗೆಯಿಟ್ಟ ರಾಜಭಕ್ತ ರೈತರೇ ಈ ಕಷ್ಟಕ್ಕೆ ಗುರಿಯಾದವರಾದ್ದರಿಂದ ಮನಸ್ಸನ್ನು ಸದಾ ನೋಯಿಸುತ್ತಿರುವ ಈ ಕಷ್ಟವನ್ನು ಪರಿಹರಿಸಿಕೊಡಬೇಕೆಂತ ಕೋರುತ್ತೇವೆ ಇದು ತೀವ್ರವಾಗಿ ಹೋದ ಸಂಗತಿಯೆಂತ ತಿರಸ್ಕರಿಸಿ ಬಿಡಬಾರದೆಂತ ಕೋರುತ್ತೇವೆ

ಈ ವರ್ಷದ ಅತಿವೃಷ್ಟಿಯಿಂದ ನಮ್ಮ ದೇಶದಲ್ಲೂ ಕೊಂಚ ನಷ್ಟಗಳು ಸಂಭವಿಸಿದೆಯೆಂತ ತಮಗೆ ತಿಳಿಸಬೇಕಾಗಿದೆ ಕಷ್ಟಕ್ಕೆ ಗುರಿಯಾದ ರೈತರಿಗ ಸರಕಾರದ ಸಹಾಯ ದೊರೆತೀತೆಂತ ನಂಬಿದ್ದೇವೆ.

ತಮ್ಮ ಅಮೂಲ್ಯ ಸಮಯವನ್ನು ಇಷ್ಟರವರೆಗೆ ಆಕ್ರಮಿಸಿದ್ದಕ್ಕೆ ಕ್ಷಮೆ ಬೇಡುತ್ತೇವೆ. ಮಧ್ಯವರ್ತಿ ಸರಕಾರದಿಂದ ಒಪ್ಪಲ್ಪಟ್ಟದ್ದಲ್ಲಿ ... ದರಿಂದಲೂ ಮುಖ್ಯವಾಗಿ ಇಂಡಿಯಾ ಸರಕಾರದ ನ್ಯಾಯವಿಧಾಯಕ ಸಭೆಗಳಲ್ಲಿ ನಮ್ಮ ಪ್ರತಿನಿಧಿಗಳು ಇಲ್ಲದಿರುವದರಿಂದಲೂ ಇಂಡಿಯಾದ ಮುಖ್ಯ ಅಧಿಕಾರಿಗಳಿಗೆ ನಮ್ಮ ಹಾರೈಕೆಗಳನ್ನು ಹೇಳಲಿಕ್ಕೆ ಬೇರೆ ಅನುಕೂಲವಿಲ್ಲದ್ದರಿಂದ ತಮಗೆ ತೊಂದರೆ ಕೊಟ್ಟೆರುವದಾಗಿದೆ

ದಕ್ಷಿಣ ಇಂಡಿಯಾದಲ್ಲಿ ತಮ್ಮ ಸಂಚಾರವು ಸುಖವಾಗಿರಲೆಂದೂ ಬಹುಕಾಲ ಸುಖಸಂಪತ್ತು ತಮಗೂ ತಮ್ಮ ಧರ್ಮ ಪತ್ನಿಯವರಿಗೂ ದೇವರು ದಯಪಾಲಿಸಲೆಂದೂ ಕೋರುತ್ತೇವೆ

ತಮ್ಮ ವಿಧೇಯರು.

ಪತ್ರವ್ಯವಹಾರಗಳು.

ಚಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ [ಎಡಿಟರ್]

ಅಯ್ಯಾ,

ತಮ್ಮ ತಾರೀಖು ೧೪ ರ ಪತ್ರಿಕೆಯಲ್ಲಿ ಮೆ ಕೊಂಗಂಡ ಕುಟ್ಟಪ್ಪನವರು ಬರೆದ ಚಾತ್ಮಿಯನ್ನು ನೋಡಿ ... ಆಶ್ಚರ್ಯಕರವುಂಟಾಯಿತು ಇದು ಯಾವ ಆಶ್ಚರ್ಯ—ಊರಿನವರ ಪಂಚಾಯಿತಿಗೆಯಲ್ಲಿ ಮೇಲ್ಕಂಡ ಕುಟ್ಟಪ್ಪನವರು ನಿನ್ನ ಹಸ್ತಾರ ಬಾಕಿ ಇರುವ ಹಣ ಊರಿನವರ ಪಂಚಾಯಿತಿಗೆ ಪಂಚಾಯತಿಗೆಯಲ್ಲಿ ನ್ಯಾಯವಾದ ಲೆಕ್ಕದ ಪಟ್ಟಿ ಒಪ್ಪಿಸಿ ಈಗ ನಾ|| ಗಣಪತಿಯವರ ಜುಲೈ ತಿಂಗಳ ಚಾತ್ಮಿಗೆ ಪ್ರತ್ಯುತ್ತರ ನಾನು ಕೊಡಬೇಕಾದುದ್ದೇನು. ಇಲ್ಲವೆಂತ ಬರೆದ ಚಾತ್ಮಿಯನ್ನು ನೋಡಿ ಬಹಳ ವ್ಯಸನಪಡುತ್ತೇನೆ ನಾನೆಂದಿಗೂ ಇಂಥಾ ಲೆಕ್ಕದಪಟ್ಟಿಯನ್ನು ಊರಿನವರಿಗೆ ಕೊಡಲಿಲ್ಲ ನಾಗಿ ತನ್ನ ಮನಸ್ಸಾಕ್ಷಿಯಿಂದ ಕಾಶೀ ವಿಶ್ವನಾಥ ದೇವರನ್ನು ಕಾವೇರಮ್ಮನನ್ನು ಮತ್ತು ನಮ್ಮ ಗ್ರಾಮದ ಜೋಡುಭಗವತಿ ದೇವರನ್ನು ಕುರಿತು ಆಣೆಯಿಂದ ಈ ನಮ್ಮ ಶ್ರೇಷ್ಟವಾದ ಕೊಡಗು ಪತ್ರಿಕೆಯಲ್ಲು ಚಾತ್ಮಿಮೂಲಕ ಬರೆದ ಪಕ್ಷ ನಾ|| ಗಣಪತಿ ಎಂಬವರು ಮೇಲು ಕಂಡ ಕುಟ್ಟಪ್ಪನವರನ್ನು ಇದೇ ಪತ್ರಿಕೆ ಮೂಲಕ ಕ್ಷಮಾಪಣೆ ಕೇಳಿಕೊಳ್ಳುವುದು ಒಳ್ಳೇದಾಗಿ ಕಾಣುತ್ತೆ

ಪಂಚಾಯಿತಿಗೆಯಲ್ಲಿ ಹಾಜರಿದ್ದವ

ಶ್ರೀಮಾನ್—ಸಂಪಾದಕರೇ,

ತಮ್ಮ ಜಿಲ್ಲೆಯ ವರ್ತಮಾನ ಸಂಗ್ರಹದಲ್ಲು ರಾ. ಸಾ. ಕೇಟೋಳಿರ ಚಂಗಪ್ಪ ಬಿ. ಎ. ಯವರನ್ನು ಖಾಯಂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿದರೆಂತ ನಮ್ಮ ಸಂತೋಷ ಸೂಚನೆ ಎಲ್ಲ ದೇಶದವರೆಲ್ಲಾ ಭಾಗಗಳಾಗಿರುವರೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ... ದೇಶದವರನ್ನು ಸರಕಾರದವರನ್ನು ನಂಬಿದರೆ ಯಾವದೂ ... ಸರಕಾರ ಇಂಥಾ ಜನ ನಮ್ಮಾಕ ... ಸಿಕ್ಕಿದರೆ ... ಅನುಕೂಲ ... ಸಂತೋಷಪಡಬೇಕಾದದ್ದು ಬಹಳ ಅವಶ್ಯ. ಕೊಡಗಿನಲ್ಲಿ ದೇಶೀಯರ ಪೈಕಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೆಲಸವನ್ನು ಮೊದಲು ನಡೆಸಿದ್ದು ಇವರೇ ಸರಿ. ಆದ್ದರಿಂದ ರಾ|| ಸಾ|| ಚಂಗಪ್ಪನವರಿಗೆ ನಮ್ಮ ಸಂತೋಷವನ್ನೂ ಮತ್ತು ಸರಕಾರಕ್ಕೆ ನಮ್ಮ ಕೃತಜ್ಞತೆಯನ್ನು ಸಹ ಸೂಚಿಸಲಿಕ್ಕೆ ತಕ್ಕ ಏರ್ಪಾಡನ್ನು ಮಾಡಬೇಕೆಂಬ ತಮ್ಮ ಸೂಚನೆಗೆ ದೇಶವು ಸಮ್ಮತಿಸುವದರಲ್ಲಿ ಯಾವ ಸಂಶಯವೂ ಇರಲಾರದು ಈ ಏರ್ಪಾಡಿಗೆ ಮಡಿಕೇರಿಯಲ್ಲಿರುವ ಉದ್ಯೋಗಸ್ಥರಲ್ಲದ ಮಹಾನುಭಾವರು ಮನಸ್ಸುಕೊಟ್ಟು ಬೇಗನೆ ಕೈಹಾಕಬೇಕಾಗಿ ಕೋರಿಕೆ. ಅಲ್ಲದೆ ರಾ|| ಸಾ|| ಚಂಗಪ್ಪನವರಿಗೆ ಈ ಜವಾಬ್ದಾರಿಕೆಯ ಕೆಲಸವನ್ನು ಶ್ರೀ ಇಗ್ಗುತಪ್ಪ ಮತ್ತು ಶ್ರೀ ಮಾತೆ ಕಾವೇರಿಯು ಪ್ರೀತಿಸುವಂತೆ ದೇಶಹಿತವಾದ ನ್ಯಾಯವನ್ನು ಕೊಟ್ಟು ದೇಶೀಯರ ಅರ್ಹತೆಯನ್ನು ಕಾಪಾಡಲಿಕ್ಕಾಗಿ ಆದೇ ಶ್ರೀ ಇಗ್ಗುತಪ್ಪ ಮತ್ತು ಕಾವೇರಮ್ಮನೂ, ಆಯುರಾರೋಗ್ಯವನ್ನೂ ಧೈರ್ಯವನ್ನೂ ಮತ್ತು ನಿರ್ಮಲ ಮನಸನ್ನು ಸಹ ಕೊಡಲೆಂದು ಬದ್ಧಕಂಕಣನಾಗಿ ಪ್ರಾರ್ಥಿಸುವ,

ಅತಿ ಉಲ್ಲಾಸಿ.

ಅಯ್ಯಾ,

ಕಳೆದ ಸಂಚಿಕೆಯಲ್ಲಿ "ಬುದ್ಧಿ ಭೋದಕ" ರು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಈ ಕೆಳಗೆ ಸೂಚಿಸಿರುವೆನು.

Study.

1. ಕಾಗದದ ಮೇಲೆ ಬರೆದು ಓದುವುದು.
2. ತಂತಿ.
3. ದುಂಬಿ

Hygiene.

4. ಸಿಂಬಳ.
5. ಕೋಟು.

Arithmetic.

6. 22.
7. ಮೂರು ಇಲಿಗಳು.

Extra.

8. ತಂತಿ ಇಲ್ಲದೆ ವರ್ತಮಾನಕಳುಹಿಸುವುದು (Wireless Telegraphy.)

ಬಹುಮಾನಸಿಕ್ಕುವುದು ಸನ್ನಿಧಿ, ನನಗೆ ಕೊಡಬೇಕೆಂದು ಕೋರಿಕೆ.

K. Lakshmi Kantha,
II Form, C. H. School,
Mercara.

ಕೊಡಗು ವಾಚಕ ಮಹಾಶಯರೇ,

ಅಮ್ಮತ್ತಿ ಕಿಬ್ಬೆಟ್ಟುವಿನ ನಾಡಿನಲ್ಲಿ ಚೆನ್ನೈನ ಕೋಟೆ ಎಂಬ ಗ್ರಾಮ ಒಂದು ಇದೆ ಈ ಚೆನ್ನೈನ ಕೋಟೆ ಗ್ರಾಮವು ೩೩ (ಮೂವತ್ತಮೂರು) ಹಳ್ಳಿಗಳನ್ನು ಒಳಸಿ ಇದೆ ಈ ಊರು ಮೈಸೂರು ದೇಶಕ್ಕೆ ಸಮೀಪವಾಗಿಯೂ, ಮೇರೆಯಾಗಿಯೂ ಇರುವುದರಿಂದ ಇದರ ದೇವಸ್ಥಾನ, ಮನೆ ವಗೈರೆಯ ನೀತಿಗಳು ಮೈಸೂರು ದೇಶದ ಪದ್ಧತಿಯನ್ನು ಅನುಸರಿಸಿ ಇವೆ. ಇದಕ್ಕೆ ಸುಮಾರು ೩೦೦ ವರ್ಷಗಳ ಮೇಲೆ ಬಹಳ ವಿರಳ ಕೊಡಗು ಜನಾಂಗದವರು ನೆಲಸಿದ್ದರು. ಇತ್ತೀಚೆಗೆ ಅಂದರೆ ೬೦—೭೦ ವರ್ಷಗಳಿಂದೀಚೆಗೆ ಸಾಧಾರಣ ೩೦—೩೫ ಕೊಡಗು ಮನೆತನದವರು ಭೂಮಿ, ಬಾಣೆ ವಗೈರೆ ಸ್ಥಿರ ಆಸ್ತಿಯನ್ನು ಪಡೆದು ವಾಸಮಾಡುತ್ತಾರೆ. ಹೆಚ್ಚು ಕಡಿಮೆ ಎಲ್ಲಾ ಮನೆತನದವರು ಇನ್ನು ಈ ಕಡೆ ನಿವಾಸಿಸಲು, ಸ್ಥಳವಹಿಕೊಳ್ಳಲು ತಯ್ಯಾರಾಗಿ ಬರುತ್ತಿದ್ದಾರೆ

ಹೀಗಿರುವಾಗ್ಯೆ ಇಲ್ಲಿರುವ ಕೊಡಗು ಜನಾಂಗದವರೆಲ್ಲರೂ ಎಚ್ಚತ್ತು ಈ ವರೆವಿಗೆ ತಮಗೆ ಅದು ಊರು ಹಿಡು ಕಟ್ಟು ಇಲ್ಲದೆಯೂ, ಅಂಬಲ, ಮಂದ್ ವಗೈರೆ

ಕೊಡಗು ಜಮ್ಮಾದಾರರ ಸಂಘ.

(ಪ್ರಚಾರಕ ಕಾರ್ಯದರ್ಶಿಯವರಿಂದ).

"ಫಲಾಪೇಕ್ಷೆಯಿಲ್ಲದೆ ಕ್ರಿಯೆಯನ್ನು ಎಡೆಬಿಡದೆ ಮಾಡುವದೇ ಧರ್ಮವಾಗಿದೆ"

"ಭಗವದ್ಗೀತೆ"

"The East is the parent of Muncipalities. Local-self Government, in the widest acceptation of the term, is as old as the East itself."

Chisholm Austey.

"ಪೂರ್ವ ಪ್ರದೇಶವು (ಏಶ್ಯಾಖಂಡ) ಮುನ್ಸಿಪಾಲಿಟಿಗಳ ಮಾತೃಭೂಮಿಯಾಗಿವೆ. ಸ್ಥಳೀಯ ಸ್ವರಾಜ್ಯವು ಅದರ ವಿಶಾಲವಾದ ಅರ್ಥದಲ್ಲಿ ಪೂರ್ವಪ್ರದೇಶದಷ್ಟೇ ಪ್ರಾಚೀನವಾಗಿದೆ.

ಸಿ ಆಸ್ಟೀ.

No. 13.

ಭರತ ಖಂಡದಲ್ಲಿರುವ ದೇಶೀಯ ವೃತ್ತಪತ್ರಿಕೆಗಳು, ಭಾರತ ಮಾತೆಯ ಸೇವೆಯಲ್ಲಿ ಮುಖ್ಯವಾದ ಒಂದು ಅಂಗವಾಗಿರುತ್ತೆ. ವೃತ್ತಪತ್ರಿಕೆಗಳ ಕ್ರಮವು ಪಶ್ಚಿಮರಾಜ್ಯದ್ದಾಗಿರುತ್ತೆ. ಇದು ಬ್ರಿಟಿಷರು ನಮ್ಮ ರಾಜ್ಯಕ್ಕೆ ಬಂದಂದಿನಿಂದ ಸುರುವಾದದ್ದು. ಹಿಂದೂ ಅಥವ ಮಹಮ್ಮದೀಯರ ಆಳ್ವಿಕೆಯಲ್ಲಿ ಈ ತರಹದ ವೃತ್ತಪತ್ರಿಕೆಗಳಿದ್ದದ್ದು ಚರಿತ್ರೆಯಲ್ಲಿ ಕಂಡುಬರುವದಿಲ್ಲ. ವೃತ್ತಪತ್ರಿಕೆಗಳ ಅಭಿವೃದ್ಧಿಗೆ ಹಿಂದೀಯರು ಬಹಳ ಉತ್ತೇಜನ ಕೊಡಬೇಕಾದದ್ದು ಅವಶ್ಯ. ನಾವು ಇಷ್ಟರವರೆಗೆ ಕೊಟ್ಟಂಥಾ ಪ್ರೋತ್ಸಾಹವು ಬಹಳ ಕಡಿಮೆ. ದೇಶೀಯ ವೃತ್ತಪತ್ರಿಕೆಗಳಿಗೆ ನಮ್ಮ ಪ್ರೋತ್ಸಾಹವು ಕಡಿಮೆಯಾದ ಕಾರಣ ದೇಶೀಯ ಜನಾಂಗವು ತಕ್ಕಷ್ಟು ಪ್ರಯೋಜನವನ್ನು ಹೊಂದಲಿಲ್ಲ. ಆದರೆ ನಮ್ಮ ವೃತ್ತಪತ್ರಿಕೆಗಳು ಸರಕಾರದವರನ್ನು ಬಹಳ ಮಟ್ಟಿಗೆ ಎಚ್ಚರಗೊಳಿಸಿದೆಂಬದು ಎಲ್ಲವರಿಗೂ ತಿಳಿದ ಸಂಗತಿಯಾಗಿದೆ. ಸರಕಾರಿ ಜವಾಬ್ದಾರಿಕೆ ಇರುವಂಥ ದೇಶೀಯ ಉದ್ಯೋಗಸ್ಥರು ಅವರ ಸ್ವಂತ ಜನರಿಂದ ನಡೆಸಲ್ಪಡುವಂಥಾ ವೃತ್ತಪತ್ರಿಕೆಗಳಿಗೆ ತಕ್ಕಷ್ಟು ಮರ್ಯಾದೆಯನ್ನೂ ಮತ್ತು ಉದಾರತ್ವವನ್ನೂ ತೋರಿಸುವವರಾಗಿಲ್ಲ. ಆದರೆ ಜವಾಬ್ದಾರಿಕೆಯುಳ್ಳ ವಿದೇಶಿ ಉದ್ಯೋಗಸ್ಥರು, ನಮ್ಮ ವೃತ್ತಪತ್ರಿಕೆಗಳಿಗೆ ಜವಾಬ್ದಾರಿಯ ದೇಶೀಯ ಉದ್ಯೋಗಸ್ಥರಿಗಿಂತ ಹೆಚ್ಚಿನ ಮರ್ಯಾದೆಯನ್ನು ಕೊಡುತ್ತಾರೆಂಬದು ನಿಜವಾದ ಸಂಗತಿಯಾಗಿರುತ್ತೆ. ಜವಾಬ್ದಾರಿಕೆಯುಳ್ಳ ದೇಶೀಯ ಉದ್ಯೋಗಸ್ಥರು ನಮ್ಮ ವೃತ್ತಪತ್ರಿಕೆಗಳಿಗೆ ಅನುಕೂಲವಿದ್ದರೂ ಸಹ ಚಂದಾ ಕೊಡಲು ಹಿಂಜರಿಯುತ್ತಾರೆ. ಹಿಂದೂ ದೇಶದ ಅನೇಕ ವೃತ್ತಪತ್ರಿಕೆಗಳ ಸಂಪಾದಕರು, ಅವರು ಮಾಡುವ ದೇಶಸೇವೆಯನ್ನು ಸ್ವಾರ್ಥತೆಯನ್ನು ತ್ಯಜಿಸಿ ಬಹಳ ಕಷ್ಟದಿಂದ ಮಾಡುತ್ತಾರೆಂಬದು ಎಲ್ಲವರಿಗೂ ತಿಳಿದ ಸಂಗತಿಯಾಗಿದೆ. ಇತರ ಜನಾಂಗಗಳಲ್ಲಿ ಧನಿಕರು ಒಗ್ಗಟ್ಟಿನಿಂದ ಹಣ ಜಮೆಮಾಡಿ, ದೇಶಸೇವೆ ಮಾಡುವ ವಿದ್ಯಾವಂತರಿಗೆ ಅನುಕೂಲವನ್ನು ಒದಗಿಸಿಕೊಡುತ್ತಾರೆ, ನಮ್ಮ ದೇಶದಲ್ಲಿ ಸ್ವಾರ್ಥತೆಯಿಂದ ಇರುವ ಒಡಕಿನ ದೆಸೆಯಿಂದ ಧನಿಕರಿಗೆ ವಿದ್ಯಾವಂತರಲ್ಲಿ ಅಭಿಮಾನವಿರುವದಿಲ್ಲ. ದೇಶಸ್ಥರು ತಕ್ಕ ಪ್ರೋತ್ಸಾಹವನ್ನು ಕೊಡದ ಕಾರಣ, ಆಂಗ್ಲೋ ಇಂಡಿಯನ್ ಮತ್ತು ಇತರ ಇಂಗ್ಲೀಷ್ ಪತ್ರಿಕೆಗಳನ್ನು ಹೊಂದಿಸುವ ರೀತಿಯಲ್ಲಿ ಪ್ರಕಟಿಸುವದು ಸಂಪಾದಕರಿಗೆ ಕಷ್ಟವಾಗಿದೆ. ಎಷ್ಟರವರೆಗೆ ದೇಶೀಯ ಉದ್ಯೋಗಸ್ಥರ ಇರಾದೆಯಂತೆ ಪತ್ರವನ್ನು ಪ್ರಕಟಿಸಿ, ಅವರ ತಪ್ಪುಗಳನ್ನು ಮರೆಮಾಚುತ್ತಾ ಬರುತ್ತಾರೋ ಅಷ್ಟರವರೆಗೆ ಸಂಪಾದಕರಿಗೆ ಕೆಲವು ಮಟ್ಟಿಗೆ ಬೆಲೆಕೊಡುವರು. ಆದ್ದರಿಂದ, ಅವರ ಒಳ್ಳೇ ಇರಾದೆಯಿಂದ ಪ್ರಯೋಜನವಾಗಲೀ ಅವರ ಸಿಟ್ಟಿನಿಂದ ನಷ್ಟವಾಗಲೀ ಇಲ್ಲದಂತೆ ಆಗಿದೆ. ವಿದ್ಯಾವಂತರಾದ ಐಶ್ವರ್ಯವಂತರ ಮಕ್ಕಳು, ಸರಕಾರಿ ಉದ್ಯೋಗಕ್ಕೆ ಮೋಹಿಸುವ ಕಾರಣ, ಸ್ವಂತಪತ್ರಿಕೆಗಳನ್ನು ಹೊರಡಿಸುವದು ಸಿಕ್ಕುವದು ಕಷ್ಟವಾಗಿದೆ. ದೇಶಾಭಿಮಾನಿಯರಾದಂಥಾ ವಿದ್ಯಾವಂತರು ಪತ್ರರಚನೆಗೆ ಪ್ರಯತ್ನಪಟ್ಟರೆ ಅಂಥವರ ಪ್ರಯತ್ನಕ್ಕೆ ಉತ್ತೇಜನ ದೊರೆಯುವುದೇ ಇಲ್ಲ. ಪತ್ರ ಸಂಪಾದಕರ ವೃತ್ತಿಯು ಮರ್ಯಾದೆ ಕೆಲಸವಾದದ್ದಲ್ಲವೆಂದೂ, ತಕ್ಕ [illegible] ಯಾಗತಕ್ಕದ್ದೆಂದೂ ಅನೇಕ ಜನರ ಭಾವನೆಯಾಗಿರುತ್ತೆ. ನಮ್ಮ ದೇಶಸ್ಥರು ವೃತ್ತಪತ್ರಿಕೆಗಳಿಗಿರುವ ಶಕ್ತಿಯನ್ನೂ ಮತ್ತು ಅದರ ಪ್ರಯೋಜನವನ್ನೂ ಸಹ ಇನ್ನೂ ಚೆನ್ನಾಗಿ ಅರಿತವರಾಗಿಲ್ಲ. ಐಶ್ವರ್ಯವಂತರು [illegible] ದ್ರವ್ಯ ಸಹಾಯ ಒದಗಿಸದ ಕಾರಣದಿಂದಲೂ ಮತ್ತು ದೇಶಸ್ಥರು ಚಂದಾ ಕೊಟ್ಟು ಪ್ರೋತ್ಸಾಹಿಸದ ಕಾರಣದಿಂದಲೂ, ನಮ್ಮ ದೇಶದ ವೃತ್ತಪತ್ರಿಕೆಗಳನ್ನು ಉತ್ತಮ ರೀತಿಯಲ್ಲಿ ಪ್ರಕಟಿಸುವದು ಅಸಾಧ್ಯವಾಗಿದೆ. ನಮ್ಮ ದೇಶದ ಅನುಭವಸ್ಥರು ಬಾತ್ಮಿಗಳನ್ನು ಬರೆದುಕಳುಹಿಸುವದರಲ್ಲಿ ಪ್ರೀತಿಯುಳ್ಳವರಾಗಿಲ್ಲ. ಇತರ ಜನಾಂಗಗಳಲ್ಲಿ ಅನುಭವಶಾಲಿಗಳೂ ವಿದ್ಯಾವಂತರು ವೃತ್ತಪತ್ರಿಕೆಗಳಿಗೆ ತಮ್ಮ ಅನುಭವದ ಅಭಿಪ್ರಾಯಗಳನ್ನು ಬಾತ್ಮಿಗಳ ಮೂಲಕ ಬರೆಯುವದರಲ್ಲಿ ಗೌರವವಿದೆಯೆಂದು ತಿಳಿದಿರುತ್ತಾರೆ. ನಮ್ಮ ದೇಶದಲ್ಲಿ ವೃತ್ತಪತ್ರಿಕೆಗಳನ್ನು ಪ್ರೋತ್ಸಾಹಿಸುವ ಬಾತ್ಮೀದಾರರನ್ನು ಸಂಶಯದಿಂದ ಕಾಣುವದು ವಾಡಿಕೆ. ನಮ್ಮ ದೇಶದಲ್ಲಿ ಒಬ್ಬನು ಸ್ವಂತ ಅಥವ ಸರಕಾರಿ ಉದ್ಯೋಗದಲ್ಲಿ ಅಭಿವೃದ್ಧಿ ಹೊಂದುತ್ತಾ ಬಂದ ಹಾಗೆ ಬಾತ್ಮಿ ಬರೆಯಲಿಕ್ಕೆ ತಿಳಿಯದವನಾಗುತ್ತಾನೆ; ಅಥವ ಮರ್ಯಾದೆಗೆ ಕಮ್ಮಿ ಎಂದು ಭಾವಿಸುತ್ತಾನೆ. ಹಣವನ್ನೂ ಮತ್ತು ಅನುಭವದ ಜ್ಞಾನವನ್ನೂ ವೃತ್ತಪತ್ರಿಕೆಗಳಿಗೆ ಸಹಾಯ ಕೊಡಲು, ನಮ್ಮವರು ಹಿಂಜರಿದರೆ, ಹ್ಯಾಗೆ ತಾನೆ ಇತರ ಜನಾಂಗಗಳ ಪತ್ರದ ರೀತಿಯಲ್ಲಿ ಪ್ರಕಟಿಸುವದು ಸಾಧ್ಯ. ಇಷ್ಟೆಲ್ಲಾ ಅಸಂದರ್ಭಗಳು ಇದ್ದರೂ ಕೂಡ ದೇಶೀಯ ವೃತ್ತಿಪತ್ರಿಕೆಗಳು ಇಷ್ಟರಮಟ್ಟಿಗೆ ನಡಿಸಲ್ಪಟ್ಟು, ಸರಕಾರಕ್ಕೆ ಎಚ್ಚರಿಕೆ ಕೊಡುತ್ತಲು ದೇಶದಲ್ಲಿ ತಿಳುವಳಿಕೆಯನ್ನು ಹರಡಿಸುತ್ತಲೂ ಜೀವಿಸಿಕೊಂಡು ಅಭಿವೃದ್ಧಿಹೊಂದುತ್ತಿರುವದು ದೊಡ್ಡ ಅದ್ಭುತವೇ ಸರಿ. ಪ್ರತಿಯೊಂದು ಆಂಗ್ಲೋ ಇಂಡಿಯನ್ ವೃತ್ತಪತ್ರಿಕೆಗಳಿಗೆ ಧ್ಯೇಯವಿದೆ. ಅಲ್ಲದೆ ಅವು ರಾಜಕೀಯ ಮತ್ತು ವ್ಯಾಪಾರದ ಪ್ರಯೋಜನವನ್ನು ಹೊಂದಲಿಕ್ಕಾಗಿ ನಡಿಸುವ ಏರ್ಪಾಡುಗಳಾಗಿವೆ. ಆದರೆ ದೇಶೀಯ ವೃತ್ತಪತ್ರಿಕೆಗಳು ಗರೀಬರೈತರ ಕಷ್ಟಗಳನ್ನು ಹೊರಬೀಳಿಸುವದರಲ್ಲೇ ಸೇವೆಮಾಡುವವಾಗಿದೆ. ಆದ್ದರಿಂದ ಅದರ (ದೇಶೀಯ ವೃತ್ತಪತ್ರಿಕೆಯ) ಧ್ಯೇಯವು ಕಷ್ಟಸೂಚಿಸುವುದೂ, ಫಿರ್ಯಾದು ಹೇಳುವುದೂ, ಸಹಾಯ ಕೇಳುವದೂ ಮತ್ತು ತಪ್ಪು ಕಂಡು ಹಿಡಿಯುವದೂ ಆಗಿದೆ. ಆದ್ದರಿಂದ ದೇಶೀಯ ಪತ್ರಗಳ ಸಂಪಾದಕರಾಗಲಿಕ್ಕೆ ಇಷ್ಟಪಡುವವರು ಕಡಿಮೆ. ಯಾಕಂದರೆ ದೇಶೀಯ ಪತ್ರಗಳ ಸಂಪಾದಕರು ಕಂಡದನ್ನು ಕಂಡಹಾಗೆ ಹೇಳುವದರಿಂದ ನಿರಂಕುಶಪ್ರಭುಗಳ ಕ್ರೂರದೃಷ್ಟಿಗೆ ಬಿದ್ದು ಅವರ ಅಸಮಾಧಾನಕ್ಕೆ ಗುರಿಪಡಬೇಕಾಗುತ್ತೆ. ಅಲ್ಲದೆ ಸಂಪಾದಕರು ಕಠಿಣವಾಗಿ ಬರೆಯುತ್ತಾನೆಂದಾಗಲೀ ಅಥವ ಸ್ವಾರ್ಥತೆಯಿಂದ ಬರೆಯುತ್ತಾನೆಂದಾಗಲೀ ಹೇಳಿಕೊಂಡು ದೇಶೀಯರಲ್ಲನೇಕರು ಉತ್ಸಾಹ ಕೊಡುವುದಿಲ್ಲ.

ಆದ್ದರಿಂದ ಹಿಂದಿಯರು ಮುಖ್ಯವಾಗಿ ತಿಳಿಯಬೇಕಾದದ್ದು ಏನೆಂದರೆ, ಹ್ಯಾಗೆ ರೈಲ್ವೆ, ಹೊಗೆಹಡಗು, ಮೋಟಾರು, ತಂತೀಟಪಾಲು ವಗೈರೆಗಳೆಲ್ಲಾ ದೇಶದ ಅಭಿವೃದ್ಧಿಗೆ ಬೇಕಾದವೆಂದು ಭಾವಿಸುವೆವೋ, ಹಾಗೆ ಹಿಂದೀ ಜನರಿಂದ ಹೊರಡಿಸಲ್ಪಡುವಂಥಾ ದೇಶೀ ವೃತ್ತಪತ್ರಿಕೆಗಳು. ನಮಗಳ ಅಭಿವೃದ್ಧಿಗೆ ಅತ್ಯವಶ್ಯವಾದವೆಂದು ತಿಳಿಯಬೇಕು. ಪತ್ರಸಂಪಾದಕರ ಮತ್ತು ಉತ್ತಮ ಬಾತ್ಮಿಗಳನ್ನು ಬರೆಯುವ ಕೆಲಸವು ಇತರ ಎಲ್ಲಾ ಉದ್ಯೋಗಗಳಿಗಿಂತ ಗೌರವವಾದದ್ದು ಮತ್ತು ದೇಶದ ಪ್ರಯೋಜನಕರೆಂದು ತಿಳಿಯಬೇಕು. ನಮ್ಮ ದೇಶದ ನಿಜವಾದ ಅಭಿವೃದ್ಧಿಯನ್ನು ಅಲ್ಲಿ ಪ್ರಕಟಿಸಲ್ಪಡುವ ಉತ್ತಮತರದ ದೇಶೀಯ ವೃತ್ತಪತ್ರಿಕೆಗಳಿಂದ ನಿರ್ಣಯಿಸಬಹುದು. ನಮ್ಮ ದೇಶದ ಬುದ್ಧಿವಂತರೂ ಮತ್ತು ಅನುಭವಶಾಲಿಗಳು ಪತ್ರರಚನೆಗೆ ಸಹಾಯಕರಾಗಿ ಉತ್ತೇಜನಕೊಡಬೇಕು. ಬಹಳ ತರದ ಜನಪ್ರಿಯವಾದ ಕೆಲಸಗಳನ್ನು ಮಾಡಲಿಕ್ಕೆ ಬಾಕಿ ಇದೆ. ಸಂಪಾದಕರನ್ನು ಹೀಯ್ಯಾಳಿಸಿದ್ದರಿಂದ ದೇಶವು ಉತ್ತಮಸ್ಥಾನಕ್ಕೆ ಬರಲಾರದು. ಪ್ರತಿಯೊಬ್ಬನು ಪತ್ರಸಂಪಾದಕನಾಗುವದು ಸಾಧ್ಯವಲ್ಲ. ಉತ್ತಮ ಲಾಯರು, ಡಾಕ್ಟರು ಮತ್ತು ಸರಕಾರಿ ಉದ್ಯೋಗಸ್ಥನಾಗುವದಕ್ಕಿಂತಲೂ ಉತ್ತಮ ಸಂಪಾದಕನಾಗುವದು ಕಷ್ಟವಾಗಿದೆ. ಪಶ್ಚಿಮ ಜನಾಂಗದವರು ಪತ್ರಸಂಪಾದಕರನ್ನು ಜವಾಬ್ದಾರಿ ಕೆಲಸಗಳಿಗೆ ಅರ್ಹರಲ್ಲವೆಂದು ಭಾವಿಸುವದಿಲ್ಲ. ನಮ್ಮ ಈಗಿನ ಸರಕಾರವು ಪತ್ರಿಕೆಗಳ [illegible] ಪ್ರೋತ್ಸಾಹಿಸದೆ ಇರುವಾಗ್ಯೆ ನಮ್ಮ ದೇಶದ ಐಶ್ವರ್ಯವಂತರು ಪಶ್ಚಿಮರಾಜ್ಯದ ಐಶ್ವರ್ಯವಂತರಹಾಗೆ ತಕ್ಕ ಸಹಾಯವನ್ನು ಕೊಡುವವರಾಗಿಲ್ಲ. ಪಶ್ಚಿಮರಾಜ್ಯದ ದೊಡ್ಡ ದೊಡ್ಡ ಜವಾಬ್ದಾರಿಕೆಯುಳ್ಳ ಉದ್ಯೋಗಸ್ಥರು, ಪತ್ರಗಳಿಗೆ ಬಾತ್ಮಿ ಬರೆಯುತ್ತಾರೆ. ಇಲ್ಲಿಯವ ಉದ್ಯೋಗಸ್ಥರು ಸಂಶಯ [illegible] ದಿಂದ ಹಿಂಜರಿಯುತ್ತಾರೆ. ಇನ್ನೆಲ್ಲಾ ಕಾರಣಗಳಿಂದ ದೇಶೀ ಪತ್ರಗಳು ಪ್ರಯೋಜನಕರವಾಗಬೇಕಾದರೆ ದೇಶದ ಜನರು ಚಂದಾ ಕೊಡುವವರಾಗಬೇಕು ಮತ್ತು ವಿದ್ಯಾವಂತರು ಪತ್ರರಚನೆಯಲ್ಲಿ ಸಹಾಯಕರಾಗಬೇಕು. ಹಾಗಿಲ್ಲವಾದರೆ ದೇಶೀಯ ಪತ್ರಗಳಿಂದ ದೇಶಕ್ಕೆ ಪ್ರಯೋಜನವಾಗದಕ್ಕೆ ನಾವೇ ಜವಾಬ್ದಾರರಲ್ಲದೆ ಬೇರ್ಯಾರು ಅಲ್ಲವೆಂದು ಖಂಡಿತ ಹೇಳಬಹುದು.

ಸಂಘದ ಕೆಲಸ.

ಈ ಮೊದಲು ಸಂಘ ಉದ್ದೇಶವನ್ನು ಕಾರ್ಯ
ರಸಲಿಕ್ಕೆ ಸಂಘದ ಒಂದು ಸ್ವಯಂ ಸೇವಕ ಮಂ
ಏರ್ಪಡಿಸುವದು ಅವಶ್ಯವೆಂದು ಸೂಚಿಸಿದ್ದಾಂ
ಏರ್ಪಾಡನ್ನು ಹ್ಯಾಗೆ ಮಾಡಬೇಕೆಂಬದಕ್ಕೆ ದೇಶ
ಗಳು ಇರಲಿದೆ ಕೊಟ್ಟು ಸಹಾಯ ಮಾಡಬೇಕಾ
ಕೆಲಸವನ್ನು ತಕ್ಕ ಏರ್ಪಾಡಿನಿಂದ ತುಲಾಸಂಕ್ರಮ
ದಲ್ಲು ಭಾಗಮಂಡಲದಲ್ಲು ಪ್ರಾರಂಭಿಸಿದರೆ ಶ್ರೀ
ಯೂ ನಮ್ಮ ಸೇವೆಗೆ ಪ್ರೀತಿಸುವಳಲ್ಲವೆ? ಕಾವ
ಸಮಯದಲ್ಲು ಭಾಗಮಂಡಲದಲ್ಲು ದೊಡ್ಡ ಜನ
ಸೇರುತ್ತೆಂಬದು ಎಲ್ಲವರಿಗೂ ತಿಳಿದ ಸಂಗತಿಯಾ
ಆ ಕಾಲಕ್ಕೆ ಸಮೂಹದಲ್ಲು ಅನೇಕ ಯಾತ್ರಿಕರು
ದಲ್ಲು ಕಷ್ಟಪಡುತ್ತಾರೆಂಬದೂ ಸಹ ನಮಗೆಲ್ಲವ
ಸಂಗತಿಯಾಗಿದೆ. ಆದ್ದರಿಂದ ಅಂಥಾ ಕಷ್ಟಪಡು
ನಮ್ಮ ಕೈಲಾದಮಟ್ಟಿಗೆ ಸಹಾಯ ಮಾಡಲು
ಶ್ರೀ ಕಾವೇರಿ ಮಾತೆಯ ಸೇವೆ ಮಾಡಿದಂತೆಯೇ
ದರೆ ಏನು ಆಶ್ಚರ್ಯ. ಸ್ವಾಮಿ ವಿವೇಕನಂದನವರು
ದೇನಂದರೆ-ಯಾತಕ್ಕೋಸ್ಕರ ದೇವಸ್ಥಾನದಲ್ಲು
ರಾಯಣನನ್ನು ಪೂಜಿಸಬೇಕೆಂದ. ಅತಿಬತ್ತೀರಿ
ತ್ತಲೂ ನರಳುತ್ತಿರುವ ಅನೇಕ ನಾರಾಯಣರನ್ನು
ವೆಯಿಂದ ಪೂಜಿಸಿದ್ದಾದರೆ ಶ್ರೀ ನಾರಾಯಣನನ್ನು
ದಂತೆ ಆಗುವದಿಲ್ಲವೇ? ಆದಕಾರಣ ಫಲಾಪೇಕ್ಷೆಯಿಂ
ಕ್ಕೊಳಗಾದವರ ಕಷ್ಟವನ್ನು ಹೋಗಲಾಡಿಸುವ
ಧರ್ಮ. ಅದೇ ನಮ್ಮ ಮತ ಅದೇ ನಮ್ಮ ಪೂಜೆ
ದ ಬಲದಿಂದಲೇ ಭಾರತಮಾತೆಯೂ ಎಷ್ಟು ಕಷ
ದರೂ, ಯುಗಾಂತರದಿಂದ ಕಷ್ಟದಿಂದ ಪಾರಾಗಿ
ತ್ತಿರುವಳು. ಇದನ್ನ ಚೆನ್ನಾಗಿ ಅರಿತು ನಮ್ಮ ಶ್ರೀ
ಮಾತೆಯ ಸೇವೆಯಲ್ಲು ನಿರತರಾಗಿರುವ ಯುವ
ರು ತತ್ವವನ್ನರಿತು, ಈ ಸ್ವಯಂ ಸೇವಕ ಮಂ
ಏರ್ಪಡಿಸಲು ಸಹಾಯಕರಾಗಬೇಕಾಗಿ ಅತಿ
ಕೋರುತ್ತೇನೆ. ತುಲಾಸಂಕ್ರಮಣವು ಅಕ್ಟೋಬ
16 ಕ್ಕೆ ಆಗುವದರಿಂದ ಮನಃ ಪೂರ್ವಕವಾಗಿ
ನ್ನು ಮಾಡಲು ಅಪೇಕ್ಷಿಸುವವರು ದಯವಿಟ್ಟು
ಚಾರಕ ಕಾರ್ಯದರ್ಶಿಯವರ ವಿಳಾಸಕ್ಕೆ ತಿಳಿಸ
ಬೇಕಾಗಿ ಕೋರುತ್ತೇನೆ ಪ್ರೋತ್ಸಾಹ ಸಿಕ್ಕಿದ ಪ
ಗಳನ್ನೂ ಮತ್ತು ನಿಯಮಗಳನ್ನೂ ಸಹ ಪ್ರೋತ್ಸಾ
ಸೇರಿ ನಿರ್ಧರಿಸಲಿಕ್ಕೆ ಅನುಕೂಲ ಮಾಡಲಾಗುತ್ತೆ.

ನೋಟೀಸು.

1923 ನೇ ಇಸವಿ ಅಕ್ಟೋಬರ್ ತಾರೀ
ಸಾಯಂಕಾಲ 3 ಘಂಟೆಗೆ ವೈಸರಾಯರವ
ಬೇಕೆಂದಿದ್ದ ವಂದನಾಪತ್ರವನ್ನು ಸ್ಥಳೀಯ
ದವರು ತಿರಸ್ಕರಿಸಿರುವ್ವರ ವಿಷಯ ಚರ್ಚಿ
ಕೇರಿ ಮುನಿಸಿಪಲ್ ಹಾಲಿನಲ್ಲು ಕೊಡಗು
ದ ಸಂಘದ ಎಗ್ಸಿಕ್ಯುಟಿವ್ ಕಮಿಟಿ ಮೀಟಿ
ನಡಿಯುವುದರಿಂದ ಕಮಿಟಿ ಮೆಂಬರುಗಳೆಲ್ಲ
ರಾಗಬೇಕೆಂತ ಕೋರುತ್ತೇವೆ

ತಾರೀಖು 24-9-23. ಸಿ. ಎಸ್. ಮಂ

ಜನರಲ್

ಜಮ್ಮಾದಾರರ ಸಂಘ ವೈಸರಾಯ

ವೈಸರಾಯ್ ಪ್ರಭುಗಳು ಮೈಸೂರಿಗೆ ಬ
ಮ್ಮಾದಾರರ ಸಂಘದ ಪ್ರತಿನಿಧಿಗಳು ವಂದನಾ
ಒಪ್ಪಿಸಲಿಕ್ಕೆ ಹೋಗುತ್ತಾರೋ ಎಂಬಲೂ,
ರಿಂತ ತಿಳಿಸಿದಮೇಲೆ ವಂದನಾ ಪತ್ರದ ನಕಲನ್ನು
ಬೇಕಲ್ಲೂ 30 ನೇ ತಾರೀಕಿನಲ್ಲ ಭೇಟಿಯ
ತಲೂ ಕಮಿಷನರ್ ಸಾಹೇಬರಿಂದ ಸಂಘಕ್ಕೆ
ಬಂದದ್ದರಿಂದ ಮೊದಲನೇ ಕಮಿಟಿ ಮೀ
ಮಾಡಿ ವಂದನಾ ಪತ್ರವನ್ನು ತಯಾರಿಸಿ ಕಳು
ಅದರ ಮೇಲೆ ಬಂದ ಜವಾಬನ್ನೂ ವಂದನಾ
ಇದರಡಿ ಮೆಂಬರುಗಳ ತಿಳುವಳಿಕೆ ಬಗ್ಗೆ ಪ್ರಕಟಿ

ಮಡಿಕೇರಿ, ಸಿ. ಯಸ್. ಮಂ

ತಾ|| 22-9-23 ಜನರ

ಕಮಿಷನರ್ ಸಾಹೇಬರಿಂದ ಜನರಲ್
ಬಂದ ರಫ್. ಸಿ. ನಂ. $\frac{601}{ಇ.ಟಿ.}$ ತಾ|| 22-9-23 ದ

ನಿಮ್ಮ ವಂದನಾ ಪತ್ರದ ಸಮೇತ ಬಂದ
ದ ಭಾಗವಕ್ಕೆ ಈ ಜವಾಬು ಬರೆಕೊಂಡಿದ್ದೇನೆ
ಘದ ಪರವಾಗಿ ವೈಸರಾಯರಿಗೆ ವಂದನಾ ಪ
ಪಡೇಕೆಂದ ಕೇಳಿಕೊಂಡದ್ದೇ ತಪ್ಪು ತಿಳುವಳಿಕೆ
ಚೆಮ್ಸ್‌ಫರ್ಡ್ ಪ್ರಭುಗಳು ಮೈಸೂರಿಗೆ ಬಂದ
ನ್‌ದಾರರ ಸಂಘವು ಕೊಡಗು ದೇಶದ ಸಾಧ
ಪ್ರಾಯದ ಪ್ರತಿನಿಧಿಗಳಾಗಿ ವಂದನಾ ಪತ್ರವನ

...ದ್ದೇವೆಂತ ಆಗ ಚೀಫ್ ಕಮೀಷನರು ನಿಶ್ಚೈ... ಪ್ರಸ್ತಾಪಕದಲ್ಲಿರಬಹುದು. ಮೆ|| ಬಾರ್ಟನ ... ಪ್ರನಪ ಯೋಚಿಸಿ ಆಗಿನ ನೈಸಲಿನಂತೆಯೇ ಈ ... ಹಕೊಳ್ಳುವದು ಉತ್ತಮವೆಂತ ನೈಸಲ್ ಮಾ... ...ಸಂಘಕ್ಕೆ ಉಂಟಾದ ತೊಂದರೆಗೂ ವಂದ... ...ಕೂಡಬೇಕೆಂತ ಬರೆಯುತ್ತಿ... ಕಾರಣವಾದ ...ಗೂ ಮೆ|| ಬಾರ್ಟನ್ ಸಾಹೇಬರು ತುಂಬಾ ...ಕ್ಕೆ ಕಳೆದ ಕಾರಣಯಿಂತೆಯೇ ದೇಶೀಯ ಮ... ...ಪೆಪಿಷನ್ ಸಮುದಾಯದಿಂದ ಕೆಲವು ಪ್ರತಿ... ...ವ ಮುಖ್ಯಸ್ಥರು ವೈಸ್‌ರಾಯ ಬಳಿ ಭೇಟಿ ಕೆಗೆದು ...ಡಗಿಗೆ ಸಂಬಂಧಪಡುವ ವಿಷಯಗಳನ್ನು ಸಾ... ...ಸಮಾಲೋಚನೆ ಕೊಡಗಿನ ತಕ್ಷಣಕ್ಕೆ ... ...ಬ್ಬಿನ ಮೆ|| ಬಾರ್ಟನ್ ಸಾಹೇಬ... ...ತ ಚೀಫ್ ಕಮಿಷನರ ಅಪ್ಪಣೆಯನ್ನು ನಿಮ... ...ಕ ತಿಳಿಸಿದ್ದೇನೆ. 2 ಈ ವಿಷಯವೂ ಅಲ್ಲದೆ ...ಬಂಧವಿಲ್ಲದ ಇನ್ನೊಂದು ಸಂಗತಿಯೇನೆಂದರೆ— ...ದಿಂದ ತಯಾರಿಸಿದ ವಂದನಾ ಪತ್ರವು ಸುತ ...ಕರಣಾ ಅರ್ಥವಾದ್ದಲ್ಲ ಚೆಮ್ಸ್‌ಫರ್ಡ್ ಪ್ರ... ...ಸಲಿಕ್ಕಾಗಿ ಕಳುಹಿಸಿದ್ದ ವಂದನಾ ಪತ್ರದಲ್ಲಿ ...ಗಳೇ ಇದರಲ್ಲೂ ಪುನರುಕ್ತವಾಗಿವೆ ಆಕ್ಷೇಪ ...ಭಾರವಿರುವ (objectionable in tone) ...ರ್ಭಾದೆಗ ಕೊರತೆಯಾದ (deplorable in ...ವಂದನಾ ಪತ್ರವನ್ನು ಪುನಃ ಸಂಘವು ಕಳುಹಿಸಿ ...ರವಾದ ಗವರ್ನರ್‌ಮೆಂಟಿನ ಮುಂದೆ ಆಪ್ಪಿದ ...ನಿರ್ವಹಿಸಿಕೊಳ್ಳಲಿಕ್ಕೆ ಈ ಅನುಕೂಲ ದೊರೆ... ...ಫರ್ಡ್ ಪ್ರಭುಗಳು ಬರುವ ಸಂದರ್ಭದಲ್ಲಿ ಸಂ... ...ದ ಆಕ್ಷೇಪಣೆಯಿಂದ ಸಂಘಕ್ಕೆ ಇನ್ನೂ ಬುದ್ಧಿ ...ವಂದನಾ ಪತ್ರವನ್ನು ತಿದ್ದಲಿಕ್ಕೆ ಇನ್ನೊಂದು ...ಡಲು ಮೆ|| ಬಾರ್ಟನ್ ಸಾಹೇಬರು ಒಪ್ಪಿದ ...ಕ್ತವಾದ ವಂದನಾ ಪತ್ರವನ್ನು ಅವರ ಒಪ್ಪಿ... ...ಸಲಾಗಿದೆಯೆಂದೂ, ಅದನ್ನು ಸ್ವೀಕರಿಸಲು ಒಪ್ಪ ...ಅಭಿಪ್ರಾಯ ಸಹ ಕೊಟ್ಟು ವೈಸ್‌ರಾಯರಿಗೆ ...ನ್ ಸಾಹೇಬರು ಬರೆಯುತ್ತಾರೆ.

...ಪ್ಯುಟೇಶನ್ ಹೋಗಲಿಕ್ಕೆ ನೇಮಿಸಲ್ಪಡುವ ಮ... ...ಹೆಸರನ್ನು ಕ್ರಮೇಣ ಪ್ರಕಟಿಸಲಾಗುತ್ತೆ.

ಕಮಿಷನರ್ ಸಾಹೇಬರ ಸ್ಪೆನಿಡೆ.

ವಂದನಾ ಪತ್ರದ ತರ್ಜುಮೆ.

ಮಾನ್ಯರಾದ ರೂಫಸ್ ಡೇನಿಯಲ್ ಪಿ. ಸಿ., ಜಿ. ಸಿ. ...ಯಸ್. ಐ., ಜಿ. ಸಿ. ಐ. ಯಿ., ಕೆ. ಸಿ. ವಿ. ಒ. ...ಪ್ರಭುಗಳಿಗೆ—

...ಗೌರವ ಯುಕ್ತ ಸನ್ನಿಧಾನದಲ್ಲಿ—

...ಸಮ್ಮಿಳನ ಮಾಡಿದ ಕೊಡಗು ಜಮೀನ್‌ದಾರರ ಸಂ... ...ಧಿಗಳಾದ ನಾವು ನಮ್ಮ ಈ ದೇಶಕ್ಕೆ ತಾವು ...ಮಗೆ ಮನಃ ಪೂರ್ತಿ ಸ್ವಾಗತವನ್ನು ಅರ್ಪಿಸಲು ...ಪ್ಪಣೆಯನ್ನು ಕೇಳಿಕೊಳ್ಳುತ್ತೇವೆ. ...ಕ್ರವರ್ತಿ ಸಾರ್ವಭೌಮರಿಗೆ ನಾವು ಸಂಪೂರ್ಣ ರಾ... ...ಭಕ್ತರಾಗಿದ್ದೇವೆಂತ ತಮಗೆ ನಾವು ದೃಢೀಕರಿಸಿ ...ವೆ ಮತ್ತು ಚಕ್ರವರ್ತಿ ಸಾರ್ವಭೌಮರಿಗೂ ಅವರ ...ನಕ್ಕೆ ನಮಗೆ ಇರುವ ಭಕ್ತಿಯನ್ನು ಅವರಿಗೆ ತಿಳಿಸ ...ಬೇಕೆಂತ ಅತಿ ವಿನಯದಿಂದ ಕೇಳಿಕೊಳ್ಳುತ್ತೇವೆ.

...ಈ ಇಂಡಿಯಾದ ಇತರ ಭಾಗಗಳಲ್ಲಿ ಸ್ಥಾಪಿಸಿ ...ರಿಸಿದ ಸರಕಾರದ ಪದ್ಧತಿಯನ್ನು ನಮ್ಮ ದೇಶ... ...ವ್ಯಾಪಕವಾಗುವಂತೆ ಮಾಡದೆ ಇರುವದರಿಂದ ...ದಲ್ಲಿ ನಿರಾಶಾಯುಕ್ತವಾದ ಅತೃಪ್ತಿಯುಂಟಾಗಿ ...ಮಗೆ ನಮ್ರತೆಯಿಂದ ತಿಳಿಸುತ್ತೇವೆ. ನಮಗೆ ಸು... ...ಕಾರ ಕ್ರಮವನ್ನು ಕೂಡಲಿಕ್ಕೆ ಸಾಧ್ಯವಿಲ್ಲದಿ... ...ಶದ ಪ್ರಾಮುಖ್ಯತೆಗಾಗಿ ಅದನ್ನು ಪ್ರತ್ಯೇಕ... ...ಇಟ್ಟುಕೊಂಡು ಮದ್ರಾಸಿಗೆ ಸೇರಿಸಿ ಬಿಡಬೇ... 10 ನೇ ಇಸ್ವಿಯಲ್ಲೇ ಇಂಡಿಯಾ ಸರಕಾರಕ್ಕೆ ವಿ... ...ಪತ್ರವನ್ನು ಬರಕೊಂಡೆವು. ತನ್ಮಧ್ಯೆ ಸ್ಥಳೀಯ ...ದೇಶದ ಕೆಲವು ಮುಖ್ಯಸ್ಥರ ಆಲೋಚನೆ ತೆಗೆದು ...ಶಿಯಲ್ ಕೌನ್ಸಿಲ್ ಒಂದನ್ನು ಈ ದೇಶಕ್ಕೆ ...ಟು ಬರಕೊಂಡರು. 1922 ರಲ್ಲಿ ಪ್ರಜಾಪ್ರತಿನಿಧಿ ...ಪಟ್ಟಿರುವ ಆದಾಯ ವೆಚ್ಚದಮೇಲೆ ಅಧಿಕಾರ ...ಸಿಂಟ್ ಗವರ್ನರ್ ಕೌನ್ಸಿಲ್ ಒಂದು ವರ್ಷದ ...ಗೆ ಮಂಜೂರಾಗತಕ್ಕದ್ದೆಂತ ಚೀಫ್ ಕಮಿಷನರ್ ... 1922 ನೇ ಇಸ್ವಿಯಲ್ಲಿ ಮುದಿತ ಮಾಡುಕೊ... ...3 ನೇ ಏಪ್ರಿಲ್‌ವರೆಗೆ ಕಾದುನೋಡಿ ಸಂಘವು ...ಮದ್ರಾಸಿಗೆ ಸೇರಿಸಿಕೊಡಬೇಕೆಂತಲೇ ತೀರ್ಮಾನ ...ಂಡಿಯಾದೇಶಕ್ಕೆ ಈ ಮೊದಲೇ ಸುಧಾರಣೆಗಳು ...ದ್ದ ಪ್ರಾಂತ್ಯಗಳು ಇನ್ನು ಹೆಚ್ಚಿಗೆ ಹಕ್ಕುಗಳನ್ನು ...ಂತ ಕೇಳುತ್ತಿರುವ ಈ ಸಮಯದಲ್ಲಿ ಅಧಿಕಾರ ...ಇಲ್ಲದ ಕೌನ್ಸಿಲಿನಿಂದ ನಮ್ಮ ದೇಶಕ್ಕೆ ತೃಪ್ತಿ ...ದು. ಆದ್ದರಿಂದ 1924 ನೇ ಇಸ್ವಿ ಮಾರ್ಚಿ ...ಗೆ ದೊಡ್ಡ ಪ್ರಾಂತ್ಯಗಳಿಗೆ ಸಿಕ್ಕಿರುವ ಸುಧಾರಣೆ ...ಮಗೂ ಕೊಡಿಸಬೇಕೆಂತಲೂ ಇದು ಸಾಧ್ಯವಾಗ ...ನ್ನು ಪ್ರತ್ಯೇಕ ಜಿಲ್ಲೆಯಾಗಿ ಇಟ್ಟು ಮದ್ರಾಸು ಪ್ರಾಂತ್ಯಕ್ಕೆ ಸೇರಿಸಬೇಕೆಂತಲೂ ಪ್ರಾರ್ಥಿಸುತ್ತೇವೆ. ನಮ್ಮ ದೇಶದ ಚುನಾಯಿತ ಮೆಂಬರುಗಳಿಗೆ ಇಂಡಿಯಾ ಸರಕಾರದ ಎರಡು ಸಭೆಗಳಲ್ಲೂ ಒಂದೊಂದು ಸ್ಥಳ ಕೊಡಬೇಕೆಂತಲೂ ಪ್ರಾರ್ಥಿಸುತ್ತೇವೆ.

ನಮ್ಮ ದೇಶಕ್ಕೆ ಇಂಡಿಯಾ ಸರಕಾರಕ್ಕೆ ತನ್ನೊ... ...ಗೆ ಆದಾಯ ವೆಚ್ಚದ ಒಪ್ಪಂದವಾಗುವಾಗ ನಮ್ಮ ದೇಶವು ಮಿತವ್ಯಯದಿಂದ ಪೀಡಿಸಲ್ಪಟ್ಟು ಯಾವ ಕೈಗಾರಿಕೆ ಕಸುಬು ಇಲ್ಲದ ಬಡನಾಡಾದ್ದರಿಂದ ಈ ದೇಶದ ಉತ್ಪತ್ತಿಯಿಂದ ಇಂಡಿಯಾ ಸರಕಾರಕ್ಕೆ ವಂತಿಗೆ ಏನೂ ಹಾಕಬಾರದೆಂತಲೂ, ಉತ್ಪತ್ತಿಯು ಯಾವ ಬಾಬನ್ನೂ ಇಂಡಿಯಾ ಸರಕಾರದ ಹಕ್ಕಾಗಿ ಮಾಡಿಕೊಳ್ಳಬಾರದೆಂತಲೂ ನಮ್ರತೆಯಿಂದ ಕೇಳಿಕೊಳ್ಳುತ್ತೇವೆ.

ಸ್ಥಳೀಯ ಸ್ವರಾಜ್ಯ, ವಿದ್ಯಾ, ನೀರಾವರಿ ಕಾಮಗಾರಿ, ವೈದ್ಯಕೀಯ, ಮುಂತಾದ ಆಡಳಿತದ ತಪಶೀಲ್ ಭಾಗಗಳಲ್ಲೂ ನಮ್ಮ ಕೋರಿಕೆಗಳು ಇವೆ. ಆದರೆ ಅವೆಲ್ಲಾ ಜವಾಬ್ದಾರಿ ಸರಕಾರ ಪದ್ಧತಿಯು ನಮಗೆ ಸಿಕ್ಕಿದನಂತರ ನಿರ್ವಹಿಸಿಕೊಳ್ಳುತ್ತೇವೆಂಬ ಧೈರ್ಯ ನಮಗಿದೆ. ಆದ್ದರಿಂದ ಅವುಗಳನ್ನೆಲ್ಲಾ ಇಲ್ಲಿ ವಿವರಿಸಿ ತಮ್ಮ ಅಮೂಲ್ಯ ಸಮಯವನ್ನು ಕಳೆಯುವದಿಲ್ಲ.

ಒಮಿನಾಸ್ ಹಿಡುವಳಿದಾರರ ಮನಸ್ಸನ್ನು ಬಹಳ ಕಳವಳಗೊಳಿಸಿದ ವಿಷಯವಾದ ಜಮ್ಮ ಹಿಡುವಳಿಯನ್ನು ಸೆಟಲ್‌ಮೆಂಟಿಗೆ ಒಳಪಡಿಸಿದ ಸಂಗತಿಯಲ್ಲಿ ನಮಗೆ ಹೇಳಲಿಕ್ಕೆ ಇರುವದನ್ನು ತಮ್ಮ ಅವಗಾಹನೆಗೆ ತರಲು ಅನುಮತಿ ಬೇಡುತ್ತೇವೆ. ಈ ಜಮ್ಮಭೂಮಿಗಳ ಮೇಲೆ ರಾಜರ ಕಾಲದಲ್ಲಿ ಸಿಕ್ಕಿದ್ದ ಹಕ್ಕುಗಳನ್ನು ದಸ್ತಾವೇಜುಗಳು ... ಸಾಧ್ಯವಿಲ್ಲವೆಂತಲೂ ನಾವು ಭೂಮಿಗಳನ್ನು ಸಂಪಾದಿಸಿದ್ದೆವು ಚೀಫ್ ಕಮಿಷನರ್ ಸಾಹೇಬರುಗಳು ಒಪ್ಪಿರುವರೆಂಬುದು ಹೀಗೆಯೇ ತಿಳಿದಿದ್ದರು. ಸನ್ನದುಗಳ ಆಧಾರದಮೇಲೆ ಎಷ್ಟೇ ಆಕ್ಷೇಪಣೆಯನ್ನು ಹೇಳಿಕೊಂಡರೂ ನಮಗೆ ತುಂಬಾ ಭಯವನ್ನುಂಟುಮಾಡುವಂತೆ ಕಳೆದ ಸೆಟಲ್‌ಮೆಂಟಿನಲ್ಲಿ ಈ ಶಾಶ್ವತ ಹಿಡುವಳಿಯ ಕಂದಾಯದ ದರವನ್ನು ವೃತ್ತ್ಯಾಸಮಾಡಿ ಹೆಚ್ಚಿಸಿ ಬಿಟ್ಟರು. ಸರಕಾರದ ವಾಗ್ದಾನಗಳಲ್ಲಿ ತುಂಬಾ ನಂಬಿಗೆಯುಳ್ಳ ರಾಜಭಕ್ತ ರೈತರೇ ಈ ಕಷ್ಟಕ್ಕೆ ಗುರಿಯಾದವರಾದ್ದರಿಂದ ಮನಸ್ಸನ್ನು ಬಹಳ ನೋಯಿಸುತ್ತಿರುವ ಈ ಕಷ್ಟವನ್ನು ಪರಿಹರಿಸಿಕೊಡಬೇಕೆಂತ ಕೋರುತ್ತೇವೆ. ಇದು ತೀರ್ಮಾನವಾಗಿ ಹೋದ ಸಂಗತಿಯೆಂತ ತಿರಸ್ಕರಿಸಿ ಬಿಡಬಾರದೆಂತ ಕೋರುತ್ತೇವೆ.

ಈ ವರ್ಷದ ಅತಿವೃಷ್ಟಿಯಿಂದ ನಮ್ಮ ದೇಶದಲ್ಲೂ ತುಂಬಾ ನಷ್ಟಗಳು ಸಂಭವಿಸಿದೆಯೆಂತ ತಮಗೆ ತಿಳಿಸಬೇಕಾಗಿದೆ. ಕಷ್ಟಕ್ಕೆ ಗುರಿಯಾದ ರೈತರಿಗೆ ಸರಕಾರದ ಸಹಾಯ ದೊರೆಯಿತೆಂತ ನಂಬಿದ್ದೇವೆ.

ತಮ್ಮ ಅಮೂಲ್ಯ ಸಮಯವನ್ನು ಇಷ್ಟರವರೆಗೆ ಆಕ್ರಮಿಸಿದ್ದಕ್ಕೆ ಕ್ಷಮೆ ಬೇಡುತ್ತೇವೆ. ಮಧ್ಯವರ್ತಿ ಸರಕಾರದಿಂದ ಬಹುದೂರದಲ್ಲಿ ಇರುವದರಿಂದಲೂ ಮುಖ್ಯವಾಗಿ ಇಂಡಿಯಾ ಸರಕಾರದ ನ್ಯಾಯವಿಧಾಯಕ ಸಭೆಗಳಲ್ಲಿ ನಮ್ಮ ಪ್ರತಿನಿಧಿಗಳು ಇಲ್ಲದಿರುವದರಿಂದಲೂ ಇಂಡಿಯಾದ ಮುಖ್ಯ ಅಧಿಕಾರಿಗಳಿಗೆ ನಮ್ಮ ಹಾಳ್‌ಮಾಲುಗಳನ್ನು ಹೇಳಲಿಕ್ಕೆ ಬೇರೆ ಅನುಕೂಲವಿಲ್ಲದ್ದರಿಂದ ತಮಗೆ ತೊಂದರೆ ಕೊಟ್ಟರು ವದಾಗಿದೆ.

ದಕ್ಷಿಣ ಇಂಡಿಯಾದಲ್ಲಿ ತಮ್ಮ ಸಂಚಾರವು ಸುಖವಾಗಿರಲೆಂದೂ ಬಹುಕಾಲ ಸುಖಸಂಪತ್ತು ತಮಗೂ ತಮ್ಮ ಧರ್ಮಪತ್ನಿಯವರಿಗೂ ದೇವರು ದಯಪಾಲಿಸಲೆಂದೂ ಕೋರುತ್ತೇವೆ.

ತಮ್ಮ ವಿಧೇಯರು.

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ [ಎಡಿಟರ್]

ಅಯ್ಯಾ,

ತಮ್ಮ ತಾರೀಖು ೧೪ ರ ಪತ್ರಿಕೆಯಲ್ಲಿ ಮೆ|| ಕೊಗಂಡ್ರ ಕುಟ್ಟಪ್ಪನವರು ಬರೆದ ಬಾತ್ಮಿಯನ್ನು ನೋಡಿಕೊಂಡೆನು. ವಾಚಕಮಹಾಶಯರೇ ಇದು ಯಾವ ಆಶ್ಚರ್ಯ—ಊರವರ ಪಂಚಾಯಿತಿಗೆಯಲ್ಲಿ ಮೇಲಾಳಂದ ಕುಟ್ಟಪ್ಪನವರು ಅನ್ಯ ಪಕ್ಷದ ಜಾತಿ ಇರುವ ಹಾಲಿ ಊರವರ ಪಂಚಾಯಿತಿಗೆ ಪಂಚಾಯಿತಿಗೆಯಲ್ಲಿ ನ್ಯಾಯವಾದ ಲೆಕ್ಕದ ಪಟ್ಟಿ ಕೊಟ್ಟು ಕಳೆದ ನಾ|| ಗಣಪತಿಯವರ ಜುಲೈ ತಿಂಗಳ ಬಾತ್ಮಿಗೆ ಪ್ರತ್ಯುತ್ತರ ನಾನು ಕೊಡಬೇಕಾದುದ್ದೇನು. ಇಲ್ಲವೆಂತ ಬರೆದ ಬಾತ್ಮಿಯನ್ನು ನೋಡಿ ಬಹಳ ವ್ಯಸನಪಡುತ್ತೇನೆ. ನಾನೆಂದಿಗೂ ಇಂಥಾ ಲೆಕ್ಕದಪಟ್ಟಿಯನ್ನು ಊರಿನವರಿಗೆ ಕೊಡಲ್ಲಿಲ್ಲವಾಗಿ ತನ್ನ ಮನಃಪೂರ್ವಕದಿಂದ ಕಾಶೀ ವಿಶ್ವನಾಥ ದೇವರನ್ನು ಕಾವೇರಮ್ಮನನ್ನು ಮತ್ತು ನಮ್ಮ ಗ್ರಾಮದ ಬೋಡುಭಗವತಿ ದೇವರನ್ನು ಕುರಿತು ಆಣೆಯಿಂದ ಈ ನಮ್ಮ ಶ್ರೇಷ್ಠವಾದ ಕೊಡಗು ಪತ್ರಿಕೆಯಲ್ಲಿ ಬಾತ್ಮಿಮೂಲಕ ಬರೆದ ಪಕ್ಷ ನಾ|| ಗಣಪತಿ ಎಂಬವರು ಮೇಲು ಕಂಡ ಕುಟ್ಟಪ್ಪನವರನ್ನು ಇದೇ ಪತ್ರಿಕೆಯ ಮೂಲಕ ಕ್ಷಮಾಪಣೆ ಕೇಳಿಕೊಳ್ಳುವುದು ಒಳ್ಳೇದಾಗಿ ಕಾಣುತ್ತೆ.

ಪಂಚಾಯಿತಿಗೆಯಲ್ಲಿ ಸಾಕ್ಷಿಸ್ಥನ

ಅಯ್ಯಾ—ಸಂಪಾದಕರೇ,

ತಮ್ಮ ಉಪದೇಶ ವರ್ತಮಾನ ಸಂಗ್ರಹದಲ್ಲಿ ರಾ|| ಸಾ|| ಕೇಟೋಳಿರ ಚಂಗಪ್ಪ ಬಿ. ಎ. ಯವರನ್ನು ಖಾಯಂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿದಕ್ಕೆ ತಮ್ಮ ಸಂತೋಷ ಸೂಚನೆ ಹಾಗೂ ದೇಶದವರೆಲ್ಲಾ ಭಾಗಿಗಳಾಗಿರುವರೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಇದಕ್ಕಾಗಿ ದೇಶದವರು ಸರಕಾರದವರನ್ನು ವಂದಿಸಬೇಕಾದದೂ ಮತ್ತು ಸರಕಾರ ಇಂಥಾ ಜನ ಸಮ್ಮತವಾದ ವಿಷಯವನ್ನು ಮಾಡಲಿಕ್ಕೆ ಅನುಕೂಲ ಸಿಕ್ಕಿದಕ್ಕೆ ಸಂತೋಷಪಡಬೇಕಾದದ್ದೂ ಬಹಳ ಅವಶ್ಯ. ಕೊಡಗಿನಲ್ಲಿ ದೇಶೀಯರ ಪೈಕಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೆಲಸವನ್ನು ಮೊದಲು ನಡೆಸಿದ್ದು ಇವರೇ ಸರಿ. ಆದ್ದರಿಂದ ರಾ|| ಸಾ|| ಚಂಗಪ್ಪನವರಿಗೆ ನಮ್ಮ ಸಂತೋಷವನ್ನೂ ಮತ್ತು ಸರಕಾರಕ್ಕೆ ನಮ್ಮ ಕೃತಜ್ಞತೆಯನ್ನೂ ಸಹ ಸೂಚಿಸಲಿಕ್ಕೆ ತಕ್ಕ ಏರ್ಪಾಡನ್ನು ಮಾಡಬೇಕೆಂಬ ತಮ್ಮ ಸೂಚನೆಗೆ ದೇಶವು ಸಮ್ಮತಪಡುವದರಲ್ಲಿ ಯಾವ ಸಂಶಯವೂ ಇರಲಾರದು. ಈ ಏರ್ಪಾಡಿಗೆ ಮಡಿಕೇರಿಯಲ್ಲಿರುವ ಉದ್ಯೋಗಸ್ಥರಲ್ಲದ ಮಹಾನುಭಾವರು ಮನಸ್ಸುಕೊಟ್ಟು ಒಡನೆ ಕೈಹಾಕಬೇಕಾಗಿ ಕೋರಿಕೆ. ಅಲ್ಲದೆ ರಾ|| ಸಾ|| ಚಂಗಪ್ಪನವರಿಗೆ ಈ ಜವಾಬ್ದಾರಿಕೆಯ ಕೆಲಸವನ್ನು ಶ್ರೀ ಇಗ್ಗುತಪ್ಪ ಮತ್ತು ಶ್ರೀ ಮಾತೆ ಕಾವೇರಿಯು ಪ್ರೀತಿಸುವಂತೆ ದೇಶಹಿತವಾದ ನ್ಯಾಯವನ್ನು ಕೊಟ್ಟು ದೇಶೀಯರ ಅರ್ಹತೆಯನ್ನು ಕಾಪಾಡಲಿಕ್ಕಾಗಿ ಅದೇ ಶ್ರೀ ಇಗ್ಗುತಪ್ಪ ಮತ್ತು ಕಾವೇರಮ್ಮನೂ, ಆಯುರಾರೋಗ್ಯವನ್ನೂ ಧೈರ್ಯವನ್ನೂ ಮತ್ತು ನಿರ್ಮಲ ಮನಸನ್ನು ಸಹ ಕೊಡಲೆಂದು ಬದ್ಧಕಂಕಣನಾಗಿ ಪ್ರಾರ್ಥಿಸುವೆ.

ಅತಿ ಉಲ್ಲಾಸಿ.

ಅಯ್ಯಾ,

ಕಳೆದ ಸಂಚಿಕೆಯಲ್ಲಿ „ಒಟ್ಟು ಭೋದಕ” ರು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಈ ಕೆಳಗೆ ಸೂಚಿಸಿರುವೆನು.

Study.

1. ಕಾಗದದ ಮೇಲೆ ಬರೆದು ಓದುವುದು.
2. ತಂತಿ.
3. ಹುಂಬು.

Hygiene.

4. ಸಿಂಬಳ.
5. ಕೋಟೆ.

Arithmetic.

6. 22.
7. ಮೂರು ಇಲಿಗಳು.

Extra.

8. ತಂತಿ ಇಲ್ಲದೆ ವರ್ತಮಾನಕಳುಹಿಸುವುದು (Wireless Telegraphy.)

ಬಹುಮಾನಸಿಕ್ಕುವುದು ಕನ್ನಡಿ, ನನಗೆ ಕೊಡಬೇಕೆಂದು ಕೋರಿಕೆ.

K. Lakshmi Kantha,
II Form, C. H. School,
Mercara.

ಕೊಡಗು ವಾಚಕ ಮಹಾಶಯರೇ,

ಅಮ್ಮತ್ತಿ ಹಿಪ್ಪಾಪುರದ ನಾಡಿನಲ್ಲಿ ಚೆನ್ನೈನ ಕೋಟೆ ಎಂಬ ಗ್ರಾಮ ಒಂದು ಇದೆ. ಈ ಚೆನ್ನೈನ ಕೋಟೆ ಗ್ರಾಮವು ೩೩ (ಮೂವತ್ತಮೂರು) ಹಳ್ಳಿಗಳನ್ನು ಒಳಸಿ ಇದೆ. ಈ ಊರು ಮೈಸೂರು ದೇಶಕ್ಕೆ ಸಮೀಪವಾಗಿಯೂ, ಮೇರೆಯಾಗಿಯೂ ಇರುವುದರಿಂದ ಆದರ ದೇವಸ್ಥಾನ, ಮರ ವಗೈರೆಯ ನೀತಿಗಳು ಮೈಸೂರು ದೇಶದ ಪದ್ಧತಿಯನ್ನು ಅನುಸರಿಸಿ ಇವೆ. ಇದಕ್ಕೆ ಸುಮಾರು ೫೦ ವರ್ಷಗಳ ಮೇಲೆ ಬಹಳ ವಿರಳ ಕೊಡಗು ಜನಾಂಗದವರು ನೆಲಸಿದ್ದರು. ಇತ್ತೀಚೆಗೆ ಅಂದರೆ ೧೫—೨೦ ವರ್ಷಗಳಿಂದೀಚೆಗೆ ಸಾಧಾರಣ ೩೦—೩೫ ಕೊಡಗು ಮನೆತನದವರು ಭೂಮಿ, ಬಾಣೆ ವಗೈರೆ ಸ್ಥಿರ ಆಸ್ತಿಯನ್ನು ಪಡೆದು ವಾಸಮಾಡುತ್ತಾರೆ. ಜೀವು ಕಡಿಮೆ ಎಲ್ಲಾ ಮನೆತನದವರು ಇನ್ನು ಈ ಕಡೆ ನಿವಾಸಿಸಲು, ಸ್ಥಳಪಡಕೊಳ್ಳಲು ತಯ್ಯಾರಾಗಿ ಬರುತ್ತಿದ್ದಾರೆ.

ಹೀಗಿರುವಾಗ್ಯೆ ಇಲ್ಲಿರುವ ಕೊಡಗು ಜನಾಂಗದವರೆಲ್ಲರೂ ಎಚ್ಚತ್ತು ಈ ವರೆವಿಗೆ ತಮಗೆ ಆದು ಊರು ಹಿಡು ಕಟ್ಟು ಇಲ್ಲದೆಯೂ, ಅಂಬಲ, ಮಂದ್ ವಗೈರೆ

ಇಲ್ಲದೆಯೂ, ಆಚಾರ ಪದ್ಧತಿಗಳೆಲ್ಲ ನೂಲೆಗೆಂತೆ ಕೋಣೆಸೀಯುವಾಗಿ ಪರಿಣಮಿಸುವುದನ್ನು ನೋಡಿ ಸಹಿಸಲಾರದೆ ತಮಗೊಂದು ಊರು ಸ್ಥಾಪಿಸಿ ಅದರ ಮೂಲ್ಕ ಸಭೆ ಏರ್ಪಾಡು ಮಾಡಿ ತಮ್ಮ ಸಂಪ್ರದಾಯ (ಆಚಾರ, ಪದ್ಧತಿ) ಗಳನ್ನು ತಿದ್ದಿ ಇತರ ಮುಂದುವರಿದ ನಾಡು ಜನರನ್ನು ಹಿಂಬಾಲಿಸಿ ಅಭಿವೃದ್ಧಿ ಪಡಿಸಬೇಕೆಂದು ಉತ್ಸಾಹದಿಂದ ಈ ಗ್ರಾಮದ ಕೊಡಗು ಜನಾಂಗದವರ ಒಂದು ಜನರಲ್ ಮೀಟಿಂಗ್ ತಾರೀಖು ೧೧-೯-೨೩ ರಲ್ಲಿ ಮೇಕೂರು ಗ್ರಾಮದ ಬಸ್ವೇಶ್ವರ ದೇವಾಲಯದಲ್ಲಿ ಜರಗಿಸಲ್ಪಟ್ಟಿತು ಸುಮಾರು ೩೦ ಮೆಂಬರು ಗಳಿದ್ದರು.

ಆ ದಿನದ ಮಹಾಸಭೆಯ ಮೀಟಿಂಗಿನಲ್ಲಿ ಮೆ|| ಬಿದ್ದಂಡ ಕರುಂಬೈಯ್ಯನವರ ಅಧ್ಯಕ್ಷತೆಯಲ್ಲಿ ಗ್ರಾಮಸ್ಥರಿಗೆಲ್ಲರಿಗೂ ಊರು ಮಾಡುವ ವಿಧಾನದ ವಿಷಯ ಬಹಳ ತರ್ಕ ವಿತರ್ಕಗಳು ನಡೆದು ಈ ಸಭೆಯ ಈಗಿನ ಉದ್ದೇಶವು ಬರೇ ಕೊಡಗರ ಸಮಾಜಿಕ ಅಭಿವೃದ್ಧಿಯ ವಿಷಯದಲ್ಲಿರಬೇಕೆಂದು ಏಕೋದ್ದೇಶವಾಗಿ ಬಹು ಮತದಿಂದ ಪಾಸಾಯಿತು. ಅಲ್ಲದೆ ದೇವಸ್ಥಾನದ ಹಬ್ಬದ ವಿಷಯವು ಸಹ ಈ ಮೊದಲು ಇದ್ದರೀತಿ ಇರಬೇಕಲ್ಲದೆ ಇದಕ್ಕೆ ಬೇರೆ ಯಾವ ಸಂಗತಿಯೂ ತತ್ಕಾಲಕ್ಕೆ ಲಗತ್ತಾಗ ಕೂಡದಾಗಿ ಸಹ ಪಾಸಾಯಿತು. ಅಲ್ಲದೆ ಇದಕ್ಕೆ ಬೇಕಾಗುವ ರೂಲ್ಸುಗಳನ್ನು ತಯಾರಿಸಲು ಒಂದು ಕಮಿಟಿಯು ಏರ್ಪಾಡಾಗಿ ಇನ್ನೊಂದು ಮೀಟಿಂಗಿನಲ್ಲಿ ಮುಂದಿಡಲು ತೀರ್ಮಾನವಾಯಿತು.

ಅದನಂತರ ಕಮಿಟಿಯವರು ರೂಲ್ಸುಗಳನ್ನು ತಯಾರು ಮಾಡಿ ತಾರೀಖು ೨೪-೯-೨೩ ರಲ್ಲಿ ಒಂದು ಜನರಲ್ ಮೀಟಿಂಗಿನಲ್ಲಿ ಮುಂದಿಟ್ಟರು. ಸಭೆಯ ಮತವು ಬರೇ ಕೊಡಗು ಜನರ ಆಚಾರ, ಪದ್ಧತಿಗಳನ್ನೂ, ಶುಭಶೋಭಾನುಗಳನ್ನೂ, ಸಾವು ತಿತಿಗಳನ್ನು ಅಭಿವೃದ್ಧಿಸುವ ವಿಷಯವಾದ್ದರಿಂದ ರೂಲ್ಸುಗಳು ಸಹ ಇದನ್ನೇ ಎತ್ತಿ ಹಿಡಿದಿತ್ತು. ರೂಲ್ಸುಗಳನ್ನೆಲ್ಲ ಸ್ವಲ್ಪ ತಿದ್ದುಪಡಿಯಿಂದ ಮಹಾ ಸಭೆಯವರು ಅಂಗೀಕರಿಸಿ ಪಾಸುಮಾಡಿ ತಕ್ಕರನ್ನು (ಪ್ರೆಸಿಡೆಂಟರನ್ನು) ಕಮಿಟಿ ಮೆಂಬರುಗಳನ್ನು ನೇಮಕಮಾಡಿದರು. ಇದೆಲ್ಲ ರೂಲ್ಸುಗಳಿಗೆ ಅನುಸಾರವಾಗಿಯೇ ನಡೆಯಿತು. ಅಲ್ಲದೆ ಕೈಲು ಪೊಳ್ದು ಹಬ್ಬವನ್ನು ಈ ವರ್ಷವೇ ಆಚರಿಸಬೇಕೆಂದು ತೀರ್ಮಾನ ಮಾಡಿ ಮುಂದು ವಗೈರೆ ಗೊತ್ತುಮಾಡಿದರು. ಇದು ಬಹುಮತದಿಂದ ಪಾಸಾಯಿತು.

ಈ ಮಧ್ಯೆ ಕೆಲವು ಜನರು ಒಂದು ಸಣ್ಣ ಪಂಗಡವನ್ನು ಏರ್ಪಡಿಸಿ ಸಭೆಯ ಮತಕ್ಕೆ ವಿರೋಧವಾಗಿ ಬೆಸ್ತನ ಕೋಟೆಗ್ರಾಮದ ಕಂಡದ ಬಸವೇಶ್ವರ ದೇವರ ಉತ್ಸಾಹವನ್ನು ಈ ಸಭೆಯು ಕೈಕೊಳ್ಳಬೇಕಾಗಿಯೂ ಅಲ್ಲದೆ ಈ ಸಭೆಯ ಪ್ರಸಿಡೆಂಟರೇ ಅದರ ಅಭಿಲಾಷೆಯನ್ನು ನೆರವೇರಿಸಬೇಕಾಗಿಯೂ ಒಂದು ಅರ್ಜಿಯನ್ನು ಕೈಲು ಮಾಡಿ ಇದು ನಡಿಸದೆ ಹೋದರೆ ನಾವುಗಳು ಈ ಸಭೆಗೆ ಸೇರುವುದಿಲ್ಲವಾಗಿ ಸೂಚಿಸಿದರು ಇದರ ತೀರ್ಮಾನಕ್ಕಾಗಿ ತಾರೀಖು ೧೬-೯-೨೩ ರಲ್ಲಿ ಒಂದು ಮೀಟಿಂಗು ಏರ್ಪಾಡಾಗಿ ಈ ಸಣ್ಣ ಪಂಗಡದವರಿಗೆ ಸಭೆಯ ಉದ್ದೇಶವು ದೇವಸ್ಥಾನದ ಹಬ್ಬ ಮಾಡುವುದಕ್ಕೆ ಅಲ್ಲ, ಆಚಾರ ಪದ್ಧತಿಗಳನ್ನು ಅಭಿವೃದ್ಧಿ ನಡಿಸಿ, ಊರು ಸ್ಥಾಪಿಸಲಿಕ್ಕಾಗಿದೆ ಎಂದೂ, ಕಂಡದ ಬಸವೇಶ್ವರ ದೇವಸ್ಥಾನಕ್ಕೆ ಎಲ್ಲಾ ಪಂಗಡದವರೂ ಹಕ್ಕುದಾರರೆಂದೂ ಇದು ಬರೇ ಕೊಡಗು ಜನಾಂಗದ ಉಟಿ ಮೊತಲಿಕ್ಕಾದುದರಿಂದ ದೇವಸ್ಥಾನದ ವಿಷಯ ಈಗ ನಾವೇ (ಕೊಡಗರೇ) ಯೋಚಿಸುವುದು ಧರ್ಮವಲ್ಲವೆಂದೂ ಎಷ್ಟು ಬೋಧಿಸಿದರೂ ನಿಷ್ಫಲವಾಯಿತು

ಈ ಸಣ್ಣ ಪಂಗಡದ ಮುಖಂಡರೆದ್ದು ಅಸಂಬಂಧವಾದ ಕೆಲಸಕ್ಕೆ, ಕ್ಷಿಪ್ರಾತಿ ದೇವಸ್ಥಾನದ ಉತ್ಸವವನ್ನು ಕೈಕೊಳ್ಳದಿದ್ದರೆ ನಾವು ಈ ಸಭೆಯನ್ನು ಖಿಲ ಮಾಡಲು ಬಿಡುವುದಿಲ್ಲವಾಗಿ..............ಹೇಳಿದರು ....ಮಹಾಸಭೆಯವರೆಲ್ಲಾ ಬೆಪ್ಪಾಗಿ ಹೋದರು.

ವಾಚಕಮಹಾಶಯರೇ, ನೀವೇ ನೋಡಿರಿ. ಇದೆಂತ ತಮಾಷೆ, ಸಣ್ಣ ಪಂಗಡದವರೇ ದೇವರ ಮಕ್ಕಳೋ? ಬಾಕಿಯವರು ಅಲ್ಲವೋ? ಹಾಗಾದರೆ ಬೇಕೂಲು ಗ್ರಾಮದ ಬಸುವನ ಗುಡಿಕಟ್ಟಿದಿಕ್ಕೆ ಹಣ ಧನ ಸಹಾಯವಿದವರಾರು ಹಂಚು ಹಾಕಿಸಿದ ಪುಣ್ಯಾತ್ಮರಾರು. ಅದರ ಕೆಲಸ ನಡೆಸುವವರ್ಯಾರು?

ಮುಖಂಡರೇ, ನೀವಲ್ಲವೆ ಒಂದಾವರ್ತಿ ಈ ಬಸುವನ ದೇವರ ಗುಡಿಗೆ ಲಗತ್ತಾದ ಬಾಕ್ಕು, ರಿಕಾರ್ಡು ದಾಖ್ಲೆಗಳನ್ನೆಲ್ಲ ಇದರ ಒಳ ಇರುವ ಕೆಲವು ತೋಟಕ್ಕೆ ಬಿಸಾಡಿ ಹೋದದ್ದು. ಇದನ್ನಲ್ಲವೇ ದೊಡ್ಡ ಪಂಗಡದವರು ಹುಡುಕಿ ತೆಗೆದು ಕೆಲಸ ನಡಿಸಿ ಬರುವುದು...............

ನಾನು ದೊಡ್ಡ ಪಂಗಡ, ಸಣ್ಣ ಪಂಗಡ ಭೇದವನ್ನು ಬೆಳಸುವ ಅಭಿಪ್ರಾಯದಲ್ಲಿ ಲೇಖಿಸಿರುವುದಿಲ್ಲ. ವಿವರ ತಿಳುವಳಿಕೆಗೆ ಲೇಖಿಸಿರುತ್ತೇನೆ. ನಮಗೆ ಎಲ್ಲರೂ ಒಟ್ಟಾಗಿ ದೇಶದ ಮೇಲ್ಮೆಗೂ ಸಮಾಜದ ಮೇಲ್ಮೆಗೂ ಶ್ರಮಪಡಬೇಕಾಗಿ ಇದೆ.

ಮುಖಂಡರೇ, ನಿಮ್ಮ ತಮಾಷೆಯನ್ನು ಇನ್ನಾದರೂ ಬಿಡಿ. ನನಗೆ ಇದೆಲ್ಲ ಸಂಕಷ್ಟವಿದೆ. ಇನ್ನಾದರೂ ಒಂದು ಮೀಟಿಂಗ್ ಮಾಡಿ ಸರಿಮಾಡುವ ಇರಾದೆ ಯೋ ವ್ಯಕ್ತಿಪತ್ರಿಕೆಗೆ ಬರೆದಿರುತ್ತೇನೆ. ಕೊಡಗು ಸಂಪಾದಕರು ಪ್ರಕಟಿಸುವರೋ ಇಲ್ಲವೋ ಗೊತ್ತಿಲ್ಲ.

ಊರವ

ಅಯ್ಯಾ,

ಕಳೆದ ೧೫ನೇ ಸಂಚಿಕೆಯಲ್ಲಿ ಕಂಡ ಕೆ. ಎಂ. ಬೆಳ್ಯಪ್ಪನವರ ಕಾಫಿ ಪಸಲ್ ಮತ್ತು ಗಿಡಗಳಿಗುಂಟಾದ ನಷ್ಟದ ಅನುಮಾನಕ್ಕೆ ಜವಾಬ್ ಅಯ್ಯಾ ಬೆಳ್ಯಪ್ಪನವರೇ, ಈ ವರ್ಷ ಕಾಫಿಗಿಡ ಮತ್ತು ಪಸಲಿಗೆ ಬಂದ ಅನಾಹುತವು ಹೆಚ್ಚಿನ ಮಳೆಯ ದೆಸೆಯಿಂದ ಹೊರ್ತು ಅವಿ ಮಹಿಮೆ, ಕಟ್ಟೆ, ಗೊಬ್ಬರದಲ್ಲಿ ಮೋಸ ಏನು ಅಲ್ಲ. ತಮ್ಮ ಲೇಖನವು ಕೃಷೀಸಿರಿದೊಡನೆ ಈ ಅನಾಹುತವನ್ನು ತಿಳಿಯಲು ಅತಿಕ್ರಮಪಟ್ಟು ನೋಡಿದಲ್ಲಿ ಈ ಕೆಳಗೆ ಕಂಡವೇರೆ ನನ್ನ ಮನಸಿಗೆ ತಿಳಿಯಬಂದಿದೆ ಈ ವರ್ಷ ಕಾಲಕ್ಕೆ ಸರಿಯಾಗಿ ಕಾಫಿ ಹೂವಿಗೆ ಮಳೆ ಸಿಕ್ಕಿದ್ದಾಗ್ಯೂ ಹೂವು ಅರಳುವ ಕಾಲದಲ್ಲಿ ದೊಡ್ಡ ಮಳೆ ದೊರಕದೆಯೆಲ್ಲಾ ಕಾಫಿಕಾಯಿ ಪೂರ ಬಿಟ್ಟು ನಾನು ನನ್ನ ಈ ಮಲೆನಾಡು ದೇಶದ ಬೆಟ್ಟ ಪ್ರದೇಶವಾದ ತಡಿಯಾಂಡ ಮಲೆ ಬೆಟ್ಟ ಸಾಲಿನಲ್ಲಿ ಇರುವ, ಕೊಲೆದಿ ಮಂದೆಯಂಡ, ಅಪ್ಪಿರಂಡ, ಕೇಟೋಳಿರ ವಗೈರೆ ರಕಸಿ ಮಾಡಿ ಪರದೆಲ್ಲಿ ಗೊಬ್ಬರ ಹಾಕುವಂತಹ ತೋಟಗಳನ್ನೂ, ಪರದೇಶದ ಗೊಬ್ಬರ ಹಾಕದ ಕಸ ತ್ತೋಟಗಳನ್ನು ಮತ್ತು ಕೊಡಗಿನ ಪೂರ್ವ ಪದ್ಧತಿಯಂತೆ ನಟ್ಟು ಆಸಿಮಾಡದೆಬಿಟ್ಟ ತೋಟಗಳನ್ನು ಗಿಡಗಳನ್ನ ಮತ್ತು ಅವುಗಳ ಪಸಲನ್ನು ಸಹ ಚನ್ನಾಗಿ ಪರಿಶೋಧಿಸಿ ನೋಡಿದಲ್ಲಿ, ತಮ್ಮ ಪತ್ರದಲ್ಲಿ ಕಂಡ ಮೇರೆಯೇ ಎಲೆ ಉದುರಿ, ರೆಕ್ಕೆ ತುದಿ ಕರಗಿ, ಒಣಗಿ, ಮತ್ತು ಕಡ್ಡಿಗಳು ಮಾತ್ರ ಇರುವವನ್ನು ನೋಡಿದರೆ ಮೋಹರಂ ಮತ್ತು ದಸರ ಹಬ್ಬಗಳಲ್ಲಿ ತೇರಿನ ಮುಂದೆ ಎರಡು ಕಡೆಗಳಲ್ಲಿ ಒಂದು ಕೋಲಿಗೆ ತುಂಬ ಕಡ್ಡಿಗಳನ್ನು ಕಟ್ಟಿ ಆ ಕಡ್ಡಿಗಳಿಗೆಲ್ಲ ಬಿಳಿ ಕಾಗದ ಸುತ್ತಿರುವ ಜಂಡವು ಯಾವ ರೀತಿಯಲ್ಲಿ ಕಾಣುತ್ತೆಯೋ ಅದೇ ಮೇರೆ ಕೆಲವು ಕಡೆ ಕಾಫಿ ಗಿಡಗಳ ಸಾಲು ಬೆಳಗಿ ಕಾಣುತ್ತೆ. ಕಾಫಿ ಪಸಲ್ ಹೂವಿನಲ್ಲಿ ೧೦೦ ಬಟ್ಟಿ ಅಂದಾಜು ಮಾಡಿದ್ದರೆ ಈಗ ೨೫ ಬಟ್ಟಿ ಇರಬಹುದು. ಬಾಕಿ ೭೫ ಬಟ್ಟಿ ಹೂವಿನ ಮೇಲೆ ಮಳೆ ಬಿದ್ದು, ಇಷ್ಟಲ್ಲದೆ ಎಡೆಬಿಡದೆ ಬೊಂದ ಮಳೆಯ ದೆಸೆಯಿಂದ ಉದುರಿಹೋಗಿರುತ್ತೆ. ಈಗ ಇರುವ ಪಸಲು ದರು ಚನ್ನಾಗಿ ಇರುವವದೇ ಎಂದು ನೋಡಿದರೆ ೧೦ ಕಾಪಿ ಕಾಯಿಗಳನ್ನು ಕುಯಿದು ಸುಲಿದು ನೋಡಿದರೆ ೧೦ಕ್ಕೆ ಒಂದು ಎರಡು ಬೀಳ್ವುದು, ಬಾಕಿದೆಲ್ಲಾ ಜಳ್ಳು ಕಟ್ಟಿವೆ. ಕೆಲವು ಒಂದು ಬೇಳೆ ಜಳ್ಳು ಒಂದು ಬೀಳ್ವುದು. ಕೆಲವು ಅರಸಿನದ ಬಣ್ಣವಾಗಿ ಹಣ್ಣಾಗಿ ನಿಂತಿವೆ. ಕೆಲವು ಹಸುರು ಬಣ್ಣದಲ್ಲಿದ್ದು ಬಾಡಿಕೊಂಡು ಗಿಡಗಳನ್ನು ಸ್ವಲ್ಪ ಅಲ್ಲಾಡಿಸಿದರೆ ಥಟ್ಟ ಉದುರಿದಂತೆ ಉದುರುತ್ತೆ. ಈ ಮಧ್ಯೆ ಜಿಗಣೆಕಾಟವೋ ಹೇಳಲಸಾಧ್ಯ. ಬೆಟ್ಟದಿಂದ ನೀರು ಬಂದು ತೋಟಗಳ ಮಧ್ಯಕ್ಕಾಗಿ ಹೊಳೆ ತೋಡುಗಳಾಗಿವೆ. ದೊಡ್ಡ ದೊಡ್ಡ, ಒರೆ ಬರದು ನಟ್ಟ ಗಿಡಗಳೆಲ್ಲ ಮುಚ್ಚಿಹೋಗಿವೆ. ಹೊಸದಾಗಿ ನಟ್ಟ ಗಿಡಗಳೆಲ್ಲ ಕೊಳೆತುಹೋಗಿವೆ. ಇದಕ್ಕೆಲ್ಲ ಎಂ. ಎಂ. ಬಿಪ್ಲೋಕ್ ರವರಾಗಲೀ ಯಾ ಎಗ್ರಿಕಲ್ಚರ್ ಕಾಲೇಜಿನಲ್ಲಿ ಓದಿಬಂದವರಾಗಿ ಏನುಕಾರಣ ಎಂದು ಸಮಜಾಯಿಸಿಗೆ ಕೊಡುವರು? ಅವರು ನ್ಯಾಯವಾದ ಬೆಟ್ಟ ಪ್ರದೇಶವನ್ನಿಗ್ಲಿ ಯಾ ಇಂತಾ ಮಳೆಯಾಗಲಿ ಕಂಡವರೇ ಅಲ್ಲವೆಂದು ನಂಬುತ್ತೇನೆ. ಅಯ್ಯಾ ಬೆಳ್ಯಪ್ಪನವರೇ, ಈ ನಮ್ಮ ಮಲೆನಾಡು ಕೊಡಗಿಗೆ ದೊಡ್ಡ ಬೆಟ್ಟವಾದ ತಡಿಯಂಡ ಮಲೆ ಬೆಟ್ಟದ ಬುಡದಲ್ಲಿರುವ ನಾಲ್ಕುನಾಡು ಅದನು ನೆಲದಲ್ಲಿ ಇಷ್ಟರುವ ಮಳೆಯ ಲೆಕ್ಕ ಕಂಡು ಹಿಡಿಯಲು ಇಷ್ಟರುವ ಅಳೆ ಮೇರೆಗೆ ಕಳೆದ ೫ ವರುಷಗಳ (ಪ್ರತಿ ವರ್ಷದ ಆಯಾ ತಾರೀಖು ೨೧ರ ವರೆಗೆ) ಲೆಕ್ಕವನ್ನು ಮತ್ತು ಒಂದೇ ದಿನದಲ್ಲಿ ದೊಡ್ಡಾಗಿ ಬಂದ ಮಳೆಯನ್ನು ಸಹ ತಮ್ಮ ಅವಗಾಹನಕ್ಕೆ ಕೊಡುವೆನು. ಅದರಿಂದ ತಮಗೆ ಈ ವರ್ಷದ ಬೆಟ್ಟಿನ ಕಡೆ ಕಾಫಿ ಗಿಡಗಳಿಗೂ ಮತ್ತು ಇತರಕಡೆ ಕಾಫಿಗಿಡ ಮತ್ತು ಪಸಲಿಗೆ ಸಹ ಉಂಟಾದ ಅನಾಹುತಗಳನ್ನು ತಾವೇ ಕಂಡು ಹಿಡಿಯಬಹುದಾಗಿದೆ. ಯಾರೂ ಹೇಳಬೇಕಾ

ಈ ಅನಾಹುತವನ್ನು ಘನ ಸರಕಾರದವರು ನೋ

ಪ್ರದೇಶದ ಕಾಫಿ ತೋಟದವರಿಗಾದರೂ ಏ

ವನಷ್ಟು ಮಾಡುವರೇನು? ಮಳೆ ಲೆಕ್ಕ 191

182-61 ಇಂಚು ನೆಟ್ಟು ತಾರೀಖು 15-6 19

ಒಂದೇ ದಿನ ದೊಡ್ಡ ಮಳೆ 9-ಇಂಚು 192

221.70 ದಾ 11 7 20 11 40 1921 ರಲ್ಲಿ

ತಾ|| 23-7-21 ರಲ್ಲಿ 12 10 1922 ರಲ್ಲಿ

ತಾ|| 22-7-22 ರಲ್ಲಿ 14-40 1923 ರಲ್ಲಿ

ತಾ|| $\frac{6\text{-}7\text{-}23}{2\,9\,0}$ ಇಂಚು ತಾ|| $\frac{13\text{-}7\text{-}23}{14\,35}$ ತಾ||

ತಾ|| $\frac{19\text{-}7\text{-}23}{15\,20}$ ಇಂಚುಗಳು ಈ ಮೇರೆ ದಿನ

ಮಳೆ ಹೊಡೆದಿರುವಾಗ್ಯೆ ಆದ ನಷ್ಟವು ಯಾವ

ದಿಂದಲೂ ಅಲ್ಲ.

"ಪ್ರತ್ಯಕ್ಷದ

HEALTH IS WEALTH.

WANTED all to improve
strength and vitality and thus sa
nation from physical degeneracy.
half-anna stamp and get 13 sp
photographs with full particulars f

Director Physical Cul

P O. Basavanagudi,
BANGALORE CITY.

ಆರೋಗ್ಯ ಚಂದ್ರ

ಮದ್ರಾಸ್.

ಸಂಪಾದಕರು ಡಾಕ್ಟರ್ ಯು. ರಾಮರಾ
ಎಮ್ ಎಲ್. ಸಿ ಯವರು.

ಆರೋಗ್ಯಚಂದ್ರಿಕ - ಆರೋಗ್ಯ ಮತ್ತು
ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ
ವೃದ್ಧಕ್ಕಾಗಿ ಏರ್ಪಡಿಸಿದ

ಒಂದು ಸಚಿತ್ರ ಮಾಸಪತ್ರಿಕೆ.

ಈ ನಮ್ಮ ಮೊದಲನೇ ಸಂಚಿಕೆಯಲ್ಲಿ ಕಾಣ
ವಿಷಯಗಳು.

ಜನಾರೋಗ್ಯ ನ್ಯಾಯಗಳು—1 ಸ್ವವಿಷಯ, 2. ವೇ ಭಾಗ್ಯ, 3 'ಮಲೇರಿಯಾ ಎಂಬ ಮೊಶ್ಕಿರ ರಣೆ, 4. ಪರಿಹಾರಕಿಸುವ ಜ್ವರ, 5 ಗರ್ಭಿಣಿಯ ಗ್ಯ, 6. ಎಳೆಮಕ್ಕಳಿಗೆ ಆಹಾರ ಕೊಡುವುದು, 7. ಳಿಗೆ ಬರುವ ನೋವು, ಅದರ ಲಕ್ಷಣಗಳು ಮತ್ತು 8. ಕೂಸು ಅಳುವುದೇಕೆ? 9. ಕಣ್ಣುಗಳಿಗೆ ವಿಶ ಪಲ್ಲುಗಳು, 11. ಕರುಳಿನ ಪೋಷಣೆ 12. ಸಾರ ರೇನು? 13. ಸೋಂಕೆಳೆದಾಗುವ ಅಪಾಯಗ ಕಾಫಿ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದ
ಒಂದು ವರ್ಷಕ್ಕೆ 1—8—0 ಬಿಡಿಪತ್ರಿಕೆ ಒಂದ
ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು
ಗ್ಯಚಂದ್ರಿಕ' ಗೆ ಎಂದು ಸ್ಪಷ್ಟವಾಗಿ ಬರೆದು ತಿ

ಪತ್ರವ್ಯವಹಾರ ವಿಳಾಸ— ಮೇನೇ
ಜರ್ ಆರೋಗ್ಯ ಚಂದ್ರಿಕ
ಟಪ್ಪಾಲು ಪೆಟ್ಟಿಗೆ ನಂ. 166, 323, ತಂಬುಚೆಟ್ಟಿ ಬೀದಿ,

ಏಜೆಂಟರು:—ಮರ್ಕರಾ ಎಸ್. ಕೆ. ಅಪ

[12—5] ಭಾಗಮಂಡ

For your requirements of h
grade Arms, Ammunition,
Wine and Spirits,

APPLY TO.—

Mc. DOWELL & Co., Ltd

24—22 MERCA

Printed & Published by D. S Krishnarwa
Proprietor, at Sreenivas Electric Press,
"for Kodagu" Ltd., Mercara—28 9-192

If not delivered please return to "Kodagu Office, Mercara"
Reg. No. M. 1550.

ಕೊಡಗು.

ಸತ್ಯೇನ ಧಾರ್ಯತೇ ಪೃಥ್ವೀ ಸತ್ಯೇನ ತಪತೇ ರವಿಃ । ... ರಾಜ್ಯಸಂಪದ ॥

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವುದು. "ಎಡಿಟರ್ ಕೊಡಗು" ...

ಪುಟ ೩] ಕೊಡಗು, ಸನ್ ೧೯೨೩ ನೇ ಅಕ್ಟೋಬರ್ ತಾರೀಖು ೫ ನೆಯ ಶುಕ್ರವಾರ. [ಸಂಚಿಕೆ ೧೯

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡಾ ಪ್ರಿಂಟಿಂಗ್ ... ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ... ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ಜಾಗ್ರತೆಯಾಗಿಯೂ ಸುಲಭಬೆಲೆಗೂ ಮಾಡಿ ಕೊಡುತ್ತೇವೆ

Srinivas Electric Press,
MYSORE.

The Coorg Central Co-operative Bank, Ltd.,

(Registered under the Co-operative Societies Act)

Share Capital	...	50,000
Paid up Share Capital	...	6,820
Fixed Deposits paid		39,819

Amounts are lent mainly to Co-operative Societies in Coorg. The accounts are checked annually by The Registrar of Co-operative Societies Coorg. Deposits for one year and more carry interest at 6¼% per annum and for smaller periods at 5% per annum.

Apply to the Secretary or Treasurer for further details.

President	Treasurer	Secretary
Jendera Cottiah	Bhujanga Rao,	C. N. Verkappaya
Rao Bahadur	B.A. B.L.,	B.A. B.L.

Dated 1–9–1923

ಜೀವವಿಮೆ

ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಯ ಯಜಮಾನನು ಮೃತಪಟ್ಟರೆ ಉಂಟಾಗತಕ್ಕ ತೊಂದರೆಗಳನ್ನು ನಿವಾರಿಸುವುದೇ ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾರ್ಥಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ

ಅತಿ ಕಡಿಮೆ ದರದಲ್ಲಿ ಯಾವ ಲೋಪವೂ ಬಾರದ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ... ಸರಳತನದ ಭದ್ರತೆಯುಳ್ಳ ಜೀವವಿಮೆ ಕಂಪೆನಿ.

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ... ಲವಾಗಿ ಹಣವನ್ನು ಒದಗಿಸಿ ಸ್ಥಿರಾಸ್ತಿಗಳನ್ನೂ ... ಟ್ಟು ದೇಶದ ಆರ್ಥಿಕ ಸಂಪತ್ತನ್ನು (Economic condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

ಸ್ತ್ರೀಪುರುಷ ರೀರ್ವರೂ ಜೀವವಿಮೆಯ ಸೌಕರ್ಯಗಳ್ನು ಪಡೆಯಲು ಅನುಕೂಲವನ್ನು ಒದಗಿಸುವ ಸಂಸ್ಥೆಯಾದರೂ ಇದೊಂದೆ

ಒಂದು ದೇಶದ ಹಣವು ಮತ್ತೊಂದು ದೇಶದಲ್ಲಿ ... ಗದಂತೆ ನೋಡಿಕೊಂಡು ವಿಮೆದಾರರ ಧನವನ್ನು ವೃದ್ಧಿಗೊಳಿಸುವ ಸಹಕಾರಸಂಘ, ಬೇಂಕ, ಮುನಿಸಿಪಾಲಿಟಿ ಮುಂತಾದ ಸಾರ್ವಜನಿಕ ಸಂಸ್ಥೆಗಳಿಗೆ ಸಾಲಗಿ ಕೊಡುವ ಅನುಕೂಲತೆಯುಳ್ಳ ಕಂಪೆನಿ ಇದೊಂದೆ.

ಹೆಚ್ಚಿನ ಮಾಹಿತಿಯನ್ನು ಕನ್ನಡ ನಾಡಿನ ... ಏಜೆಂಟರಾದ ಈ ಕೆಳಗಿನ ವಿಳಾಸದಾರರಿಂದ ಪಡೆಯಬಹುದಾಗಿದೆ

ಬಿ. ಎನ್. ಆಚಾರ್ಯ,
ಲೈಫ್ ಅಂಡ್ ಪ್ರಾವಿಡೆಂಟ್ ಆಫೀಸ್, ಮಡಿಕೇರಿ

ಬಿ. ವಿ. ತ್ ಸೋಟಿ ಸ್ಪೆನ್ಸರ್ ಕಂಪೆನಿ.

SPENCER & CO. LTD.
MERCARA AND POLLIBETTA

52–51

When you think of going to Bombay
THINK OF
THE WELCOME HOTEL.
Girgaum Back Road, BOMBAY.
Most airy accomodation. Most Central situation—Excellent Meals
Every Convenience

ವೆಲ್ಕಂ ಹೋಟೇಲ್.

— ಗಿರ್ಗಾಂವ ಬ್ಯಾಕ್‌ರೋಡ್, ಬೊಂಬಾಯಿ.

ರೈಲಿನಿಂದಿಳಿದು ... ಲ್ಲಿ ಇಳಿಯುವುದು ಸುಕ್ಷದೆ ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಯೋಗ್ಯವಾದ ಕೋಣೆಗಳು ಬೇಕೆಂದಿದ್ದರೆ ಬೊಂಬಾಯಿಪಟ್ಟಣದ ಮಧ್ಯಸ್ಥಳದಲ್ಲಿರುವ ಮೇಲ್ಕಂಡ ಹೋಟೇಲಿನಲ್ಲಿಳಿಯಲು ಮರೆಯಬೇಡಿರಿ ಯೋಗ್ಯವಾದ ಊಟ ಗಾಳಿಗನುಕೂಲವಾದ ಕೊಠಡಿ 15 ಮಿನಿಟುಗೊಮ್ಮೆ ತಿರುಗುವ ಟ್ರಾಮಿನ ಸೌಕರ್ಯ ಅಂತೂ ಪ್ರಯಾಣಿಕರಿಗೆ ಉಳಿದುಕೊಳ್ಳಲು ಅನುಕೂಲವಾದ ಉಡುಪಿ ಬ್ರಾಹ್ಮಣರ ಭೋಜನಾಲಯ

ಪೇಟ್ ಶ್ರೀನಿವಾಸರಾವ್,
ಮೇನೇಜರ್.

[12—7]

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್
ಲಿಮಿಟೆಡ್

ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ ರೂ.

ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,820
ಜಮಾ ಬಂದ ಠೇವಣಾತಿ	39 849

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ಮಾಯಿದೆ ಅಥವಾ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡಾ ಸಾಲಿಯಾನ 6¼ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡಾ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುವರು.

ಪ್ರೆಸಿಡೆಂಟರು	ಟ್ರೆಜರರ್.
ಕೊಡಂದೆರ ಕುಟ್ಟಯ್ಯನವರು.	ಎಂ. ಭುಜಂಗರಾಯರು
ರಾವ್ ಬಹದ್ದೂರ್	ಬಿ ಎ ಬಿ ಎಲ್.

ಸೆಕ್ರೆಟರಿ
ಸಿ. ಎನ್. ವೆಂಕಪ್ಪಯ್ಯನವರು ಬಿ. ಎ. ಬಿ. ಎಲ್.

ತಾರೀಖು 1—9—1923

ಸುಂದರ ವಿಲಾಸ ಪ್ರೆಸ್, ಮಡಿಕೇರಿ

ಕೊಡಗು ಮಹಾ ಜನರನ್ನು ಈಗ್ಯೆ ಕೊಡಗಿನ ರಾಜಧಾನಿಪಟ್ಟಣವಾದ ಮಡಿಕೇರಿಯಲ್ಲಿ ಸದ್ಯ ಸ್ಥಾಪಿತವಾಗಿರುವ ನನ್ನ ಮುದ್ರಾಲಯವು ತಮ್ಮನ್ನು ಸೇವಿಸಲು ಸಿದ್ಧವಾಗಿದೆ ಅಂದವಾದ ಅಕ್ಷರಗಳ ಮುದ್ದಾದ ಮುದ್ರಣದಿಂದ ಸೊಗಸಾದ ಕಾಗದಗಳಲ್ಲಿ ಮುದ್ರಿಸುವ ನೂತನ ಅನುಕೂಲತೆಗಳನ್ನು ಸಿದ್ಧಪಡಿಸಿದೆ.

ಪರಸ್ಥಳದವರಿಗೆ ಎಲ್ಲಾ ಅನುಕೂಲತೆಗಳನ್ನು ಒದಗಿಸಲು ಏರ್ಪಡಿಸಿದೆ ದೇಶೀಯ ಮುದ್ರಾಲಯಕ್ಕೆ ಸ್ವದೇಶ ಬಂಧು ಭಗಿನಿಯರು ಪ್ರೋತ್ಸಾಹ ಕೊಡಬೇಕಾಗಿದೆ.

ಒಗೆ ಒಗೆಯ ಸ್ಟೇಶನರಿ, ಸ್ಕೂಲಿನ ಶಾಲಾ ಮಕ್ಕಳ ಸಾಮಗ್ರಿಗಳನ್ನೂ ಶೇಖರಿಸಿ ಇಡಲ್ಪಡುತ್ತವೆ. ನನ್ನ ಮಾತು ಅಕ್ಕಲ್ಲ! ನನ್ನ ಕೋರಿಕೆ ಸೇವೆ. ವಿಶೇಷ ಲಾಭವಿಲ್ಲ

ವಿಶೇಷ ಮಾಹಿತಿಗೆ ಮುದ್ರಾಲಯದ ಅಧಿಕಾರಿಗಳಿಗೆ ಬರೆದು ತಿಳಿದುಕೊಳ್ಳುವುದು

ಎ. ಆರ್. ಕನ್ನಪ್ಪ ಮೊದಲಿಯಾರ್,
ಪ್ರೊಪ್ರೈಟರ್.

ಸುಂದರ ವಿಲಾಸ ಪ್ರೆಸ್
ಮಡಿಕೇರಿ.
ತಾ|| 10–9–23.

17—16

"ಕೊಡಗು"

೧೯೨೧ನೇ ಇಸವಿ ಅಕ್ಟೋಬರ್ ತಾ|| ೭ನೇ ಶುಕ್ರವಾರ

೧೯೨೧ ರ ಖಾನೆಸುಮಾರಿ ವರದಿ.

ಸನ್ 1921 ನೇ ಇಸವಿ ಮಾರ್ಚಿ ತಾರೀಖು 18 ರಲ್ಲು ರಾತ್ರಿ ತೆಗೆದ ಕೊಡಗು ದೇಶದ ಖಾನೆಸುಮಾರಿ ಲೆಕ್ಕದವರದಿ ಈಗ ತಾನೇ ನಮ್ಮ ಕೈ ಸೇರಿದೆ. ಇದು ಹತ್ತು ವರ್ಷಗಳಿಗೊಂದುಸಾರಿ ತೆಗೆಯುವ ಜನಸಂಖ್ಯೆಯ ಲೆಕ್ಕವಾಗಿದೆ. 1891 ರಲ್ಲಿ ಕೊಡಗಿನ ಒಂದನೇ ಖಾನಿಸುಮಾರಿ ಲೆಕ್ಕ ತೆಗೆದದ್ದಾಗಿ ತಿಳಿಯಬರುತ್ತದೆ. ಅಂದಿನಿಂದಲೂ ಈ ವರದಿಯನ್ನು ಮದ್ರಾಸಿನ ಸೆನ್ಸಸ್ ಸೂಪರಿಂಟೆಂಡಂಟರವರು ಬರೆಯುತ್ತಿದ್ದರು. ಆದರೆ ಈ ಸಾರಿಯು ಖಾನಿಸುಮಾರಿಯ ಲೆಕ್ಕದ ಪಟ್ಟಿಗಳೆಲ್ಲವೂ ಮದ್ರಾಸು ಆಫೀಸಿನಲ್ಲು ತಯಾರು ಮಾಡಲ್ಪಟ್ಟರೂ ಅದರ ವರದಿಯು ಸ್ಥಳೀಯ ಉದ್ಯೋಗಸ್ಥರಾದ ಲೇಂಡ್ ರಿಕಾರ್ಡ್ಸ್ ಮತ್ತು ಎಗ್ರಿಕಲ್ಚರ್ ಡಿಪ್ಯುಟಿ ಡೈರೆಕ್ಟರವರಿಂದ ಬರೆಯಲ್ಪಟ್ಟಿದೆ. ಇದಕ್ಕೆ 1911 ರ ವರದಿಯಲ್ಲಿ ಮದ್ರಾಸು ಸೆನ್ಸಸ್ ಸುಪರಿಂಟೆಂಡಂಟರಾದ ಮೆ|| ಮೊಲೊನಿಯವರ ಸೂಚನೆಯೇ ಕಾರಣವೆಂತಲೂ, ಮದ್ರಾಸು ಆಫೀಸಿನಲ್ಲು ಕೊಡವರು, ಅಮ್ಮ ಕೊಡವರು ಮತ್ತು ಜಮ್ಮ ಕೊಡವರು ಎಂಬವರಿಗೆ ಇರುವ ಭೇಧವನ್ನು ತಿಳಿಯದೆ ಅವರ ಸಂಖ್ಯೆಗಳನ್ನೆಲ್ಲಾ ಮಿಶ್ರಮಾಡಿಬಿಟ್ಟಿರುವುದರಿಂದ ದೇಶದ ಪ್ರಬಲವಾದ ಜನಾಂಗದವರಾಗಿರುವ ಕೊಡವರ ಸರಿಯಾದ ಜನಸಂಖ್ಯೆಯು ದೊರೆಯದೆ ಇರುವುದು ವ್ಯಸನಕರವೆಂತಲೂ, ಮದ್ರಾಸು ಆಫೀಸಿನಲ್ಲಿ ಇದಕ್ಕೆ ಸಂಬಂಧಪಟ್ಟ ದಾಖ್ಲೆಗಳನ್ನು ನಾಶಪಡಿಸಿರುವುದರಿಂದ ಈ ದೊಡ್ಡ ತಪ್ಪನ್ನು ಸರಿಪಡಿಸಲು ಸಾಧ್ಯವಾಗಲಿಲ್ಲವೆಂತಲೂ, ಲೆಕ್ಕದ ಪಟ್ಟಿಯನ್ನು ತಯಾರಿಸುವ ಆಫೀಸು ಕೊಡಗಿನಲ್ಲಿಯೇ ಇದ್ದಿದ್ದರೆ ಅಂಥಾ ತಪ್ಪನ್ನು ಸರಿಪಡಿಸುವುದು ಸುಲಭವಾಗುತ್ತಿತೆಂತಲೂ, ಆದುದರಿಂದ ಇಂಥಾ ಆಫೀಸನ್ನು ಇಲ್ಲಿಯೇ ಇಡುವುದು ಅವಶ್ಯ. ಇದರ ಖರ್ಚಿಗೆ ಬೇಕಾಗುವ ಹಣದ ಅಂದಾಜು ಮಾಡಿ, ಅದು ಬಹಳ ಹೆಚ್ಚಾಗುವುದೆಂದು ಕಂಡು ಬಂದರೆ, ಈ ಕೆಲಸಕ್ಕಾಗಿ ಮದ್ರಾಸು ಆಫೀಸಿಗೆ ಇಲ್ಲಿಯ ಕೆಲವು ಬುದ್ಧಿವಂತರಾದ ಗುಮಾಸ್ತರನ್ನು ಕಳುಹಿಸುವ ಏರ್ಪಾಡನ್ನಾದರೂ ಮಾಡಬೇಕೆಂದೂ ವರದಿಯಲ್ಲಿ ಸೂಚಿಸಲ್ಪಟ್ಟಿದೆ. ಹತ್ತು ವರ್ಷಕ್ಕೊಂದಾವರ್ತಿ ತೆಗೆಯಲ್ಪಡುವ ಜನಸಂಖ್ಯೆಯ ಲೆಕ್ಕದಲ್ಲಿ ದೇಶದ ಮುಖ್ಯ ಜನಾಂಗದವರ ಸರಿಯಾದ ಸಂಖ್ಯೆಯು ಸಿಕ್ಕದೆ ಇರುವುದು ಎಷ್ಟು ದೊಡ್ಡ ಅನ್ಯಾಯ ? ಇದು ಮಾತ್ರವಲ್ಲದೆ ತಾಲೋಕು ವಾರು ಜನರ ಪೈಕಿ ವಿದ್ಯಾವಂತರ ಲೆಕ್ಕ ತೆಗೆದುಕೊಂಡದ್ದರಲ್ಲಿ ಮಡಿಕೇರಿಯಲ್ಲಿ ಕಳೆದಸಾರಿಗಿಂತ ಈ ಸಾರಿ ಕಡಿಮೆಯೆಂತಲೂ, ವಿದ್ಯಾದಲ್ಲಿ ಬಹಳ ಹಿಂದೆ ಬಿದ್ದಿರುವ ನಂಜರಾಯಪಟ್ಣ ತಾಲೋಕಿನಲ್ಲಿ ಇಂಗ್ಲೀಷು ಕಲಿತವರು ಕಳೆದ ಹತ್ತು ವರ್ಷಗಳಲ್ಲಿ ಒಂದಕ್ಕೆ ಎರಡರಷ್ಟು ಹೆಚ್ಚಿದಾರೆಂತಲೂ ಪಟೇಲರುಗಳು 365 ಜನವಿರುವಾಗ್ಗ್ಯೆ ಗ್ರಾಮ ಉದ್ಯೋಗಸ್ಥರು 46 ಮಾತ್ರ ಇರುವರೆಂದೂ ಮೊದಲಾದ ಇನ್ನು ಕೆಲವು ತಪ್ಪು ಸಂಖ್ಯೆಗಳು ತೋರಿಸಲ್ಪಟ್ಟಿವೆ. ಇಂಥಾ ತಪ್ಪುಗಳನ್ನೊಳಕೊಂಡಿರುವ ವರದಿಯಿಂದ ಖಾನಿಸುಮಾರಿ ಲೆಕ್ಕದ ಉದ್ದೇಶವು ಕೈಗೂಡಿದಂತಾಗುವುದಿಲ್ಲ. ಆದುದರಿಂದ ತಪ್ಪುಗಳುಂಟಾಗದಂತೆ ಖಾನಿಸುಮಾರಿ ಆಫೀಸನ್ನು ಕೊಡಗಿನಲ್ಲಿಯೇ ಇಡಬೇಕೆಂದೂ ಇದುಸಾಧ್ಯವಲ್ಲದಿದ್ದರೆ ಇಲ್ಲಿಂದ ಗುಮಾಸ್ತರನ್ನು ಈ ಕೆಲಸಕ್ಕಾಗಿ ಮದ್ರಾಸಿಗೆ ಕಳುಹಿಸಬೇಕೆಂದೂ ಈ ವರದಿಯಲ್ಲಿರುವ ಸೂಚನೆಯು ನ್ಯಾಯವಾದದ್ದೆಂದೇ ಹೇಳಬೇಕು. ಈ ಸೂಚನೆಯನ್ನು ಸರಕಾರದವರು ಒರುವಸಾರಿ ಖಂಡಿತವಾಗಿಯೂ ಜಾರಿಗೆ ತರುವರೆಂದೇ ನಂಬುತ್ತೇವೆ. 'ಕೊಡಗು ದೇಶವು ಅಪೂರ್ವವಾಗಿ ಅಸಹಕಾರ ಚಳವಳದಿಂದ ಬಿಡುಗಡೆಯಾಗಿತ್ತು ಮತ್ತು ಜನರೆಲ್ಲರೂ ಲೆಕ್ಕ ತೆಗೆಯುವ ಉದ್ಯೋಗಸ್ತರಿಗೆ ಎಲ್ಲಾ ಸಹಾಯವನ್ನು ಮಾಡಿದರು' ಎಂದು ಬರೆಯಲ್ಪಟ್ಟಿದೆ. ರಾಜಕೀಯ ಚಳವಳದಲ್ಲಿ ಬಹಳ ಹಿಂದೆ ಬಿದ್ದಿರುವ ಈ ದೇಶಗಳ್ಲಿ ವೀರಪಕ್ಷದವರೆನ್ನಿಸಿಕೊಳ್ಳುವವರು ಹಿಂದೂ ದೇಶದ ಬೇರೆ ಪ್ರಾಂತ್ಯಗಳ ಮಧ್ಯಗಾಮಿಗಳಷ್ಟೂ ಮುಂದುವರಿಯದೆ ಇರುವಾಗ್ಗ್ಯೆ ಇಲ್ಲಿಗೆ ಅಸಹಕಾರ ಚಳವಳವು ಬರುವುದಂದರೇನು !

ಈವರದಿಯ ಪ್ರಕಾರ, ಕೊಡಗಿನ ಒಟ್ಟು ಜನಸಂಖ್ಯೆ 163,838 ಅಂದರೆ 1911 ರದಕಿಂತ 11,138 ಕಡಿಮೆ. ತಾಲೋಕುಗಳ ಪೈಕಿ ಎಡೆನಾಲ್ಕುನಾಡು ತಾಲೋಕಿಗೇ ಈ ಬಾಬಿನಲ್ಲಿ ಹೆಚ್ಚು ನಷ್ಟ ಸಂಭವಿಸಿದ್ದಾಗಿದೆ; ಇದರ ನಂತರ ನಂಜರಾಯಪಟ್ಣ ತಾಲೋಕಿಗೆ. ಇದಕ್ಕೆ ಈ ಕಾರಣಗಳನ್ನು ಸೂಚಿಸಿರುವರು. ಈ ದೇಶದಲ್ಲಿ ಕಳೆದ ಹತ್ತು ವರ್ಷಗಳಿಂದ 2363 ಎಕ್ರೆಗಳ ಕಾಫಿ ವ್ಯವಸಾಯ ಕಡಿಮೆಯಾಗಿರುವುದರಿಂದಲೂ ಮೈಸೂರು ಮತ್ತು ಮದ್ರಾಸು ಪ್ರಾಂತ್ಯಗಳಲ್ಲಿ ವ್ಯವಸಾಯಕ್ಕೆ ಕೂಲಿಗಳ ಅವಶ್ಯಕತೆಯು ಹೆಚ್ಚಾದ್ದರಿಂದಲೂ ಇಲ್ಲಿಗೆ ಹೊರಗಿನಿಂದ ಬರುತ್ತಿದ್ದ ಆಳುಗಳ ಜನಸಂಖ್ಯೆಯು 41677 ರಿಂದ 31112 ಕ್ಕೆ ಇಳಿದಿದೆ. ಇದು 10565 ಜನರ ಸಂಖ್ಯೆಯು ಕಡಿಮೆಯಾದದ್ದಕ್ಕೆ ನ್ಯಾಯವಾದ ಕಾರಣವಾಗಿದೆಯೆಂದು ಹೇಳಬಹುದು. ಆದರೆ ದೇಶದಲ್ಲಿಯೇ ಹುಟ್ಟಿ ಬೆಳೆದವರ ಸಂಖ್ಯೆಯಲ್ಲಿ 573 ಕಡಿಮೆಯಾಗಲು ದೇಶದ ಬಡತನವೂ ಅನಾರೋಗ್ಯಸ್ಥಿತಿಯೂ ಮುಖ್ಯಕಾರಣಗಳೆಂದು ಯಾರು ತಾನೇ ಹೇಳದಿರುವರು. ದೇಶದಲ್ಲಿ ಉಂಟಾದ ಹೆಚ್ಚಿನ ಮರಣಕ್ಕೆ 1918 ರಲ್ಲು ಕೊಡಗಿಗೆ ಬಂದ ಇನ್‌ಫ್ಲುವೆಂಜ ಜ್ವರವೇ ಒಂದು ಕಾರಣವೆಂತಲೂ ಅದಕ್ಕೆ 13000 ಜನರು ತುತ್ತಾದರೆಂತಲೂ ಸೂಚಿಸಿರುವರು. ದೇಶದಲ್ಲಿರುವ ಹೆಚ್ಚಿನ ಬಡತನದಿಂದಲೂ, ನ್ಯಾಯವಾದ ಸೌಕರ್ಯಗಳಿಲ್ಲದಿದ್ದುದರಿಂದಲೂ ಅಲ್ಲವೇ ಇಷ್ಟೆಲ್ಲಾ ಜನರು ಜ್ವರಕ್ಕೆ ತುತ್ತಾಗಲು ಕಾರಣ ?

'ಕೊಡಗು ದೇಶದ ಒಟ್ಟು ವಿಸ್ತೀರ್ಣ 1582 ಚದರ ಮೈಲಿಗಳ ಪೈಕಿ 600 ಚದರಮೈಲಿಗಳು ಕಾಡಾಗಿವೆ. ಚದರಮೈಲು ಒಂದಕ್ಕೆ 1911 ರಲ್ಲು ಇದ್ದ 111 ಜನ ಸಂಖ್ಯೆಯು ಈಗ 104 ಕ್ಕೆ ಇಳಿದಿದೆ. ಕಾಡನ್ನು ವಿನಾಯಿಸಿದರೆ ಚದರಮೈಲಿಗೆ 167 ರ ಪ್ರಕಾರ ಬರುವುದು. ಕಾಫಿ ವ್ಯವಸಾಯವು ಕಡಿಮೆಯಾದುದರ ಫಲಿತಾಂಶವಾಗಿ 2368 ಎಕ್ರೆಗಳ ಭತ್ತದ ವ್ಯವಸಾಯವು ಹೆಚ್ಚಿತು; ಯುದ್ಧದ ದೆಸೆಯಿಂದ ಆಹಾರ ಸಾಮಗ್ರಿಗಳ ಕ್ರಯವೇರಿ ಮೊದಲು ರೈತರಿಗೆ ಸ್ವಲ್ಪ ಕಷ್ಟವುಂಟಾದರೂ ಭತ್ತಕ್ಕೆ ದೊರಕಿದ ಹೆಚ್ಚಿನ ಕ್ರಯದಿಂದ ಆ ಕಷ್ಟವು ಅಲ್ಲಿಗಲ್ಲಿಗೇ ನಿವಾರಣೆಯಾಯಿತ್ತೆಂದೂ, ಸುಮಾರು 800 ಸಾಮಾನ್ಯ ಜನರು ಮಿಲಿಟರಿಗೆ ಸೇರಿದ್ದರಿಂದ ಅವರ ಕುಟುಂಬಗಳಿಗೆ ಹಣದ ಕೊರತೆಯು ಸ್ವಲ್ಪಮಟ್ಟಿಗೆ ಕಡಿಮೆಯಾಯಿತೆಂತಲೂ, ಸರಕಾರದವರ ಹೇಳಿಕೆ. ಭತ್ತದ ಕ್ರಯವು ಸ್ವಲ್ಪಮಟ್ಟಿಗೆ ಏರಿದ್ದರೂ ಕೂಡ ಅದು ಒಂದಕ್ಕೆ ಮೂರು ನಾಲ್ಕರಷ್ಟು ಏರಿದ್ದ ಬೇರೆ ಸಾಮಗ್ರಿಗಳ ಕ್ರಯದ ಕಷ್ಟಕ್ಕೆ ಸರಿಸಮಾನವಾಯಿತ್ತೆಂದು ಎಂದಿಗೂ ಹೇಳಲಾಗುವುದಿಲ್ಲ. ಮತ್ತು ಮಿಲಿಟರಿಗೆ ಸೇರಿ ಜನರು ಪರಪ್ರಾಂತ್ಯಗಳಿಗೆ ಹೋಗಿ ಹೆಚ್ಚಿನ ವ್ಯಯಮಾಡುವ ಅಭ್ಯಾಸವನ್ನು ಕಲಿತುಕೊಂಡು ಬಂದರೆ ಹೊರತು ಹಣ ಸಂಪಾದನೆ ಮಾಡಿದಹಾಗೆ ಕಾಣುವುದಿಲ್ಲ. ಪಟ್ಟಿಯ ಪ್ರಕಾರ ಕಳೆದ ಹತ್ತು ವರ್ಷಗಳಲ್ಲಿ ಜನನಕ್ಕಿಂತ ಮರಣವು 13888 ಹೆಚ್ಚಾಗಿದೆ. 'ಇದು ಹೊರಗಿನಿಂದ ಬಂದ ಜನರ ಹೆಚ್ಚಿನ ಮರಣದಿಂದಲೇ ಎಂದು ಹೇಳಕೂಡದೆಂತಲೂ ಜನನ ಸಂಖ್ಯೆಯನ್ನು ಸರಿಯಾಗಿ ದಾಖ್ಲೆ ಮಾಡದೆ ಇರುವುದರಿಂದಲೇ ಇಂಥಾ ತಪ್ಪು ಸಂಖ್ಯೆಗೆ ಕಾರಣವೆಂದೂ' ವಿವರಿಸಲಾಗಿದೆ. 'ಕಾಡುಗಳಲ್ಲಿ ವಾಸಿಸುವ ಯರವ ಕುರುಬರುಗಳ ಜನನವನ್ನು ಮೂಲೆಯಲ್ಲಿರುವ ಗ್ರಾಮಗಳ ಜನರ ಜನನವನ್ನೂ ಸರಿಯಾಗಿ ಬರೆಯದೆ ಇರುವುದರಿಂದಲೂ, ಹೀಗೆ ಬರೆಯಲು ಪಟೇಲರುಗಳಿಗೆ ನ್ಯಾಯವಾದ ಅನುಕೂಲಗಳು ಇಲ್ಲದೆ ಇರುವುದರಿಂದಲೂ ಇಂತಾದಕ್ಕೆ ಅವಕಾಶವುಂಟಾಯಿತೆಂದು' ಹೇಳಲಾಗಿದೆ. ಇದು ನಮಗೂ ಸರಿಯೆಂದೇ ತೋರುತ್ತದೆ. ಇನ್ನುಮುಂದಾದರೂ ಇದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವುದು ಅವಶ್ಯಕ. ತಮ್ಮ ಸಾಂಪತ್ತಿಕಸ್ಥಿತಿಗೆ ಗಣಿಸದೆ ಹೆಚ್ಚು ಮಕ್ಕಳನ್ನು ಪಡೆಯುವ ಅಭಿಲಾಷೆಯು ಜನರಿಗಿದೆಯೆಂದು ಸೂಚಿಸಲ್ಪಟ್ಟಿದೆ. ಹೀಗಿದ್ದರೂ ಕೂಡ ದೇಶದಲ್ಲಿ ಜನರು ಹೆಚ್ಚಾಗಬೇಕಾಗಿರುವಲ್ಲು ಕಡಿಮೆಯಾಗಿರುವುದರ ಅರ್ಥವೇನು ? ಕೊಡಗಿನಲ್ಲಿ ಹುಟ್ಟಿ ಬೆಳೆದವರಲ್ಲಿ 1911 ರಲ್ಲಿ 3858 ಜನರು ಪರಪ್ರಾಂತ್ಯಗಳಲ್ಲಿದ್ದರೂ ಕೂಡ 1921 ರಲ್ಲಿ 2825 ಜನರು ಮಾತ್ರ ಈ ದೇಶದ ಹೊರಗೆ ಇದ್ದರಂತೆ. ಇದು ಶೋಚನೀಯವೇಸರಿ. ನಮ್ಮ ದೇಶದವರು ಕೂಪ ಕೂರ್ಮದಂತೆ ಇಲ್ಲಿಯೇ ಇರದೆ ಪರಪ್ರಾಂತ್ಯಗಳಿಗೆ ಹೋಗಿ ವಿದ್ಯಾ, ವ್ಯಾಪಾರ, ಕೈಗಾರಿಕೆ ಮೊದಲಾದುವುಗಳಲ್ಲಿ ತರಬೇತು ಹೊಂದಿ ವಾಪಾಸು ಬರುವುದರಿಂದ ನಮ್ಮ ದೇಶದ ಅಭಿವೃದ್ಧಿಗೆ ಬಹಳ ಉತ್ತೇಜನವುಂಟಾಗುವುದು. 'ಮೂವತ್ತು ನಲ್ವತ್ತು ವರ್ಷಗಳ ಹಿಂದೆ ಜಾರಿಯಲ್ಲಿದ್ದ ಅವಿಭಕ್ತ ಕುಟುಂಬ ಪದ್ಧತಿಯು ಈಗ ಅದೃಶ್ಯವಾಗುತ್ತಾ ಬಂದು ಪ್ರತಿಯೊಬ್ಬನು ತನ್ನ ಸ್ವಂತ ಅಭಿವೃದ್ಧಿಗೆ ಪ್ರಯತ್ನಿಸುತ್ತಿರುವನು. ಇದು ಕೆಡಕುಗಳಿಲ್ಲದ ಅನುಗ್ರಹವೆಂದು ಹೇಳಲಾಗುವುದಿಲ್ಲ. ಇದರಿಂದ ಕುಟುಂಬದ ಕೆಲವರು ಮಾತ್ರ ಅಭಿವೃದ್ಧಿ ಹೊಂದುವರು. ಜಮ್ಮ ಮತ್ತು ಉಂಬಳಿ ಭೂಮಿಗಳನ್ನು ಪಾಲುಮಾಡಿಕೊಡಲು ಸಾಧ್ಯವಿಲ್ಲದೆಹೋದರೂ ಕೂಡ ಜೀವನಾಂಶ ಪಾಲು ದೊರೆಯುವುದರಿಂದ, ಅಂಥಾ ಪಾಲು ಅನೇಕ ಸಂದರ್ಭಗಳಲ್ಲಿ ಬಹಳ ಕಡಿಮೆಯಾಗಿರುವುದರಿಂದ ಕುಟುಂಬದ ಬಾಕಿ ಮೆಂಬರುಗಳಿಗೆ ನ್ಯಾಯವಾದ ಜೀವನ ನಡಿಸುವುದೇ ಕಷ್ಟ' ಎಂದು ಬರೆದಿರುವ ವಿಷಯ ಪೂರ್ತಿ ನಿಜವಾಗಿದೆ. ಪೂರ್ವದ ಅವಿಭಕ್ತ ಕುಟುಂಬ ಪದ್ಧತಿಗೆ ದೇಶದವರು ಹಿಂತಿರುಗದೆ ಹೋದರೆ ಬಡತನವನ್ನು ನಿವಾರಿಸುವುದು ಸುಲಭಸಾಧ್ಯವಲ್ಲ. ಜಮ್ಮವೆಂದರೆ ಭೂಮಿಗೆ ಕೊಡಬೇಕಾದ ಅರ್ಧ ಕಂದಾಯವನ್ನು ಮಾತ್ರ ಕೊಡುವದೆಂತಲೂ, ಬಾಕಿ ಅರ್ಧವನ್ನು ಸರ್ಕಾರದವರು ಕರೆಯುವಾಗ ಮಿಲಿಟರಿ ಸರ್ವೀಸಿಗೆ ಹೋಗಬೇಕಾದುದಕ್ಕೆ ಮಾಫಿ ಕೊಟ್ಟಿದೆಂದೂ ಅರ್ಥವೆಂದು ಸೂಚಿಸಿರುವರು. ಇದು ಪೂರಾ ತಪ್ಪು ಅಭಿಪ್ರಾಯವೆಂದು ನಾವು ಎಷ್ಟೋಸಾರಿ ಪ್ರತಿಭಟಿಸಿರುತ್ತೇವೆ. ಈ ವಿಷಯ ಇನ್ನೊಂದು ಕಡೆಯಲ್ಲಿ ಪ್ರಕಟಿಸಿರುವ ಲೇಖನದಲ್ಲಿ ವಿವರವಾಗಿದೆ. ಇನ್ನಾದರೂ ಸರ್ಕಾರದವರು ಇಂಥಾ ತಪ್ಪು ಅಭಿಪ್ರಾಯಗಳನ್ನು ಎಣಿಯುವುದನ್ನು ನಿಲ್ಲಿಸಿಯಾರೆಂದು ನಮ್ಮ ನಂಬಿಕೆ.

'ದೇಶದ ಮುಖ್ಯ ಆಹಾರವು ಭತ್ತವಾಗಿದೆ. ಈ ಧಾನ್ಯವು ಇಲ್ಲಿಗೆ ಬೇಕಾಗುವುದಕ್ಕಿಂತ ಹೆಚ್ಚಾಗಿ ಉತ್ಪತ್ತಿಯಾಗುವುದರಿಂದ ಮಿಕ್ಕಿದನ್ನು ಹೆಚ್ಚಿನ ಲಾಭದಲ್ಲಿ ಪರಪ್ರಾಂತಕ್ಕೆ ಮಾರುವರು. ಕೊಡವರಲ್ಲಿ ಜೀವನದ ಖರ್ಚು ಗೌಡರುಗಳಿಗಿಂತ ಹೆಚ್ಚು. ಅವರಲ್ಲಿ ಅನುಕೂಲಸ್ಥರು ಬಹು ವಿದ್ಯಾವಂತರಾಗಿರುವರು ಮತ್ತು ಯೂರೋಪಿಯನರ ಜೀವನಕ್ರಮವನ್ನು ಕೆಲವುಮಟ್ಟಿಗೆ ಹಿಂಬಾಲಿಸುತ್ತಿರುವರು. ಬಾಕಿಯವರಲ್ಲಿ ಮುಖ್ಯವಾಗಿ ಗೌಡುಗಳವರು ಮೇಲಿನ ಗತಿಯ ಸುಖಜೀವನವನ್ನು ಹಿಂಬಾಲಿಸಲು ಪ್ರಯತ್ನಿಸುತ್ತಿರುವರು. ಸಂಬಳವು ಹೆಚ್ಚಾಗಿರುವುದರಿಂದ ಕೂಲಿಯವರುಗಳ ಜೀವನದ ತರಗತಿಯೂ ಕೂಡ ಸ್ವಲ್ಪ ಮೇಲೇರಿದೆ' ಎಂಬೀ ಅಭಿಪ್ರಾಯಗಳು ವರದಿಯಲ್ಲಿ ಕಂಡುಬರುತ್ತವೆ. ಮನೆಯ ಖರ್ಚು ಕಳೆದು ಮಿಕ್ಕಿದ ಭತ್ತವನ್ನು ಪರಪ್ರಾಂತ್ಯದವರಿಗೆ ಹೆಚ್ಚಿನ ಲಾಭದಲ್ಲಿ ಮಾರುತ್ತಾರೆಂಬುದು ಸರಿಯು. ಯುದ್ಧದ ಮುಂಚಿನ ಕ್ರಯಕ್ಕಿಂತ ಈಗ ಹೆಚ್ಚಿರಬಹುದು. ಆದರೆ ಬೇರೆ ಸಾಮಗ್ರಿಗಳ ಹೆಚ್ಚಾಗಿರುವ ಕ್ರಯಕ್ಕೆ ಭತ್ತದ ಕ್ರಯವನ್ನು ಹೋಲಿಸಿದರೆ ಇದೆಂದಿಗೂ ಲಾಭಕರವಲ್ಲವೆಂದೇ ಹೇಳಬೇಕು. ಕೊಡವರ ಮತ್ತು ಗೌಡುಗಳವರ ಜೀವನವಿಷಯ ಬರೆದ ಸಂಗತಿಯು ಸ್ವಲ್ಪವಾದರೂ ಸುಳ್ಳು. ಈ ವಿಷಯದಲ್ಲಿ ಅವರು ಇನ್ನಾದರೂ ಕಣ್ಣು ತೆರೆದು ಯುರೋಪಿಯನರ ಸುಖಜೀವನವನ್ನು ಬಿಟ್ಟು ನಮ್ಮ ಪೂರ್ವ ಮಿತವ್ಯಯ ಜೀವನಕ್ಕೆ ಹಿಂತಿರುಗಲಾರರೇ ? ಇಲ್ಲವಾದರೆ ದೇಶದ ಬಡತನವು ಹ್ಯಾಗೆತಾನೇ ನಿವಾರಣೆಯಾಗುವುದು. ಆಳುಗಳಿಗೆ ಸಂಬಳ ಹೆಚ್ಚಾದುದರಿಂದ ಅವರ ಜೀವನಕ್ರಮವೇನೂ ಮೇಲೇರಿರುವುದಿಲ್ಲ. ಆಹಾರ ಸಾಮಗ್ರಿಗಳ ವಿಪರೀತ ಬೆಲೆಯಿಂದ ಅವರ ಜೀವನವು ಇನ್ನೂ ಕಷ್ಟತರದಲ್ಲಿಯೇ ಇದೆಯೆಂದು ಹೇಳಬೇಕು.

ಬೆಂಗಳೂರು ಕೊಡಗರ ಸಭೆ

ಈ ಸಭೆಯ 13ನೇ ವಾರ್ಷಿಕೋತ್ಸವ ಮತ್ತು ಕೈಲ್‌ಮುಹೂರ್ತ ಹಬ್ಬವು ಇದೇ ಮಾಹೆ 16ನೇ ತಾರೀಖು ಭಾನುವಾರ "ಲಾಲ್‌ಬಾಗಿ" ನಲ್ಲಿ ಬೆಳಗ್ಗೆ 9 ಘಂಟೆಯಿಂದ ಸಾಯಂಕಾಲ 6 ಘಂಟೆವರೆಗೆ ಬಹಳ ವಿಜೃಂಭಣೆಯಿಂದ ನಡೆಯಿತು. ಸ್ಥಳೀಯ ಕೊಡಗರೂ, ಇತರ ಕಡೆಯಿಂದ ಬಂದಿದ್ದ ಕೊಡಗ ಅತಿಥಿಗಳೂ ಸೇರಿ ಸಾಧಾರಣವಾಗಿ ನೂರು ಜನರವರಿಗೂ ನೆರೆದಿದ್ದರು. ಸ್ಥಳೀಯ ಕೊಡಗರಲ್ಲಿ ಡಾಕ್ಟರ್ ಕೋರವಂಡ್ರ ಅಪ್ಪಯ್ಯನವರೂ, (ಪ್ರೆಸಿಡೆಂಟರು) ಅವರ ಪತ್ನಿಯವರೂ, ಮೆ|| ಕೋವಂಡ್ರ, ಎ ವಣಯ್ಯನವರೂ, (ಜೈಲ್ ಸುಪರಿಂಟೆಂಡಂಟರು) ಅವರ ಪತ್ನಿಯವರು, ಮಗ ಚಿಣ್ಣಯನವರೂ, ಮೆ|| ಕೋದಂಡ ಯಮ್ ಕಾರ್‍ಯಪ್ಪನವರೂ (ಎಲಿಕ್ಟ್ರಿಕಲ್ ಇಂಜನೀಯರ) ಅವರ ಪತ್ನಿಯವರೂ, ಮಕ್ಕಳೂ, ಮೆ|| ಕೋದಂಡ ಯಸ್. ಕಾರ್‍ಯಪ್ಪನವರೂ, ಮೆ|| ಕೊಡೆಂದೆರ, ಜೆ ಮಂದಣ್ಣನವರೂ, ಪತ್ನಿ ಮತ್ತು ಮಕ್ಕಳೂ ಮೆ|| ಕೊಂಗಟ್ಟೆರ ಅಪ್ಪನವರೂ. ಮೆ|| ಕುಲ್ಲಚಂಡ್ರ ಕರುಂಬೈಯ್ಯನವರೂ ಅವರ ಪತ್ನಿ ಮಕ್ಕಳೂ. ಮೆ|| ಕೇಳಪಂಡ್ರ ಚಿಂಣಪ್ಪನವರೂ ಅವರ ಪತ್ನಿಯವರೂ ಮೆ|| ಪಾಡಂಡ್ರ ಜೆ ಚಂಗಪ್ಪನವರೂ ಅವರ ಪತ್ನಿಯವರೂ ಮೆ|| ಮುಕ್ಕಾಟಿರ ದೇವಯ್ಯನವರೂ, ಪೆಕಂಡ್ರಕಂಡ್ರ ಅಪ್ಪಚ್ಚನವರೂ, ಮೆ|| ಐಚಟ್ಟಿರ ಪೊನ್ನಪ್ಪನವರೂ, ಮೆ|| ಕೋದಂಡ್ರ ಸಿ. ಮಾದಪ್ಪನವರೂ. ಮೆ|| ಕೋಡೀರ, ಅಪ್ಪಣ್ಣನವರೂ ಇನ್ನೂ ಅನೇಕರೂ (ಅವರ ಹೆಸರುಗಳನ್ನೆಲ್ಲಾ ಸ್ಥಳ ಸಾಲದ್ದರಿಂದ ಬರೆಯಲು ಅಸಾಧ್ಯವು) ಮತ್ತು ಅತಿಥಿಗಳ ಪೈಕಿ ಮೆ|| ಅಪ್ಪಾರಂಡ ಮಾದಪ್ಪನವರೂ (ಯಗ್ಜಿಕ್ಯೂಟಿವ್ ಇಂಜಿನೀಯರು) ಅವರ ಪತ್ನಿಯವರೂ. ಮಗಳೂ, ಮೆ|| ಕಂಡೀರಂಡ ಗಣಪತಿಯವರ (ಬ್ಯಾರಿಷ್ಟರ್ ಆಟ್ ಲಾ), ಮಿಸೆಸ್ ಕೋದಂಡ, ಎ ನಂಜಪ್ಪನವರೂ, ಮೆ|| ಗುಡ್ಡಂಡ್ರ ಐಯ್ಯಪ್ಪನವರೂ ಮೆ|| ನೆವಂಡ್ರ ಮಾಚೈಯ್ಯನವರೂ, ಮೆ|| ಕೆ. ಕಾರ್‍ಯಪ್ಪನವರು ಇನ್ನೂ ಅನೇಕರು ಸಭೆಯನ್ನು ಅಲಂಕರಿಸಿದ್ದರು. ಇನ್ನು ಮುಂದಿನ ಕಾರ್‍ಯಗಳಿಗೂ ಹೀಗೆ ಯೆಲ್ಲರೂ ಮುಂದುವರಿದು ಈ ಕಾರ್‍ಯವನ್ನು ಅತಿ ವಿಜೃಂಭಣೆಯಿಂದಲೂ ಸಂತೋಷದಿಂದಲೂ ನಡೆಯಿಸಲು ಸೇರಿ ನೆರವೇರಿಸುವ ಆಸ್ಪದವನ್ನು ಕೊಟ್ಟು ಪಾಲುವರಾಗಿ ಕೋರುತ್ತೇವೆ.

ಎರಡು ಮೂರು ದಿವಸಗಳ ಹಿಂದೆ ಬಹಳ ಮಳೆಯಾಗಿದ್ದದ್ದು ಆ ದಿನದ ಮಟ್ಟಿಗೆ ದೇವರ ದಯೆಯಿಂದ ಬಿಡುಗಡೆಯಾಗಿ ಕೊಡಗಿನವರ ಕುಲಾಚಾರದ ವಿನೋದಗಳಿಗೆ ಬಹಳ ಅನುಕೂಲವಾಗಿತ್ತು. ಸುಮಾರು 9 ಗಂಟೆಗೆ ಆಯುಧಪೂಜೆಯನ್ನು ಮೆ|| ಗುಡ್ಡಂಡ್ರ ಐಯ್ಯಪ್ಪನವರು ನಡಿಸಿದನಂತರ, ನೆರೆದಿದ್ದ ಜನಗಳೆಲ್ಲರೂ ಮೈದಾನಕ್ಕೆ ಸ್ಪೋರ್ಟ್ಸ್‌ಗೋಸ್ಕರವಾಗಿ ತೆರಳಿದರು. ಅಲ್ಲಿ ಪರಸ್ಪರ ತೆಂಗಿನ ಕಾಯಿ ಹೋರಾಟ, ತೆಂಗಿನಕಾಯಿ ಗುರಿಹೊಡಿಯುವುದು ಗುಂಡು ಎಸೆಯುವುದು ಮುಂತಾದ ಇನ್ನೂ ಅನೇಕ ವಿನೋದಗಳು 12 ಗಂಟೆಯ ವರೆಗೂ ನಡೆದವು. ತದನಂತರ ನೆರೆದ ಜನರೆಲ್ಲರೂ, ಭೋಜನಕ್ಕೆ ಕೂತರು. ಈ ಸಂಧರ್ಭದಲ್ಲಿ ಸ್ತ್ರೀ ಪುರುಷರೆಲ್ಲರೂ ಒಂದೇ ಪಂತಿಯಲ್ಲಿ ಕುಳಿತು ಭೋಜನ ಮಾಡಿದ್ದು ಬಹಳ ಸಂತೋಷಕರವಾದ ವಿಷಯವಾಗಿದೆ. ಇದು ಅಲ್ಲದೆ ಯಾವ ವಿಧವಾದ ನಿಷಿದ್ಧ ಪದಾರ್ಥವೂ ಇಲ್ಲದಿದ್ದದ್ದು ಬಹಳ ಶ್ಲಾಘನೀಯವಾದದ್ದಾಗಿದೆ. ಊ

ವಾದನಂತರ ಸಭೆಯ ಗ್ರೂಪು ಫೋಟೋ ತೆಗಯಲ್ಪಟ್ಟಿತು. ಪುನಃ ನೆರೆದವರೆಲ್ಲರೂ ಮೈದಾನಕ್ಕೆ ಸ್ಪೋರ್ಟ್ಸಿಗೋಸ್ಕರವಾಗಿ ಹೋದರು. ಸಣ್ಣ ಮಕ್ಕಳಿಗೂ, ಯೌವನಸ್ಥರಿಗೂ, ಮತ್ತು ಪ್ರಾಯಸ್ಥರಿಗೂ ಕಕ್ಕಂಥಾ ಪಂದ್ಯಾಟಗಳೂ ನಡೆದವು. ಇದಾದನಂತರ ಎಲ್ಲರೂ ಫಲಾಹಾರಗಳನ್ನು ಸೇವಿಸಿದ ಬಳಿಕ, ಸಂಗೀತಗಾನಗಳು ನಡೆದವು.

ಆ ಬಳಿಕ ಪಂದ್ಯಾಟಗಳಲ್ಲಿ ಗೆದ್ದವರಿಗೆ ಸಂಘದ ಪ್ರೆಸಿಡೆಂಟರು ಡಾಕ್ಟರ್ ಅಪ್ಪಯ್ಯನವರು [illegible] ಇನಾಮುಗಳನ್ನು ಕೊಟ್ಟರು.

ನೂರುಗಜ ಓಟದಲ್ಲಿ ಮೊದಲನೇ ಇನಾಮು ಮ|| ಕೆ ಬಿ ಮುತ್ತಣ್ಣನವರಿಗೆ
ಗುಂಡು ಎಸೆಯುವುದರಲ್ಲಿ " , ಕೋದಂಡ್ರ ಮಾದಪ್ಪನವರಿಗೆ
ಚಕ್ರ ಓಟದಲ್ಲಿ " , ಐಚಟ್ಟಿ ಪೊನ್ನಪ್ಪನವರಿಗೆ
ಮೇಲೆ ಹಾರುವುದರಲ್ಲಿ , ಕೋದಂಡ್ರ ಮಾದಪ್ಪನವರಿಗೆ
(high jump)
ಮೇಲೆ ಹಾರುವುದರಲ್ಲಿ
ಸ್ಪೆಸಿಯಲ್ ಬಹುಮಾನ , ಮಾಚಯ್ಯನವರಿಗೆ
ಮೂರುಕಾಲು ಓಟದಲ್ಲಿ { " , ಮಾದಪ್ಪನವರೂ ಅಪ್ಪಾರಂ
" ತಿಮ್ಮಯ್ಯನವರಿಗೂ [?]
ಮಕ್ಕಳ ಓಟದಲ್ಲಿ ಅಪ್ಪಾಜಯ್ಯನವರಿಗೂ
ಹುಡುಗರ ಓಟದಲ್ಲಿ ಮಿಸ್, ಸೀತಮ್ಮನವರಿಗೂ
ತಂಗಿನಕಾಯಿ ಹೋರಾಟದಲ್ಲಿ ಮ|| ಪಿ ಉತ್ತಯ್ಯನವರಿಗೆ
ಮೈಲ್ ಓಡುವುದರಲ್ಲಿ , ಕೋದಂಡ ಅಪ್ಪಣ್ಣನವರಿಗೆ
ತೆಂಗಿನಕಾಯಿ ಗುರಿ ಹೊಡೆಯುವದರಲ್ಲಿ ಗುಡ್ಡಂಡ್ರ ಬಿಯುಪ್ಪನವರಿಗೆ
ಪೀಲ್ ಬ್ಯಾರೊ ಓಟದಲ್ಲಿ { , ಕೆ. ಅಪ್ಪಚ್ಚನವರಿಗೂ
, ಐಚಟ್ಟಿ ಪೊನ್ನಪ್ಪನವರಿಗೂ
ಫ್ಲಾಟ್ ಅಬ್‌ಸ್ಟೆಕಲ
ಅಬ್‌ಸ್ಟೆಕಲ ರೇಸಿನಲ್ಲಿ , ಪಿ ಮೊಣ್ಣಪ್ಪನವರಿಗೂ
ಕೊಡಲ್ಪಟ್ಟವು.

ಒಡ್ಡಿಗಳು ಮೆ|| ಅಪ್ಪಾರಂಡ ಮಾದಪ್ಪನವರೂ ಮೆ|| ಕೋದಂಡ ಮಾಚೈಯ್ಯನವರೂ, ಮೆ|| ಕೆ ಯಸ್ ಕಾರ್ಯಪ್ಪನವರೂ ಮೆ|| ಕೆ ಪಿ ಕಾಳಪ್ಪನವರೂ ಆಗಿದ್ದರು.

ಮೆ|| ಐಚಟ್ಟಿ ಪೊನ್ನಪ್ಪನವರೂ ಈ ವರ್ಷದ ಛಾಂಪಿಯನ್‌ಶಿಪ್ ಮೆಡಲನ್ನು ಪಡೆದರು. ಮೆ|| ಕೋದಂಡ ಮಾದಪ್ಪನವರು ಪಾಯಿಂಟುಗಳಲ್ಲಿ ಎರಡನೇಯವರು. ಇವರು ಪೈಪೋಟಿಯನ್ನು ಚೆನ್ನಾಗಿ ಹಾರಿದರು. ಮೆ|| ಕೋದಂಡ ಅಪ್ಪಣ್ಣನವರು ಒಂದು ಮೈಲ್ ಸರತ್ತಿನಲ್ಲಿ ಉತ್ಸಾಹದಿಂದ ಚೆನ್ನಾಗಿ ಓಡಿದರು.

ಮುಂದಿನ ವರ್ಷದ ಮುಖ್ಯ ಕಾರ್ಯದರ್ಶಿಗಳನ್ನು ಚುನಾಯಿಸಲ್ಪಟ್ಟಿತು. ಈ ವರ್ಷದ ಪ್ರೆಸಿಡೆಂಟರು ಡಾಕ್ಟರ್ ಅಪ್ಪಯ್ಯನವರನ್ನು ಈ ಸಂಘದ ಪೇಟ್ರನ್ನರಾಗಿಯೂ ಮೆ|| ಕೋದಂಡ ಮಾಚಯ್ಯನವರನ್ನು ಪ್ರೆಸಿಡೆಂಟರಾಗಿಯೂ, ಈ ವರ್ಷದ ವೈಸ್ ಪ್ರೆಸಿಡೆಂಟರು ಮೆ|| ಕೋದಂಡ್ರ ಯಸ್ ಕಾರ್ಯಪ್ಪನವರನ್ನೂ ಪುನಃ ವೈಸ ಪ್ರೆಸಿಡೆಂಟರಾಗಿಯೂ, ಮೆ|| ಕೆ ಪಿ ಕಾಳಪ್ಪನವರನ್ನು ಸೆಕ್ರೆಟರಿಯಾಗಿಯೂ [illegible] ಕರುಂಬೈಯನವರನ್ನು ಪುನಃ ಟ್ರೆಸರರನ್ನಾಗಿಯೂ ಚುನಾಯಿಸಲ್ಪಟ್ಟಿತು. ಬಾಕಿ ಮೆಂಬರುಗಳನ್ನು ಚುನಾಯಿಸಲು ಸಮಯವಿಲ್ಲದಿದ್ದುದರಿಂದ ಇನ್ನೊಂದು ದಿವಸಕ್ಕೆ ಆ ಕಾರ್ಯವನ್ನು ಜಾರಿಗಿಸಿದರು.

ಈ ವರ್ಷದ ಪ್ರೆಸಿಡೆಂಟರು ಸಮಾಜದ ಕೆಲಸವನ್ನೂ ವಾರ್ಷಿಕೋತ್ಸವವನ್ನೂ ನಿರ್ವಿಘ್ನವಾಗಿ ನಡೆಯಿಸಿ ಕೊಟ್ಟದ್ದಕ್ಕಾಗಿ ದೇವರಿಗೆ ವಿನಯ ಪೂರ್ವಕವಾಗಿ ಪ್ರಾರ್ಥನೆಯನ್ನು ಮಾಡಿ ಸಮಾಜದ ಕಾರ್ಯದರ್ಶಿಗಳೂ ಸ್ವಾರ್ಥತ್ಯಾಗಿಗಳಾಗಿ ಹೆಚ್ಚಿನ ಶ್ರಮ ತೆಗೆದುಕೊಂಡು ಕೆಲಸ ಮಾಡಿದವರಿಗೆಲ್ಲಾ ವಂದಿಸಿ ಸಭೆಯವರ ಕೋರಿಕೆಯ ಮೇರೆ ಯುವಕರಿಗೆ ಸ್ವಲ್ಪ ಬುದ್ಧಿವಾದ ಮಾತನ್ನು ಹೇಳಿ ಹಬ್ಬದ ಮುಖ್ಯ ತಾತ್ಪರ್ಯವನ್ನು ತಿಳಿಸಿದರು. ಮುಂದಿನ ವರ್ಷದ ಪ್ರೆಸಿಡೆಂಟರು ಮಾಚಯ್ಯನವರು ಸಮಾಜದ ಮೆಂಬರುಗಳು ಎಲ್ಲರೂ ಮಿತ್ರಭಾವದಿಂದ ಆಟ ಬೋಜನಗಳಲ್ಲಿ ಕಲೆತು ಕಾರ್ಯವನ್ನು ಸಂತೋಷದಿಂದ ನೆರವೇರಿಸಿದುದಕ್ಕೆ ಅವರ ಸಂತೋಷವನ್ನು ಸೂಚಿಸಿದರು. ಚಕ್ರವರ್ತಿ [illegible] ಪ್ರಭುಗಳಿಗೂ ವೈಸರಾಯ ಮಹಾಪ್ರಭುಗಳಿಗೂ [illegible] ಜಯವರಿಗೂ ತ್ರಿಚೀಯರ್ಸ್ ಕೊಟ್ಟನಂತರ ಸಭೆಯನ್ನು ಮುಕ್ತಾಗೊಳಿಸಿದರು.

ಮೆ|| ಅಪ್ಪಾರಂಡ [illegible] ಮಾದಪ್ಪನವರೂ ಹಣ್ಣು ಹಂಪಲುಗಳನ್ನೂ, [illegible]|| ಗುಡ್ಡಂಡ್ರ ಬಿಯುಪ್ಪನವರು ಏದು ರೂಪಾಯಿ [illegible]ಗಳನ್ನು ಸಭೆಗೆ ಬಹುಮಾನವಾಗಿ ಕೊಟ್ಟು ಸಭೆಯ ಶ್ರೇಯೋಭಿವೃದ್ಧಿಯನ್ನು ಕೋರಿದುದಕ್ಕೆ ಸಭೆಯವರು ಅವರಿಬ್ಬರಿಗೂ ತುಂಬಾ ಕೃತಜ್ಞರಾಗಿದ್ದಾರೆಂಬುದನ್ನು ತಿಳಿಯಪಡಿಸಲಾಗಿದೆ.

ಸೆಕ್ರೆಟರಿ.

ಓಂ.

ಶ್ರೀ ಜೀವದಯಾ ಪ್ರಚಾರಕ ಮಂಡಲಿ.

ದೊಡ್ಡಬಳ್ಳಾಪುರ.

ದಯೆಯೇ ದೇವರು, ದಯೆಯುಳ್ಳ ಹೃದಯವೇ ದೇವಾಲಯ.

ಅಹಿಂಸಾ ಪರಮೋ ಧರ್ಮಃ | ಅಹಿಂಸಾ ಪರಮಂ ತಪಃ ||
ಅಹಿಂಸಾ ಪರಮಂ ದಾನಂ | ಇತ್ಯಾಹುರ್ಮುನಯಃ ಸದಾ ||

ಎಂಬಂತೆ ಹಿಂಸೆಮಾಡದಿರುವುದೇ ಶ್ರೇಷ್ಟವಾದ ಧರ್ಮವು. ಹಿಂಸೆಮಾಡದಿರುವುದೇ ಶ್ರೇಷ್ಟವಾದ ದಾನವು. ಎ[illegible] ಮಹನೀಯರು ಹೇಳುತ್ತಿರುವರು. ಅದ್ದರಿಂದ [illegible] ಪ್ರಾಣಿಗಳ ವಿಷಯದಲ್ಲಿ ಹೇಗೆ ನಡೆದುಕೊಳ್ಳ[illegible]ಬೇಕೆಂಬುದನ್ನು ನಾವು ವಿಶೇಷವಾಗಿ ಗಮನಿಸ[illegible] ನಮ್ಮ ಜನ್ಮಕ್ಕೆ ಮೋಕ್ಷವನ್ನು [illegible] ಕರ್ತವ್ಯವಾಗಿದೆ.

ಪ್ರವಿಶಂತಿ ಯಥಾ ನದ್ಯಃ | ಸಮುದ್ರಂ ಋಜುವಕ್ರಗಾಃ ||
ಸರ್ವೇ ಧರ್ಮಾ ಅಹಿಂಸಾಯಾಂ | ಪ್ರವಿಶಂತಿ ತಥಾ ದೃಢಂ ||

ಎಂತೆ ಸಮಸ್ತ ನದಿಗಳೂ ಹೇಗೆ ಸಾಗರವನ್ನು ಸೇರುವುವೋ ಹಾಗೆಯೇ ಸಮಸ್ತ ಧರ್ಮಗಳೂ ಅಹಿಂಸೆಯಲ್ಲಿ ಅಡಗಿಕೊಂಡಿರುವುವೆಂದು ಧರ್ಮಶಾಸ್ತ್ರಗಳು ಸಾರುತ್ತಿರುವುವು.

[illegible] ಕಾಲದಲ್ಲಿ ಹಿಂದಿನ ಕಾಲದಲ್ಲಿದ್ದ [illegible]ಗಳು ಅಂದರೆ ಮನು, ಬುದ್ಧ, ವರ್ಧಮಾನ [illegible], ಸ್ವಾಮಿ ವಿವೇಕಾನಂದ, ಸ್ವಾಮಿ ದಯಾನಂದರೇ ಮೊದಲಾದ ಅನೇಕ ಮಹನೀಯರುಗಳು ತಮ್ಮ ಜೀವಿತಕಾಲವನ್ನೆಲ್ಲಾ ಪ್ರಾಣಿರಕ್ಷಣೆಗಾಗಿಯೂ ಅಹಿಂಸಾ ಉಪದೇಶಕ್ಕಾಗಿಯೂ ಧಾರೆ ಎರೆದಿದ್ದರೆನ್ನುವುದು ಭಾರತಪುತ್ರರಿಗೆ ತಿಳಿಯದ ವಿಷಯವಲ್ಲ.

ನಮ್ಮ ಜೀವಿತ ಮಾತಾ [illegible] ನಮ್ಮನ್ನು ಮತ್ತು ನಮ್ಮ ಮಕ್ಕಳು ಮರಿಗಳನ್ನು ಕಾಪಾಡಿ ನಮಗೆ ಆಯುರಾರೋಗ್ಯೈಶ್ವರ್ಯಾದಿಗಳು ಹೆಚ್ಚಿಸಿ ಮಹದುಪಕಾರವನ್ನುಂಟುಮಾಡುವ ಬಡ ಮೂಗು ಪ್ರಾಣಿಗಳ ವಿಷಯದಲ್ಲಿ ನಾವು ದಿನಕ್ಕೆ ಅಥವಾ ವಾರಕ್ಕೆ ಒಂದಾವರ್ತಿಯಾಗಲಿ ಅವುಗಳ [illegible] ಕಷ್ಟಗಳ ವಿಷಯದಲ್ಲಿ ಆಲೋಚನೆ ಮಾಡದೇ ಹೋದರೆ ನಮ್ಮ ಮನುಷ್ಯಜನ್ಮಕ್ಕೆ ಎಂದಿಗೂ ಶ್ರೇಯಸ್ಸುಂಟಾಗಲಾರದು. ಅಹಿಂಸಾವ್ರತವನ್ನವಲಂಬಿಸದೆ ಮಾಡುವ ಪೂಜೆ ಪುನಸ್ಕಾರಗಳೂ, ಜಪತಪಗಳೂ, ದಾನಧರ್ಮಗಳೂ ಮೊದಲಾದ ಸತ್ಕಾರ್ಯಗಳೆಲ್ಲವೂ ನೀರಿನಲ್ಲಿ ಮಾಡಿದ ಹೋಮದಂತೆ ಸರಿಯೇ ಹೊರತು ಬೇರೆ ಅಲ್ಲ.

ನಾವು ಹಾಕಿದ ಹುಲ್ಲು ಸೊಪ್ಪನ್ನು ತಿಂದು ನಮಗೆ ಅಮೃತತುಲ್ಯವಾದ ಪದಾರ್ಥಗಳನ್ನು ಕೊಡುವುದಲ್ಲದೆ ಊರಿಂದೂರಿಗೂ ಭಾರವಾದ ಸಾಮಾನುಗಳನ್ನು ಸಾಗಿಸುವುದಕ್ಕೂ ಸವಾರಿಮಾಡಲಿಕ್ಕೂ ಅನುಕೂಲವಾಗಿರುವ ಗೋವುಗಳು, ಎತ್ತುಗಳು, ಕೋಣಗಳು, [illegible]ಗಳು, ಕತ್ತೆಗಳು, ಆಡುಗಳು, ಇವೇ ಮೊದಲಾದ ಅನೇಕ ವಿಧವಾದ ಬಡ ಮೂಗುಪ್ರಾಣಿಗಳ ಕಷ್ಟ[illegible] ಸಂಕ್ಷೇಪವಾಗಿ ವಿವರಿಸಬೇಕಾದ್ದು ಅವಶ್ಯವಿರುತ್ತೆ.

1 ಗೋವುಗಳು:—ಇವುಗಳಿಗೆ [illegible] ಹುಲ್ಲು ನೀರನ್ನು ಕೊಡದೆ [illegible] ರುವ ಎಳೆ ಕರುಗಳಿಗೆ ಸರಿಯಾಗಿ ಹಾಲನ್ನು ಕುಡಿಸದೆ ತಾವುಗಳೇ ನಿರ್ದಯವಾಗಿ ಹಾಲನ್ನು [illegible] ಗಿಸಿಕೊಳ್ಳುವರು.

2. ಎತ್ತು, ಕುದುರೆ, [illegible] ಗಾಡಿಗಳಲ್ಲಿ [illegible] ಮಿತಿಮೀರಿ ಭಾರವಾದ ಸಾಮಾನುಗಳನ್ನು ಹಾಕಿ ಅವು ಎಳೆಯಲಾರದೇ ಹೋದರೆ ಅದಕ್ಕೆ [illegible] ಚಾವುಕಗಳಿಂದ ನಿರ್ದಯವಾಗಿ ಹೊಡೆದು ತಿವಿಯಲಾರದಷ್ಟು ಯಾತನೆಯನ್ನು [illegible] ಕೆಲಸಮಾಡಿಸುವರು.

3 [illegible]

4 [illegible] ಕಾಲುಗಳನ್ನು ಕಟ್ಟಿ [illegible] ಕಟ್ಟುವರು. ಇವೇ ಮೊದಲಾದ ಅನೇಕ [illegible] ನೋಡಿ [illegible]?

ಹೀಗೆ ನಮ್ಮ [illegible] ಅಭಿವೃದ್ಧಿಮಾಡಲಿಕ್ಕೆ [illegible] ತ್ತಿರುವ ಸಾಧು [illegible] ಬಿಡುವುದು ಧರ್ಮವಾಗಿದೆ.

ಇನ್ನು ಕೆಲವು ಮೂಗು ಪ್ರಾಣಿಗಳು [illegible] ನರರನ್ನು ವಿವರಿಸದೇ [illegible] ವಾಗಿದೆ.

ಆಡುಗಳು:—ಇವುಗಳು ನಮಗೆ [illegible] ಹಾಲನ್ನು ನಮ್ಮ [illegible] ಗೊಬ್ಬರವನ್ನೂ ಇಷ್ಟೇ ಅಲ್ಲದೆ ಅವುಗಳ ಕೊಡಿಯಲಿಕ್ಕೆ ದೇವರಿಂದ ಹೊಂದಿದ [illegible] ಯನ್ನೆಲ್ಲಾ ನಮಗೂ ನಮ್ಮ ಮಕ್ಕಳು ಮರಿಗಳಿಗೂ ಕೊಟ್ಟು ನಮ್ಮನ್ನು ಧಳಿ, [illegible], [illegible]ಗಳಿಂದ ಕಾಪಾಡುತ್ತವೆ.

ಕೋಳಿಗಳು:—ಇವು ಮನೆ ಸುತ್ತುಮುತ್ತಲಿರುವ [illegible] ಕ್ರಿಮಿಗಳನ್ನೆಲ್ಲಾ ತಿಂದು ರೋಗಕ್ಕೆ ಆಸ್ಪದವಾಗಿರುವ ಕ್ರಿಮಿಕೀಟಾದಿಗಳನ್ನು ನಾಶಪಡಿಸಿ ಕಾಲಕಾಲಕ್ಕೆ ಗಡಿಯಾರದಂತೆ ಕೂಗುತ್ತಾ ನಮ್ಮ ಕೆಲಸ ಕಾರ್ಯಗಳಿಗೆ ಸಹಾಯಕಾರಿಗಳಾಗಿರುವುವು. ಇವಕ್ಕೆ ಒಬ್ಬ ಮಹನೀಯರು (Village clocks) ಹಳ್ಳಿಗಳ ಗಡಿಯಾರಗಳೆಂಬುದಾಗಿ ಹೇಳಿರುವರು.

ಮೀನುಗಳು:—ಇವುಗಳು ನೀರಿನಲ್ಲಿದ್ದ ಕೆಟ್ಟ ಹುಳುಗಳನ್ನೆಲ್ಲಾ ತಿಂದು ನಮಗೆ ಜಲಯಂತ್ರಗಳಂತೆ ಶುದ್ಧವಾದ ನೀರನ್ನು ಒದಗಿಸಿ ನಮ್ಮನ್ನು ರೋಗಗಳಿಂದ ಕಾಪಾಡುತ್ತವೆ. ಇಂಥಾ ಅಮೋಘವಾದ ಉಪಕಾರವನ್ನುಂಟುಮಾಡುವಂಥಾ ಪ್ರಾಣಿಸಮೂಹವನ್ನು ಉದ್ಧರಿಸಲಿಕ್ಕೆ ಬದಲಾಗಿ ಕ್ರೂರವಾದ ಶಸ್ತ್ರಗಳಿಂದ ಸ್ವಲ್ಪವಾದರೂ ದಯೆ ಇಲ್ಲದೆ ಸಂಹರಿಸುವುದು ಯಾವ ಧರ್ಮ, ಯಾವ ಆಚಾರ, ಯಾವ ನ್ಯಾಯ.

ಈ ಸಾಧು ನಿರ್ದೋಷ ಬಡಮೂಗು ಪ್ರಾಣಿಗಳನ್ನು ಸ್ವಲ್ಪವೂ ಕನಿಕರವಿಲ್ಲದೆ ಮಾರಮ್ಮ, ಮುಸಲಮ್ಮ, ದಂಡಿನಮಾರಮ್ಮ, ಪಿಳ್ಳಮ್ಮ, ದುಗ್ಗಮ್ಮ, ದುರ್ಗಮ್ಮ, ತಿಪ್ಪಮ್ಮ, ತಿಪ್ಪಲಮ್ಮ ಮೊದಲಾದ ಕಲ್ಪಿತದೇವರುಗಳ ಮುಂದು ಬಲಿ ಕೊಡುವುದು ಯಾವ ಧರ್ಮಶಾಸ್ತ್ರದ ಪದ್ಧತಿ. ದೇವರುಗಳು ಬಲಿ ಕೇಳವುದುಂಟೇ, ಇದು ಎಂಥಾ ಅಜ್ಞಾನದ ಮಾತು. ದೇವರು ದಯಾಸ್ವರೂಪಿಯಲ್ಲವೇ? ಪ್ರಾಣಿವರ್ಗಗಳೆಲ್ಲವೂ ಆ ಮಹಾಮಹಿಮನಿಂದ ಸೃಜಿಸಲ್ಪಟ್ಟಿಲ್ಲವೇ? ಪ್ರಾಣಿಗಳೆಲ್ಲವೂ ಅವನ ಮಕ್ಕಳೆಂದಾಗಲಿಲ್ಲವೇ? ಅಂಥಾ ಪ್ರಾಣಿಗಳನ್ನ ತಂದೆಯೋ ಮಾದಿಯಲ್ಲಿ ಸಂಹರಿಸುತ್ತಿರುವಂಥಾ ಆ ಅಜ್ಞಾನಿ ಮನುಷ್ಯನು ಬಲಿ ಕೇಳುತ್ತಾನೆಯೇ? ಎಂದಿಗೂ ಇಲ್ಲ. ಇದು ತಿಳವಳಿಕೆ ಇಲ್ಲದ ಕೆಲಸ. ಈ ಆಚಾರ ಯಾವ ವೇದ, ಯಾವ ಸ್ಮೃತಿ, ಯಾವ ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ? ಯಾವುದರಲ್ಲಿಯೂ ಇಲ್ಲ. ಪ್ರತಿಯೊಬ್ಬ ಮಹನೀಯನೂ ಪ್ರತಿಯೊಂದು ಸದ್ಗ್ರಂಥವೂ ಪ್ರಾಣಿದಯೆ ಮಾಡಬೇಕೆಂದೇ ಹೊರತು ಪ್ರಾಣಿಗಳನ್ನ ಕೊಲ್ಲಬೇಕೆನ್ನುವುದಿಲ್ಲ.

ಪಾಶ್ಚಿಮಾತ್ಯ ದೇಶದಲ್ಲೂ ದೊಡ್ಡದೊಡ್ಡ ಡಾಕ್ಟರುಗಳು [illegible] ಮಾಂಸಾಹಾರವು ಒಳ್ಳೆಯದಲ್ಲವೆಂತಲೂ ಅನೇಕ ಕಾರಣಗಳನ್ನು ತೋರಿಸಿ [illegible] ಅನೇಕ [illegible] ಸಂಘ[illegible] ಮಾಂಸಾಹಾರ [illegible] ವರು [illegible] ಈ ರೀತಿ ನಡೆ[illegible] ನಮ್ಮ ಈ ಪವಿತ್ರವಾದ [illegible] ಯಾವಾಗಲೂ [illegible] ಹಿಂದೆ [illegible] ಮಹನೀಯರುಗಳು ಅಹಿಂಸಾ [illegible] ಅಹಿಂಸೋಪದೇಶಕರಾಗಿ [illegible] ಪ್ರಾಣಿರಕ್ಷಣಾಲಯಗಳನ್ನು ಸ್ಥಾಪಿಸುವುದರಲ್ಲಿ ನಿರತರಾಗಿದ್ದರು. ಈಗಲಾದರೋ ಯಾವ ಪಟ್ಟಣದಲ್ಲಿ ಯಾವ ಗ್ರಾಮದಲ್ಲಿ ಯಾವ ಹಳ್ಳಿಯಲ್ಲಿ ನೋಡಿದರೂ [illegible] ಹತ್ಯಾಶಾಲೆಗಳು [illegible] ಅಹಿಂಸೋಪದೇಶಕರೂ ಪ್ರಾಣಿರಕ್ಷಣಾಲಯಗಳೂ [illegible] ಬಹಳ ಅಪೂರ್ವವಾಯಿತು.

ಈ ವಿಷಯವಾಗಿ ಒಬ್ಬ ಮಹನೀಯರು ಹೇಳಿರುವುದೇನೆಂದರೆ —

ಬಗೆಬಗೆಯಹೆಗಳಿಂದ ಸಂತೋಷಗೊಳಿಸವ | ಸೋಗಸಾದ ಪಕ್ಷಿಜಾಲಗಳನ್ನೂ | ದಿನದಿನಕ್ಕೆ [illegible]
ವಿನಾಶಿಸುತ್ತಲಿ ಪರೆ ಮೊದಲಾದ ವಸ್ತುಗಳಿಂದ |
ಸನುಮಾಸ್ತ್ರವೇ ಬಾಯಿಸೀರಾಡುತಿಹ ಪಳ್ಳಗಳಿಗೆ
ಬೇಕಾದಷ್ಟು [illegible] || [illegible]
[illegible]ವನಂದಿಗೆ ಸೇರಾದ | ಉಪ್ಪಿನಕಾಯ್ಗಳದರಿಂ,

ಹಾಲುಮೊಸರು ಸಮೃದ್ಧಿಯಾಗಿರುತಿರಲ್ಕೆ | ಕಡು [illegible]ವಿಲ್ಲದೆ ಮಾಂಸವತಿಂದು ಬಳಿಕ || ಕ್ರೂರಮತಿಗಳಿಗೆಲ್ಲಿ ನಿನ್ನಲ್ಲಿ ಭಕ್ತಿ | ಸಕಲಕಲ್ಯಾಣಗುಣ ಧನ್ಯಸತ್ಪುರುಷ ||

ಎಂದು ಹೇಳುವರು. ಅಲ್ಲದೆ ಮತ್ತೊಬ್ಬ ಮಹನೀಯರು ಹೇಳುವುದೇನೆಂದರೆ:—

ಕಂದ || ಕಡಿದಿಡಲು ಸಮರ್ಥಂ ನೀಂ, ಮಡಿದಿ[illegible]
ವಿನಹರಣವಾಂ || ಕೊಡುವೆ [illegible] ಬಿಡು
ಬಿಡು ಈ ಕೆಡುಗಾಸಂ | ತಡೆತಡೆ ಹಿಂಸೆಯನು
ಮಾಡಗೊಂಡಿದ[illegible]ಮನವೇ ||

ಎಂಬೀರೀತಿಯಾಗಿ ಅನೇಕ ಮಹನೀಯರುಗಳ ವಚನದಿಂದಲೂ ಶಾಸ್ತ್ರಾಧಾರಗಳಿಂದಲೂ ಪ್ರಾಣಿಗಳನ್ನು ಹಿಂಸಿಸುವುದೂ ಮಾಂಸವನ್ನು ತಿನ್ನುವುದೂ ಕೂಡದೆಂದು ಸಿದ್ಧವಾಗುತ್ತೆ.

ಆದರೆ ಮಲೆನಾಡು ಮೊದಲಾದ ಶೀತದೇಶಗಳಲ್ಲಿ ದನಕರುಗಳು ಪಡುವ ಅವಸ್ಥೆ ಹೇಳಲು ಅಸಾಧ್ಯವಾದ್ದು. ಅವುಗಳು ನಿಲ್ಲುವುದಕ್ಕೆ ಸರಿಯಾದ ಸ್ಥಳವಿ

ಲ್ಲದೆ ತಿನ್ನುವುದಕ್ಕೆ ಹುಲ್ಲಿಲ್ಲದೆ ಮಳೆಗಾಲದಲ್ಲಿ ಅವುಗಳು ಪಡುವ ಕಷ್ಟವನ್ನು ಕಣ್ಣಿಂದ ನೋಡಿದರೆ ಎಂಥಾ ಕಲ್ಲೆದೆಯೂ ಕರಗದಿರಲಾರದು. ಇವು ಮಳೆಗಾಲಗಳಿಗೆ ನಿಲಿಸದೆಯೂ ತಿನ್ನುವುದಕ್ಕೆ ಆಹಾರವಿಲ್ಲದೆಯೂ ಕೃಶವಾದ ಕೂಡಲೆ ಕಟುಕರಿಗೆ ಮಾರಿಬಿಡುವುದು ಇದು ಎಂಥಾ ಘೋರವಾದ ಯಾತನೆ. ಆದ್ದರಿಂದ ದಯಾರ್ದ್ರಹೃದಯರಾದ ಸಹೋದರರೇ, ಧನಿಕರುಗಳು ನಿಲ್ಲುವುದಕ್ಕೂ ಆಹಾರ ಪಾನೀಯಾದಿಗಳು ಸರಿಯಾಗಿ ಒದಗಿಸಲಿಕ್ಕೂ ಮುತುವರ್ಜಿ ವಹಿಸಿ ಕಾರುಣ್ಯ ದೇಶೋನ್ನತಿಯನ್ನು ಮಾಡಿ ಆ ಪುಣ್ಯಕ್ಕೆ ಭಾಗಿಗಳಾಗಿರಿ.

N. B. ಈ ಅಹಿಂಸಾವಿಷಯಕ್ಕೆ ಸಂಬಂಧಪಟ್ಟ ಪುಸ್ತಕಗಳೂ ವಿಚಾರಗಳೂ ತಿಳಿಯಬೇಕಾದರೆ ಶ್ರೀ ಜೀವದಯಾಪ್ರಚಾರಕಮಂಡಲಿ, ದೊಡ್ಡಬಳ್ಳಾಪುರ.

ಅಥವಾ ಡಕ್ಕನ್ ಹ್ಯೂಮ್ಯಾನಿಟೇರಿಯನ್ ಲೀಗ್,
ಹೈದರಾಬಾದು. (ಡಕ್ಕನ್).

ಇವರಿಗೆ ಬರೆದರೆ ಪುಸ್ತಕಗಳನ್ನು ಕರಪತ್ರಗಳನ್ನೂ ಉಚಿತವಾಗಿ ಕಳುಹಿಸುತ್ತಾರೆ.

ದಯಾರ್ದ್ರ ಹೃದಯರಾದ ಆರ್ಯಮಹನೀಯರೇ, ನೀವುಗಳು ಅಹಿಂಸೋಪದೇಶಮಾಡುವುದಕ್ಕೂ ಪ್ರಾಣಿರಕ್ಷಣಾಲಯಗಳನ್ನು ಸ್ಥಾಪಿಸುವುದಕ್ಕೂ ಮಾಂಸಹಾರಿಗಳು ಶಾಖಾಹಾರಿಗಳಾಗುವುದಕ್ಕೂ ಮುತುವರ್ಜಿ ವಹಿಸಿ ಕೆಲಸಮಾಡಿ ಜನ್ಮಸಾಫಲ್ಯತೆಯನ್ನು ಹೊಂದಿ ಪರಮೇಶ್ವರನ ಅನುಗ್ರಹಕ್ಕೆ ಪಾತ್ರರಾಗಿರಿ.

ಓ ದಯಾಮಯಾ, ದೀನಬಂಧು, ಪರಮೇಶ್ವರಾ, ಪ್ರಾಣಿಗಳಿಗೆ ಅಭಯವನ್ನು ಕೊಡು. ನೀನು ಈ ಅಹಿಂಸಾವ್ರತ ಪರಿಪಾಲನೆ ಮಾಡುವಂಥಾವರಿಗೆ ಶುಭವನ್ನೂ ದೀರ್ಘಾಯುರಾರೋಗ್ಯೈಶ್ವರ್ಯಾದಿಗಳನ್ನು ಕೊಟ್ಟು ಸಂರಕ್ಷಿಸು ಲೋಕವೆಲ್ಲಾ ದಯಾವೃಷ್ಟಿಯನ್ನು ಸುರಿಸು

ಓಂ ಶ್ಯಾಂತಿಃ ಶ್ಯಾಂತಿಃ ಶ್ಯಾಂತಿಃ.

ಟಿ ಎ ಕೃಷ್ಣಪ್ಪ,
(ಅಹಿಂಸಾಪ್ರಚಾರಕ)

ಮಹನೀಯರಲ್ಲಿ ವಿನಂತಿ

ಈ ವರ್ಷದ ಅತಿವೃಷ್ಟಿಯಿಂದ ಸಂಭವಿಸಿದ ಅಪೂರ್ವವಾದ ಪ್ರವಾಹದ ದೆಸೆಯಿಂದ ಕೊಡಗಿನಲ್ಲಿಯೂ, ನಮ್ಮ ನೆರೆಜಿಲ್ಲೆಗಳಾದ ಮಲಬಾರು ದಕ್ಷಿಣ ಕನ್ನಡ ಪ್ರಾಂತ್ಯಗಳಲ್ಲಿಯೂ ಉಂಟಾಗಿರುವ ವಿವರಿಸಲಸದಳವಾದ ನಷ್ಟವು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಕಷ್ಟಕ್ಕೊಳಗಾಗಿರುವವರಿಗೆ ಸಹಾಯ ಮಾಡುವುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯವಾಗಿದೆ. ಇದಕ್ಕಾಗಿ ಮಡಿಕೇರಿಯಲ್ಲಿ ಒಂದು ಮೀಟಿಂಗು ನಡೆದು ಸ್ವಲ್ಪ ಹಣ ಜಮಾಯಿಸಲ್ಪಟ್ಟು ಕಷ್ಟನಿವಾರಣೆ ಎಗ್ಗೆ ಕಳುಹಿಸಲ್ಪಟ್ಟಿದೆ. ಈಗಲೂ ಚಂದವು ಜಮೆಯಾಗುತ್ತಲಿದೆ. ತಮ್ಮ ಸಹೋದರರ ಕಷ್ಟವು ತಮ್ಮದೆಂದು ಯೋಚಿಸಿ ಪ್ರತಿಯೊಬ್ಬ ದೇಶೀಯನೂ ಉದಾರ ಭಾವದಿಂದ ತನ್ನ ಶಕ್ತ್ಯಾನುಸಾರ ಧನಸಹಾಯ ಮಾಡಬೇಕೆಂದು ಕೋರಿದೆ. ಸಹಾಯ ಮಾಡಿದವರ ಪಟ್ಟಿಯು ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದು. ಹಣವನ್ನು ರಿಲೀಫ್ ಕಮಿಟಿಯ ಅಧ್ಯಕ್ಷರಾದ ರಾ|| ಬಾ|| ಕೂಡಂಡೇರ ಕುಟ್ಟಯ್ಯನವರು, ಮಡಿಕೇರಿ ಇವರಿಗೆ ಕಳುಹಿಸಿಕೊಡಬೇಕು

ಮಡಿಕೇರಿ — ಸಂಪಾದಕ,
26-8-23 — "ಕೊಡಗು"

ವರ್ತಮಾನ ಸಂಗ್ರಹ

ಒಳದೇಶ.

ಸ್ಟೇಟ್‌ಸೆಕ್ರೆಟರಿಯವರು ಕೊಡಗಿಗೆ ಕೌನ್ಸಿಲನ್ನು ಮಂಜೂರು ಮಾಡಿದ್ದಾರೆಂತ ಕಮಿಷನರ್ ಸಾಹೇಬರಿಗೆ ಚೀಫ್‌ಕಮಿಷನರವರಿಂದ ಬರೆದು ಬಂದಿದೆಯೆಂದು ಖಂಡಿತ ವರ್ತಮಾನವಿದೆ

ಅಕ್ಟೋಬರು ತಾ|| 8 ರಲ್ಲಿ ಕೋ ಆಪರೇಟಿವ್ ಸೆಂಟ್ರಲ್ ಬ್ಯಾಂಕ್ ಡೈರೆಕ್ಟರುಗಳ ಮೀಟಿಂಗು ಒಂದು ಮಡಿಕೇರಿಯಲ್ಲಿ ನಡೆಯುವುದು

ಮಡಿಕೇರಿಯಲ್ಲಿ ಬುಡಿಶೈಲ್ ಹೆಡ್ ಮುನ್ಷಿಯರಾಗಿದ್ದ ಮೆ|| ಕೋಳೆರ ಕುಟ್ಟಪ್ಪನವರು ಈ ತಾರೀಕು ಒಂದರಿಂದ ಫ್ರೇಜರ ಪೇಟೆ ಪಾರುಪತ್ಯಗಾರರಾಗಿ ವರ್ಗಾಯಿಸಲ್ಪಟ್ಟಿರುವರು. ಅಲ್ಲಿ ಪಾರುಪತ್ಯಗಾರರಾಗಿದ್ದ ಮೇ ಕೊಡಂದೆರ ಸುಬ್ಬಯ್ಯನವರು ಮೂರುತಿಂಗಳು ರಜೆತೆಗೆದುಕೊಂಡಿರುವರು.

ತಾ|| 26-9-23 ರಲ್ಲು ಗೋಣಿ ಮರೂರು ಗ್ರಾಮದಲ್ಲು ಕೆರೆಯಲ್ಲು ಒಂದು ಹೆಬ್ಬಾವನ್ನು ಗುಂಡುಹೊಡೆದು ಕೊಂದಿರುವರಾಗಿಯೂ ಅದು 2 ಅಡಿ ದಪ್ಪ, 14 ಅಡಿ ಉದ್ದ ಇತ್ತಾಗಿಯೂ ಅದರ ಹೊಟ್ಟೆ ಸೀಳಿ ನೋಡಿದಲ್ಲು ಕೊಂಬುಗಳಿದ್ದ ಒಂದು ಕಾಡುಕುರಿಯು ಇಡೀ ಹಾಗೇ ಇತ್ತಾಗಿಯೂ ತಿಳಿಯಬರುತ್ತದೆ.

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಕೆಲಸವು ಖಾಯಂ ಆದ ರಾ|| ಸಾ|| ಕೆ. ಚಂಗಪ್ಪನವರಿಗೆ ಮರ್ಯಾದಿ ಮಾಡುವ ವಿಷಯದ ಬಗ್ಗೆ ಮಾ|| ರಾ|| ರಾ|| ಗಳಾದ ರಾ|| ಬಾ|| ಸಿ ಪೂವಯ್ಯನವರು, ರಾ|| ಬಾ|| ಕೆ ಕುಟ್ಟಯ್ಯನವರು, ರಾ|| ಬಾ|| ಸಿ ಅಪ್ಪಯ್ಯನವರು ರಾ|| ಸಾ|| ಕೆ. ಸುಬ್ಬಯ್ಯನವರು, ಚೆ ಕುಟ್ಟಪ್ಪನವರು ಮತ್ತು ಪಿ ಮೇದಪ್ಪನವರು ಸೈನ್ ಹಾಕಿ ಒಂದು ನೋಟೀಸು ಕಳುಹಿಸಿದ ಪ್ರಕಾರ ತಾ|| 30-9-23 ರಲ್ಲಿ ಮೆ|| ಕೆ ಕುಟ್ಟಯ್ಯನವರ ಅಧ್ಯಕ್ಷತೆಯಲ್ಲಿ ಮಡಿಕೇರಿ ದೇವಸ್ಥಾನದ ಮಹಡಿಯಲ್ಲು ಮೀಟಿಂಗು ನಡೆಯಿತು. ಉದ್ಯೋಗಸ್ಥರೂ ಬೇರೆ ಮಹನೀಯರೂ ಸೇರಿ ಸುಮಾರು 70 ಜನರು ನೆರೆದಿದ್ದರು. ಊಟ ಕೊಡತಕ್ಕದ್ದೋ, ಟೀಪಾರ್ಟಿಯೋ ಎಂಬ ವಿಷಯದಲ್ಲು ಬಹಳ ವಾದ ನಡೆದು ಟೀ ಪಾರ್ಟಿ ಎಂತ ತೀರ್ಮಾನವಾಯಿತು. ಈ ಬಗ್ಗೆ ಒಂದು ಸಾವಿರ ರೂಪಾಯಿ ಬೇಕಾಗುವುದೆಂತಲೂ ಒಂದು ರೂಪಾಯಿಗೆ ಕಡಿಮೆಯಾಗಿ ಚಂದಾ ತೆಗೆದುಕೊಳ್ಳ ಕೂಡದೆಂತಲೂ ತೀರ್ಮಾನವಾಯಿತು. ಚಂದಾ ಮೊಬಲಗು ಒಂದು ರೂಪಾಯಿಗೆ ಕಡಿಮೆಯಾಗದಂತೆ ಇರಬೇಕೆಂಬ ಅಭಿಪ್ರಾಯಕ್ಕೆ ಬಹಳ ಬಲವಾದ ವಿರೋಧವಿತ್ತು. ಗರೀಬರು ಸಹ ಡಿ ಮೇಜಿಸ್ಟ್ರೇಟರವರಿಗೆ ತಮ್ಮ ಪ್ರೀತಿಯನ್ನು ತೋರಿಸಲು ಕುತೂಹಲವುಳ್ಳವರಾಗಿರುತ್ತಾರಾದ್ದರಿಂದ ಈ ನಿರ್ಬಂಧದಿಂದ ಅವರ ಸಹಾನುಭೂತಿ ತೋರಿಸಲಿಕ್ಕೆ ಅಡ್ಡಿಯಾಗುತ್ತೆಂತ ವಾದಿಸಿದರು. ದೇಶದವರೆಲ್ಲಾ ಮಡಿಕೇರಿಗೆ ಬರಲು ಸಾಧ್ಯವಿಲ್ಲವೆಂತಲೂ ಆದ್ದರಿಂದ ಒಂದೇ ದಿವಸ ದೇಶದ ಎಲ್ಲಾ ಕಡೆಗಳಲ್ಲೂ ದೇವತಾರಾಧನೆ ಮಾಡಿದು ದೇಶದವರೆಲ್ಲರೂ ಸತ್ಕರಿಸಿ ಆಶೀರ್ವಾದ ಬೇಡಿದಂತಾಗುತ್ತೆ. ಇದರಿಂದ ದೇಶದ ತೃಪ್ತಿಯನ್ನೂ ಪ್ರೀತಿಯನ್ನೂ ತೋರಿಸಿದಂತಾಗುತ್ತೆಂತಲೂ ಸೂಚನೆ ಬಂದಿತ್ತು. ಆದರೆ ಈ ಅಭಿಪ್ರಾಯಗಳು ಮಂಜೂರಾಗಲಿಲ್ಲ.

ಕಳೆದ ಜನವರಿಯಲ್ಲಿ ನಡೆದ ಸಂಘದ ಸಮ್ಮೇಳನದ ಸ್ವಾಗತ ಖರ್ಚಿಗಾಗಿ ಮೆ|| ಕಂಬೀರಂಡ (ನಾಂಗಾಲ) ಗಣಪತಿಯವರು ಕೊಟ್ಟ 10 ರೂ. ಯೂ ಮೆ|| ಪುಟ್ಟಿಚಂಡ ಮುದ್ದಪ್ಪನವರು ಕೊಟ್ಟ 5 ರೂ ಯೂ ವೀರಾಜಪೇಟೆ ವಸೂಲಿ ಪಟ್ಟಿಯಲ್ಲಿ ಜಮೆಗೆ ಬಂದಿದೆಯೆಂದು ಸೆಕ್ರೆಟರಿಯವರು ತಿಳಿಸುತ್ತಾರೆ

ಮಾ|| ರಾ|| ರಾ|| ಸಾ|| ಕೇಟೋಳಿರ ಚಂಗಪ್ಪನವರಿಗೆ ಕೊಡಗು ದೇಶದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಪದವಿಯು ಖಾಯಂ ಆದುದರಿಂದ ಸೋಮವಾರಪೇಟೆಯ ಮಹನೀಯರು ತಾ|| 26-9-23 ರಲ್ಲು ನೇರ ಸಂತೋಷಾರ್ಥವಾಗಿ ಮೆ|| ಚಂಗಪ್ಪನವರಿಗೆ ಒಂದು ಔತಣವನ್ನು ಕೊಟ್ಟದ್ದಾಗಿಯೂ, ಸದರಿ ವಿಷಯವು ಮೆ|| ಚಪ್ಪುಡ್ಲ ಕಾಳಪ್ಪನವರಿಂದ ಕೈಗೊಂಡು ಬಹಳ ವಿಜೃಂಭಣೆಯಿಂದ ನಡೆದದ್ದಾಗಿಯೂ ಒಂದು ವಾರ್ತೆ

ಮತ್ತುದಿಯ ಮತಸಂಬಂಧವಾದ ಒಂದು ಮಾಸಿಕ ಪತ್ರಿಕೆಯನ್ನು ಹೊರಡಿಸುವ ವಿಷಯ ವೀರಾಜಪೇಟೆಯಲ್ಲಿ ಮುಸ್ಲಿಮೀಯ ಮಹನೀಯರು ಕೆಲವರು ತಾ|| 25-9-23 ರಲ್ಲು ಒಂದು ಮೀಟಿಂಗು ಮಾಡಿ ಪತ್ರಿಕೆಯನ್ನು ಹೊರಡಿಸಬೇಕೆಂದು ತೀರ್ಮಾನಿಸಿರುವರಂತೆ

ರೆಡ್ ಕ್ರಾಸ್ ಸಂಘದವರು ಪ್ರಥಮ ಚಿಕಿತ್ಸೆ ಸಹಾಯ (ಫಸ್ಟ್ ಏಯಿಡ್) ಮತ್ತು ಮನೆಯಲ್ಲಿ ರೋಗಿಗಳ ಮತ್ತು ಗಾಯಗೊಂಡವರ ಉಪಚಾರ (ಹೋಮ ನರ್ಸಿಂಗ್) ಇವುಗಳನ್ನು ಕಲಿಸಲಿಕ್ಕಾಗಿ ವೀರಾಜಪೇಟೆ ಸೋಮವಾರಪೇಟೆ ಮತ್ತು ಮಡಿಕೇರಿಯ ಹುಡುಗಿಯರ ಸೆಕಂಡರಿ ಶಾಲೆ ಮತ್ತು ಸೆಂಟ್ರಲ್ ಹೈಸ್ಕೂಲುಗಳಲ್ಲಿಯೂ ಕ್ಲಾಸುಗಳನ್ನು ಬೇಗನೆ ತೆರೆಯುವರಾಗಿಯೂ ಕ್ಲಾಸಿಗೆ ಸೇರಲು ಇಷ್ಟವಿರುವವರು ಸದರಿ ಸಂಘದ ಗೌ|| ಕಾರ್ಯದರ್ಶಿಯವರಿಗೆ ಬರೆಯಬೇಕೆಂದೂ ತಿಳಿಸಿರುತ್ತಾರೆ

ದಕ್ಷಿಣ ಕೊಡಗಿನ ಎತ್ಲೆಟಿಕ್ ಅಸೋಸಿಯೇಷನವರು ತಮ್ಮ ವಾರ್ಷಿಕ ಕೈಲ್ ಮುಹೂರ್ತ ಸ್ಪೋರ್ಟ್ಸನ್ನು ಪೊನ್ನಂಪೇಟೆಯಲ್ಲಿರುವ ದಕ್ಷಿಣ ಕೊಡಗಿ ಜಿಮ್ಖಾನ ಮೈದಾನಿನಲ್ಲಿ ತಾ|| 30-9-23 ರಲ್ಲು ಮೆ|| ಪಿ ಬಿ ಟಿಪ್ಪಿಂಗರವರ ಅಧ್ಯಕ್ಷತೆಯಲ್ಲಿ ನಡೆಯಿಸಿದರು

ಎರಡು ವಾರಗಳ ಹಿಂದೆ ಪ್ರಕಟವಾದ "ಒಟ್ಟ ಧೋರಣೆ"ರ ಬಗೆಟಿಗೆ ಸರಿಯಾದ ಉತ್ತರವನ್ನು ಲಕ್ಷ್ಯಕ್ಕೆ ಕೊಂಡು ಮಾತ್ರವಲ್ಲದೆ ಕಾವೇರಿ ಪಠಂಟುಸ್ಕೂಲಿನ IV ನೇ ತರಗತಿಯ ಮಂಡೇಟಿರ ಚಂಗಪ್ಪನೂ, ನಾಪೋಕ್ಲು ಶಾಲೆಯ VII ನೇ ತರಗತಿಯ ಎನ್. ಎಸ್. ಕರುಂಬಯ್ಯನೂ 26-9-23 ರಲ್ಲೇ ಬರೆದು ಕಳುಹಿಸಿದುತ್ತಾರೆ

ಸೆಪ್ಟೆಂಬರ್ 14ರ ಪತ್ರಿಕೆಯಲ್ಲಿ ಮದ್ರಾಸಿನಲ್ಲ ಕೊಡಗು ನಿವಾಸಿಗಳು ಕೈಲ್‌ಮುಹೂರ್ತ ಹಬ್ಬವನ್ನು ಆಚರಿಸಿದರ ವಿಷಯವಾಗಿಯೂ, ಒಂದು ಕೊಡಗು ಸಂಘವನ್ನು ಏರ್ಪಡಿಸಿದರ ವಿಷಯವಾಗಿಯೂ ಬರೆದ "ಪ್ರತ್ಯಕ್ಷದರ್ಶಿ"ಯವರ ವಾರ್ತೆಗೆ ವಿರೋಧವಾಗಿ ಅದಕ್ಕೆ ಸೇರಿದ್ದಷ್ಟೇ ಕೊಡಗರು ಸೇರದೆ ಬಾಕಿಯಾಗಿದ್ದರೆಂತಲೂ, ಆ ಸಂಘವು ಎಲ್ಲರ ಸಮ್ಮತದಿಂದ ಏರ್ಪಾಡಾದದ್ದಲ್ಲವೆಂತಲೂ ಮೊದಲಾಗಿ ಪುನಃ ಒಂದು ವಾರ್ತೆಯು ಮದ್ರಾಸಿನಿಂದ ಬಂದಿದೆ. ಅದನ್ನು ಪೂರ್ತಿ ಪ್ರಕಟಿಸಿದರೆ ಅದರಲ್ಲಿರುವ ಕೆಲವು ಸಂಗತಿಗಳು ವಾಚಕರಲ್ಲಿ ತಪ್ಪು ಊಹನೆಗೆ ಎಡೆಕೊಡಬಹುದೆಂದು ಕಂಡುಬಂದದ್ದರಿಂದ ಪೂರ್ತಿಯಾಗಿ ಪ್ರಕಟಿಸುವುದಿಲ್ಲ.

ಇದೇ ಅಕ್ಟೋಬರು ತಾರೀಕು 17 ನೇ, ಕನ್ಯಾ ಮಾಸ ತೇದಿ 31 ನೇ ಬುಧವಾರ ಉದಯವಾದ ಘಳಿಗೆ 21 ಕ್ಕೆ ಅಂದರೆ ಮಧ್ಯಾಹ್ನದ ಮೇಲೆ 2½ ಗಂಟೆಗೆ ಸರಿಯಾಗಿ ಶ್ರೀ ಮೂಲಕಾವೇರಿಯಮ್ಮನವರ ತುಲಾ ಸಂಕ್ರಮಣದ ತೀರ್ಥೋದ್ಭವ ಪುಣ್ಯಕಾಲದ ಶುಭಮುಹೂರ್ತ.

ಮೆ|| ಕೋದಂಡ ರಾಯ್ ಬಹದ್ದೂರ್ ಪೂವಯ್ಯನವರು ಮತ್ತು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ರಾವ್ ಸಾಹೇಬ್ ಕೆ. ಚಂಗಪ್ಪನವರು ಸಹ ನೋಟೀಸ್ ಕಳುಹಿಸಿದ ಮೇರೆ ವರ್ಗವಾಗಿ ಹೋಗುವ ಕಮಿಷನರ್ ಸಾಹೇಬರಿಗೆ ಸತ್ಕಾರ ಮಾಡುವ ಉದ್ದಿಶ್ಯ ಮಡಿಕೇರಿಯಲ್ಲಿ 1-10-23 ರಲ್ಲಿ ಮೀಟಿಂಗ್ ನಡೆಯಿತು. 2 ರೂ ಗೆ ಕಡಿಮೆ ಇಲ್ಲದೆ ಚಂದಾ ವಸೂಲ್ ಮಾಡಬೇಕೆಂತಲೂ, ಕೆಲವು ಉದ್ಯೋಗಸ್ಥರನ್ನೂ ಸಹ ಒಳಕೊಂಡ ಕಮಿಟಿಯೊಂದು ಏರ್ಪಡಾಯಿತು. ಚೀಫ್ ಕಮಿಷನರಾಗಿದ್ದ ಕಾಬ್ ಸಾಹೇಬರಿಗೆ ಸತ್ಕರಿಸಿದಾಗ ತನ್ನ ಸ್ನೇಹಿತರೂ ಶ್ಲಾಘಿಸುವವರೂ ಮಾತ್ರ ಕೊಡುವದಾದರೆ ತಾನು ಅಂಗೀಕರಿಸಬಹುದಷ್ಟೆ ಎಂತ ಕಾಬ್ ಸಾಹೇಬರು ಹೇಳಿದ್ದರು ಎಂತ ಅಧ್ಯಕ್ಷರು ಹೇಳಿದರು. ಈಗಲೂ ಅದೇ ರೀತಿಯಿಂದ ಈ ಸತ್ಕಾರ ನಡೆಯಬೇಕಾದ್ದೆಂಬದನ್ನು ಸೂಚಿಸಿದರು. ಎರಡು ಉದ್ಯೋಗಗಳನ್ನು ದೇಶೀಯರಿಗೆ ಕೊಡಿಸಿದ್ದರಿಂದ ಮೆ|| ಸೂಟರ್ ಸಾಹೇಬರು ಸ್ತೋತ್ರಾರ್ಹರು ಎಂತ ಅಧ್ಯಕ್ಷರು ಮೊದಲೇ ವಿವರಿಸಿದರು.

ಹಿಂದೂದೇಶ.

ಗೂಮ್ಟಿ ನದಿಯಲ್ಲಿ ನೀರಿನ ಪ್ರವಾಹವು ಹೆಚ್ಚಾಗಿ ಲಕ್ನೌ ಪಟ್ಟಣದ ಹೆಚ್ಚಿನ ಭಾಗಕ್ಕೆ ನೀರು ತುಂಬಿಕೊಂಡು ಅನೇಕ ಮನೆಗಳು ಬಿದ್ದುಹೋಯಿತೆಂತಲೂ, ಸುತ್ತಮುತ್ತಲಿನ ಗ್ರಾಮಗಳನೇಕವು ಈ ಅನಾಹುತಕ್ಕೆ ತುತ್ತಾಗಿವೆಯೆಂತಲೂ ಸಾವಿರಾರು ಜನರು ಮನೆಗಳಿಲ್ಲದೆ ಕಷ್ಟಪಡುತ್ತಿರುವರೆಂತಲೂ ನದಿಯಲ್ಲಿ ನೀರು ಹೆಚ್ಚುತ್ತಲೇ ಇದೆಯೆಂತಲೂ ಸೆಪ್ಟೆಂಬರ್ 28 ರ ವರ್ತಮಾನ

ಬೇಗನೆ ರಿಟಯರ್ ಆಗಿ ಹೋಗುವ ಬೊಂಬಾಯಿ ಗವರ್ನರಾದ ಜಾರ್ಜ್ ಲಾಯಿಡ್ ರವರಿಗೆ ಹೋಗುವಾಗ್ಗೆ ವಂದನಾ ಪತ್ರವನ್ನು ಕೊಡುವಂತೆ ತೀರ್ಮಾನ ಮಾಡುವುದನ್ನು ಅಡ್ಡಿ ಮಾಡುವುದಕ್ಕಾಗಿ ಬೊಂಬಾಯಿ ಪಟ್ಟಣದ ರಾಷ್ಟ್ರಕೂಟದವರು ಅಲ್ಲಿಯ ಮುನ್ಸಿಪಲ್ ಮೀಟಿಂಗಿಗೆ ತುಂಬಿದ್ದರಿಂದ 2 ಸಾರಿ ಮೀಟಿಂಗು ಮುಂದುವರಿಸಲ್ಪಟ್ಟಿದೆ

ಬರುವ ಗೋಕನಾಡ ಖಿಲಾಫತ್ ಕಾನ್ಫರೆನ್ಸಿಗೆ ಮೌಲಾನ ಶೌಕತ್ ಅಲಿ ಯವರನ್ನು ಅಧ್ಯಕ್ಷರಾಗಿ ಆಂಧ್ರ ಪ್ರಾಂತಿಕ ಖಿಲಾಫತ್ ಕಮಿಟಿಯವರು ಸೂಚಿಸಿರುವರು

ನಾಗಪುರ ಸತ್ಯಾಗ್ರಹಕ್ಕಾಗಿ ಜೈಲಿಗೆ ಕಳುಹಿಸಲ್ಪಟ್ಟಿದ್ದ ಜಮ್ನಾಲಾಲ್ ಬಜಾಜ್‌ರವರು ಬಿಡುಗಡೆಯಾಗಿ ಬಂದದಕ್ಕೆ ಅವನ್ನು ದಾದಾದಿನವರು ಒಂದು ದೊಡ್ಡ ಮೀಟಿಂಗು ಮಾಡಿ ಅವರಿಗೆ ಸ್ವಾಗತವನ್ನೀಡಿದರು. ಇತರ ಸ್ವಯಂ ಸೇವಕರು ಕಷ್ಟಪಟ್ಟದನ್ನು ನೋಡಿದರೆ ತನ್ನ ಶ್ರಮವು ಅತ್ಯಲ್ಪವೆಂದೇ ಹೇಳಬೇಕೆಂದೂ, ಸ್ವಯಂ ಸೇವಕರು ನಾಭ ಅಥವಾ ಬಾರ್ದೋಲಿ ಸತ್ಯಾಗ್ರಹಕ್ಕೆ ತಯಾರಾಗಿರಬೇಕೆಂದು ಬಜಾಜರವರು ಉತ್ತರ ಕೊಟ್ಟರು.

ನಾಭ ಪ್ರಾಂತ್ಯದಲ್ಲಿ ಜವಹರ ಲಾಲ್ ನೆಹರುರವರನ್ನು ಸೆರೆ ಹಿಡಿದಿರುವುದರಿಂದ ಅವರ ತಂದೆಯವರಾದ ಪಂಡಿತ ಮೋತಿಲಾಲ್ ನೆಹರುರವರು ಮಗನ ಭೇಟಿಗೆ ಬಿಡಬೇಕೆಂದು ಅಲ್ಲಿನ ಸರಕಾರದವರನ್ನು ಕೇಳಿದಲ್ಲು ಅಲ್ಲಿ ರಾಜಕೀಯ ಕಾರ್ಯಕ್ಕೆ ಕೈಹಾಕದೆ ಭೇಟಿಯಾದ ಕೂಡಲೆ ವಾಪಾಸು ಹೊರಟು ಹೋಗಬೇಕೆಂಬ ಕರಾರಿನೊಡನೆ ಭೇಟಿಗೆ ಬಿಡುವರೆಂದು ಉತ್ತರ ಸಿಕ್ಕಿದ್ದಕ್ಕೆ ಪಂಡಿತರು ಒಪ್ಪದೆ ವೈಸರಾಯರವರಿಗೆ ತಂತೀವರ್ತಮಾನ ಕಳುಹಿಸಿದರು. ಮಗನಿಗೆ ಕೇಸಿನಲ್ಲಿ ಕಾನೂನಿನ ಸಹಾಯ ಕೊಡಲು ಹೋಗಬಹುದೆಂತಲೂ [illegible] ವಿಷಯ ಹಾವಳಿ ಎಬ್ಬಿಸಕೂಡದೆಂತಲೂ ವೈಸರಾಯರವರು ಉತ್ತರ [illegible]ಟ್ಟಿರುವರು

ಕಳೆದ ತಾ|| 29 ರಲ್ಲಿ [illegible] ಡಿಸ್ಟ್ರಿಕ್ಟ್ ಕಾನ್ಫ[illegible]ತೆಯಲ್ಲಿ ನಡೆಯಿತು. ಪೆನ್ನುಮೆ|| ಟಿ. ಪ್ರಕಾಶಂರವರ ಅಧ್ಯಕ್ಷ[illegible] ಹೋಗುವ ಗವರ್ನರ್ ರವರಿಗೆ ವಂದನಾ[illegible] ಬೊಂಬಾಯಿ ಮುನ್ಸಿಪಾಲಿಟಿಯವರು ತೀರ್ಮಾ[illegible] ಮಾಡದೆ ಹೋದರೆ [illegible]ಲ್ಲಿ ಕೆಲಸಮಾಡುವ ಪಂಚಮರು ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿವೆನೆಂದು ಒಂದು ಮೀಟಿಂಗು ಮಾಡಿ ಸೂಚಿಸಿರುವರು

ವಿಶ್ರಾಂತಿ ಪಡೆಯಬೇಕಾದಕಾರಣ ಮೆ|| ಸಿ. ರಾಜಗೋಪಾಲಾಚಾರ್ಯರವರು ತತ್ಕಾಲಕ್ಕೆ "ಯಂಗ್ ಇಂಡಿಯ" ಪತ್ರಿಕೆಯ ಸಂಪಾದಕ ಕೆಲಸವನ್ನು ಮೆ|| ಜಾರ್ಜ್ ಜೋಸೆಫ್‌ರವರಿಗೆ ವಹಿಸಿರುವರು

ನಾಭದಲ್ಲಿ ಸತ್ಯಾಗ್ರಹವನ್ನು ಕೈಕೊಳ್ಳಲಿಕ್ಕಾಗಿ ಅಲ್ಲಿಗೆ ಹೋಗಲು ಸಾವಿರಾರು ಅಕಾಲಿಗಳು ಅಮೃತಸರಕ್ಕೆ ಬಂದಿರುವರು. ಅಲ್ಲಿ ಒಂದುಲಕ್ಷ ಜನರ ಉಪಚಾರಕ್ಕೆ ಏರ್ಪಾಡು ಮಾಡಿರುವರು. ದಿವಸಕ್ಕೆ ಸಾವಿರ ಜನರಂತೆ ಸತ್ಯಾಗ್ರಹವನ್ನು ಕೈಕೊಳ್ಳುವಂತೆ ಏರ್ಪಾಡು ನಡೆಯುತ್ತಿದೆಯಂತೆ.

ಸರ್ ಅಷ್ಟೋಷ್ ಮುಖರ್ಜಿಯವರು ಕಲ್ಕತ್ತಾ ಹೈಕೋರ್ಟಿನ ಜಡ್ಜಿ ಪದವಿಗೆ ರಾಜಿನಾಮೆ ಕೊಟ್ಟಿದ್ದರೆಂಬ ವರ್ತಮಾನವು ಸುಳ್ಳೆಂದು ತಿಳಿಯ ಬರುತ್ತದೆ.

ಡೆಲ್ಲಿಯಲ್ಲಿ ನಡದ ಸ್ಪೆಶ್ಯಲ್ ಕಾಂಗ್ರೆಸಿನ ತೀರ್ಮಾನ ಬ್ರಿಟನ್ನಿನ ಜನರಲ್ಲಿ ಸ್ವಲ್ಪ ಕಳವಳ ಎಬ್ಬಿಸಿದೆಯೆಂತಲೂ ಅದರಿಂದ ಅವರಾಗಿಯೇ ಗಾಂಧಿಯವರನ್ನು ಜೈಲಿನಿಂದ ಬಿಡಬೇಕೆಂದು ಕೇಳಬಹುದೆಂದೂ ವರ್ತಮಾನವಿದೆ

ಪಂಡಿತ ಮದನಮೋಹನ ಮಾಲವಿಯರವರು ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರತನಕ್ಕೆ ಉಮೇದ್ವಾರರಾಗಿ ನಿಲ್ಲುವರಂತೆ

ವಿದೇಶ.

ಇಂಗ್ಲೆಂಡಿನ ಲೇಬರ್ ಪಾರ್ಟಿಯ ಮುಂದಾಳಾದ ರಾಮ್ಸೆ ಮೆಕ್ ಡಾನಲ್ಡ್ರವರು ಮಿಸ್ಸಿ ಲಿಸಾಬೆತ್‌ರ ಸಮೇತ ಇಟಲಿ ಗ್ರೀಸ್ ಮತ್ತು ತುರ್ಕಿ ರಾಜ್ಯಗಳ ಸುತ್ತಲು ಹೊರಟಿರುವರು.

ಜರ್ಮನಿಯ ಹೊಸ ಸರ್ಕಾರದ ಮುಖ್ಯ ಮಂತ್ರಿಯ ಅಭಿಪ್ರಾಯದಂತೆಯೂ ಇಂಗ್ಲೆಂಡಿನ ಮತ್ತು ಫ್ರಾನ್ಸಿನ ಮುಖ್ಯ ಮಂತ್ರಿಗಳ ಭೇಟಿಯ ಫಲಿತಾಂಶವಾಗಿಯೂ ಜರ್ಮನಿಯವರು ರೂಹರ್ ಪ್ರಾಂತ್ಯದಲ್ಲಿ ಇನ್ನುವರೆಗೆ ನಡೆಸುತ್ತಿದ್ದ ಸತ್ಯಾಗ್ರಹವನ್ನು ನಿಲ್ಲಿಸಿರುವರು ಆದುದರಿಂದ ಎರಡು ರಾಜ್ಯಗಳು ಸೇರಿ ಒಂದು ಸಮಾಧಾನಕ್ಕೆ ಬರುವ ಸಂಭವವಿದೆ

ರೂಹರ್ ಪ್ರಾಂತ್ಯದಲ್ಲಿ ಸತ್ಯಾಗ್ರಹವನ್ನು ನಿಲ್ಲಿಸಿದ ಬಗ್ಗೆ ಬವೇರಿಯನ್ ಜನರು ಅತೃಪ್ತಿಯನ್ನು ಸೂಚಿಸಿರುವರು ಇದರಿಂದ ಒದಗಬಹುದಾದ ಗಲಾಟೆಗಳನ್ನು ನಿಲ್ಲಿಸಲಿಕ್ಕಾಗಿ ಜರ್ಮನಿ ಸರ್ಕಾರದವರು ಬವೇರಿಯದಲ್ಲಿ ಮಾರ್ಶಿಯಲ್ ಲಾವನ್ನು ಜಾರಿಗೆ ತಂದು ಡಾಕ್ಟರ್ ವಾನ್ ಕಾರ್ ಬರವರನ್ನು ಅಲ್ಲಿಯ ಡಿಕ್ಟೇಟರಾಗಿ ನೇಮಿಸಿರು

ಅಲ್ಲಿಯ ಸರಕಾರ ಮಂತ್ರಿಯಾದ ಹಿಟ್ಲರ್‌ರವರು ಅಧಿಕಾರವನ್ನು ಚಲಾಯಿಸುತ್ತಿರುವರು. ಇನ್ನು ಇವ್ವರೆಗೆ ಜಗಳವೇನೂ ಸಂಭವಿಸುವುದಿಲ್ಲ

ಸೆಪ್ಟೆಂಬರ್ ತಾ|| 27 ರಲ್ಲು ಇಟಲಿಯವರು ಕಾರ್ಫೂವನ್ನು ಗ್ರೀಸಿನವರಿಗೆ ಬಿಟ್ಟುಕೊಟ್ಟಿರುವರು

ಪರ್ಶಿಯಾ ದೇಶದ ಕರ್ಮಾನ್ ಮತ್ತು ಬುಜ್ ನರ್ದ್ ಸ್ಥಳಗಳಲ್ಲಿ ಭೂಕಂಪದಿಂದ ಬಹಳ ನಷ್ಟವುಂಟಾಗಿದೆ ಜನರು ವ್ಯಾಕುಲಪಟ್ಟಿರುವರು. ಬುಜ್ ನರ್ದ್‌ನ ಪಕ್ಕದ ಪರ್ವತದಿಂದ ಹೊಗೆಯು ದಾಟುತ್ತಿದೆಯಂತೆ.

ಇಂಗ್ಲೆಂಡಿನಲ್ಲಿ ಎಲ್ಲರಿಗಿಂತಲೂ ಹಳಬರಾಗಿರುವ ಮೆ|| ಡಾನಲ್ಡ್ ವಿಟ್ಟೆಕರ್‌ರವರಿಗೆ 111 ವರ್ಷ ಪ್ರಾಯವಾಗಿದ್ದು ಈಗಲೂ ಬೆಳಗ್ಗೆ ಐದುಗಂಟೆಗೆ ಎದ್ದು ಸಾಯಂ 6 ಗಂಟೆಯವರೆಗೆ ಏನಾದರೂ ಕೆಲಸ ಮಾಡುತ್ತಿರುವರು ಕೆಲವುವೇಳೆ ಸೌದೆ ಒಡೆಯುವ ಮತ್ತು ಮನೆ ಕೆಲಸವನ್ನೂ ಸಹ ಮಾಡುತ್ತಿದ್ದಾರಂತೆ!

ತುರ್ಕಿಯ ಸರಕಾರವು ರಿಪಬ್ಲಿಕ್ ಆಗಬೇಕೆಂದೂ ಕೆಮಾಲ್ ಪಾಷಾರವರು ಪ್ರೆಸಿಡೆಂಟರಾಗಬೇಕೆಂದೂ ಅವರ ಅಭಿಪ್ರಾಯ ರಿಪಬ್ಲಿಕ್ ಸರಕಾರ ಆಗಿಬಿಟ್ಟಿದೆ ಎಂದು ವಿಯನ್ನದಲ್ಲಿ ವರ್ತಮಾನವಿದೆ.

ಒಮ್ಮೆ ಇಂಡಿಯಾದ ಸ್ಟೇಟ್ ಸೆಕ್ರೆಟರಿ ಆಗಿದ್ದ ಮಿ|| ಮೋರ್ಲೇಯವರು ಮೃತರಾದರು

ಕೊಡಗಿನ ಸ್ತ್ರೀ ಶಿಕ್ಷಣವು.

ಕೊಡಗು ದೇಶವು ಚಿಕ್ಕದಾಗಿದ್ದು ಇಲ್ಲಿನ ಜನಾಂಗವು ಸಣ್ಣದಾಗಿದ್ದರೂ ವಿದ್ಯಾರ್ಜನೆ ವಿಷಯದಲ್ಲಿ ಇಲ್ಲಿನ ಜನರು ಮುಂದಾಳುಗಳಾಗಿರುವರು (1) ಓದು ಬರಹ ಬಲ್ಲವರು ಬಹಳ ಸ್ವಲ್ಪ ಜನರೇ ಸರಿ (2) ಮುಖ್ಯವಾಗಿ ಕಾರಣವಾಗಿ ತಕ್ಕ ಮಟ್ಟಿಗೆ ವಿದ್ಯಾಭ್ಯಾಸಮಾಡಿ ಕಚೇರಿಗಳಲ್ಲಿ ಕೆಲಸ ಸಾಧಿಸಿಯನ್ನು ಮಾಡಿಕೊಳ್ಳುವರು ಇಂಗ್ಲೀಷ್ ವಿದ್ಯೆಯೇ ಇಲ್ಲಿ ಪ್ರಬಲವಾಗಿ ಬೇರೂರಿರುವುದು. ಹೊರತು ಮಾತೃಭಾಷೆಗಳಾದ ಸಂಸ್ಕೃತ, ಕನ್ನಡಗಳನ್ನು ಅಭ್ಯಾಸಿಸುವವರು ಬಹಳ ಕಡಿಮೆ ಇಂಗ್ಲೀಷ ವಿದ್ಯೆಯ ಇಲ್ಲಿನವರ ನಡೆನುಡಿಗಳನ್ನು ಸಹ ಮೃತಪ್ರಾಯವಾಗಿಸಿಬಿಟ್ಟಿರುವುದು ಈಚೀಚೆಗೆ ಕೆಲವರು ನಮ್ಮ ಸ್ವಭಾಷೋದ್ಧಾರ ಕಾರ್ಯದಲ್ಲಿ ತೊಡಗಿರುವರು

ಇಲ್ಲಿನ ಸ್ತ್ರೀಶಿಕ್ಷಣದ ವಿಚಾರವಾಡಿದರೆ ನಮ್ಮ ಜನಾಂಗವು ಈ ವಿಷಯದಲ್ಲಿ ಮುಂದುವರಿದಿಲ್ಲ ನಮ್ಮ ಭಾಷೆಯ ಪರಿಜ್ಞಾನವು ಇಲ್ಲಿನ ಸ್ತ್ರೀಯರಿಗೆ ಬಹು ಸ್ವಲ್ಪ. ಸ್ತ್ರೀಯ ಭಾಷೆಯನ್ನ ವ್ಯಾಕರಣ ಮಾಡಿದ ಕೆಲವರು ಸ್ತ್ರೀಯಾಗಿ ಪ್ರಾಪ್ತಿ ಮಾತ್ರವಾಗಿದ್ದಂತೆ ಆಡುವುತ್ತಿರುವರು ನಮ್ಮ ಸ್ತ್ರೀಸಮಾಜದ ರಹಸ್ಯವು ಶಾಶ್ವತವಾಗಿ ಸುಖಕರವಾದುದು ಇವರು ಅವರ ವಿದ್ಯಾಭಿವೃದ್ಧಿಗೆ ಪ್ರೋತ್ಸಾಹಕರು ಅಂದು ಎಲ್ಲರ ಭಾವನೆ ಇರಬಹುದು. ಇಂಗ್ಲೀಷ ವಿದ್ಯೆ ಕಲಿತರೆ ಅವರು ವಿದ್ಯಾವಂತರಾಗಲಿಲ್ಲ ಎನ್ನುವ ಮಾತ್ರವೇ ... ಮನೆಯಲ್ಲೇ ಅಭ್ಯಾಸಿಸಿದ ... ಶಕ್ತಿಗಳ ... ಸಮಾಜದ ವಿಚಾರವನ್ನು ಮಾತ್ರ ... ಬೇಕು ...

ಅವರು ಸೂರ್ಯೋದಯಕ್ಕೆ ಮೊದಲೆದ್ದು ಮನೆಯನ್ನೆಲ್ಲಾ ಶೃಂಗರಿಸಿ, ಸೊಗಸಾಗಿ ಭಗವನ್ನಾಮ ಸಂಕೀರ್ತನೆಯನ್ನು ಮಾಡುತ್ತಾ ಗೃಹಕಾರ್ಯದಲ್ಲಿ ತೊಡಗುವರು ಇಂತಹ ದಿವ್ಯ ಗೀತೆಗಳನ್ನು ನುಡಿಯುವದರಿಂದ ಅಂತಃಕರಣದಲ್ಲಿ ಶುದ್ಧಿಯೂ, ಮನಸ್ಸಿನಲ್ಲಿ ನೈರ್ಮಲ್ಯವೂ, ಚಿತ್ತದಲ್ಲಿ ವಿಕಾಸವೂ, ಸಚ್ಚಿದಾನಂದ ಮಯವಾದ ಪರಮಾತ್ಮನಲ್ಲಿ ಲೀನತೆಯೂ ಉಂಟಾಗುವುವು ಇದು ಕೇವಲ ಬ್ರಾಹ್ಮಣರ ಮನೆಗಳ ಸ್ಥಿತಿಯ ವರ್ಣನೆಯೆಂದು ವಾಚಕರು ಊಹಿಸಕೂಡದು. ಎಲ್ಲರೂ ಹೀಗೆ ಭಕ್ತಿ ರಸಪರಿಪ್ಲುತವಾದ ಹಾಡನ್ನು ಹಾಡುತ್ತಾ ತಮ್ಮ ದಿನಕಾರ್ಯವನ್ನು ನಡಸುತ್ತಿದ್ದರು ಮನೆಯನ್ನೆಲ್ಲಾ ಸ್ವಚ್ಛಪಡಿಸಿದ ತರುವಾಯ ಸ್ನಾನ ಮಾಡಿ ಶುಭ್ರ ವಸ್ತ್ರಗಳನ್ನು ಧರಿಸಿ ಅಡಿಗೆಯ ಉದ್ಯೋಗಕ್ಕೆ ಹತ್ತುವರು "cleanliness is next to godliness" ಎಂಬ ತತ್ವವನ್ನು ಅವರು ಅರಿತವರಾಗಿದ್ದರು ಮಡಿ ಮೈಲಿಗೆಗಳನ್ನು ಆಚರಿಸುತ್ತಲಿ ತಂದು, ಇಂದ್ರಿಯ ನಿಗ್ರಹ, ಆತ್ಮಶುದ್ಧಿ ಮೊದಲಾದ ಗುಣಗಳನ್ನು ಪೋಷಿಸಿ ಶಿಥಿಲವಾಗುತ್ತಿದ್ದ ನಮ್ಮ ಸಮಾಜವನ್ನು ಕಾಯ್ದು ಸ್ತ್ರೀಯನ್ನು ಸರ್ವಥಾ ನಮ್ಮ ಪೂರ್ವ ಮಹಿಳೆಯರಿಗೆ ಸಲ್ಲತಕ್ಕದ್ದು ಬಾಲಿಕೆಯರು ಕೂಡ ಹಿರಿಯರನ್ನು ಅನುಸರಿಸಿ ಹನ್ನೆರಡು ವರ್ಷಗಳಾಗುವ ಮುಂಚೆಯೇ ಅವರಿಗೆ ಗೃಹಕೃತ್ಯದಕ್ಷತೆಯು ಪ್ರಾಪ್ತವಾಗುತ್ತಿದ್ದುದು ಇದೇ ನಿಜವಾದ ಶಿಕ್ಷಣವು ಆತ್ಮಸಂಯಮ ಸಾರ್ಥತ್ಯಾಗ, ಮೊದಲಾದ ಗೃಹಶಾಂತಿಯನ್ನು ಹೆಚ್ಚಿಸುವ ಉತ್ತಮ ಗುಣಗಳ ಬೀಜವನ್ನು ಬಾಲಿಕೆಯರ ಹೃದಯದಲ್ಲಿ ಬಿತ್ತುವ ಗೃಹಗಳು ಧನ್ಯವಾದವುಗಳು. ಇದೇ ನಿಜವಾದ ಶಿಕ್ಷಣಾಲಯಗಳು

ಸ್ತ್ರೀಯರು ಗಾಯನ ಪ್ರೇಮಿಗಳಿರುವುದು ಸ್ವಾಭಾವಿಕವು. ಇವರು ಸೊಗಸಾದ ಹಾಡುಗಳನ್ನು ಹಾಡುತ್ತಿದ್ದರೆ ಆ ಬಾಲಿಕೆಯರಿಗೂ ಗಾಯನಾಭಿರುಚಿಯು ತನ್ನಿಂತಾನೆ ಉಂಟಾಗುವುದು ಹಾಡುಗಳಿಂದ ಉತ್ತಮ ಭಾವನೆಗಳುತ್ಪನ್ನವಾಗಿ ಆಧ್ಯಾತ್ಮಿಕ ಶಕ್ತಿಯು ಬೆಳೆಯುತ್ತದೆ ಸುಸ್ಥಿತಿಯಲ್ಲಿ ಹಿಗ್ಗಬಾರದು ದುಸ್ಥಿತಿಯಲ್ಲಿ ಕುಗ್ಗಬಾರದು ಎಂಬ ತತ್ವವನ್ನು ಬೋಧಿಸುವ ಹಾಡುಗಳೇ ಬಾಲಿಕೆಯರಿಗೆ ತಕ್ಕುದಾದವು ಕಸೂತಿ ಮೊದಲಾದ ಶೃಂಗಾರಿಕ ಕಲೆಗಳಲ್ಲಿಯೂ ಪೂರ್ವ ಸ್ತ್ರೀಯರು ಈಗಿನವರಿಗಿಂತ ಹೆಚ್ಚಾಗಿ ತಿಳಿದಿದ್ದರು

ವೈದ್ಯಕ ಶಿಶುಸಂಗೋಪನ, ಸೂತಿಕರ್ಮ ಇವುಗಳ ಜ್ಞಾನವು ಮುಂಚಿನ ಸ್ತ್ರೀಯರಿಗೆ ಸಾಮಾನ್ಯತಃ ಸಾಕಷ್ಟು ಇತ್ತು ಈಗಿನ ತರುಣಿಯರಿಗೆ ಇವುಗಳ ಜ್ಞಾನವು ಇರುವುದು ಅಪೂರ್ವ ಈಗಿನವರು ಡಾಕ್ಟರುಗಳನ್ನು ಹುಡುಕಬೇಕಾದ ಸಂದರ್ಭದಲ್ಲಿ ಮುಂಚಿನವರು ಹೆಚ್ಚಾಗಿ ಮನೆಯ ಪದ್ಧತಿಗಳಿಂದ ಚಿಕಿತ್ಸೆಯನ್ನು ಪೊಂದಿಕೊಳ್ಳುತ್ತಿದ್ದರು. ನಮ್ಮ ಗೃಹಗಳೇ ವಿಶ್ವವಿದ್ಯಾಲಯದ ಉಪಶಾಲೆಗಳಂತಿದ್ದವು ಶಾರೀರಿಕ ದೃಷ್ಟಿಯಿಂದ ವಿಚಾರಿಸಿದರೂ ನಮ್ಮ ಪೂರ್ವ ಪದ್ಧತಿಯೇ ಒಳ್ಳೆಯದಾಗಿ ತೋರುವದು ಆರೋಗ್ಯ ಶಾಸ್ತ್ರ, ಸ್ವಾಸ್ಥ್ಯರಕ್ಷಣ ಮೊದಲಾದವುಗಳಿಗೆ ಸಂಬಂಧಪಟ್ಟ ದೊಡ್ಡ ಪುಸ್ತಕಗಳನ್ನು ಓದಿ ಈಗಿನವರ ಸ್ತ್ರೀಯರು ಹೆಚ್ಚು ತಕ್ಕವರಾಗಿರದೆ ಮೊದಲಿನ ಸ್ತ್ರೀಯರ ಶರೀರ ನಮ್ಮ ... ಅವರ ... ಅದರಲ್ಲಿ ... ಮೊದಲಿನವರ ಶಿಕ್ಷಣವು ಶಾಲೆಯಲ್ಲಿ ಅಲ್ಲ ಶಿಕ್ಷಣವಿಲ್ಲದಿದ್ದರೂ ಸಂಸಾರಕ್ಕೂ, ಸಮಾಜಕ್ಕೂ, ಮನೆತನಕ್ಕೂ ಪರಮಾರ್ಥಕ್ಕೂ ಯೋಗ್ಯವಾದ ಶಿಕ್ಷಣವಿದ್ದಿಲ್ಲವೇ? ಹಿಂದಿನ ವಿದ್ಯೆ ಕಲ್ಲದಿದ್ದರೂ ದಾನ ... ನಮ್ಮ ಸ್ತ್ರೀಯರು ... ಸಂಸ್ಕೃತಿಯನ್ನು ಹೊಂದುತ್ತಿದ್ದಿರುವೆನೇ ಅದು ಧರ್ಮಾಚರಣೆ ಪ್ರವೃತ್ತರಾಗಿ ಮೋಕ್ಷಮಾರ್ಗವನ್ನು ಸಾಧ್ಯಮಾಡಿಕೊಳ್ಳುತ್ತಿಲ್ಲವೇ? ದೇವತ್ವವನ್ನುದಗಳಲ್ಲಿ ಹಾಡುವ ಶಿಕ್ಷಣವಿದ್ದಿದ ಪ್ರಯೋಜನವಿಲ್ಲ ... ಯಾಗಿ ... ಶಿಕ್ಷಣವು ಬೇರೆ. ಇದು ಮನೆ ಎಲ್ಲಿಯೇ ದೊರೆಯುತ್ತದೆ ಗೃಹವೆಂದರೆ ದೇವಾಲಯವೆಂದೂ ಜ್ಞಾನಮಂದಿರವೂ ಆಗಬೇಕು ನಮ್ಮ ಸ್ತ್ರೀಯರಿಗೆ ಗೃಹಶಿಕ್ಷಣವು ದೊರೆಯ ಬೇಕೆಂದರೆ ದೊಡ್ಡ ಕಟ್ಟಡಗಳ ಅವಶ್ಯಕತೆಯು ಇಲ್ಲದಂತಾಗುವುದಲ್ಲದೆ ಆರ್ಥಿಕ ದೃಷ್ಟಿಯಿಂದಲೂ ಶಿಕ್ಷಣ ಹಿತಕಾರಿಯಾಗುವದು ಮತ್ತೆ ಶಾಲೆಯಲ್ಲಿ ಆರ್ಯ ಸಂಸ್ಕೃತಿಯ ಪರಿಚಯ ಈ ಕಾಲದಲ್ಲಿ ಅಷ್ಟಿಲ್ಲ, ಎಲ್ಲಿ ಶಿಕ್ಷಣವು ಸ್ವಾಭಿಮಾನಿಗಳಾಗಿ ಅಧಿಕಾರಿಗಳ ಪ್ರೇಮ ಸಂಪಾದನೆ ತತ್ಪರರಾಗಿರುವರೋ ಅಂತಹ ಶಾಲೆಗಳಿಗೆ ಪ್ರೇಮದಿಂದ ಬೆಳೆಸಿದ ಸುಕುಮಾರ ಕುಮಾರಿಯರನ್ನು ಕಳುಹಿಸುವುದು ಕೇವಲ ಅವಿವೇಕತನವಲ್ಲವೇ? "ಗೃಹಂ ಗೃಹಿಣಿಯೇ" ... ಸ್ತ್ರೀಯರನ್ನು ಪತಿವ್ರತಾಶಿರೋಮಣಿಗಳನ್ನಾಗಿ ಮಾಡಿ, "ಗೃಹಿಣಿ ಗೃಹಮುಚ್ಯತೆ" ಎಂಬ ನಾಣ್ಣುಡಿಯನ್ನು ನಿಜಪಡಿಸುವರು ಇದರಿಂದ ಸ್ತ್ರೀಯರು ವಿದ್ಯಾಭ್ಯಾಸ ಮಾಡಕೂಡದೆಂದು ಅಭಿಪ್ರಾಯವಲ್ಲ ... ಧರ್ಮಶಾಸ್ತ್ರವೆಂದು ಒಪ್ಪದಲ್ಲಿಟ್ಟು ಕೊಂಡು ಅದು ವಿದ್ಯಾಕಲಿಯಬೇಕು ಆರ್ಯ ಮಹಿಳೆಯ ಪದ್ಧತಿಯನ್ನು ಬಿಡಬಾರದು. ಸ್ತ್ರೀಯರಿಂದ ಕುಲ ... ಸ್ತ್ರೀಯರು ಪೂಜ್ಯರು ... ತಮ್ಮ ... ಮನೋ ಭಾವದಿಂದಲೂ ಪ್ರೇಮವೃತ್ತಿಯಿಂದಲೂ ತಮ್ಮ ಪತಿಯನ್ನು ಸುಖಪಡಿಸತಕ್ಕದ್ದಾಗಿ ಮಾಡಬೇಕಾದುದು. ಅವರ ಕರ್ತವ್ಯ. ಪತಿಯು ಕರ್ತವ್ಯಮಾರ್ಗವನ್ನು ಸಲೀಸಾಗಿಯೂ ಸುಖಕರವಾಗಿಯೂ ಮಾಡಿ, ದುಃಖಭಾರವನ್ನು ಕಡಿಮೆ ಮಾಡಬೇಕಾದುದು, ಸ್ತ್ರೀಯರ ಕರ್ತವ್ಯ. ಇಂತಹ ಪವಿತ್ರವಾದ ಕುಟುಂಬ ಸ್ಥಿತಿಯು ನಮ್ಮಲ್ಲಿ ಬಹುಕಾಲದಿಂದ ನಡೆಯುತಾ ಬಂತಿರುತ್ತದೆ ಇನ್ನು ಮುಂದಾದರು ಇದರಂತೆಯೇ ನಡೆಯದೇ ಕಾದರೆ ಗೃಹಶಿಕ್ಷಣವೇ ನಿಜವಾದ ಉಪಾಯ ನಮ್ಮ ಸ್ತ್ರೀಯರು ಗೃಹಿಣಿ ಧರ್ಮವನ್ನು ಕಾಪಾಡಿ, ನಮ್ಮ ಸ್ವಭಾಷೋದ್ಧಾರ ಕಾರ್ಯದಲ್ಲಿ ಎಂದು ಮುಂದಾಳುಗಳಾಗುವರೋ ಅಂದೇ ನಮ್ಮ ಸ್ತ್ರೀಸಮಾಜವು ಅಭಿವೃದ್ಧಿಗೆ ಬರುವುದು.

ವಾಚಕರಿಗೆ ಇನ್ನು ಹೆಚ್ಚಿಗೆ ವಿವರಿಸಿ ಪ್ರಯೋಜನವಿಲ್ಲ. ತಮ್ಮನ್ನು ಇನ್ನು ದಣಿಸಿದುದಕ್ಕೆ ಕ್ಷಮಿಸಬೇಕು. ನಾನು ಬರೆ ಸ್ತ್ರೀಯರ ಶಿಕ್ಷಣದ ವಿಷಯ ಚರ್ಚಿಸಿದುದರಿಂದ, ಕೆಲವರು ಅಸಮಾಧಾನವನ್ನು ತಾಳಬಹುದು. ಇನ್ನೊಂದು ಲೇಖನದಲ್ಲಿ ಪುರುಷರ ಕರ್ತವ್ಯದ ವಿಷಯ ಚರ್ಚಿಸುವೆನು.

ಯುಗ ವೈದ್ಯ

(ವಾ ಪ್ರ ಸಂಘ, ಹುಬ್ಬಳ್ಳಿ)

ಉಡುಪಿಯಲ್ಲಿ ಪ್ರಕಟವಾಗುವ 'ಸತ್ಯಾಗ್ರಹಿ' ಪತ್ರದ ಸಂಪಾದಕರಾದ ಬಿ. ಭ. ಎಚ್ ರಾಮರಾಯರನ್ನೂ ಮತ್ತು ಅದೇ ಪತ್ರದ ಮುದ್ರಕ ಮತ್ತು ಪ್ರಕಾಶಕರಾದ ಬಿ ಭ ಎಚ್ ನಾರಾಯಣರಾವ್ ಇವರೀರ್ವರ ಮೇಲೆ ರಾಜದ್ರೋಹದ ಆರೋಪದ ಮೇಲೆ ಗವರ್ನಮೆಂಟ ಕೆಲಮ್ಮನ ವ್ಯಾಕಾರ ಸರುನ್ನು ಹೊರಟಿರುತ್ತದೆ ೩ನೇ ಅಕ್ಟೋಬರ ದಿವಸ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮುಂದೆ ಹಾಜರಾಗ ಬೇಕು ಮತ್ತು ತಮ್ಮ ಮೇಲೆ ಇಟ್ಟ ಆರೋಪದ ಉತ್ತರ ಕೊಡಬೇಕೆಂದು. ಆ ಸಮನ್ಸದಲ್ಲಿ ಬರೆದಿದ್ದುವು.

ದಕ್ಷಿಣ ಕಾನಡಾ ಜಿಲ್ಲೆಯಲ್ಲಿ ರಾಷ್ಟ್ರೀಯ ಪತ್ರದ ವರ್ತಮಾನಪತ್ರವನ್ನು ಇವರೇ ಮೊದಲು ಹೊರಡಿಸಿದರು ಮತ್ತು ಉಡುಪಿಯಲ್ಲಿ ರಾಷ್ಟ್ರೀಯ ಶಾಲೆಯನ್ನು ಸ್ಥಾಪನ ಮಾಡಿದವರು ಇವರೇ.

ಶ್ರೀ ಎಚ್. ನಾರಾಯಣರಾವ್ ಇವರು ಉಡುಪಿಯ ಕಸ್ತೂರಿಬಾ ಶಾಖಾ ಕಮಿಟಿಯ ಕಾರ್ಯದರ್ಶಿಗಳಿರುವರು ಉಡುಪಿಯಲ್ಲಿ ಖಾದೀ ಉತ್ಪಾದನವು ಇವರ ಶ್ರಮವಾದ ಫಲವೇ ಆಗಿರುತ್ತದೆ ಶ್ರೀ, ಎಚ್ ರಾಮರಾಯರನ್ನು ಮತ್ತು ಶ್ರೀ ಎಚ್. ನಾರಾಯಣರಾವ ಇವರೀರ್ವರ ದೇಶಿಕ ಪ್ರೇಮದಿಂದುದರಿಂದ ಇವರ ಮೇಲೆ ಸರಕಾರ ಕಣ್ಣು ಹೊರಟಿರುವರಾಗಿ ಬಹು ಜನರಿಗೆ ಆಶ್ಚರ್ಯವುಂಟಾಗಿರುವದು

ಹುಬ್ಬಳ್ಳಿ
23—9—23

ಜಯ! ಜಯ! ಟಕ!

ರಾಗ-ಕಾಂಬೋದಿ-ಆದಿತಾಳ

[ಪರಿಸಾರಾಯಣ ಹುನಾರಾಯ—ಎಂಬಂತೆ].

ಜಯಜಯಾಂಬಿನೆನೆ ಜಯದ ಸ್ಪರ್ಶೆ | ಜಯಕರನಾಟಕ ಸುಗುಣಾನಂದ || ದಯದ ಯಿವನಾಶಾರದೆ ಬೆಸನಾ | ಬಯಸಿದ ಸಿದ್ಧಿ ಒಸಗುವನು || ವಂದಿತ ನಾಟಕ ಸೇವೆಗೈಯುತ | ಒಸಗೊಡ ವಿನಯ ಸುತರ || ವಿನಯದೋಳೀ ಯುತ ನವ್ಯಾರತ್ನ, ಕಪರತಿ ಧ್ವಜವನು ನಿಲಿಸಲ್ಕೆ ||೧||

ಧೀವರ್ಯರ್ ವೈಭವ ಪುಂಗವರ್ ಕೊಡಗು | ಉರ್ವಿಯೊಳು ನಡೆಸಿದೆ ವಿದು || ಸರ್ವರು ಪ್ರೇಮದಿಂ ಕನ್ನಡ ಸೇವೆಯ | ಗರ್ವದೀಗೆಲೆ ಮಾಡುವರು ||೨||

ಪುರಂದರ ಶಂಕರ ಜನಿಸಿದ ಸ್ವರವಿದು | ಗಿರಿದುರ್ಗಹಿಂತರ ಮಧ್ಯಮುನಿ || ವರರಾಮಾನುಜ ಗುರುತರರುಪರು | ಭರದೊಳ್ ನಾಡೆಯ ನೆಲಗಿಹರು ||೩||

ಕನ್ನಡನಾಡೊಳು ಮತದೋಧಕರು | ನನ್ನು ಕಳವಿಗಳ್ ಉದಿಸಿಹರು || ಮುನ್ನವೆ ವಿದ್ಯಾನಗರವು ಸದ್ದದು | ನಮ್ಮ ತಮೂಕೀಗೆ ಮಂದಿರವು ||೪|| ಒಪ್ಪುರಾಣ ಜನು ||

ಬಾಲಕವಾಡದ ಕವಿ

ಹಾಡ (ನಾರಾಯಣ ಬರೇ ಎಂಬಂತೆ).

ಸೋದರರನ್ನಾ! ನೀವು | ನೋಡಿರಿ! ನೆನಿಸಾಗಳೆ | ಹಾರಿಯಾಗಳನ ಇದಲ್ಲ || ನಾಶವನ | ಸುಡು | ಗಾಡಿಗೆ ಸಾಗಿಸ | ಬಾರದ ಬದವಿದು ಬೇಸರಿಸ || ೧ ||

ಹೊಂಗುಬುಡುತಿ ಮುಳ್ಳಿ! ಹೊರೆಯಿಂದುಹವಿ | ಹಾಲ ಲಿಕಾಲನು ಕಿಳಿಸ ಪ್ರತಿ || ಮೆಯಮಾತ್ರಗಳಲಿ | ಮುಳುಗಿ ನಿಂದುತಾ | ಮುತ್ತುಟ್ಟಿಗೆ ವೈಭವನೆರೆವುವು || ೨ ||

ಅಂತರಿಗೆಗಳ | ತಾಯುಗಳಂಚಳ | ಸಾದರದಲಿ ಪದಿಯುರು || ಸಂಬಂಧನ್ನ | ತನುಮನವಾದಿದ | ತಾಯ ನನಲಿ ಬಾಪಿದ್ಕೊಳಿಯುವವು || ೩ ||

ಎಂ. ಬಿ ಆಳಸಿಗರಾಚಾರ್ಯ,

(೧. ೩. ೩.)

ಕೊಡಗು ಜಮ್ಮಾದಾರರ ಸಂಘ.

(ಪ್ರಚಾರಕ ಕಾರ್ಯದರ್ಶಿಯವರಿಂದ).

Watchman, what of the night. The night is far spent, the day is at hand. " Bible "

ಕಾವಲುಗಾರನೇ ಕತ್ತಲೆಯ ಭಯವೇಕೆ? ಕತ್ತಲೆಯು ಬಹಳ ಕಳೆಯುತ್ತಾ ಬಂದು ಬೆಳಕು ಸಮೀಪಿಸುತ್ತಿದೆ

No 14. ಕ್ರೈಸ್ತರ ಬೈಬಲ್.

ಜಮ್ಮಾಹಿಡುವಳಿಯ ನಿರ್ಬಂಧನ.

ಎಚ್ಚರಗೊಳ್ಳಿ! ಏಳಿರಿ!! ಉದ್ದೇಶವು ಕೈಗೂಡುವವರೆಗೆ ಮುಂದರಿಸಿರಿ

ಜಮ್ಮಾ ಹಿಡುವಳಿಯ ಹಕ್ಕು ಬಾಧ್ಯತೆಗಳು ನಮ್ಮ ಹುಟ್ಟು ಹಕ್ಕು ಆಗಿರುತ್ತೆ. ನಮ್ಮ ಪೂರ್ವಿಕರು ನಿರ್ಭೀತಿಯಿಂದ, ಸ್ವತಂತ್ರರಾಗಿದ್ದುಕೊಂಡು ಗುಡ್ಡ ಬೆಟ್ಟಗಳನ್ನು ಅಗೆದು ಫಲಪೈರುಗಳನ್ನು ಬೆಳಸಿಕೊಂಡು ಸೌಖ್ಯದಲ್ಲಿರುತ್ತಿರುವಾಗ್ಯೆ, ಹೊರಗಣ ರಾಜರಿಂದಲೂ ಮತ್ತು ಹೊರಗಣ ಪಾಳ್ಯಗಾರರಿಂದಲೂ ನಮ್ಮ ಸ್ವತಂತ್ರಕ್ಕೆ ಕುಂದಕ ಬರುತ್ತೆಂಬದನ್ನು ಅರಿತು, ನಮ್ಮ ದೇಶದಲ್ಲು ಕೂಡ ಬಿಗ್ಗಟ್ಟಿನ ಏರ್ಪಾಡಿನ ಅವಶ್ಯಕತೆಯು ಕಂಡು ಬಂದದ್ದರಿಂದ, ದೇಶದವರೆಲ್ಲಾ ಕೂಡಿ ಆಕಾಲದ ಸ್ಥಿತಿಗೆ ತಕ್ಕ ಹಾಗೆ ಒಬ್ಬನನ್ನು ರಾಜನನ್ನಾಗಿ ಮಾಡಿಕೊಂಡರು. ಆ ರಾಜನ ಖರ್ಚು ವೆಚ್ಚಗಳನ್ನು ಪಸ್ಸಾದ ಭೂಮಿಗಳ ಉತ್ಪತ್ತಿಯಿಂದಲೂ, ಗಂಧ ಉತ್ಪತ್ತಿಯಿಂದಲೂ ಧೂಳಿ ಮನೆ ಹಣದ ಉತ್ಪತ್ತಿಯಿಂದಲೂ ನಡಿಸಿಕೊಳ್ಳುವ ಹಾಗೆ ನಮ್ಮ ಹಿರಿಯರು ಒಪ್ಪಿ ಬಿಟ್ಟುಕೊಟ್ಟಿದ್ದರು. ಹೀಗಿರುತ್ತಿರುವಾಗ್ಯೆ ಅನುಭವದ ಮೇಲೆ ಹಕ್ಕು ಬಾಧ್ಯತೆಗಳನ್ನು ಲಿಖಿತ ಪಟ್ಟುಗಳ ಮೂಲಕ ಭದ್ರಪಡಿಸಲಿಕ್ಕಾಗಿಯೂ ಮತ್ತು ರಾಜರಿಗೆ ಸಲ್ಲತಕ್ಕ ನಿಗದಿ ಕಂದಾಯವನ್ನು ನಿಷ್ಕರ್ಷಿಸಲಿಕ್ಕಾಗಿಯೂ ಲಿಂಗರಾಜರ ಕಾಲದಲ್ಲಿ ಭೂಮಿಬಾಣೆ ಬಾರಿಕಗಳನ್ನೆಲ್ಲಾ ಅಳತೆಮಾಡಿ ಜಮ್ಮಾದ ಭೂಮಿ 100 ಬಟ್ಟಿಗೆ ಐದು ರೂಪಾಯಿ ಕಂದಾಯದಂತೆ ಕೊಡಲು ನಮ್ಮ ಹಿರಿಯರು ಒಪ್ಪಿಕೊಂಡವರಾಗಿ ರಾಜರು ಸನ್ನದ್ ನಿರೂಪಗಳನ್ನು ಭೂಮಿ ಬಾಣೆ ಬಾರಿಕಗಳ ಪದ್ದುಬಸ್ತನ್ನು ಬರೆಸಿ ವರ್ಗಗಳಿಗೆ ಹೆಸರು ಕೊಟ್ಟು 100 ಬಟ್ಟಿ ಭೂಮಿಗೆ ಐದು ರೂಪಾಯಿಗಳಂತೆ ಕಂದಾಯ ಕಟ್ಟಿಕೊಂಡು ಭೂಮಿ ಬಾಣೆ ಬಾರಿಕಗಳನ್ನು ಪುತ್ರಪೌತ್ರ ಪಾರಂಪರಿಯ ಸುಖವಾಗಿ ಅನುಭವಿಸಿ ಎಂದು ರಾಜರ ಸೀಲು ಮೋಹರಿನಿಂದ ಸನ್ನದ್ ನಿರೂಪಗಳನ್ನು ನಮ್ಮ ಹಿರಿಯರಿಗೆ ಕೊಟ್ಟದ್ದು ಪ್ರತಿಯೊಬ್ಬ ದೇಶಸ್ತನಿಗೂ ತಿಳಿದ ಸಂಗತಿಯಾಗಿದೆ. ಹೀಗಿರುತ್ತಿರುವಾಗ್ಯೆ ನಮ್ಮ ಕಡೆ ರಾಜರಾದ ವೀರರಾಜ ಒಡೆಯರು, ನಮ್ಮ ಸ್ವತಂತ್ರಕ್ಕೆ ಭಂಗ ತಂದಕಾರಣ ಸ್ವದೇಶ ಪ್ರೇಮದಿಂದ ನಮ್ಮ ಹಿರಿಯರು ಇಂಗ್ಲೀಷರ ಆಗಿನ ಸ್ವತಂತ್ರ ಪ್ರೀತಿಯ ಸ್ವಭಾವವನ್ನರಿತು ನಮ್ಮ ದೇಶದವರು ಏಕಮನಸ್ಸಿನಿಂದ ಇಂಗ್ಲೀಷರ ಆಳಿಕೆಗೆ 1834 ರಲ್ಲಿ ಒಪ್ಪಿಕೊಂಡರು. ಹಾಗೆ ಒಪ್ಪಿಕೊಂಡಾಗ್ಗೆ ಇಂಗ್ಲಿಷರ ಪ್ರತಿನಿಧಿಗಳು ನಮ್ಮ ಎಲ್ಲಾ ಹಕ್ಕು ಬಾಧ್ಯತೆಗಳಿಗೆ ಸ್ವಲ್ಪವು ಕುಂದಕ ಬರದ ಹಾಗೆ ನಡಿಸುತ್ತೇವೆಂದು ವಾಗ್ದಾನದ ಪ್ರಕಟಣಾ ಪತ್ರವನ್ನು ಬಹಿರಂಗಪಡಿಸಿರುತ್ತಾರೆ. 1858 ರಲ್ಲಿ ಕಂಪನಿ ಇಂಗ್ಲಿಷ್ ಸರಕಾರವು, ಇಂಗ್ಲಿಷರ ರಾಣಿಯರಾಗಿದ್ದ ವಿಕ್ಟೋರಿಯ ರಾಣಿಯವರ ಸ್ವಾಧೀನಕ್ಕೆ ಬಿಟ್ಟು ರಾಣಿಯವರು ಹಿಂದುಸ್ಥಾನ ಚಕ್ರವರ್ತಿನಿ ಬಿರುದನ್ನು ಸ್ವೀಕರಿಸುವ ಕಾಲದಲ್ಲು ಚಕ್ರವರ್ತಿನಿಯವರ ಪ್ರತಿನಿಧಿಯಾಗಿ ಆಗಿನ ವೈಸರಾಯರವರು ಚಕ್ರವರ್ತಿನಿಯವರ ಇಚ್ಛೆಗನುಸಾರವಾಗಿ ಪಾರ್ಲಿಮೆಂಟಿನ ತೀರ್ಮಾನಕ್ಕೆ ಒಳಪಟ್ಟಂಥ ಇಸ್ತಿಯಾರ್‌ನಾಮೆಯನ್ನು ಡೆಲ್ಲಿ ಪಟ್ಟಣದಲ್ಲಿ ನಡೆದಂಥಾ ದರ್ಬಾರಿನಲ್ಲಿ ಬಹಿರಂಗವಾಗಿ ಪ್ರಕಟಿಸಿದರು. ಆ ಇಸ್ತಿಯಾರ್‌ನಾಮೆಯನ್ನು ಆ ಕಾಲದಲ್ಲು ನಮ್ಮ ದೇಶದಲ್ಲೂ ಕೂಡ ದರ್ಬಾರು ನಡೆಸಿ ಪ್ರಕಟಿಸಿರುತ್ತಾರೆ. ಈಚೆಗೆ ಸಿಂಹಾಸನಕ್ಕೆ ಬಂದಂಥ ಎಡ್ವರ್ಡ್ ಮತ್ತು ಜಾರ್ಜ್ ಚಕ್ರವರ್ತಿಗಳು ಸಹ ಆ ಇಸ್ತಿಯಾರ್‌ನಾಮೆಯಲ್ಲು ಸೂಚಿಸಿದ ವಾಗ್ದಾನಗಳಿಗೆ ತಪ್ಪುವದಿಲ್ಲವೆಂದೂ ಸಹ ತಿಳಿಸಿರುತ್ತಾರೆ. ಆ ಇಸ್ತಿಯಾರ್‌ನಾಮೆಯ ಸಾರಾಂಶವು ನಮ್ಮ ಎಲ್ಲಾ ಹಕ್ಕು ಬಾಧ್ಯತೆಗಳನ್ನು ಏನೊಂದು ಕುಂದಕ ಬರದಹಾಗೆ ನಡಿಸಿಕೊಡುತ್ತೇವೆಂಬದೆ ಆಗಿದೆ. ಕೆಲವು ವರ್ಷಗಳು ಕಳೆಯುತ್ತಾ ಬಂದು, ದೇಶದವರಲ್ಲು ಇಂಗ್ಲಿಷರ ರಾಜ್ಯಾಡಳಿತೆಯಲ್ಲು ಪೂರ್ತಿ ವಿಶ್ವಾಸವು ರಾಜಭಕ್ತಿಯು ಹೆಚ್ಚುತ್ತಾ ಬಂದಹಾಗೆ ಇಂಗ್ಲಿಷ್ ಜವಾಬ್ದಾರಿ ಅಧಿಕಾರಿಗಳು ನಮ್ಮ ಸನ್ನದ್ ನಿರೂಪಗಳ ಪದಪ್ರಯೋಗಳಿಗೆ ನಾನಾತರದ ಕಲ್ಪನೆ ಅರ್ಥಗಳನ್ನು ಕೊಟ್ಟು ಜಮ್ಮಾದ ಭೂಮಿಗಳು ಸರಕಾರದವರ ಹಕ್ಕೆಂದು ಅಂದರೆ ಸರಕಾರದವರು ಜಮ್ಮಾದ ಭೂಮಿಯ ಮಾಲೀಕರೆಂದೂ, ನಾವು ಜಮ್ಮಾದ ರೈತರೂ ಬರೇ ವಾರಗಾರರೆಂದೂ ತೀರ್ಮಾನಿಸಿ, ನಮ್ಮ ಜಮ್ಮಾದ ಭೂಮಿಗಳ ಹುಟ್ಟು ಹಕ್ಕನ್ನು ವಿರೋಧಿಸುವವರಾಗಿರುತ್ತಾರೆ. ಇಂಗ್ಲಿಷರ ಆಳ್ವಿಕೆಗೆ ಒಳಪಟ್ಟು ಕೆಲವು ಕಾಲಗಳಲ್ಲೇ ಜವಾಬ್ದಾರಿ ಅಧಿಕಾರಿಗಳು ಅವರ ಅಧಿಕಾರಬಲವು ಹೆಚ್ಚುತ್ತಾ ಬಂದಹಾಗೆ ಜಮ್ಮಾದ ರೈತರು ಹಿಟ್ಟಿಬಿಟ್ಟಿ ಚಾಕರಿ ಮಾಡಲು ಬದ್ಧರೆಂಬ ಭಾವನೆಯಿಂದ ಜಮ್ಮಾದ ರೈತರನ್ನು ನಿರ್ಬಂಧಿಸಿದಕ್ಕೆ ನಮ್ಮ ದೇಶದ ಮುಖ್ಯಸ್ಥರಾದ ಹಿರಿಯರು ಪ್ರತಿಭಟಿಸಿ ಆಗಕ್ಕೆ ಹಾಕಿರುವ ಕುಳವು ನಿಲ್ಲಲ್ಪಟ್ಟಿತು. ಸ್ವಲ್ಪಕಾಲದಮೇಲೆ ಪುನಹ ದೇಶದ ಜನರು ಸರಕಾರದವರಲ್ಲಿ ತುಂಬಾ ಭರವಸವಿಟ್ಟು ಗ್ರಹಕೃತ್ಯ ಕೆಲಸಗಳಲ್ಲು ಮಗ್ನರಾಗಿ ಸ್ವಾರ್ಥಕತೆ ಹೆಚ್ಚುತ್ತಾ ಬಂದಹಾಗೆ ದೇಶಕ್ಕೆ ಮಾಡಬೇಕಾದ ಕೆಲಸಗಳನ್ನು ಮರೆಯುತ್ತಾ ಬರುವವರಾಗಿ ಜವಾಬ್ದಾರಿ ಅಧಿಕಾರಿಗಳು ಕೆಲವು ವರ್ಷಗಳ ಹಿಂದೆ ಜಮ್ಮಾದ ರೈತರನ್ನು ಜಮ್ಮಾಕೂಳಿಗಳೆಂದು ಕರೆಯಲು ಆಸ್ಪದ ಕೊಟ್ಟಿನಲ್ಲವೇ? ಈಗಲೂ ಸಹ ಜಮ್ಮಾಕೂಳಿಗಳೆಂದು ಎದುರಿಗೆ ಕರೆಯದೇ ಹೋದರೂ ಹಿಟ್ಟಿಬಿಟ್ಟಿ ಚಾಕರಿ ಮಾಡಬೇಕೆಂದು ಹೇಳಿಕೊಂಡು ಬಲತ್ಕಾರ ಮಾಡುವದರ ಅರ್ಥವೇನು? ದೇಶಭಾಂದವರೇ! ಜಮ್ಮಾದ ರೈತನು ದೇಶದಲ್ಲಿ ಹುಟ್ಟಿ ಬೆಳದವನೆಂದೂ, ಅಂಥಾ ಹುಟ್ಟು ನಿವಾಸಿಗಳ ಐಶ್ವರ್ಯ ಅಭಿವೃದ್ಧಿಯಿಂದುಂಟಾಗುವ ಸಕಲ ಸಂಪತ್ತು ದೇಶದ ಸಂಪತ್ತೆಂದು, ಅಂಥಾ ದೇಶದ ಸಂಪತ್ತಿನ ಅಭಿವೃದ್ಧಿಯಿಂದ ರಾಜರ ಮರ್ಯಾದೆಯೆಂದೂ ಭಾವಿಸಿ ನಮ್ಮ ರಾಜರು ಕೊಟ್ಟಂಥ ಭೂಮಿಗೆ, ಇಂಗ್ಲಿಷ್ ಸರಕಾರವು ಒಪ್ಪಿ, ಈಗ ನಮ್ಮನ್ನು ಜಮ್ಮಾದ ಭೂಮಿಯನ್ನು ಮಾಡುವ ವಾರಗಾರರೆಂದು ಸರಕಾರದವರು ಹಿಡುವಳಿದಾರರೆಂದು ಹೇಳುವರಲ್ಲವೇ? ಆಹಾ ಇದೇನು ಅನ್ಯಾಯ! ದೇವರೆ, ಯಾಕೆ ಸ್ವತಂತ್ರ ಪ್ರೀತಿಯುಳ್ಳಂಥ ಬ್ರಿಟಿಷ್ ಜನಾಂಗದ ಸರಕಾರದ ಜವಾಬ್ದಾರಿ ಪ್ರತಿನಿಧಿಗಳಿಗೆ ಇಂಥಾ ದುರಾಲೋಚನೆ ಹುಟ್ಟಿತು? ನಮ್ಮ ಹಿರಿಯರು ಇಂಗ್ಲಿಷ್‌ನವರಿಗೆ ಅನೇಕ ಲಡಾಯಿಗಳಲ್ಲು ಮಾಡಿದಂಥ ಸಹಾಯಗಳನ್ನೆಲ್ಲಾ ಮರೆತು, ನಮ್ಮನ್ನು ವಾರಗಾರರೆಂದು ಹಿಟ್ಟಿ ಬಿಟ್ಟಿ ಚಾಕ್ರಿ ಮಾಡಬೇಕೆಂದೂ ಸಹ ನಿರ್ಬಂಧಿಸುವರಲ್ಲವೇ? ಆಹಾ ಕ್ರೂರ ... ಇದೇನು ನಮಗೆ ಈ ದುರ್ಗತಿ! ಕೊಡಗು ದೇಶದಲ್ಲು ವಾಸವೂ, ಸಂಪಾದನೆಯೂ ಮಾಡುವಂಥ ಇಂಗ್ಲಿಷ್ ಸಹೋದರರೇ ನಿಮಗಾದರೂ ನಮ್ಮ ಹಿರಿಯರು ನಿಮ್ಮ ಸರಕಾರಕ್ಕೆ ಮಾಡಿದ ಸಹಾಯವನ್ನರಿತು ಸ್ವತಂತ್ರ ಪ್ರೇಮಿಗಳೆಂಬ ನಿಮ್ಮ ಜನಾಂಗದ ಬಿರುದನ್ನು ಕಾಪಾಡಲಿಕ್ಕೆ, ಮನಸ್ಸು ಬರಲಾರದೆ? ಅನಾಯಸ ಅನರ್ಥಕ್ಕೆ ದಾರಿ ಕೂಡುತ್ತೆಂಬದು ನಿಮಗೆಲ್ಲಾ ತಿಳಿದ ಸಂಗತಿಯಾಗಿದೆ. ಇಂಗ್ಲಿಷ್ ಸಹೋದರರೇ, ನಿಮ್ಮ ಜನಾಂಗದ ಹೆಸರನ್ನು ಮತ್ತೂ ನಮ್ಮ ದೇಶದ ಮರ್ಯಾದೆಯನ್ನೂ ಕಾಪಾಡಲು ಭಾಗಿಗಳಾಗಿ. ಇಷ್ಟರಲ್ಲೇ ನಮ್ಮ ಈಗಿನ ಕಿರುಕುಳವು ಮುಗಿಯಲಿಲ್ಲ. ನಮ್ಮ ಹಿಡುವಳಿಗಳ ಮೇಲೆ ಕಂದಾಯವೂ ಸಹ ಹೆಚ್ಚುಕಮ್ಮಿ ಮಾಡಲ್ಪಟ್ಟಿದೆ. ವೈಕಲ್‌ಬಾನ್ ಸಾಹೇಬರ ಕಾಲದಲ್ಲು ಬಂದಾಣಿಯನ್ನು ಹೆಚ್ಚಿಸಿದ್ದು ಸರ್ವೆ ಮಾಡುವ ಖರ್ಚಿಗೆಂದು ಹೇಳಿ ಘೋಷಿಸಿದರು. ಈಚೆಗೆ 10-20 ವರ್ಷಗಳಲ್ಲು ಅಂಗಾಮಿ ಮತ್ತು ಖಾಯಂ ತಿರ್ವೆ (settlement) ಗೆಂದು ಮಾಡಿ ನಮ್ಮ ಸಿರ್ಕಲ್ ಕಂದಾಯಗಳಲ್ಲು ಹೆಚ್ಚುಕಮ್ಮಿ ಮಾಡಿ ಜಮ್ಮಾದ ಮೇಲಿರುವ ಕಂದಾಯವು ಖಾಯಂ ತೀರ್ವೆಯಲ್ಲವೆಂದು ಸರಕಾರದವರಿಗೆ ಜಮ್ಮಾದ ಮೇಲೆ ಹೆಚ್ಚಿಗೆ ಕಂದಾಯ ಹಾಕಲು ಹಕ್ಕು ಇದೆ ಎಂದೂ, ಜನಪ್ರಿಯವಾದ ವಾದಗಳಿಗೆ ವಿರೋಧವಾಗಿ ಸ್ವಇಚ್ಛೆಯಿಂದ ತೀರ್ಮಾನಿಸಿಕೊಂಡಿರುವರು. ಸಾಲದಕ್ಕೆ 1894 ರಲ್ಲು ಸರ್ವೆ ಶುರುಮಾಡಿ ಜಮ್ಮಾದ ಭೂಮಿಗಳ ಮೇಲೆ ಜನರ ವಾದಕ್ಕೆ ವಿರೋಧವಾಗಿ ಹೆಚ್ಚಿಗೆ ಕಂದಾಯ ವಿಧಿಸಿ 1921-22 ರಲ್ಲು ಕೊಡಗು ಜಮಾಬಂದಿ ರಿಪೋರ್ಟಿನಲ್ಲು (1) ಕಂದಾಯ ವಿಧಿಸದೆ ಬಿಟ್ಟುಹೋದ ಭೂಮಿಗಳ ಮೇಲೆ ಕಂದಾಯ ಹಾಕಲಿಕ್ಕೂ (2) ಜಮ್ಮಾದ ಭೂಮಿಗಳ ಮೇಲೆ ಸರಕಾರದವರಿಗೆ ಹೆಚ್ಚಿಗೆ ಕಂದಾಯ ವಿಧಿಸಲಿಕ್ಕೆ ಹಕ್ಕಿದೆಂದು ಕೋರಿಸಬೇಕಾದ ತತ್ಕಾಲದ ಅವಶ್ಯಕತೆ ಕಾಣುತ್ತದೆಂದು ಬರೆಯುತ್ತಾರೆ. ರಾಜ್ಯಭಾರಕ್ಕೆ ಜವಾಬ್ದಾರರಾದ ಉದ್ಯೋಗಸ್ಥರು ಇಂಥಾ ಕುಯುಕ್ತಿಗಳಿಂದ ಜನರ ಹಕ್ಕು ಬಾಧ್ಯತೆಗಳಿಗೆ ವಿರೋಧಿಸಿದರೆ ಹ್ಯಾಗೆ ತಾನೆ ದೇಶದ ಜನರು ಸಮಾಧಾನದಿಂದಿರುವರು. ಬರೇ ಜಮ್ಮಾದ ಹಿಡುವಳಿಗಳ ಮೇಲೆ ಕಂದಾಯ ಹೆಚ್ಚಿಸಿದ್ದರಲ್ಲಿ ತೃಪ್ತರಾಗದೆ, ನಮ್ಮ ಬಾಣೆಬಾರಿಕೆಗಳಲ್ಲಿರುವ ಮರಗಿಡಗಳ ಮೇಲೂ ಮತ್ತು ನಮ್ಮ ಭೂಮಿಗಳಲ್ಲಿರುವ ಯಾವ ವಸ್ತುಗಳಮೇಲೂ ನಮಗೆ ಯಾವದೊಂದು ಹಕ್ಕಿರುವದಿಲ್ಲವೆಂದು ತೀರ್ಮಾನಿಸಿರುತ್ತಾರೆ. ಸ್ವಲ್ಪ ಕಾಲದಿಂದೀಚೆಗೆ ಬಂದಂಥಾ ಉದ್ಯೋಗಸ್ಥರಿಗೆ ಮೊದಲಾಗಿ ಬಂದ ಇಂಗ್ಲೀಷ್ ಜವಾಬ್ದಾರಿ ಉದ್ಯೋಗಸ್ಥರು ನಮ್ಮ ಜಮ್ಮಾದ ಹಿಡುವಳಿಯು ಖಾಯಂತಿರ್ವೆ (Permanant Settement) ಯಾದ ಕಾರಣ ಕಂದಾಯವನ್ನು ಹೆಚ್ಚು ಮಾಡಕೂಡದೆಂದು ಮತ್ತು ನಾವು ಮಾಲೀಕರೆಂದು ಹೇಳುವ ಭಾವನೆಯಿಂದ ಬರೆದಿರುತ್ತಾರೆ. ಜಮ್ಮಾ ಹಿಡುವಳಿದಾರರ ಮೇಲೆ ಆರೋಪಿಸಿದ ಇನ್ನೊಂದು ಗುರುತರ ಮಗಿರಿಯಾವದಾದರೆ 1921 ನೇ ಖಾನೇಸುಮಾರಿ ವರದಿಯಲ್ಲು ಜಮ್ಮಾದ ಮೇಲೆ ವಾಡಿಕೆ ಕಂದಾಯದ ಅರ್ಧ ಕಂದಾಯ ಹಾಕಿರುವದು ಜಮ್ಮಾದ ರೈತರು ಮಿಲಿಟರಿ ಕೆಲಸ ಮಾಡಬೇಕೆಂದಿರುವದರಿಂದ ಎಂದು ಬರೆದಿರುತ್ತಾರೆ. ಈ ರಿಪೋರ್ಟು ಬರೆದವರು ಎಷ್ಟು ಜಮ್ಮಾ ಸನ್ನದುಗಳಲ್ಲು ಈ ತರದ ಶರ್ತುಗಳಿಂದ ಬರೆಯಲ್ಪಟ್ಟದನ್ನು ಓದಿರುತ್ತಾರೆ? ಅಥವ ಇವರಿಗೆ ಉಪದೇಶಕೊಟ್ಟಿರಬಹುದಾದ ಜವಾಬ್ದಾರರಮೇಲು ಅ... ಗಳನ್ನಾದರೂ ಓದಿರುತ್ತಾರೋ? ದೇಶದ ಜನರ ಕ... ಕಲ್ಪನೆಗಳನ್ನು ತರಿಸಿಕೊಂಡು ವಾಪಾಸುಕೊಡದೆ ಮತ್ತು ಇಲ್ಲಿ ಮಡಿಕೇರಿಯ ಕಚ್ಚೇರಿಗಳಲ್ಲಿದ್ದಂಥ ಸ... ಳನ್ನು ಬೆಂಗಳೂರಿನಲ್ಲು ಇಟ್ಟುಕೊಂಡಿರುತ್ತಾರಲ್ಲವೇ? ಎಷ್ಟು ಎಷ್ಟು ಸನ್ನದುಗಳು ಇಂಥಾ ಶರತ್ತಿನಿಂದ ... ದ್ದಾಗಿದೆ ಖಾನೇಸುಮಾರಿ ಬರೆದ ದೇಶೀಯ ಉದ್ಯೋಗಸ್ಥರಾಗಲಿ ಅಥವ ಅವರಿಗೆ ಉಪದೇಶ ಕೊಡಬಹುದಾದ ... ಉದ್ಯೋಗಸ್ಥರಾಗಲಿ ತಿಳಿಸುವರೇ? ಜಮ್ಮಾದ ರೈತರು ಹಿಟ್ಟಿಬಿಟ್ಟಿ ಚಾಕರಿಮಾಡಬೇಕೆಂದಾಗಲಿ ಅಥವ ಮಿ... ಕೆಲಸಕ್ಕೆ ಹೋಗಬೇಕೆಂದಾಗಲೀ ನಮ್ಮ ಸನ್ನದ್ದುಗಳಲ್ಲಿ ಯಾವ ಷರತು ಇರುವದಿಲ್ಲ. ಎಲ್ಲಾ ನಮ್ಮ ... ಕೂಡಿದೆ. ದೇಶದಲ್ಲಿರುವ ಇತರ ರೈತರುಗಳೆಲ್ಲಾ ಸ್ವತಂತ್ರರಾಗಿರುವಾಗ್ಯೆ ಜಮ್ಮಾದ ರೈತರು ಮಾತ್ರ ಅವರ ಸ್ವತಂತ್ರದ ಹಕ್ಕನ್ನು ಮಾರಿಬಿಟ್ಟಿರುವದಿಲ್ಲ. ಈ ವಿಷಯದಲ್ಲು ದೇಶದ ಮುಖಂಡರು ಅನೇಕ ವರ್ಷಗಳಿಂದ ಅರ್ಜಿ ಕೊಡುತ್ತಾ ಬಂದಿರುತ್ತಾರೆ. ಈಗ ಕೆಲವು ಕಾಲಗಳಿಂದ ಈ ವಿಷಯದಲ್ಲು ನಾವು ಅರ್ಜಿಬರೆದುಕೊಂಡರೆ ಇಂಡ್ಯಾಸರಕಾರದವರಿಂದ ಮೊದಲೆ ತೀರ್ಮಾನವಾದಕಾರಣ ಈ ವಿಷಯದಲ್ಲಿ ಕೈಹಾಕುವದಿಲ್ಲವೆಂದು ಉತ್ತರ ಕೊಡ ಮಸ್ಸಂತುಟ್ಟಿಗೆ ಬಂದಿದೆ. ಇವನ್ನೆಲ್ಲಾ ಅರಿತು 1917 ನೇ ಇಸವಿಯಲ್ಲು ಜಮ್ಮಾದಾರರ ಸಂಘದಲ್ಲು ಜಮ್ಮಾದ ಹಿಡುವಳಿಗಳ ಮೇಲೆ ಕಂದಾಯ ಹೆಚ್ಚಿಗೆ ವಿಧಿಸಿದನ್ನು ವಜಮಾಡಬೇಕೆಂದು ಕೇಳಿಕೊಂಡದಕ್ಕೆ ನ್ಯಾಯದೊರೆಯದ ಕಾರಣ 1921 ರಲ್ಲು ಜಮ್ಮಾದಾರರ ಸಂಘದವರು ನಮ್ಮ ಜಮ್ಮಾದ ಹಕ್ಕುಬಾಧ್ಯತೆಗಳನ್ನು ಸಿವಿಲ್ ಕೋರ್ಟಿನಲ್ಲಿ ವ್ಯಾಜ್ಯವಾಡಿ ಉಳಿಸಬೇಕಾಗಿ ಬಂದಿರುವದ್ದರಿಂದ, ದೇಶದ ರೈತರು ಅವರ ಶಕ್ತಿಮೀರಿ ವ್ಯವಸಾಯ ಮಾಡಬೇಕೆಂದು ತೀರ್ಮಾನಿಸಿ ಈ ಕೆಲಸವನ್ನು ನೆರವೇರಿಸಲಿಕ್ಕಾಗಿ ಒಂದು ಕಮಿಟಿಯನ್ನು ಸ್ಥಾಪಿಸಿರುತ್ತಾರೆ. ಆದ್ದರಿಂದ ಆ ಕಮಿಟಿಯವರು ಅವರಿಗೆ ನಿರ್ಣಯಿಸಿದ ಕೆಲಸವನ್ನು ಕೈಕೊಳ್ಳಬೇಕಾಗಿ ಮತ್ತು ದೇಶದ ಜನರು ಈ ಸದುದ್ದೇಶಕ್ಕೆ ತುಂಬಾ ದ್ರವ್ಯ ಸಹಾಯಮಾಡಬೇಕಾಗಿಯೂ ಕೋರಿಕೆ.

ಪ್ರಕಟನೆ.

ಜಮ್ಮಾದಾರರ ಸಂಘ

ನಾಡುಗಳಲ್ಲು ಸಂಘದ ಕಮಿಟಿಗಳನ್ನು ಏರ್ಪಡಿಸಲಿಕ್ಕಾಗಿ ಈ ಕೆಳಗೆ ಸೂಚಿಸಿದ ಸ್ಥಳಗಳಲ್ಲು ಮೀಟಿಂಗು ಮಾಡಲ್ಪಡುತ್ತೆ. ದಯವಿಟ್ಟು ನಾಡಿನವರು ಎಲ್ಲಾ ಆಯಾ ಮೀಟಿಂಗು ಸ್ಥಳಗಳಿಗೆ ಬರಬೇಕಾಗಿ ಕೋರಿಕೆ.

ಬೇರಳಿನಾಡು.

ಅಕ್ಟೋಬರ್ 8 ನೇ ಸೋಮವಾರ ದಿವಸ ಮಧ್ಯಾಹ್ನ 2 ಗಂಟೆಗೆ ಒಪ್ಪಕೊಡ್ಗೆನಾಡು ಮುಂದಿನಲ್ಲ ಮೀಟಿಂಗು ನಡೆಸಲ್ಪಡುತ್ತೆ.

ಮಡಿಕೇರಿನಾಡು

ಅಕ್ಟೋಬರ್ 9 ರಲ್ಲು ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಕರೋಲೆ ದೇವಸ್ಥಾನದಲ್ಲು ಮೀಟಿಂಗ್ ನಡಿಸಲ್ಪಡು...

[illegible]

ನಾನು ಯಾರು? ಎಲ್ಲಿಂದ ಬಂದೆ? ಎಲ್ಲಿಗೆ ಹೋಕ್ಕವಳು? ನನಗೆ ಯಾರು ಮಿತ್ರರು? ಶತ್ರುಗಳ್ಯಾರು? ನನ್ನಿಂದಾದ ಪರೋಪಕಾರ್ಯವಾವುದು? ಎಂಬ ಮೊದಲಾದ ಎಷ್ಟೋ ಕಲ್ಪನೆಗಳನ್ನು ಕುರಿತು ಆಲೋಚಿಸಲಾ... ಮನಸ್ಸಿನೊಳಗೆ ಒಂದೊಂದು ತರಂಗವಾಗಿ ಹೊಳೆಯಲಾರಂಭಿಸಿತು. ನನ್ನ ಜನ್ಮವು ಪಾಶ್ಚಿಮಾತ್ಯದೇಶದಲ್ಲು ಬ... ಕಾಲಗಳ ಹಿಂದೆ ಉಂಟಾಯಿತು. ನಾನು ಹುಟ್ಟಿದ ಕೆ... ಕಾಲದಮೇಲೆ ಸ್ವದೇಶಾಭಿಮಾನದ ಮೇಲ್ಮೆಯುಂಟ... ದೇಶಸೇವೆಯಲ್ಲೇ ತತ್ಪರಳಾದೆನು. ನಾನು ದೇಶಸೇ... ಕಾಲಿಟ್ಟು ಒಂದೆರಡು ವರ್ಷಗಳೊಳಗೆ ಬಹುಜನರು ನನ್ನ ಧೀನರಾಗಿ ಹೋದರು. ಹೆಚ್ಚಿನವಾತೇನು? ಇಡೀದೇಶ ನನ್ನನುಮತಿಯಂತೆ ವರ್ತಿಸುತ್ತಿದ್ದಿತು. ಇಷ್ಟರಲ್ಲೇ ತೃ... ಳಾಗಲಿಲ್ಲ! ನನ್ನ ರಾಜ್ಯಶಾಸನಕಾಲದಲ್ಲೊಮ್ಮೆ ಹಿಂ... ದೇಶದ ಕಡೆಗೆ ಇಣಿಕಿಬಿಟ್ಟನು. ಅತಿ ಭಯಾನಕಧ್ವ... ಒಮ್ಮೆಗೆ ಚಕಿತಳಾಗಿ ಹಿಂದೆಗೆದೆನು. ಹಿಂದೂಮಾನವ... ರುವ ಭೀಷಣಕೃತ್ಯವು ನನ್ನನ್ನು ಭಯಗೊಳಿಸುವದ್ದಲ್ಲದೆ ... ರಲ್ಲಿ ಪ್ರಬಲವಾಗಿದ್ದ ಪೂರ್ವಾಚಾರವೆಂಬ ನಡತೆಯೊಂ... ನನ್ನನ್ನೆದುರಿಸಿ ಹೋರಾಡಲುಪಕ್ರಮಿಸಿತು. ನಾನೂ, ಇ... ರಲ್ಲಿ ಶಾಂತಳಾಗಲಿಲ್ಲ. ಪುನಃಪುನಃ ಇಣಿಕಿನೋಡುವದ... ಬಿಟ್ಟು ಸಹಾಧ್ಯಾಯಿಗಳೊಡಗೂಡಿ ಇವರ ಪೂರ್ವಾಚಾರವನ್ನೆದುರಿಸಿ ಹೋರಾಡಲುಪಕ್ರಮಿಸಿದೆನು. ಈ ಹೋರಾಟಗಳು ಒಂದೆರಡು ದಿವಸಗಳ, ಅಥವಾ ತಿಂಗಳ ಮಾತ್ರ... ಬಹುಕಾಲಗಳವರೆಗೆ ಹೋರಿದೆನು. ಎಷ್ಟೋ ತಡವೆ ಪೂರ್ವಾಚಾರವು ನನ್ನನ್ನು ಪರಾಜಿತಳನ್ನಾಗಿ ಮಾಡಿಬಿಟ್ಟಿ... ಇಷ್ಟರಲ್ಲಿಯೂ ಕೂಡ ನಿರ್ವಿಣ್ಣೆಯಾಗದೆ ಉಪಾಯಾಂತರವನ್ನು ಯೋಚಿಸತೊಡಗಿದೆನು. ಕೊನೆಗೆ ಹೀಗೆಂದು ನಿರ್ಧರಿಸಿ ಮನಸ್ಸನ್ನು ಸಮಾಧಾನಿಸಿಕೊಂಡು ಮೆಲ್ಲಮೆಲ್ಲಗೆ ಪೂರ್ವಾಚಾರದ ಒಳಹೊಕ್ಕು ದಾಸ್ಯಭಾವದಿಂದ ವರ್ತಿಸುತ್ತ ಸಮಯನಿರೀಕ್ಷಣೆಯಲ್ಲಿ ಕಾಲಕಳೆಯುತ್ತಿದ್ದೆನು. ನಿರೀಕ್ಷ್ಯವಾದ ಪೂರ್ವಾಚಾರದೊಡನೆ ನನಗೆ ಕಾಲಕಳೆದ

ವದು ಬಹಳ ಕಷ್ಟವಾಗಿಯೂ, ಅಸಹ್ಯವಾಗಿಯೂ ತೋರಿತು. ಏಕನ್ನುವಿರೋ? ಪತಿ ಸತ್ತಪಡನೆ ಸತಿಯನ್ನು ಅವನ ಮೃತ ಕಳೇಬರದೊಡನೆ ಬೆಂಕಿಗೆ ದೂಡುತ್ತಿದ್ದರು.

ಅದನ್ನು ನೋಡಿ ನನ್ನ ಎದೆಯೊಡೆದು ನೀರಾಯಿತು. ಒಮ್ಮೆಗೆ ತಲೆಯೆತ್ತಿ ಪೂರ್ವಾಚಾರದೊಡನೆ ಸತೀಸಹಗಮನವನ್ನು ನಿಲ್ಲಿಸಕೂಡದೇಕೆಯೆಂದು ಕೇಳಿದೆನು. ಅದಕ್ಕಾತನು ಎಚ್ಚರ! ಎಚ್ಚರ!! ಆ ಮಾತನ್ನು ಬಾಯಿಬಿಡಕೂಡದು. ನನ್ನ ಶಾಸನವೇ ಹೀಗೆಂದು ಹೇಳಿಬಿಟ್ಟನು. ಈ ವಿಷಯವನ್ನು ಜ್ಞಾಪಿಸಿಕೊಂಡಹಾಗೆಲ್ಲಾ ನನ್ನ ಮನಸ್ಸು ದೀನಸಹೋದರಿಯರನ್ನು ಕುರಿತು ಬಹಳ ಕಳವಳಗೊಂಡುತ್ತಿದ್ದಿತು. ಮಾಡುವದೇನು? ಸುಮ್ಮನಿದ್ದೆನು. ಈ ರಾಜ್ಯದಲ್ಲಿ ನೋಡಿದರೂ ಕೂಡಾ, ಪೂರ್ವಾಚಾರದ ಶಾಸನವೇ ನೆಲೆಗೊಂಡಿದ್ದಿತು. ಆತನ ಶಾಸನಕಾಲದಲ್ಲಾದರೋ ಸತೀಸಹಗಮನ ಒಂದಲ್ಲದೆ ಜಾತಿಭೇದಗಳೂ, ಮತಭೇದಗಳೂ, ನಾಸ್ತಿಕತನ ನಿರ್ಧಯತ್ವ, ಪಕ್ಷಪಾತ, ಲಂಚ ಕಳವು, ಕೊಲೆ ಮೊದಲಾದ ಅನೇಕ ಕೆಟ್ಟ ಕೆಲಸಗಳು ನಡೆದು ಮಾಯವಾಗುತ್ತಿದ್ದವು. ಪ್ರಪಂಚವೆಲ್ಲವೂ ಧನಸಂಪಾದಿಸುವದರಲ್ಲೇ ಮಗ್ನವಾಗಿ ದೇಶದಲ್ಲಿ ವ್ಯಯ ಕಡಮೆಯಾಗಿತ್ತು. ಇಷ್ಟು ಅನಾಹುತಗಳಿಗೆ ಕಾರಣವಾವುದೆಂಬುದನ್ನು ಆಲೋಚಿಸಿ ನೋಡಿದೆನು. ನೋಡಲಾಗಿ ಎಲ್ಲಾ ಜಾತಿಮತದವರಿಗೆ ವಿದ್ಯೆ ದೊರೆಯದಿರುವದೇ ಕಾರಣವೆಂದು ಸುಲಭದಲ್ಲಿ ತಿಳಿದುಕೊಂಡೆನು. ಆ ಕಾಲದಲ್ಲಿ ಸ್ತ್ರೀವಿದ್ಯಾಭ್ಯಾಸವೆಂಬುದೇ ಕೇಳಿ ತಿಳಿದವರು ಕೂಡಾ ಇಲ್ಲ. ಸ್ವಲ್ಪಕಾಲದೊಳಗೆ ಈ ಪೂರ್ವಾಚಾರದ ಗುಟ್ಟುಗಳನ್ನೆಲ್ಲಾ ತಿಳಿದುಕೊಂಡೆನು. ಅದಕೆ ಒಮ್ಮೆಯೇ ತಲೆಯೆತ್ತುವದಕ್ಕೆ ಪ್ರಯತ್ನಿಸಿದರೆ ಫಲವಿಲ್ಲವೆಂದೂ, ಆತುರಪಟ್ಟರೆ ಆಶಾಭಂಗವೆಂದೂ ನೆನೆಸಿಕೊಂಡು ನನ್ನ ಅನುಯಾಯಿಗಳಿಗೆ ಪೂರ್ವಾಚಾರದ ಗುಟ್ಟುಗಳನ್ನೆಲ್ಲಾ ವಿಷದಪಡಿಸಿ ಅವರ ಮೂಲಕ ಆ ದೇಶದಲ್ಲಿ ಕೆಲಭಾಗಗಳಲ್ಲಿ ಸ್ವಲ್ಪ ಸ್ಥಳವನ್ನು ಪಡೆಕೊಂಡು ಅವರನ್ನಿಳಿಸಿದೆನು. ಇದರಿಂದ ನನಗೆ ಬರಲಿಕ್ಕೂ ಹೋಗಲಿಕ್ಕೂ ಬಹಳ ಆಸ್ಪದವಾಯಿತೆಂದು ಬೇರೆ ಹೇಳಬೇಕಾದ್ದೇನಿಲ್ಲ. ಬರಬರುತ್ತ ನನ್ನ ಸ್ವಾತಂತ್ರ್ಯತೆಯನ್ನು ಸ್ವಲ್ಪಸ್ವಲ್ಪವಾಗಿ ಉನ್ನತಸ್ಥಿತಿಗೆ ತರುತ್ತಿದೆನು. ಬಹುಕಾಲಗಳಿಂದಲೂ ನಡೆದುಬರುತ್ತಿದ್ದ ಪೂರ್ವಾಚಾರಗಳ ತುಳಿಯಬೇಕೆಂಬುದೇ ನನ್ನ ಪ್ರಯತ್ನ. ಈ ಪ್ರಯತ್ನವು ಫಲಕಾರಿಯಾಗಬೇಕಾದರೆ ನನ್ನ ಶಾಸನಾನುಸಾರ ಎಲ್ಲರೂ ನಡೆಯಬೇಕೆಂಬುದೊಂದೇ ನನ್ನ ಮುಖ್ಯಾಂಶ. ಆ ಸಲುವಾಗಿ ಅಲ್ಲಲ್ಲಿ ನನ್ನ ಗುಣಶಾಸನತೆಯನ್ನು ತೋರ್ಪಡಿಸತಕ್ಕ ಕೆಲವು ಪಾಠಶಾಲೆಗಳನ್ನೂ ನಿರ್ಮಿಸಿದೆನು. ಈ ಮೊದಲು ಅನೇಕರು ನನ್ನ ಹಿತೋಕ್ತಿಯನ್ನು ಕೇಳಿ ನನ್ನ ಸ್ವಾಧೀನದವರಾಗಿದ್ದರು.

ಬರಬರುತ್ತ ಅವರಿಂದ ಸತೀ ಸಹಗಮನವನ್ನು ನಿಲ್ಲಿಸಲು ಪ್ರಯತ್ನಪಡಿಸಿ ಕೊನೆಗೆ ನಿಲ್ಲಿಸಿಯೇ ಬಿಟ್ಟೆನು. ಈ ಸಮಯ ಬಹಳ ಗಂಡಾಂತರಗಳು ನನಗೊದಗಿದವು. ಅವುಗಳನೆಲ್ಲಾ ಬಹಳ ಸಮಾಧಾನತೆಯಿಂದ ಸಹಿಸಿಕೊಂಡು ಬಂದದ್ದರಿಂದಲೂ, ಸತೀ ಸಹಗಮನವನ್ನು ನಿಲ್ಲಿಸಿದ್ದರಿಂದಲೂ, ಒಮ್ಮಿಂದೊಮ್ಮೆಗೆ ಜಗತ್ತಿನ ಬಹುಭಾಗವು ನನ್ನ ಪೂರ್ಣಕೃಪೆಗೀಡಾಯಿತು. ಇಷ್ಟಾದರೂ, ಅಪೂರ್ವ ದುಷ್ಟಾಚಾರದ ಮದ ಅಡಗಲಿಲ್ಲ. ಬರಬರುತ್ತ ನನ್ನ ಸ್ವಾತಂತ್ರ್ಯತೆಯು ಹೆಚ್ಚಿತು. ಹಾಗೆಯೇ ಸ್ತ್ರೀವಿದ್ಯಾಭ್ಯಾಸವನ್ನು ಪ್ರಚಾರಕ್ಕೆ ತಂದೆನು. ಅದಕ್ಕೂ ಪೂರ್ವಾಚಾರನು ಆಕ್ಷೇಪಿಸಿದನು. ಸುರುಸುರುವಿನಲ್ಲಿ ಸ್ವಲ್ಪ ಕಷ್ಟಪಟ್ಟೆನು. ಮತ್ತೆ ಸರ್ವರೂ ನನ್ನಂತೆಯೇ! ಆ ಮೇಲೆ ನಾನು ಉತ್ತಮ ಕನಿಷ್ಠರೆಂಬದನ್ನು ತೆಗೆದುಹಾಕಲು ಪ್ರಯತ್ನಿಸಿ ಸಕಲರೂ ವಿದ್ಯಾಭ್ಯಾಸಕ್ಕೆ ಅರ್ಹತೆಯುಳ್ಳವರೆಂದು ಸಿದ್ಧಪಡಿಸಿದೆನು. ಸರ್ವರೂ ನನ್ನ ಮಾತನ್ನೇ ಅನುಮೋದಿಸಿದರು. ಇನ್ನು ಅನ್ನಪಾನಾದಿಗಳ ವಿಚಾರವೂ ಹೀಗೆಯೇ ಇರಬಹುದೆಂದು ಸುಲಭದಲ್ಲಿ ತಿಳಿದುಕೊಂಡೆನು, ಮುಖ್ಯತಃ ಪಾನವಿಷಯದಲ್ಲಿ ಕಾಫೀ, ಟೀ, ಮೊದಲಾಗಿ ಕರೆಯಲ್ಪಡುತ್ತಾ ಮುಂದುವರಿಯಹತ್ತಿದೆನು. ಆಗಲೂ ಕೂಡಾ ಆ ಹತಭಾಗ್ಯನಾದ ಪೂರ್ವಾಚಾರನು ಬಿಡುವನೇನು? ಕಾಫಿ ದೇಹಾರೋಗ್ಯವನ್ನು ಕೆಡಿಸುತ್ತದೆ. ಇದನ್ನುಪಯೋಗಿಸಿದವರಿಗೆ ಔಷಧ ಹಿಡಿಯುತ್ತದಿಲ್ಲ ಎಂದು ಸಾರಲುಪಕ್ರಮಿಸಿದನು. ಆದರೆ ಇವನ ಗುಳುವಡಾನವನ್ನು ಕೇಳುವವರಾರು? ಸ್ವಲ್ಪ ಕಾಲದೊಳಗೇನೇ ಸರ್ವರೂ ನನ್ನ ಅಂತರ್ಹಿತರಾದರು. ಈಗ ಎಲ್ಲಿ ನೋಡಿದರೂ ನಾನೆ. ನಾನು ನೆಲೆಸಿರದ ಸ್ಥಳವೇ ಇಲ್ಲ. ನನಗೆ ಪಕ್ಷಪಾತವಿಲ್ಲ. ಧನಿಕರಿಂದ ದರಿದ್ರರವರೇಗೂ ಒಂದೇ ಸಮನಾಗಿ ನೋಡುತ್ತೇನೆ. ಸನ್ನಿಪಾತಾದಿ ಮಹಾವ್ಯಾಧಿಗಳಿಗೆ ಔಷಧಿರೂಪಳಾಗಿದ್ದೇನೆ. ಯಾವತರದ ರೋಗಸ್ಥರಿಗೂ ನಾನು ಅಪಥ್ಯಳಾಗಿರುವದಿಲ್ಲ. ನಾನು ದರಿದ್ರರಲ್ಲಿ ಪ್ರಾಣ್ಯವತಾರವನ್ನು ತಾಳಿಕೊಂಡೂ, ಧನಿಕರಲ್ಲಿ ಶ್ರೀಕಾರವನ್ನು ಧರಿಸಿಕೊಂಡಿರುವೆನು. ಜನರ ಅಚ್ಚುಮೆಚ್ಚಿಗೆಯನ್ನು ಸುಲಭದಲ್ಲಿ ಸಂಪಾದಿಸುವರೆ ತಕ್ಕ ಸಹಾಯ ಮಾಡತಕ್ಕವಳು ನಾನೆ. ಅನೇಕರು ಹೋಟೆಲುಗಳ ಮೂಲಕ ನನ್ನಿಂದಲೇ ಜೀವಿಸುತ್ತಾರೆ. ಬಾರಿ ಹೋಕರೂ ಕೂಡ ಸಾನಿಧ್ಯ ಸ್ಥಳಕ್ಕಾಗಿ ಬಾಯುವವರಾದರೆ ನನ್ನನ್ನೊಮ್ಮೆ ಮಾತಾಡಿಸದೆ ಮುಂದರಿಯಲಾರರು. ಬೇಗ್ಗೆ ಪೂರ್ವಾಚಾರನ ಉದಯವಾಗದ ಬದಲಾಗಿ ಆಬಾಲವೃದ್ಧರವರೇಗೆ ಈಗ ಎಲ್ಲೆಲ್ಲಿಯೂ ಕಾಫಿ! ಕಾಫಿ! ಎಂಬ ಶಬ್ದ ಒಂದೇ ಧನ್ಯವಾದೆ! ಇಂತಗೆ ನಾನು ಧನ್ಯಳಾದೆ!! (ಸಶೇಷ.)

ಪತ್ರವ್ಯವಹಾರಗಳು.

ಬಾತ್ಮೀದಾರರು ಕೊಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ಅಯ್ಯಾ ಹಿತಚಿಂತಕರೇ,

ತಾವು ತಾರೀಖು 7—9—1923 ರ ಕೊಡಗು ಪತ್ರಿಕೆಯಲ್ಲಿ ನಮ್ಮ ಕೋತೂರು ಮತ್ತು ನಾಲ್ಕೇರಿ ಗ್ರಾಮಗಳ ವಿಷಯವಾಗಿ ಪ್ರಕಟಿಸಿರುವ ನಿಂದಾಸ್ಪದವಾದ ಸ್ತುತಿಯನ್ನು ನೋಡಿ ತುಂಬಾ ಸಂತೋಷವಾಯಿತು. ಆದಂತಿರಲಿ ಪ್ರೆಸಿಡೆಂಟರ ಮತ್ತು ಕಮಿಟಿ ಮೆಂಬರುಗಳ ಸುಗುಣಗಳನ್ನು ತಮಗೆ ಗೊತ್ತಿದ್ದಂತೆಯೂ ಸದ್ರಿಯವರ ದುರ್ಗುಣಗಳು ಬೇರೊಬ್ಬರಿಂದ ತಿಳಿದಂತೆಯೂ ಬರೆದಿರುತ್ತೀರಿ, ಅದು ಸರಿ ಇಲ್ಲವಂತೆ, ಇದು ಸರಿ ಇಲ್ಲವಂತೆ, ಎಂಬ ವಿಷಯಗಳನ್ನೂ ತಾವುಗಳು ಕುದ್ದಾಗಿ ಪರೀಕ್ಷಿಸಿ ಅಂಥಾ ನ್ಯೂನತೆಗಳನ್ನು ತಿದ್ದುವ ಅಧಿಕಾರವಿದ್ದ ಪಕ್ಷದಲ್ಲಿ ತಿದ್ದಲೂಬಹುದಾಗಿತ್ತು. ಆ ಸಾಮರ್ಥ್ಯವಿಲ್ಲದಪಕ್ಷ ಕಮಿಟಿಯವರಿಗೆ ಬೋಧನೆ ಕೊಡಬಹುದಾಗಿತ್ತು. ಇದೂ ಅಲ್ಲ, ಸದರಿ ಸಂಘದ ಕಾರ್ಯಭಾರದಲ್ಲಿ ಒಂದು ಭಾಗವನ್ನು ತಾವು ತೆಗೆದುಕೊಳ್ಳಬಹುದಿತ್ತು. ಇದನ್ನೆಲ್ಲ ಬಿಟ್ಟು ಕತ್ತಲೆಯಲ್ಲಿ ಕತ್ತಿಬೀಸಿದಂತೆ ತಾನು ಗುಪ್ತವಾಗಿದ್ದುಕೊಂಡು ಇಲ್ಲದ ದೋಷಾರೋಪಣೆಗಳನ್ನು ದೇಶವೆಲ್ಲ ಹರಡಿಸುವುದು ಯಾವನ್ಯಾಯ. ಸುಗುಣಕ್ಕೆ ದುರ್ಗುಣವು ಹಿಂಬಾಲಿಸುತ್ತಲೇ ಇದೆ ಎಂದು ತಾವೇ ತಿಳಿಸುತ್ತೀರಿ. ಹೀಗಿರುವಾಗ್ಯೆ ಇಲ್ಲದ ಆಕ್ಷೇಪಗಳನ್ನು ದೇಶವೆಲ್ಲಾ ಹರಡಿಸಿದಂತ ತಾವುಗಳು ಸುಗುಣರೋ ದುರ್ಗುಣರೋ ಎಂಬ ವಿಷಯ ವಾಚಕಮಹಾಶಯರೇ ಆಲೋಚಿಸಲಿ. ಇದಲ್ಲದೆ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಕಾಣಿಸದೆ ಇರುವುದು ತುಂಬಾ ವ್ಯಸನಕರ. ಇದು ಪುರುಷಧರ್ಮವಲ್ಲ. ಇಷ್ಟೆಲ್ಲಾ ವಿಷಯ ಪ್ರಕಟವಾಗುವಾಗ್ಯೆ ತಮ್ಮ ಹೆಸರು ಸರಿಯಾಗಿ ತಿಳಿಸಿದ್ದ ಪಕ್ಷದಲ್ಲಿ ತಮಗೆ ಏನು ಹಾನಿಯಿರಲಿಲ್ಲವೋ. ಆದ್ದರಿಂದ ಇದಕ್ಕೆ ಸರಿಯಾಗಿ ತಮ್ಮ ಪೂರ್ಣ ಹೆಸರು ವಿಳಾಸಗಳ ಸಹಿತವಾಗಿ ಜವಾಬು ಕೊಡುವುದಲ್ಲದೆ ಸದರಿ ಯೂನಿಯನ್ನಿನ ಮುಖ್ಯ ಪ್ರತಿನಿಧಿಸ್ಥಾನವನ್ನು ವಹಿಸಿಕೊಂಡು ಸಂಘದ ನ್ಯೂನತೆಗಳನ್ನು ತಿದ್ದಿ ಮುಂದಿನ ಉನ್ನತಸ್ಥಿತಿಗೆ ತರುವ ಏರ್ಪಾಡು ಮಾಡುವದಾಗಿ ನಮಗಳ ಕೋರಿಕೆ. ಈ ರೀತಿ ನಡೆಸಿದ ಪಕ್ಷದಲ್ಲಿ ತಾವು ಪ್ರಕಟಿಸಿದಕ್ಕೆ ಪುರುಷಾರ್ಥಕವಾಯಿತೆಂದು ನಮ್ಮಗಳ ಅಭಿಪ್ರಾಯವಾಗಿದೆ. ಇನ್ನು ಅನೇಕ ಸಂಗತಿಗಳು ವಿವರಿಸಲು ಲೇಖಣಿಯು ಮುಂದರಿಸುತ್ತಿದೆ. ಇಲ್ಲಿಗೆ ನಿಲ್ಲಿಸಿರುತ್ತೇನೆ. ವಣ್ಣೆ ಜವಾಬುಕೊಡಲು ಮರೆಯಬೇಡಿ.

ಕೊ. ಮೇದಪ್ಪ,
ಕೋತೂರು ಯೂನಿಯನ್ ಸಂಘದ ಪ್ರೆಸಿಡೆಂಟರು.

1923 ನೇ ಇಸವಿ ಸೆಪ್ಟಂಬರ್ ತಾರೀಖು 25 ರಲ್ಲಿ ಪೊನ್ನಂಪೇಟೆ ನಾಡಿನವರು ಮತ್ತು ಇತರ ನಾಡಿನ ಕೆಲವು ದೊಡ್ಡ ಮನುಷ್ಯರೂ ಪೊನ್ನಂಪೇಟೆಯಲ್ಲಿ ಸಭೆ ನೆರೆದು ಮ್ಯ. ಬಿ. ಗಣಪಯ್ಯನವರ ಅಧ್ಯಕ್ಷತೆಯಲ್ಲಿ ಸ್ವರ್ಗಸ್ಥರಾದ ಪ್ರಜಾ ಮಾಡ ದೇವಯ್ಯನವರ ವಿಷಯದಲ್ಲಿ ಒಂದು ವ್ಯಸನಸೂಚಕವಾದ ಠರಾವು ಪಾಸುಮಾಡಬೇಕಾಗಿ ಮ|| ಮಾರುವಂಗಳ ಕುಶಾಲಪ್ಪನವರು ಸೂಚಿಸಿದಕ್ಕೆ ಮ|| ಚೋನೀರ ಕರುಂಬಯ್ಯನವರು ಅನುಮೋದಿಸಿದರು.

ದಿವಂಗತರಾದ ದೇವಯ್ಯನವರು ಯೋಗ್ಯರಾಗಿಯೂ, ಧೈರ್ಯಶಾಲಿಗಳಾಗಿಯೂ ದೇಶಸೇವೆಗೆ ತುಂಬಾ ಶ್ರಮವನ್ನು ತೆಗೆದುಕೊಂಡು ಕೆಲಸಮಾಡುತ್ತಿದ್ದುದು ಈ ಅಲ್ಪಕಾಲದಲ್ಲೇ ಇಹಲೋಕವನ್ನು ಬಿಟ್ಟದ್ದು ನಮ್ಮ ತಾಲೋಕಿಗೂ ಮತ್ತು ದೇಶಕ್ಕೂ ಸಹ ತುಂಬಾ ನಷ್ಟಕರವೆಂದೂ ಅವರ ಗುಣಕತನವನ್ನು ಬಹು ಸ್ವಾರಸ್ಯವಾಗಿ ಮ|| ಮಾರುವಂಗಳ ಕುಶಾಲಪ್ಪನವರು ವಿವರಿಸಿದರು.

ಅಧ್ಯಕ್ಷರು ಸಹ ಸ್ವರ್ಗಸ್ಥರ ಒಳ್ಳೇ ನಡತೆ ವಿಷಯದಲ್ಲಿ ಅವರ ಗುಣಕತನವನ್ನು ವಿವರಿಸಿದರು.

ಈ ವ್ಯಸನಸೂಚನೆಯನ್ನು ಅವರ ಕುಟುಂಬಕ್ಕೂ ಮತ್ತು ಕೊಡಗುಪೇಪರಿಗೂ ಸಹ ಕಳುಹಿಸಬೇಕೆಂದು ಮ|| ಚೋನೀರ ಕರುಂಬಯ್ಯನವರು ಸೂಚಿಸಿದಮೇರೆ ಸಭಿಕರೆಲ್ಲರೂ ಸಮ್ಮತಿಸಿದರು.

ಇಹಲೋಕವನ್ನು ಬಿಟ್ಟು ಪರಲೋಕವನ್ನೈದಿದ ದೇವಯ್ಯನವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಬೇಕೆಂತಲೂ, ಮತ್ತು ಅವರ ಕುಟುಂಬಕ್ಕೂ, ಮಾತೋಶ್ರೀ ತಾಯಿಸುನವರಿಗೂ ಅವರ ಭ್ರಾತೃವರ್ಗದವರಿಗೆಲ್ಲ ಪರಮಾತ್ಮನು ಮಂಗಳವನ್ನುಂಟುಮಾಡಲೆಂದು ಸೂಚಿಸಿ ಸಭೆಯು ಬರಖಾಸ್ತಾಯಿತು.

ಪಿ ಗಣಪಯ್ಯ.

ಅಯ್ಯಾ,

ವೀರರಾಜಪೇಟೆ ನೋಡೆಲ್‌ಸ್ಕೂಲು ಮತ್ತು ಗರ್ಲ್ಸ್ ಸ್ಕೂಲು ಮಕ್ಕಳು ಕುಡಿಯುವ ನೀರಿಲ್ಲದೆ ಪಡುವ ಸಂಕಷ್ಟವನ್ನು ವರ್ಣಿಸಲು ಅಸಾಧ್ಯ. ಆ ಎರಡು ಶಾಲೆಗಳಿಂದ ಸುಮಾರು 450 ವಿದ್ಯಾರ್ಥಿಗಳು ಇರಬಹುದು. ಎಲ್ಲರೂ ಸಾಧಾರಣವಾಗಿ 2 ರಿಂದ 5 ಮೈಲುಗಳ ದೂರದ ಗ್ರಾಮಗಳಿಂದ ನಡೆದುಬಂದು ಮಧ್ಯಾಹ್ನ ಬುತ್ತಿ ಊಟ ಮಾಡಿಕೊಂಡು ವಿದ್ಯೆ ಕಲಿಯುವವರು. ಊಟ ಮಾಡಲು ಹತ್ತಿರದ ಗದ್ದೆ ಏರಿಗಳಿಗೆ ಹೋಗುವರು. ಆ ಗದ್ದೆಗಳ ಯಜಮಾನರುಗಳಾದರೋ ನಾಯಿಯನ್ನು ಕಂಡ ಮಾಟಳ್ಳಯವರಂತೆ ಮಕ್ಕಳನ್ನು ಗದ್ದೆಗಳಿಂದ ಓಡಿಸುತ್ತಾರೆ. ಪೇಟೆಮನೆಗಳಿಗೆ ಹೋಗುವದು ಎಷ್ಟೆಂದು ಬೇಡುವರು? ನೀರು ಕೊಡುವರು? ಅಲ್ಲದೆ ಅಂಟುರೋಗಗಳು ಅನೇಕಸಲ ಪೇಟೆಯಲ್ಲಿ ಇರುವದು ವಾಡಿಕೆ. ಈ ಜಾಡ್ಯದ ಭೀತಿಯು ತಂಬೆಳಾಯಿಗಳಿಗೆ ಬಂದುಕಡೆ ಮಕ್ಕಳ ಆರೋಗ್ಯವು ಸಿಕ್ಕಸಿಕ್ಕದ ನೀರು ಕುಡಿದು ಕಡಿಸಿಕೊಳ್ಳುತ್ತಾರೆ. ವಾರಕ್ಕೊಮ್ಮೆ ಡಾಕ್ಟರುಗಳು ಮಕ್ಕಳ ದೇಹಪರೀಕ್ಷೆಗೆ ಶಾಲೆಗೆ ಬರುತ್ತಾರಂತೆ. ಇವರು ಈ ಸಂಗ್ತಿ ವಿಚಾರ ಮಾಡಿರುವರೋ? ಇಲ್ಲವೇ ಮಕ್ಕಳನ್ನು ಬರೇ ಕಣ್ಣಿಂದ ನೋಡಿ ಹೋಗುವದೋ ತಿಳಿಯದು. ಈ ಎರಡು ಶಾಲೆಗಳ ಮಧ್ಯೆ ಒಂದು ಬಾವಿಯನ್ನಾದರೂ ಈ ಎಳಮಕ್ಕಳಿಗಾಗಿ ಸರಕಾರದವರು ತೋಡಿಸಿಕೊಡಬಾರದೇ—ಈ ಧರ್ಮಕಾರ್ಯಗಳಿಗೂ ಹಣವಿಲ್ಲವೇ? ಈ ಮಕ್ಕಳು ಪಡುತ್ತಿರುವ ಕಷ್ಟವನ್ನು ಕಣ್ಣಾರೆ ನೋಡುತ್ತಿರುವ ಉಪಾಧ್ಯಾಯರ ಮನಸ್ಸು ಬಹು ಕಠಿಣವಾಗಿರಬೇಕು. ಇವರಾದರೂ ಮುಂದಕ್ಕೆ ಬರೆದು ತಕ್ಕ ಏರ್ಪಾಡು ಮಾಡಬಾರದೆ?

ಈ ಎಲ್ಲಾ ವಿಷಯಗಳನ್ನು ಕಮಿಶನರ್ ಸಾಹೇಬರು ಕುದ್ದು ಪರಾಂಬರಿಸಿ ಕೂಡ್ಲೆ ಒಂದು ಬಾವಿಯನ್ನು ತೋಡಿಸುವ ಏರ್ಪಾಡನ್ನು ಮಾಡಿ ರೈತರ ಮಕ್ಕಳ ಕಷ್ಟ ಪರಿಹರಿಸಿ ಕೃತಜ್ಞತೆಯನ್ನು ಹೊಂದುವರಾಗಿ ನಂಬಿ ಬರೆದ

ಬಡರೈತ.

ಎಂಟರ್ ಟೆಯಿನ್ ಮೆಂಟ್

ವರ್ಗವಾಗಿ ಹೋಗುವ ನಮ್ಮ ಕಮೀಶನರ್ ಸಾಹೇಬರವರಿಗೆ ಭಾರಿ ಒಂದು ಔತಣವನ್ನು ಕೊಡುವ ಏರ್ಪಾಡನ್ನು ರಾವು ಬಹದ್ದೂರ್ ಸಿ. ಮಾದಯ್ಯನವರು ಕೊಡಗು ಜನಾಂಗದ ಪರವಾಗಿ ಮಾಡಲು ಉದ್ದೇಶಪಟ್ಟಿರುವದಾಗಿ ಕೆಲವರಿಗೆ ನೋಟೀಸು ಬಂದಿದೆ. ಹೋಗುವ ದೊರೆಯನ್ನು ಸತ್ಕರಿಸುವದು ವಾಡಿಕೆ. ಆದ್ರೆ ಯಾರ ಕಡೆಯಿಂದ? ಕೊಡಗು ಜನಾಂಗದ ಪರವಾಗಿ ಕೊಡಲು ಮಾದಯ್ಯನವರಿಗೆ ಅಧಿಕಾರವಿದೆಯೇನು? ಈ ಸಂಗತಿಯಲ್ಲಿ ಜನರ ಇರಾದೆಯನ್ನು ಮೊದಲು ಹೊಂದಿಕೊಂಡು ಕೊಟ್ಟಿರಲ್ಲವೇ ಸತ್ಕರಿಸಲ್ಪಡುವ ದೊರೆಗೆ ಬಹುಮಾನ ನಮಗೂ ಮಾನ. ಮಾನ ಅವಮಾನಗಳರಲಿ. ದೊರೆಯವರ ಗುಣಾವಗುಣಗಳಿರಲಿ. ಜನಾಂಗದ ಪುರೋವೃದ್ಧಿಗೂ, ಹಿತಕ್ಕೂ, ಈ ಸತ್ಕಾರದಿಂದ ಪ್ರಯೋಜನವಿರಬಹುದೆಂದು ಮಾದಯ್ಯನವರ ಅಭಿಲಾಷೆಯೇ? ಹಾಗಿದ್ದ ಪಕ್ಷ ಕೂಡ್ಲೆ ವೀರಾಜಪೇಟೆ, ಪೊನ್ನಂಪೇಟೆಗಳಲ್ಲಿಯೂ ಸೋಮವಾರಪೇಟೆ ಮಡಿಕೇರಿಗಳಲ್ಲಿ, ಒಂದೊಂದು ಮೀಟಿಂಗ್ ನಡಿಸಿ ಈ ವಿಷಯದಲ್ಲಿ ಜನರ ಅಭಿಪ್ರಾಯವನ್ನು ಮುಂದಾಗಿ ಪಡೆಯುವದಲ್ಲವೇ ಉತ್ತಮ? ಜನಾಂಗದ ಪುರೋವೃದ್ಧಿ ಹಿತಗಳು ಯಾವವು? ಸ್ವರಾಜ್ಯದ ಸೋಪಾನಗಳನ್ನು ಒಂದೊಂದಾಗಿ ಹತ್ತುವದು. ಈ ಸೋಪಾನಗಳನ್ನು ಹತ್ತಲು ನಮ್ಮ ಕಮೀಶನರ್ ದೊರೆಯವರು ಈವರೆಗೆ ಏನೆಲ್ಲಾ ಮಾಡಿ, ಸ್ವರಾಜ್ಯದ ಎಷ್ಟು ಮೆಟ್ಲುಗಳನ್ನು ಈವರೆಗೆ ಹತ್ತಿಸಿದರು. ಮಾಂಟಗ್ಯೂ ಚೆಲ್ಮ್ಸ್‌ಫರ್ಡ್ ರಿಫಾರ್ಮ್ಸ್‌ಗಳಿಂದ ಉಂಟಾದ ಪ್ರಯೋಜನಗಳನ್ನು ನಮ್ಮ ನೆರೆ ರಾಜ್ಯದವರು ಈಗ್ಯೆ ೩—೪ ವರ್ಷಗಳಿಂದ ಅನುಭವಿಸಿ ಅದರ ರುಚಿಯನ್ನು ಸಹ ತಿಳಿದವರಾಗಿದ್ದಾರೆ. ನಮಗೆ ಅದರ ಹೆಸರೇ ಹಿಮಾಲಯ! ಅದರ ರುಚಿಯೋ ಸ್ವಪ್ನಾವಸ್ಥೆಯಾಗಿ ಈವರೆಗೆ ದಿಕ್ಕಿಲ್ಲದ ರಾಜ್ಯದ ಅನಾಥ ಕಾಲಯೋಪಾದಿಯಲ್ಲಿ ನಮ್ಮ ಕೊಡಗು ದೇಶವು ಬಿದ್ದಿದೆ. ಇದನ್ನಾದರೂ ತಪ್ಪಿಸುವ ದಾರಿಯನ್ನು ಮ|| ಮಾದಯ್ಯನವರು ಕಂಡು ಹಿಡಿದು ಈ ರೀತಿ ಔತಣದ ಏರ್ಪಾಡನ್ನು ಮಾಡಿದ್ದಾಗಿರಬಹುದೆಂದು ನಂಬಬೇಕಾಗಿದೆ. ನಮ್ಮ ದೇಶದ ವೃದ್ಧ ಮುಂದಾಳಾಗಿರುವ ಮಾದಯ್ಯನವರು ದೇಶಕ್ಕೆ ಲಾಭವಿಲ್ಲದ ಇಂಥಾದ್ದಕ್ಕೆ ಕೈ ಹಾಕಲಾರರು. ಕೂಡ್ಲೆ ಅದಕ್ಕೆ ತಕ್ಕ ಮೀಟಿಂಗ್ ಮಾಡಿಯಾರೆಂದು ನಂಬಿಕೆ.

ಗೌರಿ ಗಣೇಶ.

ಅಯ್ಯಾ,

ತಾ|| 13—9—23 ರಲ್ಲಿ ಪ್ರಾರಂಭಿಸಿದ ಗಣೇಶ ಪೂಜೆ ಹತ್ತು ದಿವಸಗಳವರೆಗೆ ವಿರಾಜಪೇಟೆಯಲ್ಲಿ ದಿವಂಗತ ರಾಮಸ್ವಾಮಿಪಿಳ್ಳೆಯವರು ಕಟ್ಟಿಸಿದ ಗಣಪತಿ ದೇವಾಲಯದಲ್ಲಿ ಅತಿ ವಿಜೃಂಭಣೆಯಿಂದ ದಿನ ನಿತ್ಯ ಪೂಜೆ ಪುನಸ್ಕಾರ ವಗೈರೆಯನ್ನು ನಡಿಸುತ್ತಾ ಬಂದರು. ಭಕ್ತ ಜನರೆಲ್ಲಾ ಪೂಜೆಯ ಸಮಯಕ್ಕೆ ಸರಿಯಾಗಿ ಸೇರಿ ಪ್ರಸಾದಗಳೊಡನೆ ತೆರಳುತ್ತಿದ್ದರು. ಗಣೇಶನನ್ನು ಬಿಡುವ ಕಡೇ ದಿನ ತಾರೀಖು 24—9—23 ನೇ ಆದಿತ್ಯವಾರ ಸಾಯಂಕಾಲ ಆರು ಗಂಟೆಗೆ ಪೂಜೆ ಪುನಸ್ಕಾರ ಮಾಡಿ ಗಣೇಶನ ವಿಗ್ರಹವನ್ನು ತೇರಿನಲ್ಲಿ ಇರಿಸಿ ವಾದ್ಯಾದಿ ಭಜನೆಗಳೊಡನೆ ಬೀದಿಬೀದಿ ಮೆರವಣಿಗೆ ಮಾಡಲಾಯಿತು. ಆ ರಾತ್ರಿ ಬೀದಿಯೆಲ್ಲಾ ಥಳಥಳನೆ ಹೊಳೆಯುತ್ತಿತ್ತು. ಸುಮಾರು ಸಾವಿರ ಜನರು ನೆರೆದಿದ್ದರು. ಮ|| ರಾ|| ತಿರುವೆಂಗಡಂ ಪಿಳ್ಳೆಯವರು ಸುಮಾರು 700 ರೂಪಾಯಿವರೆಗೆ ಖರ್ಚುಮಾಡಿ ಈ ಉತ್ಸವವನ್ನು ಮಾಡಿಸಿದ್ದು ಸರ್ವಶ್ಲಾಘನೀಯವೇ ಸರಿ. ಮ|| ರಾ|| ತಿರುವೆಂಗಡಂ ಪಿಳ್ಳೆಯವರು ಭಕ್ತಿಪೂರ್ವಕವಾಗಿಯೂ ಮತ್ತು ತಮ್ಮ ತಂದೆಯ ನಾಮಸ್ಮರಣೆಗಾಗಿಯೂ ಬಹಳ ಶ್ರದ್ಧೆಯಿಂದ ಈ ಉತ್ಸವವನ್ನು ನಡಿಸಿದಕ್ಕಾಗಿ ಎಷ್ಟು ವಂದಿಸಿದರೂ ಸ್ವಲ್ಪವೇ. ಈ ಉತ್ಸವವು ರಾತ್ರಿ ನಾಲ್ಕು ಗಂಟೆಗೆ ಮುಕ್ತಾಯವಾಯಿತು.

"ಭಕ್ತ"

"ಬಹುಮಾನಪತ್ರಕ್ಕೆ ತಿರಸ್ಕಾರ"

ಸಂಪಾದಕರೇ,

ಈ ವಿಷಯವನ್ನು ತಿಳಿದು ನನಗೆ ಬಹಳ ವ್ಯಸನವಾಗಿದೆ. ಆದರೆ ತಮ್ಮ ಅಗ್ರಲೇಖನದಲ್ಲಿ ಒಂದೆರಡು ವಿಷಯವನ್ನು ಬಿಟ್ಟಿದ್ದೀರಿ. ಕಮಿಶನರ್ ಸಾಹೇಬರ ಪಕ್ಷದಲ್ಲಿ ಚೆಮ್ಸ್‌ಫರ್ಡ್ ಪ್ರಭುಗಳಿಗೆ ಒಪ್ಪಿಸಲಿಕ್ಕೆ ತಯಾರಾಗಿದ್ದ ವಂದನಾಪತ್ರದ ಪುನರುಕ್ತಿಗಳು ಈಗಿನ ಪತ್ರದಲ್ಲೂ ಇದೆಯೆಂಬ ಒಂದು ಆಕ್ಷೇಪಣೆ ಇದೆ. ಆಗ ತಯಾರಿಸಿದ ಬಹುಮಾನಪತ್ರವು ವೈಸ್‌ರಾಯರಿಗೆ ತಲಪದ್ದರಿಂದ ಅದರಲ್ಲಿ ಹೇಳಿದ ವಿಷಯಗಳನ್ನು ವೈಸ್‌ರಾಯರಿಗೆ ತಿಳಿಸಬೇಕಾದದ್ದು ಸಂಘದ ಕರ್ತವ್ಯವಲ್ಲವೇ? ಅದ್ದರಿಂದ ಅದರಲ್ಲಿದ್ದ ವಿಷಯಗಳು ಇದರಲ್ಲಿಯೂ ಬಾರದೆ ಇರುವದು ಹೇಗೆ? ಎರಡನೇ ಅದರಲ್ಲಿ ಕೇಳಿದ ಪ್ರಾರ್ಥನೆಗಳನ್ನು ವೈಸ್‌ರಾಯರಾಗಲೀ ಸ್ಥಳೀಯ ಸರಕಾರದವರಾಗಲೀ ನೆರವೇರಿಸಿಕೊಟ್ಟಿದೆಯೇ? ಮಾಂಟ್‌ಫರ್ಡ್ ಸುಧಾರಣೆಗಳನ್ನು ನಮ್ಮ ದೇಶಕ್ಕೆ ವ್ಯಾಪಿಸಿ ಮಾಡಿಕೊಡಬೇಕೆಂತ ಅದರಲ್ಲಿ ಕೇಳಿದ್ದರು. ನಾಲ್ಕು ವರ್ಷಗಳಾದರೂ ಇನ್ನೂ ಅದರ ಫಲ ನಮಗೆ ಸಿಕ್ಕದೆ ಇರುವಾಗ ಸಂಘವು ಕೇಳಿದ್ದು ತಪ್ಪೇ? ಜಮ್ಮದ ವಿಷಯದಲ್ಲಿ ಸರಕಾರವು ಮಾಡಿದ ಅಕ್ರಮವನ್ನು ಹೇಳಕೂಡಬೇಡವೇ? ಕೇಳುತ್ತಿದ್ದರೂ ಸಹ ಎಕ್ಸಿಕ್ಯುಟಿವ್ ರಿಪೋರ್ಟಿನಲ್ಲಿ ಈ ವಿಷಯ ಬಹಳ ನಿಂತೇಹೋಗಿದೆಯೆನ್ನುತ್ತಾರೆ. ಅರ್ಜಿಗಳಲ್ಲಿ ಈ ಸಂಗತಿಯನ್ನು ಹೇಳದೆ ಇರುತ್ತಿದ್ದರೆ ರಿಪೋರ್ಟಿನಲ್ಲಿ ಇನ್ನು ಹೇಗೆ ಇರುತ್ತಿತ್ತೋ? ಈ ರೀತಿ ರೈತರಿಗೆ ಸಂಬಂಧಪಡುವ ವಿಷಯಗಳನ್ನು 1919 ನೇ ಇಸ್ವಿಯಿಂದ ಈವರೆಗೂ ಪರಿಹರಿಸದೆ ಇರುವದಕ್ಕೆ ಸರಕಾರಕ್ಕೆ ನಾಚಿಕೆಯಾಗಬೇಕೇ ಹೊರತು ಸಂಘವು ಬರಕೊಂಡದ್ದರಲ್ಲಿ ತಪ್ಪೇನೂ ನನಗೆ ತೋರುವದಿಲ್ಲ.

ಚೆಮ್ಸ್‌ಫರ್ಡ್ ಪ್ರಭುಗಳಿಗೆ ಯುರೋಪಿಯನ್ ಪ್ರತಿನಿಧಿಗಳು ವಂದನಾ ಪತ್ರವನ್ನು ಒಪ್ಪಿಸಿದ ವರ್ತಮಾನವಿದೆಯೆಂತ ಬರೆದಿದ್ದೀರಿ. ವಂದನಾ ಪತ್ರವೆಂಬ ಹೆಸರಿನಿಂದ ಪತ್ರವೇನೂ ಒಪ್ಪಿಸಿದಂತೆ ಕಾಣುವದಿಲ್ಲ. ಆಗಿನ ವರ್ತಮಾನ ಪತ್ರವೊಂದರಲ್ಲಿ ಯುರೋಪಿಯನ್ ಪ್ರತಿನಿಧಿಗಳು ತಮ್ಮ ಕೋರಿಕೆಗಳನ್ನು ಸೂಚಿಸುವ ಒಂದು ಪತ್ರವನ್ನು ಕೊಟ್ಟರೆಂತಲೂ ಅದಕ್ಕೆ ವೈಸ್‌ರಾಯ್ ಪ್ರಭುಗಳು ಮದ್ರಾಸಿಗೆ ಸೇರಿಸುವದಿಲ್ಲ ಮುಂತಾಗಿ ಜವಾಬು ಕೊಟ್ಟರೆಂತಲೂ ಪ್ರಕಟವಾಗಿತ್ತು. ನಮ್ಮ ದೇಶದಿಂದ ನೇಮಿಸಲ್ಪಡುವ "ಪ್ರತಿನಿಧಿಗಳು" ದೇಶದ ಹವಾಲ್‌ಗಳನ್ನು ಸೂಚಿಸುವ ಪತ್ರವನ್ನು ಒಪ್ಪಿಸಬಹುದೋ. ಓ! ಇದು ಹೇಗೆ ಸಾಧ್ಯ. ಕಳೆದಸಾರಿ ದೇಶೀಯ ಪ್ರತಿನಿಧಿಗಳ ಮುಂದಾಳುಗಳಾಗಿ ಹೋಗಿದ್ದದ್ದು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು. ಇವರು ರೈತರ ಕಷ್ಟಗಳನ್ನು ಹೇಳಿಕೊಳ್ಳಲು ಸಾಧ್ಯವಿಲ್ಲ. ಈಸಾರಿಯೂ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ದೇಶದ ಪ್ರತಿನಿಧಿಯಾಗಿ ಹೋಗುವದು. ಅವರು ದೇಶದ ಕಷ್ಟಗಳನ್ನು ಹೇಳಲಿಕ್ಕೆ ಹೋದರೆ ದೇಶದ ಮುಖ್ಯ ಅಧಿಕಾರಿಯಾಗಿದ್ದು ನೀನೇ ಈ ಕಷ್ಟಗಳನ್ನು ಕೆಲವುವಟ್ಟಿಗಾದರೂ ಪರಿಹರಿಸಕೂಡದಿತ್ತೋ, ನನ್ನಲ್ಲಿಗೆ ಯಾಕೆ ಬರಬೇಕಿತ್ತು, ಎಂತ ಕೇಳಿಬಿಡಲಿಕ್ಕಿಲ್ಲವೇ? ಅದ್ದರಿಂದ ಸರಕಾರದಿಂದ ನೇಮಿಸಲ್ಪಡುವ ಪ್ರತಿನಿಧಿಗಳು ಹೋಗುವದು ದೇಶದ ಬಹುಮಾನವನ್ನು ತೋರಿಸಲಿಕ್ಕೆ ಹೋಗುವದಾಗುತ್ತೆಯೇ ಹೊರತು ಹವಾಲುಗಳನ್ನು ಹೇಳಿಕೊಳ್ಳಲಿಕ್ಕಿಲ್ಲ. ಹವಾಲ್‌ಗಳಿಲ್ಲದ ಮೇಲೆ ದೇಶವು ರಾಮರಾಜ್ಯವೆಂತಲೇ ವೈಸ್‌ರಾಯರು ಭಾವಿಸುತ್ತಾರೆ. ಈ ರೀತಿ ಹುಟ್ಟಿಕೊಂಡಾದ ಅಭಿಪ್ರಾಯವನ್ನು ತಪ್ಪಿಸುವದು ಸಂಘದ ಕರ್ತವ್ಯವಾಗಿದೆ.

"ಸಂಘದ ಮೆಂಬರು"

ಮ|| ಕೋಟೀರ ಚಿಣ್ಣಪ್ಪನವರಿಗೆ ಉತ್ತರ.

ಇವರ ಬಹಿರಂಗಪತ್ರವು ಕಮಿಟಿ ಮೆಂಬರುಗಳೆಲ್ಲರಿಗೂ ಸಂಬಂಧಪಡುವದರಿಂದ ಅದಕ್ಕೆ ಜವಾಬುಕೊಡುವ ಕೆಲಸವು ಕಮಿಟಿಯದಾದರೂ ನನ್ನ ಸ್ವಂತ ಜವಾಬ್ದಾರಿಯಿಂದ ಈ ಉತ್ತರವನ್ನು ಬರಕೊಂಡಿದ್ದೇನೆ. ಮೆಮೋರಿಯಲನ್ನು ತಯಾರಿಸಿ ಜನರಲ್ ಮೀಟಿಂಗಿನ ಅನುಮತಿ ಪಡಕೊಳ್ಳಬೇಕೆಂತಾಗಲೀ, ಡೆಪ್ಯುಟೇಶನ್ ಮೆಂಬರುಗಳನ್ನು ಜನರಲ್ ಮೀಟಿಂಗಿನಲ್ಲೇ ಚುನಾಯಿಸಬೇಕೆಂತಾಗಲೀ ಜನರಲ್ ಮೀಟಿಂಗಿನ ಠರಾವಲ್ಲ. ಕಮಿಟಿಯವರು ಮೆಮೋರಿಯಲನ್ನು ತಯಾರಿಸಿ ಡೆಪ್ಯುಟೇಶನ್ ಮೆಂಬರುಗಳನ್ನು ಚುನಾಯಿಸಬೇಕೆಂತ ಠರಾವ್ ಪಾಸಾದದ್ದಾಗಿದೆ. ಜನರಲ್ ಮೀಟಿಂಗಿನಲ್ಲಿ ಈ ವಿಷಯವಾಗಿ ನಡೆದ ಚರ್ಚೆಯಲ್ಲಿ ವಿಧವಿಧದ ಅಭಿಪ್ರಾಯಗಳು ಬಂದವು. ಆಖೈರ್ ತೀರ್ಮಾನವಾದಂತೆ ಸಂಘದ ಬುಕ್ಕಿನಲ್ಲಿ ದಾಖಲಾಗಿದೆ.

ಸಂಘದ ಜನರಲ್ ಮೀಟಿಂಗಿನ ತೀರ್ಮಾನಕ್ಕೆ ವಿರೋಧವಾಗಿ ವಂದನಾಪತ್ರವನ್ನು ತಯಾರಿಸಿದ್ದೇನೋ ನಿಜವೇ. ಆದರೆ ಸಂಘದೊಳಗೆ ಇರುವ ಭಿನ್ನಾಭಿಪ್ರಾಯಗಳ ಕಾರಣದಿಂದ ಸಂಘದ ಒಗ್ಗಟ್ಟು ಸಂಪೂರ್ಣವಾಗಿ ಕೆಡಬಾರದೆಂಬ ಕಾರಣದಿಂದಲೇ ಕಮಿಟಿಯಲ್ಲಿ ರಾಜಿ ತೀರ್ಮಾನದಿಂದ ಮೆಜಾರಿಟಿ, ಮೈನಾರಿಟಿ ಪಕ್ಷದವರಿಗೂ ಒಪ್ಪುವಂತೆ ವಂದನಾಪತ್ರವನ್ನು ಮಂಜೂರ್ ಮಾಡಿದ್ದಾಗಿದೆ. ಜನರಲ ಮೀಟಿಂಗಿನಲ್ಲಿ ಶರತ್ತಿಲ್ಲದೆ ದೇಶವನ್ನು ಮದ್ರಾಸಿಗೆ ಸೇರಿಸಿಬಿಡಬೇಕೆಂಬ ಠರಾವಿಗೆ ಓಟ್‌ಮಾಡಿದ ಮಹನೀಯರೇ ಕಮಿಟಿ ಮೀಟಿಂಗಿನಲ್ಲಿ ಹಾಜರಿದ್ದವರು. ಕಮಿಟಿ ಮೀಟಿಂಗಿನಲ್ಲಿ 23 ಮೆಂಬರುಗಳು ಹಾಜರಿದ್ದರು. ಇವರಪೈಕಿ 21 ಜನರು ಜನರಲ್ ಮೀಟಿಂಗಿನ ಬಹುಮತದೊಂದಿಗೆ ಓಟ್‌ಮಾಡಿದವರು. ಇಷ್ಟು ಜನರೆಲ್ಲರೂ ಏಕಮನಸ್ಸಿನಿಂದ ವಂದನಾಪತ್ರವನ್ನು ಮಂಜೂರ್ ಮಾಡಿರುವಾಗ ಒಬ್ಬಿಬ್ಬರ ಮಾತಿನಂತೆ ಸಂಘದ ಕೆಲಸವು ನಡೆದೀತೆಂತ ಮ|| ಚಿಣ್ಣಪ್ಪನವರು ಭಯಪಡುವ ಕೆಲಸವಿಲ್ಲ.

ದೇಶದಲ್ಲಿ ಪಂಗಡಗಳ ಹಾವಳಿ ಅಧಿಕ ಇರುವಾಗ ಪಂಗಡಗಳಾಗದಂತೆ ನೋಡಿಕೊಳ್ಳುವದು ಸಂಘದ ಹಿತಚಿಂತಕರ ಕೆಲಸ. ಕಮಿಟಿಯವರೆಲ್ಲರೂ ಸಂಘದ ಹಿತವನ್ನು ಎಣಿಸದೆ ಇಂಥಾ ಕೆಲಸವನ್ನು ಮಾಡಿದರೆಂತ ಮ|| ಚಿಣ್ಣಪ್ಪನವರು ಊಹಿಸಿದ್ದು ಬಹು ವ್ಯಸನಕರ. ಮ|| ಚಿಣ್ಣಪ್ಪನವರಂತೆಯೇ ಕಮಿಟಿಯಲ್ಲಿ ಹಾಜರಿದ್ದ 23 ಮೆಂಬರುಗಳಿಗೂ ಅಥವಾ ಅವರಲ್ಲಿ ಹೆಚ್ಚಿನವರಿಗಾದರೂ ಸಂಘದ ಅಭಿವೃದ್ಧಿಯ ಆಶೆ ಇರುವದಿಲ್ಲವೇ?

ಜನರಲ್ ಮೀಟಿಂಗಿನ ಠರಾವಿಗೆ ವಿರೋಧವಾಗಿ ಓಟ್ ಮಾಡಿದವರಲ್ಲಿ ಕೆಲವರನ್ನು ಸಂಘದ ಕಮಿಟಿ ಮೆಂಬರುಗಳಾಗಿ ಯಾ ಅದರಲ್ಲಿಯೂ ವೈಸ್‌ಪ್ರೆಸಿಡೆಂಟ್ ಪದವಿಗೂ ಸಹ ಜನರಲ್‌ಬಾಡಿಯೇ ಚುನಾಯಿಸಿರುವಾಗ ಮೈನಾರಿಟಿ ಪಕ್ಷದವರನ್ನು ಸಂಘವು ಅಲ್ಲಗಳೆಯಲು ತಯಾರಿಲ್ಲವೆಂತ ಗೊತ್ತಾಗುತ್ತೆ. ವಂದನಾಪತ್ರವೂ ಮೈನಾರಿಟಿ ಪಕ್ಷದವರ ಅಭಿಪ್ರಾಯಕ್ಕೆ ಪೂರ್ತಿ ಒಪ್ಪಿಗೆಯಾಗಿಲ್ಲ. ಮದ್ರಾಸಿಗೆ ಸೇರಿಸುವ ಕೋರಿಕೆಯೇ ಇರಕೂಡದೆಂತಲ್ಲವೇ ಅವರ ಮತವಿದ್ದದ್ದು. ಕೌನ್ಸಿಲ್ ಶೀಘ್ರದಲ್ಲೇ ಬರ[illegible] ವರ್ತಮಾನವಿರುವಾಗ ವಾಯಿದೆ ಕೇಳಿ ವಾಯಿದೆ ಮುಗಿದನಂತರ ಮದ್ರಾಸಿಗೆ ಸೇರಿಸಿಬಿಡಿ ಎಂತ ಬರೆದದ್ದು ಜನರಲ ಬಾಡಿಯ ಠರಾವಿಗೆ ಸಂಪೂರ್ಣ ವಿರೋಧವಾಗಲಿಲ್ಲ. 1922 ರಲ್ಲಿ ಲೆಫ್ಟಿನೆಂಟ್ ಗವರ್ನರ್ ಕೌನ್ಸಿಲ್ ಸಿಕ್ಕಿದ[illegible]ತ್ತೇವೆಂತ ಮ|| ಚಿಣ್ಣಪ್ಪನವರು ಸಹ [illegible]ದ್ದರಲ್ಲವೇ. ಹಾಗಿರುವಾಗ ದೊಡ್ಡ ಪ್ರಾಂತ್ಯ[illegible]ರುವ ತರದ ಕೌನ್ಸಿಲ್ಲೇ ನಮಗೆ ಕೊಟ್ಟರೆ [illegible]ದೆಂತ ಕೇಳಿದ್ದರಲ್ಲಿ ದೋಷವಿಲ್ಲ. 1922 ನೇ ಇಸ್ವಿಯ ಜನರಲ್ ಮೀಟಿಂಗಿನಲ್ಲಿ ದೊಡ್ಡ ಪ್ರಾಂತ್ಯಗಳಿಗೆ ಸಿಕ್ಕಿರುವ ಮಾದರಿಯ ಕೌನ್ಸಿಲ್ಲೇ ನಮಗೆ ಬೇಕೆಂತಲೂ ಇದು ಸಾಧ್ಯವಿಲ್ಲದಿದ್ದರೆ ಮದ್ರಾಸಿಗೆ ಸೇರಿಸಿಬಿಡಬೇಕೆಂತಲೂ ಠರಾವಾಗಿತ್ತು. ಸಂಘದ ಎಲ್ಲಾ ಮುಂದಾಳುಗಳೂ ಒಪ್ಪಿ ಜನರಲ್ ಮೀಟಿಂಗಿನ ಠರಾವಿಗಿಂತ ಕಡಿಮೆಯಾದ ಲೆಫ್ಟಿನೆಂಟ್ ಗವರ್ನರ್ ಕೌನ್ಸಿಲನ್ನು ಒಪ್ಪಿಕೊಳ್ಳಲಿಲ್ಲವೇ? ಕಮಿಟಿಯವರು ದೇಶದ ಹಿತಕ್ಕೆ ಅವಶ್ಯವೆಂದರೆ ಜನರಲ್ ಮೀಟಿಂಗಿನ ಠರಾವಿಗೆ ವಿರೋಧವಾಗಿಯೂ ಕೆಲಸಮಾಡಬಹುದಂತ ಇದರಿಂದ ತೋರಬರುತ್ತೆ.

ಜನರಲ್ ಮೀಟಿಂಗ್ ಮಾಡಬೇಕೆಂತ 8 ಜನ ಕಮಿಟಿ ಮೆಂಬರುಗಳು ಪತ್ರ ಬರಕೊಂಡಿದ್ದರು. ಅದನ್ನು ಕಮಿಟಿಯವರು ಯೋಚನೆಗೆ ತೆಗೆದುಕೊಂಡು ವಂದನಾಪತ್ರವು ತುರ್ತದಲ್ಲಿ ಸರಕಾರಕ್ಕೆ ಹೋಗಬೇಕಾಗಿದ್ದದ್ದರಿಂದ ಜನರಲ್ ಮೀಟಿಂಗ್ ಅವಶ್ಯವಿಲ್ಲವೆಂತ ಮಾಡಿದರು. ವಂದನಾಪತ್ರವನ್ನು ಪಡನೇ ಕಳುಹಿಸಬೇಕೆಂತ ಚೀಫ್‌ಕಮಿಶನರ್ ಸಾಹೇಬರಿಂದ ಕಮಿಶನರ್ ಸಾಹೇಬರಿಗೆ ಟೆಲಿಗ್ರಾಮ್ ಬಂದಿದ್ದನ್ನು ಸಂಘಕ್ಕೆ ತಿಳಿಸಿದ್ದರು. ಅದ್ದರಿಂದ ಜನರಲ್ ಮೀಟಿಂಗ್ ಮಾಡುವದು ಸಾಧ್ಯವಿಲ್ಲವೆಂತ ತೀರ್ಮಾನವಾಯಿತು. ಸಂಘದ ಜನರಲ್ ಬಾಡಿಯವರಿಗೆ ಏನೂ ತಿಳಿಯದೆಂದು ಯಾರೂ ವರ್ತಿಸಲಿಲ್ಲ. ಜನರಲ್‌ಬಾಡಿಯ ಬಲವಿಲ್ಲದೆ ಸಂಘದ ಕಮಿಟಿಗೆ ಏನೂ ಹಕ್ಕಿರುವದಿಲ್ಲ. ಕಮಿಟಿಯವರು ಜನರಲ್‌ಬಾಡಿಯ ಮುಂದೆ ತಮ್ಮ ಕೆಲಸಕ್ಕೆ ತಕ್ಕ ಸಬಬುಗಳನ್ನು ಹೇಳಿ ಸಂಘದ ಜನರಲ್ ಬಾಡಿಯನ್ನು ಒಪ್ಪಿಸಿಕೊಳ್ಳಬಹುದೆಂಬ ಆಶೆಯಿಂದ ಕೆಲಸಮಾಡಿದ್ದಾರೆ. ಸಂಘದ ಜನರಲ್ ಬಾಡಿಗೆ ಕಮಿಟಿಯ ಹೇಳಿಕೆಗಳು ತೃಪ್ತಿಯಾಗದಿದ್ದರೆ ಸಂಘದ ತಿರಸ್ಕಾರಕ್ಕೆ ಕಮಿಟಿಯವರು ಗುರಿಯಾಗುತ್ತಾರೆ. ಬೇರೆ ಕಮಿಟಿಯವರನ್ನು ಆರಿಸಿಕೊಳ್ಳುವ ಹಕ್ಕು ಸಂಘಕ್ಕೆ ಇದೆ.

ಕಮಿಟಿಯು ಸದುದ್ದೇಶದಿಂದಲೇ ಕೆಲಸಮಾಡಿದೆಯೆಂತ ಜನರಲ್ ಬಾಡಿಯವರು ನಂಬಿ ಈ ಚರ್ಚೆಯನ್ನು ಇನ್ನೊಂದು ಜನರಲ್ ಮೀಟಿಂಗ್‌ವರೆಗೆ ಬೆಳೆಸಬಾರದೆಂತ ಹಾರೈಸುತ್ತೇನೆ. ಈ ಮಧ್ಯೆ ಬಹುಮಾನಪತ್ರವೇ ತಿರಸ್ಕರಿಸಲ್ಪಟ್ಟಿರುವದರಿಂದ ವಾದದ ಅವಶ್ಯಕತೆಯೇ ಇಲ್ಲವಾಗಿದೆ. ಈ ವಾದವನ್ನು ಮರೆತು ಸಂಘದ ಗೌರವವನ್ನು ಕಾಪಾಡಲು ಎಲ್ಲರೂ ಸಹಕರಿಸಬೇಕಾಗಿದೆ.

ಸಿ ಯಸ್. ವೆಂಕಪ್ಪಯ್ಯ
ಜನರಲ್ ಸೆಕ್ರೆಟರಿ

HEALTH IS WEALTH.

WANTED all to improve health strength and vitality and thus save our nation from physical degeneracy. Send half-anna stamp and get 13 specimen photographs with full particulars from

Director Physical Culture,
P.O. Basavanagudi,
BANGALORE CITY

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು ಡಾಕ್ಟರ್ ಯು. ರಾಮರಾವ್,
ಎಮ್. ಎಲ್. ಸಿ. ಯವರು.

ಆರೋಗ್ಯಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ

ಒಂದು ಸಚಿತ್ರ ಮಾಸಪತ್ರಿಕೆ

ಈ ವರ್ಷದ ಮೊದಲನೇ ಸಂಚಿಕೆಯಲ್ಲಿ ಪ್ರಕಟಿಸಿರುವ ವಿಷಯಗಳು

ಜನಾಭಿಪ್ರಾಯಗಳು—1. ಸ್ವವಿಷಯ. 2. ಆರೋಗ್ಯವೇ ಭಾಗ್ಯ 3 ಮಲೇರಿಯಾ ಎಂಬ ದೊಡ್ಡ ಜ್ವರಗಳ ನಿವಾರಣೆ 4 ಮರುಕೊಳಿಸುವ ಜ್ವರ. 5 ಗರ್ಭಿಣಿಯರ ಆರೋಗ್ಯ, 6. ಎಳೆಮಕ್ಕಳಿಗೆ ಆಹಾರಕೊಡುವುದು, 7. ಕೂಸುಗಳಿಗೆ ಬರುವ ಸೆಳವು, ಅದರ ಲಕ್ಷಣಗಳು ಮತ್ತು ಚಿಕಿತ್ಸೆ, 8 ಕೂಸು ಅಳುವದೇಕೆ? 9. ಕಣ್ಣುಗಳಿಗೆ ವಿಶ್ರಾಂತಿ, 10. ಹಲ್ಲುಗಳು, 11. ಕೂದಲಿನ ಪೋಷಣೆ, 12 ನಾರಾಯಣಬೆಂದರೇನು? 13 ನೊಣಗಳಿಂದಾಗುವ ಅಪಾಯಗಳು 14 ಕಾಫಿ

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 3—8—0 ಬಿಡಿಪತ್ರಿಕೆ ಒಂದಕ್ಕೆ 0-2-0

ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯಚಂದ್ರಿಕೆ'ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು

ಪತ್ರವ್ಯವಹಾರ ವಿಳಾಸ—ಮೇನೇಜರ್,
ಜೆಲ್ಲ್ ಅಥವಾ ಆರೋಗ್ಯ ಚಂದ್ರಿಕೆ ಆಫೀಸು,
ಟಪ್ಪಾಲು ಪೆಟ್ಟಿಗೆ ನಂ. 166 323, ತಂಬುಚೆಟ್ಟಿ ಬೀದಿ, ಮದರಾಸ್

ಏಜೆಂಟರು:— ಮ.ರಾ.ರಾ ಎಸ್.ಕೆ. ಈಶ್ವರಪ್ಪ,
[12—6] ಭಾಗಮಂಡಲ, ಕೊಡಗು.

For your requirements of high grade Arms, Ammunition, Wine and Spirits,

APPLY TO:—

Mc. DOWELL Co., Ltd.,

24—23 **MERCARA.**

Printed & Published by D S. Krishnaswamiengar, Proprietor, at Sreenivas Electric Press, Mysore "for Kodagu" Ltd., Mercara—5-10-1923.

If not delivered please return to "Kodagu Office, Mercara"
Reg. No. M. 1550.

ಕೊಡಗು.

ಸತ್ಯೇನ ಧೂತದಯಯಾ ವಿದ್ಯಾನೀತಿ ಪ್ರಯತ್ನತಃ । ಐಕಮತ್ಯೇನದೇಶೋಽಯಂ ಸುಸ್ಥಿರಾ ರಾಜ್ಯಸಂಪದ ॥

"ಎಡಿಟರ್ ಗಂಡಂಗಡ ಐ. ಬೆಳ್ಯಪ್ಪ"

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಸಂಪುಟ ೪] ಕೊಡಗು, ಸನ್ ೧೯೨೩ ನೇ ಅಕ್ಟೋಬರ್ ತಾರೀಖು ೧೨ ನೆಯ ಶುಕ್ರವಾರ. [ಸಂಚಿಕೆ ೨೦

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನಡಾ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ಬಹಳ ಜಾಗ್ರತೆಯಾಗಿಯೂ ಸುಲಭಕ್ರಯದಿಂದಲೂ ಮಾಡಿಕೊಡುತ್ತೇವೆ

Srinivas Electric Press,
MYSORE.

ಬಂಡಿತ್ ನೋಟಿ ಸ್ಪೆನ್ಸರ್ ಕಂಪೆನಿ.

SPENCER & CO., LTD., MERCARA AND POLLIBETTA } 52–52

The Coorg Central Co-operative Bank, Ltd.,

(Registered under the Co-operative Societies Act)

Share Capital	....	50,000
Paid up Share Capital	..	6,820
Fixed Deposits paid	...	39,849

Amounts are lent mainly to Co-operative Societies in Coorg. The Accounts are checked annually by The Registrar of Co-operative Societies Coorg. Deposits for one year and more carry interest at 6¼% per annum and for smaller periods at 5% per annum.

Apply to the Secretary or Treasurer for further details.

President	*Treasurer*	*Secretary*
Kodendera Poonah, Rao Bahadur.	Bhajanga Rao B.A., B.L.	C N Venkappaya B.A. B.L.

Dated 1–9–1923

When you think of going to Bombay.
THINK OF
THE WELCOME HOTEL.
Girgaum Back Road, BOMBAY.
Most airy accomodation—Most Central situation—Excellent Meals
Every Convenience.

ವೆಲ್ಕಂ ಹೋಟೇಲ್.

ಗಿರ್ಗಾಂವ್ ಬ್ಯಾಕ್‌ರೋಡ್, ಬೊಂಬಾಯಿ.

ರೈಲಿನಿಂದಿಳಿದೊಡನೆ ಒಳ್ಳೆ ಇಳಿಯೊದು ಸುಸ್ಥಳ, ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಯೋಗ್ಯವಾದ ಕೋಣೆಗಳು. ಬೊಂಬಾಯಿಪಟ್ಟಣದ ಮಧ್ಯಸ್ಥಳದಲ್ಲಿರುವ ವೆಲ್ಕಂಡ ಹೋಟೇಲಿನಲ್ಲಿಯೂ ಯೋಗ್ಯವಾದ ಊಟ, ಗಾಳಿಗನುಕೂಲವಾದ ಕೊಠಡಿ 15 ಮಿನಿಟಿಗೊಮ್ಮೆ ತಿರುಗುವ ಟ್ರಾಮಿನ ಸೌಕರ್ಯ ಅಂತೂ ಪ್ರಯಾಣಿಕರಿಗೆ ಉಳಿದುಕೊಳ್ಳಲು ಅನುಕೂಲವಾದ ಉಡುಪಿ ಬ್ರಾಹ್ಮಣರ ಭೋಜನಾಲಯ

ಜೆ. ಶ್ರೀನಿವಾಸರಾವ್,
ಮೇನೇಜರ್.

[12—5]

ಜೀವವಿಮೆ

ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಯ ಯಜಮಾನನು ಮೃತಪಟ್ಟರೆ ಉಂಟಾಗಬಹುದಾದ ಕಷ್ಟಗಳನ್ನು ನಿವಾರಿಸುವುದೇ ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ

ಅತಿ ಕಡಿಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪೆನಿ.

ಬದುಕಿರುವಾಗಲೇ ಕುಟುಂಬದ ಜೀವನಾಧಾರ [illegible] ಹಣವನ್ನು ಒದಗಿಸಿ ಸ್ಥಿರಾಸ್ತಿಗಳನ್ನೂ [illegible] ಕೊಟ್ಟು ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆ ಯಾವದೂ ಇದೊಂದೆ!

ಸ್ತ್ರೀಪುರುಷ ಇವರ್ವರೂ ಜೀವವಿಮೆಯ ಸೌಲಭ್ಯವನ್ನು ಪಡೆಯಲು ಅನುಕೂಲವನ್ನು ಒದಗಿಸುವ ಸಂಸ್ಥೆಯಾದರೂ ಇದೊಂದೆ

[illegible] ದೇಶದ [illegible] ದೇಶದ [illegible] ಭೂಸಂಪತ್ತನ್ನು ವೃದ್ಧಿಗೊಳಿಸುವ [illegible] ಮುಂತಾದ ಸಾರ್ವಜನಿಕ ಸಂಸ್ಥೆಗಳಿಗೆ [illegible] ಅನುಕೂಲತೆಯನ್ನು ಕಂಪೆನಿ [illegible].

ಹೆಚ್ಚಿನ ಮಾಹಿತಿಯನ್ನು [illegible] ಕೆಳಗಿನ ವಿಳಾಸದಿಂದ ಪಡೆಯಬಹುದಾಗಿದೆ

ಬಿ. ಎನ್. ಅರಾಧ್ಯ,
ಲೈಫ್ ಅಂಡ್ ವಿಲ್ಲೇಜ್ ಆಫೀಸ್ ಮಡಿಕೇರಿ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ

	ರೂ
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,820
ಜಮಾ ಬಂದ ಠೇವಣಾತಿ	39 849

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡಲ್ಪಡುವುದು.

ಒಂದು ವರುಷ ಹಾಗೂ ಅಧವಾ ಹೆಚ್ಚಿನ [illegible] ದೇವಣಾತಿಗಳಿಗೆ [illegible] ಬಡ್ಡಿ [illegible] ಕಡಿಮೆ ಅವಧಿಯ ಠೇವಣಾತಿಗೆ ನೂರಕ್ಕೆ ವರುಷ 5 ರ ಬಡ್ಡಿ ಕೊಡಲಾಗುತ್ತೆ.

ಹೆಚ್ಚಿನ ವಿವರಗಳಿಗೆ ಅಧ್ಯಕ್ಷರನ್ನಾಗಲಿ [illegible] ಲೆಕ್ಕ ಅಧಿಕಾರಿಯನ್ನು ಕಾಣತಕ್ಕದ್ದು

ಪ್ರೆಸಿಡೆಂಟರು.	ಟ್ರೆಜರರು.
ಕೋಡಂದೆರ ಪೂವಯ್ಯನವರು	ಭುಜಂಗರಾಯರು
ರಾವ್ ಬಹದ್ದೂರ್	ಬಿ. ಎ. ಬಿ. ಎಲ್.

ಸೆಕ್ರೆಟರಿ
ಸಿ. ಎನ್. ವೆಂಕಪ್ಪಯ್ಯನವರು. ಬಿ. ಎ. ಬಿ. ಎಲ್.
ತಾರೀಖು 1—9—1923.

ಸುಂದರ ವಿಲಾಸ ಪ್ರೆಸ್, ಮಡಿಕೇರಿ.

ಕೊಡಗು ಮಹಾ ಜನರನ್ನು ಈಗ್ಗೆ ಕೊಡಗಿನ ಪ್ರಾಧಾನಪಟ್ಟಣವಾದ ಮಡಿಕೇರಿಯಲ್ಲಿ ಸದ್ಯ ಸ್ಥಾಪಿತವಾಗಿರುವ ನನ್ನ ಮುದ್ರಾಲಯವು ತಮ್ಮನ್ನು ಸೇವಿಸಲು ಸಿದ್ಧವಾಗಿದೆ. ಅಂದವಾದ ಅಕ್ಷರಗಳಿಂದ ಮುದ್ರಣದಿಂದ ನೋಡಲು ಸೊಗಸಾದ ಕಾಗದಗಳಲ್ಲಿ ಮುದ್ರಿಸುವ ನೂತನ ಅನುಕೂಲತೆ ಎಲ್ಲಾ ಸಿದ್ಧಪಡಿಸಿದೆ.

[illegible] ಎಲ್ಲಾ ಅನುಕೂಲತೆಗಳನ್ನು ಒದಗಿಸಿರುವ ದೇಶೀಯ ಮುದ್ರಾಲಯಕ್ಕೆ ಸ್ವದೇಶೀಯರು [illegible] ಪ್ರೋತ್ಸಾಹ [illegible].

[illegible] ನಮ್ಮ ದೇಶ [illegible]! ನಮ್ಮ ಕೊಡವರೇ, ನೀವೇ! ವಿಶೇಷ ವಿವರವನ್ನು [illegible] ಮುದ್ರಾಲಯದ ಅಧಿಕಾರಿಯವರನ್ನು ಬರೆದು ತಿಳಿದುಕೊಳ್ಳುವುದು.

ಪಿ. ಆರ್. ಕಣ್ಣಪ್ಪ [illegible]

ಸುಂದರ ವಿಲಾಸ ಪ್ರೆಸ್
ಮಡಿಕೇರಿ.
ತಾ|| 10–9–23.

“ಕೊಡಗು”

೧೯೨೩ನೇ ಇಸವಿ ಅಕ್ಟೋಬರ್ ತಾ|| ೧೯ನೇ
ಶುಕ್ರವಾರ

ಕೊಡಗಿನ ನ್ಯಾಯವಿಧಾಯಕ ಸಭೆ.

ಕಳೆದವಾರ ಸ್ಟೇಟ್ ಸೆಕ್ರೆಟರಿಯವರು ಕೊಡಗಿಗೆ ಒಂದು ಕೌನ್ಸಿಲನ್ನು ಮಂಜೂರು ಮಾಡಿರುವದಾಗಿ ಚೀಫ್ ಕಮಿಷನರವರು ಕಮಿಷನರವರಿಗೆ ಬರೆದು ತಿಳಿಸಿರುತ್ತಾರೆಂಬ ವರ್ತಮಾನವಿದೆಯೆಂದು ಬರೆದಿದ್ದೆವು ಆ ವರ್ತಮಾನವು ನಿಜವೆಂದು ಕಮಿಷನರವರು ನಮಗೆ ಬರೆದು ತಿಳಿಸಿರುತ್ತಾರೆ ಈ ಕೌನ್ಸಿಲಿನ ವಿಷಯ ಸರ್ಕಾರದವರು ನಮಗೆ ತಿಳಿಸಿರುವುದೇನೆಂದರೆ — ಕೌನ್ಸಿಲಿನಲ್ಲಿ ಇಪ್ಪತ್ತು ಮೆಂಬರುಗಳಿರತಕ್ಕದ್ದು. ಜಮ್ಮದ ರೈತರಿಂದ ಚುನಾಯಿತರಾಗುವವರು ಒಂಭತ್ತು; ಜಮ್ಮೇತರರಿಂದ ಚುನಾಯಿತರಾಗುವವರು ನಾಲ್ಕು; ಯೂರೋಪಿಯನರಿಂದ ಚುನಾಯಿತರಾಗುವವರು ಎರಡು ಬಾಕಿ ಐದು ಮೆಂಬರುಗಳು ಸರ್ಕಾರದಿಂದ ನೇಮಿಸಲ್ಪಡತಕ್ಕವರು. ಇವರಲ್ಲಿ ಒಬ್ಬನು ಯರವ, ಕುರುಬ, ಪಂಚಮ ಮುಂತಾದ ಹಿಂದುಳಿದ ಪಂಗಡದವರ ಪರವಾಗಿ ನೇಮಿಸಲ್ಪಡತಕ್ಕವನೆಂದೂ ಉಳಿದ ನಾಲ್ಕು ಮೆಂಬರುಗಳು ಸರ್ಕಾರಿ ಉದ್ಯೋಗಸ್ಥರೆಂದೂ ತೋರುತ್ತದೆ. 21 ವರ್ಷಕ್ಕೆ ಮೇಲಿನ ಪ್ರಾಯದ 5 ರೂ ಕಂದಾಯ ಕೊಡುವ ಜಮ್ಮದ ಭೂಮಿ ಇರುವ ಪ್ರತಿಯೊಬ್ಬ ರೈತನಿಗೂ ಜಮ್ಮದವರ ಪ್ರತಿನಿಧಿಯಾದ ಕೌನ್ಸಿಲು ಮೆಂಬರನ್ನು ಚುನಾಯಿಸಲಿಕ್ಕೆ ಓಟು ಕೊಡುವ ಹಕ್ಕಿದೆ 5 ರೂ ಗಿಂತ ಕಮ್ಮಿ ಕಂದಾಯ ಕೊಡುವ ಜಮ್ಮದ ರೈತನಿಗೆ ಸಾಗಿನ ಭೂಮಿ ಇದ್ದರೆ ಅಂಥಾ ಸಾಗಿನ ಭೂಮಿಯ ಕಂದಾಯದ ಅರ್ಧವನ್ನು ಜಮ್ಮದ ಕಂದಾಯಕ್ಕೆ ಸೇರಿಸಿ 5 ರೂ ಕಡಿಮೆ ಇಲ್ಲದೆ ಆದರೆ ಅಂಥವನಿಗೂ ಜಮ್ಮದ ಪ್ರತಿನಿಧಿಯನ್ನು ಚುನಾಯಿಸಲಿಕ್ಕೆ ಓಟು ಕೊಡುವ ಹಕ್ಕಿದೆ ಜಮ್ಮೇತರ ಪ್ರತಿನಿಧಿಗಳಿಗೆ ಓಟು ಕೊಡುವವರು ಯಾರೆಂದರೆ — ಹತ್ತು ರೂಪಾಯಿಗೆ ಕಡಿಮೆ ಇಲ್ಲದೆ ಕಂದಾಯ ಕೊಡುವ ಜಮ್ಮವಲ್ಲದ ಭೂಮಿ ಇರುವ ಪ್ರತಿಯೊಬ್ಬನೂ, ಮನೆ ಕಂದಾಯವಾಗಲಿ ಮುನ್ಸಿಪಲ್ ತೆರಿಗೆಯಾಗಲೀ ಹತ್ತು ರೂಪಾಯಿಗೆ ಕಡಿಮೆ ಇಲ್ಲದೆ ಕೊಡುವ ಪ್ರತಿಯೊಬ್ಬನೂ, ಇನ್‌ಕಮ್ ಟ್ಯಾಕ್ಸ್ ಕೊಡುವವನೂ 21 ವಯಸ್ಸು ಮೀರಿದ್ದರೆ ಓಟು ಕೊಡಬಹುದು 1924 ನೇ ಜನವರಿ ತಿಂಗಳಲ್ಲಿ ಕೌನ್ಸಿಲ್ ಕೆಲಸವು ಬಹುಶಃ ಪ್ರಾರಂಭವಾಗಬಹುದೆಂತಲೂ ಈ ಅಕ್ಟೋಬರ್ ಆಖೈರೊಳಗೆ ಓಟು ಕೊಡುವವರ ಪಟ್ಟಿಯು ಬಹುಶಃ ಪ್ರಕಟವಾಗಬಹುದೆಂತಲೂ ತಿಳಿಸಿರುತ್ತಾರೆ

ಈ ಕೌನ್ಸಿಲಿನ ಹಕ್ಕುಗಳು ಮತ್ತು ಇತರ ಸಂಗತಿಗಳು ಈಗ ನಮಗೆ ಸರ್ಕಾರದಿಂದ ಬಂದಿರುವ ಪತ್ರದಲ್ಲಿ ಇಲ್ಲದಿದ್ದರೂ, ಈ ಮೊದಲು ಚೀಫ್ ಕಮಿಷನರವರು ದೇಶದವರಿಗೆ ತಿಳಿಸಿದ ಮೇರೆ ಈಗ ಮಂಜೂರಾಗಿರುವ ಕೌನ್ಸಿಲು ಲೆಫ್ಟಿನೆಂಟ್ ಗವರ್ನರವರ ಕೌನ್ಸಿಲೆಂದು ನಾವು ನಂಬುತ್ತೇವೆ. ಲೆಫ್ಟಿನೆಂಟ್ ಗವರ್ನರ ಕೌನ್ಸಿಲನ್ನು ಇಂಡಿಯಾ ಗವರ್ನಮೆಂಟ್ ಆಕ್ಟಿನ 77 (2) ನೇ ಸೆಕ್ಷನ್ ಮೇರೆ ಚೀಫ್ ಕಮಿಷನರವರ ಪ್ರಾಂತ್ಯಕ್ಕೆ ಇಂಡಿಯಾ ಸರಕಾರದವರು ಮಂಜೂರು ಮಾಡಬಹುದು. ಇಂಥಾ ಕೌನ್ಸಿಲಿನಲ್ಲಿ ಚೀಫ್ ಕಮಿಷನರವರೇ ಅಧ್ಯಕ್ಷರು ಅವರ ಗೈರ್ ಹಾಜರಿನಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಲು ಒಬ್ಬರನ್ನು ವೈಸ್ ಪ್ರೆಸಿಡೆಂಟರಾಗಿ ಚೀಫ್ ಕಮಿಷನರವರು ನೇಮಿಸಬಹುದು ನಮ್ಮ ದೇಶದಲ್ಲಿ ಕಮಿಷನರವರನ್ನೇ ವೈಸ ಪ್ರೆಸಿಡೆಂಟರಾಗಿ ನೇಮಿಸಬಹುದಾಗಿ ಊಹಿಸಬಹುದು ಇವರಿಬ್ಬರೂ ಗೈರ್ ಹಾಜರಾದಲ್ಲಿ ಉದ್ಯೋಗಸ್ಥ ಮೆಂಬರುಗಳ ಪೈಕಿ ಹೆಚ್ಚಿನ ದರ್ಜೆಯವರು ಅಧ್ಯಕ್ಷರಾಗುವರು ಈ ಕೌನ್ಸಿಲಿಗೆ ಹೊಸದಾಗಿ ಕಾನೂನು ಮಾಡಲಿಕ್ಕೆ ಹಕ್ಕಿದೆ ರೈತರ ಪ್ರತಿನಿಧಿ ಮೆಂಬರುಗಳೂ ಕಾನೂನಿನ ಮಸೂದೆಗಳನ್ನು ಚರ್ಚೆಗೆ ತರಬಹುದು ದೇಶಕ್ಕೆ ಸಂಬಂಧಪಡುವ ಯಾವ ವಿಷಯದ ಮೇಲಾದರೂ ಠರಾವು ತಂದು ಚರ್ಚಿಸಿ ಪಾಸುಮಾಡಬಹುದು ಆದರೆ ಅವುಗಳನ್ನು ಸರ್ಕಾರದವರು ಜಾರಿಗೆ ತರಬೇಕೆಂಬ ನಿರ್ಬಂಧವಿಲ್ಲ. ದೇಶಕ್ಕೆ ಅನ್ವಯಿಸುವ ಸಂಗತಿಗಳ ಮೇಲೆ ಸವಾಲುಗಳನ್ನು ಕೇಳಬಹುದು ಆದರೆ ಈ ಮೇಲಿನ ಕೆಲಸಗಳನ್ನು ನಡಿಸುವ ಬಗ್ಗೆ ಇಂಡಿಯಾ ಸರಕಾರದವರು ರೂಲ್ಸ್‌ಗಳನ್ನು ಮಾಡಬೇಕು ಈ ರೂಲ್ಸ್‌ಗಳು ಇನ್ನೂ ಬಂದಿಲ್ಲವಾದರೂ ಶೀಘ್ರದಲ್ಲಿಯೋ ಬರುವವೆಂದು ತಿಳಿಯುತ್ತೇವೆ ಹೀಗೆ ಬರುವ ರೂಲ್ಸುಗಳನ್ನು ಕನ್ನಡದಲ್ಲಿ ಪ್ರಕಟಿಸಿ ದೇಶದ ಜನರಿಗೆ ತಿಳಿಯುವಂತೆ ಮಾಡಬೇಕಾದ್ದು ಅಗತ್ಯ. ಬೇರೆ ಪ್ರಾಂತ್ಯಗಳಲ್ಲಿ ಜಾರಿಯಲ್ಲಿದ್ದ ರೂಲ್ಸುಗಳಿಂದ ನಮಗೆ ತಿಳಿಯಬರುವುದೇನೆಂದರೆ — ಯಾವ ಸವಾಲನ್ನೇ ಆಗಲಿ ಕೇಳಕೂಡದೆಂತಲೂ ಯಾವ ಠರಾವನ್ನು ಅನವಶ್ಯವೆಂದೇ ಸಕೂಡದೆಂತಲೂ ಅಧ್ಯಕ್ಷರು ಅಪ್ಪಣೆ ಮಾಡಲಿಕ್ಕಿಲ್ಲ ಕೌನ್ಸಿಲಿನಲ್ಲಿ ಆದಾಯ ವೆಚ್ಚದ ವರದಿ (ಎನ್ಯುಯೆಲ್ ಫೈನಾನ್ಶಿಯಲ್ ಸ್ಟೇಟ್‌ಮೆಂಟ್) ಯನ್ನು ಚರ್ಚಿಸಬಹುದು. ಆದರೆ ಚೀಫ್ ಕಮಿಷನರವರು ಈ ಮೊದಲೇ ದೇಶದವರಿಗೆ ತಿಳಿಸಿದ ಮೇರೆ ಈ ಕೌನ್ಸಿಲಿನಲ್ಲಿ ಬಜೆಟನ್ನು (ಆದಾಯ ವೆಚ್ಚದ ಅಂದಾಜು ಪಟ್ಟಿಯನ್ನು) ಚರ್ಚಿಸಲು ಅನುಕೂಲವಾಗುವ ರೂಲ್ಸುಗಳಲ್ಲಿ ಏರ್ಪಡಿಸಬಹುದು ಆದರೂ ಕೌನ್ಸಿಲಿನ ಅನುಮತಿಯಿಂದಲೇ ಉತ್ಪತ್ತಿಯನ್ನು ಖರ್ಚು ಮಾಡಬೇಕೆಂದಿಲ್ಲ ಈ ವಿಷಯಗಳ ಮೇಲೆ ರೂಲ್ಸುಗಳು ಪ್ರಕಟವಾದನಂತರ ವಿವರವಾಗಿ ಬರೆಯಬಹುದೇ ಹೊರತು ಈಗ ಸಾಧ್ಯವಿಲ್ಲ

ಈ ಸಂದರ್ಭದಲ್ಲಿ ದೇಶಕ್ಕೆ ತಕ್ಕಷ್ಟು ತೃಪ್ತಿಯನ್ನುಂಟುಮಾಡಬಹುದಾದ ಒಂದು ವರ್ತಮಾನವಿದೆ ಕೊಡಗು ಸರ್ಕಾರದ ಉತ್ಪತ್ತಿಯಿಂದ ಇಂಡಿಯಾ ಸರ್ಕಾರಕ್ಕೆ ಇನ್‌ಕಮ್ ಟ್ಯಾಕ್ಸ್ (1921-22 ರಲ್ಲಿ ರೂ 20676) ಮತ್ತು ಹನ್ನೆರಡು ಸಾವಿರ ರೂ ಮಾತ್ರ ಕೊಟ್ಟರೆ ಸಾಕಂತೆ ಇಷ್ಟನ್ನು ಸಹ ನಮ್ಮ ಈ ಬಡ ಮತ್ತು ಮಲೇರಿಯ ಪೀಡಿತ ದೇಶದಿಂದ ತೆಗೆದುಕೊಳ್ಳುವುದು ನಮಗೆ ಸಮ್ಮತವಿಲ್ಲ ನಮ್ಮ ದೇಶಕ್ಕೆ ಬರುವ ಸಾಮಾನುಗಳ ಮೇಲಿನ ಸುಂಕದ ಆದಾಯವು ಇಂಡಿಯಾ ಸರಕಾರಕ್ಕೆ ಸಿಕ್ಕುತ್ತೇ ಹೊರತು ನಮ್ಮ ಗೋಚರಕ್ಕೆ ಬರುವುದಿಲ್ಲ ಇದು ಸುಮಾರು 3 ಲಕ್ಷ ರೂ.ಗೆ ಕಡಿಮೆ ಇರಲಾರದೆಂದು ತೋರುತ್ತದೆ, ಸುಂಕಕ್ಕೆ ಗುರಿಯಾಗುವ ಸಾಮಾನುಗಳು ನಮ್ಮ ದೇಶದೊಳಕ್ಕೆ ಬರುವುದರ ಲೆಕ್ಕವು ಸರಕಾರದವರಿಗೆ ತಿಳಿಯದ್ದಲ್ಲ. ಇದು ಎಷ್ಟೆಂಬದನ್ನು ಅವರು ನಮಗೆ ತಿಳಿಸಬೇಕಾಗಿದೆ

1921-22 ನೇ ವರ್ಷದ ಆಡಳಿತ ವರದಿಯಲ್ಲಿ 79998 ರೂ ನಷ್ಟವೆಂತ ಕಾಣುತ್ತದೆ ಇನ್ನು ಮುಂದೆ ಬಜೆಟಿನಲ್ಲಿ ಐವತ್ತು ಸಾವಿರ ರೂ ಸಿಲ್ಕು ಇರುವಂತೆ ಬಜೆಟ್ ಆಗಬೇಕಂತೆ ಅಂದರೆ 1921-22 ರ ಲೆಕ್ಕ ಪ್ರಕಾರ ಒಂದು ಲಕ್ಷದ ಇಪ್ಪತ್ತೆರಡುಸಾವಿರ ರೂಪಾಯಿ ಖರ್ಚು ಕಡಿಮೆ ಮಾಡಬೇಕಾಗುವುದು ಇದರಿಂದ ಕೌನ್ಸಿಲಿನ ಮೂಲಕ ದೇಶಕ್ಕೆ ಎಷ್ಟರ ಮಟ್ಟಿಗೆ ಪ್ರಯೋಜನವನ್ನು ಮಾಡಿಕೊಳ್ಳಬಹುದೆಂಬ ವಿಷಯದಲ್ಲಿ ನಮಗೆ ಸಂದೇಹ ತೋರುತ್ತೆ ಕೆಲವು ವರ್ಷಗಳಲ್ಲಿ ಒಂದೆರಡು ಲಕ್ಷ ರೂ ಖರ್ಚು ಕಳೆದು ಉಳಿವರಿಯಾದದುಂಟು ಅದುದರಿಂದ ಕೌನ್ಸಿಲಿಗೆ ಅನಾವಶ್ಯಕದ ಬಾಬಿನ ಖರ್ಚುಗಳನ್ನು ಕಡಿಮೆ ಮಾಡುವ ಹಕ್ಕು ಸಿಕ್ಕಿದರೆ ದೇಶಕ್ಕೆ ಪ್ರಯೋಜನಮಾಡಿಕೊಳ್ಳಬಹುದಿತ್ತು ಇದು ತತ್ಕಾಲ ಸಾಧ್ಯವೆಂತ ತೋರುವುದಿಲ್ಲ

ಕೌನ್ಸಿಲಿನಿಂದ ಚಿಕ್ಕದಾದರೂ ಅನೇಕ ಪ್ರಯೋಜನಗಳಿವೆ ಜಮಾನುದಾರರ ಸಂಘದಲ್ಲಿ ಪಾಸಾಗುತ್ತಿದ್ದಂತ ಠರಾವುಗಳನ್ನು ಕೌನ್ಸಿಲಿನಲ್ಲಿ ಮಂಜೂರು ಮಾಡಿದರೆ ಸರ್ಕಾರದವರೂ ಅವರೆಗಿನಂತೆ ಗಮನಕೊಡದೆ ಇರಲು ಸಾಧ್ಯವಿಲ್ಲ. ವರ್ಷೇ ವರ್ಷೇ ಒಂದೇ ವಿಷಯದ ಠರಾವು ಪಾಸಾಗುತ್ತಿದ್ದರೆ ಅದರಿಂದ ಪ್ರಯೋಜನವಿರದೆ ಇರಲಾರದು. ಆದಾಯ ವೆಚ್ಚದ ವರದಿಯ ಮೇಲೆ ಚರ್ಚೆ ನಡೆದರೆ ಅದರಲ್ಲಿ ಜನರಿಗೆ ಪ್ರಯೋಜನವಾಗುವ ವ್ಯತ್ಯಾಸಗಳು ಆಗಲೂ ಬಹುದು ಸವಾಲು ಕೇಳುವ ಹಕ್ಕಿರುವದರಿಂದ ಜನ ಸಮ್ಮತವಲ್ಲದ ಕೆಲಸಗಳನ್ನು ಮಾಡ ಎಸ್ಟೇಟಿನವರ ಹಿಂಜರಿದಾರು ತಮ್ಮ ದೇಶದ ಆಡಳಿತ ಕಾರ್ಯದಲ್ಲಿ ದೇಶೀಯರು ಭಾಗಿಗಳಾಗಲು ಕೌನ್ಸಿಲಿನಿಂದ ಉತ್ತೇಜನವು ದೊರಕಿ ಶೀಘ್ರದಲ್ಲಿಯೇ ಹೆಚ್ಚು ಹಕ್ಕುಗಳಿಗೆ ಆಸೆ ಹುಟ್ಟಿ ಅವುಗಳನ್ನು ಪಡೆದು. ಸಿಕ್ಕಿದನಂತರ ನ್ಯಾಯವಾದ ರೀತಿಯಲ್ಲಿ ನಡಿಸಿಕೊಂಡು ಹೋಗಲು ತಕ್ಕದಾದ ತರಬೇತು ಹೊಂದಲು ಎಡೆ ಸಿಕ್ಕಿದಂತಾಯಿತು

ಈಗ ನಮಗೆ ದೊರಕಿದ ಕೌನ್ಸಿಲ್ ರಿಯಾಯಿತಿಯು ಇಂಡಿಯಾ ದೇಶದ ಬೇರೆ ಪ್ರಾಂತ್ಯಗಳಿಗೆ ಸುಮಾರು ಹದಿನೈದು ವರ್ಷಗಳ ಮೊದಲೇ ಸಿಕ್ಕಿದೆ ಈಗ ಮೂರು ವರ್ಷಗಳಿಂದ ಅಲ್ಲಿಯವರು ಹೆಚ್ಚಿನ ರಿಯಾಯಿತಿಯ ಕೌನ್ಸಿಲುಗಳ ಅನುಭವವನ್ನು ಹೊಂದುತ್ತಲಿದ್ದಾರೆ. ಇಷ್ಟು ತಡವಾಗಿಯಾದರೂ ನಮ್ಮ ದೇಶವನ್ನು ಸರಕಾರದವರು ಮರೆಯದೆ ಹೋದದಕ್ಕಾಗಿ ನಾವು ಅವರಿಗೆ ಕೃತಜ್ಞರಾಗಿದ್ದೇವೆ ದೇಶೀಯರು ಎರಡು ಮೂರು ವರ್ಷಗಳಿಂದ ತಮ್ಮ ಕರ್ತವ್ಯವನ್ನು ಅರಿತುಕೊಂಡು ಅದರಂತೆ ಚಳವಳವೆಬ್ಬಿಸಿದರಿಂದ ಸರ್ಕಾರದವರಿಗೆ ನಮ್ಮ ದೇಶವನ್ನು ಮರೆಯದಂತೆ ಮಾಡಿದ್ದಾಯಿತು. ಆದರೆ ದೇಶೀಯರು ಇಷ್ಟರಿಂದಲೇ ತೃಪ್ತರಾಗದೆ ‘ ಕೈಕೆಸರಾಗದೆ ಬಾಯಿ ಮೊಸರಾಗದು ’ ಎಂಬ ನಾಣ್ಣುಡಿಯನ್ನು ಜ್ಞಾಪಕಕ್ಕೆ ತಂದುಕೊಂಡು ತಾವು ಮಾಡಿದ ಚಳವಳದ ಫಲಿತಾಂಶವಾಗಿ ಈಗ ಕೌನ್ಸಿಲು ದೊರೆತಿತೆಯೋ ಇನ್ನು ಮುಂದಕ್ಕು ಈಗ ದೊರೆತಿರುವ ಕೌನ್ಸಿಲಿನಲ್ಲಿಯೂ, ಹೊರಗೂ ಹೆಚ್ಚಿನ ರಿಯಾಯಿತಿಗಳನ್ನು ಪಡೆಯಲು ಎಡೆಬಿಡದೆ ಪ್ರಯತ್ನಪಡುವರಾಗಿ ನಂಬುತ್ತೇವೆ

ರಿಲಾಪ್ಸಿಂಗ್ ಫೀವರ್

ರಿಲಾಪ್ಸಿಂಗ್ ಫೀವರ್ (ಮರಳುವ ಜ್ವರವು) ಉತ್ತರ ಕೊಡಗಿನಲ್ಲಿ ತಲೆದೋರಿದೆ ಕಳೆದ ವರುಷವೇ ಕರ್ನಲ್ ಮಾಸ್ಟರ್ ಸಾಹೇಬರಿಗೆ ಈ ಜ್ವರದ ವಿಷಯ ಅನುಮಾನವಿತ್ತು. ಆದರೆ, ನಾನು ಇಲ್ಲಿಗೆ ಬಂದಮೇಲೆ, ಸೋಮವಾರಪೇಟೆಯ ರೋಗಿಗಳ ರಕ್ತ ಸಂಶೋಧನೆ ಮಾಡಿದನಂತರ ಈ ರೋಗವು ಇದೆ ಎಂತ ದೃಢೀಕೃತವಾಯಿತು ಇದು ಅತಿ ಕಠಿಣತರದ್ದು; ಈ ರೋಗವು ಮೊಟ್ಟಮೊದಲು ತಲೆದೋರಿದ ಲಾಗಾಯಿತು ಮೆ|| ಪಿಯರ್ಸರು, ಈ ರೋಗ ಪೀಡಿತರಾದ ತಮ್ಮ ಕೂಲಿಯಾಳುಗಳ ರೋಗಚಿಕಿತ್ಸೆಗಳ ತೀವ್ರ ವಿಷ್ಟಪ್ಪಕ್ಕೆ 30 ಮಂದಿ ಕಾಗಿರಬಹುದೆಂದು ಅಂದಾಜು ಮಾಡುತ್ತಾರೆ

ರೋಗವು ಮನುಷ್ಯನನ್ನು ಕೊಲ್ಲುವುದೇ ಪ್ರಾಯಶಃ ವಿರಳ ಮರಳಿ ಬಾರದು. ಆದರೆ ನನ್ನು ನಿರ್ಬಲನನ್ನಾಗಿ ಮಾಡುತ್ತದೆ ಇದು ಅತಿ ಶೀಘ್ರವಾಗಿ ಹರಡುವ ಕಾರಣದಿಂದ ಇದರ ವಿಚಾರವು ಇಡೀ ಕೊಡಗಿನಲ್ಲ ವಂಥಾದ್ದಾಗಿದೆ

ರೋಗವು ತಗಣೆ ಮತ್ತು ಕೂರೆ-ಹೇನುಗಳ ಮೂಲಕ ಹರಡುತ್ತದೆ. ಈ ರೋಗವು ಇರುವ ಒಮ್ಮೆ ಆದರಿಂದ ಪೀಡಿತನಾದ್ದ ಯಾವನೊಬ್ಬನನ್ನೂ ಹೇನುಗಳಿಗೆ ಈ ರೋಗವನ್ನು ಅಂಟಿಸಬಹುದು ಹೇನುಗಳು ಒಬ್ಬನ ಮೈಯಿಂದ ಮತ್ತೊಬ್ಬನಿಗೆ ತಗಲಬರಿಗೂ ರೋಗವು ತಗಲುವುದು ಹೀಗಾಗಿ ಸ್ಥಳಕ್ಕೆ ಕೂಲಿಗಾರರ ಹೋಗಬರುವ ಈ ಜಾಡ್ಯವು ಎಲ್ಲಾ ಕಡೆಗಳಲ್ಲಿಯೂ ಹರಡಿಸುತ್ತದೆ ಅಳುಗಳು ಮೈ ತೊಳೆಯದಿರುವುದರಿಂದಲೂ, ಬಟ್ಟೆಗಳನ್ನು ಒಗೆಯದೆ ಇರುವುದರಿಂದಲೂ, ಅಂದರೆ ಮಳೆಗಾಲದಲ್ಲಿ ಕೂರೆ ವೃದ್ಧಿಯಾಗುತ್ತವೆ ಕೂರೆಗಳು ವೃದ್ಧಿಯಾದಂತೆ ಜಾಡ್ಯ ಹರಡುತ್ತಾ ಹೋಗುತ್ತದೆ

ಆದಕಾರಣ, ಈ ರೋಗವನ್ನು ಹರಡಿಸುವವುಗಳನ್ನು ದೂರೀಕರಿಸುವುದೂ ಮತ್ತು ಈ ರೋಗವಿರುವ ರೋಗದಿಂದ ಪೀಡಿತರಾಗಿದ್ದ ಜನರ ರಕ್ತವನ್ನು ಮಾಡುವುದು ಉತ್ತಮ ಉಪಾಯ. ರಕ್ತ ಶುದ್ಧಿಯಿಂದ ಹೊಸ ಕೂರೆಗಳಿಗೆ ರೋಗವು ಅಂಟುವುದಿಲ್ಲದುದರಿಂದ ಹೇನುಗಳ ಮತ್ತು ಕೂರೆಗಳ ಮೇಲೆ ಸದ್ಧವನ್ನಾಚರಿಸ (ಅಂದರೆ ಕೊಲ್ಲುವುದು.) ತಕ್ಕದ್ದು ಮತ್ತು ರೋಗಪೀಡಿತರ ಹೆಸರುಗಳನ್ನು ರಿಜಿಸ್ಟ್ರು ಮಾಡುವುದಲ್ಲದೆ, ಅವರಿಗೆ ಚಿಕಿತ್ಸೆ ನಡಿಸಬೇಕು

ಈ ರೋಗದ ಕಾರಣವನ್ನು ಕೂಲಿಗಳಿಗೆ ಹೇಳಬೇಕು ಮತ್ತು ಅವರು ತಮ್ಮ ಬಟ್ಟೆ ಬರೆಗಳಿಂದ ಗೆಗಳಿಂದ-ಪ್ರಾಮುಖ್ಯವಾಗಿ ಅವರ ಹೊದಿಕೆಗಳ ಕೂರೆಗಳನ್ನು ಹೆಕ್ಕಿ ತೆಗೆದು ಕೊಲ್ಲುವಂತೆ ಹೇಳಬೇಕು ರಕ್ಕೊಮ್ಮೆ ಯಾದರೂ ಅವರ ಹಾಸಿಗೆ, ಉಡಿಗೆ ಬಟ್ಟೆ ಎಲ್ಲಾ ಕುದಿಯುವ ನೀರಿನಲ್ಲಿ ನೆನೆ ಇಕ್ಕಬೇಕು. ಬಟ್ಟೆಯ ದು ಭಾಗವನ್ನು ಮಾತ್ರ ಕುದಿಸಿದರೆ ಸಾಲದು ಹಿಡಿದರೆ, ಕುದಿಸದೆ ಇದ್ದ ಭಾಗಕ್ಕೆ ರೋಗವು ಅಂಟುವುದು ಇದು ನಿಶ್ಚಯವೆಂದು ಸೋಮವಾರಪೇಟೆಯಲ್ಲಿ ಕಂಡುಬಂದಿದೆ ಪ್ರತಿ ಆವಶ್ಯವಾದ ಆಳುಗಳ ಹಾಸಿಗೆಗಳನ್ನು ಶುದ್ಧ ಮಾಡುವಾಗ (Sterilize) ಅವರು ಮಾಸಲಾಗಿಟ್ಟ ಒಂದೊಂದು ಜತೆ ಬಟ್ಟೆ (ಒಂದು ದುಪ್ಪಟಿ, ಪಾಳೆ, ದೋತಿ ಇಲ್ಲವೆ ಸೀರೆ) ಗಳಿರಬೇಕು ಒಟ್ಟಿನಲ್ಲಿ ಹಾಸಿಗೆಯ ಪ್ರತಿಯೊಂದಂಶವೂ ಏಕಕಾಲದಲ್ಲಿ ನೀರಿನಲ್ಲಿ ಕುದಿಯುವಂತೆ ನೋಡಿಕೊಳ್ಳುವುದು ಪಾಸಲು ಬಟ್ಟೆಗಳಿಗೆ ಅವುಗಳನ್ನು ಕೊಟ್ಟನಂತರ ಅಕ್ಕಾಗಿ ಅಂಟುತಿಗಲಿಲ್ಲ ಆದರೆ ಅಂತಾವುಗಳನ್ನು ಕುದಿಸಬೇಕು

ಲೈನುಗಳಲ್ಲಿನ ಉಗ್ರಾಣಗಳನ್ನು ಶುಚಿಯಾಗಿಡಬೇಕು ಹಾಸಿಗೆಗೆ ಉಪಯೋಗಿಸಿದ ಹುಲ್ಲುಗಳನ್ನು ಸುಡಬೇಕು ನೆಲ ಗೋಡೆಗಳನ್ನು ಸಾಬೂನು, ನೀರು ಮತ್ತು ನೀರಿನಿಂದ ತಯಾರಾದ ಕಷಾಯದಿಂದ ತೊಳೆಯಬೇಕು. “ ಕ್ರಿಸೋಲ ” ಎಂಬ ಔಷಧವನ್ನು ಕೂಲಿಯವರಿಗೆ ಹಂಚಬಹುದು (ಫಾರೆಸ್ಟ್ ಖಾತೆಯಲ್ಲಿ ಇದು ಬಹಳವು ಹೆಚ್ಚು ಇದೆ ಎಂದು ನಾನು ತಿಳಿಯುತ್ತೇನೆ ಖಾತೆಯವರು ಸಂತೋಷದಿಂದ ಇದನ್ನು ಹಂಚಲು ಕೊಡುವರು.)

ಈ ರೋಗದಿಂದ ಪೀಡಿತರಾದವರನ್ನು ಆಸ್ಪತ್ರೆಯ ಅವಗಾಹನೆಗೆ ತರ ಮಾಡಿ ಬಿಡುಗಡೆಯಾಗತಕ್ಕದ್ದು ರೋಗದ ಹರಡುವಿಕೆಯ ಮೇಲೆ ದೃಷ್ಟಿ ಇಡಬೇಕು. ತಗಲಿದವರನ್ನು ಅಜಮಾಯಿಷಿಯಲ್ಲಿರತಕ್ಕದ್ದು.

ಜ್ವರವಿರುವ ಅಥವ ಜ್ವರ ಬಂದ ಜನರಿಗೆ “ ... ಸರ್ನ ” ಎಂಬ ಔಷಧಿಯಿಂದ ಡಾಕು ಹಾಕಬೇಕು ಹಾಕುವ ಪದ್ಧತಿಯು ನೋವಿಲ್ಲದ್ದು, ಮತ್ತು ರೋಗಕ್ಕೆ ಖಂಡಿತವಾದ ಪರಿಹಾರ ಸೋಮವಾರಪೇಟೆಯ ಕೂಲಿಗರಿಗೆ ಡಾಕು ಹಾಕಿದ್ದಾಗಿದೆ ಇವರು ಈ ಚಿಕಿತ್ಸೆಗೆ ಅಡ್ಡಬರಲಿಲ್ಲ. ಮತ್ತು ಹೆದರಿಕೊಳ್ಳಲಿಲ್ಲ.

ಡಾಕು ಹಾಕಲಿಕ್ಕಾಗಿ ಪ್ರತ್ಯೇಕ ಒಬ್ಬ ಅಸಿಸ್ಟೆಂಟು ಸರ್ಜನನನ್ನು ಕೊಡಗಿನ ನಾನಾ ದಿಕ್ಕಿಗೆ ಕಳುಹಿಸಬೇಕು ಔಷಧಿಯ ಬೆಲೆಯನ್ನು ಮಾಲೀಕರು ಕೊಡಬೇಕು ಔಷದಿಯ ಬೆಲೆಯು ತಲೆಯೊಂದರ ನಾಲ್ಕು ರೂಪಾಯಿಗಳು ಬೀಳುವುದು

ಈ ರೋಗವನ್ನು ಮಲೇರಿಯಾ, ಅಥವಾ, ... ಜ್ವರವೆಂದು ಜನರು ತಪ್ಪು ತಿಳಿದುಕೊಳ್ಳುವರು. ರಡಕ್ಕೂ ಇರುವ ಮುಖ್ಯ ತಾರತಮ್ಯವೇನೆಂದರೆ— ಜ್ವರವು 5 ಇಲ್ಲವೆ 7 ದಿನಗಳ ವರೇಗೆ ಬರುವುದು, ಮಲೇರಿಯಾದ ಹಾಗೆ ಸದಾ ಬರುವುದಿಲ್ಲ ಅನಂತರ ಸುಮಾರು ಹತ್ತು ದಿವಸಗಳವರೇಗೆ ರೋಗಿಯು ಸುಖವಾಗಿರುವನು ಆಮೇಲೆ ಪುನಃ ಅವನಿಗೆ 5 ಇಲ್ಲವೆ 7 ದಿನ ಪುನಃ ಪುನಃ ಹೀಗೆಯೇ ಆಗುತ್ತೆ.

ಕಳೆದ ಯುದ್ಧದಲ್ಲಿ ಬಟ್ಟೆ ಶುದ್ಧಿ ಮಾಡುವ(Sterilize) ಉಪಾಯವು ಈ ರೀತಿಯಾಗಿತ್ತು. ದಿಣ್ಣೆಯ ಒದಿಯಲ್ಲಿ ಅಗೆದು ಕೋಣೆಯಂತೆ ಒಂದು ಸ್ಥಳವನ್ನು ತಯಾರಿಸಿ, ಮುಂಭಾಗಕ್ಕೆ ಒಂದು ಬಾಗಿಲನ್ನು ಇರಿಸಿ ಅಚೆ ಈಚೆ ಇಟ್ಟಿಗೆಯಿಂದಾಗಲೀ ಮಣ್ಣಿನಿಂದಾಗಲೀ ಮುಚ್ಚುವುದು ದಪ್ಪ ಬೆತ್ತಗಳನ್ನು (Poles) ಒಳಗೆ ಅಡ್ಡಲಾಗಿ ಹಾಸುವುದು. ಮೂರು ಅಥವಾ ನಾಲ್ಕು ಇದ್ದಲು ಹಾಕಿದ ಚಟ್ಟಿ (Sigris) ಗಳನ್ನು ಅದರೊಳಗೆ ಇಡುವುದು ಬಟ್ಟೆ ಒರೆಗಳನ್ನು ಚಣೆಗಳ ಮೇಲೆ ಒಂದು ಗಂಟೆವರೆಗೆ ತೂಗಹಾಕುವುದು ಹೀಗೆ ಮಾಡಿದರೆ, ಬಹಳ ಸೆಕೆ ಏರಿ, ಸೆಕೆಯು ಕಿಡಿಗಳೊಡನೆ ಕೂರೆಗಳನ್ನೆಲ್ಲಾ ಕೊಲ್ಲುವುದು ಕೊಡಗಿನಲ್ಲಿ ಬಟ್ಟೆಗಳು ಒಣಗುವುದಕ್ಕೆ ಬಹಳ ಕಾಲ ಬೇಕು ಆದುದರಿಂದ ಈ ಊರಿಗೆ ಮೇಲಿನ ರೀತಿಯು ಯೋಗ್ಯವಾದದ್ದು

ಮತ್ತೊಂದು ರೀತಿ ಯಾವುದೆಂದರೆ—ಎಲ್ಲಾ ಬಟ್ಟೆಗಳನ್ನೂ, ಹೊದಿಕೆಗಳನ್ನೂ ಕ್ರಿಯೋಸೋಟ್ ಅವುಷದಿಯ ಉಗ್ರಕಷಾಯದಲ್ಲಿ ಅದ್ದಿಟ್ಟು ಅವುಗಳನ್ನು ಹಿಂಡದೆ ಹಾಗೆಯೇ ಒಣಗಿಸುವುದು. ಹೀಗೆ ಮಾಡುವುದರಿಂದ ಬಟ್ಟೆಗಳ ಮೇಲೆ ನಿಲ್ಲುವ ಕ್ರಿಸೋಟ್ ಅವುಷದಿಯು ಕೂರೆಗಳು ಹತ್ತದಂತೆ ಮಾಡುತ್ತದೆ

ಎಸ್ ಸಿ. ಫ್ರೇಸರ್
ಸಿವಿಲ್ ಸರ್ಜನ್

(18 ನೇ ಸಂಚಿಕೆಯಿಂದ ಮುಂದರಿದದ್ದು)

ಪ್ರಿಯ ಕೊಡಗಿನ ಬಾಂಧವರೇ!

ಆ[illegible]ರೆಂದು ಕರ್ಮ ತೀರುವವರೇಗೂ, ಮೃತನ ಉತ್ತರಾಧಿಕಾರಿಗೆ ಹೆಚ್ಚಿನ ವಿಶೇಷ ಸಂಗತಿ ನಡೆಯುವದಕ್ಕಾಗಲಿ, ಶುಭಶೋಭನಾದಿ ಕರ್ಮಗಳ ನಡೆಸುವದಕ್ಕೂ ಒಂದು ತರದ ಪ್ರತಿಬಂಧಕವಿರುತ್ತದೆ ಇದಕ್ಕೆ ಆಶೌಚವೆಂದು ಹೇಳುತ್ತಾರೆ ಈ ಆಶೌಚವುಳ್ಳವನು ದೇವತ್ವದೊಂದುವ ಶುಭಕರ್ಮಾಂಗಗಳಿಗೂ, ಯಾ ಇವನ್ನು ನೋಡುವದಕ್ಕೂ ಅಯೋಗ್ಯನಾಗಿರುತ್ತಾನೆ ಈ ಸಮಾಪ್ತಿಯ ಕರ್ಮಾಂತರ ತೀರಿದಮೇಲೆ ಮೃತನು ಪಿತೃವೊಂದುವದಕ್ಕೆ (ಅಂದರೆ ಆತನು ಯಾವದಾದರೊಂದು ನೆಲೆ ಸೇರುವವರೇಗೆ ಯಾ, ಸ್ವರ್ಗಸೇರುವವರೆಗೆ) ಒಂದು ವರ್ಷ ಬೇಕಾಗುತ್ತದೆ ದೇವಮಾನದ ಒಂದು ದಿವಸ ನರನಿಗೆ ಒಂದು ವರ್ಷವೆನಿಸುವಕಾರಣ, ಸತ್ತನಂತರ ಮೃತನ ಜೀವ ದೇವತೆಗಳ ದಿವ್ಯಮಾನವಾದ ಒಂದೇ ದಿನದಲ್ಲಿ ನೆಲೆಮುಟ್ಟಿದರೂ, ನಮಗೆ ಅದು ಒಂದು ವರ್ಷವೆನಿಸಿಕೊಳ್ಳುತ್ತದೆ

ಹೀಗಾಗಿ ಸತ್ತ ಪ್ರಾಣಿಯು ನೆಲೆಮುಟ್ಟುವ ತನಕ ಆತನ ಕುಟುಂಬದ ಉತ್ತರಾಧಿಕಾರಿಯು ಮೃತನ ಋಣ ತೀರಿಸುವದಕ್ಕಾಗಿ ಆತನ ಮೇಲಿನ ವಿಶ್ವಾಸಕ್ಕೂ, ಭಕ್ತಿಗೂ, ಈ ತರ ಒಂದು ತರದ ನಿಬಂಧದಲ್ಲಿರುತ್ತಾರೆ ಇದಕ್ಕೆ ದೀಕ್ಷೆಯೆಂಬದಾಗಿ ಹೇಳುತ್ತಾರೆ ಇಲ್ಲಿ ದೀಕ್ಷೆಯೆ ಗರೆ ಸಾಮಾನ್ಯ (ತೀಕೆ) ಎಂದು, ಉತ್ತರಾಧಿಕಾರಿಯೆಂದರೆ (ತೀಕೆ ನಿಲ್ಲುವವರೀಗೂ) ಅನ್ವಯಿಸುತ್ತದೆ ದೀಕ್ಷೆ ನಿತ್ತವರು ಸಾಧಾರಣವಾಗಿ ಅಭ್ಯಂಜನ, ತಾಂಬೂಲ, ಸ್ತ್ರೀಸಂಗ, ಕ್ಷೌರ, ಮುಂತಾದವುಗಳನ್ನು ವರ್ಜಿಸುತ್ತಾರೆ ಪರಂತು ಕಾಲಾನುಗುಣವಾಗಿ ಯಾವದಾದರೊಂದು ತರದ ನಿಬಂಧನೆಗೊಳಗೀಡಾಗಿರುವರು ಇದು ನಮ್ಮಲ್ಲೂ ವಾಡಿಕೆಯಾಗಿದೆ ನೀವಾದರೋ ಒಂದು ವರ್ಷದ ಬದಲಿಗಾಗಿ ಆ ವರ್ಷದಲ್ಲಿ ಬರುವ ಯಾವದಾದರೊಂದು ವಿಶೇಷ ಪುಣ್ಯಕಾಲದವರೇಗೆ ಇದ್ದುಕೊಂಡು ದೀಕ್ಷೆ ಬಿಡುವ ಗುರ್ತಿಗಾಗಿ ಆ ಪುಣ್ಯದಿನದಲ್ಲಿ, ಯಾವದಾದರೊಂದು ಹೆಸರುವಾಸಿಯುಳ್ಳ ನದೀತೀರವನ್ನೈದಿ ಮೃತನಿಗೆ ಪಿಂಡಪ್ರದಾನಾದಿ ಕರ್ಮಮಾಡಿ ದೀಕ್ಷಾಕಾಲವನ್ನು ಬಿಡುತ್ತೀರಿ.

ಇನ್ನು ಶಾಸ್ತ್ರ ಸಂಪ್ರದಾಯವಾದರೊ ಸತ್ತ ಮುನ್ನೂರರುವತ್ತೈದನೇ ದಿವಸದಲ್ಲಿ ವರ್ಷಾಂತಿಕವೆಂಬ ಕರ್ಮ ನೆರವೇರಿಸಿ ದೀಕ್ಷೆ ಬಿಡಬೇಕೆಂಬದಾಗಿದೆ ಆದರೆ ಈ ಶಾಸ್ತ್ರ ಸಂಪ್ರದಾಯಾನುಸಾರ ಒಂದುವರ್ಷ ದೀಕ್ಷೆ ಇರಬೇಕೆಂದಿರುವುದಾದರೂ, ಅವರೇಗೆ ದೀಕ್ಷಿತರಾಗಿರುವರೆ ಅನಾನುಕೂಲವೆಂಬದಾಗಿ ಎಡೆಯಲ್ಲಿ ಬರುವ ಪರ್ವಕಾಲಗಳಲ್ಲಿ ನೇಮಕ್ಕಾಗಿ ದೀಕ್ಷೆ ಬಿಡುವದಾಗಿ ಬರಬಹುತ್ತಾ ಇ[illegible] ಸಮಯದಲ್ಲೇ ದೀಕ್ಷೆ ಬಿಡಬೇಕೆಂಬ ನಿಯಮವು ನಮ್ಮ ವರೆವಿಗೆ ಇಲ್ಲವಾಗಿದೆ ಬ್ರಾಹ್ಮಣರಲ್ಲಿ ಹನ್ನೆರಡರಲ್ಲೇ ಪಿಂಡದಾನಾದಿ ಕರ್ಮಗಳು ಕಳೆದು ಹೋಗುತ್ತದೆ ನಮ್ಮಲ್ಲಿ ಅದೊಂದು ಕರ್ಮ ಬಾಕಿ ಉಳಿಯುವುದರಿಂದ ಯಾವ ಹೆಚ್ಚಿನ ಕಾರ್ಯ ಮಾಡುವದಕ್ಕೂ ಆ ಪಿಂಡಪ್ರದಾನ ಕರ್ಮ ತೀರದೆ ಮೃತನ ಕ್ರಿಯೆ ಪೂರ್ತಿಯಾಗದ್ದರಿಂದ ಪಿಂಡಪ್ರಧಾನ ಮಾಡದೆ ದೀಕ್ಷಕನಿಗೆ ಬರುವ ಕಾರ್ಯಕ್ಕೂ ನಿರ್ವಾಹವಿಲ್ಲವಾಗುತ್ತದೆ ಆದಕಾರಣ ಮಾನ ಕಳದನಂತರ ಸಮೀಪ ಬರುವ ಕಾವೇರಿ ಸಂಕ್ರಮಣದಲ್ಲಾಗಲಿ, ಶಿವರಾತ್ರಿ ಯುಗಾದಿ ಮೊ[illegible]ಲಗಳಲ್ಲಿ ದೀಕ್ಷೆ ತೆಗೆಯುತ್ತಾ ಬಂದದ್ದರಿಂದ ಅದೊಂದು ಸಂಪ್ರದಾಯವೆನಿಸಿಕೊಂಡು ಈಗೀಗ ಸತ್ತರೆ ದೀಕ್ಷೆ ತೆಗೆಯುವದಕ್ಕೆ ಆ ಪರ್ವಕಾಲಗಳವರೇಗೆ ಕಾಯಬೇಕೆಂಬುವದು ಅದೊಂದು ಮೂಢಗ್ರಾಮ್ಯ ಪದ್ಧತಿ ಎನಿಸಿಕೊಂಡಿದೆ ಇದೇ ತಪ್ಪು ಪದ್ಧತಿಯೆಂದು ಕೆಲವರು ತಿಳಿದುಕೊಂಡಿರುತ್ತಾರೆ. ಇದು ಸೂಕ್ಷ್ಮ ವಿಚಾರ ಮಾಡಿ[illegible] ತಪ್ಪೆಂದು ಯಾರಿಗೂ ತಿಳಿಯದ ಸಂಗತಿ[illegible] ಈಗ ಇದಕ್ಕೆ ಕಾಲನಿಯಮವಿಲ್ಲ. ಮತ್ತು ಶಾಸ್ತ್ರ ಪ್ರಕಾರದ ಕಾಲನಿಯಮಕ್ಕನುಸಾರವಾಗಿ ನಮ್ಮಲ್ಲಿ ಈಗ ಯಾರೂ ನಿಲ್ಲುವುದಿಲ್ಲ ಆದ್ದರಿಂದ ವರ್ಷದ ಒಳಗೆ ಮಾಡಲೇಬೇಕಾದ ಪಿಂಡಪ್ರಧಾನವಾದಿ ಮತ್ತು [illegible]ವಾದರೂ [illegible]

ಕೊಡಗಿನ ಆಚಾರ ವಿಷಯವಾಗಿ ಸವಿಸ್ತಾರ ಲೇಖನವು ಮೂರಾ ನಾಲ್ಕನೇ ತರಂಗಕ್ಕೆ ದಾಟಿ ಬಂದಿರಾಗಿರುತ್ತೇವೆ ಸಮಾಲೋಚನೋದ್ದೇಶ ವಿಷಯ ವಿಸ್ತಾರವು ಬಹಳ ದೀರ್ಘವಾಯಿತೆಂದು ವಾಚಕರಾರೂ ಉದಾಸೀನ ಮನಸ್ಕರಾಗಲಾರರೆಂದು ನಂಬಿ ಮುಂದಿನ ವಿಷಯಕ್ಕೆ ತೆರಳುವೆವು

ಇನ್ನು ಯಾರಿಗೆ ಯಾರು ದೀಕ್ಷೆ ನಿಲ್ಲಬೇಕೆಂಬದಾಗಿ ಶಾಸ್ತ್ರ ದೃಷ್ಟಿಯಿಂದ ಪರ್ಯಾಲೋಚಿಸಿದರೆ ಹಿರಿಯರಿಗೆ ಕಿರಿಯರು ದೀಕ್ಷೆ ನಿಲ್ಲಬೇಕಾಗಿದೆ ಕಿರಿಯರಿಗೆ ಹಿರಿಯರು ದೀಕ್ಷೆ ನಿಲ್ಲಬೇಕೆಂಬ ವಿಧಿಯು ಇರುವದಿಲ್ಲ ನಿಲ್ಲುವದೊಂದು ತಪ್ಪೂ ಆಗುವದಿಲ್ಲ ಆದಾಗ್ಯೂ ಹಿರಿಯರು ಕಿರಿಯರಿಗೆ ನಿಲ್ಲುವುದೆಂದರೆ ಅದೊಂದು ಪ್ರೀತಿ ವಿಶ್ವಾಸಪೂರ್ವಕವೆಂದಲ್ಲದೆ ಅದು ಶಾಸ್ತ್ರನಿಯಮವೇನೂ ಅಲ್ಲ ಮಗಸತ್ತರೆ ತಂದೆಯು ಹೆಂಡತಿ ಸತ್ತರೆ ಗಂಡನೂ ದೀಕ್ಷೆನಿಲ್ಲುವದು ಲೋಕವಿರುದ್ಧವು ಇದಕ್ಕಾಗಿಯೆ ವಿವಾಹವಾಗದ ಮಕ್ಕಳು ಅಪುತ್ರವತಿಯರು ಮೃತರಾದರೆ ಇಂಥಾವರಿಗೆ ನಾರಾಯಣಬಲಿ ಎಂಬ ಕರ್ಮ ಮಾಡಿ ಬಿಡುವದುಂಟು ಪಿಂಡಮಾತ್ರ ಹಾಕುವಾಗ್ಯೆ ಮಕ್ಕಳಿಗೂ ಹೆಂಡತಿಗೂ, ಸ್ನೇಹಿತರಿಗೂ, ಬಂಧು ಬಳಗದವರಿಗೆಲ್ಲಾ ಮೃತಪ್ರಾಣಿಗಳಿಗೆ ಹಾಕಿ ತೃಪ್ತಿಪಡಿಸಬಹುದಾಗಿದೆ ನಮ್ಮಲ್ಲಿ ಯದರೂ ಇದು ಆಚರಣೆಯಲ್ಲಿಲ್ಲ ಆದರೂ ಹೆಂಡತಿಗೆ ಗಂಡನು ಮಗನಿಗೆ ತಂದೆಯು ದೀಕ್ಷೆ ನಿಲ್ಲಬೇಕೆಂಬ ಅಭಿಪ್ರಾಯವು ಸಕಾರಣ ಸಶಾಸ್ತ್ರಸಮ್ಮತವಾಗಿರುವದಿಲ್ಲ ಒಂದು ಸಮಯ ನಮ್ಮಲ್ಲಿ ಮಾಡತಕ್ಕದಮೇಲೆ ಪಿಂಡಪ್ರಧಾನವಾದ ತಕ್ಕ ಕಾರ್ಯ ಒಂದುಳಿಯುವುದರಿಂದ, ಆ ಕಾರ್ಯ ಆಗುವವರೇಗೆ ದೀಕ್ಷೆನಿಲ್ಲಬಹುದೆಂದು ಹೇಳಬಹುದು ಇಂಥಾವರಿಗೆ ಮಾಡತಕ್ಕದ (13 ನೇ ದಿವಸೇ) ವಾರ್ಷಿಕ ದಿನವೇ ಪಿಂಡಪ್ರದಾನವಾಡಿ ದೀಕ್ಷೆ ಬಿಟ್ಟು ಮರು (14 ನೇ) ದಿನವೇ ಯಾವ ಕೆಲಸವಾದರೂ ಮಾಡಬಹುದು ಆದ್ದರಿಂದಲೇ ಹೆಂಡತಿ ಸತ್ತರೆ ಸತ್ತ ಹದಿನಾಲ್ಕನೇ ದಿನವೇ ಗಂಡನಿಗೆ ಮದುವೆ ಮಾಡಬಹುದೆಂಬ ಶಾಸ್ತ್ರವಚನವಿದೆ

(ಇಲ್ಲಿ 1 ನೇ ದಿನ ಪಿಂಡ ಹಾಕುವ ಸಂಭವವಿರುವುದರಿಂದ 13 ನೇ ದಿನ ವಾರ್ಷಿಕವೆಂದು ಸೂಚಿತವಾಗಿದ್ದು) ಈ ವಚನ ಕಿರಿಯರು [illegible] ಸತ್ತ ಸಂಗತಿಯಲ್ಲಿ ಮಾತ್ರ ಹಿರಿಯರಿಗೆ ಅನ್ವಯಿಸುತ್ತ[illegible] ಯಾವ ಸಂಗತಿ ಹೇಗಿದ್ದರೂ ಗುರುಶಿಷ್ಯರಲ್ಲಿಯೂ [illegible]ರಲ್ಲಿಯೂ, ತಂದೆ ಮಕ್ಕಳಲ್ಲಿಯೂ ಸಮಾನತ್ವ [illegible]ನ ಧರ್ಮ ಇವರೊಳಗೆ ಇರುವದೇ ಇಲ್ಲ ಇಲ್ಲಿ ಕೆಲವರು ಗಂಡಹೆಂಡರೆಂದರೆ ಒಬ್ಬರಿಗೊಬ್ಬರು ಸಮಾನಧರ್ಮ ಉಳ್ಳವರೆಂದೂ ಇವರಲ್ಲಿ ಒಬ್ಬರಿಗೊಬ್ಬರೊಳಗೆ ಜ್ಯೇಷ್ಠತ್ವ ಕನಿಷ್ಠತ್ವ ಇಲ್ಲವೆಂದೂ ಪ್ರಾಣಕ್ಕೆ ಪ್ರಾಣಕೊಟ್ಟ ಗಂಡನ ಎಲ್ಲಾ ಕಷ್ಟಸುಖಗಳಿಗೆ ಭಾಗಿಯಾಗುವವಳಾದ್ದರಿಂದ ಇವಳು ಸ್ನೇಹಿತತ್ವಕ್ಕೆ ಸಮಾನತ್ವ ಉಳ್ಳವಳೆಂದೂ ಈಗಿನ ನವೀನ ನಾಗರೀಕತೆಯ ಹೊಸ ಸುಧಾರಣೆ ಕರ್ತರು ಮಾತ್ರ ಹೇಳುತ್ತಾರೆ ಇವರು ಹಿರಿಯಕಿರಿಯರೊಳಗೆ ಭೇದವನ್ನು ಕಲ್ಪಿಸಿ ಗಂಡಹೆಂಡರಲ್ಲಿ ಮಾತ್ರ ಸಮಾನವನ್ನೆಣಿಸಿ ಮಾತಾಡುವದು ಉಚಿತವಾಗಿ ತೋರುವುದಿಲ್ಲ ಗಂಡಹೆಂಡರಲ್ಲಿ ಭೇದಗಳು ಶಾಸ್ತ್ರಮೂಲಕವು ಪ್ರತ್ಯಕ್ಷಾನುಭವದಿಂದಲೂ ಅನೇಕ ಉದಾಹರಣೆಗಳಿವೆ ನಮ್ಮಲ್ಲಿ ವಾಡಿಕೆಗಾಗಿ “ಚಿತ್ಯಾಂಗ್ ಆರ ತಿಂಗಬುಟ್ಯಾಂಗ್ ವಾರಾಂಡ್” ಎಂಬ ಗಾದೆಯನ್ನು ಗಂಡಸರಲ್ಲಿ ಅನ್ವಯಿಸಿ ಹೇಳುತ್ತಾರೆ ಈ ಸಂಗತಿಯನ್ನು ನಿಜವಾಗಿ ಆಲೋಚಿಸಿ ನೋಡಿದರೆ, ಈ ಗಾದೆಯೂ ಕೂಡ ಹೆಂಗಸರಿಗೇನೇ ಪ್ರಾಪಿಸಿಕೊಂಡಿದೆ ಉದಾಹರಣೆಗಾಗಿ ‘ಬುಟ್ಯಾಂಗ್ ಆರ್ ತಿಂಗ’ ಎಂದರೆ ಒಬ್ಬನು ಬಿಟ್ಟ ಹೆಂಗಸನ್ನು ಇನ್ನೊಬ್ಬನು ಮದುವೆಯಾಗಬೇಕಾದರೆ ಅವಳು ಗರ್ಭವತಿಯೊ ಯೇನೋ ಎಂದು [illegible] ಕಾದಿಕೊಳ್ಳುವವನಿಗೆ ನೋಡಿಕೊಳ್ಳುವದೆ ಮಾ[illegible] ಬಿಟ್ಟವನು ಪಿತಾಪದೂ ಅವಶ್ಯಕವಾದ[illegible] ದಲೇ [illegible] ಸಂತತಿ ತಂದೆ ಒಬ್ಬ ಬಿಟ್ಟವ ಸಕಾರಣಮೂಲಕ ಸಂಶಯ ಪರಿಹಾರವಾಗಿಕೊಂಡು ಎರಡನೇ ಇಟ್ಟುಕೊಳ್ಳುವುದಕ್ಕಾಗಲಿ ಅಷ್ಟು ಸಮಯ ಬೇಕಂದೂ ಸತ್ಯವಂದು ವರ್ಷವೆಂದರೆ” ಗಂಡಸಾದುವಾಗ್ಯೆ ಹೆಂಡತಿ ಗರ್ಭಿಣಿಯಾಗಿದ್ದರೆ ಆಕೆಯು ಪ್ರಸೂತಿಯಾಗಿ ಬತ್ತು ದಿನದವರೇಗಿರುವ ಸಮಯಬೇಕೆಂಬದಾಗಿ ಆ ವಾಡಿಕೆಯು ಕೇವಲ ಸ್ತ್ರೀಯರಿಗೇನೇ ವ್ಯಾಪಿಸಿಕೊಂಡಿದೆಯಲ್ಲದೆ ಗಂಡಹೆಂಡತಿಯನ್ನು ಬಿಟ್ಟರೆ ಬಿಟ್ಟಮರ ದಿನವೇ ಆತನಿಗೆ ಬೇಕೆ ಮದುವೆಯಾಗಬಹುದೆಂಬುದು ಯಾರಿಗೂ ತಿಳಿಯದ ಸಂಗತಿಯಲ್ಲವಷ್ಟೆ! ನಾಗರೀಕ ಪ್ರಿಯರೆ! ಗಂಡಸತ್ತರೆ ಹೆಂಡತಿಗೆ ಹಲವುಗಳ ವಿಧಿಸಿರುತ್ತವಲ್ಲದೆ, ಹೆಂಡತಿ ಸತ್ತರೆ ಪತಿ ಸಹಗಮನ ನಮ್ಮ ಹಿಂದೂ ಮತಕ್ಕೆ ಲೋಕವ್ಯವಹಾರದಲ್ಲಿ ವಾಡಿಕೆಯಾ[illegible] ನಾಲ್ಕೈದು ಮಂದಿ ಹೆಂಗಸರನ್ನು ಮದುವೆ ಮಾಡಿಕೊಳ್ಳುವುದಾಗಲಿ ಈಗಲೂ ಇದೆಯಷ್ಟೆ! ಅಂಥಾ ಸಂಗತಿ[illegible]ದಲ್ಲಿ ನಡೆದು ಬರುವುದಿಲ್ಲವಲ್ಲವೆ? ಈ ಮ[illegible]ಗಳಿಂದ ಹೆಂಗಸರಿಗೆ ಅಬಲೆಯರೆಂಬ ಹೆಸರು ಬಂದಾಯಿತು ಸಾಮಾನ್ಯವಾಗಿ ಸ್ತ್ರೀಯರು [illegible]ದ್ಯಲ್ಲಿ ಅತಿಭಕ್ತಿಯನ್ನಿಟ್ಟು ಅವರನ್ನು ತಮ್ಮ [illegible]ದ ದೇವರೇ ಎಂದು ಭಾವಿಸುವುದರಿಂದ ಅವ[illegible] ಸಾಧ್ವೀ, ಪತಿವ್ರತಾ ಎಂಬ ಹೆಸರುವಾಸ್ತವ್ಯವ[illegible] ಬಂದಿರುತ್ತದೆ ಪ್ರಾಣಕ್ಕೆ ಪ್ರಾಣಕೊಟ್ಟು ಆಧಾ[illegible] ಕೆಲಯನಿಸುವ, ಹೆಂಡತಿಯಾದರೋ ಗಂಡನಿಗೆ ಕಿರಿ[illegible]ರಿಂದ ಸಂ ಲೋಕೋತ್ಪತ್ತಿಗೆ ಸ್ತ್ರೀಯರೇ ಮೂಲಕಾರ[illegible]ಣ ರೂ ದಂಪತಿ ಧರ್ಮದಲ್ಲಿ ಪುರುಷನೇ ಶ್ರೇಷ್ಠನಾ[illegible]ರುತ್ತಾ. ಯಾವ ವಿಧದಲ್ಲೂ ಗಂಡಹೆಂಡಿರೆಂಬ ಅರ್ಥವುಳ್ಳ [illegible] ಯು ಗಂಡನಿಗೆ ವಿಗಿಲೆಂದಾಗಲೀ ಸರಿಸಮಾನವೆಂದಾಗಲೀ ಆಗುವದಿಲ್ಲ ಸ್ತ್ರೀಯರು ಪತಿವ್ರತಾ ಧರ್ಮದಲ್ಲಿ ಕಟ್ಟುಬದ್ಧವರಾದ್ದರಿಂದ ಗಂಡಹೆಂಡಿರೆಂಬ ಭಾವನೆಯಲ್ಲಿ ಗಂಡನೇ ಪ್ರಧಾನ ಭೂಷಣವಾದ ಕಾರಣವು ಶಾಸ್ತ್ರಸಮ್ಮತಿ ಇರುವುದರಿಂದಲೂ ಹೆಂಡತಿಯ ಮಾಡತಕ್ಕ ಪಿಂಡಪ್ರಧಾನವ ಕರ್ಮತೀರಿಸಿ ಒಡನೆ ಮದುವೆ ಮಾಡಿಕೊಳ್ಳುವದಕ್ಕೆ ಯಾವದೊಂದು ಅಭ್ಯಂತರವೂ ಇರುವುದಿಲ್ಲ ಈ ಮೇಲಿನ ಎಲ್ಲಾ ಕಾರಣಗಳಿಂದ ನಮಗೆ ಹೆಂಡತಿ ಸತ್ತ 14 ನೇ ದಿನವೇ ಶಾಸ್ತ್ರ ಆಚಾರ ಸಮ್ಮತವಾಗಿ ಗಂಡನಿಗೆ ಮದುವೆಮಾಡಿಕೊಳ್ಳಬಹುದು

ನಾವು ಶಾಸ್ತ್ರಸಮ್ಮತಿಯಿಂದ ಚರ್ಚಿಸಿಕೊಂಡು ಬಂದಲ್ಲಿ, ನಮ್ಮಲ್ಲಿ ವಾಡಿಕೆಯಾಗಿ ಕಿರಿಯರಿಗೆ ದೀಕ್ಷೆ ನಿಲ್ಲುವದು ಮಾತಾಪಿತೃಗಳು ಸತ್ತವರ್ಷದೊಳಗೆ ವಿವಾಹಮಾಡಿಕೊಳ್ಳುವದು, ದೀಕ್ಷೆ ಭರ್ತಿ ಒಂದುವರ್ಷದವರೇಗೆ ನಿಲ್ಲದಿರುವದು ಬಹಳ ತಪ್ಪಾಗಿ ಕಂಡುಬರುತ್ತದೆ ಪ್ರತಿ ಒಂದು ಸಮಾಚರಣೆಯು ಶಾಸ್ತ್ರಸಮ್ಮತವಾಗಿದ್ದು ಈ ನಡತೆ ನಮ್ಮ ಸ್ಥಿ ಆಚರಣೆಗೆ ಬಾರದಿರುವದು ಬಹಳ ಶೋಚನೀಯವೇ ಸರಿ ಇದು ಹ್ಯಾಗೂ ಇರಲಿ ಪ್ರಕೃತ ಮೃತಪ್ರಾಣಿ ವಿಷಯದಲ್ಲಿ ಆತನ ಉತ್ತರಾಧಿಕಾರಿಗಳು ಮದುವೆಯಾಗುವುದಾಗಲಿ ಆತನ ಕುಟುಂಬದಲ್ಲಿ ಜನನ ಉಂಟಾಗುವುದಾಗಲಿ ಪಿತೃಗಳಿಗೆ ಬಹಳ ಪ್ರೀತಿಕರವು ಯಾಕೆಂದರೆ ಪಿತೃಗಳಿಗೆ ವರ್ಷವರ್ಷ ಮಾಡತಕ್ಕ ಪಿಂಡಪ್ರಧಾನ ಮುಂತಾದ ಕಾರ್ಯದಲ್ಲಿ ಬಹಳ ಪ್ರೀತಿ ಇರುತ್ತದೆ ಅವರಿಗೆ ಇದರಿಂದಲೇ ಗತಿಯಾಗುವಕಾರಣ ಮೃತನ ಉತ್ತರಾಧಿಕಾರಿಗಳು ಪ್ರತಿವರ್ಷವು ಪಿಂಡಪ್ರಧಾನಮಾಡಬೇಕೆಂಬುದೇ ಮೃತಪ್ರಾಣಿಯ ಉದ್ದೇಶವು ಆದಕಾರಣ ಮೃತಪ್ರಾಣಿಯ ಪುಣ್ಯವಶಕ್ಕೆ ಉತ್ತರಾಧಿಕಾರಿಗಳು ನವನಾಗರೀಕರಾಗಿ ನಾಸ್ತಿಕಮತಾಚಾರಿಗಳೇ ಇಲ್ಲವೆ ವರ್ಷವರ್ಷ ಪಿಂಡಪ್ರದಾನ ಮಾಡದವರಾಗಿಯೋ ಯಾ ಮೃತಪ್ರಾಣಿಯು ಹೆಂಗಸಾಗಿಯೊ ಅಪುತ್ರವಂತರಾಗಿಯೋ ಇದ್ದರೆ ಅಂಥಾವರ ಉತ್ತರಾಧಿಗಳು ವಿವಾಹಿತರಾಗಿ ಪುತ್ರಸಂತಾನ ಉಂಟಾದರೆ, ಅವರಾದರೂ ತಮಗೆ ಸದ್ಗತಿ ಮಾಡಿಯಾರೆಂಬ ನಂಬಿಕೆ ಬಂದಿರುವವರಾದ್ದರಿಂದ ಎಂದೂ ಮೃತರಾದವರ ನಿಮಿತ್ತವಾಗಿ ವಿವಾಹಾದಿ ಕಾರ್ಯಗಳನ್ನು ಯಾವದೊಂದು ತರದ ಪ್ರತಿಬಂಧಕದವರೇಲೆ ನಿಲ್ಲಿಸತಕ್ಕದ್ದಲ್ಲ ಈ ವಿಷಯವು ಗರುಡಪುರಾಣದಲ್ಲಿ ಸವಿಸ್ತಾರವಾಗಿದೆ ಹೀಗಿರುತ್ತಾ ಮೊನ್ನೆ ತಾನೇ ಬಿಟ್ಟಿಯಂಡ್ರ ಐಯ್ಯಣ್ಣನವರಿಗೆ ಪಟ್ಟಮಾಡ ಮನೆಯಿಂದ ನಡೆದ ವಿವಾಹದಲ್ಲು ಐಯ್ಯಣ್ಣನವರು ಹೆಂಡತಿಸತ್ತ ಒಂದುವರೆ ತಿಂಗಳೊಳಗಾಗಿ ಮದುವೆಯಾದರೆಂದು ಆರೋಪ ಹೊರಿಸಿ ದಂಡ ವಿಧಿಸಿದ್ದು. ಹೀಗೆಯೇ ಪಟ್ಟಮಾಡ ಮನೆಯವರಿಗೆ ಅಂಥಾವರಿಗೆ ಹೆಣ್ಣುಕೊಟ್ಟರೆಂಬ ದೋಷಾರೋಪಣೆ ಮಾಡಿ ದಂಡ ವಿಧಿಸಿದ್ದೂ ಬಹಳ ವ್ಯಸನಕರವಾದ ಸಂಗತಿಯಾಗಿದೆ ಈ ವಿವಾಹವು ಆಚಾರಕ್ಕೂ ಶಾಸ್ತ್ರಸಮ್ಮತಿಗೂ ಸರಿಯಾದದ್ದಾಗಿದೆ ಇವರಮೇಲೆ ಆರೋಪ ಹೊರಿಸಿದ ಸಂಗತಿ “ಅಪ್ಪನೆಟ್ಟ ಆಲದ” ವೆಂಬ ಹಳೇ ಪ್ರಾಚೀನವಾದ ಅಬದ್ಧಪದ್ಧತಿಗಳನ್ನು ಜೊತೆಮಾಡಿ ಯಾವದೋ ಒಂದು ಮತ್ಸರದ ಮೇಲಾಗಲಿ ಅಥವಾ ಹುಡುಗಾಟಕ್ಕಾಗಲಿ ಇನ್ಯಾವ ಕಾರಣದಿಂದಲೊ ಮಾಡಿದ್ದಲ್ಲದೆ ಶಾಸ್ತ್ರಸಮ್ಮತವಾಗಿಯಾಗಲಿ, ನ್ಯಾಯ ಸಮ್ಮತವಾಗಿಯಾಗಲಿ ಶಿಷ್ಟಾಚಾರ ಪದ್ಧತಿಮೂಲಕವಾಗಲಿ ಮಾಡಿದ್ದಲ್ಲವೆಂದು ಸ್ಪಷ್ಟವಾಗುತ್ತದೆ ಪಾಪ ‘ಐವರೆಲ್ಲಾ ಪ್ರತಿಷ್ಠರು’ ಅಂಥ ಹಿರಿದಪ್ಪೇ ದೊಡ್ಡ ಕುಲದ ಹಿರಿಯರೇ ಬಗೆ, ಎಂಬುವರಲ್ಲಿ ಶಾಸ್ತ್ರ ಸಮ್ಮತವೆಲ್ಲಿಯದು? ಒಬ್ಬರು ಹೇಳಿದಮಾತಿಗೆ ಮನೆಯವರೆಲ್ಲರು ಹೂಂ ಕುಟ್ಟುವುದೆ ನ್ಯಾಯ! ತಪ್ಪು, ತಪ್ಪು! ಹಕ್ಕುದಾರರು, ಪವಿತ್ರವಾದ ದಾಯಿ ಕೊಟ್ಟರಾಯಿತು, ಘಟನೆದ್ದಿತು ದೊಡ್ಡವರ ಮಾತೇ ಶಾಸ್ತ್ರ ಎನ್ನುವರಾದ ನಮಗ್ಯಾಕೆ ಈ ಶಾಸ್ತ್ರ ಚಿಂತನೆ ಎನ್ನುವರೂ ಕಂಡು ಬಂದರೆ ನಮ್ಮ ಮಾತುಗಳನ್ನು, ಶಾಸ್ತ್ರಧಾರೆಯ ಮೂಲಕವೂ ಆಚಾರ ಪದ್ಧತಿಗೆ ವಿರೋಧವಿಲ್ಲದೆ ಹೇಳಿರುವೆನು ದುರ್ಜನರು ದೋಷವನ್ನು ಹುಡುಕಿದರೂ ಸಜ್ಜನರು ಇನ್ನೀಲೇಖನದಲ್ಲಿ ಕುಂದುಕೊರತೆಗಳನ್ನೆಣಿಸದೆಂಬದಾಗಿ ನಂಬಿ ಸನ್ನಿವೇಶವನ್ನು ಮುಕ್ತಾಯಗೊಳಿಸುವೆನು. ‘ಸಜ್ಜನ ಹಿತಾಕಾಂಕ್ಷಿ’

ಹಸೀಯಾಂಲ್ಲಿ ವಿನಂತಿ.

...ರ್ಷದ ಅತಿವೃಷ್ಟಿಯಿಂದ ಸಂಭವಿಸಿದ ಅಪೂರ್ವ ...ವಾಹದ ದೆಸೆಯಿಂದ ಕೊಡಗಿನಲ್ಲಿಯೂ ನಮ್ಮ ...ಕಾದ ಮಲಬಾರು ದಕ್ಷಿಣ ಕನ್ನಡ ಪ್ರಾಂತ್ಯಗಳಲ್ಲಿ ...ಂಟಾಗಿರುವ ವಿವರಿಸಲಸದಳವಾದ ನಷ್ಟವು ಎಲ್ಲ ... ಸಂಗತಿಯಾಗಿದೆ ಈ ಕಷ್ಟಕ್ಕೊಳಗಾಗಿರುವ ...ರು ಸಹಾಯವುದು ಪ್ರತಿಯೊಬ್ಬ ಮನುಷ್ಯನ ...ದಕ್ಕಾಗಿ ಮಡಿಕೇರಿಯಲ್ಲಿ ಒಂದು ...ಪ್ಪ ಹಣ ಜಮಾಯಿಸಲ್ಪಟ್ಟು ಕಷ್ಟ ...ಸಲ್ಪಟ್ಟಿದೆ ಈಗಲೂ ಹಾದವು ...ಮ್ಮ ಸಹೋದರರ ಕಷ್ಟವು ತಮ್ಮ ...ಯೊಬ್ಬ ದೇಶೀಯನೂ ಉದಾರ ...ರ ಧನಸಹಾಯ ಮಾಡಬೇಕೆಂದು ...ಮಾಡಿದವರ ಪಟ್ಟಿಯು ಈ ಪತ್ರಿಕೆ ...ಪ್ರಕಟಿಸ... ...ದು ಹಣವನ್ನು ರಿಲೀಫ್ ಕಮಿ...ಟಿಯ ಅಧ್ಯಕ್ಷರಾದ ರಾ|| ಬಾ|| ಕೂಡಂಡೇರ ಬೆಟ್ಟಯ್ಯ ನವರು, ಮಡಿಕೇರಿ ಇವರಿಗೆ ಕಳುಹಿಸಿಕೊಡಬೇಕು

ಮಡಿಕೇರಿ. ಸಂಪಾದಕ,

26-3-23 " ಕೊಡಗು "

ವರ್ತಮಾನ ಸಂಗ್ರಹ.

ಒಳದೇಶ

ಈ ತಾ|| ಹನ್ನೆರಡನೇ ಶುಕ್ರವಾರದಿನ ರಾತ್ರಿ ಕಳೆದ ಸೆರೆಯ ಪ್ರವಾಹದಿಂದುಂಟಾದ ಹಾವಳಿಯ ನಷ್ಟಪರಿಹಾರಾರ್ಥವಾಗಿ ಹರಿಶ್ಚಂದ್ರ ನಾಟಕವನ್ನು ಬಾಲಸಮಾಜದವರು, ಮಡಿಕೇರಿ ಹೈಸ್ಕೂಲ ಹಾಲಿನಲ್ಲಿ ಆಡುವರು ಇಂಥಾ ಸ್ತುತ್ಯಕೆಲಸಕ್ಕೆ ದೇಶಾಭಿಮಾನಿಗಳೆಲ್ಲರೂ ಉತ್ತೇಜನ ಕೊಟ್ಟು ಭಾಗಿಗಳಾಗಬೇಕೆಂಬುದೇ ನಮ್ಮ ಆಶೆ

ನೇಕ್ಸ್ ಸೇಟಿಂಗ್ ಇನ್ಸ್ ಪೆಕ್ಟರಾಗಿದ್ದ ಮೆ|| ಐಚೆಟ್ಟಿರ ಮಾದಪ್ಪನವರು ಸಿಬ್ಬಂದಿ ಕಡಿತೆಯ ದೆಸೆಯಿಂದ ಕೆಲಸದಿಂದ ನಿವೃತ್ತಿ ಹೊಂದುವರಾಗಿಯೂ ಸದ್ಯಕ್ಕೆ ಪರ್ಲೋಗದಲ್ಲಿ ಹೋಗಿರುವುದಾಗಿಯೂ ತಿಳಿಯುತ್ತೇವೆ ಈ ಹುದ್ದೆಯೇ ಇನ್ನುಮುಂದೆ ಇರುವುದಿಲ್ಲವಂತೆ

ಮಡಿಕೇರಿಯಲ್ಲಿ ಈ ತಾರೀಕು 8 ರಲ್ಲು ಸಹಕಾರಿ ಸೆಂಟ್ರಲ್ ಬ್ಯಾಂಕ್ ಮೀಟಿಂಗಿನಲ್ಲು ಹಾಕತ್ತೂರು ಸಂಘಕ್ಕೆ ಮುನ್ನೂರು ರೂಪಾಯಿಗಳೂ ಕೊಡ್ಲಿಪೇಟೆ ಸಂಘಕ್ಕೆ ಸಾವಿರ ರೂಪಾಯಿಗಳೂ, ಹೆಬ್ಬಾಲೆ ಸಂಘಕ್ಕೆ ಸಾವಿರ ರೂಪಾಯಿಗಳನ್ನು ಸಾಲ ಮಂಜೂರಿಸಿದ್ದಲ್ಲದೆ ಬ್ಯಾಂಕಿನ ಒಂದು ಜನರಲ ಮೀಟಿಂಗನ್ನು ಬರುವ ನವಂಬರ್ 10 ರಲ್ಲು ಮಡಿಕೇರಿಯಲ್ಲಿ ನಡಿಸುವಂತೆಯೂ, ಆಗ ಒಂದು ಡಿಪಾರ್ಟ... ...ಲಿಕ್ಕಾಗಿ ಠಕ್ಕ ವಿಷ... ...ಲಿಕ್ಕೆ ಒಂದು ಕಮಿಟಿ ನೇಮಕ ನಿರ್ಧಾರವಾಯಿತು

ಈ ತಾ|| 7 ರಲ್ಲು ಮಡಿಕೇರಿಯಲ್ಲಿ ಕೊಡಗು ಕಂಪೆನಿಯ ಡೈರೆಕ್ಟರುಗಳ ಮೀಟಿಂಗ್ ನಡೆದು, ಕೊಡಗು ಕಮಿಷನರವರು ಹೊಸ್ನಕಾನೇ, ಕೊಡಗು ಎಡಿಟರವರಿಗೆ ಕನ್ನಡ ಸಂಚಿಕೆಯಲ್ಲಿ ತೋರಿಸಿದ ತಿರಸ್ಕಾರ ಸ್ವಭಾವಕ್ಕೆ ಡೈರೆಕ್ಟರುಗಳು ವ್ಯಸನಪಡುತ್ತಾರೆಂತಲೂ ಸಂಪಾದಕರ ಕೆಲಸ ...ಡೈರೆಕ್ಟರುಗಳಿಗೆ ಪೂರ್ತಿ ನಂಬಿಕೆ ಇದೆಯೆಂತಲೂ ಮಗ್ಗೆ... ...ಗಿ ಬರಾವುಗಳು ಮಂಜೂರಾದ ತಸತೀಲನ್ನು ಬರುವ ಪತ್ರಿಕೆಯಲ್ಲಿ ಪ್ರಕಟಣೆ ಮಾಡುತ್ತೇವೆ

ಕೊಡಗಿಗೆ ಕೌನ್ಸಿಲ್ ಮಂಜೂರಾದದ್ದು ನಿಜವೆಂದು ಸಂಪಾದಕರವರು ತಿಳಿಸಿರುತ್ತಾರೆ ಇದರ ಕೆಲಸವನ್ನು ಬರುವ ಜನವರಿಯಲ್ಲಿ ಪ್ರಾರಂಭಿಸಬಹುದಾಗಿದೆ ತಪಶೀಲ್ ಅಗ್ರಲೇಖನದಲ್ಲಿ ಸೂಚಿಸಿದೆ

ಮಡಿಕೇರಿಯಿಂದ ವೀರಾಜಪೇಟೆ ತಲಚೇರಿಗೆ ನಡೆಯುತ್ತಿದ್ದ ಕಂಪನೀಯ ಮೋಟಾರು ಬಸ್ಸು ಸರ್ವೀಸು ಈ ತಾ|| 5 ರಿಂದ ನಿಂತು ಹೋಗಿದೆ ಸರ್ವೀಸು ಇನ್ನು ಮುಂದೆ ದಕ್ಷಿಣ ಕನ್ನಡದಲ್ಲಿ ನಡಿಸಲ್ಪಡುವುದಂತೆ

ಇದೇ ತಾರೀಕು 17 ನೇ ಬುಧವಾರ ದಿನ ಮಧ್ಯಾಹ್ನದ ಮೇಲೆ 2½ ಘಂಟೆಗೆ ತಲಕಾವೇರಿಯಲ್ಲಿ ಶ್ರೀ ಮೂಲ ಕಾವೇರಮ್ಮನವರ ತುಲಾ ಸಂಕ್ರಮಣ ತೀರ್ಥವು ಉದ್ಭವವಾಗುವುದು. (ಕಳೆದವಾರ ಪ್ರಕಟಿಸಿದ್ದೆ)

ಕಾವೇರಿ ಜಾತ್ರೆಗೆ ಹೋಗುವ ಪ್ರಯಾಣಿಕರ ಅನುಕೂಲಕ್ಕಾಗಿ ಶಂಕರ್ ವಿಟ್ಠಲ ಬಸ್ಸ್ ಸರ್ವೀಸಿನವರು ತಾ|| 15 ರಿಂದ ಮಡಿಕೇರಿಯಿಂದ ಭಾಗಮಂಡಲಕ್ಕೆ ಮೋಟಾರು ಕಾರ್ ಸರ್ವೀಸು ನಡಿಸುವರಂತೆ

ಡಿಸ್ಟ್ರಿಕ್ಟ್ ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ ಮೆ|| ಪಾರ್ವಂಗಡ ಉತ್ತಪ್ಪನವರನ್ನು ಬೋರ್ಡಿನವರು ಚುನಾಯಿಸಿದನ್ನು ಚೀಫ್ ಕಮಿಷನರವರು ಮಂಜೂರು ಮಾಡಿರುವರು

...ಬೆಮಾಗಾರರ ಸಂಘದ ಖರ್ಚಿನಿಂದ ಕಾವೇರಿ ಸಂಕ್ರಮಣಕ್ಕೆ ಕೊಡಗು ಪತ್ರಿಕೆಯು ಒಂದು ಸ್ಪೆಶ್ಯಲ್ ಸಂಚಿಕೆಯನ್ನು ಪ್ರಕಟಿಸಿ ಅದರ ಪ್ರತಿಗಳು ಜಾತ್ರೆಯಲ್ಲು ಉಚಿತಾರ್ಥವಾಗಿ ಜನರಿಗೆ ಹಂಚಲಾಗುವುದು.

ಬರುವ ನವಂಬರು ತಾ|| 12 ರಲ್ಲು ಫ್ರೇಜರ್ ಪೇಟೆ ಗಣಪತಿ ಗುಡಿಯಲ್ಲಿ ತೇರು ಉತ್ಸವವು ಮಾಮೂಲ್ ಮೇರೆ ನಡೆಯುವುದು ಅದೇ ದಿನ ಸಾಯಂಕಾಲ ದನಗಳ ಪ್ರದರ್ಶನವು ಪ್ರಾರಂಭಿಸುವುದು 14 ನೇ ತಾರೀಕಿನಲ್ಲು ಉತ್ತಮ ತರದ ಜಾನುವಾರುಗಳಿಗೆ ಇನಾಮುಗಳು ಕೊಡಲ್ಪಡುವುವು

ಮಡಿಕೇರಿಯವರು ಕೆಲವರು ಸೇರಿ ಮಡಿಕೇರಿಯಿಂದ ವೀರಾಜಪೇಟೆಗೆ ಬಸ್ಸ್ ಸರ್ವೀಸನ್ನು ಬೇಗನೆ ಪ್ರಾರಂಭಿಸುವ ವರ್ತಮಾನವಿದೆ.

ತಾ|| 7 ರಲ್ಲು ಮಡಿಕೇರಿಯಲ್ಲು ಕೊಡಗು ಜಮಾನುದಾರರ ಸಂಘದ ಕಮಿಟಿ ಮೀಟಿಂಗು ನಡೆಸುವ ಮುಂಚೆ ಕಮಿಷನರವರು ಸಂಘದ ಪ್ರೆಸಿಡೆಂಟರವರನ್ನು, ಸೆಕ್ರೆಟರಿಯವರನ್ನು ಕರೆಯಿಸಿ ನಿಮ್ಮ ಸಂಘದ ಡೆಪ್ಯುಟೇಶನನ್ನು ಕಳುಹಿಸಲು ಸರ್ಕಾರದವರು ಒಪ್ಪಿಕೊಂಡಿದ್ದಾರೆಂದು ಹೇಳಿದ ಸಂಗತಿಯನ್ನು ಅವರು ಕಮಿಟಿ ಮೀಟಿಂಗಿನಲ್ಲು ತಿಳಿಸಿದಕ್ಕೆ ಆ ವಿಷಯ ಕಮಿಷನರವರಿಂದ ಕಾಗದ ಬರಬೇಕೆಂದು ಮಾಡಿದ ಕಮಿಟಿಯ ತೀರ್ಮಾನವನ್ನು ಸೆಕ್ರೆಟರಿಯವರು ಕಮಿಷನರವರಿಗೆ ಬರೆದು ಕಳುಹಿಸಿ ಮೀಟಿಂಗನ್ನು 8 ನೇ ತಾರೀಕಿಗೆ ಮುಂದರಿಸಿದರು. ಮರುದಿನ ಕಮಿಷನರವರು, ಈಗ ಕೌನ್ಸಿಲು ಮಂಜೂರಾಗಿರುವದರಿಂದ ಅಮಲ್ಗಮೇಶನಿನ ವಿಷಯವಾಗಿ ವಂದನಾ ಪತ್ರದಲ್ಲಿ ಬರೆಯುವ ಅವಶ್ಯವಿಲ್ಲ ಡೆಪ್ಯುಟೇಶನನ್ನು ವೈಸರಾಯರು ಸ್ವೀಕರಿಸುವರು. ಮೊದಲಿನ ತನ್ನ ಪತ್ರವು ಕಮಿಟಿಯವರಿಗೆ ನೋವು ಉಂಟುಮಾಡಿದಕ್ಕೆ ತಾನು ವ್ಯಸನಪಡುತ್ತೇನೆ ವೊದಲಾಗಿ ಬರೆದು ಕಳುಹಿಸಿದರಮೇಲೆ ಕಮಿಟಿಯವರು ಡೆಪ್ಯುಟೇಶನನ್ನು ವಂದನಾ ಪತ್ರದಲ್ಲಿ ತಕ್ಕ ಬದಲಾವಣೆಗಳಿಂದ ಕಳುಹಿಸುವಂತೆಯೂ ಸಂಘದ ಜನರಲ್ ಮೀಟಿಂಗು ಒಂದನ್ನು ಡಿಸಂಬರು ಒಂದನೇ ವಾರದಲ್ಲಿ ಮಾಡುವಂತೆಯೂ ತೀರ್ಮಾನ ಮಾಡಿದರು. ಈ ವಿಷಯ ವಿವರವಾಗಿ ಬರುವವಾರ ಬರೆಯುತ್ತೇವೆ

ಇದೇ ಅಕ್ಟೋಬರು ತಾ|| 12 ರಿಂದ ' ಸತ್ಯನಾರಾಯಣ ' ಬಸ್ಸು ಸರ್ವೀಸು ವೀರಾಜಪೇಟೆಯಿಂದ ಮಡಿಕೇರಿಗೂ, ಅಕ್ಟೋಬರು 10 ರಿಂದ ' ವಿಕ್ಟೋರಿಯ ' ಬಸ್ಸು ಸರ್ವೀಸು ಮಡಿಕೇರಿಯಿಂದ ವೀರಾಜಪೇಟೆಗೂ ನಡೆಯಲು ಪ್ರಾರಂಭಿಸಿದೆ

ಹಿಂದೂದೇಶ.

ಲಕ್ನೋನಗರಕ್ಕೆ ಗೋಮತೀನದಿಯ ನೆರೆಯಿಂದ ವಿಪರೀತ ನಷ್ಟವುಂಟಾಗಿದೆಯಂತೆ 1 ಸುತ್ತ, ಮುತ್ತಲೂ ಇರುವ ಗೋಂಡಾ, ಸಿತಾಪುರ ಲಕ್ಷ್ಮೀಪುರ ಹಾರ್ದೋಲಿ ಬಾರಬಂಕಿ ಡಿಸ್ಟ್ರಿಕ್ಟುಗಳಲ್ಲಿ ಬೆಳೆಗೂ ಮನೆಗೂ ಬಹಳ ನಷ್ಟವುಂಟಾಗಿದೆಯೆಂದೂ ಕಟ್ಟಡಗಳ ಸುತ್ತಲೂ ನೀರು ನಿಂತಿರುವುದರಿಂದ, ಬೀಳಲಿಕ್ಕೆ ಪ್ರಾರಂಭಿಸಿ, ಜನರಿಗೆ ಮತ್ತಷ್ಟು ಭಯವುಂಟು ಮಾಡುವುದೆಂದು ಹಿಂದು ಪತ್ರಿಕೆಯು ಹೇಳುತ್ತದೆ.

ಸೆಂಟ್ರಲ್ ಸಿಕ್ಕೀಗಿನ ನಾಲ್ಕನೇ ಸಮ್ಮೇಳನವು ಈ ತಾ|| 17 18 19 ರಲ್ಲಿ ಒಟ್ಟಿಗೂ ನಡೆ...ಲಿಕ್ಕಿದೆ ಬಹಳ ಜನರು ಸೇರುವ ನಂಬಿಕೆಯಿಂದ ಒಂದು ಲಕ್ಷ ಜನರು ನಿಲ್ಲುವಂತೆ ಚಪ್ಪರವನ್ನು ಹಾಕಿರುವರೆಂದೂ ಈ ಒಂದು ಲಕ್ಷ ಜನರಿಗೆ ಬೇಕಾದ ಊಟೋಪಚಾರಗಳನು ಅಲ್ಲಿನ ಗುರುಗಳ ಮನೆಯಲ್ಲೇ ಮಾಡುವರೆಂದೂ ಇದರೊಂದಿಗೆ ಮುಖ್ಯವಾಗಿ ಸ್ವದೇಶಿ ಬಟ್ಟೆಗಳ ಪ್ರದರ್ಶನವು ನಡೆಯುವುದೆಂದು ತಿಳಿಯಬರುತ್ತೆ

ಮಹಾತ್ಮ ಗಾಂಧಿಯವರ ಐವತ್ತೈದನೇ ಜನ್ಮದಿನವಾದ ಎರಡನೇ ಅಕ್ಟೋಬರ್ ದಿನವನ್ನು ಹಿಂದೂದೇಶದ ಅನೇಕ ಕಡೆಗಳಲ್ಲಿ ಬಹು ಸಂಭ್ರಮದಿಂದ ಆಚರಿಸಿದರು ಬೊಂಬಾಯಿಯಿಂದ ಐವತ್ತು, ಪೂನಾದಿಂದ ನೂರು ಮಹಿಳೆಯರು ಎರವಾಡ ಜೈಲಿಗೆ ಆನಿವ ಮೆರವಣಿಗೆ ಮಾಡಿ ಜೈಲ್‌ಗೇಟ್ ಬಳಿ ಮಹಾತ್ಮ ಗಾಂಧಿಯವರ ಭಾವಚಿತ್ರವನ್ನು ಪೂಜಿಸಿ, ಹೂವಿನ ಹಾರಗಳನ್ನು ಮಹಾತ್ಮರಿಗೆ ಕೊಡುವಂತೆ, ಜೈಲ್ ಅಧಿಕಾರಿಗಳಿಗೊಪ್ಪಿಸಿದರು

ಪಂಜಾಬಿನ ಕೌನ್ಸಿಲಿಗೆ ಹೋಗಕೂಡದೆಂದಿದ್ದ ಕಾಂಗ್ರೆಸ್ ಪಂಗಡದವರು ಕೌನ್ಸಿಲಿನ ವಿಷಯದಲ್ಲಿ ಲಾಲಾ ಲಜಪತ್ ರಾಯರನ್ನು ಹಿಂಬಾಲಿಸಲು ತಯ್ಯಾರಾಗಿರುವರೆಂದು ಒಪ್ಪಿಗೆ ಕೊಟ್ಟಿದೆಯಂತೆ

ಹಿಂದೂದೇಶದ ಈಗಿನ ರಾಜಕೀಯ ಸ್ಥಿತಿಯ ವಿಷಯ ಕವಿವರ್ಯ ರವೀಂದ್ರನಾಥರು ಈ ತಾರೀಕು 5 ರಲ್ಲು ಕಲಕತ್ತಾದಲ್ಲಿ ಭಾಷಣ ಮಾಡಿದ್ದಕ್ಕೆ ಅನೇಕ ಜನರು ನೆರೆದಿದ್ದರು

ಶಾಂತಿನಿಕೇತನದ ಒಬ್ಬ ಪ್ರೊಫೆಸರಾದ ಮೆ|| ಡಬ್ಲ್ಯು ಡಬ್ಲ್ಯು ಪೀಯರ್ಸನರು ಇಟಲಿಯಲ್ಲಿ ಮೃತಪಟ್ಟರೆಂಬ ವರ್ತಮಾನಸಿಕ್ಕಿದೆ ಅವರು ಕಳೆದ ಐದು ತಿಂಗಳ ಹಿಂದೆ ಇಂಗ್ಲೆಂಡಿಗೆ ಹೋಗಿ ಈಗ ವಾಪ್ಸು ಬರುವಾಗ ದಾರಿಯಲ್ಲಿ ತೀರಿ ಹೋದರಂತೆ

ಮೊದಲು ಹೆಸರು ವಾಸಿಗೊಂಡ ಒಬ್ಬ ಕಾಂಗ್ರೆಸ್ ಮೆಂಬರಾಗಿದ್ದ ರಾ|| ಬಾ|| ಪೂರ್ಣೆಂದೋ ನಾರಾಯಣ ಸಿನ್ಹಾ (ಎಂ ಎಲ್ ಸಿ) ಯವರು ಮೃತಪಟ್ಟರೆಂದು ತಿಳಿಯುತ್ತೇವೆ

ಗುಂಟೂರಿನವರು ಅಕ್ಟೋಬರ್ ಎರಡರಲ್ಲಿ ಗಾಂಧಿ ದಿನವನ್ನು ಆಚರಿಸಿದಾಗ ಅವರ ಜ್ಞಾಪಕಾರ್ಥವಾಗಿ ಅನೇಕ ಜನರಿಗೆ ಜೈಲಿನ ಊಟವನ್ನು ಬಡಿಸಿದರಂತೆ.

ಬ್ರಿಟಿಷ್ ಸಾಮ್ರಾಜ್ಯದಲ್ಲಿ ತಯ್ಯಾರಿಸಿದ ಯಾವ ಸಾಮಾನುಗಳನ್ನು ಮುನಿಸಿಪಾಲಿಟಿಯವರಾಗಲೀ, ಅದರ ಕಂಟ್ರಾಕ್ಟುದಾರರಾಗಲೀ, ಉಪಯೋಗಿಸಕೂಡದೆಂಬ ಒಂದು ಠರಾವನ್ನು ತಾ|| 11 ರಲ್ಲಿ ನಡೆಯುವ ಬೊಂಬಾಯಿ ಮುನಿಸಿಪಾಲಿಟಿ ಮೀಟಿಂಗಿನಲ್ಲಿ ಮೆ|| ವಿ ಬಿ ಪಟೇಲರು ಚರ್ಚೆಗೆ ತರುವರು.

ಈ ವೊದಲೇ ಮಹಾತ್ಮ ಗಾಂಧಿಯವರಿಗೆ ಶಾಂತಿ ನೋಬಲ್ ಪ್ರೈಜ್ ಸಿಕ್ಕುವುದೆಂಬ ವರ್ತಮಾನವು ಪ್ರಕಟವಾಗಿತ್ತು, ಆದರೆ ಈ ಇನಾಮಿನ ವಿಷಯ ಇನ್ನೂ ತೀರ್ಮಾನವಾಗಿರುವುದಿಲ್ಲ. ಇದಕ್ಕೆ ಮೂವತ್ತು ಹೆಸರುಗಳು ಬಂದಿದೆಯಂತೆ

ಲಂಡನ್ನಿನಲ್ಲಿ ಬೇಗನೇ ನಡೆಯಲಿಕ್ಕಿರುವ ಬ್ರಿಟಿಷ್ ಸಾಮ್ರಾಜ್ಯದ ವಸ್ತು ಪ್ರದರ್ಶನಕ್ಕೆ ಇಂಡಿಯಾದಿಂದ ಕೆಲವು ನರ್ತಕಿಯರನ್ನು ಕಳುಹಿಸಬೇಕೆಂಬ ಅಭಿಪ್ರಾಯವು ಹಿಂದದೇಶದಲ್ಲಿ ಬಹಳ ಅತೃಪ್ತಿಯನ್ನುಂಟುಮಾಡಿದೆ ಅನೇಕ ಕಡೆಗಳಲ್ಲಿ ಇವನ್ನು ವಿರೋಧಿಸಿ ಠರಾವು ಮಾಡಿರುತ್ತಾರೆ

ಉಡುಪಿಯ ' ಸತ್ಯಾಗ್ರಹಿ ' ಪತ್ರಿಕೆಯ ಸಂಪಾದಕರ ಪ್ರಕಾಶಕರೂ ರಾಜದ್ರೋಹದ ಲೇಖನವನ್ನು ಪ್ರಕಟಿಸಿರೆಂಬ ಆರೋಪಣೆಯಮೇಲೆ ಮಂಗಳೂರಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರವರಿಂದ ವಿಚಾರಿಸಲ್ಪಡುತ್ತಿರುವರು.

ನಾಭ ಪ್ರಾಂತ್ಯದಲ್ಲಿ ಸೆರೆ ಹಿಡಿಯಲ್ಪಟ್ಟ ಮೆ|| ಜವಹಾರಲಾಲ್ ನೆಹರು, ಮೆ|| ಗಿಡ್ವಾನಿ ಮತ್ತು ಮೆ|| ಕೆ ಸಂತಾನಮ್ ನವರಿಗೆ ಎರಡೂವರೆ ವರ್ಷ ಸಜೆ ವಿಧಿಸಲ್ಪಟ್ಟಿತು ಆದರೆ ಅಲ್ಲಿಯ ಅಧಿಕಾರಿಗಳು ಅವರನ್ನು ಒಡನೆ ಜೈಲಿನಿಂದ ಬಿಡುಗಡೆ ಮಾಡಿದರು ಆದರೆ ಅವರು ನಾಭ ಪ್ರಾಂತ್ಯವನ್ನು ಬಿಡಬೇಕೆಂದು ಹುಕುಂ

ಪಂಡಿತ ಮೋತಿಲಾಲ್ ನೆಹರುರವರನ್ನು ತಮ್ಮ ಕುಮಾರ ಜವರ್ ಲಾಲ್ ನೆಹರುರವರಿಗೆ ನಾಭದಲ್ಲಿ ಸಂಭಾಷಣೆ ಕೊಡಲು ಸರ್ಕಾರದವರು ಬಿಟ್ಟದ್ದರಿಂದ ಅವರ ಸಂಭಾಷಣೆ ಆಯಿತು

ಮದ್ರಾಸಿನ ಸರ್ ಪಿ ತ್ಯಾಗರಾಜ ಚೆಟ್ಟಿಯಾರವರು ಒಂದು ಮೀಟಿಂಗಿನಲ್ಲಿ ಮೆ|| ಎಸ್. ಶ್ರೀನಿವಾಸ ಯಂಗಾರ ರವರಿಗೆ ಕೆಲವು ಆಕ್ಷೇಪಣೆ ಮಾತುಗಳಾಡಿರಿಂದ ಆ ವಿಷಯ ಅಯ್ಯಂಗಾರ ರವರು ಖಾನೂನಿನ ಸಹಾಯಕ್ಕೆ ಹೋಗುವರೆಂದು ವರ್ತಮಾನ.

ಸಿಖ್ ಜನರು ಅಕಾಲಿ ಜಾತದಲ್ಲಿ ನಾಭ ಪ್ರಾಂತ್ಯ ಬರಕೂಡದೆಂತಲೂ ಹುಕುಂ ಮೀರಿ ಬಂದಲ್ಲು ಸೆರೆ ಹಿಡಿಲ್ಪಡುವರೆಂತಲೂ ಅಲ್ಲಿಯ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಹುಕುಂ ಮಾಡಿರುವರು ವಿಷಯ ವಿವರವಾಗಿ ಬರುವವಾರ ಬರೆಯುತ್ತೇವೆ

ವಿದೇಶ.

ಜಪಾನಿನಲ್ಲಿ ಈ ತಾರೀಕು 4 ರಲ್ಲು ಪುನಃ ಒಂದು ಭೂಕಂಪವು ಆಯಿತು ಟೋಕಿಯೋ ಮತ್ತು ಬೇರೆ ಕೆ ಪಟ್ಟಣಗಳಲ್ಲಿ ಜನರು ಭಯದಿಂದ ಮನೆಗಳಿಂದ ಹೊರಹೊಡಿದಲ್ಲದೆ ವಿದ್ಯುಚ್ಛಕ್ತಿಯ ದೀಪದ ತಂತಿಗಳಲ್ಲವೂ ...ಎಸಲ್ಪಟ್ಟವಂತೆ

ಇಂಡಿಯಾ ಹೈಕಮಿಶನರವರಿಗೆ ಸೆಕ್ರೆಟರಿಯರಾಗಿದ್ದ ಮೆ|| ಜೆ ಡಬ್ಲ್ಯು ಬೆ ...ರನವರ ಉದ್ಯೋಗದ ...ಧಿ ತೀರಿರುವುದರಿಂದ ಮದ್ರಾಸಿಗೆ ಒಡನೇ ಬರುವರು ...ನ ಹೈಕಮಿಶನರವರು ಇಂಡಿಯನ್ನರಾಗಿರುವುದರಿಂದ ...ರ ಸೆಕ್ರೆಟರಿ ಪದವಿಗೆ ಬೋರರ ಬದಲು ಒಬ್ಬ ಇಂಡಿಯನ್ನರನ್ನು ನೇಮಿಸುವರಂತೆ

ಅಮೇರಿಯಾ ಸರಕಾರದವರು ಜರ್ಮನಿಯ ಪ್ರಾಂತಸರಕಾರದಿಂದ ಸ್ವತಂತ್ರರಾಗಿರುವಂತೆ ತೋರುತ್ತದೆ ಜರ್ಮನಿಯ ಮಧ್ಯ ಸರಕಾರದ ಮಂತ್ರಿ ಮಂಡಳಿಯವರು ರಾಜಿನಾಮೆ ಕೊಟ್ಟಿರುವರು ಪ್ರೆಸಿಡೆಂಟ್ ಇಬರ್ಟರು ಒಂದು ಹೊಸ ಮಂತ್ರಿ ಮಂಡಲಿಯನ್ನು ಮಾಡುವಂತೆ ಸ್ಟ್ರೆಸ್‌ಮನ್ ರವರನ್ನು ಕೇಳಿಕೊಂಡಿರುವರು

ಜಿನೀವದಲ್ಲಿ ನಡೆಯುವ ಜನಾಂಗಗಳ ಲೇಬರ್ ಕಾನ್‌ಫರೆನ್ಸಿಗೆ ಮೆ|| ಕೆ ಸಿ ರಾಯ್ ಚೌದುರಿಯವರು ಇಂಡಿಯಾ ಕೆಲಸಗಾರರ ಪ್ರತಿನಿಧಿಯಾಗಿ ಹೋಗಿರುವರು.

ನ್ಯೂಯಾರ್ಕ್ ಪಟ್ಟಣದಲ್ಲಿ ಪಂಪಿನ ಮೂಲಕ ಆರನೂರು ಅಡಿಗಳ ಎತ್ತರದ ನೀರನ್ನು ಹಾರಿಸುವದಂತೆ ಅದ್ದರಿಂದ ಎಂಟು ಅಂತಸ್ತುಗಳುಳ್ಳ ಮಹಡಿಯ ಮೇಲೆ ಬೆಂಕಿ ಹತ್ತಿದ್ದನ್ನು ಕೆಡಿಸಲು ಅನುಕೂಲವಿದೆಯಂತೆ.

ಈ ತಾ|| 4 ರಲ್ಲು ಇಂಗ್ಲೆಂಡಿನ ದಕ್ಷಿಣ ಭಾಗ ಮತ್ತು ಫ್ರಾನ್ಸಿನ ಉತ್ತರ ಭಾಗಗಳಿಗಾಗಿ ಒಂದು ಬಲವಾದ ಬಿರುಗಾಳಿಯು ಬೀಸಿತು ಸಮೀಪದ ಸಮುದ್ರದಲ್ಲಿ ...ಗುಗಳ ಚಲನೆಯು ನಿಲ್ಲಿಸಲ್ಪಡ ಬೇಕಾಯಿತು.

Red Cross Society.
ಬಡಜನರ ಚಿಕಿತ್ಸೆಯ ಸಂಘ

ವಾಚಕರೇ, ಇತ್ತ ಗಮನ ಕೊಡುವಿರಾ? ನಿ... ಈ ಪ್ರಪಂಚದಲ್ಲಿ ಹುಟ್ಟಿ ಅನೇಕಾನೇಕ ವಿಧಗಳಲ್ಲಿ ಪರೋಪಕಾರವಮಾಡಲು ನಿಮ್ಮ ಶಕ್ತ್ಯನು ತನುಮನ ಧನಗಳನ್ನು... ಬೇಕಲ್ಲವೆ? ಪರೋಪಕಾರಕ್ಕೂ, ಬಡಜನರ ಔನ್ನತ್ಯಗೆ...

...ಕರ ಚಿಂತಿಸುವುದಕ್ಕೂ ಎಲ್ಲಿ ನಮಗೆ ಸಂದರ್ಭಗಳು ಸಿಕ್ಕುತ್ತವೆ ಎಂದು ಯೋಚನೆ ಮಾಡುತ್ತಿರುವುದೇ ನಮ್ಮ ಪ್ರಾಥಮಿಕ ಕರ್ತವ್ಯವಾಗಿರುವುದು. ಈ ವೇಳೆಯಲ್ಲಿ ನಮ್ಮ ಸುಕೃತಿಯ ವಾಚಕರಿಗೆ ಪುಣ್ಯಕೆಲಸಮಾಡಲು ಒಂದು ವಿಧಾನವನ್ನು ಕಲ್ಪಿಸಿದೆಯೆಂದು ಹೇಳಲು ನಮಗೆ ಸಂತೋಷವಾಗಿಯೂ ಸಂತೋಷವಾಗುವುದು. ಇತರ ಪ್ರಾಂತ್ಯಗಳಲ್ಲೆಲ್ಲಾ ಬಡವರು ಕುಂಟರು, ಕುರುಡರು ಮುದುಕರು ಕಾಯಿಲಸ್ಥರು ಮುಂತಾದ ಅನಾಥರ ರಕ್ಷಣೆಗೆ ಒಂದು ಸಂಘವನ್ನು ಏರ್ಪಡಿಸಿ ಅದರ ಮೂಲಕ ಕೆಲಸವಾಗುವಂತೆಯೇ ನಮ್ಮ ಕೊಡಗು ದೇಶದಲ್ಲಿಯೂ ಇತ್ತೀಚಿಗೆ ಒಂದು ಕಮಿಟಿಮಾಡಿ ಕೆಲವು ಮಹಿಳೆಯರು ತಕ್ಕ ಉತ್ಸಾಹದಿಂದ ಕೆಲಸ ಮಾಡುತ್ತಿರುವರು. ಈ ಕಾರ್ಯವು ಬಲು ಶ್ಲಾಘ್ಯನೀಯವಾಗಿದ್ದು ನಮ್ಮ ದೇಶದ ಸ್ಥಿತಿವಂತರು, ಹೆಂಗಸರು, ಗಂಡಸರು ಎಂಬ ತಾರತಮ್ಯವಿಲ್ಲದೆ ಒಳ್ಳೆಯ ಪ್ರೋತ್ಸಾಹವನ್ನು ಕೊಡುವುದು ಅವಶ್ಯವಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಪ್ರಾಚೀನ ಕಾಲದಲ್ಲಿ ಇಂತಹ ಸಂಸ್ಥೆಗಳಾಗಲಿ ಸಂಘಗಳಾಗಲಿ ಇಲ್ಲದಿದ್ದರೂ ಸ್ಥಿತಿವಂತರು ಉದಾರ ಮನಸ್ಸಿನಿಂದಲೂ, ಕರ್ತವ್ಯ ಪರಾಯಣತೆಯಿಂದಲೂ, ಬಡಬಗ್ಗರಿಗೂ ಅನಾಥರಿಗೂ ಎಷ್ಟೋ ಸಹಾಯವನ್ನು ಮಾಡಿ ತಮ್ಮ ಜನ್ಮವನ್ನು ಸಾರ್ಥಗೊಳಿಸಿದರು. ಆದರೆ ಬರಬರುತ್ತ ಕಾರಣಾಂತರಗಳಿಂದ ಇಂತಹ ಧರ್ಮಗಳು ಶಿಥಿಲವಾಗಿ ಈಗ ಮೇಲೆ ಹೇಳಿದಂತಹ ಸಂಸ್ಥೆಗಳ ಉಪಯೋಗವು ಬಹಳ ಅವಶ್ಯಕವಾಗಿದೆ. ಆದರೂ ಚಿಂತೆಯಿಲ್ಲ. ಪರೋಪಕಾರ ಬುದ್ಧಿಯು ವ್ಯಕ್ತಿಗಳಲ್ಲಿ ಕಡಿಮೆಯಾಗಿರುವುದರಿಂದ ಇನ್ನಾದರೂ ಏರ್ಪಾಡಾದ ಇಂತಹ ಸಂಸ್ಥೆಗಳ ಕಡೆಗೆ ಸಂಪೂರ್ಣ ಗಮನ ಕೊಡುವುದು ಸಾರ್ವಜನಿಕರ ಮೇಲೆ ಬಿದ್ದ ಭಾರವಾಗಿರುವುದು. ಹೆಚ್ಚಾಗಿ ಹೇಳುವುದೇನು? ಹಸಿದ ಹೊಟ್ಟೆಗೆ ಆಹಾರ ಕೊಡುವುದಕ್ಕೆ ಜನಸಾಮಾನ್ಯವು ಹೇಗೆ ತಪ್ಪದೆ ಕೆಲಸಮಾಡುತ್ತಿರುವುದೋ, ಹಾಗೆಯೇ ಅದೇ ಉತ್ಸಾಹದಿಂದ ಈ ಕಾರ್ಯಕ್ಕೂ ಕೈಕೊಟ್ಟುಬೇಕಾಗಿ ತಮ್ಮ ವಿನಯ ಪ್ರಾರ್ಥನೆ.

ಈ ಸಮಿತಿಯ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರುಗಳ ಹೆಸರನ್ನೂ ವಾಚಕರಿಗೆ ತಿಳಿಸುವುದು ಒಳ್ಳೆಯದಲ್ಲವೆ? ಮೆ|| ಸೂಟರ್. ಐ ಸಿ ಯಸ್ ಪ್ರೆಸಿಡೆಂಟರು

ಮಿಸಸ್ ಸೂಟರ್, ,, ಕ ಸಿ ತಿಮ್ಮಯ್ಯ,	ವೈಸ್ ಪ್ರೆಸಿಡೆಂಟರುಗಳು
ಮೆ|| ಎ ಬಿ. ಕಾರ್ಯಪ್ಪ ಬಾರೆಟ್ಲಾ ಗೌರವ ಕಾರ್ಯದರ್ಶಿ	
ಮಿಸಸ್ ಫ್ರೇಸರ್ ,, ರೈಮಂಡ್, ,, ಪರ್ಸ್, ,, ಅಪ್ಪಾರಂಡ ಅಪ್ಪಚ್ಚು ಮಿಸ್ ಅಪ್ಪಚ್ಚು ಮಿಸ್ ಕೇಟೋಳಿಂ ಚಂಗಪ್ಪ ಕಾಮನಾತ್, ,, ಕ ಜಿ ಬೆಳ್ಯಪ್ಪ ರೆವರೆಂಡ್ ಗ್ರೈಟ್ ಮದರ್ ಸುಪೀರಿಯರ್	ಮೆಂಬರುಗಳು

ಈ ಕಮಿಟಿಯವರ ಉದ್ದೇಶವೇನು? [illegible] ಸಿವಿಗಳು [illegible] ಕಾಯಿಲಸ್ಥರು ವೈದ್ಯ [illegible] ವಂತೆ ಬಡವರ ಕೂಸುಗಳ ಅಭಿವೃದ್ಧಿಗಾಗಿ ಕೆಲಸ ಮಾಡುವಂತೆಯೂ ಬಡ ಜನರಿಗೆ ಬಟ್ಟೆ ಬರೆಗಳನ್ನು ಒದಗಿಸ ವ್ಯವಸ್ಥೆ ಮಾಡುವಂತೆಯೂ, ವಿ [illegible] ಸರಿಪಡಿಸುವಂತೆಯೂ ಮಾಡುವುದೇ ಇದರ ಧ್ಯೇಯವಾಗಿರುವುದು. ಇವುಗಳಲ್ಲದೆ ಸಂದರ್ಭಾನುಸಾರ ಕಮಿಟಿಯವರಿಗೆ ತೋರಿದ ಇತರ ಒಳ್ಳೆಯ ಕೆಲಸಗಳನ್ನು ಆಗಿಂದಾಗ್ಗೆ ನಡೆಸುವಂತೆಯೂ ಇರುವುದು.

ಈ ಕಾರ್ಯನಿರ್ವಾಹಕ ಮಂಡಲಿಯವರ ನಿತ್ಯ ಕೆಲಸಗಳು ಯಾವುವು — ಬಡಬಗ್ಗರಿಗಾಗಿ ಸಣ್ಣಸಣ್ಣ ಯಂತ್ರಗಳನ್ನು ಇಟ್ಟು ನೂಲು ಎಳೆಯುವುದು, ತಾಯಿಯರಿಗೆ ಮಕ್ಕಳ ಪೋಷಣೆಯ ವಿಷಯವಾಗಿ ಬೋಧಿಸುವುದು, ಆಸ್ಪತ್ರೆಯಲ್ಲಿರ್ವ ರೋಗಿಗ್ರಸ್ತರ ಮೇಲು ವಿಚಾರಣೆ ಮಾಡುವುದೇ ಇವರ ಕೆಲಸ.

ಮಹಿಳೆಯರು ತಮ್ಮ ತಮ್ಮ ಮಕ್ಕಳೊಂದಿಗೆ ಒಂದು ಆಗಿಂದಾಗ್ಗೆ ಉಪದೇಶವನ್ನು ಹೇಳಿಕೊಳ್ಳಲು ಏರ್ಪಾಡು ಆಗಿರುವುದು. ಈ ಸಂಘಕ್ಕೆ ಇನ್ನೂ ಒಂದು ಮನೆಯು ಏರ್ಪಾಡಾಗಿರುವುದಿಲ್ಲ. ಮನೆಯು ಸಿಕ್ಕಿದಮೇಲೆ ಕೆಲಸವು ಮುತುವರ್ಜಿಯಿಂದ ನಡೆಸಲ್ಪಡುವುದು. ಈಗಾಗಲೇ ಇಬ್ಬರಿಗೆ ಸಹಾಯ ಮಾಡಿರುವರು. ಒಬ್ಬ ಕುರುಡಿ ಹೆಂಗಸು ತಾನು ಅನಾಥಳೆಂದೂ ತನಗೆ ಸಹಾಯವು ಅತ್ಯಗತ್ಯವೆಂದೂ ಹೇಳಿಕೊಂಡದಕ್ಕೆ ಕಮಿಟಿಯವರು ಅವಳಿಗೆ 30 ರೂಪಾಯಿ ಸಹಾಯವಮಾಡಿ ಬೆಂಗಳೂರಿಗೆ ಮೋಟಾರಿನಲ್ಲಿ ಕಳುಹಿಸಿ ಅಲ್ಲಿನ ಕಣ್ಣಾಸ್ಪತ್ರೆಯಲ್ಲಿ ಇರಿಸಿರುವರು. ಇನ್ನೊಬ್ಬಳು ಕುಂಟಾದ ಹೆಂಗಸಿಗೂ ಸಹ ಸಹಾಯ ಮಾಡುತ್ತಿರುವರು. ಈರೀತಿಯಾಗಿ ಇನ್ನೂ ಅನೇಕಾನೇಕ ಸಹಾಯವನ್ನು ಮಾಡುವುದೇ ಈ ಸಂಘದ ಉದ್ದೇಶ. ಇನ್ನಷ್ಟು ಹೆಚ್ಚು ಸಹಾಯಮಾಡಲು ಹಣಬೇಕಲ್ಲವೇ? ದ್ರವ್ಯ ಸಹಾಯವಿಲ್ಲದೆ ಕೆಲಸನಡೆಯುವುದು ಕಷ್ಟ ಸಾಧ್ಯವೆಂದು ವಾಚಕರಿಗೆ ತಿಳಿದೇ ಇರುವುದು. ಈಗ ಈ ಸಂಘದಲ್ಲಿ ಸುಮಾರು 900 ರೂ. ಮಾತ್ರ ಇರುವುದು. ಈ ಹಣವನ್ನು ಬೆಂಗಳೂರು ಇಂಪೀರಿಯಲ್ ಬ್ಯಾಂಕಿನಲ್ಲಿ ಇಟ್ಟಿರುವರು.

ವಾಚಕರೆಲ್ಲರೂ ಉದಾರಮನಸ್ಸಿನವರಾಗಿ ಇದಕ್ಕೆ ನೆರವಾಗಿ ಕೈಲಾದಷ್ಟು ಸಹಾಯ ಮಾಡುವುದು ತುಂಬಾ ಅವಶ್ಯಕವಾಗಿದೆ. ದ್ರವ್ಯವನ್ನು ಕಳುಹಿಸುವುದು ಮಾತ್ರ, ಪತ್ರವ್ಯವಹಾರವನ್ನು ನಡೆಸುವುದೆಲ್ಲ ಸೆಕ್ರೆಟರಿಯವರಾದ ಮೆ|| ಎ ಬಿ ಕಾರ್ಯಪ್ಪ, ಬಾರೆಟ್ಲಾರವರ ಮೂಲಕ ನಡೆಸಬೇಕು. ಸಂಘದವರ ಪ್ರಾರಂಭದ ಉತ್ಸಾಹವು ಕಡೆಯತನಕ ಇರುವಂತೆ ದೇಶಾಭಿಮಾನಿಗಳು ನೋಡಿಕೊಳ್ಳಬೇಕೆಂಬುದೇ ನನ್ನ ಕಡೆಯ ಕೋರಿಕೆ.

"ವಾಮನಮೂರ್ತಿ"

ಗರ್ಭಿಣಿಯರ ಆರೋಗ್ಯ.

ಹೆಂಗಸರಿಗೆ ಸಕಾಲದಲ್ಲಿ ಪ್ರಸವವಾಗಿ, ಹುಟ್ಟುವ ಶಿಶುವು ಒಳ್ಳೇ ಪುಷ್ಟಿಯಾಗಿ ಆರೋಗ್ಯದಲ್ಲಿರಬೇಕಾದರೆ ಅವರು ತಮಗೆ ಗರ್ಭವು ಕಂಡುಬಂದ ಒಂಭತ್ತು ತಿಂಗಳುಗಳವರೆಗೂ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಹೆಂಗಸರಿಗೆ ಗರ್ಭವೊಡೆಯುದು ದೇಹತತ್ವದ ಸ್ವಭಾವವಾಗಿರುವುದರಿಂದ ಅವರು ತಮ್ಮ ಆರೋಗ್ಯದಲ್ಲಿ ಎಚ್ಚರದಿಂದ್ದರೆ, ಯಾವ ಭಂಗದಲ್ಲಿಯೂ ಅಂಜಬೇಕಾದ್ದಿಲ್ಲ. ಸಾಧಾರಣವಾದ ಆರೋಗ್ಯಸ್ಥಿತಿಯಲ್ಲಿರುವವರಿಗೆ ಗರ್ಭಕಾಲದಲ್ಲಿ ಆಹಾರಾದಿ ನಿಯಮಗಳಲ್ಲಿ ಹೆಚ್ಚು ನಿರ್ಬಂಧವೂ ಬೇಕಾಗಿಲ್ಲ. ಆಹಾರ, ಉಡುಪು, ಶುದ್ಧವಾದ ಗಾಳಿ, ಮಲಶುದ್ಧಿ ಮುಂತಾದ ವಿಚಾರಗಳಲ್ಲಿ ಕೆಳಗೆ ಕೊಟ್ಟ ಸೂಚನೆಗಳಮೇರೆಗೆ ಎಚ್ಚರದಿಂದಿರಬೇಕು.

ಆಹಾರ :—ಗರ್ಭಿಣಿಯರು ತಮ್ಮ ಬಾಯಿರುಚಿಗೆ ತಕ್ಕಂತೆ ಸಮೃದ್ಧಿಯಾಗಿ ಆಹಾರವನ್ನು ತೆಗೆದುಕೊಳ್ಳುತ್ತಾ ಬಂದರೆ ಒಳ್ಳೆಯದು. ಆದರೆ ಸಾಧಾರಣ ತರಹದ ಆಹಾರವನ್ನೇ ಸೇವಿಸಬೇಕು. ಗರ್ಭದಲ್ಲಿರ್ವ ಶಿಶುವು ತಾಯಿಯ ರಕ್ತದಿಂದಲೇ ಬೆಳೆಯಬೇಕಾದುದರಿಂದ, ಗರ್ಭಿಣಿಯು ಆರೋಗ್ಯಮಾರ್ಗವನ್ನು ತಪ್ಪಿ ನಡೆದರೆ ಅದರಿಂದ ಅವರ ಗರ್ಭಶಿಶುಗಳಿಗೆ ಕೆಡಕಾಗುವುದು.

ಒಳ್ಳೇ ಹಾಲನ್ನು ಸಮೃದ್ಧಿಯಾಗಿ ಕುಡಿಯುತ್ತಿರಬೇಕು. ಮಲಶುದ್ಧಿಯು ಚೆನ್ನಾಗಿ ನಡೆಯುವುದಕ್ಕಾಗಿ, ಆಹಾರದ ಜೊತೆಯಲ್ಲಿ ಹಣ್ಣುಗಳನ್ನು ಬೇಯಿಸಿದ ಕಾಯಿಪಲ್ಯಗಳನ್ನೂ ತಿನ್ನುತ್ತಿರಬೇಕು. ಮಲಬಂಧವು ಆರೋಗ್ಯವನ್ನು ಕೆಡಿಸುವುದಲ್ಲದೆ ಸುಲಭ ಪ್ರಸವಕ್ಕೆ ಅವಕಾಶಕೊಡದೆ ಪ್ರಸವಕಾಲದಲ್ಲಿ ಬಹಳ ಕಷ್ಟವಾಗುವುದು. ಗರ್ಭವು ಬಲಿಯುತ್ತ ಬಂದಹಾಗೆಲ್ಲಾ ಆಹಾರ [illegible] ನಾವು [illegible] ಅವರು [illegible] ಆಗಾಗ ಮಿತವಾಗಿ ಆಹಾರವನ್ನು ತೆಗೆದುಕೊಳ್ಳುತ್ತಿರಬೇಕು. [illegible] ತಿಂಗಳಿನಿಂದ [illegible] 2 ರಿಂದ 4 [illegible] [illegible] ಅವರಿಗೆ [illegible] ತಿಂದು [illegible] ವಾದರೆ [illegible] ಯನ್ನು ತಂದುಕೊಳ್ಳಬೇಕು.

ಉಡುಪು :—ಇಂಡಿಯಾದೇಶದ ಹವಾಗುಣವು ಇಲ್ಲಿ ಸಾಧಾರಣವಾಗಿ ಹೆಂಗಸರು ಉಡುವ ಉಡುಪು ಗರ್ಭಿಣಿಗೂ ಸ್ಪಷ್ಟ ಅನುಕೂಲವಾಗಿಯೇ ಇರುವುದರಿಂದ ಈ ವಿಷಯವಾಗಿ ನಾವು ಇಲ್ಲಿ ಹೆಚ್ಚೇನೂ ಹೇಳಬೇಕಾಗಿಲ್ಲ. ಈ ದೇಶದ ಹೆಂಗಸರು ಶೋಭನಾರ್ಥವಾಗಿ [illegible] ಹೊಟ್ಟೆಯ ಸುತ್ತ [illegible] ಬಿಗಿಯಾಗಿ [illegible] ಇದು ಅಷ್ಟು ಉಚಿತವಾಗಿಲ್ಲ. ಆದರೆ ಇವರು ಗಮನ ತೆಗೆದುಕೊಳ್ಳಬೇಕಾದ [illegible] ಎದೆ ಮತ್ತು ಹೊಟ್ಟೆ, ಈ ಭಾಗಗಳಿಗೆ ಹೆಚ್ಚು ಬಿಗಿಯಾಗಿ [illegible] ಈ ಭಾಗಗಳನ್ನು ಸಡಿಲವಾಗಿ ಮುಚ್ಚುವ ವಸ್ತ್ರಗಳನ್ನು ಹಾಕಿಕೊಂಡಿರಬೇಕಾದುದು ಅವಶ್ಯವು. ಬಿಸಿಲುಕಾಲದಲ್ಲಿ ಹತ್ತಿಬಟ್ಟೆಗಳನ್ನು ಹಾಕಿಕೊಳ್ಳುವುದು ಹೆಂಗಸರಿಗೆ ಅಭ್ಯಾಸವಾಗಿರುವುದು. ಆದರೆ ಚಳಿಗಾಲದಲ್ಲಿ ಕಷ್ಟವಾಗಿ ತೋರಿದರೂ ದೇಹದ ಶಾಖವನ್ನು ಕಾಪಾಡುವುದಕ್ಕೂ, ಹೊರಗಿನ ಶೀತವನ್ನು ತಡೆಯುವುದಕ್ಕೂ, ಉಣ್ಣೆಯ ಬಟ್ಟೆಗಳು ಸಹಾಯಕವು. ಒಳ್ಳೆಯದು. ಗರ್ಭಿಣಿಯರು ಹಾಕುವ ಕುಪ್ಪಸವಿನಿಷ್ಟು ಮುಂತಾದವುಗಳನ್ನು ಬಿಗಿಯಾಗಿ ಎಳೆದು ಕಟ್ಟಬಾರದು.

ವಿಶ್ರಾಂತಿ :—ಈ ನಮ್ಮ ದೇಶದಲ್ಲಿ ಸಾಧಾರಣವಾಗಿ ಗರ್ಭಿಣಿಯರಿಗೆ ಯಾವ ಕೆಲಸವನ್ನೂ ಕೊಡದೆ, ಸುಖವಾಗಿ ಕುಳ್ಳಿರಿಸಿ ಪೋಷಿಸಬೇಕೆಂದು ತಿಳಿವು. ಅವರನ್ನು ಸಾಧಾರಣವಾದ ಮನೆಯ ಕೆಲಸಗಳನ್ನು ಕೂಡ ಮಾಡುವುದಕ್ಕೆ ಬಿಡುವುದಿಲ್ಲ. ಇದು ತಪ್ಪು, ಗರ್ಭಿಣಿಯರು ತಮ್ಮ ಶಕ್ತಿ ವಿಚಾರಿ ದೇಹಕ್ಕೆ ಬಹಳ ಆಯಾಸವಾಗುವಂತೆ ಕೆಲಸಮಾಡಬಾರದೇ ಹೊರತು, ಸಾಧಾರಣವಾದ ಮನೆಯ ಕೆಲಸಗಳನ್ನೆಲ್ಲಾ ಮಾಡುತ್ತಾ ಬರುವುದರಿಂದ ಅವರಿಗೆ, ಅವರಿಗೆ ಎಷ್ಟೋ ಗುಣವುಂಟು. ಹೆಚ್ಚು ಭಾರವನ್ನು ಎತ್ತುವುದು, ದೊಡ್ಡ ಹೊರೆಯನ್ನು ಹೊರುವುದು, ಓಡುವುದು, ಇವೇ ಮುಂತಾಗಿ ದಣಿವಾಗುವ ಕೆಲಸಕ್ಕೆ ಮಾತ್ರ ಅವರು ಹೋಗಬಾರದು. ಇದರಿಂದ ಅಪಾಯವುಂಟು. ಮೈಗೆ ಕೆಲಸ ಕೊಡದೆ ಸುಮ್ಮನೆ ಕುಳಿತಿದ್ದರೆ, ಅದರಿಂದ ಇನ್ನೂ ಅಪಾಯವು ಹೆಚ್ಚು. ಆರೋಗ್ಯವಂತರಾದ ಬಸಿರು ಹೆಂಗಸರು ತಮಗೆ ೮ ತಿಂಗಳು ತುಂಬುವರೆಗೂ ಮನೆಯ ಕೆಲಸಗಳನ್ನೆಲ್ಲಾ ತಾವೇ ನೋಡಿಕೊಳ್ಳಬಹುದು. ಮುಖ್ಯವಾಗಿ ಗರ್ಭಿಣಿಯರು ತಮ್ಮ ಆರೋಗ್ಯ ರಕ್ಷಣೆಗೆ ಪ್ರಸವಿಸುವರು, ತಮ್ಮ ಆರೋಗ್ಯ ರಕ್ಷಣೆಗೆ ಪ್ರಸವವಾಗುವವರೆಗೂ, ದೇಹಕ್ಕೆ ಯಾವಾಗಲೂ ಸಾಧಾರಣವಾದ ಕೆಲಸಗಳನ್ನು ಕೊಡುತ್ತಿರಬೇಕಾದುದು ಅವಶ್ಯವು. ಗರ್ಭಿಣಿಯರು ದಿನಕ್ಕೆ ಕೊಂಚ ಹೊತ್ತಾದರೂ ಹೊರಗಿನ ವ್ಯಾಯಾಮವನ್ನು ತೆಗೆದುಕೊಳ್ಳುವುದರಲ್ಲಿ ಬಹಳ ಗುಣವುಂಟು. ಆದರೆ ನಮ್ಮಲ್ಲಿ ಅನೇಕ ಹೆಂಗಸರು ಇದಕ್ಕೆ ಒಪ್ಪಲಾರರು. ಕೆಲವರಿಗೆ ಅನುಕೂಲವೂ ಕಡಿಮೆ. ಆದ್ದರಿಂದ ಮೇಲೆ ಹೇಳಿದ ನಿಯಮವು ನಮ್ಮ ಹೆಂಗಸರಲ್ಲಿ ನಡೆಯಲಾರದು. ಇದಕ್ಕಾಗಿ ನಮ್ಮಲ್ಲಿ ಗರ್ಭಿಣಿಯರು ಮನೆಯ ಕೆಲಸಗಳನ್ನು ಮಾಡುವುದರಲ್ಲಿಯಾದರೂ ತಮ್ಮ ಮೈಗೆ ತಕ್ಕಷ್ಟು ವ್ಯಾಯಾಮವು ದೊರೆಯುವಂತೆ ಮಾಡಬೇಕು. ಎಲ್ಲಕ್ಕಿಂತಲೂ ವಿಶೇಷವಾಗಿ ಗರ್ಭಿಣಿಯರಿಗೆ ಶುದ್ಧವಾದ ಗಾಳಿಯು ಧಾರಾಳವಾಗಿ ದೊರೆಯುವಂತಿರಬೇಕು. ಹಾಗಿದ್ದರೆ ಅವರಿಗೂ, ಅವರ ಗರ್ಭದ ಶಿಶುವಿಗೂ ಆರೋಗ್ಯವು ಕೆಡುವುದು.

ಎಳೆ ಮಕ್ಕಳಿಗೆ ಆಹಾರ ಕೊಡುವುದು.

ನಮ್ಮ ಪ್ರಾಂತ್ಯದಲ್ಲಿ ಶಿಶುಗಳ ಮರಣ ಸಂಖ್ಯೆಯು, ಅವರಲ್ಲಿಯೂ ಹುಟ್ಟಿದ ಒಂದು ವರ್ಷದವಳಗಾಗಿ ಸಾಯುವ ಮಕ್ಕಳ ಸಂಖ್ಯೆಯು ಅಪರಿಮಿತವಾಗಿರುವುದು. ಹೆತ್ತತಾಯಿಯರಿಗೆ ತಮ್ಮ ಶಿಶುಗಳನ್ನು ಪೋಷಿಸುವುದರಲ್ಲಿಯೂ ಅವುಗಳಿಗೆ ತಕ್ಕ ಆಹಾರವನ್ನು ಕೊಡುವುದರಲ್ಲಿಯೂ, ಸರಿಯಾದ ತಿಳುವಳಿಕೆ ಇಲ್ಲದೆ ಇರುವುದೇ ಇದಕ್ಕೆ ಮುಖ್ಯಕಾರಣವು. ಇದಕ್ಕಾಗಿ ಮಕ್ಕಳನ್ನು ಹೆತ್ತತಾಯಿರೆಲ್ಲರೂ ಈ ಕೆಳಗೆ ಕಂಡ ಸೂಚನೆಗಳನ್ನು ತಿಳಿದಿರಬೇಕಾದುದು ಆವಶ್ಯವು.

ಶಿಶುಗಳಿಗೆ ಆಹಾರ ಕೊಡುವುದರಲ್ಲಿ ಎರಡು ವಿಧವುಂಟು. ಎದೆಯ ಹಾಲನ್ನ ಕುಡಿಸುವುದೊಂದು. ಬಾಟ್ಲಿಯಿಂದ ಹಾಲು ಕುಡಿಸುವುದು ಮತ್ತೊಂದು. ಸಣ್ಣ ಕೂಸುಗಳಿಗೆ ತಾಯಿಯ ಎದೆ ಹಾಲೇ ಉತ್ತಮವು. ಅವುಗಳ [illegible] ಬೇಕಾದ ಎದೆಯ ಹಾಲನ್ನು [illegible] ಜೀರ್ಣಿಸಿಕೊಳ್ಳುವ ಶಕ್ತಿಯುಳ್ಳದೇ [illegible] ಆಹಾರವನ್ನು ಸುಲಭವಾಗಿ ಅರಗಿಸಿಕೊಳ್ಳಲಾರದು. ಈ ಕಾರಣದಿಂದಲೇ ತಾಯಿಯ ಮೊಲೆಯಿಂದ ಬೆಳೆದ ಕೂಸುಗಳು ಬುಡ್ಡಿಯ ಹಾಲಿನಿಂದ ಬೆಳೆದ ಕೂಸುಗಳಂತೆ ಅಜೀರ್ಣ ಸಂಬಂಧವಾದ ರೋಗಗಳಿಗೆ ಗುರಿಯಾಗುವುದಿಲ್ಲ. ಆದ್ದರಿಂದ ತಾಯಿಯರು ತಮಗೆ ಬಹಳ ಅನಾನುಕೂಲವಿದ್ದರೆ ಹೊರತು, ಮಕ್ಕಳಿಗೆ ತಮ್ಮ ಹಾಲನ್ನೇ ಕೊಡುವುದು ಮೇಲು.

ಒಂದುವೇಳೆ ತಾಯಿಯು ಅನಾರೋಗ್ಯದಿಂದಾಗಲಿ, ಅವಳ ಮರಣದಿಂದಾಗಲಿ ಮಕ್ಕಳಿಗೆ ತಾಯಿಯ ಹಾಲು ದೊರೆಯದಿದ್ದರೆ [illegible] ಎದೆ ಹಾಲನ್ನೇ ಕುಡಿಸಬೇಕು. ಹಾಲು [illegible] ಆರೋಗ್ಯವಂತರಾಗಿಯೂ, ದೃಢರೂ ಆಗಿರಬೇಕು. ಅವರು ಬಹಳ [illegible] ಮೈಯುಳ್ಳವರಾಗಿರಕೂಡದು. [illegible] ರೋಗ ಮುಂತಾದ ಸೋಂಕು ರೋಗಗಳ ಚಿಹ್ನೆಗಳಿಂದೂ ಅವರಲ್ಲಿ ಕಾಣಬಾರದು. ಅವರಿಗೆ ವಯಸ್ಸು ೨೦ ರ ಮೇಲೆ ೩೦ ರ ಒಳಗೆ ಇರಬೇಕು. ದಾದಿಯ ಸ್ವಂತ ಮಗುವಿನ ವಯಸ್ಸೂ ಆ ಮಗುವಿನ ವಯಸ್ಸಿನಷ್ಟೇ ಇರಬೇಕು. ಅವಳು ಸ್ವಭಾವದಲ್ಲಿ ಶಾಂತವಾಗಿರಬೇಕು. ಅಸ್ವಸ್ಥತೆಯಾದ ಕೋಪ ತಾಪಗಳಿಗೆ ಅವಕಾಶಕೊಡುವ ಹಾಗಿದ್ದರೆ, ಅಂತವಳ ಹಾಲು ಮಕ್ಕಳಿಗೆ ಆರೋಗ್ಯವನ್ನು ಕೆಡಿಸಿ ಅಜೀರ್ಣ ಭೇದಿ ಸೆಳವು ಇವೇ ಮುಂತಾದ ತೀವ್ರರೋಗಗಳಿಗೆ ಗುರಿಮಾಡುವುದು.

(ಇನ್ನೂ ಇದೆ)

ಕೊಡಗು ಜಮ್ಮಾಬಾಣೆದಾರರ ಸಂಘ.

(ಪ್ರಚಾರಕ ಕಾರ್ಯದರ್ಶಿಯವರಿಂದ).

ಹಿಂದುಸ್ಥಾನದಲ್ಲಿರುವ ಪಾಶ್ಚಾತ್ಯ ನೌಕರರೇ, ಈ ದೇಶದ ಹೀನಸ್ಥಿತಿಗೂ, ವಿಪತ್ತಿಗೂ, ನಾಶಕ್ಕೂ, ಈ ಜನಾಂಗದ ನಷ್ಟಕಷ್ಟಗಳಿಗೂ ಕಾರಣಕರ್ತರು ! — ನೌರೋಜಿ.

ಅಧಿಕಾರ ಹೆಚ್ಚುತ್ತಾ ತಮಗೆ ಬವಾಬ್ದಾರಿಕೆಯು ಹೆಚ್ಚುತ್ತೆಂಬ ಭಾವವೇ ನಮ್ಮನ್ನಾಳುವವರಿಗೆ ಇಲ್ಲದಂತಾಯಿತು ! — ಗೋಖಲೆ.

No. 15.

ಹಿಂದುಸ್ಥಾನವು ಪ್ರಪಂಚದಲ್ಲಿ ಹಿಂಬಾಲಿಸಲ್ಪಟ್ಟ ಜನಾಂಗದವರಲ್ಲಿ ಅನೇಕರಿಗೆ ಆಶ್ರಯಕೊಟ್ಟ ದರದೆಸೆಯಿಂದ ಈ ದೇಶದಲ್ಲಿ ಅನೇಕ ಮತಾವಲಂಬಿಗಳು ಇರುವ ಕಾರಣ ಅನೇಕ ಮತ ಪಂಗಡದ ಸಭೆಗಳಲ್ಲದೆ, ರಾಜಕೀಯ ವಿಷಯಗಳಲ್ಲು, ಜಾತಿ ಮತ ಭೇದಗಳಿಲ್ಲದ, ಬೇರೆ ಬೇರೆ ರಾಜಕೀಯ ಧ್ಯೇಯಗಳುಳ್ಳಂಥಾ ಸಭೆಗಳೂ, ಮತ್ತು ಜಾತಿ ಭೇದದ ರಾಜಕೀಯ ಸಭೆಗಳೂ ಸಹ ಸ್ಥಾಪಿಸಲ್ಪಟ್ಟಿವೆ. ಆದರೆ ಈ ಸಭೆಗಳ ಪೈಕಿ ಅನೇಕ ವರ್ಷಗಳ ಹಿಂದೆ ಯಾವದೊಂದೂ ಭೇದವನ್ನೆಣಿಸದೆ ಇರುವ ಹಿಂದೀ ರಾಷ್ಟ್ರೀಯ ಸಭೆಯು (Indian National Congress) ಜನ ಪ್ರಿಯವಾದದಿರುತ್ತೆ. ಹಿಂದುಸ್ಥಾನದಲ್ಲಿ ಸ್ಥಾಪಿಸಲ್ಪಟ್ಟ ಈ ಸಭೆಗಳು ಹಿಂದುಸ್ಥಾನದ ಜಾಗ್ರಾವಸ್ಥೆಯನ್ನೂ ಮತ್ತು ಬವಾಬ್ದಾರಿಕೆಯಿಂದ ಕೂಡಿದ ದೇಶಾಭಿಮಾನವನ್ನೂ ಕೃತಪಡಿಸಿತ್ತು. ಈಗ ಸುಮಾರು 40 ವರ್ಷಗಳಿಂದ ಈ ಸಭೆಗಳನ್ನು ನಡೆಸುವದರಲ್ಲು ದೇಶವು ಹೊರಗಿನ ಬಲತ್ಕಾರವಿಲ್ಲದೆಯೂ ಮತ್ತು ಅಸಮಧಾನದಿಂದ ಗೊಣಗುಟ್ಟದೆಯೂ ಖರ್ಚುಮಾಡಿದದ್ರವ್ಯವು ಕಮ್ಮಿ ಪಕ್ಷ 8-10 ಕೋಟಿ ರೂಗಳಿಗೆ ಕಡಿಮೆಯಾಗಲಾರದು. ಈ ದ್ರವ್ಯ ವ್ಯಯಕ್ಕಿಂತಲೂ ಮೇಲಾಗಿ ಅನೇಕ ದೇಶೀಯ ಮುಖಂಡರು ಅವರ ಸರ್ವಸ್ವವನ್ನೂ ದೇಶದ ಹಿತಕ್ಕಾಗಿ ಧಾರೆ ಎರೆದಿರುತ್ತಾರೆ. ಅಲ್ಲದೆ ಸರ್ವಸ್ವವನ್ನೂ ತ್ಯಾಗಮಾಡಿ ದೇಶದ ಹಿತಶ್ರೇಯಸ್ಕರವಾಗಿ ಸಾವಿರ ಗಟ್ಲೆಯಲ್ಲು ಕಾರಾಗೃಹ ಬಂಧನಕ್ಕೆ ನಿರ್ಭೀತಿಯಿಂದ ಸೇರಿ ಕಷ್ಟವನ್ನು ಅನುಭವಿಸುತ್ತಿರುವದಲ್ಲದೆ, ಈಗಲೂ ಸಾವಿರಗಟ್ಲೆಯಲ್ಲು ಕಾರಾಗೃಹಕ್ಕೆ ಹೋಗಲಿಕ್ಕೆ ತಯಾರಿರುವರು. ಘೋರಯುದ್ಧಕ್ಕೆ ಮೊದಲು ಹಿಂದುಸ್ಥಾನದ ಸ್ವತಂತ್ರ ಸ್ಥಾಪನೆಯ ಹೋರಾಟದಲ್ಲು ರಾಜಕೀಯ, ಸಾಂಪತ್ತಿಕ ಮತ, ಇವುಗಳ ಪೈಕಿ ಯಾವದರಲ್ಲು ಮುಂದಾಗಿ ಅಭಿವೃದ್ಧಿ ಹೊಂದಬೇಕೆಂಬ ವಿಷಯದಲ್ಲು ಸಂಶಯವಿತ್ತು. ಆದರೆ ಈಗ 3-4 ವರ್ಷಗಳಿಂದ ರಾಜಕೀಯ ಸ್ವತಂತ್ರ ಸಂಪಾದಿಸಿದ ಕೂಡ್ಲೆ, ಬಾಕಿ ಎಲ್ಲಾ ವಿಷಯಗಳು ಸ್ವಭಾವಿಕವಾಗಿಯೇ ಅಭಿವೃದ್ಧಿ ಹೊಂದಬಹುದೆಂದು ದೃಢೀಕರಿಸಿ, ಸ್ವತಂತ್ರ ಸ್ವರಾಜ್ಯದ ಹೋರಾಟಕ್ಕೆ ಹೆಚ್ಚಿನ ಸಿಗೆಕೊಟ್ಟು ಹೋರಾಡುವವರಾಗಿರುತ್ತೇವೆ. ಹೀಗೆ ಸ್ವರಾಜ್ಯ ಸ್ಥಾಪನೆಗೆ ಹೆಚ್ಚಿನ ಸಿಗೆ ಕೊಡುತ್ತಿರುವಾಗ್ಯೂ ಸಾಮಾಜಿಕ ಸಾಂಪತ್ತಿಕ ಮತ್ತು ಮತಸಮ್ಮಂಧಗಳಲ್ಲವರಲ್ಲೂ ಅಭಿವೃದ್ಧಿ ಹೊಂದುವದರಿಂದ ಸ್ವರಾಜ್ಯ ಸ್ಥಾಪನೆ ಕೆಲಸಕ್ಕೆ ಹೆಚ್ಚಿನ ಪ್ರೋತ್ಸಾಹಕ ಆಗುವದೆಂಬ ಸಂಗತಿಯನ್ನು ಮರೆತು ಬಿಡಾಗದೂ ಬಾರದು. ಆದ್ದರಿಂದಲೇ ಈಗಿನ ದೇಶದ ಚಳವಳಿದಲ್ಲಿ ಎಲ್ಲಾ ವಿಷಯಗಳಲ್ಲು ಜಾಗ್ರಾವಸ್ಥೆಯು ಕಂಡುಬರುವದು. ದೇಶದ ಅಭಿವೃದ್ಧಿಯು ಎಲ್ಲಾ ವಿಷಯಗಳಲ್ಲು ಅಭಿವೃದ್ಧಿ ಹೊಂದುವದರಿಂದ ಆಗಬೇಕಲ್ಲದೆ ಅನ್ಯಥ ಸಾಧ್ಯವಿಲ್ಲ. ಯಾಕೆಂದರೆ ನಮ್ಮ ರಾಜಕೀಯ ಚಳವಳದಲ್ಲು ದೇಶವೆಲ್ಲಾ ಒಂದಾಗಿ ವರ್ತಿಸಬೇಕಾಗಿದೆ. ಹೀಗಿರುವಲ್ಲಿ ನಮ್ಮ ಜಾತಿ ಮತ ವಿಚಾರಗಳು ಎಲ್ಲಾ ಪಂಗಡಗಳಲ್ಲು ದೇಶದ ಹಿತಕ್ಕೆ ಸಹಕಾರವಾಗುವ ರೀತಿಯಲ್ಲಿ ಕಾಲಕ್ಕನುಗುಣವಾಗಿ ಸನಾತನ ಧರ್ಮಕ್ಕೆ ಕುಂದುಕ ಬಾರದ ಹಾಗೆ ತಿದ್ದುಪಾಟು ಆಗದ ಪಕ್ಷಕ್ಕೆ, ನಮ್ಮ ಉದ್ದೇಶವನ್ನು ನೆರವೇರಿಸುವ ಪ್ರಯತ್ನಕ್ಕೆ ಕುಂದಕ ಉಂಟಾಗುವದು. ಹಿಂದುಸ್ಥಾನದಲ್ಲು ಎಲ್ಲಾ ಪಂಗಡಗಳ ವಾರ್ಷಿಕ ಸಮ್ಮೇಳನಗಳು ಅನೇಕ ವರ್ಷಗಳಿಂದ ನಡೆದು ಬಂದಿರುವ ಮೇಲಿನ ವಿಷಯಗಳನ್ನು ಸ್ಪಷ್ಟಗೊಳಿಸುತ್ತೆ. ಇಷ್ಟರ ಮಟ್ಟಿಗೆ ಜಾಗ್ರಾವಸ್ಥೆಯು ದೇಶದಲ್ಲು ಹುಟ್ಟಿದರೂ ಕೂಡ, ಅನೇಕರು ಇನ್ನೂ ಅವರವರ ಪಂಗಡಗಳಿಗೆ ಸರಕಾರದಿಂದ ಸಿಕ್ಕುವಂಥಾ ಉದ್ಯೋಗದ ರಿಯಾಯಿತಿಯಿಂದ ಸಂತೋಷಪಡುವವರಾಗಿರುವರು. ಎಲ್ಲಾ ಪಂಗಡದವರು ಇಂಥಾ ಸ್ವಾರ್ಥತೆಯ ಆಶೆಯನ್ನು ಬಹಿಷ್ಕರಿಸಿದ ವಿನಹ ನಮ್ಮ ಒಗ್ಗಟ್ಟಿನ ಬೆಳವಣಿಗೆಯು ಕುಂಠಿತವಾಗುವುದು. ಸರಕಾರದ ಉದ್ಯೋಗಗಳಿಗೂ ಮತ್ತು ಸರಕಾರದ ಮೇರ್ಬಾನಿಗೂ ನಾವು ಆಶಿಸಿಕೊಂಡಿರುವವರೆಗೂ ಸರಕಾರದವರು ಉದ್ಯೋಗಗಳನ್ನೂ ಮತ್ತು ಅವರ ಮೇರ್ಬಾನಿಕೆಯನ್ನೂ ಸಹ ಪಂಗಡವಾರು ಹಂಚಿ, ನ್ಯಾಯಸ್ಥರೆಂದು ತೋರಿಸಬೇಕಾದದ್ದು ಸರಕಾರದವರ ಕರ್ತವ್ಯವಾಗಿರುತ್ತೆ. ದೇಶದ ಹಿತವನ್ನು ಬೈಸುವವರು ಈಗಿನ ಸರಕಾರದ ಉದ್ಯೋಗಗಳಿಗೂ ಮತ್ತು ಸರಕಾರದವರ ಅನುಮೋದಕ್ಕೂ ಹೆಚ್ಚಿನ ಬೆಲೆಯನ್ನು ಕೊಟ್ಟರೆ ದೇಶದ ಹಿತವು ಕೈಗೂಡಲಾರದು. ಯಾಕಂದರೆ 30 ಕೋಟಿ ಜನರಿಗೆ ಸರಕಾರಿ ಉದ್ಯೋಗವು ಸಿಕ್ಕುವದು ಅಸಾಧ್ಯ. ಈಗಿನ ವಿದ್ಯೆಯನ್ನು ಕಲಿಯುವಂಥಾವರು ಹೆಚ್ಚಿಗೆ, ಸರಕಾರಿ ಉದ್ಯೋಗಗಳಿಗೆ ಅಥವ ಸರಕಾರಿ ಕ್ರಮಗಳ ಮೂಲಕ ಹೆಚ್ಚಿನ ಸ್ವಾರ್ಥತೆಯನ್ನು ಸಾಧಿಸಲಿಕ್ಕಾಗಿ ಪ್ರಯತ್ನಪಡುವವರಾಗಿರುತ್ತಾರೆ. ಆದ್ದರಿಂದ ಪರಾಶ್ರಯಕ್ಕೆ ಒಳಪಡದೆ ದೇಶದಲ್ಲಿ ಜ್ಞಾನವನ್ನೂ ತಿಳುವಳಿಕೆಯನ್ನು ಹೆಚ್ಚಿಸಿ, ಅದರ ಮೂಲಕ ದೇಶವೆಲ್ಲಾ ಅಭಿವೃದ್ಧಿ ಹೊಂದಬೇಕಂದು ಆಶಿಸಿ, ಅಂಥಾ ದೇಶದ ಅಭಿವೃದ್ಧಿಯಿಂದ ತನ್ನ ಅಭಿವೃದ್ಧಿಯನ್ನು ಹೊಂದಬಹುದೆಂಬ ಆಶೆಯಿಂದ ವಿದ್ಯಾರ್ಜನೆಗೆ ಪ್ರಯತ್ನಪಟ್ಟರೆ ಬೇಕಸೇವೆ ಮಾಡಿದಂತಾಗುವದು. ನಮ್ಮ ಪೂರ್ವಜರ ನಡಾವಳಿ ಪದ್ಧತಿಗಳೆಲ್ಲಾ ಈಗಿನಕಾಲಕ್ಕೆ ತಕ್ಕದಾಗಿತ್ತೆಂದು ಅನೇಕಾವರ್ತಿ ಸೂಚಿಸಿಯಾಗಿದೆ. ಆದರೆ ಈಗ ತಾವು ಅನೇಕ ಬಲಿಷ್ಟರಾದ ಜನಾಂಗಗಳೊಂದಿಗೆ ಸಂಸಮಾನರಾಗಿ ವರ್ತಿಸಬೇಕಾದ ಅವಶ್ಯಕತೆಯು ಪ್ರಪಂಚದ ಈಗಿನ ಸ್ಥಿತಿಯು. ನಮ್ಮನ್ನು ಬಲಕ್ಕರಿಸುವ ಕಾರಣ, ನಮ್ಮ ನಡಾವಳಿಕೆಗಳನ್ನು ನಮ್ಮ ಧರ್ಮಕ್ಕೊಳಪಟ್ಟು ಬದಲಾಯಿಸಬೇಕಾದದ್ದು ಅತಿ ಆವಶ್ಯವೆಂದು ಎಷ್ಟು ಬಾರಿ ಹೇಳಿದರೂ ಸ್ವಲ್ಪವೇ ಸರಿ, ಹೀಗಿರುವ ಸಂದರ್ಭಗಳಲ್ಲು ನಮ್ಮ ವಾರ್ಷಿಕ ಸಮ್ಮೇಳನಗಳು ನಮಗೆ ಹಿತವಾದವೆಂದು ಭಾವಿಸಿ ಅಂಥಾ ಸಮ್ಮೇಳನಗಳನ್ನು ಪ್ರೋತ್ಸಾಹಿಸಿ, ದೇಶಹಿತೈಷಿಗಳಾದ ಜ್ಞಾನಿಯರಾದ ಹಿಂದೀ ಮುಖಂಡರ ತಿಳುವಳಿಕೆಯ ಬೋಧನೆಯನ್ನೂ ಮತ್ತು ತೀರ್ಪನ್ನೂ ಶಿರಸಾವಹಿಸಿ ನಾವು ನಡೆದು ಕೊಳ್ಳದ ಪಕ್ಷಕ್ಕೆ ಸ್ವರಾಜ್ಯದ ಕೂಗೂ ಮತ್ತು ಆಶೆಯೂ ಸಹ ಪ್ರಯೋಜನಕ್ಕೆ ಬಾರಲಾರದು.

ಉಪವಾಸ ! ಎಂಭತ್ತೊಂದು ದಿನ !

ಸರ್ವಸಾಧಾರಣವಾಗಿ ಈಗಿನ ರಸಾಯನ ಶಾಸ್ತ್ರಜ್ಞರು ಒಬ್ಬ ಮನುಷ್ಯನು 60 ದಿವಸಗಳ ವರೆಗೆ ಯಾವ ಆಹಾರವನ್ನೂ ಸೇವಿಸದೆ ಬದುಕಿರಬಲ್ಲನೆಂದು ಹೇಳುತ್ತಿರುವರು. ಆದರೇನು? ಇವರ ಅಭಿಪ್ರಾಯವು ಈಗ ಮೂಲೆಗೊತ್ತಿಯೇ ಹೋಯಿತು. ಜೈನ ಸನ್ಯಾಸಿಗಳಾದ ತಪಸ್ವಿ ಸುಂದರ ಲಾಲಾಜೀಯವರು ತಮ್ಮ ಎಂಭತ್ತೊಂದು ದಿನದ ಉಪವಾಸ ವ್ರತವನ್ನು ಸಾಂಗವಾಗಿ ಪೂರೈಸಿ ಜನರೆಲ್ಲರನ್ನು ಮರುಳು ಮಾಡಿರುವರೆಂದರೆ ಅವರ ಅದ್ಭುತಶಕ್ತಿಯನ್ನೂ, ದೃಢ ವ್ರತವನ್ನೂ ಸ್ಪಷ್ಟವಾಗಿ ಸೂಚಿಸುವುದು. ಬೊಂಬಾಯಿಯ ಒಂದು ಸಣ್ಣ ಘಾಟ ಕೋಪರ್ ಎಂಬ ಗ್ರಾಮದಲ್ಲಿ ಇವರು ಸದ್ಯಕ್ಕೆ ವಾಸಮಾಡುತ್ತಿರುವರು. ಇವರ ಮಹಿಮೆಯನ್ನು ನೋಡುವುದಕ್ಕಾಗಿಯೂ ಪ್ರತ್ಯಕ್ಷ ಇವರನ್ನು ಪೂಜಿಸುವುದಕ್ಕಾಗಿಯೂ ಸಾವಿರಾರು ಜನರು ದಿನಂತರವೂ ಹೋಗಿ ತಮ್ಮ ಇಷ್ಟಪೂರ್ತಿ ಮಾಡಿಕೊಂಡು ಬರುತ್ತಿರುವರು. ಸರಿಯಾದ ಆರೋಗ್ಯಸ್ಥಿತಿಯಲ್ಲಿಯೂ ಶಾಂತಭಾವದಲ್ಲಿಯೂ ಮಲಗಿಕೊಂಡಿದ್ದ ಈ ಜೈನಸನ್ಯಾಸಿಯ ಎಷ್ಟೋ ಜನರು ಇವರ ಶರೀರಪ್ರಕೃತಿಯನ್ನು ಕುರಿತು ಪ್ರಶ್ನಿಸುತ್ತಿರುವರು. ಇವರುಗಳಿಗೆಲ್ಲಾ ಸುಂದರಲಾಲಾಜೀಯವರು ತನ್ನ ಶರೀರದ ಯಾವ ಅವಯವವೂ ನೋವಿನಿಂದ ನೋಯುತ್ತಿರುವುದಿಲ್ಲವಾಗಿಯೂ, ತಾನು ಸರಿಯಾದ ಆರೋಗ್ಯಸ್ಥಿತಿಯಲ್ಲಿರುವುದಾಗಿಯೂ ಉತ್ತರಕೊಡುತ್ತಿರುವರು. ಹೇಗೂ ಈಗಿನ ಕಾಲದಲ್ಲಿ ಇಷ್ಟು ದೊಡ್ಡ ಉಪಾವಾಸವ್ರತವು ಯಾರೂ ಎಂದೂ ಮಾಡಿರುವುದು ಗಣನೆಗೆ ಬಂದಿಲ್ಲವಲ್ಲವೇ ? ಸುಂದರಲಾಲಾಜೀಯವರ ಗುರುವಾದ ಜವಾಹಿರ್ ಲಾಲಾಜೀಯವರು ಇವರ ಉಪವಾಸವ್ರತವು ಇದೊಂದೇ ಅಲ್ಲವೆಂತಲೂ ಇದೇರೀತಿ ಎಷ್ಟೋಸಾರಿ ಉಪಾವಾಸವ್ರತವನ್ನು ಕೈಕೊಂಡು ಸಾಂಗವಾಗಿ ಪೂರೈಸಿರುವರೆಂತಲೂ ಹೇಳಿದರು. ಈಗ್ಗೆ 3 ವರ್ಷಗಳಿಂದ ಇವರು ಜವಾಹಿರ್‌ಲಾಲರ ಶಿಷ್ಯರಾಗಿ ಮೊದಲನೇ ವರ್ಷವೇ 44 ದಿವಸಗಳ ಉಪವಾಸವ್ರತವನ್ನು ಕೈಕೊಂಡರು. ಕಳೆದವರ್ಷ 61 ದಿವಸಗಳ ಉಪವಾಸವನ್ನು ಮಾಡಿ ಮುಗಿಸಿದರು. ಆಮೇಲೆ ಒಂದುಸಾರಿ 15 ದಿವಸವೂ ಕಡೆಗೆ ಈಗಿನ ಅದ್ಭುತ 81 ದಿವಸಗಳ ಉಪವಾಸವೂ ತೀರಿತು.

ಈ ತಪಸ್ವಿಗಳಿಗೆ ಈಗ 47 ವರ್ಷ ಪ್ರಾಯವಾಗಿರುವುದು. ಇಷ್ಟು ದೊಡ್ಡ ಉಪವಾಸವನ್ನು ಮಾಡಿಯೂ ಶರೀರಸ್ಥಿತಿಯು ಸ್ವಲ್ಪವೂ ವ್ಯತ್ಯಾಸವಾಗಿಲ್ಲವೆಂದರೆ ಆಶ್ಚರ್ಯ! ಆಶ್ಚರ್ಯವೇ ಸರಿ. ಈ ಸ್ವಾಮಿಗಳ ಉಪವಾಸವ್ರತದಲ್ಲಿ ಸಂದೇಹವನ್ನಿಟ್ಟುಕೊಂಡಿದ್ದ ಅನೇಕ ಡಾಕ್ಟರುಗಳು ಬಂದು ಪ್ರತ್ಯಕ್ಷ ಅವರನ್ನು ನೋಡಿ ಪರೀಕ್ಷಿಸಿ ಹಗಲಿರುಳು ಕಾಯ್ದುಕೊಂಡಿದ್ದು ಕಡೆಗೆ ಬೆರಗಾದರು. ಇವರ ಉಪವಾಸವ್ರತದ ಕಡೆಯದಿನ ಅನೇಕಾನೇಕ ಜೈನರೆಲ್ಲ ಸೇರಿ ಅಂಗಡಿಗಳನ್ನು ಮುಚ್ಚಿದ್ದರು. ದಿನಕ್ಕೆ ನಾಲ್ಕೈದುಸಾರಿ ಹೊಟ್ಟೆ ಬಿರಿಯುವಂತೆ ತಿನ್ನತಕ್ಕ ನಮ್ಮಂಥವರಿಗೆ ಅವರ ವ್ರತದ ರೀತಿಯಾಗಲಿ, ಅವರು ಹೇಗೆ ಆ ವ್ರತವನ್ನು ಆಚರಿಸುವರೆಂದಾಗಲಿ ಯೋಚಿಸಲು ಕೂಡ ಸಾಧ್ಯವಿಲ್ಲವಲ್ಲವೇ ?

ಕೊಡಗಿನಲ್ಲಿಯೂ ದಕ್ಷಿಣಕನ್ನಡ ಮತ್ತು ಮಲಬಾರ ಜಿಲ್ಲೆಗಳಲ್ಲಿಯೂ ಪ್ರವಾಹದ ದೆಸೆಯಿಂದ ನಷ್ಟವುಂಟಾಗಿರುವ ಜನಗಳ ಕಷ್ಟನಿವಾರಣೆಗಾಗಿ ಉದಾರಮನಸ್ಸಿನಿಂದ ಚಂದಾ ಕೊಟ್ಟ ಮಹನೀಯರ ತಪಶೀಲ್ ಪಟ್ಟಿ :—

ನಂ		ಸಹಾಯಮಾಡಿದ ಜನರುಗಳ ಹೆಸರು	ಮೊಬಲಗು	
		ಹಿಂದಲ ವಾರದಿಂದ ಮುಂದರಿಸಿದ್ದು	317	6
1	ಮೆ॥	ಕುದಿಯಾಂಡ ತಿಮ್ಮಯ್ಯನವರು	2	0
2	,,	ಪಟ್ಟಮಾಡ ಮಾದಪ್ಪನವರು	1	0
3	,,	ಅಜ್ಜಿಕಂಡ ಚಂಗಪ್ಪನವರು	1	0
4	,,	ಕಂಬೆಯಂಡ ಅಚ್ಚಯ್ಯನವರು	1	0
5	,,	ಪುಲಿಯಂಡ ಅಪ್ಪಚ್ಚನವರು	0	8
6	,,	ಮೇರಿಯಂಡ ನಂಜಪ್ಪನವರು	0	8
7	,,	ಬಾಲ್ತಾಟ್ ಮೃತ್ಯುಂಜಯಶಾಸ್ತ್ರಿ	0	8
8	,,	ಬಿಲ್ಲತ್ ಮಮ್ಮದ್ ಕಾಕ	0	8
9	,,	ಕಲ್ಲಾಟ್ ಮಮ್ಮದ್ ಕಾಕ	0	8
10	,,	ಬೊಳ್ಳಜಂಡ ಮಾದಪ್ಪನವರು	0	4
11	,,	ಪಾಲಂದೀರ ಕಾರುಂಬಯ್ಯನವರು	0	4
12	,,	ಅಳ್ಳನೆರವಂಡ ಮುದ್ದಪ್ಪನವರು	0	4
13	,,	ಬಲ್ಯಂಡ ಅಪ್ಪನವ್ವನವರು	0	4
14	,,	ಕೀದೇರಿ ಅಪ್ಪಣ್ಣನವರು	0	4
15	,,	ಕೆ. ಬಿ. ತಿಮ್ಮಯ್ಯನವರು	0	4
16	,,	ಬಾಲಾಟ್ ಮಮ್ಮದ್ ಕಾಕ	0	4
17	,,	ಚಾರಿಕಲ್ ಅಹಮ್ಮದ್ ಕಾಕ	0	4
18	,,	ಬಾಲಾಟ್ ಕಮಾಲಿಕಾಕ	0	4
19	,,	ಕಳ್ಳೇರಿ ಅಯಮ್ಮದ್ ಕಾಕ	0	4
20	,,	ಪಕ್ಕಲಿಗರ ಸಣ್ಣಯ್ಯನವರು	0	4
21	,,	ಪಕ್ಕಲಿಗರ ಬೋಡ್ಡಯ್ಯನವರು	0	4
22	,,	ಪಕ್ಕಲಿಗರ ಕೃಷ್ಣಯ್ಯನವರು	0	4
23	,,	ಮನೆಯಪಂಡ ನಾಚಪ್ಪಯ್ಯನವರು	3	0
24	,,	ತಂಡ್ಯಂಡ ಅಯ್ಯಪ್ಪನವರು	1	0
25	,,	ಕೊಂಗಂಡ ಅಪ್ಪಯ್ಯನವರು	3	0
26	,,	ಸುಬ್ಬಣ್ಣಶೆಟ್ಟಿಯವರು	1	0
27	,,	K. C. ಬೋಪಯ್ಯನವರು	1	0
28	,,	ಕಂಗೈಯ್ಯಶೆಟ್ಟಿ	[illegible]	[illegible]
		ಒಟ್ಟು	337	26

ಶ್ರೀಃ

ಓಂ ಗಣೇಶಾಯನಮಃ.

14 ನೇ ದಿ ಆಲ್. ಇಂಡಿಯಾ ಆಯುರ್ವೇದ ಮಹಾ ಸಮ್ಮೇಳನ ಮತ್ತು 1 ನೇ ಅಖಿಲ ಕರ್ನಾಟಕ ವೈದ್ಯ ಸಮ್ಮೇಳನ ಶೃಂಗೇರಿ

ದಿ ಆಲ್ ಇಂಡಿಯಾ ಆಯುರ್ವೇದ ಮಹಾ ಮಂಡಲವೆಂಬ ಸಂಸ್ಥೆಯು ಏರ್ಪಟ್ಟು ಈಗ 14 ವರ್ಷಗಳಿಂದ ಅಸಾಧಾರಣವಾದ ಕಾರ್ಯವನ್ನು ನಡೆಸುತ್ತಿರುವುದು ಪ್ರಸಿದ್ಧವಾಗಿದೆಯಷ್ಟೆ ! ನಮ್ಮ ಕರ್ನಾಟಕದ ನೆರೆಯ ಪ್ರಾಂತಗಳಾದ ಆಂಧ್ರ ಮಹಾರಾಷ್ಟ್ರ ಮುಂತಾದ ಪ್ರಾಂತಗಳು ಈಗ ಅರು ಪ್ರಾಂತಿಕ ವೈದ್ಯ ಸಮ್ಮೇಳನಗಳನ್ನು ನಡೆಸಿರುವುವು. ನಮ್ಮ ಕರ್ನಾಟಕಪ್ರಾಂತದ ವೈದ್ಯರೆಲ್ಲರು ಸೇರಿ ಇಂದಿನವರೆಗೂ ಇಂತಹ ಪ್ರಾಂತಿಕ ವೈದ್ಯ ಸಮ್ಮೇಳನವನ್ನು ಕೂಡ ನಡೆಸಲಿಲ್ಲವೆಂದರೆ ನಮ್ಮ ಅವನತಿಗೆ ಎನ್ನಬೇಕು. ನಮ್ಮ ಪ್ರಾಂತದಲ್ಲಿ ಇಂತಹ ಘನಕಾರ್ಯಗಳು ನಡೆಯದಿರಲು ಕರ್ನಾಟಕದ ಪ್ರಾಂತಗಳು ಭಿನ್ನ ಭಿನ್ನ ಸರಕಾರಕ್ಕೆ ಸೇರಿರುವುದೇ ಮೊದಲನೆಯ ಕಾರಣವಾಗಿದೆ. ಈಗ ಎರಡು ವರ್ಷಗಳಿಂದ ಪ್ರಾಂತಿಕ ಸಮ್ಮೇಳನವನ್ನು ನಡೆಸಬೇಕೆಂದು ಪ್ರಯತ್ನಿಸಿದರೂ ಅದು ಫಲಗ್ರಹಿಯಾಗಲಿಲ್ಲ. ದಿ. ಆಲ್. ಇಂಡಿಯಾ ಮಹಾಮಂಡಲದ ಜನರಲ್ ಸೆಕ್ರೆಟರಿಯವರು ವೈಕಮ್ ಸ್ಟೇಷನಲ್ಲಿ ನಡೆಸಲು ಪ್ರಯತ್ನ ಮಾಡಬೇಕೆಂದು ಕೋರಲು ಇದನ್ನು ಕುರಿತು ಅನೇಕ ದೊಡ್ಡ ಮನುಷ್ಯರಲ್ಲಿ ನಾನು ಪ್ರಸ್ತಾಪಿಸಲು ನಮ್ಮ ಪ್ರಾಂತದವರಾದ ಜಮೀನ್‌ದಾರ್ ವಿ ಹೊಸಕೊಪ್ಪ ಕೃಷ್ಣರಾವ್ M. L. C. ಯವರು ತಾವು ಎಕ್ಸಿಕ್ಯೂಟಿವ್ ಕಮಿಟಿಗೆ ಪ್ರೆಸಿಡೆಂಟರಾಗಿ ನಿಂತು ಈ ಘನಕಾರ್ಯವನ್ನು ಜಯಪ್ರದವಾಗಿ ನಡೆಸುವುದಾಗಿ ವಾಗ್ದಾನ ಮಾಡಿದುದು ಕರ್ನಾಟಕ ದೇಶದವರಿಗೆ ಅಭಿನಂದನೀಯ ವಿಷಯವಾಗಿದೆ. ನಮ್ಮ ಮೈಸೂರು ಸರಕಾರದ ಉತ್ತರವೂ ಪ್ರೋತ್ಸಾಹಕರವಾಗಿ ಬಂದಿದೆ. ಜಮಖಂಡಿ ಮುಧೋಳ್ ಮುಂತಾದ ಕರ್ನಾಟಕ ಪ್ರಾಂತ ದೇಶೀಯ ರಾಜರ ಉತ್ತರವು ಅಪೇಕ್ಷಿತವಾಗಿದೆ.

ನಿಖಿಲ ಕರ್ನಾಟಕ ವೈದ್ಯ ಸಮ್ಮೇಳನವನ್ನು ಡಿಸೆಂಬರ್ ನಾಚ್ಚೈರಿನೊಳಗೆ ನಡೆಸಿ ಈ ನಂತರ ನಿಖಿಲ ಭಾರತ ವರ್ಷೀಯ ವೈದ್ಯ ಸಮ್ಮೇಳನದ ಕಾಲ ಮುಂತಾದುದನ್ನು ನಿಶ್ಚಯಿಸಬೇಕಾಗಿದೆ. ನಮ್ಮ ಕರ್ನಾಟಕ ಪ್ರಾಂತದಲ್ಲಿ ತಾಲ್ಲೂಕು ಗ್ರಾಮಗಳಲ್ಲಿರುವ ವೈದ್ಯರೆಲ್ಲರೂ ಅಲ್ಲಲ್ಲಿ ಸಭೆ ನಡೆಸಿ ಅಥವಾ ತಾವಾಗಿ ತಮ್ಮ ವಿಳಾಸಗಳನ್ನು ವೈದ್ಯರ ಪಟ್ಟಿಗಳನ್ನು ಕಳುಹಿಸಬೇಕು. ಪ್ರತಿನಿಧಿಗಳನ್ನು ಚುನಾಯಿಸಿ ಸಮ್ಮೇಳನಕ್ಕೆ ಕಳುಹಿಸಬೇಕು. ಈ ಘನಕಾರ್ಯವು ನಮ್ಮ ಪ್ರಾಂತದಲ್ಲಿ ನಡೆಯುವುದು ಇದೇ ಮೊದಲಾದುದರಿಂದ ಈ ಕೆಲಸದ ಜವಾಬ್ದಾರಿಯು ಕೀರ್ತಿಯ ಭಾರವು ದೇಶಾಭಿಮಾನವುಳ್ಳ ಪ್ರತಿಯೊಬ್ಬ ಕರ್ನಾಟಕ ದೇಶದವನಿಗೂ ಸೇರಿರುವುದು. ಇಂತಹ ಸಮ್ಮೇಳನ ಕಾರ್ಯಕ್ಕೆ ನಮ್ಮ ಶ್ರೀಮನ್ಮಹಾರಾಜ ಸರ್ಕಾರದವರೂ, ಶ್ರೀ ಮಠಾಧಿಪತಿಗಳೂ, ಕಾಂಗ್ರೆಸ್ ಮುಖಂಡರೂ, ದೇಶಾಭಿಮಾನಿಗಳೂ, ವೈದ್ಯರೂ ಎಲ್ಲಾ ಕರ್ನಾಟಕ ದೇಶದ ಪತ್ರಿಕಾಕರ್ತರೂ ಅವಲಂಬಕರಾಗಿ ನಿಂತು ಕಾರ್ಯವನ್ನು ಜಯಪ್ರದವಾಗಿ ನಡೆಸುವರೆಂದು ನಂಬಿದೇನೆ.

ಶೃಂಗೇರಿ, — ವಿದ್ವಾನ್ ಕೆ. ಶೇಷಾಶಾಸ್ತ್ರೀ,
ತಾ. 1, 10 23 — ಆಯುರ್ವೇದ ರತ್ನಂ.
ಜನರಲ್ ಸೆಕ್ರೆಟರಿ ಆಯುರ್ವೇದ ಮಹಾ ಸಭಾ,

ಪತ್ರವ್ಯವಹಾರಗಳು

ಬಂದ ಪತ್ರಗಳಲ್ಲಿರುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ [ಎಡಿಟರ್]

District Board

ಆಯುಷ್ಯ ಶ್ರೀ ಮೂಲಕಾವೇರಿ ಸಂಸ್ಥಾನವು ಪವಿತ್ರ ಪಿಸಿತು. ಗ್ರಾಮದಾಂತರ ರಸ್ತೆಗಳಲ್ಲೂ ಯಾವ ಕೆಲಸವು ನಡೆಯುವದು ಈ ಲೇಖಕನಿಗೆ ಕಂಡುಬರುವದಿಲ್ಲ. ಈ ಮಹದೇವಪುರ ಮಳೆಯಿಂದ ನಾಲ್ಕುನಾಡು ಕಕ್ಕಬೆಯಿಂದ ಕಾವೇರಿಗೆ ಹೋಗುವ ರಸ್ತೆಯಲ್ಲಿ ಒಟ್ಟಿಯುತ್ತಾಡಿ ಎಂಬ ತೋಟದ ಕಳೆದ ವರ್ಷದ ಸೇತುವೆಯೂ ಬಲ್ಲಮಾವಟಿ ಗ್ರಾಮದ ಹೊಳೆಗೋಟುಹೊಳೆ ತಂಡಕಹೊಳೆ ಪುಲಿಕೋಟು ಗ್ರಾಮದ ಚೇರಹೊಳೆ ಎಂಬ ಹೊಳೆಗಳ ಸಾಲವೆಲ್ಲಾ ಕೊಚ್ಚಿ ಹೋಗಿದೆ. ಈ ರಸ್ತೆಯ ಕೆಲವುಕಡೆ ಮರಗಳು ಅಡ್ಡವಾಗಿ ಬಿದ್ದಿವೆ. ಕೆಲವುಕಡೆ ಬರೆಜರದುಬಿದ್ದಿವೆ. ಇವುಗಳನೆಲ್ಲ ಮತ್ತು ನಾಪೋಕ್ಲಿನಿಂದ ಕಾರುಗುಂದಕಚೇರಿಗೆ ಹೋಗಿ ಸೇರುವ ವಗ್ಗೆರೆ ಮಳರಸ್ತೆಗಳ ವಡನೆ ರಿಪೇರಿ ಮಾಡಿಸುವಂತೆ ಘನ ಸರಕಾರದವರು ಕೂಡ್ಲೆ ಹುಕುಂ ಜಲಾವನೆ ಮಾಡಬೇಕಾಗಿ ಕೋರುವ

"ದೇಶೀಯರ ಹಿತಚಿಂತಕ"

ತಮ್ಮ ಪತ್ರಿಕೆಯಲ್ಲಿ ಎಳ್ಳಷ್ಟು ಜಾಗದಲ್ಲಿ ನಾನು ಕೆಳಗೆ ಬರೆದ ಅಂಶಗಳನ್ನು ದಯವಿಟ್ಟು ಪ್ರಕಟಿಸಬೇಕಾಗಿ ಬೇಡುತ್ತೇನೆ.

ದೇಶಭಕ್ತರಾದ ಕುಮುಂಟೂರು ಗ್ರಾಮದ ಕಳ್ಳಂಗಳ ಬೆಳ್ಯಪ್ಪನವರು ತಾರೀಕು 29-9-23 ರಲ್ಲು ಸ್ವರ್ಗಸ್ಥರಾದರು. ಇವರು ಕುಮುಂಟೂರು ಮತ್ತು ಬಾಡಗ ಗ್ರಾಮದ ಸಹಕಾರ ಸೊಸೈಟಿಯ ಪ್ರೆಸಿಡೆಂಟರಾಗಿದ್ದರು. ಇವರು ಗ್ರಾಮ ಒಗ್ಗಟ್ಟಿನಲ್ಲು ತುಂಬಾ ಪ್ರಯತ್ನಪಡುತ್ತಿದ್ದರಲ್ಲದೆ ಗ್ರಾಮದ ಸ್ಕೂಲ್ ಕಟ್ಟಡ ಕಟ್ಟಿಸಲು ತುಂಬಾ ಪ್ರಯತ್ನ ಗೆದುಕೊಂಡು, ಗ್ರಾಮದ ಪ್ರತಿಯೊಬ್ಬ ಹುಡುಗನನ್ನು ಶೋಧಿಸಿ ಸ್ಕೂಲಿಗೆ ಸೇರಿಸುತ್ತಿದ್ದರು.

ಇವರು ನಮ್ಮ ದೇಶದ ಶ್ರೀ ಮೂಲಕಾವೇರಿಯಮ್ಮನವರಿಗೆ ಒಂದು ನೂರು ಬಟ್ಟಿ ಭೂಮಿಯನ್ನು ದರ್ಮಾರ್ಥವಾಗಿ ಒಪ್ಪಿಸಿರುತ್ತಾರೆ.

ಇಂಥಾ ಪುಣ್ಯಾತ್ಮರಾದ ಬೆಳ್ಯಪ್ಪನವರು ತಮ್ಮ 47 ನೇ ವಯಸ್ಸಿನಲ್ಲು ಸ್ವರ್ಗಸ್ಥರಾದ ಸಂಗ್ತಿ ಗ್ರಾಮ ಸಂಘದ ಮೆಂಬರುಗಳಿಗೆ ತುಂಬಾ ವ್ಯಸನವನ್ನುಂಟುಮಾಡಿದೆ. ಇವರಿಗೆ ಪರಲೋಕದಲ್ಲು ಮೋಕ್ಷವನ್ನು ಕೊಟ್ಟು ಇವರ ಸಂಸಾರವು ದುಃಖಸಾಗರದಿಂದ ಪಾರಾಗಿ ಸುಖವನ್ನು ಅನುಭವಿಸುವಂತೆ ಮಾಡಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ. ಸೆಕ್ರೆಟರಿ

ಕುಮುಂಟೂರು ಮತ್ತು ಬಾಡಗ ಸೊಸೈಟಿ

ಪ್ರಿಯ ಸಂಪಾದಕರೆ

ತಾರೀಖು 29-9-23 ರಲ್ಲಿ ಪಾಡಿ ಸುಬ್ರಮಣ್ಯದೇವರ (ಇಗ್ಗುತಪ್ಪ) ಭಕ್ತಜನರ ವೃದ್ಧಿಸಂಘದ ಮೀಟಿಂಗು ನಡಿಯಿತು. ಅಲ್ಲಿಗೆ ನಾಡು ಪಾರುಪತ್ಯಗಾರರು ಸಹ ಬಂದಿದ್ದರು. ನಮ್ಮ ಕೊಡಗು ದೇಶದ ಮಿ|| ಮೈ|| ಹುದ್ದೆಯು ಕಾಯಂ ಆಗಿ ಇಂಡಿಯನರಿಗೆ ದೊರೆತದ್ದು ಇದೇ ಪ್ರಥಮವಾಗಿರುತ್ತೆ. ಮತ್ತು ಪ್ರಥಮ ಈ ಹುದ್ದೆಯು ನಮ್ಮ ಈ ಭಕ್ತಜನ ಸಂಘದ ಓರ್ವ ಮೆಂಬರಾದ ಮ|| ಶ್ರೀ|| ಕಟ್ಟೇರಿ ಸಂಗಪ್ಪ ಬಿ ಎ ಯವರಿಗೆ ಪಾಡಿ ಸುಬ್ರಮಣ್ಯನ ಕರುಣಾ ಕಟಾಕ್ಷದಿಂದ ಇವರು ದೇವರ ಮನಪೂರ್ವಕವಾದ ಭಕ್ತರಾಗಿರುವರೆಂದೂ, ಇವರು ನಮ್ಮ ನಾಡಿನವರಾಗಿ ಇರುವದರಿಂದ ಈ ದೇವಾಲಯದಲ್ಲೇ ಅವರಿಗೆ ದೀರ್ಘಾಯುಷ್ಯವನ್ನೂ ದಯಪಾಲಿಸಬೇಕೆಂದೂ ಮತ್ತು ಅವರು ಮಾಡುವ ಈಗಿನ ಉದ್ಯೋಗದಲ್ಲು ಏನೊಂದು ಕುಂದುಕೊರತೆ ಬಾರದಂತೆ ಕಾಪಾಡಬೇಕೆ ಈ ಪಾಡಿ ಸುಬ್ರಮಣ್ಯನಿಗೆ ಈ ಭಕ್ತಜನ ಸಂಘದವರು ಒಂದು ಪೂಜೆ ಮಾಡಬೇಕಾಗಿ ಮೆ|| ಕಾಡಿಯಂಡ ಮಾಚ್ಚಯ್ಯನವರು ಸೂಚಿಸಿದಕ್ಕೆ ಎಲ್ಲರೂ ಸಮ್ಮತಿಸಿ ಬರುವ ಅಕ್ಟೋಬರ್ ತಾರೀಕು 27 ನೇ ಕಡೇ ಶನಿವಾರ ದಿನ ಪಾಡಿ ಸುಬ್ರಮಣ್ಯನಿಗೆ ರುದ್ರಾಭಿಷೇಕ ನಡಿಸುವಂತೆಯೂ ಸದ್ರಿ ಚಂಗಪ್ಪನವರನ್ನು ಸದರಿ ದಿನ ದಯಮಾಡಿಸಿ ರುದ್ರಾಭಿಷೇಕದ ಅರ್ಚನೆ ಸ್ವೀಕರಿಸುವಂತೆ ಈ ಸಂಘದ ಪ್ರೆಸಿಡೆಂಟರು ಅವರಿಗೆ ಬಿನ್ನಪತ್ರ ಬರೆಕೊಳ್ಳಬೇಕಾಗಿಯೂ ತೀರ್ಮಾನವಾಯಿತು. ಸದರಿ ದಿನ ಮೆ|| ಉಮಿಯಾಂಡ ಮಾಚ್ಚಯ್ಯನವರು ಸರಕಾರಿ ನವುಕರಿಯಿಂದ ಬಿಡುಗಡೆಯಾಗಿ ಪೆಂಚನ್ ಹೊಂದುವದರಿಂದಲೂ ಇವರು ಸಹ ಈ ಸಂಘದ ಮೆಂಬರಾಗಿರುವದರಿಂದಲೂ ಇವರು ಒಂದು ಸಮಾರಾಧನೆ ಸದರಿ ದಿನ ನಡಿಸಬೇಕು ಮತ್ತು ಸಂಘದವರು ಇವರ ಹೆಸರಿನಲ್ಲು ಒಂದು ರುದ್ರಾಭಿಷೇಕ ನಡಿಸಬೇಕೆಂದು ಮೆ|| ಕೋಡಿಮಣಿಯಂಡ ನಂಜುಂಡನವರು ತಂದ ಠರಾವಿಗೆ ಮೆ|| ಮಾಚ್ಚಯ್ಯನವರು ಒಪ್ಪಿಕೊಂಡದಕ್ಕೆ ಎಲ್ಲರೂ ಸಮ್ಮತಿಸಿದರು. ಸದರಿ 27 ನೇ ಕಡೇ ಶನಿವಾರದಿನ ಪಾಡಿ ಸುಬ್ರಮ್ಮಯರ ವೃದ್ಧಿ ಸಂಘದ ಸರ್ವ ಮೆಂಬರುಗಳೂ ದಯಮಾಡಿಸುವಂತೆ ಪ್ರಕಟಿಸಬೇಕಾಗಿ ಸಹ ತೀರ್ಮಾನವಾಯಿತು. ಇದೀಗ ಭಕ್ತಜನರ ಬೇಡಿಕೆ ನಿಮಾಂತ!

"ಓರ್ವ ಭಕ್ತ."

"ಊರವನ ಹಗೆ ಬವಾಬು"

ಅಯ್ಯ ಊರವನೇ,

ಅವ್ವಕ್ತಿ ಸಿದ್ದಾಪುರ ಚೆಟ್ಟಿನಕೋಟೆ ಮುಂತಾದವು ಮೂರು ಹಳ್ಳಿಯ ಪೂರ್ವ ಪಕ್ಷ ಪಾಲನ ಮಾಡಿಕೊಂಡಿದ್ದ ಕೊಡಗು ಜನಾಂಗದವರಿಗೆ ಹಿಡುಕಟ್ಟು ರುಭಾಶಕ ನವಗ್ಗೆರೆ ಪದ್ಧತಿ ಮೀರು ಇಲ್ಲವಾಗಿ ಬಂತು ಬೇಡಿಯುವದು. ನೋಡಿದರೆ ಕೋಟೆಯ ಮುಖಂಗರು ಪಡಿನ ಸತಿಗಳಲ್ಲದೆ ಇದ್ದರೆ ಶುಭಾಶುಭ ಕಾರ್ಯಗಳನ್ನೂ ದೇವರ ಹಬ್ಬವನ್ನೂ ಮುಖಾಮುಖಿಗೆ ಕೂಟ ವಗ್ಗೆರೆ ಕಲಸಗಳನ್ನೂ ಈ ವರೆಗೆ ಕೊಡಗು ಜನಾಂಗದ ಊರವರು ಹಾಗೆ ನಡಿಸಿಕೊಂಡು ಬರುತ್ತಿದ್ದರೆಂದು ಲೇಖಕನೇ ತಿಳಿಸುವನಿದ್ದ ಈಗ ಹತ್ತು ಇಪ್ಪತ್ತು ವರ್ಷಗಳಿಂದೀಚೆಗೆ ಬಂದು ನೆಲೆಗೊಂಡಿರುವ ಹೆಚ್ಚಿನ ಕೊಡಗು ಜನಾಂಗದವರಿಗೆ ಈ ಊರಲ್ಲಿ ನಾನಾಕಡೆಯಿಂದ ಬಂದು ನೆಲೆಗೊಂಡಿರುವ ಕೊಡಗು ಜನಾಂಗದವರ ಪದ್ಧತಿ, ಹಿಡುಕಟ್ಟು ವಗ್ಗೆರೆ ಒಂದೇ ರೀತಿ ನಡಿಸಬೇಕೆಂಬ ಕುತೂಹಲದಿಂದ ಒಂದು ಜನರಲ್ ಬಾಡಿ ಮೀಟಿಂಗ್ ನಡಿಸಿದಲ್ಲಿ, ಮೀಟಿಂಗಿನಲ್ಲು ಪೂರ್ವದಿಂದಲೂ ಕೊಡಗರು ಚುನಾಯಿತ ತಕ್ಕಾಮುಖ್ಯರಿಂದ ನಡಿಸಿಕೊಂಡುಬರುವ ಕೆಂಚದ ಬಸವೇಶ್ವರ ದೇವರ ತಕ್ಕಾವೆ, ಕೆಲಸವನ್ನು ಈಗ ಚುನಾಯಿಸಿದ ಪ್ರೆಸಿಡೆಂಟರು ಮತ್ತು ಕಮಿಟಿ ಮೆಂಬರುಗಳು ನಡಿಸಿಕೊಂಡುಹೋಗುವದು ಉತ್ತಮವಾಗಿದೆಯೆಂದು ಸಣ್ಣ ಪಂಗಡದವರು ಹೇಳಿದಕ್ಕೆ ದೊಡ್ಡ ಪಂಗಡದವರು ದೇವಸ್ಥಾನದ ಕೆಲಸವನ್ನು ಮೊದಲಿನಂತೆಯೇ ನಡಿಸಿಕೊಂಡು ಹೋಗಬೇಕೆಂದು ತೀರ್ಮಾನಿಸಿ, ಬಹುಮುಖ್ಯ ದೇವಸ್ಥಾನದ ಸಂಗ್ತಿಯಾಗಿ ಬೇರೆ ಮೀಟಿಂಗ್ ಮಾಡುವ ನಮ್ಮ ಕೊಡಗು ಪದ್ಧತಿ ಹಿಡುಕಟ್ಟು ಮಾಡುವ ಕೊಡಗು ಸಮೂಹಕ್ಕೆ ಲಗತ್ತಿಲ್ಲವೆಂದು ಹೇಳುವದು ಯಾರ ತಮಾಷೆ?

ಸಣ್ಣ ಪಂಗಡದವರು, ದೊಡ್ಡ ಪಂಗಡದವರು ಕೂಡಿ 1916ನೆ ಇಸ್ವಿಯಲ್ಲಿ ಸಣ್ಣ ಪಂಗಡದ ಒಬ್ಬನಿಗೆ ದೇವರ ತಕ್ಕಾಮೆ ಕೊಟ್ಟದಲ್ಲವೇ? ಹೀಗಿರುವಲ್ಲಿ ಈ ನವೀನ ರೂಪದಲ್ಲು ಪದ್ಧತಿ ಹಿಡುಕಟ್ಟು ನಡಿಸಬೇಕೆಂದು ಓಡಾಡುವ ಯುವಕರಲ್ಲಿ ಸಣ್ಣ ಪಂಗಡದವರು ದೇವರ ತಕ್ಕಾಮೆ ಕೆಲಸವನ್ನು ನಮ್ಮ ಸೆನಿಯರವರು ಕೈಕೊಳ್ಳಬೇಕೆಂದದ್ದು ತಪ್ಪಾಯಿತ್ತೇ? ವಾಚಕ ಮಹಾಶಯರೇ ಇದು ಯಾರ ತಮಾಷೆಯೆಂದು ಊಹಿಸಿಕೊಳ್ಳಿ.

ಅಯ್ಯಾ ಊರವನೇ, ಸಣ್ಣ ಪಂಗಡವು ಮಹಾಸಭೆಗೆ ಮೇನೋರಾನೇ ಹೇಳಿದರೂ ಮಹಾಸಭೆಯೂ ಬೇಪ್ಪಗ ಹೊರಲಿಕ್ಕೆ ಕಾರಣವುಂಟೋ? ಮಹಾಸಭೆಯು ಮಂಜೂರು ಇನ್ನು ಮುಂದಕ್ಕೆ ಆಗುವ ಶುಭಾಶುಭ, ಮತ್ತು ಕ್ಲಬ್ ಮೂಹೂರ್ತ ಹಬ್ಬ ನಡಿಸಬೇಡುವದಿಲ್ಲವೆಂದು ತೀರ್ಮಾನಿಸಿದ, ಮಹಾಸಭೆಯ ತೀರ್ಮಾನದಂತೆ ಕಮಿಟಿಯವರು ಯಾಕೆ ಕ್ಲಬ್ ಮೂಹೂರ್ತ ಹಬ್ಬ ನಡಿಸಲಿಲ್ಲ? ಒಂದುವೇಳೆ ಸಣ್ಣ ಪಂಗಡದವರು ಬಿಟ್ಟುಹೋದರೆ ಅವರನ್ನು ಬಿಟ್ಟು ಮಾಡಬಹುದಾಗಿತ್ತು. ಇಲ್ಲವೇ ಈ ಸಂಗ್ತಿಯನ್ನು ಜನರಲ್ ಬಾಡಿಯವರಿಗೆ ತಿಳಿಸಬಹುದಾಗಿತ್ತು. ಏನೂ ಮಾಡದೆ ಸುಮ್ಮನೆ ನಿದ್ರೆ ಮಾಡುತ್ತಿರುವವೇ ಕಮಿಟಿಯವರ ಕೆಲಸವೋ? ಮನಸು ಬಂದಂತೆ ಸಭೆಗಳನ್ನು ಮಾಡಿ, ಕಾರ್ಯಗಳನ್ನು ಮಾಡದೆ ಹಾಳುಮಾಡುವದೇ ಇದರ ಉದ್ದೇಶ್ಯವೋ? ಇದು ಯಾರ ತರದ ತಮಾಷೆಯಾಗಬಹುದು!

ಮೇಕೂರು ಗ್ರಾಮದ ಬಸವನ ಗುಡಿಯ ಕಟ್ಟಡದ ಕೆಲಸವನ್ನು ಊರವರು ಸಣ್ಣ ಪಂಗಡದ ಮುಖಂಡನೊಬ್ಬನಿಗೆ ವಹಿಸಿಕೊಟ್ಟದಲ್ಲವೇ? ಈ ಕಟ್ಟಡದ ಕೆಲಸವನ್ನು ಪೂರೈಸಲಿಕ್ಕೆ ಹಣ ದಾನಮಾಡಿದ ಪುಣ್ಯಾತ್ಮರು ನೀವೇ ಆಗಿದ್ದರೆ ಹೊರಗಿನಿಂದ ಸಾಲವೆತ್ತಿ ಕೆಲಸ ಪೂರೈಸಿ, ಸಾಲ ನಿವಾರಣೆಗ್ಗೆ ನಿರೆ ಗ್ರಾಮಸ್ಥರಿಂದ ಹಣ ವಸೂಲ್ ಮಾಡಿ ಸಾಲ ತೀರಿಸಿದ ಮೇಲೆಯೂ, ಕಟ್ಟಡದ ಕೆಲಸ ಪೂರೈಸಿದ ನಂತರವೂ ದೇವಸ್ಥಾನದ ಲೆಕ್ಕಾಚಾರ ನೋಡಿ ಅದನ್ನು ಇಂದು ನಾಳೆ ಎಂದು ಹೇಳಿ ಕಟ್ಟಕಡೆಗೆ ಒಂದು ಮೀಟಿಂಗಿನಲ್ಲು ನೀವೇ ಈ ದೇವಸ್ಥಾನದ ಉತ್ಸವ ವಗ್ಗೆರೆ ಕೆಲಸ ನಡಿಸಬೇಕೆಂದು ಉತ್ಸವ ಕಳೆದಮೇಲೆ ಲೆಕ್ಕಾಚಾರ ನೋಡುತ್ತೇವೆಂದು ಹೇಳಿದಕ್ಕಲ್ಲವೇ ರಿಕಾರ್ಡುಗಳನ್ನು ಸಭೆ ಮುಂದಿಟ್ಟುಹೋದದ್ದು. ಈಗಲ್ಲವೇ ದೊಡ್ಡ ಪಂಗಡದವರು ರಿಕಾರ್ಡುಗಳನ್ನು ತೆಗೆದು ಇಂದು ಅಲ್ಲಿಂದೀಚೆಗೆ ಎರಡು ವರ್ಷವಾದರೂ ಲೆಕ್ಕಾಚಾರ ನೋಡದೆ ಇರುವದು? ಹಣ ಹಾಕಿದ ಪುಣ್ಯಾತ್ಮರು ಮೂಲೆ ಹಿಡಿದಿರಬೇಕೆ? ಗುಡಿಯ ಬಂದು ಮೂಲೆ ಬಿದ್ದುಹೋದವರ ಏನನ್ನು ಏನು ಮಾಡಿದರು? ಸಾಧು ಎತ್ತಿಗೆ ಎರಡು ಹೇರು ಎಂಬ ಗಾದೆಯಂತೆ, ಕೆಲ್ಸ ಮಾಡಿದವನೇ ಮಾಡಲಿ ಎಂದ ದೊಡ್ಡ ಪಂಗಡದವರ ತಮಾಷೆ ಇನ್ನು ವಾಚಕ ಮಹಾಶಯರೇ ನೋಡಿ.

ಪಟ್ಟಿನ ತರ್ಕವಿತರ್ಕಗಳಿಂದ ಘನವಾದ ಕೊಡಗನ್ನು ತುಂಬುವದು ನ್ಯಾಯವಲ್ಲ. ನಮ್ಮ ದೇಶದಲ್ಲು ನಮ್ಮ ಪದ್ಧತಿಗನುಸಾರವಾಗಿ ದೇವತಾ ಕಲ್ಪವನ್ನು ನಡಿಸಿಕೊಂಡು ಹೋಗುವ ರೀತಿ ನಮ್ಮ ಈ ಗ್ರಾಮದಲ್ಲು ನಡೆಯುತ್ತಾ ಬರುವ ಪದ್ಧತಿ ಮೀರಿ ಈಗ ಹೊಸದಾಗಿ ಏಕರ್ದಾಗಿರುವ ಕಮಿಟಿಯವರಿಂದ ನಡಿಸುತ್ತಿದ್ದು, ದೇವಸ್ಥಾನಕ್ಕೆ ಬೇರೆ ಕಮಿಟಿ ಪ್ರೆಸಿಡೆಂಟರು ಚುನಾಯಿಸುವದಕ್ಕೆ ಅವಶ್ಯವಿಲ್ಲ. ಇದೇ ಸಣ್ಣ ಪಂಗಡದವರ ಕೋರಿಕೆಯಾಗಿದೆ.

"ಮತ್ತೊಬ್ಬ ಊರವ"

ಇದು ಯಾವ ನ್ಯಾಯ

ಸಂಪಾದಕರೆ,

ಕೊಡಗು ವಾಚಕರುಗಳೇ, ತಾ|| ... ದೀಪಾವಳಿಗೆ, ಬಂದ ನಮ್ಮ ಕೊಡಗು ... ಮಂದಿ ಸಾಹೇಬರು ನಮ್ಮನ್ನೆಲ್ಲಾ ಎಂದರೆ ... ಬಳಿಯ ಜನರನ್ನೆಲ್ಲಾ ನಮ್ಮ ಹಾಲ್‍ನಲ್ಲಿ ವಿಷಯಗಳಲ್ಲಿ ಯಾತರದಾದ ದರಖಾಸ್ತು ಅಗಬೇಕು ಮತ್ತು ನಿಮ್ಮ ಸ್ಥಿತಿಗಳನ್ನು ವಿಚಾರಿಸಿ ನಿಮಗೆ ಸಹಾಯ ಮಾಡುತ್ತೇನೆ ಹೇಳಿ, ನಮ್ಮೆಲ್ಲರನ್ನು ಮೀಟಿಂಗಿಗೆ ಶ್ರೀರಾಮ ಶಾಲೆಗೆ ಸೇರಿಸಿ, ಜನತಾ ಕಮಿಷನರ್ ಉಪನ್ಯಾಸ ಮಾಡುವಾಗ್ಯೆ ನಿಮ್ಮ ದೇಶಕ್ಕೆ ಕೌನ್ಸಿಲ್ ತಾತ್ಕಾಲದಲ್ಲಿ ಬರುತ್ತದೆ. ಅನಂತರ ನಿಮ್ಮ ನಾಳೆಯ ಕೆಲಸ ಮಾಡಿ ಸಹಿಸುವ. ಅದುವರೆಗೆ ನೀವು ಸಹಕಕ್ಕೆ ಕುತರ್ಕ ಮಾಡುತ್ತಾ ಇದ್ದೀರಿ, ಎಂತ ಹೇಳಿದರೆ ಹೊರಗು, ನಾವು ಪ್ರೇಕ್ಷಕರಾಗಿರುವ ಯೋಗ್ಯ ... ರಾಯರ ... ರಾಯರು ಕಂದಾಯ ಕೊಡುತ್ತೇವೆಂದು ಈ ಬಡಕೃಷಿಕರು ಹೇಳುವಾಗ್ಯೆ ಇವರ ನೋವು ಹ್ಯಾಗಿ ದೆಯೆಂಬ ಸಂಗ್ತಿ ಮನಸ್ಸಿಗೆ ತೆಗೆದುಕೊಳ್ಳಲಿಲ್ಲ. ಇಂಥಾ ನಮ್ಮ ನೋವಿನ ಕೂಗಿನ ಪರಿಹಾರಕ್ಕೂ ಮತ್ತು ಕತ್ತಲಲ್ಲಿ ನಮ್ಮ ದೇಶಬಿಟ್ಟು ಹೋಗುವ ಕಮಿಷನರವರಿಗೆ ಬಳ್ಳೆ ಹೆಸರಿನ ಸನ್ಮಾನವೇ ಇದು ಎಂಥಾ ಸುಸಮಯವಾಗಿತ್ತು! ಮತ್ತು ಈ ಸಮಯದಲ್ಲಿ ನೆರೆ ನೀರಿನ ಪ್ರವಾಹದಿಂದ ನಮಗಳಿಗೆ ಉಂಟಾಗಿರುವ ನಷ್ಟಗಳಿಗೆ ಕಂದಾಯವಾದರೂ ಮಾಫಿ ಸಿಕ್ಕಬಹುದೆಂದು ಕೆಲವು ಅರ್ಜಿಗಳು ಕೊಟ್ಟದ್ದಕ್ಕೆ ಕೃಷಿ ಸಾಗಿನ ಜಮೀನುಗಳಿಗೆ ಕಂದಾಯ ಮಾಫಿ ಕೊಡುವುದಿಲ್ಲವೆಂದು ಹೇಳಿದರು. ಈ ವಿಷಯ ನೋಡಿದರೆ ಏಕೆ ಬಂದಕ್ಕೆ ಎಂಟ ಷಟ್ಟಬೆಳೆಯುವ ಜರಿ ಜಮೀನಿಗೆ, ಕಂದಾಯ ಮಾಫಿ ಮಾತ್ರವಲ್ಲದೆ ಇನ್ನೇನಾದರೂ ಸರ್ಕಾರದಿಂದ ಸಹಾಯ ಸಿಕ್ಕಬಹುದು. ಅದರೆ ಏಕೆ ಬಂದಕ್ಕೆ ನಷ್ಟವಾಗಿ ಮನೆ, ಹುಲ್ಲು, ಇಲ್ಲವೇ ದಿನಸಿ ಬೆಳೆವ ಕೃಷಿಸಾಗಿನ ಜಮೀನಿಗೆ ಕಂದಾಯ ಮಾಫಿಯಿಲ್ಲ, ಇದು ರಾಜನೀತಿಗೆ ವಿರೋಧವೇ? ಈ ದಲ್ಲಿ ಈ ರೀತಿ ಉಪನ್ಯಾಸಕ್ಕೆ ಬಂದ ಕಮಿಷನರ್ ಮತ್ತು ನಮ್ಮ ಹೊಬಳಿಯ ಪಾರುಪತ್ಯಗಾರರ ನ್ಯಾಯವೇ ಉಚಿತ ಕೆಲಸ, ನಮ್ಮ ಪಾಲು ಹಾನಿಯಾದ ವಿಷಯವೂ ಕೇಳದ್ದು ಇಲ್ಲ! ಹೇಳಿದ್ದು ಈ ರೀತಿಯಾದ ನಮ್ಮ ಪಾಡನ್ನು ಏನೆಂದು ಹೇಳಲಿ! ಅಲ್ಲದೆ ನಾವು ವಿದ್ಯಾವಂತರಾಗಿದ್ದ ಪಕ್ಷ ಮುಂದುವರಿದು ಮಾತನಾಡಬಹುದಾಗಿತ್ತು. ... ಹೀನಸ್ಥರು ಎಂಬಂತೆ ನಮ್ಮ ಕೂಗು ಹಿಂದೆ ಹೋ, ಮುಂದೆ ಇಲ್ಲ, ಎಂಬ ಸಂಗತಿ ಸತ್ಯ, ಸರ್ಕಾರದ ಅಧಿಕಾರಿಗಳು ತಿಳಿದುಕೊಂಡಿರುವಲ್ಲ. ಯಾವ ... ವೂ ಇಲ್ಲ. ಇಂಥಾ ಕಣಿವೆ ಹೋಬಳಿಯನ್ನು ರಿಪುತ್ರನನ್ನು ನೋಡಿದರೆ, ನಮಗೆ ಕೌನ್ಸಿಲಿನಿಂದ ಫಲವೇನು? ಶಿಕ್ಷಿತರಾದ ಕೂಡ ಅದನ್ನು ನಾವು ಹಿಂದೆ ಹೇಳಬೇಕಲ್ಲದೆ ಮುಂದುವರಿಯುವ ವಿಧವೇನು ತೋರುವುದಿಲ್ಲ. ಆದಕಾರಣದಿಂದ ಕೊಡಗು ಮಹಾನೀಯರೆಲ್ಲಾ ಏಕಮತ್ಯದಿಂದ ದೇಶಸೇವೆ ಮಾಡಬೇಕಾಗಿದೆ. ಕಣಿವೆ ಹೋಬಳಿಯನ್ನು ಮುಂದೆತರುವ ಮಹನೀಯರು ತುಂಬಾ ನಮ್ಮ ದೇಶದಲ್ಲಿ ಹುಟ್ಟಲಿದು, ಹಾಗೆ ನ ಕಣಿವೆ ಹೋಬಳಿಯ ಜನರ ಸ್ಥಿತಿಯನ್ನು ನಮ್ಮ ದೇಶದ ಮುಖಂಡರುಗಳು, ಮನಸ್ಸಿಗೆ ತಾರದೆ ಹೋದ ಪಕ್ಷದಲ್ಲಿ ಅಲ್ಲಿಯ ಜನರ ಗತಿಯು ಏನಾಗುವುದೆಂದು ಹೇಳಲಾಗುವುದಿಲ್ಲ. ಅಲ್ಲದೆ ಜಮೀನುದಾರರ ಸಂಘದ ಪರವಾಗಿ ಏರ ಡಿಕಲ್ಪಿಸುವ ನಮ್ಮ ... ಸುವ ಕಮಿಟಿಯು ಅದಷ್ಟುಬೇಗನೆ ಈ ವಿಷಯವನ್ನು ಯೋಚಿಸಬೇಕಾಗಿದೆ.

ಬೇಸರಪಟ್ಟವ.

ಹೆಂರಲ್ ಸೂಟರ್ ಸಾಹೇಬರ ಸ್ಮಾರಕ.

ಕಳೆದ ಅಕ್ಟೋಬರ್ ತಿಂಗಳ ೧ ನೇ ತಾರೀಖಿನಲ್ಲಿ ಮಡಿಕೇರಿ ಓಂಕಾರೇಶ್ವರದ ಸಾರ್ವ ಜನಿಕವೆನಿಸಲ್ಪಟ್ಟ (Temple Hall) ಹಾಲಿ ಕಮಿಷನರಾಗಿರುವ ಮಿ|| ಸೂಟರ್ ಸಾಹೇಬರು, ಕೊಡಗಿನಿಂದ ವರ್ಗವಾಗಿ ಬೇರೆ ಕಡೆಗೆ ಹೋಗುವವರಾಗಿರುವುದರಿಂದ, ಅವರು ಈ ದೇಶದಲ್ಲಿದ್ದ ಕೆಲಕಾಲ ತಮ್ಮ ಶಕ್ತಿ ಸಾಮರ್ಥ್ಯದಿಂದ ಆಡಳಿತ ನಡೆಸಿ, ಇವರ ಪ್ರಭುತ್ವದಲ್ಲಿಯೋ, ಸ್ಥಾಪಿಸಲ್ಪಟ್ಟ ... ಗನುಸಾರವಾಗಿ ... ಮೋಟಾರ್ ... ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ... ಗೆ ... ನೆನಪಿಗಾಗಿ ಈ ದೇಶದ ... ಈ ದಾರಿಗಳಲ್ಲಿ ತಮಗಿರತಕ್ಕ ವಿಶ್ವಾಸವನ್ನು

ರೀತಿಯಲ್ಲಿ ತೋರ್ಪಡಿಸಬೇಕೆಂಬುದನ್ನು ಈ ಒಂದು ಸಾರ್ವಜನಿಕ ಸಭೆಯು ನೇರಿತ್ತೆಂಬು ಕರಿಗೆ ವಿದಿತವಿದೆ ಇರಲಾದರು

ಳ ಮೇಲೆ ಪ್ರಜೆಗಳಿಗೆ ಪ್ರೇಮವಷ್ಟೆ, ನಾನೇನು ಒತ್ತಿ ಹೇಳಬೇಕಾಗಿಲ್ಲ. ಈ ನ ಸಭೆಯಲ್ಲಿ ಒಬ್ಬರೀತಿಯಲ್ಲಿ ದೂ ಭೀಳು ಅವರಿಗಾಗಿ ದೊಡ್ಡ ಔತಣ ಬೇಕೆಂದರು ಇನ್ನು ಕೆಲವರು ಟೀ (Tea party) ನಡೆಸುವುದು ಚೆನ್ನವೆಂದರು. ಹೀ ವಾದ ಅಭಿಪ್ರಾಯಗಳು ಹೊರಬಿದ್ದವು. ಲ್ಲಿ ನಾನೂ ನನ್ನ ಅಭಿಪ್ರಾಯವನ್ನು ಸಭೆ ಆದೇನಂದರೆ, ಮಿ ಸೂಟರ್ ಸಾಹೇಬ ಕೆಲಸಗಳನ್ನು ಕೊಡಗಿನಲ್ಲಿ ನಡೆಸಿದ್ದಾರೆ ಗೆ ದೂರಕಲು ಅಸಾಧ್ಯವಾಗಿದ್ದ ಪದವಿಗಳ ರಿಗೆ ದೊರಕುವಂತೆ ಮಾಡಿದರು ; ಕೊಡಗಿ ಧ್ಯಾಯಿಕ ಸಭೆಯು ದೊರೆಯುವಂತೆ ಯತ್ನಿ ಉಪಾಧ್ಯಾಯರುಗಳ ವೇತನಗಳನ್ನು ಹೆ , ಹೀಗೆ ಉತ್ತಮ ಕೆಲಸಗಳನ್ನು ನಡೆಸಿರುವ ಯರ ನಾಮವು ಚಿರಸ್ಥಾಯಿಯಾಗಿರುವುದು ಹಾಗಾದರೆ ನಾವು ಸಭೆ ನಡೆಸುತ್ತಿರುವ ಸ ನವನ್ನು ದೊಡ್ಡದೊಡ್ಡ ಸಭೆಗಳು ನಡೆಯುವ ಹೊರಗಿನಿಂದ ಬಂದ ವಿದ್ಯಾವಂತ ಜನರು ಭಾಷ ವನ್ನು ಕೊಡಲು ಅನುಕೂಲವಾಗುವುದಕ್ಕೂ, ಯೋ ತೋರುವ ರೀತಿಯಲ್ಲಿ, ಒದಗಿಸಿ, ಅದನ್ನು ಸೂಟರ ಮಹಲ್ " ಎಂದು ಕರೆಯುವುದು ಹಿತಕ ರವೆಂದು ನಾನು ಸಲಹೆ ಕೊಟ್ಟೆನು ಆದರೆ ಮಿ, ರಾ ಯಬಹದ್ದೂರ್ ಕೆ ಅಪ್ಪಯ್ಯನವರು, ಜನರು ಒಬ್ಬ ಕಷ್ಟದಲ್ಲಿದ್ದಾರೆಂದೂ ಇಂಥಾ ಕೆಲಸಕ್ಕೆ ದುಡ್ಡಿನ ಸಹಾ ಯವು ಹೆಚ್ಚಾಗಿ ಬೇಕೆಂದೂ, ಕಾರಣಗಳನ್ನು ಸೂಚಿಸಿ, ನನ್ನ ಸಲಹೆಯನ್ನು ವಿರೋಧಿಸಿದ ಜೊತೆ ಇಲ್ಲ ಮಡಿಕೇರಿಯಲ್ಲಿ ದೊಡ್ಡ ಸಭೆ ಸೇರಬೇಕಾದರೆ, ಇಕ್ಕಟ್ಟಾದ ಈ ಸ್ಥಳ ಒಂದೇ ಇರುವುದೆಂಬುದನ್ನು ಮಿ ಅಪ್ಪಯ್ಯನವರು ಮರೆತರು ಅವರಿಗೆ ಹಣದ ಅಭಾವವೇ ಮುಖ್ಯಕಾರಣವಾಗಿ ತೋರಿತು ಹಣವು ಈ ಕ ಉಪಕ್ಕೆ ಉತ್ಪತ್ತಿಯಾಗುತ್ತದೆಂದು ನಾನು ಭಾವಿಸಿ ದ ಹೇಳುತ್ತೇನೆ ಎಂತೆಂಥಾ ಅನ್ಯದೇಶೀಜನ ಕವನ ದ ಕೆಲಸಗಳಿಗೆ ಜನರು ದ್ರವ್ಯ ಸಹಾಯಮಾಡುವಾಗ, ತ ಮಗೆ ಹಿತಕರವಾದ ಕೆಲಸಗಳನ್ನು ನಡೆಯಿಸಿದ ನಮ್ಮ ಕವಿಶಾಸನ ಜ್ಞಾಪಕಾರ್ಥವಾಗಿ ಕಟ್ಟುವ "ಟೌನ್ ಹಾಲ್" ಕಟ್ಟೋಣದ ಒಡಂಬಡಿಕೆಗಾಗಿ ಮುಕ್ತಹಸ್ತದಿಂದ ದುಡ್ಡನ್ನೀಯಲು ಅವರು ಅಂಜುವರೇ ? ಇತ್ತೀಚೆ ದರೆ ಒಡೆಯರಿಗೆ ಅರೆಕಾಸಿನಷ್ಟು ರೂಪಾಯಿಗಳು ನಾಳು ಇಷ್ಟು ಹಣವು ಕೊಡಗಿನಲ್ಲಿ ದೊರೆಯಲಾರದೇ?

ಶ್ರೀ ಸೂಟರವರ ಟೌನ್ ಹಾಲ್ ಹಣ ವಸೂಲಾಗುತ್ತಿದೆ. ಈ ಕೆಲಸ ನಡೆದು, ನಿಶ್ಚಿತ ಮಾಡಿನಲ್ಲಿ ಮೇಲಿನ ಕಟ್ಟೋಣಕ್ಕಾಗಿ ಉಪಯೋಗಿಸಬಹುದು. ಮುಖ್ಯವಾಗಿ, ಕಾರ್ಯನಿರ್ವಾಹಕರಾದ (Conveners) ಮಿ ರಾವುಬಹದೂರ್ ಮಂದಯ್ಯನವರೂ ಮಿ, ರಾವ್ ಸಾಹೇಬ್ ಚಂಗಪ್ಪನವರೂ "ಸೂಟರ ಮಹಲ್" ಎಂಬದಾಗಿ ಹೆಸರುಕೊಟ್ಟು, ಒಡಂಬಡಿಕೆ ಕಟ್ಟೋಣದ ಸಂಗತಿಯನ್ನು ಇನ್ನೊಮ್ಮೆ ಚರ್ಚಿಸಲು ಮತ್ತೊಂದು ಸಭೆಯನ್ನು ಕರೆಯಬೇಕಾಗಿ ನಾನು ಅವರನ್ನು ಬೇಡಿಕೊಂಡಿದ್ದೇನೆ ನಾವು ಬಡಾಯಿ ಸವೇಕಂದಿ ವ ಕಟ್ಟೋಣದಲ್ಲಿ ಶಿಲಾಲಿಪಿ (inscription) ಒಂದು ಕೆಲಸ ಪೂರೈಸಿದ ನಂತರ ಇರಿಸಲ್ಪಡಬೇಕಾಗುತ್ತೆ. ಅದರಲ್ಲಿ, ಮೆಟ್ಟಮೊದಲು ಯಾವ ದೇಶೀಯರಿಗೆ ಮೇಲಿನ ಹುದ್ದೆಗಳು ದೊರಕಿದವೋ, ಅವರ ಹೆಸರುಗಳನ್ನು ಕೆತ್ತಿಸುವುದು ಯೋಗ್ಯ, ಈ ಕಾರಣದಿಂದ ಮಿ ರಾವ್ ಸಾಹೇಬ್ ಕೆ ಚಂಗಪ್ಪನವರು ಮತ್ತು ಮಿ ರಾವ್ ಸಾಹೇಬ್ ದೇವಯ್ಯನವರು ಇವರ ಹೆಸರುಗಳು ಶಾಸನದಲ್ಲಿ ಇರುವುದಾದರೆ, "ಸೂಟರ ಮಹಲ್" ಗೆ ಹೆಚ್ಚು ಗೌರವವು ದೊರೆಯುವುದು

ಇದೆಲ್ಲಾ ಸರಿಯಷ್ಟೆ ! ಸೂಟರ್ ದೊರೆಗಳಲ್ಲಿಗೆ, ಹೇಳಿಯುವದಿದ್ದರೆ ನಮಗೆ ಕೌನ್ಸಿಲ್ ಸಿಕ್ಕುತ್ತಿರಲಿಲ್ಲವೋ, ಇತರ ಯಾವ ಕೆಲಸವಾಗಲೀ ನಡೆಯುತ್ತಿರಲಿಲ್ಲವೋ ಎಂದು ಕೆಲವರು ಹೇಳಬಹುದು. ಅದು ವು ಅಗೇ ಆಗಿಷ್ಟೆ ಆದರೆ, ನಡೆದ ಯಾವುದೊಂದು ಒಳ್ಳೆ ಅಥವ ಕೆಟ್ಟ ಕೆಲಸಕ್ಕೆ ಯಾರನ್ನಾದರೊಬ್ಬ ಮನುಷ್ಯರುಗಳನ್ನು ಗೊತ್ತುಮಾಡುವುದು ಲೋಕದ ರೀತಿ ಮಾತು. ಎಂದೂ ಭಾರತದ ಯುದ್ಧದಲ್ಲಿ ಸೋತವರ ಜಯಕ್ಕೆ ಕಾರಣಗಳಾವುವು ಎಂದರೆ, ಯಾವ ಉತ್ತರ ಕೊಡಬಹುದು ? ದ್ರೌಪದಿಯ ಪಾತಿವ್ರತ್ಯವೋ ಇಲ್ಲವೇ, ಕೃಷ್ಣನ ಸಂಧಾನವೋ ಇಲ್ಲವೇ ಧರ್ಮರಾಯನ ಧರ್ಮವೋ ? ಇವುಗಳಲ್ಲಿ ಯಾವ ಕಾರಣವು ಹಿತವಾದ್ದು? ಧರ್ಮರಾಯನ ಧರ್ಮವೇ ಮುಖ್ಯ ಕಾರಣವೆಂದು ಎಲ್ಲರೂ ಒಪ್ಪುವರು ಅದರಿಂದ ಮಿ ಸೂಟರ್ ಸಾಹೇಬರವರ ಪ್ರಭುತ್ವಕಾಲದಲ್ಲಿ ಯೇ ಅದ ಒಳ್ಳೇ ಕಾರ್ಯಗಳಿಗೆ ಅವರೇ ಕಾರಣರಾಗರೇ ? ಆದಕಾರಣವೇ "ಸೂಟರ್ ಮಹಲ್" ಅತ್ಯಗತ್ಯ

ಎ ಕಾಳಪ್ಪ

ಮೈಸೂರು ಗವರ್ನಮೆಂಟು ಸೆಕ್ಯುರಿಟಿ ಲೈಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಅಯ್ಯಾ ಲೇಖಕರೇ,

ನಿಮ್ಮ ಉತ್ಸಾಹಕ್ಕೆ ಮೆಚ್ಚಿದೆನು. ನಮ್ಮ ಕಂಪೆನಿಯ ನಿಯಮಗಳನ್ನು ತಿಳಿಯಲು ಅತಿ ಕುತೂಹಲಪಟ್ಟು "ಕೊಡಗು" ನಲ್ಲಿ ಪತ್ರ ಬರೆದು ಕೇಳಿದ್ದಕ್ಕೆ ನಾನು ಬಹಳ ಆನಂದಿಸಿದೆನು ನಿಮ್ಮ ಕುತೂಹಲವೇನೋ ಸರಿ ಆದರೆ ನಿಮ್ಮ ಮನದಣಿಯುವ ಹಾಗೆ ಸಕಲ ಸಲಹೆಗಳನ್ನೂ ಕೊಡಲು ಸಿದ್ಧವಾಗಿರುವ ಮಡಿಕೇರಿ ಸಬ್ ಆಫೀಸಿಗೇನೇ ಪತ್ರ ಬರೆದಿದ್ದ ಪಕ್ಷದಲ್ಲಿ "ಕೊಡಗು" ಪತ್ರಿಕೆಯ ಅಮೂಲ್ಯ ಸ್ಥಳವನ್ನು ಹಾಳುಮಾಡದಂತಾಗುತ್ತಿದ್ದಿತೇ ? ಹಾಗೆ ಇಲ್ಲ ನೀವೇನೋ ನಮ್ಮ ಪತ್ರ ಕಾಯ ಮಡಿಕೇರಿಯಲ್ಲಿ ಬರೆದು ದೋ, ಮೈಸೂರಿನಲ್ಲಿಯೋ ಎಂದು ಮುಂಚಿತವಾಗಿ ಬಹಳವಾಗಿ ಸಂಶಯ ಹುಟ್ಟಿಲ್ಲವೆ ? ಅಯ್ಯೋ ಪಾಪ, ನಾನಾ ಸಂಶಯವನ್ನು ನಿವಾರಿಸುವೆವು. ಮಡಿಕೇರಿಯಲ್ಲಿರುವ ನಮ್ಮ ಅಧಿಕಾರಿಗಳು ನನಗೆ ಬದಲಾಗಿ ನನ್ನ ಹೆಸರಿನಲ್ಲಿ ಆ ಪತ್ರವನ್ನು ಬರೆದಿರುತ್ತಾರೆ ಗೊತ್ತಾಯಿತೆ ? ಆದುದರಿಂದ ನೀವು ಅಷ್ಟೊಂದು ಕೌತುಕಪಡಬೇಕಾದಿಲ್ಲ.

ನೀವು ಉಪಯೋಗಿಸಿದ 'ದಲ್ಲಾಲ' ಎಂಬ ಶಬ್ದಕ್ಕೆ ನಿಮ್ಮ ವಿಜಾತಿಯವಾದ ಅರ್ಥವನ್ನು ನಾವು ಗ್ರಹಿಸುವುದಾದರೂ ಹೇಗೆ? ಒಂದು ವೇಳೆ ಕಷ್ಟಪಟ್ಟು ತಿಳಿದರೂ ಹೈ ಕಮಿಷನರುಗಳ ಪದವಿಗೂ ನನ್ನ ಸ್ಥಿತಿಗೂ ಹೋಲಿಸುವ ನಿಮ್ಮ ಚಾತುರ್ಯವು ಅದಾ ಎಷ್ಟು ಶ್ಲಾಘನೀಯವಾದದ್ದು ! ನಿಮಗೆ ಹುಟ್ಟಬಹುದಿ ಒಂದೇ ಆ ದುರಳ್ಪ ಬಹಳ ವಿಷಾದಿಸಬೇಕಾಗಿದೆ

ರೋಗಿಷ್ಠರೇ, ನೀವೇನೂ ಹೆದರಬೇಕಾದಿಲ್ಲ ಒಂದು ವೇಳೆ ನಿಮ್ಮ ಹೆಸರಿಗೆ ಸಾಲ ಒಂದಾದೂ ಪರ್ಸನಲ್ ಸೆಕ್ಯುರಿಟಿಯು ಆದರೆ ದೇಹದಾರ್ಢ್ಯರಿಯವೋ ಲೂ, ಸ್ಥಿರಾಸ್ತಿಗಳಮೇಲೂ ಜೀವವಿಮೆಮಾಡಿಸಿಕೊಂಡು ಹಣಕೊಡುವ ಪದ್ಧತಿಯನ್ನು ಮಾಡುವಷ್ಟು ಬುದ್ಧಿವಂತಿಗೆಯನ್ನು ಖರ್ಚು ಮಾಡುದಿವೆವು. ಹಾಗಲ್ಲದೇ ರೋಗಿಷ್ಠರನ್ನೂ, ಬಡವರನ್ನೂ ಜೀವವಿಮೆ ಮಾಡಿಸಿ ಕೊಂಡು ಕಂಪೆನಿಯನ್ನು ದಿವಾಳಿ ಎಬ್ಬಿಸುವ ಉದ್ದೇಶವು ನಮ್ಮದಲ್ಲವೇ ಅಲ್ಲ. ಧೈರ್ಯಗೆಡಬೇಡಿ

ನೀವು ಮಂದಬುದ್ಧಿಯವರೆಂದು ಹೇಳಕೂಡದು, ಏಕೆ ನಿಮ್ಮನ್ನು ವಂಚಿಸಿ ನಾವೇನೂ ನಮ್ಮ ಕಂಪೆನಿಗೆ ಸೇರಿಸಿಕೊಂಡಿಲ್ಲವಷ್ಟೆ. ನೀವೇನೋ ಮೆಸಿಯ ದೂಬ್ಬ ಪುಸ್ತಕವನ್ನು ಕುರಿತು ... ನೇ ... ಹೇಳಿದಿರಿ. ನಮ್ಮ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಪುಸ್ತಕವು ಷೇರುದಾರರುಗಳ ಅಸಾಧಾರಣವಾದ ಮೀಟಿಂಗಿನಲ್ಲಿ ತಯಾರುಮಾಡಿ ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ ... ನೇ ... ನೇ ಇಸವಿಯಲ್ಲಿ ಅಪ್ರೂವಾಗಿ ಮೈಸೂರು ... ನಿಬಂಧನಗಳ ಸೆಕ್ಷನ್ ೧೦ ಮತ್ತು ೧೩ ನೇ ಸೆಕ್ಷನ್ ಅನುಸರಿಸಿ ೧೯೧೩ ನೇ ಇಸವಿ ರೆಗ್ಯುಲೇಷನ್ ಪ್ರಕಾರ ರಿಜಿಸ್ಟರ್ ಆಗಿರುವ ಅದರ ನಕಲನ್ನು ದಯಮಾಡಿ ನೋಡಿರಿ.

ಬಡವರ ಹಣವನ್ನು ಐಶ್ವರ್ಯವಂತರ ಉಪಯೋಗಕ್ಕೆ ನಾವು ಹಾಕುವೆವೆಂದು ಲೇಖಕರುಗಳು ಹೇಳಿದರು ... ಬಂದರೆ ... ಅವರು ದಯಮಾಡಿ ತೋರಿಸಿಕೊಟ್ಟರೆ ನಾವು ಅವರಿಗೆ ಕೃತಜ್ಞರಾಗಿರುವೆವು ... ಮಾಡುತ್ತೇವೆ.

ನಿಮ್ಮ ... ಈಗ ... ಹಾಗೆ ... ನಿಮ್ಮ ... ಒಂದು ... ಪರಿಹರಿಸಿಕೊಳ್ಳಬೇಕಾಗಿ ಪ್ರಾರ್ಥನೆ.

ಪಿ. ... , ಅಯ್ಯಣ್ಣ, ಚೀಫ್ ಏಜಂಟ್,

ಮಡಿಕೇರಿ.

WHY BOTHER!

P Sam & Co, Mysore, who ha[s] just opened a Branch also in Merc[ara]

WILL CARRY

all kinds of your goods and luggage and from any parts in Coorg at re[asonable] reasonable charges. Their promptn[ess] is fully deserving a trial from you. Spec[ial] reduced rates for manure crop requisit[es] supplied.

ಕೊಡಗಿನ ಎಲ್ಲಾ ಪ್ರಾಂತ್ಯಗಳಿಗೂ ಸಾಮಾನುಗಳ ಕಳುಹಿಸಿಕೊಡುತ್ತಿದ್ದ

ಸ್ಯಾಂ ಅಂಡ್ ಕಂಪೆನಿಯವರು

ಈಗ ಮಡಿಕೇರಿಯಲ್ಲಿ ಒಂದು ಬ್ರಾಂಚನ್ನು ಸ್ಥಾಪಿಸಿದ್ದಾ[ರೆ]

ಅವರು ಸಕಾಲದಲ್ಲಿ ಮಿತವ್ಯಯದಿಂದ ಕ್ರಮಪೂರ್ವಕವಾಗಿ ಸಾಮಾನುಗಳನ್ನು ಕಳುಹಿಸಿ ಕೊಡುವವರಾ[ಗಿ]ರುವುದರಿಂದ ನಿಮ್ಮ ಕೆಲಸಗಳಿಗೆ ಅವರನ್ನೊಂದಾವ[ರ್ತಿ] ಪರೀಕ್ಷಿಸಿ ತೋಟಗಳಿಗೆ ಬೇಕಾದ ಸಾಮಗ್ರಿಗಳನ್ನು ಕ[ಡಿಮೆಯಲ್ಲಿ] ಮಾಡುತ್ತಾರೆ

ಗೊಬ್ಬರಕ್ಕೆ ಕಮ್ಮಿಯಾದ ಸ್ಪೆಷಲ್ ರೇ[ಟು]

HEALTH IS WEALTH.

WANTED all to improve hea[lth] strength and vitality and thus save [the] nation from physical degeneracy. S[end] half-anna stamp and get 13 specim[en] photographs with full particulars from

Director Physical Cultu[re]

P.O. Basavanagudi,

BANGALORE CITY.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು ಡಾಕ್ಟರ್ ಯು. ರಾಮರಾವ್,

ಎಮ್. ಎಲ್. ಸಿ ಯವರು

ಆರೋಗ್ಯಚಂದ್ರಿಕೆಯು ಆರೋಗ್ಯ ಮತ್ತು ಶುಚಿ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ಕೊಡುವುದಕ್ಕಾಗಿ ಏರ್ಪಡಿಸಿದ

ಒಂದು ಸಚಿತ್ರ ಮಾಸಪತ್ರಿಕೆ

ಈ ನಮ್ಮ ಮೊದಲನೇ ಸಂಚಿಕೆಯಲ್ಲಿ ಕಾಣಿಸಿದ ವಿಷಯಗಳು

ಜನಾಭಿಪ್ರಾಯಗಳು—1 ಸ್ವವಿಷಯ 2 ಆರೋಗ್ಯವೇ ಭಾಗ್ಯ 3 ಮಲೇರಿಯಾ ಎಂಬ ಸೊಳ್ಳೆಗಳ ... ದಕ್ಕೆ, 4. ಮರುಕಳಿಸುವ ಜ್ವರ 5 ಗರ್ಭಿಣಿಯರ ಆರೋಗ್ಯ, 6. ಎಳೆಮಕ್ಕಳಿಗೆ ಆಹಾರಕೊಡುವುದು, 7. ಕೂಳಿಗೆ ಬರುವ ಸಿಳ್ಳ, ಅದರ ಲಕ್ಷಣಗಳು ಮತ್ತು ಚಿ... 8 ಕೂಸು ಅಳುವುದೇಕೆ ? 9. ಕಣ್ಣುಗಳಿಗೆ ವಿಶ್ರಾಂತಿ ... ಹಲ್ಲುಗಳು, 11. ಕೂದಲಿನ ಪೋಷಣೆ 12 ಸಾರಾಯ ... ರೇನು ? 13 ನೊಣಗಳಿಂದಾಗುವ ಅಪಾಯಗಳು ಕಾಫಿ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ... ಲಗು ವರ್ಷಕ್ಕೆ 1—8—0 ಬಿಡುಪತ್ರಿಕೆ ಒಂದಕ್ಕೆ 0-...

ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯಚಂದ್ರಿಕೆ' ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇ[ಕು]

ಪತ್ರವ್ಯವಹಾರ ವಿಳಾಸ—ಮ್ಯಾನೇಜರ್,

ಆರೋಗ್ಯ ಚಂದ್ರಿಕೆ ಆಫೀ[ಸು]

ಟಪ್ಪಾಲು ಪೆಟ್ಟಿಗೆ ನಂ 105 323, ತಂಬುಚೆಟ್ಟಿ ಬೀದಿ, ಮದ[ರಾಸು]

ಏಜೆಂಟರು :— ಮ.ರಾ.ರಾ. ಎಸ್ ಕೆ. ಕೃಷ್ಣರಸ್ವ ...

[12—7] ಭಾಗಮಂಡಲ, ...

For your requirements of high grade Arms, Ammunition, Wine and Spirits,

APPLY TO —

Mc. DOWELL Co., Ltd.,

24—24 MERCAR[A]

Printed & Published by D S. Krishnaswami Proprietor, at Sreenivas Electric Press, for "Kodagu" Ltd., Mercara—12 10 1923

If not delivered please return to "Kodagu Office, Mercara"
Reg. No. M. 1550.

ಕೊಡಗು.

ಸತ್ಯೇನ ಧೂತದಯಯಾ ವಿದ್ಯಾನೀತಿ ಪ್ರಯುಕ್ತಯಾ । ಏಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದಃ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು. "ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ"

ಸಂಪುಟ ೩] ಕೊಡಗು, ಸನ್ ೧೯೨೩ ನೇ ಇಸವಿ ಅಕ್ಟೋಬರು ತಾರೀಖು ೧೯ ನೆಯ ಶುಕ್ರವಾರ. [ಸಂಚಿಕೆ ೨೧

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನಡಾ ಪ್ರಿಂಟಿಂಗ್ ...ಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ...ರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ... ಜಾಗ್ರತೆಯಾಗಿಯೂ ಸುಲಭಧಾರಣೆಗೂ ಮಾಡಿ ...ತ್ತೇವೆ

...rinivas Electric Press,
MYSORE.

ಜೀವವಿಮೆ.

...ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಯ ಯಜ...ನು ಮೃತಪಟ್ಟರೆ ಉಂಟಾಗಬಹುದಾದ ತೊಂದರೆಗ...ನಿವಾರಿಸುವುದೇ ಜೀವವಿಮೆ.

...ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾ...ಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ.

...ಆಕಸ್ಮಿಕ ಘಟನೆ ದಶದಲ್ಲಿ ಯಾವ ಲೋಪವೂ ಬಾರ...ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ...ರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪೆನಿ.

...ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ...ವಾಗಿ ಹಣವನ್ನು ಒದಗಿಸಿ ಸ್ಥಿರಾಸ್ತಿಗಳನ್ನೂ ಕೊಂಡು ...ತ್ತು ದೇಶದ ಆರ್ಥಿಕ ಸಂಪತ್ತನ್ನು (Economic ...dition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇ...ದೆ।

...ಸ್ತ್ರೀಪುರುಷ ರೀರ್ವರೂ ಜೀವವಿಮೆಯ ಸೌಕರ್ಯಗ ಪಡೆಯಲು ಅನುಕೂಲವನ್ನು ಒದಗಿಸುವ ಸಂಸ್ಥೆಯಾ ಇದೊಂದೆ

ಒಂದು ದೇಶದ ಹಣವು ಮತ್ತೊಂದು ದೇಶದಲ್ಲಿ ...ವಾಗದಂತೆ ನೋಡಿಕೊಂಡು ವಿಮೆದಾರರ ಭೂಸಂಪ... ವೃದ್ಧಿಗೊಳಿಸುವ, ಸಹಕಾರಸಂಘ, ಬೇಂಕ ಮುನಿ...ಲಟಿ ಮುಂತಾದ ಸಾರ್ವಜನಿಕ ಸಂಸ್ಥೆಗಳಿಗೆ ಸಾಲ ಕೊಡುವ ಅನುಕೂಲತೆಯುಳ್ಳ ಕಂಪೆನಿ ಇದೊಂದೆ.

...ಚ್ಚಿನ ಮಾಹಿತಿಯನ್ನು ಕನ್ನಡ ನಾಡುಗಳ ಛೀಫ್ ...ರಾದ ಈ ಕೆಳಗಿನ ವಿಳಾಸದಾರರಿಂದ ಪಡೆಯ...ಬಹುದು.

ಬಿ. ಎಸ್. ಆರಾಧ್ಯ,
...ಟ್ರಿಕ್ ಅಂಡ್ ಮ್ಯಾಟೀಕ್ ಆಫೀಸ್ ಮಡಿಕೇರಿ.

...ಲ ತನದಲ್ಲಿ ಹೆಚ್ಚು ಲಾಭ ಪಡಕೊಳ್ಳಿ.

...ಕ್ಕೆ ... ...ಶಾಲೆಯಲ್ಲಿ ಸುಧಾರಿ...ತೆಗಳೂ ಕಬ್ಬಿನ ಗಾಣಗಳೂ, ... ಯಂತ್ರ ಇತ್ಯಾದಿ ಒಕ್ಕಲಿಗರಿಗೆ ...ಲಾಭದಾಯಕವೂ ಆಗುವವುಗಳೇ ಸಾ...ಗಳು ತಯಾರಾಗುತ್ತವೆ ...ವಿರಾರು ಪೈಕರು ಮಾಡುತ್ತಿರುವ ...ತ್ಯಾಟಲಾಗ್ ತರಿಸಿಕೊಳ್ಳಿ.

...ಶ —

...ಕಿರ್ಲೋಸ್ಕರ ಬಂಧು ಲಿಮಿಟೆಡ್,
ಪೋ. ಕಿರ್ಲೋಸ್ಕರವಾಡಿ,
ಜಿಲ್ಲಾ—ಸಾತಾರಾ

When you think of going to Bombay.
THINK OF

THE WELCOME HOTEL.

Girgaum Back Road, BOMBAY.

Most airy accomodation—Most Central situation—Excellent Meals Every Convenience.

ವೆಲ್ಕಂ ಹೋಟೇಲ್.

ಗಿರ್ಗಾಂವ ಬ್ಯಾಕ್‌ರೋಡ್, ಬೊಂಬಾಯಿ.

ರೈಲಿನಿಂದಿಳಿದೊಡನೆಯೇ ಅಲ್ಲಿ ಇಲ್ಲಿಯೊದು ಸುತ್ತದೆ, ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಯೋಗ್ಯವಾದ ಕೋಣೆಗಳು ಬೇಕೆಂದಿದ್ದರೆ ಬೊಂಬಾಯಿಪಟ್ಟಣದ ಮಧ್ಯಸ್ಥಳದಲ್ಲಿರುವ ಮೇಲ್ಕಂಡ ಹೋಟೇಲಿನಲ್ಲಿಳಿಯಲು ಮರೆಯಬೇಡಿರಿ. ಯೋಗ್ಯವಾದ ಊಟ, ಗಾಳಿಗನುಕೂಲವಾದ ಕೊಠಡಿ 15 ಮಿನಿಟಿಗೊಮ್ಮೆ ತಿರುಗುವ ಟ್ರಾಮಿನ ಸೌಕರ್ಯ, ಅಂತೂ ಪ್ರಯಾಣಿಕರಿಗೆ ಉಳಿದುಕೊಳ್ಳಲು ಅನುಕೂಲವಾದ ಉಡುಪಿ ಬ್ರಾಹ್ಮಣರ ಭೋಜನಾಲಯ

ಹೆಚ್. ಶ್ರೀನಿವಾಸರಾವ್,
[12—9] ಮೇನೇಜರ್.

HEALTH IS WEALTH.

WANTED al' ‑ improve health strength and vitality and thus save our nation from physical degeneracy Send half-anna stamp and get 13 specimen photographs with full particulars from

Director Physical Culture,
P O Basavanagudi,
BANGALORE CITY

ಆರೋಗ್ಯ ಚಂದ್ರಿಕೆ.

ಮಾಸಿಕ.

ಸಂಪಾದಕರು ಡಾಕ್ಟರ್ ಯು. ರಾಮರಾವ್,
ಎಮ್. ಎಲ್. ಸಿ ಯವರು

ಆರೋಗ್ಯಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ

ಒಂದು ಸಚಿತ್ರ ಮಾಸಪತ್ರಿಕೆ.

ಈ ನಮ್ಮ ಮೊದಲನೇ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು

ಜನಾನುವಾಕ್ಯಗಳು—1 ಸ್ವವಿಷಯ, 2. ಆರೋಗ್ಯವೇ ಭಾಗ್ಯ, 3. ಮಲೇರಿಯಾ ಎಂಬ ಮೈಲಿಜ್ವರಗಳ ನಿವಾರಣೆ, 4. ಮರುಕೊಳಿಸುವ ಜ್ವರ, 5. ಗರ್ಭಿಣಿಯರ ಆರೋಗ್ಯ, 6. ಎಳೆಮಕ್ಕಳಿಗೆ ಆಹಾರಕೊಡುವುದು, 7. ಕೂಸುಗಳಿಗೆ ಬರುವ ಸೆಳವು, ಅದರ ಲಕ್ಷಣಗಳು ಮತ್ತು ಚಿಕಿತ್ಸೆ, 8. ಕೂಸು ಅಳುವುದೇಕೆ ? 9. ಕಣ್ಣುಗಳಿಗೆ ವಿಶ್ರಾಂತಿ, 10. ಹಲ್ಲುಗಳು, 11. ಕೂದಲಿನ ಪೋಷಣೆ, 12 ಸಾರಾಯವೆಂದರೇನು ? 13 ನೊಣಗಳಿಂದಾಗುವ ಅಪಾಯಗಳು 14 ಕಾಫಿ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1—8—0 ಬಿಡಿಪತ್ರಿಕೆ ಒಂದಕ್ಕೆ 0-2-0.

ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು "ಆರೋಗ್ಯಚಂದ್ರಿಕೆ" ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು

ಪತ್ರವ್ಯವಹಾರ ವಿಳಾಸ— ಮೇನೇಜರ್
ಹೆಲ್ತ್ ಅಥವಾ ಆರೋಗ್ಯ ಚಂದ್ರಿಕೆ ಆಫೀಸು,
ಟಪ್ಪಾಲು ಪೆಟ್ಟಿಗೆ ನಂ. 165, 323 ತಂಬುಚೆಟ್ಟಿ ರೋಡ, ಮದರಾಸ್
ಏಜೆಂಟರು:—ಮು ಆರ್. ಎಸ್ ಕೆ. ಈಶ್ವರಪ್ಪ,
[12—8] ಭಾಗಮಂಡಲ, ಕೊಡಗು.

WHY BOTHER

P Sam & Co, Mysore, who have just opened a Branch also in Mercara

WILL CARRY

all kinds of your goods and luggage to and from any parts in Coorg at very reasonable charges. Their promptness is fully deserving a trial from you. Special reduced rates for manure Crop requisities supplied. 4—2

ಕೊಡಗಿನ ಎಲ್ಲಾ ಪ್ರಾಂತ್ಯಗಳಿಗೂ ಸಾಮಾನುಗಳನ್ನು ಕಳುಹಿಸಿಕೊಡುತ್ತಿದ್ದ

ಸ್ಯಾಂ ಅಂಡ್ ಕಂಪನಿಯವರು

ಈಗ ಮಡಿಕೇರಿಯಲ್ಲಿ ಒಂದು ಬ್ರಾಂಚನ್ನು ಸ್ಥಾಪಿಸಿದ್ದಾರೆ. ಅವರು ಸಕಾಲದಲ್ಲಿ ಮಿತವ್ಯಯದಿಂದ ಶ್ರದ್ಧಾಪೂರ್ವಕವಾಗಿ ಸಾಮಾನುಗಳನ್ನು ಕಳುಹಿಸಿ ಕೊಡುವವರಾಗಿರುವುದರಿಂದ ನಿಮ್ಮ ಕೆಲಸಗಳಿಗೆ ಇವರನ್ನೊಂದಾವರ್ತಿ ಪರೀಕ್ಷಿಸಿ. ತೋಟಗಳಿಗೆ ಬೇಕಾದ ಸಾಮುಗ್ರಿಗಳನ್ನು ಸಪ್ಲೈ ಮಾಡುತ್ತಾರೆ

ಗೊಬ್ಬರಕ್ಕೆ ಕಮ್ಮಿಯಾದ ಸ್ಪೆಷಲ್ ರೇಟು.

ಸುಂದರ ವಿಲಾಸ ಪ್ರೆಸ್, ಮಡಿಕೇರಿ.

ಕೊಡಗು ಮಹಾ ಜನರನ್ನು ಕುರಿತು ಕೊಡಗಿನ ಪ್ರಧಾನಪಟ್ಟಣವಾದ ಮಡಿಕೇರಿಯಲ್ಲಿ ಸದ್ಯ ಸ್ಥಾಪಿತವಾಗಿರುವ ನನ್ನ ಮುದ್ರಾಲಯವು ತಮ್ಮನ್ನು ಸೇವಿಸಲು ಸಿದ್ಧವಾಗಿದೆ. ಅಂದವಾದ ಅಕ್ಷರಗಳಿಂದ, ಮುದ್ದಾದ ಮುದ್ರಣದಿಂದ ಸೊಗಸಾದ ಕಾಗದಗಳಲ್ಲಿ ಮುದ್ರಿಸುವ ನೂತನ ಅನುಕೂಲತೆಗಳನ್ನು ಸಿದ್ಧಪಡಿಸಿದೆ

ಪರಸ್ಥಳಗಳಿಗೆ ಎಲ್ಲಾ ಅನುಕೂಲತೆಗಳನ್ನು ಒದಗಿಸಲು ಏರ್ಪಡಿಸಿದೆ ದೇಶೀಯ ಮುದ್ರಾಲಯಕ್ಕೆ ಸ್ವದೇಶ ಬಂಧು ಭಗಿನಿಯರು ಪ್ರೋತ್ಸಾಹ ಕೊಡಬೇಕಾಗಿದೆ.

ಬಗೆ ಬಗೆಯ ಸ್ಟೇಶನರಿ, ಸಾಮೂಹಿಕ ಶಾಲಾ ಮಕ್ಕಳ ಸಾಹಿತ್ಯಗಳೆಲ್ಲವೂ ಶೇಖರಿಸಿ ಇಡಲ್ಪಡುತ್ತವೆ. ನಮ್ಮ ದರಗಳು ಅಲ್ಪ! ನಮ್ಮ ಕೋರಿಕೆ, ಸೇವೆ! ವಿಶೇಷ ಲಾಭವಲ್ಲ

ವಿಶೇಷ ಮಾಹಿತಿಗೆ ಮುದ್ರಾಲಯದ ಅಧಿಕಾರಿಗಳಿಗೆ ಬರೆದು ತಿಳಿದುಕೊಳ್ಳುವುದು

ವಿ ಆರ್. ತಣ್ಣಪ್ಪ ಮೊದಲಿಯಾರ್,
ಸುಂದರ ವಿಲಾಸ ಪ್ರೆಸ್. ಪ್ರೊಪ್ರೈಟರ್
ಮಡಿಕೇರಿ. 12—12
ತಾ|| 10—9—23,

ವರ್ತಮಾನ ಸಂಗ್ರಹ.

ಒಳದೇಶ.

ತುಯ್ಯಂಗೇರಿನಾಡು ಅವಂದೂರು ಗ್ರಾಮದಲ್ಲಿರುವ ಕಾಳೇರಮ್ಮನ ಕಾರ್ಯಪ್ಪನೆಂಬವರು ಹಕ್ಕಿ ಬೇಟೆಗೆ ಹೋದಲ್ಲಿ ಕಾಲುಕಪ್ಪಿ ಬಿದ್ದಾಗ ಕೈಯ್ಯಲ್ಲಿದ್ದ ಕೋವಿಯಿಂದ ಗುಂಡು ಹಾರಿ ತನಗೆ ತಗಲಿ ಮೃತರಾದರೆಂದು ತಿಳಿಯ ಬರುತ್ತದೆ.

ಬಿಹಾರ್ ರಿಲೀಫ್ ಫಂಡಿಗಾಗಿ ವೈಸರಾಯರವರು ಹಿಂದೂದೇಶದವರಿಗೆ ಮಾಡಿರುವ ಅಪ್ಪೀಲನ್ನು ಪ್ರತಿಯನ್ನು ಕಮಿಷನರವರು ನಮಗೆ ಕಳುಹಿಸಿ ನಮ್ಮ ದೇಶದವರೂ ಅದಕ್ಕೆ ಸಹಾಯಮಾಡಬೇಕೆಂದು ಕೇಳಿರುತ್ತಾರೆ. ಮಡಿಕೇರಿಯಲ್ಲಿರುವ ಸ್ಪೆನ್ಸರ್ ಕಂಪೆನಿಯ ಮೇನೇಜರವರಿಗೆ ಈ ಚಂದಾ ತೆಗೆದುಕೊಳ್ಳುವ ಅಧಿಕಾರ ಕೊಟ್ಟಿರುವರು.

ಈ ವರ್ಷ ಕೊಡಗಿನ ಹಾಕಿ ಟೋರ್ನಮೆಂಟು ಮಡಿಕೇರಿಯಲ್ಲಿ ನವಂಬರು ತಾರೀಖು 5 ರಿಂದ 22 ರ ವರೆಗೆ ನಡೆಯುವುದೆಂದೂ, ಪಂದ್ಯಾಟದಲ್ಲಿ ಭಾಗಿಗಳಾಗಲು ಇಷ್ಟವಿರುವ ಟೀಮುಗಳು 5 ರೂಪಾಯಿ ದಾಖಲಾತಿ ಫೀಸಿನೊಂದಿಗೆ ತಮ್ಮ ಅಪ್ಲಿಕೇಶನನ್ನು ಅಕ್ಟೋಬರು ತಾ|| 22 ರೊಳಗೆ ಕಳುಹಿಸತಕ್ಕದೆಂದೂ, ಪಂದ್ಯಾಟಗಳ ತಾರೀಖುಗಳ ನಿಷ್ಕರ್ಷೆಯು ತಾ|| 22-10-23 ಮಾಡಲ್ಪಡುವುದೆಂದೂ ಸೆಕ್ರೆಟರಿಯವರು ತಿಳಿಸುತ್ತಾರೆ.

ತಾ|| 13—10—23 ರ ರಾತ್ರಿ ಮಡಿಕೇರಿ ಹೈಸ್ಕೂಲು ಹಾಲಿನಲ್ಲಿ ಪ್ರವಾಹದ ಹಾವಳಿಯಿಂದ ಕಷ್ಟಪಡುತ್ತಿರುವವರ ಸಹಾಯಾರ್ಥವಾಗಿ ಬಾಲಕನ್ಯಾರ್ಗ ಸಮಾಜದವರು 'ಸತ್ಯಹರಿಶ್ಚಂದ್ರ' ನಾಟಕವನ್ನು ಅಭಿನಯಿಸಿದರು

ಕಲಕಾವೇರಿಯಲ್ಲಿ ತಾರೀಖು 17 ನೇ ದಿನ ಮಧ್ಯಾಹ್ನ ತೀರ್ಥ ಒಂದುದರಿಂದ ಒಲಮುರಿಯಲ್ಲಿ ಜಾತ್ರೆಯು ತಾರೀಖು 18 ನೇ ದಿನ ಗುರುವಾರ ನಡೆಯಿತು

ಕಟಿಯತ್ತನಾಡು ಚೇಲಾವರ ಗ್ರಾಮದಲ್ಲಿ ಪಟ್ಟಚರವಂಡ ಮೊಣ್ಣಪ್ಪನವರ ಮಗ ಮುತ್ತಪ್ಪ ವಗೈರೆ ಕೆಲವರು ಬೇಟೆಗೆ ಹೋಗಿದ್ದಾಗ ಘಾಯವಾದ ಹಂದಿಯೊಂದು ಮುತ್ತಪ್ಪನವರ ಮೇಲೆ ಬಿದ್ದು ಘಾಯಪಡಿಸಿದೆ. ಅನಂತರ ಅದು ಕೊಲ್ಲಲ್ಪಟ್ಟಿತು. ಘಾಯಪಟ್ಟವರು ಆಸ್ಪತ್ರೆಯಲ್ಲಿ ದಾ[illegible]ತ ವರ್ತಮಾನಬಂದಿದೆ

ಫ್ರೇಜರ್‌ಪೇಟೆಯಲ್ಲಿ ಒದಲಿಗೆ ವಾರುಪತ್ತೆ ಕೆಲಸ ನೋಡುತ್ತಿದ್ದ ಮೆ|| ಕೋಳೆರ ಕುಟ್ಟಪ್ಪನವರ ಕೌನ್ಸಿಲ್ ಸಂಬಂಧದ ಕೆಲಸ ನೋಡುವ ಕ್ಲಾರ್ಕ ಕೆಲಸಕ್ಕೆ ಮಡಿಕೇರಿಗೆ ವಾಪಸು ಬಂದಿರುವರು ಫ್ರೇಜರ್‌ಪೇಟೆಯಲ್ಲಿ ತತ್ಕಾಲಕ್ಕೆ ನಾಡ್‌ಕ್ಲಾರ್ಕ ವಾರುಪತ್ತೆಗೆ ಚಾರ್ಜನಲ್ಲಿರುತ್ತಾರಂತೆ.

ಕೊಡಿಪೇಟೆಯಲ್ಲಿ ಇರುವ ಕೊಡಗರು ಮತ್ತು ಅಲ್ಲಿ ಇರುವ ಸ್ಕೂಲ್ ಮಾಸ್ಟರುಗಳು ಸೇರಿ ಇದೇ ತಾರೀಖು 1 ರಿಂದ ಒಂದು ರೀಡಿಂಗ್ ರೂಮ್ 'ಕ್ಲಬ್' ಏರ್ಪಡಿಸಿ ಅದಕ್ಕೆ ಕೊಡ್ಲಿಪ್ಯಾಟೆ ಕೊಡಗರಿಡಿಂಗ್ ರೂಮು (Coorg's Club Kodlipett) ಎಂದು ಹೆಸರಿಟ್ಟು ಅಲ್ಲಿನ ಅಸಿಸ್ಟೆಂಟ್ ಮಾಸ್ಟರ್ ಮೆ|| ಮಾಡೇರ ಕುಟ್ಟಪ್ಪನವರ ಸೆಕ್ರೆಟರಿಯಾಗಿ ನೇಮಕ ಮಾಡಿ ಈಗ ಪ್ರತಿದಿನವೂ ಆರುವರೆಯಿಂದ ಆಟಪಾಠಗಳೊಡನೆ ಕಾಲವನ್ನು ಕಳೆಯುತ್ತಾರೆಂತಲೂ, ಸದ್ರಿ ಸೆಕ್ರೆಟರಿಯವರು ಅಲ್ಲಿಯ ಮತ್ತು ನೆರೆಹೊರೆಯ ಈ ಕ್ಲಬ್ಬಿಗೆ ಸೇರ ಸದ್ರಿ ರೀಡಿಂಗ್ ರೂಮನ್ನು ಪ್ರೋತ್ಸಾಹಪಡಿಸಬೇಕಾಗಿ ಕೋರುತ್ತಾರೆ

ಮಡಿಕೇರಿ ಮತ್ತು ವೀರರಾಜೇಂದ್ರಪ್ಯಾಟೆಗೆ ಹೊಸದಾಗಿ ಏರ್ಪಾಡಾಗಿರುವ ಮೋಟಾರು ಬಸ್ಸು ಸರ್ವೀಸು ಕ್ರಮಕ್ಕೆ ಹೊಂದುವುದಾಗಿಯೂ, ಈ ಬಗ್ಗೆ ಬಸ್ಸುಗಳನ್ನು ತರುವುದಕ್ಕೆ ಕಂಪೆನಿಯವರ ಕಡೆಯವರು [illegible]ದ್ರಾಸಿಗೆ ಹೋಗಿರುವುದಾಗಿಯೂ ತಿಳಿಯಬರುತ್ತೆ ನಮ್ಮ ದೇಶದ ಯುವಕರಿಗೆ ಈ ಕಂಪೆನಿಯಲ್ಲಿ ನವುಕರರಾಗಿ ಸೇರುವುದಕ್ಕೆ ಇದು ಒಂದು ಒಳ್ಳೆಯ ಜೀವನದ ದಾರಿಯಾಗಿದೆ. ಡ್ರೈವರು, ಕಂಡಕ್ಟರ್, ಕ್ಲೀನರ್ ವಗೈರೆರು ಬೇಕಾದ್ದರಿಂದ ಅಪ್ಲಿಕೇಶನ್ ದಾಖಲುಮಾಡಿಕೊಂಡರೆ ಆವರವರ ಯೋಗ್ಯತಾನುಸಾರ ಕೆಲಸ ಸಹ ಸಿಕ್ಕಬಹುದು

ಪೊನ್ನಂಪೇಟೆದಲ್ಲಿ ಎತ್ತು ಕಟ್ಟಿ ಎಳೆಯುವ ಸ್ಟೀಮ್ ರೋಲರಿನ ಕೆಳಗೆ ಕೆಲಸಮಾಡಿಕೊಂಡಿದ್ದ ಒಬ್ಬ ಆಳು ಆಕಸ್ಮಾತವಾಗಿ ಆ ಇಂಜನಿನೀಗೆ ಸಿಕ್ಕಿ ಮೃತಪಟ್ಟದ್ದಲ್ಲದೆ, ಇನ್ನೊಬ್ಬನಿಗೂ ಸಹ ಕಠಿಣವಾದ ಗಾಯವೂ ಸಂಭವಿಸಿದೆಯಂತೆ ಈ ಅಪಾಯಗಳಿಗೆ ಅವರ ಅಜಾಗ್ರತೆಯೇ ಕಾರಣವೆಂದು ಕಾಣುತ್ತೆ.

ಕೆಲವು ತಿಂಗಳುಗಳಿಂದ ನಿಂತು ಹೋಗಿದ್ದ ಗೋಣಿಕೊಪ್ಪಲು ಮಗ್ಗದ ಕೆಲಸವು ಈಗ ಪುನಃ ಹೊಸದಾಗಿ ಬಟ್ಟೆ ನೆಯ್ಯಲು ಪ್ರಾರಂಭಿಸಿರುವುದು ನೋಡಿದರೆ ಇದು ಅಂದಿನವಾಗಿಯೂ ಮುಂದೆನಡುವ ಹಾಗೆ ನಡಬೇಕು

ಇದೇ ತಿಂಗಳು ೩ ನೇ ತಾರೀಖಿನಿಂದ ಪ್ರಾರಂಭವಾದ ಹಾಕಿ ಟೋರ್ನಾಮೆಂಟು ಪೊನ್ನಂಪ್ಯಾಟೆ ಹಾಕಿ ಮಾಳದಲ್ಲಿ ಈ ಕೆಳಗೆ ನಮೂದಿಸಿದ ಟೀಮುಗಳಿಂದ ಬಹಳ ವಿಜೃಂಭಣೆಯಿಂದ ಆಡಲ್ಪಟ್ಟವಾಗಿ ತಿಳಿಯುತ್ತೇವೆ

(1) ಪೊನ್ನಂಪ್ಯಾಟೆ, (2) ಗೋಣಿಕೊಪ್ಪಲು, (3) ತಾರೆಸ್ಟ್, (4) ಪೊಳ್ಳಿಬೆಟ್ಟ, (5) ಅಮ್ಮತ್ತಿ, (6) ವೀರರಾಜೇಂದ್ರಪ್ಯಾಟೆ ಸ್ಕೂಲ, (7) ವೀರರಾಜೇಂದ್ರಪ್ಯಾಟೆ ಯೂನಿಯನ್, (8) ಮನೆಯಪಂಡ ಯಂಗ್‌ಮೆನ್ಸ್ ಎಸೋಸಿಯೇಶಿಯನ್, (9) ಎಲಿಮೆಂಟರಿ ಸ್ಕೂಲು. ಪ್ರತಿ ಎದುರು ಟೀಮು ಒಂದು ಇಲ್ಲವೇ ಎರಡು ಗೋಲಿನಿಂದ ಮಾತ್ರ ಸೋಲಲ್ಪಟ್ಟಾಗ್ಯೂ ತಾರೆಸ್ಟ್ ಟೀಮು ಪೊಳ್ಳಿಬೆಟ್ಟ ಟೀಮಿನವರಿಂದ 5 ಗೋಲಿನಿಂದ ಸೋಲಿಸಲ್ಪಟ್ಟರಂತೆ ಈ ತಮಾಷೆ ನೋಡಲಿಕ್ಕಾಗಿ ಪ್ರತಿ ದಿನವೂ 400-500 ಜನಕ್ಕೆ ಕಮ್ಮಿ ಇಲ್ಲದೆ ನೆರೆಯುತ್ತಿದ್ದರಲ್ಲದೆ ಆಕೈರ ದಿನ 1000 ಜನರವರೆಗೂ ನೆರೆದಿದ್ದರೆಂತಲೂ, ದಕ್ಷಿಣ ಕೊಡಗಿನ ತಾಲ್ಲೂಕು ಸುಭೇದಾರರಾದ ಮೆ|| ಎನ್. ಬಿ ಕಾಳಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿ ಕಪ್ಪನ್ನು ಎಲಿಮೆಂಟರಿ ಸ್ಕೂಲಿನವರ ಟೀಮಿಗೆ ಕೊಟ್ಟರಂತೆ

ಕೇವು ತಿಂಗಳುಗಳಲ್ಲಿ ಮಳೆಯು ಜೋರಾಗಿ ಹೊಡೆದು ಜನರಿಗೆ ನಾನಾತರಹದ ಕಷ್ಟಗೊಳಪಡಿಸಿ ಈಗ ಮಳೆ ಇಲ್ಲದೆ ದೇಶದವರೆಲ್ಲರೂ, ಬೆಳೆಯ ಗತಿಯನ್ನು ನೋಡಿ ಬಾಯಿ ಬಡಿಯುತ್ತಿದ್ದಾರೆ.

ಹಿಂದೂದೇಶ.

ಪಂಡಿತ ಮದನಮೋಹನ ಮಾಲವೀಯರು ಫಿಜಾಬಾದ್ ಡಿವಿಜನಿನಿಂದ ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರುತನಕ್ಕೆ ಉಮೇದ್ವಾರರಾಗಿ ನಿಲ್ಲುವರೆಂದು ಅಲಹಾಬಾದಿನ ಲೀಡರ್ ಪತ್ರಿಕೆಯು ಸೂಚಿಸುತ್ತದೆ.

ಗವರ್ನಮೆಂಟ್ ಉದ್ಯೋಗಸ್ಥರು ಕೌನ್ಸಿಲು ಮೆಂಬರುತನಕ್ಕೆ ಉಮೇದ್ವಾರರಾಗಿ ನಿಲ್ಲುವವರಿಗೆ ಓಟುಕೊಡಿ ಎಂದು ಜನರಿಗೆ ಬೋಧಿಸಕೂಡದೆಂದು ಬಂಗಾಳ ಮತ್ತು ಅಸ್ಸಾಮ್ ಸರ್ಕಾರದವರು ಪ್ರಸಿದ್ಧ ಪತ್ರಿಕೆಗಳನ್ನು ಪ್ರಕಟಿಸಿರುವರು

ಸೆಕ್ಯೂರಿಟಿ ಕೊಡಲಿಲ್ಲವಾದ ಕಾರಣ ಪಾರ್ಜರಿದಕ್ ಕಮಿಟಿಯ ಮೆಂಬರಾದ ಮೆ|| ಹರ್ನಾಮ್‌ಸಿಂಗ್ ಎಂಬುವರ ಮುಂದಾಳೊಬ್ಬರಿಗೆ ಒಂದು ವರ್ಷ ಸಜೆ ವಿಧಿಸಲ್ಪಟ್ಟಿದೆ

ನಾಭ ಪ್ರಾಂತ್ಯವು ಹೊಸ ಬ್ರಿಟಿಷ್ ಅಧಿಕಾರಿಯ ಅಧೀನದಲ್ಲಿರುವದು ಕಷ್ಟವೆಂದು ಕೋರಿಸಿದ ಅಲ್ಲಿನ ಅನೇಕ ಉದ್ಯೋಗಸ್ಥರನ್ನು ಡಿಸ್‌ಮಿಸ್ ಮಾಡಿರುವರೆಂತಲೂ ಅವರಲ್ಲಿ ಹೈಕೋರ್ಟ್‌ಜಡ್ಜರಾದ ಸರ್ದಾರ್ ಬಾಚಾಕಸ್ಸಿಂಗ್ ರವರು ಒಬ್ಬರೆಂತಲೂ ವರ್ತಮಾನ

ರಾಜದ್ರೋಹದ ಲೇಖನಗಳನ್ನು ಪ್ರಕಟಿಸಿದರೆಂದು ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದ "ಆನಂದ ಬಜಾರ್ ಪತ್ರಿಕೆ" ಯ ಸಂಪಾದಕರನ್ನೂ ಪ್ರಕಾಶಕರನ್ನು ಕಲ್ಕತೆಯ ಚೀಫ್ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು ತಪ್ಪಿತಸ್ಥರಲ್ಲವೆಂದು ತೀರ್ಪು ಕೊಟ್ಟಿರುವರು.

ಡಾಕ್ಟರ್ ಕಿಚ್ಲೂರನ್ನು ಸೆರೆಹಿಡಿಯಲು ವಾರಂಟು ಹೊರಟಿದೆಯೆಂದೂ ಅವರು ಬೇಗನೆ ಸೆರೆಹಿಡಿಯಲ್ಪಡುವರೆಂದೂ ತಾ|| 10 ರ ವರ್ತಮಾನ.

ಸಯಂಬಪುರದಲ್ಲಿ ಎರಡು ರೈಲು ಗಾಡಿಗಳು ಒಂದಕ್ಕೊಂದು ಮುಟ್ಟಿ 12 ಜನರು ಮೃತಪಟ್ಟಿರುವರು; 30 ಜನರಿಗೆ ಘಾಯವಾಗಿದೆ

ಅಮೃತಸ್ರಾದ ಒಂದು ಪೋಸ್ಟಾಫೀಸಿನಲ್ಲಿ ಕೊಲೆಪಾತಕ ಮಾಡಿದವನಿಗೆ ಹೈಕೋರ್ಟಿನಲ್ಲೂ ಮರಣದಂಡನೆ ಖಾಯಂ ಆದ ಮೇಲೆ ಈಗ ಪುನಃ ಪ್ರಿವಿಕೌನ್ಸಿಲಿಗೆ ಅಪೀಲ್ ಮಾಡಲು ಅನುಮತಿದೊರೆತಿದೆ

ಕೌನ್ಸಿಲಿಗೆ ಹೋಗಲೇ ಕೂಡದೆಂತ ವಾದಮಾಡುತ್ತಿದ್ದ ಇಬ್ಬರು ಪಂಜಾಬಿನ ಕೌನ್ಸಿಲಿಗೆ ಉಮೇದ್ವಾರರಾಗಿ ನಿಲ್ಲಲು ಮೆ|| ಜಯಕರಾಯರ ಅಭಿಪ್ರಾಯಕ್ಕನುಸಾರವಾಗಿ ಯೋಚಿಸಿದಾರಂತೆ

ಬೊಂಬಾಯಿ ಅಧಿಪತ್ಯದ ಒಂದು ಗ್ರಾಮದಲ್ಲಿ ಮಾರ್ಗಶಾಯಿ ಎಂಬುವರಲ್ಲಿಗೆ ಇಬ್ಬರು ಬಂದು ಒಂದು ಕಾಗದವನ್ನು ಕೊಟ್ಟರು ಅವನ್ನು ಓದುತ್ತಿರುವಾಗ ಅವರನ್ನು ಗುಂಡಿನಿಂದ ಹೊಡದು ಕೊಂದರು ಕಳವು ದಂಗೆ ಖೋರರ ಮೇಲೆ ನಡೆದ ವಿಚಾರದಲ್ಲಿ ಪೋಲೀಸಿಗೆ ಸಹಾಯ ಮಾಡಿದ್ದೇ ಕಾರಣವೆಂತ ಊಹಿಸಿದ್ದಾರೆ

ಅಹಮೋದಿನಲ್ಲಿ ಯಂತ್ರಗಳಿಂದಲೇ ಬೆಂಕಿಹುಟ್ಟಿ ಗೋಣಿ ನೇಯುವ ಕಾರ್ಖಾನೆಯೊಂದು ಸುಟ್ಟು ಹೋಯಿತು 15 ಲಕ್ಷ ರೂಪಾಯಿ ನಷ್ಟವಾಗಿದೆ

ಸರ್ ಪಿ ಸಿ ರೆಯವರು ಸೈಯನ್ಸಿನ ವಿಚಾರವು ಹಿಂದಿನಿಂದ ಮಾಡಿಕೊಳ್ಳಬಹುದು ಸ್ವರಾಜ್ಯದ ಕೆಲಸ ಕೂಡಲೇ ಆಗಬೇಕೆಂತ ಹೇಳಿದ ಮಾತನ್ನು ಒಬ್ಬರು ಸಾಧಿಸಿದ್ದಾರೆ ಇಂಗ್ಲೆಂಡ್ ಇಟಲಿ ಮುಂತಾದ ಪ್ರಾಂತ್ಯಗಳಲ್ಲಿ ಯುದ್ಧದ ಕಾಲದಲ್ಲಿ ಸೈಯನ್ಸಿನಲ್ಲಿ ಕೆಲಸಮಾಡುತ್ತಿದ್ದವರೆಲ್ಲಾ ಕೆಲಸ ಬಿಟ್ಟು ಯುದ್ಧಕ್ಕೆ ಹೋಗಿದ್ದಾರೆ ನಮಗೆ ಸ್ವರಾಜ್ಯವಿದ್ದಿದ್ದರೆ ನಮ್ಮಲ್ಲಿ ಸೈಯನ್ಸ್ (ಅಂದರೆ ರಸಾಯನಶಾಸ್ತ್ರ) ದಲ್ಲಿ ಪ್ರಖ್ಯಾತಿಪಡೆದ ಜನರು ಅನೇಕ ವಿರುತ್ತಿದ್ದರು ಮುಂತಾಗಿ ಬರೆದಿದ್ದಾರೆ.

ಅಲಿಘೋರಾದಲ್ಲಿ ಮೌಲಾನಾಮಹಮ್ಮದಲಿಯವರು ಮಾಡಿದ ಭಾಷಣದಲ್ಲಿ ಹಿಂದೂ ಮುಸಲ್ಮಾನರ ಒಗ್ಗಟ್ಟೂ ಮತ್ತು ಗಾಂಧಿಯವರು ನಿಯಮಿಸಿರುವ ಕೆಲಸಗಳನ್ನು ಮಾಡುವದು ಇದುಂಲ್ಲೇ ಎರವಾಡಾ ಜೈಲಿನ ಬೀಗದ ಕೈ ಇದೆ ಎಂತ ಹೇಳಿದರು.

ಲಾಲಾಲಜಪತರಾಯರು ಹೇಳಿರುವದೇನೆಂದರೆ —ಭಕ್ತಿಯ ಸ್ತ್ರೀಯರಿಗೆ ಗೌರವ, ದಾನ, ಬುದ್ಧಿ ಮುಂತಾದ ಗುಣಗಳಲ್ಲಿ ಹಿಂದೂ ಧರ್ಮವು ಯಾವ ಇತರ ಧರ್ಮಕ್ಕೂ ಹಿಂದೆ ಬೀಳುವದಿಲ್ಲ. ಈಗಿನ ವಿದ್ಯಾಭ್ಯಾಸ ಹೊಂದಿದವರಲ್ಲಿ ಹಿಂದೂ ಧರ್ಮವು ಕಡಿಮೆಯಾಗುತ್ತಾ ಇದೆ [illegible] ವಿದ್ಯಾವಂತರೂ ಐಶ್ವರ್ಯವಂತರೆ ಹಿಂದೂ ಮತಕ್ಕೆ ಕಂ[illegible]ಕರು. ಐಶ್ವರ್ಯವಂತರು ತಮ್ಮ ಧನ ಸಂಪಾದನೆಗೋಸ್ಕರ ಅದನ್ನು ಕಾಪಾಡಲಿಕ್ಕೂ ಬೇರೆಯವರ ಸಹಾಯ ಬಯಸುತ್ತಾರೆ ಮುಸಲ್ಮಾನರ ದೌಲತ್ತಿನ ಕಾಲದಲ್ಲಿ ಹಿಂದುಗಳು ಐಶ್ವರ್ಯವಂತರಾಗಿದ್ದರು ಅದನ್ನು ಕಾಪಾಡಿಕೊಳ್ಳಲಿಕ್ಕೂ ಅವರಿಗೆ ಶಕ್ತಿಯಿತ್ತು ಈಗಿನಾದರೂ ಅದನ್ನು ಕಾಪಾಡಲು ಬ್ರಿಟಿಷ್ ಅಧಿಕಾರಿಗಳ ಸಹಾಯ ಬಯಸುತ್ತಾರೆ ಹೀಗೆ ಪರರ ಆಶ್ರಯವನ್ನು ಬಯಸುತ್ತಾ ಒಬ್ಬ ಜನಾಂಗಕ್ಕೆ ನಾಚಿಕೆಯೇ ಇಲ್ಲದೆ ಹೋಗುತ್ತೆ ಐಶ್ವರ್ಯವಂತರೂ ವಿದ್ಯಾವಂತರೂ ಬಡ ಮತ್ತು ಮಧ್ಯಮ ಸ್ಥಿತಿಯವರ ಸಹಾಯ ಕೇಳದೆ ಹೋಗುವದೇ ಹಿಂದೂ ಧರ್ಮಕ್ಕೆ ಕೇಡನ್ನುಂಟುಮಾಡುವದು ಈಗ ಮಾಡಬೇಕಾದ್ದೇನಂದರೆ, ಬಡ ಹಿಂದೂಗಳಿಗೆ ಸಹಾಯ ಮಾಡಿ ಅವರ ಸಹಕಾರವನ್ನು ಪಡೆಯುವದು. ಮುಸಲ್ಮಾನರನ್ನು ದೂಷಿಸುತ್ತಾ ಕೂತದ್ದರಿಂದ ಪ್ರಯೋಜನವಿಲ್ಲ ಹಿಂದೂಗಳೊಳಗೆ ಭೇದಗಳಿಲ್ಲದೆ ಒಗ್ಗಟ್ಟಾಗಿ ಕೆಲಸಮಾಡುತ್ತಾ ಮುಸಲ್ಮಾನರಿಗೆ ಮನಸ್ಸು ನೋಯುವಂತಾ ಕೆಲಸಮಾಡದೆ ಇದ್ದರೇನೇ ಸಾಧ್ಯವಾಗಿದೆ ಹಿಂದೂಗಳು ಅಬಲರಾಗಿರುವವರೆಗೆ ಈ ದೇಶಕ್ಕೆ ಸ್ವರಾಜ್ಯ ದೊರೆಯುವದಿಲ್ಲ

ಜವಾಹರ್‌ಲಾಲ್ ನೆಹರೂ ಮುಂತಾದವರನ್ನು ನಭಾ ಜೈಲಿನಿಂದ ಶರತ್ತಿಲ್ಲದೇ ಬಿಟ್ಟಿದ್ದಾಗಿದೆಯೆಂದು ತಿಳಿಯುತ್ತೆ

ಬ್ರಿಟಿಷ್ ಸಾಮ್ರಾಜ್ಯದ ಪ್ರದರ್ಶನಕ್ಕೆ ಮದ್ರಾಸಿನಿಂದ ಸೂಳೆಯರನ್ನು ಕಳುಹಿಸಬೇಕೆಂದಿದ್ದ ಅಭಿಪ್ರಾಯಕ್ಕೆ ಸರ್ಕಾರವು ವಿರೋಧಿಸುತ್ತೆಂತ ವರ್ತಮಾನವಿದೆ.

ಆಯುರ್ವೇದ ಚಿಕಿತ್ಸೆಗೆ ಪ್ರೋತ್ಸಾಹ ಕೊಡಲು [illegible] ಪಾಯ ಕಂಡು ಹಿಡಿಯಲಿಕ್ಕಾಗಿ ಒಂಗ[illegible] ನೇಮಿ'ದ ಮುನಸೀಯರು ದಕ್ಷಿಣ [illegible] ವ್ರಾಯ ತೆಗೆದುಕೊಳ್ಳಲಿಕ್ಕಾಗಿ ಆ ಪ್ರಾಂತ್ಯ[illegible] ಣಮಾಡುತ್ತಿದ್ದಾರೆ

ಸಂಯುಕ್ತ ಪ್ರಾಂತ್ಯದ ರಾಷ್ಟ್ರೀಯ[illegible] ಸ್ಥಾನದಿಂದ ಕೊಡಬೇಕಾಗಿದ್ದ [illegible] ಹೇಳುವದೇನೆಂದರೆ ಹಿಂದುಸ್ಥಾನಕ್ಕೆ ಪೂರ್ಣ[illegible] ಅದಕ್ಕೆ ಸ್ವತಂತ್ರ ಸಿಕ್ಕಿದಮೇಲೆ ಇಂಡಿಯಾವು ಬ್ರಿಟಿಷ್ [illegible]ತ್ಯದಲ್ಲಿ ಬೇಕಾದರೆ ಇರಲಿ ಮುಂತಾಗಿ ಹೇಳಿ[illegible]

ವಿದೇಶ.

ಕಾನ್‌ಸ್ಟೇಂಟಿನೋಪಲಿನಲ್ಲಿ ಪೂರ್ತಿಯಾಗಿ ಸಿಪಾಯಿ ಹೊಂದವನ್ನು ಬೇಗನೆ ಚಾರಿಗೆ ತರಬೇಕೆಂದು ಅಂಗೋರಾ ಸರ್ಕಾರದವರು ಹುಕುಂ ಮಾಡಿರುವರು

ಕಾನ್‌ಸ್ಟೇಂಟಿನೋಪಲಿನಲ್ಲಿ ಯೂರೋಪಿನವರ [illegible] ಗವಾದ ಪೇರ[illegible] ಕೂಡ ತರ್ಕಿಭಾಷೆ[illegible] ಭಾಷೆಯಾಗಿ ಮಾಡಲ್ಪಡುವದೆಂದು ತಿಳಿಯಬರುತ್ತೆ

ಚಿಕಾಗೋ ಪಟ್ಟದ ಗುಡಿಯಲ್ಲಿ ಕೆಲವು ಜನರು ಪ್ರಾರ್ಥನೆಮಾಡುತ್ತಿರುವಾಗ ಒಬ್ಬ ಹೆಂಗಸು ಬಂದು [illegible] ಪತ್ತಿರ ಪ್ರಾರ್ಥನೆಮಾಡಲಿ [illegible] ಗಾಂಬಹಾಕಿ ಕೂತು ಗುಂಡಿನಿಂದ ಪಾದ್ರಿ[illegible] ರಂತೆ ಅವಳನ್ನು ಸಭಿಕರು ಹಿಡಿದ [illegible] ವೆಂದು ಪೋಲೀಸಿನವರು ಅವಳನ್ನು [illegible] ನು ೨ ತನ್ನ ಗಂಡನಮೇಲೆ ಗುಂಡು ಹೊಡೆದು [illegible] ಪಾದನೆ ಮಾಡಿದ್ದಾಗಿ ಸೀಗ ಮಾಡಿದ್ದೇರೆ [illegible]

ಬ್ರಿಟಿಷ್ ಮಂತ್ರಿಯಾಗಿದ್ದ ಆ[illegible] ವೇ[illegible] ಯವರು ಮೃತರಾದ್ದರಿಂದ ತನ್ನ [illegible] ಮ ಗುರಿ ನೇ ಮೃತರಾದರೆಂದೂ ಅಂದಾ [illegible] ಇನ ದೊರಕುವದು ಕಷ್ಟವೆಂದು ಬರೆದಿದ್ದಾರೆ

ಆಗಾಮಾನರು ಬರೆಯುವದೇನೆಂದರೆ—ಲಾಸ [illegible]ನಿಂದ ಟರ್ಕಿಗೂ ಇಂಗ್ಲೆಂಡಿಗೂ ಸ್ನೇಹವು [illegible] ವಾಗಿ ಸ್ಥಾಪಿತವಾಯಿತು. [illegible] ಯದಲ್ಲಿ ಸಂಬಂಧಗಳನ್ನು ಸ್ಥಾಪಿಸಿ ಮುಸಲ್ಮಾನರ [illegible] ಇಂಗ್ಲೆಂಡು [illegible] ಬಹಳ ದಯೆ ಮಾಡಬೇಕೆಂತ ಬರೆದಿದ್ದಾರೆ

* * * ಮುದ್ರಾಶನಗಳಿಗೂ [illegible] ನವು ಎದ

ನಮ್ಮ ದಕ್ಷಿಣಕನ್ನಡ ಜಿಲ್ಲೆಯು ಕನ್ನಡ ನಾಡೆಂ[illegible] ನಾಮವಾಕ್ಯದಿಂದಲೇ ವ್ಯಕ್ತವಾಗುತ್ತಿದೆ [illegible] ಬ್ಬನು ಹುಟ್ಟುಕನ್ನಡ ನಾಡೆಂದರೂ ಸ್ಪಷ್ಟ[illegible] ಸಿಗೆ ಭಾಷಾಸಾಮಾನ್ಯದ ವಿಶೇಷ ವಾತ್ಸಲ್ಯದಿಂದ [illegible] ಆನಂದನೀಯ ಮೋಟಾರುಸರ್ವಿಸ್ [illegible] ಸ್ನ ಕವ್ಯೆ[illegible] ಮಾನದಿಂದ ನಿರುಪಾಧಿಕವಾಗಿ ಸಾಸು ನಡೆಸುತ್ತಾ[illegible] ನ್ನು ಬರುತ್ತೆ !

ಪ್ರಕೃತ ನನ್ನ ಇಷ್ಟಮಿತ್ರರಲ್ಲಿ ಕೆಲ ಮಹನೀ[illegible] ನಮ್ಮ ಸ್ವಸ್ಥಾನವಾದ ದಕ್ಷಿಣಕನ್ನಡ ನಾಡಿನ[illegible] ಕನ್ನಡದ ಮೋಟಾರು ಸರ್ವಿಸಿನ ಮೇಲೆ [illegible] ವದಂತೀಲೂ ಕೆಲಂಡ ಅನಾನುಕೂಲತೆಯಾದ [illegible]

ಕಾವೇರಿ ಜಾತ್ರೆಯ ವಿಶೇಷ ಸಂಚಿಕೆ

If not delivered please return to "Kodagu Office, Mercara" Reg. No. M. 1550.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾನೀತಿ ಪ್ರಯುಕ್ತತಃ । ಏಕಮತ್ಯೇನದೇಶಾನಾಂ ಸುಸ್ಥಿರಾ ರಾಜ್ಯಸಂಪದ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು. "ಎಡಿಟರ್ ಚಂದ್ಯಂಡ ಐ. ಬೆಳ್ಯಪ್ಪ"

ಕೊಡಗು, ಸನ್ ೧೯೩೩ ನೇ ಇಸವಿ ಅಕ್ಟೋಬರು ತಾರೀಖು ೧೮ ನೇ ಬುಧವಾರ.

ದೇಶಸೇವೆ ಮಾಡಿ ಶ್ರೀ ಕಾವೇರಿಮಾತೆಯ ಅನುಗ್ರಹ ಪಡೆಯಿರಿ.

" ಕೊಡಗು "

೧೯೩೩ ನೇ ಇಸವಿ ಅಕ್ಟೋಬರ್ ತಾ|| ೧೮ ನೇ ಬುಧವಾರ.

ಕಾವೇರಿಜಾತ್ರೆ.

ಹಿಂದೂ ಧರ್ಮವು, ಇತರ ಎಲ್ಲಾ ಧರ್ಮಗಳಿಗಿಂತಲೂ ಸರ್ವೋತ್ಕೃಷ್ಟವಾದುದು ; ಇತ್ತೀಚೆಗೆ ಪಾಶ್ಚಾತ್ಯರು ಸಹ ನಮ್ಮ ಹಿಂದೂ ಧರ್ಮವನ್ನು ಪರೀಕ್ಷಿಸಿ ಅತ್ಯಂತ ಕೋಶವನ್ನು ಸಂಪಾದಿಸುವವರಾಗಿದ್ದಾರೆ. ಹಿಂದೂ ಧರ್ಮಕ್ಕೆ ಒಂದೇ ವೇದವೇ ಆಧಾರವೆಂದು ಅನೇಕರು ತಿಳಿದುಕೊಂಡಿರುವರು ವೇದಗಳ ಗುಟ್ಟು ತಿಳಿಯಲು ಉಪನಿಷತ್ತುಗಳು ನಮಗೆ ಮೂಲ ನಮ್ಮ ವೇದೋಪನಿಷತ್ತುಗಳು, ಕ್ರಿಸ್ತನ ಪೈಬಲಿನಂತೆ ಒಬ್ಬ ಮಹಾತ್ಮನಿಂದಾಗಲೀ ಮುಸಲ್ಮಾನರ "ಕುರಾನ್" ನಂತೆ ಇನ್ನೊಬ್ಬ ದಿವ್ಯಪುರುಷನಿಂದಾಗಲೀ ಆದವುಗಳಲ್ಲ ಅನೇಕ ಋಷಿಗಳು ಬಹುಕಾಲ ತಪಸ್ಸುಮಾಡಿ ಸಂಪಾದಿಸಿದ ಅನುಭವಗಳ ಭಂಡಾರವು. ನಮ್ಮ ಗ್ರಂಥಗಳು ಬದಲಾವಣೆಯಾಗಬಹುದು ; ಆದರೆ ಕ್ರೈಸ್ತರ ಇಲ್ಲವೆ ಮುಸಲ್ಮಾನರ ಗ್ರಂಥಗಳು ಎಲ್ಲಾ ಕಾಲಕ್ಕೂ ಒಂದೇ.

ಧರ್ಮವೇ ನಮ್ಮ ಮುಖ್ಯೋದ್ದೇಶವಾಗಿದೆ ಸಮಾಜದಲ್ಲಿಯೂ, ರಾಜಕೀಯ ಸಂಗತಿಗಳಲ್ಲಿಯೂ ನ್ಯಾಯನೀತಿಗಳಲ್ಲಿಯೂ, ಶಿಲ್ಪಶಾಸ್ತ್ರದಲ್ಲಿಯೂ, ಧರ್ಮವು ಹರಡಿಕೊಂಡಿದೆ ಪಾಶ್ಚಾತ್ಯರ ಧರ್ಮವು ಎಲ್ಲಿ ಉಳಿದಿದೆ ಎಂದರೆ ಗುಡಿಗಳಲ್ಲಿ ಮಾತ್ರ ರಣಾಂಗಣದಲ್ಲಿಲ್ಲ. ರಾಜ್ಯಕೃತ್ಯಗಳಲ್ಲಿಲ್ಲ ; ಸಮಾಜದಲ್ಲಂತೂ ಇಲ್ಲವೇ ಇಲ್ಲವೆಂದೆನ್ನಬೇಕು ಇತರ ಮಾರ್ಗವು ಪ್ರವೃತ್ತಿಮಾರ್ಗವು ಇವರ ದೃಷ್ಟಿಯು ಪ್ರಾಪಂಚಿಕ ಸುಖಸಮುದಾಯದ ಕಡೆಗೆ, ನಮ್ಮ ಮಾರ್ಗವಾದರೋ ನಿವೃತ್ತಿಮಾರ್ಗ ; ನಾನು ಯಾರು ? ನನ್ನಿಂದ ಈ ಲೋಕದಲ್ಲಿ ಆಗತಕ್ಕ ಕಾರ್ಯವೇನಿದೆ : ಇತ್ಯಾದಿ ಸಂಗತಿಗಳನ್ನು ನಿರ್ಧರಿಸಿ, ನಿತ್ಯಾನಂದವನ್ನು ಪಡೆಯುವ ಮಾರ್ಗ. ಇಂಥಾ ಆನಂದವನ್ನು ಪಡೆಯಬೇಕಾದರೆ ಅನೇಕ ಜನ್ಮಗಳನ್ನೆತ್ತಿ ಯಮನನ್ನು ಸಹ ಗೆಳೆಯನನ್ನಾಗಿ ಮಾಡಿಕೊಳ್ಳಬೇಕು ಮುಮುಕ್ಷುಗಳಲ್ಲಿ ಆಗಿನ ಕಾಲಕ್ಕೆ ಅಗ್ರೇಸರನಾಗಿದ್ದ ನಾಚಿಕೇತನು ತಂದೆಯಿಂದ ತಿರಸ್ಕೃತನಾಗಿ ಯಮನಲ್ಲಿಗೆ ಹೋಗಿ, ಯಮನ ಉಪದೇಶದಿಂದ ನಿಮುಕ್ತನಾಗಲಿಲ್ಲವೇ ? ಇಂಥಾ ಮಹನೀಯರ ಪವಿತ್ರ ಚರಿತ್ರೆಗಳಿಂದ ನಾವು ಸಹ ಮುಕ್ತಿಯನ್ನು ಸಂಪಾದಿಸಲು ಉದ್ಯೋಗಿಸಬಹುದು

ಹಿಂದೂ ಮತದಲ್ಲಿ ಆಯಾಯ ಜನರಿಗೆ ಯೋಗ್ಯವಾದ ಅಂತಸ್ತಿನ ಧರ್ಮಾಚರಣೆಯನ್ನು ಹಿರಿಯರು ನೇಮಿಸಿರುವರು. ಏನೂ ತಿಳಿಯದ ಮೂಢ ಜನರಿಗೆ ಪುರಾಣವನ್ನೂ, ಮಧ್ಯಸ್ಥಿತಿಯವರಿಗೆ ಆಚಾರವಿಚಾರಗಳನ್ನೂ, ವಿದ್ಯಾವಂತರಿಗೆ ತತ್ವವಿಚಾರವನ್ನೂ, ಇವರು ಕಲ್ಪಿಸಿಕೊಟ್ಟಿರುವರು ರಾಮನವಮಿಯಲ್ಲಿ ಎಲ್ಲಿಯೋ ಕೂತಲ್ಲಿ ರಾಮನ ರಾಮಾಯಣ ಕಥೆಯನ್ನು ಕೇಳುವವರು ಎಷ್ಟೋ ಮಂದಿ ; ಭಕ್ತಿಯಿಂದಲೂ, ನೇಮದಿಂದಲೂ ಅವನನ್ನು ಆರಾಧಿಸುವವರು ಎಷ್ಟೋ ಮಂದಿ ; ರಾಮನು ಆತ್ಮನು ; ಇವನು ಹತ್ತು ಇಂದ್ರಿಯಗಳನ್ನು ಗೆದ್ದ ದಶರಥನ ಮಗನು ; ಸೀತೆ ಎಂಬುವಳು ಮನಸ್ಸು ಈಕೆಯು ಚಿಂತೆಯನ್ನು ಆಳಿಸಿದ್ದರಿಂದ, ಹತ್ತು ಇಂದ್ರಿಯಗಳನ್ನು ಅಧೀನದಲ್ಲಿಟ್ಟುಕೊಳ್ಳದ ದಶಶಿರ (ರಾವಣ) ನ ಕೈವಶಳಾದಳು. ಅಂತ್ಯದಲ್ಲಿ ರಾವಣನನ್ನು ಕೊಂದು (ಇಂದ್ರಿಯಗಳನ್ನು ಜೈಸಿ) ಸೀತೆಯನ್ನು (ಮನಸ್ಸನ್ನು) ಸ್ವಾಧೀನ ಪಡಿಸಿಕೊಂಡು ರಾಮನು (ಆತ್ಮನು) ವಿರಾಜಿಸಿ ಎಂದು ಹಲಕೆಲವರು ಯೋಚಿಸುವರು ಇದೀಗ ತತ್ವವಿಚಾರವು

ಮುಕ್ತಿಯನ್ನು ಹೊಂದಲಿಕ್ಕೆ ಭಕ್ತಿಮಾರ್ಗವೇ ಸುಲಭ ಸಾಧನವು ಭಕ್ತಿಯು ಎರಡು ತೆರನದು-ಗೌಣ ಮತ್ತು ಪರ ಗೌಣವೆಂದರೆ ಫಲವನ್ನಪೇಕ್ಷಿಸುವುದು ; ಪರವೆಂದರೆ ಫಲಬೇಡದಿರುವುದು ಎಂತೂ, ಭಕ್ತಿಯನ್ನು ತೋರ್ಪಡಿಸಬೇಕಾದರೆ ನಮ್ಮ ಮುಂದೆ ಯಾವುದಾದರೊಂದು ವಿಗ್ರಹವಿರಲೇಬೇಕು. ಪ್ರಪಂಚದ ಎಲ್ಲ ಜಾತಿಜನರು ಒಂದು ವಿಧದಲ್ಲಿಲ್ಲವಿದ್ದರೆ ಮತ್ತೊಂದು ವಿಧದಲ್ಲಿ ವಿಗ್ರಹಾರಾಧಕರಾಗಿರುತ್ತಾರೆ. ಭಾರತೀಯರಿಗೆ ಆರಾಧನೆಗೆ ದೇವಾಲಯಗಳೂ ತೀರ್ಥಯಾತ್ರಾಸ್ಥಳಗಳಿವೆ, ಪಾಶ್ಚಿಮಾತ್ಯರಿಗೆ ಗುಡಿಗಳಿವೆ ನಮ್ಮ ಗುಡಿಗಳಲ್ಲಿ ಆರಾಧನೆಯನ್ನು ವಿಗ್ರಹಗಳಿಗೆ ಒಪ್ಪಿಸುವೆವು ಪಾಶ್ಚಿಮಾತ್ಯರು ಇವರಲ್ಲಿ ಹೆಚ್ಚಾಗಿ ಪ್ರೋಟೆಸ್ಟೆಂಟರು ಗುಡಿಗಳಲ್ಲಿ ವಿಗ್ರಹಗಳನ್ನಿಡದೆ, ಹಾಗೆಯೇ ತಮ್ಮ ಪ್ರಾರ್ಥನೆಯನ್ನು ದೇವರಿಗೊಪ್ಪಿಸುವರು ಹಿಂದುಗಳಿಗೆ ದೇವಾಲಯಗಳಮೇಲೂ ವಿಗ್ರಹಗಳಮೇಲೂ ಪ್ರೇಮ, ಪಾಶ್ಚಿಮಾತ್ಯರಿಗೆ ಗುಡಿಗಳಮೇಲೆ ಪ್ರೇಮ. ಹಿಂದುಗಳ ಆರಾಧನೆಯು ತತ್ವಾರಾಧನೆಯು ಪಾಶ್ಚಿಮಾತ್ಯರ ಆರಾಧನೆಯು ಸ್ಥಳಾರಾಧನೆಯು. ಹೇಗೂ ಇತ್ತಂಡದವರು ವಿಗ್ರಹಾರಾಧಕರೇ ಇರುತ್ತಾರೆ.

ಇಡೀ ಹಿಂದೂ ದೇಶದಲ್ಲಿ ಜನರು ಮುಕ್ತಿಪಥವನ್ನು ಕಂಡು ಹಿಡಿದುಕೊಳ್ಳಲು ಅನುಕೂಲಿಸುವಂತೆ ಅನೇಕಾನೇಕ ದೇವಾಲಯಗಳೂ, ತೀರ್ಥಗಳೂ ಯಾತ್ರಾಸ್ಥಾನಗಳೂ ಅವೆ. ಹಿಮಾಲಯದಲ್ಲಿ ಶಂಕರಾಚಾರ್ಯರಿಂದ ಸ್ಥಾಪಿತವಾದ ಬದರಿನಾಥ ಕೇದಾರನಾಥ, ದಕ್ಷಿಣದಲ್ಲಿ ಶ್ರೀರಂಗ, ರಾಮೇಶ್ವರ ಮುಂತಾದ ದೇವಾಲಯಗಳೂ ಇರುವುದಲ್ಲದೆ. ಉತ್ತರಕ್ಕೆ ಗಂಗೆಯೂ, ದಕ್ಷಿಣಕ್ಕೆ ಕಾವೇರಿಯೂ ತೀರ್ಥಯಾತ್ರಿಕರಿಗೆ ಮನತಣಿಸಿಕೊಂಡಿದ್ದಾರೆ ಗಂಗೆಯು ಹಿಮಾಲಯದ ಮಾನಸ ಸರೋವರದಲ್ಲಿ ಹುಟ್ಟಿರುವಳು. ಕಾವೇರಿಯು ಮಡಿಕೇರಿಯಿಂದ ಇಪ್ಪತ್ತೈದು ಮೈಲು ದೂರದಲ್ಲಿರುವ ಪಶ್ಚಿಮಘಟ್ಟಗಳಲ್ಲಿ ಅಡಗಿರುವ ಬ್ರಹ್ಮಗಿರಿಯಲ್ಲಿ ಉತ್ಪತ್ತಿಯಾದಳು. ಗಂಗೆಯು ಉತ್ತರದವರನ್ನು, ಮತ್ತು ಕಾವೇರಿಯು ದಕ್ಷಿಣದವರನ್ನು ಪಾವನಮಾಡುತ್ತಿರುವ ಅಕ್ಕತಂಗಿಯರು. ಗಂಗೆಯು ಅಕ್ಕನಾದುದರಿಂದ ಸಾವಿರಾರು ಜನರನ್ನು ಉದ್ಧಾರಮಾಡುತ್ತಿರುವಳು. ಆದರೆ ಕಾವೇರಿಯು ತಂಗಿಯಾದುದರಿಂದ ಅಷ್ಟೊಂದು ಜನರನ್ನು ಉದ್ಧಾರಮಾಡದಿದ್ದರೂ, ನೂರಾರು ಜನರನ್ನಾದರೂ ಪಾವನಮಾಡುತ್ತಿರುವಳು ಆದರೆ ಗಂಗೆಯು ಕಾವೇರಿಯನ್ನು ಎಂದೂ ಮರೆಯಲಾರಳಂತೆ ಅಸಂಖ್ಯಾತ ಜನರು ಗಂಗೆಯಲ್ಲಿ ಮಿಂದು ಅವಳನ್ನು ಶ್ರಮಿಸಿದ್ದರಿಂದ, ಗಂಗೆಯು ಪುನಃ ಕಾವೇರಿಯಲ್ಲಿ ತನ್ನ ಪಾಪವನ್ನು ಕಳೆಕೊಳ್ಳುವಳಂತೆ ಆದುದರಿಂದ ಗಂಗೆಯೂ ಕಾವೇರಿಗೆ ಆಭಾರಿಯಾಗಿರುತ್ತಾಳೆ ಗಂಗೆಯ ದಡದಲ್ಲಿರುವಂತೆ ದೇವಾಲಯಗಳು ಕಾವೇರಿಯ ದಡದಲ್ಲಿಯೂ ಅವೆ ಗಂಗೆಯಂತೆ ಕಾವೇರಿಯು ಸಹ ಅಯೋನಿಜೆ

ಕಾವೇರಿಯು ಮಹಾಪತಿವ್ರತೆ ಈಕೆ ಬ್ರಹ್ಮಪುತ್ರಿಯು. ಈಕೆಯನ್ನು ಕಾವೇರಮುನಿಯು ಬ್ರಹ್ಮನಿಂದ ದತ್ತು ಪಡೆದನು. ಈಕೆಯು ಅಂಗುಷ್ಠಪ್ರಮಾಣೆಯಾದುದರಿಂದ ಅಂಗುಷ್ಠಪುರುಷನೇ ಪತಿಯಾಗಬೇಕೆಂದು ತಪಸ್ಸುಮಾಡಿ ಅಗಸ್ತ್ಯಮುನಿಯನ್ನು ಲಗ್ನಮಾಡಿಕೊಂಡಳು ಲಗ್ನವಾಗುವಾಗುವಾಗ ಅಗಸ್ತ್ಯನು ಇವಳನ್ನು ಯಾವ ಕಾಲಕ್ಕೂ ಬಿಟ್ಟಿರಕೂಡದೆಂದೂ ಹಾಗೆ ಬಿಟ್ಟರೆ. ಇವಳು ಅಗಸ್ತ್ಯನನ್ನು ಅಗಲಿ ಹೋಗಬಹುದೆಂದೂ ಷರತ್ತಿಗೆ ಒಪ್ಪಂದ ನಡೆದಿತ್ತು ಲಗ್ನವಾದ ನಂತರ ಉರ್ವರೂ ಕಾಶಿಯಲ್ಲಿ ವಾಸಿಸುತ್ತಿದ್ದರು ಅಹರ್ನಿಶವು ಕಾವೇರಿಯು ತಾನು ಯಾವ ರೀತಿಯಲ್ಲಿ ಲೋಕಕ್ಕೆ ಉಪಕಾರವಮಾಡಲಿ ಎಂದು ಯೋಚಿಸುತ್ತಿದ್ದಳು. ಇತ್ತಲಾಗೆ ವಿಂಧ್ಯಪರ್ವತವು ದಿಕ್ಕುದೆಸೆ ತಪ್ಪಿ ಬೆಳೆದು ಬೆಳೆದು, ಸೂರ್ಯನೇ ಕಾಣದಂತಾಯಿತು ವಿಂಧ್ಯನು ಅಗಸ್ತ್ಯರ ಶಿಷ್ಯನು ಈ ಕಾರಣದಿಂದ ದೇವತೆಗಳು ಅಗಸ್ತ್ಯನನ್ನು ವಿಂಧ್ಯನಿಗೆ ಇನ್ನು ಹೆಚ್ಚಿಗೆ ಬೆಳೆಯದಂತೆ ಆಜ್ಞಾಪಿಸುವಂತೆ ಬೇಡಿಕೊಂಡರು. ಅಗಸ್ತ್ಯನು ಪತ್ನೀ ಸಮೇತನಾಗಿ ವಿಂಧ್ಯನಲ್ಲಿಗೆ ಬಂದು, ಅವನಿಗೆ ತಾನು ಹೀಗೆ ಇರಬೇಕೆಂದು ಆಜ್ಞಾಪಿಸಿ, ದಕ್ಷಿಣಾಭಿಮುಖವಾಗಿ ಪ್ರಯಾಣಮಾಡುತ್ತಾ, ಬ್ರಹ್ಮಗಿರಿಗೆ ತಲುಪಿ, ಅಲ್ಲಿಯೆ ತಂಗಿದನು ನಂತರ ಅಲ್ಲಿಯೇ ವಾಸಿಸುವವನಾದನು. ಈ ಗಿರಿಯ ತಪ್ಪಲಿನಲ್ಲಿ ತನಿಕೆಯು ವಾಸವಾಗಿದ್ದಳು ಇವಳ ಅದಿನಾಮಕ್ಕೆ ತನಿಕಾಚಿಯೆಂದು ಹೆಸರಿದೆ ಒಂದು ದಿನ ಅಗಸ್ತ್ಯನು ತನಿಕಾಚಿಕೆ ಹೋದನು ಕಾವೇರಿಗೆ ಇದೊಂದು ನೆವಸಿಕ್ಕಿತು ಋಷಿಯು ತನ್ನನ್ನು ಅಗಲಿ ಹೋದೊಡನೆ, ತಾನು ಬ್ರಹ್ಮಗಿರಿಯ ಕುಂಡಿಗೆಯೊಳನುಗ್ಗಿ, ಮುಂದಕ್ಕೆ ಹರಿದು ಹೋದಳು ಅಗಸ್ತ್ಯನು ತನ್ನ ಶಿಷ್ಯರೊಂದಿಗೆ ಕಾವೇರಿಯನ್ನು ಹಿಂಬಾಲಿಸಿದನು ಆದರೆ ಈಕೆಯು ಋಷಿಯ ಕೈವಶವಾಗಬಾರದೆಂದು ನಾಗನ ಹೊಟ್ಟೆಯೊಳಗೆ ನುಗ್ಗಿ ಬಂದಳು ಇದಕ್ಕೆ ನಾಗತೀರ್ಥವೆಂದು ಹೇಳುತ್ತಾರೆ ನಂತರ ಭಾಗಂಡ ಋಷಿಗಳಿದ್ದ ಭಾಗಮಂಡಲಕ್ಕೆ ಬಂದಳು ಕನಿಕೆಯು ಇಲ್ಲಿ ಕಾವೇರಿಯೊಡನೆ ಸಂಕಲಿತಳಾದಳು. ಈ ಸ್ಥಳಕ್ಕೆ ಸಂಗಮವೆಂದು ಹೆಸರು ಇಲ್ಲಿಯೇ ಸುಜ್ಯೋತಿಯು ಹುಟ್ಟಿದಳು ಕೊಡಗರೆಲ್ಲರೂ ಹರಿಶ್ಚಂದ್ರದಲ್ಲಿ ಹೋಗಕೂಡದೆಂದು ಕಾವೇರಿಯನ್ನು ತಡೆಹಿಡಿದಾಗ "ಎಲ್ಲರೂ ಬಲಮುರಿಗೆ ಬನ್ನಿ" ಎಂದು ಹೇಳಿ ಮುಂದೆ ಹರಿದಳು ಬಲಮುರಿಗೆ ಈಕೆಯು ತಲುಪುವ ಕಾಲಕ್ಕೆ ಜನರೆಲ್ಲರೂ ಬಂದರು ಆದರೆ ಅಮ್ಮ ಕೊಡಗರು ಮಾಲಬಂದದ್ದರಿಂದ "ನೂರೊಕ್ಕ ಅಮ್ಮಂಗ ಅರೊಕ್ಕ ಆಡ', ಅರೊಕ್ಕ ಕೊಡವ ನೂರೊಕ್ಕ ಆಡ್ ವಿಚಾರ್ ನೆರಿಚೆಚ್ಚ್ಯುಯಕ್ ತಿರಿಕಿಯೊಳಿ" ಎಂದು ಹೇಳಿ ಹೊರಟಳು. ಅಷ್ಟರೊಳಗೆ ಅಗಸ್ತ್ಯನು ಬಲಮುರಿಗೆ ತಲುಪಿ, ಕಾವೇರಿಯನ್ನು ಕಂಡು, "ನಿಲ್ಲು, ನಿಲ್ಲು" ಎಂದು ಘರ್ಜನೆ ಮಾಡಿದನು ಕಾವೇರಿಯು ನಿಂತಳು ಮತ್ತು ಹೀಗೆಂದಳು "ನಮ್ಮಿಬ್ಬರ ಒಪ್ಪಂದ ಮುರಿಯಿತು. ಆದುದರಿಂದ ನಾನು ನಿಲ್ಲಲಾರೆ, ಮುಂದರಿಯುತ್ತೇನೆ" ಆಗ ಅಗಸ್ತ್ಯನು— ನೀನು ನನ್ನ ಪತ್ನಿ, ಆದುದರಿಂದ ನೀನು ಅರ್ಧವಾಗಿ ನನ್ನಲ್ಲಿರು ಇನ್ನು ಅರ್ಧಭಾಗವಾಗಿ ಹರಿದು ಲೋಕೋಪಕಾರ ಮಾಡು" ಎಂದು ನುಡಿದನು ಅನಂತರ ಕಾವೇರಿಯು ಅರ್ಧವಾಗಿ ಹರಿದು ಹೋದಳು ಅವಳ ದಡದಲ್ಲಿ, ಬೇತರಿ, ಗುಹ್ಯ, ರಂಗನಪಟ್ಟ, ಮುಳ್ಳುಸೋಗೆ, ರಾಮಪುರ, ಸಿರಂಗಾಲ, ರಾಮನಾಥಪುರ, ಚುಂಚನಕಟ್ಟೆ ಮುಂತಾದ ಅನೇಕ ದೇವಾಲಯಗಳು ನಿರ್ಮಿತವಾದುವು ಅಲ್ಲದೆ ದಕ್ಷಿಣದಲ್ಲಿ ವಿಖ್ಯಾತ ಶ್ರೀರಂಗವು ಕಾವೇರಿಯ ದಡದಲ್ಲಿಯೇ ಇದೆ. ಇದಿಷ್ಟು ಪುರಾಣ ವಿಚಾರವಾಯಿತು

ಇನ್ನು, ಕಾವೇರಿಯ ವ್ಯವಹಾರಣೆಯನ್ನು ಕುರಿತ ಒಂದೆರಡು ಮಾತು. ಬ್ರಹ್ಮಗಿರಿಯಲ್ಲಿ ಪ್ರತಿವರುಷದ ಕನ್ಯಾ

ಮಾಸದಲ್ಲಿ ದೊಡ್ಡ ಜಾತ್ರೆ ನಡೆಯುವುದು. ಈ ವರುಷ ಇದೇ ತಿಂಗಳು 17 ನೇ ತಾರೀಕಿಗೆ ಮಧ್ಯಾಹ್ನ 2½ ಗಂಟೆಗೆ ತೀರ್ಥೋದ್ಭವ. ಆ ದಿನ ನಾನಾ ಕಡೆಗಳಿಂದ ಜನರು ಬಂದು ಸೇರುವರು. ತಂಜಾವೂರು, ತಿರುಚಿನಾಪಳ್ಳಿ, ಕಾವೇನಾಡು, ಮಲಬಾರು, ದಕ್ಷಿಣಕನ್ನಡ, ಉತ್ತರಕನ್ನಡ, ಮೈಸೂರು, ಮದ್ರಾಸು ಪ್ರಾಂತ್ಯಗಳಿಂದ ಅಸಂಖ್ಯಾತ ಜನರು ಕಾವೇರಿ ಜಾತ್ರೆಗೆ ಪಯಣಮಾಡುವರು. ಪ್ರಯಾಗದಲ್ಲಿ ಪಿಂಡಪ್ರದಾನ ಮಾಡುವಂತೆ ಇಲ್ಲಿಯೂ ಮಾಡುವರು. ಈ ಕಾರ್ಯವು ಜಾತ್ರೆಗೆ ಒಂದೆರಡು ದಿನಗಳ ಮುಂಚೆ ನಡೆಯುವುದು. ಜಾತ್ರೆ ದಿನ ಕೊಡಗು ಜನರು ಕಟ್ಟೆಯಲ್ಲಿ ಅಕ್ಕಿಯನ್ನಿಟ್ಟು ಅದರಮೇಲೆ ತೆಂಗಿನ ಕಾಯಿಯನ್ನು ಅಥವಾ ಸೌತೆಕಾಯಿಯನ್ನು ಇರಿಸಿ, ನಂತರ ಅದನ್ನು ನಗಗಳಿಂದ ಅಲಂಕರಿಸಿ ಭಕ್ತಿಯಿಂದ ಪೂಜೆನಡೆಸುವರು. ಬ್ರಹ್ಮಗಿರಿಗೆ ಹೋಗಲಾರದವರು ಬಲಮುರಿಯಲ್ಲಿ ಸ್ನಾನಕ್ಕೆ ಹೋಗುವರು. ಇದೀಗ ಆ ದಿನದ ಆಚರಣೆ.

ಕಾವೇರಿಯು ಲೋಪಾಮುದ್ರೆಯೆಂಬ ನಾಮಾಂಕಿತದಿಂದಲೂ ಕರೆಯಲ್ಪಡುವಳು. ಈಕೆಯು ಮಹಾದೊಡ್ಡ ಪತಿವ್ರತೆಯಾದುದರಿಂದ, ಇವಳ ಹೆಚ್ಚಿಯನ್ನು ಸ್ಮರಿಸತಕ್ಕ ಭಕ್ತಿಯಿಂದ ಪೂಜಿಸಲ್ಪಡುವಳು. ಲೋಪಾಮುದ್ರೆಯು ಸತ್ಯಪತಿವ್ರತೆಯುಳ್ಳವಳು. ಈಕೆಯು ಗಂಡನ ಮೇಲೆ ಪ್ರೀತಿಯಿಲ್ಲದಂತ, ಜೈಮಿನಿ ಭಾರತದಲ್ಲಿ ವರ್ಣಿತವಾಗಿರುವ ಚಂಡಿಯಲ್ಲ. ಗಂಡನ ಸೇವೆಯನ್ನು ತೃಪ್ತಿಕರವಾಗಿ ಮಾಡಿದ ಪತಿವ್ರತೆ ಗಂಡನ ಒಪ್ಪಂದದಮೇರೆ, ಜನರಿಗೆ ಉಪಕಾರ ಮಾಡುವ ಉದ್ದೇಶದಿಂದ ಪತಿಯ ಅಪ್ಪಣೆಯಿಂದಲೆ ಜಲವಾಹಿನಿಯಾದಳು.

ಇಂಥ ಮಹನೀಯಳ ಯಾತ್ರೆಗೆ ಅನೇಕರು ದುಸ್ಸಹವಾದ ಕಷ್ಟಗಳನ್ನು ಸಹಿಸಿಕೊಂಡು ಹೋಗುವರು. ತೀರ್ಥವು ಭಾಗಮಂಡಲದಿಂದ 3 ಮೈಲುದೂರದಲ್ಲಿರುತ್ತಾ, ಜನರು ನಿರಾಯಾಸದಿಂದ ದಾರಿಯನ್ನು ಸಾಗಿಸುವರು. ಆ ಪ್ರಾಂತ್ಯದ ಸೌಂದರ್ಯವನ್ನು ವಿವರಿಸಲು ರವೀಂದ್ರನಾಥ ಟಾಗೂರನಂತೆ ಕವಿಯೇ ಯೋಗ್ಯಪುರುಷನು.

ಹಿಂದೂ ದೇಶದ ಐಕ್ಯತೆಗಾಗಿಯೇ ತೀರ್ಥಗಳೂ, ಯಾತ್ರೆಗಳೂ ಆಗಿವೆಯೆಂದು ಯಾರು ತಾನೇ ಹೇಳಲಾರರು! ಯಾತ್ರೆಯಲ್ಲಿ ಜನಂ ಸಾಮಾಜಿಕಸ್ಥಿತಿಯನ್ನೂ ಅವರ ಭಾವನೆಗಳನ್ನು ತಿಳಿಕೊಳ್ಳಬಹುದು. ಜಾತ್ರೆಯು ಒಂದು ಪ್ರದರ್ಶನದಂತಿರುವುದು. ಇಲ್ಲಿ ತರತರದ ಕಂಚಿನ ಪಾತ್ರೆಗಳನ್ನೂ ಆಟದಸಾಮಾನುಗಳನ್ನೂ, ಇನ್ನೂ ಇತರ ಸಾಮಾನುಗಳನ್ನೂ, ಮಾರಾಟಕ್ಕೆ ಇಡುವುದರಿಂದ ಕೆಲಸಗಾರರು ಹೊಸ ಹೊಸ ಮಾದರಿಗಳನ್ನು ಕಲಿಯಲಿಕ್ಕೆ ಅವಕಾಶವಿದೆ. ಎಲ್ಲಕ್ಕಿಂತಲೂ ವಿಶೇಷವಾಗಿ, ಭಕ್ತಿಭಾವನೆಗಳು ಉದಾತ್ತವಾಗುವುವು. ಮನುಷ್ಯನ ಅಹಂಕಾರವು ತಗ್ಗುವುದು; ಪ್ರಾಣಿದಯೆ, ಸಮಾನತ್ವ, ಇತ್ಯಾದಿ ಗುಣಗಳು ಮನುಷ್ಯನಲ್ಲಿ ವೃದ್ಧಿಹೊಂದುವುವು. ಇಂಥಾ ಸುಗುಣಗಳನ್ನು ಪಡೆಯಲು ಅನುಕೂಲಿಸಿರುವ ಕಾವೇರಿಯನ್ನು ತಾಯಿಯೆಂದು ಭಾವಿಸಿ, ಅವಳ ಆಶೀರ್ವಾದಕ್ಕೆ ನಾವು ಒಳಗಾಗೋಣ.

ಸಂಘದ ವಂದನಾಪತ್ರಕ್ಕೆ ಪುರಸ್ಕಾರ.

ಮೂರು ವಾರಗಳ ಹಿಂದೆ “ಸಂಘದ ಬಹುಮಾನ ಪತ್ರಕ್ಕೆ ತಿರಸ್ಕಾರ” ಎಂದು ನಾವು ಬಹಳ ಮನೋವ್ಯಥೆಯಿಂದ ಬರೆದ ಅಗ್ರಲೇಖನದ ಅಂತ್ಯಭಾಗದಲ್ಲಿ ಸೂಚಿಸಿದ ನಮ್ಮ ಆಶೆಯು ಸಫಲವಾಯಿತು. ನ್ಯಾಯಮೂರ್ತಿಯಾದ ಲಾರ್ಡ್ ರೀಡಿಂಗ್ ಪ್ರಭುಗಳು ಜಮೀನುದಾರರ ಸಂಘದ ಪ್ರತಿನಿಧಿಗಳಿಗೆ ಭೇಟಿ ಕೊಡಲು ಒಪ್ಪಿರುವರೆಂದು ತಿಳಿಯಬರುತ್ತದೆ. ವಂದನಾಪತ್ರವು ತಿರಸ್ಕರಿಸಲ್ಪಟ್ಟನಂತರ ಸ್ಟೇಟ್ ಸೆಕ್ರೆಟರಿಯವರಿಂದ ಈ ದೇಶಕ್ಕೆ ನ್ಯಾಯವಿಧಾಯಕಸಭೆ ಮಂಜೂರಾದುದರಿಂದ ದೇಶದ ಅಭಿಪ್ರಾಯವನ್ನು ಪ್ರತಿಬಿಂಬಿಸುವ ಜಮೀನುದಾರರ ಸಂಘದ ಅಭಿಪ್ರಾಯವನ್ನು ತಿಳಿಯಲು ವೈಸರಾಯಿ ಪ್ರಭುಗಳಿಗೆ ಅವಕಾಶವಿರಬಹುದು. ನಮ್ಮ ಅಭಿಪ್ರಾಯದಲ್ಲಿ ತನ್ಮಧ್ಯೆ ಕೌನ್ಸಿಲು ಮಂಜೂರು ಆಗದೆ ಇದ್ದಿದ್ದರೂ ಸಂಘದ ವಂದನಾಪತ್ರದ ಭಾಷಾಶೈಲಿಯನ್ನು ಬದಲಾಯಿಸಿ ತಂದಿದ್ದರೆ ಆಗಬಹುದೆಂತ ವೈಸರಾಯರು ತೀರ್ಮಾನಿಸುತ್ತಿದ್ದರೆಂದೇ ತೋರುತ್ತದೆ. “ಸಂಘಕ್ಕೆ ಸಿಕ್ಕಿದ ಆಕ್ಷೇಪಣೆಯಿಂದ ಸಂಘಕ್ಕೆ ಇನ್ನೂ ಬುದ್ಧಿ ಬಂದದ್ದರಿಂದ ವಂದನಾಪತ್ರವನ್ನು ತಿದ್ದಲಿಕ್ಕೆ ಇನ್ನೊಂದು ಅವಕಾಶ ಕೊಡಲು ಮೈ. ಬಾರ್ನ್ಸ್ ಸಾಹೇಬರವರು ಉದ್ದೇಶವಿಲ್ಲ” ಎಂತ ತಾ| 22-9-23 ರಲ್ಲಿ ಬರೆದ ಕಮಿಷನರವರೇ ತಾ 8-10-23 ರಲ್ಲಿ “ವಿದ್ಯಮಾನ ಬದಲಾದುದರಿಂದ ಸಂಘದ ಡೆಪ್ಯುಟೇಶನಿಗೆ ಭೇಟಿ ಕೊಡಲು ವೈಸರಾಯರು ಒಪ್ಪುತ್ತಾರೆ” ಎಂತಲೂ, ಮೊದಲನೇ ಪತ್ರದಲ್ಲಿ ದೇಶದ ಸಾಧಾರಣಾ ಅಭಿಪ್ರಾಯವನ್ನು ಸಂಘವು ಸೂಚಿಸುತ್ತದೆಂತ ಹೇಳಲಿಕ್ಕಾಗುವುದಿಲ್ಲವಾದುದರಿಂದ ಸಂಘದ ಡೆಪ್ಯುಟೇಶನ್ ಅನಾವಶ್ಯವೆಂತ ಚೀಫ್ ಕಮಿಷನರು ವೈಸರಾಯರಿಗೆ ತಿಳಿಸಿದ್ದಾರೆಂತ ಬರೆದವರೇ, “ಸಂಘಕ್ಕೂ ಸರಕಾರಕ್ಕೂ ಇದ್ದ ಸ್ನೇಹಸಂಬಂಧಗಳು ಪುನಹ ಮುಂದುವರಿದು ಸಾಗೀತೆಂತ ನಾನು ಸಂಪೂರ್ಣವಾಗಿ ನಂಬುತ್ತೇನೆ” ಎಂತ ಎರಡನೇ ಪತ್ರದಲ್ಲಿ ಬರೆದಿರುತ್ತಾರೆಂತ ಸಂಘದಿಂದ ತಿಳಿಯಬಂದಿದೆ. ಸಂಘಕ್ಕೆ ಬಂದ ತಾ|| 8-10-23 ರ ಕಮಿಷನರವರ ಪತ್ರದ ತರ್ಜುಮೆಯನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು. ಚೀಫ್ ಕಮಿಷನರವರ ಕೋಪಕ್ಕೆ ಗುರಿಯಾಗಿ ಶಿಕ್ಷಿಸಲ್ಪಟ್ಟ ಸಂಘವು ಶಿಕ್ಷೆಗೆ ಅರ್ಹವಾದದ್ದಲ್ಲವೆಂತ ವೈಸರಾಯರ ಸ್ಥಿರಪಡಿಸಲಾಯಿತು. ಸಂಘದ ಪರವಾಗಿ ನಮ್ಮ ಹಿಂದಿನ ಅಗ್ರಲೇಖನದ ಮೂಲಕ ಮಾಡಿದ ಅಪ್ಪೀಲು ಜಯಪ್ರದವಾಯಿತು. ಸಂಘವು ದೇಶದ ಅಭಿಪ್ರಾಯವನ್ನು ಕೊಡುವ ಸಂಸ್ಥೆಯೆಂಬುದು ನ್ಯಾಯಂ ಆಯಿತು. ಸ್ಥಳೀಯ ಸರಕಾರದವರ ದೃಷ್ಟಿಯಲ್ಲಿ ಸಂಘವು ಕಳಕೊಂಡಿದ್ದ ಗೌರವವು ಮರಳಿ ಬಂದದ್ದು ದೇಶೀಯರೆಲ್ಲರಿಗೂ ಸಂತೋಷವನ್ನುಂಟುಮಾಡದೆ ಇರದು.

ಕಮಿಷನರವರ ಈಗಿನ ಕಾಗದದಲ್ಲಿ “ನಾನು ನಿಮಗೆ ಮೊದಲು ಬರೆದ ಪತ್ರದಿಂದ ನಿಮ್ಮ ಸಂಘಕ್ಕೆ ಬೇಸರವಾದದಕ್ಕೆ ತುಂಬಾ ವ್ಯಸನಪಡುತ್ತೇನೆ. ಈಗ ಆ ಅತೃಪ್ತಿಯು ಸಂಪೂರ್ಣವಾಗಿ ಸಮಾಧಾನವಾಗಬಹುದೆಂತ ನಾನು ನಂಬುತ್ತೇನೆ .... ಬಹುಶಃ ನನ್ನ ಕಾಗದದ ಮಾತು ಅನಾವಶ್ಯಕವಾಗಿ ಜೋರಾಗಿ ಇತ್ತೆಂತ ನಾನು ಒಪ್ಪುತ್ತೇನೆ. ಇದಕ್ಕೆ ನಾನು ಪೂರ್ತಿ ಜವಾಬುದಾರಿಯನ್ನು ವಹಿಸಿಕೊಳ್ಳುತ್ತೇನೆ .... ಈ ವಿಷಯದ ಎಲ್ಲಾ ಸಂಗತಿಗಳನ್ನು ನಿಷ್ಕಪಟವಾಗಿ ಮೇಲ್ಕಂಡ ಮೇರೆ ವಿವರಿಸಿದ ನಂತರ ಆ ವಿಷಯವನ್ನು ಮರೆಯುವೆವೆಂತಲೂ...... ......ನಂಬುತ್ತೇನೆ” ಎಂತ ಬರೆದಿದ್ದಾರೆ. ವಿವರಗಳೆಲ್ಲಾ ಆ ಪತ್ರದಲ್ಲಿ ಇರುವುದರಿಂದ ಇಲ್ಲಿ ಅವುಗಳನ್ನೆಲ್ಲಾ ಬರೆಯುವ ಅವಶ್ಯವಿಲ್ಲ. ಸಂಘದ ವಂದನಾಪತ್ರದಲ್ಲಿ ಅವರ ಕೋಪೋದ್ರೇಕಕ್ಕೆ ಬಲವಾದ ಕಾರಣವಿತ್ತೆಂತ ಮುಂತಾಗಿ ಕಮಿಷನರವರು ಬರೆದಿದ್ದಾರೆ. ಈ ವಿಷಯದಲ್ಲಿ ನಾವು ವಾದಿಸತಕ್ಕದ್ದು ಇದೆಯಾದರೂ ಆಗಿಹೋದ ಕಾರ್ಯವನ್ನು ಮರೆಯಬೇಕೆಂಬ ಕಮಿಷನರವರ ಕೋರಿಕೆಗೆ ಅನುಸಾರವಾಗಿ ಹೆಚ್ಚು ಬರೆಯಲು ಅಪೇಕ್ಷಿಸುವದಿಲ್ಲ.

ಜಮೀನುದಾರರ ಸಂಘಕ್ಕೆ ಮೆಂಬರುಗಳಾಗಿ ದೇಶಸೇವೆ ಮಾಡಿರಿ.

ಈ ರೀತಿ ಸಂಘವು ಪುರಸ್ಕರಿಸಲ್ಪಟ್ಟದ್ದರಿಂದ ಉಂಟಾಗುವ ಸಂತೋಷದ ಹಿಗ್ಗಿನಲ್ಲಿ ಸಂಘವಾಗಲೀ ದೇಶವಾಗಲೀ ತಮ್ಮ ಮುಂದಿನ ಕರ್ತವ್ಯವನ್ನು ಮರೆಯಬಾರದು. ಸಂಘಕ್ಕೆ ಹೀಗೆ ಜಯವಾಗಲಿಕ್ಕೆ ಆದರ ಮೆಂಬರುಗಳು ಸಂಘದೊಳಗಿರುವ ಎಲ್ಲಾ ಮತಭೇದಗಳನ್ನೂ ಕಳಕೊಂಡಿರುವ ವಂದನಾಪತ್ರವನ್ನು ತಯಾರಿಸಿ ಸಂಘದ ಒಗ್ಗಟ್ಟನ್ನು ತೋರಿಸಿದ್ದು ಒಂದು ಕಾರಣವಾಗಿದೆಯೆಂತ, ನಾವು ನಂಬುತ್ತೇವೆ. ವಂದನಾಪತ್ರದಲ್ಲಿ ಮಾತ್ರವಲ್ಲ ಎಲ್ಲಾ ಕಾರ್ಯಗಳಲ್ಲೂ ಸಾಧ್ಯವಾದಮಟ್ಟಿಗೆ ಎಲ್ಲಾ ಅಭಿಪ್ರಾಯದವರೂ ಒಗ್ಗಟ್ಟಾಗಿ ವರ್ತಿಸುವುದು ದೇಶದ ಏಳಿಗೆಗೆ ಅತ್ಯವಶ್ಯಕ. ಇಂಥಾ ಒಗ್ಗಟ್ಟಿನಿಂದ ನಡಕೊಂಡದ್ದರಿಂದಲ್ಲವೇ ಈಗ ಮಂಜೂರಾಗಿರುವ ಕೌನ್ಸಿಲು ದೊರೆತದ್ದು? ಈ ಕೌನ್ಸಿಲಿನಿಂದ ಸಂಘವು ಸೂಚಿಸುತ್ತಿದ್ದ ದೇಶದ ಅಭಿಲಾಷೆಗಳೆಲ್ಲವೂ ಕೈಗೂಡದ್ದರಿಂದ ಹೆಚ್ಚಿನ ಸುಧಾರಣೆಯನ್ನು ಪಡೆಯಲು ಸಂಘವು ಮತ್ತಷ್ಟು ಒಗ್ಗಟ್ಟಿನಿಂದ ಕೆಲಸಮಾಡಬೇಕಾಗಿದೆ. ಆದುದರಿಂದ ಸಂಘದ ಕೆಲಸವನ್ನು ದೂರ ನಿಂತು ನೋಡುತ್ತಿದ್ದ ದೇಶೀಯರೂ, ಸಂಘದ ಇರುವಿಕೆಯೇ ತಿಳಿಯದೆ ಇರುವಂತವರಿದ್ದರೆ ಅವರೂ, ಸಂಘದೊಳಗೆ ನೆಪಮಾತ್ರಕ್ಕೆ ಇದ್ದವರೂ ಮನಃಪೂರ್ತಿಯಾಗಿ ಸಂಘಕ್ಕೆ ಉತ್ತೇಜನಕೊಟ್ಟು ದೇಶದ ಸ್ವತಂತ್ರವನ್ನು ಪಡೆಯಲು ಭಾಗಿಗಳಾಗಬೇಕು.

ಮೊದಲು ತಯಾರುಮಾಡಿದ್ದ ವಂದನಾಪತ್ರವನ್ನೇ ಬದಲಾಗಿರುವ ಈಗಿನ ವಿದ್ಯಮಾನಗಳಿಗೆ ಸರಿಯಾಗುವಂತೆ ತಿದ್ದುಪಡಿ ಮಾಡಿ ಮೊದಲೇ ಕಮಿಟಿಯಿಂದ ಚುನಾಯಿತರಾದ ಪ್ರತಿನಿಧಿಗಳು ವೈಸರಾಯರ ಭೇಟಿಗೆ ಹೋಗಬೇಕೆಂದು ಕಮಿಟಿಯವರು ಪುನಹ ತೀರ್ಮಾನಿಸಿರುವರು. ಸಂಘವು ದೊಡ್ಡ ಪ್ರಾಂತ್ಯಗಳಿಗೆ ಸಿಕ್ಕಿದಂತೆ ಪ್ರಜೆಗಳಿಗೆ ಜವಾಬ್ದಾರಿ ಇರುವ ಆಡಳಿತ ಕ್ರಮವನ್ನು ಕೇಳುತ್ತಲೇ ಬಂದದ್ದಾದರೂ ಕಳೆದವರ್ಷ ದೇಶದ ಮುಖಂಡರು ಈಗ ಮಂಜೂರಾದ ನ್ಯಾಯವಿಧಾಯಕ ಸಭೆಯನ್ನು ಒಪ್ಪಿಕೊಂಡದ್ದರಿಂದ ಈ ಕೌನ್ಸಿಲನ್ನು ಉಪಯೋಗಿಸಿಕೊಂಡು ಹೆಚ್ಚಿನ ಹಕ್ಕುಗಳನ್ನು ಪಡೆಯಲಿಕ್ಕೆ ಅರ್ಹತೆಯನ್ನು ತೋರಿಸಿ ಪ್ರಯತ್ನಿಸುವುದೇ ಈಗಿನ ಸ್ಥಿತಿಗೆ ಉತ್ತಮವೆಂಬುದೇ ನಮ್ಮ ಅಭಿಪ್ರಾಯ.

ದೇಶಕ್ಕೆ ವಿಜ್ಞಾಪನೆ.

ಮಹನೀಯರೇ,

ನಾನು ಮೈಸೂರಿನಲ್ಲಿ ಉದ್ಯೋಗವನ್ನು ಬಿಟ್ಟು ಬಂದನಂತರ ದೇಶದ ಕೆಲಸವನ್ನು ನನ್ನ ಕೈಲಾದಮಟ್ಟಿಗೆ ಮಾಡಬೇಕೆಂಬ ಕುತೂಹಲದಿಂದ, ನಮ್ಮ ಜಮೀನುದಾರರ ಸಂಘವನ್ನು, ಈಗ ಇರುವ ನಮೂನೆಯಲ್ಲಿ ಏರ್ಪಡಿಸಲು ಆಲೋಚಿಸಿ ಲೇಟ್ ಬಿದ್ದಂಡ ಗಣಪತಿಯವರ ಸಹಾಯದಿಂದ, ಸ್ಥಾಪಿಸಿ, ಈಗ ಸುಮಾರು 1½ ವರ್ಷಗಳ ಕೆಲಸವು ಫಲಕಾರಿಯಾದದ್ದು ದೇಶದಲ್ಲಿ ಅನೇಕರಿಗೆ ತಿಳಿದ ಸಂಗತಿಯಾಗಿದೆ. ಆದರೆ ಸಂಘದ ಉದ್ದೇಶವು ಪೂರ್ತಿಯಾಗಿ ಕೈಗೂಡದ ವಿಷಯದಲ್ಲಿ ದೇಶದ ಹಿತಚಿಂತಕರೆಲ್ಲಾ ವ್ಯಸನಪಡುತ್ತಿರುವರೆಂಬುದರಲ್ಲಿ ಸಂಶಯವಿರಲಾರದು. ಈ ನ್ಯೂನತೆಗೆ ದೇಶದವರೆಲ್ಲಾ ಸಂಘಕ್ಕೆ ಕೊಡಬೇಕಾದ ಉತ್ತೇಜನವನ್ನು ಕೊಡದೆ ಇರುವುದೇ ಮುಖ್ಯ ಕಾರಣವಾಗಿರುತ್ತೆ. ಹ್ಯಾಗೂ ಸಂಘವು ಮಾಡಿದ ಕೆಲಸದಿಂದ, ಈಗ ನಮಗೆ ಸಿಕ್ಕಿರುವ ಮಾರ್ಪಾಟುಗಳ ಸಂಘದ ಗೌರವವನ್ನೂ, ಮತ್ತು ದೇಶದ ಮರ್ಯಾದೆಯನ್ನೂ, ಕಾಪಾಡಿತ್ತೆಂದು ಎಲ್ಲರೂ ಸಂತೋಷಪಡಬೇಕಾದದ್ದು ಆವಶ್ಯ. ನಾನು ನನ್ನ ದೇಹದ ಅನಾರೋಗ್ಯದ ದೆಸೆಯಿಂದ ನನಗೆ ಕುತೂಹಲವಿರುವಷ್ಟು ಮಟ್ಟುವರಿಯಿಂದ ಕೆಲಸಮಾಡಲು ಸಾಧ್ಯವಾಗದಿದ್ದರೂ ಕೂಡ ನಾನು ಸಂಘದ ವಿಷಯದಲ್ಲಿ ಪೂರ ಹಿತಚಿಂತಕನಾಗಿರುತ್ತೇನೆ. ಇನ್ನಾದರೂ ದೇಶದವರೆಲ್ಲಾ ಈ ಸಂಘವನ್ನು ಪ್ರೋತ್ಸಾಹಿಸಿ ದೇಶಾಭಿವೃದ್ಧಿಗಾಗಿ ಸಿಕ್ಕಿರುವ ಕೌನ್ಸಿಲಿಗೆ ಅರ್ಹರಾದ ಪ್ರತಿನಿಧಿಗಳನ್ನು ಕಳುಹಿಸಿ ದೇಶವನ್ನುದ್ಧಾರಮಾಡಬೇಕೆಂದು ಕೇಳುತ್ತೇನೆ. ನನ್ನ ಇನ್ನೊಂದು ಕೋರಿಕೆ ಏನೆಂದರೆ - ಈಗ ಎರಡು ವರ್ಷಗಳ ಹಿಂದೆ ಸರಿಯಾಗಿ ಈ ದೇಶದ ಕೆಲಸವನ್ನು ಮಾಡುತ್ತಿರುವ “ಕೊಡಗು ಪತ್ರಿಕೆ”ಯನ್ನೂ ಸಹ ಕಾಪಾಡಬೇಕಾದದ್ದು ದೇಶದವರ ದೊಡ್ಡ ಕರ್ತವ್ಯ. ಈ ಕೊಡಗುಪತ್ರಿಕೆಯು ದೇಶದವರಿಗೂ ಮತ್ತೂ ಸರಕಾರಕ್ಕೂ ಸಹ ಬಹಳಮಟ್ಟಿಗೆ ದೇಶದ ಕಷ್ಟಸುಖಗಳನ್ನು ತಿಳಿಸುತ್ತಾ ಬರುತ್ತಲಿರುವಾಗ್ಯೆ ದೇಶದವರು ಈ ಪತ್ರಿಕೆಯನ್ನು ತಕ್ಕಷ್ಟುಮಟ್ಟಿಗೆ ಪ್ರೋತ್ಸಾಹಿಸದೆ ಇರುವುದು ಬಹಳ ವ್ಯಸನಕರ. ಆದುದರಿಂದ ಇನ್ನಾದರೂ ದೇಶದಲ್ಲಿ ವಿದ್ಯಾವಂತರಾದ ಎಲ್ಲಾ ಮಹನೀಯರೂ ಮತ್ತು ಮಹಿಳೆಯರೂ ಈ ಪತ್ರಿಕೆಗೆ ಚಂದಾದಾರರಾಗಿ ದೇಶಸೇವೆಯನ್ನು ಮಾಡಬೇಕೆಂದು ಅತಿ ವಿನಯದಿಂದ ಕೋರುತ್ತೇನೆ.

10—10—23,
ಮಡಿಕೇರಿ — ಕೋದಂಡ ಮಾದೈಯ

ಕಾವೇರಿ ಯಾತ್ರಿಕರಲ್ಲಿ ವಿನಂತಿ.

ಎಷ್ಟೋ ಸಾವಿರಾರು ವರ್ಷಗಳಿಂದ ತಲಕಾವೇರಿಯಲ್ಲಿ ಹುಟ್ಟಿ ಹರಿಯುತ್ತಲಿರುವ ಈ ನದಿಯು ಲಕ್ಷಾಂತರ ಜನರಿಗೆ ಆಶ್ರಯವನ್ನು ಕೊಟ್ಟು ಕಾಪಾಡುತ್ತಿದೆಯಲ್ಲವೆ? ತಲಕಾವೇರಿಗೆ ತುಲಾಸಂಕ್ರಮಣದಲ್ಲಿ ಎಷ್ಟೋ ಸಾವಿರಾರು ವರ್ಷ ವರ್ಷವೂ ಬಹಳ ದೂರದಿಂದಲೂ ಬಂದು ಸ್ನಾನಮಾಡಿ ಹೋಗುತ್ತಾರಲ್ಲವೆ? ಇಲ್ಲಿ ಲಕ್ಷಾಂತರ ಜನರು ಹೋಗಿ ತೀರ್ಥ ಬರುವಾಗ ಸ್ನಾನಮಾಡಿ ದೇವರ ನಾಮಗಳನ್ನುಚ್ಚರಿಸುತ್ತ, ದೇವರಿಗೆ ಹಣ್ಣುಕಾಯಿಗಳನ್ನರ್ಪಿಸಿ ತಾವು ಕೃತಾರ್ಥರಾದೆವೆಂದು ಸಂತೋಷಚಿತ್ತರಾಗಿ ಬರುವರು. ಇವೆಲ್ಲವೂ ಅವರವರ ನಂಬಿಕೆಯ ಮಾತಾಯಿತು. ನಂಬಿಕೆಯಿಂದ ಕಬ್ಬಿಣವು ಚಿನ್ನವೂ ಚಿನ್ನವು ಕಬ್ಬಿಣವೂ ಆಗಬಹುದು. ಇದರ ವಿಷಯದಲ್ಲಿ ನಾನು ಹೆಚ್ಚಾಗಿ ಹೇಳಬೇಕಾದುದೇನೂ ಇಲ್ಲ.

ಈ ಕಾವೇರಿ ಯಾತ್ರೆಯನ್ನು ಮಾಡುವ ಉದ್ದೇಶವೇನು? ಎಂಬದಾಗಿ ಯಾತ್ರಿಕರನ್ನೆಲ್ಲಾ ವಿಚಾರಿಸಿದರೆ ಸಾಮಾನ್ಯವಾಗಿ ನಮಗೆ ದೊರೆಯುವ ಉತ್ತರವೆಂದರೆ, ನಾವು ಮಾಡಿದ ಪಾಪವನ್ನು ಪರಿಹರಿಸುವುದಕ್ಕಾಗಿ ಯಾತ್ರೆಯನ್ನು ಮಾಡುತ್ತೇವೆಂದು ಕೆಲವರೂ, ನಮ್ಮ ಇಷ್ಟಾರ್ಥವು ಕೈಗೂಡಬೇಕೆಂದು ತೀರ್ಥಸ್ನಾನ ಮಾಡುವೆವೆಂದು ಕೆಲವರೂ, ತಮ್ಮ ಪಿತೃಗಳಿಗೆ ಸದ್ಗತಿ ಒದಗಿಸಬೇಕೆಂದು ಅನೇಕರೂ, ಜನರು ಹೆಚ್ಚಾಗಿ ಸೇರುವುದರಿಂದ ವಿನೋದಕ್ಕೂ ಅಲ್ಪಸ್ವಲ್ಪ ವ್ಯಾಪಾರ ನಡಿಸಬಹುದೆಂದು ಮತ್ತೆ ಕೆಲವರೂ, ತಮಾಷೆಯನ್ನು ನೋಡುವೆವೆಂದು ಇನ್ನು ಕೆಲವರೂ ಹೇಳುವರು. ಈ ಉತ್ತರಗಳೆಲ್ಲಾ ಮನುಷ್ಯನ ನಿಜವಾದ ಕರ್ತವ್ಯ ಪಾಲನಕ್ಕಾಗಿ ಕಲಸಮಾಡುವ ಒಂದು ಉಪಾಯವಾದರೂ ಇದೆಯೆ? ಇಲ್ಲವೇ ಇಲ್ಲ. ಹಾಗಾದರೆ ಯಾತ್ರೆಯನ್ನು ಮಾಡುವುದು ಏತಕ್ಕಾಗಿ? ಜಾತ್ರೆ ಹೋಗುವುದರಿಂದಾದರೂ ಕರ್ತವ್ಯಪಾಲನ ಮಾಡಿದಂತಾಗುವುದಿಲ್ಲವೆ? ಹಾಗಾದರೆ ಕೇಳಿರಿ.

ನಮ್ಮ ಇಷ್ಟಾರ್ಥಗಳನ್ನು ನೆರವೇರಿಸಲಿಕ್ಕಾಗಿ ಭಗವಂತನನ್ನು ಪ್ರಾರ್ಥಿಸಬೇಕಾದುದಿಲ್ಲ. ಅಥವಾ

ನಾಡುವುದೂ ಸ್ವಾರ್ಥವೆಂದು ಕರೆಯಲ್ಪಡುವುದು. ಪರಮಾತ್ಮನು ನಮ್ಮನ್ನು ಕೆಲಕೆಲವು ಕರ್ತವ್ಯವನ್ನು ಮಾಡುವುದಕ್ಕಾಗಿ ನಿರ್ಮಿಸಿರುವನು. ಆ ಕರ್ತವ್ಯಗಳಲ್ಲಿ ದೇವರ ಸೇವೆಯೂ ಒಂದಾಗಿದೆ. ಹಾಗಾದಮೇಲೆ ಆ ದೇವರ ಸೇವೆಗಾಗಿಯೇ ನಾವು ದೇವರನ್ನು ಪ್ರಾರ್ಥಿಸಬೇಕಲ್ಲವೇ? ಅದೇ ರೀತಿ ನಾವು ಯಾತ್ರೆ ಹೋಗುವುದು ನಮ್ಮ ಕರ್ತವ್ಯ ಪಾಲನಕ್ಕಾಗಿಯೇ ಇರಬೇಕು. ಹಾಗಲ್ಲದೆ ಪುಣ್ಯವನ್ನು ಪಡೆಯುವುದಕ್ಕಾಗಲಿ, ನಮ್ಮ ಇಷ್ಟಸಿದ್ಧಿಯಾಗುವುದಕ್ಕಾಗಲಿ ನಾವು ಯಾತ್ರೆ ಮಾಡಿದರೆ ಅದು ಫಲಪಾತ್ರವೆನಿಸುವ ಸ್ವಾರ್ಥತೆಯಾಗುವುದಿಲ್ಲವೇ? ನಾನಾ ಜನರ ನಡೆನುಡಿಗಳಲ್ಲಿ ಬೆಳಕು ಕಲಿತುಕೊಳ್ಳಬೇಕಾದುದನ್ನು ಕಲಿಯುವುದಕ್ಕೆ ಯಾತ್ರೆ ಮಾಡುವುದರಲ್ಲಿ ಪ್ರಯೋಜನವಿದೆ. ಯಾತ್ರೆ ಮಾಡುವಾಗ ಅನೇಕಾನೇಕ ಕಷ್ಟಗಳನ್ನನುಭವಿಸುವಾಗ ನಮ್ಮಲ್ಲಿರುವ ಮನವು ಎಷ್ಟೋ ಕರಗಿ ಸಾತ್ವಿಕಸ್ಥಿತಿಗೆ ಬರುವುದು. ಆದುದರಿಂದ ನಾವು ಯಾತ್ರೆಯನ್ನು ಈ ಉದ್ದೇಶದಿಂದ ಮಾಡಬೇಕು. ಇಂತಹ ಉದ್ದೇಶಗಳಿಂದ ಯಾತ್ರೆಯನ್ನು ಮಾಡುವವರು ಅತಿ ವಿರಳ. ಆದುದರಿಂದ ಯಾತ್ರಿಕರೆಲ್ಲರೂ ಕಾಲುದಾರಿಯಿಂದಲೇ ಹೋಗಬೇಕು. ಅಲ್ಲದೆ ಉಪವಾಸವ್ರತವನ್ನು ಕೈಕೊಂಡು ದೇಹವನ್ನು ಸ್ವಲ್ಪ ಸ್ವಲ್ಪವಾಗಿ ದಂಡಿಸಿ, ಜ್ಞಾನವನ್ನು ಪಡೆಯಬೇಕು. ಹಾಗಲ್ಲದೆ ಮೋಟಾರು ಗಾಡಿಗಳಲ್ಲಿ ಸುಖವಾಗಿ ಹೋಗಿ ಸ್ನಾನಮಾಡಲು ವೈಗ[illegible]ತನದಿಂದ ಹಿಂದೆ ಬರುವವರು ತಲಕಾವೇರಿಗೇ ಹೋಗಬೇಕಾಗಿಲ್ಲ. ರಾಜಾ ಸೀಟಿಗೆ ಹೋದರೂ ಸಾಕು.

ಯಾತ್ರಿಕರಲ್ಲಿ ನನ್ನದೊಂದು ಕಡೆಯ ವಿನಂತಿ ಇದೆ. ಪರ್ವಸ್ನಾನಕ್ಕಾಗಿ ಜನರೇರಿಗೆ ಯಾವುದಾದರೂ ಒಂದು ದುರಾಭ್ಯಾಸವು ಇಲ್ಲದೇ ಇರುವುದು ಬಹಳ ಅಪರೂಪ. ಹೊಗೆಸೊಪ್ಪಿನ ಸೇವನೆ, ಮದ್ಯಪಾನ, [illegible], ಬೀಡಿ [illegible] ದೃಷ್ಟಸೇವನೆ [illegible] ಇದುವೆಲ್ಲವೂ ಒಂದೊಂದು ದುರಾಭ್ಯಾಸಗಳು. ಇವುಗಳಲ್ಲಿ ಯಾವುದಾದರೂ ಒಂದು ಅಭ್ಯಾಸವನ್ನು ಮಾಡದಿರುವವರು ಅಪರೂಪವೇ ಸರಿ. ಇವುಗಳನ್ನು ತ್ಯಾಗಮಾಡದೇ ಹೋದರೆ ಯಾತ್ರೆಯನ್ನು ಮಾಡಿ ತಾನೇ ಏನು ಪ್ರಯೋಜನ? ಯಾತ್ರಿಕರೆಲ್ಲರೂ ದೃಢವಾದ ಮನೋನಿಶ್ಚಯದಿಂದ ತಂತಮ್ಮ ದುರಾಭ್ಯಾಸಗಳನ್ನು ಕಾವೇರೀ ಯಾತ್ರೆ ಮಾಡಿದ ಗುರುತಿಗಾಗಿಯಾದರೂ ಅದನ್ನು ಬಿಟ್ಟುಬಿಡಲೇಬೇಕು. ಇಂತಹ ಮನೋನಿಶ್ಚಯವನ್ನು ಮಾಡದೆ ಇದಕ್ಕಿಂತಲೂ ಹೆಚ್ಚಾಗಿ ಮಾಡಬೇಕಾದುದೇನೂ ಇಲ್ಲ. ಯಾತ್ರಿಕರೆ, ಕಾಶೀಯಾತ್ರೆ ಮಾಡಿದವರು ತಮಗೆ ಬಹಳ ಪ್ರೀತಿಯುಳ್ಳ ವಸ್ತುವೊಂದನ್ನು ಬಿಟ್ಟುಬಿಡಬೇಕೆಂದು ಒಂದು ನಿಯಮವನ್ನು ನೀವು ಕೇಳಿಯಿರಲ್ಲವೆ? ಹಾಗೆಯೇ ಈ ತಲಕಾವೇರಿ ಯಾತ್ರೆಯಲ್ಲಿಯೂ ನೀವು ಯಾತ್ರಿಕರು ದೃಢವ್ರತದಿಂದ ಯಾವುದಾದರೂ ಹೆಚ್ಚಿನ ಪ್ರೀತಿಯುಳ್ಳ ಒಂದು ಕೆಟ್ಟ ಅಭ್ಯಾಸವನ್ನು ಸೇವನೆ ಮಾಡುವುದನ್ನು ಖಂಡಿತವಾಗಿಯೂ ಬಿಟ್ಟುಬಿಡಬೇಕು. ಹಾಗೆ ಮಾಡದೇ ಹೋದರೆ ಯಾತ್ರೆ ಮಾಡಿದ್ದರಲ್ಲಿ ಹೆಚ್ಚು ಪ್ರಯೋಜನವು ಸಿಕ್ಕಲಾರದೆಂದು ಯಾತ್ರಿಕರೆಲ್ಲರೂ ಖಂಡಿತವಾಗಿ ತಿಳಿದಿರಬೇಕು. ಸಿಸಾ ಸೇವನೆಯನ್ನು ಮಾಡುವವರು ತಲಕಾವೇರಿಯಲ್ಲಿ ದೇವರಭಿಮುಖವಾಗಿ ನಿಂತು "ಓ ದೇವೀ! ನಾನು ಇಷ್ಟು ದಿನ ಮದ್ಯಪಾನವನ್ನು ಸೇವಿಸಿ ಸೇವಿಸಿ ಬಹಳ ನೀಚನಾಗಿದ್ದೇನೆ. ನನ್ನ ಬುದ್ಧಿಯು ಕೆಟ್ಟುಹೋಗಿದೆ. ಓ ಪವಿತ್ರ ದಯಾನಿಧಿ ನೀನು ನನಗೆ ಇಂತಹ ಬುದ್ಧಿಯನ್ನು ಇನ್ನು ಮುಂದೆ ಕೊಡಬೇಡ. ನನ್ನ ಈ ದುರಾಭ್ಯಾಸವನ್ನು ಇಷ್ಟಕ್ಕೇ ನಿಲ್ಲಿಸುವೆನು. ಇನ್ನು ಮುಂದೆ ಮದ್ಯವನ್ನು ಸೇವಿಸುವುದೇ ಇಲ್ಲ" ಎಂದು ಹೇಳಿ ಮನೋನಿಶ್ಚಯದಿಂದ ಅದನ್ನು ಬಿಟ್ಟುಬಿಡಲೇಬೇಕು. ನಸ್ಯ, ಬೀಡಿ, ಸಿಗರೇಟು, ಕಾಫಿ, ಟೀ, ಮೊದಲಾದವುಗಳನ್ನು ಸೇವಿಸುವವರೂ, ಸಹ ಈ ರೀತಿ ದೇವರ ಮುಂದೆ ತಮ್ಮ ತಪ್ಪನ್ನು ಕ್ಷಮಿಸುವಂತೆ ಕೇಳಿಕೊಂಡು ಇನ್ನು ಮುಂದೆ ಖಂಡಿತವಾಗಿಯೂ ಆ ದುರಭ್ಯಾಸಗಳನ್ನು ಬಿಟ್ಟುಬಿಡಬೇಕು. ಹಾಗಲ್ಲದೆ ನಿತ್ಯಸೇವನೆ ಮಾಡುವವನ್ನು ಹಾಗೆ ಮಾಡುವುದು ಪಾಪಕರವೆಂದು ಹೇಳುವ ಹೊಟ್ಟೆ ಸಭ್ಯ[illegible]ಕೊಳ್ಳುವವರು ಟೀ ಬೀಡಿ ಸೇವಿಸುವವರಲ್ಲವೇ? ಇವರು ಅವರಿಗಿಂತಲೂ ಕೀಳಾದವರಲ್ಲವೇ? ನಾವು ಇತರರಿಗೆ ಬುದ್ಧಿವಾದವನ್ನು ಹೇಳಬೇಕಾದರೆ ಮೊದಲು ನಮ್ಮಲ್ಲಿರುವ ದುರ್ಗುಣಗಳನ್ನು ತ್ಯಾಗಮಾಡಿ, ನಮ್ಮ ಉದಾಹರಣೆಯನ್ನು ಇತರರಿಗೆ ತೋರಿಸಬೇಕು. ಹೊಗೆಸೊಪ್ಪನ್ನು ಸೇವಿಸುವವರಿಗೂ, ಇತರ ದುರ್ಗುಣಗಳನ್ನುಳ್ಳವರಿಗೂ ಸಹ ನನ್ನ ವಿನಂತಿಯು ಇದೇ. ಆದುದರಿಂದ ಓ, ಕಾವೇರಿ ಯಾತ್ರಿಕರೇ! ನಿಮಗೆ ನಿಜವಾದ ಯಾತ್ರೆಯಿಂದ ಪ್ರಯೋಜನವಾಗಬೇಕಾಗಿದ್ದರೆ, ನಿಮ್ಮ ನಸ್ಯ, ಬೀಡಿ, ಸಿಗರೇಟು, ಹೊಗೆಸೊಪ್ಪು, ಸಿಸಾ ಸೇವನ ಕಾಫಿ, ಟೀ ಮುಂತಾದ ದುರ್ಗುಣಗಳನ್ನು ಖಂಡಿತವಾಗಿಯೂ ಬಿಟ್ಟುಬಿಡಬೇಕೆಂದು ನೂರಾರು ಸಾರಿ ಕರೆದು ಕರೆದು ಕೇಳಿಕೊಳ್ಳುತ್ತೇನೆ. ನಿಮ್ಮನ್ನು ಇಷ್ಟೆಲ್ಲ ಕೇಳಿಕೊಳ್ಳುವವನಾದ ನಾನೂ ಸಹ ನನ್ನಲ್ಲಿರುವ ಒಂದು ದುರ್ಗುಣವನ್ನಾದರೂ ಬಿಟ್ಟುಬಿಡಬೇಕಲ್ಲವೆ? ನಾನು ಹಾಗೆ ಬಿಟ್ಟಿರದೆ ನಿಮ್ಮನ್ನು ಕೇಳಿಕೊಳ್ಳುವುದು ಸಮಂಜಸವಲ್ಲ. ನಸ್ಯ ಸೇವಿಸುವವನಾದ ನಾನು ನನ್ನ ದುರ್ಗುಣವನ್ನು ಬಿಟ್ಟು ನಿಮ್ಮ ಕೇಳಿಕೊಳ್ಳುತ್ತೇನೆ. ಕಾವೇರಿ ಯಾತ್ರೆ ಮಾಡಿ ಬಂದವರೆಲ್ಲರೂ ತಂತಮ್ಮ ದುರ್ಗುಣ ತ್ಯಾಗವನ್ನು ಮಾಡಿದ್ದೇ ಆದರೆ ಯಾತ್ರೆ ಮಾಡಿದ ಸರ್ವ ಪ್ರಯೋಜನವೂ ಖಂಡಿತವಾಗಿ ಸಿಕ್ಕುವುದು. ಓ ಯಾತ್ರಿಕರೆ [illegible] ತ್ಯಾಗಮಾಡಿರಿ, ಖಂಡಿತವಾಗಿಯೂ ಒಟ್ಟು [illegible] ಮರೆಯದೆ ಕಾವೇರೀ ನದಿಯಲ್ಲಿ ಕೇಳುವವರಿ [illegible] ಕೃಪೆಯಾಗಿರಿ ಇದೇ ನನ್ನ ಪ್ರಾರ್ಥನೆ.

ಮಾನವ ಸೇವಕ.

> "ಕೊಡಗು" ಪತ್ರಿಕೆಗೆ ಚಂದಾದಾರರಾಗಿ ದೇಶಭಕ್ತಿ ತೋರಿರಿ.

ವಾಚಕರಲ್ಲಿ ವಿನಂತಿ.

ದೇಶಬಾಂಧವರೇ,

ಈ ಭೂಲೋಕದಲ್ಲಿ [illegible] ಮಾನವರೂ [illegible] ಜ್ಞಾನವನ್ನು [illegible] ದೇವರನ್ನು ತಿಳಿಯುವುದಕ್ಕಾಗಿ [illegible] ಆತನ ಸೇವೆಗಾಗಿಯೇ ಬೇರೆ [illegible] ಆತನ ಪ್ರತಿಬಿಂಬಗಳು [illegible] ದೇಶಸೇವೆಯೆಂದರೆ [illegible] ದೇಶದ ಅಭಿವೃದ್ಧಿಯೇ ಪ್ರತಿಯೊಬ್ಬ ನಿವಾಸಿಯ [illegible] ದೇಶದ [illegible] ಪ್ರತಿಯೊಬ್ಬನೂ [illegible] ದೇಶದ [illegible] ಪ್ರತಿಯೊ[illegible] ದೇಶ [illegible] ಹೆಚ್ಚಿನ [illegible] ನಮ್ಮ ಜಿಲ್ಲೆಯ [illegible] ಅಭಿವೃದ್ಧಿ [illegible] ಈಗ ಸುಮಾರು 13 ವರ್ಷ ಕೆಳಗೆ [illegible] ಸಂಘ ಒಂದು ಸ್ಥಾಪಿತವಾಯಿತು. [illegible] ಅನೇಕರು [illegible] ಮುಖ್ಯವಾದ [illegible] ದೇಶದ [illegible] ತಿಳಿಸುವುದು [illegible] ದೇಶವಾಸಿಗಳ [illegible] ತಮ್ಮ ತಮ್ಮ ಜನಾಂಗಕ್ಕೆ [illegible] ಈ ಸಂಘದ ಉದ್ದೇಶಗಳಲ್ಲಿ [illegible] ಆದರೆ ಈ ಸಂಘದಿಂದ ದೇಶಕ್ಕೆ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ಕೆಲವರು ಹೇಳುತ್ತಿರುವರು. ಇದು ಪೂರ್ತಿ ಒಪ್ಪತಕ್ಕ ಮಾತಲ್ಲ. ದೇಶಕ್ಕೆ ಈ ಸಂಘದಿಂದ ಮಾಡಲು ಉಂಟಾಗುವ ಪ್ರಯೋಜನಗಳು [illegible] ಅತಿವೃಷ್ಟಿಯಿಂದ ದೇಶದಲ್ಲಿ ಉಂಟಾದ ಕಷ್ಟ [illegible] ಈ ಸಂಘದವರಲ್ಲವೇ? [illegible] ಸ್ವರ್ಗ [illegible] ಈ ಸಂಘದವರ [illegible] ಉದ್ದೇಶದಲ್ಲಿ ಬೆಳೆಗಾರರ ಸಂಘವು [illegible] ದೇಶಕ್ಕೆ [illegible] ಈ ಸಂಘದ [illegible] ಆದರೆ ಈ [illegible]

ಇನ್ನೂ ಹೆಚ್ಚಿನ ಪ್ರಯೋಜನಗಳನ್ನು ಒದಗಿಸತಕ್ಕದಾಗಿ [illegible] ದೇಶದವರ ಆಲಸ್ಯಭಾವದಲ್ಲದೆ [illegible] ಕಾರಣವಲ್ಲ. ಜನರು ಇದರ ಕೆಲಸಕ್ಕೆ ಸಾಕಷ್ಟು ಉತ್ತೇಜನವನ್ನು ಕೊಟ್ಟಿರುವುದಿಲ್ಲ. ಮೇಲೆ ಹೇಳಿದಂತೆ ಎಲ್ಲರೂ ಒಂದೇ ವಿಧದಲ್ಲಿ ದೇಶಸೇವೆ ಮಾಡಲು ಸಾಧ್ಯವಿಲ್ಲ. ಕೆಲವರು ಧನಸಹಾಯದಿಂದಲೂ, ಇನ್ನು ಕೆಲವರು ಬುದ್ಧಿಬಲದಿಂದಲೂ ಮತ್ತೆ ಕೆಲವರು ದೇಹಸಹಾಯದಿಂದಲೂ ಇದರ ಕೆಲಸಕ್ಕೆ ಪ್ರೋತ್ಸಾಹ ಕೊಡಬೇಕಾಗಿದೆ. ಆದುದರಿಂದ ಜಮೀನು ಹಿಡುವಳಿದಾರರಾದ ಪ್ರತಿಯೊಬ್ಬರೂ ಈ ಸಂಘಕ್ಕೆ ಮೆಂಬರರಾಗಬೇಕೆಂದು ಎಷ್ಟು ಒತ್ತಿ ಹೇಳಿದರೂ ಸಾಲದು. ಜಮೀನುದಾರರ ಸಂಘದ ಮೆಂಬರಲ್ಲದವನು ಜಮೀನು ಹಿಡುವಳಿದಾರನೆಂದು ಹೇಳಿಕೊಳ್ಳಲು ನಾಚಿ ತಲೆತಗ್ಗಿಸಬೇಕು. ಆದುಕಾರಣ ಈ ಸಂಘದ [illegible] ಆರ್ಗನೈಸರವರ ಕೆಲಸಕ್ಕೆ ಮೇಲೇ ಹೇಳಿದಂತೆ ಸಹಾಯಕರಾಗಬೇಕಾಗಿ ನನ್ನ ಕೋರಿಕೆ.

ನಮ್ಮ [illegible] ಈ ಸಂಘಕ್ಕೆ ಮುಖ್ಯ ಬೆಂಬಲವಾಗಿರುವ [illegible] ವಿಷಯ ದೇಶೀಯರ [illegible] ಹೇಳದೆ ನನ್ನ ಕರ್ತವ್ಯವನ್ನು [illegible] ಇದೇ, ಈಗ ಸುಮಾರು ಎರಡು ವರ್ಷಗಳಿಂದ [illegible] ನಿರ್ಧೀಕರಿಸಿ ಕೈಕೊಂ[illegible] ಇದು ಹೊರಡಲು [illegible] ಯೋಚಿಸಿದಂತೆ [illegible] ತವನ್ನು ಅವರು [illegible] ಕಷ್ಟಪಟ್ಟು [illegible] ಜನರನ್ನು [illegible] ಕೆಲವು ಪತ್ರಿಕೆ [illegible] ಜಮೀನುದಾರರ ಸಂಘದ ಉದ್ದೇಶಗಳನ್ನು [illegible] ರೈತರ ಅಭಿಪ್ರಾಯಗಳನ್ನು ಸರಕಾರದವರ ಮುಂದಿಡಲು ಇದು ಬಹಳ ಸಹಕಾರಿಯಾಗಿದೆ. ರೈತರ ಕೋರಿಕೆಗಳನ್ನು ಜಮೀನುದಾರರ ಸಂಘದ ಮೂಲಕ [illegible] ಸರ್ಕಾರದವರಿಗೆ ತಿಳಿಸಲು ಉಪಕಾರಿಯಾಗುವುದು. ಅದರ ಈ ಪತ್ರಿಕೆಯ ಮೂಲಕ [illegible] ದೇಶದ [illegible] ಅಧಿಕಾರಿಗಳ ಗಮನ[illegible] ಅವುಗಳಿಗೆ ಸರ್ಕಾರದವರು ತಕ್ಕ [illegible] ಇರುವರು ಎಂಬುದು ಎಲ್ಲ[illegible] ನಮ್ಮ ದೇಶಕ್ಕೆ ಈಗ ದೊರಕಿರುವ [illegible] ಮಾರ್ಗವನ್ನು ಪಡೆಯಲು ಈ ಪತ್ರಿಕೆಯು ಮಾಡಿದ ಕೆಲಸವು ಅಲ್ಪವಲ್ಲ. ದೇಶೀಯರ [illegible] ಸರ್ಕಾರದವರ ಮುಂದಿಟ್ಟದ್ದರ ಫಲಿತಾಂಶ [illegible] ಇನ್ನು ಮುಂದೆಯೂ ನಮ್ಮ ಹಕ್ಕುಗಳನ್ನು ಪಡೆಯಲು ಇದೇ ಮುಖ್ಯಸಾಧನವು [illegible] ಆ ಕೆಲಸದಲ್ಲಿ ನಾವೂ ಹೆಚ್ಚಾಗಿ ಭಾಗಿಗಳಾಗಬೇಕು [illegible] ತಿಳಿಸಲು ಇದರ [illegible] ಸಹಾಯ ಬೇರೆ ಯಾವುದೂ ಇಲ್ಲ. ನಮ್ಮ [illegible]ದಲ್ಲಿಯೂ ಹೊರಗಡೆಯೂ ನಡೆಯುತ್ತಿರುವ ಸಮಾಚಾರಗಳನ್ನು ಜನರು ಎಲ್ಲಿ ಇದ್ದರೂ ಅವರಿಗೆ ತಿಳಿಸಲು ಅನುಕೂಲವಾಗಿರುವ ಈ ಪತ್ರಿಕೆಗೆ ದೇಶೀಯರೆಲ್ಲರೂ ಪ್ರೋತ್ಸಾಹ ಕೊಡಬೇಕೆಂದು ಎಷ್ಟು ಹೇಳಿದರೂ ಸ್ವಲ್ಪವೇ. ಓದು ಬರಹ ತಿಳಿಯುವ ಪ್ರತಿಯೊಬ್ಬನೂ ಈ ಪತ್ರಿಕೆಗೆ ಚಂದಾದಾರನಾಗಿ ಇದರ ಕೆಲಸಕ್ಕೆ ಉತ್ತೇಜನ ಕೊಡಬೇಕು.

ಕೊಡಂದೇರ ಕುಟ್ಟಯ್ಯ.

ದೇಶದ ಎಚ್ಚರಿಕೆಗೆ ಸಾಧನಗಳು.

ಅವು ಯಾವುವೆಂದರೆ –

(೧) ಜಮೀನುದಾರರ ಸಂಘ.

(೨) "ಕೊಡಗು" ಪತ್ರಿಕೆ.

ಜಮೀನುದಾರರ ಸಂಘ.

ಕೊಡಗಿನಲ್ಲಿ ಜನರು ಒಗ್ಗಟ್ಟಾಗಿ ದೇಶದ ಏಳಿಗೆಯನ್ನು [illegible] ಜಮೀನುದಾರರ ಸಂಘವು ಮುಖ್ಯವಾಗಿದೆ. ಈ ಸಂಘವು ಒಳ್ಳೇ ಸ್ಥಿತಿಯಲ್ಲಿ ಕೆಲಸಮಾಡಲಿಕ್ಕೆ ತೊಡಗಿ ಹದಿಮೂರು ವರ್ಷಗಳಾದವು. ಆ ಮೊದಲು ರಾಜ್ಯಾಡಳಿತದ ವಿಷಯದಲ್ಲಿ ರೈತರು [illegible] ವರ್ಷವೆಲ್ಲಾ ಕೆಲಸ ಮಾಡುತ್ತಿದ್ದರೇ ಹೊರತು ರೈತರ ಅಭಿಪ್ರಾಯವನ್ನು [illegible] ಮುಖ್ಯಸ್ಥರಾದವರು [illegible] ಭಾವನೆ ರೈತರಲ್ಲಿ ಇತ್ತು [illegible] ದೇಶದ ಮುಖಂಡರಲ್ಲಿ [illegible] ಕೇಳಿ ಆಲೋಚನೆ ತೆಗೆದುಕೊಳ್ಳುತ್ತಿದ್ದರು [illegible] ನಾನು ತಿಳಿದಿದ್ದೇನೆ. ದೇಶೀಯರ [illegible] ಆ ಕೊರತೆಯನ್ನು [illegible] ಸರ್ಕಾರದವರು [illegible] ದೇಶದಲ್ಲಿ [illegible] ರೈತರಲ್ಲಿ ಕೆಲವರಿಗೆ [illegible] ಆಗಿಂದಾಗ್ಗೆ ಕೊಟ್ಟರೂ ರೈತರ

ಮತವನ್ನು ಸರಕಾರಕ್ಕೆ ತಿಳಿಸಲು ಪ್ರಾರಂಭಿಸಿದರು. ಇದರಿಂದಲೂ ಪ್ರಯೋಜನವಾಗುವದಿಲ್ಲವೆಂತ ಸ್ಪಷ್ಟವಾಗುತ್ತಾ ಬಂದ ಕ ವರ್ಷವೆಲ್ಲಾ ಖಾಯಂ ಕೆಲಸ ಮಾಡುವ ಸಂಘವು ಸ್ಥಾಪಿತವಾಯಿತು.

ಸರಕಾರಿ ಉದ್ಯೋಗಸ್ಥರೇ ರೈತರ ಮತವನ್ನು ಕೊಡುವ ಕಾಲದಲ್ಲಿ ದೇಶದವರು ರಾಜಕೀಯ ವಿಚಾರದಲ್ಲಿ ಒಗ್ಗಟ್ಟಾಗಿ ಯೋಚಿಸದೆ ಇದ್ದರೂ ಆಯಾ ಗ್ರಾಮಕ್ಕೆ ಸಂಬಂಧಪಡುವ ಆಡಳಿತಗಳಲ್ಲಿ ಗ್ರಾಮಪಂಚಾಯತಸ್ಥರು ತುಂಬಾ ಭಾಗಿಗಳಾಗುತ್ತಿದ್ದರೆಂತ ತಿಳಿಯಬರುತ್ತೆ. ಬ್ರಿಟಿಷ್ ಆಳಿಕೆ ಪ್ರಾರಂಭವಾದ ಮೇಲೆ ಸಹ ಸಿವಿಲ್ ಜಡ್ಜಿಯವರಿಗೆ ಪಂಚಾಯತಿ ಸಹಾಯವಿತ್ತೆಂಬದಕ್ಕೆ ದಾಖಲೆಗಳು ಇರುವಾಗ ಇತರ ಆಡಳಿತಗಳಲ್ಲಿ ಇಂಥಾ ಪಂಚಾಯತಸ್ಥರ ಮತವನ್ನು ಅವಲಂಬಿಸಿಯೇ ಉದ್ಯೋಗಸ್ಥರು ಮೇಲಧಿಕಾರಿಗಳಿಗೆ ಅಭಿಪ್ರಾಯ ಕೊಡುತ್ತಿದ್ದರೆಂಬದೆಂತ ನಂಬಲೇಬೇಕಾಗಿದೆ. ಇಂಥಾ ಪಂಚಾಯತಿಗಳು ಪ್ರತಿ ಗ್ರಾಮದಲ್ಲೂ ಇದ್ದಾಗ ಸರಕಾರ ಆಡಳಿತದ ಸೋಂಕು ರೈತರಿಗೆ ತಟ್ಟುತ್ತಲೇ ಇರಲಿಲ್ಲ. ಬ್ರಿಟಿಷ್ ಸರಕಾರದ ಆಡಳಿತವು ಅಭಿವೃದ್ಧಿಯಾಗುತ್ತಾ ಬಂದಂತೆ ಪಂಚಾಯತಿಗಳು ಮಾಯವಾಗುತ್ತಾ ಬಂದವು. ಯಾವ ತಕರಾರನ್ನೇ ಆಗಲೀ ತೀರಿಸಲಿಕ್ಕೆ ರೆವಿನ್ಯೂ ಸಿವಿಲ್ ಅಧಿಕಾರಸ್ಥಾನಗಳಿಗೆ ಹೋಗಲಿಕ್ಕೆ ಪ್ರಾರಂಭಿಸಿದರು. ಸರಕಾರದ ಕಟ್ಟು ಇನ್ನೂ ಬಿಗಿಯಾಗಿರದೆ ಇದ್ದದ್ದರಿಂದ ಅಂಥಾ ಅಧಿಕಾರಿಗಳೂ ರೈತರ ಸ್ನೇಹವನ್ನೇ ಮುಂದಿಟ್ಟು ಕೆಲಸಮಾಡುತ್ತಿದ್ದರು. ರೈತರಿಗೆ ಉದ್ಯೋಗಸ್ಥರಲ್ಲಿ, ಅವ್ರರಿಂದ ಸರಕಾರದಲ್ಲಿ ನಂಬಿಗೆ ಬೆಳೆಯಿತು. ತಂದೆತಾಯಿಗಳಂತೆ ರೈತರನ್ನು ಕಾಪಾಡುವ ಸರಕಾರವೆಂಬ ಅಭಿಪ್ರಾಯವು ಎಲ್ಲರಲ್ಲಿ ಸ್ಥಿರಗೊಳಿಸಿತು. ಸರಕಾರ ತೋಟಗಳು ಲಾಗಳು (ಕಾನೂನು) ಬೆಳೆಯುತ್ತಾ ಬಂದಂತೆ ರೈತರಲ್ಲಿ ಕೆಲವರಿಗಾದರೂ ಸರಕಾರಿ ಉದ್ಯೋಗಸ್ಥರು ರೈತರ ಸ್ನೇಹ ಬೇಕಾಗೂ ಇರಲಿ, ತಮ್ಮ ಅಧಿಕಾರವನ್ನು ಕಾನೂನಿಗೆ ಸರಿಯಾಗಿ ನಡೆಸಿ ಮೇಲಧಿಕಾರಿಗಳ ಶಿಫಾರಸ್ಸು ಪಡೆಯುವದೇ ಮುಖ್ಯವೆಂತ ಅನ್ನಿಸತೊಡಗಿತು. ಇದರಿಂದ ಉದ್ಯೋಗಸ್ಥರ ಮೇಲೆ ನಾವು ಆಕ್ಷೇಪಿಸುತ್ತೇನೆ ತಿಳಿಯಲೂ ಭಾವಿಸಬಾರದು. ಸರಕಾರ ಆಡಳಿತದಲ್ಲಿ ಖರ್ಚು ಹೆಚ್ಚಾಯಿತು. ಅದರಿಂದ ರೈತರಿಂದ ವಿಧವಿಧದ ತೆರಿಗೆ ತೆಗೆದುಕೊಳ್ಳಬೇಕಾಗಿ ಬಂತು. ಇಂಥಾ ತೆರಿಗೆಗಳನ್ನು ವಸೂಲುಮಾಡುವದೂ ಮತ್ತು ಹೊಸ ಹೊಸದಾಗಿ ಮಂಜೂರಾಗುತ್ತಾ ಬಂದ ಕಾನೂನುಗಳನ್ನು ಜಾರಿಮಾಡುವದೂ ಉದ್ಯೋಗಸ್ಥರ ಕೆಲಸವಾದ್ದರಿಂದ ಸರಕಾರದ ಉಪ್ಪು ತಿನ್ನುವ ಉದ್ಯೋಗಸ್ಥರು ಕಾನೂನಿಗೆ ಸರಿಯಾಗಿಯೇ ನಡೆಯಲೇಬೇಕಾಯಿತು. ಆದರಿಂದ ಈ ಸರಕಾರದ ಹೊಸಹೊಸ ಕಾನೂನುಗಳೂ ಹೊಸಹೊಸ ತೆರಿಗೆಗಳೂ ಉದ್ಯೋಗಸ್ಥರಲ್ಲಿ ರೈತರ ನಂಬಿಗೆ ಕೆಡಿಸಲು ಕಾರಣವಾದವೇ ಹೊರತು ಉದ್ಯೋಗಸ್ಥರ ಸ್ವಭಾವಗುಣವಲ್ಲ. ಈ ರೀತಿ ಸರಕಾರ ಕಾನೂನುಗಳು ದಿನೇದಿನೇ ಹೊಸಹೊಸತಾಗಿ ಬರಲು ಪ್ರಾರಂಭವಾಗುತ್ತಾ ಬಂದಂತೆ ರೈತರ ಮುಖ್ಯಸ್ಥರು ಕೆಲವರು ಅಗತ್ಯ ಬರುವ ಕಾನೂನುಗಳ ಸಾಧಕ ಬಾಧಕಗಳನ್ನು ಯೋಚಿಸುವ ಜನ ಸಮುದಾಯವೊಂದು ಬೇಕೆಂತ ನಿಶ್ಚೈಸಿ [illegible] ಸಂಘವನ್ನು ಸ್ಥಾಪಿಸಿದರು.

ಪ್ರಾರಂಭದಲ್ಲಿ ಅಲ್ಪಸ್ವಲ್ಪ ಜನರ ಕೂಟವಾದರೂ ಈ ಅಲ್ಪಸ್ವಲ್ಪ ಜನರು ರೈತರು ಮುಂದುಗಡೆ ದೇಶದ ಆಡಳಿತದ ವಿಷಯ ಚರ್ಚಿಸುತ್ತಾ ಬಂದ ಕ ಸರಕಾರದ ಆಡಳಿತದಲ್ಲಿ ರೈತರ ಅಭಿಪ್ರಾಯವನ್ನು ಸೂಚಿಸಬಹುದೆಂತ ತಿಳಿಯುತ್ತ ಬಂದರು. ಹಾಗೆಯೇ ಸಂಘದಲ್ಲಿ ಮೆಂಬರುಗಳ ಸಂಖ್ಯೆ ಹೆಚ್ಚುತ್ತಾ ಬಂತು. ಸಂಘದಿಂದ ಪ್ರತ್ಯಕ್ಷ ಪ್ರಯೋಜನವಾದವು ಕೆಲವು ಇವೆ. ಅವುಗಳನ್ನೆಲ್ಲಾ ಇಲ್ಲಿ ಹೇಳಬೇಕಾದದ್ದಿಲ್ಲ. ರೈಲ್ವೇ ಸೆಸ್ ಎಂಬ ತೆರಿಗೆಯನ್ನು ಹಾಕಲು ಸರಕಾರದವರು ಯೋಚಿಸಿದಾಗ ಸಂಘದ ಚಳವಳಿಯನ್ನು ಬಹಳ ಜೋರಾಗಿ ನಡೆಸಿದ್ದರಿಂದ ಸರಕಾರದವರು ಈ ಹೊಸ ತೆರಿಗೆಯ ಹಾಕುವ ಅಭಿಪ್ರಾಯವನ್ನೇ ಬಿಟ್ಟುಬಿಟ್ಟರು. ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಪೋಲೀಸ್ ಅಸಿಸ್ಟಂಟ್ ಸುಪರಿಂಟೆಂಡೆಂಟ್ ಕೆಲಸಗಳನ್ನು ದೇಶೀಯರಿಗೇನೇ ಕೊಡಬೇಕೆಂತ ಸಂಘವು ಕೆಲಸಮಾಡಲು ತೊಡಗಿದಂದಿನಿಂದಲೇ ಹೇಳುತ್ತಲೇ ಇದೆ. ಈ ಕೋರಿಕೆ ಸಫಲವಾದದ್ದು ಎಲ್ಲರಿಗೂ ತಿಳಿದೇ ಇದೆ. ಸಂಬಂಧಪಟ್ಟ ಕಾಲೇಜಿನಲ್ಲಿ ವೈಸರುಗಳನ್ನು ರಿಜರ್ವ್ ಫಾರೆಸ್ಟು ಮಾಡಿ ಗಂಧದ ತೋಟಮಾಡಬೇಕೆಂತ ಸರಕಾರದವರು ನಿಶ್ಚೈಸಿ ಮಂಜೂರುಮಾಡಿದ್ದು ರದ್ದಾಯಿತು. ಇದಕ್ಕೆ ಸಂಘದವ್ರೂ ಸ್ಥಳೀಯ ರೈತರ ಚಳವಳಿಯೂ ಕಾರಣವೆಂಬದು ಎಲ್ಲರಿಗೂ ಜ್ಞಾಪಕದಲ್ಲಿ ಇರಬೇಕು. ಸರಕಾರಿ ಆಳಿಕೆಯಲ್ಲಿ ಖರ್ಚು ಕಡಿಮೆಮಾಡಲಿಕ್ಕಾಗಿ ಮೂರು ವೈದ್ಯರುಗಳಿಗೆ ಪ್ರಾಕ್ಟೀಸಿಗೇನಾದರೂ ಸ್ವಲ್ಪ ಅವಕಾಶ ದೊರೆಯುವಂತೆಯೂ ದೀರ್ಘಕಾಲದ ವೈದಿಗಳನ್ನು ಕಂಟ್ರಾಕ್ಟರಿಗೆ ಕಳುಹಿಸಿದರೆ ಉತ್ತಮವೆಂತ ಸಂಘದ ಠರಾವುಗಳು ನಾಲ್ಕಾರು ವರ್ಷಗಳ ಹಿಂದಿನ ಮೇಲೆ ಇದು ಜಾರಿಗೆ ಬಂದೇ ಬಿಟ್ಟಿತು. ಮಡಿಕೇರಿ ಮುನಿಸಿಪಾಲಿಟಿಗೆ ರೈತರ ಚುನಾಯಿತರೊಬ್ಬರೇ ಅಧ್ಯಕ್ಷರಾಗಬೇಕೆಂತ ಪ್ರತಿವರ್ಷವೂ ಠರಾವಾಗುತ್ತಾ ಬಂದದ್ದರಿಂದ ಆಗಿನ ಅಧ್ಯಕ್ಷರಾಗಿದ್ದ ಅಸಿಸ್ಟೆಂಟ್ ಕಮಿಷನರೂ, ಕಮಿಷನರು ಸಹ ಆಕ್ಷೇಪಿಸಿದರೂ ಸಹ ಮಂಜೂರಾಗಿಯೇ ಬಿಟ್ಟಿತು. ವೀರರಾಜಪೇಟೆ ಮ್ಯುನಿಸಿಪಲ್ ಕಮಿಟಿ ಕೆಲಸವೂ ಸಂಘದ ಕೋರಿಕೆಯಂತೆಯೇ ಮಂಜೂರಾದರು. ಇಲಾಖೆ ಶಾಲೆಗಳು ದೇಶೀಯರಿಗೇನೇ ಆಗಬೇಕೆಂತ ಕೊಡಬೇಕೆಂತ ಜಾರಿಗೆ ಬಂದ ಉದ್ದೇಶವು ಸಂಘದ ಠರಾವುಗಳಿಂದಲೇ. ಯುದ್ಧದ ಸಮಯದಲ್ಲಿ ಕಾಫಿ ಕ್ರಯ ಅತಿ ಕಡಿಮೆಯಾದಾಗ ಕಾಫಿ ಪ್ಲಾಂಟರುಗಳಿಗೆ ಸರಕಾರದಿಂದ ಧನಸಹಾಯವು ಬಂದು ಲಕ್ಷ ರೂಪಾಯಿವರೆಗೆ ಸಿಕ್ಕಿದ್ದು ಸಂಘದ ಹೋರಾಟದಿಂದಲೇ. ಇಲಾಖೆ ಮಳೆಗಾರರಿಗೆ ಕಂದಾಯದ ಮಾಫಿ ಸಿಕ್ಕಿದ್ದು ಸಂಘದ ಬಲದಿಂದಲೇ. ವೀರರಾಜಪೇಟೆಯಲ್ಲಿ ಹೈಸ್ಕೂಲು ಬಂದದ್ದು ಸಂಘದಿಂದಲ್ಲವೇ? ಎಲ್ಲಾದಕ್ಕಿಂತಲೂ ಪ್ರಮುಖವಾದ ಈಗ ಬಂದಿರುವ ಆಡಳಿತದ ಸುಧಾರಣೆಯು ದೊರಕಿದ್ದು ಸಂಘವಿದ್ದದ್ದರಿಂದಲೇ. ಸ್ಟೇಟ್ ಸೆಕ್ರೆಟರಿಯವರೂ, ವೈಸರಾಯರೂ ರಾಜ್ಯಾಡಳಿತದಲ್ಲಿ ಯಾವ ವಿಧದ ಸುಧಾರಣೆ ಮಾಡಬೇಕೆಂಬ ವಿಷಯದಲ್ಲಿ ದೇಶದ ಅಭಿಪ್ರಾಯ ತೆಗೆದುಕೊಳ್ಳುತ್ತಿದ್ದಾಗ ಸಂಘವಿದ್ದದ್ದರಿಂದ ಈ ದೇಶದ ಹೆಸರಾದರೂ ಅವರ ರಿಪೋರ್ಟುಗಳಲ್ಲಿ ಸೇರಲಿಕ್ಕೆ ಆ ಕಾಲವಾಯಿತು. ಆಗ ಸಂಘದ ಪ್ರತಿನಿಧಿಗಳು ಕೇಳುವದು ಬಹಳ ಕಡಿಮೆಯಾಗಿದ್ದರಿಂದಲೇ ನ್ಯಾಯವಿಧಾಯಕಸಭೆಯು ಮಂಜೂರಾಗಲು ಇಷ್ಟು

ಜಮೀನುದಾರರ ಸಂಘಕ್ಕೆ ಮೆಂಬರು ಗಳಾಗಿ ದೇಶಸೇವೆ ಮಾಡಿರಿ.

ತಡವಾದದ್ದು. ಆದರೂ ಮಾಂಟೆಗ್ಯೂ ಚೆಮ್ಸ್‌ಫರ್ಡ್ ಪ್ರಕಟವಾದಂದಿನಿಂದ ಸಂಘವು ಎಡೆಬಿಡದೆ ದೊಡ್ಡ ಪ್ರಾಂತ್ಯಗಳ ಕೌನ್ಸಿಲ್ ನಮಗೆ ಬೇಕೆಂತ ಕೂಗಿಕೊಂಡು ಹೋರಾಡಿದ್ದರಿಂದ ಈ ನ್ಯಾಯವಿಧಾಯಕಸಭೆಯು ಮಂಜೂರಾದದ್ದು. ಈ ರೀತಿ ಮುಖ್ಯಮುಖ್ಯ ಪ್ರಯೋಜನಗಳನ್ನು ಹೇಳಿದ್ದರಿಂದ ಸಂಘಕ್ಕೆ ಅಪಜಯವೇ ಆಗಲಿಲ್ಲವೆಂತ ಊಹಿಸಬಾರದು. ಮಡಿಕೇರಿಗೆ ಕಾಲೇಜು ಇನ್ನೂ ಸಿಕ್ಕಲಿಲ್ಲ. ಹಾರಂಗಿನಾಲೆ ಇನ್ನೂ ಮಂಜೂರಾಗಲಿಲ್ಲ. ಬೇತರಿ ಸೇತುವೆ ಇನ್ನೂ ಆಗಲಿಲ್ಲ. ಡಿಸ್ಟ್ರಿಕ್ಟ್ ಬೋರ್ಡ್ ಆಡಳಿತವು ರೈತರ ಕೈವಶವಾಗಲಿಲ್ಲ. ಇನ್ನೂ ಅನೇಕ ಕೋರಿಕೆಗಳು ಕೈಗೂಡಲಿಲ್ಲ. ಆದರೆ ಜನರ ನಿದ್ರಾವಸ್ಥೆಯು ಕೆಲವು ಮಟ್ಟಿಗಾದರೂ ಸಂಘದಿಂದಲೇ ಹೋದದ್ದರಿಂದ ಈ ಲೋಪಗಳನ್ನೆಲ್ಲಾ ಸಂಘವು ಇನ್ನೂ ಬಲವಾಗಿಯೂ ಒಗ್ಗಟ್ಟಿನಿಂದಲೂ ಕೆಲಸಮಾಡಿದರೆ ಹೋಗಲಾಡಿಸಿಕೊಳ್ಳಬಹುದು.

ಆದರೆ ಸರಕಾರವು ಈ ಸಂಘದ ಮಾತು ನಿರಾಕರಿಸದಂತಾಗಬೇಕಾದರೆ ದೇಶದಲ್ಲಿರುವ ಪ್ರಾಯಬಂದ ಪ್ರತಿಯೊಬ್ಬ ರೈತನೂ, ಪಟ್ಟಣವಾಸಿಯೂ ಸಂಘದ ಮೆಂಬರಾಗಬೇಕು. ದೇಶದ ಪ್ರತಿಯೊಬ್ಬ ಪ್ರಜೆಯೂ ಸಂಘಕ್ಕೆ ಸೇರಿ ತನ್ನ ಹಕ್ಕುಗಳನ್ನು ಸ್ಥಾಪಿಸಿಕೊಳ್ಳಲಿಕ್ಕೂ ತನ್ನ ದುರ್ಗತಿಗಳಿದ್ದರೆ ಅವನ್ನು ದೂರಮಾಡಲಿಕ್ಕೂ, ದೇಶಕ್ಕೆ ಸ್ವತಂತ್ರ ಗಳಿಸಲಿಕ್ಕೂ ಕೆಲಸಮಾಡಬೇಕು. ಸಂಘದಲ್ಲಿ ದೇಶವು ಒಗ್ಗಟ್ಟಾದರೆ ಯಾವತರದ ಸುಧಾರಣೆಯನ್ನಾದರೂ ಪಡೆಯಬಹುದು. ಒಗ್ಗಟ್ಟಿನಿಂದ ಸಂಘದ ಮೆಂಬರುಗಳೆಲ್ಲರೂ ಒಂದೇ ಅಭಿಪ್ರಾಯದವರಾಗಿರಬೇಕೆಂತಲ್ಲ. ಸಂಘಕ್ಕೆ ಮೆಂಬರಾಗಿ ಪ್ರತಿಯೊಬ್ಬನೂ ತನ್ನ ಮತವನ್ನು ಕೊಡಲೇಬೇಕು. ಆದರೆ ಸಂಘವು ಬಹುಮತದಂತೆ ಕಾರ್ಯ ನಡೆಯಬೇಕು.

ಕೌನ್ಸಿಲ್ ಬಂದದ್ದರಿಂದ ಸಂಘದ ಅವಶ್ಯಕತೆಯೇ ಇಲ್ಲದಾಗಿದೆ ಎಂತ ಕೆಲವರು ಯೋಚಿಸಬಹುದು. ಸಂಘವು ಪಾಸು ಮಾಡಿಕೊಳ್ಳುತ್ತಿದ್ದ ಠರಾವುಗಳೆಲ್ಲಾ ಕೌನ್ಸಿಲಿನಲ್ಲಿ ಪಾಸ್‌ಮಾಡಿಕೊಳ್ಳಬಹುದು. ಇದೇನೋ ನಿಜವೇ. ಆದರೆ ಕೌನ್ಸಿಲಿಗೆ ಹೋದ ಮೆಂಬರುಗಳು ಪ್ರಜಾಹಿತವನ್ನು ಸಾಧಿಸುತ್ತಾರೋ ಇಲ್ಲವೋ ಎಂಬದನ್ನು ದೇಶವು ಬಹು ಜಾಗರೂಕತೆಯಿಂದ ನೋಡಿಕೊಳ್ಳುತ್ತಿರಬೇಕು. ಇದು ಸಂಘದ ಮೂಲಕ ಸಾಧ್ಯವೇ ಹೊರತು ಬೇರೆ ಅನುಕೂಲವಿಲ್ಲ. ದೇಶದ ಪ್ರತಿಯೊಬ್ಬ ಓಟರು ಮತ್ತು ಪ್ರತಿಯೊಬ್ಬ ರೈತನೂ ಸಂಘದ ಮೆಂಬರಾಗಲು ಅವಕಾಶವಿರುವಾಗ ಬೇರೆ ಸಂಸ್ಥೆಯನ್ನು ಏರ್ಪಡಿಸುವ ಅವಶ್ಯಕತೆಯೇ ಇಲ್ಲ.

ಕೌನ್ಸಿಲ್ ಬಂದದ್ದರಿಂದ ಪ್ರತಿಯೊಬ್ಬ ಪ್ರಜೆಯೂ ಎಚ್ಚತ್ತುಕೊಳ್ಳಬೇಕಾದ ಆವಶ್ಯಕತೆಯು ಬಹಳವಾಯಿತು. ಈವರೆಗಾದರೂ ಸಂಘದಲ್ಲಿ ಕೂಗಿಕೊಳ್ಳುವದು ಸರಕಾರದ ಗಮನಕ್ಕೆ ಬೀಳುವದು ಕಷ್ಟವಾಗುತ್ತಿತ್ತು. ಸಂಘದ ಕೂಗು ಸರಕಾರಕ್ಕೆ ತಲುಪಿಸಲಿಕ್ಕೆ ಏರ್ಪಡಾದ ಸಂಸ್ಥೆಯೇ ಕೌನ್ಸಿಲೆಂದರೆ ತಪ್ಪಾಗಲಾರದು. ಕೌನ್ಸಿಲಿಗೆ ಹೋದ ಮೆಂಬರುಗಳು ಸರಕಾರದ ಮುಗುಳುನಗೆಗೂ, ಶಹಬಾಸಿಗೂ ಮರುಳಾಗಿ ಪ್ರಜೆಗಳ ಹಿತವನ್ನು ಮರೆಯುವ ಸಂಭವವಿದೆ. ಅವರಿಗೆ ಎಚ್ಚರ ಕೊಡುತ್ತಿರುವದು ಸಂಘದ ಕೆಲಸವಾಗಿದೆ. ಸಂಘವೇ ದೇಶದ ಪಾರ್ಲಿಮೆಂಟ್ ಆಗುವವರೆಗೆ ಸಂಘದ ಅವಶ್ಯಕತೆ ಇದ್ದೇ ಇದೆ.

2. "ಕೊಡಗು" ಪತ್ರಿಕೆ.

ಈ ಸಂಸ್ಥೆಯು ನ್ಯಾಯವಿಧಾಯಕ ಸಭೆಗಿಂತಲೂ ಪ್ರಾಮುಖ್ಯವಾದ್ದೆಂತ ನಾನು ಮನಃಪೂರ್ತಿಯಾಗಿ ಹೇಳುತ್ತೇನೆ. ಸ್ವರಾಜ್ಯವೇ ಬಂದಾ ಬೂ ವೃತ್ತಾಂತಪತ್ರಿಕೆಗಳೇ ದೇಶವನ್ನು ಆಳುವದೆಂದರೆ ಅತ್ಯುಕ್ತಿಯಲ್ಲ. ಇಂಗ್ಲೆಂಡಿನ ಆಡಳಿತವನ್ನು ರೂಪಕ್ಕೆ ತರುವದು ಅಲ್ಲಿನ ವೃತ್ತಾಂತಪತ್ರಿಕೆಗಳು. ನಮ್ಮ ಈ ದೇಶದಲ್ಲಿ ಈ ಒಂದು "ಕೊಡಗು" ಪತ್ರಿಕೆಯು ದೇಶವನ್ನು ಬರ ಕಾದವನ್ನು ಎಚ್ಚರಿಸಲಿಕ್ಕೆ ಸಾಕೆಂತ ನಾನು ಹೇಳುವದಿಲ್ಲ. ಆದರೆ ಈ ಪತ್ರಿಕೆಯು ದೇಶದ ಪ್ರತಿಯೊಬ್ಬನ ಉದಾರತ್ವಕ್ಕೆ ಗುರಿಯಾಗಬೇಕಾಗಿದೆ. ಇದು ದೇಶದ ಜನಸಮುದಾಯದವರು ಜಾಯಿಂಟ್ ಸ್ಟಾಕ್ ಸ್ಥಾಪಿಸಿದ ಪತ್ರಿಕೆಯಾದ್ದರಿಂದ ಈ ಪತ್ರಿಕೆಯು ಅಧಿಪತಿಗಳು ಒಬ್ಬನ ಅಥವ ಒಬ್ಬರ ಪಕ್ಷ ಹಿಡಿಟಿದ ಅಭಿಪ್ರಾಯವಾಗಿರಲು ಸಾಧ್ಯವಿಲ್ಲ. ಷೇರ್‌ದಾರರು ರೈತರೇ ಅದ್ದರಿಂದ ಈ ಪತ್ರಿಕೆಯು ಮತವೇ ದೇಶದ ಮತವೆಂದರೆ ಕಾರ್ಯತಃ ನಿಜವಾಗಿದೆ.

ಈ ಎರಡು ವರ್ಷ ಕಾಲ ಕೆಲಸಮಾಡಿದ್ದರಿಂದ ರೈತರಿಗೆ ಪ್ರಯೋಜನ ಬಂದದ್ದು ಅನೇಕವಿದೆ. ಅದಕ್ಕಿಂತ ಅಮೂಲ್ಯ ಬೆಲೆಯುಳ್ಳ ಪ್ರಯೋಜನವು ಯಾವದೆಂದರೆ ದೇಶದವರನ್ನು ಎಚ್ಚರಿಸಿದ್ದು. ದೇಶದವರಿಗೆ ತಮ್ಮ ಕರ್ತವ್ಯವನ್ನು ಸೂಚಿಸಿಕೊಡುತ್ತಿರುವದರಿಂದ ಕುಂಭಕರ್ಣನ ನಿದ್ರೆಯಂತಿದ್ದ ರೈತರ ನಿದ್ರೆಯು ಎಚ್ಚರವಾಯಿತು. ಸಂಘವು ಹತ್ತುವರ್ಷಗಳಿಂದ ಮಾಡಿದ ಕೆಲಸವು ಸರಕಾರಕ್ಕೂ ವಿಧಾನಕ್ಕೆ ಹಾಜರಾಗುತ್ತಿದ್ದ ಮೆಂಬರುಗಳಿಗೂ ಅವರ ಮೂಲಕ ಅವರ ಇಷ್ಟಮಿತ್ರರಿಗೂ ತಿಳಿಯುತ್ತಿತ್ತೇ ಹೊರತು ಈ ನತ ಜನಸಮುದಾಯಕ್ಕೆ ತಿಳಿಯುತ್ತಿರಲಿಲ್ಲ.

ಇಂಥ ಉಪಯೋಗಕಾರಿ ಪತ್ರಿಕೆಯನ್ನು ಚಿರಂಜೀವಿಯಾಗಿ ಮಾಡಬೇಕಾದರೆ ದೇಶದ ಪ್ರತಿಯೊಬ್ಬನ ಉದಾರತ್ವಯೂ ಬೇಕಾಗಿದೆ. ಪಶ್ಚಿಮಾತ್ಯ ದೇಶಗಳಲ್ಲಿ ಲಕ್ಷಗಟ್ಲೆ ಚಂದಾದಾರರಿರುವ ಪತ್ರಿಕೆಗಳಿವೆ. ಇಂಡಿಯಾದ ಇತರ ಪ್ರಾಂತ್ಯಗಳಲ್ಲಿರುವ ಇಂಗ್ಲಿಷ್ ಮತ್ತು ದೇಶಭಾಷೆಯ ಪತ್ರಿಕೆಗಳಿಗೂ ಹತ್ತು ಇಪ್ಪತ್ತು ಸಾವಿರ ಚಂದಾದಾರರಿರುವದುಂಟು. ನಮ್ಮ ಈ ಪತ್ರಿಕೆಗೆ ನಮ್ಮ ದೇಶದ ಹೊರಗಿನಿಂದ ಆಶ್ರಯವು ಸಿಕ್ಕುವ ಸಂಭವ ಕಡಿಮೆ. ಆದ್ದರಿಂದ ಪ್ರತಿಯೊಬ್ಬ ದೇಶಹಿತೈಷಿಯೂ "ಕೊಡಗು" ಪತ್ರಿಕೆಯನ್ನು ತರಿಸಿ ಆ ಹೆಸರಿನ ದೇಶದ ಸೇವೆ ಮಾಡಲಿಕ್ಕೆ ಅನುಕೂಲವಿದೆ.

ಸಿ. ಯಮ್. ಪೆಂಕಣ್ಣಯ್ಯ.

ಗ್ರಾಮದಕಡೆಗೆ ತಿರುಗಿರಿ.

...ನಾಂಗವು ಹಳ್ಳಿಗಳಲ್ಲಿ ಗುಡಿಸಲುಗಳಲ್ಲಿ ವಾ...ಂದ ಅನೇಕಾವರ್ತಿ ಹೇಳಿದ್ದಾಗಿದೆ. ಆದ್ದರಿಂದ ...ಕ್ಕೆ ಇರುವವರಾಯವನ್ನು ಹಳ್ಳಿಗಳಲ್ಲಿ ಗುಡಿ...ಗಳಲ್ಲೇ ಮೊದಲು ಹಾಕಬೇಕಾಗಿದೆ. ನಮ್ಮ ...ಳಲ್ಲಿರುವ, ಗುಡಿಸಲುಗಳಲ್ಲಿ ವಾಸಿಸುವವರ ಸ್ಥಿ...ನ್ನು ಚೆನ್ನಾಗಿ ಆಲೋಚಿಸಿ, ಅಲ್ಲಿರುವ ನ್ಯೂನತೆಗ... ಹೋಗಲಾಡಿಸುವವರಿಂದ ನಾವು ಧನ್ಯರಾಗಬೇಕ...? ಪ್ರಿಯ ಸಹೋದರರೇ, ಗ್ರಾಮಗಳಲ್ಲಿರುವ ...ರನ್ನು ಏನೆಂದು ಹೇಳಲಿ! ನಮ್ಮ ಹಿರಿಯರಲ್ಲಿದ್ದಂ...ಕ್ಯೋನ್ಯ ಪ್ರೀತಿಭಾವವನ್ನು ಮರೆತು, ಗ್ರಾಮಗ...ೂ ಮನೆಗಳಲ್ಲಿಯೂ ನಾವು ಪರದೇಶಿಗಳಂತೆ ...ಜೀವಿಸುವವರಾಗಿಲ್ಲವೇ? ಸ್ವಾರ್ಥತೆಯಿಂದ ...ವನ್ನು ಪೋಷಿಸಿ, ಅತಿಭೋಗಗಳ್ಗೆ ಗುರಿಯಿಟ್ಟು ...ಳಿಕೆಯೂ ಮತ್ತು ಅನುಕೂಲವೂ ಆಡಿಮೆಯಾ...ಸಹಾಯಕರಾಗಿರುವ, ನಮ್ಮ ಸಹೋದರರ ಸು...ನಿಗಾ ಕೊಡದೆ ಇರುವವರಿಂದ ಗ್ರಾಮದ ಅಭಿವೃ...ಕಂಟಕ ಬಂದು ದೇಶವು ಕ್ಷಯವಾಗುತ್ತಾ ಬರು...ವೇ? ಗ್ರಾಮದಲ್ಲಿ ಹುಟ್ಟಿ, ಗ್ರಾಮದಲ್ಲಿ ತಾ...ಲೆಪಾಲು ಉಂಡು, ಗ್ರಾಮದ ಅನ್ನವನ್ನು ತಿಂದು ...ಮದ ವ್ಯವಸಾಯಗಳಲ್ಲಿ (ನಾಡುಗಳಲ್ಲಿ) ಓಡಾಡಿ ...ದು ಬೆಳೆದು, ಗ್ರಾಮದ ಸಂಪಾದನೆಯಿಂದ ವಿದ್ಯೆಯ...ಕಲಿತು, ಜ್ಞಾನಿಯಾಗಿಯೂ ಕೂಡ, ಸ್ವಾರ್ಥತೆ...ದ ಐಶ್ವರ್ಯವನ್ನೂ, ಭೋಗವನ್ನೂ ಪೋಷಿಸುವವ... ಪಟ್ಟಣವನ್ನು ಸೇರಿ ಗ್ರಾಮವನ್ನು ನಾಶಪಡಿಸು...ಲ್ಲವೇ? ರಾಮ! ರಾಮ! ಅಹಾ! ಗ್ರಾಮದ ...ನವೇ! ಗ್ರಾಮದ ಅನಾರೋಗ್ಯವೇ!! ಗ್ರಾಮದ ...ಟ್ಟತನವೇ!!! ಇದೇನುಮಾಯ! ನಮ್ಮ ಅಜ್ಜಂ...ದ ಔದಾರ್ಯಗುಣವೂ, ಅವರ ಸಹೋದರಭಾವದ ...ತಿಯೂ, ಗ್ರಾಮದ ಸುಭಿಕ್ಷೆಯೆಲ್ಲಾ ಏನಾದವು! ...ಮದ ಸಮುದಾಯದಲ್ಲಿ ಪೋಷಿಸುತಿದ್ದಂಥ ...ಹಿರಿಯರ ಸಂತತಿಯಲ್ಲಿ ಹುಟ್ಟಿ ಅವರ ರಕ್ತವು ...ಶರೀರದಲ್ಲಿ ಚಲಿಸುತ್ತಿರುವಾಗ್ಯೂ ಹ್ಯಾಗೆ ಈ ...ವು ನಮ್ಮನ್ನು ಮುಚ್ಚಿಕೊಂಡಿರುವದು. ಗ್ರಾ...ದಲ್ಲಿ ಎಲ್ಲಿ ನೋಡಿದರೂ ಬಡತನ, ಎಲ್ಲಿ ನೋಡಿ... ಅನಾರೋಗ್ಯ, ಎಲ್ಲಿ ನೋಡಿದರೂ ಇಗ್ಗಟ್ಟು ...ವು ಪ್ರತಿಯೊಬ್ಬನ ಸ್ವಂತಹೆಳ್ಳಲ್ಲನೆಂದೂ ಧ...ವನ್ನು ಕಾಪಾಡಲು ದ್ಯಕ್ಷ ಸಮುದಾಯಕ್ಕೆ ಒಳ...ರತಕ್ಕದೆಂದೂ ತಿಳಿಯುವವರೆಗೂ ಗ್ರಾಮದ ಸುಲಿ...ದುಂಟಾಗಿರುವ ಬಡತನವು ಹೋಗುವದಿಲ್ಲ. ಧ...ವನ್ನು ವಿವರಿಸುವದು ಸುಲಭಸಾಧ್ಯವಲ್ಲ. ಅನೇಕ ...ನಿಗಳೂ ಋಷಿಪ್ರೇಷ್ಠರೂ ಈ ವಿಷಯದಲ್ಲಿ ...ವರು ಅಂಥಾ ಮಹಾತ್ಮರ ಧರ್ಮಬೋಧನೆ ...ತಿಳಿಯಲು ಉಪೇಕ್ಷೆಮಾಡಿದ್ದರಿಂದಲೇ ಈಗಿನ ...ವು ನಮ್ಮನ್ನು ಮುಚ್ಚಿಕೊಂಡಿರುವದೆಂದರೆ ಸ...ವ್ಯಗಲಾರದು. ಪಟ್ಟಣವಾಸಿಗಳಾದಂಥ ದೇಶ...ವನೇ, ಗ್ರಾಮವನ್ನು ಸುಲಿಗೆಮಾಡಿ ನೀನು ಐಶ್ವ...ವಂತನಾಗಿ ಅತಿಭೋಗಿಯಾದರೂ ಕೂಡ, ಗ್ರಾಮ...ನ್ನು ಬಡನಕ್ಕೊಳಪಡಿಸಿ, ಸಂಪಾದಿಸಿದ ಪಟ್ಟಣದ ...ಐಶ್ವರ್ಯವು, ಮರಳಿನ ಮೇಲೆ ಕಟ್ಟಿದ ಅರಮನೆ ...ರು ಇನ್ನಾದರೂ ಯೋಚಿಸುವಿಯೊ? ಗ್ರಾಮದ ...ವೃದ್ಧಿಯಿಂದಲೇ ದೇಶವು ಅಭಿವೃದ್ಧಿಯಾಗಬೇಕಲ್ಲ ...ಪಟ್ಟಣ ಅಭಿವೃದ್ಧಿಯಾಗುತ್ತಾ ಬಂದಹಾಗೆ ದೇಶವು ...ಗುತ್ತಾ ಬರುತ್ತಿಂಬದರಲ್ಲಿ ಯಾವ ಸಂಶಯವೂ ...ಲ್ಲ. ಆದ್ದರಿಂದ, ಪಟ್ಟಣವಾಸಿಯೇ ಇನ್ನಾದರೂ ನೀ...ಜನ್ಮವೆತ್ತಿದ ಗ್ರಾಮವೆಂಬ ತೊಟ್ಟಿಲನ್ನು ಉದ್ಧಾರ...ಬಾಲಿಶನಾಗಿ ನಿನ್ನ ತನುಮನಧನವನ್ನು ಅರ್ಪಿಸಿ ಶ...ಉಳ್ಳ ದೇಶವನ್ನು ಕಾಪಾಡುವಿಯಾ? ಅಹಾ! ನಿ...ಜನ್ಮವೆತ್ತಿದಕೂಡಲೇ ಆ ಗ್ರಾಮ ಮಾತೆಯು ಎ...ಸಂತೋಷಭರಿತಳಾಗಿದ್ದಳೆಂದು ನಿನಗೆ ತಿಳಿದಿರುವ...? ನಿನಗೆ ಏನಾದರೂ ಅಪಾಯ ಸಂಭವಿಸೀತು ಎಂಬ ...ತಿಯಿಂದ ಎಷ್ಟು ಗ್ರಾಮಸ್ಥರು ನಿನ್ನ ಕಾವಲಿಗೆ ಬಂ...ರುವರೆಂದು ನೀನು ಯೋಚಿಸುವೆ! ಇಷ್ಟೆಲ್ಲಾ ಆಶೆ...ಂದ ಕಾಪಾಡಿದ ನಿನ್ನ ಗ್ರಾಮವನ್ನು ನೀನು ಮರೆ...ಯುವದೆಂದರೆ ಏನು ಅರ್ಥ? ನಿನ್ನ ಗ್ರಾಮವನ್ನು ನೀ... ಮರೆತರೆ ನಿನ್ನ ಅಭಿವೃದ್ಧಿಗೆ ಬಹಳ ಕಂಟಕ ಒದ...ದು. ಆದ್ದರಿಂದ ಇನ್ನಾದರೂ ನೀನು ಜನ್ಮವೆತ್ತಿ ಪಾ...ಸಂತೋಷಪಟ್ಟ ಗ್ರಾಮವನ್ನು ಮರೆಯದೆ ನಿನ್ನ ...ತೆಯನ್ನು ತೋರಿಸುವಿಯಾ? ಈ ನಿನ್ನ ಕರ್ತವ್ಯ...ನ್ನು ಮಾಡಲು ನೀನು ತಪ್ಪಿದರೆ ಗ್ರಾಮವು ನಿನ್ನನ್ನು ...ಸುವದು.

ಗ್ರಾಮವಾಸಿಯಾದ ಸಹೋದರನೇ, ನೀನೇನು ...ಯುವಿ? ನಿನ್ನನ್ನು ತ್ಯಜಿಸಿ, ನಿನ್ನನ್ನು ಮರೆತಿರುವ ಸಹೋದರನ ಸಹಾಯ ನಿರೀಕ್ಷಣೆಯಿಂದ ಕಾಲಕಳೆಯುವುದು ಗೋಳಾದ ಮಾತ್ರಕ್ಕೆ, ನೀನು ನಿನ್ನ ತಾಯಿಯ ಕೆಲಸವನ್ನು ಮಾಡದಂತಾಗುವುದೇ? ನಿನ್ನ ಬಡತನಕ್ಕೂ, ನಿನ್ನ ಅನಾರೋಗ್ಯಕ್ಕೂ ನಿನ್ನ ಇಗ್ಗಟ್ಟಿಗೂ ನೀನೂ ಕೂಡ ಉತ್ತರವಾದಿಯೆಂಬುದನ್ನು ಮರೆಯಬೇಡ. ಯಾಕೆ? ನೀನೇ ಮುಖ್ಯವಾದ ಅಪರಾಧಿ. ನೀನು ಗ್ರಾಮದಲ್ಲಿ ವಾಸವಾಗಿಕೊಂಡಿರುತ್ತೀ ಎಂದ ಮಾತ್ರಕ್ಕೆ, ನಿನ್ನ ಜವಾಬ್ದಾರಿಕೆಯು ತಪ್ಪಿದಂತಾಗುವದಿಲ್ಲ. ಗ್ರಾಮಾಭಿವೃದ್ಧಿಯನ್ನೇ ಬಯಸುತ್ತಿದ್ದಂಥ ಹಿರಿಯರ ರಕ್ತವು ನಿನ್ನ ಶರೀರದಲ್ಲಿ ಚಲಿಸುತ್ತಿದೆ. ಹಿರಿಯರ ಕಾಲದಲ್ಲಿ ಗ್ರಾಮದಲ್ಲಿ ಇದ್ದಂಥ ಪರಸ್ಪರ ಸಹಾಯದ ಗುಣಗಳನ್ನು ಚೆನ್ನಾಗಿ ಮನಸ್ಸಿಗೆ ತಂದು ಅದರಂತೆ ಅನುಸರಿಸಿ ನಡೆ. ಗ್ರಾಮದಲ್ಲಿ ಇದ್ದಂಥ ಪರೋಪಕಾರದ ಧರ್ಮದ ಕಟ್ಟುಗಳನ್ನು ಅಭಿವೃದ್ಧಿಪಡಿಸಿ ನೀನು ಅಭಿವೃದ್ಧಿ ಹೊಂದುವವನಾಗು. ನಿನ್ನ ದೇವಸ್ಥಾನವನ್ನೂ ಬಾವಿಗಳನ್ನೂ, ಮಾಡಿ ಮಗ್ಗದ ಗ್ರಾಮ ತೋಟಗಳ ನೀತಿಗೆ ಒಳಪಟ್ಟವನಾಗಿ ಸಮುದಾಯದ ಅಭಿವೃದ್ಧಿಯಲ್ಲಿ ಭಾಗಿಯಾಗು. ನಿನ್ನ ಕೆಲಸಗಳೆಲ್ಲವನ್ನೂ ಆಗುವಷ್ಟು ಸ್ವತಃ ಮಾಡಿಕೊಂಡು ಪರಸಹಾಯ ನಿರೀಕ್ಷಣೆ ಮಾಡಲ್ಲದ, ಸ್ವತಂತ್ರನಾಗಿ ಗ್ರಾಮದ ಸ್ವಾತಂತ್ರ್ಯವನ್ನೂ, ತನ್ಮೂಲಕ ದೇಶದ ಸ್ವಾತಂತ್ರ್ಯವನ್ನೂ ಕಾಪಾಡಲಿಕ್ಕೆ ಸಹಾಯಕನಾಗು. ನಿನ್ನನ್ನು ಬಿಟ್ಟುಹೋದಂಥ ಪಟ್ಟಣವಾಸಿಯು, ಪಟ್ಟಣದಲ್ಲಿ ಮೋಜು ಹೊಂದಬಹುದೆಂದು ಆಶಿಸಿಕೊಂಡಿದ್ದರೂ ಕೂಡ, ನಿನಗೆ ನಾಚಿಕೆಯಿಂದ ನಿನ್ನೆದುರಿಗೆ ಸಂತೋಷ ಭಾವದಿಂದ ನಟಿಸಿ ನಿನ್ನನ್ನು ಮರೆತವರ ಬೆನೆಯಿಂದ ಅವನಿಗುಂಟಾಗಿರುವ ಪರಾಧೀನತೆ ಮನಸ್ಸಿನ ಬಂಧನವನ್ನೂ ಅಗಾಗ್ಯೆ ದುಃಖಿಸಿಕೊಂಡು ಆಲೋಚಿಸಬಹುದು. ನಿನ್ನ ಸುಖದಿಂದ ಶ್ರೀಮಂತನು ಸ್ವತಂತ್ರನಾಗಲು ಸಾಧ್ಯವೆ ದೂ, ನಿನ್ನ ಬಡತನವು ಅವನನ್ನು ಅಪಕೀರ್ತಿಯಲ್ಲಿ ಒಳಪಡಿಸುತ್ತಿದ್ದೂ, ನೀನು ಸಕ್ಕರೆ ಅವನಿಗೆ ನೀಡುವನೆ ದೂ ಜ್ಞಾನೋದಯವಾಗಿ ನೀನೂ ಅವನೂ, ಜನ್ಮವೆತ್ತಿದ ನಿನ್ನ ಗ್ರಾಮದ ಕಡೆಗೆ ತಿರುಗಿ ನೋಡಹತ್ತುವನು. ಆದ್ದರಿಂದ ನೀನು ನಿನ್ನ ಹಿರಿಯರನ್ನು ಹಿಂಬಾಲಿಸಿ ನಿನ್ನ ಕರ್ತವ್ಯವನ್ನು ಮಾಡಿ ಅಭಿವೃದ್ಧಿ ಹೊಂದಿ ಒಲಿಷ್ಟನಾಗಿ ಪಟ್ಟಣವಾಸಿಯಾದ ನಿನ್ನ ಸಹೋದರನಿಗೆ ಮೇಲ್ಪಂಕ್ತಿಯಾಗದೆ ಹೋದ ಪಕ್ಷಕ್ಕೆ ದೇಶವು ನಿನ್ನನ್ನು ಶಪಿಸುವದು.

"ವಂದೇ ಮಾತರಂ"

" ಕೊಡಗು " ಪತ್ರಿಕೆಗೆ ಚಂದಾದಾರರಾಗಿ ದೇಶಭಕ್ತಿ ತೋರಿಸಿರಿ.

ಕೊಡಗು ಕೌನ್ಸಿಲ್

ಕೊಡಗು ಕೌನ್ಸಿಲು ಇನ್ನು ಮೂರು ನಾಲ್ಕು ತಿಂಗಳುಗಳಲ್ಲಿ ಜನ್ಮವೆತ್ತುವದು. ಇನ್ನೊಂದು ಶತಕ್ರಮದೊಳಗೆ ಈ ಕೌನ್ಸಿಲ್ ಕೆಲವು ಸಾಧಿಯಾದರೂ ಸಭೆ ಸೇರಿ ಜನರಿಗೆ ಹಿತಕರವಾದ ಕಾರ್ಯಗಳನ್ನು ನಡಿಸಿ ಜನರ ಪ್ರೀತಿಗೆ ಪಾತ್ರವಾಗಬೇಕಾಗಿ ಎಲ್ಲರ ಕೋರಿಕೆಯಾಗಿದೆ.

ಈ ಕೌನ್ಸಿಲ್‌ನಿಂದ ಜನರಿಗೆ ಯಾವ ಹಕ್ಕುಗಳು ಸಿಕ್ಕಿವೆ? ಕೌನ್ಸಿಲ್‌ನಿಂದ ಆಗತಕ್ಕ ಕೆಲಸಗಳು ಯಾವವು? ಆಗದೇ ಇರುವುಗಳು ಯಾವವು? ಈ ಸಂಗ್ತಿಗಳನ್ನು ತಿಳಿಯಬೇಕಾಗಿದೆ.

ಕೌನ್ಸಿಲಿನ ಪ್ರಥಮ ಕೆಲಸವು ನ್ಯಾಯ ನಿರ್ಮಾಣವಾಗಿದೆ. ಈಗ ಇಡೀ ಇಂಡಿಯಾದ ಶಕ್ತಿ ನ್ಯಾಯ ನಿರ್ಮಾಣ ಮಾಡುವ ಲೆಜಿಸ್ಲೆಟಿವ್ ಎಸೆಂಬ್ಲಿಯು ಕೊಡಗಿಗೂ ಅಹಾ ಕಾನೂನುಗಳನ್ನು ಮಾಡುತ್ತದೆ. ಇದನ್ನು ಇನ್ನು ಮುಂದಕ್ಕೂ ಮಾಡುವದು. ಅದರೆ ಕೊಡಗಿಗಾಗಿಯೇ ಗವರ್ನರ್ ಜನರಲ್ ಇನ್ ಕೌನ್ಸಿಲ್ (ವೈಸರಾಯರು ತಮ್ಮ ಮಂತ್ರಿಗಳ ಸಹಾಯದಿಂದ) ರೆಗ್ಯುಲೇಶನ್‌ಗಳನ್ನು ಮಾಡುತ್ತಾರೆ. ಕೊಡಗು ರೆವಿನ್ಯೂ ರೆಗ್ಯುಲೇಶನ್, ಕೊಡಗು ಮುನ್ಸಿಪಲ್ ರೆಗ್ಯುಲೇಶನ್. ಈ ಕಾನೂನುಗಳು ಗವರ್ನರ್ ಜನರಲ್ ಇನ್ ಕೌನ್ಸಿಲರಿಂದ ಉಂಟಾದ ಕಾಯಿದೆಗಳಾಗಿವೆ. ಇದಲ್ಲದೆ ಶೆಡ್ಯೂಲ್ ಡಿಸ್ಟ್ರಿಕ್ಟ್ ಆಕ್ಟು ಎಂಬ ಆಕ್ಟು ಮೇರೆ ಇಂಡಿಯಾ ದೇಶದ ಬೇರೆ ಯಾವ ಪ್ರಾಂತ್ಯಗಳಲ್ಲಿದ್ದ ಆಕ್ಟುಗಳನ್ನು ಚೀಫ್ ಕಮಿಶನರ್ ಸಾಹೇಬರು ಕೊಡಗಿಗೆ ಬಾರಿಗೆ ತರಬಹುದು. ಈ ಆಕ್ಟು ಮೇರೆ ಮದ್ರಾಸಿನ ಕಾಫಿ ಆಕ್ಟನ್ನು ಕೊಡಗಿಗೆ ಜಾರಿಗೆ ತಂದಿರುತ್ತಾರೆ. ಕೊಡಗಿಗೇ ಸಂಬಂಧಪಟ್ಟ ಕಾನೂನುಗಳನ್ನು ಇನ್ನು ಮುಂದೆ ಅನೇಕ ಸಂಗ್ತಿಗಳಲ್ಲಿ ಕೊಡಗು ಕೌನ್ಸಿಲ್ ಪಾಸು ಮಾಡಬಹುದು. ಇಂಡಿಯಾ ಗವರ್ನಮೆಂಟಿಗೆ ಸಂಬಂಧಪಟ್ಟ ಸಂಗ್ತಿಗಳಲ್ಲಿ ಆದರೆ, ಪೋಸ್ಟಾಫೀಸ್ ಮಿಲಿಟರಿ ವಗೈರೆ ಕೆಲವು ಮುಖ್ಯ ಸಂಗ್ತಿಗಳಲ್ಲಿ ಕೊಡಗಿನ ಜನರಿಗೆ ಸಂಬಂಧಪಟ್ಟದಾದರೂ ಕೊಡಗಿನ ಕೌನ್ಸಿಲ್ ಕೈಹಾಕಲಿಕ್ಕೆ ಕೂಡದು. ಆದರೆ ವಿದ್ಯೆ, ಮುನ್ಸಿಪಾಲಿಟಿಗಳು, ಜನರ ಆರೋಗ್ಯ, ಸಿವಿಲ್ ಕಾನೂನಿನ ಮೇರೆ ಹಕ್ಕುದಾರಿಕೆಗಳು, ಮುಜರಾಯಿ ಇನಾಮ್ ಡಿಸ್ಟ್ರಿಕ್ಟ್ ಬೋರ್ಡ್ ಇನಾಮ್ ಇವೇ ಮೊದಲಾದವುಗಳಿಗೆ ಸಂಬಂಧಪಟ್ಟ ಕಾನೂನುಗಳು ಇನ್ನು ಮುಂದೆ ಕೌನ್ಸಿಲ್‌ನಲ್ಲೇ ಮಾಡಲ್ಪಡುವವು.

ಕೌನ್ಸಿಲ್‌ನಿಂದ ಆಗಬಹುದಾದ ಎರಡನೇ ಕೆಲಸವು ಯಾವದೆಂದರೆ ವರ್ಷಕ್ಕೆ ಒಂದಾವರ್ತಿ ಸರ್ಕಾರದವರು ಆಯವ್ಯಯ ಖರ್ಚನ್ನು ತೋರಿಸುವದರ ವಿಷಯವೂ ದೇಶಕ್ಕೆ ಸಂಬಂಧಪಡುವ ಎಲ್ಲಾ ಜಾಗ್ ಹವಾಲುಗಳ ವಿಷಯವೂ ಮೆಂಬರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಸೂಚಿಸುವರು.

ಕೌನ್ಸಿಲ್‌ನಲ್ಲಿ ನಡೆಯಬಹುದಾದ ಮೂರನೇ ಕಾರ್ಯವೇನಂದರೆ ರಾಜ್ಯಭಾರದ ಸಂಗ್ತಿಗಳಲ್ಲಿ ಮೆಂಬರುಗಳು ಸರ್ಕಾರದವರಿಗೆ ಸವಾಲುಗಳನ್ನು ಕೇಳುವರು. ಇದಕ್ಕೆ ಸರ್ಕಾರದವರು ಉತ್ತರಗಳನ್ನು ಕೊಡುವರು.

ರಾಜ್ಯಭಾರದ ಕೆಲವು ಸಂಗತಿಗಳಲ್ಲಿ ಮೆಂಬರುಗಳು ಠರಾವುಗಳನ್ನು ತರುವದು ಕೌನ್ಸಿಲಿ ಇನ್ನೊಂದು ಹಕ್ಕಾಗಿದೆ. ಈ ಸಂಗತಿಗಳನ್ನು ಸರ್ಕಾರದವರು ಮುಂಜೂರು ಮಾಡಬೇಕೆಂದಿಲ್ಲವಾದರೂ ಜನರ ಒಗ್ಗಟ್ಟಿನ ಅಭಿಪ್ರಾಯವು ಸರ್ಕಾರಕ್ಕೆ ತಿಳಿಯುವುದರಿಂದ ಈ ಠರಾವುಗಳಿಂದ ಬಹಳ ಪ್ರಯೋಜನಗಳು ಉಂಟಾಗಬಹುದು.

ಮದ್ರಾಸ ಬೊಂಬಾಯಿ ಬಂಗಾಳ, ಈ ಪ್ರಾಂತ್ಯಗಳ ಕೌನ್ಸಿಲುಗಳಿಗೆ ಮೊಂಟಗೂ ಚೆಮ್ಸ್‌ಫರ್ಡ್, ಇವರ ರಿಫಾರ್ಮ್ಸ್ ಮೇರೆ ಹೆಚ್ಚಿನ ಹಕ್ಕುಗಳು ದೊರೆತಿವೆ. ಮೇಲ್ಕಂಡ ಹಕ್ಕುಗಳಲ್ಲದೆ ಕೆಲವು ಸಂಗತಿಗಳಲ್ಲಿ ರಾಜ್ಯಭಾರದ ಅಧಿಕಾರವನ್ನೇ ಅದರ ಕೌನ್ಸಿಲ್‌ನಿಂದ ಚುನಾಯಿಸಲ್ಪಟ್ಟ ಮಂತ್ರಿಗಳಿಗೇ ವಹಿಸಿದ್ದಾರೆ. ಈ ಹಕ್ಕು ಕೊಡಗಿಗೆ ದೊರೆತಿಲ್ಲ. ಬಹುಶಃ ಇನ್ನು ಮುಂದೆ ದೊರೆಯಬಹುದು.

ಕೊಡಗು ಕೌನ್ಸಿಲ್‌ನಿಂದ ಜನರಿಗೆ ತಕ್ಕ ಮಟ್ಟಿಗೆ ಪ್ರಯೋಜನಗಳು ಲಭಿಸಬಹುದು. ಇದು ಪ್ರಥಮ ಕೌನ್ಸಿಲ್ ಆದ್ದರಿಂದ ಹೆಚ್ಚು ಕಮ್ಮಿ ಇದ್ದರೂ ಇದನ್ನು ಪರೀಕ್ಷಿಸಿ ಇನ್ನು ಮದ್ರಾಸ್, ಬೊಂಬಾಯಿ ಪ್ರಾಂತ್ಯಗಳಂತೆ ಮುಂದರಿಸಬೇಕಾಗಿ ಅನೇಕ ಜನರ ಅಭಿಪ್ರಾಯ ಪಟ್ಟಿದ್ದಾರೆ. ಈ ಪ್ರಾಂತ್ಯವು ಸಣ್ಣದಾದರೂ ಮೆಂಬರುಗಳು ಜನರಿಗೆ ಹತ್ತಿರಾಗ್ಯೆ ಸಿಕ್ಕಿ ಜನರ ಆಲೋಚನೆಯನ್ನು ಹೆಚ್ಚಿಗೆ ಗಮನಕ್ಕೆ ತಕ್ಕೊಳ್ಳಬಹುದು. ಈ ಸಂಗತಿಗಳಲ್ಲಿ ಕೊಡಗಿನವರೂ, ಜನರು ತಮ್ಮ ನೀತಿಯಿಂದಲೂ ಬುದ್ಧಿ ಕುಶಲತೆಯಿಂದಲೂ ಇವುಗಳನ್ನು ಸರಿಯಾಗಿ ಉಪಯೋಗಿಸಬಹುದು. ಈಗ ಮುಖ್ಯವಾಗಿ ಕೌನ್ಸಿಲಿಗೆ ಚುನಾಯಿಸಲ್ಪಡಬಹುದಾದ ಮೆಂಬರುಗಳು ಸ್ವಾರ್ಥತ್ಯಾಗಿಗಳಾಗಿರಬೇಕು. ಜನರ ಸೇವೆಯಲ್ಲಿ ಮಗ್ನರಾಗಬೇಕು. ಜನರ ಕಷ್ಟಸುಖಗಳನ್ನು ತಿಳಿದವರಾಗಬೇಕು. ಜನರು ಎಚ್ಚರವಾಗಿದ್ದು ಇಂಥವರನ್ನೇ ಮೆಂಬರರಾಗಿ ಚುನಾಯಿಸಿದರೆ ಕೊಡಗಿನ ಪ್ರಥಮ ಕೌನ್ಸಿಲಿನ ಪ್ರಭಾವವು ಬೇರೆ ಪ್ರಾಂತ್ಯಗಳಲ್ಲೂ ಹರಡಬಹುದು.

"On looker."

ದೇಶಸೇವೆ.

ರಾಜಕೀಯ ಎಂಬ ಶಬ್ದವನ್ನು ನೋಡಿದ ಮಾತ್ರಕ್ಕೇನೇ ಅನೇಕರಿಗೆ ಏನೇನೋ ತೋರಬಹುದು! ಆದ್ದರಿಂದ ರಾಜಕೀಯವೆಂಬುದು ರಾಜ್ಯಕ್ಕೆ ಸಂಬಂಧಪಟ್ಟದಾದ ದರಿಂದ ರಾಜ್ಯವೆಂಬುದರ ಅರ್ಥವನ್ನು ಸಂಕ್ಷೇಪವಾಗಿ ವಿವರಿಸಬೇಕಾಗಿದೆ. ಅದು ಹೇಗಂದರೆ, ಕೆಲವು ಜನರು ಕೂಡಿ ಕುಟುಂಬವೂ ಅನೇಕ ಕುಟುಂಬಗಳು ಕೂಡಿ ಒಂದು ಗ್ರಾಮವೂ ಅನೇಕ ಗ್ರಾಮಗಳು ಕೂಡಿ ಒಂದು ದೇಶವೂ ಆಗುತ್ತದೆ. ಮೊದಲು ಕುಟುಂಬಗಳೆಲ್ಲಾ ಒಟ್ಟು ಕೂಡಿ ತಮಗೆ ಬೇಕಾದವುಗಳನ್ನು ಒದಗಿಸಲು ಬಾರದೆ, ಗ್ರಾಮವಾಗುತ್ತದೆ. ಗ್ರಾಮಗಳು ತಮಗೆ ಬೇಕಾಗುವ ಸರ್ವವಸ್ತುಗಳನ್ನು ಒದಗಿಸಲು ಪ್ರಾರಂಭಿಸುವಾಗ ಹುಟ್ಟುವ ಒಂದು ಸಂಸ್ಥೆಯೇ ರಾಜ್ಯವೆಂದೆನ್ನಿಸುತ್ತದೆ. ಇದನ್ನು ನೋಡಿದರೆ ಈ ರಾಜ್ಯವೆಂಬ ಶಬ್ದವು ಜನರ ಪ್ರಯೋಜನಕ್ಕಾಗಿ ಜನರಿಂದ ಹುಟ್ಟಿದುದೇ ಆಗಿ ಮನುಷ್ಯನ ಒಂದು ಅಂಗಕ್ಕೆ ಹೋಲಿಸಬಹುದಾಗಿದೆ. ಇಂಥಾ ರಾಜ್ಯಭಾರವು ಜನರಿಗೆ ಸರಿಯಾಗಿರದ ಪಕ್ಷ, ಮನುಷ್ಯನಿಗೆ ಅವನು ಶ್ರೇಷ್ಠವಾದ ಒಂದು ಅವಯವಕ್ಕೆ ಊನವುಂಟಾದಂತೆ ತೋರುತ್ತೆ. ಆದ್ದರಿಂದ ಮನುಷ್ಯನಾಗಿ ಹುಟ್ಟಿದವನಾದ ಪ್ರತಿಯೊಬ್ಬನ ಕರ್ತವ್ಯವೂ ತನ್ನ ಶರೀರದ ಹಾಗೆ ಇವರ ರಾಜಕೀಯ ವಿಚಾರಗಳಲ್ಲಿಯೂ ಅದರ ಅಭಿವೃದ್ಧಿಯಲ್ಲಿ ತಗಲಿಯೂ ಚಿಂತಿಸುತ್ತಿರುವುದೇ ಆಗುತ್ತೆ. ಈ ಕಾರಣವನ್ನು ತಿಳಿದಿರುವುದರಿಂದಲೇ, ನಮ್ಮ ಭರತ ಖಂಡದ ಮುಂದಾಳುಗಳು ನೇಶನಲ ಕಾಂಗ್ರೆಸ್ಸನ್ನು ಮಾಡಿ ತನ್ಮೂಲಕ ನಮ್ಮ ಭರತಖಂಡಕ್ಕೆ ಸ್ವರಾಜ್ಯ (ಅಂದರೆ ಪ್ರಜೆಗಳಿಂದ ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಇರುವ ರಾಜ್ಯಭಾರ) ಸಿಕ್ಕಬೇಕೆಂಬದಾಗಿ ಹೋರಾಡುತ್ತಲೇ ಇದ್ದಾರೆ.

ನಮ್ಮಲ್ಲಿ ಕೆಲವು ಜನರು ಸ್ವರಾಜ್ಯ ಸಿಕ್ಕಿದರೆ ದೈತರಿಗೆ ತಂದಾಯಕಟ್ಟುವುದು ಬಾಕಿಯಾಗುತ್ತದೋ, ಅನ್ನರೀತಿ ಅನೇಕರ ಪ್ರೀತಿಯಿಂದ ಸ್ವರಾಜ್ಯಗದ್ದುಗೆಯನ್ನು ತೊಲಗಿಸಿಕೊಳ್ಳುವುದೇತಕ್ಕೆಂದೂ, ರಾಜಕೀಯ ವಿಚಾರವು ಬಹಳ ಕಷ್ಟದ ಕೆಲಸವೆಂದೂ ಭಯಂಕರವಾದುದೆಂದೂ, ಕೆಲವು ಜನರು ತಮಗೆ ಕೆಲಸವಾಗುವುದೂ ಇಲ್ಲವೆ ಇರುವಾಗ ದೇಶದಲ್ಲಿ ಖಾಲಿ ಕಾಟಿಮಾಡುತ್ತಾರೆಂದೂ ಎಷ್ಟೋ ಸಮಾಜಕ್ಕೂ

ಮೊಸವಾದ ಕಡೇಗಾಲಕ್ಕೆ ಎಲ್ಲಿಯೂ ಸಾಗದೆ ಇರುವಾಗ ರಾಜಕೀಯವೇ ಬಿಡದಾಗಿ ಕೂಗಿಕೊಂಡು. ಉದ್ಯೋಗಸ್ಥರಿಂದಲೂ ಅನೇಕರು ವಿಧವಿಧವಾಗಿ ಹೇಳುತ್ತಾರೆ. ಈ ಅಭಿಪ್ರಾಯಕ್ಕೆ ಎಷ್ಟು ವ್ಯಸನಪಟ್ಟರೂ ಸಾಲದು. ರಾಜ್ಯವೆಂಬ ಶಬ್ದವು ಜನರ ಪ್ರಯೋಜನಕ್ಕಾಗಿರುವ ಸಮಾಜವೆಂಬ ಶಬ್ದಸಂಬಂಧವಾದ ಉತ್ಕೃಷ್ಟ ವಿಭಾಗ. ಇಂಥಾ ಮಾನವ್ಯಾಪಾರವಷ್ಟು ಆದರೆ ಯಾವೂ ಇರುವುದಿಲ್ಲ. ಮೀನಿಗೆ ನೀರು ಹೇಗೋ, ಪಕ್ಷಿಗೆ ಗಾಳಿ ಹೇಗೋ ಹಾಗೆಯೇ ನಾಗರಿಕನಾದ ಮನುಷ್ಯನನ್ನು ರಾಜ್ಯವೆಂಬುದು ಎಲ್ಲಾ ಕಡೆಯಲ್ಲಿಯೂ ಸುತ್ತಿಕೊಂಡಿದೆ. ಈ ಕಾರಣದಿಂದಲೇ, ಪುರಾತನ ತತ್ವಜ್ಞಾನಿಗಳನೇಕರು, ರಾಜ್ಯಶಾಸ್ತ್ರವು, ನೀತಿ ಶಾಸ್ತ್ರದ ಒಂದು ಭಾಗವೆಂದೂ, ಮನುಷ್ಯನ ಅತಿ ಶ್ರೇಷ್ಟವಾದ ಎಲ್ಲಾ ಗುಣಸಂಪತ್ತಿಗೆ ರಾಜ್ಯವೇ ಮೂಲ ಕಾರಣವೆಂದು ಹೇಳಿರುತ್ತಾರೆ.

ಈ ಕಾರಣಗಳಿಂದಲೇ, ಇಂಗ್ಲೆಂಡ್, ಅಮೇರಿಕಾ ಜರ್ಮನ್ ಮೊದಲಾದ ರಾಜ್ಯಗಳು ಈ ರಾಜನೀತಿ ಯಾ, ರಾಜಕೀಯವೆಂಬ ಶಬ್ದದ ಅರ್ಥಕ್ಕನುಗುಣವಾಗಿ ತಮ್ಮ ರಾಜ್ಯವನ್ನು ಪ್ರಜಾಪ್ರತಿನಿಧಿತ್ವದ ತವರು ಮನೆಯಾಗಿ ಮಾಡಿ ರಾಜ್ಯಪಾಲಿಸುತ್ತಿದ್ದಾರೆ. ಅಲ್ಲದೆ ಜನರ ಸೌಖ್ಯಕ್ಕಾ ಅವು ತಿಳುವಳಿಕೆಯುಳ್ಳವರಾಗಿ ತಮ್ಮ ತಮ್ಮ ಬಾಧ್ಯತೆಗಳನ್ನು ತಿಳಿದಿರುವುದೇ ಮೂಲವೆಂದೂ, ಹೀಗೆ ತಯಾರಾಗಲು "ಅರ್ಥವು" ಅಂದರೆ ಹಣವು ಬಹಳ ಅವಶ್ಯವೆಂದೂ, ಅಂಥಾ ಹಣವನ್ನು ಸಂಪಾದನೆ ಮಾಡಲು ರಾಜ್ಯವೇ ಮೂಲವೆಂದು ತಿಳಿದಿರುತ್ತಾರೆ. ಇದ್ದರಿಂದ ಯಾವ ಅಭಿವೃದ್ಧಿಗೆ ಆಗಲಿ ಧನವೇ ಮುಖ್ಯವೆಂಬುದು ವ್ಯಕ್ತವಾಗುತ್ತದೆ. ಈ ಕಾರಣದಿಂದಲೇ ಮಹಾತ್ಮ ಗಾಂಧಿಜಿಯವರು ಟಿಳಕ ಸ್ವರಾಜ್ಯನಿಧಿಗೆ ಒಂದು ಕೋಟಿ ರೂಪಾಯಿಯನ್ನು ಅಲ್ಪ ಸಮಯದಲ್ಲಿಯೇ ಕೂಡಿಸಿದರು. ಹೀಗೆ ಕೂಡಿಸಿದ ಹಣದಿಂದ ಭರತಖಂಡದಲ್ಲಿ ಸ್ವರಾಜ್ಯ ಸಾಧನೆಗಿರುವ ಎಂತೆಂಥ ಮಹತ್ತಿನ ಕಾರ್ಯಗಳನ್ನು ಮಾಡಿ ಹಿಂದೂದೇಶವು ಸಹ ಸ್ವರಾಜ್ಯದ ಯೋಗ್ಯತೆ ಇರುವ ದೇಶವೆಂದೂ, ಇದ ವರೆಗೆ ನಡೆಸಿದಂತೆ ಇನ್ನು ಪಾರತಂತ್ರ್ಯವನ್ನು ಸಹಿಸಲಿಕ್ಕಿಲ್ಲವೆಂತಲೂ ತೋರ್ಪಡಿಸಿದ್ದು ಎಲ್ಲರಿಗೂ ವೇದ್ಯ ವಿಷಯವಷ್ಟೆ. ಆದರೆ ಇಂಥಾ ಸ್ವತಂತ್ರದ ಹೋರಾಟದ ಸಮಯದಲ್ಲಿ ನಮ್ಮ ಕೊಡಗು ದೇಶವು ಎಲ್ಲಿರುವುದು ಎಂಬುದನ್ನು ಯೋಚಿಸುವಾಗ ನಮ್ಮ ದೇಶದವರೆಂತಹವರು ಈ ಪುಣ್ಯ ಭೂಮಿಯಲ್ಲಿ ಹುಟ್ಟಿದೆ ಹೋಗಬೇಕಾಗಿತ್ತು! ಎಂತ ಅನ್ನಿಸುತ್ತೆ. ಕೊಡಗು ದೇಶವು ಇನ್ನು ಕ್ರಮವಾಗಿ ಬಾರದ ರಾಜ್ಯವಾಗಿ ಯಾವ ರಾಜಕೀಯ ಸ್ವತಂತ್ರವೂ ಸಿಕ್ಕದೆ ಒಬ್ಬ ಚೀಫ್ ಕಮೀಶನರಿಂದ ಆಳಲ್ಪಡುತ್ತಿರುವುದನ್ನು ಕಂಡು ಇದರ ನಾಗರಿಕರಿಗೆ ಅರಿವು ಇನ್ನು ಜನರನ್ನು ನಿದ್ರಿಸುತ್ತಿರಲ್ಲಾ.

ಇದಕ್ಕೆ ಪರಿಹಾರ.

ಇಂಥಾ ಸ್ಥಿತಿಯನ್ನು ಹೋಗಲಾಡಿಸಲು ದೇಶದಲ್ಲಿ ಅನೇಕ ಉಪದೇಶಕರು, ಸ್ವಾರ್ಥತ್ಯಾಗಿಗಳಾಗಿ ಕೆಲಸಮಾಡುವವರು ಅತ್ಯಾವಶ್ಯಕ. ಕೆಲಸಮಾಡಲು ಅನೇಕ ಬೋಧಕರು ಇಲ್ಲದಿರುವಿಕೆಯಿಂದಲೇ, ನಮ್ಮ ದೇಶವು ನಪುಂಸಕ ನಂತಿರುತ್ತೆ. ಈ ಮೊದಲೇ ಹೇಳಿದಂತೆ ಹಣವೇ ಎಲ್ಲದಕ್ಕೂ ಮೂಲವಾಗಿರುವುದೆಂದು ನಮ್ಮ ದೇಶದವರು ಒಂದು ದೊಡ್ಡ ವೇತನವನ್ನು ಒಡನೇ ಶೇಖರಿಸಿ ದೇಶದ ರಾಜಕೀಯ ಸಾಂಪತ್ತಿಕ, ಸಾಮಾಜಿಕ ಕೆಲಸ ಪ್ರಾರಂಭ ಮಾಡದೆ ಹೋದರೆ ದೇಶದವರು ಅಭಿವೃದ್ಧಿಯಾಗುವ ಮುಂದರಿಯಾರಿ ಕಾಣಿಸು. ಈ ಕಾರಣಗಳಿಂದ ನಮ್ಮ ದೇಶದ ಎಲ್ಲಾ ಮಹನೀಯರಿಗೂ ಮಹಿಳೆಯರಿಗೂ ಈ ಕೆಳಗಣ ಬಿನ್ನಹವನ್ನು ಸೂಚಿಸುತ್ತೇನೆ.

ಬಂಧುಭಗಿನಿಯರೇ,

ನಾನು ಕಳೆದ ಎರಡು ಮೂರು ವರ್ಷಗಳಿಂದ ನಮ್ಮ ದೇಶದ ಎಲ್ಲಾ ಮೂಲೆಗಳನ್ನು ಸುತ್ತುತ್ತಲೇ ಇದ್ದೇನೆ. ಆದರೆ ನನ್ನ ಮನಸ್ಸಿನಲ್ಲಿ ನಮ್ಮ ದೇಶದ ಜನರು ಬಹಳ ಒಳ್ಳೆಯವರೆಂದೂ, ಸಾಧುಸ್ವಭಾವದವರೆಂದೂ ಮೋಸವೆಂಬುದು ತಿಳಿದ ಜನರೇ ಅಲ್ಲವೆಂತಲೂ ತಿಳಿದಿದ್ದೇನೆ. ಆದರೆ ನಮ್ಮ ಜನರು ಯಾವ ಕೆಲಸಮಾಡುವುದು ಕಡಿಮೆಯಾಗಿದೆ, ಶ್ರದ್ಧೆಯಿಂದ ಮಾಡಿಸಲು ಪ್ರತಿ ಗ್ರಾಮದಲ್ಲೂ ಆಗಾಗ್ಯೆ ತಕ್ಕಬುದ್ಧಿಮಾತಿಗಳ ಹೇಳುವವರು ಯಾ, ಉಪದೇಶಕರು ಅತ್ಯವಶ್ಯವಾಗಿವೆ. ಇಂಥಾ ಉಪದೇಶಕರು ಗ್ರಾಮಾಂತರಗಳಲ್ಲಿ ದೊರೆತರೆ ನಮ್ಮ ಜನರ ಭಾಗ್ಯಕ್ಕೆ ಎಣೆಯೇ ಇಲ್ಲ. ಆದ್ದರಿಂದ ಈ ತರದ ಬೋಧಕರನ್ನು ನಾವು ತಯಾರುಮಾಡಬೇಕಾದದ್ದು ನಮ್ಮ ಮೊದಲಿನ ಕರ್ತವ್ಯ. ನಮ್ಮ ಜನರು ವಾಡಿಕೆಯಾಗಿ ಬಡತನ ಬಡತನ ಎಂಬುದಾಗಿ ಕೂಗುತ್ತಾರೆ. ಆದರೆ ನಾವು ಯಾವದಾದರೊಂದು ಕೆಲಸವನ್ನು ಮಾಡಬೇಕೆಂದುದ್ದೇಶಿಸಿದರೆ ನಮ್ಮ ಸ್ಥಿರಮನಸ್ಸೇ ಗೆಲ್ಲುವುದಲ್ಲದೆ, ಬಡತನವು ಎಂದೂ ಮುಖ್ಯದಲ್ಲಿ ನಿಲ್ಲುವುದಿಲ್ಲ. ಆದ್ದರಿಂದ ಎಲ್ಲಾ ಕೆಲಸಕ್ಕೂ ನಮ್ಮ ಮನಸ್ಸೇ ಮೂಲ. ಮನಸ್ಸೇ ಸರ್ವಸ್ವ. ಮನಸ್ಸೊಂದಿದ್ದರೆ ಮಾರ್ಗವಿದ್ದೇ ಇದೆ ಎಂಬುದು ಸಿದ್ಧಾಂತವಾಗುವುದು. ಏತಕ್ಕೆಂದರೆ, ನಾವು ಅನೇಕ ಸಂದರ್ಭಗಳಲ್ಲಿ ಸಂತೋಷಕೂಟಕ್ಕೂ, ನಾಟಕಕ್ಕೂ, ಮದುವೆ, ಉಡಿಗೆತೊಡಿಗೆ ಮೊದಲಾದುವುಗಳಿಗೂ ಎಷ್ಟೆಷ್ಟೋ ಖರ್ಚು ಮಾಡುತ್ತೇವೆ. ನಮ್ಮಗಳಿಗೆ ಮಕ್ಕಳು ಹುಟ್ಟಿದಾಕ್ಷಣವೇ ಸಂತೋಷದಿಂದ ಎಷ್ಟು ಹಣ ಖರ್ಚು ಮಾಡುವುದಿಲ್ಲ! ಆದ್ದರಿಂದ ನಮ್ಮ ಜನರನ್ನು ಸುಶಿಕ್ಷಿತರನ್ನಾಗಿ ಮಾಡಲು ಮತ್ತು ಒಳ್ಳೆ ಮನಸ್ಸು ಅವರಲ್ಲಿ ಇರುವಹಾಗೆ ತಯಾರುಮಾಡಿಸಲು ನಮಗೆ ಅನೇಕ ಬೋಧಕರು ಬೇಕಾಗಿವೆಯಲ್ಲವೇ? ನಮ್ಮಲ್ಲಿ ಸ್ತ್ರೀಯರು ಬಹಳ ಸ್ಥಿರಮನಸ್ಸಿನಿಂದ ತಮಗೆಬೇಕಾಗುವ ಆಭರಣಗಳನ್ನು ಬಟ್ಟೆಗಳನ್ನು ಮಾಡಿಸಲಿಕ್ಕೆ ಎಷ್ಟು ಪ್ರಯತ್ನಪಡುತ್ತಾರೆ. ಇದಕ್ಕೆಲ್ಲಾ ಕಾರಣವು ಮನಸ್ಸೇ. ಆದ್ದರಿಂದ ದೇಶದ ಎಲ್ಲಾ ಸ್ತ್ರೀಪುರುಷರು ಇಂಥಾ ಕಾರ್ಯಕ್ಕೆ ಭಾಗಿಗಳಾಗಿ ಶಕ್ತಿಮೀರಿ ಸಹಾಯ ಮಾಡಿದ ವಿನಹ ದೇಶವು ಎಂದೂ ಮುಂದೆ ಬರಲಿಕ್ಕಿಲ್ಲ. ನಮ್ಮ ಸ್ತ್ರೀಯರಾದರೋ ಯಾವಾಗಲೂ ಆ ಲೋಕಮಾತೆಯಾದ ಶ್ರೀ ಕಾವೇರಿಯನ್ನು ಮನೆದೇವತೆಯಾಗಿಟ್ಟುಕೊಂಡು ಪೂಜಿಸುವವರು ಆ ಮಾತೆಯ ಗುಣವನ್ನು ಹಿಂಬಾಲಿಸತಕ್ಕವರು. ಆ ಶ್ರೀ ಮೂಲಕಾವೇರಿಯು, ಲೋಕಕಲ್ಯಾಣಕ್ಕಾಗಿ ಜನ್ಮವನ್ನೆತ್ತಿ ತನ್ನ ಜನ್ಮವನ್ನು ಪರೋಪಕಾರಕ್ಕಾಗಿಯೇ ಧಾರೆ ಎರೆದಿದ್ದಾಳೆ. ಹೀಗಿರುವಾಗ ನಮ್ಮ ಸೋದರಿಯರು ಉದಾಸೀನದಿಂದಿರುವುದು ನೋಡಿದರೆ ಬಹಳ ವ್ಯಸನವಾಗುತ್ತದೆ. ಸ್ತ್ರೀಯರೇ ನಮ್ಮ ಎಲ್ಲಾ ಅಭಿವೃದ್ಧಿಗೂ ಮೂಲ. ನಮ್ಮನ್ನು ಹೆತ್ತವರು ಹೆಂಗಸು. ಹೊಟ್ಟೆಹೊತ್ತಿ ಅನ್ನ ನೀರಿಕ್ಕಿ, ಸಾಕಿ ಸಲಹಿದವಳು ಹೆಂಗಸು, ಈಗ ಈ ಪ್ರಪಂಚವನ್ನು ಹೊತ್ತಿರುವವಳಾದರೂ ಸ್ತ್ರೀಯೇ. ನಮ್ಮ ವಿದ್ಯಾ ಬುದ್ಧಿ ಶಕ್ತಿ ವೇದಾ, ಪಾಠಿತ್ಯ ಇವೆಲ್ಲಕ್ಕೂ ಅಭಿಮಾನಿಗಳಾದವರೆಲ್ಲರೂ ಹೆಂಗಸೇ. ಅಲ್ಲದೆ ನಮ್ಮ ಮುಂದಿನ ಸಮಸ್ತ ವಿಚಾರಗಳಿಗೂ ಸ್ತ್ರೀಯರ ಸಹಾನುಭೂತಿಯು ಮೂಲವಾಗಿರಬೇಕು. ಮಕ್ಕಳನ್ನು ಸ್ವದೇಶಪ್ರೇಮಿಗಳನ್ನಾಗಿ ಮಾಡಬೇಕಾದರೆ ಮೊದಲು ತಾಯಿಯ ಹೃದಯದಲ್ಲಿ ಸ್ವದೇಶ ಪ್ರೇಮವು ಬೇರೂರಬೇಕು. ಹೆಂಗಸರು ಎಷ್ಟೆಷ್ಟು ಸದ್ಗುಣಿಯಾಗಿರುವರೋ ಅಷ್ಟು ದೇಶವೂ ವೃದ್ಧಿಯಾಗುವುದು. ಆದರೆ ಹೀಗೆ ಆಗಬೇಕಾದರೆ ತಕ್ಕ ಶಿಕ್ಷಣವು ದೊರಕು ಅನ್ಯಥಾ ಆಗದು ಮನುವು ಈ ಕಾರಣದಿಂದಲೇ ಸ್ತ್ರೀಗೂ ಶ್ರೀಗೂ ಭೇದವಿಲ್ಲವೆಂದು ಹೇಳಿರುತ್ತೇನೆ. ಯಾವ ಗೃಹದಲ್ಲಿ ಸ್ತ್ರೀಯು ಪೂಜಿಸಲ್ಪಡುವಳೋ, ಆ ಗೃಹದಲ್ಲಿ ದೇವತೆಯ ನಿಲುವುದೆಂದು ಹೇಳಿರುತ್ತೇನೆ. ನಮಗೆ ದೊರೆಯುವ ಧನಕ್ಕೆ ಲಕ್ಷ್ಮಿಯೂ ವಿದ್ಯೆಗೆ ಸರಸ್ವತಿಯೂ ಜನನ ಮರಣಗಳು ಆ ಮಹಾ ಶಕ್ತಿಯೆಂದು ತಿಳಿದು ನಾವು ಸ್ತ್ರೀಯರನ್ನು ಗೌರವಿಸಬೇಕೆಂದು ಹೇಳುವುದು ವಾಡಿಕೆಯಾಗಿದೆ. ಸ್ತ್ರೀಯರು ಸಾಹಸಿಯರು, ಹಣವುಳ್ಳವರು. ಹಿಡಿದ ಕೆಲಸವನ್ನು ಮಾಡುವವರು ಆದ್ದರಿಂದ ನಮ್ಮ ದೇಶದ ಸ್ತ್ರೀಯರೆಲ್ಲರೂ ತಮ್ಮ ಶಕ್ತ್ಯಾನುಸಾರ ದೇಶಹಿತ ಕಾರ್ಯಗಳಲ್ಲಿ ಮುಂದಕ್ಕೆ ಬರಬೇಕೆಂದೂ ತಮ್ಮ ಪತಿ, ಪುತ್ರರನ್ನೂ, ಬಂಧು ಬಾಂಧವರನ್ನೂ ಆಗಾಗ್ಗ ದೇಶದ ಕೆಲಸದ ಮಹತ್ವದ ವಿಷಯ ಬೋಧಿಸಿ ಅವುಗಳ ಕಡೆಗೆ ಮನಸ್ಸು ಕೊಡುವಂತೆ ಮಾಡುವುದು ಸ್ತ್ರೀಯರ ಕರ್ತವ್ಯವೆಂದು ಒತ್ತಿಹೇಳಬೇಕೇ! ನಮ್ಮ ದೇಶದ ಸ್ತ್ರೀಯರೆಲ್ಲರೂ ವಿದ್ಯಾವತಿಯರಾ. ಅದರಿಂದ ದೇಶದ ಭೂತಭವಿಷ್ಯತ್ತು, ವರ್ತಮಾನ ಕಾಲಗಳನ್ನು ತಿಳಿಯಲು ಸಮರ್ಥರು.

ದೇಶಭಾಂಧವರೇ ತಾವೆಲ್ಲರೂ ದೇಶೋದ್ಧಾರಕ್ಕಾಗಿ ಪ್ರಯತ್ನ ಪಡುವುದು ನಿಜವಾದರೆ, ತಮ್ಮಲ್ಲಿರುವ ಆಲೋಚನೆಗಳನ್ನು, ಕಾರ್ಯಥಾ ಮಾಡಿ ತೋರಿಸಬೇಕಾಗಿದೆ. ಮುಟ್ಟಮೊದಲು ದೇಶಸೇವೆಯ ಈ ಪುಣ್ಯಕೆಲಸವು ಯಾವದೂ ಇಲ್ಲವೆಂದು ಕಂಠೋಕ್ತವಾಗಿ ಹೇಳಬೇಕಾಗಿದೆ. ಏಕೆಂದರೆ ನಾವೆಲ್ಲರೂ ಸ್ವಪ್ರಯೋಜನಕ್ಕಾಗಿ ಅನೇಕ ರೂಪಾಯಿಗಳನ್ನು ಖರ್ಚುಮಾಡಿ ಶ್ರೀ ಕಾವೇರಿಯ ದರ್ಶನ ಮಾಡಿಕೊಂಡು ಬರುತ್ತೇವೆಯಲ್ಲವೇ. ಇದರಿಂದ ನಮಗೆ ಆ ದೇವಿಯು ಭಕ್ತಿಯನ್ನು ಮುಕ್ತಿಯನ್ನು ಕರುಣಿಸುತ್ತಾಳೆಂಬ ಭಾವನೆಯಿಂದ ನಾವು ಹೋಗುತ್ತೇವೆ. ದೇಶದಲ್ಲಿ ಸಾವಿರಾರು ಜನರ ಉದ್ಧಾರಕ್ಕಾಗಿ ಕೆಲ ಸ್ವಯಂಸೇವಕರಿಗೆ ಯಿಂದ ಸಾಧ್ಯವಾದಷ್ಟು ಸಹಾಯಮಾಡಿದರೆ ನಾವು ಇಂಥಾ ಸಾವಿರಾರು ದೇವಿಯ ಸೇವೆಯನ್ನು ಮಾಡಿದಂತಾಗುವುದಿಲ್ಲವೇ. ಈ ಕಲಿಯುಗದಲ್ಲಿ ಅನೇಕ ಜನರ ಸೇವೆಯನ್ನು ಮಾಡಿ ಅವರ ಕಷ್ಟಸುಖಗಳಲ್ಲಿ ಭಾಗಿಗಳಾಗಿ, ಅವರ ಅಭಿವೃದ್ಧಿಗೆ ತಕ್ಕ ಕೃಷಿಮಾಡುವಷ್ಟು ಪುಣ್ಯವೂ ಯಾವುದರಲ್ಲಿಯೂ ಇರುವುದಿಲ್ಲ. ಪ್ರತಿ ಒಬ್ಬನ ಆತ್ಮನಲ್ಲಿಯೂ ಆ ಶ್ರೀಕೃಷ್ಣ ಪರಮಾತ್ಮನು ನೆಲೆಗೊಂಡಿರುವುದರಿಂದ, ನೀವು ಅನೇಕ ಶ್ರೀಕೃಷ್ಣ ಪರಮಾತ್ಮನ ಪೂಜೆಮಾಡಿದಂತೆ ಆಗುತ್ತದೆಂದು ಶ್ರೀಕೃಷ್ಣನೇ ಭಗವದ್ಗೀತೆಯಲ್ಲಿ ಹೇಳಿರುತ್ತಾನೆ. ಆದ್ದರಿಂದ ದೇಶದ ಜನರನ್ನು, ಸುಶಿಕ್ಷಿತರನ್ನಾಗಿ ಮಾಡಲು ಮುಂದೆ ಬನ್ನಿ. ಇದಕ್ಕೆ ಮೊದಲು ತಕ್ಕ ಹಣ ಸಹಾಯವು ಅವಶ್ಯ. ಹಣಸಹಾಯವು ಕೋರಿದಷ್ಟು ಸಿಕ್ಕಿದರೆ ದೇಶಸೇವಕರು ತನ್ನಷ್ಟಕ್ಕೇ ಬರುವವರಾಗಿದ್ದಾರೆ. ಹೀಗೆ ವಸೂಲಾಗಲ್ಪಡುವ ಹಣದಿಂದ, ನಮ್ಮ ಮಕ್ಕಳಿಗೆ ನಮ್ಮ ದೇಶದ ನೀತಿಗೊಳಪಡುವ ದೇಶಾಭಿಮಾನಿಗಳನ್ನಾಗಿ ಮಾಡುವ ಶಿಕ್ಷಣವನ್ನೂ ವ್ಯಾಪಾರ ಕೈಗಾರಿಕೆ ಕೃಷಿಯನ್ನು ವೃದ್ಧಿಪಡಿಸುವ ವಿಷಯದಲ್ಲಿ ಸಾಧನೋಪಾಯಗಳನ್ನು ಕಂಡು ಹಿಡಿಯುವುದಕ್ಕೂ ನಮ್ಮ ದೇಶಕ್ಕೆ ಒಂದೇಯಾಗಿರುವ ಕೊಡಗು ಪತ್ರಿಕೆಯನ್ನು ವೃದ್ಧಿಪಡಿಸುವುದಕ್ಕೂ, ಜಮಾನುದಾರ ಸಂಘದ ಏಳಿಗೆಗೂ, ಸಹಕಾರ ಸಂಘಕ್ಕೂ, ಸ್ವದೇಶಿ ಸ್ವಭಾವಕ್ಕೆ ಉತ್ತೇಜನ ಕೊಡಲು ತಕ್ಕ ಏರ್ಪಾಡಿಗೂ ಇವೆಲ್ಲಕ್ಕೂ ಮೂಲಾಧಾರವಾದ, ರಾಜಕೀಯ ಸುಧಾರಣೆಯನ್ನು ಹೊಂದಲಿಕ್ಕೂ ಎಷ್ಟು ಅನುಕೂಲಗಳಿವೆ ಎಂದು ಯೋಚಿಸಿರಿ. ಈ ಕೆಲಸ ಸಾಧ್ಯವಾಗಬೇಕಾದರೆ ಧನಿಕರ ಉದಾರತೆಯು ಎಂದಿನಂತೆಯೇ ಇನ್ನೂ ಅಭಿವೃದ್ಧಿ ಎಂಬ ಕಟ್ಟಡದ ತಳಹದಿಗೆ ಮಧ್ಯಮರಗತಿಯವ ಜನರೇ ಮೂಲಾಧಾರರು. ಅವರಿಂದಲೇ ದೇಶಕ್ಕೆ ಶ್ರೀದು ಹೆಚ್ಚಾಗಿ ಬರುವುದು. ಬಡತನವೆಂದು ಎಣಿಸದಬೇಡಿ ಎಲ್ಲರೂ ಒಂದೇ ಮನಸ್ಸಿನಿಂದ ದೇಶಹಿತ ಚಿಂತೆಯನ್ನು ಮಾಡಿರಿ. ನಮ್ಮ ಜನರು ಬಹಳ ಒಳ್ಳೆಯವರೆಂದು ಒತ್ತಿಹೇಳುತ್ತೇನೆ. ಆದರೆ ಅವರನ್ನು ನ್ಯಾಯಮಾರ್ಗದಲ್ಲಿ ನಡಿಸುವ ಮುಂದಾಳುಗಳು ಮತ್ತು ಬುದ್ಧಿವಂತರು ಬೇಕಾಗಿದೆ. ನಮ್ಮ ದೇಶದಲ್ಲಿ ಆಗುವ ದೊಡ್ಡ ಜೂಜಾಟಕ್ಕೂ ದುಂದುಗಾರಿಕೆಗೂ ವಿಷಸೇವನೆಗೂ ಅನೇಕರು ಎಷ್ಟೆಷ್ಟು ದುಡ್ಡು ಖರ್ಚುಮಾಡುತ್ತಾರೆ. ಇಂಥಾ ಮಹನೀಯರು ಸಹ ದೇಶಹಿತ ಕಾರ್ಯಗಳಲ್ಲಿ ಮನಸ್ಸು ಕೊಡುವರಿಯಬೇಕಾಗಿ ಪ್ರಾರ್ಥನೆ. ಅನ್ಯರ ಮನಸ್ಸು ನೋಯಿಸುವ ಗೌರವದ ಆಡಂಬರಕ್ಕೂ ಮರುಳಾಗದ ಆತ್ಮಕ್ಕೆಗೂ, ಅದರಿಂದ ಮೋಕ್ಷಕ್ಕೂ ಪ್ರಯತ್ನಿಸಿರಿ. ಎಲ್ಲಾ ಮೋಕ್ಷಕ್ಕೂ ಆದಿಮೂಲವು ದೇಶಸೇವೆಯೆಂದೂ, ದೇಶಸೇವೆಯ ಪ್ರತಿಫಲವು ರಾಜಕೀಯ ಸುಧಾರಣೆ ಎಂಬುದನ್ನು ಮರೆಯಬೇಡಿರಿ.

ನಾವು ಇನ್ನೊಬ್ಬರನ್ನು ದೂರುವ ಬದಲು ನಮ್ಮನ್ನು ನಾವು ತಿದ್ದಿಕೊಳ್ಳುವ ಸ್ವಸಹಾಯದಲ್ಲಿಯೂ, ಸ್ವಪಕ್ಷದಲ್ಲಿಯೂ ನಂಬಿಗೆ ಇರುವ ನಾವೆಲ್ಲರೂ ಒಟ್ಟಾಗಿ ದೇಶಸೇವೆಯೇ ಲೋಕಮಾತೆಯಾದ ಕಾವೇರಿ ಸೇವೆಯೆಂದು ತಿಳಿದು ರಾಷ್ಟ್ರೀಯ ಕಾರ್ಯದಲ್ಲಿ ಒದ್ದಕಣರಾಗಿರುವ ನಮಗೆ ಬರುವ ಕಷ್ಟನಷ್ಟಗಳು ಪ್ರಥಮ ಬಹಳ ದೊಡ್ಡದೆಂದು ಕಂಡುಬಂದರೂ ಹೆದರದೆ ನಾವು ಹಿಡಿದ ಕಾರ್ಯವನ್ನು ಸಾಧಿಸಬೇಕು. ಮದ್ರಾಸು ಬೊಂಬಾಯಿ ಮೊದಲಾದ ಪ್ರಾಂತಗಳಿಗೆ ಕೊಟ್ಟಿರುವ ಮಾರ್ಪಾಡುಗಳನ್ನು ಖಂಡಿತವಾಗಿಯೂ ಕೊಡಬೇಕೆಂದೂ, ಹಿಂದೂ ದೇಶದ ಇತರ ಸಹೋದರರಂತೆ ನಾವೂ ಇದೇವೆಯೆಂದೂ, ಭಯವಿಲ್ಲದೆ ಹೇಳುವ. ನಮ್ಮ ರಾಜ್ಯವಾಳುವವರೂ ನಮ್ಮಂತ ಮನುಷ್ಯರೆಂದೂ, ನಾವು ಅವರಂತೆ ಮಾನಮರ್ಯಾದೆ ಇರುವರೆಂದು ನಾವೂ ಹೇಳಿಕೊಳ್ಳುವ. ನಮ್ಮಲ್ಲಿ ಸರಕಾರದಿಂದ ಒಬ್ಬನಿಗೆ ನ್ಯಾಯ ಸಿಕ್ಕಲಿಲ್ಲವೆಂಬ ವಿಚಾರದಲ್ಲಿ ಎಲ್ಲರೂ ಒಗ್ಗಟ್ಟಾಗಿ ಒಬ್ಬನ ಅನ್ಯಾಯವು ದೇಶದ ಅನ್ಯಾಯವೆಂದು ತಿಳಿಯುವ. ಅನ್ಯರನ್ನು ತನ್ನವರಂತೆ ಕಾಣುವ ಪರಹಿತಬುದ್ಧಿಯನ್ನು ಹೊಂದುವ. ಬ್ರಿಟಿಷಿನವರೂ ಪ್ರಪಂಚದಲ್ಲಿರುವ ಎಲ್ಲಾ ನಾಡುಗಳಿಗಿಂತಲೂ ಶ್ರೇಷ್ಟವಾದದ್ದು ಅವರ ಉನ್ನತವಾದ ದೇಶಾಭಿಮಾನ, ಉದ್ಯೋಗಶೀಲತೆ ಎಂಬುದನ್ನು ತಿಳಿದು ಬ್ರಿಟಿಷ್ ಜನರ ಒಳ್ಳೆ ನಡತೆಯನ್ನು ಶ್ಲಾಘಿಸಿ ಕೆಟ್ಟದ್ದನ್ನು ತೋರುವಂತಾದ್ದನ್ನು ದೂರಮಾಡುವ ನಮಗೆ ಬರುವಂಥ ವಿಘ್ನಗಳು ಮತ್ತು ಪ್ರತಿಕೂಲಗಳೆಲ್ಲವನ್ನು ತಾಳಿಯಿಂದ ಧೈರ್ಯದಿಂದಲೂ ತೆಗೆದುಕೊಂಡು ಅವೆಲ್ಲವೂ ನಮ್ಮ ಅಭಿವೃದ್ಧಿಗಿರುವ ಪ್ರಥಮ ಸೋಪಾನಗಳೆಂದು ತಿಳಿಯುವ.

ಮೇಲೆ ಬರೆದಂತಾವುಗಳೆಲ್ಲವನ್ನೂ ಕಾರ್ಯಥಾ ನಡೆಸಿ ತೋರಿಸಬೇಕಾದರೆ ಹಣವು ಅತ್ಯವಶ್ಯಕ. ನಾವು ಕೆಲಸಗಳೆಲ್ಲವನ್ನು ಮಾಡುವವರು ಎಂದು ತೋರಿಸಬೇಕಾದರೆ ನಮಗೆ ದೇಶದ ಎಲ್ಲಾ ಜನರಿಂದಲೂ ದೊರೆಯುವ ಸಹಾಯದಿಂದ ತಿಳಿಯುತ್ತೆ. ಆದ್ದರಿಂದ ದೇಶಹಿತ ಕೆಲಸಗಳಿಗೆ ಪ್ರತಿಯೊಬ್ಬನು ತನಗೆ ಹುಟ್ಟಿದ ಮಕ್ಕಳ ಅಭಿವೃದ್ಧಿಗೆ ಎಷ್ಟರ ಮಟ್ಟಿಗೆ ಪ್ರಯತ್ನ ಪಟ್ಟು ಖರ್ಚುಮಾಡುತ್ತಾನೋ ಹಾಗೆಯೇ ಪ್ರತಿ ಒಬ್ಬನೂ ದೇಶದ ಒಂದು ಮಗುವು ಹುಟ್ಟಿದೆ ಎಂಬ ಭಾವನೆಯಿಂದ ತಿಳಿದು, ಈಗ ಕೂಡಿಸಬೇಕಿರುವ ನಿಧಿಗೆ ಸಹಾಯಕರಾಗಿ, ನಮಗೆ ರಾಜಕೀಯ ಮಾರ್ಪಾಡುಗಳು ಸಂಪೂರ್ಣವಾಗಿ ದೊರೆಯುವವರೆ ಯಾವ ತರದ ದುಂದುಗಾರಿಕೆಯನ್ನು ಮಾಡುವುದಿಲ್ಲವೆಂದು ದೃಢೀಕರಿಸುವ ನಮ್ಮ ಶಕ್ತ್ಯನುಸಾರ ರಾಷ್ಟ್ರೀಯಾಭಿವೃದ್ಧಿಗಿರುವ ಸಾಧನಗಳಿಗೆ ದ್ರವ್ಯಸಹಾಯ ಮಾಡುವ ಮನಸ್ಸು ಹೊಂದಿದ್ದರೆ ಮಾರ್ಗ ಇದ್ದೇ ಇದೆ ಎಂಬುದನ್ನು ತೋರಿಸುವ.

ಈ ವಿಚಾರದಲ್ಲಿ ತಕ್ಕ ಏರ್ಪಾಡುಗಳು ಒಡನೇ ಆಗುತ್ತವೆ. ಅವುಗಳನ್ನು ಆಗಿಂದಾಗ್ಯೆ ದೇಶದವರ ಅವಗಾಹನೆಗೆ ತಂದುಕೊಳ್ಳುತ್ತೇವೆ. ಯಾರು ತಮಗೆ ತಾವೇ ಸಹಾಯ ಮಾಡಿಕೊಳ್ಳುತ್ತಾರೋ ಅಂಥವರಿಗೆ ದೇವರು ಸಹಾಯ ಮಾಡುತ್ತಾನೆ. ಆದ್ದರಿಂದ ನಮ್ಮ ಶಕ್ತಿ ಮೇಲೆ, ನಮ್ಮ ಯೋಗ್ಯತೆಯಲ್ಲಿ ನಂಬಿಗೆ ಇರುವ ದೇಶಸೇವೆಯ ಶಾಶ್ವತವಾದ ಸಾಫಲ್ಯ ಸಂಪೂರ್ಣ ಸೇವೆಯಲ್ಲಿ ನಮ್ಮ ಕುಲದೇವತೆಯಾದ, ಮಾತೆಯಂತಿರುವ ಶ್ರೀ ಮೂಲಕಾವೇರಿಯು ತಕ್ಕ ಪ್ರೋತ್ಸಾಹವನ್ನೀಯಲೆಂತಲೂ, ಕಾರ್ಯಶೀಲತೆಯನ್ನುಂಟುಮಾಡುವಂತೆ ನಾವು ಆ ದೇವಿಯನ್ನು ನಿಶ್ಚಲವಾದ ಭಕ್ತಿಯಿಂದ ಪೂಜಿಸಿ ನಮ್ಮ ಕರ್ತವ್ಯಗಳನ್ನು ಮಾಡಲಿಕ್ಕೆ ಪ್ರಾರಂಭಿಸುವ.

"ದೇಶಸೇವಕ"

Printed & Published by D S. Krishnaswamieo Proprietor, at Sreenivas Electric Press, Mys "for Kodagu" Ltd. Mercara—17-10-1943

...ದಲ್ಲಿದ್ದು ನಡಿಸುವುದು ಕಷ್ಟಸಾಧ್ಯವಾದುದರಿಂದಲೂ ಆ ... ಮೋಟಾರು ಲೈನನ್ನು ಅಲ್ಲಿ ಅಂತ್ಯಪಡಿಸಿ ಇಲ್ಲಿಯೇ ... ಬೇಕಾಗಿ ನಿರ್ಧರಿಸಿರುವೆನು ಪರಂತು ಕವರ್ನರ... ...ದಲ್ಲಿರುತ್ತಿದ್ದಾಗ ಅಧಿಕಾರಿವರ್ಗದವರಿಂದಲೂ ಮಹಾ...ನ ಮುಖಾಂತರದಿಂದಲೂ ಜನಸಾಮಾನ್ಯರಿಂದಲೂ ವಿಶೇಷ...ರವಾಗಿ ನಾನು ಪಡೆದ ಉದಾರಾತಿಥ್ಯವು ಚಿರಸ್ಮರ...ಯವಾಗಿದೆ ನಿವೃತ್ತಿಯಲ್ಲಿಯೂ ಸಾಗಿಹೋಗುವ ನನ್ನ ...ಲೆ ತಮ್ಮೆಲ್ಲರ ಅಭಿಮಾನವು ಏಕರೀತಿಯಲ್ಲಿರಬೇಕೆಂಬು... ನನ್ನ ಸವಿನಯ ಸಂಪ್ರಾರ್ಥನೆ

ನೆಲ್ಲಿಕಾಯ ವ್ಯಾಪಾರಾವ್.

...॥ 7-10-23 ರಲ್ಲು “ಕೊಡಗು” ಆಫೀಸಿನಲ್ಲು ನಡೆದ “ಕೊಡಗು” ಕಂಪೆನಿಯ ಡೈರೆಕ್ಟರುಗಳ ಮೀಟಿಂಗಿನ ವಿವರ.

...ಬಂದಿದ್ದವರು:—

1 ಮ॥ ಕೆ ಕುಟ್ಟಯ್ಯ ರಾ॥ ಬಾ॥ (ಚೇರ್‌ಮ್ಯಾನ್)
2 „ ಸಿ ಎನ್ ವೆಂಕಪ್ಪಯ್ಯ, ಬಿ. ಎ, ಬಿ ಎಲ್,
3 „ ಎಸ್ ಆರ್ ಸುಬ್ಬಯ್ಯ,
4 „ ಪಿ ಟಿ ಕುಶಾಲಪ್ಪ,
5 „ ಎಂ ಎಂ ಚಿಣ್ಣಪ್ಪ
6 „ ಕೆಕ್ಕಡ ಪೂವಯ್ಯ,
7 „ ಬಿ ಎಂ ಕಾರ್ಯಪ್ಪ
8 „ ಪುಲಿಯಂಡ ಉತ್ತಯ್ಯ,
9 „ ಪಿ ಬಿ ಮೇದಪ್ಪ, ಬಿ ಎ, ಬಿ. ಎಲ್.

1 1923-23 ನೇ ವರ್ಷದ ಜಮಾ ಮತ್ತು ಖರ್ಚಿನ ...ಯೂ ಲಾಭ ನಷ್ಟದ ಪಟ್ಟಿಯೂ ಓದಲಾಯಿತು

ಮೇಲಿನ ಪಟ್ಟಿಗಳನ್ನು ಎಲ್ಲಾ ಲೆಕ್ಕ ಪುಸ್ತಕಗಳೊಂದಿಗೆ ಆಡಿಟ್ ಮಾಡಲಿಕ್ಕಾಗಿ ಆಡಿಟರವರಿಗೆ ಕೊಡತಕ್ಕಂತೆ ...ರ್ಮಾನವಾಯಿತು.

2 ಕಮಿಶನರವರು ತಾ॥ 21-9-23 ರಲ್ಲು ಸಂಪಾದಕರಿಗೆ ಬರೆದ ಎಚ್ಚರಿಕೆ ಪತ್ರವೂ, ಸಂಪಾದಕರು ಅವರಿಗೂ ...ಮಾಪನರವರಿಗೂ ತಾ॥ 11-9-23 ರಲ್ಲು ನಡೆದ ಸಂಭಾಷಣೆಯ ವಿವರ ಬರೆದದ್ದು ಮತ್ತು ಅದಕ್ಕೆ ಸಂಬಂಧಪಟ್ಟ ಲೇ...ಗಳೂ ಓದಲಾಯಿತು

ಸಂಪಾದಕರ ಕೆಲಸದಲ್ಲಿ ಡೈರೆಕ್ಟರುಗಳ ಸಂಬಂಧವೂ ...ರ್ದು ಮಾಡಲ್ಪಡಬೇಕೆಂದು ಸರ್ವಸಮ್ಮತದಿಂದ ನಿರ್ಧಾರವಾಯಿತು

3. ತಾ॥ 11-9-23 ರ ಸಂಭಾಷಣದಲ್ಲಿ ಕಮಿಶನರವರು ಸಂಪಾದಕರಿಗೆ ಕೂಡಿಕೊಳ್ಳಲು ಅನುಮತಿ ಕೊಡದ್ದರಿಂದಲೂ ಹೊರಗೆ ಬಹಳ ಹೊತ್ತು ಕೂರಲಿಕ್ಕೆ ಸ್ಥಳ ಕೊಡದೆ ಕಾಯಿಸಿದ್ದರಿಂದಲೂ ಡೈರೆಕ್ಟರುಗಳು ವ್ಯಸನಪಡುತ್ತಾ...ರು ಬಹುಮತದಿಂದ ಪಾಸಾಯಿತು.

ಚೇರ್‌ಮ್ಯಾನ್ ಮೆ॥ ಕೆ ಕುಟ್ಟಯ್ಯನವರು ಮತ್ತು ...॥ ಪಿ ಬಿ. ಮೇದಪ್ಪನವರು ಸಂಭಾಷಣೆ ವೇಳೆಯಲ್ಲಿ ...ನು ನಡೆದುದು ತಮಗೆ ಗೊತ್ತಿಲ್ಲವೆಂದು ಹೇಳಿ ಈ ...ರಾವಿಗೆ ಒಪ್ಪಲಿಲ್ಲ

ಕೆ ಕುಟ್ಟಯ್ಯ. (ಚೇರ್‌ಮ್ಯಾನ್)

ಕೊಡಗು ಕಮಿಶನರವರ ಆಫೀಸ್,
ಮಡಿಕೇರಿ ತಾ॥ 8-10-23.

ಚೀಫ್ ಕಮಿಶನರವರು ಜಮೀನುದಾರರ ಸಂಘದ ... ಕಾರ್ಯದರ್ಶಿಯವರಿಗೆ ಬರೆದ ಪತ್ರದ ನಕಲು

...ಯರೇ,

ವೈಸರಾಯರ ಭೇಟಿಗೆ ಡೆಪ್ಯುಟೇಶನ್ ಹೋಗುವ ವಿಷಯದ ತಾ॥ 7 ರ ನಿಮ್ಮ ಕಾಗದ ತಲುಪಿತು ನಿಮಗೂ ...॥ ಕುಟ್ಟಯ್ಯನವರಿಗೂ ಖುದ್ದಾಗಿ ನಾನು ತಿಳಿಸಿದಮೇರೆ ...ಟ್ ಸೆಕ್ರೆಟರಿಯವರು ಕೊಡಗಿಗೆ ಒಂದು ಕೌನ್ಸಿಲನ್ನು ...ಪಡಿಸಲು ಷರಾಯಿಟ್ಟು ರಿಮಾರ್ಕ್ ಮಾಡಿದ ಪದದಿಂದ ...ದ್ದೇಶವು ಬಹಳವಾಗಿ ಬದಲಾಗಿರುವುದರಿಂದ ನಿಮ್ಮ ...ಮಾನಪತ್ರದಲ್ಲಿ ಹೆಚ್ಚಿನ ಆಕ್ಷೇಪಕ್ಕೆ ಗುರಿಯಾದ ಭಾಗವು ...ನಾವಶ್ಯಕವಾಗಿದೆ ಮುಖ್ಯವಾಗಿ ನಾನು ಈ ವಾಕ್ಯವ...ನ್ನು ತೋರಿಸಬಹುದು. “ಕೌನ್ಸಿಲಿನಿಂದ ನಮ್ಮ ಪ್ರಾಂತ್ಯಕ್ಕೆ ...ಪ್ರಯೋಗವಾದುದು” ಎಂಬ ವಾಕ್ಯವು ಸ್ವರೂಪದಲ್ಲಿ ...ದಂತೆ ಇದೆ ವೈಸರಾಯರಿಗೆ ಒಪ್ಪಿಸುವ ಬಹು...ಮಾನ ಪತ್ರದಲ್ಲಿ ಇದು ಸಂಪೂರ್ಣವಾಗಿ ಅನಾವಶ್ಯಕವಾ...ದೆ ಇತರ ಕೆಲವು ಪ್ರಾರ್ಥನೆಗಳನ್ನೂ ಕೋರಿಕೆಗಳನ್ನೂ ...ಚ್ಚಿನ ಮರ್ಯಾದೆ ತೋರಿಸುವ ಮಾತಿನಲ್ಲಿ ಬರೆಯಬ...ಹುದು. ಹಾಗೂ, ವಿದ್ಯಮಾನ ಬದಲಾದ ಸ್ಥಿತಿಯಲ್ಲಿ ...ದ ಡೆಪ್ಯುಟೇಶನಿಗೆ ಭೇಟಿಕೊಡಲು ವೈಸರಾಯರು ಒಪ್ಪು...ತ್ತಾರೆ ಆದ್ದರಿಂದ ನಿಮ್ಮ ಕಮಿಟಿ ಮುಂದೆ ಈ ವಿಷಯವ...ನ್ನು ಪುನಃ ತರಬೇಕೆಂತ ಕೇಳಿಕೊಳ್ಳುತ್ತೇನೆ ಇನ್ನೂ ಏನು ...ಬಹುದೆಂದರೆ ಮೇಲೆ ಬರೆದ ವಾಕ್ಯದ ಬದಲಿಗೆ “ನಮ್ಮ ...ಪ್ರಾಂತ್ಯದ ನಿರೀಕ್ಷಣೆಯು ಸರಕಾರ ... ಜಾ...ರಿಯಲ್ಲಿದ್ದ ಕೌನ್ಸಿಲಿಗಿಂತ ಮುಂದರಿಸಿದ ಸರಕಾರಿ ಪದ್ಧ...ತಿಯ ಮೇಲೆ ಇದೆ” ಎಂತ ಬರೆದರೆ ಆಕ್ಷೇಪವಿಲ್ಲ ಮತ್ತು ... ಮಾತು ಮೊದಲಿನ ಮಂದನಾಪತ್ರದ ಅಭಿಪ್ರಾಯವನ್ನೇ ...ಬಿಸುತ್ತೆಂತ ನಾನು ನಂಬುತ್ತೇನೆ.

2. ನಾನು ನಿಮಗೆ ಮೊದಲು ಬರೆದ ಕಾಗದದಿಂದ ನಿಮ್ಮ ಸಂಘಕ್ಕೆ ಬೇಸರವಾದ್ದಕ್ಕೆ ತುಂಬಾ ವ್ಯಸನಪಡುತ್ತೇನೆ ಈಗ ಆ ಅತೃಪ್ತಿಯು ಸಂಪೂರ್ಣವಾಗಿ ಸಮಾಧಾನವಾಗಬಹುದೆಂತ ನಾನು ನಂಬುತ್ತೇನೆ ನಾನು ಖುದ್ದಾಗಿ ಹೇಳಿದಮೇರೆ ಸ್ಟೇಟ್ ಸೆಕ್ರೆಟರಿಯವರು ಕೆಲವು ಕಾಲದಿಂದ ಕೊಡಗಿಗೆ ಒಂದು ಕೌನ್ಸಿಲನ್ನು ಕೊಡುವ ಬಗ್ಗೆ ಮನಸ್ಸಿನಲ್ಲಿ ... ಮಾಡುವವರಲ್ಲಿಯೂ ಮಾಡಿಸುವವರಲ್ಲಿಯೂ ಬಹಳ ತೊಂದರೆ ಮತ್ತು ಶ್ರಮ ತೆಗೆದುಕೊಂಡಿದ್ದಾರೆ ಹೀಗೆ ಮಾಡಿದ ಕೆಲಸವೆಲ್ಲಾ ನಿಮ್ಮ ಸಂಘವು ಊಹಿಸಲಾರದು. ಅಲ್ಲವಾದರೆ ನಿಮ್ಮ ಬಹುಮಾನಪತ್ರದ ಭಾಷೆಯು ಬೇರೆಯಾಗಿರುತ್ತೆಂತ ನಾನು ನಂಬುತ್ತೇನೆ ನಿಮಗೂ ಕುಟ್ಟಯ್ಯನವರಿಗೂ ನಾನು ತಿಳಿಸಿದಮೇರೆ ಸ್ಟೇಟ್ ಸೆಕ್ರೆಟರಿಯವರಿಗೆ ಬರೆಯಬಾರದೆಂತಲೂ ಮುಂಬರುವ ಯಾವಾಗಲಾದರೂ ಬರಬಹುದೆಂತಲೂ ನಾನು ಎಲ್ಲರಿಗೂ ತಿಳಿಯುವಂತೆ ಹೇಳಿದ್ದೆ. ಬಹುಮಾನಪತ್ರದ ಮಾತುಗಳು ಚೀಫ್ ಕಮಿಶನರ್ ನಾನೇ ಬರಿಗೂ ನನಗೂ ಅನಾವಶ್ಯವೆಂತ ತೋರಿದ್ದರಲ್ಲಿ ಸಂಘಕ್ಕೆ ಅತೃಪ್ತಿಯಾಗಿರಬಹುದೆಂತ ನಾನು ನಂಬುತ್ತೇನೆ ಕೊಡಗಿಗಾಗಿ ನಾವು ಮಾಡಿದ ಪ್ರಯತ್ನವನ್ನು ಜನರು ತಿಳಕೊಳ್ಳದ್ದಕ್ಕೆ (ಗೌರವಿಸದ್ದಕ್ಕೆ) ಸ್ವಭಾವಿಕವಾಗಿ ನನಗೆ ನೋವಾಯಿತು ಬಹುಶಃ ನನ್ನ ಕಾಗದದ ಮಾತುಗಳು ಅನಾವಶ್ಯವಾಗಿ ಬಿರುಸಾಗಿತ್ತೆಂತ ನಾನು ಒಪ್ಪುತ್ತೇನೆ ಇದಕ್ಕೆ ನಾನು ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತೇನೆ. ತ್ಯಾಗ ... ಯೋಚಿಸಿನೋಡುವಾಗ ಕೋಪೋದ್ರೇಕಕ್ಕೆ ಕಾರಣ ಬಲವಾಗಿಯೇ ಇತ್ತೆಂತ ನಿಮ್ಮ ಸಂಘವು ಒಪ್ಪೀತೆಂತ ನನಗೆ ನಂಬಿಕೆ ಇದೆ.

3 ಈ ವಿಷಯದ ಎಲ್ಲಾ ಸಂಗತಿಗಳನ್ನು ನಿಷ್ಕಪಟವಾಗಿ ಹೇಳುವಂತೆ ಮೇರೆ ವಿವರಿಸಿದನಂತರ ಆ ವಿಷಯವು ಮರೆಯಲ್ಪಡುವದೆಂತಲೂ ಈಗ ಕೊಡಗಿನ ಅಭಿವೃದ್ಧಿಯಲ್ಲಿ ನೀತಿಯ ಓಟರುಗಳಿಗೆ ಬಲವಾದ ಮತ್ತು ದೊಡ್ಡ ಶಕ್ತಿಯನ್ನು ಉಪಯೋಗಿಸುವ ಹಕ್ಕು ಸಿಕ್ಕಿದ ಮೇಲೆ ನಿಮ್ಮ ಸಂಘವು ಸರಕಾರದೊಡನೆ ತಮ್ಮೊಳಗೆ ಇದ್ದ ಸ್ನೇಹಸಂಬಂಧವು ಪುನಃ ಮುಂದುವರಿಯುವುದೆಂತಲೂ ನಾನು ಸಂಪೂರ್ಣವಾಗಿ ನಂಬುತ್ತೇನೆ

4 ತಿದ್ದಿದ ಮಂದನಾಪತ್ರವು ಬಂದ ಮಾತ್ರದೊಳಗೆ ನನ್ನ ಕೈಸೇರುವಂತೆ ನೀವು ಮಾಡಿದರೆ ಸಂತೋಷಪಡುತ್ತೇನೆ ಬಹುಶಃ ಅವಶ್ಯವಾದ ನಾನು ಕಾಣಿಸಿಗೆ ಹೋಗುತ್ತೇನೆ ಅದಕ್ಕೆ ಮುಂಚೆ ಚೀಫ್ ಕಮಿಶನರಿಗೆ ಒಪ್ಪಿಸಲಿಕ್ಕೆ ಅನುಕೂಲವಾಗಬೇಕೆಂತ ಅಪೇಕ್ಷಿಸುತ್ತೇನೆ

ತಮ್ಮ ವಿಶ್ವಾಸಿ,
ಸಿ ಎ ಸೂಬರ್
ಕೊಡಗು ಕಮಿಶನರು.

ಕೊಡಗು ಜಮೀನ್ದಾರರ ಸಂಘ.

(ಪ್ರಚಾರದ ಕಾರ್ಯದರ್ಶಿಯವರಿಂದ)

ಸರ್ವ ಜಾತಿಯು ಸುಖವಾಗಲಿ! ಸತ್ಯವನ್ನೇ ನುಡಿ ಪ್ರಜೆಗಳು, ಹೋರಾಡಿರಿ! ಯಾರಾದರೆ ಆ ವರಿಷ್ಠವನ್ನು ಎಲ್ಲರಿಗೂ ಉಪದೇಶಿಸಿರಿ! ಪ್ರತಿಯೊಬ್ಬ ಪ್ರಜೆ ಪ್ರತಿ ಊರಿನಲ್ಲೂ ಸೇರಿ! ದೇಶದಲ್ಲೆಲ್ಲ ವ್ಯಾಪಿಸುವಂತೆ ಮಾಡಿ!

ಮಾಲಂಬಿಯ
ಸಂಘದ ಕೆಲಸ

ತಾ॥ 13-10-23 ರಲ್ಲು ಜಮೀನ್ದಾರರ ಸಂಘದ ಒಂದು ಕಮಿಟಿಯನ್ನು ಮಡಿಕೇರಿ ... ಏರ್ಪಡಿಸುವ ನಿಮಿತ್ತ ಮ॥ ಶ್ರೀ॥ ಸಿ॥ ಎನ್ ವೆಂಕಪ್ಪಯ್ಯನವರ ಅಧ್ಯಕ್ಷತೆಯಲ್ಲು ಸುಮಾರು ... ಜನರು ಸೇರಿ 5 ಗಂಟೆ ಸಮಯಕ್ಕೆ ಒಂದು ಮೀಟಿಂಗು ನಡೆಯಿತು. ಅಧ್ಯಕ್ಷರು ಸಂಘದ ಉದ್ದೇಶವನ್ನು ವಿವರಿಸಿ ಪ್ರಜೆಗಳ ಅಭಿಮತಕ್ಕನುಸಾರವಾಗಿ ಸರಕಾರವು ನಡೆಯಬೇಕಾದರೆ ಈಗಿನ ಪ್ರಸಂಗದ ಮುಖವಾಗಿ ಅನೇಕ ಪ್ರಜೆಗಳಿರುವ ಸಂಘಗಳು ಇರಬೇಕು. ನಮ್ಮ ದೇಶದಲ್ಲಿರುವ ಜಮೀನ್ದಾರರ ಸಂಖ್ಯೆಯನ್ನೇ ಬಲಪಡಿಸಿಕೊಳ್ಳಬೇಕಾಗಿದೆ ಸಂಘದ ಪ್ರಯತ್ನದಿಂದಲೇ ಈ ಕೌನ್ಸಿಲು ಸಿಕ್ಕಿದೆ ಇನ್ನು ಮುಂದೆ ಕೌನ್ಸಿಲಿನ ಕೆಲಸ ಚೆನ್ನಾಗಿ ನಡೆಯಬೇಕಾದರೆ ಪ್ರಜಾಮತವನ್ನು ಸೂಚಿಸುವ ಈ ಸಂಘವು ಬಲವಾಗಬೇಕು. ಈ ಸಂಘದ ಉದ್ದೇಶವನ್ನು ಈ ಊರಲ್ಲಿ ಸ್ಥಾಪಿಸಿ ಅದರ ... ಸಹಕಾರವನ್ನು ಪಡೆದುಕೊಂಡರೆ ಬಹಳ ಪ್ರಯೋಜನವಾಗುವುದೆಂದು ಹೇಳಿದರು.

ಪ್ರಚಾರದ ಕಾರ್ಯದರ್ಶಿಯವರು ಸಂಘದ ಮುಖ್ಯ ರಾಜಕೀಯ ಕೆಲಸ ಮಾತ್ರವಲ್ಲ ಸಾಮಾಜಿಕ ಸಾಂಪತ್ತಿಕ ಮತ್ತು ವಿದ್ಯಾಭಿವೃದ್ಧಿಯಲ್ಲೂ ಕೂಡ ಈ ಸಂಘದ ಮೂಲಕ ಅಭಿವೃದ್ಧಿ ಹೊಂದಬಹುದು ... ಸಂಘದ ಉಪಶಾಖೆಯನ್ನು ಈ ಊರಲ್ಲಿ ಸ್ಥಾಪಿಸಲಿಕ್ಕೆ ಎಲ್ಲರೂ ... ಸಹಾಯಕರಾಗಬೇಕೆಂದು ಕೇಳಿಕೊಂಡರು

ಮೆ॥ ಎಂ ಎಂ ಸಿದ್ದೇಶ ಸಾಹುಕಾರರು ... ದರೆ ಸಭೆಯಿಂದ ಕಟ್ಟುಗಳನ್ನು ... ಸಹಾಯ ನಿಧಿ ನಾವು ಮಾಡುವೆವು, ... ದರು ಜೈಕರು ಕಷ್ಟಗಳನ್ನು ... ನಾವು ಹೇಳಬೇಕು. ಬೇರೆ ಊರುಗಳಲ್ಲಿ ಪಟ್ಟಣವಾಸಿಗಳೇ ಎಲ್ಲಾ ಜನಗಳಲ್ಲಿ ಮುಂದಾಳುಗಳಾಗಿರುವರು ನಾವು ಹಿಂದೆ ಬಿದ್ದಿರುವುದು ನಾಚಿಕೆಗೇಡು. ಆದ್ದರಿಂದ ನಾವು ಜಮೀನ್ದಾರರ ಸಂಘದಲ್ಲಿ ಸೇರಿ ಕೆಲಸಮಾಡಿ ಪ್ರಯೋಜನ ಹೊಂದಬೇಕೆಂದು ಹೇಳಿದರು. ಮ॥ ಪುಟ್ಟಸ್ವಾಮಿ ಶೆಟ್ಟರು. ಜಮೀನ್ದಾರರ ಸಂಘದ ಒಂದು ಶಾಖೆಯನ್ನು ಏರ್ಪಡಿಸುವುದು ಅವಶ್ಯವೆಂದು ಹೇಳಿದರು ಅಷ್ಟರಲ್ಲಿ ಮ॥ಶ್ರೀ ಕೆ ಪರಮೇಶ್ವರಶೆಟ್ಟರು ಸಂಘದ ಕಮಿಟಿಯಿಂದ ಶಾಖೆಯನ್ನು ಸ್ಥಾಪಿಸಲಿಕ್ಕೆ ಹಕ್ಕು ಸಿಕ್ಕಿದೆಯೋ ಎಂತ ಕೇಳಿದ್ದಕ್ಕೆ ಕಮಿಟಿಯವರ ಠರಾವನ್ನು ಓದಿ ಹೇಳಿದನಂತರ ಎಲ್ಲವರೂ ಶಾಖೆಯನ್ನು ಏರ್ಪಡಿಸಲು ಒಪ್ಪಿಕೊಂಡರು

ಮ॥ ದಾಸಪ್ಪನವರು ಫ್ರೀ ರೀಡಿಂಗ ರೂಮು ಒಂದನ್ನು ಸ್ಥಾಪಿಸಬೇಕೆಂದು ಸೂಚಿಸಿದ್ದಕ್ಕೆ ಎಲ್ಲವರು ಒಪ್ಪಿಕೊಂಡರು. ನಂತರ ಈ ಶಾಖೆಯ ಕೆಲಸವನ್ನು ನಡಿಸಲಿಕ್ಕಾಗಿ ಈ ಕೆಳಗೆ ನಮೂದಿಸಿದ ಮಹನೀಯರು ಒಪ್ಪಿಗೆ ಚೀಟಿಸ್ರ ಕಾರ ಚುನಾಯಿಸಲ್ಪಟ್ಟರು

ಅಧ್ಯಕ್ಷರು

ಮ॥ಶ್ರೀ॥ ಎ ಸಿದ್ದಲಿಂಗಪ್ಪನವರು ಖಜಾಂಚಿ ಮ॥ಶ್ರೀ ಕೆ ಎನ್ ಪರಮೇಶ್ವರಶೆಟ್ಟರು ಕಾರ್ಯದರ್ಶಿ, ಮ॥ ಶ್ರೀ॥ ಬಿ ಬಸಪ್ಪಶೆಟ್ಟರು

ಕಮಿಟಿ ಮೆಂಬರುಗಳು — ಮ॥ ಶ್ರೀ॥ ಗಳಾದ
1 ಎಂ ಎಂ ಸಿದ್ದೇಶ್ ಸಾಹೇಬರು,
7 ಜಿ ಈರಪ್ಪಶೆಟ್ಟಿ,
3 ಲಿಂಗಣ್ಣಶೆಟ್ಟಿ,
4 ಪುಟ್ಟಪ್ಪಶೆಟ್ಟಿ,
5 ಕಪನ್ನಯ್ಯಶೆಟ್ಟಿ,
6 ಎಸ್ ಬಸಪ್ಪಶೆಟ್ಟಿ,
7 ಕೆ ಸಂಕೆ ಯ್ಯಶೆಟ್ಟಿ,
8 ಎ ರಾಮಯ್ಯನವರು,
9 ಬಿ ದಾಸಪ್ಪನವರು,

ಇನ್ನು ಮುಂದೆ ಜನರನ್ನು ಚುನಾವಣೆ ಮಾಡಿಕೊಳ್ಳಲಿಕ್ಕೆ ಈ ಕಮಿಟಿಯವರಿಗೆ ಸ್ವತಂತ್ರ ಬಿಟ್ಟಿದೆ ಅಧ್ಯಕ್ಷರು, ಕಾರ್ಯದರ್ಶಿ ... ಬಿ ದಾಸಪ್ಪನವರು ಮತ್ತು ಕೆ ಕಪನ್ಯಯ ಶೆಟ್ಟರು ಕೂಡಿದ ಕಮಿಟಿಯು, ಈ ಶಾಖೆಯ ನಿಯಮಕ್ಕೆ ... ಅದರ ನಿಯಮಗಳನ್ನು ಮಾಡಿ ಕಮಿಟಿಯ ಸಮ್ಮತಕ್ಕೆ ಇಡಬೇಕೆಂದು ತೀರ್ಮಾನವಾಯಿತು ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಸಹಾಯಕ್ಕೆ ... ಕಪನ್ಯಯ ಶೆಟ್ಟಿ ಫ್ರೀ ರೀಡಿಂಗ್ ರೂಮಿಗೆ ಬೇಕಾದ ನಿಯಮಗಳನ್ನು ವಿಚಾರಿಸಲು ನೇಮಿಸಲ್ಪಟ್ಟರು. ಫ್ರೀ ರೀಡಿಂಗ್ ರೂಮಿಗೆ ಬೇಕಾದ ದಾನ (Donation) ವಸೂಲು ಮಾಡಲಿಕ್ಕಾಗಿ ಈ ಕೆಳಗೆ ನಮೂದಿಸಿದ ಮಹನೀಯರು ಚುನಾಯಿಸಲ್ಪಟ್ಟರು

ಮ॥ ಶ್ರೀ॥ ಗಳಾದ ಜಿ ಈರಪ್ಪಶೆಟ್ಟಿ, ಎ ಲಿಂಗಣ್ಣಶೆಟ್ಟಿ ಕೆ ಕಪನ್ಯಯಶೆಟ್ಟಿ ಪಿ ಪುಟ್ಟಪ್ಪಶೆಟ್ಟಿ ಫ್ರೀ ರೀಡಿಂಗ ರೂಮಿಗೆ ... ವಸ್ತುಗಳನ್ನು ತರಿಸುವದಾಗಿ ... 33 ರೂಪಾಯಿಗಳನ್ನು ಕೊಡುವದಾಗಿ ವಾಗ್ದಾನವಾಯಿತು. ಸಭಾಧ್ಯಕ್ಷರಿಗೆ ವಂದನೆಯನ್ನು ಅರ್ಪಿಸಿ ಮೀಟಿಂಗು ಮುಕ್ತಾಯವಾಯಿತು.

ಅಕ್ಟೋಬರ್ ತಾ॥ 8 ರಲ್ಲು ಪಾಲೇರಿ ನಾಡಿನ ಮತ್ತು 9 ರಲ್ಲು ಮಡಿಕೇರಿ ನಾಡಿನ ಮೀಟಿಂಗು ನಡೆದ ... ಈ ವರ್ತಮಾನಗಳು ಮುಂದಿನ ವಾರಕ್ಕೆ ಪ್ರಕಟಿಸಲ್ಪಡುತ್ತವೆ.

ಅಕ್ಟೋಬರ್ ತಾ 21 ರಲ್ಲು ಕಗ್ಗೋಡು ದೇವಸ್ಥಾನದಲ್ಲಿ, ... 2 ಗಂಟೆಗೆ ... ನಾಡಿಗೆ ಒಂದು ಕಮಿಟಿಯನ್ನು ಏರ್ಪಡಿಸುವ ನಿಮಿತ್ತ ... ಒಂದು ಮೀಟಿಂಗ್ ನಡೆಯುವದು. ... ನಾಡು ಗ್ರಾಮಸ್ಥರು ... ಬರಬೇಕಾಗಿ ಕೋರಿಕೆ

ತಾ 7 10 23 ರಲ್ಲು ನಡೆದ ಜಮೀನ್ದಾರರ ಸಂಘದ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸ್

---

1 ಮೀಟಿಂಗಿಗೆ ಹಿಂದಿನ ಮೀಟಿಂಗಿನ ನಿರ್ಣಯಗಳನ್ನು ... ಓದಲಾಯಿತು ... ವೈಸರಾಯರು ಸಂಘದ ಪ್ರತಿನಿಧಿಗಳಿಗೆ ... ಭೇಟಿ ಕೊಡಲು ... [illegible]

2 ... [illegible]

ನೋಡಿ ಇನ್ನೊಂದು ಕಮಿಟಿ ಮೀಟಿಂಗಿನೊಳಗೆ ರಿಪೋರ್ಟ್ ಮಾಡಬೇಕೆಂ" ತ ತೀರ್ಮಾನವಾಯಿತು

3 ಕೆಲವು ಮೆಂಬರುಗಳಿಂದ ಜನರಲ್ ಮೀಟಿಂಗ್ ಜರಗಬೇಕೆಂತ ಬಂದ ಕಾಗದವನ್ನು ಓದಿ, ಈ ವಿಷಯ ನಾಳೆ ಇತ್ಯರ್ಥಮಾಡಬೇಕೆಂತ ಪ್ಯಾಸಲಾಯಿತು

4. "ಕೊಡಗು" ಪತ್ರಿಕೆಯ ಕಾವೇರಿ ಸಂಕ್ರಮಣದ ವಿಶೇಷ ಸಂಚಿಕೆಯೊಂದನ್ನು ಪ್ರಕಟಿಸಿ ಯಾತ್ರಿಕರಿಗೆ ಮುಫತ್ತಾಗಿ ಹಂಚಲು ಸಂಘದಿಂದ 100 ರೂ ಗೆ ಮೀರದೆ ಕೊಡಬಹುದೆಂತ ಪ್ಯಾಸಲಾಯಿತು

ತಾ|| 8—10—23 ರಲ್ಲಿ ಮುಂದರಿಸಿದ ಮೀಟಿಂಗಿನಲ್ಲಿ ಆದ ಪ್ರೋಸೀಡಿಂಗ್ಸ್.

1 ಕಮಿಶನರ್ ಸಾಹೇಬರ ತಾ|| 8—10—23 ರ ಕಾಗದ ಓದಿನೋಡಿ ಸಂಘದ ಡೆಪ್ಯುಟೇಶನಿನ ವಂದನಾಪತ್ರ ವನ್ನು ಬದಲಾಯಿಸಿಕೊಂಡು ಭೇಟಿಗೆ ಹೋಗಬಹುದೆಂತ ತೀರ್ಮಾನವಾಯಿತು

2 ಪ್ರೆಸಿಡೆಂಟ್, ಜನರಲ್ ಸೆಕ್ರೆಟರಿ ಮತ್ತು ಮೆ|| ಪಿ ಐ ಬೆಳ್ಯಪ್ಪ ಮತ್ತು ಮೆ|| ಒಕ್ಕಲ್ಲಿಂತ್ರ ಬೆಳ್ಯಪ್ಪನವರು ಸೇರಿ ವಂದನಾಪತ್ರದಲ್ಲಿ ಬೇಕಾದ ಬದಲಾವಣೆಗಳನ್ನು ಮಾಡಬಹುದೆಂತ ತೀರ್ಮಾನವಾಯಿತು

3. ಹೋಗತಕ್ಕ ಪ್ರತಿನಿಧಿಗಳು ಮೊದಲು ಚುನಾಯಿಸದೇ ಇದಬೇಕೆಂತ ಪ್ಯಾಸಲಾಯಿತು

4 ವಂದನಾಪತ್ರವನ್ನು ಸಂಘದ ಖರ್ಚಿನಿಂದ ಪ್ರಿಂಟ್ ಮಾಡಿಸಬಹುದೆಂತ ತೀರ್ಮಾನವಾಯಿತು

5. ಸಂಘದ ಜನರಲ್ ಮೀಟಿಂಗನ್ನು ವೀರರಾಜಪೇಟೆಯಲ್ಲಿ ಡಿಸೆಂಬರಿನಲ್ಲಿ ಶೀಘ್ರದಲ್ಲೇ ನಿಶ್ಚೈಸುವ ತಾರೀಕಿನಲ್ಲಿ ಮಾಡಬೇಕೆಂತ ತೀರ್ಮಾನವಾಯಿತು,

ಸಂಘದ ಜನರಲ್ ಮೀಟಿಂಗ್ ಆದನಂತರ ವಿದ್ಯಮಾನಗಳು ಬಹಳವಾಗಿ ಬದಲಾಗಿರುವದರಿಂದ ಡೆಪ್ಯುಟೇಶನನ್ನು ಕಳುಹಿಸುವ ಜವಾಬ್ದಾರಿಯನ್ನು ಕಮಿಟಿಯವರೇ ವಹಿಸಿಕೊಂಡಿದ್ದಾರೆಂತ ಮೀಟಿಂಗ್ ಮಾಡಬೇಕೆಂತ ಬದವರಿಗೆ ತಿಳಿಸಬೇಕೆಂತ ಪ್ಯಾಸಲಾಯಿತು

ಕೆ ಕುಟ್ಟಯ್ಯ,
ಪ್ರೆಸಿಡೆಂಟ್

ಕೋ ಆಪರೇಟಿವ್ ಸೆಂಟ್ರಲ್ ಬ್ಯಾಂಕ್ ಡೈರೆಕ್ಟರುಗಳ ತಾ|| 8—10—23 ಆ ಮೀಟಿಂಗಿನ ಪ್ರೊಸೀಡಿಂಗ್ಸ್

1 ಸೆಪ್ಟಂಬರ್ ತಿಂಗಳ ಜಮಾ ಖರ್ಚು ಓದಲಾಯಿತು

ಹಳೆಸಿಲ್ಕು	7611—8—10
ಜಮಾ	3019—4—5
ಒಟ್ಟು	10630—13—3
ಖರ್ಚು	2932—5—0
ಜಾತಾ ಬಾಕಿ	7698—8—3

2. ಬ್ಯಾಂಕಿನ ಉಪಯೋಗಕ್ಕೆ ಒಂದು (ಸೇಫ್) ಪೆಟ್ಟಿಗೆಯನ್ನು ಸರಕಾರದಿಂದ ಕೊಟ್ಟದ್ದಕ್ಕು ಅದನ್ನು ಖಜಾನೆ ಕೊಠಡಿಯಲ್ಲಿ ಇಡಲಿಕ್ಕೆ ಅನುಮತಿ ಕೊಟ್ಟದ್ದಕ್ಕು ಕಮಿಶನರ್ ಸಾಹೇಬರಿಗೆ ಬ್ಯಾಂಕಿನ ವಂದನೆಯನ್ನು ಒಪ್ಪಿಸಬೇಕು

3 ಬಿಳುಗುಂದ ಸಂಘದವರು ಹಣ ಕಟ್ಟಲು ಹೆಚ್ಚಿನ ವಾಯಿದೆ ಬೇಕೆಂತ ಬರಕೊಂಡ ಕಾಗದ ಓದಲಾಯಿತು ಈ ಸಂಘವನ್ನು ಡೈರೆಕ್ಟರು ಮೆ|| ಕೋಟೆರ ಚಿಣ್ಣಪ್ಪನವರು ಸಂದರ್ಶಿಸಿ ಬರೆದ ರಿಪೋರ್ಟಿನ ನಕಲನ್ನು ನೋಡುವವರೆಗೆ ಈ ವಿಷಯ ಪ್ಯಾಸಲ್‌ಮಾಡಕೂಡದೆಂತಲೂ, ಅವರಿಗೆ ಆ ರಿಪೋರ್ಟನ್ನು ಯಾಕೆ ಕಳುಹಿಸಲಿಲ್ಲವೆಂತ ಕೇಳಬೇಕೆಂತಲೂ ಪ್ಯಾಸಲಾಯಿತು.

4. ಕೊಡ್ಲಿಪೇಟೆ ಸಂಘಕ್ಕೆ ತಿಂಗಳಿಗೆ 100 ರೂ ಮತ್ತು ಬಡ್ಡಿ ವಾಪಸುಮಾಡುವ ಶರತ್ತಿನಿಂದ 1000 ರೂ ಮಂಜೂರಾಯಿತು

5. ಹೆಬ್ಬಾಲೆ ಸಂಘಕ್ಕೆ ಎರಡುವರ್ಷ ಕಂತಿನಿಂದ ವಾಪಸುಮಾಡುವ ಶರತ್ತಿನಿಂದ 1000 ರೂ. ಮಂಜೂರಾಯಿತು

6 ನಾಕತ್ತೂರು ಸಂಘಕ್ಕೆ 31—3—24 ರ ವಳಗೆ ವಾಪಸುಮಾಡುವ ಶರತ್ತಿನಿಂದ 300 ರೂಪಾಯಿ ಮಂಜೂರಾಯಿತು

7. "ಕೊಡಗು" ಪತ್ರಿಕೆಗೆ ಕೊಡುವ ಚಾರ್ಜನ್ನು ರೂಪಾಯಿ 50 ಕ್ಕೆ ಇಳಿಸುವಂತೆ ಕೇಳಿಕೊಳ್ಳಬೇಕೆಂತ ಪ್ಯಾಸಲಾಯಿತು

8. "ಕೊಡಗು" ಕಂಪೆನಿಯ ಸಬ್ ಎಡಿಟರು ಬ್ಯಾಂಕಿನ ಬರವಣಿಗೆ ಕೆಲಸವನ್ನು ತಿಂಗಳಿಗೆ 5 ರೂ. ಭತ್ಯ ತೆಗೆದುಕೊಂಡು ಮಾಡುವಂತೆ ಕೇಳಿಕೊಳ್ಳಬೇಕೆಂತ ಪ್ಯಾಸಲಾಯಿತು.

9. 10—11—23 ರಲ್ಲಿ ಕಮಿಶನರ ಅಧ್ಯಕ್ಷತೆಯಲ್ಲಿ ಬ್ಯಾಂಕಿನ ಜನರಲ್ ಮೀಟಿಂಗ್ ಮಾಡಬೇಕೆಂತ ಪ್ಯಾಸಲಾಯಿತು

ಆ ಮೀಟಿಂಗಿನ ದಿನ ಒಂದು ಟೀಪಾರ್ಟಿಯನ್ನು ಏರ್ಪಡಿಸಲಿಕ್ಕೆ ಈ ಕೆಳಗಿನ ಕಮಿಟಿ ಏರ್ಪಾಡಾಯಿತು.

1. ಮೆ|| ಕೆ. ಬೆಂಗಪ್ಪನವರು ಖಾನ್ ಸಾಹೇಬ್,
2 ಮೆ|| ಕೆ ಎಚ್ ಸುಬ್ಬಯ್ಯರು,
3 ಮೆ|| ಯಂ ಭುಜಂಗರಾಯರು ಸೆಕ್ರೆಟರಿ,
4 ಮೆ|| ಎಮ್. ಎಮ್ ಚಿಣ್ಣಪ್ಪನವರು
5. ಸಿ ಯಚ್. ವೆಂಕಪ್ಪಯ್ಯನವರು.

ಸಿ ಯಚ್ ವೆಂಕಪ್ಪಯ್ಯ
ಗೌ ಕಾರ್ಯದರ್ಶಿ.

ಪತ್ರವ್ಯವಹಾರಗಳು.

ಬಾತ್ಮೀದಾರರು ಕಳುಹುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ [ಎಡಿಟರ್]

ಅಮ್ಮತ್ತಿಬಾರ ಸಂಘದ ಸ್ಪೆಶಲ್ ಕಾನ್ಫರೆನ್ಸ್.

ಮಹನೀಯರೆ

ಈ ವಿಚಾರದಲ್ಲಿ ನಾನು ಕೊಡಗು ಅಮ್ಮತ್ತಿಬಾರ ಸಂಘಕ್ಕೆ ಒಂದು ಬಹಿರಂಗ ಪತ್ರ ಬರೆದಿದ್ದೆನು. ಇದಕ್ಕೆ ಜನರಲ್ ಸೆಕ್ರೆಟರಿಯವರು ಕೊಟ್ಟ ಜವಾಬು ನನಗೆ ತೃಪ್ತಿಕರವಾಗಿಲ್ಲ ಈ ಮಧ್ಯೆ ಈ ಮೊದಲೇ ಸರಕಾರದವರು ಕೊಡುವುದಾಗಿ ಹೇಳಿದ ಕೌನ್ಸಿಲ್ ಮಂಜೂರಾಗಿ ಬಂದಿದೆ ಸಂಘದ ಎಗ್ಸೆಕ್ಯುಟಿವ್ ಕಮಿಟಿಯವರು ಒಡನೇ ಒಂದು ಜನರಲ್ ಮೀಟಿಂಗ್ ಸದ್ಯದ ಸ್ಥಿತಿಯನ್ನು ಜನರಲ್‌ಬಾಡಿಯವರಿಗೆ ವಿವರಿಸಿ ತಕ್ಕ ಸಮಜಾಯಿಸಿ ಕೊಡಲಿಕ್ಕೆ ಮಾಡಲು ತೀರ್ಮಾನಿಸಿದ್ದಾರೆ ಅದ್ದರಿಂದ ಇವರ ಸಮಜಾಯಿಸಿ ತಿಳಿದ ನಂತರ ಜನರಲ್ ಮೀಟಿಂಗಿನಲ್ಲಿ ತಕ್ಕ ಜವಾಬು ಕೊಡಲು ತಯ್ಯಾರಿರುವುದರಿಂದ ಪತ್ರಿಕೆಯಲ್ಲಿ ಈ ವಿಚಾರ ಬರೆಯುವುದನ್ನು ಬಾಕಿ ಮಾಡುತ್ತೇನೆ ಜನರಲ್‌ಬಾಡಿಯವರು ಮೀಟಿಂಗ್‌ವರೆಗೆ ಕಾಯುವುದು ಒಳ್ಳೇದು ಕೆ ಪಿ ಚಿಣ್ಣಪ್ಪ

ಅಯ್ಯ ಸಂಪಾದಕರೆ,

ತಮ್ಮ ಜುಲೈ ತಾರೀಖು 27 ನೇ ಪತ್ರಿಕೆಯಲ್ಲಿ ವಾ|| ಗಣಪತಿ ಎಂಬವರ ಪತ್ರವನ್ನು ನೋಡಿದ ವಾಚಕಮಹನೀಯರಿಗೆ ಶೋಚನೀಯವಾಗದಿರದು

ವಾ|| ಗಣಪತಿಯವರೆ ನಿಮ್ಮ ಲೇಖನದಲ್ಲಿ ಬಾಡಗನ್ನೂರಿಗಾಗಿ ಮೆ|| ಕೊಂಗಂಡ ಮೇದಪ್ಪನವರು ಮಹನೀಯರಿಂದ 4100 ಚಂದಾ ಎತ್ತಿ ತಂದರೆಂದೂ ಅದನ್ನು ನನ್ನ ಸ್ವಾಧೀನದಲ್ಲಿ ಇಟ್ಟಿರುತ್ತಾರೆಂದೂ ಲೇಖಿಸಿರುವದು ಸರಿಯಷ್ಟೆ ಈ ಸಂಗತಿ ನನಗೆ ಆಶ್ಚರ್ಯವನ್ನುಂಟುಮಾಡಿದೆ. ನನ್ನಲ್ಲಿ ಅಂಥ ಹಣವನ್ನು ಯಾರು ಇಟ್ಟಿರುವದಿಲ್ಲವಲ್ಲ ನಾನು ಆಶ್ಚರ್ಯಪಡುತ್ತೇನೆ ಇಟ್ಟಿರುತ್ತೇವೆ ಎಂಬುದು ಯಾರ್ಯಾರು? ಅಲ್ಲ ನೀವೋ ಎಂಬುದನ್ನು ನಿಜಸಂಗತಿ ತಿಳಿಸಿ ಚಂದಾ ಎತ್ತಿ ತಂದವರು ಅಂಥಾ ಹಣವನ್ನು ಸದುಪಯೋಗ ಪಡಿಸುವರೇ ಇಟ್ಟುಕೊಳ್ಳಲು ಯೋಗ್ಯತೆಯುಳ್ಳವರಲ್ಲವೆಂಬುದೆ ನಿಮ್ಮ ಲೇಖನಿಯು ವ್ಯಕ್ತಪಡಿಸುತ್ತದೆಯಲ್ಲ ಇದು ನ್ಯಾಯವೇ? ಹಾಗೆ ಒಂದುವೇಳೆ ಸದುಪಯೋಗಕ್ಕೆಂದು ಹಣ ತಂದಿದ್ದ ಪಕ್ಷ ಸ್ಕೂಲಿನ ಉಪಯೋಗಕ್ಕೆ ಒದಗಬೇಕಾಗಿತ್ತು ಇಲ್ಲವೆ ಅಂಥಾ ಹಣವನ್ನು ದುರುಪಯೋಗಪಡಿಸದೇ ಚಂದಾ ಕೊಟ್ಟ ಮಹನೀಯರು ಯೋಚಿಸಿಕೊಳ್ಳಲಿ ನನ್ನಲ್ಲಿ ಹಣ ಇಟ್ಟಿರುತ್ತೇವೆ ಎಂಬುದು ಸುಳ್ಳುವಾರ್ತೆಯಾಗಿದೆ ಗ್ರಾಮಕ್ಕೆ ಸ್ಕೂಲು ಸ್ಥಾಪಿಸಿಕೊಡಲು ಕೊಂದರೆ ತೆಗೆದುಕೊಂಡ ಕುಟ್ಟಪ್ಪನವರ ಮೇಲೆಯೂ ಸುಳ್ಳನ್ನು ಪ್ರಚಾರಪಡಿಸಿದಂತೆ ಗ್ರಾಮದ ಪಟೇಲನಾಗಿಯೂ ಸ್ಕೂಲ್ ಪಂಚಾಯತನಾಗಿಯೂ ಇರುವ ನನ್ನ ಮೇಲೆಯೂ ಇಂಥಾ ಸುಳ್ಳು ಬಾತ್ಮಿಯನ್ನು ಹೊರಡಿಸಿದವರು ಯಾರೆಂಬುದನ್ನು, ವಾ|| ಗಣಪತಿ ಎಂಬವರು ನ್ಯಾಯವಾಗಿ, ತಿಳಿಸಬೇಕು ಮತ್ತು ಸ್ಕೂಲು ಕಟ್ಟಡದ ಖರ್ಚು ಪಟ್ಟಿಯನ್ನೂ, ನನ್ನಲ್ಲಿ ಹಣ, ಇಟ್ಟಿರುತ್ತೇವೆ ಎಂಬುದನ್ನು ಈ ಪತ್ರಿಕೆಯ ಮೂಲಕ ನೀವು ಸರಿಯಾದ ನಿಜವನ್ನು ಪ್ರಕಟಿಸದೆ ಹೋದಪಕ್ಷ ಪತ್ರಿಕೆ ಮೂಲಕ ಕ್ಷಮೆ ಕೇಳಿಕೊಳ್ಳುವದು ಇಲ್ಲವೆ ಸುಳ್ಳು ಯೋಚನೆಯ ಬಾತ್ಮಿಯನ್ನು ಹೊರಡಿಸಿದಕ್ಕೆ ತಕ್ಕ ಪ್ರತೀಕಾರವನ್ನು ಕೊಡಲು ಆಲೋಚಿಸಲಾಗುತ್ತ ಎಚ್ಚರಿಸಿದೆ. ಕೆ ಕಾರ್ಯಪ್ಪ

ಅಯ್ಯ,

ಕಳೆದ ಸೆಪ್ಟಂಬರ ತಿಂಗಳು ತಾರೀಖು 20 ನೇ ಗುರುವಾರದದಿನ ವೆಸ್ಲಿಯನ್ ಮಿಶನಿನ ಸುಪರಿಂಟೆಂಡೆಂಟರು, ಮೈಸೂರಿನಿಂದ ಆನಂದಪುರಕ್ಕು ಅಲ್ಲಿಂದ ಮಡಿಕೇರಿಗೂ ದಯಮಾಡಿದ್ದರು ಸುಪರಿಂಟೆಂಡೆಂಟರ ಆಗಮನವು ಕೆಲವು ಮಂದಿ ಸಭಿಕರಿಗೆ ಮಾತ್ರ ತಿಳಿಸಲ್ಪಟ್ಟದ್ದು ಇತರರಲ್ಲಿ ಬಹು ಕುತೂಹಲಕ್ಕೆ ಕಾರಣವನ್ನುಂಟುಮಾಡಿತು ಸಾಹೇಬರವರು ಮಡಿಕೇರಿಗೆ ಬಂದ ದಿನದ ಸಾಯಂಕಾಲದಲ್ಲಿಯೇ ಕೆಲವು ಸಭಿಕರನ್ನು ಮಾತ್ರ ಕರೆಯಿಸಿ, ಸಭಿಕರು ವೆಸ್ಲಿಯನ್ ಮಿಶನ್ ಕೊಡಗಿಗೆ ಕಾಲಿಡುವ ಮುಂಚಿತವಾಗಿಯೇ, ತಮ್ಮ ಸ್ವಂತಖರ್ಚಿನಿಂದ ಸಭೆಯು ಖರ್ಚಿಗಾಗಿಯೂ, ಬಂಡ ಒಳ್ಳೇದಕ್ಕಾಗಿಯೂ, ಆಮಾಯಿಸಲ್ಪಟ್ಟ ಹಣದ ಲೆಕ್ಕಾಚಾರವನ್ನು ವಿಚಾರಿಸಿ, ಆ ಲೆಕ್ಕಾಚಾರವನ್ನು ತನಗೆ ಒಪ್ಪಿಸಬೇಕೆಂದು ಹೇಳಿದರು. ಕೊಡದವರಿಗೆ ಸದ್ರಿ ಲೆಕ್ಕಾಚಾರವನ್ನು ಒಪ್ಪಿಸಲು ಯಾವ ನ್ಯಾಯವೂ ಕಾಣದ್ದರಿಂದ ಆ ಲೆಕ್ಕಾಚಾರವನ್ನು ಒಪ್ಪಿಸಲೊಲ್ಲದಕ್ಕೆ ಮಾರನೆಯ ಆದಿತ್ಯವಾರ ಸಾಹೇಬರವರಲ್ಲಿ ಸುಪರಿಂಟೆಂಡೆಂಟರು! ಅದೇ ತಾರೀಖು 23 ರಲ್ಲಿ ಕಮಿಶನರ್ ಸಾಹೇಬರವರು ಸಭೆಯು ಒಡೆಯುವವರೆಲ್ಲರನ್ನು ವಿಚಾರಿಸಿದ್ದು, "ವೆಸ್ಲಿಯನ್ ಮಿಶನಿಗೆ ಸಭಿಕರು ಕೂಡಿಸಿದ ಸ್ವಂತ ಹಣದ ಲೆಕ್ಕಾಚಾರವನ್ನು ಕೊಡಕೂಡದು" ಎಂದು ಪಂಚಾಯಿತಿದಾರರ ತೀರ್ಮಾನವಾಗಿರುವುದರಿಂದ ತಾನು ಆ ಲೆಕ್ಕಾಚಾರವನ್ನು ಕೊಡಲಿಕ್ಕಾಗುವದಿಲ್ಲವೆಂಬೀರೀತಿಯಾಗಿ ತಿಳಿದರು ಅನಂತರ ಮಾರನೆ ದಿನವೇ ಸುಪರಿಂಟೆಂಡೆಂಟರು ಮೈಸೂರಿಗೆ ಹಿಂತಿರುಗಿದರು

2 ಸುಪರಿಂಟೆಂಡೆಂಟರು ತಾನು ಪ್ರವರ್ತಿಸಬೇಕಾದ ಧರ್ಮವನ್ನು ಮರೆತಿದ್ದು ಮೇಲ್ಕಂಡ ಹಣದ ವಿಚಾರಣೆಗೋಸ್ಕರವೇ ಮೈಸೂರಿನಿಂದ ಮಡಿಕೇರಿಗೆ ಬಂದಂತೆ ತೋರುತ್ತದೆ ತಮ್ಮ ಮೇಲ್ವಿಚಾರಣೆಗೊಳಪಟ್ಟ ಸಭೆ, ಶಾಲೆ ಇನ್ನು ಇತರ ಸಭಿಕರ ಚಲನವಲನಗಳನ್ನು ಗೋಚರಕ್ಕೆ ತಾರದೆ, ಸಭೆಯುವರಲ್ಲಿರುವ ಅಲ್ಪಸ್ವಲ್ಪ ಹಣದಕಡೆಗೆ ವಿಶೇಷ ಲಕ್ಷ್ಯವಿಟ್ಟಂತೆ ತೋರುತ್ತದೆ ವೆಸ್ಲಿಯನ್ ಮಿಶನ್ ಪ್ರತಿನಿಧಿಗಳಾದ ಈ ಸುಪರಿಂಟೆಂಡೆಂಟರ ಧರ್ಮವು ಇದೆಯೋ? ಕೆಲವರನ್ನು ಮಿತ್ರರೋ ವಾದಿ ಇನ್ನು ಕೆಲವರನ್ನು ಶತ್ರುಗಳೋಪಾದಿ ಕಂಡು ಸಭೆಯೊಳಗೆ ಭೇದವನ್ನು ಉಟ್ಟುಸಿದ್ದೇ ಮೇಲ್ಕಂಡ ಕೂಟದ ಫಲಿತಾಂಶವಾಗಿದೆ ಎಂದು ತಿಳಿಸುವರೆ ಬಹು ವ್ಯಸನ ಪಡುತ್ತೇವೆ ಇದೀಗ ಸಭಾ ಭೋದನೆಯ ಫಲಿತಾಂಶವು ಇತಿ

ಮಡಿಕೇರಿ ಕ್ರೈಸ್ತ ಸಹೋದರರೆಲ್ಲರು

ಸ್ಕಾಲರ್‌ಶಿಪ್ ಮತ್ತು ಫ್ರೀಶಿಪ್

ಅಯ್ಯ,

ಮೊದಲು ಕೆಳಗಿನ ಕ್ಲಾಸುಗಳಲ್ಲಿ ಯಾರ್ಯಾರಿಗೆ ಫ್ರೀಶಿಪ್ ಮತ್ತು ಸ್ಕಾಲರಶಿಪ್ ಸಿಕ್ಕುತ್ತಿತ್ತೋ ಅವರು ಮುಂದಿನ ತರಗತಿಗೆ ಪಾಸಾದರೆ ಅದೇ ನಿಯಮವನ್ನೇ ಅನುಸರಿಸುತ್ತಿದ್ದರು ಮುಖ್ಯವಾಗಿ ಫ್ರೀಶಿಪ್ ಮತ್ತು ಸ್ಕಾಲರ್‌ಶಿಪ್‌ಗಳನ್ನು ಯೋಗ್ಯವಾದ ಬಡ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದರು, ಆದರೆ ಈ ವರ್ಷವಾದರೋ ಅಂಥಾ ಬಡ ವಿದ್ಯಾರ್ಥಿಗಳಿಗೆ ಇಷ್ಟು ಮಂಜೂರಾಗಲಿಲ್ಲವೆಂದು ತಿಳಿಯಬಂದಿದೆ ಇದು ಯಾತಕ್ಕೋಸ್ಕರವೆಂದು ತಿಳಿಯುವುದಿಲ್ಲ. ಬಡವರಾದ ಜನ, ಮುಂದಕ್ಕೆ ಮಕ್ಕಳಿಗೆ ವಿದ್ಯೆಯನ್ನು ಕಲಿಸಲಿಕ್ಕೆ ಬಹಳ ಕಷ್ಟವಾಗಿದೆ ಆದುದರಿಂದ ಇದರ ಕಾರಣವನ್ನು ಸ್ಕೂಲು ಅಧಿಕಾರಿಗಳು ದಯವಿಟ್ಟು ತಿಳಿಸಿದರೆ ಬಹಳ ಅನುಕೂಲವಾಗುತ್ತದೆ. "ಬಡವಂದ"

ಪ್ರಿಯಸಂಪಾದಕರೆ,

ಸೆಪ್ಟಂಬರ್ ತಾರೀಖು 28ನೇ "ಕೊಡಗು" ಪತ್ರಿಕೆಯಲ್ಲಿದ್ದ "ಕೊಡಗಿನಲ್ಲಿ ಔಷಧಿಯ ಮೂಲಕ ಜನರ ಕಷ್ಟ ಪರಿಹಾರ" ಎಂಬ ಲೇಖನವನ್ನು ಮನಕೊಟ್ಟು ಓದಿದೆನು

ನಿಮ್ಮ ಬಾತ್ಮೀದಾರರು ಸೂಚಿಸುವಂತೆ ಅಂಥಾ ಆಸ್ಪತ್ರೆಗಳು ಹಣದ ಪ್ರಶ್ನೆಯೇ ಕಷ್ಟತರವಾದದ್ದೆಂದು ನನಗೂ ತೋರುತ್ತದೆ ಯಾವ ಏರ್ಪಾಡನ್ನಾದರೂ ಜಾರಿಗೆ ತರುವಂತೆ ಮಾಡಬೇಕಾದರೆ ಅದಕ್ಕೆ ಬೇಕಷ್ಟು ಹಣ ಒದಗಿಸಬೇಕು ಮತ್ತು ಎಲ್ಲಿಂದ ಹೆಚ್ಚು ತರಿಗೆ ಎತ್ತು ಮೊದಲು ಇಂಥಾ ಏರ್ಪಡಿಸ ಖರ್ಚನ್ನು ಕಡೇ ಕಾಸಿನವರೆಗೂ ಲೆಕ್ಕಹಾಕಿ ನೋಡಬೇಕು

ನೀವು ಮೆಡಿಕಲ್ ಮತ್ತು ವೆಟರಿನರಿ ಕೆಲಸಗಳನ್ನು ಬಿಟ್ಟಿರುವಂತೆ ಕಾಣುತ್ತದೆ ನಿಮ್ಮ ಅಭಿಪ್ರಾಯಗಳು ಒಟ್ಟಾರೆ ಹೀಗಿದೆಂದು ಹೇಳಬಹುದು

ಕೊಡಗಿನ ಪ್ರತಿ ಮೂರು ಗ್ರಾಮಗಳಿಗೊಬ್ಬ 25 1 35 ರೂ ಸಂಬಳದ ಮೆಡಿಕಲ್ ಏಜೆಂಟನ್ನು (ಉತ್ತಮರ ಕಾಂಪೌಂಡರ್) ಮತ್ತು 25—1—30 ರೂ ಸಂಬಳದ ಒಬ್ಬ ಪರದೇಶಾದ ಸೂಲಗಿತ್ತಿಯನ್ನು ಇಡಬೇಕು ಪ್ರತಿ ಏಜಂಟಿನ ಹತ್ತಿರ ಸಾಧಾರಣದ ಕಾಯಿಲೆಗಳಿಗೆ ಬೇಕಾಗುವ ಎಲ್ಲಾ ಔಷಧಿಗಳಿರಬೇಕು ಮತ್ತು ಇವರಿಬ್ಬರ ಖರ್ಚಿಗಾಗಿ ಪ್ರತಿಯೊಬ್ಬ ಗ್ರಾಮಸ್ಥನಿಂದ ಒಂದು ಭತ್ತ ಧಾನ್ಯ ವಸೂಲಿ ಮಾಡಬೇಕು

ನಮ್ಮ ಬಾತ್ಮೀದಾರರು ಮೊದಲನೆಯಲ್ಲಿ 40 ಏಜೆಂಟರುಗಳು ಕಡೆಗೆ 30 ಏಜೆಂಟರುಗಳು ಸಾಕೆಂದು ಹೇಳುವುದನ್ನು ನೋಡಿದರೆ ಅವರು ಖರ್ಚಿನ ಲೆಕ್ಕಹಾಕುವ ತೊಂದರೆ ತೆಗೆದುಕೊಳ್ಳಲಿಲ್ಲವೆಂತಲೇ ತೋರುತ್ತದೆ ಪ್ರತಿ ಮೂರು ಗ್ರಾಮಗಳಿಗೊಬ್ಬ ಏಜೆಂಟನ್ನು ಮತ್ತು ಒಬ್ಬ ಸೂಲಗಿತ್ತಿಯ ಪ್ರಕಾರ ಕೊಡಗಿನಲ್ಲಿರುವ 377 ಗ್ರಾಮಗಳಿಗೆ 126 ಏಜೆಂಟರುಗಳೂ ಅಷ್ಟೇ ಸೂಲಗಿತ್ತಿಯರೂ ಬೇಕಾಗುವುದು

ಇವುಗಳ ಆರಂಭದ ವಾರ್ಷಿಕ ಖರ್ಚು ಕೆಳಗೆ ಕಾಣಿಸಿದಷ್ಟಾಗುವುದು —

126×25×22+126×25×12=ರೂ 75 600 ಇದಕ್ಕೆ ಸಾಧಾರಣದ ಕಾಯಿಲೆಗಳಿಗೆ ಬೇಕಾಗುವ ಎಲ್ಲಾ ಔಷಧಿಗಳುಳ್ಳ ಒಂದು ಚಿಕ್ಕ ಡಿಸ್ಪೆನ್ಸರಿಯ ಖರ್ಚನ್ನು ಕೂಡಿಸುವುದು ಮುಖ್ಯವಾಗಿ ಬೇಕಾಗುವಷ್ಟು ಕ್ವಯನೈನ್ ಪುಕ್ಕಟೆವಾಗಿ ಎಲ್ಲಾ ದಕ್ಕಿಂತಲೂ ಹೆಚ್ಚು ಬೆಲೆ ಶ್ರೀಮಂಗಲ ಆಸ್ಪತ್ರೆಯ ಲೆಕ್ಕವನ್ನು ಆಧಾರವಾಗಿ ತೆಗೆದುಕೊಂಡರೆ ಪ್ರತಿಯೊಂದು ಡಿಸ್ಪೆನ್ಸರಿಗೆ 1000 ರೂಪಾಯಿ ಬೇಕಾಗುವುದು, ಅಂದರೆ ಒಟ್ಟು 1 26 000 ರೂಪಾಯಿ ಆಗುವುದು ಇದಕ್ಕೆ ಏಜೆಂಟ್ ಮತ್ತು ಸೂಲಗಿತ್ತಿಯರಿಗೆ ಇರುವ ಮನೆಗಳ ಖರ್ಚು ಸಾದಿಲ್ವಾರು ಖರ್ಚು, ಧಾನ್ಯವನ್ನು ವಸೂಲಿ ಮಾಡಲಿಕ್ಕೆ ಬೇಕಾಗುವ ಖರ್ಚು ಮತ್ತು ಬೇರೆ ಚಿಲ್ಲರೆ ಖರ್ಚುಗಳು ಒಟ್ಟಾರೆ ಕಡ್ಮೆಪಕ್ಷ ಪ್ರತಿಯೊಂದು ಸ್ಥಳಕ್ಕೆ ವರ್ಷಕ್ಕೆ 100 ರೂ ಯಂತೆ 12 600 ರೂ ಕೂಡಿಸಬೇಕು ಹೀಗೆ ಒಟ್ಟು 75 600+1 26,000+12 600=ರೂ 2 14 200 ಕೊಡಗಿನ ಮೆಡಿಕಲ್ ಬಜೆಟ್ಟಿಗೆ ಸೇರಿಸಬೇಕಾಗುವುದು ಇಲ್ಲ! ಈಗಿನಂತೆ ಹೆಚ್ಚಾಗಿ ಮೆಡಿಕಲ ರಿಲೀಫ್ ಕೊಡಬೇಕಾದ ಪಕ್ಷದಲ್ಲಿ ಮೇಲೆ ಸೂಚಿಸಿದ ಏರ್ಪಾಡಿಗಿಂತ ಮಿತವ್ಯಯದಿಂದ ನಡಿಸತಕ್ಕದ್ದು ಇದೇ ವಿಷಯ ಬೇಗನೆ ಇನ್ನೊಂದು ಪತ್ರದಲ್ಲಿ ಸೂಚಿಸುವೆನು

[ಇದು ಇಂಗ್ಲೀಷು ಪತ್ರದ ಭಾಷಾಂತರ ಸಂ.] ಎಫ್ ಸಿ ಕ್ರೈಬಲ್ (ಸಿವಿಲ್ ಸರ್ಜನ್)

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ

	ರೂ
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,526
ಜಮಾ ಬಂದ ಠೇವಣಾತಿ	39,849

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 6½ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಖ್ಖ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು ಕೊಣಂದೆರ ಕುಟ್ಟಯ್ಯನವರು, ರಾಯ್ ಬಹದ್ದೂರ್

ಟ್ರೆಜರರ್ ಯಂ. ಭುಜಂಗರಾಯರು ಬಿ ಎ ಬಿ ಎಲ್.,

ಸೆಕ್ರೆಟರಿ.

ಸಿ ಯಚ್. ವೆಂಕಪ್ಪಯ್ಯನವರು ಬಿ. ಎ., ಎಲ್ ಟಿ

ತಾರೀಖು 1—9—1923.

Printed & Published by D S Krishnaswamiengar Proprietor, at Sreenivas Electric Press, Mysore "for Kodagu" Ltd. Mercara—19 10-1923

If not delivered please return to "Kodagu Office, Mercara" Reg. No. M. 1550.

ಕಾವೇರಿ ಜಾತ್ರೆಯ ವಿಶೇಷ ಸಂಚಿಕೆ

ಕೊಡಗು.

ಸತ್ಯೇನ ಧಾರ್ಯತೇ [illegible] ಸತ್ಯಮೇವ [illegible]

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು. "ಎಡಿಟರ್ ಸಂಪಾದಕ [illegible]"

ಕೊಡಗು, ಸನ್ ೧೯೩೩ ನೇ ಇಸವಿ ಅಕ್ಟೋಬರು ತಾರೀಖು ೧೮ ನೇಯ ಬುದವಾರ.

ದೇಶಸೇವೆಗಾಗಿ ಶ್ರೀ ಕಾವೇರಿಮಾತೆಯ ಅನುಗ್ರಹ ಪಡೆಯಿರಿ.

"ಕೊಡಗು"

೧೯೩೩ ನೇ ಇಸವಿ ಅಕ್ಟೋಬರ್ ತಾ|| ೧೮ನೇ ಬುಧವಾರ

ಕಾವೇರಿಜಾತ್ರೆ

ಹಿಂದೂ ಧರ್ಮವು ಇತರ ಎಲ್ಲಾ ಧರ್ಮಗಳಿಗಿಂತ ಬಹು ಸರ್ವೋತ್ಕೃಷ್ಟವಾದುದು. ಇತ್ತೀಚೆಗೆ ಪಾಶ್ಚಾತ್ಯರ ಸಹ ಸನಾತನ ಹಿಂದೂ ಧರ್ಮವನ್ನು ಪರೀಕ್ಷಿಸಿ ಅತ್ಯಾಸಕ್ತಿ ತೋರಿಸುವವರಾಗಿದ್ದಾರೆ. ಹಿಂದೂ ಧರ್ಮಕ್ಕೆ [illegible] ಆಧಾರವೆಂದು ಅನೇಕರು ತಿಳಿದುಕೊಂಡಿರುವರು. [illegible] ಗುಟ್ಟು ತಿಳಿಯಲು ಉಪನಿಷತ್ತುಗಳ [illegible] ವೇದೋಪನಿಷತ್ತುಗಳ [illegible] ಮಹಾತ್ಮರಿಂದಾಗಲೀ [illegible] ದಿವ್ಯಪುರುಷರಿಂದಾಗಲೀ ಬರೆಯಲ್ಪಟ್ಟ [illegible] ಅನೇಕ [illegible] ತಪಸ್ವಿಗಳು ಸಾಧಿಸಿದ [illegible] ಆದರೆ [illegible] ಒಂದೇ.

ಧರ್ಮವೇ ನಮ್ಮ ಮುಖ್ಯಧ್ಯೇಯವಾಗಿದೆ. ಸಮಾಜದಲ್ಲಿಯೂ ರಾಜಕೀಯ ಸಂಗತಿಗಳಲ್ಲಿಯೂ [illegible] ಗಳಲ್ಲಿಯೂ ಶಸ್ತ್ರಶಾಸ್ತ್ರದಲ್ಲಿಯೂ ಧರ್ಮವು ಹರಡಿಕೊಂಡಿದೆ. ಪಾಶ್ಚಾತ್ಯರ ಧರ್ಮವು ಎಲ್ಲಿ ಉಳಿದಿದೆ ಎಂದರೆ [illegible]ಗಳಲ್ಲಿ ಮಾತ್ರ; ರಣಾಂಗಣದಲ್ಲಿಲ್ಲ [illegible] ಸಮಾಜದಲ್ಲಂತೂ ಇಲ್ಲವೇ ಇಲ್ಲವೆಂದೆನ್ನಬೇಕು. [illegible] ಮಾರ್ಗವು ಪ್ರವೃತ್ತಿಮಾರ್ಗವು. ಇವರ ದೃಷ್ಟಿಯು [illegible] ಸುಖಸಮೃದ್ಧಿಯ ಕಡೆಗೆ. ನಮ್ಮ ಮಾರ್ಗವಾದರೋ ನಿವೃತ್ತಿಮಾರ್ಗ. ನಾನು ಯಾರು? [illegible] ಈ ಲೋಕದಲ್ಲಿ ಜನಿಸಿದ ಕಾರ್ಯವೇನಿದೆ ಇತ್ಯಾದಿ ಸಂಗತಿಗಳನ್ನು ನಿರ್ಧರಿಸಿ ನಿತ್ಯಾನಂದವನ್ನು ಪಡೆಯುವ ಮಾರ್ಗ. ಇಂಥಾ ಆನಂದವನ್ನು ಪಡೆಯಬೇಕಾದರೆ [illegible] ಜನ್ಮಗಳನ್ನೆತ್ತಿ ಯಮನನ್ನು [illegible] ಮಾಡಿಕೊಳ್ಳಬೇಕು. ಮುಮುಕ್ಷುಗಳಲ್ಲಿ ಅಗಿನ ಕಾಲಕ್ಕೆ ಶ್ರೇಷ್ಠನಾಗಿದ್ದ ನಾಚಿಕೇತನು ತಂದೆಯಿಂದ ತಿರಸ್ಕೃತನಾಗಿ ಯಮನಲ್ಲಿಗೆ ಹೋಗಿ, ಯಮನ ಉಪದೇಶದಿಂದ ವಿಮುಕ್ತನಾಗಲಿಲ್ಲವೇ? ಇಂಥಾ ಮಹನೀಯರ ಪವಿತ್ರ ಚರಿತ್ರೆಗಳಿಂದ ನಾವು ಸಹ ಮುಕ್ತಿಯನ್ನು ಸಂಪಾದಿಸಲು ಪ್ರಯೋಗಿಸಬಹುದು.

ಹಿಂದೂ ಮತದಲ್ಲಿ ಆಯಾಯ ಜನರಿಗೆ ಯೋಗ್ಯವಾದ [illegible] ಧರ್ಮಾಚರಣೆಯನ್ನು ಹಿರಿಯರು ನೇಮಿಸಿದರು. ಏನೂ ತಿಳಿಯದ ಮೂಢ ಜನರಿಗೆ [illegible] ಮಧ್ಯಸ್ಥಿತಿಯವರಿಗೆ ಆಚಾರವಿಚಾರಗಳನ್ನೂ [illegible]ವಂತರಿಗೆ ತತ್ವವಿಚಾರವನ್ನೂ, ಇವರು ಸಜ್ಜುಗೊಳಿಸಿದರು. [illegible] ರಾಮಾಯಣದಲ್ಲಿ ಎಲ್ಲಿಯೋ ಕಾಡಿನಲ್ಲಿ ರಾವಣ [illegible] ಕಥೆಯನ್ನು ಕೇಳುವವರು ಎಷ್ಟೋ ಮಂದಿ ಭಕ್ತಿಯಿಂದಲೂ, ಸ್ನೇಹದಿಂದಲೂ ಅದನ್ನು ಆರಾಧಿಸುವವರು [illegible], ರಾಮನು ಲಕ್ಷ್ಮಣನು, ಇವರು ಹತ್ತು [illegible]ಯಗಳೆಂಬ ರಥ [illegible] ಮಗನು, ಸೀತೆ ಎಂಬ ಮನವನ್ನು ಈಕೆಯು ಜೀವನವನ್ನು ಆಕೆಂದ್ರದಿಂದ ಹತ್ತು ಇಂದ್ರಿಯಗಳನ್ನು ಅಧೀನದಲ್ಲಿಟ್ಟುಕೊಳ್ಳದ ದಶಶಿರ (ರಾವಣ) ನ ಸ್ವಾಧೀನಳಾದಳು. ಅಂತ್ಯದಲ್ಲಿ ರಾವಣನನ್ನು ಕೊಂದು (ಇಂದ್ರಿಯಗಳನ್ನು ಜೈಸಿ) ಸೀತೆಯನ್ನು (ಮನಸ್ಸನ್ನು) ಸ್ವಾಧೀನಪಡಿಸಿಕೊಂಡ ರಾಮನು (ಆತ್ಮನು) ವಿರಾಜಿಸಿ ಎಂದು ಹಲವರು ಯೋಚಿಸುವರು. ಇದೀಗ ತತ್ವವಿಚಾರವು.

ಮುಕ್ತಿಯನ್ನು ಹೊಂದಲಿಕ್ಕೆ ಭಕ್ತಿಯೇ ಸುಲಭ ಸಾಧನವು. ಭಕ್ತಿಯು ಎರಡು ತೆರನಾಗಿದೆ: ಗೌಣ ಮತ್ತು ಪರ. ಗೌಣವೆಂದರೆ ಫಲವನ್ನಪೇಕ್ಷಿಸುವುದು, ಪರವೆಂದರೆ ಫಲಪೇಕ್ಷಿಸದ್ದು. ಎಂತಹ ಭಕ್ತಿಯನ್ನು ತೋರ್ಪಡಿಸಬೇಕಾದರೂ ನಮ್ಮ ಮುಂದೆ ಯಾವುದಾದರೊಂದು ವಿಗ್ರಹವಿರಬೇಕು. ಪ್ರಪಂಚದ ಎಲ್ಲಾ ಜಾತಿಜನರು ಒಂದು ವಿಧದಲ್ಲಲ್ಲದಿದ್ದರೆ ಮತ್ತೊಂದು ವಿಧದಲ್ಲಿ ವಿಗ್ರಹಾರಾಧಕರಾಗಿರುತ್ತಾರೆ. ಭಾರತೀಯರಿಗೆ ಆರಾಧನೆಗೆ ದೇವಾಲಯಗಳೂ ತೀರ್ಥಯಾತ್ರಾಸ್ಥಳಗಳಿವೆ. ಪಾಶ್ಚಿಮಾತ್ಯರಿಗೆ ಗುಡಿಗಳಿವೆ. ನಮ್ಮ ಗುಡಿಗಳಲ್ಲಿ ಆರಾಧಿಸುವ ವಿಗ್ರಹಗಳಿಗೆ ಒಪ್ಪಿಸುವೆವು. ಪಾಶ್ಚಿಮಾತ್ಯರು ಇವರಲ್ಲಿ [illegible] ಪ್ರೊಟೆಸ್ಟೆಂಟರು [illegible]ಗಳಲ್ಲಿ ಚಿತ್ರಗಳನ್ನಿಡದೆ ಹಾಗೆಯೇ ತಮ್ಮ ಪ್ರಾರ್ಥನೆಯನ್ನು [illegible]. ಹಿಂದುಗಳಿಗೆ ದೇವಾಲಯಗಳೇ [illegible] ಪಾಶ್ಚಿಮಾತ್ಯರ [illegible] ಪ್ರೇಮ. ಹಿಂದುಗಳ ಆರಾಧನೆಯು [illegible] ಆರಾಧನೆಯು [illegible] ಪಾಶ್ಚಿಮಾತ್ಯರ ಆರಾಧನೆಯು [illegible] ಆರಾಧನೆಯು ಹೇಗೂ ಇತ್ತಂಡದವರ ವಿಗ್ರಹಾರಾಧಕರೇ ಇರುತ್ತಾರೆ.

ಇದೀ ಹಿಂದೂ ದೇಶದಲ್ಲಿ ಜನರು ಮುಕ್ತಿಪಥವನ್ನು ಕಂಡ [illegible] ಅನೇಕ ಸ್ಥಳಗಳು [illegible] ಯಾತ್ರಾಸ್ಥಾನಗಳೂ ಇವೆ. [illegible] ದೇವಾಲಯಗಳು [illegible] ದಕ್ಷಿಣದಲ್ಲಿ ಶ್ರೀರಂಗ [illegible] ರಾಮೇಶ್ವರ [illegible] ದೇವಾಲಯ ಇರುವುದಲ್ಲದೆ ಉತ್ತರಕ್ಕೆ ಗಂಗೆಯೂ ದಕ್ಷಿಣಕ್ಕೆ ಕಾವೇರಿಯೂ ತೀರ್ಥಯಾತ್ರೆಗೆ ಪ್ರಖ್ಯಾತಿಹೊಂದಿದ್ದಾರೆ. ಗಂಗೆಯು ಹಿಮಾಲಯದ ಮಾನಸ ಸರೋವರದಲ್ಲಿ ಹುಟ್ಟಿರುವಳು. ಕಾವೇರಿಯು ಮಡಿಕೇರಿಯಿಂದ ಇಪ್ಪತ್ತೈದು ಮೈಲು ದೂರದಲ್ಲಿರುವ ಪಶ್ಚಿಮಘಟ್ಟಗಳಲ್ಲಿ ಅಡಗಿರುವ ಬ್ರಹ್ಮಗಿರಿಯಲ್ಲಿ ಉತ್ಪತ್ತಿಯಾದಳು. ಗಂಗೆಯು ಉತ್ತರದವರನ್ನು ಮತ್ತು ಕಾವೇರಿಯು ದಕ್ಷಿಣದವರನ್ನು ಪಾವನಮಾಡುತ್ತಿರುವ ಅಕ್ಕತಂಗಿಯರು. ಗಂಗೆಯು ಅಕ್ಕನಾದುದರಿಂದ ಸಾವಿರಾರು ಜನರನ್ನು ಉದ್ಧಾರಮಾಡುತ್ತಿರುವಳು. ಆದರೆ ಕಾವೇರಿಯು ತಂಗಿಯಾದುದರಿಂದ ಅಷ್ಟೊಂದು ಜನರನ್ನು ಉದ್ಧಾರಮಾಡದಿದ್ದರೂ, ನೂರಾರು ಜನರನ್ನಾದರೂ ಪಾವನಮಾಡುತ್ತಿರುವಳು. ಆದರೆ ಗಂಗೆಯು ಕಾವೇರಿಯನ್ನು ಎಂದೂ ಮರೆಯಲಾರಳಂತೆ. ತುಲಾಮಾಸದ [illegible] ಜನರು ಗಂಗೆಯಲ್ಲಿ ಮಿಂದು ಅವಳನ್ನು ಕಲುಷಿತಗೊಳಿಸಿದ್ದರಿಂದ ಗಂಗೆಯು ಪುನಃ ಕಾವೇರಿಯಲ್ಲಿ ತನ್ನ ಪಾಪವನ್ನು ಕಳೆಕೊಳ್ಳುವಳಂತೆ. ಆದುದರಿಂದ ಗಂಗೆಯೂ ಕಾವೇರಿಗೆ [illegible] ಭಾರಿಯಾಗಿರುತ್ತಾಳೆ. ಗಂಗೆಯ ದಡದಲ್ಲಿರುವಂತೆ ದೇವಾಲಯಗಳು ಕಾವೇರಿಯ ದಡದಲ್ಲಿಯೂ ಇವೆ. ಗಂಗೆಯಂತೆ ಕಾವೇರಿಯೂ ಸಹ ಆಯೋನಿಜೆ.

ಕಾವೇರಿಯು ಲೋಪಾಮುದ್ರೆಯೆಂಬ ಹೆಸರಿನಿಂದ ಬ್ರಹ್ಮಪುತ್ರಿಯು. ಈಕೆಯನ್ನು ಕಾವೇರಮುನಿಯು ಬ್ರಹ್ಮನಿಂದ ದತ್ತು ಪಡೆದನು. ಈಕೆಯು ಅಂಗುಷ್ಠಪ್ರಮಾಣದವಳಾದುದರಿಂದ ಅಂಗುಷ್ಠಪುರವಾಸೀ ಪತಿಯಾಗಬೇಕೆಂದು ತಪಸ್ಸುಮಾಡಿ ಅಗಸ್ತ್ಯಮುನಿಯನ್ನು ಲಗ್ನವಾದಳು. ಲಗ್ನವಾಗುವಾಗ ಅಗಸ್ತ್ಯನು ಇವಳನ್ನು ಯಾವ ಕಾಲದಲ್ಲೂ ಬಿಟ್ಟಿರಕೂಡದೆಂದೂ ಹಾಗೆ ಬಿಟ್ಟರೆ ಇವಳು ಅಗಸ್ತ್ಯನನ್ನು ಅಗಲಿ ಹೋಗಬಹುದೆಂದೂ ಇಬ್ಬರಿಗೆ ಒಪ್ಪಂದ ನಡೆದಿತ್ತು. [illegible]ವಾದ ನಂತರ ಅನ್ನಪೂರ್ಣೆ ಕಾಶಿಯಲ್ಲಿ ಜೀವಿಸುತ್ತಿದ್ದರು. ಆದರೆ ಕಾವೇರಿಯು ತಾನು ಯಾವ ರೀತಿಯಲ್ಲಿ ಲೋಕಕ್ಕೆ ಉಪಕಾರಮಾಡಲಿ ಎಂದು ಯೋಚಿಸುತ್ತಿದ್ದಳು. ಇತ್ತಲಾಗಿ ವಿಂಧ್ಯಪರ್ವತವು ದಿಕ್ಕುದೆಸೆ ತಪ್ಪಿ ಬೆಳೆದು ಬೆಳೆದು ಸೂರ್ಯನೇ ಕಾಣದಂತಾಯಿತು. ವಿಂಧ್ಯನು ಅಗಸ್ತ್ಯರ ಶಿಷ್ಯನು. ಈ ಕಾರಣದಿಂದ ದೇವತೆಗಳು ಅಗಸ್ತ್ಯನನ್ನು ವಿಂಧ್ಯನಿಗೆ ಇನ್ನು ಹೆಚ್ಚಿಗೆ ಬೆಳೆಯದಂತೆ ಆಜ್ಞಾಪಿಸುವಂತೆ ಬೇಡಿಕೊಂಡರು. ಅಗಸ್ತ್ಯನು ಪತ್ನೀ ಸಮೇತನಾಗಿ ವಿಂಧ್ಯನಲ್ಲಿಗೆ ಬಂದು ಅವನಿಗೆ ತಾನು ಹೀಗೆ ಇರಬೇಕೆಂದು ಆಜ್ಞಾಪಿಸಿ ದಕ್ಷಿಣಾಭಿಮುಖವಾಗಿ ಪ್ರಯಾಣಮಾಡುತ್ತಾ ಬ್ರಹ್ಮಗಿರಿಗೆ ತಲುಪಿ ಅಲ್ಲಿಯೇ [illegible] ಸಂಕಲ್ಪ ಅಲ್ಲಿಯೇ ವಾಸಮಾಡಿದನು. ಈ ಗಿರಿಯ ತಗ್ಗಿನಲ್ಲಿ ಕನಿಕೆಯು ವಾಸವಾಗಿದ್ದಳು. ಇವಳ [illegible] ಕನಿಕೆ [illegible] ಒಂದು ದಿನ ಅಗಸ್ತ್ಯನು ಕನಿಕೆಯ ಕಡೆಗೆ ಹೋದನು. ಕಾವೇರಿಗೆ ಇದೊಂದು ನೆವಸಿಕ್ಕಿತು. [illegible] ಮುನಿಯು ತನ್ನನ್ನು ಅಗಲಿ ಹೋದೊಡನೆ ತಾನು [illegible] ಕಂಡಿಗೆಯೊಳಗಿನಿಂದ ಮುಂದಕ್ಕೆ ಹರಿದು ಹೋದಳು. ಅಗಸ್ತ್ಯನು ತನ್ನ ಶಿಷ್ಯರೊಂದಿಗೆ ಕಾವೇರಿಯನ್ನು ಹಿಂಬಾಲಿಸಿದನು. ಆದರೆ ಈಕೆಯು ಮುನಿಯ ಕಣ್ಣಿಗೆ ಸಿಗಬಾರದೆಂದು ನಾಗರ ಹೊಟ್ಟೆಯೊಳಗೆ ನುಗ್ಗಿ ಬಂದಳು. ಇದಕ್ಕೆ ನಾಗತೀರ್ಥವೆಂದು ಹೇಳುತ್ತಾರೆ. [illegible] ಭಾಗವು [illegible] ಕನಿಕೆ [illegible] ಇಲ್ಲಿ ಕಾವೇರಿಯೊಡನೆ ಸಂಕಲಿತಳಾದ [illegible] ಈ ಸ್ಥಳ [illegible] ಭಾಗಮಂಡಲ [illegible] ವಲಂಬುರಿ [illegible] ಮುಂದೆ [illegible] ಕೊಡಗಿನವರು [illegible] ಮಾರ್ಗದಲ್ಲಿ ಹೋಗಕೂಡದೆಂದು ಕಾವೇರಿಯನ್ನು [illegible] ಬೇಡಿದಾಗ ಎಲ್ಲರಿಗೂ ಬಲಮುರಿಗೆ ಬನ್ನಿ ಎಂದು ಹೇಳಿ ಮುಂದೆ ಹರಿದಳು. ಬಲಮುರಿಗೆ ಈಕೆಯು ತಲುಪುವ ಕಾಲಕ್ಕೆ ಜನರೆಲ್ಲರೂ ಬಂದರು. ಆದರೆ ಅಮ್ಮ ಕೊಡಗರು ಮಾರಬಂದದ್ದರಿಂದ ಸೀರೆಯ [illegible] ಅಮ್ಮಂಗ [illegible] ಅರೋಕ್ಕ [illegible] ಕೊಡವ ನೂರೊಕ್ಕ [illegible] ತಿಂಕಿಯೊಳ್ ಎಂದು ಹೇಳಿ ಹೊರಟಳು. ಅಷ್ಟರೊಳಗೆ ಅಗಸ್ತ್ಯನು ಬಲಮುರಿಗೆ ತಲುಪಿ, ಕಾವೇರಿಯನ್ನು ಕಂಡು "ನಿಲ್ಲು ನಿಲ್ಲು" ಎಂದು ಘರ್ಜನೆ ಮಾಡಿದನು. ಕಾವೇರಿಯು ನಿಂತಳು ಮತ್ತು ಹೀಗೆಂದಳು: "ನಮ್ಮಿಬ್ಬರ ಒಪ್ಪಂದ ಮುರಿಯಿತು. ಆದುದರಿಂದ ನಾನು ನಿಲ್ಲಲಾರೆ, ಮುಂದರಿಯುತ್ತೇನೆ." ಆಗ ಅಗಸ್ತ್ಯನು — "ನೀನು ನನ್ನ ಪತ್ನಿ. ಆದುದರಿಂದ ನೀನು ಅರ್ಧವಾಗಿ ನನ್ನಲ್ಲಿದ್ದು ಇನ್ನು ಅರ್ಧಭಾಗವಾಗಿ ಹರಿದು ಲೋಕೋಪಕಾರ ಮಾಡು" ಎಂದು ನುಡಿದನು. ಅನಂತರ ಕಾವೇರಿಯು ಅರ್ಧವಾಗಿ ಹರಿದು ಹೋದಳು. ಅವಳ ದಡದಲ್ಲಿ ಬೇತರಿ, ಗುಹ್ಯ, ರಂಗಸಮುದ್ರ, ಮೈಸೂರಿಗೆ [illegible] ಸಿರಂಗಾಲ, ರಾಮನಾಥಪುರ [illegible] ಮುಂತಾದ ಅನೇಕ ದೇವಾಲಯಗಳು ನಿರ್ಮಿತವಾದವು. ಅಲ್ಲದೆ ದಕ್ಷಿಣದಲ್ಲಿ ವಿಖ್ಯಾತ ಶ್ರೀರಂಗವು ಕಾವೇರಿಯ ದಡದಲ್ಲಿಯೇ ಇದೆ. ಇದಿಷ್ಟು ಪುರಾಣ ವಿಚಾರವಾಯಿತು.

ಇನ್ನು, ಕಾವೇರಿಯ ವ್ಯಾಪಾರಣೆಯನ್ನು [illegible] ಕೆಲವು ಮಾತು. ಬ್ರಹ್ಮಗಿರಿಯಲ್ಲಿ ಪ್ರತಿವರುಷ ತುಲಾ

ವರ್ಷಂಪ್ರತಿ ದೊಡ್ಡ ಜಾತ್ರೆ ನಡೆಯುವುದು. ಈ ವರುಷ ಇದೇ ತಿಂಗಳು 17 ನೇ ತಾರೀಕಿಗೆ ಮಧ್ಯಾಹ್ನ 2½ ಗಂಟೆಗೆ ತೀರ್ಥೋದ್ಭವ. ಆ ದಿನ ನಾನಾ ಕಡೆಗಳಿಂದ ಜನರು ಬಂದು ನೆರೆಯುವರು. ತಂಜಾವೂರು, ತಿರುಚಿನಾಪಳ್ಳಿ, ಕಾವನಾಡು, ಮಲಬಾರು, ದಕ್ಷಿಣಕನ್ನಡ, ಉತ್ತರಕನ್ನಡ, ಮೈಸೂರು, ಮದ್ರಾಸು ಪ್ರಾಂತ್ಯಗಳಿಂದ ಅಸಂಖ್ಯಾತ ಜನರು ಕಾವೇರಿ ಜಾತ್ರೆಗೆ ದಯಮಾಡಿಸುವರು. ಪ್ರಯಾಗದಲ್ಲಿ ಪಿಂಡಪ್ರದಾನ ಮಾಡುವಂತೆ ಇಲ್ಲಿಯೂ ಮಾಡುವರು. ಈ ಕಾರ್ಯವು ಜಾತ್ರೆಗೆ ಒಂದೆರಡು ದಿನಗಳ ಮುಂಚೆ ನಡೆಯುವುದು. ಜಾತ್ರೆ ದಿನ ಕೊಡಗು ಜನರು ಬಟ್ಟಲಲ್ಲಿ ಅಕ್ಕಿಯನ್ನಿಟ್ಟು ಅದರಮೇಲೆ ತೆಂಗಿನ ಕಾಯಿಯನ್ನು ಅಥವಾ ಸೌತೆಕಾಯಿಯನ್ನು ಇರಿಸಿ, ನಂತರ ಅದನ್ನು ನಗಗಳಿಂದ ಅಲಂಕರಿಸಿ ಭಕ್ತಿಯಿಂದ ಪೂಜೆನಡೆಸುವರು. ಬ್ರಹ್ಮಗಿರಿಗೆ ಹೋಗಲಾರದವರು ಬಲಮುರಿಯಲ್ಲಿ ಸ್ನಾನಕ್ಕೆ ಹೋಗುವರು. ಇದೀಗ ಆ ದಿನದ ಆಚರಣೆ.

ಕಾವೇರಿಯು ಲೋಪಾಮುದ್ರೆಯೆಂಬ ನಾಮಾಂಕಿತದಿಂದಲೂ ಕರೆಯಲ್ಪಡುವಳು. ಈಕೆಯು ಮಹಾಶ್ರೇಷ್ಠ ಪತಿವ್ರತೆಯಾದುದರಿಂದ, ಇವಳ ಹೆಜ್ಜೆಯನ್ನನುಸರಿಸತಕ್ಕ ಭಕ್ತಿಯಿಂದ ಪೂಜಿಸಲ್ಪಡುವಳು. ಲೋಪಾಮುದ್ರೆಯು ಸಪ್ತಪತಿವ್ರತೆಯರಲ್ಲೊಬ್ಬಳು. ಈಕೆಯು ಗಂಡನ ಮೇಲೆ ಪ್ರೀತಿಯಿಲ್ಲದಂತೆ, ಜೈವಿನಿ ಭಾರತದಲ್ಲಿ ವರ್ಣಿತವಾಗಿರುವ ಚಂಡಿಯಲ್ಲ. ಗಂಡನ ಸೇವೆಯನ್ನು ತೃಪ್ತಿಕರವಾಗಿ ಮಾಡಿದ ಪತಿವ್ರತೆ ಗಂಡನ ಒಪ್ಪಂದದಮೇರೆ, ಜನರಿಗೆ ಉಪಕಾರ ಮಾಡುವ ಉದ್ದಿಶ್ಯದಿಂದ ಪತಿಯ ಅಪ್ಪಣೆಯಿಂದಲೆ ಎರಡಿಯಾದಳು.

ಇಂಥ ಮಹನೀಯಳ ಯಾತ್ರೆಗೆ ಅನೇಕರು ದುಸ್ಸಹವಾದ ಕಷ್ಟಗಳನ್ನು ಸಹಿಸಿಕೊಂಡು ಹೋಗುವರು. ತೀರ್ಥವು ಭಾಗಮಂಡಲದಿಂದ 5 ಮೈಲುದೂರದಲ್ಲಿರುತ್ತಾ, ಜನರು ನಿರಾಯಾಸದಿಂದ ದಾರಿಯನ್ನು ಸಾಗಿಸುವರು. ಆ ಪ್ರಾಂತ್ಯದ ಸೌಂದರ್ಯವನ್ನು ವಿವರಿಸಲು ರವೀಂದ್ರನಾಥ ಟಾಗೂರರಂತೆ ಕವಿಯೇ ಯೋಗ್ಯಪುರುಷನು.

ಹಿಂದೂ ದೇಶದ ಐಕ್ಯತೆಗಾಗಿಯೇ ತೀರ್ಥಗಳೂ, ಯಾತ್ರೆಗಳೂ ಆಗಿವೆಯೆಂದು ಯಾರು ತಾನೇ ಹೇಳಲಾರರು! ಯಾತ್ರೆಯಲ್ಲಿ ಜನರ ಸಾಮಾಜಿಕಸ್ಥಿತಿಯನ್ನೂ ಅವರ ಭಾವನೆಗಳನ್ನೂ ತಿಳಕೊಳ್ಳಬಹುದು. ಜಾತ್ರೆಯು ಒಂದು ಪ್ರದರ್ಶನದಂತಿರುವುದು. ಅಲ್ಲಿ ತರತರದ ಕಂಚಿನ ಪಾತ್ರೆಗಳನ್ನೂ, ಆಟದಸಾಮಾನುಗಳನ್ನೂ, ಇನ್ನೂ ಇತರ ಸಾಮಾನುಗಳನ್ನೂ, ಮಾರಾಟಕ್ಕೆ ಇಡುವುದರಿಂದ ಕೆಲಸಗಾರರು ಹೊಸ ಹೊಸ ಮಾದರಿಗಳನ್ನು ಕಲಿಯಲಿಕ್ಕೆ ಅವಕಾಶವಿದೆ. ಎಲ್ಲಕ್ಕಿಂತಲೂ ವಿಶೇಷವಾಗಿ, ಭಕ್ತಿಭಾವನೆಗಳು ಉದಯವಾಗುವುವು. ಮನುಷ್ಯನ ಅಹಂಕಾರವು ತಗ್ಗುವುದು; ಪ್ರಾಣಿದಯೆ ಸಮಾನತ್ವ, ಇತ್ಯಾದಿ ಗುಣಗಳು ಮನುಷ್ಯನಲ್ಲಿ ವೃದ್ಧಿಹೊಂದುವುವು. ಇಂಥಾ ಸುಗುಣಗಳನ್ನು ಪಡೆಯಲು ಅನುಕೂಲಿಸಿರುವ ಕಾವೇರಿಯನ್ನು ತಾಯಿಯೆಂದುಭಾವಿಸಿ, ಅವಳ ಆಶೀರ್ವಾದಕ್ಕೆ ನಾವು ಒಳಗಾಗೋಣ.

ಸಂಘದ ವಂದನಾಪತ್ರಕ್ಕೆ ಪುರಸ್ಕಾರ.

ಮೂರು ವಾರಗಳ ಹಿಂದೆ "ಸಂಘದ ಬಹುಮಾನ ಪತ್ರಕ್ಕೆ ತಿರಸ್ಕಾರ" ವೆಂದು ನಾವು ಬಹಳ ಮನೋವ್ಯಥೆಯಿಂದ ಬರೆದ ಅಗ್ರಲೇಖನದ ಅಂತ್ಯಭಾಗದಲ್ಲಿ ಸೂಚಿಸಿದ ನಮ್ಮ ಆಶೆಯು ಸಫಲವಾಯಿತು. ನ್ಯಾಯಮೂರ್ತಿಯಾದ ಲಾರ್ಡ್ ರೀಡಿಂಗ್ ಪ್ರಭುಗಳು ಜಮಾಬಂದಿದಾರರ ಸಂಘದ ಪ್ರತಿನಿಧಿಗಳಿಗೆ ಭೇಟಿ ಕೊಡಲು ಒಪ್ಪಿರುವರೆಂದು ತಿಳಿಯಬರುತ್ತದೆ. ವಂದನಾಪತ್ರವು ತಿರಸ್ಕರಿಸಲ್ಪಟ್ಟನಂತರ ಪ್ರೈವೇಟ್ ಸೆಕ್ರೆಟರಿಯವರಿಂದ ಈ ದೇಶಕ್ಕೆ ನ್ಯಾಯವಿಧಾಯಕಸಭೆ ಮಂಜೂರಾದುದರಿಂದ ದೇಶದ ಅಭಿಪ್ರಾಯವನ್ನು ಪ್ರತಿಬಿಂಬಿಸುವ ಜಮಾಬಂದಿದಾರರ ಸಂಘದ ಅಭಿಪ್ರಾಯವನ್ನು ತಿಳಿಯಲು ವೈಸರಾಯ ಪ್ರಭುಗಳಿಗೆ ಕುತೂಹಲವಿರಬಹುದು. ನಮ್ಮ ಅಭಿಪ್ರಾಯದಲ್ಲಿ ತನ್ಮಧ್ಯೆ ಕೌನ್ಸಿಲು ಮಂಜೂರು ಆಗದೆ ಇದ್ದಿದ್ದರೂ ಸಂಘದ ವಂದನಾಪತ್ರದ ಭಾಷಾಶೈಲಿಯನ್ನು ಬದಲಾಯಿಸಿ ತಂದಿದ್ದರೆ ಆಗಬಹುದೆಂತ ವೈಸರಾಯರು ತೀರ್ಮಾನಿಸುತ್ತಿದ್ದರೆಂದೇ ತೋರುತ್ತದೆ. "ಸಂಘಕ್ಕೆ ಸಿಕ್ಕಿದ ಅಪ್ಪಣೆಯಿಂದ ಸಂಘಕ್ಕೆ ಇನ್ನೂ ಬುದ್ಧಿ ಬರದ್ದರಿಂದ ವಂದನಾಪತ್ರವನ್ನು ತಿದ್ದಲಿಕ್ಕೆ ಇನ್ನೊಂದು ಅವಕಾಶ ಕೊಡಲು ಮೆ|| ಬಾರ್ಟನ್ ಸಾಹೇಬರವರು ಒಪ್ಪುವದಿಲ್ಲ" ಎಂತ ತಾ|| 22-9-23 ರಲ್ಲು ಬರೆದ ಕವಿಾಷನರವರೇ ತಾ|| 3-10-23 ರಲ್ಲಿ "ವಿದ್ಯಮಾನ ಬದಲಾದುದರಿಂದ ಸಂಘದ ಡೆಪ್ಯುಟೇಶನಿಗೆ ಭೇಟಿ ಕೊಡಲು ವೈಸರಾಯರು ಒಪ್ಪುತ್ತಾರೆ" ಎಂತಲೂ, ಮೊದಲನೇ ಪತ್ರದಲ್ಲಿ ದೇಶದ ಸಾಧಾರಣ ಅಭಿಪ್ರಾಯವನ್ನು ಸಂಘವು ಸೂಚಿಸುತ್ತದೆಂತ ಹೇಳಲಿಕ್ಕಾಗುವದಿಲ್ಲವಾದುದರಿಂದ ಸಂಘದ ಡೆಪ್ಯುಟೇಶನ್ ಅನಾವಶ್ಯವೆಂತ ಚೀಫ್ ಕವಿಾಷನರು ವೈಸಲು ಮಾಡಿದ್ದಾರೆಂತ ಬರೆದವರೇ, "ಸಂಘಕ್ಕೂ ಸರ್ಕಾರಕ್ಕೂ ಇದ್ದ ಸ್ನೇಹಸಂಬಂಧಗಳು ಪ್ರಸನ್ನವಾಗುವದರಿಂದ ಸಂತೋಷ ಪಡುತ್ತೇನೆಂತ ನಾನು ಸಂಪೂರ್ಣವಾಗಿ ನಂಬುತ್ತೇನೆ" ಎಂತ ಎರಡನೇ ಪತ್ರದಲ್ಲಿ ಬರೆದಿರುತ್ತಾರೆಂತ ಸಂಘದಿಂದ ತಿಳಿಯಬಂದಿದೆ. ಸಂಘಕ್ಕೆ ಬಂದ ತಾ|| 8-10-23 ರ ಕವಿಾಷನರವರ ಪತ್ರದ ತರ್ಜುಮೆಯನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು. ಚೀಫ್ ಕವಿಾಷನರವರ ಕೋಪಕ್ಕೆ ಗುರಿಯಾಗಿ ಶಿಕ್ಷಿಸಲ್ಪಟ್ಟ ಸಂಘವು ಶಿಕ್ಷೆಗೆ ಅರ್ಹವಾದದ್ದಲ್ಲವೆಂತ ವೈಸರಾಯರ ವೈಸಲಾಯಿತು. ಸಂಘದ ಪರವಾಗಿ ನಮ್ಮ ಹಿಂದಿನ ಅಗ್ರಲೇಖನದ ಮೂಲಕ ಮಾಡಿದ ಅಪ್ಪೀಲು ಜಯಪ್ರದವಾಯಿತು. ಸಂಘವು ದೇಶದ ಅಭಿಪ್ರಾಯವನ್ನು ಕೊಡುವ ಸಂಸ್ಥೆಯೆಂಬುದು ಖಾಯಂ ಆಯಿತು. ಸ್ಥಳೀಯ ಸರಕಾರದವರ ದೃಷ್ಟಿಯಲ್ಲಿ ಸಂಘವು ಕಳಕೊಂಡಿದ್ದ ಗೌರವವು ಮರಳಿ ಬಂದದ್ದು ದೇಶೀಯರೆಲ್ಲರಿಗೂ ಸಂತೋಷವನ್ನುಂಟುಮಾಡದೆ ಇರದು.

ಕವಿಾಷನರವರ ಈಗಿನ ಕಾಗದದಲ್ಲಿ "ನಾನು ನಿಮಗೆ ಮೊದಲು ಬರೆದ ಪತ್ರದಿಂದ ನಿಮ್ಮ ಸಂಘಕ್ಕೆ ಬೇಸರವಾದದಕ್ಕೆ ತುಂಬಾ ವ್ಯಸನಪಡುತ್ತೇನೆ. ಈಗ ಆ ಅತೃಪ್ತಿಯು ಸಂಪೂರ್ಣವಾಗಿ ಸಮಾಧಾನವಾಗಬಹುದೆಂತ ನಾನು ನಂಬುತ್ತೇನೆ ... . ಬಹುಶಃ ನನ್ನ ಕಾಗದದ ಮಾತು ಅನಾವಶ್ಯಕವಾಗಿ ಜೋರಾಗಿ ಇತ್ತೆಂತ ನಾನು ಒಪ್ಪುತ್ತೇನೆ. ಇದಕ್ಕೆ ನಾನು ಪೂರ್ತಿ ಜವಾಬುದಾರಿಯನ್ನು ವಹಿಸಿಕೊಳ್ಳುತ್ತೇನೆ .... ಈ ವಿಷಯದ ಎಲ್ಲಾ ಸಂಗತಿಗಳನ್ನು ನಿಷ್ಪಕ್ಷಪಾತವಾಗಿ ಮೇಲ್ಪಂಕ್ತಿ ಪೀಠಕ್ಕೆ ವಿವರಿಸಿದ ನಂತರ ಆ ವಿಷಯವನ್ನು ಮರೆಯುವಿರೆಂತಲೂ... .. .. ..ನಂಬುತ್ತೇನೆ" ಎಂತ ಬರೆದಿದ್ದಾರೆ. ವಿವರಣೆಯೆಲ್ಲಾ ಆ ಪತ್ರದಲ್ಲಿ ಇರುವುದರಿಂದ ಇಲ್ಲಿ ಅವುಗಳನ್ನೆಲ್ಲಾ ಬರೆಯುವ ಅವಶ್ಯವಿಲ್ಲ. ಸಂಘದ ವಂದನಾಪತ್ರದಲ್ಲಿ ಅವರ ಕೋಪಕ್ಕೆ ಬಲವಾದ ಕಾರಣವಿತ್ತೆಂತ ಮುಂತಾಗಿ ಕವಿಾಷನರವರು ಬರೆದಿದ್ದಾರೆ. ಈ ವಿಷಯದಲ್ಲಿ ನಾವು ವಾದಿಸತಕ್ಕದ್ದು ಇದ್ದಾಗ್ಯೂ ಆಗಿಹೋದ ಕಾರ್ಯವನ್ನು ಮರೆಯಬೇಕೆಂಬ ಕವಿಾಷನರವರ ಕೋರಿಕೆಗೆ ಅನುಸಾರವಾಗಿ ಹೆಚ್ಚು ಬರೆಯಲು ಅಪೇಕ್ಷಿಸುವುದಿಲ್ಲ.

ಜಮಾಬಂದಿದಾರರ ಸಂಘಕ್ಕೆ ಮೆಂಬರುಗಳಾಗಿ ದೇಶಸೇವೆ ಮಾಡಿರಿ.

ಈ ರೀತಿ ಸಂಘವು ಪುರಸ್ಕರಿಸಲ್ಪಟ್ಟದ್ದರಿಂದ ಉಂಟಾಗುವ ಸಂತೋಷದ ಹಿಗ್ಗಿನಲ್ಲಿ ಸಂಘವಾಗಲೀ ದೇಶವಾಗಲೀ ತಮ್ಮ ಮುಂದಿನ ಕರ್ತವ್ಯವನ್ನು ಮರೆಯಬಾರದು. ಸಂಘಕ್ಕೆ ಹೀಗೆ ಜಯವಾಗಲಿಕ್ಕೆ ಅದರ ಮೆಂಬರುಗಳು ಸಂಘದೊಳಗಿರುವ ಎಲ್ಲಾ ಮತಭೇದಗಳನ್ನೊಳಕೊಂಡಿರುವ ವಂದನಾಪತ್ರವನ್ನು ತಯಾರಿಸಿ ಸಂಘದ ಒಗ್ಗಟ್ಟನ್ನು ತೋರಿಸಿದ್ದು ಒಂದು ಕಾರಣವಾಗಿದೆಯೆಂತ ನಾವು ನಂಬುತ್ತೇವೆ. ವಂದನಾಪತ್ರದಲ್ಲಿ ಮಾತ್ರವಲ್ಲ ಎಲ್ಲಾ ಕಾರ್ಯಗಳಲ್ಲೂ ಸಾಧ್ಯವಾದಮಟ್ಟಿಗೆ ಎಲ್ಲಾ ಅಭಿಪ್ರಾಯದವರೂ ಒಗ್ಗಟ್ಟಾಗಿ ವರ್ತಿಸುವುದು ದೇಶದ ಏಳಿಗೆಗೆ ಅತ್ಯವಶ್ಯಕ. ಇಂಥಾ ಒಗ್ಗಟ್ಟಿನಿಂದ ನಡಕೊಂಡದ್ದರಿಂದಲ್ಲವೇ ಈಗ ಮಂಜೂರಾಗಿರುವ ಕೌನ್ಸಿಲು ದೊರೆತದ್ದು? ಈ ಕೌನ್ಸಿಲಿನಿಂದ ಸಂಘವು ಸೂಚಿಸುತ್ತಿದ್ದ ದೇಶದ ಅಭಿಲಾಷೆಗಳೆಲ್ಲವೂ ಕೈಗೂಡದ್ದರಿಂದ ಹೆಚ್ಚಿನ ಸುಧಾರಣೆಯನ್ನು ಪಡೆಯಲು ಸಂಘವು ಮತ್ತಷ್ಟು ಒಗ್ಗಟ್ಟಿನಿಂದ ಕೆಲಸಮಾಡಬೇಕಾಗಿದೆ. ಅದುಕಾರಣ ಸಂಘದ ಕೆಲಸವನ್ನು ದೂರ ನಿಂತು ನೋಡುತ್ತಿದ್ದ ದೇಶೀಯರೂ, ಸಂಘದ ಇರುವಿಕೆಯೇ ತಿಳಿಯದೆ ಇರುವಂತವರಿದ್ದರೆ ಅವರೂ, ಸಂಘದೊಳಗೆ ನೆಪಮಾತ್ರಕ್ಕೆ ಇದ್ದವರೂ ಮನಃಪೂರ್ತಿಯಾಗಿ ಸಂಘಕ್ಕೆ ಉತ್ತೇಜನಕೊಟ್ಟು ದೇಶದ ಸ್ವಾತಂತ್ರವನ್ನು ಪಡೆಯಲು ಭಾಗಿಗಳಾಗಬೇಕು.

ಮೊದಲು ತಯಾರುಮಾಡಿದ್ದ ವಂದನಾಪತ್ರವನ್ನೇ ಬದಲಾಗಿರುವ ಈಗಿನ ವಿದ್ಯಮಾನಗಳಿಗೆ ಸರಿಯಾಗುವಂತೆ ತಿದ್ದುಪಡಿ ಮಾಡಿ ಮೊದಲೇ ಕಮಿಟಿಯಿಂದ ಚುನಾಯಿತರಾದ ಪ್ರತಿನಿಧಿಗಳು ವೈಸರಾಯರ ಭೇಟಿಗೆ ಹೋಗಬೇಕೆಂದು ಕಮಿಟಿಯವರು ಪುನಹ ತೀರ್ಮಾನಿಸಿರುವರು. ಸಂಘವು ದೊಡ್ಡ ಪ್ರಾಂತ್ಯಗಳಿಗೆ ಸಿಕ್ಕಿದಂತೆ ಪ್ರಜೆಗಳಿಗೆ ಜವಾಬ್ದಾರಿ ಇರುವ ಆಡಳಿತ ಕ್ರಮವನ್ನು ಕೇಳುತ್ತಲೇ ಬಂದದ್ದಾದರೂ ಕಳೆದವರ್ಷ ದೇಶದ ಮುಖಂಡರು ಈಗ ಮಂಜೂರಾದ ನ್ಯಾಯವಿಧಾಯಕ ಸಭೆಯನ್ನು ಒಪ್ಪಿಕೊಂಡದ್ದರಿಂದ ಈ ಕೌನ್ಸಿಲನ್ನು ಉಪಯೋಗಿಸಿಕೊಂಡು ಹೆಚ್ಚಿನ ಹಕ್ಕುಗಳನ್ನು ಪಡೆಯಲಿಕ್ಕೆ ಅರ್ಹತೆಯನ್ನು ತೋರಿಸಿ ಪ್ರಯತ್ನಿಸುವುದೇ ಈಗಿನ ಸ್ಥಿತಿಗೆ ಉತ್ತಮವೆಂಬುದೇ ನಮ್ಮ ಅಭಿಪ್ರಾಯ.

ದೇಶಕ್ಕೆ ವಿಜ್ಞಾಪನೆ.

ಮಹನೀಯರೇ,

ನಾನು ಮೈಸೂರಿನಲ್ಲು ಉದ್ಯೋಗವನ್ನು ಬಿಟ್ಟು ಬಂದನಂತರ ದೇಶದ ಕೆಲಸವನ್ನು ನನ್ನ ಕೈಲಾದಮಟ್ಟಿಗೆ ಮಾಡಬೇಕೆಂಬ ಕುತೂಹಲದಿಂದ, ನಮ್ಮ ಜಮಾಬಂದಿದಾರರ ಸಂಘವನ್ನು, ಈಗ ಇರುವ ನಮೂನೆಯಲ್ಲು ಏರ್ಪಡಿಸಲು ಆಲೋಚಿಸಿ ಲೇಟ್ ಬಿದ್ದಂಡ ಗಣಪತಿಯವರ ಸಹಾಯದಿಂದ, ಸ್ಥಾಪಿಸಿ, ಈಗು ಸುಮಾರು 13 ವರ್ಷಗಳ ಕೆಲಸವು ಫಲಕಾರಿಯಾದದ್ದು ದೇಶದಲ್ಲು ಅನೇಕರಿಗೆ ತಿಳಿದ ಸಂಗತಿಯಾಗಿದೆ. ಆದರೆ ಸಂಘದ ಉದ್ದೇಶವು ಪೂರ್ತಿಯಾಗಿ ಕೈಗೂಡದ ವಿಷಯದಲ್ಲು ದೇಶದ ಹಿತಚಿಂತಕರೆಲ್ಲಾ ವ್ಯಸನಪಡುತ್ತಿರುವರೆಂಬುದರಲ್ಲು ಸಂಶಯವಿರಲಾರದು. ಈ ನ್ಯೂನತೆಗೆ ದೇಶದವರೆಲ್ಲಾ ಸಂಘಕ್ಕೆ ಕೊಡಬೇಕಾದ ಉತ್ತೇಜನವನ್ನು ಕೊಡದೆ ಇರುವದೇ ಮುಖ್ಯ ಕಾರಣವಾಗಿರುತ್ತೆ. ಹ್ಯಾಗೂ ಸಂಘವು ಮಾಡಿದ ಕೆಲಸದಿಂದ, ಈಗ ನಮಗೆ ಸಿಕ್ಕಿರುವ ಮಾರ್ಪಾಟುಗಳು. ಸಂಘದ ಗೌರವವನ್ನೂ, ಮತ್ತು ದೇಶದ ಮರ್ಯಾದೆಯನ್ನೂ, ಕಾಪಾಡಲ್ಪಟ್ಟಿತೆಂದು ಎಲ್ಲರೂ ಸಂತೋಷಪಡಬೇಕಾದದ್ದು ಅವಶ್ಯ. ನಾನು ನನ್ನ ದೇಹದ ಅನಾರೋಗ್ಯದ ದೆಸೆಯಿಂದ ನನಗೆ ಕುತೂಹಲವಿರುವಷ್ಟು ಮತ್ತು ಮನಸ್ಸಿನಂತೆ ಕೆಲಸಮಾಡಲು ಸಾಧ್ಯವಾಗದಿದ್ದರೂ ಕೂಡ ನಾನು ಸಂಘದ ವಿಷಯದಲ್ಲಿ ಪೂರ್ಣ ಹಿತಚಿಂತಕನಾಗಿರುತ್ತೇನೆ. ಇದ್ದಾಗ್ಯೂ ದೇಶದವರೆಲ್ಲಾ ಈ ಸಂಘವನ್ನು ಪ್ರೋತ್ಸಾಹಿಸಿ ದೇಶದ ಅಭಿವೃದ್ಧಿಗಾಗಿ ಸಿಕ್ಕಿರುವ ಕೌನ್ಸಿಲಿಗೆ ಅರ್ಹರಾದ ಪ್ರತಿನಿಧಿಗಳನ್ನು ಕಳುಹಿಸಿ ದೇಶವನ್ನುದ್ಧಾರಮಾಡಬೇಕೆಂದು ಕೋರುತ್ತೇನೆ. ನನ್ನ ಇನ್ನೊಂದು ಕೋರಿಕೆ ಏನೆಂದರೆ– ಈಗ ಎರಡು ವರ್ಷಗಳ ಹಿಂದೆ ಸರುವಾಗಿ ಈ ದೇಶದ ಕೆಲಸವನ್ನು ಮಾಡುತ್ತಿರುವ "ಕೊಡಗು" ಪತ್ರಿಕೆಯನ್ನೂ ಸಹ ಕಾಪಾಡಬೇಕಾದದ್ದು ದೇಶದವರ ದೊಡ್ಡ ಕರ್ತವ್ಯ. ಈ ಕೊಡಗುಪತ್ರಿಕೆಯು ದೇಶದವರಿಗೂ ಮತ್ತೂ ಸರಕಾರಕ್ಕೂ ಸಹ ಬಹಳಮಟ್ಟಿಗೆ ದೇಶದ ಕಷ್ಟಸುಖಗಳನ್ನು ತಿಳಿಸುತ್ತಾ ಬರುತ್ತಲಿರುವಾಗ್ಯೂ ದೇಶದವರು ಈ ಪತ್ರಿಕೆಯನ್ನು ತಕ್ಕಷ್ಟುಮಟ್ಟಿಗೆ ಪ್ರೋತ್ಸಾಹಿಸದೆ ಇರುವದು ಬಹಳ ವ್ಯಸನಕರ. ಆದ್ದರಿಂದ ಇನ್ನಾದರೂ ದೇಶದಲ್ಲಿ ವಿದ್ಯಾವಂತರಾದ ಎಲ್ಲಾ ಮಹನೀಯರೂ ಮತ್ತು ಮಹಿಳೆಯರೂ ಈ ಪತ್ರಿಕೆಗೆ ಚಂದಾದಾರರಾಗಿ ದೇಶಸೇವೆಯನ್ನು ಮಾಡಬೇಕೆಂದು ಅತಿ ವಿನಯದಿಂದ ಕೋರುತ್ತೇನೆ.

10—10—23.

ಮಡಿಕೇರಿ ಕೋದಂಡ ಮಾದೈಯ

ಕಾವೇರಿ ಯಾತ್ರಿಕರಲ್ಲಿ ವಿನಂತಿ.

ಎಷ್ಟೋ ಸಾವಿರಾರು ವರ್ಷಗಳಿಂದ ತಲಕಾವೇರಿಯಲ್ಲಿ ಹುಟ್ಟಿ ಹರಿಯುತ್ತಲಿರುವ ಈ ನದಿಯು ಲಕ್ಷಾಂತರ ಜನರಿಗೆ ಆಶ್ರಯವನ್ನು ಕೊಟ್ಟು ಕಾಪಾಡುತ್ತಿದೆಯಲ್ಲವೆ. ತಲಕಾವೇರಿಗೆ ತುಲಾಸಂಕ್ರಮಣದಲ್ಲಿ ಎಷ್ಟೋ ಸಾವಿರಾರು ವರ್ಷ ವರ್ಷವೂ ಬಹಳ ದೂರದಿಂದಲೂ ಬಂದು ಸ್ನಾನಮಾಡಿ ಹೋಗುತ್ತಾರಲ್ಲವೆ? ಇದರಿ

ಲಕ್ಷಾಂತರ ಜನರು ಹೋಗಿ ತೀರ್ಥ ಬರುವಾಗ ಸ್ನಾನಮಾಡಿ ದೇವರ ನಾಮಗಳನ್ನುಚ್ಚರಿಸುತ್ತ, ದೇವರಿಗೆ ಹಣ್ಣು ಕಾಯಿಗಳನ್ನರ್ಪಿಸಿ ತಾವು ಕೃತಾರ್ಥರಾದೆವೆಂದು ಸಂತೋಷಚಿತ್ತರಾಗಿ ಬರುವರು. ಇವೆಲ್ಲವೂ ಅವರವರ ಸಂತೋಷ ಮಾತ್ರವೇ. ನಂದಿಕೆಯಿಂದ ಕಬ್ಬಿಣವು ಚಿನ್ನವೆ ಚಿನ್ನವು ಕಬ್ಬಿಣವೂ ಆಗಬಹುದು. ಇದರ ವಿಷಯದಲ್ಲಿ ನಾನು ಹೆಚ್ಚಾಗಿ ಹೇಳಬೇಕಾದುದೇನೂ ಇಲ್ಲ.

ಈ ಕಾವೇರಿ ಯಾತ್ರೆಯನ್ನು ಮಾಡುವ ಉದ್ದೇಶವೇನು? ಎಂಬದಾಗಿ ಯಾತ್ರಿಕರನ್ನೆಲ್ಲಾ ವಿಚಾರಿಸಿದರೆ ಸಾಮಾನ್ಯವಾಗಿ ನಮಗೆ ದೊರೆಯುವ ಉತ್ತರವ್ಯಾವದು? ನಾವು ಮಾಡಿದ ಪಾಪವನ್ನು ಪರಿಹರಿಸುವುದಕ್ಕಾಗಿ ಯಾತ್ರೆಯನ್ನು ಮಾಡುತ್ತೇವೆಂದು ಕೆಲವರೂ ನಮ್ಮ ಇಷ್ಟಾರ್ಥವು ಕೈಗೂಡಬೇಕೆಂದು ತೀರ್ಥಸ್ನಾನ ಮಾಡುವೆವೆಂದು ಕೆಲವರೂ, ತಮ್ಮ ಪಿತೃಗಳಿಗೆ ಸದ್ಗತಿ ಒದಗಿಸಬೇಕೆಂದು ಕೆಲವರೂ, ಅನೇಕರೂ ಜನರು ಹೆಚ್ಚಾಗಿ ಸೇರುವುದರಿಂದ ವ್ಯಾಪಾರ ಅಲ್ಪಸ್ವಲ್ಪ ವ್ಯಾಪಾರ ನಡೆಸಬಹುದೆಂದು ಮತ್ತೆ ಕೆಲವರೂ, ತಮಾಷೆಯನ್ನು ನೋಡುವೆವೆಂದು ಇನ್ನು ಕೆಲವರೂ ಹೇಳುವರು. ಈ ಉತ್ತರಗಳಲ್ಲೆಲ್ಲಾ ಮನುಷ್ಯನ ನಿಜವಾದ ಕರ್ತವ್ಯ ಪಾಲನಕ್ಕಾಗಿ ಕೆಲಸಮಾಡುವ ಒಂದು ಉತ್ತರವಾದರೂ ಇದೆಯೆ? ಇಲ್ಲವೇ ಇಲ್ಲ. ಹಾಗಾದರೆ ಯಾತ್ರೆಯನ್ನು ಮಾಡುವುದು ಏತಕ್ಕಾಗಿ? ಜಾತ್ರೆ ಹೋಗುವದರಿಂದ ಕರ್ತವ್ಯಪಾಲನ ಮಾಡಿದಂತಾಗುವುದಿಲ್ಲವೆ? ಗಾಬರಿ ಕೇಳಿರಿ.

ನಮ್ಮ ಇಷ್ಟಾರ್ಥಗಳನ್ನು ನೆರವೇರಿಸಲಿಕ್ಕಾಗಿ ನಾವು ಭಗವಂತನನ್ನು ಪ್ರಾರ್ಥಿಸಬೇಕಾದುದಿಲ್ಲ. ಅಥವಾ

ಮಾಡುವುದೂ ಸ್ವಾರ್ಥವೆಂದು ಕರೆಯಲ್ಪಡುವುದು. ಪರಮಾತ್ಮನು ನಮ್ಮನ್ನು ಕೆಲಕೆಲವು ಕರ್ತವ್ಯವನ್ನು ಮಾಡುವುದಕ್ಕಾಗಿ ನಿರ್ಮಿಸಿರುವನು. ಆ ಕರ್ತವ್ಯಗಳಲ್ಲಿ ದೇವರ ಸೇವೆಯೂ ಒಂದಾಗಿದೆ. ಹಾಗಾದಮೇಲೆ ಆ ದೇವರ ಸೇವೆಗಾಗಿಯೇ ನಾವು ದೇವರನ್ನು ಪ್ರಾರ್ಥಿಸಬೇಕಲ್ಲವೇ? ಅದೇ ರೀತಿ ನಾವು ಜಾತ್ರೆ ಹೋಗುವುದು ನಮ್ಮ ಕರ್ತವ್ಯ ಪಾಲನೆಕ್ಕಾಗಿಯೇ ಇರಬೇಕು. ಹಾಗಲ್ಲದೆ ಪುಣ್ಯವನ್ನು ಪಡೆಯುವುದಕ್ಕಾಗಲಿ, ನಮ್ಮ ಇಷ್ಟಸಿದ್ಧಿಯಾಗುವುದಕ್ಕಾಗಲಿ ನಾವು ಯಾತ್ರೆ ಮಾಡಿದರೆ ಅದು ಫಲವನ್ನಾಶಿಸುವ ಸ್ವಾರ್ಥತೆಯಾಯಿತಲ್ಲವೆ? ನಾನಾ ಜನರ ನಡೆನುಡಿಗಳಲ್ಲಿ ಬೆರೆತು ಕಲಿತುಕೊಳ್ಳಬೇಕಾದುದನ್ನು ಕಲಿಯುವುದಕ್ಕೆ ಯಾತ್ರೆ ಮಾಡುವುದರಲ್ಲಿ ಪ್ರಯೋಜನವಿದೆ. ಯಾತ್ರೆ ಮಾಡುವಾಗ ಅನೇಕಾನೇಕ ಕಷ್ಟಗಳನ್ನನುಭವಿಸುವಾಗ ನಮ್ಮಲ್ಲಿರುವ ಮದವು ಎಷ್ಟೋ ಕರಗಿ ಸಾತ್ವಿಕಸ್ಥಿತಿಗೆ ಬರುವುದು. ಆದುದರಿಂದ ನಾವು ಯಾತ್ರೆಯನ್ನು ಈ ಉದ್ದೇಶದಿಂದ ಮಾಡಬೇಕು. ಇಂತಹ ಉದ್ದೇಶಗಳಿಂದ ಯಾತ್ರೆಯನ್ನು ಮಾಡುವವರು ಅತಿ ವಿರಳ. ಆದುದರಿಂದ ಯಾತ್ರಿಕರೆಲ್ಲರೂ ಕಾಲು ನಡಿಗೆಯಿಂದಲೇ ಹೋಗಬೇಕು. ಅಲ್ಲದೆ ಉಪವಾಸವ್ರತವನ್ನು ಕೈಕೊಂಡು ದೇಹವನ್ನು ಸ್ವಲ್ಪ ಸ್ವಲ್ಪವಾಗಿ ದಂಡಿಸಿ ಜ್ಞಾನವನ್ನು ಪಡೆಯಬೇಕು. ಹಾಗಲ್ಲದೆ ಮೋಟಾರು ಗಾಡಿಗಳಲ್ಲಿ ಸುಖವಾಗಿ ಹೋಗಿ, ಸ್ನಾನಮಾಡಲು ವ್ಯಾಕುಲತನದಿಂದ ಹಿಂದೆ ಓಡುವವರು ತಲಕಾವೇರಿಗೇ ಹೋಗಬೇಕಾಗಿಲ್ಲ. ರಾಜಾ ಸೀಟಿಗೆ ಹೋದರೂ ಸಾಕು.

ಯಾತ್ರಿಕರಲ್ಲಿ ನನ್ನದೊಂದು ಕರೆಯು. ವಿನಂತಿಯಿದೆ. ಸರ್ವಸಾಮಾನ್ಯವಾಗಿ ಜನರೆಲ್ಲರಿಗೆ ಆವುದಾದರೂ ಒಂದು ದುರಾಭ್ಯಾಸವು ಇಲ್ಲದೇ ಇರುವುದು ಬಹಳ ಅಪರೂಪವಷ್ಟೆ! ಹೊಗೆಸೊಪ್ಪಿನ ಸೇವನೆ, ಮದ್ಯಪಾನ, ವಿಷಯಾಸಕ್ತಿ, [illegible] ಇತರ ಮಾದಕ ದ್ರವ್ಯಸೇವನೆ, ಮುಂತಾದುವೆಲ್ಲವೂ ಒಂದೊಂದು ದುರಭ್ಯಾಸಗಳು. ಇವುಗಳಲ್ಲಿ ಯಾವುದಾದರೂ ಒಂದು ಅಭ್ಯಾಸವನ್ನು ಮಾಡದೆ ಇರುವವರು ಅಪರೂಪವೇ ಸರಿ. ಇವುಗಳನ್ನು ತ್ಯಾಗಮಾಡದೇ ಹೋದರೆ ಯಾತ್ರೆಯನ್ನು ಮಾಡಿದರೇನು ಪ್ರಯೋಜನ? ಯಾತ್ರಿಕರೆಲ್ಲರೂ ದೃಢವಾದ ಮನೋನಿಶ್ಚಯದಿಂದ ತಂತಮ್ಮ ದುರಭ್ಯಾಸಗಳನ್ನು ಕಾವೇರೀ ಯಾತ್ರೆ ಮಾಡಿದ ಗುರುತಿಗಾಗಿಯಾದರೂ ಅದನ್ನು ಬಿಟ್ಟುಬಿಡಲೇಬೇಕು. ಇಂತಹ ಮನೋನಿಶ್ಚಯವನ್ನು ಮಾಡಿದರೆ ಇದಕ್ಕಿಂತಲೂ ಹೆಚ್ಚಾಗಿ ಮಾಡಬೇಕಾದುದೇನೂ ಇಲ್ಲ. ಯಾತ್ರಿಕರೆ, ಕಾಶೀಯಾತ್ರೆ ಮಾಡಿದವರು ತಮಗೆ ಹೆಚ್ಚಾಗಿ ಪ್ರೀತಿಯುಳ್ಳ ವಸ್ತುವೊಂದನ್ನು ಬಿಟ್ಟುಬಿಡಬೇಕೆಂದು ಒಂದು ನಿಯಮವನ್ನು ನೀವು ಕೇಳಿಯುವಿರಲ್ಲವೆ? ಹಾಗೆಯೇ ಈ ತಲಕಾವೇರಿ ಜಾತ್ರೆಯಲ್ಲಿಯೂ ಸಹ ಯಾತ್ರಿಕರು ದೃಢವ್ರತದಿಂದ ಯಾವುದಾದರೂ ಹೆಚ್ಚಿನ ಪ್ರೀತಿಯುಳ್ಳ ಒಂದು ಕೆಟ್ಟ ಅಭ್ಯಾಸವನ್ನು ಸೇವನೆ ಮಾಡುವುದನ್ನು ಖಂಡಿತವಾಗಿಯೂ ಬಿಟ್ಟುಬಿಡಬೇಕು. ಹಾಗೆ ಮಾಡದೇ ಹೋದರೆ ಯಾತ್ರೆ ಮಾಡಿದ್ದರಲ್ಲಿ ಹೆಚ್ಚು ಪ್ರಯೋಜನವು ಸಿಕ್ಕಲಾರದೆಂದು ಯಾತ್ರಿಕರೆಲ್ಲರೂ ಖಂಡಿತವಾಗಿ ತಿಳಿದಿರಬೇಕು. ನಿತ್ಯಾ ಸೇವನೆಯನ್ನು ಮಾಡುವವರು ತಲಕಾವೇರಿಯಲ್ಲಿ ದೇವರಿಗಭಿಮುಖವಾಗಿ ನಿಂತು ಓ ದೇವರೇ, ನಾನು ಇಷ್ಟು ದಿನ ಮದ್ಯಪಾನವನ್ನು ಸೇವಿಸಿ ಸೇವಿಸಿ ಬಹು ನೀಚನಾಗಿದ್ದೇನೆ. ನನ್ನ ಬುದ್ಧಿಯೇ ಕೆಟ್ಟು ಹೋಗಿದೆ. ಹೇ ಪರಮಾತ್ಮ ದಯಾಸಿಂಧು ನೀನು ನನಗೆ ಇಂತಹ ಬುದ್ಧಿಯನ್ನು ಇನ್ನು ಮುಂದೆ ಕೊಡಬೇಡ. ನನ್ನ ಈ ದುರಾಭ್ಯಾಸವನ್ನು ಇಷ್ಟಕ್ಕೇ ನಿಲ್ಲಿಸುವೆನು. ನಾನು ಇನ್ನು ಮುಂದೆ ಮದ್ಯವನ್ನು ಸೇವಿಸುವುದೇ ಇಲ್ಲ ಎಂದು ದೃಢವಾಗಿ ಹೇಳಿ ಮನೋನಿಶ್ಚಯದಿಂದ ಅದನ್ನು ಬಿಟ್ಟುಬಿಡಲೇಬೇಕು. ನಶ್ಯ, ಬೀಡಿ, ಸಿಗರೇಟು, ಕಾಫಿ, ಟೀ ಮೊದಲಾದುವುಗಳನ್ನು ಸೇವಿಸುವವರೂ ಸಹ ಈ ರೀತಿ ದೇವರ ಮುಂದೆ ತಮ್ಮ ತಪ್ಪನ್ನು ಕ್ಷಮಿಸುವಂತೆ ಕೇಳಿಕೊಂಡು ಇನ್ನು ಮುಂದೆ ಖಂಡಿತವಾಗಿಯೂ ಆ ದುರ್ವ್ಯಸನವನ್ನು ಬಿಟ್ಟು ಬಿಡಬೇಕು. ಹಾಗಲ್ಲದೆ ನಿತ್ಯಾಸೇವನೆ ಮಾಡುವವರನ್ನು ಹಾಗೆ ಮಾಡುವುದು ಪಾಪಕರವೆಂದು ಹೇಳುವವರು ಸದ್ಗೃಹಸ್ಥರೆನ್ನಿಸಿಕೊಳ್ಳುವವರು ಚಹಾ ಬೀಡಿ ಸೇವಿಸುವವರಲ್ಲವೆ? ಇವರು ಅವರಿಗಿಂತಲೂ ಕೀಳಾದವರೇ? ನಾವು ಇತರರಿಗೆ ಬುದ್ಧಿವಾದವನ್ನು ಹೇಳಬೇಕಾದರೆ ಮೊದಲು ನಮ್ಮಲ್ಲಿರುವ ದುರ್ಗುಣಗಳನ್ನು ತ್ಯಾಗಮಾಡಿ, ನಮ್ಮ ಉದಾಹರಣೆಯನ್ನು ಇತರರಿಗೆ ತೋರಿಸಬೇಕು. ಹೊಗೆಸೊಪ್ಪನ್ನು ಸೇವಿಸುವವರಿಗೂ, ಇತರ ದುರ್ಗುಣಗಳನ್ನುಳ್ಳವರಿಗೂ ಸಹ ನನ್ನ ವಿನಂತಿಯು ಇದೇ. ಆದುದರಿಂದ ಓ, ಕಾವೇರಿ ಯಾತ್ರಿಕರೇ! ನಿಮಗೆ ನಿಜವಾದ ಯಾತ್ರೆಯಿಂದ ಪ್ರಯೋಜನವಾಗಬೇಕಾಗಿದ್ದರೆ, ನಿಮ್ಮ ಬೀಡಿ, ಸಿಗರೇಟು, ಹೊಗೆಸೊಪ್ಪು, ನಿತ್ಯಾಸೇವನೆ ಮುಂತಾದ ದುರ್ಗುಣಗಳನ್ನು ಖಂಡಿತವಾಗಿ ಬಿಟ್ಟುಬಿಡಬೇಕೆಂದು ನೂರಾರು ಸಾರಿ ಕರೆದು ಕರೆದು ಕೇಳಿಕೊಳ್ಳುತ್ತೇನೆ. ನಿಮ್ಮನ್ನು ಇಷ್ಟೆಲ್ಲ ಕೇಳಿಕೊಳ್ಳುವ ನಾನು ಸಹ ನನ್ನಲ್ಲಿರುವ ಒಂದು ದುರ್ಗುಣವನ್ನೂ ಬಿಟ್ಟುಬಿಡಬೇಕಲ್ಲವೆ? ನಾನು ಹಾಗೆ ಬಿಟ್ಟು ನಿಮ್ಮನ್ನು ಕೇಳಿಕೊಳ್ಳುವುದು ಸಮಂಜಸವಲ್ಲ. ನಶ್ಯ ಸೇವಿಸುವವನಾದ ನಾನು ನನ್ನ ದುರ್ಗುಣವನ್ನು ಬಿಟ್ಟು ಕ್ಷಮೆ ಕೇಳಿಕೊಳ್ಳುತ್ತೇನೆ. ಕಾವೇರಿ ಯಾತ್ರೆ ಮಾಡಿ ಒಬ್ಬೊಬ್ಬರೂ ತಂತಮ್ಮ ದುರ್ಗುಣ ತ್ಯಾಗವನ್ನು ಮಾಡಿದ್ದೇ ಆದರೆ ಯಾತ್ರೆ ಮಾಡಿದ ಸರ್ವ ಪ್ರಯೋಜನವೂ ಖಂಡಿತವಾಗಿ ಸಿಕ್ಕುವುದು. ಓ ಯಾತ್ರಿಕರೇ ದುರ್ಗುಣ ತ್ಯಾಗವನ್ನು ಖಂಡಿತವಾಗಿಯೂ ಬಿಟ್ಟುಬಿಡಿ. ಸ್ವಲ್ಪವೂ ಮರೆಯದೆ ಕಾವೇರೀ ನದಿಯಲ್ಲಿ ತೇಲುವಂತೆ ಬಿಟ್ಟು ನಿಶ್ಚಿಂತರಾಗಿ. ಇದೇ ನನ್ನ ಪ್ರಾರ್ಥನೆ.

ವಾಮನಮೂರ್ತಿ

"ಕೊಡಗು" ಪತ್ರಿಕೆಗೆ ಚಂದಾದಾರರಾಗಿ ದೇಶಭಕ್ತಿ ತೋರಿಸಿರಿ.

ಪೇಟೆಯವರಲ್ಲಿ ವಿನಂತಿ.

ದೇಶಬಾಂಧವರೇ

ಈ ಭೂಲೋಕದಲ್ಲಿ ಮನುಷ್ಯ ಜನ್ಮಕ್ಕಿಂತ ಉತ್ತಮವಾದದ್ದು ಬೇರೆ ಯಾವುದೂ ಇಲ್ಲ. ಸೃಷ್ಟಿಕರ್ತನು ಮನುಷ್ಯವರ್ಗಕ್ಕೆ ಕರುಣಿಸಿರುವ ಜ್ಞಾನಶಕ್ತಿಯೇ ಇದಕ್ಕೆ ಕಾರಣವಾಗಿರುತ್ತೆ. ಇಂಥಾ ಶ್ರೇಷ್ಠವಾದ ಜನ್ಮವನ್ನು ಮನುಷ್ಯನು [illegible] ಸದುಪಯೋಗಿಸದೆ ಹೋದರೆ ಅವನು ಎಂದಿಗೂ [illegible] ಉತ್ತಮ [illegible] ಹೊಂದಲಾರನು [illegible]. ಸಾಮಾಜಿಕ ಪ್ರಾಣಿಯೆಂದೇ ಕೆಲವರು ಹೇಳುವರು. ಇದನ್ನು ಅನ್ಯಮತದವರು ಯಾರಾದರೂ ಒಪ್ಪಲಾರರು. ಮನುಷ್ಯನು ತನ್ನನ್ನು ನಿರ್ಮಿಸಿದ ದೇವರನ್ನು ತಿಳಿಯುವುದಕ್ಕಾಗಿ ಒಬ್ಬ ವ್ಯಕ್ತಿ ಆತನ ಸೇವೆಗಾಗಿಯೇ ಜೀವಿಸಿ [illegible] ಆತನ ಸೇವೆ [illegible] ಆತನ ಪ್ರತಿಬಿಂಬವಾಗಿರುವ ಮನುಷ್ಯರ ಸೇವೆ ಮಾಡುವುದೆಂದೇ ಅರ್ಥ. ಆದುದರಿಂದಲೇ ದೇಶಸೇವೆಯು ಈಶಸೇವೆಯೆಂದು ವಾಡಿಕೆಯಾಗಿ ಜ್ಞಾನಿಗಳು [illegible]. ದೇಶಸೇವೆಯೆಂದರೆ ಅಲ್ಲಿಯ ನಿವಾಸಿಗಳ ಸೇವೆ [illegible] ಬೇಕಾಗಿಲ್ಲ [illegible] ಮಾಡತಕ್ಕದ್ದು ಪ್ರತಿಯೊಬ್ಬನ ಕರ್ತವ್ಯವೇ ಸರಿ. ದೇಶದ ಅಭಿವೃದ್ಧಿಯೇ ಪ್ರತಿಯೊಬ್ಬ ನಿವಾಸಿಯ ಅಭಿವೃದ್ಧಿ [illegible] ಪ್ರಯೋಜನ [illegible] ದೇಶದ [illegible] ಪ್ರತಿಯೊಬ್ಬನ [illegible] ದೇಶದ [illegible] ಮಾಡಬೇಕು [illegible] ಹೀಗಾಗುವುದರಿಂದ [illegible] ದೇಶದ [illegible]. ಹಾಗೆಯೇ ನಮ್ಮ ಈ ಚಿಕ್ಕ ದೇಶದಲ್ಲಿಯೂ ಜನಸಮುದಾಯದ ಅಭಿಪ್ರಾಯವನ್ನು [illegible] ಮಾಡಲು ಈಗ ಸುಮಾರು 13 ವರ್ಷಗಳಿಂದ ಜಮೀನ್ದಾರರ ಸಂಘ ಒಂದು ಸ್ಥಾಪಿತವಾಯಿತು. ಇದರ ಉದ್ದೇಶಗಳು ಅನೇಕರಿಗೆ ತಿಳಿಯದೆಂದು ತೋರುವುದರಿಂದ ಅವುಗಳಲ್ಲಿ ಮುಖ್ಯವಾದವುಗಳನ್ನು ಸೂಚಿಸಬಯಸುತ್ತೇನೆ. ಜಮೀನು ಹಿಡುವಳಿದಾರರ ಕುಂದುಕೊರತೆಗಳನ್ನು ಸರಕಾರದವರಿಗೆ ತಿಳಿಸಿ [illegible] ಪರಿಹಾರಗಳನ್ನು ದೊರಕಿಸುವುದು. [illegible] ದೇಶದವರ ಏಳಿಗೆ [illegible] ಕೊಳ್ಳುವುದು. ಕೃಷಿ ಮತ್ತು [illegible] ಸಾಧನ ವಿಧಾನಗಳನ್ನು ರೈತರಿಗೆ ತಿಳಿಸುವುದೂ ಧಾನ್ಯ [illegible] ಮತ್ತು ಫಲಗಳ ಬೀಜಗಳನ್ನು ಹೊಂದಿಸಿ ಕೊಡಲು ಏರ್ಪಾಡು ಮಾಡುವುದೂ ತಮ್ಮ ತಮ್ಮ ಜನಾಂಗಕ್ಕೆ ಸಮ್ಮಂಧಿಸುವ [illegible] ಮತ್ತು ವಿವೇಕ ಮಾರ್ಗಗಳ ವಿಷಯ ಆಲೋಚಿಸುವುದೂ ಸಹ ಈ ಸಂಘದ ಉದ್ದೇಶಗಳಲ್ಲಿ ಅಡಕವಾಗಿವೆ. ಆದರೆ ಈ ಸಂಘದಿಂದ ದೇಶಕ್ಕೆ ಹೆಚ್ಚಿನ ಪ್ರಯೋಜನವೇನೂ ಆಗಿರುವುದಿಲ್ಲವೆಂದು ಕೆಲವರು ಹೇಳುತ್ತಿರುವರು. ಇದು ಪೂರ್ತಿ ಒಪ್ಪತಕ್ಕ ಮಾತಲ್ಲ. ದೇಶಕ್ಕೆ ಈ ಸಂಘದಿಂದ ಮೊದಲು ಉಂಟಾಗಿರುವ ಪ್ರಯೋಜನಗಳಲ್ಲಿ [illegible] ಅತಿವೃಷ್ಟಿಯಿಂದ ದೇಶದಲ್ಲಿ ಉಂಟಾದ ಕಷ್ಟ ಪರಿಹಾರದ ಬಗ್ಗೆ [illegible] ವಿವರಿಸಿ [illegible] ಮಾಡಿದ್ದು ಈ ಸಂಘವಲ್ಲವೇ? [illegible] ಒಕ್ಕಲಾದರೂ ನಿರಾತಂಕ [illegible] ರೈತರಿಗೆ [illegible] ಕೊಟ್ಟದ್ದು ಈ ಸಂಘವಲ್ಲದೆ ಮತ್ತಾರು? [illegible] ಉದ್ದೇಶದಲ್ಲಿ ಜಮೀನುದಾರರ ಸಂಘವು ದೊಡ್ಡ ಜಯವನ್ನು ಹೊಂದಿದೆಯೆಂದು ಧೃಢವಾಗಿ ಹೇಳಬೇಕು. ಯಾವುದೂ ಸುಧಾರಣೆಯೂ ದೊರೆಯದೆ ಇದ್ದಂತ ಈ ದೇಶಕ್ಕೆ ನ್ಯಾಯವಿಧಾಯಕ ಸಭೆಯು ದೊರೆಯುವಂತೆ ಹೋರಾಡಿದ್ದು ಈ ಸಂಘದ ವಿಶ್ವ [illegible] ಫಲವೆಂದು ಹೇಳುವುದರಲ್ಲಿ [illegible] ಇನ್ನೂ ಹೆಚ್ಚಿನ ಪ್ರಯೋಜನಗಳನ್ನು ಒದಗಿಸಬಹುದಾಗಿತ್ತು. ಹೀಗಾಗದೆ ಇರಲು [illegible] ಆಲಕ್ಷ್ಯಭಾವವಲ್ಲದೆ ಮತ್ತಾವುದೂ ಕಾರಣವಲ್ಲ. ಜನರು ಇದರ ಕಡೆಗೆ ಸಾಕಷ್ಟು ಉತ್ತೇಜನವನ್ನು ಕೊಟ್ಟಿರುವುದಿಲ್ಲ. [illegible] ಎಲ್ಲರಿಗೂ ಒಂದೇ ವಿಧದಲ್ಲಿ [illegible] ಮಾಡಲು ಸಾಧ್ಯವಿಲ್ಲ. ಕೆಲವರು ಧನಸಹಾಯದಿಂದಲೂ, ಕೆಲವರು ಬುದ್ಧಿ ಚಾತುರ್ಯದಿಂದಲೂ ಮತ್ತೆ ಕೆಲವರು ದೇಹಸಹಾಯದಿಂದಲೂ ಇದರ ಕೆಲಸಕ್ಕೆ ಪ್ರೋತ್ಸಾಹ [illegible] ಬೇಕಾಗಿದೆ. ಆದುದರಿಂದ ಜಮೀನು ಹಿಡುವಳಿದಾರನಾದ ಪ್ರತಿಯೊಬ್ಬನೂ ಈ ಸಂಘಕ್ಕೆ ಮೆಂಬರನಾಗಬೇಕೆಂದು [illegible] ಒತ್ತಿ ಹೇಳುವನು [illegible]. ಸಂಘದ ಮೆಂಬರಲ್ಲದವನು ಜಮೀನು ಹಿಡುವಳಿದಾರನೆಂದು [illegible] ಕೊಳ್ಳಬೇಕು. [illegible] ಈ ಸಂಘದ ಕಾರ್ಯದರ್ಶಿಗೆ ಹೊಂದಿರುವ ಅಗತ್ಯ [illegible] ದೇಶೀಯರೆಲ್ಲರೂ ಸಹಾಯಕರಾಗಬೇಕಾಗಿ ನನ್ನ ಕೋರಿಕೆ.

ನಮ್ಮ ದೇಶದ ಏಳಿಗೆಗೆ ಈ ಸಂಘಕ್ಕೆ ಮುಖ್ಯ ಬೆಂಬಲವಾಗಿರುವ ಇನ್ನೊಂದು ಸಂಸ್ಥೆಯ ವಿಷಯ ದೇಶೀಯರ [illegible] ಕೊಡದೆ ಹೋದರೆ ನನ್ನ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲ. ಇದೇ ಈಗ ಸುಮಾರು ಎರಡು ವರ್ಷಗಳಿಂದ ದೇಶಸೇವೆಯನ್ನು ನಿರ್ಭೀತಿಯಿಂದ ಕೈಕೊಂಡಿರುವ 'ಕೊಡಗು' ಪತ್ರಿಕೆಯು. [illegible] ದೇಶವನ್ನು [illegible] ದೃಢತೆಯು [illegible] ಜಮೀನುದಾರರ ಸಂಘದ ಉದ್ದೇಶಗಳನ್ನು [illegible] ಸರಕಾರದವರ ಮುಂದಿಡಲು ಇದು ಬಹು ಸಹಕಾರಿಯಾಗಿದೆ. ರೈತರ ಕೋರಿಕೆಗಳನ್ನು ಜಮೀನುದಾರರ ಸಂಘದ ಮೂಲಕ ವರ್ಷಕ್ಕೊಂದು [illegible] ತಿಳಿಸಲು ಅವಕಾಶವಿರುವುದು. ಆದರೆ ಈ ಪತ್ರಿಕೆಯ ಮೂಲಕ ಪ್ರತಿವಾರವೂ ದೇಶದ ಅಭಿಲಾಷೆಗಳು ಅಧಿಕಾರಿಗಳ ಗಮನಕ್ಕೆ [illegible] ಅವುಗಳಿಗೆ ಸಹಕಾರಿಯಾಗುವುದು. [illegible] ನಮ್ಮ ದೇಶಕ್ಕೆ ಈಗ ದೊರೆತಿರುವ [illegible] ಪಡೆಯಲು ಈ ಪತ್ರಿಕೆಯ [illegible] ಬಹಳ ಇದೆ. [illegible] ಫಲಿತಾಂಶವೇ ಈಗ [illegible] ಇನ್ನೂ ಮುಂದೆ [illegible] ನಮ್ಮ [illegible] ಪಡೆಯಲು ಇದೇ ಮುಖ್ಯಸಾಧನವು. [illegible] ದೇಶದ [illegible] ಹ್ಯಾಗೆ ಭಾಗಿಗಳಾಗಿ [illegible] ನಮ್ಮ [illegible] ಬೇರೆ ಯಾವುದೂ ಇಲ್ಲ. ನಮ್ಮ ದೇಶದ [illegible] ನಡೆಯುತ್ತಿರುವ [illegible] ಅವರಿಗೆ ತಿಳಿಸಲು ಅನುಕೂಲವಾಗಿ [illegible] ಪ್ರೋತ್ಸಾಹ [illegible] ಕೊಡಬೇಕೆಂದು [illegible] ಪ್ರತಿಯೊಬ್ಬರೂ ಈ ಪತ್ರಿಕೆಗೆ ಚಂದಾದಾರರಾಗಿ ಇದರ [illegible] ಉತ್ತೇಜನ ಕೊಡಬೇಕು.

ಕೊಡಂದೇರ ಕುಟ್ಟಯ್ಯ

ದೇಶದ ಎಚ್ಚರಿಕೆಗೆ ಸಾಧನಗಳು.

ಅವು ಯಾವುವೆಂದರೆ

(1) ಜಮೀನ್ದಾರರ ಸಂಘ

(2) 'ಕೊಡಗು' ಪತ್ರಿಕೆ.

ಜಮೀನ್ದಾರರ ಸಂಘ.

[illegible] ದೇಶದ [illegible] ಜಮೀನುದಾರರ ಸಂಘವು [illegible] ಕೊಡಗ ಜಮೀನುದಾರರು [illegible] ಆ ಮೊದಲು [illegible] ಸೇರಿ [illegible] ಅಧಿಕಾರ [illegible] ನಮ್ಮ ದೇಶೀಯ [illegible] ಮುಖ್ಯಸ್ಥರಾದವರು [illegible] ನಾನು ತಿಳಿದಿದ್ದೇನೆ [illegible] ಹೇಳಿಕೊಳ್ಳುವ [illegible] ದೇಶದಲ್ಲಿ [illegible] ರೈತರಲ್ಲಿ ಕೆಲವರಿಗೆ [illegible]

ಹಾತವನ್ನು ಸರಕಾರಕ್ಕೆ ತಿಳಿಸಲು ಪ್ರಾರಂಭಿಸಿದರು. ಇದರಿಂದಲೂ ಪ್ರಯೋಜನವಾಗುವದಿಲ್ಲವೆಂತ ವ್ಯಕ್ತವಾಗುತ್ತಾ ಬಂದಾಗ ವರ್ಷವೆಲ್ಲಾ ಕಾಯಂ ಕೆಲಸ ಮಾಡುವ ಸಂಘವು ಸ್ಥಾಪಿತವಾಯಿತು.

ಸರಕಾರಿ ಉದ್ಯೋಗಸ್ಥರೇ ರೈತರ ಮತವನ್ನು ಕೊಡುವ ಕಾಲದಲ್ಲಿ ದೇಶದವರು ರಾಜಕೀಯ ವಿಚಾರದಲ್ಲಿ ಒಗ್ಗಟ್ಟಾಗಿ ಯೋಚಿಸದೆ ಇದ್ದರೂ ಆಯಾ ಗ್ರಾಮಕ್ಕೆ ಸಂಬಂಧಪಟ್ಟ ಆಡಳಿತಗಳಲ್ಲಿ ಗ್ರಾಮಪಂಚಾಯತಸ್ಥರು ತುಂಬಾ ಭಾಗಿಗಳಾಗಿ ಇತ್ತಿದ್ದರೆಂತ ತಿಳಿದು ಬರುತ್ತೆ. ಬ್ರಿಟಿಷ್ ಆಡಳಿತ ಪ್ರಾರಂಭವಾದ ಮೇಲೆ ಸಹ ಸಿವಿಲ್ ಜಡ್ಜಿಯರಿಗೆ ಪಂಚಾಯತಿ ಸಹಾಯವಿತ್ತೆಂಬದಕ್ಕೆ ರುಜುವಾತು ಇರುವಾಗ ಇತರ ಆಡಳಿತಗಳಲ್ಲಿ ಅಂಥಾ ಪಂಚಾಯತಸ್ಥರ ಮತವನ್ನು ಅವಲಂಬಿಸಿಯೇ ಉದ್ಯೋಗಸ್ಥರು ಮೇಲಧಿಕಾರಿಗಳಿಗೆ ಅಭಿಪ್ರಾಯಕೊಡುತ್ತಿದ್ದರಬೇಕೆಂತ ನಂಬಲೇಬೇಕಾಗಿದೆ. ಇಂಥಾ ಪಂಚಾಯತಿಗಳು ಪ್ರತಿ ಗ್ರಾಮದಲ್ಲೂ ಇದ್ದಾಗ ಸರಕಾರಿ ಆಡಳಿತದ ಸೋಂಕು ರೈತರಿಗೆ ತಟ್ಟುತ್ತಲೇ ಇರಲಿಲ್ಲ. ಬ್ರಿಟಿಷ್ ಸರಕಾರದ ಆಡಳಿತವು ಅಭಿವೃದ್ಧಿಯಾಗುತ್ತಾ ಬಂದಾಗ ಪಂಚಾಯತಿಗಳು ಮಾಯವಾಗುತ್ತಾ ಬಂದವು. ಯಾವ ತಕರಾರನ್ನೇ ಆಗಲೀ ತೀರಿಸಲಿಕ್ಕೆ ರೆವಿನ್ಯೂ ಸಿವಿಲ್ ಅಧಿಕಾರಸ್ಥಾನಗಳಿಗೆ ಹೋಗಲಿಕ್ಕೆ ಪ್ರಾರಂಭಿಸಿದರು. ಸರಕಾರದ ಕಟ್ಟು ಇನ್ನೂ ಬಿಗಿಯಾಗದೆ ಇದ್ದದ್ದರಿಂದ ಅಂಥಾ ಅಧಿಕಾರಿಗಳೂ ರೈತರ ಕ್ಷೇಮವನ್ನೇ ಮುಂದಿಟ್ಟು ಕೆಲಸಮಾಡುತ್ತಿದ್ದರು. ರೈತರಿಗೆ ಉದ್ಯೋಗಸ್ಥರಲ್ಲಿ, ಆದ್ದರಿಂದ ಸರಕಾರದಲ್ಲಿ ನಂಬಿಗೆ ಬೆಳೆಯಿತು. ತಂದೆತಾಯಿಗಳಂತೆ ರೈತರನ್ನು ಕಾಪಾಡುವ ಸರಕಾರವೆಂಬ ಅಭಿಪ್ರಾಯವು ಎಲ್ಲರಲ್ಲಿಯೂ ಸ್ಥಿರಗೊಳಿಸಿತು. ಸರಕಾರಿ ತೋಟಗಳು ರೂಲ್ಸುಗಳು (ಖಾನೂನು) ಬೆಳೆಯುತ್ತಾ ಬಂದಂತೆ ರೈತರಲ್ಲಿ ಕೆಲವರಿಗಾದರೂ ಸರಕಾರಿ ಉದ್ಯೋಗಸ್ಥರು ರೈತರ ಕ್ಷೇಮವು ಹೇಗೂ ಇರಲಿ, ತಮ್ಮ ಅಧಿಕಾರವನ್ನು ಖಾನೂನಿಗೆ ಸರಿಯಾಗಿ ನಡೆಸಿ ಮೇಲಧಿಕಾರಿಗಳ ಶಿಫಾರಸ್ಸು ಪಡೆಯುವದೇ ಮುಖ್ಯವೆಂತ ಅನ್ನಿಸತೊಡಗಿತು. ಇದರಿಂದ ಉದ್ಯೋಗಸ್ಥರಮೇಲೆ ನಾನು ಆಕ್ಷೇಪಿಸುತ್ತೇನೆಂತ ಯಾರೂ ಭಾವಿಸಬಾರದು. ಸರಕಾರಿ ಆಡಳಿತದಲ್ಲಿ ಖರ್ಚು ಹೆಚ್ಚಾಯಿತು. ಆದುದರಿಂದ ರೈತರಿಂದ ವಿಧವಿಧದ ತೆರಿಗೆ ತೆಗೆದುಕೊಳ್ಳಬೇಕಾಗಿ ಬಂತು. ಇಂಥಾ ತೆರಿಗೆಗಳನ್ನು ವಸೂಲುಮಾಡುವದೂ ಮತ್ತು ಹೊಸ ಹೊಸದಾಗಿ ಮಂಜೂರಾಗುತ್ತಾ ಬಂದ ಖಾನೂನುಗಳನ್ನು ಜಾರಿಮಾಡುವದೂ ಉದ್ಯೋಗಸ್ಥರ ಕೆಲಸವಾದ್ದರಿಂದ ಸರಕಾರದ ಉತ್ಪತ್ತಿಯನ್ನು ಉದ್ಯೋಗಸ್ಥರು ಖಾನೂನಿಗೆ ಸರಿಯಾಗಿಯೇ ನಡೆಯಲೇಬೇಕಾಯಿತು. ಆದರಿಂದ ಈ ಸರಕಾರದ ಹೊಸಹೊಸ ಖಾನೂನುಗಳೂ ಹೊಸಹೊಸ ತೆರಿಗೆಗಳೂ ಉದ್ಯೋಗಸ್ಥರಲ್ಲಿ ರೈತರ ನಂಬಿಗೆ ಕಡಿಸಲು ಕಾರಣವಾದವೇ ಹೊರತು ಉದ್ಯೋಗಸ್ಥರ ಸ್ವಭಾವಗುಣವಲ್ಲ. ಈ ರೀತಿ ಸರಕಾರಿ ಖಾನೂನುಗಳು ದಿನೇದಿನೇ ಹೊಸಹೊಸತಾಗಿ ಬರಲು ಪ್ರಾರಂಭವಾಗುತ್ತಾ ಬಂದಂತೆ ರೈತರ ಮುಖ್ಯಸ್ಥರು ಕೆಲವರು ಆಗಿಂದಾಗ್ಗೆ ಬರುವ ಖಾನೂನುಗಳ ಸಾಧಕ ಬಾಧಕಗಳನ್ನು ಯೋಚಿಸುವ ಜನರ ಸಮುದಾಯವೊಂದು ಬೇಕೆಂತ ನಿಶ್ಚೈಸಿ ಜಮೀನ್ದಾರರ ಸಂಘವನ್ನು ಸ್ಥಾಪಿಸಿದರು.

ಪ್ರಾರಂಭದಲ್ಲಿ ಅಲ್ಪಸ್ವಲ್ಪ ಜನರ ಕೂಟವಾದರೂ ಈ ಅಲ್ಪಸ್ವಲ್ಪ ಜನರು ರೈತರ ಮುಂದುಗಡೆ ದೇಶದ ಆಡಳಿತದ ವಿಷಯ ಚರ್ಚಿಸುತ್ತಾ ಬಂದಂತೆ ಸರಕಾರದ ಆಡಳಿತದಲ್ಲಿ ರೈತರ ಅಭಿಪ್ರಾಯವನ್ನೂ ಸೂಚಿಸಬಹುದೆಂತ ತಿಳಿಯುತ್ತಾ ಬಂದರು. ಹಾಗೆಯೇ ಸಂಘದಲ್ಲಿ ಮೆಂಬರುಗಳ ಸಂಖ್ಯೆ ಹೆಚ್ಚುತ್ತಾ ಬಂತು. ಸಂಘದಿಂದ ಪ್ರತ್ಯಕ್ಷ ಪ್ರಯೋಜನವಾದವು ಕೆಲವು ಇವೆ. ಪಕ್ಕಾ ಪಟ್ಟದನ್ನೆಲ್ಲಾ ಇಲ್ಲಿ ಹೇಳಬೇಕಾದದ್ದಿಲ್ಲ. ರೈಲ್ವೇ ಸೆಸ್ ಎಂಬ ಕಂದಾಯವನ್ನು ಹಾಕಲು ಸರಕಾರದವರು ಯೋಚಿಸಿದಾಗ ಸಂಘದ ಚಳವಳವನ್ನು ಬಹಳ ಜೋರಾಗಿ ನಡಿಸಿದ್ದರಿಂದ ಸರಕಾರದವರು ಈ ಹೊಸ ಕಂದಾಯ ಹಾಕುವ ಅಭಿಪ್ರಾಯವನ್ನೇ ಬಿಟ್ಟುಬಿಟ್ಟರು. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಪೋಲೀಸ್ ಅಸಿಸ್ಟೆಂಟ್ ಸುಪರಿಂಟೆಂಡೆಂಟ್ ಕೆಲಸಗಳನ್ನೂ ದೇಶೀಯರಿಗೇನೇ ಕೊಡಬೇಕೆಂತ ಸಂಘವು ಕೆಲಸಮಾಡಲು ತೊಡಗಿದಂದಿನಿಂದಲೇ ಹೇಳುತ್ತಲೇ ಇದೆ. ಈ ಕೋರಿಕೆ ಸಫಲವಾದದ್ದು ಎಲ್ಲರಿಗೂ ತಿಳಿದೇ ಇದೆ. ನಂಜರಾಜಪಟ್ಟಣ ತಾಲೋಕಿನಲ್ಲಿ ಪೈಸಾರಿಗಳನ್ನು ರಿಜರ್ವ್ ಫಾರೆಸ್ಟ್ ಮಾಡಿ ಗಂಧದ ತೋಟಮಾಡಬೇಕೆಂತ ಸರಕಾರದವರು ನಿಶ್ಚೈಸಿ ಬಂದಿತಾದದ್ದು ರದ್ದಾಯಿತು. ಇದಕ್ಕೆ ಸಂಘದ ಚಳವಳವೂ ಸ್ಥಳೀಯ ರೈತರ ಚಳವಳವೂ ಕಾರಣವೆಂಬದು ಎಲ್ಲರಿಗೂ ಜ್ಞಾಪಕದಲ್ಲಿ ಇರಬೇಕು. ಸರಕಾರಿ ಆಡಳಿತದಲ್ಲಿ ಖರ್ಚು ಕಡಿಮೆಮಾಡಲಿಕ್ಕಾಗಿ ಎಲ್ಲಾ ಖೈದಿಗಳಿಗೆ ಕೈಗಾರಿಕೆಗಳೇ [illegible] ಕಲಿಯಲಿಕ್ಕೆ ಅವಕಾಶ ದೊರೆಯುವಂತೆ ಬಹು ದೀರ್ಘಕಾಲದ ಖೈದಿಗಳನ್ನು ಕಣ್ಣೂರಿಗೆ ಕಳುಹಿಸಿದರೆ ಉತ್ತಮವೆಂತ ಸಂಘದ ಠರಾವುಗಳು [illegible] ಮೇಲೆ ಇದು ಜಾರಿಗೆ ಬಂದು ಬಿಟ್ಟಿತು. [illegible] ಮುನಸಿಪಾಲಿಟಿಗೆ ರೈತರ [illegible] ಕ್ಷರಾಗಬೇಕೆಂತ ಪ್ರತಿವರ್ಷವೂ ಠರಾವು [illegible] ದ್ದರಿಂದ ಈಗಿನ ಅಧ್ಯಕ್ಷರಾಗಿದ್ದ ಅಸಿಸ್ಟೆಂಟ್ ಕಮಿಷನರೂ, ಕಮಿಷನರು ಸಹ ಆಕ್ಷೇಪಿಸಿದಾಗ್ಯೂ ಸಹ ಮಂಜೂರಾಗಿಯೇ ಬಿಟ್ಟಿತು. ಪ್ರೆಸಿಡೆಂಟ್ ವೈಸ್‌ಪ್ರೆಸಿಡೆಂಟ್ ಕೆಲಸವೂ ಸಂಘದ ಕೋರಿಕೆಯಂತೆಯೇ ಮಂಜೂರಾದದು. [illegible] ಬೇಬೀಯಂಗೇನ್ [illegible] ಜಾರಿಗೆ ಬಂದ [illegible] ಸಂಘದ ಠರಾವುಗಳ ಪಲೇ [illegible] ಕಾಫಿ ಕ್ರಯ ಅತಿ ಕಡಿಮೆಯಾದಾಗ ಕಾಫಿಪ್ಲಾಂಟರುಗಳಿಗೆ ಸರಕಾರದಿಂದ ಧನಸಹಾಯವು ಬಂದುದಲ್ಲದೆ [illegible] ಈವರೆಗೆ ಸಿಕ್ಕಿದ್ದು ಸಂಘದ ಕೋರಿಕೆಯಿಂದಲೇ. ಇ[illegible] ಮಾಲಗಾರರಿಗೆ ಕಂದಾಯ ಮಾಫಿ ಸಿಕ್ಕಿದ್ದು ಸಂಘದ ಬಲದಿಂದಲೇ. ವೀರರಾಜಪೇಟೆಯಲ್ಲಿ ಹೈಸ್ಕೂಲು ಬಂದದ್ದು ಸಂಘದಿಂದಲ್ಲವೇ? ಎಲ್ಲಕ್ಕಿಂತಲೂ ಪ್ರಾಮುಖ್ಯವಾದ ಈಗ ಬಂದಿರುವ ಆಡಳಿತ ಸುಧಾರಣೆಯು ದೊರಕಿದ್ದು ಸಂಘವಿದ್ದದ್ದರಿಂದಲೇ. [illegible] ಸೆಕ್ರೆಟರಿ ಮುಂತಾದವರೂ, ವೈಸ್‌ರಾಯರೂ [illegible] ಕಡೆಗಳಲ್ಲಿ ಬಹುವಿಧದ ಸುಧಾರಣೆ ಕೊಡುವ [illegible] ದೇಶದವರ ಅಭಿಪ್ರಾಯ ತೆಗೆದುಕೊಳ್ಳುತ್ತಿದ್ದಾಗ ಸಂಘವಿದ್ದದ್ದರಿಂದ ಈ ದೇಶದ ಹೆಸರು [illegible] ರಿಪೋರ್ಟಿಗೆ ಸೇರಲಿಕ್ಕೆ ಅವಕಾಶವಾಯಿತು. ಆಗ ಸಂಘದ ಪ್ರತಿನಿಧಿಗಳು ಕೇಳುವದು ಬಹಳ ಕಡಿಮೆಮಾಡಿದ್ದರಿಂದಲೇ ನ್ಯಾಯವಿಧಾಯಕಸಭೆಯು ಮಂಜೂರಾಗಲು ಇಷ್ಟು

ಜಮೀನುದಾರರ ಸಂಘಕ್ಕೆ ಮೆಂಬರುಗಳಾಗಿ ದೇಶಸೇವೆ ಮಾಡಿರಿ.

ಸಾವಕಾಶವಾದದ್ದು. ಅದರೂ ಮಾಂಟ್‌ಫರ್ಡ್ ರಿಪೋರ್ಟ್ ಪ್ರಕಟವಾಗಂದಿನಿಂದ ಸಂಘವು ಎಡೆಬಿಡದೆ ದೊಡ್ಡ ಪ್ರಾಂತ್ಯಗಳ ಕೌನ್ಸಿಲ್ ನಮಗೆ ಬೇಕೆಂತ ಈವರೆಗೂ ಕೋರುತಿದ್ದರಿಂದ ಈ ನ್ಯಾಯವಿಧಾಯಕಸಭೆಯು ಮಂಜೂರಾದದ್ದು. ಈ ರೀತಿ ಮುಖ್ಯ ಮುಖ್ಯ ಪ್ರಯೋಜನಗಳನ್ನು ಹೇಳಿದ್ದರಿಂದ ಸಂಘಕ್ಕೆ ಅಸಾಧ್ಯವೇ ಆಗಲಿಲ್ಲವೆಂತ ಊಹಿಸಬಾರದು. ಮಡಿಕೇರಿಗೆ ಕಾಲೇಜ್ ಇನ್ನೂ ಸಿಕ್ಕಿರುವದಿಲ್ಲ. ಹಾರಂಗಿನಾಲೆ ಇನ್ನೂ ಮಂಜೂರಾಗಲಿಲ್ಲ. ಬೇತರಿ ಸೇತುವೆ ಇನ್ನೂ ಆಗಲಿಲ್ಲ. ಡಿಸ್ಟ್ರಿಕ್ಟ್‌ಬೋರ್ಡ್ ಆಡಳಿತವು ರೈತರ ಕೈವಶವಾಗಲಿಲ್ಲ. ಇನ್ನೂ ಅನೇಕ ಕೋರಿಕೆಗಳು ಕೈಗೂಡಲಿಲ್ಲ. ಆದರೂ ಜನರ ವಿದ್ಯಾವಸ್ಥೆಯು ಕೆಲವು ಮಟ್ಟಿಗಾದರೂ ಸಂಘದಿಂದಲೇ ಹೋಗಿದ್ದದ್ದರಿಂದ ಈ ಲೋಪಗಳನ್ನೆಲ್ಲಾ ಸಂಘವು ಇನ್ನೂ ಬಲವಾಗಿಯೂ ಒಗ್ಗಟ್ಟಿನಿಂದಲೂ ಕೆಲಸಮಾಡಿದರೆ ಹೋಗಲಾಡಿಸಿಕೊಳ್ಳಬಹುದು.

ಆದರೆ ಸರಕಾರವು ಈ ಸಂಘದ ಮಾತು ವಿಚಾರದಂತಾಗಬೇಕಾದರೆ ದೇಶದಲ್ಲಿರುವ ಪ್ರಾಯಬಂದ ಪ್ರತಿಯೊಬ್ಬ ರೈತನೂ, ಪಟ್ಟಣನಿವಾಸಿಯೂ ಸಂಘದ ಮೆಂಬರಾಗಬೇಕು. ದೇಶದ ಪ್ರತಿಯೊಬ್ಬ ಪ್ರಜೆಯೂ ಸಂಘಕ್ಕೆ ಸೇರಿ ತನ್ನ ಹಕ್ಕುಗಳನ್ನು ಸ್ಥಾಪಿಸಿಕೊಳ್ಳಲಿಕ್ಕೂ ತನ್ನ ದುರ್ಗತಿಗಳಿದ್ದರೆ ಅವನ್ನು ದೂರಮಾಡಲಿಕ್ಕೂ, ದೇಶಕ್ಕೆ ಸ್ವತಂತ್ರ ಪಡೆಯಲಿಕ್ಕೂ ಕೆಲಸಮಾಡಬೇಕು. ಸಂಘದಲ್ಲಿ ದೇಶವು ಒಗ್ಗಟ್ಟಾದರೆ ಯಾವತರದ ಸುಧಾರಣೆಯನ್ನಾದರೂ ಪಡೆಯಬಹುದು. ಒಗ್ಗಟ್ಟಿನಿಂದ ಸಂಘದ ಮೆಂಬರುಗಳೆಲ್ಲರೂ ಒಂದೇ ಅಭಿಪ್ರಾಯದವರಾಗಬೇಕೆಂತಿಲ್ಲ. ಸಂಘಕ್ಕೆ ಮೆಂಬರಾಗಿ ಪ್ರತಿಯೊಬ್ಬನೂ ತನ್ನ ಮತವನ್ನು ಕೊಡಲೇಬೇಕು. ಆದರೆ ಸಂಘದ ಬಹುಮತದಂತೆ ಕಾರ್ಯ ನಡೆಯಬೇಕು.

ಕೌನ್ಸಿಲ್ ಬಂದದ್ದರಿಂದ ಸಂಘದ ಅವಶ್ಯಕತೆಯೇ ಇಲ್ಲದಾಗಿದೆ ಎಂತ ಕೆಲವರು ಯೋಚಿಸಬಹುದು. ಸಂಘವು ಚರ್ಚೆಮಾಡಿಕೊಳ್ಳುತ್ತಿದ್ದ ಠರಾವುಗಳೆಲ್ಲಾ ಕೌನ್ಸಿಲಿನಲ್ಲಿ ಚರ್ಚೆಮಾಡಿಕೊಳ್ಳಬಹುದು. ಇದೇನೋ ನಿಜವೇ. ಆದರೆ ಕೌನ್ಸಿಲಿಗೆ ಹೋದ ಮೆಂಬರುಗಳು ಪ್ರಜಾಹಿತವನ್ನು ಸಾಧಿಸುತ್ತಾರೋ ಇಲ್ಲವೋ ಎಂಬದನ್ನು ದೇಶವು ಬಹು ಜಾಗರೂಕತೆಯಿಂದ ನೋಡಿಕೊಳ್ಳುತ್ತಿರಬೇಕು. ಇದು ಸಂಘದ ಮೂಲಕ ಸಾಧ್ಯವೇ ಹೊರತು ಬೇರೆ ಅನುಕೂಲವಿಲ್ಲ. "ದೇಶದ ಪ್ರತಿಯೊಬ್ಬ ಓಟರು ಮತ್ತು ಪ್ರತಿಯೊಬ್ಬ ರೈತನೂ ಸಂಘದ ಮೆಂಬರಾಗಲು ಅವಕಾಶವಿರುವಾಗ ಬೇರೆ ಸಂಸ್ಥೆಯನ್ನು ಏರ್ಪಡಿಸುವ ಅವಶ್ಯಕತೆಯೇ ಇಲ್ಲ.

ಕೌನ್ಸಿಲ್ ಬಂದದ್ದರಿಂದ ಪ್ರತಿಯೊಬ್ಬ ಪ್ರಜೆಯೂ ಎಚ್ಚತ್ತುಕೊಳ್ಳಬೇಕಾದ ಅವಶ್ಯಕತೆಯು ಬಹಳವಾಯಿತು. ಕೆಲವರಿಗಾದರೂ ಸಂಘದಲ್ಲಿ ಕೂಗಿಕೊಳ್ಳುವದು ಸರಕಾರದ ಗಮನಕ್ಕೆ ಬೀಳುವದು ಕಷ್ಟವಾಗುತ್ತಿತ್ತು. ಸಂಘದ ಕೂಗು ಸರಕಾರಕ್ಕೆ ತಲಪಿಸಲಿಕ್ಕೆ ಏರ್ಪಾಡಾದ ಸಂಸ್ಥೆಯೇ ಕೌನ್ಸಿಲೆಂದರೆ ತಪ್ಪಾಗಲಾರದು. ಕೌನ್ಸಿಲಿಗೆ ಹೋದ ಮೆಂಬರುಗಳು ಸರಕಾರದ ಮುಗುಳುನಗೆಗೂ, ಶಹಭಾಸಿಗೂ ಮರುಳಾಗಿ ಪ್ರಜೆಗಳ ಹಿತವನ್ನು ಮರೆಯುವ ಸಂಭವವಿದೆ. ಅವರಿಗೆ ಎಚ್ಚರ ಕೊಡುತ್ತಿರುವದು ಸಂಘದ ಕೆಲಸವಾಗಿದೆ. ಸಂಘವೇ ದೇಶದ ಪಾರ್ಲಿಮೆಂಟು ಆಗುವವರೆಗೆ ಸಂಘದ ಅವಶ್ಯಕತೆ ಇದ್ದೇ ಇದೆ.

2. "ಕೊಡಗು" ಪತ್ರಿಕೆ.

ಈ ಸಂಸ್ಥೆಯು ನ್ಯಾಯವಿಧಾಯಕ ಸಭೆಗಿಂತಲೂ ಪ್ರಾಮುಖ್ಯವಾದದ್ದೆಂತ ನಾನು ಮನಃಪೂರ್ತಿಯಾಗಿ ಹೇಳುತ್ತೇನೆ. ಸ್ವರಾಜ್ಯವೇ ಬಂದಾಗಲೂ ವೃತ್ತಾಂತಪತ್ರಿಕೆಗಳೇ ದೇಶವನ್ನು ಆಳುವದೆಂದರೆ ಉತ್ಪ್ರೇಕ್ಷೆಯಲ್ಲ. ಇಂಗ್ಲೆಂಡಿನ ಆಡಳಿತವನ್ನು ರೂಪಕ್ಕೆ ತರುವದು ಅಲ್ಲಿನ ವೃತ್ತಾಂತಪತ್ರಿಕೆಗಳು. ನಮ್ಮ ಈ ದೇಶದಲ್ಲಿ ಈ ಒಂದು "ಕೊಡಗು" ಪತ್ರಿಕೆಯು ದೇಶವನ್ನು ಸರಕಾರವನ್ನು ಎಚ್ಚರಿಸಲಿಕ್ಕೆ ಸಾಕೆಂತ ನಾನು ಹೇಳುವದಿಲ್ಲ. ಆದರೆ ಈ ಪತ್ರಿಕೆಯು ದೇಶದ ಪ್ರತಿಯೊಬ್ಬನ ಉದಾರಾಶ್ರಯಕ್ಕೆ ಗುರಿಯಾಗಬೇಕಾಗಿದೆ. ಇದು ದೇಶದ ಜನಸಮುದಾಯದವರು ಹದರಿಕೆ ಹಾಕಿ ಸ್ಥಾಪಿಸಿದ ಪತ್ರಿಕೆಯಾದ್ದರಿಂದ ಈ ಪತ್ರಿಕೆಯ ಅಭಿಪ್ರಾಯಗಳು ಒಬ್ಬನ ಅಥವ ಬಲಾಢ್ಯರ ಚಿಕ್ಕಕೂಟದ ಅಭಿಪ್ರಾಯವಾಗಿರಲು ಸಾಧ್ಯವಿಲ್ಲ. ಶೇರ್‌ದಾರರು ರೈತರೇ ಆದ್ದರಿಂದ ಈ ಪತ್ರಿಕೆಯ ಮತವೇ ದೇಶದ ಮತವೆಂದರೆ ಕಾರ್ಯತಃ ನಿಜವಾಗಿದೆ.

ಈ ಎರಡು ವರ್ಷ ಕಾಲ ಕೆಲಸಮಾಡಿದ್ದರಿಂದ ರೈತರಿಗೆ ಪ್ರಯೋಜನ ಬಂದದ್ದು ಅನೇಕವಿದೆ. ಅದಕ್ಕೆ ಅಮೂಲ್ಯ ಬೆಲೆಯುಳ್ಳ ಪ್ರಯೋಜನವು ಯಾವದೆಂದರೆ ದೇಶದವರನ್ನು ಎಚ್ಚರಿಸಿದ್ದು. ದೇಶದವರಿಗೆ ತಮ್ಮ ಕರ್ತವ್ಯವನ್ನು ಸೂಚಿಸಿಕೊಡುತ್ತಿರುವದರಿಂದ ಕುಂಭಕರ್ಣನ ನಿದ್ರೆಯಂತಿದ್ದ ರೈತರ ನಿದ್ರೆಯು ಎಚ್ಚರವಾಯಿತು. ಸಂಘವು ಹತ್ತುವರ್ಷಗಳಿಂದ ಮಾಡಿದ ಕೆಲಸವು ಸರಕಾರಕ್ಕೂ ಮೀಟಿಂಗಿಗೆ ಹಾಜರಾಗುತ್ತಿದ್ದ ಮೆಂಬರುಗಳಿಗೂ ಅವರ ಮೂಲಕ ಅವರ ಇಷ್ಟಮಿತ್ರರಿಗೂ ತಿಳಿಯುತ್ತಿತ್ತೇ ಹೊರತು ಈಗಿನಂತೆ ಜನಸಮುದಾಯಕ್ಕೆ ತಿಳಿಯುತ್ತಿರಲಿಲ್ಲ.

ಇಂಥ ಉಪಯೋಗಕಾರಿ ಪತ್ರಿಕೆಯನ್ನು ಚಿರಂಜೀವಿಯಾಗಿ ಮಾಡಬೇಕಾದರೆ ದೇಶದ ಪ್ರತಿಯೊಬ್ಬನ ಉದಾರಾಶ್ರಯವು ಬೇಕಾಗಿದೆ. ಪಶ್ಚಿಮಾತ್ಯ ದೇಶಗಳಲ್ಲಿ ಲಕ್ಷಗಟ್ಲೆ ಚಂದಾದಾರರಿರುವ ಪತ್ರಿಕೆಗಳಿವೆ. ಇಂಡಿಯಾದ ಇತರ ಪ್ರಾಂತ್ಯಗಳಲ್ಲಿರುವ ಇಂಗ್ಲಿಷ್ ಮತ್ತು ದೇಶಭಾಷೆಯ ಪತ್ರಿಕೆಗಳಿಗೂ ಹತ್ತು ಇಪ್ಪತ್ತು ಸಾವಿರ ಚಂದಾದಾರರಿರುವದುಂಟು. ನಮ್ಮ ಈ ಪತ್ರಿಕೆ ನಮ್ಮ ದೇಶದ ಹೊರಗಿನಿಂದ ಆಶ್ರಯದ ನಿಕ್ಕುವ ಸಂಭವ ಕಡಿಮೆ. ಆದ್ದರಿಂದ ಪ್ರತಿಯೊಬ್ಬ ದೇಶಭಕ್ತನೂ "ಕೊಡಗು" ಪತ್ರಿಕೆಯನ್ನು ತರಿಸಿ ಆ ಕಡೆ ದೇಶದ ಸೇವೆ ಮಾಡಲಿಕ್ಕೆ ಅನುಕೂಲವಿದೆ.

ಸಿ. ಯಸ್. ವೆಂಕಪ್ಪಯ್ಯ

ಗ್ರಾಮದೇವತೆಗೆ ತಿರುಗಿರಿ.

ಜನಾಂಗವು ಹಳ್ಳಿಗಳಲ್ಲಿ ನಗರ ವಸತಿಗಳಲ್ಲು ವಾಸಿಸುತ್ತಿಂದ ಅನೇಕಾವರ್ತಿ ಹೇಳಿದಾಗಿದೆ. ಅದ್ದರಿಂದ ಸ್ವರಾಜ್ಯಕ್ಕೆ ಆರುವದಾಯವನ್ನು ಹಳ್ಳಿಗಳಲ್ಲಿ ಸಗುದಿಸಲುಗಳಲ್ಲೇ ಮೊದಲು ಹಾಕಬೇಕಾಗಿದೆ. ನಮ್ಮ ಹಳ್ಳಿಗಳಲ್ಲಿರುವ, ಗುಡಿಸಲುಗಳಲ್ಲಿ ವಾಸಿಸುವವರ ಸ್ಥಿತಿಯನ್ನು ಚನ್ನಾಗಿ ಆಲೋಚಿಸಿ, ಅಲ್ಲಿರುವ ನ್ಯೂನತೆಗಳನ್ನು ಹೋಗಲಾಡಿಸುವದರಿಂದ ನಾವು ಧನ್ಯರಾಗಬೇಕಲ್ಲವೇ? ಪ್ರಿಯ ಸಹೋದರರೇ, ಗ್ರಾಮಗಳಲ್ಲಿರುವ ಸ್ಥಿತಿಯನ್ನು ಏನೆಂದು ಹೇಳಲಿ! ನಮ್ಮ ಹಿರಿಯರಲ್ಲಿದ್ದಂಥ ಅನ್ಯೋನ್ಯ ಪ್ರೀತಿಭಾವವನ್ನು ಮರೆತು, ಗ್ರಾಮಗಳಲ್ಲಿಯೂ ಮನೆಗಳಲ್ಲಿಯೂ ನಾವು ಪರದೇಶಿಗಳೋಪಾದಿಯಲ್ಲಿ ಜೀವಿಸುವವರಾಗಿಲ್ಲವೇ? ಸ್ವಾರ್ಥತೆಯಿಂದ ಐಶ್ವರ್ಯವನ್ನು ಮೋಹಿಸಿ, ಅತಿಭೋಗಕ್ಕೆ ಗುರಿಯಿಟ್ಟು, ತಿಳುವಳಿಕೆಯೂ ಮತ್ತು ಅನುಕೂಲವೂ ಕಡಿಮೆಯಾಗಿ ನಿಸ್ಸಹಾಯಕರಾಗಿರುವ ನಮ್ಮ ಸಹೋದರರ ಸುಖಕ್ಕೆ ನಿಗಾ ಕೊಡದೆ ಇರುವದರಿಂದ ಗ್ರಾಮದ ಅಭಿವೃದ್ಧಿಗೆ ಕುಂದಕ ಬಂದು ದೇಶವು ಕ್ಷಯವಾಗುತ್ತಾ ಬರುತ್ತದಲ್ಲವೇ! ಗ್ರಾಮದಲ್ಲಿ ಹುಟ್ಟಿ, ಗ್ರಾಮದಲ್ಲಿ ತಾಯಿಯೊಲೆಹಾಲು ಉಂಡು, ಗ್ರಾಮದ ಅನ್ನವನ್ನು ತಿಂದು ಗ್ರಾಮದ ಮೈದಾನಗಳಲ್ಲಿ (ಮಾಡುಗಳಲ್ಲಿ) ಓಡಾಡಿಕೊಂಡು ಬೆಳೆದು, ಗ್ರಾಮದ ಸಂಪಾದನೆಯಿಂದ ವಿದ್ಯೆಯನ್ನು ಕಲಿತು, ಜ್ಞಾನಿಯಾಗಿಯೂ ಕೂಡ, ಸ್ವಾರ್ಥತೆಯಿಂದ ಐಶ್ವರ್ಯವನ್ನೂ, ಭೋಗವನ್ನೂ ಮೋಹಿಸುವವರಾಗಿ ಪಟ್ಟಣವನ್ನು ಸೇರಿ ಗ್ರಾಮವನ್ನು ನಾಶಪಡಿಸುತ್ತೇವಲ್ಲವೇ? ರಾಮ! ರಾಮ! ಆಹಾ! ಗ್ರಾಮದ ಬಡತನವೇ! ಗ್ರಾಮದ ಅನಾರೋಗ್ಯವೇ! ಗ್ರಾಮದ ಇಗ್ಗಟ್ಟುತನವೇ!!! ಇದೇನುಮಾಯೆ! ನಮ್ಮ ಅಜ್ಜಂದಿಯರ ಔದಾರ್ಯಗುಣವೂ, ಅವರ ಸಹೋದರಭಾವದ ಪ್ರೀತಿಯೂ, ಗ್ರಾಮದ ಸುಭಿಕ್ಷೆಯೆಲ್ಲಿ ಏನಾದವು! ಗ್ರಾಮದ ಸಮುದಾಯದಲ್ಲಿ ಮೋಹಿಸುತ್ತಿದ್ದಂಥ ನಮ್ಮ ಹಿರಿಯರ ಸಂತತಿಯಲ್ಲಿ ಹುಟ್ಟಿ ಅವರ ರಕ್ತವು ನಮ್ಮ ಶರೀರದಲ್ಲಿ ಚಲಿಸುತ್ತಿರುವಾಗ್ಯೂ ಹೀಗೆ ಈ ಮೌಢ್ಯವು ನಮ್ಮನ್ನು ಮುಚ್ಚಿಕೊಂಡಿರುವದು ಗ್ರಾಮದಲ್ಲಿ ಎಲ್ಲಿ ನೋಡಿದರೂ ಬಡತನ, ಎಲ್ಲಿ ನೋಡಿದರೂ ಅನಾರೋಗ್ಯ, ಎಲ್ಲಿ ನೋಡಿದರೂ ಇಗ್ಗಟ್ಟು. ಸ್ವತಂತ್ರವು ಪ್ರತಿಯೊಬ್ಬನ ಸ್ವಂತಹಕ್ಕಲ್ಲವೆಂದೂ ಧರ್ಮವನ್ನು ಕಾಪಾಡಲು ವ್ಯಕ್ತಿ ಸಮುದಾಯಕ್ಕೆ ಒಳಪಟ್ಟಿರತಕ್ಕದೆಂದೂ ತಿಳಿಯುವವರೆಗೂ ಗ್ರಾಮದ ಸುಲಿಗೆಯಿಂದುಂಟಾಗಿರುವ ಬಡತನವು ಹೋಗುವದಿಲ್ಲ. ಧರ್ಮವನ್ನು ವಿವರಿಸುವದು ಸುಲಭಸಾಧ್ಯವಲ್ಲ. ಅನೇಕ ಪ್ರಾಜ್ಞಾನಿಗಳೂ ಋಷಿಪ್ರೇಷ್ಠರೂ ಈ ವಿಷಯದಲ್ಲಿ ಸೋತಿರುವರು. ಅಂಥಾ ಮಹಾತ್ಮರ ಧರ್ಮಬೋಧನೆಯನ್ನು ತಿಳಿಯಲು ಉಪೇಕ್ಷೆಮಾಡಿದ್ದರಿಂದಲೇ ಈಗಿನ ಸ್ಥಿತಿಯು ನಮ್ಮನ್ನು ಮುಚ್ಚಿಕೊಂಡಿರುವದೆಂದರೆ ಏನೂ ತಪ್ಪಾಗಲಾರದು. ಪಟ್ಟಣವಾಸಿಗಳಾದಂಥ ದೇಶಬಾಂಧವನೇ, ಗ್ರಾಮವನ್ನು ಸುಲಿಗೆಮಾಡಿ ನೀನು ಐಶ್ವರ್ಯವಂತನಾಗಿ ಅತಿಭೋಗಿಗಳಾದರೂ ಕೂಡ, ಗ್ರಾಮವು ಬಡತನಕ್ಕೊಳಗಾದರೂ, ಸಂಪಾದಿಸಿದ ಪಟ್ಟಣದ ಐಶ್ವರ್ಯವು, ಮರಳಿನ ಮೇಲೆ ಕಟ್ಟಿದ ಅರಮನೆಯಂತೆ ಎಂದು ಇನ್ನಾದರೂ ಯೋಚಿಸುವಿಯೋ? ಗ್ರಾಮದ ವೃದ್ಧಿಯಿಂದಲೇ ದೇಶವು ಅಭಿವೃದ್ಧಿಯಾಗುವದಲ್ಲದೆ, ಪಟ್ಟಣ ಅಭಿವೃದ್ಧಿಯಾಗುತ್ತಾ ಬಂದಹಾಗೆ ದೇಶವು ಕುಗ್ಗುತ್ತಾ ಬರುತ್ತೆಂಬದರಲ್ಲಿ ಯಾವ ಸಂಶಯವೂ ಇಲ್ಲದ್ದರಿಂದ, ಪಟ್ಟಣವಾಸಿಯೇ, ಇನ್ನಾದರೂ ನೀನು ಹುಟ್ಟಿದ ಗ್ರಾಮವೆಂಬ ತೊಟ್ಟಿಲನ್ನು ಉದ್ಧಾರಕ್ಕಾಗಿ ನಿನ್ನ ತನುಮನಧನವನ್ನು ಅರ್ಪಿಸಿ ಈ ದೇಶವನ್ನು ಕಾಪಾಡುವಿಯೋ? ಆಹಾ! ನಿನ್ನ ತೊಟ್ಟಿಲಾದ ಆ ಗ್ರಾಮದ ಮಾತೆಯು ಎಷ್ಟೋ ಕಷ್ಟಪರಿತಾಪಗಳಿಗೊಳಗಾಗಿವೆಯೆಂದು ನಿನಗೆ ತಿಳಿದಿರುವದೋ? ನಿನಗೆ ಏನಾದರೂ ಅಪಾಯ ಸಂಭವಿಸಿದರೆ ಎಂಬದನ್ನು ಎಷ್ಟು ಗ್ರಾಮಸ್ಥರು ನಿನ್ನ ಕಾವಲಿಗೆ ಬಂದರು ನೀನು ಯೋಚಿಸುವೆ! ಇಷ್ಟೆಲ್ಲಾ ಆಕೆ ಕಾಪಾಡಿದ ನಿನ್ನ ಗ್ರಾಮವನ್ನು ನೀನು ಮರೆತರೆ ಏನು ಅರ್ಥ? ನಿನ್ನ ಗ್ರಾಮವನ್ನು ನೀನೇ ನಿನ್ನ ಅಭಿವೃದ್ಧಿಗೆ ಬಡಿಸಿ ಕುಂದಕ ಬರುವದರಿಂದ ಇನ್ನಾದರೂ ನೀನು ಜನ್ಮವೆತ್ತಿದ ಪವಿತ್ರ ಗ್ರಾಮವನ್ನು ಮರೆಯದೆ ನಿನ್ನ ಹಿತವನ್ನು ತೋರಿಸುವಿಯಾ ಈ ನಿನ್ನ ಕರ್ತವ್ಯವನ್ನು ನೀನು ತಪ್ಪಿದರೆ ಗ್ರಾಮವು ನಿನ್ನನ್ನು ...

ಪಟ್ಟಣವಾಸಿಯಾದ ಸಹೋದರನೇ, ನೀನೇನು ನಿನ್ನನ್ನು ಕ್ಷಮಿಸಿ, ನಿನ್ನನ್ನು ಮರೆತಿರುವ ಸಹೋದರ ಸಹಜಾರ ನಿರೀಕ್ಷಣೆಯಿಂದ ಕಾಯುತ್ತಿರುವ ಆ ಗ್ರಾಮಮಾತೆಯ ಮಾತನ್ನು, ನೀನು ನಿನ್ನ ತಾಯಿಯ ಸೇವನವನ್ನು ಮಾಡಿದಂತಾಗುವದೇ? ನಿನ್ನ ಬಡತನವೂ, ನಿನ್ನ ಅನಾರೋಗ್ಯವೂ ನಿನ್ನ ಇಗ್ಗಟ್ಟುಗಳೂ ನಿನಗೆ ಕೂಡ ಉತ್ತರವಾದಿಯೆಂಬದನ್ನು ಮರೆಯಬೇಡ. ಯಾಕೆ? ನೀನೇ ಮುಖ್ಯವಾದ ಜವಾಬ್ದಾರನು. ನೀನು ಗ್ರಾಮದಲ್ಲಿ ವಾಸವಾಡಿಕೊಂಡಿರುತ್ತೀ ಎಂದಮಾತ್ರಕ್ಕೆ ನಿನ್ನ ಜವಾಬ್ದಾರಿಕೆಯು ತಪ್ಪಿದಂತಾಗುವದಿಲ್ಲ. ಗ್ರಾಮಾಭಿವೃದ್ಧಿಯನ್ನೇ ಬಯಸುತ್ತಿದ್ದಂಥ ಹಿರಿಯರ ರಕ್ತವು ನಿನ್ನ ಶರೀರದಲ್ಲು ಚಲಿಸುತ್ತಿದೆ. ಹಿರಿಯರ ಕಾಲದಲ್ಲಿ ಗ್ರಾಮದಲ್ಲು ಇದ್ದಂಥ ಪರಸ್ಪರ ಸಹಾಯದ ಗುಣಗಳನ್ನು ಚನ್ನಾಗಿ ಮನಸ್ಸಿಗೆ ತಂದು ಅದರಂತೆ ಅನುಸರಿಸು. ನೀನು ಗ್ರಾಮದಲ್ಲು ಇದ್ದಂಥ ಪರೋಪಕಾರದ ಧರ್ಮದ ಕಟ್ಟುಗಳನ್ನು ಅಭಿವೃದ್ಧಿಪಡಿಸಿ ನೀನು ಅಭಿವೃದ್ಧಿ ಹೊಂದುವವನಾಗು. ನಿನ್ನ ದೇವಸ್ಥಾನವನ್ನು, ಅಂಬಲಗಳು, ಮಹಾನವಮಿ ಗ್ರಾಮ ಕೋಟೆಗಳ ನಿಂತಿಗೆ ಬಿಡಲ್ಪಟ್ಟವರಾಗಿ ಸಮುದಾಯ ಅಭಿವೃದ್ಧಿಯಲ್ಲು ಬಂಗಿ ಬಾವಿ, ನಿನ್ನ ಕೆಲಸಗಳಲ್ಲವನ್ನೂ ಆಗುವಮ್ಮ ಸ್ವಂತ ಮಾತೆಕೊಂತು ನೆರವಾಯಿ ನಿರೀಕ್ಷಿಸುತ್ತಿದ್ದಾಳೆ. ಸ್ವತಂತ್ರನಾಗಿ ಗ್ರಾಮದ ಸ್ವಾತಂತ್ರ್ಯವನ್ನೂ ತನ್ನ ಆತ್ಮದೇಶದ ಸ್ವತಂತ್ರದ ಸ್ವಾತಂತ್ರ್ಯವನ್ನು ನಿನ್ನನ್ನು ಬಿಟ್ಟು ಹೋದಂಥವನ ಪಟ್ಟಣದಲ್ಲಿ ವಾಸಮಾಡುವದೆಂದು ಅರಿಸಿಕೊಂಡಿದ್ದರೂ ಕೂಡ, ನಿನಗೆ ನಾಚಿಕೆಯಾಗಿ, ನಿನ್ನವರಿಗೆ ಸಂತೋಷ ಭಾವದಿಂದ ನಟಿಸಿ, ನಿನ್ನನ್ನು ಕುರಿತ ದೇಶದಿಂದ ಅವನಿಗುಂಟಾಗಿರುವ ಪರಾಧೀನತೆಯನ್ನು ಬಂಧನವನ್ನೂ ಆಗ್ಗಾಗ್ಯ ಬಿಡುಗಡೆ ಹೊಂದು ಆಲೋಚಿಸುತ್ತಾ ನಿನ್ನ ಸುಖದಿಂದ ಬೇರೆ ಅವನು ಸ್ವತಂತ್ರನಾಗಲು ಸಾಧ್ಯವೆಂದೂ, ನಿನ್ನ ಬಡತನವು ಅವನನ್ನು ಸಾಯಿಸುತ್ತಿದೆಯೆಂದೂ, ನೀನು ಸಕ್ಕರೆ ಅವನೂ ಸಾಯುವನೆಂದು ಜ್ಞಾನದಿಂದ ಮುಂದಾಗಿ ನೀನೂ ಅವನೂ, ಜನ್ಮವೆತ್ತಿದ ನಿನ್ನ ಗ್ರಾಮದ ಕಡೆಗೂ ತಿರುಗಿ ನೋಡುತ್ತಿರುವನು. ಅದ್ದರಿಂದ ನೀನು ನಿನ್ನ ಹಿರಿಯರನ್ನು ಹಿಂಬಾಲಿಸಿ ನಿನ್ನ ಕರ್ತವ್ಯವನ್ನು ನೆರವೇರಿಸಿ ಅಭಿವೃದ್ಧಿ ಹೊಂದಿ ಐಶ್ವರ್ಯವಂತನಾಗಿ ಪಟ್ಟಣವಾಸಿಯಾದ ನಿನ್ನ ಸಹೋದರನಿಗೆ ಬೆಂಬಲನಾಗಿ ದೇಶದ ಪಕ್ಷಕ್ಕೆ ದೇಶವು ನಿನ್ನನ್ನು ಕಾಪಿಸುವದು.

"ವಂದೇ ಮಾತರಂ"

"ಕೊಡಗು" ಪತ್ರಿಕೆಗೆ ಚಂದಾದಾರರಾಗಿ ದೇಶಭಕ್ತಿ ತೋರಿಸಿರಿ

ಕೊಡಗು ಕೌನ್ಸಿಲ್

ಕೊಡಗು ಕೌನ್ಸಿಲು ಇನ್ನು ಮೂರು ನಾಲ್ಕು ತಿಂಗಳುಗಳಲ್ಲಿ ಜನ್ಮವೆತ್ತುವದು. ಇನ್ನೊಂದು ತಿಂಗಳೊಳಗೆ ಈ ಕೌನ್ಸಿಲ್ ಕೆಲವು ಸಾರಿಯಾದರೂ ಸಭೆ ಸೇರಿ ಜನರಿಗೆ ಹಿತಕರವಾದ ಕಾರ್ಯಗಳನ್ನು ನಡಿಸಿ ಜನರ ಪ್ರೀತಿಗೆ ಪಾತ್ರವಾಗಬೇಕಾಗಿ ಎಲ್ಲರ ಕೋರಿಕೆಯಾಗಿದೆ.

ಈ ಕೌನ್ಸಿಲ್‌ನಿಂದ ಜನರಿಗೆ ಯಾವ ಹಕ್ಕುಗಳು ಸಿಕ್ಕಿವೆ? ಕೌನ್ಸಿಲ್‌ನಿಂದ ಆಗತಕ್ಕ ಕೆಲಸಗಳು ಯಾವವು? ಅಗದೇ ಇರುವಗಳು ಯಾವವು? ಈ ಸಂಗತಿಗಳನ್ನು ತಿಳಿಯಬೇಕಾಗಿದೆ.

ಕೌನ್ಸಿಲಿನ ಪ್ರಥಮ ಕೆಲಸವು ನ್ಯಾಯ ನಿರ್ಮಾಣವಾಗಿದೆ. ಈಗ ಇಡೀ ಇಂಡಿಯಾದ ಶಕ್ಕೆ ನ್ಯಾಯ ನಿರ್ಮಾಣ ಮಾಡುವ ಲೆಜಿಸ್ಲೆಟಿವ್ ಎಸೆಂಬ್ಲಿಯು ಕೊಡಗಿಗೂ ಸಹಾ ಕಾನೂನುಗಳನ್ನು ಮಾಡುತ್ತದೆ. ಇದನ್ನು ಇನ್ನು ಮುಂದೆಯೂ ಮಾಡುವದು. ಅದರ ಕೊಡಗಿಗಾಗಿಯೇ ಗವರ್ನರ್ ಜನರಲ್ ಇನ್‌ಕೌನ್ಸಿಲ್ (ಮೈಸೂರಾಯರು ತಮ್ಮ ಮಾತ್ರಿಗಳ ಸಹಾಯದಿಂದ) ರೆಗ್ಯುಲೇಶನ್ನುಗಳನ್ನು ಮಾಡುತ್ತಾರೆ. ಕೊಡಗು ಲ್ಯಾಂಡ್ ರೆಗ್ಯುಲೇಶನ್, ಕೊಡಗು ಮುನ್ಸಿಪಲ್ ರೆಗ್ಯುಲೇಶನ್, ಈ ಕಾನೂನುಗಳು ಗವರ್ನರ್ ಜನರಲ್ ಇನ್‌ಕೌನ್ಸಿಲಿನಿಂದ ಉಂಟಾದ ಕಾಯಿದೆಗಳಾಗಿವೆ. ಇವಲ್ಲದೆ ಕೌನ್ಸಿಲ್ ಮಿಸ್ತ್ರಿಕ್ಟ್ ಆಗ್ನು ಎಂಬ ಆಕ್ಟ್ ಮೇರೆ ಇಂಡಿಯಾ ದೇಶದ ಬೇರೆ ಯಾವ ಪ್ರಾಂತ್ಯಗಳಲ್ಲಿದ್ದ ಆಕ್ಟು ಗಳನ್ನು ಚೀಫ್ ಕಮಿಶನರ್ ಸಾಹೇಬರು ಕೊಡಗಿಗೆ ಬಾರಿಗೆ ತರಬಹುದು. ಈ ಆಕ್ಟನ್ನು ಮೇರೆ ಮದ್ರಾಸಿನ ಕಾಫಿ ಆಕ್ಟನ್ನು ಕೊಡಗಿಗೆ ಜಾರಿಗೆ ತಂದಿರುತ್ತಾರೆ. ಕೊಡಗಿಗೇ ಸಂಬಂಧಪಟ್ಟ ಕಾನೂನುಗಳನ್ನು ಇನ್ನು ಮುಂದೆ ಅನೇಕ ಸಂಗತಿಗಳಲ್ಲಿ ಕೊಡಗು ಕೌನ್ಸಿಲ್ ಮಾಡಲು ನಡೆಯಬಹುದು. ಇಂಡಿಯಾ ಗವರ್ನಮೆಂಟಿಗೆ ಸಂಬಂಧಪಟ್ಟ ಸಂಗತಿಗಳಲ್ಲಿ ಅಂದರೆ, ಪೋಸ್ಟಾಫೀಸ್ ವಿ ಬೀರಿ ನಗ್ಗರಿ ಕೆಲವು ಮುಖ್ಯ ಸಂಗತಿಗಳಲ್ಲಿ ಕೊಡಗಿನ ಜನರಿಗೆ ಸಂಬಂಧಪಟ್ಟದಾದರೂ ಕೊಡಗಿನ ಕೌನ್ಸಿಲ್ ಕೃಪಾಕಾರಿಗೆ ಬರಲಾರದು. ಅದರ ವಿಷ್ಯ ಮುನ್ಸಿಪಾಲಿಟಿಗಳು, ಜನರ ಆರೋಗ್ಯ, ಸಿವಿಲ್ ಕಾನೂನಿನ ಮೇಲ ಪಕ್ಕಾಗಾರಿಗಳ, ಮುಖ್ಯವಾಗಿ ಜನಾಬೆ ವಿಷ್ಯ ಕೃ ಬೋರ್ಡ್ ಇಲಾಖೆ ಇವೇ ಮೊದಲಾದವುಗಳಿಗೆ ಸಂಬಂಧಪಟ್ಟ ಕಾನೂನುಗಳು ಇನ್ನು ಮುಂದೆ ಕೌನ್ಸಿಲಿನಲ್ಲೇ ಮಾಡಲ್ಪಡುವವು.

ಕೌನ್ಸಿಲ್‌ನಿಂದ ಆಗಬಹುದಾದ ಎರಡನೇ ಕೆಲಸವು ಯಾವದೆಂದರೆ, ವರ್ಷಕ್ಕೆ ಒಂದಾವರ್ತಿ ಸರ್ಕಾರದವರು ಜಮಾ ಖರ್ಚನ್ನು ತೋರಿಸುವದರ ವಿಷಯವೂ ದೇಶಕ್ಕೆ ಸಂಬಂಧಪಡುವ ಎಲ್ಲಾ ಹಾಲಿ ಹವಾಲಿಗಳ ವಿಷಯವೂ ಮೆಂಬರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಸೂಚಿಸುವರು. ಕೌನ್ಸಿಲಿನಲ್ಲಿ ನಡೆಯಬಹುದಾದ ಮೂರನೇ ಕಾರ್ಯವೇನೆಂದರೆ, ರಾಜ್ಯಭಾರದ ಸಂಗತಿಗಳಲ್ಲಿ ಮೆಂಬರುಗಳು ಸರ್ಕಾರದವರಿಗೆ ಸವಾಲುಗಳನ್ನು ಕೇಳುವಾಗ ಇದಕ್ಕೆ ಸರ್ಕಾರದವರು ಉತ್ತರಗಳನ್ನು ಕೊಡುವರು.

ರಾಜ್ಯಭಾರದ ಕೆಲವು ಸಂಗತಿಗಳಲ್ಲಿ ಮೆಂಬರುಗಳು ಠರಾವುಗಳನ್ನು ತರುವದು ಕೌನ್ಸಿಲಿನ ಇನ್ನೊಂದು ಹಕ್ಕಾಗಿದೆ. ಈ ಸಂಗತಿಗಳನ್ನು ಸರ್ಕಾರದವರು ಮಂಜೂರು ಮಾಡಬೇಕೆಂದಿಲ್ಲವಾದರೂ ಜನರ ಒಗ್ಗಟ್ಟಿನ ಅಭಿಪ್ರಾಯವು ಸರ್ಕಾರಕ್ಕೆ ತಿಳಿಸುವದರಿಂದ ಈ ಠರಾವುಗಳಿಂದ ಬಹಳ ಪ್ರಯೋಜನಗಳು ಉಂಟಾಗಬಹುದು.

ಮದ್ರಾಸು ಬೊಂಬಾಯಿ ಬಂಗಾಳ, ಈ ಪ್ರಾಂತ್ಯಗಳ ಕೌನ್ಸಿಲುಗಳಿಗೆ ಮೊಂಟಗೂ ಚೆಲ್ಮ್ಸ್‌ಫರ್ಡ್ ಇವರ ರಿಫಾರ್ಮ್ಸ್ ಮೇರೆ ಹೆಚ್ಚಿನ ಹಕ್ಕುಗಳು ದೊರೆತಿವೆ. ಮೇಲ್ಕಂಡ ಹಕ್ಕುಗಳಲ್ಲದೆ ಕೆಲವು ಸಂಗತಿಗಳಲ್ಲಿ ರಾಜ್ಯಭಾರದ ಅಧಿಕಾರವನ್ನೇ ಅದರ ಕೌನ್ಸಿಲ್‌ನಿಂದ ಚುನಾಯಿಸಲ್ಪಟ್ಟ ಮಂತ್ರಿಗಳಿಗೆ ವಹಿಸಿದ್ದಾರೆ. ಈ ಹಕ್ಕು ಕೊಡಗಿಗೆ ದೊರೆತಿಲ್ಲ. ಒಹುಶಃ ಇನ್ನು ಮುಂದೆ ದೊರೆಯಬಹುದು.

ಕೊಡಗು ಕೌನ್ಸಿಲ್‌ನಿಂದ ಜನರಿಗೆ ತಕ್ಕ ಮಟ್ಟಿಗೆ ಪ್ರಯೋಜನಗಳು ಲಭಿಸಬಹುದು. ಇದು ಪ್ರಥಮ ಕೌನ್ಸಿಲ್ ಆದ್ದರಿಂದ ಹೆಚ್ಚು ಶಕ್ತಿ ಇದ್ದರೂ ಇವನ್ನು ಪರೀಕ್ಷಿಸಿ ನಮ್ಮ ಮದ್ರಾಸ್, ಬೊಂಬಾಯಿ ಪ್ರಾಂತ್ಯಗಳಂತೆ ಮುಂದಿರಬೇಕಾಗಿ ಅನೇಕ ಜನರು ಅಭಿಪ್ರಾಯ ಪಟ್ಟಿದ್ದಾರೆ. ಈ ಪ್ರಾಂತ್ಯವು ಸಣ್ಣದಾದರೂ ಮೆಂಬರುಗಳು ಜನರಿಗೆ ಗಾಗ್ಗೆ ಸಿಕ್ಕಿ ಅವರ ಆಲೋಚನೆಯನ್ನು ಹೆಚ್ಚಿಗೆ ಗಮನಕ್ಕೆ ತಕ್ಕೊಳ್ಳಬಹುದು. ಆಮೇಲ್ಗಳಲ್ಲಿ ಕೊರತೆ ಇದ್ದರೂ, ಜನರು ತಮ್ಮ ನೀತಿಯಿಂದಲೂ ಬುದ್ಧಿ ಕುಶಲತೆಯಿಂದಲೂ ಅವುಗಳನ್ನು ಸರಿಯಾಗಿ ಉಪಯೋಗಿಸಬಹುದು. ಈಗ ಮುಖ್ಯವಾಗಿ ಕೌನ್ಸಿಲಿಗೆ ಚುನಾಯಿಸಲ್ಪಡಬಹುದಾದ ಮೆಂಬರುಗಳು ಸ್ವಾರ್ಥತ್ಯಾಗಿಗಳಾಗಿರಬೇಕು. ಜನರ ಸೇವೆಯಲ್ಲಿ ಮಗ್ನರಾಗಬೇಕು. ಜನರ ಕಷ್ಟಸುಖಗಳನ್ನು ತಿಳಿದವರಾಗಬೇಕು. ಜನರು ಎಚ್ಚರವಾಗಿದ್ದು ಇಂಥವರನ್ನೇ ಮೆಂಬರರಾಗಿ ಚುನಾಯಿಸಿದರೆ ಕೊಡಗಿನ ಪ್ರಥಮ ಕೌನ್ಸಿಲಿನ ಪ್ರಭಾವವು ದೇಶೀ ಪ್ರಾಂತ್ಯಗಳಲ್ಲೂ ಹರಡಬಹುದು.

"On looker."

ದೇಶಸೇವೆ.

ರಾಜಕೀಯ ಎಂಬ ಶಬ್ದವನ್ನು ನೋಡಿ ಮಾತ್ರಕ್ಕೇನೇ ಅನೇಕರಿಗೆ ಏನೇನೋ ತೋರಬಹುದು! ಅದ್ದರಿಂದ ರಾಜಕೀಯವೆಂಬುದು ರಾಷ್ಟ್ರಕ್ಕೆ ಸಂಬಂಧಪಟ್ಟದ್ದಾದ್ದರಿಂದ ರಾಜ್ಯವೆಂಬುದರ ಅರ್ಥವನ್ನು ಸಂಕ್ಷೇಪವಾಗಿ ವಿವರಿಸಬೇಕಾದರೆ ಅದು ಹೇಗಂದರೆ ಕೆಲವು ಜನರು ಕೂಡಿ ಕುಟುಂಬವೂ ಅನೇಕ ಕುಟುಂಬಗಳು ಕೂಡಿ ಒಂದು ಗ್ರಾಮವೂ ಅನೇಕ ಗ್ರಾಮಗಳು ಕೂಡಿ ಒಂದು ದೇಶವೂ ಆಗುತ್ತದೆ. ಮೊದಲು ಕುಟುಂಬಗಳಲ್ಲಿ ಒಟ್ಟು ಕೂಡಿ ತಮಗೆ ಬೇಕಾದವುಗಳನ್ನು ಒದಗಿಸಲು ಒಂದು ಗ್ರಾಮವಾಗುತ್ತದೆ. ಗ್ರಾಮಗಳು ತಮಗೆ ಬೇಕಾಗುವ ಸರ್ವವನ್ನು ಗಳನ್ನು ಒದಗಿಸಲು ಪ್ರಾರಂಭಿಸುವಾಗ ಹುಟ್ಟುವ ಒಂದು ಸಂಸ್ಥೆಯೇ ರಾಜ್ಯವೆಂದೆನ್ನಿಸುತ್ತದೆ. ಇದನ್ನು ನೋಡಿದರೆ ಈ ರಾಜ್ಯವೆಂಬ ಶಬ್ದವು ಜನರ ಪ್ರಯೋಜನಕ್ಕಾಗಿ ಜನರಿಂದ ಹುಟ್ಟಿದುದೇ ಅಗಿ ಮನುಷ್ಯನ ಒಂದು ಅಂಗಕ್ಕೆ ಹೋಲಿಸಬಹುದಾಗಿದೆ. ಇಂಥಾ ರಾಜ್ಯಭಾರವು ಜನರಿಗೆ ಸಹಾಯಾಗಿರದ ಪಕ್ಷ, ಮನುಷ್ಯನಿಗೆ ಅವನು ಶ್ರೇಷ್ಠವಾದ ಒಂದು ಅವಯವಕ್ಕೆ ಊನವುಂಟಾದಂತೆ ತೋರುತ್ತೆ. ಅದ್ದರಿಂದ ಮನುಷ್ಯನಾಗಿ ಹುಟ್ಟಿದವನಾದ ಪ್ರತಿಯೊಬ್ಬನ ಕರ್ತವ್ಯವೂ ತನ್ನ ಶರೀರದ ಹಾಗೆ ಇರುವ ರಾಜಕೀಯವಿಚಾರಣೆಯಲ್ಲಿಯೂ ಅದರ ಅಭಿವೃದ್ಧಿಯಲ್ಲಿ ಹರಿಸಬೇಕಾದಂತೆ ಬೇಕೆಂದು ಹೇಳುತ್ತಿರುವುದೇ ಆಗಿರುತ್ತೆ. ಈ ಕಾರಣವನ್ನು ತಿಳಿದು ಕೊಳ್ಳುವದರಿಂದಲೇ, ನಮ್ಮ ಭರತ ಖಂಡದ ಮುಂದಾಳುಗಳು ಸ್ವರಾಜ್ಯಕ್ಕಾಗಿ ... ಖಂಡಕ್ಕೆ ಸ್ವರಾಜ್ಯ (ಅಂದರೆ, ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ಇರುವ ರಾಜ್ಯಭಾರ) ಸಿಕ್ಕಬೇಕೆಂಬದಾಗಿ ಹೋರಾಡುತ್ತಲೇ ಇದ್ದಾರೆ.

ನಮ್ಮಲ್ಲಿ ಕೆಲವು ಜನರು ಸ್ವರಾಜ್ಯ ಸಿಕ್ಕರೆ ಪ್ರತಿಯೊಬ್ಬರಿಗೆ ಕಂದಾಯ ಮನ್ನಾ ಆಗುವದೋ, ಜಾತಿ ಮತ ಭೇದಗಳೇ ಇಲ್ಲವೋ, ಅನೇಕರು ಸ್ವರಾಜ್ಯಕ್ಕಾಗಿ ಸ್ವರಾಜ್ಯವೆಂದರೆ ಮರಣವೆಂದು ಸುಮ್ಮನಿರುವರು. ರಾಜಕೀಯದ ವಿಚಾರವು ಎಷ್ಟು ಕಷ್ಟದ ಕೆಲಸವೆಂದೂ ಭಯಂಕರವಾದ ನಂಬಿ, ಕೆಲವು ಜನರು ತಮಗೆ ಕೆಲಸವಾದರೂ ಇಷ್ಟ ... ಇದ್ದಲ್ಲಿ ತಾಲೀ ಕಂಟಿವಾಹ ...ದಿಂದಲೂ ಎಷ್ಟು ಜನಾಂಗಕ್ಕೂ

ಮೊಸಮಾಡಿ ಕಡೇಗಾಲಕ್ಕೆ ಎಲ್ಲಿಯೂ ಸಾಗದೆ ಇರುವಾಗ ರಾಜಕೀಯವೆಂಬುದಾಗಿ ಕೂಗಿಕೊಳ್ಳುವುದು ಹಿಡ್ಯಾದು ತತ್ವದಿಂದಲೂ ಅನೇಕರು ವಿಧವಿಧವಾಗಿ ಹೇಳುತ್ತಾರೆ ಈ ಅಭಿಪ್ರಾಯಕ್ಕೆ ಎಷ್ಟು ವ್ಯಸನಪಟ್ಟರೂ ಸಾಲದು ರಾಜ್ಯವೆಂಬ ಶಬ್ದವು ಜನರ ಪ್ರಯೋಜನಕ್ಕಾಗಿರುವ ಸಮಾಜವೆಂಬ ಶಬ್ದಸಂಬಂಧವಾದ ಉತ್ಪನ್ನವಿರುವಾಗ ಇಂಥಾ ಮಾತನ್ನಾಡುವವರನ್ನು ಕಂಡರೆ ಯಾರಿಗೂ ಇರುವುದಿಲ್ಲ ವಿಷಯವಿರದೆ ಹೀಗೆ ಪಕ್ಕಿಗೆ ಗಾಳಿ ಹೇಗೋ ಹಾಗೆ ಜೀವನಾಧಾರವಾದ ಮನುಷ್ಯನನ್ನು ರಾಜ್ಯವೆಂಬುದು ಎಲ್ಲಾ ಕಡೆಯಲ್ಲಿಯೂ ಸುತ್ತಿಕೊಂಡಿದೆ ಈ ಕಾರಣದಿಂದಲೇ, ಪುರಾತನ ತತ್ವಜ್ಞಾನಿಗಳನೇಕರು, ರಾಜ್ಯಶಾಸ್ತ್ರವು ನೀತಿಶಾಸ್ತ್ರದ ಒಂದು ಭಾಗವೆಂದೂ ಮನುಷ್ಯನ ಅತಿ ಶ್ರೇಷ್ಠವಾದ ಎಲ್ಲಾ ಗುಣಸಂಪತ್ತಿಗೆ ರಾಜ್ಯವೇ ಮೂಲ ಕಾರಣವೆಂದೂ ಹೇಳಿರುತ್ತಾರೆ

ಈ ಕಾರಣಗಳಿಂದಲೇ ಇಂಗ್ಲೆಂಡ್, ಅಮೇರಿಕಾ ಜಪಾನ್ ಮೊದಲಾದ ರಾಜ್ಯಗಳು ಈ ರಾಜನೀತಿ ಯಾ ರಾಜಕೀಯವೆಂಬ ಶಬ್ದದ ಅರ್ಥಕ್ಕನುಗುಣವಾಗಿ ತಮ್ಮ ರಾಜ್ಯವನ್ನು ಪ್ರಜಾಪ್ರತಿನಿಧಿತ್ವದ ತಳಹದಿಯಾಗಿ ಮಾಡಿ ರಾಜ್ಯವಾಳುತ್ತಿದ್ದಾರೆ. ಅಲ್ಲದೆ ಜನರ ಸೌಖ್ಯಕ್ಕೆ ತಾವು ತಿಳುವಳಿಕೆಯುಳ್ಳವರಾಗಿ ತಮ್ಮ ಹಕ್ಕು ಭಾದ್ಯತೆಗಳನ್ನು ತಿಳಿದಿರುವುದೇ ಮೂಲವೆಂದೂ, ಹೀಗೆ ತಯಾರಾಗಲು "ಅರ್ಥವು" ಅಂದರೆ ಹಣವು ಬಹಳ ಅವಶ್ಯವೆಂದೂ, ಅಂಥಾ ಹಣವನ್ನು ಸಂಪಾದನೆ ಮಾಡಲು ರಾಜ್ಯವೇ ಮೂಲವೆಂದು ತಿಳಿದಿರುತ್ತಾರೆ ಇದ್ದರಿಂದ ಯಾವ ಅಭಿವೃದ್ಧಿಗೆ ಆಗಲಿ ಧನವೇ ಮುಖ್ಯವೆಂಬುದು ವ್ಯಕ್ತವಾಗುತ್ತದೆ ಈ ಕಾರಣದಿಂದಲೇ ಮಹಾತ್ಮ ಗಾಂಧಿಯವರು ಟಿಳಕ ಸ್ವರಾಜ್ಯ ನಿಧಿಗೆ ಒಂದು ಕೋಟಿ ರೂಪಾಯಿಯನ್ನು ಅಲ್ಪ ಸಮಯದಲ್ಲಿಯೇ ವಸೂಲಾಯಿಸಿದರು. ಹೀಗೆ ವಸೂಲಾದ ಹಣದಿಂದ ಭರತಖಂಡದಲ್ಲಿ ಸ್ವರಾಜ್ಯ ಸಾಧನೆಗೆ ಬೇಕಾದ ಅನೇಕ ಉಪಯುಕ್ತ ಕಾರ್ಯಗಳನ್ನು ಮಾಡಿ ಹಿಂದೂ ದೇಶವು ಈಗ ಸ್ವರಾಜ್ಯದ ಯೋಗ್ಯತೆ ಇರುವ ದೇಶವೆಂದೂ ಇದ ಮೇಗ ಸಹಿಸದಿರಲು ಇನ್ನು ಪಾರತಂತ್ರ್ಯವನ್ನು ಸಹಿಸಲಿಕ್ಕಿಲ್ಲವೆಂಬುದೂ ತೋರ್ಪಡಿಸಿದ್ದು ಎಲ್ಲರಿಗೂ ವೇದ್ಯವಿರಬಹುದು ಆದರೆ ಇಂಥಾ ಸ್ವತಂತ್ರದ ಹೋರಾಟದ ಸಮಯಗಳಲ್ಲಿ ನಮ್ಮ ಕೊಡಗು ದೇಶವು ಎಲ್ಲಿರುವುದು ಎಂಬುದನ್ನು ಯೋಚಿಸುವಾಗ ನಮ್ಮ ದೇಶದ ಮೇಲ್ತರದ ಈ ಪುಣ್ಯ ಭೂಮಿಯಲ್ಲಿ ಹುಟ್ಟಿದೆ ಹೋಗಬೇಕಾಗಿತ್ತು! ಎಂತ ಅನ್ನಿಸುತ್ತೆ ಕೊಡಗು ದೇಶವು ಇನ್ನು ಪ್ರತ್ಯೇಕ ಒಂದು ರಾಜ್ಯವಾಗಿ ಯಾವ ರಾಜಕೀಯ ಸ್ವತಂತ್ರವೂ ಸಿಕ್ಕದೆ ಒಬ್ಬ ಚೀಫ್ ಕಮಿಷನರಿಂದ ಆಳಲ್ಪಡುತ್ತಿರುವುದನ್ನು ಕಂಡು ಇದರ ಗುಣದೋಷಗಳನ್ನು ಅರಿತರೂ ಇನ್ನು ಜನ ವನ್ನು ನಿದ್ರಿಸುತ್ತಿರಲ್ಲಾ

ಇದಕ್ಕೆ ಪರಿಹಾರ

ಇಂಥಾ ಸ್ಥಿತಿಯನ್ನು ಹೋಗಲಾಡಿಸಲು ದೇಶದಲ್ಲಿ ಅನೇಕ ಉಪದೇಶಕರು ನಿಸ್ವಾರ್ಥತ್ಯಾಗಿಗಳಾಗಿ ಕೆಲಸಮಾಡುವವರು ಅತ್ಯವಶ್ಯಕ ಕೆಲಸಮಾಡಲು ಅನೇಕ ಬೋಧಕರು ಇಲ್ಲದಿರ ವಿಷಯದಿಂದಲೇ ನಮ್ಮ ದೇಶವು ಸಪ್ಪಂಗಿ ನಿಂತಿರುತ್ತೆ, ಈ ಮೊದಲೇ ಹೇಳಿದಂತೆ ಹಣವೇ ಎಲ್ಲಾದಕ್ಕೂ ಮೂಲವಾಗಿರುವುದೆಂದು ನಮ್ಮ ದೇಶದವರು ಒಂದು ದೊಡ್ಡ ವೇತನವನ್ನು ಬೇಗನೇ ಕೇಳುಸಿ ದೇಶದ ರಾಜಕೀಯ ಸಾಂಪತ್ತಿಕ ಸಾಮಾಜಿಕ ಕೆಲಸ ಪ್ರಾರಂಭ ಮಾಡದೆ ಹೋದರೆ ದೇಶದವರು ಅಭಿವೃದ್ಧಿಯಾಗುವ ಮುಂದಣದಾರಿ ಕಾಣೆನು ಈ ಕಾರಣಗಳಿಂದ ನಮ್ಮ ದೇಶದ ಎಲ್ಲಾ ಮಹನೀಯರಿಗೂ ಮಹಿಳೆಯರಿಗೂ ಈ ಕೆಳಗಣ ಚಿಕ್ಕಹವನ್ನು ಸೂಚಿಸುತ್ತೇನೆ

ಬಂಧುಭಗಿನಿಯರೇ,

ನಾನು ಕಳೆದ ಎರಡು ಮೂರು ವರ್ಷಗಳಿಂದ ನಮ್ಮ ದೇಶದ ಎಲ್ಲಾ ಮೂಲೆಗಳನ್ನು ಸುತ್ತುತ್ತಲೇ ಇದ್ದೇನೆ ಆದರೆ ನನ್ನ ಮನಸ್ಸಿನಲ್ಲಿ ನಮ್ಮ ದೇಶದ ಜನರು ಬಹಳ ಒಳ್ಳೆಯವರೆಂದೂ, ಸಾಧುಸ್ವಭಾವದವರೆಂದೂ ಮೋಸವೆಂಬುದು ತಿಳಿದ ಜನರೇ ಅಲ್ಲವೆಂತಲೂ ತಿಳಿದಿದ್ದೇನೆ ಆದರೆ ನಮ್ಮ ಜನರು ಯಾವ ಕೆಲಸಮಾಡುವುದು ಕಡಿಮೆಯಾಗಿದೆ, ಶ್ರದ್ಧೆಯಿಂದ ಮಾಡಿಸಲು ಪ್ರತಿ ಗ್ರಾಮದಲ್ಲೂ ಆಗಾಗ್ಯೆ ತಕ್ಕಬುದ್ಧಿವಂತಿಕೆ ಹೇಳುವವರು ಯಾ, ಉಪದೇಶಕರು ಅತ್ಯವಶ್ಯವಾಗಿವೆ. ಇಂಥಾ ಉಪದೇಶಕರು ಗ್ರಾಮಾಂತರಗಳಲ್ಲಿ ದೊರೆತರೆ ನಮ್ಮ ಜನರ ಭಾಗ್ಯಕ್ಕೆ ಎಣೆಯೇ ಇಲ್ಲ ಆದ್ದರಿಂದ ಈ ತರದ ಬೋಧಕರನ್ನು ನಾವು ತಯಾರಾಗ ಮಾಡಬೇಕಾದದ್ದು ನಮ್ಮ ಮೊದಲಿನ ಕರ್ತವ್ಯ ನಮ್ಮ ಜನರು ಸಾಹಿಕೆಯಾಗಿ ಬಡತನ ಬಡತನ ಎಂಬುದಾಗಿ ಕೂಗುತ್ತಾರೆ. ಆದರೆ ನಾವು ಯಾವದಾದರೊಂದು ಕೆಲಸವನ್ನು ಮಾಡಬೇಕೆಂದುದ್ದೇಶಿಸಿದರೆ ನಮ್ಮ ಸ್ಥಿರಮನಸ್ಸೇ ಗೆಲ್ಲುವುದಲ್ಲದೆ, ಬಡತನವು ಎಂದೂ ಮಧ್ಯದಲ್ಲಿ ನಿಲ್ಲುವುದಿಲ್ಲ. ಆದ್ದರಿಂದ ಎಲ್ಲಾ ಕೆಲಸಕ್ಕೂ ನಮ್ಮ ಮನಸ್ಸೇ ಮೂಲ. ಮನಸ್ಸೇ ಸರ್ವಸ್ವ. ಮನಸ್ಸೊಂದಿದ್ದರೆ ಮಾರ್ಗವಿದ್ದೇಯಿದೆ ಎಂಬ ಮಾತು ಸಿದ್ಧಾಂತವಾಗುವುದು ಏತಕ್ಕೆಂದರೆ, ನಾವು ಅನೇಕ ಸಂದರ್ಭಗಳಲ್ಲಿ ಸಂತೋಷಕೂಟಕ್ಕೂ, ನಾಟಕಕ್ಕೂ ಮದುವೆ, ಉಡಿಗೆತೊಡಿಗೆ ಮೊದಲಾದುವುಗಳಿಗೂ ಎಷ್ಟೆಷ್ಟೋ ಖರ್ಚು ಮಾಡುತ್ತೇವೆ. ಇವುಗಳಿಗೆ ಖರ್ಚು ಹುಟ್ಟಿದಾಕ್ಷಣವೇ ಸಂತೋಷದಿಂದ ಎಷ್ಟುಹಣ ಖರ್ಚು ಮಾಡುವುದಿಲ್ಲ! ಆದ್ದರಿಂದ ನಮ್ಮ ಜನರನ್ನು ಸುಶಿಕ್ಷಿತರನ್ನಾಗಿ ಮಾಡಲು ಮತ್ತು ಒಳ್ಳೆ ಮನಸ್ಸು ಅವರಲ್ಲಿ ಇರುವದಾಗ ತಯಾರುಮಾಡಿಸಲು ನಮಗೆ ಅನೇಕ ಬೋಧಕರು ಬೇಕಾಗಿವೆಯಲ್ಲವೇ? ನಮ್ಮಲ್ಲಿ ಸ್ತ್ರೀಯರು ಬಹಳ ಸ್ಥಿರಮನಸ್ಸಿನಿಂದ ನಮಗೆಬೇಕಾಗುವ ಆಭರಣಗಳನ್ನು ಒಟ್ಟುಗೂಡಿಸಿ ಮಾಡಿಸಲಿಕ್ಕೆ ಎಷ್ಟು ಪ್ರಯತ್ನಪಡುತ್ತಾರೆ ಇದಕ್ಕೆಲ್ಲಾ ಕಾರಣವು ಮನಸ್ಸೇ ಇದ್ದರಿಂದ ದೇಶದ ಎಲ್ಲಾ ಸ್ತ್ರೀಪುರುಷರು ಇಂಥಾ ಕಾರ್ಯಕ್ಕೆ ಭಾಗಿಗಳಾಗಿ ಶಕ್ತಿ ಮೀರಿ ಸಹಾಯ ಮಾಡಿದ ವಿನಹ ದೇಶವು ಎಂದೂ ಮುಂದೆ ಬರಲಿಕ್ಕಿಲ್ಲ ನಮ್ಮ ಸ್ತ್ರೀಯರಾದರೋ ಯಾವಾಗಲೂ ಆ ಲೋಕಮಾತೆಯಾದ ಶ್ರೀ ಕಾವೇರಿಯನ್ನು ಮನೆದೇವತೆಯಾಗಿಟ್ಟುಕೊಂಡು ಪೂಜಿಸುವವರು ಆ ಮಾತೆಯ ಗುಣವನ್ನು ಹಿಂಬಾಲಿಸತಕ್ಕವರು ಆ ಶ್ರೀ ಮೂಲಕಾವೇರಿಯು, ಲೋಕಕಲ್ಯಾಣಕ್ಕಾಗಿ ಜನ್ಮವನ್ನೆತ್ತಿ ತನ್ನ ಜನ್ಮವನ್ನು ಪರೋಪಕಾರಕ್ಕಾಗಿಯೇ ಧಾರೆ ಎರೆದಿದ್ದಾಳೆ ಹೀಗಿರುವಾಗ ನಮ್ಮ ಸೋದರಿಯರು ಉದಾಸೀನದಿಂದಿರುವುದು ನೋಡಿದರೆ ಬಹಳ ವ್ಯಸನವಾಗುತ್ತದೆ ಸ್ತ್ರೀಯರೇ ನಮ್ಮ ಎಲ್ಲಾ ಅಭಿವೃದ್ಧಿಗೂ ಮೂಲ ನಮ್ಮನ್ನು ಹೆತ್ತವರು ಹೆಂಗಸು. ಹೊತ್ತುಹೊತ್ತಿಗೆ ಅನ್ನ ನೀರಿತ್ತು, ಸಾಕಿ ಸಲಹಿದವಳು ಹೆಂಗಸು ಈಗ ಈ ಪ್ರಪಂಚವನ್ನು ಹೊತ್ತಿರುವವಳಾದರೂ ಸ್ತ್ರೀಯೇ. ನಮ್ಮ ವಿದ್ಯಾ ಬುದ್ಧಿ ಶಕ್ತಿ ವೇದಾ, ಪ್ರಾಜ್ಞತೆಗಳೆಲ್ಲಕ್ಕೂ ಅಧಿಮೂಲಳಾದವಳೆಲ್ಲರೂ ಹೆಂಗಸೇ ಅಲ್ಲದೆ ನಮ್ಮ ಮುಂದಿನ ಸಮಸ್ತ ವಿಚಾರಗಳಿಗೂ ಸ್ತ್ರೀಯರ ಸಹಾಯ ಸಹಾನುಭೂತಿಯು ಮೂಲವಾಗಿರಬೇಕು ಮಕ್ಕಳನ್ನು ಸ್ವದೇಶ ಪ್ರೇಮಿಗಳನ್ನಾಗಿ ಮಾಡಬೇಕಾದರೆ ಮೊದಲು ತಾಯಿಯ ಹೃದಯದಲ್ಲಿ ಸ್ವದೇಶ ಪ್ರೇಮವು ಬೇರೂರಬೇಕು ಹೆಂಗಸರು ಎಷ್ಟೆಷ್ಟು ಸದ್ಗುಣಿಯರಾಗಿರುವರೋ ಅಷ್ಟು ದೇಶವು ವೃದ್ಧಿಯಾಗುವುದು ಆದರೆ ಹೀಗೆ ಆಗಬೇಕಾದರೆ ತಕ್ಕ ಶಿಕ್ಷಣವು ಮೊದಲು ಅವಶ್ಯ ಆಗದು ಮನುವು ಈ ಕಾರಣದಿಂದಲೇ ಸ್ತ್ರೀಗೂ ಶ್ರೀಗೂ ಭೇದವಿಲ್ಲವೆಂದು ಹೇಳುತ್ತೇನೆ ಯಾವ ಗೃಹದಲ್ಲಿ ಸ್ತ್ರೀಯರು ಪೂಜಿಸಲ್ಪಡುವರೋ ಆ ಗೃಹದಲ್ಲಿ ದೇವತೆಯಿರುವುದೆಂದು ಹೇಳಿರುತ್ತೇನೆ ನಮಗೆ ದೊರೆಯುವ ದಸಕ್ಕೆ ಒಕ್ಕಲಿಯೂ ವಿದ್ಯೆಗೆ ಸರಸ್ವತಿ ಈ ಜನನ ಗುಣಗಳು ಆ ಮಹಾ ಶಕ್ತಿಯೆಂದು ತಿಳಿದು ನಾವು ಸ್ತ್ರೀಯರನ್ನು ಗೌರವಿಸಬೇಕೆಂದು ಹೇಳುವುದು ಪಾಡಿಕೆಯಾಗಿದೆ ಸ್ತ್ರೀಯರು ಸಾಹಸಿಯರು ಹಣವ್ಯಯ ದ. ಹಿಡಿದ ಕೆಲಸವನ್ನು ಮಾಡುವವರು ಆದ್ದರಿಂದ ನಮ್ಮ ದೇಶದ ಸ್ತ್ರೀಯರೆಲ್ಲರೂ ತಮ್ಮ ಶಕ್ತ್ಯನುಸಾರ ದೇಶಹಿತ ಕಾರ್ಯಗಳಲ್ಲಿ ಮುಂದಕ್ಕೆ ಬರಬೇಕೆಂದೂ ತಮ್ಮ ಪತಿ ಪುತ್ರರನ್ನೂ, ಬಂಧು ಬಳಗದವರನ್ನೂ ಈಗ ನಮ್ಮ ದೇಶದ ಕೆಲಸದ ಮಹತ್ವದ ವಿಷಯ ಬೋಧಿಸಿ ಅವುಗಳ ಕಡೆಗೆ ಮನಸ್ಸು ಕೊಡುವಂತೆ ಮಾಡುವುದು ಸ್ತ್ರೀಯರ ಕರ್ತವ್ಯವೆಂದು ಬಿನ್ನಹಿಸಬೇಕೇ! ನಮ್ಮ ದೇಶದ ಸ್ತ್ರೀಯರೆಲ್ಲರೂ ವಿದ್ಯಾವತಿಯರು ಆದರಿಂದ ದೇಶದ ಭೂತಭವಿಷ್ಯತ್ತು ವರ್ತಮಾನ ಕಾಲಗಳನ್ನು ತಿಳಿಯಲು ಸಮರ್ಥರು.

ದೇಶಬಾಂಧವರೇ ತಾವೆಲ್ಲರೂ ದೇಶೋದ್ಧಾರಕ್ಕಾಗಿ ಪ್ರಯತ್ನ ಪಡುವುದು ನಿಜವಾದರೆ ತಮ್ಮಲ್ಲಿರುವ ಆಲೋಚನೆಗಳನ್ನು, ಕಾರ್ಯರೂಪಕ್ಕೆ ತಂದು ತೋರಿಸಬೇಕಾಗಿದೆ ಮೊಟ್ಟಮೊದಲು ದೇಶಸೇವೆಯ ಈ ಪುಣ್ಯಕೆಲಸಕ್ಕೆ ಯಾವುದೂ ಇಲ್ಲವೆಂಬ ಕಂಠೋಕ್ತವಾಗಿ ಹೇಳಬೇಕಾಗಿದೆ ಏಕೆಂದರೆ ನಾವೆಲ್ಲರೂ ಸ್ವಪ್ರಯೋಜನಕ್ಕೆ ಅನೇಕ ರೂಪಾಯಿಗಳನ್ನು ಖರ್ಚುಮಾಡಿ ಶ್ರೀ ಕಾವೇರಿ ದರ್ಶನ ಮಾಡಿಕೊಂಡು ಬರುತ್ತೇವೆಯಲ್ಲವೇ ಇದರಿಂದ ನಮಗೆ ಆ ದೇವಿಯು ಭಕ್ತಿಯನ್ನು ಮುಕ್ತಿಯನ್ನು ಕೊಡುತ್ತಾಳೆಂಬ ಭಾವನೆಯಿಂದ ನಾವು ಹೋಗುತ್ತೇವೆ ದೇಶದಲ್ಲಿ ಸಾವಿರಾರು ಜನರ ಉದ್ಧಾರಕ್ಕಾಗಿ ಕೆಲಸ ನಮ್ಮ ಕೈಯಿಂದ ಸಾಧ್ಯವಾದಷ್ಟು ಸಹಾಯ ಮಾಡಿದರೆ ನಾವು ಇಂಥಾ ಸಾವಿರಾರು ದೇವಿಯ ಸೇವೆಯನ್ನು ಮಾಡಿದಂತಾಗುವುದಿಲ್ಲವೇ ಈ ಕಲಿಯುಗದಲ್ಲಿ ಅನೇಕ ಜನರ ಸೇವೆಯನ್ನು ಮಾಡಿ ಅವರ ಕಷ್ಟಸುಖಗಳಲ್ಲಿ ಭಾಗಿಗಳಾಗಿ, ಅವರ ಅಭಿವೃದ್ಧಿಗೆ ತಕ್ಕ ಕೃಷಿಮಾಡುವಷ್ಟು ಪುಣ್ಯವು ಯಾವುದರಲ್ಲಿಯೂ ಇರುವುದಿಲ್ಲ. ಪ್ರತಿ ಒಬ್ಬನ ಆತ್ಮನಲ್ಲಿಯೂ ಆ ಶ್ರೀಕೃಷ್ಣಪರಮಾತ್ಮನು ನೆಲೆಗೊಂಡಿರುವುದರಿಂದ, ನೀವು ಅನೇಕ ಶ್ರೀಕೃಷ್ಣಪರಮಾತ್ಮನ ಪೂಜೆಮಾಡಿದಂತೆ ಆಗುತ್ತದೆಂದು ಶ್ರೀಕೃಷ್ಣನೇ ಭಗವದ್ಗೀತೆಯಲ್ಲಿ ಹೇಳಿರುತ್ತಾನೆ ಆದ್ದರಿಂದ ದೇಶದ ಜನರನ್ನು, ಸುಶಿಕ್ಷಿತರನ್ನಾಗಿ ಮಾಡಲು ಮುಂದೆ ಬನ್ನಿ, ಇದಕ್ಕೆ ಮೊದಲು ತಕ್ಕ ಹಣ ಸಹಾಯವು ಅವಶ್ಯ ಹಣಸಹಾಯವು ಕೊರದಷ್ಟು ಸಿಕ್ಕಿದರೆ ದೇಶಸೇವಕರು ತನ್ನಷ್ಟಕ್ಕೇ ಬರುವವರಾಗಿದ್ದಾರೆ. ಹೀಗೆ ವಸೂಲಾಗಲ್ಪಡುವ ಹಣದಿಂದ, ನಮ್ಮ ಮಕ್ಕಳಿಗೆ ನಮ್ಮ ದೇಶದ ನೀತಿಗೊಳಪಡುವ ದೇಶಾಭಿಮಾನಿಗಳನ್ನಾಗಿ ಮಾಡುವ ಶಿಕ್ಷಣವನ್ನೂ ವ್ಯಾಪಾರ ಕೈಗಾರಿಕೆ ಕೃಷಿಯನ್ನು ವೃದ್ಧಿಪಡಿಸುವ ವಿಷಯದಲ್ಲಿ ಸಾಧನೋಪಾಯಗಳನ್ನು ಕಂಡು ಹಿಡಿಯುವುದಕ್ಕೂ ನಮ್ಮ ದೇಶಕ್ಕೆ ಒಂದೇಯಾಗಿರುವ ಕೊಡಗು ಪತ್ರಿಕೆಯನ್ನು ವೃದ್ಧಿಪಡಿಸುವುದಕ್ಕೂ, ಜಮಾನುದಾರ ಸಂಘದ ಏಳಿಗೆಗೂ, ಸಹಕಾರ ಸಂಘಕ್ಕೂ, ಸ್ವದೇಶಿ ಸ್ವಭಾಷೆಗೆ ಉತ್ತೇಜನ ಕೊಡಲು ತಕ್ಕ ಏರ್ಪಾಡಿಗೂ ಇ ವೆಲ್ಲಕ್ಕೂ ಮೂಲಾಧಾರವಾದ ರಾಜಕೀಯ ಸುಧಾರಣೆಯನ್ನು ಹೊಂದಲಿಕ್ಕೂ ಎಷ್ಟು ಅನುಕೂಲಗಳಿವೆ ಎಂಬುದನ್ನು ಯೋಚಿಸಿರಿ ಈ ಕೆಲಸ ಸಾಧ್ಯವಾಗಬೇಕಾದರೆ ಧನವಂತರ ಉದಾರತೆಯು ಎಂದಿನಂತೆಯೇ ಇನ್ನೂ ಅವಶ್ಯ ಅಭಿವೃದ್ಧಿ ಎಂಬ ಕಟ್ಟಡದ ತಳಹದಿಗೆ ಮಧ್ಯತರಗತಿಯಲ್ಲಿರುವ ಜನರೇ ಮೂಲಾಧಾರರು ಅವರಿಂದಲೇ ದೇಶಕ್ಕೆ ಒಳ್ಳೇದು ಹೆಚ್ಚಾಗಿ ಆಗುವುದು ಬಡತನವೆಂದು ಎದೆಗುಂದಬೇಡಿ ಎಲ್ಲರೂ ಒಂದೇ ಮನಸ್ಸಿನಿಂದ ದೇಶಹಿತ ಚಿಂತನೆಯನ್ನು ಮಾಡಿರಿ ನಮ್ಮ ಜನರು ಬಹಳ ಒಳ್ಳೆಯವರೆಂದು ಒತ್ತಿಹೇಳುತ್ತೇನೆ ಆದರೆ ಅವರನ್ನು ನ್ಯಾಯವಾದ ವಿಧಾನದಲ್ಲಿ ನಡಿಸುವ ಮುಂದಾಳುಗಳು ಮತ್ತು ಬುದ್ಧಿವಂತರು ಬೇಕಾಗಿದೆ ನಮ್ಮ ದೇಶದಲ್ಲಿ ಆಗುವ ದೊಡ್ಡ ದೊಡ್ಡ ಔತಣಕ್ಕೂ ದೂಮ್ರಪಾನಕ್ಕೂ ವಿಷಸೇವನೆಗೂ ಅನುಕೂಲವಂತರು ಎಷ್ಟೆಷ್ಟು ದುಡ್ಡು ಖರ್ಚು ಮಾಡುತ್ತಾರೆ. ಅಂಥಾ ಮಹನೀಯರು ಸಹ ದೇಶಹಿತ ಕಾರ್ಯಗಳಲ್ಲಿ ಮುಂದುವರಿಯಬೇಕಾಗಿ ಪ್ರಾರ್ಥನೆ ಅನ್ಯರ ಮನಸ್ಸಿಗೂ ಯೂ, ಗೌರವದ ಆಡಂಬರಕ್ಕೂ ಮರುಳಾಗದ ಆತ್ಮತೃಪ್ತಿಗೂ, ಆದರಿಂದ ಮೋಕ್ಷಕ್ಕೂ ಪ್ರಯತ್ನಿಸಿರಿ ಎಲ್ಲಾ ಪುಣ್ಯಕ್ಕೂ ಆದಿಮೂಲವು ದೇಶಸೇವೆಯೆಂದೂ, ದೇಶಸೇವೆಯ ಪ್ರತಿಫಲವು ರಾಜಕೀಯ ಸುಧಾರಣೆ ಎಂಬುದನ್ನು ಮರೆಯಬೇಡಿರಿ

ನಾವು ಇನ್ನೊಬ್ಬರನ್ನು ದೂರುವ ಬದಲು ನಮ್ಮನ್ನು ನಾವು ತಿದ್ದಿಕೊಳ್ಳುವ ಸ್ವಸಹಾಯದಲ್ಲಿಯೂ, ಸ್ವಪ್ರಯತ್ನದಲ್ಲಿಯೂ ನಂಬಿಗೆ ಇರುವ ನಾವೆಲ್ಲರೂ ಉತ್ಸಾಹಿತರಾಗಿ ದೇಶಸೇವೆಯೇ ಲೋಕಮಾತೆಯಾದ ಕಾವೇರಿಯ ಸೇವೆಯೆಂದು ತಿಳಿದು ರಾಷ್ಟ್ರೀಯ ಕಾರ್ಯದಲ್ಲಿ ಬದ್ಧಕಂಕಣರಾಗಿರುವ ನಮಗೆ ಬರುವ ಕಷ್ಟನಷ್ಟಗಳು ಪ್ರಥಮದಲ್ಲಿ ಬಹಳ ದೊಡ್ಡದೆಂದು ಕಂಡುಬಂದರೂ ಹೆದರದೆ ಧೈರ್ಯದಿಂದ ನಾವು ಹಿಡಿದ ಕಾರ್ಯವನ್ನು ನಡೆಸುವ ನಮಗೆ ಮದ್ರಾಸು ಬೊಂಬಾಯಿ ಮೊದಲಾದ ಪ್ರಾಂತಗಳಿಗೆ ಕೊಟ್ಟಿರುವ ಮಾರ್ಪಾಡಗಳನ್ನು ಖಂಡಿತವಾಗಿಯೂ ಕೊಡಬೇಕೆಂದೂ ಹಿಂದೂ ದೇಶದ ಇತರ ಸಹೋದರರಂತೆ ನಾವೂ ಇದೇವೆಯೆಂದೂ ಭಯ ವಿಲ್ಲದೆ ಹೇಳುವ ನಮ್ಮನ್ನು ರಾಜ್ಯವಾಳುವವರೂ ನಮ್ಮಂತ ಮನುಷ್ಯರೆಂದೂ ನಾವೂ ಅವರಂತೆ ಮಾನಮರ್ಯಾದೆ ಇರುವರೆಂದು ನಾವೂ ಹೇಳಿಕೊಳ್ಳ. ನಮ್ಮಲ್ಲಿ ಸಂಸ್ಕಾರದಿಂದ ಒಬ್ಬನಿಗೆ ನ್ಯಾಯಸಿಕ್ಕಲಿಲ್ಲವೆಂಬ ವಿಚಾರದಲ್ಲಿ ಎಲ್ಲರೂ ಒಗ್ಗಟ್ಟಾಗಿ ಒಬ್ಬನ ಅನ್ಯಾಯವು ದೇಶದ ಅನ್ಯಾಯವೆಂದು ತಿಳಿಯುವ, ನಮ್ಮನ್ನು ನಮ್ಮವರಂತ ಕಾಣುವ ಉಚಿತಬುದ್ಧಿಯನ್ನು ಕಲಿಯುವ ಬ್ರಿಟಿಷಿನವರೂ ಪ್ರಪಂಚದಲ್ಲಿರುವ ಎಲ್ಲಾ ... ನಾಗರಿಕರಿಗಿಂತಲೂ ಶ್ರೇಷ್ಠವಾದದ್ದು ಅವರ ಉಚ್ಚವಾದ ದೇಶಾಭಿಮಾನ ಉದ್ಯೋಗಶೀಲತೆ ಎಂಬುದನ್ನು ತಿಳಿದು ... ಟಿಷ್ ಜನರ ಒಳ್ಳೆ ನಡತೆಯನ್ನು ಕಲಿತು ಕಟ್ಟದ್ವೇಷ ತೋರುವಂತಹದ್ದನ್ನು ದೂರಮಾಡುವ ನಮಗೆ ಬರುವಂತಹ ಎಡರು ಮತ್ತು ಪ್ರತಿಕೂಲಗಳೆಲ್ಲವನ್ನು ತಾಳಿಯಿಂದ ಧೈರ್ಯದಿಂದಲೂ ತೆಗೆದುಕೊಂಡು ... ನಮ್ಮ ... ವೃದ್ಧಿಗಿರುವ ಪ್ರಥಮ ಸೋಪಾನಗಳೆಂದು ತಿಳಿವ ...

ಮೇಲೆ ಬರೆದಾದವುಗಳೆಲ್ಲವನ್ನೂ ಕಾರ್ಯರೂಪಕ್ಕೆ ತೋರಿಸಬೇಕಾದರೆ ಹಣವು ಅತ್ಯವಶ್ಯಕ ನಾವ ... ಕಳೆಗಳೆಲ್ಲವನ್ನು ಮಾನವರು ಎಂದು ತೋರಿಸಬೇಕು ... ದೇಶದ ಎಲ್ಲಾ ಜನರಿಂದಲೂ ದೊರೆಯುವ ಸಹಾಯದಿಂದ ತಿಳಿಯುತ್ತೆ ಆದ್ದರಿಂದ ದೇಶಹಿತ ಕೆಲಸಕ್ಕೆಯು ಪ್ರತಿಯೊಬ್ಬನೂ ತಾಗೆ ಹುಟ್ಟಿದ ಮಕ್ಕಳ ಅಭಿವೃದ್ಧಿಗೆ ... ದ ಮಟ್ಟಿಗೆ ಪ್ರಯತ್ನ ಪಟ್ಟು ಖರ್ಚುಮಾಡುತ್ತಾನೆ ... ಹಾಗೆಯೇ ಪ್ರತಿ ಒಬ್ಬನೂ ದೇಶದ ಒಂದು ಮಗುವು ... ಟ್ಟಿದೆ ಎಂಬ ಭಾವನೆಯಿಂದ ತಿಳಿದು, ಈಗ ಕೂಡಿಸಬೇಕಿರುವ ನಿಧಿಗೆ ಸಹಾಯಕರಾಗಿ, ನಮಗೆ ರಾಜಕೀಯ ಮಾರ್ಪಾಡುಗಳು ಸಂಪೂರ್ಣವಾಗಿ ದೊರೆಯುವವರೆಗೂ ಯಾವ ತರದ ದುಂದುಗಾರಿಕೆಯನ್ನು ಮಾಡುವುದಿಲ್ಲವೆಂದು ದೃಢೀಪಡಿಸುವ ನಮ್ಮ ಶಕ್ತಿಮೀರಿ ರಾಷ್ಟ್ರೀಯಾಭಿವೃದ್ಧಿಗಿರುವ ಸಾಧನಗಳಿಗೆ ದ್ರವ್ಯಸಹಾಯ ಮಾಡುವ ... ವೊಂದಿದ್ದರೆ ಮಾರ್ಗ ವಿದ್ದೇ ಇದೆ ಎಂಬುದನ್ನು ತೋರ್ಪಡಿಸುವ

ಈ ವಿಚಾರದಲ್ಲಿ ತಕ್ಕ ವಿಮರ್ಶೆಗಳು ಬರಬೇಕೆನ್ನುತ್ತೇನೆ. ಅವುಗಳನ್ನು ಆಗಿಂದಾಗ್ಗೆ ದೇಶದವರ ಅರಿವಿಗೆ ತಂದುಕೊಳ್ಳುತ್ತೇವೆ ಯಾರು ತಮಗೆ ತಾವೇ ಸಹಾಯ ಮಾಡಿಕೊಳ್ಳುತ್ತಾರೋ ಅಂಥವರಿಗೆ ದೇವರು ಸಹಾಯ ಮಾಡುತ್ತಾನೆ, ಆದ್ದರಿಂದ ನಮ್ಮ ಮೇಲೆ, ನಮ್ಮ ಯೋಗ್ಯತೆಯಲ್ಲಿ, ನಂಬಿಗೆ ಇರುವ ದೇಶಸೇವೆಯ ಕಾರ್ಯವಾದ ಸಾಕ್ಷಾತ್ ಪರಮೇಶ್ವರ ಸೇವೆಯಲ್ಲಿ ನಮ್ಮ ಕುಲದೇವತೆಯಾದ, ಮಾತೆಯಾದ ಶ್ರೀ ಮೂಲಕಾವೇರಿಯು ತಕ್ಕ ಪ್ರೋತ್ಸಾಹವನ್ನೂ ಶಕ್ತಿಯನ್ನೂ ಕಾರ್ಯಶೀಲತೆಯನ್ನು ಕೊಡುವಂತೆ ನಾವು ಆ ದೇವಿಯನ್ನು ನಿಶ್ಚಲವಾದ ಭಕ್ತಿಯಿಂದ ನಮ್ಮ ಕರ್ತವ್ಯಗಳನ್ನು ಮಾಡಲಿಕ್ಕೆ ಪ್ರಾರ್ಥಿಸಬೇಕು

ದೇಶಸೇ[ವಕ]

Printed & Published by D. S. Krishna... Proprietor, at Sreenivas Electric Press, "for Kodagu" Ltd., Mercara—17 10-1937

"Kodagu Office, Mercara"
Reg. No. M. 1550.

ಕೊಡಗು.

ಸತ್ಯೇನೋತ್ತರದಯಯಾ ವಿದ್ಯಾನೀತಿ ಪ್ರಯುಕ್ತತಃ । ನಿಕಮತ್ಯೇನದೇಶಂನಂ ಸುಸ್ಥಿರಾ ರಾಜ್ಯಸಂಪದ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು. "ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ"

ವಾರ್ಷಿಕ ಚಂದಾ ೪-೮-೦ ರೂ.

ಸಂಪುಟ ೩] ಕೊಡಗು, ಸನ್ ೧೯೩೩ ನೇ ಇಸವಿ ಅಕ್ಟೋಬರು ತಾರೀಖು ೨೭ ನೆಯ ಶುಕ್ರವಾರ. [ಸಂಚಿಕೆ ೨೨

ಪ್ರಿಂಟಿಂಗ

ನಿಮ್ಮ ಇಂಗ್ಲೀಷ್ ಮತ್ತು ಕನಡ್ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ಅತಿ ಜಾಗ್ರತೆಯಾಗಿಯೂ ಸುಲಭಧಾರೆಗೆ ಮಾಡಿ ಕೊಡುತ್ತೇವೆ.

Srinivas Electric Pss,
MYSORE.

ಜೀವವಿಮೆ.

ಸಂಪಾದಿಸುವವರು ಕುಟುಂಬಗಳಲ್ಲಿ ಸಂಪಾದಿಸುವವನ ಮೃತಪಟ್ಟರೆ ಉಂಟಾಗಬಹುದಾದ ಗತ್ಯಂತರವನ್ನು ನಿವಾರಿಸುವುದೇ ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬೀವನಾರ್ಥಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ.

ಅತಿ ಕಡಿಮೆ ದರದಲ್ಲಿ ಯಾವ ಲೋಕ ಬಾರದ ಹಾಗೆ ಸ್ವಪ್ರದಲ್ಲಿ ಹಣವನ್ನು ಒದಗಿಸುವ ಸಂಪಾದರೂ ಕೂಡ ಸರಕಾರದ ಭದ್ರತೆಯುಳ್ಳ ಜೀವವಿಮೆ.

ಬದುಕಿರುವಾಗಲೇ ಕುಟುಂಬದ ಜೀವನಾರ್ಥಕ್ಕಾಗಿ ಹಣವನ್ನು ಒದಗಿಸಿ ಸ್ಥಿರಾಸ್ತಿಗಳೊಂದು ಕಟ್ಟು ದೇಶದ ಆರ್ಥಿಕ ಸಂಪತ್ತನ್ನು (Einic ondition) ವೃದ್ಧಿಗೊಳಿಸುವ ಸಂಸ್ಥೆ ಇದೊಂದೇ!

ಸ್ತ್ರೀ ಪುರುಷ ಇಬ್ಬರೂ ಜೀವವಿಮೆ ಪಡೆಯಲು ಅನುಕೂಲವನ್ನು ಒದಗಿಸುತ್ತಿರುವುದು ಇದೊಂದೆ.

ಒಂದು ದೇಶದ ಹಣವು ಮತ್ತೊಂದು ದೇಶಕ್ಕೆ ಹೋಗದಂತೆ ನೋಡಿಕೊಂಡು ಪ್ರಜಾಸಂಪತ್ತನ್ನು ವೃದ್ಧಿಗೊಳಿಸುವ ಸಹಕಾರಸಂಘ ಮೈಸೂರು ಸರಕಾರದ ಸಾರ್ವಜನಿಕ ಸಂಸ್ಥೆಗಳಲ್ಲಿ ನಡೆಯುವ ಅನುಕೂಲತೆಯುಳ್ಳ ಕಂಪೆನಿಯಿದೆ.

ಹೆಚ್ಚಿನ ಮಾಹಿತಿಯನ್ನು ಕನ್ನಡ ನಾಡಿನ ಪ್ರಧಾನ ಈ ಕೆಳಗಿನ ವಿಳಾಸದಾರರಿಂದ ಪಡೆಯಬಹುದಾಗಿದೆ.

ಬಿ. ಎಸ್. ಆರಾಧ್ಯ
ಲೈಫ್ ಅಂಡ್ ಮ್ಯಾರೇಜ್ ಆಫೀಸ್ (ರಿ)

ಕಾಲ ತನದಲ್ಲಿ ಹೆಚ್ಚು ಲಾಭ ಪಡೆಯಿರಿ.

ನಮ್ಮ ಕಾರ್ಖಾನೆಯಲ್ಲಿ ಸುಧಾರಿಸಿದ ಬೆಟ್ಟಿಗಳೂ ಕಬ್ಬಿಣ ಗಾಣಗಳೂ, ಯಂತ್ರ ಇತ್ಯಾದಿ ಒಕ್ಕಲಿಗರಿಗೆ ಲಾಭದಾಯಕವುಳ್ಳವುಗಳ ಸಾಮಾನುಗಳು ತಯಾರಾಗುತ್ತವೆ. ವಿವರವು ಬೇಕಾದವರು ಚಿತ್ರ ಕ್ಯಾಟಲಾಗ್ ತರಿಸಿಕೊಳ್ಳಿ.

ವಿಳಾಸ —
ಲೋಹಕಾರ್ಖಾನೆ ಒಂದು ಲಿಮಿಟೆಡ್
ಪೋ. ಕಿರ್ಲೋಸ್ಕರವಾಡಿ
ಜಿಲ್ಲಾ —

When you think of going to Bombay
THINK OF

THE WELCOME HOTEL.

Girgaum Back Road, BOMBAY.

Most airy accomodation—Most Central situation—Excellent Meals
Every Convenience

ವೆಲ್ಕಂ ಹೋಟೇಲ್.

ಗಿರ್ಗಾಂವ ಬ್ಯಾಕ್‌ರೋಡ್, ಬೊಂಬಾಯಿ.

ರೈಲಿನಿಂದಿಳಿದೊಡನೆಯೇ ಅಲ್ಲಿ ಇಲ್ಲಿಯೊದು ಸುತ್ತದೆ ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಯೋಗ್ಯವಾದ ಕೋಣೆಗಳು ಬೇಕೆಂದಿದ್ದರೆ ಬೊಂಬಾಯಿಪಟ್ಟಣ ಮಧ್ಯಸ್ಥಳದಲ್ಲಿರುವ ವೆಲ್ಕಂ ಹೋಟೇಲಿನಲ್ಲಿಳಿಯಲು ಮರೆಯಬೇಡಿರಿ. ಯೋಗ್ಯವಾದ ಊಟ ಗಾಳಿಗನುಕೂಲವಾದ ಕೊಠಡಿ 15 ಮಿನಿಟಿಗೊಮ್ಮೆ ತಿರುಗುವ ಟ್ರಾಮಿನ ಸೌಕರ್ಯ ಅಂತೂ ಪ್ರಯಾಣಿಕರಿಗೆ ಇಳಿದುಕೊಳ್ಳಲು ಅನುಕೂಲವಾದ ಉಡುಪಿ ಬ್ರಾಹ್ಮಣರ ಭೋಜನಾಲಯ.

[12—10] ಹೆಚ್. ಶ್ರೀನಿವಾಸರಾವ್,
ಮೇನೇಜರ್.

ಬಂದಿತ್ ಸ್ಪೆನ್ಸರ್ ಕಂಪೆನಿ.

SPENCER & Co Ltd.,
Mercara and Pollibetta [24—1]

ಕಂಬಳಿಯ ಟೋಪಿಗಳು.

ಇವುಗಳನ್ನು ಸಾಚಾ ಉಲ್ಲನ್ ನಿಂದ ತಯಾರಿಸಿದೆ. ಚಳಿ ಮಳೆ ಹಿಮಕಾಲಗಳಲ್ಲಿ ಉಪಯೋಗಿಸುತ್ತಿದ್ದರೆ ವ್ಯಾಧಿಗಳು ಸೇರುವದಿಲ್ಲ. ಬೇರೆಯವರು ಉಲ್ಲನ್ ಎಂದು ಹೇಳಿ ನೂಲಿನದನ್ನು ಕಳುಹಿಸುವರು. ನಾವು ಹಾಗೆ ಮೋಸಮಾಡಲಾರೆವು. ಸಾಚಾ ಉಲ್ಲನ್ ಟೋಪಿಗಳನ್ನೇ ಕಳುಹಿಸುವೆವು. ಕ್ರಯ 1 ಕ್ಕೆ 1—8—0.

ಕ್ಷೌರಕತ್ತಿ.

ಇದನ್ನು ಇಟ್ಟುಕೊಂಡು ಕ್ಷೌರಕನ ಕೈಯಲ್ಲಿ ಕೊಟ್ಟು ಕೆಲಸವನ್ನು ಮಾಡಿಸಿಕೊಂಡಲ್ಲಿ ಇತರ ಶರೀರ ಸಂಬಂಧವಾದ ವ್ಯಾಧಿಗಳು ಬರುವುದೆಂಬ ಭಯವು ಇಲ್ಲವಂತೆ ಸುಖವಾಗಿರಬಹುದು. ಕ್ರಯ ಕತ್ತಿ 1 ಕ್ಕೆ ರೂ 1—12—0

ವಿಳಾಸವಾದರೋ —
ನೇಮಿಯಾಥ ಟ್ರೇಡಿಂಗ್ ಕಂ.
ಪೋಸ್ಟು ಬಾಕ್ಸ್ ನಂ 505
ಸಿ ಟಿ ಮದ್ರಾಸು.
[4—1]

WHY BOTHER

P Sam & Co, Mysore, who have just opened a Branch also in Mercara

WILL CARRY

all kinds of your goods and luggage to and from any parts in Coorg at very reasonable charges. Their promptness is fully deserving a trial from you. Special reduced rates for manure Crop requisities supplied
4—3

ಕೊಡಗಿನ ಎಲ್ಲಾ ಪ್ರಾಂತ್ಯಗಳಿಗೂ ಸಾಮಾನುಗಳನ್ನು ಕಳುಹಿಸಿಕೊಡುತ್ತೇವೆ.

ಸ್ಯಾಂ ಅಂಡ್ ಕಂಪೆನಿಯವರು

ಈಗ ಮಡಿಕೇರಿಯಲ್ಲಿ ಒಂದು ಬ್ರಾಂಚನ್ನು ಸ್ಥಾಪಿಸಿದ್ದಾರೆ. ಅವರ ಸಹಕಾರದಲ್ಲಿ ಎತ್ತಿನಗಾಡಿಯಿಂದ ತ್ವರಿತವಾಗಿ ಸಾಮಾನುಗಳನ್ನು ಕಳುಹಿಸಿ ಕೊಡುವವರಾಗಿರುವುದರಿಂದ ನಿಮ್ಮ ಕೆಲಸಗಳಿಗೆ ಉಪಯೋಗವಾಗುತ್ತದೆ. ತೋಟಗಳಿಗೆ ಬೇಕಾದ ಸಾಮಾಗ್ರಿಗಳನ್ನು ಸಪ್ಲೈ ಮಾಡುತ್ತಾರೆ.

ಗೊಬ್ಬರಕ್ಕೆ ಕಡಿಮೆಯಾದ ಕ್ರಯವಿದೆ.

"ಕೊಡಗು"

೧೯೨೩ನೇ ಇಸವಿ ಅಕ್ಟೋಬರ್ ತಾ|| ೨೬ನೇ ಶುಕ್ರವಾರ.

ಕೌನ್ಸಿಲಿಗೆ ಚುನಾವಣೆ.

ಈ ಮೊದಲೇ ತಿಳಿಸಿದಂತೆ ಮಂಜೂರಾಗಿರುವ ಕೌನ್ಸಿಲು ಎಲ್ಲರಿಗೂ ತೃಪ್ತಿಕರವಲ್ಲದಿದ್ದರೂ ಅದನ್ನು ಉಪಯೋಗಿಸುವುದರಿಂದ ಸಾಧ್ಯವಾಗುವಷ್ಟು ಪ್ರಯೋಜನಗಳನ್ನು ಹೊಂದಿಕೊಂಡು ಹೆಚ್ಚು ಹಕ್ಕಿರುವ ಕೌನ್ಸಿಲನ್ನು ಪಡೆಯುವುದಕ್ಕೆ ಕೆಲಸಮಾಡುತ್ತಿರಬೇಕೆಂತ ದೇಶದ ಅಭಿಪ್ರಾಯವಾಗಿ ಆಗಿರುತ್ತೆ. ಈ ಅಭಿಪ್ರಾಯವನ್ನೇ ಜಮೀನುದಾರರ ಸಂಘದ ಪ್ರತಿನಿಧಿಗಳು ವೈಸರಾಯರಿಗೆ ಒಪ್ಪಿಸುವ ಮಹಜರು ಪತ್ರದಲ್ಲಿ ಸೂಚಿಸಿರುತ್ತಾರೆಂತ ತಿಳಿಯಬರುತ್ತದೆ. ಮೋಂಟ್‌ಫರ್ಡ್ ರಿಪೋರ್ಟಿನಲ್ಲಿ ಬರೆದಂತೆ ಒಡೀ ಆಲೋಚನಾ ಸಭೆಯಾಗಿದ್ದದ್ದರೆ ದೇಶಕ್ಕೆ ಏನೂ ಪ್ರಯೋಜನವಾಗುತ್ತಿಲ್ಲವೆಂದು ಹೇಳಬಹುದು. ಆದರೆ ಈ ಕೌನ್ಸಿಲಿನಲ್ಲಿ ಶಾಸನವನ್ನು ಮಾಡುವ ಹಕ್ಕು, ಆದಾಯ ವೆಚ್ಚವನ್ನು ಚರ್ಚಿಸುವ ಹಕ್ಕು, ಸವಾಲು ಕೇಳುವ ಹಕ್ಕು ಸಹ ಇರುವುದರಿಂದಲೂ, ಪ್ರಜೆಗಳ ಚುನಾಯಿತ ಮೆಂಬರುಗಳ ಸಂಖ್ಯೆ ಸರ್ಕಾರದವರಿಂದ ನೇಮಿಸಲ್ಪಡುವ ಮೆಂಬರುಗಳ ಸಂಖ್ಯೆಗಿಂತ ಹೆಚ್ಚಾಗಿರುವುದರಿಂದಲೂ, ಇತರ ಪ್ರಾಂತ್ಯಗಳಲ್ಲಿ 1907 ರಿಂದ ಜಾರಿಯಲ್ಲಿದ್ದ ಮೋರ್ಲೆಮಿಂಟೊ ಸುಧಾರಣೆಯ ಕೌನ್ಸಿಲುಗಳಷ್ಟೇ ಹಕ್ಕು ಸಿಕ್ಕಿದೆಯೆಂದು ಹೇಳಬಹುದು. ಯಾವ್ಯಾವ ವಿಷಯಗಳಲ್ಲಿ ಶಾಸನವು ಮಾಡಬಹುದೆಂಬುದನ್ನು ನಿರ್ಣಯಿಸುವ ನಿಬಂಧನೆಗಳು ಹೊರಟಿದ್ದ ಮೇಲೆ, ನಮ್ಮ ಕೌನ್ಸಿಲಿಗೆ ಶಾಸನ ಮಾಡುವ ಹಕ್ಕು ಎಷ್ಟರ ಮಟ್ಟಿಗೆ ಇದೆಯೆಂದು ಹೇಳಬಹುದಷ್ಟೆ. ಇದನ್ನು ನಿರ್ಣಯಿಸುವಾಗ ದೊಡ್ಡ ಪ್ರಾಂತ್ಯಗಳ ಈಗಿನ ಕೌನ್ಸಿಲುಗಳಿಗೆ ಇರುವಂತ ಶಾಸನವನ್ನು ಮಾಡುವ ಹಕ್ಕುಗಳನ್ನೆಲ್ಲಾ ನಮ್ಮ ಕೌನ್ಸಿಲಿಗೂ ಕೊಡಲೇಬೇಕೆಂತ ನಮ್ಮ ಅಭಿಪ್ರಾಯವಾಗಿದೆ. ಶಾಸನದ ಮಸೂದೆಗಳು (ಬಿಲ್ಸ್) ಇಲ್ಲಿಯ ಕೌನ್ಸಿಲಿನಲ್ಲಿ ಚರ್ಚೆಗೆ ಬರುವ ಮುಂಚೆಯೇ ಇಂಡಿಯಾ ಸರ್ಕಾರದವರಾದ ಚರ್ಚೆಗೆ ತರಬಹುದೆಂಬ ಮಂಜೂರಾತಿ ಪಡೆಯಬೇಕೆಂತ ಇರುವುದು ಜನರಿಗೆ ಸಂಪೂರ್ಣ ಅತೃಪ್ತಿಯನ್ನುಂಟುಮಾಡಿದರು. ಕೌನ್ಸಿಲಿನಲ್ಲಿ ಪಾಸಾಗುವ ಮಸೂದೆಗಳು ಶಾಸನವಾಗುವ ಮುಂಚೆ ವೈಸರಾಯ ಒಪ್ಪಿಗೆ ಬೇಕೆಂತಿರುವಾಗ ಮಸೂದೆಗೆ ಚರ್ಚೆಗೆ ಮುಂಚೆ ಇಂಡಿಯಾ ಸರ್ಕಾರದ ಮಂಜೂರಾತಿ ಬೇಕೆಂತ ಇರುವುದು ನ್ಯಾಯವಲ್ಲ. ಇಂತಾ ಕೊರತೆಗಳಿಂದ ಕೂಡಿದ್ದರೂ ಕೂಡ ಕೌನ್ಸಿಲನ್ನು ಉಪಯೋಗಿಸಬೇಕೆಂತ ದೇಶದವರು ಉದ್ದೇಶಿಸಿರುವ ಕಾರಣ ಇದಕ್ಕೆ ಮೆಂಬರುಗಳನ್ನು ಚುನಾಯಿಸುವ ಕ್ರಮಗಳು ದೇಶದವರಿಗೆ ಸ್ಪಷ್ಟವಾಗಿ ತಿಳಿಯಬೇಕಾಗಿರುವುದರಿಂದ ನಮಗೆ ತಿಳಿದಿರುವ ಮಟ್ಟಿಗೆ ಅವುಗಳನ್ನು ಇಲ್ಲಿ ಸೂಚಿಸಲು ಇಷ್ಟಪಡುತ್ತೇವೆ.

ಜಮ್ಮದ ರೈತರಿಗೆ ಇರುವ ಒಂಭತ್ತು ಮೆಂಬರು ಸ್ಥಾನಗಳನ್ನು ಕಿಗ್ಗಟ್ಟುನಾಡು ತಾಲೋಕಿಗೆ ಮೂರು, ಪಾಡಿ ಎಡೆನಾಲ್ಕುನಾಡು ತಾಲೋಕಿಗೆ ಮೂರು, ಮಡಿಕೇರಿ ತಾಲೋಕಿಗೆ ಎರಡು, ಮತ್ತು ಸೋಮವಾರಪೇಟೆ ತಾಲೋಕಿಗೆ ಒಂದು ಮತ್ತು ಜಮ್ಮೇತರರ ನಾಲ್ಕು ಸ್ಥಾನಗಳು ಮೇಲ್ಕಂಡ ನಾಲ್ಕು ತಾಲೋಕುಗಳಿಗೆ ಒಂದೊಂದರ ಮೇರೆಗೂ ಕೊಡಗಿನಲ್ಲಿರುವ ಎಲ್ಲಾ ಯೂರೋಪಿಯನ್ ಪರವಾಗಿ ಇಬ್ಬರು ಇರತಕ್ಕದೆಂದು ನಿರ್ಣಯಿಸಲ್ಪಟ್ಟಿದೆ ಇದನ್ನು ಪುನಹ ಬದಲಾಯಿಸಲಾರರೆಂತ ನಂಬುತ್ತೇವೆ. ಜಮ್ಮದವರ ಪರವಾಗಿ ಹೋಗುವ ಮೆಂಬರುಗಳಿಗೆ ಓಟು ಕೊಡುವ ಹಕ್ಕು ಯಾರ್ಯಾರಿಗೆ ಇದೆಯೆಂದರೆ—(1) ಐದು ರೂಪಾಯಿಂದ ಸಾಯದ ಜಮ್ಮದ ಭೂಮಿ ಇರುವವನೂ, (2) ಐದು ರೂಪಾಯಿಯಷ್ಟು ಜಮ್ಮದ ಕಂದಾಯವಿಲ್ಲದವನಿಗೆ ಸಾಗಿನ ಭೂಮಿ ಇದ್ದರೆ ಅದರ ಅರ್ಧ ಕಂದಾಯವನ್ನು ಜಮ್ಮದ ಕಂದಾಯಕ್ಕೆ ಸೇರಿಸಿ ಐದು ರೂಪಾಯಿ ಆಗುವವನೂ, (3) ಜಮ್ಮದ ರೈತನಾಗಿದ್ದು ಎರಡುವರ್ಷ ರಿಜಿಮೆಂಟಿನಲ್ಲಿ ಕೆಲಸ ಮಾಡಿದವನೂ ಜಮ್ಮದ ಪ್ರತಿನಿಧಿಗಳಿಗೆ ಓಟು ಕೊಡಬಹುದು. ಜಹಾಗೀರು, ಉಂಬಳಿ, ಹಿಡುವಳಿದಾರರು 'ಜಮ್ಮ' 'ಜಮ್ಮೇತರ' ವೆಂಬ ವಿವರಣೆಗೆ ಒಳಪಡದವರಾಗಿದ್ದಾರೆಂತ ತಿಳಿಯುತ್ತೆ ಇವರನ್ನು ಜಮ್ಮದ ಪಂಗಡಕ್ಕೆ ಸೇರಿಸುವುದು ನ್ಯಾಯವಾಗಿದೆ. ಜೋಡಿ ಮತ್ತು ಬಟವಾಸ್ತವನ್ನು 'ಜಮ್ಮೇತರ'ಕ್ಕೆ ಸೇರಿಸಬಹುದು ಆಯಾಯ ತಾಲೋಕಿನಲ್ಲಿರುವ ಪ್ರತಿಯೊಬ್ಬ ಓಟರೂ ಆಯಾಯ ಪಂಗಡ ಪ್ರತಿನಿಧಿಗಳಾಗಿ ಆ ತಾಲೋಕಿನಿಂದ ಹೋಗತಕ್ಕ ಪರ ಸಂಖ್ಯೆಯಷ್ಟೇ ಓಟು ಕೊಡಲು ಹಕ್ಕಿದೆ ಅಂದರೆ ಕಿಗ್ಗಟ್ಟುನಾಡು ಜಮ್ಮದ ಓಟರುಗಳು ಮೂರು ಮೆಂಬರುಗಳಿಗೆ ಓಟು ಕೊಡಬಹುದು. ಅಲ್ಲಿಯ ಸಾಗಿನ ಓಟರುಗಳು ಒಬ್ಬ ಮೆಂಬರಿಗೆ ಮಾತ್ರ ಓಟು ಕೊಡಬಹುದು. ಜಮ್ಮೇತರ ಮೆಂಬರುಗಳಿಗೆ ಓಟು ಕೊಡಲು ಹಕ್ಕಿರುವವರು ಯಾರೆಂದರೆ— (1) ಹತ್ತು ರೂ. ಕಂದಾಯದ ಸಾಗಿನ ಭೂಮಿ ಇರುವ ರೈತನು. (2) ಮುನ್ಸಿಪಲ್ ಕಂದಾಯ ಅಥವಾ ಡಿ ಬೋರ್ಡು ಮನೆಕಂದಾಯ ಹನ್ನೆರಡು ರೂಪಾಯಿ ಕೊಡುವವನು, ಇನ್‌ಕಮ್‌ಟ್ಯಾಕ್ಸ್ ಕೊಡುವವನು. (3) ಮೂರುವರ್ಷ ಮಿಲಿಟರಿ ಸರ್ವೀಸು ಮಾಡಿದವನು.

ಯಾವ ಓಟರೇ ಆಗಲಿ 21 ವರ್ಷ ಪ್ರಾಯಕ್ಕೆ ಕಡಿಮೆ ಇಲ್ಲದವನಾಗಿರಬೇಕಲ್ಲದೆ ಅವನು ಓಟು ಕೊಡಲು ಇಚ್ಛೈಸುವ ತಾಲೋಕಿನಲ್ಲಿ ಹಿಂದಿನ ಸರ್ಕಾರಿ ವರ್ಷದಲ್ಲಿ 120 ದಿವಸವಾದರೂ ವಾಸವಿರಬೇಕು. ಇದೂ ಅಲ್ಲದೆ ಐದು ವರ್ಷಗಳ ಒಳಗೆ ಕ್ರಿಮಿನಲ್ ಸಜದವರೂ, ಕುಲಾಸು ಆಗದೆ ಇರುವ ಇನ್‌ಸಾಲ್ವೆನ್ಸಿ ಸರ್ಟಿಫಿಕೇಟ್ ಪಡೆದವರೂ ಓಟರುಗಳಾಗಕೂಡದಂತೆ.

ಕೌನ್ಸಿಲು ಮೆಂಬರಾಗಲು ಉಮೇದ್ವಾರನಾಗಬೇಕಾದರೆ ಯಾವದಾದರೂ ಒಂದು ತಾಲೋಕಿನ ಓಟುಗಳ ಪಟ್ಟಿಯಲ್ಲಿ ಅವನ ಹೆಸರು ದಾಖಲಾಗಿ 25 ವರ್ಷ ಪ್ರಾಯಕ್ಕೆ ಕಮ್ಮಿ ಇಲ್ಲದವನಾಗಿರಬೇಕು ಜಮ್ಮದ ಓಟರುಗಳ ಯಾವದಾದರೊಂದು ತಾಲೋಕಿನ ಪಟ್ಟಿಯಲ್ಲಿ ಹೆಸರಿದ್ದರೆ ಅವನು ಯಾವ ತಾಲೋಕಿನ ಜಮ್ಮದ ಮೆಂಬರಾಗಿ ನಿಲ್ಲಬಹುದು ಇದರಂತೆಯೇ ಸಾಗು ಪ್ರತಿನಿಧಿಯೂ ಸಹ ಅಂದರೆ ಮಡಿಕೇರಿ ತಾಲೋಕಿನ ಜಮ್ಮದ ಓಟರುಗಳ ಪಟ್ಟಿಯಲ್ಲಿರುವವನು ಕಿಗ್ಗಟ್ಟುನಾಡಿಗಾಗಲೀ, ಪಾಡಿ ಎಡೆಗಾಗಲೀ, ಸೋಮವಾರಪೇಟೆಗಾಗಲಿ ಜಮ್ಮದ ಪ್ರತಿನಿಧಿಯಾಗಲು ಉಮೇದ್ವಾರನಾಗಿ ನಿಲ್ಲಬಹುದು. ಮೆಂಬರಾಗಲು ಉಮೇದ್ವಾರರಾಗುವವರು 250 ರೂ ಠೇವಣಾತಿ ಕಟ್ಟಬೇಕು. ಓಟು ತೆಗೆದ ನಂತರ ಆ ತಾಲೋಕಿನಲ್ಲಿ ಓಟ ಕೊಟ್ಟ ಜನರ ಸಂಖ್ಯೆಯ ಎಂಟರಲ್ಲಿ ಒಂದಂಶದ ಓಟುಗಳಾದರೂ ಸಿಕ್ಕದವನು ಈ 250 ರೂ ಕಳಕೊಳ್ಳುವನು ಎಂಟರಲ್ಲಿ ಒಂದಂಶಕ್ಕಿಂತ ಹೆಚ್ಚು ಓಟುಗಳು ಸಿಕ್ಕಿದವನಿಗೆ ಅವನ 250 ರೂ. ಠೇವಣಾತಿ ಹಣವು ವಾಪಾಸು ಕೊಡಲ್ಪಡುವುದು

ಓಟು ಕೊಡುವ ಸ್ಥಳಗಳನ್ನು ಓಟು ತೆಗೆದುಕೊಳ್ಳುವ ಆಫೀಸರುಗಳನ್ನೂ ಹಿಂದಳಿಂದ ನೇಮಿಸುತ್ತಾರಂತೆ. ಓಟರುಗಳಿಗೆಲ್ಲಾ ಅನುಕೂಲವಾಗುವಂತೆ ಪ್ರತಿಯೊಂದು ನಾಡು ಕಚೇರಿ ಇದ್ದ ಅಥವಾ ಕಡಿಮೆ ಪಕ್ಷ ಈಗ ಇರುವ ಸ್ಥಳದಲ್ಲಿ ಓಟು ತೆಗೆಯುವಂತೆ ಮಾಡಬೇಕು ಇಲ್ಲವಾದರೆ ಓಟು ಕೊಡುವಂತ ಅಮೂಲ್ಯವಾದ ಹಕ್ಕನ್ನು ಹೆಚ್ಚಿನ ಜನರು ಉಪಯೋಗಿಸಿಕೊಳ್ಳಲಿಕ್ಕಿಲ್ಲವೆಂಬ ಭಯವಿದೆ ಓಟಿನ ಮೂಲಕ ಚುನಾವಣೆ ಪದ್ಧತಿಯು ಈ ದೇಶದಲ್ಲಿ ಇದೇ ಮೊದಲಾದುದರಿಂದ ಸರ್ಕಾರದವರು ಓಟರುಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಡಬೇಕಾದದ್ದು ಅವಶ್ಯ ಯೂರೋಪಿಯನ್ ಓಟರುಗಳು ಮಾತ್ರ ತಮ್ಮ ಓಟುಗಳನ್ನು ಟಪ್ಪಾಲಿನ ಮೂಲಕ ಕಳುಹಿಸಿಕೊಡಬಹುದೆಂದು ರೂಲು ಇದೆ. ಈ ಹಕ್ಕನ್ನು ದೇಶೀಯರಿಗೂ ಕೊಡದೆ ಭೇದವನ್ನು ತೋರಿಸಿರುವದು ಬಹಳ ವ್ಯಸನಕರ

ಓಟರುಗಳ ಪಟ್ಟಿಯು ಬೇಗನೆ ಪ್ರಕಟವಾಗುತ್ತದೆ ಮೇಲೆ ಸೂಚಿಸಿರುವ ರೂಲುಗಳ ಪ್ರಕಾರವಾಗಿ ಓಟ ಕೊಡಲು ಹಕ್ಕಿರುವ ಪ್ರತಿಯೊಬ್ಬನು ಹಾಗೆ ಪ್ರಕಟವಾಗುವ ಪಟ್ಟಿಯಲ್ಲಿ ತನ್ನ ಹೆಸರಿದೆಯೋ ಎಂಬುದನ್ನು ನೋಡಿಕೊಳ್ಳಬೇಕು ಹೆಸರು ಬಿಟ್ಟು ಹೋಗಿದ್ದರೆ ಅದನ್ನು ಸೇರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿಕೊಂಡು ತಮ್ಮ ಹೆಸರುಗಳನ್ನು ಪಟ್ಟಿಯಲ್ಲಿ ದಾಖಲೆ ಮಾಡಿಸಿಕೊಳ್ಳುವುದು ಪ್ರತಿಯೊಬ್ಬ ಓಟರ ಕರ್ತವ್ಯವಾಗಿದೆ ಹೀಗೆ ತಿದ್ದುಪಡಿ ಮಾಡಲ್ಪಟ್ಟ ಪಟ್ಟಿಯು ಪುನಹ ಪ್ರಕಟವಾಗುವುದು ಅದರಲ್ಲಿ ಹೆಚ್ಚು ಕಡಿಮೆಯಾದರೆ ಸರಿಪಡಿಸುವುದು ಆ ನಂತರ ಚುನಾವಣೆಗೆ ಸಾಧ್ಯವಿಲ್ಲ. ಆದುದರಿಂದ ನಮ್ಮ ನಾಡವರೆಲ್ಲರೂ ತಾವೂ ಜಾಗರೂಕರಾಗಿರತಕ್ಕದಲ್ಲದೆ ಇತರರಿಗೂ ತಿಳಿಸಿ ಎಚ್ಚರಗೊಳಿಸಬೇಕೆಂತ ನಮ್ಮ ಅಭಿಲಾಷೆ ರಾಜ್ಯಾಡಳಿತೆ ಸ್ವಲ್ಪವಾದರೂ ಪ್ರಜೆಗಳಿಗೆ ಹಕ್ಕು ಸಿಕ್ಕಿರುವುದು ಇದೇ ಮೊದಲು ಈ ಅಮೂಲ್ಯವಾದ ಓಟುಕೊಡುವ ಹಕ್ಕನ್ನು ಉಪಯೋಗಿಸುವುದರಲ್ಲಿ ಅನುಕೂಲವನ್ನು ಓಟು ಪಟ್ಟಿಯನ್ನು ಅಜಮಾಯಿಸಿ ಸರಿಪಡಿಸಿಕೊಳ್ಳುವುದರಲ್ಲೂ ಓಟು ಪಟ್ಟಿಗೆ ದಾಖಲಾದನಂತರ ಸ್ವರಾಜ್ಯಕ್ಕೆ ಇರುವ ತಮ್ಮ ಅರ್ಹತೆಯನ್ನು ಓಟು ಕೊಡುವುದರಲ್ಲೂ ನಿದರ್ಶಿಸಬೇಕಾದದ್ದು ದೇಶದವರ ಕರ್ತವ್ಯವಾಗಿದೆ

ಚೆಕರ್ ಮತ್ತು ಖಾದಿಪ್ರಚಾರ.

"ಕೊಡಗು" ಪತ್ರಿಕೆಯು ಜನ್ಮವೆತ್ತಿ ಸಾಧಾರಣ ಮೂರು ವರ್ಷಗಳಾದುವು ಅಂದಿನಿಂದ ಈ ಏಕಾಕಿಯಾದ ಪತ್ರಿಕೆಯು ನಮ್ಮ ಚಿಕ್ಕ ಜನಾಂಗಕ್ಕೆ ತುಂಬಾ ಸಹಾಯವನ್ನುಂಟುಮಾಡಿರುವುದು. ಪದೇ ಪದೇ ದೇಶಾಭಿವೃದ್ಧಿ ಪರವಾಗಿ ಅನೇಕ ಲೇಖನಗಳು ಕಾಣಿಸಿಕೊಂಡಿರುವವು. ಆದರೂ ಚರ್ಕ ಮತ್ತು ಖಾದಿಪ್ರಚಾರ ಇವುಗಳ ವಿಷಯ ಕೊಡಗು ದೇಶವು ಶೂನ್ಯಭಾವವೆಯುಳ್ಳದಾಗಿರುವುದು ಲೇಷಮಾತ್ರವೂ ಸಂಶಯವಿಲ್ಲ. ಅವಕಾಶ ದೊರತಿದೆ ಕೊಡಗು ದೇಶಕ್ಕೆ ಈ ವಿಷಯವಾಗಿ ನನ್ನದೊಂದು ವಿನಂತಿ.

ಕೆಲವು ವರ್ಷಗಳ ಹಿಂದೆ ನಮ್ಮ ದೇಶದ ಮುಖ್ಯಸ್ಥರು ಮಹಾಪ್ರಭುಗಳಿಂದ ಜನರಿಗೆ ಸಂದೇಶದ ವಿಷಯಗಳಿಲ್ಲದ ಕಗ್ಗತ್ತಲೆಯೋ ಪಾದಿಯಲ್ಲಿದ್ದಿತು. ಕೊಡಗು ಪತ್ರಿಕೆಯು ಬರಲು ಕಾರಣವಾದ ಸಂಕರ ರಾತ್ರಿಯ ಅಂಧಕಾರವೆಲ್ಲವೂ ಹೇಗೆ ಸೂರ್ಯನು ಮೂಡುತ್ತಲೇ ತೊಲಗುವುದೋ ಹಾಗೆಯೇ ನಮ್ಮ ಜನರಲ್ಲಿದ್ದ ಅಜ್ಞಾನವು ಮೆಲ್ಲಮೆಲ್ಲಗೆ ಬರಿಗುತ್ತಿರುತ್ತೆ, ಕಾಲಕ್ರಮೇಣ ಅದು ಪೂರ್ಣ ನಾಶ ಹೊಂದುವದು ಎಳ್ಳಿಯನ್ನೂ ಸಂಶಯವಿಲ್ಲ ಒಂದೆರಡು ವರ್ಷಗಳಿಂದ ನಮ್ಮ ದೇಶದ ಬಡಜನರು ಪರದೇಶ ಸಾಮಾನುಗಳನ್ನು ಅಲ್ಪಸ್ವಲ್ಪವಾಗಿ ಆರಿಸುತ್ತಾ ಬಂದಿರುವರು ತಾವು ಸ್ವರ್ಗ ಸೋಪಾನವನ್ನೂ ಸಮೀಪಿಸಿ ಮೆಟ್ಟಿಲು ಹತ್ತುತ್ತಿರುವರೋ ಅಥವಾ ನರಕ ಕೂಪವನ್ನು ಅಪ್ಪುತ್ತಿರುವರೋ ನಾ ಸಂಶಯಿಸು. ಈ ಮಾತುಗಳೆಲ್ಲವೂ ... ಯಲ್ಲಿರಿ. ನಾವು ಕೈಕೊಂಡ ಕಾರ್ಯವನ್ನು ... ನೋಣ

ನಮ್ಮ ದೇಶದಲ್ಲಿ ಕೈಗಾರಿಕೆ ಕಾರುಗಾರರುಗಳು ಕಾಣುವುದು ಪರದೇಶದಲ್ಲಿಯಾದರೂ ಕಾರ್ಖಾನೆಗಳೂ, ಕೈಕಸುಬಿನ ಶಾಲೆಗಳೂ, ಉನ್ನತಪದವಿಯನ್ನು ... ದಿರುವವು ಆಯಾಯ ಪುರನಿವಾಸಿಗಳಿಗೆ ಇಡೀ ... ವೆಲ್ಲವೂ ದಣಿದು ಜೀವಿಸಲು ಅನುಕೂಲಗಳಿರುವುವು ನಮ್ಮ ದೇಶದಲ್ಲಿ ಯಾದರೂ ಸಂಗತಿಗಳಿಲ್ಲವೂ ... ವಿಧವಾಗಿರುವುದು ಕೆಲಸ ಮಾಡುವವರಿಗೆ ... ವೂ ಎಡೆಬಿಡದೆ ಹೊಟ್ಟೆಹೊರೆಯಲು ಸಾಧನಗಳು ಸಿಗಲಾರವು. ಇದೇ ಸ್ವರಂತೆ ಏನಾದರೊಂದು ಕಸುಬನ್ನು ಗೃಹದಲ್ಲಿರಿ ನಮ್ಮವರು ನೆರವೇರಿಸಬೇಕಾಗಿರುವದು

ನಮ್ಮ ಈ ಚಿಕ್ಕ ಜನಾಂಗದ ಮುಖ್ಯ ಪ್ರವೃತ್ತಿ ವ್ಯವಸಾಯವಾಗಿರುವುದು ಬೇಸಾಯಗಾರರಿಗೆ ... ಗಾಲವು ಪ್ರಾರಂಭಿಸಿದ ನಂತರ ಮೂರು ನಾಲ್ಕು ತಿಂಗಳವರೆಗೆ ತಮ್ಮ ಸಮೀಪ ... ವಸಂತದಲ್ಲಿ ... ಡು. ನಾಟಿ ಕೆಲಸದ ಮೇಲೆ ನೆಲ್ಲದನ್ನು ... ಕೊಯ್ಯುವುದು ... ಕೆಲಸ ವಿಶೇಷ ಕೆಲಸವಾಗಿದೆ ... ಸುಗ್ಗಿ ... ದಿನವೆಲ್ಲ ಬೇಸಾಯವಿಲ್ಲ ... ಲಿಯು ಫಸಲಾಗಿರುವಲ್ಲಿ ಮನೆಯ ಯಜಮಾನನಿಗೆ ... ಕಷ್ಟಗಳುಬರುವ ಅವಶ್ಯಕತೆಯಿಲ್ಲ ... ಇಲ್ಲದೆ ಸುಗ್ಗಿ ಕಡೆಗಳಲ್ಲಿ ಜನರು ನಾಟಿ ಕೆಲಸವೆಲ್ಲ ಮುಗಿದ ನಂತರ ಅವರು ತಮ್ಮ ಕೈಸುಮ್ಮನಿರುವ ... ರೈವರ (Bench) ಕೆಳತು ಇಲ್ಲದಿಲ್ಲದ ನಿಷ್ಪ್ರಯೋಜನ ಮಾತು ಆಡುವ ಆಯುತ್ತ ಸಮಯವನ್ನು ಕಳೆಯುವದು ತದನಂತರ ಸುಗ್ಗಿಗಳಲ್ಲಿ ರೈತರಿಗೆ ಹೆಚಿನ ಕೆಲಸವು ... ಹಣ್ಣು ಕೊಯ್ಯುವುದು ... ಕೆಲಸವು ... ದು ತಿಂಗಳು ಮಾತ್ರ ಆ ಮೇಲೆ ಒಕ್ಕಲು ಕೆಲಸವು ... ರಂಭಿಸಲು ಎರಡು ತಿಂಗಳು ಬೇಕು ಆ ಕೆಲಸವು ... ರಡು ತಿಂಗಳಿಗಿಂತ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ, ಒಕ್ಕಲು ಕೆಲಸ ತೀರಿ ಭತ್ತ ಗೂಡೆನೆಲ (Granary) ಸೇರಿದ ನಂತರ ರೈತನ ತನ್ನ ಅನುಭವದ ಸಮಯವನ್ನು ಎಷ್ಟೊಂದು ಸುಲಭವಾಗಿ ಕಳೆಯುವನು. ಈ ಮೇಲೆ ವಿವರಿಸಿದಂತೆ ಕೊಡಗಿನಲ್ಲಿ ರೈತರು ಸುಗ್ಗಿಕಾಲದಲ್ಲಿ 5-6 ತಿಂಗಳು ಮಾತ್ರ ಕೆಲಸವನ್ನು ... ಉಳಿದ 5-6 ತಿಂಗಳನ್ನು ನಿಷ್ಪ್ರಯೋಜನವಾಗಿ ಕಳೆಯುವರು. ಕೊಡಗಿನಲ್ಲಿ ಶೇಕಡ 75 ಜನರು ವ್ಯವಸಾಯ ವೃತ್ತಿಯವರು ಇಂಥವರೆಲ್ಲರೂ ತಮ್ಮ ಜೀವನದಲ್ಲಿ ಪ್ರತಿಯೊಂದು ವರ್ಷವೂ ಕಡಿಮೆ ಪಕ್ಷ ಅರ್ಧಭಾಗ ಸಮಯವನ್ನು ವ್ಯರ್ಥವಾಗಿ ಕಳೆಯುವರು.

ಸಮಯದ ಅರ್ಧಭಾಗವನ್ನು ಹೀಗೆ ವ್ಯರ್ಥವಾಗಿ ಕಳೆಯುವುದಕ್ಕೆ ಉತ್ತಮವಾಗಿ ಉಪಯೋಗಿಸುವುದು ... ಶ್ರಮಪಡದು ಪ್ರತಿಯೊಬ್ಬ ... ಮನೆಯವರೊಂದು ಚರ್ಕವಿಟ್ಟಲ್ಲಿ ಅದರಿಂದ ... ಪ್ರಯೋಜನವನ್ನು ಹೊಂದಬಹುದು. ... ಲೆ ನೇಕಾರ ಪುರುಷರು ವರ್ಷದ ಕೆಲವು ಭಾಗವನ್ನು ವ್ಯರ್ಥವಾಗಿ ಕಳೆಯುವರು ಸ್ತ್ರೀಯರ ವಿಷಯದಲ್ಲಿ ಹೇಳಬೇಕಾದರೆ ... ಸ್ತ್ರೀಯರು ಇಡೀ ದಿವಸ ಪುರುಷರಂತೆ ಕೆಲಸಮಾಡುವುದುಂಟು ಇಂಥವರು ... 12 ತಿಂಗಳಲ್ಲಿ ಮೂರು ನಾಲ್ಕು ತಿಂಗಳನ್ನು ಸುಮ್ಮನೆ ಕಳೆಯುವರು ಶ್ರೀಮಂತರ ಮಧ್ಯಸ್ಥರ ಒಳಮನೆಯ ಊಟವಾದ ನಿದ್ರಿಸುವ ಸಮಯ ಬಿಟ್ಟು ತಮ್ಮ ಜೀವನದ ಹೆಚ್ಚಿನ ಭಾಗವನ್ನೆಲ್ಲ ನಿಷ್ಪ್ರಯೋಜನವಾಗಿ ಕಳೆಯುತ್ತಿರುವರು. ಆಹಾ! ಇನ್ನೆನಿತು ಕಠಿಣವಾಗಿರುವಂತ ಸಂಗತಿ ಭೂಲೋಕದ ಯಾವ ಭಾಗದ ಮನುಷ್ಯರಲ್ಲಿ ಈ ಬಗೆಯ ಸಂಗತಿಯು ಇದೆ? ಸ್ತ್ರೀಯೊಂದು ಗೃಹದಲ್ಲು ಪತಿಯು ಹೊರಗೆ ಹೋಗಿ ಅವನು ಹಿಂತಿರುಗಿ ಬರುವವರೆಗೆ ಪತ್ನಿಯು ಅನ್ನಪದಾರ್ಥವನ್ನು ... ಇತರ ಗೃಹಕೃತ್ಯದ ಕೆಲವನ್ನೇನಾದರೂ ಮುಗಿಸಿ ... ಸಮಯವನ್ನು ಇತರ ನೆರೆಯವರ ಗೃಹಕ್ಕೆ ಹೋಗಿ ... ಕಾಲವನ್ನು ಕಳೆಯುತ್ತಿರುವಳು. ಅಕ್ಕಪಕ್ಕದಲ್ಲಿ ಎಲ್ಲಿ ನಿರರ್ಥಕವಾಗಿ ಕಾಲವು ಕಳೆಯುವುದೋ ಅಲ್ಲಿ ಸಾವಿರಾರು ಚರ್ಕಗಳು ಚಲಿಸುತ್ತಿ ... ದೊಂದಿರುವ ಜಗಲಿಗಳಲ್ಲಿಯೂ ಕಾಣಿಸಿಕೊಳ್ಳುತ್ತಿದ್ದ ದೇಶೀಯ ಉದ್ಯಮವು ಖಂಡಿತ, ಹೊರಪ್ರದೇಶಗಳಲ್ಲಿ ಚರ್ಕಗಳ ಲಕ್ಷೋಪಲಕ್ಷ ಈ ಯಂತ್ರಗಳಲ್ಲಿ ಕೆಲಸಮಾಡುವವರು ಎಣಿಸಿ ... ಸುವವರು ಖಾದಿಬಟ್ಟೆಯ ಪ್ರಚಾರವೇ

...ಸೇವೆಯಲ್ಲಿ ನಿರತರಾಗಿರುವವರೆಲ್ಲರೂ ಖಾದಿಬಟ್ಟೆಯ ಉಪಯೋಗಿಸುವರು. ನಮ್ಮ ದೇಶದರಾದರೋ ಬಟ್ಟೆ ಧರಿಸುವವರನ್ನು ಕೈಬೆರಳುಗಳಿಂದ ಎಣಿಸಬಹುದು. ನಮ್ಮ ದೇಶದ ಕೆಲವು ಜನಗಳ ಅಭಿಪ್ರಾಯವನ್ನು ...ದು ಗ್ರಹಿಸೋಣ. ಖಾದಿಬಟ್ಟೆಯನ್ನು ಧರಿಸಿದವನ ನೋಡಿದರೆ ಇವರು ಅಸಹಕಾರರೆಂದೂ ನೋಡುವ. ಅಸಹಕಾರರಾಗಲು ಆತನಲ್ಲಿ ಯಾವುದೆಲ್ಲ ಗುಣಗ...ಕು. ಇದನ್ನೆಲ್ಲ ನೋಡಲು ನಮ್ಮ ದೇಶದವರು ಇ...ಲ್ಲರಿಗಿಂತಲೂ ನವೀನ ನಾಗರೀಕತೆಯನ್ನು ಹೊಂದಿದ...ದು ತೋರುತ್ತೆ. ಯಾವನಾದರೂ ಒಬ್ಬನು ಖಾದಿ...ಯನ್ನುಟ್ಟು ಹೊರಬಿದ್ದರೆ ಆತನನ್ನು ಓರೆಗಣ್ಣಿನಿಂದ ...ಡುವವರಿಷ್ಟಿದ್ದಾರೆ. ಇನ್ನು ಕೆಲವರು "ಏನಪ್ಪ" ...ತ್ಮಗಾಂಧಿಯ ಶಿಷ್ಯನಾಗಿ ಬಿಟ್ಟೆಯೋ? ಮಹಾತ್ಮ... ...ಥ... ಶಿಷ್ಯನಾಗಲು ಈ ಪುರುಷನ ಹಣೆಯಲ್ಲಿ ಬರೆದಿ...ೋ ಎಂಬುದು ದೇವರೆ ತಿಳಿದಿರುವನು. ಇದು ಹೀಗಿರಲಿ. ಕೊಡಗಿನಲ್ಲಿ ಎಲ್ಲೋ ಮೂಲೆಮೂಲೆಗಳಲ್ಲಿ ಚರಕಗ...ಬಹುದು. ಈ ಯಂತ್ರಗಳೇನು ಸೋಜಿಗಕರವೇನಲ್ಲ. ಇ...ವನ್ನು ಸಾಮಾನ್ಯ ಬಡಗಿಯು ಮೂರು ನಾಲ್ಕು ರೂಪಾಯಿಗಳಿಗೆ ತಯಾರಿಸಬಹುದು. ಅಥವಾ ಒಳ್ಳೆ ತರಹದ ...ಗಳನ್ನು ಪರದೇಶಗಳಿಂದ ಅಲ್ಪ ಮೊಬಲಗಿಗೆ ತರಿಸಿಕೊಳ್ಳ...ಹುದು. ಇಂಥ ಒಂದು ಯಂತ್ರವನ್ನು ಮನೆಯಲ್ಲಿಟ್ಟು...ಂಡು ಪರದೇಶದಿಂದ ಹತ್ತಿಯನ್ನು ತರಿಸಿ ದಿವಸದ ಹ... ಭಾಗವನ್ನು ವ್ಯರ್ಥವಾಗಿ ಕಳೆಯುವುದಕ್ಕಿಂತ ಅವುಗ...ಸ್ಟಿಕೆ ಒಂದೆರಡು ಗಂಟೆಗಳನ್ನು ಈ ಚರಕ ನೂಲುವುದ...ದಲ್ಲಿ ಆದರ ಪುಣ್ಯವನ್ನು ಏನೆಂದು ಹೇಳುವೆವು. ... ಮೊದಲ ನಮ್ಮ ದೇಶದಲ್ಲಿ ಇಡೀ ವರ್ಷವೆಲ್ಲ ಕೆಲ...ಲ್ಲದೆ ಎಷ್ಟೋ ಮನುಷ್ಯರು ನಮ್ಮ ಸಮಯವನ್ನು ಹಾ...ಮಾಡುವವರು ಅನೇಕರಿದ್ದಾರೆಂದು ತಿಳಿದೆವು. ಇಂಥ...ಲ್ಲರೂ ಒಂದೊಂದು ಚರಕವನ್ನು ತರಿಸಿ ನೂಲುವ... ಕಳಿತು ಎಷ್ಟು ಪ್ರಯೋಜನ ಪೂರ್ವಕವಾಗಿ ಕಾಲಹ... ಮಾಡಬಹುದು. ಮತ್ತು ಎಷ್ಟು ಸುಲಭದಲ್ಲಿ ಅನ್ನ...ವು ಸಂಪಾದಿಸಬಹುದು. ಚರಕದ ಜೊತೆಗೆ ಒಂದು ...ಮಗ್ಗವನ್ನು ಇಟ್ಟುಕೊಂಡರೆ ತಾನು ತಯಾರಿಸಿದ ನೂ...ದಲೇ ತನ್ನ ಹೆಂಡತಿ ಮಕ್ಕಳು ಮುಂಗಳಿಗೆಲ್ಲ ಧರಿಸಲು ...ಕಾದ ಬಟ್ಟೆಯನ್ನು ಸಿದ್ಧಪಡಿಸಬಹುದು. ಹೀಗೆ ಮಾ...ದಲ್ಲಿ ಪ್ರತಿಯೊಬ್ಬನೂ ಸುಖಪುರುಷನಾಗಿ ತನ್ನ ಜೀವನ...ಯಾತ್ರೆಯನ್ನು ಮುಂದರಿಸಬಹುದು. ಈಗಲಾದರೂ ಬ...ಟ್ಟೆಗಾಗಿ ... ಬಟ್ಟೆ ವ್ಯಾಪಾರಿಯ ಹತ್ತಿರ ಹೋಗಿ ಪ್ರತಿ...ಬ್ಬ ... ತನ್ನ ಹಣವನ್ನು ಎಣಿಸಿಕೊಡುವಾಗ ಕಂ...ನಿಗಳು ಬೀಳದಿರವು. ಅನೇಕ ಸರ್ತಿ ಬಡವ ಮನುಷ್ಯರು ...ಾಪಾರಿಗಳ ವಶನಾಗಿ ನೊಣವು ಜೇಡರ ಬಲೆ...ಯಲ್ಲಿ ಸಿಕ್ಕಿ ಹೇಗೆ ತನ್ನನ್ನು ರಕ್ಷಿಸಿಕೊಳ್ಳಲು ಯತ್ನಿಸುವು...ೋ ಅದೇ ರೀತಿಯಲ್ಲಿ ಆ ಮನುಷ್ಯರನೇಕರು ಹೋರಾ...ಬೇಕಾಗಿರುವುದು. ಗೃಹಣಿಯರ ಒಡವೆ ವಸ್ತುಗಳನ್ನು ...ಡವಿಟ್ಟು, ಅಥವಾ ಮುಂದಿನ ವರ್ಷದ ಭತ್ತದ ಫಸಲಿನ ...ಹಣದಿಂದ ಹೆಚ್ಚು ಕ್ರಯದ ಬಟ್ಟೆಬರೆಗಳನ್ನು ಸಾಲಮಾಡಿ ...ವನು. ಆತನು ರೇಷ್ಮೆಯ 'ಮಿಸನಿನಿ' ಎನ್ನುವ ...ೋಟನ್ನು ಧರಿಸಿರುವನು. ನನಗೂ ಅಂಥಾದೊಂದು ...ೋಟು ಬೇಕಾಗಿರುವುದು, ಎಂದೆನ್ನುತ್ತ ಬಟ್ಟೆ ಮಾರುವ ...ನ ಹತ್ತಿರ ಹೋಗಿ ತನ್ನಲ್ಲಿ ದ್ರವ್ಯವಿಲ್ಲದಿದ್ದರೂ ಸಾಲಮಾ... ಬಟ್ಟೆ ತರುವನು. ಇದು ಎಂತಹ ಹುಚ್ಚುತನ! ಬಟ್ಟೆ...ರೆಗಳ ವಿಷಯಕ್ಕೆ ಬರುವಾಗ ನಮ್ಮಲ್ಲನೇಕರು ಕಂಬಳಿ...ರುವಷ್ಟು ಕಾಲುನೀಡು ಎಂಬ ನಾಣ್ಣುಡಿಯನ್ನು ಮರೆಯುವರು. ಆದಕಾರಣ ಪ್ರತಿಯೊಬ್ಬನೂ ಮೂರು ...ಲ್ಕು ರೂಪಾಯಿಗಳೊಳಗೆ ಬಡಗಿಯೊಬ್ಬನಿಂದ ಒಂ...ದು ಚರಕವನ್ನು ತಯಾರಿಸಿಕೊಂಡು ದಿವಸಕ್ಕೆ ಸಾಧಾ...ರಣ ಒಂದೆರಡು ಗಂಟೆ ಕೆಲಸಮಾಡಿದರೆ ಸುಮಾರು ...ಂಡು ನೂಲುಗಳನ್ನು ತಯಾರಿಸಬಹುದು. ಹೀಗೆ ಒಂದೆರಡು ಯಂತ್ರಗಳಿದ್ದರೆ ಬೇಕಾದಷ್ಟು ನೂಲು ತ...ಯಾರಿಸಿ ಬಟ್ಟೆಮಾಡಬಹುದು. ಹೆಚ್ಚಾದ ನೂಲನ್ನು ಮಾ...ರಬಹುದು. ಅಥವಾ ತಾನು ಉಡಲಿಕ್ಕೆ ಬೇಕಾದ ...ಟ್ಟೆಮಾಡಲು ಉಪಯೋಗಿಸಬಹುದು. ತಾನು ತಯಾ...ರಿಸಿದ ನೂಲಿನಿಂದಲೇ ತನಗೆ ಧರಿಸಿಕೊಳ್ಳಲಿಕ್ಕೆ ಬೇಕಾದಂತ ...ಟ್ಟೆಗಳನ್ನು ಕೈಮಗ್ಗದಿಂದ ತಯಾರಿಸಿಕೊಳ್ಳಬಹುದು. ...ೀಗೆ ಪ್ರಯತ್ನಿಸಿ ಬಟ್ಟೆ ತಯಾರಿಸಿಕೊಂಡಲ್ಲಿ ತನ್ನ ಜೀವನ ...ಯಾತ್ರೆಯು ಹೆಚ್ಚು ತಡಚಣೆಗಳಿಲ್ಲದೆ ಸಾಗಬಹುದು. ಪ್ರತಿ...ಯೊಂದು ಮನೆಯಲ್ಲೂ ಒಂದು ಚರಕವನ್ನು ಇಟ್ಟುಕೊಂಡ... ಹೆಂಗಸರನೇಕರು ತಾವು ನಿರರ್ಥಕವಾಗಿ ಕಳೆಯುವ ...ವೇಳೆಯನ್ನು ಆ ಚರಕಯಂತ್ರದ ವಾದದಲ್ಲಿ ಕಳೆಯಬಹು...ದು. ಹೀಗೆ ಕಳೆದರೆ ಜನಗೆ ಅನುಕೂಲತೆಯೂ, ಗೌರವ...ವೂ, ಯಶಸ್ಸೂ, ದೈವತ್ವವೂ ದೊರಕುವುದರಲ್ಲಿ ಲೇಶ...ಮಾತ್ರವೂ ಸಂದೇಹವಿಲ್ಲ. ಇದರ ಬದಲು ನೋಮಾಂತ...ವನ್ನು ಅಪ್ಪಿಹಿಡಿದರೆ ದೇಶಕ್ಕೂ, ಜನಾಂಗಕ್ಕೂ, ಎಲ್ಲಾ...ದರ ಕ್ಷೀಣತೆಯು ಹೀನತ್ವವೂ ಸಂಭವಿಸುವವು. ಪರ...ದೇಶದವರ ಆಚಾರ ಗುಣಗಳನ್ನು ಕಂಡು ನಾವು ಅವುಗಳ...ಯ ಸ್ವಲ್ಪ ಅಂಶಗಳನ್ನಾದರೂ ಯಾಕೆ ಕಲಿತುಕೊಳ್ಳ...ಬಾರದು. ಕೃಷಿಕರೊಬ್ಬರು ಪರದೇಶದಿಂದ ಹತ್ತಿಯನ್ನು ...ತರಿಸುವುದು ಇಲ್ಲಿನವರಿಗೆ ಸ್ವಲ್ಪ ಪ್ರಯಾಸವಾಗಿ ಕಂಡ... ಅಂಥಲ್ಲಿ ನಮ್ಮ ದೇಶದಲ್ಲೇ ಹತ್ತಿಯ ಗಿಡಗಳನ್ನು ನೆಟ್ಟು ಹತ್ತಿಯನ್ನು ತಯಾರಿಸಿದಲ್ಲಿ ಇದಕ್ಕಿಂತಲೂ ಶ್ರೇಯಸ್ಕರವಾದದ್ದು ಬೇರೊಂದಿಲ್ಲ. ಚರಕದಲ್ಲಿ ತಯಾರಿಸಿದ ನೂಲಿನಿಂದ ಕೈಮಗ್ಗದಲ್ಲಿ ಸಿದ್ಧಪಡಿಸಿದ ಬಟ್ಟೆಗೆ ಖಾದಿ ಎಂದು ಹೆಸರು. ಈ ಬಟ್ಟೆಯನ್ನು ಎಷ್ಟು ಅಲ್ಪಹಣ ವ್ಯಯದಿಂದ ತಯಾರಿಸಬಹುದು. ಹೀಗೆ ತಯಾರಿಸಿದ ಬಟ್ಟೆಯು ಶಕ್ತಿಯೂ, ಬಾಳಿಕೆಯೂ ವಿಶೇಷವಾದದ್ದು.

ಆದನ್ನ ಯುಕ್ತ ನಮ್ಮ ದೇಶದ ಮುಂದಾಳುಗಳು ಇಲ್ಲವೇ ದೇಶಸೇವೆಯಲ್ಲಿ ಮಗ್ನವಾಗಿರುವವರು ಮುಖ್ಯ, ಮುಖ್ಯ ಪಟ್ಟಣಗಳಲ್ಲಿ ಚರಕ, ಹತ್ತಿ, ಇತ್ಯಾದಿಗಳನ್ನು ತರಿಸಿ, ಅಥವಾ ತಯಾರಿಸಿ ನೆಲೆಗೊಳಿಸಿದಲ್ಲಿ ದೇಶದ ಬಡಜನರ ಜೀವನೋದ್ಧಾರಮಾಡಿದಂತಾಗಾವುದಿಲ್ಲವೇ.

ಗರ್ಭಿಣಿಯರ ಆರೋಗ್ಯ.

(೩೦ ನೇ ಸಂಚಿಕೆಯಿಂದ ಮುಂದುವರಿದುದ್ದು)

ಕೂಸು ಹುಟ್ಟಿದ ಮೇಲೆ 2 ಗಂಟೆಯ ಕಾಲಕ್ಕೆ ಕಡಿಮೆಯಿಲ್ಲದೆ 1 ಗಂಟೆ ಕಾಲಕ್ಕೆ ಮೀರದೆ ತಾಯಿಯು ಹಾಲನ್ನು ಕುಡಿಯುತ್ತಿರಬೇಕು. ಮೊದಮೊದಲು ತಾಯಿಯ ಸ್ತನಾಗ್ರಕ್ಕೆ ಸಕ್ಕರೆಯ ನೀರನ್ನು ಸ್ವಲ್ಪವಾಗಿ ಕೊಡೆಯುವುದು ಉತ್ತಮ. ಮಗುವು ಹುಟ್ಟಿ ಎರಡು ದಿನಗಳಾಗುವವರೆಗೆ ಸುಲಭವಾಗಿ ಜೀರ್ಣವಾಗುವ ಜಾರದ ಅಕ್ಕಿ ಅಥವ ಇತರ ಧಾನ್ಯಗಳಿಂದ ಮಾಡಿದ ಗಂಜಿಯನ್ನು ಕೊಡುವುದು ತಪ್ಪು. ಕೂಸು ಹುಟ್ಟಿದ ಮೊದಲು ಎರಡು ದಿನಗಳವರೆಗೆ ದಿನಕ್ಕೆ ಎಂದರೆ 24 ಗಂಟೆಗಳ ಕಾಲಕ್ಕೆ ನಾಲ್ಕು ಅಥವ ಆರುಸಾರಿ ತಾಯಿಯ ಎದೆ ಹಾಲನ್ನು ಕೊಡಬೇಕು. ಹಗಲು ಹೊತ್ತಿನಲ್ಲಿ 2 ಗಂಟೆಯ ಹೊತ್ತು, ಒಮ್ಮೊಮ್ಮೆ ವಾರಗಳವರೆಗೆ ಕಾಲಕ್ರಮವಾಗಿ ಹಾಲನ್ನು ಕುಡಿಸಬೇಕು. ಆ ವೇಳೆ 6 ರಿಂದ 12 ವಾರಗಳವರೆಗೆ 2½ ಗಂಟೆಯ ಕಾಲಕ್ಕೆ ಒಂದು ಸಾರಿಯೂ ಆ ಮೇಲೆ 3 ನೇ ತಿಂಗಳಿಂದ 9 ತಿಂಗಳವರೆಗೆ 3 ಗಂಟೆಗಳ ಕಾಲಕ್ಕೆ ಒಂದು ಸಾರಿಯೂ, ಅದರಿಂದಾಚೆಗೆ ಒಂದು ವರ್ಷವು ತುಂಬುವವರೆಗೆ 3½ ಗಂಟೆಗೆ ಒಂದು ಸಲದಂತೆಯೂ ಹಾಲನ್ನು ಕುಡಿಸಬೇಕು. ರಾತ್ರಿಯ ಕಾಲಗಳಲ್ಲಿ ಮೊದಲು ಒಂದು ವಾರದವರೆಗೆ ಒಂದು ಅಥವ 2 ಸಲಕ್ಕಿಂತ ಹೆಚ್ಚಾಗಿ ಹಾಲುಕುಡಿಸಬಾರದು. ಆಮೇಲೆ 5 ನೇ ತಿಂಗಳವರೆಗೆ ರಾತ್ರಿ 10 ಗಂಟೆಗೆ ಒಂದು ಸಲ ಮಾತ್ರ ಹಾಲು ಕೊಟ್ಟು ಮಲಗಿಸಬೇಕು. ಮಕ್ಕಳಿಗೆ 5 ತಿಂಗಳು ತುಂಬಿದಮೇಲೆ ರಾತ್ರಿಯ ಹೊತ್ತು ಎಂದರೆ 10 ಗಂಟೆಯ ಮೇಲೆ ಬೆಳಿಗ್ಗೆ 6 ಗಂಟೆಗೆ ಮೊದಲು ಹಾಲನ್ನು ಕುಡಿಸಲೇಬಾರದು.

ಶಿಶುಗಳಿಗೆ ಹಾಲುಕೊಡುವುದರಲ್ಲಿ ಕ್ಲಿಪ್ತವಾದ ಕಾಲಕ್ರಮವನ್ನು ಅನುಸರಿಸುವುದು ಬಹಳ ಅವಶ್ಯವು. ಕೂಸು ಅಳುವಾಗಲೆಲ್ಲಾ ಹಾಲುಕುಡಿಸುವುದು ತಪ್ಪು. ಅದರಿಂದ ಅಜೀರ್ಣ ಭೇದಿ ಮುಂತಾದ ರೋಗಗಳಿಗೆ ಅವಕಾಶಮಾಡಿ ಕೊಟ್ಟಂತಾಗುವುದು. ಕೂಸು ... ಕಾಲಕ್ರಮ ... ಅಭ್ಯಾಸವನ್ನು ಕೊಡುತ್ತಿದ್ದಾಗಲೂ ... ಅಳುವುದಾದರೆ ಅದು ಬಾಯಾರಿಕೆಯಿಂದ ... ಹೊರತು ಹಸಿವಿನಿಂದಲ್ಲ. ಅಂತಹ ಸಮಯಗಳಲ್ಲಿ ಕೂಸಿಗೆ ಸ್ವಲ್ಪ ಬಿಸಿನೀರನ್ನು ಕುಡಿಸಿಬಿಟ್ಟರೆ ಅದು ... ಹಾಲು ಕುಡಿಯುವವರೆಗೆ ಸುಮ್ಮನೆ ಮಲಗುವುದು. 15 ನಿಮಿಷಗಳಿಗಿಂತ ಹೆಚ್ಚುಹೊತ್ತು ಮಕ್ಕಳಿಗೆ ಹಾಲನ್ನು ಕುಡಿಸಬಾರದು.

ಎದೆಯ ಹಾಲು ದೊರೆಯದೆ ಹೋದಾಗ ಶಿಶುಗಳಿಗೆ ಬುಡ್ಡಿಯ ಹಾಲನ್ನು ಕುಡಿಸದೆ ತೀರದು. ಆದರೆ ಯಾವ ಹಾಲೇ ಆದರೂ ಎದೆಯ ಹಾಲಿನಷ್ಟು ಉತ್ತಮವಲ್ಲ. ಎದೆಯ ಹಾಲು ಸಿಕ್ಕದಿದ್ದಾಗ ಹಸುವಿನ ಹಾಲನ್ನು ಕೊಡಬೇಕಾಗುವುದು. ನಮಗೆ ಸುಲಭವಾಗಿ ಸಿಕ್ಕುವ ಹಾಲೂ ಅದೇ. ಆದರೆ ಅದನ್ನು ಕರೆದ ಹಾಗೇಯೇ ತಂದು ಮಕ್ಕಳಿಗೆ ಕೊಟ್ಟರೆ ಜೀರ್ಣವಾಗುವುದಿಲ್ಲ. ಎದೆಯ ಹಾಲಿಗೂ ಹಸುವಿನ ಹಾಲಿಗೂ ಬಹಳ ವ್ಯತ್ಯಾಸವುಂಟು. ಹಸುವಿನ ಹಾಲಿನಲ್ಲಿ ಕೆಲವು ವಸ್ತುಗಳು ಮಾತ್ರ ಎದೆಯ ಹಾಲಿನಲ್ಲಿ ಇರುವಷ್ಟೇ ಇದ್ದರೂ ಮಾಂಸವರ್ಧಕವಾದ ಪ್ರೋಟೀಡ್ ಎಂಬುದು ಶೇಕಡ 3½ ಪಾಲಿನಷ್ಟು ಹೆಚ್ಚಾಗಿಯೂ, ಸಕ್ಕರೆಯು ಶೇಕಡ 4½ ಪಾಲು ಕಡಿಮೆಯಾಗಿಯೂ ಇರುವುದು. ಇದಕ್ಕಾಗಿ ಹಸುವಿನ ಹಾಲನ್ನು ಕೆಲವು ವಿಧಾನಗಳಿಂದ ಎದೆಯ ಹಾಲಿನಂತೆ ಮಾಡಿ ಮಕ್ಕಳಿಗೆ ಕುಡಿಸಬೇಕು. ಎಂದರೆ:—ಹಸುವಿನ ಹಾಲಿನ ಸಮ ಪ್ರಮಾಣಕ್ಕೆ ನೀರನ್ನು ಅಥವಾ ಬಾರ್ಲೀ ನೀರನ್ನು ಬೆರಸಿಕೊಟ್ಟರೆ ಆ ಹಾಲಿನಲ್ಲಿ ಹೆಚ್ಚಾಗಿ ಸೇರಿರುವ ಕೆಲವು ವಸ್ತುಗಳ ಪ್ರಮಾಣವು ತಗ್ಗಿ, ಎದೆಯ ಹಾಲಿನಲ್ಲಿರುವ ಅದೇ ವಸ್ತುವಿನ ಪ್ರಮಾಣಕ್ಕೆ ಸಮಬರುವುದು. ಆದರೆ ಬೆರಸಿದಲೇ ಆ ಹಾಲಿನಲ್ಲಿ ಮಗುವಿನ ಆರೋಗ್ಯಕ್ಕೆ ಬೇಕಾದಷ್ಟು ಪ್ರಮಾಣದಲ್ಲಿದ್ದ ಬೇರೆ ವಸ್ತುಗಳು ಕಡಿಮೆಯಾಗಬಹುದು. ಅದಕ್ಕಾಗಿ ಸ್ವಲ್ಪ ಹಾಲಿನ ಕೆನೆ ಮತ್ತು ಹಾಲಿನಿಂದ ತೆಗೆದ ಸಕ್ಕರೆ, ಇವುಗಳನ್ನು ಸೇರಿಸಬೇಕು. ಹಾಗೆಯೇ ಎದೆಯ ಹಾಲಿನಲ್ಲಿರುವ ಕ್ಷಾರವು ಹಸುವಿನ ಹಾಲಿನಲ್ಲಿ ಬರುವಂತೆ ಮಾಡುವುದಕ್ಕಾಗಿ, ಒಂದು ಔನ್ಸು ಹಾಲಿಗೆ 2 ಡ್ರಾಂಗಳ ಪ್ರಮಾಣಕ್ಕೆ ಸುಣ್ಣದ ತಿಳಿಯನ್ನಾಗಲಿ, ಸೋಡಾ ... ಅಥವಾ ಸೋಡಾ ಸಿಟ್ರೇಟ್ ಎಂಬುದನ್ನಾಗಲಿ ಸೇರಿಸಿ ಕೊಡಬಹುದು.

ಹೀಗೆ ಹಾಲಿಗೆ ನೀರನ್ನು ಬೆರಸುವುದರಲ್ಲಿ ಕೂಸಿಗೆ 15 ದಿನಗಳು ತುಂಬುವವರೆಗೆ ಹಾಲಿನ ಪ್ರಮಾಣವು 1 ಕ್ಕೆ 3 ರಂತೆ ಇದ್ದು ಕ್ರಮ ಕ್ರಮವಾಗಿ ನೀರಿನ ಪ್ರಮಾಣವನ್ನು ತಗ್ಗಿಸುತ್ತಾ ಬರಬೇಕು. ಹೀಗೆ ನೀರು ಬೆರಸಿದ ಹಾಲನ್ನು ಕೂಸಿಗೆ ಮಂದುವರೆ ತಿಂಗಳವರೆಗೆ ಒಂದೊಂದು ವೇಳೆಗೆ ಒಂದರಿಂದ ಒಂದೂವರೆ ಔನ್ಸುಗಳ ಪ್ರಮಾಣಕ್ಕೆ ಕೊಡಬೇಕು. ಆಮೇಲೆ 2 ನೆಯ ತಿಂಗಳಿಂದ ಆ ಮಗುವಿನ ವಯಸ್ಸು ಕಳೆಯುವಂತೆ ಒಂದೊಂದು ಔನ್ಸಿನಷ್ಟು ಹೆಚ್ಚಿಸುತ್ತಾ ಬರಬಹುದು.

ಆದರೆ ಈಚೆಗೆ ಹಾಲಿಗೆ ಬದಲಾಗಿ ಬೇರೆ ನಾನಾ ತರಹದ ಆಹಾರಗಳು ಅನ್ಯದೇಶಗಳಿಂದ ಮಾರಾಟಕ್ಕಾಗಿ ಬರುವುದುಂಟು. ಅದರ ಪ್ರಕಟಣೆಗಳ ಆಡಂಬರಗಳಿಗೆಲ್ಲಾ ಮರುಳಾಗಿ ಸಿಕ್ಕಿದ ಹಾಗೆ ಅದನ್ನು ಮಕ್ಕಳಿಗೆ ಬಿಡಬಾರದು. ಮುಖ್ಯವಾಗಿ ಪಿಷ್ಟಪದಾರ್ಥವು ಹೆಚ್ಚಾಗಿ ಸೇರದಿರುವ ಆಹಾರವನ್ನೇ ನೋಡಿ ಮಕ್ಕಳಿಗೆ ಉಪಯೋಗಿಸಬೇಕು. ಈ ಆಹಾರ ವಿಷಯದಲ್ಲಿ ಶಿಶುವಿಗೆ 9 ತಿಂಗಳು ತುಂಬುವವರೆಗೆ ಬಹಳ ಎಚ್ಚರಿಕೆಯಿಂದರಬೇಕು. ಹಾರ್ಲಿಕ್ಸ್ ಮಾಲ್ಟಡ್ ಮಿಲ್ಕ್ ಮತ್ತು 2 ನೇ ನಂಬರಿನ ಅಲೆನ್‌ಬರೀಸ್ ಫುಡ್, ಮೆಲ್ಲಿನ್ಸ್ ಫುಡ್ ಇವು ತಕ್ಕ ಮಟ್ಟಿಗೆ ಶಿಶುಗಳ ದೇಹಕ್ಕೆ ತಕ್ಕಂತೆ ತಯಾರಿಸಲ್ಪಟ್ಟಿರುವುದರಿಂದ ಅವುಗಳನ್ನು ಉಪಯೋಗಿಸುವುದರಲ್ಲಿ ದೋಷವಿಲ್ಲ.

ಹಾಲು ಕುಡಿಸುವ ಬುಡ್ಡಿ, ಆ ಬುಡ್ಡಿಯ ಬಾಯಿಗೆ ಇರುವ ರಬ್ಬರ್ ಇವುಗಳನ್ನು ಉಪಯೋಗಿಸುವುದರಲ್ಲಿಯೂ, ಈ ಕೆಳಗೆ ಕಂಡ ವಿಷಯಗಳನ್ನು ಗಮನಿಸಬೇಕಾದುದು ಅವಶ್ಯವು. ಸಿಕ್ಕಿದ ಬುಡ್ಡಿಗಳನ್ನೂ, ರಬ್ಬರುಗಳನ್ನೂ ಉಪಯೋಗಿಸುವುದರಲ್ಲಿ ಆಹಾರ ದೋಷದಿಂದ ಶಿಶುಗಳಿಗೆ ಎಷ್ಟು ಮಟ್ಟಿಗೆ ಕೆಡಕ್ಕಾಗಬಹುದೋ ಅಷ್ಟು ಕೇಡಾಗಬಹುದು. ಹಾಲು ಕುಡಿಸುವ ಬುಡ್ಡಿಯು ದೋಣಿಯ ಆಕಾರದಂತೆ ಇದ್ದರೆ ಉತ್ತಮವು. ಬುಡ್ಡಿಯಲ್ಲಿ ಮೂಲೆಗಳೂ, ಗಂಟುಗಳೂ, ಹೆಚ್ಚಾಗಿರಬಾರದು. ಹಾಗಿದ್ದರೆ ಕೊಳೆಯು ಸೇರುವುದಕ್ಕೆ ಅವಕಾಶವಾಗುವುದು. ಬುಡ್ಡಿಯನ್ನು ಸುಲಭವಾಗಿ ತೊಳೆದು ಶುದ್ಧಮಾಡುವಂತಿರಬೇಕು. ಹಾಲು ಬಿಟ್ಟೊಡನೆಯೇ ಅದರಲ್ಲಿ ಸ್ವಲ್ಪ ಹುಳಿನೀರನ್ನು ಬಿಟ್ಟು ಒಳಗೂ ಹೊರಗೂ ಚೆನ್ನಾಗಿ ತೊಳೆದು ಆ ಬುಡ್ಡಿಯನ್ನು ಬಟ್ಟೆಗೆ ಹಾಕುವ ಸೋಡಾನೀರಿನಲ್ಲಿ ಇಟ್ಟಿರಬೇಕು. ಬಾಯಿಗಿರುವ ರಬ್ಬರನ್ನು ಕೂಡ ಹಾಲಿನ ಕೆನೆಯು ನಿಲ್ಲದಂತೆ ಚೆನ್ನಾಗಿ ತೊಳೆದು, ತಣ್ಣೀರಿನಲ್ಲಿ ಇಟ್ಟಿರಬೇಕು. ಆ ತಣ್ಣೀರಿಗೆ ಒಂದು ಚಿಟಿಕೆಯಷ್ಟು ಸೋಡಾ ಉಪ್ಪನ್ನು ಸೇರಿಸುವುದು ಒಳ್ಳೆಯದು. ರಬ್ಬರಿನಲ್ಲಿ ಹಾಲು ಬರುವುದಕ್ಕಾಗಿ ಮಾಡಿರುವ ರಂಧ್ರವು ಸಣ್ಣದಾಗಿ ... ಬಗ್ಗಿಸಿದರೆ ಹಾಲು ಒಂದೊಂದು ತೊಟ್ಟಾಗಿ ಬೀಳುವ ಹಾಗಿರಬೇಕು. ಬಹಳ ವೇಗದಿಂದ ಧಾರೆಯಾಗಿ ಬೀಳುವ ಹಾಗಿರಬಾರದು. ಕೆಲವರು ಬರೇ ರಬ್ಬರನ್ನು ಕೂಸಿನ ಬಾಯಿಗೆ ಕೊಡುವುದುಂಟು. ಹೀಗೆ ಮಾಡುವುದರಿಂದ ಕೂಸಿನ ಹೊಟ್ಟೆಗೆ ಗಾಳಿ ತುಂಬಿ ಮಗುವಿನ ಆರೋಗ್ಯವು ಕೆಡುವುದು.

ಆರೋಗ್ಯಚಂದ್ರಿಕೆ.

ಜಯ! ಶ್ರೀ ಕಾವೇರಿಮಾತಾ !!

ರಾಗ—ಕಾಂಭೋಜಿ—ಝಂಪೆ.

[ಏನಬೇಡಲಿ ನಿನ್ನ ಬಳಿಗೆ ಬಂದು—ಎಂಬಂತೆ]

ಕಾವೇರಿಜಯಜಯತು ಕಮಲಭವಜಾತೆ |
ದೇವಿಪೊರೆಸಜ್ಜನರ ಕಮಲಭವಮಾತೆ || ಪಲ್ಲವಿ ||

ಗಳಗಳನೆ ಹರಿಯುತಲಿ ಬಳುಕುವಂದದಿಜನನಿ |
ನಲಿಯುತಿಹೆಯೋ ಏನೊ ಎಂದು ಕಣ್ಗೊಳಿಸಿ ||
ತೆರೆಗಳು ತಿಳಿತಿದೊಡೆ ಅಳುಕದಲೆ ಬಳಬಳನೆ |
ಸುಳಿಯುತಲಿಬರುವೆ ಶ್ರೀ ಕಾವೇರಿಮಾತೆ || ೧ ||

ದೇಶದೇಶದಿ ಹರಿದು ಸಕಲಜನರಾತಮವ |
ಲೇಸಿನೊಳುತಣಿಸುವೆ ಹರಿಸಿ ಪಾಪವುನವ ||
ಶ್ರೀಶನತಿ ಕೊಡುಸುವತಿ, ಕೊಡಗುನಿಧಿಮನ್ನನವ |
ನೀನವುದಿ ಸರಿಗೈಯೆ ಹರಿಸಿತಾಮಸವ || ೨ ||

ಗಿರಿಗಳೊಳು ಸಹ್ಯಾದ್ರಿ, ನದಿಗಳೊಳುಕಾವೇರಿ |
ಕರಮಪಾವನವಹುದು ನಾನೇನುಸುರಲಿ ||
ಹರಿಮಹಿಮೆ ಮಸಲಿಲ ದೇಹವನು ನೋಳ್ಪರಲಿ |
ಸುರನರರ ದುರಿತವನು ತೊಳಲಿಪುದು ಪ್ರಿಯದಿ || ೩ ||

ಕಮಲಭವ, ಚಕ್ರಧರ, ಮೃಗಧರನು ವಂದಿಪರು |
ಕಮಲಭವಗಿರಿಯಲ್ಲಿ ನೆರೆಸಿಹರು, ಅಮರ ||
ಸುಮತಿಯುತ ಸುಂದರಿಯೆ ಭೂಮಾತೆಕೈಮುಗಿದು |
ಅಮಲಮತಿಯಿಂನಿನ್ನ ಜನನಿನಂದಿಪೆವು || ೪ ||

ಕಾವೇರಿಜಯಜಯತು ಕಮಲಭವಜಾತೆ |
ದೇವಿಪೊರೆಸಜ್ಜನರ ಕಮಲಭವಮಾತೆ ||

"ಕೊಡಗುಮಿತ್ರ"

ವರ್ತಮಾನ ಸಂಗ್ರಹ.

ಒಳದೇಶ

ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಪರೀಕ್ಷೆಗಳಲ್ಲಿ ಮ॥ ಪಟ್ಟಮಾಡ ಪೂವೈಯ್ಯನವರ ಮಕ್ಕಳು ಮ॥ ಪೆಮ್ಮಂಡ ಕೆಂಚಪ್ಪನವರು ಬಿ ಎ ಯಲ್ಲಿಯೂ ಮ॥ ಗಳಾದ ಮಡಿಕೇರಿಯಂಡ ಬೆಳ್ಯಪ್ಪ ಮುಸಿಯಪಂಡ ಚಿಟ್ಯಪ್ಪ ಪಳಿಯಂಡ ಕುಶಾಲಪ್ಪ ಬಳಕರಂಡ ಕುಟ್ಟಪ್ಪ ಕುತಂಡ ಪೂವೈಯ್ಯ ಕ ಶಂಕರನಾರಾಯಣ, ಎಮ್ ಎಸ್ ಮಹಾಬಲಯ್ಯ ಕೋದಂಡ ಎಮ್ ಬೆಳ್ಳಿ ಮತ್ತು ಕುಪ್ಪಂಡ ಎಮ್ ಗಣಪತಿ ಇವರು ಇಂಟರ ಮೀಡಿಯಟ ನಲ್ಲಿಯೂ ತೇರ್ಗಡೆ ಹೊಂದಿರುವರಾಗಿ ತಿಳಿಯಲು ಸಂತೋಷಪಡುತ್ತೇವೆ ಇವರುಗೆಲ್ಲರಿಗೂ ನಮ್ಮ ಅಭಿನಂದನೆ

ಇದೇ ತಾರೀಖು 23 ರಲ್ಲು ಮಹಮ್ಮದೀಯ ಮತಸ್ಥಾಪಕರಾದ ಕಾಲಜ್ಞಾನಿ ಹಜರತ್ ಮಹಮ್ಮದರವರ ಜನನ ದಿನದ ಆಚರಣೆಗಾಗಿ ಅನೇಕ ಮುಸಲ್ಮಾನರು ಸೇರಿ ವೀರರಾಜಪೇಟೆ ಮೋಡೆಲ್ ಸ್ಕೂಲು ಹಾಲಿನಲ್ಲಿ ಕೊಡಗು ಮೌಲೂದ ಉತ್ಸವವನ್ನು ಬಹು ಸಂಭ್ರಮದಿಂದ ನಡಿಸಿದರು

ದಸರ ವಾರದಲ್ಲಿ ಮೈಸೂರಿಗೆ ಬಂದಿದ್ದ ಬಂಗಾಳಿ ಮಹನೀಯರಾದ ಸರ್‌ಗುಪ್ತ ಮತ್ತು ಮ॥ ಬಿ ಸಿ ಮಿತ್ತರ್ ರವರು ಮಡಿಕೇರಿಗೆ ಒಂದು ಎರಡು ದಿವಸಗಳಿದ್ದು ವಾಪಸು ಹೋದರು ಇವರು ಮ॥ ಅಪ್ಪಾರಂಡ ಅಪ್ಪಚ್ಚನವರ ಅತಿಥಿಗಳಾಗಿದ್ದರಂತೆ

ಮಡಿಕೇರಿಯ ಕೆಲವು ಪ್ರೊಟೆಸ್ಟೆಂಟ್ ಕ್ರೈಸ್ತರು ಕಳೆದ 14 ನೇ ತಾರೀಕಿನಲ್ಲಿ ಇಲ್ಲಿಯ ವೆಸ್ಲಿಯನ್ ಮಿಷನ ದೇವಾಲಯದಲ್ಲಿ ಒಂದು ಮೀಟಿಂಗು ಮಾಡಿ 21 ನೇ ತಾರೀಕಿನ ದಿನದ ಸದರಿ ದೇವಾಲಯದಲ್ಲಿ ಕಳೆದ [illegible] ವರ್ಷಗಳಿಂದ ನಡೆಯುತ್ತಾ ಬಂದ ಆರಾಧನೆಗೆ ಸೇರದೆ ಅದೇ ದಿವಸ 1 ಘಂಟೆಯಿಂದ 12 ರವರೆಗೆ ಆರಾಧನೆ ನಡಿಸಲಿಕ್ಕೆ ಪ್ರಾರಂಭಿಸಿರುವುದರಿಂದ ಇದೊಂದು ವಿಪರೀತ ಆರಾಧನೆಯೆಂದೂ ಇದು ಹೆಸರಿಲ್ಲದ ಮತನ ಸಂಘವೆಂದೂ ಒಂದು ವಾರ್ತೆ

ಸೆಪ್ಟಂಬರ್ ತಿಂಗಳ ಇಂಪೀರಿಯಲ್ ಸ್ಪೆಶ್ಯಲ್ ಸಿಗರೇಟುಗಳ ಸ್ಪರ್ಧೆಯಲ್ಲಿ ಮೊದಲನೇ ಇನಾಮಿನ 25 ರೂ ಯು ಕಡಮಕಲ ತೋಟದ ಮ॥ ಜೆ ಎಚ್ ಜೆಫ್ರಿಯವರಿಗೆ ದೊರೆತಿದೆ

ಕೊಡಗು ಜಮಾನ್‌ದಾರರ ಸಂಘದ ಜನರಲ್ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಸರಕಾರಕ್ಕೆ ಕಳುಹಿಸಿದ್ದಕ್ಕೆ ಕೆಲವು ರಿಸೊಲ್ಯೂಶನ್‌ಗಳಿಗೆ ಜವಾಬು ಬಂದಿದೆ ಮುಂದಿನ ವಾರ ಪ್ರಕಟಿಸಲಾಗುತ್ತೆ

ಕಾವೇರಿ ಜಾತ್ರೆಗೆ ಮೈಸೂರು ಕಡೆಯಿಂದ ಯಾತ್ರಿಕರನ್ನು ತರುವ ಒಂದು ಮೋಟಾರ್ ಬಸ್ಸಿನ ಡ್ರೈವರಿಗೆ ಲೈಸನ್ಸ್ ಇಲ್ಲದೆ ಬಸ್ಸನ್ನು ತಂದದ್ದಕ್ಕಾಗಿಯೂ, ಬಸ್ಸನ್ನು ರಿಜಿಸ್ಟರ್ ಮಾಡಿದ ನಂಬರನ್ನು ಎದುರು ಇಡದ್ದಕ್ಕಾಗಿಯೂ 62 ರೂಪಾಯಿ ಜುಲ್ಮಾನೆ [illegible] ಭಾಗಮಂಡಲದಲ್ಲೇ ಶಂಕರ ಪಿಟ್ಟಲ್ ಸರ್ವಿಸಿನ ಬಸ್ಸನ್ನು ಹಾರ್ನ್ ಮಾಡದೆ ರಭಸದಿಂದ ಓಡಿಸಿದ್ದಕ್ಕಾಗಿ 15 ರೂ ಜುಲ್ಮಾನೆಯಾಗಿಯೂ ಈ ಎರಡು ಕೇಸುಗಳ [illegible] ಮಾಡಿದ [illegible] ವಿಚಾರವಾಗಿ ತೀರ್ಪಾಯಿತು

ಕಾವೇರಿ ತೀರ್ಥ ಉತ್ಸವಕಾಲದಲ್ಲಿ ತಲಕಾವೇರಿಯಲ್ಲಿ ಜೋರಾದ ಮಳೆ ಬಿತ್ತು ಆಗಲೇ ದೇಶದ ಎಲ್ಲಾ ಕಡೆಯಲ್ಲಿಯೂ ಸಾಧಾರಣವಾಗಿ ಬಿತ್ತು ಅದೇ ಆ ದಿನ ಸಾಯಂಕಾಲ ದೇಶದ ಎಲ್ಲಾ ಭಾಗಕ್ಕೂ ಎರಡು ಇಂಚಿಗೆ ಕಡಿಮೆ ಇಲ್ಲದೆ ಮಳೆ ಹೊಡೆದಿದೆ ಈ ಮಳೆಯಿಂದ ಗದ್ದೆಗಳಿಗೂ ತೋಟಗಳಿಗೂ ಬಹು ಪ್ರಯೋಜನವಾಯಿತು ಮಾರನೇ ದಿನವೂ ಕೆಲವು ಕಡೆಗಳಿಗೆ ಮಳೆ ಬಿದ್ದಿದೆ

ನವಂಬರು 3 ನೇ ತಾರೀಕಿನಲ್ಲಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಕಮಿಷನರವರ ಪ್ರೋತ್ಸಾಹದಿಂದ ಶಾಲೆಯ ಅಧಿಕಾರಿಗಳೂ ಮಡಿಕೇರಿಯ ಕೆಲವು ಮಹನೀಯರೂ ಸೇರಿ ವಾರ್ಷಿಕವಾಗಿ ನಡೆಯುವ ಚರ್ಚೆಯ ಸಮೂಹದಲ್ಲಿ ಹಿಂದೂದೇಶದ ಏಕೀಕರಣದ ಭಾಷೆ' ಯ ವಿಷಯ ಒಂದು ಡಿಬೇಟು (ಚರ್ಚೆ) ನಡೆಯುವುದು

ಕೊಡಗಿನ ಶಿಕ್ಷಣ ಇನ್‌ಸ್ಪೆಕ್ಟರವರು ನವಂಬರು ಮೊದಲನೇ ವಾರದಲ್ಲಿ ಕೊಡಗಿಗೆ ಬರುವರಂತೆ

ನವಂಬರು ಒಂದನೇ ವಾರದ ಅಂತ್ಯದಲ್ಲಿ ಸೆಂಟ್ರಲ್ ಹೈಸ್ಕೂಲಿನ ಹೊಸ ಮತ್ತು ಹಳೆ ವಿದ್ಯಾರ್ಥಿಗಳು 'ಶೂರಸೇನಚರಿತ್ರೆ' ಎಂಬ ನಾಟಕವನ್ನು ಅಭಿನಯಿಸಲಿಕ್ಕಿರುವರು

ಹಿಂದೂದೇಶ.

ರಾಜದ್ರೋಹದ ಲೇಖನಗಳನ್ನು ಪ್ರಕಟಿಸಿದರೆಂದು ಉಡುಪಿಯ "ಸತ್ಯಾಗ್ರಹೀ" ಪತ್ರಿಕೆಯ ಸಂಪಾದಕರಾದ ಮ॥ ಎಚ್ ನಾರಾಯಣರಾವ್‌ರವರಿಗೆ 1 ವರ್ಷದ ಕಠಿಣಸಜೆ ಮತ್ತು 300 ರೂ ಜುಲ್ಮಾನೆ ಅದನ್ನು ಕೊಡದಿದ್ದಲ್ಲಿ ಮೂರು ತಿಂಗಳು ಹೆಚ್ಚಿನ ಸಜೆ ಮತ್ತು ಪ್ರಕಾಶಕರಾದ ಮ॥ ರಾಮರಾಯ ಮಲ್ಯರವರಿಗೆ ಒಂದು ವರ್ಷ ಕಠಿಣಸಜೆಯೂ ವಿಧಿಸಲ್ಪಟ್ಟಿದೆ

ನಂಬೂದಿರಿಯವರಿಗೆ ವೈಕಂದಲ್ಲಿ ಸತ್ಯಾಗ್ರಹ ಸಮಿತಿಯ ದಾರಿ ಬಿಡುವಂತೆ ಚರ್ಚಿಸಲು ಕಾಂಗ್ರೆಸಿನವರು ಕ್ರಮ ಕೈಗೊಳ್ಳುವರೋ ಎಂದು ಡಾಕ್ಟರ್ ಕಿಚ್ಲೂ ಅವರು ಕೇಳಿದಕ್ಕೆ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿರುವ ಮಿ॥ ಕೊಂಡ ವೆಂಕಟಪ್ಪಯ್ಯನವರು ಬರೆದು ಪತ್ರಿಕೆಯ ಮೂಲಕ ಈ ಕೆಲಸವು ಬಹಳ ಮುಖ್ಯವಾದ ಕೆಲಸವಾಗಿರುವುದರಿಂದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ಅಥವಾ ವರ್ಕಿಂಗ್ ಕಮಿಟಿಯು ಒಪ್ಪಿಗೆ ಇಲ್ಲದೆ ಈ ಕಾರ್ಯಕ್ಕೆ ಕೈಹಚ್ಚುವುದು ಸರಿಯಲ್ಲವೆಂದು ಸೂಚಿಸಿರುವರು

ಎಲ್ಲಾ ರಾಜಕೀಯ ಪಕ್ಷಗಳಿಗೆ ಸೇರಿದ 100 ಮಂದಿ ಹಿಂದೂ, ಮಹಮ್ಮದೀಯ ಮತ್ತು ಸಿಖ್ಖ ಮುಖಂಡರು ಒಂದು ಪ್ರಕಟಣೆಯನ್ನು ಹೊರಡಿಸುವರು ಯಾವ ಧರ್ಮದ ಅನುಯಾಯಿಗಳೇ ಆಗಲಿ ಎಷ್ಟು ಸೆಳೆಯುವ ಅಸ್ಪೃಶ್ಯರ [illegible] ದೇವಾಲಯ [illegible] ಶಾಲೆ ಮುಂತಾದ ಕ್ರಿಸ್ತರು ಮೊದಲು ಸ್ತ್ರೀಯರಿಗೆ ಅವರು [illegible] ದೂ ಧರ್ಮದ ಪ್ರಕಾರ [illegible] ಇತರ ಧರ್ಮವಾಗಿ ನಡೆಯುವುದರಿಂದ ಅಕ್ಷಯ ನಷ್ಟ [illegible] ಕ್ಷಿಸುವುದು ಎಷ್ಟು ಕಠಿಣ [illegible] ಎಣಿಸತಕ್ಕದ್ದು

ಕಾಂಗ್ರೆಸ್ಸಿನ ಸ್ವರಾಜ್ಯಪಾರ್ಟಿಯ ಸೆಕ್ರೆಟರಿಯವರಾದ ಪಂಡಿತ ಮೋತಿಲಾಲ್ ನೆಹರೂ ಮತ್ತು [illegible] ಉದ್ದೇಶಗಳನ್ನು ತಿಳಿಸುವ ಪತ್ರವನ್ನು ಪ್ರಕಟಿಸಿದ್ದಾರೆ "ಇಂಡಿಯಾಕ್ಕೆ ನ್ಯಾಯವಾದ ಮತ್ತು ಶಾಂತ ಮಾರ್ಗದಿಂದ ಸ್ವರಾಜ್ಯ ಪಡೆಯಬೇಕು" [illegible] ಸ್ವರಾಜ್ಯ ಪಾರ್ಟಿಯ ಉದ್ದೇಶಗಳ [illegible] ಕೌನ್ಸಿಲುಗಳನ್ನು [illegible] ಸ್ವರಾಜ್ಯ ಪಾರ್ಟಿಯು [illegible] ಸ್ವಾಧೀನದಲ್ಲಿ ಉದ್ದೇಶವನ್ನು [illegible] ಸಿಕ್ಕುವುದು ಈ ಪಾರ್ಟಿ [illegible] ತತ್ವಾದಿ ವಿಷಯಗಳನ್ನು ಕುರಿತು ಪ್ರತ್ಯೇಕವಾದ ಅಭಿಪ್ರಾಯ [illegible] ಸರ್ಕಾರದ ಎಲ್ಲಾ ಆಡಳಿತವನ್ನು [illegible] ಹೋರಾಡಬೇಕು [illegible] ತೃಪ್ತಿಯಾಗಿ ಜವಾಬು ಸಿಕ್ಕಿದರೆ ಸ್ವರಾಜ್ಯದ ಕ್ರಮವನ್ನು ನಿಶ್ಚಯಿಸುವದು [illegible] ಈ [illegible] ತೃಪ್ತಿಕರವಾದ ಜವಾಬು ದೊರೆಯದೆ ಇದ್ದರೆ ಸ್ವರಾಜ್ಯಪಾರ್ಟಿಯು ಬಹುಮತವಿದ್ದರೆ ಸರಕಾರದ ಕೆಲಸಗಳಲ್ಲಾ ಅಡ್ಡಿ ಮಾಡಿ [illegible] ಸಭೆ [illegible] ನಡಿಸುವದನ್ನು ಅಸಾಧ್ಯವಾಗಿ ಮಾಡಬೇಕು [illegible] ಸಂದರ್ಭದಲ್ಲಿ ಈ ಪಾರ್ಟಿಯು ಕೆಲಸ ಮಾಡುತ್ತೆ

ಜಲಂದರ್ ಪಟ್ಟಣದಲ್ಲಿ ಸೆಂಟ್ರಲ್ ಸಿಕ್ ಲೀಗ್ ಮೀಟಿಂಗು [illegible] ಅಧ್ಯಕ್ಷತೆಯಲ್ಲಿ ತಾ 17 ರಲ್ಲಿ ನಡೆಯುವ ಮೀಟಿಂಗಿನ [illegible] ಅಲ್ಲಿ ನೆರೆದ [illegible] ಸಭೆಯನ್ನು ಮಾಡಿರುವ ಪಟ್ಟಣದ ಎಲ್ಲಾ ಭಾಗಗಳಲ್ಲೂ ಇಂಗ್ಲಿಷ್ ಸಿಪಾಯಿಗಳು ಮೆಷಿನ್ ಗನ್ನುಗಳೂ ಇಡಲ್ಪಟ್ಟಿದ್ದವು ಮ॥ ಮಹಮ್ಮದಲ್ಲಿ, ಕಿಚ್ಲು ಸಹ ಅಲ್ಲಿಗೆ ಆ ಸಭೆಗಾಗಿ ಹೋದರು ಏನು ಮಾಡಬೇಕೆಂದು ತೋರಲಿಲ್ಲ ಡಿಸ್ಟ್ರಿಕ್ಟ ಗಡಿಯಾಚೆಗೆ ಒಂದು ಗ್ರಾಮದಲ್ಲಿ ಸಭೆ ಸೇರಿತು [illegible] ಸಿಕ್ಕರನ್ನು ಸೆರೆ ಹಿಡಿದಿದ್ದಾರೆ [illegible] ಕೌನ್ಸಿಲ್ ಅಸೆಂಬ್ಲಿ ಯಲ್ಲಿ [illegible] ಸೂಚಿಸುತ್ತಾರೆ.

ಸಿಮ್ಲಾದ ಚೆಮ್ಸ್‌ಫರ್ಡ್ ಕ್ಲಬ್ಬಿನಲ್ಲಿ ತಾರೀಖು 17-10-23 ರಲ್ಲಿ ಮಾತಾಡುವಾಗ ವೈಸ್‌ರಾಯರು ಹೇಳುವುದೇನೆಂದರೆ.— ಕೌನ್ಸಿಲುಗಳನ್ನು ಹಾಳುಮಾಡಲಿಕ್ಕೆಂತಲೇ ಉದ್ದೇಶವಿರುವವರಿಗೆ ಕೌನ್ಸಿಲ್ ಮೆಂಬರುತನ ದೊರೆಯಲಾಗದು ದೊರೆತರೂ ಅವರಿಂದ ಸುಧಾರಣೆಗಳು ಹಾಳಾಗುವದಲ್ಲದೆ ಕೊಟ್ಟ ಸುಧಾರಣೆಯನ್ನು ಯಾಕೆ ರದ್ದುಮಾಡಬಾರದೆಂತ ಯೋಚಿಸಬೇಕಾಗುತ್ತೆ. ಬ್ರಿಟಿಷ ಸಾಮ್ರಾಜ್ಯದ ಪ್ರದರ್ಶನವನ್ನು ಬಹಿಷ್ಕರಿಸಿದರೆ ಇಂಡಿಯಾದ ಉತ್ಪತ್ತಿಗಳ ಪ್ರಕಟಣೆಯಾಗದೆ ಇಂಡಿಯಾಕ್ಕೆ ನಷ್ಟವಿದೆಯೇ ಹೊರತು ಯಾರಿಗೂ ತೊಂದರೆ ಇಲ್ಲ. ಇಂಗ್ಲಿಷ್ ಸಾಮಾನುಗಳನ್ನು ಬಹಿಷ್ಕರಿಸುವ ಪ್ರಯತ್ನದಿಂದ ಇಂಗ್ಲೆಂಡಿನವರಿಗೆ ಈ ದೇಶದವರಮೇಲೆ ಕೋಪ ಉಂಟಾಗುತ್ತೇ ಹೊರತು ಬೇರೆ ಇಲ್ಲ. ನಭಾಸಂಸ್ಥಾನಕ್ಕೂ ಪಾಟಿಯಾಲಾ ಸಂಸ್ಥಾನಕ್ಕೂ ಹೋರಾಟವಾಗುವ ಸಂದರ್ಭದಲ್ಲಿ ನಭಾ ರಾಜರು ಸಿಂಹಾಸನವನ್ನು ಬಿಟ್ಟಿದ್ದಾಗಿದೆ. ಯಾರು ಎಷ್ಟು ಪ್ರಯತ್ನಿಸಿದರೂ ಯುವರಾಜರು ಪ್ರಾಯಕ್ಕೆ ಬರುವವರೆಗೂ ಈಗ ಮಾಡಿದ ಏರ್ಪಾಡಿನಲ್ಲಿ ಏನೂ ವ್ಯತ್ಯಾಸ ಮಾಡುವದಿಲ್ಲ.

ಹಿಂದೂದೇಶದಲ್ಲಿ ಸಿವಿಲ್ ಡಿಸ ಒಬಿಡಿಯನ್ಸ್ ಆರಂಭಿಸಬೇಕಾದರೆ ಸ್ವಯಂಸೇವಕರನ್ನು ಒಟ್ಟು ಮಾಡುವುದು ಅತ್ಯಗತ್ಯ. ಅರಣ್ಯಶಾಖೆಯ [illegible] ಇಲ್ಲದೆ ಈ ಕಾರ್ಯವು ಸಾಧ್ಯವಾಗುವುದಿಲ್ಲ. ಯಾವುದಕ್ಕೂ ತಯಾರಾಗಿರುವವರು ಅದನ್ನು ದಕ್ಷ ನಡಿಸಲು ಇದೀಗ ಸಮಯ [illegible] ಪ್ರತಿಯೊಂದು ಅಭಿಪ್ರಾಯದಂತೆ ಕಾಂಗ್ರೆಸ್ [illegible] ಸ್ವರಾಜ್ಯ ವರ್ಕಿಂಗ್ ಕಮಿಟಿ [illegible] ಕಾಂಗ್ರೆಸ್ಸಿಗೆ ಸಹಾಯ ಮಾಡಿ [illegible] ಕಾಂಗ್ರೆಸ್ಸಿನ ಸೆಕ್ರೆಟರಿಯಾದ ಡಾಕ್ಟರ್ [illegible] ಡಾಕ್ಟರ್ ಕಿಚ್ಲೂರವರಿಗೆ [illegible] ಕಳುಹಿಸಿರುವರು

ಬೊಂಬಾಯಿ ಕಾರ್ಪೊರೇಷನ್ ಸಭೆ [illegible] ಗೆ ಸೇರಿ ಬ್ರಿಟಿಷ್ ಸಾಮ್ರಾಜ್ಯದ ಇಂಡಿಯಾದ [illegible] ಯಾವ ಸಾಮಾನನ್ನಾದರೂ [illegible] ಮುನಿಸಿಪಾಲ್ ಕೆಲಸಗಳಿಗೆ ಉಪಯೋಗಿಸಬಾರದೆಂದು ತೀರ್ಮಾನಿಸಿದ್ದರೆ [illegible] ಸಾಮ್ರಾಜ್ಯದ ಹೊರಗೆ [illegible] ಸಾಮಾನನ್ನು [illegible] ಉಪಯೋಗಿಸಬಹುದು [illegible] ನಿಂದ ದೇಶಕ್ಕೆ ಉಂಟಾದ ಉತ್ಪತ್ತಿಯನ್ನು ಸಲಿಕ್ಕಾಗಿ ಮಾಡಿದ್ದಾಗಿದೆ

[illegible] ನಡೆಯುವ ಮಿಲಾದ್ ಷರೀಫಿಗೆ ಡಾಕ್ಟರ್ ಕಿಚಲೂರವರನ್ನು ಅಧ್ಯಕ್ಷರಾಗಿ ಆರಿಸಿದ್ದಾರೆ

[illegible] ಇಂಡಿಯಾದ ಸ್ವರಾಜ್ಯ [illegible] ಲಾಹೋರಿನಲ್ಲಿ ನವಂಬರು ೧ ವಿರಿಂದ ಪ್ರಾರಂಭವಾಗಿದೆ.

ಸೋಶಿಯಲಿಸ್ಟ್ ದೇಶದಿಂದ ಅಲ್ಲಿನ ವಿರೋಧ ಪಕ್ಷ [illegible] ಜೋಶೀವರ್ತಾ [illegible] ಇಂಡಿಯಾಕ್ಕೆ ಬಂದ [illegible] ಮಹಾತ್ಮ ಗಾಂಧಿಯವರ [illegible] ಹೇಳುವುದೇನೆಂದರೆ,— ಸೋಶಿಯಲಿಸ್ಟ್ [illegible] ಗೊತ್ತಿಲ್ಲದ [illegible] ಪ್ರೀತಿಸುವರು ಮಾತ್ರವಲ್ಲ ಅವರ ರಾಜಕೀಯ ತತ್ವವನ್ನು ಬಹುಮಾನಿಸಿ ತಮ್ಮ ದೇಶದ ರಾಷ್ಟ್ರ [illegible] ಮಹಾತ್ಮರ ಮಾರ್ಗವನ್ನೇ [illegible] ತಮಗೆ ಸಂಘವಾದರೆ ಮಹಾತ್ಮರನ್ನು ಪಡೆಯಬೇಕೆಂತ ಇದ್ದಾರಂತೆ

ಅಲಹಾಬಾದ ಮುನಿಸಿಪಾಲಿಟಿಯಲ್ಲಿ ಅಮೇರಿಕಾದ ವಸಾಹತುಗಳ ಜನರು ಹಿಂದೀಯರಿಗೆ [illegible] ನಿಂದ ಆ ದೇಶದವರಿಗೆ ಮುನಿಸಿಪಾಲಿಟಿ [illegible] ದರೆಂಬುದೂ, ಮುನಿಸಿಪಾಲಿಟಿಯೊಳ [illegible] ಇಂಗ್ಲೀಷರಿಗೂ ಅಮೇರಿಕಾದವರಿಗೂ, [illegible] ಮುನಿಸಿಪಲ್ ಕಂದಾಯವನ್ನು [illegible] ಬೇಕು [illegible] ಪ್ರಾಂತ್ಯಗಳಲ್ಲಿ [illegible] ಪಡೆಯುವ ಹಿಂದೂ ಸ್ವರಾಜ ಪಡೆಯುವದೇ ಉಪಾಯವೆಂತ ವಾಕ್ಯವು ಮಂಜೂರಾಯಿತು

ವಿದೇಶ

ಈ ಕೆಳಗೆ ಕಾಣಿಸಿರುವ ಸಂಗತಿಗಳನ್ನು ಒಬ್ಬ ಜೋತಿಶಾಸ್ತ್ರಜ್ಞನು ಹೇಳಿರುವನೆಂದು ಪ್ರಾನ್ಸಿನ ಒಂದು ಪತ್ರಿಕೆಯು ಸೂಚಿಸುತ್ತದೆ—1921 ನೇ ಇಸವಿಯಲ್ಲಿ ಫ್ರಾನ್ಸಿನಲ್ಲಿ ಭಯಂಕರವಾದ ಉತ್ಪಾತ ತಯಾರಾದು ಪರ್ಶಿಯ ಮತ್ತು ಜರ್ಮನಿ ದೇಶಗಳಲ್ಲಿ ಸ್ನೇಹವುಂಟಾಗುವುದು ಸ್ಪೈನ್ ರಾಜನ ಆಳಿಕೆಯು ಅಂತ್ಯವಾಗಿದು ಇಟಲಿಯು ಬಹಳ ಪ್ರಬಲವಾಗುವದು ಆಸ್ಟ್ರಿಯಾ ದೇಶವು ಎರಡು ಭಾಗಗಳಾಗಿ ವಿಂಗಡಿಸಿ ಹೋಗುವದು ಕನಡಾದೇಶವು ಬ್ರಿಟಿಷ್ ಸಾಮ್ರಾಜ್ಯದಿಂದ ಬೇರೆಯಾಗಿ ಹೋಗಿ ಅಮೇರಿಕದ ಸಂಯುಕ್ತ ರಾಷ್ಟ್ರಗಳೊಡನೆ ಸೇರುವುದು ಐರ್ಲೆಂಡಿಗೆ ಸಂಪೂರ್ಣ ಸ್ವಾತಂತ್ರ್ಯವು ದೊರೆವುದು ಹಿಂದೂಸ್ಥಾನವು ಸ್ವತಂತ್ರವಾಗಿ ಅಲ್ಲಿ ಪ್ರಜಾಪ್ರಭುತ್ವವು ಸ್ಥಾಪಿತವಾಗುವುದು ಐಕ್ಯಹೊಂದಿದ ಚೈನಾ ದೇಶಕ್ಕೆ ಜಪಾನಿನಲ್ಲಿ ಅಧಿಕಾರ ಹೆಚ್ಚುವುದು ಪೂರ್ವದೇಶಗಳಲ್ಲಿ ಪ್ರಸಿದ್ಧ ಮಹಾಪುರುಷನೊಬ್ಬನು ಜನಿಸುವನು ಇವನ ಜನನವು 1923 ರಲ್ಲಿಯೇ ಲೋಕಕ್ಕೆ ಪ್ರಕಟವಾಗುವುದು

ಲಂಡನಿನಲ್ಲಿ ರೌಂಡ್ ಟೇಬಲಿನ ನೈಟುಗಳ ಸ್ಥಾನಕ್ಕೆ ಬಿಕಾನೀರದ ಮಹಾರಾಜರನ್ನು ಸೀನಿಯರ್ ನೈಟಾಗಿ ನಾಮಕರಣ ಮಾಡಿದರು ಆಗ ಆ ಮಹಾರಾಜರು ಇಂಡಿಯಾ ಸ್ವರಾಜ್ಯದ ವಿಷಯ ಹೀಗೆಂದು ಹೇಳಿದರಂತೆ—ಹಿಂದೂ ದೇಶ ನಿಮ್ಮ ಸಹಾಯವನ್ನು ನಿರೀಕ್ಷಿಸುತ್ತಿದೆ ಅದರ ಕೃತಜ್ಞತೆಯನ್ನು ಸಂಪಾದಿಸಿಕೊಳ್ಳಿ ಮತ್ತೆ ನಿಮಗೆ ಬ್ರಿಟಿಷ ಸಾಮ್ರಾಜ್ಯದೊಳಗೆ ನನ್ನ ಮಾತೃ ಭೂಮಿಯಷ್ಟು ರಾಜಭಕ್ತಿಯುಳ್ಳ ಮತ್ತು ಕೃತಜ್ಞತೆಯುಳ್ಳ ಭಾಗವು ಬೇರೆ ಯಾವದೂ ಸಿಕ್ಕಲಿಕ್ಕಿಲ್ಲ.

ಒರ್ಲಿನ್ ಪಟ್ಟಣದಲ್ಲಿ ಕೆಲಸವಿಲ್ಲದೆ ಕಷ್ಟಪಡುತ್ತಿರುವವರ ಗಲಾಟೆಯು ಜೋರಾಗುತ್ತಿದೆ, ಆಹಾರವಿಲ್ಲದೆ ಇರುವುದರಿಂದ ಡ್ರೆಸ್ಡೆನ್ ಎಂಬಲ್ಲಿ ಗಲಾಟೆ ಉಂಟಾಗಿ ಪೋಲೀಸಿನವರು 7 ಜನರನ್ನು ಗುಂಡುಹೊಡೆದು ಕೊಂದದ್ದಲ್ಲದೆ ಅನೇಕರು ಗಾಯವಾಗಿದೆ. ಬಹಳ ಜನರು ಸೆರೆಹಿಡಿಯಲ್ಪಟ್ಟಿರುವರು.

ತುರುಕರ ಕೆಲಸದ ದೆಸೆಯಿಂದ ಮಿ|| ಮೋಂಟೇಗ್ಯುರವರು ತಮ್ಮ ದಕ್ಷಿಣ ಆಫ್ರಿಕ ಪ್ರಯಾಣವನ್ನು ಹದಿನೈದು ದಿವಸಕ್ಕೆ ಮುಂದುವರಿಸಿರುವರು. ಇವರು ಬೊಂಬಾಯಿಗೆ ನವಂಬರು 13 ಕ್ಕೆ ತಲಪುವರು. ಅವರ ಪತ್ನಿಯು ಅಲ್ಲಿ ಅವರ ಜೊತೆ ಸೇರುವರು.

ಸಿವಿಲ್ ಸರ್ವಿಸಿನ ವಿಷಯ ಅಭಿಪ್ರಾಯ ಸಂಗ್ರಹಿಸಲು ಲೋಯಲ್ ಕಮಿಷನ್ ಸಭಿಕರುಗಳು ಇಂಗ್ಲೆಂಡಿನಿಂದ ಇಂಡಿಯಾಕ್ಕೆ ಬೇಗನೆ ಹೊರಡಲಿಕ್ಕಿರುವರು. ಈ ನಾಲ್ಕು ವಿಷಯಗಳನ್ನು ಈ ಕಮಿಷನಿನವರು ತೀರ್ಮಾನಿಸಬೇಕೆಂದು ಇಂಗ್ಲೆಂಡಿನಲ್ಲಿ ಜನರು ಅಭಿಪ್ರಾಯಪಡುತ್ತಿರುವರು 1 ಇಂಡಿಯಾದಲ್ಲಿರುವ ಬ್ರಿಟಿಷ್ ಸಿವಿಲಿಯನರುಗಳ ಈಗಿನ ಸಂಬಳವನ್ನು ಶೇಕಡ 50 ರಷ್ಟು ಹೆಚ್ಚಿಸಬೇಕು 2 ಡೊಡ್ಡ ಪಟ್ಟಗಳಲ್ಲಿರುವವರಿಗೆ ಅದಕ್ಕಿಂತ ಹೆಚ್ಚಿನ [illegible] ಅವರನ್ನು ಪೂರ್ತಿ ಸರ್ವೀಸಿನ ಕಾಲದವರೆಗೆ ಇಡುವ ಅಧಿಕಾರ [illegible] ದ [illegible] ಕಳುಹಿಸುವುದಾದರೆ ಅದಕ್ಕೆ [illegible] ರದ ಭರವಸೆ 4 ಇಂಡಿಯನರಿಗೆ ಈ [illegible] ಸಂಬಳವೇ ಸಾಕಾಗಿರುವುದರಿಂದ ಅವರಿಗೆ ಹೆಚ್ಚಿಸಬೇಕಾದ ಅವಶ್ಯವಿಲ್ಲ.

ಡಾಕ್ಟರ್ ಟೆಜ್‌ಬಹದೂರ್ ಸಪ್ರುರವರಿಗೆ ಇಂಗ್ಲೆಂಡಿನಲ್ಲಿ ಒಂದು ಕೋಣದಲ್ಲಿ ಅಕಸ್ಮಾತಾಗಿ ಏನೋ ಅಪಾಯದಲ್ಲಿ ಬಿದ್ದು ಈಯಿಲ್ಪೂರಾಸವೂ [illegible] ಗುಣವಾಗುತ್ತಿದ್ದಾರೆಂದು ‘ಲೀಡರ್’ ಪತ್ರಿಕೆಯು ಸೂಚಿಸುತ್ತದೆ.

ನಾವು ಭಾರತೀಯರು.

ಯವನಕಾಲವು, ಪರಕೀಯರಿಂದದಲ್ಲಿ ನಾನು ಹಿಂದೀಯನೆಂದ ಗೌರವದಿಂದ ಹೇಳುತ್ತಿದ್ದ ಕಾಲವಾಗಿತ್ತೋ ಈಗ ಅದು ಮಾಸಿಹೋಗಿ ಹೋಗಿದೆ. ಪಾಶ್ಚಾತ್ಯರ ವಿಧ್ವಂಸನಕ್ಕೆ ಬಂದು ಒಲಿಸಿಕೊಂಡುದರಿಂದ ಹಿಂದೀಯರು ತಾವು ಹಿಂದೀಯರೆಂದು ಹೇಳಿಸಿಕೊಳ್ಳುವುದು ಕೂಡ ಅವಮರ್ಯಾದೆಯೆಂದೋ, ನಾಚಿಕೆಯೆಂದೋ ತಿಳಿವ ದುರ್ಭಾವವು ಒಂದೊದಗಿತು. ಒಂದಾನೊಂದು ಕಾಲದಲ್ಲಿ ಹಣೆಯಲ್ಲಿ [illegible] ಇಲ್ಲವೇ [illegible] ಮನಸ್ಸು ಭಗವದ್ಭಕ್ತರಾಗಿ ಧ್ಯಾನವನ್ನಾವ ವಸ್ತ್ರಧರಿಸುತ್ತಿರುವುದು [illegible] ವಾಗಿತ್ತು. ಭಿಕ್ಷೆಯನ್ನು [illegible] ಪಾದಧೂಳಿಯನ್ನು ತಲೆಮೇಲೆ ಧರಿಸಿಕೊಳ್ಳುವುದು, ಭೂಷಣವೆಂದು ತಿಳಿಯುವ ಕಾಲವೊಂದಿತ್ತು. ವೇದಪುರಾಣಾದಿ ಗ್ರಂಥಗಳನ್ನು ಓದುವುದೆಂದರೆ ಶ್ರದ್ಧೆಯೂ ಸಂತೋಷವೂ ಆಗುವ ಕಾಲವಿತ್ತು. ಪಾಶ್ಚಾತ್ಯರಾಗ [illegible] ಈಗಿನ [illegible] ಅದೇ ಒಂದು ಪುರಾಣವಾಗಿ ಹೋಗಿದೆ. ಈಗ ವಿಧವಿಧದ ಚಿತ್ರವಿಚಿತ್ರ [illegible] ಭಗವಂತನ ನಾಮಸ್ಮರಣೆಯನ್ನು [illegible] ಯೂ ಭಾವಿಸುವುದು ಈಗ [illegible] ಸ್ತುತಿ [illegible] ನದಿ [illegible] ಉತ್ಸವವಾಗ [illegible] ಸಿವಿಲಾದ ಪಶ್ಚಿಮ [illegible] ಕೆಲವು ತಗ್ಗಿ ಬಂದು [illegible] ಅವಸ್ಥೆಯ [illegible] ಮೋಹಿಸಿ ನೋಡುವಾಗ ಯಾವ [illegible] ಸ್ವದೇಶಾಭಿಮಾನಿಯ ಕಣ್ಣೀರು ಬರದಿರಲಾರದು.

[illegible] ಭಾರತೀಯರಾದ [illegible] ಹೀಗೆ ಹೇಳುತ್ತಾರೆ. —

ಓ ಭಾರತವರ್ಷವೇ, ಸೀತೆ ಸಾವಿತ್ರಿ ದಮಯಂತಿಯರು ನಿನ್ನ ಭಾವನೆಯ [illegible] ಮರೆಯಬೇಡ. ಸನ್ಯಾಸಿಗಳಲ್ಲಿ ಸನಾತನಿಯಾದ [illegible] ಉಮಾನಾಥ ಶಂಕರನೇ ನಿನ್ನ ಇಷ್ಟದೇವತೆ ಎಂಬುದನ್ನು ಮರೆಯಬೇಡ. ವಿವಾಹ ಧನ ಜೀವನಗಳೆಲ್ಲವೂ ನಿನ್ನ ಇಂದ್ರಿಯಸುಖಕ್ಕೆಂದು ಎಂದೂ ತಿಳಿಯಬೇಡ, ಅಥವಾ ಯಾವನೊಬ್ಬ ವ್ಯಕ್ತಿಯ ಸುಖಕ್ಕೂ ಅಲ್ಲ, ನಿನ್ನ ಜನನದಿಂದಾರಭ್ಯ ನೀನು ಪಾವನವಾದ ದೇಹವು ದೇವಿಗೋಸ್ಕರವೇ ನಡೆದಿದೆ ಎಂಬುದನ್ನೆಂದಿಗೂ ಮರೆಯಬೇಡ, ಮರೆಯಬೇಡ. — ಹೇ ವೀರ, ಧೈರ್ಯವನ್ನು ತಾಳು, ನೀನು ಹಿಂದೂ ಎಂಬುದಾಗಿ ಸಂತೋಷಭರದಿಂದ ಹಿಗ್ಗಿ ಹಿಗ್ಗಿ ಹೇಳು, “ನಾನೊಬ್ಬ ಹಿಂದೂ, ಭಾರತೀಯರೆಲ್ಲರೂ ನನ್ನ ಸಹೋದರರು” ಇನ್ನೂ ಹೇಳು. ವಿದ್ಯೆ ಇಲ್ಲದ ಭಾರತೀಯನೂ, ಕಿರುಕನಾದ ಹಿಂದುವೂ, ಹಿಂದೂ ಬ್ರಾಹ್ಮಣನೂ ಹಿಂದೂ ಚಂಡಾಲನೂ ನನ್ನ ಸಹೋದರರು’ ಭಿನ್ನಭಿನ್ನವಾದ ಹಂಚುಬಟ್ಟೆಗಳನ್ನು ಧರಿಸಿ ಉಚ್ಚಸ್ವರದಿಂದ ಹಿಗ್ಗಿ ಕೂಗಿಹೇಳು “ಭಾರತೀಯರೆಲ್ಲಾ ನನ್ನ ಸಹೋದರರೇ, ಹಿಂದುಗಳೆಂದರೆ ನನ್ನ ಜೀವಾಧಾರ ಹಿಂದೂ ದೇವದೇವತೆಗಳೇ ನನ್ನ ದೇವತೆ, ಹಿಂದೂ ಸಮಾಜವೇ ನನ್ನ ಬಾಲ್ಯದ ತೊಟ್ಟಿಲು, ನನ್ನ ಹುಡುಗಾಟದ ವಿಹಾರಸ್ಥಾನ ಇನೇ ನನ್ನ ಪರಮಪಾವನವಾದ ಮುದಿಪ್ರಾಯದ ವಿಶ್ರಾಂತಿಸ್ಥಾನ” ಹೇಳಯ್ಯ, ಇನ್ನೂ ಹೇಳು.— “ಭರತಖಂಡವೇ ನನ್ನ ಸ್ವರ್ಗ, ಅದರ ಉನ್ನತಿಯೇ ನನ್ನ ಉನ್ನತಿ, ನನ್ನ [illegible] ಹಗಲಿರುಳೂ ಪ್ರಾರ್ಥಿಸು “ಹೇ ಪರಮಾತ್ಮ, ಲೋಕೇಶ್ವರಿ, ಮಾತಾ, ನನಗೆ ಗಂಡಸುತನವನ್ನು ದಯಪಾಲಿಸು. ಹೇ ಸರ್ವಶಕ್ತಿ, ನನ್ನಲ್ಲಿರುವ ಹೇಡಿತನವನ್ನು ಕಳೆದು ನನ್ನನ್ನು ನಿಜವಾದ ಮನುಷ್ಯನನ್ನಾಗಿ ಮಾಡು.”

ವಿವೇಕಾನಂದ

ಇದೇ ರೀತಿಯ ಪಾಶ್ಚಾತ್ಯದೇಶದಲ್ಲಿ ವೇದಾಂತಸಂಘಗಳ ಕುರಿತು [illegible] ಸ್ವಾಮಿಗಳವರು ಮಾಡಿದ ಉಪನ್ಯಾಸ.

ಪ್ರಪಂಚದಲ್ಲಿ ಧರ್ಮಗ್ಲಾನಿಯುಂಟಾಗಿ ಅಧರ್ಮವು ಯಾವಾಗ ಹೆಚ್ಚುವುದೋ ಆಗ ಮನುಷ್ಯಕೋಟಿಗೆ ಸಹಾಯಕ್ಕಾಗಿ ನಾನು ಬರುತ್ತೇನೆ” ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳುತ್ತಾನೆ. ನಮ್ಮ ಈ ಪ್ರಪಂಚದಲ್ಲಿ ಕಾಲ [illegible] ಹೋದ ಹಾಗೆಲ್ಲಾ ಹೊಸಹೊಸ ಮಾರ್ಪಾಡುಗಳುಂಟಾಗಿ [illegible] ಹೊಸ ಸ್ಥಿತಿಗತಿಗಳು ಮತ್ತು ಆಧ್ಯಾತ್ಮಿಕ ವ್ಯವಹಾರಗಳ [illegible] ಧರ್ಮದ [illegible] ಅವತಾರಪುರುಷರು ಒಂದು ಭಾಗದಲ್ಲಿ ಪ್ರಾಪಂಚಿಕ ವ್ಯವಹಾರಗಳನ್ನು [illegible] ಸುವುದರಲ್ಲಿ ಅಡಚಣೆ [illegible] ಪ್ರಾಮುಖ್ಯವಾಗಿರುವ ಆಧ್ಯಾತ್ಮಿಕ ವಿಚಾರಗಳನ್ನು ಸ್ಥಿರಪಡಿಸುವ [illegible] ರಲ್ಲಿ ವಿಶ್ವಾಸವಿಡಬೇಕಾದ [illegible] ಇದುವರೆಗೆ ದೊರೆತಿರುವ ಇತಿಹಾಸದಲ್ಲಿ ಕಂಡುಬಂದಿದೆ. ಆಧ್ಯಾತ್ಮಿಕ ವಿಚಾರಗಳು ಕಳೆಗುಂದುತ್ತ ಬಂದು ಅವುಗಳ ಸ್ಥಾನವನ್ನು ಪ್ರಾಪಂಚಿಕ ವ್ಯವಹಾರಗಳು ಆಕ್ರಮಿಸುವಾಗ ಮನುಷ್ಯರು ತಮ್ಮ ಸಾತ್ವಿಕತೆಗೆ ತಿಲಾಂಜಲಿಯಿತ್ತು ಜಗತ್ತನ್ನು ಸಂಹರಿಸುವ ಯಂತ್ರಗಳಾಗುವ ಸಂಭವವಿರುವಾಗ ಒಂದು ಮಹತ್ವದ ಶಕ್ತಿಯು ಬಂದು ತಿದ್ದುಪಡಿ ಮಾಡುವುದು ಆವಶ್ಯಕವಾಗಿದೆ. ಅದನ್ನೂ ಪ್ರತಿಬಂಧಿಸ [illegible] ಸಾಧ್ಯವಿಲ್ಲ. ಸಾವಿರಾರು [illegible] ವ್ಯವಸ್ಥೆಯಲ್ಲಿ [illegible] ಸರ್ವಸ್ವವೆಂದು [illegible] ಹೊಸಹೊಸ ಸಂಶೋಧನೆ [illegible] ಸಾಧನಗಳೆಂದೂ, ಇವೇ [illegible] ಅಭಿವೃದ್ಧಿಯೆಂದೂ [illegible] ಸಕಲ ಸೃಷ್ಟಿ [illegible] ಆತ್ಮ [illegible] ಒಂದಾನೊಂದು ಕಾಲದಲ್ಲಿ [illegible] ಪ್ರತಿಪಾದಿಸುತ್ತಲಿತ್ತು. ಅದರ [illegible] ರಾಗಿರುವರು. ಇವೇ ಈ ಎರಡು ಪಂಥಗಳಲ್ಲಿನ ವ್ಯತ್ಯಾಸ.

ಸಕಲ ಸೃಷ್ಟಿಕರ್ತನಾದ ಭಗವಂತನ ಮಹಿಮೆ ಯನ್ನರಿತುಕೊಳ್ಳುವುದರಲ್ಲಿ ಸರ್ವಸ್ವವೂ ಅಡಗಿದೆಯೆಂದು [illegible] ರುವ ಪೂರ್ವದೇಶ್ಯರು, ಇಂದೀಗ ನಾಶವೆಂಬ [illegible] ಗಳಿಂದ ಕೂಡ [illegible] ದಲ್ಲಿನ [illegible] ದ [illegible] ಸಂತೋಷ [illegible] ತಮ್ಮ ಅಭಿಪ್ರಾಯ [illegible] ಲ್ಲದೆ [illegible] ವನ್ನು [illegible] ಜ್ಞಾನ [illegible] ಒಂದು ಕ್ಷಣಿಕವಾದ [illegible] ದೇಹದ [illegible] ಇಂದು [illegible] ಪ್ರತ್ಯಕ್ಷವಾಗಿ [illegible] ತ್ಯಾಗದ [illegible] ಭಗವಂತನ [illegible] ಕಲ್ಲಿನ [illegible] ನುಡಿ [illegible]?

ಈ ಪ್ರಪಂಚದ ಐಹಿಕ [illegible] ಧನಾಢ್ಯ [illegible] ಕಾರಣಗಳನ್ನು ನಾವು ನೋಡುತ್ತಿ [illegible] ಎಂಥ ವಿಷಯ! ಹೊಂದಿ ನಾವು ಜೀವಿಸುತ್ತೇವೆ? ಅದರ ಶ್ರೇಷ್ಠವೆಂದು ತಿಳಿಯುವ [illegible] ಗಿಂತ [illegible] ಸ್ವಾತಂತ್ರ್ಯ [illegible] ಶ್ರೇಷ್ಠ [illegible] ಪಾವನವಾದ [illegible] ಅಂತರಂಗ [illegible] ಬಂದರೆ [illegible] ವಿವೇಕ [illegible]? [illegible] ಸೃಷ್ಟಿಯ [illegible] ತಿಳಿ [illegible] ದೇಶದಿಂದ [illegible] ಮುಂದಿನ [illegible] ಸ್ವಭಾವ [illegible] ಯುದ್ಧ [illegible] ಜೀವನ [illegible] ಯಾವ ದೇಶದಲ್ಲೂ, ಜನಾಂಗದಲ್ಲೂ [illegible] ಸ್ವದೇಶದ ತಮ್ಮ ಸ್ವಭಾವಗಳನ್ನು, ತಿದ್ದಿಕೊಳ್ಳಬಹುದು (ಇವರ ಅಂಜಿಕೆಗೆ ಎಷ್ಟೋ ಕಾರಣಗಳಿರಬಹುದು) ಭಾರತೀಯರ ಧ್ವನಿಯು ಈ ದಿನ [illegible] ಯ ಸ್ವಭಾವ ಈ [illegible] ಇತಿಹಾಸದಲ್ಲಿ ಯಾವ ಕಾಲದಲ್ಲಿಯೂ ಪರರಾಜ್ಯಗಳನ್ನು ಜಯಿಸಲು ಹೋಗಲಿಲ್ಲ. ಇತರರಿಗೆ ಸೇರಿದ ಯಾವ ವಸ್ತುಗಳನ್ನು ತಕ್ಕೊಳ್ಳಲಿಕ್ಕೆ ಹೋಗಲಿಲ್ಲ. ಇದು ಜನಾಂಗವು ಈ ಹಿಂದೂ ಜನಾಂಗ ಪೊರೆಯದೆ ಬೇರೊಂದಿಲ್ಲ. ಈ ನಮ್ಮ ಹಿಂದುಸ್ಥಾನ ಮಾಡಿದ ತಪ್ಪೇನು? ತನ್ನ ಭೂಮಿಯನ್ನು ಫಲವತ್ತಾಗಿಟ್ಟುಕೊಂಡು ಇತರರನ್ನು ಆಕರ್ಷಿಸುವುದರಿಂದ! ಯಾವ [illegible] ಗಳನ್ನು ನಡೆಸುವುದರಿಂದ” ನಿರಂತರವೂ ದೇವರ ಕುರಿತು ಧ್ಯಾನಮಾಡುವ [illegible] ಆಧ್ಯಾತ್ಮಿಕ ದೃಷ್ಟಿ [illegible] ತನ್ನ ಸಂಪಾದಿಸಿ ಇತರ [illegible] ಗೆ ನೀಡುವುದರಿಂದ!” ಈ ಹಿಂದ ದೇಶವು ಮಾಡಿದ ತಪ್ಪು! ಬೇರೆಯವರು ದೋಚಿಕೊಂಡು ಹೋದರೂ ಇತರರು ಕಾಡು ಮನುಷ್ಯರಂತೆ [illegible] ಕಸಿದು ಅದಕ್ಕೆ ಸ್ವತ್ತುಪರವಾಗಿ [illegible] ಬುದ್ಧಿಯನ್ನೂ ಆತ್ಮನ ಶಕ್ತಿಯನ್ನೂ ಅವರಿಗೆ ತೋರಿಸಿಕೊಡುವುದು. ಮಾತ್ರ [illegible] ಪ್ರಕರಣಗಳಲ್ಲಿ [illegible] ಪೌರಾತ್ಯರಿಗೆ [illegible] ಅಪೂರ್ವ, ಅಪ್ಪಸಂಬಳ, ಹಿಂದೀಯರು ಯಾವಾಗ ತಮ್ಮ [illegible] ಗಳನ್ನು ಬಿಟ್ಟು ದಾಟುವರೋ ಆಗ [illegible] ಬಂದು [illegible] ಹೋಗುವರು. [illegible] ಮಾಡುವ ಕೆಲಸವು ಅದ್ಭುತವಾದದ್ದು.

[illegible] ಎಷ್ಟರಿಂದ ಯಾತನೆ ಪಡೆ ಎಂಬುದನ್ನು ಪರೀಕ್ಷಿಸಿ [illegible] ನೋಡುವವರು ಎಲ್ಲರಲ್ಲಿಯೂ [illegible] ಪ್ರೇಮವನ್ನು ಹುಟ್ಟಿಸಲು ನಿರಂತರವೂ [illegible] ಮಹಾತ್ಮರುಗಳೇ ಬೇಕಾದದ್ದು. ಈ [illegible] ಅಧಿಕಾರ, ಧನ, ಎಲ್ಲದಕ್ಕಿಂತಲೂ [illegible] ತಾವು ಹಿಡಿದ ಕೆಲಸವನ್ನು [illegible] ಸಂದರ್ಭದಲ್ಲಿ ತಮ್ಮ ಆಯುಷ್ಯ [illegible] ಎಂದೇಕಾದರೂ [illegible] ವೇದಾಂತ ಸಂಘಗಳ [illegible] ನೋಡುವುದು [illegible] ಇಲ್ಲ [illegible] ಒಂದು [illegible] ಸಿಕ್ಕ [illegible] ಫಲಕಾರಿ [illegible] ಜನಾಂಗವುದರಲ್ಲಿ ಸಂದೇಹವೇ ಇಲ್ಲ.

ಅಮೆರಿಕದ ಈ ವೇದಾಂತ ಉಪನ್ಯಾಸದಿಂದ ನಾವು [illegible] ನಮ್ಮ [illegible] ಭಿನ್ನಾಭಿಪ್ರಾಯದಿಂದ ಕೂಡಿದುದೇ [illegible] ಯಾವಾಗಲೂ [illegible] ಆಗಲಿ, ಯಾವಾಗಲೂ [illegible] ಆಗಲಿ, ನಾವು ಮುಖ್ಯ ದೇಶವನ್ನು [illegible] ಅಭಿಪ್ರಾಯವನ್ನು ಕೂಡುವ [illegible] ಸಾಧನವು [illegible] ಇದ್ದರ [illegible] ನಮ್ಮನ್ನು ನಾಶಮಾಡುವವರೇ ಇಲ್ಲ [illegible] ಸಿದ್ಧಾಂತ [illegible] ನಮ್ಮನ್ನು [illegible] ಎಷ್ಟೋ [illegible] ಸ್ವತಂತ್ರವಾಗಿ [illegible], ನಾವು [illegible] ಪ್ರತಿದಿನವೂ [illegible] ಗೆ ಅವರ ಉಪಕಾರವನ್ನು [illegible] ನಮಗೆ ನಾಚಿಕೆಯಿಲ್ಲವೇ? [illegible] ನಾವು [illegible] ಬೇಕು. ಇದಕ್ಕೆ [illegible] ನಾವು ಒಬ್ಬ [illegible] ವ್ಯವಹಾರಗಳಲ್ಲಿ [illegible] ಆಧ್ಯಾತ್ಮಿಕ ವಿಚಾರಗಳಲ್ಲಿ ಶ್ರದ್ಧೆಯನ್ನು ಹುಟ್ಟಿಸಿ ನಮ್ಮನ್ನು [illegible] ದೇವರನ್ನು ಭಕ್ತಿಯಿಂದ ಪೂಜಿಸಿ [illegible] ನಾವು [illegible] ನಮ್ಮ ಸೇವೆ [illegible].

ದಾಮೋದರ [illegible]

ದಿನಗಳ [illegible].

[illegible]

ದೇಶದವರಿಗೆ ಅಪೀಲ್.

ದೇಶ ಹಿತಚಿಂತಕರೇ,

ಅವ್ವತ್ತಿ ಕೊಡಗು ನೇಷನಲ್ ಸ್ಕೂಲ್ ಸಹಾಯ ವಿಷಯದಲ್ಲು ಅನೇಕ ಅಪೀಲ್‌ಗಳು ಮಾಡಲ್ಪಟ್ಟವು. ದೇಶದ ಮಹನೀಯರ ಧನಸಹಾಯ ವಗೈರೆ ಎಲ್ಲಾ ತರದ ಸಹಾಯವು ಇನ್ನೂ ಬೇಕಾಗಿದೆ. ಈ ನೇಷನಲ್ ಸ್ಕೂಲಿನಿಂದ ದೇಶಕ್ಕೆ ಎಷ್ಟು ಪ್ರಯೋಜನವಿದೆ ಮುಂದಕ್ಕೆ ಇದರ ಮೂಲಕ ಎಂಥಾ ಪ್ರಯೋಜನಗಳನ್ನು ಹೊಂದಬಹುದು ಯೆಂಬ ಸಂಗತಿಯು ದೇಶದ ಮಹಾನುಭಾವರಿಗೆ ತಿಳಿಯದ್ದಲ್ಲ. ಭೂಲೋಕದಲ್ಲಿ ಇಂಥಾ ನೇಷನಲ್ (ರಾಷ್ಟ್ರೀಯ) ಶಾಲೆಗಳಿಂದಲೇ ಜನರು ಅಭಿವೃದ್ಧಿ ಹೊಂದಿದ್ದಾಗಿದೆ. ಈ ಸಂಗತಿ ಈಗ್ಯೆ ಇಂಡ್ಯಾದೇಶದಲ್ಲು ಪರಿಷ್ಕಾರವಾಗಿ ಎಲ್ಲೆಲ್ಲಿಯೂ ರಾಷ್ಟ್ರೀಯ ವಿದ್ಯಾಶಾಲೆಗಳು ಸ್ಥಾಪನೆಯಾಗಿ ಇದರ ಮೂಲಕ ವಿದ್ಯೆ ಕೈಗಾರಿಕೆ, ವ್ಯಾಪಾರ, ಜಾತಿ ನೀತಿ ವಗೈರೆಗಳನ್ನು ಹಬ್ಬಿಸಿ ಜನಾಂಗಗಳಲ್ಲಿ ಒಗ್ಗಟ್ಟಿನ ಊಟಾಗಿ ಭೂಲೋಕದಲ್ಲಿ ತಮ್ಮ ಹಕ್ಕು ಬಾಧ್ಯತೆಗಳನ್ನು ಪಡೆದು ಅಭಿವೃದ್ಧಿ ಹೊಂದುತ್ತಾ ಮುಂದರಿಸುತ್ತಾ ಇದ್ದಾರೆ. ಹೀಗಿರುವಲ್ಲಿ ನಾವು ಕೊಡಗು ದೇಶದವರು ಸಹ ಇವರನ್ನು ಹಿಂಬಾಲಿಸಿ ಈ ನೇಷನಲ್ ಸ್ಕೂಲನ್ನು ಅಭಿವೃದ್ಧಿಪಡಿಸಿ ನಮ್ಮ ದೇಶದ ಆವಶ್ಯಕತೆ ಮತ್ತು ಕೋರಿಕೆಗೆ ಸರಿಯಾಗಿ ಮಾಡಿಕೊಂಡು ಇದರ ಮೂಲಕ ಈ ಸಮಯದಲ್ಲಿ ನಮ್ಮ ಯುವಕರಿಗೆ ನ್ಯಾಯವಾದ ಮತ್ತು ನಿಜವಾದ ಅಭಿವೃದ್ಧಿ ಹೊಂದುವ ಮತ್ತು ಮುಂದರಿಸುವ ದಾರಿಯನ್ನು ಮಾಡದಿದ್ದರೆ ನಾವು ಯಾವ ತೋರಿದರೆ ಯಾವ ಶಕ್ತಿ, ಯಾವ ಹಿನ್ನೆಲೆ, ಯಾವ ಯುಕ್ತಿ, ಯಾವ ಬುದ್ಧಿವಾದ ಮತ್ತು ಯಾವತರದ ಉಪಾಯಗಳಿಂದ ಫಲವಾದೀತು? ಎಂದೂ ಆಗಲಿಕ್ಕಿಲ್ಲ. ಭೂಲೋಕವನ್ನು ಉದ್ಧರಿಸುವ ಪಂಥವಾದ ಬುದ್ಧಿವಾದವನ್ನು ಅನುಸರಿಸಿ ನಮ್ಮ ಈ ಚಿಕ್ಕ ದೇಶದವರು ಸಹ ನಡೆಯತಕ್ಕದ್ದು ನಮ್ಮ ಕರ್ತವ್ಯವಾಗಿದೆ.

ಆದ್ದರಿಂದ ದೇಶದ ಮಹನೀಯರೇ ಹಿತಚಿಂತಕರೇ ಈ ಸಮಯದಲ್ಲಿ ಈ ನೇಷನಲ್ ಸ್ಕೂಲನ್ನು ದ್ರವ್ಯ ಸಹಾಯಮಾಡಿ ಸ್ಥಿರಪಡಿಸಿ ಅಭಿವೃದ್ಧಿಗೆ ಬಂದ ಈ ಸ್ಕೂಲನ್ನು ಹಾಳುಮಾಡುವದು ದೇಶಕ್ಕೆ ಲೇಸಲ್ಲ. ಇದನ್ನು ಸ್ಥಿರಪಡಿಸಿ ದೇಶದ ಕೋರಿಕೆಗೆ ಸರಿಯಾಗಿ ಮಾಡಿಕೊಳ್ಳುವದು ದೇಶದ ಭಾರವಾಗಿದೆ. ತಾವು ದಯಪಾಲಿಸುವ ಸಾವಿರಾರು ಚಂದಗಳಲ್ಲಿ ಇದೊಂದು ಧರ್ಮವಾದ, ತಮ್ಮ ದೇಶಕ್ಕೇ ಉಪಯೋಗವಾದ ಅವಶ್ಯವಾದ ಶ್ರೇಷ್ಠವಾದ ಚಂದವಾಗಿದೆ. ದೇಶದ ಮಹಾತ್ಮರು ತಮ್ಮ ದೇಶದಮೇಲೆ ದಯವಿಟ್ಟು ಕರುಣೆಯಿಟ್ಟು ಚಂದವನ್ನು ಮತ್ತು ಧರ್ಮವನ್ನು ದಯಪಾಲಿಸಬೇಕಾಗಿ ಅರಿಕೆಮಾಡಿಕೊಳ್ಳುವ, ತಮ್ಮ ವಿಧೇಯ,

ಬಿದ್ದಂಡ್ರ ಐ ಕೈಪ್ಪ,

ಅಬ್ದುಲ್ ಗಫೂರ್‌ಖಾನ್

ಸುರಾದೇವಿಗೆ ಬಹಿಷ್ಕಾರ!

ಅಸಹಕಾರ ಚಳವಳಿಯು ಹಿಂದೂ ದೇಶದಲ್ಲಿ ಹರಡಿ ಈಗ ಒಂದೆರಡು ವರ್ಷಗಳು ಮಾತ್ರವಾಗಿದೆ. ಅಷ್ಟರಲ್ಲೇ ಬಹಿಷ್ಕಾರ (ಬಾಯಿಕಟ್) ವೆಂಬ ಶಬ್ದವು ವಾಡಿಕೆಯಾಗಿ ಎಲ್ಲರ ಬಾಯಿಯಿಂದಲೂ ಹೊರಡಲು ಹತ್ತಿದೆ. ಆದರೆ ನಮ್ಮ ಈ ಕೊಡಗು ದೇಶದಲ್ಲಿ ಪೂರ್ವದಿಂದಲೇ 'ಮೋಂಬಡಿ ಬೆಪ್ಪ' ಯಾ, 'ಬಹಿಷ್ಕಾರ ಇಡುವ' ಎಂಬುದು ಗ್ರಾಮ, ನಾಡು ದೇಶಪಂಚಾಯಿತಿಗಳಲ್ಲಿ ಉಪಯೋಗವಾಗುತ್ತಾ ಬಂದದ್ದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಊರಲ್ಲಿ ಒಬ್ಬನು ತಪ್ಪನ್ನು ಮಾಡಿದರೆ ಊರವರು ಅವನಿಗೆ ದಂಡವನ್ನು ವಿಧಿಸಿ ಆ ದಂಡವನ್ನು ಕೊಡದವನನ್ನು ಬಹಿಷ್ಕಾರ ವಿಡುತ್ತಿರುವದು ಅನೇಕ ವರ್ಷಗಳಿಂದಲೇ ನಡೆದು ಬಂದ ಪದ್ಧತಿಯಾಗಿದೆ. ಆದರೆ ಜನಸಾಮಾನ್ಯದಲ್ಲಿ ಹೆಚ್ಚಿನ ಕೆಟ್ಟ ಕೆಲಸಗಳಿಗೂ ಕ್ರೂರಕೃತ್ಯಗಳಿಗೂ ಮುಖ್ಯಕಾರಣವಾಗಿರುವ ಸುರಾದೇವಿಯನ್ನು ದೇಶೀಯರು ಬಹಿಷ್ಕಾರ ಹಾಕದೆ ಇರುವದು ಎಷ್ಟು ಅನ್ಯಾಯ! ಎಷ್ಟು ಶೋಚನೀಯ!! ಗ್ರಾಮನಿವಾಸಿಗಳೇ, ವಿವೇಕಶೂನ್ಯನಾಗಿ ನಿಶಾದೇವಿಯ ಪಾಶಕ್ಕೆ ಸಿಕ್ಕಿ ಬಿದ್ದಂತ ನಿಮ್ಮವನೊಬ್ಬನು ಏನೋ ತಪ್ಪು ಮಾಡಿದನೆಂದು ಅವನನ್ನು ಬಹಿಷ್ಕಾರ ಮಾಡುವುದರ ಬದಲು ಆ ಪಾಪಗಳ ಮಾತೆಯಾದಂತ ಸುರಾದೇವಿಯನ್ನೇ ಯಾಕೆ ಬಹಿಷ್ಕಾರ ಹಾಕಕೂಡದು? ಆ ಮಹಾಮಾರಿಯನ್ನು ನಿಮ್ಮ ಊರಿನೊಳಗೇ ಸುಳಿಯದಂತೆ ಮಾಡಿದರೆ ನಿಮ್ಮಲ್ಲಿ ಆಗಾಗ್ಗೆ ಉಂಟಾಗುತ್ತಿರುವ ಕಲಹ ಕೂಟಗಳು ನಿರ್ನಾಮವಾಗುವವಲ್ಲದೆ ನಿಮ್ಮ ದ್ರವ್ಯಹಾನಿಯು ಎಷ್ಟರ ಮಟ್ಟಿಗೆ ಕಡಿಮೆಯಾಗುವುದೆಂದು ನೀವು ಯೋಚಿಸಿರುವಿರಾ! ಅಥವಾ ಯೋಚಿಸಿದರೆ ಅದರಿಂದುಂಟಾಗುವದು ಪರಿಣಾಮಗಳು ನಿಮ್ಮನ್ನು ನಾಚಿಗೆಗೊಳಿಸುವುದರಿಂದ ಯೋಚಿಸದೆ ಸುಮ್ಮನಿರುವಿರಾ! ಇಲ್ಲವೇ ಯೋಚಿಸಿ ಅದರ ಕೇಡುಗಳನ್ನು ಅರಿತವರಾದರೂ ಆ ಪಾಪದ ಪೀಡದ ಬಲೆಯಿಂದ ತಪ್ಪಿಸಿಕೊಳ್ಳಲು ಅಶಕ್ತರಾಗಿರುವಿರಾ! ಇದು ನಿಜವಾದರೆ ನೀವು ಜ್ಞಾನಶಕ್ತಿಯುಳ್ಳ ಮನುಷ್ಯರೆಂದು ಎನ್ನಿಸಿಕೊಳ್ಳಲು ಯೋಗ್ಯರೇ? ನೀವು ನಾಯಿ ನರಿಗಳಿಗಿಂತಲೂ ಕಡೆ ಎಂದು ಭಾವಿಸುವುದರಲ್ಲಿ ಆಕ್ಷೇಪಣೆ ಏನಿದೆ?

ಮದ್ಯಪಾನದಿಂದುಂಟಾಗುವ ಎಣಿಸಲಸಾಧ್ಯವಾದ ಕೆಡುಕುಗಳ ವಿಷಯ ಅನೇಕ ಜ್ಞಾನಿಗಳೂ, ಪಂಡಿತರೂ ಮತ್ತು ಡಾಕ್ಟರುಗಳೂ ಎಷ್ಟೋ ಪುಸ್ತಕಗಳನ್ನು ಬರೆದಿರುವರು. ಆದರೆ ಅವುಗಳನ್ನೆಲ್ಲಾ ಇಲ್ಲಿ ಬರೆಯಲು ಸ್ಥಳಸಂಕೋಚವಾದುದರಿಂದ ಲೋಕವಿಖ್ಯಾತರಾಗಿರುವ ಮಹಾತ್ಮ ಗಾಂಧಿಯವರು ಈ ವಿಷಯದಲ್ಲಿ ಹೇಳಿರುವದನ್ನು ತಿಳಿಯಲು ಅನೇಕರಿಗೆ ಕುತೂಹಲವಿರಬಹುದಾದುದರಿಂದ ಅದನ್ನು ಮಾತ್ರ ಇಲ್ಲಿ ಸೂಚಿಸುವೆನು. ತಮ್ಮ "ಆರೋಗ್ಯಸಾಧನ" ದಲ್ಲಿ ಹೇಳಿರುವದೇನೆಂದರೆ—"ಪ್ರಪಂಚದ ಯಾವತ್ತು ಮತಧರ್ಮಗಳಲ್ಲಿ ಮದ್ಯಪಾನವು ಭಂಗಿ ಮತ್ತು ಅಫೀಮು ಕೆಟ್ಟದ್ದೆಂದು ನಿರ್ಣಯಿಸಲ್ಪಟ್ಟಿದೆ. ಆದರೆ ಇದನ್ನು ಪೂರ್ತಿಯಾಗಿ ತ್ಯಜಿಸಿದವರು ಅಪೂರ್ವ. ಕುಡುಕತನದಿಂದ ಸಾವಿರಾರು ಮನೆಗಳು ಮಣ್ಣುಪಾಲಾಗಿ ಹೋಗಿವೆ! ಲಕ್ಷೋಪಲಕ್ಷ ಜನರು ಇದರಿಂದ ಜ್ಞಾನಶೂನ್ಯರಾಗಿದ್ದಾರೆ. ಕುಡುಕನಿಗೆ ಯಾವದೊಂದು ವಿಷಯದಲ್ಲಿಯೂ ಜ್ಞಾನವಿರುವುದಿಲ್ಲ. ಒಮ್ಮೊಮ್ಮೆ ಅವನು ತಾಯಿ, ಹೆಂಡತಿ, ಮಗಳೆಂಬ ಭೇದಗಳನ್ನು ಕೂಡ ಮರೆಯುವುದುಂಟು. ಸಾರಾಯಿಯಿಂದ ಮನುಷ್ಯನ ಬುದ್ಧಿಯು ನಾಶವಾಗಿ ಅಂತ್ಯದಲ್ಲಿ ಅವನು ಭೂಮಿಗೆ ಭಾರವಾಗುವನು. ಅನೇಕವೇಳೆ ಈ ಕುಡುಕರು ಚರಂಡಿಗಳಲ್ಲಿಯೂ ಹೇಸಿಗೆಯ ಜಲದಾರಿಗಳಲ್ಲಿಯೂ ಬಿದ್ದಿರುವುದನ್ನು ನಾವು ನೋಡಬಹುದು. ಎಷ್ಟು ಒಳ್ಳೇ ಮನುಷ್ಯನಾದರೂ ಮದ್ಯಪಾನದಿಂದ ಕೆಟ್ಟು ಹೋಗುತ್ತಾನೆ. ಬುದ್ಧಿವಂತರೂ ಕೂಡ ಇದರ ಮಹಿಮೆಯಿಂದ ಬುದ್ಧಿ ಸ್ವಾಸ್ಥ್ಯವಿದ್ದರೂ, ಏನೊಂದೂ ಕೆಲಸಮಾಡಲು ಅಶಕ್ತರಾಗುವರು. ಮನಸ್ಸಿನ ಮೇಲೆ ಅವರ ಅಧಿಕಾರವು ನಡೆಯುವುದಿಲ್ಲ; ಅವನು ಮನಸ್ಸಿಗಧೀನನಾಗಿ ನಡೆಯಬೇಕಾಗುತ್ತದೆ. ಆದುದರಿಂದ ಮದ್ಯವನ್ನು ಮತ್ತು ಇದರ ಬಾಸಾ ಅಕ್ಕತಂಗಿಯರಂತಿದ್ದ ಭಂಗಿ ಮತ್ತು ಅಫೀಮನ್ನು ಖಂಡಿತವಾಗಿ ತ್ಯಜಿಸಬೇಕು. ಈ ವಿಷಯದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಕೆಲವರು ಮದ್ಯವನ್ನು ಔಷಧವಾಗಿ ಸೇವಿಸಿದರೆ ಕೆಟ್ಟದ್ದಲ್ಲವೆನ್ನುವರು. ಆದರೆ ಮದ್ಯಕ್ಕೆ ಗೌರವನೀಯವಾದ ಯೂರೋಪದೇಶದ ಡಾಕ್ಟರರು ಕೂಡ ಇದು ಕೆಟ್ಟದ್ದೆಂದು ತೀರ್ಮಾನಿಸಿದ್ದಾರೆ. ಆದುದರಿಂದ ಮೊದಲು ಇದನ್ನು ಅನೇಕ ರೋಗಗಳಲ್ಲಿ ಉಪಯೋಗಿಸುತ್ತಿದ್ದರೂ ಈಗ ಈ ಪದ್ಧತಿಯು ಸಂಪೂರ್ಣವಾಗಿ ನಿಂತು ಹೋಗಿದೆ. ಬ್ರಾಂಡಿಯನ್ನು ಔಷಧಕ್ಕಾಗಿ ಉಪಯೋಗಿಸುವದಾದರೆ ಅದನ್ನು ಕುಡಿಯುವದಕ್ಕೆ ಯಾಕೆ ಉಪಯೋಗಿಸಬಾರದೆಂದು ಹಲವು ಪಕ್ಷಪಾತಿಗಳು ಕೇಳಬಹುದು! ಆದರೆ ಔಷಧಕ್ಕೆ ಅನೇಕ ವಿಷಪದಾರ್ಥಗಳನ್ನೂ ಉಪಯೋಗಿಸುತ್ತಾರೆ; ಅದನ್ನು ಆಹಾರವಾಗಿ ಏಕೆ ಉಪಯೋಗಿಸುವುದಿಲ್ಲ? ಕೆಲವು ವ್ಯಾಧಿಗಳಲ್ಲಿ ಮದ್ಯದಿಂದ ಸ್ವಲ್ಪ ಮಟ್ಟಿಗೆ ಗುಣತೋರಬಹುದು. ಆದರೆ ಇದರಿಂದ ಎಷ್ಟು ಹಾನಿಯುಂಟಾಗಿದೆಯೆಂದರೆ, ವಿಚಾರಶೀಲರು ಪ್ರಾಣ ಹೋದರೂ ಔಷಧಕ್ಕೆಂದು ಕೂಡ ಇದನ್ನು ಉಪಯೋಗಿಸಬಾರದು. ಲಕ್ಷಾಂತರ ಜನರನ್ನು ಹಾಳು ಮಾಡಿರತಕ್ಕ ಈ ವಸ್ತುವನ್ನು, ಈ ನಶ್ವರವಾದ ಶರೀರವನ್ನು ಉಳಿಸುತ್ತದೆಂದು ಉಪಯೋಗಿಸುವುದಕ್ಕಿಂತಲೂ ಅವಿವೇಕವು ಏನಿದ್ದೀತು? ನಮ್ಮ ಹಿಂದೂ ದೇಶದಲ್ಲಿ ಡಾಕ್ಟರರು ಒತ್ತಾಯಪಡಿಸಿದರೂ ಇದನ್ನು ಯಾ, ಕೆಟ್ಟದೆಂದು ತೋರುವ ಇತರ ಪದಾರ್ಥವನ್ನು ಸರ್ವಥಾ ಉಪಯೋಗಿಸಲು ಒಪ್ಪದೆ ಪ್ರಾಣವನ್ನು ಬಿಡುವುದಕ್ಕೂ ಸಿದ್ಧರಾಗಿರುವವರು ಅನೇಕರಿದ್ದಾರೆ." ಹಿಂದೂ ದೇಶದಲ್ಲಿ ನಿವಾಸಿಸಿದ್ದ ಶತಮಾನಗಳಿಂದ ಕೇರಿಯವರೆಲ್ಲರೂ ಮಾಡಿದ್ದಕ್ಕಿಂತ ಹೆಚ್ಚಾಗಿ ಎರಡು ವರ್ಷಗಳಲ್ಲಿಯೂ ಕೆಲಸ ಮಾಡಿದ ಮಹಾತ್ಮ ಗಾಂಧಿಯವರ ನಿರ್ವಿವಾದವಾದ ಮಾತುಗಳಿಗೆ ಯಾರು ತಾನೇ ಒಪ್ಪದೆ ಇರುವರು? ಆದುದರಿಂದ ಅಮಲುಪದಾರ್ಥ ಸೇವನೆಯ ದೋಷಗಳನ್ನು ಇನ್ನೂ ಹೆಚ್ಚಾಗಿ ವಿವರಿಸುವುದರಿಂದ ಪ್ರಯೋಜನವಿಲ್ಲ.

ದೇಶಬಾಂಧವರೇ, ಇನ್ನಾದರೂ ನೀವು ಕಣ್ಣು ತೆರೆದು ನಿಮ್ಮ ಪಾಪಗಳನ್ನು ನೋಡುವವರಾಗುವಿರಾ! ನಿಮ್ಮ ಮನಸ್ಸಿನ ಅಭ್ಯಾಸ ಅಭಿಲಾಷೆಗಳನ್ನೂ ಹತೋಟಿಯಲ್ಲಿಟ್ಟುಕೊಂಡು ಮನುಷ್ಯರೆಂದು ಎನ್ನಿಸಿಕೊಳ್ಳಲು ಅರ್ಹರಾಗುವಿರಾ! ಇಂದೀಗ ನಿಮ್ಮ ದೃಢಸಂಕಲ್ಪಕ್ಕೆ ಸುಸಮಯವು. ನಾಳೆಗೆ ಕಾಯದೆ, ಈ ಹೊತ್ತೇ ಕಾವೇರಿ ಮಾತೆಯ ಸ್ನಾನಮಾಡುವಾಗ್ಯೆ ನಿಮ್ಮ ಈ ದುರಭ್ಯಾಸವನ್ನು ಸಂಪೂರ್ಣವಾಗಿ ಕೊಳೆದು ಬಿಡಿರಿ. ಈ ಅತಿ ಮಲೀನವಾದ ಕೊಳೆಯನ್ನು ತೊಳೆದು ನಿಮ್ಮ ಮನಸ್ಸನ್ನು ಶುಚಿಮಾಡಿಕೊಳ್ಳಿರಿ. ನಿಮ್ಮ ಮನಸ್ಸು ಬಹಳ ಹಗುರವಾಗುವುದು. ನಿಮ್ಮ ಜೀವನವು ನಿಮಗೊಂದು ಭಾರವೆಂದು ತೋರಲಿಕ್ಕಿಲ್ಲ. ಲೋಕವಿಚಾರದಲ್ಲಿ ನಿಮ್ಮ ಅಭಿಪ್ರಾಯವು ಉದಾರವಾಗುವುದು. ನೀವು ಈ ದಿನ ಜಾತ್ರೆಗೆ ಬಂದ ಉದ್ದೇಶವು ಕೈಗೂಡಿದಂತಾಗುವುದು. ಹೇ, ಕಾವೇರಿ ಮಾತೇ, ನಿನಗಾದರೂ ನಿನ್ನ ಅಪಾರವಾದ ಮಕ್ಕಳ ದುಸ್ಥಿತಿಯನ್ನು ನೋಡಿ ಮನಸ್ಸು ಕರಗದೇ! ತಾಯೇ, ನೀನಾದರೂ ನಿನ್ನ ಆಶೀರ್ವಾದವನ್ನು ಪಡೆಯಲು ಬಂದಿರುವ ನಿನ್ನ ಸಾವಿರಾರು ಭಕ್ತರನ್ನು ನಾಶಪಡಿಸುತ್ತಿರುವ ಈ ದುರಭ್ಯಾಸವನ್ನು ಬೇರು ಸಹಿತ ಕಿತ್ತುಹಾಕುವಂತೆ ಅವರ ಚಿತ್ತವನ್ನು ಶುದ್ಧಮಾಡಲಾರೆಯಾ! ನಿನ್ನ ಮೇಲೆ ಪೂರ್ತಿಭಕ್ತಿಯುಳ್ಳ ಅವರಿಗೆ ನೀನಲ್ಲದಿದ್ದರೆ ಮತ್ಯಾರು ಗತಿ! ಆದುದರಿಂದ ನಿನ್ನ ಭಕ್ತರನ್ನು ನಿನ್ನ ಶತ್ರುವಾದ ಸುರಾದೇವಿಯ ಸೆಳತದಿಂದ ರಕ್ಷಿಸು, ರಕ್ಷಿಸು, ರಕ್ಷಿಸು ಎಂಬುದು ನಿನ್ನಲ್ಲಿ ನನ್ನ ಪ್ರಾರ್ಥನೆಯು.

ಪತ್ರವ್ಯವಹಾರಗಳು.

ಬಾತ್ಮಿದಾರರು ಬರೆವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ಗೋಣಿಕೊಪ್ಪದಲ್ಲಿರುವ ಮಿಶನರಿಶಾಲೆ.

ಅಯ್ಯಾ!

ನಿಮ್ಮ 17 ನೇ ಸಂಚಿಕೆಯ ವರ್ತಮಾನಸಂಗ್ರಹದಲ್ಲಿ ಗೋಣಿಕೊಪ್ಪಲಿನಲ್ಲಿರುವ ಮಿಶನರಿಶಾಲೆಗೆ "ಮಾಲುಗಳಾದ ಡಿಸ್ಟ್ರಿಕ್ಟ್ ಬೋರ್ಡಿನವರು, 45 ರೂಪಾಯನ್ನು ಗ್ರಾಂಟ್ (ಸಹಾಯಧನ) ಮಂಜೂರು ಮಾಡಿರುತ್ತಾರೆಂದು ಓದಿದೆನು. ಇದಲ್ಲದೆ ಎಂಪೀರಿಯಲ್ ಗವರ್ನ್‌ಮೆಂಟಿನವರೂ, 35 ರೂಪಾಯನ್ನು ಮಂಜೂರು ಮಾಡಿರುತ್ತಾರಂತೆ. ಒಟ್ಟಾರೆ ಈ ಶಾಲೆಗೆ ತಿಂಗಳು ಒಂದಕ್ಕೆ 80 ರೂಪಾಯಿ ಸಹಾಯಧನ. ಅಂದರೆ ಮುಂಚೆಗಿಂತ 65 ರೂಪಾಯಿ ಜಾಸ್ತಿ ಸಿಕ್ಕಿದಂತಾಯಿತು. ಈ ಸಹಾಯಧನವು ಉಪಾಧ್ಯಾಯರುಗಳ ಸಂಬಳವನ್ನು ಹೆಚ್ಚಿಸುವುದಕ್ಕೆ ಬದಗಿಸಲ್ಪಡುವುದೋ? ಯಾ ಬೇರೆ ಯಾವುದಕ್ಕೋ? ಎಂಬದನ್ನು ತಿಳಿಯಲು ಬಹಳ ಆಕಾಂಕ್ಷೆಯಿಂದಿರುವ,

ಮಡಿಕೇರಿ, ಆ ಬಡ ಉಪಾಧ್ಯಾಯರುಗಳ
ತಾ|| 7-10-1923. ಸ್ನೇಹಿತ.

ಅಯ್ಯಾ,

ನಮ್ಮ ಜನರಿಗೆ ಹಿತವಾಗಿರುವ ಪತ್ರಿಕೆಯಲ್ಲಿ ಈ ಕಾಗದವನ್ನು ಛಾಪಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಈಗ ನಮ್ಮ ದೇಶಕ್ಕೆ ಕೌನ್ಸಿಲ್ ಮೆಂಬರುಗಳನ್ನು ಚುನಾಯಿಸುವ ಬಗ್ಗೆ ಒಂದು ಪತ್ರವು ಚಲಾವಣೆಯಲ್ಲಿರುತ್ತದೆ. ಇದಕ್ಕೆ ಬಿ. ನಂಜಪ್ಪ ವಗೈರೆ ರುಜು ಮಾಡಿರುತ್ತಾರೆ. ನಾನು ನಂಜಪ್ಪನವರಲ್ಲಿ ಮಾತನಾಡುತ್ತಿರುವಾಗ್ಯೆ ಅವರು ಈ ಪತ್ರಕ್ಕೆ ನಾನು ರುಜು ಹಾಕಿರುವುದಿಲ್ಲ ಮತ್ತು ನಮ್ಮ ಒಪ್ಪಿಗೆ ಕೊಟ್ಟಿರುವುದಿಲ್ಲವೆಂಬದಾಗಿ ಹೇಳಿದರು. ಈ ಒಂದು ಚಿಕ್ಕ ಸಂಗತಿಯಿಂದ ಈ ಪತ್ರವನ್ನು ಚಲಾವಣೆಗೆ ತಂದವರ ಉದ್ದೇಶವನ್ನು ಎಲ್ಲರೂ ತಮಗೆ ತಾವೇ ವಿಚಾರಿಸಿಕೊಳ್ಳಬಹುದು. ಹೆಚ್ಚು ಬರೆಯತಕ್ಕದ್ದಿಲ್ಲ. ಹೀಗೆ ಸುಳ್ಳು ಮೇಲೆ ಬನಾವಣೆ ಮಾಡುವುದು ಮತ್ತು ರುಜು ಸೃಷ್ಟಿಸಿ ಮಾಡುವವರು ಮುಂದೆ ಹೀಗೆ ಯಾವ ಕೆಲಸವನ್ನು ಮಾಡಲಿಕ್ಕೆ ಹಿಂಜರಿಯಾರು? ಈ ಪತ್ರದ ಉದ್ದೇಶ ತಮ್ಮನ್ನು ಮೇಲು ಮಾಡಿಕೊಂಡು ಅನ್ಯರನ್ನು ತಮ್ಮ ಕೆಲಸಕ್ಕಾಗಿ ನಿಂದಿಸುವುದು. ವಾಚಕರು ಪಕ್ಷಪಾತವಿಲ್ಲದೆ ವಿಚಾರಿಸಿ.

ಸಿ. ಐ ತಿಮ್ಮಯ್ಯ

ಗುರುಗಳು ಅನೇಕರು, ಶಿಷ್ಯರು ಕಮ್ಮಿ.

ಯಾವದಾದರೂ ಒಂದು ಧರ್ಮವನ್ನು ಕುರಿತು ಮಾತಾಡುವುದೇ ಇರಲಿ, ಸತ್ಯವನ್ನು ಕುರಿತು ಮಾತಾಡುವುದಾಗಲಿ ಅದರೆ ಹತ್ತು ಜನರು ಸೇರಿದ ಒಂದು ಸಭೆಗೆ ಈ ವಿಷಯಗಳ್ಯಾವದಾದರೂ ಚರ್ಚೆಗೆ ಬಂದಲ್ಲಿ ಪ್ರತಿ ಒಬ್ಬನೂ ಒಬ್ಬೊಬ್ಬನಿಗೆ ಮೇಲಾಗಿ, ಧರ್ಮವನ್ನೇ, ಸತ್ಯವನ್ನೇ, ಹೆಚ್ಚಾಗಿ ವರ್ಣಿಸುವರು. ಆದರೆ ಅವರ ಪೈಕಿ ಒಬ್ಬನಾದರೂ ಹೇಳಿದಂತೆ ಮಾಡುವವರಿದ್ದಾರೆಯೇ? ಇಲ್ಲ. ಇದಕ್ಕಾಗಿ ಹೆಚ್ಚಾಗಿ ಮಾತನಾಡುವುದರಿಂದಲೂ, ಉಡುಪುಗಳನ್ನು ಧರಿಸಿಕೊಂಡು ಮಹಾತ್ಮಗಾಂಧಿ, ಇಂತವರೇ ಮೊದಲಾದವರ ಉದಾಹರಣೆಗಳನ್ನು ಹೇಳಿಕೊಂಡು, ಆಚಾರವನ್ನೂ, ನಡತೆಯನ್ನೂ ಸರಿಯಾಗಿ ಇಟ್ಟುಕೊಳ್ಳದೆ ಬಾಯಿಯಲ್ಲಿ ಮಾತ್ರ ಡಾಂಭಿಕವೃತ್ತಿಯನ್ನು ತೋರ್ಪಡಿಸುತ್ತಾ, ನೀಚವೃತ್ತಿಯನ್ನು ಅವಲಂಬಿಸಿಕೊಂಡು ಮೇಲೆ ಮಹಾತ್ಮರ ಮಹಾತ್ಮ್ಯವನ್ನು ಪರಿಹಾಸ್ಯ ಮಾಡಿದಂತಾಗುವುದಿಲ್ಲವೇ? ಇದರ ಬದಲು ಅವರು ತಮ್ಮ ನಡತೆಯಿಂದಲೇ ಬೇರೆಯವರನ್ನು ಹಿಂಬಾಲಿಸುವಂತೆ ಮಾಡಿಕೊಂಡು ಮೆಲ್ಲಮೆಲ್ಲನೆ ತಮ್ಮ ಸುತ್ತುಮುತ್ತಲಿನ ಜನರನ್ನು ಹಿಂಬಾಲಿಸುವಂತೆ ಮಾಡಿ, ಅನಂತರ ಇದು ನಿಜವಾದ ಸ್ವರೂಪವಾದರೆ ದೇಶದವರೇ ಅವರನ್ನು ಹಿಂಬಾಲಿಸುವುದರಲ್ಲಿ ಸಂಶಯವೇತಕ್ಕೆ. ಇದರ ಬದಲು ದೇಶದವರಿಗೆ ತಾವೇ ಬುದ್ಧಿವಂತರೆಂದು ಬಾಯಿಮಾತಿನಿಂದಲೂ, ಉಡುಪಿನಿಂದಲೂ, ತೋರಿಸಬಾರದಾಗಿ ನನ್ನ ಕೋರಿಕೆ.

"ಪರೀಕ್ಷಕ"

REGISTRATION.

ರಿಜಿಸ್ಟ್ರಾರವರಲ್ಲಿ ವಿನಂತಿ—

ನಮ್ಮ ಈ ಕೊಡಗು ದೇಶವು ಕೇರಿಗಳಾಗಿಯೂ ಸಣ್ಣ ಸಣ್ಣ ಗ್ರಾಮಗಳಾಗಿಯೂ ಅನೇಕ ನಾಡುಗಳಾಗಿಯೂ ನಾಲ್ಕೈದು ತಾಲೂಗಳಾಗಿಯೂ ಇದ್ದು ಪ್ರತಿ ಗ್ರಾಮಗಳಲ್ಲಿಯೂ ಉಂಟಾದ ಲೇವಾದೇವಿಗಳಿಗೆ ಉಂಟಾದ ಆದಾರ ಪಾದಾರ ಯಾವ ಲಿಕಾವಟ್ಟುಗಳ್ಳವನೂ ಸನ್ [illegible] ಯಾ ಆ ಕಾಲದವರಿಗೂ ರಿಜಿಸ್ಟರಾಗುತ್ತಿರಲಿಲ್ಲ. ಇತ್ತಲಾಗಿ ಬರುತ್ತಾ ಬರುತ್ತಾ ಕಾನೂನ್ ಪ್ರಕಾರವಾಗಿ ಲಿಕಾವಟ್ಟುಗಳೆಲ್ಲಾ ರಿಜಿಸ್ಟರಾಗಿಯೇ ತೀರಬೇಕೆಂಬ ನಿರ್ಬಂಧವಾದ ನಂತರ ಪ್ರತಿ ನಾಡುಗಳಲ್ಲಿ ರಿಜಿಸ್ಟರಾಗುತ್ತಿತ್ತು. ನಂತರ ಸಬ್‌ರಿಜಿಸ್ಟ್ರಾರುಗಳವರು ಈಗ ಸಿಬ್ಬಂದಿ ಕೊರತೆಗಾಗಿ ಗ್ರಾಮಗಳ ನಾಡುಗಳ ಮತ್ತು ತಾಲೂಗಳನ್ನೇ ಬಂದಕೊಂಡು ಸೇರಿಸಿ ಸಬ್‌ರಿಜಿಸ್ಟ್ರಾರ ಆಫೀಸು ಸಹ ತೆಗದು ಉತ್ತರ ಕೊಡಗು, ದಕ್ಷಿಣ ಕೊಡಗು, ಎಂಬ ಎರಡು ತಾಲೂಕುಗಳಾಗಿ ಎರಡು ತಾಲೂಕು ಕಚೇರಿ ತಿರಸ್ತಿದಾರರುಗಳೇ ರಿಜಿಸ್ಟ್ರರಿಂದೂ ಇದಕ್ಕೆ ಪಡ್ಡೂಸಿಯಾಗಿ ರೈತರ ಕ್ಷೇಮಕ್ಕಾಗಿ ಪ್ರತಿ ನಾಡುಗಳ ಪಾಗಾರರು ರಿಜಿಸ್ಟ್ರೇಶನ್ ಬಗ್ಗೆ ಲಿಕಾವಟ್ಟುಗಳನ್ನು ಹೊಂದಿಕೊಳ್ಳುವಂತೆ ಈಗ ಕೆಲ್ಸಜರಗುತ್ತಿದೆ. ಇದೇನೋ ರೈತರಿಗೆ ಮುಖ್ಯವಾದ ಸುರಕ್ಷಿತವೇ ಸರಿ ಆದರೆ ಇದರಲ್ಲಿ ಇನ್ನೊಂದು ನ್ಯೂನತೆಯಿದೆ, ಅದನ್ನು ಘನಸರಕಾರದವರು ದಿವ ಚಿತ್ತಕ್ಕೆ ತಂದು ಸರಿಪಡಿಸಿಕೊಡಬೇಕಾದ ಈ ವಿನಂತಿಗೆ ಕಾರಣ [illegible] ಸ ಬ್‌ರಿಜಿಸ್ಟ್ರೇಶನ್ ರಿಕಾರ್ಡುಗಳಿದ್ದಾವ ಇ [illegible] ಮತ್ತು ವೀರರಾಜೇಂದ್ರಪ್ಪೇಟೆ ತಾಲ್ಲೂಕುಗಳಲ್ಲಿರುವ [illegible] ಗಳಲ್ಲಿ ಲಿಕಾವಟ್ಟು ತ್ವರಿತವಾಗಬೇಕಾದರೆ ಮುಂಡ್ರೋಟು ಗ್ರಾಮದವನು ಪಳೆ ನಾಕ್ಲು ಬಗ್ಗೆ ನಾಗೂ ವೀರರಾಜೇಂದ್ರಪ್ಪೇಟೆ ತಾಲೂಕಿಗೆ ಹೋಗದೆ [illegible] ಯು ಅಲ್ಲಿಗೆ ಹೋಗಿ ಅರಾರು ಪಳೆ ನಾಕ್ಲು ಪೇರೆ ಇಲ್ಲಿಯೇ ಕ್ರಯವಾದದನ್ನು ಅಲ್ಲಿ ರಿಜಿಸ್ಟರ್ ಬಗ್ಗೆ ಕೊಟ್ಟರೆ ತಾನು ರಿಜಿಸ್ಟರ್ ಮಾಡುವಲ್ಲಿ ನಾಪ್ರೋಕ್ಲ್ಲ ನಾಡಿಗೆ ಹೋಗನ್ನವರು ನಾಡುಬಾಗರರು ತೆಗದುಕೊಂಡರೂ ತಾಲೂ ಕಚೇರಿಗೇನ ಲಿಕಾವಟ್ಟು ರಿಜಿಸ್ಟರಿಗೆ ಪಾಕ್ಲು ಬಗ್ಗೆ ಕೆಳಹಬೇಕಲ್ಲವೇ ? ಲೆಕ್ಕವಗ್ಗರೆ [illegible] ಲೊನಿಂದಲೇ ಕಳುಹಿಸುವದಾಗಿದೆ ಆದದರಿಂದ ತಾಲೂಕು ತಿರಸ್ತದಾರರಾದ ಸಬ್‌ರಿಜಿಸ್ಟ್ರಾರ ಪಿಕೆ Jurisdiction ಪೂರ ತಾಲೂಗೆ ಸೇರಿದ ಲಿಕಾವಟ್ಟುಗಳು ಹಾಜರಾದರೆ ರಿಜಿಸ್ಟರ್ ಮಾಡುವಂತೆ ಹುಕುಂ ಆದರೆ ಬಹರೈತರು ತಾಬಹಳ ಮಾಡದೆ ಕೆಲ್ಸಜರಗಿಸಿಕೊಳ್ಳುತ್ತಿದ್ದರು ಇದರಿಂದ ಸರಕಾರಕ್ಕೆ ನಷ್ಟವೂ ಇಲ್ಲ ರೈತರಿಗೆ ಕಷ್ಟವೂ ಇಲ್ಲ. ಹೊಡ್ಡೆ ತಾಲೂ ತಿರಸ್ತಿದಾರು [illegible] ತಾಲೂ [illegible] ಸ ಎಸವ ಅರಾರು ಹಾಜರಾಗಿ [illegible] ರಿಜಿಸ್ಟರ್ ಮಾಡುವಂತೆ ಹುಕುಂ ಕೊಟ್ಟು ಈ ವಿವಿ [illegible] ಕ್ಕಟಿಸಬೇಕಾಗಿ ವಿನಂತಿ

[illegible]

AGRICULTURL.

ಕೊಡಗಿನ ವ್ಯವಸಾಯಬೋಧಿನಿ (Expriment of) [illegible] ಕೊಡಗಿನಲ್ಲಿ ಆದಂಥ ಕಸಬನ್ನು ಇದರಿಂದ ಬಳ್ಳೆ ಸ್ಥಿತಿಗೆ ತರಬೇಕೆಂಬ ಉದ್ದೇಶದಲ್ಲಿ ನಸ ಸರ [illegible] ವೀರರಾಜೇಂದ್ರಪ್ಪೇಟೆ ತಾಲೂಕು [illegible] ರು ಹಿಂದೆ ನೋಡಿದರೆ ಕಾಣದಂತಾ [illegible] ದ್ದಿ [illegible] ತಲೆಕಸ್ಸಿನಲ್ಲಿ ದೊಡ್ಡ [illegible] (300 ಬ) ಭೂಮಿಯನ್ನು ನಡುವ ಒಂದರ 350-0 0 ಗೇಣಿ -0-0 [illegible] ಯನ್ನು ಭೂಮಾಲೀಕನಿಗೆ ಹೋಗುವ [illegible] ಭೂಮಿಯನ್ನು ಮಾಡಿಕೊಂಡು 80 [illegible] 0 ಬೋ ರೂಪಾಯಿ ಸಂಬಳದ ಒಬ್ಬ ಎಗ್ರಿಕಲ್ಚರ್ [illegible] ಯಲ್ಲಿ ಪಾಸಾದವನನ್ನು ಅದರ ಕೈಕೆಳಗೆ 20 ರೂಪಾಯಿ ತಿಂಬಳದ ಒಬ್ಬ ಗುಮಾಸ್ತನನ್ನು ಇಟ್ಟು ಈ [illegible] ರೀತಿ ವ್ಯವಸಾಯ [illegible] ಎಂದರೆ [illegible] ನ್ನು ಬೆಳಸಿದನ್ನು ತನ್ನು ಈ ಲೇಖಕನು [illegible] ಕೆಗಿ ಅವಲೋಕಿಸಿದ ಮಾಡಿದಾಯಿತು

ಬೆಳಸಿಗಳ ಕ್ರಮ.

ಗೆಲವು ಗದ್ದೆಗಳಲ್ಲಿ ಒಂದು ಕಣೆ, ಎರಡು, ಮೂರು ನಾಲ್ಕು ಕಣೆ ಬೀಕಿಯವುಗಳಲ್ಲಿ ಮಾಮೂಲಾಗಿ ಪ್ಲಲ್ಲ ನಡುವ ನಾಟಿಯಂತೆಯೇ ನಟ್ಟಿರುತ್ತಾರೆ. ನಾಟಿಗಳು ಆಗಿಸ್ಟು ತಾರೀಕು 10 ರಲ್ಲೂ (ಕರ್ಕಾಟಕ ಮಾಸ 32) ಮತ್ತು ಆಗಿಸ್ಟು ತಾರೀಕು 29 ರಲ್ಲೂ (ಸಿಂಹಮಾಸ 11) ನಟ ನಟ್ಟಿರುತ್ತಾರೆ ಇವುಗಳ ಪರಿಣಾಮ ಅಂದರೆ ಈ ಲೇಖಕನು ಪರಿಶೋಧಿಸಿದ ತಾರೀಖು 6-10-23 (ಕನ್ಯಾಮಾಸ 19) ರಲ್ಲಿ ಕಂಡದರ ವಿವರ— ಆಗಿಸ್ಟು ತಾರೀಕು 10 ರ ನಾಟಿ —ಒಂದು ಕಣೆ (ಸಸಿ) ಇದು ನವರದಾಳು (ಸಹಜ ಆಗುಹಾನ ಬರಿಡಗೆ) ಈಗ 8; 6 ಕಡೆಗಳಾಗಿವೆ. ಇದರಂತೆ ಸಮರಾಶಿ ಆಗಿ ಅಂದರೆ ಚಟ್ಟಿದಾಳು, ನವರದಾಳು ಸಹ ಮಿಶ್ರದಿಂದ ಒಂದು ಕಣೆ ನಟ್ಟದ್ದು 12; 6; 4 ಆಗಿವೆ. ಚಟ್ಟಿದಾಳು (ದೊಟ್ಟ ಆಗಿ) ಎರಡು ಕಣೆ ನಟ್ಟದ್ದು ಈಗ 13; 8; 6; 4 ಸಮರಾಶಿ ಆಗಿ ಎರಡು ಕಣೆ ಈಗ 8; 6; 5; 3; 12, 3 ಕಣೆ, 11, 9, 8 7, 4 4 ಕಣೆ ಈಗ 16; 15; 12; 7; 6, ಈ ಮೇರೆ ಇವೆ. ಮಾಮೂಲ್ ನಾಟಿ ಅಂದರೆ ಕೊಡಗಿನಲ್ಲಿ ನಡುವಮೇರೆ ನಟ್ಟದರಲ್ಲಿ 14; 13; 12, 11; 8, ಒಂದೇ ಗದ್ದೆಯಲ್ಲಿ 5 ವಿಧದ ನಾಟಿ ಆಗಿಸ್ಟು ತಾ 29 ರಲ್ಲಿ ನಟ್ಟದರ ಪರಿಣಾಮ ಒಂದು ಕಣೆ ನಟ್ಟದರಲ್ಲಿ 5, 2, 6 4 5 ಎರಡು ಕಣೆ—5, 7, 7, 7 8 ಮೂರು ಕಣೆ—9, 9, 6 9, 4. ನಾಲ್ಕು ಕಣೆ—10, 10, 9, 11, 4 ಮಾಮೂಲ್—17 15, 10, 12, 11. ಈ ಮೇರೆ ಇರುತ್ತೆ 10-50 ಸೆಂಟ್ ಭೂಮಿಗೆ 4½ ಬಟ್ಟಿ (360 ಸೇರು) ಎತ್ತು ಬೀಜ ಹಾಕಿದರಲ್ಲಿ 20 ಸೇರು ಬೀಜದ ಪೈರು ಹಿತು [illegible] ಈ ನಾಲ್ಕುವರೆ ಬಟ್ಟಿ ಬೀಜ ಎಷ್ಟು [illegible] ಭಾಗದಲ್ಲಿ ಬಿತ್ತಿದೆಂದು ಗೊತ್ತು ಕಂಡುಹಿಡಿಯುವದಿಲ್ಲ ಚಟ್ಟಿದಾಳು ಎರಡು ಕಣೆ, ನವರದಾಳು ಒಂದು ಕಣೆ ನಟ್ಟಿರೆ. ಅದೆಲ್ಲ [illegible] ಒಂದು ಕಣೆ ನವರದಾಳು ಒಂದ ಕಣೆ ಅದರಂತೆ ಎರಡು [illegible] 1 2 3-4 ಸರಿಯಾಗಿ ನಡತೋಕಿತ್ತು. ಅಗ್ಗೆ ಫಲ ಗೊತ್ತಾಗುತ್ತಿತ್ತು. ಇದೆಲ್ಲಾ ಈ ಮೊದಲೇ ನಟ್ಟು ಪರೀಕ್ಷಿಸಿ ಆಗಿರುತ್ತೆ ಈ ಲೇಖಕನು ಇದೇ ಗದ್ದೆಯ ಸಳಿಕಟ್ಟಿನಲ್ಲಿ ವಿಧವಿಧವಾದ ಪೈರುಗಳನ್ನು ನೋಡುವಾಗಲೂ ಬೆಳೆಯಲ್ಲೂ ನಿರ್ದಿಷ್ಟವಾಗಿ ಎಳೆಯಲ್ಲೂ ಸಹ ಸರಕಾರ ಮಾಡುವಮೇರೆ ತನಗಿದ್ದ ಉದ್ಯೋಗದ ಜೊತೆಯಲ್ಲಿ [illegible] ಪ್ರತಿಫಲವಿಲ್ಲದೆ ಈ ಕೆಲಸ ನಡಿಸಿರುವದ [illegible] ಹೀಗಲ್ಲಾ ಮಾಡಬೇಕಾದ್ದು [illegible] ಕೊಡವಿನ ಗದ್ದೆಯಲ್ಲಿ [illegible] ರೈತರು [illegible] ಆಗಿಂದಾಗ್ಗೆ [illegible] ಸವರದಾಳು ಸಸಿ ಸರಿಯಾದ ಪದ್ಧತಿಯನ್ನು ಬಿಟ್ಟು ಚಟ್ಟಿದಾಳು ಸಸಿ ನಡುವಂತೆಯೂ [illegible] ಪಟ್ಟದಾಳು ಸಸಿ [illegible] ಎಷ್ಟು [illegible] ಎಷ್ಟು ಬೀಜ ಬಿತ್ತಿದರೆ ಆ ಬಿತ್ತೋಣವನ್ನು [illegible] ಮಾಂತರದಲ್ಲಿ ಅರ್ಧ ಎಕರೆ ಭೂಮಿಯನ್ನು [illegible] ಕೊಟ್ಟು ರೈತರಿಂದ [illegible] [illegible] ಕೊಟ್ಟು [illegible] ಸ್ಥಿತಿಯನ್ನು ಉನ್ನತಿಗೆ [illegible] ಮಾಡಿದುವಮೇರೆ [illegible] ಕೆಳದ ಮೂಲೆಯಲ್ಲಿ ಈ [illegible] ರೈತರ [illegible] ಒಂದು ಆವರು ಇದ [illegible] ಸಂದರ್ಭ [illegible] ಬೇಕಾಗುತ್ತೊ ತಿಳಿಯದು ಇದಕ್ಕೆ [illegible] ಅರ್ಥ [illegible] ಸಹ ತಿಳಿದು ಸರಕಾರ [illegible] ನೋಡಿದರುದು ಸರಕಾರದವರು [illegible] ರೈತರ ಕ್ಷೇಮ [illegible] ಈ ಲೇಖಕನು [illegible] ಗೊಂಡು ಪ್ರಾರ್ಥಿಸಿರುವದಾದ ಈ ಬಾಕಿ ಹೊಂದಿಸ ಬೇಕಾಯಿತು.

ಬೇಗದ ಶಿವಶಂಕರ.

ಮಂಗಳೂರಿನ ಕೊಡಗಿನ ವಿದ್ಯಾರ್ಥಿ ಸಭೆ.

ಈ ವರ್ಷದ ಪ್ರಾರಂಭದಲ್ಲಿ ಮಂಗಳೂರಿನಲ್ಲಿಯು ಕೊಡಗಿನವರು ನನ್ನ [illegible] ಒಂದ [illegible] ಮಹಾಸೇ [illegible] ಪ್ರೋತ್ಸಾಹಿಸಲ್ಪಟ್ಟು ಒಂದು, ಎಸೋಸಿಯೇಶನ್ [illegible] ಮಾಡದೆ ತಿಳಿಸಲ್ಪಟ್ಟಿದೆ. ಈ [illegible] ಕಾರ್ಯದರ್ಶಿಯು, ಅವಿಶ್ರಾಂತರ [illegible] ಮಂಗಳೂರಿನ ವಿದ್ಯಾರ್ಥಿಗಳಿಗೆ ಒಂದು ಮನೆ ಮತ್ತು ಅವಕ್ಕೆ ಬೇಕಾದ ಸಾಮಾನುಗಳನ್ನು [illegible] ದಯಸಾಗುವ [illegible] ಸಹಾಯ ಮಾಡಬೇಕೆಂದು [illegible] ಸಭೆಯಲ್ಲಿ ಮಂಜೂರಾದ ಠರಾವೇನೆಂದರೆ—

"That the association appeals to the country to help the movement to establish a permanet hostel in Mangalore for the use of students going from Coorg"

ತರ್ಜುಮೆ :—"ಮಂಗಳೂರಿನಲ್ಲಿರುವ ಕೊಡಗು ದೇಶದ ವಿದ್ಯಾರ್ಥಿಗಳಿಗೆ ಒಂದು ಶಾಶ್ವತವಾದ ಮನೆಯನ್ನು ಮತ್ತು ಅದಕ್ಕೆ ಅವಶ್ಯವಿರುವ ಸಾಮಾನುಗಳನ್ನು ಕೊಂಡುಕೊಳ್ಳಲು ದೇಶದವರೆಲ್ಲರು ದ್ರವ್ಯಸಹಾಯ ಮಾಡಬೇಕೆಂದು ಅವಿಶ್ರಾಂತರ ಕೋರಿಕೆಯಾಗಿದೆ." ಈ ಮೇರೆ ಈ ಸಭಾಮಾಡಿದ ಸಹಾಯಕರ ಹೆಸರು ಕೆಳಗೆ ಕೊಡಲ್ಪಟ್ಟಿದೆ

ಮ್ಹಾರಾ ರಾ ಕೇ. [illegible] ನವರು	೫	೦	೦
,,	ಜ ಉತ್ತಪ್ಪನವರು	೩	೦	೦
,,	ಬೇ ಚಂಗಪ್ಪನವರು	೨	೦	೦
,,	ಕೇ ಐಯ್ಯಣ್ಣನವರು	೨	೦	೦
,,	ಪ್ರ ಮುದ್ದಪ್ಪನವರು	೧	೦	೦
,,	ಪ ಮುತ್ತಣ್ಣನವರು	೧	೦	೦
,,	ಪ. ಚಂಗಪ್ಪನವರು	೧	೦	೦
,,	ಚ ಮುತ್ತಣ್ಣನವರು	೧	೦	೦
,,	ಜ ಮೊಣ್ಣಪ್ಪನವರು	೧	೦	೦
,,	ಬಿ ಕುಟ್ಟಪ್ಪನವರ ಪತ್ನಿ	೧	೦	೦
,,	ಟಿ ಪೊನ್ನಪ್ಪನವರು	೧	೦	೦
,,	ಮ. ಸುಬ್ಬಯ್ಯನವರು	೦	೮	೦
,,	ಕೆ ಕುಟ್ಟಪ್ಪನವರು	೦	೮	೦
,,	ಸಹ ಅಭಿಲಾಷಿ	೦	೮	೦
,,	ನು ಅಪ್ಪಯ್ಯನವರು	೦	೮	೦
,,	ತಿ ಕಾರ್‍ಯಪ್ಪನವರು	೦	೮	೦
,,	ಪ ಪೂವಯ್ಯನವರು	೦	೮	೦
,,	[illegible] ಪ್ಪನವರು	೦	೮	೦
,,	ಬಿ, ಪೂವಯ್ಯನವರು	೦	೮	೦
,,	[illegible] ಪ್ಪನವರು	೦	೮	೦
,,	ಕೆ [illegible] ಯ್ಯನವರು	೦	೮	೦
,,	ಪ ತಿಮ್ಮಯ್ಯನವರು	೦	೪	೦
,,	[illegible] ಯ್ಯನವರು	೦	೪	೦
,,	ಐ [illegible] ಪ್ಪನವರು	೦	೪	೦
	ಒಟ್ಟು ...	೨೩	೧೨	೦

ಇನ್ನು ಕೆಲವು ಮಹನೀಯರು ಹಣಸಹಾಯ ಮಾಡುವೆವೆಂದು ವಾಗ್ದಾನಮಾಡಿರುವರು. ಅವರು ಸದ್ಯದಲ್ಲಿಯೇ ಕೆಳಗೆ [illegible] ವಿಳಾಸಕ್ಕೆ ಕಳುಹಿಸುವರೆಂದು ಭರವಸೆ ಇದೆ.

ಅಲ್ಲದೆ ಮಹಾ ರಾ ರಾ ಮು ಕುಟ್ಟಪ್ಪನವರು,
,, ಕೇ ಕಾರ್‍ಯಪ್ಪನವರು,
,, ಪ ಮಾದಪ್ಪನವರು,
,, ಕ. ನಂಜಪ್ಪನವರು,

ನಾಲ್ವರು ಪರೋಪಕಾರಾರ್ಥವಾಗಿ ಹಣ ವಸೂಲು ಮಾಡುತ್ತಿರುವರು ಆದರೆ ಇವರು ಮಾಡಿದ ಕೆಲಸದ ವಿಷಯವೇ ತಿಳಿಯದು. ಈ ಪತ್ರಿಕೆಯನ್ನು ನೋಡಿದ ಕೂಡಲೆ ಅವರ ವಿಳಾಸಕ್ಕೆ ಮೊಬಲಗನ್ನು ಕಳುಹಿಸು ವುದು ಅಲ್ಲದೆ ಒಂದು ಕಾಗದವನ್ನು ಬರೆಯಬೇಕೆಂದು ಕೇಳಿಕೊಳ್ಳುವೆನು

ಮಂಗಳೂರಿನಲ್ಲಿ ನಮ್ಮ ದೇಶೀಯರಿಂದ ವಸೂಲಾದ ಹಣ [illegible] ಒಟ್ಟಾರೆ ೬ ಸಭೆಯು ಬಾಕ್ಕಿ ವಸೂಲಾದದ್ದು [illegible] ಮಂಗಳೂರಿನಲ್ಲಿ ಮೊದಲಿನ ಸಭೆಯಲ್ಲಿಯೇ ನಿಶ್ಚೈಸಿದಂತೆ [illegible] ರೂಪಾಯನ್ನು ದರ್ಜಿಕ್ಕೆ ಮೊದಲೇ ಮನೆಬಾಡಿಗೆಯಾಗಿ ಕೊಡಲ್ಪಟ್ಟಿತು. [illegible] ಕಳೆದನಂತರ ಕೊಂಚವೇ ಹಣವಿದ್ದದ್ದನ್ನು ಕಂಡು ಅದರಲ್ಲಿ [illegible] ರೂಪಾಯಿಯನ್ನು ಪ್ರಸಕ್ತ ಒಂದು ತಿಂಗಳ ಮನೆಬಾಡಿಗೆಗಾಗಿ ಕೊಡಲ್ಪಟ್ಟಿತು. ಇತರ [illegible] ೧—೧೨—೬. ಉಳಿದ ೩—[illegible]—೬. [illegible] ರರ ಕೈಯಲ್ಲಿದೆ.

ಈ ವರ್ಷ ಇರುವ ಮನೆಗೆ ಅಡಿಗೆ ಮತ್ತು ಬೇರೆ ಸಾಮಾನುಗಳು ಗವರ್ನಮೆಂಟು ಕಾಲೇಜಿನಿಂದಲೇ ಕೊಡಲ್ಪಟ್ಟಿದೆಯಾದರೂ, ಆ ಕಾಲೇಜಿನ ದಯಾಳುವಾದ ಪ್ರಿನ್ಸಿಪಾಲ್ ಜೆ ಕೆ ಚೆಟ್ಟೂರರವರು ಮೂಲಂಗಿ ಎಲ್ಲೂಷಿಯನ್ ಕಾಲೇಜಿನವನ್ನು ಮತ್ತು ಒಬ್ಬ ಕನ್ನರ ಕೈಸ್ತರಿನವರನ್ನು, ಇತರ [illegible] ತೆಗೆದುಕೊಳ್ಳಬಾರದು ಅಪ್ಪಣೆಕೊಟ್ಟು ಹಾಗೂ ಈ ವರ್ಷದ ಮನೆಯಲ್ಲಿ ಒಟ್ಟು [illegible] ಇರಿಸಿದ್ದಾರೆ.

ಬರುವ ವರ್ಷಕ್ಕೆ ಈ ಸಭೆಯ ಉದ್ಯೋಗಸ್ಥರು ಇನ್ನು ಮುತುವರ್ಜಿಯಿಂದ ಕೆಲಸಮಾಡಿ ಅನುಕೂಲತೆಗಳನ್ನು ಖಂಡಿತವಾಗಿಯೂ ಹೆಚ್ಚಿಸುವರು

ಈ ತಿಂಗಳಲ್ಲಿ ಕೈಲುಪೋದಿಗೆ ಎಲ್ಲರೂ ಸೇರಿದ್ದಾಗ ಮೇಲೆ ಬರೆದುದನ್ನು ಓದಿ ಹೇಳಲು ಎಲ್ಲವೂ ಸರ್ವಸಮ್ಮತವಾಗಿದೆಯೆಂದು ಒಪ್ಪಲಾಯಿತು. ಈ ವರ್ಷ ಇಬ್ಬರು ಕಮಿಟಿ ಮೆಂಬರರು ಸಂದೇಶಕ್ಕೆ ಹೋದವರಾದ ಪಿ. ಯಸ್. ದೇವಯ್ಯನವರನ್ನೂ ಮತ್ತು ಸಿ. ಯಸ್. ಮುಂದಣ್ಣನವರನ್ನೂ ಕಮಿಟಿ ಮೆಂಬರರಾಗಿ ಚುನಾಯಿಸಲ್ಪಟ್ಟಿತು.

ಅನಂತರ ಸಭೆಯು ಮುಕ್ತಾಯವಾಯಿತು.

"ಕಾರ್ಯದರ್ಶಿ"

District Board Schools

ವಿದ್ಯಾ ಇಲಾಖೆ ಮುಖಂಡರು ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳಿಗೆ ಸೂಚನೆ—ಅಯ್ಯಾ, ಈಗ ಕೊಡಗಿನಲ್ಲಿ ಅನೇಕ ಪ್ರೈಮರಿ ಶಾಲೆಗಳಿವೆ. ಈ ಶಾಲೆಗಳನ್ನೆಲ್ಲಾ ಬಂದೆರಡು ಸುಪರ್‌ವೈಸರ್‌ಗಳಿಂದ ವಿದ್ಯಾಭಿವೃದ್ಧಿ ಮತ್ತು ಉಪಾಧ್ಯಾಯರು ಕಲಿಸಬೇಕಾದ ನಿಯಮಗಳನ್ನು ಹೇಳಿಕೊಡಲಿಕ್ಕೆ ಸಹ ಅಸಾಧ್ಯವೆಂದು ಗ್ರಾಮಾಂತರಗಳಲ್ಲಿ ಕೆಲವು ಮಾತು ಬಾರದಿಗಳಾದ ವಿದ್ಯಾಹೀನರನ್ನು ಕೆಲವು ವಿದ್ಯಾವಂತರಾದ ತಮ್ಮ ಮನೆ ಬಿಟ್ಟು ಹೊರಡದವರನ್ನು ಸಹ ಸ್ಕೂಲ್ ಪಂಚಾಯಿತಸ್ತರನ್ನಾಗಿ ನೇಮಿಸಿರುತ್ತಾರೆ. ಈ ಚುನಾವಣೆಯು ನಾಡುಕಚೇರಿಯವರು ಮಾಡುವದಾಗಿದೆ. ಕೆಲವರು ಇಟ್ಟಬಿಟ್ಟ ಚಾಕರಿ ಮಾಡಿಲ್ಲದವರಿಗೆ ಈ ಮೆಂಬರತನ ದೊರೆತರೆ ಈ ನಿರ್ಬಂಧದಿಂದ ಪಾರಾಗಬಹುದೆಂದು ನಾಡುಕಚೇರಿಯವರ ದಯೆಯಿಂದ ಹೊಂದಿರುವದಾಗಿಯೂ ಸಹ ತಿಳಿಯುತ್ತೆ. ಹ್ಯಾಗೂ ತಮ್ಮ ಈ ಲೇಖಕನು ನೋಡಿದ ಮತ್ತು ತಿಳಿದಮಟ್ಟಿಗೆ ಶಾಲೆಗಳಲ್ಲಿ ನಾಡುಕಚೇರಿಗಳಲ್ಲಿ ಕನ್ನಡಿ ಕಟ್ಟಿ ಹೆಸರು ತೂಗಹಾಕಿದ್ದೇ ಶಿವಾಯಿ ಶಾಲೆಗೆ ಹೋಗಿ ಯಾ ಮಾಷ್ಟರುಗಳು ನ್ಯಾಯವಾಗಿ ನಿಶ್ಚ(?) ಕಾಲಕ್ಕೆ ಸರಿಯಾಗಿ ಶಾಲೆಗೆ ಬಂದು ಕಾಲಕಳೆಯದೆ ಸರಿಯಾಗಿ ತಮ್ಮ ತಮ್ಮ ಕೆಲ್ಸಕಾರ್ಯಗಳಲ್ಲೇ ಮಗ್ನರಾಗಿರುತ್ತಾರೋ ಯಾ ಅನಾವಶ್ಯವಾಗಿ ಇತರರು ಯಾರಿಂದಲೂ ಶಾಲೆಗೆ ಬಂದರೆ ಅವರೊಡನೆ ಸರಸ ಸಲ್ಲಾಪಗಳಿಂದ ದಿನ ನೂಕಿ ಸಂಬಳ ಮಾತ್ರ ಹೊಂದುವದರಲ್ಲಿದ್ದು ಮಕ್ಕಳಿಗೆ ವಿದ್ಯೆಯೂ ಇಲ್ಲ, ಮನೆಯಲ್ಲಿ ತಂದೆ ತಾಯಿಗಳಿಗೆ ಕೆಲ್ಸಕಾರ್ಯಕ್ಕೂ ಇಲ್ಲದೆ ಮಾಡುತ್ತಾರೋ ಮತ್ತು ಶಾಲೆಗೆ ಹುಡುಗರು ಸರಿಯಾಗಿ ಬರುತ್ತಾರೋ, ಗ್ರಾಮಾಂತರಗಳಿಂದ ಶಾಲೆಗೆ ಕಳಿಸಲು ಯೋಗ್ಯರಾದ ಮಕ್ಕಳನ್ನು ತಂದೆ ತಾಯಿಗಳು ಕಳುಹಿಸುತ್ತಾರೋ, ಕಳುಹದೆ ಇದ್ದರೆ ಸದರಿಯವರಿಗೆ ಬೋಧನೆ ಕೊಟ್ಟು ಶಾಲೆಗೆ ಬಾಲಬಾಲಿಕೆಯರನ್ನು ಕಳುಹುವಂತೆ ಮಾಡುವದು, ಶಾಲೆಗೆ ಬೇಕಾದ ರಿಪೇರಿ ವಗೈರೆ ಕೆಲ್ಸಕಾರ್ಯಗಳ ಬಾಬಿನಲ್ಲಿ ಶಾಲಾ ಮುಖಂಡರಿಗೆ ಬರೆಯುವದು ಈ ಬಾಬಿಗಾಗಿ ಶಾಲೆಯಲ್ಲಿ ಇಟ್ಟಿರುವ ರಿಜಿಸ್ಟರಿನಲ್ಲಿ ಬರೆಯಬೇಕು ಎಂಬ ಯಾವ ಸಂಗತಿಯೂ ಸಹ ಶಾಲಾ ಮೆಂಬರುಗಳ ಕೆಲ್ಸವೆಂಬದು ಅವರಿಗೆ ಸದ್ಯ ತಿಳಿಯದೆ ಇರುವವರು ಸಹ ಶಾಲಾ ಮೆಂಬರುಗಳಾಗಿರುತ್ತಾರೆ.

ಈಗಲಾದರೋ ಸರಕಾರದವರ ಸಿಬ್ಬಂದಿ ಕೋತೆಯ ದೆಸೆಯಿಂದ ಅನೇಕ ಪಿಂಚಿನ್‌ದಾರು ಮತ್ತು ಕೆಲಸದಿಂದ ಬಿಡುಗಡೆ ಆದವರೂ ಸ್ಕೂಲ್‌ಫೈನಲ್ ಆಗಿ ಉದ್ಯೋಗವಿಲ್ಲದೆ ಮನೆಯಲ್ಲಿ ಇರುವ ಯುವ್ವನಸ್ತರು ಸಹ ಅನೇಕರಿದ್ದಾರೆ. ಇದಲ್ಲದೆ ಸಹಕಾರಿ ತತ್ವಗಳನ್ನರಿತ ಸಹಕಾರಿ ಸಂಘಗಳ ಪ್ರೆಸಿಡೆಂಟರುಗಳು ಸಹ ಇರುತ್ತಾರೆ. ಇಂಥಾವರನ್ನು ಪ್ರತಿ ಶಾಲಾ ಮೆಂಬರುಗಳಾಗಿ ಮಾಡುವಂತೆಯೂ.

ಕೆಲವು ಶಾಲೆಗಳಲ್ಲಿ ಹುಡುಗರು ಕಮ್ಮಿ ಹುಡುಗಿಯರು ಹೆಚ್ಚು. ಅಂಥಾ ಶಾಲೆಯ ಸುತ್ತಮುತ್ತಲಿರುವ ಕೃಷಿಕರು ಬಡವರೆಂದೇ ಭಾವಿಸಿ ಫೀಜು ಮಾಫು ಮಾಡಿದರೆ ವಿದ್ಯಾರ್ಥಿಗಳು ಹೆಚ್ಚುವರು. ಇದಕ್ಕೆ ಸಾಮ್ಯವಾಗಿ ಅಕ್ಕಟೆ ಸ್ಕೂಲಿನಲ್ಲಿ ಈಗ ನಾಲ್ಕಾರು ವರ್ಷಗಳ ಹಿಂದೆ ಬಾಲಿಕೆಯರ ಸಂಖ್ಯೆ ಹೆಚ್ಚು ಬಾಲಕರ ಸಂಖ್ಯೆ ಕಮ್ಮಿ. ಅವನು ಸಹ ಸ್ಕೂಲ್ ಫೀಜು ಕೊಡದೆ ನ್ಯಾಯವಾದ ಹಾಜರಿಯೇ ಇಲ್ಲದೆ ೯ ಹುಡುಗಿಯರು ೩ ಹುಡುಗರಿದ್ದರು. ಸ್ಕೂಲ್ ಫೀಜು ಮಾಫು ಮಾಡಿದರಿಂದ ಈಗ ಸಾಧಾರಣ ೩೦ ವಿದ್ಯಾರ್ಥಿಗಳಿದ್ದಾರಂತೆ. ಆದದರಿಂದ ಯಾವ ಸ್ಕೂಲಿನಲ್ಲಿ ಹುಡುಗರು ಕಮ್ಮಿ ಹುಡುಗಿಯರು ಹೆಚ್ಚು ಅಂಥಾ ಸ್ಕೂಲ್‌ಗಳಿಗೆ ಸ್ಕೂಲ್ ಫೀಜು ಕಮ್ಮಿ ಯಾ ಮಾಫು ಮಾಡಬೇಕು.

ಇನ್ನು ಕೆಲವು ಶಾಲೆಗಳಲ್ಲಿ ಹುಡುಗ ಹುಡುಗಿಯರ ಹಾಜರಿಯೇ ಕಮ್ಮಿ ಗ್ರಾಮಾಂತರಗಳನ್ನು ತಿರುಗಿದರೆ ಮಕ್ಕಳಿದ್ದಾರೆ ಶಾಲೆಗೆ ಕಳಹದ ಸಂಗತಿಯಾಗಿ ವಿಚಾರಿಸಿದರೆ ಉಪಾಧ್ಯಾಯರು ಶಾಲೆಯಲ್ಲಿ ಪಾಠ ಹೇಳುವದರ ಬದಲು ಕೋಲಾಟ (ಸರಿಯಾಗಿ) ಹುಡುಗರೊಂದಿಗೆ ಆಡುತ್ತಾರಂತೆ. ಕೋಲು ಉಪಯೋಗಿಸದೆ ವಿದ್ಯೆ ಕಲಿಸಲು ಅಯೋಗ್ಯರಾದ ಮಾಸ್ಟರ್ ಯಾ ಟೀಚರನ್ನು ಶಾಲೆಯಿಂದ ಗಡೀಪಾರ್ ಮಾಡಬೇಕಲ್ಲವೆ? ಈಗ ಸಂಬಳ ಹೆಚ್ಚು, ಸ್ಕೂಲ್‌ಫೈನಲ್ ಆಗಿ ಉದ್ಯೋಗ ದೊರೆಯದೆ ನರಳುವವರೂ ಹೆಚ್ಚು. ಈ ಸಮಯದಲ್ಲಿ ನ್ಯಾಯವಾದ ಕೋಲಾಟ ಇಲ್ಲದೆ ಕಲಿಸುವ ಮಾಸ್ಟರುಗಳು ಎಷ್ಟೋ ದೊರೆಯಬಹುದು.

ಇನ್ನೊಂದು ನ್ಯೂನತೆಯಿದೆ. ಅದೇನೆಂದರೆ ಕೆಲವು ಶಾಲೆಗಳಲ್ಲಿ ಸ್ಕೂಲ್ ಹೆಡ್‌ಮಾಸ್ಟರಿಂದ ಹಿಡಿದು ಬಾಲಶಿಕ್ಷ ಮಾಸ್ಟರ್‌ವರೆಗೆ ಕೊಡಗರೇ ಆದುದರಿಂದ ಇವರುಗಳು ಶಾಲೆ ತೆರೆದನಂತರ ಸಹ ಕೊಡಗು ಭಾಷೆಯನ್ನೇ ಆಡುವರು. ಇವರು ಕಲಿಸುವ ಭಾಷೆ ಕನ್ನಡ ಮತ್ತು ಇಂಗ್ಲಿಷ್. ಇದು ತಪ್ಪಲ್ಲವೇ? ಮಕ್ಕಳಿಗೆ ಓದುವದರಿಂದ ಅರ್ಥವಾಗುವದಿಲ್ಲ, ಪ್ರಸ್ತಾಪಗಳಾದ ಅನೇಕ ವಿಧದಲ್ಲಿ ಅರ್ಥವಾಗುತ್ತೆ. ಅರ್ಥವಿಲ್ಲದ ಕೆಲ್ಸ ಸರ್ವತ ವ್ಯರ್ಥ. ಆದಕಾರಣ ಶಾಲೆ ತೆರೆದನಂತರ ಯಾವ ವಿಧದಲ್ಲಿ ಸ್ವಭಾಷೆಯನ್ನಾಡದೆ ಯಾವ ವಿದ್ಯೆಯನ್ನು ಕಲಿಸುತ್ತಾರೋ ಅದೇ ಭಾಷೆಯನ್ನಾಡುವಂತೆ ಮಾಡಬೇಕಲ್ಲವೇ?

ಈಗ ಶಾಲಾ ಉಪಾಧ್ಯಾಯರುಗಳಿಗೆ ವೇತನ ಹೆಚ್ಚಿಸಿದರೂ ಕೂಡ ಪೂರ್ವದಲ್ಲಿ ವೇತನ ಕಮ್ಮಿ. ಶಾಲಾ ಇಲಾಖೆಗೆ ಜನ ಸಿಕ್ಕುವದು ಅತಿ ಕಷ್ಟವಾದ್ದರಿಂದ ಅವರವರ ಮನೆಯಿಂದಲೇ ಬಂದು ಕೆಲ್ಸನಡಿಸುವಂತಾದಾಗಿತ್ತು ಮತ್ತು ವಿದ್ಯೆಯ ಬೆಲೆಯೇ ತಿಳಿದಿರಲಿಲ್ಲ. ಶಾಲೆಗೆ ಮಾಸ್ಟರ್ ಬರಲಿಲ್ಲ ಮಾಸ್ಟರ್ ಪಾಠ ತೆಗೆಯಲಿಲ್ಲವೆಂದರೆ ಮಕ್ಕಳಿಗೆ ಬಹಳ ಖುಷಿಯಾಗಿತ್ತು. ಈಗಲಾದರೋ ಹುಡುಗರು ಮಾಸ್ಟರ್ ಬರಲಿಲ್ಲ ಬಂದರೂ ಪಾಠ ಮಾಡಲಿಲ್ಲ ಎಂಬದಾಗಿ ತಂದೆ ತಾಯಿಗಳಿಗೆ ದೂರು ಹೇಳುತ್ತಾರಲ್ಲದೆ ತಂದೆ ತಾಯಿಗಳು ಸಹ ಶಾಲೆಯಲ್ಲಿ ಈ ದಿನ ಏನು ಕಲಿಸಿದರು. ಎಂಬ ವಗೈರೆಯಾಗಿ ಕೇಳುತ್ತಿದ್ದಾರೆ.

ಮಾಸ್ಟರುಗಳು ಅವರ ಮನೆಗಳಿಂದ ಬರುವ ಸಂದರ್ಭ ಎಲ್ಲರಿಗೂ ತಿಳಿದ ಸಂಗತಿಯೇ ಆಗಿರುತ್ತೆ. ಕೆಲವು ಹಿಂಬಿಟ್ಟು ಕೆಲವುಸಮಯ ನಂಬರಿಪ್ಪರು ಓದಿದಾಗ್ಯೆ ಈ ಮೇರೆ ಗೈರಾಜರಾಗಿ ವರ್ಷಕ್ಕೆ ನ್ಯಾಯವಾದ ಬರಹ ೩ ತಿಂಗಳೂ ಸಹ ಇಲ್ಲ. ಆದುದರಿಂದ ಅವರ ಮನೆಯಿಂದಲೇ ಬಂದು ಓದಿಸುವ ಸಂದರ್ಭದಲ್ಲಿ ಮಾಸ್ಟರ್ ಕೆಲ್ಸ ಕೊಡಬಾರದು. ಹ್ಯಾಗೂ ಹೆಡ್‌ಮಾಸ್ಟರಾದರೂ ಬ್ಯಾರೆ ಶಾಲೆಯ ಸಮೀಪ ಬಿಡಾರ ಮಾಡಿಕೊಂಡು ಇರುವವರೇ ಆಗಬೇಕು. ಟೀಚರ್‌ಗಳೂ ಅದೇ ಮೇರೆ ಆಗಬೇಕು. ಆದರೆ ಹೆಡ್‌ಮಾಸ್ಟರ್ ಪರ ನಾಡಿನವರಾಗಿ ಸರಕಾರಿ ರಜದಲ್ಲಿ ಮಾತ್ರ ಹೋಗುವವರಾಗಿ ಶಾಲಾ ಕಮಿಟಿಯವರು ಆಗಿಂದಾಗ್ಯೆ ಶಾಲಾ ವಿಚಾರ ತೆಗದುಕೊಳ್ಳುವವರಾದರೆ ಸದ್ಯಕ್ಕೆ ಟೀಚರ್‌ಗಳು ಅವರ ಮನೆಯಿಂದಲೇ ಬರುವವರಾದರೂ ಚಿಂತೆಯಿಲ್ಲ.

ಈ ಮೇಲ್ಕಂಡ ಸೂಚನೆಗಳನ್ನು ವಿದ್ಯಾ ಇಲಾಖೆ ಮೇಲಧಿಕಾರಿಗಳೂ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ಸರಿಪಡಿಸದಿದ್ದರೆ ಬಡರೈತರಿಂದ ಒಪ್ಪದ ದುಡ್ಡು ವಸೂಲ್ ಮಾಡಿ ಶಾಲಾ ಮಾಸ್ಟರ್‌ಗಳ ಸಾಕುವದೇ ಹೊರ್ತು ಮಕ್ಕಳಿಗೆ ನ್ಯಾಯವಾದ ವಿದ್ಯೆ ಕೊಟ್ಟಂತಾಗುವದಿಲ್ಲ.

ಮಕ್ಕಳತಂದೆ

NOTICE.

Notice is hereby given for the information of the public that a Horticultural Poultry and dog show will be held at Mercara about the end of February 1924, and prizes will be awarded to the best exhibits The exact date of the show and other particulars will be notified in due course.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ.

1924 ನೆ ಇಸವಿ ಫೆಬ್ರವರಿ ತಿಂಗಳಲ್ಲಿ ಮಡಿಕೇರಿಯಲ್ಲಿ ಸಾಕಿದ ಕೋಳಿ ಕಾಡುಪಕ್ಷಿ, ಹೂವು ಮತ್ತು ಹಣ್ಣು ಹಂಪಲುಗಳ ಪ್ರದರ್ಶನ ನಡೆಸಲ್ಪಡುತ್ತೆ. ಉತ್ತಮತರದ ವಸ್ತುಗಳಿಗೆ ಇನಾಮುಗಳು ಕೊಡಲ್ಪಡುವವು. ಪ್ರದರ್ಶನದ ತಾರೀಖು, ವಗೈರೆ, ತಪಶೀಲುಗಳನ್ನು ಮುಂದಕ್ಕೆ ಪ್ರಕಟಿಸಲ್ಪಡುತ್ತೆ.

Municipal Office, Mercara, 15-10-23. (Sd.) K. Kuttayya, President.

HEALTH IS WEALTH.

WANTED all to improve health strength and vitality and thus save our nation from physical degeneracy. Send half-anna stamp and get 13 specimen photographs with full particulars from

Director Physical Culture,
P.O Basavanagudi,
BANGALORE CITY.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು ಡಾಕ್ಟರ್ ಯಂ. ರಾಮರಾವ್, ಎಪ್. ಎಲ್. ಸಿ ಯವರು

ಆರೋಗ್ಯಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸೆಯ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ

ಒಂದು ಸಚಿತ್ರ ಮಾಸಪತ್ರಿಕೆ

ಈ ನಮ್ಮ ಮೊದಲನೇ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು

ಜನಾಭಿಪ್ರಾಯಗಳು—1 ಸ್ವವಿಷಯ, 2. ಆರೋಗ್ಯವೇ ಭಾಗ್ಯ, 3. ಮಲೇರಿಯಾ ಎಂಬ ಮೊರೆಜ್ವರಗಳ ನಿವಾರಣೆ, 4. ಮರುಕೊಳಿಸುವ ಜ್ವರ, 5 ಗರ್ಭಿಣಿಯರ ಆರೋಗ್ಯ, 6. ಎಳೆಮಕ್ಕಳಿಗೆ ಆಹಾರಕೊಡುವುದು. 7 ಕೂಸುಗಳಿಗೆ ಬರುವ ಸೆಳವು. ಅದರ ಲಕ್ಷಣಗಳು ಮತ್ತು ಚಿಕಿತ್ಸೆ 8. ಕೂಸು ಅಳುವುದೇಕೆ? 9. ಕಣ್ಣುಗಳಿಗೆ ವಿಶ್ರಾಂತಿ 10 ಹಲ್ಲುಗಳು, 11. ಕರುಳಿನ ಪೋಷಣೆ 12 ಸಾರಾಯಿ ವೆಂದರೇನು? 13 ನೊಣಗಳಿಂದಾಗುವ ಅಪಾಯಗಳು 14 ಕಾಫಿ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1—8—0 ಬಿಡುಪತ್ರಿಕೆ ಒಂದಕ್ಕೆ 0-2-0

ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯಚಂದ್ರಿಕೆ' ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು

ಪತ್ರವ್ಯವಹಾರ ವಿಳಾಸ— ಮ್ಯಾನೇಜರ್

ಹೆಲ್ತ್ ಅಥವಾ ಆರೋಗ್ಯ ಚಂದ್ರಿಕೆ ಆಫೀಸ

ಟಪ್ಪಾಲು ಪೆಟ್ಟಿಗೆ ನಂ. 166. 323, ತಂಬುಶೆಟ್ಟಿ ಬೀದಿ, ಮದರಾಸು

ಏಜೆಂಟರು :— ಮ.ರಾ.ರಾ ಎಸ್ ಕೆ. ಈಶ್ವರಪ್ಪ,

[12—9] ಭಾಗಮಂಡ್ಲ, ಕೊಡಗು

For your requirements of high grade Arms, Ammunition, Wine and Spirits,

APPLY TO:-

Mc. DOWELL & Co., Ltd.,
MERCARA.

24—1

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,820
ಜಮಾ ಬಂದ ಠೇವಣಾತಿ	30,849

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ತನಿಖಾಯಿಷಿ ಮಾಡುತ್ತಾರೆ

ಪ್ರೆಸಿಡೆಂಟರು — ಕೊಡಂದೆರ ಕುಟ್ಟಯ್ಯನವರು ರಾವು ಬಹದ್ದೂರ್

ಟ್ರೆಜರ್. — ಯಂ. ಭುಜಂಗರಾಯರ ಬಿ. ಎ. ಬಿ ಎಲ್

ಸೆಕ್ರೆಟರಿ — ಸಿ ಯಮ್ ವೆಂಕಪ್ಪಯ್ಯನವರು ಬಿ. ಎ. ಬಿ. ಎಲ್

ತಾರೀಖು 1—9—23

Printed & Published by D S Krishnaswami[illegible] Proprietor, at [illegible] Electric Press, [illegible] for Kodagu [illegible] Ltd. Mercara—26 10 192[illegible]

If not d[elivered] please return to "Kodagu Office, Mercara"
Reg. No. M. 1550.

ಕೊಡಗು.

ವಾರ್ಷಿಕ ಚಂದಾ ೩—೦—೦ ರೂ.

ಸತ್ಯೇನ ಭೂತದಯಯಾ ವಿದ್ಯಾಸಿಂತಿ ಪ್ರಯತ್ನತಃ | ಐಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದ |

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು. "ಎಡಿಟರ್ ಪಂದ್ಯಂಡ ಐ ಬೆಳ್ಯಪ್ಪ"

ಸಂಪುಟ ೩] ಕೊಡಗು, ಸನ್ ೧೯೩೩ ನೇ ಇಸವಿ ನವೆಂಬರು ತಾರೀಖು ೩ ನೆಯ ಶುಕ್ರವಾರ. [ಸಂಚಿಕೆ ೨೩

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡಾ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ದಂತೆ ಜಾಗ್ರತೆಯಾಗಿಯೂ ಸುಲಭಬೆಲೆಗೂ ಮಾಡಿ ಕೊಡುತ್ತೇವೆ.

Srinivas Electric Press,
MYSORE.

ಜೀವವಿಮೆ.

ಸಾವಿರಾರು ಕುಟುಂಬಗಳಿಗೆ ಸಂಪಾದನೆಯ ಯಜಮಾನನು ಮೃತಪಟ್ಟರೆ ಉಂಟಾಗಬಹುದಾದ ತೊಂದರೆಗಳನ್ನು ನಿವಾರಿಸುವುದೇ ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ

ಅತಿ ಕಡಿಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪೆನಿ

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲವಾಗಿ ಹಣವನ್ನು ಒದಗಿಸಿ ಸ್ಥಿರಾಸ್ತಿಗಳನ್ನು ಕೂಡಿಟ್ಟು ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

ಸ್ತ್ರೀಪುರುಷ ಇರ್ವರೂ ಜೀವವಿಮೆಯ ಸೌಕರ್ಯಗಳನ್ನು ಪಡೆಯಲು ಅನುಕೂಲವನ್ನು ಒದಗಿಸುವ ಸಂಸ್ಥೆಯಾದರೂ ಇದೊಂದೆ

ಒಂದು ದೇಶದ ಹಣವು ಮತ್ತೊಂದು ದೇಶದಲ್ಲಿ ವ್ಯಯವಾಗದಂತೆ ನೋಡಿಕೊಂಡು ಎಮೆದಾರರ ಭೂಸಂಪತ್ತನ್ನು ವೃದ್ಧಿಗೊಳಿಸುವ ಸಹಕಾರಸಂಘ ಬ್ಯಾಂಕ, ಮುನಿಸಿಪಾಲಿಟಿ ಮುಂತಾದ ಸಾರ್ವಜನಿಕ ಸಂಸ್ಥೆಗಳಿಗೆ ಸಾಲವಾಗಿ ಕೊಡುವ ಅನುಕೂಲತೆಯುಳ್ಳ ಕಂಪೆನಿ ಇದೊಂದೆ.

ಹೆಚ್ಚಿನ ಮಾಹಿತಿಯನ್ನು ಕನ್ನಡ ನಾಡುಗಳ ಛೀಪ್ ಏಜಂಟರಾದ ಈ ಕೆಳಗಿನ ವಿಳಾಸದಾರರಿಂದ ಪಡೆಯಬಹುದಾಗಿದೆ.

ಬಿ. ಎಸ್. ಆರಾಧ್ಯ,
ಲೈಫ್ ಅಂಡ್ ಮ್ಯಾರೇಜ್ ಆಫೀಸ್ ಮಡಿಕೇರಿ

ಒಕ್ಕಲತನದಲ್ಲಿ ಹೆಚ್ಚು ಲಾಭ ಪಡೆಕೊಳ್ಳಿ.



ನಮ್ಮ ಕಾರಖಾನೆಯಲ್ಲಿ ಸುಧಾರಿಸಿದ ನೇಗಿಲುಗಳೂ ಕಬ್ಬಿನ ಗಾಣಗಳೂ, ಮೇವು ಯಂತ್ರ ಇತ್ಯಾದಿ ಒಕ್ಕಲಿಗರಿಗೆ ಬಹು ಲಾಭದಾಯಕವುಳ್ಳವುಗಳೇ ಸಾಮಾನುಗಳು ತಯಾರಾಗುತ್ತವೆ

ಸಾವಿರಾರು ರೈತರು ಹೂಡುತ್ತಿರುವ ಈ ಸಚಿತ್ರ ಕ್ಯಾಟಲಾಗು ತರಿಸಿಕೊಳ್ಳಿ.

ತಮ್ಮ ವಿಳಾಸ:—

ಕಿರ್ಲೋಸ್ಕರ ಬಂಧು ಲಿಮಿಟೆಡ್,
ಪೋ. ಕಿರ್ಲೋಸ್ಕರವಾಡಿ,
[16—3] ಜಿಲ್ಲಾ—ಸಾತಾರಾ

When you think of going to Bombay,
THINK OF
THE WELCOME HOTEL.
Girgaum Back Road, BOMBAY.
**Most airy accomodation – Most Central situation – Excellent Meals
Every Convenience.**

ವೆಲ್ಕಂ ಹೋಟೇಲ್.

ಗಿರ್‌ಗಾಂವು ಬ್ಯಾಕ್‌ರೋಡ್, ಬೊಂಬಾಯಿ.

ಕೈಲಿಸಿಂದಿಳಿದೊಡನೆಯೇ ಅಲ್ಲಿ ಇಳ್ಕೊಳ್ಳಬಹುದು ಸುಖದೆ. ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಯೋಗ್ಯವಾದ ಕೋಣೆಗಳು ಬೇಕೆಂದಿದ್ದರೆ ಬೊಂಬಾಯಿಪಟ್ಟಣದ ಮಧ್ಯಸ್ಥಳದಲ್ಲಿರುವ ವೆಲ್ಕಂ ಹೋಟೇಲಿನಲ್ಲಿಳಿಯಲು ಮರೆಯಬೇಡಿರಿ ... ಗಿರ್‌ಗಾಂವು ... 15 ಮಿನಿಟಿಗೊಮ್ಮೆ ತಿರುಗುವ ಟ್ರಾಮಿನ ಸೌಕರ್ಯ ... ಪ್ರಯಾಣಿಕರಿಗೆ ಉಳಿದುಕೊಳ್ಳಲು ಅನುಕೂಲವಾದ ... ಬ್ರಾಹ್ಮಣರ ಭೋಜನಾಲಯ

ಜೆಚ್. ಶ್ರೀನಿವಾಸರಾವು,
[12—11] ಮೇನೇಜರ್.

ಬಿಂದಿಗೆ ನೋಟ ಸ್ಪೆನ್ಸರ್ ಕಂಪೆನಿ.

SPENCER & Co Ltd }
Mercara and Pollibetta } [24—2]

ಕಂಬಳಿಯ ಟೋಪಿಗಳು.

ಇವುಗಳನ್ನು ಸಾಚಾ ಉಲ್ಲನ್ನಿಂದ ತಯಾರಿಸಿದೆ. ಚಳಿ, ಮಳೆ ಹಿಮಕಾಲಗಳಲ್ಲಿ ಉಪಯೋಗಿಸುತ್ತಿದ್ದರೆ ವ್ಯಾಧಿಗಳು ಸೇರುವದಿಲ್ಲ ಬೇರೆಯವರು ಉಲ್ಲನ್ ಎಂದು ಹೇಳಿ ಮಾರುವದನ್ನು ಕಳುಹಿಸುವರು ನಾವು ಹಾಗೆ ಮೋಸಮಾಡಲಾರೆವು. ಸಾಚಾ ಉಲ್ಲನ್ ಟೋಪಿಗಳನ್ನೇ ಕಳುಹಿಸುವೆವು ಕ್ರಯ 1 ಕ್ಕೆ 1—8—0.

ಕ್ಷೌರದ ಕತ್ತಿ.



ಇದನ್ನು ಇಟ್ಟುಕೊಂಡು ಕ್ಷೌರಿಕನ ಕೈಯಲ್ಲಿ ಕೊಟ್ಟು ಕೆಲಸವನ್ನು ಮಾಡಿಕೊಂಡಲ್ಲಿ ಇತರ ಶರೀರ ಸಂಬಂಧವಾದ ವ್ಯಾಧಿಗಳು ಬಾರದಂತೆ ಉರಿಯೂ ಇಲ್ಲದಂತೆ ಸುಖವಾಗಿರುವುದು ಕ್ರಯ ಕತ್ತಿ 1 ಕ್ಕೆ ರೂ 1—12—0.

ವಿಳಾಸ:—
ನೇಪಿಯರ್ ವಾಚ್ ಕಂಪೆನಿ
ಪೋಸ್ಟು ಬಾಕ್ಸ ನಂ 505.
[4—2] ಪಿ. ಟಿ. ಮದ್ರಾಸು.

WHY BOTHER

P Sam & Co , Mysore, who have just opened a Branch also in Mercara
WILL CARRY
all kinds of your goods and luggage to and from any parts in Coorg at very reasonable charges. Their promptness is fully deserving a trial from you. Special reduced rates for manure Crop requisities supplied. 4—4

ಕೊಡಗಿನ ಎಲ್ಲಾ ಪ್ರಾಂತ್ಯಗಳಿಗೂ ಸಾಮಾನುಗಳನ್ನು ಕಳುಹಿಸಿಕೊಡುತ್ತಿದ್ದ

ಸ್ಯಾಂ ಅಂಡ್ ಕಂಪನಿಯವರು

ಈಗ ಮಡಿಕೇರಿಯಲ್ಲಿ ಒಂದು ಬ್ರಾಂಚನ್ನು ಸ್ಥಾಪಿಸಿದ್ದಾರೆ.

ಅವರು ಸಕಾಲದಲ್ಲಿ ಮಿತವ್ಯಯದಿಂದ ಶ್ರದ್ಧಾಪೂರ್ವಕವಾಗಿ ಸಾಮಾನುಗಳನ್ನು ಕಳುಹಿ ಕೊಡುವವರಾಗಿರುವುದರಿಂದ ನಿಮ್ಮ ಕೆಲಸಗಳಿಗೆ ಇವರನ್ನೊಂದಾವರ್ತಿ ಪರೀಕ್ಷಿಸಿ. ತೋಟಗಳಿಗೆ ಬೇಕಾದ ಸಾಮಗ್ರಿಗಳನ್ನು ಸಪ್ಲೈ ಮಾಡುತ್ತಾರೆ

ಗೊಬ್ಬರಕ್ಕೆ ಕಡಿಮೆಯಾದ ಕ್ರಯಪಟ್ಟಿಯು.

"ಕೊಡಗು"

೧೯೨೩ನೇ ಇಸವಿ ಅಕ್ಟೋಬರ್ ತಾ|| ೨ನೇ ಶುಕ್ರವಾರ

ಕೌನ್ಸಿಲಿನ ಚುನಾವಣೆ.

(ನಂ. 2.)

ಕಳೆದವಾರ ಕೌನ್ಸಿಲಿನ ಚುನಾವಣೆಯ ವಿಷಯ ಬರೆದನಂತರ ಇನ್ನೂ ಕೆಲವು ಸಂಗತಿಗಳು ನಮಗೆ ತಿಳಿಯಬಂದಿರುವುದರಿಂದ ಅವುಗಳನ್ನು ನಮ್ಮ ವಾಚಕರಿಗೆ ತಿಳಿಸಲಿಚ್ಛಿಸುತ್ತೇವೆ. ಕಳೆದವಾರದಲ್ಲಿ ಓಟರುಗಳ ಅರ್ಹತೆಯ ವಿಷಯದಲ್ಲಿ ಬರೆದದ್ದು ಸ್ವಲ್ಪ ಹೆಚ್ಚು ಕಡಿಮೆಯಾಗಿದೆ. ಇನ್‌ಸಾಲ್ವೆನ್ಸಿ ಸರ್ಟಿಫಿಕೇಟು ಪಡೆದು ಡಿಸ್ಚಾರ್ಜ್ ಆಗದಿದ್ದರೂ ಓಟುಕೊಡುವ ಹಕ್ಕನ್ನು ಕಳಕೊಳ್ಳುವುದಿಲ್ಲ. ಇಂಡಿಯನ್ ಪಿನಲ್ ಕೋಡಿನ ೯ (ಎ) ಚಾಪ್ಟರಿನ ಮೇರೆ ಆರುತಿಂಗಳು ಸಜಕ್ಕೆ ಕಡಿಮೆ ಇಲ್ಲದೆ ಶಿಕ್ಷೆ ಕೊಡಬಹುದಾದ ತಕ್ಸೀರಿನ ಮೇರೆ ಶಿಕ್ಷಿಸಲ್ಪಟ್ಟಿದ್ದರೆ ಮಾತ್ರ ಓಟುಕೊಡುವ ಹಕ್ಕನ್ನು ಕಳಕೊಳ್ಳುತ್ತಾನಷ್ಟೇ ಹೊರತು ನಾವು ಮೊದಲು ಸೂಚಿಸಿದಂತೆ ಐದು ವರ್ಷದೊಳಗೆ ಕ್ರಿಮಿನಲ್ ಸಜವಾದವರು ಓಟಿನ ಹಕ್ಕನ್ನು ಕಳಕೊಳ್ಳುವುದಿಲ್ಲ. ಚುನಾವಣೆಯ ಕೆಲಸದಲ್ಲಿ ಅಕ್ರಮಗಳನ್ನು ನಿಷೇಧಿಸುವ ಆಕ್ಟಿನ (ಕರಪ್ಟ್ ಪ್ರೇಕ್ಟೀಸ್ ಆಕ್ಟ್) ಮೇರೆ ನೇಮಿಸಲ್ಪಟ್ಟ [illegible] ಕೃತ್ಯಗಳಲ್ಲಿ ಯೋಗ್ಯವ ಅಕ್ರಮಗಳನ್ನು ನಡೆಸಿದನೆಂದು ರಿಪೋರ್ಟುಮಾಡಲ್ಪಟ್ಟ ಪ್ರತಿಯೊಬ್ಬನ ಓಟರುಗಳ ಪಟ್ಟಿಯಿಂದ ತೆಗೆಯಲ್ಪಡುವುದಲ್ಲದೆ ಐದು ವರ್ಷಗಳ ವರೆಗೆ ಅವನ ಹೆಸರು ಆ ಪಟ್ಟಿಗೆ ಸೇರಿಸಲ್ಪಡಲಾಗುವುದಿಲ್ಲ. ಓಟರನಾಗಬೇಕಾದರೆ ಕಂದಾಯಕೊಡುವ ಮತ್ತು ಮೇಲೆ ಸೂಚಿಸಿದ ಅರ್ಹತೆಯಲ್ಲದೆ, ಒಬ್ಬನು ಬ್ರಿಟಿಷ್ ಪ್ರಜೆಯಾಗಿರಬೇಕು, ಗಂಡಸಾಗಿರಬೇಕು; ತಲೆ ಸರಿ ಇಲ್ಲದವನೆಂದ ತಕ್ಕ ಕೋರ್ಟಿನಲ್ಲಿ ಪ್ರಕಟವಾಗಿರಬಾರದು. ಆದರೆ ಕೌನ್ಸಿಲು ಮೆಂಬರನಾಗಲಿಕ್ಕೆ ಓಟರನಾಗಲು ಬೇಕಾಗುವ ಅರ್ಹತೆಗಳಲ್ಲದೆ ಒಬ್ಬನು ಬೇರೆ ನ್ಯಾಯವಿಧಾಯಕಸಭೆಯ ಮೆಂಬರನಾಗಿರಕೂಡದು, ಆಯರಾಗಿದ್ದು ಆ ಕೆಲಸದಿಂದ ಖಾಯಂ ಆಗಿ ಆಗಲೀ ಹಂಗಾಮಿಯಾಗಿ ಆಗಲೀ ವಜಾಮಾಡಲ್ಪಟ್ಟರವನಾದು, ಕುಲಾಸ ಆಗದ ಇನ್‌ಸಾಲ್ವೆಂಟ್ ಆಗಿರಬಾರದು; ಕುಲಾಸ್ ಆದ ಇನ್‌ಸಾಲ್ವೆಂಟ್ ಆದರೂ ಅವನ ಇನ್‌ಸಾಲ್ವೆನ್ಸಿಗೆ ಅವನ ದುರಾದೃಷ್ಟವೇ ಕಾರಣ ಹೊರತು ಅವನ ದುರ್ನಡತೆಯಲ್ಲವೆಂತ ಕೋರ್ಟಿನಿಂದ ಸರ್ಟಿಫಿಕೇಟು ಪಡೆದಿರಬೇಕು; ಆಯರು ಕೆಲಸ ಕಳಕೊಂಡಲ್ಲಿ ಚೀಫ್ ಕಮೀಷನರವರು ಮಾಫಿಮಾಡಬಹುದು; ಐದು ವರ್ಷದ ಒಳಗೆ ಆರುತಿಂಗಳ ಸಜಾ ಇರುವ ಕ್ರಿಮಿನಲ್ ಶಿಕ್ಷೆಗೆ ಗುರಿಯಾಗಿರಬಾರದು. ಒಬ್ಬ ಓಟರನ ಹೆಸರು ಒಂದಕ್ಕಿಂತ ಹೆಚ್ಚು ಓಟರ ಪಟ್ಟಿಯಲ್ಲಿರಕೂಡದು. ಓಟರುಗಳ ಮತ್ತು ಮೆಂಬರುಗಳ ಅರ್ಹತೆಯ ವಿಷಯ ಹೆಚ್ಚೇನೂ ಆಕ್ಷೇಪಣೆ ಹೇಳುವಂತೆ ಇಲ್ಲ. ಆದರೆ ಸ್ತ್ರೀಯರಿಗೆ ಓಟುಕೊಡುವ ಮತ್ತು ಮೆಂಬರಾಗಲು ಇರುವ ಹಕ್ಕು ಕೂಡದೆ ಇರುವದು ವ್ಯಸನಕರ. ಈಗ ಮದ್ರಾಸು ಮತ್ತು ಇತರ ಅನೇಕ ಪ್ರಾಂತ್ಯಗಳಲ್ಲಿ ಈ ಅರ್ಹತೆಯನ್ನು ಸ್ತ್ರೀಯರಿಗೆ ಕೊಟ್ಟಿರುತ್ತಾರೆ. ನಮ್ಮ ದೇಶದ ಸ್ತ್ರೀಯರು ವಿದ್ಯೆಯಲ್ಲಿಯೂ ಬುದ್ಧಿಕುಶಲತೆಯಲ್ಲಿಯೂ ಬೇರೆ ಪ್ರಾಂತ್ಯಗಳ ಸ್ತ್ರೀಯರಿಗೆ ಹಿಂದೆ ಬಿದ್ದಿರುವಂತೆ ಕಾಣುವುದಿಲ್ಲ. ಹೀಗಿರುವಲ್ಲಿ ಇವರಿಗೂ ಈ ಹಕ್ಕುಗಳು ಖಂಡಿತವಾಗಿ ಸಿಕ್ಕಬೇಕಾಗಿತ್ತು. ಈ ಚುನಾವಣೆಗೆ ಇಲ್ಲದೆ ಹೋದರೂ ಬರುವ ಇನ್ನೊಂದು ಚುನಾವಣೆಗೆ ಸ್ತ್ರೀಯರಿಗೆ ಈ ಹಕ್ಕುಗಳು ಸಿಕ್ಕುವಂತೆ ಕೌನ್ಸಿಲಿನಲ್ಲಿಯಾದರೂ ತೀರ್ಮಾನಿಸಬೇಕಾದದ್ದು ಅಗತ್ಯ. ಅಲ್ಲದೆ ಐವತ್ತು ಕಂದಾಯ ಐದು ರೂಪಾಯಿ ಮತ್ತು ಸಾಗು ಕಂದಾಯ ಹತ್ತು ರೂಪಾಯಿ ಕೊಡುವವರು ಮಾತ್ರ ಓಟುಕೊಡಲು ಅರ್ಹರೆಂದು ರೂಲುಮಾಡಿದ್ದು ಸ್ವಲ್ಪ ಹೆಚ್ಚಿನದರವಾಯಿತ್ತೆಂದೇ ನಮ್ಮ ಅಭಿಪ್ರಾಯ. ಇದಕ್ಕಿಂತಲೂ ಕಡಿಮೆ ಕಂದಾಯ ಕೊಡುವವರಿಗೂ ಕೂಡ ಓಟುಕೊಡುವ ಹಕ್ಕು ದೊರೆತರೆ ಹೆಚ್ಚಿನ ಜನಸಮುದಾಯದ ಅಭಿಪ್ರಾಯದಂತೆ ಸರಕಾರವು ನಡೆಯಲು ಅನುಕೂಲವಾಗುವುದು. ಈಗಿನ ಚುನಾವಣೆಗೆ ಈ ರೂಲ್ಸುಗಳನ್ನು ಬದಲಾವಣೆ ಮಾಡಲು ಬಹುತಃ ತಡವಾಯಿತೆಂದು ತೋರುತ್ತದೆ. ಆದರೆ ಇವುಗಳೆಲ್ಲಾ ಈಗ ಕೌನ್ಸಿಲು ಮೆಂಬರುಗಳಾಗಿ ಚುನಾಯಿಸಲ್ಪಡುವ ಮಹನೀಯರು ಮೊದಲು ಗಣನೆಗೆ ತರಬೇಕಾದ ಸಂಗತಿಗಳಾಗಿವೆ.

ಕೌನ್ಸಿಲು ಮೀಟಿಂಗಿನಲ್ಲಿ ಕೆಲಸ ನಡಿಸಲು ಅಗತ್ಯವಿರುವ ಮೆಂಬರುಗಳ ಸಂಖ್ಯೆಯು (ಕೋರಮ್) ಎಂಟಾಗಿದೆ. ಮೀಟಿಂಗಿನಲ್ಲಿ ಎಂಟು ಜನ ಮೆಂಬರುಗಳಿಗಿಂತ ಕಡಿಮೆಯಾಗಿ ಹಾಜರಿದ್ದಲ್ಲಿ ಆದಿನ ಮೀಟಿಂಗು ನಡಿಸಕೂಡದು. ಯಾವದಾದರೊಂದು ವಿಷಯ ಚರ್ಚೆಯ ಮೀಟಿಂಗಿನಲ್ಲಿ ಆ ವಿಷಯ ಹೆಚ್ಚು ಬಲ್ಲಂಥ ಒಬ್ಬನನ್ನು ಚೀಫ್ ಕಮೀಷನರವರು ಅಗತ್ಯ ಮೆಂಬರಾಗಿ ನೇಮಿಸಿಕೊಳ್ಳಬಹುದು. ಆ ವಿಷಯದಲ್ಲಿ ಅಂಥ ನೇಮಿತ ಮೆಂಬರನಿಗೆ ಬೇರೆ ಮೆಂಬರುಗಳಂತೆಯೇ ಓಟುಕೊಡುವ ಹಕ್ಕು ಇದೆ. ಆದರೆ ಅಂಥಾ ತಾತ್ಕಾಲಿಕನೇಮಿತ ಮೆಂಬರನಿಗೆ ಓಟುಕೊಡುವ ಹಕ್ಕುಕೊಡುವದು ನ್ಯಾಯವಾಗಿ ತೋರುವುದಿಲ್ಲ. ಅಂಥವನು ಚರ್ಚಿಸುವ ವಿಷಯದಲ್ಲಿ ತನ್ನ ಹೆಚ್ಚಿನ ಮಾಹಿತಿಯ ಜ್ಞಾನವನ್ನು ಕೌನ್ಸಿಲು ಮೆಂಬರುಗಳ ಮುಂದಿಟ್ಟು ಅವರ ತೀರ್ಮಾನಕ್ಕೆ ಬಿಡುವಂತೆ ಮಾಡಬಹುದಾಗಿತ್ತು.

ಹಿಂದುಳಿದ ಸಂಗಡದವರ ಅಂದರೆ ಹೊಲೆಯ, ಕುರುಬ, ಮಾದಿಗ ಮತ್ತು ಯರವ ಈ ಜಾತಿಯವರ ಪರವಾಗಿ ಒಂದು ಮೆಂಬರನ್ನು ಚೀಫ್ ಕಮೀಷನರವರು ಕೌನ್ಸಿಲಿಗೆ ನೇಮಿಸುವರು. ಹೀಗೆ ನೇಮಿತವಾಗುವ ಮೆಂಬರನು ಹಿಂದುಳಿದ ಸಂಗಡದವನೊಬ್ಬನಾಗಿರುವನೋ, ಅಥವಾ ಮೇಲ್ವರಗತಿಯವನಾಗಿರುವನೋ ಎಂಬದು ನಮಗೆ ಇನ್ನೂ ತಿಳಿಯದು. ನಮ್ಮ ಈ ದೇಶದಲ್ಲಿ ಹಿಂದುಳಿದ ಸಂಗಡದವರ ಏಳಿಗೆಗಾಗಿ ಹೆಚ್ಚು ಶ್ರಮತೆಗೆದುಕೊಂಡು ಕೆಲಸಮಾಡಿರುವ [illegible] ಇಂದಿರುವುದಿಲ್ಲ. ಆದುದರಿಂದ ಹಿಂದುಳಿದ ಸಂಗಡದವರ ಕಷ್ಟಗಳನ್ನು ಚೆನ್ನಾಗಿ ಅರಿತವರಾಗಿ ಅವರ ಪ್ರತಿನಿಧಿಯಾಗಿ ಕೌನ್ಸಿಲಿಗೆ ಒರಲು ಯೋಗ್ಯರಾದವರನ್ನು ಮೇಲ್ವರಗತಿಯಲ್ಲಿ ಕಾಣುವುದು ಕಷ್ಟವಾಗದೆ. ಅಲ್ಲದೆ ಹಿಂದುಳಿದ ಸಂಗಡದವರಲ್ಲೇ (ಕನ್ನಡ) ವಿದ್ಯಾವಂತರು ಕೆಲವರಿರುವರು. ಅವರಲ್ಲಿ ಒಬ್ಬರನ್ನು ನೇಮಿಸಿದರೆ ಕೌನ್ಸಿಲಿನಲ್ಲಿ ಅವರ ಕಷ್ಟಸುಖಗಳನ್ನು ಹೇಳಲು ಬಹಳ ಅನುಕೂಲವಾಗುವುದರಲ್ಲಿ ಸಂಶಯವಿಲ್ಲ. ಸರಕಾರದವರು ಮೆಂಬರು [illegible] ನೇಮಿಸುವಾಗ್ಗೆ ಈ ವಿಷಯ ಗಣನೆಗೆ ತೆಗೆದುಕೊಳ್ಳುವರಾಗಿ [illegible]

ಓಟರ [illegible] ದಿನ್ನ [illegible] ಮೇಲೆ ಸೂಚಿಸಿದಾಯಿತು. [illegible] ಓಟುಕೊಡಲು [illegible] ಗಳ ದೂರದಲ್ಲಿ ಓಟುಕೊಡುವ ಸ್ಥಳವನ್ನು ಏರ್ಪಡಿಸಿದ್ದೇ ಓಟರುಗಳಿಗೆ ಬಹಳ ಕಷ್ಟವೆಂದು ಅಕ್ಷಮ್ಯವು. ಬಾಯಿಬಿಡುತ್ತಿರುವರು. ಹೀಗೆ ನಮ್ಮ ದೇಶದಲ್ಲಿ ಈಗ ನಾಡು ಕಚೇರಿಗಳಿರುವಲ್ಲಿ ಯಾದರೂ ಓಟುಕೊಡುವ ಏರ್ಪಾಡು ಮಾಡದೆ ಹೋದರೆ ಜನರಿಗೆ ಬಹಳ ತೊಂದರೆಯುಂಟಾಗುವುದು. ಹೀಗಾದರೆ ಅನೇಕರು ಓಟುಕೊಡುವ ತಮ್ಮ ಅಮೂಲ್ಯವಾದ ಹಕ್ಕನ್ನು ಕಳಕೊಳ್ಳಲು ಎಡೆಕೊಟ್ಟಂತಾಗುವುದು. ತಾಲೂಕಿಗೆ ಒಂದೊಂದು ಸ್ಥಳದಲ್ಲಿ ಮಾತ್ರ ಓಟುಕೊಡುವಂತೆ ಮಾಡಿದರೆ ಓಟಿನ ಬೆಲೆಯನ್ನು ಚೆನ್ನಾಗಿ ತಿಳಿಯದೆ ಇರುವಂಥ ನಮ್ಮ ಜನರು ಹತ್ತಿಪ್ಪತ್ತು ಮೈಲುಗಳ ದೂರ ನಡೆಯುವ ಕಷ್ಟವನ್ನು ಯೋಚಿಸಿ ಓಟುಕೊಡದೆ ಸುಮ್ಮನಾಗುವರೆಂಬುದರಲ್ಲಿ ಸಂದೇಹವಿಲ್ಲ. ಈ ವಿಷಯ ಬಹಳ ಮುಖ್ಯವಾಗಿರುವದರಿಂದ ಸರ್ಕಾರದವರ ಗಣನೆಗೆ ತರುವ ಉದ್ದೇಶ ಪ್ರಸತ ಬರೆದದ್ದಾಗಿದೆ.

ಓಟರುಗಳ ಪಟ್ಟಿಯು ನವಂಬರ ತಿಂಗಳ ಪ್ರಾರಂಭದಲ್ಲಿ ಪ್ರಕಟವಾಗುವುದೆಂತಲೂ ಒಂದು ವಾರದೊಳಗೆ ಓಟು ಕೊಡಲು ಹಕ್ಕಿರುವ ಜನರು ಆ ಪಟ್ಟಿಯಲ್ಲಿ ತಮ್ಮ ಹೆಸರು ಸೇರಲ್ಪಡದೆ ಹೋಗಿದ್ದರೆ ಆ ವಿಷಯ ರಿವೈಸಿಂಗ ಆಫೀಸರಿಗೆ ತಿಳಿಸಿ ಸರಿಪಡಿಸಿಕೊಳ್ಳಬೇಕೆಂತಲೂ ವರ್ತಮಾನವಿದೆ. ಮೊದಲಿನ ಓಟರ ಪಟ್ಟಿಯು ಪ್ರಿಂಟಾಗುವ ಸಂಭವವೂ ಕೂಡ ಇಲ್ಲವೆಂದೇ ತೋರುತ್ತದೆ. ನ್ಯಾಯವಾಗಿ ಹೇಳುವದಾದರೆ ಚುನಾವಣೆಯ ರೂಲ್ಸುಗಳು ದೇಶದಲ್ಲಿ ಪ್ರಕಟವಾಗಿ ಜನರಿಗೆಲ್ಲರಿಗೂ ತಿಳಿದನಂತರವೇ ಮೊದಲಿನ ಓಟರ ಪಟ್ಟಿ ತಯಾರಿಸಲ್ಪಡಬೇಕಾದದ್ದು. ನಮ್ಮ ದೇಶದಲ್ಲಿ ಚುನಾವಣೆ ರೂಲ್ಸುಗಳು ಇನ್ನೂ ಜನರಿಗೆಲ್ಲಾ ಪ್ರಕಟವಾಗಿರುವುದಿಲ್ಲ. ಅಷ್ಟರಲ್ಲೇ ಓಟರ ಪಟ್ಟಿಯು ತಯಾರಾಗಿದೆಯೆಂದೂ ಅದು ಈ ವಾರದಲ್ಲೇ ಪ್ರಕಟವಾಗುವುದೆಂದೂ ಸುದ್ದಿ. ಚುನಾವಣೆಯ ಕ್ರಮವು ಈ ದೇಶದಲ್ಲಿ ಜಾರಿಗೆ ಬರುವುದು ಇದೇ ಮೊದಲು. ಇಂಥಾದರಲ್ಲಿ ಓಟರುಗಳ ಪಟ್ಟಿಯಲ್ಲಿ ಅನೇಕ ಕುಂದುಕೊರತೆಗಳು ಬರದೆ ಇರಲಾರವು. ಅನೇಕ ಹೆಸರು ಪಟ್ಟಿಯಲ್ಲಿ ದಾಖ್ಲೆಯಾಗದೆ ಬಿಟ್ಟುಹೋಗಿರಲಿಕ್ಕೂ ಸಾಕು. ಇವುಗಳನ್ನೆಲ್ಲಾ ಸರಿಪಡಿಸಿಕೊಳ್ಳಲು ಜನರಿಗೆ ಒಂದು ತಿಂಗಳ ಸಮಯವಾದರೂ ಬೇಕು. ಒಂದು ವಾರದೊಳಗೆ ಸರಿಪಡಿಸಿಕೊಳ್ಳುವದೆಂದರೆ ಅಸಾಧ್ಯ. ಇಂಥಾ ಪಟ್ಟಿಯು ಪ್ರಕಟವಾಗಿದೆಯೆಂದು 4 ಮೂಲೆ ಗ್ರಾಮಗಳಲ್ಲಿರುವ ಜನರಿಗೆ ತಿಳಿಯಲಿಕ್ಕೇ ಒಂದು ವಾರ ಸಾಲದು. ಹೀಗೆಂದ ಮೇಲೆ ಅವರು ಹತ್ತಿಪ್ಪತ್ತು ಮೈಲುಗಳ ದೂರ ನಡೆದು ರಿವೈಸಿಂಗ್ ಆಫೀಸರ ಬಳಿಗೆ ಬಂದು ತಮ್ಮ ಹೆಸರು ದಾಖ್ಲೆಯಾಗದೆ ಇದ್ದ ಪಕ್ಷದಲ್ಲಿ ಅವುಗಳನ್ನು ಸರಿಪಡಿಸಿಕೊಳ್ಳುವುದು ಒಂದು ವಾರದಲ್ಲಿ ಸಾಧ್ಯವೇ? ಕಡಿಮೆಪಕ್ಷ ಎರಡು ವಾರಗಳಾದರೂ ಬೇಡವೇ? ಹೀಗೆ ಸರಿಪಡಿಸಿಕೊಳ್ಳಬೇಕಾದರೆ ಓಟರುಗಳಿಗೆ ಚುನಾವಣೆಯ ರೂಲ್ಸುಗಳು ಗೊತ್ತಿರಬೇಕು. ಚುನಾವಣೆಯ ರೂಲ್ಸುಗಳು ಇಂಗ್ಲೀಷಿನಲ್ಲು ನವಂಬರು ತಿಂಗಳ ಕೊಡಗು ಗಜೇಟಿನಲ್ಲಿ ಪ್ರಕಟವಾಗುವುದೆಂದು ತಿಳಿಯಬರುತ್ತದೆ. ಇದರಿಂದ ಎಷ್ಟು ಜನರಿಗೆ ಪ್ರಯೋಜನವಾಗಬಹುದು? ದೇಶದವರೆಲ್ಲಾ ಖಂಡಿತವಾಗಿ ತಿಳಿಯಬೇಕಾದ ಇಂಥಾ ಮುಖ್ಯಸಂಗತಿಯನ್ನು ಇಂಗ್ಲೀಷಿನಲ್ಲಿ ಅಲ್ಪಸ್ವಲ್ಪ ಜನರಿಗೆ ತಿಳಿಯುವಂತೆ ಪ್ರಕಟಿಸಿದರೆ ಸಾಕೋ? ಆದುದರಿಂದ ಸರ್ಕಾರದವರು ಈ ರೂಲ್ಸುಗಳನ್ನು ಕನ್ನಡದಲ್ಲಿ ಪ್ರಕಟಿಸಿ ಜನರಿಗೆಲ್ಲಾ ಹಂಚಬೇಕಾದದ್ದು ಅಗತ್ಯ. ಇದಕ್ಕೆ ಸಮಯ ಸಾಲದೆಂದೂ, 1924 ನೇ ಜನವರಿಯಲ್ಲಿ ಕೌನ್ಸಿಲು ಪ್ರಾರಂಭವಾಗಬೇಕೆಂದೂ ಸರಕಾರದವರು ಹೇಳಬಹುದು. ಜನರಿಗೆಲ್ಲಾ ಚುನಾವಣೆ ರೂಲ್ಸು ತಿಳಿಯದೆಯೂ ಅರ್ಹರಾದವರಿಗೆಲ್ಲಾ ಓಟುಕೊಡುವ ಹಕ್ಕು ಸಿಕ್ಕದೆಯೂ ಅವಸರದಲ್ಲಿ ಚುನಾವಣೆ ಮಾಡಿ ಜನವರಿಯಿಂದ ಕೌನ್ಸಿಲು ಕೆಲಸ ಪ್ರಾರಂಭಿಸುವುದಕ್ಕಿಂತ, ಎಲ್ಲವೂ ಜನರಿಗೆ ತಿಳುವಳಿಕೆಕೊಟ್ಟು ಸಾವಧಾನದಿಂದ ಚುನಾವಣೆ ನಡಿಸಿ ಒಂದೆರಡು ತಿಂಗಳ ತಡವಾಗಿಯಾದರೂ ಕೌನ್ಸಿಲು ಕೆಲಸ ಪ್ರಾರಂಭಿಸುವುದು ಉತ್ತಮವೆಂದು ನಮ್ಮ ಅಭಿಪ್ರಾಯ. [illegible] ಮೂರು ವರ್ಷಗಳಿಂದ ಕೌನ್ಸಿಲಿಗೆ ಕಾಯುತ್ತಿದ್ದ ಜನರು ಅದರ ಪ್ರಾರಂಭಕ್ಕೆ ಒಂದೆರಡು ತಿಂಗಳು ಕಾಯಲು ಒಪ್ಪದಿರಲಾರರು. ಇದು ಸರಕಾರದವರ ಅವಸರವೆಂದೇ ತೋರುತ್ತದೆ. ಅಧಿಕಾರಿಗಳು [illegible] ಹೀಗೆ ಮಾಡಬಹುದೇ?

ಧೀರತ್ವವೂ—ಭೀರುತ್ವವೂ.

(ಬರೆದು ಬಂದದ್ದು)

ಮಡಿಕೇರಿ ದೇಚೂರಿನ ಶ್ರೀ ರಾಮಮಂದಿರವು ಈ ವರ್ಷದ ಅತಿವೃಷ್ಟಿಯಿಂದ ಗೋಡೆಗಳೆಲ್ಲಾ ನಾಶವಾಗಿ ಆ ಭಕ್ತಮಂಡಲಿಯವರ ಪ್ರಯತ್ನದಿಂದಲೂ ಉದಾರರಾತ್ರಯರಾದ ದೇಶಾಭಿಮಾನಿಗಳ ಧನಸಹಾಯದಿಂದಲೂ ದೇಚೂರಿನ ಭಕ್ತಮಂಡಲಿಯವರ [illegible] ತಾರೀಕು 1[illegible] ರಲ್ಲಿ ಒದಗಿದ ನವರಾತ್ರಿ ಉತ್ಸವವು ಇವರ [illegible] ಎಲ್ಲವೂ [illegible] ಗಂಡವಾಸನ [illegible] ಧುಂಧುಳಾ [illegible] ಮಹಿಷಾಸುರ [illegible] ಆ ದೈತ್ಯರಾಜನನ್ನು ಸಂಹರಿಸಿ ತಿಮೂರ್ತಿಗಳಿಂದಲೂ ಅಸಾಧ್ಯವಾಗಿದ್ದು ಆದಿಶಕ್ತಿಯಾದ ಪಾರ್ವತಿಯು ಅವತರಿಸಿ [illegible] ಮಹಿಷಾಸುರನ [illegible] ಸೃಷ್ಟಿಸಿದ ದೇವಿಯ ಪ್ರತಿಮೆಯನ್ನೂ ಪಟ್ಟಣದ ಬೀದಿಗಳಲ್ಲಿ ಮೆರವಣಿಗೆ ಮಾಡಿ, ದೇವವಿಧಿಯಿಂದ ಉತ್ಸವಂಬಂಧದ ಕ್ರಿಯೆಗಳೆಲ್ಲವನ್ನೂ ಪೂರೈಸಿ, ಸಂಗೀತ, ಭಜನೆ ಮುಂತಾದವುಗಳಿಂದ ಪುನಃ ಶ್ರೀ ರಾಮಮಂದಿರವನ್ನು ಸೇರಿ, ಮಂಗಳಾರತಿಯೇ ಮೊದಲಾದವುಗಳಿಂದ ಉತ್ಸವವನ್ನು ಸಾಂಗಗೊಳಿಸಿದ ಈ ಜನರ ಸಾಹಸವೂ ಏಕಮತ್ಯವೂ ದಿನೇದಿನ ಅಭಿವೃದ್ಧಿಸುವಂತೆ ಅವರೆಲ್ಲರೂ ನಂಬಿರುವ ಆ ಶ್ರೀರಾಮದೇವರೇ ಕಾಯಬೇಕಾಗಿದೆ.

ಈ ಮಹಿಷಾಸುರ ಮರ್ದಿನಿಯ ಪ್ರತಿಮೆಯನ್ನು ನೋಡಿದರೆ ಭಾರತಮಹಿಳೆಯರ ಧೀರತ್ವವು ಕಣ್ಣೆದುರಿಗೆ ಕಟ್ಟಿಟ್ಟಂತಿದ್ದಿತ್ತು. ಹಿಂದೂ ತರುಣಿಯರು ಪರತಂತ್ರರೆಂದು ನಮ್ಮ ಪೂರ್ವದ ಪುಣ್ಯಚರಿತ್ರೆಯರ ಗುಣಕಥನಗಳನ್ನು ಮಾಡದವರು ಹೇಳುತ್ತಿರುವರು. ಹಿಂದೂ ಸ್ತ್ರೀಯರು ಎಲ್ಲಾ ಕುಟುಂಬಭಾರಗಳಲ್ಲಿಯೂ ಮುಂದೆ ಅವಶ್ಯವಾಗಿ ಬೇಕಾಗುತ್ತಿ [illegible] ಪಾಶ್ಚಾತ್ಯ ಸ್ತ್ರೀಯರಲ್ಲಿರುವ ಗೌರವವು ವಿಷಯಾಸುಖಕ್ಕೆ. ಭಾರತಸ್ತ್ರೀಯರಿಗಾದರೋ ಅವರ ಪಾತಿವ್ರತ್ಯಕ್ಕೆ, ಅವರ ಉದಾರಶೀಲತೆಗೆ, ಅವರ ಸಕಲ ಸದ್ಗುಣಗಳಿಗೆ ಗೌರವವು. ಇಂಥಾ ಗುಣಗಳಲ್ಲಿ ಮಾತ್ರವೇ ಭಾರತಾತರುಣಿಯರಿದ್ದರೆಂದರೆ ವರ್ಣನೆ ಮಾತ್ರವಲ್ಲವು. ಸೀತಾ, ದ್ರೌಪತಿ ಅಹಲ್ಯಾ ಅನಸೂಯಾ ಮತ್ತು ಸಾವಿತ್ರಿಯೇ ಮೊದಲಾಗಿ ಅನೇಕಾನೇಕ ಸಾಧ್ವೀಮಣಿಗಳು ಈ ಭರತಖಂಡದಲ್ಲಿ ಜನ್ಮವೆತ್ತಿ, ಪರಮಾವಧಿ ಧೀರುಗಳೆಂದೆನ್ನಿಸಿಕೊಂಡಿದ್ದರು. ಈಗಿನ ಸ್ತ್ರೀಯರಲ್ಲನೇಕರು ಪಾಶ್ಚಾತ್ಯ ಪದ್ಧತಿಯನ್ನನುಸರಿಸಿ, ಭೀರುತ್ವವನ್ನು ಪಾತಾಳಕ್ಕೆ ತುಳಿದು ಧೀರತ್ವವೊಂದನ್ನೇ ತಳೆದು ತಾಂಡವವಾಡಲೆತ್ನಿಸುತ್ತಿರುವರು. ಇದು ನಮ್ಮ ಭಾರತಮಾತೆಯ ದುರ್ದೈವವೇ ಸರಿ.

ನಮ್ಮ ಪುರಾಣಸ್ತ್ರೀಯರಲ್ಲಿ ಧೀರತ್ವವಿಲ್ಲವೆಂದಲ್ಲವು. ಆಗಿನ ಅಂಥಾ ಕೀರ್ತಿಶಾಲಿನಿಯರಾದ ಸ್ತ್ರೀಯರು ಧೀರುಗಳೆಂದರೆ ಪರಮಾವಧಿ ಧೀರುಗಳು; ಧೀರರೆಂದರೆ, ಪರಮಾವಧಿ ಧೀರರು. ಧೀರುತ್ವವು ಎಡೆಬಿಡದೆ ತಾಂಡವವಾಡುತ್ತಿದ್ದಿತು. ಸಮಯಬಿದ್ದರೆ ಗಂಡುಗಚ್ಚೆಯನ್ನು ಹಾಕಿ ಹೊರಟರೆಂದರೆ ಚತುರ್ದಶಲೋಕಗಳೂ ತಲ್ಲಣಗೊಳ್ಳದೇ ಇರಲಿಲ್ಲ. ದೃಷ್ಟಾಂತರಕ್ಕೆ ಈ ಮಹಿಷಾಸುರಮರ್ದಿನಿಯ ಪ್ರತಿಮೆಯನ್ನು ನೋಡಿದವರಿಗೆ ತಿಳಿಯದಿರದು. ಈಗಿನ ಸ್ತ್ರೀಯರ ಧೀರತ್ವವು ಪಾಶ್ಚಾತ್ಯ ಸ್ತ್ರೀಯರ ಧೀರತ್ವವಾಗಿದೆ. ಪೂರ್ವದ ನಮ್ಮ ಪುಣ್ಯಸ್ತ್ರೀಯರ ಧೀರತ್ವವೂ ಭೀರುತ್ವಗಳೇ ನಮಗೆ ಬೇಕಾಗಿರುವುದು. ಅಂಥಾವುಗಳೇ ನಮ್ಮ ಭರತಖಂಡದ ಸ್ತ್ರೀಯರ ನಿಜವಾದ ಮತ್ತು ಯೋಗ್ಯವಾದ ಹಕ್ಕುಗಳಾಗಿವೆ. ಅವನ್ನೇ ನಮ್ಮ ಸ್ತ್ರೀಯರು ಈಗಲೂ ಉಜ್ವಲಗೊಳಿಸಿ ಧೀರರಾದ ಮಕ್ಕಳನ್ನು ಹಡೆದು ಭಾರತಮಾತೆಯನ್ನು ತೃಪ್ತಿಗೊಳಿಸಬೇಕಾಗಿರುವುದು. ಅಂಥಾ ಸ್ತ್ರೀರತ್ನಗಳೇ ಭಾರತಮಾತೆಯ ಪ್ರೇಮಪುತ್ರಿಯರು. ಅಂಥಾ ಸ್ತ್ರೀಯರೇ ಭಾರತೀಯರ ಪುಣ್ಯಮಾತೆಯರಾಗಲಿಕ್ಕೆ ಯೋಗ್ಯರು. ಅಂಥಾ ಪುಣ್ಯಸ್ತ್ರೀಯರ ಕೀರ್ತಿಯು ಚಿರಸ್ಥಾಯಿಯಾಗಿರುವುದು.

ನಾಟಕಾಭಿನಯಗಳಲ್ಲಿನ ಸ್ತ್ರೀಪಾತ್ರಗಳ ಅಭಿರುಚಿ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಬಾಹ್ಯ ಪ್ರಪಂಚದ ಪ್ರಕೃತಿಯ ಸೌಂದರ್ಯವೂ ಮನುಷ್ಯನ ವಿಚಾರಯುತ ಮಾಡತಕ್ಕ ಕೆಲಸವೂ ನಾಟಕರೂಪವಾಗಿರುವುದು ಈ ಸೌಂದರ್ಯದಲ್ಲಿ ಮನುಷ್ಯರ ಅಭಿರುಚಿಯು ಕಡಿಮೆಯಾಗುತ್ತ ಮನಸ್ಸು ಸ್ವಾಧೀನವನ್ನು ತೊರೆಯುತ್ತ ಇನ್ನು ಕಲ್ಪನಾ ನಾಟಕಗಳು ಕೊಂಡು ಹೊರಟವು ಪ್ರೇಕ್ಷಕರ ಅವಗಾಹನೆಯು, ನಾಟಕಾಂತ್ಯದವರೆಗೆ ಯಾವ ರೀತಿಯಲ್ಲಿ ಪ್ರಫುಲ್ಲಿತವಾಗಿದ್ದು ಅನಂತರ ಹೃದಯಕಲಶವು ತುಂಬಿ ಆ ಆನಂದವು ಮರೆಯಾಗುವುದೋ, ಹಾಗೆಯೇ, ಮನುಷ್ಯನು ತನ್ನ ಕರ್ತವ್ಯಗಳಲ್ಲಿನ ಪ್ರತಿಫಲವನ್ನೆಣಿಸದೆ ಅವುಗಳನ್ನು ಶಾಶ್ವತವಾದುವುಗಳೆಂದೂಹಿಸಿ ಅನೇಕ ಕಾರ್ಯಗಳನ್ನೆಸಗುತ್ತಿರುವನು

"ಪರಮಾತ್ಮನ ಸತ್ಸಂಗತಿಗಳು ಈ ಪ್ರಕಾರವಾಗಿರಬಹುದು" ಎಂಬುದನ್ನು ಜನರಿಗೆ ತೋರಿಸಿ ದೈವಭಕ್ತಿಯನ್ನು ಹೆಚ್ಚಿಸುವ ಮಾರ್ಗವನ್ನು ಕಲ್ಪಿಸುವುದೇ ಹಿಂದಿನ ನಾಟಕ ಕೂಟಗಳ ಉದ್ದೇಶವಿರಬಹುದು. ಆದರೆ ಇತ್ತೀಚೆಗೆ ಪಾರಮಾರ್ಥಿಕ ವಿಷಯವಲ್ಲದೆ, ಕಲ್ಪನಾ ವಿಷಯಗಳನ್ನೂ ನಾಟಕ ರೂಪದಲ್ಲಿ ಸಂಗ್ರಹಿಸಿ ಜನರಿಗೆ ಆಡಿ ತೋರಿಸುವರು. ಇವುಗಳು ಪಾಶ್ಚಾತ್ಯದ ರೀತಿಗಳಿದ್ದರೂ ಅಥವ ಅಭಿನಯಗಳ ಚಿತ್ರಸ್ವೈರ್ಯವ ಅಧಿಕವಾಗುತ್ತಿದ್ದರೂ ಈ ಅಸ್ವಾಭಾವಿಕ ಕಾಲದಲ್ಲಿ ಸಹಜವಾಗಿ ಜನರ ಮನಮಿಕೆಯು ಬೇರೊಂದು ಕಡೆಗೆಳೆಯಿತು. ಭಕ್ತಿಮಾರ್ಗಕ್ಕೆ ಸಾಧನವಾಗಿದ್ದ ನಾಟಕರಂಗವು ಅಂದ ಚಂದ ಸೌಂದರ್ಯಗಳ ರೂಪವಾಯಿತು ನವೀನ ನಾಟಕಗಳು ಹೆಚ್ಚು ಪ್ರೋತ್ಸಾಹಸತ್ತೆಯನ್ನು ಜನರಲ್ಲಿ (ಪ್ರೇಕ್ಷಕರಲ್ಲಿ) ಅಧಿಕಗೊಳಿಸಿತು (!) ಜನರಲ್ಲಿ ಭಗವದ್ಭಕ್ತಿಯೂ ದೂರವಾಗಿ ನಗರದ ಕಣ್ಣನಗನ್ನು ತಣಿಸುವ ರೂಪು ರಾಶಿಗಳನ್ನು ನೋಡುವುದರಲ್ಲಿಯೇ ಮನಸೆಳೆಯಿತು. ಆದುದರಿಂದ ಕಳೆದುಹೋದ ಅಲ್ಪ ಸ್ವಲ್ಪ ಭಾವಾಭಿವ್ಯಕ್ತಿ ನಾಟಕಾಭಿರುಚಿಯನ್ನು ತೊರೆದರು ನಾಟಕದಲ್ಲಿನ ಅಂತರಂಗ ಸ್ವಾರಸ್ಯವು ಹೋಗಿ ಬಾಹ್ಯ ಸೌಂದರ್ಯವು ಜನರ ಮನಸ್ಸನ್ನು ಬೇರೂರಿ ಅದರಲ್ಲಿಯೇ ಆಸಕ್ತಿಯನ್ನು ಹೊಂದಿ ಅವರು ಮಾತ್ರ ಅವುಗಳಲ್ಲಿ ಪ್ರವೇಶಿಸಿದರು, ಹೀಗಾದುದರಿಂದ ನಾಟಕ ಕೂಟಗಳ ಒಡೆಯರು ನಾಟಕಾಭಿನಯಗಳ ಅಂದಚಂದಗಳಲ್ಲಿಯೂ ಅವರ ವೇಷ ಭೂಷಣಗಳಲ್ಲಿಯೂ ಕಳೆದುಹೋದ ಸೌಂದರ್ಯವಾದ ಜನರಿಗಳಲ್ಲಿಯೂ ಒದಗಿತು. ಯಾಗಾದುದರಿಂದ ದಂಡಿತೋತ್ತರ ಕಟಾಕ್ಷವು ಪುನರಾವರ್ತಿ ಬೀಳಲು ಅವಕಾಶ ದೊರಕಲಿಲ್ಲ

ಸೀನರಿಗಳೇನೋ ಹೊಸಬಗೆಯಾಗಿ ಪರಿಣಮಿಸಿ ಜನರ ಮನಸ್ಸನ್ನಾಕರ್ಷಿಸಿದುವು. ಆದರೆ ಮನುಷ್ಯರಿಗೆ ಸೃಷ್ಟಿ ವೈಚಿತ್ರ್ಯವಿರುತ್ತಿದ್ದರೆ ನೋಡದ ಹೊರತು ಇರುವಂಗೆ ಉತ್ಪತ್ತಿರಲಿಲ್ಲ ಎಷ್ಟಾದರೇನು? ಪುರುಷರು ಪುರುಷರೇ (!) ಯರು ಸ್ತ್ರೀಯರೇ (!) ಆದರೂ ಅದೊಂದಾಶ್ಚರ್ಯ! ಮೇಣ ನಾಟಕಪ್ರಯತ್ನರೂ ಸ್ತ್ರೀಯರೇ ಅದು. ಇನ್ನು ಟೀಕಾಲ ಇರುವರು ಪ್ರತಿಕಾರ್ಯದಲ್ಲಿಯೂ ಅವರ ವೃತ್ತಿ ಎಷ್ಟಾದೆಯೂ ಹೆಚ್ಚುತ್ತಿರುವುದು. ಭಕ್ತಿಮಾರ್ಗ ಪ್ರದರ್ಶಕದ ನಾಟಕ ರಂಗವು ರೂಪರಾಶಿಯ ಭವನವಾಯಿತು. ಸ್ತ್ರೀಯರ ಸೌಂದರ್ಯವನ್ನೂ ಒಳಗೊಂಡ ಪುರುಷನು ಅವರ ಸ್ತ್ರೀ ಸ್ವಭಾವವಿರತಕ್ಕ ಸ್ತ್ರೀಜನ್ಯವಾದ ರೂಪರಾಗವನ್ನು ಪಡೆದಿರುವ ಪುರುಷನು, ಅವನೊಬ್ಬ ರಮಣಿಯೇ. ಅದೇನೂ ಅತಿಶಯೋಕ್ತಿಯಲ್ಲ. ಅದೃಷ್ಟವಶಾತ್ ಕುರಿಗಳಾಗಿ ಇತರ ವಿಷಯಗಳಲ್ಲಿ ವಿಧಿಯಾಜ್ಞೆಯಿಂದ ಯರನ್ನು ಹೋಲತಕ್ಕ ಪುರುಷನು ಸ್ತ್ರೀಯೇ ಆದನು. ಟಕಾರಂಭದಲ್ಲಿಯೇ ಸ್ತ್ರೀ ಪ್ರದರ್ಶನ ಎಂದರೆ ದಿವ್ಯರೂಪಗಳೇ ಮುಂದೆ ಬಂದಂತೆ ಪ್ರೇಕ್ಷಕರ ಅಟ್ಟಹಾಸ, ರದೇ ಭಾವನೆ, ಆದಾವುದು?—!

ಸೀರೆಯುಟ್ಟ ಮಾತ್ರಕ್ಕೆ ಸ್ತ್ರೀಯರೇ. ಆದರೆ ಅರ್ಧವಿದಯು ಹಾಗಿಲ್ಲ ಪುರುಷನ ಮುಖದಮೇಲಿನ ದಿವ್ಯತ್ವ ಗೆ ಸ್ವಾಭಾವಿಕ ಸ್ತ್ರೀ ಸೌಂದರ್ಯವಿದ್ದು, ತನ್ನ ಚಾತುರಿಂದ ಹೆಂಗಸಿನ ಗುಣಗಳನ್ನನುಸರಿಸಿ ಅಥವಾ ಸ್ತ್ರೀ ದರ್ಯವನ್ನು ಅನೇಕ ಉಪಾಯಗಳಿಂದ ಕಲ್ಪಿಸಿ ಅವರ ಗಳನುಕರಣದಿಂದ ಪುರುಷನು ಅರ್ಧ ಸ್ತ್ರೀಯೇ ಆಗು ಆದರೆ ಪುರುಷನು ಗಂಡಸಾಗಿರುವಾಗ ಸಂಪೂರ್ಣ ಯೆಂದರೆ ಆಶ್ಚರ್ಯ ಯಾವುದುವೇ? ನಮಗೆಂದಿಗೂ ಹಾದು ಇದರ ರ್ಥವನ್ನು ತಿಳಿಯಲು ಸಾಧಕರೆಂದೊಂದ. ಲ್ಲಿ ಅವರಲ್ಲಿ ಸ್ತ್ರೀ ಸೌಂದರ್ಯ ಗುಣಾವಳಿಗಳು ಸ ವುದರಿಂದಲ್ಲವೇ ಪ್ರೇಕ್ಷಕರಾಗಲೀ ಇತರರಾಗಲೀ ಮನಸ್ಸಿನಲ್ಲಿಯೂ ಸದ್ಭಾವಾಪ್ತವಲ್ಲಿಯೂ ಆ ವ್ಯಕ್ತಿ ಸ್ತ್ರೀಯೆಂಬುದಾಗಿ ಭಾವನೆಯಿಟ್ಟು ಕ್ರಮೇಣ ಅದೇ ವನ್ನು ಚಿರಸ್ಥಾಯಿಯನ್ನಾಗಿ ಮಾಡುವರು ಆದ ದ ತನು ಅಬಲೆಯೇ! ಇಲ್ಲದಿದ್ದರೆ ಅವನಿಗೀ ಅರಸ್ತೆ ನನಿಗೆ ಬೇಕೆಯುವರ ಭಾವನೆಯು ಅಥವಾ ಮೋಹವು ಬಗೆಯದು? ಪುರುಷರ ಕಟಾಕ್ಷವು ಸುಂದರಿಯರ ಮೇಲೆ ಬೀಳುವಾಗ ಅವರ ಮೋಹರೂಪವಾವು ನೋಡಿ ಏಕೀಕರಣವಾಗುವುದು ಆದರೆ ಸಹಜರ ಪ್ರೀತಿಭಾವಕ್ಕೆ ಮುಂಚಾಗಿ ಅವರ ಉತ್ಸಾಹದಿಂದ ಉಬ್ಬಿ ತನ್ನ ಚಾತುರ್ಯವನ್ನೂ ರೂಪುರಾಶಿಗಳನ್ನೂ ಅಧಿಕಗೊಳಿಸುತ್ತ ತನ್ನ ಕಾರ್ಯಗಳನ್ನು ಇತರರೂ ಸಂಕೋಚಗೊಂಡು ಮೋಹಿಸಿದರೂ ಅದರಲ್ಲಿ ತಾನೇ ತೃಪ್ತಿಯನ್ನು ತಂದುಕೊಳ್ಳಲಾಗದೆ ನಾನಾತರಹದ ವಿಕಾರಗಳನ್ನು ಕಲ್ಪಿಸಿಕೊಳ್ಳುತ್ತ ಕಂತ ಕಂತ ಒಡವೆಗಳಲ್ಲಿಯೂ ಕಂಡ ಕಂಡ ಸೀರೆಯಲ್ಲಿಯೂ ಆಶೆಗೊಂಡು ತಾನೂ ಒಂದು ಒಗೆಯ ನೋಹಾಂಧರೂಪದಲ್ಲಿ ಬಿದ್ದು ತೊಳಲುವನು ಇದರಿಂದ ಇವನಿಗೆ ಹಿತಚಿಂತಕರು, ಸಹಾಯಿಗಳು, ಅನುಯಾಯಿಗಳು, ಮಿತ್ರರು ಅಧಿಕವಾಗಿ ಸುತ್ತಲೂ ಕಾದಿರುವರು. ಯಾವ ಕಾರಣದಿಂದ?—!

ಇದರಿಂದ ಯೋಗ್ಯಾಯೋಗ್ಯತೂ ತಮ್ಮ ಮನಸ್ಸನ್ನು ಕೆಡಿಸಿಕೊಳ್ಳುವರು. ನೀತಿಜ್ಞರು ಬುದ್ಧಿ ಹೇಳುವುದರಿಂದ ನೀತಿ ವಿಹೀನರಾಗುವರು ಒಸರೆಲ್ಲರೂ ಅದನ್ನು ಹೊಗಳುವರು, ಅವನನ್ನೆ ಬಹುಮಾನಿಸುವರು ಯಾವುದರಿಂದ, ಆ ಜೀವಿತದ ಮೋಹಪರವಶತೆಯಿಂದ ಯಾವ ಭಾವನೆಯ ಮೋಹ? ಸನೋದರ ಸನೋದರಿ ಭಾವನೆಯ ಪ್ರೀತಿಯಿಲ್ಲ ನೀತಿವಿಹೀನರಾದ ರಾಕ್ಷಸರಾದ ನಿರ್ಮಲವಾದ ಮೋಹಪರ ಸ್ವಲ್ಪ ಕೇವಲ ಕ್ರೂರ ಕರ್ಮಿಗಳಿಗೆ ಯೋಗ್ಯವಾದ ಕಾಮಕದ ನೆಲೆಯಲ್ಲಿ ಬೆಳೆಗಾಣಿಸತ್ತಿಯ, ಮೋಹನರು ಇದೇನು ಭಕ್ತಿಮಾರ್ಗವೇ, ಭಕ್ತಿಮಾರ್ಗವೇ, ಮೋಹನಮಾರ್ಗವೇ

ಪ್ರಕೃತ ಸ್ತ್ರೀ ಪಾತ್ರಕನ ಅಭಿಮತವಾವುದು? ಪ್ರಥಮತಃ ಆ ವ್ಯಕ್ತಿಗೆ ತನ್ನ ಕೆಲಸದಲ್ಲಿ ಆಲಸ್ಯವಾದರೂ ಜನರ ಹೊಗಳಿಕೆಗೆ ಮರುಳಾಗಿ ಅವರ ಬಹುಮಾನಗಳಿಗೆ ಸೆರೆಸಿಕ್ಕಿ ಸಹಚರರ ಸನ್ನಿಧಾನಗಳಿಗೆ ಬೆರಗಾಗಿ, ಇವೆಲ್ಲವೂ ಶಾಶ್ವತವಾದವುಗಳೆಂಬ ಭಾವನೆಯಿಂದ ಹಿಗ್ಗಿ ತನ್ನ ಮುಂದಿನ ಪರಿಣಾಮವನ್ನು ಸ್ವಲ್ಪವೂ ಆಲೋಚಿಸದೆ ಪ್ರವೇಶಿಸುವನು ನೀತಿಜ್ಞರ ಹಿತಾಕರಣೆಯೂ ತನ್ನನ್ನು ಕಡಿಸುವುದೆಂದು ಯೋಚನೆಯು ಆಗಹಾಗಿರುವುದಿಲ್ಲ ಒಂದುವೇಳೆ ಆ ವ್ಯಕ್ತಿಯು ನಿರ್ಮಲಚಿತ್ತನಾಗಿ ನೀತಿವಿಶಾರದನೂ ಸಕಲವನ್ನ ತಿಳಿದವನಾಗಿದ್ದರೂ ಅದರೆ ಅವನೀ ಗುಣಗಳಿಗೆ ಅವನ ಸ್ತ್ರೀ ಪಾತ್ರವು ಕೇವಲ ಅನುಕೂಲವು ಆದರೂ ಅವನಿಗೆ ಅದು ಯೋಗ್ಯವಾಗಿ ಕಾಣಬಹುದು. ಆದರೆ ಅವನ ಸಹಚರರ ಗುಣವು ನಿರ್ಮಲವಲ್ಲವಷ್ಟೆ? ಮನುಷ್ಯನು ತನ್ನ ಸುಗುಣಗಳಿಂದ ತಾನು ಕಡುಕಾರನು ವಿವೇಕಿಯಾದವನು ಕ್ರೂರ ಕರ್ಮಿಗಳ ಕೈಯಲ್ಲಿ ಬಿದ್ದರೆ ಎಷ್ಟು ವಿವೇಕವಿದ್ದರೆ ತಾನೇ ತಪ್ಪಿಸಿಕೊಳ್ಳಬಲ್ಲನು ಅಂತೂ ಅವನ ವಿನಾಶಕ್ಕೇನೆ ವಿವೇಕಿಯು ಅವನಿಗೆ ಸಿಕ್ಕುವುದು ಹಾಗೆಯೇ ಜನರು ಯಾವ ಕಪಟಕ್ಕಾಗಲೀ ಸ್ವಾಹಿತಕ್ಕಾಗಲೀ ನೇರತಕ್ಕ ಕಾಲದಲ್ಲಿ ಅನೇಕ ವಿವಾದಗಳು ಅವುಗಳನ್ನೂ ಅವುಗಳ ಗುಣಪರಿಶೀಲತೆಯನ್ನು ಅವುಗಳ ಉಪಯೋಗಗಳನ್ನೂ ತನ್ನ ಸ್ಥಿತಿಯನ್ನೂ ಯೋಚಿಸಿ ನಿಂತ್ಯಾಗ ಏಂತವ ತೀಸ ಕಸಿಗೆ ಯೋಗ್ಯವಾಗಿ ಕಂಡು ಬಂದರೆ ಅವುಗಳಲ್ಲಿ ಸೇರುವುದು ವಿಹಿತವು ಇಲ್ಲದಿದ್ದರೆ ತಾನು ಕಡತಕ್ಕ ಕಾಲದಲ್ಲಿ ತನ್ನ ಹಿತಕಾಂಕ್ಷಿಗಳು ದೂರವಾಗುತ್ತಿರಲು ಆಗ ಕೊರಗಿ ಪಶ್ಚಾತ್ತಾಪ ಪಡಬೇಕಾಗುವುದು

ಸನ್ಮಾರ್ಗದರ್ಶಿ.

ಕೊಡಗು ಜಮೀನ್ದಾರರ ಸಂಘ.

(ಪ್ರಚಾರಕ ಕಾರ್ಯದರ್ಶಿಯವರಿಂದ)

8-10 ರ ಲ್ಲು ಪಾಲೇರಿನಾಡು ಕಮಿಟಿ ಏರ್ಪಡಿಸಲಿಕ್ಕಾಗಿ ಒಪ್ಪಂಗೊಡ್ಡಿ ಮಾಡಿನಲ್ಲು ಮ|| ಶ್ರೀ|| ಮುದ್ದಯ್ಯ ಬಿಳ್ಳಪ್ಪನವರ ಅಧ್ಯಕ್ಷತೆಯಲ್ಲಿ 18 ಜನರು ಸೇರಿದ ಒಂದು ಮೀಟಿಂಗ್ ನಡೆಯಿತು ಈ ಮೀಟಿಂಗ್‌ನಲ್ಲಿ ಪ್ರಚಾರಕ ಕಾರ್ಯದರ್ಶಿಯವರು ಸಂಘದ ಉದ್ದೇಶವನ್ನೂ ಮತ್ತು ದೇಶದ ಸ್ಥಿತಿಗತಿಗಳನ್ನೂ ವಿವರಿಸಿದನಂತರ ಅಧ್ಯಕ್ಷರೂ ಮತ್ತು ಮ|| ಶ್ರೀ|| ಗಳು ಪಂದಿತ್ತಿರ ಮಾದೈಯ್ಯನವರೂ, ಮರುವಂಡ ಬೋಪ್ಪೈಯ್ಯನವರು ಸಂಘದ ಪ್ರಯೋಜನವನ್ನು ವಿವರಿಸಿ ಹೇಳಿದನಂತರ ಪಾಲೇರಿನಾಡಿಗೆ ಒಂದು ಕಮಿಟಿ ಆಗಬೇಕೆಂದು ತೀರ್ಮಾನಿಸಲ್ಪಟ್ಟು ಬಹು ಮತದಿಂದ ಈ ಕೆಳಗೆ ನಮೂದಿಸಿದ ಕಮಿಟಿಯು ಏರ್ಪಡಿಸಲ್ಪಟ್ಟಿತು.

ಅಧ್ಯಕ್ಷರು—ಮ|| ಶ್ರೀ|| ಮುದ್ದಯ್ಯ ಬಿಳ್ಳಪ್ಪನವರು
ಖಜಾನಜಿ—ಪಂದಿತ್ತಿರ ಮಾದೈಯ್ಯನವರು
ಕಾರ್ಯದರ್ಶಿ—ಮರುವಂಡ ಬೋಪ್ಪೈಯ್ಯನವರು

ಕಮಿಟಿ ಮೆಂಬರುಗಳು

ಕಾಂತನಕೊಲ್ಲಿಗ್ರಾಮ—ಮ|| ಶ್ರೀ|| ಪಾಪಂಡ ಮುದ್ದಪ್ಪ, ಮರುವಂಡ ಬಿದ್ದಪ್ಪ

ಕಡಂಗಾಳು—ಮುದ್ದಯ್ಯರ ಗಣಪಪ್ಪ, ಬಿಚ್ಚಟ್ಟಿರ ನೋದಪ್ಪ ಮನಿಯಪ್ಪನ ಮಪ್ಪಯ್ಯ,

ಕೊಪ್ಪತ್ತೂರು—ಕೋಟೆರ ಅಣ್ಣೈಯ್ಯ, ಮನಿಯಪ್ಪನ ಪೂವಣ್ಣ

ಹಾಲೇರಿ—ಮೂಲೆಮನೆ ಸಂಚಪ್ಪ, ಅಯ್ಯಕುಟ್ಟಿರ ಮಾದೈಯ್ಯ

ಗ್ರಾಮದ ಕಮಿಟಿ ಮೆಂಬರುಗಳು ಗ್ರಾಮದಲ್ಲಿ 18 ವರ್ಷಕ್ಕೆ ಮೇಲ್ಪಟ್ಟವರ ಹೆಸರುಗಳನ್ನು ಪ್ರಚಾರಕ ಕಾರ್ಯದರ್ಶಿಯವರಿಗೆ ತಿಳಿಸಬೇಕೆಂದು ತೀರ್ಮಾನವಾಯಿತು. ಅಲ್ಲದೆ ಒಪ್ಪಿಕ್ಕೆ ತೀರದವರು ಎಲ್ಲಾ ಕೊಡಗು, ಪತ್ರಿಕೆಗೆ ಚಂದಾದಾರರಾಗಬೇಕೆಂದು ತೀರ್ಮಾನವಾಯಿತು ಅಧ್ಯಕ್ಷರಿಗೆ ವಂದನೆಯನ್ನರ್ಪಿಸಿ ಸಭೆಯು ಮುಕ್ತಾಯವಾಯಿತು

ಮಡಿಕೇರಿನಾಡು ಮೀಟಿಂಗು 9-10-23 ರಲ್ಲು ಚಾಂಡಿರ ಮಾದಪ್ಪನವರ ಅಧ್ಯಕ್ಷತೆಯಲ್ಲು ಕರೋಲೆ ದೇವಸ್ಥಾನದಲ್ಲು 2 ಘಂಟೆಗೆ ನಡೆಯಿತು ಪ್ರಚಾರಕ ಕಾರ್ಯದರ್ಶಿಯವರು ಸಂಘದ ಉದ್ದೇಶ್ಯವನ್ನು ವಿವರಿಸಿ ಹೇಳಿ ದೇಶದ ಸ್ಥಿತಿಗತಿಗಳನ್ನು ತಿಳಿಸಿದನಂತರ ಸರ್ವಸಮ್ಮತದಿಂದ ಮಡಿಕೇರಿನಾಡಿಗೆ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂದು ತೀರ್ಮಾನವಾಗಿ, ಈ ಕೆಳಗೆ ನಮೂದುಳ್ಳ ಕಮಿಟಿಯು ಏರ್ಪಾಡಾಯಿತು

ಅಧ್ಯಕ್ಷರು—ಚಾಂಡಿರ ಮಾದಪ್ಪನವರು
ಕಾರ್ಯದರ್ಶಿ—ಕೊಕ್ಕಲೆರ ಸೋಮಣ್ಣನವರು
ಖಜಾನಜಿ—ಬೊಳ್ಳಂ ಸುಬ್ಬೈಯ್ಯನವರು.

ಕಮಿಟಿ ಮೆಂಬರುಗಳು.

ಕರೋಲೆಬಾಡಗ—ಮ|| ಶ್ರೀ|| ಅರೆಯಂಡ ಕಾಳೈಯ್ಯ, ಕುಂಜಲಂಡ ಮಾದೈಯ್ಯ

ಕಳಕೇರಿ ನಿಡಗಣೆ—ಮ|| ಶ್ರೀ|| ತೆಕ್ಕಡ ಕುಟ್ಟೈಯ್ಯನವರು, ಪುಟ್ಟಮಂಡ ಪೂವೈಯ್ಯನವರು,

ಹೆಬ್ಬೆಟ್ಟಗೇರಿ—ಪಾಂಡಿರ ಅಪ್ಪಯ್ಯನವರು ಬಿದಿರಂಡ ಚಿಣ್ಣಪ್ಪನವರು,

ಕಗ್ಗಡಂಗೇರಿ—ಮ|| ಶ್ರೀ|| ಚೆಟ್ಟಿರ ಸುಬ್ಬೈಯ್ಯನವರು, ಕೊಕ್ಕಲೆರ ಭೀಮೈಯ್ಯನವರು

ಅಧ್ಯಕ್ಷರಿಗೆ ವಂದನೆಯನ್ನರ್ಪಿಸಿ ಸಭೆಯು ಬರಖಾಸ್ತಾಯಿತು. ನಂತರ ಎಲ್ಲರಿಗೂ ಪೂಜಾರಿಯು ಗಂಧ ಪ್ರಸಾದವನ್ನು ಕೊಟ್ಟು ದೇವರಿಗೆ ಮಾಡಿದ ನೈವೇದ್ಯವನ್ನು ಸ್ವೀಕರಿಸಿದರು

ಕೊಡಗು ದೇಶ.

1923ನೇ ಇಸವಿ ಅಕ್ಟೋಬರ್ 11 ನೇ ತಾರೀಖಿನ ಪ್ರಕಟಣೆ

ಒರುವ ದೀಪಾವಳಿ ಹಬ್ಬದ ಸಂಬಂಧ ಪ್ರೇಜರ್‌ಪೇಟೆಯಲ್ಲಿ ದನಗಳ ಒಂದು ಪ್ರದರ್ಶನವು ಮಾಡಲ್ಪಡುವುದೆಂಬ ವಿಷಯವನ್ನು ಈ ಮೂಲಕ ಸರ್ವರಿಗೂ ತಿಳಿಸಲಾಗಿದೆ. ಈ ಪ್ರದರ್ಶನವು 1923 ನೇ ನವಂಬರು ತಾರೀಖು 12 ನೇ ಸೋಮವಾರ ಪ್ರಾರಂಭಿಸಿ ಅದೇ ತಾರೀಖು 14 ನೇ ಬುಧವಾರ ಸಾಯಂಕಾಲ ಮುಗಿಯುವುದು ಈ ಜಾತ್ರೆಯಲ್ಲಿ ದನಗಳು ಮಾತ್ರವಲ್ಲದೆ ಹಸುರುವಾಣಿ ಮುಂತಾದವುಗಳನ್ನೆಲ್ಲಾ ಪ್ರದರ್ಶಿಸಬಹುದು ಆ ಪ್ರದರ್ಶನವನ್ನು ತಾ|| 12 ರ ಮಧ್ಯಾಹ್ನದಮೇಲೆ ತೆರೆಯಲ್ಪಡುವುದು ತಾರೀಖು 14 ನೇ ಸಾಯಂಕಾಲ ಬಹುಮಾನಗಳನ್ನು ಕೊಟ್ಟಾದನಂತರ ಜಾತ್ರೆ ರ್ ಮಾಡಲ್ಪಡುವುದು.

2 ಕೊಡಗಿನ ರೈತರಿಗೆ ಕೊಡಗಿನಲ್ಲಿಯೂ ಮತ್ತು ಹೊರಗಿನ ದೇಶದಲ್ಲಿಯೂ ಇರತಕ್ಕ ಬೇರೆ ಬೇರೆ ಹುಟ್ಟಿನ ದನಗಳನ್ನು ತೋರಿಸಿ ಕೊಡಗಿನಲ್ಲಿ ಅವುಗಳು ಉತ್ಪನ್ನಸ್ಥಿತಿಗೆ ಒರುವಂತೆ ಮಾಡಬೇಕೆಂಬುದೇ ಈ ಪ್ರದರ್ಶನದ ಉದ್ದೇಶವು

3 ಈ ಪ್ರದರ್ಶನದಲ್ಲಿ ಉತ್ತಮವಾದ್ದೆಂದು ಕಂಡಬರುವ ದನಗಳಿಗೆ ಅಪಿಡಿರ‍್ಸ್‌ನಲ್ಲಿ ನಮೂದಿಸಿದ ಇನಾಮುಗಳು ದೊರೆಯುವುವು, ತಕ್ಕವಾಗಿ ಕಂಡ ದನಗಳು ಮಾತ್ರವೇ ಇನಾಮಾತಿಗೆ ಬಿಡಲ್ಪಡುವುವು. ಜಾತ್ರೆಗಳಿಗೆ ಅವಶ್ಯವೆಂದು ಕಂಡಲ್ಲಿ ಗಾಡಿಕಾಡುಗಳ ಭಾರ ಎಳೆಯುವ ಶಕ್ತಿ ಮುಂತಾದವನ್ನು ಪರೀಕ್ಷೆ ಮಾಡಿ ನೋಡುವರು. ಒಂದು ಇನಾಮವನ್ನು ಹೊಂದಿದವ ಯಾವ ದನವಾದರೂ ಇನ್ನೊಂದು ಬಹುಮಾನವನ್ನು ಹೊಂದಲು ಬಿಡಲ್ಪಡಲಾರದು, ಆದರೆ ಸ್ಪೆಷಿಯಲ್ ಇನಾಮನ್ನು ಮಾತ್ರ ಹೊಂದಬಹುದು.

4 ಅಂಟುರೋಗವಿರತಕ್ಕ ಪ್ರದೇಶದಿಂದ ಬರತಕ್ಕ ದನಗಳನ್ನು ಪ್ರದರ್ಶಿಸಲು ಬಿಡಲಾಗತಕ್ಕದ್ದಲ್ಲ

ಅಪಿಡಿರ‍್ಸ್.

1 ಈ ದೇಶದಲ್ಲಿ ಹುಟ್ಟಿಬೆಳೆದ ಗೂಳಿಗಳು—1 ನೇ ಇನಾಮು ಭಂಗಾರದ ಮೆಡಲು, 2, 3 ನೇ ಇನಾಮುಗಳು ನಗದು ಹಣ ರೂಪದಲ್ಲಿ.

2. ಪರದೇಶದಲ್ಲಿ ಹುಟ್ಟಿದ ಗೂಳಿಗಳು—1 ನೇ ಇನಾಮು ಭಂಗಾರದ ಮೆಡಲು 2, 3 ನೇ ಇನಾಮುಗಳು ನಗದು ಹಣ ರೂಪದಲ್ಲಿ

3 ಓಡುವ ಎತ್ತುಗಳು ಜೋಡಿ—ಮೂರು ಇನಾಮುಗಳು ನಗದು ಹಣ ರೂಪದಲ್ಲಿ.

4 ಭಾರ ಎಳೆಯುವ ಎತ್ತಿನ ಜೋಡಿ—ಮೂರು ಇನಾಮುಗಳು ನಗದು ಹಣ ರೂಪದಲ್ಲಿ.

5 ಕರುವಿನ ಹಸುಗಳು—

(ಎ) ದೊಡ್ಡದಾದವುಗಳಿಗೆ—ಮೂರು ಇನಾಮುಗಳು, ನಗದು ಹಣ ರೂಪದಲ್ಲಿ

(ಬಿ) ಸಣ್ಣದಾದವುಗಳಿಗೆ, ಡಿಟ್ಟೊ

6. ಹೋರಿಗಳು—

(ಎ) ಒಂದುವರ್ಷದ ಮೇಗಿನವುಗಳಿಗೆ ಮೂರು ಇನಾಮುಗಳು, ನಗದು ಹಣರೂಪದಲ್ಲಿ.

(ಬಿ) ಎರಡು ವರ್ಷದೊಳಗಿನವುಗಳಿಗೆ—ಡಿಟ್ಟೊ.

7. ಎರಡು ಹಲ್ಲಿನ ಹಸುವಿನ ಕರುಗಳಿಗೆ—ಎರಡು ಇನಾಮುಗಳು ನಗದು ಹಣರೂಪದಲ್ಲಿ

8. (ಎ) ಉಳುವ ಎತ್ತುಗಳು (ಕೊಡಗಿನವು) ಎರಡು ಇನಾಮುಗಳು ನಗದು ಹಣರೂಪದಲ್ಲಿ

(ಬಿ) ಉಳುವ ಕೋಣಗಳು ಕೊಡಗಿನವು ಡಿಟೊ

9. ದಕ್ಷಿಣ ಕೊಡಗಿನ ಗಿಡ್ಡರಾಸು ಬೀಜದ ಹೋರಿಗಳು—ಎರಡು ಇನಾಮುಗಳು ನಗದು ಹಣರೂಪದಲ್ಲಿ.

10. ಕರೆಯುವ ಎಮ್ಮೆಗಳು—ಡಿಟೊ.

11. ಪ್ರದರ್ಶನದಲ್ಲಿ ಅತ್ಯುತ್ತಮವಾದ ರಾಸಿಗೆ ನಗದು ಹಣರೂಪದಲ್ಲಿ ಒಂದು ಇನಾಮು.

12. ಹಸರುವಾಣಿ—ಇವಕ್ಕೆ ಕೆಲವು ಇನಾಮುಗಳು ನಗದು ಹಣರೂಪದಲ್ಲಿ ಕೊಡಲ್ಪಡುವುವು

ಎ. ಸುಬ್ಬಾರಾಯ,
ಡಿಪ್ಟಿಡೈರೆಕ್ಟರ್ ಲ್ಯಾಂಡ್‌ರೆಕಾರ್ಡ್ಸ್ ಮತ್ತು
ಎಗ್ರಿಕಲ್ಚರ್ ಇಲಾಖೆ

ವಿಮರ್ಶೆ.

'ಸರಸ್ವತಿ' ಆರ್. ಕಲ್ಯಾಣಮ್ಮನವರು ಇದರ ಸಂಪಾದಿಕೆ, ಚಾಮರಾಜಪೇಟೆ, ಬೆಂಗಳೂರು.

ವಾರ್ಷಿಕ ಚಂದಾ ಮೂರು ರೂಪಾಯಿ.

ಸರಸ್ವತಿಯ ಮಾಸಪತ್ರಿಕೆ ಇದು ಜನ್ಮವೆತ್ತಿ ಮೂರು ವರುಷಗಳಾಯಿತು, ನಾಲ್ಕನೆ ವರುಷದ ಪ್ರಥಮ ಸಂಚಿಕೆಯು ನಮ್ಮ ವಿಮರ್ಶೆಗೆ ಬಂದಿದೆ. ಇದು ಮೇಲ್ತರಗತಿಯ ಪತ್ರಿಕೆಯೆಂದೇ ನಮ್ಮ ಭಾವನೆ. ಇದರ ಸಂಪಾದಕಿಯರು ವಿದ್ಯಾವತಿಯರಾಗಿದ್ದು ತಮ್ಮ ಪುಸ್ತಕಗಳ ಮತ್ತು ಈ ಪತ್ರಿಕೆಯ ಮುಖೇನ ಭಾಷಾಸೇವೆಯನ್ನೂ, ದೇಶಸೇವೆಯನ್ನೂ ನಡೆಸುತ್ತಿರುವರು. ಸ್ತ್ರೀ ಸಮಾಜ ಸುಧಾರಣೆಯೆ ಇದರ ಮುಖ್ಯ ಧ್ಯೇಯ. ಸ್ತ್ರೀ ವಿದ್ಯಾಭ್ಯಾಸ, ಪುರಾಣ, ವರದಕ್ಷಿಣೆ, ವ್ರತಾಚರಣೆ ಇವೇ ಮೊದಲಾದ ವಿಷಯಗಳನ್ನು ಕುರಿತ ದಿವ್ಯ ಲೇಖನಗಳು ಈ ಸಂಚಿಕೆಯಲ್ಲಿ ಬಂದಿವೆ. ಸರ್ವತ್ರ ಕರ್ನಾಟಕರು ಆದರಿಸಬೇಕಾದ ಪತ್ರಿಕೆ. ಈ ಪತ್ರಿಕೆಯು ಗೃಹಿಣಿಯರೆಲ್ಲರ ಕೈಯಲ್ಲಿರಬೇಕಾದ ಸಂಶಯವಿಲ್ಲ. ಕಷ್ಟನಷ್ಟ ಸುಖಗಳ ಕೈಚೀಲ. ಸ್ತ್ರೀ ಸಮಾಜದ ಏಳ್ಗೆಯನ್ನು ಪ್ರತಿಪಾದಿಸುವ ಈ ಮಾಸಪತ್ರಿಕೆಯು ಕಣ್ಮರೆಯಾಗದಂತೆ ಕನ್ನಡಿಗರು ಕೈಕೊಡದೆ ಇರಲಾರರು. ಕನ್ನಡನಾಡಿನಲ್ಲಿ ಈ ತೆರದ ಪತ್ರಿಕೆಯು ಇದೊಂದೇ.

ವರ್ತಮಾನ ಸಂಗ್ರಹ.

ಒಳದೇಶ.

ಸಿಲೋನಿನಲ್ಲಿ ಫಾರೆಸ್ಟ್ ರೇಂಜರಾಗಿರುವ ಮೆ|| ಮಂಡೇಟಿರ ಸುಬ್ಬಯ್ಯನವರಿಗೆ ಇಂಡಿಯನ್ ಟೆರಿಟೋರಿಯಲ್ ಪಟಾಲಮಿನಲ್ಲಿ ಕಿಂಗ್ಸ್ ಕಮಿಶನ್ ದೊರೆತಿದೆಯೆಂತಲೂ ಈಗ ಅವರು 12 ನೇ ಮಲಬಾರು ಬೆಟಲಿಯನ್ನಿನಲ್ಲಿ ಸೆಕೆಂಡ್ ಲೆಫ್ಟಿನೆಂಟರಾಗಿ ತರಬೇತು ಹೊಂದುತ್ತಿರುವರೆಂದೂ ತಿಳಿಯಬರುತ್ತದೆ.

ಜಮೀನುದಾರರ ಸಂಘದ ಕಮಿಟಿಗಳನ್ನು ಏರ್ಪಡಿಸುವ ಬಗ್ಗೆ ತಾ|| 28-10-23 ರಲ್ಲು ಹೊರಮಲೆನಾಡಿನವರ ಮೀಟಿಂಗು ಗಾಳಿಬೀಡು ಶಾಲೆಯಲ್ಲಿಯೂ, ತಾ|| 29-10-23 ರಲ್ಲಿ ಭಗಂಡೇಶ್ವರ ನಾಡಿನವರ ಮೀಟಿಂಗು ಭಗಂಡೇಶ್ವರ ದೇವಸ್ಥಾನದಲ್ಲಿಯೂ ನಡೆದು ನಾಡು ಕಮಿಟಿಗಳು ಏರ್ಪಡಿಸಲ್ಪಟ್ಟವು

ಕೊಡಗಿನಿಂದ ತಿರುಚನಾಪಳ್ಳಿಗೆ ಟೆರಿಟೋರಿಯಲ್ ಪಟಾಲಮಿನವರು ಕೆಲವರು ತರಬೇತಿಗೆ ಹೋಗಿದ್ದವರು ಕಳೆದವಾರ ತರಬೇತು ತೀರಿಸಿ ವಾಪಸುಬಂದಿರುವರು

ಇದೇ ತಾರೀಕು 3 ನೇ ಶನಿವಾರ ದಿನ ಸಾಯಂಕಾಲ 4½ ಗಂಟೆಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಡಿಬೇಟಿಂಗ್ ಸೊಸೈಟಿಯ ಒಂದು ಮೀಟಿಂಗು ಪಾರ್ಲಿಮೆಂಟಿನ ರೀತಿ ನಡೆಯುವುದು. ಹಿಂದೂ ದೇಶದ ಕೋರ್ಟು ಭಾಷೆಯು ಆಂಗ್ಲಭಾಷೆ ಆಗಬೇಕೋ ಎಂಬ ವಿಷಯವು ಚರ್ಚಿಸಲ್ಪಡುವುದು. ಇದಕ್ಕೆ ಪರವಾಗಿ ಮೆ|| ಬಿ ಎಸ್. ಕುಶಾಲಪ್ಪನವರೂ ವಿರೋಧವಾಗಿ ಮೆ|| ಸಿ. ಎನ್ ವೆಂಕಟ್ಟಯ್ಯನವರೂ ಮಾತಾಡುವರು. ಕಮಿಷನರವರು ಅಧ್ಯಕ್ಷರಾಗಲು ಒಪ್ಪಿರುವರು. ಮೆ|| ಕೆ. ಜಿ ಬೆಳ್ಯಪ್ಪನವರು, ಮೆ|| ಕೆ ಚಂಗಪ್ಪ ರಾ|| ಸಾ|| ರವರು ಮತ್ತು ಮೆ|| ಪಿ ಮಂಗೇಶರಾಯರು ಕ್ಯಾಬಿನೆಟ್ ಮೆಂಬರುಗಳಾಗಲು ಸಮ್ಮತಿಸಿರುವರು

ಕಮಿಷನರವರ ಆಫೀಸಿನಲ್ಲು ತಾತ್ಕಾಲಿಕ ಒಂದು ಗುಮಾಸ್ತನ ಕೆಲಸಕ್ಕೆ ತಿಂಗಳಿಗೆ 50 ರೂಪಾಯಿ ಸಂಬಳದ ಒಬ್ಬ ಗ್ರಾಜ್ಯುವೇಟ್ ಬೇಕೆಂದು ನೋಟೀಸು ಪ್ರಕಟವಾಗಿದೆ. ಇಷ್ಟವಿರುವವರು ಅಪ್ಲಿಕೇಷನ್ ಬರಕೊಳ್ಳಬಹುದು.

ತಾ|| 23-10-23 ರಲ್ಲು ವೀರಾಜಪೇಟೆ ಮೋಡಲ್ ಸ್ಕೂಲಿನಲ್ಲಿ ನಡೆದ ಮಹಮ್ಮದೀಯರ ಗುರುಗಳಾದ ಹಜರತ್ ಮಹಮ್ಮದ್‌ರವರ ಜನ್ಮದಿನದ ಉತ್ಸವದ ಮೀಟಿಂಗಿಗೆ ಡಿ ಮೋಜಿಸ್ಟ್ರೇಟ್ ಮೆ|| ಕೆ ಚಂಗಪ್ಪನವರು, ಮೆ|| ನಡಿಕೇರಿಯಂಡ ಕಾಳಪ್ಪನವರು, ಮೆ|| ಅಪ್ಪಾರಂಡ ಚಂಗಪ್ಪನವರು, ಮೆ|| ಸಿ. ಎಂ. ರಾಮರಾಯರೂ ಇನ್ನೂ ಅನೇಕ ಮಹನೀಯರು ಸೇರಿ ಸುಮಾರು ನಾಲ್ಕುನೂರು ಜನರು ಹಾಜರಿದ್ದರು, ಮೆ|| ಸೈಯ್ಯದ್ ಅಬ್ದುಲ್ಲಾ ಸಾಹೇಬರು ಖೊರಾನ್ ಓದಿ ಮೀಟಿಂಗು ಪ್ರಾರಂಭಿಸಿದರು. ಮೆ|| ಅಬ್ದುಲ್ ಮಜೀದ್ ಖಾನ್‌ರವರು ಇಂಗ್ಲೀಷಿನಲ್ಲಿಯೂ ಮೈಸೂರಿನ ಮೆ|| ಅಬ್ದುಲ್ ಹಫೀಜ್ ಸಾಹೇಬರು ಹಿಂದುಸ್ಥಾನಿಯಲ್ಲಿಯೂ, ಮೆ|| ಮಾಯಿಸೆಕಾಶನವರು ಕನ್ನಡದಲ್ಲಿಯೂ ಗುರುಗಳವರ ಚರಿತ್ರೆ ಸಾರಾಂಶವನ್ನು ಓದಿದರು. ಸಭೆಯವರು ಸಂತೋಷಭರಿತರಾದರು. ಇಂಪಾದ ಸಂಗೀತವು ಹಾಡಲ್ಪಟ್ಟಿತು. ಸಭೆಯ ಪರವಾಗಿ ಮೆ|| ಬಿ. ಬೋಪಯ್ಯನವರೂ, ಅಂಜುಮನ್ ಪರವಾಗಿ ಮೆ|| ಅಬ್ದುಲ್ ಗಫೂರ ಖಾನ್‌ರವರು ಮತ್ತು ಅಬ್ದುಲ್ ಹಫೀಜ್ ಸಾಹೇಬರು ಸಭೆಗೆ ವಂದನೆಗಳನ್ನು ಅರ್ಪಿಸಿದ ನಂತರ ಮಿಠಾಯಿ ಸ್ವೀಕಾರದಿಂದ ಮೀಟಿಂಗು ಬರಖಾಸ್ತಾಯಿತೆಂದು ಒಂದು ಬಾತ್ಮಿ

ಕಾವೇರಿ ಸಂಕ್ರಮಣದಿಂದೀಚೆಗೆ ಮೋಡ ಕವಿದುಕೊಳ್ಳುತ್ತಲೂ ಒಂದೊಂದು ದಿನ ಮಳೆಯು ಹನಿಕುತ್ತಲೂ ಇದೆ

ಫ್ರೇಜರ್ ಪೇಟೆಯಲ್ಲಿ ಕ್ಷಯರೋಗದಿಂದ ಬಳಲುತ್ತಿದ್ದ ಮೆ|| ಕಲ್ಲುಮಾಡನ ಅಪ್ಪಚ್ಚನವರು ಎದೆಕೋವೆ ದೆಶೆಯಿಂದ ತಾ|| 26-10-23 ರಲ್ಲು ಮಡಿಕೇರಿ ಆಸ್ಪತ್ರೆಯಲ್ಲಿ ಮೃತಪಟ್ಟರು.

ಹಿಂದೂದೇಶ.

ಬಾಬ್ಬರ್ ಅಕಾಲಿಯ ಓಡಿ ಹೋಗುತ್ತಿದ್ದ ಒಬ್ಬ ಮುಖ್ಯ ಮುಂದಾಳಾದ ಧಾನಾಸಿಂಗ್‌ರನ್ನು ಸರಕಾರದವರು ಸೆರೆ ಹಿಡಿದಿರುವರು. ಅತಿ ಅಪಾಯಕರವಾದ ಮುಂದಾಳುಗಳಲ್ಲಿ ಇವರೊಬ್ಬರಂತೆ.

ಸ್ವರಾಜ್ಯ ಪಾರ್ಟಿಯ ಮುಂದಾಳಾದ ಚಿತ್ತರಂಜನ ದಾಸರವರು ಕಲ್ಕತ್ತೆಯಲ್ಲಿ 'ಫಾರ್‌ವರ್ಡ್' ಎಂಬದೊಂದು ಪತ್ರಿಕೆಯನ್ನು ಹೊರಡಿಸಿರುವರು. ಇದು ಇಂಗ್ಲೀಷಿನಲ್ಲಿ ಪ್ರತಿದಿನವೂ ಪ್ರಕಟವಾಗುವುದು. ಅನೇಕ ಕಾಂಗ್ರೆಸ್ ಮುಂದಾಳುಗಳು ಇದಕ್ಕೆ ಬೆಂಬಲ ಕೊಡುತ್ತಾರಂತೆ

ಅಮೃತಸರದ ಜೈಲಿನಲ್ಲಿಟ್ಟಿರುವ ಅನೇಕ ಅಕಾಲಿ ಮುಂದಾಳುಗಳ ವಿಚಾರಣೆಯನ್ನು ನೋಡಲಿಕ್ಕಾಗಿ ಪಂಡಿತ ಮೋತಿಲಾಲ್‌ನೆಹರು, ಮೆ|| ಗಿರ್ಧಾರಿಲಾಲ್ ಮತ್ತು ಮದ್ರಾಸಿನ ಮೆ|| ಟಿ ಪ್ರಕಾಶಮ್‌ರವರು ಅಮೃತಸರಕ್ಕೆ ಹೋಗಿರುವರು

ಲಾಲಾ ಲಜಪತರಾಯರು ತಾ|| 27-10-23 ಒಂದು ಕಾನ್‌ಫರೆನ್ಸ್ ಮಾಡಲಿಕ್ಕಾಗಿ ಕಾಂಗ್ರೆಸ್ ಕೆಲಸಗಾರರನ್ನು ಸೊಲನಿಗೆ ಕರೆದಿರುವರು

ಅಲಹಾಬಾದಿಗೆ ವೈಸರಾಯರು ಆಗಮಿಸಿದರೆ ಅಲ್ಲಿ ನಡೆಯಬಹುದಾದ ಆಡಂಭರದ ಉತ್ಸವಗಳಿಗೆ ಜನರು ಯಾರೂ ಸೇರಬಾರದೆಂದು ಅಲ್ಲಿಯ ಮುನ್ಸಿಪಾಲಿಟಿಯವರು ಠರಾವು ಮಂಜೂರು ಮಾಡಿರುವರು

ಜೈತಾಸದಲ್ಲಿ ಅಕಾಲಿಗಳ ಸತ್ಯಾಗ್ರಹವನ್ನು ವಿರೋಧಿಸುವುದಕ್ಕಾಗಿ ಒಬ್ಬ ಸಿಕ್ಕ ಪೋಲೀಸ ಸುಪರಿಂಟೆಂಡೆಂಟರನ್ನು ನೇಮಿಸಲು ಆತನು ಈ ಕೆಲಸಕ್ಕೆ ಒಪ್ಪದ್ದರಿಂದ ಆತನನ್ನು ಕೈದು ಮಾಡಿರುವರು.

ಮೌಲಾನ ಶೌಕತ್ ಅಲಿಯವರನ್ನು ತಾ|| 26 10-23 ರಲ್ಲು ವಾಡ್ಯಾರ್ನ್ ಎಂಬಲ್ಲಿ ಜೈಲಿನಿಂದ ಬಿಡುಗಡೆ ಮಾಡಿದರು. ಅವರ ತಾಯಿ ಬೈಅಮ್ಮನ್‌ರವರೂ, ಸಹೋದರ ಮೌಲಾನ ಮಹಮ್ಮದ್ ಅಲಿಯವರೂ ಅವರನ್ನು ಎದುರುಗೊಂಡು ಅಹ್ಮದಾಬಾದಿಗೆ ಹೊರಟು ಹೋದರು

ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ಮೆಂಬರಾಗಿದ್ದ ಸರ್ ಮಣೀಂದ ಚಂದ್ರನಂದಿಯವರು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟಿರುವರು. ಅವರ ಬದಲಿಗೆ ಬೇರೊಬ್ಬರನ್ನು ಚುನಾಯಿಸುವರು

ಶ್ರೀಯುತ ಲಾಲಾ ಲಜಪತರಾಯರೂ ಮತ್ತು ಡಾ|| ಅನ್ಸಾರಿಯವರೂ ಸೇರಿ ಪಂಗಡ ಭೇದಗಳನ್ನು ಹೋಗಲಾಡಿಸಲು ಒಂದು ಒಪ್ಪಂದದ ಕರಡನ್ನು ತಯಾರು ಮಾಡುವುದರಲ್ಲಿ ಮಗ್ನರಾಗಿರುತ್ತಾರೆ. ಅದು ಸದ್ಯದಲ್ಲಿಯೇ ತಯಾರಾಗುವುದು. ಈ ಕರಡನ್ನು ಮಧ್ಯಗಾಮಿಗಳಿಗೂ ಮುಖ್ಯಸ್ಥರಿಗೂ ಕಳುಹಿಸಿಕೊಟ್ಟು ಅವರ ಅಭಿಪ್ರಾಯವನ್ನು ತೆಗೆದುಕೊಂಡು ಕೋಕನಾಡ ಕಾಂಗ್ರೆಸ್ಸಿನಲ್ಲಿ ಸಮಾಲೋಚನೆಗೆ ಇಡುವರು

ಬೆಜವಾಡ ಮುನಿಸಿಪಾಲಿಟಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಂಗಡದವರೇ ಗೆದ್ದರು. ಡಿ. ಎ ಹನುಮಂತರಾಯರೂ ಅಪ್ಪಾಸ್ವಾಮಿಯವರೂ ಕಾಂಗ್ರೆಸ್ಸಿನವರಿಗೆ ವಿರೋಧವಾಗಿ ಬಹಳ ಕೆಲಸ ಮಾಡಿದರೂ ಸಾಧ್ಯವಾಗಲಿಲ್ಲ

ಸಂಸ್ಕೃತ ಪಂಡಿತರಲ್ಲಿ ಅಗ್ರಗಣ್ಯರಾಗಿರುವ ಸರ್ ರಾಮಕೃಷ್ಣ ಭಂಡಾರ್ಕರ್‌ರವರು ಖಾಯಿಲೆಯಲ್ಲಿ ಮಲಗಿರುವರು.

ಪಂಜಾಬು ಸರಕಾರವು ಒಂದು ಹೊಸ ಆಜ್ಞೆಯನ್ನು ಹೊರಡಿಸಿದೆ. ಶಿರೋಮಣಿ ಗುರುದ್ವಾರ ಪ್ರಬಂಧಕ ಕಮಿಟಿಯನ್ನು ಅಥವಾ ಅಕಾಲೀ ದಳವೆಂಬ ಸಂಘದ ಪ್ರಕಟನಾಪತ್ರಗಳನ್ನು ಸರಕಾರದ ಅನುಮತಿಯಿಲ್ಲದೆ ಯಾವ ಪತ್ರಕರ್ತರೂ ಪ್ರಕಟಿಸಬಾರದೆಂದು ಈ ಅಪ್ಪಣೆಯು ಹೇಳುತ್ತದೆ.

ವಿದೇಶ.

ತೆಹರಾನಿನಲ್ಲಿ ಇಸ್ಲಾಮ್ ಮತ್ತು ಪರ್ಶಿಯಾದ ಹೆಸರಿನಲ್ಲಿ ಬ್ರಿಟಿಷರಿಗೆ ವಿರೋಧವಾಗಿ ಹಜರತ್ ಮಹಮ್ಮದರವರ ಜನ್ಮದ ದಿನ ಒಂದು ದೊಡ್ಡ ಮೀಟಿಂಗು ಮಾಡಲು ಏರ್ಪಾಡು ನಡೆದಿದೆಯಂತೆ

ಜರ್ಮನಿಯಲ್ಲಿ ಸೆಪರೆಟಿಸ್ಟ್ ಪಂಗಡದವರು ಅನೇಕ ಕಡೆ ದಂಗೆ ಎದ್ದಿರುವರು. ಕೆಲವು ಕಡೆಗಳಲ್ಲಿ ಅವರು ಪಟ್ಟಣಗಳನ್ನು ತಮ್ಮ ಸ್ವಾಧೀನಪಡಿಸಿಕೊಂಡಿರುವರು. ಕೆಲವು ಕಡೆಗಳಲ್ಲಿ ರಿಪಬ್ಲಿಕ್ ಸರ್ಕಾರದವರು ಇವರನ್ನು ಸೋಲಿಸಿರುವರು. ಕದನಗಳಲ್ಲಿ ಕೆಲವು ಮರಣಗಳೂ ಸಂಭವಿಸಿರುವುದಲ್ಲದೆ ಅನೇಕರಿಗೆ ಗಾಯಗಳುಂಟಾಗಿವೆಯಂತೆ

ಇಂಗ್ಲೆಂಡಿನಲ್ಲಿ ಅತಿ ಸುಂದರವಾದ ಮತ್ತು ಅತ್ಯಂತ ವಿಶಾಲವಾದ ವಾಶ್‌ಹಾಲ್ ಸಿನೆಮಾ ನೋಟದ ಮನೆಗೆ ಬೆಂಕಿಬಿದ್ದು ಪೂರ್ಣ ನಾಶವಾಗಿ ಸುಮಾರು 18,00,000 ರೂಪಾಯಿ ನಷ್ಟವಾಗಿರುವುದು

ಪರ್ಶಿಯದ ಅರಸರಾದ ಷಾರವರು ನೂತನ ಯುದ್ಧ ಮಂತ್ರಿಯನ್ನು ಮಂತ್ರಿಮಂಡಲಿಯನ್ನು ಏರ್ಪಡಿಸುವಂತೆ ಹೇಳಿಕೊಂಡಿರುವರು. ಷಾರವರು ಯೂರೋಪಿನಲ್ಲಿ ಒಂದು ಪ್ರಯಾಣಕ್ಕೆ ಹೊರಡುವರೆಂದು ವರ್ತಮಾನವಿದೆ

ಮೆ|| ಮಾಂಟೇಗ್ಯೂರವರು ದಕ್ಷಿಣ ಅಫ್ರಿಕಕ್ಕೆ ತಮ್ಮ ಪ್ರಯಾಣವನ್ನು ಬರುವ ವರ್ಷದವರೆಗೆ ಮುಂದರಿಸಿರುವರು. ಆದರೆ ಅವರು ತನ್ನ ಪತ್ನಿಯೊಡನೆ ಹಿಂದೂ ದೇಶಕ್ಕೆ ರಜೆಯ ಭೇಟಿಗಾಗಿ ಡಿಸಂಬರು 21 ರಲ್ಲು ಬೊಂಬಾಯಿಗೆ ಬಂದು ಮಾರ್ಚ ಮಧ್ಯದಲ್ಲಿ ವಾಪಸು ಹೋಗುವರಂತೆ

ಪೋಲೆಂಡಿನ ಮುಖ್ಯ ಪಟ್ಟಣವಾದ ವಾರ್ಸಾನಗರದ ಕೋಟೆಯಲ್ಲಿ ಹೆಚ್ಚಾಗಿ ಕೂಡಿಡಲ್ಪಟ್ಟಿದ್ದ ಸಿಡಿ ಮದ್ದಿನ ಗುಂಡುಗಳು ಇದ್ದಕ್ಕಿದ್ದ ಹಾಗೆಯೇ ಸಿಡಿದು ಭಯಂಕರವಾದ ಅನಾಹುತವನ್ನು ಮಾಡಿದೆ. ಕೋಟೆಯೂ ಅದರ ಸುತ್ತುಮುತ್ತಲಿನ ಮನೆ ಮಠಗಳೂ ನಾಶವಾದುವು. ಅದರ ಧ್ವನಿಯು ಸುಮಾರು 30 ಮೈಲಿ ದೂರದವರೆಗೆ ಕೇಳಿತಂತೆ. 200 ಜನರು ಸತ್ತಿರುವರು. 500 ಮಂದಿಗೆ ಘಾಯವಾಗಿದೆ. ಸುಮಾರು 2000 ಟನ್ನು ಮದ್ದು ನಾಶವಾಗಿದೆ

ನವಂಬರ್ 1 ನೇ ತಾರೀಕಿನಲ್ಲಿ ಲಾರ್ಡ್ ಪೀಲ್‌ರವರು ಆಂಗ್ಲೋ ಇಂಡಿಯನರ ಸಂಘದ ಪರವಾಗಿ ಹೋಗುವ ಡೆಪ್ಯುಟೇಶನನ್ನು ಸ್ವೀಕರಿಸಲು ಒಪ್ಪಿರುವರು

ಅಕ್ಟೋಬರು 22 ರಲ್ಲು ಗ್ರೀಸಿನಲ್ಲಿ ನಡೆಯುತ್ತಿರುವ ಕೌನ್ಸಿಲ್ ಚುನಾವಣೆಯ ವಿಷಯ ಪತ್ರಿಕೆಗಳು ಇಷ್ಟ ಸಂಗತಿಯನ್ನು ಇದ್ದ ಹಾಗೆ ಬರೆಯಲು ಬಿಡಲಿಲ್ಲವೆಂಬ ಕಾರಣದಿಂದ ಜನರಲ್ ಮೆಟಿಕ್ಸಾಸ್‌ರವರು ಎರಡು ಸಾವಿರ ಸೈನಿಕರೊಂದಿಗೆ ದಂಗೆ ಎದ್ದರು. ಸರಕಾರದವರಿಗೂ ಅವರಿಗೂ ಜಗಳವು ಉಂಟಾಗಿ ಅನೇಕ ಮರಣಗಳು ಸಂಭವಿಸಿದವು. ಆದರೆ ಸರಕಾರದವರು ದಂಗೆಯನ್ನು ನಿಲ್ಲಿಸುತ್ತಾ ಬಂದಿರುವರಾಗಿ ವರ್ತಮಾನ

ತುಲಸಿದಾಸ.

(ಬರೆದುಬಂದದ್ದು)

ಕವಿಯು ವಾಙ್ಮಯಕ್ಷೇತ್ರದಲ್ಲಿ ಚಕ್ರವರ್ತಿಯು ಎಲ್ಲಾ ಭಾಷೆಗಳಲ್ಲಿಯೂ ಕವಿಗಳಿದ್ದಾರಷ್ಟೆ. ಭರತ ಖಂಡದಲ್ಲಿ ಲೆಕ್ಕವಿಲ್ಲದಷ್ಟು ಭಾಷೆಗಳಿವೆ. ಅನೇಕ ಮುಖ್ಯ ಭಾಷೆಗಳಿಗೆ ರಾಮಾಯಣ ಮಹಾಭಾರತ ಗ್ರಂಥಗಳು ಸಂಸ್ಕೃತದಿಂದ ಪರಿವರ್ತಿತವಾಗಿವೆ. ಕನ್ನಡದಲ್ಲಿ ಕುಮಾರ ವ್ಯಾಸನ ಭಾರತ, ರಾಮಾಯಣವೂ, ತಮಿಳು ಭಾಷೆಯಲ್ಲಿ ಕಂಬನ ರಾಮಾಯಣವೂ ಪ್ರಸಿದ್ಧವಾಗಿವೆ. ಆದರೆ ಹಿಂದಿಭಾಷೆಯ ತುಳಸಿರಾಮಾಯಣವು ಪ್ರಾವಿಣ್ಯದಿಂದ ಎಲ್ಲ ರಾಮಾಯಣಗಳಿಗಿಂತಲೂ ಉತ್ಕೃಷ್ಟವೆನಿಸಿದೆ. ತುಳಸಿದಾಸನ ರಾಮಾಯಣವು ವಾಲ್ಮೀಕಿಯ ಸಂಸ್ಕೃತ ರಾಮಾಯಣದಷ್ಟೆ ಉತ್ತಮ ಗ್ರಂಥವಾಗಿದೆ

ತುಳಸಿದಾಸನು ರಾಮಭಕ್ತನು. ಇವನ ಜೀವನ ಕ್ರಿಯಾದಕ್ಷೋ ಕಮ್ಮಿಯಾದುದಲ್ಲ. ಈತನು 1586 ಸಂವತ್ಸರದಲ್ಲಿ ಬಾಂದಾಜಿಲ್ಲೆಯ ರಾಜಾಪುರ ಗ್ರಾಮದಲ್ಲಿ ಜನ್ಮವೆತ್ತಿದನು. ಇವನ ತಾಯಿಯ ಹೆಸರು ಹುಲಸಿ, ತಂದೆಯ ಹೆಸರು ಆತ್ಮಾರಾಮದುಬೇ. ತುಳಸಿದಾಸನ ಚಿಕ್ಕ ನಾಮ ರಾಮಬೋಲಾ ಎಂದಿತ್ತು. ಇವನ ಗುರು ಕಾಶೀ ಕ್ಷೇತ್ರದಲ್ಲಿದ್ದ ನರಹರಿದಾಸ. ಇವನಿಗೆ ಕುಲೀನ ಬ್ರಾಹ್ಮಣ ಕನ್ಯೆಯನ್ನು ತಂದು ವಿವಾಹ ನಡಿಸಿದ್ದರು. ಇವಳ ಹೆಸರು ರತ್ನಾವಳಿ. ಈಕೆಯು ಸೌಂದರ್ಯವತಿಯೂ ಗುಣಶಾಲಿನಿಯಾಗಿಯೂ ಇದ್ದಳು. ತುಲಸಿದಾಸನು ತನ್ನ ಹೆಂಡತಿಯನ್ನು ಬಹಳವಾಗಿ ಪ್ರೀತಿಸುತಿದ್ದನು. ಈಕೆಯನ್ನು ಬಿಟ್ಟು ಅಗಲ್ಲುತ್ತಿರಲಿಲ್ಲ. ಒಂದು ದಿನ ಈಕೆಯು ತನ್ನ ತವರು ಮನೆಗೆ ಹೋಗಿದ್ದಾಗ ತುಲಸಿದಾಸನು ಮನೆಯಲ್ಲಿ

ಪತಿಯನ್ನು ಕಂಡು, ಲಜ್ಜಿತಳಾಗಿ ತನ್ನ ಗಂಡನನ್ನು ಕುರಿತು ಹೀಗೆಂದಳು— "ನನ್ನ ಮೇಲೆ ನಿಮಗೆಷ್ಟು ಪ್ರೇಮ. ಈ ಪ್ರೇಮವನ್ನು ದೇವರ ಕಡೆಗೆ ತಿರುಗಿಸಿದರೆ ಲಾಭವೆಷ್ಟು ಆಗಬಹುದು" ಈ ಸಣ್ಣ ವಿಷಯವು ಅವನ ಜ್ಞಾನಚಕ್ಷುವನ್ನು ತೆರೆಯುವಂತೆ ಮಾಡಿತು. ಈತನು ಕೂಡಲೆ ಕಾಶಿಗೆ ಹೊರಟು ಹೋದನು. ಹೆಚ್ಚಾಗಿ ಇವನು ಕಾಶಿ ಮತ್ತು ಅಯೋಧ್ಯ ಈ ಊರುಗಳಲ್ಲೇ ವಾಸಮಾಡುತಿದ್ದನು. ಸಮಯ ಸಿಕ್ಕಿದಾಗ ಮಥುರಾ, ಬೃಂದಾವನ, ಪ್ರಯಾಗ ಚಿತ್ರಕೂಟ, ಮೊದಲಾದ ತೀರ್ಥಸ್ಥಳಗಳಿಗೆ ಯಾತ್ರೆಮಾಡಿದ್ದನು. ಕಾಶಿಯಲ್ಲಿ ಇವನಿದ್ದ ಸ್ಥಳವು ಈಗಲೂ ಹೆಸರುಗೊಂಡಿದೆ. ಈತನು ಸುಮಾರು 21 ಗ್ರಂಥಗಳನ್ನು ಬರೆದಿದ್ದಾನೆ. ಇವುಗಳಲ್ಲಿ ಕೆಲವು ಪ್ರಕಟವಾಗಿವೆ; ಕೆಲವು ಮುದ್ರಿತವಾಗುತ್ತಲಿವೆ. ಇವನು 1680 ವಿಕ್ರಮ ಸಂವತ್ಸರದ ಶ್ರಾವಣ ಶುಕ್ಲ ಸಪ್ತಮಿ ದಿನ ತನ್ನ ಕಳೇಬರವನ್ನು ಬಿಟ್ಟು ಪರಂಧಾಮವನ್ನು ಸೇರಿದನು. ಹಿಂದೀ ಭಾಷೆಯ ನಿಷ್ಕಲಂಕ ಪೂರ್ಣ ಚಂದ್ರನು ಅಸ್ತಮಿಸಿ ಇಂದಿಗೆ ಸುಮಾರು 300 ವರುಷಗಳಿಗಿಂತಲೂ ಹೆಚ್ಚಾಯಿತು.

ತುಲಸಿದಾಸನು ಆಗಿನ ಕಾಲಕ್ಕೆ ರಾಮ ಭಕ್ತಾಗ್ರೇಸರನೆನಿಸಿಕೊಂಡಿದ್ದನು. ಯಾರೇ ಆಗಲಿ, ತಾಯಿತಂದೆಗಳೇ ಆಗಲಿ, ರಾಜನೇ ಆಗಲಿ, ರಾಮನ ಮತ್ತು ಸೀತೆಯ ಭಜನೆ ಮಾಡದೆ ಇದ್ದರೆ ಅಂಥವರಲ್ಲಿ ಕೂಡಾ ಕೂಡ ಬಾರದು ಎಂಬುದು ಇವನ ಮತ. ಒಂದಾನೊಂದು ದಿನ ಮೀರಾಬಾಯಿಯು, ತಾನು ರಾಮ ಭಜನೆ ಮಾಡತಕ್ಕವಳಾದುದರಿಂದ ತನ್ನನ್ನು ಮನೆಯವರೆಲ್ಲರೂ ಮೆಚ್ಚುವುದಿಲ್ಲವೆಂದೂ ಆಗಾಗ್ಗೆ ದೂಷಿಸುತ್ತಾರೆಂದೂ, ಒಂದು ಪತ್ರಬರೆದು ತುಳಸಿದಾಸನಲ್ಲಿಗೆ ಕಳುಹಿಸಿದಳು. ಅದಕ್ಕೆ ದಾಸನು ಹೀಗೆ ಉತ್ತರ ಬರೆದನು: —ಜಾಕೆ ಪ್ರಿಯನ ರಾಮ ವೈದೇಹಿ | ತಜಿಯೆ ತಿನಹಿ ಕೋಟಿ ವೈರಿ ಸಮ ಯದ್ಯಪಿ ಪರಮ ಸನೇಹಿ || —ಯಾವನು ರಾಮನನ್ನು ಮೆಚ್ಚುವುದಿಲ್ಲವೋ ಅಂಥವನು ಕೋಟಿ ವೈರಿಗಳಿಗೆ ಸಮಾನನಾದರೂ, ಪರಮ ಸ್ನೇಹಿತನೇ ಇರುತ್ತಾನೆ.

ತುಲಸಿದಾಸನ ಕಾಲದವರೆಗೆ ಶೈವರಿಗೂ ವೈಷ್ಣವರಿಗೂ ವೈಮನಸ್ಯವಿತ್ತು; ಆಗಾಗ್ಗೆ ಅವರೊಳಗೆ ಜಗಳ ನಡೆಯುತಿತ್ತು. ಇವನ ದೆಸೆಯಿಂದ ವೈಷ್ಣವರು ತಮ್ಮ ದ್ವೇಷವನ್ನು ಮೂಲೆಗೊತ್ತಿದ್ದರು. ಇವನ ರಾಮಾಯಣದಲ್ಲಿ ಮೇಲಿನ ಪಂಗಡದವರಿಗಿರತಕ್ಕ ವೈಮನಸ್ಸನ್ನು ಹೋಗಲಾಡಿಸಿ, ಪ್ರೀತಿವಿಶ್ವಾಸಗಳನ್ನು ಬೆಳೆಸಲು ಯತ್ನಿಸಿದ ಸಂಗತಿಗಳು ಅನೇಕ ಅವೆ.

ದಾಸನಿಗೆ ತನ್ನ ಭಾಷೆಯಮೇಲೆ ಅತ್ಯಂತ ಪ್ರೇಮ. ಇವನಿಗೆ ಸಂಸ್ಕೃತದಲ್ಲಿಯೂ ಹೆಚ್ಚು ಅನುಭವ ಇತ್ತು. ಒಂದು ಸಾರೆ ನಾಗರಿ ಭಾಷಾ ಪಂಡಿತನೊಬ್ಬನು ದಾಸನನ್ನು ಕುರಿತು "ಸ್ವಾಮಿ, ತಾವು ಸಂಸ್ಕೃತ ಪಂಡಿತರಾಗಿದ್ದು ತಮ್ಮ ಸ್ವಭಾಷೆಯಾದ ಹಿಂದಿಯಲ್ಲಿ ರಾಮಾಯಣವನ್ನು ಏಕೆ ಬರೆದಿರಿ" ಎಂದು ಸವಾಲು ಹಾಕಿದನು. ಅದಕ್ಕೆ ದಾಸನು ಜವಾಬು ಹೇಳಿದ್ದೇನಂದರೆ— "ಸಂಸ್ಕೃತ ಉತ್ತಮ ಭಾಷೆ ಏನೋ ಸರಿ. ಆದರೆ ಸಾಮಾನ್ಯ ಜನರು ಸಂಸ್ಕೃತವನ್ನು ಓದಲಾರರು; ಓದಿದರೂ ಅರ್ಥಮಾಡಿಕೊಳ್ಳಲಾರರು. ಅರ್ಥಮಾಡಿಕೊಳ್ಳುವವರು ವಿದ್ಯಾವಂತರು ಮಾತ್ರ. ಆದುದರಿಂದ ಸರ್ವರೂ ಸುಲಭವಾಗಿ ತಿಳಿದುಕೊಳ್ಳುವಂತೆ ಹಿಂದಿಯಲ್ಲಿ ಈ ಗ್ರಂಥವನ್ನು ಬರೆಯಬೇಕಾಯಿತು"

ತುಲಸಿರಾಮಾಯಣವು ಉತ್ತರ ದೇಶದವರ ಧರ್ಮಗ್ರಂಥವೆನಿಸಿಕೊಂಡಿದೆ. ಈ ಗ್ರಂಥವು 9 ಕೋಟಿ ಜನರ ಆಸ್ತಿಯಾಗಿದೆ. ಬೈಬಲಿನ ಪರಿಚಯವು ಇಂಗ್ಲಾಂಡಿನವರಿಗಿರುವುದಕ್ಕಿಂತಲೂ ಹೆಚ್ಚಾಗಿ, ಗಂಗಾವಾಸಿಗಳಿಗೆ ಈ ರಾಮಾಯಣಗ್ರಂಥದ ಪರಿಚಯವಿದೆ. ಜನರ ಮೇಲಿರುವ ಈ ಗ್ರಂಥದ ಪ್ರಭಾವವನ್ನು ನೋಡಿದರೆ, ಇದೀ ಆಸ್ತಿಯಿಂದಿದ ಮೂರು ನಾಲ್ಕು ಗ್ರಂಥಕಾರರಲ್ಲೊಬ್ಬನು ಈತನೆನ್ನ ಬಹುದು.

ಈ ರಾಮಾಯಣವು ಅನೇಕ ಭಾಷೆಗಳಿಗೆ ಪರಿವರ್ತನವಾಗಿದೆ. ಬಂಗಾಳಿ, ಮರಾಟಿ ಉರ್ದು ಇಂಗ್ಲಿಷ್ ಭಾಷೆಗಳಲ್ಲಿ ಈ ಗ್ರಂಥವು ದೊರೆಯುತ್ತದೆ. ಇಂಥಾ ವಿಶೇಷ ಗ್ರಂಥ ಪರಿಚಯವು ದಕ್ಷಿಣೀಯರಾದ ನಮಗೆ ಇನ್ನೂ ಆಗದಿರುವುದು ವಿಷಾದಕರವಾದ ಮಾತು. ವಾವಿಲ್ಲ ವೆಂಕಟೇಶ್ವರಲು ಇವರು ತೆಲುಗು ಭಾಷೆಗೆ ಈ ಗ್ರಂಥವನ್ನು ಪರಿವರ್ತಿಸುತ್ತಿದ್ದಾರೆ. ನಮ್ಮ ಕನ್ನಡ ನಾಡಿನಲ್ಲಿ. ಸಕ್ಕರೆ ಪಟ್ಟಣ ವಾಸಿಗಳಾದ ಡಿ. ಕೆ. ಭಾರದ್ವಾಜ, ವಿದ್ಯಾಭೂಷಣ, ಇವರು ಇದೇ ಗ್ರಂಥವನ್ನು ಕನ್ನಡದಲ್ಲಿ ಬರೆಯಲು ಯೋಚಿಸಿರುತ್ತಾರೆ. ಚಂದಾದಾರರು ಶೀಘ್ರದಲ್ಲಿ ದೊರಕಿದರೆ ಗ್ರಂಥವೂ ಶೀಘ್ರದಲ್ಲಿಯೇ ಹೊರಬೀಳುವುದು. ಭಾರದ್ವಾಜರು ಕನ್ನಡ ವಾಙ್ಮಯದಲ್ಲಿ ಅನುಭವಶಾಲಿಗಳಾದ್ದರಿಂದ, ಈ ಕೆಲಸಕ್ಕೆ ಅವರು ಕೈಹಚ್ಚಿರುವುದು ಕನ್ನಡಿಗರ ಪುಣ್ಯವೇ ಸರಿ. ಚಂದಾದಾರರು ನಿಸ್ವಾರ್ಥತೆಯಿಂದ ಮುಂದೆ ಬಂದು ತುಳಸಿದಾಸರ ಅಮೋಘವಾದ ಗ್ರಂಥಾಮೃತವನ್ನು ಕನ್ನಡದಲ್ಲಿಯಾದರೂ ಸವಿಯಲಾರರೇ!

ತುಲಸಿದಾಸನಿಗೆ ರಾಮನಮೇಲೆ ಪ್ರೇಮವೆಷ್ಟಿತೆಂಬುದು ಈ ಕೆಳಗಿನ ಉದಾಹರಣೆಗಳಿಂದ ಓದುಗರಿಗೆ ತಿಳಿಯಬಹುದು.

ಮುಕುತಹೋಯಿ ವಾಚಾಲು ಪಂಗುಚಢಯಿ ಗಿರಿವರಗಹನ |
ಜಾಸುಕೃಪಾ, ಸೋದಯಾಲು ದ್ರವೌ ಸಕಲ ಕಲಿಮಲ ದಹನ ||

ಯಾರ ಕರುಣೆಯಿಂದ ಮೂಕನು ವಾಚಾಲನಾಗುತ್ತಾನೋ, ಕುಂಟನು ಮಹತ್ತರವಾದ ಬೆಟ್ಟವನ್ನು ಏರುತ್ತಾನೋ, ಅಂಥಾ ಪಾವನಮೂರ್ತಿಯಾದ ನೀನು (ರಾಮನು) ನನ್ನ ಕಡೆಗೆ ಕಣ್ಣು ತಿರುಗಿಸು. ಕಲಿಯುಗದ ಕಷ್ಟಗಳೆಲ್ಲವನ್ನೂ ದಹನಮಾಡತಕ್ಕವನು ನೀನಲ್ಲವೇ!

ಕರೊಸೋಮ ಉರಧಾಮ ಸದಾಕ್ಷೀರ ಸಾಗರಶಯನ ||

ಕ್ಷೀರಸಾಗರದೇ ಶಯನವಾಗಿರತಕ್ಕವನಾದ ನೀನು (ರಾಮನು) ನನ್ನ ಹೃದಯದಲ್ಲಿಯೂ ನಿತ್ಯ ವಾಸಮಾಡುವವನಾಗು.

ತುಲಸಿದಾಸನು ರಾಮಭಕ್ತರಲ್ಲಿ ಅಗ್ರೇಸರನು. ಹಿಂದೀಭಾಷೆಯನ್ನು ಪವಿತ್ರಮಾಡಿದ ಈ ದಿವ್ಯಪುರುಷನ ಚರಿತ್ರೆಯನ್ನು ಕನ್ನಡಿಗರಿಗೆ ಪರಿಚಯಮಾಡಿಸಲು ಅನುಕೂಲ ಮಾಡಿಕೊಟ್ಟ "ಹಿಂದೀಪ್ರಚಾರ" ಕ್ಕೆ ನಾನು ಋಣಿಯಾಗಿದ್ದೇನೆ.

"ಸೀತಾರಾಂ"

ಕನ್ನಡ.

(ಬಾರೆ ಶಾರದಾಂಬ—ಎಂಬಂತೆ).

ಪಾಲಿಸುಮುರಾರಿ ಶೌರಿ || ಪ || ಪಾಲಿಸುಭೂನಾಥ ಖ್ಯಾತ || ಅ ಪ || ಮಾಯಾವತಾರಿಯೆ | ಮಾಯಾಪಹಾರಿಯೆ || ಕಾಯೊಕಮಲೇಶಾ ಈಶಾ || ೧ ||

ನರಸಿಂಹರೂಪನೆ | ದುರಿತವಿದೂರನೆ || ಪೊರೆವಾಸುದೇವ ದೇವಾ || ೨ ||

ಹರದಾಸವಂದಿಪ | ಸುರಗುರುಪೂಜಿಪ || ಹರಿಯೇ ನಿಕಾಯೊ ಕಾಯೊ || ೩ ||

(ಬಾರಿ ಕೊಯ್ಯುನವೂ—ಎಂಬಂತೆ).

ಕಾಪಿಡುಶಂಕರಾ | ಕಾಯಾರಹಿತ ಮಾಯಾತೀತ ಪ್ರೀಯನಾಥ || ಅ ಪ || ಪಾಲಿಸೆನ್ನನು ಕಾಲಕಾಲನೆ | ಫಾಲನೇತ್ರನೆ || ತ್ರಿಶೂಲಮಹಿಪಾಲ ಗುಣಲೋಲಶೀಲ || ೧ ||

ಪ್ರೀತಿಸುಪಿತ ಭೀತಿವಿಡಿಸು | ನೀತಿತೋರಿಸು || ಧಾತಾಜಗನ್ನಾಥ ಮಹಭೂತನಾಥ || ೨ ||

ತೋರುನೀದಯ ಶೂರನಾಯಕ | ಧೀರಪಾಲಕ || ಮಾರಂಹರಗಂಭೀರ ಹರದಾಸನಪೋಷ || ೩ ||

ಹರದಾಸ,
ಅಪ್ಪಚ್ಚ ಕವಿ.

ಪತ್ರವ್ಯವಹಾರಗಳು.

ಚಾಕ್ಕಿದಾರರು ತಳುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ವಿನಂತಿ

ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಸಾತ ಕಮಾನಿನಲ್ಲಿ ಇದೇ ತಿಂಗಳು ತಾರೀಖು 7 ರಲ್ಲು ಟೆಂಪಲ್ ಕಮಿಟಿಯ ಒಂದು ಮಾಸಿಕಸಭೆಯು ಸೇರಿ, ಅನೇಕ ಕಾರ್ಯಕ್ರಮಗಳ ಮಧ್ಯೆ ಮ|| ರಾವ್‌ಸಾಹೇಬ್ ಕೇಟೋಳಿ ಚೆಂಗಪ್ಪನವರ ಹೆಸರಿನಲ್ಲಿ, ಟೆಂಪಲ್ ಕಮಿಟಿಯ ಅಧಿಕಾರಕ್ಕೊಳಪಟ್ಟಿರುವ ದೇವಾಲಯಗಳಲ್ಲೆಲ್ಲಾ ಅವರಿಗೆ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ್ ಹುದ್ದೆಯು ಖಾಯಂ ದೊರಕಿದ ಶುಭಸಂಗತಿಯ ಜ್ಞಾಪಕಾರ್ಥವಾಗಿ, ಪೂಜೆ ಪುರಸ್ಕಾರಗಳು ನಡೆಯುವಂತೆ ತೀರ್ಮಾನವಾದ ವಿಚಾರವು ಅ ದಿನವೇ ಪೇಟೆಯಲ್ಲೆಲ್ಲಾ ಹರಡಿತು. ಈ ಪೂಜೆಯು ಕಾರ್ತೀಕ ಶುದ್ಧ ಷಷ್ಠಿ, ಬುಧವಾರ (ಉತ್ತರ ಆಷಾಢವಾದ ಇವರ ಜನ್ಮನಕ್ಷತ್ರ) ದಿವಸ ಅಂದರೆ ತಾ. 14-11-1923 ಕ್ಕೆ ಬರುತ್ತದೆ. ಅ ದಿನ ಪೂಜೆಯು ವಿಜೃಂಭಣೆಯಿಂದ ನಡೆಯಬೇಕೆಂದು ಹಲಕೆಲ ಪಟ್ಟಣಿಗರು ನಿರೀಕ್ಷಿಸಿಕೊಳ್ಳುತ್ತಿದ್ದರು. ಪ್ರಥಮದಿಂದಲೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಪದವಿಯು ಐ ಸಿ ಯಸ್ ಮಾಂಡಲಿಕರ ಹಕ್ಕಾಗಿತ್ತು. ಅಂಥಾ ಪದವಿಯು ದೇಶೀಯರಿಗೆ ದೊರಕಿದ್ದಕ್ಕೆ ನಮಗೆಲ್ಲರಿಗೂ ಬಹು ಸಂತೋಷ. ನಮ್ಮ ಈ ಅಪಾರ ಸಂತೋಷವನ್ನು ಆಯಾಯ ಜನಗಳು ಅವರವರ ದೇವಾಲಯಗಳಲ್ಲಿ ತೋರ್ಪಡಿಸುವುದು ಯೋಗ್ಯರೀತಿಯೇ ಆಗಿದೆ. ಮ|| ಚೆಂಗಪ್ಪನವರು ತಮಗೆ ಹಂಗಾಮಿಯಾಗಿ ಈ ಪದವಿಯು ಪ್ರಾಪ್ತವಾದ ಲಾಗಾಯ್ತು ತೃಪ್ತಿಕರವಾಗಿ ತಮ್ಮ ಕೆಲಸ ನಡೆಸಿ, ಸರ್ಕಾರದವರ ಮತ್ತು ಪ್ರಜೆಗಳ ಪ್ರೇಮವನ್ನು ಗಳಿಸಿರುವರು. ಮುಂದೆಯೂ ಇದೇರೀತಿ ಉದ್ಯೋಗ ನಡೆಸಲು, ಪರಮಾತ್ಮನು ಅವರಿಗೆ ಸರ್ವ ಚೈತನ್ಯವನ್ನೂ ಆಯುರಾರೋಗ್ಯವನ್ನೂ, ಕೊಡಲಿ ಎಂಬುದೇ ನಮ್ಮ ಪ್ರಾರ್ಥನೆ.

ಮೇಲಿನ ಪೂಜೆಯ ದಿನ ಸಾಯಂಕಾಲ ಸುಮಾರು 6½ ಗಂಟೆಗೆ, ಮ|| ಚೆಂಗಪ್ಪನವರು ತಮ್ಮ ಹಿತಚಿಂತಕರೊಂದಿಗೆ ಮೊದಲು ಗದ್ದಿಗೆಗೆ ಹೋಗಿ, ಅಲ್ಲಿ ಪೂಜೆ ತೀರಿಸಿಕೊಂಡು, ವಿಹರೇನವರೇಟೆಗಾಗಿ ಬರುತ್ತಾ, ಬಸವನಗುಡಿ, ಕಂಕರಿ ದೇವಾಲಯ ಮತ್ತು ಕನ್ಯಕಾಪರಮೇಶ್ವರಿ ದೇವಾಲಯಗಳನ್ನು ನುಗ್ಗಿ, ಪ್ರಸಾದ ಪಡೆದು ಹೋಗುವುದು ಆ ದಿನದ ಕಾರ್ಯ ವಿವರವೆಂದು ತೀರ್ಮಾನಿಸಿದೆ. ಹಿಂದೂ ದೇವಾಲಯಗಳಲ್ಲಿ ಪೂಜಾ ಪ್ರಾರ್ಥನೆಗಳು ನಡೆಯುವಾಗ, ಮುಸಲ್ಮಾನರು ತಮ್ಮ ಮಸೀದಿಗಳಲ್ಲಿ ಅವರ ಹೆಸರಿನಲ್ಲಿ ಪ್ರಾರ್ಥನೆಗಳನ್ನು ಒಪ್ಪಿಸದೆ ಇರಲಾರರು. ಆ ದಿನ ಎಲ್ಲ ಕೋಮಿನ ಜನರು ನಡೆಸಲು ಯೋಚಿಸಿರುವ ಪೂಜಾಕಾರ್ಯವು ಯುಕ್ತರೀತಿಯಲ್ಲಿ ಜರುಗುವುದೆಂದೆ ನನಗೆ ಭರವಸೆ ಇದೆ. ಟೆಂಪಲ್ ಕಮಿಟಿ ಸಭೆಯಲ್ಲಿ ಈರೀತಿ ಪೂಜೆ ನಡೆಸಬೇಕೆಂದು ಟರಾವನ್ನು ತಂದ ಮಹನೀಯರಿಗೆ ನಾವು ಕೃತಜ್ಞರಾಗಿದ್ದೇವೆ.

ಆ ದಿನ ಇಡೀ ಕೊಡಗಿನ ಎಲ್ಲಾ ದೇವಾಲಯಗಳಲ್ಲಿ, ವಿಶೇಷರೀತಿಯಲ್ಲಿ, ಮ|| ಚೆಂಗಪ್ಪನವರ ಹೆಸರಿನಲ್ಲಿ ಪೂಜೆ ನಡಿಸಬೇಕಾಗಿ ನನ್ನ ವಿನಂತಿ.

"ಮಡಿಕೇರಿ ಪಟ್ಟಣಿಗ"

ಅಯ್ಯಾ ಕಾಳಮ್ಮನವರೇ,

ತಾವು ಕೊಡಗಿನ ೨೦ ನೇ ಸಂಚಿಕೆಯಲ್ಲು ಹಜರತ್ ನೂಟರ್ ಸಾಹೇಬರವರು ಈ ದೇಶದಿಂದ ಹೊರಗೆ ಹೋಗುವ ಸಂದರ್ಭದಲ್ಲು ಕೊಡಲ್ಪಡೀಕಾದ ಗೌರವದ ವಿಷಯ ಚರ್ಚಿಸಲು ಸೇರಿದ ಸಾರ್ವಜನಿಕ ಸಭೆಯ ಮುಂದೆ ನೀವು ತಂದ ಠರಾವನ್ನು ಮತ್ತು ಬಾತ್ಮಿಯನ್ನು ನೋಡಿದೆನು. ಆದರೆ ಹಜರತ್ ನೂಟರ್ ಸಾಹೇಬರವರ ಕಾಲದಲ್ಲು ಉಂಟಾದ ಕತ್ತಲೆಯನ್ನು ಬಿಟ್ಟು ಬೆಳಕನ್ನೇ ವಿವರಿಸಿದಕ್ಕೆ ವಿಷಾದಪಡಬೇಕಾಗಿದೆ. ಕತ್ತಲೆಯ ವಿಷಯ ಒಂದೆರಡು ಮಾತುಗಳು ಅವಶ್ಯವೆಂದು ಈ ಕೊಡಗು ಪತ್ರಿಕೆಗೆ ಬರೆದಿರುತ್ತೇನೆ. ಮನ್ನಿಸುವಿರಾಗಿ ನಂಬುತ್ತೇನೆ.

ಕಾಳಮ್ಮನವರೇ, ಕೊಡಗು ದೇಶದ ಜನರ ಹಿತಕ್ಕೆ ವಿರೋಧವಾಗಿ ನೆಸ್ಸು ಹಾಕಿದ್ದು, ಹೊರಗಿನಿಂದ ಉಪನ್ಯಾಸ ಕೊಡಲು ಬಂದ ಪಂಡಿತ ಬಂಧುಗಳಿಗೆ ವಾಕ್‌ಬಂಧನ ಬಿಡಮುಟ್ಟಿ ಕಿಬ್ಬಂದಿ ಕೊಟ್ಟ ಯಾರ ಕಾಲದಲ್ಲಿ? ತಿಳಸುವಿರಾ?

ನಾತ್‌ಕಮಾನಹಾಲನ್ನು ಬಡಾಯಿಸಿ ಮ|| ನೂಟರ್ ಸಾಹೇಬರ ಹಾಲಾಗಿ ಮಾಡಲಿಕ್ಕೆ ಹಾಕಿದ್ದ ನಿಮ್ಮ ಸಲಹೆಯನ್ನು ವಿಸಾಟಂಗಿಸಲ್ಲಿ ಜೇರೊಬ್ಬ ಮಹನೀಯರು ವಿರೋಧಿಸಿದ್ದು ಯಾತಕ್ಕೆ? ಈ ಸಂವತ್ಸರ ಅತಿವೃಷ್ಟಿಯಿಂದ ಕೊಡಗು ದೇಶದ ಬಡರೈತರು ಅನುಭವಿಸಿದ ನಷ್ಟ, ಕಷ್ಟಗಳನ್ನು ಸಹಿಸಲಾರದೆ ಕುಗ್ಗಿ, ಕಗ್ಗಲಾಗಿ ಇರುವಾಗ ನಿಮ್ಮ ಸಲಹೆಗೆ ಹಣ ವಸೂಲು ಮಾಡುವುದು ಕೋಚನೀಯವೆಂದಲ್ಲವೇ? ನೀವು ಹೇಳುವ ರೀತಿ ಬಡಾವಣೆಗೆ ೬, ೭ ಸಾವಿರ ರೂಪಾಯಿಗಳು ಕೊಡಗಿನಿಂದ ವಸೂಲಿಯಾಗದೆ ಇರದು. ಎಂದರೆ, ತಮ್ಮಂತೆಯೇ ಎಲ್ಲರೂ ಶ್ರೀಮಂತರಾಗಿರುತ್ತಾರೆಂದು ಊಹಿಸಿದಿರೋ? ಗ್ರಾಮಾಂತರಗಳ ಬಡರೈತರ ತೊಂದರೆಯನ್ನು ನೀವು ಕಣ್ಣಿನಿಂದ ನೋಡಿದರೆ ನಿಮ್ಮ ಈ ಉತ್ಸಾಹವು ಕುಗ್ಗಿ, ಕ್ಷೀಣವಾಗದೆ ಇರಲಾರದು. ಪರ್ವ ಇಲ್ಲ. ತಮ್ಮ ಅಭಿಪ್ರಾಯದಂತೆ ನಾತ್‌ಕಮಾನ್ ಹಾಲನ್ನು ಬಡಾವಣೆ ಮಾಡಿದರೆ ಹೊರಗಿನಿಂದ ಬಂದ ಜನರಿಗೆ ಭಾಷಣಕೊಡಲು ಅನುಕೂಲವೆಂದು ಹೇಳುತ್ತೀರಲ್ಲವೇ? ಈವರಿವಿಗೆ ಎಷ್ಟು ಹೊರಗಿನಿಂದ ಬಂದ ಮಹನೀಯರಿಗೆ ಭಾಷಣಕ್ಕೆ ಅನುಕೂಲ ಸಿಕ್ಕಿದೆ ಹೇಳುವಿರಾ?

ಕಾಳಮ್ಮನವರೇ, ತಾವು ದೇಶೀಯರ ಉದ್ಯೋಗದ ವಿಷಯ ಲೇಖನ ಬರೆದಿರುತ್ತೀರಿ. ಆದರೆ, ಈಗ ಸಿಕ್ಕಿದ ದೊಡ್ಡ ಉದ್ಯೋಗಗಳೆಲ್ಲಾ ಜಮೀನ್ದಾರ ಸಂಘದ ೬, ೭ ವರ್ಷಗಳ ಹೋರಾಟದ ಫಲವಲ್ಲವೇ? ಇದರ ವಿಷಯ ತಮ್ಮ ಬಾತ್ಮಿಯಲ್ಲು ಬರೆಯಲು ತಮಗೇನಾದರೂ ನಾಚಿಕೆಯಾಯಿತೇ? ಚಿಂತೆ ಇಲ್ಲ. ಇದೆಲ್ಲಾ "ಕೊಡಗು" ವಾಚಕರಿಗೆ ಗೊತ್ತಾಗಿ ಅನುಭವಕ್ಕೆ ಬಂದ ಸಂಗತಿಗಳಾಗಿವೆ.

ಇದೆಲ್ಲಾ ಯಾತಕಪ್ಪಾ! ಮುಂತಾಗಿ ತಮಗೆ ತಾವೇ ಪ್ರಶ್ನೆಗೆ ಜವಾಬು ಬರೆದುಕೊಂಡ ಜಮತ್ತಾರಕ್ಕೆ ಇನ್ನೊಂದು ಮಾತು ಬರೆಯಬೇಕಾಗಿದೆ. ಮಹಾಭಾರತ ಯುದ್ಧದ ಪರಿಸಮಾಪ್ತಿಯು ಧರ್ಮರಾಯನ ಧರ್ಮದಲ್ಲಿಯಾದರೂ, ದ್ರೌಪತಿಯ ಮತ್ತು ಶ್ರೀಕೃಷ್ಣನ ಧರ್ಮವೂ, ಸಂಧಾನವೂ ಇಲ್ಲದಿದ್ದರೆ ಭಾರತ ಯುದ್ಧವು ಕೊನೆಗಾಣುತ್ತಿರಲಿಲ್ಲವೆಂದು ಬಟ್ಟೆತಕ್ಕದ್ದಾಗಿದೆ. ಬಂದು ಕೈ ಚಪ್ಪಾಳೆ ಕಟ್ಟಬಾರದೀತೇ? ಊಹಿಸಿಕೊಳ್ಳಿ.

ಎ. ನಾಸಾಫೀಸಿಯಲ್.

ಬಾಡಗ ಸ್ಕೂಲ್

ವೀರರಾಜಪೇಟೆನಾಡು ಬಾಡಗಗ್ರಾಮದ ಮಹನೀಯರೇ,

ಬಾಡಗ ಗ್ರಾಮದ ಸ್ಕೂಲು ಕಟ್ಟಡ ಕಟ್ಟಿಸಿದ ವಿಷಯವಾಗಿಯೂ, ಚಂದ ವಸೂಲುಮಾಡಿದ ಹಣದ ವಿಷಯವಾಗಿಯೂ, ಖರ್ಚುಮಾಡಿದ ಹಣದ ವಿಷಯವಾಗಿಯೂ, ಅನೇಕ ತರದ ಸಿಂದ್ಯಾಸ್ಪದವಾದ ವಾರ್ತೆಗಳನ್ನು ನೋಡಿ ಬಹಳ ವ್ಯಸನಪಡುತ್ತೇನೆ ನಾವು ಗ್ರಾಮ ನಿವಾಸಿಗಳು, ಪೇಪರಿನಲ್ಲಿ ಬರೆದಂತಾ ಸಂಗತಿಗಳನ್ನು ಪಂಚಾಯಿತಿ ಮೂಲಕ ತೀರಿಸಿಕೊಳ್ಳದೆ ಪೇಪರಿನಲ್ಲಿ ಬರೆದು ದೇಶವೆಲ್ಲಾ ಹರಡಿಸುವುದರಿಂದ ಏನು ಬಹು ಮಾನ ಸಿಕ್ಕುತ್ತದೆ. ಇಂಥಾ ವಾರ್ತೆಗಳನ್ನು ಬರೆಯುವರಿಗೆ ಬಹುಮಾನವಲ್ಲದೆ ಓದುವರಿಗೂ ಕೇಳುವರಿಗೂ ಹೇಸಿಕೆಯಲ್ಲದೆ ನಮಗಳಿಗೆ ನಾಚಿಕೆಯಲ್ಲವೇ ? ನಮ್ಮ ನ್ಯಾಯ ಅನ್ಯಾಯಗಳನ್ನು ನಾವು ಊರಿನವರು ಕೂಡಿ ನ್ಯಾಯದಿಂದ ತೀರಿಸಿಕೊಂಡು ನಮ್ಮ ಮರ್ಯಾದೆಯನ್ನು ಉಳಿಕೆ ಮಾಡಿಕೊಳ್ಳುವುದು ಉತ್ತಮವಲ್ಲವೇ ? ಬಾಡಗ ಗ್ರಾಮದ ಮಹನೀಯರೇ ತಾವು ತಮ್ಮ ಸತ್ಯದಿಂದಲೂ, ಧರ್ಮದಿಂದಲೂ, ಯಾರೆಲ್ಲ ಎಷ್ಟೆಷ್ಟು ಚಂದ ಯಾರ್ಯಾರ ಕೈಯಿಂದ ವಸೂಲು ಮಾಡಿದ್ದೀರಿ ಏನುಮಾಡುತ್ತೀರಿ. ಯಾವಯಾವ ಬಾಬಿನಲ್ಲಿ ಸ್ಕೂಲು ಕಟ್ಟಡಕ್ಕೆ ಎಷ್ಟು ಖರ್ಚು. ಜಾಸ್ತಿ ಎಷ್ಟು ರೂಪಾಯಿ ಬಾಕಿಯಿದೆಯೋ ಅದನ್ನು ಬಾಡಗ ಸ್ಕೂಲಿನ ಅಭಿವೃದ್ಧಿಗೋಸ್ಕರ ಸ್ಕೂಲಿನ ಹೆಸರಿನಲ್ಲಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಇಟ್ಟು ಶಾಲೆಯ ಅಭಿವೃದ್ಧಿಗೂ ಬಾಲಕ ಬಾಲಕಿಯರ ವಿದ್ಯೆಗೂ ಪ್ರೋತ್ಸಾಹ ಕೊಡುವಿರಾಗಿ ನಂಬುತ್ತೇನೆ. ಅಲ್ಲದೆ ದೇಶಾಭಿಮಾನಿಗಳು ಅವರವರ ಉದಾರಮನಸ್ಸಿನಿಂದ ಕೊಟ್ಟಂತ ಚಂದವನ್ನು ಪೇಪರಿನಲ್ಲಿ ಪ್ರಚುರಪಡಿಸಬೇಕಾಗಿ ಅಪೇಕ್ಷಿಸುವ,

ಕುಪ್ಪಂಡ್ರ ಚೆಣ್ಣಪ್ಪ

[ಈ ಶಾಲೆಯ ಸಂಬಂಧ ಅನೇಕ ವಾರ್ತೆಗಳು ನಮ್ಮ ಕೈಸೇರಿವೆ ಸ್ಥಳಸಂಕೋಚದಿಂದ ಅವುಗಳನ್ನೆಲ್ಲಾ ಪ್ರಕಟಿಸಲು ಸಾಧ್ಯವಿಲ್ಲ ಈ ವಿಷಯದಲ್ಲಿ ಪತ್ರಿಕೆಯ ಮೂಲಕ ಚರ್ಚೆ ನಡಿಸುವುದರ ಬದಲು ಈ ವಾರ್ತೆದಾರರ ಅಭಿಪ್ರಾಯದಂತೆ ಆ ಗ್ರಾಮಸ್ಥರೆಲ್ಲರೂ ಸೇರಿ ಒಂದು ತೀರ್ಮಾನಕ್ಕೆ ಬರುವುದು ಉತ್ತಮವಾಗಿದೆ ಸಂ]

ಅಯ್ಯಾ,

ಆಸ್ಪತ್ರೆಗಳ ವಿಷಯ ಬರೆದ ವಾರ್ತೆಗೂ ಮತ್ತು ರಿಲೇಪ್ಸಿಂಗ್ ಫೀವರ್ ಎಂಬುದರ ವಿಷಯವೂ ಜನರ ತಿಳುವಳಿಕೆ ಬಗ್ಗೆ ಈಗಿನ ಸಿವಿಲ್ ಸರ್ಜನರು ನಿಮ್ಮ ಪತ್ರಿಕೆಗೆ ಲೇಖನಗಳನ್ನು ಕಳುಹಿಸಿದ್ದು ನೋಡಿ ಬಹಳ ಸಂತೋಷವಾಯಿತು ಹೀಗೆಯೇ ಇನ್ನು ಮುಂದೆಯೂ ಆಸ್ಪತ್ರೆ ವಿಷಯ ಬರುವ ವಾರ್ತೆಗಳಿಗೆ ಜವಾಬು ಕೊಡುವರಾಗಿ ನಂಬುತ್ತೇನೆ

ಎರಡು ವರುಷಗಳ ಹಿಂದೆ ಆಸ್ಪತ್ರೆಗಳಲ್ಲಿರುವ ಸಬ್ ಅಸಿಸ್ಟೆಂಟ್ ಸರ್ಜನರು ಕಾಯಿಲಸ್ತರ ಮನೆಗೆ ಹೋದಲ್ಲಿ ಅಲಾಯಿದಾ ಫೀಸ್ ಕೊಡಬೇಕೋ ಎಂಬ ಪ್ರಶ್ನೆ ಕೇಳಿದ್ದಕ್ಕೆ ಕೊಡಬೇಕೆಂದು ಅಧಿಕಾರಿಗಳು ಉತ್ತರಕೊಟ್ಟಿದ್ದು ವಾಚಕ ಮಹಾಶಯರಿಗೆ ತಿಳಿಯದ್ದಲ್ಲ. ಆದರೆ, ಸೂಲಗಿತ್ತಿಯರಿಗೆ ಹೀಗೆ ಅಲಾಯಿದಾ ಚಾರ್ಜು ಕೊಡಬೇಕೋ ಎಂಬುವುದು ಅನೇಕರಿಗೆ ಇನ್ನೂ ತಿಳಿಯಬಂದಿರುವುದಿಲ್ಲ. ಅವರಿಗೆ ಚಾರ್ಜು ಕೊಡಬೇಕೆಂದಿದ್ದರೆ ಅವರಿಂದ ಬಡಜನರಿಗೆ ಏನೊಂದು ಪ್ರಯೋಜನ ಉಂಟಾಗಲಿಕ್ಕಿಲ್ಲವೆಂದು ಹೇಳಬೇಕಾಗಿಲ್ಲ. ಅನುಕೂಲಸ್ತರು ಮಾತ್ರ ಚಾರ್ಜು ಕೊಟ್ಟು ಕರಸಿಕೊಳ್ಳುವರು. ಸಬ್ ಅಸಿಸ್ಟೆಂಟ್ ಸರ್ಜನರಾದರೋ ಕಾಯಿಲಸ್ತರಾದ ಬಡವರನೇಕರು ಆಸ್ಪತ್ರೆಗಳಿಗೆ ಹೋಗುವುದರಿಂದ ಅಲ್ಲಿಯಾದರೂ ಅವರಿಗೆ ಚಿಕಿತ್ಸೆಯನ್ನು ಮಾಡುವರು, ಅದಕ್ಕಾಗಿ ಅವರಿಗೆ ಸಂಬಳ ಕೊಡುವುದೆಂದು ಹೇಳಬಹುದು ಆದರೆ, ಹೆರಿಗೆ ಸಮಯದಲ್ಲಿ ಹೆಂಗಸರು ಅದಕ್ಕಾಗಿ ಆಸ್ಪತ್ರೆಗೆ ಹೋಗುವುದಿಲ್ಲ. ಹೀಗಿರುವುದರಿಂದ ಸೂಲಗಿತ್ತಿಯರಿಗೆ ಕೊಡುವ ಸಂಬಳವು ಯಾತಕ್ಕೆಂದು ಗೊತ್ತಾಗುವುದಿಲ್ಲ. ಆದುದರಿಂದ ಸೂಲಗಿತ್ತಿಯರಿಗೆ ಹೇಳಿಕಳುಹಿಸಿದಾಗ ಮನೆಮನೆಗೆ ಹೋಗಿ ಹೆರಿಗೆಗೆ ಸಹಾಯ ಕೊಡಬೇಕಾದುದು ನ್ಯಾಯವಾಗಿ ತೋರುತ್ತೆ ಹೀಗಾದರೇನೇ ಸೂಲಗಿತ್ತಿಯರಿಂದ ಬಡಬಗ್ಗರಿಗೆ ಉಪಕಾರ ಉಂಟಾಗಬಹುದು ಈಗಿನ ಸ್ಥಿತಿಯಲ್ಲಿ ಸೂಲಗಿತ್ತಿಯರು ಚಾರ್ಜು ಕೇಳುವುದರಿಂದ ಜನರು ಅವರನ್ನು ಕರೆಸಲು ಹಿಂಜರಿದು ಕಷ್ಟಕ್ಕೆ ಒಳಗಾಗುತ್ತಾರೆ ಪ್ರತಿಯೊಬ್ಬ ಸೂಲಗಿತ್ತಿಯೂ ತಿಂಗಳೊಂದರ, ಬಿಡಿ, ವರ್ಷ ಒಂದರ ಎಷ್ಟೆಷ್ಟು ಹೆರಿಗೆಗಳಿಗೆ ಸಹಾಯಕೊಟ್ಟರೆಂಬುದನ್ನು ವಿಚಾರಿಸಿದರೆ ವಿಶದವಾಗಬಹುದು ಆದುದರಿಂದಲೇ ಹೆರಿಗೆಯ ಸಮಯದಲ್ಲಿ ಮರಣವು ಹೆಚ್ಚಾಗುತ್ತೆ ಹೀಗಾದಲ್ಲಿ ಜನಸಂಖ್ಯೆಯು ಕಡಿಮೆಯಾಗದಿರುವುದು ಹ್ಯಾಗೆ ? ಈ ವಿಷಯದಲ್ಲಿ ಅಧಿಕಾರಿಗಳು ತಕ್ಕ ಏರ್ಪಾಡು ಮಾಡಿ ಜನರ ತಿಳುವಳಿಕೆ ಬಗ್ಗೆ ಈ ಪತ್ರಿಕೆಯ ಮೂಲಕ ಪ್ರಕಟಿಸುವರಾಗಿ ಕೋರುವ,

"ಪಟ್ಟಣಿಗ"

ಮಹನೀಯರೆ,

ಕೊಡಗು ನಿವಾಸಿಗಳಾದ ಮಾಪಿಳ್ಳೆಯವರೆಲ್ಲರೂ, ಕುಂಜಿಲದಲ್ಲಿ ಒಂದು ಮಸೀದಿಗೆ ಸೇರಿದಾಗ್ಯೆ ಸ್ಥಿರ ಸೊತ್ತುಗಳನ್ನು ಕೊಡಗು "ಲಾ" ಪ್ರಕಾರ ಅನುಸರಿಸಿ ನಡಿಸಬೇಕೆಂದು ಮೀಟಿಂಗ್ ಮಾಡಿ ತೀರ್ಮಾನಿಸಿರೆಂದು ಕಳೆದ ಒಂದು ಸಂಚಿಕೆಯಲ್ಲಿ ಒಂದು ಸುಳ್ಳು ಅಭಿಪ್ರಾಯ ಬರೆದಿದ್ದು ಸಂಗ್ತಿ ನೋಡಿ ಬಹು ಆಶ್ಚರ್ಯಪಡುತ್ತೇನೆ ಮಾಪಿಳ್ಳೆಯೆಂಬುದೇ ಅಯಾಯಿ ಊರಿನಲ್ಲಿ ಆಯಾಯವರು ಇಷ್ಟಪಟ್ಟವರನ್ನು ಕರೆದು ಒಂದು ನಾಸ್ತಿ ಓದುವ ಸಂಗತಿಯಾಗಿದೆ. ಅದಕ್ಕೆ ದೇಶಸ್ತರು ಸೇರುವುದಾಗಲಿ ಕರೆಯುವದಾಗಲಿ ವಾಡಿಕೆಯಿಲ್ಲ ಹೀಗಿರುವಲ್ಲಿ ದೇಶಸ್ತರು ಸೇರಿದ್ದೆಂತಲೂ, ಮೀಟಿಂಗ್ ಆಯಿತೆಂತಲೂ ಹೇಳುವದು ಎಷ್ಟುಮಟ್ಟಿಗೆ ನಿಜವಿರಬಹುದು, ಕೊಡಗು ಪತ್ರಿಕೆಯನ್ನು ಬುದ್ಧಿವಂತರು ಪ್ರಕಟಿಸಿರುವಂತಾ ಸಮಾಚಾರಗಳನ್ನು ನನ್ನಂಥ ಬುದ್ಧಿಹೀನನು ಓದಿ, ತಿಳಿದು, ಬಳ್ಳಿಗತ್ತಿಗೆ ಬಲಿ ಎಂಬುದು ನನ್ನ ಈ ಚಿಕ್ಕ ಮನಸ್ಸಿಗೂ ಸಹ ತಿಳಿಯಬರುತ್ತೆ. ಹೀಗಿರುವಾಗ್ಯೆ ಇಂಥಾ ನಿಜವಲ್ಲದನ್ನು ಪ್ರಕಟಿಸಲು ತಿಳಿಸಿದ್ದಾದರೆ ನನ್ನಂತವನಿಗೆ ಇನ್ನೂ ಬುದ್ಧಿಹೀನತೆ ಕಲಿಸಿದಂತಾಗುತ್ತೆ ಆದ್ದರಿಂದ ಇಂತಾ ಸುಳ್ಳು ಅಭಿಪ್ರಾಯ ಕೊಡುವರು ಬಹು ಎಚ್ಚರಿಕೆ! ಯಾರೂ, ಎಂದೂ ಇಂತಾ ಸುಳ್ಳನ್ನು ಪ್ರಕಟಿಸಲು ತಿಳಿಸಬಾರದಾಗಿ ನನ್ನ ವಂದನೆ ಆದರೆ ಈ ಸಂಗತಿಯಲ್ಲಿ ನಡೆದಂತ ಚರ್ಯೆಯನ್ನು ಈ ಕೆಳಗೆ ವಿವರಿಸುತ್ತೇನೆ

ಕೊಡುಗು ದೇಶದ ನಿವಾಸಿಗಳಾದ ಮಾಪಿಳ್ಳೆ ಮುಫಸ್ತರು ಅಂದರೆ ಶಾಫೀಮದ್‌ಹಬ್‌ನವರು ಕೆಲವು ಕಡೆಗಳಲ್ಲಿ ಮಹಮ್ಮದಿ "ಲಾ" ವೆಂದೂ ಕೆಲವರು ಕೊಡಗು "ಲಾ" ವೆಂದೂ ಈ ಮೇರೆ ಅನೇಕರು ಅನೇಕ ತರವಾದ "ಲಾ" ಹೇಳುವ ಕಾರಣ ತಮ್ಮೊಳಗೆ ಕೋರ್ಟು ವ್ಯಾಜ್ಯದಿಂದ ನಿಷ್ಪ್ರಯೋಜನವಾಗಿ ಹಣ ವ್ಯಯಮಾಡುವದರಿಂದ ಮೈತಾಡಿ ಗ್ರಾಮದ ಮ್ಹ॥ ಕೂವಲೇ ಮಾಯಿನೆಯವರು ಇದನ್ನು ಒಂದು ಹಿಡುಕಟ್ಟಿಗೆ ಅಂದರೆ ಒಂದೇ "ಲಾ" ನಡಿಯುವಂತೆ ಮಾಡಬೇಕೆಂದು ದೇಶಸ್ತರಾದ ಕುಟುಂಬರಿಗೆ ಲೆಟರ್ ಮೂಲಕ ತಿಳಿಸಿದ ಮೇರೆ ನೆರೆಯುವರೆಲ್ಲರೂ ಈ ಕಳೆದ ಸೆಪ್ಟಂಬರ್ ತಾರೀಕು ೧೬ ನೇ ದಿನ ವೀರರಾಜಪ್ಯಾಟೆಗೆ ಹಾಜರಾಗಿ ಮ॥ ಕಂಡೋಕತ್ತು ಕುಂಞಪ್ಪೋಕರ್ ವಗ್ಯೆರೆ ಸಾಹುಕಾರರೊಡನೆ ವೀರರಾಜಪ್ಯಾಟೆ ಕಾದುಲ್ಲಿ, ತಕ್ಯಾವ್, ಎಂಬ ಮಸೀದಿಯಲ್ಲಿ, ನೂಂಜೇರಿ ಅಬ್ದುಲ್‌ಹಪೀಸ್ ಇಬ್ನಿಮುಹ್ಯಿದ್ದೀನ್, ಕಾದುಲ್ಲಿ ಕೈಕ್, ಹಾಜಿ, ಗುರುಗಳವರ ಅಧ್ಯಕ್ಷತೆಯಲ್ಲಿ ಮೀಟಿಂಗ್ ನಡೆದು ಆದ ಚರ್ಚೆಯಲ್ಲಿ ಮೆಜಾರ್ಟಿಯಾಗಿ ಮಹಮ್ಮದಿ ಲಾ ವೇನರರು ಬರ್ರ್ಯಾಗಿಯೂ, ತಾವು ಮಹಮ್ಮದಿ ಮುಫಸ್ತರಾದ್ದರಿಂದ ಖಂಡಿತ ಎಲ್ಲರೂ ಮಹಮ್ಮದಿ ಲಾ ಅನುಸರಿಸಬೇಕೆಂತಲೂ ಹ್ಯಾಗೂ ಈ ಬರುವ "ರಬೀಉಲ್ ಇಕೀರ್" ತಿಂಗಳು ೬ ನೇ ದಿನ ಅನೇಕ ಜನರೊಡನೆ ಇನ್ನೊಂದು ಮೀಟಿಂಗ್‌ನಲ್ಲಿ ಈ ಮೇರೆ ಐಕ್ಯರು ತೀರ್ಮಾನ ಮಾಡುವ, ಎಂದು ಹೇಳಿ ಎಲ್ಲರೂ ಅವರವರ ಮನೆಗೆ ಹೋದರು. ಆದ್ದರಿಂದ ದೇಶಾಭಿಮಾನಿಗಳೆಲ್ಲರೂ ಮೇಲ್ಕಂಡ ತಿಂಗಳಲ್ಲಿ ೬ ಕ್ಕೆ ಸೇರಿಸಿ ತೀರ್ಮಾನಿಸುವಿರಾಗಿ ನಾನು ನಂಬಿದ್ದೇನೆ.

ಕುಲಸ್ಥ.

ದೇಶಬಾಂಧವರೇ,

ಅಕ್ಟೋಬರ್ ತಾರೀಖು ೧೨ ರ ಸಂಚಿಕೆಯಲ್ಲಿ ಮಿ॥ ಕಾಳಪ್ಪ ಎಂಬವರು ಮಡಿಕೇರಿಯಲ್ಲಿ ಇರುವ ಓಂಕಾರೇಶ್ವರ ದೇವಸ್ಥಾನಕ್ಕೆ ಸಂಬಂಧಪಟ್ಟ, ಸಾಕ್ಕ ಕಮಾನನ್ನು ಒಡಾಯಿಸಿ ಮುಂದೆ ಸೂಟರ್ ಮಹಾಲ್ ಎಂಬದಾಗಿ ಹೆಸರು ಕೊಟ್ಟು ಶಿಲಾಶಾಸನವನ್ನು ಸ್ಥಾಪಿಸಬೇಕೆಂಬದಾಗಿ ಬರೆದ ಸದಭಿಪ್ರಾಯವು ನ್ಯಾಯವಾದದ್ದೋ ? ಎಂಬದನ್ನು ದೀರ್ಘಾಲೋಚನೆ ಮಾಡಿ ಸರ್ವರನ್ನು ಕಠಿಣ ನ್ಯಾಯವಾದ ಜವಾಬು ಕೊಡಬೇಕಾದದ್ದು ಸಹಜವಾದದೆಂದು ತೋರುತ್ತೆ.

ಹಾಲಿ ಕಮಿಷನರ್ ಆಗಿರುವ, ಮ್ಹ॥ ಸೂಟರ್ ಸಾಹೇಬರವರು ದೇಶಿಯರಿಗೆ ದೊರಕಲು ಅಸಾಧ್ಯವಾದ ಪದವಿಗಳನ್ನು ದೊರಕುವಂತೆ ಮಾಡಿದರೆಂತಲೂ ನ್ಯಾಯವಿಧಾಯಕ ಸಭೆ ದೊರೆಯುವಂತೆ ಯತ್ನಿಸಿದರೆಂತಲೂ, ಬಡ ಉಪಾಧ್ಯಾಯರುಗಳ ವೇತನವನ್ನು ಹೆಚ್ಚಿಸಿದರೆಂತಲೂ, ಆದಕಾರಣ, ಇವರ ಹೆಸರನ್ನು ಸ್ಮರಿಸಿಕೊಳ್ಳುವಂತೆ ಸಾಕ್ಕಕಮಾನನ್ನು ಸೂಟರ್ ಮಹಾಲ್ ಎಂಬದಾಗಿ ಮಾಡಬೇಕಾಗಿ, ಅಭಿಪ್ರಾಯಪಟ್ಟ ಇವರಿಗೆ ಬುದ್ಧಿಕುಶಲತೆಯೂ ಮತ್ತು ಲೋಕದ ಅನುಭವವೂ ಎಷ್ಟರ ಮಟ್ಟಿಗೆ ಇದ್ದು ಈ ಅಭಿಪ್ರಾಯವನ್ನು ಸೂಚಿಸಿದರೆಂಬದು ಗೊತ್ತಾಗುವದಿಲ್ಲ. ಇವರಿಗೆ ಹಿಂದೂಸ್ಥಾನವು ಯಾರಿಂದ ಜಾಗ್ರತೆಯನ್ನು ಹೊಂದಿತೆಂಬದು ಅಸಾಧ್ಯವಾದ ಪದವಿಗಳು ಸಾಧ್ಯವಾಗಲು ಯಾರು ಕಾರಣಭೂತರೆಂಬದೂ ಮತ್ತು ಉಪಾಧ್ಯಾಯರುಗಳ ಸಂಬಳ ಯಾವ ರೀತಿಯಿಂದ ಹೆಚ್ಚಿಸಿದರೆಂಬದೂ ಅರಿತೋ, ಅರಿಯದೆಯೋ "ಕೋಣ ಕರಹಾಕಿತು ಕೊಟ್ಟಿಗೆಯಲ್ಲಿ ಕಟ್ಟು" ಎಂಬದಾಗಿ ಹೇಳಿದಂತೆ ಸಾಕ್ಕಕಮಾನ್ ಎಂಬ ಹೆಸರನ್ನು ಬದಲಾಯಿಸಿ ಸೂಟರ್‌ಮಹಾಲ್ ಎಂಬದಾಗಿ ಮಾಡಲು ಇನ್ನೊಮ್ಮೆ ಸಭೆ ಸೇರಿಸಿ ಚರ್ಚಿಸಬೇಕೆಂಬದಾಗಿ ಸಭಿಕರನ್ನು ಕೇಳಿಕೊಂಡಂತೆ ಕಾಣುತ್ತೆ

ಭಾರತಾ ಯುದ್ಧದಲ್ಲಿ ಪಾಂಡವರ ಜಯಕ್ಕೆ ಧರ್ಮರಾಯನ ಧರ್ಮವೇ ಮುಖ್ಯಕಾರಣವೆಂದು ಎಲ್ಲರು ಒಪ್ಪುವರು ಎಂಬದಾಗಿ ಬರೆದಿರುತ್ತಾರೆ ಹಾಗಾದರೆ ದೇಶೀಯರಿಗೆ ದೊರಕಲು ಅಸಾಧ್ಯವಾದ ಪದವಿಗಳೂ ಮತ್ತು ಕೌನ್ಸಿಲ್ ಸಹ ದೊರಕಲು ದಾರಿಮಾಡಿಸಿದ ರೋಜಿ ಲೋಕಮಾನ್ಯತಿಲಕ ಮೊದಲಾದ ಹಿಂದೂಸ್ಥಾನದ ಮುಂದಾಳುಗಳು ಕೊಟ್ಟ ಜಾಗ್ರತೆಗನುಸಾರವಾಗಿ ನಿದ್ರಾವಸ್ಥೆಯಲ್ಲಿ ಇದ್ದ ನಮ್ಮನ್ನು ಎಚ್ಚರಿಸಲು ಹಲವು ಪ್ರಯತ್ನ ತೆಗೆದುಕೊಂಡ ಜಮೀನುದಾರರ ಸಂಘವನ್ನು ಏರ್ಪಡಿಸಿದ ಮಹಾಸಿಯರ ಧರ್ಮಪ್ರಯತ್ನದಿಂದ ಮೇಲೆ ಹೇಳುವ ಎರಡು ಉದ್ದೇಶಗಳು ನೆರವೇರಿದುದನ್ನು ಯಾರು ತಾನೇ ಒಪ್ಪಲಾರರೆಂಬದನ್ನು ಮಿ॥ ಕಾಳಪ್ಪನವರು ಬರೆದು ಅವರನ್ನು ಮುಂದಾಗಿ ಸ್ಮರಣೆಗೆ ತರಲು ಯೋಚಿಸದೆ ಅರ್ಥಗರ್ಭಿತವಾಗುವ ಇವರ ಅಭಿಪ್ರಾಯದ ಸೂಚನೆಗಳನೆಲ್ಲಾ ನೋಡಿದರೆ ಯಾರಿಗೆ ತಾನೇ ವ್ಯಸನವುಂಟಾಗದಿರಲಾರದೆಂಬುದು ಗೊತ್ತಾಗುವದಿಲ್ಲ

ಉಪಾಧ್ಯಾಯರುಗಳ ಸಂಬಳವನ್ನು ಹೆಚ್ಚಿಸಿದರೆಂಬದಾಗಿ ಬರೆಯುತ್ತಾರೆ ಕಪ್ಪೆಯನ್ನು ಕೊಂದು ಹಾವಿಗೆ ಮೇವು ಹಾಕಿದ ಹಾಗೆ ಬಡಪ್ರಜೆಗಳ ಕಷ್ಟಸುಖ ಯೋಚಿಸದೆ ನೆಸ್ ಹೆಚ್ಚಿಸಿ ಸಂಬಳ ಬಡಾವಣೆ ಮಾಡಿದಕ್ಕೆ ಕಾಳಪ್ಪನವರು ಇಷ್ಟರಮಟ್ಟಿಗೆ ತೃಪ್ತರಾಗಿ ಮೇಲೆ ಹೇಳುವ ರೀತಿ ಅವರ ಅಭಿಪ್ರಾಯವನ್ನು ಸೂಚಿಸಿದ್ದು ನೋಡಿದರೆ ಇವರು ಒಂದೇ ಪಕ್ಷವನ್ನು ಗಣನೆಗೆ ತೆಗೆದುಕೊಂಡಂತೆ ಕಾಣುತ್ತೆ ಆದ್ದರಿಂದ ಕಾಳಪ್ಪನವರ ಅಭಿಪ್ರಾಯಕ್ಕೆ ವಿರುದ್ಧವಾಗಿ ನನ್ನ ಅಭಿಪ್ರಾಯವನ್ನು ಸೂಚಿಸುವವನಾಗಿದ್ದೇನೆ ಸರ್ವಸಮ್ಮತವಾದರೆ ದೇಶದ ಮುಂದಾಳುಗಳು ಮತ್ತು ಹಿತೈಷಿಗಳು ದಿವ್ಯ ಚಿತ್ತಕ್ಕೆ ತೆಗೆದುಕೊಳ್ಳಬೇಕಾಗಿ ವಿನಯದಿಂದ ಬೇಡಿಕೊಳ್ಳುತ್ತೇನೆ. ಈಗ ದೊರತ ಎರಡು ಪದವಿಗಳು ಮತ್ತು ಕೌನ್ಸಿಲ್ ಸಹ ದೊರೆಯಲು ಜಮೀನುದಾರರ ಸಂಘವೇ ಮೂಲಕಾರಣವಾದದ್ದರಿಂದ ಈ ಸಂಘವನ್ನು ಸ್ಥಾಪಿಸಿದ ಮೂಲಪುರುಷರುಗಳ ಜ್ಞಾಪಕಾರ್ಥಕವಾಗಿಯೂ, ನಮಗಳಿಗೆ ಸಭೆ ಸೇರಲು ಅನುಕೂಲಿಸುವಂತೆಯೂ, ಮತ್ತು ನಮ್ಮ ದೇಶದ ಪತ್ರಿಕೆಯನ್ನು ಇಲ್ಲಿಯೇ ಛಾಪಿಸಲು ಏರ್ಪಾಡುಮಾಡುವ ಪಕ್ಷ ಅದಕ್ಕೂ ಸಹ ಅನುಕೂಲಿಸುವಂತೆ ತಕ್ಕ ಸ್ಥಳದಲ್ಲಿ ಒಂದು ಕಟ್ಟಡವನ್ನು ಕಟ್ಟಲು ದೇಶೀಯರನ್ನು ಪ್ರೋತ್ಸಾಹಪಡಿಸಿ ಚಂದಾ ಎತ್ತಲು ತಕ್ಕ ಏರ್ಪಾಡು ಮಾಡಲು ಮುಂದಾಳುಗಳು ಜಾಗ್ರತೆಯಿಂದ ಕಾರ್ಯವನ್ನು ಕೈಕೊಳ್ಳಬೇಕಾಗಿ ಪ್ರಾರ್ಥಿಸುತ್ತೇನೆ ಅಲ್ಲದೆ ಪದವೀಧರರಿಬ್ಬರಿಗೂ ಸಂಘದ ಶ್ರೇಯೋಭಿವೃದ್ಧಿಗೋಸ್ಕರ ದೇವರು ಉದಾರ ಮನಸ್ಸನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ಜಮೀನುದಾರರ ಸಂಘದ ವಾರ್ಷಿಕ ಸಮ್ಮೇಳನದ ಸಭಾಧ್ಯಕ್ಷರುಗಳ ಭಾಷಣಗಳಲ್ಲಿ ಈ ಸಂಘವು ಯಾರಿಂದ ಯಾವಾಗ ಸ್ಥಾಪಿಸಲ್ಪಟ್ಟಿತೆಂತ ಸೂಚಿಸದೆ ಇರುವದಕ್ಕೂ ಮತ್ತು ಸಂಘವನ್ನು ಸ್ಥಾಪಿಸಲ್ಪಟ್ಟ ಮೂಲಪುರುಷರುಗಳ ಪೈಕಿ ಯಾರಾದರು ಪರಲೋಕವನ್ನೈದಿದ್ದರೆ ಅವರ ಜ್ಞಾಪಕಾರ್ಥಕವಾಗಿ ಅವರ ಭಾವಚಿತ್ರವನ್ನು ಸಭೆ ಮುಂದಿಡದೆಯೂ ಸಂಘಸ್ಥಾಪಕರಾದ ಮೂಲಪುರುಷರುಗಳನ್ನು ಸಭೆಕಾರ್ಯವನ್ನು ಕೈಕೊಳ್ಳುವ ಮೊದಲು ಸ್ಮರಿಸದೆ ಕಾರ್ಯವನ್ನು ಕೈಕೊಳ್ಳುತ್ತಾ ಬರುತ್ತಿರುವದಕ್ಕೆ ವ್ಯಸನಪಡುತ್ತೇನೆ ಈ ನನ್ನ ಅಭಿಪ್ರಾಯವು ಸರ್ವಸಮ್ಮತವಾದಲ್ಲಿ ಮುಂದಕ್ಕಾದರು ನಡಿಸಿಕೊಳ್ಳಬೇಕಾಗಿ ಮಹಾಸಿಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಸಿ ಜಿ ಸಿ.

ಅಮ್ಮತ್ತಿ ನೇಶನಲ್ ಸ್ಕೂಲ ವಿಷಯ

ಸ್ವಾ,

ಅಮ್ಮತ್ತಿ ನೇಷನಲ್ ಶಾಲೆಯನ್ನು ಜಮೀನ್ದಾರ ...ಘವು ವಹಿಸಿಕೊಳ್ಳಬೇಕೆಂಬ ಕೋರಿಕೆಯನ್ನು ನೆರ...ರಿಸುವ ಬಗ್ಗೆ ಒಂದು ಕಮಿಟಿ ಸಹ ಜಮೀನ್ದಾರ ...ಘದ ವಾರ್ಷಿಕ ಮೀಟಿಂಗಿನಲ್ಲಿ ಏರ್ಪಾಡಾಯಿತೆಂದು ...ಯುತ್ತೇನೆ. ಇತ್ತೀಚೆಗೆ ಇದರ ವಿಷಯ ಏನೊಂದೂ ...ತ್ತಿರುವುದಿಲ್ಲ. ಇಂಥಾ ಶ್ರೇಯಸ್ಕರವಾದ ಕೆಲಸ...ನ್ನು ಸಂಘವು ಕೈಕೊಂಡರೆ ಒಕ್ಕಲಿಗರಿಗೆ ಪ್ರಯೋಜ...ನದ ಕೆಲಸವೆಂತ ತಿಳಿಯುತ್ತ ದೇಶದ ಜನರೆಲ್ಲಾ ... ಇಂಥಾದೊಂದು ಚಿಕ್ಕ ಕೆಲಸವನ್ನು ಮಾಡಲು ...ಬರದರೆ ನಾಚಿಕೆಗೇಡೇ ಸರಿ. ಅನೇಕ ವರ್ಷಗಳಿಂದ ...ವು ಮಹನೀಯರು ದೇಶದ ಸಹಾಯವನ್ನು ನಿರೀ... ನಡಿಸುತ್ತಿದ್ದ ಈ ಶಾಲೆಯ ಕಾರ್ಯವನ್ನು ನಿವೃತ್ತಿ...ತದಿದ್ದರೆ ಜಮೀನ್ದಾರ ಸಂಘದ ಹೆಸರು ಸಾರ್ಥಕ...ವುದಿಲ್ಲ. ಜನೋದ್ಧಾರಕ ವಹಿಸಿ ಪ್ರತ್ಯಕ್ಷವಾಗಿ ...ರ್ವಹಿಸುವ ಕಾರ್ಯಗಳಲ್ಲಿ ಈ ಸಂಘವು ಕೈಹಾಕ...ದಿದ್ದಲ್ಲವೆಂದರೆ ಬರಿ ಗುಲ್ಲಿನ ಸಮಾಜವೇ ಸರಿ. ...ಯ ವಿಷಯದ ಸ್ಥಿತಿಯು ಬದ್ರತೆಯನ್ನು ಕಳಕೊ...ವಂತೆ ಕಾಣುವುದರಿಂದ ಸಂಘದವರು ಇದನ್ನು ನಿವಾ...ವ ವಿಧಾನವನ್ನು ವಹನೆ ಕಂಡುಹಿಡಿದು ಕೆಲಸವಾ...ವುದು ಲೇಸು.

ಅನ್ಯಾ—ರೈತಾಗ್ರಹರೇ, ಕೌನ್ಸಿಲ್ ಮೆಂಬರುತ...ಟಿಟಿಗೆ ತಾನು ನಿಷ್ಪಕ್ಷಪಾತಿ, ಸ್ವಪ್ರಭುತ್ವ ಗವರ್ನ...ನ, ದೇಶಹಿತೈಷಿ ದೇಶವನ್ನು ಉದ್ಧರಿಸುವೆನೆಂಬು...ವ ಮನಸ್ಕರನ್ನು ನೇಶನಲ್ ಶಾಲೆಗೆ ತಾವು ಸಹಾ...ಯ ಮಾಡುತ್ತೀರಿ ಬಡಮಕ್ಕಳ ಪಾಡೇನು ಎಂದು ಕೇ...ರಾ? ಜಮೀನ್ದಾರಸಂಘದವರು ಕೌನ್ಸಿಲಿಗೆ ಮೆಂ...ಬರಾಗುವವರ ಹೆಸರುಗಳನ್ನು ಪ್ರಕಟನೆ ಮಾಡುವಲ್ಲಿ ...ಳ್ಳವರೆಂದು ತಿಳಿಯುವುದಲ್ಲದೆ ಈ ಮೊದಲು ...ಯನ್ನು ಸರಿಪಡಿಸಿ ಆ ಮಹನೀಯರ ಹೆಸರನ್ನು ...ಸಲು ಪ್ರಯತ್ನಿಸುವುದು ಉತ್ತಮವೆಂದು ನನಗೆ ...ರುತ್ತೆ.

ಸಿ ಸಿ ಸಿ

...ಯ ದೇಶಬಾಂಧವರೇ! ಮತ್ತು ಕುಲಬಾಂಧವರೇ! ಇದೊಂದು ಎಚ್ಚರಿಕೆಯ ಮಾತು ಇದಕ್ಕೆ ಗಮನ...ರಿ!

ಕೊಡಗಿಗೆ ಕೌನ್ಸಿಲು ಮಂಜೂರಾಗಿ ಬಂದಿರುವದೇ ...ಸಹಜ. ಇದಕ್ಕೆ ಮೆಂಬರುಗಳನ್ನು ಚುನಾಯಿಸುವ ... ದೇಶದವರದಾಗಿದೆ. ಇದೀಗ ದೇಶದವರ ಬುದ್ಧಿ...ಯನ್ನು ಪರೀಕ್ಷಿಸುವ ಸಮಯ. ಒಬ್ಬೊಬ್ಬರ...ಗೆ ಬಳಗಾಗಿ ಮೆಂಬರುಗಳನ್ನು ಚುನಾಯಿಸುವ...ದಲ್ಲ. ದೇಶಸೇವೆ ನ್ಯಾಯವಾಗಿ ಮಾಡುವ...ರೋ ಅಂಥವರನ್ನು ಚುನಾಯಿಸಬೇಕಾದದ್ದು ...ವರ ಕರ್ತವ್ಯ. ಇದಕ್ಕಾಗಿ ಪ್ರತಿ ಒಬ್ಬ ಓಟರು...ವಾಗಿಯೂ ಅವರವರ ಹೆಚ್ಚಿನ ಬುದ್ಧಿಯನ್ನು ... ಇಂಥಾವರನ್ನೆ ಚುನಾಯಿಸಬೇಕೆಂಬದನ್ನು ದೃಢ...ದೇಕಾಗಿದೆ. ಕೌನ್ಸಿಲು ಮಂಜೂರಾಯಿತು ಎಂಬ ... ಕೇಳಿದ ವಹನೆ ಮೆಂಬರುತನಕ್ಕೆ ಓಡ್ಯಾಡುವ ...ನೀಯರೇ ಕೇಳಿ. ಕೌನ್ಸಿಲು ಮೆಂಬರುತನಕ್ಕೆ ...ಒಬ್ಬನು ಓಡಾಡುವದು ಸಹಜವೇ ಸರಿ. ಆದರೆ ...ಗಿ ಸ್ಥಳಿಕ ಅಧಿಕಾರಿಗಳು ತಯಾರಿಸಿದ ಕಾನೂ...ಕಾಯಿದೆಗಳು ದೇಶದವರ ತಿಳುವಳಿಕೆಗೆ ತಾರದೆ ...ಗಿ ಮಂಜೂರಾತಿಗೆ ಕಳುಹಿಸಿರುವದು ದೇಶದವ...ರ್ಗೆ ಇದೆಯೋ ಇಲ್ಲವೋ ಎಂಬುದನ್ನು ಮೊದ...ಲು ಕೊಂಡು ಮೆಂಬರುತನಕ್ಕೆ ಹೋರಾಡುವದು ...ಅಲ್ಲವೇ? ಎತ್ತು ಹಾರುವ ಮೊದಲು ಗೋಣಿ ... ಎಂಬಂತೆ ಕೌನ್ಸಿಲು ಮಂಜೂರಾಯಿತು ಎಂದ...ಕ್ಕೆ ಕಾನೂನು, ಕಾಯಿದೆ ತಿಳಿಯದೆ ಮೆಂಬರು... ಕೂಗಲೇ ಹೋರಾಡುವುದು ಮೂಢತನವಲ್ಲವೇ? ...ನು, ಕಾಯಿದೆ ದೇಶದವರಿಗೆ ಒಪ್ಪಿತವಲ್ಲದ ಪಕ್ಷ...ರುತನಕ್ಕೆ ನಿಂತುಕಾನೆ ಏನು ಪ್ರಯೋಜನ? ಅಧಿಕಾರಿಗಳು ಇನ್ನಾದರು ಕಾನೂನು, ಕಾಯಿ...ದೆಯನ್ನು ದೇಶದವರಿಗೆ ಬಹಿರಂಗಪಡಿಸಿ ಸ್ವಲ್ಪಮಟ್ಟಿಗಾ...ದೇಶದವರ ಅಭಿಪ್ರಾಯ ತೆಗೆದುಕೊಂಡು ಮಂಜೂ...ರು ಮಾಡಿಸಬೇಕೆಂದು ನನ್ನ ಕೋರಿಕೆ.

ಕಾಯಿದೆಯ ಪರೀಕ್ಷಕ

...ದ ೨೮ ನೇ ಸಂಚಿಕೆಯಲ್ಲಿ ಮಡಿಕೇರಿ ಕ್ರೈ...ಸ್ತರ ... ಎಂಬವರು ಬರೆದದ್ದನ್ನು ... ಅವರು ಬರೆದ ಸಂಗತಿಗಳೆಲ್ಲಾ ನಿಜವಾದದ್ದಲ್ಲ. ... ಸಂಗತಿಗಳನ್ನು ಪತ್ರದಲ್ಲಿ ಬರೆಯುವದಕ್ಕಿಂತ ಸುಮ್ಮನಿದ್ದರೆ ಲೇಸಲ್ಲವೇ; ಆದರೆ ನಾನು ಅಂದು ನಿಜವಾಗಿ ನಡೆದ ಸಂಗತಿಗಳನ್ನು ಕೊಂಚ ತಿಳಿಸಲು ಅಪೇಕ್ಷಿಸುತ್ತೇನೆ. ಕೊಡಗಿನ ವೆಸ್ಲಿಯನ್ ಮಿಷನ್ನಿನ ಸುಪರಿಂಟೆಂಡೆಂಟಾದ ರೆವರೆಂಡ್ ರೀಸ್ ಸಾಹೇಬರು (ನೂತನವಾಗಿ ಬಂದವರು—ಮುಂದೆ ವೆಸ್ಲಿಯನ್ ಮಿಷನಿನ ಚೇರ್ ಮೆನ್ನರಾಗಿದ್ದವರು) ೧೯ ನೇ ತಾರೀಕಿಗೆ ಆನಂದಪುರಕ್ಕೆ ಬಂದವರು ೨೦ ನೇ ತಾರೀಕಿಗೆ ಮಧ್ಯಾಹ್ನ ಮಡಿಕೇರಿಗೆ ಬಂದರು. ಇಲ್ಲಿಯ ಪಾಸ್ಟರರವರು ೧೯ ನೇ ತಾರೀಕಿನಲ್ಲಿ ಸಭೆಯ ಮೆಂಬರುಗಳಲ್ಲಿ ೯ ಜನರಿಗೆ ೨೦ ನೇ ತಾರೀಕು ಸಂಜೆಗೆ ರೀಸ್ ದೊರೆಯವರು ಸಭೆಯ ವಿಷಯ ಒಂದು ಪಂಚಾಯತಿ ಮಾಡುತ್ತಾರಾದ್ದರಿಂದ ನೀವುಗಳು ಬರಬೇಕಾಗಿ ಬೇಡುತ್ತೇನೆ ಎಂಬದಾಗಿ ನೋಟೀಸು ಕಳುಹಿಸಿದ್ದರು. ಈ ಸಂಗತಿ ಎಲ್ಲಾ ಕಡೆಯಲ್ಲಿಯೂ ಹರಡಿತ್ತು ಎಂಬದಕ್ಕೆ ಏನೊಂದು ಸಂಶಯವಿರದು. ೨೦ ನೇ ತಾರೀಕು ಸಂಜೆ ೬ ಗಂಟೆಗೆ ಸರಿಯಾಗಿ ಬೋಧಕರು ಬಂದು ಸ್ಕೂಲಿನಲ್ಲಿ ಕುರ್ಚಿಯ ಮೇಲೆ ಕುಳಿತಿದ್ದರು. ಆಗ್ಯೆ ಇನ್ನೊಂದು ಕೋಣೆಯಲ್ಲಿ ಕೆಲವರು ಸೇರಿಕೊಂಡು ಬಹುಗದ್ದಲ ಮಾಡುತ್ತಿದ್ದರೆಂಬುದಕ್ಕೆ ಸಂಶಯವಿಲ್ಲ. ಸಮಯಕ್ಕೆ ಸರಿಯಾಗಿ ಒಬ್ಬಬ್ಬರು ಬಂದಿದ್ದರು. ೬||| ಗಂಟೆಗೆ ನೋಟೀಸು ಕೊಟ್ಟವರ ಪೈಕಿ ೫ ಜನ ಬಂದರು. ನೋಟೀಸು ಇಲ್ಲದೆ ಇದ್ದವರು ಮೂರು ನಾಲ್ಕು ಜನ ಬಂದರು. ದೊರೆಯವರು ನೋಟೀಸು ಕಳುಹಿಸಿದವರು ಮಾತ್ರವೇ ಇರಬೇಕು, ಬೇರೆಯವರು ಇರಬೇಕೆಂದು ಬಹು ದೈನ್ಯವಾಗಿ ಕೇಳಿದ ... ಸುರುಮಾಡಿದ್ದರಿಂದ ದೊರೆಯವರು ... ಮೀಟಿಂಗ್ ಸುರು ಮಾಡಿದರು. ... ಕೆಲವರು ಆಚೆಕೋಣೆಯಲ್ಲಿ ಬೊಬ್ಬೆ ಹಾಕುವುದು ಕಿಟಿಕಿಯಲ್ಲಿ ಬಂದು ಇಣುಕಿ ನೋಡುವದು ಇತ್ಯಾದಿ ಎಷ್ಟೋ ಕುಚೇಷ್ಟೆಗಳನ್ನು ನಡಿಸಿದರು. ದೊರೆಯವರು ಬಹು ತಾಳ್ಮೆಯಿಂದಲೇ ಬಹು ಬುದ್ಧಿವಾದಗಳನ್ನು ಹೇಳಿದರು. ಮುಖ್ಯವಾಗಿ ಇಲ್ಲಿಯ ಗವರ್ನಮೆಂಟಿನ ಆಫೀಸುಗಳಲ್ಲಿ ಉದ್ಯೋಗದಲ್ಲಿರುವ ಕ್ರೈಸ್ತರು ಅಂಥಾದ್ದನ್ನು ಮಾಡಿದ ಮೇಲೆ ಬೇರೆಯವರು ಮಾಡದೆ ಇದ್ದಾರೇ? ಇದು ಕ್ರೈಸ್ತರ ಮರ್ಯಾದೆಯಲ್ಲವೇ? ದೊರೆಯವರು ಗಲಾಟೆ ಮಾಡಬೇಡಿರೆಂದು ... ಕೇಳಿಕೊಂಡು, ಬಾಸೆಲ್ ಮಿಶನಿನ ಈ ಕೆಲಸವು ಗವರ್ನಮೆಂಟಿನವರ ಮೂಲಕ ತಮಗೆ ಸಿಕ್ಕಿತೆಂದು ಎಲ್ಲಾ ಸಂಗತಿಗಳನ್ನು ಕ್ರಮವಾಗಿ ವಿವರಿಸುತ್ತಾ ಬಂದು, ಕೊಡಗಿನ ಕಮಿಶನರ್ ... ಇರುವ ಆಸ್ತಿಯ ಮತ್ತು ಎಲ್ಲಾ ಸಾಮಾನುಗಳ ಪಟ್ಟಿಯನ್ನು ಮಿಷನ್ ಸ್ಕೂಲಿನ ಹೆಡ್ ಮಾಸ್ತರರಾದ ... ನವರಿಂದ ಓದಿಸಿದರು. ನಂತರ ತಾನು ಇಲ್ಲಿಯ ... ಕೆಲಸಕ್ಕೆ ... ಎಲ್ಲಾ ... ಸುಮ್ಮನೆ ಚರ್ಚೆ ಮಾಡುವದು ಬೇಡ ಎಂಬದಾಗಿ ತಿಳಿಸಿ ನಂತರ ಚರ್ಚ್ ಮತ್ತು ಪ್ಲಾಂಟರ್ ಫಂಡಿನ ಹಣದ ವಿಷಯ (ಅದು ಮುಂದೆ ಮಿಶನರಿಗಳ ಸ್ವಾಧೀನದಲ್ಲಿತ್ತು ನಂತರ ... ಸಭೆಯವರಲ್ಲಿ ಒಬ್ಬರ ಕೈಗೆ ಸೇರಿತ್ತು) ಅದರ ಲೆಕ್ಕಾಚಾರವನ್ನು ಮದ್ರಾಸಿನಲ್ಲಿರುವ ಸರಕಾರದಿಂದ ನೇಮಿಸಲ್ಪಟ್ಟ ಮಿಶನ್ ಟ್ರಸ್ಟಿಯವರು ಕೇಳುತ್ತಾರೆ. ನಾನು ಅವರಿಗೆ ಅದರ ಲೆಕ್ಕಾಚಾರ ಕೊಡಬೇಕು. ನಾನು ನಿಮಗೆ ಎಷ್ಟು ಕಾಗದಗಳನ್ನು ಬರೆದರೂ ನೀವು ಜವಾಬು ಕೊಡುವದಿಲ್ಲ. ಅದರೊ ಜೊತೆ ಇಲ್ಲ. ಈಗ ನಾನು ಇಲ್ಲಿರುವವರ ಪತ್ತರ ಒಬ್ಬೊಬ್ಬರನ್ನು ಕೇಳುತ್ತೇನೆ ಎಂಬುವಾಗ ಹೇಳ ಮೊದಲಾಗಿ ... ಕುಳಿತುಕೊಂಡಿರುವ ಮ|| ದೇವಪ್ರಿಯ ಕುಂದರರ ಪತ್ತರ ಕೆಲವು ಪ್ರಶ್ನೆಗಳನ್ನು ಕೇಳುತ್ತಾ ಇರುವಾಗ ಮ|| ಅಮೋಸ್ ಕರ್ಣನು ಎದ್ದು ಬಹು ಅವಮರ್ಯಾದೆ ಕರವಾಗಿ ಮಾತಾಡಿದರು. ದೊರೆಯವರು ಬಹು ತಾಳ್ಮೆಯಿಂದ ಎಷ್ಟು ಹೇಳಿದರು ಕೇಳದೆ ವಿವಾದ ನಡೆಸುತ್ತಾ ಇದ್ದಾಗ ಮ|| ದೇವಪ್ರಿಯ ಕುಂದರ್ ಅಮೋಸ್ ಕರ್ಣರು ಎಸ್. ದೇವದಾಸನವರು. ಗಾಬ್ರಿಯೇಲ್ ಕುಂದರರು. ಇಮಾನುವೇಲ್ ... ನವರು ಮೀಟಿಂಗಿನಿಂದ ಹೊರಟು ಹೋದರು. ದೊಡ್ಡ ಗದ್ದಲವಾಯಿತು. ದೊರೆಯವರು ಬೇರೆ ೩ ಜನರು ಸುಮಾರು ೧ ಗಂಟೆ ಹೊತ್ತು ಸುಮ್ಮನೆ ಕೂತಿದ್ದು ನಂತರ ಹೊರಟು ಹೋದರು. ಇಂಥಾ ಗಲಾಟೆ ಮಾಡಿದರೆ, ಸಭೆಯ ...ಗಳನ್ನು ತೀರಿಸಲಿಕ್ಕಾದೀತೇ? ಮರುದಿನ ... ರೀಸ್ ದೊರೆಗಳು ಕಮಿಶನರ್ ... ೨೦ ನೇ ತಾರೀಕಿನಲ್ಲಿ ... ಮ|| ದೇವಪ್ರಿಯ ಕುಂದರರನ್ನು ... ಅನೇಕ ಬುದ್ಧಿವಾದಗಳನ್ನು ಕ್ರೈಸ್ತನಿಗೆ ಯೋಗ್ಯವಾದ ರೀತಿಯಲ್ಲಿ ಹೇಳಿ ಸಮಾಧಾನವಾಗಿ ತೀರಿಸುವರೆ ಹೇಳಿ ಕಳುಹಿಸಿರುತ್ತಾರೆ. ವೆಸ್ಲಿಯನ್ ಮಿಶನಿನ ಪ್ರತಿನಿಧಿಗಳಾದ ರೀಸ್ ಬೋಧಕರು ತನ್ನ ಇಚ್ಛೆಯಂತೆ ನಡೆಯಲಿಕ್ಕಾದೀತೇ? ತನ್ನ ಮೇಲ್ವಿಚಾರಕರಿಗೆ ಜವಾಬು ಕೊಡಬೇಕಲ್ಲವೇ? ಪ್ಲಾಂಟರ್ ಮತ್ತು ಚರ್ಚ್ ಫಂಡಿನ ಹಣ ಸಭೆಯವರ ಕೈಯಲ್ಲಿ ಇರುವದು ನ್ಯಾಯವೋ? ಅದರ ಲೆಕ್ಕಾಚಾರವನ್ನು ಎಲ್ಲಾ ಸಭೆಯವರಿಗೆ ತಿಳಿಸದೆ ಇರುವದಕ್ಕೆ ಕಾರಣವೇನು? ಮುಂದೆ ಅದರ ಗತಿ ಏನಾದೀತು? ಅಮ್ಮಾ ಲೇಟ್ ಬಾಸೆಲ್ ಮಿಶನಿನವರು ಯಾವ ಆಸ್ತಿಯನ್ನಾದರೂ ಸಭೆಯವರ ಹೆಸರಿನಲ್ಲಿ ಬರೆದಿಟ್ಟ ದಾಖಲೆ ಇದೆಯೋ?

ಕೊಡಗು ಕ್ರೈಸ್ತಬಂಧು.

"ಮದ್ರಾಸಿನ ಕೊಡಗುಸಭಾ"

ಅಯ್ಯಾ ಸಂಪಾದಕರೇ,

ನಿಮ್ಮ ಪತ್ರಿಕೆಯ, ಸೆಪ್ಟಂಬರ 14 ರ ಸಂಚಿಕೆಯಲ್ಲಿ, ಮದ್ರಾಸಿನಲ್ಲಿರುವ ಕೊಡಗು ನಿವಾಸಿಗಳು, ಕೈಲ್ ಮುಹೂರ್ತ ಹಬ್ಬವನ್ನು ಆಚರಿಸಿದುದರ ವಿಷಯವಾಗಿಯೂ, ಅದರ ನಂತರ ಒಂದು ಕೊಡಗು ಸಭೆಯನ್ನು ಏರ್ಪಡಿಸಿದುದರ ವಿಷಯವಾಗಿಯೂ, ಒಬ್ಬ "ಪ್ರತ್ಯಕ್ಷದರ್ಶಿ" ಯ ಬಾತ್ಮಿಯನ್ನು ವಿರೋಧಿಸಿ, ಈ ತಾರೀಕು ೨೭ ರ ಸಂಚಿಕೆಯ ... ದೇಶ ವರ್ತಮಾನದ "... ಕೈಲ್ ಮುಹೂರ್ತ ಹಬ್ಬಕ್ಕೆ ಸೇರಿದಷ್ಟೇ ಕೊಡಗರು ಸೇರದೆ ಬಾಕಿಯಿದ್ದರಂತೆ" ಪ್ರಕಟಿಸಿದ ಸುಳ್ಳು ವರ್ತಮಾನವನ್ನು ನೋಡಿ, ನನಗೆ ಬಹಳ ಆಶ್ಚರ್ಯವಾಯಿತು. ಯಾಕೆಂದರೆ ಬಾರದೇ ಇದ್ದ ಕೊಡಗರು ಬಹಳ ಸ್ವಲ್ಪ ಸಂಖ್ಯೆಯೆಂದು ಖಂಡಿತವಾಗಿಯೂ ತಿಳಿಸಬಲ್ಲೆನು. ಅದರೂ ಸಹ, "ಸೇರಿದಷ್ಟೆ ಜನರು ಸೇರಲಿಲ್ಲ" ವೆಂದರೆ, ಈ ಸೇರದೇಯಿದ್ದ ಮಹನೀಯರಲ್ಲಿ ಕೆಲವರಿಗೆ ಯಾವುದೋ ಒಂದು ಮಾಯೆಯ ಸಹಾಯದಿಂದ, ಅವರ ಎರಡು ಪಾಲನ್ನು ಕಾಣಿಸಿಕೊಳ್ಳುವ ಶಕ್ತಿಯಿರಬಹುದೋ! ಎಂಬ ಭಾವನೆಯು ನನ್ನಲ್ಲಿ ಹುಟ್ಟಿತು.

ಮದ್ರಾಸಿನಲ್ಲಿರುವ ಕೊಡಗು ಯುವಕ ಯುವತಿಯರ ಸಂಖ್ಯೆ ಸುಮಾರು ಮೂವತ್ತೈದರಷ್ಟಾಗಬಹುದು. "ಪ್ರತ್ಯಕ್ಷದರ್ಶಿ" ಯು ಬರೆದ ಬಾತ್ಮಿಯಲ್ಲಿ ಸಾಧಾರಣ ಇಪ್ಪತ್ತೈದು ಜನರು ಹಬ್ಬದಲ್ಲಿ ಸೇರಿದ್ದರು ಎಂದು ಕಾಣಿಸುತ್ತೇ ಹೊರತಾಗಿ, ಮದ್ರಾಸಿನ ಕೊಡಗು ನಿವಾಸಿಗಳೆಲ್ಲರೂ ಒಟ್ಟುಗೂಡಿದ್ದರು ಎಂದು ಬರೆಯಲಿಲ್ಲ. ಹೀಗಿರುವಾಗ್ಗೆ, ಕೆಲವರು ಹಬ್ಬಕ್ಕೆ ಸೇರಲಿಲ್ಲವೆಂದು ವಾಚಕರಿಗೆ ಸುಲಭದಲ್ಲಿಯೇ ತಿಳಿಯಬಹುದಲ್ಲವೇ? ಇದಲ್ಲದೆ ಸೇರದೇ ಇದ್ದವರ ಸಂಖ್ಯೆಯನ್ನು ಎರಡರಷ್ಟು ಹೆಚ್ಚಿಸಿ. ತಪ್ಪುವರ್ತಮಾನವನ್ನು ಹಬ್ಬಿಸುವ ಉದ್ದೇಶ ಬಂದಲ್ಲವಿದ್ದರೆ, ನನ್ನ ಸ್ನೇಹಿತನು ... ನ ವಿರೋಧಿಸಿ ಬರೆದಂತಾ ಬಾತ್ಮಿಯ ಅವಶ್ಯಕತೆಯೇ ಇಲ್ಲವೆಂದು ನನಗೆ ತೋರುತ್ತೆ. ಅಥವಾ ಹಬ್ಬಕ್ಕೆ ಸೇರದೇಯಿದ್ದ ಮಾತ್ರದಿಂದ, ಅವರು ಹೊಗಳಿಕೊಳ್ಳುವ ಆವಶ್ಯಕತೆಯೂ ಇಲ್ಲವೆಂದು ನಾನು ಗ್ರಹಿಸುತ್ತೇನೆ. ಆದರೆ ಇಂಥಾ ನಿಜವಲ್ಲದ ವರ್ತಮಾನವನ್ನು ಓದಿ ವಾಚಕರು ತಪ್ಪು ಅಭಿಪ್ರಾಯ ಮಾಡಿಕೊಳ್ಳುವ ಸಂಭವವಿರುವುದರಿಂದ, ನಾನು ಈ ಚಿಕ್ಕ ಬಾತ್ಮಿಯನ್ನು ಪ್ರಕಟಿಸುತ್ತೇನೆ.

ಮದ್ರಾಸಿನಲ್ಲಿರುವ ಕೊಡಗರ ಸಂಖ್ಯೆ ಎಷ್ಟೆಂದು ಈ ಮೊದಲೇ ತಿಳಿಸಿರುತ್ತೇನೆ. ಅವರಲ್ಲಿ ಸುಮಾರು ಇಪ್ಪತ್ತನಾಲ್ಕು ಮಂದಿ ಹಬ್ಬದಲ್ಲಿ ನೆರೆದಿರಬಹುದು. ಹಬ್ಬಕ್ಕೆ ಬಾರದೆಯಿದ್ದವರ ಪೈಕಿ ಕೆಲವರು ಅಸೌಖ್ಯಸ್ಥರಾಗಿದ್ದರು. ಮತ್ತೆ ಕೆಲವರು ಆ ಸಮಯದಲ್ಲಿ ಮದ್ರಾಸಿನಲ್ಲಿರಲಿಲ್ಲ. ಇವರೆಲ್ಲರೂ ಅದರ ನಂತರ ಸಂಘದ ಮೆಂಬರುಗಳಾಗಿ ಸೇರಿದ್ದಾರೆ. ಈ ಎರಡು ಕಾರಣಗಳಿಗೂ ಒಳಪಡದೆ, ಮದ್ರಾಸಿನಲ್ಲೇ ಇದ್ದ ಕೆಲವರು, ಯಾವ ಅನಾನುಕೂಲತೆಯಿಂದ ಬರಲಿಲ್ಲವೆಂದು ಹೇಳಲಿಕ್ಕೆ ಸಾಧ್ಯವಿಲ್ಲ. "ಪ್ರತ್ಯಕ್ಷದರ್ಶಿ" ಯ ಬಾತ್ಮಿಯನ್ನು ವಿರೋಧಿಸಿದವರ ಸ್ವಭಾವವನ್ನು ನೋಡಿದರೆ ಸೇರದೇಯಿದ್ದ ಈ ಕೆಲವು ಮಹನೀಯರಿಗೆ ಏನೋ ಮನಸ್ತಾಪ ಉಂಟಾದಹಾಗೆ ತೋರುತ್ತದೆ.

ಕೈಲ್ ಮುಹೂರ್ತ ಹಬ್ಬದ ದಿವಸ ಕೆಲವು ಮಂದಿ ಮಾತ್ರ ... ದಿನ ಕೆಲಸವನ್ನು ... [illegible] ... ಎಲ್ಲ ... [illegible] ... ಎಂದು

ವಿಂಗಡಿಸಿ, ಒಳ್ಳೆಯದಾದರೆ ತಾನೂ ಸಹ ಆ ಕಾರ್ಯವನ್ನು ಅಂಗೀಕರಿಸುವನು, ಅಲ್ಲದೆ ಅನಾವಶ್ಯಕವಾದ ಹುತ್ತು ಪ್ರಯೋಜನವಿಲ್ಲದ ಆತಂಕವನ್ನು ತರಲಿಕ್ಕಿಲ್ಲ.

ಕೊಡಗು ಸಂಘಸ್ಥಾಪನೆಯ ವಿಷಯದಲ್ಲಿ, ಇಲ್ಲಿನ ಹಿರಿಯರೂ, ಮತ್ತು ಉದ್ಯೋಗಸ್ಥರಾದ ಮ|| ರಾ|| ಶ್ರೀ|| ಕೆ. ಎಂ. ಗಣಪತಿ, ಬ್ಯಾರಿಸ್ಟರಟ್‌ಲಾ, ಮತ್ತು ಮ|| ರಾ|| ಶ್ರೀ|| ಬಿ. ಪಿ. ಕುಟ್ಟಪ್ಪ, ಎಂ. ಎ., ಯವರೂ ಸಹ, ಹೆಚ್ಚಿನ ಪ್ರೋತ್ಸಾಹ ತೆಗೆದುಕೊಂಡರೆಂತ ತಿಳಿಸುವುದಕ್ಕೆ ಸಂತೋಷಪಡುತ್ತೇನೆ. ಮ|| ರಾ|| ಶ್ರೀ|| ಕೆ. ಎಂ. ಗಣಪತಿಯವರನ್ನು ಸಂಘದ ಪ್ರೆಸಿಡೆಂಟರಾಗಿ ಚುನಾಯಿಸದ ಸಂಗತಿಯನ್ನು "ಪ್ರತ್ಯಕ್ಷದರ್ಶಿ" ಯ ವಾರ್ತೆಯಿಂದ ವಾಚಕರು ತಿಳಿದಿರಬಹುದು.

ಮದ್ರಾಸಿನ ಕೊಡಗು ಸಮಾಜವು ಹ್ಯಾಗೂ ಸ್ಥಾಪಿಸಲ್ಪಟ್ಟಿದೆ ಆದರೆ ಸಂಘವನ್ನು ಏರ್ಪಡಿಸುವ ಕೆಲಸದಲ್ಲಿ ತಾವೂ ಪಾಲುದಾರರಾಗಲಿಲ್ಲವೆಂಬದಾಗಿ ಕೆಲವರು ನಿರಾಶೆಯುಕ್ತರಾಗಬೇಕಾಗಿಲ್ಲ. ಇನ್ನಾದರೂ ಸಂಘದ ಮೆಂಬರುಗಳಾಗುವುದಕ್ಕೆ ಬೇಕಾದಷ್ಟು ಅನುಕೂಲಗಳಿವೆ. ಹಾಗೆ ಮೆಂಬರುತನವನ್ನು ಅಪೇಕ್ಷಿಸುವವರು, ಸಂಘದ "ಸೆಕ್ರೆಟರಿ" ಯಾದ ಮ|| ರಾ|| ಶ್ರೀ|| ಎಂ. ಎಂ. ಮುತ್ತಣ್ಣ, ಬಿ. ಎ., ಯವರಿಗೆ ಬರೆದು, "ಎಡ್ಮಿಶನ್ ಫಾರಂ" ಗಳನ್ನು ತರಿಸಿಕೊಳ್ಳಬಹುದೆಂತ ತಿಳಿಸುತ್ತೇನೆ.

ಸಂಘದ ಮೆಂಬರ್

ನೋಟೀಸ್.

ಕೊಡಗು ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿನ ಒಂದು ಜನರಲ್ ಮೀಟಿಂಗ್ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಹಾಲಿನಲ್ಲಿ ತಾ|| 16-11-23 ನೇ ಶುಕ್ರವಾರ 4½ ಘಂಟೆಗೆ ಕಮಿಶನರ್ ಸಾಹೇಬರ ಅಧ್ಯಕ್ಷತೆಯಲ್ಲಿ ನಡಿಯುತ್ತೆ. ಬ್ಯಾಂಕಿಗೆ ಸೇರಿದ ಸಂಘಗಳು ತಮ್ಮ ಪ್ರತಿನಿಧಿಗಳನ್ನು ಕಳುಹಿಸಬೇಕೆಂತಲೂ, ಬ್ಯಾಂಕಿನಲ್ಲಿ ಷೇರ್ ತೆಗೆದುಕೊಂಡ ಮೆಂಬರುಗಳೂ ಸಹ ಹಾಜರಾಗಬೇಕಾಗಿ ಕೋರುತ್ತೇವೆ.

ವಿಷಯಗಳು —

1. ಬ್ಯಾಂಕಿನ ವರದಿ.
2. ಬ್ಯಾಂಕಿಗೆ ಸಾಲ ತೆಗೆಯುವ ಮಿತಿಯನ್ನು ಹೆಚ್ಚಿಸುವುದು
3. ಇತರ ವಿಷಯಗಳು.

ಮಡಿಕೇರಿ, ಸಿ. ಯಮ್. ವೆಂಕಪ್ಪಯ್ಯ,
ತಾ|| 27—10—23. ಗೌ|| ಕಾರ್ಯದರ್ಶಿ.

Coorg Forest Department.

TIMBER SALE NOTICE.

Mercara, dated the 13th October 1923.

It is hereby given for general information that the following quantities of timber felled and carted to Hunsur by the Coorg Forest Department will be sold by public auction in convenient lots at Hunsur on 12th November 1923 at 1 P.M.

	Approximate quantity. C. ft.
Teak (Tectona grandis)	26,209
Biti (Dalbergia latifolia)	412
Honne (Pterocarpus marsupium)	1,931
Matti (Terminalia tomentosa)	61
Nandi (Lagerstroemla lanceolata)	2063
Arsintega (Adina cordifolia)	61
Total	30,737 c ft.

For further particulars apply to:—

The Divisional Forest Officer, South-Coorg, Mercara.

Telegraphic address "**Divfo**" Mercara

ಕೊಡಗು ವಿದ್ಯಾಭಿವೃದ್ಧಿ ಸಂಘ.

ಕೊಡಗು ವಿದ್ಯಾಭಿವೃದ್ಧಿ ಸಂಘಕ್ಕೆ ಚಂದಾ ವಸೂಲಿ ಮಾಡುವುದಕ್ಕೆ ಬಗ್ಗೆ ಇಬ್ಬರು ಏಜೆಂಟರುಗಳು ಬೇಕಾಗಿದೆ ವಸೂಲಿ ಮಾಡಿದ ಹಣದಲ್ಲಿ ಶೇಕಡ 25 ರೂ. ಕಮಿಶನ್ ಕೊಡಲಾಗುವುದು ಅಪ್ಲಿಕೇಶನ್ ಸಂಘದ ಪ್ರೆಸಿಡೆಂಟರಿಗೆ ತಾ|| 30-11-23 ರೊಳಗೆ ಕಳುಹಿಸತಕ್ಕದ್ದು. ನೇಮಕವಾಗುವ ದರಖಾಸ್ತುದಾರರು 100 ರೂ. ಗೆ ಜಾಮೀನು ಕೊಡಬೇಕಾಗಿದೆ 2-1

M. Bheemaiya, *Hon. Secretary* — Sd/ K. Chengappa, *President.*

ನೋಟೀಸು.

ಶ್ರೀ ಕಾವೇರಿ ಮೋಟಾರು ಬಸ್ಸು ಬರುವ ನವಂಬರ್ ತಿಂಗಳಲ್ಲಿ ಹೊರಡುತ್ತೆ. ಈ ಬಸ್ಸಿನ ಕೆಲಸಕ್ಕಾಗಿ ಈ ಕೆಳಗೆ ಕಂಡ ಇಸಮ್‌ಗಳು ಬೇಕಾಗಿವೆ. ಇಚ್ಛೆ ಪಡುವವರು ನವಂಬರ್ ತಾರೀಖು 4 ಕ್ಕೆ ಮಡಿಕೇರಿಯಲ್ಲಿ ಮ|| ಪಾಲೇಕಂಡ ಮೇದಪ್ಪನವರಲ್ಲಿಗೆ ಖುದ್ದು ಹಾಜರಾಗಿ ದರಖಾಸ್ತು ಮಾಡಿಕೊಳ್ಳಬಹುದು.

(1)—ಒಬ್ಬ ಮೆಕಾನಿಕ್ (ಯಂತ್ರಕ) ಸಂಬಳ ಯೋಗ್ಯತೆಮೇರೆ.

(2)—ಒಬ್ಬ ಆಫೀಸು ಮೇನೇಜರು, ಮಾಹೆಯಾನ 50 ರೂಪಾಯಿ, 200 ರೂಪಾಯಿ ಜಾಮೀನು ಕೊಡಬೇಕು.

(3)—ಮೂರು ಜನರು ಡ್ರೈವರುಗಳು. ಸಂಬಳ 35 ರೂಪಾಯಿ ಮೇರೆ ಪ್ರತಿಯೊಬ್ಬನೂ 60 ರೂಪಾಯಿ ಜಾಮೀನು ಕೊಡಬೇಕು.

(4)—ಎರಡು ಜನರು ಕಂಡಕ್ಟರುಗಳು ಸಂಬಳ 20 ರಿಂದ 25 ರವರೆಗೆ ಜಾಮೀನು 60 ರೂಪಾಯಿ ಮೇರೆ

(5)—ಮೂರು ಜನ ಕ್ಲೀನರುಗಳು. ಸಂಬಳ 15 ರೂಪಾಯಿ ಮೇರೆ. ಜಾಮೀನು ಇಲ್ಲ.

ತಾ|| 8—10—23. ಕೆ ಕುಟ್ಟಯ್ಯ,
ಮಡಿಕೇರಿ. ಡೈರೆಕ್ಟರ್.

ಪ್ರಸಿದ್ಧ ಪತ್ರಿಕೆ.

For Sale! ಮಾರಾಟಕ್ಕೆ !!

ಈ ಮೂಲಕ ಮಹನೀಯರಿಗೆ ತಿಳಿಯಪಡಿಸುವುದೇನೆಂದರೆ—ಗೋಣಿಕೊಪ್ಪಲಿನಿಂದ ಪೊನ್ನಂಪೇಟೆಕ್ಕೆ ಹೋಗುವ ಪಬ್ಲಿಕ್ ರಸ್ತೆ ಬಾಜು ಎಡಭಾಗ ಗೋಣಿಕೊಪ್ಪಲು ಸೇತುವೆ ಒಳ ಇರಕಕ್ಕೆ ಈ ಕೆಳಗೆ ವಿವರಿಸಿರುವ ನನ್ನ ಸ್ವಯಾರ್ಜಿತದ ಸ್ಥಿರ ಆಸ್ತಿಗಳನ್ನು ಬಹು ಕಮ್ಮಿ ಕ್ರಯ 4,500 ರೂಪಾಯಿಗಳಿಗೆ ವಿಕ್ರಯಿಸಲು ಇಷ್ಟಪಟ್ಟಿರುವ ನಿಮಿತ್ತ, ಖಾಯಿಸ್‌ದಾರರು ಸದ್ರಿ ಸೊತ್ತುಗಳನ್ನು ಯಾವ ಕಾಲದಲ್ಲಿಯಾದರೂ ಆಜಮಾಯಿಸಿಕೆಯಿಂದ ಹೆಚ್ಚಿನ ಸಂಗತಿ ತಿಳಿಯಬೇಕಾದಲ್ಲು ಕೆಳಗಿನ ವಿಳಾಸಕ್ಕೆ ಬರೆದು ಕೊಳ್ಳತಕ್ಕದ್ದು.

(1) 300 ಭಟ್ಟಿ ಸಾಗುಭೂಮಿ, ಸರಾಸರಿ ಉತ್ಪತ್ತಿ 150 ಭಟ್ಟಿ ಭತ್ತ.

(2) ಸುಮಾರು 500 ಗಿಡಗಳಿರುವ ಕಿತ್ತಳೆತೋಟ ಸರಾಸರಿ ಉತ್ಪತ್ತಿ 100 ರಿಂದ 150 ರೂಪಾಯಿಗಳ ವರೆವಿಗೆ.

(3) ಮಂಗಳೂರು ಹಂಚು ಹಾಕಿದ 5 ಅಂಕಣದ ಒಂದು ಮಹಡಿ ಮನೆ, ಸರಾಸರಿ ಬಾಡಿಗೆ 100 ರೂಪಾಯಿಗಳು.

M. K. ABDUL KARIM,
3-1 Genl. Merchant, Gonicopal.

Old Student's Association Magazine.

CENTRAL HIGH SCHOOL, MERCARA.

Editor: Mr. B. S. Kushalappa B.A., Yearly subscription Re 1—0—0

Will be published under the distinguished patronage of C. A. Souter Esq., I.C.S. Commissioner of Coorg, and K. Chengappa Esq., R. S.—in the first week of November.

Among other articles the following are the few:

"Fore-word" by C. A Souter Esq. I.C.S.

"Vinayak Chaturthi" by Mr. D. M. Sidlingiah.

"The cramming school" by Mr. B. S. Kushalappa.

"A Town Hall for Coorg" by Mr. P. I. Belliappa, Editor "Kodagu"

"Coorg Inscriptions" by Mr. B. N. Krishnamurthy.

"The Village School Master" by Mr. A. Kalamma

"The Huthri Song" by Mr. P. Mangesh Rao, B A, L.T,

"The Will of God" by Mr. Anantha Rao, B.A., B.L.,

etc etc. etc.

Best Medium for Advertisers:

Apply for rates etc, to

The Manager,
Old Students' Association Magazine,
4-1 **C. H School, Mercara.**

HEALTH IS WEALTH.

WANTED all to improve health strength and vitality and thus save nation from physical degeneracy. Send half-anna stamp and get 13 specimen photographs with full particulars.

Director Physical Culture
P.O. Basavanagudi,
BANGALORE CITY

ಆರೋಗ್ಯ ಚಂದ್ರಿಕೆ

ಮದ್ರಾಸ್.

ಸಂಪಾದಕರು ಡಾಕ್ಟರ್ ಯು. ರಾಮರಾವ್, ಎಮ್ ಎಲ್. ಸಿ ಯವರು

ಆರೋಗ್ಯಚಂದ್ರಿಕೆಯು ಆರೋಗ್ಯ ಮತ್ತು ಶ... ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ಕೊ... ವುದಕ್ಕಾಗಿ ಏರ್ಪಡಿಸಿದ

ಒಂದು ಸಚಿತ್ರ ಮಾಸಪತ್ರಿಕೆ.

ಈ ನಮ್ಮ ಮೊದಲನೇ ಸಂಚಿಕೆಯಲ್ಲಿ ಕಾಣ... ವಿಷಯಗಳು.

ಜನಾಧಿಪ್ರಾಯಗಳು—1 ಸ್ವವಿಷಯ, 2. ಆರೋ... ವೇ ಭಾಗ್ಯ, 3. ಮಲೇರಿಯಾ ಎಂಬ ಚಳಿಜ್ವರಗಳ ... ದಣೆ, 4. ಮರುಕೊಳಿಸುವ ಜ್ವರ, 5. ಗರ್ಭಿಣಿಯರ ... ಗ್ಯ, 6. ಎಳೆಮಕ್ಕಳಿಗೆ ಆಹಾರಕೊಡುವುದು, 7. ... ಳಿಗೆ ಬರುವ ಸೆಳವು, ಅದರ ಲಕ್ಷಣಗಳು ಮತ್ತು ... 8 ಕೂಸು ಅಳುವುದೇಕೆ? 9. ಕಣ್ಣುಗಳಿಗೆ ವಿಶ್ರಾಂತಿ ... ಹಲ್ಲುಗಳು, 11. ಕೂದಲಿನ ಪೋಷಣೆ 12 ಸಾರಾ... ರೇನು? 13 ನೊಣಗಳಿಂದಾಗುವ ಅಪಾಯಗಳ... ಶಾಖೆ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ... ಲಗು ವರ್ಷಕ್ಕೆ 1—8—0 ಬಿಡುಪತ್ರಿಕೆ ಒಂದಕ್ಕೆ ...

ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು "ಆರೋಗ್ಯಚಂದ್ರಿಕೆ" ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇ...

ಪತ್ರವ್ಯವಹಾರ ವಿಳಾಸ— ಮೇನೇಜರ್ ಹೆಲ್ತ್ ಅಥವಾ ಆರೋಗ್ಯ ಚಂದ್ರಿಕೆ ಆಫೀ... ಟಪ್ಪಾಲು ಪೆಟ್ಟಿಗೆ ನಂ. 166, 3/3 ತಂಬುಚೆಟ್ಟಿ ಬೀದಿ, ಮ...

ಏಜೆಂಟರು.—ಮ|| ರಾ|| ರಾ|| ಎಸ್ ಕೆ. ಈಶ್ವರಪ್ಪ ...

[12—10] ಭಾಗಮಂಡ್ಲ, ಕೊ...

For your requirements of high grade Arms, Ammunition, Wine and Spirits,

APPLY TO.—

Mc. DOWELL & Co., Ltd.,
24—2 **MERCAR...**

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರ... ರಿಜಿಸ್ಟರಾಗಿದೆ.

ಶೇರ್ ಬಂಡವಾಳ 5...
ವಸೂಲಾದ ಶೇರ್ ಮೊಬಲಗು ...
ಅಮಾ ಬಂದ ಠೇವಣಾತಿ 3...

ಈ ಬ್ಯಾಂಕಿನಿಂದ ಕೊಡಗು ದೇಶದ ಸ... ಸಂಘಗಳಿಗೇನೇ ಹೊರ್ತಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ... ದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬ... ದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇ... ತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯು...

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿ... ರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ

ಪ್ರೆಸಿಡೆಂಟರು ಟ್ರೆಷ...
ಕೊಡಂದೆರ ಕುಟ್ಟಯ್ಯನವರು, ಯಂ, ಧುಬಂಗ...
ರಾವ್ ಬಹದ್ದೂರ್ ಬಿ. ಎ. ಬಿ. ಎ...

ಸೆಕ್ರೆಟರಿ.

ಸಿ. ಯಮ್. ವೆಂಕಪ್ಪಯ್ಯನವರು ಬಿ. ಎ. ಬಿ. ಎ...

ತಾರೀಖು 1—9—23

Printed & Published by D.S. Krishnaswami Proprietor, at Sreenivas Electric Press, M... "for Kodagu" Ltd., Mercara—2 11-1923

If not delivered please return to "Kodagu Office, Mercara" Reg. No. M. 1550.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾನೀತಿ ಪ್ರಯತ್ನತಃ । ಏಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದಃ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು. "ಎಡಿಟರ್ ಪಂದ್ಯಂಡ ಐ. ಬೆಳ್ಯಪ್ಪ"

ಸಂಪುಟ ೩] ಕೊಡಗು, ಸನ್ ೧೯೨೩ ನೇ ಇಸವಿ ನವಂಬರು ತಾರೀಖು ೯ ನೆಯ ಶುಕ್ರವಾರ. [ಸಂಚಿಕೆ ೨೪

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡಾ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಸ್ವರೂಪದ್ದಿರಲಿ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ಜಾಗ್ರತೆಯಾಗಿಯೂ ಸುಲಭಬೆಲೆಯಿಂದಲೂ ಮಾಡಿಕೊಡುತ್ತೇವೆ.

Srinivas Electric Press,
MYSORE.

ಜೀವವಿಮೆ

ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಯ ಯಜಮಾನನು ಮೃತಪಟ್ಟರೆ ಉಂಟಾಗಬಹುದಾದ ತೊಂದರೆಗಳನ್ನು ನಿವಾರಿಸುವುದೇ ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ.

ಅತಿ ಕಷ್ಟದ ದರದಲ್ಲಿ ಯಾವ ಲೋಪವೂ ಬಾರದ ರೀತಿ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪೆನಿ.

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಅನುಕೂಲವಾಗಿ ಹಣವನ್ನು ಒದಗಿಸಿ ಸ್ಥಿರಾಸ್ತಿಗಳನ್ನು ಕೊಂಡು ಕೊಟ್ಟು ದೇಶದ ಆರ್ಥಿಕ ಸಂಪತ್ತನ್ನು (Economic condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

ಸ್ತ್ರೀಪುರುಷ ಇಬ್ಬರೂ ಜೀವವಿಮೆಯ ಸೌಕರ್ಯವನ್ನು ಪಡೆಯಲು ಅನುಕೂಲವನ್ನು ಒದಗಿಸುವ ಸಂಸ್ಥೆಯಾದರೂ ಇದೊಂದೆ.

ಒಂದು ದೇಶದ ಹಣವು ಮತ್ತೊಂದು ದೇಶದಲ್ಲಿ ವ್ಯಯವಾಗದಂತೆ ನೋಡಿಕೊಂಡು ವಿಮೆದಾರರ ಭೂಸಂಪತ್ತನ್ನು ವೃದ್ಧಿಗೊಳಿಸುವ, ಸಹಕಾರಸಂಘ, ಬ್ಯಾಂಕ, ಮುನಿಸಿಪಾಲಿಟಿ ಮುಂತಾದ ಸಾರ್ವಜನಿಕ ಸಂಸ್ಥೆಗಳಿಗೆ ಸಾಲವಾಗಿ ಕೊಡುವ ಅನುಕೂಲತೆಯುಳ್ಳ ಕಂಪನಿ ಇದೊಂದೆ.

ಹೆಚ್ಚಿನ ಮಾಹಿತಿಯನ್ನು ಕನ್ನಡ ನಾಡುಗಳ ಚೀಫ್ ಏಜೆಂಟರಾದ ಈ ಕೆಳಗಿನ ವಿಳಾಸದಾರರಿಂದ ಪಡೆಯಬಹುದಾಗಿದೆ.

ಬಿ. ಎಸ್. ಆರಾಧ್ಯ,
ಲೈಫ್ ಅಂಡ್ ಮ್ಯಾರೇಜ್ ಆಫೀಸ್ ಮಡಿಕೇರಿ.

ಕಿರ್ಲೋಸ್ಕರ ನೇಗಲುಗಳನ್ನೇ ಒಕ್ಕಲಿಗರು ಹೊಗಳುತ್ತಾರೆ.

ಯಾಕೆಂದರೆ- ಇವು ಒಕ್ಕಲಿಗನಿಗೆ ತಗಲುವ ವೇಳೆ, ದುಡ್ಡು, ಕಷ್ಟಗಳನ್ನು ಹೋಗಲಾಡಿಸುತ್ತವೆ. ಬಿಡಿಭಾಗಗಳು ಬೇಕಾದಾಗ ದೊರೆಯುತ್ತವೆ.

ನಮ್ಮಲ್ಲಿ—ಭೂಮಿ ಕಬ್ಬಿಣ ನೇಗಲುಗಳೂ, ಕಬ್ಬಿನ ಗಾಣಗಳೂ, ನೀರು ಕೊರೆಯುವ ಯಂತ್ರ ರಾಟೆಗಳೂ ಇತ್ಯಾದಿ ತಯಾರಾಗುತ್ತವೆ

'ಕೋ' ಎಂಬ ಕ್ಯಾಟಲಾಗು ತರಿಸಿಕೊಳ್ಳಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,
ಕಿರ್ಲೋಸ್ಕರವಾಡಿ, (ಸಾತಾರಾ)

—4]

When you think of going to Bombay
THINK OF

THE WELCOME HOTEL.

Girgaum Back Road, BOMBAY.

Most airy accomodation—Most Central situation—Excellent Meals Every Convenience.

ವೆಲ್ಕಂ ಹೋಟೇಲ್.

ಗಿರ್‌ಗಾಂವ ಬ್ಯಾಕ್‌ರೋಡ್, ಬೊಂಬಾಯಿ

ದೈವಸಂಧಿಯಿಂದೊದಗಿದ ಅಲ್ಲಿ ಇಳಿಯೋದು ಸುಕ್ಷದೆ ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಯೋಗ್ಯವಾದ ಕೋಣೆಗಳು ಬೇಕೆಂದಿದ್ದರೆ ಬೊಂಬಾಯಿಪಟ್ಟದ ಮಧ್ಯಸ್ಥಳದಲ್ಲಿರುವ ವೆಲ್ಕಂ ಹೋಟೇಲಿನಲ್ಲಿಳಿಯಲು ಮರೆಯಬೇಡಿರಿ. ಯೋಗ್ಯವಾದ ಊಟ ಗಾಳಿಗನುಕೂಲದಾದ ಕೊಠಡಿ 15 ಮಿನಿಟಿಗೊಮ್ಮೆ ತಿರುಗುವ ಟ್ರಾಮಿನ ಸೌಕರ್ಯ ಅಂತೂ ಪ್ರಯಾಣಿಕರಿಗೆ ಉಳಿದುಕೊಳ್ಳಲು ಅನುಕೂಲವಾದ ಉಡುಪಿ ಬ್ರಾಹ್ಮಣರ ಭೋಜನಾಲಯ

ಹೆಚ್ ಶ್ರೀನಿವಾಸರಾವು,
ಮೇನೇಜರ್

[12—12]

Cut this out. This will guide you while in BOMBAY.

SHREE KRISHNA LODGE.

BOARDING & LODGING HOUSE,

SANDHURST ROAD, BOMBAY.

Comfortable time Assured.

[12-1]

ಹಾಕಿ.

ಸಾಹಿತ್ಯ ಬೋಂಡು ವೇಂಗಿ ಸ್ಪೆನ್ಸರ್‌ಕ್ಕ ಬಾರಿ.

SPENCER & Co., Ltd.,
Mercara and Pollibetta, Coorg

[24—3]

"ಕೊಡಗು"

೧೯೨೩ನೇ ಇಸವಿ ಅಕ್ಟೋಬರ್ ತಾ|| ೯ನೇ ಶುಕ್ರವಾರ.

ಕೊಡಗು ನ್ಯಾಯವಿಧಾಯಕ ಸಭೆ.

(ಲೆಜಿಸ್ಲೇಟಿವ್ ಕೌನ್ಸಿಲ್).

ನಮ್ಮ ದೇಶಕ್ಕೆ ಕೌನ್ಸಿಲು ಮಂಜೂರಾದ ಸಂಗತಿಯು ಇಂಡಿಯಾ ಗಜೆಟಿನಲ್ಲಿ ಅಕ್ಟೋಬರ್ 30 ನೇ ತಾರೀಕಿನಲ್ಲಿ ಪ್ರಕಟವಾಗಿರುವದರಿಂದ ಮದ್ರಾಸ್ ಪತ್ರಿಕೆಗಳು ಅದರ ಮೇಲೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿವೆ. ಅಂಥಾ ಲೇಖನಗಳ ತರ್ಜುಮೆಗಳನ್ನು ಇನ್ನೊಂದು ಕಡೆ ಕೊಟ್ಟಿದ್ದೇವೆ. ನಮ್ಮ ದೇಶಕ್ಕೆ ಕೌನ್ಸಿಲ್ ಸ್ಥಾಪನೆಯಾಗುವದರಿಂದ ಕೆಲವು ಕಾಲದವರೆಗಾದರೂ ಮದ್ರಾಸಿಗೆ ಸೇರಿಕೊಳ್ಳುವ ಮಾತು ದೇಶದಲ್ಲಿ ಯಾರೂ ಎತ್ತಲಾರರು. "ಹಿಂದೂ" ಪತ್ರಿಕೆ ಹೇಳುವಮೇರೆ ಈ ಕೌನ್ಸಿಲ್ ಸ್ವತಂತ್ರದ ಮೊಳಕೆಯೆಂತಲೇ ದೇಶದವರು ನಂಬಿದ್ದಾರೆ. ಈ ಕೌನ್ಸಿಲಿನ ಮೂಲಕ ಆಡಳಿತದ ಸ್ವತಂತ್ರ ದೊರೆಯಿತೆಂತ ಯಾರೂ ತೃಪ್ತಿಪಡುವಳಿಕೆ ಮಾಡಿಕೊಳ್ಳಬಾರದು. ನಾವು [illegible] ಬರೆದಂತೆ ಬಹಳ ನಿರ್ಬಂಧಗಳಿಗೆ ಒಳಪಟ್ಟು ಮಾತನಾಡುವ ಹಕ್ಕು ಇದೆ. ಆದಾಯವೆಚ್ಚದ ಪಟ್ಟಿಯನ್ನು ಚರ್ಚಿಸಬಹುದು; ಠರಾವು ಪಾಸ್ ಮಾಡಬಹುದು. [illegible]ಕ್ಕೆ ಸಂಬಂಧಪಡುವ ಇತರ ವಿಷಯಗಳಮೇಲೂ [illegible]ಗಳನ್ನು ಮಂಜೂರು ಮಾಡಿಕೊಳ್ಳಬಹುದು. ಈ [illegible] ಕಾರ್ಯಗಳ ಮೂಲಕ ಆಡಳಿತದಲ್ಲಿ ದೇಶದ ಅಭಿಪ್ರಾಯವು ಸ್ವಲ್ಪಮಟ್ಟಿಗಾದರೂ ನಡೆಯುವಂತೆ ಮಾಡಬಹುದು. [illegible]ಟ್‌ಫರ್ಡ್ ರಿಪೋರ್ಟಿನಲ್ಲಿ ಸಹ ಇಂಥಾ ಕೌನ್ಸಿಲ್‌ಗಳ ಸಂಗತಿ ಹೀಗೆಯೇ ಬರೆದಿದೆ. ರಿಸೊಲ್ಯೂಷನ್‌ಗಳನ್ನು ಪಾಸ್ ಮಾಡಿಕೊಂಡರೆ ಸರಕಾರದವರು ಅವನ್ನು ಅನುಸರಿಸಬೇಕೆಂತ ಇಲ್ಲವಾದರೂ ಅವಕ್ಕೆ ಬೆಲೆ ಕೊಡಬೇಕು. ಅದನ್ನು ಉಲ್ಲಂಘಿಸಲಿಕ್ಕೆ ತಕ್ಕ ಕಾರಣ ಕೊಡಲೇಬೇಕು. ಕೌನ್ಸಿಲಿನ ಪ್ರಯೋಜನವು ದೇಶಕ್ಕೆ ಆಗಬೇಕಾದರೆ ಕೌನ್ಸಿಲಿಗೆ ಮೆಂಬರುಗಳನ್ನು ಕಳುಹಿಸಿದರೆ ತಮ್ಮ ಕೆಲಸವಾಯಿತೆಂತ ಓಟರುಗಳಾಗಲೀ ಇತರ ಪ್ರಜೆಗಳಾಗಲೀ ಸುಮ್ಮನೆ ಕೂತಿರಬಾರದು. ದೇಶದ ಕೊರತೆಗಳನ್ನು ಇನ್ನಷ್ಟು ಗಟ್ಟಿಯಾಗಿ ಕೂಗಿ ಹೇಳುತ್ತಿರಬೇಕು. "ಮದ್ರಾಸ್ ಮೆಯಿಲ್" ಪತ್ರದಲ್ಲಿ ಹೇಳುವಂತೆ ಈಗ ಬಂದ ಕೌನ್ಸಿಲಿನಲ್ಲಿ ಸ್ವರಾಜ್ಯದ ಬೀಜವೇನೂ ಇಲ್ಲ. ಸ್ವರಾಜ್ಯದ ಅರ್ಹತೆಯನ್ನು ತೋರಿಸಲಿಕ್ಕೂ ಸ್ವರಾಜ್ಯವನ್ನು ಪಡೆಯಲಿಕ್ಕೂ ಈ ಕೌನ್ಸಿಲಿನಿಂದ ಪ್ರಯೋಜನವಿದೆಯೆಂತ ನಾವು ನಂಬುತ್ತೇವೆ. "ಹಿಂದೂ" ಪತ್ರ ಹೇಳುವಂತೆ ಒಬ್ಬ ಅಧಿಕಾರಿಯ ನಿರಂಕುಶ ಪ್ರವರ್ತನವು ಸ್ವಲ್ಪವಾದರೂ ಕಡಿಮೆಯಾಗುವದಿಲ್ಲ. ಆದರೆ ಇನ್ನು ಮುಂದೆ ನಿರಂಕುಶ ಪ್ರವರ್ತನದಿಂದ ದೇಶವಾಳುವದು ಸಾಧ್ಯವಿಲ್ಲವೆಂತ ಸರಕಾರಕ್ಕೆ ತಿಳಿಯಲಿಕ್ಕೂ, ಸುಧಾರಣೆಯೆಂತ ಬಹು ವಿಜೃಂಭಣೆಯಿಂದ ಹೊರಪಡುತ್ತಿರುವ ಕೌನ್ಸಿಲಿನಿಂದ ಪ್ರಯೋಜನ ಹೊಂದಲು ಸಾಧ್ಯವಿಲ್ಲವೆಂತಲೂ ರೈತರ ಅಧೀನವಾದ ಸರಕಾರವೇ ದೇಶಕ್ಕೆ ಬೇಕಾದ್ದೆಂತಲೂ ತಿಳಿಸಲು ಈ ಕೌನ್ಸಿಲಿನಿಂದ ಪ್ರಯೋಜನವಿದೆ. ಆದರೂ ಈ ಪ್ರಯೋಜನ ಹೊಂದಲಿಕ್ಕೆ ಸಹ ಸರಕಾರಿ ಉದ್ಯೋಗಸ್ಥರೇ ರೈತರ ಪ್ರತಿನಿಧಿಗಳೆಂಬ ಭಾವವು ರೈತರ ಮನಸ್ಸಿನಿಂದ ಹೊರಟು ಹೋಗಿ ತಮ್ಮ ಓಟ್ ಪಡೆದು ಕೌನ್ಸಿಲಿಗೆ ಹೋಗುವವರಿಂದಲೇ ತಮ್ಮ ಕಷ್ಟಪರಿಹಾರವಾಗಬೇಕೆಂಬ ನಂಬಿಕೆ ರೈತರಲ್ಲಿ ಚೆನ್ನಾಗಿ ನೆಲೆಗೊಳಬೇಕು. ಕೌನ್ಸಿಲಿಗೆ ಓಟ್ ಸಿಕ್ಕಿ ಹೋದನಂತರ ಮೊದಲು ಕೊಟ್ಟ ವಾಗ್ದಾನಗಳನ್ನು ಎಷ್ಟರಮಟ್ಟಿಗೆ ನಡಿಸುತ್ತಿದ್ದಾರೆಂಬದನ್ನು ರೈತರು ಬಹು ಜಾಗರೂಕತೆಯಿಂದ ಕಾದು ನೋಡುತ್ತಿರಬೇಕು. ಪ್ರತಿನಿಧಿಗಳು ತಮ್ಮ ಮಾತಿಗೆ ಗಮನಕೊಡುವಂತೆ ಮಾಡುವ ಪವರ್ ತಮ್ಮಲ್ಲಿದೆ ಎಂತ ರೈತರು ಚೆನ್ನಾಗಿ ತಿಳಿದಿರಬೇಕು. ಈಗ ಚುನಾವಣೆಯಾಗುವ ಕೌನ್ಸಿಲಿನ ಅವಧಿಯಾದ ಮೂರು ವರ್ಷ ಗತಿಸುವದರೊಳಗೆ ಕೌನ್ಸಿಲಿನ ಹೊರಗೂ, ಕೌನ್ಸಿಲಿನ ಒಳಗೂ ದೊಡ್ಡ ಪ್ರಾಂತ್ಯಗಳ ಹಕ್ಕುಗಳಿಗಿಂತ ಹೆಚ್ಚಿಗೆ ಹಕ್ಕು ಪಡೆಯಲು ಈ ದೇಶವು ಅರ್ಹವೆಂದು ತೋರಿಸಿಯಾರೆಂತ ನಮಗೆ ನಂಬಿಗೆ ಇದೆ.

"ಹಿಂದೂ" ಪತ್ರಿಕೆ ಹೇಳುವಷ್ಟು ಯೂರೋಪಿಯನ್ ಪ್ಲಾಂಟರುಗಳ ಬಲವೇನೂ ನಡಿಯುವದಿಲ್ಲ. ಪ್ಲಾಂಟರುಗಳು ಇರಲಿ, ಇಲ್ಲದಿರಲಿ, ಬೇರೆ ಪ್ರಾಂತ್ಯಗಳಲ್ಲಿರುವ ರಾಜತಂತ್ರಗಳು ಇಲ್ಲಿಯೂ ಜಾರಿಯಲ್ಲಿವೆಯೇ ಹೊರತು ಇಲ್ಲಿ ಪ್ಲಾಂಟರುಗಳ ಮತದಿಂದಲೇ ಆಡಳಿತ ನಡೆಯುತ್ತೆಂಬದು ಉತ್ಪ್ರೇಕ್ಷೆಯೇ ಸರಿ. "ನ್ಯೂ ಇಂಡಿಯಾ" ದ ಆಶೆಯು ಒಂದು ಬಾಬಿನಲ್ಲಿ ನಿರಾಶೆಯಾಗಬಹುದು. ಪ್ಲಾಂಟರ್ ಸಮುದಾಯಕ್ಕೆ ಕೌನ್ಸಿಲಿನಲ್ಲಿ ಪ್ರತಿನಿಧಿತ್ವವು ಅವರ ಸಂಖ್ಯೆಗಾಗಲೀ ಹಕ್ಕಿಗಾಗಲೀ ಬೇಕಾದದ್ದಕ್ಕಿಂತ ಹೆಚ್ಚಾಗಿಯೇ ಆಯಿತು. ಯೂರೋಪಿಯನ್ ಪ್ಲಾಂಟರುಗಳ ಪ್ರಾಮುಖ್ಯತೆಗೆ ಒಬ್ಬ ಪ್ರತಿನಿಧಿಯೇ ಸಾಕಾಗಿತ್ತು. ಅವರು ರೈತರ ಕಷ್ಟವನ್ನು ವಿಚಾರಿಸುವವರೆಂತ ಯಾರು ನಂಬುವದಿಲ್ಲ. ಒಂದೂವರೆ ಲಕ್ಷ ಜನರಿಗೆ ಪ್ರತಿನಿಧಿಗಳು 14, ನೂರು ಜನ ಪ್ಲಾಂಟರುಗಳಿಗೆ ಇಬ್ಬರು. ಕೌನ್ಸಿಲ್ ಕೊಡುವ ಆಲೋಚನೆ ಮೊದಲನೇಸಾರಿ ರೈತರ ಮುಖ್ಯಸ್ಥರು ಸೇರಿ ಮಾಡಿದಾಗ, ಯೂರೋಪಿಯನ್ ಪ್ಲಾಂಟರುಗಳು ಸಹ ಒಟ್ಟು ಸಮುದಾಯದ ಓಟು ಮೂಲಕವೇ ಬರಬೇಕೇ ಹೊರತು, ಪ್ಲಾಂಟರುಗಳ ಓಟು ಮಾತ್ರ ಪಡೆದರೆ ಸಾಲದೆಂತ ತೀರ್ಮಾನವಾಯಿತು. ಆ ಚರ್ಚೆಯಲ್ಲಿ ಭಾಜಂದ್ರ ಮ|| ಟಿಪ್ಪಿಂಗ್ ಸಾಹೇಬರು ಸಹ ಇದಕ್ಕೆ ಒಪ್ಪಿದರು. ಹೀಗೆ ಇದ್ದಿದ್ದರೆ ಅವರು ರೈತರ ಪ್ರತಿನಿಧಿಗಳೆಂತಲೇ ನಾವು ಗಟ್ಟಿಯಾಗಿ ಹೇಳಬಹುದಿತ್ತು. ಈ ವಿಷಯ ಈಗ ಏರ್ಪಡಾಗುವ ಕೌನ್ಸಿಲಿನಿಂದಲೇ ತೀರ್ಮಾನವಾಗಬೇಕು.

"ಹಿಂದೂ" ಪತ್ರ ಬರೆದಂತೆ ಈ ದೇಶದಲ್ಲಿ ಅನೇಕ ಭಾಷೆಗಳು ಇವೆಯಾದರೂ ಕನ್ನಡ ತಿಳಿಯದವರು ಬಹಳ ಕಡಿಮೆ. ಸರಕಾರದವರು ಕನ್ನಡವನ್ನೇ ದೇಶಭಾಷೆಯಾಗಿ ಒಪ್ಪಿಕೊಂಡಿದ್ದಾರೆ. ಅದ್ದರಿಂದ ಕರ್ನಾಟಕಕ್ಕೆ ಈ ದೇಶ ಸೇರಿದ್ದೆಂಬದನ್ನು ಯಾರೂ ಮರೆಯಬಾರದು. ಕೌನ್ಸಿಲಿಗೆ ಹೋಗುವ ಪ್ರತಿನಿಧಿಗಳು ಕೌನ್ಸಿಲಿನಲ್ಲಿ ಚರ್ಚೆ ಸಹ ಕನ್ನಡ ಭಾಷೆಯಲ್ಲೇ ಆಗಬೇಕೆಂತ ತೀರ್ಮಾನಿಸಿಕೊಂಡಾರೆಂತ ನಾವು ನಂಬಿದ್ದೇವೆ. ಬೇರೆ ಪ್ರಾಂತ್ಯಗಳ ಕೌನ್ಸಿಲುಗಳಲ್ಲಿ ದೇಶಭಾಷೆಯಲ್ಲಿ ಚರ್ಚಿಸಲಿಕ್ಕೆ ಇರುವ ತೊಡಕು ನಮ್ಮ ದೇಶದ ಕೌನ್ಸಿಲಿಗೆ ಇಲ್ಲ. ಬೇರೆ ಪ್ರಾಂತ್ಯಗಳಲ್ಲಿ ಒಂದಲ್ಲ, ಎರಡಲ್ಲ, ಮೂರು ನಾಲ್ಕು ಭಾಷೆಯಾಡುವ ಜಿಲ್ಲೆಗಳ ಪ್ರತಿನಿಧಿಗಳು ಬರುತ್ತಾರೆ. ಅದ್ದರಿಂದ ಯಾವ ದೇಶಭಾಷೆಯಲ್ಲಿ ಚರ್ಚಿಸಬೇಕೆಂಬದು ನಿರ್ಣಯಿಸುವದು ಕಷ್ಟ. ನಮ್ಮ ದೇಶದ ಕೌನ್ಸಿಲಿನಲ್ಲಿ ಕನ್ನಡಭಾಷೆ ತಿಳಿಯದವರು ಬರುವ ಸಂಭವವೇ ಇಲ್ಲ. ಯೂರೋಪಿಯನ್ ಪ್ಲಾಂಟರುಗಳು ಸಹ ಕನ್ನಡ ತಿಳಿದವರೇ ಹೆಚ್ಚು.

ಈ ಕೌನ್ಸಿಲಿನಿಂದ ಖರ್ಚು ಹೆಚ್ಚಾಗುತ್ತೆಯೇ ಹೊರತು ಕಡಿಮೆಯಾಗುವದಿಲ್ಲವೆಂತ 'ಹಿಂದೂ' ಪತ್ರಿಕೆಯು ಬರೆದಿದೆ. ಈಗ ಬರುವ ಕೌನ್ಸಿಲಿಂದ ಖರ್ಚು ಹೆಚ್ಚಾಗುವ ಸಂಭವವಿಲ್ಲ. ಮೆಂಬರುಗಳಿಗೆ ಭತ್ಯ ಕೊಡುವ ಒಂದು ಬಾಬಲ್ಲದೆ ಬೇರೆ ಏನೂ ಖರ್ಚಿಲ್ಲ. ದೊಡ್ಡ ಪ್ರಾಂತ್ಯಗಳ ಕೌನ್ಸಿಲಿನ ಮಾದರಿಯಾಗಿದ್ದರೆ ಖರ್ಚು ಖಂಡಿತವಾಗಿಯೂ ಹೆಚ್ಚುತ್ತಿತ್ತು. ಆದರೂ ಪ್ರಜೆಗಳಿಗೆ ಎಂತ ಇಡುವ ಹಣವನ್ನು ಪ್ರಜೆಗಳ ಅನುಮತಿಯಿಂದ ವಿಚರ್ಮಾಡುವ ಹಕ್ಕು ಸಿಕ್ಕುತ್ತಿತ್ತು. ಸಿಕ್ಕಿರುವ ಕೌನ್ಸಿಲಿನ ಗುಣದೋಷಗಳನ್ನು ತತ್ಕಾಲ ಚರ್ಚಿಸಿದರೆ ಸಾಕಾಗಿದೆ. ನಮ್ಮ ದೇಶದ ಉತ್ಪತ್ತಿಯಲ್ಲಿ ನಿಯಮಿತ ಮೊಬಲಗನ್ನು ಇಂಡಿಯಾ ಸರಕಾರಕ್ಕೆ ಕೊಟ್ಟುಬಿಟ್ಟನಂತರ ಉಳಿದ ಹಣವು ಈ ದೇಶದ ರೈತರ ಗುಣಕ್ಕಾಗಿಯೇ ಖರ್ಚಾಗಬೇಕೆಂಬದೊಂದು ಸಂತೋಷ ನಮಗಿದೆ. ಪ್ರತ್ಯೇಕವಾಗಿರುವದರ ಕೆಡಕುಗಳು "ಹಿಂದೂ" ಹೇಳಿರುವದು ಒಪ್ಪತಕ್ಕದ್ದಾಗಿದೆ. ಆದರೆ ಈಗ ದೊರೆತಿರುವ ಆದಾಯವೆಚ್ಚದ ಅನುಕೂಲತೆ ನೋಡಿದರೆ ಪ್ರತ್ಯೇಕವಾಗಿರುವದೇ ಉತ್ತಮವೆಂತ ನಮಗೆ ಈಗ ತೋರುತ್ತೆ. ಇನ್ನು ಕೌನ್ಸಿಲ್ ಸರಕಾರದ ಅನುಭವದಿಂದ ಗುಣದೋಷಗಳು ತಿಳಿಯಬೇಕಷ್ಟೆ.

ಸೆಲ್ಫ್ ಡಿಟರ್ಮಿನೇಶನ್ ಅಂದರೆ "ತನ್ನ ಹಕ್ಕನ್ನು ತಾನೇ ನಿರ್ಣಯಿಸಿಕೊಳ್ಳುವದು" ಎಂಬ ತತ್ವಕ್ಕನುಸರಿಸಿ ಹಿಂದೂಪತ್ರವು ದೇಶಕ್ಕೇನೇ ಕೌನ್ಸಿಲಿನ ಗುಣದೋಷಗಳನ್ನು ನಿರ್ಣಯಿಸಲು ಬಿಟ್ಟದ್ದು ಯುಕ್ತವೇ. ತತ್ಕಾಲಕ್ಕೆ ಕೌನ್ಸಿಲಿನ ಕೆಲಸ ನಡೆಸಿನೋಡಿ ಹಿಂದಿನಿಂದ ಮುಂದಿನ ಯೋಚನೆ ಮಾಡತಕ್ಕದ್ದೆಂತ ದೇಶದವರು ನಿರ್ಣಯಿಸಿದ್ದು ಸಹ ಯುಕ್ತವೇ.

"ಮದ್ರಾಸ್ ಮೆಯಿಲ್" ಪತ್ರದಲ್ಲಿ ನೋವಾಗುವ ಮಾತುಗಳಿವೆ. ಈಗಿನ ಆಡಳಿತ ರೀತಿಯು ಜನರಿಗೆ ಹೆಚ್ಚು ಕಡಿಮೆ ತೃಪ್ತಿಯುಂಟೆ. ಆಡಳಿತವು ಸಂಪೂರ್ಣ ಅತೃಪ್ತಿಕರವೆಂತ ಕೆಲವು ಕಾಲದಿಂದ ಪ್ರಜೆಗಳು ಕೂಗುತ್ತಿದ್ದಾರೆ. ಈ ತರಹದ ಬರವಣಿಗೆಯಿಂದ ದೇಶದವರು ಎಚ್ಚತ್ತುಕೊಳ್ಳಬೇಕಾದದ್ದು ಅವಶ್ಯವೆಂಬದು ಪ್ರತ್ಯಕ್ಷವಾಗುತ್ತೆ. ದೇಶದಲ್ಲಿ ಬಲವಾದ ಚಳವಳವು ಐದಾರುವರ್ಷದಿಂದ ನಡೆದದ್ದು "ಮದ್ರಾಸ್ ಮೆಯಿಲ್" ನ ಕಿವಿಗೆ ತಲಪಿರುವದಿಲ್ಲ. ಹಾಗಿರುವಾಗ ಇನ್ನೂ ದೂರವಿರುವ ಇಂಡಿಯಾ ಸರಕಾರಕ್ಕೆ ಕೇಳಬೇಕಾದರೆ ಜನರ ಚಳವಳದ ಧ್ವನಿಯು ಇಂಗ್ಲೆಂಡಿಗೆ ತಲಪುವಂತೆ ಮಾಡುವದು ಅವಶ್ಯವೆಂತ ಗೊತ್ತಾಗುವದಿಲ್ಲವೇ.

ಕೌನ್ಸಿಲ್ ಬಂತೆಂಬ ಉತ್ಸಾಹದಲ್ಲಾಗಲೀ ಓಟ್ ಓಟ್ ಎಂಬ ಕೂಗಿನಿಂದಾಗಲೀ ರೈತರು ತೃಪ್ತರಾಗಿ ಬಿಡಬಾರದು. ಪ್ರಜೆಗಳ ಕೈಗೆ ಆಡಳಿತ ಸಿಕ್ಕುವವರೆಗೂ ಪ್ರಜೆಗಳು ತಮ್ಮ ಅಂತರ್ಬಹಿ ಶುಚಿಮಾಡಿಕೊಳ್ಳುವ ಕೆಲಸ ಇದ್ದೇ ಇದೆ. ಪ್ರಜೆಗಳ ಆಡಳಿತ ಬಂದಮೇಲೆ ಈ ಶುಚಿತ್ವ ಬೇಡವೆಂತಲ್ಲ, ಆಗ ದೊರೆತ ಸ್ವತಂತ್ರವನ್ನು ಉಳಿಸಿಕೊಳ್ಳಲಿಕ್ಕೆ ಈ ಶುಚಿತ್ವವು ಇದ್ದೇ ಇರಬೇಕು. ಅಂತಶ್ಶುಚಿ ಎಂಬುದರಿಂದ ನಾವು ಸತ್ಯತೆ, ಅಹಿಂಸಾ, ದೇಶಭಕ್ತಿ, ಕೋರ್ಟು ಕಚೇರಿಗಳಿಗೆ ಅಸಹ್ಯತೆ, ಅನ್ಯೋನ್ಯ ಸಹೋದರಭಾವ ಇತ್ಯಾದಿ ಗುಣಗಳನ್ನು ಕುರಿತು ಹೇಳುವದಾಗಿದೆ. ಬಹಿಶ್ಶುಚಿ ಎಂದರೆ ಪರದೇಶಿ ಉಡುಪಿನ ಮೋಹಬಿಡುವದು; ನಿಶಾ ಇತ್ಯಾದಿ ದುರ್ಗುಣಗಳನ್ನು ಬಿಡುವದು ಮುಂತಾದ್ದು. ಈ ಕೆಲಸಗಳಿಗೆ ದೇಶದವರ ಗಮನವು ಇದ್ದೇ ಇರಬೇಕು. ಅವುಗಳಿಂದಲೇ ದೇಶದಲ್ಲಿ ಸುಭಿಕ್ಷೆಯಾದೀತೇ ಹೊರತು ಈಗಿನ ಕೌನ್ಸಿಲುಗಳಿಂದ ಬಹುಕಾಲಕ್ಕೆ ಸಾಧ್ಯವಿಲ್ಲ.

ಕೊಡಗಿನ ಭಾವಿಸ್ಥಿತಿ.

(ಹಿಂದೂ ಪತ್ರದಿಂದ)

ಕೊಡಗಿಗೆ ಪ್ರತ್ಯೇಕ ನ್ಯಾಯವಿಧಾಯಕ ಸಭೆಯು ನೇಮಕವಾಗಿರುವುವನ್ನು ನೋಡಿದರೆ, ಈ ಪುಟ್ಟ ದೇಶವನ್ನು ಮದರಾಸು ಆದಿಪತ್ಯಕ್ಕೆ ಜಂಟಿಸುವ ವಿಚಾರವು ತೊಲಗಿತೆಂದೇ ನಮ್ಮ ಊಹನೆ. ಈ ಸಭಾ ಸ್ಥಾಪನೆಯು ಯುಕ್ತವಾದದ್ದೋ, ಇದಕ್ಕೆ ಕೊಡಗಿನ ಜನರು ಒಪ್ಪುತ್ತಾರೋ, ಎಂಬ ಸಂಶಯವಿದೆ. ಒಂದು ಬಾಬಿನಲ್ಲಿ ಈ ದೇಶವು ಅತಿ ಸಣ್ಣದಾಗಿರುವುದರಿಂದ ಪ್ರತ್ಯೇಕವಾಗಿ ಇಂದೇಕಾಗಿರುವ ಹೆಚ್ಚು ಖರ್ಚಿನ ಇಂಥ ಸಭೆಯನ್ನು ಈ ದೇಶದವರ ಮೇಲೆ ಏರಿಸುವುದರಿಂದ ಪ್ರಯೋಜನವೇನೂ ಇಲ್ಲ. ವಿಸ್ತೀರ್ಣದಲ್ಲಿ ಕೊಡಗು ದೇಶವು ಕೇವಲ 1580 ಚದರ ಮೈಲುಗಳು. ಅದರ ಜನಸಂಖ್ಯೆಯು ಎರಡು ಲಕ್ಷಕ್ಕಿಂತ ಎಷ್ಟೋ ಕಡಿಮೆ. ಆಚೆ ಮೈಸೂರು, ಈಚೆ ದಕ್ಷಿಣಕನ್ನಡ ಮತ್ತು ಮಲಬಾರು; ತಾನು ಮಧ್ಯೆ ಇರುವ ಕನ್ನಡ, ತೆಲುಗು, ತಮಿಳು, ಕೊಡಗು ಮುಂತಾದ ಭಾಷೆಗಳುಳ್ಳ ಬಹು ಭಾಷಾ ಪ್ರಾಂತ್ಯವಾಗಿದೆ. ಈಗ್ಗೆ ಒಬ್ಬ ಅರಸು ಅಥವಾ ಸೈನ್ಯದ ಉದ್ಯೋಗ ಮಾಡಿದ ಗೈರ್‌ಹಾಜರಿ ನಿರಂಕುಶ ಅಧಿಕಾರಿಯಾದ ಚೀಫ್ ಕಮಿಶನರ ಆಡಳಿತದಲ್ಲಿ ಈ ದೇಶವು ಇದೆ. ಚೀಫ್ ಕಮಿಷನರ ವಸತಿ (ಹೆಡ್‌ಕ್ವಾರ್ಟರ್ಸ್) ಬೆಂಗಳೂರು. ಇವರು ಮೈಸೂರ ರೆಸಿಡೆಂಟರು ಸಹ ಆಗಿದ್ದಾರೆ. ಈ ಕೊಡಗು ದೇಶಕ್ಕೆ ಇವರೇ ಸರ್ವಾಧಿಕಾರಿ ತಾನೇ ಹೈಕೋರ್ಟು. ತಾನೇ ಸ್ಥಳೀಯ ಸರಕಾರ. ಪ್ರಜೆಗಳ ಸಲುವಳಿಯಿಲ್ಲದ ಈ ವ್ಯಕ್ತಿಯಲ್ಲಿ ಸರ್ವಾಧಿಕಾರವೂ ಇರುವುದರಿಂದುಂಟಾಗುವ ಅನರ್ಥದ ಪರಿಮಾಣವು ಎಷ್ಟೆಂದು ಹೇಳಬೇಕಾದುದಿಲ್ಲ. ಆ ಗೈರಹಾಜರ ನಿರಂಕುಶ ಪ್ರಭುತ್ವದಿಂದುಂಟಾಗುವ ಅನರ್ಥಗಳ ಕೂಟಕ್ಕೆ ಮತ್ತೊಂದು ಕೆಡಕೂ ಜೋಡಣೆಯಾಗಿದೆ. ಕೊಡಗು ಕೇವಲ ಕಾಫಿ ಬೆಳೆಯತಕ್ಕ ದೇಶವೇ ಆಗಿಂದ ಲಾರ್ಡ್ ವೆಲ್ಲಿಂಗ್‌ಡನ್ನರು ಹೇಳಿದಂತೆ, 'ವಿಡನ್ನಿನ ತೋಟ'ವೇ ಸರಿ. ಇದು ಯೂರೋಪಿಯನ್ ಪ್ಲಾಂಟರನಿಗೆ ಮೆಚ್ಚಿನ ಊರು. ಇವನ ನೂರೆಯು ಎಷ್ಟರ ಮಟ್ಟಿಗೆ ನಡೆದಿದೆ ಎಂದರೆ, ಇಡೀ ದೇಶವೇ ಅವನ ಕೈಯಲ್ಲಿದೆ. ಕೊಡಗರು ಇಂಥಾ ಪ್ಲಾಂಟರನ ಆಳಿಕೆಯ ಕಡೆಗೆ ಅತೃಪ್ತಿಯ ನೋಟವನ್ನು ಹಾಕುತ್ತಿದ್ದಾರೆ. ಏಕೆಂದರೆ, ಈ ತರದ ಆಡಳಿತವು ಅವರ ಪ್ರಜಾಹಿತ, ಆರ್ಥಿಕ, ಮತ್ತು ರಾಜಕೀಯ ಜೀವನದ ಮೇಲೆ (Civil economic and political life) ದುಃಖಕರವಾಗಿ ಪರಿಣಮಿಸಿಯದೆ.

ಕೊಡಗರು ಬಹಳ ಹಿಂದಿನಿಂದ ಆರ್ಥಿಕ ಮತ್ತು ಇತರ ಕಾರಣಗಳಿಗಾಗಿ ತಮ್ಮ ದೇಶವನ್ನು ಮದ್ರಾಸು ಆದಿಪತ್ಯಕ್ಕೆ ಹೊಂದಿಸುವ ಸಲಹೆಯನ್ನು ಆನಂದದಿಂದ ಸ್ವೀಕರಿಸಿದ್ದೇ ಅಲ್ಲದೆ ಈ ಸಲಹೆಯು ಕಾರ್ಯವಾಗಿ ಪರಿಣಮಿಸಬೇಕೆಂದೇ ಹೋರಾಡಿದರು. ಸುಮಾರು ಮೂರು ವರ್ಷಗಳ ಹಿಂದೆ ನಡೆದ 1200 ಮಂದಿಗಳಿಗಿಂತಲೂ ಹೆಚ್ಚು ಸೇರಿದ 'ಕೊಡಗು ಜಮೀನ್‌ದಾರರ ಸಂಘ'ದಲ್ಲಿ ಗಟ್ಟಿಮುಟ್ಟಿ ರಾಜಕೀಯ ಸುಧಾರಣೆಗಳು ತಮಗೆ ಕೊಡಲ್ಪಡದೆ ಹೋದರೆ, ತಮ್ಮ ದೇಶವನ್ನು ಮದ್ರಾಸಿಗೆ ಜೋಡಿಸಬೇಕೆಂದ ತೀರ್ಪು ಆಯಿತೆಂದು, ನಾವು ಯೋಚಿಸುತ್ತೇವೆ. ಆಗ್ಗೆ ವಿರೋಧ ಪಕ್ಷ ಒಂದಿತ್ತು, ಸರಕಾರದ ಕಡೆಯವರೇ ಆ ಪಕ್ಷದಲ್ಲಿದ್ದವರು. ಈಚಿನ ಕಾರ್ಯಕ್ರಮದ ವಿಚಾರದಲ್ಲಿ ಕೊಡಗರಿಗೆ ಯಾವ ಅಭಿಪ್ರಾಯವಿದೆಯೋ ನಮಗೆ ತಿಳಿಯದು. ಈಗ ಅವರಿಗೆ ಪ್ರಾಪ್ತವಾಗಿರುವ ಸುಧಾರಣೆಗಳು ಹಿಂದಿನ ಸ್ಥಿತಿಯನ್ನು ದೂರಮಾಡುವಂತಿಲ್ಲ. ಉದ್ಯೋಗದ ಅಂತರಕ್ಕೆ ಕೂಡುವ, ಹೇಳತಕ್ಕಂಥ ಹಕ್ಕುಗಳೇನೂ ಇಲ್ಲದ ಸರಕಾರದ ಪ್ರಭಾವಕ್ಕೊಳಗಾದ ಒಂದು ಪುಟ್ಟ ನ್ಯಾಯವಿಧಾಯಕ ಸಭೆಯು ಕಾಲ್ಪನಿಕ ಆಧೀಸ್ತು (Sentimental consolation) ವಾಗಿದೆ ಮಾತ್ರವಲ್ಲದೆ ಮೇಲೆ ವಿವರಿಸಿದ ಕೆಡಕುಗಳ ಬುಡಕ್ಕೆ ಕೊಡಲಿ ಪೆಟ್ಟು ಹಾಕುವಂತೆ ತೋರುವುದಿಲ್ಲ. ಈ ಸಭೆಯು ಖರ್ಚನ್ನು ತಗ್ಗಿಸುವುದರ ಬದಲು ಏರಿಸುತ್ತದೆ. ಆಡಳಿತದ ಮೇಲಿನ ಪ್ಲಾಂಟರನ ಶಕ್ತಿಯು ಎಂದಿನಂತೆ ಜೋರೆ ಇರುತ್ತೆ.

ಮೇಲಾಗಿ, ಕೊಡಗು 'ಕೌನ್ಸಿಲುಳ್ಳದೇಶ'ವಾಗಿ ಸ್ವತಂತ್ರದ ಮೆಟ್ಟಲನ್ನು ಏರಲು ಹೊಸ ಸ್ಥಿತಿಗತಿಗಳಿಗನುಸಾರವಾಗಿ ಸಿಕ್ಕಿರುವ ಅಭಯದ ರುಚಿಯು ವ್ಯಕ್ತಿ ಆಶೆಯನ್ನು ಹೆಚ್ಚಿಸುವುದಲ್ಲದೆ, ತಮ್ಮ ಸ್ಥಳೀಯ ದೇಶಭಕ್ತಿಯನ್ನು ವೃದ್ಧಿಪಡಿಸುವುದು. ಕೊಡಗಿನ ಜನರು ಸ್ವಸ್ಥಾಪನೆ (Self determination) ಗಾಗಿ ತಮ್ಮ ಹಕ್ಕು ಸಂಪಾದಿಸುವದಾರಿಗೆ ನಾವು ಅಡ್ಡ ಬರುವವರಾಗಿಲ್ಲ. ತಮ್ಮ ದೇಶವನ್ನು ಮದರಾಸಿಗೆ ಸೇರಿಸಬೇಕೆಂದು ಅವರು ಹಿಂದೆ ಆಚರಿಸಿದ ವ್ರತವನ್ನು ತ್ಯಜಿಸಿದರೂ ಆಗಬಹುದು; ಆತ್ಮಶಕ್ತಿಯಿಂದ ಹೊಸ ವ್ರತವನ್ನು ಕೈಕೊಂಡರೂ ಆಗಬಹುದು; ಹೇಗೂ ಇದು ಅವರಿಗೆ ಸಂದ ವಿಚಾರ.

ಜಮ್ಮಾ ಹಿಡುವಳಿಯ ನಿರ್ಬಂಧನ.

(ಬರೆದು ಬಂದದ್ದು.)

ಇದೇ ತಿಂಗಳ 5 ನೇ ತಾರೀಖಿನಲ್ಲಿ ಹೊರಟ ಕೊಡಗು ಪತ್ರಿಕೆಯಲ್ಲಿ ಜಮ್ಮಾದ ಭೂಮಿ ಇವುಗಳಿಗೆ ಲಗತ್ತಾದ ಬಾಣೆ ಬಾರಿಕೆಗಳ ಬಾಬಿನಲ್ಲಿ ಕಾಲಕ್ರಮೇಣವಾಗಿ ಬಂದಿರುವ ನಿರ್ಬಂಧನಗಳ ಕುರಿತು ಬರೆಯಲ್ಪಟ್ಟಿತು. ಈಗ ಜಮ್ಮಾದ ಮಲೆಗಳ ನಿರ್ಬಂಧಗಳ ಕುರಿತು ಬರೆಯೋಣ. ಯಾಲಕ್ಕಿ ಮಲೆಗಳು ಸಾಧಾರಣವಾಗಿ ಕೊಡಗಿನಲ್ಲಿರುವ ಪಶ್ಚಿಮ ಘಟ್ಟದ ಪರ್ವತಶ್ರೇಣಿಗಳಲ್ಲಿರುವದರಿಂದ ಪೂರ್ವದಲ್ಲಿ ಇಂಥ ಪರ್ವತಗಳ ಅಡಿಯಲ್ಲಿ ಇಲ್ಲವೆ ಅದು ಬಾಜುವಿನಲ್ಲಿರುತ್ತಿದ್ದ ಜಮ್ಮಾದ ರೈತರುಗಳ ಅನುಕೂಲತೆಗೋಸ್ಕರ ಅದು ಅವರ ಸ್ವಾಧೀನದಲ್ಲಿದ್ದವು. ಅವರವರ ಅನುಕೂಲ ತಕ್ಕಾಗ ಸ್ವಂತವಾಗಿ ಮಲೆಗಳಲ್ಲಿ "ಕೋಟೆ" ಗಳ ಮಾಡಿಕೊಂಡು ಹಂಗಾಮಿನಲ್ಲಿ ಅಂದರೆ ತಮ್ಮ ತಮ್ಮ ಗದ್ದೆ ವ್ಯವಸಾಯವಾದನಂತರ ಮಲೆಗಳಲ್ಲಿ ಹೋಗಿರುತ್ತಾ ಯಾಲಕ್ಕಿ ಫಸಲನ್ನು ಎತ್ತಾವಳಿ ಮಾಡುತ್ತಿದ್ದರು. ಮನೆ ಹುಡುಗರು ಸಹ ಮಲೆಯಲ್ಲಿರುವ ತಮ್ಮ ಜನರಿಗೆ ತಮ್ಮ ತಮ್ಮ ಮನೆಗಳಿಂದ ಅಕ್ಕಿ, ಬುತ್ತಿ, ರೊಟ್ಟಿ, ಇತರ ಸಾಮಾನು ಸಹ ಅರ್ಧ ದಾರಿಗೆ ತಂದುಕೊಡುವುದೂ ಮಲೆಯಿಂದ ಗಂಡಸರು ಕೂಯಿದಾಗಿದ್ದ ಯಾಲಕ್ಕಿಯನ್ನು ಅರ್ಧದಾರಿ ವರೆಗೆ ತಂದು ಹುಡುಗರಿಗೆ ಕೊಡುವುದೂ ಸಾಧಾರಣ ಪದ್ಧತಿಯ ರೂಢಿಯಲ್ಲಿ ಇದ್ದದ್ದು ನಮ್ಮಲ್ಲಿ ಅನೇಕ ಹಿರಿಯರಿಗೆ ತಿಳಿದಿರುವ ಸಂಗತಿಯಾಗಿದೆ. ಹಿಂದೇ ಕಾಲದಲ್ಲಿ ಈಗಿನಷ್ಟು ನಾಗರೀಕತೆ ಹರಡದೆ ಇದ್ದ ಕಾರಣ ಈ ಕೆಲಸ ಬಿಟ್ಟು ಹೋಗುವವರೂ ಪರದೇಶದಿಂದ ವ್ಯಾಪಾರಕ್ಕಾಗಿ ಈ ದೇಶಕ್ಕೆ ಬರುವವರೂ ಕೇವಲ ವಿರಳವಾಗಿ [illegible] ಹಿಂದಿನ ಕೊಡಗಿನ ರಾಜರು ಹಾಗೆ ಅವರ ಸ್ವಂತ [illegible] ಕಾರಣಗಳಿಂದ ಜನರು [illegible] ಇಟ್ಟಿರಲಿಲ್ಲ. ದೇಶದಲ್ಲಿ ಬೆಳೆದ ಯಾಲಕ್ಕಿಯೆಲ್ಲ ಆ ಕಾಲದ ರಾಜರ (ಅರಮನೆಯ) ಮೂಲಕವೇ ವ್ಯಾಪಾರವಾಗುತ್ತಿತ್ತು. ಆದ್ದರಿಂದ ಯಾಲಕ್ಕಿ ಬೆಳೆಸಿದ ರೈತರು ತಮ್ಮ ಉತ್ಪತ್ತಿಯನ್ನು ವ್ಯಾಪಾರಕ್ಕಾಗಿ ಅರಮನೆಗೆ ಒಪ್ಪಿಸುತ್ತಿದ್ದರು. ಇದಕ್ಕಾಗಿಯೇ ರಾಜರು ಆ ಬಾಬಿನ ಲೆಕ್ಕವನ್ನು ಇಡಲು ಸಿಬ್ಬಂದಿಯನ್ನು ಏರ್ಪಡಿಸಿದ್ದರು. ಯಾಲಕ್ಕಿ ರಾಜರ ಮುಖಾಂತರವೇ ವ್ಯಾಪಾರವಾಗುತ್ತಿದ್ದರೂ [illegible] ಬೆಳೆದಾತ ರೈತರಿಗೆ ಕ್ರಯದ ಹಣವನ್ನು ಕೊಡುತ್ತಿದ್ದರು. ಇದರಿಂದ ಮುಖ್ಯವಾಗಿ ತಿಳಿಯತಕ್ಕದೇನೆಂದರೆ ರೈತನು ತನ್ನ ಮಾಲೆಂದು ತಿಳಿದು ಬೇರೆ ಯಾರೂ ಕೊಂಡುಕೊಳ್ಳುವವರ ನಿಮಿತ್ತದ ಕಾರಣ ರಾಜರಿಗೆ ಒಪ್ಪಿಸಿ ರಾಜರಿಂದ ಕ್ರಯದ ಹಣಗಳನ್ನು ಹೊಂದುತ್ತಿದ್ದರೆಂಬುದೆ. ಈ ಪದ್ಧತಿ ಇಲ್ಲಿ ವಿವರಿಸಲು ಅವಶ್ಯ ಇಲ್ಲದ ಅನೇಕ ಕಾರಣಗಳಿಂದ ರೈತರ ಅನುಭವ ಹಕ್ಕು ಸ್ವಾಧೀನದಲ್ಲಿದ್ದ ಅನೇಕ ಯಾಲಕ್ಕಿ ಮಲೆಗಳು ಅನುಭವ ಇಲ್ಲದೆ ಬಿಟ್ಟಿದ್ದ ಅನೇಕ ಭೂಮಿಗಳಿಗೂ ರಾಜರು ಕೂಡ ತೆಗೆದುಕೊಳ್ಳುವ ದಾರಿಗಳಿಂದ ಹಾಗೆ ತಾಣಬಿಟ್ಟಿದ್ದವೋ ಹಾಗೆ ಬಿಟ್ಟುಹೋದವು. ಅಂಥ ಮಲೆಗಳನ್ನು ಆವ ರೈತರ ಮೂಲಕ ಎತ್ತಾವಳಿ ಮಾಡಿಸುತ್ತಿದ್ದರು. ಈ ರೀತಿ ಬಿಟ್ಟ ಯಾಲಕ್ಕಿಯನ್ನು ರೈತರು ಕೂಡ ಯಾಲಕ್ಕಿ ಜೊತೆಯಲ್ಲಿಯೇ ರಾಜರು ವ್ಯಾಪಾರವಾಡುತ್ತಿದ್ದರು. ಇದೇ ಏರ್ಪಾಡು ಕೊಡಗು ಬ್ರಿಟಿಷರ ವಶವಾಗಿ ಎಷ್ಟೋ ವರುಷಗಳವರೆಗೆ ನಡೆದುಬರುತ್ತಿತ್ತು. ಇದಕ್ಕೆ ಸರಕಾರಿ ಸಿಬ್ಬಂದಿ ಸಹ ಬೇರೆ ಇರುತ್ತಿತ್ತು. ಹೀಗೆ ಎತ್ತಾವಳಿ ಸರಕಾರದವರು ಮಾಡಿ ಯಾಲಕ್ಕಿಯನ್ನು ಒಣಗಿಸುತ್ತಿದ್ದ ಕಣವೂ ಇದರ ಸುತ್ತ ಕಟಂಗ ಇರುವುದೂ ಸಹ ಈಗಲೂ ನಾಲಡಿಗ್ರಾಮದಲ್ಲಿ ಯಾರಾದರು ಕಾಣಬಹುದು. ಹೀಗೆ ರೈತರ ಹಿಡುವಳಿ ಅನುಭವತಪ್ಪಿದ ಯಾಲಕ್ಕಿ ಮಲೆಗಳಿಗೆ "ಸರಕಾರಿ ಮಲೆ" ಎಂಬ ಹೆಸರು ಬಿತ್ತು. ಅನಂತರ ಯಾಲಕ್ಕಿ ಕೊಂಡುಕೊಳ್ಳುವವರು ಹೆಚ್ಚಾದರಿಂದಲೂ ಸರಕಾರಿ ಸಿಬ್ಬಂದಿಯವರಿಗೂ ರೈತರಿಗೂ ಸ್ನೇಹವಿದ್ದು ಯಾಲಕ್ಕಿ ಫಸಲಿನಲ್ಲಿ ವಂಚನೆಯಾಗುವದೆಂದೂ ಸದರಿ ಹಿಂದಿನ ಏರ್ಪಾಡು ಬಹಳ ಗಲಾಟೆಗೂ ನಷ್ಟಕ್ಕೂ ಕಾರಣವಾಗುವದೆಂದೂ ಸರಕಾರದವರು ಅಭಿಪ್ರಾಯಪಟ್ಟವರಾಗಿ "ಸರಕಾರಿ ಮಲೆ" ಗಳ ಫಸಲನ್ನು ಆಯಾಯ ಸಂವತ್ಸರ ಹರಾಜುಮಾಡಿ ಹಣ ವಸೂಲು ಮಾಡುವುದೂ, ರೈತನು ತನ್ನ ಯಾಲಕ್ಕಿಯನ್ನು ತಂದು ಸರಕಾರಕ್ಕೆ ಕೊಟ್ಟ ಮೊಬಲಗು ಪಡೆಯುವದು ಬೇಡ, ಪ್ರತಿ ಆಥ ರೈತನು ತನ್ನ ಮಲೆಯಲ್ಲಿ ಬೆಳೆಯುವ ಫಸಲಿನ ಸರಿಯಾದ ಪರಿಮಾಣವನ್ನು ತಿಳಿಯಬೇಕೆಂದು ಹಾಗೆ ತಿಳಿಸಿದನಂತರ ಆಗಿನ ಯಾಲಕ್ಕಿ ಕ್ರಯದಮೇಲೆ ಆಗುವ ಮೊಬಲಗಿನಲ್ಲಿ ಸರಕಾರಕ್ಕಾಗುವ ರಾಜಭಾಗವನ್ನು ಹಣದ ರೂಪದಲ್ಲಿ ಕಂದಾಯವೆಂದು ಕೊಡಬಹುದು. ವಸೂಲು ಮಾಡಬಹುದೆಂದು ಸರಕಾರದವರು ನಿಶ್ಚಯಮಾಡಿಕೊಂಡು ಅನಂತರ ಜಮ್ಮಾದ ಮಲೆಗಳಿಗೆ ಜಮ್ಮಾದ ಭೂಮಿಗೆ ರಾಜರು ಸಿಸ್ತುಕಟ್ಟಿದರೀತಿ ಸಿಸ್ತುಕಟ್ಟಿ "ಪಟ್ಟೆ" ಸಹ ಕೊಡುವುದಾಗಿ ಇಸ್ತಿಹಾರ್ ಮಾಡಿದರೀತಿ "ಪಟ್ಟೆ" ಸಿಕ್ಕುತ್ತೆಂಬ ಸಂಟ ನಿರೀಕ್ಷಣೆಯಿಂದ ರೈತರು ಯಥಾರ್ಥವೆಂದು ನಂಬಿ ತಮ್ಮ ತಮ್ಮ ಮಲೆಗಳ ಯಾಲಕ್ಕಿ ಫಸಲಿನ ಪರಿಮಾಣವನ್ನು ತಿಳಿಸಿದಮೇಲೆ ಆಗಿನ ಧಾರಣೆಗನುಗುಣವಾಗಿ "ರಾಜಭಾಗ" ಇಲ್ಲವೆ ಕಂದಾಯವನ್ನು ವಿಧಿಸಿದರು. ಇದು ಆಗಿನ ಕೊಡಗಿನ ಸೂಪರಿಂಟೆಂಡರಾಗಿದ್ದ ಕ್ಯಾಪ್ಟನ್ ಮಾಟಿಗನವರ ಕಾಲದಲ್ಲಿ ನಡೆದ್ದಾಗಿದೆ. ವಾಗ್ದಾನದ ಪ್ರಕಾರ ಪಟ್ಟೆ ಬರಲಿಲ್ಲವಾಗಿ ಅನೇಕಾವರ್ತಿ ಜಮ್ಮಾದ ಮಲೆ ರೈತರು ಅರ್ಜಿಗಳನ್ನು ಬರಾಯಿಸಿಕೊಂಡರೂ ಏನೂ ಪ್ರಯೋಜನಕ್ಕೆ ಬರಲಿಲ್ಲ. ಕಂದಾಯ ವಸೂಲಾಗುತ್ತಲೇ ಬರುತ್ತಿತ್ತು. "ಸರಕಾರಿ ಮಲೆ" ಗಳ ಫಸಲನ್ನು ಪ್ರತಿ ವರುಷ ಹರಾಜುಮಾಡುವುದು. ಸರಕಾರಕ್ಕೆ ಹೆಚ್ಚಿನ ಪ್ರಯೋಜನ ಇಲ್ಲ. ಗೇಣಿಗೆ ಕೊಟ್ಟಲ್ಲಿ ಹೆಚ್ಚಿನ ಮೇಹನತ್ತಿನಿಂದ ಉತ್ಪತ್ತಿ ಉಂಟಾಗಿ ಗೇಣಿ ಮೊಬಲಗು ಹೆಚ್ಚು ಆಗುವುದೆಂಬ ಭಾವನೆಯಿಂದಲೂ ಬಹಳ ದೀರ್ಘಕಾಲದ ಗೇಣಿಗೆ ಕೊಟ್ಟರೆ ಹಕ್ಕಿಗೇನಾದರು ಭಂಗ ಉಂಟಾಗುವದೆಂಬ ಅಭಿಪ್ರಾಯದಿಂದಲೂ ಹತ್ತುವರ್ಷದ ಗೇಣಿಗೆ ಮಾತ್ರ ಹಡದರಕಾಸ್ತು ದಾರರಿಗೆ ಕೊಡುತ್ತಾ ಬಂದರು. "ಗೇಣಿ" ಮಲೆಗಳೆಂದು ಹೆಸರು ಬರಲಿಕ್ಕೆ ಕಾರಣವೇ ಇದು. ಇಂಥ ಗೇಣಿ ಮಲೆಗಳು, ಜಮ್ಮಾದ ಮಲೆಗಳ ಮಧ್ಯ ಮಧ್ಯ ಇರುತ್ತಾ ಜಮ್ಮಾದ ಮಲೆಗಾರರಿಗೆ ಬಹಳ ಕೇವಲ ಅನ್ಯಾಯವಾದದ್ದರಿಂದ ಸರ್ವೆ ಮಾಡಿ ವಿಂಗಡಿಸಿ ಹದ್ದುಬಸ್ತು ಮಾಡಿಡಬೇಕೆಂಬ ಅರ್ಜಿಗಳು ಸರಕಾರದವರಲ್ಲಿ ಹುಟ್ಟಿ ಹಾಗೂ ತಕ್ಕಮಟ್ಟಿನ ಏರ್ಪಾಡು ನಡೆಯಿತು. ಸೆಟ್ಲ್‌ಮೆಂಟಾಗಬೇಕೆಂದು ಹೇಳುತ್ತಿದ್ದ ಇತ್ತೀಚೆಗೆ ಸೆಟ್ಲ್‌ಮೆಂಟು ಜಮ್ಮಾ ಮಲೆಗಳಿಗೆ ಮಾಡಿರುವ ವಿಚಾರ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಜಮ್ಮಾದ ಮಲೆಯವರ ಹಕ್ಕು ಯಾವ ರೀತಿಯಲ್ಲಿ ತೀರ್ಮಾನವಾಯಿತು. ಯಾವ್ಯಾವ ಬದಲುಗಳಿಗೆ ಕಾರಣ ಉಂಟಾಯಿತು. ಕಂದಾಯದಲ್ಲಿ ಏನೇನು ವ್ಯತ್ಯಾಸ ಬಂದಿವೆ, ಈ ವಗೈರೆ ಸಂಗತಿಗಳನ್ನು ಇನ್ನೊಂದು ಸಂಚಿಕೆಯಲ್ಲಿ ಕೇಳಬಹುದು.

ಕೊಡಗಿಗೆ ಕೌನ್ಸಿಲ್

೧) ("ಮದ್ರಾಸ್ ಮೆಯಿಲ್ ಪತ್ರದಿಂದ) ಕೊಡಗೆಂಬ ಚಿಕ್ಕ ಪ್ರಾಂತ್ಯವು ಮದ್ರಾಸ್ ಅಧಿಪತ್ಯದ ಒಳಗೆ ಸೇರಿ ಇದ್ದರೂ ಇಂಡಿಯಾ ಸರಕಾರದಿಂದಲೇ ಚೀಫ್ ಕಮಿಷನರ ಮೂಲಕ ಆಡಳಿತ ನಡಿಸಲ್ಪಡುತ್ತಿದೆ. ಕಮಿಷನರು ಮತ್ತು ಫಾರೆಸ್ಟ್ ಇಲಾಖೆಯ ಮುಖ್ಯ ಉದ್ಯೋಗಸ್ಥರು ಸಹ ಮದ್ರಾಸ್ ಅಧಿಪತ್ಯದಿಂದ ಎರವಾಗಿ ಕೊಡಲ್ಪಟ್ಟವರಾಗಿದ್ದಾರೆ. ಹಾಗೂ ಈಗಿನ ಆಡಳಿತದಲ್ಲಿ ದೇಶದ ಜನರಿಗೆ ಹೆಚ್ಚು ಕಡಿಮೆ ತೃಪ್ತಿಯೇ ಇದೆ. ಇಂಡಿಯಾ ಸರಕಾರದಿಂದ 'ಕೊಡಗನ್ನು ಮದ್ರಾಸಿನಲ್ಲಿ ಸೇರಿಸಲ್ಪಟ್ಟರೆ' ಈ ಸಂಬಂಧದಲ್ಲಿ ಜನರಿಗೆ ತುಂಬಾ ಗಾಬರಿಯಿದೆ. ಆದರೂ ಬಂದೋಬಸ್ತಿನೊಳಗೆ ಜನರಲ್ಲಿ ಕೆಲವು ಭಾಗದವರು ಆಡಳಿತದಲ್ಲಿ ಹಣಗೆ ಹಕ್ಕು ಸಿಕ್ಕಬೇಕೆಂಬ ಕಾರಣದಿಂದ ಮದ್ರಾಸ್ ಅಧಿಪತ್ಯದ ಜಿಲ್ಲೆಯಾಗಿ ಸೇರಿಸಬೇಕೆಂದು ಕೇಳುತ್ತಿದ್ದರು. ಅದರ ಆವಶ್ಯಕತೆ ಈಗ ಇಲ್ಲ. ಇತ್ತೀಚಿನ ಸುಧಾರಣೆಗಳು ಬಂಗಾಳ ಮೊದಲಾದ ದೊಡ್ಡ ಪ್ರಾಂತ್ಯಗಳಿಗೆ ಮಾತ್ರವಲ್ಲ, ಚಿಕ್ಕ ಚಿಕ್ಕ ದೇಶಗಳಿಗೂ ಸ್ವರಾಜ್ಯದ ಹಕ್ಕು ಕೊಡುವ ಕೌನ್ಸಿಲ್ ಕೊಡಬೇಕಾಯಿತು. ಚಿಕ್ಕ ಪ್ರಾಂತವಾದ ಕೊಡಗಿಗೆ ಹೊಸ ಕೌನ್ಸಿಲ್ ಒಂದು ಈಗ ಕೊಡಲ್ಪಟ್ಟಿದೆ. ಮುಖ್ಯ ಅಧಿಕಾರಿಯು ಚೀಫ್ ಕಮಿಷನರೆಂಬ ಹೆಸರಿನವರೇ ಆಗಿದ್ದರೂ ಅವರಿಗೆ ಲೆಫ್ಟಿನೆಂಟ್ ಗೌರ್ನರ ರವರ ಕೌನ್ಸಿಲ್ ಒಂದು ಏರ್ಪಡಾಗುತ್ತೆ. ಚುನಾಯಿತರಾದ ಉದ್ಯೋಗಸ್ಥರಲ್ಲದ ಮೆಂಬರುಗಳ ಸಂಖ್ಯೆ ಹೆಚ್ಚಾಗಿರುತ್ತೆ. ೪ ಜನ ಉದ್ಯೋಗಸ್ಥರೂ ಒಬ್ಬ ಹಿಂದುಳಿದ ವಂಗಡದ ಪರವಾಗಿಯೂ ನೇಮಿಸಲ್ಪಡುತ್ತಾರೆ. ಹಿಂದಿನ ಚರಿತ್ರೆಯನ್ನು ಹೋಲಿಸಿದರೆ ಮತ್ತು ದೇಶದ ಆಳತೆಯನ್ನು ನೋಡಿದರೆ ಈ ದೇಶಕ್ಕೆ ಸರಕಾರದವರು ಸ್ವರಾಜ್ಯದ ವಿಷಯದಲ್ಲಿ ಬಹಳ ಧಾರಾಳಮನಸ್ಸು ತೋರಿಸಿದರೆಂತಲೇ ಹೇಳಬಹುದು. ಕೊಡಗರಿಗೆ ದೊರೆತ ಸ್ವರಾಜ್ಯದಲ್ಲಿ ಅವರಿಗೆ ತೃಪ್ತಿಯಾಗದೆ ಇರಲಾರರೆಂತಲೂ ಅವರ ಧಾರ್ಮಿಕ ಮತ್ತು ಸಾಂಪತ್ತಿಕ ಬೆಳವಣಿಗೆಯು ಇನ್ನು ಮುಂದೆ ಮೊದಲಿನ ಆಡಳಿತದಲ್ಲಿ ಆಗುತ್ತಿದ್ದದ್ದಕ್ಕಿಂತ ಹೆಚ್ಚಾಗಿ ಮುಂದೆ ಸಾಗೀತೆಂತ ನಾವು ನಂಬುತ್ತೇವೆ.

(೨) (ನ್ಯೂ ಇಂಡಿಯಾದಿಂದ) ಕೌನ್ಸಿಲ್ ಬಂದದ್ದರಿಂದ ಕೊಡಗು ಪ್ರತ್ಯೇಕವಾಗಿರಬೇಕೋ ಮದ್ರಾಸಿಗೆ ಸೇರಬೇಕೋ ಎಂಬುದಾಗಿ ಕೆಲವು ವರ್ಷಗಳಿಂದ ನಡೆಯುತ್ತಿದ್ದ ವಾದವು ತೀರ್ಮಾನವಾಯಿತು. ೧೫೮೦ ಚದುರ ಮೈಲು ವಿಸ್ತೀರ್ಣ ಉಳ್ಳದ್ದು. ಆದರೂ ಕಾಫಿ ತೋಟಗಳುಳ್ಳ ದೇಶವಾಗಿದೆ. ದೇಶದವರು ಮದ್ರಾಸಿಗೆ ಸೇರಿಕೊಂಡರೆ ಹೆಚ್ಚಿನ ರಾಜಕೀಯ ಸ್ವತಂತ್ರವನ್ನು ಪಡೆಯಬಹುದೆಂದು ತಿಳಿದಿದ್ದಾರೆ, ಆದರೆ ಯೂರೋಪಿಯನ್ ತೋಟಗಾರರು ಮದ್ರಾಸಿಗಿಂತ ಇಂಡಿಯಾ ಸರಕಾರದಿಂದ ಚೆನ್ನಾಗಿ ಆಳಲ್ಪಡುತ್ತದೆಯೆಂತ ವಾದಿಸುತ್ತಾರೆ. ೧೯೨೦ ರಲ್ಲಿ ಇಂಡಿಯಾ ಕೌನ್ಸಿಲಿನಲ್ಲಿ ವಾದ ಬಂದಾಗ ಪಾರ್ಲಿಮೆಂಟು ಕ್ರಮದ ಕೌನ್ಸಿಲ ಉಳ್ಳ ಸುಧಾರಣೆಗೆ ಕೊಡಲಾಗುತ್ತೆಂತ ಸರ್ ವಿಲಿಯಂ ವಿನ್ಸೆಂಟ್ ದೊರೆಗಳು ಹೇಳಿದ್ದರು. ಅವಶ್ಯವಿದ್ದಕ್ಕೆ ಒಟ್ಟು ಸ್ಥಿತಿಯನ್ನು ಅನುಭವಿಸಲಾಗುತ್ತೆಂತಲೂ ಹೇಳಿದ್ದರು. ಕೌನ್ಸಿಲಿನ ರಚನಾ ಕ್ರಮವೆಲ್ಲಾ ನಮ್ಮ ಕೈಸೇರಿಲ್ಲ. ಅವೆಲ್ಲಾ ದೇಶದವರಿಗೆ ತೃಪ್ತಿಯನ್ನುಂಟುಮಾಡಿ ಇವೆಯೆಂತಲೂ ಪ್ರಾಮುಖ್ಯವಾಗಿ ಸ್ವಪ್ರಯೋಜನದ ಹಕ್ಕುಗಳಿಗೆ ಅವಶ್ಯಕ್ಕಿಂತ ಹೆಚ್ಚಿಗೆ ಪ್ರತಿನಿಧಿತ್ವ ವಿರಲಾರದೆಂತಲೂ ನಂಬುತ್ತೇವೆ.

ಕೊಡಗು ಮಹಾಜನರೊಳು ಅರ್ಪಿಸುವ ವಿನಂತಿ. –

ನಮ್ಮ ದೇಶಕ್ಕೆ ಮಂಜೂರಾದ ಕೌನ್ಸಿಲ್ ಯಾನೆ ನ್ಯಾಯವಿಧಾಯಕ ಸಭೆಗೆ ನಿಮ್ಮ ಪ್ರತಿನಿಧಿಗಳನ್ನು ಆರಿಸಿ ಚುನಾಯಿಸಲು ನಿಮಗಳನೆಲ್ಲಾ ಕೆಲವು ದಿವಸಗಳಲ್ಲಿ ಕೇಳತೊಡಗುವರು. ಆ ನ್ಯಾಯವಿಧಾಯಕ ಸಭೆಯು (ಕೌನ್ಸಿಲು) ಅವರ ಪ್ರತಿನಿಧಿಗಳ ಮೂಲಕವಾಗಿ ಕೊಡಗು ದೇಶದಲ್ಲಿಯೂ ಸೇರಿದ ಸಂಬಂಧ ಮತ್ತು ನಿವಾಸದಾರ್ಥಗಳನ್ನು ಚಿಕ್ರಿಮಾಡುವ ಎಲ್ಲಾ ಏರ್ಪಾಡುಗಳ ಮೇಲ್ವಿಚಾರಣೆಯನ್ನು ಪೂರ್ತಿಯಾಗಿ ಕೈಕೊಳ್ಳುವದು. ಆ ಸಭೆ ನಿವಾಸದಾರ್ಥ ವಗೈರೆ ಮಾರುವ, ಮಾಡುವ ಮತ್ತು ತರಿಸುವ ಎಲ್ಲಾ ಅಂಗಡಿಗಳನ್ನು ಮುಚ್ಚಿಸಲು ಕಮ್ಮಿಮಾಡಲು ಸಹ ಸಾಧಿಸುವನು. ಆದದರಿಂದ ಪ್ರತಿನಿಧಿಗಳನ್ನು ಚುನಾಯಿಸುವ ನೀವುಗಳು ಅಂದರೆ ಪ್ರತಿ ವೋಟರರು ಇದರ ಆದಿಮೂಲವಾಗಿರುತ್ತೀರೆಂಬುದನ್ನು ಒತ್ತಿ ಹೇಳಬೇಕಾಗಿಲ್ಲವು.

ಈ ಸಂದರ್ಭದಲ್ಲಿ ನಿಮಗಳ ಕರ್ತವ್ಯ ಏನು? ಏನನ್ನು ಮಾಡಬೇಕು? ಈಗ ಇರುವ ಹಾಗೆಯೇ ನಡೆದುಕೊಂಡು ಬರಲು ನೀವುಗಳೆಲ್ಲರೂ ಇಷ್ಟಪಡುತ್ತೀರೋ? ಲಕ್ಷಗಟ್ಟಲೆ ರೂಪಾಯಿಗಳನ್ನು ನಮ್ಮ ದೇಶದಿಂದ ಕೊಚ್ಚಿಕೊಂಡು ಹೋಗಲು ನೀವುಗಳು ಒಪ್ಪುತ್ತೀರೋ? ಮನೆವರಗಳು ಹಾಳಾಗಿ ಕುಟುಂಬಗಳು ಜೀರ್ಣವಾಗಿ ನಿವಾಸೇವನೆಯಿಂದ ಸಾವಿರಾರು ನಿಮ್ಮ ಸೋದರರು ಮಡಿಯುವದನ್ನು ಕಣ್ಣಾರೆ ನೋಡಿ ಕೊಂಡು ಇರುವದು ಉಚಿತವೋ? ಅಲ್ಲಾ ಈ ನಿವಾಸಾದವನ್ನು ಬಹಳ ಮಟ್ಟಿಗೆ ಕಮ್ಮಿಮಾಡುವ ಬಹಳ ಸಕಲ ಅದ ಮಾನೂಸಿಗೆ ಮಳವಡಿಸುವ ಅದಾ ಪೂರ್ತಿಯಾಗಿ ನಿಲ್ಲಿಸಿಬಿಡುವ ಯತ್ನ [illegible] ನಿಮಗೆ ಇದೆಯೋ? ನಮ್ಮ ದೇಶದ ಮುಂದಿನ ಅಭಿವೃದ್ಧಿಗೆ ಕಾರಣರಾದ ಹೆಚ್ಚಿನ ವ್ಯಾಪಾರಗಳನ್ನು ಮಾಡಲು ತಯಾರಿರಬೇಕು. [illegible] ಮಾಡಲುಗಳು ನಿಸಂದರೆ (Local Option) ಲೋಕಲ್ ಆಪ್ಷನ್ ಅಂದರೆ ಅಯಾಯ ಪ್ರಾಂತದ ಓಟರರುಗಳು ಬಯಸುವಂತೆ ಅಯಾಯ ಕಡೆಗಳಲ್ಲಿ ಇರುವ ನಿವಾಸದಾರ್ಥದ ಅಂಗಡಿಗಳನ್ನು ಕಮ್ಮಿಸುವ ಕಮ್ಮಿಮಾಡುವ ಯಾ ಪೂರ್ತಿ ತೆಗೆದುಹಾಕುವ ಹಕ್ಕು ಇರುವದು. ಹೀಗಾಗದಲ್ಲಿ ನಮ್ಮ ದೇಶದ ಅಭಿವೃದ್ಧಿಗೆ ಹೆಚ್ಚಿನ ಉಪಯೋಗವು ಉಂಟಾಗುವದು ಮತ್ತು ನಿವಾಸನಿಷೇಧ ಮಾಡುವ ಉದ್ದೇಶವು ಬಲವಾಗುವದು. ಈ ಮಾರ್ಗಗಳನ್ನು ಮಾಡಬೇಕೆಂಬ ಉತ್ಸಾಹವು ನಿಮಗಳಿಗೆಲ್ಲಾ ಇದ್ದಲ್ಲಿ ಇಂಥಾ ದೇಶೋದ್ಧಾರದ, ದಾರಿದ್ರ್ಯನಿವಾರಣೆಯ ಮತ್ತು ಬಹುಮತಕ್ಕೆ ವಿರುದ್ಧವಾಗಿ ಕೌನ್ಸಿಲ್ಲುಗಳಲ್ಲಿ ತಂದ ಠರಾವಿಗೆ ಮೇಹನತ್ತು ಮತ್ತು ಸಹಾಯ ಮಾಡದೆ ಇರುವಂತಾವರನ್ನು ಬಂಧಿತವಾಗಿಯೂ ಚುನಾಯಿಸಕೂಡದು. ಯಾರ್ಯಾರು ಈ ವಿಷಯದಲ್ಲಿ ಬಡೊಬ್ಬರ ಮುಗಳು ನಗೆಗೂ ತತ್ಕಾಲದ ಮೇಹರ್ಬಾನಿಗೂ ಮತ್ತು ಉದ್ಯೋಗಸ್ಥರ ಶಿಫಾರಸಿಗಾಗಿಯೂ ಸಹ ತಮ್ಮ ತಮ್ಮ ನೀತಿಯನ್ನು ಬುದ್ಧಿ ಕುಶಲತೆಗಳನ್ನು ಮರೆತು ತಮ್ಮ ಓಟುಗಳನ್ನು ಸರಿಯಾಗಿ ಉಪಯೋಗಿಸದೆ ಇರುವವರು ತೋರಿಬರುತ್ತಾರೋ ಅಂಥಾ ಮಹನಿಯರು ದೇಶದ್ರೋಹಿಗಳಾಗಿ ನಮ್ಮ ಈ ಪುಣ್ಯಭೂಮಿಗೆ ಕೊರತೆ ಉಂಟುಮಾಡುವವರಾಗುತ್ತಾರೆ. ಆದದರಿಂದ ಈಗ ಮುಖ್ಯವಾಗಿ ಕೌನ್ಸಿಲ್ಲಿಗೆ ಚುನಾಯಿಸಲ್ಪಡಬಹುದಾದ ಮೆಂಬರುಗಳು ಸ್ವಾರ್ಥತ್ಯಾಗಿಗಳಾಗಿರಬೇಕು. ದೇಶಸೇವೆಯಲ್ಲಿ ಮುಗ್ನರಾಗಿರಬೇಕು. ಜನರ ಕಷ್ಟ ಸುಖಗಳನ್ನು ತಿಳಿದವರಾಗಿರಬೇಕು. ಜನರು ಇಂತವರನ್ನೇ ಕೌನ್ಸಿಲ್ ಮೆಂಬರಾಗಿ ಚುನಾಯಿಸದಲ್ಲಿ ನಮ್ಮ ಮೊದಲನೇ ಕೌನ್ಸಿಲಿನ ಪ್ರಭಾವವು ಮತ್ತು ದೇಶದ ಸೌಭಾಗ್ಯವು ಇಷ್ಟೇಯೆಂಬುದನ್ನು ಎಣಿಸಲು ಅಸಾಧ್ಯವಾಗುವದು. ಯಾರ್ಯಾರು ನಿವಾಸನಿಷೇಧದ ವಿಷಯದಲ್ಲಿ ಮೇಹನತ್ತು ಎತ್ತಿಕೊಂಡು ಲೋಕೋದ್ಧಾರಕ್ಕೆ ಸಹಾಯಮಾಡುತ್ತೇವೆಂದು ಅಭಯವನ್ನು ಕೊಡುತ್ತಾರೋ ಅಂಥಾವರನ್ನೇ ಚುನಾಯಿಸಬೇಕೆಂಬುದಾಗಿ ಅತಿವಿನಯದಿಂದ ಬೇಡಿಕೊಳ್ಳುತ್ತೇವೆ.

ಇಂತಿ ತಮ್ಮ ಸೇವಕರಾದ

ಕೊಡಗು ಅಮೃತಸಂಘದ ಪರವಾಗಿ

ವರ್ತಮಾನ ಸಂಗ್ರಹ.

ಒಳದೇಶ.

ದಕ್ಷಿಣ ಕೊಡಗಿನಲ್ಲಿ ನಡೆದ ಹಾಕಿ ಟೋರ್ನಮೆಂಟಿನಲ್ಲಿ ಪೊನ್ನಂಪೇಟೆಯಲ್ಲಿ ಎಲಿವೆಂಟರು ಶಾಗಳ ಟೀಮೂ, ಪೊನ್ನಿಬೆಟ್ಟದಲ್ಲಿ ಪೊನ್ನಿಬೆಟ್ಟ ಟೀಮೂ ಗೆದ್ದು ಇನಾಮು ಬಟ್ಟಲುಗಳನ್ನು ಪಡೆದವೆಂದು ತಿಳಿಯಬರುತ್ತದೆ.

ಮಡಿಕೇರಿಯಲ್ಲಿ ಕೊಡಗಿನ ಹಾಕಿ ಟೋರ್ನಮೆಂಟು ತಾ|| 4 ರಿಂದ ಪ್ರಾರಂಭವಾಗಿದೆ.

ಶಾಲೆಗಳ ಇನ್ಸ್ಪೆಕ್ಟರವರು ತಾ|| 6 ಮತ್ತು 7 ರಲ್ಲಿ ವಿರಾಜಪೇಟೆ ಇನ್ಸ್ಪೆಕ್ಷನನ್ನು ತಾ|| 12 ಮತ್ತು 13 ರಲ್ಲಿ ಮಡಿಕೇರಿ ಇನ್ಸ್ಪೆಕ್ಷನನ್ನೂ ಮಾಡುವರೆಂದು ತಿಳಿಯಬರುತ್ತದೆ.

ಆಗೋಸ್ತು 17 ರಿಂದ ಅಕ್ಟೋಬರು 24 ರ ವರೆಗೆ ತಿರುಚಿನಾಪಳ್ಳಿಯಲ್ಲಿ ಟೆರಿಟೋರಿಯಲ್ ಪಟಾಲಾಮಿನ ಎಸ್. ಸಿ. ಒ. ಕ್ಲಾಸಿನಲ್ಲಿ ಕೊಡಗಿನಿಂದ ಹೋಗಿದ್ದ ಮೆ|| ಮಾಚಿಮಾಡ ದೇವಯ್ಯನವರು, ಮೆ|| ಕೋದಂಡ ನಾಣಯ್ಯನವರು, ಮೆ|| ಕಂಡ್ರತಂಡ ತಿಮ್ಮಯ್ಯನವರು ಮತ್ತು ಮೆ|| ಪಾಲೇಕಂಡ ಪೊನ್ನಪ್ಪನವರು ಬಹಳ ಚೆನ್ನಾಗಿ ತರಬೇತು ಹೊಂದಿ ಅವರ ರಿಜಿಮೆಂಟಿಗೆ ಹೆಸರುವಾಸಿ ತಂದುದರಿಂದ ಮೇಜರ್ ಪ್ಲಾಮರ್ ರವರು ಇವರನ್ನು ಅಭಿನಂದಿಸಿರುವರು. ಇದರೊಂದಿಗೆ ದೇಶದವರ ಅಭಿನಂದನೆಯೂ ಇವರಿಗಿದೆ.

ನಾಡಿದೇವಸ್ಥಾನದಲ್ಲಿ ಕಳೆದ ತಾರೀಖು 27 ರಲ್ಲು ಒಂದು ದೊಡ್ಡ ಸಮಾರಾಧನೆಯು ನಡೆಯಿತು. ಈ ಸಮಾರಾಧನೆಯನ್ನು ನಡೆಸಿದವರು ಮೆ|| ಉಪಿಯಂಡ ಮಾಚಯ್ಯನವರು ಮತ್ತು ಪರಗಂಡ ಕುಟುಂಬಸ್ಥರು. ಸುಮಾರು 200 ಜನರು ನೆರೆದಿದ್ದರು. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಸಾಹೇಬರನ್ನೂ ಇತರ ಉದ್ಯೋಗಸ್ಥರನ್ನೂ ಕರೆದಿದ್ದರು. ಈಗ ಬಂದ ಕೌನ್ಸಿಲ್ ವಿಷಯ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಸಾಹೇಬರು ಮಾತಾಡಿ ಓಟ್ ಎಂಥವರಿಗೆ ಕೊಡಬೇಕೆಂಬುದರ ವಿಷಯ ಒತ್ತಿ ಒತ್ತಿ ಹೇಳಿದರು. ಈ ವಿಷಯ ಮೆ|| ಕೋಟೇರ ಚಿಣ್ಣಪ್ಪನವರಿಗೂ ಮತ್ತು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಸಾಹೇಬರಿಗೂ ಒಳ ಮಾತುಕಥೆಗಳು ನಡೆದವೆ ಎಂಬದಾಗಿ ಒಂದು ವಾರ್ತೆ.

ತಾರೀಖು 28 ರಲ್ಲು ನಾಪೋಕ್ಲಿನಲ್ಲಿ ನಾಡಿಕಡಿಯತ್ತು ನಾಡಿನವರು ಕೂಡಿ, ಮೆ|| ಕೇಟೋಳಿರ ಚಂಗಪ್ಪನವರಿಗೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಕೆಲಸ ಕಾಯಂ ಆದದ್ದಕ್ಕೆ ಒಂದು ಸನ್ಮಾನದ ಕೂಟವನ್ನು ನಾಪೋಕ್ಲು ದೇವಸ್ಥಾನದಲ್ಲಿ ಕೂಡಲಾಯಿತು. ಶಾಲಾಹುಡುಗರು ಸುಮಾರ 300 ಮತ್ತು ನಾಡಿನವರು 250 ಜನರು ಹಾಜರು ಇದ್ದರು. ತಿಂಡಿ ತೀರ್ಥ ಪಾನಸ ವಗೈರೆ ಊಟವಾದ ನಂತರ ನಾಪೋಕ್ಲು ದೇವಸ್ಥಾನದಿಂದ ಎಲ್ಲರೂ ಸ್ಕೂಲಿಗೆ ಹೋಗಿ ಮೈದಾನದಲ್ಲಿ ಮಕ್ಕಳಿಗೆ ಸ್ಪೋರ್ಟ್ಸ್ ಮಾಡಿಸಿ ಇನಾಮುಗಳನ್ನು ಹಂಚಿದರು. ಅನಂತರ ಸ್ಕೂಲಿನಲ್ಲಿ ಮೆ|| ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಮೀಟಿಂಗ್ ನಡೆದು ಅನೇಕ ಜನರ ಅವರ ಯೋಗ್ಯತೆಯನ್ನು ಕೊಂಡಾಡಿದರು. ಕೊಡಗಿಗೆ ದೊರೆತ ಕೌನ್ಸಿಲ್ ವಿಷಯ ಎಂಥವರನ್ನು ಕಳುಹಿಸಬೇಕೆಂದೂ ಓಟ್ ಎಂಥವರಿಗೆ ಕೊಡಬೇಕೆಂಬುದನ್ನು ವಿವರಿಸಿ ಹೇಳಿದನಂತರ ಅನೇಕರು ಓಟ್ಸು ಕೊಡುವ ವಿಷಯ ಮಾತಾಡಿದರೆಂದು ಒಬ್ಬರು ಬರೆದಿರುತ್ತಾರೆ.

ಕುಂಭಕೋಣದಿಂದ ಬಂದ ಒಬ್ಬ ಬ್ರಾಹ್ಮಣ ಈಶ್ವರ ಭಾಗವತರೆಂಬವರು ಕಾವೇರಿ ಯಾತ್ರೆಗೆ ಹೋಗಿ ಹಿಂತಿರುಗುವಾಗ ಮಡಿಕೇರಿಗಾಗಿ ಬಂದು ತಾ|| 2-11-23 ನೇ ದಿನ ಸಾಯಂಕಾಲ 6 ಗಂಟೆಯಿಂದ 8½ ಗಂಟೆವರೆಗೆ ಓಂಕಾರೇಶ್ವರ ದೇವಸ್ಥಾನದ ಟೆಂಪಲ್ ಹಾಲ್‌ನಲ್ಲಿ ಬಹಳ ವಿನೋದವಾದ ಸಂಗೀತವನ್ನು ಆಡಿದಕ್ಕಾಗಿ ಅಲ್ಲಿ ನೆರೆದಿದ್ದ ನೂರಾರು ಜನರು ಅವರ ಸಂಗೀತಕ್ಕೆ ಮೆಚ್ಚಿ ಆಕ್ಷಣವೇ 50 ರೂಪಾಯಿ ಚಂದಾವನ್ನೂ ತಾಂಬೂಲ ತಟ್ಟೆಯಲ್ಲಿ ಅವರಿಗೆ ಕೊಟ್ಟರು.

ಕಳೆದ ಅಕ್ಟೋಬರ್ ತಾರೀಖು 14 ರಲ್ಲು ಪೊನ್ನಂಪ್ಪೇಟೆ ನಾಡು ಹೈಸೊಡ್ಲು ಗ್ರಾಮದ ಮೆ|| ಮುಂಡಂಗಳ ಕಾರ್ಯಪ್ಪನೆಂಬವರು ಬಂದು ಹೆಬ್ಬುಲಿಗೆ ಗುಂಡು ಹೊಡೆದರಂತೆ. ಅದು ಸಾಧಾರಣ 12-13 ಅಡಿ ಉದ್ದ ಇದ್ದಿತಂತೆ. ಆ ಹುಲಿಯು ಕಾಡಿನಿಂದ ಮೈದಾನಕ್ಕೆ ಬಂದು ಮೂರು ಸುತ್ತು ಪ್ರದಕ್ಷಣೆ ಮಾಡಿ ಚಂದ್ರನ ಕಡೆಗೆ ಮುಖತಿರುಗಿಸಿಕೊಂಡು ನಮಸ್ಕಾರ ಮಾಡಿ ಮಲಗುವ ಸಮಯದಲ್ಲಿ ಗುಂಡು ಹೊಡೆಯಲ್ಪಟ್ಟಿತಂತೆ.

ಕೊಡಗು ಜಮಾಬಂದಿ ಸಂಘದ ಕಮಿಟಿ ಮೀಟಿಂಗು ಇದೇ ತಾರೀಖು 15 ನೇ ದಿನ ಸಾಯಂಕಾಲ 5 ಗಂಟೆಯ ಸಮಯಕ್ಕೆ ಮಡಿಕೇರಿ ಮೆರ್ಕೆರಾ ಕ್ಲಬ್ ಹಾಲಿನಲ್ಲಿ ನಡೆಯುತ್ತೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗ್ ಇದೇ ತಾರೀಖು 15 ನೇ ದಿನ ಸಾಯಂಕಾಲ 4-30 ಗಂಟೆಗೆ ಮಡಿಕೇರಿ ಮ್ಯುನಿಸಿಪಲ್ ಹಾಲಿನಲ್ಲಿಯೂ, ಜನರಲ ಮೀಟಿಂಗ್ ಇದೇ ತಾರೀಖು 16 ನೇ ದಿನ ಸಾಯಂಕಾಲ 4-30 ಗಂಟೆಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಹಾಲಿನಲ್ಲಿಯೂ ನಡೆಯುತ್ತೆ.

ಈಗ ಹೊಸದಾಗಿ ಬಾಣೆಗಳಲ್ಲಿ ಮನುಷ್ಯರನ್ನು ಒಂದು ತರದ ಹುಳಗಳು ತಿಂದು ನಾಶಪಡಿಸುವುದು ಇತ್ತೀಚೆಗೆ ಪ್ರಬಲಿಸುತ್ತಾ ಬರುವುದು ನೋಡಿದರೆ ಮೂಕಜಂತುಗಳಾದ ಗೋವುಗಳಿಗೆ ಅನೇಕ ತರದಿಂದ ಕಷ್ಟ ಸಂಭವಿಸುವುದರಲ್ಲಿ ಸಂಶಯವಿಲ್ಲ. ಕೆಲವು ಕಡೆ ಭತ್ತದ ಬೆಳೆಗೆ ಬಿದ್ದಿದೆಯೆಂದು ತಿಳಿಯಬರುತ್ತದೆ.

ಒಡಿಗೇರಿ ನಾಡು ನುಕ್ಕೋಡ್ಲು ಗ್ರಾಮದ ಕಾಳಚಂಡ ಕುಟ್ಟಯ್ಯನೆಂಬವರು ಕಳೆದ ಅಕ್ಟೋಬರ್ ತಾರೀಖು 28 ರಲ್ಲು ಬೆಳಿಗ್ಗೆ ಬೈನೆ ಮರಕ್ಕೆ ಹತ್ತಿ ಸೇಂದಿ ತೆಗೆದುಕೊಂಡು, ಇಳಿಯುವ ಸಮಯದಲ್ಲಿ ಕೆಳಗೆ ಬಿದ್ದು ಸತ್ತು ಹೋದರಂತೆ. ಅಭ್ಯಾಸವಿಲ್ಲದೆಯೂ ಸೇಂದಿ ವಗೈರೆ ಕುಡಿದುಕೊಂಡು ಮರ ಹತ್ತುವುದರಿಂದ ಇಂಥಾ ಅಪಾಯಗಳು ಸಂಭವಿಸುವ ಕಾರಣ ಇನ್ನು ಮುಂದಕ್ಕಾದರೂ ಎಚ್ಚರಗೊಳ್ಳಲಾರೆವೇ?

ಮಡಿಕೇರಿ ದೇವಸ್ಥಾನದಲ್ಲಿದ್ದ ಅನಾಥನಾದ ಒಬ್ಬ ದಾಸಯ್ಯನು ಕಳೆದ ತಾ|| 1 ರ ವರೆಗೆ ಸೌಖ್ಯದಲ್ಲಿದ್ದವನು ತಾರೀಖು 2 ನೇ ಶುಕ್ರವಾರ ಆಕಸ್ಮಾತವಾಗಿ ಅಂದರೆ ಹೊಟ್ಟೆಶೂಲೆ ನೋವಿನಿಂದ ಮೃತಪಟ್ಟನಾಗಿಯೂ, ಇವನು ವಾರೀಸು ದಾರರಿಲ್ಲದವನಾದ್ದರಿಂದ ಪೋಲೀಸ್‌ಗೆ ತಿಳಿಸಿ ಅವರಿಂದ ಅಪ್ಪಣೆ ಪಡೆದು ದೇವಸ್ಥಾನದವರೆಲ್ಲರೂ ಸೆ ರಿ (ಹೊಲೆಯರಿಂದ ವಾರೀಸ್ ದಾರರಿಲ್ಲದ ಕಾರಣ ಬೀದಿಯಿಂದ ತ್ರಿ ದಹನ ಮಾಡಿಸಿದೆ) ಗರೀಬ ಫಂಡಿನಿಂದ (Poor Fund) ಎರಡು ರೂಪಾಯಿ ತೆಗೆದ ಕೊಂಡು ದಹನ ಮಾಡಿದ್ದರಿಂದ ಪೋಲೀಸಿನ ಫಂಡು ಮುಗಿದ್ದು ಗರೀಬರಿಗೆ ಬಂದು ಕಮ್ಮಿಕೃತವಾಯಿತು.

ಕಳೆದ ತಾರೀಖು 20 ರಲ್ಲು ವಿರಾಜಪೇಟೆ ಸ್ಕೂಲಿನ ಎಲಿಮೆಂಟರಿ ಶಾಲೆಯ ಉಪಾಧ್ಯಾಯರುಗಳು ಸೇರಿ ತಮ್ಮ ಸಂಬಳದ ವಿಷಯ ಚೀಫ್ ಕಮಿಷನರರಿಗೆ ಒಂದು ಟೆಲಿಗ್ರಾಂನ್ನೂ ಮತ್ತು ಕಮಿಷನರ್ ಸಾಹೇಬರವರಿಗೆ ಒಂದು ಅರ್ಜಿಯನ್ನೂ ಸಹ ಬರೆದು ಕಳುಹಿಸಿರುವರು.

ಗೋಖಲೆ ಮೆಮೋರಿಯಲ್ ಫಂಡಿನ ಪರೀಕ್ಷೆ ವರ್ಷದ ಸ್ಕಾಲರ್ ಷಿಪ್ ಒಂದೇ ಗಂಟಿನಲ್ಲಿ ರೂಪಾಯಿ 25-1-0 ರ ಮೇರೆ ಮಂಗಳೂರು ಗವರ್ನಮೆಂಟ್ ಕಾಲೇಜಿನಲ್ಲಿ ಓದುತ್ತಿರುವ ಎಸ್. ಸಿ. ಸುಬ್ಬಯ್ಯ ಮತ್ತು ಎಸ್. ಕೃಷ್ಣನು ಎಂಬ ವಿದ್ಯಾರ್ಥಿಗಳಿಗೆ ಕಳುಹಿಸಲಾಗಿದೆ. ಇವರೇ ಆಯಾ ವರ್ಷದಲ್ಲಿ ಅರ್ಹರೆಂದು ಮಡಿಕೇರಿ ಹೈಸ್ಕೂಲ ಹೆಡ್ ಮಾಸ್ಟರಿಂದ ಸರ್ಟಿಫಿಕೇಟು ಕಾಗದ ಬಂದದ್ದರಿಂದ ಆದ ರಂಕಿಯೇ ಕಳುಹಿಸಲಾಗಿದೆಯೆಂತ ಸೆಕ್ರೆಟರಿಯವರು ನಮಗೆ ತಿಳಿಸಿದ್ದಾರೆ.

ಮೆ|| ಬಿದ್ದಂಡ ನಂಜಪ್ಪ ಬಿ. ಎ. ಯವರನ್ನ ಫ್ರೇಜರ್ ಪೇಟೆ ಪಾರುಪತ್ಯಗಾರರಾಗಿ ನೇಮಿಸಿರುವರು.

ಹಿಂದೂದೇಶ.

ಮದ್ರಾಸು ನ್ಯಾಯವಿಧಾಯಕ ಸಭೆಗೆ ಯೂನಿವರ್ಸಿಟಿ ಪರವಾಗಿ ಮೆ|| ಎಸ್. ಸತ್ಯಮೂರ್ತಿಯವರು ಚುನಾಯಿಸಲ್ಪಟ್ಟಿರುವರು.

ಬೊಂಬಾಯಿ ನ್ಯಾಯವಿಧಾಯಕ ಸಭೆಗೆ ಬೊಂಬಾಯಿ ಪಟ್ಟಣದ ಪ್ರತಿನಿಧಿಯುಳ್ಳದಕ್ಕೆ ಪರವಾಗಿ ಚುನಾಯಿಸಲ್ಪಟ್ಟಿರುವ ಆರು ಮೆಂಬರುಗಳ ಪೈಕಿ ನಾಲ್ಕು ಜನರು ಸ್ವರಾಜ್ಯ ಪಾರ್ಟಿಯವರಾಗಿರುವರು.

ನಾಭಾ ದೇಶದ ರಾಜನ ಸಂಬಂಧ ಸಿಖ್ಖರೆಲ್ಲರೂ ಸವಿನಯ ಕಾನೂನು ಭಂಗವನ್ನು ಆಚರಿಸಲು ಎಲ್ಲರನ್ನು ತಯಾರಿಸುತ್ತಿರುವರು. ಅಮೃತಸರದಲ್ಲಿ ಇದರ ಒಂದು ಆಫೀಸನ್ನು ತೆರೆದಿರುವರು. ಪಂಜಾಬಿನ ಸಿಖ್ಖರಿಗೆ ಎಲ್ಲರಿಗೂ ಈ ವಿಷಯ ಬೋಧಿಸುತ್ತಿರುವರು.

ಮದ್ರಾಸು ಯೂನಿವರ್ಸಿಟಿಯ ಸಿಂಡಿಕೇಟ್ ಮೆಂಬರುಗಳ 8 ರಲ್ಲಿ ಒಂದಕ್ಕೆ ಕುಮಾರ ಮಂಗಳದ ಜಮೀನ್ದಾರಿಣಿಯಾದ ಶ್ರೀಮತಿ ಕೆ. ರಾಧಬಾಯಿ, ಬಿ. ಎ. ಯವರು ಉಮೇದ್ವಾರರಾಗಿ ನಿಂತಿರುವರು.

ಸಿವಿಲ್ ಸರ್ವಿಸ್ ಕಮಿಷನಿಗೆ ಸೇರಿರುವ ಸರ್ ಮಹಮ್ಮದ್ ಹಬಿಬುಲ್ಲಾರವರ ಬದಲಿಗೆ ಕೊಲ್ಲಂಗೋಡ್ ರಾಜರವರನ್ನು ಮದ್ರಾಸು ಎಗ್ಸಿಕ್ಯೂಟಿವ್ ಕೌನ್ಸಿಲಿನ ತಾತ್ಕಾಲಿಕ ಮೆಂಬರಾಗಿ ನೇಮಿಸಿರುವರು.

ರಾಷ್ಟ್ರೀಯ ಪಂಗಡದವರಾದ ಮೆ|| ವೆಂಕಟಪ್ಪಚೆಟ್ಟಿಯಾರ್ ರವರನ್ನು ಬಹುಮತದಿಂದ ಸೇಲಂ ಮುನ್ಸಿಪಾಲಿಟಿಯ ಚೇರ್‌ಮ್ಯಾನರಾಗಿ ಚುನಾಯಿಸಿರುವರು.

ಆರೋಗ್ಯವನ್ನು ಪಡೆಯಲಿಕ್ಕಾಗಿ ಸೊಲನಿಗೆ ಹೋಗಿದ್ದ ಲಾಲಾ ಲಜಪತರಾಯರವರು ಬೇಗನೆ ಲಾಹೋರಿಗೆ ಬರಲಿಕ್ಕಿರುವರು.

ಹಕೀಮ್ ಅಜ್ಮಲ್ ಖಾನ್‌ರವರು ತಾ|| 7 ರಲ್ಲು ಡಿಲ್ಲಿಯಲ್ಲಿ ತನ್ನ ಕಣ್ಣಿನ ಆಪರೇಶನಿಗೆ ಒಳಗಾಗುವರೆಂದು ತಿಳಿಯಬರುತ್ತದೆ.

ಸಂಟ್ರಾಲು ಎಗ್ಸಿಕ್ಯೂಟಿವ್ ಕೌನ್ಸಿಲಿನ ಎಗ್ರಿಕಲ್ಚರ್ ಮೆಂಬರಾಗಿದ್ದ ಮೆ|| ಹರಿಕಿಷನ್ ಲಾಲ್ ರವರು ತಮ್ಮ ಪದವಿಗೆ ರಾಜಿನಾಮೆ ಕೊಟ್ಟಿರುವರು. ಕೆಲವು ದಿವಸಗಳ ಹಿಂದೆ ಕೌನ್ಸಿಲ್ ಆಫ್‌ಸ್ಟೇಟಿನ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಂಥ ರಾ|| ಬಾ|| ಲಾಲಾ ಲಾಲ್ ಚಂದ್‌ರವರು ಈ ಪದವಿಗೆ ಬರುವರೆಂದು ವದಂತಿ.

ಸಿವಿಲ್ ಸರ್ವೀಸಿನವರ ವಿಷಯ ವಿಚಾರಿಸಲು ವಿರ್ಪಡಿಸಲ್ಪಟ್ಟಿರುವ ಸಿವಿಲ್ ಸರ್ವೀಸ್ ಕಮಿಷನಿನ ಅಧ್ಯಕ್ಷರಾದ ಲಾರ್ಡ್ ಲೀರವರು ಮತ್ತು ಕೆಲವು ಮೆಂಬರುಗಳು ತಾ|| 2 ರಲ್ಲಿ ಬೊಂಬಾಯಿಯಲ್ಲಿ ಬಂದು ಇಳಿದರು.

ಮತಭೇದಗಳಿಂದ ಉಂಟಾಗುವ ಕಲಹಗಳಿಗೆ ಸ್ವರಾಜ್ಯವೇ ಔಷಧಿಯೆಂದು ಪಂಡಿತ ಮಾಲವೀಯರು ಡೆಲ್ಲಿಯಲ್ಲಿ ಒಂದು ಭಾಷಣದಲ್ಲಿ ಹೇಳಿರುವರು.

ವಿದೇಶ

ಇಂಗ್ಲೆಂಡಿನಲ್ಲಿ ನಡೆಯುತ್ತಿರುವ ಇಂಪೀರಿಯಲ್ ಕಾನ್ಫರೆನ್ಸಿನಲ್ಲಿ ಇಂಡಿಯನರಿಗೆ ಕೆನ್ಯಾದಲ್ಲಿ ಸಮಾನತ್ವ ದೊರೆಯಬೇಕೆಂಬುದರ ವಿಷಯವಾಗಿ ಹೋರಾಡಿದರೂ ಆ ವಿಷಯವು ಈ ಮೊದಲೇ ತೀರ್ಮಾನವಾಗಿಬಿಟ್ಟಿರುವುದರಿಂದ ಈಗ ಪುನಹ ಅದನ್ನು ಚರ್ಚಿಸಲಿಕ್ಕಾಗುವುದಿಲ್ಲವೆಂದು ಹೇಳಿದರಂತೆ.

ಕೆನ್ಯಾ ಪ್ರಶ್ನೆಯನ್ನು ಪುನಹ ಚರ್ಚೆಗೆ ತರುವಂತೆ ಏರ್ಪಾಡುಮಾಡಲ್ಪಟ್ಟಿದೆಯೆಂದು ಮೆ|| ಪೋಲಕ್‌ರವರು ಮೆ|| ವಿ. ಶ್ರೀನಿವಾಸಶಾಸ್ತ್ರಿಯವರಿಗೆ ತಂತಿ ವರ್ತಮಾನ ಕಳುಹಿಸಿರುವರಂತೆ.

ಜರ್ಮನಿಯಲ್ಲಿ ಕಲಹಗಳು ಪ್ರಬಲವಾಗುತ್ತಿದೆ. ಕ್ರೈಪೆಲ್ಡ್ ಎಂಬಲ್ಲಿ ಸೆಪರೇಟಿಸ್ಟ್‌ರವರು ರಿಪಬ್ಲಿಕ್ ಸರ್ಕಾರವನ್ನು ಏರ್ಪಡಿಸಿರುವರು. ... ಸರ್ಕಾರದಿಂದ ... ಕಲಹವನ್ನು ಸಂಗಡಿಸುವರು. ಹಿಂತೆಗೆದಿರುವರು. ಆದುದರಿಂದ ಸೈನ್ಯ ... ರಿಟ ... ಕೆಲವು ... ದಕ್ಷ ... ಕೊಡುವಂತೆ ... ತಿಳಿಯಬರುತ್ತದೆ.

ಈಸ್ಟ್ ಆಫ್ರಿಕದಲ್ಲಿರುವ ಹಿಂದೀಯರು ಬೊಂಬಾಯಿಯಲ್ಲಿ ನಡೆಯುವ ಕಾಂಗ್ರೆಸಿಗೆ ಅಧ್ಯಕ್ಷರಾಗಬೇಕೆಂದು ಮೆ|| ಸಿ. ಎಫ್. ಎಂಡ್ರ್ಯೂಸ್‌ರವರನ್ನು ಕೇಳಿಕೊಂಡದಕ್ಕೆ, ತನಗೆ ಆ ವಿಷಯದಲ್ಲಿ ಮನಸ್ಸಿಲ್ಲವೆಂದೂ, ಇನ್ನು ಸಲ್ಲದೆಂತಲೂ, ತಾನು ಆಫ್ರಿಕಕ್ಕೆ ಆ ಸಮಯದಲ್ಲಿ ಹೋಗ ಬೇಕಾಗಿರುವುದರಿಂದಲೂ, ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲು ಅವರು ಒಪ್ಪಿಕೊಂಡಿರುವುದಿಲ್ಲ.

ಬ್ರಿಟಿಷ್ ಸಾಮ್ರಾಜ್ಯದ ಈಗಿರುವವರಿಗಿಂತ ದೊಡ್ಡ ಮುಖ್ಯಮಂತ್ರಿಯ ಗಿದ್ದ ಮೆ|| ಬೋನರ್‌ಲಾರವರು ಕ್ಯಾನ್ಸರಿನಿಂದ ಅಕ್ಟೋಬರು ತಾ|| 30 ರಲ್ಲು ಲಂಡನಿನಲ್ಲಿ ಮೃತಪಟ್ಟರು. ರಾಜರೂ ಮುಖ್ಯಮಂತ್ರಿಯವರೂ ಬೇರೆ ಮುಖ್ಯಜನರೆಲ್ಲರೂ ಈ ಮರಣದ ವಿಷಯ ಬಹಳ ವ್ಯಸನವನ್ನು ಸೂಚಿಸಿರುವರು.

ಅಕ್ಟೋಬರು ತಾ|| 30ರಲ್ಲು ತುರ್ಕೀದೇಶದವರು ರಿಪಬ್ಲಿಕ್ ಸರ್ಕಾರವನ್ನು ಸ್ಥಾಪಿಸಿ ಮುಸ್ತಫ ಕಮಾಲ್‌ಪಾಷಾರವರು ಇದರ ಮೊದಲನೇ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟಿರುವರು. ಅವರು ಮಂತ್ರಿಮಂಡಲಿಯನ್ನು ನೇಮಿಸುವಂತೆ ಇಸ್ಮೆಟ್ ಪಾಷಾರವರನ್ನು ಕೇಳಿಕೊಂಡಿರುವರು.

ಕೆನ್ಯಾ ಪ್ರಶ್ನೆಯು ... ಹೋಯಿತು ... ಶಕ್ತಿಗೆ ಎಂದಿಗೂ ಒಪ್ಪಬೇಕಾದದ್ದು. ಮೆ|| ಶ್ರೀನಿವಾಸಶಾಸ್ತ್ರಿ ... ದಾಕ್ಟರ ಸಪ್ರೂರವರಿಗೆ ತಂತಿ ವರ್ತಮಾನ ಕಳುಹಿಸಿರುವರು.

ಬೊಂಬಾಯಿ ಎಂಬಲ್ಲಿ ತಾ|| 30-10-23 ರಲ್ಲು ಒಂದು ಭಯಂಕರವಾಗಿ ಭೂಕಂಪನವುಂಟಾಯಿತು. ಆದರೆ ನಷ್ಟವೇನೂ ಸಂಭವಿಸಿಲ್ಲವಂತೆ.

ಸ್ತ್ರೀಯರ ನಾಗರೀಕತೆ ಅಥವಾ ಅಲಂಕಾರ

(ಜಯಕರ್ನಾಟಕದಿಂದ)

(ಲೇಖಕಿ—ಬೆಂಗಳೂರು ಶ್ರೀಮತಿ ರಾಜಮ್ಮನವರು)

ಪ್ರಿಯ ಭಗಿನಿಯರಲ್ಲಿ ವಿಜ್ಞಾಪನಾ—

ನಾನು ಹಲವುಕಡೆ ಅಂದರೆ, ಹಿಂದೂದೇಶದಲ್ಲಿ ಪುಣ್ಯಕ್ಷೇತ್ರಗಳೆಂದೂ ಪಟ್ಟಣಗಳೆಂದೂ ಕರೆಯಲ್ಪಡುವ ಹರಿದ್ವಾರ, ಪ್ರಯಾಗ ಅಥವಾ ಅಲಹಾಬಾದ, ಕಾಶಿ, ಅಯೋಧ್ಯ, ಗೋಕುಲ ವೃಂದಾವನ, ಮಧುರೆ, ಆಗ್ರಾ, ಲಖನೌ, ಮುಂಬಯಿ, ಮದರಾಸ, ಕಂಚಿ, ಶ್ರೀರಂಗಂ, ತಿರುಚನಾಪಳ್ಳಿ, ತಿರುಪತಿ, ಧಾರವಾಡ, ಶ್ರೀಪೆರಂಬದೂರ್, ತಿರುವನ್ನೂರ್, ಇವೇ ಮುಂತಾದ ಸ್ಥಳಗಳಿಂದಲೂ ಸ್ವಲ್ಪ ಮಟ್ಟಿಗೆ ಲೋಕಾನುಭವವನ್ನು ಹೊಂದಿರುವೆನು.

ಆದರೆ ಪ್ರತಿಯೊಂದು ಜನಾಂಗದ ಸ್ತ್ರೀಸಮುದಾಯವೂ ಮೊತ್ತಕ್ಕೆ ವೇಗಳ ಅಲಂಕಾರಾದಿಗಳನ್ನೂ ನವನಾಗರೀಕತೆಯ ಉಚ್ಚಾಶ್ರಯಸ್ಥಾನವಾದ ತಳುಕುಮಿನುಕುಗಳನ್ನೇ ಬಹುವಾಗಿ ಅನುಸರಿಸುವಂತೆ ನನ್ನ ಬುದ್ಧಿಗೆ ತೋರುತ್ತಿದೆ.

ಪ್ರಥಮತಃ ನಮ್ಮ ಮೈಸೂರು ಸೀಮೆಯ ಪ್ರತಿಯೊಂದು ಜಾತಿಯಲ್ಲಿಯೂ, ಈ ಅಲಂಕಾರದ ಆಡಂಬರಕ್ಕೆ ಹೆಚ್ಚು ಹಣವು ಖರ್ಚಾಗುತ್ತಿದೆ. ಈಗ ನಮ್ಮ ಭಾರತೀಯರು ಅನುಭವಿಸುತ್ತಿರುವ ದಾರಿದ್ರ್ಯದೆಶೆಗೆ ಸೋಮಾರಿತನವೂ ಅತಿವ್ಯಯವೂ ಹೆಂಗಸರ ಅಲಂಕಾರಪ್ರಿಯತ್ವವೂ ಪುರುಷರ ದಾಸ್ಯ ಭಿಕ್ಷೆಯೂ ಕಾರಣವಾಗಿವೆ.

ನಾನು ನೋಡಿದಂತೆ, ಒಳಳೆ ಉತ್ತಮ ಸ್ಥಿತಿಯಲ್ಲಿದ್ದ ಕುಟುಂಬಗಳು ಈ ರೀತಿಯಾದ ನಡವಳಿಕೆಯಿಂದ ನಾಶವಾಗುತ್ತಿವೆ. ಇನ್ನಾದರೂ, ನಮ್ಮ ಪ್ರಿಯ ಭ್ರಾತೃಭಗಿನಿಯರು ದುಂದುಗಾರಿಕೆಯ ವೆಚ್ಚವನ್ನು ಬಿಟ್ಟು ತಮ್ಮ ಯೋಗ್ಯತೆಯನ್ನರಿತು ಉಡಿಗೆತೊಡಿಗೆಗಳಲ್ಲಿ ಪ್ರವೇಶಿಸುವರೆಂದು ನಂಬುತ್ತೇನೆ.

ನಾವು ಒಂದು ಗೃಹವನ್ನು ಪ್ರವೇಶಿಸಿದ ಕೂಡಲೇ ಪ್ರಥಮತಃ ನಮ್ಮ ವಾಹನಾದಿಗಳಿಗೆ ಅವರ ದರ್ಜೆಯಂತೆ ಮರ್ಯಾದೆಗಳು ದೊರಕುತ್ತವೆ; ಅಂದರೆ (ಮೋಟಾರಾಗಿದ್ದಲ್ಲಿ) ಹೆಚ್ಚಿಗೆಯೂ, ಪ್ರಥಮ ಮರ್ಯಾದೆಯೂ (ಕೋಚು ಗಾಡಿ) ಯಾದರೆ, (ದ್ವಿತೀಯ) ಎರಡನೆಯ ದರ್ಜೆಯ ಮರ್ಯಾದೆಯೂ, ಜಟ್ಕಾಗಾಡಿ ಯಾದರೆ ಸಾಧಾರಣ ಮರ್ಯಾದೆಯೂ, ಭಗವಂತನಿಂದಾ ಸರ್ವಜನರಿಗಾಗಿ ದಯಪಾಲಿಸಲ್ಪಟ್ಟಿರುವ ಎರಡು ಕಾಲಿನ ರಥದಲ್ಲಿ ಹೋದವನಿಗೆ ಕನಿಷ್ಟಪಕ್ಷವಾದ ತಿರಸ್ಕಾರವೂ ಆಗುತ್ತದೆ, ನಂತರ ಮನೆಯ ಯಜಮಾನಿಯವರು ಬಂದು ಇವರ ಆಭರಣಗಳನ್ನು ಪರೀಕ್ಷಿಸಬೇಕಾಗುತದೆ; ಬಂದವರು ಆಭರಣಭೂಷಿತರಾಗಿ, ಜನದಿಂದ ತಯಾರಿಸಿ ಧರಿಸಿಕೊಂಡಿರಬೇಕು; ಎರಡನೇಯದು ಮೈಮೇಲೆ ಧರಿಸುವ, ವಸ್ತ್ರಖಚಿತವಾದ ತಿರುವು ಅದು ಉತ್ಕೃಷ್ಟವಾಗಿರಬೇಕು; ಕುತ್ತಿಗೆಯಲ್ಲಿ ವಜ್ರಖಚಿತವಾದ ಹಾರ ಪದಕಾದಿಗಳಿಂದ ಶೋಭಾಯಮಾನವಾಗಿ ಧರಿಸಿಕೊಂಡಿರಬೇಕು ಮತ್ತು ಕೈಗಳಿಗೆ ನೇಕವನ್ನು ತೋರ್ಪಡಿಸುವದು ಪ್ರಕಾಶವನ್ನು ಬೀರುವ ವಜ್ರ, ಗೋಮೇದಿಕಾದಿ ನಾನಾ ರತ್ನಗಳಿಂದ ಮನೋಹರವಾಗಿ ಸ್ವರ್ಣಕಾರನಿಂದ ನಿರ್ಮಿಸಲ್ಪಟ್ಟ ಸ್ತ್ರೀಯರ ಮನೋನೇತ್ರಗಳನ್ನು ಆಕರ್ಷಿಸುವ ಬಳೆಗಳಾಗಿರಬೇಕು. ನಂತರ ಕಟಿಯಲ್ಲಿ ಥಳಥಳಿಸುವ ರತ್ನಗಳಿಂದ ಕಲ್ಪಿಸಲ್ಪಟ್ಟ ಶೋಭಾಯಮಾನವಾದ ಒಡ್ಯಾಣ ಇರಬೇಕು; ಕಾಲಿನಲ್ಲಿ ಹೊಸಹೊಸ ಸರಪಣಿಗಳ ಝಂಕಾರವೂ ಕೇಳುತ್ತಿರುವಂತಾದ ದೇಶಗಳಲ್ಲಿ ತಯಾರಾಗಿ ಪರದೇಶದಿಂದ ಬಂದ ಸೀರೆಯ ಬೆಡಗಿನಿಂದ ಬಳಕುತ್ತಾ ಒಬ್ಬಾಕೆಯು ಮನೆಯೊಳಗೆ ಪ್ರವೇಶಿಸಿದ್ದೇ ಆದರೆ ಆಕೆಯು ಬಾಧ್ಯತೆ ಇಲ್ಲದ ದಾಯಾದಿ ಸಂಬಂಧವಾಗಿದ್ದರೂ ಸಮೀಪ ಬಂಧುವಿಗಿಂತಾ ಹೆಚ್ಚಾಗಿ ನಟಿಸಿ ಅವಳಿಗೆ ಎಲ್ಲರಿಗಿಂತಲೂ ಹೆಚ್ಚಾದ ಮರ್ಯಾದೆಗಳನ್ನೂ ಉಡುಗೆರೆಗಳನ್ನೂ ಮಾಡಿ ಆಕೆಯು ಕಾಲುಗಳು ಸೋಂಕಿದ ಸ್ಥಳವೇ ಪಾವನವೆಂದು ನಟಿಸುತ್ತಾರೆ.

ಆಕೆಯ ಗುಣ ಶೀಲ ಕ್ಷಮೆ, ದಯೆ ಶಾಂತಿ, ಆಚಾರ, ಕುಲ, ಗೋತ್ರ, ಪಾತಿವ್ರತ್ಯ ಯಾವುದು ಹ್ಯಾಗಿದ್ದರೂ ಇರಲಿ; ಸ್ತ್ರೀಯರ ನೈಜವಾದ ಭೂಷಣವ್ಯಾವುದೆಂಬುವದನ್ನು ಕುರಿತು ಒಬ್ಬರಾದರೂ ಈ ಕಾಲದಲ್ಲಿ ಚಿಂತಿಸುವಂತೆಯೇ ಕಾಣೆ! ಇತರರನ್ನು ಮರುಳುಮಾಡುವ ಈ ಕೃತಕವಾದ ಭೂಷಣವು ಎಂದಿಗೂ ಭೂಷಣವಾಗಲಾರದು

ಹಿರಿಯರ ಕಾಲದಲ್ಲಿ ನಮ್ಮ ಸ್ತ್ರೀ ಜನಾಂಗವು ಹೇಗೆ ತಮ್ಮ ಪ್ರಾಣವನ್ನೂ ರಾಜ್ಯಾದಿ ಸುಖವನ್ನೂ ತ್ಯಾಗ ಮಾಡಿ ಮಾನ ಸಂರಕ್ಷಣೆಮಾಡಿಕೊಳ್ಳುತ್ತಿದ್ದರೋ, ಪುರುಷರು ಪರನಾರೀಸೋದರರಾಗಿ ಹೇಗಿರುತ್ತಿದ್ದರೋ ಅದನ್ನೆಲ್ಲಾ ನಮ್ಮ ಹಿಂದೂ ಪುರಾಣಗಳಿಂದಲೂ ಚರಿತ್ರೆಗಳಿಂದಲೂ ಸರ್ವಸಾಮಾನ್ಯವಾಗಿ ಅರಿತವರುಗಳಾಗಿಯೇ ಇರುತ್ತೀರಿ

ಸ್ತ್ರೀಯರಿಗೆ ನಿಜವಾದ ಭೂಷಣವಾವುದು? ಮೇಲೆ ನಾವು ಬರೆದಂತೆ ಇತರರಿಗೆ ಸೊಗಸುತೋರುವಂತೇ ಧರಿಸುವ ಆಭರಣಾದಿಗಳಲ್ಲ;

ಸೌಮಂಗಲ್ಯಕ್ಕೆ ಎಷ್ಟು ಆಭರಣಗಳು ಅವಶ್ಯಕವೆಂದು ಹಿರಿಯರ ಅಪ್ಪಣೆಯೋ ಅಷ್ಟೇ ನಾವು ಧರಿಸಿಕೊಂಡರೆ ಸಾಕು.

(ಸಶೇಷ)

ವಿಧೂಷಕ.

ತಿರುಚನಾಪಳ್ಳಿ ಅಧ್ಯಾಪಕ ಮ|| ಎ. ರಾಮಯ್ಯರ್ ಎಂ ಎ.

(ಹಿಂದೀಪ್ರಾಚಾರದಿಂದ)

ಕಂಚಿ ರಾಜನು ಕರ್ಣಾಟಕ ರಾಜನ ಮೇಲೆ ದಂಡೆತ್ತಿ ಹೋದನು. ಸಮರಾಂಗಣದಲ್ಲಿ ಉಗ್ರತರದ ಗುದ್ದಾಟ ನಡೆಯಿತು ಅಂತ್ಯದಲ್ಲಿ ವಿಜಯ ಲಕ್ಷ್ಮಿಯು ಕಂಚಿರಾಜನನ್ನು ಆಲಿಂಗಿಸಿದಳು ಜಯಶಾಲಿಯಾದ ಕಂಚಿರಾಜನು ತನ್ನ ಶತ್ರುರಾಜನ ಸಂಪತ್ತನ್ನು ಸೂರೆಗೊಂಡನು, ಚಿನ್ನ ಬೆಳ್ಳಿ ಮುತ್ತು ಮಾಣಿಕ್ಯ, ಗಂಧ, ಆನೆದಂತ ಇತ್ಯಾದಿ ಅಮೂಲ್ಯ ಪದಾರ್ಥಗಳನ್ನು ತನ್ನ ರಾಜಧಾನಿಯಾದ ಕಂಚಿಗೆ ಸಾಗಿಸಿಕೊಂಡು ಹೋಗುವವನಾದನು.

ದಾರಿಯಲ್ಲಿ, ಹೋಗುತಾ, ಆಯಾಸವಾದ ಕಾರಣ, ತನ್ನ ಚತುರಂಗ ಬಲವು ಒಂದು ಹಳ್ಳಿಯ ಸಮೀಪ ಕಳಗಿತು ಆ ರೀತಿಗೆಯ ಸ್ವಲ್ಪ ದೂರದಲ್ಲಿಯೇ ಮಹಾಬಲೇಶ್ವರಿಯ ದೇವಾಲಯವಿತ್ತು. ಕಂಚಿರಾಜನು ಮಂತ್ರಿ ಪುರೋಹಿತ ಮತ್ತು ವಿದೂಷಕರೊಡನೆ ದೇವೀದರ್ಶನಾರ್ಥವಾಗಿ ಮಂದಿರಕ್ಕೆ ಹೋದನು. ಅನೇಕ ಕುರಿಗಳನ್ನು ದೇವಿಗೆ ಬಲಿ ಕೊಡಿಸಿದನು.

ಪೂಜೆಯಾದ ನಂತರ ರಕ್ತವಸ್ತ್ರದಿಂದ ಹಣೆಯಲ್ಲಿ ರುಧಿರ ತಿಲಕವನ್ನಿಟ್ಟು ಬರುತ್ತಿದ್ದ ಜನರನ್ನು ನೋಡಿ ರಾಜನಿಗೆ ಮನೋವಿಕಲ್ಪವಾಯಿತು; ಭಯವೂ ಆಯಿತು

ದಾರಿಯ ಹತ್ತಿರದಲ್ಲೇ ಒಂದು ಮಾವಿನ ತೋಟವಿತ್ತು. ಒಂದು ಮಾವಿನ ಮರದ ಕೆಳಗೆ ಕೆಲವು ಹುಡುಗರು ವಿನೋದದಿಂದ ಆಟ ಆಡುತ್ತಿದ್ದರು ರಾಜನು ಈ ಹುಡುಗರನ್ನು ನೋಡಿ ತನ್ನ ಕೆಲ ಹಿಂಬಾಲಕರೊಡನೆ ಅವರ ಬಳಿಗೆ ಹೋಗಿ "ಹುಡುಗರೇ! ನೀವೇನ ಆಟವಾಡುತ್ತೀರಿ?" ಎಂದು ವಿಚಾರಿಸಿದನು. ಹುಡುಗರು ಆಟದ ಮಸ್ತಿನಿಂದ ರಾಜನಿಗೆ ಉತ್ತರ ಕೊಡಲಿಲ್ಲ

ಆಟವಾಡಲಿಕ್ಕೆ ಮಕ್ಕಳಲ್ಲಿ ಕೆಲವು ಗೊಂಬೆಗಳಿದ್ದವು ಈ ಗೊಂಬೆಗಳ ಸಹಾಯದಿಂದ ಯುದ್ಧಕ್ಷೇತ್ರದ ಆಟವಾಡುತಿದ್ದರು ರಾಜನು ಹುಡುಗರ ಸಮೀಪಕ್ಕೆ ನಡೆದು ಯಾರ್ಯಾರಿಗೆ ಯುದ್ಧ ನಡೆಯುತ್ತಿದೆ? ಎಂದು ಪ್ರಶ್ನಿಸಿದನು

ಹುಡುಗರು "ಕರ್ಣಾಟಕ ರಾಜನಿಗೂ, ಕಂಚೀ ರಾಜನಿಗೂ ಯುದ್ಧ ನಡೆಯುತ್ತಿದೆ" ಎಂದು ಉತ್ತರ ಕೊಟ್ಟರು.

ರಾಜನಿಗೆ ವಿಸ್ಮಯ ಉಂಟಾಗಿ ಪುನಃ ಹುಡುಗರನ್ನು ಕುರಿತು "ಯಾರು ಸೋತರು? ಗೆದ್ದವರು ಯಾರು?" ಎಂದನು.

ಹುಡುಗರ ಪೈಕಿ ಒಬ್ಬ ಧೈರ್ಯದಿಂದ ಹೀಗೆಂದನು. "ಕರ್ಣಾಟಕ ರಾಜನ ವಿಜಯವಾಯಿತು ಕಂಚಿ ರಾಜನು ಓಡಿಹೋದನು." ಎಂದನು

ಬಾಲಕನ ಮಾತನ್ನು ಮಂತ್ರಿಯು ಕೇಳಿದೊಡನೆಯೇ ಕೋಪಾವಿಷ್ಟನಾದನು, ರಾಜನ ಕಣ್ಣುಗಳು ಬೆಂಕಿಕಿಡಿಗಳನ್ನು ಸುರಿಸಹತ್ತಿದವು, ಆದರೆ ವಿದೂಷಕನು ಹೊಟ್ಟೆಬಿರಿಯುವ ಹಾಗೆ ಹುಚ್ಚುಹುಚ್ಚಾಗಿ ನಗಹತ್ತಿದನು.

ರಾಜನು ತನ್ನ ಸೇನೆಗೆ ಬಂದು ಸೇನಾಪತಿಯನ್ನು ಕರೆದು "ನೋಡು! ನನ್ನ ಮಹತ್ತರವಾದ ವಿಜಯವನ್ನು, ಜನರು ಇದನ್ನು ಕಂಡೂ ಮೆಚ್ಚದೆ ಆ ಮಕ್ಕಳು ಹೀಗೆ ಹೇಳುತ್ತಾರೆ" ಎಂದು ಪ್ರಶ್ನೆ ಮಾಡಿದನು.

ಈ ಸಂಭಾಷಣೆಯ ಗ್ರಾಮದವರೆಲ್ಲಾ ಕೂಡಿ ಬಂದಿತು ಪುರೋಹಿತನು ಕಂಚಿ ರಾಜನನ್ನು ಕುರಿತು "ಮಹಾರಾಜಾಧಿರಾಜನೇ! ನೀನು ಕೋಪಿಸಬೇಡ ಈ ಮುಗ್ಧ ಹುಡುಗರು ಏನೂ ತಿಳಿಯದವರು. ಇವರು ಬಾಲಕರಲ್ಲ ಭವಾನಿಯೇ ಇವರ ಮುಖದಿಂದ ನುಡಿಸಿದಳು. ಇವರ ಮೇಲೆ ದಯೆ ತೋರಿಸಬೇಕು; ಇವರಿಗೆ ಕ್ಷಮೆ ಕೊಡಬೇಕು" ಎಂದು ವಿನಯದಿಂದ ಬೇಡಿದನು

ರಾಜನು ಗ್ರಾಮಸ್ಥರ ಮಾತನ್ನು ಚೆನ್ನಾಗಿ ಆಲಿಸಿ ಮನಸು ಶಾಂತವಾಗಿ, ಸೇನಾಪತಿಯನ್ನು ಕರೆದು "ನೀನು ಆ ಮಕ್ಕಳನ್ನೂ ಬಿಟ್ಟು ಬಿಡು! ಮತ್ತು ಸಂಜೆಯಾಗುವಾಗ ನೀವು ಕಂಚಿರಾಜನನ್ನು ಕನಸಿನಲ್ಲಿಯೂ ಕಾಣುವ ಹಾಗೆ ಮಾಡಬಾರದೆಂದು ಆಜ್ಞಾಪಿಸು" ಎಂದು ಹೇಳಿ ತನ್ನ ವಸತಿಗೆ ಹೊರಟು ಹೋದನು

ಸಾಯಂಕಾಲದಲ್ಲಿ ಸೇನಾಪತಿಯು ರಾಜನ ಸಮ್ಮುಖಕ್ಕೆ ಬಂದು ಅಂಜಲೀಬದ್ಧನಾಗಿ ನಿಂತು "ರಾಜಾ! ಆ ಊರಿನಲ್ಲಿ ನಾವು ಗಳೂ ಸೆಂಗಳೂ ಏನೂ ಸಿಕ್ಕಲಿಲ್ಲ ಮನುಷ್ಯರ ಸುಳಿವೇ ಇಲ್ಲ" ಎಂದು ವಿಜ್ಞಾಪಿಸಿದನು

ಮಂತ್ರಿಯು ಈ ಮಾತನ್ನು ಕೇಳಿದೊಡನೆಯೇ ತಲೆಯನ್ನು ಕೆಳಕಿಕ್ಕಿ ಹೀಗೆಂದನು "ದೇವ! ನಿಮ್ಮ ಮಹಾಪಕೀರ್ತಿಯಾಯಿತು" ಎಂದನು

ಪುರೋಹಿತನು "ಭಗವತೀ ಮಹಾಬಲೇಶ್ವರಿಯು ಮಹಾರಾಜನಿಗೆ ವಿಜಯವನ್ನು ಅನುಗ್ರಹಿಸಲಿ" ಎಂದನು. ವಿದೂಷಕನು "ಮಹಾರಾಜ! ನನ್ನನ್ನು ಕಳುಹಿಸಿಬಿಡು" ಎಂದು ಬೇಡಿದನು. ರಾಜನು ಆಶ್ಚರ್ಯದಿಂದ "ಯಾಕೆ" ಎಂದನು ವಿದೂಷಕನು "ನಾನು ಕಷ್ಟಗಾರ; ಹೋಡೆಯಲೂ ಆರೆ, ಪರಮಾತ್ಮನ ದಯೆಯಿಂದ ನಗುವುದನ್ನು ಮಾತ್ರ ಕಲಿತಿದ್ದೇನೆ ಇನ್ನು ನಿನ್ನಲ್ಲಿದ್ದರೆ ನಗುವನ್ನು ಸಹ ಮರೆಯಬೇಕಾದೀತು." ಎಂದನು

ಕೊಡಗು ಜಮೀನ್ದಾರರ ಸಂಘ.

(ಪ್ರಚಾರಕ ಕಾರ್ಯದರ್ಶಿಯವರಿಂದ)

1923 ನೇ ಇಸವಿ ಅಕ್ಟೋಬರ ತಾರೀಕು 28 ರಲ್ಲು ಹೊರಮಲೆನಾಡಿಗೆ ಜಮೀನ್ದಾರರ ಸಂಘದ ಒಂದು ಕಮಿಟಿಯನ್ನು ಏರ್ಪಡಿಸಲಿಕ್ಕಾಗಿ ಗಾಳಿಬೀಡು ಸ್ಕೂಲಿನಲ್ಲು ನಾಡಿನವರ ಒಂದು ಮೀಟಿಂಗು ಮ|| ಶ್ರೀ|| ಬಿದ್ದಂಡ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲು ನಡೆಯಿತು. ಅಧ್ಯಕ್ಷರು ಸಂಘದ ನಿಯಮಗಳನ್ನು ವಿವರಿಸಿದನಂತರ ದೇಶದ ಕಷ್ಟ ಸುಖಗಳನ್ನೂ ಮತ್ತು ಹೊರ ಮಲೆನಾಡಿನವರು ಬಹಳ ಹಿಂದುಳಿದಿರುವ ವಿಷಯದಲ್ಲು ವಿವರಿಸಿ ಹೇಳಿ ಸಂಘವು 12-13 ವರ್ಷಗಳಿಂದ ದೇಶಕ್ಕೆ ಮಾಡಿದ ಪ್ರಯೋಜನಕರವಾದ ಕೆಲಸಗಳನ್ನು ತಿಳುವಳಿಕೆ ಕೊಟ್ಟನಂತರ ಹೊರ ಮಲೆನಾಡಿಗೆ ಸಂಘದ ಒಂದು ಕಮಿಟಿಯನ್ನು ಏರ್ಪಡಿಸಿಕೊಂಡು ಸಂಘಕ್ಕೆ ಕೃತಿಯೊಳ್ಳ ಜಮೀನ್ದಾರನು ಮೆಂಬರನಾಗಿ ನಾಡಿನವರು ಪ್ರಯೋಜನವನ್ನು ಹೊಂದಬೇಕಾಗಿ ಕೇಳಿಕೊಂಡ ಮೇರೆ ಎಲ್ಲವರು ಸರ್ವಸಮ್ಮತದಿಂದ ಈ ಕೆಳಗೆ ನಮೂದಕ್ಕ ಮೆಂಬರುಗಳನ್ನು ಕಮಿಟಿಗೆ ಚುನಾಯಿಸಿದರು.

ಕಮಿಟಿ ಮೆಂಬರುಗಳು.

ಅಧ್ಯಕ್ಷರು—ಮ|| ಶ್ರೀ|| ಬಲ್ಲೀರ ಕರುಂಬೈಯ್ಯನವರು
ಸೆಕ್ರಟರಿ—ನೆಲ್ಲಪಟ್ಟಿರ ಸುಬ್ಬೈಯ್ಯನವರು
ಕಜಾಂಜಿ—ನೆಲ್ಲಪಟ್ಟಿರ ಚಂಗಪ್ಪನವರು

ಮೆಂಬರುಗಳು.

ಗಾಳಿಬೀಡು—ಚಾಂಡಿರ ಗಣಪತಿಯವರು, ಸ್ವಾಳತಕನ ಪೂವೈಯ್ಯ

ಮದ್ದೆಗೇರಿ—ಕೋಚನ ಸುಬ್ಬಯ್ಯನವರು, ಅಚ್ಚಪಟ್ಟಿರ ಮಾದಪ್ಪನವರು

18 ವರ್ಷಕ್ಕೆ ಮೇಲ್ಪಟ್ಟವರ ಹೆಸರನ್ನು ಪ್ರಚಾರಕ ಕಾರ್ಯದರ್ಶಿಯವರಿಗೆ ಕೊಡಬೇಕೆಂತ ತೀರ್ಮಾನವಾದನಂತರ ಕೂಡಲೆ ಹಾಜರಿ ಪಟ್ಟಿಯನ್ನು ಅಲ್ಲಿ ನೆರದಿದ್ದ ಜನರಿಗೆ ಕೊಟ್ಟನಂತರ ಸಭೆಯು ಬರಕಾಸ್ತು ಆಯಿತು.

ಕಗ್ಗೋಡುನಾಡು ಮೀಟಿಂಗು

27—10—23 ರಲ್ಲು ಪ್ರಚಾರಕ ಕಾರ್ಯದರ್ಶಿಯವರು ಕೊಟ್ಟ ನೋಟೀಸು ಮೇರೆ ಸುಮಾರು 20 ಜನರು ಸೇರಿದ ಒಂದು ಸಭೆಯು ಮ|| ಶ್ರೀ|| ಬಿದ್ದಿಯಂಡ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲು ನಡೆಯಿತು ಅಧ್ಯಕ್ಷರು ಮೀಟಿಂಗಿನ ಉದ್ದೇಶವನ್ನು ವಿವರಿಸಿ ಹೇಳಿದನಂತರ ಪ್ರಚಾರಕ ಕಾರ್ಯದರ್ಶಿಯವರು ದೇಶದ ಕಷ್ಟಸುಖ ಮತ್ತು ಕುಂದುಕೊರತೆಗಳನ್ನು ವಿವರಿಸಿ ಪ್ರತಿನಿಧಿಗಳು ಅವರ ಕೆಲಸವನ್ನು ನಡೆಸುವ ಸಿದ್ಧತೆಗೆ ... ಮಾಡಲು ...

[illegible]

... ಈ ಸಭೆಗೆ ಬಂದು ಸಂಘದ ಕಮಿಟಿಯನ್ನು ಏರ್ಪಡಿಸಬೇಕೆಂದು ... ಕಮಿಟಿಯನ್ನು ಏರ್ಪಡಿಸಿಕೊಂಡು ... ಮೆಂಬರಾಗಿ ... ಕೊಡಗು ಪತ್ರಿಕೆಯು ದೇಶದವರನ್ನು ಬಹಳ ಎಚ್ಚರಗೊಳಿಸುವ ಪತ್ರಿಕೆಯನ್ನು ಮಾಡಿ ಪ್ರೋತ್ಸಾಹಿಸಬೇಕೆಂದು. ಕೊನೆಯಲ್ಲಿ ಮ|| ಶ್ರೀ|| ಚಂಗೀರ ರಾಮಯ್ಯನವರು ... ಇಷ್ಟು ವರ್ಷ ಸಂಘವನ್ನು ... ಸಂಘದ ಕೆಲಸದಿಂದಲೇ ಆ ... ಆಗಬೇಕೆಂದೂ ... ಸಂಘದ ಪ್ರೋತ್ಸಾಹದಿಂದಲೇ ಆಗಿದೆ ಇನ್ನು ಮುಂದಕ್ಕೂ ಸಂಘವನ್ನು ಮತ್ತು ಕೊಡಗು ಪತ್ರಿಕೆಯ ... ಪ್ರೋತ್ಸಾಹ ಕೊಟ್ಟು ... ದೇಶದ ಎಲ್ಲಾ ಕೆಲಸವೂ ಚೆನ್ನಾಗಿ ನಡೆಯಬಹುದಾದ್ದರಿಂದ ಕೊಡಗು ಪತ್ರಿಕೆಗೆ ಚಂದಾದಾರರಾಗಬೇಕೆಂದು ... ಕೇಳಿಕೊಂಡನು. ನಂತರ ... ಮತ್ತು ಕೋಟೇರ ಮುತ್ತಣ್ಣನವರು, ನಮ್ಮ ಸಂಘವನ್ನು ಪ್ರೋತ್ಸಾಹಿಸಬೇಕೆಂತ ... ಈ ಕೆಳಗಿನ ಕಮಿಟಿಯು ಏರ್ಪಾಡಾಯಿತು ಕಮಿಟಿ ಚುನಾವಣೆ ಆದನಂತರ ಕೆಳಗೆ ಕಂಡ ಜನರು ಕೊಡಗು ಪತ್ರಿಕೆಗೆ ಚಂದಾದಾರರಾಗಲು ಹೆಸರು ಕೊಟ್ಟರು.

1. ಕಗ್ಗೋಡುನಾಡು ಕಮಿಟಿ.

ಅಧ್ಯಕ್ಷರು—ಮೆ|| ಬಿಟ್ಟತ್ತ ಕೃಷ್ಣೈಯ್ಯನವರು
ಕಾರ್ಯದರ್ಶಿ—ಮೆ|| ಮಣವಟ್ಟಿರ ಪಯ್ಯಪ್ಪನವರು
ಕೋಶಾಧ್ಯಕ್ಷರು—ಮೆ|| ಮಂಡ್ರೀರ ಪೆಳ್ಯಪ್ಪನವರು

ಕಮಿಟಿ ಮೆಂಬರುಗಳು

ಕಗ್ಗೋಡು ಗ್ರಾಮ—ಮೆ|| ಕುಂಞಪಂಡ ಚಣ್ಣಪ್ಪನವರು ಮೆ|| ಮಂಡ್ರೀರ ಮಂದಣ್ಣನವರು.

ಹೇರೂರಿಗ್ರಾಮ—ಮೆ|| ಒಡ್ಡನರಾಮೈಯ್ಯನವರು ಮೆ|| ಕೋತೀರ ದೇವೈಯ್ಯನವರು.

ಹಾಕತ್ತೂರು ಗ್ರಾಮ—ಮೆ|| ಅಮ್ಮಟಂಡ ದೇವೈಯ್ಯನವರು, ಮೆ|| ಅಕ್ಕಾಂ ಪುಟ್ಟೈಯ್ಯನವರು

ಬಿಳಗೇರಿ ಗ್ರಾಮ—ಮೆ|| ಕಣ್ಣಚಂಡ ಮಂದಣ್ಣನವರು, ಮೆ|| ಕೋಟೇರ ಮುತ್ತಣ್ಣನವರು, ಮೆ|| ಪಾಲಕೋಟ ಮುದ್ದಪ್ಪನವರು

ಕಾಟಕೇರಿ ಗ್ರಾಮ—ಮೆ|| ಚೆಮ್ಮನ ಮಾದಪ್ಪನವರು ಮೆ|| ಬೈಪಟ್ಟಿರ ಮಾದಪ್ಪನವರು.

ಮಡಿಗ್ರಾಮ—ಮೆ|| ನೆರಿಯನ ಕೃಷ್ಣಪ್ಪನವರು, ಮೆ|| ಕೊಟ್ಟ್ಯದ ಬೋಯ್ಯೈಯ್ಯನವರು, ಮೆ|| ಉದೇರಿ ರಾಮಪ್ಪನವರು.

2. ಕೊಡಗು ಪತ್ರಿಕೆಗೆ ಚಂದಾದಾರರಾದವರ ಹೆಸರು.

ಬಿಳಗೇರಿಗ್ರಾಮ—ಮೆ|| ಕೋಟೇರ ಮುತ್ತಣ್ಣನವರು ಮೆ|| ಕಣ್ಣಚಂಡ ಮಂದಣ್ಣನವರು. ಮೆ|| ಬಿಟ್ಟತ್ತನಾಡ ಕೃಷ್ಣೈಯ್ಯನವರು, ಮೆ|| ಕೋಟೇರ ಮುದ್ದೈಯ್ಯನವರು, ಮೆ|| ಪಾಲ್ಕೋಟ ಮುದ್ದಪ್ಪನವರು, ಮೆ|| ಕುಂಞವಂಡ ದೇವೈಯ್ಯನವರು.

ಮೇಕೇರಿಗ್ರಾಮ—ಮೆ|| ಕೋರೆರ ಕಾರ್‍ಯಪ್ಪನವರು, ಮೆ|| ಕೋರೆರ ಮಾಚ್ಚೈಯ್ಯನವರು, ಮೆ|| ಓಡ್ಯನ ರಾಮೈಯ್ಯನವರು.

ಕಗ್ಗೋಡುಗ್ರಾಮ—ಮೆ|| ಮಂದ್ರೀರ ಬೆಳ್ಯಪ್ಪನವರು ಮೆ|| ಕುಲಿಕಾಳು ಮಂಜೈಯ್ಯನವರು

ಬರುವ ನವಂಬರ್ ತಾರೀಖು 11 ಕ್ಕೆ ನಾಡು ಕಮಿಟಿ ಮೀಟಿಂಗ್ ಇಟ್ಟಿದೆ ಕಗ್ಗೋಡುನಾಡು ಕೋಲು ಪೂರ್ವದ ಪ್ರಕಾರ ನಡಿಸಲಿಕ್ಕೆ ಬರುವ ವಾರದಲ್ಲಿ ಪ್ರಸ್ತಾಪಿಸಬೇಕಾಗಿ ತೀರ್ಮಾನವಾದನಂತರ ಕಾವೇರಿ ಸಂಚಿಕೆಯ ಕೊಡಗು ಪತ್ರಿಕೆಯನ್ನು ಬಟವಾಡೆಯಿಂದ ಸಭೆಯು ಬರಖಾಸ್ತು ಆಯಿತು

ಪತ್ರವ್ಯವಹಾರಗಳು.

ಬಾತ್ಮೀದಾರರು ಕಳುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ಕುದಿಕೇರಿ ದನಗಳ ದೊಡ್ಡಿಯನ್ನು ತೆಗೆದು ಟಿ (Tea) ತೋಟದವರಿಗೆ ತೋಟದಲ್ಲಿ ದೊಡ್ಡಿ ಇಡಲಿಕ್ಕೆ ಸರಕಾರದವರು ಹುಕ್ಕುಂ ಕೊಟ್ಟಿರುವದಾಗಿ ನಾನು ತಿಳಿದು ತುಂಬಾ ವ್ಯಸನಪಡುತ್ತೇನೆ ತೋಟದವರಿಗೆ ದೊಡ್ಡಿ ಇಡಲಿಕ್ಕೆ ಹುಕ್ಕುಂ ಕೊಟ್ಟರೆ ಸುತ್ತಮುತ್ತಲು ಇರುವ ಗರೀಬ ರೈತರ ಪಾಡು ದೇವರೇ ಬಲ್ಲ. ತೋಟದಿಂದ ೩-೪ ಮೈಲು ದೂರದಲ್ಲಿ ದೊಡ್ಡಿ ಇದ್ದು ಕೂಡ ತೋಟದ ಕೂಲಿ ಆಳುಗಳು ಆ ಸಂದುಪ್ಪಿನಲ್ಲಿರ್ವ ದನಗಳನ್ನು ತಂದು ದೊಡ್ಡಿಗೆ ಸೇರಿಸಿ ಎಷ್ಟೋ ಗರೀಬ ಜನರಿಗೆ ತೊಂದರೆ ಮಾಡುತ್ತಿದ್ದಾರೆ ಆದುದರಿಂದ ಘನಸರಕಾರದವರು ತೋಟದವರಿಗೆ ದೊಡ್ಡಿ ಇಡಲಿಕ್ಕೆ ಹುಕ್ಕುಂ ಕೊಡಲಿಕ್ಕಿಲ್ಲವಾಗಿ ನಂಬುತ್ತೇವೆ.

ಒಬ್ಬ ರೈತ.

ಅಯ್ಯಾ ಸಂಪಾದಕರೇ,

ಕಳೆದವಾರದ ಪತ್ರಿಕೆಯಲ್ಲಿ, ಕೊಳುವಂಡ್ರ ಮೆ|| ತಿಮ್ಮಯ್ಯನವರು, ನಾವು ಕೆಲವು ಜನರು ಕೂಡಿ ಪ್ರಕಟಿಸಿದ ಪ್ರಸಿದ್ಧ ಪತ್ರಿಕೆಯ ವಿಷಯ, ನಮ್ಮಲ್ಲಿ ಕೆಲವರು ಅನ್ನೊಬ್ಬರ ರುಜು ಸೃಷ್ಟಿ ಮಾಡಿರುತ್ತಾರೆಂದೂ, ಮೆ|| ಬಿ ನಂಜಪ್ಪನವರು ರುಜು ಹಾಕಲಿಲ್ಲವಾಗಿ ವಗೈರೆಯಾಗಿ, ರುಜು ಹಾಕಿದ ಮೆಂಬರುಗಳಿಗೆ ಮಾನಹಾನಿಕರವಾಗಿ ಬರೆದ ಬಾತ್ಮಿಯನ್ನು ನೋಡಿದೆನು ಈ ವಿಷಯದಲ್ಲಿ ಮೆ|| ಬಿಟ್ಟಿಯಂಡ್ರ ನಂಜಪ್ಪನವರು ನನಗೆ ಬರೆದ ಜವಾಬನ್ನೂ, ಮೆ|| ನಂಜಪ್ಪನವರ ಕಾಗದವನ್ನೂ, ಪ್ರಸಿದ್ಧ ಪತ್ರಿಕೆಯನ್ನು ಪ್ರಕಟಣೆ ಬಗ್ಗೆ ಕೇಳಿಕೊಳ್ಳುತ್ತೇನೆ ಮೆ|| ತಿಮ್ಮಯ್ಯನವರು ಇಂಥಾ ಅಪಮಾನಕರವಾದ ಬರವಣಿಗೆಯನ್ನು, ಪ್ರಸಿದ್ಧ ಪತ್ರಿಕೆಗೆ ರುಜು ಹಾಕಿದವರ ಮೇಲೆ ಬರೆದದ್ದು ಪೂರ ಮಾನಹಾನಿಕರವಾದ್ದರಿಂದ ಈ ಬಾಗಾಯ್ತು ೧೦ ದಿನದೊಳಗೆ ದಸ್ಕತ್ತು ಹಾಕಿದ ಎಲ್ಲಾ ಮಹನೀಯರ ಮನ್ನಣೆ ಕೇಳಿಕೊಳ್ಳದೆ ಹೋದರೆ ಅವರ ಮೇಲೆ, ಕ್ರಿಮಿನಲ್ ಮತ್ತು ಸಿವಿಲ್ ಕೋರ್ಟಿನಲ್ಲಿ ತಕ್ಕ ಕ್ರಮ ಜರಗಿಸಲಾಗುತ್ತೆ.

ಕೋದಂಡ ಉತ್ತೈಯ್ಯ.

ಅಯ್ಯಾ,

ಈಗ ಮಂಜೂರಾಗಿ ಬಂದಿರುವ ಕೌನ್ಸಿಲಿನ ಮೆಂಬರುತನಕ್ಕೆ ಉಮೇದ್ವಾರರಾಗಿ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ನಿಲ್ಲಬಹುದೋ ಎಂಬ ಪ್ರಶ್ನೆಯನ್ನು ನನ್ನಲ್ಲಿ ಹಲವರು ಕೇಳಿರುವರು. ಇಂಥಾ ಸಂಶಯವು ಅನೇಕರಲ್ಲಿರಬಹುದು. ಆದುದರಿಂದ ನನಗೆ ತಿಳಿದಿರುವ ಈ ಜವಾಬನ್ನು ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಕೋರಿಕೆ. ನಾನು ಚುನಾವಣೆ ರೂಲ್ಸುಗಳನ್ನು ಚೆನ್ನಾಗಿ ಓದಿರುತ್ತೇನೆ. ಅದರಲ್ಲಿ ನನಗೆ ಕಂಡಮಟ್ಟಿಗೆ ಬೇರೊಂದು ನ್ಯಾಯವಿಧಾಯಕ ಸಭೆಯಲ್ಲಿ ಮೆಂಬರಾಗಿರುವವರು ಈ ಕೌನ್ಸಿಲಿನಲ್ಲಿ ಮೆಂಬರುತನಕ್ಕೆ ನಿಲ್ಲಕೂಡದೆಂದು ಮಾತ್ರ ಅಲ್ಲದೆ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ನಿಲ್ಲಕೂಡದೆಂದಿಲ್ಲ. ಈಗಿನ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ ಮೆಂಬರುಗಳಾಗಿರುವ ಏಳು ಜನರೂ (5 ಹಿಂದೀಯರು, 2 ಯೂರೋಪಿಯನರು) ಕೌನ್ಸಿಲು ಮೆಂಬರುತನಕ್ಕೆ ಉಮೇದುವಾರರಾಗಿ ನಿಲ್ಲುವವರಂತೆ ಇದೆ. ಆದುದರಿಂದ ಡಿ ಬೋರ್ಡ್ ಮೆಂಬರುಗಳು ಕೌನ್ಸಿಲು ಮೆಂಬರುತನಕ್ಕೆ ನಿಲ್ಲಕೂಡದೆಂಬ ಸುಳ್ಳು ವರ್ತಮಾನವು ಬಹಳ ಅನ್ಯಾಯವನ್ನುಂಟುಮಾಡಬಹುದು. ಈ ಸುಳ್ಳು ವರ್ತಮಾನವನ್ನು ನಂಬದೆ ತಮಗೆ ಅರ್ಹರೆಂದು ತೋರುವವರಿಗೆ ಬಯಸಿಕೊಡುವಲ್ಲಿ ಯಾವದೊಂದು ಅಡ್ಡಿ ಇಲ್ಲವೆಂದು ತಿಳಿಸುವ,

ದೇಶೀಯ,

ಹಳ್ಳಿಯವಾಸ.

ನಾಗರೀಕತನ ಅರಿಯದ ಹಳ್ಳಿಯ ಜನಾಂಗವು ನಮ್ಮ ಕಣಿವೆ ಹೋಬಳಿಯಲ್ಲಿ ಮನೆಮಾರು ಹಟ್ಟಿಕೊಟ್ಟಿಗೆ ಎಂದೇ ಜಾಗದಲ್ಲಿ ಇಟ್ಟುಕೊಂಡು ಅಶುಚಿಸ್ಥಿತಿಯಲ್ಲಿರುವ ಕಣಿವೆ ಕಿಬ್ಬರಿ ಜನರ ಹೀನಸ್ಥಿತಿಗಳನ್ನು ನಮ್ಮ ಕೊಡಗ ಮಹಾಶಯರು ಕಣ್ಣಾರೆ ನೋಡುತ್ತ ಇರುವದು ಸಹೋದರ ಭಾವವೇ ಎಂದರೆ ತಾರೀಖು ೨೩ ರ ಅಕ್ಟೋಬರ್ ೨೩ ರ ಸಂಚಿಕೆ ಕೊಡಗು ಪೇಪರಿನಲ್ಲಿ (ಗ್ರಾಮದ ಕಡೆಗೆ ತಿರುಗಿರಿ) ಎಂಬ ಬಾತ್ಮಿಯೊಂದನ್ನು ನಾನು ಓದಿ ನೋಡಿ ಬಹು ಸಂತೋಷಪಟ್ಟಿರುತ್ತೇನಲ್ಲದೆ, ಇದೇ ರೀತಿ ಈ ಬಾತ್ಮಿದಾರರು ಸಹೋದರರು ದೇಶಮಹಾನೀಯರಲ್ಲಿ ತುಂಬಾ ಹುಟ್ಟಿದ ವರ್ಷದಲ್ಲಿ ಬಹು ಹಿಂದೆಯೇ ಸಾಕಿರುವ ನಮ್ಮ ಕಣಿವೆ ಹೋಬಳಿಯ ಹೀನಸ್ಥಿತಿಗಳನ್ನು ಬದಲಾಯಿಸುವ ಸಮಯವು ಬಹು ಶೀಘ್ರದಲ್ಲೇ ಒದಗಬಹುದೆಂದು ಕಾತರ ಹಲವಡುತ್ತೇನೆ. ಈ ಗಾಗಲೇ ನಮ್ಮ ದೇಶಕ್ಕೆ ಸಿಕ್ಕಿರುವ ಕೌನ್ಸಿಲ್ ಪ್ರಯೋಜನ ಒಂದನ್ನು ಯೋಚಿಸಿದರೆ ನಮ್ಮ ಹೀನಸ್ಥಿತಿ ಬದಲಾವಣೆ ಬಗ್ಗೆ ಕಾವೇರಿ ಮಾತೆಯ ದೊಡ್ಡಬರಿಯಾದ ಸುವರ್ಣಾವತಿಯ ಅಕ್ಕತಂಗಿಯರ ಸಹೋದರರು ಯಾವ ರೀತಿ ಕಲಿತು ಕೊಂಡಿರುತ್ತದೋ ಆದೋರೀತಿ, ಹಾರಂಗಿ ನಾಲೆ ಮುಂದುವರಿದಿದ್ದಲ್ಲಿ ಕಣಿವೆ ಹೋಬಳಿಯ ಬಡಪಾಮರರ ಪೊರೆಯನ್ನು ಕಾಪಾಡ್ಯಾರೆಂದು ಹಾರೈಸುತ್ತೇವೆ ಕಾವೇರಿ ಮಾತೆಯ ಪುತ್ರರಾದ ಕೊಡಗ ಮಹಾಶಯರು ಸುವರ್ಣಾವತಿಯ ಪುತ್ರರನ್ನಾಗಿ ನಮ್ಮನ್ನು ಮಾಡಿ ಸಹೋದರ ಭಾವವನ್ನು ಯೋಚಮಾಡಿ ನಮಗೆ ಆದರೂ ಪನಾಗರೀಕತ್ವವನ್ನು ಬೆರೆಯಿಸಿಕೊಂಡಾರು ಎಂದು,

" ಕುತೂಹಲಿ "

ಅಯ್ಯಾ, ಕೊಡಗು ಪತ್ರಿಕಾಕರ್ತರೇ,

ತಮ್ಮ ಈ ತಿಂಗಳ ೭ ರ ಸಂಚಿಕೆಯಲ್ಲಿ ಪ್ರಕಟಿಸಿರುವ ಮಹಾರಾಜಶ್ರೀ ಸಿ ಐ ತಿಮ್ಮಯ್ಯನವರ ಬಾತ್ಮಿಯನ್ನು ನಾನು ಓದಿ ನನಗೆ ಆಶ್ಚರ್ಯ ಮತ್ತು ವಿಷಾದವಾಯಿತು. ಅದರಲ್ಲಿ ನಾನು ನಂಜಪ್ಪನವರಲ್ಲಿ ಮಾತನಾಡುತ್ತಿರುವಾಗ್ಯೆ ಅವರು ಈ ಪತ್ರಕ್ಕೆ ನಾನು ರುಜು ಹಾಕಿರುವದಿಲ್ಲ ಮತ್ತು ಸಮ್ಮತ ಸಹಾ ಕೊಟ್ಟಿರುವದಿಲ್ಲವೆಂಬದಾಗಿ ಹೇಳಿದರು, ಎಂತ ಬರೆದಿರುತ್ತಾರೆ. ಇದು ತಪ್ಪು ಅಭಿಪ್ರಾಯವಾಗಿದೆ ಸದ್ರಿ ನೋಟಿಸ್ ನನಲ್ಲಿ ತಂದ ದಿನ ನಾನು ಬಹಳ ಜ್ವರವಾಗಿ ಮಲಗಿಕೊಂಡಿದ್ದದರಿಂದ ಸದ್ರಿ ನೋಟಿಸಿಗೆ ನಾನು ರುಜು ಹಾಕುವದಕ್ಕೆ ಆಗಲಿಲ್ಲ, ಆದರೆ ಸದರಿ ನೋಟಿಸ್ ಮಸೂದೆಗೆ ನಾನು ಸಮ್ಮತ ಕೊಟ್ಟಿರುತ್ತೇನೆ ಎಂಬದಾಗಿ ಹೇಳಿದನ್ನು ತಿಮ್ಮಯ್ಯನವರು ತಪ್ಪು ಅರ್ಥಮಾಡಿಕೊಂಡು ಮೇಲ್ಕಂಡ ಬಾತ್ಮಿಯನ್ನು ಬರೆದರೆಂದು ನಾನು ಊಹಿಸಬೇಕಾಗಿದೆ ಚನ್ನಾಗಿ ವಿಚಾರ ಮಾಡದೆ ಆತುರದಿಂದ ಪರದೂಷಣೆಗಳನ್ನು ಅಥವ ಪರರಮೇಲೆ ಆರೋಪಣೆಗಳನ್ನು ಹೊರಿಸಿ ಕೌನ್ಸಿಲ್ ಸಿಕ್ಕುತ್ತೆ ಎಂಬಾಗಲೇ ಇಂಥಾ ಬಾತ್ಮಿಗಳು ಹೊರಡುವದಕ್ಕೆ ಪ್ರಾರಂಭವಾದ ಮೇಲೆ ಇನ್ನು ಕೌನ್ಸಿಲ್ ಕ್ರಮವಾಗಿ ನಿರ್ಮಾಣವಾದನಂತರ ಬರಬಹುದಾದ ಬಾತ್ಮಿಗಳನ್ನು ತಮ್ಮ ಪತ್ರದಲ್ಲಿ ಛಾಪಿಸುವದಕ್ಕೆ ಸ್ಥಳ ಸಾಕಾದೀತೇ ? ಕಾರಣವಿದ್ದಾಗಲೀ ಕಾರಣವಿಲ್ಲದೆಯಾಗಲೀ ನಮ್ಮ ಇಷ್ಟು ಸಣ್ಣ ಜನಾಂಗದಲ್ಲಿ ನಾವು ಪರಸ್ಪರ ದೋಷಾರೋಪಣೆಗಳನ್ನು ಮಾಡಿ ಕಚ್ಚಾಡುತ್ತಿದ್ದರೆ ನಮ್ಮ ಮುಂದಿನ ಪರಿಣಾಮ ಎಷ್ಟರಮಟ್ಟಿಗೆ ಅಭಿವೃದ್ಧಿಗೆ ಬಂದೀತು ? ನಮ್ಮ ಬಗ್ಗಟ್ಟಿಗೆ ಇವು ಸಾಧನಗಳೇ ? ಎಂತ ನನ್ನ ಮನಸ್ಸು ಬಹಳ ಕಂಗೊಳಿಸುತ್ತಿದೆ.

ಮೆ|| ತಿಮ್ಮಯ್ಯನವರು ತಮ್ಮ ತಪ್ಪನ್ನು ಇನ್ನೊಂದು ಪತ್ರಿಕೆಯಲ್ಲಿ ಪ್ರಚುರಗೊಳಿಸುವಂತಾಗಿ ನನ್ನ ಕೋರಿಕೆ.

ಬಿ. ನಂಜಪ್ಪ.

ಅಯ್ಯಾ, ಕೊಡಗು ಬಾಂಧವರೇ,

ಕೊಡಗು ದಕ್ಷಿಣ ಕೊಡಗು ತಾಲೋಕು ಶ್ರೀಮಂಗಲನಾಡು ಬೇಗೂರು ಗ್ರಾಮ ಮತ್ತು ಆಜು ಬಾಜು ಗ್ರಾಮಗಳಲ್ಲಿ ಸಹ ಬಾಣೆಗಳಲ್ಲು ಹುಲ್ಲಿಗೆ ಒಂದು ತರಹದ ಹಸುರು ಹುಳಗಳು ಬಿದ್ದು ನೆಲದಲ್ಲು ಸುಮಾರು ¼ ಇಂಚು ನಷ್ಟ ಆಳದಿಂದಲೇ ಹುಲ್ಲಿನ ಬೇರು ಸಮೇತ ತಿಂದು ಹುಲ್ಲು ತೀರಾ ಬೆಂದು ಹೋದ ಹಾಗೆ ಆಗಿ ಗೋವುಗಳ ಚರಾವಿಗೇನೇ ಬಹಳ ನಿರ್ಬಂಧವಾಗಿದೆ. ಈ ಹುಳವು ಬೇರು ಸಮೇತ ತಿಂದು ಒಣಗಿ ಬೆಂದು ಹೋದ ಹಾಗೆ ಕಪ್ಪಾಗಿರುವ ಹುಲ್ಲುಗಳನ್ನು ಉದರಬಾಧೆಯಿಂದ ಗೋವುಗಳು ಭುಂಜಿಸುವದರ ದೆಶೆಯಿಂದ ಗೋವುಗಳು ಯಾವ ತರದ ವ್ಯಾಧಿಯಿಂದ ಬಳಲಬೇಕೋ ಕ್ಷೀಣಗತಿಯಾಗಬೇಕೋ ಮರಣಸೋಚನ ಜೋರಾಗಬಹುದೋ ಹ್ಯಾಗೋ ತಿಳಿಯದು ಹೀಗೆ ಗೋವುಗಳ ಸಂವೃದ್ಧಿಯು ಕ್ಷೀಣಸ್ಥಿತಿಗೆ ಬಂದರೆ ದೇಶವು ಮತ್ತು ಜರಾಯ್ತಿದಾರರ ಗತಿಯು ಹ್ಯಾಗಾಗಬಹುದೆಂಬದ್ದು ತಿಳಿಯಲಸಾಧ್ಯವಾಗಿರುತ್ತೆ ಈ ಹುಳಗಳ ನಾಶವು ಕೆಲವು ಮಟ್ಟಿಗೆ ಕಾಗೆ ಮತ್ತು ಕುರುಳ ಪಕ್ಷಿಗಳಿಂದ ಆಗುತ್ತಿದೆ ಆದರೂ ಸಾಧ್ಯವಿಲ್ಲ ಆದ್ದರಿಂದ ದೇಶದಲ್ಲಿ ಯಾರಾದರೂ ಪುಣ್ಯಾತ್ಮರು ಈ ಹುಳನಾಶಕ್ಕೆ ಇರುವ ಔಷಧಿಯನ್ನು ಕಂಡು ಹಿಡಿದು ದೇಶಕ್ಕೆ ಪ್ರಚಾರಮಾಡಿದ್ದಲ್ಲಿ (ಕೃಷ್ಣನು ಗೋವುಗಳನ್ನು ಕಾಪಾಡಿದಂತೆ) ಅಂತಾ ಮನುಷ್ಯನನ್ನು ಕೃಷ್ಣನೆಂದೇ ಭಾವಿಸಬಹುದು ಅಂತವನಿಗೆ ದೇವರು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನೀಯಲೆಂದು ಭಗವಂತನನ್ನು ಬೇಡುತ್ತೇವೆ ಬೇಗನೆ ಈ ಹುಳ ನಾಶಕ್ಕೆ ತಕ್ಕ ಔಷಧಿಯು ಕಂಡು ಹಿಡಿಯದೆ ಹೋದರೆ ಕ್ರಮೇಣ ದೇಶವೆಲ್ಲಾ ಈ ಹುಳವು ಹರಡಿಕೊಳ್ಳಬಹುದಾಗಿ ಕಾಣುತ್ತೆ, (ಉಂಡೆ ಮುಳ್ಳಿ ಕತ್ತಿ ಪುಡಿಚಸಕ್ಕೆ) ಹುಳವು ಹಸರು ವರ್ಣವಾಗಿ ಸುಮಾರು ೧ ಇಂಚು ಉದ್ದವಾಗಿ ಕೊಡಿಕಡ್ಡಿಗಿಂತ ಸ್ವಲ್ಪ ದಪ್ಪವಾಗಿದೆ ಈ ಹುಳವು ಮತ್ತೆ ಬೆಳೆಬಿದ್ದರೆ ಅನ್ನಕ್ಕೇನೇ ಗತಿಯಿಲ್ಲದಂತೆ (ರಾಮಸ್ವಾಮಿ ರಾಕ್ಷಸರ ಕೊಂದನೆಕ್ಕೆ) ಆಗಬಹುದು ಎಂಬುದಕ್ಕೆ ಸಂಶಯವಿಲ್ಲ. ಇನ್ನು ಯೇನೇನು ಅನರ್ಥಗಳು ಆಗಬಹುದೋ ತಿಳಿಯಲಸದಳವಾಗಿರುತ್ತೆ. ಹುಳವು ಬಿದ್ದಲ್ಲಿ ಯೆಚ್ಚರದಿಂದ ಕೇಳಿದರೆ ಇಂಜಿನ್ ಶಬ್ದದಂತೆ ಕೇಳುತ್ತೆ.

ಅರಮಣ ಮಾಡ ಕಾರ್ಯಪ್ಪ.

ಮಡಿಕೇರಿಯಿಂದ ಹೊರಮಲೆನಾಡು, ಗಾಳಿಬೀಡ ಗ್ರಾಮಕ್ಕೆ ಹೋಗುವ ರಸ್ತೆಯು ಬಹಳ ಹೀನಸ್ಥಿತಿಯಲ್ಲಿರ್ವದರಿಂದ ಡಿಸ್ಟ್ರಿಕ್ಟ್ ಬೋರ್ಡಿನವರು ಮೂವತ್ತು ರೂಪಾಯಿ ಮಾತ್ರ ಅದನ್ನು ರಿಪೇರಿ ಬಗ್ಗೆ ಮಂಜೂರ್ಮಾಡಿದ್ದಾಗಿ ತಿಳಿಯುತ್ತೇನೆ ಆದರೆ ಈ ವರ್ಷದ ಹೇರಳವಾದ ಮಳೆಯ ದೆಶೆಯಿಂದ ಸೇತುವೆ ವಗೈರೆ ಹಾಳಾಗಿ ಅದನ್ನು ರಿಪೇರಿಮಾಡಿಸಲಿಕ್ಕೇನೇ ಮೇಲ್ಕಂಡ ಮೂವತ್ತು ರೂಪಾಯಿ ಸಾಲದ್ದರಿಂದ ಡಿಸ್ಟ್ರಿಕ್ಟ್ ಬೋರ್ಡಿನವರು ಈ ವಿಷಯದಲ್ಲಿ ಅತ್ಯಂತ ತೊಂದ್ರೆ ತೆಗೆದುಕೊಂಡು, ರಸ್ತೆಯನ್ನು ಖುದ್ದು ನೋಡಿ ನ್ಯಾಯವಾದ ಎಸ್ಟಿಮೇಟಿನಿಂದ ತಕ್ಕಷ್ಟು ಹಣವನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಮಂಜೂರ್ಮಾಡಿಸಿ ರಸ್ತೆಯನ್ನು ರಿಪೇರಿ ಮಾಡಿಸುವ ಪ್ರಯತ್ನ ತೆಗೆದುಕೊಳ್ಳುವರಾಗಿ ನಂಬುತ್ತೇನೆ ಹಾಗೆ ರಿಪೇರಿ ವಗೈರೆ ಮಾಡಿಸದೆ ಹೋದರೆ ಸದರಿ ಹೊರಮಲೆನಾಡಿನ ರೈತರು ಬಡವರಾದ್ದರಿಂದ ಅವರಿಂದ ವರ್ಷಂ ಪ್ರತಿ ಸೆಸ್ಸ್ ತೆಗೆದುಕೊಳ್ಳುವುದೇ ಅಧರ್ಮವೆಂತ ನನ್ನ ಮನಸ್ಸಿಗೆ ತೋರುವುದಲ್ಲದೆ ಆ ನಾಡಿನ ರೈತರು ಇದಕ್ಕಿಂತ ಗರೀಬರಾಗಿ ನ್ಯಾಯವಾದ ಸಮಾಚಾರಗಳೇನೊಂದೂ ತಿಳಿಯದೆ ಹಾಳಾಗಿ ಹೋಗುವುದು ಖಂಡಿತ ಎಂತ ನನ್ನ ಅಭಿಪ್ರಾಯವಾಗಿದೆ.

ಬಿದ್ದಂಡ ಕಾರ್ಯಪ್ಪ.

ಕಳೆದ ತಾರೀಖು ೨೩ ರಲ್ಲಿ ಕುದಿಕೇರಿ ಬಹದೂರ್ ಫಂಡಿನ ಒಂದು ಜನರಲ್ ಮೀಟಿಂಗ್ ನಡೆಯಿತು. ಸಾಧಾರಣ ೩೦ ಜನರವರೆಗೆ ಹಿಂದು ಮಹಮ್ಮದಿಯರು ಸೇರಿ ನೆರೆದಿದ್ದರು. ಮೆ|| ತೀತಿರ ಸುಬ್ಬೈಯ್ಯನವರ ಅಧ್ಯಕ್ಷತೆಯಲ್ಲಿ ಪಾಸಾದ ಠರಾವುಗಳು

ಒಂದನೇದು ಫಂಡನ್ನು ರಿಜಿಸ್ಟರ್ ಮಾಡಿಸಬೇಕೆಂದೂ ಇದು ಧರ್ಮದ ಫಂಡಾಗಿರುವುದರಿಂದ ಕ್ಲಿಪ್ತ ಬಡ್ಡಿ ಇಡಬೇಕೆಂದೂ ಅಯ್ಯಮಾಡ ಸುಬ್ಬೈಯ್ಯನವರು ತಂದ ಠರಾವು ಬಹುಮತದಿಂದ ಪಾಸಾಯಿತು.

ಕೊಡಗಿಗೆ ಇದೇ ಮೊದಲು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಸಾಹೇಬರ ಕೆಲಸ ದೊರಕಿದ್ದರಿಂದಲೂ ಮತ್ತು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಕೆಲಸ ಮೆ|| ಕೇಟೋಳಿರ ಚಂಗಪ್ಪನವರಿಗೆ ಕಾಯಂ ಆಗಿರುವುದರಿಂದ ನಾವು ನಮ್ಮ ಫಂಡಿನ ಪರವಾಗಿ ಅವರಿಗೆ ಒಂದು ಬಿನ್ನಪತ್ರ ಕಳುಹಿಸುವುದಲ್ಲದೆ ಅವರ ಹೆಸರಿನಲ್ಲು ಹಿಂದು ದೇವಸ್ಥಾನದಲ್ಲಿ ಒಂದು ರುದ್ರಾಭಿಷೇಕ ಮತ್ತು ಮಹಮ್ಮದೀಯರ ಮಸೀದಿಯಲ್ಲಿ ಒಂದು ಪೂಜೆ ಸಹ ಮಾಡಿಸಬೇಕೆಂದು ಅಧ್ಯಕ್ಷರು ತಂದ ಠರಾವಿಗೆ ಎಲ್ಲಾ ಜನರು ಒಪ್ಪಿ ಸಂತೋಷಪಟ್ಟರು

"A Visitor"

ವಿರಾಜಪೇಟೆ ಹಾಸ್ಟೆಲ್.

ವಿರಾಜಪೇಟೆ ಸ್ಕೂಲ್ ಹಾಸ್ಟೆಲ್ ೧೯೦೩ ರಲ್ಲಿ ಅಲ್ಲಿನ ಹೆಡ್ಮಾಸ್ಟರಾಗಿದ್ದ ಮಿ ಶ್ರೀನಿವಾಸರಾಯರಿಂದ ಕೊಡಗ, ಗವ್ರಡ ಮತ್ತು ...ರಿಗೆ ಜಾತಿಯ ವಿದ್ಯಾರ್ಥಿಗಳ ಕ್ಷೇಮ ಮತ್ತು ಅನುಕೂಲಕ್ಕಾಗಿ ಸ್ಥಾಪಿಸಲ್ಪಟ್ಟಿತೆಂಬದಾಗಿ ಹೇಳಲಬಹುದು. ಅವರ ಪತ್ರಕವು ೧೯೩೦ ರ ವರೆಗ ಹೆಡ ಮಾಸ್ಟರಿಂದ [illegible] ದಿಂದ ನೋಡಲ್ಪಡುತ್ತಿತ್ತು. ಈಗ ಹೆಡ್‍ಮಾಸ್ಟರಿಂದಲೇ ನಡಿಸಲ್ಪಡುತ್ತೆ.

ಕೊಡಗಿನಲ್ಲಿ ವಿರಾಜಪೇಟೆಯು ಪವಿತ್ರಸ್ಥಳ ಮತ್ತು ದೊಡ್ಡ ವ್ಯಾಪಾರ ನಡಿಯುವ ಸ್ಥಳವೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಅಲ್ಲದೆ ಕಳೆದ ವರ್ಷ V ಫಾರಂನ್ನೂ ಈ ವರ್ಷ VI ಫಾರಂನ್ನೂ ತರೆದಿರುವುದು. ಈ ಅನುಕೂಲತೆಗಳಿಂದ ಹೆಚ್ಚಿನ ವಿದ್ಯಾರ್ಥಿಗಳು ಅಲ್ಲೇ ವ್ಯಾಸಂಗಮಾಡುವನೋ ವ್ಯವಸ್ಥೆಯಾದ ಮಾಡು ಕಳೆದ ವರ್ಷದ ಆದಿಯಲ್ಲಿ ಅಲ್ಲಿ ೨೭೩ ವಿದ್ಯಾರ್ಥಿಗಳಿದ್ದರು. ಈ ವರ್ಷದ ಪ್ರಾರಂಭದಲ್ಲೇ ಸುಮಾರು ೩೩೦ ವಿದ್ಯಾರ್ಥಿಗಳು ವ್ಯಾಸಂಗ ಮಾಡುವರು. ಅದಂತಿರಲಿ ಹಾಸ್ಟೆಲಿನಲ್ಲಿ ಕಳೆದ ವರ್ಷ ಈ ತಿಂಗಳಲ್ಲಿ ೩೦ ವಿದ್ಯಾರ್ಥಿಗಳಿದ್ದರು ಈಗ ೪೮-೫೦ ರ ವರೆಗೆ ಇದ್ದಾರೆ. ಇನ್ನೂ ಸೇರುವವರನೇಕರಿರುವರು.

ಈಗಿರುವ ಓದುವ ಕೊಠಡಿಯನ್ನು (Study hall) ತೆಗೆದು ಮಲಗುವ ಕೋಣೆಯಾಗಿಯೂ ಸ್ಕೂಲ್ ಹಾಲನ್ನು ಓದುವ ಸಮಯದಲ್ಲಿ ಓದುವದಕ್ಕಾಗಿ ಏರ್ಪಡಿಸಿದರೆ ಇನ್ನು ೩೦-೪೦ ಜನ ವಿದ್ಯಾರ್ಥಿಗಳಿಗೆ ಅನುಕೂಲತೆಯನ್ನು ಒದಗಿಸಬಹುದು ಅಲ್ಲದೆ ಈಗ ಒಬ್ಬ ಕಾಲತ ಉಪಾಧ್ಯಾಯರಿಂದ ಮೇಲ್ವಿಚಾರಣೆಯು ನಡಿಯುತ್ತಿದೆ ಅವರೆ ಸಮಯವರಿತು ಕೆಲ್ಸಮಾಡಲು ಅನುಕೂಲವಿಲ್ಲದಿರುವದರಿಂದ ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ಭೋಜನ ವಿಚಾರವು ನಡಿಯುವುದಿಲ್ಲವೆಂದು, ಭೋಜನವು ಪರಿಷ್ಕಾರವಾಗಿ ನಡಿಯುವುದಿಲ್ಲವೆಂದು ತಿಳಿಯುತ್ತೇವೆ ಅಲ್ಲದೆ ಹಾಸ್ಟೆಲಿಗೆ ಬೇಕಾದ ಉಪಕರಣಗಳನ್ನು ತರಲು ಉಪಾಧ್ಯಾಯರಿಗೆ ಸಮಯವಿಲ್ಲದರಿಂದ ತಡವಾಗಿ ತರುವರು, ಇದರಿಂದ ತಿಂಗಳಿಗೆ ಸುಮಾರು ೪೦, ೫೦ ರೂಪಾಯಿ ನಷ್ಟವಿರುವುದು. ಈ ಕ್ರಮಗಳಿಂದ ವಿದ್ಯಾರ್ಥಿಗಳ ಆರೋಗ್ಯಕ್ಕೂ ಮುಂದಿನ ಅಭಿವೃದ್ಧಿಗೂ ಹಾನಿ ಬರುವ ಸಂದರ್ಭವಿದೆ.

ಆದುದರಿಂದ ವಿದ್ಯಾ ಇಲಾಖೆ ಅಧಿಕಾರಿಗಳು ಈ ವಿಚಾರವನ್ನು ತಮ್ಮ ಘನಚಿತ್ತಕ್ಕೆ ತಂದುಕೊಂಡು ಒಬ್ಬ ಖಾಯಂ ಮೇನೇಜರು ಯಾ ದಾರುಸಕ್ಕಾಗಾರರನ್ನು ನೇಮಿಸಿ ತಕ್ಕ ಕ್ರಮಗಳನ್ನು ಜರುಗಿಸಿ ವಿದ್ಯಾರ್ಥಿಗಳನ್ನು ಅವರ ಅನಾನುಕೂಲತೆಯನ್ನು ಮತ್ತು ವಿದ್ಯಾರ್ಥಿಗಳ ಒಡ ತಂದೆಗಳ ಚಿಂತೆಯನ್ನು ನೀಗಬೇಕಾಗಿ ಕೇಳಿಕೊಳ್ಳುವ,

ವಿದ್ಯಾರ್ಥಿಯ ಹಿತಚಿಂತಕ

ಆವಣ್ಣ,

ಕೊಡಗು ಪತ್ರಿಕೆಯ ತಾರೀಖು ೧೯ ರಲ್ಲಿ ಇರುವ ಮೀ|| ಕೋದಂಡ ಮಾದೈಯ್ಯನವರ ಕಾಗದಕ್ಕೆ ಜವಾಬು ಇವರು ಈಗ ದೇಶಕ್ಕೆ ಸಿಕ್ಕಿರುವ ಕಾಂಗ್ರೆಸ್ಸಿನಲ್ಲಿ ಪ್ರೆಸಿಡೆಂಟರಾಗಿಯಾಗಲಿ ಇಲ್ಲವೇ ಮೆಂಬರ್ ಆಗಿಯಾಗಲಿ ಕಾರ್ಯ ವಹಿಸಿಕೊಂಡು ಅನುಭವವಿದ್ದ ಹೊಸ ಮೆಂಬರುಗಳಿಗೆ ಕೆಲಸ ನಡಿಸುವ ರೀತಿ ಕಲಿಸಿರು ನೋಡಿದಲ್ಲಿ ಇವರು ಕೈಬಿಡದ ದೇಶಸೇವೆ ಈ [illegible] ಸಂಪೂರ್ಣವಾಗುತ್ತೆ ಇವರು ಬುದ್ಧಿವಂತರಾಗಿ ನೇಕದವರು ಬೇಡಿಕೊಳ್ಳುವೆನು.

ಕೊಳುವಂಡ ತಿಮ್ಮಯ್ಯ.

ದೇವರು ಕೊಟ್ಟರೂ ಪೂಜಾರಿ ಕೊಡ

ಅಯ್ಯೋ ಮಹನೀಯರೇ! ಬೋರ್ಡ್ ಹಾಯಿ ಉಪಾಧ್ಯಾಯರುಗಳ ಪರವಾಗಿ ಕೆಲವು ಉಪಾಧ್ಯಾಯರುಗಳು ಕೊಡಗು ಕಮಿಷನರ್ ಸಾಹೇಬರನ್ನು ಭೇಟಿ ಮಾಡಿದಾಗ, ಅವರು ಬಡ ಉಪಾಧ್ಯಾಯರುಗಳ ಕಷ್ಟವನ್ನು ನೀಗಿಸಲಿಕ್ಕಾಗಿ ಅವರ ವೇತನಗಳನ್ನು [illegible] ಮಾಡುವಂತೆ ವಾಗ್ದಾನ ಮಾಡಿದ ರೀತಿ [illegible] ನಮ್ಮ ಹಾಳಾದ [illegible] ಉಪಾಧ್ಯಾಯರುಗಳ [illegible] ಕಮಿಷನರವರಿಗೆ [illegible] ಅವರುಗಳ ಸಂಕಟವನ್ನು [illegible] ಮಾಡಿದಂತೆ ಕೆಲವು [illegible] ಮುಂಚೂಣಿಯಲ್ಲಿದ್ದಾಗಿ [illegible] ಇದು ಡಿ|| ಬೋರ್ಡಿನಲ್ಲಿ [illegible]

ಡಿ|| ಇನ್ಸ್‍ಪೆಕ್ಟರವರು ಇವರಿಗೆ ಸರಿಯಾದ ಸ್ಕೇಲ್ ಸಹ ತಯಾರಿಸಿ, ಮಂಜೂರಾತಿ ಬಗ್ಗೆ ಕಳುಹಿಸಿ ಕೊಟ್ಟಿದ್ದಾಗಿ ಸಹ ನನಗೆ ಸಂತರ ಅನೇಕ ದಿವಸಗಳಾದಾಗ್ಯೂ ಯಾವದೊಂದು ತೀರ್ಮಾನವಾದಂತೆ ಕಂಡು ಬರುವುದಿಲ್ಲ. ಈಗ ನೋಡ ಮುಂದಾಳುಗಳಾಗಿರುವ ಮಹನೀಯರು ಈ ಕಾಲ ಉಪಾಧ್ಯಾಯರುಗಳಿಂದಲೇ ತಂದೇತಾಗಿ ದೇಶ ಭಕ್ತಿ [illegible] ತವಿಸಿಕೊಳ್ಳುತ್ತಾ [illegible] ಸಂಭಾವನೆಯು ಹೆಚ್ಚು ಪ್ರಯತ್ನ ತೆಗೆದುಕೊಂಡು ತಮ್ಮ ಅಭಿವೃದ್ಧಿಗೆ ಕಾರಣರಾದ ಬಡ ಉಪಾಧ್ಯಾಯರುಗಳ ಸಂಕಟವನ್ನು ಪರಿಹರಿಸಿ. ಅವರಿಗೆ [illegible] ವನ್ನು ಕೊಡುವುದು ವಿಹಿತವಲ್ಲವೇ? ನೀವಿನ ಮುಂದಾಳುಗಳಾದವರು ದೇಶದ ಉನ್ನತಿಯು ತಮ್ಮ ದೇಶಕ್ಕೇ ಬರಬೇಕೆಂದು ಹೊಡೆದಾಡುವುದು ತಾಯಿಯ ಸಂತೋಷವಾದ ಕೆಲಸವು ಈಗ ಕೊಡಗು ದೇಶದಲ್ಲಿ ಉಪಾಧ್ಯಾಯರ ಬೈಕ [illegible] ೧೦ ರಂತೆ ಕೊಡಗರೇ ಉಪಾಧ್ಯಾಯರಾಗಿದ್ದಾರೆ ಇಂಥಾದ್ದರಲ್ಲಿ ನಮ್ಮ ದೇಶದವರಿಗೆ ಆದಷ್ಟು ಉತ್ತೇಜನವನ್ನು ಕೊಡುವುದು ಯೋಗ್ಯವಲ್ಲವೇ? ಅಲ್ಲದೆ ಹ, [illegible] ಕಮಿಷನರ್ ಸಾಹೇಬರವರು ತಾವು ಮಾಡಿದ ವಾಗ್ದಾನವನ್ನು ಭಂಗವಿಲ್ಲದೆ ನಡಿಸಿಕೊಡುವರು. ಪ್ರಯತ್ನ ಪಡುವರೆಂತಲೂ ಮತ್ತು ಈ ಸಂಬಂಧವಾಗಿರುವ ಹಣವನ್ನು [illegible] ಸ್ಕೀಂನಂತೆ ಕೊಡಲೇ ಮಂಜೂರು ಮಾಡಿಸಿ ಕೊಡುವಂತೆ ಪ್ರಯತ್ನಿಸುವರು ಎಂದು ನಂಬಿದ್ದೇನೆ. ತೋರುತ್ತ ಯಾ [illegible] ಈ ರೀತಿ ನಡಿಸದೆ ಹೋದಲ್ಲಿ ಪ್ರೈಮರಿ ವಿದ್ಯಾಭ್ಯಾಸಕ್ಕೆ ಮೂಲಕಾರಣರಾದ ಉಪಾಧ್ಯಾಯರುಗಳು ನಿರುತ್ಸಾಹಿಗಳಾಗಿ, ಕಾಲಕ್ರಮೇಣ ಪ್ರೈಮರಿ ವಿದ್ಯಾಭ್ಯಾಸವು ಕೊಡಗಿನಲ್ಲಿ ಹಿಂದೆ ಬೀಳುವುದು [illegible] ಈಗ ಕೊಡಗಿನ ಪ್ರೈಮರಿ ವಿದ್ಯಾಭ್ಯಾಸವು [illegible] ಉತ್ತಮ [illegible] ಸರ್ಕಾರದ [illegible] ಗತಿಯೇನಗದೆ ಇವರಿಗೆ ಭಾಗಿಗಳಾದ ಉಪಾಧ್ಯಾಯರುಗಳಿಗೆ ತಕ್ಕ ಪ್ರೋತ್ಸಾಹವನ್ನು ಕೊಡುವುದು ದೇಶದ ಮುಂದಾಳುಗಳ ಮತ್ತು ದೊಡ್ಡವರ ಕರ್ತವ್ಯವಾಗಿದೆ. ಕೊಡಗು ಡಿ. ಬೋರ್ಡ್ ಪ್ರೆಸಿಡೆಂಟರಾದ ಮಿ|| [illegible] ರ್ ಧೋರಣೆಗಳವರು ಈ ದಿಸೆಯಲ್ಲಿ ಅತ್ಯಂತ [illegible] ಗನ್ನು ಬಿಡುವುದಾಗಿ ಪಡೆದರೆ ಈ ಮೊದಲ [illegible] ರ್ಹರುಗಳಿಗೆ ಮೂಲ ಕಾರಣರಾದ ಇವರು [illegible] ಮೊದಲೇ ಬಡ ಉಪಾಧ್ಯಾಯರುಗಳ ಮನಸ್ಸು ಸಂತೋಷಪಡಿಸಿ, ಅವರ ಪ್ರೀತಿಗೆ ಪಾತ್ರರಾಗುವರೆಂತ [illegible] ರುತ್ತೇನೆ ಇದಕ್ಕೆ ಕೊಡಗು ದೇಶದ [illegible] ಮುಂದಾಳುಗಳೂ [illegible] ಈ ಪ್ರೈಮರಿ ವಿದ್ಯಾಭ್ಯಾಸವನ್ನು ಇನ್ನೂ ಉನ್ನತಸ್ಥಿತಿಗೆ ತರುವರೆಂದು ನಂಬಿದ್ದೇನೆ.

ವಿದ್ಯಾಭಿಮಾನಿ,
(ಮಾಚಿಗೌಡ್ರ ಮುಂಗೋಲ್)

ಆವಣ್ಣ,

[illegible]

ಟು ಜರು ಜಾರು ಸ್ನೇಹಿ ಶಕ್ತಿಗಳಂತು ಕಷ್ಟ ಪೂರ್ವಸುಲಸವ ಬರಾವು ಕಲಿಯುವದೇ ಹಣ ಸುರುವಾಯಿತು ಪುಸ್ತಕ ೧-೨ ಹಾಳೆ ಕಲಿಯುವವರೆಗೂ ಗಿ ಭೋಧಕರು ಅನೇಕ ಪುಸ್ತಕಕ್ಕೆ ಇರುವ ಮತ್ತು ಹವಾರು ಮಾಡಿಕೊಂಡಿರಬೇಕು. ಹೀಗಾಗಿ ಒಂದೆರಡು ವರ್ಷ ಕಳೆಯಿತು, ಸುರುವಾಯಿತು ಏನು "ಎಗ್ಸಿಸ್" ಎಂದು ಅದರಲ್ಲಿ ಎಂಟರ ಹಾಳೆ [illegible] "ಕಾಮ್ಪೋಸಿಂಗ್" ಮುಂದು [illegible] ಹಾಳೆ ಹಾಳೆಗೆ ಬರುತ್ತ [illegible] ಪದ್ಯಗಳನ್ನು ಗೀಚಿ [illegible] ಗಾದೆ [illegible] ಹಚ್ಚಿಕೊಂಡಿದ್ದ [illegible] ಹೋಲ್ ಹೋಲ್ ಹಾಡುಗಳೇ ಧನ್ಯರು. ಇನ್ನೇನು ಪೊಲಿಟಿಕಲ್, ಡ್ರಾಯಿಂಗ್, ಮ್ಯಾಪ್‍ಡ್ರಾಯಿಂಗ್ ಬುಕ್ಕು, ಕಂಪೋಸಿಷನ್, ಕಲರ್ ಬಾಕ್ಸ್, ಯೋನೇನು ಇದೆ [illegible] ಕಡಿಮೆಯಾಯ್ತು ಹಾಲು ಇದ [illegible] ಬೇಕಾದ್ದನ್ನು ಮೊದಲು ತಿಳಿ [illegible] ಸರಿಯಾದ ಮನಸ್ಸು [illegible] ಪ್ರೈಮರಿ [illegible] ಮುಂದೆಂದು [illegible] ಏನು ಕಲಿತರು? [illegible]

[illegible]

ಈಗ [illegible] ಪ್ರೈಮರಿ ತರಗತಿಗಳಿಗೆ ಮಕ್ಕಳಿಗೆ ಕಲಿಸುವ ಪುಸ್ತಕದ ಕೆಟ್ಟರ್ [illegible] ಭಾಗ ೧ ೨ನೇ ಭಾಗ ಮೂರು ಕರಡಿ, ಅರ್ಥವೇ ದಿ. [illegible]

[illegible]

ವಿ. ಬಿ. [illegible]

ನೋಟೀಸ್.

ಕೊಡಗು ಜಮಾಸಹಕಾರಸಂಘದ ಕಮಿಟಿ ಮೀಟಿಂಗ್ ತಾ|| 15—11—1923 ನೇ ದಿನ ಸಾಯಂಕಾಲ 5 ಗಂಟೆಗೆ ಮುನ್ಸಿಪಲ್ ಆಫೀಸಿನಲ್ಲು ನಡಿಯುತ್ತೆ

ವಿಷಯಗಳು.—

1. ಮೈಸರಾಯರ ಡೆಪ್ಯೂಟೇಶನ್ನಿಗೆ ಮೆ|| ಯಂ ಊಂ ತಿದ್ದಿಕ್ಕೆ ಸಾಟಲು ಹೋಗ ವುದಿಲ್ಲವಾದ್ದರಿಂದ ಏನುಮಾಡ ಬೇಕೆಂಬ ವಿಷಯ—

ಜಮಾಸಹಕಾರಸಂಘ, ಸಿ ಎಚ್ ವೆಂಕಪ್ಪಯ್ಯ,
ಮಡಿಕೇರಿ ತಾ|| 3-11-23. ಜನರಲ್ ಸೆಕ್ರೆಟರಿ

ನೋಟೀಸು.

ಸೆಂಟ್ರಲ್ ಬ್ಯಾಂಕು ಡೈರೆಕ್ಟರುಗಳ ಮೀಟಿಂಗ್ ತಾರೀಖು 15—11—23 ನೇ ದಿನ ಸಾಯಂಕಾಲ 4-30 ಗಂಟೆಗೆ ಮುನ್ಸಿಪಲ್ ಆಫೀಸಿನಲ್ಲು ನಡಿಯುತ್ತೆ

ವಿಷಯಗಳು —

(1) ಸಾಲಗಳ ಅರ್ಜಿ.
(2) ಸೆಕ್ರೆಟರಿಯ ರಿಪೋರ್ಟು
(3) ಲೆಖ್ಖ.

ಸೆಂಟ್ರಲ್ ಸಹಕಾರಿ ಬ್ಯಾಂಕ್ ಸಿ ಎಚ್ ವೆಂಕಪ್ಪಯ್ಯ,
ಲಿಮಿಟೆಡ್, ಗೌರವ ಸೆಕ್ರೆಟರಿ.
ಮಡಿಕೇರಿ, ತಾ|| 3-11-23

Coorg Forest Department,

South Division.

Mercara, the 28th October 1923.

NOTICE.

It is notified for general information that there will be *no sale* of Coorg Forest Department timber at Hunsur on 12th November 1923

K G BELLIAPPA,
Divisional Forest Officer, South Coorg

The Saraswathi Publishing Company.

ಶಾರದಾಗ್ರಂಥಮಾಲಾ.

ಈ ಗ್ರಂಥಮಾಲೆಯಲ್ಲಿ ಭಾರತಮಹಿಳೆಯರ ಇಹಪರ ವಿಷಯಗಳನ್ನು ಬೋಧಿಸತಕ್ಕ ಗ್ರಂಥಗಳು ಆಗಾಗ್ಗೆ ಪ್ರಕಟಿಸಲ್ಪಡುವವು ಇದುವರೆವಿಗೆ ಪ್ರಕಟವಾಗಿರುವ ಗ್ರಂಥಗಳು —

		ರೂ	ಆ	ಪೈ
1	ಪ್ರಿಯಂವದೆ (ವರದಕ್ಷಿಣೆಯಿಂದಾಗುವ ಕಷ್ಟ ನಷ್ಟಗಳು)	0	6	0
2.	ಸ್ನೇಹಲತೆ (ವಂಗಕನ್ಯೆಯ ಚರಿತ್ರೆ)	0	10	0
3	ಸೌಭಾಗ್ಯವತಿ (ಹಿಂದೂವಿಧವೆಯರ ಶೋಚನೀಯಾವಸ್ಥೆ)	0	12	0
4	ನಿರ್ಮಲೆ (ಸಾಮಾಜಿಕ ಸುಧಾರಣೆಯ ನಾಟಕ)	0	8	0
5.	ಹಿಂದೂಭಾಗ್ಯೋದಯ (ನಾಟಕ)	0	4	0
6	ಕೂರ್ಜನಮಾಭಂಗ (ನಾಟಕ)	0	4	0
7	ಹುಡುಗರು ಹುಡುಗಿಯರು (ನಾಟಕ)	0	4	0

ಈ ಎಲ್ಲಾ ಕಾದಂಬರಿಗಳನ್ನೂ ಒಟ್ಟಾಗಿ ತರಿಸಿಕೊಳ್ಳುವವರಿಗೆ ಒಟ್ಟು ರೂಪಾಯಿ 2—12—0 ಗೆ ವಿ ಪಿ ಹಾಸಲು ಇಲ್ಲದೆ ಕೊಡಲ್ಪಡುವುದು. ಪ್ರಿಂಟಿನಲ್ಲಿರತಕ್ಕ ಗ್ರಂಥಗಳು—ಬಲಿಕೆ ಕೋಗಿ ಪದ್ಮಿನಿ

ಸರಸ್ವತಿ.

ಉತ್ತಮವರ್ಗದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ

ನಾಲ್ಕನೆಯ ಸಂಪುಟದ ಪ್ರಥಮ ಸಂಚಿಕೆಯು ಈ ತಿಂಗಳ ಮೊದಲನೇ ತಾರೀಖಿನಿಂದ ಪ್ರಾರಂಭವಾಗಿರುವುದು ಇದರಲ್ಲಿ ಬಾಲಕ ಬಾಲಿಕೆಯರಿಗೂ ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಸ್ವಾರಸ್ಯವಾದ ನಾಟಕ ಕಾದಂಬರಿಗಳೂ ಮತ್ತು ಅನೇಕ ಉತ್ತಮ ಲೇಖನಗಳೂ ಪ್ರಕಟಿಸಲ್ಪಡುವವು ಹೊಸದಾಗಿ ಚಂದಾದಾರರಾಗತಕ್ಕವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸಿದರೆ ಶಾರದಾ ಗ್ರಂಥಮಾಲೆಯ ಪ್ರಕಟನೆಯಲ್ಲಿ ಒಂದು ಪುಸ್ತಕವು ಬಹುಮಾನವಾಗಿ ಕೊಡಲ್ಪಡುವುದು ಇಷ್ಟಪಟ್ಟವರಿಗೆ ಮಾದರಿ ಸಂಚಿಕೆಯು ಉಚಿತವಾಗಿ ಕಳುಹಿಸಲ್ಪಡುವುದು

ವಾರ್ಷಿಕ ಚಂದಾ ರೂಪಾಯಿ 3—0—0 ಮಾತ್ರ.

SARASWATHI PUBLISHING Co.
Post Box No 57. Bangalore City

ಕೊಡಗು ವಿದ್ಯಾಭಿವೃದ್ಧಿ ಸಂಘ.

ಕೊಡಗು ವಿದ್ಯಾಭಿವೃದ್ಧಿ ಸಂಘಕ್ಕೆ ಚಂದಾ ವಸೂಲಿ ಮಾಡತಕ್ಕ ಬಗ್ಗೆ ಇಬ್ಬರು ಏಜೆಂಟರುಗಳು ಬೇಕಾಗಿದೆ ವಸೂಲಿ ಮಾಡಿದ ಹಣದಕ್ಕೆ ಶೇಕಡ 25 ರೂ ಯಂತೆ ಕಮೀಷನ್ ಕೊಡಲಾಗುವುದು ಅಪ್ಲಿಕೇಶನ್ ಸಂಘದ ಪ್ರೆಸಿಡೆಂಟರಿಗೆ ತಾ|| 30-11-23 ರೊಳಗೆ ಕಳುಹಿಸತಕ್ಕದ್ದು ಮಂಜೂರಾಗುವ ದರಖಾಸ್ತುದಾರರು 100 ರೂ. ಗೆ ಜಾಮೀನು ಚಾವಿನಾಸು ಕೊಡಬೇಕಾಗಿದೆ 2-2

M. Bheemaiya, Sd/ K Chengappa,
Hon. Secretary *President*

ಪ್ರಸಿದ್ಧ ಪತ್ರಿಕೆ.

For Sale ! ಮಾರಾಟಕ್ಕೆ !!

ಈ ಮೂಲಕ ಮಹನೀಯರಿಗೆ ತಿಳಿಯಪಡಿಸುವುದೇನೆಂದರೆ—ಗೋಣಿಕೊಪ್ಪಲಿನಿಂದ ಪೊನ್ನಂಪೇಟೆಕ್ಕೆ ಹೋಗುವ ಪಬ್ಲಿಕ್ ರಸ್ತೆ ಬಾಜು ಎಡಭಾಗ ಗೋಣಿಕೊಪ್ಪಲು ಸೇತುವೆ ಬಳಿ ಇರತಕ್ಕ ಈ ಕೆಳಗೆ ವಿವರಿಸಿರುವ ನನ್ನ ಸ್ವಯಾರ್ಜಿತದ ಸ್ಥಿರ ಆಸ್ತಿಗಳನ್ನು ಬಹು ಕಮ್ಮಿ ಕ್ರಯ 4,500 ರೂಪಾಯಿಗಳಿಗೆ ವಿಕ್ರಯಿಸಲು ಇಷ್ಟಪಟ್ಟಿರುವ ನಿಮಿತ್ತ, ಖಾಯಿಸ್‌ದಾರರು ಸದ್ರಿ ಸೊತ್ತುಗಳನ್ನು ಯಾವ ಕಾಲದಲ್ಲಿಯಾದರೂ ಅಜಮಾಯಿಸಿಕೆಯಿಂದ ಹೆಚ್ಚಿನ ಸಂಗತಿ ತಿಳಿಯಬೇಕಾದಲ್ಲು ಕೆಳಗಿನ ವಿಳಾಸಕ್ಕೆ ಬರೆದು ಕೊಳ್ಳತಕ್ಕದ್ದು

(1) 300 ಭಟ್ಟಿ ಸಾಗುಭೂಮಿ, ಸರಾಸರಿ ಉತ್ಪತ್ತಿ 150 ಭಟ್ಟಿ ಭತ್ತ

(2) ಸುಮಾರು 500 ಗಿಡಗಳಿರುವ ಕಿತ್ತಳೆತೋಟ ಸರಾಸರಿ ಉತ್ಪತ್ತಿ 100 ರಿಂದ 150 ರೂಪಾಯಿಗಳ ವರಿವಿಗೆ

(3) ಮಂಗಳೂರು ಹಂಚು ಹಾಕಿದ 5 ಅಂಕಣದ ಒಂದು ಮಹಡಿ ಮನೆ ಸರಾಸರಿ ಬಾಡಿಗೆ 100 ರೂಪಾಯಿಗಳು

M K ABDUL KARIM
3 2 Genl Merchant, Gonicopal

Old Student's Association Magazine.

CENTRAL HIGH SCHOOL, MERCARA

Editor. Yearly subscription
Mr B S Kushalappa B A, Re 1—0—0

Will be published under the distinguished patronage of C. A Souter Esq, I C S Commissioner of Coorg, and K Chengappa Esq, F. S—in the first week of November

Among other articles the following are the few:

"Fore word" by C A Souter Esq I C S
"Vinayak Chaturthi" by Mr. D M Siddlingiah
"The cramming school" by Mr B S Kushalappa
"A Town Hall for Coorg" by Mr P I Belliappa, Editor "Kodagu
"Coorg Inscriptions" by Mr B N Krishnamurthy
"The Village School Master" by Mr A Kalamma
"The Huthri Song" by Mr P Mangesh Rao, B A, L T,
"The Will of God" by Mr Anantha Rao, B A., B L,

etc etc etc

Best Medium for Advertisers
Apply for rates etc, to

The Manager,
Old Students' Association Magazine
4-2 **C H School, Mercara**

ಕಂಬಳಿಯ ಟೋಪಿಗಳು.



ಇವುಗಳನ್ನು ಸಾಚಾ ಉಲ್ಲನ್ನಿಂದ ತಯಾರಿಸಿದೆ ಚಳಿ, ಮಳೆ ಹಿಮಕಾಲಗಳಲ್ಲಿ ಉಪಯೋಗಿಸುತ್ತಿದ್ದರೆ ವ್ಯಾಧಿಗಳು ಸೇರುವದಿಲ್ಲ ಬೇರೆಯವರು ಉಲ್ಲನ್ ಎಂದು ಹೇಳಿ ಸೂಲಿನದನ್ನು ಕಳುಹಿಸುವರು ನಾವು ಹಾಗೆ ಮೋಸಮಾಡಲಾರೆವು. ಸಾಚಾ ಉಲ್ಲನ್ ಟೋಪಿಗಳನ್ನೇ ಕಳುಹಿಸುವೆವು ಕ್ರಯ 1 ಕ್ಕೆ 1—8—0.

ಕ್ಷೌರ ಕತ್ತಿ.



ಇದನ್ನು ಇಟ್ಟುಕೊಂಡು ಕ್ಷೌರಿಕನ ಕೈಯಲ್ಲಿ ಕೊಟ್ಟು ಕೆಲಸವನ್ನು ಮಾಡಿಕೊಂಡಲ್ಲಿ ಇತರ ಶರೀರ ಸಂಬಂಧವಾದ ವ್ಯಾಧಿಗಳು ಬಾರದಂತೆ ಉರಿಯೂ ಇಲ್ಲದಂತೆ ಸುಖವಾಗಿರುವುದು ಕ್ರಯ ಕತ್ತಿ 1 ಕ್ಕೆ ರೂ 1-12-0

ಸಿರಿತವಾಡಿರಿ —
ನೇಪಿಯರ್ ವಾಚ್ ಕಂಪನಿ,
ಪೋಸ್ಟು ಬಾಕ್ಸ್ ನಂ 505
[4—3] ಪಿ ಡಿ ಮದ್ರಾಸು.

HEALTH IS WEALTH.

WANTED all to improve health strength and vitality and thus save our nation from physical degeneracy. Send half anna stamp and get 13 specimen photographs with full particulars from

Director Physical Culture,

P O Basavanagudi,
BANGALORE CITY

ಆರೋಗ್ಯ ಚಂದ್ರಿಕೆ.

ಮಾಸಪತ್ರಿಕೆ.

ಸಂಪಾದಕರು ಡಾಕ್ಟರ್ ಯು. ರಾಮರಾವ್,
ಎಮ್ ಎಲ್. ಸಿ ಯವರು.

ಆರೋಗ್ಯಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರಯುವುದಕ್ಕಾಗಿ ಏರ್ಪಡಿಸಿದ

ಒಂದು ಸಚಿತ್ರ ಮಾಸಪತ್ರಿಕೆ

ಈ ನವ್ಯ ಮೊದಲನೇ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಜನಾಭಿಪ್ರಾಯಗಳು—1 ಸ್ವವಿಷಯ, 2 ಆರೋಗ್ಯವೇ ಭಾಗ್ಯ, 3 ಮಲೇರಿಯಾ ಎಂಬ ಮೊರೆಜ್ವರಗಳ ನಿವಾರಣೆ, 4 ನಡುಕೋಳಿಸುವ ಜ್ವರ, 5 ಗರ್ಭಿಣಿಯರ ಆರೋಗ್ಯ, 6. ಎಳಮಕ್ಕಳಿಗೆ ಆಹಾರಕೊಡುವುದು, 7. ಕೂಸುಗಳಿಗೆ ಬರುವ ಸೆಳವು, ಅದರ ಲಕ್ಷಣಗಳು ಮತ್ತು ಚಿಕಿತ್ಸೆ 8 ಕೂಸು ಅಳುವುದೇಕೆ ? 9 ಕಣ್ಣುಗಳಿಗ ವಿಶ್ರಾಂತಿ, 10 ಹಲ್ಲುಗಳು, 11. ಕೂದಲಿನ ಪೋಷಣೆ 12 ಸಾರಾಯಿವೆಂದರೇನು ? 13 ನೊಣಗಳಿಂದಾಗುವ ಅಪಾಯಗಳು 14 ಕಾಫಿ

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ 1—8—0 ಬಿಡುಪತ್ರಿಕೆ ಒಂದಕ್ಕೆ 0-2-0

ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯಚಂದ್ರಿಕೆ' ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು.

ಪತ್ರವ್ಯವಹಾರ ವಿಳಾಸ— ಮೇನೇಜರ್,
ಹೆಲ್ತ್ ಅಥವಾ ಆರೋಗ್ಯ ಚಂದ್ರಿಕೆ ಆಫೀಸು,
ಟಪ್ಪಾಲು ಪೆಟ್ಟಿಗೆ ನಂ 166 323 ತಂಬುಚೆಟ್ಟಿ ಬೀದಿ ಮದರಾಸ್
ಏಜೆಂಟರು —ಮ ರಾ ರಾ ಎಸ್ ಕೆ. ಈಶ್ವರಪ್ಪ,
[13—11] ಭಾಗಮಂಡ್ಲ, ಕೊಡಗು

For your requirements of high grade Arms, Ammunition, Wine and Spirits,

APPLY TO –

Mc. DOWELL & Co., Ltd.,

24—3 **MERCARA.**

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,820
ಜಮಾ ಬಂದ ಠೇವಣಾತಿ	30,849

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘನೆಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಖ್ಖ ಅಜಮಾಯಿಷಿ ಮಾಡುತ್ತಾರೆ

ಪ್ರೆಸಿಡೆಂಟರು ಟ್ರೆಜರ್
ಕೊಡಂದೆರ ಕುಟ್ಟಯ್ಯನವರು, ಯಂ, ಭುಜಂಗರಾಯರ
ರಾಯ್ ಬಹದ್ದೂರ್ ಬಿ. ಎ, ಬಿ ಎಲ್
ಸೆಕ್ರೆಟರಿ
ಸಿ ಯಚ್. ವೆಂಕಪ್ಪಯ್ಯನವರು ಬಿ ಎ ಬಿ ಎಲ್
ತಾರೀಖು 1—9—23

Printed & Published by D S Krishnaswamienga Proprietor, at Sreenivas Electric Press, Mysore for Kodagu' Ltd. Mercara—9 11 1923

If not delivered please return to
"Kodagu Office, Mercara"
Regd. No. M. 1550.

ಕೊಡಗು.

ಚಂದಾ ವರ್ಷ ೩-೮-೦ ರೂ.

ಸತ್ಯೇನ ಧೂತದಯಯಾ ವಿದ್ಯಾನೀತಿ ಪ್ರಯತ್ನತಃ । ಐಕಮತ್ಯೇನದೇಶಾನಾಂ ಸುಸ್ಥಿರಾ ರಾಜ್ಯಸಂಪದ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

"ಎಡಿಟರ್ ಕಂಡ್ಯಂಡ ಐ. ಬೆಳ್ಯಪ್ಪ"

ಸಂಪುಟ ೩] ಕೊಡಗು, ಸನ್ ೧೯೩೩ ನೇ ಇಸವಿ ನವಂಬರು ತಾರೀಖು ೧೭ ನೆಯ ಶುಕ್ರವಾರ. [ಸಂಚಿಕೆ ೨೫

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ ಮತ್ತು ಕನ್ನಡಾ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ದಂತೆ ಜಾಗ್ರತೆಯಾಗಿಯೂ ಸುಲಭಬೆಲೆಗೂ ಮಾಡಿ ಕೊಡುತ್ತೇವೆ

Srinivas Electric Press,
MYSORE

ಜೀವವಿಮೆ

ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಯ ಯಜಮಾನನು ಮೃತಪಟ್ಟರೆ ಉಂಟಾಗತಕ್ಕಂಥ ತೊಂದರೆಗಳನ್ನು ನಿವಾರಿಸುವುದೇ ಜೀವವಿಮೆ

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ

ಪತಿ ಸ್ವರಾಷ್ಟ್ರದಲ್ಲಿ ಯಾವ ಲೋನ್ ಬಾರದ ಹೊಂಕ ಕ್ಷೇತ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪೆನಿ

ಬಡಾಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲವಾಗಿ ಹಣವನ್ನು ಒದಗಿಸಿ ಸ್ಥಿರಾಸ್ತಿಗಳನ್ನು ಕೊಂಡುಕೊಟ್ಟು ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

ಸ್ತ್ರೀಪುರುಷರೀರ್ವರೂ ಜೀವವಿಮೆಯ ಸೌಕರ್ಯಗಳನ್ನು ಪಡೆಯಲು ಅನುಕೂಲವನ್ನು ಒದಗಿಸುವ ಸಂಸ್ಥೆಯಾದರೂ ಇದೊಂದೆ

ಒಂದು ದೇಶದ ಹಣವು ಮತ್ತೊಂದು ದೇಶದಲ್ಲಿ ವ್ಯಯವಾಗದಂತೆ ನೋಡಿಕೊಂಡು ನಿಮ್ಮ ದೇಶದ ಧನಸಂಪತ್ತನ್ನು ವೃದ್ಧಿಗೊಳಿಸುವ ಸಹಕಾರಸಂಘ ಬೇಂಕ ಮುನಿಸಿಪಾಲಿಟಿ ಮುಂತಾದ ಸಾರ್ವಜನಿಕ ಸಂಸ್ಥೆಗಳಿಗೆ ಸಾಲವಾಗಿ ಕೊಡುವ ಅನುಕೂಲತೆಯುಳ್ಳ ಕಂಪೆನಿ ಇದೊಂದೆ

ಹೆಚ್ಚಿನ ಮಾಹಿತಿಯನ್ನು ಕನ್ನಡ ನಾಡಿನ ಛೀಫ ಏಜಂಟ್‌ರಾದ ಈ ಕೆಳಗಿನ ವಿಳಾಸದಾರರಿಂದ ಪಡೆಯಬಹುದಾಗಿದೆ

ಬಿ. ಎಸ್. ಆರಾಧ್ಯ,
ಲೈಫ್ ಅಂಡ್ ಮ್ಯಾರೇಜ್ ಆಫೀಸ್ ಮಡಿಕೇರಿ.

ಕಿರ್ಲೋಸ್ಕರ ನೇಗಲುಗಳನ್ನೇ ಒಕ್ಕಲಿಗರು ಹೊಗಳುತ್ತಾರೆ.

ಯಾಕೆಂದರೆ— ಇವು ಒಕ್ಕಲಿಗನಿಗೆ ತಗಲುವ ವೆಚ್ಚ, ದುಡ್ಡು, ಕಷ್ಟಗಳನ್ನು ಹೋಗಲಾಡಿಸುತ್ತವೆ. ಬಿಡಿಭಾಗಗಳು ಬೇಡಿದಾಗ ದೊರೆಯುತ್ತವೆ

ನಮ್ಮಲ್ಲಿ—ಘೂಮಿಕಸ್ತ ನೇಗಲುಗಳೂ, ಕಬ್ಬಿನ ಗಾಣಗಳೂ, ಮೇವು ಕೊರೆಯುವ ಯಂತ್ರ, ರಾಟೆಗಳೂ ಇತ್ಯಾದಿ ತಯಾರಾಗುತ್ತವೆ

'ಕೋ' ಎಂಬ ಕ್ಯಾಟಲಾಗು ತರಿಸಿಕೊಳ್ಳಿ

ಕಿರ್ಲೋಸ್ಕರ ಬಂಧು ಲಿಮಿಟೆಡ್,
[16—5] ಕಿರ್ಲೋಸ್ಕರವಾಡಿ, (ಸಾತಾರಾ).

When you think of going to Bombay
THINK OF

THE WELCOME HOTEL.

Girgaum Back Road, BOMBAY.

Most airy accomodation - Most Central situation—Excellent Meals
Every Convenience

ವೆಲ್ಕಂ ಹೋಟೇಲ್.

ಗಿರ್‌ಗಾಂವು ಬ್ಯಾಕ್‌ರೋಡ್, ಬೊಂಬಾಯಿ

ರೈಲಿನಿಂದಿಳಿದೊಡನೆಯೇ ಅಲ್ಲಿ ಇಳಿಯುದು ಸುಲಭ, ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಯೋಗ್ಯವಾದ ಕೋಣೆಗಳು ಬೇಕಾದಿದ್ದರೆ ಬೊಂಬಾಯಿಪಟ್ಟಣದ ಮಧ್ಯಸ್ಥಳದಲ್ಲಿರುವ ವೆಲ್ಕಂ ಹೋಟೇಲಿನಲ್ಲಿಳಿಯಲು ಮರೆಯಬೇಡಿರಿ ಯೋಗ್ಯವಾದ ಊಟ, ಗಾಳಿಗನುಕೂಲವಾದ ಕೋಣೆ 15 ಮಿನಿಟಿಗೊಮ್ಮೆ ತಿರುಗುವ ಟ್ರಾಮಿನ ಸೌಕರ್ಯ ಅಂತೂ ಪ್ರಯಾಣಿಕರಿಗೆ ಉಳಿದುಕೊಳ್ಳಲು ಅನುಕೂಲವಾದ ಉಡುಪಿ ಬ್ರಾಹ್ಮಣರ ಭೋಜನಾಲಯ

ಹೆಚ್. ಶ್ರೀನಿವಾಸರಾವ್,
[12—1] ಮೇನೇಜರ್

Cut this out. This will guide you while in BOMBAY.

SHREE KRISHNA LODGE.

BOARDING & LODGING HOUSE.

SANDHURST ROAD, BOMBAY.

[12-2] **Comfortable timeA ssured.**

ಹಾರೆ.

ಸಾಹಿತ್ಯ ಬೇಕಿದ್ದು ಸ್ಪೆನ್ಸರ್‌ಕ್ಕೆ ಬನ್ನಿ.

SPENCER & Co. Ltd, Mercara and Pollibetta, Coorg [24—4]

“ ಕೊಡಗು ”

೧೯೨೩ ನೇ ಇಸವಿ ನವಂಬರ್ ತಾ|| ೧೬ ನೇ ಶುಕ್ರವಾರ

ಕೌನ್ಸಿಲ್ ಚುನಾವಣೆ ರೂಲ್ಸ್.

ಇದು ಈಗ ಗಜೆಟಿನಲ್ಲಿ ಪ್ರಕಟವಾಗಿದೆ. ಆದರೆ ನಮಗೆ ಗಜೆಟ್ ಕೊಡುವ ಪದ್ಧತಿಯನ್ನು ಇನ್ನೂ ಸರಕಾರದವರು ಅನುಸರಿಸಿಲ್ಲವಾದ್ದರಿಂದ ಬೇರೆಯವರಿಗೆ ಬಂದ ಗಜೆಟ್ ನೋಡಿ ನಮ್ಮ ಅಭಿಪ್ರಾಯ ಬರೆಯಬೇಕಾಗಿದೆ ನಾವೇ ತರಿಸಿಕೊಳ್ಳಬಹುದು. ಆದರೆ ದೇಶದಲ್ಲಿರುವ ಈ ಒಂದು ಪತ್ರಿಕೆಯ ಮೂಲಕ ದೇಶಕ್ಕೆ ತಿಳಿಸಬೇಕಾದ ಸಂಗತಿಗಳನ್ನು ಈ ಪತ್ರಿಕೆಗೆ ಸರಕಾರದವರು ಒದಗಿಸಿ ಕೊಡಬೇಕಾದದ್ದು ಸರಕಾರದ ಕರ್ತವ್ಯವಾಗಿದೆಯೆಂತ ನಾವು ನಂಬುತ್ತೇವೆ ಈ ಚೀಚಿಗೆ ಸರಕಾರದವರು ಕೆಲವು ವಿಷಯಗಳನ್ನು ಕಳುಹಿಸುತ್ತಿದ್ದಾರೆ. ಇದೀಗ ಸರಿಯಾದ ಕ್ರಮ

ಓಟರುಗಳ ಪಟ್ಟಿಗಳನ್ನು ಓಟುಗಳ ಪಟ್ಟಿಗಾಗಿ ಆರಿಸಲ್ಪಟ್ಟಿರುವ ನಾಲ್ಕು ತಾಲೋಕುಗಳ ಮುಖ್ಯಪಟ್ಟಣವಾದ ಮಡಿಕೇರಿ, ಸೋಮವಾರಪೇಟೆ ವೀರರಾಜಪೇಟೆ ಮತ್ತು ಪೊನ್ನಂಪೇಟೆಯಲ್ಲಿ ಸಹ ಇದೇ ನವಂಬರ್ 15 ರ ವರೆಗೆ ಪ್ರಕಟಮಾಡಲಾಗುತ್ತೆಂತಲೂ ತಕರಾರು ಹೇಳಬೇಕಾದವರು ಛರ್ನೈಂಗ್ ಆಫೀಸರಾದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ 25 ನೇ ತಾರೀಕಿನವಳಗೆ ಹೇಳಿಕೊಳ್ಳಬೇಕೆಂತಲೂ 2 ನೇ ತಾರೀಕಿನೊಳಗೆ ಒಂದು ದಿನದಲ್ಲಿ ತಕರಾರುಗಳ ಮೇಲೆ ವಿಚಾರವಾಡಲು ಮುಖರೂರು ಮಾಡಬೇಕೆಂತಲೂ ತಕರಾರು ಫೈಸಲ್ ಮಾಡಿ ತಿದ್ದಿದ ಪಟ್ಟಿಯನ್ನು ರಿಟರ್ನಿಂಗ್ ಆಫೀಸರಿಗೆ ಡಿಸೆಂಬರ್ 5 ನೇ ತಾರೀಕಿನೊಳಗೆ ಕಳುಹಿಸಬೇಕೆಂತಲೂ ಹಾಗೆ ತಿದ್ದಿ ತಮ್ಮ ಕೈಗೆ ಬಂದ ಪಟ್ಟಿಯನ್ನು ರಿಟರ್ನಿಂಗ್ ಆಫೀಸರು ಡಿಸೆಂಬರ್ 15 ನೇ ತಾರೀಕಿನೊಳಗೆ ಪ್ರಕಟಿಸಬೇಕೆಂತಲೂ, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರೇ ರಿವೈಸಿಂಗ್ ಆಫೀಸರೆಂತಲೂ ಸುಬೇದಾರರುಗಳೇ ರಿಟರ್ನಿಂಗ ಆಫೀಸರುಗಳೆಂತಲೂ ಗಜೆಟನಲ್ಲಿ ಪ್ರಕಟವಾಗಿದೆ. ತಕರಾರನ್ನು ಕೇಳಲಿಕ್ಕೆ ಇರುವವರು ಹೇಗೆ ಹೇಳಬೇಕೆಂಬದನ್ನು ರೂಲಿನಲ್ಲಾಗಲೀ ಶೆಡ್ಯೂಲಿನಲ್ಲಾಗಲೀ ನಮೂದಿಸಿರುವದಿಲ್ಲ. ರಿಟರ್ನಿಂಗ್ ಆಫೀಸರು ಕೂಡಲೇ ಎಲ್ಲರಿಗೂ ತಿಳಿಯುವಂತೆ ಓಟರುಗಳ ಪಟ್ಟಿ ಸಂಗಡಲೇ ಈ ಕ್ರಮವನ್ನೂ ಪ್ರಕಟಿಸುತ್ತಾರೆ

ಓಟರು ಪಟ್ಟಿಗೆ ತಕರಾರು ಹೇಳುವದೆಂದರೆ ಓಟ್ ಮಾಡಲು ಹಕ್ಕಿರುವಂಥಾವನ ಹೆಸರು ಬಿಟ್ಟು ಹೋಗಿದ್ದರೆ ತನ್ನ ಹೆಸರು ಸೇರಿಸಿಕೊಳ್ಳಬೇಕೆಂತಲೂ ಹಕ್ಕಿಲ್ಲದೆ ಇದ್ದರೂ ಸೇರಿದ್ದರೆ ವಜಾ ಮಾಡಬೇಕೆಂತಲೂ, ಅಥವಾ ಬೇರೆಯವರ ಹೆಸರು ಸೇರಲಿಕ್ಕೆ ಹಕ್ಕಿಲ್ಲದಿದ್ದರೂ ಸೇರಿದೆ ಅದನ್ನು ವಜಾ ಮಾಡಬೇಕೆಂತಲೂ ಹೇಳಿಕೊಳ್ಳುವದು ಓಟರುಗಳ ಪಟ್ಟಿಯು ಪ್ರಿಂಟಾಗಿ ಎಲ್ಲರಿಗೂ ನೋಡಲಿಕ್ಕೆ ಸಿಕ್ಕದೆ ಇರುವದರಿಂದ ತಕರಾರು ಉಂಟೋ ಇಲ್ಲವೋ ಎಂತ ಜನರಿಗೆ ತಿಳಿಯುವದೇ ಕಷ್ಟ. ಈಗ ತಿದ್ದಲಿಕ್ಕಿರುವ ಪಟ್ಟಿ ಪ್ರಿಂಟಾಗಿ ಪ್ರಕಟವಾಗದಿದ್ದರೂ ತಿದ್ದಿದ ಆಖೈರ್ ಪಟ್ಟಿಯಾದರೂ ಪ್ರಿಂಟ್ ಆಗಬೇಕಾದದ್ದು ಅತಿ ಅವಶ್ಯ

ಓಟ್ ಕೊಡುವ ಸೆಂಟರು (ಸ್ಥಳ) ಗಳು ನಿರ್ಣಯವಾಗಿವೆ ಅದರ ಪಟ್ಟಿಯು ಪ್ರಕಟಣೆ ಬಗ್ಗೆ ಬಂದದ್ದನ್ನು ಇನ್ನೊಂದು ಕಡೆ ಪ್ರಕಟಿಸಿದ್ದೇವೆ. ಆಯಾ ಸೆಂಟರಿಗೆ ಅದಕ್ಕೆ ಸಂಬಂಧಪಟ್ಟ ಗ್ರಾಮದಲ್ಲಿರುವ ಓಟರುಗಳು ಓಟ್ ಕೊಡಲು ಹಾಜರಾಗಬೇಕು ನಾವು ಮೊದಲು ಬರೆದಿದ್ದಂತೆ ಓಟ್ ಕೊಡುವ ಸ್ಥಳಗಳನ್ನು ಓಟರುಗಳಿಗೆ ಅನುಕೂಲವಿರುವಂತೆಯೇ ಮಾಡಿಕೊಟ್ಟಿದ್ದಾರೆಂತ ಹೇಳಬಹುದು ಸ್ವಲ್ಪ ತೊಂದರೆಗಳು ಇನ್ನೂ ಅಲ್ಲಲ್ಲಿ ಇರಬಹುದಾದರೂ ಅದನ್ನು ಇನ್ನೊಂದು ಚುನಾವಣೆಯಿಗೆ ಸುಧಾರಿಸಿಕೊಳ್ಳಲು ಓಟರುಗಳು ಒಪ್ಪಬಹುದೆಂತ ನಂಬುತ್ತೇವೆ.

ಒಟ್ಟು ದೇಶದಲ್ಲಿ 26 ಓಟ್ ಕೊಡುವ ಸ್ಥಳಗಳಿರುವದರಿಂದ ಓಟ್ ಕೊಡುವ ಸ್ಥಳದಲ್ಲಿರಬೇಕಾದ ಪ್ರಿಸೈಡಿಂಗ್ ಆಫೀಸರುಗಳೂ ಮತ್ತು ಪೋಲ್ಲಿಂಗ್ ಆಫೀಸರುಗಳು ಎಂತ ತುಂಬಾ ಆಫೀಸರುಗಳು ಬೇಕಾಗುತ್ತೆ. ಪಾರುಪತ್ತೆಗಾರರೂ ಸುಬೇದಾರರೂ ಸಹ ಪ್ರಿಸೈಡಿಂಗ್ ಆಫೀಸರುಗಳು ಆದರೂ ಇನ್ನೂ ತುಂಬಾ ಆಫೀಸರುಗಳು ಬೇಕಾಗುತ್ತೆ. ಪೋಲೀಸ್ ಇಲಾಖೆಯವರನ್ನು ನೇಮಿಸುವದು ರಿಟರ್ನಿಂಗ್ ಆಫೀಸರಿಗೆ ಸುಲಭ ತೋರಬಹುದು ಖಾನೂನಿನಲ್ಲಿ ವಿರೋಧವಿಲ್ಲದಿದ್ದರೆ ಆಗಬಹುದು. ಈ ಆಫೀಸರುಗಳನ್ನೆಲ್ಲಾ ನೇಮಕ ಮಾಡುವ ಹಕ್ಕು ರಿಟರ್ನಿಂಗ್ ಆಫೀಸರಿಗೆ ಇರುವದು. ಇವರು ಈ ಕೆಲಸಕ್ಕೆ ಯುಕ್ತರಾದವರನ್ನೇ ನೇಮಿಸಿಯಾರೆಂತ ನಮಗೆ ಭರವಸೆ ಇದೆ

ಜಮ್ಮದವರ ಓಟ್ ತೆಗೆದುಕೊಳ್ಳುವ ಆಫೀಸರು, ಜಮ್ಮೇತರರ ಓಟ್ ತೆಗೆದುಕೊಳ್ಳುವ ಆಫೀಸರು ಬೇರೆ ಬೇರೆ ಇರಬೇಕೆಂತ ನಮ್ಮ ಅಭಿಪ್ರಾಯ. ಇಲ್ಲವಾದರೆ ತುಂಬಾ ಗಲಿಬಿಲಿಯಾಗಬಹುದು. ಸಮಯ ದೊರೆಯುವದೂ ಕಷ್ಟವಾಗಬಹುದು. ಬೇರೆ ಆಫೀಸರುಗಳನ್ನು ನೇಮಿಸುವದು ಸಾಧ್ಯವಿಲ್ಲದಿದ್ದರೂ ಓಟ್ ತೆಗೆದುಕೊಳ್ಳುವ ಆಫೀಸರು ಬಹಳ ಜಾಗರೂಕರಾಗಿರಬೇಕು. ಸಮಾಧಾನಿಗಳಾಗಿರಬೇಕು, ಇಲ್ಲವಾದರೆ ಜಮ್ಮದ ಓಟು ಜಮ್ಮೇತರ ಪಟ್ಟಿಗೆಗೂ ಜಮ್ಮೇತರ ಓಟು ಜಮ್ಮದ ಪಟ್ಟಿಗೆಗೂ ಬೀಳಬಹುದು

ಮೆಂಬರುಗಳಾಗುವವರು ಅರ್ಜಿ ಕೊಡಬೇಕಾದ ಕ್ರಮವೂ ರೂಲಿನಲ್ಲಿ ಇದೆ ಫಲಾನಾ ಉಮೇದ್ವಾರನು ಮೆಂಬರಾಗಬೇಕೆಂತ ತಾನು ಅಭಿಪ್ರಾಯಪಡುತ್ತೇನೆಂತ ಒಬ್ಬ ಓಟರು ತಾನು ಒಪ್ಪುತ್ತೇನೆಂತ ಇನ್ನೊಬ್ಬ ಓಟರು ಒರೆದು ಸೈನ್ ಹಾಕಬೇಕು ತಾನು ಮೆಂಬರಾಗಲು ಒಪ್ಪುತ್ತೇನೆಂತ ಉಮೇದ್ವಾರನೂ ಸೈನ್ ಹಾಕಬೇಕು. ಹೀಗೆ ಒಪ್ಪುವವರ ಓಟರುಗಳ ಪಟ್ಟಿ ನಂಬರನ್ನೂ ನಮೂದಿಸಬೇಕು. ಇಂಥಾ ನೋಮಿನೇಶನ್ ಪತ್ರದ ಸಂಗಡ ತನ್ನ ಇಲೆಕ್ಷನ್ ಏಜೆಂಟರು ಫಲಾನಾ ಮನುಷ್ಯರೆಂತ ನಮೂದಿಸುವ ಒಂದು ಪತ್ರವನ್ನು ಕೊಡಬೇಕು ಈ ನೋಮಿನೇಶನ್ ಪತ್ರವನ್ನು ಕ್ರಮವಾಗಿದೆಯೋ ಎಂತ ಬಹಳ ಸೂಕ್ಷ್ಮ ವಿಚಾರಮಾಡುತ್ತಾರೆ. ಈ ಪತ್ರ ಕೊಡುವ 250 ರೂ. ಡಿಪಾಜಿಟ್ಟನ್ನು ಕೊಡಬೇಕು ಇದರ ವಿಷಯ ಮೊದಲೇ ಬರೆದಿದ್ದೇವೆ

ಇಲೆಕ್ಷನ್ ಏಜೆಂಟಾಗುವವರು ಕೌನ್ಸಿಲ್ ಮೆಂಬರಾಗಲು ಅರ್ಹನಾಗಿರಬೇಕು ಒಂದಾವರ್ತಿ ನೇಮಕವಾದ ಏಜೆಂಟನ್ನು ವಜಾ ಮಾಡಬೇಕಾದರೆ ಬರವಣಿಗೆ ಮೂಲಕವೇ ಆಗಬೇಕು. ಅಂಥಾ ಸಂಗತಿಯನ್ನು ರಿಟರ್ನಿಂಗ್ ಆಫೀಸರಿಗೆ ತಿಳಿಸಬೇಕು.

ಇಲೆಕ್ಷನ್ ಸಂಬಂಧವಾಗಿ ಈ ಕೆಳಗಿನ ಕೃತ್ಯಗಳು ಖಾನೂನಿಗೆ ವಿರೋಧವಾದವುಗಳು—(1) ಓಟ್ ಕೊಡಲಿಕ್ಕಾಗಿಯಾಗಲೀ, ಉಮೇದ್ವಾರನಾಗಿ ನಿಲ್ಲದಂತೆ ಮಾಡಲಿಕ್ಕಾಗಿಯಾಗಲೀ ಹಣ ಅಥವಾ ಬೇರೆ ಪ್ರತಿಫಲ ಕೊಡುವದು ಅಥವಾ ಕೊಡುತ್ತೇನೆಂತ ಮಾತು ಕೊಡುವದು (2) ಓಟ್ ಕೊಡುವ ಸ್ವತಂತ್ರವನ್ನು ತಪ್ಪಿಸಲಿಕ್ಕಾಗಿ ಯಾವ ವಿಧದ ಜುಲುಂ ಆದರೂ ನಡಿಸುವದು ಓಟರಿಗೆ ಬೆದರಿಕೆ ಉಂಟುಮಾಡುವದೂ, ಮತ್ತು ದೇವತಾ ಕೋಪಕ್ಕೆ ಗುರಿಯಾಗುತ್ತಿ ಎಂತ ಹೆದರಿಸುವದು ಸಹ ಜುಲುಂಗೆ ಸೇರಿದ್ದೇ (3) ಒಬ್ಬ ಮನುಷ್ಯನೆಂತ ಇನ್ನೊಬ್ಬ ನಟಿಸುವದು (4) ಒಬ್ಬ ಉಮೇದ್ವಾರನಾಗಲೀ ಅವನ ಏಜೆಂಟನಾಗಲೀ (ಉಮೇದ್ವಾರನ ಒಪ್ಪಿಗೆಯಿಂದ) ಇನ್ನೊಬ್ಬ ಉಮೇದ್ವಾರನ ನಡತೆ ವಿಷಯವಾಗಲೀ, ನಡವಳಿ ವಿಷಯವಾಗಲೀ, ಅಥವಾ ಉಮೇದ್ವಾರಿಕೆ ವಿಷಯವಾಗಿಯಾಗಲೀ, ಉಮೇದ್ವಾರಿಕೆಯಿಂದ ಹಿಂತೆಗೆದ ವಿಷಯವಾಗಲೀ ಅಂಥಾ ಉಮೇದ್ವಾರ ಚುನಾವಣೆಗೆ ಭಂಗ ಬರುವಂತೆ ಸುಳ್ಳನ್ನಾಗಲೀ, ಸತ್ಯವೆಂದು ನಂಬದ ವಿಷಯವನ್ನಾಗಲೀ ಆಡುವದು (5) 21 ನೇ ರೂಲ್ ಮೇರೆ ಇಂಡಿಯಾ ಸರಕಾರದವರು ನಿರ್ಣಯಿಸುವ ಖರ್ಚಲ್ಲದೆ ಬೇರೆ ಖರ್ಚು ಮಾಡುವದು ಉಮೇದ್ವಾರನಾಗಲೀ ಅವನ ಏಜೆಂಟನಾಗಲೀ ಚುನಾವಣೆ ಬಗ್ಗೆ ಮಂಜೂರಾದ ಖರ್ಚಲ್ಲದೆ ಬೇರೆ ಖರ್ಚು ಮಾಡುವದು ಉಮೇದ್ವಾರರಲ್ಲದವರು ಅಥವ ಅವರ ಏಜೆಂಟರಲ್ಲದವರು ಮೇಲೆ ಬರೆದ ಯಾವದನ್ನಾದರು ಮಾಡಿದರೂ ತಪ್ಪೇ ಆಗುತ್ತೆ ಲಂಚ ತೆಗೆದುಕೊಳ್ಳುವವರೂ ತಪ್ಪುದಾರರೇ ಆಗುತ್ತಾರೆ. ಓಟರುಗಳು ಓಟ್ ಕೊಡುವ ಸ್ಥಳಕ್ಕೆ ಹೋಗಲಿಕ್ಕೆ ಬರಲಿಕ್ಕಾಗಿ ಗಾಡಿ ಮುಂತಾದ್ದಕ್ಕೆ ಬಾಡಿಗೆ ಕೊಡುವದು. ಓಟರಿಗೆ ಕೊಟ್ಟರೆ ಮಾತ್ರ ತಪ್ಪಲ್ಲ ಇಂಥಾ ಬಾಡಿಗೆಯನ್ನು ಓಟರುಗಳ ಉಪಯೋಗಕ್ಕಾಗಿ ಯಾರಿಗೆ ಕೊಟ್ಟರೂ ತಪ್ಪೇ ಆಗುತ್ತೆ. ಉಮೇದ್ವಾರರಿಗಾಗಿ ಬೇರೆ ಯಾರದರೂ ಯಾವದಾದರೂ ವಿಧದ ಖರ್ಚು ಅಂದರೆ ಮೀಟಿಂಗಿಗಾಗಿಯಾಗಲೀ, ಪ್ರಕಟಣೆಗಾಗಿಯಾಗಲೀ ಖರ್ಚು ಮಾಡುವದು ತಪ್ಪು ನಿಷಾ ಪದಾರ್ಥ ಇರುವ ಸ್ಥಳದ ಬಳಿ ಓಟರುಗಳ ಮೀಟಿಂಗ್ ಮಾಡಲಿಕ್ಕೆ ಬಿಡುವದು ತಪ್ಪೇ, ಇಲೆಕ್ಷನ್ ಬಗ್ಗೆ ಪ್ರಕಟವಾಗುವ ಯಾವ ವಿಧದ ಹಸ್ತಪತ್ರಿಕೆ ಮುಂತಾದ ಪ್ರಿಂಟಾದ ಪತ್ರಗಳಲ್ಲಿ ಪ್ರಿಂಟರ ಹೆಸರಿಲ್ಲದೆ ಇರುವದು ತಪ್ಪೇ

ಈರೀತಿ ಬಹಳ ಕಠಿಣ ರೂಲ್‌ಗಳಿವೆ ಈ ವಿಷಯದಲ್ಲಿ ಉಮೇದ್ವಾರರಾಗುವವರೂ, ಅವರಿಗಾಗಿ ಕೆಲಸ ಮಾಡುವವರೂ ಬಹಳ ಎಚ್ಚರವಾಗಿರಬೇಕು.. ಈ ರೂಲ್‌ಗಳಿಗನುಗುಣವಾಗಿ ಎಲ್ಲಾ ಉಮೇದ್ವಾರರೂ ಅವರ ಕಡೆಯವರೂ ಕೆಲಸ ಮಾಡಿದರೆ ಲಂಚ ಮುಂತಾದ ಕೆಟ್ಟ ಅಭ್ಯಾಸಗಳು ನಮ್ಮ ದೇಶದಲ್ಲಿ ತಲೆದೋರಲಾರವು. ಓಟರುಗಳು ಸಹ ದೇಶದ ಹಿತವನ್ನೇ ಬಯಸಿ ಸ್ವಂತಕ್ಕೆ ಏನೂ ಪ್ರಯೋಜನ ಎಣಿಸದೆ ಕೆಲಸ ಮಾಡಬೇಕು. ಈ ಮೇಲ್ಕಂಡ ತಪ್ಪುಗಳಿಗೆ ಗುರಿಯಾಗಿದ್ದಾನೆಂತ ರುಜುವಾತಾದರೆ ಅಂಥಾ ಈ ಚುನಾವಣೆಯಲ್ಲಿ ಉಮೇದ್ವಾರನು ಮೆಂಬರಾಗಕೂಡದು ಮಾತ್ರವಲ್ಲ ಮುಂದೆ ಐದು ವರ್ಷದವರೆಗೆ ಮೆಂಬರಾಗಕೂಡದು. ಎಂತ ಹುಕ್ಕುಂ ಸಹ ಆಗಬಹುದು. ಚೀಫ್ ಕಮಿಷನರ್ ಸಾಹೇಬರಿಗೆ ಯುಕ್ತ ತೋರಿದರೆ ಇಂಥಾ ಹುಕ್ಕುಮನ್ನು ರದ್ದು ಪಡಿಸಬಹುದು ಇಂಥಾ ಅಪಾಯಕರವಾದ ರೂಲ್‌ಗಳನ್ನು ಕನ್ನಡದಲ್ಲಿ ದೇಶದ ಎಲ್ಲರಿಗೂ ತಿಳಿಯುವಂತೆ ಪ್ರಕಟಿಸುವದು ಸರಕಾರದ ಕರ್ತವ್ಯವಾಗಿದೆಯೆಂತ ನಾವು ಒತ್ತಿ ಹೇಳುತ್ತೇವೆ

ಪಾರ್ಲಿಮೆಂಟ್ ಮೀಟಿಂಗ್.

(ಸ್ವಂತ ಬಾತ್ಮೀದಾರರಿಂದ).

ಇಂಗ್ಲಿಷ್ ಪಾರ್ಲಿಮೆಂಟಿನ ರೀತಿಯಲ್ಲಿ ತಾರೀಖು 7-9-23 ರಲ್ಲಿ ಮಡಿಕೇರಿ ಸ್ಕೂಲ್ ಹಾಲಿನಲ್ಲಿ ಒಂದು ಸಭೆ ನಡೆಯಿತು. ಕಮಿಷನರ್ ಸಾಹೇಬರು ಪಾರ್ಲಿಮೆಂಟಿನ “ಸ್ಪೀಕರ್” ಆಗಿದ್ದರು, “ಸ್ಪೀಕರ್” ಅಧ್ಯಕ್ಷರಾಗಿ ಸಭೆಯಲ್ಲಿ ಕ್ರಮವಾಗಿ ಸಭಿಕರು ನಡೆಕೊಳ್ಳುವಂತೆ ನೋಡಿಕೊಳ್ಳುವ ಕೆಲಸವೇ ಹೊರತು ಸಭೆಯ ಚರ್ಚೆಯಲ್ಲಿ ಭಾಗಿಗಳಾಗಬಾರದು ಮಂತ್ರಿಗಳು ಮತ್ತು ಮಂತ್ರಿಗಳಿಗೆ ವತ್ತಾಸೆಕೊಡುವ ಮೆಂಬರುಗಳೂ ಸಭೆಯ ಒಂದು ಭಾಗದಲ್ಲಿ ಕುಳಿತುಕೊಂಡರು ಇನ್ನೊಂದು ಭಾಗದಲ್ಲಿ [illegible] ಪಕ್ಷದವರು ಕೂತುಕೊಂಡರು ಪ್ರೇ[illegible] ಪ್ರೇಕ್ಷಕರು ಕೂತಿದ್ದರು ಸಾರ್ಜೆಂಟ್ [illegible] [illegible] ಸಭೆ [illegible] “ಕಟ್ಟಿಗೆ” ಯನ್ನು [illegible] ಬಂದಾಗ ಸ್ಪೀಕರ್ ಹಿಂದಿನಿಂದ ಬಂದರು ಎಲ್ಲರೂ ಎದ್ದು ನಿಂತು ಸಭೆಯ ಪಾದ್ರಿಯು ಪ್ರಾರ್ಥನೆಯನ್ನು ಮಾಡಿದ ನಂತರ ಎಲ್ಲರೂ ಕೂತುಕೊಂಡರು.

ಮಂತ್ರಿಗಳನ್ನ ಕೇಳುವ ಸವಾಲುಗಳನ್ನು ಕೆಲವು ಮೆಂಬರುಗಳು ಮುಂದಾಗಿಯೇ ಕಳುಹಿಸಿಕೊಟ್ಟಿದ್ದರು ಆಯಾ ಮೆಂಬರುಗಳ ಹೆಸರೆತ್ತಿ ಸ್ಪೀಕರ್ ಕರೆದು ಹೇಳಿದಂತೆಯೇ ಸವಾಲುಗಳು ಕೇಳಲಾದವು. ಮಂತ್ರಿಗಳಾಗಿ ಮೆ ಅಣ್ಣಾರಾಡ್ರ ಕಾರ್ಯಪ್ಪನವರೂ, ಮೆ|| ಕೊರವಂಡ ಮುತ್ತಣ್ಣನವರೂ ಮೆ|| ಇಡೆಮಾಡ ಬೆಳ್ಯಪ್ಪನವರೂ, ಮತ್ತು ಮೆ|| ಮೊಗೇರರಾಯರೂ ಸರಿ ತಕ್ಕ ತಕ್ಕ ಜವಾಬುಗಳನ್ನು ಕೊಟ್ಟರು ಒಬ್ಬ ಕೇಳಿ ಸವಾಲಿಗೆ ಜವಾಬು ಸಿಕ್ಕಿದನಂತರ ಸವಾಲಿಗೆ ಸಂಬಂಧಪಡುವ ಹೆಚ್ಚಿಗೆ ಸವಾಲುಗಳನ್ನೂ ಕೇಳಿದರು ಅವುಗಳಲ್ಲಿ ಕೆಲವನ್ನು ಜವಾಬಿನಿಂದ [illegible] ಸವಾಲಿಗೆ ಎಡ ಸಿಕ್ಕಲಿಲ್ಲವಾದ್ದರಿಂದ ಬಿಡುವದಿಲ್ಲವಾಗಿ ಸ್ಪೀಕರ್ ಹೇಳಿದರು. ಸವಾಲ್ ಕೇಳಿದವರಲ್ಲಿ ಇಬ್ಬರ [illegible] ರಾಗಿದರು.

“ದೇಡನಂತರ ಇಂಡಿಯಾದೇಶಕ್ಕೂ ಬ್ರಿಟಿಷ್ ಸಾಮ್ರಾಜ್ಯದ ಇತರ ಭಾಗಗಳಿಗೂ ಒಗ್ಗಟ್ಟು ಬೆಳೆಯಲಿಕ್ಕಾಗಿಯೂ, ಇಂಡಿಯಾದೇಶದ ರಾಷ್ಟ್ರೀಯತ್ವದ ಮತ್ತು ತಿಳುವಳಿಕೆಯ ಅಭಿವೃದ್ಧಿಗಾಗಿಯೂ ಇಂಡಿಯಾದೇಶದಲ್ಲಿ ಇಂಗ್ಲಿಷ್ ಭಾಷೆಯನ್ನು ವತ್ತಾಯದ 2 ನೇ ಭಾಷೆಯಾಗಿ ಮಾಡಬೇಕು” ಎಂಬ ಠರಾವನ್ನು ಮಂತ್ರಿಗಳ ಪರವಾಗಿ ಮೆಂಬರಾದ ಮೆ|| ಬಿದ್ದಂಡ ಕುಶಾಲಪ್ಪನವರು ಸಭೆಯ ಮುಂದೆ ತಂದರು. ಇವರ ಭಾಷಣದ ಸಾರವನ್ನು ಇನ್ನೊಂದು ಕಡೆ ಕೊಟ್ಟಿದೆ ಮೆ|| ಆರ್. ಯನ್ ಸಂಜೀವರಾಯರು ಒತ್ತಾಸೆಕೊಟ್ಟು ಭಾಷಣಮಾಡಿದರು ಮೆ|| ಕುಶಾಲಪ್ಪನವರ ಭಾಷಣವು ಸ್ವಲ್ಪ ಉದ್ದವಾದರೂ ಬಹಳ ಸ್ವಾರಸ್ಯವಾಗಿತ್ತು ಎದುರುಪಕ್ಷದ ಪರವಾಗಿ ಮೆ|| ಸಿ. ಯನ್ ವೆಂಕಪ್ಪಯ್ಯನವರೂ ಮತ್ತು ಮೆ|| ಹರಿಶಯ್ಯನವರೂ ವಿರೋಧಿಸಿದರು. ಇವರ ಭಾಷಣಗಳ ಸಾರಾಂಶ ಇನ್ನೊಂದು ಕಡೆ ಕೊಟ್ಟಿದೆ ಇನ್ನೊಬ್ಬ ವಿದ್ಯಾರ್ಥಿಯೂ ವಿರೋಧಿಸಿದನಂತರ ಓಟ ಲೆಕ್ಕ ತೆಗೆದುಕೊಳ್ಳುವ ಟೆಲ್ಲರ್ ಎಂಬ ಆಫೀಸರುಗಳಿಗೆ ಓಟ್ ತೆಗೆಯಲಿಕ್ಕೆ ಸ್ಪೀಕರ್ ಹುಕ್ಕುಂ ಮಾಡಿದರು. ಠರಾವಿಗೆ ಒತ್ತಾಸೆ ಕೊಡುವವರು ಸಭೆಯಿಂದ ಬಲಭಾಗದ ಬಾಗಲಿಗಾಗಿಯೂ ವಿರೋಧಿಸುವವರು ಎಡಭಾಗದ ಬಾಗಲಿನಿಂದಲೂ ಹೋಗಬೇಕೆಂತ ಸ್ಪೀಕರ್ ಹೇಳಿದರು. ಹಾಗೆ ಹೊರಗೆ ಹೋಗುವಾಗ ಟೆಲ್ಲರ್‌ಗಳು ಮೆಂಬರುಗಳ ಎಣಿಕೆ ತೆಗೆದುಕೊಂಡರು ಆನಂತರ ಪುನಃ ಮೆಂಬರುಗಳೆಲ್ಲಾ ಸಭೆ ಕೂಡಿದನಂತರ ಠರಾವಿಗೆ 20 ಓಟುಗಳೂ, ವಿರೋಧವಾಗಿ 30 ಓಟುಗಳೂ ಎಣಿಸಲ್ಪಟ್ಟಿವೆಯೆಂತಲೂ, ಆದ್ದರಿಂದ ಠರಾವು ಮಂಜೂರಾಗಲಿಲ್ಲವೆಂತ ಸ್ಪೀಕರ್ ತಿಳಿಸಿದರು. ಮೆ|| ಕುಶಾಲಪ್ಪನವರು ಮಾತಾಡುವಾಗ ಎದುರು ಪಕ್ಷದಿಂದ ಒಬ್ಬ ಮೆಂಬರು “ನಾಚಿಕೆ” “ಇಲ್ಲ” ಎಂತ ಮುಂತಾಗಿ ಆಗಿಂದಾಗ್ಯೆ ಕೂಗಿಕೊಂಡು ಗಲಾಟೆಮಾಡಿದ್ದರಿಂದ ಸಾರ್ಜೆಂಟಿಗೆ ಸ್ಪೀಕರ್ ಹುಕ್ಕುಂ ಮಾಡಿದಮೇರೆ ಆ ಮೆಂಬರನ್ನು ಸಭೆಯಿಂದ ಹೊರಕ್ಕೆ ನೂಕಿಬಿಟ್ಟರು. ಹೀಗೆ ಮಾಡುವದೆಂತ ಮೊದಲೇ ಏರ್ಪಾಡಾಗಿತ್ತು.

ಪಾರ್ಲಿಮೆಂಟಿನ ರೀತಿಗಳನ್ನು ಕಲವುಮಟ್ಟಿಗೆ ಅಭಿನಯಿಸಿ ತೋರಿಸಿದರು. ಮೆಂಬರು ಇಂಗ್ಲೀಷು ಪಾರ್ಲಿಮೆಂಟ್ ಮೆಂಬರುಗಳಾಗಿದ್ದು ಮಾತಾಡುತ್ತಿರುವದೆಂತ ಭಾವಿಸಿಕೊಂಡು ನಟಿಸಿದ್ದಾಗಿದೆ, ಸ್ಪೀಕರ್ ಆದ ಕಮಿಷನರ್ ಸಾಹೇಬರೂ ಮತ್ತು ಇವರ ಪತ್ನಿಯವರಿಗೂ ಸಂತೋಷವಾಯಿತಂತೆ. ಕಮಿಷನರ್ ಸಾಹೇಬರು ಬಹಳ ಸಮಾಧಾನದಿಂದ ಬೇಸರವಿಲ್ಲದೆ ಕೆಲಸ ನಡಿಸಿದರು. ಪಾರ್ಲಿಮೆಂಟ್ ಸಭೆಯ ಕೆಲಸ ತೀರಿದನಂತರ ಈ ಕಾರ್ಯಕ್ಕೆ ಉತ್ತೇಜನಕೊಟ್ಟ ಕಮಿಶನರ್ ಸಾಹೇಬರಿಗೂ ಏರ್ಪಾಡುಮಾಡಿದ ಮೆ|| ಕುಶಾಲಪ್ಪನವರೇ ಮುಂತಾದ ಶಾಲಾ ಅಧಿಕಾರಿಗಳೂ ಸಭೆಯ ಪರದಿಂದ ವಂದನೆಗಳನ್ನು ಒಪ್ಪಿಸಬೇಕಿತ್ತು. ಸ್ವಪ್ರಯೋಜನವನ್ನು ಎಣಿಸದೆ ಪ್ರಜೆಗಳಿಗೆ ಪ್ರಯೋಜನವಾಗಬೇಕೆಂತಲೇ ಮಾಡುವ ಕೆಲಸಗಳಿಗೆ ಪ್ರಜೆಗಳು ಕೃತಜ್ಞರಾಗಿಯೇ ಇರುತ್ತಾರೆ.

ಪಾರ್ಲಿಮೆಂಟ್ ಮೀಟಿಂಗಿನಲ್ಲಿ ಮೆ|| ಸಿ ಯನ್. ವೆಂಕಪ್ಪಯ್ಯನವರು ಮಾಡಿದ ಭಾಷಣದ ಸಾರಾಂಶ.

ಇಂಡಿಯಾದೇಶದ ಭಾಷಾವಿಷಯವಾದ ಈ ಠರಾವನ್ನು ನಮ್ಮ ಈ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ತಂದದ್ದು ಯುಕ್ತವಲ್ಲ ಈ ವಿಷಯವು ಇಂಡಿಯಾದೇಶದ ಜನರಿಗೂ ಅವರ ಶಾಸನವಿಧಾಯಕ ಸಭೆಗಳಿಗೂ ಸಂಬಂಧ

ಲುವದಾದ್ದರಿಂದ ಅವರಿಗೇನೇ ಬಿಡಬೇಕೇ ಹೊರತು ನಾವು ಹಾಕಬಾರದು. ರಾಜಕೀಯ ಮಾರ್ಪಾಟುಗಳ ವಿಷಯ ಆಯಾ ಸಂಸ್ಥಾನಗಳೇ ತಮ್ಮ ತಮ್ಮ ಮಾರ್ಪಾಟು ನಿರ್ಣಯಿಸಿಕೊಳ್ಳಬೇಕೆಂಬುದೇ ನನ್ನ ಮತವಾಗಿದೆ [illegible] ಈ [illegible] ಹೆಸರಿಸಿದ [illegible] ಪ್ರಕಾರ [illegible] ಒಂದಿಷ್ಟು ರಾಷ್ಟ್ರೀಯ ಮಾರ್ಪಾಟು ವಿಷಯವನ್ನೇ ಆಯಾ ರಾಜ್ಯಗಳಿಗೆ ಬಿಟ್ಟುಕೊಡಬೇಕೆಂದಿರುವಾಗ ಭಾಷಾಮಾರ್ಪಾಟನ್ನು ಅವರಮೇಲೆ ನಾವು ಹೊರಿಸಬಾರದು.

ನಾವು ಬಹಳ ಅಸಾಧ್ಯವಾದ ಕೆಲಸವನ್ನು ಈ ಸಭೆಗೆ ಒಪ್ಪಿಸುವಂತಿದೆ. ಇಂಡಿಯಾದೇಶದ 30 ಕೋಟಿ ಜನರೆಲ್ಲ ಈ ಇಂಗ್ಲಿಷ್ ಭಾಷೆಯನ್ನು 2 ನೇ ಭಾಷೆಯಾಗಿ ಕಲಿಯಬೇಕೆಂಬ ಈ ಠರಾವನ್ನು ಈ ಸಭೆಯು ಅಂಗೀಕರಿಸಿದರೆ ಇಂಡಿಯಾದಲ್ಲಿ ಇಂಗ್ಲಿಷ್ ತಿಳಿಯದ ಪ್ರತಿಯೊಬ್ಬ ಮನುಷ್ಯನೂ ಶಿಕ್ಷೆಗೆ ಗುರಿಯಾಗುತ್ತಾನೆಂಬ ಶಾಸನಮಾಡುವ ಭಾರವು ಈ ಸಭೆಯಮೇಲೆ ಬೀಳುತ್ತೆ. ಇಂಥಾ ಅಸಾಧ್ಯ ಕೆಲಸವನ್ನು ಸೂಚಿಸುವ ಠರಾವನ್ನು ಮಂಜೂರು ಮಾಡಬಾರದು. ಒಂದೇ ವಿದ್ಯಾಶಾಲೆಗಳಲ್ಲಿ ಓದುವವರಿಗೆ ಮಾತ್ರ ಇಂಗ್ಲೀಷನ್ನು ಬಲಾತ್ಕಾರವಾಗಿ ಕಲಿಸಬೇಕೆಂಬ ಅಭಿಪ್ರಾಯವಾದರೆ ಹಾಗೆ ಹೇಳಬೇಕಿತ್ತು. ಆಗಲೂ ಈ ಠರಾವನ್ನು ತರಲು ಇನ್ನೂ ಸಮಯಬಂದಿಲ್ಲ. ಏತಕ್ಕೆಂದರೆ-ಎರಡನೇ ಬಲಾತ್ಕಾರದ ಭಾಷೆಯಾಗಬೇಕೆಂಬ ಠರಾವಿನಲ್ಲಿದೆ. ಅಂದರೆ ಈಗಾಗಲೇ ಒಂದನೇ ಭಾಷೆ ಇಂಗ್ಲಿಷಿಗಿಂತ ಬೇರೆ ಯಾವದೋ ಆಗಲೇ ಇದೆಯೆಂತ ಊಹೆಯಾಯಿತು. ವಿದ್ಯಾಭ್ಯಾಸವನ್ನು ಪೂರ್ತಿಯಾಗಿ ದೇಶೀಯ ಭಾಷೆಗಳಲ್ಲೇ ಕೊಡಬೇಕೆಂಬುದೇ ಒಳ್ಳೆ ತತ್ವ. ಈಗ ಇಂಗ್ಲಿಷ್ ಭಾಷೆಯಲ್ಲಿ ಕೊಡುತ್ತಿದ್ದಾರೆ. ಇದನ್ನು ನಿಲ್ಲಿಸಿ ದೇಶೀಯ ಭಾಷೆಗಳಿಗೆ ಪ್ರಾಮುಖ್ಯತೆ ಕೊಟ್ಟನಂತರ 2 ನೇ ಭಾಷೆಯ ವಿಷಯ ಯೋಚನೆಮಾಡಿದರೆ ಸಾಕು

ಸಾಮ್ರಾಜ್ಯದ ಇತರ ಭಾಗಗಳಿಗೂ ಇಂಡಿಯಾಕ್ಕೂ ಒಗ್ಗಟ್ಟು ಬೀಳಲಿಕ್ಕೆ ಇಂಗ್ಲಿಷ್ ಭಾಷೆಯನ್ನು ಬಲಾತ್ಕಾರದಿಂದ ಇಂಡಿಯಾದವರಮೇಲೆ ಹೇರಿದರೆ ಆಗುವದಿಲ್ಲ. ಸಾಮ್ರಾಜ್ಯದ ಇತರಭಾಗಗಳು ಇಂಡಿಯಾದ ಕಡೆಗೆ ಸ್ವಲ್ಪ ಕೃಪಾದೃಷ್ಟಿಯಿಂದ ನೋಡಿ ಸಮಾನತ್ವ ಕೊಟ್ಟರೆ ಮಾತ್ರ ಒಗ್ಗಟ್ಟು ಬೆಳೆದೀತಷ್ಟೆ. ಕೆನಡಾದಲ್ಲಿರುವ ಎಲ್ಲಾ ಇಂಡಿಯನರಿಗೂ ಬಹುಶಃ ಇಂಗ್ಲಿಷ್ ಗೊತ್ತಿರಬಹುದು. ಆದರೂ ಅಲ್ಲಿ ಸಮಾನತ್ವವಿಲ್ಲ. ಅಥವಾ ಸಮಾನತ್ವ ಬೇಕಾದರೆ ಇಂಗ್ಲಿಷ್ ಕಲಿಯಬೇಕೆಂತ ಇಂಗ್ಲಿಷ್ ಜನರು ಹೇಳುವದಿಲ್ಲ. ಇಂಡಿಯಾದೇಶಕ್ಕೆ ಸ್ವರಾಜ್ಯ ಕೊಟ್ಟರೆ ಆ ದೇಶದವರಿಗೆ ಸಾಮ್ರಾಜ್ಯದ ಸಮಾನ ಹಕ್ಕು ದೊರೆತೀತಷ್ಟೆ

ರಾಷ್ಟ್ರೀಯತ್ವ ಬೆಳೆಯಲಿಕ್ಕೂ, ಇಂಡಿಯಾದೇಶದ [illegible] ಸಂಪತ್ತು ಹೆಚ್ಚಲು ಇಂಗ್ಲಿಷ್ ಅವಶ್ಯವಿಲ್ಲ. ಇಂಗ್ಲಿಷ್ ಭಾಷೆ ಹುಟ್ಟುವ ಮೊದಲೇ ಇಂಡಿಯಾದಲ್ಲಿ ನಾಗರೀಕತೆ ಬಹಳ ಅಭಿವೃದ್ಧಿ ಹೊಂದಿತ್ತು. ಅಲ್ಲಿನ ಆಗಿನ ಆತ್ಮವಿಚಾರದ ಅನುಭವವನ್ನು ಪಾಶ್ಚಿಮಾತ್ಯರೂ ಈಗ ನೋಡಿ ಆಶ್ಚರ್ಯಪಡುತ್ತಾರೆ. ಇಂಥಾ ಜ್ಞಾನವು ಅವರಿಗೆ ಇಂಗ್ಲಿಷ್ ಭಾಷೆಯಿಂದ ಬಂದದ್ದಲ್ಲ. ಜಪಾನ ದೇಶವು ಪ್ರಪಂಚದ ರಾಜ್ಯಗಳಲ್ಲಿ ದಕ್ಷತೆಯಲ್ಲಿಯೂ, ಶಕ್ತಿಯಲ್ಲಿಯೂ ಬೇರೆ ಯಾವ ರಾಜ್ಯಕ್ಕೂ ಕಡಿಮೆಯಾಗಿಲ್ಲ. ಇದು ಅವರಿಗೆ ಇಂಗ್ಲಿಷ್ ಭಾಷೆಯಿಂದ ಬಂದದ್ದಲ್ಲ. ಅವರ ಸ್ವಂತ ಭಾಷಾಪ್ರೇಮ, ದೇಶಭಕ್ತಿ, ಸ್ವಶಕ್ತಿಯಿಂದಲೂ ಬಂದಿದೆಯಷ್ಟೆ. ಇಂಗ್ಲಿಷ್ ಭಾಷೆಯಲ್ಲಿರುವ ಅತ್ಯುತ್ತಮ ವಿಷಯಗಳನ್ನು ತಮ್ಮ ಭಾಷೆಗೆ ತೆಗೆದುಕೊಂಡಿರಬಹುದು.

ಇಂಡಿಯಾದಲ್ಲಿಯೂ ಹಾಗೆ ಮಾಡಿದರೆ ಸಾಕಾಗಿದೆ. ಅವರ ದೇಶಭಾಷೆಯನ್ನು ಅಭಿವೃದ್ಧಿಗೊಳಿಸಿಕೊಂಡು ಕೆಲವರು ಇಂಗ್ಲಿಷ್ ಭಾಷೆಯ ಸಾರವನ್ನು ಅವರ ಭಾಷೆಗೆ ಸೇರಿಸಿಕೊಂಡರೆ ಸಾಕಾಗಿದೆ. ಸಾಮ್ರಾಜ್ಯದ ಸಭೆಗಳಲ್ಲಿ ಮಾತಾಡಲು ಬರುವವರು ಇಂಗ್ಲಿಷ್ ಕಲಿತರೆ ಸಾಕಾಗಿದೆ. ವ್ಯಾಪಾರಿಗಳು ಇಂಗ್ಲಿಷ್ ಕಲಿತರೆ ಸಾಕಾಗಿದೆ. ಈ ತಪ್ಪು ಇಂಗ್ಲಿಷ್ ಭಾಷೆಯನ್ನು ಇಂಡಿಯಾದವರು ಕಲಿಯಬೇಕಾದರೆ ಅವರ ಮೆದುಳಿಗೆ ಬಹಳ ಕಷ್ಟವಾಗುತ್ತೆ. ಅವರ ಶಕ್ತಿಯನ್ನೆಲ್ಲಾ ಭಾಷೆಗೆ ಖರ್ಚುಮಾಡಿದರೆ ಸ್ವಂತ ಬುದ್ಧಿಯೇ ಉಳಿಯುವದಿಲ್ಲ. ಸ್ವಶಕ್ತಿಯೇ ಇಲ್ಲದವರಾಗುತ್ತಾರೆ. ಇಂಗ್ಲಿಷ್ ಭಾಷೆಗೂ ದೇಶೀಯ ಭಾಷೆಗಳಿಗೂ ಏನೂ ಸಂಬಂಧವಿಲ್ಲದ್ದರಿಂದ ಇಂಗ್ಲಿಷ್ ಭಾಷೆಯಲ್ಲಿ ವಿದ್ಯೆ ಪಡೆದ ಜನರ ತಿಳುವಳಿಕೆಯೂ ಜನಸಮುದಾಯಕ್ಕೆ ಇಳಿಯುವದೇ ಇಲ್ಲ. ಇಂಗ್ಲಿಷ್ ವಿದ್ಯೆ ಓದಿದವರು ತಮ್ಮ ಮನೆಯಲ್ಲೂ ಗ್ರಾಮದಲ್ಲೂ ಪರಕೀಯರಾಗುತ್ತಾರೆ. ಇಂಗ್ಲಿಷ್ ಭಾಷೆಗೆ ಪ್ರಾಮುಖ್ಯತೆ ಕೊಡುವದನ್ನು ಬಿಟ್ಟು ದೇಶಭಾಷೆಗೆ ಪ್ರಾಮುಖ್ಯತೆ ಕೊಟ್ಟಿದ್ದರೆ ದೇಶದ ಸ್ಥಿತಿಯು ಬಹಳ ಉನ್ನತಸ್ಥಿತಿಗೆ ಬರುತ್ತಿತ್ತು. ಆದ್ದರಿಂದ ಇಂಗ್ಲಿಷಿಗೆ ಬಲಾತ್ಕಾರ ಮಾಡಕೂಡದು

ಇಂಡಿಯಾದೇಶದೊಳಗೆ ಎಲ್ಲಾ ಪ್ರಾಂತ್ಯದಲ್ಲಿಯೂ ತಿಳಿಯುವ ಒಂದು ಭಾಷೆಯೇನೋ ಬೇಕು. ಹಿಂದುಸ್ತಾನಿ ಭಾಷೆಯೇ ಸಾಕಾಗಿದೆ. ಇದು ಎಲ್ಲಾ ಪಟ್ಟಣಗಳಲ್ಲೂ ತಿಳಿಯುವ ಭಾಷೆ. ಉತ್ತರ ಇಂಡಿಯಾದಲ್ಲಿ ಎಲ್ಲರೂ ಆಡುವ ಮಾತು. ರಾಷ್ಟ್ರೀಯ ಸಭೆಗಳಲ್ಲಿ ಈ ಭಾಷೆಯನ್ನು ಈಗಾಗಲೇ ಅವಲಂಬಿಸಿದ್ದಾರೆ. ಆದ್ದರಿಂದ ಈ ಭಾಷೆಯನ್ನೇ ರಾಷ್ಟ್ರಭಾಷೆಯನ್ನಾಗಿ ಮಾಡಿಕೊಂಡರೆ ಸಾಕಾಗಿದೆ. ಆದ್ದರಿಂದ ಈ ಠರಾವಿಗೆ ಯಾರೂ ಒಪ್ಪಕೂಡದು

[illegible] ಹರಿಕಸ್ತೂರಿಯವರು (?)

[illegible] ಭಾಷಣ

ಈ ಸಭೆಯ ಅಭಿಪ್ರಾಯಕ್ಕಾಗಿ ಇಟ್ಟಿರುವ ಈ ಪ್ರಸಂಗಕ್ಕೆ ನಾನು ವಿರೋಧಿಯಾಗಿದ್ದೇನೆ. ಹಿಂದೂ ದೇಶದವರ ವಿದ್ಯಾವಿಚಾರದ ಏಳಿಗೆಯಲ್ಲಿ ಈ ಪ್ರಕ್ರಿಯು ವಿರೋಧವಾದುದರಿಂದಲೂ ಒಂದು ಜನಾಂಗದ ರಾಷ್ಟ್ರೀಯ ವಿದ್ಯಾವಿಚಾರದಿಂದಲೂ ಈ ಪ್ರಕ್ರಿಯು ಅಸಮ್ಮತವಾದುದರಿಂದಲೇ ನಾನು ವಿರೋಧಿಸಲು ನಿಂತಿರುವೆನು

ಪ್ರಥಮದಲ್ಲಿ ನಮ್ಮ ಹಿಂದೂ ದೇಶದ ಪ್ರಜೆಗಳಿಗೆ ಪ್ರಜಾಪ್ರಭುತ್ವದ ಆದಷ್ಟೇ ಅನುಕೂಲತೆಗಳನ್ನು ಒದಗಿಸಿಕೊಟ್ಟಿರುವ ನಮ್ಮ ಸರಕಾರದವರು ಈ ಪ್ರಕ್ರಿಯನ್ನು ಹಿಂದೀಯರಿಗೇ ಬಿಟ್ಟು ಕೊಡಬೇಕಲ್ಲವೆ? ಇಲ್ಲಿ ತರ್ಕಿಸುವುದು ನ್ಯಾಯವಾಗಿ ತೋರುವುದಿಲ್ಲ. ಅಷ್ಟು ಯೋಗ್ಯತೆ ಹಿಂದೀಯರಿಗೆ ಇಲ್ಲವೆ?

ಸದ್ಯ ಸಭೆಯಲ್ಲಿ ಈ ಪ್ರಸಂಗ ಚರ್ಚೆಗೆ ಬಂದಿರೋದರಿಂದ ಆ ವಿಷಯವನ್ನು ಪರ್ಯಾಲೋಚಿಸೋಣ! ಸದ್ಯ ಸರ್ವತ್ರ ಇಂಗ್ಲೀಷ ಕಲಿಸುವುದರಿಂದ ಉಂಟಾಗಿರುವ ಪರಿಣಾಮವನ್ನು ಹಿಂದೂ ದೇಶದ ಸ್ಟೇಟ್ ಸೆಕ್ರೆಟರಿಯವರ ಆಜಮಾಯಿಷಿಯಿಂದ ದೊರೆತಿರುವ ನನ್ನ ಅನುಭವದಿಂದ ಇಲ್ಲಿ ಹೇಳುವವನಿದ್ದೇನೆ

ಲೋರ್ಡ್ ಮೆಕಾಲೆಯವರ ಕಾಲದಿಂದ ಇದುವರೆಗೆ ಇಂಗ್ಲೀಷ್ ಕಲಿತ ಹಿಂದೀಯರಲ್ಲಿ ಸಾವಿರಕ್ಕೆ ಮತ್ತುಸ್ವಲ್ಪ [illegible] ಮಾತ್ರ ಚೆನ್ನಾಗಿ ಓದುಬಲ್ಲವರಾಗಿದ್ದಾರೆ. [illegible] "ಪೀಜಿ" (Pigeon English) ಇಂಗ್ಲಿಷ್ ಬಲ್ಲವರಾದರೂ ಪ್ರಯೋಜನಕ್ಕೆ ಬಾರದವರಾಗಿರುತ್ತಾರೆ. ಸಾವಿರಕ್ಕೆ ನೂರುಮಂದಿಯರು [illegible] ರೀತಿಯಾದರೆ 900 ಮಂದಿಯರು ಇಂಗ್ಲಿಷ್ ಕಲಿತು ಪಾರಂಗತರಾಗಲು ಅದೆಷ್ಟು ಕಾಲಮಾನಗಳಾದಾವು? ಬಹುಶಃ ಅಲ್ಲಿ ಇಲ್ಲಿಯ ಇಂಗ್ಲಿಷ್ ಬಲ್ಲ ಹಿಂದೀಯರನ್ನು ಕಂಡು ಗೌ|| ಪ್ರಸಂಗಿಕರು [Hon Mover] ಮೋಸಹೋದರೇನೊ! ಹಲವು ಶತಮಾನಗಳಿಂದ ಇಷ್ಟೊಂದು ಪ್ರಯೋಜನವೇ ದೊರೆತಿರುವ ಹಿಂದೂಗಳಿಗೆ ಇನ್ನು ಕಡ್ಡಾಯವಾಗಿ ಇಂಗ್ಲಿಷ್ ಕಲಿಸಿದರೆ ಆಗುವ ಪರಿಣಾಮವೂ ನನ್ನ ಮಾತ್ರವಲ್ಲ ಇಡೀ ಸಭಿಕರ ಅನುಮಾನಕ್ಕೆ ಆಸ್ಪದವಾಗಿದೆ ಎಂದು ಖಂಡಿತವಾಗಿ ಹೇಳಬಲ್ಲೆನು

ಇಂಗ್ಲಿಷ್ ಭಾಷಾಭಂಡಾರದಲ್ಲಿ ಬೇಕಾದಷ್ಟು ಸಾಹಿತ್ಯದ ರಾಶಿ ಇದೆ. ಸಕಲ ಕಲೆಗಳ ಮೂಲವು ಆಗಲೇ ನಮ್ಮ ಭಾಷೆಯಲ್ಲಿ ದೊರೆಯುವುದೇನೋ ನಿಜ. ಆದರೆ ಈ ಭಂಡಾರಾಗಾರದ ಕೀಲಿಯನ್ನು ತೆರೆದು ಹಿಂದೀಯರಿಗೆ ಕೊಡುವವರಾದರೂ ಯಾರು? ಕೀಲಿಯಾದರೂ ಹಿಂದೂ ದೇಶೀ ಪುಸ್ತಕಗಳಲ್ಲಿ ದೊರೆತೀತೆ? ದೊರೆತರೂ ಆ ಕಾಲಗಳಲ್ಲಿ ಇಂಗ್ಲಿಷ್ ಭಾಷೆಯ ಪರಿಸ್ಥಿತಿಯನ್ನು ಗಮನಕ್ಕೆ ತರೋಣವಾಗಲಿ! ಈ ಪರಭಾಷೆಯನ್ನು ಕಲಿಯಲು ಎಷ್ಟೊಂದು ವರ್ಷಕಾಲ ಮಾನವನ ಶ್ರೇಷ್ಠವಾದ ಮಾನಸಿಕ ಶಕ್ತಿಯನ್ನು ಕಳೆದುಕೊಳ್ಳಬೇಕಾಗಿದೆ? ಕಳಕೊಂಡ ವೇಳೆ ಆಗುವ ಫಲಿತಾಂಶವಾದರೂ ವಿದ್ಯಾಪಾರಂಗತನಾದ ಪ್ರಾಪಂಚಿಕ ಪ್ರಯೋಜನಕ್ಕೆ ಆಗದೆ ಪುಸ್ತಕದ ಹುಳುವಿನಂತೆ ಆಲಸ್ಯವು ಸಿ! ಅಲ್ಲವೆ? ತಾಯಿಯ ಮೊಲೆಹಾಲಿನಿಂದ ಬೆಳೆದ ಮಗುವಿನ ಆರೋಗ್ಯವು ಹೇಗೆ ಇದ್ದೀತು? ಪರಂತು ಪರದೇಶದಿಂದ ತರಿಸಿದ "ಕಂಡೆನ್ಸ್ಡ್ ಮಿಲ್ಕ" (Condensed Milk) ಹಿನ್ನು ಹಾಲಿನಲ್ಲಿ ಬೆಳೆದ ಮಗುವಿನ ಆರೋಗ್ಯವೆಲ್ಲಿ?

ಈರೀತಿಯಲ್ಲಿ ಸದ್ಯ ಇಂಗ್ಲಿಷ್ ಕಲಿಯುತ್ತಿರುವ ಹಿಂದೀಯರ ಪಾಡೇನು? ಅವರ ಅಭಿವೃದ್ಧಿಯೇನು? ಗೊಣ್ಣೆಹುಳ (Snail) ವಿನಂತೆ ಆವೆಯ ಓಟದಂತೆ ನಿಧಾನವಲ್ಲವೆ?

ಪರಂತು ಹಿಂದೀಯರಿಗಾಗಿ ನಾವು ಮಾಡತಕ್ಕದ್ದೇನು! ಹಿಂದೀಯರ ವಿದ್ಯಾವಿಚಾರದಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಅವರಿಗೆ ಕೊಡಬೇಕಾಗಿದೆ. ದೇಶೀಯರ ವಿದ್ಯೆಯು ದೇಶೀಯನಮೂನೆಯಲ್ಲಿರಬೇಕೆ ಪರದೇಶೀಯವಾದರೆ ಪರಿಣಾಮವು ಎಂದಾದರೂ ವಿಚಿತ್ರವೆನಿಸೀತು. ಸಕಲ ಹಿಂದೂಸ್ಥಾನದ ಭಾಷೆಯಾಗಿ ಹಿಂದಿಯನ್ನೋ ಉರ್ದುವನ್ನೋ ಕಲಿತು ಆಯಾ ಜಾತೀಯ ಭಾಷೆಯನ್ನು ತಿಳಿದು ಸಾಲದುದಕ್ಕೆ ಇಂಗ್ಲಿಷನ್ನೂ ಕಡ್ಡಾಯವಾಗಿ ಕಲಿಯಲೆಳಸುವ ಇಂಥ ಬಾಲಕನ ಆಲೋಚನಾಶಕ್ತಿಯು ಅಭಿವೃದ್ಧಿ ಹೊಂದುವುದು ಇದೆಯೆ?

ಲಾರ್ಡ್ ಮೆಕಾಲೆಯವರು ಯೂರೋಪಿನ ವಿದ್ಯಾಮಾನ ತಿಳಿಯದಿದ್ದರೆ ಹಿಂದೀಯರಿಗೆ ಮುಕ್ತಿ ಇಲ್ಲವೆಂಬುದೇನೋ ನಿಜ. ಆದರೆ ಆಗಿನ ಸ್ಥಿತಿಗೂ ಈಗಿನ ಸ್ಥಿತಿಗೂ ಎಷ್ಟು ವ್ಯತ್ಯಾಸವಿದೆ? ದೇಶದ ಆಳಿಕೆಯಲ್ಲಿ ಜನರ ಅಧಿಕಾರ ವಿಚಾರದಲ್ಲಿ ಪ್ರಜೆಗಳ ಸ್ಥಿತಿಗತಿಗಳಲ್ಲಿ ಜನಾಂಗದ ಆಲೋಚನಾಭಿವೃದ್ಧಿಯೇ ಈ ನೂತನ ಯುಗದಲ್ಲಿ ಎಲ್ಲಿಯೂ ಬದಲಾವಣೆ ಆಗಿಲ್ಲವೆ? ಆ ಸ್ಥಿತಿಯಲ್ಲಿ ಇಂಗ್ಲೀಷನ್ನು ಎರಡನೆ ಭಾಷೆಯಾಗಿ ಕಡ್ಡಾಯವಾಗಿ ಕಲಿಸಿದರೆ ನಮ್ಮ ಭವ್ಯ ರಾಜ್ಯದ ಒಂದು ಭಾಗವಾದ ಹಿಂದೂ ದೇಶದ ಮುಂದಿನ ಜನಾಂಗದವರ ಮಾನಸಿಕ ಶಕ್ತಿಯನ್ನು ಕೆಡಿಸಿದುದಕ್ಕೋಸ್ಕರ ಜನಾಂಗದ ವೀರರಿಗೆ ಮುಂತೆ [illegible] ಮುಟ್ಟುಗೋಲು ಹಾಕಿದಂತಾಗುವುದಿಲ್ಲವೆ?

ಆದ ಕಾರಣ ಇಂಗ್ಲೀಷನ್ನು ಕಡ್ಡಾಯವಾಗಿ ಕಲಿಸಲು ತೀರ್ಮಾನಿಸಿದರೆ ಅದರಿಂದ ಹಿಂದೀಯರ ರಾಷ್ಟ್ರೀಯ ಸ್ವತಂತ್ರ ಮರಣ ದಂಡನೆಯನ್ನು ವಿಧಿಸಿದಂತಾದೀತು. [illegible] ನಕ್ಕೆ ಕಟ್ಟಿ ಕಟ್ಟಿದಂತಾದೀತು. ಅವರ ದಿವ್ಯ ದೇವಭಾಷೆಗಕ್ಕೆ ಅಡ್ಡಗಟ್ಟಿದಂತಾಯಿತು. ಒಂದೇ ವಾಕ್ಯದಲ್ಲಿ ಹೇಳುವುದಾದರೆ ಇಂಗ್ಲೀಷರಿಂದ ಹಿಂದೀಯರಿಗೆ ಸಿಗುವ ಮುಕ್ತಿಯನ್ನು ಕೊಡುವೆವೆಂದು ಹೇಳುವುದು ಕನಸಿನ ಮಾತೇ ಸರಿ.

ಕನಸಿನ ಮಾತು! ಖಂಡಿತವಾಗಿ ಸ್ವಪ್ನದ ಆಶೆಯೇ ಸರಿ! ನೀರ ಮೇಲಣ ಹೋಮವೇ ಸರಿ! ಮರಳ ಮೇಲಣ ಬರವಣಿಗೆಯೇ ಸರಿ! ಎಲ್ಲಿಯವರೆಗೆ ಹಿಂದೀಯರು ಕೂಲಿಕಾರರ ಮೊದಲುಗೊಂಡು ಶ್ರೀಮಂತರವರೆಗೆ ಇಂಗ್ಲಿಷಿನಲ್ಲಿ ಆಲೋಚಿಸಿ ಅದನ್ನು ತಿಳಿಸಲಿಕ್ಕಾಗದೆ ಕಷ್ಟಪಡುತ್ತಲಿರುವರೊ ಎಲ್ಲಿಯವರೆಗೆ ಹಿಂದೀಯರು ತಮ್ಮ ಭಾಷೆ, ತಮ್ಮ ಧರ್ಮ, ತಮ್ಮ ರಾಷ್ಟ್ರ ಎಂಬ ಅಭಿಮಾನಗಳಿಗೆ ನಾವು ಎಡೆಕೊಡುವುದಿಲ್ಲವೋ ಎಂದಿನವರೆಗೆ ಅವರನ್ನು ಕಡ್ಡಾಯವಾಗಿ ಇಂಗ್ಲಿಷ್ ಕಲಿಸಲು ನಾವು ಬಲತ್ಕರಿಸುವೆವೋ ಅಲ್ಲಿಯವರೆಗೆ ಅಂದಿನವರೆಗೆ ಗೌ|| ಪ್ರಸಂಗೀಕರು ಹೇಳಿದಂತೆ ನಮ್ಮ ಈ ಭವ್ಯ ರಾಜ್ಯದ ಒಂದು ಅಂಗವಾದ ಹಿಂದೂ ದೇಶಕ್ಕೆ ಪ್ರೀತಿಯ ದಾರಿಯನ್ನು ತೋರಿದಂತಾಗುವುದಿಲ್ಲ. ಸುಖದ ಹಾದಿಯನ್ನು ಇಟ್ಟಂತಾಗುವುದಿಲ್ಲ. ಖಂಡಿತವಾಗಿಯೂ ಇವೆಲ್ಲವೂ ಕನಸಿನ ಮಾತೇ ಸರಿ!

ಕೊನೆಯಲ್ಲಿ ಭಾಷೆಯೇ ಪರಸ್ಪರ ಅನುರಾಗಕ್ಕೆ ಕಾರಣವಲ್ಲ! ಹೃದಯ ಮಧ್ಯದ ಶುದ್ಧ ಪ್ರೇಮವೇ ಕಾರಣ. ಇಂಗ್ಲಿಷ ಬಲ್ಲ ಸನ್ಮಾನಿತ ಶಾಸ್ತ್ರಿಯವರು ಭೂಲೋಕದ ಉದ್ದಗಲಕ್ಕೆ ಸಂಚರಿಸಿ ಸಂಪಾದಿಸಿದುದಾದರೂ ಇಷ್ಟೇ ಎಂದು ಸಭಿಕರಿಗೆ ತಿಳಿದೇ ಇದೆಯಲ್ಲವೆ? ಇಂಗ್ಲೀಷ್ ಭಾಷೆಯು ಹಿಂದೂ ದೇಶದ ಉನ್ನತಿಗೆ ಕಾರಣವಾಗದ ಬಳಿಕ ನಮ್ಮ ವಿಶಾಲವಾದ ರಾಜ್ಯಕ್ಕೆ ಏನೊಂದು ಪ್ರಯೋಜನವನ್ನು ತಂದೀತು? ಹಿಂದೂ ದೇಶದ ಉನ್ನತಿಯೇ ಬ್ರಿಟಿಷರಾದ ನಮ್ಮ ಗೌರವ! ಅವರ ಸುಖವೇ ನಮ್ಮ ರಾಜ್ಯಭಾರದ ಧ್ಯೇಯ! ಪರಸ್ಪರಾನುರಾಗವಿದ್ದಲ್ಲಿ ಹಿಂದೂ ದೇಶವು ನಮ್ಮ ಬ್ರಿಟಿಷ ಚಕ್ರಾಧಿಪತ್ಯದವರ ಸ್ನೇಹಕ್ಕೂ ಪ್ರೀತಿಗೂ ಆದೇಶ ಪಾತ್ರವಾಗಲಿಕ್ಕಿಲ್ಲದು?

ಕಳೆದ ಮಾಹೆ ತಾರೀಖು 14 ರಲ್ಲು ಕೊಡಗು ಶನಿವಾರಸಂತೆ ಸ್ಕೂಲಿನಲ್ಲಿ 'ಶಾರದಾಪೂಜೆ' ಯು ಮೆ|| ಪಿ. ಬಿ ಪೂಣಚ್ಚನವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು ಸದರಿ ಪೂಜೆಗೆ ಶಾಲೆಯ ಮಕ್ಕಳು ಹೊರಗಿನ ಎಲ್ಲಾ ಹುಡುಗರೂ ಸ್ಥಳೀಯರೂ ಮೆ|| ರಂಗಪ್ಪ ರೇಂಜರೂ ಫಾರೆಸ್ಟರುಗಳೂ ಮತ್ತು ಇಲ್ಲಿಯ ಎಲ್ಲಾ ಆಫೀಸರುಗಳು ಸೇರಿದ್ದರು.

ಪ್ರೋಗ್ರೇಮ್

1 ಭಜನೆ (by public)

2 ಕನ್ನಡ ಪದ್ಯ (ತಾರತಮ್ಯ) I ನೇ ಒರ್ಸಿಯ ವಿದ್ಯಾರ್ಥಿಗಳಿಂದ

* 3 ಒಬ್ಬ ವಿದ್ಯಾರ್ಥಿಯ ಅನುಭವ V ನೇ ದರ್ಜೆಯ ವಿದ್ಯಾರ್ಥಿಯಿಂದ

4 ಕನ್ನಡ ಪದ್ಯ (ಹೊಲೆಯನ ಹಾಡು) IV ನೇ ,,

5 ಶಾಲೆಯ ರಿಪೋರ್ಟು V ನೇ ,,

6 ಸರಸ್ವತಿ ಸ್ತೋತ್ರ (ಮೆ|| ಕಪ್ಪನಮ್ಮ ಶೆಟ್ಟಿ ಸೇಯಿಗೆ ಸ್ಕೂಲು).

7. ಶಾರದಪೂಜೆ ಕುರಿತು ಉಪನ್ಯಾಸ (ಮೆ|| ಕಾಳಮ್ಮನವರು ಉ. ಕೊಡಗು ಸುಪರವೈಜರ)

8 ಅಧ್ಯಕ್ಷರ ಭಾಷಣ

9 ಮಂಗಳ ಹೂ ಪ್ರಸಾದ ವಿನಿಯೋಗ.

* ಇದನ್ನು ಇನ್ನೊಂದು ಪೇಜಿನಲ್ಲಿ ಕೊಟ್ಟಿವೆ.

ಮೆ|| ಕಾಳಮ್ಮನವರು ಮೇಲಿನ ಉಪನ್ಯಾಸವನ್ನು ಆಬಾಲವೃದ್ಧರಿಗೂ ತಿಳಿಯುವಂತೆ ತಿಳಿಗನ್ನಡ ಸುಂದರ ಶೈಲಿಯಲ್ಲಿ ಹೇಳಿ ಜನರಲ್ಲಿ ದೈವಭಕ್ತಿಯನ್ನು ಹುಟ್ಟಿಸಿ ತಮ್ಮ ಗಾನಪ್ರಭೆಯಿಂದ ಎಲ್ಲರನ್ನೂ ಆನಂದ ಸಾಗರದಲ್ಲಿ ಮುಳುಗಿಸಿದ್ದರು. ಇಷ್ಟೊಂದು ತಿಳುವಳಿಕೆಯನ್ನು ನಮಗೆ ಉಂಟುಮಾಡಿದಕ್ಕಾಗಿ ಇವರಿಗೆ ನಾವು ಚಿರಋಣಿಗಳಾಗಿರುತ್ತೇವೆ

ಮೆ|| ಪಿ ಬಿ ಪೂಣಚ್ಚನವರು ತಮ್ಮ ಭಾಷಣದಲ್ಲಿ ಅಲ್ಲಿ ನೆರೆದಿದ್ದವರಿಗೆ ಕೂಲಿ ಮಕ್ಕಳಿಗೂ ಗವರ್ನಮೆಂಟು ಶಾಲೆಗೂ ಇರುವ ವ್ಯತ್ಯಾಸವನ್ನು ವಿಶದವಾಗಿ ತಿಳಿಯಪಡಿಸಿ ಪ್ರತಿಯೊಬ್ಬರೂ ಅವರ ಮಕ್ಕಳುಗಳನ್ನು ಗವರ್ನಮೆಂಟ್ ಶಾಲೆಗೆ ಕಳುಹಿಸಲಿಕ್ಕೆ ಪ್ರಯತ್ನಪಡುವುದು ಒಳ್ಳೆಯದೆಂದೂ ಇದೇ ರೀತಿಯಲ್ಲಿ ಪ್ರತಿ ವರ್ಷವೂ ಇಂಥಾ ಪೂಜೆಯೊಂದನ್ನು ಏರ್ಪಡಿಸಿ ಮಕ್ಕಳುಗಳಿಗೆ ಆದಷ್ಟು ತಿಳುವಳಿಕೆಯನ್ನು ಕೊಡುವುದು ಉತ್ತಮವೆಂದೂ ಹೇಳಿದರು

ಸಮುದಾಯ ಪ್ರಸಾದ ವಿನಿಯೋಗದಿಂದಲೂ, ಜಯವು ಸ್ವೀಕಾರದಿಂದಲೂ ಅಂದಿನ ಪೂಜೆಯು ಪರಿಸಮಾಪ್ತಿಯಾಯಿತು ಎಂದು ಹೇಳಲು ಬಹಳ ಸಂತೋಷಿಸುತ್ತೇವೆ.

ವರ್ತಮಾನ ಸಂಗ್ರಹ

ಒಳದೇಶ.

ನಾರಾಣೆಯಲ್ಲಿ ನಾಪಿಳ್ಳೆ ಇಸುಬು ಕಾಕನವರು ಬಾ [illegible] ಅಂಗಡಿ ಇಟ್ಟಿದ್ದ ಮ॥ ಬಿದ್ದಂಡ ತಿಮ್ಮಯ್ಯ [illegible] ಕಟ್ಟಡಕ್ಕೆ ತಾ॥ ೪ ರ ರಾತ್ರಿ ಬೆಂಕಿ ಬಿದ್ದು [illegible] ಸುಮಾರು ನೂರು ರೂಪಾಯಿಯ [illegible] ಸಾಮಾನೂ ಸುಮಾರು ನೂರು ರೂ ಬೆಲೆಯ ಕಟ್ಟಡವೂ ನಷ್ಟವಾಗಿದೆಯಂತೆ

ತಾ॥ 7 ರಲ್ಲಿ ಮ॥ ಬಟ್ಟಿಯಂಡ ನಂಜಪ್ಪನವರ ಮಗ ಅಪ್ಪಯ್ಯನು ವೀರಾಜಪೇಟೆ ಶಾಲೆಯಲ್ಲಿ ಸ್ಕೂಲ್ ಫೈನಲ್ ಕ್ಲಾಸಿನಲ್ಲಿ ಓದುತಿದ್ದವನು ರೋಗದಿಂದ ಮೃತಪಟ್ಟನು

ತಾ॥ 2 ರಲ್ಲಿ ವೀರಾಜಪೇಟೆ ಮೋಡಲ್ ಸ್ಕೂಲ್ ಹಾಲಿನಲ್ಲಿ ಒಂದು ಪಬ್ಲಿಕ್ ಡಿಬೇಟ್ ನಡೆಯಿತು ಡಿ ಮೇಜಿಸ್ಟ್ರೇಟರವರ ಗ್ರೆಂಟ್ ಹಾಲಿನಲ್ಲಿ ಮ॥ ಶ್ರೀನಿವಾಸರಾವ್ ಅಧ್ಯಕ್ಷರಾಗಿದ್ದರು. ಪೂರ್ವದ ಪಂಚಾಯಿತಿಗೆ ಪದ್ಧತಿ ಉತ್ತಮವೆಂದು ಮ॥ ಪಿ. ಎಸ್. ಉತ್ತಯ್ಯನವರೂ, ಈಗಿನ ನ್ಯಾಯ ಕೋರ್ಟಿನ ಪದ್ಧತಿ ಉತ್ತಮವೆಂದು ಮ॥ [illegible] ಮಂದಣ್ಣನವರೂ ಚರ್ಚಿಸಿದರು. ಇವರಿಗೆ ಒತ್ತಾಸೆಯಾಗಿ ಬೇರೆ ಕೆಲವರೂ ಮಾತಾಡಿದರು ಕಡೆ ಪಂಚಾಯಿತಿಗೆ ಪದ್ಧತಿಯು ಉತ್ತಮವೆಂದು ಬಹುಮತದಿಂದ ತೀರ್ಮಾನವಾಯಿತು.

ಇದೇ ತಾರೀಖು 7 ರಲ್ಲಿ ವೀರಾಜಪೇಟೆ ಹೈಸ್ಕೂಲು ಹಾಲಿನಲ್ಲಿ ಸದರಿ ಶಾಲೆಯ ವಿದ್ಯಾರ್ಥಿಗಳನ್ನು ಸಂಗೀತದಲ್ಲಿ ಪರೀಕ್ಷಿಸಿ ಉತ್ತಮರಾದ ಮೊದಲಿನ ಮೂವರಿಗೆ ಕಡವ ಮಾಸ್ಟರವರು ಇನಾಮುಗಳನ್ನು ಹಂಚಿದರು.

ಬೆಪ್ಪುನಾಡಿನವರು ತಾ॥ 10 ರಲ್ಲಿ ಅರಮೇರಿಗ್ರಾಮದ ಪಕ್ಕದ ನಾಡು ದೇವಸ್ಥಾನವಾದ ಪೆಮ್ಮಕ್ಕಮ್ಮೆಯ ದೇವಾಲಯದಲ್ಲಿ ಅಯಿರಿ, ಹೆಗ್ಗಡೆ ಮೊದಲಾದ ಕೊಡಗು ಪದ್ಧತಿಯನ್ನು ಅನುಸರಿಸಿ ನಡೆಯುವ ಕೂಡಿಗೋತ್ರದವರನ್ನು ಮೊದಲಿನಂತೆ ಮಂದುಗಳಲ್ಲಿ ಜೊತೆಯಲ್ಲಿ ಕೋಲಾಟಕ್ಕೆ ಸೇರಿಸಿಕೊಳ್ಳಕೂಡದೆಂದೂ ಅವರು ಕೇಳಿಕೊಂಡರೆ ಅವರಿಗೆ ಬೇರೊಂದು ಮಂದನ್ನು ಏರ್ಪಡಿಸಿಕೊಡಬಹುದೆಂತಲೂ ನಾಡು ತಕ್ಕರು ತೀರ್ಮಾನಿಸಿದರೆಂದು ಒಂದು ಬಾತ್ಮಿ

ಅಮೋಸುದಾರರ ಸಂಘದ ನಾಡುವಾರು ಸಬ ಕಮಿಟಿಗಳನ್ನು ಏರ್ಪಡಿಸಲಿಕ್ಕಾಗಿ ಗಡಿನಾಡಿಗಳಿಗೆ ತಾ॥ 19 ರಲ್ಲಿ ಪಾಡಾನ್ನೂರು ಸಾಲೆಯಲ್ಲೂ, ಸೂರ್ಲಬಿ ನಾಡಿಗಳಿಗೆ ಸೂರ್ಲಬಿ ಅಂಬಲದಲ್ಲಿ ತಾ॥ 20 ರಲ್ಲಿ ಮಧ್ಯಾಹ್ನ ಹನ್ನೆರಡು ಗಂಟೆಗೆ ನಡೆಸಲ್ಪಡುವುದು.

ಆರ್ಮಿಸ್ಟಿಸ್ ಡೇ ಅಂದರೆ ಯುದ್ಧ ತೀರಿದ ದಿನವಾದ ನವಂಬರು 11 ನೇ ತಾರೀಖಿನ ದಿನ 11 ಗಂಟೆಗೆ 2 ನಿಮಿಷ ಸರ್ವ ಕೆಲಸ ನಿಲ್ಲಿಸಿ ದೇವರ ಪ್ರಾರ್ಥನೆ ಮಾಡುವ ವಿಷಯ ಸರಕಾರದಿಂದ ತಿಳುವಳಿಕೆ ಕೊಟ್ಟಿದ್ದರು ಅದನ್ನು ಪ್ರಕಟಿಸಲಿಕ್ಕೆ ಸಮಯವಿರಲಿಲ್ಲ. ಮಡಿಕೇರಿ ಗುಡಿಗಳಲ್ಲೆಲ್ಲಾ ಪ್ರಾರ್ಥನೆಯು ನಡೆಯಿತು. ಎಲ್ಲರೂ ಮೌನವನ್ನು ತಾಳಿದ್ದರು

ಕಳೆದ ತಾರೀಖು 2 ರ ಸಂಚಿಕೆಯ ವರ್ತಮಾನ ಸಂಗ್ರಹದಲ್ಲಿ ನಮೂದಿಸಿರುವ ಡೀಬೇಟಿಂಗ್ ಸೊಸೈಟಿಯ ಒಂದು ಮೀಟಿಂಗು ತಾ॥ 3 ರಲ್ಲಿ ಕಮಿಷನರವರು ಗೈರಾಜರು ಆದ್ದರಿಂದ ನಡೆಯಲಿಲ್ಲ. ಮೇಲ್ಕಂಡ ಮೀಟಿಂಗು ಇದೇ ತಾರೀಖು 7 ನೇ ಬುಧವಾರದ ದಿವಸ ಸಾಯಂಕಾಲ 4–30 ಗಂಟೆಯ ಸಮಯದಲ್ಲಿ ಕಮಿಷನರವರ ಅಧ್ಯಕ್ಷತೆಯಲ್ಲಿ ಸೆಂಟ್ರಲ್ ಹೈಸ್ಕೂಲ್‌ನಲ್ಲಿ ನಡೆಯಿತು ಮ॥ ಕೆ. ಚಂಗಪ್ಪ ರಾ॥ ಸಾ॥ ರವರು ಕಾಯಿಲೆಯಾದ್ದರಿಂದ ಇವರ ಸ್ಥಾನವನ್ನು ಮ॥ ಎ. ಬಿ. ಕಾರ್‍ಯಪ್ಪ, ಎಂ. ಎ ಬಾರ್-ಅಟ್-ಲಾ ರವರು ವಹಿಸಿ ಪಾರ್ಲಿಮೆಂಟಿನ ರೀತಿ ಚರ್ಚೆ ನಡೆಯಿತು. ಮೀಟಿಂಗಿನ ಸಾರಾಂಶವನ್ನು ಇನ್ನೊಂದು ಕಡೆ ವರ್ಣಿಸಿರುವೆವು.

ಒಂದುವರೆ ಇಂಚು ಉದ್ದವಾಗಿಯೂ ಹೆಸರು ಕಾಳಿಗಿಂತ ಸ್ವಲ್ಪ ದೊಡ್ಡತರವಾಗಿರುವ ತಲೆಯುಳ್ಳದ್ದಾಗಿಯೂ ಹಳದಿ ವರ್ಣವಾಗಿಯೂ ಇರುವ ಒಂದು ಹುಳವು ಬಾಣೆಗಳಲ್ಲು ಗದ್ದೆಗಳಲ್ಲೂ ಈಗೀಗ ಆವರಿಸಿಕೊಂಡು ಬಂದಿದೆ ಹುಲ್ಲದ ದೆಸೆಯಿಂದ ಬಾಣೆಗಳಲ್ಲಿ ಹುಲ್ಲಿನ ಸಂತಾನವಿಲ್ಲ ಗದ್ದೆಗಳಲ್ಲಿ ಪೈರು ನಾಶ ಉಂಟಾಗಿರುವುದರಿಂದ ಸರಕಾರದವರಾಗಲಿ ಇಲ್ಲವೇ ಕೃಷಿಕರಾಗಲಿ ಒಡನೆ ಸದರಿ ಹುಳವನ್ನು ನಾಶಪಡಿಸುವ ಏರ್ಪಾಡು ಮಾಡದಿದ್ದರೆ “ಉತ್ತಮ ಮತ್ತು ಬಿಕ್ಕುವ” ಈ ಎರಡು ವಿಧಕ್ಕೂ ಬರುವ ವರ್ಷಬಾಧಕ ಬರದಿರಲಾರದೆಂದು ಒಂದು ಬಾತ್ಮಿ.

ಪ್ರೆಜರ್ ಪ್ಯಾಟಿ ನಾಡು ಕಚೇರಿಯಲ್ಲಿ ಶ್ಯಾನುಭೋಗರಾಗಿದ್ದ ಕಲ್ಲುಮಾಡನ ಅಪ್ಪಚ್ಚನವರು ಮೃತಪಟ್ಟದ್ದರಿಂದ ಅವರ ಬದಲಿಗೆ ನಾಪೋಕ್ಲು ನಾಡು ಕಚೇರಿ ಶ್ಯಾನುಭೋಗರು ಮ॥ ಮಾಚಿಮಾಡ ಮಂದಣ್ಣನವರನ್ನು ಕಳುಹಿಸಿರುವರು.

ಶ್ರೀ ಶಿವಾನಂದಸೂನು, ಬಂಕಾಪುರ, ಜಿ. ಧಾರವಾಡ ಎಂಬವರು ಭುವನೇಶ್ವರಿ ಎಂಬ ಕವಿತಾಮಯ ಮಾಸಪತ್ರಿಕೆಯನ್ನು ಕನ್ನಡ ಸಾಹಿತ್ಯ ಸೇವೆಯ ಉದ್ದೇಶದಿಂದ ಪ್ರಕಟಿಸಿರುವ ಕಾರಣ ಕನ್ನಡ ಭಾಷಾಭಿಮಾನಿಗಳೆಲ್ಲರೂ ಅಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್ ಮೈಸೂರು ಎಂಬವರ 1924 ನೇ ಸಂವತ್ಸರದ ಕ್ಯಾಲೆಂಡರು ಬಹಳ ಸುಲಭ ಕ್ರಯದಲ್ಲಿ ವಿಕ್ರಯಮಾಡುತ್ತಾರೆಂತ ತಿಳಿಸಿರುವುದರಿಂದ ಅಪೇಕ್ಷೆ ಇರುವವರು ಒಂದಾಣೆ ಪೋಸ್ಟೇಜು ಅವರಿಗೆ ಕಳುಹಿಸಿಕೊಟ್ಟರೆ ಒಂದು ಮಾದ್ರಿ ಕ್ಯಾಲೆಂಡರು ಕಳುಹಿಸಲ್ಪಡುವುದು.

[illegible] 8 [illegible] ಸ್ವಚಿತ್ರಿಗೆ [illegible] ಹೋಗಿ [illegible] ಪತ್ರೆ ಇಲ್ಲವಾಗಿಯೂ ಕಳೆದ ವರ್ಷವೂ ಸಹ ಇದೇ ಸ್ಥಳದಲ್ಲಿ ಸದರಿ ಜಾತ್ರೆಯ ದಿನ ಒಬ್ಬ ಕ್ರಿಶ್ಚಿಯನ್ [illegible] ಹೋದವನಾಗಿಯೂ [illegible] ತಿಳಿಯುತ್ತೆ

ಕಳೆದ ಘೋರವಾದ ಮಳೆಯ ಪ್ರವಾಹದ ದೆಸೆಯಿಂದ ನಷ್ಟ ಮತ್ತು ಕಷ್ಟಕ್ಕೊಳಗಾಗಿ ಕೇವಲ ಗರೀಬರಾದ ಹಕ್ಕುಗಟ್ಟ ನಾಡು ಸಿಟ್ಟೂರು ಗ್ರಾಮದ ಅದೇಂಗಡ ಜಾಗಪ್ಪನವರಿಗೆ 30 ರೂಪಾಯಿ ಮನೆ ರಿಪೇರಿಗೂ ಕೋವಿಗಾಗಿ ಹಾತೆ ನಾಡು ಬೆಟ್ಟೋಳಿ ಗ್ರಾಮದ [illegible] 7 ವರ್ಷ ಪ್ರಾಯದ ಮಂದುಗಾಗಿ ಹತ್ತು ರೂಪಾಯಿ ದೇವರ ಖರ್ಚಿಗೂ ಬೇಂಗು ನಾಡು ಕುಯ್ಯಂಗೇರಿ ನಾಡು ಐತಿಚಂಡ ಗ್ರಾಮದ ಸರವಂಡ ಬಿದ್ದಪ್ಪನವರಿಗೆ ಮೂವತ್ತು ರೂಪಾಯಿ ಧರ್ಮ ಮಾಡಿದ ಒಗ್ಗ ಕೊಡಗು ರಿಲೀಫ್ ಫಂಡಿನಿಂದ ಧರ್ಮಾರ್ಥವಾಗಿ ಕೊಡಲ್ಪಟ್ಟಿತು.

ಶ್ರೀ ಕಾವೇರಿ ಮೋಟಾರ್ ಬಸ್ ಕಳೆದ ತಾರೀಖು 8 ನೇ ದಿನದ ಮಧ್ಯಾಹ್ನದಿಂದ ಮಡಿಕೇರಿಗೆ ಬಂದ. [illegible] ದಿವಸವೇ ತಾ॥ 9 ರ ವಿಕ್ಟೋರಿಯ ಮೋಟಾರ್ ಸರ್ವಿಸ್ ಮಡಿಕೇರಿಯಿಂದ ವೀರರಾಜೇಂದ್ರಪ್ಯಾಟೆಗೆ ಓಡುವುದನ್ನು ನಿಲ್ಲಿಸಿಬಿಟ್ಟಿದ್ದರಿಂದ ಪ್ರಯಾಣಿಕರಿಗೆ ಬಹಳ ಅನಾನುಕೂಲವಾಗಿದೆ

ಈಗ ಸುಮಾರು ದಿವಸಗಳಿಂದ ಬೆಳಿಗೆ ತಕ್ಕಂಥಾ ಮಳೆಯು ಹೊಡೆಯದೆ ಬೆಳೆಯು ಹೀನಸ್ಥಿತಿಗೆ ಬರುತ್ತಾ ಇದೆ

ಶ್ರೀ ಕಾವೇರಿ ಮೋಟಾರು ಸರ್ವಿಸ್ ಈಗ ವಡೆ ಮಡಿಕೇರಿಯಿಂದ ವೀರರಾಜೇಂದ್ರ ಪ್ಯಾಟೆಗೆ ಓಡಲು ಪ್ರಾರಂಭವಾಗಿರುವುದು ಇದಕ್ಕೆ ಮ॥ ಕೊಂಗಂಡ ಎಂ ಸುಬ್ಬಯ್ಯನವರನ್ನು ಆಫೀಸು ಮೇನೇಜರಾಗಿ ನೇಮಿಸಿರುತ್ತಾರೆ

ಕಳೆದ ತಾರೀಖು 12 ನೇ ದಿವಸ ದೀಪಾವಳೀ ಹಬ್ಬದ ಸಮ್ಮಂದ ಪ್ರೇಜರ್ ಪ್ಯಾಟೆಯಲ್ಲಿ ದನಗಳ ಮತ್ತು ಹಸುರು ವಾಣಿಗಳ ಪ್ರದರ್ಶನವು ಶುರುವಾಗಿ ತಾರೀಖು 14 ಕ್ಕೆ ಮುಕ್ತಾಯವಾಯಿತು

ಮಡಿಕೇರಿಯಲ್ಲಿ ಕೊಡಗಿನ ಹಾಕಿ ಟೋರ್ನಮೆಂಟ್ ಈ ಕೆಳಗೆ ನಮೂದಿಸಿದ ತಾರೀಖುಗಳಲ್ಲಿ ನಡೆಯಿತು ತಾ॥ 5-11-23 ರಲ್ಲಿ ಎಲಿಮೆಂಟರಿ ಸ್ಕೂಲ್ ಮತ್ತು ಅಮ್ಮತ್ತಿ ಪಬ್ಲಿಕ್ ಟೀಮಿಗೂ ಪಂದ್ಯಾಟ ನಡೆದು ಅದರಲ್ಲಿ ಎಲಿಮೆಂಟರಿ ಸ್ಕೂಲ್ ಟೀಮು ಗೆದ್ದಿತು ತಾ॥ 6-11-23 ರಲ್ಲಿ ಬಾಲಸಮಾಜ ಎ ಟೀಮೂ ಮತ್ತು ಮಹದೇವಪ್ಯಾಟೆ ಯೂನಿಯನ್ ಟೀಮೂ ಆಡಿ, ಅದರಲ್ಲಿ ಬಾಲಸಮಾಜ ಎ ಟೀಮಿನವರು ಗೆದ್ದರು. ತಾ॥ 7-11-23 ರಲ್ಲಿ ನಾಪೋಕ್ಲು ಟೀಮು ಮತ್ತು ವೀರರಾಜೇಂದ್ರಪ್ಯಾಟೆ ಸ್ಕೂಲ್ ಟೀಮು ಆಡಿ, ವೀರರಾಜೇಂದ್ರ ಪ್ಯಾಟೆ ಸ್ಕೂಲ್ ಟೀಮಿನವರು ಗೆದ್ದರು. ತಾ॥ 8-11-23 ರಲ್ಲು ಸೆಂಟ್ರಲ ಹೈಸ್ಕೂಲ್ ಎ ಟೀಮು ಮತ್ತು ಪಾರಿಸ್ಟ್ ಟೀಮು ಆಡಬೇಕಾಗಿತ್ತು ನಿಶ್ಚೈಸಿ ಪಾರಿಸ್ಟ್ ಟೀಮಿನವರು ಹಿಂತೆಗೆದುಕೊಂಡರು. ತಾ॥ 9-11-23 ರಲ್ಲಿ ಸೆಂಟ್ರಲ್ ಹೈಸ್ಕೂಲ್ ಬಿ ಟೀಮು ಮತ್ತು ಬಾಲಸಮಾಜ ಬಿ. ಟೀಮು ಆಡಿ ಅದರಲ್ಲಿ ಸ್ಕೂಲ್ ಬಿ. ಟೀಮು ಗೆದ್ದಿತು. ತಾ॥ 10-11-23 ರಲ್ಲು ವೀರರಾಜೇಂದ್ರ ಪ್ಯಾಟೆ ಸ್ಕೂಲ್ ಟೀಮು ಮತ್ತು ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಬಿ. ಟೀಮು ಆಡಿ. ವೀರರಾಜೇಂದ್ರ ಪ್ಯಾಟೆ ಟೀಮಿನವರು ಗೆದ್ದರು. ತಾ॥ 11-11-23 ರಲ್ಲಿ ಸೆಂಟ್ರಲ್ ಹೈಸ್ಕೂಲ್ ಎ. ಟೀಮು ಮತ್ತು ಬಾಲಸಮಾಜ ಎ. ಟೀಮು ಆಡಿ ಅದರಲ್ಲಿ ಬಾಲಸಮಾಜ ಟೀಮಿನವರು ಗೆದ್ದರು ತಾ॥ 12 ಮತ್ತು 13 ರಲ್ಲು ಆಡಿದ್ದರ ಫಲಿತಾಂಶವನ್ನು ಬರುವ ವಾರ ಪ್ರಕಟಿಸುವೆವು.

ಮಡಿಕೇರಿಯಲ್ಲಿ ರಿಟಯರ್ಡ್ ಫಾರೆಸ್ಟ್ ಹೆಡ್‌ಕ್ಲಾರ್ಕ್ ಆಗಿದ್ದ ಮ॥ ಪಾತಿಕೃಷ್ಣಯ್ಯನವರ ಮಗ ಮ॥ ಎ ಕೆ ಕೃಷ್ಣಯ್ಯನವರು ಬೊಂಬಾಯಿಯಲ್ಲಿ ಆದರ ಬಿ ಎ. ಎಲ್. ಎಲ್. ಬಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿಷಯ ಸಂತೋಷಪಡುತ್ತೇವೆ:

ಅಗ್ರಲೇಖನದಲ್ಲು ಕೌನ್ಸಿಲ್ ಮೆಂಬರುಗಳಿಗೆ ಓಟು ಕೊಡುವ ಸೆಂಟರು (ಸ್ಥಳ) ಗಳನ್ನು ಇನ್ನೊಂದು ಕಡೆ ಪ್ರಕಟಿಸುತ್ತೇವೆ ಎಂತ ಬರೆದಿದ್ದೆವು. ಆದರೆ ಪಟ್ಟಿಯು ಸಮಯಕ್ಕೆ ಸರಿಯಾಗಿ ಸರಕಾರದವರಿಂದ ದೊರಕದ್ದರಿಂದ ಇನ್ನೊಂದು ವಾರ ಪ್ರಕಟಿಸಲ್ಪಡುತ್ತದೆ.

ಪಾರ್ಲಿಮೆಂಟ್ ಮೀಟಿಂಗ್ (ಸ್ವಂತ ಬಾತ್ಮಿದಾರರಿಂದ) ಎಂಬ ಲೇಖನದಲ್ಲು ಮ॥ ಅಡ್ಡಂಡ ಕುಶಾಲಪ್ಪನವರ ಭಾಷಣವನ್ನು ಇನ್ನೊಂದು ಕಡೆ ಕೊಟ್ಟಿದೆ ಎಂತ ಬರೆದಿದ್ದೆವು ಆದರೆ ಸದ್ರಿ ಕುಶಾಲಪ್ಪನವರು ಅವರ ಭಾಷಣದ ಸಾರಾಂಶವನ್ನು ಕಳುಹಿಸದ್ದರಿಂದ ಬರುವ ವಾರ ಪ್ರಕಟಿಸುವೆವು.

ಹಿಂದೂದೇಶ.

ಅಲ್ಲಹಾಬಾದಿನ ಮುನಸೀಪಲ್ ಬೋರ್ಡಿನ ವಿಷ[illegible]ಗ ಸಮಯದಲ್ಲಿ ಶ್ರೀಯುತ ಕೃಷ್ಣಕಾಂತ ಮಾಲವೀಯ[illegible] ಸ್ವೈಸರಾಯರು ಅಲಹಾಬಾದಿಗೆ ಬಂದಾಗ ಯಾವ ವಿಧ[illegible]ದ ಮಾನಸನ್ಮಾನಗಳನ್ನು ಮಾಡಕೂಡದೆಂದು ಒಂದು ಸ[illegible] [illegible]

ಹಿಂದೂ ಮುಸಲ್ಮಾನರ ಐಕ್ಯಕ್ಕಾಗಿ [illegible] ಶ್ರಮ [illegible] ಸಹಾಯ ಮಾಡಿ [illegible] ಲ್ಲಿ ಕೆಲವರೂ ಅವರ ಅನುಯಾಯಿಗಳೂ ಹಿಂದೂ ಧರ್ಮ[illegible]ದವರನ್ನು [illegible] ಶಬ್ದಗಳಿಂದ ದೂಷಿಸುತ್ತಿರುವುದರಿಂದ ಇವ[illegible]ರಲ್ಲಿ ಐಕ್ಯಭಂಗ ವುಂಟಾಗಲು ಅವಕಾಶವೀಯದಂ[illegible] ಮೌಲಾನಾ ಮಹಮ್ಮದಾಲಿ [illegible] ಸಪಡಿ[illegible]ಬೇಕೆಂದು ಸ್ವಾಮಿ ಶ್ರದ್ಧಾನಂದರು [illegible] ಪತ್ರಿಕೆಗೆ ಬ[illegible]ದಿರುವರು.

ಅಕಾಲಿಗಳು ಮುಖಂಡನಾದ ದ[illegible]ನನ್ನು [illegible] ಹೋಲಿನಲ್ಲಿ ಹಿಡಿದಾಗ ಅವನ ಕಾವಲಿಗಾಗಿದ್ದ ಬಾಡಿ ಗಾರ್ಡ್ ಆತನೂ ಎಂ. ಪೋಲೀಸರು ಹಿಡಿದರು.

2[illegible] ನೇ ತಾರೀಕಿನಲ್ಲಿ ವೈಸರಾಯರ ಲಖ್ನೋದಲ್ಲಿ ಸಂಚರಿಸಿದಾಗ ಲ್ಲೆಲ್ಲೆಯೂ ಹರತಾಳವು ಆಚರಿಸಲ್ಪಟ್ಟಿತು.

ಲಾಲಾ ಲಜಪತರಾಯರೂ ಡಾ॥ ಅನ್ಸಾರಿಯವರೂ ಸೇವಾ ರಾಷ್ಟ್ರೀಯ ಕರಾರಿನ ಕರ್ಡ ಇತ್ಯಾದಿಗಳನ್ನು ಸಿದ್ಧಪಡಿಸಿದರು

ಬಂಗಾಳ ಸರ್ಕಾರದ ಮಂತ್ರಿ ಮಂಡಲಿಯವರೂ ತಮ್ಮ ಪದವಿಗಳಿಗೆ ರಾಜೀನಾಮೆ ಕೊಟ್ಟರು.

ಕುಂಭಕೋಣದ [illegible] ಪ್ರಸಿದ್ಧ ಶ್ರೇಷ್ಠ ವರ್ತಕನಾಗಿದ್ದ ಒಬ್ಬ ಶ್ರೀವೈಷ್ಣವ ಬ್ರಾಹ್ಮಣನು ಕಳದವಾರ ಬೇಕಂದು ರೈಲ್ ಗಾಡಿಗೆ ಸಿಕ್ಕಿ ಆತ್ಮಹತ್ಯ ಮಾಡಿಕೊಂಡನು. ಕಾರಣವೇನೆಂದು ತನಿಖೆ ಮಾಡಿದ್ದರಲ್ಲಿ ಅವನಿಗೆ ರೇಷ್ಮೆ ವ್ಯಾಪಾರದಲ್ಲಿ ನಷ್ಟ ಸಂಭವಿಸಿ 60,000 ರೂಪಾಯಿ. ದೇಣೆ ಇದ್ದಂತೆಯೂ, 10,000 ರೂಪಾಯಿ ಸಲ್ಲಿಸಬೇಕಾಗಿದ್ದ ವಾಯಿದೆ ಕಳೆದುಹೋಗಿದ್ದರಿಂದ ಅವನ್ನು ಒದಗಿಸಲಾರದೆ ಈರೀತಿ ಆತ್ಮಹತ್ಯ ಮಾಡಿಕೊಂಡಂತೆಯೂ ತಿಳಿಯಿತು

ರಾಮಚಂದ್ರ ದಿವಾಕರ್ ಮೇಲೆ 124 ನೇ ಸೆಕ್ಷನ್ನಿನಂತೆ ರಾಜದ್ರೋಹದ ಆರೋಪದಿಂದ ವಾರಂಟು ಹೊರಟಿದೆ. ದೇಶಿಲಾವಣಿ ಎಂಬ ಪುಸ್ತಕವನ್ನು ಮುದ್ರಿಸಿದ ಆರೋಪವೇ ಕಾರಣವೆಂದು ಕೇಳುತ್ತೇವೆ

ಮೈಸೂರಿನಲ್ಲಿ ಅಕ್ಟೋಬರ್ ತಾರೀಕು 31 ರಿಂದ ನವಂಬರ್ 6 ರ ವರೆಗೆ ಪ್ಲೇಗಿನಿಂದ ಒಟ್ಟಿಗೆ 71 ಮರಣಗಳು ಸಂಭವಿಸಿವೆ

ಅಮೃತಸರದಲ್ಲಿ ಅಕಾಲಿಗಳ ವಿಚಾರಣೆಗಾಗಿ ಮಾಲವೀಯರೂ ಪಂಡಿತ ಮೋತಿಲಾಲ್‌ನೆಹರೂ, ಜವಾಹರ್ ಲಾಲ್‌ನೆಹರೂ ಮತ್ತು ಶ್ರೀನಿವಾಸ ಅಯ್ಯಂಗಾರರೂ ಬರುವರೆಂದು ವರ್ತಮಾನ. ಸಿ. ಆರ್. ದಾಸರು 27 ನೇ ತಾರೀಕಿನಲ್ಲಿ ಬರಲಿಕ್ಕಿರುವರು.

ಮೌಲಾನಾ ಅಬ್ದುಲ್ ಅಸದ್‌ರವರಿಂದ ಪ್ರೇರೇಪಿಸಲ್ಪಟ್ಟು ಹಿಂದೂ ಮುಸಲ್ಮಾನ ಕಾಂಗ್ರೆಸ್ ಮುಖಂಡರ ಸಭೆಯೊಂದು ಇದೇ 30 ನೇ ತಾರೀಕಿಗೆ ಡೆಲ್ಲಿಯಲ್ಲಿ ನಡೆಸಲು ನಿಶ್ಚಯಿಸಿದ್ದದ್ದು 15 ದಿವಸಕ್ಕೆ ಮುಂಚಿತವಾಗಿಯೇ ಜರಗುವುದು

ಆರುಜನ ಪಾರ್ಸಿಗಳು ತಂತಮ್ಮ ಬೈಸಿಕಲ್ಲುಗಳಲ್ಲಿ ಪ್ರಪಂಚವನ್ನು ಸುತ್ತಲು ಹೊರಟಿರುವರು. ಇವರು ತಮ್ಮ ಪ್ರಯಾಣವನ್ನು 3 ವರ್ಷಗಳೊಳಗಾಗಿ ಮುಗಿಸಬಹುದೆಂದು ಊಹಿಸಿರುವರು.

ವಿದೇಶ

ಮುಖ್ಯಮಂತ್ರಿಗಳಾಗಿದ್ದ ಬೋನರ್‌ಲಾರವರು ಲಂಡನಿನಲ್ಲಿ ಶ್ವಾಸಕೋಶರೋಗದಿಂದ ಮೃತ್ಯುವಶರಾದರು ಇವರ ಸಂಸ್ಕಾರಕ್ಕೆ ಅನೇಕ ಜನರು ಸೇರಿದ್ದರು.

ಲೀಪ್ಜಿಗ್‌ನಲ್ಲಿ ಆದ ಮೋಟಾರು ಪ್ರದರ್ಶನದಲ್ಲಿ ವರ್ಷವರ್ಷವೂ ಮೋಟಾರುಗಳ ರಫ್ತು ಆದರೆ ಪರದೇಶಗಳಿಗೆ ಹೋಗುವುದು ಹೆಚ್ಚಾಗುತ್ತಿವೆಯಂತೆ.

ಲಂಡನಿನಲ್ಲಿ ನವಂಬರ್ 4 ನೇ ತಾರೀಕು ಸಾಯಂಕಾಲ 10–30 ಕ್ಕೆ ಭಯಂಕರವಾದ ಒಂದು ಭೂಕಂಪ ಉಂಟಾಯಿತು. ಅದರ ರಭಸವು ಸುಮಾರು 11,000 ಕಿಲೋಮೀಟರಿನಷ್ಟು ವಿಸ್ತೀರ್ಣದ ವರೆಗೆ ತಿಳಿಸಿದೆಯಂತೆ

ವಿಲಾಯತಿಯ ಮೆಂಚೆಸ್ಟರ್ ಎಂಬಲ್ಲಿ ಅಸಹ್ಯಕರವೂ ದುರ್ನೀತಿಭೋದಕವೂ ಆದ ಭಾವಚಿತ್ರಗಳನ್ನು ಮಾರುತ್ತಿದ್ದವನೊಬ್ಬನಿಗೆ 50 ಪೌಂಡು ಜುಲ್ಮಾನೆಯಾಯಿತು ಆ ಚಿತ್ರಗಳನ್ನು ಬೆಳಕಿನಲ್ಲಿ ನೋಡಿದರೆ ಸಾಧಾರಣ ಚಿತ್ರಗಳಂತೆ ತೋರುತ್ತಲಿದೆಯೆಂತಲೂ, ಆದರೆ ಮೇಣದ ಬತ್ತಿಯ ದೀಪದ ಪ್ರಕಾಶ ಬಿದ್ದಾಗ ಬೆತ್ತಲೆಯಾದ ಸ್ತ್ರೀ ಪುರುಷರ ಚಿತ್ರಗಳು ಚಲಿಸುತ್ತಿದ್ದಂತೆ ಕಂಡುಬರುತ್ತಿದ್ದುವೆಂತಲೂ ತಿಳಿದು ಬರುತ್ತದೆ!

ಆಸ್ಟ್ರೇಲಿಯಾದಲ್ಲಿ ಕಮ್ಯೂನಿಷ್ಟರು ಸುಪರ್‌ವೈಸರುಗಳನ್ನು ಕೆಲಸದಿಂದ ತೆಗೆದುಹಾಕದಿದ್ದುದಕ್ಕಾಗಿ 650 ಜನ [illegible]ಲೀಸಿನವರು ತಮ್ಮ ಕೆಲಸಕ್ಕೆ ಮುಷ್ಕರ ಹಿಡಿದಿರುವರು ಒಹಳ ಅನಾನುಕೂಲಗಳು ಸಂಭವಿಸುತ್ತಿವೆ ರೈಲ್ವೇ ಕಂಬಗಳ[illegible]

ನನಗೆ ಬೇಸರವಾಗಲಿಲ್ಲ ಇಲ್ಲಿಯ ವಿಚಾರ ನಾನು ಏಕೆ ಹೇಳಬೇಕು ? ಗೊತ್ತಿದೆಯಷ್ಟೆ ! ನನ್ನ ಈಗಿನ ಸ್ಥಿತಿಯನ್ನು ನೀವು ಕಾಣುತ್ತೀರಷ್ಟೆ. ನಾನು ಹೇಳಬೇಕಾದ್ದಲ್ಲಾ. [illegible] ನನಗೆ [illegible]

ನಾ ಹೇಳುವವರಿಗೆ ಆಯುರಾರೋಗ್ಯ ಕೂಡದವನ್ನಿತ್ತ, [illegible] ಕಾಲ ನಮ್ಮನ್ನಾಳುವ ಸಾಮರ್ಥ್ಯನನು [illegible] ವದಲ್ಲದೆ ಅವನ [illegible]

ಸರ್ದಾರ್ ವಲ್ಲಭಭಾಯಿ ಪಟೇಲರ ಸಂದೇಶ.

'ನಮ್ಮ ಜೀವನ ಧ್ಯೇಯವು ಕರಗತವಾಗಿ ಆ ಉತ್ಸವದಲ್ಲಿ [illegible] ಸಂದರ್ಭದಲ್ಲಿ ಈ ಜಯಕ್ಕೆ ಕ[illegible] ಸ್ವಾತಂತ್ರ್ಯವೇದಿಕೆಯ ಲ್ಲಿ ಒಲಿದ [illegible] ಹುತಾತ್ಮರನ್ನು ನೆನೆಯುವದು ಪ್ರಥಮ ಕರ್ತವ್ಯವಾಗಿದೆ. ಸಾಯದೆ ಆ[illegible] ಬಾಕಿ ಉಳಿದಿರುವ ನಮಗೆ ಈ ದಿವಸವು ಗೌರವದ ದಿವಸವಾಗಿದೆ. ಹಿಂದೂದೇಶವನ್ನು ಸ್ವಾತಂತ್ರ್ಯದ ಗುರಿಗೆ ಮುಟ್ಟಿಸಿದುದಕ್ಕೆ ನಾವು ಹೆಮ್ಮೆಪಡಬೇಕು. ಗಾಂಧೀಜಿಯವರ ಮುಂದಾಳುತನದಲ್ಲಿ ಅಹಿಂಸಾ ಮಾರ್ಗದ ಈ ಸಾಧನೆಯ [illegible] ಇನ್ನು ಹೆಚ್ಚಿನ ಶೋಭೆ ಬಂದಿದೆ. ಈಗ ನಾವು ಮುಟ್ಟಿರುವ ಗುರಿಯು ನಮ್ಮ ಇಷ್ಟಿತ ಧ್ಯೇಯವಲ್ಲದಿದ್ದರೂ ಅದರ ಸಾಧನೆಗೆ ಯೋಗ್ಯರೀತಿ ಶ್ರಮಿಸುವ ಅವಕಾಶ ಇದೆ. ಈ ಮಹಾಖಂಡದ ಮಾನವಗಣದೊಡನೆ ಈ ಸ್ವಾತಂತ್ರ್ಯದಲ್ಲಿ ಭಾಗಿಗಳಾಗುವದು ಹರ್ಷದಾಯಕವಾಗಿದೆ. ಈ ವಿಶೇಷ ಸನ್ನಿವೇಶದಲ್ಲಿ ಮುಂದೆ ನಮಗೆ ಒದಗಲಿರುವ ಜವಾಬ್ದಾರಿಗಳನ್ನು ಮರೆಯಲು [illegible]ವದಿಲ್ಲ. ನಮಗೆ ಬಂದಿರುವ ಸ್ವಾತಂತ್ರ್ಯವನ್ನು ಅಂತರೀಕವಾಗಿ ಇಲ್ಲವೆ ಹೊರಗಿನಿಂದ ಯಾರೂ ಬಂದು ಕಸಿದುಕೊಳ್ಳದ ರೀತಿ ಕಾಪಾಡುವ ಪ್ರಯತ್ನವು ನಮ್ಮ ಪ್ರಥಮ ಕರ್ತವ್ಯ. ದೇಶದ ಮಹಾ ಮುಂದಾಳುಗಳಿಗಿರುವಷ್ಟೇ ಸ್ವಾತಂತ್ರ್ಯ [illegible] ಭದ್ರತೆ ನಮ್ಮ ದೇಶದ ದೀನದರಿದ್ರರಿಗೂ ಬರುವಂತಾಗಬೇಕು. ಕೂಲಿಗಾಗಿ ದಿನವಹಿ ದುಡಿಯುವವರಿಗೆ ಕೈಯಿಂದಾಗಿ ಶ್ರಮಿಸುವವರಿಗೆ ಅವರ ಶ್ರಮದ ಫಲವು ಯೋಗ್ಯರೀತಿ ದೊರೆಯುವಂತೆ ಮಾಡಬೇಕು. ನಮ್ಮ ದೇಶದ ಭವಿಷ್ಯವನ್ನು ರೂಪಿಸುವ ಭಾಗ್ಯ ನಮ್ಮ ಕೈಗೆ ಬಂದಿದೆ. ನಮ್ಮ ಆಶೆ ಆಕಾಂಕ್ಷೆಗಳಿಗೆ ಸರಿಯಾಗಿ ಅದನ್ನು ರೂಪಿಸಿಕೊಳ್ಳುವದು ನಮ್ಮ ಕರ್ತವ್ಯ. ಈ ಮಹಾಕಾರ್ಯಕ್ಕೆ ಪ್ರತಿಯೊಬ್ಬ ಭಾರತೀಯನೂ ತನ್ನ ಹೃತ್ಪೂರ್ವಕ ಬೆಂಬಲವನ್ನು ಕೊಡಬೇಕೆಂದು ಕೇಳುತ್ತೇನೆ. ಈ ಪವಿತ್ರ ಕಾರ್ಯವು ಸ್ವಾರ್ಥತೆ, ಅಂತರ್ಜಗಳ, ಸಂಕೀರ್ಣ ಮನೋಭಾವಗಳಿಂದ ಮಲಿನವಾಗದಿರಲಿ.

ನಮ್ಮ ಈ ಸುಂದರ ದೇಶದ ಶರೀರದಲ್ಲಿ ಅನೇಕ ಗಾಯಗಳಾಗಿದ್ದು ಅವುಗಳನ್ನು ಸ್ನೇಹಸೌಹಾರ್ದತೆಗಳಿಂದ ಗುಣಪಡಿಸಬೇಕಿದೆ. ಈ ವರೆಗೆ ನಮ್ಮವರಾಗಿದ್ದು, ನಮ್ಮೊಡನಿದ್ದು ಈಗ ಬೇರೆಯಾಗಿ ಪಾಕಿಸ್ತಾನದಲ್ಲಿರುವವರನ್ನು ಮರೆಯಲಾರೆವು. ಅವರ ಭವಿಷ್ಯದ ಬಗ್ಗೆ ನಾವು ಕಣ್ಣಿಟ್ಟು ಕಾದಿರುವೆವು. ಇವರು ಮುಂದೆ ಈ ಹಿಂದಿನಂತೆ ಆಪ್ತರಾಗಿ ಒಂದುಗೂಡಬಲ್ಲರು ಎಂಬುದು ಸಾಧ್ಯತೆಯಿದೆಯೆಂದು ನನ್ನ ನಂಬಿಕೆ. ಈ ದೃಷ್ಟಿಯಿಂದ ನಾಡಿನ ಸೇವೆಗಾಗಿ ಬದ್ಧಕಂಕಣರಾಗುವ ಪ್ರತಿಜ್ಞೆ ಮಾಡಬೇಕು. ದೇಶದ ಪ್ರತಿಯೊಬ್ಬನೂ ಅಂತೆಯೇ ಮಾಡಬೇಕಾಗಿದೆ.'

Reg No. M 1550,
'KODAGU MERCARA (Coorg)

ಕೊಡಗು

ಸಂಪಾದಕರ — ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ 4-8-0

ಸಂಪುಟ ೨.. | ತಾರೀಖು ..-..-೧೯೪೭ನೇ ಶುಕ್ರವಾರ | ಸಂಚಿಕೆ ೧..

[illegible] 'ಜೈ ಹಿಂದ್' [illegible] ಸಂಸ್ಥಾಪಕ ನೇತಾಜಿ ಬೋಸ್

[illegible] ಈ ಜಗತ್ತಿನ [illegible] ಸ್ವಾತಂತ್ರ್ಯ [illegible] ಅವರದ [illegible] ನಾ [illegible] ವರ್ಷವ [illegible] ನಿತ್ಯ [illegible] ಸ್ವಾತಂತ್ರ್ಯಕ್ಕಾಗಿ [illegible] ಸಾವಿರ [illegible] ಕೊಡಗಿನ [illegible] ಜಗತ್ತಿನ [illegible] ಭಾರತದ [illegible] ಸ್ವಾತಂತ್ರ್ಯದ [illegible] ಜಗತ್ತಿನ [illegible] ಜಪಾನ್ ಗಳಲ್ಲಿ [illegible] ಸ್ವಾತಂತ್ರ್ಯದ [illegible] ಸ್ವತಂತ್ರ [illegible] ಜಗತ್ತಿನ [illegible] ಜಗತ್ತಿನ [illegible] ಜೀವನದ [illegible] ದೇಶಕ್ಕೆ [illegible] ಅವರ [illegible] ಅವರ [illegible] ಬಾರದ [illegible] ನೋಡಿ [illegible] ಅವರ [illegible] ಬರಲಿಲ್ಲವೇ ?

ಕಾಂಗ್ರೆಸ್ ಅಧ್ಯಕ್ಷರಾದ ಕೃಪಲಾನಿಯವರ ಸಂದೇಶ.

ಅಖಂಡ ಭಾರತದ ರೂಪಿನಲ್ಲಿ ಸ್ವಾತಂತ್ರ್ಯ ಬರಲಿಲ್ಲವೆಂದು ನಿರಾಶರಾಗುವ ಕಾರಣವಿಲ್ಲ. ಕಾಂಗ್ರೆಸ, ವ್ಯಕ್ತಿಗತ ಸ್ವಾತಂತ್ರ್ಯ, ಸಮಾನ ಸಂದರ್ಭ ಮತ್ತು ಪ್ರತಿಯೊಬ್ಬ ನಾಗರೀಕನಿಗೂ ಯೋಗ್ಯ ಅವಕಾಶಗಳನ್ನು ಒದಗಿಸಿ ಆತನವನ ವ್ಯಕ್ತಿತ್ವವನ್ನು ಪರಿಪೂರ್ಣತೆಗೆ ಮುಟ್ಟಿಸುವ ಅವಕಾಶ ಕಲ್ಪಿಸಿಕೊಡುವ ಸಂಸ್ಥೆಯಾಗಿದೆ. ಅಗಸ್ಟ ೧೫, ಭಾರತ ಚರಿತ್ರೆಯಲ್ಲಿ ಚಿರಸ್ಮರಣೀಯವಾದ ದಿನ. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಹೆಣಭಾರವು ನಮ್ಮ ದೇಶದಿಂದ ಅಂದು ಎತ್ತಲ್ಪಡುವದು. ಅನೇಕ ಪೀಳಿಗೆಗಳ ಚಳವಳ, ತ್ಯಾಗಗಳ ಫಲವಾಗಿ ಸ್ವಾತಂತ್ರ್ಯ ಬಂದಿದೆ. ಈ ಸ್ವಾತಂತ್ರ್ಯಕ್ಕೆ ಕಾರಣರಾದ ಸರ್ವರನ್ನೂ ವಂದಿಸಿ ಗೌರವಿಸಬೇಕಾಗಿದೆ.

ಸ್ವಾತಂತ್ರ್ಯವನ್ನು ತಂದ ನಮ್ಮ ದೇಶದ ಈ ಕ್ರಾಂತಿಯು ಜಗತ್ತಿನ ಚರಿತ್ರೆಯಲ್ಲಿ ನವೀನವಾದುದು. ಇಷ್ಟೊಂದು ಅಲ್ಪ ರಕ್ತಪಾತ ಮತ್ತು ಜನನಾಶದಿಂದ ಯಾವುದೊಂದು ದೇಶವೂ ಸ್ವಾತಂತ್ರ್ಯ ಪಡೆಯಲಿಲ್ಲ. ಇದು ಪಾಶವೀಶಕ್ತಿಯ ಜಯವಲ್ಲ, ಆತ್ಮಶಕ್ತಿಯ ವಿಜಯ. ಈ ಸಾಧನೆಯು ಮಹಾತ್ಮರ ಚೈತನ್ಯದಾಯಕ ಮುಂದಾಳ್ತನದಲ್ಲಿ ಸಾಧ್ಯವಾಯಿತು. ಈ ರಾಷ್ಟ್ರಪಿತಾಮಹರಿಗೆ ನಮ್ಮ ಶರಣುಗಳು.

ಆದುದರಿಂದ ಹಿಂದೂದೇಶಕ್ಕೆ ಸ್ವಾತಂತ್ರ್ಯ ಒದಗಿಸಲು ಪ್ರಯತ್ನಿಸಿದರೂ ಅನಿವಾರ್ಯವಾಗಿ ಹಿಂದೂದೇಶದ ವಿಭಜನೆಗೆ ಒಪ್ಪಬೇಕಾಯಿತು. [illegible] ದಾಗಿದ್ದವರು ಎರಡಾಗಿ ಬಾಳಬೇಕಾಯಿತು. ಆದರೆ ಸ್ವಾತಂತ್ರ್ಯದ ಉದಯದಿಂದ ಮತ್ತೊಮ್ಮೆ ನಮ್ಮೆಲ್ಲರ ಐಕ್ಯತೆಯು ಹಿಂದಿನದಕ್ಕಿಂತಲೂ ಭದ್ರವಾಗಿ ಆದೀತೆಂದು ವಿಶ್ವಾಸವಿದೆ. ಕಳೆದ ಕೆಲವು ತಿಂಗಳುಗಳ ಘಟನೆಗಳು ನಮ್ಮನ್ನು ಚಿಂತೆಗೊಳಗಾಗಿಸಿದರೂ ಗಾಯಗೊಂಡ ಯೋಧನು ಜಯವಾರ್ತೆಯಿಂದ ಸಂತೋಷಿಸುವಂತೆ ಆನಂದಪಡುವ.

ನಮ್ಮ ಭವ್ಯ ಭವಿಷ್ಯವನ್ನು ರೂಪಿಸುವ ಇಲ್ಲವೇ ಕುರೂಪಗೊಳಿಸುವ ಹಕ್ಕು ನಮ್ಮಲ್ಲಿದೆ. ಜಾತಿ ಮತಭೇದವಿಲ್ಲದೆ ಈ ಜವಾಬ್ದಾರಿಯು ಪ್ರತಿಯೊಬ್ಬ ನಾಗರೀಕನ ಮೇಲಿದೆ. ಇಂದು ಶತ್ರುವು ಹೊರಗಿಲ್ಲ. ನಮ್ಮ ಜೊತೆಯಲ್ಲಿದ್ದಾನೆ. ಉಪವಾಸ, ಬಡತನ, ರೋಗ, ಅಜ್ಞಾನ, ಸ್ವಾರ್ಥತೆ ಈ ಶತ್ರುಗಳನ್ನು ಓಡಿಸಬೇಕಾಗಿದೆ. ಇವುಗಳನ್ನು ನಿವಾರಿಸಲೆತ್ನಿಸುವದು ಪ್ರತಿಯೊಬ್ಬ ಭಾರತೀಯನ ಪವಿತ್ರ ಕರ್ತವ್ಯ. ಈ ಯುದ್ಧಕ್ಕೆ ಹೆಚ್ಚಿನ ಸ್ಥೈರ್ಯ, ಶಿಸ್ತು ಬೇಕಾಗಿದೆ.

ಸ್ವಾತಂತ್ರ್ಯದ ಪರಿಣಾಮ.

ಇದೇ ತಿಂಗಳು ೧೫ನೇ ತಾರೀಖಿನ ದಿವಸ ಬ್ರಿಟಿಷರು ಹಿಂದುಸ್ಥಾನದ ಮೇಲಿದ್ದ ತಮ್ಮ ಅಧಿಕಾರವನ್ನು ಬಿಟ್ಟುಕೊಟ್ಟರು. ಹಿಂದುಸ್ಥಾನದಲ್ಲಿ ಬ್ರಿಟಿಷರ ಧ್ವಜವಾದ 'ಯೂನಿಯನ್ ಜಾಕ್' ಧ್ವಜವು ಹಾರಾಡುತ್ತಿದ್ದಲ್ಲೆಲ್ಲ, ತ್ರಿವರ್ಣ ಮತ್ತು ಅಶೋಕ ಚಕ್ರವನ್ನೊಳಗೊಂಡ ಹಿಂದೀ ಧ್ವಜವು ಹಾರಿಸಲ್ಪಟ್ಟಿತು. ಇದೇ ಧ್ವಜದಂತಿದ್ದ ಕಾಂಗ್ರೆಸ್ ಧ್ವಜಕ್ಕೆ ಇದು ವರೆಗೆ ಮೂಗು ಮುರಿಯುತ್ತಿದ್ದ ವೈಸರಾಯರೇ ಮೊದಲಾದವರು, ಸರ್ವ ಸರಕಾರೀ ಅಧಿಕಾರಿಗಳು ಅದನ್ನು ಸರಕಾರಿ ಕಚೇರಿಗಳ ಮೇಲೆ ಹಾರಿಸಿ ಅದಕ್ಕೆ ವಂದನೆಗಳನ್ನು ಸಮರ್ಪಿಸಿದರು.

ತಮ್ಮವರ ಅಧಿಕಾರ ಸಮಾಪ್ತಿಯು ಹಿಂದುಸ್ಥಾನದಲ್ಲಾದುದನ್ನು ಕಂಡು ನಮ್ಮಲ್ಲಿ ವಾಸಿಸಿದ, ಸರಕಾರಿ ಉದ್ಯೋಗಗಳಲ್ಲಿ ಅಧಿಕಾರನಡೆಸುತ್ತಿದ್ದ ಯೂರೋಪು ವಾಸಿಗಳು, ವಿಶೇಷತಃ ಇಂಗ್ಲಿಷರು ಕಾಂತಿಹೀನರಾದರು. ಅವರಲ್ಲಿ ಕೆಲವರು 'ಬಂದದ್ದನ್ನು ಸಂತೋಷದಿಂದ ಎದುರಿಸುವವನೇ ಜಾಣ' ಎಂಬ ನೀತಿಗನುಸರಿಸಿ ಹಿಂದುಸ್ಥಾನದಲ್ಲಿಯೇ ಉಳಿದು ಹಿಂದೀಯರಲ್ಲಿ ಸಮರಸರಾಗಿ ನಡೆದುಕೊಳ್ಳಲು ಸಿದ್ಧರಾಗಿದ್ದಾರೆ. ಹಿಂದೀಯರನ್ನು ತಮಗಿಂತ ಕಡಿಮೆ ಪಟ್ಟದವರೆಂದು ತಿಳಿಯುತ್ತ ಬಂದ ಕೆಲವು ಯೂರೋಪ್ ವಾಸಿಗಳು, ತಮ್ಮ ಹಿಡಿತವು ಹಿಂದುಸ್ಥಾನದ ಮೇಲಿಂದ ತಪ್ಪಿತೆಂಬುದನ್ನು ನೋಡುತ್ತಲೇ, ಇಲ್ಲಿಂದ ತಮ್ಮ ದೇಶಕ್ಕೆ ಕಾಲ್ತೆಗೆಯಲು ನಿಶ್ಚಯಿಸಿದರು.

ಅಧಿಕಾರದಲ್ಲಿ ಸರ್ವವೂ ಅಡಕವಾಗಿದೆಯೆಂಬುದು ಸುಳ್ಳಲ್ಲ. ಈ ಸ್ಥಿತ್ಯಂತರವು ಹಿಂದುಸ್ಥಾನದಲ್ಲಿ ಆಗುತ್ತಲೇ ಜಗತ್ತಿನಲ್ಲಿಯ ಸರ್ವ ದೇಶಗಳು ಹಿಂದುಸ್ಥಾನವನ್ನು ಇಂದು ಹೊಗಳುತ್ತಿವೆ. ಅದರ ಬೆನ್ನು ಚಪ್ಪರಿಸುತ್ತವೆ. ತಮ್ಮ ದೇಶಗಳ ವ್ಯಾಪಾರ ಸಂಬಂಧವೇ ಮೊದಲಾದವುಗಳ ಬಗ್ಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲು ಮುಂದೆ ಬರುತ್ತಿವೆ. ರಾಯಭಾರಿಗಳನ್ನು ಪರಸ್ಪರರಲ್ಲಿ ನಿಯಮಿಸಿಕೊಳ್ಳುವ ಕಾರ್ಯವು ಭರದಿಂದ ನಡೆಯುತ್ತಿದೆ

ಈ ಮೊದಲು ಹಿಂದುಸ್ಥಾನದ ಮಾತೆಂದರೆ ಜಗತ್ತಿನಲ್ಲಿ ಬೆಲೆಯೇ ಇದ್ದಿಲ್ಲ. ಈ ದೇಶದ ಜನರಿಗೆ ಇತರ ದೇಶಗಳಲ್ಲಿ ಮಾನವನ್ನನೀಗಳಿದ್ದಿಲ್ಲ. ಈ ದೇಶದ ಪ್ರಜೆಗಳಿಗೆ ಪರದೇಶಗಳಲ್ಲಿ ಆಗುವ ಅನ್ಯಾಯಗಳ ಕಡೆಗೆ ಲಕ್ಷ್ಯಗೊಡುವವರೇ ಇದ್ದಿಲ್ಲ. ಈಗ ಮಾತ್ರ ಸರ್ವಪರಿಸ್ಥಿತಿಯು ಹಾ ಹಾ ಅನ್ನುವದರೊಳಗಾಗಿ ಸ್ಥಿತ್ಯಂತರ ಹೊಂದಿದೆ. ಇಂದು ಹಿಂದುಸ್ಥಾನದ ಜನತೆಂದರೆ ಕಣ್ಣೆತ್ತಿ ನೋಡುತ್ತಿದ್ದಾರೆ. ಹಿಂದುಸ್ಥಾನದ ಪ್ರತಿನಿಧಿಯೆಂದರೆ ಲಕ್ಷ್ಯಪೂರ್ವಕವಾಗಿ ವಿಚಾರಮಾಡಿ ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದಾರೆ. ದಕ್ಷಿಣ ಆಫ್ರಿಕೆಯ ಸ್ಮಟ್ಸರಂಥವರು ಕೂಡ ತಾವು ಇದು ವರೆಗೆ ಹಿಂದೀಯರ ಬಗ್ಗೆ ಅನುಸರಿಸಿದ ಧೋರಣದ ಬಗ್ಗೆ ಪುನರ್ವಿಮರ್ಶೆ ಮಾಡಲು ಸಿದ್ಧರಾಗಿದ್ದಾರೆ. ಇಷ್ಟು ಬೇಗನೆ ಹಿಂದುಸ್ಥಾನವು ಸ್ವತಂತ್ರವಾಗುವುದೆಂದು ಅವರಿಗೆ ಪಾಪ! ಗೊತ್ತಿರಲಿಕ್ಕಿಲ್ಲ. ಗೊತ್ತಾಗಿದ್ದರೆ ಅವರು ಆ ರೀತಿಯ ಅನ್ಯಾಯ ಕಾಯಿದೆಯನ್ನು ಮಾಡುವ ಕಾರ್ಯಕ್ಕೆ ಕೈಯನ್ನೇ ಹಾಕುತ್ತಿದ್ದಿಲ್ಲ. ಜಾಗತಿಕ ವ್ಯವಸ್ಥೆಗೆ ಸಂಬಂಧಪಟ್ಟ ಯಾವುದೇ ಸಭೆಗೆ ಇಂದು ಹಿಂದುಸ್ಥಾನಕ್ಕೂ ಆಮಂತ್ರಣವು ಬರುತ್ತಿದೆ

ಬಿಳಿ ಬಣ್ಣದವರು ಹೆಚ್ಚು, ಕರಿ ಬಣ್ಣದವರು ಕಡಿಮೆ ಎಂಬ ವಿಚಾರವು ಇದು ವರೆಗೆ ಇತ್ತು. ಈ ಬೆಲೆಯ ಸಮಾಚಾರವು ಕೂಡ ಸ್ವಾಭಾವಿಕವಾದುದಲ್ಲ ಅದು ಮನುಷ್ಯ ನಿರ್ಮಿತವಾದುದೆಂಬುದಕ್ಕೆ ಇಂದು ನಮ್ಮಲ್ಲುಂಟಾದ ಪರಿಸ್ಥಿತಿಯೇ ಸಾಕ್ಷಿ. ಬ್ರಿಟಿಷರು ಹಿಂದುಸ್ಥಾನದಲ್ಲಿ ಕಾಲಿಡುವುದಕ್ಕಿಂತ ಮೊದಲು ಈ ದೇಶದಲ್ಲಿ ಕರೀಬಣ್ಣಕ್ಕೆ ಹೆಚ್ಚಿನ ಬೆಲೆಯಿತ್ತು. ಗಡ್ಡ ಬಿಟ್ಟುಕೊಂಡಿದ್ದ ಬಿಳಿ ಜನ ವ್ಯಾಪಾರಿಗಳು ನಮ್ಮ ದೇಶದ ಅರಸರ ಮುಂದೆ ಬಂದು ಬಗ್ಗಿ ನಮಸ್ಕಾರ ಮಾಡುತ್ತಿದ್ದರು ಆಗ ಆ ಬಿಳಿ ಬಣ್ಣಕ್ಕೆ ಏನೂ ಬೆಲೆಯಿದ್ದಿಲ್ಲ. ಸಾವಕಾಶವಾಗಿ ಬ್ರಿಟಿಷರು ನಮ್ಮ ದೇಶದ ಅಧಿಕಾರವನ್ನು ಆಕ್ರಮಿಸಿ ಮೆರೆಯಲು ಹತ್ತಿದ ಬಳಿಕ ಈ ವಿಚಾರದಲ್ಲಿ ವ್ಯತ್ಯಾಸವಾಯಿತು. ಬಿಳಿ ಬಣ್ಣದವರು ತ್ರಿಕಾಲದಲ್ಲಿಯೂ ಶ್ರೇಷ್ಠರು, ಆಳುವುದಕ್ಕೆ ಅವರೇ ಅರ್ಹರು, ಜಾಣರು, ಚತುರರು, ಉದಾರಿಗಳು ಎಂಬ ಕಲ್ಪನೆ ಮತ್ತು ಭಾವನೆಗಳು ನಮ್ಮಲ್ಲಿ ರೂಢವಾದವು

ಬ್ರಿಟಿಷರ ಅಧಿಕಾರವು ಹೋಗುತ್ತಲೇ ಅವರ ನಿಜ ಸ್ವರೂಪವು ಇಂದು ಕಾಣುತ್ತಿದೆ. ಅವರ ಬಣ್ಣವು, ಅವರ ಶ್ರೇಷ್ಠತೆಯನ್ನು ತೋರಿಸುವುದಕ್ಕಾಗಿ ಬಿಳಿದಾಗಿದ್ದಿಲ್ಲವೆಂಬುದು ಮತ್ತು ಅವರು ಚಳಿ ದೇಶದಲ್ಲಿ ಹುಟ್ಟಿದುದಕ್ಕಾಗಿ ಬೆಳ್ಳಗಿದ್ದಾರೆಂಬುದು ಇಂದು ಎದ್ದು ಕಾಣುತ್ತಿದೆ. ಅವರು ನಡೆನುಡಿಗಳಲ್ಲಿ ಮೇಲ್ಮೆಯುಳ್ಳವರು, ಉದಾರರು, ಸ್ವಚ್ಛತೆಯುಳ್ಳವರು, ಸುಖಲೋಲುಪತೆಯಲ್ಲಿ ಹೆಚ್ಚುಗಾರಿಕೆಯುಳ್ಳವರು ಏಕೆ ಆಗಿದ್ದರೆಂಬುದು ಇಂದು ಒಡೆದು ತೋರುತ್ತಿದೆ. ದೊಡ್ಡ ದೊಡ್ಡ ಅಧಿಕಾರಗಳು ಅವರಿಗೆ ಸಿಗುತ್ತಿದ್ದುದರಿಂದ ಮತ್ತು ಅವುಗಳ ಮೂಲಕ ಕೈತುಂಬ ಸಂಬಳವು ಅವರಿಗೆ ದೊರಕುತ್ತಿದ್ದುದರಿಂದ ಹೀಗೆ ನೀರಿನಂತೆ ದುಡ್ಡನ್ನು ವೆಚ್ಚ ಮಾಡಲು ಅವರಿಗೆ ಸಾಧ್ಯವಿತ್ತೆಂಬುದು ಇಂದು ನಿಚ್ಚಳವಾಗಿ ಕಂಡು ಬರುತ್ತಿದೆ. ಆಡಳಿತವನ್ನು ನಡೆಸುವುದಕ್ಕೆ ಬ್ರಿಟಿಷರೇ ಹುರಿದಾದವರು ಎಂಬುದು ನಮ್ಮವರ ಭಾವನೆಯಾಗಿತ್ತು. ಇಂದು ನೋಡಿದರೆ ಅವರ ಕರ್ತವ್ಯದಕ್ಷತೆಯ ಆಳವು ಗೊತ್ತಾಗುವಂತಿದೆ ಅವರು ಸ್ವಾಭಾವಿಕವಾಗಿಯೇ ಹಾಗೆ ಕರ್ತವ್ಯದಕ್ಷರಿದ್ದಿಲ್ಲ. ಹೊರಗಿನಿಂದ ಬಂದವರು ಯಾರ ಹೆದರಿಕೆಯಿಲ್ಲದೆ ಕೆಲಸ ಮಾಡಬಲ್ಲವರು ಆಗಿದ್ದುದರಿಂದ ಹೀಗೆ ಅವರಿಂದ ಕೆಲಸವಾಯಿತು. ಇನ್ನು ಮೇಲೆ ಅವರ ಕರ್ತವ್ಯದಕ್ಷತೆಯನ್ನು ನಿರೀಕ್ಷಿಸಿದರೆ ನಿಜಸಂಗತಿಯನ್ನು ಕಂಡುಕೊಳ್ಳಬಹುದು. ಈಗಾಗಲೇ ಅವರು ಕಾಂತಿಹೀನರಾಗಿದ್ದಾರೆ. ಮೊದಲು ಅವರ ಮೋರೆಯ ಮೇಲಿದ್ದ ತೇಜಸ್ಸು ಇಂದು ಕಳೆಗುಂದಿ ಹೋಗಿದೆ. ಹಿಂದಕ್ಕೆ ಅವರ ಹತ್ತರ ಹೋಗಲು ಹೆದರುತ್ತಿದ್ದವರು ಇಂದು ಅವರ ಭುಜದ ಮೇಲೆ ಹತ್ತಿ ಕೂಡಲಾರಂಭಿಸಿದ್ದಾರೆ. ಹಲ ಕೆಲವು ಯೂರೋಪಿಯನ್ ಅಧಿಕಾರಿಗಳಂತೂ ದಿಕ್ಕುಕಾಣದೆ, ಹೇಳಿದ್ದನ್ನು ಮಾಡದಿದ್ದರೆ ಏನಾಗುವದೋ ಎಂದು ಬೆದರಿಕೊಂಡು ಎಳೆದವರ ಕಡೆಗೆ ಹೋಗಲು ಪ್ರಾರಂಭಿಸಿದ್ದಾರೆ. ಗಾಂಧಿ ಟೊಪ್ಪಿಗೆಯನ್ನು ಕಂಡರೆ ಹಲ್ಲು ಕಡಿಯುವಂಥವರು ಅದಕ್ಕೆ ಈಗ ತಲೆಬಗ್ಗಿಸ ಹತ್ತಿದ್ದಾರೆ.

ಚಾತುರ್ಯದಲ್ಲಿ ಹಿಂದೀಯರು ಎಂದಿಗೂ ಬಿಳಿವರ್ಣದವರಿಗೆ ಹಿಂದೆ ಬಿದ್ದಿಲ್ಲ. ಆದರೆ ಅಧಿಕಾರವು ಅಡ್ಡ ಬಂದು ನಮ್ಮವರನ್ನು ಅಮುಮ ಇದು ವರೆಗೆ ಕಟ್ಟಿತ್ತು. ಹೀಗಿದ್ದರೂ ನಮ್ಮ ಜನರ ಚಾತುರ್ಯವು ಅನುವು ಸಿಕ್ಕಾಗ ಹೊಳೆಯುತ್ತಲೇ ಬಂದಿದೆ. ಆದರೆ ಆ ಹೊಳಪಿನ ಫಲವು ಇದು ವರೆಗೆ ಮೇಲಧಿಕಾರಿಗಳಾದ ಬ್ರಿಟಿಷರ ಉಡಿಗೆ ಬೀಳುತ್ತ ಬಂದಿತು. ಇನ್ನು ಮುಂದೆ ಹಾಗಾಗಲಾರದು. ನಮ್ಮ ದುಡಿತದ, ಶ್ರಮದ, ಚಾತುರ್ಯದ ಫಲವು ನಮಗೇ ಸಿಗುವುದು.

ರಾಜಸತ್ತೆಯು ಮೇಲೆ ಪ್ರಜೆಗಳಲ್ಲಿ ಅನೇಕ ಮಾರ್ಪಾಟುಗಳುಂಟಾಗುವವು. ನಮ್ಮ ಉಡಿಗೆ ತೊಡಿಗೆಗಳು ಕೂಡ ಯೂರೋಪದವರ ರೀತಿಗಳನ್ನು ಅನುಸರಿಸಿ ಇದು ವರೆಗೆ ನಡೆದವು. ಆದರೆ ಇನ್ನು ಮುಂದೆ ಹಾಗೆ ಆಗುವ ಕಾರಣವಿಲ್ಲ. ಏನೂ ಪ್ರಯೋಜನವಿಲ್ಲದೆ ಕೇವಲ ನಮ್ಮ

(೮ನೇ ಪುಟ ನೋಡಿ)

ನೆಹರೂರವರ ಸಂದೇಶ

ನಿಶ್ಚಿತ ದಿನವು ಬಂತು. ದೀರ್ಘ ನಿದ್ರೆಯ ನಂತರ ಮತ್ತು ದೀರ್ಘ ಹೋರಾಟದ ನಂತರ ಎಚ್ಚರಗೊಂಡು, ಸ್ಫೂರ್ತಿಗೊಂಡು ಸ್ವತಂತ್ರವಾಗಿ ಭಾರತವು ನಿಂತಿದೆ. ನಮ್ಮ ಗತ ಜೀವನವು ನಮ್ಮ ಮೇಲೆ ಇನ್ನೂ ತನ್ನ ಭಾರದ ಹೊರೆಯನ್ನಿಟ್ಟಿದೆ. ನಾವು ತೆಗೆದುಕೊಂಡ ಪ್ರತಿಜ್ಞೆಗಳನ್ನು ಸಾಧಿಸಲು ಇನ್ನೂ ಶ್ರಮಿಸಬೇಕಾಗಿದೆ. ಚರಿತ್ರೆ ಹೊಸದಾಗಿ ಪ್ರಾರಂಭವಾಗಲಿದೆ. ಇದು ಭಾರತದಲ್ಲಿರುವ ನಮಗೆ, ಏಷ್ಯಾದವರಿಗೆ, ಇಡೀ ಜಗತ್ತಿಗೆ ಮಹತ್ವಪೂರ್ಣ ಘಟನೆ. ಪೂರ್ವದಿಗಂತದಲ್ಲಿ ಸ್ವಾತಂತ್ರ್ಯದ ಹೊಸ ಸೂರ್ಯನೊಬ್ಬನ ಉದಯವಾಗುತ್ತಿದೆ. ಈ ಸೂರ್ಯನು ಎಂದೂ ಅಸ್ತಮಿಸದಿರಲಿ! ಸುತ್ತುಮುತ್ತಲು ಮೋಡ ಕವಿದಿದ್ದರೂ ಈ ಸೂರ್ಯನ ಉದಯದಲ್ಲಿ ಸಂತೋಷ ಪಡುವ. ನಮ್ಮ ಮುಂದೆ ಜಟಿಲ ಸಮಸ್ಯೆಗಳಿವೆ. ವ್ಯಸನ ಪೀಡಿತ ಜನತೆಯು ಸುತ್ತಲಿದೆ. ಸ್ವಾತಂತ್ರ್ಯವು ನಮಗೆ ಹೊಸ ಜವಾಬ್ದಾರಿಗಳನ್ನು ತರಲಿದೆ. ಇವುಗಳನ್ನು ನಿಷ್ಠೆಯಿಂದ ನಾವು ಹೊರಬೇಕು.

ಈ ದಿನ ನಮ್ಮ ಪ್ರಥಮ ಚಿಂತನೆಯು ಇದನ್ನು ರೂಪಿಸಿದ ಮಾನವ ಶಿಲ್ಪಿಯ ಕಡೆ ಹೋಗಬೇಕು. ಸ್ವಾತಂತ್ರ್ಯ ಜ್ಯೋತಿಯನ್ನು ಎತ್ತಿಹಿಡಿದು ಭರತಖಂಡದ ನೂತನ ಚೈತನ್ಯದ ಮೂರ್ತಿಯಾಗಿರುವವರ ಕಡೆ ನಮ್ಮ ಗಮನ ಹೋಗಬೇಕು. ಅನೇಕ ವೇಳೆ ನಾವು ಅವರ ಅಯೋಗ್ಯ ಹಿಂಬಾಲಕರಾಗಿರುವೆವು. ಅವರ ಮಹಾ ಸಂದೇಶಗಳನ್ನು ಮರೆತಿರುವೆವು. ಭಾರತ ಮಾತೆಯ ಈ ಮಹಾ ಪುತ್ರರು ತಮ್ಮ ನಂಬಿಕೆ, ಶಕ್ತಿ, ವಿನಯತ್ವ, ಧೈರ್ಯಗಳಲ್ಲಿ ಅಗ್ರೇಸರು. ಯಾವ ಗಾಳಿ ಬೀಸಲಿ, ಎಂಥಾ ಮಳೆ ಬರಲಿ ಅವರು ನಮ್ಮ ಹೃದಯಗಳಲ್ಲಿ ಹಚ್ಚಿಸಿದ ಸ್ವಾತಂತ್ರ್ಯ ಕಿಡಿಗಳು ನಂದದಂತೆ ನೋಡಿಕೊಳ್ಳುವೆವು.

ನಮ್ಮ ನಂತರದ ಚಿಂತನೆಯು ಸ್ವಾತಂತ್ರ್ಯಕ್ಕಾಗಿ ಹೆಸರಿಲ್ಲದೆ, ಹೊಗಳಿಸಿಕೊಳ್ಳದೆ ಮೃತರಾದ ವೀರಯೋಧರ ಕಡೆ ಹೋಗುತ್ತದೆ. ಭವಿಷ್ಯವು ನಮ್ಮನ್ನು ಕೈಯೆತ್ತಿ ಕರೆಯುತ್ತಿದೆ. ಯಾವ ಕಡೆ ಹೋಗುವುದು? ಏನನ್ನು ಮಾಡಲು ಪ್ರಯತ್ನಿಸುವುದು? ಸಾಮಾನ್ಯ ಜನಜಂಗುಳಿಗೆ, ಹೊಲದಲ್ಲಿ ಉಳುವವನಿಗೆ, ಕಾರ್ಖಾನೆಯ ಕೆಲಸಗಾರನಿಗೆ ಸ್ವಾತಂತ್ರ್ಯ ಬರುವಂತೆ ಮಾಡಬೇಕು. ಅಜ್ಞಾನ, ಬಡತನ, ಕಾಯಿಲೆ ಕಸಾಲೆಗಳನ್ನು ನಿವಾರಿಸಬೇಕು. ಸಿರಿವಂತ, ಪ್ರಜಾಪ್ರಭುತ್ವದ, ಪ್ರಗತಿಶೀಲ ಜನಾಂಗವನ್ನು ಕಟ್ಟಬೇಕು. ಇದಕ್ಕಾಗಿ ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ಸಂಸ್ಥೆಗಳನ್ನು ನಿರ್ಮಿಸಿ ಪ್ರತಿಯೊಬ್ಬನಿಗೂ ನ್ಯಾಯ, ಜೀವನ ಪರಿಪೂರ್ಣತೆ ಕರಗತವಾಗುವಂತೆ ಮಾಡಬೇಕು.

ಮುಂದೆ ನಮಗೆ ಕಠಿಣ ಕೆಲಸವಿದೆ. ನಮ್ಮ ಪ್ರತಿಜ್ಞೆಗಳನ್ನು ಕಾರ್ಯರೂಪದಲ್ಲಿ ತರುವ ವರೆಗೆ ನಮಗೆ ವಿಶ್ರಾಂತಿಯಿಲ್ಲ. ನಾವು ಅಖಂಡ ದೇಶದ ನಾಗರೀಕರು. ನಾವು ಯಾವ ಧರ್ಮ ಮತದವರಾದರೂ ಭರತಖಂಡದ ಸಂತಾನವಾದ್ದರಿಂದ ಪ್ರತಿಯೊಬ್ಬನಿಗೂ ಜೀವನದಲ್ಲಿ ಯೋಗ್ಯ ಅವಕಾಶಬೇಕು. ಕೋಮುವಾರು ಭಾವನೆಗೆ, ಸಂಕೀರ್ಣ ಮನೋವೃತ್ತಿಗೆ ಎಡೆಕೊಡಲಾರೆವು. ಏಕೆಂದರೆ ಸಂಕೀರ್ಣ ಮನೋಭಾವವಿರುವ ಜನರನ್ನು ಹೊತ್ತಿರುವ ಯಾವ ದೇಶವೂ ಘನವೆತ್ತ ದೇಶವಾಗಲಾರದು."

ಮಡಿಕೇರಿ ಕೋಟೆಯ ಮೇಲೆ ರಾಷ್ಟ್ರಧ್ವಜ.

ಚೀಫ್ ಕಮಿಶನರವರಿಂದ ಧ್ವಜಾರೋಹಣ.

[ತಾರೀಕು ೧೫ರಂದು ಹಿಂದೂಸ್ಥಾನದ ಎಲ್ಲಾ ಭಾಗಗಳಲ್ಲಿ ... ಯಿಂದ ಸ್ವಾತಂತ್ರ್ಯದಿನಾಚರಣೆ ನಡೆದಿದ ... ಪಟ್ಟಣದಲ್ಲಿ ಯೋಗ್ಯರೀತಿಯಲ್ಲಿ ಆಚರಣೆನಡೆದಿದೆ ... ಹಲವೆಡೆ [ದರಿದ್ರನಾರಾಯಣನಿಗೆ ಅನ್ನ ... ಅವೆಲ್ಲವನ್ನೂ ವಿಶದವಾಗಿ ಕೊಡಲು ಸ್ಥಳ ... ಕಾರಣ ಸೂಕ್ಷ್ಮ ವಿವರಗಳನ್ನು ಮಾತ್ರ ಕೊಡಲಾಗಿದೆ ...]

ತಾರೀಕು ೧೫, ಭಾರತ ಖಂಡಕ್ಕೆ ಸುದಿನ. ಆ ದಿನವು ತನ್ನ ಶುಭಸಂದೇಶದಿಂದಲೇ ಕೊಡಗಿನಲ್ಲೂ ಉದಯಿಸಿತು. ರಾತ್ರಿ ೧೨ ಗಂಟೆ ಹೊಡೆದೊಡನೆಯೇ ಮಡಿಕೇರಿ ವಿದ್ಯಾರ್ಥಿ ಕಾಂಗ್ರೆಸ್ಸಿನವರು ಮೆರವಣಿಗೆ ಹೊರಟು ಉದಿಸಿಬರುತ್ತಿದ್ದ ಸ್ವಾತಂತ್ರ್ಯವನ್ನು ತಮ್ಮ ವಾದ್ಯಘೋಷಗಳಿಂದ ಸ್ವಾಗತಿಸಿದರು. ಬೆಳಗ್ಗೆ ೬ ಗಂಟೆಗೆ ಮಡಿಕೇರಿ ಹೈಸ್ಕೂಲ್ ಆವರಣದಲ್ಲಿ ಧ್ವಜಾರೋಹಣವನ್ನು ಮಾಡಿ ಮೆರವಣಿಗೆ ಹೊರಟಿತು. ಮಡಿಕೇರಿಯ ಕಾಂಗ್ರೆಸಿಗರೂ, ಸಾರ್ವಜನಿಕರೂ ಸಹಕರಿಸಿದ್ದರು. ಸಾವಿರಾರು ಬಾಲಕ ಬಾಲಕಿಯರು ಸಮವಸ್ತ್ರ ಧರಿಸಿದ್ದ ಕಾರಣ ಮೆರವಣಿಗೆಗೆ ಹೆಚ್ಚಿನ ಸೌಂದರ್ಯ ಬಂದಿತ್ತು. ಮಡಿಕೇರಿಯ ಪ್ರಾಮುಖ್ಯ ಬೀದಿಗಳ ಮೆರವಣಿಗೆಯ ನಂತರ ಕೊಡಗು ಜಮೀನ್ದಾರರ ಸಂಘದ ಕಟ್ಟಡದ ಎದುರು ಧ್ವಜಾರೋಹಣವು ನಡೆಯಿತು.

ನಂತರ ೯-೩೦ ಗಂಟೆಗೆ ಕೋಟೆಯ ಆವರಣದಲ್ಲಿ ಮಡಿಕೇರಿಯ ನಿವಾಸಿಗಳೂ, ಅನೇಕ ದೂರದ ಪ್ರೇಕ್ಷಕರೂ, ಪತ್ರಿಕಾ ಪ್ರತಿನಿಧಿಗಳೂ ಕಿಕ್ಕಿರಿದು ನೆರೆದಿದ್ದರು. ಅನೇಕರು ತಮ್ಮ ತಮ್ಮ ರಾಷ್ಟ್ರೀಯ ಉಡುಪುಗಳನ್ನು ಧರಿಸಿದ್ದರು. ಪೋಲೀಸರ ಮತ್ತು ಸೇವಾದಳದವರ ಕವಾಯತು ನಡೆಯಿತು. ಚೀಫ್ ಕಮಿಷನರು ಚಿಕ್ಕ ಭಾಷಣದನಂತರ ಧ್ವಜಾರೋಹಣ ಮಾಡಿದರು. ವಾದ್ಯಗಳು, ಜಯ ಘೋಷಗಳು ಧ್ವಜವನ್ನು ಸ್ವಾಗತಿಸಿದವು. 'ಜನಗಣ ಮನ' ಹಾಡಲ್ಪಟ್ಟಿತು. ನಂತರ ಚೀಫ್ ಕಮಿಷನರು ಸ್ವಾತಂತ್ರ್ಯ ದಿನದ ಸಂದೇಶವನ್ನು ಓದಿದರು. ಇದಾದ ನಂತರ ಬೃಹದಾಕಾರದ ಮೆರವಣಿಗೆ ಹೊರಟಿತು. ಸೇವಾದಳವು ಮುಂದೆ ಸಾಗಿತ್ತು. ಅವರ ಹಿಂದೆ ಪೋಲೀಸ್ ಪಡೆಯಿತ್ತು. ಎರಡು ಆನೆಗಳು ರಾಷ್ಟ್ರಧ್ವಜವನ್ನು ಹಿಡಿದು ಮುಂದೆಗಮನದಿಂದ ಸಾಗಿದ್ದವು. ಜನಸಮೂಹವು ... ಬಸ್ಸು, ಲಾರಿ, ಕಾರುಗಳ ಮೆರವಣಿಗೆ ನಂತರ ಹಿಂಬಾಲಿಸಿತ್ತು. ಎಲ್ಲಿ ನೋಡಿದರೂ ... ಎಲ್ಲಿ ನೋಡಿದರು ... ಎಲ್ಲಿ ಆಲಿಸಿದರೂ 'ಸ್ವತಂತ್ರ ಭಾರತ್ ಕೀ ಜೈ' ಮೆರವಣಿಗೆಯನ್ನು ಮುಗಿಸಿದೊಡನೆ ೧೨ ಗಂಟೆಗೆ ಕೋಟೆಗೆ ... ಸಿಹಿತಿಂಡಿ ಹಂಚುವಿಕೆಯು ನಡೆಯಿತು. ನಂತರ ಓಂಕಾರೇಶ್ವರ ದೇವಸ್ಥಾನ, ಕ್ರಿಶ್ಚಿಯನ್ ಚರ್ಚ್ ಮತ್ತು ಮುಸ್ಲಿಮರ ಮಸೀದಿಗಳಲ್ಲಿ ಪೂಜೆ, ಪ್ರಾರ್ಥನೆಗಳಾದವು.

ಮಧ್ಯಾಹ್ನ ೩ ಗಂಟೆಗೆ ಕಾವೇರಿ ಹಾಲ್‌ನಲ್ಲಿ ಸಾರ್ವಜನಿಕ ಸಭೆಯೊಂದು ನಡೆಯಿತು. ಶ್ರೀ ಕೆ. ಸಿ. ಕರುಂಬಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಸಿ. ಎಮ್. ಪೂಣಚ್ಚ, ಡಾ. ನಂಜುಂಡೇಶ್ವರ, ... ಮೊದಲಾದವರು ...



ಕಾವೇರಿ ಹಾಲ್‌ನಲ್ಲಿ ...

ಕೊಡಗಿನ ... ಹಿಂದೂಸ್ಥಾನದ ...

ಶನಿವಾರಸಂತೆ

ಶನಿವಾರಸಂತೆಯಲ್ಲಿ ಈ ದಿನಾಚರಣೆಯು ಸೂಕ್ತವಾಗಿ ನಡೆಯಿತು. ಶ್ರೀ ... ಧ್ವಜಾರೋಹಣ ಮಾಡಿದರು. ... ಶಾಲೆಯ ಮಕ್ಕಳು ...

ಕಂದಂಗಾಲ-ರುದ್ರಗುಪ್ಪೆ-ಬಾಡಗ

... ಕಂದಂಗಾಲ ಶಾಲೆಯಲ್ಲಿ ಶ್ರೀ ... ಧ್ವಜಾರೋಹಣ ಮಾಡಿದರು. ...

ಕೇ ಶ್ರಿ ನಾ ಡು.

ಈ ನಾಡಿನವರು ... ಸಭೆ ಸೇರಿದರು. ... ರಾಷ್ಟ್ರಧ್ವಜದ ಮಹತ್ವ ... ಶ್ರೀ ಕೆ. ಜ. ... ರಾವ್, ಕೆ. ಎ. ಬಿದ್ದಪ್ಪ ಮತ್ತು ಬಿ. ಕೆ. ... ಭಾಷಣ ಮಾಡಿದರು.

ಕೊ ಣ ಶ ಂ ಪೇ.

ಕೋಣಶಂಪೇಯ ... ಶಾಲೆಯಲ್ಲಿ ... ಧ್ವಜಾರೋಹಣ ಮಾಡಿದರು. ... ಜನತೆಗೆ ... ಶಾಲೆಯ ...

ಕೊಡಗು

ತಾ. ೨೨-೮-೧೯೪೭ನೇ ಶುಕ್ರವಾರ

ಮುಂದೇನು ?

ನವೋತ್ಸಾಹದಿಂದ ಸ್ವಾತಂತ್ರ್ಯ ದಿನಾಚರಣೆ ನಡೆಯಿತು. ಭಾರತೀಯರು ಸ್ವತಂತ್ರರಾದ ಸಂದೇಶವು ಹಳ್ಳಿ ಹಳ್ಳಿಗಳಿಗೂ ಮುಟ್ಟಿತು. ಆ ಪವಿತ್ರ ದಿನದಂದು ತೋರಿಸಿದ ಉತ್ಸಾಹ, ಹುರುಪು, ಪ್ರೀತಿ, ಆದರಗಳು ಬೇರೆ ಕಡೆ ತಿರುಗಬೇಕಾಗಿದೆ. ಭಾರತೀಯರಿಗೆ ಅಧಿಕಾರ ಬಂದಾಕ್ಷಣ ಬಡವರಿಗೆ ಸ್ವಾತಂತ್ರ್ಯ ಬಂದಂತಾಗಲಿಲ್ಲ. ಪಂಡಿತ ಜವಾಹರರು ಹೇಳಿದಂತೆ ಹಿಂದೂದೇಶದಲ್ಲಿ ಕಣ್ಣೀರಿಡುವ ಒಂದೇ ವ್ಯಕ್ತಿ ಇರುವ ವರೆಗೆ ಭಾರತೀಯರ ಸ್ವಾತಂತ್ರ್ಯವು ಪೂರ್ಣ ಕರಗತವಾಗಲಾರದು. ಈ ಮಹಾಕಾರ್ಯಕ್ಕೆ ಸರ್ವರೂ ಪ್ರಯತ್ನ ಮಾಡಬೇಕು. ನಾಡಿನಲ್ಲಿ ಹಬ್ಬಿರುವ ಸಾಮಾಜಿಕ ದುಷ್ಟಪರಂಪರೆಗಳು, ಆರ್ಥಿಕ ಅಸಮಾನತೆಗಳು, ನೈತಿಕ ಶೈಥಿಲ್ಯಗಳು, ಅಜ್ಞಾನ ಅಂಧಕಾರಗಳು ತೊಲಗದೆ ಸ್ವಾತಂತ್ರ್ಯವಿಲ್ಲ !

ಈ ಜವಾಬ್ದಾರಿಯನ್ನು ನಿರ್ವಹಿಸಲು ಕೇಂದ್ರ ಜನಪ್ರೀತ ಸರಕಾರವು ಪಂಡಿತ ಜವಾಹರರ ನೇತೃತ್ವದಲ್ಲಿ ಕಾರ್ಯೋನ್ಮುಖವಾಗಿದೆ. ಯಾವ ಸರಕಾರವೇ ಆಗಲಿ, ಎಷ್ಟೇ ಶ್ರದ್ಧೆಯಿಂದ ಕೆಲಸ ಮಾಡಲಿ, ಸಾರ್ವಜನಿಕರ ಬೆಂಬಲವಿಲ್ಲದೆ ಅದರ ಪ್ರಯತ್ನವು ಫಲಕಾರಿಯಾಗದು. ಆದ್ದರಿಂದ ಸರಕಾರದ ಕಡಿವಾಣ ಹಿಡಿದು ಮುನ್ನಡೆಸುವವರು ನಮ್ಮ ಮುಂದಾಳುಗಳಾದರೂ ಅವರ ಪ್ರಯತ್ನಕ್ಕೆ ಜಯ ಕಳಶವನ್ನಿಡುವವರು ನಾವು. ಆದ್ದರಿಂದ ನಾವು ಅವರ ಕಾರ್ಯಗಳಲ್ಲಿ ಹೃತ್ಪೂರ್ವಕ ಸಹಕರಿಸಬೇಕು. ಭರತಖಂಡವು ವಿಶಾಲವಿದೆ, ಅಂತೆಯೇ ಅದು ಬಿದ್ದಿರುವ ಕಂದರವಾದರೂ ಆಳವಾಗಿದೆ. ಅಲ್ಲಿಂದ ಮೇಲೆತ್ತಲು ಭಾರತೀಯ ಪ್ರತಿಯೊಬ್ಬ ಪುತ್ರನ ಪರಿಶ್ರಮ ಬೇಕಿದೆ.

ಸ್ವಾರ್ಥಜೀವನ ಸಾಕು. ಇನ್ನಾದರೂ ಸಾಮೂಹಿಕ ಹಿತ ದೃಷ್ಟಿ ನಮ್ಮಲ್ಲಿ ಉದಯವಾಗಲಿ. ಭರತಖಂಡವು ನಮ್ಮೆಲ್ಲರ ದೇವ ಮಂದಿರವೆಂಬ ಭಾವನೆ ಬರಲಿ. 'ಏಕಂ ಸದ್ವಿಪ್ರಾ, ಬಹುಧಾ ವದಂತಿ' ಎಂಬ ದಿವ್ಯ ಮಂತ್ರದ ಜ್ಞಾನೋದಯವಾಗಲಿ. ಉದಯವಾದ ಸ್ವಾತಂತ್ರ್ಯ ದೀವಿಗೆಯು ನಮ್ಮ ಹೃದಯದ ಕಲ್ಮಷಗಳನ್ನು ತೊಳೆಯುವ ಪಾವನ ಗಂಗೆಯಾಗಲಿ.

ವರ್ತಮಾನ.

ಸ್ವಾತಂತ್ರ್ಯ ದಿನೋತ್ಸವದ ಸಂದರ್ಭದಲ್ಲಿ ಚೆನ್ನಪಟ್ಟಣಗಳೂರಿನಲ್ಲಿ ನಡೆದ "ಭಾರತ ಸ್ವಾತಂತ್ರ್ಯ" ಎಂಬ ವಿಷಯದ ಸಾರ್ವಜನಿಕ ಪ್ರಬಂಧ ಸ್ಪರ್ಧೆಯಲ್ಲಿ ಶ್ರೀಮತಿ ಪುಲಿಯಂಡ ಗೌರಿ ಇವರು ಬಹುಮಾನವನ್ನು ಪಡೆದಿರುವರು.

ತಾ. ೧೭ರಲ್ಲಿ ದಕ್ಷಿಣಕನ್ನಡ ಕೊಡಗು ಜನರ ಸಂಘದವರು ಶ್ರೀಮತಿ ನಡಿಕೇರಿಯಂಡ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಮಂಗಳೂರಿನಲ್ಲಿ ಸಭೆಸೇರಿ ವೇಲ್ಮಂಡ ಸಂಘದ ಪ್ರಾರಂಭೋತ್ಸವ ಮತ್ತು ಸ್ವಾತಂತ್ರ್ಯದಿನಾಚರಣೆಯನ್ನು ನಡೆಸಿದರು. ಶ್ರೀ ಎನ್. ಎಸ್. ತಿಮ್ಮಯ್ಯನವರು ಈ ಸಂದರ್ಭದಲ್ಲಿ ಭಾಷಣ ಮಾಡಿದರು.

ಮುಂಬಾಯಿ ಕೊಡಗು ಸಂಘದ ಮೆಂಬರುಗಳು ತಾ. ೧೫-೮-೪೭ರಲ್ಲಿ ಸ್ವಾತಂತ್ರ್ಯೋತ್ಸವವನ್ನು ಜರಗಿಸಿದರು. ರಾಷ್ಟ್ರೀಯ ಧ್ವಜಾರೋಹಣವನ್ನು ಆ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಮಾಚಂಡ ಕಾರ್ಯಪ್ಪನವರ ಮನೆಯ ಮಹಡಿಯ ಮೇಲೆ ನಡಸಿದರು.

ಬೆಂಗಳೂರು ದಂಡು ಸಿಗ್ನಲ್ ಕ್ಯಾಂಪಿನಲ್ಲಿರುವ ಕೊಡವರು ತಾ. ೧೬-೮-೪೭ರಲ್ಲಿ ಅಲ್ಲಿಯ ಗ್ಯಾರಿಸನ್ ಮೈದಾನದಲ್ಲಿ ನಡೆದ "ಗ್ರ್ಯಾಂಡ ಮಿಲಿಟರಿ ಟಟೂ ಡಿಸ್ಪ್ಲೇ"ಯಲ್ಲಿ ಕೊಡಗು ನೃತ್ಯವನ್ನು ತೋರಿಸಿ [illegible] ಎಲ್ಲರ ಪ್ರಶಂಸೆಗೆ ಪಾತ್ರರಾದರೆಂದು ತಿಳಿದು ಬರುತ್ತದೆ.

ಕೊಡಗಿನ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ ಜಡ್ಜಾಗಿರುವ ಶ್ರೀ ಎನ್. [illegible]ಪ್ಪನವರು ತಾ. ೧೭ರ ರಾತ್ರಿ [illegible] ಯಲ್ಲಿ ಜಾರಿಗೋ ಬಿದ್ದು ಎಡಗೈ [illegible] ಮುರಿದು ಹೋಗಿ ಚಿಕಿತ್ಸೆಗಾಗಿ [illegible]ರಿಗೆ ಹೋಗಿರುವರು.

ತ [illegible] ಮಡಿಕೇರಿಯಲ್ಲಿ [illegible] ಮಳೆಯಾಗಿದೆ. [illegible] ಮಡಿಕೇರಿಗೆ [illegible]

ಶ್ರೀ ಅಜ್ಜಿಕುಟ್ಟೀರ ಅಪ್ಪಣ್ಣನವರನ್ನು [illegible] ರು ಗವರ್ನಮೆಂಟ್ [illegible] ಮಂಗಳೂರು ವಿದ್ಯಾರ್ಥಿಕಾಲೇಜ್ ಪ್ರಿನ್ಸಿಪಾಲರಾಗಿ [illegible] ವಿದ್ಯಾರ್ಥಿ [illegible] ನೇಮಿಸಲಾಗಿದೆ.

ಮಡಿಕೇರಿ ಬಸ್ ನಿಲ್ದಾಣದಲ್ಲಿ ಆದಿ ಶ್ರೀ ಕಾವೇರಿ ಬಸ್ ಒಂದರಲ್ಲಿ [illegible] ಯಾರೋ [illegible] ಬಸ್ಸಿನಲ್ಲಿದ್ದ ಪೆಟ್ರೋಲ್ ಟ್ಯಾಂಕಿಗೆ [illegible] ಬಸ್ಸಿನೊಳಗಿದ್ದವರು [illegible] ಅದನ್ನು ಒಡೆದು [illegible] ಅದು ಕೆಳಗೆ ಬೀಳ[illegible] ಪೆಟ್ರೋಲು [illegible] ಶ್ರೀ [illegible] ಯಂಡ ಮಂದಣ್ಣ [illegible] ಬೆಂಕಿ [illegible]

ಪ್ರಜಾ ಪ್ರತಿನಿಧಿ ಸಭೆಯ ಚೇಂದ್ರಿಮಾಡ ವಿ. ಮುತ್ತಣ್ಣನವರು ತಾ. [illegible]

ಕೊಡಗು ನ್ಯಾಯವಿಧಾಯಕ ಸಭೆಯ [illegible] ತಾ. ೨೮-೮-೪೭ರಲ್ಲಿ ನಡೆಯುವದು.

(ಹಿಂದಿನ ಪುಟದಿಂದ ಮುಂದುವರಿದುದು)

ಸಭೆ ನಡೆಯಿತು. ಆಟೋಟಗಳ ಸ್ಪರ್ಧೆಯೂ ಇತ್ತು. ಶ್ರೀ ಎಂ. ಕೆ. [illegible]ನವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಬೋಧಪ್ರದವಾದ ಭಾಷಣಗಳಾದವು.

ಹಾತೂರು

ಈ ಊರಿನ ಸುತ್ತು ಮುತ್ತಲಿನ ಗ್ರಾಮಸ್ಥರು [illegible] ಸೇರಿದರು. [illegible] ರಿಂದ ಪ್ರಾರಂಭವಾದ ನಂತರ ಶ್ರೀ [illegible] ಅಚ್ಚಯ್ಯನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಧ್ವಜಾರೋಹಣದ ನಂತರ ರಾಷ್ಟ್ರಧ್ವಜದ ಗೌರವಾರ್ಥ [illegible] ಘೋಷಣೆಗಳನ್ನು [illegible] ಶ್ರೀಗಳಾದ [illegible] ಯ್ಯ, ಎಚ್. ಬಿ. ಅಣ್ಣಯ್ಯ, ಎಂ. ಎಸ್. ಕಾರ್ಯಪ್ಪ, ಎಚ್. ಬಿ. ಸಿದ್ದಯ್ಯ ಮೊದಲಾದವರು ಭಾಷಣ ಮಾಡಿದರು. ಸ್ವಾತಂತ್ರ್ಯ ದಿನೋತ್ಸವಕ್ಕಾಗಿ [illegible] ಕೈಲ್ ಮುಹೂರ್ತ ಹಬ್ಬದಲ್ಲಿ ಊರೂರಿನ [illegible] ಮಾಡಿದ್ದಲ್ಲದೆ, ಗಾಂಧೀಜಿಯವರಿಗೆ ಆಯುರಾರೋಗ್ಯವನ್ನು ಜವಾಹರರಿಗೆ ತಮ್ಮ ಕಾರ್ಯದಲ್ಲಿ ಪ್ರಗತಿಯನ್ನು [illegible] ರಾಪುಗಳನ್ನು ಮಾಡಿದರು. [illegible] ಮಂಗಳೂರಿನ [illegible] ರಿಂದ 'ಸ್ವಾತಂತ್ರ್ಯ ವ[illegible]' ಎಂಬ ಹರಿಕಥೆಯೂ ನಡೆಯಿತು.

ಬೆಸಗೂರು.

ಬೆಸಗೂರು ಹೈಯರ್ ಎಲಿಮೆಂಟರಿ ಶಾಲೆಯಲ್ಲಿ [illegible] ಗ್ರಾಮಸ್ಥರ [illegible] ಶ್ರೀ [illegible] ಯವರ ಅಧ್ಯಕ್ಷತೆಯಲ್ಲಿ ಸಭೆ ನೆರೆ[illegible] ಶ್ರೀ [illegible] ಎನ್. [illegible] ಭಾಷಣ ಮಾಡಿದರು. [illegible] ಶಾಲಾ ವಿದ್ಯಾರ್ಥಿಗಳಿಗೆ [illegible] ಶ್ರೀಮತಿ ಎ. ಕೆ. ಪೊನ್ನಮ್ಮನವರ [illegible] ಉಪಾಹಾರದ ನಂತರ ಸಭೆ [illegible]

ಶ್ರೀಮಂಗಲ.

[illegible] ಇಲ್ಲಿಯ [illegible] ಬೆಳಿಗ್ಗೆ ಪ್ರಭಾತಫೇರಿ, [illegible] ಮತ್ತು [illegible] ಸಭೆ ಸೇರಿದರು. [illegible] ಧ್ವಜಾರೋಹಣ ನಡೆಯಿತು. [illegible] ನಂತರ ಶ್ರೀ ಸಿ. ಕೆ. ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಶ್ರೀ ಎ. ಎಂ. ತಿಮ್ಮಯ್ಯನವರು ಪ್ರತಿಜ್ಞಾವಾಕ್ಯ ಓದಿದರು. ಶ್ರೀಗಳಾದ ಎ. ಡಿ. ಮಂದಣ್ಣ, ಬಿ. ಟಿ. ಕೊರಗಪ್ಪ, ಎ. ಕೆ. ನಂಜಪ್ಪ ಮತ್ತು ಕೆ. ಸಿದ್ದಪ್ಪನವರು ಭಾಷಣಮಾಡಿದರು. ಶಾಲಾ ಬಾಲಕ ಬಾಲಕಿಯರಿಗೆ ಆಟೋಟಗಳ ಸ್ಪರ್ಧೆ ಏರ್ಪಡಿಸಲಾಗಿತ್ತು. ಸಿಹಿತಿಂಡಿ ವಿತರಣೆಯಿಂದ ಕಾರ್ಯಕ್ರಮ ಮುಕ್ತಾಯಗೊಂಡಿತು.

ನೋಟೀಸು.

ಕೊಡಗು ಪ್ರಾಂತ್ಯಕ್ಕೆ ತಕ್ಕಷ್ಟು ನೆಲಗಡಲೆ ಹಿಂಡಿಯನ್ನು ಹಂಚಬೇಕೆಂದು ಕೊಡಗಿನ ಚೀಫ್ ಕಮಿಷನರ್ ಸಾಹೇಬರವರು ಬಯಸುವುದರಿಂದ, ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ–

ನೆಲಗಡಲೆ ಹಿಂಡಿಯನ್ನು ಕೊಂಡುಕೊಳ್ಳಲು ಇಚ್ಛಿಸುವಂತಹ ಮಹಾಶಯರುಗಳು ತಮಗೆ ಬೇಕಾದ ನೆಲಗಡಲೆ ಹಿಂಡಿಯನ್ನು ಈ ಕೆಳಗೆ ದಸ್ಕತ್ತು ಮಾಡಿದವರಿಗೆ ಬರವಣಿಗೆ ಮೂಲಕ ಈ ನೋಟೀಸು ಕಂಡ ಒಂದು ವಾರದೊಳಗೆ ತಿಳಿಯಿಸುವುದು. ಪ್ರತಿಯೊಬ್ಬರೂ ಈ ಸುಸಂಧರ್ಭವನ್ನು ಕಳೆದುಕೊಳ್ಳದೆ ತಮಗೆ ವರ್ಷಕ್ಕೆ ಬೇಕಾದ ಪ್ರಮಾಣವನ್ನು ಪೊಂದಿಕೊಳ್ಳಬೇಕಾಗಿ ಕೋರುತ್ತೇನೆ.

ಸಿ. ಕೆ. ಕುಶಾಲಪ್ಪ,
ಚೀಫ್ ಫಾರೆಸ್ಟ್ ಆಫೀಸರು.

ELEPHANTS FOR SALE

About 12 elephants (both male and femal) will be sold by auction at Tittimathi at 2 P. M., on 13-8 1947. For particulars apply to the Chief Forest Officer, Coorg, Mercara.

C. M. Kushalappa,
Chief Forest Officer, Coorg.

ಸ್ವಾತಂತ್ರ್ಯ ಉತ್ಸವ.

ಭರತಖಂಡದ ಆಡಳಿತ ಜವಾಬ್ದಾರಿ ಭಾರತೀಯರಿಗೆ ಬಂತು.

ಇಸವೀಸು ಗಳಿಗೆ ಮಧ್ಯರಾತ್ರಿ ೧೨ ಗಂಟೆ ಹೊಡೆದ ಮರುನಿಮಿಷದಿಂದ ಹಿಂದೀ ರಾಜ್ಯಾಂಗಸಭೆಯು ಬ್ರಿಟಿಷರಿಂದ ಹಿಂದೂದೇಶದ ಆಡಳಿತ ಜವಾಬ್ದಾರಿಯನ್ನು ವಹಿಸಿಕೊಂಡಿತು. ಭರತಖಂಡದ ಸ್ವಾತಂತ್ರ್ಯದ ಉದಯವನ್ನು ಆ ಸುಮುಹೂರ್ತದಲ್ಲಿ 'ಮಹಾತ್ಮಾಗಾಂಧೀಕೀ ಜೈ' ಎಂಬ ಘೋಷಣೆಯಿಂದ ಸರ್ವರೂ ಸ್ವಾಗತಿಸಿದರು. ರಾಜ್ಯಘಟನಾ ಸಮಿತಿಯ ಪ್ರತಿ ಮೆಂಬರನೂ ಪ್ರತಿಜ್ಞೆಯನ್ನು ತೆಗೆದುಕೊಂಡ ನಂತರ ಪಂಡಿತ ಜವಾಹರ್ ಲಾಲ್ ನೆಹರೂ ಮತ್ತು ಡಾ. ರಾಜೇಂದ್ರ ಪ್ರಸಾದರು ವೈಸರಾಯರ ಮನೆಗೆ ಹೋಗಿ ಅವರನ್ನು ಹಿಂದೂದೇಶದ ಗವರ್ನರ್ ಜನರಲಾಗಿ ನೇಮಿಸಿದುದನ್ನು ತಿಳಿಸಿದರು.

ಮೌಂಟ್ ಬೆಟನ್.

ಭಾರತದ ಗವರ್ನರ್ ಜನರಲಾದ ಮೌಂಟ್‌ಬೆಟನರವರು ರಾಜ್ಯಘಟನಾ ಸಮಿತಿಯ ಸದಸ್ಯರನ್ನು ಉದ್ದೇಶಿಸಿ ಭಾಷಣಮಾಡುತ್ತಾ ಹೀಗೆಂದರು. (ಬ್ರಿಟಿಷ್ ಸಾರ್ವಭೌಮರಿಂದ ಹಿಂದೂದೇಶಕ್ಕೆ ಸಂದೇಶವೊಂದಿತ್ತು. ಈ ಚರಿತ್ರಾರ್ಹ ದಿನದಲ್ಲಿ ಭಾರತದ ಸರ್ವರಿಗೂ ಶುಭಾಶಯವನ್ನು ರಾಜರು ಬಯಸಿದ್ದಾರೆ) 'ಆರು ತಿಂಗಳಿಗೆ ಹಿಂದೆ ಬ್ರಿಟಿಷ್ ಪ್ರಧಾನರಾದ ಅಟ್ಲೀಯವರು ನನ್ನನ್ನು ಕರೆದು ಹಿಂದೂದೇಶದ ಕಡೇ ವೈಸರಾಯರಾಗಬೇಕೆಂದು ಆಶಿಸಿದರು. ೧೯೪೮ನೇ ಜೂನ್ ಅಂತ್ಯದೊಳಗೆ ಹಿಂದೂದೇಶದ ಜವಾಬ್ದಾರಿಯನ್ನು ಹಿಂದೀಯರಿಗೆ ಒಪ್ಪಿಸುವ ಜವಾಬ್ದಾರಿಯನ್ನೂ ತಿಳಿಸಿದರು. ನಿಮ್ಮೆಲ್ಲರ ಸಹಾಯದಿಂದ ಈ ನಿಶ್ಚಿತ ಅವಧಿಗೆ ಮೊದಲೇ ಅಂದರೆ ೧೦ ತಿಂಗಳುಗಳ ಮೊದಲು ಭಾರತಕ್ಕೆ ಜವಾಬ್ದಾರಿಯನ್ನು ವಹಿಸಿಕೊಡಲು ಸಮರ್ಥನಾದೆ.

ಭಾರತೀಯ ಮುಂದಾಳುಗಳು ನನ್ನ ಕೆಲಸದಲ್ಲಿ ನನಗೆ ಬಹು ಸಹಾಯವನ್ನು ಮಾಡಿದ್ದಾರೆ. ಅವರ ಸಹಾಯ ಮತ್ತು ಮಾರ್ಗದರ್ಶಿತ್ವದಿಂದಲೇ ಈ ಸಮಸ್ಯೆಯು ಶೀಘ್ರ ಕೊನೆಗೊಳ್ಳಲು ಕಾರಣವಾಯಿತು. ಇಂದಿಗೆ ನನ್ನ ವೈಸರಾಯಿ ಕೆಲಸ ಮುಗಿಯಿತು. ಅವರೂ ಸ್ವತಂತ್ರ ಭಾರತಕ್ಕೆ ನನ್ನನ್ನು ಗವರ್ನರ್ ಜನರಲಾಗಿ ಪುನಃ ನೇಮಕ ಮಾಡಿರುವರು. ನಾನು ಭಾರತೀಯರ ಈ ಆದರವನ್ನು ಮನ್ನಿಸಿ ಜವಾಬ್ದಾರಿಯನ್ನು ವಹಿಸುವೆನು. ಆದರೆ ಬರುವ ಏಪ್ರಿಲ್ ತಿಂಗಳಲ್ಲಿ ನನ್ನನ್ನು ಈ ಜವಾಬ್ದಾರಿಯಿಂದ ಬಿಡುಗಡೆ ಮಾಡಬೇಕು. ಏಕೆಂದರೆ ಸ್ವತಂತ್ರ ಭಾರತದಲ್ಲಿ ದೇಶೀಯರೊಬ್ಬರು ಗವರ್ನರ್ ಜನರಲಾಗಿರುವದು ಸೊಗಸು ಮತ್ತು ಅವಶ್ಯಕ. ಸರ್ದಾರ್ ಪಟೇಲರ ದೂರದೃಷ್ಟಿಯ ಪರಿಣಾಮವಾಗಿ ಹಿಂದೂದೇಶದ ಸಂಸ್ಥಾನಗಳೆಲ್ಲವೂ ರಾಜ್ಯಘಟನಾ ಸಮಿತಿಯಲ್ಲಿ ಸೇರಿಕೊಳ್ಳುವಂಥವಾಯಿತು. ಉಳಿದಿರುವ ಹೈದರಬಾದು ಶೀಘ್ರ ಸೇರುವ ಭರವಸೆ ನನಗಿದೆ. ಭವಿಷ್ಯದಲ್ಲಿ ಕಠಿಣ ಸಮಸ್ಯೆಗಳಿವೆ. ಅವನ್ನು ಧೈರ್ಯಪೂರ್ವಕ ಎದುರಿಸುವದು ಅವಶ್ಯಕವಿದೆ. ಭರತಖಂಡಕ್ಕೆ ಸ್ವಾತಂತ್ರ್ಯವನ್ನು ಒದಗಿಸಿದ ಮಹಾಪುರುಷನನ್ನು ವಂದಿಸಬೇಕಿದೆ. ಕೇವಲ ಸತ್ಯ ಅಹಿಂಸೆಗಳಿಂದ ಜಗತ್ತಿಗೆ ಆದರ್ಶ ಸಾಧನೆಮಾಡಿ ತೋರಿಸಿದ ಅವರು ಇಲ್ಲಿ ಈಗ ಇಲ್ಲದಿರುವದು ಶೋಚನೀಯ ವಿಚಾರವಾಗಿದೆ. ನಿಮ್ಮ ಪ್ರಥಮ ಮುಖ್ಯಮಂತ್ರಿಯಾದ ಪಂಡಿತ ಜವಾಹರರು ಜಗದ್ವಿಖ್ಯಾತ ಮುಂದಾಳು. ಅವರ ಸಹಾಯ ಸಹಾನುಭೂತಿಗಳು ನನ್ನ ಹಲವು ಕಾರ್ಯಗಳನ್ನು ಹಗುರ ಮಾಡಿದವು. ಅವರ ಅತ್ಯುತ್ತಮ ಮುಂದಾಳ್ತನದಲ್ಲಿ ಭರತಖಂಡವು ಪ್ರಗತಿಯ ಶಿಖರವನ್ನೇರುವದರಲ್ಲಿ ಸಂಶಯವಿಲ್ಲ'

ರಾಜೇಂದ್ರ ಪ್ರಸಾದರ ಭಾಷಣ.

'ನಮ್ಮ ಇತಿಹಾಸದ ಈ ಗಂಭೀರಕ್ಷಣದಲ್ಲಿ ಜನಾಂಗಗಳ ವಿಧಿಯನ್ನು ರೂಪಿಸುತ್ತಿರುವ ಸರ್ವಶಕ್ತನನ್ನು ಧ್ಯಾನಿಸಿ, ಬಹುವಿಧವಾಗಿ ಸಹಿಸಿ ಬಲಿದಾನವಿತ್ತವರನ್ನು ಕೃತಜ್ಞತೆಯಿಂದ ಸ್ಮರಿಸೋಣ. ಕಳೆದ ಮೂವತ್ತು ವರ್ಷಗಳಿಂದ ನಮಗೆ ದಾರಿತೋರಿಸಿ ಮುನ್ನಡೆಸಿದ ಗಾಂಧಿಯವರಿಗೆ ಪ್ರೇಮಭಕ್ತಿಗಳಿಂದ ವಂದಿಸೋಣ. ಅವರು ನಮ್ಮ ಉಚ್ಚ ಸಂಸ್ಕೃತಿಯ ಪ್ರತಿಬಿಂಬವಾಗಿದ್ದಾರೆ. ಸತ್ಯ ಅಹಿಂಸೆಗಳ ಶಸ್ತ್ರಗಳನ್ನು ನಮ್ಮ ಕೈಗಿತ್ತು ರಕ್ತಪಾತವಿಲ್ಲದೆ ಸ್ವರಾಜ್ಯಗಳಿಸಲು ಕಾರಣರಾದವರು ಅವರು. ಈ ಉದಾತ್ತ ತತ್ವಗಳಲ್ಲಿ ನಮಗಿರುವ ವಿಶ್ವಾಸವನ್ನು ಜಗತ್ತಿಗೆ ತೋರಲು ನಮಗೆ ಅವಕಾಶ ಒದಗುತ್ತಿದೆ. ನಮಗಿರುವ ಮಹದಾಕಾಂಕ್ಷೆಯೊಂದೆ. ಎಲ್ಲರ ಸ್ವಾತಂತ್ರ್ಯಕ್ಕಾಗಿ, ಜನಕೋಟಿಯ ಶಾಂತಿಗಾಗಿ ನಮ್ಮ ಅಂಶದ ಕೆಲಸವನ್ನು ಸಲಿಸಬೇಕೆಂಬುದೇ.

ನೈಸರ್ಗಿಕ ದೃಷ್ಟಿಯಿಂದಲೂ, ಭಗವಂತನ ಸೃಷ್ಟಿಯಿಂದಲೂ ಒಂದಾಗಿರಬೇಕಾಗಿದ್ದ ದೇಶ ಇಂದು ಎರಡಾಗಿ ನಿಂತಿದೆ. ನಮ್ಮ ಸಹೋದರರಾಗಿದ್ದವರ ವಿಯೋಗಕ್ಕೆ ವಿಷಾದ ವ್ಯಕ್ತಪಡಿಸಬೇಕಾಗಿದೆ. ಪಾಕಿಸ್ಥಾನ ಸರಕಾರಕ್ಕೆ ಯಶಸ್ಸು ದೊರೆಯಲೆಂದು ನಿಮ್ಮ ಮತ್ತು ನನ್ನ ಪರ ಆಶಿಸುವೆನು. ನಮ್ಮ ಗಡಿಯೊಳಗೆ ಪಾಕಿಸ್ಥಾನಕ್ಕೊಳಪಟ್ಟಿರುವವರು ಸರ್ವಚಿತ್ತರಾಗಿ, ತಮ್ಮ ಮನೆ ಮಠಗಳನ್ನು ಬಿಡದೆ, ಸಂಸ್ಕೃತಿಯನ್ನು ತ್ಯಜಿಸದೆ ಅಲ್ಲೇ ಇರಬೇಕಾಗಿ ಬಿನ್ನವಿಸುತ್ತೇನೆ. ಅವರಿಗೆ ನ್ಯಾಯ, ನೀತಿಗಳು ದೊರೆಯುವವೆಂದು ಬೆದರಲು ಕಾರಣವಿಲ್ಲ. ಇಂಡಿಯಾದಲ್ಲಿರುವ ಅಲ್ಪಸಂಖ್ಯಾತರೂ ಬೆದರಬೇಕಿಲ್ಲ. ಅವರ ಧರ್ಮ ಸಂಸ್ಕೃತಿ, ಭಾಷೆಗಳನ್ನು ರಕ್ಷಿಸಲಾಗುವದು. ನಮ್ಮ ಕಾರ್ಯ ಮಹತ್ತರವಾದುದು. ಇದರಲ್ಲಿ ಎಲ್ಲರ ತ್ರಿಕರಣಪೂರ್ವಕ ಬೆಂಬಲ ಪ್ರೀತಿಗಳಿರುವವೆಂದು ನಂಬಿರುವೆನು.'

ಜವಾಹರರ ಭಾಷಣ.

'ಇಂದು ನಡುರಾತ್ರಿ, ಜಗತ್ತು ನಿದ್ರಿಸುತ್ತಿರುವಾಗ ಭಾರತವು ಸಜೀವವಾಗಿ ಚೇತನಹೊಂದಿ ಸ್ವಾತಂತ್ರ್ಯಕ್ಕೆ ಎಚ್ಚರಗೊಳ್ಳಲಿದೆ. ಆ ಅಮೂಲ್ಯ ನಿಮಿಷ ಬಂದಿದೆ. ಆತ್ಮಪೂರ್ವವಾದ ಹೆಳಕಿನಿಂದ [illegible] ಕ್ಕೆ ಸಮರ್ಪಣ ಮಾಡುವ, ಹಳೆಯುಗ ಮುಗಿದು ಹೊಸ ಯುಗಾರಂಭವಾಗುವ, ಬಹು ಕಾಲದಿಂದ ದಲಿತವಾಗಿ ಒತ್ತಲ್ಪಟ್ಟಿರುವ ಆತ್ಮವು ಉಸಿರುಗೊಳ್ಳುವ ಕ್ಷಣ ಬರುತ್ತದೆ. ಈ ಪವಿತ್ರ ಕ್ಷಣದಲ್ಲಿ ನಾವು ಭಾರತದ ಸೇವೆಗಾಗಿ, ಜನಕೋಟಿಗಾಗಿ ನಮ್ಮ ಸರ್ವಸ್ವವನ್ನೂ ವಿನಿಯೋಗಿಸುವ ಪ್ರತಿಜ್ಞೆ ತೆಗೆದುಕೊಳ್ಳುವದು ಯುಕ್ತವಿದೆ.

ಇತಿಹಾಸದ ಉದಯದಲ್ಲಿ ಭಾರತವು ತನ್ನ ಅನಂತ ಶೋಧನೆಗಾಗಿ ಹೊರಟಿತು. ಅಸಂಖ್ಯಾತ ಶತಮಾನಗಳು ಭಾರತದ ಯತ್ನಗಳಿಂದ ತುಂಬಿವೆ. ಅದರ ಯಶಸ್ಸು ಹಾಗೂ ಅಪಯಶಸ್ಸುಗಳ ಶೋಭೆಯಿಂದ ರಂಜಿತವಿವೆ. ನಾವಿಂದು ದುರ್ದೈವದ ಕಾಲವನ್ನು ಮುಗಿಸುವೆವು. ಭಾರತವಿಂದು ತನ್ನನ್ನು ತಾನು ಕಂಡುಕೊಳ್ಳುತ್ತಿದೆ.

ಸ್ವಾತಂತ್ರ್ಯ ಮತ್ತು ಅಧಿಕಾರ, ಜವಾಬ್ದಾರಿಯನ್ನು ತರುತ್ತವೆ. ಈ ಸ್ವಾತಂತ್ರ್ಯ ಜನನದ ಮೊದಲು ನಾವು ಪ್ರಸವದ ಭಯಂಕರ ವೇದನೆಯನ್ನು ಅನುಭವಿಸಿರುವೆವು. ಆ ದುಃಖಸ್ಮರಣೆಯಿಂದ ನಮ್ಮ ಎದೆಗಳು ಭಾರವಾಗಿವೆ. ಹೋಗಿದ್ದರೂ ಕಳೆದುದೆಲ್ಲಾ ಮುಗಿಯಿತು. ಭವಿಷ್ಯತ್ತು ನಮ್ಮನ್ನು ಕರೆಯುತ್ತಿದೆ. ಭಾರತದ ಸೇವೆಯೆಂದರೆ ನೊಂದ ಜನಕೋಟಿಯ ಸೇವೆಯಾಗಿದೆ. ನಮ್ಮ ಜನಾಂಗದ ಸರ್ವಶ್ರೇಷ್ಠ ಮಹಾಪುರುಷನ ಯತ್ನವೆಂದರೆ—ಪ್ರತಿಯೊಂದು ಕಣ್ಣಿನಿಂದ ಅಶ್ರುಗಳನ್ನು ಒರಸಬೇಕೆಂಬುದು. ಯಾವದೇ ಕಣ್ಣಿನಲ್ಲಿ ಅಶ್ರುಗಳಿರುವನ್ನು ದಿನ ನಮ್ಮ ಸೇವಾಕಾರ್ಯ ಕೊನೆಗೊಳ್ಳದು. ಇದು ದ್ವೇಷಮಯ, ಪುಟ್ಟ ಟೀಕೆಗಳಿಗೆ ಸಮಯವಲ್ಲ. ಸ್ವತಂತ್ರಭಾರತದ ಮಹಾ ಪ್ರಾಸಾದವನ್ನು ನಾವು ಕಟ್ಟಬೇಕಾಗಿದೆ'

ಡಾ. ರಾಧಾಕೃಷ್ಣನ್.

'ಇಂದಿನ ದಿನದ ಮುಖ್ಯ ಇತಿಹಾಸವು ಬೆಳೆಯುವದು ನಮ್ಮ ಪ್ರಜಾಪ್ರಭುತ್ವದ ಮುನ್ನಡೆಯಲ್ಲಿ. ಇದೊಂದು ಜಗ್ಗುರುತು. ಆಸೆ ನಿರೀಕ್ಷೆಗಳ, ಮೌನ ಪ್ರಾರ್ಥನೆಗಳ ದೀರ್ಘ ರಾತ್ರಿಯು. ನಂತರ ನಾವಿಂದು ಸ್ವಾತಂತ್ರ್ಯೋದಯವನ್ನು ಕಾಣುತ್ತಿರುವೆವು. ಬಲಾತ್ಕಾರ ಮತ್ತು ನಿರ್ಧಾರದಿಂದ ಆಳಿದ ಬ್ರಿಟಿಷ್ ಪ್ರಭುತ್ವವು ಇಂದು ಅಧಿಕಾರ ಬಿಟ್ಟುಕೊಡುವದನ್ನು ಮೆಚ್ಚಬೇಕು. ಇಂಡೋನೇಶ್ಯದಲ್ಲಿ ಡಚ್ಚರೂ, ಏಷ್ಯಾ ವಸಾಹತುಗಳಲ್ಲಿ ಫ್ರೆಂಚರೂ ಅಂಟಿಕೊಂಡಿರುವಾಗ ಬ್ರಿಟಿಷರ ರಾಜನೀತಿಯ ದೂರದೃಷ್ಟಿಯನ್ನು ಮೆಚ್ಚಬೇಕು. ನಾವೂ ಕೂಡ ಜಗತ್ತಿನ ಇತಿಹಾಸಕ್ಕೊಂದು ಅಧ್ಯಾಯವನ್ನು ಕೂಡಿಸಿರುವೆವು. ಪರತಂತ್ರದಲ್ಲಿದ್ದ ಜನಾಂಗಗಳು ಹೇಗೆ ತಮ್ಮ ಸ್ವಾತಂತ್ರ್ಯವನ್ನು ಗೆದ್ದವು ಎಂಬುದನ್ನು ನೋಡಿರಿ. ವಾಶಿಂಗ್‌ಟನ್, ನೆಪೋಲಿಯನ್, ಕ್ರಾಮ್‌ವೆಲ್, ಹಿಟ್ಲರ್, ಮುಸಲೋನಿ—ಅವರ ಖಡ್ಗದ ಅಸ್ತ್ರಗಳು ಹರಿಯಿಸಿದ ನೆತ್ತರು, ಹಬ್ಬಿಸಿದ ಭಯ ಇವುಗಳಿಂದ ಅವರು ಅಧಿಕಾರ ಪಡೆದರು. ಇಲ್ಲಿ ನಮ್ಮ ನಾಡಿನಲ್ಲಿ ನಮ್ಮ ಯುಗದ ಸರ್ವಶ್ರೇಷ್ಠ ಮಹಾತ್ಮನೊಬ್ಬನು ಬಲಾಢ್ಯ ಪರಕೀಯ ಪ್ರಭುತ್ವವೊಂದನ್ನು ಶಾಂತಿಯಿಂದ ಎದುರಿಸಿದನು. ಇಂದಿನ ಫಲವನ್ನು ನೋಡಿ. ಯಾವ ಕಹಿ ಭಾವನೆಯೂ ಇಲ್ಲದೆ, ದ್ವೇಷವಿಲ್ಲದೆ ಅಧಿಕಾರವು ವರ್ಗಾಯಿಸಲ್ಪಡುತ್ತಿದೆ.

೧೬೦೦ ರಿಂದ ಬ್ರಿಟಿಷರು ಭಾರತಕ್ಕೆ ಬರತೊಡಗಿದರು: ಗುರುಗಳಾಗಿ, ಸನ್ಯಾಸಿಗಳಾಗಿ, ವರ್ತಕರಾಗಿ, ರಾಜತಂತ್ರಜ್ಞರಾಗಿ, ರಾಜ್ಯಭಾರಿಗಳಾಗಿ ಅನೇಕ ರೂಪದಿಂದ ಬಂದಿರುವರು. ಇವರಲ್ಲಿ ಮಹಾಪುರುಷರಾಗಿದ್ದವರು ಈ ದೇಶವನ್ನು ಸಾಧಾರಿಸಲಿಕ್ಕೆ ಯತ್ನಿಸಿದರು. ಅವರಲ್ಲಿ ಕೀಳಾಗಿದ್ದವರು ವಿರುದ್ಧವಾಗಿ ವರ್ತಿಸಿದರು. ಇಂದು ಸ್ವಾತಂತ್ರ್ಯ ಬರುತ್ತಿರುವಾಗ ಪೂರ್ಣ ಸಂತೋಷವಿಲ್ಲದೆ, ಪ್ರಾಣರಂಜಿತ ನಗುವಿಲ್ಲದೆ ಭಾರತವು ಸ್ವತಂತ್ರಗೊಳ್ಳುತ್ತಿದೆ.

ನಾವೇ ನಮಗೆ ರಕ್ಷಕರಾಗಿದ್ದೇವೆ. ನಮ್ಮ ತಪ್ಪುಗಳನ್ನೂ, ದೋಷಗಳನ್ನೂ ತಿದ್ದಿಕೊಳ್ಳಬೇಡವೇ? ನಮ್ಮ ಗೃಹದೊಳಗಿನ ಅನೈಕ್ಯವನ್ನು ಸರಿಪಡಿಸಬೇಡವೇ? ನಮ್ಮ ಹೃದಯಗಳನ್ನು ನಾವೇ ಪರಿಶೋಧಿಸಬೇಕು. ನಾವು ಗೆದ್ದಿರುವೆವು, ಗೆದ್ದಿದ್ದೇ ಕಾದ ರೀತಿಯಲ್ಲಿ ಗೆಲ್ಲಲಿಲ್ಲ. ಈ ಜವಾಬ್ದಾರಿ ನಮ್ಮದು. ಕೋಮುವಾರ ಪಡೆಗಳು ಬೇರೆ ಬೇರೆ ಅವುಗಳಿಂದ ಯಾರೂ ಎಲ್ಲಿಗೂ ತಲುಪಲಾರರು. ಸಾಂಸ್ಕೃತಿಕ ಒಂದನವು ಪಾಕಿಸ್ಥಾನ ಹಿಂದೂಸ್ಥಾನಗಳೊಳಗೆ ಬೆಳೆಯಲಿ. ನಮಗೆ ಇಂದು ಹಲವು ಸಂದರ್ಭಗಳಿವೆ. ಅಧಿಕಾರವು ಯೋಗ್ಯತೆಯನ್ನು ಮೀರಬಾರದು. ಇಂದು ನಡುರಾತ್ರಿಯಿಂದ ನಾವು ಬ್ರಿಟಿಷರ ಮೇಲೆ ದೂರು ಹೊರಿಸಲಾರೆವು. ನಾವೇ ಜವಾಬ್ದಾರಿ ಹೊರುವವರು. ದೇಶದ ಹೆಸರನ್ನು ಕಡಿಸಿದ ಲಂಚಕೋರತನ, ಭ್ರಷ್ಟಪಡತನ, ತಪ್ಪು ಹಂಗಿಗಳನ್ನು ನಿರ್ಮೂಲನಮಾಡಬೇಕು. ಇಲ್ಲದಿದ್ದಲ್ಲಿ ಪ್ರಗತಿಯಿಲ್ಲ'

ಬಾಬು ರಾಜೇಂದ್ರ ಪ್ರಸಾದರ ಸಂದೇಶ.

“ಮಹಾತ್ಮಗಾಂಧೀಜಿ ಮತ್ತವರ ಹಿಂದಿನ ಮಹಾ ಮುಂದಾಳುಗಳ ಪರಿಶ್ರಮದ ಫಲದಿಂದ ಹಿಂದೂದೇಶವು ಇತರ ಸ್ವತಂತ್ರ ರಾಷ್ಟ್ರಗಳಂತೆ ಹೊಸದ ಸ್ವಾತಂತ್ರ್ಯದ ಚರಿತ್ರಾರ್ಹ ಯಾತ್ರೆಯಲ್ಲಿ ತನ್ನ ಪಾಲನ್ನು ನಿರ್ವಹಿಸುವಂತಾಯಿತು. ಇಂದು ಪರಕೀಯ ಹೊರೆಯನ್ನು ಕಿತ್ತೊಗೆದು ನಾವು ಅನುಭವಿಸುತ್ತಿರುವ ವಿಜಯೋತ್ಸವವು ನಮ್ಮ ಸ್ವಂತ ಶ್ರಮದಿಂದ ಪಡೆದ ಜಯ. ಆದರೆ ಇದೇ ನಮ್ಮ ಕಾರ್ಯದ ಅಂತಿಮವಲ್ಲ. ನಿಮಿಷದಂತರ ಜನರು ಉಪವಾಸ, ಬಡತನ, ಕಾಯಿಲೆಗಳಿಂದ ನರಳುತ್ತಿದ್ದಾರೆ. ಇವುಗಳನ್ನು ಜಯಿಸಲು ನಮ್ಮ ೬೦ ಲಕ್ಷ ಪಕ್ಷ ಕಲಹ, ಸ್ವಾರ್ಥದೃಷ್ಟಿ ಮೊದಲಾದವುಗಳನ್ನು ಬದಿಗೊತ್ತಿ ಶ್ರಮಿಸಬೇಕು. ಸ್ವತಂತ್ರ ರಾಷ್ಟ್ರದ ಅವಶ್ಯಕತೆಗನುಗುಣವಾಗಿ ದೇಶದ ಜನತೆಯು ಐಕ್ಯತೆಯ ಮತ್ತು ಸಹಾನುಭೂತಿಯನ್ನು ವಿಕಸಿಸಿ ಯೋಗ್ಯ ಮಾರ್ಗದಲ್ಲಿ ಪ್ರವರ್ತಿಸಲು ಮಹಾ ಶ್ರಮಪಡಬೇಕಿದೆ. ಜನತೆಯು ನಿರ್ಧಾರ ನಿಷ್ಠೆಯು ಇದ್ದರೆ ಈ ಎಡರುಗಳನ್ನು ಜಯಪ್ರದವಾಗಿ ನಿವಾರಿಸಬಹುದೆಂದು ನನ್ನ ನಂಬಿಕೆ.”

ವಕೀಲರೂ-ಸ್ವಾತಂತ್ರ್ಯವೂ.

ಲೇ:—ಬಿ. ಡಿ. ಗಣಪತಿ

ಹಿಂದೂಸ್ಥಾನದ ಸ್ವಾತಂತ್ರ್ಯಕ್ಕೆ ವಕೀಲ ವೃಂದವು ತನ್ನ ಅಮೂಲ್ಯ ಸೇವೆಯನ್ನು ಸಲ್ಲಿಸಿದೆ. ಈಗ ನಮಗೆ ಬಂದಿರುವ ಸ್ವಾತಂತ್ರ್ಯದಲ್ಲಿ ಮುಂದೆ ಈ ವೃತ್ತಿಯು ಯಾವ ಮಾರ್ಗವನ್ನನುಸರಿಸುವದೋ ಅವರ ಮೇಲೆಯೇ ಕೆಲಮಟ್ಟಿಗೆ ಸ್ವಾತಂತ್ರ್ಯದ ಶೋಭೆಯೂ ಅಡಗಿದೆ. ಈ ವರೆಗಿನ ಆಡಳಿತದಲ್ಲಿ ನಮ್ಮದು ಎಂಬ ಭಾವನೆ ಬರುತ್ತಿರಲಿಲ್ಲ. ದುಡ್ಡಿನ ಪ್ರಶ್ನೆಯೇ ಪ್ರಧಾನವಾಗಿತ್ತು. ಅಪರಾಧಿಯು ಮಾಡಿದ್ದು ತಪ್ಪೆಂದು ತಿಳಿದರೂ ಕೂಡ ದುಡ್ಡಿನ ದೃಷ್ಟಿಯಿಂದ ವಕೀಲರು ಅವರ ವಕಾಲತ್ತು ವಹಿಸಿ ಅವನನ್ನು ರಕ್ಷಿಸುವ ಪ್ರಯತ್ನಮಾಡುವದು ಇಂದಿಗೂ ಇದೆ. ಇಂದು ಸರಕಾರ ಬದಲಾಗಿದೆ. ಆರ್ಥಿಕ ದೃಷ್ಟಿಯಿಂದ ಯೋಗ್ಯ ವಿತರಣೆಯಾಗಬೇಕೆಂದು ಕೂಗಿದೆ. ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಸರ್ವರೂ ಸಮಾನರಾಗಿರಬೇಕೆಂದೂ ಜನತೆ ಕೇಳುತ್ತಿದೆ. ಈ ಸಮಾನತೆ ಮತ್ತು ನ್ಯಾಯಗಳ ಯೋಗ್ಯ ವಿತರಣೆ ಸಾಧ್ಯವಾಗಲು ವಕೀಲರದ್ದೂ ದೊಡ್ಡ ಜವಾಬ್ದಾರಿಯಿದೆ. ಅವರುಗಳು ಮುಂದೆ ಸಮಾಜ ಸುಧಾರಕರ ಪಾತ್ರವನ್ನು ವಹಿಸಬೇಕಿದೆ.

ಬ್ರಿಟಿಷ್ ಆಡಳಿತೆ ನಡೆದಿದ್ದಾಗ ಸರಕಾರವು ಮಾಡುತ್ತಿದ್ದ ಕಾನೂನುಗಳನ್ನು ರಾಜಕೀಯ ದೃಷ್ಟಿಯಿಂದ ಮುರಿಯುವದು ಒಂದು ತತ್ವದಂತಿದ್ದರೂ ಬೇರೆ ದೃಷ್ಟಿಯಿಂದಲೂ ಕಾನೂನುಗಳು ಮುರಿಯಲ್ಪಡುವದರಿಂದಲೇ ಆಚರಿಸಲ್ಪಡುತ್ತಿದ್ದವು! ಜನತೆಯು ಇಂಥಾ ಕಾಲದಲ್ಲಿ ತಮ್ಮ ರಕ್ಷಣೆಗೆ ವಕೀಲವೃಂದದ ಮರೆಹೋಗುತ್ತಿತ್ತು. ವಕೀಲರು ಕಾನೂನನ್ನು ತಮಗೆ ಬೇಕಿದ್ದಂತೆ ತಿರುವುಮುರುವು ಮಾಡಿ ತಮ್ಮ ಪಕ್ಷದವರನ್ನು ನಿರಪರಾಧಿಗಳಾಗಿ ಮಾಡುತ್ತಿದ್ದರು. ದುಡ್ಡು ಹೆಚ್ಚಿಗೆ ಕೊಡುವ ಶಕ್ತಿಯಿದ್ದರೆ ಕೊಲೆಮಾಡಿದರೂ ಪಾರಾಗಬಹುದು ಎಂಬ ಕಲ್ಪನೆ ಜನತೆಯಲ್ಲಿ ಬಂದಿದೆ. ಹಾಗೆ ಕೊಲೆಮಾಡಿದವರೂ ಬದುಕಿಕೊಂಡ ನಿದರ್ಶನಗಳಿವೆ!

ಕಾನೂನು ಹೇಗಿದೆಯೆಂಬುದನ್ನು ಜನತೆಗೆ ಹೇಳಿಕೊಡುವದೇ ವಕೀಲನ ಕೆಲಸವಲ್ಲದೆ ಅಪರಾಧಿಯ ತಪ್ಪನ್ನು ಮುಚ್ಚುವದು ಎಂದೂ ವಕೀಲವೃತ್ತಿಯಾಗದೆಂದು ನನ್ನ ಭಾವನೆ. ತಪ್ಪುದಾರಿ ಹಿಡಿಯುವವರನ್ನು ಎಚ್ಚರಿಸಿ, ಧರ್ಮ ಭೀರುಗಳಿಗೆ ಯೋಗ್ಯಪಥ ತೋರಿಸುವ ಕೆಲಸವು ವಕೀಲರದು. ವಕೀಲರು ಎಂದು ಸಮಾಜದಲ್ಲಿ ನ್ಯಾಯ, ಧರ್ಮಗಳನ್ನು ಸ್ಥಾಪಿಸುವ ಜವಾಬ್ದಾರಿಯನ್ನು ಹೊರುವದಿಲ್ಲವೋ ಅಂದಿನ ವರೆಗೆ ನಮಗೆ ಸ್ವಾತಂತ್ರ್ಯವಿದ್ದರೂ ಸಮಾಜವು ಸರ್ವರ ಹಿತಸಾಧಕವಾಗಲಾರದು.

ಕಪ್ಪುಸಂತೆಯಲ್ಲಿ ಕಳ್ಳವ್ಯಾಪಾರಮಾಡಿ, ನೂರಾರು ಜನರು ಜೀವಂತವಿದ್ದಾಗಲೇ ಕೊಲೆಮಾಡಿದ ಲಾಭಬಡುಕರನ್ನು ರಕ್ಷಿಸುವ ಕೆಲಸಕ್ಕೆ ವಕೀಲರು ಕೈಯಿಕ್ಕಿದರೆ ಅದು ಯೋಗ್ಯ ವಕೀಲಿಯಾದೀತೆ? ಸಮಾಜದ ಕಟ್ಟುಕಟ್ಟಳೆಗಳನ್ನು ಮುರಿದು ಅನಾಚಾರಮಾಡಿದವರನ್ನೂ ಬೆಂಬಲಿಸಿ ಅವರ ಪರ ವಾದಿಸಿದರೆ ಊರ ಹಿತ ಮಾಡಿದಂತಾಗುವದು? ಈ ರೀತಿ ತಪ್ಪು ಮಾಡಿದವರನ್ನು ಕಾನೂನಿನ ಕಟ್ಟಳೆಯಿಂದ ರಕ್ಷಿಸುವ ಪ್ರಯತ್ನಮಾಡುವ ವಕೀಲರು ಈ ದುರ್ನಡತೆಗಳಿಗೆ ಪ್ರತ್ಯಕ್ಷವಲ್ಲದಿದ್ದರೂ ಪರೋಕ್ಷವಾಗಿ ಬೆಂಬಲಕೊಟ್ಟಂತಾಗುವದಿಲ್ಲವೇ?

ಕೊಲೆಪಾತಕಿಯನ್ನು ಬದುಕಿಸಿದೆನೆಂದು ಆತನ ವಕೀಲನು ತನ್ನ ಹೆಗ್ಗಳಿಕೆಯನ್ನು ಹೇಳಿಕೊಳ್ಳುತ್ತಾನೆ. [illegible] ರನ್ನು ರಕ್ಷಿಸಿಕೊಳ್ಳಲಿಕ್ಕಾಗಿ [illegible] ರು ಬೆವರ್ಸಿಟ್ಟಿಕೊಳ್ಳುತ್ತಾನೆ [illegible] ಜನ್ಮ ಕೊಡದ [illegible] ಒಕ್ಕಲ [illegible] ಸುತ್ತದೆ. ಆದರೆ [illegible] ರು ಈ ರೋಗಗಳಿಗೆ [illegible] ಧಿಯೊಬ್ಬನು ಗಲ್ಲಿಗೇರಿಸಲ್ಪಡುವಾಗಲೇ, ಒಬ್ಬನನ್ನು [illegible] ಅಂಥಾವರನ್ನು [illegible] ಒದಗಿಸಿ ಕೊಟ್ಟರೆ [illegible] ವಾಗಿಲ [illegible]

ಸ್ವಾತಂತ್ರ್ಯದ [illegible] ದೂಡೇರದ [illegible] ರೀತಿ [illegible] ದು. ಕೋರ್ಟಿನ [illegible] ಹಿಂದಿನ ಶೋಭೆಯನ್ನು ಕಳಕೊಂಡ [illegible] ನ್ಯಾಯ [illegible] ಮಾಡಿರುವ [illegible] ದಲಾಗಬಹುದು. ಆದ್ದರಿಂದ ವಕೀಲ ವೃತ್ತಿಯೂ ತನ್ನ ಹಿಂದಿನ ಬಣ್ಣವನ್ನು ಕಳಕೊಳ್ಳಬಹುದು. ಈ ಪರಿವರ್ತನೆಯೊಂದಿಗೆ ವಕೀಲರು ತಮ್ಮ ದೃಷ್ಟಿಯನ್ನು ಬದಲಾಯಿಸಬೇಕಾಗಿದೆ. ಯಾರಿಗೂ ಅಪಕಾರವಾಗದ ರೀತಿ, ಯಾರಿಗೂ ಅಕಾರಣ ಶಿಕ್ಷೆ ದೊರೆಯದ ರೀತಿ ನ್ಯಾಯದ ಯೋಗ್ಯ ವಿತರಣೆಯಾಗುವಂತೆ ಅವರು ನೋಡಿಕೊಂಡರೆ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರು ಮಾಡಿದ ತ್ಯಾಗಕ್ಕೆ ಕಳಶವಿಟ್ಟಂತಾಗುವದು.

ನವಭಾರತದ ಉದಯದೊಂದಿಗೆ ನವಶಕ್ತಿ ಬೇಕು. ದೇಶದ ಸರ್ವ ಆಡಳಿತವು ನಮ್ಮಿಂದಲೇ ನಡೆಸಲ್ಪಡುವಾಗ ನಾವೇ ಮಾಡಿದ ಕಾಯಿದೆಗಳನ್ನು ನಾವೇ ಮುರಿಯುವದು ಸಾಧ್ಯವಿಲ್ಲ. ಸ್ವಾತಂತ್ರ್ಯ ಬಂತೆಂದಾಗ ಇನ್ನೊಬ್ಬನನ್ನು ಕೊಲೆಮಾಡಲು ಸ್ವಾತಂತ್ರ್ಯವಲ್ಲ. ಇಲ್ಲವೇ ಇನ್ನೊಬ್ಬನ ಮಾತನ್ನು ಮಾನಿಸಬಾರದೆನ್ನುವ ಸ್ವಾತಂತ್ರ್ಯವಲ್ಲ. ಸ್ವಾತಂತ್ರ್ಯ ಪ್ರತಿಯೊಬ್ಬನಿಗಿದೆಯೆಂದು ಸರ್ವರೂ ರಸ್ತೆಗಳಲ್ಲಿ ಒಬ್ಬರಿಗೊಬ್ಬರು ದಾರಿ ಬಿಡದೆ ನಡೆಯುವದಾದರೆ ನಮ್ಮ ಪ್ರಗತಿ ಎಲ್ಲಿಗೆ ತಲಪೀತು? ಸ್ವಾತಂತ್ರ್ಯದೊಂದಿಗೆ ಇನ್ನೊಬ್ಬನ ಸ್ವಾತಂತ್ರ್ಯವನ್ನು ಗೌರವಿಸುವ ಜವಾಬ್ದಾರಿ ಪ್ರತಿಯೊಬ್ಬನಿಗಿದೆ. ಈ ಹಕ್ಕು ಬಾಧ್ಯತೆಗಳನ್ನು ಜನತೆಗೆ ಮನವರಿಕೆ ಮಾಡಿಸುವ, ಜನತೆ ತಪ್ಪಿದಲ್ಲಿ ತಿದ್ದುವ ಉದ್ಯಮ ವಕೀಲರದ್ದಾದರೆ ಅವರೇ ನಾಡಿನ ಧರ್ಮದರ್ಶಿಗಳೂ ಆಗುವರು.

ಗಾಂಧಿಯವರ ಆದರ್ಶ ಸ್ವರಾಜ್ಯ.

‘ನನ್ನ ಅಭಿಮತದಂತೆ ಸ್ವರಾಜ್ಯವೆಂದರೆ ಭಾರತ ಸರಕಾರವು ಭಾರತೀಯರ ಒಪ್ಪಿಗೆಯದು. ಭಾರತೀಯರಲ್ಲಿ ಲಿಂಗ ಭೇದವಿಲ್ಲದೆ ಯಾವತ್ತೂ ಜನಸಾಮಾನ್ಯರನ್ನೊಳಗೊಂಡು ಎಲ್ಲಾ ವಯಸ್ಕರು ಮತದಾನಮಾಡಿ ಕೊಟ್ಟ ಒಪ್ಪಿಗೆಯಿಂದ ರಚಿಸಲ್ಪಡಬೇಕು. ಅಲ್ಲದೆ ಕೆಲವರ ಕೈಯಲ್ಲಿ ಅಧಿಕಾರ ಬರುವದರಿಂದ ಸ್ವರಾಜ್ಯ ಬಂದಂತಾಗುವದಿಲ್ಲ. ಆ ಸ್ವರಾಜ್ಯವು ಅಧಿಕಾರದ ದುರುಪಯೋಗವಾದಾಗ ಅದನ್ನು ಎದುರಿಸುವ ಶಕ್ತಿ ಎಲ್ಲರಲ್ಲಿಯೂ ಬಂದಾಗ ಮಾತ್ರ ಲಭಿಸುವದು. ಅರ್ಥಾತ್ ಅಧಿಕಾರಿಗಳನ್ನು ಸರಿಮಾರ್ಗಕ್ಕೆ ಹಚ್ಚಿ ನಿಯಂತ್ರಿಸುವ ಒಂದು ಶಕ್ತಿ ಜನತೆಯಲ್ಲಿ ಬರುವಂತೆ ಜನಸಾಮಾನ್ಯರನ್ನು ಸುಶಿಕ್ಷಿತರನ್ನಾಗಿ ಮಾಡುವದರಿಂದಲೇ ಸ್ವರಾಜ್ಯದ ಗಳಿಕೆಯಾಗುವದು.

‘ಹಿಂದುಸ್ಥಾನದ ಅರೆ ಉಪವಾಸದಿಂದ ಬಳಲುತ್ತಿರುವ ನಿರ್ಗತಿಕರಿಗಾಗಿ ನನ್ನ ಜೀವಮಾನ ಮೀಸಲಿದೆ. ಸ್ವರಾಜ್ಯವೆಂದರೆ ಈ ಚಲಿಸುವ ಅಸ್ತಿಪಂಜರದಂತಿರುವ [illegible] ಕೋಟಿ ಜನರ ಉದ್ಧಾರದಲ್ಲಿದೆ. ಈ ವರೆಗೆ ಮೂಕರಾಗಿ ತುಂಬುತಿದ್ದ [illegible] ನಡೆದು ಮಾತಾಡಲಿಕ್ಕೆ ಕಲಿತಾಗಲೆ ಪೂರ್ಣ ಸ್ವರಾಜ್ಯ [illegible] ಆ ಸ್ವರಾಜ್ಯವು ಸೇವೆಯಿಂದ ದೊರೆಯಲಾರದು. ಅದನ್ನು [illegible] ಗಳಿಸಬೇಕು.’

[illegible] ಹೀನವೃತ್ತಿಯಾಯಿತೇ?

ಲೇ:-‘[illegible]’

ಗುರುರ್ಬ್ರಹ್ಮಾ ಗುರುರ್ವಿಷ್ಣು
ಗುರುರ್ದೇವೋ ಮಹೇಶ್ವರಃ।
ಗುರುಸ್ಸಾಕ್ಷಾತ್ ಪರಬ್ರಹ್ಮಂ
ತಸ್ಮೈ ಶ್ರೀ ಗುರವೇ ನಮಃ॥

[illegible] ಜೀವನ, ಗುರುವಿನಿಂದಲೇ [illegible], [illegible] ಮೊದಲು [illegible] ಕೆಲವರು ಗುರುವಿನ [illegible] ವಿಲ್ಲದ ವಿದ್ಯೆ [illegible] ಎಂದರು. ಗುರುವೇ ಸಾಕ್ಷಾತ್ ಪರಬ್ರಹ್ಮನೆಂದರು. [illegible] ಗುರುಗಳನ್ನು ಹೊಗಳಿದರು, ಕೊಂಡಾಡಿದರು. ಗುರುಗಳೇ ಸರ್ವಕ್ಕೂ ಸಾಧನರಾದರು. ಆದರೆ ಈ ಗುರುವಿಶೇಷಣಗಳು ಈಗಿನ ಗುರುಗಳಿಗೆ ಸ್ವಲ್ಪ ಮಟ್ಟಿಗೆ ಅನ್ವಯಿಸುವದು. ಭೌತಿಕ ನಾಗರಿಕತೆಯ ಸಾಗರದಲ್ಲಿ ತೇಲಾಡುತ್ತಿರುವವರಿಗೆ ದುಡ್ಡೇ ದೊಡ್ಡಪ್ಪನಾಗಲು ಗುರುಗಳೂ ಹೊಟ್ಟೆಯ ಕಡೆಗೆ ಕಣ್ಣಿಡಬೇಕಾಯಿತು. ಆದ್ದರಿಂದ ಇಂದು ಗುರುಗಳೆಂದರೆ ಎಲ್ಲರಿಗೂ ತಿರಸ್ಕಾರ. ಮೇಲಿನ ಶ್ಲೋಕದ ಮಾರ್ಪಾಟಾಗಿ ಇಂದು ಹೀಗಾಗಿದೆ:

ಗುರುರ್ದಾರಿದ್ರ್ಯ, ಗುರುರ್ಭಿಕ್ಷುಕ
ಗುರುರ್ಮಹೋ ಶ್ವಾನರಜಃ।
ಗುರುರ್ಶ್ರೇಷ್ಠ ಜಗದ್ನಿಂದ್ಯಂ
ತಸ್ಮೈ ಭಿ ಗುರವೇ ನಮಃ॥

* * *

“ಉಂಚವೃತ್ತಿಲ್ಲದವಂಗೆ ಉಪಾಧ್ಯಾಯ ಚಾಕರಿ” ಎಂದು ಹಿರಿಯರು ಗಾದೆ ಕಟ್ಟಿದರು. ಆದರೆ ಈಗ ‘[illegible] ಚಾಕರಿ ತಪ್ಪಿತವಂಗೆ ಉಪಾಧ್ಯಾಯ ಚಾಕರಿ’ ಎಂಬಾಗಿದೆ. [illegible] ತನದವರೋ, ಗಾಡ್‌ಫಾದರ್‌ಗಳೋ, ಸೆಟ್ಟಿಗೆ ನಿಂತು ಸಹಾಯ ಮಾಡುವವರೋ ಇದ್ದರೆ ಅಂಥವರಿಗೆ ಹೋದಲ್ಲಿ ಬಂದಲ್ಲಿ ಎಲ್ಲಾ ‘ನೋ ವೇಕೆನ್ಸಿ’ [illegible] ಕೊನೆಗೆ ಏನಾದರೂ ಆಗಲಿ ಎಂದು ‘ಉಪಾಧ್ಯ’ ಕೆಲಸಕ್ಕೆ ಅರ್ಜಿ ಬರಕೊಳ್ಳಬೇಕಾಗುವದು. ಏಕೆಂದರೆ ದೇವರು ಹೊಟ್ಟೆಯೊಂದನ್ನು ಕೊಟ್ಟಿದ್ದಾನೆ ಕಾಣೆ! ಬಡವನೂ, ಬಲ್ಲಿದನೂ ಪಕ್ಷಪಾತವಿಲ್ಲದೆ ಅದಕ್ಕೆ ಏನನ್ನಾದರೂ ತುಂಬಿಸಬೇಕಲ್ಲವೇ? ಕೆಲಸಕ್ಕೆ ಸೇರಿ ಆಯಿತು. ಮೊದಲೇ ಉಪಾಧ್ಯಾಯರಿಗೆ ಸಂಬಳ ಕಡಿಮೆ. ಬಡ ‘ಉಪಾಧ್ಯ’ನಿಗೆ ಅದರಲ್ಲೂ ಕಡಿಮೆ ಸಂಬಳ. ಹೊಟ್ಟೆ ಬಟ್ಟೆಯ ತೊಂದರೆ ಬೇರೆ. ಹೊಟ್ಟೆಗಾಗಿ [illegible] ನಡೆಸಿದರು [illegible] ಮಕ್ಕಳೊಂದಿಗೆ. ಇವನ್ನೆಲ್ಲಾ ಯೋಚಿಸುವಾಗ ಈ ಬರೆಯುವ ಬಾಯಿಯ ಲೇಖನಿಯೂ ಉರಿ ಹೇಳಲೆತ್ನಿಸುತ್ತದೆ. ಆದರೆ ಗೇಣುದ್ದದ ಲೇಖನಿಯನ್ನೂ ಮಾರುದ್ದದ ಉಪಾಧ್ಯಾಯರ ವಿರುದ್ಧ ಉಪಯೋಗಿಸಲಾಗುತ್ತಿದೆ. ಲೇಖನಿಯ ಒಂದೇ ಗೆರೆಯಿಂದ ಒಂದು ಮೂಲೆಯಲ್ಲಿದ್ದವರು ಮತ್ತೊಂದು ಮೂಲೆಗೆ ಒಗೆಯಲ್ಪಡುವರು! ಈ ಗುರುಗಳ ನಿವೇದನವು ಅರಣ್ಯರೋದನವಾಗಿ ಪರಿಣಮಿಸಿದ್ದೂ ಉಂಟು. ಅಲ್ಪಜ್ಞರು ಈ ವಿಚಾರ ಅಲಕ್ಷ್ಯದಿಂದಿದ್ದರೂ ಗುರುಕ್ಲೇಶವನ್ನು ಶಮನ ಮಾಡಿಸಲು ತಿಂಗಳಿಗೆ [illegible] ರೂಪಾಯಿಗಳ [illegible] ಮಾಡಿಸಬಾರದೇಕೆಂದು ವಿಚಾರವಂತರು ಕೇಳುತ್ತಿದ್ದಾರೆ.

* * *

ಇಂದು ಕೆಳಗಿಳಿದ ಸೂರ್ಯನು ನಾಳೆ ಹುಟ್ಟುತ್ತಾನೆ. ಇಂದು ಜೀವನದಲ್ಲಿ ಕಾರ್ಗತ್ತಲೆ ಕವಿದವರಿಗೆ ನಾಳೆ ಬೆಳಕು ಬೀಳುವದು. ಏಕೆಂದರೆ ಕಾಲಚಕ್ರದಲ್ಲಿ ನಿನ್ನೆ ಅಧಿಕಾರದಲ್ಲಿದ್ದವರು ಇಂದು ಕೆಳಗಿಳಿಯಬೇಕಾಗಿದೆ. ಇದೇ ರೀತಿ ನಾಳೆ ಅಧ್ಯಾಪಕವರ್ಗಕ್ಕೆ ಸುಯೋಗವು ಬಾರದೆ? ಉಪಾಧ್ಯಾಯರು ತಮ್ಮ ಅಭಿಲಾಷೆಯನ್ನು ಸಾಧಿಸಿಕೊಳ್ಳುವ ಮಾರ್ಗವು ಸನ್ನಿಹಿತವಾಗಿದೆ. ಕುರಿಯ ಚರ್ಮ ಹೊದ್ದ ತೋಳರನ್ನು ಗುರ್ತಿಸಿ ಬೇಕಿದ್ದವರಿಗೆ ಮುಕ್ತಿಕೊಡುವ ದಿನ ಬರಲಿದೆ. ಈ ಮಾತು ಕೇವಲ ಉಪಾಧ್ಯಾಯವರ್ಗದ ಸ್ವಾರ್ಥಸಾಧನೆಗಲ್ಲ. ನಾಡಿನ ಹಿತಕ್ಕಾಗಿ!

ಸ್ವಾತಂತ್ರ್ಯವು ಎಲ್ಲಿದೆ?

ಬ್ರಿಟಿಶರ ಕೈವಾಡದಿಂದ ಹಿಂದೂಸ್ಥಾನವು ಮುಕ್ತವಾಯಿತು. ನಮ್ಮ ಆರ್ಥಿಕ ಅಭ್ಯುದಯ ಉದೇರಿತು, ಮೊದಲಾದ ಉದ್ಗಾರಗಳು ನಮ್ಮಿಂದ ಹೊರಡುತ್ತಿವೆ ಹಾಗೆ ಆದುದೂ ಹೌದು. ಅದನ್ನು ತೋರಿಸುವ ಮತ್ತು ಅದರ ಬಗ್ಗೆ ಮನವರಿಕೆ ಮಾಡಿ ಕೊಡುವ ಅನೇಕ ಘಟನೆಗಳು ನಡೆದವು ಮತ್ತು ಜರಗುತ್ತಿವೆ ಅವುಗಳಲ್ಲಿ ಕೆಲವನ್ನು ಹೇಳುವುದಾದರೆ, ಹಿಂದೂಸ್ಥಾನದ ಸರಕಾರಿ ಕಟ್ಟಡಗಳ ಮೇಲೆ ನಮ್ಮ ಧ್ವಜವು ಹಾರಾಡುತ್ತಿದೆ, ವ್ಹಾಯಿಸರಾಯರೇ ಮೊದಲಾದ ಸರ್ವ ಅಧಿಕಾರಿಗಳು, ಪೋಲೀಸರು, ಸೈನಿಕರು ಅದಕ್ಕೆ ಶಿರಬಾಗಿಸಿ ವಂದನೆಗಳನ್ನು ಅರ್ಪಿಸಿದರು. ನಮ್ಮ ದೇಶದ ರಾಯಭಾರಿಗಳು ಜಗತ್ತಿನ ದೊಡ್ಡ ದೊಡ್ಡ ರಾಷ್ಟ್ರಗಳಿಗೆ ಕಳುಹಿಸಲ್ಪಟ್ಟಿದ್ದಾರೆ ವೈಸರಾಯ ಗವ್ಹರ್ನರ ಪದವಿಗಳಲ್ಲಿ ಹಿಂದೀಯರನ್ನೇ ನಿಯಮಿಸುವ ಅಧಿಕಾರವು ನಮ್ಮ ಕೈಗೆ ಬಂದಿತು, ಇದುವರೆಗೆ ಇಲ್ಲಿ ಇದ್ದ ಯುರೋಪದ ಜನರು ಮೊದಲಿನ ತಮ್ಮ ಮೇಲ್ಪಟ್ಟವನ್ನು ಬಿಟ್ಟು ಇಳಿದು ನಮ್ಮೊಡನೆ ಸಮಾನಸ್ಕಂಧರಾಗಿ ವರ್ತಿಸುತ್ತಿದ್ದಾರೆ. ಹೀಗೆ ವರ್ತಿಸಲು ಸಿದ್ಧರಿಲ್ಲದವರು ಈ ದೇಶವನ್ನು ಬಿಟ್ಟು ತೆರಳಿದ್ದಾರೆ, ಜಗತ್ತಿನ ವ್ಯಾಪಾರ ವ್ಯವಹಾರಗಳಲ್ಲಿ ಹಿಂದೂಸ್ಥಾನದ ಮಾತಿಗೂ ಇಂದು ಬೆಲೆಬಂದಿದೆ ಇತ್ಯಾದಿ.

ಆದರೆ ಸ್ವಾತಂತ್ರ್ಯ ಬಂದರೂ ದೇಶದ ಇತರ ಕಾರ್ಯಕಲಾಪಗಳಲ್ಲಿ ಪರಿಸ್ಥಿತಿಯಲ್ಲಿ ಏನೂ ವ್ಯತ್ಯಾಸವು ಕಂಡು ಬರುತ್ತಿಲ್ಲ. ಅವೇ ಕಟ್ಟಡಗಳಿವೆ, ಅವರೇ ಸೂರ್ಯಚಂದ್ರರಿದ್ದಾರೆ, ಅವೇ ಗಿಡಮರಗಳಿವೆ ಅವರೇ ಅಧಿಕಾರಿಗಳಿದ್ದಾರೆ, ಅವೇ ರೇಲ್ವೆ ಗಾಡಿಗಳು ಓಡಾಡುತ್ತಿವೆ, ಅದೇ ರೇಶನಿಂಗ್ ಪದ್ಧತಿಯಿದೆ ಅದೇ ಪೋಲೀಸರಿದ್ದಾರೆ, ಹೊಡೆದಾಟ ಬಡಿದಾಟಗಳು ಯಥಾ ಪ್ರಕಾರ ನಡೆದಿವೆ.

ಅಂದ ಮೇಲೆ ನಮಗೆ ಸಿಕ್ಕಿದ ಸ್ವಾತಂತ್ರ್ಯದ ಕುರುಹು ಎಲ್ಲಿ ಕಾಣುತ್ತಿದೆಯೆಂಬುದನ್ನು ನಾವು ಇಂದು ಹುಡುಕಬೇಕಾಗಿದೆ. ಬ್ರಿಟಿಶರ 'ಯೂನಿಯನ್' ಜಾಕ್ ಧ್ವಜದ ಸ್ಥಳದಲ್ಲಿ ಇಂದು ನಮ್ಮ ತ್ರಿವರ್ಣ ಧ್ವಜವು ಹಾರಾಡುತ್ತಿದೆ ಮತ್ತು ಎಲ್ಲ ಸರಕಾರೀ ಮತ್ತು ಅರ್ಧ ಸರಕಾರೀ ಕಚೇರಿ ಮತ್ತು ಅವುಗಳಲ್ಲಿ ಕಾಣುತ್ತಿದ್ದ ಬ್ರಿಟಿಷ್ ರಾಜದಂಪತಿಗಳ ಚಿತ್ರವೂ ಈಗ ಮಾಯವಾಗಬಹುದು. ಅದರ ಸ್ಥಳದಲ್ಲಿ ಮಹಾತ್ಮಾಗಾಂಧಿಯವರದೋ ಅಥವಾ ನಮ್ಮ ರಾಷ್ಟ್ರದ ಅಧ್ಯಕ್ಷರದೋ ಚಿತ್ರವು ತೂಗಿಸಲ್ಪಡಬಹುದು ಈ ಚಿಹ್ನೆಗಳ ಮೂಲಕ/ನಮಗೆ ಸಿಕ್ಕ ಸ್ವಾತಂತ್ರ್ಯವನ್ನು ತಿಳಿದುಕೊಳ್ಳಬೇಕೇ? ಹೌದು ಎಂದರೆ ಅಷ್ಟರಿಂದ ನಮ್ಮ ಜೀವನದಲ್ಲಿ ಏನು ಹುಟ್ಟಿದಂತಾಯಿತು? ಇತರ ಸರ್ವ ಕಾರ್ಯಕಲಾಪಗಳು ಪರಿಸ್ಥಿತಿಯು ಹಿಂದಿನಂತೇ ನಡೆಯುವುದಾದರೆ ಬ್ರಿಟಿಷರ ರಾಜ್ಯವು ಏನು ಕೆಡುಕಾಗಿತ್ತು? ಅಥವಾ ಅವರ ಅಧಿಕಾರವು ಹೋಗಿ ನಮ್ಮ ರಾಜ್ಯಾಧಿಕಾರವು ಉಂಟಾದುದರಿಂದ ನಮಗಾವ ಲಾಭವೇನು? ಎಂಬ ಮಾತುಗಳು ಹುಟ್ಟುವುದು ಸ್ವಾಭಾವಿಕವಾಗಿದೆ ಸಾಮಾನ್ಯ ಜನರಂತೂ ಈ ರೀತಿಯ ಅಭಿಪ್ರಾಯಪಡುವುದು ಸಹಜವು

ಈ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಪಾರತಂತ್ರ್ಯ ಎಲ್ಲಿ ಇತ್ತು? ಎಂಬುದನ್ನು ನಾವು ನೋಡಬೇಕಾಗುವದು. ಅದರ ಜ್ಞಾನವಾದರೆ ಅದೇ ಸ್ಥಳದಲ್ಲಿ, ಆ ಪಾರತಂತ್ರ್ಯದ ಸ್ಥಳದಲ್ಲಿ ಇಂದು ಸ್ವಾತಂತ್ರ್ಯವು ಬಂದುನಿಂತಿದೆ ಎಂಬುದನ್ನು ತೋರಿಸಲಾಗುವದು

ಮೌಲಾನಾ ಅಬುಲ್ ಕಲಂ ಆಜಾದ್

"ಸ್ವಾತಂತ್ರ್ಯ ಸಮರದ ಪ್ರಥಮ ಪರಿಚ್ಛೇದವು ಜಯಪ್ರದವಾಗಿ ಕೊನೆಗೊಂಡಿತು ಈ ಸ್ವಾತಂತ್ರ್ಯವು ಭಾರತೀಯರೆಲ್ಲರ ಸಹಕಾರ ಸಹಾನುಭೂತಿಗಳಿಲ್ಲದೆ ಶರಗತವಾಗುತ್ತಿರಲಿಲ್ಲ ಈ ಸಹಾಯ ಸಹಾನುಭೂತಿಗಳು ಹೆಚ್ಚಿನ ಪರಿಮಾಣದಲ್ಲಿ ಮುಂದೆ ಬೇಕಿವೆ ಮುಂದಿನ ಸ್ವಾತಂತ್ರ್ಯ ಸ್ಥಾಪನೆಯ ಪರಿಚ್ಛೇದವು ಪ್ರಾಮುಖ್ಯವಾದುದ ರಾಷ್ಟ್ರೀಯ ಪುನರ್ರಚನೆಯು ಮಾತಿನಿಂದ ಆಗಲಾರದು ನಮ್ಮ ಆಶಯಗಳನ್ನು ನೆರವೇರಿಸಿ ಭರತಖಂಡವನ್ನು ಭವ್ಯವಾಗಿ ಸಕಲರ ಸೌಖ್ಯದ ಸಮ್ಮೇಲನ ಕ್ಷೇತ್ರವಾಗಿ ಮಾಡಲು ಈ ಸ್ವಾತಂತ್ರ್ಯವನ್ನು ನಾವು ಉಪಯೋಗಿಸಿಕೊಳ್ಳಬೇಕು ಪ್ರತಿಯೊಬ್ಬ ಭಾರತೀಯನೂ ಈ ಸಂದಿಗ್ಧ ಸಮಯದಲ್ಲಿ ದೇಶದ ಕರೆಗೆ 'ಓ' ಕೊಟ್ಟು ಅವನ ಅಥವಾ ಅವಳ ಭಾಗದ ಕರ್ತವ್ಯವನ್ನು ಯೋಗ್ಯ ರೀತಿಯಿಂದ ನಿರ್ವಹಿಸಬೇಕು"

— ಆಜಾದ್

ಕಾಂಗ್ರೆಸ್ ಮುಖಂಡರು ಇದುವರೆಗೆ ಸ್ವಾತಂತ್ರ್ಯ ಪಾರತಂತ್ರ್ಯಗಳ ವ್ಯಾಖ್ಯೆಯನ್ನು ಹಿಂದೀ ಜನತೆಯ ಮುಂದೆ ಅನೇಕ ಸಲ ಇಡುತ್ತಬಂದಿದ್ದಾರೆ "ನಮ್ಮಲ್ಲಿದ್ದ ಪರಕೀಯ ಸರಕಾರವು, ಸರಕಾರೀ ಕಚೇರಿಗಳಲ್ಲಿಲ್ಲ, ಅಧಿಕಾರಿಗಳಲ್ಲಿಲ್ಲ, ಪೋಲೀಸ ಪಡೆಯಲ್ಲಿಲ್ಲ, ಸೈನ್ಯದಲ್ಲಿಲ್ಲ, ಕಾರಾಗೃಹಗಳಲ್ಲಿಲ್ಲ; ಅದು ನಮ್ಮ ಹೃದಯದಲ್ಲಿಯೇ ಇದೆ ನಮ್ಮ ಮನಸ್ಸಿನಲ್ಲಿ ಆಳವಾಗಿ ಬೇರೂರಿರುವ ದಾಸ್ಯ ಭಾವನೆ, ಹೆದರಿಕೆಗಳನ್ನು ಸಮೂಲ ಕಿತ್ತು ಹಾಕಿದರೆ ಈ ಪರಕೀಯ ಸರಕಾರವು ಮೇಲಿನ ಗುವ ತನಗೆ ಯಾರ ಭಯವೂ ಇಲ್ಲ, ಯಾವ ಕಾಯಿದೆಯೂ ತಮಗೆ ಏನೂ ಮಾಡಲಾರದು ಎಂಬುದು ಅವರ ಆ ಸ್ವಾತಂತ್ರ್ಯದ ಅರ್ಥವಾಗಿತ್ತು. ಆ ಸ್ವಾತಂತ್ರ್ಯವನ್ನು ಒಳಗೆ ಜನರು ಸಂಪಾದಿಸಿದಾಗಲೇ ಅರ್ಥವಾಗಿದ್ದ ಬ್ರಿಟಿಶ ಸರಕಾರದ ಭಯವನ್ನು ಅವರು ತೊರೆದು ಹಾಕಿದಾಗಲೇ ನಮ್ಮ ದೇಶವು ಸ್ವತಂತ್ರವಾಯಿತು.

ಇಂದು ನಮಗೆ ಸಿಕ್ಕಿರುವ ಸ್ವಾತಂತ್ರ್ಯವನ್ನು ಅದೇ ರೀತಿಯಾಗಿ ನಾವು ಹುಡುಕಬೇಕಾಗಿದೆ ಅಥವಾ ಕಂಡುಕೊಳ್ಳಬೇಕಾಗಿದೆ. ಬ್ರಿಟಿಶರ ಶಕ್ತಿಯು ಹೋ ಸ್ಥಳಗಳಲ್ಲಿಂದ ತಾನಾಗಿಯೇ ಮಾಯವಾಗುವುದು" ಎಂದು ಅವರು ಪದೆಪದೇ ಹೇಳಿದರು

ಮಹಾತ್ಮಾಗಾಂಧಿಯವರಂತೂ 'ನಾನು ಯಾವಾಗಲೂ ಸ್ವತಂತ್ರನಿದ್ದೇನೆ' ಎಂದು ಹೇಳಿದರು, ಅದರ ಅರ್ಥ, ಹಿಂದೂಸ್ಥಾನವು ಸ್ವತಂತ್ರವಿತ್ತೆಂದಲ್ಲ, ಅಥವಾ ಹಿಂದೂಸ್ಥಾನದಲ್ಲಿದ್ದ ಪರಕೀಯ ಸರಕಾರದ ಅಧಿಕಾರವು ಅವರ ಮೇಲೆ ಇರಲಿಲ್ಲವೆಂದಲ್ಲ. ಸರಿ ದಾರಿಯಿಂದ ಹೋಗಿ ನಮ್ಮವರ ಆಡಳಿತವು ಪ್ರಾರಂಭವಾದ ಕೂಡಲೆ ದೇಶವು ಸ್ವತಂತ್ರವಾಯಿತು ಎಂಬ ಮಾತು ವ್ಯಕ್ತವಾದದ್ದು ನಿಜ ಆದರೆ ಸ್ವಾತಂತ್ರ್ಯದ ನಿಜವಾದ ಪ್ರಯೋಜನವು ಜನತೆಗೆ ದೊರೆಯಬೇಕಾದರೆ ಅದರೂ ಆ ಸ್ವಾತಂತ್ರ್ಯವನ್ನು ಪಡೆಯಬೇಕು ಅನ್ಯಾಯ ಅತ್ಯಾಚಾರ ಸುಲಿಗೆಗಳನ್ನು ಯಾವ ಸರಕಾರವು ಮಾಡಿದರೇನು? ಬಿಳಿ ಅಧಿಕಾರಿಗಳ ಕೈಯೊಳಗಿನ ರಾಜ್ಯಸೂತ್ರಗಳು ಕರಿ ಅಧಿಕಾರಿಗಳ ಕೈಯಲ್ಲಿ ಬಂದ ಮಾತ್ರಕ್ಕೆ ನಮ್ಮ ಜೀವನಕ್ಕೆ ಸೌಖ್ಯವುಂಟಾಗಲಾರದು ಈ ಮಾತನ್ನು ಕೂಡ ಕಾಂಗ್ರೆಸು ಹಿಂದೀ ಜನತೆಯ ಮನಸ್ಸಿನಲ್ಲಿ ಬಿಂಬಿಸದೆ ಬಿಟ್ಟಿಲ್ಲ.

ಹಿಂದೀ ಜನತೆಯು ಈಗ ಸ್ವಾತಂತ್ರ್ಯವನ್ನು ಸಂಪಾದಿಸಬೇಕಾಗಿದೆ ಬ್ರಿಟಿಶರ ರಾಜ್ಯವಿದ್ದಾಗ ಹೇಳುತ್ತಿದ್ದಂತೆ, ಸ್ವಾತಂತ್ರ್ಯವು ಧ್ವಜದಲ್ಲಿರದೆ, ದೇಶದ ರಾಜನ ಅಥವಾ ಅಧ್ಯಕ್ಷನ ಚಿತ್ರದಲ್ಲಿರದೆ, ಕಚೇರಿಗಳಲ್ಲಿರದೆ, ಪೋಲೀಸರಲ್ಲಿರದೆ, ಕಾಯಿದೆಗಳಲ್ಲಿರದೆ, ನಮ್ಮ ಹೃದಯದಲ್ಲಿಯೇ ಇದೆ. ಅದು ಇದೆಯೋ ಇಲ್ಲವೋ ಎಂಬುದನ್ನು ಪ್ರತಿಯೊಬ್ಬನೂ ನೋಡಿಕೊಳ್ಳಬೇಕು. ನಮ್ಮ ದೇಶಗಳ ಕಾಯಿದೆಗಳನ್ನು ನಮ್ಮ ದೇಶದ ಜನತೆಯ ಹಿತಕ್ಕಾಗಿ ನಮ್ಮವರೇ ಮಾಡಿದರೂ ಅವುಗಳ ಭಯವು ನಮಗೆ ತಪ್ಪದಿದ್ದರೆ ಮತ್ತು ಅವುಗಳ ಮೂಲಕ ನಮಗೆ ಹಾನಿಯೇ ಆಗುತ್ತಿದ್ದರೆ ಅಥವಾ ಅವುಗಳನ್ನು ನಾವೇ ಉಲ್ಲಂಘಿಸಿ ನಮ್ಮ ಅಹಿತವನ್ನು ನಾವೇ ಮಾಡಿಕೊಳ್ಳುತ್ತಿದ್ದರೆ ನಮಗೆ ಸ್ವಾತಂತ್ರ್ಯವು ಇನ್ನೂ ಸಿಗಲಿಲ್ಲವೆಂದೆನ್ನಬೇಕಾಗುವುದು ನಮ್ಮ ದೇಶವು ಸ್ವತಂತ್ರವಾದರೂ ಅದರ ಪ್ರಯೋಜನವು ನಮಗೆ ದೊರೆಯಲಿಲ್ಲವೆಂದು ಹೇಳಬೇಕಾಗುವುದು. ಅಂದ ಮೇಲೆ ನಮ್ಮ ಹೃದಯದಲ್ಲಿ ಇನ್ನೂ ಪಾರತಂತ್ರ್ಯವೇ ಇದೆ ಎಂದು ವ್ಯಕ್ತವಾಗುವದು. ಪಾರತಂತ್ರ್ಯವು ಪರದೇಶೀಯರ ಮೂಲಕವಾಗಿರಲಿ ಅದು ಪಾರತಂತ್ರ್ಯವೇ

ಭರತಖಂಡಕ್ಕೆ ಸ್ವಾತಂತ್ರ್ಯವು ಸಿಕ್ಕಿದ್ದರೂ ಅದು ಜನರಿಗೆ ಕಾಣಿಸದಿದ್ದುದರ ಕಾರಣವು ಮೇಲಿನ ಮಾತುಗಳಿಂದ ಸ್ಪಷ್ಟವಾಗದೆ ಇರದು. "ಯಾವ ರಾಜನು ಬಂದರೇನು? ನಮಗೆ ರಾಗಿ ಬೀಸುವದು ತಪ್ಪುವದಿಲ್ಲ" ಎಂದು ಹಳ್ಳಿಗರು ಅನ್ನುತ್ತಿದ್ದರೆ ಅವರ ಹೃದಯದಲ್ಲಿಯು ಪಾರತಂತ್ರ್ಯವು ಇನ್ನೂ ಹೋಗಿಲ್ಲವೆಂಬುದು ಒಡೆದು ಕಾಣುವದು.

ಹೃದಯದಲ್ಲಿದ್ದ ಪಾರತಂತ್ರ್ಯವು ಹೋಗಬೇಕಾದರೆ ಜನತೆಯು ಏನು ಮಾಡಬೇಕು? ಎಂಬುದನ್ನು ಯೋಚಿಸಬೇಕು ದೇಶದ ಕಾಯಿದೆಗಳು ನಮ್ಮ ಜನರ ಹಿತದ ಸಲುವಾಗಿ, ನಮ್ಮ ಆಳಿಕೆಯಲ್ಲಿಂತೂ ನಿಶ್ಚಯವಾಗಿ ನಿರ್ಮಾಣ ಮಾಡಲ್ಪಡುವವು ಅವುಗಳನ್ನು ಪಾಲಿಸ ತಕ್ಕದ ಬಹುಭಾಗದ ಹೊಣೆಯು ಸರಕಾರದ ಮೇಲೆ ಇದೆಯೆಂಬ ಮಾತು ಸತ್ಯಪೂರ್ಣವಾದದ್ದು, ಆದರೆ ಜನತೆಯು ಆ ಕಾರ್ಯದಲ್ಲಿ ಸಹಕರಿಸದಿದ್ದರೆ ಅದು ಯುಕ್ತಿಯಾಗಿ ಕೊನೆಗೊಳ್ಳಲಾರದು. ಈ ಮಾತಿಗೆ ಇಂದಿನ ಪರಿಸ್ಥಿತಿಯೇ ಸಾಕ್ಷಿ.

ಪ್ರಾಂತಗಳಲ್ಲಿ ಮಂತ್ರಿ ಮಂಡಲಗಳು ಕಾಂಗ್ರೆಸಿನವೇ ಆಗಿ ಹೋದ ವರ್ಷದಿಂದ ಕಾರ್ಯಮಾಡುತ್ತಿವೆ ಮತ್ತು ನಮ್ಮ ಜನತೆಯ ಸುಖಸೌಕರ್ಯಗಳನ್ನು ಕಲ್ಪಿಸಿಕೊಡಲು ಒಂದೇ ಸಮನೆ ಹೆಣಗುತ್ತಿವೆ. ಆದರೆ ಅವುಗಳ ಕಾರ್ಯವು ಯಶಸ್ವಿಯಾಗದಿದ್ದುದು ಅನುಭವಕ್ಕೆ ಬಂದ ಮಾತಾಗಿದೆ. ಇದಕ್ಕೆ ಕಾರಣವೇನು? ಈಗಂತೂ ನಮ್ಮದೇ ಸರಕಾರವು ಇಡೀ ದೇಶದಲ್ಲಿ ಉಂಟಾಗಿದೆ. ಇನ್ನು ಮೇಲೆ ನಮ್ಮವರ ಕಾಯಿದೆಗಳು ಯಥಾವತ್ತಾಗಿ ಕಾರ್ಯದಲ್ಲಿ ಇಳಿಯಲು, ನಿಜವಾಗಿ ನೋಡಿದರೆ ಸ್ವಲ್ಪವೂ ಅಡ್ಡಿ ಇರಲಾರದು. ಜನರು ತಮ್ಮ ಹೃದಯದಲ್ಲಿಯ ಪಾರತಂತ್ರ್ಯವನ್ನು ದೂಡದೋಡಿಸದಿದ್ದರೆ ಈ ಕಾರ್ಯವು ಇನ್ನು ಮುಂದೆ ಕೂಡ ಅಷ್ಟೇ ಕಠಿಣವಾಗುವುದನ್ನು ಯಾರು ಮರೆಯಕೂಡದು.

ನಮ್ಮ ಹೃದಯದಲ್ಲಿದ್ದ ಪಾರತಂತ್ರ್ಯವಾವುದು ಎಂಬುದನ್ನು ನಾವು ಇಂದು ಒಳಹೊಕ್ಕು ನೋಡಿಕೊಳ್ಳಬೇಕಾಗಿದೆ. ನಮ್ಮಲ್ಲಿಯ ಸ್ವಾರ್ಥ, ಆಶೆ, ಭಯ ಈ ಗುಣಗಳ ದಾಸ್ಯದಲ್ಲಿ ಅಥವಾ ಪಾರತಂತ್ರ್ಯದಲ್ಲಿ ನಾವು ಸಿಕ್ಕಿದ್ದೇವೆ. ಈ ದಾಸ್ಯದ ಮೂಲಕ ನಾವು ನಮ್ಮ, ನಮ್ಮ ಬಾಂಧವರ ಮತ್ತು ದೇಶದ ಹಾನಿಯನ್ನು ಮಾಡುತ್ತಿದ್ದೇವೆ. ನಾವೇ ಮಾಡಿದ ಅನ್ಯಾಯಕ್ಕಾಗಿ ದೇಶದ ಅವಳಿತವು ಸರಿಯಾಗಿ ನಡೆಯದಿರುವಾಗ ಮತ್ತು ಅದರ ಫಲಿತ ನಮ್ಮ ಬಾಳು ದುಸ್ತರವಾದಾಗ ಸರಕಾರವನ್ನು ದೂಷಿಸುತ್ತೇವೆ. ಕಳ್ಳಪೇಟೆ ಲಂಚಗಳ ಆಶ್ರಯ ಪಡೆದಿರುವವರಿಗೆ ನಾವು ಬಯ್ಯುತ್ತೇವೆ. ಆದರೆ ನಾವೇ ಕಳ್ಳಪೇಟೆ ಮಾಡುತ್ತೇವೆ, ಮತ್ತು ಲಂಚ ಕೊಟ್ಟು ಬರುತ್ತೇವೆ. ಕಳ್ಳಪೇಟೆಯನ್ನು ಮಾಡಿದವರನ್ನು ಹಿಡಿಯಿರಿ ಎಂದು ನಾವೇ ಹೇಳುತ್ತೇವೆ, ಆದರೆ ಹಾಗೆ ಆ ಜನರು ಹಿಡಿಯಲ್ಪಟ್ಟಲ್ಲಿ ಅವರನ್ನು ಬಿಡಿಸಲು ನಾವೇ ಓಡಾಡುತ್ತೇವೆ. ಕಾಯಿದೆಗೆ ವಿರುದ್ಧವಾಗಿ ಕೆಲಸಮಾಡಿ ಅದರ ಪರಿಣಾಮವನ್ನು ಭೋಗಿಸಬೇಕಾದಾಗ ಎದೆಯೊಡೆಯುತ್ತೇವೆ. ನಾವೇ ಸ್ವಚ್ಛರಿಲ್ಲದಕ್ಕಾಗಿ ಕಾಯಿದೆಗಳನ್ನು ನಮ್ಮ ಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳುವ ಮತ್ತು ಅವುಗಳಿಂದ ಅನ್ಯಾಯವಾದಾಗ ಪ್ರತಿಭಟಿಸುವ ಶಕ್ತಿಯು ನಮ್ಮಲ್ಲಿ ಉಳಿಯುವದಿಲ್ಲ.

ಮನಸಿನಲ್ಲಿ ಅಥವಾ ಹೃದಯದಲ್ಲಿ ಇರುವ ಈ ಪಾರತಂತ್ರ್ಯವು ಹೋಗಬೇಕು. ಅಂದರೆ ನಮ್ಮ ದೇಶಕ್ಕೆ ಸಿಕ್ಕ ಸ್ವಾತಂತ್ರ್ಯವು ನಮಗೂ ದೊರೆಯುವದು. ಇಲ್ಲದಿದ್ದರೆ ನಮ್ಮವೇ ಆದ ಕಾಯಿದೆಗಳ ವಾತಾವರಣದಲ್ಲಿ ನಮ್ಮ ದೌರ್ಬಲ್ಯಕ್ಕಾಗಿಯೇ ನಾವು ಕಷ್ಟಪಡಬೇಕಾಗುವದು. ಮಹಾತ್ಮಾಗಾಂಧಿಯವರು ಬ್ರಿಟಿಶರ ಆಳಿಕೆಯಲ್ಲಿ ಕೂಡ ಅಷ್ಟೇ ಸ್ವಚ್ಛರಾಗಿ ಇದ್ದುದರಿಂದ ಅವರಿಗೆ ಆ ಆಳಿಕೆಯಲ್ಲಿಯೂ ಪಾರತಂತ್ರ್ಯದ ಅರಿವುಂಟಾಗಲಿಲ್ಲ. ಆದ್ದರಿಂದ ನಮಗೆ ಸಿಕ್ಕ ಸ್ವಾತಂತ್ರ್ಯವು ನಮ್ಮ ಹೃದಯಗಳಲ್ಲಿದೆ; ಡೆಲ್ಲಿಯಲ್ಲಿಲ್ಲ

"ಜೈಹಿಂದ್"

ವಿಮೆ ಮೊದಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸಕ್ರೆಟರಿಗಳು

ದಿ ಬೊಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್,	ಬೊಂಬೆ ಲೈಫ್ ಬಿಲ್ಡಿಂಗ್,
ಪೋ. ಬಾ. ನಂ. 337,	ಪೋ. ಬಾ. ನಂ. 1,
ಮದ್ರಾಸು 2.	ಉಡುಪಿ

(ಟೆಲಿಫೋನ್ ನಂ 8398)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಡರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿಸಲಾಗಿದೆ.

ವಸೂಲಾದ ಶೇರು ಬೊಬಲಗು ರೂ. 1,33,740, ಜಮಾ ಬಂದ ಠೇವಣಾತಿ 3,30,268-1-8, ವಸೂಲಾದ ಕ್ಷೇಮನಿಧಿ 2,36,454 0-3, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಿಲ್ಲದೆ, ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಯನ್ನು ತಾ. 1-12-46ರಿಂದ ಹೊಂದಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0-8-0 ದರದ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ,	ಕೆ. ಪಿ. ಅಪ್ಪಯ್ಯ, M. L. C.
ಗೌ. ಕಾರ್ಯದರ್ಶಿ,	ಪ್ರೆಸಿಡೆಂಟ್ ಮತ್ತು ಖಜಾಂಚಿ

ಎಂಪೈರ್ ಆಫ್ ಇಂಡಿಯಾ

ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಸ್ಥಾಪನೆ—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ಮಿಕ್ಕಿ
	ಚಾಲ್ತಿಯಿರುವ ವಿಮೆ	17,74,52,000	"
	ಆಸ್ತಿ	6,67,60,000	"
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು	...	8,83,62,000	"

ಅಂಗ ಕಛೇರಿ	ಏಜೆನ್ಸಿ	ಪ್ರಧಾನ ಕಛೇರಿ
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ

Edited, Printed and Published by P. I. Bellappa at 'Kodagu' Press Mercara, for 'Kodagu' Ltd.

ಸ್ವಾತಂತ್ರ್ಯದ ಪರಿಣಾಮ.

(೩ನೇ ಪುಟದಿಂದ ಸಾಗಿದ್ದು)

ಆಳರಸರ ಪ್ರೀತ್ಯರ್ಥವಾಗಿ ನಾವು ಬೂಟು, ಪತ್ಲೂಣು, ಹ್ಯಾಟುಗಳನ್ನು ಹಾಕಿಕೊಂಡೆವು. ಹಲ ಕೆಲವರಂತೂ ಯುರೋಪಿಯನ್ನರ ಹೆಸರುಗಳನ್ನು ತಮ್ಮ ಮಕ್ಕಳಿಗೆ ಇಟ್ಟು ಆನಂದಪಟ್ಟರು. ತಮ್ಮ ಹೆಂಡರಿಗೆ ಪರಕಾರ (ಫ್ರಾಕ್) ಉಡಿಸಿದರು. ತಲೆಯ ಮೇಲೆ ಕೂದಲು ಬೆಳೆಸಿ ಹಿಕ್ಕುವುದನ್ನು ನಾವೆಲ್ಲರೂ ಮೆಚ್ಚಿದೆವು

ಮಹಾತ್ಮಾಗಾಂಧಿಯವರಂತಹ ವಿಭೂತಿಗಳು ಹುಟ್ಟಿ ನಮ್ಮ ಜನರಲ್ಲಿದ್ದ ಈ ಹುಚ್ಚನ್ನು ಕೆಲವು ಮಟ್ಟಿಗೆ ಬಿಡಿಸಲು ಯತ್ನಿಸಿದ್ದಾರೆ ಅಂಥವರ ಯೋಗ್ಯತೆಗೆ ಮನಸೋತು ಅನೇಕ ಪಾಶ್ಚಾತ್ಯ ಸ್ತ್ರೀಪುರುಷರು ನಮ್ಮ ಉಡಿಗೆ ತೊಡಿಗೆಗಳನ್ನು ಹಾಕಿಕೊಂಡರು ಇನ್ನು ಮುಂದೆ ಸಾರ್ವತ್ರಿಕವಾಗಿ ಈ ದೃಶ್ಯವು ಕಾಣ ಹತ್ತುವದು, ಬೂಟು ಹ್ಯಾಟುಗಳನ್ನು ಹಾಕಿಕೊಂಡವರನ್ನು ಕಂಡರೆ ನಗುವ ಕಾಲವು ನಾಳೆ ಬರಲಿದೆ.

ಇಂಗ್ಲಿಷ್ ಭಾಷೆಯೆಂದರೆ ನಮಗೆ ಬಹಳ ಉತ್ಸಾಹ ನಮ್ಮಲ್ಲಿಯ ಅನೇಕರು ಅದರಲ್ಲಿ ಪಾಂಡಿತ್ಯವನ್ನು ಸಂಪಾದನೆ ಮಾಡಿದ್ದಾರೆ. ವಿ ಶ್ರೀನಿವಾಸ ಶಾಸ್ತ್ರಿಗಳಂಥವರು ಆ ಭಾಷೆಯ ಪಾಂಡಿತ್ಯದಿಂದ ಇಂಗ್ಲಿಷರನ್ನೇ ಬೆಪ್ಪುಗೊಳಿಸಿದರು. ಆ ಭಾಷೆಯು ಜಗತ್ತಿನ ಉತ್ತಮ ಭಾಷೆಗಳಲ್ಲಿ ಒಂದಾಗಿರುವುದೂ ಹೌದು. ಆದರೆ ಆ ಮೋಹದಿಂದ ನಾವು ಇಂದು ಪರಾವೃತ್ತರಾಗಬೇಕಾಗಿದೆ. ಇದುವರೆಗೆ ಹಾಗೆ ಮಾಡಲು ಸಾಧ್ಯವಿದ್ದಿಲ್ಲ. ಅದನ್ನು ಬಲ್ಲವರಿಗೇ ಹೆಚ್ಚಿನ ಸರಕಾರಿ ಉದ್ಯೋಗಗಳು ದೊರೆಯುತ್ತಿದ್ದುದರಿಂದಲೂ ಅದನ್ನು ಕಲಿಯದವರಿಗೆ ಎಲ್ಲಿಯೂ ಮನ್ನಣೆ ಸಿಗುತ್ತಿರದ್ದರಿಂದಲೂ ಅದನ್ನು ಬಿಟ್ಟರೆ ಗತಿಯೇ ಇಲ್ಲವೆನ್ನುವ ಪರಿಸ್ಥಿತಿಯು ಇತ್ತು. ಇನ್ನು ಆ ಮಾತು ಉಳಿಯುವದಿಲ್ಲ. ಹಿಂದೀ ಬರದಿದ್ದರೆ ಅವನನ್ನು ಯಾರು ಮಾತಾಡಿಸುವದಿಲ್ಲ, ಸರಕಾರದಲ್ಲಂತೂ ಅವನನ್ನು ಮುಂದಕ್ಕೆ ಕರೆಯುವದೇ ಇಲ್ಲ. ಇಂಗ್ಲಿಷ್ ಭಾಷೆಯನ್ನು ಕಲಿಯಲು ಅಪ್ಪದವೇ ಇಲ್ಲವೆಂದಲ್ಲ ಜಗತ್ತಿನಲ್ಲಿಯ ಇತರ ಭಾಷೆಗಳನ್ನು ಕಲಿಯುವಂತೆ, ಕೇವಲ ವಿವಿಧ ಭಾಷಾಜ್ಞಾನದ ದೃಷ್ಟಿಯಿಂದ ಅದನ್ನು ಕಲಿಯಬಹುದು.

ನಮ್ಮ ಭಾಷೆ ಮಾತ್ರ ಹಿಂದೀ. ಈ ಭಾಷೆಯು ಕೂಡ ಜಗತ್ತಿನಲ್ಲಿಯ ಉತ್ತಮ ಭಾಷೆಗಳಲ್ಲಿ ಒಂದಾಗಿದೆ ಅಷ್ಟೇ ಅಲ್ಲದೆ 'ಅದು ನಮ್ಮದು' ಎಂಬುದೊಂದು ಭಾವನೆಯು ಇದೆ ಅದನ್ನೇ ಇನ್ನು ಎಲ್ಲರೂ ಕಲಿಯಬೇಕಾಗುವದು. ಇಷ್ಟೇ ಏಕೆ ಅದನ್ನು ಇಲ್ಲಿಗೆ ಬರುವ ಪರದೇಶಿಯರು ಕೂಡ ಕಾರ್ಯಾವಶ್ಯಕತೆಯ ದೃಷ್ಟಿಯಿಂದ ಕಲಿಯಬೇಕಾಗುವುದು.

ಉದ್ಯೋಗ ಮೊದಲಾದ ಇತರ ದೃಷ್ಟಿಗಳಿಂದ ಕೂಡ ನಮ್ಮ ದೇಶದ ಪರಿಸ್ಥಿತಿಯು ಭವಿಷ್ಯತ್ಕಾಲದಲ್ಲಿ ತೀವ್ರ ರೂಪಾಂತರವನ್ನು ಹೊಂದುವುದು. ಪರದೇಶಗಳ ಕಡೆಗೆ ನಾವು ನೋಡುತ್ತ ಕುಳಿತಿದ್ದ ಸ್ಥಿತಿಯು ಇನ್ನು ಮುಂದೆ ಉಳಿಯುವುದಿಲ್ಲ. ಪರದೇಶಗಳ ಪೇಟೆಗಳಿಂದ ಬರುವ ಸಾಮಗ್ರಿಗಳಿಗಿಂತ ನಮ್ಮಲ್ಲಿ ಹುಟ್ಟುವ ವಸ್ತು ಒಡವೆಗಳು ಕಡಿಮೆ ಬೆಲೆಗೆ ದೊರೆಯುವವು.

ಒಟ್ಟಿನಲ್ಲಿ ಹಿಂದೂಸ್ಥಾನದ ಪರಿಸ್ಥಿತಿಯಲ್ಲಿ ವಿದ್ಯುತ್ಸಂಚಾರವಾದಂತೆ ಸ್ಥಿತ್ಯಂತರವಾಗುವುದಿದೆ. ಸರ್ವ ವಿಧದಲ್ಲಿಯೂ ನಾವು ಇನ್ನು ಮುಂದೆ ಪ್ರಗತಿ ಹೊಂದುವೆವು ಕೈಯಲ್ಲಿ ದೊಡ್ಡ ಕೋಲು ಇಲ್ಲದೆ ಇರುವ ಅಸಹಾಯಸ್ಥಿತಿಯು ಇಲ್ಲದಂತಾಗಿ ನಾವೆಲ್ಲರೂ ಮನೆ ಮನೆಗೆ ಶೂರ ಧೀರರಾಗಿರುವ ವಾತಾವರಣವು ಬರುವುದು.

ಹೀಗಾಗಲು ಒಂದೇ ಒಂದು ಕಾರಣವೆಂದರೆ ಸ್ವಾತಂತ್ರ್ಯ. ಇದುವರೆಗೆ ನಾವು ಕೈಕಾಲು ಕಟ್ಟಿ ನಡೆಯಲಾರದ ಮನುಷ್ಯನಂತಿದ್ದೆವು. ಯಾವುದೇ ರೀತಿಯಲ್ಲಿ ಪ್ರಗತಿ ಹೊಂದಲು ನಾವು ಮುಂದರಿದರೆ ಅಲ್ಲಿ ಈ ಪರದಾಸ್ಯರೂಪೀ ಅಡ್ಡಗೋಲು ಎದ್ದು ಕಾಣುತ್ತಿತ್ತು. ಇಂದು ನಾವು ನಿರಾತಂಕವಾಗಿ ಮುಂದರಿಯಬಹುದಾಗಿದೆ ಬಹು ದಿವಸದಿಂದ ನಮ್ಮ ಮನಸ್ಸಿನಲ್ಲಿದ್ದ ಆಕಾಂಕ್ಷೆಯು ಇಂದು ಕೈಗೂಡಿತು.

'ಜೈಹಿಂದ್'

ಆಸ್ಟ್ರೇಲಿಯಾದಲ್ಲಿ ಕಮೀಷನರು ಸುಪರ್‌ವೈಸರುಗಳನ್ನು ಕೆಲಸದಿಂದ ತೆಗೆದುಹಾಕಿದಿದ್ದುದರಿಂದ 650 ಜನ ಪೋಲೀಸಿನವರು ತಮ್ಮ ಕೆಲಸಕ್ಕೆ ಬಹಿಷ್ಕಾರ ಹಾಕಿದಿರುವರು. ಬಹಳ ಅಕ್ರಮತನಗಳು ಸಂಭವಿಸುತ್ತಿವೆ. ರೈಲ್ವೇ ಕಂಬಗಳನ್ನು ಕಿತ್ತುಹಾಕುತ್ತಲೂ ಕಿಟಕಿಗಳನ್ನು ಒಡೆಯುತ್ತಲೂ ಅಂಗಡಿ [illegible] ಗಳನ್ನು ಸುಲಿಗೆ ಮಾಡುತ್ತಲೂ ಇರುವರು. ಸುಮಾರು 5 [illegible] ನಷ್ಟ ಈಗಾಗಲೇ ಸಂಭವಿಸಿದೆ.

ಜರ್ಮನಿಯಲ್ಲಿ ಆಹಾರ ಸಾಮಗ್ರಿ [illegible] ಅಭಾವದಿಂದ ದಿನ ದಿನಕ್ಕೆ ಭಯಂಕರವಾಗುತ್ತಿದೆ.

ಗ್ರೇಟ್ ಬ್ರಿಟನ್ನಿನಲ್ಲಿ 15ನೇ ಅಕ್ಟೋಬರ ವರೆಗೆ 1255900 ಜನರು ಕೂಲಿ ಇಲ್ಲದ್ದಕ್ಕೆ ತಿರುಗುತ್ತಿರುವರು. ಹೋದ ವಾರಕ್ಕಿಂತ ಈ ವಾರದಲ್ಲಿ 15 ತಾ|| 2372 ಜನ ಕೂಲಿ ಇಲ್ಲದವರುಗಳು ಹೆಚ್ಚಾಗಿದ್ದಾರೆ.

ಅಮೇರಿಕದಲ್ಲಿ ಬೀದಿಗಳಲ್ಲಿ ಇರುವ ಹೆಂಗಸೊಬ್ಬಳು ಸ್ವಂತ ಮೋಟಾರು ಇಟ್ಟು ಗುಡಿಸುವುದಕ್ಕೆ ಬರುತ್ತಿದ್ದಳು. ಇದಕ್ಕಾಗಿ ಅಲ್ಲಿಯ ಅಧಿಕಾರಿಯು ಅವಳನ್ನು ಕೆಲಸದಿಂದ ತೆಗೆದನು.

ಲಾಪಿ ಡ ಬಾರ್ಜರ ಪ್ರಯಾಣವು ಅಮೇರಿಕದಲ್ಲಿ ಆದರದಿಂದ ಸ್ವೀಕರಿಸಲ್ಪಡುತ್ತಿದೆ.

ಜರ್ಮನಿಯ ಮಾಜಿ ಕೈಸರ ಚಕ್ರವರ್ತಿಯ ಹಿರಿಯ ಮಗನು ಹಾಲೆಂಡಿನಿಂದ ವಾಪಸು ಜರ್ಮನಿಗೆ ಬಂದು [illegible] ಅಧಿಪತ್ಯದಲ್ಲಿ ಇದ್ದುಕೊಳ್ಳುವುದಕ್ಕೆ ಪ್ರಯತ್ನದಾಗಿ ವರ್ತಮಾನವಿದೆ.

ಟಿಂಪಲ ಎಂಬೊಬ್ಬನು ತನ್ನ ಮೋಟಾರು ಬೈಸಿಕಲಿನ ಮೇಲೆ ಗಂಟೆಗೆ 3 ಮೈಲು ದರದಲ್ಲಿ ಪ್ರಯಾಣ ಮಾಡಿರುವನು. ಅವನಿಗೆ ಯಾವ ಮೋಟಾರೂ 100 ಮೈಲುಗಳಿಗೆ ಹೆಚ್ಚಾಗಿ ಹೋಗಿದ್ದಿಲ್ಲ.

ಹಿಂದೂ ನೇಷನಲ ಕಾಂಗ್ರೆಸಿನವರ ಅನೇಕ ಸಭೆಗಳಲ್ಲಿ ಅವರಿಗೆ ತುರ್ಕಿ ಜನಾಂಗದ ಮುಖ್ಯಸ್ಥರನ್ನು ಪರವಾಗಿ ಅವರನ್ನು ಮನಃಪೂರ್ವಕವಾಗಿ ವಂದಿಸಿ ನನ್ನ ಚಿರಸೇವೆಯ ಕೃತಜ್ಞತೆಯನ್ನು ಈ ಮೂಲಕ ತೋರಿಸುವೆನು ಎಂದು ಮುಸ್ತಫಾ ಕೆಮಾಲ ಪಾಷಾರವರು ಕಾಂಗ್ರೆಸ್ ಕಾರ್ಯದರ್ಶಿಗೆ ಬರೆದಿರುವರು.

THE EXPERIENCE OF A STUDENT.

ಒಬ್ಬ ವಿದ್ಯಾರ್ಥಿಯ ಅನುಭವ.

[illegible] ಯಾದೇ ನಾನೇನೋ ಈ ಸ್ಕೂಲಿನ ವಿದ್ಯಾರ್ಥಿ ಇದ್ದಂದ ನಾಲ್ಕೈದು ವರ್ಷಗಳಾದುವು. ಈಚೆಗೆ ಕೆಲವು [illegible] ಗಳ ಬದಲಾವಣೆಯಾಯಿತು. ಹೇಗೋ ನಾನು [illegible] ಬೇಕಾದ ಪಾಠಗಳು ಮಾತ್ರ ಬದಲಾಗಲಿಲ್ಲ.

ನಾನು ಇಲ್ಲಿಗೆ ಬರುವುದಕ್ಕೆ ಮೊದಲು ನಮ್ಮ ಅಯ್ಯ [illegible] ಶಾಲೆಗೆ ಹೋಗು ಹೋಗು ಎಂದು ಒತ್ತಾಯ [illegible] ತ್ತಿದ್ದನು. ಹಾಗೂ ಹೀಗೂ ಮಾಡಿ ನನ್ನನ್ನು [illegible] ಒಂದು ದಿನ ನನ್ನನ್ನು ಕೂಲಿಮಠಕ್ಕೆ ಕರೆದುಕೊಂಡು [illegible] ದ ಅನೇಕ ಅಂಗಳದಲ್ಲಿ ನಿಂತುಕೊಂಡ.

[illegible] ಲಿಮಠವು ಏನನಗುಳಿಗಲಿ ಜಗಲಿ ತಂಬಾ [illegible] ಇಲ್ಲ ಮಕ್ಕಳು ಕೂತುಕೊಂಡಿದ್ದರು. ನಾನು ಒಂದು ಮೂಲೆಯಲ್ಲಿ ಹೋಗಿ ಕುಕ್ಕರಿಸಿಕೊಂಡೆ. ಸ್ವಲ್ಪ ಹೊತ್ತಿನ [illegible] ರೋ ಒಬ್ಬರು ಕೈಯಲ್ಲಿ ಉದ್ದವಾದ ಬೆತ್ತವನ್ನು ಹಿಡಿದು ಬಂದರು. ನನ್ನ ಅಯ್ಯನು ಅವರಿಗೆ ಬಗ್ಗಿ [illegible] ಮಾಡಿದನು. ನನಗೇನೋ ಅವರನ್ನು ನೋಡಿದ [illegible] ಒಂದಕ್ಕೆ ಹೋಗುವ ಹಾಗಾಯಿತು. ಅವ್ವರೊಳ [illegible] ತು. ಕೂಗಿಕೊಂಡು ಮರಳಮೇಲೆ ಗೀಚ ತೊಡ [illegible] ನು ಮಿಟಮಿಟ ನೋಡ ತೊಡಗಿದೆ. ಬೆತ್ತ ಹಿಡಿ [illegible] ತ್ತ ಅಯ್ಯನೂ ಒಟ್ಟಿಗೆ ಒಳಗೆ ಬಂದರು. ಆಗ [illegible] ಒಂದಕ್ಕೆ ಹೋಗುವ ಹಾಗಾಯಿತು. ಅಯ್ಯ [illegible] ಅಯ್ಯನೇನೋ ನನ್ನ ಕಡೆಗೆ ಬೆರಳು ತೋರಿ [illegible] ಒಪ್ಪಿಸಿದಂತಾಯಿತು. ಅಯ್ಯನು ಹೊರಟು [illegible] ನನಗೆ ಒಳಗೆ ಬಂದವರು ಉಪಾಧ್ಯಾಯರೆಂದು [illegible] ಅವರು ಒಳಗೆ ಒಂದು ಚಾಪೆಯ ಮೇಲೆ [illegible] ರು. ಕೂಡಲೆ ಅವರು ಒಬ್ಬ ಹುಡುಗನನ್ನು ಕ [illegible] ಎಂದು ಹೇಳಿದರು. ನಂತರ ನಮಸ್ಕಾರ ಮಾಡಿ ನನ್ನ [illegible] ಗೇರಿಸಿದರು. ಈ ಮಧ್ಯೆ 2 3 ಹುಡುಗರಿಗೆ ಬ [illegible] ಗಳು ಬಿದ್ದವು. ಥಣ್ಣಕ್ಕೆ ನನಗೇನೋ ಪೆಟ್ಟು [illegible]

[illegible] ಯರ ಕೈಯಲ್ಲಿ ಬೆತ್ತ, ಮರದಲ್ಲಿ ಮರಳು [illegible] ಮತ್ತೇನೂ ಇರಲಿಲ್ಲ. ಅಲ್ಲಿ ಇಲ್ಲಿ ಎರಡು [illegible] ಗಳು ಬಿದ್ದಿದ್ದವು. ಅವು ಎಂಥಾವುವೆಂದು [illegible] ತ್ತಾಗುವುದಿಲ್ಲ.

[illegible] ಒಬ್ಬ ಹುಡುಗನು ಆಗಾಗ್ಗೆ ಬಂದು [illegible] ಹಿಡಿದು ಮರಳಮೇಲೆ ಡೊಂಕು ಡೊಂ [illegible] ದ್ದನು. ಬಿಸಿಲು ಏರಿದ ಹಾಗೆ ಮಾಸ್ತರು [illegible] ಬಾವು ಆಡುತ್ತಿದ್ದವು. ಹೀಗಾಗಿ ನನಗೇ [illegible] ದಲ್ಲಿ ಬೇಸರ ಹಿಡಿಯಿತು.

[illegible] ದೇಶಿ ಸ್ಕೂಲಿಗೆ ಹೋಗುತ್ತೇನೆಂದು [illegible] ಅರಿದು ಇಲ್ಲಿಗೆ ಬಂದೆ. ಇಲ್ಲೇನೋ ನನಗೆ ಬೇಸರವಾಗಲಿಲ್ಲ. ಇಲ್ಲಿಯ ವಿಚಾರ ನಾನು ಏಕೆ ಹೇಳಬೇಕು? ಗೊತ್ತಿದೆಯಷ್ಟೆ! ನನ್ನ ಈಗಿನ ಸ್ಥಿತಿಯನ್ನು ನೀವು ಕಾಣುತ್ತೀರಷ್ಟೆ. ನಾನು ಹೇಳಬೇಕಾದ್ದೆಲ್ಲಾ ಇಷ್ಟೇ. ನನಗೆ ಅಪ್ಪಣೆ ಕೊಟ್ಟರೆ ಹೋಗಿ ಬರುತ್ತೇನೆ.

ಒಬ್ಬ ವಿದ್ಯಾರ್ಥಿ.

ವಿರಾಜಪೇಟೆ ವ್ಯಾಪಾರಿಗಳ ಸಂಘ.

ವಿಪ್ರ [illegible] ನಲ್ಲಿ ನಡೆದ ಸಂಘದ [illegible] ಚೀಫ್ ಕಮಿಶನರ್ ಸಾಹೇಬರಿಗೆ ಕಳುಹಿಸಿದ್ದಕ್ಕೆ ಕೆಲವು ದರಖಾಸ್ತುಗಳ ಮೇಲೆ ಈ ಕೆಳಗಿನ ಜವಾಬು ಕಮಿಶನರ್ ಸಾಹೇಬರಿಂದ ಬಂದಿದೆ.

(1) ಸಹಕಾರಿ ಸಂಘಗಳ ಇಲಾಖೆಗೆ ಹೆಚ್ಚಿಗೆ ಸಿಬ್ಬಂದಿ ಕೊಡಬೇಕೆಂತ ಕೇಳಿದ್ದಕ್ಕೆ ಒಬ್ಬ ಇನ್ಸ್‌ಪೆಕ್ಟರನ್ನು ಹೆಚ್ಚು ಕಡಿಮೆ ನೇಮಿಸುವ ಆಲೋಚನೆ ಇದೆ.

(2) ನಾಗು ರೈತರು ಕೋವಿ ಲೈಸೆನ್ಸ್ ಬೇಕೆಂತ ಕೇಳಿದಾಗ ಕೊಡಬೇಕೆಂತ ಕೇಳಿದ್ದಕ್ಕೆ ನ್ಯಾಯವಾಗಿ ಅವಶ್ಯವಿದೆಯೆಂತ ತೋರಿದ [illegible] ಲೈಸೆನ್ಸ್ ಕೊಡಲಾಗುತ್ತೆ.

(3) ಡಿಸ್ಟ್ರಿಕ್ಟ್ ಬೋರ್ಡನ್ನು ರೈತರ ಅಧೀನ ಮಾಡಿ ಕೊಡಬೇಕೆಂತ ಕೇಳಿದ್ದಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನ [illegible] ವೈಸ್ ಪ್ರೆಸಿಡೆಂಟರನ್ನು ಇಷ್ಟರಲ್ಲೇ ನೇಮಕವಾಗಲಾಗಿದೆ.

(4) ಮರದ [illegible] ಹೆಸರನ್ನು ಕೋರ್ಟಿನ ರಿಕಾರ್ಡಿನಲ್ಲಿ ಇಟ್ಟದ್ದಕ್ಕೆ [illegible] ನಡತೆ ಎಂದದ್ದಕ್ಕೆ ಇದು ಸರಕಾರದವರ ಮುಂದೆ [illegible] ನಡೆದ ಪ್ರಶ್ನೆಯಲ್ಲ.

(5) ತೂಕ ಮತ್ತು ಅಳತೆಗಳನ್ನು ಮುಖ್ಯವಾಗಿ ಪರಿಷ್ಕರಿಸುವ ಒಂದು ನಿರ್ಣಯಕ್ಕೆ ತರಬೇಕೆಂತ ಕೇಳಿದ್ದಕ್ಕೆ ತಕ್ಕಷ್ಟು ಮುನಿಸಿಪಾಲಿಟಿಗಳಲ್ಲಿ ನಿಯಮಿತ ಅಳತೆಗಳನ್ನು ಸ್ಥಾಪಿಸುವ ಏರ್ಪಾಡು ಮಾಡಲಾಗಿದೆ.

(6) ಆಸ್ಪತ್ರೆಗಳಲ್ಲಿ ಸಾಕಷ್ಟು ಔಷಧಿ ಇಟ್ಟಿರಬೇಕೆಂತ ಕೇಳಿದ್ದಕ್ಕೆ ಆಸ್ಪತ್ರೆಗಳಲ್ಲಿ ಸಾಕಷ್ಟು ಔಷಧಿ ಇಟ್ಟಿರುವದಿಲ್ಲವೆಂತ ಊಹಿಸಲಿಕ್ಕೆ ಕಾರಣವಿಲ್ಲ.

(7) ಶನಿವಾರಸಂತೆ, ಸಂಪಾಜೆ ಮೂರ್ನಾಡಿನಲ್ಲಿ ಆಸ್ಪತ್ರೆಗಳನ್ನು ಏರ್ಪಡಿಸಬೇಕೆಂಬ ವಿಷಯಕ್ಕೆ ಹೆಚ್ಚಿಗೆ ಆಸ್ಪತ್ರೆಗಳನ್ನು ಸ್ಥಾಪಿಸುವದಕ್ಕೆ ಹಣವಿಲ್ಲದಿರುವುದೇ ಅಡ್ಡಿಯಾಗಿದೆ.

(8) ಶನಿವಾರಸಂತೆ ಹೋಬಳಿಯಲ್ಲಿ ಗಂಧದ ತೋಟಕ್ಕೆ ರಿಜರ್ವ್ ಮಾಡಬೇಕೆಂತ ಯೋಚಿಸಿದ್ದನ್ನು ಬಿಟ್ಟಿರುವದರಿಂದ ಇದನ್ನು ಗಜೆಟ್ ನೋಟಿಫಿಕೇಶನ್ ಮೂಲಕ ರದ್ದು ಮಾಡಬೇಕೆಂತ ಕೇಳಿದ್ದಕ್ಕೆ ರದ್ದುಮಾಡಲು ಏರ್ಪಾಡು ಮಾಡಲಾಗಿದೆ.

(9) ವಾಸವಿರುವ ಮನೆಗಳ 3 ಮೈಲು ಫಾಸಲೆ ಒಳಗೆ ರಿಜರ್ವ್ ಮಾಡಬಾರದೆಂತ ಕೇಳಿದ್ದಕ್ಕೆ ನೆರೆಹೊರೆಯದ ಮತ್ತು ಮನೆಯ ಉಪಯೋಗಕ್ಕೆ ಬೇಕಾದ ಸಾಮಾನುಗಳಿಗೆ ತಕ್ಕ ಏರ್ಪಾಡು ಮಾಡಲಾಗುತ್ತೆ.

(10) ವಿರಾಜಪೇಟೆ ಸ್ಕೂಲನ್ನು ಹೈಸ್ಕೂಲ್ ಮಾಡಬೇಕೆಂತ ಕೇಳಿದ್ದಕ್ಕೆ ಈಗಾಗಲೇ ಮಾಡಿ ಹೋಗಿದೆ.

(11) ಉಮ್ಮತ್ತಿ ಸ್ಕೂಲ್‌ಗಳ ಮತ್ತು ವಿರಾಜಪೇಟೆ ಮೋಡೆಲ್‌ಸ್ಕೂಲ್ ಮತ್ತು ಗರ್ಲ್ಸ್‌ಸ್ಕೂಲುಗಳ ಬಳಿ ಬಾವಿ ತೋಡಿಸಬೇಕೆಂತ ಕೇಳಿದ್ದಕ್ಕೆ ವಿರಾಜಪೇಟೆ ಮೋಡೆಲ್ ಸ್ಕೂಲ್ ಬಳಿ ಬಾವಿ ತೋಡಿಸುವ ವಿಷಯ ನಡೆಯುತ್ತಾ ಇದೆ.

(12) ಕಣಿವೆ ಹೋಬಳಿಯ ಜನರು ಕುಡಿಯುವ ನೀರಿಗೂ ಅದರಿಂದ ಆರೋಗ್ಯಕ್ಕೂ ಭಂಗವಾಗುವಂತೆ ಕೀಗೆ ಹೊಸೂರಿನ ಭೂಕಾಳಿ ನಾರು ತೆಗೆಯುವ ಕಾರ್ಖಾನೆಯಿಂದ ಕೊಳಕುನೀರನ್ನು ಹೊಳೆಗೆ ಬಿಡುವದನ್ನು ನಿಲ್ಲಿಸಬೇಕೆಂತ ಕೇಳಿದ್ದಕ್ಕೆ ಈ ವಿಷಯ ತನಿಖಿಯಲ್ಲಿದೆ.

ಎಂತಲೂ ಜವಾಬು ಬಂದಿದೆ.

ಸಿ ಯಂ ಮೊಳಪ್ಪಯ್ಯ,
ಜನರಲ್ ಸೆಕ್ರಟರಿ.

ಪತ್ರವ್ಯವಹಾರಗಳು

ಚಾತ್ರದಾರರು ಬರೆವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ.

[ಎಡಿಟರ್]

ರಾ|| ಸಾ|| ಡಿ ಮೇ ಸಾಹೇಬರವರ ಜನ್ಮದಿನಾರ್ಥವಾಗಿ ನಡಿಸಿದ ಸಂತೋಷಕೂಟ.

ಅಕ್ಟೋಬರ್ ತಾರೀಕು 30 ನೆ ಮಂಗಳವಾರ ಕೋತೂರು ನಾಲ್ಕೇರಿ ಗ್ರಾಮಸ್ಥರೆಲ್ಲರೂ ಸದ್ರಿ ಕೋತೂರು ಗ್ರಾಮದ ಮಾರಮ್ಮ ದೇವರ ಗುಡಿಗೆ ಪೂಜಾ ಸಾಹಿತ್ಯಗಳೊಡನೆ ಸೇರಿ ಸದ್ರಿ ದೇವರಿಗೆ ಫಲಪುಷ್ಪ ನೈವೇದ್ಯಗಳನ್ನು ಸಮರ್ಪಿಸಿ ನಮ್ಮ ಸ್ವದೇಶಿಯರಲ್ಲಿ ಈ ಮೊದಲು ಅಂತು ಮತ್ತು ಕೇಳಿಯು ಇಲ್ಲದ ಉನ್ನತಪದವಿಗೆ ಬಂದಿರುವ ಮ|| ರಾ|| ಸಾ|| ಡಿ ಮೇ ಸಾಹೇಬರಾದ ಕೆ ಚಂಗಪ್ಪನವರ ಸ್ತೋತ್ರವನ್ನು ಮಾಡಿ ದೇವರ ಪೂಜೆಯನ್ನು ನಡಿಸಿ ಅಲ್ಲಿ ನೆರದಿದ್ದ ಜನರೆಲ್ಲರು ಏಕೋ ಭಾವದಿಂದ ಶ್ರೀ ಭಗವಂತನ ಸಾಹೇಬರವರಿಗೆ ಆಯುರಾರೋಗ್ಯ ಸಂಪದಸಿದ್ಧಿಯು ಚಿರಕಾಲ ನಮ್ಮನ್ನಾಳುವ ಸಾಮರ್ಥ್ಯವನ್ನು ಕೊಡುವದಲ್ಲದೆ ಅವರ ಪತ್ನಿ ಪುತ್ರರು ಸಹ ಚಿರಂಜೀವಿಗಳಾಗಿ ಬಾಳಲೆಂದು ಪ್ರಾರ್ಥಿಸಿ ಜಯಘೋಷದೊಡನೆ ಸಭೆಯು ಮುಕ್ತಾಯ ಮಾಡಲ್ಪಟ್ಟಿತು.

ಕೆ ಬೋಪಣ್ಣ
(ಮುಖವಿಯನ್ ಸಭೆಯ ಪರವಾಗಿ)

[illegible] ಸಾರ್ವಜನಿಕ [illegible] ನಮ್ಮ ಕವಿನಾಟ ಸರ ದೊರೆಗಳಿಗೆ ಸಲ್ಲಿಸುವ ವಿಷಯದಲ್ಲಿ ನಂದೆಕರು ಪತ್ರಿಕೆಯಲ್ಲಿ ಅಭಿಪ್ರಾಯ [illegible] ಕಾರ್ಯ 3-4 ವರುಷ ನಮ್ಮ ದೇಶದಲ್ಲಿ ಅವರ [illegible] ಮಾಡಿದ ದೊರೆಗಳ ಅವರ ಉದ್ಯೋಗ ಧರ್ಮದಲ್ಲಿ [illegible] ಅಧಿಕಾರದಲ್ಲಿ ದೇಶಸೇವೆ [illegible] ಅವರ ಹುಚ್ಚು [illegible] ಕೃತಜ್ಞತೆ ತೋರಿಸಬೇಕೇ ಹೊರತು ಅವರಾದದ್ದಕ್ಕೆ ಇದು [illegible] ದ ಸಿವಿಲ್ ಆಲೋಚಿಸಿ, [illegible] ವೃತ್ತಿಕರ ಕಾರ್ಯನಿರ್ವಾಹಕರ ಗೃಹವಾಗಿಕೇ! [illegible] ಭಾಷೆಯಲ್ಲಿ ತೋರಿಸುತ್ತಿದೆ [illegible] ಭಕ್ತಿ ಧರ್ಮಕ್ಕೆ ತಕ್ಕ ಸರ್ವರನ್ನು ಭೇದವಿಲ್ಲದೆ ಸತ್ಕರಿಸಬೇಕೆಂಬ ಸನಾತನ ಧರ್ಮವನ್ನು ನಮ್ಮ ಜನಾಂಗವು ಪಾಲಿಸಬೇಕೆಂದು ನನ್ನ ಅಪೇಕ್ಷೆಯಾಗಿರುತ್ತೆ. [illegible] ಬಗಸಾಧ್ಯವಾದರೂ ಆಧಾರವೆಂದರೆ [illegible] ನಮ್ಮ ಸಮಯದಲ್ಲಿ ಕವಿನಾಟಕರ ದೊರೆಯವರ [illegible] ಇದುವರೆಗೂ [illegible] ಬೀಳ್ಕೊಡುವ [illegible] ಗಳನ್ನು ಘೋರವಾಗಿ ಪ್ರತಿಸ್ಪರ್ಧಿಯಿಂದ [illegible] ಅಪ್ರಮಾಣವೆಂತ ಮಾಡಿದ ಮಹೋಪಕಾರವು ಜಿಲ್ಲೆಯವರಾದ್ದರಿಂದಲೋ ಇವರು ಪ್ರಜೆಗಳ ದಿವ್ಯ ಚರಿತ್ರೆಯನ್ನು ಸ್ಥಾಪಿಸಲು ಅಪೂರ್ವ ಕಾರ್ಯ ಸತ್ಕಾರ್ಯದಿಂದ ಸಂತೋಷಪಡಿಸಿ ಸತಿಪತಿಗಳಿಗೆ ಆಯುರಾರೋಗ್ಯ ಕೊಡುವದು ಭಗವಂತನಿಗೂ ಪವ್ಯ [illegible] ದು ಬರಿಯಬೇಕು. ಆದ್ದರಿಂದ ಇನ್ನಾದರು ಕೆಲವು ಮುಖಂಡರು ಆಲೋಚಿಸದೆ ವಿಘ್ನವಿಲ್ಲವೆಂತೆ ಸರ್ವರು ಸಂತೋಷದಿಂದ ಸತ್ಕಾರ ನಡಿಸಿದರೆ ನಾವು ಕೊಡಗು ಭಾಷೆಯಲ್ಲಿ ಕೆಳಗಿನ ಪದವನ್ನು ರಚಿಸಿ ಜನಾಂಗದ ಭಕ್ತಿ ವಿಶ್ವಾಸವನ್ನು ಪ್ರಕಾಶಗೊಳಿಸುವೆನು.

(ನಾರಾಯಣಯೆನ್ನಿರೋ—ಎಂಬಂತೆ)

ಬಾಳಿರೊ ನಿಂಗಯೊಂದನ | ಸೂಟ್‌ದೊರೆ | ಕೇಳಿ ಪಡದಿತ್ತೆಂದು || ಪ || ಜನಸ್ಮಾರ ಬಂದಿಚನಿಂಗ | ಸೂಟರ್ ದೊರೆ | ಕೊಡಗ್‌ಕ್ ಬಂದ್ ಎಂಗ || ಪಡದ ದೊರೆತನದಚ್ಚ ಪಟ್ಟಾಭಿಷ | ಎಚತಿಪೊಂತೆಂರ | ಮಾಡಿದಪ್ಪಾಗುಣ ||೧|| ಬಡವರ್ಕಾನಸ್ಲಿಪೆಂದು | ಸೂಟರ ದೊರೆ | ಕೊಡವರ್ ಅರ್ತ ಬೆಂದ || ನಡೆ ಮುತವಕಾರ ನಿಂಗ್‌ಕೊಡ್‌ತಿತ್ | ಚೂಡಕ ಪೊಂದೊಪ್ಪಿ | ಚೂಡಿವರಿಪ್ಪತು ||೨|| ಮುರಪ್‌ಲೆ ನಿಂಗಳೆಂಗ | ಸೂಟರ್‌ದೊರೆ | ಮರೆಯತಿ ದೇಶನಿಂಗ || ಸುಂದರ ಮೆಚ್ಚುವ ಪರಮೇಶನೇಮೆ | ಆರ್‌ಯಿರುವಕಾಲ | ಅರಿಬೆತ್ ವಾಡಿರೊ ||೩|| ದಂ ಮಕ್ ಮೆಚ್ಚಿತಿರಿ | ಸೂಟರ್ ದೊರೆ | ಕರ್‌ಮಕ್ ಕುಡಕಿರಿ || ಹರದಯಕ್ ಚೀಫ್‌ದೊರೆ ಯಾಯಿಬಾಳೆಂದ್ | ಹರದಾಸ ಬೋಪ ವ | ಪರಮೇಶ ಪಾದಕ್ ||೪||

ಹರದಾಸ

ಸುಧಾರಣೆಯ ಕೌನ್ಸಿಲ್.

ತಾರೀಖು 12 ಮತ್ತು 26 ನೇ ಅಕ್ಟೋಬರ್ ತಿಂಗಳ ಸಂಚಿಕೆಗಳಲ್ಲಿ ಈ ದೇಶಕ್ಕೆ ದೊರಕಿತ ಕೌನ್ಸಿಲ್ ವಿಷಯ ಬರದದ್ದು ನೋಡಿದರೆ ಸಾಧಾರಣವಾಗಿ ಸವಿಸ್ತಾರಗಳಿಲ್ಲವನ್ನು ಊಹನೆ ಮೇಲೆ ಬರದದೆಂತ ಕೆಲವು ಕಡೆ ಒಪ್ಪುತ್ತಾರೆ. ಮಂಜೂರಾಗಿ ಬಂದಿರುವ ಸುಧಾರಣೆಗಳನ್ನು ಪ್ರಕಟಪಡಿಸದೆ ಒಡನೆ ಕೌನ್ಸಿಲ್ ಕೆಲಸಕ್ಕೆ ಶುರು ಮಾಡಬೇಕೆಂಬದಾಗಿ ಸರಕಾರದವರು ಅಭಿಪ್ರಾಯಪಟ್ಟಿರುವಂತೆ ಸೂಚನೆ ಮಾಡುವರೋ? ನೋಡಿದರೆ ಯಾರಿಗೆ ತಾನೆ ಆಶ್ಚರ್ಯವಾಗದಿರದು, ದೇಶದ ಮುಂದಾಳುಗಳಾದರೂ? ಕೌನ್ಸಿಲಿನಲ್ಲಿ ಕಮಿಗೆ ಎಷ್ಟರಮಟ್ಟಿಗೆ ರಾಜ್ಯಾಡಳಿತದಲ್ಲಿ ಹಕ್ಕಿದೆಂಬದನ್ನು ಮೆಂಬರುಗಳ ಚುನಾವಣೆಯಲ್ಲೂ ಓಟರುಗಳ ಹಕ್ಕಿನಲ್ಲೂ ಸರಕಾರದವರ ಇರಾದೆಯೋ? ಯಾ ಪ್ರಜೆಗಳ ಒಪ್ಪಿಗೆಯಂತೆ ನಡಿಯುತ್ತದೋ ಇದರಲ್ಲು ಪಕ್ಷಪಾತಗಳೇನಾದರೂ ಇದೆಯೋ ಎಂಬ ಯಾವದೊಂದು ಸಂಗತಿಯನ್ನು ತಿಳಿಯದೆಯೂ ಪೇಪರುಗಳಲ್ಲಿ ಕೂಡಿಸಿ ಎಲ್ಲಾ ಸಂಗತಿಗಳನ್ನು ಕಂಡುಕೊಂಡರೆ ಆದ್ದರೆ ಅವುಗಳನ್ನು ಸರಿ ತಿಳಿಸಿ ಒಗ್ಗಟ್ಟಿನಿಂದ ಹ್ಯಾಗೆ ನಡೆದುಕೊಳ್ಳಬೇಕೆಂಬವನ್ನು ನಿಶ್ಚಯಿಸದೆ ನಾಡ ಮೇಲೆ ಒಂದು ಮೆಂಬರುತನಕ್ಕೆ ಸ್ಪರ್ಧಿಸಿದರೆ ನೋಡಿದರೆ ಮುಂದಿನಗತಿ ಹ್ಯಾಗಬಹುದೆಂದು ದೇವರೇ ಬಲ್ಲ.

ಮೆಂಬರುಗಳ ಚುನಾವಣೆಯಲ್ಲು ಓಟರುಗಳ ಹಕ್ಕಿನಲ್ಲು ನ್ಯಾಯವಿದೆಯೆಂತ ಹೇಳಲಿಕ್ಕಾಗುವದಿಲ್ಲ. 5 ಮತ್ತು 10 ರೂಪಾಯಿಗಳಿಗಿಂತ ಕಮ್ಮಿ ಕಂದಾಯ ಕೊಡುವವರು ಓಟು ಕೊಡಲು ಹಕ್ಕುದಾರರಲ್ಲವೆಂತಲೂ 2 ವರ್ಷ ಮಿಲಿಟರಿ ಸರ್ವೀಸ್ ಮಾಡಿದವನಿಗೆ ಈ ನಿಶ್ಚಯವಿಲ್ಲದೆ ಓಟು ಕೊಡಲು [illegible] ನ್ನ ದೇಶದ ಶ್ರೀ ಕಾವೇರಿ ಯಮ [illegible]

ಹೊಂದು ಹಕ್ಕುದಾರನೆಂತಲೂ ನಿರ್ಣಯಿಸಿರುವುದು ನೋಡಿದರೆ ಈ ಹಕ್ಕನ್ನೂ ಸಹ ಪೂರ ಅವರೇ ಉಳಿಸಿಕೊಂಡಿದ್ದಾರೆಂಬುದು ಖಂಡಿತವಾಗುತ್ತೆ. ಮೆಂಬರುಗಳ ಚುನಾವಣೆಯಲ್ಲು ಓಟರುಗಳ ಹಕ್ಕಿನಲ್ಲು ಪ್ರಜೆಗಳಿಗೆ ಸ್ವತಂತ್ರಕೊಡದೆ ಅದಕ್ಕೂ ಸಹ ನಿರ್ಬಂಧವಾದ ನಿಬಂಧನೆಗಳನ್ನು ಮಾಡಿರುವುದು ನೋಡಿದರೆ ಈ ಕೌನ್ಸಿಲ್ ... ಎಷ್ಟರ ಮಟ್ಟಿಗೆ ... ಒಳ್ಳೆಯದೆಂದು ಗೊತ್ತಾಗುವದಿಲ್ಲ. ಮೆಂಬರಾಗುವವನು ದೇಶದ ಯಾವ ಭಾಗದಲ್ಲೇ ಆಗಲಿ ವಾಸಮಾಡಿಕೊಂಡಿರುವವನು ಆಗಬಹುದೆಂತಲೂ ಓಟರು ಮಾತ್ರ ಓಟು ಕೊಡುವ ತಾಲೋಕಿನಲ್ಲು ಹಿಂದಿನ ಸರಕಾರಿ ವರ್ಷದಲ್ಲು 120 ದಿವಸ ವಾಸವಾಗಿದ್ದರೆ ಓಟು ಕೊಡಲು ಹಕ್ಕುದಾರನೆಂತ ಬರೆದಿರುವುದು ಯಾವ ನ್ಯಾಯ ಅಲ್ಲದೆ ೧೦ ರೂಪಾಯಿ ಸಾಗಿನ ಭೂಕಂದಾಯ ಇಲ್ಲವೆ ನಗರಸಭೆಯಲ್ಲು ಒಂದಿರುವ ಮೇರೆ ಇತರ ಯಾವ ತೆರಿಗೆಯನ್ನೇ ಆಗಲಿ ಕೊಡುವವರೆಲ್ಲ ಸಾಗಿನ ಪರ ಮೆಂಬರಾಗಲು ಮತ್ತು ಓಟು ಕೊಡಲು ಹಕ್ಕುದಾರರೆಂತ ನಮೂದಿಸುತ್ತೆ. ಹಾಗಾದರೆ ಕುರಿತ ಇತರ ತೆರಿಗೆಗಳನ್ನು ಕೊಡುತ್ತಿರುವ ಬಂಡು ಹಿಡುವಳಿದಾರರು ಓಟು ಕೊಡಲು ಮೆಂಬರಾಗಲು ಹಕ್ಕುದಾರರನ್ನವೇ ಸಾಗಿನ ಪರ ಮೆಂಬರಾಗುವವನು ಭೂಕಂದಾಯ ತೆರುವವನೇ ಆಗಬೇಕೆಂತ ಕಡ್ಡಾಯ ಇರುವ ಹಾಗೆ ಕಾಣುವದಿಲ್ಲ ಇದು ಯಾವ ನ್ಯಾಯವೋ ತಿಳಿಯದು ಭೂಕಂದಾಯ ಕೊಡದವನು ಸಾಗಿನ ಪರ ಮೆಂಬರನಾದರೆ ಆತನಿಗೆ ಸಾಗಿನ ವಿಷಯ ಗೊತ್ತಾಗುವದಿಲ್ಲ.

ಮುನ್ಸಿಪಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡು ಕಂದಾಯಗಳೆಲ್ಲಾ ಆಗಾಗ್ಗೆಯಿಂದಲು ಪ್ರತಿನಿಧಿಗಳ ಅಧಿಕದಂತೆ ಸ್ವಲ್ಪ ಹೆಚ್ಚು ಕಮ್ಮಿಯಾಗಿ ಜನರ ಅಪೇಕ್ಷೆಯಂತೆಯೇ ವೆಚ್ಚ ಮಾಡುತ್ತಾ ಬರುತ್ತಿರುವಾಗ ಇಂಥಾ ತೆರಿಗೆ ಕೊಡುವವರು ಸಾಗಿನ ಪರ ಕೌನ್ಸಿಲಿಗೆ ಮೆಂಬರುಗಳಾಗಲು ಮತ್ತು ಓಟು ಕೊಡಲು ಹಕ್ಕುದಾರರೆಂದು ನಿರ್ಣಯಿಸಿರುವುದರಲ್ಲಿ ನ್ಯಾಯವಿದೆಯೆಂತ ಹೇಳಲಿಕ್ಕಾಗುವದಿಲ್ಲ ಜಮ್ಮ ಜ ಸಾಗು ೧೦ ರೂಪಾಯಿಗಳಿಗಿಂತ ಕಮ್ಮಿ ತೆರಿಗೆ ಕೊಡುವವರು ಓಟು ಕೊಡಲು ಹಕ್ಕುದಾರರೆಂತ ಹೇಳುವ ಪಕ್ಷ ಇದರಲ್ಲು ನ್ಯಾಯವಿಲ್ಲವೆಂತ ಖಂಡಿತವಾಗುತ್ತೆ. ಅಲ್ಲದೆ ವ್ಯತ್ಯಾಸವನ್ನು ಸಹ ತೋರಿಸುತ್ತಾರೆಂಬುದರಲ್ಲಿ ಸಂದೇಹವಿಲ್ಲ ಈ ದರಗಳು ಭಾಗದಾರರಿಗೆ ಭಾಡಿಕವಿಲ್ಲವೆಂತಲೂ ಪಟ್ಟೇದಾರರಿಗೆ ಕುಂಬಾಬಾಧಿಸುತ್ತೆಂತಲೂ ಖಂಡಿತಾ ಹೇಳಬಹುದು ಎಷ್ಟೇ ಕಮ್ಮಿ ಕಂದಾಯ ಕೊಡುವ ಪ್ರತಿ ಒಬ್ಬ ಪಟ್ಟೆದಾರನಿಗೂ ಮೆಂಬರಾಗುವ ಮತ್ತು ಓಟು ಕೊಡುವ ಹಕ್ಕು ಇರುವದರಲ್ಲಿ ನ್ಯಾಯವಿಲ್ಲವೆಂತ ಯಾರು ಹೇಳಬಲ್ಲರು.

ತಾಲೋಕ್ಕುವಾರು ಜಮ್ಮದ ಪರಮೆಂಬರುಗಳನ್ನು ವಿಂಗಡಿಸಿದರಲ್ಲಿ ತಕ್ಕನಷ್ಟಿಗೆ ನ್ಯಾಯವಿದೆ ಎಂದು ಹೇಳಬಹುದು ಸಾಗಿನ ಪರಮೆಂಬರುಗಳನ್ನು ತಾಲೋಕ್ಕುವಾರು ಒಂದರಂತೆ ವಿಂಗಡಿಸಿದರಲ್ಲಿ ನ್ಯಾಯವಿದೆಯೆಂತ ಹೇಳಲಿಕ್ಕಾಗುವದಿಲ್ಲ ಯಾಕಂದರೆ ನಂಜರಾಜಪಟ್ಟಣ ತಾಲೋಕಿನಲ್ಲು ಸಾಗಿನ ಭೂಕಂದಾಯ ಕೊಡುವವನು ಜಮ್ಮದ ಹಿಡುವಳಿದಾರರಲ್ಲಿದ್ದ ಸಾಗಿನ ರೈತರು (ಪಟ್ಟೆದಾರರು) ಬ್ಯಾರೆ ಯಾವ ತಾಲೋಕಿನಲ್ಲು ಇರಬಾರದೆಂದು ಹೇಳಲು ಸಾಧ್ಯವಿಲ್ಲದಿರುವಾಗ ಸಾಗಿನಪರ ಎರಡು ಮೆಂಬರುಗಳ ಸ್ಥಾನವನ್ನು ಈ ತಾಲೋಕಿನವರಿಗೆ ಕೊಡಬೇಕಾದದ್ದು ನ್ಯಾಯವಾದದ್ದಲ್ಲವೆಂದು ಯಾರುತಾನೆ ಹೇಳುವರು.

ಈ ದೇಶದಲ್ಲು ಸಾಧಾರಣವಾಗಿ ಎಲ್ಲಾ ವರ್ಣದವರಿಗೂ ಭೂಮಿ ಜಮೀನುಗಳು ಇದ್ದೇ ಇದೆ ಆದದರಿಂದ ಹಿಂದುಳಿದ ವರ್ಗದಕ್ಕೆ ಅಧಿಕಾಯದ ಮೆಂಬರು ಬೇಕೆಂತ ಹೇಳಲು ಹೆಚ್ಚು ಅವಕಾಶ ತೋರುವದಿಲ್ಲ ಅಲ್ಲದೆ ಅವರು ಅಭಿವೃದ್ಧಿ ಸ್ಥಿತಿಯಲ್ಲು ಇಲ್ಲದೆ ಇರುವದರಿಂದ ಅವರನ್ನು ಮುಂದಕ್ಕೆ ತರಲು ಮತ್ತು ಭೂಕಂದಾಯ ಕೊಡದೆ ಇತರ ತೆರಿಗೆಗಳನ್ನು ಕೊಡುತ್ತಿರುವವರ ಪರವಾಗಿಯೂ ಒಬ್ಬ ಮೆಂಬರು ಅವಶ್ಯ ಇರಬೇಕಾಗಿರುವದದರಿಂದ ಡಿಪ್ರೆಸ್ಡ್ ಕ್ಲಾಸ್ ಪರವಾಗಿ ಇಟ್ಟಿರುವ ಮೆಂಬರುತನದ ಹಕ್ಕನ್ನು ಈ ಸಮುದಾಯದ ಹಕ್ಕಾಗಿ ನಿರ್ಣಯಿಸಿ ಅವರ ಓಟುಗಳ ಮುಖಾಂತರ ಮೆಂಬರನ್ನು ಚುನಾಯಿಸುವದರಲ್ಲಿ ನ್ಯಾಯವಿಲ್ಲವೆಂತ ಹೇಳಲಿಕ್ಕಾಗುವದಿಲ್ಲ.

ಜಮ್ಮ ಮತ್ತು ಸಾಗಿನ ಪರಮೆಂಬರುಗಳಾಗಲು ಮತ್ತು ಓಟುಕೊಡಲು ಕಂದಾಯದ ದಾಂತಾಯಿಯಂತೆ ಭಾಗದಕಡೆಗೆಲ್ಲ ಹಕ್ಕು ಇಟ್ಟಿರುವದು ಸರ್ವಸಮ್ಮತವಾಗಿದೆ ಆದರೆ ಮೆಂಬರುತನಕ್ಕೆ ನಿಂತವನಿಗೆ ಸಿಕ್ಕಿದ ಓಟಿನಲ್ಲು ಅವನ ಕುಟುಂಬದ ಮೆಂಬರುಗಳ ಓಟಿನ ಸಂಖ್ಯೆಷ್ಟೋ? ಯಾಸಂಬಂಧಿಕರಲ್ಲದ ಇತರರ ಓಟಿನ ಸಂಖ್ಯೆಷ್ಟೋ ಎಂಬುದನ್ನು ಗಣನೆಗೆ ತಾರದೆ ಹೋದರೆ ಇದರಿಂದ ನ್ಯಾಯವು ದೊರೆಯಲಾರದೆಂಬುದಕ್ಕೆ ಸಂದೇಹವಿಲ್ಲ ಮುಂದಾಗಲುಗಳೆಲ್ಲ ಮೇಲ್ಕಂಡ ಸಂಗ್ತಿಗಳನ್ನೆಲ್ಲ ವಿಶೇಷಾಲೋಚನೆ ಮಾಡಿನೋಡಿ. ಮೆಂಬರುತನಕ್ಕೆ ನಿಂತಿರುವುದಕ್ಕಿಂತ ಮುಂದಾಗಿ ಕಾಂಡು ಕೊಡಿಕೆಗಳನ್ನೆಲ್ಲ ಹೋಗಲಾಡಿಸಿಕೊಂಡು ಸರ್ವಸಂಮತದಿಂದ ಸಾವಧಾನದಿಂದ ಈ ಕೌನ್ಸಿಲನ್ನು ಅಂಗೀಕರಿಸುವದರಿಂದ ಹಿಂದಿನಿಂದ ಸುಖಪ್ರದವಾಗಬಹುದು. ಅದಿಲ್ಲದೆ ಆತುರತಾಗಿ ಕೌನ್ಸಿಲನ್ನು ಅಂಗೀಕರಿಸಿಕೊಂಡು ಕಷ್ಟಕೂಳಪಟ್ಟುಕೊಂಡು ಸಂತಾಪಪಡುವದರಿಂದ ಪ್ರಯೋಜನವಾಗದಾದೆಂಬ ಸಂಗ್ತಿಯನ್ನು ಗಣನೆಗೆ ತಂದುಕೊಳ್ಳಬೇಕಾಗಿ ವಿನಂತಿ.

K. B. C.

COORG LTD.

ಕೊಡಗು ಕಂಪನಿಯ ಶೇರುದಾರರಲ್ಲಿ ವಿನಂತಿ.

ಅಯ್ಯಾ, ಕೊಡಗು ಪತ್ರಿಕೆಯ ಸಂಪಾದಕರೇ ಅ... ಈ ಕಂಪನಿಯ ಶೇರುದಾರರಿಗೆ ... ಈ ಲೇಖನದಲ್ಲು ಕಂಪನಿಯ ಡೈರೆಕ್ಟರುಗಳು ಸರಿಯಾಗಿ ಕೆಲಸ ನಡಿಸದ್ದರಿಂದ ಕಂಪನಿಗೆ ನಷ್ಟವಾಗುವ ಸಂದರ್ಭವಿದೆ ಶೇರುದಾರರು ಹಾಕಿದ ಅಸಲಿಗೇನೆ ಮೋಸ ಬಾಬ ಎಲ್ಲಿಯುದು ಎಂಬ ವಗ್ಯೆರೆಯಾಗಿ ವಾದಿಸಿದರು ಈ ಸಂಗತಿಗಾಗಿ ನಾನು ಕಾದ್ದು ಈ ಕಾರಣ ಹೊದು ಕಲು ಕೊಡಗು ಆಫೀಸಿಗೆ ಹೋಗಿ ನೋಡಿದಲ್ಲದೆ ಅದಿಟರ ರಿಪೋರ್ಟು ನೋಡಿದಲ್ಲು ಈ ಕಂಪನಿಯ ಶೇರುದಾರರು ೫೯ ಜನರೆಂತಲೂ ಈ ಕಂಪನಿಯಿಂದ ಪತ್ರಿಕೆ ತರಿಸಿಕೊಳ್ಳುವ ಚಂದಾದಾರರು ೪೫೭ ಜನರೆಂತಲೂ ಕಂಡುಬರುತ್ತೆ. ನಾನೆಸೋ ಎಲ್ಲಾ ಶೇರುದಾರರೂ ಈ ಪತ್ರಿಕೆಯ ಚಂದಾದಾರರೆಂದು ನಂಬಿದ್ದೆನಲ್ಲದೆ ಕೊಡಗು ಜನಾಂಗದವರೇ ಸಂಬಂಧೇಕಾದ ಸಂಗ್ತಿಯಾಗಿದೆ ಪ್ರತಿ ಶೇರುದಾರರು ಒಂದೊಂದು ಪತ್ರಿಕೆ ತರಿಸಿಕೊಂಡಿದ್ದರೆ ಶೇರುದಾರರಲ್ಲದ ಚಂದದಾರರ ಸಂಖ್ಯೆಯು ೨೬೦ ಮಾತ್ರವಾಗಿರಬೇಕಾಗಿತ್ತು. ಇದು ಪೂರ ಸುಳ್ಳು ಇದಕ್ಕೆ ಕಾರಣವೇನೆಂದು ವಿಚಾರಿಸಿದಲ್ಲು ೫೯ ಜನ ಶೇರುದಾರರ ಪೈಕಿ ಅಂದಾಜು ೧೭ ಜನರು ಮಾತ್ರ ಪತ್ರಿಕೆ ತರಿಸಿಕೊಳ್ಳುತ್ತಾರೆಂತಲೂ ಬಾಕಿ ಶೇರುದಾರರು ತರಿಸಿಕೊಳ್ಳುವದಿಲ್ಲವಾಗಿ ಕಂಡುಬರುತ್ತೆ.

ಇದು ನೋಡುವಾಗ್ಯೆ ಶೇರುದಾರರು ಲಾಭವನ್ನು ಬಯಸುವವರೇಹೊರತು ದೇಶದ ಏಳಿಗೆಯನ್ನು ಮತ್ತು ದೇಶದ ಸಮಾಚಾರವನ್ನು ತಿಳಿಯಲಪೇಕ್ಷಿಸಿರುವದಿಲ್ಲವಾಗಿ ನಂಬಬೇಕಾಯಿತು. ದಯಮಾಡಿ ಇನ್ನಾದರೂ ಈ ಪತ್ರಿಕೆಯನ್ನು ತರಿಸಿಕೊಳ್ಳದ ಎಲ್ಲಾ ಶೇರುದಾರರುಗಳು ಪತ್ರಿಕೆಯನ್ನು ತರಿಸಿಕೊಂಡು ಈ ಪತ್ರಿಕೆಯ ಏಳಿಗೆಯ ಪ್ರೀತಿಗೆ ಪಾತ್ರರಾಗುವರಾಗಿ ಕೇಳಿಕೊಳ್ಳುವ ಈ ಕಂಪನಿಯ ಓವರ್ ಡೈರೆಕ್ಟರ್.

ಬಿದಿಯಂಡ ಮಾಚ್ಚಯ್ಯ.

ಅರಿಯದ ಅನಾರೋಗ್ಯ.

ಕೊಡಗು ಒಂದು ಮಹಾನೀಯರೇ? ಆರೋಗ್ಯವನ್ನು ಅರಿಯಬೇಕಾದರೆ ಶರೀರಸ್ಥಿತಿಗಳನ್ನು ತಿಳಿಯಬೇಕಾದರೆ ಒಟ್ಟು ಬರೆ ಹಟ್ಟಿ ಕೊಟ್ಟಿಗೆ ಇಂಥಾ ವಿಷಯಗಳಲ್ಲಿ ಇರುವ ದುರ್ವಿಷಯಗಳನ್ನು ನಿಗಾನೋಡಬೇಕಾದ್ದಲ್ಲಿ ಕೊಂಚ ನಾಗರೀಕತನ ಪ್ರತಿಮನುಷ್ಯನ ವಶದಲ್ಲಿಯೂ ಕೂಡ ಇದ್ದೇ ತೀರಬೇಕಾದ್ದಲ್ಲವೇ ಯಿ ಚಿಕ್ಕಮಾಡಿ ನೋಡಿದರೆ, ಕಣಿವೆ, ಹೋಬಳಿಯ ಹಿಂದು ಬಿದ್ದಿರುವ ಜನಗಳ ಕೊಂಚ ಯೇಳಿಗೆಗೆ ಯಾದರೂ ಯಾವ ಮಹಾನೀಯನೇ ಆಗಲಿ ನಮ್ಮ ದೇಶಬಂಧು ಮಹಾನೀಯರುಗಳಲ್ಲಿ ಈ ಹೋಬಳಿಗೆ ಉಮೇದ್ವಾರನಾಗಿ ವಿದ್ಯಕಾಳಿಯಾಗಿ ನಿಲ್ಲಬಾರದೇ ದೇಶಸೇವೆಮಾಡಬಾರದೇ, ದೊಡ್ಡ ಕೀರ್ತಿ ನರಹನ್ನದಲ್ಲಿ ಸಂಪಾದಿಸಬಾರದೇ, ದೇಶಮಹಾನೀಯರೇ ಇದು ಕೊಂಚ ತಾಮಸವಾಗಿ ಆಗುವ ಕಾರ್ಯವಾಗಿದೆ. ಅಂಥಾ ಮಹಾನೀಯರು ಹುಟ್ಟೀಹುಟ್ಟಾರು. ಅದಂತಿರಲಿ. ಆದರೆ ಹಾಲಿ ಈಗ ಈ ಹೋಬಳಿಯ ಪ್ರತಿ ಮನೆಯ ಅಕಾಲಮರಣ ಮತ್ತು ತುಂಬಾ ಅಸ್ವಸ್ಥೆಯಿಂದ ನರಳುತ್ತ ಬಿದ್ದಿರುವ ಅನಾರೋಗ್ಯದ ಜನರ ಯೊಚ್ಚರಿಕೆ ಬಗ್ಗೆ ಯಾವ ಉಪಾಯವನ್ನು ನಾವು ಅರಿಯದ ಶಾಮುರದ ಪಾಡಿಗೆ ಕಡ್ಡ ಯಾವುದಾದರೂ ನಿರ್ಣಯವನ್ನು ಕುತೂಹಲಿಸುವ ನಮಗಳ ಕಾಯಿಲೆ ಬಗ್ಗೆ ದೊಡ್ಡ ಗವರ್ನಮೆಂಟಿನವರಾದರೂ, ಯಾವುದಾದರೂ ಎಚ್ಚರಿಕೆ ಕೊಟ್ಟು ಈ ಹೋಬಳಿಯ ಪ್ರತಿಮನೆಗಳಿಗೂ ಹೋಗಿನೋಡುವ ಒಬ್ಬ ಅಲಾಯಿದ ಡಾಕ್ಟರ್ ಇಟ್ಟು ನಿಗಾ ನೋಡುವಂತೆ ಮಾಡಿದರೆ ನಮ್ಮಗಳ ಮೊರೆಗೆ ಗವರ್ನಮೆಂಟಿನವರು ಎಷ್ಟೋ ಉಪಕಾರವನ್ನು ಉಂಟು ಮಾಡ್ಯಾಯುದೆಂದು ನಾವು ತುಂಬಾ ಕುತೂಹಲಿಗಳಾಗಿರುತ್ತೇವೆ. ಅಲ್ಲದೆ ಫ್ರೇಜರ್‌ಪೇಟೆಯ ಆಸ್ಪತ್ರೆಯಲ್ಲಿ ಪ್ರತಿದಿನದಲ್ಲಿ ಜಾತ್ರೆಯೋಪಾದಿಯಲ್ಲಿ ನಿಲ್ಲುತ್ತಿರುವ ಜನರ ಕಷ್ಟವನ್ನು ನಮ್ಮ ಡಾಕ್ಟರರು ಪ್ರಚುರಪಡಿಸದೆ ಇರುವುದು ತುಂಬಾ ವ್ಯಸನಕರ. ಅಲ್ಲದೆ ಈಗಲೇ ಸುರು ಆಗಿರುವ ಕೊರೆ ಹಿಮಬಂದನಂತರ ಈ ನನುಗಳ ಪಾಡು ಯಾವ ರೀತಿಯೋ ಗೊತ್ತಿಲ್ಲ. ಇದಕ್ಕಾಗಿ ಮುಂದೆ ಯೆಚ್ಚರಿಸಲು ದಯಸರ್ಕಾರದವರು ಕೂಡಲೆ ನಮ್ಮ ಹೋಬಳಿಗೆ ಯೆಚ್ಚರಿಕೆ ತೆಗೆದುಕೊಳ್ಳಬೇಕಾಗಿ,

ಯೆಚ್ಚತ್ತ. ಪ.

ಮ|| ಸಿ. ಬಿ. ಸಿ ಯವರೇ,

ಕೊಡಗು ತಾ|| ೨—೧೧—೧೯೨೩ ರಲ್ಲಿ ನಿಮ್ಮ ಹಿಂದು ಲೇಖನದಲ್ಲಿ, ಆಸ್ತಿಯನ್ನು ಕೊಂಡು ಹಾಸಿಗೆ ಮೇಲ್ ಹಾಕಿದ ಹಾಗೆ ಒಡಹುಟ್ಟಿದ ಅಪ್ಪನಿರುವಾಗಲೇ ಹೆಸರೆ ಸಹ ಹೇಜಿ ಮಾಸ್ತರರ ಸಂಬಳ ಒಡಾವಣೆ ... ಇರದಿರುತ್ತೇರಿ ಮಾಸ್ತರನ್ನು ಈ ವಿಗಡ ರೈತರನ್ನು ಆಸ್ತಿಗೂ ಹೋಲಿಸಿದ ತಮ್ಮ ವಿವೇಕವನ್ನು ನೋಡಿ ನನಗೆ ಬಹಳ ಸಂತೋಷವಾಯಿತು.

ಮಾಸ್ತರರು ರೈತರ ಮಕ್ಕಳನ್ನು ಲಾಯರುಗಳನ್ನಾಗಿಯೂ, ಇಂಜಿನಿಯರುಗಳನ್ನಾಗಿಯೂ, ಡಾಕ್ಟರುಗಳನ್ನಾಗಿಯೂ, ಶಾಸಿಲ್ದಾರರನ್ನಾಗಿಯೂ, ಮತ್ತು ಇತರ ಪ್ರರುವ ಕಾರ್ಯಗಳಿಗೆ ಯೋಗ್ಯರನ್ನಾಗಿಯೂ, ಮಾಡುತ್ತಾರೆಂಬುದು ಮರೆತಿರುವಂತೆ ಕಾಣುತ್ತೆ.

(The teacher makes the lawyer, the engineer, the doctor, and the humble clerk in the office. He teaches the boys to read, to write, to use his senses, to be honest, truthful, patient and kindly. After school, when you are citizens of a country, you will know how to act towards your fellow men I hope you learnt all in the school.)

ಹೀಗಿರುವಾಗ ಮಾಸ್ತರರನ್ನು ಮುಖ್ಯವಾದ, ವಿಚಾರುವ, ಶಾಲೆಗೆ ಹೋಲಿಸಿದ ತಮ್ಮ ಕುಶಲಬುದ್ಧಿಗೆ ನನ್ನ ಅನೇಕ ವಂದನೆಗಳಲಿ.

ಮಾಸ್ತರರು ಯಾರ ಮಕ್ಕಳನ್ನು ನ್ಯಾಯ ಮನುಷ್ಯರನ್ನಾಗಿ ಮಾಡುವರೋ ಅಂಥಾ ಕಾಯಕಂದೇ ಆಗ ಸೇ ಹೇಳಿಸಿದ್ದು. ಆದರಿಂದ ತಮ್ಮ ಮಕ್ಕಳ ಪುರೋವೃದ್ಧಿಗೆ ಯಾರು ಕಾರಣರೋ ಅಂಥವರ ಸಂಬಳವನ್ನು ಒಡಾವಣೆಮಾಡದಲ್ಲಿ ಯಾವ ಬೋಧವೂ ನನಗೆ ಕಾಣುವುದಿಲ್ಲ. ಮ|| ಸಿ. ಬಿ. ಸಿ. ಯವರೇ ತಮಗೆ ಏನಾದರ ಗೊತ್ತಿದ್ದರೆ, ಅದನ್ನು ವಿವರಿಸಿ ತಮ್ಮ ಅವಲೋಕನವನ್ನು ಮುಂದರಿಸುವರಾಗಬೇಕಾಗಿ ನನ್ನ ಕೋರಿಕೆ. ತಮ್ಮನ್ನು ವಿರೋಧಿಸಿದೆನೆಂದು ಕೋಪಮಾಡಬೇಡಿ. ವಿಶ್ವಾಸವಿರಲಿ.

R. N. SETTY,

3-11-23. L. F. School, Fraserpet

ಅಮ್ಮತ್ತಿ ನಾಡು ಹಾಲುಗುಂದ ಊರಿನವರು ತಮ್ಮ ಊರಿನ ನೆರೆಹೊರೆಯಲ್ಲಿ ರಸ್ತೆಯಿಲ್ಲದೆ ಬಹಳ ಅನಾನುಕೂಲವನ್ನು ಅನುಭವಿಸುತ್ತಿದ್ದರು. ಸದರಿ ಅನಾನುಕೂಲವನ್ನು ಸರಕಾರದವರಲ್ಲಿಯೂ, ಡಿಸ್ಟ್ರಿಕ್ಟ್ ಬೋರ್ಡಿನವರಲ್ಲಿಯೂ ಎಷ್ಟೋ ವರ್ಷಗಳಿಂದ ಪ್ರಕಟಿಸಿದರೂ ಪ್ರಯೋಜನಕ್ಕೆ ಬರಲಿಲ್ಲ. ಆದರೆ ವರ್ಷ ಡಿಸ್ಟ್ರಿಕ್ಟ್ ಬೋರ್ಡಿನವರ ಊರ ಮಧ್ಯಕ್ಕೆ ರಸ್ತೆಮಾಡಿಸಲು ೩೫ ರೂಪಾಯಿಗಳನ್ನು ಕೊಡಿಸಿ ಆ ನಾಲ್ಕೈದು ಮೈಲಿಗಳ ದೂರ ಆಗಬೇಕಾದ ಈ ರಸ್ತೆಯ ಕೆಲಸಕ್ಕೆ ಅಷ್ಟೊಂದು ಹಣವು ಸಾಲದ ಕಾರಣ ತಾ|| ೨೯—೧೦—೨೩ ರಲ್ಲಿ ಊರು ಒಂದು ಮೀಟಿಂಗನ್ನು ಮಾಡಿ ಸದರಿ ರಸ್ತೆಯ ಗ್ರಾಮದವರು ತಾವೇ ದೇವಣಗೇರಿಯಿಂದ ಕೊಂಡಂಗೇರಿವರೆಗೆ ಮಾಡಿ ಮುಗಿಸುವದೆಂದೂ, ಮೇಲ್ಕಂಡ ಮತ್ತು ಊರವರ ಚಂದಾ ಹಣ ಒಟ್ಟು ಸುಮಾರು ೬೦೦ ರೂಪಾಯಿಗಳನ್ನು ಊರವರೇ ಅನುಭವಿಸಬೇಕೆಂದೂ ತೀರ್ಮಾನಿಸಿದರು. ಈ ಕಾರ್ಯನಿರ್ವಾಹಕ್ಕಾಗಿ ಒಬ್ಬರು ಅಧ್ಯಕ್ಷರು ಮತ್ತು ಹತ್ತು ಜನ ದಸ್ತರನ್ನು ನಿಯಮಿಸಿಕೊಂಡಿರುತ್ತಾರೆ. ಇವರು ಯ ಕೆಲಸವು ಮುಕ್ತಾಯವಾಗುವವರೆಗೆ ನಡೆಯುವ ಹಾಗೆ ನೋಡಿಕೊಳ್ಳಬೇಕೆಂದು ತೀರ್ಮಾನಿಸಿರುತ್ತಾರೆ ಗಲೇ ಕೆಲಸವು ಆರಂಭಿಸಲ್ಪಟ್ಟು ಒಹುತೀವ್ರತೆಯಿಂದ ನಡೆಯುತ್ತಿದೆ. ಹುತ್ತಿ ಹಟ್ಟದೊಳಗೆ ಸರಿಯಾದ ರಸ್ತೆಯು ತೃಪ್ತಿಯಾಗುತ್ತೆಂಬುದರಲ್ಲಿ ಸಂಶಯವಿಲ್ಲವೆ ಒಗ್ಗಟ್ಟು ಮತ್ತು ಸ್ವಾವಲಂಭನ! ಒಗ್ಗಟ್ಟು ಮತ್ತು ಸ್ವಾವಲಂಭನವು ನಮ್ಮ ಜಿಲ್ಲೆಯ ಪ್ರತಿಯೊಂದು ಗ್ರಾಮದಲ್ಲಿ ಯ ದೇಶಾಭಿವೃದ್ಧಿಯು ತೀವ್ರವೇ ಸರಿ! ದೇವಗ್ರಾಮದವರೂ ಸಹ ತಮ್ಮ ಗ್ರಾಮಕ್ಕಾಗಿ ಈ ರಸ್ತೆಯ ಉಳಿದ ಭಾಗವನ್ನು ಸರಿಪಡಿಸಬೇಕೆಂದು ನಂಬಬೇಕಾಗಿದೆ. ಅಲ್ಲದಿದ್ದರೆ ಹಾಲುಗುಂದದವರ ಪ್ರಯತ್ನವು ಹೆಚ್ಚು ಫಲಕಾರಿಯಾಗದಿದ್ದರಿಂದ ದೇವಣಗೇರಿ ಊರವರು ಈ ರಸ್ತೆ ಚೆಂಬೆಳೆಯೂರು ರಸ್ತೆವರೆಗೆ ದುರಸ್ತು ಮಾಡುತ್ತ ಮಾಡುವರೆಂದು ನಂಬಿರುವ ಓದುಗ.

ಕೊಡಗು ಸಂಪಾದಕರಿಗೆ

ಅಯ್ಯಾ,

ಒಳ್ಳೆ ಕೋಡು ಗ್ರಾಮದ ಕೊಡಗರೆಲ್ಲರೂ ಸೇರಿ ಕಳೆದ ತಾರೀಖು ೬ನೆ ರಲ್ಲು ಮೆ|| ಚಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗು ಮಾಡಿ ಕೊಡಗಿನ ಪ್ರಸ್ತುತಸ್ಥಿತಿಯ ಮತ್ತು ಈಗ ತಾನೇ ದೊರೆತಿರುವ [illegible] ದೇಶದವರು [illegible] ಕುರಿತು ಚರ್ಚಿಸಲಾಯಿತು. ಆಮೇಲೆ ಮೆ|| ಕಾರ್ಯಪ್ಪನವರು ಕೊಡಗರ ಮದುವೆಯ ವಿಷಯ ವಿಳಂಬವಾಗಿ ಭಾಷಣಮಾಡಿದರು. ಅವರು ಕೊಡಗರು ಅವಶ್ಯಕವಾಗಿ ಮಾಡಬೇಕಾದ ಮದುವೆ ಕಾರ್ಯಗಳಿಗೆ ಅನಾವಶ್ಯಕವಾಗಿ ಹೆಚ್ಚು ಹಣ ಖರ್ಚುಮಾಡುತ್ತಾ ಬಂದುದರಿಂದ ದೇಶದಲ್ಲಿ ಮದುವೆ ಮಾಡಿದ ಎಷ್ಟೋ ಜನರು ಸಾಲವೆಂಬ ಬಾವಿಯಲಿ ಬಿದ್ದು ನರಳುತ್ತಿದ್ದಾರೆಂದೂ ಹಣವಿಲ್ಲದೆ ಹಲವರು ಮದುವೆ ಮಾಡದೆ ದೀರ್ಘಕಾಲ ಸುಮ್ಮನೆ ಇರುತ್ತಾರೆಂದೂ, ಹೀಗೆ ನಡೆಯುತ್ತಾ ಬರುವುದರಿಂದ ದೇಶದ ಸುಸ್ಥಿತಿಗೆ ಎಷ್ಟೋ ಅನಾಹುತಗಳು ಕಂಡು ಬಂದಿವೆಯೆಂದೂ ಇದನ್ನು ನಿಲ್ಲಿಸಲಿಕ್ಕೆ ತಕ್ಕ ಏರ್ಪಾಡು ಮಾಡದಿದ್ದರೆ ಇನ್ನೂ ಕೆಟ್ಟದಾಗುತ್ತಿರುವುದೆಂದೂ ಹೇಳಿದರು. ಇದೂ ಅಲ್ಲದೆ ವಿವಾಹದ ವಿಷಯ ಇನ್ನು ಕೆಲವು ಬಿಕ್ಕಟ್ಟುಗಳಿರುವುದರಿಂದ ಉಂಟಾಗುತ್ತಿರುವ ಅನಾಹುತಗಳನ್ನು ವಿವರಿಸಿ ಹೇಳಿದರು. ಇವರ ನಂತರ ಸಭೆ ಸೇರಿದ ಕೆಲವು ಮಹನೀಯರು [illegible] ಆದ ನಂತರ ಮೆ|| ಕಾರ್ಯಪ್ಪನವರು ಈ ಕೆಳಗಿನ ಠರಾವುಗಳನ್ನು ಸಭೆಯ ಮುಂದಿಟ್ಟರು.

(೧) ಈಗಿನ ಪದ್ಧತಿ ಪ್ರಕಾರ ಕೊಡಗರ ಮದುವೆಗಳಲ್ಲಿ ಅನಾವಶ್ಯಕವಾಗಿ ಹಣ ವ್ಯಯಮಾಡುವುದರಿಂದ ದೇಶದ ಸಾಂಪತ್ತಿಕ ಮೊದಲಾದ ಸ್ಥಿತಿಗಳಿಗೆ ಅನಾಹುತಗಳು ತಲೆದೋರುತ್ತಿರುವುದರಿಂದ ಇನ್ನು ಮುಂದಕ್ಕೆ ಈಗಿನಂತೆ ಗಂಡ ಹೆಣ್ಣಿನ ಮನೆಗಳಲ್ಲಿ ಬೇರೆ ಬೇರೆಯಾಗಿ ಮುಹೂರ್ತಗಳನ್ನು ಮಾಡುವುದು [illegible] ಮದುವೆ ದಿವಸ ಮದುಮಗನು ತನ್ನ ಬಂಧು ಮಿತ್ರರೊಡನೆ ಮದುಮಗಳ ಮನೆಗೆ ಹೋಗಿ ಅಲ್ಲಿ ಬೇರೆ ಹಿಂದು ಮತಸ್ಥರು ನಡಿಸುವ ರೀತಿ ಇಬ್ಬರಿಗೂ ಅದೇ ದಿವಸವೆ, ಒಳ್ಳೆ ಶುಭ ಕಾಲದಲ್ಲಿ ಮುಹೂರ್ತಮಾಡಿ ಊಟವುಪಚಾರವಾದ ನಂತರ ಆ ದಿನವೇ ಮದುಮಗನು ಮದುಮಗಳ ಸಮೇತ ತನ್ನ ಮನೆಗೆ ಬರುವಂತೆ ಎಲ್ಲರೂ ಸೇರಿ ಏರ್ಪಾಡು ಮಾಡುವುದು.

(೨) ಈ ಸಂಗತಿಯಲ್ಲಿ ದೇಶಹಿತೈಷಿಗಳೆಲ್ಲರ ಸಹಾಯವು ಅವಶ್ಯವಿರುವುದರಿಂದ ಅವರೆಲ್ಲರ ಅಭಿಪ್ರಾಯವನ್ನು ತಿಳಿಯಲಿಕ್ಕೋಸ್ಕರ ಈ ಮೀಟಿಂಗಿನಲ್ಲಿ ನಡೆದ ಸಂಗತಿಗಳನ್ನು ದೇಶಸೇವೆ ಹಿಂದೇನೆ ಹೊರಟಿರುವ ಕೊಡಗು ಪತ್ರಿಕೆಯಲ್ಲಿ ಪ್ರಕಟಿಸುವಂತೆ ಸಂಪಾದಕರನ್ನು ಕೇಳಿಕೊಳ್ಳುವದು.

ಈ ಮೇಲಿನ ಠರಾವುಗಳನ್ನು ಮೆ|| ಚಣ್ಣಪ್ಪನವರು ಅನುಮೋದಿಸಿದ ನಂತರ ಸಭಿಕರೆಲ್ಲರೂ ಏಕಮತದಿಂದ ಮಂಜೂರು ಮಾಡಿದರು. ಈ ವಿಷಯ ದೇಶಹಿತೈಷಿಗಳ ಅಭಿಪ್ರಾಯ ತಿಳಿದು ಈ ತಾರೀಖು ೬ರಲ್ಲಿ ಪುನಃ ಸಭೆ ಸೇರುವಂತೆ ಏರ್ಪಾಡಾಯಿತು.

ತರುವಾಯ ಅಧ್ಯಕ್ಷರಿಗೆ ವಂದಿಸಿ ಮೀಟಿಂಗನ್ನು ಮುಕ್ತಾಯಮಾಡಿದರು. ಐಯ್ಯಪ್ಪ

ಬಡಜನರ ಚಿಕಿತ್ಸೆ ಸಂಘ

Red Cross Society

ಈಗ್ಗೆ ಒಂದೆರಡು ವಾರಗಳ ಹಿಂದೆ "ಕೊಡಗಿ"ನ ವಾಮನಮೂರ್ತಿಯವರದೊಂದು ಸ್ವಾರಸ್ಯವಾಗಿ ಕಟಿಸಲ್ಪಟ್ಟಿದ್ದಿತು. ಕೊಡಗು ದೇಶದಲ್ಲಿ ಇಂತಹ ಒಂದು ಸಂಘವನ್ನು ಏರ್ಪಡಿಸಿ ಬಡಜನರಿಗೆ ಸಹಾಯ ಮಾಡಲು ಹೊರಟಿರುವುದು ಬಲು ಶ್ಲಾಘನೀಯವಾದುದು. ಸರಿ, ಪ್ರಾಚೀನಕಾಲದಲ್ಲಿ ಇಂತಹ ಸಂಘಗಳಿದ್ದಿವಾದರೂ ಪ್ರತಿಯೊಬ್ಬ ಸಭ್ಯ ಗೃಹಸ್ಥನೂ ಈ ಸಂಘದವರ ಕೆಲಸಗಳನ್ನು ಮಾಡುತ್ತಿದ್ದನು. ಹಾಗೆಂದಲೇ ಇಂತಹ ಸಂಘಗಳ ಆವಶ್ಯಕತೆಯು ಎಲ್ಲಿ ಉಳಿಯಿತು? ಆದರೆ ಬರಬರುತ್ತ ಇಂತಹ ಉದಾರ ಬುದ್ಧಿಯೂ ಪರೋಪಕಾರದೃಷ್ಟಿಯೂ ಜನಸಾಮಾನ್ಯದಲ್ಲಿ ಕಡಿಮೆಯಾದನಂತರ ಇಂತಹ ಸಂಘಗಳ ಏರ್ಪಾಡು ಬೇಕಾಯಿತು. ಆದುದರಿಂದ ಇಂತಹ ಸಂಘಗಳನ್ನು ಪ್ರೋತ್ಸಾಹಿಸಬೇಕಾದುದೇ ನಮ್ಮ ಕರ್ತವ್ಯ.

ಬಡಬಗ್ಗರ ಪ್ರಯೋಜನಾರ್ಥವಾಗಿ ಇದೇ ಸಂಘದವರು ಒಂದು ಯಂತ್ರವನ್ನಿಟ್ಟು ಮಾಡಬಹುದು ಎಂದು ಅವರಿಗೆ ತಿಳಿಸಿದೆನು. ಇದು ನಿಜವಾಗಿಯೂ ಸ್ತೋತ್ರಾರ್ಹವಾದುದು. ಆದರೆ ಈ ಯಂತ್ರಕ್ಕೆ ಹೇಗೆಂದರೂ ಹತ್ತಾರು ರೂಪಾಯಿಗಳವರೆಗೆ ಖರ್ಚಾಗಬಹುದಲ್ಲವೆ? ಮೊದಲೇ ಧನಸಹಾಯವಿಲ್ಲವೆಂದೂ, ಬಂಡವಾಳವು ಕಡಿಮೆಯೆಂದೂ ಹೇಳಿಕೊಳ್ಳುತ್ತಿರುವ ಈ ಸಂಘವು ಇದಕ್ಕೆ ಹಾಕುವ ಖರ್ಚನ್ನು ಉಳಿಸಿಕೊಳ್ಳಬಾರದೆ? ಕೊಡಗು ದೇಶದಲ್ಲಿ ಈಗ ಹತ್ತಾರು [illegible] ! [illegible] ಔಷಧಗಳನ್ನು ಮಾಡಿಸಿ [illegible] ಸುಲಭವಾಗಿ ಸಿಗಬಹುದಲ್ಲ? ಇದು ಬಂಡವಾಳವಿಲ್ಲವೆಂದು ಹೇಳುವ ಸಮಯದಲ್ಲಿ ಖರ್ಚು ಕಡಿಮೆಮಾಡಿದಂತಾದುದಲ್ಲದೆ ಬಡಬಗ್ಗರಿಗೆ ಇನ್ನಷ್ಟು ಪ್ರಯೋಜನವಾಯಿತಲ್ಲವೆ?

ನಮ್ಮ ದೇಶದ ಹಣವು ನಮ್ಮಲ್ಲೇ ಉಳಿದು ನಮ್ಮ ಜನರಿಗೆ ಕೆಲಸಕ್ಕೆ ದಾರಿಮಾಡಿ ಕೊಟ್ಟರೆ ಎಷ್ಟರಮಟ್ಟಿಗೆ ಸಹಾಯವಾದಂತಾಗುವುದಲ್ಲದೆ ಪರದೇಶದ ವಸ್ತುಗಳನ್ನು ತರಿಸಿ ನಮ್ಮ ದ್ರವ್ಯವನ್ನು ನೀರಿನಂತೆ ಆ ದೇಶಗಳಿಗೆ ಚೆಲ್ಲುವುದರಲ್ಲಿ ಪ್ರಯೋಜನವಿಲ್ಲವೆಂದು ಖಡಿತವಾಗಿ ಹೇಳುವೆನು. ಪರದೇಶದವರಿಗೆ ಆ ದುಡ್ಡನ್ನು ಕೊಡುವುದರಿಂದ ನಮ್ಮ ಬಡವರ ಬಾಯಿಗೆ ಕುಕ್ಕೆ ಕಟ್ಟಿದಂತಾಗುವುದು. ಆದ್ದರಿಂದ ಬಂದ ವಿಧದಲ್ಲಿ ಸಂಘದವರು ಸ್ವದೇಶದ ಉಪಯೋಗಾರ್ಥವಾಗಿ ಮಾಡುವ ಕೆಲಸವು ಎನ್ನೆಂದು ತರದಲ್ಲಿ ಕೆಡುಕೆನ್ನಿಸುವದೆ?

ಆದುದರಿಂದ ತರಕಗಳನ್ನು ಮಾಡಿ [illegible] [illegible] ಪ್ರಾಂತ್ಯಕ್ಕೊಳಗಾಗದೆ [illegible] ಸಂಪೂರ್ಣ [illegible] ಇನ್ನು ಸಂಪಾದಕರ ಅಭಿಪ್ರಾಯವೇನು?

"ಅಂಜನೇಯ"

ಮೆ| ಕಾಳಪ್ಪನವರೆ!

ಕಳೆದ ೨೦ನೇ ಸಂಚಿಕೆಯಲ್ಲಿ ಬರೆದ ಲೇಖನವನ್ನು ಓದುವಗತಿಯು ನನಗೆ ದೊರೆಯಿತು. ಅವನ್ನು ನೀವು ಬಹಳ ಆತುರದಲ್ಲಿ ಬರೆದಂತೆ ತೋರುತ್ತೆ.

ನಿಮ್ಮ ಲೇಖದಿಂದ ಕೆಲವು ಅಸಮಾಧಾನವನ್ನುಂಟುಮಾಡುವ ಅರ್ಥಗಳು ಉತ್ಪನ್ನವಾಗುವಂತಿವೆ. "ಮುಂದಿಗಳ ಇಚ್ಛೆಗನುಸಾರವಾ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮತ್ತು ಅಸಿಸ್ಟೆಂಟ್ ಸುಪರಿಂಟೆಂಡೆಂಟರ ಉದ್ಯೋಗ (ದೇಶೀಯರಿಗೆ) ದೊರಕಿದ್ದಕ್ಕಾಗಿ" ನಾವು ನಮ್ಮ ವಿಶ್ವಾಸವನ್ನು ಮೆ|| ಸೂಟರವರಿಗೆ ತೋರಿಸಬೇಕು ಎನ್ನುವ ಇಚ್ಛೆಗನುಸಾರವಾಗಿರುವ [illegible]. ಸೂಟರವರ ದಯೆಯಿಂದಲೂ ಮೇಲೆ ಹೇಳಿದ ಪದವಿಗಳನ್ನು ಎರಡು ಅಯೋಗ್ಯರಾದ ಮನುಷ್ಯರ ತಲೆಯ ಮೇಲೆ ಧರ್ಮಾರ್ಥವಾಗಿ ಹೊರಿಸಿದ್ದನ್ನು ವಿವರಿಸುವಂತೆ ಹೇಳುವಿರಲ್ಲ! ಹೀಗೆ ತಮ್ಮ ತಮ್ಮ ಬೆಲೆಗಳನ್ನೂ ಅರಿತುಕೊಳ್ಳದೆ ಬೈದಾಡುವುದಕ್ಕೆ ವೃತ್ತಾಂತಪತ್ರಿಕೆಗಳೇ ಆಗಬೇಕೆ?

ನಿಮ್ಮ ಲೇಖನವನ್ನು ಓದುವಾಗ ನಿಮ್ಮ ಇಂದಿನ ಯಲ್ಲಿರುವ [illegible] ಕಟ್ಟಿಸಿದ ಗೋರತು ನಮ್ಮ ದೇಶಕ್ಕೆ ಬೇಕಾಗಿಲ್ಲವೆಂದು ಯೋಚನೆಯಾಗುತ್ತೆ. ಮಡಿಕೇರಿಯಲ್ಲಿ ದೊಡ್ಡ ದೊಡ್ಡ ಸಭೆ ಸೇರಲಿಕ್ಕೆ ನಿಮಗೆ ಸ್ಥಳವೇ ಇಲ್ಲವೇ? ಬೋರ್ಡ್ ಗ್ರೌಂಡ್ ಮತ್ತು ಮೇನ್ಸ್ ಕಾಂಪೌಂಡಿಗೆ ಏನಾಗಿದೆ? ಸಭೆ ಸೇರಲಿಕ್ಕೆ ಮನೆಯೇ ಬೇಕಾದಲ್ಲಿ, ದೇಶದ ಬೇರೆ ಬೇರೆ ಕಡೆಗಳಲ್ಲಿ ಇನ್ನು ಮುಂದಕ್ಕೆ ಸಭೆ ಸೇರಬೇಕಾಗಬಂದಲ್ಲಿ, ಅಲ್ಲಲ್ಲಿ ಒಂದೊಂದು ಮನೆಯನ್ನು ಕಟ್ಟಿಸುವವರ್ಯಾರು?

ಇಂಥಾ ಕೆಲಸಗಳಿಗೆ ಹಣವು ಬಹಳ ಸುಲಭದಲ್ಲಿ ಉತ್ಪತ್ತಿಯಾಗುತ್ತದೆಂಬ ಭರವಸೆಯನ್ನು ನೀವು ವೃಥಾ ಕರಿಸಿದ ಸಂಗತಿ ಕೊಡಗು ದೇಶದ ಸ್ಥಿತಿಗತಿಗಳನ್ನು ಅರಿಯದವರಿಗೇನೋ ಅನೇಕ ತರಗಳಲ್ಲಿ ಸಂತೋಷವನ್ನುಂಟುಮಾಡಬಹುದು. ಸ್ವಲ್ಪ ತಿಳಿದವರು, ನಿಮ್ಮ ಅಭಿಪ್ರಾಯವನ್ನು ನೆನಸಿಕೊಂಡು ಬಹಳ ತರದಲ್ಲಿ ನೊಂದಿರಬಹುದು. ಈ ಟೆಂಪಲ್ ಹಾಲ್ ಕಟ್ಟುವಣಿಗೆ ಆರೇಳುಸಾವಿರ ರೂಪಾಯಿ ಖರ್ಚುಮಾಡುವುದಾದರೆ, ಕೊಡಗಿನ ಸ್ವಸಂಪಾದಕ ಗಂಡಸಿನ ತಲಾ ಒಂದರ ಎಷ್ಟು ಬಿದ್ದಂತಾಯಿತೆಂದು ಯೋಚಿಸಿದಿರಾ! "ಎಂತೆಂತಹ ಅಪ್ರಯೋಜನಕರವಾದ ಕೆಲಸಗಳಿಗೆ ಜನರು ದ್ರವ್ಯಸಹಾಯ ಮಾಡಿ" ರುತ್ತಾರೆಂದು ನೀವು ತೋರಿಸಿದ್ದ ಪಕ್ಷದಲ್ಲಿ, ನಿಮ್ಮ ಅಭಿಪ್ರಾಯವು ನಮ್ಮೆಲ್ಲರಿಗೂ ಪೂರ್ತಿ ತಿಳುವಳಿಕೆಯನ್ನೀಯುತ್ತಿತ್ತು. ಅಲ್ಲದೆಯೂ, ಸೂಟರ್‌ಮಹಲ್ ಯಾವ ತರದಲ್ಲಿ 'ಅಪ್ರಯೋಜನಕರ'ವಾದದ್ದಲ್ಲವೆಂಬುದನ್ನು ಸ್ವಲ್ಪ ತಿಳಿಸುವಿರಾ! ಆರೇಳು ಸಾವಿರ ರೂಪಾಯಿಗಳನ್ನು ಇನ್ನು ಕಮ್ಮಿತರದಲ್ಲಿ, ಇಷ್ಟು ಚಿಕ್ಕ ದೇಶದಲ್ಲಿ ನೀವು ಯೋಚಿಸಿರುವಾಗ್ಗೆ ಒಂದು ತಪ್ಪನ್ನು ಮಾಡಿದಂತೆ ತೋರುತ್ತೆ. ಇದರ ಜೊತೆಯಲ್ಲಿ ನೀವು ದೇಶದ ಸ್ಥಿತಿಯನ್ನು ಸಹ ಯೋಚಿಸಬೇಕಾಗಿತ್ತಲ್ಲವೇ? ಇದಕ್ಕಿಂತಲೂ ಒಳ್ಳೆಯ ಕೆಲಸವು ಈಗ ಕೊಡಗಿನಲ್ಲಿ ಸಧ್ಯಕ್ಕೆ ಇಲ್ಲವೇ? ಇಷ್ಟರಲ್ಲಿ, ಇಂಥ ಚಂದಾ ವಸೂಲಿಯಿಂದ ಸಹಾಯವನ್ನೂ, [illegible] ಇಲ್ಲದ [illegible]!

[illegible] ಆದರ ಮಧ್ಯದಲ್ಲಿ ನಾವೂ ಬರಬೇಕೆಂಬ ಗಾದೆಯಂತೆ, ಎಲ್ಲರೂ ಮಾಡುತ್ತಾರೆಂದು ನಾವೂ ಮಾಡಿ ಬಿಡುವ ಯೋಚನೆಯನ್ನು ಮಾಡುವಾಗ್ಗೆ ಸ್ವಲ್ಪ ಹಿಂದೂ ಮುಂದೂ ನೋಡುವದು ಒಳ್ಳೆಯದು. ಇಂಥ ಕೆಲಸಗಳನ್ನು ಮಾಡಲು ಯೋಚಿಸುವಾಗ್ಗೆ ಸ್ಥಳ ಮತ್ತು ಸಮಯವನ್ನು ಯೋಚಿಸಬೇಕಾಗಿದೆ. ಇಂಥ ಏರ್ಪಾಡುಗಳು ಈ ದೇಶದಲ್ಲಿ ಈಗ ಸರಿಯಿಲ್ಲ. ಮೆ|| ಸೂಟರವರ ಹೆಸರನ್ನು ಇಲ್ಲಿ ನಡಬೇಕೆಂದು ನೀವೂ ಮತ್ತು ನಿಮ್ಮ ಸಂಗಡಿಗರು ಇಚ್ಛಿಸುವಲ್ಲಿ ಅದನ್ನು ಎಲ್ಲಿ ಮತ್ತು ಹೇಗೆ ನೆಡಬೇಕೆಂಬುದನ್ನು ಮೊದಲು ಯೋಚಿಸಿ ಮೊದಲು [illegible] ಜಾಗದಲ್ಲಿ ಅದನ್ನು ನಟ್ಟುಬಿಟ್ಟರೆ ಕಡಗೆ ಅದರ ಕೆಳಗೆ ಇರುವ ಬಂಡೆ ಕಲ್ಲಿನ ಬಿಸಿಯಿಂದ ಅದು ಮೊಳೆಯದೆ ನಾಶವಾಗಬಹುದು. ಆದ್ದರಿಂದ ಅಂಥ ಜಾಗವನ್ನು ಚೆನ್ನಾಗಿ ನೋಡಿ, ಅಂಥ ಜಾಗವೆ ನಮ್ಮ ತಕ್ಷಣ [illegible] ಇಷ್ಟ ಅವಶ್ಯಕತೆಯನ್ನು ನೆರವೇರಿ[illegible] ಗೆ [illegible] ಕೊಡಗಿಗೆ ಬೇಕಾಗಿದ್ದರೆ, ಈ ಹಣವನ್ನು ಒಂದು ನೇಟಿವ್ ಕಾಲೇಜಿಗಾದರೂ ಕೊಟ್ಟು ಮೆ|| ಸೂಟರವರ ಹೆಸರನ್ನು ಅಲ್ಲಿ ನಟ್ಟರೆ ಬಹಳ ಬೇಗನೆ ಮತ್ತು ಒಳ್ಳೆಯ ತೆಗುಳು ಬರಬಹುದು.

ದೇಶಿಯರಿಗೆ ದೊಡ್ಡ ದೊಡ್ಡ ಉದ್ಯೋಗಗಳನ್ನು ಕೊಡುವುದೂ ಮತ್ತು ಕೌನ್ಸಿಲನ್ನು ಕೊಡುವುದೂ ಮೆ|| ಸೂಟರವರು ಹೊಸದಾಗಿ ಉಂಟುಮಾಡಿದವುಗಳೆಂದು ನೀವು ಬಹಳ ದೃಢವಾಗಿ ನಂಬಿದಂತೆ ಕಂಡುಬರುತ್ತೆ. ಹಾಗಾದ ಪಕ್ಷಕ್ಕೆ ಇದೇತರದ ಬೇರೆ ಹೊಸ ಸಂಗತಿಗಳನ್ನು ಮೆ|| ಸೂಟರವರು ಇನ್ನು ಈ ದೇಶಕ್ಕೆ ತರಬಹುದು. ಅದು ಯಾವುದೆಂದರೆ — ಈಗ ಮಾಮೂಲಿಯಾಗಿ ರೈತರಾಗಲಿ ಅಥವ ಬೇರೆ ಯಾವ ಸಂಗಡವರೇ ಆಗಲಿ, ಊರು ಬಿಟ್ಟು ಹೊರಗೆ ಹೋಗುವವರಿಗೆ ಊಟ ಕೊಡುವದು ಮತ್ತು ಜ್ಞಾಪಕಾರ್ಥವಾಗಿ ಏನಾದರೂ ಮಾಡುವ ಅಭ್ಯಾಸವು ನಡೆದು ಬಂದಿದೆ. ಆ ಸ್ಥಿರದ ಮೆ|| ಸೂಟರವರು ಮೇಲೆ ಹೇಳಿದ ಹೊಸ ವಸ್ತುಗಳನ್ನು ಕೊಡಗಿಗೆ ತಂದದಾಗೆ, ಅವರ ಜ್ಞಾಪಕಾರ್ಥವಾಗಿ ಏನು ಮಾಡಲು, ಮಾಡಿರುವ ಏರ್ಪಾಡುಗಳನ್ನು ಅಂಗೀಕರಿಸದೆ, ಅವರೇ ನಮ್ಮ ದೇಶಕ್ಕಾಗಿ ಒಂದು ಒಳ್ಳೆ ಏರ್ಪಾಡನ್ನು ಮಾಡಿ ಹೋದರೆ, ಅವರ ಹೆಸರು ಮತ್ತಷ್ಟು ಚೆನ್ನಾಗಿ ಇಲ್ಲಿ ನೆಲೆಗೊಂಡು ಜನರು ಅವರನ್ನು ಮತ್ತಷ್ಟು ಕೊಂಡಾಡುವರಲ್ಲದೆ ಅವರು ಲೋಕಕ್ಕೆ ಒಂದು ಮೇಲು ಸಂಗತಿಯನ್ನು ಹಾಕಿ ಕೊಟ್ಟಂತಾಗಿ, ನಿಮ್ಮ ಅಭಿಪ್ರಾಯದಂತಹ ಮುನಸೋಲುವ ಅಭಿಪ್ರಾಯಗಳಿಗೆ ಆಸ್ಪದಗಳಿಲ್ಲದಂತಾಗುವವು.

"ಭಾರತ ಯುದ್ಧದಲ್ಲಿ ಪಾಂಡವರ ಜಯಕ್ಕೆ ಕಾರಣಗಳಾವವು? ದ್ರೌಪದಿಯ ಪಾತಿವ್ರತ್ಯವೇ? ಕೃಷ್ಣನ ಸಂಧಾನವೇ? ಧರ್ಮರಾಯನ ಧರ್ಮವೇ?" ಧರ್ಮರಾಯನ ಧರ್ಮವೆಂದು ನೀವು ಹೇಳುತ್ತೀರಿ. ಆದರೆ ಕೌರವರ ಅಧರ್ಮವೇತಕ್ಕಾಗಬಾರದು?

ಹೀಗೆಯೆ, ಮೆ|| ಸೂಟರವರು ದಯೆಯಿಂದ ಅವರು ದೇಶಕ್ಕೆ ಒಳ್ಳೆಯದನ್ನು ಮಾಡಿದರೆಂದು ನೀವು ಹೇಳುತ್ತೀರಿ. ಅವರು ಈ ಒಳ್ಳೆಯ ಕೆಲಸಗಳನ್ನು ಮಾಡಲು ಆಸ್ಪದವನ್ನು ದೇಶವು ಯಾಕೆ ಕೊಟ್ಟಿರಬಾರದು? ಹೀಗೆ ಒಳ್ಳೆ ಕೆಲಸಗಳನ್ನು ಮಾಡಲು ಆಸ್ಪದ ಕೊಟ್ಟ ದೇಶದ ಮೇಲೆ ಕರುಣೆಯಿಟ್ಟು (ಅಲ್ಲ ಕೃತಜ್ಞತೆಯೊ?) ಮೆ|| ಸೂಟರವರು, ಅವರು ಇಲ್ಲಿಂದ ಹೋಗುವ ಕಾಲದಲ್ಲಿ, ಅವರ ಸ್ವಂತ ಖರ್ಚಿನಿಂದ ನಮ್ಮ ದೇಶಕ್ಕೆ ತಕ್ಕಷ್ಟು ಹೆಚ್ಚಿನ ಆವಶ್ಯವಿರುವ ಏನಾದರೂ ಒಂದನ್ನು ಸ್ಥಾಪಿಸಿ, ಇಲ್ಲಿಯ ಜನರು ಅವರ ಜ್ಞಾಪಕಾರ್ಥವಾಗಿ ಏನನ್ನಾದರೂ ಏರ್ಪಾಡುಮಾಡಿದರೆ, ಅದನ್ನು ತಿರಸ್ಕರಿಸಿದರೆ, ಅವರು ನಿಜವಾಗಿಯೂ ನಮ್ಮ ದೇಶದ ಹಿತವನ್ನು ಯೋಚಿಸುತ್ತಿದ್ದರೆಂಬುದು ಸ್ಥಾಪಿಸಿದಂತಾಗುವುದಲ್ಲದೆ ನಮ್ಮ ದೇಶಿಯರ ಪ್ರೀತಿಗೆ ಮತ್ತಷ್ಟು ಪಾತ್ರರಾಗುವರು.

ಇವರು ಮಾಡಿದ ಒಳ್ಳೆ ಕೆಲಸಕ್ಕಾಗಿ ಇವರಿಗೆ ಊಟಕೊಡಲು ಮಾಡಿದ ಏರ್ಪಾಡು ನಾಚಿಕೆಕೇಡಿನ ಸಂಗತಿ ಮಾತ್ರವೇ ಅಲ್ಲ. ನಮ್ಮ ಮೂಢತನವನ್ನು ಸಹ ಹೊರಪಡಿಸುವಂತಾಗುತ್ತೆ.

ಐ ಪಿ ಯಂ

ನೆಲಜಿಗಾ ಸ್ರಮದ ದವಸದ ಬಂಡಾರ

ಇದೇ ತಾರೀಖು ೪ ನೇ ಆದಿತ್ಯವಾರದ ದಿನ ಸದರಿ ಸಂಘದ ಮೀಟಿಂಗೊಂದು ನಡಿಸಬೇಕೆಂದು ಸಂಘದ ಪ್ರೆಸಿಡೆಂಟರು ಗೊತ್ತುಮಾಡಿದರು ಅದೇ ಮೇರೆಗೆ ೫ ಮೆಂಬರುಗಳು ಬೇರೆ ಸದಸ್ಯರುಗಳು ಬಂದು ಸೇರಿದರು ಇನ್ನೇನು ಮೀಟಿಂಗಿಗೆ ಪ್ರಾರಂಭಿಸುವದೇ ಆದರೆ ಪ್ರೆಸಿಡೆಂಟರು ಎಲ್ಲಿ; ಈಗ ಬಂದಾರು ಆಗ ಬಂದಾರು ಎಂದು ಇದಿರು ನೋಡುತ್ತಾ, ನೋಟಗಳನ್ನು ಅಟ್ಟುತ್ತಾ ಐದು ಗಂಟೆಗಳವರೆಗೆ ಭದ್ರವಾಗಿ ಕಾಳತರು. ಆದರೂ ಅಧ್ಯಕ್ಷರ ಸುಳವೇ ಇಲ್ಲ. ಮೆಂಬರುಗಳಿಗೇನು ಮನೆಯಲ್ಲೇನು ಕೆಲಸವಿಲ್ಲವೇ; ಅಥವಾ ಮನೆ ಕೆಲಸದಲ್ಲಿ ಬೇಸರ ಹುಟ್ಟಿತ್ತೆ? ಹ್ಯಾಗೂ ಮನೆ ಕೆಲಸವೂ ಇಲ್ಲ. ಸಂಗದ ಗೊತ್ತಾದ ಕೆಲಸವೂ ನಿಷ್ಪ್ರಯೋಜನ

ನಮ್ಮೊಳಗೆ ಗೊತ್ತಾದ ಪ್ರಕಾರ ಕೆಲವು ದರಕಾಸ್ತು ದಾರರಿಗೆ ಭತ್ತವನ್ನು ಮಂಜೂರ್ ಮಾಡಿದೆವು. ಹಾಗೂ ಮೀಟಿಂಗು ಪ್ರೆಸಿಡೆಂಟರು ಇಲ್ಲದೆ ಮುಕ್ತಾಯವಾಯಿತು. ಅಧ್ಯಕ್ಷ ಮಹಾಶಯರುಗಳು ಮಾರಣೆ ದಿನ ಬಂದು ಮೆಂಬರುಗಳಿಗೆ ತಿಳಿಸಿದರೆ ಮೀಟಿಂಗು ಮಾಡಿ ತಮ್ಮ ಇಷ್ಟಾನುಸಾರ ಸಂಘದ ನಿಯಮಗಳಿಗೆ ವಿರೋಧವಾಗಿ ನಡೆದವರಿಗೂ ಸಹ ಭತ್ತವನ್ನು ಮಂಜೂರ್ ಮಾಡಿದ್ದಾಗಿ ತಿಳಿಯುತ್ತೇನೆ ಸರಿ ಹಾಗೂ ಹೀಗೂ ಕಮಿಟಿ ಮೆಂಬರುಗಳು ಅವಶ್ಯಕತೆಯೂ ಸಂಘಕ್ಕೆ ಇಲ್ಲದಂತಾಯಿತ್ತೇ, ಜನ ಸಮಾನ್ಯವೂ ನಿರಂಕುಶ ಪ್ರಭುತ್ವವನ್ನು ಆದಷ್ಟು ದೂರು ಅಟ್ಟಬೇಕೆಂದಿರುವಾಗ ನಮ್ಮ ಅಧ್ಯಕ್ಷ ಮಹಾಶಯರುಗಳಿಗೇನು ಅದರಲ್ಲಿ ಅಷ್ಟೊಂದು ಅಭಿರುಚಿ,

ಸಂಘವನ

F. R SALE.

One chestnut Gelding about 14½ hands belonging to Dr T. Greenaway Oaklands Siddapur suitable for riding is to be sold for 250 cash or quick offer; would trap if trained, believed absolutely sound Owner has purchased car and has no further use for a Horse.

Apply sharp to the undersigned before the 30th instant.

V. Venkataswamy Naidu,
6-11-23. Assistant to C M O
2—1 POLLIBETTA

The Saraswathi Publishing Company.

ಶಾರದಾಗ್ರಂಥಮಾಲಾ.

ಈ ಗ್ರಂಥಮಾಲೆಯಲ್ಲಿ ಭಾರತಮಹಿಳೆಯರ ಇಹಪರ ವಿಜಯಾಭ್ಯುದಯಗಳನ್ನು ಬೋಧಿಸತಕ್ಕ ಗ್ರಂಥಗಳು ಆಗಾಗ್ಯೆ ಪ್ರಕಟಿಸಲ್ಪಡುವವು. ಇದುವರೆವಿಗೆ ಪ್ರಕಟವಾಗಿರುವ ಗ್ರಂಥಗಳು —

		ರೂ.	ಆ.	ಪೈ.
1.	ಪ್ರಿಯಂವದೆ (ವರದಕ್ಷಿಣೆಯಿಂದಾಗುವ ಕಷ್ಟನಷ್ಟಗಳು)	0	6	0
2.	ಸ್ನೇಹಲತೆ (ವಂಗಕನ್ಯೆಯ ಚರಿತ್ರೆ)	0	10	0
3.	ಸೌಭಾಗ್ಯವತಿ (ಹಿಂದೂವಿತಂತುವಿನ ಶೋಚನೀಯಾವಸ್ಥೆ)	0	12	0
4.	ನಿರ್ಮಲೆ (ಸಾಮಾಜಿಕ ಸುಧಾರಣೆಯ ನಾಟಕ)	0	8	0
5.	ಹಿಂದೂಭಾಗ್ಯೋದಯ (ನಾಟಕ)	0	4	0
5.	ಕೂಕನಶಾಭಂಗ (ನಾಟಕ)	0	4	0
6	ಹುಡುಗಲು ಹುಡುಗಿಯರು (ನಾಟಕ)	0	4	0

ಈ ಎಲ್ಲಾ ಕಾದಂಬರಿಗಳನ್ನೂ ಒಟ್ಟಾಗಿ ತರಿಸಿಕೊಳ್ಳುವವರಿಗೆ ಒಟ್ಟು ರೂಪಾಯಿ 2—12—0 ಗೆ ವಿ. ಪಿ. ಹಾಸಲು ಇಲ್ಲದೆ ಕೊಡಲ್ಪಡುವುದು. ಪ್ರಿಂಟಿನಲ್ಲಿರತಕ್ಕ ಗ್ರಂಥಗಳು—ಲಲಿತ.ಕೋಣೆ.ಪದ್ಮಿನಿ.

ಸರಸ್ವತಿ.

ಉತ್ತಮವರ್ಗದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ.

ನಾಲ್ಕನೆಯ ಸಂಪುಟದ ಪ್ರಥಮ ಸಂಚಿಕೆಯು ಈ ತಿಂಗಳ ಮೊದಲನೇ ತಾರೀಖಿನಿಂದ ಪ್ರಾರಂಭವಾಗಿರುವುದು. ಇದರಲ್ಲಿ ಬಾಲಕ ಬಾಲಕಿಯರಿಗೂ ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಸ್ವಾರಸ್ಯವಾದ ನಾಟಕ ಕಾದಂಬರಿಗಳೂ ಮತ್ತು ಅನೇಕ ಉತ್ತಮ ಲೇಖನಗಳೂ ಪ್ರಕಟಿಸಲ್ಪಡುವವು. ಹೊಸದಾಗಿ ಚಂದಾದಾರರಾಗತಕ್ಕವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸಿದ್ದರೆ ಶಾರದಾ ಗ್ರಂಥಮಾಲೆಯ ಪ್ರಕಟನೆಯಲ್ಲಿ ಒಂದು ಪುಸ್ತಕವು ಬಹುಮಾನವಾಗಿ ಕೊಡಲ್ಪಡುವುದು ಇಷ್ಟಪಟ್ಟವರಿಗೆ ಮಾದರಿ ಸಂಚಿಕೆಯು ಉಚಿತವಾಗಿ ಕಳುಹಿಸಲ್ಪಡುವುದು.

ವಾರ್ಷಿಕ ಚಂದಾ ರೂಪಾಯಿ 3—0—0 ಮಾತ್ರ.

SARASWATHI PUBLISHINC Co.,
Post Box No. 57. Bangalore City.

ಪ್ರಸಿದ್ಧಪತ್ರಿಕೆ.

For Sale ' ಮಾರಾಟಕ್ಕೆ !!

ಈ ಮೂಲಕ ಮಹನೀಯರಿಗೆ ತಿಳಿಯಪಡಿಸುವುದೇನೆಂದರೆ—ಗೋಣಿಕೊಪ್ಪಲಿನಿಂದ ಪೊನ್ನಪೇಟೆಕ್ಕೆ ಹೋಗುವ ಪಬ್ಲಿಕ್ ರಸ್ತೆ ಬಾಜು ಎಡಭಾಗ ಗೋಣಿಕೊಪ್ಪಲು ಪೇಟೆ ಒಳ ಇರತಕ್ಕ ಈ ಕೆಳಗೆ ವಿವರಿಸಿರುವ ನನ್ನ ಸ್ವಯಾರ್ಜಿತದ ಸ್ಥಿರ ಆಸ್ತಿಗಳನ್ನು ಬಹು ಕಮ್ಮಿ ಕ್ರಯ 4,500 ರೂಪಾಯಿಗಳಿಗೆ ವಿಕ್ರಯಿಸಲು ಇಷ್ಟಪಟ್ಟಿರುವ ನಿಮಿತ್ತ, ಖಾಯಿಸ್‌ದಾರರು ಖುದ್ದು ಸೊತ್ತುಗಳನ್ನು ಯಾವ ಕಾಲದಲ್ಲಿಯಾದರೂ ಅಜಮಾಯಿಸಿಕೆಯಿಂದ ಹೆಚ್ಚಿನ ಸಂಗತಿ ತಿಳಿಯಬೇಕಾದಲ್ಲು ಕೆಳಗಿನ ವಿಳಾಸಕ್ಕೆ ಬರೆದು ಕೊಳ್ಳತಕ್ಕದ್ದು.

(1) 300 ಭಟ್ಟಿ ಸಾಗುಭೂಮಿ, ಸರಾಸರಿ ಉತ್ಪತ್ತಿ 150 ಭಟ್ಟಿ ಭತ್ತ.

(2) ಸುಮಾರು 500 ಗಿಡಗಳಿರುವ ಕಿತ್ತಳೆತೋಟ ಸರಾಸರಿ ಉತ್ಪತ್ತಿ 100 ರಿಂದ 150 ರೂಪಾಯಿಗಳ ವರಿವಿಗೆ.

(3) ಮಂಗಳೂರು ಹಂಚು ಹಾಕಿದ 5 ಅಂಕಣದ ಒಂದು ಮಹಡಿ ಮನೆ. ಸರಾಸರಿ ಬಾಡಿಗೆ 100 ರೂಪಾಯಿಗಳು.

M. K. ABDUL KARIM,
3-3 Genl. Merchant, Gonicopal.

Old Student's Association Magazine.
CENTRAL HIGH SCHOOL, MERCARA.

Editor: Yearly subscription
Mr. B. S. Kushalappa B.A., Re. 1—0—0

Will be published under the distinguished patronage of C. A. Souter Esq., I.C S. Commissioner of Coorg, and K. Chengappa Esq., R. S—in the first week of November,

Among other articles the following are the few:

"Fore word" by C. A Souter Esq. I C S.
"Vinayaka Chaturthi" by Mr. D. M Sidlingiah.
"The cramming school" by Mr. B. S. Kushalappa.
"A Town Hall for Coorg" by Mr. P. I. Belliappa, Editor "Kodagu
"Coorg Inscriptions" by Mr. B. N. Krishnamurthy.
"The Village School Master" by Mr A. Kalamma
"The Huthri Song" by Mr. P. Mangesh Rao, B.A , L.T.,
"The Will of God" by Mr. Anantha Rao, B.A., B.L.,
etc. etc. etc.

Best Medium for Advertisers:

Apply for rates etc , to

The Manager,
Old Students' Association Magazine,
4-3 **C. H School, Mercara**

ಕಂಬಳಿಯ ಟೋಪಿಗಳು.

ಇವುಗಳನ್ನು ಸಾಚಾ ಉಲ್ಲನ್ನಿಂದ ತಯಾರಿಸಿದೆ. ಚಳಿ, ಮಳೆ, ಹಿಮಕಾಲಗಳಲ್ಲಿ ಉಪಯೋಗಿಸುತ್ತಿದ್ದರೆ ವ್ಯಾಧಿಗಳು ಸೇರುವದಿಲ್ಲ ಬೇರೆಯವರು ಉಲ್ಲನ್ ಎಂದು ಹೇಳಿ ನೂಲಿನದನ್ನು ಕಳುಹಿಸುವರು ನಾವು ಹಾಗೆ ಮೋಸಮಾಡಲಾರೆವು. ಸಾಚಾ ಉಲ್ಲನ್ ಟೋಪಿಗಳನ್ನೇ ಕಳುಹಿಸುವೆವು. ಕ್ರಯ 1 ಕ್ಕೆ 1—8—0.

ಕ್ಷೌರಕತ್ತಿ.



ಇದನ್ನು ಇಟ್ಟುಕೊಂಡು ಕ್ಷೌರಿಕನ ಕೈಯಲ್ಲಿ ಕೊಟ್ಟು ಕೆಲಸವನ್ನು ಮಾಡಿಕೊಂಡಲ್ಲಿ ಇತರ ಶರೀರ ಸಂಬಂಧವಾದ ವ್ಯಾಧಿಗಳು ಬಾರದಂತೆ ಉರಿಯೂ ಇಲ್ಲದಂತೆ ಸುಖವಾಗಿರುವದು. ಕ್ರಯ ಕತ್ತಿ 1 ಕ್ಕೆ ರೂ. 1-12-0.

ವಿಳಾಸಮಾಡಿರಿ :—
ನೇಪಿಯರ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ. 505.
[4—4] ಪಿ ಟಿ ಮದ್ರಾಸು.

HEALTH IS WEALTH.

WANTED all to improve health strength and vitality and thus save our nation from physical degeneracy. Send half-anna stamp and get 15 specimen photographs with full particulars from

Director Physical Culture,
P.C. Basavanagudi,
BANGALORE CITY.

ಆರೋಗ್ಯ ಚಂದ್ರಿಕೆ.

ಮದ್ರಾಸ್.

ಸಂಪಾದಕರು ಡಾಕ್ಟರ್ ಯು. ರಾಮರಾವ್,
ಎಮ್. ಆರ್. ಸಿ ಯವರು.

ಆರೋಗ್ಯಚಂದ್ರಿಕೆಯು ಆರೋಗ್ಯ ಮತ್ತು ಚಿಕಿತ್ಸದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವುದಕ್ಕಾಗಿ ಏರ್ಪಡಿಸಿದ

ಒಂದು ಸಚಿತ್ರ ಮಾಸಪತ್ರಿಕೆ

ಈ ನಮ್ಮ ಮೊದಲನೇ ಸಂಚಿಕೆಯಲ್ಲಿ ಕಾಣಿಸಿರುವ ವಿಷಯಗಳು.

ಜನಾಧಿಪತ್ಯಯಗಳು—1. ಸ್ವವಿಷಯ, 2. ಆರೋಗ್ಯವೇ ಭಾಗ್ಯ. 3 ಮಲೇರಿಯಾ ಎಂಬ ಮೊರೆಜ್ವರಗಳ ನಿವಾರಣೆ, 4. ಮರುಕಳಿಸುವ ಜ್ವರ, 5. ಗರ್ಭಿಣಿಯರ ಆರೋಗ್ಯ, 6. ಎಳಮಕ್ಕಳಿಗೆ ಆಹಾರಕೊಡುವುದು, 7. ಕೂಸುಗಳಿಗೆ ಬರುವ ಸೆಳವು, ಅದರ ಲಕ್ಷಣಗಳು ಮತ್ತು ಚಿಕಿತ್ಸೆ 8. ಕೂಸು ಅಳುವುದೇಕೆ ? 9. ಕಣ್ಣುಗಳಿಗೆ ವಿಶ್ರಾಂತಿ, 10 ಪಲ್ಲುಗಳು, 11. ಕೂದಲಿನ ಪೋಷಣೆ 12. ಸಾರಾಯಿಮೇಲೆ ರೇನು ? 13 ನೊಣಗಳಿಂದಾಗುವ ಅಪಾಯಗಳು 14 ಕಾಫಿ.

ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೂಲಗು ವರ್ಷಕ್ಕೆ 1—8—0 ಬಿಡುಪತ್ರಿಕೆ ಒಂದಕ್ಕೆ 0-2-0.

ಮೇಲ್ಕಂಡ ಪತ್ರಿಕೆಯನ್ನು ಅಪೇಕ್ಷಿಸುವವರು 'ಆರೋಗ್ಯಚಂದ್ರಿಕೆ' ಗೆ ಎಂದು ಸ್ಪಷ್ಟವಾಗಿ ಬರೆದು ತಿಳಿಸಬೇಕು

ಪತ್ರವ್ಯವಹಾರ ವಿಳಾಸ— ಮೇನೇಜರ್,
ರೆಲ್ಟ್ ಅಥವಾ ಆರೋಗ್ಯ ಚಂದ್ರಿಕೆ ಆಫೀಸು
ಟಪ್ಪಾಲು ಪೆಟ್ಟಿಗೆ ನಂ. 166, 323 ತಂಬುಚೆಟ್ಟಿ ಬೀದಿ, ಮದರಾಸ್
ಏಜೆಂಟರು :—ಮ ರಾ.ರಾ ಎಸ್. ಕೆ. ಅಸ್ವರಪ್ಪ,
[12—12] ಭಾಗಮಂಡಲ, ಕೊಡಗು.

For your requirements of high grade Arms, Ammunition, Wine and Spirits,

APPLY TO:-

Mc. DOWELL & Co., Ltd.,
24—4 **MERCARA.**

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ
ಶೇರ್ ಬಂಡವಾಳ	50,000
ವಸೂಲಾದ ಶೇರ್ ಮೊಬಲಗು	6,820
ಜಮಾ ಬಂದ ಠೇವಣಾತಿ	30,649

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘನೆಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ 5 ರ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಅಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು. ಟ್ರೆಜರ್.
ಕೊಡಂದೆರ ಕುಟ್ಟಯ್ಯನವರು, ಯಂ. ಭುಜಂಗರಾವ
ರಾಯ್ ಬಹದ್ದೂರ್ ಬಿ. ಎ. ಬಿ. ಎಲ್
ಸೆಕ್ರೆಟರಿ,
ಸಿ. ಯಸ್. ವೆಂಕಪ್ಪಯ್ಯನವರು ಬಿ. ಎ. ಬಿ. ಎಲ್.
ತಾರೀಖು 1—9—23,

Printed & Published by D.S. Krishnaswamiengar Proprietor, at Sreenivas Electric Press, Mysore "for Kodagu "Ltd., Mercara—16-11-1923

"Kodagu Office, Mercara"
Reg. No. M. 1550.

ಕೊಡಗು.

ಸತ್ಯೇನ ಧೂತದಯಯಾ ವಿದ್ಯಾನೀತಿ ಪ್ರಯತ್ನತಃ । ಐಕಮತ್ಯೇನ ಸರ್ವೇಷಾಂ ಸುಸ್ಥಿರಾ ರಾಜ್ಯಸಂಪದಃ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

'ಎಡಿಟರ್ ಸಂಪ್ಯಂಡ ಐ. ಬೆಳ್ಯಪ್ಪ'

ಪ್ರಟ ೩] ಕೊಡಗು, ಸ್ಕ ೧೯೨೩ ನೇ ಇಸವಿ ನವಂಬರು ತಾರೀಖು ೨೩ ನೆಯ ಶುಕ್ರವಾರ. [ಸಂಚಿಕೆ ೨೬

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನಡಾ ಪ್ರಿಂಟಿಂಗ್ ಂಗ್ ಮತ್ತು ಬೈಂಡಿಂಗ್ ಕೆಲಸ ಯಾವದೇ ಊ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ಜಾಗ್ರತೆಯಾಗಿಯೂ ಸುಲಭಬೆಲೆಗೂ ಮಾಡಿ .ತ್ತೇವೆ.

rinivas Electric Press,
MYSORE.

ಜೀವವಿಮೆ

ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಯ ಯಜ ನ ಮೃತಪಟ್ಟರೆ ಉಂಟಾಗುಬಹುದಾದ ತೊಂದರೆಗ ನಿವಾರಿಸುವುದೇ ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬ ಜೀವನಾ ಕ್ಕ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ.

ಅತಿ ಕಡಿಮೆ ದರದಲ್ಲಿ ಯಾವ ಲೋಪವೂ ಬಾರ ಕ್ಕಿಸ್ತದಲ್ಲಿ ಹಣವನ್ನು ಒದಗಿಸುವ ಇಷ್ಟಯಾದರೂ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪೆನಿ ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ವಾಗಿ ಹಣವನ್ನು ಒದಗಿಸಿ ಸ್ವಿರಾಸ್ತಿಗಳನ್ನು ಕೊಂಡು ಪ್ಪ ದೇಶದ ಆರ್ಥಿಕ ಸಂಪತ್ತನ್ನು (Economic ...tion) ವೃದ್ಧಿಗೊಳಿಸುವ ಸಂಸ್ಥೆ ಯಾದರೂ ಇ ದೆ.

ಲೈಫ್ ಇನ್ಶೂರೆನ್ಸ್ ಆಕ್ಟಿನ ಮೇರೆ ಇಂಡಿಯಾ ಗವ ಂಟ ಸೆಕ್ಯೂರಿಟಿಗಾಗಿ ಕಟ್ಟಬೇಕಾದ 12 ಲಕ್ಷ ರೂಪಾ ಸೆಕ್ಯೂರಿಟಿಗಾಗಿಯೂ ಮೈಸೂರು ಗವರ್ನಮೆಂಟ ್ರಟಿಗೆ ಕಟ್ಟಬೇಕಾದ 1 ಲಕ್ಷ ರೂಪಾಯಿ ... ಯೂ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಂಕಿನ ಮದ್ರಾಸಿನ ಶಾಖೆಯಲ್ಲಿ 1 ಲಕ್ಷ ಗವರ್ ಆಫ್ ಇಂಡಿಯ ಸೆಕ್ಯೂರಿಟಿಯನ್ನು ಅರ್ಧಲಕ್ಷ ...ಸೂರು ಸೆಕ್ಯೂರಿಟಿಯನ್ನು ಡಿಪಾಜಿಟಾಗಿ ಇಟ್ಟಿರುತ್ತೆ. ಒಂದು ಲಕ್ಷ ಇಂಡ್ಯಾ ಗವರ್ಮೆಂಟ್ ಸೆಕ್ಯೂರಿಟಿಗೆ ...ರ್ ಮೂಲಕ ಏರ್ಪಾಡು ಮಾಡಿರುತ್ತೆ.

ಬಿ. ಎಲ್. ಆರಾಧ್ಯ,
ಲೈನ್ ಅಂಡ್ ಮಾರ್ಕೆಟ್ ಆಫೀಸ್ ಮಡಿಕೇರಿ.

ಕಿರ್ಲೋಸ್ಕರ ನೇಗಲುಗಳನ್ನೇ ಒಕ್ಕಲಿಗರು ಹೊಗಳುತ್ತಾರೆ.



ಯಾಕೆಂದರೆ—ಇವು ಒಕ್ಕಲಿಗನಿಗೆ ತಗಲುವ ವೆಚ್ಚ, ದು ಡ್ಡು ಕಷ್ಟಗಳನ್ನು ಹೋಗಲಾಡಿಸುತ್ತವೆ. ಬಿಡಿಭಾಗಗಳು ಬೇಡಿ ದಾಗ ದೊರೆಯುತ್ತವೆ.

ನಮ್ಮಲ್ಲಿ—ಘಾ ಮಿಷಿನ್ ನೇಗಲುಗಳೂ ಕಬ್ಬಿನ ಗಾಣಗಳೂ ಪಂಪುಗಳೂ ಕಟರ್ ಮೊದಲಾದ ಕೃಷಿ ಸಾಧನಗಳೂ ಇತ್ಯಾದಿ ತಯಾರಾಗುತ್ತವೆ

'ಕೋ' ಎಂಬ ಕ್ಯಾಟಲಾಗು ತರಿಸಿಕೊಳ್ಳಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್,
ಕಿರ್ಲೋಸ್ಕರವಾಡಿ. (ಸಾತಾರಾ).

When you think of going to Bombay.

THINK OF

THE WELCOME HOTEL.

Girgaum Back Road, BOMBAY.

Most airy accomodation—Most Central situation—Excellent Meals Every Convenience

ವೆಲ್ಕಂ ಹೋಟೆಲ್.

ಗಿರ್ಗಾಂವು ಬ್ಯಾಕ್‌ರೋಡ್, ಬೊಂಬಾಯಿ.

ರೈಲಿನಿಂದಿಳಿದೊಡನೆಯೇ ಅಲ್ಲಿ ಇಳಿಯೋದು ಸುಖದ ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಯೋಗ್ಯ ವಾದ ಕೋಣೆಗಳು ಬೇಕೆಂದಿದ್ದರೆ ಬೊಂಬಾಯಿಪಟ್ಟಣದ ಮಧ್ಯಸ್ಥಳದಲ್ಲಿರುವ ವೆಲ್ಕಂ ಹೋಟೇಲಿನಲ್ಲಿಳಿಯಲು ಮರೆ ಯಬೇಡಿರಿ. ಯೋಗ್ಯವಾದ ಊಟ, ಗಾಳಿಗನುಕೂಲವಾದ ಕೊಠಡಿ 15 ನಿಮಿಷಗೊಮ್ಮೆ ತಿರುಗುವ ಟ್ರಾಮಿನ ಸೌಕರ್ಯ, ಅಂತೂ ಪ್ರಯಾಣಿಕರಿಗೆ ಬೇಕಾಗುವ ಅನುಕೂಲವಾದ ಉಡುಪಿ ಬ್ರಾಹ್ಮಣರ ಭೋಜನಾಲಯ

ಕೆ. ಶ್ರೀನಿವಾಸರಾವ್
ಮ್ಯಾನೇಜರ್

[12—2]

Cut this out. This will guide you while in BOMBAY.

SHREE KRISHNA LODGE.

BOARDING & LODGING HOUSE,

SANDHURST ROAD, BOMBAY.

[12—?]

Comfortable time Assured.

ಹಾಕಿ.

ಸಾಹಿತ್ಯ ಬ್ಲೇಂಡು ವೇಂಗಿ ಸ್ಪೆನ್ಸರ್ ಕ್ಕೆ ಬಾರಿ.

SPENCER & Co., Ltd., }
Mercara and Pollibetta, Coorg. }

[24—5]

ಸೂಚನೆ.

ಹುತ್ತರಿ ಹಬ್ಬದ ಕಾರಣ ಬರುವ ವಾರದ ತಾ|| ೩೦—೧೧—೨೩ ರ "ಕೊಡಗು" ಪತ್ರಿಕೆಯು ಪ್ರಕಟಿಸಲ್ಪಡುವುದಿಲ್ಲವೆಂಬುದನ್ನು ಈ ಮೂಲಕ ನಮ್ಮ ವಾಚಕರೆಲ್ಲರಿಗೂ ತಿಳಿಸಲಾಗಿದೆ. ಸಂ

"ಕೊಡಗು"

೧೯೨೩ ನೇ ಇಸವಿ ನವಂಬರ್ ತಾ|| ೨೩ ನೇ ಶುಕ್ರವಾರ.

ಸಿವಿಲ್ ಸರ್ವೀಸ್ ಕಮಿಷನ್.

ಇಂಡಿಯಾದೇಶದ ಮೇಲ್ ದರ್ಜೆಯ ಸರಕಾರಿ ನೌಕರಿಯ ಸಂಬಳ ಮುಂತಾದ ಆರ್ಥಿಕ ಮತ್ತು ಒಟ್ಟು ಇಂಡಿಯಾ ದರ್ಜೆಯಿಂದ ಪ್ರಾಂತೀಕ ದರ್ಜೆಗೆ ಇಳಿಸುವ ವಿಷಯ ಮತ್ತು ಈ ಉದ್ಯೋಗಗಳಿಗೆ ದೇಶೀಯರನ್ನು ಯೂರೋಪಿಯನ್ನರನ್ನೂ ಯಾವ ರೀತಿಯಲ್ಲಿ ಆರಿಸಬೇಕೆಂಬುದೇ ಮುಂತಾದ ವಿಷಯಗಳನ್ನು ವಿಚಾರಿಸಿ ವರದಿ ಕೊಡಲಿಕ್ಕಾಗಿ ಚಕ್ರವರ್ತಿಯವರಿಂದ ನೇಮಕವಾದ ಒಂದು ಕಮಿಷನ್ ಇಂಡಿಯಾ ದೇಶಕ್ಕೆ ಬಂದು ವಿಚಾರವನ್ನು ನಡೆಸುತ್ತಿದೆ. ಇತರ ಯಾವ ವಿಷಯಗಳನ್ನೆಲ್ಲಾ ವಿಚಾರಿಸಬೇಕೆಂತ ಉದ್ದೇಶವನ್ನು ಹೇಳಿದರೂ ಇಂಡಿಯಾದಲ್ಲಿ ಉದ್ಯೋಗ ಮಾಡುತ್ತಿರುವ ಯೂರೋಪಿಯನರ ಸಂಬಳ, ಪೆನ್ಶನ್, ರಜದ ಅನುಕೂಲತೆ ವಿಲಾಯಿತಿಗೆ ಹೋಗಿ ಬರುವ ಅನುಕೂಲತೆಗಳನ್ನು ಹೆಚ್ಚಿಸಬೇಕೆಂಬುದೇ ಈ ಕಮಿಷನ್‌ನ ನೇಮಕಕ್ಕೆ ಕಾರಣವೆಂತ ನಾವು ಊಹಿಸಬಹುದು. ಈ ಕಮಿಷನಿನ ಅಧ್ಯಕ್ಷರ ಭಾಷಣದಲ್ಲಿ ಈ ಉದ್ದೇಶಕ್ಕಾಗಿ ಕಮಿಶನ್ ನೇಮಕವಾದದ್ದೆಂಬ ಅಪವಾದಕ್ಕೆ ಕಾರಣವಿಲ್ಲವೆಂತಲೂ ದೇಶೀಯರಿಗೆ ಯಾವ ರೀತಿಯಲ್ಲಿ ದೊಡ್ಡ ಉದ್ಯೋಗಗಳನ್ನು ಹೆಚ್ಚಾಗಿ ಕೊಡಬಹುದೆಂಬುದನ್ನು ಕಂಡುಹಿಡಿಯುವದೂ ಒಂದು ಮುಖ್ಯ ಉದ್ದೇಶವಾಗಿದೆಯೆಂತಲೂ ಹೇಳಿದರು. ಆದರೆ ಯೂರೋಪಿಯನ್ ಆಫೀಸರುಗಳ ಕಷ್ಟ ನಿವಾರಣೆಯು ಅವಸರದ ಮತ್ತು ಮುಖ್ಯ ಉದ್ದೇಶವಿದೆಯೆಂತಲೂ ಒಪ್ಪಿದರು. ಈ ಬಡ ಇಂಡಿಯಾದೇಶದಲ್ಲಿ ತಿಂಗಳಿಗೆ ಸಾವಿರಾರು ರೂಪಾಯಿ ಸಂಬಳವಿರುವ ಉದ್ಯೋಗಸ್ಥರಿಗೆ ಇನ್ನೂ ಸಂಬಳ ಹೆಚ್ಚಿಸಲು ಇಂಡಿಯಾದೇಶದ ಉತ್ಪತ್ತಿಯಿಂದ ಸಂಬಳ ಪಡೆಯುವ ಕಮಿಷನ್ ಬಂದು ವಿಚಾರ ಮಾಡುತ್ತಿರುವುದು ತುಂಬಾ ವಿಷಾದವನ್ನುಂಟುಮಾಡುವದಾಗಿದೆ. ರೈತರ ಹೊರೆ ಹೆಚ್ಚಿಸುವಂಥಾ ಸಂಗತಿಯಲ್ಲವಾದರೆ ಹಾಸ್ಯಾಸ್ಪದವಾದ ವಿಷಯವೆಂತ ಬರೆಯುತ್ತಿದ್ದೆವು. ಇಂಡಿಯಾ ದೇಶದ ಬಡತನವನ್ನು ಸರಕಾರವೂ ಒಪ್ಪುತ್ತದೆ. ಸರಕಾರದ ಆದಾಯ ವೆಚ್ಚದಲ್ಲಿ ಉತ್ಪತ್ತಿಗಿಂತ ಖರ್ಚೇ ಹೆಚ್ಚಾಗಿದೆಯೆಂತ ಬಡವರಿಗೆ ಸಹಿಸಲಾರದಷ್ಟು ಭಾರವಾಗುವ ತೆರಿಗೆಗಳನ್ನು ಹಾಕುತ್ತಿದ್ದಾರೆ. ಪೋಸ್ಟಾಫೀಸಿನ ಕಾರ್ಡಿನ ಬೆಲೆಯನ್ನು ಶೇಕಡ 100 ರಷ್ಟು ಹೆಚ್ಚಿಸಿದರು. ಬರಿಯುವ ಕಾಗದಗಳ ಬೆಲೆಯನ್ನು ಶೇಕಡ 50 ರಷ್ಟು ಹೆಚ್ಚಿಸಿದರು. ಕೋರ್ಟ್ ಫೀಜನ್ನೂ ಅದರಂತೆಯೇ ಹೆಚ್ಚಿಸಿದರು. ಮುನಸಿಪಲ್ ಮತ್ತು ಡಿಸ್ಟ್ರಿಕ್ಟ್‌ಬೋರ್ಡ್ ತೆರಿಗೆಗಳನ್ನು ಆಗಿಂದಾಗ್ಯೆ ಹೆಚ್ಚಿಸುತ್ತಿದ್ದಾರೆ. ವಿದ್ಯೆ ಪಡೆಯಬೇಕಾದರೆ ಆ ಬಾಬಿನ ಖರ್ಚುಗಳನ್ನು ಹೆಚ್ಚಿಸಿದ್ದಾರೆ. ಬಟ್ಟೆ ಹೊಗೆಸೊಪ್ಪು ಮತ್ತು ಪರದೇಶದಿಂದ ಬರುವ ಇತರ ಎಲ್ಲಾ ಸಾಮಾನುಗಳ ಮೇಲೂ ಹಾಕಿದ ಸುಂಕವೂ ರೈತರಮೇಲೆಯೇ ಬೀಳುತ್ತೆ. ಇಷ್ಟು ಮಾಡಿಯೂ ಹಣ ಸಾಲದೆ ಸಿಬ್ಬಂದಿ ಖೋತೆಯನ್ನು ಧಾರಾಳವಾಗಿ ಮಾಡಿದರು. ಅದನ್ನು ಕಡಿಮೆ ದರ್ಜೆಯವರ ಮೇಲೆ ಉಪಯೋಗಿಸಿದರೇ ಹೊರತು ಮೇಲ್ದರ್ಜೆಯವರಿಗೆ ಸಂಬಳ ಹೆಚ್ಚಿಸುವ ಯೋಚನೆ ಮಾಡುತ್ತಿದ್ದಾರೆ. ಇದು ಯಾವದರಿಂದಲೂ ತೃಪ್ತಿಯಾಗದೆ ಭಿಕ್ಷುಕನಿಗೂ ಸಹ ವ್ಯಾಪಕವಾಗುವ ಉಪ್ಪಿನ ಸುಂಕವನ್ನು ಶೇಕಡ 100 ರಂತೆ ರೈತರ ಪ್ರತಿನಿಧಿಗಳ ಅಭಿಪ್ರಾಯಕ್ಕೆ ವಿರೋಧವಾಗಿ ವೈಸ್‌ರಾಯರ ನಿರಂಕುಶ ಶಕ್ತಿಯನ್ನು ಉಪಯೋಗಿಸಿ ಹಾಕಿದರು. ಈರೀತಿಯಲ್ಲಿ ಸರಕಾರವು ಬಡತನದಲ್ಲಿರುವಾಗ, ಒಂದು ಹೊತ್ತಿಗೆ ಇದ್ದರೆ ಇನ್ನೊಂದು ಹೊತ್ತಿಗೆ ತಿನ್ನಲಿಕ್ಕೆ ಇಲ್ಲದ ರೈತರ ಸಂಖ್ಯೆಯು ಶೇಕಡ 50 ರಷ್ಟಾದರೂ ಇರುವಾಗ ತಿಂಗಳಿಗೆ 1000 ರೂಪಾಯಿ ಲೆಖ್ಖದಲ್ಲಿ ಸಂಬಳವಿರುವವರಿಗೆ ಸಂಬಳ, ಭತ್ಯ, ಪೆನ್ಶನ್ ಅನುಕೂಲತೆಗಳನ್ನು ಕೊಡುವ ಏರ್ಪಾಡು ಮಾಡುತ್ತಿದ್ದಾರೆ! ಇಂಡಿಯಾ ದೇಶದವರೆಲ್ಲರೂ ಈ ಕಮಿಶನ್ ನೇಮಕವಾದ್ದಕ್ಕೆ ತುಂಬಾ ಆಕ್ಷೇಪಿಸುತ್ತಿದ್ದಾರೆ. ಆದರೆ ಕೌನ್ಸಿಲುಗಳ ಮೂಲಕವೂ ಮಂತ್ರಿಗಳ ಮೂಲಕವೂ ದೇಶದ ಆಡಳಿತವು ನಡಿಯಲು ಆರಂಭವಾದಂದಿನಿಂದಲೂ ಯೂರೋಪಿಯನ್ ಉದ್ಯೋಗಸ್ಥರು ತಮ್ಮ ಬಡತನವನ್ನು ಹೇಳ ತೊಡಗಿದ್ದಾರೆ.

ನಮ್ಮ ದೇಶಕ್ಕೆ ದೊರೆತ ಸುಧಾರಣೆಯಲ್ಲಿ ರೈತರ ಪ್ರತಿನಿಧಿಯನ್ನು ಮಂತ್ರಿಯಾಗಿ ನೇಮಿಸಿಕೊಳ್ಳುವ ಕ್ರಮವೇನೂ ದೊರೆಯಲಿಲ್ಲ. ಅದು ದೊರೆತ ಪ್ರಾಂತ್ಯಗಳಲ್ಲಿಯೂ ಸುಧಾರಣೆಯಿಂದ ಪ್ರಯೋಜನವಾಗದೆ ಇರಲಿಕ್ಕೆ ಈ ಸಿವಿಲ್‌ಸರ್ವಿಸಿನವರ ಸಂಬಳವನ್ನು ಕಡಿಮೆಮಾಡುವ ಹಕ್ಕು ಮತ್ತು ಅವರನ್ನು ನೇಮಿಸುವ ಯಾ ಬಿಡಿಸುವ ಹಕ್ಕು ಸಹ ಕೌನ್ಸಿಲಿಗೆ ಯಾ ಮಂತ್ರಿಗೆ ಇಲ್ಲದೆ ಇರುವದೇ ಕಾರಣವಾಗಿದೆ. ಸಂಬಳವನ್ನು ಕಡಿಮೆಮಾಡುವ ಹಕ್ಕು ಸಹ ಕೌನ್ಸಿಲಿಗೆ ಇರಬೇಕೆಂತ ದೇಶೀಯರು ಕೂಗುತ್ತಿರುವಾಗ ಅವರ ಸಂಬಳವನ್ನು ಹೆಚ್ಚಿಸಲಿಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚಾಗುವ ಕಮಿಶನ್ ಒಂದನ್ನು ನೇಮಿಸುವದೆಂದರೆ ಯಾರಿಗೆ ತಾನೇ ದುಃಖವಾಗಲಾರದು?

ಈ ಕಮಿಶನನ್ನು ಚಕ್ರವರ್ತಿಯವರೇ ನೇಮಿಸಿದ್ದಾದ್ದರಿಂದ ಇಂಡಿಯಾಸರಕಾರದಕ್ಕಾಗಲೀ ಸ್ಟೇಟ್ ಸೆಕ್ರೆಟರಿಯವರಿಗಾಗಲೀ ತಾವು ಅಂಜಬೇಕಾದದ್ದಿಲ್ಲವೆಂತ ಹೇಳಿದರು. ಈ ದರೂ ದೇಶದ ಜನರಿಗೆ ಈ ಕಮಿಶನ್ ಬೇಡದಿರುವಾಗ, ಯೂರೋಪಿಯನ್ ಆಫೀಸರುಗಳ ಕೂಗಿನಿಂದಲೇ ಹುಟ್ಟಿದ ಈ ಕಮಿಶನ್ನಿಂದ ದೇಶಕ್ಕೆ ಕ್ಷೇಮವಿಲ್ಲವೆಂತ ಧೈರ್ಯವಾಗಿ ಹೇಳಬಹುದು. ಈ ಕಮಿಶನ್ನಿನ ಮುಂದೆ ಅಭಿಪ್ರಾಯ ಕೊಡುವದು ಗೌರವಕ್ಕೆ ಕುಂದಾಗಲೀ ಒಪ್ಪಿದಂತಾಗಲೀ ಆಗಬಹುದೆಂತ ಕೆಲವರು ತಿಳಿದಿದ್ದಾರೆ.

ಮೆ|| ಕೆ. ಸಿ. ರಾಯ್ ಎಂಬವರು 14 ನೇ ತಾರೀಕಿನಲ್ಲಿ ಡೆಲ್ಲಿಯಲ್ಲಿ ತಮ್ಮ ಮತವನ್ನು ಕೊಟ್ಟಿದ್ದಾರೆ. ಇವರು ನೋಡರೇಟ್ ಪಕ್ಷದವರೆಂತ ನಮಗೆ ತಿಳಿಯುತ್ತೆ. ಈ ರಾಯ್ ಯಾವ ಪಕ್ಷವನ್ನೂ ಅವಲಂಭಿಸಿದವನಲ್ಲವೆಂತ ಹೇಳಿಕೊಂಡಿದ್ದಾರೆ. ಆದರೂ ಇವರು ದೇಶೀಯ ಅಭಿಪ್ರಾಯವನ್ನು ಬಹಳ ಧೈರ್ಯದಿಂದಲೂ ಸಮರ್ಪಕವಾಗಿಯೂ ಕೊಟ್ಟಿದ್ದಾರೆ. ಇವರ ಅಭಿಪ್ರಾಯದಲ್ಲಿ ದೋಷವನ್ನು ತೋರಿಸಲಿಕ್ಕೆ ಕಮಿಶನ್ನಿನ ಅಧ್ಯಕ್ಷರೂ ಮತ್ತು ಇನ್ನೊಬ್ಬ ಯೂರೋಪಿಯನ್ ಮೆಂಬರೂ ಬಹಳ ಪ್ರಯತ್ನಿಸಿದರು. ಆದರೆ ಅದರಿಂದ ಮೆ|| ರಾಯ್‌ಯವರ ಅಭಿಪ್ರಾಯವನ್ನು ಇನ್ನಷ್ಟು ಗಟ್ಟಿಮಾಡಿದಂತಾಯಿತು.

ಇವರ ಅಭಿಪ್ರಾಯದ ಸಾರಾಂಶವೇನೆಂದರೆ— ಮಂತ್ರಿಗಳ ತಾಬೆಯ ಇಲಾಖೆಯಲ್ಲಿ ಕೆಲಸ ಮಾಡುವ ಉದ್ಯೋಗಸ್ಥರ ಮೇಲೆ ಸಂಪೂರ್ಣ ಅಧಿಕಾರವು ಪ್ರಾಂತೀಕ ಸರಕಾರಗಳಿಗೆ ಇರಬೇಕು. ಐ. ಸಿ. ಯಸ್. ಮತ್ತು ಪೋಲೀಸ್ ಸರ್ವಿಸ್ ಮಾತ್ರ ಒಟ್ಟು ಇಂಡಿಯಾದೇಶದ ಗುಂಪಿಗೆ ಸೇರಿದ್ದರೆ ಸಾಕು. ಯೂರೋಪಿಯನರಿಗೆ ಕೊಡುವ ದೊಡ್ಡ ಸಂಬಳದ ಕಷ್ಟವನ್ನು ಪರಿಹಾರ ಮಾಡಿಕೊಳ್ಳಲಿಕ್ಕಾಗಿ ದೇಶೀಯರನ್ನೇ ಹೆಚ್ಚಾಗಿ ಉದ್ಯೋಗಕ್ಕೆ ನೇಮಿಸಿಕೊಳ್ಳಬೇಕು. ಯೂರೋಪಿಯನ್ ಆಫೀಸರುಗಳು ಸಂಬಳ ಹೆಚ್ಚುಬೇಕೆಂತ ಕೇಳುವಂತಾದ್ದರಿಂದ ಯೂರೋಪಿಯನ್ ಆಫೀಸರುಗಳ ಸಂಖ್ಯೆ ಕಡಿಮೆ ಮಾಡಲಿಕ್ಕೆ ಅವರು ಒಪ್ಪಲೇಬೇಕು. ಎಲ್ಲಾ ಆಫೀಸರುಗಳ ಸಂಬಳವನ್ನೂ ಇಂಡಿಯಾದೇಶದ ಮಟ್ಟಕ್ಕೆ ಇಳಿಸಿಕೊಳ್ಳಬೇಕು. ಅಂದರೆ ಈಗ ಇರುವ ಸಂಬಳದ 3 ನೇ ಎರಡು ಭಾಗಕ್ಕೆ ಇಳಿಸಬೇಕಾಗಿದೆ. ಯೂರೋಪಿಯನ್ ಆಫೀಸರು ದೂರ ವಾಸಕ್ಕೆ ಒಂದಷ್ಟಕ್ಕಾಗಿ ಅವರಿಗೆ ಹೆಚ್ಚಿಗೆ ಎಲೋವನ್ಸ್ ಕೊಡಬೇಕು. ಈಗ ಜಾರಿಯಲ್ಲಿರುವ ಮೇರೆ ಪ್ರತಿವರ್ಷ ಶೇಕಡ 1½ ಯಂತೆ ದೇಶೀಯರನ್ನು ಕೆಲಸಕ್ಕೆ ಸೇರಿಸಿಕೊಳ್ಳತಾಬಂದರೆ ಬಹಳ ಸಾವಕಾಶವಾಗುತ್ತೆ. ಈ ಉದ್ಯೋಗಗಳಲ್ಲಿ ದೇಶೀಯರು ಶೇಕಡ 50 ರಷ್ಟಾದರೂ ಆಗಬೇಕಾದರೆ ಯೂರೋಪಿಯನರನ್ನು ನೇಮಿಸುವದನ್ನು ಸಂಪೂರ್ಣವಾಗಿ ನಿಲ್ಲಿಸಿದರೂ ಇನ್ನೂ 12 ವರ್ಷ ಬೇಕು. ವಸಾಹತುಗಳಲ್ಲಿ ಹಿಂದೀಯರಿಗೆ ಅವಮರ್ಯಾದೆಯಾಗುತ್ತಿರುವದರಿಂದ ವಸಾಹತುಗಳ ನಿವಾಸಿಗಳಿಗೆ ಈ ದೇಶದಲ್ಲಿ ಯಾವ ಉದ್ಯೋಗವನ್ನೂ ಕೊಡಬಾರದು.

ಕಮಿಶನ್ನಿನ ಅಧ್ಯಕ್ಷರು ದೇಶದಲ್ಲಿ ಜಾತಿ ಜಗಳಗಳು ವ್ಯತ್ಯಾಸಗಳೂ ಇರುವದರಿಂದ ಯೂರೋಪಿಯನರು ಹೆಚ್ಚಾಗಿ ಇರಬೇಡವೇ ಎಂತ ಕೇಳಿದ್ದಕ್ಕೆ ಈಜಿಪ್ಟಿನಲ್ಲಿಯೂ ಐರ್‌ಲ್ಯಾಂಡಿನಲ್ಲಿ ಇಂಥಾ ತೊಂದರೆ ಇದ್ದರೂ ಉದ್ಯೋಗಸ್ಥರನ್ನು ಹೊರಗಿನಿಂದ ತರುವದರ ಮೂಲಕ ಈ ತೊಂದರೆ ಪರಿಹಾರಮಾಡಿಕೊಳ್ಳುವ ಯೋಚನೆ ಮಾಡಲಿಲ್ಲವೆಂತ ತೋರಿಸಿದರು. ಸ್ವರಾಜ್ಯಪಾರ್ಟಿಗೆ ಸೇರಿದವರು ಕೌನ್ಸಿಲಿಗೆ ಬರುವದರಿಂದ ಇಂಗ್ಲಿಷ್ ಅಧಿಕಾರಿಗಳ ಸಂಬಳ ಕಡಿಮೆ ತೆಗೆಯಬೇಕೆಂತಲೂ ಕೆಲಸದಿಂದ ತೆಗೆಯಬೇಕೆಂತಲೂ ಕೇಳಿ ಯೂರೋಪಿಯನ್ ಅಧಿಕಾರಿಗಳ ಜೀವನವೇ ಅಭದ್ರವಾಗುವಂತೆ ಮಾಡಿಯಾರಲ್ಲಾ ಎಂತ ಇನ್ನೊಬ್ಬ ಕಮಿಶನ್ ಮೆಂಬರು ಕೇಳಿದ್ದಕ್ಕೆ ಎಂಥಾ ಎಕ್ಸ್ಟ್ರೀಮಿಸ್ಟ್ ಎಂದರೆ ಮುಂದರಿದು ಹೋಗುವವರೇ ಆಗಲೀ ಕೌನ್ಸಿಲಿಗೆ ಬಂದನಂತರ ಮೋಡರೇಟ್‌ಗಳಾಗಿ ಹೋಗುತ್ತಾರೆ. ಆದ್ದರಿಂದ ಈ ಭಯವು ಬೇಡ, ಯೂರೋಪಿಯನ್ ಉದ್ಯೋಗಸ್ಥರು ಇಲ್ಲಿಗೆ ಬರುವ ಮುಂಚೆ ದೇಶೀಯರ ವಿಷಯ ಅವರಿಗೆ ಇಲ್ಲದ ಸಂಗತಿಗಳನ್ನು ಹೇಳಿ ಹೆದರಿಸುವದರ ಬದಲು ದೇಶದಲ್ಲಿ ಕೆಲಸ ಚನ್ನಾಗಿ ಮಾಡಿದರೆ ಹಿಂದೀಯರು ಎಂದು ಅಪಕಾರ ಮಾಡಲಿಕ್ಕಿಲ್ಲವೆಂಬದನ್ನು ಅವರ ಮನಸ್ಸಿಗೆ ಅಂಟುವಂತೆ ಹೇಳಿ ಕಳುಹಿಸಿದರೆ ಆ ಉದ್ಯೋಗಸ್ಥರಿಗೆ ಭಯಪಡುವ ಆವಶ್ಯವೇ ಇರುವದಿಲ್ಲವೆಂತಲೂ ಹೇಳಿದರು. 1917 ನೇ ಇಸ್ವಿ ಆಗಸ್ಟ್ ತಿಂಗಳಲ್ಲಿ ಮಾಡಿದ ವಾಗ್ದಾನದಲ್ಲಿ ಕ್ರಮೇಣ ಹಿಂದೂಸ್ತಾನಕ್ಕೆ ಕೊಡುತ್ತೇವೆಂತ ಮಾತ್ರವಲ್ಲಿ ದೇಶೀಯರನ್ನು ಸರಕಾರಿ ಉದ್ಯೋಗಗಳಿಗೆ ಹೆಚ್ಚಾಗಿ ತೆಗೆದುಕೊಳ್ಳುತ್ತೇವೆ ಇತ್ತು. ಈ ಎರಡನೇ ವಾಗ್ದಾನವನ್ನು ನಡಿಸುವ ಇನ್ನೂ ಪ್ರಾರಂಭಿಸಿಯೇ ಇಲ್ಲವೆಂತ ಹೇಳಿದರು. ಪದಲ್ಲಿರುವ ಹಕ್ಕುಗಳನ್ನು ಕಾಪಾಡಿಕೊಳ್ಳಕ್ಕೆ ... ಎಂಬ ಪ್ರಶ್ನೆಗೆ ಒಪ್ಪಿಕೊಂಡರು ... ಈ ದೇಶಭಕ್ತಿ ಹೆಚ್ಚುತ್ತಿರುವದರಿಂದ ಸಿವಿಲ್ ಸರ್ವಿಸ್ ಪೋಲೀಸ್ ಸರ್ವಿಸ್ ಸಹ ಪ್ರಾಂತೀಕವಾಗಿಯೇ ಬೇಕಾಗುವದಿಲ್ಲವೋ ಎಂತ ಕೇಳಿದ್ದಕ್ಕೆ ಸ್ವರಾಜ್ಯದಲ್ಲೂ ಸಹ ಒಟ್ಟು ಇಂಡಿಯಾಕ್ಕೆಲ್ಲಾ ಒಂದೇ ಉದ್ಯೋಗಗಳು ಆ ಎರಡು ಇಲಾಖೆಗಳಲ್ಲಿ ಇರಬೇಕೆಂತ ಮೆ|| ರಾಯ್ ಅವರು ಹೇಳಿದರು. ಇತರ ಇಲಾಖೆಯ ಬಳದ ದರವೂ ಆಯಾ ಪ್ರಾಂತ್ಯಕ್ಕೆ ಅನುಕೂಲವಾಗಿ ನಿರ್ಣಯಿಸಲಿಕ್ಕೆ ಹಕ್ಕು ಕೊಡಬೇಕೆಂತಲೂ ಹೇಳಿದರು. ... ಪ್ರಾಂತೀಕವಾಗಿ ಮಾಡಬೇಕೆ? ಮೆ|| ರಾಯ್ ಅವರು ಹೇಳಿದಾಗ ಸಿವಿಲ ಪೋಲೀಸ್ ಸರ್ವಿಸ್‌ಗಳಲ್ಲಿರುವ ಯೂರೋಪಿಯನ್‌ರಿಗೆ ... ದೇಶಕ್ಕೆ ... ಕೇಳಿದ್ದಕ್ಕೆ ... ಅವಶ್ಯಕ್ಕೆ ಬೇಕಾದಷ್ಟು ... ಪ್ರಾಂತೀಕ ಸರ್ವಿಸನಲ್ಲಿ ... ಯೂರೋಪಿಯನ್ ಆಫೀಸರುಗಳು ...

ಡಾಕ್ಟರ ... ಚಿಕಿತ್ಸೆ ಮಾಡಿಸಿಕೊಳ್ಳುವದು ... ಉದ್ಯೋಗಗಳಲ್ಲಿ ದೇಶೀಯರನ್ನು ... ಯೂರೋಪಿಯನ್ ಉದ್ಯೋಗಸ್ಥರನ್ನು ನೇಮಿಸಬೇಕೆಂದಿದ್ದೆಂತ ಹೇಳಿದರು. ದೇಶದ ಉದ್ಯೋಗಗಳ ... ದೇಶೀಯರಿಗೇ ಇರಬೇಕಾದದ್ದು ... ಕೆಲವು ಕಾಲದವರೆಗೆ ಯೂರೋಪಿಯನ್‌ರನ್ನು ತೆಗೆದುಕೊಳ್ಳಬೇಕಾಗಬಹುದೆಂತ ಹೇಳಿದರು. ದೇಶದಲ್ಲಿ ... ಜಗಳಗಳ ವಿಷಯ ಹೇಳುವಾಗ ನಿಮ್ಮಿಂದ ಶಾಂತಿ ಸ್ಥಾಪಿತವಾಗಲಿಲ್ಲ. ಶಾಂತತಾ ಭಂಗಕ್ಕೆ ಕಾರಣವಾದ ಜಾತಿ ವ್ಯತ್ಯಾಸಗಳನ್ನು ಪರದೇಶದವರು ಇಲ್ಲಿಸಲು ಸಾಧ್ಯವಿಲ್ಲ. ಬಹುಕಾಲದಿಂದ ಸಂದಾಯವಾಗಿ ತಮ್ಮ ಸ್ವದೇಶದ ಜನರನ್ನು ಸಂಬುವದನ್ನೇ ... ವರು ಮರೆತಿದ್ದಾರೆ ಎಂಥಾ ಸತ್ಯವಾದ ಮಾತು! ... ವಲ್ಲ ದೇಶೀಯ ಅಧಿಕಾರಿಗಳು ತಮ್ಮ ಸ್ವಬುದ್ಧಿಯನ್ನು ಉಪಯೋಗಿಸಿ ದೇಶಕ್ಕೆ ಒಳ್ಳೇದು ಮಾಡಲಿಕ್ಕೆ ಅವರ ಸ್ವಬುದ್ಧಿಯನ್ನು ಉಪಯೋಗಿಸಲಿಕ್ಕೆ ಬಿಟ್ಟು ಆಡಳಿತದ ಜವಾಬ್ದಾರಿಯನ್ನು ದೇಶೀಯ ಅಧಿಕಾರಿಗಳ ಮೇಲೆ ಇಟ್ಟರೆ ಜಾತಿ ಜಗಳಗಳೂ ಇರಲಿಕ್ಕೇ ಇಲ್ಲವೆಂತ ನಾವು ತಿಳಿಯುತ್ತೇವೆ.

ಈ ಲೇಖನದಲ್ಲಿ ಮೆ|| ರಾಯ್‌ಯವರ ಅಭಿಪ್ರಾಯವೇ ತುಂಬ ಹೋಯಿತು. ನಮ್ಮ ಅಭಿಪ್ರಾಯವೇನೆಂದರೆ ಯಾಕೆಂದರೆ ಮೆ|| ರಾಯ್ ಯವರ ಅಭಿಪ್ರಾಯವೇ ನಮ್ಮ ಅಭಿಪ್ರಾಯಗಳು. ಇಂಡಿಯಾದೇಶವನ್ನು ಸ್ವರಾಜ್ಯದ ಪ್ರಥಮ ಮೆಟ್ಟನ್ನು ಹತ್ತಿಸಿರುವಾಗ ಇಂಡಿಯಾದ ಜನರ ಪ್ರತಿನಿಧಿಗಳ ಆಳ್ವಿಕೆಗೆ ಇಂಡಿಯಾದೇಶದವನ್ನು ಒಪ್ಪಿಕೊಂಡ ಆಫೀಸರುಗಳು ತಯಾರಾಗಿರಬೇಕು.

ಮೆ|| ರಾಯ್‌ಯವರಂತೆ ಕೆಲವರಾದರೂ ತಮ್ಮ ಅಭಿಪ್ರಾಯವನ್ನು ಮರೆಮಾಡದೆ ಹೇಳಿದರೆ ದೇಶಕ್ಕೆ ಬರತಕ್ಕ ಕೆಲವು ಮಟ್ಟಿಗಾದರೂ ಕಡಿಮೆಯಾದೀತೋ ಎಂಬ ಆಶೆ ನಮಗೆ ಇದೆ.

MEDICAL RELIEF IN COO[RG]

ಕೊಡಗು ನಿವಾಸಿಗಳ ಆರೋಗ್ಯ ಸ್ಥಿತಿ ಮತ್ತು ... ಕೂಲತೆಯನ್ನು ಕಡಿಮೆ ಖರ್ಚಿನಿಂದಲೂ ಹೆಚ್ಚಿನ ... ರ್ಥದಿಂದಲೂ ಯಾವ ರೀತಿಯಲ್ಲಿ ಅಭಿವೃದ್ಧಿಗೊಳಿಸಬಹುದು ಈ ಕೆಳಗಿನ ಲೇಖನಗಳಿಂದ ನಾನು ವಿಷದಪಡಿಸಲು ಯತ್ನಿಸುತ್ತೇನೆ.

ಕೊಡಗಿನಲ್ಲಿ ಶಿಶುಮರಣವು ಹೆಚ್ಚಾಗಿರುವ ಹೊಂದು ಜನಸಂಖ್ಯೆಯು ಕಡಿಮೆಯಾಗಲು ಮುಖ್ಯ ... ಪ್ರಸವಕಾಲದಲ್ಲುಂಟಾಗುವ ಅನೇಕ ಅಪಾಯಗಳೂ ... ಯ ಹೊಟ್ಟೆಯಲ್ಲಿರುವ ಶಿಶುವಿಗೆ ದೊರೆಯುವ ... ವಾದ ಮತ್ತು ಅಜಾಗರೂಕತೆಯಿಂದ ಕೊಡುವ ... ಪದಾರ್ಥಗಳೇ ಶಿಶುಮರಣ ಸಂಖ್ಯೆಯು ಹೆಚ್ಚುವ್ರ ... ರಣವಾಗಿರುವದು.

ಸಾಲದುದಕ್ಕೆ ಹೆಂಗಸರೆಲ್ಲರೂ, ಮತ್ತು ... ಗಳೂ, ದುರಾಚಾರಿಗಳೂ, ಉಪಚಾರದ ಗಂಧವೇ ... ಯದವರೂ ಆದ ಸೂಲಗಿತ್ತಿಯರ ಆಶ್ರಯವನ್ನು ... ಕಾಗಿರುವುದು ನಿಜವಾಗಿಯೂ ದುರಾದೃಷ್ಟವೇ ...

ಇಂಥ ಸೂಲಗಿತ್ತಿಯರ ಬದಲಿಗೆ ಒಳ್ಳೆ ... ಹೊಂದಿದ ಆಸ್ಪತ್ರೆಯ ಸೂಲಗಿತ್ತಿಯರನ್ನೇ ಒದಗಿಸಲು ನಮ್ಮಿಂದ ಸಾಧ್ಯವಾಗುವುದಿಲ್ಲ. ಆದುದರಿಂದ ಬೇರೇನಾದರೂ ಒಳ್ಳೆಯ ಉಪಾಯವನ್ನು ಹುಡುಕಬೇಕಾಗಿರುವುದು. ಸೂಲಗಿತ್ತಿಯರ ಕ್ರೂರವಾದ ಕೆಲಸಗಳಿಗೆ ಕಾತ ಕೊಡದಂತೆ ಅವರನ್ನು ಸರಿಯಾದ ಲಗಾಮಿನಲ್ಲಿಡದು ಕೊಳ್ಳಬೇಕು. ಕೊಡಗು ನಾಡಿನಲ್ಲಿರುವ ಸೂಲಗಿತ್ತಿಯರ ಹೆಸರುಗಳನ್ನೆಲ್ಲ ಬಲವಂತದಿಂದಾದರೂ ರಿಜಿಸ್ಟರ್ ಮಾಡಿಸಲು ಮುನ್ಸಿಫಲ್ ಅಥವಾ ಡಿಸ್ಟ್ರಿಕ್ಟ್‌ಬೋರ್ಡು ...

ತಕ್ಕ ಕಾನೂನನ್ನು ಮಾಡುವುದು ಅತ್ಯಾವಶ್ಯವೆಂದು ನಾನು ಇಲ್ಲಿ ಸೂಚಿಸುವೆನು. ಇವರ ಹೆಸರನ್ನು ರಿಜಿಸ್ಟರ್ ಮಾಡಿಸಲು ಯಾವ ತೆರಿಗೆಯನ್ನೂ ಹಾಕುವುದು ಬೇಡವಾಗಿ ಕಾಣುತ್ತೆ. ಅಥವ ಹಾಕಿದರೂ ಬಹಳ ಕಡಿಮೆಯಾಗಿಯೇ ಹಾಕಬೇಕು. ಈ ರಿಜಿಸ್ಟರ್ ತಯಾರಾದನಂತರ ಎಲ್ಲಾ ಸೂಲಗಿತ್ತಿಯರೂ ತಮ್ಮ ಹತ್ತಿರದ ಆಸ್ಪತ್ರೆಗಳ ಸಬ್‌ಅಸಿಸ್ಟಾಂಟ್ ಸರ್ಜನರ ಬಳಿಗೆ ಹೋಗಿ ಅವರಿಂದ ಒಬ್ಬೊಬ್ಬಳಿಗೆ ಚರ್ಮರೋಗ ಮುಂತಾದ ವ್ಯಾಧಿಯೂ ಇಲ್ಲವೆಂದೂ ತಕ್ಕ ಪ್ರಾಯವಾಗಿದೆಯೆಂದೂ ಪರೀಕ್ಷೆ ಮೂಲಕ ನಿಶ್ಚಯಿಸಿಕೊಳ್ಳಲೇಬೇಕಾಗುವುದು. ಪ್ರಾಯ ಹೆಚ್ಚಾಗಿ ಹೋದ ಹಾಗೆಲ್ಲಾ ಸೂಲಗಿತ್ತಿಯರ ಅಭ್ಯಾಸವು ಮಲಿನವಾಗಿಯೂ ಅಶುಚಿಯಾಗಿಯೂ ಇರುವುದಾಗಿ ನನಗೆ ಕಂಡು ಬಂದಿರುವುದರಿಂದ ಪ್ರಾಯದ ವಿಷಯ ಹೆಚ್ಚು ಗಮನಕೊಡಬೇಕಾಗಿದೆ. ಹೀಗೆ ತಮ್ಮ ಹತ್ತಿರಕ್ಕೆ ಬಂದ ಸೂಲಗಿತ್ತಿಯರಿಂದ ಸ್ವಲ್ಪ ಉತ್ತಮವಾಗಿರುವಂತಹ ಕೆಲವು ಸೂಲಗಿತ್ತಿಯರನ್ನು ಆರಿಸಿ ಸಬ್‌ಅಸಿಸ್ಟಾಂಟ್ ಸರ್ಜನರು ಮುಖ್ಯ ಆಸ್ಪತ್ರೆಗಳಾದ ಮಡಿಕೇರಿ ಮತ್ತು ವೀರರಾಜೇಂದ್ರಪ್ಯಾಟೆ ಆಸ್ಪತ್ರೆಗಳಿಗೆ ತರಬೇತಿಗೆ ಕಳುಹಿಸಬೇಕು. ಒಂದೊಂದು ಆಸ್ಪತ್ರೆಯಲ್ಲು ನಾಲ್ಕು ನಾಲ್ಕು ಜನ ಸೂಲಗಿತ್ತಿಯರಿಗೆ ಎರಡು ತಿಂಗಳು ಅಥವಾ ಅವಶ್ಯ ಬಿದ್ದಲ್ಲಿ ಇನ್ನೂ ಕೆಲವು ಹೆಚ್ಚು ದಿವಸಗಳು ತರಬೇತು ಕೊಟ್ಟು ಅಂತ್ಯದಲ್ಲಿ ಅವರಿಗೆ ಒಂದು ಪರೀಕ್ಷೆ ಮಾಡಿ ಅದರಲ್ಲಿ ಪಾಸಾದರೆ (ಸರ್ಟಿಫಿಕೇಟು) ಯೋಗ್ಯತಾ ಪತ್ರವನ್ನು ಕೊಟ್ಟು ಒಳ್ಳೆ ತಯಾರಾದ ಡಿಸ್ಟ್ರಿಕ್ಟ್‌ಬೋರ್ಡ್ ಸೂಲಗಿತ್ತಿಯರನ್ನಾಗಿ ಮಾಡಿ ಅವರನ್ನು ಅವರವರ ಊರುಗಳಿಗೆ ಕಳುಹಿಸಿ ಕೊಡಲ್ಪಡುವುದು.

ಈ ಸೂಲಗಿತ್ತಿಯರ ಪರೀಕ್ಷೆಗಾಗಿ ಸಬ್‌ಅಸಿಸ್ಟೆಂಟ್ ಸರ್ಜನರಿಗೆ ಯಾವ ವಂತಿಗೆಯನ್ನು ಕೊಡಬೇಕಾಗಿಲ್ಲ. ಅಲ್ಲದೆ ಇವರು ಅವರ ಚುನಾವಣೆಗಾಗಿ ಯಾವ ಚಾರ್ಜನ್ನೂ ತೆಗೆದುಕೊಳ್ಳಕೂಡದು.

ಸೂಲಗಿತ್ತಿಯರಿಗೆ ಮನೆಯಿಂದ ಆಸ್ಪತ್ರೆಗೆ ಹೋಗಿ ಬರುವುದರ ಪ್ರಯಾಣ ವೆಚ್ಚವೂ ಆಸ್ಪತ್ರೆಯಲ್ಲಿ ಅಭ್ಯಾಸಿಸುವಾಗ ಮಾಸಾಶನ ಉತ್ತಮರೂಪವಾಗಿ ಕಟ್ಟಿ ಕೊಡಲ್ಪಡುವುದು.

ಈರೀತಿಯಾಗಿ ಕೊಡಗುದೇಶವು ತಯಾರಾದ 48 ಡಿಸ್ಟ್ರಿಕ್ಟ್ ಬೋರ್ಡ್ ಸೂಲಗಿತ್ತಿಯರನ್ನು ಪಡೆಯಬೇಕು. ಸೂಲಗಿತ್ತಿಯರಿಗೆ ಶುಚಿಯಾಗಿರುವುದಕ್ಕೂ ಕೆಲಸದಲ್ಲಿ ಉಪಯೋಗಿಸುವ ವಸ್ತ್ರಗಳ ವಿಷಯವೂ, ಕೆಲವು ಚಿಕಿತ್ಸೆಗಳ ವಿಷಯವೂ ಕಲಿಸಲ್ಪಡುವುದು. ಇದೂ ಅಲ್ಲದೆ ಶಿಶುವಿಗೆ ಮತ್ತು ಬಾಣಂತಿಗೆ ಯಾವ ಯಾವ ಆಹಾರವನ್ನು ಯಾವ ಯಾವ ರೀತಿಯಲ್ಲಿ ಕೊಡಬೇಕೆಂಬುದನ್ನು ಕಲಿಸಲ್ಪಡುವುದು.

ಮೇಲಿನ ವಿಷಯಗಳೆಲ್ಲವನ್ನು ಸರಿಯಾಗಿ ವಿಶದಪಡಿಸುವಂತೆ ನಾನು ಒಂದು ಪುಸ್ತಕವನ್ನು ಕನ್ನಡದಲ್ಲಿ ಪ್ರಕಟಪಡಿಸಿ ಪರೀಕ್ಷೆಯಾದನಂತರ ಪ್ರತಿಯೊಬ್ಬ ಸೂಲಗಿತ್ತಿಗೂ ಉಚಿತವಾಗಿ ಕೊಡಬೇಕೆಂದು ಯೋಚಿಸಿರುವೆನು.

ಕೆಲವು ನಿಯಮಗಳನ್ನೂ ಕಾನೂನುಗಳನ್ನೂ ಏರ್ಪಡಿಸಿ ಸೂಲಗಿತ್ತಿಯರು ಅವುಗಳಿಗನುಸಾರವಾಗಿ ನಡೆಯಲು ತಪ್ಪಿದರೆ ಅವರ ಯೋಗ್ಯತಾ ಪತ್ರಗಳನ್ನು ರದ್ದು ಮಾಡುವಂತಿರಬೇಕು.

ಈರೀತಿಯಲ್ಲಿ ಅನೇಕ ಹೆಂಗಸರು ತಯಾರಾದರೆ ಬಾಣಂತಿಯರ ಚಿಕಿತ್ಸೆಯು ಬಹಳ ಮಟ್ಟಿಗೆ ಅಭಿವೃದ್ಧಿ ಹೊಂದುವುದರಲ್ಲಿ ಸಂಶಯವಿಲ್ಲ. ಎಲ್ಲರೂ ತಯಾರಾದ ಸೂಲಗಿತ್ತಿಯರನ್ನೇ ಕರೆಯುವಾಗ ಇತರ ಮೂಢ ಸೂಲಗಿತ್ತಿಯರು ತಮ್ಮ ಉತ್ಪತ್ತಿ ಹಾಳಾಗುವುದನ್ನು ನೋಡಿ ತಾವೂ ಸಹಾ ಅದೇ ರೀತಿ ಡಿಸ್ಟ್ರಿಕ್ಟ್ ಬೋರ್ಡ್ ಸೂಲಗಿತ್ತಿಯರಾಗಬೇಕೆಂದು ಹಾರೈಸುವರು.

ಈ ಏರ್ಪಾಡಿಗೆ 1100 ರೂಪಾಯಿ ಬೇಕಾಗುವುದು. ಪ್ರಯಾಣ ಭತ್ಯಕ್ಕೇನು 120 ರೂಪಾಯಿಯೂ, 980 ರೂಪಾಯಿ ತಯಾರಿ ಖರ್ಚಿಗೂ ಬೇಕಾಗುವುದು. ಇದೇನು ಒಂದು ದೊಡ್ಡ ಹಣವಲ್ಲ. ದೇಶಾಭಿಮಾನಿಗಳು ಮನಸ್ಸು ಮಾಡಿದರೆ ಈ ಹಣವನ್ನು ಬೇಗನೆ ಒಟ್ಟುಗೂಡಿಸಿ ಸೂಲಗಿತ್ತಿಯನ್ನು ತಯಾರು ಮಾಡಿ ಅವರಿಗೆ ಸುಖವಾದ ಜೀವನವನ್ನು ಮಾಡಿ ಕೊಡಬಹುದು. ತಮಗೆ ಮುಂದಕ್ಕೆ ದೊರೆಯಬಹುದಾದ ಉತ್ಪತ್ತಿಯನ್ನು ನೆನೆಸಿಕೊಂಡು ಕೆಲವರು ತಿಂಗಳು ಸಂಬಳವು ಇಲ್ಲದೆ ತರಬೇತಿಗೆ ಬರಲೂ ಸಾಕು.

ಈ ಊರಿನಲ್ಲಿ ಪ್ರಸವಕಾಲದಲ್ಲಿ ಪಡುವ ಕಷ್ಟವನ್ನು ನೋಡಿದರೆ ಕರುಳು ಬೇಯುತ್ತಿರುವುದು. ಬಡ ಹೆಂಗಸರ ಮತ್ತು ಮಕ್ಕಳ ಇಂತಹ ಕಷ್ಟಗಳನ್ನು ತಪ್ಪಿಸಲು ಉದಾರಿಗಳಾದ ದೇಶಾಭಿಮಾನಿಗಳು ಮುಂದಕ್ಕೆ ಬರಬಹುದೆಂದು ನಾನು ನಂಬಿದ್ದೇನೆ.

ಎಫ್. ಸಿ. ಫ್ರೇಸರ್,
ಮೇಜರ್ ಐ. ಎಮ್. ಎಸ್.,
ಸಿವಿಲ್ ಸರ್ಜನ್.

ಸ್ತ್ರೀಯರ ನಾಗರೀಕತೆ ಅಥವಾ ಅಲಂಕಾರ

[24 ನೇ ಸಂಚಿಕೆಯಿಂದ ಮುಂದುವರಿದದ್ದು]

(ಜಯಕರ್ನಾಟಕದಿಂದ)

(ಲೇಖಕ—ಬೆಂಗಳೂರು ಶ್ರೀಮತಿ ರಾಜಮ್ಮನವರು)

ಮತ್ತು ನಮ್ಮ ಸ್ತ್ರೀಜಾತಿಗೆ ನಿಜವಾದ ಭೂಷಣವು ಪಾತಿವ್ರತ್ಯವೂ, ಸ್ನೇಹವೂ, ಸುಗುಣವೂ, ಪರೋಪಕಾರ ಮಾಡುವದರಲ್ಲಿ ಪ್ರೀತಿಯೂ, ಪರಪೀಡೆಯಲ್ಲಿ ಪರಾಙ್ಮುಖತೆಯೂ ದೈವಭಕ್ತಿ, ಅತಿಥಿಸತ್ಕಾರ, ಸುಹೃದಯವೂ ಇವೇ ಮುಂತಾದ ಸುಗುಣಗಳೇ ನಿಜವಾದ ಅಲಂಕಾರಗಳು.

ಈಗಲೂ ಅಂಥಾ ಸುಗುಣಶೀಲರಾದ ಸತೀಮಣಿಯರು ನಮ್ಮ ಆರ್ಯಾವರ್ತದಲ್ಲಿ ಇಲ್ಲವೆಂದು ಹೇಳಕೂಡದು. ಇವರುಗಳ ಮಹಿಮೆಯಿಂದಲೇ ಇನ್ನೂ ನಮ್ಮ ಹಿಂದೀಯರು ಉಜ್ಜೀವಿಸುತ್ತಿರುವರು.

ಭಗಿನಿಯರಿರಾ! ತಮ್ಮಲ್ಲಿಯೂ ನನ್ನದೊಂದು ಬಿನ್ನಹ ಉಂಟು. ಸುಮ್ಮನೇ ಪ್ರಸಂಗಗಳನ್ನು ಮಾಡುವುದರಲ್ಲಿಯೂ ಅದನ್ನು ಕೇಳುವುದರಲ್ಲಿಯೂ ಕಾಲಕ್ಷೇಪವಾಗುತ್ತಿದೆಯೇ ವಿನಾ ನಡವಳಿಕೆಯಲ್ಲಿ ಏನೂ ಆದಂತೆ ತೋರಲಿಲ್ಲ.

ಬಯಾಸ್ಕೋಪ (ಮೂಕನಾಟಕ) ಮುಂದಿದ್ದ ಬಳಿ ತಮ್ಮಗಳ ದೃಷ್ಟಿಯನ್ನು ಸ್ವಲ್ಪ ಚಲ್ಲಿರಿ! ತಮ್ಮ ಕುಟುಂಬಗಳೂ ಮಾತೃಭೂಮಿಯೂ ಯಾವ ಸ್ಥಿತಿಯಲ್ಲಿರುವುದೆಂಬುದನ್ನು ಗಮನಿಸದೇ ಅಲ್ಲಿನ ನೋಟದಲ್ಲಿ ಮಗ್ನರಾಗಿ ಚಪ್ಪಾಳೆಗಳನ್ನು ಹೊಡೆಯುತ್ತಾ ಬ್ರಹ್ಮಾನಂದವನ್ನು ಪಡೆದವರಂತೆ ನಟಿಸುತ್ತಾರೆ.

ಮನೆಯಲ್ಲಿ ಮುದ್ದಿನಮಕ್ಕಳು ಅನ್ನವಿಲ್ಲದೆ ಬಳಲುತ್ತಿದ್ದರೂ, ದೇಶದಲ್ಲಿ ಬಡಬಗ್ಗರು ಎರಡು ದಿನಗಳಿಗೊಂದಾವರ್ತಿ ಹೊಟ್ಟೆ ತುಂಬಾ ಅನ್ನವಿಲ್ಲದೆಯೂ ಪೇಚಾಡುತ್ತಿರುವಲ್ಲಿ ಈ ನೋಟಗಳಿಂದಾಗುವುದೇನು? ಡಂಭಾಚಾರದ ಉಪಯೋಗವೇನು? ಇವುಗಳಿಗಿಡುವ ಖರ್ಚು ಬಡವಿದ್ಯಾರ್ಥಿಗಳ ಉದ್ಧರಣಕಾರ್ಯದಲ್ಲಿ ಉಪಯೋಗಿಸಿದರೆಷ್ಟು ಉತ್ತಮವಾದೀತು?

ಪರಮಪವಿತ್ರವಾದ ಈ ಮನುಷ್ಯದೇಹವನ್ನು ಪಡೆದದ್ದಕ್ಕೆ ಪ್ರಯೋಜನವೇನಾಯಿತು? ಜ್ಞಾನವನ್ನು ಸಂಪಾದನೆಮಾಡದಿದ್ದರೆ ನಮ್ಮಗಳ ಜನ್ಮಸಾರ್ಥಕವಾದೀತು! ಈ ಜ್ಞಾನಾರ್ಜನೆಗೆ ನಿಜವಾದ ಸಹಕಾರಿ ವಿದ್ಯೆಯೇ! ಜನ್ಮಸಾರ್ಥಕ್ಯವೂ ವಿದ್ಯಾರ್ಜನೆಯೂ ಒಂದೇ ಎಂದು ಗುರುಜನಗಳು ನುಡಿದಿರುತ್ತಾರೆ. ವಿದ್ಯೆಯಿಂದ ಮಂಕುತನವು ನೀಗುತ್ತದೆ. ಮಂಕುತನ ನೀಗಿದ ಕೂಡಲೇ ಜ್ಞಾನೋದಯವಾಗುತ್ತದೆ. ಜ್ಞಾನೋದಯವಾದೊಡನೆ ತನ್ನ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕೆಂಬ ಬುದ್ಧಿ ಹುಟ್ಟುತ್ತದೆ. ಪ್ರಪಂಚದಲ್ಲಿ ಜನಗಳು ಅನುಭವಿಸುವ ಕಷ್ಟಪರಂಪರೆಗೆ ಅವಿದ್ಯೆಯೇ ಕಾರಣ. ಆದ್ದರಿಂದ ಆ ಮಂಕುತನವನ್ನು ಹೋಗಲಾಡಿಸುವುದಕ್ಕೆ ಶ್ರೇಷ್ಠವಾದ ವಿದ್ಯಾರ್ಜನೆಯನ್ನು ನಾವುಗಳೆಲ್ಲರೂ ಮಾಡಬೇಕು!

ಪೂರ್ವಕಾಲದಲ್ಲಿ ನಮ್ಮ ಹಿಂದುಸ್ಥಾನದಲ್ಲಿ ಜನಸಂಖ್ಯೆ ಈಗಿನಷ್ಟಿರಲಿಲ್ಲ. ಜನಗಳಿಗೆ ಈಗ ದೊರಕುವಷ್ಟು ಸೌಕರ್ಯಗಳು ಇರಲಿಲ್ಲ. ಆ ಕಾಲದವರು ಸ್ವಲ್ಪ ಶ್ರೇಷ್ಠವಾದ ಅಭಿಪ್ರಾಯ—ಉತ್ತಮವಾದ ಮಾರ್ಗಗಳ ಮೇಳಗಳಿಂದ ಉಪಯೋಗಿಸುವುದು ಒಂದುಪ್ಪಾಗಿ, ಆದ್ದರಿಂದ ಅವರುಗಳು ತಮ್ಮ ಜನಾಂಗಕ್ಕಾಗಿ ಹೆಚ್ಚು ಶ್ರಮಪಡಬೇಕಾದ ಅವಶ್ಯಕತೆ ಕಮ್ಮಿಯಾಗಿತ್ತು.

ಮತ್ತು ಅವರುಗಳು ಯಾವಾಗಲೂ ವಿದ್ಯಾರ್ಜನೆಯಲ್ಲಿ ಹೆಚ್ಚು ಆಯುಷ್ಕಾಲವನ್ನು ಕಳೆದು ತಾವು ಜನ್ಮಧಾರಣೆಮಾಡಿದ್ದಕ್ಕೆ ಸಾರ್ಥಕ್ಯವನ್ನು ಪಡೆಯುತ್ತಿದ್ದರು.

ವಿದ್ಯೆಯನ್ನು ಕೃಷಿಮಾಡಲು ಈಗಿನಷ್ಟು ಸಾಧನಗಳಿರಲಿಲ್ಲ. ಆ ಕಾಲದಲ್ಲಿ ಅಚ್ಚು ಪುಸ್ತಕಗಳಿರಲಿಲ್ಲ, ವರ್ತಮಾನಪತ್ರಿಕೆಗಳಿರಲಿಲ್ಲ, ಉಗಿಬಂಡಿಗಳಿರಲಿಲ್ಲ, ಟಪಾಲಿನ ಸೌಕರ್ಯಗಳಿರಲಿಲ್ಲ. ಹಡಗುಗಳಾಗಲೀ ತಂತಿಯಾಗಲೀ ಟೆಲಿಫೋನಾಗಲೀ, ವಿಮಾನವಾಗಲೀ ಇರಲಿಲ್ಲ.

ಮತ್ತು ಕೆಲವು ಪಾಠಶಾಲೆಗಳೂ ದೇವಸ್ಥಾನಗಳೂ ಇದ್ದುವು. ಇವುಗಳೇ ಆ ಕಾಲದ ವಿದ್ಯಾಭ್ಯಾಸದ ಸಲಕರಣೆಗಳಾಗಿದ್ದುವು. ಆದರೂ ಅವರುಗಳಿಗೆ ದೊರೆತದ್ದು ಸ್ವಲ್ಪ ಗ್ರಂಥಗಳೇ. ನಮ್ಮಗಳಿಗಿಂತ ಕೋಟಿಪಾಲು ಹೆಚ್ಚು ಅರಿವನ್ನು ಪ್ರಕಟಪಡಿಸುತ್ತಿದ್ದರು.

ಇಷ್ಟು ಸೌಕರ್ಯವನ್ನು ಪಡೆದಿದ್ದರೂ ಈಗಿನ ಜನಾಂಗವು ಬರಿಯ ಮಾತಿನಲ್ಲಿಯೇ ಕಾಲಕಳೆಯುವರಾಗಿರುತ್ತಾರೆ.

ನಮ್ಮಗಳನ್ನು ಪಾಶ್ಚಿಮಾತ್ಯರು ಸರಿಸಮನಾಗಿ ಕಾಣಬೇಕಾದರೆ ನಮ್ಮ ದೇಶವು ನಾಗರೀಕತೆಯಲ್ಲಿ ಪ್ರಖ್ಯಾತಿಪಡೆಯಬೇಕಾದರೆ, ಚಟುವಟಿಕೆಯಲ್ಲಿಯೂ, ವಿದ್ಯಾರ್ಜನೆಯಲ್ಲಿಯೂ ಕಸಬುದಾರಿಯಲ್ಲಿಯೂ ಆಸಕ್ತಿವುಳ್ಳವರಾಗಬೇಕಾದದ್ದು. ಇದೇ ನನ್ನ ಪ್ರಾರ್ಥನೆಯಾಗಿರುತ್ತೆ.

‖ ಶ್ಲೋಕ ‖

ಅಲ್ಪವಿತ್ತಂ ಕುರೂಪಂ ಸರ್ವತಶ್ಚ ಕುಪಿತಾನ್ ಗುಣಾಢ್ಯಾನ್ ‖
ಸವವರ್ಗ್ಯಾ ಸಹವರ್ತನೀಯಾ ಸರ್ವೇಗುಣಾಃ ಕಾಂಚನಮಾಶ್ರಯಂತಿ ‖
ಕೃಪಣಂ ಮಿತ್ರಂ ಧನ್ಯಾರ್ಹಂ ಪುತ್ರಾಕ್ಷ ದಾನಾಕ್ಷ ಸುಹೃಜ್ಜನಾಶ್ಚ ‖
ತವ ಧರ್ಮಸಂಯುಕ್ತಂ ಸ್ತ್ರೀ ಪ್ರಥಮೋದಿತಾಂ ಭುಜಾಸಕ್ತಾಂ ‖
ಮಾತಾನಿಂದತಿ ನಾಭಿನಂದತಿ ಪಿತಾ ಭ್ರಾತಾ ನ ಸಂಭಾಷತೇ ‖
ಭೃತ್ಯಃ ಕುಪ್ಯತಿ ನಾನುಗಚ್ಛತಿ ಸುತಃ ಕಾಂತಾ ಚ ನಾಲಿಂಗತೇ ‖
ಅರ್ಥಪ್ರಾರ್ಥನ ಶಂಕಯಾನ ಕುರುತೇ ಸಲ್ಲಾಪಮಾತ್ರಂ ಸುಹೃತ್ ‖
ತಸ್ಮಾದರ್ಥಮುಪಾರ್ಜಯ ಶೃಣು ಸಖೇ ಹ್ಯರ್ಥೇನ ಸರ್ವೇವಶಾಃ ‖

ಪ್ರಿಯ ಭಗಿನಿಯರಿರಾ! ಈ ಶ್ಲೋಕಾರ್ಥವನ್ನು ಸರ್ವದಾ ಗ್ರಹಿಸಬೇಕು. ನಿರ್ಮಾಣವಾದವನ್ನೂ ಮರೆಯದೆ ನಿತ್ಯವೂ ಅದನ್ನು ಜಪಿಸಿ ಪರೀಕ್ಷಿಸಲು ಹೊರಡಲು ಧೈರ್ಯವಿರಬೇಕು.

ವ್ಯರ್ಥವಾದ ಡಂಭಾಚಾರದ ಖರ್ಚುಗಳನ್ನು ಬಿಡಲು ಸ್ತ್ರೀಯರು ಪ್ರಿಯರಾದ ನಮ್ಮ ಭಗಿನಿಯರು, ಅದಾವ ಸ್ವದೇಶೀ ವ್ರತವನ್ನಾಚರಿಸಿ ವಿದ್ಯೆ ಧನಗಳನ್ನು ಸಂಪಾದನೆ ಮಾಡುವವರಾಗಿ ಪ್ರಕಾಶಿಸಿ (ಸರ್ವೇ ಜನಾಃ ಸುಖಿನೋ ಭವಂತು) ಎಂಬಂತೆ ಬಾಳುವುದನ್ನು ಕಲಿತುಕೊಳ್ಳುವ ನಮ್ಮ ನಾಡಿನ ಸಂಪದವನ್ನೂ ನಾಗರೀಕತೆಯನ್ನೂ ವೃದ್ಧಿಗೊಳಿಸುವರೆಂದು ಹಾರೈಸುತ್ತೇನೆ.

ಹೆಚ್ಚು ಅರಿತವಳಲ್ಲವಾದ್ದರಿಂದ ನನ್ನ ಅಭಿಪ್ರಾಯದಲ್ಲಿ ತಪ್ಪುಗಳಿದ್ದರೆ ಕ್ಷಮೆಯನ್ನು ಬೇಡುತ್ತೇನೆ.

ಈ ಪುಸ್ತಕವು ಮ॥ ಹರೇಕರ್ ಮಂಜಪ್ಪನವರಿಂದ ವಿರಚಿತವಾದದ್ದು. ಸತ್ಯಾಗ್ರಹಾಶ್ರಮ ಹರಿಹರ, ಇಲ್ಲಿ ಒಂದಾಣೆಗೆ ದೊರೆಕುವುದು.

ಬ್ರಹ್ಮಚರ್ಯ.

(ವಿಮರ್ಶಕ—ಯಂ. ಮಡಿಕೇರಿ ಕೊಡಗು).

ಈ ತೆರನ ಗ್ರಂಥವು ಕನ್ನಡಭಾಷೆಯಲ್ಲಿ ಅಪೂರ್ವ. ಒಂದುವೇಳೆ ಇಲ್ಲವೇ ಇಲ್ಲೆಂದು ಹೇಳಿದರೂ ಆದೀತು. ಗ್ರಂಥಕಾರರು ಸತ್ಯಾಗ್ರಹಿಗಳಾದಕಾರಣ, ಇಂಥ ಗ್ರಂಥವನ್ನು ಬರೆಯಲು ಸಮರ್ಥರಿರುವರು. ಇವರ ಅಭಿಪ್ರಾಯದಲ್ಲಿ ಬ್ರಹ್ಮಚರ್ಯವೆಂದರೆ—ಜನನೇಂದ್ರಿಯ ಅಂದರೆ ವೀರ್ಯವನ್ನು ರಕ್ಷಿಸುವುದು. ಆದರೆ ಬ್ರಹ್ಮಚರ್ಯದ ನಿಜವಾದ ಅರ್ಥ, ‘ಯಾವನೊಬ್ಬ ಹುಡುಗನು ಉಪನಯನವಾಗಿ ವಿದ್ಯಾಸಂಪಾದನೆಗಾಗಿ ತನ್ನ ಗುರುವಿನ ಸನ್ನಿಧಿಯಲ್ಲಿರುವ ಸಮಯ’ ಎಂದು. ಈ ಪುಸ್ತಕದಲ್ಲಿ ಕೇವಲ ಇಂದ್ರಿಯನಿಗ್ರಹ ವಿಚಾರವೇ ಇರುವುದರಿಂದ, ಇಂದ್ರಿಯನಿಗ್ರಹ ಇಲ್ಲವೆ ರತಿಶಾಸ್ತ್ರ ಎಂಬ ಹೆಸರು ಯೋಗ್ಯವಿರುತಿತ್ತು. ಚಿಂತೆ ಇಲ್ಲ.

ಈ ಪುಸ್ತಕವು ನನ್ನ ಕೈಯಲ್ಲಿ ಬಿದ್ದೊಡನೆಯೇ, ಬಹು ಬೇಗನೆ ಓದಿ ಮುಗಿಸಬೇಕೆಂದು ಸಂಕಲ್ಪಿಸಿದೆ. ಒಂದಾವರ್ತಿ ಓದುವಾಗಲೇ, ಭಾಷಾಸರಳತೆಯೂ ವಿಷಯಸೌಂದರ್ಯವೂ ಇನ್ನೊಮ್ಮೆ ಪಠಿಸಬೇಕೆಂದು ನನ್ನ ಮನವನ್ನು ಪ್ರೇರೇಪಿಸಿದುವು. ಇಂಥಾ ಕೆಲಸಕ್ಕೆ ಮನವನ್ನು ನಿಗ್ರಹಿಸಬಹುದೇ? ಎಂತೂ ಇನ್ನೊಮ್ಮೆ ಓದದೆ ಬಿಡಲಿಲ್ಲ. ಪ್ರತಿಯೊಬ್ಬ ಗೃಹಸ್ಥನೂ ಓದಬೇಕಾದ ತಿರುಳಿನ ಪುಸ್ತಕವೆಂದು ಆಗ ನನಗೆ ಮನದಟ್ಟಾಯಿತು.

ವೀರ್ಯೋತ್ಪತ್ತಿ, ವೀರ್ಯನಾಶದಿಂದುಂಟಾಗುವ ಕೆಡಕುಗಳು ಬಾಲ್ಯವಿವಾಹದಿಂದುಂಟಾಗುವ ಹಾನಿ, ವೀರ್ಯರಕ್ಷಣೆಯ ಉಪಾಯ ಇತ್ಯಾದಿ ಸಂಗತಿಗಳು ಚೆನ್ನಾಗಿ ವಿಸ್ತೃತವಾಗಿವೆ. ಮಹಾತ್ಮ ಗಾಂಧಿಯವರ ಆರೋಗ್ಯನಿಯಮಗಳು ಸಹ ಇವೆ. ಯುವಕರಿಗೆ ಬೇಕಾದಷ್ಟು ಬುದ್ಧಿವಾದವಿದೆ. ಪಾಶ್ಚಾತ್ಯಶಾಲೆಗಳಲ್ಲಿ ರತಿಶಾಸ್ತ್ರ (Sexuology) ವನ್ನು ಕಲಿಸುತ್ತಿರುವಾಗ, ಹಿಂದೀಶಾಲೆಗಳಲ್ಲಿ ಯಾಕೆ ಈ ರೀತಿಯ ಬೋಧನೆ ಇರಬಾರದು? ಈಗಿನ ಬಾಲಕರು ಅಪಕ್ವಭೋಗ್ಯ ಅವೇಗದ ವಾಸನೆಗಳ ದೆಸೆಯಿಂದ ತಮ್ಮ ಶರೀರವನ್ನು ಹಾಳುಮಾಡಿಕೊಳ್ಳುತ್ತಿರುವರು. ಇಂಥಾ ಗ್ರಂಥಗಳನ್ನೋದುವುದರಿಂದ ಎಷ್ಟೋ ರಸಿಕ ಯುವಕರು ಅಕಾಲಮರಣದಿಂದ ತಪ್ಪಿಸಿಕೊಳ್ಳುವರು. ಇಷ್ಟೇ ಅಲ್ಲ. ಮುಂದಿನ ಜನಾಂಗವು ಹೆಚ್ಚು ಶಕ್ತಿಯನ್ನು ಹೊಂದಿ ಯಶಸ್ಸನ್ನು ಸಂಪಾದಿಸುವುದು. ‘ಗೃಹಸ್ಥಾಶ್ರಮದಲ್ಲಿ ವೀರ್ಯವನ್ನು ಕೇವಲ ವಿಷಯೋಪಭೋಗಕ್ಕಾಗಿ ವಿನಿಯೋಗಿಸುವುದು ಮಹಾ ಪಾಪಕೃತ್ಯವಾಗಿದೆ. ಕೇವಲ ಸಂತಾನಪ್ರಾಪ್ತಿಗಾಗಿಯೇ ಕಾಲವರಿತು ವೀರ್ಯವನ್ನು ಪಯೋಗಿಸಬೇಕು.’ ‘ಯಾರು 25 ವರುಷಗಳವರೆಗೆ ವೀರ್ಯವನ್ನು ಸಕಲ ರೀತಿಗಳಿಂದಲೂ ಸಂರಕ್ಷಿಸುತ್ತಾರೋ ಅವರು ಧನ್ಯರೇ ಸರಿ.’ ಮಹಾತ್ಮ ಗಾಂಧಿಯವರು ಹೀಗೆ ಹೇಳಿರುವರು—‘ಯಾರು ಲಗ್ನವಾಗಿಲ್ಲವೋ, ಅವರು ಈ ಕಠಿಣಕಾಲದಲ್ಲಿ ವಿವಾಹವಾಗಲೇಬಾರದು. ಒಂದುವೇಳೆ ವಿವಾಹವಾಗದೆ ಇರಲು ಸಾಧ್ಯವೇ ಇಲ್ಲದಿದ್ದರೆ ಅದಷ್ಟು ನಿಧಾನವಾಗಿ ಲಗ್ನವಾಗಬೇಕು. 25 ಅಥವಾ 30 ವರುಷಗಳೊಳಗಾಗಿ ಲಗ್ನವಾಗುವುದೇ ಇಲ್ಲವೆಂದು ತರುಣರು ಸಂಕಲ್ಪಮಾಡಬೇಕು. ಬ್ರಹ್ಮಚರ್ಯವನ್ನಾಚರಿಸುವುದರಿಂದ ಹೆಚ್ಚಿನ ಆರೋಗ್ಯಭಾಗ್ಯವು ಲಭ್ಯವಾಗುತ್ತದೆ.’

ಇವರು ಇನ್ನೂ ಒತ್ತಿ ಹೇಳುವುದೇನೆಂದರೆ—‘ಪರಸ್ತ್ರೀಗಮನಕ್ಕಿಂತ ಆತ್ಮಹತ್ಯವು ನೂರುಪಾಲು ಮೇಲು. ವಿವಾಹಿತರಾಗಲಿ ಅಥವಾ ಅವಿವಾಹಿತರಾಗಲಿ ವೀರ್ಯವನ್ನು ಸಂರಕ್ಷಿಸಬೇಕು.’

ಶರೀರವಾಗಲಿ ಮನೋಬುದ್ಧಿಗಳಾಗಲಿ ಸ್ವಸ್ಥವಾಗಿರಬೇಕಾದರೆ ವೀರ್ಯವು ನಾಶವಾಗದಂತೆ ನೋಡಿಕೊಳ್ಳುವುದು ಅತಿ ಅವಶ್ಯ. ಒಂದು ಹನಿ ವೀರ್ಯ ತಯಾರಾಗಲಿಕ್ಕೆ ನಾಲ್ವತ್ತು (ಕೆಲವರು ಅರುವತ್ತು) ಕೊಡು ಶುದ್ಧರಕ್ತವು ಬೇಕೆಂದು ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಆದುದರಿಂದ ಸ್ವಾಮಿ ರಾಮತೀರ್ಥರ ಬೋಧನೆಯನ್ನು ಅರಿಯಿರಿ, ಮಿತ್ರರೆ! ನೀವು ಯಾವಾಗ ಎಚ್ಚರಾಗುವಿರಿ? ನಿಮಗೆ ಯಾವಾಗ ಬುದ್ಧಿ ಬರುವುದು? ನೀವು ಹಾಳಾಗುವುದಲ್ಲದೆ ದೇಹವೂ ಹಾಳಾಗುವಂತೆ ವೀರ್ಯವನ್ನು ವ್ಯರ್ಥವಾಗಿ ಕಳೆದುಕೊಳ್ಳಬೇಡಿ.

ಸರ್ವದಾ ಈ ಗ್ರಂಥವನ್ನು ಆಗಾಗ ಓದಿನೋಡುತ್ತಾ ವಾಗ್ರಪಂಚ ತರದಿಂದಿನ ಅಡಿಯಲ್ಲಿ ಇಟ್ಟುಕೊಳ್ಳುವುದು ಹಿತಕರ. ತರುಣಗಾರರು ಈ ಪುಸ್ತಕವನ್ನು ಓದಿ ಆಗ ಕರುವಂದಿಗಳಿಗೆ ಹಾಗೆ ಉಪದೇಶ ಮಾಡುವುದು ಉತ್ತಮ. ಇವರಿಂದ ಓದುವವರು ತುಂಬಾ ಅನುಗ್ರಹೀತರಾಗುವರು. ಇಷ್ಟು ಅತಿ ಸಣ್ಣ ಮತ್ತು ಬೆಲೆಯುಳ್ಳ ಪುಸ್ತಕ ಓದಿ ಸುಖಿಸಿರಿ.

“ವಿಮರ್ಶಕ”

ವರ್ತಮಾನ ಸಂಗ್ರಹ

ಒಳದೇಶ

ಇದೇ ನವಂಬರು ತಾರೀಕು 23 ನೇ ಶುಕ್ರವಾರ ದಿನ ಕೃತ್ತಿಕಾನಕ್ಷತ್ರದಲ್ಲಿ ಪಾಡಿ ಸುಬ್ರಾಯ ದೇವರ ಕಳಾವೃದ್ಧ್ಯ ವಾಗುತ್ತೆ ನವಂಬರು 24 ನೇ ಶನಿವಾರ ದಿನ ರೋಹಿಣೀ ನಕ್ಷತ್ರದಲ್ಲು ದೇವಪೊಳ್ದು ಆ ದಿನ ಸಾಯಂಕಾಲ 8 ಗಂಟೆಗ ನೆರೆಕಟ್ಟುವುದು 9 ಗ ಟೆಗೆ ಕದಿರು ಕುಯ್ಯುವುದು, 10 ಗಂಟೆಗೆ ಊಟಮಾಡುವ ಶುಭ ಮುಹೂರ್ತವು ಇದೇ ತಾ|| 25 ನೇ ಆದಿತ್ಯವಾರದಿನ ಮೃಗಶಿರಾ ನಕ್ಷತ್ರದಲ್ಲು ನಾಡುಪೊಳ್ದು ಆದಿನ ಸಾಯಂಕಾಲ 9 ಗಂಟೆಗೆ ನೆರೆಕಟ್ಟುವುದು 10 ಗಂಟೆಗೆ ಕದಿರು ಕುಯ್ಯುವುದು 11 ಗಂಟೆಗೆ ಊಟಮಾಡುವ ಶುಭಮುಹೂರ್ತವು

ಪೊನ್ನಂಪೇಟೆಗೆ ಸೇರಿದ ಹುದೂರಿನಲ್ಲಿ ಸಿಡುಬು ರೋಗವು ತಲೆದೋರಿದೆಯೆಂತಲೂ ಪಾರುಪತ್ಯಗಾರರೂ ವೇಕ್ಸಿನೇಟರೂ ರಾ ವಿಷಯ ಕುಂಬಾ ಶೋಂದರೆ.. ಸ್ಸ ತೆಗೆದು ಕೊಳ್ಳುತ್ತಿದ್ದಾರೆಂದೂ ವರ್ತಮಾನ

ಕೆಲವು ಕಾಲಕ್ಕೆ ಹಿ ದೆ ಘೋರ ಯುದ್ಧವು ನಡೆಯುತ್ತಿದ್ದಾಗ ಸಂತೆಯಲ್ಲಿ ಎಲ್ಲಿನೋಡಿದರೂ ಮಾರ್ಕೆಟ್ಟೂ ಅಂಗಡಿಗಳಲ್ಲೂ ಗಾಡಿಗಳ ಹಿಂದೆಯೂ ದಾರಿಯು ಆ ಯುದ್ಧದ ಸಮಾಚಾರವೇ ಜನರು ಮಾತಾಡುತ್ತಿದ್ದರು, ಹಾಗೆಯೇ ಈಗ ಪ್ರತಿಯೊಬ್ಬನೂ ಕೌನ್ಸಿಲು ಮೆಂಬರ ತನಕ್ಕೆ ಓಟುಕೊಡುವುದರ ವಿಷಯ ಪ್ರಸ್ತಾಪಿಸುತ್ತಿರುವುದು. ಕೌನ್ಸಿಲು ಮೆಂಬರುತನಕ್ಕೆ ಉಮೇದುವಾರರಾಗಿ ನಿಲ್ಲಲಿಚ್ಛಿಸುವವರ ಉಪನ್ಯಾಸವೂ ಓಡಾಟವೂ ಹೇಳಲಸಾಧ್ಯ ಇಷ್ಟಕ್ಕೆ ತರಿಂದ ಸುಮಾರು ಎಪ್ಪತ್ತು ವರ್ಷದ ಮುದುಕರಿಗೂ ಪ್ರಾಯವೃದ್ಧರಿಗೂ ವೆಂಬರುಗಳಾಗಲು ಪ್ರಯತ್ನಿಸುತ್ತಿರುವರು ಉಮೇದುವಾರರುಗಳ ಪರವಾಗಿ ಓಟು ಕೊಡುವಂತೆ ಜನರಿಗೆ ಬೋಧಿಸಲ ಅಲ್ಲಲ್ಲಿ ಏಜೆಂಟರುಗಳ ಪ್ರಯತ್ನವೆಂದು ಮೊದಲಾಗಿ ಒಂದು ವಾರ್ತೆ

ಕೌನ್ಸಿಲು ಮೆಂಬರುತನಕ್ಕೆ ಓಟು ಕೊಡುವ ಹಕ್ಕಿರುವ ಸರ್ಕಾರಿ ಉದ್ಯೋಗಸ್ಥರು ಉಮೇದ್ವಾರರಿಗೆ ತಮ್ಮ ಓಟುಗಳನ್ನು ಮಾತ್ರ ಕೊಡಬಹುದೆಂತಲೂ ಯಾವ ಉಮೇದುವಾರನಿಗಾಗಲೀ ಓಟುಕೊಡಿ ಎಂದು ಬೇರೆ ಜನರಿಗೆ ಬೋಧಿಸಕೂಡದೆಂತಲೂ ಆದರೆ ಪಟೇಲರ ಪೂರ್ತಿ ಸಂಬಳದ ಸರ್ಕಾರಿ ಉದ್ಯೋಗಸ್ಥರಲ್ಲದವರಾದುದರಿಂದ ಅವರು ಚುನಾವಣೆಯ ವಿಷಯದಲ್ಲಿ ಉಮೇದುವಾರರುಗಳ ಏಜೆಂಟರುಗಳಂತೆ ಕೆಲಸಮಾಡಬಹುದೆಂತಲೂ ಸರ್ಕಾರಿ ಆಫೀಸುಗಳಿಗೆಲ್ಲಾ ಒಂದು ಸರ್ಕಲಾರು ಸುತ್ತಾಡುತ್ತಿದೆಯೆಂದು ವರ್ತಮಾನವಿದೆ

ನವಂಬರು ತಾ|| 16 ರಲ್ಲು ಮಡಿಕೇರಿ ಹೈಸ್ಕೂಲು ಹಾಲಿನಲ್ಲಿ ಕಮಿಷನರವರ ಅಧ್ಯಕ್ಷತೆಯಲ್ಲಿ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿನ ಜನರಲ್ ಮೀಟಿಂಗು ನಡೆಯಿತು ಇದರ ವಿವರ ಇನ್ನೊಂದು ಕಡ ಪ್ರಕಟವಾಗಿದೆ

"ಕೊಡಗು" ಕಂಪೆನಿಯವರು ಈಗ ತೆಗೆದುಕೊಂಡಿರುವ ದೊಡ್ಡ ಡಬ್ಬಲ್‌ಕ್ರೌನ್ ಪ್ರೆಸ್ಸಿನ ಕ್ರಯವನ್ನು ಬೇಗನೆ ಕೊಡಬೇಕಾಗಿರುವುದರಿಂದಲೂ ಚಿಕ್ಕ ಚಿಕ್ಕ ಪ್ರಿಂಟಿಂಗ್ ಕೆಲಸಗಳಿಗಾಗಿ ಇನ್ನೊಂದು ಚಿಕ್ಕ ಪ್ರೆಸ್ ವಡನೆ ತೆಗೆಯಬೇಕಾಗಿರುವುದರಿಂದಲೂ ಷೇರುದಾರರು ತಮ್ಮ ಷೇರುಗಳ ಬಾಕ್ಕ್ ಬಾಕಿ ಕಂತುಗಳ ಹಣವನ್ನು ವಡನೆ ಪಾವತಿ ಮಾಡಬೇಕೆಂದು ಕಾರ್ಯಾಧ್ಯಕ್ಷರ ಕೋರಿಕೆ

ಕಳೆದ ಮಳೆಗಾಲದಲ್ಲಿ ನಷ್ಟಪಟ್ಟವರ ಪೈಕಿ ನಾಲಡಿ ಗ್ರಾಮದ ಪರದಂಡ ಅಕ್ಕವ್ವನವರಿಗೆ ಜೀವನಾಂಶದ ಉದ್ದಿಶ್ಯ 15 ರೂಪಾಯಿಯೂ ಬಲಮುರಿ ಗ್ರಾಮದ ಪಾಲಂದಿರ ಪೊನ್ನಪ್ಪನವರಿಗೆ ಅವರ ಬಿದ್ದು ಹೋದ ಮನೆ ರಿಪೇರಿ ಬಗ್ಗೆ 30 ರೂಪಾಯಿಯೂ ಕೊಳಕೇರಿ ಗ್ರಾಮದ ಕರಿಯಂಡ ಪೊನ್ನಪ್ಪ ನವರಿಗೆ ಗದ್ದೆ ನಷ್ಟದ ಪರಿಹಾರಕ್ಕಾಗಿ 25 ರೂಪಾಯಿಯೂ ನಹ ಕೊಡಗು ರಿಲೀಫ್ ಫಂಡಿನಿಂದ ಧರ್ಮಾರ್ಥವಾಗಿ ಕೊಡಲ್ಪಟ್ಟಿದೆ ಇಷ್ಟರ ವರೆಗೆ ಈ ಫಂಡಿನಿಂದ ಕೊಡಗಿನವರಿಗೆ 230-3-6 ಯೂ, ದಕ್ಷಿಣ ಕನ್ನಡ ಜಿಲ್ಲೆಯವರಿಗೆ 181-14-6 ಯೂ ಉಚಿತಾರ್ಥವಾಗಿ ಕೊಡಲ್ಪಟ್ಟಿದೆ

ಹಾಕಿ ಟೂರ್ನಮೆಂಟಿನಲ್ಲಿ ತಾ|| 12 ರಲ್ಲು ಎಲಿಮೆಂಟರಿ ಶಾಲೆಗಳ ಟೀಮು ವೀರರಾಜಪೇಟೆ ಹೈಸ್ಕೂಲಿನ ಟೀಮನ್ನು ಸೋಲಿಸಿತು ಆದರೆ ಈ ಟೂರ್ನಮೆಂಟಿನಲ್ಲಿ ಆಡಿದ ಟೀಮುಗಳಪೈಕಿ ವೀರರಾಜಪೇಟೆ ಹೈಸ್ಕೂಲಿನ ಟೀಮೇ ರೂಲ್ಸಿಗೆ ಅನುಸರಿಸಿ ಉತ್ತಮವಾಗಿ ಆಡಿದೆಂದು ಜನರ ಅಭಿಪ್ರಾಯ ತಾ|| 13 ರಲ್ಲು ಎಲಿಮೆಂಟರಿ ಶಾಲೆಗಳ ಟೀಮೂ ಮಡಿಕೇರಿ ಬಾಲಸಮಾಜ ಟೀಮೂ ಆಡಿದಲ್ಲು ಯಾರಿಗೂ ಸೋಲ್ ಆಗಲಿಲ್ಲ ತಾ|| 14 ರಲ್ಲು ಪುನಹ ಆಡಿದಲ್ಲಿ ಬಾಲಸಮಾಜದವರು ಎಲಿಮೆಂಟರಿ ಶಾಲೆಗಳ ಟೀಮನ್ನು ಸೋಲಿಸಿದರು ಆಟದ ನಂತರ ಸ್ಕೂಲು ಇನ್‌ಸ್ಪೆಕ್ಟರಾದ ಮೆ|| ಯೇಟ್ಸ್‌ರವರು ಹಾಕಿ ಆಡುವುದರ ವಿಷಯ ಕೆಲವು ಬುದ್ಧಿವಾದಗಳನ್ನು ಹೇಳಿ ಟೂರ್ನಮೆಂಟಿನಲ್ಲಿ ಗೆದ್ದಂತ ಬಾಲಸಮಾಜದ ಟೀಮಿಗೆ ಒಟ್ಟನ್ನು ಇನಾಮಾಗಿ ಕೊಟ್ಟರು

ಕೊಡಗು ಜಮಾನುದಾರರ ಸಂಘದ ಡೆಪ್ಯುಟೇಶನಿಗೆ ಮೈಸೂರಿನವರು ಇದೇ ತಾರೀಕು 30 ರಲ್ಲು ಮೈಸೂರಿನಲ್ಲಿ ಭೇಟಿಕೊಡುವರು

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ ಪದವಿಯಿಂ ಪಾಯಂ ಅದದ್ದಕ್ಕಾಗಿ ಮೆ|| ಕೆ. ಚಂಗಪ್ಪ ರಾ|| ಸಾ| ರವರಿಗೆ ಕೊಡಗಿನ ಗೌಡುಗಳವರು ಸೇರಿ ತಾರೀಕು 17 ರಲ್ಲು ಮಡಿಕೇರಿ ಪ್ರೆಸ್ ಹಾಲಿನನಲ್ಲು ಒಂದು ಎಂಟರ ಟೆಯಿನ್‌ಮೆಂಟನ್ನು ಕೊಟ್ಟರ

ತಾ|| 16 ರಲ್ಲು ಮಡಿಕೇರಿ ಮುನ್ಸಿಪಲ್ ಹಾಲಿನಲ್ಲಿ ಕೊಡಗು ಜಮಾನುದಾರರ ಸಂಘದ ಕಮಿಟಿಯ ಒಂದು ಮೀಟಿಂಗೂ ಕೋಆಪರೇಟಿವ್ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಒಂದು ಮೀಟಿಂಗೂ ನಡೆದವು

ಕೊಳಕ್ಕೇರಿ ಗ್ರಾಮದಲ್ಲಿ ವಾರೆ ಪರಮೇಶ್ವರಯ್ಯನವರ ಮನೆಗೆ ತಾ|| 11-11-23 ರಲ್ಲಿ ಬೆಂಕಿ ಬಿದ್ದು ಬೆಂದು ಹೋಗಿದೆಯೆಂದೂ ಸುಮಾರು 300 ರೂ ನಷ್ಟವಾಗಿದೆಯೆಂದೂ ವರ್ತಮಾನ

ಈಗ ಇಲ್ಲಿ ಎಗ್ಸಿಕ್ಯೂಟಿವ್ ಇಂಜಿನೀಯರಾಗಿದ್ದ ಮೆ|| ಎಂ ಜಿ ಸ್ಲಾಟ್ಸ್‌ನವರು ತಾ|| 27 ರಲ್ಲು ಇಲ್ಲಿಂದ ಹೋಗುವರೆಂತಲೂ ಇವರ ಬದಲು ಇಲ್ಲಿಗೆ ಎಗ್ಸಿಕ್ಯುಟಿವ್ ಇಂಜಿನಿಯರಾಗಿ ಸೇಲಮಿನಿಂದ ಮೆ|| ಸಿ ಆರ್ ರಿಚರ್ಡ್ಸನ್‌ರವರು ಬರುವರೆಂತಲೂ ತಿಳಿಯಬರುತ್ತದೆ

'ಶ್ರೀ ಕಾವೇರಿ ಮೋಟಾರುಬಸ್ಸು' ಸರ್ವಿಸು ತಾ|| 15 ರಿಂದ ಮಡಿಕೇರಿಯಿಂದ ವೀರರಾಜಪೇಟೆಗೆ ನಡೆಯಲು ಪ್ರಾರಂಭವಾಗಿದೆ ತಾತ್ಕಾಲಿಕ ಲೈಸನ್ಸು ಪಡೆದು ವೀರರಾಜಪೇಟೆಯಿಂದ ಮಡಿಕೇರಿಗೆ ನಡೆಯುತ್ತಿದ್ದ "ಸಕ್ಕನಾರಾಯಣಬಸ್ಸು' ಸರ್ವೀಸು ತಾ|| 19 ರಿಂದ ಈ ಲೈಸನ್ಸಿಲ್ಲಿ ನಿಲ್ಲಿಸಲ್ಪಟ್ಟಿದೆ 'ಶಂಕರ್ ಎಟ್ಟಲ್ ಮೋಟಾರುಬಸ್ಸು' ಸರ್ವೀಸು ಈಗ ಮಡಿಕೇರಿಯಿಂದ ಬೆಳಿಗ್ಗೆ 7-30 ಗಂಟೆಗೆ ಹೊರಟು ಸಾಯಂಕಾಲಕ್ಕೆ ಮಂಗಳೂರಿಗೆ ತಲುಪುವಂತೆ ಏರ್ಪಾಡು ಮಾಡಲಾಗಿದೆ

ಕಾವೇರಿ ಸಂಕ್ರಮಣ ಕಳೆದ ನಂತರ ದೇಶದಲ್ಲಿ ಮಳೆಯೇ ಬಾರದ್ದರಿಂದ ಭತ್ತದ ಬೆಳೆಯು ಕದಿರು ಬಾಟುವಷ್ಟು ತೊಂದರೆಯಾಗಿದೆ ಕರೆಗದ್ದೆಗಳೆಲ್ಲಾ ಒಣಗಿ ಹೋಗಿವೆ ಮುಖ್ಯವಾಗಿ ಹಿಂದೆ ನೆಟ್ಟ ಬೆಳೆಗೆ ಇದರಿಂದ ಬಹಳ ದೋಷವುಂಟಾಗಿದೆ ಸಾಧಾರಣ ಎಲ್ಲಿ ನೋಡಿದರೂ ಈ ವರ್ಷ ಬೆಳೆಯೇ ಕಡಿಮೆ ಇದರಲ್ಲೂ ಈಗ ಅತ್ಯವಶ್ಯವಾಗಿರುವಾಗ್ಗೆ ಮಳೆ ಇಲ್ಲದ್ದರಿಂದ ಬೆಳೆಯು ಮತ್ತಷ್ಟು ಕಡಿಮೆಯಾಗುವುದರಿಂದ ರೈತರ ಮುಖವು ಬಾಡುತ್ತಾ ಬರುತ್ತಿದೆ

ಸಬ್ ಅಸಿಸ್ಟೆಂಟ್ ಸರ್ಜನರಾದ ಮೆ|| ಎಂ ವಿ ನಾಯಡುರವರನ್ನು ವೀರರಾಜಪೇಟೆಯಿಂದ ಸಾಮ್ವಾರಪೇಟೆಗೂ ಮೆ|| ಬಿ ವೆಂಕಟರಾಮಯ್ಯನವರನ್ನು ಸಾಮ್ವಾರಪೇಟೆಯಿಂದ ವೀರರಾಜಪೇಟೆಗೆ ವರ್ಗಾಯಿಸಿರುವರು.

ಸನಿವಾರ ಸಂತೆ ಮತ್ತು ಕೊಡ್ಲಿಪೇಟೆಯಲ್ಲಿ ಪ್ಲೇಗು ತಲೆದೋರಿದೆಯೆಂದು ತಿಳಿಯಬರುತ್ತದೆ

ಹುತ್ತರಿಹಬ್ಬಕ್ಕಾಗಿ ಶಾಲೆಗಳಿಗೂ ಕೊಡಗು ಉದ್ಯೋಗಸ್ಥರಿಗೂ ನವಂಬರು ತಾ|| 23 ರಿಂದ ಡಿಸೆಂಬರು 2 ರ ವರೆಗೆ ರಜೆ ಇದೆ "ಕೊಡಗು" ಆಫೀಸು ಈ ತಾ|| 24 ರಿಂದ 30 ರ ವರೆಗೆ ಮುಚ್ಚಲ್ಪಡುವುದು

ಹಿಂದೂದೇಶ.

ಹಿಂದೂಮತದಿಂದ ಬೇರೆ ಮತಗಳಿಗೆ ಸೇರಿಸಲ್ಪಟ್ಟಿದ್ದ ಜನರನ್ನು ಪುನಹ ಹಿಂದೂಮತಕ್ಕೆ ವಾಪಾಸು ತೆಗೆದುಕೊಳ್ಳಲಿಕ್ಕಾಗಿ ಹೊರಟಿರುವ ಶುದ್ಧಿ ಚಳವಳಿಗೆ ಮಹಾರಾಜರು 500 ರೂಪಾಯಿ ಉಚಿತಾರ್ಥವಾಗಿ ಕೊಡುತ್ತೇನೆಂದು ಬೊಂಬಾಯಿಯ ಒಬ್ಬ ಕೋಟ್ಯಾಧೀಶ್ವರನು ವಾಗ್ದಾನ ಮಾಡಿರುವನು

ತಾ|| 15 ರಲ್ಲು ಬಂಗಾಳದ ನ್ಯಾಯವಿಧಾಯಕ ಸಭೆಗೆ ಮೆಂಬರುಗಳ ಚುನಾವಣೆಯು ನಡೆಯಿತು

ಹಿಂದೂಸ್ತಾನ ಸ್ತ್ರೀಯರ ಟೀಚರ್ಸ್ ಟ್ರೇನಿಂಗ್ ಫಂಡಿಗೆ ಗ್ವಾಲಿಯಾರದ ಮಹಾರಾಜರು 25 000 ರೂ. ಯನ್ನೂ ಇಂದೂರಿನ ಮಹಾರಾಜರು 10 000 ರೂ ಯನ್ನೂ ಕೊಟ್ಟಿರುವರು

ಪಂಜಾಬಿನ ನ್ಯಾಯವಿಧಾಯಕ ಸಭೆಯಲ್ಲಿ ಆಗಾಗ್ಗೆ ಪ್ರಶ್ನೆ ಹಾಕಿದರ ಫಲಿತಾಂಶವಾಗಿ ಸರ್ದಾರ್ ರಘುಬೀರ್‌ಸಿಂಗ್ ಮತ್ತು ಪಾರ್ವತೀದೇವಿ ಎಂಬ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿರುವರು

ಪರಾಸ್ಪುರದಲ್ಲಿ ಹಾವಳಿ ಮಾಡುತ್ತಿದ್ದ ಭಾಟು ಎಂಬ ದಂಗೆ ಕೋರರ ಪಂಗಡದ ಮುಖಂಡನಾದ ಸುಲ್ತಾನನ್ನು ಪೋಲೀಸಿನವರು ಕಳೆದ 18 ತಿಂಗಳುಗಳಿಂದ ಹುಡುಕುತಾ ಇದ್ದು ಈಗ ಹಿಡಿದಿರ ವರಂತೆ

ತಾ|| 15 ರಲ್ಲು ಡಾ|| ಮಹ್ಮದ್‌ರವರ ಅಧ್ಯಕ್ಷತೆಯಲ್ಲು ಅನೇಕ ಕಾಂಗ್ರೆಸ್ ಮುಂದಾಳುಗಳು ನೆರೆದಿದ್ದ ಒಂದು ಮೀಟಿಂಗು ಡೆಲ್ಲಿಯಲ್ಲಿ ನಡೆದು ಹಿಂದೂ ಮುಸಲ್ಮಾನರ ಐಕ್ಯಮತ್ಯದ ಸ್ವರಾಜ್ಯವಾದ ಭಾಷಣ ಮಾಡಿದರು

ಕಲ್ಕತ್ತಾ ಪಟ್ಟಣದಲ್ಲಿರುವ ಪ್ರಾದ್ಯಾನದ ಶ್ರೀ ಜೋರಾವರ್ ಸಿಂಗ್ ಜಿ ಠಾಕೂರ್ ಸಾಹೇಬರು ವಿಶ್ವಭಾರತಿಗೆ 15000 ರೂಪಾಯಿ ಉಚಿತಾರ್ಥವಾಗಿ ದಯಪಾಲಿಸಿರುವರು.

18 ನೇ ತಾರೀಖಿನ ದಿನದ ಗಾಂಧಿ ದಿನವನ್ನು ಅನೇಕ ಕಡೆಗಳಲ್ಲಿ ಜನರು ಮೀಟಿಂಗುಗಳ ಮೂಲಕವೂ ಮೆರವಣಿಗೆಗಳ ಮೂಲಕವೂ ಆಚರಿಸಿದರು. ಮದ್ರಾಸಿನವರೂ ಬಹು ಸಂಭ್ರಮದಿಂದ ನಡಿಸಿದರು

ಮದ್ರಾಸಿನ ಹೊಸಕೌನ್ಸಿಲು ಮೀಟಿಂಗು ಇದೇ ತಾ|| 26 ರಲ್ಲು ನಡೆಯುವುದು ಮೆಂಬರುಗಳು ಪ್ರಮಾಣ ವಚನಕೆಗೆ ರುಜು ಹಾಕಿದನಂತರ ಬಾಕಿ ಕೆಲಸಗಳು ನಡೆಯುವವು

ಮದ್ರಾಸು ಸರ್ಕಾರದ ಹಳೇ ಮಂತ್ರಿಗಳು ರಾಜೀನಾಮೆ ಕೊಟ್ಟು ಹೊಸ ಮಂತ್ರಿಗಳು ಬೇಗನೆ ನೇಮಿಸಲ್ಪಡುವರು ಹಳೇ ಮಂತ್ರಿಗಳ ಪೈಕಿ ಪನಗಾಲದ ರಾಜರೂ ಮೆ|| ಎ ಪಾತ್ರೋರವರೂ ಪುನಹ ಮಂತ್ರಿಗಳಾಗಿ ನೇಮಿಸಲ್ಪಡುವ ಸಂಭವವಿದೆಯಂತೆ

ಮದ್ರಾಸ ಗವರ್ನರವರು ರಾ|| ಬ|| ಎ ಮಾಸಿಲಾಮಣಿ ಪಿಳ್ಳೆಯವರನ್ನು ಮೆ|| ಜಸ್ಟಿಸ್ ಕೋಟ್ಸ್ ಟ್ರಾಟರ್‌ರವರ ಗೈರುಹಾಜರಿನಲ್ಲಿ ಮದ್ರಾಸು ಹೈಕೋರ್ಟ್ ಜಡ್ಜರಾಗಿ ನೇಮಿಸಿರುವರು.

ಡಾಕ್ಟರ ಯು ರಾಮ ರಾಯರು ಮದ್ರಾಸು ನ್ಯಾಯವಿಧಾಯಕ ಸಭೆಗೆ ಮೆಂಬರಾಗಿ ಚುನಾಯಿಸಲ್ಪಟ್ಟಿರುವರು

ಅಖಿಲಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗು ತಾ|| 13 ರಲ್ಲು ಅಮೃತಸರದಲ್ಲಿ ನಡೆಯಿತು ಅಕಾಲಿಗಳ ಈಗಿನ ಸ್ಥಿತಿಯ ವಿಷಯವೂ ನವಿನಯ ರಾಜ್ಯದ ಭಾಗದ ವಿಷಯವೂ ಚರ್ಚಿಸಲ್ಪಟ್ಟಿತು ಚರ್ಚೆಯು ಗುಪ್ತವಾಗಿ ಮಾಡಲ್ಪಟ್ಟಿತು

ಆರ್ಕರ್ ಸೀ ಮರ್ಸನ್ ಮೆಮೋರಿಯಲ್ ಫಂಡಿನಿಂದ ಒಂದ ಸಾವಿರ ಪೌನುಗಳನ್ನು ಬರ್ಮದಲ್ಲಿ ಕುರುಡರಿಗೆ ಮನೆಗಳನ್ನು ಕಟ್ಟಿಸಿಕೊಡಲಿಕ್ಕಾಗಿ ಬೈಸರಾಯರು ಬರ್ಮಾ ಗವರ್ನರವರಿಗೆ ಕೊಟ್ಟಿರುವರು.

ತಾ|| 14 ರಲ್ಲ ಪ್ರಾಕಶಾಲ ನರಾಚಿ ಟ್ರಿಡ ಒಂದು ಬಂದಿಗ ಬೆಂಕಿ ಬಿದ್ದು ಸುಮಾರು ಒಂದ ಲಕ್ಷ ರೂಪಾಯಿಯಷ್ಟು ನಷ್ಟ ಸಂಭವಿಸಿದೆ

ಈಗ ಚುನಾವಣೆ ಎಲ್ಲಿ ಲೆಜಿಸ್ಲೇಟಿವ ಅಸೆಂಬ್ಲಿಗೂ ಪ್ರಾಂತಿಕ ಕೌನ್ಸಿಲುಗಳಿಗೂ ಅನೇಕ ಸ್ವರಾಜ್ಯ ಪಾರ್ಟೀ ಮೆಂಬರು ಚುನಾಯಿಸಲ್ಪಟ್ಟಿರುವುದರಿಂದ ಇವರೆಲ್ಲರೂ ಸೇರಿ ಇನ್ನು ಮುಂದೆ ಕೌನ್ಸಿಲುಗಳಲ್ಲಿ ಹ್ಯಾಗ ವರ್ತಿಸಬೇಕೆಂಬುದನ್ನು ನಿಶ್ಚೈಸಿಕೊಳ್ಳಲಿಕ್ಕೆ ಒಂದು ಕಾನ್ಫರೆನ್ಸು ಮಾಡುವ ಏರ್ಪಾಟಿನಲ್ಲಿದೆ

ವಿದೇಶ

ಐರ್ಲಂಡಿನ ಮೆ|| ಡಬ್ಲ್ಯು ಬಿ ಈಟ್ಸ್ ಎಂಬವರಿಗೆ ಲಿಟರೇಚರಿನಲ್ಲು ನೋಬೆಲ್" ಇನಾಮು ದೊರೆತಿದೆ

ಕೆಲವು ದಿವಸಗಳ ಹಿಂದೆ ಗ್ರೀಸ್ ದೇಶದಲ್ಲಿ ನಡೆದ ದಂಗೆಯ ಸಂಬಂಧ ಅಲ್ಲಿಯ ಕೋರ್ಟಿನವರು ಜನರಲ್ ಲಿಯೊನಾರ್ಡೋ ಪೌಲಸ್ ಮತ್ತು ಗಾರ್ಗಲೈಡಿಸ್, ಮೇಜರ್ ಅಪ್ಪಂಜೊನ್ ಮತ್ತು ನಿಕೋಲರೀಸ್ ಪಾಲಿಗೆ ಗುರಿಮಾಡಿರುವದಲ್ಲದೆ ಬೇರೆ ಅನೇಕ ದೊಡ್ಡ ಉದ್ಯೋಗಸ್ಥರುಗಳಿಗೆ ದೀರ್ಘಕಾಲದ ಸಜೆ ವಿಧಿಸಿರುವರು

ಇಂಡಿಯಾದ ಪ್ರತಿನಿಧಿಯಾಗಿ ಇಂಪೀರಿಯಲ್ ಕಾನ್ಫರೆನ್ಸಿಗೆ ಹೋಗಿದ್ದ ಡಾಕ್ಟರ್ ಸಾಪ್ರೂರವರು ಕಾನ್ಫರೆನ್ಸು ತೀರಿದನಂತರ ದಕ್ಷಿಣ ಆಫ್ರಿಕದ ಪ್ರತಿನಿಧಿಯಾದ ಜನರಲ್ ಸ್ಮಟ್ಸ್‌ರವರು ಇಂಡಿಯಾ ಸರ್ಕಾರದ ಮೇಲೆ ಬಹಳ ಆಕ್ಷೇಪಣೆಗಳನ್ನು ಹೊರಿಸಿದರೆಂದು ಹೇಳಿದ್ದು ಪೂರಾ ಅನ್ಯಾಯವೆಂದೂ ಅದಕ್ಕೆ ತಾನು ಪೂರ್ತಿ ವಿರೋಧಿಸುತ್ತೇನೆಂದೂ ಜನರಲ್ ಸ್ಮಟ್ಸ್‌ರವರು ಸೂಚಿಸಿರುವರು

ಇಂಗ್ಲೆಂಡಿನ ಈಗಿರುವ ಪಾರ್ಲಿಮೆಂಟನ್ನು ಬರಕಾಸ್ತು ಮಾಡಿ ಮೆಂಬರುಗಳನ್ನು ಪುನಹ ಚುನಾವಣೆ ಮಾಡುವ ಏರ್ಪಾಡು ನಡೆಯುತ್ತಿದೆ

ಡಾಕ್ಟರ್ ಸಾಪ್ರೂ ಮತ್ತು ರಾಜಾ ಬ್ರಿಜ್‌ ಕಿಶೋರ್ ವಿಲ್ಲಿಯಮ್ಸ್‌ರವರು ಇಂಗ್ಲೆಂಡಿನಿಂದ ಇಂಡಿಯಾಕ್ಕೆ ಹೊರಟಿರುವರು ಆರ್ಚ್ ಬಿಷಪ್ ಆಫ್ ಕ್ಯಾಂಟರ್‌ಬರಿ ಮತ್ತು ಮೆ|| ದಲಾಲ್ ಮೊದಲಾದವರು ವಿಕ್ಟೋರಿಯದಿಂದ ಅವರನ್ನು ಕಳುಹಿಸಿಕೊಟ್ಟರು

ಅಮೇರಿಕದ ಪ್ರೇಗ್ ವಿಶ್ವವಿದ್ಯಾಲಯದಲ್ಲಿ ಡಾಕ್ಟರ್ ಜೆ ಸಿ ಬೋಸ್‌ರವರು ವಸ್ತು ವಿಜ್ಞಾನಶಾಸ್ತ್ರದಲ್ಲಿ ತಾವು ಕಂಡು ಹಿಡಿದಿರುವ ಹೊಸ ಸಂಗತಿಗಳ ವಿಷಯ ಉಪನ್ಯಾಸಗಳನ್ನು ಮಾಡಿದರು ನೆರೆದಿದ್ದ ಜನರು ಬಹಳ ಸಂತೋಷಭರಿತರಾದರು

ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ತಾರೀಕು 15-11-23 ರ ಮೀಟಿಂಗ್

1 ವೀರರಾಜಪೇಟೆ ಸಂಘಕ್ಕೆ 3000 ರೂ ಸಾಲವು ಮಂಜೂರಾಯಿತು ಆರು ತಿಂಗಳಿಗೆ 750 ರೂ ಮೇರೆ ಮರು ಪಾವ್ತಿ ಮಾಡಬೇಕು

2 ಗೋಣಿಕೊಪ್ಪಲು ಸಂಘಕ್ಕೆ 600 ರೂ ಮಂಜೂರಾಯಿತು 31-3-24 ರ ವಳಗೆ ಮರುಪಾವ್ತಿಯಾಗಬೇಕು

3 ಡೈರೆಕ್ಟರುಗಳಿಗಾಗಿ ತಯಾರಿಸಿದ ರಿಪೋರ್ಟು ಮಂಜೂರಾಯಿತು

4 ಮೆ|| ಬಿ ಯಮ್ ಕಾರ್ಯಪ್ಪನವರಿಗೆ 200 ರೂ ಮಂಜೂರಾಯಿತು.

5 ಬಿಳುಗುಂದ ಸಂಘಕ್ಕೆ ಫಾಯಿದೆ ಕೊಡಲಾಗುವದಿಲ್ಲವೆಂತ ಫೈಸಲಾಯಿತು

ಸಿ ಯನ್. ವೆಂಕಪ್ಪಯ್ಯ
ಕಾರ್ಯದರ್ಶಿ.

ಪತ್ರವ್ಯವಹಾರಗಳು

ಬಾತ್ಮಿದಾರರು ಬರುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬುದಾರರಲ್ಲ [ಎಡಿಟರ್]

'ದೇವಯ್ಯ ಬಿದ್ದಂಡ" ಇವರ ಲೇಖನವು ಬಹು ದಾಸ್ಪಿಲ್ ಉಮೇದುವಾರರಿಗೆ ಬುದ್ಧಿ ಹೇಳುವ ವಿಷಯವಾದ್ದರಿಂದ ಪತ್ರವ್ಯವಹಾರವಾಗಿ ಪ್ರಕಟಿಸಲು ಸಾಧ್ಯವಿಲ್ಲ ಸ. ಕೊ.

ಇದೇ ಕಾರಣದಿಂದಲೇ "ಜ ಮಾದಪ್ಪ" ನವರ ಲೇಖನವನ್ನು ಪ್ರಕಟಿಸಲು ಸಾಧ್ಯವಿಲ್ಲ

ಕೌನ್ಸಿಲ್ ಊಟ

ಕಳೆದ ತಾರೀಖು ೧೨ ರಲ್ಲಿ ಅಪ್ಪರಂಡ ಮ॥ ಚಂಗಪ್ಪನವರು ಮತ್ತು ಕೊಳುವಂಡ ತಿಮ್ಮಯ್ಯನವರು ನಾಪೋಕ್ಲಿಗೆ ದಯಮಾಡಿಸಿ ಸುತ್ತಮುತ್ತಲಿರುವ ಗ್ರಾಮಸ್ಥರನ್ನು ನಾಪೋಕ್ಲು ಅಕೇರಿಬಳಿ ಕೂಡಿಸಿ ಒಂದು ದೊಡ್ಡ ಔತಣವನ್ನು ಕೊಟ್ಟರು ಔತಣದಲ್ಲಿ ಕೌನ್ಸಿಲ್ ಮೆಂಬರುತನದ ವಿಷಯ ಮಾತಾಡುವುದಲ್ಲದೆ ತಮಗೆ ಓಟುಕೊಡಬೇಕೆಂದು ಸಹ ಹೇಳಿದರು ಪಟ್ಟಕ್ಕೆ ಸೇರಿದ ಮಾಂಸವಗೈರೆ ಇತ್ತು ಊಟವು ಬಹಳ ಚೆನ್ನಾಗಿತ್ತು ಹ್ಯಾಗೂ ಮ॥ ಚಂಗಪ್ಪನವರು ಮತ್ತು ಮ॥ ತಿಮ್ಮಯ್ಯನವರು ನಮಗೆಲ್ಲರಿಗೂ ಔತಣ ಕೊಟ್ಟದ್ದಕ್ಕೆ ನಾವು ಅವರಿಗೆ ಋಣಿಯಾಗಿರುತ್ತೇವೆ ಆದರೆ ಮೇಲ್ಕಂಡವರು ಓಟವಾಗಲಿ ಇತರ ಯಾವ ವಿಧದ ಲಂಚವನ್ನು ಕೊಡಬಾರದೆಂತ ಹೇಳುವುದು ಕೇಳಿದ್ದೇವೆ ಈಗ ನಡೆದಿರುವ ಊಟಗಳು ಲಂಚದ ರೀತಿಯದಲ್ಲವೋ ? ವಿರೋಧವಾದರೆ ಯಾರೂ ಕೇಳುವವರಿಲ್ಲವೋ ?

ಹಾಜರಿದ್ದವ

ಮಸ್ಯಾ,

ರಾವುಸಾಹೇಬ ಮ॥ ಕೆ ಚಂಗಪ್ಪನವರಿಗೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಪದವಿ ಕಾಯಂ ಆದ ಸಂತೋಷಾರ್ಥವಾಗಿ ಕಡಿಯತ್ತು ನಾಡಿನವರು ಭಗವತಿ ದೇವರಲ್ಲಿ ಅವರ ಜನ್ಮನಕ್ಷತ್ರ ಶುಭದಿನವಾದ ತಾರೀಖು ೧೫—೧೧—೩೩ ನೇ ಬುಧವಾರ ದಿವಿ ೧೧ ಗಂಟೆಗೆ ಅವರ ಹೆಸರಿನಲ್ಲಿ ಅವರ ಆಯುರಾರೋಗ್ಯ ಸಂಪತ್ತು ವೃದ್ಧಿಗೋಸ್ಕರವಾಗಿ ಬಹಳ ಸ್ವರ್ಣಾರ್ಚನೆ ಪೂಜೆಯನ್ನು ಅರ್ಪಿಸಿ ವಶಪಡಿಸಿ ಗ್ರಾಮಸ್ಥರು ಸಮುದಾಯ ಸೇರಿ ನಡಿಸಿ ಪ್ರಸಾದವನ್ನು ಪೋಸ್ಟು ಮೂಲಕ ಅವರಿಗೆ ತಲಪಿಸಿ ಈ ಸಂಗತಿ ಪ್ರಸಿದ್ಧಿಗೋಸ್ಕರ ಕೊಡಗು ಪತ್ರಿಕೆಗೆ ಅರಿಕೆ ಮಾಡಿಕೊಂಡದ್ದಾಗಿದೆ

ಮುಕ್ಕಾಟಿರ ಕಾಳಪ್ಪ

ವಿರಾಜಪೇಟೆ ಹಾಸ್ಟಲ್

ಅಯ್ಯಾ, ವಿದ್ಯಾರ್ಥಿಯ ಹಿತಚಿಂತಕರೇ!

ನವಂಬರು ತಾರೀಖು ೯ ರ ಪತ್ರಿಕೆಯಲ್ಲಿ ವಿರಾಜಪೇಟೆ ಹಾಸ್ಟಲಿನ ವಿಷಯ ಬರೆದಿರುವ ನಿಮ್ಮ ಸುಳ್ಳು ಲೇಖನವನ್ನು ಓದುವರೇ ವ್ಯಸನಕರವಾಗಿರುತ್ತದೆ. ಹುಡುಗರ ಭೋಜನ ವಿಚಾರ ಮತ್ತು ಹಾಸ್ಟಲಿಗೆ ಬೇಕಾದ ಉಪಕರಣಗಳನ್ನು ಕುರಿತು ನೀವು ಹೇಳುವುದೆಲ್ಲಾ ಪೂರಾ ಅನ್ಯಾಯ ಮತ್ತು ಸುಳ್ಳು ಆ ಬಾಬ್ತಿನಲ್ಲಿ ಯಾವ ಸಂಕಟವೂ ಇರುವುದಿಲ್ಲ ಹಾಸ್ಟಲಿನ ಪ್ರತಿಯೊಂದು ಕೆಲಸವೂ ಕ್ರಮವರಿತು ನಡೆಯುತ್ತ ಎಂದು ನಾನು ಖಂಡಿತ ಹೇಳುತ್ತೇನೆ

ನೀವು ಈ ರೀತಿ ಬರಿಯುವದಕ್ಕಿಂತ, ಒಮ್ಮೆ ಸದರಿ ಹಾಸ್ಟಲಿಗೆ ದಯಮಾಡಿಸಿ ಅಲ್ಲಿನ ಕುಂದು ಕೊರತೆಗಳನ್ನು ಪರಿಶೋಧಿಸುವರೇ ಎಷ್ಟರ ಮಟ್ಟಿಗೆ ತೊಂದರೆ ತೆಗೆದುಕೊಂಡಿರುತ್ತೀರಿ ಎಂಬವನ್ನು ವಿವರಿಸದ್ದರೆ ಸಂತೋಷವಾಗುತಿತ್ತು ಹಾಸ್ಟಲಿನಲ್ಲಿ ಏನಾದರೂ ಕೊರತೆ ಕಂಡು ಬಂದರೆ ಅದನ್ನು ಅದರ ಮೇಲ್ವಿಚಾರಕರಾಗಿರುವ ಉಪಾಧ್ಯಾಯರಿಗೆ ತಿಳಿಸಿ ತಿದ್ದುಪಡಿ ಮಾಡುವದರ ಬದಲು ಪತ್ರಿಕೆಯಲ್ಲಿ ತಪ್ಪು ಅಭಿಪ್ರಾಯ ಕೊಟ್ಟಿರುವದನ್ನು ಯೋಚಿಸಿದರೆ ನಿಮ್ಮ ವಿಪರೀತ ಬುದ್ಧಿಯನ್ನು ಮತ್ತು ಕುಹಕತನವನ್ನು ಜನರಿಗೆ ತೋರಿಸಿದಂತೆ ಆಯಿತು ಸ್ವಾರ್ಥವಿಲ್ಲದ ಮನೋಭಾವನೆಯಿಂದ ಹಾಸ್ಟಲಿನ ಕೆಲಸವನ್ನು ನಡಿಸುವವರೇ ಬಹಳ ಒಳ್ಳೆಯದು ಅವರೇ ಲೋಕದಲ್ಲಿ ಯಾರ ಸಂಸ್ಥೆಯ ಕೆಲಸ ಚೆನ್ನಾಗಿ ನಡಿಸುವ ಉದ್ದೇಶ ಉಳ್ಳವರಾಗಿ ದೂರವಾಗುವ ನಿಮ್ಮ ಕ್ರೂರ ಸ್ವಭಾವವನ್ನು ಒ ಬಿಟ್ಟರೆ ಒಳ್ಳೆಯದು

ಸತ್ಯದ ಅಭ್ಯರ್ಥಿ

ಅಪ್ಪಚ್ಚ ರ ... ಕೊಳುವಂಡ ತಿಮ್ಮಯ್ಯನ ವರಗಳ ಸಂಭಾಷಣೆ

ಮ॥ ನ ಚಂಗಪ್ಪನವರ ಕಾಗದ ನೋಡಿ ವ್ಯಸನವೂ ಮತ್ತು ಆಶ್ಚರ್ಯವೂ ಆಯಿತು ವ್ಯಸನವು ನಡೆದ ಸಂಗತಿಯನ್ನು ಇಲ್ಲವೆಂದು ಹೇಳುವುದು ಇಂತವರು ಈ ಅಲ್ಪ ಸಂಗತಿಗೂ ಹೀಗೆ ಮಾಡುವರು

ಇವರು ರಜಾ ತಾಲೂಕಿನಿಂದ ಬಂದುದು ಇವರ ಕಾಗದದ ಮೇಲೆ ತಿಳಿಯುತ್ತ ಪ್ರಪಂಚದಲ್ಲಿ ಇರುವ ... ಸುಳ್ಳು ಮತ್ತು ದಿಟ ಇವೆರಡು ಬ ... ಕಡೆ ತರಲಿಲ್ಲ ಒಂದು ... ಮಾತನ್ನು ... ಇರುವುದು ಆಶ್ಚರ್ಯ ... ಪಡೆಯಬಾರದು ಒಂದು ಸಂಗತಿ ಇವರೆಲ್ಲರೂ ವಿಚಾರಿಸಬೇಕು ಏನೆಂದರೆ — ಚಂಗಪ್ಪನವರಿಗೂ ಮತ್ತು ನನಗೂ ಈ ವಿಷಯ ... ಅವರು ಹೇಳಿದ ... ನನಗೆ ... ಸಂಗತಿ ತಿಳಿಯದು ... ಹೋಗುವಾಗ ... ಅವರು ... ಕೊಡಲಿಲ್ಲ ... ನಾನು ಈ ಸಂಗತಿ ಬೇರೆಯಾಗಿ ಬರೆಯುತ್ತೇನೆಂದು ... ಸಹ ಇದ್ದರು ನನ್ನ ಕಾಗದ ... ನಂತರ ಇವರು ಹೇಳಿದ್ದು ಇಂಥವರು ತಂದು ... ನಾನು ನಿನ್ನಲ್ಲಿ ಹೇಳಿದ ಮಾತು ನೀನು ಹೀಗೆ ಬರೆದದ್ದು It is a Practical yoke you have placed me in a very awkward position I must only Contradict ಇದು ... ಇದರಿಂದಲೇ ... ನನ್ನ ... ನಂಜಪ್ಪನವರು ಇಲ್ಲವೆಂದು ಹೇಳುತ್ತಾರೆ ... ಹೇಳುತ್ತೇನೆ ... ವಿಚಾರಿಸಿ ನಿಜಸ್ಥಿತಿಯನ್ನು ಪತ್ರಿಕೆಯಲ್ಲಿ ತಿಳಿಸು ಕೊಳ್ಳಬೇಕಾಗಿ ಬೇಡಿಕೊಳ್ಳುತ್ತೇನೆ

ಪೊನ್ನಂಪೇಟೆ ಸಿ ಐ ತಿಮ್ಮಯ್ಯ

ಅಯ್ಯಾ ದೇಶಬಾಂಧವರೇ! ಮತ್ತು ... ಭವರೇ!

ತಾರೀಖು ೨—೧೧—೩೩ ರ ಪತ್ರಿಕೆಯಲ್ಲಿ ನಾನು ಬರೆದ ಮೇರೆ ಈಗಾಗಲೇ ಜನರ ಮನಸ್ಸಿಗೆ ಬಿದ್ದಿರುವ ಕಾಯಿದೆಗಳು ಹೊರಗೆ ಬಿದ್ದಂತೆ ... (೧) ಐದು ವರ್ಷ ಹತ್ತು ರೂಪಾಯಿಗಳಿಗೆ ... ದಾಯ ಕಟ್ಟುವವರಿಗೂ ... ಪಟ್ಟೆದಾರರು ... ಅಥವ ಹತ್ತು ರೂಪಾಯಿ ... ಕಟ್ಟುವವನಾಗಿದ್ದು ಆತನಿಗೆ ಒಂದು ಅರ್ಥ ಬೇಕು ... ವಿಸಾರಿದ ... ಮನೆಯ ... ರೂಪಾಯಿ ... ಇದ್ದರೆ ... ಸಹ ಓಟು ಕೊಡುವ ಹಕ್ಕು ಇಲ್ಲವೆಂದು ... ಇದು ನ್ಯಾಯವಾಗಿರಲು ... ನ ಮಾಡಿರುವದು ಎಂಥ ಧರ್ಮ ? ೧ ಮತ್ತು ... ಗಳಲ್ಲಿ ತೋರಿಸಿರುವವರು ಸರ್ಕಾರದ ... ಇದರಿಂದ ಕೌನ್ಸಿಲು ಇರುವುದೇ ಕೊಡಗು ದೇಶದಲ್ಲಿ ... ಗಳಲ್ಲಿ ವಿಭಾಗವಾಗಿ ಈಗ ಎಲ್ಲಿಯೂ ... ತಂದೆಮಕ್ಕಳು ಇನ್ನೂ ... ದೇಶದ ... ಇರುವವರನ್ನು ... ಸಂದರ್ಭ ... ಕುಟುಂಬಗಳಲ್ಲಿ ಒಬ್ಬರಿಗೆ ... ಎಂದು ... ಕೌನ್ಸಿಲು ... ಮೆಂಬರುಗಳಿಗೆ ಓಟು ಕೊಡಲು ತಂದೆಯ ... ವಿಭಾಗವಾಗುವ ಗತಿ ಬಂತೇ! ... ಕೌನ್ಸಿಲೇ ಏನೆಂದು ಹೇಳಲಿ ಇದನ್ನು ತಿಳಿಯದೆ ಈಗಾಗಲೇ ಕೌನ್ಸಿಲು ಮೆಂಬರು ತನಕ್ಕೆ ... ಮೆಂಬರುಗಳೇ ಕೌನ್ಸಿಲಿನ ಕಾನೂನುಗಳಲ್ಲಿ ಇರುವ ಕುಂದು ಕೊರತೆಗಳನ್ನು ... ಮೆಂಬರುತನಕ್ಕೆ ... ಒಳ್ಳೇದಲ್ಲವೇ ? ನೀವು ಈ ಸಂಗತಿಗಳನ್ನು ಹಿಂ ... ಬಿಟ್ಟುಕೊಂಡು ಕೌನ್ಸಿಲು ಬಂತು ಎಂಬ ಮಾತ್ರಕ್ಕೆ ಮೆಂಬರುತನಕ್ಕೆ ಒಪ್ಪುವುದು ನೋಡಿದರೆ ನೀವು ಕೌನ್ಸಿಲಿನಲ್ಲಿ ಗೌರವಕ್ಕೆ ಮೆಂಬರಾಗಲು ಹೋಗುವವರೇ ಹೊರತು ಬೇರೆ ಏನು ಇಲ್ಲವೆಂದು ಖಂಡಿತ ಇದು ... ಬಳ್ಳಿಗಳು ಬೇರೆ ... ಮಾಡುವವರಾದರೆ ಮೆಂಬರುತನದ ಓಟ್ ಬಿಟ್ಟು ಕಾನೂನಿನ ವಿಷಯ ಗಮನಿಸಿರಿ ಮೆಂಬರು ... ದೇಶದವರ ಕೆಲಸ ಬಿಟ್ಟ ಗಳ ನ್ಯಾಯ ... ಓಟು ಕೊಡದಿದ್ದರೆ ಆವರು ... ಈ ಕಾನೂನನ್ನು ಖಂಡಿತ ತೀರಿಸಬೇಕು ಇದು ... ಕೆಲಸವಲ್ಲ ಇದು ಬಡವರ ಮತ್ತು ... ಜೀವನವನ್ನು ಕಾಪಾಡುವ ಧಾರೆ ಎಂದು ಊಹಿಸಬೇಕಾಗಿದೆ ಮೇಲ್ಕಂಡ ಕಲಂ ೧ ಮತ್ತು ೨ ಕ್ಕೆ ಸರ್ಕಾರದವರು ಸಹ ಖಂಡಿತ ... ವರೆಂದು ನಾನು ನಂಬಿದ್ದೇನೆ

ಕಾಯಿದೆ ನಿರೀಕ್ಷಕ

[ಈ ಕಾನೂನನ್ನು ಸರಿಪಡಿಸಲಿಕ್ಕೆ ಕೌನ್ಸಿಲಿನಿಂದ ಲೇ ಸಾಧ್ಯ—ಸಂ ಕೊ]

ಆರ್ಯ ಮಹನೀಯರೆ ನಮ್ಮ ದೇಶಕ್ಕೆ ಈ ರೀತಿಗೆ ... ವಿಕಾಸವು ... ದರಿಂದ ಇದನ್ನು ಬರೆಯುವೆನು ಈ ಬರವಣಿಗೆ ... ಓದಿ ... ದೇಶ ... ಮಾಡಿದರೆ ನಮಗೆ ... ರೀತಿಗಳನ್ನು ಅಭ್ಯಾಸಮಾಡಿ ... ದೇಶದ ... ಮಾಡಬಹುದು

ಅಮೇರಿಕಾ ದೇಶದಲ್ಲಿ ಒಂದು ಹೊಸದಾಗಿ ರೂಢಿಯಾಗಿದ್ದ ಊರಿನಲ್ಲಿ ಒಂದು ಪುಸ್ತಕ ಭಂಡಾರ ... ನವೀನವಾದ ಒಂದು ... ಆ ಊರಿನಲ್ಲಿ ಒಬ್ಬ ... ಹನ್ನೆರಡು ಕುಟುಂಬಗಳೂ ಮತ್ತು ಒಂದು ... ಮಠವು ಇರುವುದು ಆ ಮಠದ ಗುರುವು ಆ ಊರನ್ನು ಉನ್ನತಸ್ಥಿತಿಗೆ ತರಬೇಕೆಂದು ಎಲ್ಲಕ್ಕೂ ಅವಶ್ಯವಾಗಿ ... ಪುಸ್ತಕ ಭಂಡಾರವೇಕೆಂದು ತಿಳಿದನು ಆದರೆ ಎಲ್ಲರೂ ... ಪುಸ್ತಕಭಂಡಾರದ ... ಕಟ್ಟಿಸಲಿಕ್ಕೂ ಮತ್ತು ಅಲ್ಲಿ ... ಅನುಕೂಲವಾಗಲಿ ಇಲ್ಲದಕಾರಣ ಒಂದು ನವೀನವಾದ ಉಪಾಯವನ್ನು ಹೊರಡಿಸಿದನು. ಅದು ಹೇಗೆಂದರೆ ಆ ಗುರುವು ಊರಿನಲ್ಲಿ ಪ್ರತಿಮನೆಗೂ ಹೋಗಿ ಆಯಾಯ ಮನೆಯಲ್ಲಿ ಯಾವಯಾವ ಪುಸ್ತಕಗಳವೆಯೋ ಆ ಪುಸ್ತಕಗಳ ಪಟ್ಟಿಯನ್ನು ತಂದು, ಎಲ್ಲಾ ಮನೆಯವರ ಪುಸ್ತಕಗಳ ಪಟ್ಟಿಯನ್ನು ಜೋಡಿಸಿ ಅದರ ನಕಲನ್ನು ತೆಗೆದು ಪ್ರತಿಮನೆಯವರಿಗೂ ಕಳುಹಿಸಿದನು ಯಾರಿಗೆ ಯಾವ ಗ್ರಂಥಬೇಕಾದರೆ ಆ ಪುಸ್ತಕದ ಸಂಖ್ಯೆಯನ್ನು ಹೆಸರನ್ನು ಗ್ರಂಥಕರ್ತನ ಹೆಸರು ಮತ್ತು ಮಾಲಿಕರ ಹೆಸರನ್ನು ಬರೆದು ಕಳುಹಿಸಿದರೆ ... ಗುರುವು ಆ ಚೀಟಿಯನ್ನು ... ಕೊಂಡು ಬೇರೊಂದು ಚೀಟಿಯನ್ನು ತನ್ನ ಸೇವಕನ ಕೈಯಲ್ಲಿ ಮಾಲಿಕನಿಗೆ ಕಳುಹಿಸಿ ಬೇಕಾದ ಪುಸ್ತಕವನ್ನು ಓದಲು ಆಸಕ್ತಿ ಉಳ್ಳವರಿಗೆ ಕಳುಹಿಸಿಕೊಡುತ್ತಿದ್ದನು ಪ್ರತಿ ಅದಿತ್ಯವಾರ ಮಾತ್ರ ಪುಸ್ತಕವನ್ನು ಪಡೆಯಕೊಳ್ಳುತ್ತಿದ್ದರು ಒಬ್ಬೊಬ್ಬರು ಹದಿನೈದು ದಿನಗಳವರೆಗೆ ಇಟ್ಟುಕೊಳ್ಳಬಹುದಿತ್ತು ಪ್ರತಿ ಶನಿವಾರ ... ತನ್ನ ಸೇವಕನನ್ನು ಕಳುಹಿಸಿ ಹದಿನೈದು ದಿನಗಳಿಗಿಂತ ಮುಂಚೆ ಕೊಟ್ಟ ಪುಸ್ತಕಗಳನ್ನು ತರಿಸಿ ಮಾಲಿಕರಿಗೆ ಕಳುಹಿಸಿ ಕೊಡುತ್ತಿದ್ದನು ಈರೀತಿ ಆ ... ಪುಸ್ತಕಗಳು ಅವರಲ್ಲಿಯೇ ಇರುತ್ತಿದ್ದವು ಈ ವ್ಯಾಪಾರಕ್ಕೆ ಸೇರಿದವರ ತಮ್ಮ ತಮ್ಮ ... ಪುಸ್ತಕಗಳ ಪಟ್ಟಿಯನ್ನು ಕೊಡುವುದಲ್ಲದೆ ... ಒಂದು ... ಕೊಡುತ್ತಿದ್ದರು ... ವರ್ಷಗಳಲ್ಲಿ ಆ ಊರಿನ ಜನರು ಅನೇಕ ಪುಸ್ತಕಗಳನ್ನು ಓದಿದ್ದಲ್ಲದೆ ಸ್ವಂತ ಸ್ವಂತವಾಗಿ ಗುರುಗಳವರು ಹೇಳಿದಂತ ಪುಸ್ತಕಗಳನ್ನು ಕರಿಸಿ ಬಹಳವಾಗಿ ವಿದ್ಯಾವಂತರಾದರು

ಈ ರೀತಿಯ ಪುಸ್ತಕ ಭಂಡಾರಗಳನ್ನು ನಮ್ಮಲ್ಲಿ ಊರೂರಿನಲ್ಲಿ ... ಹೊಂದಿದರೆ ಮಡಿಕೇರಿ ... ವಿರಾಜಪೇಟೆ ಪೊನ್ನಂಪೇಟೆ ಸೋಮವಾರಪೇಟೆ ಮತ್ತು ನಾಪೋಕ್ಲು ಮೊದಲಾದ ಸ್ಥಳಗಳಲ್ಲಿ ಸ್ಥಾಪಿಸಿ ದೇಶ ... ಗಳೂ, ವಿದ್ಯಾವಂತರೂ ಆದ ಉಪಾಧ್ಯಾಯರು ... ಸೆಕ್ರೆಟರಿಗಳೂ ದೇಶೋದ್ಧಾರ ಮಾಡಲು ಇದು ಒಂದು ಮಹತ್ತಾದುದಾದರೂ ಬಹಳ ಸುಲಭಕಾರ್ಯವಾಗಿದೆ

ಸರಸ್ವತಿ

ಇದೇ ತಾರೀಖು 10 ನೇ ದಿನ ಅಜ್ಜೂರು ಪನ್ನ ಹೊಸೂರು ಗ್ರಾಮಸ್ಥರವರು ಸೇರಿ ಗೋಣಿಕೊಪ್ಪಲು ಸ್ಕೂಲು ಹಾಲಿನಲ್ಲಿ ಒಂದು ಮೀಟಿಂಗು ನಡೆಸಿದರು. ಮೆ|| ಚೆಪ್ಪುಡಿರ ದೇವಯ್ಯನವರು ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಮೀಟಿಂಗಿನ ಉದ್ದೇಶ ಒಂದು ಮತ್ತು ಸಂಘ ಒಂದನ್ನು ಏರ್ಪಡಿಸುವಿಕೆ, ಜೀರ್ಣವಾಗಿರು ಮುಂದುವಾನಿ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡುವಿಕೆ, ಛತ್ರದ ಮಂಡಸ್ಸು ಏರ್ಪಡಿಸುವಿಕೆ, ಸುಮಾರು 30 ಜನರು ಸೇರಿದ್ದರು. ಮೆಂಬರುಗಳ ಸೇರೋಣವು ಕಮ್ಮಿಯಾದ್ದರಿಂದ ಎಲ್ಲಾ ವಿಷಯಗಳು ಮುಂದಿನ ಮೀಟಿಂಗಿನಲ್ಲಿ ತೀರ್ಮಾನಿಸುವಂತೆ ತೀರ್ಮಾನವಾಯ್ತು. ಮೆ|| ಎನೆಯಂಡ ಅಪ್ಪಯ್ಯನವರೂ, ಪನ್ನಂಡ ಕಾರ್ಯಪ್ಪನವರೂ ಕೋಂಗಂಡ ಕಾರ್ಯಪ್ಪನವರೂ ಬಿಪನ್ಮಾಡ ತಮ್ಮಯ್ಯನವರೂ, ಕುಪ್ಪಂಡ ಮಾಚಯ್ಯ, ಚಂಗಪ್ಪನವರೂ ತಮ್ಮ ತಮ್ಮ ಶಿಳುವಳಿಕೆಯನ್ನು ಎಲ್ಲರಲ್ಲಿಯೂ ಚೆನ್ನಾಗಿ ಬೋಧಿಸಿದರು. ಮೆ|| ಕೆ. ಕಾರ್ಯಪ್ಪನವರನ್ನು ಸೆಕ್ರೆಟರಿಯಾಗಿ ನೇಮಿಸಿದರು.

ಮೆಂಬರು

ಮಡಿಕೇರಿಯಲ್ಲಿರುವ ಬೇಟು ಬಾಸೆಲ್ ಮಿಶನ್ ಕ್ರೈಸ್ತರು ಸುಮಾರು ಹದಿನೆಂಟು ವರ್ಷಗಳಾಗಾಯಿತು ತಮ್ಮ ಆಸುಖವದಲ್ಲಿದ್ದ ದೇವಾಲಯದಲ್ಲಿ ಆರಾಧನೆಯನ್ನು ತಮ್ಮ ಕ್ರಮಕ್ಕನುಸರಿಸಿಯೇ ನಡಿಸುತ್ತ ಬಂದಿದ್ದರಿಂದ ಮೇರೆಗೆ ತಾತ್ಕಾಲಿಕವಾಗಿ ನೇಮಿಸಲ್ಪಟ್ಟ ವೆಸ್ಲಿಯನ್ ಮಿಶನ್ ನವರು ಒಪ್ಪಂದಕ್ಕನುಸರಿಸಿ ನಡಿಸದೇ ಇದ್ದಕಾರಣ ಬೇಟು ಬಾಸೆಲ್ ಮಿಶ್ಶನ ನವರ ಪೈಕಿ ಜಾ 95 ರಷ್ಟು ಕ್ರೈಸ್ತರು ತಮ್ಮ ಕ್ರಮವನ್ನೇ ಅನುಸರಿಸಿದ ಆರಾಧನೆಯನ್ನು ನಡಿಸುತ್ತಾ ಬಂದಲ್ಲಿ ತಾ|| 11 11 19 ರಲ್ಲಿ ವೆಸ್ಲಿಯನ್ ಮಿಶನ್ ಸೂಪರಿಂಟೆಂಡೆಂಟರುಗಳಾದ ಘನ ರೀಸ್ ಮತ್ತು ಕಾರ್ಟರ್ ಸಾಹೇಬರುಗಳಿಂದ, ಸದ್ರಿ ದೇವಾಲಯದಲ್ಲಿ ತಡೆ ಮಾಡಲ್ಪಟ್ಟದ್ದಾಯಿತು. ಶೋಧಕರಾದ ಇವರುಗಳು ಮಾಡಿದ ಕೃತ್ಯವು ಬಹಳ ವ್ಯಸನಕರವಾದ್ದಾಗಿದೆ. ಆದಾಗ್ಯೂ ದಯಾಳುಗಳಾದ ರಾಯ ಬಹದ್ದೂರು ಕೋಡಂದೆರ ಅಟ್ಟಯ್ಯನವರು ಕ್ರಿಸ್ಟಿಯನ್ನ ಬಂಗ್ಲೆಯನ್ನು ತಾತ್ಕಾಲಿಕ ನಮ್ಮ ಆರಾಧನೆಯನ್ನು ನಡಿಸುವಿಕೆ ದಯಪಾಲಿಸಿದ್ದಕ್ಕಾಗಿ ಅವರಿಗೂ ಅವರ ಕುಟುಂಬಕ್ಕೂ ಆಯುರಾರೋಗ್ಯವನ್ನೀಯಲೆಂದು ಕೋರುವ ಬಾಸೆಲ್ ಮಿಶನ್ ಕ್ರೈಸ್ತರಲ್ಲಿ ಒಬ್ಬ

"ಕ್ರೈಸ್ತ

ಅಯ್ಯಾ ಪತ್ರಿಕಾಕರ್ತರೇ,

ಈ ತಾರೀಕು 14 ನೇ ದಿನ ಬುಧವಾರ 10 ಗಂಟೆಗೆ ಸರಿಯಾಗಿ ಕಾವಾಡಿ ಗ್ರಾಮಸ್ಥರೆಲ್ಲರು ನಮ್ಮ ಗ್ರಾಮದ ಭಗವತಿ ದೇವಸ್ಥಾನದಲ್ಲು ಸೇರಿ ಮ|| ರಾ|| ಕಟ್ಟೋಳಿ ಚಂಗಪ್ಪ ಬಿ ಎ ಅರ್ ಯಸ್ ರವರಿಗೆ ಡಿಸ್ಟ್ರಿಕ್ಟ ಮೇಜಿಸ್ಟ್ರೇಟ್ ಪದವಿ ಕಾಯಂಯ್ಯಾದದಕ್ಕಾಗಿ ನಮ್ಮ ಕೃತಜ್ಞತೆಯನ್ನು ಸರಕಾರಕ್ಕೂ, ಸಂತೋಷವನ್ನು ದೇಶಿಯರಿಗೂ ಸಹ ತೋರ್ಪಡಿಸಲಿಕ್ಕಾಗಿ ಮಹಾಪೂಜೆಯನ್ನು ನಡಿಸಿ ಪೂಜೆ ಸಮಯಕ್ಕೆ ಎಲ್ಲರು ದೇವರ ನಡೆಗೆ ಒಂದು ನಿಂತು ಶ್ರೀ ಪಾರ್ವತಿ ಪರಮೇಶ್ವರನೂ ಕಾವೇರಿಯಮ್ಮ ಮಹಾತಾಯಿಯೂ, ಇಗ್ಗುತಪ್ಪನೂ ಸ್ಥಳದೇವತೆಯೂ ಸದರಿ ಚಂಗಪ್ಪನವರಿಗೆ ಸರಕಾರದ ಪ್ರೀತಿಗೆ ಪಾತ್ರರಾಗುವಂತೆಯೂ ಪ್ರಜೆಗಳ ಕ್ಷೇಮಚಿಂತನೆಯಲ್ಲಿ ನಿರಂತರವು ಧೃಡಮನಸ್ಕರಾಗಿರುವಂತೆಯೂ ಅವರ ನಂತರ ಅವರ ಪದವಿಯನ್ನು ತಿಂಬಾಲಿಸುವವರಿಗೆ ಪ್ರಜೆಗಳ ಹಿತಚಿಂತನೆ ವಿಷಯ ಹಿತೋಪದೇಶಗಳನ್ನು ಕೂಡುವ ಪುಣ್ಯಕೀರ್ತಿಯು ಇವರಿಗೆ ಲಭಿಸುವಂತೆಯೂ ಆಯುರಾರೋಗ್ಯ ಐಶ್ವರ್ಯ ಸರ್ವಸಂಪತ್ತು ದೀರ್ಘಾಯುಷ್ಯ ಕೊಟ್ಟು ಕಾಪಾಡಬೇಕಾಗಿ ಆಶೀರ್ವದಿಸಬೇಕಾಗಿ ಊರಿನವರ ಪಕ್ಷವಾಗಿ ಮ|| ರಾ|| ಮಾಚಿಮಂಡ ಬಿದ್ದಯ್ಯನವರು ಪ್ರಾರ್ಥಿಸುವಾಗ್ಯ ಎಲ್ಲರೂ ಸ್ತೋತ್ರ ಮಾಡಿ ಒಂದೆರಡು ನಿಮಿಷದವರೆಗೂ ಬಹು ಮೌನದಲ್ಲಿದ್ದ ನಂತರ ತೀರ್ಥಪ್ರಸಾದಗಳನ್ನು ಕೈಗೊಂಡು ತಿಂಡಿ ಫಲಹಾರಗಳನ್ನು ಸ್ವೀಕರಿಸಿ, ಸರಕಾರಕ್ಕೂ ಮ|| ರಾ|| ಚಂಗಪ್ಪನವರಿಗೂ ನಮ್ಮಗಳ ಮನಃಪೂರ್ವಕವಾದ ವಂದನೆಗಳಿಂದ ಮೂರುಗಂಟೆ ಸಮಯಕ್ಕೆ ಸಭೆಯು ಬಹು ಸಂತೋಷದಿಂದ ಪರಿಸಮಾಪ್ತಿಯಾಯ್ತು.

ಈ ಪ್ರೊಸಿಡಿಂಗ್ಸನ್ನೂ, ದೇವರ ಪ್ರಸಾದವನ್ನು ಸಹ ಮೆ|| ರಾ|| ಚಂಗಪ್ಪನವರಿಗೆ ಕಳುಹಿಸುವಂತೆ ತೀರ್ಮಾನವಾಯ್ತು.

ಸ್ವಜನಾಭಿಲಾಷಿ.

ಅಯ್ಯಾ, ಮಕ್ಕಳತಂದೆ!

ನೀವು 22 ನೇ ಸಂಚಿಕೆಯಲ್ಲಿ ವಿದ್ಯಾ ಇಲಾಖೆಯ ಮುಖಂಡರಿಗೂ ಡಿ|| ಬೋರ್ಡ್ ಮೆಂಬರುಗಳಿಗೂ ಕೊಟ್ಟ ಸೂಚನೆಯನ್ನು ಓದಿ ನೋಡಿ ಆನಂದವೆಂಬ ಸಾಗರದಲ್ಲಿ ಮಗ್ನರಾದೆವು. ನೀವು ಬರೆದ ಲೇಖನದಲ್ಲು ಇರುವ ಪ್ರತಿ ಒಂದು ವಾಕ್ಯವೃಂದವನ್ನು ಚೆನ್ನಾಗಿ ಓದಿನೋಡಿದರೆ ಬಹು ಸೋಜಿಗವಾಗುತ್ತ.

ಕೊಡಗಿನಲ್ಲಿ ಅನೇಕ ಪ್ರೈಮರಿ ಶಾಲೆಗಳಿವೆ. ಇಬ್ಬರು ಉಪಾಧ್ಯಾಯರುಗಳಿಂದ ಶಾಲೆಗಳ ವಿದ್ಯಾಭಿವೃದ್ಧಿಯನ್ನು ಮತ್ತು ಉಪಾಧ್ಯಾಯರುಗಳು ಕಲಿಸಬೇಕಾದ ನಿಯಮಗಳನ್ನು ಹೇಳಿಕೊಡಲಿಕ್ಕೆ ಅಸಾಧ್ಯವಾಗಿದೆ. ಆದ್ದರಿಂದ ಶಾಲೆಗಳಿಗೆ ಪಂಚಾಯತರನ್ನು ನೇಮಿಸಿದ್ದು ಎಂಬುದು ಅತ್ಯಂತ ನಾಚಿಕೆ ಸರಿ ಶಾಲೆಗಳಲ್ಲಿ ಪಂಚಾಯತರನ್ನು ಯಾತಕ್ಕೋಸ್ಕರ ನೇಮಿಸಿದ್ದಾರೆ ಅವರು ಶಾಲೆಗಳಲ್ಲಿ ಮಾಡಬೇಕಾದ ಕರ್ತವ್ಯವೇನು, ಎಂಬುದು ಮಕ್ಕಳ ತಂದೆಗೆ ಇನ್ನೂ ಗೊತ್ತಾಗಲಿಲ್ಲವೇ! ಅದನ್ನು ತಿಳಿಯಬ ಮಕ್ಕಳ ತಂದೆಯು ಶಾಲೆಯ ಹೆ|| ಮಾಸ್ಟರನ್ನಾಗಲಿ, ಶಾಲೆಗೆ ಕೊಟ್ಟ ಪಂಚಾಯತರ ಸನದನ್ನಾಗಲಿ, ಓದಿನೋಡಿದಲ್ಲು ಗೊತ್ತಾಗುವದು. ಪಂಚಾಯತರು ಹೊಂದಿಕೊಂಡ ಮೆಂಬರುಗಳು ನಾಡು ಕಚೇರಿಯವರದಯೆಯಿಂದ ವಿದ್ಯಾಹೀನರು ಸಹ ಕೆಲಸವನ್ನು ಹೊಂದುವರಾಗಿ ಮಕ್ಕಳ ತಂದೆಯು ತಿಳಿದ ಸಂಗತಿ ಬಹು ನಾಚಿಕೆಯೇ ಸರಿ. ನಾಡು ಕಚೇರಿಯವರು ವಿದ್ಯಾಹೀನರಿಗೆ ಎಂದೂ ಈ ಕೆಲಸವನ್ನು ಕೊಡಲಿಕ್ಕಿಲ್ಲವಾಗಿ ನಂಬುತ್ತೇವೆ. ಆದರೆ ಮಕ್ಕಳ ತಂದೆಯು ನಾಡು ಕಚೇರಿಯವರನ್ನು ಹೀಯಾಳಿಸಿದ್ದು ಬಹುವ್ಯಸನಕರವೇ ಸರಿ.

ಈ ಮಕ್ಕಳ ತಂದೆಯು ಅವರವರ ಮನೆಯ ಪವಿಹಾಪ ಮಾಸ್ಟರುಗಳಿಗೆ ಕೆಲಸ ಕೊಡಬಾರದು. ಕೊಟ್ಟರೆ ಶಾಲೆ ಕೆಲಸಗಳನ್ನು ಮಾಡುವದಿಲ್ಲವೆಂದು ಬರೆದ ಸಂಗತಿ ಆಶ್ಚರ್ಯವೇ ಸರಿ. ಪರನಾಡಿನ ಉಪಾಧ್ಯಾಯರು ಬಂದರೆ ಹಳ್ಳಿ ಶಾಲೆಗಳಲ್ಲಿ ವಾಸಯಿರಲಿಕ್ಕೆ ಅನುಕೂಲಿಸಿಕ್ಕುವದು ಕಷ್ಟ. ಈಗಿನ ಕನಿಷ್ಟ ಕಾಲದಲ್ಲಿ ಅವರವರ ಕಾಲ ಕಳೆಯುವದು ಬಹು ಪ್ರಯಾಸವಾಗಿದೆ. ಹಳ್ಳಿಯ ಜನರಿಗೆ ಊಟಚಾರ್ಜ ಕೊಡುತ್ತೇನೆಂದು ಹೇಳಿದರೂ ಕೂಡ ಚಾರ್ಜು ಕೆಗಿದುಕೊಂಡು ಊಟಕೊಡುವದು ಅವರಿಗೆ ನಾಚಿಕೆ. ಚಾರ್ಜ ಕೊಡಲು ಅವರಿಗೆ ಚೈತನ್ಯವಿಲ್ಲ. ಆದ್ದರಿಂದ ಹಳ್ಳಿಯ ಜನರು ಅನೇಕ ತರದ ನೆವಗಳನ್ನು ಉಪಾಧ್ಯಾಯರಿಗೆ ಹೇಳುತ್ತಾರೆ. ಇಂಥಾ ತೊಂದರೆಗಳನ್ನು ಮೇಲಾಧಿಕಾರಿಗಳು ತಿಳಿದೇಯಿವೆ. ಹೀಗಿರುವಾಗ್ಯೆ ಪರನಾಡಿನಿಂದ ಬಂದ ಉಪಾಧ್ಯಾಯರುಗಳು ಶಾಲೆಯಲ್ಲಿ ಪಾಠಹೇಳುವದು ಬದಿಗೆ ನಾನು ಈ ದಿನ ಯಾರ ಮನೆಗೆ ಊಟಕ್ಕೆ ಹೋಗಲಿ ಯಾರು ಕರಕೊಂಡು ಹೋದಾರು ಎಂಬ ಚಿಂತೆಯಿಂದಲೇ ಪಾಠಪೇಳದೆ ನರಳುತ್ತಿರುತ್ತಾರೆ.

ಇಂಥಾ ತೊಂದರೆಗಳನ್ನು ಪಟ್ಟೇ ಉಪಾಧ್ಯಾಯರು ಅನುಭವಿಸಿದ್ದಾರೆ. ಅವರವರ ಮನೆಯ ಹತ್ತಿರ ಶಾಲೆಯಲ್ಲು ಕಲಸ ಮಾಡುವವರು ನಮ್ಮನ್ನು ಮೇಲಾಧಿಕಾರಿಗಳು ದೂರ ವರ್ಗಮಾಡಿ ಯಾರೆಂಬ ಹೆದರಿಕೆಯಿಂದ ಕಲಸಮಾಡದೆ ನವನ ನಲ್ಲಾಪಗಳಿಂದ ಕಾಲಕಳೆಯಲಿಕ್ಕಿಲ್ಲವಾಗಿ ನಂಬುತ್ತೇವೆ.

ಅಯ್ಯಾ ಮಕ್ಕಳ ತಂದೇ! ನೀವು ನಾಡು ಕಚೇರಿಯವರ ಸ್ಕೂಲು ಪಂಚಾಯತರ ಮತ್ತು ಉಪಾಧ್ಯಾಯರ ಕಲಸಗಳ ನ್ಯೂನತೆಗಳನ್ನು ಬರೆದ ನಿಮ್ಮ ಲೇಖನಿಗೆ ಮಕ್ಕಳ, ಮತ್ತು, ಮಕ್ಕಳ ತಂದೆಯವರ ನ್ಯೂನತೆಗಳನ್ನು ಬರೆಯಲು ಗೋಚರವಾಗಲಿಲ್ಲವೇ! ಆಹಾ ಇದೇನಾಶ್ಚರ್ಯ!

ಉಪಾಧ್ಯಾಯ

ಅಯ್ಯಾ, ಸಂಪಾದಕರೇ

ನಿಮ್ಮ ಪತ್ರಿಕೆಯ 23 ನೇ ಸಂಚಿಕೆಯಲ್ಲಿ "ಕೊಡಗು ಕ್ರೈಸ್ತ ಬಂಧು" ಎಂಬವರು ಬರೆದ ಲೇಖನವನ್ನು ಓದಿದೆನು. ನಾನು ನಿಮ್ಮ 21 ನೇ ಸಂಚಿಕೆಯಲ್ಲಿ ನಿಜವಾಗಿ ನಡೆದ ವಿಷಯಗಳನ್ನೇ ಬರೆದಿದ್ದೆನು. "ಕೊಡಗು ಕ್ರೈಸ್ತ ಬಂಧು" ಎಂಬವರು ನಾನು ಬರೆದ ಒಂದು ಸಂಗತಿಯೂ ನಿಜವಾದದ್ದಲ್ಲವೆಂತಲೂ ತಾನು ನಡೆದಸಂಗತಿಗಳನ್ನು ಬರೆಯಲು ಇಷ್ಟಪಡುತ್ತೇನೆಂತಲೂ ಹೇಳಿ ತನ್ನ ಲೇಖನವನ್ನು ಪ್ರಾರಂಭಿಸಿ ನಾನು ಬರೆದ ಪ್ರಸ್ತಾಪಗಳನ್ನೇ ಬರೆದು, ಜೊತೆಗೆ ಅಲ್ಪವಿಷಯಗಳನ್ನು ಉತ್ಪ್ರೇಕ್ಷಿಸಿ ಬರೆದಿರುತ್ತಾರಲ್ಲದೆ ನಾನು ಬರೆದುದರಲ್ಲಿ ಸುಳ್ಳು ಯಾವದು ತಾನು ಬರೆದುದರಲ್ಲಿ ಸತ್ಯವ್ಯಾವದು ಎಂಬದನ್ನು ಹೇಳುವುದೇ ಇಲ್ಲ. ತನ್ನ ಲೇಖನಕ್ಕೆ ವಿಪರೀತ ಬಣ್ಣ ಹಚ್ಚಲು ಹೋಗಿ ಕೊನೆಗೆ "ಎಲ್ಲಾ ಬಣ್ಣ ಮಸಿ ನುಂಗಿತು" ಎಂಬ ಗಾದೆಯನ್ನು ನಿಧ್ಧಿಗೆ ತಂದರು ಎಂದು ಹೇಳಿದರೂ ತಪ್ಪಾಗದು.

ನಮ್ಮ "ಕೊಡಗು ಕ್ರೈಸ್ತ ಬಂಧು" ಬರೆದ ಲೇಖನವನ್ನು ಯಾರಾದರೂ ಸಂಯಾಗಿ ಓದಿ ನೋಡುವುದಾದರೆ ಅವರು ಬಹು ಮರ್ಯಾದಸ್ಥರೆಂದೂ ಸ್ನೇಹಿತಪಂಕ್ತರೆಂದೂ ತಿಳಿಯ ಬಹುದು. ಇಂಥವರು ತಪ್ಪಿ ಹೋಗುವುದೆಂದರೇನು! ಇತರರ ಕಡೆಗೆ ಅವಮರ್ಯಾದೆ ಕರವಾಗಿ ವರ್ತಿಸುವುದರ ಅರ್ಥವೇನು? ಅಯ್ಯಾ ಸಂಪಾದಕರೇ! ಮೇಲ್ಕಂಡ ಸಂಚಿಕೆಯ ಆ ಲೇಖನವು ನಿಮಗೆ ಹ್ಯಾಗೆ ತೋರುತ್ತದೆ? "ಜನ ನೋಡಿ ಮಾತಾಡಬೇಕು, ಬಾಗ ನೋಡಿ ಉಗುಳಬೇಕು" ಎಂಬಗಾದೆಯು ಇನ್ನೂ ಅವರಿಗೆ ತಿಳಿಯದೆ ಇರುವುದು ಆಶ್ಚರ್ಯ. ನನ್ನ "ಕ್ರೈಸ್ತ ಬಂಧು" ವೆಂದು ಹೇಳಿಸಿಕೊಂಡರೂ ಬುದ್ಧಿಪೂರ್ವಕ ಲಕ್ಷಣಗಳು ತಿಳಿಯಂತವಾದರೂ ಲೇಖನದಲ್ಲಿ ಕಾಣುವುದೇ ಇಲ್ಲ. ಪ್ರತಿಯೊಂದು ಲೇಖನದ ಸ್ವರ ಭಾವವನ್ನು ನೋಡಿದರೆ ನಮ್ಮ ಕ್ರೈಸ್ತ ಬಂಧುವಿಗೆ ಏನೋ ಒಂದು ಕಾರಣದಿಂದ ಹಲವರ ಮೇಲೆ ಮನಸ್ತಾಪವಿರುವುದರಿಂದ ಅವರಮೇಲೆ ದ್ವೇಷವನ್ನು ಕಟ್ಟಿಕೊಂಡಿದ್ದಾರೆಂತಲೂ, ಅದನ್ನು ತೋರ್ಪಡಿಸಲು ಈ ಸಂದರ್ಭವನ್ನು ಉಪಯೋಗಿಸಿರುತ್ತಾರೆಯೇ ಹೊರ್ತು ನಾನು ಬರೆದದ್ದರಲ್ಲಿ ಯಾವದು ನಿಜವಾದದ್ದಲ್ಲವೆಂಬದನ್ನು ಕಾಣಿಸಲು ಪ್ರಯತ್ನಿಸುತ್ತಾರೆ ಎಂಬುದು ತೋರುವುದೇ ಇಲ್ಲ.

ರೀಸ್ ಸಾಹೇಬರು ವೃದ್ಧರೇನೋ ನಿಜ. ಅವರು ವಾಯಸ್ಥರು ಅಂದು ಹಾಜರಿದ್ದವರಲ್ಲಿರಲಿಲ್ಲವೇ? ಅವರ ಕಡೆಗೆ ಹ್ಯಾಗೆ ವರ್ತಿಸಿದರು? ರೀಸ್ ಸಾಹೇಬರು ವಯಸ್ಸಾದವರಾದ್ದರಿಂದಲ್ಲವೇ ಚೇಯರ್‌ಮೆನ್ ತನವು ರಿಂದ ತಪ್ಪಿ ಹೋದದ್ದು? ಪಾಸ್ಟರರು ನೋಟೀಸು ಕಳುಹಿದ್ದೇನೋ ನಿಜ, ಆದರೆ "ರೀಸ್ ಸಾಹೇಬರು ಸಭೆಯ ಪಂಚಾಯತಿ ಮಾಡುತ್ತಾರೆ" ಎಂಬದಾಗಿ ಪಾಸ್ಟರರು ನೋಟೀಸು ಕಳುಹಿಸಿದರು ಎಂಬದಾಗಿ ಕ್ರೈಸ್ತ ಬಂಧು ಹೇಳುವ ಮಾತು ಸುಳ್ಳು. ಯಾವುದೇ ಒಂದು ಕಾರ್ಯಕ್ಕೆ ಹಿರಿಯರನ್ನೂ ಅನುಭವಸ್ಥರನ್ನೂ ಮೀಟಿಂಗಿಗೆ ಕರೆಯುವುದು ಲೋಕಪದ್ಧತಿ. ಇಲ್ಲಿಯ ಪಾಸ್ಟರರು ಇದನ್ನು ಸ್ವಲ್ಪ ಮರೆತು, ಕೆಲವು ಹಿರಿಯರನ್ನು ತಳ್ಳಿ ತನಗೆ ಬೇಕಾದವರನ್ನು ಅಂದಿನ ಮೀಟಿಂಗಿಗೆ ಕರೆಸಿದ ನ್ಯಾಯ ಯಾವುದು? "ಸಭೆಯವರನ್ನು ಸಂಧಿಸಿ ಮಾತಾಡಲು ರೀಸ್ ಸಾಹೇಬರು ಅಪೇಕ್ಷಿಸುತ್ತಾರೆ" ಎಂಬದಾಗಿ ಪಾಸ್ಟರರ ನೋಟೀಸು ಇದ್ದಲ್ಲಿ ಹಿರಿಯರೂ ಅನುಭವಸ್ಥರೂ ಧೊರೆಯವರನ್ನು ಸಂಧಿಸಿ ಮಾತಾಡಲು ಹೋದದ್ದರಲ್ಲಿ ತಪ್ಪೇನು? ಅವರೂ ಕೂಡಾ ಸಭೆಯವರಲ್ಲವೋ? ಪ್ರಸ್ತಾಪಿಸಿದ ಹಣದ (ಚರ್ಚ್ ಮತ್ತು ಪೂವರ್ ಫಂಡಿನ) ವಿಷಯವು ಅವರ ತಿಳುವಳಿಕೆಗೆ ಬಂದರೆ ಕಡಕಾದೀತೆಂದು ಭಾವಿಸಿದರೇ? ಅಂದು ಪ್ರಸ್ತಾಪಿಸಿದ ವಿಷಯವು ಇಡೀ ಸಭೆಗೆ ಲಕ್ಷ್ಯವಾಗಿರುತ್ತದೆಯೇ ಹೊರತು ಪಾಸ್ಟರರು ಕೂಡಿಸಿದ 7 ಮಂದಿಗೆ ಮಾತ್ರವಲ್ಲ. ಈ 7 ಮಂದಿಯನ್ನು ಸಭೆಯವರು ಚುನಾವಣೆ ಮಾಡಿದ್ದೂ ಇಲ್ಲ. ಶಾಲಾಮಕ್ಕಳ ಹಾಜರು ಕರೆಯುವ ಹಾಗೆ ಪೋಪಾದಿ ಸೂಪರಿಂಡೆಂಟರು ಅಂದು ಕೂಡಿದ ಸದಸ್ಯರುಗಳ ಹಾಜರು ತಕ್ಕೊಂಡೂ, ಎಣಿಸಿಯೂ ಇರುವಲ್ಲಿ ಇತರ ಮೂರು ಹಿರಿಯರ ಎಣಿಕೆಯು ತಪ್ಪಿಹೋದದ್ದು, ಕ್ರೈಸ್ತ ಬಂಧುವಿನ ಅಂಬೋಣದಂತೆ ಮುದಿಪ್ರಾಯದ ದೋಷವೇ? "ಧೊರೆಯವರು ಮೀಟಿಂಗ್ ಸುರುಮಾಡುವಾಗಲೇ ಅನುಮತಿ ಇಲ್ಲದವರು ಇರಕೂಡದು ಎಂದು ಹೇಳಿದರು" ಎಂಬ ಸುಳ್ಳನ್ನು ಹೇಳುತ್ತೇನೆಂದು ನಟಿಸಿಕೊಂಡು ಕ್ರೈಸ್ತ ಬಂಧುವಿನ ಮಾತು ಆಗದೇ ಸುಳ್ಳು. ಆ ಹಿರಿಯರನ್ನೊಡಗೂಡಿ ಕಾರ್ಯವನ್ನಾರಂಭಿಸಿ ಮಧ್ಯದಲ್ಲಿ ಯಾವುದೋ ಒಂದು ನೆವದಿಂದ ಅವರನ್ನು ಓಡಿಸಲು ಪ್ರಯತ್ನಿಸಿದ್ದು ನ್ಯಾಯವೋ? ನಿಜವನ್ನು ಹೇಳುವ ಕ್ರೈಸ್ತ ಬಂಧುವಿನ ಗೋಚರಕ್ಕೆ ಇದು ಬರಲಿಲ್ಲವೋ? ಕೂಡಿದ್ದ 7 ಮಂದಿಯಲ್ಲಿ 5 ಮಂದಿ ಮೀಟಿಂಗ್‌ನಿಂದ ಹೊರಟು ಹೋಗಬೇಕಾದರೆ ತಕ್ಕ ಕಾರಣವಿಲ್ಲದಿರುವುದೇ? ಹಣದ ಈ ಅಲ್ಪ ಸಂಗತಿಯನ್ನು ಹಜರತ್ ಕಮಿಷನರ್ ಸಾಹೇಬರವರಲ್ಲಿ ದೂರು ಕೊಡಲು ತಿಳಿದಿದ್ದ ಸುಪರಿಂಟೆಂಡೆಂಟರಿಗೆ ಕ್ರೈಸ್ತ ಬಂಧುವು ಹೇಳುವ ಗಲಾಟೆಯಾಗಿದ್ದರೆ ಪೋಲೀಸಿಗೆ ತಿಳಿಸಲು ಗೊತ್ತಾಗದಿರುತಿತ್ತೇ? ಹೆಸರಿನ ಪೂರ್ತಿಯ ಕ್ರೈಸ್ತ ಬಂಧುವಿಗೆ ಮಾತ್ರ ಆ ಗಲಾಟೆಯು ಕಂಡುಬಂತೇ? ಕ್ರೈಸ್ತ ಬಂಧುವೆನ್ನಿಸಿಕೊಂಡ ನಿಷ್ಕಾರಣವಾಗಿ ಗವರ್ನಮೆಂಟ್ ಆಫೀಸುಗಳಲ್ಲಿ ಕೆಲಸ ಮಾಡುವ ಕ್ರೈಸ್ತರಮೇಲೆ ಸುಳ್ಳು ಸುಳ್ಳಾಗಿ ಆಕ್ಷೇಪಗಳನ್ನು ಕಲ್ಪಣೆಮಾಡಿ ಬರೆದದ್ದರ ಉದ್ದೇಶ್ಯವೇನು? ವೈಮನಸ್ಯತನವನ್ನು ತಾಳಿದ್ದ ಇವರಮೇಲೆ ತನ್ನ ದ್ವೇಷವನ್ನು ತೋರ್ಪಡಿಸಿದರೇ ವಿನಹ ನಾನು ಮೊದಲು ಬರೆದ ಯಾವ ವಿಷಯಗಳನ್ನಾದೂ ಖಂಡಿಸಿ ಬರೆಯಲಿಲ್ಲ.

ಆದಾಯವೆಚ್ಚಗಳ ಲೆಕ್ಕಾಚಾರವನ್ನು ವರ್ಷಂಪ್ರತಿ ಕೇಳದೆ ನಾಲ್ಕೈದು ವರ್ಷಗಳಿಗೊಮ್ಮೆ ಕೇಳುವುದಿದೆಯೋ? ಆಸ್ತಿಯ ಪಟ್ಟಿಗೆ ಸೇರದ ಈ ಲೆಕ್ಕಾಚಾರ ಕೇಳುವ ನ್ಯಾಯ ಎಲ್ಲಿಯದು? ಮೇಲ್ಕಂಡ ಹಣದ (ಚರ್ಚ್ ಮತ್ತು ಪೂವರ್ ಫಂಡಿನ) ವಿಷಯ ತನಗೆ ಗೊತ್ತಿಲ್ಲವೆಂದು ನಟಿಸುವುದರಲ್ಲಿ ನಮ್ಮ ಕ್ರೈಸ್ತ ಬಂಧು ಕೇವಲ ಅಜ್ಞಾನಿಯೆಂದು ಹೇಳಿದರೂ ತಪ್ಪಾಗದು. ಈ ಹಣವನ್ನು ಹಿರಿಯರಲ್ಲೊಬ್ಬರಕೈಗೆ ಕ್ರಮವ್ಯತಿರಾಗಿ ಕೆಲವು ಗೃಹಸ್ಥರ ಸಮಕ್ಷಮ ಕೊಟ್ಟದ್ದಾಗಿ ಗುಪ್ತದ ವಿನಹಾ ಕ್ರೈಸ್ತಬಂಧುವು ಹೇಳುವಂತೆ ಪರಮೋಸದಿಂದಲ್ಲವೇ ಅಲ್ಲ. ಈ ಹಣಕ್ಕೆ ಸಭೆಯವರು ಆರಿಸಿಕೊಂಡ ಮುಖ್ಯಸ್ಥರು ಇದ್ದೇ ಇರುತ್ತಾರೆ. ಕ್ರೈಸ್ತಬಂಧುವೆನ್ನಿಸಿಕೊಂಡು ಇದನ್ನು ತಿಳಿದೂ ಅಜ್ಞಾನಿಯಾಗಿ ವರ್ತಿಸಿದ್ದೇನು? ಈ ಹಣದ ಲೆಕ್ಕಾಚಾರವನ್ನು ಪ್ರತಿವರ್ಷದ ಅಂತ್ಯದಲ್ಲಿ ಸಭೆಯವರಿಗೆ ತಿಳಿಸುತ್ತಾ ಬಂದಿರುವಲ್ಲಿ ಕ್ರೈಸ್ತ ಬಂಧುವು ಆವಾಗ್ಗೆ ಕ್ರೈಸ್ತನಾಗಿರುತ್ತಿದ್ದರೆ ಗೊತ್ತಾಗದೆ ಇರುತ್ತಿತ್ತೇ? "ಬೇಟ ಬಾಸೆಲ ಮಿಶನ್ನಿನವರು ಆಸ್ತಿಯನ್ನು ಸಭೆಯವರ ಹೆಸರಿನಲ್ಲಿ ಬರೆದಿಟ್ಟ ದಾಖಲೆ ಇದೆಯೋ?" ಎಂದು ಅವರು ಕೇಳುವುದಾದರೆ "ಕುರುಡನಿಗೆ ಕನ್ನಡಿ ಇದ್ದರೇನು? ಇಲ್ಲದಿದ್ದರೇನು?" ಎಂಬುವುದೇ ನನ್ನ ಉತ್ತರ.

ಹಲವರ ಮೇಲೆ ದ್ವೇಷವನ್ನು ಕಟ್ಟಿಕೊಂಡು ಪತ್ರಿಕೆಗಳ ಮೂಲಕ ತನ್ನ ಒಳಪ ಸಸಾಪಗಳನ್ನು ಈ ರೀತಿ ತೋರ್ಪಡಿಸುವ ಇವರಿಗೆ ಕ್ರೈಸ್ತಬಂಧು ಎಂಬ ಹೆಸರು ಹೊಂದುವುದೇ?

"ಕ್ರೈಸ್ತ ಸಹೋದರರಲ್ಲೊಬ್ಬ"

ಅಮ್ಮತ್ತಿ ನೇಶನಲ್ ಸ್ಕೂಲು.

ಅಯ್ಯಾ,

ಮ|| ರಾ| ಶ್ರೀ, ಕೊಳುವಂಡ ತಿಮ್ಮಯ್ಯನವರು ಅಮ್ಮತ್ತಿ ನೇಶನಲ್ ಸ್ಕೂಲಿನ ಸಂಬಂಧ ನನಗೆ ಬರೆದಿರುವ ಈ ಕೆಳಗಿನ ಕಾಗದವನ್ನು ದೇಶ ಬಂಧುಗಳ ತಿಳುವಳಿಕೆ ಬಗ್ಗೆ ಪ್ರಕಟಿಸಬೇಕಾಗಿ ಕೋರಿಕೆ –

ಶ್ರೀಮಾನ್ ಅಬ್ದುಲ್ ಗಫೂರ್‌ಖಾನ್ ಸಾಹೇಬರೆ,

ನಾನು ನಿಮ್ಮ ಸಂಗಡ ರೂಬ್‌ರೂ ಮಾತಾಡಿದಂತೆ ಅಮ್ಮತ್ತಿ ನೇಶನಲ್ ಸ್ಕೂಲಿಗಾಗಿ ಅಮ್ಮತ್ತಿ ನಿವ್ವಾಸಿಗಳು ಮಾಡಿದ ಹಚ್ಚನಾಡಿನಲ್ಲಿರುವ ನನ್ನ ಐವತ್ತು ಎಕ್ರೆ ಜಾಗವನ್ನು ಕೊಡಲು ಇಚ್ಛೈಸುತ್ತೇನೆ. ಇದರಲ್ಲಿ ಭತ್ತ, ಕಾಫಿ ಅಥವಾ ಯಾಲಕ್ಕಿ ವ್ಯವಸಾಯ ಮಾಡಲು ಅನುಕೂಲವಿರುವ ಬಾಧಕವಿಲ್ಲದ ಜಾಗ ಆಗಿದೆ. ಇದರಲ್ಲಿರುವ ಕೆಲವು ಬಿಟ್ಟೆ ಮರಗಳನ್ನು ಶಾಲೆಯ ಪ್ರಯೋಜನಾರ್ಥವಾಗಿ ಶಾಲೆಯ ಅಧಿಕಾರಿಗಳು ಮಾರಾಟ ಮಾಡಿಕೊಳ್ಳಬಹುದು. ಇದಕ್ಕೆ ನೀವು ಒಪ್ಪಿದರೆ ಹೆಚ್ಚಿನ ಸಂಗತಿಗಳನ್ನು ತಿಳಿಸುವೆನು.

....

....

"ತರ್ಜುಮೆ" ತಮ್ಮ ವಿಧೇಯ

ಸಿ. ಐ. ತಿಮ್ಮಯ್ಯ

ಮ. ತಿಮ್ಮಯ್ಯನವರ ಹಿರಿಯರು ದಾನಧರ್ಮಗಳಲ್ಲಿ ನಮ್ಮ ದೇಶದಲ್ಲಿ ಹೆಸರುವಾಸಿ ಪಡೆದಿರುವರು ಎಲ್ಲರಿಗೂ ತಿಳಿದುದಲ್ಲ. ಇವರೂ ಇವರ ಹಿರಿಯರ ಮಾರ್ಗವನ್ನೇ ಹಿಂಬಾಲಿಸುತ್ತಿರುವುದರಿಂದ ನಾವು, ಸ್ವಾರ್ಥ ಕಲಿಟವುಳ್ಳವರು ನಾಚಬೇಕಲ್ಲದೆ ದೇಶದವರೇ ಇವರಿಗೆ ಋಣಿಯಾಗಿ ಬಂದಿಸುವವರಾಗಿದ್ದೇವೆ. ಅಲ್ಲದೆ ನಮ್ಮ ದೇಶದಲ್ಲಿರುವ ಐಶ್ವರ್ಯವಂತ ಮಹನೀಯರು ಇಂಥಾ ಧಾರ್ಮಿಕ ಪುರುಷರ ಉದಾಹರಣೆಯನ್ನು ಹಿಂಬಾಲಿಸಿ ತಮ್ಮ ಉದಾರಭಾವನೆಯನ್ನು ತೋರಿಸಬೇಕಾಗಿ ಕೋರುವೆನು.

ಅಬ್ದುಲ್ ಗಫೂರ್‌ಖಾನ್

ಆಸ್ಪತ್ರೆಗಳು

ನವೆಂಬರ್ ೯ನೇ ತಾರೀಖಿನ "ಕೊಡಗು" ಪತ್ರಿಕೆಯಲ್ಲಿ "ಪಟ್ಟಣಿಗ" ನೆಂಬವರು ಬರೆದ ಟಿಪ್ಪಣಿಗೆ ಉತ್ತರ ಕೊಡುವುದರಲ್ಲಿ ಗರೀಬ ಜನರಿಗೆ ಮುನಿಸಿಪಲ್ ಸೂಲಗಿತ್ತಿಯರು ಫೀಸ್ ಚಾರ್ಜು ಮಾಡುತ್ತಾರೆಂಬ ಸಂಗತಿ ನನಗೆ ತಿಳಿಸಿದ್ದರಿಂದ ಅವರಿಗೆ ಮುಂದೆ ಮಾತ್ರ ಡಿಸ್ಟ್ರಿಕ್ಟ್ ಬೋರ್ಡಿನಿಂದ ಅಥವಾ ಮುನಿಸಿಪಾಲಿಟಿಯಿಂದ ಸಂಬಳ ಕೊಡುತ್ತಿರುವ ಸೂಲಗಿತ್ತಿಯರು ಹೆರಿಗೆಗೆ ಕರೆದಾಕ್ಷಣ ಫೀಸಿನ ಅಭಿಲಾಷೆಯಿಲ್ಲದೆ ಒಡನೆ ಹೋಗಬೇಕೆಂಬುದು. ಚೆನ್ನಾಗಿ ತಿಳಿದಂತಕ್ಕದ್ದು ತಿಂಗಳಿಗೆ ೩೦ ರೂ ಗಿಂತ ಹೆಚ್ಚು ಉತ್ಪತ್ತಿ ಇಲ್ಲದೆ ಇರುವವರಿಂದ ಫೀಸನ್ನು ಎಂದಿಗೂ ಕೇಳಲೂ ಕೂಡದು. ಅಪೇಕ್ಷಿಸಲೂ ಬಾರದು. ಇದಕ್ಕಿಂತ ಹೆಚ್ಚಿಗೆ ಉತ್ಪತ್ತಿ ಇರುವವರಿಂದ ಸಾಧಾರಣ ದರದಲ್ಲಿ ಉತ್ಪತ್ತಿಗನುಸಾರವಾಗಿ ಮಾತ್ರ ಚಾರ್ಜು ವಸೂಲಿಮಾಡಬಹುದು. ಸೂಲಗಿತ್ತಿಯರು ಇದಕ್ಕೆ ವಿರೋಧವಾಗಿ ಹೊರಡು ಹೊರಿಸಿದರೆ ಅದನ್ನು ತಿಳುಹಲು ಸಿವಿಲ್ ಸರ್ಜನರು ತಯಾರಾಗಿರುವರು. ಆಸ್ಪತ್ರೆಗೆ ಬರಲು ಕೂಡದಿರುವ ಕಾಯಿಲಸ್ಥರಾಗಿರುವ ಬಡವರ ಮನೆಗೆ ಫೀಸಿಲ್ಲದೆ ಹೋಗುತ್ತಿರುವುದು ನನ್ನ ಪದ್ಧತಿಯಾಗಿದೆ. ಈಗಾಗಲೆ ಹೋಗುತ್ತಿರುವನು. ಮೇಲಿನ ರೀತಿ ಕಾಯಿಲಸ್ಥರಾಗಿರುವವರ ಉತ್ಪತ್ತಿಯು ತಿಂಗಳಿಗೆ ೩೦ ರೂ ಗೆ ಮಿಗದೆ ಇದ್ದಲ್ಲಿ ಅಂಥವರನ್ನು ನೋಡಲಿಕ್ಕೆ ಫೀಸಿಲ್ಲದೆ ಸಬ್ ಅಸಿಸ್ಟೆಂಟ್ ಸರ್ಜನರನ್ನು ಅವರ ಮನೆಗೆ ಕರೆಯಿಸಿಕೊಳ್ಳುವ ಹಕ್ಕು ಪಬ್ಲಿಕ್‌ನವರಿಗೆ ಇದೆಯೆಂಬುದು ಜನರು ತಿಳಕೊಳ್ಳತಕ್ಕದ್ದು. ಸಬ್ ಅಸಿಸ್ಟೆಂಟ್ ಸರ್ಜನನು ಕಾಯಿಲಸ್ಥನನ್ನು ಅವನನ್ನು ಆಸ್ಪತ್ರೆಗೆ ಕಳುಹಿಸಬೇಕೆಂದು ಹೇಳಿದರೆ ಕಾಯಿಲಸ್ಥನು ಅದಕ್ಕೆ ಒಪ್ಪಬೇಕು. ಜೀವಕ್ಕೆ ಅಪಾಯ ಬಾರದಂತೆ ಆಸ್ಪತ್ರೆಗೆ ಒಯ್ಯಬಹುದಾದಂತ ಸಂದರ್ಭದಲ್ಲಿ ರೋಗಿಯು ಆಸ್ಪತ್ರೆಗೆ ಹೋಗಲು ಒಪ್ಪದೆ ಹೋದರೆ ನಂತರ ಫೀಸಿಲ್ಲದೆ ಸಬ್ ಅಸಿಸ್ಟೆಂಟ್ ಸರ್ಜನನನ್ನು ತನ್ನ ಮನೆಗೆ ಕರೆಯಿಸಿಕೊಳ್ಳುವ ಹಕ್ಕನ್ನು ಕಳಕೊಳ್ಳುವನು.

(ತರ್ಜುಮೆ)

(Sd) ಎಫ್. ಸಿ. ಫ್ರೇಸರ್,

ಮೇಜರ್, ಐ. ಎಂ. ಎಸ್. ಸಿವಿಲ್ ಸರ್ಜನ್

ಅಯ್ಯಾ,

ಮೈಸೂರು ಲೈಫ್ ಅಂಡ್ ಪ್ರಾಪರ್ಟಿ ಎಶ್ಯುರೆನ್ಸ್ ಕಂಪೆನಿಯವರ "ಜೆ ಪಾಲಿಸಿ" ಎಂಬ ಪ್ರಕಟನೆಯು ನಿಮ್ಮ ಪತ್ರಿಕೆಯಲ್ಲಿ ಸದಾ ಪ್ರಕಟವಾಗುತ್ತಿರುವುದನ್ನು ನೋಡುತ್ತಿದ್ದೇವೆ. ಆ ಪಾಲಿಸಿಯ ವಿಷಯ ಮೈಸೂರು ಸರಕಾರದವರ ಅಭಿಪ್ರಾಯ ಹೀಗಿದೆ ಎಂಬುದನ್ನು ಕಳೆದ ಆಗಸ್ಟ್ ತಿಂಗಳ ೨೭ನೇ ತಾರೀಕಿನ 'ವೃತ್ತಾಂತಪತ್ರಿಕೆ' ಯಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ಆದ ಚರ್ಚೆಯನ್ನು ಈ ಕೆಳಗೆ ನಿಮ್ಮ ಪತ್ರಿಕೆಯ ವಾಚಕರ ತಿಳುವಳಿಕೆ ಬಗ್ಗೆ ಕಳುಹಿಸುತ್ತೇವೆ. ಇದನ್ನು ನೋಡಿ ನಮ್ಮ ದೇಶೀಯರು ಎಚ್ಚರಗೊಳ್ಳಬೇಕಾಗಿ ನಮ್ಮ ವಿನಂತಿ.

ಮೈಸೂರು ನ್ಯಾಯವಿಧಾಯಕಸಭೆ

....

ಮೈಸೂರು ಕಂಪೆನಿಗಳ ಕಾನೂನಿನಲ್ಲಿ ಹೊಸ ಮತ್ತು ಹಳೆ ಕಂಪೆನಿಗಳ ಹೆಸರು ಎಲ್ಲಾ ನಿಬಂಧನೆ, ಕಾನೂನು ವಿಧಿಗಳು ಬದಲಾವಣೆ ಮಾಡಬೇಕಾದ ಬಗ್ಗೆ ಕಂಡು ಬಂತು. ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಪ್ರಾಪರ್ಟಿ ಅಶ್ಯುರೆನ್ಸ್ ಕಂಪೆನಿಯವರು "ಗವರ್ನಮೆಂಟ್ ಸೆಕ್ಯೂರಿಟಿ' ಎಂಬ ಪದಗಳನ್ನು ಜಾಹಿರಾತಿನಲ್ಲಿ ಉಪಯೋಗಿಸಿ ಜನರನ್ನು ಮೋಸ ಮಾಡುವುದರಿಂದ ಆ ಪದಗಳನ್ನು ರದ್ದುಪಡಿಸಬೇಕೆಂದು ಸರಕಾರಕ್ಕೆ ತಿಳಿಸಲ್ಪಟ್ಟದ್ದರಿಂದ ಸರಕಾರದವರು ಆ ಕಂಪೆನಿಗೆ ಆ ಪದಗಳನ್ನು ಉಪಯೋಗಿಸಬಾರದೆಂದು ತಿಳಿಸಿದರು. ಆದರೆ ಅದರಂತೆ ಕಂಪೆನಿಯವರು ನಡೆಯಲಿಲ್ಲ. ಅದರ ಮೇಲೆ ಗವರ್ನಮೆಂಟ್‌ನವರು ಪ್ರಸಿದ್ಧ ಪತ್ರಿಕೆಯನ್ನು ಪ್ರಕಟ ಮಾಡಿ ಆ ಕಂಪೆನಿಯವರು ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ ಎಂದು ಇಟ್ಟುಕೊಂಡಿರುವ ಪದಗಳಿಗೆ ಯಾವ ಸರಕಾರದ ಜವಾಬ್ದಾರಿ ಏನೂ ಇರುವುದಿಲ್ಲವೆಂದು ಮುಂದಾಗಿ ತಿಳಿಸಿದರು. ಈಚೆಗೆ ಈ ಕಂಪೆನಿಯ ವಿಚಾರವು ನ್ಯಾಯವಿಧಾಯಕ ಸಭೆಯಲ್ಲೂ ಪ್ರಜಾಪ್ರತಿನಿಧಿ ಸಭೆಯಲ್ಲೂ ಕೂಡ ಚರ್ಚೆಯಾಗಿರುತ್ತದೆ. ಗವರ್ನಮೆಂಟಿನವರು ಆ ಪದಗಳನ್ನು ಉಪಯೋಗಿಸಬಾರದೆಂದು ಅನೇಕ ಸಲ ಆ ಕಂಪೆನಿಯವರಿಗೆ ತಿಳಿಸಿ ಎಚ್ಚರಿಸುತ್ತಾ ಬಂದರು. ಆದರಿಂದ ನಮ್ಮ ಸಂಸ್ಥಾನದ ಒಳಗೂ ಹೊರಗಡೆಯೂ ಅನೇಕರು ಮೋಸಹೋಗುವ ಸಂಭವ ಉಂಟೆಂದು ಸರಕಾರಕ್ಕೆ ತಿಳಿದುಬಂದಿದೆ. ಆ ಪದಗಳನ್ನು ಕಂಪನಿಯು ಹೆಸರಿನಿಂದ ತೆಗೆಸಿಹಾಕಿಸುವುದರ ಕ್ಕೆ ಮಾಡಿದ ಪ್ರಯತ್ನಗಳೆಲ್ಲಾ ನಿಷ್ಫಲವಾದ್ದರಿಂದ ಈಗ ಕಂಪನಿ ಕಾನೂನುಗಳಲ್ಲೇ ತಕ್ಕ ಬದಲಾವಣೆ ಮಾಡಬೇಕೆಂದು ಸೂಚಿಸಿರುತ್ತೇವೆ. ಇದನ್ನು ಮೆಂಬರುಗಳು ಚರ್ಚಿಸಿ ಪ್ಯಾಸ್ ಮಾಡಬೇಕಾಗಿದೆ ಎಂದು ಮುಂತಾಗಿ ಕಾರ್ಯದರ್ಶಿಯವರು ಹೇಳಿದರು. ಚರ್ಚೆ ಮಾಡುವಾಗ ಮ|| ಬಿ ವಿ ರಾಮಸ್ವಾಮಿಶೆಟ್ಟರು ಆ ರೀತಿ ಮಾಡಬಹುದೆಂದು ಒಪ್ಪಿಕೊಂಡರು. ಮ|| ಪರಮಶಿವಯ್ಯನವರು ತಿಳುವಳಿಕೆ ಸಾಲದವರು ಎಂದಿದ್ದರೂ ಮೋಸಹೋಗುತ್ತಾರೆಂದೂ ನಷ್ಟಪಟ್ಟ ಅಥವಾ ಮೋಸಹೊಂದಿದ ಸಂದರ್ಭ ಕಂಡುಬಂದಾಗ ಕಂಪನಿಯ ಮೇಲೆ ಮೊಕದ್ದಮೆ ಮಾಡಬಹುದಾಗಿದೆ ಎಂದೂ ಹೇಳಿದರು. ಮ|| ವಿಜಯದೇವರು ಹೆಸರನ್ನು ಬದಲಾವಣೆ ಮಾಡಿಸಬಹುದು. ಆದರೆ ಮಾಡದಿದ್ದರೆ ೩ ತಿಂಗಳಲ್ಲಿ ಕಂಪನಿಯನ್ನು ಕೊನೆಯಿಟ್ಟು ಸುತ್ತೇವೆನ್ನುವುದು ಬಹಳ ಕಠಿಣವಾದ್ದರಿಂದ ವಿನಾದ ರೂ ಜುಲ್ಮಾನೆ ಹಾಕಬಹುದೆಂದು ಸೂಚಿಸಿದರು. ಮ|| ಅಬ್ಬಾಸ್ ಖಾನರು ಹೀಗೆ ಹೆಸರು ತಪ್ಪಾಗಿ ಉಪಯೋಗಿಸುವುದನ್ನು ಮಡಮಾಡಬೇಕೆಂದಿದ್ದರು. ಮ|| ವಿಜಯದೇವರ ಸಲಹೆಯಂತೆ ಮೊದಲು ಕಾರಣ ತೋರಿಸಿ ಸರಕಾರದವರು ನೋಟೀಸು ಕೊಟ್ಟು ಸಮಾಧಾನವನ್ನು ತರಿಸಿಕೊಂಡು ಮುಂದಿನ ಕ್ರಮ ಜರುಗಿಸತಕ್ಕದ್ದಾಗಿದೆ ಎಂದು ಮೆಂಬರುಗಳು ಒಪ್ಪಿ ಬಿಲ್ಲನ್ನು ಪ್ಯಾಸ್ ಮಾಡಿದರು.

ಈ ಕಂಪನಿಗೆ ಸೇರಿರುವವರೂ, ಸೇರಬೇಕೆಂದಿರುವವರೂ ಮೇಲಿನಸಂಗತಿಯನ್ನು ಚೆನ್ನಾಗಿ ಓದತಕ್ಕದ್ದು.

ಬಿ ಗಣಪತಿ

ಐ ಪಿ ಮಾದಪ್ಪನವರಿಗೊಂದು

ಕಳೆದ ಕೊಡಗು ಪತ್ರಿಕೆಯ ನಿಮ್ಮದೊಂದು ಸೂಚನೆಯ ಪತ್ರ ನೋಡಿ ಬೆರಗುಹೊಂದಿದೆ. ವಿದ್ಯಾ ಇಲಾಖೆಯು (Syllabus) ಸಿಲೆಬಸ್ ಮತ್ತು ಕರಿಕ್ಯುಲಮ್ (Curiculum) ಗಳನ್ನು ವಿದ್ವಾಂಸರಿಂದ ಉಂಟುಮಾಡಿ ಭೂಲೋಕದಲ್ಲೆಲ್ಲಾ ವ್ಯಾಪಿಸಿರುವ ಕಿಂಡರ್‌ಗಾರ್ಟನ್ ಕ್ರಮವನ್ನೇ ನಿಲ್ಲಿಸಬೇಕೇ–ಇಲ್ಲವೇ ತಮ್ಮಂಥವರನ್ನು ಸಂತೋಷಪಡಿಸಲು ಈ ಲೇಖನ ಬರೆದಿರುವಿರೋ ತಿಳಿಯದು. ಮೊದಲನೇದೇ ನಿಮ್ಮ ಉದ್ದಿಶ್ಯವಾದರೆ ಆಸಾಧ್ಯ ಕೆಲಸಕ್ಕೆ ಕೈಹಾಕಿರಿ. ೭ನೇದಾದರೆ ನಿಮ್ಮ ಪತ್ರ ಓದಿ ತೀರುವವರೆಗೆ ಮಾತ್ರ ಸಂತೋಷಪಡಿಸಬಹುದು.

ನಮ್ಮ ಹಿರಿಯರು ಶಾಲೆಗಳಲ್ಲಿ ಓದುವಾಗ ಕಲಿತ ಕ್ರಮವು ಈಗಿನದಲ್ಲವೇ. ನಮ್ಮ ಬಾಲ್ಯದ ಸ್ಲೇಟು ಪುಸ್ತಕಗಳ ನಮ್ಮ ಮಕ್ಕಳವು. ಸುಧಾರಿಸಬೇಕೇ ಬೇಡವೇ? ನಿಮ್ಮ ಪತ್ರದ ತಾತ್ಪರ್ಯವಿಲ್ಲದೆ ನವನಾಗರಿಕತೆಯ ಪದ್ಧತಿಯ ಸುಧಾರಣೆಯಾಗದಿರಬೇಕೆಂದಲ್ಲವಾಗಿ ತೋರುತ್ತದೆ. ಪೂರ್ವದಲ್ಲಿ ಮಠಗಳಲ್ಲಿ ಓದುತ್ತಿದ್ದ ಬಾಲಕರ ಮಯಸ್ಸನ್ನು ಗಣನೆಗೆ ತಂದಿದ್ದೀರೋ? ಐದು ವರ್ಷ ಬಂದವನೂ ಕೂಡ ೩ನೇ ತರಗತಿಯಲ್ಲಿ ಓದುತ್ತಿದ್ದದ್ದು ನೆನಪಿಲ್ಲವೇ? ಈಗಲೂ 14 ವರುಷ ಕಳೆದ ನಂತರ ನಿಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಸುರುಮಾಡಿದರೆ ನಿಮ್ಮ ಮಕ್ಕಳ ಸ್ಲೇಟುಪುಸ್ತಕಗಳು 3 ಕಿಲೋವರೆಗೂ ಹೊರಬಹುದು. ಇಷ್ಟಾದರೆ, ಕಾಲ್ಕಡೆ ಮಕ್ಕಳಿಗೆ ಬರೆಯಲು ಕಲಿಯಲು, ಪುಸ್ತಕಗಳನ್ನು ಓದಲು ದೇವರೇ, ಎಂದು ಹೇಳಿಕೊಡಲು ಬಳಕೆಯ ಬೇರೆ ಕಾರಣಗಳು ನಿಮ್ಮ ಪಕ್ಕಕ್ಕೆ ಏರಿಲ್ಲವೇ. ನಿಮ್ಮ ಹಿರಿಯರು ಮಕ್ಕಳನ್ನು ಹೊಲಿಮಠಕ್ಕೆ ಎಂದಾದರೂ ಹಣ ದರ್ಜೆಯ ರಿಗೆ ಕೊಡುತ್ತಿದ್ದರೇ. ಜಾತಿ ಪರ್ವಗಳಂತೂ ಇರಲಿ. ದರ್ಜೆಗೆ 1 ಮಗುವಿನ 1 ವರುಷದ ಒಟ್ಟು ಹೊರಿಗೆ ಖರ್ಚನ್ನು ಉಳಿಕೆ ಮಾಡಿದರೆ, ನೀವು ದೇವರಿಗೆ ಹೊರೆ ಇರುವ ಸ್ಲೇಟು, ಪುಸ್ತಕಗಳ ದುಡ್ಡು ಉಳಿಯುವುದಿಲ್ಲವೇ. ಪೂರ್ವದ ವಿದ್ಯಾಭ್ಯಾಸದ ಉದ್ದೇಶವೇ ಬೇರೆ. ಈಗಿನದೇ ಬೇರೆ. ಹಾಗಾದರೆ ಕಲರ್‌ಬಾಕ್ಸ್, ಡ್ರಾಯಿಂಗ್, ಫ್ರೂಟ್‌ರೂಲ್, ಇಂಜೆಕ್ಷನ್, ಆಲೋಚಿಸಿನೋಡಿ. ಓಹೋ, "ಕಡೆಯಲ್ಲಿ ಹಾಳು ಇರುವ ಮಕ್ಕಳಿಗೆ ಇದು ಬೇಕಾಗಿದೆಯೇ" ಎಂದು ನಿಮ್ಮ ಅಭಿಪ್ರಾಯವೇ? ಹಾಗಾದರೆ ಸಂಪೂರ್ಣವಾಗಿ ಐದು ವರ್ಷದ ನಂತರ ನಿಮ್ಮ ಲೋಗೆ ಹೊಸ ಮಕ್ಕಳು ಕಲಿಕೆಯ ನಂತರ ತನ್ನ ಮಾತುಗಳನ್ನು ಬೇಕಾದರೆ ಅಕ್ಷರ ಪಾಠಗಳನ್ನು ಕಾಣುವ ಶಕ್ತಿ ಬಂದ ನಂತರ ಮಕ್ಕಳನ್ನು ಶಾಲೆಗೆ ಕಳುಹಿಸಿದರೆ ಆಯಿತು. ನಿಮ್ಮ ಲೇಖನದಲ್ಲಿ 1 ನೇ ತರಗತಿಯಿಂದ 6 ನೇ ತರಗತಿವರೆಗೆ ಬೇಕಾಗುವ ಕೆಲವು ಪುಸ್ತಕಗಳ ಹೆಸರುಗಳನ್ನು ಆಡಂಬರದಿಂದ ಬರೆಯುವಿರಿ. ಇವುಗಳಲ್ಲಿ ಅನೇಕವು ಚಿಕ್ಕ ಮಕ್ಕಳಿಗೆ ಹೇಳಿಕೊಡುವ ಕಥೆಪುಸ್ತಕಗಳೆಂಬುದನ್ನು ಮರೆತಿರಿ. ಈ ಕತೆಗಳು ಪೂರ್ವದಲ್ಲಿ ನಮ್ಮ ಹಿರಿಯರು ಮನೆಯಲ್ಲಿ ಚಿಕ್ಕ ಬಾಲಕರಿಗೆ ಹೇಳಿಕೊಡುತ್ತಿದ್ದ ಪದಿಮುಗಳೆಂಬುದು ಗೊತ್ತಿಲ್ಲದ ತಿಳಿಗೇಡಿತನಕ್ಕೆ ಏನು ಹೇಳಲಿ. ಆ ಪದಿಮುಗಳನ್ನು ಹೇಳಿಕೊಡುವ ಅಭ್ಯಾಸವು ಮನೆಗಳಲ್ಲಿ ನಮ್ಮ ಹಿರಿಯರೊಂದಿಗೆ ಮಾಯವಾದ ಕಾರಣದಿಂದಲೇ ಈ ಚಿಕ್ಕ ಪಠ್ಯಪುಸ್ತಕಗಳನ್ನು ಇಟ್ಟರೆಂದು ತಿಳಿಯಿರಿ. ನೀವು (Education) ವಿದ್ಯೆಗೂ (Language) ಭಾಷೆಗೂ ಇರುವ ಭೇದವನ್ನು ತಿಳಿದುಕೊಂಡಿಲ್ಲ. ಇಂಗ್ಲಿಷ್, ಕನ್ನಡ, ತೆಲುಗು, ಒಂದೊಂದು ಭಾಷೆಯಾಗಿದೆ. ಆದರೆ ಈ ಬಾಷೆ ಬಂದ ಮಾತ್ರಕ್ಕೆ ವಿದ್ಯೆ ಬಂತೆಂಬುದು ತಪ್ಪು. ಭಾಷೆಗೂ ವಿದ್ಯೆಗೂ ಇರುವ ವ್ಯತ್ಯಾಸವನ್ನು ತಿಳಿದುಕೊಂಡಿದ್ದರೆ "ಕನ್ನಡಕ್ಕೇ ಈ ಪರಿಯಾದರೆ ಇಂಗ್ಲಿಷಿಗೆ ಇನ್ನೆಷ್ಟೋ" ಎಂದು ಹೊರೆ ಇಡುತ್ತಿರಲಿಲ್ಲ. ಭಾಷೆಯನ್ನು ಕಲಿಯುವುದು ಮಾತ್ರವೇ ವಿದ್ಯೆಯ ಉದ್ದೇಶವಾದರೆ ಒಂದೆರಡು ಪುಸ್ತಕಗಳೂ ಮಕ್ಕಳಿಗೆ ಸಾಕಾಗಿತ್ತು. ಆದರೆ ವಿದ್ಯೆಯ ಉದ್ದೇಶವು ಅದಲ್ಲ. ಇದನ್ನು ಹಿಂದಳಿಂದ ಬರೆಯುವೆನು.

ಒಟ್ಟಾರೆ ನಿಮ್ಮ ಅಭಿಪ್ರಾಯವೇನು? ಮಕ್ಕಳಿಗೆ ಬರೆಯಿಸಬೇಕು. ಸ್ಲೇಟು ಪುಸ್ತಕಗಳು ಕಮ್ಮಿ ಬೇಕು. ಗಿಳಿ ಕಂಠಪಾಠದಿಂದ ಅಷ್ಟಗೆರೆ ಬರೆಯಿಸಬೇಕು. ಗಿಳಿಪಾಠ ಮಾಡಿಸಬಾರದು. ಸ್ಲೇಟು ಪುಸ್ತಕ ಜೋಡಿಸುವ ಸಾಮರ್ಥ್ಯ ಇರುವವರಿಗೆ ಸ್ಲೇಟು, ಪುಸ್ತಕ, ಮಕ್ಕಳಿಗೆ ಕೊಡಬಾರದು ಇಷ್ಟೆ ಅಲ್ಲವೇ. ಅದಕ್ಕೇನು ಆಗಬಹುದು. ಮಕ್ಕಳು 15 ವರುಷ ಆದ ವಿನಹ ಶಾಲೆಗೆ ಕಳುಹಿಸಬಾರದೆಂದು ಇನ್ನೊಂದು ಲೇಖನ ಕಾಣೆ. ಬರೆಯುಬಿಟ್ಟರೆ ಪುಸ್ತಕ ಸ್ಲೇಟುಗಳ ದುಡ್ಡು ಉಳಿಸಿ ದೇಶಕ್ಕೆ ಹಿತಮಾಡುವಿರಿ. ಒಂದನ್ನು ಮರೆತಿರಿ. ಗಿಳಿಪಾಠ ಬಾಯಿಪಾಠ ಮಾಡಿಸುವುದೂ ಪೂರ್ವದಲ್ಲಿಯೂ ಇತ್ತು. ನಾಮರಾಮಿಕಾಕಿಯ, ಕ್ರಿಯೋಕಿರಿಯ ಮೊದಲಾದ ಗಿಳಿಭಾಷೆಗಳು ಇದ್ದವು. ತಿಳಿದುನೋಡಿ. ಅಯ್ಯಾ ಮಾದಪ್ಪನವರೇ, ಇಂಥಾ ಲೇಖನಗಳನ್ನು ಬರೆಯುವ ಸಮಯವನ್ನು ಬಂದುಧ್ಯಾನದಲ್ಲಿಯಾದರೂ ಕಳೆಯಬಾರದೇ.

ಮಾದಪ್ಪನ ಮೇದಪ್ಪ.

ಅಯ್ಯಾ, ಸಂಪಾದಕರೇ !

ನಮ್ಮ ವೀರರಾಜಪೇಟೆ ಶಾಲೆಯ ಆರನೇ ಫಾರಂನ್ನು (VI) ಓದುತ್ತಿದ್ದ ಚಿಟ್ಟಿಯಂಡ ನಂಜಪ್ಪನವರ ದ್ವಿತೀಯ ಪುತ್ರರಾದ ಅಪ್ಪಯ್ಯನವರು ಕಳೆದ ೭ ನೇ ತಾರೀಕಿನಲ್ಲಿ ಅಕಾಲಮೃತ್ಯುವನ್ನು ಹೊಂದಿದ ವಿಷಯವಾಗಿ ನಮ್ಮ ವ್ಯಸನವನ್ನು ಸೂಚಿಸಲಿಕ್ಕೆ ನಾವೆಲ್ಲರೂ ಹಾಲಿನಲ್ಲಿ ಸೇರಿದೆವು. ನಮ್ಮ ಪರೊಳಗೆ ನಮ್ಮ ಉಪಾಧ್ಯಾಯರುಗಳು ಸಹ ಸೇರಿದ್ದರು. ನಮ್ಮ ಹೆಡ್‌ಮಾಸ್ಟರಾದ ಸಿ ಯಂ. ರಾಮರಾಯರು ಮತ್ತು ಅಸಿಸ್ಟೆಂಟ್ ಟೀಚರುಗಳಾದ ಪಿ ಯಂ ಉತ್ತಪ್ಪನವರೂ ಮತ್ತು ಟಿ. ಯಂ. ಕಾರ್ಯಪ್ಪನವರೂ ಇವರ ಅಕಾಲಮರಣದ ವಿಷಯವಾಗಿಯೂ ಮತ್ತು ನಡತೆಗಳ ವಿಷಯವಾಗಿಯೂ ವ್ಯಸನಕರವಾದ ಭಾಷಣಗಳನ್ನು ಮಾಡಿದರು. ಕಡೆಗೆ ಇವರ ತಂದೆಯವರಿಗೂ ಮತ್ತು ಕುಟುಂಬದವರಿಗೂ ವ್ಯಸನಸೂಚಕನಾದ ಪತ್ರವನ್ನು ಕಳುಹಿಸಲಿಕ್ಕೆ ಒಪ್ಪಿ ಅಪ್ಪಯ್ಯನವರಿಗೆ ಸ್ವರ್ಗಸುಖವನ್ನು ಕೊಡಲೆಂದು ಮಹಾದೇವರನ್ನು ಪ್ರಾರ್ಥಿಸಿದೆವು. ಒಬ್ಬ ವಿದ್ಯಾರ್ಥಿ.

ಹಾಲಿ ಕೊಡಗಿನ ರಾಜ್ಯಭಾರಕ್ಕೆ ಘನ ಸರಕಾರದವರು ದಯಪಾಲಿಸಿರುವ ಮಂತ್ರಾಲೋಚನ ಸಭೆಗೆ ಮೆಂಬರಾಗುವ ಮಹನೀಯರು ಪಲಾಸ ಮಹನೀಯರೆ ಮೆಂಬರಾಗಬೇಕೆಂದು ಓಟ್ ಕೊಡುವ ಮಹನೀಯರು ಸಹ ದೀರ್ಘಾಲೋಚನೆಮಾಡಿ ಯೋಗ್ಯರಾದವರ ಮೆಂಬರಾಗಿ ಚುನಾಯಿಸಿಕೊಂಡು ರಾಜ್ಯಾಡಳಿತ ನಡೆಸಿದರೆ ಬಹಳ ಹಾಗಿಯು ಈ ದೇಶದ ಸಂಪತ್ತನ್ನು ಕೊಳೆಬಡಿಯುವ ನಿಷಾದೇವಿ ಮೂದೇವಿಯನ್ನು ದೇಶದಿಂದ ಓಡಿಸುವ ಸರ್ವ ಸ್ವತಂತ್ರ ನಮ್ಮ ಕೈಯಲ್ಲೇ ಇದೆ. ಸರಕಾರದವರ ಮತ್ತು ಮೆಂಬರುಗಳ ದೂರಿ ಫಲವಿಲ್ಲ ಅದೇನಂದರೆ—

ಅಬ್ಕಾರಿ ಇಲಾಖೆಯವರು ಸರಕಾರಿ ಪೈಸಾರಿಜಾಗದಲ್ಲಿ ತಾನಾಗಿ ಬೆಳದು ಪಕ್ವಕ್ಕೆ ಬಂದ ಬೈನೆಮರದ ಸೇಂದಿ ಇಳಿಸಿ ಮಾರಾಟಕ್ಕೆ ಇಷ್ಟೇ ಅಂಗಡಿಯೆಂದು ಹರಾಜುಮಾಡುತ್ತಾರೆಯೇ ಹೊರತು ರೈತರ ಖಾಸಗಿ ಜಾಗದ ಬೈನೆಮರದ ಸೇಂದಿ ಇಳಿಸಿ ಮಾರುವದಕ್ಕೆ ಹರಾಜು ಮಾಡುವದಿಲ್ಲ. ಹೀಗಿರುವಾಗ್ಯೆ ಖಾಸಗಿ ಬೈನೆ ಮರದ ಹಕ್ಕುದಾರರು ಕಂಟ್ರಾಕ್ಟುದಾರನಿಗೆ ತನ್ನ ಖಾಸಗಿ ಬೈನೆ ಕೊಡದೆ ಹೋದರೆ ಸೇಂದಿ ಮಾರಾಟ ತಾನಾಗಿಯೇ ನಿಂತುಹೋಗುತ್ತೆ. ಇದಕ್ಕೆ ದೃಷ್ಟಾಂತರ ಮಡಿಕೇರಿ ತಾಲ್ಲೋಕು ಹೊರೂರು ಮೂಡಿಗೇರಿನಾಡು ಒಂದರಲ್ಲು ಸರಕಾರಿ ಬೈನೆಮರ 12 ಮಾತ್ರ ಇದೆ. ಇಂಥಾ ನಾಡಿನಲ್ಲಿ 10 ನೆ ಮೈಲ್ ಮುಂಟಿಕೊಪ್ಪದ ಸಂತೆ ಮಾಳದಲ್ಲಿಯು ಗದ್ದೆ ಬೈಲಿನಲ್ಲಿಯು ಬೋಯಿಕೇರಿಯಲ್ಲಿ 4 ಅಂಗಡಿ ಅಂದಾಜು ಹತ್ತು ಸಾವಿರಕ್ಕೆ ಹರಾಜಿನಲ್ಲಿ ದಕ್ಷಿಣಕನ್ನಡ ಜಿಲ್ಲೆ ಬಿಲ್ಲವರು ಬಿಡದಿರಕಾಸ್ತುನಲ್ಲು ಪಾಕೊಂಡು ವ್ಯಾಪಾರ ನಡಿಸಿ ಭೂಮಿ ಮನೆ ಕಾಪಿ ತೋಟ್ಟ ಬಾಪಾದರಾಗಿಯು ಆವರಿಗೆ ತನ್ನ ಖಾಸಗಿ ಬೈನೆ [illegible] ರೈತನು [illegible] ದಕ್ಕೆ ಜಾಮೀನುದಾರನಾಗಿ ಸಹ ತನ್ನ ಭೂಮಿ ಮನೆ ಕಳಕೊಳ್ಳುತ್ತಾರಲ್ಲ. ಇದಕ್ಕೆ ಘನಸರಕಾರದವರ ದೂರಲ್ಲು ಫಲವೇನು, ಫಲವಿಲ್ಲ. ಇದರಿಂದ ಕೊಡಗಿನ ಪರಿಷತ್ತಿನ ಸಂಗದ ಮೆಂಬರುಗಳು ತಾವು ತಮ್ಮ ಊರು ನಾಡುಗಳಲ್ಲಿ ಯಾವನೊಬ್ಬ ರೈತನಾಗಿ ಖಾಸಗಿಬೈನೆ ಸರಕಾರಿ ಗುತ್ತಿಗೆದಾರನಿಗೆ ಸೇಂದಿ ಇಳಿಸಿ ಮಾರಕ್ಕೆ ಕೊಡಬಾರದಾಗಿ ತಾವು ತಮ್ಮೊಳಗೆ ಕಟ್ಟು ಕಟ್ಟಳೆ ಮಾಡಿಕೊಂಡರು. ಬಂದ ವರುಷದಲ್ಲಿ ಬಿಲ್ಲವರೆಲ್ಲಾ ಕೊಡಗುಬಿಟ್ಟು ಸ್ವಂತ ಊರಿಗೆ ಹೋಗುವುದಕ್ಕೆ ಯಾವ ಸಂಶಯ ಅಭ್ಯಂತರವಿಲ್ಲ. ದೃಷ್ಟಾಂತರವಾಗಿ ಕೇರಿನಾಡು [illegible] ಭೂಮಿ [illegible] ಒಂದು ಸಾವಿರ ರೂಪಾಯಿ, ಸೇಂದಿ ಅಂಗಡಿ 1500, ಸಾರಾಯಿ ಅಂಗಡಿ 1000, ಇದರನ್ನು [illegible] 9 10 ವರುಷದಿಂದ ಸುಖವಾಗಿದ್ದಾರೆ [illegible], ದೇಶದಿಂದ ಪರೆ, ಅವ [illegible] ಸಂಗದ ರೂಲ್ಸ್ ನಡಲಿಸಬೇಕಾದುದು ಘನಸರಕಾರದ ಇಂಡ್ಯಾ ಚಕ್ರವರ್ತಿ ಪ್ರಭುಗಳ ಪ್ರತಿನಿಧಿಯಾದ ಲೇಟ ಚ್ಯಾನಿಸರ್ ಡರ್ಕ ವೈಸ್ರಾಯಿ ದೊರೆಗಳವರು ಕೊಡಗು ನಿವಾಸಿಗಳು ಡಿಪ್ಯುಟೇಷನಿಗೆ ಮೈಸೂರಿಗೆ ಹೋಗಿದ್ದ ಕಾಲದಲ್ಲು ಮೊಬ್ಬ [illegible] ಸಿದ್ದಾಪುರದ [illegible] ಸದರಿ ಡಿಪ್ಯುಟೇಷನ್ನಿಗೆ [illegible] ಕೊಡಗಿನ ಜಲ್ಲ ಭೂಮಿ ನಂ 1814 [illegible] ವಿಳಯಿಂದ ಕಂದಾಯ ನಿರ್ಣಯಮಾಡಿ ಆಯಾಯ ಕುಟುಂಬದ ಸಮುದಾಯನ್ನಿಕ್ಕದ ಭೂಮಿಮನೆ ಮನೆತನದ ಹೆಸರಿಗೆ ಸರಕಾರ ವಜಾವಲ್ಲದ ಶಿಕ್ತ ನಿಗಂಟನ್ನು ಎಂದೆಂದಿಗೂ ನಾಶಮಾಡುಗಬಲ್ಲವೆಂದು ಸಹ ಮುಂಬರಾಟ ಸಂಗತಿ ಮನ್ನೆಮಾಡಿದೆನು.

11—11—23. ವಿಧೇಯ,

ಕರಗ ರಾಳ್. ಕೊರವಂಡ ಪೊನ್ನಪ್ಪ.

ಶಂಕರ ವಿಠಲ್ ಮೋಟಾರು ಸರ್ವಿಸ್.

ಇಷ್ಟರವರೆಗೆ ಮೇಲ್ಗಂಡ ಸರ್ವಿಸ್ 11 ಘಂಟೆಯಿಂದ ಮಡಿಕೇರಿಯಿಂದ ಹೊರಟು ಸಾಯಂಕಾಲಕ್ಕೆ ಪುತ್ತೂರಿಗೆ ಸೇರುತ್ತಿದ್ದದ್ದನ್ನು ತಾರೀಖು 20—11—23 ನೇ ಮಂಗಳವಾರದಿಂದ ಬೆಳಿಗ್ಯೆ 7-30 ಘಂಟೆಗೆ ಮಡಿಕೇರಿಯಿಂದ ಹೊರಟು ಸಾಯಂಕಾಲ 5-30 ಘಂಟೆಗೆ ಮಂಗಳೂರಿಗೆ ಸೀದಾ ತಲುಪುವಂತೆ ಏರ್ಪಾಡು ಮಾಡಲ್ಪಟ್ಟಿರುತ್ತೆ. [4–1]

ತಾ|| 19—11—23, ಬಿ ಟಿ ಗೋಪಾಲಕೃಷ್ಣಯ್ಯ,

ಮಡಿಕೇರಿ ಶಂಕರವಿಠಲ್ ಮೋಟಾರ್ ಏಜೆಂಟ್

FOR SALE.

A commodious bungalow with extensive out-houses, well, and compound, measuring nearly an acre, situated on the high road to the Central High School, Mercara, newly built in 1911, at a cost of about Rs. 18,000. Price Rs. 12,000 or near offer.

For further particulars, apply to

Mr. R. FRAMJEE,

2—1 General Merchant, MERCARA

Old Student's Association Magazine.

CENTRAL HIGH SCHOOL, MERCARA.

Editor	Yearly subscription
Mr. B S Kushalappa B.A.	Re 1 0—0

Will be published under the distinguished patronage of C A Souter Esq., I C S Commissioner of Coorg and K. Chengappa Esq., R S—in the first week of November.

Among other articles the following are the few

"Fore word" by C. A Souter Esq. I C S

"Vinayak Chaturthi" by Mr. D M Siddingiah.

"The cramming sch[illegible]" by Mr B S. Kushalappa

"A Town Hall for Coorg" by Mr P I Belliappa, Editor "Kodagu

"Coorg Inscriptions" by Mr B N Krishnamurthy.

"The Village School Master" by Mr A. Kalamma

"The Huthri Song" by Mr P Mangesh Rao, B A, L.T,

"The Will of God" by Mr Anantha Rao, B.A., B.L.,

etc. etc etc

Best Medium for Advertisers

Apply for rates etc, to

The Manager,

Old Students' Association Magazine,

4–4 C. H School, Mercara

FOR SALE.

One chestnut Gelding about 14½ hands belonging to Dr T. Greenaway Oaklands Siddapur suitable for riding is to be sold for 250 cash or quick offer; would trap if trained, believed absolutely sound. Owner has purchased car and has no further use for a Horse.

Apply sharp to the undersigned before the 30th instant

V. Venkataswamy Naidu,

6-11-23. Assistant to C.M O

2—2 POLLIBETTA.

HEALTH IS WEALTH.

WANTED all to improve health, strength and vitality and thus save the nation from physical degeneracy. Send half-anna stamp and get 13 specimen photographs with full particulars from

Director Physical Culture

P.O Basavanagudi,

BANGALORE CITY.

The Saraswathi Publishing Company

ಶಾರದಾಗ್ರಂಥಮಾಲಾ.

ಈ ಗ್ರಂಥಮಾಲೆಯಲ್ಲಿ ಭಾರತಮಹಿಳೆಯರ ಇತರ ವಿಷಯಾಭ್ಯಸಯುಗಳನ್ನು ಬೋಧಿಸತಕ್ಕ ಗ್ರಂಥಗಳು ಆಗಾಗ್ಗೆ ಪ್ರಕಟಿಸಲ್ಪಡುವವು ಇದುವರಿವಿಗೆ ಪ್ರಕಟವಾಗಿರುವ ಗ್ರಂಥಗಳು.—

		ರೂ	ಆ	ಪೈ
1.	ಪ್ರಿಯಂವದೆ (ವರದಕ್ಷಿಣೆಯಿಂದಾಗುವ ಕಷ್ಟನಷ್ಟಗಳು)		0	6
2.	ಸ್ನೇಹಲತೆ (ವಂಗಕನ್ಯೆಯ ಚರಿತ್ರೆ)		0	10
3	ನಿರ್ಭಾಗ್ಯವನಿತೆ (ಹಿಂದೂವಿಧವೆಯರ ಶೋಚನೀಯಾವಸ್ಥೆ)		0	12
4	ನಿರ್ಮಲೆ (ಸಮಾಜಿಕ ಸುಧಾರಣೆಯ ನಾಟಕ)		0	8
5.	ಹಿಂದೂಭಾಗ್ಯೋದಯ (ನಾಟಕ)		0	4
5	ಕೂರ್ಪನಖಾಭಂಗ (ನಾಟಕ)		0	4
6	ಹುಡುಗಟ ಹುಡುಗಿಯರು (ನಾಟಕ)		0	4

ಈ ಎಲ್ಲಾ ಕಾದಂಬರಿಗಳನ್ನೂ ಒಟ್ಟಾಗಿ ತರಿಸಿಕೊಳ್ಳುವವರಿಗೆ ಒಟ್ಟು ರೂಪಾಯಿ 2—12—0 ಗೆ ವಿ. ಪಿ. ಹಾಸಲು ಇಲ್ಲದೆ ಕೊಡಲ್ಪಡುವದು. ಪ್ರಿಂಟಿನಲ್ಲಿರತಕ್ಕ ಗ್ರಂಥಗಳು—[illegible]

ಸರಸ್ವತಿ.

ಉತ್ತಮವರ್ಗದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ.

ನಾಲ್ಕನೆಯ ಸಂಪುಟದ ಪ್ರಥಮ ಸಂಚಿಕೆಯು ಈ ತಿಂಗಳ ಮೊದಲನೇ ತಾರೀಖಿನಿಂದ ಪ್ರಾರಂಭವಾಗಿರುವುದು. ಇದರಲ್ಲಿ ಬಾಲಬಾಲಿಕೆಯರಿಗೂ ಸ್ತ್ರೀಯರಿಗೂ ತಿಳಿಯುವಂತಹ ಸುಲಭವಾದ ಶೈಲಿಯಲ್ಲಿ ಸ್ವಾರಸ್ಯವಾದ ನಾಟಕ ಕಾದಂಬರಿಗಳೂ ಮತ್ತು ಅನೇಕ ಉತ್ತಮ ಲೇಖನಗಳೂ ಪ್ರಕಟಿಸಲ್ಪಡುವವು. ಹೊಸದಾಗಿ ಚಂದಾದಾರರಾಗತಕ್ಕವರು ಚಂದಾಹಣವನ್ನು ಮುಂಗಡವಾಗಿ ಕಳುಹಿಸಿದರೆ ಶಾರದಾ ಗ್ರಂಥಮಾಲೆಯ ಪ್ರಕಟನೆಯಲ್ಲಿ ಒಂದು ಪುಸ್ತಕ ಬಹುಮಾನವಾಗಿ ಕೊಡಲ್ಪಡುವುದು. ಇಷ್ಟಪಟ್ಟವರಿಗೆ ಮಾದರಿ ಸಂಚಿಕೆಯು ಉಚಿತವಾಗಿ ಕಳುಹಿಸಲ್ಪಡುವುದು.

ವಾರ್ಷಿಕ ಚಂದಾ ರೂಪಾಯಿ 3—6—0 ಮಾತ್ರ,

SARASWATHI PUBLISHING CO.,

Post Box No. 57. Bangalore City

For your requirements of high grade Arms, Ammunition, Wine and Spirits,

APPLY TO –

Mc. DOWELL & Co., Ltd.,

24—5 MERCARA

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ ಅಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

	ರೂ
ಶೇರ್ ಬಂಡವಾಳ	50,00[illegible]
ವಸೂಲಾದ ಶೇರ್ ಮೊಬಲಗು	6,82[illegible]
ಜಮಾ ಬಂದ ಠೇವಣಾತಿ	30,84[illegible]

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೆ ಮೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ಮಾಯಿದೆ ಅಥವಾ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾಣ 5 ರ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾಣ 5 ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಅಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟಾಯಿಷ ಮಾಡುತ್ತಾರೆ.

ಪ್ರೆಸಿಡೆಂಟರು ಟ್ರಿಜರ್.

ಕೊಡಂದೆರ ಕುಟ್ಟಯ್ಯನವರು, ಯಂ, ಭುಜಂಗರಾಯರು

ರಾವ್ ಬಹದ್ದೂರ್ ಬಿ. ಎ. ಬಿ. ಎಲ್

ಸೆಕ್ರೆಟರಿ

ಸಿ. ಡಿ. ವೆಂಕಪ್ಪಯ್ಯನವರು ಬಿ. ಎ. ಬಿ. ಎಲ್

ತಾರೀಕು 1—9—23

Printed & Published by D.S. Krishnaswamiengar Proprietor, at Sreenivas Electric Press, Mysore "for Kodagu "Ltd., Mercara—23 11-1923

"Regd. No. M. 150."

ಸತ್ಯವನ್ನೇ ಹೇಳುವ ಎಲ್ಲರ ಪ್ರಿಯವಾದ ಪತ್ರಿಕೆ | ...

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವುದು.

"ಎಡಿಟರ್ ...ಜಿ. ಪಳ್ಳಂಗಪ್ಪ"

ಸಂಪುಟ ೩] ಕೊಡಗು, ... ನೆ ಇಸವಿ ... ಶುಕ್ರವಾರ. [ಸಂಚಿಕೆ ೨೭

ಪ್ರಿಂಟಿಂಗ್

... ಮತ್ತು ಬೈಂಡಿಂಗ್ ಕೆಲಸಗಳು ... ನಮ್ಮಲ್ಲಿಗೆ ಕಳುಹಿಸಿದ್ದ ... ಅಚ್ಚುಕಟ್ಟಾಗಿಯೂ ... ಮಾಡಿ ... ಕೊಡಲಾಗುವುದು.

Srinivas Electric Press,
MYSORE

The Saraswathi Publishing Company
ಸರಸ್ವತೀ ಗ್ರಂಥಮಾಲಾ

... ಗ್ರಂಥಗಳು ... ಪ್ರಕಟವಾಗಿರುವ ಗ್ರಂಥಗಳ —

	ರೂ	ಆ	ಪೈ
... (...) ...	0	6	0
... (...)	0	...	0
...	0	1	0
... (...)	0	8	0
... (ನಾಟಕ)	0	4	0
... (ನಾಟಕ)	0	4	0
... (ನಾಟಕ)	0	4	0

... ರೂಪಾಯಿ 2—12—0 ...

ಸರಸ್ವತಿ

... ಕನ್ನಡ ... ಮಾಸಪತ್ರಿಕೆ ... ರೂಪಾಯಿ 3—0—0 ಮಾತ್ರ.

SARASWATHI PUBLISHING Co.,
Post Box No. 57 Bangalore City

ಕಾಫಿ ... ಕೊಡಗಿನ ಹೊಸ ...

ಯಾವ ... ಬೆಳೆಗಾರರಿಗೂ ... ಎಂಬ ... ಕಾರ್ಖಾನೆಯಲ್ಲಿ ... ದೊರೆಯುತ್ತದೆ.

... ಎಂಬ ...

ಕಿರ್ಲೋಸ್ಕರ್ ಬಂಧು ಲಿಮಿಟೆಡ್.
ಕಿರ್ಲೋಸ್ಕರವಾಡಿ, (ಸಾತಾರಾ)

When you think of going to Bombay
THINK OF
THE WELCOME HOTEL.
Girgaum Back Road, BOMBAY.
... Central situation—Excellent Meals
Every Convenience

ವೆಲ್‌ಕಮ್ ಹೋಟೆಲ್.
ಗಿರ್ಗಾಂವ್ ಬ್ಯಾಕ್‌ರೋಡ್, ಬೊಂಬಾಯಿ

... ಯೋಗ್ಯ ... 15 ... ಮ್ಯಾನೇಜರ್

[12—3]

... will guide you while in BOMBAY.

SHREE KRISHNA LODGE.
BOARDING & LODGING HOUSE,
SANDHURST ROAD, BOMBAY.

[12-4] Comfortable time Assured.

... ಕೆ.

... ಬೋಯಿಂಗ್ ... ಹ್ಯಾಂಡ್‌ ...

SPENCER & Co. Ltd.
Mercara and Pollibetta Coorg.

[24—6]

"ಕೊಡಗು"

೧೯೩೪ ನೇ ಇಸವಿ ಡಿಸೆಂಬರ್ ತಾ॥ ೭ ನೇ ಶುಕ್ರವಾರ

ಜಮೀನಾನುದಾರರ ಸಂಘವೂ ವೈಸರಾಯರೂ.

ಕಳೆದ ನವಂಬರು ತಾರೀಖು 30 ರಲ್ಲು ಇಂಡಿಯಾ ದೇಶದ ವೈಸರಾಯರಾದ ಲಾರ್ಡ್ ವಿಲಿಂಗ್ಡನ್ ಪ್ರಭುಗಳವರು ಕೊಡಗು ಜಮೀನಾನುದಾರರ ಸಂಘದ ಪ್ರತಿನಿಧಿಗಳಿಗೆ ಭೇಟಿಯನ್ನು ದಯಪಾಲಿಸಿದರು. ಸಂಘದ ಕಮಿಟಿಯವರಿಂದ ಆರಿಸಲ್ಪಟ್ಟಿದ್ದ ಡೆಪ್ಯುಟೇಶನಿನವರು ಸಂಘದ ಪರವಾಗಿ ವೈಸರಾಯರವರಿಗೆ ಒಪ್ಪಿಸಿದ ವಂದನಾ ಪತ್ರವನ್ನೂ ಅದಕ್ಕೆ ವೈಸರಾಯರು ಕೊಟ್ಟ ಜವಾಬನ್ನೂ ಇನ್ನೊಂದು ಕಡೆ ಪ್ರಕಟಿಸಿರುವೆವು. ಇವು ಬಹು ಮುಖ್ಯವೆಂದು ತೋರಿಬಂದುದರಿಂದ ಇಂಗ್ಲೀಷಿನಲ್ಲಿರುವ ಅವುಗಳ ತರ್ಜುಮೆಯನ್ನು ಕನ್ನಡದಲ್ಲಿಯೂ ಪ್ರಕಟಿಸಿದ್ದಾಗಿದೆ.

ವೈಸರಾಯರ ಡೆಪ್ಯುಟೇಶನ್ ಸ್ವೀಕರಿಸುವ ಬಹು ದಿನವು ಜಮೀನುದಾರರ [illegible] ಇದೇ ಮೊದಲು. ಆದುದರಿಂದ ಸಂಘವನ್ನು ನಾವು ಅಭಿನಂದಿಸುತ್ತೇವೆ. ಮೊದಲು ಒಂದು ಸಾರಿ ವೈಸರಾಯರಾದ ಲಾರ್ಡ್ ಚೆಮ್ಸ್‌ಫರ್ಡ ಪ್ರಭುಗಳವರು ಮೈಸೂರಿಗೆ ಬಂದಿದ್ದಾಗ ಸಂಘದ ಡೆಪ್ಯುಟೇಶನ್ [illegible] ಹೇಳಿದರೂ ಕಾಲದ ಅವಕಾಶ ದೊರೆಯಲಿಲ್ಲ. ಹಾಗೆಯೇ ಈ ಸಾರಿಯೂ ಸ್ವೀಕರಿಸಲು ಅವಕಾಶವಿಲ್ಲದಿಂದ ಒಂದು ಸಲ ಬಿದ್ದು ಹೋಗಲ್ಪಟ್ಟಿತು. ಕಡೆಗೆ ವೈಸರಾಯರವರೇ ಡೆಪ್ಯುಟೇಶನು ಬರಬಹುದೆಂದು ಒಪ್ಪಿಗೆ ಕೊಟ್ಟ ಸಂಗತಿ ಈ ಮೊದಲೇ ನಮ್ಮ ವಾಚಕರಿಗೆ ತಿಳಿಸಿದ್ದಾಗಿದೆ. ಇಂಡಿಯಾ ಸರ್ಕಾರದವರೇ ನಮ್ಮ ದೇಶದ ಪರವಾಗಿ ಈ ಸಂಘದ ಪ್ರತಿನಿಧಿಗಳ ಮೂಲಕ ವಂದನಾ ಪತ್ರವನ್ನು ಅಂಗೀಕರಿಸಿ ಕೊಂಡದ್ದರಿಂದ ಸಂಘದ ಪ್ರಾಮುಖ್ಯತೆಯು ದೇಶದಲ್ಲಿ ದಿನೇ ದಿನೇ ಹೆಚ್ಚುತ್ತಾ ಬರುತ್ತಿದೆ ಎಂಬುದರಲ್ಲಿ ಏನೊಂದೂ ಸಂಶಯವಿಲ್ಲ.

ಕೊಡಗಿಗೆ ದೊರೆತಿರುವ ಹೊಸ ನ್ಯಾಯವಿಧಾಯಕ ಸಭೆಯನ್ನು ತೆಗೆಯುವ ಸಮಾರಂಭದಲ್ಲಿ ಭಾಗಿಯಾಗಲು ತನಗೆ ಆಶೆ ಇತ್ತೆಂತಲೂ, ಆದರೆ ತನಗೆ ದಕ್ಷಿಣ ಹಿಂದೂ ಸ್ಥಾನದಲ್ಲಿ ಬಹಳ ಕೆಲಸವಿರುವುದರಿಂದ ತನಗೆ ಸಮಯ ಸಾಲದ ಕಾರಣ ಬಹಳ ಇಚ್ಛೆಗೆ ವಿರೋಧವಾಗಿ ಈ ಉದ್ದೇಶವನ್ನು ಬಿಡಬೇಕಾಯಿತೆಂದು ವೈಸರಾಯರು ತಮ್ಮ ಉತ್ತರದಲ್ಲಿ ಸೂಚಿಸಿರುವರು. ಇದು ನಮ್ಮ ದೇಶೀಯರಿಗೆ ವ್ಯಸನಕರವೆ. ನಮ್ಮ ದೇಶಕ್ಕೆ ಮೊಟ್ಟ ಮೊದಲಾಗಿ ದೊರೆತಿರುವ ಕೌನ್ಸಿಲನ್ನು ವೈಸರಾಯರೇ ತೆರೆಯುವವರಾಗಿದ್ದರೆ ದೇಶದ ವರ್ಗಗಳಿಗೂ ಬಹು ಸಂತೋಷವನ್ನುಂಟುಮಾಡುತ್ತಿತ್ತು.

ಕೊಡಗು ದೇಶವು ಚಿಕ್ಕದಾದರೂ ಅದರ ಚರಿತ್ರೆಯು ದೊಡ್ಡದಾಗಿದೆಯೆಂತಲೂ, ಅದರ ನಿವಾಸಿಗಳ ಜಾತಿಯೂ ಭಾಷೆಯೂ ಸಮಾಜ [illegible] ವಿಶೇಷತರದ್ದಾಗಿರುವುದರಿಂದ ಅದನ್ನು ಪ್ರತ್ಯೇಕವಾಗಿ ಇಟ್ಟದ್ದಾಗಿದೆಯೆಂತಲೂ, ಕೊಡಗರು ಬ್ರಿಟಿಷ್ ಸರ್ಕಾರದವರಿಗೆ ಮಿಲಿಟರಿಯ ಸಂಬಂಧ ಬಹಳ ಸಹಾಯ ಮಾಡಿರುವರೆಂತಲೂ ಈಗಲೂ ರಾಜಭಕ್ತಿಯ ಮತ್ತು ಸೇವೆಯ ಧ್ಯೇಯಗಳನ್ನು ನಡಿಸಿಕೊಂಡು ಬರುತ್ತಿದ್ದಾರೆಂತಲೂ ಮುಂತಾಗಿ ಕೊಡಗಿನವರಿಗೆ ಸ್ವಾತಂತ್ರ್ಯಾರ್ಹವಾದ ಮಾತುಗಳು ವೈಸರಾಯರ ಉತ್ತರದಲ್ಲಿ ಕಂಡುಬರುತ್ತವೆ. ಕೊಡಗಿನವರ ಮೇಲಿನ ಗುಣಗಳೇ ಈಗ ದೊರೆತಿರುವ ನ್ಯಾಯವಿಧಾಯಕ ಸಭೆಗೆ ಕಾರಣವೆಂದೂ ಸಹ ಅವರು ಸೂಚಿಸಿರುವರು. ನಮ್ಮ ಈ ಚಿಕ್ಕ ದೇಶದವರು ಇಂಡಿಯಾ ದೇಶದ ಮುಖ್ಯ ಅಧಿಕಾರಿಯ ಅಭಿಮಾನಕ್ಕೂ ಹೊಗಳಿಕೆಗೂ ಇಷ್ಟರ ಮಟ್ಟಿಗೆ ಪಾತ್ರರಾಗಿರುವಲ್ಲು ಈ ಮೊದಲು ಈ ದೇಶಕ್ಕೆ ಪ್ರಜಾಪ್ರತಿನಿಧಿಗಳ ಸಂಸ್ಥೆಯಾವದೂ ಕೊಡದೆ, ಹಿಂದೂ ದೇಶದ ಬೇರೆ ಪ್ರಾಂತ್ಯಗಳಿಗೆ ಸುಮಾರು ಹದಿನೈದು ವರ್ಷಗಳಿಗೆ ಮೊದಲೇ ದೊರೆತಂಥಾ ಒಂದು ಕೌನ್ಸಿಲನ್ನು ಈಗ ತಾನೇ ಮಂಜೂರು ಮಾಡಿರುವುದು ವ್ಯಸನಕರವೆಂದು ಯಾರು ತಾನೇ ಹೇಳದಿರುವರು. ಅದೂ ಕೂಡ ಈಗ ಮಂಜೂರಾಗಿರುವ ಕೌನ್ಸಿಲಿನಲ್ಲಿ ಹೆಚ್ಚಿನ ಜವಾಬ್ದಾರಿಕೆಗಳೇನೂ ಜನರ ಪ್ರತಿನಿಧಿಗಳಿಗೆ ದೊರೆತಿರುವುದಿಲ್ಲವಾದರೂ, ರಾಜ್ಯಾಡಳಿತದಲ್ಲಿ ಜವಾಬ್ದಾರಿ ಇಲ್ಲದ ಸರಕಾರಿ ಪದ್ಧತಿಗಿಂತ ಮುಂದುವರಿದ ಹಕ್ಕುಗಳಿರುವ ಸರಕಾರದ ಪದ್ಧತಿಯನ್ನು ಪಡೆಯುವುದನ್ನೇ ತಮ್ಮ ಧ್ಯೇಯವಾಗಿಟ್ಟುಕೊಂಡು ಈಗಿನ ಕೌನ್ಸಿಲನ್ನು ಸಾಧ್ಯವಿರುವಷ್ಟು ಮಟ್ಟಿಗೆ ಉಪಯೋಗಿಸುತ್ತೇವೆಂತಲೂ ಹೆಚ್ಚಿನ ಸುಧಾರಣೆಗಳು ಶೀಘ್ರದಲ್ಲಿಯೇ ದೊರೆತೀತೆಂದು ನಂಬುತ್ತೇವೆಂತಲೂ ಜಮೀನಾನುದಾರರ ಸಂಘದವರು ತಮ್ಮ ವಂದನಾಪತ್ರದಲ್ಲಿ ಸೂಚಿಸಿರುವುದು ನ್ಯಾಯವೆಂದು ತೋರುತ್ತದೆ. ಸಿಕ್ಕಿದ ರಿಯಾಯ್ತಿಗಳನ್ನು ಉಪಯೋಗಿಸಿಕೊಂಡು ಹೆಚ್ಚಿನ ಸುಧಾರಣೆಗಳಿಗೆ ಹೊಡೆದಾಡುವುದೇ ಉಚಿತವೆಂದು ನಮ್ಮ ಅಭಿಪ್ರಾಯ. ಅಲ್ಲದೆ ಈ ದೇಶದ ಪ್ರತಿನಿಧಿಗಳಿಗೆ ಇಂಡಿಯಾ ಸರ್ಕಾರದ ನ್ಯಾಯವಿಧಾಯಕ ಸಭೆಗಳಲ್ಲಿ ಎಡೆ ದೊರಕಬೇಕೆಂದು ಸಂಘದವರು ಕೇಳಿಕೊಂಡದ್ದಕ್ಕೆ ಜನಸಂಖ್ಯೆಯ ತಕ್ಕಷ್ಟು ಜನಸಂಖ್ಯೆಯು ಕೊಡಗಿನಲ್ಲಿ ಕಡಿಮೆ ಇರುವುದರಿಂದ [illegible] ಸಭೆ [illegible] ಕೊಡಲ್ಪಟ್ಟಿರುವುದರಿಂದಲೂ ತತ್ಕಾಲ ಇದಕ್ಕಿಂತ ಹೆಚ್ಚಿನ ರಿಯಾಯ್ತಿಗಳನ್ನು ನಿರೀಕ್ಷಿಸಕೂಡದೆಂತ ಉತ್ತರವಿತ್ತಿರು [illegible] ತಿಕ ಸಭೆಯಲ್ಲಿ ಆಯಾ ಪ್ರಾಂತ್ಯಕ್ಕೆ ಸಂಬಂಧಪಡುವ ಸಂಗತಿಗಳು ಮಾತ್ರ ಚರ್ಚಿಸಲ್ಪಡುವವು. ಆದರೆ ಇಂಡಿಯಾ ಸರಕಾರದ ಸಭೆಗಳಲ್ಲಿ ಇಡೀ ಹಿಂದೂ ದೇಶಕ್ಕೆ ಸಂಬಂಧಪಡುವ ವಿಷಯಗಳು ತೀರ್ಮಾನಿಸಲ್ಪಡುವುದರಿಂದ ಹಿಂದೂ ದೇಶ ಒಂದು ಭಾಗವಾಗಿರುವ ನಮ್ಮ ದೇಶದ ಪ್ರತಿನಿಧಿಗಳಿಗೂ ಆ ಸಭೆಗಳಲ್ಲಿ ಎಡೆಕೊಡುವುದು ಅವಶ್ಯಕವಾಗಿದೆ. ಈಗಿನ ಸ್ಥಿತಿಯಲ್ಲಿ ಈ ದೇಶದ ಅಭಿಪ್ರಾಯವನ್ನು ಆ ಸಭೆಗಳಲ್ಲಿ ಸೂಚಿಸದೆ ಅಲ್ಲಿಯ ತೀರ್ಮಾನಗಳಿಗೆ ನಮ್ಮ ದೇಶದವರು ಒಳಗಾಗಬೇಕಲ್ಲವೇ? ಇದೊಂದಿಗೂ ಈ ದೇಶದವರಿಗೆ ತೃಪ್ತಿಕರವಲ್ಲ. ನಮ್ಮ ದೇಶದಿಂದ ಇಂಡಿಯಾ ಸರಕಾರಕ್ಕೆ ಕೊಡಬೇಕಾದ ಕಪ್ಪಕಾಣಿಕೆಯ ವಿಷಯದಲ್ಲಿ ನಮ್ಮ ಸರ್ಕಾರವು ಪ್ರತಿ ವರ್ಷ ಸರ್ಕಾರಕ್ಕೆ ಕ್ರಮವಾದ ಹದಲಿ [illegible] ಕೊಡಬೇಕಾಗಿದ್ದರೂ ಇಲ್ಲಿಯ ಉತ್ಪನ್ನ ಮತ್ತು ಖರ್ಚ ಕಡಿಮೆಯಾಗಿರುವುದರಿಂದ ಅದನ್ನು ಮಾಫಿ ಮಾಡಬೇಕಾಗಿಯೆಂದು ಕೇಳಿದ ಕೇಳಿಕೆಗೆ [illegible] ಕ್ಕಾಗಿ ವೈಸರಾಯರು ರಸೀದಿ ಮತ್ತು ಅವರ ಸಿಬ್ಬಂದಿಯ ಖರ್ಚಿನ ಒಂದು ಭಾಗವನ್ನು ಮಾತ್ರ ಕೊಡಬೇಕಾಗಿದೆಯೆ ದತ್ತಿ ವೈಸರಾಯರು ಹೇಳಿದರು. ಆದರೆ ಇಲ್ಲಿಯ ಪೂರ್ತಿ ಕಾಂಟ್ರಿಬ್ಯೂಶನ್ (ಈಗ ಸುಮಾರು 23 ಸಾವಿರ) ನ್ನು ಇಂಡಿಯಾ ಸರಕಾರಕ್ಕೆ ಕೊಡಬೇಕಾಗಿರುವುದರ ವಿಷಯ ವೈಸರಾಯರು ಮರೆತಿರುವಂತೆ ಕಾಣುತ್ತೆ. ಅದುದರಿಂದಲೇ ಅವರು ಈ ವಿಷಯ ಏನೂ ಹೇಳಲಿಲ್ಲ. ಇನ್ನಾದರೂ ಅವರು ಇದನ್ನು ಆಲೋಚಿಸಿ ಸಂಘದವರು ಕೇಳಿಕೊಂಡಂತೆ ನಮ್ಮ ದೇಶದ ವಿಶೇಷಸ್ಥಿತಿಯನ್ನು ಗಮನಕ್ಕೆ ತಂದುಕೊಂಡು ಈ ಹದಲಿಕೆಯಲ್ಲಿ ಇನ್ನೂ ರಿಯಾಯ್ತಿ ತೋರಿಸುವರಾಗಿ ನಮ್ಮ ಆಶೆಯಾಗಿದೆ.

ರೈತರಿಗೆ ಮುಖ್ಯವಾದ ಇನ್ನೊಂದು ವಿಷಯದಲ್ಲಿ ವೈಸರಾಯರ ಉತ್ತರವು ಬಹಳ ಅತೃಪ್ತಿಕರವಾದ್ದಾಗಿದೆ. ನಮ್ಮ ಕನ್ನಡಗಳಲ್ಲಿ ಜಮ್ಮದ ಹಿಡುವಳಿಯ ಕಂದಾಯವನ್ನು ಅರ್ಧವಾಗಿಯೇ ಇರುವಂತೆ ಸೂಚಿಸಿದೆಯಲ್ಲದೆ ಆದರ ಮೇಲು ಖಾಯಂ ಆಗಿಯೇ ಇರುವಂತೆ ವಾದಿಸಲಿಕ್ಕೆ ಅಧಾರವಿಲ್ಲವೆಂತಲೂ ಜಮ್ಮ ಭೂಮಿಯ ಕಂದಾಯವನ್ನು ಸಾಗಿನ ಭೂಮಿಯ ಕಂದಾಯದ ಅರ್ಧಕ್ಕಿಂತ ಹೆಚ್ಚು ಮಾಡುವುದಿಲ್ಲವೆಂತಲೂ ರಿಡಿಂಗ್ ಪ್ರಭುಗಳು ಜವಾಬು ಕೊಟ್ಟಿರುವರು. ಸನ್ನದುಗಳಲ್ಲಿ ಇಷ್ಟು ಭೂಮಿಗೂ ಅದಕ್ಕೆ ಸೇರಿದ ಬಾಣೆ ಬಾರೆಗಳಿಗೂ ಇಷ್ಟು ಕಂದಾಯವನ್ನು ಕೊಟ್ಟು ಪುತ್ರಪೌತ್ರ ಪಾರಂಪರ್ಯವಾಗಿ ಅನುಭವಿಸಬಹುದೆಂದು ಬರೆಯಲ್ಪಟ್ಟಿರುವುದನ್ನು ಸರಕಾರದವರು ಅರ್ಧ ಕಂದಾಯದ ರಿಯಾಯ್ತಿ ಮಾತ್ರವೆಂತ ಅರ್ಥಮಾಡಿಕೊಂಡಿರುವುದು ಪೂರಾ ತಪ್ಪೆಂತ ಎಷ್ಟು ಹೇಳಿದರೂ ಸಾಲದು. ಹೀಗೆ ಸರ್ಕಾರದವರು ತಪ್ಪು ಅರ್ಥಮಾಡಿಕೊಂಡು ದೇಶದ ರೈತರ ಖಾಯಂ ಹಕ್ಕು ಬಾಧ್ಯತೆಗಳಿಗೆ ಕುಂದಕ ತರುತಿರುವುದು ಎಂದೂ ನ್ಯಾಯವಲ್ಲ. ಇನ್ನಾದರೂ ಸರ್ಕಾರದವರು ಈ ವಿಷಯ ಸನ್ನದುಗಳ ನಿಜವಾದ ತರ್ಜುಮೆಯೊಡನೆ ಪರ್ಯಾಲೋಚಿಸಿ ಜಮ್ಮದ ಭೂಮಿಯ ಕಂದಾಯದ ಸೆಟ್ಲ್‌ಮೆಂಟನ್ನು ರದ್ದುಪಡಿಸಿ ಸನ್ನದಿನಲ್ಲಿರುವ ಕಂದಾಯದ ದರವನ್ನು ಖಾಯಂ ಪಡಿಸದೆ ಹೋದರೆ ರೈತರಲ್ಲಿ ಉಂಟಾಗಿರುವ ಅತೃಪ್ತಿಯು ಅಸಮಾಧಾನವು ಹೋಗಲಿಕ್ಕಿಲ್ಲವೆಂದು ನಮ್ಮ ಭಾವನೆ.

ಅತಿವೃಷ್ಟಿಯಿಂದ ದೇಶಕ್ಕೆ ಉಂಟಾದ ನಷ್ಟಕ್ಕೆ ಪರಿಹಾರಾರ್ಥವಾಗಿ ಟಕಾವಿ ಸಾಲ ಕೊಡಲಿಕ್ಕಾಗಿ ಇಂಡಿಯಾ ಸರಕಾರದಿಂದ ಹೆಚ್ಚಿನ ಹಣ ಮಂಜೂರು ಮಾಡಲ್ಪಟ್ಟಿದೆಯೆಂದು ವೈಸರಾಯರು ಹೇಳಿದರು. ಆದರೆ ಬರೀ ಟಕಾವಿ ಸಾಲದಿಂದ ರೈತರ ಕಷ್ಟನಿವಾರಣೆಯಾಯಿತೆಂದು ಯೋಚಿಸಿಕೊಳ್ಳಕೂಡದು. ಈಗ ಸುಮಾರು ಎರಡು ತಿಂಗಳಿಂದ ಮಳೆಯೇ ಇಲ್ಲದೆ ಇರುವುದರಿಂದ ಭತ್ತದ ಬೆಳೆಯು ಪಾತ್ರ ನಷ್ಟ ಹಾಳಾಗಿ ರೈತರು ಕಷ್ಟಪಡುತ್ತಿರುವರು. ನ್ಯಾಯವಾದ ಸಂದರ್ಭಗಳಲ್ಲಿ ಕಂದಾಯ ಮಾಫಿ ಮಾಡದೆ ರೈತರ ಕೊಂದರೆ ನೀಗುವುದು ಕಷ್ಟವೆಂದೇ ಕಂಡುಬರುತ್ತದೆ.

ಪಾರ್ಲಿಮೆಂಟಿನಲ್ಲಿ ಮ॥ ಬಿ ಎಸ್ ಕುಶಾಲಪ್ಪ, ಬಿ ಎ, ಇವರು ಮಾಡಿದ ಭಾಷಣ

ಮನುಷ್ಯನ ಅನುಭವವನ್ನು ಪರಿಶೀಲಿಸಿ ದೇಶದ ಚರಿತ್ರೆಯು ಮಾರ್ಪಾಡುಗಳಾಗುವುದು ಲೋಕಸಿದ್ಧಾಂತ. ಇಂತಹ ಚರಿತ್ರೆಯನ್ನು ಪರಿಶೀಲಿಸಿದರೆ ಪ್ರಪಂಚದ ನಿವಾಸಿಗಳಾದ ಮನುಷ್ಯವರ್ಗದಲ್ಲಿ ಒಗ್ಗಟ್ಟಿನ ಆವೊಂದು ಶುಭಸೂಚನೆಯು ಎಲ್ಲೆಲ್ಲಿಯೂ ಕಾಣಿಸುತ್ತಿದೆ. ಪ್ರಾಚೀನಕಾಲದಲ್ಲಿ ಮನುಷ್ಯರು ಕಾಡಿನ ಪ್ರಾಣಿಗಳಂತೆ ಗುಹೆಗಳಲ್ಲೊ ಮರದ ಪೊಟ್ಟರೆಗಳಲ್ಲೊ ವಾಸವಾಗಿದ್ದುಕೊಂಡು ಹೊಟ್ಟೆಪಾಡೇ ಮುಖ್ಯವೆಂದು ಒಗ್ಗಟ್ಟಿನ ಸುಳಿವೇ ತಿಳಿಯದೆ ಪರಸ್ಪರ ಮಾತ್ಸರ್ಯದ್ವೇಷ ಇತ್ಯಾದಿಗಳಿಂದ ಕಾಲ ಕಳೆಯುತ್ತಿದ್ದರು. ಆದರೆ ಕಾಲಕ್ರಮೇಣ ಅಂತಹ ದಿವಸಗಳು ಹೋಗಿವೆ. ಪ್ರಕೃತಿಯಲ್ಲಿ ಕೂಡ ಬದಲಾವಣೆಗಳು ಕಲೆದೋರುವಂತೆ ಒಕ್ಕೋರಲಿನ್ನು ಗಜದುದ್ದದ ಸಾಗರವನ್ನು ದಾಟಬಹುದಾಗಿದೆ. ಬೋರೆಯುವ ವಿಶಾಲವಾದ ನದಿಗಳನ್ನು ಪಾರಾಗಿ ಹೋಗಬಹುದಾಗಿದೆ. ಅಗಾಧವಾದ ಪರ್ವತವನ್ನು ಕೊರೆದು ದಾರಿಮಾಡಿ ಸಾಗಿಸಬಹುದಾಗಿದೆ. ಹೀಗೆ ಸರ್ವತ್ರ ಅವನತಿ ಹೊಂದ ಒಗ್ಗಟ್ಟು ಮನುಷ್ಯವರ್ಗದಲ್ಲಿ, ಪ್ರಕೃತಿಯಲ್ಲಿ ತಾನಾಗಿ ಕಲೆದೋರಿದೆ.

[illegible] ಒಗ್ಗಟ್ಟಿನ [illegible] ಇಲ್ಲ, ಇದಿಷ್ಟೆ ಅಲ್ಲದು ಇವೆಲ್ಲವೂ ಒಂದೇ ಸಂಘಗಳಂತಿವೆ. ಮನುಷ್ಯವರ್ಗದ ಒಗ್ಗಟ್ಟಿಗೆ [illegible] ಬುದ್ಧಿಯ ಬೆಳವಣಿಗೆ ಪ್ರಪಂಚದ ಉದ್ಧಾರಕ್ಕೆ ಬಹು ಮಟ್ಟಿನ ಬುದ್ಧಿ (Intellect) ಯನ್ನು ಹೊಂದಬೇಕು. ಬುದ್ಧಿಯಿಂದಲೇ ಒಗ್ಗಟ್ಟು ಬರಬೇಕಲ್ಲದೆ ಆಯುಧಗಳಿಂದಲ್ಲ, ಹಗ್ಗದ ಬಂಧನದಿಂದಲ್ಲ, ಬೆದರಿಕೆಯಿಂದಲ್ಲ. ಸರ್ವತ್ರ ಬಂದು ಮಾಡದ ಹಬ್ಬೋಣದ ಕಲುಷಿತಗೊಳಿಸುವ ಪರಿಣಾಮವೂ ತೃಪ್ತಿಕರವಾಗಿ ಹಾಗಾದರೆ ಒಗ್ಗಟ್ಟಿನ ಆಡಿಪಾಯ ಇರುವುದು ಬುದ್ಧಿ.

ಇದನ್ನು ಹೇಗೆ ವೃದ್ಧಿಗೊಳಿಸಬಹುದು? ಮನುಷ್ಯರಲ್ಲಿ ಪರಸ್ಪರ ಪ್ರೇಮವು ಹುಟ್ಟುವುದಾದರೂ ಆದರ್ಶ ಆಚಾರಗಳ ಮೂಲವು [illegible] ಬದಲಾವಣೆ ನಮ್ಮಲ್ಲಿರುವ ಆಲೋಚನೆಯು [illegible] ತಿಳಿಸುವ [illegible] ಭಾಷೆ. ಆಕವ [illegible] ವಿನಿಮಯವೇ ಪ್ರಾಮುಖ್ಯವಾದ [illegible] ಪರಸ್ಪರ ವ್ಯಾಖ್ಯಾನದಲ್ಲಿ ಜನಾಂಗ [illegible] ತಿಳಿದಿರದ್ದರಿಂದ ಅನುರಾಗ ಹುಟ್ಟಿಗೆ [illegible] ಇಂಡಿಯದಲ್ಲಿ ಅಯೋಧ್ಯೆ [illegible] ಪಟ್ಟವನ್ನು ಕಟ್ಟಲು ಪ್ರಾರ್ಥಿಸಿದ ಆಂಗ್ಲರ [illegible] ನಾಗರಿಕ [illegible] ಪರ ಬೇಡಬೇಕಿದ್ದಲ್ಲಿ ಸ್ವಾರ್ಥಕ್ಕೆ ಮುಟ್ಟುವಂತ ಒಗ್ಗಟ್ಟನ್ನು ಕಟ್ಟಿಕೊಳ್ಳಲು ಪ್ರಯತ್ನಿಸಿದ ಆಂಗ್ಲ [illegible] ಲಕ್ಷ್ಮಿಯಲ್ಲಿ ಕೂಲಿಕಾರರನ್ನು ನೇಮಿಸಿ [illegible] ಇವರ ದೇವರ ಇಚ್ಛೆಗೆ ವಿರೋಧವಾದ ದರ ಕೂಲಿಗಾರರು ಒಬ್ಬ ಮಾತಿನ ಮತ್ತೊಬ್ಬನಿಗೆ ಬಿಡದೆ ಹೋಗಲೆಂಬ ಶಾಪವು ಬಂದದ್ದರಿಂದ ಒಬ್ಬರ ಭಾಷೆಯೇ ಬದಲಾಯಿತು. ಭಾಷೆ ತಿಳಿಯದ [illegible] ಆಲೋಚನೆ ಎಲ್ಲಿದ್ದೀತು? ಒಗ್ಗಟ್ಟು ಎಲ್ಲಿಂದ ನೇ ಬಂದಿತು? (ಪರಿವರ್ತನೆ) ಯಾವ ಸದುದ್ದೇಶದರೂ ಭಂಗತರುವ [illegible] ಭಾಷೆಯ ವಿವಿಧ ಸದ್ಯ ಪರ [illegible] ತಿಳಿದಿರೋದ್ದರಿಂದ ಉತ್ತರದಿಂದ ದಕ್ಷಿಣ ಭೂಶಿರದವರೆಗೆ ಒಟ್ಟು ರಿನ್ನೊಬ್ಬರು [illegible] ಯುಬಹುದಾಗಿದೆ. ಈ ಪರಸ್ಪರದ ತಿಳಿಯೋಣದರ ಅಭಿವೃದ್ಧಿಯೇ ಈ ನನ್ನ ಭಾಷಣದ ಮುಖ್ಯ ಉದ್ದೇಶ.

ಇಂಗ್ಲೀಷ್ ಭಾಷೆಯು ಈಗ ಎಲ್ಲೆಲ್ಲಿಯೂ ತಿಳಿ ಭಾಷೆಯಾಗಿದೆ. ವ್ಯಾಪಾರದಲ್ಲಿ, ಬ್ಯಾಂಕುಗಳಲ್ಲಿ, ದೇಶವಿದೇಶಗಳಲ್ಲಿ, ಜ್ಞಾನವಿಜ್ಞಾನೀಯ ವಿಷಯಗಳಲ್ಲಿ, ರಾಜಕೀಯದ ಸಂಗತಿಗಳಲ್ಲಿ, ಎಲ್ಲೆಲ್ಲೂ ಇಂಗ್ಲೀಷು ಅದನ್ನು ಹರಡಿದ ಸಂಶಯ ನಮ್ಮ ಜನಾಂಗದ ಉದ್ದೇಶ ಸಫಲವಾಗುವುದರಲ್ಲಿ ಸಂಶಯವೇ ಇಲ್ಲ.

ಹೀಗೆ ಹೇಳಿದುದರಿಂದ ಇಂಗ್ಲಿಷಿನಲ್ಲಿ ಎಲ್ಲಾ ವಿಷಯಗಳನ್ನು ನಮ್ಮ ಹಿಂದೀಯರಿಗೆ ಕಲಿಸಬೇಕೆಂದು ನಾನು ಹೇಳುವುದಿಲ್ಲ. ದೇಶೀಯ ಭಾಷೆಯಂತೆ ಇಂಗ್ಲೀಷನ್ನು ಎಲ್ಲರೂ ದ್ವಿತೀಯ ಭಾಷೆಯಾಗಿ ಕಡ್ಡಾಯವಾಗಿ ಕಲಿಯಬೇಕು. ಇದರಿಂದ ಸ್ವಯಂ ಎಂದೂ ಮುಗದ [illegible] ಪಿತಾಮಹ [illegible] ಬ್ರಿಟಿಷ್ [illegible] ಒಗ್ಗಟ್ಟಿಗೆ ಭಂಗಬರುವುದಿಲ್ಲ. ಪ್ರತ್ಯಕ್ಷ ಸುಖಸ್ವಾರ್ಥವನ್ನು ನಾವು ನಮ್ಮ ಪ್ರಜೆಗಳಿಗೆ ಕೊಟ್ಟ ಪ್ರಭುಪರಿಯನ್ನು ಗಳಿಸದ್ದಕ್ಕೆ ನಾವು ಭಾಗಿಗಳಾಗುವೆವು. ಆದುದರಿಂದ ಎಲ್ಲರೂ ನನ್ನ ಅಭಿಮತವನ್ನು ಎತ್ತಿ ಹಿಡಿಯಬೇಕಾಗಿ ಕೋರುವೆನು.

ಕೊನೆಯಲ್ಲಿ ಹಿಂದೂದೇಶದಲ್ಲಿ ಇತರ ಭಾಷೆಗಳೊಂದಿಗೆ ಇಂಗ್ಲೀಷ್ ಭಾಷೆಯನ್ನು ಮಾತ್ರ ಕಡ್ಡಾಯವಾಗಿ ಕಲಿಸಬೇಕು. ಆಗ ಒಗ್ಗಟ್ಟು ತನ್ನಷ್ಟಕ್ಕೆ ಬರುವುದು. ಒಗ್ಗಟ್ಟಿನೊಡನೆ ಸ್ವಾತಂತ್ರ್ಯವೂ ತಾನೇ ಬರುವುದು. ಪರಸ್ಪರ ಅನುರಾಗವಿಲ್ಲದಿದ್ದರೆ ಸ್ವಾತಂತ್ರ್ಯವಂತೂ ದೊರಕೀತೆ? ಆದುದರಿಂದ ಬ್ರಿಟಿಷ್ ಸಾಮ್ರಾಜ್ಯದ ಒಗ್ಗಟ್ಟಿಗಾಗಿ ಹಿಂದೀಯರ ಸ್ವಾತಂತ್ರ್ಯಕ್ಕಾಗಿ ಈಗ ಕಲಿಯುತ್ತಿರುವ ಇಂಗ್ಲಿಷನ್ನು ಮೊದಲಿನ ಭಾಷೆಯಾಗಿರಿಸದೆ ಎರಡನೆಯದಾಗಿ ಇರಿಸಬೇಕು. ಮೊದಲನೆಯದಾಗಿ ಯಾವ ದೇಶೀಯ ಯಾ, ಅನ್ಯದೇಶೀಯ ಭಾಷೆಯಿರಬಹುದು. ಆದರೆ ಸರ್ವತ್ರ ಇಂಗ್ಲಿಷ್ ಭಾಷೆಯು ಇಂತಹದ್ದು ಇರು ನಮಗೆ ಮಾತ್ರವಲ್ಲ ಹಿಂದೀಯರಿಗೆ ಕೂಡ ಸಮ್ಮತವಾಗಿದೆ. ಇಂಗ್ಲೀಷ್ ಅನುದರಿಂದ ಎಲ್ಲರು ಈ ಅಭಿಪ್ರಾಯಕ್ಕೆ ಬೆಂಬಲವನ್ನು ಕೊಡಬೇಕಾಗಿದೆ.

[ಈ ಕೊಡವರ ಭಾಷಣ ಸಂಪೂರ್ಣ].

[His] Excellency the Right Honourable

[Rufu]s Daniel Isaacs, Earl of Reading,

[P.] C., G.C.B., G.M.S.I., G.M.I.E., G.C.V.O.

VICEROY & GOVERNOR GENERAL OF INDIA

[May] it please Your Excellency

We, the undersigned representatives of the Coorg Landholders' Association, [res]pectfully beg to approach Your Excellency with an offer of our most hearty [wel]come on the occasion of your visit to [this] neighbourhood.

We respectfully assure Your Excellency of our devoted loyalty to His [Imp]erial Majesty the King Emperor and [we] take this opportunity of craving [You]r Excellency's favour to convey to [His] Imperial Majesty this expression of [loya]lty and devotion to His Person and [Thr]one.

We respectfully thank Your Excellency for having granted to us a Council [on t]he model of a Lieutenant Governor's [Cou]ncil. We, however, deem it our duty [to s]tate that our aspirations are for a [more] advanced form of constitution than [that] of a Council without a share of [resp]onsibility in the Government. We [shall] endeavour to utilise the Council now [kind]ly sanctioned, as far as it is possible [to d]o so but we trust that further reforms [will] be granted to us at no very distant [date].

We thank Your Excellency again for [bein]g liberal in fixing our Provincial con[tribu]tion to the Imperial Government, [but] we expect further special treatment [in t]he matter of finances on account of [our] peculiar conditions.

We beg to bring to Your Excellency's [noti]ce that our Province is not represent[ed] in the Imperial Legislatures. We [hum]bly pray that Your Excellency be [plea]sed to provide seats to our elected [repr]esentatives in both the Imperial [Legi]slatures.

We have our grievances in the matter [of] Local Self Government, education, [irrig]ation, railway communication and [othe]r details of the administration of the [cou]ntry, but we hope to get all these [redr]essed through the Council. Therefore [we] do not dwell on them here.

Before we conclude, however, we can[not] but beg the liberty of briefly referring [to a] matter which has been deeply agita[ting] the minds of the landholders, namely [the] question of the settlement of lands [hel]d under 'Jamma' tenure. We had [alwa]ys regarded that the assessment [orig]inally fixed in the sannads by the [Stat]e was in the nature of a permanent [sett]lement and unalterable. At the last [sett]lement the hereditary and permanent [natu]re of these lands was summarily [inte]rfered with and altered, and the [asse]ssment enhanced in the face of re[pea]ted protests from the people based on [thei]r Sannads, and the declarations of [the] highest authorities. We pray that [You]r Excellency will be pleased kindly [to l]ook into the matter, and redress this [deep]ly felt grievance.

We further beg to bring to Your [Ex]cellency's notice that our country also [has] suffered from the recent heavy rains [and] we hope that the Government will [do] necessary relief to the ryots affected.

In conclusion we wish Your Excel[lenc]y and Her Excellency Lady Reading [a] pleasant tour in Southern India and [man]y years of happiness and prosperity.

We remain,

[Y]our Excellency's most loyal servants,

1. K. Kuttiah,
2. P. C. Kushalappa
3. Usman Khan Sahib

His Excellency the Viceroy's reply [to] the address to be presented by the [Coo]rg Land holders Association.

GENTLEMEN,—

I am gratified to have had this opportunity of meeting you and thank you most warmly for your address and for the kind welcome you have extended to Her Excellency and myself.

It was my hope to have found time to pay a visit to Coorg and to have had the pleasure of taking part in the ceremonies connected with the inauguration of your new Legislative Council, but my engagements in Southern India are numerous and my time is restricted, and I have been obliged though with great reluctance to abandon my idea.

Nevertheless you may rest assured that Coorg and its people hold a very special interest for me, and that I am conscious that the ties, which connect them with my Government are of a very special nature. Coorg is a small country, but it has a great history behind it. Its people were allies of the British Government for nearly 90 years before their country at their own request was taken over by the British. They rendered valuable assistance in the Wars with Hyder Ali and Tipu. Their support was also given in the suppression of the rising in South Canara in 1836; and at the time of the Sepoy Mutiny they rallied en masse to the help of the British Government. These fine traditions found their echo in their record in the recent great War and even now when war is over by raising a territorial battalion and by keenness in enlisting they continue to foster and preserve their ideals of loyalty and service. These annals establish a record in which Coorg, though smaller in area and population than the average British district, may well take pride as a province. Its people, as my Government have always recognised have their own racial, linguistic, and social characteristics and a distinct and well marked individuality of own, and it was on these grounds that they were selected for integrity as a unit of administration and in view of these considerations in spite of the comparative minuteness of the area and population involved the Government of India decided to establish a separate Legislative Council in Coorg.

I earnestly hope that the new Council will fully justify its creation, and that the people in Coorg will find in it reasonable opportunities for public life and political expansion. My Government, you may be confident, will watch its activities with sympathy. I trust that in due time they may develop into more extended participation in the work of administration.

You have alluded to your desires for representation in the Imperial Legislature. Some of the smaller administrative units, it is true, such as Delhi, have elected representatives in the Legislative Assembly but these have no provincial Legislative Council. You have the latter privilege and not the former and I think that on reflection it will be clear to you that in view of the numerical restrictions of your electorate you can hardly at the present time expect a larger share in representative institutions than that which has been vouchsafed to you in your new Provincial Council. My Government has always paid special consideration to your circumstances, for although strict logic might demand a regular contribution from your revenues to the Central Government yet, in view of the smallness of your revenues and expenditure this has been waived and you pay no charge for this nature except part of the cost of the Resident of Mysore and his establishment for work connected with his office as the Chief Commissioner of Coorg. If it is found necessary to send forward at any time any proposals relating to the financial stability of the province, you may rely on their careful examination at the hands of my Government.

As regards the special tenures referred to by you, I understand that there has been no breach of the very material concession of assessment at half the ordinary rates which is the essence of this special system. The question has been carefully considered by the Government of India on several occasions, and it has been decided that the sanads confirm the special grant of tenure at a rate which is light as compared with that of other ryots but do not substantiate any claim to permanent assessment; while these lands have a privileged rate of assessment no new facts or circumstances have been advanced to show that they are not liable to periodical reassessment with other lands. I have heard with regret of the damage done in some parts of the province by excessive rainfall. I believe that whatever measures it was possible in the circumstances to devise for the relief of distress have been put into effect. My Government made a special grant for agricultural advances to meet the situation.

Gentlemen, I thank you again for your address and wish your province all future prosperity.

ಚಿಕಿತ್ಸಾ ವಿಷಯದಲ್ಲಿ ನಮ್ಮ ಕೊಂಗರ ಅಜಾಗರೂಕತೆ.

(ಯು ವೆಂಕಟರಾವ್ ಎಲ್ ಎಮ್. ಪಿ ಇವರಿಂದ,)

[ಇವರು ನಮ್ಮ ಪೈಸ್ಕೂಲಿನಲ್ಲೇ ವಿದ್ಯೆ ಪಡೆದವರಾಗಿದ್ದಾರೆ—ಸಂ ಕೊ]

ನಮ್ಮಲ್ಲಿ ಮನೆಗೆಲಸಗಳನ್ನು ಅಕ್ಕರೆಯಿಂದ ನಡೆಯತ್ತಿರುವ ಅನೇಕ ಸ್ತ್ರೀಯರು ತಮ್ಮ ಗುಣದಿಂದಲೂ ತಮ್ಮ ಕಾರ್ಯತತ್ಪರತೆಯಿಂದಲೂ ನಡತೆಯಿಂದಲೂ ಶ್ಲಾಘನೀಯರಾಗಿರುವುದೇನೋ ಸಹಜವೇ! ಆದರೆ ಆರೋಗ್ಯ ದೃಷ್ಟಿಯಿಂದ ನೋಡಿದರೆ ಚಿಕಿತ್ಸಾವಿಷಯದಲ್ಲಿ ಅವರಲ್ಲಿ ಬಹಳ ಲೋಪ ಇನ್ನು ಕಾಣಬರುತ್ತದೆ. ಮನೆಗೆಲಸಗಳನ್ನು ಮಾಡುವ ನಮ್ಮ ಕೊಂಗರ ಬಲಗೈಯನ್ನು ಪರೀಕ್ಷಿಸಿ ನೋಡಿರಿ! ದಿನವೂ ಎರಡು ಮೂರು ಸಾರಿ ಮುಸರೆ, ತಪ್ಪಲೆ ಮುಂತಾದುವುಗಳನ್ನು ತಿಕ್ಕುವುದರಿಂದ ಅವರ ಉಗುರುಗಳೆಲ್ಲಾ ಸವೆದುಹೋಗಿವೆ ಮತ್ತು ಆ ಉಗುರುಗಳ ಅಂಚೆಲ್ಲಾ ಕಪ್ಪಾಗಿ ಅದರ ಸುತ್ತಲೂ ಊದಿಕೊಂಡು ಮತ್ತು ಒಂದೊಂದು ಸಮಯದಲ್ಲಿ ಆ ಊದಿರುವ ಭಾಗವನ್ನು ಒತ್ತಿದರೆ, ಉಗುರುಸಂದುಗಳಿಂದ ಕೀವು ಕೂಡ ಬರುವುದುಂಟು. ಇಂತಹ ರೋಗ, ಹಳ್ಳಿಯವರು ತಮ್ಮ ಕೈಗೆ ಬಿಸಿಯು ತಡೆಯುವದಂತಾಗಿ, ಬರಿಯೂ ನೋವು ಹೋಗ್ಬಹದಾಗ ವೈದ್ಯರಬಳಿಗೆ ಚಿಕಿತ್ಸೆಗಾಗಿಯೂ ತೋರಬೇಕಾಗಿರುವುದು. ನಮ್ಮಲ್ಲಿ ಪ್ರಾಯಿಕವಾಗಿ ಹೆಂಗಸರನೇಕರು ಅತಿಗೆಪಾಗುವುದು, ಬಟ್ಟೆ ಒಗೆಯುವುದು, ಪಾತ್ರೆಗಳನ್ನು ತೊಳೆಯುವುದು ಇವಲ್ಲೆಲ್ಲಾ ತಮ್ಮ ಕೈಯಿಂದಲೇ ಮಾಡಬೇಕಾಗಿದೆ. ಈ ಕೆಲಸಗಳನ್ನೆಲ್ಲಾ ಮಾಡುವಾಗ ಪ್ರತಿಯೊಂದುಸಲವೂ ಕೈಯನ್ನು ಶುದ್ಧವಾಗಿ ತೊಳೆದು ಚೆನ್ನಾ ಒರೆಸಿಕೊಂಡು ಅಮೇಲೆ ತಮ್ಮ ಭೋಜನಪದಾರ್ಥವನ್ನು ಮುಟ್ಟುವರೆಂಬ ನಂಬಿಕೆಯಿಲ್ಲ. ಇಷ್ಟು ಎಚ್ಚರದಿಂದ ಗಮನಿಸಿ ಕೆಲಸಮಾಡುವುದಕ್ಕೂ ಅವರಿಗೆ ತಿಳುವಳಿಕೆ ವಿರಾಮವಿಲ್ಲ. ಇದರಿಂದ ಮೇಲೆ ಹೇಳಿದ ಪ್ರಾಕೃತಿಕ ರೋಗವನ್ನು ತಂದುಕೊಂಡಮೇಲೆ, ಅನೇಕ ಹೆಂಗಸರು ಆ ಕೈನೋವು ಹೋಗುವುದಕ್ಕಾಗಿ ತತ್ಕಾಲಕ್ಕೆ ತಮಗೆ ಸಿಕ್ಕಿದ ಬೇರಿನ ಸುಣ್ಣ, ಮೆಣಸು ಮುಂತಾದವುಗಳನ್ನು ಅರೆದು ಹಚ್ಚುವರು. [illegible] ಕೊಳೆತು ಹೋಗುವದು. ಕೊಳೆತ ಕೈಯನ್ನು ಒರೆಸುವುದರ ಹುಚ್ಚುತನ [illegible] ಇಲ್ಲ. [illegible]

(ಸಶೇಷ)

ನೋಟೀಸು.

೧ ಲೆಜಿಸ್ಲೇಟಿವ ಕೌನ್ಸಿಲನ್ನು ಜಮಿನ್ದಾರರ ಸಂಘದ ಕಮಿಟಿಯವರು ಒಪ್ಪಿಕೊಳ್ಳಬಾರದೆಂತಲೂ, ಸಂಘವು ಕೌನ್ಸಿಲನ್ನು ಅಂಗೀಕರಿಸುವುದಾದರೆ ಸಂಘದಿಂದ ಮೆಂಬರುಗಳನ್ನು ಚುನಾಯಿಸಬೇಕೆಂತಲೂ ಸಹ ಮೆ| ಕುಟ್ಟಂಡ ತಮ್ಮಯ್ಯನವರು ಮೊದಲಾದ ೧೩೧ ಮೆಂಬರುಗಳು ಸೈನ್ ಹಾಕಿ ಬರೆದು ಸಂಘಕ್ಕೆ ಕಳುಹಿಸಿದ ಕಾಗದದ ವಿಷಯ ಯೋಚಿಸಲಿಕ್ಕೆ ತಾರೀಖು ೨೨-೧೨-೧೯೨೩ ನೇ ಶನಿವಾರ ದಿನ ಸಂಘದ ಒಂದು ವಿಶೇಷ ಜನರಲ್ ಮೀಟಿಂಗು ಮಧ್ಯಾಹ್ನ ೨ ಗಂಟೆಗೆ ವೀರರಾಜೇಂದ್ರಪೇಟೆ ತಾಲೋಕು ಕಚೇರಿ ಬಳಿ ನಡಿಯುತ್ತೆ

೨ ಕಳೆದ ಎರಡು ವರ್ಷಗಳ ಚಂದಾ ಕೊಡದವರಿಗೆ ಮೀಟಿಂಗಿನಲ್ಲಿ ಚರ್ಚಿಸುವ ಹಕ್ಕಿರುವುದಿಲ್ಲ.

ಕೊಡಗು ಜಮಿನ್ದಾರರಸಂಘ, ಸಿ ಎನ್ ವೆಂಕಪ್ಪಯ್ಯ,
ಮಡಿಕೇರಿ ತಾ|| 22-11-23 ಜನರಲ್ ಸೆಕ್ರಟರಿ

ವರ್ತಮಾನ ಸಂಗ್ರಹ

ಒಳದೇಶ

ಕಾಂತು ಮೂರ್ನಾಡಿನ ಏಕೊಳ ಗ್ರಾಮದವರಲ್ಲಿ ಈಗ ಎರಡು ಮೂರು ವರ್ಷಗಳಿಂದ ನೇರಿದಿ ಕಟ್ಟಬೇಕು, ಬೇಡವೆಂಬ ಎರಡು ಪಂಗಡವಿದ್ದು ಹುತ್ತರಿ ಹಬ್ಬದಲ್ಲಿ ಪಾಂಡಂಡಾಕೆ ನಾಡು ಮಂದಿಗೆ ಬರುವಾಗ್ಗೆ ದಾರಿಯಲ್ಲಿ ಈ ಎರಡು ಪಂಗಡದವರು ಹೊಡೆದಾಡಿ ಒಕಂ ಳಗಿ ಮಂದಿಗೆ ಬಂದಲ್ಲು ನಾಡಿನವರು ಪಂಚಾಯಿತಿಗೆ ಯಿದ್ದ ಅವರನ್ನು ರಾಜಿ ಮಾಡಿದರಂತೆ.

ಇದೇ ತಾ|| 2 ರಲ್ಲು ಕಾಂಡನ ಕೊಲ್ಲಿ ಗ್ರಾಮದ ಪಂದಿಕುತ್ತಿರ ಮಾದೈಯ್ಯನವರು ಕೋವೆ ದೆಸೆಯಿಂದ ಮೃತಪಟ್ಟರೆಂದು ತಿಳಿಸಲು ವ್ಯಸನಪಡುತ್ತೇವೆ

ಬೆಪ್ಪುನಾಡಿನವರ ಮಾದಪಟ್ಟ ನಾ ಎಪರಂಬಿನಲ್ಲು ಆಯಿರಿ ಪೆಗ್ಗಡೆಯವರನ್ನು ಕೊಡಗರ ಜೊತೆಯಲ್ಲಿ ಕೋಲು ಹೊಡೆಯಲು ಬಿಡಬಾರದೆಂದು ಕೆಲವರು ಚರ್ಚೆ ಮಾಡುತ್ತಿದ್ದ ವೇಳೆಯಲ್ಲಿ ಬಾಕಿಯವರು ಅವರನ್ನು ಸೇರಿಸಿಕೊಂಡು ಕೋಲು ಹೊಡೆದರೆಂದೂ ಯಾವದೂ ತೀರ್ಮಾನವಾಗದ್ದರಿಂದ ಕೋಲಾಟವು ಚನ್ನಾಗಿ ನಡೆಯದೆ ಎಲ್ಲರೂ ವಾಪಾಸು ಹೋದರೆಂದು ವರ್ತಮಾನ

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ ಪದವಿಯು ಖಾಯಂ ಆದದಕ್ಕೆ ಮೆ|| ಕೆ ಚಂಗಪ್ಪನವರಿಗೆ ಇದೇ ತಾ|| 19 ರಲ್ಲೂ, ವರ್ಗವಾಗಿ ಹೋಗುವ ಕಮಿಷನರ್ ಮೆ|| ಸೂಟರ್‌ರವರಿಗೆ ತಾ|| 20 ರಲ್ಲೂ ಮಡಿಕೇರಿಯಲ್ಲಿ ಎಂಟರ್ ಟೈನ್‌ಮೆಂಟ್ ಕೊಡುವಂತೆ ಏರ್ಪಾಡು ನಡೆಯುತ್ತಿದೆ

ಸ್ಕೂಲುಗಳ ಇನ್‌ಸ್ಪೆಕ್ಟರಾದ ಮೆ|| ಯೇಟ್ಸ್‌ರವರು ಕೊಡಗಿನಲ್ಲಿ ಇನ್‌ಸ್ಪೆಕ್ಷನ್ ತೀರಿಸಿ ತಾ|| 6 ರಲ್ಲು ಬೆಂಗಳೂರಿಗೆ ವಾಪಾಸು ಹೋದರು

ಜಮಿನುದಾರರ ಸಂಘದ ಪರವಾಗಿ ಮೆ|| ಕೆ ಕುಟ್ಟಯ್ಯ, ಮೆ|| ಸಿ ಎನ್ ವೆಂಕಪ್ಪಯ್ಯ ಮೆ|| ಪಾರ್ವಂಗಳ ಕುಶಾಲಪ್ಪ, ಮೆ|| ಕೆಕ್ಕಡ ಪೂವೈಯ್ಯ ಮತ್ತು ಮೆ|| ಉಸ್ಮಾನ್‌ಖಾನ್ ಇವರು ಐದುಜನರು ಡೆಪ್ಯುಟೇಶನ್ ಹೋಗಿ ನವಂಬರು ತಾ|| 30 ರಲ್ಲು ಮೈಸೂರಿನಲ್ಲಿ ವೈಸರಾಯರಿಗೆ ಭೇಟಿಕೊಟ್ಟರು

ಕಳೆದ ತಾ|| 27 ರಲ್ಲು ಮೆ|| ಸಿ ಆರ್ ರಿಚಾರ್ಡ್ಸನ್‌ರವರು ಮೆ|| ಎಮ್ ಜಿ ಪ್ಲಾಟ್‌ರವರಿಂದ ಕೊಡಗಿನ ಎಗ್ಸಿಕ್ಯುಟಿವ್ ಇಂಜಿನೀಯರ್ ಹುದ್ದೆಯ ಚಾರ್ಜು ತೆಗೆದುಕೊಂಡರು

ನಾಮಧಾರಿ ಸಿ ಎಸ್ ಶ್ರೀನಿವಾಸ ಶಾಸ್ತ್ರಿಯವರು ತನ್ನ ಪತ್ನಿ ಸಮೇತ ಎಸ್ ಸಿ ಪಿ ಬೊಳ್ಳಮ್ಮನವರೊಂದಿಗೆ ಕಳೆದ ತಾ|| 30 ರಲ್ಲಿ ಬೆಂಗಳೂರಿಂದ ಮಡಿಕೇರಿಗೆ ಬಂದು ಅಲ್ಲಿಂದ ಮರುದಿನ ತಲಕಾವೇರಿಗೆ ಹೋಗಿ 2೩ ರಲ್ಲು ವಾಪಾಸು ಹೊರಟುಹೋದರು ಇವರು ಶ್ರೀಮತಿ ಕೋದಂಡ ಬೊಳ್ಳಮ್ಮನವರ ಅತಿಥಿಯಾಗಿದ್ದರು

ಪೆರುಂಬಾಡಿ ಗ್ರಾಮದಲ್ಲಿ ಕಳೆದ ಎಪ್ರಿಲಿನಿಂದ ಸುಮಾರು 16 ರಾಸುದನಗಳನ್ನು ಕೊಂದಂಥ ಒಂದು ಕಿರುಬನು ತಾ|| 20-11-23 ರಲ್ಲು ನಾಲ್ಕುರಾಸು ದನಗಳನ್ನು ಕೊಂದಲ್ಲಿ ಉಳಿಕೂತು ಮೆ|| ಬೊಪ್ಪಂಡ ಪೂವೈಯ್ಯನವರು ಆ ಕಿರುಬನನ್ನು ಗುಂಡುಹೊಡೆದ. ಕೊದ್ದರಿದ್ದರಿಂದ ಆ ಗ್ರಾಮಸ್ಥರಿಗೆ ದೊಡ್ಡ ಉಪಕಾರಮಾಡಿದಂತಾಯಿತ್ತೆಂದು ಒಂದು ಬಾತ್ಮಿ

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಪದವಿಯು ಇದೇ ಮೊದಲಾಗಿ ಹಿಂದೀಯರಿಗೆ ದೊರೆತದರಿಂದ ಮಡಿಕೇರಿ ಪೇಟೆಯವರು ಸೇರಿ ತಾ|| 3 ರಲ್ಲು ಸಾಯಂಕಾಲ ಮೆ|| ಕೆ ಚಂಗಪ್ಪನವರನ್ನು ಮೆರವಣಿಗೆ ಯೊಂದಿಗೆ ವೆಂಕ್ಟ್ರೀಶ, ವೈಶ್ಯಂ ಪೇಟಾಂಗದವರ ಮತ್ತು ಶಿವಾಚಾರದವರ ದೇವಸ್ಥಾನಗಳಿಗೆ ಕರೆದುಕೊಂಡು ಹೋಗಿ ಪೂಜೆಗಳನ್ನು ನಡಿಸಿ ಪ್ರಸಾದವನ್ನು ಕೊಟ್ಟರು ಪೇಟೆ ಬೀದಿಯು ಹಲವು ವಿಧದ ತೋರಣಗಳಿಂದ ಚೆನ್ನಾಗಿ ಶೃಂಗರಿಸಲ್ಪಟ್ಟಿತ್ತು.

ವೈಸರಾಯಿ ಪ್ರಭುಗಳ ಧರ್ಮಪತ್ನಿಯವರ ಕೋರಿಕೆ ಮೇರೆ 1924 ನೇ ಇಸವಿ ಜನವರಿ ತಿಂಗಳ 3 ನೇ ವಾರದಲ್ಲು ಹಿಂದೂ ದೇಶದಲ್ಲೆಲ್ಲಾ ನಡಿಸಲಿಕ್ಕಿರುವ ಶಿಶು ಪ್ರದರ್ಶನವನ್ನು ನಮ್ಮ ಕೊಡಗು ದೇಶದಲ್ಲಿ ಸಹ ನಡಿಸ ಬೇಕೆಂದು ಕೇಳಿಕೊಂಡಿರುವ ಕಾರಣ ಸದರಿ ಸಂಗತಿಯನ್ನು ಚರ್ಚಿಸಿ ತೀರ್ಮಾನಿಸಲು ಡಿಸಂಬರ 7 ರಲ್ಲು ಮಧ್ಯಾಹ್ನ 12 ಗಂಟೆಗೆ ಕಮಿಷನರವರ ಅಧ್ಯಕ್ಷತೆಯಲ್ಲ ಮಡಿಕೇರಿ ಡಿಸ್ಟ್ರಿಕ್ಟ್ ಪ್ರೆಸ್ ಹಾಲಿನಲ್ಲು ಒಂದು ಬಹಿರಂಗ ಮೀಟಿಂಗು ನಡೆಯಲಿಕ್ಕಿದೆ

ದೇಶದಲ್ಲಿ ಮಳೆಯೇ ಇಲ್ಲದೆ ಬಹು ದಿವಸಗಳಾದುದರಿಂದ ಭತ್ತದ ಬೆಳೆಯು ಬಹಳ ಕಡಿಮೆಯಾಗಿದೆ ಇನ್ನು ಕದರು ಪೂರ್ತಿ ದಾಟಿರುವುದಿಲ ಆವಾರ ಆಗಾಗ್ಗೆ ಆಕಾಶದಲ್ಲಿ ಮೋಡವು ಕವಿದುಕೊಂಡು ಬರುತ್ತಿರುವುದಲ್ಲದೆ ಗುಡುಗೂ ಕೇಳಿಸುತಿತ್ತು

ಈ ವರ್ಷದ ಹುತ್ತರಿ ಹಬ್ಬದಲ್ಲು ಬೆಟ್ಟಕತ್ತು ನಾಡಿನವರ ಕೈ ಮಡಿಕೆ ಪರಂಬಿನಲ್ಲೂ, ಕಡಿಯತ್ತುನಾಡಿನ ಪೆಬ್ಬಟ್ಟಾಣೆಯಲ್ಲೂ ನಾಡುಕೋಲಿನ ದಿನ ಕೌನ್ಸಿಲು ಚುನಾವಣೆಯ ವಿಷಯ ಕೆಲವು ಉಮೇದುವಾರರು ಭಾಷಣ ಮಾಡಿದರಂತೆ ಈ ಸಂಬಂಧವಾಗಿ ಪರನಾಡಿನವರು ಹಲವರು ಅಲ್ಲಿಗೆ ನೆರೆದಿದ್ದರಂತೆ

ಮನಿಯಪಂಡ ಯಂಗ್‌ಮೆನ್ಸ್ ಸಂಘದ 5 ನೇ ವಾರ್ಷಿಕೋತ್ಸವವು ಮೆ|| ಎಂ ದೇವೈಯ್ಯನವರ ಅಧ್ಯಕ್ಷತೆಯಲ್ಲು ನಡೆಯಿತು ಸುಮಾರು 200 ಜನರು ನೆರೆದಿದ್ದರು ವಿವಿಧ ಸ್ಪೋರ್ಟ್ಸ್ ಯಾನೆ ಆಟಗಳು ನಡೆದವು ಕಡೇಗೆ 30 ಡಿಶೀರ್ಪಗಳು ಹಂಚಲ್ಪಟ್ಟವು ಎಂದು ಒಂದು ಬಾತ್ಮಿ

ದನಕರುಗಳನ್ನೂ, ಮೈಹಸಗಳನ್ನೂ ಗೋಣಿಕೊಪ್ಪಲು ಸಂತೆಯಿಂದ ಕೊಂಡುಕೊಳ್ಳಲು ಇದೀಗ ತಕ್ಕ ಸಮಯವೆಂದು ಅಲ್ಲಿಯವರೊಬ್ಬರು ತಿಳಿಸುತ್ತಾರೆ

ನವಂಬರು ತಾರೀಖು 23 ನೇಯ ಕೊಡಗು ಪತ್ರಿಕೆಯಲ್ಲು ಪ್ರಕಟವಾದ ಮೆ|| ಸಿ ಎ ತಿಮ್ಮೈಯ್ಯನವರ ಬಾತ್ಮಿಯಲ್ಲು 5 ನೇ ಪುಟ, 2 ನೇ ಕಲಂ 1೮ ನೇ ಪಂಕ್ತಿಯಲ್ಲಿ ದೇವರಿಗೆ ಎಂಬದನ್ನು ಪೇಪರಿಗೆ ಎಂದೂ 23 ನೇ ಪಂಕ್ತಿಯಲ್ಲಿ 'yoke ಎಂಬದನ್ನು 'joke' ಎಂದೂ ತಿದ್ದಿ ಓದಿಕೊಳ್ಳತಕ್ಕದೆಂದು ಅವರು ತಿಳಿಸುತ್ತಾರೆ

ಐರಾತಿನ ಮೋಸಲಿನಲ್ಲಿರುವ ಮೆ|| ಮಾತಂಡ ಕಾರ್ಯಪ್ಪನವರು ಅಲ್ಲಿಯ ಡಿ ಡಬ್ಲ್ಯು ಒ ವಿಸ ಇಂಡಿಯಾ ಸ್ಥಾಪಿನವರಿಂದ ವಸೂಲಿ ಮಾಡಿದ ನೂರು ರೂಪಾಯಿಯನ್ನು ಕೊಡಗು ರಿಲೀಫ್ ಫಂಡಿಗೆ ಕಳುಹಿಸಿರುವರು ದೇಶದವರ ವಂದನೆ ಇವರಿಗೆ ಖಂಡಿತವಾಗಿಯೂ ಇದೆ

ಹಿಂದೂದೇಶ.

ವೈಸರಾಯರು ಮದ್ರಾಸಿಗೆ ತಾ 8 ರಲ್ಲು ತಲಪುವರು ಆ ದಿನ ಅಲ್ಲಿ ಹರತಾಳವನ್ನು ಆಚರಿಸಬೇಕೆಂದು ಅಲ್ಲಿಯ ಕೆಲವು ಮುಂದಾಳುಗಳು ಅಲ್ಲಿಯ ನಿವಾಸಿಗಳಿಗೆ ಅಪ್ಪೀಲ್ ಮಾಡಿರುವರು

ತಿನ್ನವೆಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರಾಗಿದ್ದ ದಿವಾನ್ ಬಹದೂರ್ ಟಿ ಎನ್ ಶಿವಜ್ಞಾನಮ್ ಪಿಳ್ಳೆಯವರು ಈಗ ಮದ್ರಾಸು ಸರ್ಕಾರದ ಒಬ್ಬ ಮಂತ್ರಿಯಾಗಿ ನೇಮಿಸಲ್ಪಟ್ಟಿದ್ದರೂ ಕೂಡ ಡಿ ಬೋರ್ಡಿನ ಪ್ರೆಸಿಡೆಂಟ್ ತನಕ್ಕೆ ರಾಜಿನಾಮೆ ಕೊಟ್ಟಿರುವುದಿಲ್ಲವಂತೆ

ಬರ್ಮಾ ಲೆಜಿಸ್ಲೆಟಿವ್ ಕೌನ್ಸಿಲಿನಲ್ಲಿ ಪೋಲೀಸು ಇಲಾಖೆಗೆ ಹೆಚ್ಚಿನ ಗ್ರ್ಯಾಂಟ್ ಕೊಡಬೇಕೆಂಬದಕ್ಕೆ ನೇಶನಲಿಸ್ಟ್ ಪಂಗಡದವರು ವಿರೋಧಿಸಿ ಅದನ್ನು ಮುಂಜೂರು ಮಾಡಲು ಬಿಡಲಿಲ್ಲ

ನವನಗರದ ಮಹಾರಾಜರಾದ ಜಾಮ್ ಸಾಹೇಬರವರು ಡಾ|| ರವೀಂದ್ರನಾತ್ ಠಾಗೋರರವರ ವಿಶ್ವಭಾರತಿಗೆ ಐದು ಸಾವಿರ ರೂಪಾಯಿ ಕೊಟ್ಟಿರುವರು

ಅಖಿಲ ಭಾರತ ಸಾಮಾಜಿಕ ಕಾನ ಫರೆನ್ಸಿನ ನಾಲ್ಕನೇ ಸಮ್ಮೇಳನವು ಕಳೆದ ತಾ 29 ರಲ್ಲು ಡಾ|| ಅನಿಬೆಸೆಂಟ್ ಅಮ್ಮನವರ ಅಧ್ಯಕ್ಷತೆಯಲ್ಲಿ ಬೊಂಬಾಯಿಯಲ್ಲಿ ನಡೆಯಿತು.

ಅಲ್ ಇಂಡಿಯಾ ವಿದ್ಯಾರ್ಥಿಗಳ ಕಾನ್‌ಫರೆನ್ಸು ಡಿಶಂಬರಿನ ಅಖೈರು ವಾರದಲ್ಲಿ ಕೋಕನಾಡದಲ್ಲಿ ಕಾಂಗ್ರೆಸ್ ಚಪ್ಪರದಲ್ಲಿ ನಡೆಯುವುದು

ನಾಗಪುರದ ಹಿಂದೂ ಮುಸಲ್ಮಾನರ ಕಲಹದಲ್ಲಿ 460 ಹಿಂದುಗಳು ಕೈದು ಮಾಡಲ್ಪಟ್ಟಿದ್ದರು ಆ ಕಲಹವು ಈಗ ರಾಜಿಯಿಂದ ತೀರ್ಮಾನವಾಗಿದೆ

ಇಂಡಿಯಾದ ಸೈನಿಕರಿಗೆ ಗೋಮಾಂಸಕ್ಕಾಗಿ ಇಂಡಿಯಾದಲ್ಲೇ ಗೋವಧೆಮಾಡುವ ಬದಲು ಆಸ್ಟ್ರೇಲಿಯಾದಿಂದ ಮಾಂಸವನ್ನು ತರಿಸಿದರೆ ಇಲ್ಲಿ ವಧೆಯಾಗುವ ಒಂದೂವರೆಲಕ್ಷ ಗೋವುಗಳಲ್ಲಿ ಒಂದು ಲಕ್ಷವನ್ನಾದರೂ ಉಳಿಸಬಹುದೆಂದು ಲಂಡನಿನ ಗೋರಕ್ಷಣಾ ಸಭೆಯ ಕಾರ್ಯದರ್ಶಿಗಳಾದ ಮೆ|| ಕೆ ಎಸ್ ಜಸವಾಲರು ಹೇಳುತ್ತಾರೆ ಇದಲ್ಲವೇ ಹಿಂದೂ ಪುತ್ರರಿಗೆ ಸ್ವಲ್ಪವಾದರೂ ಧರ್ಮದ ಕೆಲಸ !

ಬಂಗಾಳ ಲೆಜಿಸ್ಲೆಟಿವ್ ಕೌನ್ಸಿಲು ಚುನಾವಣೆಯಲ್ಲಿ ಸ್ವರಾಜ್ಯ ಪಾರ್ಟಿಯ ಡಾ|| ಬಿಧುನ್ ಚಂದ್ರರೈಯವರು ಮಂತ್ರಿಯಾಗಿದ್ದ ಸರ್ ಸುರೇಂದ್ರನಾಥ್ ಬೆನರ್ಜಿಯವರನ್ನು ಸೋಲಿಸಿಬಿಟ್ಟಿರುವರು ಇಷ್ಟರವರೆಗೆ ಆ ಕೌನ್ಸಿಲಿಗೆ 31 ಸ್ವರಾಜ್ಯಪಾರ್ಟಿಯ ಮೆಂಬರುಗಳು ಚುನಾಯಿಸಲ್ಪಟ್ಟಿರುವರು.

ಮದ್ರಾಸ್ ನ್ಯಾಯವಿಧಾಯಕ ಸಭೆಯಲ್ಲಿ ಎ ಪಿ ಪಾತ್ರೋ ಪನಗಲ್ಲಿನ ರಾಜರೂ, ದಿವಾನ್ ಬಹದ್ದೂರ್ ಎನ್. ಎಸ್. ಶಿವಜ್ಞಾನಂ ಪಿಳ್ಳೆಯವರೂ ಮಂತ್ರಿಗಳಾ[ಗಿ]ರುವರೆಂದು ವದಂತಿ ಇದೆ

ಗೋಸ್ವಾಮಿ ಪಾರಾಚಟ್ಲಿಯ ಜಮಿನುದಾರರ ... ಬ್ಬರ ಮಗಳು ಒಂದು ಆಶ್ಚರ್ಯಕರವಾದ ಶಿಶುವನ್ನು ... ರುವಳು ಅದಕ್ಕೆ ಒಂದು ಕಿವಿಯಿದೆ ನಾಲಗು ... ಎರಡು ಬದಿಗೂ ಹಚ್ಚಿರುವ ದೊಡ್ಡ ಬಾಯಿಯಿಂದ ... ಸೋಚ್ಛ್ವಾಸ ಮಾಡುತ್ತದೆ ಕಿವಿಯಿಲ್ಲದ ಇನ್ನೊಂದು ... ಯಲ್ಲಿ ಬಹಳ ಸಣ್ಣ ಕಣ್ಣು ಇದೆ ಕಿವಿಯನ್ನು ... ದೊಡ್ಡ ಕಣ್ಣು ಅದರ ಸ್ಥಾನದಿಂದ ಎರಡು ಇಂಚು ಮುಂ[ದೆ] ಬರುತ್ತದೆ. ಮತ್ತು ಆ ಮಗುವು ನೊಂದ ನಾಯಿಯಂ[ತೆ] ಕೂಗುತ್ತದೆ ಅದರ ದೇಹವು ಹೆಣ್ಣೂ ಗಂಡೂ ಅವಯ[ವ]ಗಳುಳ್ಳ ಚಮತ್ಕಾರಿಕವಾದ ಜೋಡಣೆಯಾಗಿದೆ ... ದಿನಗಳಾಗಿದ್ದರೂ ದೇಹವು ಬಹಳ ಗಟ್ಟಿಯಾಗಿ... ಈ ವಿಚಿತ್ರ ಶಿಶುವನ್ನು ನೋಡಲು ಅನೇಕರುಂದಿ ಹೋ[ಗು]ತ್ತಾರೆ (ದಿ ಕೆನರಾ ಲೀಡರ್)

ವೈಸರಾಯರು ಏರ್ಪಡಿಸಿದ ಜಪಾನ್ ದೇಶದ ಸಹಾಯ ನಿಧಿಗೆ 1೩ ಲಕ್ಷ ರೂಪಾಯಿಗಳು ಈಗಲೇ ಜಮೆಯಾಗಿವುದು

ಪೋರಬಂದರಕ್ಕೆ ಹೋಗಿದ್ದ ರವೀಂದ್ರನಾಥ್ ಠಾಕೂರವರಿಗೆ ಅವರ ವಿಶ್ವಭಾರತಿ ವಿಶ್ವವಿದ್ಯಾಲಯಕ್ಕೆ ಅಲ್ಲಿನ ಮಹಾರಾಜರು 80ಸಾವಿರ ರೂಪಾಯಿಗಳನ್ನು ಸಹಾಯ ಮಾಡಿರುವರು

ಕಳೆದ ತಾ 30 ರಲ್ಲಿ ಡಾ|| ಸರ್ ಟೇಜ್ ಬಹದೂರ ಸಾಪ್ರುರವರು ಇಂಪೀರಿಯಲ್ ಕಾನ್‌ಫರೆನ್ಸಿನಲ್ಲಿ ನಡೆದ ... ಗತಿಗಳ ವಿಷಯ ಬೊಂಬಾಯಿಯಲ್ಲಿ ಒಂದು ದೊಡ್ಡ ... ಮೀಟಿಂಗಿನಲ್ಲು ಭಾಷಣ ಮಾಡಿದರು

ಮದ್ರಾಸು ಕೌನ್ಸಿಲಿನಿಂದ ನೇಮಕವಾದ ಮಂತ್ರಿ... ಲ್ಲಿ ಕೌನ್ಸಿಲಿಗೆ ಸಂಬಿಗೆಇಲ್ಲವೆಂತ ಮೆ|| ರಾಮಲಿಂಗರೆಡ್ಡಿ... ವರು ಠರಾವು ತಂದದ್ದು ವಾಪಸಾಗಲಿಕ್ಕೆ ಅದ್ದರಿಂದ ... ಡ್ಡಿ ಮೊದಲಾದವರು ಕೌನ್ಸಿಲಿನಲ್ಲಿ ಒಂದು ವಿರೋಧ ಪಾ[ರ್ಟಿ] ಮಾಡುವುದರಲ್ಲಿದ್ದಾರೆ

ವಿದೇಶ

ಜರ್ಮನಿಯ ರಿಪಬ್ಲಿಕನ್ ಪಾರ್ಟಿಯ ಮುಂದಾಳಾ[ದ] ಮೇಕೆಸ್ ಎಂಬವರು ಸರಕಾರವನ್ನು ನಡಿಸಲು ಸಾಧ್ಯ[ವಿಲ್ಲ]ವೆಂದು ತನ್ನ ಮಿತ್ರಮಂಡಲಿಯಲ್ಲಿ ಬರಖಾಸ್ತು ಮಾಡಿದ[ರು] ಮಧ್ಯಪಾರ್ಟಿಯ ಮಾರ್ಕ್ಸ್ ಎಂಬವರ ಹೊಸಮಂ[ತ್ರಿ]ಮಂಡಲಿಯನ್ನು ಏರ್ಪಡಿಸಿರುವರು.

ಈಸ್ಟ್‌ಆಫ್ರಿಕದ ಇಂಡಿಯನ್ ನೇಶನಲ್ ಕಾಂಗ್ರೆ[ಸ್] ಕ್ರಿಸ್‌ಮಸ್‌ವಾರದಲ್ಲಿ ಮೊಂಬಾಸದಲ್ಲಿ ನಡೆಯುವು[ದು] ಶ್ರೀಮತಿ ಸರೋಜಿನಿ ನಾಯಡುರವರು ಅಧ್ಯಕ್ಷರಾಗ[ಲು] ಸನ್ಮತಿಸಿರುವರು.

ಗ್ರೀಸ್ ದೇಶದ ಸರಕಾರಕ್ಕೆ ವಿರೋಧವಾಗಿ ಜನ ದಂಗೆಯೆದ್ದು ಪ್ರಜಾಧಿಪತ್ಯ ನೆಲೆಗೊಳ್ಳಬೇಕೆಂದು ಪ್ರಯ[ತ್ನ]ಸಿದುದರಿಂದ ಇನ್ನು ಅಲ್ಲಿ ಪ್ರಜಾಧಿಪತ್ಯವೇ ಸ್ಥಾಪಿಸ[ಲ್ಪಡು]ವುದೆಂದು ತಿಳಿಯಬರುತ್ತದೆ

ಜರ್ಮನಿ ಚಕ್ರವರ್ತಿಯಾಗಿದ್ದ ಕೈಸರರ ಮಗ ಹಾಲೆಂಡಿನಿಂದ ಜರ್ಮನಿಗೆ ಬಂದಿರುವರು ಅವರನ್ನು ... ಯ ಸರಕಾರವು ತಮ್ಮ ಆಸ್ತಿಯಲ್ಲಿ ನಿಲ್ಲಬಹುದೆಂದು ಒಪ್ಪಿ ಕೊಟ್ಟಿರುವರು ಅವರು ತಮ್ಮ ಆಸ್ತಿಗೆ ಬಂದಿರುವುದ[ರಿಂ]ದ ಫ್ರೆಂಚರಿಗೆ ಸಮಾಧಾನವಿಲ್ಲ ಆದರೆ ಆ ವಿಷಯ[ದಲ್ಲಿ] ಬ್ರಿಟಿಷರು ತಾವು ನಿಷೇಧಿಸುವುದಿಲ್ಲವೆಂದು ಹೇಳುತ್ತಾ[ರೆ] ಮಗನು ತನ್ನನ್ನು ಕೇಳಿ ಹೋಗಿಲ್ಲವಾಗಿಯೂ, ತನ್ನ[ನ್ನು] ಕೇಳಿದ್ದುದಾದರೆ ತಾನು ನಿಷೇಧಿಸುತಿದ್ದೆನೆಂದೂ ಅಂ[ತಃ]ಕಲಹ ಬಹಳವಾಗಿರುವ ಈ ಸಮಯದಲ್ಲಿ ತನ್ನ ಮಗ ಜರ್ಮನಿಗೆ ಹೋಗಿರುವುದು ಯುಕ್ತವಲ್ಲವೆಂದೂ ... ಹಾಲೆಂಡಿನಲ್ಲಿರುವ ಕೈಸರರು ಹೇಳುತ್ತಾರೆ.

ಕಳೆದ 50 ವರ್ಷಗಳಿಂದೀಚೆಗೆ ಎಂದೂ ಇಲ್ಲದ[ಷ್ಟು] ಘೋರವಾದ ಗಾಳಿಮಳೆಯಿಂದ ಇಂಗ್ಲೆಂಡಿನ ನಾರ್ಫ[ೋ]ಲ್ಕ್, ಡೆರ್ಬಿಶಯರ್ ಲಂಕಶಯರ್ ಮೊದಲಾದ ಕಡೆಗ[ಳ]ಲ್ಲಿ ಅನೇಕ ರಸ್ತೆಗಳು ನಾಶವಾಗಿರುವುದಲ್ಲದೆ, ಗ್ಯಾಸ್‌ಲೈ[ಟು] ನಿಂತು ಹೋದುದರಿಂದ ದೀಪ ಉರಿಸಲಿಕ್ಕಾಗಲಿಲ್ಲ ... ಕ ನದಿಗಳಲ್ಲಿ ವಿಪರೀತ ನೆರೆ ಬಂದು 400 ಮನೆಗಳೂ ನಾ[ಶ]ವಾದವು

ಜಮಿನ್‌ದಾರರ ಸಂಘದ ಪ್ರತಿನಿಧಿಗಳು ವೈಸ್‌ರಾಯರಿಗೆ ಒಪ್ಪಿಸಿದ ವಂದನಾ ಪತ್ರದ ತರ್ಜುಮ.

ಬಹುಮಾನಹೊಂದಿದ ರೂಫಸ್ ಡೇನಿಯಲ್ ಇಸ[ಾ]ಕ್, ಅರ್ಲ್ ಆಫ್ ರೀಡಿಂಗ್ ಪಿ ಸಿ. ಜಿ ಸಿ ಬಿ, ಜಿ.ಯಮ್ ಎಸ್ ಐ, ಜಿ ಯಮ್ ಐ ಇ, ಜಿ ಸಿ ವಿ ಒ, ವೈಸ್‌ರಾ[ಯ್] ಮತ್ತು ಗವರ್ನರ್ ಜನರಲ್‌ರಿಗೆ —

ತಮ್ಮ ಸನ್ನಿಧಿಯಲ್ಲಿ—

ಜಮಿನ್‌ದಾರರಸಂಘದ ಪ್ರತಿನಿಧಿಗಳಾದ ನಾವು ನ... ನೆಲೆಗೆ ತಮ್ಮ ಸವಾರಿಯು ಚಿತ್ತೈಸಿದ ಈ ಸಂದರ್ಭ...

ನಮ್ಮ ಮನಃಪೂರ್ತಿ ಸ್ವಾಗತವನ್ನು ನಿಮಗೆ ಕೊಡಲು ತಮ್ಮ ಅನುಮತಿ ಕೇಳುತ್ತೇವೆ.

ಚಕ್ರವರ್ತಿ ಸಾರ್ವಭೌಮರಿಗೆ ನಮ್ಮ ರಾಜಭಕ್ತಿ ಸಂಪೂರ್ಣವಾಗಿದೆಯೆಂಬುದನ್ನು ತಮಗೆ ಭರವಸೆ ಕೊಡುತ್ತೇವೆ ಚಕ್ರವರ್ತಿಯವರಿಗೂ ಅವರ ಸಿಂಹಾಸನಕ್ಕೂ ಇರುವ ರಾಜಭಕ್ತಿಯ ವರದಿಯನ್ನು ದಯವಿಟ್ಟು ತಾವು ಕಳು[illegible]ತ ಕೇಳಿಕೊಳ್ಳುತ್ತೇವೆ

ಲೆಫ್ಟಿನೆಂಟ್ ಗವರ್‌ನರ್ ಕೌನ್ಸಿಲಿನ ಮಾರ್[illegible]ಉ ಕೌನ್ಸಿಲನ್ನು ನಮಗೆ ಮಂಜೂರ್ ಮಾಡಿದ್ದಕ್ಕೆ ನಮ್ಮ ಧನ್ಯವಾದಗಳನ್ನು ಹೇಳುತ್ತೇವೆ ರಾಜಾಡಳಿತದಲ್ಲಿ ಜವಾಬ್ದಾರಿಯಿಲ್ಲದ ಸರಕಾರಿ ಪದ್ಧತಿಗಿಂತ ಮುಂದರಿಸಿದ ಹಕ್ಕುಗಳಿರುವ ಸರಕಾರಿ ಪದ್ಧತಿಯನ್ನು ಪಡೆಯುವದೇ ನಮ್ಮ ಧ್ಯೇಯವಾಗಿದೆಯೆಂಬದನ್ನು ತಮಗೆ ತಿಳಿಸುವದು ನಮ್ಮ ಕರ್ತವ್ಯವಾಗಿದೆಯೆಂತ ನಂಬುತ್ತೇವೆ ಈಗ ದಯವಿಟ್ಟು ಮಂಜೂರ್ ಮಾಡಿದ ಕೌನ್ಸಿಲನ್ನು ಸಾಧ್ಯವಿರುವಮಟ್ಟಿಗೆ ಉಪಯೋಗಿಸುತ್ತೇವೆ ಆದರೆ ಹೆಚ್ಚಿನ ಸುಧಾರಣೆಗಳು ಶೀಘ್ರದಲ್ಲೇ ದೊರೆತೀತೆಂತ ನಂಬುತ್ತೇವೆ.

ನಮ್ಮ ದೇಶದಿಂದ ಇಂಡಿಯಾ ಸರಕಾರಕ್ಕೆ ಕೊಡಬೇಕಾದ ವಂತಿಗೆಯನ್ನು ನಿರ್ಣಯಿಸುವದರಲ್ಲಿ ದಯತೋರಿಸಿದ್ದಕ್ಕಾಗಿ ಪುನಃ ಧನ್ಯವಾದಗಳನ್ನು ಹೇಳುತ್ತೇವೆ. ನಮ್ಮ ವಿಶೇಷ ಸ್ಥಿತಿಯನ್ನು ಗಣನೆಗೆ ತಂದುಕೊಂಡು ಆದಾಯ ವೆಚ್ಚದ ವಿಷಯದಲ್ಲಿ ಇನ್ನೂ ರಿಯಾಯ್ತಿಗಳನ್ನು ತೋರಿಸಿಯಾರೆಂಬ ನಮ್ಮ ನಿರೀಕ್ಷಣೆ ಇದೆ

ನಮ್ಮ ದೇಶದ ಪ್ರತಿನಿಧಿಗಳಿಗೆ ಇಂಡಿಯಾ ಸರಕಾರದ ನ್ಯಾಯವಿಧಾಯಕ ಸಭೆಗಳಲ್ಲಿ ಎಡೆಯಿಲ್ಲವೆಂತ ತಮ್ಮ ಗೋಚರಕ್ಕೆ ತರುತ್ತೇವೆ. ಇಂಡಿಯಾ ಸರಕಾರದ ಎರಡು ನ್ಯಾಯವಿಧಾಯಕ ಸಭೆಗಳಲ್ಲೂ ನಮ್ಮ ಪ್ರತಿನಿಧಿಗಳಿಗೆ ಸ್ಥಳ ಕೊಡಬೇಕೆಂತ ಕೇಳುತ್ತೇವೆ

ಸ್ಥಳೀಯ ಸ್ವರಾಜ್ಯ ವಿದ್ಯೆ ನೀರಾವರಿ ಕಾಮಗಾರಿ ವೈದ್ಯ ಮುಂತಾದ ರಾಜ್ಯಾಡಳಿತದ ತಪಶೀಲುಗಳಲ್ಲಿ ಸವಾಲುಗಳಿವೆ ಆದರೆ ಅವನ್ನೆಲ್ಲಾ ನಮ್ಮ ಕೌನ್ಸಿಲ್ ಮೂಲಕ ಸಂಪಾದಿಸಿಕೊಳ್ಳಬಹುದೆಂತ ಆಶಿಸುತ್ತೇವೆ ಆದ್ದರಿಂದ ಇಲ್ಲಿ ಅವುಗಳನ್ನು ಹೇಳಿಕೊಳ್ಳುವದಿಲ್ಲ

ಮುಗಿಸುವದರ ಮುಂಚೆ ಭೂಮಾಲೀಕರ ಮನಸ್ಸನ್ನು ಕಳವಳಗೊಳಿಸಿರುವ ವಿಷಯವಾದ ಜಮ್ಮ ಹಿಡುವಳಿಯ ಸೆಟಲ್‌ಮೆಂಟಿನ ವಿಷಯವನ್ನು ಹೇಳಿಕೊಳ್ಳಲಿಕ್ಕೆ ಅನುಮತಿ ಕೇಳದೆ ಇರಲು ಸಾಧ್ಯವಿಲ್ಲ ರಾಜರಿಂದ ನಿರ್ಣಯವಾದ ಕಂದಾಯದ ದರವು ಶಾಶ್ವತವೆಂತ ನಾವು ಯಾವಾಗಲೂ ನಂಬಿದ್ದೆವು ಕಳೆದ ಸೆಟಲ್‌ಮೆಂಟಿನಲ್ಲಿ ಈ ಪರಂಪರಾಗತವಾದ ಕಾಯಂ ದರವನ್ನು ವ್ಯತ್ಯಾಸಮಾಡಿ ಸನ್ನದ್‌ಗಳ ಮತ್ತು ದೊಡ್ಡ ಅಧಿಕಾರಿಗಳ ಅಭಿಪ್ರಾಯಗಳಮೇಲಿನ ಆಧಾರದಿಂದ ಎಷ್ಟು ಆಕ್ಷೇಪಿಸಿದರೂ ಕಂದಾಯವನ್ನು ಹೆಚ್ಚಿಸಿಬಿಟ್ಟರು ಈ ವಿಶೇಷ ನೋವನ್ನುಂಟುಮಾಡಿರುವ ವಿಷಯವನ್ನು ತಾವು ಚಿತ್ತಕ್ಕೆ ತೆಗೆದುಕೊಂಡು ಪರಿಹರಿಸಿಕೊಡಬೇಕೆಂತ ಕೇಳಿಕೊಳ್ಳುತ್ತೇವೆ

ಈಚೆಗೆ ಬಿದ್ದ ಅತಿವೃಷ್ಟಿಯಿಂದ ನಮ್ಮ ದೇಶವು ಬಹು ಕಷ್ಟನಷ್ಟಗಳಿಗೆ ಒಳಗಾಗಿದೆಯೆಂಬುದನ್ನು ತಮಗೆ ತಿಳಿಸುತ್ತೇವೆ. ಕಷ್ಟಕ್ಕೆ ಗುರಿಯಾದ ರೈತರಿಗೆ ಸರಕಾರಿ ಸಹಾಯ ದೊರೆಯಬೇಕೆಂತ ನಂಬುತ್ತೇವೆ

ತಮಗೂ ತಮ್ಮ ಪತ್ನಿಯವರಿಗೂ ದಕ್ಷಿಣ ಹಿಂದುಸ್ಥಾನ ಸಂಚಾರದಲ್ಲಿ ಕ್ಷೇಮವಿರಲೆಂದೂ ಬಹುಕಾಲ ಶ್ರೇಯೋಭಿವೃದ್ಧಿ ಮತ್ತು ಸಂಪತ್ತು ಇರಲೆಂತ ಹಾರೈಸುತ್ತೇವೆ

ತಮ್ಮ ವಿಧೇಯ ಸೇವಕರು

1 ಕೆ ಕುಟ್ಟಯ್ಯ,
2 ಪಿ ಟಿ ಕುಶಾಲಪ್ಪ,
3 ಉಸ್ಮಾನ್ ಖಾನ್ ಸಾಹೇಬ್
4 ಬಿ ಯಸ್ ಪೂವಯ್ಯ,
5 ಸಿ ಯಮ್ ವೆಂಕಪ್ಪಯ್ಯ

ವೈಸ್‌ರಾಯರ ಉತ್ತರದ ತರ್ಜುಮೆ.

[illegible]ೀಯರೇ

ನಿಮ್ಮನ್ನು ನೋಡಲಿಕ್ಕೆ ನನಗೆ ಅನುಕೂಲ ಸಿಕ್ಕಿದ್ದಕ್ಕೆ [illegible]ಷವಾಗಿದೆ ನಿಮ್ಮ ವಂದನಾಪತ್ರಕ್ಕೂ ಮತ್ತು [illegible] ನನ್ನ ಪತ್ನಿಗೂ ಕೊಟ್ಟ ಸ್ವಾಗತಕ್ಕೂ ನಾನು ನಿಮ[illegible]ವಾದವನ್ನಿಯುತ್ತೇನೆ

[illegible]ಡಗಿಗೆ ಬಂದು ನಿಮ್ಮ ಹೊಸ ನ್ಯಾಯವಿಧಾಯಕ[illegible]ನ್ನು ತೆರೆಯುವ ಸಮಾರಂಭದಲ್ಲಿ ಭಾಗಿಯಾಗಲು [illegible] ದೊರೆತೀತೆಂತ ನನಗೆ ಆಸೆ ಇತ್ತು ಆದರೆ ದಕ್ಷಿಣ [illegible]ಸ್ಥಾನದಲ್ಲಿ ನನಗೆ ತುಂಬಾ ಕೆಲಸವಿರುವದರಿಂದಲೂ ನನಗೆ ಸಮಯಸಂಕೋಚವಾದ್ದರಿಂದಲೂ ನನ್ನ ಇ[illegible]ರೋಧವಾಗಿ ಈ ಉದ್ದೇಶವನ್ನು ವಿಡಬೇಕಾಯಿತು [illegible]ದರೂ ಕೊಡಗೂ ಮತ್ತು ಕೊಡಗಿನ ಜನರೂ ಸಕ[illegible]ಶೇಷ ಅಭಿಮಾನಕ್ಕೆ ಪಾತ್ರರಾಗಿದ್ದಾರೆಂತಲೂ ಮ[illegible]ವರಿಗೂ ನನ್ನ ಸರಕಾರಕ್ಕೂ ಇರುವ ಸಂಬಂಧವು [illegible]ಶೇಷ ಸ್ವಭಾವದ್ದೆಂಬದನ್ನು ನಾನು ಜ್ಞಾಪಕದಲ್ಲಿ[illegible]ಂಬದನ್ನೂ ನೀವು ಚನ್ನಾಗಿ ತಿಳಿದುಕೊಳ್ಳಬಹುದಾ[illegible]ಡಗು ಚಿಕ್ಕದೇಶವಾಗಿದೆ ಆದರೆ ಅದರ ಚರಿತ್ರೆಯು [illegible]ಾಗಿದೆ ಆ ದೇಶದ ಜನರ ಕೋರಿಕೆಮೇರೆ ಆ ದೇಶ[illegible]ಕರು ಸ್ವಾಧೀನಪಡಿಸಿಕೊಳ್ಳುವದಕ್ಕೆ 50 ವರ್ಷಕ್ಕೆ ಮುಂಚೆಯೇ ಆ ದೇಶದ ಜನರು ಬ್ರಿಟಿಷ್ ಸರಕಾರದ ಮಿತ್ರರಾಗಿದ್ದರು. ಹೈದರ್ ಆಲಿ ಮತ್ತು ಟಿಪ್ಪುಸುಲ್ತಾನರಮೇಲೆ ನಡೆದ ಯುದ್ಧಗಳಲ್ಲಿ ಅವರು ಅಮೂಲ್ಯ ಸಹಾಯ ಮಾಡಿದರು 1836 ರಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಕಾಟಕಾಯಿಯನ್ನು ದಮಾಯಿಸಲಿಕ್ಕೆ ಅವರ ಸಹಾಯವನ್ನು ಧಾರಾಳವಾಗಿ ಕೊಟ್ಟರು ಸಿಪಾಯಿ ದಂಗೆಯ ಸಮಯದಲ್ಲಿ ಬ್ರಿಟಿಷ್ ಸರಕಾರಕ್ಕೆ ಸಹಾಯಕೊಡಲು ಒಮ್ಮತದಿಂದ ತಯಾರಾದರು ಈ ಸೊಗಸಾದ ಪರಂಪರಾಗತಗುಣವು ಅನುಸಾರವಾಗಿ ಮೊನ್ನೆ ನಡೆದ ಮಹಾಯುದ್ಧದಲ್ಲಿ ನಿದರ್ಶನವಾಯಿತು ಈಗ ಯುದ್ಧತೀರಿದನಂತರವೂ ಒಂದು ಟೆರಿಟೋರಿಯಲ್ ಸೈನ್ಯವನ್ನು ಏರ್ಪಡಿಸಿದ್ದರಿಂದಲೂ ಅದಕ್ಕೆ ಸೇರಲು ತೋರಿಸಿದ ಕುತೂಹಲತೆಯಿಂದಲೂ ಅವರ ರಾಜಭಕ್ತಿಯ ಮತ್ತು ಸೇವೆಯ ಧ್ಯೇಯಗಳನ್ನು ನಡಿಸಿಕೊಳ್ಳುತ್ತಲೂ ಉಳಿಸಿಕೊಳ್ಳುತ್ತಲೂ ಇದ್ದಾರೆ ಈ ಐತಿಹಾಸಿಕ ಕಾರ್ಯಗಳಿಂದ ಸಾಧಾರಣ ಬ್ರಿಟಿಷ್ ಜಿಲ್ಲೆಗಿಂತ ವಿಸ್ತೀರ್ಣದಲ್ಲಿಯೂ ಜನಸಂಖ್ಯೆಯಲ್ಲಿಯೂ ಕಡಿಮೆಯಾದರೂ ಪ್ರತ್ಯೇಕ ಪ್ರಾಂತವೆಂಬ ಹೆಮ್ಮೆಯನ್ನ ನ್ಯಾಯವಾಗಿಯೇ ಇಟ್ಟುಕೊಳ್ಳಬಹುದು ನನ್ನ ಸರಕಾರವು ಯಾವಾಗಲೂ ಒಪ್ಪಿಕೊಂಡಂತೆ ಅದರ ಜನರು ಜಾತಿಯಲ್ಲಿಯೂ ಭಾಷೆಯಲ್ಲಿಯೂ ಸಮಾಜರಚನೆಯಲ್ಲಿಯೂ ಬೇರೆ ಜನರಿಗಿಂತ ಪ್ರತ್ಯೇಕಿಸಲ್ಪಟ್ಟವರಾಗಿದ್ದಾರೆ ಈ ಕಾರಣದಿಂದಲೇ ರಾಜ್ಯಾಡಳಿತದ ಬಗ್ಗೆ ಪ್ರತ್ಯೇಕವಾಗಿ ಇಡಲ್ಪಟ್ಟಿದ್ದಾರೆ ಈ ವಿಷಯಗಳನ್ನೆಲ್ಲಾ ಯೋಚಿಸಿಯೇ ವಿಸ್ತೀರ್ಣದಲ್ಲಿಯೂ ಜನಸಂಖ್ಯೆಯಲ್ಲಿಯೂ ಬಹಳ ಚಿಕ್ಕದಾದರೂ ಇಂಡಿಯಾ ಸರಕಾರವು ಕೊಡಗಿನಲ್ಲಿ ಪ್ರತ್ಯೇಕ ನ್ಯಾಯವಿಧಾಯಕ ಸಭೆಯನ್ನು ಸ್ಥಾಪಿಸಲು ನಿಶ್ಚೈಸಿದ್ದಾಗಿದೆ

ಹೊಸ ನ್ಯಾಯವಿಧಾಯಕ ಸಭೆಯು ಅದರ ಸ್ಥಾಪನೆಯನ್ನು ಸಾರ್ಥಕಗೊಳಿಸೀತೆಂತಲೂ ಮತ್ತು ಕೊಡಗಿನ ಜನರ ದೇಶಸೇವೆಗೂ ರಾಜಕೀಯ ಹಕ್ಕುಗಳ ಬೆಳವಣಿಗೆಗೂ ಅದರ ಮೂಲಕ ಅನುಕೂಲ ದೊರೆತೀತೆಂತ ನಾನು ಮನಃಪೂರ್ತಿ ನಂಬಿದ್ದೇನೆ. ಅದರ ಕೆಲಸ ಕಾರ್ಯಗಳನ್ನು ನನ್ನ ಸರಕಾರವು ಸಹಾನುಭೂತಿಯಿಂದ ನೋಡುತ್ತಿರುತ್ತದೆಂಬದನ್ನು ನೀವು ನಂಬಬಹುದು ಕಾಲಕ್ರಮೇಣ ಆಡಳಿತದ ಕಾರ್ಯಗಳಲ್ಲಿ ಹೆಚ್ಚಿನಭಾಗ ತೆಗೆದುಕೊಳ್ಳುವ ಸ್ಥಿತಿ ಬರಬಹುದೆಂತ ನಾನು ನಂಬುತ್ತೇನೆ

ಇಂಡಿಯಾ ಸರಕಾರದ ನ್ಯಾಯವಿಧಾಯಕ ಸಭೆಯಲ್ಲಿ ನಿಮ್ಮ ಪ್ರತಿನಿಧಿಗೆ ಎಡೆ ದೊರಕಬೇಕೆಂತ ಕೇಳಿದ್ದೀರಿ ಚಿಕ್ಕ ಪ್ರಾಂತ್ಯಗಳಾದ ಡಿಲ್ಲಿ ಮುಂತಾದ ಕೆಲವಕ್ಕೆ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಚುನಾಯಿತ ಪ್ರತಿನಿಧಿಗಳಿರುವದು ನಿಜವೇ ಆದರೆ ಇವಕ್ಕೆ ಪ್ರಾಂತೀಯ ಸಭೆಗಳಿಲ್ಲ ನಿಮಗೆ ಪ್ರಾಂತೀಯ ಸಭೆ ಇರುವದರಿಂದ ಮೊದಲನೇದು ಇಲ್ಲ ನೀವು ಆಲೋಚಿಸಿ ನೋಡಿದರೆ ಚುನಾಯಿಸುವ ಹಕ್ಕು ಇರುವ ಜನರ ಸಂಕುಚಿತ ಸ್ಥಿತಿಯನ್ನು ಗಣನೆಗೆ ತಂದರೆ ಈಗ ನಿಮಗೆ ದಯಪಾಲಿಸಿರುವ ಪ್ರಾಂತೀಯ ಸಭೆಗಿಂತ ಪ್ರಜಾಪ್ರತಿನಿಧಿಗಳ ಸಂಸ್ಥೆಗಳಲ್ಲಿ ಹೆಚ್ಚಿನ ಅನುಕೂಲತೆಗಳು ತತ್ಕಾಲ ನಿರೀಕ್ಷಿಸಲಿಕ್ಕಾಗುವದಿಲ್ಲವೆಂತ ನಿಮಗೇನೇ ಸ್ಪಷ್ಟವಾದೀತೆಂತ ನಾನು ಯೋಚಿಸುತ್ತೇನೆ. ನನ್ನ ಸರಕಾರದವರು ನಿಮ್ಮ ವಿದ್ಯಮಾನಗಳಿಗೆ ಯಾವಾಗಲೂ ವಿಶೇಷ ಗಮನಕೊಟ್ಟಿದ್ದಾರೆ. ನ್ಯಾಯವಾಗಿ ಲೆಕ್ಕ ನೋಡಿದರೆ ನಿಮ್ಮ ಸರಕಾರದ ಉತ್ಪತ್ತಿಯಿಂದ ಮಧ್ಯವರ್ತಿ ಸರಕಾರಕ್ಕೆ ಕ್ರಮವಾದ ವಂತಿಗೆ ಕೊಡಬೇಕಾಗಿದ್ದರೂ ನಿಮ್ಮ ಉತ್ಪತ್ತಿ ಮತ್ತು ಖರ್ಚು ಕಡಿಮೆಯಾಗಿರುವ ಕಾರಣದಿಂದ ಅದನ್ನು ಮಾಫಿ ಬಿಡಲಾಗಿದೆ ಕೊಡಗಿನ ಕೆಲಸ ನೋಡುವದಕ್ಕಾಗಿ ಮೈಸೂರು ರೆಸಿಡೆಂಟರ ಮತ್ತು ಅವರ ಸಿಬ್ಬಂದಿಯ ಖರ್ಚಿನ ಒಂದು ಭಾಗವನ್ನು ಮಾತ್ರ ಕೊಡಬೇಕಾಗಿದೆಯೇ ಹೊರತು ನ್ಯಾಯವಾದ ವಂತಿಗೆಯೇನೂ ನೀವು ಕೊಡುವುದಿಲ್ಲ ನಿಮ್ಮ ದೇಶದ ಆದಾಯವೆಚ್ಚದ ಸ್ಥಿತಿಯ ಸಂಬಂಧವಾಗಿ ವಿಸ್ತಾರವೂ ಮತಲಬ್ಬುಗಳನ್ನು ಕಳುಹಿಸಬೇಕಾಗಿ ಬಂದಲ್ಲಿ ಇಂಡಿಯಾ ಸರಕಾರದವರು ಅವನ್ನು ಚನ್ನಾಗಿ ಪರಿಶೀಲಿಸಿ ನೋಡುತ್ತಾರೆಂಬದನ್ನು ನೀವು ನಂಬಬಹುದು

ನೀವು ನಮೂದಿಸಿರುವ ವಿಶೇಷರೀತಿಯ ಭೂಮಿ ಹಿಡುವಳಿಯ ವಿಷಯದಲ್ಲಿ ಈ ಹಿಡುವಳಿಯ ಮುಖ್ಯ ಅಂಶವಾದ ಅರ್ಧ ಕಂದಾಯದ ಹಕ್ಕನ್ನು ವ್ಯತ್ಯಸ್ತಮಾಡಿಲ್ಲವೆಂತ ತಿಳಿಯುತ್ತೇನೆ ಅನೇಕಸಾರಿ ಇಂಡಿಯಾ ಸರಕಾರದವರಿಂದ ಈ ವಿಷಯ ಚೆನ್ನಾಗಿ ಪರೀಕ್ಷಿಸಲ್ಪಟ್ಟಿದೆ ಬೇರೆ ರೈತರಿಗಿಂತ ಸುಲಭತರದ ಕಂದಾಯವನ್ನು ಸನದ್‌ಗಳು ಖಾಯಮವಾಡಿವೆಯೇ ಹೊರತು ಆ ದರವು ಖಾಯಮ ಎಂಬದಾಗಿ ವಾದಿಸಲಿಕ್ಕೆ ಸನ್ನದ್‌ಗಳಲ್ಲಿ ಆಧಾರವಿಲ್ಲವೆಂತ ಸ್ಪಷ್ಟವಾಗಿದೆ ಈಗಲೂ ಈ ಭೂಮಿಗಳಿಗೆ ಕಡಿಮೆ ದರದ ಕಂದಾಯವೇ ಇರುವದರಿಂದ ಈ ದರವನ್ನು ಆಗಿಂದಾಗ್ಯೆ ಬೇರೆ ಭೂಮಿ ಕಂದಾಯದ ದರದಾತೆಯೇ ವ್ಯತ್ಯಸ್ತಪಡಿಸಬಾರದೆಂಬ ವಾದಕ್ಕೆ ಹೊಸ ಕಾರಣಗಳನ್ನಾಗಲೀ ಪ್ರಮಾಣಗಳನ್ನಾಗಲೀ ಕೊಟ್ಟಿರುವದಿಲ್ಲ ಅತಿವೃಷ್ಟಿಯಿಂದ ನಮ್ಮ ದೇಶದ ಕೆಲವು ಪ್ರಾಂತ್ಯಗಳಲ್ಲಿ ನಷ್ಟವಾಗಿದೆಯೆಂತ ತಿಳಿದು ವ್ಯಸನಪಡುತ್ತೇನೆ ಕಷ್ಟನಿವಾರಣೆಗೆ ಸಂದರ್ಭದಲ್ಲಿ ಸಾಧ್ಯವಿದ್ದಷ್ಟು ಏರ್ಪಾಡುಗಳನ್ನು ಮಾಡಲ್ಪಟ್ಟಿತೆಂದು ನಾನು ನಂಬುತ್ತೇನೆ ಇದಕ್ಕಾಗಿಯೇ ಟಕಾವಿ ಸಾಲ ಕೊಡುವ ಬಗ್ಗೆ ನಮ್ಮ ಸರಕಾರದಿಂದ ಹೆಚ್ಚಿನ ಹಣ ಮಂಜೂರ್ ಮಾಡಲ್ಪಟ್ಟಿದೆ

ಮಹನೀಯರೇ ನಿಮ್ಮ ವಂದನಾಪತ್ರಕ್ಕೆ ಪುನಃ ನಾನು ಧನ್ಯವಾದಗಳನ್ನು ಹೇಳಿ ನಿಮ್ಮ ದೇಶಕ್ಕೆ ಮುಂದೆ ಶ್ರೇಯೋಭಿವೃದ್ಧಿಯಾಗಲೆಂತ ಹಾರೈಸುತ್ತೇನೆ

ಚಿತ್ರವಿಚಿತ್ರಾವಳಿ.

ನವನಾಗರಿಕತೆಯ ಸುಖ ಸಂತೋಷಗಳಲ್ಲಿ ಕೇಳಾಡುತ್ತಿರುವದೆಂದರೆ ಅಮೇರಿಕನರು ಬಹು ಮಟ್ಟಿಗೆ ಜಪಾನೀಯರೂ ನಮಗೆ ಗೊತ್ತು ಅಮೇರಿಕೆಯ ಭವ್ಯ ಅಂಗಡಿ ಕಟ್ಟಡಗಳು ಜಪಾನಿನಲ್ಲಿಯೂ ಜಪಾನೀಯರ ಕಟ್ಟಡಗಳು ಅಮೇರಿಕದಲ್ಲಿಯೂ ಇವೆ ಸದ್ಯ ಅಮೇರಿಕದ ಮುಖ್ಯ ನಗರವಾದ ನ್ಯೂಯಾರ್ಕ್ ಪಟ್ಟಣದಲ್ಲಿ ಜಪಾನೀಯರ ಮಿತ್ಸುಯಿ ಕಂಪೆನಿ (Mitsvi Co New York) ಯವರು ತಮ್ಮ ತಮ್ಮ ವ್ಯಾಪಾರಗಳಿಗೆ ಮಹಡಿನ ಉನ್ನತ ಭವ್ಯವಾದ ಹದಿನೈದು ಅಂತಸ್ತಿನ ಒಂದು ಕಟ್ಟಡವನ್ನು ಕಟ್ಟಿದ್ದರು ಈ ಕಂಪೆನಿಯ ಅಧಿಕಾರವನ್ನ ಯೋಕಿನ್‌ಸಾಕೆ ಇನೊಯೆ (Yokin Sake Inoye) ಎಂಬ ಜಪಾನೀಯ ಶ್ರೀಮಂತನು ನಡೆಸುತ್ತಿದ್ದನು

ಜಪಾನ ದೇಶದ ಮುಖ್ಯ ನಗರವಾದ ಟೋಕಿಯೋ ಬಳಿ ಭೂಕಂಪದಿಂದ ನಡೆದ ಅನಾಹುತಗಳು ಎಲ್ಲರಿಗೂ ತಿಳಿದೇ ಇವೆ ಈ ವರ್ತಮಾನ ತಿಳಿದ ಕೂಡಲೆ ಅಮೇರಿಕದಲ್ಲಿದ್ದ ನಮ್ಮ ಪರಿಚಿತ ಯೋಕಿನ್‌ಸಾಕೆಯು ತನ್ನ ಪತ್ನಿ ಪುತ್ರರ ವಿಷಯ ತಿಳಿಯಲು ತಂತಿ ಬಿಟ್ಟನು ಹದಿನೈದು ದಿವಸಗಳ ವರೆಗೆ ಉತ್ತರವೇ ಬರಲಿಲ್ಲ ಮತ್ತೊಂದು ದಿನ ಒಂದು ತಂತಿ ಬಂದೇ ಬಿಟ್ಟಿತು ಅದರಲ್ಲಿ ಸರ್ವನಾಶವಾಗಿದೆ ಎಂದಷ್ಟು ವಾಕ್ಯ ಬರೆದಿತ್ತು ತನ್ನ ಪತ್ನಿ ಪುತ್ರರನ್ನು ಕಳಕೊಂಡನೆಂಬ ದುಃಖದಿಂದ ಆ ಹದಿನೈದನೆಯ ಅಂತಸ್ತಿನಿಂದ ಕೆಳಕ್ಕೆ ದುಮಿಕಿದನು ಆ ಪೆಟ್ಟಿನಿಂದ ಯೋಕಿನ್‌ಸಾಕೆಯು ಮತ್ತೆ ಚೇತರಿಸಿಕೊಳ್ಳಲೇ ಇಲ್ಲ

ಮರುದಿವಸ ಬೆಳಗ್ಗೆ ಮತ್ತೊಂದು ತಂತಿಯಮೇಲೆ ಡಿಲೇಯ್ಡ್ (Delayed) ಎಂದು ಬರೆದು ಬಂತು ಒಡೆದು ನೋಡುವಾಗ್ಯೆ ಪತ್ನಿ ಪುತ್ರರು ಸುಖದಲ್ಲಿದ್ದಾರೆ ಪತ್ನಿಯ ತನ್ನ ಪ್ರೇಮವನ್ನು ಈ ಮೂಲಕ ಸೂಚಿಸುವಳು ಎಂದಿತ್ತು

ಹಾ ! ಮಾನವ ಪ್ರಪಂಚದ ಬಾಳೇ !

ವಿಲಿಯಂ ಎಂಬೊಬ್ಬನು ಮದುವೆಯು ಸವಿಪಾಸದ ಹಕ್ಕಿಯಲ್ಲಿ ನಡೆಯಲಿಕ್ಕಿತ್ತು ಬೆಳಗ್ಗೆ ಹೊರಡುವ ರೈಲುಬಂಡಿಯಿಂದ ಅಲ್ಲಿಗೆ ಹೋಗಲು ಸಿದ್ಧವಾದ ವಿಲಿಯಂ ಸಕಾಲದಲ್ಲಿ ಏಳಲು ಅನುಕೂಲವಾಗಲಿಲ್ಲ ಆ ಒಡನೆ ರೈಲ್ವೆ ಸ್ಟೇಶನ್‌ಗೆ ಹೋಗಿ ಒಂದು ತಂತಿಯನ್ನು ಕೊಟ್ಟನು, ವಿಧಿವಿಚಿತ್ರ ತಡೆಯಲ್ಪಟ್ಟನು ನಾನು ಬರುವತನಕ ಮದುವೆಯಾಗಬೇಡ ' ಇದು ಏನು ? B N K

ಕೊಡಗಿಗೆ ಋಣಿಯಾಗಿ

(ಕರ್ನಾಟಕ ಜನಜೀವನ ಪತ್ರಿಕೆಯ ಸಂಪಾದಕರಾದ ಮ ರಾ| ಡಿ ವಿ ಗುಂಡಪ್ಪನವರಿಂದ)

ಭಾರತ ದೇಶಸೇವಕ ಸಂಘದ ಅಧ್ಯಕ್ಷರೂ ಸುಪ್ರಸಿದ್ಧರೂ ಆದ ರೈಟ ಆನರಬಲ್ ವಿ ಎಸ್ ಶ್ರೀನಿವಾಸಶಾಸ್ತ್ರಿಗಳವರೂ, ಆ ಸಂಘದ ಸಾಮಾಜಿಕರಲ್ಲೊಬ್ಬರಾದ ಮ ವಿ ವೆಂಕಟಸುಬ್ಬಯ್ಯನವರೂ ಅವರಿಬ್ಬರ ಪರಮ ಕೃಪೆಗೆ ಪಾತ್ರನಾದ ನಾನೂ ಈ ಕೊಡಗು ದೇಶಕ್ಕೆ ಬಂದು ಇಲ್ಲಿಯ ನೋಟಗಳನ್ನು ನೋಡಿ, ಅನುಭವಿಸಿದ ಸಂತೋಷವನ್ನು ಬಂದೆರಡು ಮಾತುಗಳಿಂದಾದರೂ ಸೂಚಿಸಿ ' ಕೊಡಗು " ಪತ್ರಿಕೆಗೆ ಬರೆದುಕೊಡಬೇಕೆಂದು ನಮ್ಮ ಮಿತ್ರರೊಬ್ಬರು ಅಪೇಕ್ಷಿಸಿದ್ದಾರೆ. ಅವರ ಅಪ್ಪಣೆಯಂತೆ ಮಾಡುವುದು ನಮ್ಮ ಕೃತಜ್ಞತೆಗೆ ಗುರುತಾಗುವುದೆಂದೆಣಿಸಿ ಬಂದೆರಡು ಪಂಕ್ತಿಗಳನ್ನು ಬರೆಯ ಹೊರಟಿದ್ದೇವೆ

ನನ್ನ ಜನ್ಮ ಪ್ರಾಂತವಾದ ಮೈಸೂರು ರಾಜ್ಯದ ಸೌಭಾಗ್ಯಕ್ಕೆ ಅನೇಕ ವಿಧಗಳಲ್ಲಿ ಮೂಲಕಾರಣವಾಗಿರುವ ಕಾವೇರಿಗೆ ಮೂಲಸ್ಥಾನವಾಗಿಯೂ ಭಾರತಖಂಡದಲ್ಲಿ ಪ್ರಕೃತಿ ರಾಮಣೀಯತೆಗೆ ಪ್ರಸಿದ್ಧಿ ಹೊಂದಿರುವ ಪ್ರದೇಶಗಳಲ್ಲೊಂದಾಗಿಯೂ ಇರುವ ಕೊಡಗು ನಾಡನ್ನು ನೋಡಬೇಕೆಂಬ ಆಸೆಯು ನನಗೆ ಬಹುಕಾಲದಿಂದ ಇತ್ತು ಆ ಆಸೆಯು ಮ| ಶ್ರೀನಿವಾಸಶಾಸ್ತ್ರಿಗಳವರ ಪ್ರೀತಿ ವಿಶೇಷದಿಂದ ಈಗ ನನಗೆ ಈಡೇರಿದ್ದುದಕ್ಕಾಗಿ ನಾನು ಅತ್ಯಂತ ಕೃತಜ್ಞನಾಗಿದ್ದೇನೆ ಈ ನಾಡಿನಲ್ಲಿ ನಾನು ನೋಡಿದ ಅದ್ಭುತವಾದ ನೋಟಗಳನ್ನು ಎಂದಿಗೂ ಮರೆಯಲಾರೆನು ಜಗತ್ಕಾರಣಳಾದ ಪ್ರಕೃತಿಯ ಮಹಿಮೆಯು ಎಷ್ಟೊಂದು ದೊಡ್ಡದು ಆಕೆಯ ಕ್ರಿಯೆಗಳು ಎಷ್ಟು ವಿಚಿತ್ರವಾದುವು ಎಂಬುದನ್ನು ನೆನಪಿಗೆ ತಂದು ಕೊಡಬಲ್ಲ ಮಹಾಸ್ಥಳಗಳಲ್ಲಿ ತಲಕಾವೇರಿಯ ಪ್ರದೇಶವು ಅತಿಮುಖ್ಯವಾದ ಒಂದು ಎಂಬುದಕ್ಕೆ ಸಂದೇಹವಿರದು ಮಡಕೇರಿಯ ಸುತ್ತಮುತ್ತಲಿನ ಬೆಟ್ಟಕಣಿವೆ ಕಾಡುಗಳೇ ಮೈಸೂರಿನಿಂದ ಬರುವವರಿಗೆ ಆಶ್ಚರ್ಯವನ್ನುಂಟುಮಾಡಿ ಆನಂದಗೊಳಿಸತಕ್ಕವುಗಳಾಗಿವೆ ತಲಕಾವೇರಿ ಬೆಟ್ಟದ ನೆತ್ತಿಗೇರಿ ಮಾ[illegible]ಳನ್ನು ವಿಚಾರಿಸಿದರು ಬ್ರಹ್ಮಗಿರಿಯ ಮೇಲಿನ ನೋಟ

ವು ಪ್ರಕೃತೀ ದೇವಿಯು ವೈಭವವು ಮಾನವನ ವೈಭವವನ್ನು ಹೀಯಾಳಿಸುತ್ತಿದ್ದುದ್ದೋ ಎಂಬ ಕಲ್ಪನೆಯು ಸ್ಫುಟವಾಗುವಂತಹ ದೃಶ್ಯಗಳಿವೆ. ಎತ್ತ ನೋಡಿದರೂ ಪ್ರಕೃತಿಯು ಮಹಾಶಿಲ್ಪಿಯೇ. ಭೂಮಿಯೇ ಸಮುದ್ರವನ್ನು ಕರೆಸಿ ದೊಡ್ಡ ದೊಡ್ಡ ಅಲೆಗಳಂತೆ ಎದ್ದಿದೆಯೋ ಎನ್ನಿಸುವಂತೆ ಹಸುರು ಕಾಡುಗಳಿಂದ ಅಲಂಕೃತಗಳಾದ ಬೆಟ್ಟಗಳು ಸಾಲುಸಾಲಾಗಿ ಹಬ್ಬಿವೆ. ಅಲ್ಲಿ ನಿಂತವನಿಗೆ ಮಾನುಷ ಪ್ರಪಂಚವು ಎಳ್ಳಷ್ಟು ಕಣ್ಣಿಗೆ ಕಾಣದೆ, ಸನಿಹಿಗೂ ಬಾರದೆ, ಸೃಷ್ಟಿಕರ್ತನ ಕೈಯು ದುಂದುಗಾರಿಕೆಯೊಂದೇ ಎಂಟುಕಡೆಯೂ ಪ್ರತ್ಯಕ್ಷವಾಗಿರುವುದು. [illegible] ಮಣ್ಣನೇ ಆಟವಾಡುವಂತೆ ಬ್ರಹ್ಮನು ಇಲ್ಲಿ ತನ್ನ ಸಾಮಗ್ರಿಯನ್ನು ಮನಸ್ಸಿಗೆ ಬಂದ ಆಟವಾಡಿರುವನು. ಅದು ಮಾನುಗಾರನನ್ನು ಮೂಕನನ್ನಾಗಿ ಮಾಡಿಸುವಂತಹ ಅದ್ಭುತ ಆಟವನ್ನು ಒಡ್ಡಿರುವುದು ಹೇಗೆ?

ಓಪಿಯಮ್ ಮತ್ತು ಧೂಮಪಾನದ ವಿಷಯವೂ, ಔಷಧಿ ಮತ್ತು ಓಪಿಯಮ್ ತಯಾರಿಸುವುದರ ವಿಷಯವೂ ಚರ್ಚಿಸಲಿಕ್ಕಾಗಿ ಲೀಗ್ ಆಫ್ ನೇಶನ್ಸಿನ ಕೌನ್ಸಿಲಿನವರು ಬರುವ ನವಂಬರು ತಿಂಗಳಲ್ಲಿ ಜಿನಿವಾದಲ್ಲಿ ಎರಡು ಕಾನ್ಫರೆನ್ಸನ್ನು ಸೇರಿಸುವರಾಗಿ ತಿಳಿಯಬರುತ್ತದೆ

ಇಂಗ್ಲೆಂಡಿನಲ್ಲಿ ದನಗಳಿಗೆ ಕಾಲು ಮತ್ತು ಬಾಯಿ ಜ್ವರ ಕಾಯಿಲೆಯು ಜೋರಾಗುತ್ತಾ ಬರುತ್ತಿರುವದರಿಂದ ಸರ್ಕಾರದವರು ಸುಮಾರು 70 000 ಪ್ರಾಣಿಗಳನ್ನು ಈವರೆಗೆ ಕೊಂದಿರುವರು ಇದಕ್ಕೆ ರೈತರು ಬಹು ವಿರೋಧಿಸುತ್ತಿರುವರು ಒಂದೂವರೆ ಮಿಲಿಯ ಪೌನುಗಳವರೆಗೆ ಪರಿಹಾರವನ್ನು ರೈತರಿಗೆ ಕೊಡುವಷ್ಟರಮಟ್ಟಿಗೆ ದನಗಳನ್ನು ಕೊಲ್ಲಲು ಸರ್ಕಾರದವರು ತಯಾರಾಗಿರುವರೆಂದು ಹೇಳಿರುವರು.

ಟಿಪ್ಪಣಿಗಳು—ಬುದ್ಧಿಸಂಸ್ಕಾರ.

ಜನಪದವು ಅಭಿವೃದ್ಧಿಯಾಗಬೇಕಾದರೆ ಶಾಲೆಗಳೇ ಮುಖ್ಯಸಾಧನ ವಿದ್ಯೆಯ ದೃಷ್ಟಿಯು ಮಾನವನ ಸಂಸ್ಕೃತಿಯ ಕಡೆಗಿರಬೇಕು ವಿದ್ಯೆಯೆಂದರೆ ಬರೆ ವಿಷಯಸಂಗ್ರಹವಲ್ಲ ಅದರೆ ವಿಷಯಾನುಭವ (accumilation) ಮನುಷ್ಯನ ಸರ್ವ ಚೈತನ್ಯಗಳು ವಿಶಂತಿಯಾಗಿ ಸಂಸ್ಕಾರವನ್ನು ಹೊಂದುವಂತೆ ಮಾಡುವುದೇ ವಿದ್ಯೆಯ ಮುಖ್ಯ ಕಾರ್ಯ. ವಿದ್ಯೆಯ ಆ ದೇಶೋದ್ದೇಶಗಳನ್ನು ಕುರಿತು ಮೆ॥ ಕಿಟ್ಸಿಂಗ್ ಸಾಹೇಬರು ಹೀಗೆ ಬರೆಯುತ್ತಾರೆ

ಸಮಾಜದ ಪ್ರತಿಯೊಂದು ವ್ಯಕ್ತಿಗಿರಬೇಕಾದ ಅನುಕೂಲಗಳು —

1 ದೇಹಧಾರ್ಢ್ಯತೆ ಮತ್ತು ಆರೋಗ್ಯ

2 ಜೀವನ ಸಂಪಾದನೆಗೆ ಬೇಕಾದ ಶಕ್ತಿ

3 ವಿರಾಮಕಾಲವನ್ನು ಹಿತಕರವಾಗಿ ಉಪಯೋಗಿಸುವ ಸಾಮರ್ಥ್ಯ.

4 ನಿಸರ್ಗ ದೇವತೆಯ ಮೇಲಿನ ಪ್ರೇಮ

5 ಪ್ರಾಣಿದಯೆ

6 ಕಲಾಪ್ರೇಮ.

7 ನಿಷ್ಕಲಂಕತೆ, ಸಹಾನುಭೂತಿ, ಶಮದಮಾದಿ ಗುಣಗಳು.

8 ತನ್ನ ಕೆಲಸವನ್ನು ತ್ಯಜಿಸುವುದಾದ ಸಂದರ್ಭದಲ್ಲಿ ತ್ಯಜಿಸಿ ಸಮಾಜ ಸೇವೆಮಾಡುವುದು welfare.

ಹಳೇ ಕಡತಗಳ ಬೆಲೆ !!!

ಒಂದು "ಯೇಹುದ್ಯರ ಗ್ರಂಥಭಂಡಾರ" ದಲ್ಲಿ 43000 ಹಳೆ ಪೆಟಿಗಳು ಮತ್ತು 4200 ಹಸ್ತಲಿಪಿಗಳು ಇವೆ ಯಂತೆ ಕ್ರಿಸ್ತಶಕ 1400 ರಲ್ಲಿ ಒಬ್ಬವೈದ್ಯನು ಬರೆದಿಟ್ಟಿದ್ದ ಟಿಪ್ಪಣಿಗಳ ಒಂದು ಕಡತದಲ್ಲಿ ಅನೇಕ ರೋಗಚಿಕಿತ್ಸೆಗಳಿವೆ.

ಅರಬ್ಬಿ ಹೆಂಗಸರು ತಮ್ಮ ಹಲ್ಲನ್ನು ಒಂದು ತರದ ಕಳ್ಳಿಯಿಂದ ಉಜ್ಜುತಿದ್ದುದರಿಂದ ಅವರಿಗೆ ಯಾವ ತರದ ಹಲ್ಲಿನ ರೋಗವೂ ಇರಲಿಲ್ಲವಂತೆ ಈಗಿನ ಕಾಲದಲ್ಲಾದರೋ ಶೇಕಡ 75 ಮಂದಿಗೆ ಹಲ್ಲು ಬೇನೆ ತಪ್ಪಿದ್ದಲ್ಲ.

ಅಗಸೆಮರದ ಬೇರನ್ನು ನೀರಿನಲ್ಲಿ ಕುದಿಸಿ, ಮೇಲೆಕ್ಕೇರುವ ಆವಿಗೆ ಕಿವಿಯೊಡ್ಡಿದರೆ ಯಾವತರದ ಕಿವಿಸೋವಿದ್ದರೂ ಮಾಯವಾಗುವುದಂತೆ

ಮೊಲದ ನೆಣವನ್ನು ಮತ್ತು ಅದರ ಎಲುಬಿನೊಳಗಿರುವ ತುಪ್ಪವನ್ನು ತಲೆಗೆ ಹಚ್ಚಿದರೆ ಕೂದಲೆಲ್ಲ ನಾಶವಾಗುವುದಂತೆ.

ಪ್ರಯಾಣಿಕನು ತನ್ನ ದೇಹದಲ್ಲಿ ಹಂಸಿಯ ಇಪ್ಪತ್ತು ಲಗ್ಗನ್ನು ಇಟ್ಟುಕೊಂಡಿದ್ದರೆ ಅವನಿಗೆ ಕಳ್ಳಕಾಕರ ಬಾಧೆ ತಪ್ಪುವುದಂತೆ.

ವಿದ್ಯಾಬಾರದವನು ಕರಿನಾಯಿಯ ಹಲ್ಲನ್ನು ತನ್ನ ತಲೆದಿಂಬಿನಡಿಯಲ್ಲಿ ಇಟ್ಟುಕೊಂಡು ಮಲಗಿದರೆ ಸುಖವಾಗಿ ವಿದ್ಯೆ ಬರುವುದಂತೆ

ಈ ವಿಚಾರಗಳೆಲ್ಲ ನಿಜವಾಗದಿದ್ದರು ಕೆಲವೊಂದು ಕಾರಣಕ್ಕೆ ಯೋಗ್ಯವವೆ. ಅಪ್ರಯೋಜನವಾದವುಗಳು ತಾಳಪತ್ರಗಳನ್ನೂ, ಹಸ್ತಗ್ರಂಥಗಳನ್ನೂ, ನಾಶವಾಗುವುದುಚಿತವಲ್ಲವೆಂದು ನಮಗೆ ತಿಳಿಯುತಲ್ಲವೇ ?

ಕಾಗದದ ನಾಣ್ಯದ ಪರಿಣಾಮ !

ಜರ್ಮನಿಯ ಸದ್ಯದ ಸ್ಥಿತಿಯು ಅತಿ ದುಃಖಕರವಾಗಿ ಹಣ್ಣುಹಂಪಲಿನ ಬೆಲೆ ಕಾಸಲ್ಲ ದುಡ್ಡಲ್ಲ ಆಣೆಯೂ ಅಲ್ಲ, ರೂಪಾಯಿಯು ಅಲ್ಲ ಒಂದು ಆಪ್ಪಿಕಾಟಿಗೆ ಒಂ… ಪೌನು ! ಒಂದು ಸೇರು ಹಾಲಿನ ಬೆಲೆ ನಾಲ್ಕಾಣೆಯೇ … ನಮ್ಮೂರಿನ ರಿವಾಜು. ಜರ್ಮನಿಯಲ್ಲಿ ಮೂರು … ಗಳ ಬೆಲೆ ಈಗಿನ ಸೇರು ಹಾಲಿಗಿದೆ. ಇಷ್ಟೆ ಅಲ್ಲ ಒಂದು ರೊಟ್ಟಿಯ ಬೆಲೆ ಒಂದು ಮೋಟಾರು ಗಾಡಿಯ ಬೆಲೆಗೆ ಸಮಾನ, ಒಂದು ಕುಪ್ಪಿ ಬೀರಿಗೆ ಒಂದು ಮೋಟಾರಿನಲ್ಲಿ ಎಷ್ಟು ಕುಪ್ಪಿಗಳು ಹಿಡಿಯುವುವೋ ಅಷ್ಟು ಕುಪ್ಪಿಗಳ ಬೆಲೆ, … ಸೇರು ಆಲುಗೆಡ್ಡೆಯು ಹಿಂದಿನ ಬೆಲೆಗೆ ಈಗಿನ ಹಕ್ಕಿ… ಗೆಡ್ಡೆಗಳ ಕ್ರಯವಂತೆ. ಒಂದು ಕುದುರೆಯ ಲಾಳ… ಬೇಕಾದರೆ ಕುದುರೆಯ ಬೆಲೆ … ಕೊಡಬೇಕು ಜರ್ಮನಿಯಲ್ಲಿ ದುಡ್ಡಿಗೆ ಬೆಲೆಯೆ ಇಲ್ಲದಂತಾಗಿದೆ ಅಲ್ಲಿ …ಯೊಂದಕ್ಕೆ 17·563·819·142 ಮಾರ್ಕುಗಳು ಬೆಲೆಯು ಕಾಗದದ ದುಡ್ಡು ತಯಾರಾಗುತ್ತಿದೆಯಂತೆ ಹಾಗಾ… ಕಾಗದದ ದುಡ್ಡಿನ ಬೆಲೆ ಎಷ್ಟು ಎಷ್ಟೆಂದು ತಿಳಿ… ಸದ್ಯದ ಜರ್ಮನಿಯು ಹೊಟ್ಟೆಹೊರೆಯುವುದಕ್ಕಾಗಿ ಬಹಳ …ಚಾಡುತ್ತಲಿದೆ

ಮಾಡಬಾರದ್ದು ಮಾಡಿದರೆ ಆಗಬಾರದ್ದು ಆಗುತ್ತೆ.

ಈ ಗಾದೆಯು ಪಲವು ವೃದ್ಧರ ಬಾಯಿಂದ ಆಗಾಗ …ಉವುದನ್ನು ನಾವು ನೋಡಿದ್ದೇವೆ ಇದರ ನಿಜಾಂಶ ಇದಕ್ಕೂ ಏನಿರಬಹುದು ನೋಡೋಣ.

ಈಜಿಪ್ತ ದೇಶವು ದೊಡ್ಡ ದೊಡ್ಡ ಸಮಾಧಿಗಳಿಗೆ ಹೆಸರು ಹೋಗಿದೆ ಕೆಲವು ಕಾಲಕ್ಕೆ ಹಿಂದೆ ತುತಂಕಮಾನನೆಂಬ ರಾಜನ ಸಮಾಧಿಯನ್ನು ಲಾರ್ಡ್ ಕಾರ್ನರ್ವಾನ್ ಎಂಬ … ಅಗೆದು ಶೋಧನೆಮಾಡುವರು ಸಮಾಧಿಯೊಳಗೆ ಕಾರ್ಯ ನಡೆಸುತಿದ್ದಾಗ, ಅವರು ಅಲ್ಲಿಯೇ ಸತ್ತರು ಹೀಗಾದು ಯಾರ ಶಾಪದಿಂದ ? ಹಿಂದಿನ ಪಿ.ಸರ್ (ಇಜಿಪ್ತ) …ದ್ರಿಗಳ ಶಾಪದಿಂದಲೇ ಎಂದು ಅಲ್ಲಿಯ ಜನರು ಅನ್ನುತ್ತಾರೆ

ಹಿಂದೂ ದೇಶಕ್ಕೆ ಬಹಳ ಕಾಲಕ್ಕೆ ಹಿಂದಕ್ಕೆ ಒಬ್ಬ …ವಿಕನು ಬಂದಿದ್ದು, ಹಿಂತಿರುಗುವಾಗ ತನ್ನ ಹಡಗದಲ್ಲಿ …ದ್ಧನ ಒಂದು ವಿಗ್ರಹವನ್ನು ಹೊತ್ತುಕೊಂಡು ಹೋದನು …ದರೆ ದಾರಿಯಲ್ಲಿ ಅಗೋಚರವಾಗಿ ಆತನ ಹಡಗಿಗೆ ಬೆಂಕಿ …ತ್ತು ಹಡಗಿನಲ್ಲಿದ್ದವರು ಆ ಬುದ್ಧನ ವಿಗ್ರಹವನ್ನು ಸಮುದ್ರಕ್ಕೆ ಹಾಕಿದರು ಆ ವಿಗ್ರಹವು ತೇಲಿಕೊಂಡು …ದಡಕ್ಕೆ ಬಂತು ಈ ಸುದ್ದಿಯು ಹಡಗವು ಸಂಪೂರ್ಣವಾಗಿ ಸುಡುವುದಕ್ಕೆ ಮುನ್ನವೇ ಊರಿಗೆ ಸೇರಿದ್ದ ಆ …ವಿಕನ ಕಿವಿಗೆ ಬಿತ್ತು, ಆತನು ಅದನ್ನು ತನ್ನ ಮನೆಗೆ …ಗಿಸಿದನು ಆದರೆ ಅವನೇನು ಜೀವದಿಂದ ಉಳಿಯಲ್ಲ ಅವನ ಮರಣದನಂತರ ಆತನ ಮಗಳು ಆ ವಿಗ್ರಹವನ್ನು ತನ್ನ ಮನೆಯಲ್ಲಿಯೇ ಇರಿಸಿದ್ದಳು ಪುನಃ ಏನೇನೋ ವೈಪರೀತ್ಯಗಳು ನಡೆಯಲಾರಂಭಿಸಿದುವು. ಆಳುಗಳಿಗೆ ಹೆದರಿಕೆಯುಂಟಾಯಿತು ಒಬ್ಬನು ಆ ವಿಗ್ರಹವು …ಯುತ್ತದೆ ಎಂದನು. ಮತ್ತೊಬ್ಬನು ಅದರ ಹತ್ತಿರ ಹೋದರೆ ತನಗೆ ಭಯತೋರುತ್ತದೆಂದನು ಮಕ್ಕಳಿಗೆ ಭಯಂಕರವಾದ ಕನಸುಗಳು ಬೀಳಲಾರಂಭಿಸಿದುವು. ಕೊನೆಗೆ …ನರು, ನಂಟರಿಷ್ಟರು ಆ ಮನೆಗೆ ಬರುವುದಕ್ಕೆ ಬಹಳ ಭಯ…ಲ್ಲಿಡುತ್ತಿದ್ದರು ಅನಂತರ ಆಕೆಯು ಆ ವಿಗ್ರಹವನ್ನು ವಸ್ತುಸಂಗ್ರಹಾಲಯಕ್ಕೆ ಸಾಗಿಸಿದಳು

ಕೊಂಡುಹೋದನ ಅವಸ್ಥೆ ಏನೆಂಬುದು ನಿಮಗೆ ತಿಳಿದಿರುತ್ತದೆ.

ತೈಲಶಕಟದ ಹಾಲಾಹಲ

(Poison Gas From Motor Cars)

ಅಮೇರಿಕಾ ದೇಶದಲ್ಲಿ ಮೋಟಾರು ಗಾಡಿಗಳ ಸಂಖ್ಯೆ ಹೆಚ್ಚಿಷ್ಟಲ್ಲ. ಪ್ರತಿ ಹತ್ತು ಮಂದಿಗೆ ಆರು ಗಾಡಿಗಳಾದರೆ, ಆ ದೇಶದಲ್ಲಿ ಎಷ್ಟು ಗಾಡಿಗಳಾಗಬಹುದು ನೀವೇ ಊಹಿಸಿಕೊಳ್ಳಿರಿ.

ಪ್ರೊಫೆಸರ್ ಹ್ಯಾಂಡರ್ಸನ್‌ರವರು ಒಳ್ಳೆ ವಿದ್ಯಾಪ್ರವೃತ್ತಿಗಳು. ಈ ವಿಷಯವಾಗಿ ಶೋಧನೆ ನಡೆಸಿ, ಮನೆಯ ಹೊಗೆ, ಕಾರ್ಖಾನೆಯ ಹೊಗೆ ಇವುಗಳಿಗಿಂತಲೂ, ಮೋಟಾರಿನ ಹೊಗೆಯು ಅಪಾಯಕರವೆಂದು ಹೇಳುತ್ತಾರೆ ಮೋಟಾರು ಹೊಗೆಗೆ ಅಂಗಾರಾಮ್ಲ (carbon mon oxide) ವೆಂದು ಹೆಸರು. ಇದೇ ಹೊಗೆಗಾಳಿಯು ಮೋಟಾರು ಕಾರ್ಖಾನೆಗಳಲ್ಲಿಯೂ, ಗಣಿಗಳಲ್ಲಿಯೂ ಅನೇಕರ ಬಾಯಿಗೆ ಹೀರು ಬಿಟ್ಟಿದೆ ಈ ಗಾಳಿಯನ್ನು ಸೇದುವುದರಿಂದ ತಲೆನೋವು, ಬಲಹೀನತೆ, ವ್ಯಾಕುಲ, ಹಸಿಗೆ ತಲೆ ತಿರುವು ಇತ್ಯಾದಿ ಬೇನೆಗಳು ಉಂಟಾಗುತ್ತವೆ ಇದರಿಂದ ಕ್ಷಯರೋಗವು ಪ್ರಾಪ್ತವಾದದ್ದುಂಟು.

ಮೋಟಾರು ಕಾರ್ಖಾನೆಯಲ್ಲಿ (garage) ಕೆಲಸಮಾಡುವವರನ್ನು ಹೆಂಡರ್ಸನ್ನ ದೊರೆಗಳು ಅವರ ಆರೋಗ್ಯವಿಷಯದಲ್ಲಿ ವಿಚಾರಿಸಿದಾಗ ತಲೆನೋವು, ಮೈನೋವು ಇತ್ಯಾದಿ ಉಂಟೆಂದು ಹೇಳಿದರು ಈ ಗಾಳಿಯಿಂದ ಮುಂದಕ್ಕೆ ಬಹಳ ಕೆಡಕುಂಟೆಂದು ಅಭಿಪ್ರಾಯಪಡುತ್ತಾರೆ ಮಡಿಕೇರಿಯಲ್ಲಿ ಮೋಟಾರುಗಳು ಈಗೀಗ ಹೆಚ್ಚು. ಕಾನ್ಸಿಲ್ಲಿನ ಮೆಂಬರನೊಬ್ಬನಿಗಾಗಿ ಇಷ್ಟೊಂದು ಮೋಟಾರುಗಳು ನಮ್ಮೂರಲ್ಲಿ ಓಡಾಡುತ್ತವೆ ಅಂಗಾರಾಮ್ಲ ಇವರಿಗೆ ಬಾಧಿಸುವುದಿಲ್ಲವೇ ? ಸ್ವಲ್ಪವಷ್ಟಿಗೆ ಇದನ್ನು ಅವರು ಸೇವಿಸಿದರೂ, ರಾತ್ರಿವೇಳೆಯಲ್ಲಿ ಒಳ್ಳೆ ಗಾಳಿಯಿಂದ ಇದರ ಕೆಡಕು ಕಡಿಮೆಯಾಗುವುದು ಅನಾವಶ್ಯಕವಾದರೂ ಹೊತ್ತಾದರೆ ಕಾನ್ಸಿಲಿನಲ್ಲಿ ಹೊರದೀಕಬಹುದಷ್ಟೆ.

ಪತ್ರವ್ಯವಹಾರಗಳು.

ಬಾತ್ಮಿದಾರರು ಕಳುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ಕೊಡಗುದೇಶದ ಮುಂದಾಳುಗಳಲ್ಲಿ ವಿಜ್ಞಾಪನ.

ಮಹಾಶಯರೇ, ನಿಮ್ಮ ಸಹೋದರಭಾವದಿಂದ ಬಂದು ದೇಶದಲ್ಲಿ ಹುಟ್ಟಿ ಇಂಥಾ ನವನಾಗರೀಕ ಕಾಲದಲ್ಲಿ ಕಳೆದ ಹೋಬಳಿಯಲ್ಲಿ ಶೋಚನೀಯ ವ್ಯವಹಾರಗಳನ್ನು ನಿರ್ವಹಿಸಿಕೊಂಡು ಹೋಗಲು ನಮಗೆ ಚೈತನ್ಯವಿಲ್ಲದೆ ಈ ಹೋಬಳಿಯಲ್ಲಿ ನಾವುಗಳು ಅಳಿಯುತ್ತಿರುವದನ್ನು ಸಹ ದೇಶದ ಮುಂದಾಳು ಮಹಾಶಯರು ಗಣ್ಯರು ನೋಡಿಯೂ ಸುಮ್ಮನಿರಬಹುದು ಈ ರೀತಿ ಇರುವ ಈ ಹೋಬಳಿಯಲ್ಲಿ ಮುಂಗಾರು ಬೈರು ಮಾಡಿದಾಗ್ಯೂ ಆ ರೀತಿ ನಾನಾ ಅತಿವೃಷ್ಟಿಯಿಂದಲೂ ನೆರೆ ನೀರಿನಿಂದಲೂ, ಬೇಕಾದಷ್ಟು ನಷ್ಟಕ್ಕೆ ಒಳಗಾಗಿ ಭಂಗಪಡುತ್ತಿರುವ ನಮ್ಮುಗಳ ಹಿಂಗಾರು ಬೈರು ಎಂದರೆ, ಹುರಳಿ ಹುತ್ತರಿಗಾದರೂ ಗುರನೋಡುತ್ತಿದ್ದ ಹಿಂಗಾರು ಬೈರಿನ ಬೆಳೆ ಇತ್ತು ಆಗ್ಯೆ ಎರಡು ತಿಂಗಳಿಂದಲೂ ಮಳೆಯಿಲ್ಲದೆ ಇರುವದು ನೋಡಿದರೆ ಬರಗಾಲವು ಬರುವ ದೂರವಿಲ್ಲ ಬಾಬೇಕು, ಎತಕ್ಕೆ ಈ ರೀತಿಯಾದರೆ ಸಮಾಧಾನವಿಲ್ಲದೆ, ಈ ರೀತಿಯಾಗಿ ಬಹಳ ಹಿಂದೆ ಬಿದ್ದಿರುವ ನಮ್ಮ ಹೋಬಳಿಯ ಹೀನಸ್ಥಿತಿಗಳನ್ನು ಎಷ್ಟೋ ದಫೆ ನಮ್ಮ ದೇಶದ ಮುಂದಾಳು ಮಹಾಶಯರುಗಳ ಸಂಗಿಗೆ ಕಟ್ಟಿರುತ್ತೇವೆ ಇಂಥಾ ವಿಷಯಗಳೆಲ್ಲಾ ನಮ್ಮ ದೇಶದ ಮಹಾಶಯರು ಹಿಂದಕ್ಕೆ ತಳ್ಳಿಕೊಂಡೇ ಇರುತ್ತಾರೆ ನಮ್ಮ ದೇಶದ ಮಹಾಶಯರುಗಳಿಗೆ ದೊರೆತಿರುವ ನಾಗರಿಕತೆಯು ಸುಲಭಸಾಧ್ಯವನ್ನು ನೋಡಿದರೆ ಇಷ್ಟು ಹಿಂದೆ ಬಿದ್ದಿರುವ ನಮ್ಮನ್ನು ಎತ್ತುವನು ಬಹುಸುಲಭವೆಂದು ಹಾರೈಸುತ್ತಿರುವ ನಮ್ಮುಗಳ ಮೊರೆಯನ್ನು ದೇಶದ ಮಹಾಶಯರು ಮನಸ್ಸಿಗೆ ದಯೆ ತೋರದೆ ಹೋದದ್ದರಲ್ಲಿ ಸಹೋದರಭಾವವು ಏಕವೇ ತೋರದೆಂತಾದುದಲ್ಲ ಅದಕಾರಣ ಮಹಾಶಯರು ನಮ್ಮ ಹೋಬಳಿಗೆ ಮುಖ್ಯ ನಾಗರಿಕತೆಗೆ ಬೇಕಾಗಿರುವ ಮಾರ್ಗ ನಾಲಾ ವಿಷಯದ ನೀರಾವರಿಯನ್ನು ತಿದ್ದುಪಡಿ ಮಾಡಿ ನಮ್ಮ ಹೋಬಳಿಯನ್ನು ಸಹ ಸಹೋದರಭಾವವೆಂದು ಯೋಚಿಸುವರೆಂದು ಹಾರೈಸುವ

ಎಂಟರ್‌ಟೈನ್‌ಮೆಂಟಿನ ನೋಟಿಸು

ಎಂಟರ ಟೈನ್‌ಮೆಂಟ, ಎಟ್ ಹೋಮ್ ಟಿ ಪಾರ್ಟಿ ಎಂಬ ನಾನಾವಿಧವಾದ ಉಪಯುಕ್ತವಾದ ಕೆಲಸ ಪಲವು ಕಡೆಗಳಲ್ಲಿ ಈಗ ಬಂದಿರುವವುಗಳಿಂದ ಪ್ರೈಜನ್ನು ವೇಗವನ್ನು ಹಿಡಿದು ಮುಂದುವರಿಯುತ್ತಿದೆ ಸಣ್ಣ ಉದ್ಯೋಗಸ್ಥರುಗಳಿಗೆ ಬಂದು ಕಡೆ ಕಷ್ಟ, ಸದಾ ಹಾಳಿದಿಯೂ ಕಳೆಯದು ಪಾಕವಿದ್ದರೆ ಮೇಲಾಧಿಕಾರಿಯ ಕಣ್ಣಿನ ಮುಂದೆ ಗುರಿಯಾಗುವರು ಬಹಳ್ಯ ಹನಿಗಂತೂ ಚಾಂದಾ ಕೊಟ್ಟು ಸಾಕಾಗುವದು ಕೊಡದೆ ಹೋದರೆ ಅಧಿಕಾರಿಗಳ ತಲೆ ತೂಗುವುದರಿಂದಲೇ ಎದೆ ಬಿಟ್ಟು ಇಲ್ಲವಿದ್ದರೂ ಸಾಲವಮಾಡಿಯಾದರೂ ಕೊಡಬೇಕಾಗುವದು ನಾಲ್ಕಾಣೆ ಎಂಟಾಣೆ, ಎಟ್‌ಹೋಮ್, ಟೀಪಾರ್ಟಿ, ಅದೇನೂ ಅಲ್ಲ. ಒಂದು ರೂಪಾಯಿ, ಎರಡು ರೂಪಾಯಿ, ಮೂರು ರೂಪಾಯಿ. ಒಂದೊಂದಾವೃತ್ತಿ ಐವತ್ತು ರೂಪಾಯಿಗೆ ಕಡಿಮೆ ಇರಲೂ ಇದು ಪ್ರೀತಿಶಕ್ತಿ, ಬಡಿಶಕ್ತಿ, ರಟ್ಟು, ಹಾಸ್ಯಸಗಳ ಬಹುಮಾನದಿಂದಲೂ, ಬಾಂದಿ ವಿಸ್ತಿ ಮೊದಲಾದ ಪವಿತ್ರ ಪುಣ್ಯತೀರ್ಥ ನೀಡಿಸಿದುದಲೂ, ಆರೋಗ್ಯವನ್ನೀಯು ಅಂದರೂ, ಆಶೀರ್ವಾದಗಳು, ಇನ್ನೊಂದು ಕಡೆ ನಷ್ಟಗಳಿಗೆ ಅಜೀರ್ಣವಾಗಲಿ, ಚಂದಾಪಟ್ಟಿಯಾಗಲಿ ಹೋಗಲಿ ಚಿಕ್ಕ ಆಫೀಸರುಗಳು, ಸಿವಿಲಿಯನು ಆಫೀಸರುಗಳು; ಗ್ರಾಂಟು ಜನರೂ ಅದರಲ್ಲೂ ಉಳಿಕೆಯಾದೋರು, ಸರ್ವವಿದ್ದರೂ ಅಭ್ಯಸ್ಥವೆಂದೂ ಹಲವು ವಿಧದ ತಿಂಡ್ಯಾನ, ಚಾಪಾಪಟ್ಟಿಗಾಗಿ ಮಹಾಂತ ದೊತ್ತಮನುಷ್ಯ ಮೂರು ರೂಪಾಯಿ ಹಾಕುವದೇನೋ ಬಂದು ಹಲೆ ಹೊರೆಯುತಿರುವರು, ಎರಡಾಣೆ ನಾಲ್ಕಾಣೆ ಸಾಧಾರಣವಾಗಿ ಬರುವರು ಅವರ ಕಷ್ಟವು ನೀಗಿಯೋ ಯಾ ಕಷ್ಟದಿಂದ ಸತ್ತು ಉಳಿಕೆಯಾದವರಿಗೋ ಸಿಕ್ಕುವನು ಇವೆತಹ ಅನ್ಯಾಯದ ಕಾಲವೋ ನಾಹರಿಯೆ ಕಾಫಿತೋಟದ ಬ್ಯಾಗೇಜು ಮಂಗಳೂರಿನ ಆಳುಗಳು ಬೇಕು, ಆದರೆ ಅಂತಾ ಪ್ರತಿನಿಮಿತ್ತಕ್ಕೆ ದಾನಮಾಡುವ ಕೋಟಿಗಾದರೂ ಬಹು ವಿಧ ಅವರಲ್ಲಿ ಕೂಡಿಸಬಿನವರೂ ಯಾವುದಾದರೂ ಹಾಕುವದೇ ಕೊಡುಗೆದೆ

ಎಟ ಹೋಮ್ ಎಂಟರಟೈನ್‌ಮೆಂಟ ಹೊಂದಿಕೊಳ್ಳುವ ಬಾಗ್ಯಲಕ್ಷ್ಮಿಯು ಯಾತಕ್ಕಾಗಿ ಇಂಥಾ ಧರ್ಮಕಾರ್ಯಕ್ಕೆ ಕಷ್ಟ ಬಂದುಹೋಗುತಿಗಳ ಸಂಬಳವನ್ನು ವಿನಿಯೋಗಿಸಬಾರದು.

ಒಬ್ಬ ಕಷ್ಟಕಂಡವ.

ಅಯ್ಯಾ ಸಂಪಾದಕರೇ

ಆದಿ ಶಂಕರಾಚಾರ್ಯರ ಕಾಲದಿಂದಲೂ ಅದ್ವೈತಮತದವರು ನಾನೇ ನೀನು ನೀನೇ ನಾನು ಸರ್ವವೂ ಪರಬ್ರಹ್ಮದಲ್ಲಿ ಅಡಗಿದೆ ಯೆಂಬುವದೇ ತತ್ವವನ್ನು ಸ್ವಾಮಿವಿವೇಕಾನಂದ ಮೊದಲಾದವರು ಅನೇಕರು ಬೋಧಿಸಿದ್ದು ಯೆಲ್ಲರಿಗೂ ವೇದ್ಯವಿರುವುದಲ್ಲದೆ ಸರಿ ಅದ್ವೈತತತ್ವವೇ ನ್ಯಾಯವಾದದ್ದೆಂದು ಯೆಲ್ಲಮತದವರು ಒಪ್ಪಿಕೊಂಡಿರುತ್ತಾರೆ ಸದರಿ ತತ್ವದಮೇರೆ ನಾನೆ ದೇವರು ಯೆಂಬುದಾಗಿ ರಾಜಯೋಗಿಗಳು ಹೇಳುವದರಲ್ಲಿ ಯಾವ ತಪ್ಪುಕಾಣುವದಿಲ್ಲ

ಅನೇಕರು ತಮ್ಮ ಕಷ್ಟಗಳ ಅಂದ್ರೆ ಕಾಯಿಲೆ, ಜಾಡ್ಯ, ವ. ರೋಗಗಳ ಪರಿಹಾರಕ್ಕಾಗಿ ಅರುಹಿ ಭಕ್ತಿಪೂರ್ವಕ ಮಂತ್ರಾಕ್ಷತೆ ಪ್ರಸಾದವನ್ನು ಪಡಕೊಂಡು ಗುಣಹೊಂದಿರುತ್ತಾರೆ ಇಂತ ಮಹತ್ವದ ಗುಣವು ವೈದ್ಯರಿಂದಲೂ ಯಾವದೇವರಿಂದಲೂ ಅಸಾಧ್ಯ.

ತತ್ವಜ್ಞಾನವನ್ನು ಪಡೆಯಬೇಕೆನ್ನುಳ್ಳವರ್ಯಾರೂ ಶ್ರದ್ಧೆಯಿಟ್ಟು ವಿಚಾರಿಸಿದವರಲ್ಲ ಈಸಂಗತಿ ಅನೇಕ ದಿನಾ ಋಷಿಗಳ ಸಂಸರ್ಗದಲ್ಲಿ ನಾನು ತಿಳಿದಿರುತ್ತೇನೆ

ಯಂ ಯಸ್ ಲಕ್ಷ್ಮಣಯ್ಯ.

ದೇಶಭಾಂದವರೇ !

ಮಿಕೆಳಗೆ ಸೈನು ಮಾಡಿದ ನಾನು ಪಟ್ಟಿಮಾಡ ಮನೆಯಿಂದ ಹೊಣೆಗಾರನಾಗಿರುತ್ತೇನೆ ನನಗೆ ಕುಟುಂಬದವರು ಮೂವತ್ತು ರೂಪಾಯಿ ಜುಲುಮಾನೆ ವಿಧಿಸಿದರೆಂದು ಪತ್ರಿಕಾಕರ್ತರಿಗೆ "ಕೇಳಿದವ" ರು ಸುಳ್ಳು ವರ್ತಮಾನ ಕೊಟ್ಟದಕ್ಕೆ ನಾನು ಖತಿಸುತ್ತೇನೆ. ಸದ್ರಿ ಬಾತ್ಮಿದಾರರಿಗೆ ಹೇರೆಯಾದ ವರ್ತಮಾನಕರ್ತರಿಂದಲೊ ಯಾ, ನಮ್ಮ ಕುಟುಂಬದ, ಯಾ, ನನ್ನ ಮೇಲಣ ಮತ್ಸರದಿಂದಲೋ ಇಂಥ ಸುಳ್ಳುಬಾತ್ಮಿಯನ್ನು ಪ್ರಕಟಿಸಿದಾಗಿದೆ, ಸದ್ರಿ ಬಾತ್ಮಿ ಯೊಂಟಿ ಸಮಯದಲ್ಲಿ ನಾನು ಕಾಯಿಲೆಯನಾಗಿದ್ದದರಿಂದ ಕೂಡಲೇ ಜವಾಬು ಕೊಡಲು ಆಗಲಿಲ್ಲವೆಂಬದಕ್ಕೆ ವ್ಯಸನಪಡುತ್ತೇನೆ ನಾನು ನನ್ನ ಪೂರ್ವಪದ್ಧತಿಯಮೇರೆ ಸತ್ತವಳಿಗೆ ಮಾಡಬೇಕಾದ ಕರ್ಮಗಳನ್ನು ಪೂರೈಸಿ ಗತಿಹೊಂದಿಸಿದನ್ನ ಪಟ್ಟಿಮನೆಯವರು ಕಂಡು, ಯಾ, ತಿಳಿದು ನನಗೆ ಮರುವಿಕುರಿಮಾಡಿಕೊಟ್ಟದ್ದೆ ಸಾಕ್ಷಿಯಾಗಿದೆ ಪೌಳನ್ನು ಪಟ್ಟಿಮನೆಯಿಂದ, ವಿನಾಯವಾಗಿದ್ದರಿಂದ ನಾನು ಕಾವೇರಿಗೆ ಹೋಗಿಬರುವದು ತೀರ್ಥವಿಳಿಯಲು ಕಾರಣ ಇಲ್ಲವಾದ್ರೆ ಎಗ್ಗ ಗುರಿಮಾಡಿಕೊಳ್ಳುತ್ತಿರಲಿಲ್ಲವೆಂಬ ಸಂಗತಿಯನ್ನು ನಾನು ಬರಿಸಬೇಕಾದಿಲ್ಲ. ನನಗೆ ಕುರಿಮಾಡಿದ ಪೌಳನ್ನು ತಪ್ಪಿಸಿ ಬೇರೆಕಡೆಯಿಂದ ಹೆಣ್ಣನ್ನು ನನಗ ವಿವಾಹ ಮಾಡಬೇಕೆಂಬ ಅಭಿಲಾಷೆಯಿಂದಲೇ, ಹೆಣ್ಣಿನಮನೆ ಕೆಲವರು ಮತ್ತು ಕೆಲವುದ್ಯೋಗಸ್ಥರು ಸಹ ಕೂಡಿ ಸದ್ರಿ ಕುರಿಮಾಡಿದಮದುವೆಯನ್ನು ತಪ್ಪಿಸಬೇಕೆಂದು ದುರ್ಬೋಧನೆಯಿಂದ ಹೆಣ್ಣಿನ ಅಣ್ಣಂದಿರಿಂದ ಶಾಂತಿವರ್ತಮಾನ ಕಳುಹಿಸಿದಲ್ಲದೆ ನನ್ನಬಳಿಗೆ ಕೆಲವುದ್ಯೋಗಸ್ಥರ ಕಾಗದದಿಂದಲಿ ಅನೇಕ ತರವಾದ ಬೋಧನೆಗಳಾದರೂ, ಹಿಂಜರಿಯದೆ ಮದುವೆ ಮಾಡಿದ್ದಕ್ಕೆ ಸುಳ್ಳು ಬಾತ್ಮಿಯಿಂದಲಾದರೂ ಅವಮಾನ ಪಡಿಸಬೇಕೆಂಬ ಯಿರಾದೆಯಿಂದ ಯಿಂಥ ಬಾತ್ಮಿ ಹೊಡಸಿದೆ ವಿನಹ ನಾನು ಯಾವ ತಪ್ಪನ್ನು ಮಾಡಲಿಲ್ಲವೆಂಬ ಸಂಗತಿಯನ್ನು ತಮ್ಮೆಲ್ಲವರ ಅವಗಾಹನೆಗೆ ಈ ಮೂಲಕ ತಂದವನಾಗಿರುತ್ತೇನೆ. ಇಂಥ ಬಾತ್ಮಿಗಳಾದರೆ ದೇಶದವರ ಮನಸ್ಸನ್ನು ತಲ್ಲಣಗೊಳಿಸುವದಕ್ಕೆ "ಕೇಳಿದವ" ರು ಬರೆದದನ್ನು ಪೂರ್ವ ಸುಖ ಳಿಸುತ್ತೇನೆ ಅದರಿಂದ "ಕೇಳಿದವ" ರ ಹೆಸರು ವಿಳಾಸವನ್ನು ಪತ್ರಿಕಾಕರ್ತರು ದಯವಿಟ್ಟು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ತಾ॥ 6–12–23 B. C Aiyanna

„ ನೇಕನಲ್ ಬೇಬೀಷೋ ''

ಇಂಡಿಯ.

ಮಹಾನಿಯರೇ, ಇದೇ ಡಿಸೆಂಬರು ತಿಂಗಳ ೧೪ ನೇ ತಾರೀಕಿನ ಪತ್ರದಲ್ಲಿ ಪ್ರಸಿದ್ಧಪಡಿಸಿದ್ದ ಬಾತ್ಮಿಯಿಂದ ಜನರು ಈ ತರದ ಶಿಶುಪ ದರ್ಶನವು ಯಾವ ಉದ್ದೇಶದಿಂದ ಹೇಗೆ, ಏತಕ್ಕಾಗಿ ಎಂಬ ಸರಿಯಾದ ತಿಳುವಳಿಕೆ ಬಾರದೆ ಒಬ್ಬೊಬ್ಬರಾಗಿ ಪ್ರಶ್ನಿಸುತ್ತಿದ್ದಾರೆ, ಆದ್ದರಿಂದ ಈ ವಿಷಯದಲ್ಲಿ ಸಂಕ್ಷೇಪವಾಗಿ ವಿವರಿಸಬೇಕಾಗಿದೆ. ಇಂಡಿಯಾದೇಶದಲ್ಲಿ ನಮಗೆ ತಿಳಿದಂತೆ, ಒಂದು ವರುಷ ಪ್ರಾಯದ ಒಳಗೆ ಇರುವ ಶಿಶುಗಳು ಒಂದು ಲಕ್ಷಕ್ಕೆ ಮೇಲ್ಪಟ್ಟು ಸಾಯುತ್ತಾರಾಗಿಯೂ ಉಳಿದವರ ಪೈಕಿ ಅನೇಕರು ಬಲಹೀನರಾಗಿರುತ್ತಾರಾಗಿಯೂ ತಿಳಿದುಬರುತ್ತದೆ. ಇಂಡಿಯಾದೇಶದಲ್ಲಿ ಹುಟ್ಟುವ ಪ್ರತಿ ಐದು ಮಕ್ಕಳಲ್ಲಿ ಒಂದು ಮಗುವಿನಂತೆ ಸಾಯುತ್ತಿಯಾಗಿ ಕಾಣಬರುತ್ತದೆ. ಕೊಡಗಿನಲ್ಲಾದರೋ ತಿಳಿದ ಲೆಕ್ಕದ ಪ್ರಕಾರ ಕಳೆದ ಒಂದು ವರುಷಕ್ಕೆ ಒಂದುವರುಷ ಪ್ರಾಯದ ಒಳಗಾಗಿ ಇರುವ ಶಿಶುಗಳು ೧೧೩೪ ಸತ್ತಿರುವದಾಗಿಯೂ, ಒಂದುವರುಷ ಪ್ರಾಯದಿಂದ ಐದುವರುಷ ಪ್ರಾಯದ ಒಳಗೆ ಇರುವ ಮಕ್ಕಳು ೧೧೧೪ ಸತ್ತಿರುವದಾಗಿಯೂ ಕಂಡುಬರುತ್ತದೆ. ಕೊಡಗಿನಲ್ಲಿ ಜನಸಮೂಹದ ದಾಖಲೆಗಳು ಸರಿಯಾಗಿಲ್ಲದ್ದರಿಂದ ಈ ಸಂಖ್ಯೆಗಳಿಗಿಂತ ಇನ್ನೂ ಹೆಚ್ಚು ಮರಣವಿದ್ದರಬಹುದಾಗಿ ನಂಬಬೇಕಾಗಿರುತ್ತದೆ. ಈ ಶಿಶು ಮರಣಗಳ ದೆಸೆಯಿಂದಲೇ ಈ ಕೊಡಗು ದೇಶದಲ್ಲಿ ೧೯೧೧ ನೇ ಯಿಸವಿಯ ಖಾನೇಸುಮಾರಿಗೂ ಹತ್ತು ಸಾವಿರಕ್ಕಿಂತ ಹೆಚ್ಚಾಗಿ ಜನಸಂಖ್ಯೆ ಕಮ್ಮಿ ಇರಲು ಕಾರಣವೆಂದು ಹೇಳುವುದರಲ್ಲಿ ಏನೂ ಸಂಶಯವಿರುವುದಿಲ್ಲ. ಹಟ್ಟಿನ ಭಾಗದಲ್ಲಿ ಈ ಶಿಶು ಮರಣಗಳಿಗೆ ತಾಯಿಗಳ ಅಜ್ಞಾನತ್ವವೂ ಮತ್ತು ಅಜಾಗರೂಕತೆಯೂ ಕಾರಣವೆಂದೇ ಹೇಳಬೇಕಾಗಿದೆ. ಹೀಗಿರುವುದರಿಂದ ದೇಶದ ಎಲ್ಲಾ ಜನರ ತಿಳುವಳಿಕೆಗೆ ಶಿಶುಪಾಲನಾ ಕ್ರಮವನ್ನು ತಂದು ಶಿಶುಮರಣ [illegible] ಸಾಧ್ಯವಾದಷ್ಟಕ್ಕೆ ಕಮ್ಮಿ ಮಾಡುವ ಉದ್ದೇಶದಿಂದ ಈ ಪ್ರದರ್ಶನವು ಏರ್ಪಡಿಸಿದ್ದಾಗಿರುತ್ತೆ.

ಪ್ರದರ್ಶನದಲ್ಲಿ ಚಿತ್ರಗಳಿಂದಲೂ, ತಕ್ಕ ಉಪನ್ಯಾಸಗಳಿಂದಲೂ, ಮೋಜಿಕ್ ಲ್ಯಾಂಟ್ರನ್ ಪ್ರದರ್ಶನಗಳಿಂದಲೂ ಮತ್ತು ಇತರ [illegible] ಜನಗಳಿಗೆ ತಮಗಳ ಶಿಶುಪಾಲನಾ ಕ್ರಮಗಳನ್ನು ತಿಳುವಳಿಕೆ ಕೊಡುವುದಲ್ಲದೆ ಚೆನ್ನಾಗಿ ಪೋಷಣೆ ಪಡೆದ ಶಿಶುಗಳಿಗೆ ಬಹುಮಾನಗಳನ್ನು ಸಹ ಕೊಡಲಾಗುತ್ತೆ.

ಹಾಲಿಸಂವತ್ಸರದ ಈ ಪ್ರದರ್ಶನವು ಸಮಯ [illegible] ಕೊರತೆವಾದ್ದರಿಂದ ಮಡಿಕೇರಿಯಲ್ಲಿ ಮಾತ್ರ, [illegible] ಜನವರಿ ತಿಂಗಳ ೧ ನೇ ದಿನ ನಡೆಯಲ್ಪಡುತ್ತೆ. ದೇಶದ ಎಲ್ಲಾ ಮಹಾಶಯರು ಮತ್ತು ಮಹಿಳೆಯರು ತಮಗಳ ಸಮೀಪದಿಂದ ಈ ಪ್ರದರ್ಶನವು ಜನ ಮನಸ್ಸಿಗೆ ಆನಂದಗೊಳಿಸುವಂತೆಯೂ ತಿಳುವಳಿಕೆ ಭರಿತವಾಗಿಯೂ ಇರುವಂತೆ ಮಾಡಲು ಈ ಮೂಲಕ ಕೇಳಿಕೊಳ್ಳಲ್ಪಟ್ಟವರಾಗಿರುತ್ತೆ.

ಎ. ಬಿ. ಕಾರ್ಯಪ್ಪ

(ಗೌರವ ಕಾರ್ಯದರ್ಶಿ)

ಜಿಲ್ಲಾ ದೇಶಬಾಂಧವರೇ! ಮತ್ತು ಕುಲಬಾಂಧವರೇ!

ಕಳೆದ ಆಗಷ್ಟು ತಿಂಗಳ ಒಂದು ಪತ್ರಿಕೆಯಲ್ಲಿ ಹೊಗೆಸೊಪ್ಪಿನಿಂದ ಆಗುವ ಬೀಡಿ, ಸಿಗರೇಟ್ ಇತ್ಯಾದಿ ಪದಾರ್ಥ ಸೇವಿಸುವದನ್ನು ತ್ಯಜಿಸುವ ಕುರಿತು ಒಂದು ಬಾತ್ಮಿಯನ್ನು ನೋಡಿದೆನು. ದೇಶಬಾಂಧವರಿಗೂ ಕುಲಬಾಂಧವರಿಗೂ ಹಿತಕರವನ್ನುಂಟುಮಾಡುವಂಥಾ ಬಾತ್ಮಿಯನ್ನು ಒಂದೇ ಒಂದು ಬಾರಿನೋಡಿದ್ದರೆ ಬಹಳ ಮಟ್ಟಿಗೆ ಸಾಲದು, ಆದ್ದರಿಂದ ನಮ್ಮ ಪತ್ರಿಕಾಕರ್ತರು ಅಂಥಾ ಬಾತ್ಮಿಗಳನ್ನು ಪದೇ ಪದೇ ಪ್ರಕಟಿಸಿದರೆ ದೇಶಕ್ಕೆ ಮಹತ್ತಾದ ಉಪಕಾರ ಮಾಡಿದಂತಾಗುವದು.

ಹಾಗೆಯೇ, ನಾನು ಅನೇಕ ಜನರಲ್ಲಿ ಹೊಗೆಸೊಪ್ಪಿನಿಂದಾಗುವ ಪದಾರ್ಥಗಳನ್ನು ಸೇವಿಸಿದರೆ ಅದರಿಂದಾಗುವ ಪ್ರಯೋಜನವೇನೆಂಬುದಾಗಿ ಕೇಳಲು ಅದಕ್ಕವರು ಮೊದಲು ಚುರುಕು, ಬೇಜಾರಪರಿಹಾರ, ಶರೀರಸಾಗಿ ಮಲವಿಸರ್ಜನೆಯಾಗುವಿಕೆ, ನೆಗಡಿಯಾಗದಿರುವಿಕೆ, ಛಳಿಯಾಗದಿರುವಿಕೆ ಮತ್ತೂ ಅದೊಂದುತರದ ಆಡಂಭರ (goke) ಎಂಬುದಾಗಿ ಹೇಳುವವನ್ನು ಸ್ವತಃ ಕೇಳಿದ್ದೇನೆ, ಆದರೆ ಆತರದ ಅಭಿಪ್ರಾಯವು ಒರೀಬಾಯಿಮಾತಲ್ಲದೆ ಅದರಿಂದ ಶರೀರಕ್ಕೆ ಯಾವ ತರದ ಸೌಕರ್ಯವಿಲ್ಲವೆಂದು ಕಂಠೋಕ್ತವಾಗಿ ಹೇಳಬಹುದು. ಅದೂ ಅಲ್ಲದೆ ಬೀಡಿ, ಸಿಗರೆಟ್ ಇತ್ಯಾದಿ ಸೇದುವುದರಿಂದ ಎದೆ ನೋಯುತ್ತದೆ ನಂಜೇರುತ್ತದೆ ಕಣ್ಣು ಉರಿಯುತ್ತದೆ ಎಂಬಿಂತಹ ಮಾತುಗಳನ್ನು ಸಹ ಕೇಳಿದ್ದೇನೆ. ಹಾಗಿರುವಲ್ಲಿ, ಅದನ್ನು ಸೇವಿಸುವುದನ್ನು ತ್ಯಜಿಸಿ ಎಂದು ಹೇಳಿದರೆ ಓ ಹೋ, ಅದು ಆಗುವುದಿಲ್ಲ. ಒಂದುಗಳಿಗೆ ಇಲ್ಲದ ಪಕ್ಷದಲ್ಲಿ ಹುಚ್ಚು ಹಿಡಿದಂತಾಗುವುದು, ಒಂದು ಹೊತ್ತು ಊಟವನ್ನಾದರೂ ಬಿಡಬಹುದು. ಅದನ್ನು ಬಿಡಲಿಕ್ಕಾಗುವುದಿಲ್ಲ. ಅದನ್ನು ಬಿಟ್ಟದ್ದೇ ಆದರೆ ಹುಚ್ಚು ಹಿಡಿದಂತಾಗುವುದು ಎಂದು ಹೇಳುತ್ತಾರೆ. ಅಯ್ಯೋ ದೈವವೇ, ಅಂತೇ, "ಪೈಸಕೊಡುತ್ತೇನೆಂಟ್ಟು ಪಿರಾಂದ್ ಮಾಂಗ್ ನಾದ್" ಎಂಬ ನಾಣ್ಣುಡಿಯು ಹಾಗೆ ತಮ್ಮ ಮನಸ್ಸಿಗೆ ವಿರುದ್ಧವಿದ್ದರೆ, ನಮ್ಮ ಸುತ್ತಮುತ್ತಲಿರುವ ಬ್ರಾಹ್ಮಣರಾದಿಗಳ ಜನರೆಲ್ಲಾ ಅದನ್ನು ತ್ಯಜಿಸುತ್ತಾ ಬರುವಾಗ್ಯೆ ನಮ್ಮ ಈ ಕೊಡಗು ದೇಶದ ಜನಾಂಗಕ್ಕೆ ಮಾತ್ರ ಆಗುಂಥದೆಂತೆ. ಇದು ಯಾವ ಧರ್ಮ. ಎಂತೆಂಥ ಮಹಾತ್ಮರು ತಮ್ಮ ಮನಸ್ಸನ್ನು ಬಂಧಿಸಿ ಎಷ್ಟೋ ಅಗಾಧವಾದ ಕೆಲಸಗಳನ್ನು ಮಾಡಿರುವಾಗ ತಮ್ಮ ಮನಸ್ಸಿನಂತೆ ಅಭ್ಯಾಸಿಸಿದ ದುರಭ್ಯಾಸಗಳನ್ನು ತ್ಯಜಿಸಲಿಕ್ಕೆ ಆಗುವುದಿಲ್ಲವೆಂಬುದು ಶೋಚನೀಯವಾದ ಸಂಗತಿಯಲ್ಲವೇ. ಒಂದುವೇಳೆ ಬಹಳ ವರ್ಷಗಳ ಹಿಂದೆ ಅಭ್ಯಾಸಮಾಡಿದಂತಹ ಹಳಬರಿಗೆ ತ್ಯಜಿಸುವುದು ಅಸಾಧ್ಯವಾಗಿರಬಹುದು. ಆದರೆ ಈಗೀಗ ಸುರುಮಾಡಿದಂತ ಯುವಕರಿಗೆ ಧಾರಾಳವಾಗಿ ತ್ಯಜಿಸಬಹುದು. ಈತರಹದ ದುರಾಭ್ಯಾಸಗಳಲ್ಲಿ ಅವನು ಕೊಳೆಯು, ಇವನು ಉತ್ತಮನು ಎಂಬುದು ಕಮ್ಮಿಯಾಗಿದೆ. ಆದ್ದರಿಂದ ದೇಶಬಾಂಧವರೂ, ಕುಲಬಾಂಧವರೂ ಅಷ್ಟುಮಿತ ರಾಗಿರುವಂಥಾ "ಯುವಕರೇ" ನೀವಾದರೂ ಬಿಟ್ಟದ್ದೇ ಆದರೆ ಜಗದ್ರಕ್ಷಕನಾಗಿರುವಂಥಾ ಭಗವಂತನು ನಿಮಗೆ ಆಯುರಾರೋಗ್ಯ ಸಂಪತ್ತು ವೃದ್ಧಿಯನ್ನು ದಯಪಾಲಿಸಿ ಕಾಪಾಡುತ್ತಾನೆಂಬುದಕ್ಕೆ ಯಾವ ಅಭ್ಯಂತರವೂ ಇಲ್ಲ.

ಸಜ್ಜನಾಭಿಲಾಷಿ

ಮಾಗಪ್ಪನ ಮೋಗಪ್ಪನವರೆ!

ಕಳೆದ ಸಂಚಿಕೆಯಲ್ಲಿ (೨೩ ನೇದು) ನೀವು ಒರೆ [illegible] ಯಾವಾಗಿ ಸ್ವಲ್ಪ ಬರೆಯಲು ಅಪ್ಪಣೆ ಕೊಡಿರಿ.

[illegible] ಇಲ್ಲಾಚೆಯು ಕರಿಕಸ್ಸಲರ್ಗಳನ್ನೂ ವಿ[illegible]ದ ಊಟವಾಗಿ ಭೂಲೋಕದಲ್ಲೆಲ್ಲಾ ವ್ಯಾಪಿಸಿ[illegible] ಕರಿ ಗಾರ್ಡನ್ ಕ್ರಮವನ್ನೆ ಸಿಲಿಸಬೇಕೆ!" ಎಂದು [illegible] ದೊರೆಯ ಊಟಕ್ಕೆ ಮಾಂಸವು ಒಳ್ಳೆಪದಾರ್ಥ ನಾದರಲ್ಲಿ, ಬ್ರಾಹ್ಮಣನ ಊಟಕ್ಕೆ ಬೂದಿ [illegible]ಳವಲ್ಲವೇ? ಹಾಗೆ ಅವರವರ ಆವಶ್ಯಕತೆಯನ್ನು [illegible] ತಿಳಿದುಕೊಂಡು ಅದಕ ಸುಸೂಗವಾಗಿ ನಡಕೊಳ್ಳುವುದು ಮೇಲಲ್ಲವೆ? ಹೀಗಲ್ಲದೆ, ಹುಲಿ ತಿನ್ನುವವನು ಗಳನ್ನು ನಾವು ತಿಂದು ಬಿಟ್ಟರೆ ಅದು ನಮಗೆ ಸರಿಬಿದೀತೆ?

ನವನಾಗರೀಕತೆಯ ವಿದ್ಯಾಕ್ರಮದ ಸುಧಾರಣೆ [illegible] ರುಷ್ಯಾಯೇ ಕ್ರಮವಾಗಿ ಬರಬೇಕೆಂದು ನಿಮ್ಮ ಅಭಿಪ್ರಾಯ ಹೊಸ ಹೊಸದಾಗಿ ಲೋಕದಲ್ಲಿ [illegible] ಹಿಡಿಯಲ್ಪಡುವವುಗಳನ್ನೆಲ್ಲಾ ನಾವು ಅಲಂಗಿಸಮಾಡಿಕೊಳ್ಳದೆ ಸ್ಥಳ ಮತ್ತು ಜನರಿಗೆ ಒಪ್ಪುವಂಥಾದ್ದನ್ನು ಮಾತ್ರ ತೆಗೆದುಕೊಳ್ಳಬೇಕೆಂಬುದಕ್ಕೆ ನೀವು ಒಪ್ಪಿರಾಗಿ ನಂಬುತ್ತೇನೆ. ಹಾಗಿದ್ದರೆ ಈ, ನವನಾಗರೀಕತೆಯ ವಿದ್ಯಾಕ್ರಮದ " ಫಲಿತಾಂಶವೇನು? ಹೆಚ್ಚು ಕಮ್ಮಿ ಹದಿನೈದು ವರ್ಷಗಳವರೆಗೆ, ಈ „ ನವನಾಗರೀಕತೆಯ ವಿದ್ಯಾಕ್ರಮದ " ಶಾಲೆಗೆ ನಮ್ಮ ಮಕ್ಕಳು ಹೋಗಿ, ಅವರು ಈ " ಶ್ರೇಷ್ಠವಾದ ವಿದ್ಯೆಯನ್ನು ಕಲಿಸಲಿಕ್ಕಾಗಿ, ತಂದೆತಾಯಿಗಳು ನನ್ನ ಹತ್ತಿರ ಇರುವ ಹಣವನ್ನೆಲ್ಲಾ ಖರ್ಚುಮಾಡಿ, ಇನ್ನು ಮುಂದುವರಿಸಲು ಹಣವಿಲ್ಲದಿರುವಾಗ, ಇನ್ನು ಮಗ ಅನ್ನ ಸ್ವಂತವಾದದ್ದೂ ಒಂದು ಸಂಪಾದನೆಯ ದಾರಿಗೆ ಹೋಗಿಸಬೇಕೆಂದು ಯೋಚಿಸುವಾಗ ಅವರಿಗೆ ಯಾವ ದಾರಿ ಇದೆ? ಅಂಥ [illegible] ಒಗ್ಗು ದೇಶಿಲ್ಲ. ನ್ಯೈಟಿಗಿದರೂ ಸಹ, ಅವರು ಕಲಿತ ಈ ಶ್ರೇಷ್ಠವಾದ ವಿದ್ಯೆಯು ಬೆಳೆಯಿಂದ ಆ ವ್ಯಕ್ತಿಯು ಅವರ ಮರ್ಯಾದೆಗೆ ಬಹಳ ಕಮ್ಮಿಯಾಗಿ ತೋರುತ್ತ ಪಡಾತ್ರವಲ್ಲ. ಅವರಿಗೆ ಅದರ ವಿಷಯವಾಗಿ ಏನೂ ಗೊತ್ತೂ ಇಲ್ಲ. ವ್ಯಾಪಾರ ಮತ್ತು ಕೈಗಾರಿಕೆಗಳ ಇಳಿಯುವುದೇಗರ ಜಿದ್ದತ್ತಿಯ ವಿಷಯವಾಗಿ ಅವರಿಗೆ ಸ್ವಲ್ಪವೂ ಗೊತ್ತಿಲ್ಲ ಮಾತ್ರವಲ್ಲ. ಅವರಲ್ಲಿ ಬಂಡವಾಳವೂ ಇಲ್ಲ. ಹೀಗಾದಮೇಲೆ ಅವರಿಗೆ ಇರುವ ದಾರಿಯಾವುದು? ೨೦ ಅಥವ ೨೦ ರೂಪಾಯಿಯ ಮೊದಲು ಸಂಬಳ ಅಲ್ಲದ ಸರಕಾರಿ ಉದ್ಯೋಗವೆ! ಹಾಗಾದಮೇಲೆ ನವನಾಗರೀಕತೆಯ ವಿದ್ಯಾಕ್ರಮದ ಫಲಿತಾಂಶವೇನು? ಪ್ರತಿವರ್ಷವೂ ನಾವು ನಮ್ಮ ಶಾಲೆಗಳಿಂದ ಕೆಲವು ಮಂದಿ ಗುಮಾಸ್ತರನ್ನು ತಯಾರಿಸುತ್ತೇವೆ. ಇದರಿಂದ ದೇಶಕ್ಕೆ ಪ್ರಯೋಜನವೇನಾಯಿತೆಂದು ನಿಮ್ಮ ಅಭಿಪ್ರಾಯ. ಅದರಿಂದ ದೇಶಕ್ಕೆ ಉಂಟಾಗುವ ಕುಂದಕಗಳನ್ನು ನಾನು ಹೇಳಬೇಕಾದ ಅವಶ್ಯವಿಲ್ಲವೆಂದು ನೆನಸುತ್ತೇನೆ.

" ಈಗಿನ ವಿದ್ಯಾಭ್ಯಾಸದ ಉದ್ದೇಶ್ಯವೇ ಬೇರೆ, ಅದರ ನಡೇ ಬೇರೆ " ಎಂಬದಾಗಿ ಬರೆಯುತ್ತೀರಿ. ನಿಜವಾಯೂ ಅದು ಈಗಿನ ವಿದ್ಯದ ಉದ್ದೇಶದ ಫಲಿತಾಂಶವು ಗುಮಾಸ್ತರನ್ನು ತಯ್ಯಾರಿಸುವುದೆಂದು ಇನ್ನೊಂದು ಹೇಳಬೇಕೆ? ಇದರಲ್ಲಿ ಉತ್ತಮತರದ್ದು ಯಾವುದು? ಪೂರ್ವದ್ದು ಅಲ್ಲವೆಂದು ನೀವು ಹೇಳಲಿಕ್ಕಿಲ್ಲವಾಗಿ ನಂಬುತ್ತೇನೆ.

" ಪೂರ್ವದಲ್ಲಿ ಮರಳನಲ್ಲಿ ಬರುತ್ತಿದ್ದ ಬಾಲಕನ ವಯಸ್ಸನ್ನು ಗಣನೆಗೆ ತಂದಿದ್ದೀರೋ? ವಿಶಾಸೆ ಒಂದು ಕೂಡ ಕಾಡ ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದದ್ದು ನಸಿಲ್ಲವೇ?" ಎಂದು ಬರೆಯುತ್ತೀರಿ. ಇದರ ಅರ್ಥವೇನು? ವಿಶಾಸೆ ಒಂದು ದೊಡ್ಡವರಾಗಿದ್ದು ತಮ್ಮ ಸಮಾನುಗಳ ಎಚ್ಚರವನ್ನು ತೆಗೆದುಕೊಳ್ಳಲಿಕ್ಕಾಗದ್ದರಿಂದ ಪೂರ್ವದಲ್ಲಿ ಅವರು ಮರಳನಲ್ಲಿ ಬರೆಯುತ್ತಿದ್ದರೆಂದೂ; ಈಗ ಕಡೆ ಬಾಯಿಯಲ್ಲಿ ಹಾಲು ಇರುವ ಮಕ್ಕಳಿಗೆ ಅವರವರ ಸಾಮಾನಿನ ಎಚ್ಚರ ತೆಗೆದುಕೊಳ್ಳ[illegible] ಶಕ್ತಿ ಇರುವದರಿಂದ ಸ್ಲೇಟುಬಳಪಗಳೂ ಮತ್ತು ಪುಸ್ತಕಗಳ ಸೇರಿಸಿರಾದ ಕಲರ್ ಬಾಕ್ಸ್ ಮುಂತಾದವುಗಳೂ ಬೇಕೆಂಬುದು, ತಮ್ಮ ಅಭಿಪ್ರಾಯವೆ? ತಮ್ಮನ್ನು ತಾವೇ ಮರೆತು ಇದರಲ್ಲಿ ಸ್ವಲ್ಪ [illegible] ಬರೆಯಬೇಕೆಂದು ನೆನಸಿ, ಬಹಳ ವಿಶೇಷವಾಗಿ, ಅರ್ಥಕ್ಕೆ ಗಮನಕೊಡದೆ, ಕೆಲವು ವಾಕ್ಯಗಳನ ಬರೆದಿರುತ್ತೀರೊ?

ಕಡೆಯಲ್ಲಿ ನೀವು "ಮಕ್ಕಳು (ಮಕ್ಕಳನ್ನು ೧೪ ವರ್ಷ ವಿನಹ ಶಾಲೆಗೆ ಕಳುಹಿಸಬಾರದೆಂದು ಇನ್ನೊಂದು ಲೇಖನ ತಾವೇ ಬರೆದು ಬಿಟ್ಟರೆ ಪುಸ್ತಕ ಸ್ಲೇಟುಗಳ ದುಡ್ಡು ಉಳಿಸಿ ದೇಶಕ್ಕೆ ಉಪಕಾರವಿರಿ[illegible] ಬರೆಯುತ್ತೀರಿ. ನಿಮ್ಮ [illegible] ಅಭಿಪ್ರಾಯದಲ್ಲಿ ೧೪ ವರ್ಷದ ನಂತರ ಶಾಲೆಗೆ ಹೋದರೆ ಉಳಿಯುವುದು ಪುಸ್ತಕದ ಮತ್ತು ಸ್ಲೇಟಿನ ದುಡ್ಡು ಮಾತ್ರ, ಯಾತಕೆಂದರೆ ಮಕ್ಕಳು ಈಗಿನ ಕಾಲದ ಬಹಳ ಚಿಕ್ಕ ವಯಸ್ಸಿನಲ್ಲಿ ಹೋಗುವುದರಿಂದ ಅವರ ಬರೆಯುವಿಕೆ ಮರಳೇ ಒಳ್ಳೆಯದೆಂದು ನನ್ನ ಅಭಿಪ್ರಾಯವಲ್ಲದೆ, ದೊಡ್ಡವರಿಗೆ ಮರಳು ಕೊಡಬೇಕೆಂದಲ್ಲ.

„ ಓ ಹೋ! ಕಡೆ ಬಾಯಿಯಲ್ಲಿ ಹಾಲು ಇರುವ ಮಕ್ಕಳಿಗೆ ಇದನ್ನು (ಸ್ಲೇಟು, ಪುಸ್ತಕ, ಕಲರ್ ಬಾಕ್ಸ ಮುಂತಾದವುಗಳು) ಕೊಡಬಾರದೆಂದು ಅಭಿಪ್ರಾಯವಾಗಾದರೆ, ಸಾವಧಾನವಾಗಿ, ವಿಶಾಸೆ ಬಂದನಂತರ, ನಿಧಿಗೆ ಬೊಸೆಮಾಗಲು ಕಲಿತನಂತರ........ ಮಕ್ಕಳನ್ನು ಶಾಲೆಗೆ ಕಳುಹಿಸಿದರೆ ಆಯಿತು, " ಎಂದು ನೀವು ಕಳೆದ ಲೇಖನದ ಪ್ರಶ್ನೆಗಳ ಪೈಕಿ ಒಂದು ವಿ[illegible] ಐದು ವರ್ಷದಲ್ಲಿ ಶಾಲೆಗೆ ಹೋಗುವ ಹುಡುಗ[illegible] ೧೪ ವರ್ಷದಲ್ಲಿ ಹೋಗಲಿ, ಹೀಗೆ ಅವರ ವಯಸ್ಸಿನ [illegible] ಆವಶ್ಯಕವಾಗಿ [illegible]; ಅ[illegible] ಮಕ್ಕಳು ಶಾಲೆಗೆ ಹೋಗ ವಾಗ [illegible] ಸ್ಲೇಟು [illegible] ಇರದೆ [illegible] ಹಾ! ನವನಾಗರೀಕತೆಯೆ! ಪುಸ್ತಕಗಳನ್ನು ತೆಗೆದುಕೊಳ್ಳುವುದಕ್ಕೇನು, ಸಭ್ಯಕ್ಕೆ ದರ್ಜೆಗೆ ಕಳುಹಿಸಿದರಾಯಿತು ಎಂಬುದೇ ನಿಮ್ಮ ಅರ್ಥವಲ್ಲವೆ? ಒಟ್ಟಿಯ ಕ್ರಯಕ್ಕಿಂತಲೂ ಹೋರಿ ಕಾಲಿಯು ಹೆಚ್ಚಾಗುವ, ನೀವು ಕೊಂಡಾಡುವ, ನವನಾಗರೀಕತೆಯ ವಿದ್ಯಾಕ್ರಮದ ಫಲಿತಾಂಶವಲ್ಲವೆ ದು ಹೇಳಲಿಕ್ಕೆ ಕಾರಣಗಳವೆಯೆ? ಹಾಗಾದಮೇಲೆ ಮೊದಲು ಮನ್ನಮಾಡಬೇಕಾದದ್ದು ಯಾವುದು? ಟ[illegible] ಕಲಿಸುವುದು ಪೂರ್ವದ ವಿದ್ಯೆಯ ಮುಖ್ಯಾಂಶವಾಗಿತ್ತು. ಅದನ್ನು ನೀವು ಕೊಂಡಾಡುತ್ತೀರಿ. ಹಾಗಾದಮೇಲೆ ಎಲ್ಲಾ ತರದಲ್ಲಿಯೂ ಉತ್ತಮವಾದ ಪೂರ್ವ ವಿದ್ಯಾಕ್ರಮವನ್ನು ತರುವುದು ಮೇಲಲ್ಲವೆ? ಅಷ್ಟರನ್ನು ಮೈಗೆ ಧರಿಸಿಕೊಂಡು, ತಲೆಗೆ ದೊರೆಟೊಪ್ಪಿಯ[illegible]

ಅಯ್ಯೋ ಮೋಗಪ್ಪನವರೆ! ನೀವು ಈ ಲೇಖನವನ್ನು ಬರೆಯಲು ಸುರುಮಾಡುವಾಗ್ಗೆ, ಏನೋ ಅದು ಕಾರ್ಯವನ್ನು ಮೊದಲು ಯೋಚಿಸಿರುತೀರಿಯೂ, ಕಡೆ ಅದರ ಅತ್ಯ ಅಂತ್ಯದಲ್ಲಿ ನಿಮ್ಮನ್ನು ನೀವೇ ಮರೆತು ಕೊಂಡಿರುತ್ತದೆಯಲ್ಲಾ! ಹೀಗಿದ್ದಮೇಲೆ ವಿದ್ಯೆಯಂಬುವುದು ದೊಡ್ಡ ಸಂಗ್ರಹ ವಿಷಯವಾಗಿ ಬರೆಯಲು ತಗಲುವುದೆ? ವ್ಯಸನವೇ ಸರಿ.

ಆದರೂ ಕಡೆಯಲ್ಲಿ ವಿದ್ಯೆಗೂ ಮತ್ತು ಭಾಗ್ಯ ಇರುವ ಜೀವನ ವಿಷಯವಾಗಿಯೂ, ಮತ್ತು ವಿದ್ಯು ಉದ್ದೇಶನ ವಿಷಯವಾಗಿಯೂ, ಬರೆಯುತ್ತೀರಿ ದು ಬರವಸಕೊಟ್ಟ ಲೇಖನದ ದಾರಿಯನ್ನು ಕಾಣುತ್ತಿರುತ್ತೇವೆ.

ಅ. ಪಿ. ಅ.

"ಮಾದಪ್ಪನಮೋಡಪ್ಪ" ನವರಿಗಿನ್ನೊಂದು.

ಅಯ್ಯಾ, ತಾವ್ಯಾರು? ತಮ್ಮ ಲೇಖನದಲ್ಲಿ ಒಮ್ಮೆ ಕವನ್ನು ಬಿಟ್ಟ ರಾಮಧ್ಯಾನನಿರತರಾದ ಮುನಿವರ್ಯ ಹೇಳಿಕೊಳ್ಳುವಿರಿ. ಇನ್ನೊಮ್ಮೆ ಬಡಹಳ್ಳಿಯುವ ಉಚ್ಚರಿಸಲು ಅಸಾಧ್ಯವಾದ ಕರಿಕ್ಯುಲಂ, ಸಿಲೆ ಕಿಂಡರ್‌ಗಾರ್ಟನ್ ಮೊದಲಾದ ಶಬ್ದಗಳನ್ನು ಪ್ರಯೋಗಿಸಿ ಗುರುಪೀಠವನ್ನು ಅಲಂಕರಿಸಿದವರೆಂದು ವರ್ಣಿಸಿಕೊಳ್ಳುವಿರಿ. ತಿರುಗೊಮ್ಮೆ "ಮಾದಪ್ಪನ ಮೋಡಪ್ಪ" ನೆಂಬ ವಿಜಾತೀಯವಾದ ಹೆಸರನ್ನು ಧರಿಸಿ ದು ಆನಂದಸಾಗರದಲ್ಲಿ ಓಲಾಡಿದಿರಿ. ಹೇಗೂ ತಾ ರಾದರೂ ಆಗಲೀ, ನಮ್ಮ ಹಿರಿಯರು ಹೊಲಿಗೆಗೆ ಗೆ ದುಡ್ಡು ಕೊಡುತ್ತಿರಲಿಲ್ಲವೆಂಬುದು ಸಹಜ. ನಾವು ದರ್ಜಿಗೆ ಕೊಡುವ ಆ ತಪ್ಪಿತಕ್ಕೆ ಪುಸ್ತಕ ದುಡ್ಡುಕೊಡಿ ಎಂದು ಹೊಸಹೊಸ ಪುಸ್ತಕಗಳ ಶಾಲೆಯಲ್ಲಿ ಜಾರಿಗೆ ತರುತ್ತಿರುವಿರೋ? ಅಲ್ಲ ಪುಸ್ತಕಗಳಿಗೆ ಮಕ್ಕಳ ಪೋಷಕರು ದುಡ್ಡು ಕೊ ಕೊಟ್ಟು, ಸಾಕಾಗಿ ದರ್ಜಿಗೆ ಕೊಡಲು ದುಡ್ಡಿಲ್ಲದೆ ಗಳನ್ನು ದೇಶದಿಂದ ಹೊರಕ್ಕೋಡಿಸುವ ಸುಲಭ ಯವೋ? ಅಲ್ಲ, ತಮ್ಮ ನವೀನ ವಿದ್ಯಾಕ್ರಮದ ಕದಲ್ಲಿ ಅತ್ತಿ ಆಚಾರ ಅನಾಚಾರಗಳನ್ನು ಮೂಲೆ ಗೊಳಿಸಿ ನಮ್ಮ ಹಿರಿಯರಂತೆ ಸುಲಭದ ಜೀವನದ ದಾ ಯನ್ನು ಬೋಧಿಸುವ ವಿಧಾನಗಳು ಆ ಪುಸ್ತಕಗಳಲ್ಲಿ ವಾಗಿವೆಯೋ ಹೇಗೆ? ಹಾಗೆ ಪೂರ್ವದಲ್ಲಿ ಒಂ ಗಳಪಾಠಗಳನ್ನು ಕಲಿಸುತ್ತಿದ್ದರು. ಈತ್ತೀಚೆಗೆ ನವೀನಕ್ರಮಕ್ಕೆ ಒಂದು 30-40 ವರ್ಷಗಳಾಗಿ ಗಿಳ ಪುಸ್ತಕದ ಸಂಖ್ಯೆ ಹೆಚ್ಚದೆಹೋದರೆ ನವೀನಕ್ರ ಕುಂದಕವೆಂದೋ ತಮ್ಮ ಭಾವನೆ, ಅಲ್ಲ ನಮ್ಮ ಂತಲ್ಲಿ 3 ಬುಂಡೆ ಎತ್ತಿ ಬಿಡುತ್ತಿದ್ದ ನಾನು 6 ಎತ್ತಿ ಹೆಸರು ಕೊಂಡುಹೋಗಿದವೆಂದೋ ಹೇಗೆ? ಬಾಯಿಕಾಣ್ಯ ಕಿರಿಯೊಂಕಿರಿಯೋ" ಎಂಬ ಬಾ ರಕ್ಕೂ ತಮ್ಮ ಬೆಲ್ಲದ ಬೈಲು ಬೆರ್ಚಪ್ಪ, ಮೋ ಕಾಳಪ್ಪ, ಅಂಗಳದುಗ್ಗ ಬಿಟ್ಟಿ ಬಸವಯ್ಯ ಮೊದ ವರುಗಳಗೂ ಭೇದವಿಲ್ಲವೆಂದೋ ತಮ್ಮ ಭಾವನೆ ಯಿಕಾಣ್ಯ ವಗೈರೆ ಏನೆಂದು ತಿಳಸುವಿರಾ, ಪೂರ್ವ ಗಳಪಾಠದ ಪುಸ್ತಕ ಒಂದೊಂದನ್ನು ಈಗಿನಂತೆ ಳ ಕೈಗೆ ಹಿಡಿಸದೆ ಉಪಾಧ್ಯಾಯರೇ ಬಾಯಿಪಾಠ ಸುತ್ತಿದ್ದರೆಂಬುದನ್ನು ನಿಮ್ಮ ಲೇಖನಕ್ಕೆ ತೂಕ ಲು ಬಿಟ್ಟಿರೋ ಹೇಗೆ? ನವೀನ ವಿದ್ಯಾಕ್ರಮದ ಹೇಳಿದ ಮಹಾಪುಸ್ತಕಗಳು ಯಾವ ಯುಗದ ವೀರರ ಕಥೆಗಳು ಇದಕ್ಕಿಂತ ಯೋಗ್ಯವಾದ ಪು ಳು ಇಲ್ಲವೆಂದೋ ತಮ್ಮ ಯೋಚನೆ ಸದ್ಯಕ್ಕೆ , ಪಾಂಡವ ರಾಮ ನಳ, ಹರಿಶ್ಚಂದ್ರ ಮೊದ ರ ಚರಿತ್ರೆಗಳು ತಮ್ಮ ಮೇಲಿನ ಪುಸ್ತಕಕ್ಕೆ ಸರಿ ಯೇನು? ಅದು ಹೇಗೂ ಇರಲಿ ನನ್ನ ಲೇಖನದ ಸಂಗತಿಗಳಿಗೆ ತಾವು ಗಮನಕೊಡದೆ 14 ವಯ 5 ವಯಸ್ಸು ವಿಶಾಸ ಒಂದು ಶಾಲೆಗೆ ಕಳುಹಿಸುವ ಬರಿಯಿರಿ ಎಂದು ಬರದು ಅದರಲ್ಲೇ ತೃಪ್ತಿಪಡಿ ತಾವು ಉರುಡಾಡಿದರೆ ನಾನೊಪ್ಪುವೆನೆ? ಹೇಗೂ ಧರಿಸಿಕೊಂಡ ಹೆಸರು ಸರ್ವಸಮ್ಮತದಿಂದ ಒಪ್ಪ ದರೆ ನನ್ನ ಮೊದಲಿನ ಲೇಖನದಲ್ಲಿ ತಾವು ಬಿಟ್ಟ ಗಳಿಗೆ ನಾಟ್ಯುವಾರು ಪ್ರಸ ನಾನು ಬರದಿರುತ್ತೇ ವುಗಳಿಗೆ ತಕ್ಕ ಜವಾಬು ಬೆಳಸಬೇಕಾಗಿದೆ

1) "ಪುಸ್ತಕಕ್ಕೆ ಒಂದು ವರ್ಷ ವಯಸ್ಸು ಮುಗಿ ದೇ ತಡ ಅದಕ್ಕೆ ಯಮಪುರಿವಾಸ"

2) "ತಪ್ಪಿದರೆ ಚಿಕ್ಕಮಕ್ಕಳಿಗೆ ಹಲ್ಲು ಹುಟ್ಟುವ ಒಂದೆರಡು ಹಾಗೆ ಹೆಚ್ಚಿಗೆ"

3) "ಒಂದೇತರದ ಪದ್ಯ (ಉದಯರಾಗನಕ್ಷತ್ರ) ಬೇರೆ ಪುಸ್ತಕದಲ್ಲಿ"

4) "ಪಾಠಗಳನ್ನು ಕಲಿಸುವದಕ್ಕೆ ಒಂದು ನಿಘಂ ಟು"

ಪದ್ಯಕ್ಕೂ ಭಾಷೆಗೂ ಇರುವ ಭೇದವನ್ನು ತಿಳಸ ಗಿ ನನ್ನ ಇದಕ್ಕೆ ಮೊದಲಿನ ಲೇಖನದಲ್ಲಿ ಕೇಳ ರುತ್ತದೆ ತಿಳಸಿ ಮಾದಪ್ಪನ ಮೋಡಪ್ಪನ ಅಟ್ಟಿದ,

ಐ ಪಿ ಮಾದಪ್ಪ

ಕೊಡಗಿನ ಜನರ ದುರಾಚಾರ.

ಸ್ವಾಮಿ,

ಕೊಡಗಿನ ಜನರು ಧೈರ್ಯಶಾಲಿಗಳೆಂದೂ, ಔಮ್ಮ ರುದಾರರೆಂದೂ ಲೋಕಪ್ರಖ್ಯಾತವಾಗಿದೆಯಾದ ದುರಾಚಾರವೆಂಬ ಕೆಟ್ಟ ಚಾಳಿಯು ಈ ಮೇಲಿನ ಗುಣಗಳನ್ನು ಮರೆಮಾಡುತ್ತಲಿದೆ. ಅಬ್ಕಾರಿ ಇಲಾ ಖೆಯು ಮನೆಯನ್ನು ಹಾಳುಮಾಡುವ ಇಲಾಖೆ ಯೆಂದೆನ್ನಬಹುದು. ಇದಕ್ಕೆ ಸರಿಯಾಗಿ ಕೊಡಗಿನ ಬುದ್ಧಿ ಇಲ್ಲದ ಜನರು ತಮ್ಮ ತೋಟದೊಳಗಿನ ಬೈನೆಮರಗಳನ್ನು, ಈಚಲುಮರಗಳನ್ನು, ಬಿಲ್ಲವರಿಗೆ ವಾರಕ್ಕೋ, ಗುತ್ತಿಗೆಗೋ ಕೊಟ್ಟು ಯಾವಾಗಲೂ ಕು ಡಿದು ದುಡ್ಡು ವ್ಯಯಮಾಡುವರು. ಇವೂ ಸಾಲದ್ದಕ್ಕೆ ಅಂಗಡಿಗೆ ಹೋಗಿ ಹೆಚ್ಚಾಗಿ ದುಡ್ಡು ಖರ್ಚುಮಾಡಿ ಕು ಡಿಯುತ್ತಾರೆ. ದುಡ್ಡಿನ ಬಡತನವಿದ್ದವರು ತಮ್ಮಲ್ಲಿದ್ದ ಸರ್ವಸ್ವವನ್ನೂ ತಮ್ಮ ಸ್ನೇಹಿತರಾದ ಬಿಲ್ಲವರಿಗೆ ಕೊಟ್ಟು ಕಡೆಗೆ ಅವರ ಹೆಂಡದ ಗಡಿಗೆಯನ್ನೇ ಹೊರುವ ಅನುಮಾನಕ್ಕೂ ಕೂಡ ಅಂಜುವುದಿಲ್ಲ. ಇಂಥಾ ಹೀನ ಕೆಲಸವನ್ನು ಹೋಗಲಾಡಿಸುವ ಉಪಾಯವು ನಮ್ಮ ಹೃದಯದಲ್ಲಿಯೇ ಇದೆ. ನಾವುಗಳೆಲ್ಲರು ಬೈನೆಮರಗಳನ್ನು ಕೊಡದೆಯೂ, ಅಂಗಡಿಗೆ ಹೋಗಿ ಕುಡಿಯದೆಯೂ ಇದ್ದರೆ ಬಿಲ್ಲವರೆಲ್ಲರೂ ನಮ್ಮ ಸ್ನೇಹವನ್ನು ಬಿಟ್ಟು ಅವರ ದೇಶಕ್ಕೆ ಪಲಾಯನಮಾಡುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಮಧುಪಾನ ಮಾಡುವುದರ ವಿಚಾರದಲ್ಲಿ ಪೂರ್ವದಲ್ಲಿಯೂ ಕೂಡ ವಿದುರನು "ಮತಿಕೆಡುಗುಂ ಮಧುಪಾನದಲಿ" ಎಂದು ನೀತಿ ಹೇಳಿರುತ್ತಾನೆ. ಈ ದುರಾಚಾರವನ್ನು ಹೋಗಲಾಡಿಸುವುದಕ್ಕೆ ಕೊಡಗಿನ ಮಹಾಜನಗಳಾದ ಕೊಡಗರೂ ಗೌಡುಗಳು ಸೇರಿ ನಾಡುನಾಡುಗಳಲ್ಲಿ ಮೀಟಿಂಗ್ ಮಾಡಿ ಇನ್ನುಮುಂದಕ್ಕೆ ಬಿಲ್ಲವರಿಗೆ ಬೈನೆ ಮರಗಳನ್ನು ಕೊಟ್ಟವರಿಗೆ ದಂಡ ವಿಧಿಸತಕ್ಕದೆಂದು ಎಚ್ಚರಿಸಿದರೆ ಈ ದುರಾಚಾರವು ಹೋಗಬಹುದೆಂದು ನಂಬಿರುತ್ತೇನೆ.

ಈ ಇಲಾಖೆಯಲ್ಲಿ ಸರ್ಕಾರದವರಿಗೆ ಲಾಭವುಂಟು ಆದರೆ ಪ್ರಜೆಗಳಿಗೆ ಹೆಚ್ಚಾದ ಕೆಡುಕು ಉಂಟು. ಪ್ರಜೆಗಳನ್ನು ಕಾಪಾಡಬೇಕೆಂದಿದ್ದರೆ ಸರ್ಕಾರದವರು ಪ್ರಜೆಗಳಮೇಲೆ ದಯವಿಟ್ಟು ಅಬ್ಕಾರಿ ಇಲಾಖೆಯನ್ನು ತೆಗೆಯಬೇಕು. ಹೀಗಾದಹೊರತು ಕೊಡಗಿನ ಜನರು ಊರ್ಜಿತಕ್ಕೆ ಬಂದಿತವಾಗಿಯೂ ಬರಲಾರರು. ಈ ವಿಚಾರದಲ್ಲಿ ನಾವುಗಳಾದ ಕೊಡಗಿನ ಜನರೆಲ್ಲರು ಸೇರಿ ಕೊಡಗಿನ ಮುಖ್ಯಾಧಿಕಾರಿಯನ್ನು ಕೇಳುವುದು ಒಳ್ಳೆಯದಲ್ಲವೇ?

ವಿಧೇಯ,

30-11 1923 ಜೇಪಂಡಿರ ಮುತ್ತಣ್ಣ ಗೌಡ,

ನಾಲ್ಕುನಾಡು, ಬಲ್ಲಮಾವಟ್ಟಿಗ್ರಾಮ

ಅಯ್ಯಾ,

ತಾರೀಖು 9-11-23 ರ ತಮ್ಮ ಪತ್ರಿಕೆಯ 6 ನೇ ಪೇಜಿನಲ್ಲಿ ನಮೂದಿರುವ ಮೇರೆ ಶ್ರೀಮಂಗಲನಾಡು ಹುದಿಕೇರಿ ಟೆನ್ನಿಸ್ ಬಾಡೂರ್ ಸಂಘದ ಪ್ರೆಸಿಡೆಂಟರಾದ ಕೇತ್ತೀರ ಸುಬ್ಬಯ್ಯನವರು ಮತ್ತು ಈ ಸಂಘದ ಮೆಂಬರುಗಳು ಸಹಾ ಈ ತಾರೀ 15 ನೇ ಬುಧವಾರದ ದಿನ ಬೆಳಗೆ 9 ಘಂಟೆಗೆ ಹುದಿಕೇರಿ ಗ್ರಾಮದ ಶ್ರೀ ಮಹಾದೇವರ ದೇವಸ್ಥಾನದಲ್ಲಿ ಪೂಜೆಗಿರುವ ಸರ್ವ ಸಾಮಾನುಗಳೊಡನೆ ಕೂಡಿ ರುದ್ರಾಭಿಷೇಕ ಪೂಜೆಯನ್ನು ಮಾಡಿಸಿ ನಮ್ಮ ಸ್ವದೇಶಿಯನಲ್ಲಿ ಹಿಂದೆ ಯಾರೂ ಹೊಂದದ ಉನ್ನತಪದವಿಯನ್ನು ಶ್ರೀ ಕಾವೇರಮ್ಮನ ಕರುಣಾಕಟಾಕ್ಷದಿಂದ ಕೈಕೊಂಡಿರುವ ಮ॥ ರಾ॥ ಸಾ॥ ದಿ, ಮ, ರಾದ ಕೆ ಚಂಗಪ್ಪನವರ ಸ್ತೋತ್ರವನ್ನು ಮಾಡಿ ಇವರಿಗೆ ಆಯುರಾರೋಗ್ಯ ಸಂಪದವನಿತ್ತು ಚಿರಕಾಲ ನಮ್ಮನ್ನಾಳುವ ಸಾಮರ್ಥ್ಯವನ್ನು ಕೊಡುವದಲ್ಲದೆ ಅವರ ಪತ್ನಿಪುತ್ರರೂ ಸಹ ಚಿರಂಜೀವಿಗಳಾಗಿ ಬಾಳಲೆಂದು ಶ್ರೀ ಮಹಾದೇವರಿಗೆ ಪ್ರಾರ್ಥಿಸಿ ದೇವರ ತೀರ್ಥಪ್ರಸಾದವನ್ನು ಎಲ್ಲರು ಕೈಕೊಂಡು ದೇವರ ಪೂಜಾರಿಗೆ ನಮ್ಮ ಸಂಘದ ಪ್ರೆಸಿಡೆಂಟರಾದ ಕೇತ್ತೀರ ಸುಬ್ಬಯ್ಯನವರು ಸಂಘದವರೆಲ್ಲರಿಗಾಗಿ ದಕ್ಷಿಣೆ ತಾಂಬೂಲವನ್ನು ಕೊಟ್ಟು ದೇವಸ್ಥಾನದಲ್ಲಿ ಸಂಘದ ಮೆಂಬರುಗಳು ಮ॥ ರಾ॥ ಸಾ॥ ಕೆ ಚಂಗಪ್ಪನವರ ಹೆಸರಿನಿಂದ ಮಾಡಿಸಿದ ಪಾಯಸ ಅನ್ನವನ್ನು ನೆರದಿದ್ದ ಜನರು ಮತ್ತು ಅನೇಕ ಚಿಕ್ಕಚಿಕ್ಕ ಮಕ್ಕಳೂ ಸಹ ಉಂಡು ತಾಂಬೂಲವನ್ನು ಸ್ವೀಕರಿಸಿಕೊಂಡು ಸಂತೋಷದಿಂದ ಸಾಯಂಕಾಲ 5 ಘಂಟೆಗೆ ಸಭೆಯು ಮುಕ್ತಾಯವಾಯಿತು. ಪೂಜೆಯ ಪ್ರಸಾದವಾಲಿಕೆಯನ್ನು ಮತ್ತು ನಮ್ಮ ಸಂಘದ ಪ್ರೆಸಿಡೆಂಟರ ಹೆಸರಿನಲ್ಲಿ ಒಂದು ಬಿನ್ನಹಪತ್ರಿಕೆಯನ್ನು ಸಹ ಮ॥ ರಾ॥ ಸಾ॥ ಕೆ. ಚಂಗಪ್ಪನವರಿಗೆ ಈ ತಾ॥ 6 ರಲ್ಲು ಟಪಾಲ್ ಮೂಲಕ ಪ್ರೆಸಿಡೆಂಟರ್ ಸುಬ್ಬಯ್ಯನವರು ಕಳುಹಿಸಿರುತ್ತಾರೆ.

ಮೇಲ್ಕಂಡ ಪ್ರೆಸಿಡೆಂಟರು ಸೂಚಿಸಿದಮೇರೆ ಈ ಸಂಘಕ್ಕೆ ಸೇರಿದ ಮಹಮ್ಮದಿಯವರೂ ಸಹ ಹಿಂದುಜನರ ಪೂಜೆಯ ದಿನವೇ ತಮ್ಮ ಮಸೀದಿಯಲ್ಲು ಜಾತಿಯವನ್ನು ಮಾಡಿ ಮ॥ ರಾ॥ ಚಂಗಪ್ಪನವರ ಹೆಸರಿನಿಂದ ಸಕ್ಕರೆಯನ್ನು ಹಂಚಿ ಸಭೆಯನ್ನು ಬರಖಾಸ್ತು ಮಾಡಿದರು.

ಗುಂಡೀರ ಸುಬ್ಬಮ್ಮಯ್ಯ.

HORSE FOR SALE.

A young 9 year old, grey mare 14 3 in size in perfect condition Open for veternary examination. Price Rs 350 or very near offer with bridle Fittest animal for hard work, such as Estate and Forest etc.

For further particulars, please apply to Mr M. B Subbayya, Ranger, Karmad, Thithimathi Post

B. A MUTHANNA,
Spencer & Co, Ltd,
POLLIBETTA.

ಕೊಡಗು ವಿದ್ಯಾಭಿವೃದ್ಧಿ ಸಂಘ.

ಕೊಡಗು ವಿದ್ಯಾಭಿವೃದ್ಧಿ ಫಂಡಿಗೆ ಚಂದಾ ಹಣವು ಕ್ರಮವಾಗಿ ವಸೂಲಾಗದೆ ಫಂಡಿನಲ್ಲಿ ಹಣವು ಕಡಿಮೆಯಾದುದರಿಂದ ಕಳೆದವರ್ಷ ಹೊಸಸ್ಕಾಲರ್‌ಶಿಪ್‌ಗಳನ್ನು ಮಂಜೂರ್ಮಾಡಲು ಆಗಲಿಲ್ಲ. ಆದುದರಿಂದ ಪ್ರತಿನಾಡಿನೊಳಗೆ ಸುತ್ತಿಕೊಂಡು ಫಂಡಿನ ಪ್ರಯೋಜನವನ್ನು ಎಲ್ಲರಿಗೂ ಮನದಟ್ಟುಮಾಡಿ, ಫಂಡಿಗೆ ಚಂದಾ ವಸೂಲ್‌ಮಾಡಲು ಏಜಂಟರುಗಳಾಗಿ

1. ಮೆ॥ ನಾಪನೆರವಂಡ ಪೊಂಣಪ್ಪನವರು,

2 ಮೆ॥ ಕೂಕಂಡ ಪೂವೈಯ್ಯನವರು,

3 ಪರದಂಡ ಗಣಪತಿಯವರನ್ನು ಸಹ ನೇಮಕ ಮಾಡಿರುತ್ತೆ. ಸಂಘದ ಅಭಿವೃದ್ಧಿಯನ್ನು ಅಪೇಕ್ಷಿಸುವ ಮಹನೀಯರು ತಮ್ಮ ಚಂದಾಹಣವನ್ನು ಸದರಿ ಏಜಂಟರುಗಳಿಗೆ ಪಾವತಿ ಮಾಡಿದಲ್ಲಿ ಪ್ರಿಂಟ್‌ರಶೀದಿಯಲ್ಲಿ ರಸೀತಿ ದೊರಕುವುದು [2—1]

ಯಂ ಭೀಮಯ್ಯ, ಕೆ ಚಂಗಪ್ಪ,

ಗೌರವ ಸೆಕ್ರಟರಿ ಪ್ರೆಸಿಡೆಂಟರು.

ಶ್ರೀ ಕಾವೇರ್ಯೈ ನಮಃ

ಕೊಡಗು ನ್ಯಾಯವಿಧಾಯಕ ಸಭೆಗೆ

ಮೆಂಬರುಗಳ ಚುನಾವಣೆ

ಭಾಗಮಂಡ್ಲ ಶ್ರೀಪತಿರಾಯನ ವಿನಂತಿ.

ಮಹನೀಯರೇ,

ನಾನು ಮಡಿಕೇರಿ ತಾಲೋಕು ನಾಗು ಪರವಾಗಿ ನ್ಯಾಯವಿಧಾಯಕ ಸಭೆಗೆ ಉಮೇದ್ವಾರನಾಗಿ ನಿಂತಿರುವದು ಈ ಮೊದಲೇ ನಿಮಗೆ ಗೊತ್ತಿರಬಹುದು. ಮಡಿಕೇರಿ ತಾಲೋಕು ನಾಗು ಯಾ ಜಮ್ಮೇತರದ ಪರವಾಗಿ ಒಬ್ಬ ಪ್ರತಿನಿಧಿಯು ಚುನಾಯಿಸಲ್ಪಡುವನು. ನಿಮ್ಮಲ್ಲಿ ಪ್ರತಿ ಒಬ್ಬ ನಾಗು ಓಟುದಾರನಿಗೂ ಒಂದು ಓಟು ಮಾತ್ರ ಕೊಡುವ ಹಕ್ಕಿರುವದು. ಅದನ್ನು ನನಗೆ ಕೊಡಬೇಕಾಗಿ ವಿನಯದಿಂದ ಪ್ರಾರ್ಥಿಸುತ್ತೇನೆ.

ನಾನು ಅನೇಕ ವರ್ಷಗಳಿಂದಲೂ ದೇಶಸೇವೆಯೇ ಈಶಸೇವೆಯೆಂದೆಣಿಸಿ ಕಾರ್ಯಕ್ರಮದಲ್ಲಿ ನಿರತನಾಗಿ ವರ್ಗದಾರರ ಸಂಘದ ಮೂಲಕ ಸುಧಾರಣೆಯ ವಿಚಾರದಲ್ಲಿ ಇಂಡಿಯಾ ಸ್ಟೇಟ್ ಸೆಕ್ರಟರಿಯವರಲ್ಲಿಯೂ ಸ್ಥಳೀಯ ಸರಕಾರದವರಲ್ಲಿಯೂ ತುಂಬಾ ವಾದವನ್ನು ನಡಿಸಿರುತ್ತೇನೆ. ಮಾಲಂಬಿ ಫಾರೆಸ್ಟ್ ಕಮಿಟಿಯ ಮೆಂಬರನಾಗಿ ಕಮಿಟಿಯವರು ಶೋಧನೆಯಿಂದ ಬರದ ರಿಪೋರ್ಟಿನಿಂದ ಫಾರೆಸ್ಟ್ ಇಲಾಖೆಯವರಿಂದ ರೈತರಿಗೆ ಉಂಟಾಗುತ್ತಿದ್ದ ಕಷ್ಟಗಳು ತಕ್ಕಮಟ್ಟಿಗೆ ಪರಿಹಾರವಾಗಿಯವೆ. ಯಾಲದ ಮಲೆಗಳ 7 ವರ್ಷದ ಅವಧಿಯನ್ನು 21 ಹೆಚ್ಚಿಸುವದಕ್ಕೆ ಕೆಲವು ವರ್ಷಗಳ ಹಿಂದೆ ನಾನು ಮಾಡಿದ ಪ್ರಯತ್ನಗಳು ತಮಗೆ ತಿಳಿದಿರಬಹುದು. ಈಚೆಗೆ ಮಲೆಗಳ ಕಂದಾಯ ಮಾಫಿಯಾಗುವ ಒಗ್ಗೆ ರೈತರ ಕಡೆಯಿಂದ ನಾನು ಮಾಡಿದ ಪ್ರಯತ್ನದ ಫಲವನ್ನು ನಾವೆಲ್ಲರೂ ಅನುಭವಿಸುತ್ತಿರುವದರಿಂದ ಇದನ್ನು ಪ್ರತ್ಯೇಕವಾಗಿ ವಿವರಿಸುವದಿಲ್ಲ. ಈಗಲೂ ಸಂದರ್ಭ ದೊರೆತಾಗ ದೇಶಸೇವೆ ಮಾಡುತ್ತಲಿರುವ ನನ್ನ ಕೆಲಸಗಳೇ ನನ್ನ ಯೋಗ್ಯತೆಗಳನ್ನು ತಿಳಿಸುವವು. ದೇಶೀಯನಾಗಿ ಹಳ್ಳಿಯಲ್ಲಿದ್ದ ರೈತರ ಸುಖದುಃಖದ ಅನುಭವವೂ ನಾನು ನನ್ನ ಸಮಯವೂ ಉಳ್ಳವನಾಗಿರುತ್ತೇನೆ.

ನೀವುಗಳು ದಯವಿಟ್ಟು ಓಟು ಕೊಟ್ಟು ನನ್ನನ್ನು ಚುನಾಯಿಸಿದರೆ ನಮ್ಮ ಎಲ್ಲಾ ವಿಧದ ಹಕ್ಕು ಮತ್ತು ಸ್ವಾತಂತ್ರ್ಯ ಅಭಿವೃದ್ಧಿಯಾಗುವಂತೆಯೂ, ನಮ್ಮೊಳಗಿರುವ ಕೋಮುವಾರು ಭೇದಗಳನ್ನು ಹೋಗಲಾಡಿಸಿ ಸಹೋದರಭಾವದಿಂದ ಸಮುದಾಯಾಭಿವೃದ್ಧಿಯಾಗುವಂತೆಯೂ, ಇತರ ಪ್ರಾಂತ್ಯಗಳಿಗೆ ದೊರೆತಿರುವ ಸುಧಾರಣೆಯು ಆದಷ್ಟು ಬೇಗನೇ ನಮಗೂ ದೊರಕುವಂತೆಯೂ ಎಲ್ಲಾ ವಿಧವಾದ ನ್ಯಾಯವಾದ ರೀತಿಯಲ್ಲಿ ಹೊಸ ಕೊಡಗು ಕೌನ್ಸಿಲಿನಲ್ಲಿ ಕೆಲಸ ಮಾಡಲು ದೀಕ್ಷೆಯನ್ನು ಕೈಗೊಳ್ಳುವೆನು.

ಇತಿ ನಿಮ್ಮ ಸೇವಾಕಾಂಕ್ಷಿ,

[4—1] ಭಾಗಮಂಡ್ಲ ಶ್ರೀಪತಿರಾವ್,

ಶಂಕರ ವಿಠಲ್ ಮೋಟಾರು ಸರ್ವೀಸ್

ಇಷ್ಟರವರೆಗೆ ಮೈಸೂರಿನ ಸರ್ವಿಸ್ 11 ಘಂಟೆಗೆ ಇದ್ದ ನ ಡಿಕೇರಿಯಿಂದ ಹೊರಡುತ್ತಿದ್ದ ಮೋಟಾರು ಲಾರಿ ಈ ತಾರೀಖು 20—11—23 ನೇ ಸೋಮವಾರದಿಂದ ಬೆಳಿಗ್ಗೆ 7 ರ ಘಂಟೆಗೆ ಮಡಿಕೇರಿಯಿಂದ ಹೊರಟು ಸಾಯಂಕಾಲ 5 ರ ಘಂಟೆಗೆ ಸರಿಯಾಗಿ ಮೈಸೂರು ತಲುಪುವಂತೆ ಏರ್ಪಾಡು ಮಾಡಲ್ಪಟ್ಟಿದೆ. [4 4]

ತಾ|| 19—11—23, ಬಿ ಟಿ ಗೋಪಾಲಕೃಷ್ಣಯ್ಯ

ಮಡಿಕೇರಿ ಶಂಕರವಿಠಲ್ ಮೋಟಾರ್ ಏಜೆಂಟ್

ಆರೋಗ್ಯ ಚಂದ್ರಿಕ.

ಇದು ಪ್ರಜೆಗಳ ಹಿತಕ್ಕಾಗಿ ಆರೋಗ್ಯ ಶಾಸ್ತ್ರವನ್ನೂ ವೈದ್ಯಶಾಸ್ತ್ರವನ್ನೂ ಬೋಧಿಸುವ ಒಂದು ಮಾಸಪತ್ರಿಕೆ. ಇದರ ಸಂಪಾದಕರು ಬೆಂಗಳೂರಿನಲ್ಲಿ ಪ್ರಸಿದ್ಧರಾದ ಡಾಕ್ಟರ್ ಯು ರಾಮರಾವ್ ಎಲ್ ಎಂ ಎಸ್ ಅವರು. ಇದರಲ್ಲಿ ಅನೇಕ ಪ್ರಸಿದ್ಧ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರುಗಳ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು.

ಟಪಾಲುಕೂಲಿ ಸೇರಿ ಈ ಪತ್ರಿಕೆಯ ವಾರ್ಷಿಕ ಚಂದಾ 1—8—0 ರೂ ಮಾತ್ರ. ಬಿಡಿ ಪತ್ರಿಕೆ ಒಂದಕ್ಕೆ 0—2—0 ಆಣೆ

ಏಜೆಂಟರು —	ವಿಳಾಸ —
ಮ|| ರಾ|| ರಾ|| ಎಸ್ ಕೆ	ಮೇನೇಜರ್
ಅಪ್ಪರಪ್ಪ	ಆರೋಗ್ಯಚಂದ್ರಿಕೆ ಆಫೀಸು
ಭಾಗಮಂಡಲ	323 ತಿಂಬು ಚೆಟ್ಟಿಬೀದಿ
ಕೊಡಗು	ಮದ್ರಾಸು

[12—1]

ಮಡಿಕೇರಿ ತಾಲೂಕಿನ ನಾಗಿನ

ಓಟರುಗಳೆಲ್ಲಾ

ಚೆರಿಯಪಂಡ್ಲ

ಶ್ರೀಪತಿ ರಾಯರಿಗೆ

ಓಟು ಕೊಡಿರಿ

"ಪ್ರಕಟಣೆ"

[3—1]

ಜೀವವಿಮೆ

ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಯ ಯಜಮಾನನು ಮೃತಪಟ್ಟರೆ ಉಂಟಾಗತಕ್ಕ ದಾರಿದ್ರ್ಯ ಕೋಟಲೆಗಳನ್ನು ನಿವಾರಿಸುವುದೇ ಜೀವವಿಮೆ

ವೃದ್ಧಾಪ್ಯಕಾಲದಲ್ಲಿ ಸುಖ ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ

ಅತಿ ಕಡಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಷೇಮದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಶಾಖೆ

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಕಾಲವಾಗಿ ಹಣವನ್ನು ಒದಗಿಸಿ ಸ್ವದೇಶಾಭ್ಯುದಯಕ್ಕೂ ಕೊಡುಗೆ ಕೊಟ್ಟು ದೇಶದ ಆರ್ಥಿಕ ಸಂಪತ್ತಿನ (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

ಲೈಫ್ ಇನ್ಸೂರೆನ್ಸ್ ಆಕ್ಟಿನ ಮೇರೆ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗಾಗಿ ಸ್ಥಿರಪಡಿಸಿರುವ 12 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಗೆ ಸ್ಥಿರಪಡಿಸಿರುವ 1 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಮದ್ರಾಸಿನ ಶಾಖೆಯಲ್ಲಿ 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯಾ ಸೆಕ್ಯೂರಿಟಿಯನ್ನು ಅರ್ಧ ಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಡಿಪಾಜಿಟ್ಟು ಇಟ್ಟಿರುತ್ತೆ. ಮತ್ತೆ ಒಂದು ಲಕ್ಷ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗೆ ಬ್ಯಾಂಕ್ ಮೂಲಕ ವಿಚಾರಣೆ ಮಾಡಿರುತ್ತೆ.

ಬಿ ಎಸ್ ಅನಾಥ್ಯ

ಲೈಫ್ ಅಂಡ್ ಮ್ಯಾರೇಜ್ ಆಫೀಸ್ ಮಡಿಕೇರಿ

HEALTH IS WEALTH

WANTED all to improve health strength and vitality and thus save our nation from physical degeneracy. Send half anna stamp and get 13 specimen photographs with full particulars from

Director Physical Culture,

P O Basavanagudi,

BANGALORE CITY

For your requirements of high grade Arms, Ammunition, Wine and Spirits,

APPLY TO -

Mc. DOWELL & Co., Ltd.,

24—8 MERCARA

ಶರೀರ ವ್ಯಾಯಾಮ.

ಬೆಂಗಳೂರು ಸಿಟಿ

ಸಂಪಾದಕರು:—ಪ್ರೊಫೆಸರ್ ಎಸ್ ವಿ ಕೃಷ್ಣ

ರಾಯರು ಡೈರೆಕ್ಟರ್ ಫಿಸಿಕಲ್ ಕಲ್ಚರ್

ಇನ್ಸ್ಟಿಟ್ಯೂಟ್ ಬೆಂಗಳೂರು

ಉತ್ತಮ ತರದ ಕನ್ನಡ ಮಾಸಪತ್ರಿಕೆ.

ಕರ್ನಾಟಕ ಜನಸಾಮಾನ್ಯಕ್ಕೆ ಸುಲಭವಾಗಿ ತಿಳಿಯುವ ಹಾಗೆ ಈ ಮಾಸಪತ್ರಿಕೆಯಲ್ಲಿ ದೇಹಾರೋಗ್ಯ ವಿಚಾರ ವ್ಯಾಯಾಮ ಕ್ರಮ ಮತ್ತು ಆರೋಗ್ಯ ಶಾಸ್ತ್ರ ಗಳೂ, ಔಷಧಿಗಳಿಲ್ಲದ ಚಿಕಿತ್ಸೆ ಮುಂತಾದ ಅನೇಕ ಉಪಯುಕ್ತವಾದ ವಿಷಯಗಳು ಗರ್ಭೀಕರಿಸಲ್ಪಟ್ಟಿರುತ್ತವೆ

ಶಾರೀರಕ ಮಾನಸಿಕ ಮತ್ತು ಆರೋಗ್ಯ ಸಂಪತ್ತನ್ನು ಪಡೆಯಬೇಕೆಂಬ ಆಶೆಯುಳ್ಳ ಪ್ರತಿಯೊಬ್ಬ ಮಾನವನೂ ಓದಬೇಕಾದ ಉತ್ತಮವಾದ ಮಾಸಪತ್ರಿಕೆ. ಅಂಚೆವೆಚ್ಚ ಸೇರಿ ಈ ಪತ್ರಿಕೆಯ ವಾರ್ಷಿಕ ಚಂದಾ ೧ ರೂ ೦ ಬಿಡಿಪತ್ರಿಕೆ ೦—೨—೦ ಮೊದಲನೆಯ ಸಂಚಿಕೆಯು ಇದೇ ಡಿಸೆಂಬರ ತಿಂಗಳು ೧ ನೇ ತಾರೀಖು ಹೊರಟಿದೆ. ಮುಂದಿನ ಸಂಚಿಕೆಗಳು ಪ್ರತಿ ತಿಂಗಳ ೧ ನೇ ತಾರೀಖಿನ ದಿನ ಮುದ್ರಿತವಾಗುತ್ತವೆ

ಸೂಚನೆ:— ಚಂದಾದಾರರಾಗುವವರು ವಿ ಪಿ ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಉತ್ತಮ

ಅಡ್ರೆಸ್ —ಎಡಿಟರ್ "ಶರೀರ ವ್ಯಾಯಾಮ"

ಪಿ ಒ ಬಸವನಗುಡಿ

[4—2] ಬೆಂಗಳೂರು ಸಿಟಿ

ಪ್ರಕಟನೆ.

ಕೊಡಗು ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ್

ಲಿಮಿಟೆಡ್

ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ ರೂ

ಶೇರ್ ಬಂಡವಾಳ	50 000
ವಸೂಲಾದ ಶೇರ್ ನೋಟುಗಳು	6320
ಜಮಾ ಬಂದ ಶೇರ್ ಹಣ	30 849

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಸಂಸ್ಥೆಗಳಿಗೆ ಹಣ ಒದಗಿಸಲ್ಪಡುವುದು

ಒಂದು ವರುಷ ಬಾಯಿದೆ ಅಥವಾ ಹೆಚ್ಚಿನ ಬಾಯಿದೆಯ ಠೇವಣಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ಬಾಯಿದೆಯ ಠೇವಣಿಗಳಿಗೆ ಶೇಕಡ ಸಾಲಿಯಾನ 5 ರ ಬಡ್ಡಿ ದೊರೆಯುತ್ತೆ.

ಪೂರ್ತಿ ವಿವರ ಬೇಕಾದವರು ಕೋ ಆಪರೇಟಿವ್ ಬ್ಯಾಂಕ್ ದವರು ಬರೆದು ತಿಳುಕೊಳ್ಳಬಹುದು.

ಪ್ರೆಸಿಡೆಂಟರು	ಟ್ರೆಸರರ್
ಕೊಡಂದೇರ ಕುಟ್ಟಯ್ಯನವರು	ಯಂ ಭುಜಂಗರಾಯರು
ರಾವ್ ಬಹದ್ದೂರ	ಬಿ ಎ ಬಿ ಎಲ್

ಸೆಕ್ರೆಟರಿ

ಸಿ ಯಸ್ ಪೊನ್ನಪ್ಪಯ್ಯನವರು ಬಿ ಎ ಬಿ ಎಲ್

ತಾರೀಖು 1—9—23

ಸುಲಭದ ರೀತಿ ! ಲಾಭದ

ರೇಷ್ಮೆ ಸೀರೆಗಳನ್ನೂ, ವಸ್ತ್ರಗಳನ್ನೂ ಬನಾರಸ್ ಇತರ [illegible] ಕೊಳ್ಳೇಗಾಲ್ ಸೋಮೇಶ್ವರ ಪಟ್ಟು ಕಟ್ಟುವ ರೇಷ್ಮೆ ಪಟ್ಟೆ, ಪಟ್ಟೆ ವಸ್ತ್ರ, ಕೈವಸ್ತ್ರ ಮುಂತಾದವುಗಳಿಗೆ ಬಣ್ಣ ಕೊಟ್ಟು ಹೊಸದಾಗಿ ತಯಾರಿಸುತ್ತೇವೆ. ಬಿಳಿ ಉಡುಪುಗಳಿಗೆ ಇವರವರ ಇಷ್ಟದಂತೆ ಬಣ್ಣ ಕೊಡಲು ತಯಾರಿದ್ದೇವೆ. ಬಿಳೀ ಬಟ್ಟೆಗಳಿಗೆ ಗುಲಾಬಿ ಮತ್ತು ಕಪ್ಪು ಬಣ್ಣ ಕೊಡುವುದರಿಂದ ಬಣ್ಣಗಳು ಮಾತ್ರವಲ್ಲದೆ ಬೆಲೆ ಬಾಳುವ ಸೀರೆಗಳನ್ನು ವಾಷ್ (ಕ್ಲೀನ್) ಮಾಡಬೇಕಾದ್ದರಿಂದ ಕೇರಿಯಲ್ಲಿ ಹೆಚ್ಚು ಅನೇಕರ ಹಳೇ ಬಟ್ಟೆಗಳಿಗೆ ಬಣ್ಣ ಕೊಟ್ಟು ಹೊಸ ಮಾಡಿಕೊಟ್ಟಿರುತ್ತೇವೆ

ದರಗಳು

ಸೀರೆಗಳಿಗೆ		ರವಿಕೆ ಚೌಕಗಳಿಗೆ	
1 ನೇ ನಂಬರು	5—0—0	1 ನೇ ನಂಬರ್	1
2 ನೇ ನಂಬರು	4—8—0	2 ನೇ ನಂಬರ್	1
3 ನೇ ನಂಬರು	4—0—0	3 ನೇ ನಂಬರ್	1

ಬಟ್ಟೆಗಳ ಸಂಗಡ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿ. ಯಂ ಮುರುಗೇಶಮೊದಲಿಯಾರ್

(ಕ್ಲೀನ್ ಮತ್ತು ಡೈಯಿಂಗ್ ವರ್ಕ್ಸ್)

[4—2] ಗೌಳಿಬೀದಿ ಮಡಿಕೇರಿ

ಓಂ.

The Mysore Government Security Life and Marriage Assurance Company Ltd.

Head Office — Life and Marriage Assurance Buildings Mysore

ನೋಟೀಸು

ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ—ಈ ಕಂಪನಿಯು ಬಹಳ ಮುಂದೆ ಸಾಲ ನಮ್ಮ ಪಾಲಿಸಿಗಳ ಇನ್ವೆಸ್ಟ್‌ಮೆಂಟ್ ಕ್ರಮದಲ್ಲಿ ರೂಪಾಯಿಗಳನ್ನು ಸಾಲ ಕೊಡ ವೃದ್ಧಿಸಿ ಸಿಕ್ಕ ಕ್ವಾರ್ಟರ ಚೀಟಿ ಎತ್ತುವಂತೆ ಆಗಿರುತ್ತದೆ. ಈ ಕಂಪೆನಿಯ ವ್ಯವಹಾರ ಕಟ್ಟಿದ ಚೀಟಿಗಳಿಗೆ ಈ ಕೆಳಗಿನ ಬಾಂಡು ಗಳನ್ನು ಪಾಲುದಾರರ ಎತ್ತಲ್ಪಟ್ಟದ್ದರಿಂದ ಈ ಕಂಪನಿಯ ರೂಲ್ಸ್ ಗಳ ಅವರಿಗೆ ಅವರ ಸ್ವಂತ ಟವಾಬ್ದಾರಿಕೆಯಮೇಲೆ ಸಾಲ ಕೊಡುವುದಾಗಿ ಸಾಲ ಕೊಡಲ್ಪಟ್ಟ ಹಣವನ್ನು ಒಪ್ಪಿ (ಇಷ್ಟು) ಇಲ್ಲದೆ ಮೂರುತಿ ದಾವೃತ್ತಿ 10 ರೂಪಾಯಿಯಂತೆ 25 ವರ್ಷಗಳ ತುಂಬಿ ಬರುವುದು

ಹೆಸರು ವಿಳಾಸ	ಬಾಂಡ್ ನಂಬರು	
1 ಮ|| ಜೆಟ್ ಬೆಂಗಳೂರಿನ ಶಂಕರನ್ ಬಿಳಿಪಟ್ಟ ಗಿಲಿಸ್	6 59	10
2 ಮ|| ಕೃಷ್ಣ ಚಂದ್ರ ಒಕ್ಕಲಿಗ ಬಜಾರ ಮತ್ತು ಪ್ಯಾಕಾರಿ ದಲ್ಲಾ (ಬೆಂಗಳೂರು)	86	10
3 ಮ|| ಕೆ ಎಸ್ ಕಣ್ಣಯ್ಯನವರ ಆಫೀಸ್ ಕಟ್ಟಡ ಮಡಿಕೇರಿ ಕೊಡಗು	4 47	10

ಹೀಗೆ ಪ್ರತಿ ತಿಂಗಳಲ್ಲಿ ಎರಡು ಸಾರಿ ಸಾಲ ಚೀಟಿ ಎತ್ತಿ ಕೊಡ್ಡ ವೇಳಾಕಾಗಿರುವ ದರಿಂದಲೂ ಇದು ವರೆಗೆ ತಿಂಗಳು 31 ನೇ ತಾರೀಖಿನ ದಿ ಕ್ವಾರ್ಟರ್ ದಾವೃತ್ತಿ ಚೀಟಿ ಎತ್ತುವುದರಿಂದಲೂ ಸಾಲ ಇನ್ವೆಸ್ಟ್‌ಮೆಂಟ್ ಕ್ರಮದಮೇಲೆ ಯಾವ ಇಲ್ಲದೆ ದೇಹವಾಬ್ದಾರಿಕೆಯಮೇಲೆ ಸಾಲ ಕೊಳ್ಳುವವರು ಭಾಗ್ಯಶಾಲಿಗಳು (ಪ್ರವೇಶಧನ 2—ಸ್ಟ್ಯಾಂಪಿನೋಟ್ಟಿನ 0—8—0 ಡಿಶಂಬರ್ ತಿಂಗಳು 1—0—0 ಮತ್ತು 5 ರೂಪಾಯಿಗೆ ಮೇಲ್ 1—8—0) ಅಂತು ಒಟ್ಟು 5 ರೂಪಾಯಿ ಬಾಂಡಿಗೂ ಇದುವರೆಗಾಯಿ ನಂತ ಎಷ್ಟು ಬೇಕೋ ಅಷ್ಟು ಅರ್ಜಿ ಮತ್ತು ನೋಟುಗಳು ವಿಳಾಸಕ್ಕೆ ಕಳುಹಿಸಿದರೆ ಹಳೆ ಬಾಂಡು ಮತ್ತು ದಾಖಲೆಯೊಡನೆ ಹೊಸ ಬಾಂಡ ಹೆಸರನ್ನು ಸೇರಿಸಿ ಚೀಟಿ ಗಳಿದು ನೇರವೇರಿಕ್ಕೆ ಸಮರ್ಪಿಸಿದ ಭಾಗ್ಯ ವಂತರಾಗ್ಗು ಕಳುಹಿಸಲಾಗಿದೆ.

(ಎಸಂತಿ —ಹಳೆಯಬಾಂಡು ಮತ್ತು ನೋಟುಗಳು ಡಿಶಂಬರ್ ತಿಂಗಳವರೆಗೆ ತಮ್ಮ ಕಂತಿನ್ನು ಮತ್ತು ಬಡ್ಡಿ 1—8—0 ಹಣವನ್ನು ಆಫೀಸಿಗೆ ಕಳುಹಿಸಬೇಕಾಗಿ ಕೋರಿದೆ)

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಬಿ ಎಸ್ ಅನಾಥ್ಯ

ಕೊಡಂಬಾಯಿ ಮತ್ತು ಕೊಡಗಿನ

ಚೀಫ್ ಏಜೆಂಟ್

[4—3] ಮಡಿಕೇರಿ

Printed & Published by D S Krishna[illegible] Proprietor, at Sreenivas Electric Press for Kodagu Ltd., Mercara—21 12 1923

If not delivered please return to "Kodagu Office, Mercara" Reg. No. M. 1550.

ಕೊಡಗು.

ಸತಿ ನ ಭಾರತದುಯಾ ವಿದಾ ಪೀತಿ ಪ್ರಯತ್ನತಃ ಐಕಮತ್ಯೇನ ...ನಂ ಗುಸ್ಥಿರಾ ...ಪದ ||

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವುದು. "ಎಡಿಟರ್' ...

ಸಂಪುಟ ೩] ಕೊಡಗು ... ನೆಯ ಶುಕ್ರವಾರ. [ಸಂಚಿಕೆ ೩೦

ಪ್ರಿಂಟಿಂಗ್

ನಿಮ್ಮ ಇಂಗ್ಲೀಷು ಮತ್ತು ಕನ್ನಡ ಪ್ರಿಂಟಿಂಗ್ ಮತ್ತು ಬೈಂಡಿಂಗ್ ... ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರ ... ಜಾಗ್ರತೆಯಾಗಿಯೂ ಸುಲಭವಾಗಿಯೂ ಮಾಡಿ ಕೊಡುತ್ತೇವೆ

Srinivas Electric Press,
MYSORE

The Saraswathi Publishing Company
ಶಾರದಾ ಗ್ರಂಥಮಾಲೆ

ಈ ಗ್ರಂಥಮಾಲೆಯಲ್ಲಿ ... ಗ್ರಂಥಗಳು ... ಪ್ರಕಟವಾಗಿರುವ ಗ್ರಂಥಗಳು —

	ರೂ	ಆ	ಪೈ
ಪ್ರಿಯಂವದೆ (... ಸ್ತ್ರೀಚರಿತ್ರೆಗಳು)	0	6	0
ಶ್ರೀಪಾಲ (... ಬೋಧೆ)	0	8	0
... (...)	0	12	0
... (... ನಾಟಕ)	0	8	0
... (ನಾಟಕ)		4	0
... (ನಾಟಕ)	1	4	0
... (ನಾಟಕ)		4	0

ಈ ಎಲ್ಲಾ ... ರೂಪಾಯಿ 2—1—0 ... ಪ್ರಿಂಟಿನ ... ಗ್ರಂಥಗಳ ...

ಸಾಗ್ಯ

ಉತ್ತಮವರ್ಗದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ

ನಾಲ್ಕನೆಯ ಸಂಪುಟದ ಪ್ರಥಮ ಸಂಚಿಕೆ ... ಪ್ರಕಟವಾಗಿರುವುದು ... ನಾಟಕ ... ಪ್ರಕಟಿಸಲ್ಪಡುವುವು ... ಪ್ರಕಟನೆಯಲ್ಲಿ ... ಉಚಿತವಾಗಿ ...

ವಾರ್ಷಿಕ ಚಂದಾ ರೂಪಾಯಿ 3—0—0 ಮಾತ್ರ,

SARASWATHI PUBLISHING Co
Post Box No 57 Bangalore City

ಕಿರ್ಲೋಸ್ಕರ ನೇಗಲುಗಳಿಗೆ ಒಕ್ಕಲಿಗರು ಹೊಗಳುತ್ತಾರೆ

ಯಾಕೆಂದರೆ— ಇವು ಒಕ್ಕಲಿಗರಿಗೆ ತಗಲುವ ವೆಚ್ಚ ಮತ್ತು ಕಷ್ಟಗಳನ್ನು ಕಡಿಮೆಮಾಡುತ್ತವೆ ... ಮಾಡುತ್ತವೆ

ನಮ್ಮಲ್ಲಿ— ... ನೇಗಲುಗಳು ... ಮಾಡುವ ... ಇತ್ಯಾದಿ ತಯಾರಾಗುತ್ತವೆ.
'ಕೊಡಗ' ...

ಕಿರ್ಲೋಸ್ಕರ ಬಂಧು ಲಿಮಿಟೆಡ್,
[...—10] ಕಿರ್ಲೋಸ್ಕರವಾಡಿ (ಸಾತಾರಾ)

When you think of going to Bombay
THINK OF

THE WELCOME HOTEL.

Girgaum Back Road, BOMBAY.

Most airy accomodation—Most Central situation—Excellent Meals
Every Convenience

ವೆಲ್ಕಂ ಹೋಟೆಲ್.

ಗಿರ್ಗಾಂವ್ ಬ್ಯಾಕ್ ರೋಡ್, ಬೊಂಬಾಯಿ.

... ಅಲ್ಲಿ ಇಳಿಯಿರಿ ... ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಯೋಗ್ಯವಾದ ... ಬೊಂಬಾಯಿ ಪಟ್ಟಣದ ಮಧ್ಯಸ್ಥಳದಲ್ಲಿರುವ ... 15 ಮಿನಿಟುಗಳಷ್ಟು ... ಬ್ರಾಹ್ಮಣರ ಭೋಜನಾಲಯ

ಜೆ. ಶ್ರೀನಿವಾಸರಾವು,
[12—6] ಮೇನೇಜರ್

Cut this out This will guide you while in BOMBAY.

SHREE KRISHNA LODGE.

BOARDING & LODGING HOUSE,

SANDHURST ROAD, BOMBAY.

[12-7] **Comfortable time Assured**

ಕ್ರಾನ್ಸ್ ... ಸ್ಪೆನ್ಸರ್ ಕಂಪನಿಕ್ ಬೋಂಡಿಯ ಸಾಮಾನ್ ಬಂದಿತ್ತ್.

ಒ ಪ್ಪ ಬಂದಿತ್ ಸ್ಟೋರ್.

SPENCER & Co, Ltd, Mercara and Pollibetta, Coorg [2—9]

“ ಕೊಡಗು ”

೧೯೨೩ ನೇ ಇಸವಿ ಡಿಸೆಂಬರ್ ತಾ|| ೨೮ ನೇ ಶುಕ್ರವಾರ.

ಕೌನ್ಸಿಲು ಚುನಾವಣೆ.

ಈ ತಾರೀಕು 17 ರಲ್ಲು ಪ್ರಕಟವಾಗಿರುವ ಕೊಡಗು ಗಜೆಟಿನ ವಿಶೇಷ ಸಂಚಿಕೆಯಲ್ಲು ಕೌನ್ಸಿಲು ಮೆಂಬರುತನಕ್ಕೆ ಉಮೇದುವಾರರಾಗಿ ನಿಲ್ಲಲು ಅಪೇಕ್ಷಿಸುವವರು ಈ ತಾರೀಕು 27 ರಲ್ಲಿ ಅಥವಾ ಅದಕ್ಕೆ ಮೊದಲು 11 ಗಂಟೆಯಿಂದ 3 ಗಂಟೆ ಒಳಗೆ ಪಾಡಿ ಎಡೆತಾಲೋಕು ಮತ್ತು ಕಿಗ್ಗಟ್ಟುನಾಡು ತಾಲೋಕಿನ ಪ್ರತಿನಿಧಿಗಳಾಗಲು ಇರಾದೆಯುಳ್ಳವರು ವೀರಾಜಪೇಟೆ ತಾಲೋಕು ಆಫೀಸಿನಲ್ಲಿಯೂ, ಮಡಿಕೇರಿ ತಾಲೋಕು ಮತ್ತು ಸಂಜರಾಯಪಟ್ಣ ತಾಲೋಕಿನ ಉಮೇದುವಾರರುಗಳು ಮಡಿಕೇರಿ ತಾಲೋಕು ಆಫೀಸಿನಲ್ಲೂ ಆಯಾಯ ತಾಲೋಕು ರಿಟರ್ನಿಂಗ್ ಆಫೀಸರುಗಳಿಗೆ ಅಂದರೆ ಸುಬೇದಾರರುಗಳಿಗೆ ಅರ್ಜಿಕೊಡಬೇಕೆಂತ ಸೂಚಿಸಿದೆ. ಈ ಅರ್ಜಿಯೊಂದಿಗೆ ಪ್ರತಿಯೊಬ್ಬ ಉಮೇದುವಾರನು 250 ರೂಪಾಯಿಗಳನ್ನು ಸರ್ಕಾರದಲ್ಲಿ ಠೇವಣಾತಿ ಕಟ್ಟಬೇಕು. ಚುನಾವಣೆಯಲ್ಲಿ ಓಟು ಕೊಡಲು ಹಾಜರಾಗುವವರ ಸಂಖ್ಯೆಯಲ್ಲಿ ಒಂದು ಅಥವಾ ಎರಡು ಮೆಂಬರುಗಳು ಬೇಕಾದಲ್ಲಿ ಎಂಟರಲ್ಲಿ ಒಂದುಭಾಗವೂ ಮೂರು ಮೆಂಬರುಗಳು ಬೇಕಾದಲ್ಲಿ ಇಪ್ಪತ್ತನಾಲ್ಕರಲ್ಲಿ ಒಂದುಭಾಗದ ಓಟುಗಳು ಸಿಕ್ಕದೆಹೋದರೆ ಠೇವಣಾತಿ 250 ರೂಪಾಯನ್ನು ಕೊಡಲಾಗುವುದಿಲ್ಲ. ಅಲ್ಲದೆ ಈ ಅರ್ಜಿ ಜೊತೆಯಲ್ಲೇ ಪ್ರತಿ ಉಮೇದುವಾರನು ಒಬ್ಬ ಇಲೆಕ್ಷನ್ ಏಜಂಟನ್ನು ನೇಮಿಸಿದ್ದೇನೆಂದು ಅವನ ಹೆಸರನ್ನು ಬರೆದುಕೊಡಬೇಕು. ಉಮೇದುವಾರನೇ ತನ್ನ ಅಂಥಾ ಏಜೆಂಟಾಗಬಹುದು ಬೇರೊಬ್ಬನೂ ಆಗಬಹುದು. ಹೀಗೆ ಕೊಟ್ಟಂಥ ಅರ್ಜಿಗಳನ್ನು ರಿಟರ್ನಿಂಗ್ ಆಫೀಸರರು ಇದೇ ತಾರೀಖು 29 ರಲ್ಲು ಆಯಾ ತಾಲೋಕಿನ ಉಮೇದುವಾರರುಗಳು ಮುಂದೆ ಅಜಮಾಯಿಸಿ ನೋಡುವರು. ಆ ದಿನ ಸರಿಯಾಗಿ ಅರ್ಜಿ ಕೊಟ್ಟ ಉಮೇದುವಾರರುಗಳ ಹೆಸರನ್ನು 31 ನೇ ತಾರೀಕಿನಲ್ಲಿ ಪ್ರಕಟಿಸುವರು. ಆಯಾ ಕಾನ್ಸ್ಟಿಟುವೆನ್ಸಿಯಲ್ಲಿ ಬೇಕಾದ ಮೆಂಬರುಗಳ ಸಂಖ್ಯೆಗಿಂತ ಹೆಚ್ಚು ಅರ್ಜಿಗಳಿದ್ದರೆ ಜನವರಿ ತಾರೀಕು 15 ರಲ್ಲು ಬೆಳಿಗ್ಗೆ 7 ಗಂಟೆಯಿಂದ ಸಾಯಂಕಾಲ 5 ಗಂಟೆವರೆಗೆ (ಮಧ್ಯಾಹ್ನ 12 ರಿಂದ 1 ಗಂಟೆಯವರೆಗೆ ವಿಶ್ರಾಂತಿ ಇದೆ) ಈ ಮೊದಲೇ ಪ್ರಕಟಿಸಿದ ಪಟ್ಟಿಯಲ್ಲಿ ಕಂಡಮೇರೆ ಆಯಾ ಊರವರು ಆಯಾ ಓಟಿಂಗ್ ಸೆಂಟರಿಗೆ ಹಾಜರಾಗಿ ಓಟು ಕೊಡಬೇಕು. ಪಟ್ಟಿಯಲ್ಲಿ ನಮೂದಿಸಿರುವಂತೆ ಗ್ರಾಮದವರು ಅವರವರ ಓಟಿಂಗ್ ಸ್ಥಳಗಳಲ್ಲು ಓಟುಕೊಡಬೇಕಲ್ಲದೆ ಬೇರೆಕಡೆಗಳಲ್ಲಿ ಬಿಡಲಾಗುವುದಿಲ್ಲ. ಒಬ್ಬ ಓಟರು ಒಂದೇ ಸ್ಥಳದಲ್ಲಿ ಓಟು ಕೊಡತಕ್ಕದ್ದು. ದೇಶದಲ್ಲೆಲ್ಲಾ ಒಂದೇದಿನ ಓಟು ತೆಗೆಯಲಾಗುತ್ತೆ. ಈ ಕ್ಲಿಪ್ತಕಾಲದೊಳಗೆ ಒಂದು ಓಟು ಕೊಡದೆ ಹೋದರೆ ನಂತರ ಕೊಡಲಿಕ್ಕಾಗುವುದಿಲ್ಲ. ಆದುದರಿಂದ ಓಟರುಗಳು ಈ ವಿಷಯದಲ್ಲಿ ಎಚ್ಚರವಾಗಿದ್ದು ತಮ್ಮ ತಮ್ಮ ಸ್ಟೇಶನುಗಳಲ್ಲಿ ಕಾಲಕ್ಕೆ ಸರಿಯಾಗಿ ಹಾಜರಾಗಿ ಅಮೂಲ್ಯವಾದ ತಮ್ಮ ಓಟಿನ ಹಕ್ಕನ್ನು ಉಪಯೋಗಿಸಬೇಕಾದದ್ದು ಅವರ ಕರ್ತವ್ಯವಾಗಿದೆ.

ತಾ|| 22 ರಲ್ಲು ವೀರಾಜಪೇಟೆಯಲ್ಲು ನಡೆದ ಜಮಾನದಾರರ ಸಂಘದ ವಿಶೇಷ ಜನರಲ್ ಮೀಟಿಂಗಿನಲ್ಲು, ದೇಶದವರು ಕೇಳುತ್ತಿದ್ದಷ್ಟು ಹಕ್ಕುಗಳುಳ್ಳ ಕೌನ್ಸಿಲು ಇಲ್ಲದಿದ್ದರೆ ಈಗ ಮಂಜೂರಾದ ಕೌನ್ಸಿಲನ್ನು ಸಾಧ್ಯವಾದಷ್ಟುಮಟ್ಟಿಗೆ ಉಪಯೋಗಿಸಲು ತೀರ್ಮಾನಿಸಿರುವುದರಿಂದ ಪ್ರತಿಯೊಬ್ಬ ಓಟರು ತನ್ನ ಓಟಿನ ಹಕ್ಕನ್ನು ಉಪಯೋಗಿಸಲೇಬೇಕೆಂತ ನಮ್ಮ ಅಭಿಪ್ರಾಯ. ಓಟುಕೊಡಲು ಹಕ್ಕಿರುವವರ ಪೈಕಿ ಎಷ್ಟು ಜನರು ತಮ್ಮ ಹಕ್ಕನ್ನು ಉಪಯೋಗಿಸುತ್ತಾರೆಂಬುದರಿಂದ ನಮ್ಮ ದೇಶದ ಆಡಳಿತದಲ್ಲಿ ಭಾಗಿಗಳಾಗಿರಲು ದೇಶೀಯರು ಎಷ್ಟರಮಟ್ಟಿಗೆ ಕುತೂಹಲವುಳ್ಳವರಾಗಿರುವವರೆಂದು ವಿಶದವಾಗುತ್ತದೆ. ಇದಕ್ಕಿಂತಲೂ ಸರ್ಕಾರದ ಹೆಚ್ಚಿನ ಜವಾಬ್ದಾರಿಯನ್ನು ಪ್ರಜೆಗಳ ಪ್ರತಿನಿಧಿಗಳಿಗೆ ಕೊಡಬೇಕಾದರೆ ಸರ್ಕಾರದವರು ಈ ಲೆಖ್ಖವನ್ನು ಗಣನೆಗೆ ತೆಗೆದುಕೊಳ್ಳುವರು. ಆದುದರಿಂದ ಓಟರುಗಳು ಕುಯಿಲುಕೆಲಸದ ಮಧ್ಯದಲ್ಲಿ ಓಟುಕೊಡಬೇಕಾದರೂ ಕೂಡ ಉದಾಸೀನ ಮಾಡದೆ ಒಂದುದಿವಸದ ಕೆಲಸವನ್ನು ಬಿಟ್ಟಾದರೂ ಬಂದು ಆಡಳಿತ ಜವಾಬ್ದಾರಿಯನ್ನು ವಹಿಸಿಕೊಳ್ಳಲು ತಮಗಿರುವ ಆತುರವನ್ನು ಖಂಡಿತವಾಗಿಯೂ ಸೂಚಿಸಬೇಕು.

ಜನರು ಎಷ್ಟು ತೊಂದರೆ ತೆಗೆದುಕೊಂಡು ತಮ್ಮ ಕೆಲಸವನ್ನು ಬಿಟ್ಟು ಓಟಿಂಗ್ ಸ್ಥಳಕ್ಕೆ ಬಂದರೂ ಓಟುಕೊಡುವ ಕ್ರಮವನ್ನು ತಿಳಕೊಳ್ಳದೆ ಹೋದರೆ ತಮ್ಮ ಪ್ರಯತ್ನವೆಲ್ಲಾ ನಿಷ್ಪ್ರಯೋಜನವಾದೀತು. ಈ ಹೊಸರೀತಿಯಲ್ಲಿ ಓಟು ಕೊಡುವ ಪದ್ಧತಿಯು ನಮ್ಮ ದೇಶದಲ್ಲಿ ನವೀನವಾದುದರಿಂದಲೂ, ಇದನ್ನು ತಿಳಕೊಳ್ಳಲು ಬೇರೆ ಅನುಕೂಲಗಳು ಇಲ್ಲದೆ ಇರುವುದರಿಂದ ಈ ವಿಷಯ ಸ್ವಲ್ಪಮಟ್ಟಿಗೆ ವಿವರಿಸಬೇಕಾಗಿದೆ. ಪ್ರತಿಯೊಬ್ಬ ಓಟರನು ತನಗೆ ಓಟು ಕೊಡುವ ಹಕ್ಕಿದೆಯೋ ಎಂಬದನ್ನು ತಾಲೋಕು ಕಚ್ಚೇರಿಯಲ್ಲಿರುವ ಓಟರ ಪಟ್ಟಿಯನ್ನು ನೋಡಿ ತಿಳಿದುಕೊಂಡು ಸಾಧ್ಯವಿದ್ದರೆ ತನ್ನ ನಂಬರನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ನಂಬರನ್ನು ತಿಳಕೊಂಡರೆ ಓಟು ತೆಗೆದುಕೊಳ್ಳುವ ಆಫೀಸರಿಗೆ ಸಹಾಯಮಾಡಿದಂತಾಗುವುದಲ್ಲದೆ ಹೆಚ್ಚು ವಿಳಂಬವಿಲ್ಲದೆ ಸುಲಭದಲ್ಲಿಯೇ ಓಟು ಕೊಡಲು ಅನುಕೂಲವಾಗುವುದು. ಓಟುಕೊಡುವ ಸ್ಥಳದಲ್ಲು ಪ್ರಿಸೈಡಿಂಗ್ ಮತ್ತು ಪೋಲಿಂಗ್ ಆಫೀಸರುಗಳಲ್ಲದೆ ಉಮೇದುವಾರರಾಗಲೀ ಅವರ ಏಜೆಂಟರುಗಳಾಗಲೀ ಹಾಜರಿರುವರು. ಇಂಥಾ ಪೋಲಿಂಗ್ ಏಜೆಂಟರುಗಳನ್ನು ಉಮೇದುವಾರರು ಬರಹ ಮೂಲಕ ನೇಮಿಸುತ್ತಾರೆ. ಓಟು ಕೊಡುವ ಕೆಲಸದಲ್ಲಿ ಯಾವದೊಂದು ಅಕ್ರಮ ನಡೆಯದಂತೆ ನೋಡಿಕೊಳ್ಳುವ ಮತ್ತು ಹಾಗೆ ಅಕ್ರಮ ನಡೆದರೆ ಆಗಲೇ ಪ್ರಿಸೈಡಿಂಗ್ ಆಫೀಸರಿಗೆ ತಿಳಿಸುವ ಅಧಿಕಾರವು, ಈ ಏಜೆಂಟರುಗಳಿಗೆ ಇರುತ್ತೆ. ಹಾಜರಾಗುವ ಓಟರನ ಹೆಸರು ಮತ್ತು ನಂಬರು ತಿಳಕೊಂಡ ನಂತರ ಪ್ರಿಸೈಡಿಂಗ್ ಆಫೀಸರು ಬೇಲೆಟ್ ಪೇಪರನ್ನು ಕೊಡುತ್ತಾರೆ. ಈ ಪೇಪರಿನಲ್ಲಿ ಉಮೇದುವಾರರುಗಳ ಹೆಸರುಗಳು ಕನ್ನಡದಲ್ಲಿ ಪ್ರಿಂಟು ಮಾಡಲ್ಪಟ್ಟಿರುತ್ತೆ. ಅದರಲ್ಲಿ ಉಮೇದುವಾರರ ಹೆಸರುಗಳ ಮೊದಲನೇ ಅಕ್ಷರವು ಅಕ್ಷರಮಾಲೆಯಲ್ಲಿರುವ ಕ್ರಮದ ಪ್ರಕಾರ ಹೆಸರುಗಳು ಒಂದರಕೆಳಗೆ ಒಂದು ಪ್ರಿಂಟಾಗಿರುತ್ತೆ. ಬೇಲೆಟ್ ಪೇಪರಿನ ಮಾದರಿಯನ್ನು ಈ ಕೆಳಗೆ ಕಾಣಿಸಿರುವೆವು :—

ಕೆ. ಕೆ ಅಣ್ಣಯ್ಯ	
ಎಂ ಎಸ್ ಬೋಳ್ಳಿಯ್ಯ	
ಆರ್ ಎನ್ ಬಿದ್ದಪ್ಪ	
ಬಿ ದೇವೈಯ್ಯ	
ಡಿ. ಸಿ. ಗಣಪತ್ತಿ	
ಆರ್. ಐಯ್ಯಣ್ಣ	

ಇದರ ಹಿಂದುಗಡೆ ಸೂಚನೆಯು ಹೀಗಿರುತ್ತೆ —(1) ನೀವು ಓಟು ಕೊಡಬಹುದಾದ ಮೆಂಬರುಗಳ ಸಂಖ್ಯೆ........

(2) ನಿಮಗೆ ಓಟು ಕೊಡಲು ಮನಸ್ಸಿರುವ ಪ್ರತಿಯೊಬ್ಬ ಉಮೇದುವಾರನ ಹೆಸರಿನ ಎದುರಿನಲ್ಲಿ ಈ × ಗುರುತು ಮಾಡಬೇಕು

(3) ಈ ಗುರುತು .... ಜನರ ಹೆಸರಿಗೆ ಮಾತ್ರ ಹಾಕಬೇಕು

ಕಿಗ್ಗಟ್ಟುನಾಡು ತಾಲೋಕು ಮತ್ತು ಪಾಡಿ ಎಡೆ ತಾಲೋಕಿನ ಜಮ್ಮಾ ಓಟರುಗಳಿಗೆ ಮೂರು ಉಮೇದುವಾರರುಗಳ ಹೆಸರಿಗೂ, ಮಡಿಕೇರಿ ತಾಲೋಕಿನ ಜಮ್ಮಾ ಓಟರುಗಳಿಗೆ ಎರಡು ಹೆಸರುಗಳಿಗೂ ಸಂಜರಾಯಪಟ್ಣ ಜಮ್ಮಾ ಓಟರುಗಳಿಗೆ ಒಂದೇ ಹೆಸರಿಗೂ ಎಲ್ಲಾ ತಾಲೋಕುಗಳ ಸಾಗಿನ ಓಟರುಗಳಿಗೆ ಒಂದೇ ಹೆಸರಿಗೂ ಗುರ್ತುಮಾಡುವ ಹಕ್ಕಿದೆ. ಒಂದು ಹೆಸರಿಗೆ ಒಂದಲ್ಲದೆ ಹೆಚ್ಚು ಗುರ್ತು ಮಾಡಕೂಡದು. ಆಯಾ ತಾಲೋಕಿನಲ್ಲಿ ಬೇಕಾಗಿರುವ ಮೆಂಬರುಗಳ ಸಂಖ್ಯೆಗಿಂತ ಹೆಚ್ಚಿನ ಹೆಸರುಗಳ ಮುಂದೆ ಗುರ್ತು ಹಾಕಬಾರದು. ಬೇಲೆಟ್ ಪೇಪರಿನಲ್ಲಿ ಓಟುಕೊಟ್ಟವನ ರುಜುವಾಗಲೀ, ಬೇರೆ ಯಾವ ಗುರ್ತಾಗಲೀ ಹಾಕಕೂಡದು. ಈ ಕ್ರಮಕ್ಕನುಸಾರವಾಗಿ ನಡೆಯದೆ ಹೋದರೆ ಅಂಥಾ ಓಟನ್ನು ಎಣಿಕೆಗೆ ತೆಗೆದುಕೊಳ್ಳುವುದಿಲ್ಲ. ಓದುಬರಹ ಗೊತ್ತಿರುವವನಿಗೆ ಇಂಥಾ ಬೇಲೆಟ್ ಪೇಪರ್ ಕೊಟ್ಟು ಯಾರೂ ಇಲ್ಲದಂಥ ಮಗ್ಗುಲದ ಕೊಠಡಿಗೆ ಕಳುಹಿಸುವರು. ಅಲ್ಲಿ ಅವನು ತನಗೆ ಒಪ್ಪಿಗಿರುವವರಿಗೆ ಗುರ್ತುಮಾಡಿ ಮಡಚಿ ಅದರ ಹಿಂದುಗಡೆ ಮೊದಲೇ ಹಾಕುವ ಸರ್ಕಾರಿ ಸೀಲನ್ನು ಪ್ರಿಸೈಡಿಂಗ್ ಆಫೀಸರಿಗೆ ತೋರಿಸಿ ಅಲ್ಲಿಟ್ಟಿರುವ ಪೆಟ್ಟಿಗೆಯೊಳಕ್ಕೆ ಹಾಕಬೇಕು. ಓದುಬರಹ ಇಲ್ಲದವರು ಪ್ರಿಸೈಡಿಂಗ್ ಆಫೀಸರಿಗೆ ತಿಳಿಸಿದರೆ ಆ ಬೇಲೆಟ್ ಪೇಪರಿನಲ್ಲಿರುವ ಹೆಸರುಗಳನ್ನು ಓದಿ ಹೇಳುತ್ತಾರೆ. ಅವುಗಳ ಪೈಕಿ ತನಗೆ ಒಪ್ಪಿಗೆ ಇರುವವರ ಹೆಸರನ್ನು ಓಟು ಕೊಡುವವನು ಹೇಳಿದಲ್ಲು ಪ್ರಿಸೈಡಿಂಗ್ ಆಫೀಸರು ಉಮೇದುವಾರರ ಅಥವಾ ಅವರ ಏಜೆಂಟರುಗಳ ಮುಂದೆ ಗುರ್ತುಗಳನ್ನು ಹಾಕುತ್ತಾರೆ. ಸರ್ಕಾರದವರು ಓಟರುಗಳ ಮನಪೂರ್ತಿಯಾಗಿ ಓಟುಕೊಡಲು ತಕ್ಕ ಅನುಕೂಲಗಳನ್ನು ಏರ್ಪಡಿಸಿರುವಾಗ್ಗೆ ಇನ್ನೊಂದುಕಡೆ ಪ್ರಕಟಿಸಿರುವ ಕಮಿಷನರವರ ಭಾಷಣದಮೇರೆ ದೇಶದವರ ಪ್ರತಿನಿಧಿಗಳಾಗಲು ಯೋಗ್ಯರಾದವರನ್ನೇ ಕೌನ್ಸಿಲಿಗೆ ಮೆಂಬರುಗಳಾಗಿ ಓಟರುಗಳು ಚುನಾಯಿಸುತ್ತಾರೆಂತ ನಾವು ನಂಬುತ್ತೇವೆ.

ಹಜರತ್ರ್ ಮೆ|| ಸೆ. ಚೋಳ್ಳಚೆಂಗಪ್ಪ ಬಿ.ಎ., ಅವರ ಹೆಸರಿನಲ್ಲಿ ನಡೆದ ಪೂಜಾಕ್ರಮ

(ನಮ್ಮ ಸ್ವಂತ ಬಾತ್ಮಿದಾರರಿಂದ)

ಮೆ|| ಚಂಗಪ್ಪನವರ ಹೆಸರಿನಲ್ಲಿ ಮುಜರಾಯಿ ಇಲಾಖೆಯ ಅಧಿಕಾರದಲ್ಲಿರುವ ದೇವಾಲಯಗಳಲ್ಲೂ, ಇತರ ದೇವಾಲಯಗಳಲ್ಲೂ ಕಳೆದ ಅಕ್ಟೋಬರ್ 13 ನೇ ತಾರೀಖಿನ ದಿನ ಪೂಜೆಪುರಸ್ಕಾರಗಳು ನಡೆಯಬೇಕೆಂದು ನೇಮಕವಾಗಿತ್ತು. ಆದರೆ ಅವರ ದೇಹಾನಾರೋಗ್ಯದ ಬೆಸೆಯಿಂದ ಸದರಿ ಪೂಜೆಯನ್ನು ಮುಂದೊತ್ತಲಾಯಿತು. ಅವರ ಆರೋಗ್ಯವು ಸ್ವಾಸ್ಥ್ಯಕ್ಕೆ ಬಂದೊಡನೆ, ಅವರ ಇಚ್ಛಾನುಸಾರವಾಗಿ ಮಡಿಕೇರಿಯ ಜನರು ಇದೇ ತಿಂಗಳ 3 ನೇ ತಾರೀಖಿನದಿನ ಪೂಜೆಯನ್ನು ಎಲ್ಲಾ ದೇವಾಲಯಗಳಲ್ಲಿ ವಿಜೃಂಭಣೆಯಿಂದ ನಡೆಸಿದರು.

ಮೆ|| ಚೆಂಗಪ್ಪನವರು ಆದಿನ ಸಾಯಂಕಾಲ 7 ಘಂಟೆಗೆ ಸರಿಯಾಗಿ ನಿಯಮಿತವಾದ ಚೌಕಕ್ಕೆ ತಮ್ಮ ಮೋಟಾರಿನಲ್ಲಿ ಮೆ|| ಜೆ. ಯಂ ಕಾಮತರವರ ಜತೆಯಲ್ಲಿ ಬಂದಿಳಿದರು. ಅಗ್ಗೆ ಮೆ|| ಆರ್ ಸಂಜೀವರಾಯರು ಪಟ್ಟಣಿಗರ ಪರವಾಗಿ ಅವರಿಗೂ ಸ್ವಾಗತವನ್ನಿತ್ತರು. ಅಲ್ಲಿ ಮೆ|| ಅಸಿಸ್ಟೆಂಟ್ ಸೂಪರಿಂಡೆಂಟ ದೇವಯ್ಯನವರೇ ಮೊದಲಾದ ಬಹುಮಂದಿ ಉದ್ಯೋಗಸ್ಥರು ಇತರ ಜನರು ನೆರೆದಿದ್ದರು. ಮೆ|| ಚಂಗಪ್ಪನವರು ತಮ್ಮ ಆಪ್ತೇಷ್ಟರೊಡನೆ ಮುಂದರಿದು ಹೋಗುತ್ತಿದ್ದಾಗ ದಾರಿಯಲ್ಲಿ ಮೆ|| ಅಜೀಜ್ ಸಾಹೇಬರು ತಮ್ಮ ಅಂಗಡಿಮುಂದೆ ಕಲಮಕ್ಕಳಿಂದ [illegible] ಮೇಲೆ ಶ್ರೇಯೋಪ್ರಾರ್ಥನೆಗಳನ್ನು ಮಾಡಿಸಿದರು. ತದನಂತರ ಇವರು ವೇಳ್ಳಾಳಜನರ ರಾಮ ಮಂದಿರಕ್ಕೆ ಚಿತ್ತೈಸಿ ಪೂಜಾತೀರ್ಥವನ್ನು ಪಡೆದು ಹಿಂತಿರುಗಿ ಮಹದೇವಪೇಟೆಗಾಗಿ ವೈಶ್ಯರ ಕನ್ನಿಕಾಪರಮೇಶ್ವರಿ ದೇವಾಲಯಕ್ಕೂ, ಶ್ರೀರಾಮಮಂದಿರ ಶ್ರೀವರದಮೃಷ್ಣಮಂದಿರ ಶಂಕರದೇವಾಲಯ, ಬಸವೇಶ್ವರನ ದೇವಸ್ಥಾನ ಇವೆಲ್ಲವುಗಳಿಗೂ ದಯಮಾಡಿಸಿ ಪ್ರಸಾದವನ್ನು ಸ್ವೀಕರಿಸಿದರು.

ಅಂತ್ಯದಲ್ಲಿ ಇವರಿಗೂ ಇವರೊಡನೆ ದಯಮಾಡಿಸಿದ್ದ ದೊಡ್ಡ ಮನುಷ್ಯರಿಗೂ ಮಡಿಕೇರಿ ಎ ವಿ ಸ್ಕೂಲಿನಲ್ಲಿ ತಿಂಡಿ ತೀರ್ಥ ನಡೆಯಿತು. ಅಲ್ಲಿ ಮೆ|| ಯಸ ಬಸಪ್ಪನವರು ಲಿಂಗಾಯತರ ಪರವಾಗಿ ಮೆ|| ಚಂಗಪ್ಪನವರ ಗುಣಕಥನ ಮಾಡಿದರು. ಪ್ರತ್ಯುತ್ತರವಾಗಿ ಮೆ|| ಚಂಗಪ್ಪನವರೂ ತನ್ನ ಹೆಸರಿನಲ್ಲಿ ಪೂಜೆನಡೆಸಿದ್ದಕ್ಕೂ, ಇಲ್ಲಿ ಟೀಪಾರ್ಟಿ ಏರ್ಪಾಡು ಮಾಡಿದ್ದಕ್ಕೂ ಪೇಟೆ ಸವಾರಿಗಳನ್ನು ಬಹಳವಾಗಿ ಹೊಗಳಿ ಮಾತಾಡಿದರು. “ನಾನು ಆ ಮನುಷ್ಯ ಈ ಮನುಷ್ಯನೆಂಬ ಭೇದವನ್ನಿಟ್ಟಿಲ್ಲ. ಎಲ್ಲರೂ ಒಂದೇಯಾಗಿ ತೋರುವರು” ಎಂದು ಅವರು ನುಡಿದ ಮಾತುಗಳು ಬಹು ಪ್ರೋತ್ಸಾಹಕರವಾಗಿದ್ದುವು.

ಇಲ್ಲಿ ಸಭೆಯು ವಿಸರ್ಜಿಸಲ್ಪಟ್ಟನಂತರ ಚಂಗಪ್ಪನವರು ಮೆ|| ಹೆಜ್ಜೆಯೀರಪ್ಪಶೆಟ್ಟರ ಭಜನೆ ಮಂದಿರಕ್ಕೆ ಆಗಮಿಸಿ, ಪ್ರಸಾದಪಡೆದು ಗಣಪತಿಬೀದಿಗಾಗಿ ಮುಂದೆ ಹೋಗುತ್ತಿದ್ದಾಗ ಮೆ|| ಮೊಹಮ್ಮದಲಿ ಸಾಹೇಬರು ತಮ್ಮ ಮಕ್ಕಳಿಂದ ಹಾಡಿಸಿ ಅವರನ್ನು ಇನ್ನೂ ಉತ್ತಮಸ್ಥಿತಿಗೆ ದೇವರು ಏರಿಸಲೆಂದು ಪ್ರಾರ್ಥಿಸಿದರು. ಸರ್ವರೂ ಚೌಕಕ್ಕೆ ಬಂದು ಮೆ|| ಚಂಗಪ್ಪನವರನ್ನು ವಿನಯದಿಂದ ಕಳುಹಿಸಿ, ತಮ್ಮ ತಮ್ಮ ಗೃಹಗಳಿಗೆ ಸಾರಿದರು.

1923 ನೇ ಇಸವಿ ಡಿಸಂಬರ್ ತಾರೀಖು 20 ರಲ್ಲು ಬೆಳಿಗ್ಗೆ 9 ಗಂಟೆಗೆ ಮಡಿಕೇರಿ ಮುನಿಸಿಪಲ್ ಆಫೀಸಿನಲ್ಲು ನಡೆದ ಕೊಡಗು ಸೆಂಟ್ರಲ್‌ಬ್ಯಾಂಕಿನ ಡೈರಕ್ಟರುಗಳ ಕಮಿಟಿ ಮೀಟಿಂಗಿನ ವಿವರ :—

ಹಾಜರಿದ್ದ ಮೆಂಬರುಗಳು.—(1) ಮೆ|| ಕೆ ಕುಟ್ಟಯ್ಯನವರು, ಆರ ಬಿ ಪ್ರೆಸಿಡೆಂಟರು, (2) ಮೆ|| ಉದಿಯಂಡ ಪೂವೈಯ್ಯನವರು, (3) ಮೆ|| ಯಂ ಭುಜಂಗರಾಯರು ಬಿ ಎ ಬಿ ಎಲ್. ಟ್ರೆಜರರ್ (4) ಮೆ|| ಸಿ. ಎನ್ ವೆಂಕಪ್ಪೈಯ್ಯನವರು ಬಿ ಎ ಬಿ ಎಲ್ ಗೌರವಸೆಕ್ರೆಟರಿ, (5) ಮೆ|| ಕೆ ಸುಬ್ಬೈಯ್ಯನವರು ಆರ್ ಯಸ್ (6) ಮೆ|| ಪಿ. ಪೊನ್ನಪ್ಪನವರು, (7) ಕೋಅಪರೇಟಿವ್ ಸಂಘದ ರಿಜಿಸ್ಟ್ರಾರವರು

1 ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು

2 ಕಳೆದ ನವಂಬರ್ ತಿಂಗಳ ಜಮಾ ಮತ್ತು ಖರ್ಚು ಓದಲಾಯಿತು

3 ಸೋಮವಾರಪ್ಯಾಟೆ ಸೊಸೈಟಿಯವರ 2000 ರೂಪಾಯಿ ಸಾಲದ ಅಪ್ಲಿಕೇಶನ್ ಓದಲಾಯಿತು. ಮೇಲ್ಕಂಡ ಸಾಲವನ್ನು ತಾರೀಖು 31–3–1925 ರಲ್ಲು ಬಡ್ಡಿ ಸಮೇತ ವಾಪಸುಕೊಡುವ ಶರತ್ತುಮೇರೆ ಮಂಜೂರಾಯಿತು.

4 ಮಡಿಕೇರಿ ಟವ್ನ್ ಕೋಅಪರೇಟಿವ್ ಸೊಸೈಟಿಯವರ 1000 ರೂಪಾಯಿಯ ಸಾಲದ ಅರ್ಜಿ ಓದಲಾಯಿತು. ಆದರೆ ಅವರಿಗೆ 800 ರೂಪಾಯಿ ಪ್ರತಿತಿಂಗಳಲ್ಲಿಯೂ 100 ರೂಪಾಯಿ ಮತ್ತು ಬಡ್ಡಿ ವಾಪಸು ಕೊಡುವ ಶರತ್ತಿನಮೇರೆ ಮಂಜೂರಾಯಿತು.

ಕೆ. ಕುಟ್ಟಯ್ಯ,
ಪ್ರೆಸಿಡೆಂಟರು

ಶ್ರೀ|| ಸಿ. ಎ. ಸೂಟರ್‌ಸಾಹೇಬರಿಗೆ ಸತ್ಕಾರ.

(ನಮ್ಮ ಸ್ವಂತ ಬಾತ್ಮಿದಾರರಿಂದ)

ಮೆ|| ಸೂಟರ್‌ಸಾಹೇಬರ ದೇಶದ ಎಲ್ಲಾ ಭಾಗದಲ್ಲಿರುವ ಸ್ನೇಹಿತರು ಸೇರಿ ತಾ|| 20-12-23 ರಲ್ಲಿ ಮಡಿಕೇರಿ ರಾಜಾಸೀಟ್ ಮೈದಾನದಲ್ಲಿ ಸತ್ಕರಿಸಿದರು. ತಿಂಡಿ ತೀರ್ಥಗಳು ಚಲೋರೀತಿಯಿಂದ ತಂದಿಡಲ್ಪಟ್ಟಿತು. ಸೂರ್ಯಾಸ್ತಮಯವಾಗುವಷ್ಟರಲ್ಲಿ ವಿಸ್ಕಿಬಾಟಲುಗಳು ಖಾಲಿಯಾಗಿತ್ತು. ಬಂದದ್ದರಿಂದ ಈ ಸಂದರ್ಭದಲ್ಲಿ “ತೀರ್ಥ” ತ[illegible]ದಲ್ಲಿ ಈ ನಿಶಾಪದಾರ್ಥವೂ ಸೇರಿಕೊಂಡಂತಾಯಿತು. [illegible]ಟ್‌ಗಳು ತುಂಬಾ ಜೋಡಿಸಲ್ಪಟ್ಟಿದ್ದವು. ಖಾಲಿಯಾದುವೋ ಅನೇಕ ಇದ್ದವು. ಮಹಿಳೆಯರು ಕೆಲವರು ಯುರೋಪಿಯನ್ ಆಫೀಸರುಗಳು ಕೆಲವರೂ ಇದ್ದರು. ಸಂಗೀತ, ಕುಸ್ತಿ, ಶಕ್ತಿಸಾಧನೆಗಳು ಆದವು. ಬಿಳೀ ಕುಪ್ಪಸ [illegible]ದಷ್ಟು ಕಟ್ಟಿದ್ದ ಕೊಡಗು ಜನರು ದುಡಿಯನ್ನು ಬಾರಿಸುತ್ತಾ ಹಾಡಿದರು. ಇವರ ಸುತ್ತ ಸಾಧಾರಣವಾಗಿ ದೇವಸ್ಥಾನಗಳಲ್ಲಿ ಕುಣಿಯುವ ರೀತಿಯಲ್ಲಿ “ಬೊಳಕಾಟ” ಎಂಬ ಕುಣಿತವನ್ನು ಮೆ|| ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ರಾವ್‌ಸಾಹೇಬ್ ದೇವಯ್ಯನವರು ಮೆ|| ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ರಾವ್‌ಸಾಹೇಬ್ ಚಂಗಪ್ಪನವರು ಸಹ ಕಲೆತು ಕುಣಿದರು. ನೋಡಲಿಕ್ಕೆ ಬಹಳ ಅಂದವಾಗಿತ್ತು. ಹೊಸ (ಮೋಹನರ್ ಸಾಹೇಬರ ಪತ್ನಿಯವರು ಸ್ನ್ಯಾಪ್ ಶಾಟ್ ಫೋಟೋ) ಕಹ ತೆಗದರು. ಅನಂತರ ಸಾಧಾರಣದ [illegible]ವಾಯಿತು. ಅನಂತರ ಮೆ|| ಕುಟ್ಟಯ್ಯನವರು ಸಭೆಯ ಪರವಾಗಿ ಕೆಲವು ಮಾತುಗಳನ್ನು ಆಡಿದರು. ಸೂಟರ್‌ಸಾಹೇಬರು ಬಂದು ಐದುವರ್ಷವಾಯಿತು. ಇವರ ಕಾಲದಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಕೆಲಸವು ಮೆ|| ರಾವ್‌ಸಾಹೇಬ್ ಕೆ ಚೆಂಗಪ್ಪನವರಿಗೂ, ಪೋಲೀಸ್ ಅಸಿಸ್ಟೆಂಟ್ ಪದವಿಯು ಮೆ|| ರಾವ್‌ಸಾಹೇಬ್ ದೇವಯ್ಯನವರಿಗೂ ಆಯಿತು. ಕೌನ್ಸಿಲ್ ಪ್ರಾರಂಭವಾಯಿತು. ಕೌನ್ಸಿಲ್ [illegible] ಕೊಡುವುದರಲ್ಲಿ ಒಂದೇ ಎಡ್ವೈಸರಿ ಕೌನ್ಸಿಲಿಗಿಂತ ಎಷ್ಟೋ ಹೆಚ್ಚು ಪವರ್‌ಗಳಿರುವ ಕೌನ್ಸಿಲ್ ದೊರೆತು [illegible] ದೇಶದವರು ತುಂಬಾ ಕೃತಜ್ಞರಾಗಿದ್ದಾರೆ. ಮೆ|| ಸೂಟರ್ ಸಾಹೇಬರು ಒಳ್ಳೇ ಶಿಖಾರಿಯವರಾಗಿದ್ದಾರೆ. ಕ್ರಿಕೆಟ್ ಆಟದಲ್ಲು ತುಂಬಾ ಉತ್ಸಾಹಿಗಳು. ಇವರೂ ಇವರ ಪತ್ನಿಯವರೂ ಸಹ ದೇಶದ ಎಲ್ಲಾ ಕಾರ್ಯಗಳಲ್ಲೂ ತುಂಬಾ ಅಭಿಮಾನವನ್ನು ತೋರಿಸುತ್ತಿದ್ದರು. ಇವರಿಬ್ಬರಿಗೂ ದೇವರು ಆಯುರಾರೋಗ್ಯವನ್ನು ಕೊಡಲಿ ಎಂದು ಹೇಳುವಷ್ಟರಲ್ಲಿ ಮೆ|| ರಾವ್‌ಬಹದ್ದೂರ್ ಅಪ್ಪಾಜಿ [illegible]ನವರು ಪುಷ್ಪಮಾಲಿಕೆಯನ್ನು ಹಾಕಿದರು. ಶ್ರೀಮತಿ ಜೆಪ್ಪು [illegible]ನವರು ಮಿಸೆಸ್ ಸೂಟರ್‌ರವರಿಗೆ ಹೂವಿನ ಹಾರವನ್ನು ಹಾಕಿದರು. ಹೂವುಗಳನ್ನು ಕೈಗೆ ಕೊಟ್ಟರು. ಇದ್ದವರ ಕೈಗೆ ಮೆ|| ರಾವ್‌ಸಾಹೇಬ್ [illegible] ಅವರನ್ನೆಲ್ಲಾ ಸಾಹೇಬರ ತಲೆಯಮೇಲೆ ಪುಷ್ಪಾಂಜಲಿ ಮಾಡಿದರು. ಮತ್ತು ಸಾಹೇಬರಿಗೆ ದೇಶದ ಜ್ಞಾಪಕಾರ್ಥಕ್ಕಾಗಿ ಒಂದು ಸಂಪೂರ್ಣ ಕೊಡವ ಉಡುಪನ್ನು ಒಪ್ಪಿಸಿದರು. ದುಡ್ಡು ಎಲ್ಲವೂ ಅಲ್ಲಿ ಹಾಜರಿದ್ದರು. [illegible] ಕೊಡುತ್ತೇ ಪ್ರತಿಸತ್ಕಾರ ರೂಪವಾಗಿ ಮೆ|| ಕುಟ್ಟಯ್ಯನವರು ಸಭೆಯ ಪರವಾಗಿ ಒಪ್ಪಿಸಿದರು.

ಮೆ|| ಸೂಟರ್‌ಸಾಹೇಬರ ಭಾಷಣದ ಸಾರಾಂಶವೇನೆಂದರೆ—ಈ ದೇಶವು ಬಹಳ ಸೌಂದರ್ಯವಾದದ್ದು. ಇಂಗ್ಲೆಂಡ್ ಬಿಟ್ಟ ನಂತರ ಇಂತಾ ದೇಶವನ್ನು ನಾನು ಎಲ್ಲಿಯೂ ನೋಡಲಿಲ್ಲ. ಇಲ್ಲಿನ ಜನರು ಸಹ ಹಾಗೆಯೇ ಒಳ್ಳೆಯವರಾಗಿದ್ದಾರೆ. ಬೊಂಬಾಯಿಯಲ್ಲಿ ಕವಿತಾವರ್ತ [illegible]ರಾಗಿದ್ದಾರೆ. ಮದ್ರಾಸಿನಲ್ಲಿ ಕೊಡಗು ದೇಶವು ಎಲ್ಲಿ ಇದೆಯೆಂತ ಕೇಳುತ್ತಾರೆ. ಕೊಡಗು ದೇಶವನ್ನು ನೋಡಿದ ನಂತರ ಅದನ್ನು ಬಿಡಲಿಕ್ಕೆ ಮನಸಿಲ್ಲ. ಎಂದೂ ಮರೆಯಲಿಕ್ಕಿಲ್ಲ.

ಜಮ್ಮಾದಾರರ ಸಂಘದ ಪ್ರತಿನಿಧಿಗಳು ವೆಸ್ಟ್‌ರಾಪರನ್ನು ನೋಡಲಿಕ್ಕೆ ಹೋದಾಗ ಪ್ರೈಸ್‌ರಾಯರು ಹೇಳಿದಂತೆ ಈ ದೇಶಕ್ಕೆ ಸ್ಪೆಶಿಯಲ್ ಕಾರಣಗಳಿಂದ ಕೌನ್ಸಿಲ್ ದೊರೆತದ್ದಾಗಿದೆ. ಇದು ಸಾಧಾರಣದ ಪ್ರಯೋಜನವೇನಲ್ಲ. ನಾನು ವರ್ಗವಾಗಿ ಹೋಗುವ ದಕ್ಷಿಣ ಕನ್ನಡ ಜಿಲ್ಲೆಯು ಇದಕ್ಕಿಂತ ನಾಲ್ಕರಷ್ಟು ದೊಡ್ಡದು. ಇಂಥಾ ಚಿಕ್ಕ ದೇಶಕ್ಕೆ ಕೌನ್ಸಿಲ್ ಸಿಕ್ಕಿದ್ದು ಭಾಗ್ಯವೇ. ಆದರೆ ಸಿಕ್ಕಿದ ಕೌನ್ಸಿಲನ್ನು ಚನ್ನಾಗಿ ಉಪಯೋಗಿಸಿ ಹೆಚ್ಚಿನ ಹಕ್ಕುಗಳಿರುವ ಕೌನ್ಸಿಲನ್ನು ಪಡೆಯಬೇಕು. ಈ ಕೌನ್ಸಿಲನ್ನು ಹೇಗೆ ನಡಿಸುತ್ತೀರಿ ಎಂಬುದನ್ನು ಇಂಡಿಯಾ ಸರ್ಕಾರದವರು ನೋಡಿ ಮುಂದಿನ ಹಕ್ಕು ಕೊಡಬೇಕಾಗಿದೆ. ಕೊಡಗನ್ನು ಕೊಡಗಿನ ನಿವಾಸಿಗಳೇ ಆಳಬೇಕಾಗಿದ್ದಂಬಲ್ಪೇಯವನ್ನು ಯಾವಾಗಲೂ ಮುಂದಿಟ್ಟೇ ಕೆಲಸಮಾಡಬೇಕಾಗಿದೆ. ಆದ್ದರಿಂದ ಈ ಕೌನ್ಸಿಲಿಗೆ ಒಳ್ಳೇ ಮೆಂಬರುಗಳನ್ನು ಆರಿಸಬೇಕು. ಬರೀ ಕಿವಿಗೆ ಸುಂದರವಾಗಿ ತೋರುವ ಮಾತುಗಳನ್ನು ಕೇಳಿ ಮರುಳಾಗಬೇಡಿ. ಯಾವ ಉಮೇದ್ವಾರನೇ ಬಂದು ಕೇಳಿದರೂ ಎಲ್ಲರ ಗುಣದೋಷಗಳನ್ನು ಯೋಚಿಸಿ ಕೊಡುವ ನಿಶ್ಚಯ ಮಾಡಿ ನಿಮ್ಮ ಓಟನ್ನು ನಿಮ್ಮ ಜೀವಿತದಲ್ಲೇ ಇಟ್ಟಿದ್ದು ನಿಮಗೆ ಯುಕ್ತವೆಂತ ತೋರಿದ ಉಮೇದ್ವಾರನಿಗೆ ಓಟ್ ಕೊಡಿ.

ಈ ದೇಶದಲ್ಲಿ ನನಗೂ, ಜನರಿಗೂ ತುಂಬಾ ಸ್ನೇಹಭಾವವೇ ಇತ್ತು. ಯಾರಾದರೂ ಅಹಿತರು ಇದ್ದರೂ, ಅಂಥಾ ಅಹಿತಕ್ಕೆ ನಾನು ಮಾಡಬೇಕಾದ ಕೆಲಸಗಳನ್ನು ಮಾಡಿದ್ದೇ ಕಾರಣ. ಕೊಡಗರು ತುಂಬಾ ಸಮಾಧಾನ ಬುದ್ಧಿ (Level headed) ಯುಳ್ಳವರಾಗಿದ್ದಾರೆ. ಒಂದೊಂದಾವರ್ತಿ ಮಾತ್ರ ಅಲ್ಲಲ್ಲಿ ಬೆಂಕಿಯೇನಾದರೂ ಕಂಡರೆ ಗಲಿಬಿಲಿಯೇಳುತ್ತಾರೆ. ನನಗೂ ನನ್ನ ಪತ್ನಿಗೂ ನೀವು ಮಾಡಿದ ಸತ್ಕಾರಕ್ಕೆ ನಾವು ತುಂಬಾ ಕೃತಜ್ಞರಾಗಿದ್ದೇವೆ. ನಿಮ್ಮ ದೇಶವನ್ನು ನಾವು ಎಂದೂ ಮರೆಯುವದಿಲ್ಲ. ನಿಮ್ಮ ನೆರೆದೇಶದಲ್ಲೇ ನಾನು ಇರುವದರಿಂದ ಆಗಿಂದಾಗ್ಗೆ ಬಂದು ನೋಡುತ್ತಿರಬಹುದು. ನೀವು ಕೊಟ್ಟ ಉಡಿಗೆಯನ್ನು ಬಹಳ ಅಮೂಲ್ಯವೆಂದು ಭಾವಿಸಿ ಇಟ್ಟಿರುತ್ತೇನೆ.

ಎಂತ ಇವರ ಭಾಷಣವಾದ ನಂತರ ಪುನಃ ಎಲ್ಲರೂ ಸೇರಿ ಕುಣಿದರು. ಮೆ|| ಸೂಟರ್‌ಸಾಹೇಬರು, ಡಾಕ್ಟರ್ ಸಾಹೇಬರು, ಮತ್ತು ಇತರರು, ಮತ್ತು ಇತರ ಅನೇಕ ಜನರು ಸಹ ಕುಣಿತದಲ್ಲಿ ಸೇರಿದರು. (ಭಾತೃಭಾವವು ಚನ್ನಾಗಿ ನಿದರ್ಶಿಸಲ್ಪಟ್ಟಿತು) ಮೆ|| ಸೂಟರ್‌ಸಾಹೇಬರ ಬದಲಿಗೆ ಬರುವ ಮೆ|| ಟಾಸ್ಕರ್‌ಸಾಹೇಬರು ಇವರ ಪತ್ನಿ ಕೊಡಗಿನಲ್ಲಿ ದಯಮಾಡಿದ್ದರು.

ರಕ್ತದೆಸೆ ಮತ್ತು ಅನಾವಶ್ಯವ್ಯಯ

(ಲೇಖಕ:—ರಾವ ಬಹದ್ದೂರ ಸರ್ದಾರ ಡಾಕ್ಟರ ಯಂ ವಿ ಶ್ರೈವ್ ಎಂ ಎ, ಎಲ್ ಎಲ್. ಡಿ)

ರಿಕ್ತತೆಯೂ ಅನಾವಶ್ಯವ್ಯಯವೂ ಹಿಂದೂದೇಶದ ಆರ್ಥಿಕ ಜೀವನದ ಮುಖ್ಯ ವಿಷಯಗಳಾಗಿದ್ದು, ಎಲ್ಲರ ಗಣನೆಗೆ ಯೋಗ್ಯವಿವೆ. ಇವುಗಳ ಸ್ಥಿತಿಯು ಹಳ್ಳಿಗಳಲ್ಲಿ ಘೋರವಲ್ಲದೆ ಪಟ್ಟಣಗಳಲ್ಲು. ಪಟ್ಟಣಗಳಲ್ಲಿ ನಾಗರೀಕತೆಯು ಹೊಳಪಿನಲ್ಲಿ ಇನ್ನು ಅವ್ಯಕ್ತವಾಗಿರುವುದರಿಂದ ಮಂದಿಗಳ ಅವಗಾಹನೆಗೆ ಬರಲಾರವು. ಪ್ರತಿಯೊಂದು ಕಡೆಯಲ್ಲಿಯೂ ಅಪಾರ ಗರೀಬತನದೊಂದಿಗೆ ಹಾನಿಕರವಾದ ವ್ಯಯವೂ ಕೂಡಿಕೊಂಡೇ ಇರುತ್ತದೆ. ಎಲ್ಲೆಲ್ಲಿಯೂ ಜೀವನಾಶ ಶಕ್ತಿನಾಶ ಕಾಲನಾಶ ಪದಾರ್ಥನಾಶ ಎಂತೂ ಸರ್ವನಾಶವೇ ತೋರುತ್ತದೆ. ಬಡತನವು ನಿಶ್ಚಿತದೇಶವೆಂದು ಸಿದ್ಧಾಂತದ ಮಾತಾಗಿದೆ. ಹೀಗಾಗಿರುವುದು ಅನಾವಶ್ಯವ್ಯಯದಿಂದಲೆ ಎಂಬುದು ನಮಗಿನ್ನು ಕಂಗೊಳಿಸಿಲ್ಲವು.

ಛೀ ಛೀ, ನಮ್ಮ ದೇಶದಲ್ಲಿ ಎಂಥ ಅನಾವಶ್ಯ ಖರ್ಚು! ಹಿಂದಿನಕಾಲದಲ್ಲಿ ನಮ್ಮ ಜನರ ಸರಾಸರಿ ಆಯುಷ್ಯವು ನೂರು ವರುಷಗಳು. ಅತ್ಯಧಿಕ ಪ್ರಾಯವು ನಮಗೆ 120 ವರ್ಷವಾಗಿದ್ದವು. ಇತರ ಕೆಲದೇಶದ ಜನರಿಗೆ 60-70 ವರುಷ ಪರಿಮಿತವಾಗಿತ್ತು. ಈಗ ಕಾಲದಲ್ಲಿ ಸ್ಥಿತಿಗತಿಗಳೇ ಬದಲಾಗಿವೆ. ನಮ್ಮ ಈಗಿನ ಸರಾಸರಿ ಆಯುಷ್ಯವು ಗಂಡಸರಿಗೆ 22 59 ಹೆಂಗಸರಿಗೆ 23 31 ವರುಷಗಳು. ಇಂಗ್ಲಾಂಡಿನಲ್ಲಿ ಗಂಡಸರ ಸರಾಸರಿ ಆಯುಷ್ಯವು 46 4 ಹೆಂಗಸರದು 50 02. ನಮ್ಮ ದೇಶದ [illegible] ಇನ್ನೂ ಹೀನಾವಸ್ಥೆಯುಳ್ಳ ಪಟ್ಟಣಗಳಲ್ಲಿ ಸರಾಸರಿ ಆಯುಷ್ಯವು 6 ವರುಷ [illegible] ಆಯುಷ್ಯ[illegible] ದಿನೇ ದಿನೇ ಕಡಿಮೆ ಕಡಿಮೆ ಆಗುತ್ತಾ ಬರುತ್ತಿದೆ.

ಈ ತೆರನ ಜೀವನಾಶಕ್ಕೆ ನಮ್ಮ ರಿಕ್ತದೆಸೆಯೇ ಮುಖ್ಯಕಾರಣವೆಂದೆನ್ನಬೇಕು. ಪಟಿಯೊಂದರ ನಮ್ಮ ಸರಾಸರಿ ಆದಾಯವು 20—48 ರೂಪಾಯಿಗಳು ಮಾತ್ರ. ಆದಾಯವು ಕಿಂಚಿತ್ತಾದರೂ ಸಾಮಾನು ಸಂಗ್ರಾಮಗಳ ಬೆಲೆಯು ಹೆಚ್ಚು ಆಗಿರುವುದರಿಂದ ನಮ್ಮ ಆದಾಯದ ಬೆಲೆಯು ಮತ್ತೂ ಕಡಿಮೆ ಆಗುತ್ತದೆ. ನಮ್ಮ ಜನರ ದೊಡ್ಡ ಭಾಗವು ಅನ್ನಾಹಾರವಿಲ್ಲದೆ ಬಳಲುತ್ತಿದೆ ಎಂದರೆ ಅತಿಶಯೋಕ್ತಿಯೇ?

ಜೀವಕ್ಕೆ ಮುಖ್ಯಾಧಾರ ಅನ್ನ ಆಹಾರ. ಅದರೆ ಇದು ನಾನಾರೀತಿಯಲ್ಲಿ ಹಾಳಾಗುತ್ತಿದೆ. ಬೂಟಾದಿ ವ್ಯವಸಾಯ ಕ್ರಮಗಳು ಮತ್ತು ಭೂಸಾರ ಶೋಷಣೆಯು ಉತ್ಪತ್ತಿಯನ್ನು ಕಡಿಮೆ ಮಾಡುವುದಲ್ಲದೆ, ಹಾನಿಕರವಾಗಿ ಪರಿಣಮಿಸಿವೆ. ಇತರ ದೇಶಗಳ ತುಲ್ಯದಿಂದ ನಮ್ಮ ದೇಶದ ಉತ್ಪತ್ತಿಯು ಕಡಿಮೆಯಾಗಲಿಕ್ಕೆ ನಮ್ಮ ನಿಕೃಷ್ಟವಾದ ಮಣ್ಣೇ ಕಾರಣವೆಂದು ತೋರುವದಿಲ್ಲ. ಹೀಗಾದರೂ, ಗೊಬ್ಬರವನ್ನು ಬೆಲೆಯುಳ್ಳದ್ದಾಗಿ ಬರಿಸುತ್ತೇವೆ. ಹಿಂಡಿಯನ್ನು ಅನ್ಯದೇಶಗಳಿಗೆ ರಫ್ತುಮಾಡುತ್ತೇವೆ. ಭೂಮಿಗೆ ಗೊಬ್ಬರ ಸರಿಯಾಗಿ ನಾವು ಹಾಕುವುದಿಲ್ಲ; ನೀರಾವರಿಯನ್ನು ಒದಗಿಸಿಕೊಂಡಿಲ್ಲ. ಗದ್ದೆಯಲ್ಲಿರುವ ಬೆಳೆಗೆ ಹುಳಿ ಇಲಿ ಇವುಗಳಿಂದುಂಟಾಗುವ ಅಪಾಯವು ವಿಪರೀತ. ಹೀಗೆ ನಷ್ಟ ಹೋದ ಧವಸದಿಂದ ಎಷ್ಟೋ ಅನ್ನವಿಲ್ಲದ ಸಾವಿರಾರು ಜನರನ್ನು ಬದುಕಿಸಬಹುದಿತ್ತು.

ಕ್ಷಾಮ ಪೀಡಿತರಾಗಿರುವ ಜನರ ಊರಿನಲ್ಲಿ ಹೊತ್ತು ಖರ್ಚಿನ ಸಂಸ್ಕಾರವು ಅಮದು ರಫ್ತು ವ್ಯಾಪಾರದಿಂದ ಹಾನಿಯನ್ನುಂಟುಮಾಡುತ್ತಿದೆ. ನಮ್ಮ ದೇಶದ ಅಮದು ಬಟ್ಟೆ, ಸಕ್ಕರೆ, ಇದರ ಬೆಲೆಯು ದವಸಧಾನ್ಯ. ನಮ್ಮ ದೇಶದಲ್ಲಿ ಅತ್ಯಧಿಕವಾಗಿ ಹತ್ತಿ ಬೆಳೆಯುವುದಾದರೆ, ನಮ್ಮೆಲ್ಲರ ಉಡುಗೆಗಾಗಿ ಹೊರಗಿನಿಂದ ಬಟ್ಟೆ ಬರಬೇಕು. ನಮ್ಮ ದೇಶದಲ್ಲಿ ಅಗಣಿತ ಜನರು ಅನಾಥರೂ ಗತಿಹೀನರಾಗಿರುವಾಗ, ನಮ್ಮ ಊರಿನಿಂದ ಆಹಾರ ಪದಾರ್ಥಗಳು ವಿದೇಶಗಳಿಗೆ ಒಯ್ಯಲ್ಪಡಬೇಕು. ಈ ಸ್ಥಿತಿಯನ್ನು ನೋಡಿದರೆ ನಮ್ಮ ಜನರಿಗೆ ದುಃಖವುಂಟಾಗಲಾರದೇ!

ನಮ್ಮ ಜನರ ಕೈಯಲ್ಲಿ ಹಣವಂತೂ ಇಲ್ಲವೇ ಇಲ್ಲ. ನಮ್ಮ ಭೂಮಿಯಾದರೋ ಛಿನ್ನಭಿನ್ನವಾಗಿ ಅತಿ ಸಣ್ಣ ತುಂಡುಗಳಾಗಿದೆ. ನಮ್ಮ ದೇಶದ ಕಾನೂನು ಭೂಮಿಯನ್ನು ಈ ಪಾಡಿಗೆ ತಂದಿದೆ. ಇಲ್ಲಿ ಜಾಯಿಂಟ್ ಸ್ಟಾಕ್ ಕಂಪೆನಿಗಳು ಇಲ್ಲದೆ ಇರುವ ಕಾರಣ, ದೇಶಕ್ಕೆ ಏಳ್ಗೆ ಇಲ್ಲ. ನಮ್ಮ ಅವನತಿಗೆ ಜಾತಿಭೇದವು ಮತ್ತೊಂದು ಕಾರಣ. ಈ ಜಾತಿಭೇದವು ಹೆಚ್ಚು ಚಾತುರ್ಯವನ್ನು ಸಂಪಾದಿಸಲಿಕ್ಕೆ ಅಡ್ಡಬರುತ್ತದೆ. ತಂದೆ ಮಗನಿಗೆ ತನಗೆ ಗೊತ್ತಿದ್ದನ್ನು ಮಾತ್ರ ಕಲಿಸುತ್ತಾನೆ. ಮಗನಾದರೋ ತಂದೆಯಿಂದಲೇ ಕಾಲ ವಿದ್ಯೆ ಕಲಿಯಬೇಕು. ಹೀಗಿರುವಾಗ ಜೀವಕ್ಕೆ ದೇಸದ ತೋರುವುದು; ಹಳೇ ಪದ್ಧತಿಯೇ ಕೂಡಾ ಮೂಲವಾಗುವುದು.

ನಮ್ಮ ಜನರ ಅನ್ನವಿಲ್ಲದೆ ಬಳ್ಳಲು ವೈಯುಕ್ತಿಕರಾದುದರಿಂದ ಅಸ್ವಾಸ್ಥ್ಯ (insanitation) ದಿಂದುಂಟಾಗುವ ಕೆಡಕುಗಳಿಗೆ ಬೇಗನೆ ಗುರಿಯಾಗುತ್ತಾರೆ. ಹಳ್ಳಿ ಪ್ರದೇಶಗಳಲ್ಲಿ ಸ್ವಾಸ್ಥ್ಯದ ಮಾತೇ ಇಲ್ಲ; ಪಟ್ಟಣಗಳಲ್ಲಿ ಸ್ವಾಸ್ಥ್ಯ ನಿಯಮಗಳ ಕಡೆಗೆ ಒಮ್ಮೊಮ್ಮೆ ತಿರಸ್ಕಾರ. ಅನೇಕ ಅಂಟು ರೋಗಗಳ ದೆಸೆಯಿಂದ ಬಹಳ ಜನರು ಸಾಯುತ್ತಾರೆ. ಹಳ್ಳಿಯ ಸ್ಥಿತಿಯನ್ನು ವರ್ಣಿಸಬೇಕಾದರೆ ಬರಿದು. ಹಿಂದು ದೇಶದಲ್ಲಿ ಸೂಕ್ಷ್ಮದರ್ಶಕವೂ, ಒಳ್ಳೇ ಗಾಳಿಯೂ ಇಲ್ಲದಿದ್ದರೆ, ಇದು ಸ್ಮಶಾನದ ಪ್ರಾಂತವೇ ಆಗುತಿತ್ತು.

ನಮ್ಮ ದೇಶದ ಆರ್ಥಿಕಸ್ಥಿತಿಯು ಬಹು ಹೀನವಾಗಿರುತ್ತಾ, ನಮ್ಮ ಜಾತಿ ಪದ್ಧತಿಗಳು ಮತ್ತು ಇತರ ಅಭ್ಯಾಸಗಳು ನಮ್ಮನ್ನು ಕ್ಷೀಣಗತಿಗನ್ನಾಗಿ ಮಾಡಲು ಸಹಾಯವಾದುವು. ವ್ಯಾಜ್ಯಸಾಹಸ್ಯ, ಬಾಲ್ಯವಿವಾಹ, ಅನಾವಶ್ಯ ಖರ್ಚು ತಗಲುವ ನಮ್ಮ ಕೆಲ ಪ್ರೊಂದು ಆಚಾರ ಪದ್ಧತಿಗಳೂ, ಲೌಕೀಕ ಮತ್ತು ಧಾರ್ಮಿಕ ಹಳೇ ಸಂಸ್ಕಾರಗಳೂ ನಮ್ಮನ್ನು ಬಹಳ ಗರೀಬರನ್ನಾಗಿ ಮಾಡಿದುವು.

ಹೆಂಗಸರ ಪಾಡಂತೂ ಹೇಳಲಸಾಧ್ಯ. ನಮ್ಮ ದೇಶದ ಅರ್ಧ ಜನಸಂಖ್ಯೆಯೇ ತಕ್ಕ ಮರ್ಯಾದೆ ಇಲ್ಲದೆ ನಿರರ್ಥವಾಗುತ್ತಲಿದೆ. ನಮ್ಮ ಸಮಾಜದ ಬಲವೇ ಈ ಕಾರಣದಿಂದ ಕುಂದಿಹೋಗಿದೆ.

ಒಕ್ಕಲಿಗರಿಗೆ ಮಾಡಲಿಕ್ಕೆ ಹೆಚ್ಚು ಕೆಲಸವಿಲ್ಲದೆ ತಮ್ಮ ಸಮಯವನ್ನು ಸುಮ್ಮನೆ ಕಳೆಯುತ್ತಾರೆ. ಒಬ್ಬ ಅಧಿಕಾರ ಪ್ರವೃತ್ತಿಯು “ಮಾಡಲಿಕ್ಕೆ ಹೆಚ್ಚು ಕೆಲಸವಿಲ್ಲದೆ ದಿವಸವೂ ಹೆಚ್ಚು ಕೆಲಸವಿದ್ದು ಬಲಹೀನತೆಯೂ ಅಪ್ರಕೃತ ನಿರುದ್ಯೋಗದಿಂದ ದುರ್ಗತಿಯೂ ಜನಾಂಗಕ್ಕೆ ಪ್ರಾಪ್ತವಾಗುವುದು” ಎಂದು ಹೇಳಿರುತ್ತಾನೆ. ನಮ್ಮ ದೇಶದಲ್ಲಿ ಈ ತೆರನ ವಿಚಾರಗಳು ಈ ಜೊತೆಗೂ ಅಂಗ್ಲ ಪ್ರತಿನಿಧಿಗಳ ಸುತ್ತಿವೆ. ನಮ್ಮ ದುರ್ಭಾಗ್ಯಗಳು ನಮ್ಮನ್ನು ಪಾಳುಮಾಡಿವೆ. ನಾವು ತೊಂದರೆಪಡುತ್ತಿದ್ದೇವೆ. ಈ [illegible]ದಿಂದ [illegible] ಇನ್ನು [illegible] ಮತ್ತು ಮುಂದೆ [illegible] ಹಾಗಿದ್ದರೂ [illegible] ಸಮಾಜಕ್ಕೆ ಹಾನಿ ಇಲ್ಲದೆ [illegible].

ನಾವು ಮದಿರಾಪಾನದ ದುರ್ವ್ಯಸನಗಳ [illegible] ಹೊಲೆಯರು [illegible] ಭಾಗಗಳಲ್ಲಿ ನಮ್ಮ ನೋಡಿದಂತೆ [illegible] ವ್ಯಾಪಾರ [illegible] ಸಂಗತಿ [illegible] ಕೆಲ ಪ್ರೊಂದು ಜನರಿಗೆ ಕಾಲವೇ ದರಿದ್ರ [illegible] ಮಾತು [illegible]ವಾದದ್ದಾಗಿದೆ. ಜನರು ತಮ್ಮ ನಿತ್ಯಗಳಲ್ಲಿ ಕೂಡ ಮರಗಳಲ್ಲಿಯೂ, ಗೊಮ್ಮಟಗಳಲ್ಲಿಯೂ ತಮ್ಮ ಹೆಚ್ಚಿನ ಸಮಯವನ್ನೆಲ್ಲಾ ಕಳೆಯುತ್ತಾರೆ. ಇಂಥವರಿಗೆ ಸಮಯ ಸಾಗುವುದು ಹೇಗೆ ಎಂಬುದೇ ಯೋಚನೆ. ಅತಿ ಜಾಗ್ರತೆಯಿಂದ ಕಡಿಮೆ ಖರ್ಚಿನಲ್ಲಿ ಯಂತ್ರೋಪಕರಣಗಳು ನಡೆಸುವ ಕೆಲಸಗಳು ಬಲಹೀನ ಕೂಲಿಗಳಿಂದಲೂ, ಅಸಮರ್ಥ ಇಲವರಿಂದಲೂ ನಡೆಯುತ್ತಿವೆ. ಒಮ್ಮೊಮ್ಮೆ ಕಾರಣಗಳಿಗೆ ತಿರಸ್ಕಾರ ನೋಟ. ದೇಶದ ಸ್ವಾಸ್ಥ್ಯಕ್ಕೆ ಹೆಚ್ಚು ನಿಗಕೊಡಬೇಕಾದುದು ಸಹಜ. ಸ್ವಾಸ್ಥ್ಯವಿದ್ದರೆ ಜನರು ಆರೋಗ್ಯದಲ್ಲಿದ್ದು ಹೆಚ್ಚು ಕೆಲಸವನ್ನು ನಡೆಸುವರು.

ಆಂಗ್ಲೇಯ ಪ್ರಭುತ್ವವು ಭಾರತೀಯರ ಸ್ವಾಸ್ಥ್ಯಕ್ಕೆ ಹೆಚ್ಚು ಗಮನವನ್ನಿತ್ತಿರುವುದಿಲ್ಲ. ಆಂಗ್ಲೇಯರಿಗೆ ರಾಜ್ಯಭಾರತ್ವವನ್ನು ಉತ್ಕೃಷ್ಟವಾಗಿರಬೇಕೆಂದೇ ಅವರ ಆ ದೇಶ. ದೇಶೀಯ ರಾಜ್ಯಗಳಲ್ಲಿಯೂ ಸಹ ಜನರ ವಿದ್ಯಾಭ್ಯಾಸವೂ ಮದ್ದು ಮಹಿಳೆಯ ವಿಷಯಗಳಿಗೂ ನೋಡುವ ಪಡಿತೇ ಅಲ್ಲದೆ ಕಾರ್ಯಪಡಿಯಾಗಿಲ್ಲ. ಪರಿಷ್ಕೃತ ಸರಕಾರವು ಮತ್ತು ದೇಶೀಯ ರಾಜರು ಜನರ ದುರ್ಭಾಗ್ಯಗಳಿಂದ ಹೆಚ್ಚು ಪ್ರಯೋಜನವನ್ನೇನೂ ಹೊಂದದೆ ಬಿಟ್ಟಿಲ್ಲ. ದೇಶೀಯ ರಾಜ್ಯಗಳಲ್ಲಿ ಕೆಲ ಪ್ರೊಂದು ಮಂದಿ ಉತ್ತಮ ರೀತಿಯಿಂದ ರಾಜ್ಯಭಾರ ನಡೆಸುತ್ತಿರುವರು. ಇವರ ನಿವಾಸಿ ದಾರ್ಥದ ವ್ಯಾಪಾರದಿಂದ ಜನರ ಆದಾಯವು ಧವಸ ಉಂಡಾಯಿಂತ ಸ್ವಲ್ಪವೇನೋ ಕಡಿಮೆ ಇರಬಹುದು. “ನಾವು ಭಾರತೀಯ ಜನಾಂಗವೆಂದು ಯಾವಾಗ ಅರಿತುಕೊಳ್ಳುವೆವೋ ನಾನರಿಯೆನು.”

Hindustan Review.

ವರ್ತಮಾನ ಸಂಗ್ರಹ

ಒಳದೇಶ

ಮೆ|| ಸಾಟರ್‍ಸಾಹೇಬರು ತಾ|| 22-12-23 ರಲ್ಲಿ ಶ್ರೀನ ಕಮಿಷನರ್ ಸಾಹೇಬರಾದ ಟ್ರಾನ್ಸರ್ ಸಾಹೇಬರಿಗೆ "ಕೊಡಗು" ಕಂಪೆನಿ ಡೈರೆಕ್ಟರುಗಳ ಮೀಟಿಂಗ ನಂತರಾಪೇಟೆಯಲ್ಲಿ ತಾ|| 22-12-23 ರಲ್ಲಿ ನಡೆಯಲು ನಿಯಮಿಸಲ್ಪಟ್ಟಿರುವ ಕಾರಣದಿಂದ ಮೀಟಿಂಗನ್ನು ಮುಂದಿನ ಬೇರೆ ದಿನಕ್ಕೆ ಇಡುವರೆಂತ ನಿಶ್ಚಯವಾಯಿತು.

ಮೆ|| ಸೂಲರ ಸಾಹೇಬರು ಕೊಡಗು ದುಸ್ಸುಳುಪ್ಪ ದಟ್ಟಿ ಹೆಚ್ಚೆತ್ತು ಹಾಸಿನ ಬಿಡಿ ಕುಣಿ ನಡ ಹಾಕಿಕೊಂಡು ಫೋಟೋ ತೆಗೆಸಿದರು-ಇವರು ಅಧಿಕಾರಿಗಳು, ಎಲ್ಲರೂ ಸೇರಿ ಒಂದು ಫೋಟೋ ತೆಗೆಯಲಾಯಿತು. ಪಶ್ಚಿಕ್ಕಿನವರು ಸಹ ಸೇರಿಕೊಂಡು ಇನ್ನೊಂದು ಫೋಟೋ ಆಯಿತು.

ತಾ|| 22 ರಲ್ಲಿ ಜಮೀನುದಾರರ ಸಂಘದ ವಿಶೇಷ ಜನರಲ್ ಮೀಟಿಂಗು ವೀರಾಜಪೇಟೆಯಲ್ಲಿ ಸಭಾಧ್ಯಕ್ಷರಾದ ಮೆ|| ಕೆ. ಕುಟ್ಟಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೀಟಿಂಗಿನ ವಿವರವು ಇನ್ನೊಂದು ಕಡೆ ಪ್ರಕಟವಾಗಿದೆ.

ಕೆಲವು ದಿವಸಗಳ ಹಿಂದೆ ಮರೆನಾಡು ಕಾಳಿ ಮಾಡ ಬಿದ್ಯಮ್ಮನವರ ಮಗ ಬಿಂಗ್ರ್ಯನೆಂಬವನು ಸೌದೆಗೆ ಹೋಗಿದ್ದಲ್ಲಿ ಮರದ ಮೇಲೆ ಹತ್ತಿ ಕಡಿಯುವಾಗ ಆಕಸ್ಮಿಕವಾಗಿ ಕೆಳಗೆ ಬಿದ್ದು ಸ್ವಲ್ಪ ಹೊತ್ತಿನಲ್ಲಿ ಮೃತಪಟ್ಟನೆಂದು ವರ್ತಮಾನ.

ಕರ್ತನಾದ ಸೋಮಯ್ಯನವರ ಮಗ ಬೆಳ್ಳಪ್ಪನೆಂಬವನು ತಾ 2-12-23 ರಲ್ಲಿ ರಾತ್ರಿ ಕೋವಿ ತಗದುಕೊಂಡು ಗದ್ದೆಗೆ ಹೋಗವಾಗ ಆಕಸ್ಮಿಕವಾಗಿ ವಿಷದಹಾವು ಕಚ್ಚಿ ಅರ್ಧಗಂಟೆಯೊಳಗೆ ಮರಣ ಹೊಂದಿದನಂತೆ.

ಜನ್ನಾಳರಾದ ಅಚ್ಚಯ್ಯನವರ ಮಗ ಬೆಳ್ಳಪ್ಪನೆಂಬ 8 ವಯಸ್ಸಿನ ಹುಡುಗನ ತಲೆಯಲ್ಲಿ ಒಂದು ಬೊಳ ಉದ್ದ ಜಡೆ ಬೆಳೆದುಕೊಂಡಿದೆಯೆಂದೂ ಅದನ್ನು ಕತ್ತರಿಸಿದರೆ ಪುನಹ ಬೆಳೆಯುವದೆಂದೂ ... ಅವನು ವಿಧವಾಂತ ಆಹಾರವನ್ನು ತಾನಾಗಿಯೇ ಬಿಟ್ಟಿರುವನೆಂದೂ ಅವನ ಶರೀರವು ಬಹಳ ಬಡಕಲಾಗಿದೆಯೆಂದೂ ಇದೆಲ್ಲವೂ ಅವನ ಪೂರ್ವ ಜನ್ಮದ ವಿಶೇಷ ಸೂಚನೆಯಾಗಿರಬಹುದೆಂದೂ ಒಂದು ವಾರ್ತೆ.

ದೇಶದಲ್ಲೆಲ್ಲಾ ಕೌನ್ಸಿಲ್ ಚುನಾವಣೆಯ ಚಳವಳಿವು ದಿನೇದಿನೇ ಪ್ರಬಲವಾಗುತ್ತಿದೆ. ಪೇಟೆ ಪಟ್ಟಣಗಳಲ್ಲಿಯೂ ಗ್ರಾಮಾಂತರಗಳಲ್ಲಿಯೂ ಜನರನ್ನು ಸೇರಿಸಿ ಮೀಟಿಂಗು ಮಾಡುವುದಲ್ಲದೆ ಉಮೇದುವಾರರುಗಳು ಕೆಲವರು ಪ್ರತಿಯೊಂದು ಮನೆಗೂ ಹೋಗಿ ಓಟು ಕೇಳುತ್ತಿದ್ದಾರೆ. ಉಮೇದುವಾರರುಗಳ ಪ್ರಸಿದ್ಧ ಪತ್ರಿಕೆಗಳು ಅನೇಕ ಪ್ರಕಟವಾಗುತ್ತಿವೆ. ಎಲ್ಲಿ ನೋಡಿದರೂ ಕೌನ್ಸಿಲು ಚುನಾವಣೆ ಮಾತೇ ಕೇಳುತ್ತಿದ್ದೆ. ... ಕೌನ್ಸಿಲು ವಿಷಯವಾಗಿದೆ.

ಕೌನ್ಸಿಲು ಚುನಾವಣೆಯು ಜನವರಿ ತಾ|| 15 ನೇ ಮಂಗಳವಾರ ನಡೆಯುವುದು. ದೇಶದಲ್ಲೆಲ್ಲಾ ಒಂದೇ ದಿನ ಓಟು ತೆಗೆಯಲ್ಪಡುವುದು. ಬೆಳಿಗ್ಗೆ 7 ಗಂಟೆಯಿಂದ 12 ಗಂಟೆವರೆಗೂ, ಮಧ್ಯಾಹ್ನ 1 ಗಂಟೆಯಿಂದ ಸಾಯಂಕಾಲ 6 ಗಂಟೆ ವರೆಗೂ ನಿಯಮಿತವಾದ ಸ್ಥಳಗಳಲ್ಲಿ ಓಟು ತೆಗೆಯಲ್ಪಡುವುದು.

ದೇಶದಲ್ಲಿ ಮಳೆ ಇಲ್ಲದಿದ್ದರೂ ಆಗಾಗ್ಗೆ ಆಕಾಶದಲ್ಲಿ ಓಡಾಡುತ್ತಿರುವ ಮೋಡಗಳ ದೆಸೆಯಿಂದ ಮಳೆಯ ಮೊದಲ ಲಕ್ಷಣಗಳು ಬರಲಿವೆ.

ಹಿಂದೂದೇಶ

ಬ್ರಿಟಿಷರಿಗೂ ಅಫ್ಘಾನರಿಗೂ ಮನಸ್ತಾಪ ಹುಟ್ಟಿದೆಯೆಂತ ವರ್ತಮಾನವಿದೆ. ಬ್ರಿಟಿಷ್ ಜನರು ಕೊಲೆಮಾಡಿದ ಅಫ್ಘಾನ್ ಪ್ರಜೆಯನ್ನು ಬ್ರಿಟಿಷರಿಗೆ ಬಿಟ್ಟು ಕೊಡಲಿಲ್ಲವೆಂತಲೂ, ಬ್ರಿಟಿಷ್ ರಾಜ್ಯದಲ್ಲಿರುವ ಅಫ್ಘಾನ್ ಪ್ರಜೆಗಳಿಗೆ ಅಫ್ಘಾನ್ ಜನರು ಪೀಡಿಸಿ ಕೇಳುತ್ತಿದ್ದಾರೆಂತಲೂ ಕಾರಣಗಳಂತೆ.

ಮದ್ರಾಸ್ ನ್ಯಾಯವಿಧಾಯಕ ಸಭೆಯ ಅಧ್ಯಕ್ಷರಾಗಿದ್ದ ಮೆ|| ರಾಜಗೋಪಾಲಾಚಾರ್ಯರು ಬಿಟ್ಟಿರಲು ಅದರಿಂದ ಮೆ|| ಸ್ವಾಮಿಕನ್ನಾಪಿಳ್ಳೆ ಎಂಬವರನ್ನು ಅಧ್ಯಕ್ಷರಾಗಿ ನೇಮಿಸಲ್ಪಟ್ಟದ್ದಾರೆ. ಇವರನ್ನು ಸರಕಾರದವರು ಪಾರ್ಲಿಮೆಂಟ್ ಸ್ಥಾನ ಕಲಿತುಬರಲು ಇಂಗ್ಲೆಂಡಿಗೆ ಕಳುಹಿಸಿ ಕರಬೇಕು ತಮೊಂದು ಉದಾಹರಣೆಗಿದ್ದಾರೆ.

ಬಂಗಾಳದ ಗವರ್ನರವರು ಮೆ|| ಸಿ. ಆರ್. ದಾಸರಿಗೆ ಮಂತ್ರಿಗಳನ್ನು ನೇಮಿಸಲಿಕ್ಕೆ ಹೇಳಿದ್ದಕ್ಕೆ ತನ್ನ ಪಾರ್ಟಿಯವರು ಕೌನ್ಸಿಲ್ ಸರಕಾರವನ್ನು ಹಾಳುಮಾಡಲಿಕ್ಕೇ ನೇಮಿಸಲ್ಪಟ್ಟಿರುವ ಕಾರಣದಿಂದ ಅವರು ಸರಕಾರವನ್ನು ನಡೆಸಲಿಕ್ಕೆ ತಯಾರಿಲ್ಲವೆಂತ ಹೇಳಿದರು.

ಅನೇಕ ಪತ್ರಿಕೆಗಳ, ಕೆಲವು ಅಕ್ಷಯರ್ಪಟ್ಟಿನ ದಾರಿಗಳನ್ನು ಜೈಲಿನಲ್ಲಿ ಇಟ್ಟುಕೊಂಡು ಅವರ ಶಿಕ್ಷೆಯಾದ ದಾರಿಗಳನ್ನು ಸರಕಾರದ ಆಡಳಿತವನ್ನು ನಡೆಸಲು ಹೇಳುವುದು ಅಶಕ್ಯಕರವಾಗಿದೆಯೆಂತ ಬರೆದಿವೆ.

ಮದ್ರಾಸ್ ಹೈಕೋರ್ಟಿನ ಚೀಫ್ ಜಡ್ಜಿಯವರಾದ ಶ್ರೀಮಾನ್ ವಾಲೇಸರು ರಾಜೀನಾಮೆ ಕೊಟ್ಟಿದ್ದಾರೆ.

ಗಂಟೂರುಜಿಲ್ಲೆಯಲ್ಲಿ ಉಪವಾಸಾದಿಗಳೊಂದು ಆಗದೇಶಾಗಿರುವದರಿಂದ ಅಲ್ಲಿನ ಓಟುಗಾರರಿಗೆ ಮೆ|| ಸಿ. ಆರ್. ರೆಡ್ಡಿ ಮುಂತಾದವರು ಹೇಳಿಕೊಳ್ಳುವದೇನೆಂದರೆ:- ಸ್ವರಾಜ್ಯ ಪಾರ್ಟಿಗೆ ಓಟ್ ಕೊಡುವವರು ದೇಶದ್ರೋಹಿಗಳೆಂತಲೂ ಬ್ರಾಹ್ಮಣರನ್ನು ದ್ವೇಷಿಸುವದನ್ನು ಬಿಟ್ಟು ದೇಶ ಹಿತೈಷಿಗಳು ಯಾರೆಂಬುದನ್ನು ತಿಳಿದು ಓಟು ಕೊಡಬೇಕೆಂತಲೂ ಕೆಲವು ಬ್ರಾಹ್ಮಣರು ಸ್ವರಾಜ್ಯ ಕೌನ್ಸಿಲಿಗೆ ಹೋದ ಸ್ವರಾಜ್ಯಕ್ಕೆ ಬೇಗ ವೇ ಮುಣಗಿಹೋಗುವದಿಲ್ಲವೆಂತ ಪ್ರಬಲವಾಗಿ ಹೇಳಿದ್ದಾರೆ.

ಬೊಂಬಾಯಿಯ ಪ್ರಸಿದ್ಧ ವರ್ತಕರಾದ ಈಶ್ವರದಾಸ್ ಲಕ್ಷ್ಮೀದಾಸರು ಒಂದು ವರ್ಷಕ್ಕೆ ಬೊಂಬಾಯಿಯ ಶ್ರೀಮಾನರಾಗಿರುವರು. ಇವರು ಬನಿಯಾಜಾತಿಯ ಕುಟುಂಬಕ್ಕೆ ಸೇರಿ ಇವರ ಪೂರ್ವಿಕರು ಕಳೆದ ಎರಡು ಶತಮಾನದಿಂದಲೂ ಬೊಂಬಾಯಿ ಪಟ್ಟಣದಲ್ಲಿ ವಾಸಮಾಡಿಕೊಂಡಿದ್ದಾರೆ. ಧರ್ಮ ಕೆಲಸಕ್ಕೆ ಖರ್ಚುಮಾಡುವುದರಲ್ಲಿ ಈ ಕುಟುಂಬದವರು ಬಹಳ ಪ್ರಸಿದ್ಧಿಗೆ ಬಂದವರು. ಇವರಿಗೆ ಈ ಕುಟುಂಬದಲ್ಲಿ ತಪ್ಪಕ್ಕೆ ರದು ಲಕ್ಷ ರೂಪಾಯಿಗಳನ್ನು ಧರ್ಮ ಕೆಲಸಕ್ಕಾಗಿ ಖರ್ಚುಮಾಡುತ್ತಾರೆ.

ಮೊನ್ನೆ ಮೊನ್ನೆ ಇಂಡಿಯನ್ ಸಾಮಾಜಿಕ ಸಭೆಯು ಈ ತಾ|| 29 30 ರಲ್ಲಿ ಪೂನಾ ಪಟ್ಟಣದಲ್ಲಿ ನಡೆಯುವುದು. ಸಭೆಯ ಅಧ್ಯಕ್ಷರು ದಾಕ್ಷಿಣ್ಯ ಪರಾಂಜಪೆಯವರು. ಸ್ವಾಗತಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲು ಸಾಂಗ್ಲಿಸಂಸ್ಥಾನದ ರಾಜರವರು ಒಪ್ಪಿದ್ದಾರೆ. ಮೆ|| ಜಿ. ಕೆ. ಚಾಟಿಯವರು ಒಪ್ಪಿರುವರು.

ಗಡರ್ವಾಲ ಪ್ಯಾರೋ ಡಿಸ್ಟ್ರಿಕ್ಟಿನ್ನಿರುವ ದಾಸುಜಾತಿಯವರು, ಕುಟ್ಟೋರಿ ದ ಅಲ್ಲಿ ವಿಶೇಷ ಪೋಲೀಸನವರನ್ನಿಟ್ಟರುವ ಅವರ ಖರ್ಚಿಗೆ ಒಂದು ಹೊಸ ಬಂಗಲೆ ಕಟ್ಟುತ್ತಿದ್ದಾರಂತೆ ... ಮೆ|| ವಿ. ಜೆ. ಪಟೇಲರ ಮುಂದಾಳುತನದಲ್ಲಿ ಆ ಗೃಹವನ್ನು ಹೊಸ ಸರಕಾರವನ್ನು ಕಾಣದೆ ಇರುವುದಕ್ಕಾಗಿ ಆಚರಿಸಿದರು.

ಈ ತಾರೀಖು 18 ರಲ್ಲಿ ಮದ್ರಾಸಿನ ಸ್ವರಾಜ್ಯ ಪಕ್ಷವನ್ನು ಹೈದರಾಬಾದು ಸ್ಟೇಟ್‍ಗೆ ಬಾಹಿಸಿಕೊಂಡ ಸ್ಟೇಷನವ ... ತಿಳಿದು ಬಂತು.

ಕಳೆದ ತಿಂಗಳು ... ಆದಿತ್ಯವಾರ ತಿನ್ನವೆಲ್ಲಿ ನಷ್ಟ ... ಪ್ರವಾಹದ ಸ್ಥಿತಿ ... 5 ಸಾವಿರ ಜನ ಗೃಹಹೀನರಾಗಿರುವರು. ಐವತ್ತು ಸಾವಿರ ರೂಪಾಯಿ ನಾಶವಾಗಿದೆ. ಈ ಕಷ್ಟದಲ್ಲಿ ಜೀವವನ್ನುಳಿಸಲು ಅನೇಕ ಪೋಲೀಸು ನೌಕರರು ಬಂದುದು ಬಹಳ ದೊಡ್ಡ ಉಪಕಾರವೆಂದು ತಿಳಿಯುತ್ತೇವೆ.

ಕಳೆದ ತಾರೀಖು 19 ರಲ್ಲಿ ಗಯಾದಲ್ಲಿ ಕೂಡಿದ ಕ್ರಿಸ್ತಿಯನ್ ಮಿಷನರಿಗಳ ಕಾನ್ಫರೆನ್ಸ್ ನಡೆಯಿತು. ಕಾನ್ಫರೆನ್ಸನ್ನು ಡಾಕ್ಟರ್ ... ತೆರೆದರು.

ಸ್ವರಾಜ್ಯಪಾರ್ಟಿ ... ಕೌನ್ಸಿಲಿನವರು ನ್ಯಾಯವಿಧಾಯಕ ಸಭೆಯನ್ನು ಇನ್ನು ಮುಂತೆ ... 29 ರಲ್ಲಿ ಮೀಟಿಂಗ ಮಾಡಲಿಕ್ಕಿರುವರು.

ಬೊಂಬಾಯಿಯ ... ಲೀಗು ... ಕೂಲಿ ... ಕೆಲಸಕ್ಕೆ ಹೋಗದೆ ಇರುವ ಮುಷ್ಕರವು ಇನ್ನೂ ಮುಗಿದಿರುವದಿಲ್ಲ.

ಸಿಂಧುದೇಶದ ಸ್ಥೈದರಾಬಾದಿನ ಹಿಂದೂ ಪತ್ರಿಕೆಯ ಸಂಪಾದಕರಾಗಿದ್ದ ಪ್ರೊಫೆಸರ್, ಗಾನ ... ಜೈಲಿನಿಂದ ಬಿಡುಗಡೆ ಮಾಡಿರುವರು.

ಕಲ್ಕತ್ತೆಯ ... ಜೈಲಿನಲ್ಲಿ ... ತಿಂಗಳಿನಿಂದ ... ಅದು ಸ್ವಸ್ಥರಾಗದೆ ಮಲಗಿರುತ್ತಾರೆ ... ಇನ್ನೂ ಕಳುಹಿಸಲ್ಪಟ್ಟಿರುವದಿಲ್ಲವಂತೆ.

ವಿದೇಶ

ಗತಿಸಿದ ಇಂಗ್ಲೆಂಡಿನ ಪ್ರಧಾನ ಮಂತ್ರಿಯಾಗಿದ್ದ ಮೆ|| ಬೋನರ್ ಲಾರವರು ತನ್ನ ಮನೆ ಆಸ್ತಿಯೆಲ್ಲದೆ, ಐವತ್ತೊಂದು ಸಾವಿರ ಪೌಂಡು ಬೆಲೆ ಬಾಳುವಂತ ಆಸ್ತಿಯನ್ನು ಸಂಪಾದಿಸಿದ್ದರು.

ಗ್ರೀಸನ ರಾಜರು ರೂಮೇನಿಯಾ ದೇಶಕ್ಕೆ ಹೊರಟು ಹೋಗಿರುವರು. ಅವರ ಖರ್ಚಿಗಾಗಿ ಒಂದು ಮಿಲಿಯನ್ ಡ್ರ್ಯಾಕಮಾ, ಅಲೆಕ್ಸಾಂಡ್ರಸ್ಸನ್ನು ಕೊಡುವಂತೆ ಅಲ್ಲಿಯ ಪ್ರಜೆಗಳವರು ತೀರ್ಮಾನಿಸಿರುವರು. ರಾಜ್ಯಭಾರವನ್ನು ಕ್ಷಿಪ್ರವಾಗಿ ಕೈಗೊಳ್ಳಬೇಕೆಂದು ಮಾಡಿರುವ ಪತ್ರಕ್ಕೆ ರುಜು ಹಾಕಲು ಅವರು ಒಪ್ಪಿಲ್ಲವಂತೆ.

ಮೆಕ್ಸಿಕೊದಲ್ಲಿ ಆದ ದಂಗೆಯಲ್ಲಿ ಸರಕಾರದ ಸಿಪಾಯಿಗಳು ಬಹಳ ನಷ್ಟಪಟ್ಟು ಓಡಿಸಲ್ಪಡುವ ಸಂಭವ ಉಂಟೆಂತಲೂ ದಂಗೆಕೋರರಿಗೆ ಜಯವಾಗುವ ಸಂಭವವಿದೆಯೆಂತಲೂ ತಿಳಿಯುತ್ತೇವೆ.

ಇಂಗ್ಲೆಂಡ್ ಪಾರ್ಲಿಮೆಂಟಿನಲ್ಲಿ ಮಂತ್ರಿಮಂಡಳವನ್ನು ಏರ್ಪಡಿಸಲು ಲೇಬರ್ (ಕಾರ್ಮಿಕ) ಪಾರ್ಟಿಯವರನ್ನು ಕೇಳುವ ಸಂಭವವಿದೆಯಷ್ಟೆ. ಈ ಪಾರ್ಟಿಯವರು ಮೋರ್ಚರಿಗೆ ... ಪಾಲಿಸಿಗೆ ಒಳಪಟ್ಟು ಇರುವವರಿಗೆ ಸಹಾಯ ಕೊಡಲು ಲಿಬರಲ್ ಪಾರ್ಟಿಯವರು ತಯಾರಾಗಿರುವರೆಂದು ಲೇಬರ್ ಪಾರ್ಟಿಯವರು ನೋಡಿಕೊಂಡರೆ ... ಮುಂದಾಳುಗಳನ್ನು ಮಾಡಿಕೊಳ್ಳುವರೆಂತಲೂ, ಈ ಪಾರ್ಟಿ ಮೀಟಿಂಗಿನಲ್ಲಿ ತೀರ್ಮಾನಿಸಿರುವರು.

ಡಿಸೆಂಬರು ತಾರೀಖು 22 ರಲ್ಲಿ ವೀರಾಜಪೇಟೆಯಲ್ಲಿ ನಡೆದ ಜಮೀನುದಾರರ ಸಂಘದ ವಿಶೇಷ ಜನರಲ್ ಮೀಟಿಂಗಿನ ವಿವರ

ಸಂಘದ ಸಭಾಧ್ಯಕ್ಷರಾದ ಮೆ|| ಕೊಂಡಂದೇರ ಕುಟ್ಟಯ್ಯನವರು ಮೀಟಿಂಗಿನ ಅಧ್ಯಕ್ಷರಾಗಿದ್ದರು. ಸುಮಾರು ಐವತ್ತು ಜನ ಸೇರಿದ್ದರು. ಸಭಿಕರಲ್ಲಿ ಉತ್ಸಾಹ ತೋರಲಿಲ್ಲ. ಈಗ ದೇಶದಲ್ಲೆಲ್ಲಾ ಹರಡಿಕೊಂಡಿರುವ ಕೌನ್ಸಿಲು ಚುನಾವಣೆಯ ಚಳವಳಿವೇ ಇದಕ್ಕೆ ಕಾರಣವೆಂದು ಕಾಣುತ್ತದೆ. ಸಭೆಯು ನಿಯಮಿತ ಕಾಲಕ್ಕೆ ಪ್ರಾರಂಭವಾಗಿ ... ಮೊದಲು ಅಧ್ಯಕ್ಷರು ತಾ|| ಬಾ|| ಇದರ ... ನಂತರ ... ವಿಷಯ ತಿಳಿಸಿ ಗತಿಸಿದ ... ವಿಶೇಷ ದೇಶಭಕ್ತಿ ಮತ್ತು ಗುಣಗಳನ್ನು ವರ್ಣಿಸಿದರು. ನಂತರ ರಾ|| ಸಾ|| ಕೇಳೆಮಾಡನಾಂಡ ಅಚ್ಚಯ್ಯನವರು ತಾ|| ಬಾ|| ಕೊಂಡಂಡ ಮಾದಪ್ಪನವರು ಮುಂತಾದವರು ... ತಂಜಾ ... ಸಂಘದವರು ನೋಡಿಕೊಂಡು ... ರಾಜೀನಾಮೆ ... ಮೇಲೆ ... ಮಾಡುಗ ... ಕಳೆದ ... ವಿವರ.

ಮೆ|| ಕುಟ್ಟ ... ವೇದಲಾದವರ ... ಕ್ಕೆ ... ಸ್ಥಾಪನೆ ... ಒದಿ ... ಸಂಘದ ಜನರಲ್ ಮೀಟಿಂಗಿನ ಮನುಷ್ಯರು ... ತರಾವಿಗೆ ವಿರೋಧವಾಗಿ ... ಜನರ ಕೌನ್ಸಿಲು ಒಪ್ಪಿಸಿಕೊಳ್ಳುತ್ತೇವೆಂದು ... ಮಂಡನೆ ... ಕಳುಹಿಸಿದ್ದರಿಂದಲೂ ಈ ವಿಶೇಷ ಜನರಲ್ ಮೀಟಿಂಗು ಮಾಡಿ ಜನರಲ್ ... ಇದರಿಂದ ... ಇದ್ದದರಿಂದಲೂ ಜನರಲ್ ... ಕಮಿಟಿಯ ಮೆಂಬರುಗಳ ಮೇಲೆ ... ವೋಟು ರವಾನನ್ನು ಮೆ|| ಸಿ. ಎಸ್. ಉತ್ತಯ್ಯನವರು ... ಇದಕ್ಕೆ ಅನುಮೋದನೆಯಾಗಿ ಮೆ|| ... ಬೆಯ್ಯ ಮೆ|| ಪುಲಿಯಂಡ ಮ ... ಬೆಳ್ಯಪ್ಪ ... ಕೊಂಡಂಡಬೆಳ್ಯಪ್ಪ ಮೆ|| ಕೊಳುವಂಡ ... ಮೆ|| ಬೆರಂಡ ... ಜನರಲ್ ... ಸರಕಾರ ... ಸಭೆ ... ಮಾಡಿದ್ದ ... ಮೆ|| ಕೋಟೇರ ... ಮಾತನಾಡಿದರು. ... ಮೆ|| ಮಾಚ ... ಮಾತನಾಡಿದರು ... ಮೇಲೆ ... ಅದನ್ನು ... ಅಧ್ಯಕ್ಷರು ... ಮೆ|| ... ವಿರೋಧವಾಗಿ ... ಮೆ|| ಸಿ. ಎಂ. ... ಮೆ|| ... ನಾದಪ್ಪ ... ಮೆ|| ... ಮಾತಾಡಿ ... ನಂತರ ... ಬೇರೆ ... ದೇಶ ಕೌನ್ಸಿಲು ... ಸರಕಾರವೇ ಕಾರಣವೆಂದು ... ಕಮಿಟಿಯವರಿಗೆ ತಿಳಿದಿದ್ದರಿಂದಲೂ ... ಜನರಲ್ ಮೀಟಿಂಗಿನಲ್ಲಿ ಸರ್ವಸಮ್ಮತಿಯಿಲ್ಲದ ... ವೈಸರಾಯ್ ... ತಿರಸ್ಕರಿಸಿ ... ಇನ್ನು ... 19 ... ವೊದಲಾಗಿ ... ಬಯಸುವ ... ಸಂಘಕ್ಕೆ ದೊರೆತದ್ದರಿಂದ ಅದನ್ನು ... ಈ ವಿಷಯ ಜನರ ... ಸಭೆ ... ಅಭಿಪ್ರಾಯ ಕೇಳಲು ... ಜನರು ... ಕಮಿಟಿಯವರು ... ತೀರ್ಮಾನ ... ಇದರಿಂದ ಜನರ ... ಅತೃಪ್ತಿಯುಂಟಾದದ್ದರಿಂದ ಈಗಿನ ಕಮಿಟಿಯ ಕಮಿಟಿಯನ್ನು ಬದಲು ತಯಾರಾಗಿರುವರೆಂತಲೂ ... ಸೆಕ್ರೆಟರಿಯಾದ ಮೆ|| ಸಿ. ಎಂ. ವೆಂಕಪ್ಪಯ್ಯನವರು ... ನಂತರ ಮೆ|| ಉತ್ತಯ್ಯನವರ ಠರಾವಿಗೆ ಓಟಿಗೆ ಹಾಕಲ್ಪಟ್ಟಿತು. ಇದಕ್ಕೆ ಬಹುಮತದವರು ... ಓಟು ... ಕೊಟ್ಟರು.

ಕಮಿಟಿಯವರ ಮೇಲೆ ವಿಶ್ವಾಸವಿಲ್ಲವೆಂಬ ಠರಾವು ಸೋಲಿಸಲ್ಪಟ್ಟದ್ದರಿಂದ ಕಮಿಟಿಯವರು ಕೌನ್ಸಿಲನ್ನು ...

ಕನ್ನಂಡರಿಕೆಯೇ ಮೆ|| ಸಿ ಎಸ್ ಉತ್ತಯ್ಯನವರು ಸೂಚಿಸಿದ ಮೇರೆ ಸರ್ವಸಮ್ಮತದಿಂದ ಒಪ್ಪಲಾಯಿತು

"ಜಮಾದಾರ್ ಸಂಘದವರು ಕೌನ್ಸಿಲಿಗೆ ಹೋಗಬೇಕಾದ ಮೆಂಬರುಗಳನ್ನು ಆರಿಸಿ ಕೊಡಬೇಕು" ಎಂಬ ಠರಾವನ್ನು ಮೆ|| ಸಿ ಯಸ್ ಉತ್ತಯ್ಯನವರು ಸೂಚಿಸಿದ್ದಕ್ಕೆ ಅನೇಕರು ಒತ್ತಾಸೆ ಕೊಟ್ಟರು ಅನೇಕರು ವಿರೋಧಿಸಿದರು ಠರಾವಿ ಮೇಲೆ ಓಟು ತೆಗೆಯುವಾಗ [illegible] ಸಾಧ್ಯವಾಗಲಿಲ್ಲ [illegible] ಸಾಧ್ಯವಾಗಲಿಲ್ಲ ಅನಂತರ ಠರಾವಿಗೆ ಓಟು ಕೊಡುವವರು ಕೊಡದವರೂ ಬೇರೆಬೇರೆ ಸ್ಥಳ ಹಾಕಿಸಿದಮೇಲೆ ಎಣಿಸಿನೋಡುವಾಗ ಸಂಘದಿಂದ ನಿಯಮಿಸಬೇಕೆಂತ ಹೇಳುವವರು 90 ಜನರೂ ಬೇಡವೆಂತ ಹೇಳುವವರು 109 ಜನರೂ ಇದರು ಆದರಿಂದ ಠರಾವು ಮಂಜೂರಾಗಲಿಲ್ಲ

ಮಂಗಳೂರಿನ [illegible] ಇಸ್ಲಾಮ್ ಸಭೆಯೆಂತ ಈಗ ಹೊಸದಾಗಿ ನಿರ್ಮಾಣವಾಗಿರುವ ಸಭೆಯ ಪ್ರೆಸಿಡೆಂಟರಾದ ಮೆ|| ರಸೂಲ್ [illegible] ಸಾಹೇಬರ ಕಾಗದವನ್ನು ಓದಲಾಯಿತು [illegible] ಕೌನ್ಸಿಲಿನಲ್ಲಿ ಎರಡು ಸೀಟ್ ಬಿಟ್ಟುಕೊಡಬೇಕೆಂಬುದಕ್ಕೆ [illegible] ಸಂಘದ ಸಹಾಯಬೇಕೆಂತ [illegible] ಪ್ರತಿನಿಧಿಗಳು ಸಭೆಗೆ ಬರುತ್ತಾರೆಂತ ಬರೆದಿತ್ತು ಪ್ರತಿನಿಧಿಗಳ ಪರವಾಗಿ ಮೆ|| [illegible] ಸಾಹೇಬ ಮತ್ತು [illegible] ಸಾಹೇಬರು ಮಾತನಾಡಿದರು ಮೆ|| ಬಿದ್ದಂಡ ಬೋಪಯ್ಯನವರು ಇವರಿಗೆ ಒತ್ತಾಸೆಯಾಗಿ ಮಾತನಾಡಿದರು

ಮೆ|| ಬಿದ್ದಂಡ [illegible] ಈ ವಿಷಯವನ್ನು ಸಂಘದವರು [illegible] ಮಾತನಾಡಿದರು [illegible] ಈ ವಿಷಯದಲ್ಲಿ ಬೇರೆ ಸೀಟು ಸಿಕ್ಕುವುದು ಸಂಘವಿಷ್ಟ್ರಂದ [illegible] ದಿವಸ [illegible] ಪ್ರಯೋಜನವಿಲ್ಲ [illegible] ಬೋಪಯ್ಯನವರು ಈ ವಿಷಯದಲ್ಲಿ [illegible] ಹಾಗೆ ಇದಕ್ಕೆ ಮುಸಲ್ಮಾನ ಜನರ ಒಪ್ಪಿಗೆ ಇರಬೇಕೆಂತ ಕೇಳಿ ಒಪ್ಪಿದ್ದರಿಂದ ಹಾಗೆಯೇ ಠರಾವು ಮಂಜೂರಾಯಿತು — ಅನಂತರ ಸಭೆಯು ಮುಕ್ತಾಯವಾಯಿತು.

ಮ|| ರಾ|| ರಾ|| [illegible] ಮಾದಯ್ಯನವರ ಮರಣ.

ಇವರ ಮರಣದಿಂದ ದೇಶಕ್ಕೆ [illegible] ಸೂಚಿಸಲಿಕ್ಕೆ ಮಡಿಕೇರಿ ಪೈಸಲ್ [illegible] ತಾರೀಕು 18 12-23 ರಲ್ಲಿ ಒಂದು ಮೀಟಿಂಗ್ ನಡೆಯಿತು ಮೀಟಿಂಗಿನ ನೋಟೀಸಿಗೆ ಮೆ|| ರಾ|| ಬಾ|| ಕೊಕಂಡೆರ ಕುಟ್ಟಯ್ಯನವರು, ಮೆ|| ರಾ|| ಸಾ|| [illegible] ಯ್ಯನವರು [illegible] ಸಿದ್ದೀಕ್ ಸಾಹೇಬ, ಪೈ [illegible] ಮಡಿಕೇರಿ [illegible] ಮೀಟಿಂಗ್ [illegible] ಅಧ್ಯಕ್ಷರಾಗಿ [illegible] ಮೇರೆ ಮೆ|| ಸಿ [illegible] ವಹಿಸಿದರು

ಇವರು ಮೊ|| ಮಾದಯ್ಯನವರು [illegible] ಸಂಸ್ಥಾನಿಕರಾಗಿದ್ದರೆಂತಲೂ, [illegible] ದೇಶಕ್ಕೆ ದೊಡ್ಡ [illegible] ದೇಶಸೇವೆ ಮಾಡಿದರೆಂತ [illegible] ಯೇ [illegible] ವಿದ್ಯೆಗೆ ಸಹಾಯಕ್ಕಾಗಿ [illegible] ಗತಿಸಿದ ಡಾಕ್ಟರ್ ಸುಬ್ಬಯ್ಯನವರು ಹೋದಂದಿನಿಂದ [illegible] ಮಾಡುತ್ತಿದ್ದರು [illegible] ಹೀಗೆ ಸರಿಯಾದ ಸಹಾಯಕರಿಲ್ಲದೆ [illegible] ಕೊಡಗಿಗೆ ಹೆಚ್ಚಿನ ಕಷ್ಟವಾಯಿತೆಂತ ಹೇಳಿದರು

ಮೆ|| ರಾವ್‌ಸಾಹೇಬ್ ಕೆ. ಸುಬ್ಬಯ್ಯನವರು— "ಮೆ|| [illegible] ಮಾದಯ್ಯನವರು ಮೃತರಾದ್ದರಿಂದ ದೇಶಕ್ಕೆ [illegible] ನಷ್ಟವನ್ನು [illegible] ಈ ಮೂಲಕ ಸೂಚಿಸುತ್ತಾರೆ" ಎಂಬ ಠರಾವನ್ನು ಸಭೆಯ ಮುಂದೆ ಇಟ್ಟರು ಇವರು ಠರಾವಿನಮೇಲೆ [illegible] ಮಾತಾಡಲಿಲ್ಲ ಇವರ ಗುಣಕಥನವನ್ನು ಮಾತಾಡಲು ಸಿಕ್ಕಿದ ಅವಕಾಶವನ್ನು ಉಪಯೋಗಿಸಲಿಲ್ಲ ಸಭಿಕರಿಗೆ ಸಂತಾಪವಾಯಿತು ಈ ಠರಾವನ್ನು ಸಭಿಕರೆಲ್ಲರೂ ಮೌನವಾಗಿ ಎದ್ದುನಿಂತು ಮಂಜೂರ್ ಮಾಡಿಕೊಂಡರು

ಮೆ|| ಯಂ ಯಾಲ ಸಿದ್ದೀಕ್ ಸಾಹೇಬರು— 1ನೇ ಠರಾವನ್ನು ಮೆ|| ಮಾದಯ್ಯನವರಿಗೆ ತಿಳಿಸಬೇಕೆಂಬ ಠರಾವನ್ನು ಸಭೆಯ ಮುಂದೆ ತಂದರು. ತಾನು ಮೆ|| ಮಾದಯ್ಯನವರ ಸ್ನೇಹಿತರಲ್ಲಿ ಒಬ್ಬನಾಗಿದ್ದೆನೆಂದೂ ಮೆ|| ಮಾದಯ್ಯನವರು ಸಾಯುವವರೆಗೂ ಓದುತ್ತಲೇ ಇದ್ದು [illegible] ನಕಲಿಸಿದವರಾಗಿದ್ದರೆ ತಾನು [illegible] ದಿದ್ದ ವಿದ್ಯಾರ್ಥಿಯೇ ಆಗಿದ್ದರೆಂತಲೂ, ಕೆಲವುಕಾಲದಿಂದ ಎದುರಿಗೆ ಬಂದು ಕೆಲಸಮಾಡುವದು ಕಡಿಮೆಯಾದರೂ ಎಲ್ಲಾ ಸಮುದಾಯದ ಕಾರ್ಯಗಳಲ್ಲೂ ತಾನು ಆಲೋಚನೆ ಕೊಡುತ್ತಲೇ ಇದ್ದರೆಂತಲೂ ಅವರು [illegible] ಕ್ರಮ [illegible] ಸಮಯಕ್ಕೆ ಕೌನ್ಸಿಲ ಸಿಕ್ಕಿದ ಸಮಯದಲ್ಲಿ [illegible] ಹೇಳಿದರು

ಮೆ|| ಸಿ [illegible] ರಾಮಯ್ಯನವರು ಈ ಠರಾವಿಗೆ ಅನುಮೋದಿಸಿ ಮೆ|| ಮಾದಯ್ಯನವರು ಗೌಡುಗರ ಜಾತಿಯವರಿಗೆ ಮಾರ್ಗದರ್ಶಕರಾಗಿದ್ದರೆಂತಲೂ ಅವರ ಮರಣದಿಂದ ತನ್ನ ಜಾತಿಯವರಿಗೆ ತುಂಬಾ ವ್ಯಸನವಿದೆಯೆಂತಲೂ ಹೇಳಿದರು ಈ ಸಂದರ್ಭದಲ್ಲಿ ಜಾತಿಯವರು ಬಾರದದ್ದು ನನಗೆ ತೃಪ್ತಿಕರವಾಗಿ ತೋರಲಿಲ್ಲ ಠರಾವುಕೂಡ ಮಂಜೂರಾಯಿತು ಸಭೆಯು ವಿಸರ್ಜನೆಯಾಯಿತು

ಸ್ಮಂಕರಪಾತ್ರ ಬಾರದಿಂದ

ಮೆ|| ರಾವ್ ಸಾಹೇಬ್ [illegible] ರಂಗಪ್ಪನವರಿಗೆ [illegible] ಡೆಪ್ಯುಟಿ ಕಮಿಶನರ್ [illegible] ಸಂತೋಷವನ್ನು ಸೂಚಿಸಲಿಕ್ಕೆ [illegible] ಅವರ ಸ್ನೇಹಿತರು [illegible] ತಾರೀಖು 19—12—23 ರಲ್ಲಿ [illegible] ಟೀ ಪಾರ್ಟಿ [illegible] ಟೀ ಪಾರ್ಟಿ [illegible]

[illegible]

ಪತ್ರವ್ಯವಹಾರಗಳು.

[illegible] ಪತ್ರಕರ್ತರ [illegible]

ಜವಾಬ್ದಾರರಲ್ಲ [ಎಡಿಟರ್]

ಸೆಟ್ಲ್‌ಮೆಂಟಿನ [illegible]

[illegible]

ಸೆಟ್ಲ್‌ಮೆಂಟ್ [illegible]

ಮಹಾಶಯರೇ,

ಕೊಡಗು ಪತ್ರಿಕೆಯಲ್ಲಿ [illegible] ತಾರೀಖು [illegible] ಪತ್ರಿಕೆಯ ೮ನೇ ಪೇಜಿನಲ್ಲಿ [illegible] ಹಗ್ಗದೆ [illegible] ಸೊಸೈಟಿಯ [illegible] ಹಗ್ಗದೆ [illegible] ರಂಗಪ್ಪನವರು [illegible] ಪತ್ರಿಕೆಯ ೮ನೇ ಪೇಜಿನಲ್ಲಿ [illegible] ಮಾತ್ರ ಕ್ಷಮೆ ಕೇಳುತ್ತೇನೆ

ಜೆ ಮುತ್ತಣ್ಣ

ಅಯ್ಯಾ,

[illegible] ಕೊಡಗಿನ [illegible] ಪತ್ರಿಕೆಯಲ್ಲಿ ಪ್ರಕಟಿಸುತ್ತೇನೆ

[illegible]

ಮಡಿಕೇರಿ, [illegible] ಏಜೆಂಟ್,

[illegible] ಪೀಟರ್ ಜೆಸ್ಲಿ.

[illegible]

ಚೋನಿರ [illegible]

ಅಯ್ಯಾ ಕೊಡಗು ಬಾಂಧವರೇ,

ಶ್ರೀ ಮಂಗಲ ನಾಡಿನ ಜಮಾಬಂದಿಯು ಶ್ರೀಮಂಗಲದಲ್ಲಿ ತಾರೀಖು ೧೧-೧೨-೨೩ ರಲ್ಲಿ ಕೊಡಗು ಕ॥ ಅ॥ ಕಮಿಷನರ್ ಸಾ॥ ಜಮಾಬಂದಿ ಆಫೀಸರರವರಿಂದ ಜರಗಲ್ಪಟ್ಟಿತು. ಆದರೆ ಜಮಾಬಂದಿಯಲ್ಲಿ ಶ್ರೀಮಂಗಲನಾಡಿನವರು ಮಧ್ಯಸ್ಥಳವಾದ ಸಾ॥ ಕನ್ನಡದಲ್ಲಿ ಪುರಾತನರಿಂದಲೂ ಪ್ರಖ್ಯಾತಿ ಹೊಂದಿದ ಹುದಿಕೇರಿಯಲ್ಲಿ ಈಗ ಇರುವ ಪ್ರೈಮರಿ ಇಂಗ್ಲಿಷ್ ಸ್ಕೂಲಿನ ಜೊತೆಗೆ ಇಂಗ್ಲೀಷ್ ಲೋವರ್ ಸೆಕೆಂಡರಿ ಸ್ಕೂಲ್ ಸ್ಥಾಪನೆಯಿಂದ ಶ್ರೀಮಂಗಲ ನಾಡಿನವರಿಗೆ ವಿದ್ಯಾದಾನವನ್ನು ಮಾಡಿಸಿ ಕೊಡಬೇಕಾಗಿ ಅರ್ಜಿದಾಸ್ತು ಮಾಡಲ್ಪಟ್ಟಿದೆ. ಈ ಅರ್ಜಿ ಮೇರೆ ಘನಸರ್ಕಾರದವರು ಗರೀಬನಾಡಿನವರ ಮೇಲೆ ಹೆಚ್ಚಿನ ಕೃಪೆಯಿಟ್ಟು ಲೋವರ್ ಸೆಕೆಂಡರಿ ಇಂಗ್ಲೀಷ್ ಸ್ಕೂಲ್ ಸ್ಥಾಪಿಸಿ ಕೊಟ್ಟು ಕಾಪಾಡ್ಯರಾಗಿಯೂ ಈ ಮೇರೆ ಪ್ರೊಸಿಡಿಂಗ್ಸು ಜವಾಬು ಕೊಡಬಹುದಾಗಿ ಶ್ರೀಮಂಗಲ ನಾಡಿನವರು ಆರೈಸುತ್ತೇವೆ. ತಾರೀಖು ೧೪-೧೨-೨೩ ರಲ್ಲಿ.

ಹಾಜರಿದ್ದವ

ಅಯ್ಯಾ ಸಂಪಾದಕರೆ,

ನಮ್ಮ ಕೊಡಗು ಪ್ರಾಂತವು ಇತ್ತಲಾಗೆ ಉನ್ನತಿಗೆ ಬರುತ್ತಿದೆ. ಬಹಳ ಕಾಲದಿಂದಲೂ ಜಮೀನ್ದಾರ ಸಂಘವು ಕೋರಾಡಿ ಇತರ ದೊಡ್ಡ ಪ್ರಾಂತಗಳಂತೆ ನ್ಯಾಯವಿಧಾಯಕ ಸಭೆಯೊಂದನ್ನು ಸಂಪಾದಿಸಿತು. ಸರ್ವಕೋಮಿನ ಜನರು ಈ ಸಂಘದಲ್ಲಿರುತ್ತಾರೆ. ದೇಶದ ಉನ್ನತಿಯಾಗಲಿ ಅವನತಿಯಾಗಲಿ ಈ ಸಂಘದ ಮೇಲೆ ಬಿದ್ದಿದೆ. ವಿಧಾಯಕ ಸಭೆಗೆ ಹೋಗುವ ಉಮೇದುವಾರರು ಚುನಾವಣೆಯಾದರೆ ಆತ್ಮವಿರೋಧವಾಗಿ ಆಚರಿಸ ಬಾರದೆಂದು ನನ್ನ ಸವಿನಯ ಬಿನ್ನಹ.

ನಮ್ಮ ನಾಡಿನ ಸೃಷ್ಟಿಸೌಂದರ್ಯವನ್ನು ನೋಡಲಿಕ್ಕೂ, ಕಾವೇರಿ ತೀರ್ಥಸ್ನಾನ ಮಾಡಿ ಪಾಪ ವಿಸರ್ಜನೆ ಮಾಡಲಿಕ್ಕೂ, ಅನೇಕ ಅನ್ಯಪ್ರಾಂತದವರು ಇಲ್ಲಿಗೆ ದಯಮಾಡಿಸಿರುತ್ತಾರೆ. ಮೊ ಶಿವಸ್ವಾಮಿ ಅಯ್ಯರರೂ, ಮೊ॥ ರಾಮಲಿಂಗರೆಡ್ಡಿಯವರೂ, ಮೊ॥ ರಾಧಾಕುಮುದ ಮುಖರ್ಜಿಯವರೂ ಇಲ್ಲಿಗೆ ಬಂದಿದ್ದು ನಿಸರ್ಗ ದೇವತೆಯ ಲೀಲಾ ವಿನೋದಗಳಲ್ಲಿ ಮಗ್ನರಾಗಿ ತಮ್ಮ ಆನಂದವು ಪಾರವಿಲ್ಲದ್ದಾಯಿತೆಂದು ಸೂಚಿಸಿಕೊಂಡರು. ಇತ್ತಲಾಗೆ ಮೊ॥ ವಿ ಎಸ್ ಶ್ರೀನಿವಾಸಶಾಸ್ತ್ರಿಯವರು ಮಡಿಕೇರಿಗೆ ಆಗಮಿಸಿ, ತಲಕಾವೇರಿಗೆ ಹೋಗಿ ಬಹಳ ಆನಂದಿತರಾದರು. ಒಂದೆರಡು ತಿಂಗಳಿಗೆ ಹಿಂದೆ ಮೊ॥ ಕೆ ಜಿ ಗುಪ್ತರು ಬಂದಿದ್ದರು. ಹೀಗೆ ಆಗಾಗ ಮಹನೀಯರಾದ ವಿದ್ಯಾವಂತರು ನನ್ನ ದೇಶಕ್ಕೆ ಬಂದು ತಮ್ಮ ಸುಬುದ್ಧಿವಾದದಿಂದ ಸಾಮಾನ್ಯ ಜನರ ಪ್ರೀತಿಗಳ ಮಟ್ಟಕ್ಕೆ ಏರಿಸುತ್ತಿರುವರು. ೧೯೧೦ ವರುಷಗಳ ಹಿಂದಕ್ಕೆ ವಿದ್ವನ್ಮಣಿಗಳ ಹೆಸರುಗಳೇ ನಮ್ಮ ಕೊಡಗು ಜನರಿಗೆ ಪರಿಚಯ ವಿರಲಿಲ್ಲ. ಅಂಥವರಿಂದ ಹೆಚ್ಚು ಪ್ರಯೋಜನ ಪಡೆಯಬೇಕಾದರೆ ಅವರ ಉಪನ್ಯಾಸ ಕೇಳಲು ಅನು ದೊರಕಿಸಿಕೊಳ್ಳಬೇಕು. ಇದಕ್ಕಾಗಿ ಒಂದು ದೊಡ್ಡ ಆಲಯಬೇಕು. ಈ ಸಂಗತಿಯನ್ನು ಈ ಪತ್ರಿಕೆಯು ಚರ್ಚಿಸುತ್ತಲಿದೆ.

ಸಾಮಾನ್ಯ ವಿದ್ಯೆಯಲ್ಲಿ ನಮ್ಮ ದೇಶದವರು ಇತರ ಪ್ರಾಂತಗಳಿಗಿಂತ ಮುಂದರಿದಿದ್ದರೆ. ಆದರೆ ಕಲಾವಿದ್ಯಾಭ್ಯಾಸವೂ ಕೈಗಾರಿಕಾ ವಿದ್ಯಾಭ್ಯಾಸವೂ ಏನೇನೂ ಇಲ್ಲವೆಂದೇ ನನ್ನ ಭಾವನೆ. ಕೌನ್ಸಿಲ್ ಮೆಂಬರರು ಈ ವಿಚಾರಕ್ಕೆ ತಮ್ಮ ನಿಗಕೊಡದಿರಲಾರರು.

ನಮ್ಮ ವ್ಯವಸಾಯ ಕ್ರಮವು ಶಾಸ್ತ್ರೀಯವಾಗಿಲ್ಲ. ನೂತನ ರೀತಿಗಳನ್ನೂ ಇತರ ಉಪಾಯಗಳನ್ನೂ ಮೈಸೂರು ಸರ್ಕಾರದವರಂತೆ ನಮ್ಮ ಸರ್ಕಾರದವರೂ ಸಹ ತರಿಸಿಕೊಂಡು ಇಲ್ಲಿ ಡಿಪ್ಪೋಗಳನ್ನು ಇಟ್ಟು ಅವುಗಳಿಂದ ಉಪಕರಣಗಳನ್ನು ಹಂಚುವಂತೆ ಮಾಡುವುದು ಮತ್ತು ಕೌನ್ಸಿಲ್ ಸದಸ್ಯರ ಗಮನವು ಇದಕ್ಕೆ ತಿರುಗಲಿ ಈ ಕಡೆಗಲಿ.

ಅಯ್ಯಾ ಸದಸ್ಯರುಗಳೇ! ಲೋಕಲ್ ಕೌನ್ಸಿಲ್ಲಿಗೆ ಹೋಗುವ ಮುನ್ನ ಅನೇಕ ತರದ ಪ್ರತಿಜ್ಞೆ ಮಾಡುವಿರಿ. ಚುನಾವಣೆಯಾದ ಮೇಲೆ ಪ್ರತಿಜ್ಞೆ ಪೂರ್ಣ ಮಾಡುವ ಭಾರವು ನಿಮ್ಮದು. ನಮಗೆ ಹೊಸದಾಗಿ ಕೌನ್ಸಿಲು ಸಿಕ್ಕಿದೆ. ಇಲ್ಲದ ಸಲ್ಲದ ಕಲಹಗಳನ್ನು ಹೂಡಿಕೊಂಡು ಕಾದಾಡಬೇಡಿ. ಭ್ರಾತೃಪ್ರೇಮದಿಂದ ಕಾರ್ಯ ನಡೆಸಿರಿ. ಈಗಾಗಲೆ ಉಮೇದ್ವಾರರೊಳಗೆ ಕಚ್ಚಾಟ. ಹೀಗಾಗಬಾರದು. ಉಮೇದಿನಲ್ಲಿ ಬಿಟ್ಟರೊಟ್ಟರಿಗೆ ವಿಶ್ವಾಸವಿರಬೇಕು. ಬಿಟ್ಟಿಸ್ಸೆನ್ನಿಸುವ ದೂರಬಾರದು. ನಮ್ಮ ದೇಶಕ್ಕೆ ಶುಭವಾಗಲಿ,

ಪ್ರಜೆ

ದಿವಂಗತ ಕೌನ್ಸಿಲರ್ ರಾವ್‌ಸಾಹೇಬ್ ಕೋದಂಡ್ರ ಮಾದೈಯ್ಯನವರು.

ಶ್ರೀಮಾನ್ ಮಾದೈಯ್ಯನವರ ಮರಣದ ದುಃಖವಾರ್ತೆಯನ್ನು ತಿಳಿದು ಮದ್ರಾಸು ಕೊಡಗು ಯೂನಿಯನಿನ ಮೆಂಬರುಗಳು ಸಭೆಸೇರಿ ಈ ಕೆಳಗಿನ ಠರಾವನ್ನು ಸರ್ವಸಮ್ಮತದಿಂದ ಮಂಜೂರು ಮಾಡಿ, ಅದರ ಒಂದು ಪ್ರತಿಯನ್ನು ಕೊಡಗು ಪತ್ರಿಕೆಗೂ ಮತ್ತು ಅದರ ಸಾರಾಂಶವನ್ನು ತಂತೀ ಮೂಲಕ ದುಃಖ ಸಾಗರದಲ್ಲಿ ಮುಳುಗಿರುವ ಅವರ ಕುಟುಂಬದವರಿಗೂ ಕಳುಹಿಸುವಂತೆ ನಿರ್ಣಯಮಾಡಿದರು. ಠರಾವು "ಶ್ರೀಮಾನ್ ಮಾದೈಯ್ಯನವರು ಮೈಸೂರು ಸಂಸ್ಥಾನದಲ್ಲಿ ಅಪಾರವಾದ ಕೀರ್ತಿಯನ್ನು ಪಡೆದು ವೃದ್ಧಾಪ್ಯದಲ್ಲಿ ಮಾತೃಭೂಮಿಯ ಸೇವೆಯನ್ನು ಕೈಕೊಂಡು ಕೊಡಗು ಜಮೀನ್ದಾರರಸಂಘ, ಕೊಡಗು ವಿದ್ಯಾಭಿವೃದ್ಧಿಸಂಘ, ಕೊಡಗುಸಭೆ ಇವುಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಕಾರಣರಾಗಿಯೂ, ಅನೇಕ ಸ್ಕಾಲರ್‌ಶಿಪ್‌ಗಳನ್ನು ಕೊಟ್ಟು ಕೊಡಗಿನ ವಿದ್ಯಾಭಿವೃದ್ಧಿಗೆ ಕಾರಣಭೂತರಾಗಿಯೂ, ತಮ್ಮ ಅನುಭವ ದೂರದೃಷ್ಟಿ, ಬುದ್ಧಿಕೌಶಲತೆಯಿಂದ ಹಿತಾಹಿತಗಳನ್ನು ತಿಳಿದು ಸಮಯೋಚಿತ ಸದಭಿಪ್ರಾಯಗಳನ್ನು, ರಾಜಕೀಯ ಸಾಮಾಜಿಕ ಇವೇ ಮೊದಲಾದ ದೇಶಸಂಬಂಧವಾದ ವಿಷಯಗಳಲ್ಲಿ ಆಲೋಚನೆ ಕೊಡುವವರಾಗಿಯೂ, ದೇಶದ ಏಳಿಗೆಗೆ ಸ್ತಂಭಭೂತರಾಗಿಯೂ ಇದ್ದು, ಅಲ್ಲದೆ, ಈಗ ನಮಗೆ ಸಿಕ್ಕಿದ ನ್ಯಾಯವಿಧಾಯಕ ಸಭೆಯನ್ನು ತಮ್ಮ ಅನುಭವ ಮತ್ತು ಪರಿಪಕ್ವ ಹಿತಾಲೋಚನೆಯಿಂದ ದೇಶೋನ್ನತಿಗೆ ಪ್ರಯೋಜನವಾಗುವಂತೆ ಮಾಡಲು ದೇಶಕ್ಕೆ ಬೇಕಾಗಿದ್ದಂಥಾ ಈ ಮಹಾತ್ಮರನ್ನು ದೇಶವು ಈ ವೇಳೆಯಲ್ಲಿ ಕಳೆದುಕೊಂಡದ್ದು ಅದರ ದುರ್ದೆಶೆಯೆಂದು ನಾವು ಭಾವಿಸುತ್ತೇವೆ.

ದಿವಂಗತ ಮಾದೈಯ್ಯನವರ ಆತ್ಮಕ್ಕೆ ಭಗವಂತನು ಅಕ್ಷಯ ಪದವಿಯನ್ನು ನೀಡಲೆಂದೂ, ಶೋಕಾಗ್ರಸ್ತರಾಗಿರುವ ಅವರ ಕುಟುಂಬದವರಿಗೆ ಈ ಅಪರಿಮಿತ ದುಃಖವನ್ನು ಸಹಿಸಲು ಧೈರ್ಯಸ್ಥೈರ್ಯಗಳನ್ನು ದಯಪಾಲಿಸಲೆಂದು ಶ್ರೀಭಗವಂತನನ್ನು ನಾವು ಪ್ರಾರ್ಥಿಸುತ್ತೇವೆ.

ಅಜ್ಜಮಾಡ ಕಾಳಯ್ಯ

ಕೊಡಿ ಮಲೆನಾಡಿನ ಹೆಗ್ಗಡೆಯವರಿಗೆ ಶುಭಮಸ್ತು.

ಇದೇ ಡಿಸಂಬರು ತಿಂಗಳು ೩ ರ ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಿದ ತಮ್ಮ ವಿನಂತಿಯು ಯಾರ ಹೃದಯವನ್ನು ಕೂಡ ಮುಟ್ಟದೆ ಇದ್ದೀತು! ತಾವು ಸಿಕ್ಖ ಹಾಯಿಗಳೂ ಸಿಂಧಿಗಳೂ, ಪಿಡಿ ಕೀನರೂ ನಮಗಾಗಿ ಬರೆದುಕೊಳ್ಳುತ್ತಾರೆ. ಸೂರ್ಯ ಮುಳುಗದ ಬ್ರಿಟಿಷ ಸಾಮ್ರಾಜ್ಯದಲ್ಲಿ ಇವರು ಹೀಗೇಕೆ ಬರೆದುಕೊಳ್ಳುವರು ಅವರ ಕುಲ ನಾಮಕರಣದಿಂದಲೂ ಖ್ಯಾತಿಗಳು ಬರನ್ನು ಇವರು ಅರಿಯದೆ ಹೋದರೇ! ಧರ್ಮಾರ್ಜನೆಯೂ, ವಿದ್ಯಾರ್ಜನೆಯೂ, ತಮ್ಮ ಪಾಲಿಗೆ ಇಲ್ಲದುದೆಂಬುದನ್ನು ಇವರು ಮರೆತರೇ! ದೇಶ ಎಲ್ಲಾಗಳೇ (ಗತಿಗಳು) ಆಯಾಯ ರಾಜ್ಯಭಾರಕ್ಕನುಗುಣವಾಗಿ ಬದಲಾಗುತ್ತಿರುವಾಗ್ಯೆ ದೇಶದ ಆಚಾರವು ಹಿಂದುಳಿದಿದ್ದರೆ ಇಷ್ಟವುದರಲ್ಲಿ ಆಶ್ಚರ್ಯವೇನು? ತಮ್ಮ ಪಿತೃಪಿತಾಮಹರು ಅರ್ಜಿಸಿದ ತಮ್ಮ ಕುಲನಾಮಕ್ಕೆ ಬಹುಮಾನವನ್ನಿಟ್ಟ ಇವರ ಬುದ್ಧಿವಂತಿಕೆಯನ್ನು ಏನೆಂದು ಸ್ತುತಿಸಲಿ! "ಹೆಗ್ಗಡೆ" ಎಂಬ ಕುಲನಾಮಪದದ ಅರ್ಥವನ್ನಾದರೂ ಗ್ರಹಿಸಿದ್ದರೆ, ಕೊಡಗು ಪತ್ರಿಕೆಯಲ್ಲಿ ವಿನಂತಿ ಕಳುಹಿಸಬೇಕಾದ ಅಗತ್ಯವಿರಲಿಲ್ಲ. ತಾವು ಯಾರು? ತಮ್ಮ ಅಧಿಕಾರವೇನಿತ್ತು? ತಮ್ಮ ನಾಡಿನ ಪದ್ಧತಿಗಳೇ ಸಿದ್ಧವು? ಯಾವ ಯಾವ ಕಾಲದಲ್ಲಿ ಯಾವ ಯಾವ ಬದಲಾವಣೆಗಳಾದವು? ಇವುಗಳನ್ನೆಲ್ಲಾ ವಿಚಾರಮಾಡಿಕೊಳ್ಳದೆ ಪರರ ಮೇಲೆ ಆದರಿಸಿಕೊಳ್ಳಬೇಕೆಂದು ಆಶೆಯಿಟ್ಟು ಬರೆದ ಇವರ ವಿನಂತಿಗೆ ಯಾರು ತಾನೆ ವ್ಯಸನಪಡದೆ ಇರುವರು? "ಬಂದೆವೊ ನೆಲೆ ಕಳೆವು ಬಂದ ಒಕ್ಕ ಮುಂಗಳವು" "ಕೊಂದಲೆ ಕೈಚಕ್ಕ ಕೋಯಿಮೆ ನರಳು" ಎಂಬ ಮೊದಲಾದ ಹಿರಿಯರ ನಾಣ್ಣುಡಿಗಳನ್ನು ಈ ಹೆಗ್ಗಡೆ ಮಹಾಶಯರು ಮರೆತರೇ! ಆರ್ಯ್ಯೋ ಪಾಪ ಇನ್ನವರೂ ಎಚ್ಚರಗೊಳ್ಳಿ. ವಿದ್ಯಾರ್ಜನೆಮಾಡಿ, ಮಾನವೂ, ಧನವೂ, ಬಲವೂ, ತಾನಾಗಿಯೇ ಹಿಂದೆ ಬರುವುದು ಅನಂತರ ಸ್ವರಾಜ್ಯದ ಮಾತೆತ್ತಿ ಬಗ್ಗಟ್ಟು ಎಂಬ ಆಯುಧಿಯ ಮಾತಿಗೊಂದುತ್ತರ, ಕಬ್ಬಿಣವನ್ನು ಕೂಡ ಕರಗಿಸಬಲ್ಲ ಆಯುರಿಯು ಒಗ್ಗಟ್ಟಿನ ಸುದ್ಧಿಯೆತ್ತಿದ್ದು ಶುಭಕಾರವೇ ಸರಿ, ಭಾಗಂಡಕ್ಷೇತ್ರವನ್ನು ಕಟ್ಟಿ ಶಿಲಾಶಾಸನವನ್ನು ಬರೆದಿಟ್ಟ ಮಹಾತ್ಮ ಯ ಪಾಕಣ ಆಯುರಿಯ ನಾಮಸೋಟ್ಟ ರಣೆಯನ್ನು ತ್ರಿಕಾಲದಲ್ಲಿಯೂ ಸ್ಮರಣೆ ಮಾಡಲು ಮರೆತು ನಾಯಕರೇ ತಿಮರ್ಮಗಳ್ಳ ಕಾರಣವೇನು? ಎಂದು ಕೇಳುವ ಇವರ ಪ್ರಶ್ನೆಗೆ ಉತ್ತರ ಬರೆದು ಇವರ ಅಪೇಕ್ಷೆಯಂತೆ ಕೈಹಿಡಿದೆತ್ತಲೂ ಯಾರು ಮುಂದೆ ಬರುವರೋ ನೋಡಬೇಕು.

ಒಬ್ಬ ಬಂಧು.

ದೇಶಬಾಂಧವರೇ,

ಮೊ॥ ಕೆ ಚಂಗಪ್ಪನವರಿಗೆ ಕೊಡಗು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಪದವಿಯು ಕಾಯಂ ಆದುದಕ್ಕೆ ಇದೇ ತಾರೀಖು ೧೪ ರಲ್ಲಿ ಹೈಸೊಡ್ಲು ಗ್ರಾಮಸ್ಥರೆಲ್ಲರೂ ಸೇರಿ ಕೊಡಗು ದೇಶದಲ್ಲಿ ಉದ್ಭವ ಲಿಂಗವಾದ ಹೈಸೊಡ್ಲು ಗ್ರಾಮದ ಶ್ರೀಮಹಾದೇವರ ದೇವಸ್ಥಾನದಲ್ಲಿ ರುದ್ರಾಭಿಷೇಕ ಪೂಜೆಯನ್ನು ನಡಿಸಿದರು. ಪೂಜೆಯು ಅಂತ್ಯವಾಗುವ ಸಮಯದಲ್ಲಿ ಮೊ॥ ಚೋನಿರ ತಿಮ್ಮಯ್ಯನವರು ಈಗ ಕೊಡಗಿನ ಎರಡನೆಯ ಧೊರೆಯಾಗಿ ದೊಡ್ಡ ಅಧಿಕಾರ ಹೊಂದಿದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿಯೂ, ಪಸ್ಟ್ ಅಸಿಸ್ಟೆಂಟ್ ಕಮಿಷನರಾಗಿಯೂ, ಡಿವಿಜನಲ್ ಆಫೀಸರಾಗಿಯೂ, ಮುನಿಸಿಪಾಲಿಟಿಯ ಪ್ರೆಸಿಡೆಂಟರಾಗಿಯೂ ಇರುವ ಮೊ॥ ಕೆ ಚಂಗಪ್ಪ ಬಿ ಎ ಇವರು ದೇಶದ ಪ್ರಜೆಗಳನ್ನು ಚಿರಕಾಲ ಆಳುವ ಆತ್ಮಶಕ್ತಿಯನ್ನೂ, ಆಯುರಾರೋಗ್ಯವನ್ನೂ ಸುಖಸಂಪತ್ತನ್ನೂ ಸಹ ಶ್ರೀಮೂಲಕಾವೇರಮ್ಮನೂ ಮತ್ತು ಶ್ರೀಮಹಾದೇವರೂ ದಯಪಾಲಿಸಲೆಂದು ಹೇಳಿ ಎಲ್ಲರೂ ಪ್ರಾರ್ಥಿಸಿ ಮಂಗಳ ಘೋಷದೊಡನೆ ಪೂಜೆಯು ಮುಕ್ತಾಯವಾದ ನಂತರ ತೀರ್ಥಪ್ರಸಾದಗಳನ್ನು ಸೇವಿಸಿ, ಅಲ್ಲಿಂದ ಕೆಲವು ಜನರು ಪ್ರಸಾದ ಸಮೇತ ಬಂದು ಅದೇ ದಿನ ಸಾಯಂಕಾಲ ಮೂರು ಗಂಟೆಯ ಸಮಯಕ್ಕೆ ಶ್ರೀಮಂಗಲದಿಂದ ಪೊನ್ನಂಪೇಟೆಗೆ ಬರುವಾಗ ಅರನೇಕಲ್ಲು ಬಳಿ ಮೋಟಾರು ನಿಲ್ಲಿಸಿ ಪ್ರಸಾದ ಕೊಟ್ಟದನ್ನು ವಿಶ್ವಾಸಪೂರ್ವಕದಿಂದ ಸ್ವೀಕರಿಸಿ ಹೊರಟು ಹೋದರು.

ಹಾಜರಿದ್ದವ

ಅಯ್ಯಾ ಸಂಪಾದಕರೆ

ತಮ್ಮ ಜನೋಪಕಾರ ವೃತ್ತಪತ್ರದಲ್ಲಿ ನನ್ನ ಇದೊಂದು ಪತ್ರವನ್ನು ಪ್ರಕಟಿಸುವಿರಾಗಿ ಕೋರುತ್ತೇನೆ.

ಮಹದೇವ ಪೇಟೆಯಲ್ಲಿ ಚಾಮುಂಡೇಶ್ವರಿ ದೇವಾಲಯವು ಇದೆ. ಇದು ರಾಜರ ಕಾಲದಲ್ಲಿ ಕಟ್ಟಲ್ಪಟ್ಟ ಕಟ್ಟಡ. ಪೇಟೆಯ ಮಧ್ಯದಲ್ಲಿರುವ ಈ ದೇವಾಲಯವು ಸದ್ಯಕ್ಕೆ ನಾದುರಸ್ತಿನಲ್ಲಿದೆ. ಹತ್ತು ಮೂವತ್ತು ವರುಷಗಳಿಂದಲೂ ಈ ದೇವಾಲಯಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಜೀರ್ಣೋದ್ಧಾರ ಮಾಡಬೇಕೆಂದು ಪ್ರಯತ್ನ ಮಾಡುತ್ತಾರೆ. ಹೊರತು, ಕಾರ್ಯಕ್ಕೆ ಬಂದಾಗ ವಿಶ್ವಾಸವನ್ನು ಸಂಪಾದಿಸುವುದಿಲ್ಲ. ಇವರೊಳಗೆ ಹಿಂದಕ್ಕೂ ಕಚ್ಚಾಟ, ಈಗಲೂ ಕಚ್ಚಾಟ ಆದರೆ ಮುಂದೆಯೂ ಹೀಗೆಯೋ ಏನೋ ತಿಳಿಯದು!

ಇಂಲಿ ನಾನು ಈ ಕೆಲಸ ಮಾಡಿಸುತ್ತೇನೆ, ಆವನು ಆ ಕೆಲಸ ಬೇಕು; ಮತ್ತೊಬ್ಬನು ಮುಗುದೊಂಗು ಕೆಲಸ ನಡೆಸಲಿ ಇತ್ಯಾದಿಯಾಗಿ ತಂತಮ್ಮೊಳಗೆ ಅಂದುಕೊಳ್ಳುವುದಕ್ಕಿಂತಲೂ, ಕೆಲವೊಂದು ಅನುಕೂಲನ್ನು ಬದಲು ಸೇರಿಕೊಂಡು ಕಾರ್ಯವನ್ನು ಜಗಮಾಡಿಸುವುದು ಲೇಸು. ಎಂಥ ಕಾರ್ಯ ನಡೆಯಬೇಕಾದರೂ ದುಡ್ಡು ಪ್ರಧಾನವಲ್ಲ, ಮನಸ್ಸೆ ಪ್ರಧಾನವೆಂದು ಪ್ರಾಜ್ಞರು ಹೇಳುತ್ತಾರೆ. ಆದುಕಾರಣ ಹಣಗಾರರಿಗೆ ಚಿತ್ತಪ್ರಕಾಶವಾಗಬೇಕು. ಹೀಗಾಗುವುದಕ್ಕೆ ಬೇರೆ ಏನೊಂದು ಉಪಕರಣಬೇಡ. ತಮ್ಮ ದಿವ್ಯ ಕಣ್ಣುಗಳನ್ನು ನಿಂತಲ್ಲಿಯೇ ನಿಂತು ತಿರುಗಿಸಿದರೆ ಸಾಕು. ಆ ಕೆಳಜನರೂ ಮೇಲಜನರೂ ಹಿಂದು ಮುಂದಿನ ಜನರೂ ಯಾವ ಯಾವ ರೀತಿಯಲ್ಲಿ ಮುಂದರಿಯುತ್ತಿರುವರೆಂಬ ವಿಚಾರವು ತಮ್ಮ ಕಣ್ಣಿಗೆ ತೋರದಿರಲಾರದು. ಒಬ್ಬರನ್ನೊಬ್ಬರು ನೋಡಿ, ಸತ್ಕಾರ್ಯಗಳನ್ನು ಆಚರಿಸುವುದು ಈಗಿನ ಮಾತಲ್ಲ, ರಾಮಾಯಣಭಾರತ ಕಾಲಗಳ ಮಾತೇ ಆಗಿದೆ.

ನನ್ನದೊಂದು ಕಡೇ ಮಾತು ಮಳೆಗಾಲಕ್ಕೆ ಹೆಚ್ಚೆಂದರೆ ನಾಲ್ಕೈದು ತಿಂಗಳುಂಟು. „ ಆಡಿನೋಡು ವುದಕ್ಕಿಂತ ಮಾಡಿನೋಡುವುದು ಉಚಿತ" ಎಂಬ ನಾಣ್ಣುಡಿಯನ್ನು ತಮ್ಮ ಕಣ್ಣೆದುರಿಗಿಟ್ಟುಕೊಂಡು ಅಧಿಪರು ಹಿಡಿದ ಕಾರ್ಯವನ್ನು ಮಾಡಬೇಕೆಂದು ನನ್ನ ಸವಿನಯ ಪ್ರಾರ್ಥನೆ.

ನೋಟಗಾರ.

ಓಂ

ಮೈಸೂರು ಗೌರ್ನಮೆಂಟು ಸೆಕ್ಯುರಿಟಿ ಲೈಫ್ ಅಂಡ್ ಮ್ಯಾರೇಜ್ ಅಷ್ಯೂರೆನ್ಸು ಕಂಪೆನಿ ಲಿಮಿಟೆಡ್ ಮೈಸೂರು

೨೪-೧೧-೨೩ ನೇ ತಾರೀಖಿನಲ್ಲಿ ಮ|| ರಾ|| ಬಿ ಗಣಪತಿಯವರು ಕೊಡಗು ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಕಟಣೆಗೆ ನನ್ನ ಅನೇಕ ವಂದನೆಗಳನ್ನು ಅವರಿಗೆ ಅರ್ಪಿಸಿ ಈಕೆಳಗೆ ಕಂಡ ಕೆಲವು ಅಂಶಗಳನ್ನು ಕೊಡಗಿನ ಮಹಾಶಯರಿಗೆಸರಿಯಾದ ತಿಳವಳಿಕೆ ಬಗ್ಗೋಸ್ಕರ ಪ್ರಕಟಿಸಿರುತ್ತೇನೆ ಎಲ್ಲಾ ಮಹನೀಯರೂ ಇದನ್ನು ಓದಬೇಕೆಂದು ನನ್ನ ಪ್ರಾರ್ಥನೆ

ಈ ಕಂಪೆನಿಯು ಮೂಲಧನವಾದ ೫,೦೦,೦೦೦ ರೂಪಾಯಿಗಳ ಷೇರುಗಳು ಪೂರ್ತಾ ಭರ್ತಿಯಾಗಿರುತ್ತವೆ ಮತ್ತು ಅದಕ್ಕಾಗಿ ಇದುವರಿಗೆ ವಸೂಲಾಗಿರತಕ್ಕ ಮೊಬಲಗು ಮೂರು ಲಕ್ಷದವರಿಗೂ ಇರುತ್ತದೆ ಹೀಗೆ ವಸೂಲಾಗಿರತಕ್ಕ ಷೇರು ಮೊಬಲಗಿನ ಪೈಕಿ ಒಂದು ಲಕ್ಷ ರೂಪಾಯಿಗಳ ಇಂಡಿಯಾ ಗೌರ್ನಮೆಂಟು ಸೆಕ್ಯೂರಿಟಿಗಳು ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿಗಳ ಆಕ್ಟಿನ ಪ್ರಕಾರ ಇಂಡಿಯಾ ಗೌರ್ನಮೆಂಟಿನಲ್ಲಿ ಈಗಾಗಲೇ ಸೆಕ್ಯೂರಿಟಿ ಡಿಪಾಜಿಟ್ಟಾಗಿಟ್ಟಿರುವದಲ್ಲದೆ ಮೈಸೂರ್ ಆಕ್ಟಿನಪ್ರಕಾರ ಎರಡು ಲಕ್ಷ ರೂಪಾಯಿಗಳಿಗೆ ಪ್ರತಿಯಾಗಿ ಇನ್ನೂ ಗೌರ್ನಮೆಂಟು ಸೆಕ್ಯೂರಿಟಿಗಳು ಇಟ್ಟಿರುತ್ತವೆ ಅಲ್ಲದೆ ೫೦೦೦ ರೂಪಾಯಿಗಳವರಿಗಿನ ಮೊಬಲಗು ಮೈಸೂರು ಗೌರ್ನಮೆಂಟು ಸೆಕ್ಯೂರಿಟಿಯಲ್ಲಿ ಇಟ್ಟಿರುತ್ತೆ ಮೈಸೂರು ಪಟ್ಟಣದ ವ್ಯಾಪಾರದ ಸ್ಥಳದಲ್ಲಿ ಸುಮಾರು ೫೦,೦೦೦ ರೂಪಾಯಿಗಳ ಬೆಲೆ ಬಾಳುವ ಮತ್ತು ತಿಂಗಳು ಒಂದಕ್ಕೆ ೨೫೦ ರೂಪಾಯಿವರಿಗೆ ಬಾಡಿಗೆ ಉತ್ಪತ್ತಿಯಾಗುವ ಒಂದು ಸುಂದರವಾದ ಕಟ್ಟಡವನ್ನೂ ಈ ಕಂಪೆನಿಯು ಹೊಂದಿರುತ್ತೆ

ನಮ್ಮ ಹಿಂದೂ ಜನಗಳು ಯಾತಕ್ಕೆ ವಿಳಗಗೆ ಬರುವದಿಲ್ಲವೆಂದರೆ ಒಬ್ಬ ಮನುಷ್ಯನಲ್ಲಿರುವ ಒಳ್ಳೆ ಗುಣಗಳನ್ನು ಬಿಟ್ಟು ಕೆಡುಕು ಅಭಿಪ್ರಾಯ ಕನ್ನಡಿ ಎದುರು ನೋಡುತ್ತಿರುವುದು ಇದೊಂದು ನಮ್ಮ ಜನಗಳ ಏಗೆ ಹೊಂದಿಕೆ ಅಲ್ಲದೆ ಯಾವಾಗಲೂ ಹಿತ್ತಲಮದ್ದಿಗೆ ರುಚಿಯಿಲ್ಲ ಎಂಬ ಸಾಮಾತಿಗೆ ಸರಿಯಾಗಿ ಇದೇ ನಮ್ಮ ಕಂಪೆನಿಯು ದೂರವಾಗಿರತಕ್ಕ ಸ್ಥಳಗಳಲ್ಲಿದ್ದ ಪಕ್ಷದಲ್ಲಿ ಈ ರೀತಿಯಾದ ದುರಭಿಪ್ರಾಯವು ಜನಗಳಿಗೆ ಕಾಣುತ್ತಿರಲಿಲ್ಲ ಅದೂ ಇರಲಿ ನಮ್ಮ ಕಂಪೆನಿಯಲ್ಲಿ ಇರುವ ಸೌಲಭ್ಯಗಳು ಇನ್ಯಾವ ಕಂಪೆನಿಯಲ್ಲಿವೆಯೋ ಅದು ಇನ್ಯಾವ ರೀತಿ ಇರಬೇಕೋ ಗೊತ್ತಾಗುವುದಿಲ್ಲ ಜನಗಳಿಗೆ ಈ ದಿನ ವಿಮೆಮಾಡಿದರೆ ನಾಳೆ ದಿವಸವೇ ಹಣ ಕೊಡಬೇಕು ಇಲ್ಲದಿದ್ದರೆ ಅದು ಕೆಟ್ಟ ಕಂಪೆನಿ ಎಂದು ಹೇಳುತ್ತಾರೆ ಕೊಡಗಿನಲ್ಲಿ ನಾವು ಸರಿಯಾಗಿ ಕೆಲಸಮಾಡುವುದಕ್ಕೆ ಶುರುಮಾಡಿ ಒಂದು ವರ್ಷವಾಯಿತು ಈಗಾಗಲೇ ಒಂದು ನೆರಳ್ಳೆಯವರಿಗೆ ಸಾವಿರ ರೂಪಾಯಿಗಳೂ, ಒಬ್ಬರಿಗೆ ಜೆಟ್ಟಿಕೆಯಲ್ಲಿ ಒಂದುಸಾವಿರ ರೂಪಾಯಿಗಳೂ ಕೊಟ್ಟಿರುವುದಲ್ಲದೆ ಸ್ವತ್ತುಗಳ ಆಧಾರದ ಮೇಲೆ ೨,೫೦೦ ರೂಪಾಯಿಗಳು ಸಾಲ ಕೊಡಲ್ಪಟ್ಟಿವೆ ಆಯಾಯ ಜಿಲ್ಲೆಯಲ್ಲಿ ಬರುವ ಮೊಬಲಗನ್ನೆಲ್ಲಾ ಅಲ್ಲಲ್ಲಿಯ ವಿಮೇದಾರರಿಗೆ ಕೊಡುವದೇ ಈ ಕಂಪೆನಿಯ ಮುಖ್ಯೋದ್ದೇಶವಾಗಿ ಷೇರುದಾರರ ಹೊರೆಯನ್ನು ಈಗಾಗಲೇ ಹೊರೆ ವರೆ ಯಾವ ರೀತಿ ಆಗಬೇಕೆಂದು ಈಗಾಗ ಈ ಕಂಪೆನಿಯು ಹತ್ತು ರೂಪಾಯಿನ ಷೇರುಗಳು ಹನ್ನೆರಡು ರೂಪಾಯಿನಂತೆ ಮಾರುತ್ತಲಿವೆ ಈ ಸರಿಯಾದ ಸಂಗತಿಯನ್ನೆಲ್ಲಾ ತಿಳಿಯದೆ ಮೇಲ್ಕಂಡ ಲೇಖಕರು ಕಂಪೆನಿಗೆ ಸೇರಿರುವವರೂ ಮತ್ತು ಸೇರುವವರೂ ಹಿಂಗಿರಬೇಕೆಂದು ಎಚ್ಚರಿಕೆಕೊಡುತ್ತಾರೆ ಹಾಗೆ ಅವರ ಹೇಳಿಕೆಯಂತೆ ನೀವು ಈ ಸದುದ್ದೇಶ ಬಿಟ್ಟರೆ ನಿಮಗೆ ನಷ್ಟವಾಗುತ್ತೆ

ಈಗಾಗಲೇ ಮೇಲ್ಕಂಡ ಷೇರುಗಳು ಪೂರಾಭರ್ತಿ ಎರಡು ರೂಪಾಯಿನ ಹೆಚ್ಚಿಗೆಯಂತೆ ಮಾರುವ ೬೦೦೦ ಬಾಂಡು ಪಾಲಿಸಿದಾರರುಗಳೂ ಹದಿನೈದು ಲಕ್ಷ ರೂಪಾಯಿನ ವಿಮೇದಾರರುಗಳೂ ಇರುತ್ತಾರೆ ಗಳೂ ಸ್ವಲ್ಪ ಕಾಲ ತಡೆದು ಅನಂತರ ನೋಡಿ ಇದರ ಫಲಿತಾಂಶವು ಕಾಣಬರುತ್ತೆ. ದೈವಸಿದ್ಧವಾಗಿರುವ ನಿಮ್ಮ ಕಾಫಿ ಬೆಳೆಯು ಒಂದು ಸಾರಿ ಫಲವತ್ತಾಗಿಯೂ ಇನ್ನೊಂದು ಸಾರಿ ಬಹು ನಷ್ಟವಾಗಿಯೂ ಬೆಳೆಯನ್ನು ಕೊಡುತ್ತಿರುವುದು ನೀವು ಕಣ್ಣಾರ ನೋಡುತ್ತಾ ಇದ್ದೀರಿ ಸುಗ್ಗಿ ವೇಳೆ ಬಂದಾಗ ಕಾಫಿತೋಟ ನೋಡುವುದು ಬೆಳೆ ಬಾರದಿದ್ದರೆ ಅದರ ಕಡೆಗಮನಕೊಡಬಾರದೇ ಯೋಚನೆಮಾಡಿನೋಡಿ

ನಾಮಧೇಯದಿಂದ ಸುಕಸ್ಸು ಎಂದಿಗೂ ಬರುವುದಿಲ್ಲ. ಅವರ ಅಂತಃಕರಣ ಸರಿಯಾಗಿದ್ದ ಪಕ್ಷದಲ್ಲಿ ಆಧಿಕ್ಯ ಎಂದಿಗೂ ಹಾನಿಯಿಲ್ಲ ತಿಳಿಯುವುದು.

ಆದ್ದರಿಂದ ನನ್ನ ಕೋರಿಕೆ ಏನೆಂದರೆ ನಿಮ್ಮ ನಿಮ್ಮ ಕಂತುಗಳನ್ನು ಸರಿಯಾಗಿ ಕಟ್ಟುತ್ತಾ ಬಂದರೆ ಅದರ ಫಲಿತಾಂಶವು ನಿಮಗೇ ಗೊತ್ತಾಗುವುದು.

೧೪-೧೧-೨೩.

ತಮ್ಮ ವಿಧೇಯ,
ಟಿ. ಎನ್ ಆರಾಧ್ಯ,
ಚೀಫ್ ಏಜಂಟ್, ಮಡಿಕೇರಿ

ಪೊನ್ನಂಪೇಟೆ ಶ್ರೀಮಂಗಲನಾಡಿನ ಜನ್ಮದ
ಓಟರುಗಳು ನಿಮಗಿರುವ ಮೂರು
ಓಟುಗಳ ಪೈಕಿ ಒಂದನ್ನು
ದಯವಿಟ್ಟು

ಪಾರ್ವಂಗಡ ಕುತ್ತಾ
ಅಪ್ಪಯ್ಯನವರಿಗೆ
ಕೊಡಲು ಖಂಡಿತ
ಮರೆಯಬೇಡಿರಿ.

"ಪ್ರಕಟಣೆ"

ಪ್ರಸಿದ್ಧ ಪತ್ರಿಕೆ.

ಇದೇ ಬರುವ ಜನವರಿ ತಿಂಗಳ 18 ನೇ ಶುಕ್ರವಾರದಿನ ಮಡಿಕೇರಿ ಕೋಟೆಯಲ್ಲು ಶಿಶುಗಳ ಪ್ರದರ್ಶನ (BABY SHOW) ಒಂದು ಮಾಡಲಾಗುತ್ತೆ ಒಂದು ತಿಂಗಳಿಂದ ಮೂರು ವರುಷಗಳ ಪ್ರಾಯದ ಒಳಗೆ ಇರುವ ಶಿಶುಗಳ ಸ್ಥಿತಿ ಅರ್ಹರಾದವರಿಗೆ ಇನಾಮುಗಳನ್ನು ಕೊಡಲಾಗುವದಾಗುತ್ತೆ ಪ್ರದರ್ಶನದಲ್ಲಿ ಉಪನ್ಯಾಸಗಳು, ಮ್ಯಾಜಿಕ್ ಲ್ಯಾಂಟ್ರನ್, ವಗೈರೆ ಅನೇಕ ತರದ ವಿನೋದಗಳು ನಡೆಸಲ್ಪಡುತ್ತವೆ ಎಲ್ಲರೂ ತಮ್ಮ ಶಿಶುಗಳ ಸಮೇತ ಪ್ರದರ್ಶನಕ್ಕೆ ಬರಬೇಕಾಗಿ ಕೇಳಿಕೊಳ್ಳಲಾಗಿದೆ ಹೆಚ್ಚಿನ ಮಾಹಿತಿ ಬೇಕಾದಲ್ಲು ಪ್ರದರ್ಶನದ ಗೌರವ ಕಾರ್ಯದರ್ಶಿ ಯವರು ಮಡಿಕೇರಿಗೆ ಬರೆದು ತಿಳಿದುಕೊಳ್ಳಬಹುದು.

ತಾರೀಕು 13-12-23. B. Ganapa,
[3—1] ಗೌರವ ಕಾರ್ಯದರ್ಶಿ

ಕೊಡಗು ವಿದ್ಯಾಭಿವೃದ್ಧಿ ಸಂಘ.

ಕೊಡಗು ವಿದ್ಯಾಭಿವೃದ್ಧಿ ಫಂಡಿಗೆ ಚಂದಾ ಹಣವು ಕ್ರಮವಾಗಿ ವಸೂಲಾಗದೆ ಫಂಡಿನಲ್ಲಿ ಹಣವು ಕಡಿಮೆಯಾದುದರಿಂದ ಕಳೆದವರ್ಷ ಹೊಸಸ್ಕಾಲರ್‌ಶಿಪ್‌ಗಳನ್ನು ಮಂಜೂರ್ಮಾಡಲು ಆಗಲಿಲ್ಲ ಆದುದರಿಂದ ಪ್ರತಿನಾಡಿನೊಳಗೆ ಕುತ್ತಿಕೆಯಂತು ಫಂಡಿನ ಪ್ರಯೋಜನವನ್ನು ಎಲ್ಲರಿಗೂ ಮನದಟ್ಟುಮಾಡಿ, ಫಂಡಿಗೆ ಚಂದಾ ವಸೂಲುಮಾಡಲು ಏಜಂಟರುಗಳಾಗಿ

1. ಮೆ|| ನಾಪನೆರವಂಡ ಬೋಪಣ್ಣನವರು,
2. ಮೆ|| ಕೂತಂಡ ಪೂವೈಯ್ಯನವರು,
3. ಪಟ್ಟಮಾಡ ಗಣಪತಿಯವರನ್ನು ಸಬ್ ಕಮಿಟಿ ನೇಮಕ ಮಾಡಿರುತ್ತೆ.

ಸಂಘದ ಅಭಿವೃದ್ಧಿಯನ್ನು ಅಪೇಕ್ಷಿಸುವ ಮಹನೀಯರು ತಮ್ಮ ಚಂದಾಹಣವನ್ನು ಸದರಿ ಏಜಂಟರುಗಳಿಗೆ ಪಾವತಿ ಮಾಡಿದಲ್ಲು ಪ್ರಿಂಟ್‌ಮಾಡಿದಲ್ಲು ರಶೀತಿ ದೊರಕುವುದು [2—2]

ಯಂ ಭೀಮಯ್ಯ, ಗೌರವ ಸೆಕ್ರಟರಿ. ಕೆ ಚಂಗಪ್ಪ, ಪ್ರೆಸಿಡೆಂಟರು

ಪಾಕೆಟ್‌ಡೈರಿ ಉಚಿತ.

ಈ ನಕ್ಷೆಯಲ್ಲಿ ಕಂಡ ಪೇನವು ಸೀಮೆಯಲ್ಲಿ ತಯಾರಾದದ್ದು ಇದಕ್ಕೆ ಬಂಗಾರದಂತ ಮುಳ್ಳು ಇರುವದು. ಈ ಪೇನಾವಿನಲ್ಲಿ ಬರೆಯುವುದರಿಂದ ಅಕ್ಷರಗಳು ಶಾಯಿ ಕಡಿಮೆಯಿಲ್ಲದೆ ಮುದ್ದಾಗಿ ಬರೆಯುವದು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಹೊಸ ವರುಷದ ಪಾಕೆಟ್ ಡೈರಿ ಒಂದನ್ನು ಇನಾಮಾಗಿ ಕೊಡುವೆವು.

ಕ್ರಯ ಡೈರಿ ಸಹಿತ ಪೇನಾ 1 ಕ್ಕೆ 1—12—0

ಜರ್ಮನ್ ಅಲಾರಂ ಟೈಂಪೀಸ್‌ಗಳು.



ಈ ಗಡಿಯಾರಗಳು ಜರ್ಮನ್ ದೇಶದಲ್ಲಿ ತಯಾರಾದವು ಮೇಲುಗಡೆ ಬೆಳ್ಳಿಯಂತಿರುವ ಮುಕ್ಕಳಿರುವದು ಎಂದಿಗೂ ಕಪ್ಪಾಗದು ಶಬ್ದವಾದು ಗಂಟೆಯನ್ನು ಕೊಡುವದು. ಗಡಿಯಾರದ ಎತ್ತರವು 7 ಅಂಗುಲವಿರುವದು ಮತ್ತು ಗಂಟೆಯನ್ನು ಸಹ ಭಾರಿಸುವದು ಬಹು ಬೇಗನೆ ಗಂಟೆಯನ್ನು ಕಂಡು ಹಿಡಿಯಬಹುದು. ಅಂಗಡಿ ಸ್ಕೂಲು, ಮನೆ ಗುಡಿಗಳಲ್ಲಿ ಇಡಲು ಬಹು ಚೆನ್ನಾಗಿರುವದು ಇದಕ್ಕೆ ಹೋಲಿಕೆಯಾಗಿ ಈ ಮಾದರಿ ಗಡಿಯಾರಗಳು ಮಾರ್ಕೆಟಿಗೆ ಬಂದಿಲ್ಲ ಇವಕ್ಕೆ 3 ವರುಷಗಳ ಗ್ಯಾರಂಟಿ ಇದೆ

ಕ್ರಯ 1 ಕ್ಕೆ 5—0—0 ರೂಪಾಯಿ.

ಅಲಾರಂ ಇಲ್ಲದ "ಬೇ" ಟೈಂಪೀಸ್ 3—8—0 ರೂ

ವಿಳಾಸ —ಎಸ್ ಆರ್ ಕೃಷ್ಣ ಅಂಡ್ ಕೋ
ನಂ 1 ತಂಬುಸೆಟ್ಟಿಯವರ ಪೇಟೆ
[4—1] ಮದರಾಸು.

ಶ್ರೀ ಕಾವೇರ್ಯೈ ನಮಃ

ಕೊಡಗು ನ್ಯಾಯವಿಧಾಯಕ ಸಭೆಗೆ ಮೆಂಬರುಗಳ ಚುನಾವಣೆ

ಭಾಗಮಂಡ್ಲ ಶ್ರೀಪತಿರಾಯರ ವಿನಂತಿ.

ಮಹನೀಯರೇ,

ನಾನು ಮಡಿಕೇರಿ ತಾಲೋಕು ನಾಗು ಸ್ಥಾನವಾಗಿ ನ್ಯಾಯವಿಧಾಯಕ ಸಭೆಗೆ ಉಮೇದ್ವಾರನಾಗಿ ನಿಂತಿರುವದು ಈ ಮೊದಲೇ ನಿಮಗೆ ಗೊತ್ತಿರಬಹುದು ಮಡಿಕೇರಿ ತಾಲೋಕು ನಾಗು ಯಾ ಒಮ್ಮೆಕರತ ಪದವಾಗಿ ಒಬ್ಬ ಪ್ರತಿನಿಧಿಯು ಚುನಾಯಿಸಲ್ಪಡುವನು ನಿಮ್ಮಲ್ಲಿ ಪ್ರತಿ ಒಬ್ಬ ನಾಗು ಓಟುದಾರನಿಗೂ ಒಂದು ಓಟು ಮಾತ್ರ ಕೊಡುವ ಹಕ್ಕಿರುವದು ಅದನ್ನು ನನಗೆ ಕೊಡಬೇಕಾಗಿ ವಿನಯದಿಂದ ಪ್ರಾರ್ಥಿಸುತ್ತೇನೆ

ನಾನು ಅನೇಕ ವರ್ಷಗಳಿಂದಲೂ ದೇಶಸೇವೆಯೇ ಈಶಸೇವೆಯೆಂದೆಣಿಸಿ ಕಾರ್ಯಕ್ಷೇತ್ರದಲ್ಲಿ ನಿರತನಾಗಿ ಮರ್ಕರಾ ಸಂಘದ ಮೂಲಕ ಸುಧಾರಣೆಯ ವಿಚಾರದಲ್ಲಿ ಇಂಡಿಯಾ ಸ್ಟೇಟ್ ಸೆಕ್ರಟರಿಯವರಲ್ಲಿಯೂ ಸ್ಥಳೀಯ ಸರಕಾರದವರಲ್ಲಿಯೂ ಹುಂಬಾ ವಾದವನ್ನು ಮಾಡಿರುತ್ತೇನೆ ಮಾಲಂಬ ಫಾರೆಸ್ಟ್ ಕಮಿಟಿಯು ಮೊಬಲಗಾಗಿ ಕಟ್ಟುವವರು ಶೋಧಿಸಿ ಬರದ ರಿಪೋರ್ಟಿನಿಂದ ಫಾರೆಸ್ಟು ಇಲಾಖೆಯವರಿಂದ ರೈತರಿಗೆ ಉಂಟಾಗುತ್ತಿದ್ದ ಕಷ್ಟಗಳು ಕಡಮೆಯಾಗಿಗೆ ಪರಿಹಾರವಾಗಿರುವೆ ಯಾಲದ ಮಳೆಗೆ 7 ವರ್ಷದ ಅವಧಿಯನ್ನು 21 ಹೆಚ್ಚಿಸುವದಕ್ಕೆ ಕೆಲವು ವರ್ಷಗಳ ಹಿಂದೆ ನಾನು ಮಾಡಿದ ಪ್ರಯತ್ನಗಳು ನಿಮಗೆ ತಿಳಿದಿರಬಹುದು ಈಚೆಗೆ ಮಳೆಗಳ ಕಂದಾಯ ಮಾಫಿ ಯಾಗುವ ಬಗ್ಗೆ ಪತ್ರದ ಕಡೆಯಿಂದ ನಾನು ಮಾಡಿದ ಪ್ರಯತ್ನದ ಫಲವನ್ನು ನಾವೆಲ್ಲಾ ಅನುಭವಿಸುತ್ತಿರುವುದರಿಂದ ಇದನ್ನು ಪ್ರತ್ಯೇಕವಾಗಿ ವಿವರಿಸುವದಿಲ್ಲ ಈಗಲೂ ನಂಬರ್ ದೊರೆತರೆ ದೇಶಸೇವೆ ಮಾಡುತ್ತಲಿರುವ ನನ್ನ ಗುಣಗಳೇ ನನ್ನ ಯೋಗ್ಯತೆಯನ್ನು ತಿಳಿಸ ವವು ದೇಶೀಯನಾಗಿ ಹಳ್ಳಿಯಲ್ಲಿದ್ದು ರೈತರ ಸುಖ ದುಃಖ ಅನುಭವವೂ ಸಾಕಷ್ಟು ಸಮಯವೂ ಉಳ್ಳವನಾಗಿದ್ದೇನೆ

ನೀವುಗಳು ದಯವಿಟ್ಟು ಓಟು ಕೊಟ್ಟು ನನ್ನನ್ನು ಚುನಾಯಿಸಿದರೆ ನಮ್ಮ ಎಲ್ಲಾ ವಿಧದ ಹಕ್ಕು ಸತ್ವ ಸ್ವಾತಂತ್ರ್ಯ ಅಭಿವೃದ್ಧಿಯಾಗುವಂತೆಯೂ ನಮ್ಮೊಳಗಿರುವ ಕೋಮುವಾರು ಭೇದಗಳನ್ನು ಹೋಗಲಾಡಿಸಿ ಸಹೋದರಭಾವದಿಂದ ಸಮುದಾಯಾಭಿವೃದ್ಧಿಯಾಗುವಂತೆಯೂ ಇತರ ಪ್ರಾಂತ್ಯಗಳಿಗೆ ದೊರೆತಿರುವ ಸುಧಾರಣೆಯು ಆದಷ್ಟು ಬೇಗನೇ ನಮಗೂ ದೊರಕುವಂತೆಯೂ ಎಲ್ಲಾ ವಿಧವಾದ ನ್ಯಾಯವಾದ ರೀತಿಯಲ್ಲಿ ಹೊಸ ಕೊಡಗು ಕೌನ್ಸಿಲಿನಲ್ಲಿ ಕೆಲಸ ಮಾಡಲು ದೀಕ್ಷೆಯನ್ನು ಕೈಗೊಳ್ಳುವೆನು.

ಇತಿ ನಿಮ್ಮ ಸೇವಾಕಾಂಕ್ಷಿ,
ಭಾಗಮಂಡ್ಲ ಶ್ರೀಪತಿರಾಯ
[4—2]

ಪೊನ್ನಂಪೇಟೆ ಶ್ರೀಮಂಗಲನಾಡಿನ ಜಮ್ಮದ ಓಟರು
ಗಳು ತಮಗಿರುವ ಮೂರು ಓಟುಗಳ ಸೈಕಿ
ಒಂದನ್ನು ದಯವಿಟ್ಟು

ಮನೆಯಪಂಡ ಚಿಣ್ಣಪ್ಪ
ನವರಿಗೆ ಕೊಡಿರಿ.

'ಪ್ರಕಟನೆ"

[2—1]

ಆರೋಗ್ಯ ಚಂದ್ರಿಕೆ.

ಇದು ಪ್ರಜಾಕ್ಷೇಮಕ್ಕಾಗಿ ಆರೋಗ್ಯಮಾರ್ಗವನ್ನೂ ಚಿಕಿತ್ಸೆಯನ್ನೂ ಬೋಧಿಸುವ ಒಂದು ಮಾಸಪತ್ರಿಕೆ. ಇದರ ಸಂಪಾದಕರು ಮದ್ರಾಸಿನಲ್ಲಿ ಪ್ರಸಿದ್ಧರಾದ ಡಾಕ್ಟರ್ ಯು ರಾಮರಾವ್ ಎಮ್ ಎಲ್ ಸಿ ಯವರು. ಇದರಲ್ಲಿ ಅನೇಕ ಪ್ರಸಿದ್ಧ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರುಗಳ ಲೇಖನಗಳು ಆಗಿಂದಾಗ್ಯ ಪ್ರಕಟವಾಗುವವು.

ಓಪಾಲು ಖರ್ಚು ಸೇರಿ ಈ ಪತ್ರಿಕೆಯ ವಾರ್ಷಿಕ ಚಂದ 1—8—0 ರೂ ಮಾತ್ರ. ಬಿಡಿ ಪ್ರತಿ ಒಂದಕ್ಕೆ 0—2—0 ಆಣೆ.

ಏಜೆಂಟರು —	ವಿಳಾಸ —
ಮ॥ ರಾ॥ ರಾ॥ ಎಸ್ ಕೆ ತಿಮ್ಮಪ್ಪ, ಭಾಗಮಂಡಲ ಕೊಡಗು	ಮೇನೇಜರ್ ಆರೋಗ್ಯಚಂದ್ರಿಕೆ ಆಫೀಸು 323 ತಂಬುಚೆಟ್ಟಿಬೀದಿ ಮದ್ರಾಸು

[12—2]

ಮಡಿಕೇರಿ ತಾಲೋಕಿನ ನಾಗಿನ

ಓಟರುಗಳೆಲ್ಲಾ

ಚಿಲಗಮಂಡ್ಲ
ಶ್ರೀಪತಿ ರಾಯರಿಗೆ
ಓಟು ಕೊಡಿರಿ.

" ಪ್ರಕಟನೆ

[3—2]

ಜೀವವಿಮೆ

ಸಾವಿರಾರು ಕುಟುಂಬಗಳಲ್ಲಿ ಸಂಪಾದಿಸುವ ಯಜಮಾನನು ಮೃತಪಟ್ಟರೆ ಉಂಟಾಗಬಹುದಾದ ಕಷ್ಟಗಳನ್ನು ನಿವಾರಿಸುವುದೇ ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ.

ಅತಿ ಕಡಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪೆನಿ.

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲವಾಗಿ ಹಣವನ್ನು ಒದಗಿಸಿ ಸ್ವದೇಶಸ್ಥರನ್ನೂ ಕೂಡು ಕಟ್ಟಿ ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

ಲೈಫ್ ಇನ್ಶೂರೆನ್ಸ್ ಆಕ್ಟಿನ ಮೇರೆ ಇಂಡಿಯಾ ಗವರ್ನಮೆಂಟ ಸೆಕ್ಯೂರಿಟಿಗಾಗಿ ಸಲ್ಲಬೇಕಾದ 12 ಲಕ್ಷ ರೂಪಾಯು ಸೆಕ್ಯೂರಿಟಿಗಾಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಗೆ ಸಲ್ಲಬೇಕಾದ 1 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಬ್ಯಾಂಕಿನ ಮದ್ರಾಸಿನ ಶಾಖೆಯಲ್ಲು 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯ ಸೆಕ್ಯೂರಿಟಿಯನ್ನು ಅರ್ಧಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಡಿಪಾಜಿಟ್ಟ ಇಟ್ಟಿರುತ್ತೆ. ಬಾಕಿ ಒಂದು ಲಕ್ಷ ಇಂಡಿಯ್ಯಾ ಗವರ್ನಮೆಂಟು ಸೆಕ್ಯೂರಿಟಿಗೆ ಬ್ಯಾಂಕ್ ಮೂಲಕ ಏರ್ಪಾಡು ಮಾಡಿರುತ್ತೆ.

ಬಿ. ಎಸ್. ಆರಾಧ್ಯ,

ಲೈಫ್ ಅಂಡ್ ಮ್ಯಾರೇಜ್ ಆಫೀಸ್ ಮಡಿಕೇರಿ.

HEALTH IS WEALTH

WANTED all to improve health strength and vitality and thus save our nation from physical degeneracy. Send half anna stamp and get 13 specimen photographs with full particulars from

Director Physical Culture,

P O Basavanagudi,

BANGALORE CITY

For your requirements of high grade Arms, Ammunition, Wine and Spirits,

APPLY TO –

Mc. DOWELL & Co., Ltd.,

24—9 MERCARA

ಶರೀರ ವ್ಯಾಯಾಮ.

ಬೆಂಗಳೂರು ಸಿಟಿ

ಸಂಪಾದಕರು:—ಪ್ರೊಫೆಸರ್ ಎಮ್ ವಿ ಕೃಷ್ಣರಾಯರು ಡೈರೆಕ್ಟರ್ ಫಿಜಿಕಲ್ ಕಲ್ಚರ್ ಇನ್‌ಸ್ಟಿಟ್ಯೂಟ್, ಬೆಂಗಳೂರು

ಉತ್ತಮ ತರದ ಕನ್ನಡ ಮಾಸಪತ್ರಿಕೆ.

ಕರ್ನಾಟಕ ಜನಸಾಮಾನ್ಯಕ್ಕೆ ಸುಲಭವಾಗಿ ತಿಳಿಯುವ ಹಾಗೆ ಈ ಮಾಸಪತ್ರಿಕೆಯಲ್ಲಿ ದೇಹಾರೋಗ್ಯ ವಿಚಾರ ವ್ಯಾಯಾಮ ಕ್ರಮ ... ಆರೋಗ್ಯ ತತ್ವಗಳೂ, ವಿಷಯಗಳಿಲ್ಲದ ಒಕ್ಕಲು ಮುಂತಾದ ಅನೇಕ ಉಪಯುಕ್ತವಾದ ವಿಷಯಗಳು ಪ್ರಕಟಿಸಲ್ಪಟ್ಟಿರುತ್ತವೆ.

ಶಾರೀರಕ ಮಾನಸಿಕ ಮತ್ತು ಆರೋಗ್ಯ ಸಂಪತ್ತನ್ನು ಹೊಂದಬೇಕೆಂಬ ಆಶೆಯುಳ್ಳ ಪ್ರತಿಯೊಬ್ಬ ಮಾನವನೂ ಓದಬೇಕಾದ ಉತ್ತಮ ತರದ ಮಾಸಪತ್ರಿಕೆ. ಅಂಚೆವೆಚ್ಚ ಸೇರಿ ಈ ಪತ್ರಿಕೆಯ ವಾರ್ಷಿಕ ಚಂದಾ 1—8—0 ಬಿಡಿಪ್ರತಿ 0—3—0 ಮೊದಲನೆಯ ಸಂಚಿಕೆಯು ಇದೇ ಡಿಸಂಬರ ತಿಂಗಳು 1 ನೇ ತಾರೀಖು ಹೊರಟಿದೆ. ಮುಂದಿನ ಸಂಚಿಕೆಗಳು ಪ್ರತಿ ತಿಂಗಳ 1 ನೇ ತಾರೀಖಿನ ದಿನ ಹೊರಡುತ್ತವೆ.

ಸೂಚನೆ: ಚಂದಾದಾರರಾಗುವವರು ವಿ ಪಿ ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ.

ಅಡ್ರೆಸ್ —ಎಡಿಟರ್ 'ಶರೀರ ವ್ಯಾಯಾಮ'

ಬಸವನಗುಡಿ

[4—3] ಬೆಂಗಳೂರು ಸಿಟಿ

ಪ್ರಕಟನೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್

ಲಿಮಿಟೆಡ್.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ

	ರೂ
ಶೇರ್ ಬಂಡವಾಳ	50 000
ವಸೂಲಾದ ಶೇರ್ ಮೊಬಲಗು	6 820
ಜಮಾ ಬಂದ ಠೇವಣಾತಿ	30,849

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೊತ್ತಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ನೂರಿಯಾನ 5 ರ ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ನೂರಿಯಾನ 5 ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು	ಟ್ರೆಜರ್
ಕೊಡಂದೆರ ಕುಟ್ಟಯ್ಯನವರು ಯಂ. ಭುಜಂಗರಾಯರ್ ರಾವ್ ಬಹದ್ದೂರ್	ಬಿ. ಎ. ಬಿ ಎಲ್

ಸೆಕ್ರೆಟರಿ

ಸಿ ಯಸ್ ಮೊಕಪ್ಪಯ್ಯನವರು ಬಿ ಎ ಬಿ ಎಲ್

ತಾರೀಖು 1—9—23.

ಸುಲಭದ ರೀತಿ! **ಲಾಭದ ದಾರಿ!!**

ರೇಷ್ಮೆ ಸೀರೆಗಳೂ ವಸ್ತ್ರಗಳೂ ಬನಾರಸ್ ಕಾಶ್ಮೀರ ಶಾಲು ಪಟ್ಟೆ ಕೋರನಾಡ್ ಸೊಂಟಕ್ಕೆ ಕಟ್ಟುವ ರೇಷ್ಮೆಪಟ್ಟೆ, ತಲೆಗೆ ಕಟ್ಟುವ ವಸ್ತ್ರ ಕೈವಸ್ತ್ರ ಮುಂತಾದವುಗಳಿಗೆ ಬಣ್ಣ ಕೊಟ್ಟು ಅಂಬು ವಗೈರೆಯಿಂದ ಹಳೇದನ್ನು ಹೊಸದಾಗಿ ತಯಾರಿಸುತ್ತೇವೆ. ಬಿಳೀ ರೇಷ್ಮೆ ಬಟ್ಟೆಗೆ ಅನೇಕ ತರದ ಇಷ್ಟದ ಬಣ್ಣ ಕೊಡಲು ತಯಾರಿದ್ದೇವೆ. ಸೂಟಿನ ಬಿಳೀ ಬಟ್ಟೆಗಳಿಗೆ ಗುಲಾಬಿ ಮತ್ತು ಕಪ್ಪು ಬಣ್ಣ ಕೊಡಬಹುದು. ಮೇಲ್ಕಂಡ ಬಣ್ಣಗಳು ಚಾತುರ್ಯವಾದದ್ದಾಗಿರುತ್ತೆ. ಕಲಾಬತ್ತು ಸೀರೆ ವಗೈರೆಗಳನ್ನು ಡ್ರೈ (ಕ್ಲೀನ್) ಮಾಡಲಿಕ್ಕೂ ಚೆನ್ನಾಗಿ ಗೊತ್ತಿದೆ. ಮಾಸಿ ಹೋಗಿರುವ ಅನೇಕ ಹಳೇ ಬಟ್ಟೆಗಳಿಗೆ ಬಣ್ಣ ಕೊಟ್ಟು ಹೊಸದಾಗಿ ಮಾಡಿಕೊಟ್ಟಿರುತ್ತೇವೆ.

ಚಾರ್ಜುಗಳು

ಸೀರೆಗಳಿಗೆ		ತಲೆ ವಸ್ತ್ರಗಳಿಗೆ	
1 ನೇ ನಂಬರು	5—0—0	1 ನೇ ನಂಬರ್	1—8—0
2 ನೇ ನಂಬರು	4—8—0	2 ನೇ ನಂಬರ್	1—4—0
3 ನೇ ನಂಬರ್	4—0—0	3 ನೇ ನಂಬರ್	1—0—0

ಹೆಚ್ಚಿನ ಸಂಗತಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಪಿ ಎಂ ಮುರ ಗೇಶಮೊದ್ಲಿಯಾರ್,

(ಕ್ಲಾತ್ ಮತ್ತು ಡೈಯಿಂಗ್ ವ್ಯಾಪಾರ)

[4—3] ಗಾಳಿಬೀಡು ಗುಡಿಕೇರಿ ಕೊಡಗು

ಓಂ.

The Mysore Government Security Life and Marriage Assurance Company Ltd

Head Office —Life and Marriage Assurance Buildings Mysore

ನೋಟೀಸು

ಈ ಮೂಲಕ ಸಮಸ್ತರಿಗೂ ತಿಳಿಸುವುದೇನೆಂದರೆ—ಈ ಕಂಪನಿಯ ಬಾಂಡು ಮತ್ತು ಸಾಲದಾರರಿಗೆ ನಮ್ಮ ಜನರಲ್ ಇನ್‌ವೆಸ್ಟ್‌ಮೆಂಟ್ ಕ್ರಮದಮೇಲೆ 1 ರೂಪಾಯಿಗಳನ್ನು ಸಾಲ ಕೊಡುವುದಕ್ಕೆ ನಿಶ್ಚಯಿಸುವ ಕ್ಯೋ ನಂಬ್ರ ಚೀಟಿ ಎತ್ತುವಂತೆ ಆಗಸ್ಟು ತಾರೀಖು 31 ರಲ್ಲಿ ಈ ಕಂಪೆನಿಯ ಮೈಸೂರಿನ ಕಟ್ಟಡದಲ್ಲಿ ಚೀಟಿ ಎತ್ತಲು ಈ ಕೆಳಗೆ ಬಾಂಡು ಮತ್ತು ಸಾಲದಾರರ ಚೀಟಿಗಳು ಎತ್ತಲ್ಪಟ್ಟದ್ದರಿಂದ ಈ ಕಂಪೆನಿಯ ರೂಲ್ಸುಗಳಿಗನುಸಾರ ಅವರಿಗೆ ಅವರ ಸ್ವಂತ ಜವಾಬ್ದಾರಿಯಮೇಲೆ ಈ ಕೆಳಗಿನ ಹಣವನ್ನು ಸಾಲ ಕೊಡಲ್ಪಟ್ಟಿತು. ಈ ಹಣವು ಬಡ್ಡಿ (ವ್ಯಾಜ) ಇಲ್ಲದೆ ಮಾಸಿಕ ತಿಂಗಳಿಗೂ ದಾಮಾಶಿ 10 ರೂಪಾಯಿಯಂತೆ 25 ವರ್ಷಗಳವರೆಗೂ ವಸೂಲು ಬರುವುದು.

	ಹೆಸರು ವಿಳಾಸ	ಬಾಂಡುನಂಬರು	ಸಾಲಕೊಟ್ಟ ಮೊಬ
1	ರಾ॥ಹೆಚ್ ಎಂ ... ... ಟೇಲರಿಂಗ್ ...	6159	1000—0—
2	ಮೆ॥ ಪ್ರಭು 'ಚಂದ್ರ ಬ್ಯಾನರ್ಜಿ' ... ಮತ್ತು ... ದಸ್ತಾ (ಬಂಗಾಳ)	80	1000—0—
3	ಮೆ॥ ಕೆ ಎಸ ಶಿವನ್ನಯ್ಯ ಶೆಟ್ಟಿ ಕಂಪೆನಿ ... ಮಡಿಕೇರಿ ಕೊಡಗು	4747	1000—

ಹೀಗೆ ಪ್ರತಿವರ್ಷದಲ್ಲಿ ಎರಡುಸಾರಿ ಸಾಲ ಕೊಡುವ ಚೀಟಿ ಎತ್ತಿ ... ಕೊಡುವುದರಿಂದಲೂ 1924 ಇಸವಿ ಜನವರಿ ತಿಂಗಳು 31 ನೇ ತಾರೀಖಿನ ದಿವಸ ಕ್ಯೋ ಎರಡಾವೃತ್ತಿ ಚೀಟಿ ಎತ್ತುವುದರಿಂದಲೂ ನಮ್ಮ ಜನರಲ್ ಇನ್‌ವೆಸ್ಟ್‌ಮೆಂಟ್ ಕ್ರಮದಮೇಲೆ ಯಾವ ಬಡ್ಡಿಯೂ ಇಲ್ಲದೆ ದೇಹವನಾಬ್ದಾರಿಕೆಯಮೇಲೆ ಸಾಲಹೊಂದಲಿಚ್ಛೈಸುವವರು ಜಾಗ್ರತೆಯಲ್ಲಿ (ಪ್ರವೇಶಧನ 2—0—0 ಸ್ಟಾಂಪಿಗೋಸ್ಕರ 0—8—0, ಡಿಸಂಬರ್ ತಿಂಗಳ ಕಂತು 1—0—0 ಮತ್ತು 50 ರೂಪಾಯಿಗಳಮೇಲಿನ ಬಡ್ಡಿ 1—8—0) ಅಂತು ಒಟ್ಟು 5 ರೂಪಾಯಿ ಹೀಗೆ ಪ್ರತಿ ಬಾಂಡಿಗೂ ಐದುರೂಪಾಯಿಯಂತೆ ಎಷ್ಟು ಬಾಂಡ ಬೇಕೋ ಅಷ್ಟಕ್ಕೆ ಅರ್ಜಿ ಮತ್ತು ಮೊಬಲಗು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ ಹಳೆಯ ಬಾಂಡು ಮತ್ತು ಸಾಲದಾರರೊಡನೆ ಹೊಸಬರ ಹೆಸರನ್ನು ಸೇರಿಸಿ ಚೀಟಿ ಎತ್ತಲಾಗುವುದು. ಸೇರಲಪೇಕ್ಷಿಸುವವರೆಲ್ಲರೂ ಜಾಗ್ರತೆಯಿಂದ ವರಕಾಸ್ತು ಕಳುಹಿಸಬೇಕಾಗಿದೆ.

(ವಿನಂತಿ —ಹಳೆಯಬಾಂಡು ಮತ್ತು ಸಾಲದಾರರುಗಳು ಡಿಸಂಬರ್ ತಿಂಗಳವರೆಗೆ ತಮ್ಮ ಕಂತು ಮೊಬಲಗನ್ನು ಮತ್ತು ಬಡ್ಡಿ 1 8—0 ಹಣವನ್ನು ನಮ್ಮ ಆಫೀಸಿಗೆ ಕಳುಹಿಸಬೇಕಾಗಿ ಕೋರಿಕೆ)

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಬಿ ಎಸ್. ಆರಾಧ್ಯ,

ಬೊಂಬಾಯಿ ಮತ್ತು ಕೊಡಗುಬೆಲ್ಟಿನ

ಚೀಫ್ ಏಜೆಂಟ್,

[4—4] ಮಡಿಕೇರಿ, ಕೊ

Printed & Published by D S Krishnaswami Proprietor, at Sreenivas Electric Press, M "for Kodagu" Ltd., Mercara—28 12 1923

If not delivered please return to the
"Kodagu Office, Mercara"
Reg. No. M. 1550.

ಕೊಡಗು.

ಸತತೇನ ಭೂತಳ [illegible] ವಿಖ್ಯಾಸಿತಿ [illegible] । [illegible] ।

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

" [illegible] ಪಂದ್ಯಂತ [illegible] ಬೆಳ್ಳಪ್ಪ.

ವಾರ್ಷಿಕ ಮುಂಗಡ ೩ ರೂ ೦ ಆ.

ಸಂಪುಟ ೩]   ಕೊಡಗು, ಸನ್ ೧೯೨೪ನೇ ಇಸವಿ ಜನವರಿ, ತಾರೀಖು ೪ನೆಯ ಶುಕ್ರವಾರ.   [ಸಂಚಿಕೆ ೩೧

ಪ್ರಿಂಟಿಂಗ್

ನಿಮ್ಮ ಇಂಗ್ಲೀಷ್ ಮತ್ತು ಕನ್ನಡ ಪ್ರಿಂಟಿಂಗ್ ರೂಲಿಂಗ್ ಮತ್ತು ಬೈಂಡಿಂಗ್ ಕೆಲಸಗಳು ಯಾವದೇ ಇದ್ದರೂ ನಮ್ಮಲ್ಲಿಗೆ ಕಳುಹಿಸಿದಲ್ಲಿ ನಿಮ್ಮ ಇಷ್ಟಾನುಸಾರದಂತೆ ಜಾಗ್ರತೆಯಾಗಿಯೂ ಸುಲಭದರದಿಂದಲೂ ಮಾಡಿ ಕೊಡುತ್ತೇವೆ

Srinivas Electric Press,
MYSORE

The Saraswathi Publishing Company
ಶಾರದಾಗ್ರಂಥಮಾಲಾ

ಈ ಗ್ರಂಥಮಾಲೆಯಲ್ಲಿ ಭಾರತಮಹಿಳೆಯರ [illegible] ವಿಷಯಗಳನ್ನು ಬೋಧಿಸತಕ್ಕ ಗ್ರಂಥಗಳು ಆಗಾಗ್ಗೆ ಪ್ರಕಟಿಸಲ್ಪಡುವವು ಇದುವರೆಗೆ ಪ್ರಕಟವಾಗಿರುವ ಗ್ರಂಥಗಳು —

	ರೂ	ಆ	ಪೈ
1. ಪ್ರಿಯಂವದ (ವರದಕ್ಷಿಣೆಯಿಂದಾಗುವ ಕಷ್ಟ ನಿಷ್ಠುರಗಳು) ..	0	6	0
ಸ್ನೇಹಲತೆ (ವಂಗಕನ್ಯೆಯ ಚರಿತ್ರೆ)	0	10	0
ಸೌಭಾಗ್ಯವತಿ (ಹಿಂದೂಸ್ತ್ರೀಯರ [illegible])	0	12	0
ನಿರ್ಮಲೆ (ಸಾಮಾಜಿಕ ಸುಧಾರಣೆಯ ನಾಟಕ)	0	8	0
ಹಿಂದೂಭಾಗ್ಯೋದಯ (ನಾಟಕ)	0	4	0
[illegible] (ನಾಟಕ)	0	4	0
ಹುಡುಗರ ಹುಚ್ಚು [illegible] (ನಾಟಕ)	0	4	0

ಈ ಎಲ್ಲಾ [illegible] ಒಟ್ಟಾಗಿ [illegible] ರೂಪಾಯಿ 2—12—0 [illegible] ಪ್ರಿಂಟಿನಲ್ಲಿದ್ದ ಗ್ರಂಥಗಳು [illegible]

ಸರಸ್ವತಿ.

ಉತ್ತಮವರ್ಗದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ

ನಾಲ್ಕನೆಯ ಸಂಪುಟದ ಪ್ರಥಮ ಸಂಚಿಕೆಯು [illegible] ಇದರಲ್ಲಿ [illegible] ಸ್ತ್ರೀಯರಿಗೂ [illegible] ನಾಟಕ [illegible] ಮತ್ತು [illegible] ಗ್ರಂಥಮಾಲೆಯ [illegible]

ವಾರ್ಷಿಕ ಚಂದಾ [illegible]

SARASWATHI PUBLISHING Co.,
[illegible]

ಕಿರ್ಲೋಸ್ಕರ [illegible]

ದೇಶಾಭಿಮಾನದಿಂದ [illegible] ಹೋಗಲಾಡಿಸುತ್ತವೆ. [illegible] ಭಾಗಗಳು [illegible] ನಮ್ಮಲ್ಲಿ—ಯೂ [illegible] ನೇಗಿಲುಗಳೂ, [illegible] ಗಾಣಗಳೂ, ನೀರೆತ್ತುವ [illegible]ಗಳೂ ಇತ್ಯಾದಿ ತಯಾರಾಗುತ್ತವೆ

'ಕೋ' ಎಂಬ [illegible] ಕಿರ್ಲೋಸ್ಕರ ಬಂಧು ಲಿಮಿಟೆಡ್,
—11]   ಕಿರ್ಲೋಸ್ಕರವಾಡಿ (ಸಾತಾರಾ).

When you think of going to Bombay.
THINK OF
THE WELCOME HOTEL.
Girgaum Back Road, BOMBAY.
Most airy accomodation—Most Central situation—Excellent Meals
Every Convenience

ವೆಲ್ಕಂ ಹೋಟೇಲ್.

ಗಿರ್ಗಾಂವು ಬ್ಯಾಕ್‌ರೋಡ್, ಬೊಂಬಾಯಿ.

ರೈಲಿನಿಂದಿಳಿದೊಡನೆಯೇ ಅಲ್ಲಿ ಇಳಿಯಿರಿ ಉತ್ಕೃಷ್ಟವಾದ ತಿಂಡಿ ಮತ್ತು ವಾಸಕ್ಕೆ ಯೋಗ್ಯವಾದ ಕೋಣೆಗಳು ಬೇಕೆಂದಿದ್ದರೆ ಬೊಂಬಾಯಿಪಟ್ಟಣದ ಮಧ್ಯಸ್ಥಳದಲ್ಲಿರುವ ವೆಲ್ಕಂ ಹೋಟೇಲಿನಲ್ಲಿಳಿಯಲು ಮರೆಯಬೇಡಿರಿ ಯೋಗ್ಯವಾದ ಊಟ ಗಾಳಿಗನುಕೂಲವಾದ ಕೋಣೆ 15 ಮಿನಿಟಿಗೊಮ್ಮೆ ತಿರುಗುವ ಟ್ರಾಮಿನ ಸೌಕರ್ಯ ಅಂತೂ ಪ್ರಯಾಣಿಕರಿಗೆ ಉಳಿದುಕೊಳ್ಳಲು ಅನುಕೂಲವಾದ ಉಡುಪಿ ಬ್ರಾಹ್ಮಣರ ಭೋಜನಶಾಲೆ.

[12—7]   ಕೆ. ಶ್ರೀನಿವಾಸರಾವ್,
ಮೇನೇಜರ್

Cut this out. This will guide you while in BOMBAY

SHREE KRISHNA LODGE.

BOARDING & LODGING HOUSE.

SANDHURST ROAD, BOMBAY.

[12-8]   Comfortable time Assured.

ಕ್ರಿಸ್‌ಮಸ್ [illegible] ಸ್ಪೆನ್ಸರ್ ಕಂಪನಿಗೆ ಹೊಸತಾದ ಸಾಮಾನ ಬಂದಿದೆ.

ಒಮ್ಮೆ ಬಂದು ನೋಡಿ.

SPENCER & Co., Ltd.,
Mercara and Pollibetta, Coorg.   [24—10]

“ಕೊಡಗು”

೧೯೨೪ನೇ ಇಸವಿ ಜನವರಿ ತಾ|| ೪ನೇ ಶುಕ್ರವಾರ

ಮ|| ಶ್ರೀನಿವಾಸಶಾಸ್ತ್ರಿಗಳ ಬೆಂಗಳೂರು ಭಾಷಣ.

ರೈಟ್ ಆನರೇಬಲ ವಿ ಎಸ್ ಶ್ರೀನಿವಾಸಶಾಸ್ತ್ರಿ ಪಿ ಸಿ ಯವರು ಈಚೆಗೆ ನಮ್ಮ ದೇಶಕ್ಕೆ ಬಂದು ಹೋದದ್ದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಬ್ರಿಟಿಷ್ ಸಾಮ್ರಾಜ್ಯದ ವಸಾಹತುಗಳಲ್ಲಿ ಮುಖ್ಯವಾಗಿ ಕೆನ್ಯಾದಲ್ಲಿ ಹಿಂದೀಯರಿಗೆ ಆಗುವ ಅಪಮರ್ಯಾದೆಯಿಂದ ಶಾಸ್ತ್ರಿಗಳವರ ಮನಸ್ಸಿನಲ್ಲಿ ಎಷ್ಟರಮಟ್ಟಿಗೆ ನೋವು ತುಂಬಿತ್ತೆಂಬುದು ಅವರನ್ನು ಮಡಿಕೇರಿಯಲ್ಲಿ ನೋಡಿದವರಿಗೆ ಗೊತ್ತಾಗಿರಲಾರದು. ಅವರು ಮೂರು ತಿಂಗಳಿಂದ ದೇಹದ ಅನಾರೋಗ್ಯದ ದೆಸೆಯಿಂದ ಬೆಂಗಳೂರಲ್ಲಿ ವಿಶ್ರಾಂತಿ ಹೊಂದಿ ಕಳೆದವಾರ ತನ್ನ ರಾಜಕೀಯ ಕೆಲಸವನ್ನು ಕೈಕೊಳ್ಳಲಿಕ್ಕೆ ಬೆಂಗಳೂರಿನಿಂದ ಹೊರಡುವ ಮೊದಲು ಅಲ್ಲಿಯ ‘ಲಿಬರಲ್ ಯೂನ್ಯನಿ’ ನವರು ಏರ್ಪಡಿಸಿದ್ದ ದೊಡ್ಡದೊಂದು ಪಬ್ಲಿಕ್ ಮೀಟಿಂಗಿನಲ್ಲಿ ಕೆನ್ಯಾದಲ್ಲಿ ಇಂಡಿಯನರಿಗೆ ನಡೆಯುತ್ತಿರುವ ಅನ್ಯಾಯದ ವಿಷಯ ತನ್ನ ಮನಸ್ಸಿನಲ್ಲಿದ್ದದ್ದನ್ನೆಲ್ಲಾ ವಿವರವಾಗಿ ಹೇಳಿರುವರು. ಅವರು ಕಾಯಿಲಸ್ಥರಾಗಿ ಮಲಗಿರುವಾಗಲೇ, ಇಂಗ್ಲೆಂಡಿಗೆ ಹೋಗಿದ್ದ ಬಿಟ್ ಒಡೆಯರ್ ಸಾಹೇಬರಿಗೆ ಕೆನ್ಯಾ ಹೋದರೆ ಎಲ್ಲಾ ಹೋಯಿತು” ಎಂಬ ಟೆಲಿಗ್ರಾಮ್ ಕೊಟ್ಟಿದ್ದರು. ಬೆಂಗಳೂರ ಭಾಷಣದಲ್ಲೂ ಸಹ ಇದೇ ಮಹಾಶಕ್ತಿ, ಕೆನ್ಯಾದ ತೀರ್ಮಾನದಲ್ಲಿ ಹಿಂದೂ ದೇಶದ ಮುಂದಿನ ಚರಿತ್ರೆಗೆ ಬಹಳ ಕುಂದಕ ಇದೆ ಎಂತಲೂ ಹೇಳಿ ನಮ್ಮ ಹಕ್ಕುಬಾಧ್ಯತೆಗಳಿಗೆ ಮಾತ್ರವಲ್ಲ ಹಿಂದೀಯರೆಂಬ ನಮ್ಮ ಗೌರವಕ್ಕೇನೇ ಭಂಗಬರುವ ಈ ವಿಷಯದಲ್ಲಿ ಸಮಾಧಾನದಲ್ಲಿ ಹೇಳೋ ಸಾಧ್ಯವಿಲ್ಲವೆಂತ ಹೇಳಿದರು. ಮ|| ಶಾಸ್ತ್ರಿಗಳವರು ಸಮಾಧಾನ ಪಂಗಡದ ಶಿಖಾಮಣಿಗಳಾಗಿದ್ದದರಿಂದಲೇ ಅವರಿಗೆ ಇಂಡಿಯಾ ಸರ್ಕಾರ ಮಾತ್ರವಲ್ಲ ಬ್ರಿಟಿಷ್ ಸರ್ಕಾರವೇ ಗೌರವಿಸಿ, ಪ್ರಿವಿಕೌನ್ಸಿಲರೆಂಬ ಹೆಸರು ಸಹ ಕೊಟ್ಟಿದ್ದಾಗಿದೆ. ಅಂಥವರೇನೇ ಈ ರೀತಿ ಹೇಳಿರುವಾಗ್ಯೆ ಈ ಕೆನ್ಯಾವಿಷಯವು ಎಷ್ಟು ಮಹತ್ವದಿಂದಿರಬೇಕೆಂಬುದನ್ನು ವಾಚಕರೇ ಊಹಿಸಿಕೊಳ್ಳಬಹುದು.

ತನ್ನ ಮೇಲೆ ಬ್ರಿಟಿಷ್ ಪತ್ರಿಕೆಗಳು ಬಹಳ ಕ್ರೋಧವನ್ನು ತಾಳಲಿಕ್ಕೆ ಕಾರಣವೇನೆಂಬುದನ್ನು ಹೇಳಿದ್ದಾರೆ. ಕೆನ್ಯಾದಲ್ಲಿ ಹಿಂದೀಯರಿಗೆ ಪಕ್ಷಪಾತವಾಗುವಂತೆ ಸೈಸಲು ಮಾಡಲಿಕ್ಕೆ ಕಾರಣವೇನೆಂದರೆ ಕೆನ್ಯಾದ ಬಿಳಿಜನರು ತಮ್ಮ ಸಮಾನ ಹಕ್ಕನ್ನು ಹಿಂದೀಯರಿಗೆ ಕೊಡುವುದಾದರೆ ತಾವು ಕುಂಡೆದ್ದು ತಮ್ಮ ಗವರ್ನರನ್ನು ಸಹ ಗಡೀಪಾರು ಮಾಡುವುದಾಗಿಯೂ ಕೆನ್ಯಾದ ಹಿಂದೀಯರನ್ನೆಲ್ಲಾ ನಾಶಪಡಿಸುವುದಾಗಿಯೂ ಹೇಳಿದ್ದರಿಂದಲೇ ಬ್ರಿಟಿಷ್ ಸರ್ಕಾರವು ಹಾಗೆ ಮಾಡಿದ್ದಾಗಿದೆಯೆಂದು ಹೇಳಿದರು. ಈ ಗುಟ್ಟನ್ನು ಇಂಗ್ಲೆಂಡಿನ ಯಾವ ಪತ್ರಿಕಾಕರ್ತರಾಗಲೀ, ಪಬ್ಲಿಕ್ ಭಾಷಣಕರ್ತರಾಗಲೀ ಪ್ರಕಟಿಸಲಿಲ್ಲವಂತೆ! ಅದನ್ನು ಪ್ರಕಟಿಸಿದ್ದೇ ಶಾಸ್ತ್ರಿಯವರ ತಪ್ಪೆಂತ ಬ್ರಿಟಿಷ್ ಪತ್ರಿಕೆಗಳು ಭಾವಿಸಿದವಂತೆ. ಇದರಿಂದ ನಮ್ಮ ನ್ಯಾಯವರ ಉದ್ದೇಶಗಳೆಲ್ಲಾ ಪ್ರಕಟವಾಗುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಇಂಡಿಯಾ ಸರ್ಕಾರದವರಿಗೆ ಹಿಂದೀಯರ ಈ ಚಳವಳದಲ್ಲಿ ಸಂಪೂರ್ಣ ಸಹಾನುಭೂತಿ ಇದೆಯೆಂತ ಹೇಳಿದರು. ಆದರೆ ಕೆನ್ಯಾದ ಬಿಳೀಜನರು ಪುಂಡು ಏಳುತ್ತೇವೆಂತ ಹೇಳಿದಾಗ ಇಂಡಿಯಾ ಸರ್ಕಾರದವರು ಅದಕ್ಕೆ ಪ್ರತಿಯಾಗಿ ಏನಾದರು ಮಾಡುತ್ತೇವೆಂದು ಹೇಳಬಹುದಾಗಿತ್ತು; ಹಾಗೆ ಮಾಡಲಿಲ್ಲ. ಬ್ರಿಟಿಷ್ ಮಂತ್ರಿಮಂಡಲಿಯ ಏಜೆಂಟರಾಗಿರುವ ಇಂಡಿಯಾ ಸರ್ಕಾರದವರಿಂದ ಇದನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಆದುದರಿಂದ ನಮ್ಮ ಸರ್ಕಾರವು ಬೇರೆಯಾದ ವಿನಹ ಕೆನ್ಯಾದಲ್ಲಿ ಹಿಂದೀಯರಿಗೆ ಸಮಾನ ಹಕ್ಕು ಸಾಧ್ಯವಿಲ್ಲವೆಂತ ಸೂಚಿಸಿದರು. ಸಮಾಧಾನ ಪಕ್ಷದವರು ಕ್ರಮ ಕ್ರಮವಾಗಿ ಹಕ್ಕುಗಳನ್ನು ಪಡೆಯುತ್ತಾ ಒಂದು ಆಖೈರಿನಲ್ಲು ಸ್ವರಾಜ್ಯ ಸಿಕ್ಕಿದರೆ ಸಾಕೆಂದು ಹೇಳುತ್ತಿದ್ದವರು ನ್ಯಾಯಸಿಕ್ಕಬೇಕಾದರೆ ಸರ್ಕಾರವು ಬದಲಾಗಬೇಕೆಂದು ಹೇಳುವಾಗ ಸ್ವರಾಜ್ಯ ಕೂಡಲೇ ಪಡೆಯಬೇಕೆಂಬುದು ಎಷ್ಟು ಅಗತ್ಯವಿದೆಯೆಂದು ವಿಶದವಾಗುತ್ತದೆ. ಪ್ರತಿಯೊಬ್ಬನೂ ಇದಕ್ಕಾಗಿ ಎಷ್ಟರಮಟ್ಟಿಗೆ ಪ್ರಯತ್ನಿಸಬೇಕೆಂಬುದು ಹೇಳಿ ಪೂರೈಸಲು ಸಾಧ್ಯವಿಲ್ಲ. ಶಾಸ್ತ್ರಿಗಳಂಥ ಮುಖ್ಯ ಮುಂದಾಳುಗಳು ಹೇಳಿದಾಕ್ಷಣ ಸರ್ಕಾರದ ಕ್ರಮವು ಬದಲಾಗುವುದಿಲ್ಲ. ದೇಶೀಯನಾದ ಪ್ರತಿಯೊಬ್ಬನು ದೇಶದ ಸ್ವಾತಂತ್ರ್ಯಕ್ಕಾಗಿ ತನ್ನ ಅಂಶದ ಕೆಲಸವನ್ನು ಮಾಡಿಯೇ ತೀರಬೇಕು.

ಕೆನ್ಯಾದಲ್ಲಿ ಹಿಂದೀಯರ ಹಕ್ಕನ್ನು ಇನ್ನೂ ಕಡಿಮೆ ಮಾಡುವ ಇಮಿಗ್ರೇಶನ್ ಬಿಲ್ಲೆಂಬದೊಂದು ಹೊಸಕಾನೂನು ಮಂಜೂರಾಗಲು ಅಲ್ಲಿಯ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೆ ಬಂದಿದೆ. ಆ ವಿಷಯಕ್ಕೆ ಅಷ್ಟೇನು ಗಮನ ಕೊಡಬೇಕೆಂದಿಲ್ಲ. ಎಳೆಕೊಂಡು ಓಡುವ ಗೂಳಿಯ ಮೂಗುದಾರದ ಹಗ್ಗವನ್ನು ಬಿಟ್ಟು ಅದರ ಬಾಲವನ್ನು ಹಿಡುಕೊಂಡವನ ಸ್ಥಿತಿಯಂತೆಯೇ ಇಮಿಗ್ರೇಶನ್ ಬಿಲ್ಲಿಗೆ ಗಮನಕೊಡುವ ಹಿಂದೀಯರ ಗತಿಯಾಗುವುದೆಂತಲೂ ಇದರಿಂದ ಇಮಿಗ್ರೇಶನ್ ಬಿಲ್ಲನ್ನು ಬದಲಾಯಿಸಲು ಪ್ರಯತ್ನಿಸಬಾರದೆಂತ ತಾನು ಹೇಳುವುದಿಲ್ಲವೆಂತಲೂ, ಇದಕ್ಕಿಂತ ವಸಾಹತುಗಳಲ್ಲಿ ಹಿಂದೀಯರಿಗೆ ಬಿಳಿಜನರೊಂದಿಗೆ ಸಮಾನ ಹಕ್ಕುಸಿಕ್ಕುವಂತೆ ಹೊಡೆದಾಡುವುದೇ ಅತ್ಯಾವಶ್ಯವಿಷಯವೆಂತಲೂ ಒತ್ತಿ ಹೇಳಿದರು.

ಕೆನ್ಯಾದ ಹುಟ್ಟು ಜನರ ಹಕ್ಕುಗಳನ್ನು ಕಾಪಾಡಲಿಕ್ಕಾಗಿಯೇ ಹಿಂದೀಯರ ಆ ದೇಶಕ್ಕೆ ಹೋಗುವುದನ್ನು ತಡೆಗಟ್ಟಬೇಕೆಂಬ ತತ್ವವನ್ನು ತಾಬೆದಾರಿಯ ಸಂಕಲೆಗಳ ನೋವನ್ನು ಬಹುಕಾಲದಿಂದ ಅನುಭವಿಸುತ್ತಿರುವ ಹಿಂದೀಯರು ಒಪ್ಪಬೇಕಾಯಿತು. ತನ್ನಂತೆಯೇ ಬೇರೆಯವರು ಕಷ್ಟಕ್ಕೆ ಗುರಿಯಾಗಬಾರದೆಂತ ಯೋಚಿಸಿದರು. ಆದರೆ ನಿಜವಾಗಿ ಕೆನ್ಯಾ ಮೂಲನಿವಾಸಿಗೆ ಹಿಂದೀಯನಂತ ಸ್ನೇಹಿತನು ಬೇರೆ ಇಲ್ಲ. ಬೇರೆ ಜನರು ಮೂಲನಿವಾಸಿಗಳ ಭೂಮಿಯನ್ನೆಲ್ಲಾ ಕಿತ್ತುಕೊಂಡು ಸಾಲದುದಕ್ಕೆ ಅನ್ಯಾಯದ ಕಾನೂನುಗಳನ್ನು ಮಾಡಿ ಅವರಿಂದ ಬಲುಂನಿಂದ ಕೆಲಸಮಾಡಿಸಿಕೊಂಡು ಸ್ವಾರ್ಥತೆಯನ್ನು ಸಾಧಿಸಿಕೊಳ್ಳುವವರಾಗಿದ್ದಾರೆ. ಅವರ ಮುಂದಾಳೊಬ್ಬನ ಮಾತಿನಂತೆ ‘ಮೂಲನಿವಾಸಿಗಳ ಭೂಮಿಯನ್ನೆಲ್ಲಾ ಕದ್ದದ್ದಲ್ಲದೆ ಅವರ ಅಂಗಗಳನ್ನೆಲ್ಲಾ ಕಡಿಯುವುದೇ ತಮ್ಮ ಕೆಲಸವಾಗಿದೆ’ ಆದುದರಿಂದ ಆ ದೇಶಕ್ಕೆ ಹೋಗುವುದನ್ನು ತಡೆಯಬೇಕಾದದ್ದು ಹಿಂದೀಯರನ್ನಲ್ಲ, ಬಿಳೀಜನರನ್ನೇ ಆಗಿದೆ. ಈ ಮಾತುಗಳನ್ನು ನಮ್ಮ ವೈಸರಾಯರು ಹೇಳುವದು ಸಾಧ್ಯವಿಲ್ಲ. ಆದುದರಿಂದಲೇ ಇಂಡಿಯಾದ ಸರಕಾರವು ಬದಲಾಗಬೇಕಾದದ್ದೆಂದು ತಾನು ಹೇಳುವುದಾಗಿದೆ. ಸರ್ಕಾರದ ಸಹಾಯವಿಲ್ಲದೆ ಜನರಿಂದಲೇ ಇಂತಾ ಮಹತ್ವದ ಕೆಲಸವು ಸಾಧ್ಯವಿಲ್ಲ. ನಾವು ಸ್ವತಂತ್ರ ಜನರಾಗಿ ನಮ್ಮ ಸರ್ಕಾರವನ್ನು ತೆಗೆಯುವುದು, ಮಾಡುವುದು ನಮ್ಮ ಕೈಯಲ್ಲಿ ಇಲ್ಲದ ವಿನಹ ಇಂಥಾ ಪ್ರಯತ್ನಗಳಲ್ಲಿ ನಾವು ಖಂಡಿತ ಸೋಲುವೆವು. ಈ ದೊಡ್ಡ ಉದ್ದೇಶಕ್ಕಾಗಿಯೇ ನಮ್ಮ ಎಲ್ಲಾ ಪ್ರಯತ್ನಗಳನ್ನು ತಿರುಗಿಸಬೇಕಾಗಿದೆ. ಆಕಾರಣ ಇಂಡಿಯಾದ ರಾಜ್ಯಕಾರ್ಯದಲ್ಲಿ ಶಾಂತತೆ ಮತ್ತು ಅಶಾಂತತೆ, ವಿರಪಕ್ಷ ಮತ್ತು ಅಲ್ಪ ಕೆಲಸವೆಂಬುದರಲ್ಲಿ ನನಗೇನೂ ಅರ್ಥವಿಲ್ಲ. ವಸಾಹತುಗಳ ಸಮಾನತ್ವವೆಂಬ ಧ್ವಜದ ಸುತ್ತಲೂ ಎಲ್ಲರೂ ಒಂದಾಗಿ ಸೇರಬೇಕು. ಅದು ಶೀಘ್ರದಲ್ಲಿ ಆಗಬೇಕು. ಇನ್ನು ಹೆಚ್ಚಿನ ಸುಧಾರಣೆಗಳಿಗೆ ಹೊಡೆದಾಡುವುದರಲ್ಲಿ ಏನೊಂದೂ ಪ್ರಯೋಜನವಿಲ್ಲ. ಆದುದರಿಂದ ಈಗಿನ ಸುಧಾರಣೆಯಲ್ಲಿ ತೃಪ್ತರಾಗಿರುವವರನ್ನು ಕೌನ್ಸಿಲಿಗೆ ಚುನಾಯಿಸಿರಿ ಎಂದು ವೈಸರಾಯ ಪ್ರಭುಗಳು ದೇಶದವರಿಗೆ ಎಚ್ಚರಿಕೆ ಕೊಟ್ಟಾಗ್ಯೂ ನಿತ್ರಾಣವಾದ ನರಿಯಾಗಿ ಅವಯವ ಕೂಡದ ಮತ್ತು ರಾಜ್ಯಕಾರ್ಯದಲ್ಲಿ ಶಿಶುವಿನಂತಿರುವ ಇಂಡಿಯಾ ದೇಶವು ಧೈರ್ಯದಿಂದ ಉತ್ತರವನ್ನು ಕೊಟ್ಟಿರುತ್ತದೆ. ಹಿಂದೀಯರು ವೈಸರಾಯರ ಎಚ್ಚರಿಕೆಗೆ ಗಮನಕೊಡಲಿಲ್ಲವೆಂಬುದು ಕಳೆದ ಚುನಾವಣೆಯಲ್ಲಿಯೇ ಕಂಡುಬರುತ್ತದೆ. ನಮ್ಮ ದೇಶದ ಮಾರ್ಗದರ್ಶಕರೆಂದು ಹೇಳಿಕೊಳ್ಳುವ ಎಂಗ್ಲೋ ಇಂಡಿಯನ್ ಮತ್ತು ಬ್ರಿಟಿಷ್ ಪ್ರೆಸ್ಸಿನವರೂ ಮತ್ತು ಇಂಡಿಯನ್ ಸಿವಿಲ್ ಸರ್ವೀಸಿನ ಜವಾಬ್ದಾರರೂ ಅಧಿಕಾರಸ್ಥರೂ ಹಿಂದೂ ದೇಶದ ಭಂಡಾರವನ್ನು ಬ್ರಿಟಿಷ್ ಉದ್ಯೋಗಸ್ಥರ ಸ್ವತಂತ್ರದಲ್ಲಿ ಇಟ್ಟರೆ ಎಲ್ಲವೂ ಚೆನ್ನಾಗಿ ನಡೆಯುತ್ತದೆಂದು ಹೇಳುತ್ತಿರುವರು. ‘ಅಲ್ಲದೆ ನೀವು ನಿಮ್ಮ ಪೂರ್ವಿಕರ ಹಾಗೆ ಇಲ್ಲ. ನಿಮಗೆ ಬ್ರಿಟಿಷರ ಜನ್ಮದಲ್ಲಿಯೂ ಅಕ್ಕದ ಶಾಸ್ತ್ರದಲ್ಲಿಯೂ ನಂಬಿಗೆ ಇಲ್ಲವೇ? ಸಮಾನತ್ವಕ್ಕೆ ಯಾಕೆ ಇಷ್ಟು ಅವಸರಪಡುತ್ತೀರಿ? ನಿಧಾನವಾಗಿ ನಿಮ್ಮ ಸ್ವಾತಂತ್ರ್ಯವು ನಿಮಗೆ ದೊರೆಯಲಾರದೇ? ಕೆನ್ಯಾದಲ್ಲಿಯೂ, ಇಂಡಿಯಾದಲ್ಲಿಯೂ ನಿಮಗೆ ಎಲ್ಲಾ ಹಕ್ಕುಗಳು ಸರಿಸಮಾನವಾಗಿ ದೊರೆಯದೆ ಇರುವುದು ಅನ್ಯಾಯವೆಂದು ನೀವು ಹೇಳುವುದರಲ್ಲಿ ಕಾರಣವಿದೆ. ಆದರೆ ಸಾವಧಾನದಿಂದ ಒಂದೊಂದಾಗಿ ಅವುಗಳನ್ನು ಪಡೆಯಲು ನೀವು ಕಾಯಬೇಕೆಂದೂ ಅವಸರ ಮಾಡಿದರೆ ಶಾಂತಿಗೆ ಭಂಗವಾಗುವುದೆಂದೂ ನಮ್ಮ ಹಿತಚಿಂತಕರೆಂದೆನಿಸಿಕೊಳ್ಳುವ ಬ್ರಿಟಿಷ್ ಮಹನೀಯರು ನಮಗೆ ಬೋಧಿಸುತ್ತಿರುವರು. ಕಾನೂನಿಗನುಸಾರವಾಗಿಯೂ ಶಾಂತತೆಯಿಂದಲೂ ಸಾವಧಾನದಲ್ಲಿ ಅಭಿವೃದ್ಧಿ ಹೊಂದಬೇಕೆಂಬುದು ನಮ್ಮಲ್ಲಿ ಕೆಲವರ ನಂಬಿಕೆಯಾಗಿದೆ. ಈ ನಂಬಿಕೆಯಲ್ಲಿ ನಾನು ಭಾಗಿಯಾಗಿದ್ದೇನೆ. ಆದರೆ ನಾವು ನಿಧಾನವಾದರೂ ದಿನೇ ದಿನೇ ಮುಂದುವರಿಯುತ್ತಿದ್ದೇವೋ ಎಂಬ ಸಂಶಯವು ನನಗೆ ಹುಟ್ಟಿದೆ. ಒಂದುಸಲ ಉದಾರಭಾವವನ್ನು ತೋರಿಸಿದ ಬ್ರಿಟಿಷರಿಗೆ ತಮ್ಮ ಉದಾರತ್ವದಲ್ಲಿ ಹೆದರಿಕೆಯು ಹುಟ್ಟಿದೆ. ತಾವು ತಪ್ಪಿದ್ದೇ ಹೆಚ್ಚಾಯಿತೆಂದು ಹೇಳಲಾರಂಭಿಸಿರುವರು” ಎಂದು ಮುಂತಾಗಿ ಶಾಸ್ತ್ರಿಗಳವರು ತಮ್ಮ ದೀರ್ಘಭಾಷಣದಲ್ಲಿ ನಿಜವಾದ ಹಿಂದೀಯರ ಹಾಗೆ ಮನಸ್ಸು ಕರಗುವಂತೆ ಹೇಳಿರುವರು.

ಕೆನ್ಯಾದಲ್ಲಿರುವ ಹಿಂದೀಯರ ಕಷ್ಟಸ್ಥಿತಿಯ ವಿಷಯವಾಗಿ ನಾವು ಈ ಮೊದಲೇ ಒಂದೆರಡು ವೇಳೆ ವಿವರವಾಗಿ ಬರೆದಿದ್ದೆವು. ಅಲ್ಲಿಯ ಸರಕಾರದವರು ಹಿಂದೀಯರನ್ನು ಇಟ್ಟಿರುವ ಹೀನಸ್ಥಿತಿಯನ್ನು ಆಲಿಸಿದಾಗಲೇ ಹಿಂದೂ ದೇಶದಲ್ಲಿರುವ ಅವರ ಸಹೋದರರಲ್ಲಿ ಯಾರಿಗೆ ತಾನೇ ಮನಸ್ಸು ಕರಗದೆ ಇರುವುದು? ನಮ್ಮ ದೇಶದಲ್ಲೂ ಕೂಡ ಯೂರೋಪಿಯನರಿಗೂ ದೇಶೀಯರಿಗೂ ಇಂಥಾ ವ್ಯತ್ಯಾಸಗಳಲ್ಲಿ ಕೆಲವನ್ನು ತೋರಿಸುವರು. ನಮ್ಮ ಕೌನ್ಸಿಲು ನೇಮಕದಲ್ಲಿಯೇ ಯೂರೋಪಿಯನ್ ಓಟರುಗಳ ಸಂಖ್ಯೆಯು ಅತ್ಯಲ್ಪವಾದರೂ ಅವರಿಗೆ ಎರಡು ಪ್ರತಿನಿಧಿಗಳನ್ನು ಕೊಟ್ಟಿರುವರು. ಈ ದರದಲ್ಲಿ ದೇಶೀಯರ ಚುನಾಯಿತ ಮೆಂಬರುಗಳ ಸಂಖ್ಯೆಯು ಮೂರರಷ್ಟು ಯಾ, ಕಡಿಮೆಪಕ್ಷ ಎರಡಷ್ಟಾದರೂ ಆಗಬೇಕಾಗಿತ್ತು. ಇಷ್ಟು ಮಾತ್ರವಲ್ಲ ಟಪ್ಪಾಲು ಮೂಲಕ ಓಟುಕೊಡುವ ಹಕ್ಕನ್ನು ಯೂರೋಪಿಯನರಿಗೆ ಮಾತ್ರ ಕೊಟ್ಟಿರುವರು. ದೇಶೀಯರಾದರೋ ಎಷ್ಟು ವೃದ್ಧರೇ ಆಗಿರಲಿ, ಅಂಗಹೀನರಾಗಿಯಾಗಲಿ ಕಾಯಿಲಸ್ಥರಾಗಿಯಾಗಲೀ ಓಟುಕೊಡುವ ಸ್ಥಳಕ್ಕೆ ಬರಲು ಅಶಕ್ತರಾಗಿದ್ದರೂ ಕೂಡ ಅವರು ಪೋಲಿಂಗ್ ಸ್ಟೇಶನಿಗೆ ಬಂದ ವಿನಹ ಅವರಿಗೆ ಓಟು ಕೊಡುವ ಹಕ್ಕಿಲ್ಲ. ಯೂರೋಪಿಯನರಿಗೆಲ್ಲಾ ಪೋಲಿಂಗ್ ಸ್ಟೇಶನಿಗೆ ಬರಲು ಸಾಕಷ್ಟು ಅನುಕೂಲಗಳಿಲ್ಲವೆಂದೋ ಅಥವಾ ಅವರ ಚರ್ಮವು ಬಿಳಿಚರ್ಮವೆಂದೋ ಹೀಗೆ ಪಕ್ಷಪಾತ ತೋರಿಸಲು ಕಾರಣವೋ ಎಂಬುದು ತಿಳಿಯದು. ನಮ್ಮ ದೇಶೀಯರಿಗೆ ಇದೊಂದು ಭಿನ್ನಭೇದದಿಂದಲೇ ಇಷ್ಟೆಲ್ಲಾ ನೋವು ಉಂಟಾಗಿರುವಾಗ್ಗೆ ಕೆನ್ಯಾದಲ್ಲಿರುವ ಹಿಂದೀಯರ ಪಾಡನ್ನು ತಿಳಿದುಕೊಂಡು ಅವರ ಮನೋವ್ಯಥೆಯಲ್ಲಿ ನಾವೂ ಭಾಗಿಗಳಾಗಿ ಅವುಗಳ ಪರಿಹಾರಾರ್ಥವಾಗಿ ಹೋರಾಡಬೇಕಾದದ್ದು ಪ್ರತಿಯೊಬ್ಬ ದೇಶೀಯನ ಕರ್ತವ್ಯವಾಗಿದೆ. ಮ|| ಶಾಸ್ತ್ರಿಯವರು ಹೇಳಿರುವ ಹಾಗೆ ಸರ್ಕಾರವು ಬದಲಾಗದೆ ಸಮಾನತ್ವವು ದೊರೆಯುವುದು ಸಾಧ್ಯವೋ ಎಂಬ ಸಂಶಯವು ಎಲ್ಲರಲ್ಲಿಯೂ ಹುಟ್ಟಿದೆ.

ಇಂಗ್ಲೀಷ್ “ಹಿಂದೂ” ಪತ್ರದ ಸಂಪಾದಕರಾಗಿದ್ದ ಮ|| ಕಸ್ತೂರಿ ರಂಗೈಯ್ಯಂಗಾರರ ಮರಣ.

ಬರೆದು ಬಂದದ್ದು

ದಕ್ಷಿಣ ಹಿಂದೂದೇಶಕ್ಕೆಲ್ಲಾ ಧ್ರುವನಕ್ಷತ್ರದಂತಿದ್ದ ಶ್ರೀಮಾನ್ ಕಸ್ತೂರಿ ರಂಗಯ್ಯಂಗಾರರು ಕಳೆದವಾರ ದಿವಂಗತರಾದರು. ಇವರು ಹಿಂದೂದೇಶದ ಪತ್ರಸಂಪಾದಕರೊಳಗೆ ಅಗ್ರಗಣ್ಯರಿದ್ದರು. 1905 ರಲ್ಲಿ ಲೋಕಪ್ರಸಿದ್ಧವಾದ ಹಿಂದೂಪತ್ರಿಕೆಯು ಮ|| ರಂಗೈಯ್ಯಂಗಾರರ ಕೈಗೆ ಬಿತ್ತು. ಅಂದಿನಿಂದ ಇವರು ಪ್ರಜಾಹಿತದ ಒದ್ದಾಟದಲ್ಲಿ ಮುಳುಗಿದ್ದರು. ಇವರ ಮರಣದಿಂದ ಭಾರಿ ಮಾತೆಗುಂಟಾಗಿರುವ ದುಃಖವು ಅಪರಿಮಿತವಾಗಿದೆ. ನಾನಾಕಡೆಯ ಮುಂದಾಳುಗಳು ಇವರ ಮರಣದುಃಖವನ್ನು ಸಭೆಗಳ ಮೂಲಕ ತೋರ್ಪಡಿಸಿರುತ್ತಾರೆ.

ಅಯ್ಯಂಗಾರರು ತಮ್ಮ ವಿದ್ಯಾಭ್ಯಾಸವು ಪೂರೈಸಿದ ನಂತರ ಕೆಲಕಾಲ ವಕೀಲರಾಗಿ ಮದರಾಸಿನಲ್ಲಿದ್ದರು. ಅವರ ಸ್ವಭಾವವು ಲೇಖನವೃತ್ತಿಯ ಕಡೆಗೆ ಹರಿಯುತಿತ್ತು. ಆದುದರಿಂದ ಅನುಕೂಲ ದೊರತೊಡನೆ ಪತ್ರಸಂಪಾದಕರಾದರು. 20 ವರುಷಗಳಿಗೆ ಹಿಂದೆ “ಹಿಂದೂಪತ್ರವು” ಜಿ ಸುಬ್ರಮಣ್ಯರವರ ಸಂಪಾದಕತ್ವದಲ್ಲಿದ್ದಾಗಲೇ ಹೆಸರುವಾಸಿಯನ್ನು ಪಡೆದಿತ್ತು. ಐಯ್ಯಂಗಾರರು ಇದರ ಸಂಪಾದಕತ್ವವನ್ನು ವಹಿಸಿಕೊಂಡಕೂಡಲೆ ಪತ್ರದ ಮಾತಂತಿರಲಿ ದಕ್ಷಿಣ ಹಿಂದೂದೇಶದ ರಾಜಕೀಯ ಸ್ಥಿತಿಯೇ ಮಾರ್ಪಾಡಾಗತೊಡಗಿತು. ಐಯ್ಯಂಗಾರರು ಬಹುವಿದ್ಯಾಚತುರರು, ಕಾರ್ಯಸಾಧಕರು. ಇವರು ಯಾವಾಗಲೂ ಶಾಂತಸ್ವಭಾವದವರು ಆಗಿದ್ದರು. ಈಗಿನ ರಾಜಕೀಯ ವಿಚಾರವಾಗಿ ಅನೇಕ ಸ್ವದೇಶಾಭಿಮಾನಿಗಳು ಇವರ ಬುದ್ಧಿವಾದ ಕೇಳಲಿಕ್ಕೆ ಹೋಗುತ್ತಿದ್ದಾಗ, ಐಯ್ಯಂಗಾರರು ತಮ್ಮ ಮಧುರವಾದ ಮಾತಿನಿಂದ ಎಲ್ಲತರದ ಜನರಿಗೂ ಸಮಂಜಸವಾದ ಉತ್ತರಕೊಡುತ್ತಿದ್ದರು.

ಮೊನ್ನೆ ಮದರಾಸಿನಲ್ಲಿ ಜರುಗಿದ ಇವರ ಸ್ಮಾರಕಸಭೆಯಲ್ಲಿ ವಿಖ್ಯಾತ ಮ|| ಯಸ್ ಶ್ರೀನಿವಾಸಯ್ಯಂಗಾರರು ಇವರ ಗುಣಕಥನವನ್ನು ಯಥಾಯೋಗ್ಯವಾಗಿ ನಡಿಸಿದವರು. “ಮ|| ನಾಮದಾರ ದಿವಂಗತ ಗೋಖಲೆಯವರ ಪಂಗಡದವರು ಲೋಕಮಾನ್ಯ ತಿಲಕರನ್ನು ರಾಷ್ಟ್ರೀಯ ಸಭೆಯಿಂದ ಹೊರಗೆ ಹಾಕಬೇಕೆಂದಿದ್ದ ವಿಚಾರದಲ್ಲೂ ... ಅಷ್ಟರ್‌ಲಾಲಿ ಗವರ್ನರ ಶಾಸನದ ವಿಚಾರದಲ್ಲೂ ... ನ್ನು ಎಬ್ಬಿಸಿದ್ದು ಮದರಾಸಿನ ‘ಹಿಂದೂ’ ಪತ್ರವೇ. ... ಯ್ಯಂಗಾರರು ಸನ್ಯಾಸಿಸ್ವಭಾವದವರಾದರೂ ... ಬಿಸ್‌ಮಾರ್ಕ್ ಮತ್ತು ವಾಲ್‌ಪೋಲ್ ಇವರಂತೆ ದೇಶದ ... ಚಳವಳಿಗಳನ್ನು ಕುರಿತ ವಿಷಯವು ಇವರ ವಿಚಾರಣೆಯ ... ತ್ತು. ಲೋಕಮಾನ್ಯರಂತೆ ಐಯ್ಯಂಗಾರರಿಗೂ ಮಹತ್ತರ ಬುದ್ಧಿಕುಶಲತೆ ಇತ್ತು. ಐಯ್ಯಂಗಾರರು ಅತಿ ಜಟಿಲ ವಿಷಯಗ್ರಾಹ್ಯ ಮಾಡಿಕೊಳ್ಳುತ್ತಿದ್ದರು. ಇವರನ್ನು ... ಕೋಬ್ಡನ್, ಮಾರ್ಲೆ ಈ ಮಹಾತ್ಮರ ಸಮಾನತೆ ... ದು. ಪ್ರಜಾಪ್ರಭುತ್ವದಲ್ಲಿ ಇವರಿಗೆ ಅಪಾರವಾದ ವಿಶ್ವಾಸವಿತ್ತು. ಇಂಥಾ ಅಗ್ರೇಸರರನ್ನು ಕಳಕೊಂಡ ವ್ಯಸನ ಬಹಳವಾಗಿದೆ ಎಂದು ಮುಂತಾಗಿ ಹೇಳಿದರು.

ಐಯ್ಯಂಗಾರರು ಕೂಲಿಗಾರರ ವಿಷಯದಲ್ಲಿ ... ಸಹಾನುಭೂತಿಯನ್ನು ತಾಳಿದ್ದರು. ಕೆಲವರುಗಳಿಗೆ ...

ಮದರಾಸಿನ ಬಕ್ಕಿಂಗ್‌ಹಾಮ್ ಮತ್ತು ಕಾರ್ನಾಟಿಕ್ ಮಿಲ್ಲಿನಿಂದ ಸುಮಾರು ಹತ್ತುಸಾವಿರ ಕೂಲಿಗಾರರು ತಳ್ಳಲ್ಪಟ್ಟಿದ್ದಾಗಲೂ, ಸರಕಾರದವರು ಕೂಲಿಗಾರರ ಮುಖಂಡರನ್ನು ಗಡಿಪಾರು ಮಾಡಿದಾಗಲೂ ಐಯ್ಯಂಗಾರರೂ ತಮ್ಮ ದೇಶಭಕ್ತಿಯಿಂದ ಗರೀಬು ಜನರಿಗೆ ಬಹಳ ಉಪಕಾರ ಮಾಡಿದರು.

ಐಯ್ಯಂಗಾರರ ಮರಣದಿಂದ ದಕ್ಷಿಣ ಹಿಂದೂದೇಶದ ಮೇಲೆಲ್ಲಾ ಮೋಡ ಕವಿದುಕೊಂಡಂತಾಗಿದೆ. ಈ ಸಮಯದಲ್ಲಿ ದೇವರು ಇವರ ಆತ್ಮಕ್ಕೆ ಸುಖಶಾಂತಿಯನ್ನೀಯಲೆಂದು ಹಾರೈಸುತ್ತೇವೆ. ಈ ಪತ್ರದ ಮೂಲಕ ನಮ್ಮ ವ್ಯಸನವನ್ನು ಎಲ್ಲರಿಗೂ ಸೂಚಿಸುತ್ತೇವೆ.

"ವಾಣೀವಿಲಾಸ ಮಹಿಳಾಸಭಾ" ವೀರರಾಜಪೇಟೆ.

(ಒಬ್ಬ ಬಾತ್ಮೀದಾರರಿಂದ)

ತಾರೀಖು 16—12 ರಲ್ಲಿ ವೀರರಾಜಪೇಟೆ ಗರ್ಲ್ಸ್ ಸ್ಕೂಲ್ ಹಾಲಿನಲ್ಲಿ ಶ್ರೀಮತಿ ಕೋಳಿಯಂಡ್ರ ಅಕ್ಕಮ್ಮನವರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ಸಮಾಜದ ಪಬ್ಲಿಕ್ ಮೀಟಿಂಗೊಂದು ನಡೆಯಿತು. ಸಾಧಾರಣ 60 ಜನ ಸ್ತ್ರೀಯರು ಸೇರಿದ್ದರು. ದೇವರ ಪ್ರಾರ್ಥನೆ, ಕಳೆದ ಮೀಟಿಂಗಿನ ರಿಪೋರ್ಟನ್ನು ಓದುವದು, ಸ್ತ್ರೀವಿದ್ಯಾಭ್ಯಾಸದ ವಿಷಯ ಪ್ರಬಂಧವನ್ನು ಓದುವದು ಮುಂತಾದ ಕಾರ್ಯಕಲಾಪಗಳ ನಂತರ ಮ|| ರಾ|| ಸಿ. ಯಂ. ರಾಮರಾವ್, ಬಿ. ಎ. ಎಲ್. ಟಿ. ಯವರು ಒಂದು ಸ್ತ್ರೀಸಂಘದ ಆವಶ್ಯಕತೆಯನ್ನು ಕುರಿತು ಬಹಳ ನೀತಿಬೋಧಕವಾಗಿಯೂ ರಸಭರಿತವಾಗಿಯೂ ಭಾಷಣವನ್ನು ಮಾಡಿದರು. ಭಾಷಣದ ಸಾರಾಂಶವೇನಂದರೆ —

ಈಗಿನ ಕಾಲದಲ್ಲಿ ಸಂಘಗಳು ಅತಿ ಅವಶ್ಯವೆಂದು ತಂಡು ಬಂದಿವೆ. ಯಾವದೊಂದು ಜನಸಮುದಾಯವಾಗಲಿ, ಯಾವದೊಂದು ಜನಾಂಗವಾಗಲಿ ತಮ್ಮ ಸಾಮಾಜಿಕ ಸ್ಥಿತಿ ಮತ್ತು ಧಾರ್ಮಿಕ ವಿಷಯಗಳನ್ನು ಸಂಘಗಳ ಮೂಲಕವಾಗಿಯೇ ವೃದ್ಧಿಮಾಡಿಕೊಳ್ಳುತ್ತಾರೆ. ರಾಜಕೀಯ ವಿಷಯಗಳಂತು ಸಂಘಗಳ ಆವಶ್ಯಕತೆಯನ್ನು ಹೇಳತಂದ. ನಮ್ಮ ಹಿಂದೂಸಮಾಜದಲ್ಲಿ ಪೂರ್ವದಲ್ಲಿ ಇಂಥಾ ಸಂಘಗಳು ಮೀಟಿಂಗಿಯಲ್ಲಿರಲಿಲ್ಲ. ಅದಕ್ಕಾಗಿ ಈಗ ಇರಬಾರದು ಹೇಳಲಾಗುವದಿಲ್ಲ. ಬಹಳ ಮೊದಲು ಜನರು ಕುಡಿಯಲಿಕ್ಕೆ ಚಿಪ್ಪನ್ನಾಗಲಿ, ಮೃಗಗಳ ಕೊಂಬುಗಳನ್ನಾಗಲಿ ಉಪಯೋಗಿಸುತ್ತಿದ್ದರು. ಕಾಲಗತಿಯಿಂದ ಇನಾಮಲು ಮತ್ತು ಪೋರ್ಸಲೇನ್ ಬಟ್ಟಲುಗಳು ಬಾಡಿಕೆಗೆ ಬಂದವು. ಬರುತ್ತಾ ಚಿನ್ನ ಬೆಳ್ಳಿ ಮೊದಲಾದ ಅಮೂಲ್ಯ ಲೋಹದ ಬಟ್ಟಲುಗಳನ್ನು ಉಪಯೋಗಿಸುತ್ತಾರೆ. ಈಗಿನ ಕಾಲದಲ್ಲಿ ಕುಡಿಯಲಿಕ್ಕೆ ಚಿಪ್ಪನ್ನುಪಯೋಗಿಸುವದು ಅಸಂಭವವಾದ್ದರಿಂದ ಕಾಲಗತಿಗೆ ಸರಿಯಾದ ಬದಲಾವಣೆಗಳು ಬರಲೇಬೇಕು.

ಸ್ತ್ರೀಯರು ಪುರುಷರಷ್ಟೇ ಬಾಳ ಪ್ರಾಮುಖ್ಯರೆಂದು ತಿಳಿಯಬೇಕು. ನಿದರ್ಶನಗಳ ಮೂಲಕ ಹೇಳುತ್ತೇವೆ. ವೃದ್ಧಿಯ ಉನ್ನತ ಜನಾಂಗಗಳು ಈ ವಿಷಯವನ್ನು ಚೆನ್ನಾಗಿ ತಿಳಿದು ತಮ್ಮ ಸ್ತ್ರೀಯರಿಗೆ ವಿದ್ಯಾ ಮತ್ತು ಲೋಕಜ್ಞಾನದಲ್ಲಿ ವೃದ್ಧಿಯನ್ನುಂಟುಮಾಡುತ್ತಾ ವಿಶೇಷ ಗಮನ ಕೊಡುತ್ತಾರೆ. ನಮ್ಮ ಹಿಂದದೇಶವೂ ಸಹ ಇತ್ತೀಚೆಗೆ ಸ್ವಲ್ಪ ಸ್ತ್ರೀಯರ ಅಭಿವೃದ್ಧಿಯ ವಿಷಯ ಪ್ರಯತ್ನಪಡುತ್ತದೆ. ಅದರ ಫಲಿತಾಂಶವಾಗಿ ಅನೇಕ ಸ್ತ್ರೀಯರು ಜನಾಂಗದ ಮುಂದಾಳುಗಳಾಗಿದ್ದಾರೆ. ಸ್ತ್ರೀಯರು ಗೃಹಕೃತ್ಯದವನ್ನು ಬಿಡಬಾರದು. ಬಾಹ್ಯಪ್ರಪಂಚದ ಜ್ಞಾನವು ಅತಿ ಆವಶ್ಯವೆಂಬುದು ಸರ್ವಸಮ್ಮತದ ಮಾತು.

ಸ್ತ್ರೀಯರಿಗೆ ದೇಹಸಾಮರ್ಥ್ಯವು ಬಹಳ ಕಮ್ಮಿಯೆಂಬರು. ಆದರೆ ಅವರ ಮಾನಸಿಕ ಬಲವು ಬಹು ಹಿರಿದಾದುದು. ನಮ್ಮ ದೇಶದ ಸ್ತ್ರೀಯರು ಸ್ವೈರ್ಯ ಮತ್ತು ಪಾತಿವ್ರತ್ಯಗಳಲ್ಲಿ ಹೆಸರುಗೊಂಡು ತಮ್ಮನ್ನು ಅಮರರನ್ನಾಗಿ ಮಾಡಿಕೊಂಡಿದ್ದಾರೆ. ಇತ್ತೀಚೆಗೂ ನಮ್ಮ ದೇಶದ ಸ್ತ್ರೀಯರು ಕಾಲಿ ನೋಡಿದಲ್ಲಿ ಬೆಳೆದ ಸಿಂಹದ ಮರಿಯಂತೆ ಸ್ವ ಗಾಂಭೀರ್ಯವನ್ನೇ ತೋರಿಸುತ್ತಾರೆ. ಆದರೆ ಧಾರ್ಮಿಕ ವೇಣ ಅವರು ವಿದ್ಯಾವಂತೆಯರಲ್ಲಿ ಸಂಶಯವಿಲ್ಲ. ಕರ್ಮದ ಸ್ತ್ರೀಯರಲ್ಲಿ ದಾಕ್ಷಿಣ್ಯ ಮಾನಸಿಕಶಕ್ತಿಯಿಂದ ಕಾಪಾಡಿದ್ದರು.

ಸೀತೆಯನ್ನು ರಾವಣನ ಅಪಹರಿಸಿಕೊಂಡು ಹೋದಾಗ ರಾವಣನೂ ಅವನ ಬಲದಿಂದ ಅವಳಿಗೆ ಯಾವ ಅಪಾಯವನ್ನೂ ಮಾಡಲಾರದೆ ಹೋದನು. ರಾಮನೊಂದಿಗೆ ಅನೇಕ ವನಗಳವರೆಗೆ ಹೋದ ರಾವಣನಿಗೆ ಸೀತೆಯು ಪತಿಗೃಹವನ್ನು ಬಿಟ್ಟು ಸ್ವೈರ್ಯ ಬಿಡಲಿಲ್ಲ. ದುಶ್ಯಾಸನನಿಂದ ದ್ರೌಪದಿಯನ್ನು ಅವಮಾನಗೊಳಿಸುವದು ಸಾಗದೆ ಹೋಯಿತು. ಸಾವಿತ್ರಿಯು ಯಮಿ ಶಾಪದಿಂದ ಪತಿಯನ್ನು ಪಾರುಮಾಡುವದಕ್ಕಾಗಿ ಸುರ್ಯೋದಯವನ್ನೇ ತಡೆದಳು. ಸಾವಿತ್ರಿಯು ಮೃತ್ಯುವನ್ನೇ ಜಯಿಸಿ ತನ್ನ ಪ್ರಾಣಪ್ರಿಯನನ್ನು ಪುನರ್ಜೀವನಗೊಳಿಸಿ ಮಾಡಿದಳು. ಇಂತಹ ಅದ್ಭುತಶಕ್ತಿಯುಳ್ಳ ನಮ್ಮ ಭಾರತ ರಮಣಿಯರ ಅಭಿವೃದ್ಧಿಗೆ ಯಾರು ತಾನೆ ವಿರುದ್ಧವಾಗುವರು.

ಆದರೆ ಇತ್ತೀಚೆಗೆ ಅನ್ಯದೇಶೀಯರ ಹೆಚ್ಚಾಗಿ ಮಹಮ್ಮದೀಯರ ದಾಳಿಯಿಂದ ಸ್ತ್ರೀಯರ ಅಭಿವೃದ್ಧಿಗೆ ಬಹು ಕೆಟ್ಟ ಆತಂಕಗಳೊದಗಿದವು. ಈ ಕೆಟ್ಟ ಸಮ್ಮೇಳನವನ್ನು ಅವರು ಬಂದು ನೋಡುವದು ತುಂಬಾ ಅಸಾಧ್ಯವಾಗುತ್ತಿತ್ತು. ಮಹಮ್ಮದೀಯರ ಪ್ರಾಬಲ್ಯದ ಕಟ್ಟಡಗಳಲ್ಲಿ ಸ್ತ್ರೀಯರು ಸೀರೆಗೆ ಹೋಗಲಿಕ್ಕೆ ನಿಬಂಧನೆಯನ್ನು ಕೊಡದೆ ಮಾಡಿದ ಗುಪ್ತವ್ಯವಸ್ಥೆಗಳವೆಯಂತೆ. ಆದರಿಂದ ಈಗಿನ ಸ್ತ್ರೀಯರಿಗೆ ಎಷ್ಟರಮಟ್ಟಿಗೆ ತಮ್ಮ ಸ್ವಾತಂತ್ರ್ಯವನ್ನು ಬಂಧಿಸಲ್ಪಟ್ಟಿದ್ದವೆಂದು ಹೇಳಬಹುದು. ಈಗಲೀಗ ಯಾವ ಭೀತಿಯೂ ಇಲ್ಲ. ಸ್ತ್ರೀಯರು ನಿರಾತಂಕವಾಗಿ ವಿದ್ಯಾರ್ಜನೆ ಮಾಡಬಹುದು, ಲೋಕಜ್ಞಾನವನ್ನು ಸಂಪಾದಿಸಬಹುದು. ಹಾಗಿರುವಾಗ ಸ್ತ್ರೀಯರು ತಮ್ಮ ಮಾನಸಿಕ, ನೈತಿಕ, ಸಾಮಾಜಿಕ ಮತ್ತು ಧಾರ್ಮಿಕ ಅಭಿವೃದ್ಧಿಯನ್ನು ಪರಸ್ಪರ ಮಿಳಿತವಾಗುವದರಿಂದ ತಂದುಕೊಳ್ಳಬಹುದು.

ಆದರೆ ಸಾವಿರಾರು ಜನರು ಇದ್ದರೂ ಸಮಾಜವಲ್ಲ, ನೂರಾರು ಜನರಿದ್ದರೂ ಸಮಾಜವಲ್ಲ. ಕಾರಣ, ಬೇರೆಬೇರೆ ಬಗೆಗಳುಳ್ಳವರು ಒಟ್ಟಿಗೆ ಕೈಮುಗಿದು ಅನುಸರಿಸುವ ಸದಸ್ಯರುಳ್ಳ ಒಂದು ಸಮಾಜವು ಪ್ರತಿಯೊಂದು ವಸ್ತುವಿನಿಂದಲೂ ಒಳ್ಳೆಯದು ಮತ್ತು ಕೆಟ್ಟದು ಉಂಟಾಗುವದು. ಇದರಂತೆ ಸಮಾಜದಿಂದಲೂ ಸಹ ಸಮಾಜದ ವ್ಯಕ್ತಿಗಳು ವಿವೇಕವನ್ನನುಸರಿಸಬೇಕು. ಪಾಶ್ಚಾತ್ಯ ಪದ್ಧತಿಯ ಈ ಸಮಾಜವು ಕೇವಲ ಎಲ್ಲಾ ವಿಷಯಗಳಲ್ಲೂ ಪಾಶ್ಚಾತ್ಯರನ್ನೇ ಅನುಸರಿಸಬಾರದು. ಪಾಶ್ಚಾತ್ಯರ ಬೇರೆಯಾದರೂ ಅದರಲ್ಲಿರುವ ವ್ಯಕ್ತಿಗಳು ಹಿಂದೂಗಳಾಗಿರುವದರಿಂದ ಹಿಂದೂ ಆಚಾರಗಳನ್ನೇ ಅನುಸರಿಸಬೇಕು. ಹಾಗಾದರೇನೆ ಅದು ಸರ್ವಸಮ್ಮತವಾಗುವದು. ಭಂಗಾರದ ಆಭರಣವು ಸೊಗಸಾದುದೇನೋ ನಿಜ. ಆದರೆ ಆ ಭಂಗಾರಕ್ಕೆ ನಾನಾ ನವರತ್ನಗಳನ್ನು ಕೂಡಿಸುವುದಾದರೆ ಅದೆಷ್ಟು ಮನೋರಂಜಕವಾಗುವದು! ಅದರಂತೆಯೇ ಸಮಾಜವೆಂಬ ಈ ನಿಮ್ಮ ಭಂಗಾರದ ಆಭರಣಕ್ಕೆ ಸ್ವಧರ್ಮ ಮತ್ತು ಸ್ವಆಚಾರವೆಂಬ ನವರತ್ನಗಳನ್ನು ಕಲ್ಪಿಸಿದರೆ ಈ "ವಾಣೀವಿಲಾಸ ಮಹಿಳಾಸಭಾ" ಎಂಬ ಆಭರಣವು ನಮ್ಮ ದೇಶದ ಪ್ರತಿಯೊಬ್ಬ ಮಹಿಳೆಯೂ ಧರಿಸಲು ಯೋಗ್ಯವಾಗುವದು. ಇಂಥಾ ಆಭರಣಕ್ಕೆ ಅಂಥಾ ನವರತ್ನಗಳೂ ಇಷ್ಟು ನಿಮ್ಮಲ್ಲಿ ಅಭಿವೃದ್ಧಿಗೆ ತರುವ ಸಹಸ, ಧೈರ್ಯಾದಿಗಳು ಇದ್ದರೆ ಮುಂದೆ ದೇವರು ದಯೆಯನ್ನು ತೋರುವನು.

ನಂತರದ ಸಭಾಧ್ಯಕ್ಷರ ಭಾಷಣದ ಸಾರಾಂಶ.—

ಈ ಸಭೆಯನ್ನು ನಿರ್ಮಿಸಲು ಮುಂದುವರಿಸಿದ ಸಕಲ ಸಹೋದರಿ ಮಹಿಳೆಯರಿಗೆ ನಾನು ತುಂಬಾ ವಂದಿಸುತ್ತೇನೆ. ಇದನ್ನು ಇಷ್ಟರಲ್ಲೇ ಬಿಡದೆ ಅಭಿವೃದ್ಧಿಪಡಿಸಬೇಕು. ಇದರ ಶ್ರೇಯನ್ನು ಇಲ್ಲಿಯ ನಗರವಾಸಿಗಳಾದ ಸ್ತ್ರೀಯರಿಂದಲೇ ಹೆಚ್ಚಾಗಿ ಆಗಬೇಕು. ಆದರೆ ಸರ್ವರೂ ಇದನ್ನು ಆಶ್ರಯಿಸಿ ಇದರ ಬೆಳವಣಿಗೆಯನ್ನು ಕೋರಬೇಕು.

ಈ ದೇಶದ ಸ್ತ್ರೀಯರು ಧಾರ್ಮಿಕ ಮತ್ತು ಲೌಕಿಕ ಜ್ಞಾನದಲ್ಲಿ ಹಿಂದುಳಿದಿರುವರು. ಪೂರ್ವದ ಚರಿತ್ರೆಯನ್ನು ನೋಡಿದರೆ ಆಗಿನ ಸ್ತ್ರೀಯರು ಬಹು ವೃದ್ಧಿಯಲ್ಲಿದ್ದರೆಂದು ತಿಳಿಯುವದು. ನಿಗಧಿಂಟುವ ಉಪನಿಷತ್ತುಗಳಲ್ಲಿ ಸ್ತ್ರೀಯರು ತಮ್ಮ ವಿದ್ವತ್ತೆಯಲ್ಲಿ ಪ್ರೌಢರೂ ಆಗಿದ್ದರಂತೆ. ಈಗ ಬಹು ಮುಂದುವರಿದಿರುವ ಜನಗಳು ಆ ಸಮಯದಲ್ಲಿ ಕಾಡಿನಲ್ಲಿ ಅರಣ್ಯವಾಸಿಗಳಾಗಿದ್ದರು. ಜಾನಪದಾಯಿತು ರಾಮಾಯಣದಲ್ಲಿ ಗಾಂಧಾರಿ ಗುಣಶೀಲವನ್ನು ತಿಳಿದು ಅವರ ಯೋಗ್ಯತೆಯನ್ನು ಬಲ್ಲವರು ಸಾವಿರಗ ಅಂಥಾ ಮಹಾಪುರುಷರುಗಳಲ್ಲಿ ಯಾವ ಇರಾದೆಯನ್ನು ಹೇಳಬಹುದು.

ಮೊದಲು ಗುರುಕುಲ ಮೂಲಕ ವಿದ್ಯಾಭ್ಯಾಸವು ನಡೆಯುತ್ತಿತ್ತು. ಈಗಲಾದರೋ ಬಾಲಿಕಾ ಪಾಠಶಾಲೆಗಳು ನಮ್ಮ ಅವಶ್ಯಕ್ಕೆ ಸರಿಯಾಗಿರುವವು. ಆದರೂ ನಾವು ಪುರಾಣ ಇತಿಹಾಸಾದಿ ಶಿಕ್ಷಣಕ್ಕೆ ಮೊದಲಾದ ವಿಷಯಗಳಲ್ಲಿ ಅಜ್ಞಾನಿಗಳಾಗಿರುವೆವು. ಈ ಕೆಟ್ಟ ನಮ್ಮ ಅಜ್ಞಾನವನ್ನು ಹೋಗಲಾಡಿಸಲು ಸ್ವಲ್ಪ ಸ್ವಲ್ಪ ಪರಿಶ್ರಮ ಕಾಲವನ್ನು ನಿರ್ಮಿಸಿಕೊಂಡು ಇಂಥಾ ಸ್ಥಳಗಳಲ್ಲಿ ಸೇರಿದರೆ ನಮ್ಮ ಕುಂದುಕೊರತೆಗಳನ್ನು ಹೋಗಲಾಡಿಸಿಕೊಳ್ಳಬಹುದು. ಆ ಕಾರಣ ಈ ಸಮಾಜದ ಸದಸ್ಯರಾಗಿ ಇದನ್ನು ಅಭಿವೃದ್ಧಿಗೊಳಿಸಬೇಕೆಂದು ನಾನು ಪದೇ ಪದೇ ಹೇಳುವ ಮಾತಾಗಿದೆ.

ತದನಂತರ ಬಂದಿದ್ದ ಭಾಷಣಕಾರರಿಗೂ, ಅಧ್ಯಕ್ಷರಿಗೂ ನೆರೆದ ಸಭಿಕರಿಗೂ ಸೆಕ್ರೆಟರಿಯವರ ವಂದನಾ ಸಂತರ ತಾಂಬೂಲಾದಿಗಳನ್ನು ಸ್ವೀಕರಿಸಿ, ಮಂಗಳವನ್ನು ಹಾಡಿ ಸಭೆಯು ಮುಕ್ತಾಯವಾಯಿತು.

[ಮೇಲಿನ ಭಾಷಣಗಳಲ್ಲಿ ಕುಂದುಕೊರತೆಗಳಿದ್ದರೆ ಲೇಖಕರಿಗೆ ಭಾಷಣಕಾರರಲ್ಲ]

ಕೊಡಗುದೇಶಕ್ಕೆ ಸ್ವಾಯತ್ತರಾಜ್ಯವು.

ಕೊಡಗು ದೇಶವು ಅತಿ ಚಿಕ್ಕ ಸ್ವತಂತ್ರಪ್ರಾಂತವು. ಮಾಂಟೆಗ್ಯೂ ಸುಧಾರಣೆಗಳ ಪಕ್ಕ ಆ ಪ್ರಾಂತಕ್ಕೆ ಇರುವದಿಲ್ಲ. ಮೊನ್ನೆ ಹೊಸ್ತು ಮಾತ್ರ ಆ ಪ್ರಾಂತಕ್ಕೆ ಸ್ವತಂತ್ರವಾದದ್ದೊಂದು ಶಾಸನ ಮಂಡಳವು ಮಾತ್ರ ದೊರೆತಿದೆ. ಅದರಿಂದ ಅಲ್ಲಿಯ ಜನರಿಗೆ ಸಮಾಧಾನವಾಗಿಲ್ಲ. ಅಲ್ಲಿಯ ಜಮೀನುದಾರರ ಸಂಘದವರು ಪ್ರಾಯಿಸರಾಯರು ಮೈಸೂರು ಪ್ರಾಂತಕ್ಕೆ ಬಂದಾಗ ೩೦ ನೇ ನವಂಬರ ದಿವಸ ತಮ್ಮ ಪತಿಯಿಂದ ಆರು ಜನರದೊಂದು ಮಂಡಳವನ್ನು ಪ್ರಾಯಿಸರಾಯರ ಭೆಟ್ಟಿಗೆ ಕಳುಹಿಸಿಕೊಟ್ಟರು. ಪರಿಷತ್ ಕಾಯಿದೆ ಮಂಡಳಗಳಲ್ಲಿ ಕೊಡಗಿನ ಪ್ರತಿನಿಧಿಗಳಿರುವದಿಲ್ಲ. ಜಮ್ಮಾ ಜಮೀನುಗಳ ಶಾಶ್ವತವಾದ ತೀರಿಗೆಯನ್ನು ತೆಗೆಯಲಾಗಿ, ಅದನ್ನು ಸರಕಾರದವರು ನೀಳಿಂದದೇಲೆ ಹೆಚ್ಚಿಸುವದು ಅನ್ಯಾಯವು. ಇವೇ ಮುಂತಾದ ಬೇಡ, ದೂರುಗಳನ್ನು ಅವರು ಪ್ರಾಯಿಸರಾಯರೆದುರಿಗೆ ಹೇಳಿಕೊಂಡರು. ಪ್ರಾಯಿಸರಾಯರು ಸಾಹೇಬರು ಅವುಗಳಿಗೆಲ್ಲ ಪಾಡಿಲೆಯಂತೆ ನ್ಯಾಯಾರ್ಥದಲ್ಲಿ ಉತ್ತರಕೊಟ್ಟು ಸಮಾಧಾನಪಡಿಸಿದರು. "ನಿಮ್ಮ ದೇಶವು ಚಿಕ್ಕಪ್ರಾಂತವು ಆದುದರಿಂದ ನಿಮಗೆ ಪ್ರಾಂತಿಕ ಶಾಸನಮಂಡಳವನ್ನು ಕೊಟ್ಟಿರುವದೇ ಮಹದುಪಕಾರವು. ಆದುದರಿಂದ ನೀವು ಇಷ್ಟರಲ್ಲಿಯೇ ಹೆಚ್ಚಿನ ಹವ್ಯಾಸವನ್ನು ಹಿಡಿಯಬೇಡಿರಿ. ಜಮ್ಮಾ ಜಮೀನುಗಳು ಶಾಶ್ವತ ಕಂದಾಯದ ಜಮೀನುಗಳೆಂಬ ಬಗ್ಗೆ ಸಾಕಷ್ಟು ಆಧಾರಗಳಿರುವದಿಲ್ಲ. ನಿಮ್ಮ ಜಮ್ಮಾ ಜಮೀನುಗಳಿಗೆ ಅರ್ಧವರಿ ತೀರಿಗೆಯಿರುವದು. ಅದರಲ್ಲಿ ನಾವೇನು ವಿಶೇಷ ಹೆಚ್ಚು ಕಡಿಮೆ ಮಾಡಿರುವದಿಲ್ಲ" ಇವೇ ಮುಂತಾಗಿ ಪ್ರಾಯಿಸರಾಯ ಸಾಹೇಬರು ಹೇಳಿದರು. ಇಂಗ್ಲೀಷರಾಷ್ಟ್ರದ ರಾಜನೀತಿಯನ್ನು ಕುರಿತು ನೋಡಿರಿ. ಕರ್ನಾಟಕ ಮಹಾರಾಷ್ಟ್ರ ಮುಂತಾದವುಗಳನ್ನು ಬೇರೆ ಪ್ರಾಂತಗಳನ್ನಾಗಿ ವಿಭಾಗಿಸಿರಿ ಎಂದು ಕೇಳಿದರೆ ಆಯಾ ಪ್ರಾಂತಗಳಿಗೆ ಸ್ವತಂತ್ರ ಸರಕಾರಗಳನ್ನು ನಡಿಸಲು ಬಹಳ ಪೂರೈಸುವದಿಲ್ಲವೆಂದು ಒಂದು ಆಕ್ಷೇಪ ಇದೇ, ಕೊಡಗುದೇಶದವರು ನಮಗೆ ಸ್ವತಂತ್ರಪ್ರಾಂತವು ಬೇಕೆಂದರೂ, ಕೈಯಿಂದ ಖರ್ಚನ್ನು ಕೊಟ್ಟು ಸರಕಾರವು ಅದನ್ನು ಸ್ವತಂತ್ರವಾದ ಪ್ರಾಂತವನ್ನಾಗಿ ಇಡುತ್ತದೆ.

"ಜಯಕರ್ನಾಟಕ"

[ಕೊಡಗು ಪ್ರಾಂತದವರು ತಮಗೆ ಸ್ವತಂತ್ರಪ್ರಾಂತವು ಬೇಡವೆಂದು ಹೇಳುವುದಿಲ್ಲ. ಬದಲಿಗೆ ಇದನ್ನು ಸ್ವತಂತ್ರವಾದ ಪ್ರಾಂತ್ಯವನ್ನಾಗಿ ಇಡಲಿಕ್ಕೆ ಸರ್ಕಾರದವರು ಕೈಯಿಂದ ಖರ್ಚನ್ನು ಏನೂ ಕೊಡುವುದಿಲ್ಲ.

ಸಂ. "ಕೊಡಗು"]

1923 ನೇ ಇಸವಿ ಡಿಸೆಂಬರು ತಾರೀಖು 5 ರಲ್ಲಿ ನಡೆದ ಡಿಸ್ಟ್ರಿಕ್ಟ್ ಬೋರ್ಡಿನ ಜನರಲ್ ಮೀಟಿಂಗಿನ ವಿವರ.—

ಹಾಜರಿದ್ದವರು:—

1. ಮಿ|| ಸಿ. ಎ. ಸೂಟರ್, ಐ. ಸಿ. ಎಸ್. ಕಮಿಷನರು ಮತ್ತು ಡಿ. ಬೋರ್ಡ ಪ್ರಸಿಡೆಂಟರು.
2. ಮೇಜರ್ ಎಚ್. ಸಿ. ಫ್ರೇಸರ್ ಸಿವಿಲ್ ಸರ್ಜನ
3. ಮಿ. ಎ. ಎಫ್. ಮಿಂಚಿನ ಫಾರೆಸ್ಟ್ ಡಿಸ್ಟ್ರಿಕ್ಟ್ ಕನ್ಸರ್ವೇಟರು
4. ರಾ. ಸಾ. ಕೆ. ಚಂಗಪ್ಪ ಬಿ. ಎ. ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಮತ್ತು ಅ|| ಕಮಿಷನರ್
5. ಮಿ|| ಸಿ. ಆರ್. ಎಸ್. ರಿಚಾರ್ಡಸನ್ ಎಗ್ಸಿಕ್ಯುಟಿವ ಇಂಜಿನಿಯರ್
6. ಮಿ|| ಪಿ. ಜಿ. ಟಿಪ್ಪಿಂಗ್.
7. ಮಿ|| ಜಿ. ಆರ್. ಪರ್ನ
8. ಮಿ|| ಎನ್. ಐ. ಕಾಳಪ್ಪ, ದ. ಕೊಡಗಿನ ಸ್ಟೇಟಾರರು.
9. ಮಿ|| ಪಂದ್ಯಂಡ ಬೆಳ್ಯಪ್ಪ
10. ಮಿ|| ಕೋಟೆರ ಚಿಣ್ಣಪ್ಪ.
11. ಮಿ|| ನಾಮಂಗಳ ಕುಶಾಲಪ್ಪ
12. ಮಿ|| ನಿಡ್ಯ ಸುಬ್ಬಯ್ಯ

ಗೈರ್‌ಹಾಜರಾದವರು:—

1. ಮಿ|| ಕೋದಂಡ ಅಪ್ಪಯ್ಯ ರಾ|| ಬಾ||
2. ಮಿ|| ಪಾಲೇಕಂಡ ಚಂಗಪ್ಪ ಉ. ಕೊಡಗು ಸ್ಟೇಟಾರರು
3. ಮಿ|| ಪಟ್ಟಡ ಉತ್ತಯ್ಯ, ಸಮ್ಮೇಳನಗಳ ಸ|| ಅ|| ಇನ್ಸ್‌ಪೆಕ್ಟರು

ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸಿನ ಪ್ರತಿಗಳು ಮೆಂಬರುಗಳಿಗೆ ಕಳುಹಿಸಲ್ಪಟ್ಟದ್ದು ಓದಲಾಯಿತೆಂದು ಒಪ್ಪಿದರ.

ಮಳೆಗಾಲದಲ್ಲಿ ಹೊಳೆಯ ನೆರೆಯ ಸಮಯದಲ್ಲಿ ಜನರ ಪ್ರಯೋಜನಕ್ಕಾಗಿ ತುಂಬಾ ಸಹಾಯ ಕೊಟ್ಟದ್ದರಿಂದ ಬೇಮಂಗಲ ನೋಣಿಕಡುವಿನ ಕಂಟ್ರಾಕ್ಟ್‌ದಾರನಿಗೆ 35 ರೂ. ಕಂಟ್ರಾಕ್ಟ್ ಮೊಬಲಗಿನಿಂದ ವಜಾಕೊಡಬಹುದೆಂದು ಶಿಫಾರಸುಮಾಡಿ ಬರೆದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ತಾರೀಖು 23-10-23 ರ ಪತ್ರವು ಓದಲಾಯಿತು.

ಇದು ಒಪ್ಪಲಾಯಿತು.

ವಿರಾಜಪೇಟೆ ಟೋಲ್‌ಗೇಟ್ ಕಂಟ್ರಾಕ್ಟ್‌ದಾರನಿಗೆ ಕಂಟ್ರಾಕ್ಟ್ ಮೊಬಲಗಿನಲ್ಲಿ 100 ರೂ. ವಜಾಕೊಡಬಹುದೆಂದು ಡಿ. ಮೆಜಿಸ್ಟ್ರೇಟರು ತಾ. 8-10-23 ರಲ್ಲು ಬರೆದ ಪತ್ರವು ಓದಲ್ಪಟ್ಟಿತು.

ಇದು ಮಂಜೂರಾಯಿತು.

3. ಮನೆತೆರಿಗೆಯ ಬದಲಾವಣೆಯ ವಿಷಯ ಹೆಲ್ತ್ ಇನ್ಸ್‌ಪೆಕ್ಟರವರ ಹುಕುಮಿನ ವಿಷಯವಾಗಿ ಅವರ ಸೆಕ್ರೆಟರಿಯವರು ತಾ|| 15-10-23 ರಲ್ಲು ಬರೆದ ಮೆಮೊರಾಂಡಂ ಓದಲಾಯಿತು.

ಕಾಫಿತೋಟಗಳ ಸುಪರಿಂಟೆಂಡೆಂಟರುಗಳು, ಅಸಿಸ್ಟೆಂಟ್ ಸುಪರಿಂಟೆಂಡೆಂಟರುಗಳು ಮತ್ತು ಮೇನೇಜರುಗಳು ಮನೆತೆರಿಗೆಯಿಂದ ವಿನಾಯಿಸಲ್ಪಡಬಾರದೆಂದು ಮೆ|| ಪಾರ್ವಂಗಡ ಕುಶಾಲಪ್ಪನವರು ಸೂಚಿಸಿದನ್ನು ಮೆ|| ಪಂದ್ಯಂಡ ಬೆಳ್ಯಪ್ಪನವರು ಅನುಮೋದಿಸಿದರು

(1) ಇನ್‌ಕಮ್ ಟೇಕ್ಸ್ ಕೊಡುವವರು ಮನೆತೆರಿಗೆ ಕೊಡಬೇಕೆಂಬ ಠರಾವಿಗೆ ಏಳು ಜನರು ವಿರೋಧವಾಗಿಯೂ ನಾಲ್ಕುಜನರು ಪರವಾಗಿಯೂ ಓಟು ಕೊಟ್ಟದ್ದರಿಂದಲೇ ಈ ಠರಾವು ಮಂಜೂರಾಗಲಿಲ್ಲ

(2) ಮನೆತೆರಿಗೆಯನ್ನು ದರವನ್ನು ಬದಲಾಯಿಸುವ ವಿಷಯ ಬರುವ ಮೀಟಿಂಗಿಗೆ ಇಡಲ್ಪಟ್ಟಿತು

4. ಈ ಕೆಳಗೆ ಸೂಚಿಸಿದ ಬದಲಾವಣೆಯೊಂದಿಗೆ 1924-25 ರ ಡಿ ಬೋರ್ಡಿನ ಬಜೆಟ್ಟು ಮಂಜೂರುಮಾಡಲ್ಪಟ್ಟಿತು

ಉತ್ಪತ್ತಿ :—ಔಷಧಿಮಾರಾಟದಿಂದ	700 ರೂ.
ಖರ್ಚು :—ಔಷಧಿ ಮತ್ತು ಶಸ್ತ್ರಗಳ ಕ್ರಯ	5000 ರೂ.
ಗ್ರಾಮಾಂತರ ರಸ್ತೆಗಳಿಗೆ	9900 ರೂ
ದೋಣಿ ಮತ್ತು ಸೇತುವೆಗಳಿಗೆ	1350 ರೂ

ಡಿ. ಪಿ ಡಬ್ಲ್ಯು ವಿನ ಬಜೆಟ್ಟಿನಿಂದ ಈ ಕೆಳಗಿನ ಅಂಶಗಳು ತೆಗೆಯಲ್ಪಟ್ಟವು :—

ಸಿದ್ದಾಪುರದ ಆಸ್ಪತ್ರೆಯಲ್ಲಿ ಆಪರೇಷನ್ ರೂಮಿಗೆ	660 ರೂ.
ಸುಂಟಿಕೊಪ್ಪ ಸಿದ್ದಾಪುರ ರಸ್ತೆಯ 1 ನೇ ಮತ್ತು 2 ನೇ ಮೈಲುಗಳ ಕಟ್ಟೆಗಳಿಗೆ ಕಲ್ಲು ಕಟ್ಟುವುದು	1000 ರೂ
ಬಾಳೆಲೆ ದೊಡ್ಡಿ.	800 ರೂ
ಕೊಡ್ಲಿಪೇಟೆಯಲ್ಲಿ ಪಂಚಮರಿಗೆ ಒಂದು ಬಾವಿತೋಡುವುದು	1000 ರೂ
ಶನಿವಾರಸಂತೆ ಚಂಗಡಹಳ್ಳಿ ರಸ್ತೆಯ ಸೇತುವೆ ರಿಪೇರಿ.	440 ರೂ
	3900 ರೂ

(Sd) ಸಿ. ಎ ಸೂಟರ್.
(ಅಧ್ಯಕ್ಷರು).

ವರ್ತಮಾನ ಸಂಗ್ರಹ

ಒಳದೇಶ.

ಕೊಡಗು ಕೌನ್ಸಿಲಿಗೆ ಉಮೇದ್ವಾರರು ಕಳೆದ ತಾ. 27 ರಲ್ಲು ಪ್ರತಿಯೊಬ್ಬನು 250 ರೂ ಠೇವಣಾತಿ ಕಟ್ಟಿ ಮೆಂಬರುತನಕ್ಕೆ ಅಪ್ಲಿಕೇಶನ್ ಕೊಟ್ಟರು ಅವುಗಳನ್ನು ಸರಿಯಾದುವೊ ಎಂದು ತಾ. 29 ರಲ್ಲು ಅಜಮಾಯಿಸಿ ನೋಡಿ ಈ ಕೆಳಗಿನ ಮಹಾಶಯರು ಉಮೇದ್ವಾರರಾಗಿ ನಿಲ್ಲಬಹುದೆಂದು ಮಂಜೂರು ಮಾಡಿರುವರು. ವೀರರಾಜಪೇಟೆ-ನಾಡೋಕ್ಲು ಅಮ್ಮತ್ತಿ ಕಾನ್‌ಸ್ಟಿಟ್ಯುವೆನ್ಸಿಗೆ ಜಮ್ಮದವರ ಪರವಾಗಿ 1. ಮೆ|| ಬಿದ್ದಂಡ ಬೋಪೈಯ್ಯನವರು 2 ಮೆ|| ಬಲ್ಲಚಂಡ ಬೆಳ್ಯಪ್ಪನವರು 3. ಮೆ|| ಅಪ್ಪಾರಂಡ ಚಂಗಪ್ಪನವರು 4 ಮೆ|| ಕೊಟೆರ ಚಿಣ್ಣಪ್ಪನವರು 5. ಮೆ|| ಕೊಳುವಂಡ ತಿಮ್ಮಪ್ಪಯ್ಯನವರು, 6. ಮೆ|| ಕೋಣಿಯಣಿಯಂಡ ಸುಬ್ಬಯ್ಯನವರು, 7. ಮೆ|| ಪಂದ್ಯಂಡ ಬೆಳ್ಯಪ್ಪನವರು; ಜಮ್ಮೇತರರ (ಸಾಗಿಪರ) ಪರವಾಗಿ 1. ಮೆ|| ಎಸ್. ಎಮ್. ಪಿಂಟೋರವರು 2. ಮೆ|| ಖಲೀಲ್‌ಖಾನ್‌ರವರು. ಪೊನ್ನಂಪೇಟೆ ಶ್ರೀಮಂಗಲ ಕಾನ್‌ಸ್ಟಿಟ್ಯುವೆನ್ಸಿಗೆ ಜಮ್ಮದವರ ಪರವಾಗಿ 1. ಮೆ|| ಕೊಡಂದೆರ ಕುಟ್ಟಯ್ಯನವರು, 2. ಮೆ|| ಮಾಚಿಮಾಡ ಮಾಚಯ್ಯನವರು, 3 ಮೆ|| ಪಾರ್ವಂಗಡ ಕುಶಾಲಪ್ಪನವರು, 4. ಮೆ|| ಮನೆಯಪ್ಪಂಡ ಚಿಣ್ಣಪ್ಪನವರು, 5. ಮೆ|| ಕತ್ತಮನೆ ಗಣಪಮ್ಮಯ್ಯನವರು, 6 ಮೆ|| ಪುಚ್ಚಿಮಾಡ ಕಟ್ಟಪ್ಪನವರು; ಜಮ್ಮೇತರರ ಪರವಾಗಿ 1. ಮೆ|| ಸಿ ಎನ್. ವೆಂಕಪ್ಪಯ್ಯನವರು 2. ಮೆ|| ಟಿ ಎ ನಾಗರತ್ನಪ್ರಿಯವರು; ಮಡಿಕೇರಿ ಕಾನ್‌ಸ್ಟಿಟ್ಯುವೆನ್ಸಿಗೆ ಜಮ್ಮದವರ ಪರವಾಗಿ 1, ಮೆ|| ಕೋದಂಡ ಅಪ್ಪಯ್ಯನವರು, 2 ಮೆ|| ಕೊರವಂಡ ಪೊನ್ನಪ್ಪನವರು, 3 ಮೆ|| ಕರಂಬಾಡಿ ಸುಬ್ರಾಯನವರು, 4. ಮೆ|| ಪಾಲೇಕಂಡ ಮೇದಪ್ಪನವರು, 5. ಮೆ|| ಕೆಂಬಡ ತಂಡಮುಂದಣ್ಣನವರು; ಜಮ್ಮೇತರರ ಪರವಾಗಿ 1. ಮೆ|| ಬಿ ಶ್ರೀಪತಿರಾಯರು, 2. ಮೆ|| ಮುಸ್ತಫಾಖಾನ್‌ರವರು, ನಂಜರಾಯಪಟ್ಣ ಕಾನ್‌ಸ್ಟಿಟ್ಯುವೆನ್ಸಿಗೆ ಜಮ್ಮದವರ ಪರವಾಗಿ 1. ಮೆ|| ಮಂಡೇಟಿರ ಅಪ್ಪಯ್ಯನವರು, 2 ಮೆ|| ಚೌಡ್ಲು ಕಾಳಪ್ಪನವರು; ಜಮ್ಮೇತರರ ಪರವಾಗಿ 1 ಮೆ|| ನಿಡ್ತ ಸುಬ್ಬಣ್ಣಯ್ಯನವರು, 2 ಮೆ|| ಕೃಷ್ಣಮೂರ್ತಿಯವರು, ಒಟ್ಟು ಜಮ್ಮದವರ ಪರವಾಗಿ ಬೇಕಾಗಿರುವ 9 ಮೆಂಬರುತನಗಳಿಗೆ 20 ಉಮೇದುವಾರರೂ, ಜಮ್ಮೇತರರ ಪರವಾಗಿ ಬೇಕಾಗಿರುವ 4 ಮೆಂಬರುತನಗಳಿಗೆ 8 ಉಮೇದುವಾರರೂ ಚುನಾವಣೆಗೆ ನಿಂತಿರುವರು ಚುನಾವಣೆಯು ದೇಶದಲ್ಲೆಲ್ಲಾ ತಾ 15 ನೇ ಮಂಗಳವಾರ ನಡೆಯುವುದು.

ಚೆಂಬೆ ಬೆಳ್ಳೂರು ಗ್ರಾಮದಕಡೆ ದನಗಳ ಕಾಯಿಲೆಯು ಸ್ವಲ್ಪ ಸ್ವಲ್ಪ ಹರಡುತ್ತಿದೆಯೆಂದು ವರ್ತಮಾನ.

ಕಳೆದ ತಾರೀಕು 16 ರಲ್ಲು ವೀರರಾಜಪೇಟೆಯಲ್ಲಿ ಶ್ರೀಮತಿ ಕೊಳುವಂಡ ಅಕ್ಕಮ್ಮನವರ ಅಧ್ಯಕ್ಷತೆಯಲ್ಲಿ ವಾಣೀವಿಲಾಸ ಮಹಿಳಾಸಭೆಯೆಂಬ ಹೆಸರಿನಿಂದ ಸ್ತ್ರೀಯರ ಸಭೆಯೊಂದು ಸ್ಥಾಪಿಸಲ್ಪಟ್ಟಿದೆ ಇದು ಮಡಿಕೇರಿಯ ಮಹಿಳಾಸಭೆಯಂತೆ ಅಲ್ಪ ಆಯುಸ್ಸುಳ್ಳದ್ದಾಗದೆ ಚಿರಕಾಲ ಬಾಳಲೆಂದು ನಮ್ಮ ಆಶೆಯಾಗಿದೆ.

ಮೆ|| ಮಂಡೇಪಂಡ ಪಮ್ಮಯ್ಯನವರ ಮಗ ಮುತ್ತಣ್ಣನವರು ಡಿಸೆಂಬರು ತಾ. 24 ರಲ್ಲು ಕಿಕಿಮತಿಯಲ್ಲಿ ಒಂದು ಹೆಬ್ಬುಲಿಯನ್ನು ಗುಂಡು ಹೊಡೆದು ಕೊಂದೆ ಮರುದಿನ ಹುಲಿ ಮದುವೆ ಮಾಡಿದರೆಂದು ತಿಳಿಯಬರುತ್ತದೆ.

ನಾಲ್ಕು ನಾಡು ನೆಲಜಿ ಗ್ರಾಮದಲ್ಲಿರುವ ಡಿಸ್ಟ್ರಿಕ್ಟ ಬೋರ್ಡು ರಸ್ತೆಯ ರಿಪೇರಿ ಕೆಲಸವನ್ನು ಮೆ|| ನಾಪಂಡ ಮೊಣ್ಣಪ್ಪನವರು ಕಂಟ್ರಾಕ್ಟು ತೆಗೆದುಕೊಂಡು ತನ್ನ ಕೈಯಿಂದ ನಷ್ಟವಾದರೂ ಗಣಿಸದೆ ರಿಪೇರಿ ಕೆಲಸವನ್ನು ಬಹು ತೃಪ್ತಿಕರವಾಗಿ ಮಾಡಿಸಿರುವರೆಂದೂ, ಸ್ವಲ್ಪ ಮಟ್ಟಿಗೆ ಗ್ರಾಮಸ್ಥರು ಕೆಲಸಕ್ಕೆ ಸಹಾಯ ಕೊಟ್ಟರೆಂದೂ, ಇದನ್ನು ಬೇರೆ ಕಂಟ್ರಾಕ್ಟದಾರರೂ ಹಿಂಬಾಲಿಸಬೇಕೆಂದೂ ಒಂದು ಬಾತ್ಮಿ. ಹೀಗೆಯೇ ಹೊಸೂರು ಗ್ರಾಮದ ಮೆ|| ಮೊಳ್ಳೆರ ಚಂಗಪ್ಪನವರು ಆ ಊರಿನ ರಸ್ತೆಯ ರಿಪೇರಿ ಕೆಲಸವನ್ನು ಚೆನ್ನಾಗಿ ಮಾಡಿಸಿರುವರೆಂದೂ ತಿಳಿಯಬರುತ್ತದೆ ಅದರೆ ಅನೇಕ ಕಡೆಗಳಲ್ಲಿ ಇಂಥಾ ಕಂಟ್ರಾಕ್ಟುದಾರರು ತೃಪ್ತಿಕರವಾದ ಕೆಲಸ ಮಾಡಿಸದೆ ಲಾಭ ಹೊಂದಲು ಪ್ರಯತ್ನಿಸಿರುವರೆಂದು ಪುಕಾರುಗಳೂ ಇವೆ ಇಂಥಾ ಕೆಲಸಗಳಲ್ಲಿ ಲಾಭವನ್ನು ಯೋಚಿಸದೆ ಗ್ರಾಮದ ಹಿತವನ್ನು ಬಯಸಿ ಮೇಲೆ ಸೂಚಿಸಿದ ಮಹನೀಯರಂತೆ ನ್ಯಾಯವಾದ ಕೆಲಸಗಳನ್ನು ಕಂಟ್ರಾಕ್ಟುದಾರರು ಮಾಡಿಸುವರೆಂದಾಗಿ ನಂಬುತ್ತೇವೆ

ಕೌನ್ಸಿಲು ಚುನಾವಣೆಯ ಚಳವಳಿವು ಬಹು ರಭಸದಿಂದ ನಡೆಯುತ್ತಿದೆ ಪ್ರತಿದಿನವೂ ಮೋಟಾರುಕಾರುಗಳಲ್ಲಿ ಉಮೇದ್ವಾರರು ಸಂತೆಯಿಂದ ಸಂತೆಗೂ ಗ್ರಾಮದಿಂದ ಗ್ರಾಮಕ್ಕೂ ತಿರುಗುತ್ತ ಇರುವರು ಇದಕ್ಕಾಗಿಯೇ ಕೆಲವು ಉಮೇದ್ವಾರರು ಮೋಟಾರು ಕಾರುಗಳನ್ನು ಸಹ ಕೊಂಡುಕೊಂಡಿರುವರು

ಅನೇಕ ಕಡೆಗಳಲ್ಲಿ ಭತ್ತದ ಬೆಳೆಯ ಕುಯಿಲು ಕೆಲಸವು ಪ್ರಾರಂಭವಾಗಿದೆ ಮಳೆಯ ತೊಂದರೆಯೇನೂ ಕಂಡುಬರುವುದಿಲ್ಲ ಪ್ರತಿದಿನವೂ ಮಲಬಾರಿನಿಂದ ಆಳುಗಳು ಬರುತ್ತಲಿದ್ದರೂ ಕೂಡ ಆಳುಗಳ ಕ್ಷಾಮವು ಕಡಿಮೆಯಾಗಿರುವುದಿಲ್ಲವೆಂದು ಅನೇಕರು ಹೇಳುತ್ತಿರುವರು

ಹಿಂದೂದೇಶ

ಮಧ್ಯಪ್ರಾಂತ್ಯದ ಗವರ್ನರಾದ ಸರ್ ಫ್ರಾಂಕ್ ಸ್ಲೈಯವರು ಒಂದು ಪ್ರಾಂತಿಕ ಸ್ವರಾಜ್ಯ ಪಾರ್ಟಿಯ ಅಧ್ಯಕ್ಷರಾದ ಡಾಕ್ಟರ್ ಮೂರಿಜೆಯವರನ್ನು ಮಂತ್ರಿಪದವಿಯನ್ನು ವಹಿಸಿಕೊಳ್ಳುವಂತೆ ಕೇಳಿದರು. ಸ್ವರಾಜ್ಯಪಾರ್ಟಿಯ ಮೆಂಬರುಗಳ ಸಂಖ್ಯೆಯೇ ಆ ಪ್ರಾಂತ್ಯದ ನ್ಯಾಯವಿಧಾಯಕ ಸಭೆಯಲ್ಲಿ ಹೆಚ್ಚಾಗಿರುವುದು ಇದಕ್ಕೆ ಕಾರಣ ಈಗಿನ ಸರ್ಕಾರದವರ ಕೈಕೆಳಗೆ ಉದ್ಯೋಗವನ್ನು ಕೈಕೊಳ್ಳುವುದಿಲ್ಲವೆಂಬುದು ಸ್ವರಾಜ್ಯಪಾರ್ಟಿಯವರ ಧ್ಯೇಯವಾದುದರಿಂದ ಮಂತ್ರಿಪದವಿಯನ್ನು ವಹಿಸಿಕೊಳ್ಳಲಿಕ್ಕಾಗುವುದಿಲ್ಲವೆಂದು ಡಾ|| ಮೂರಿಜೆಯವರು ಜವಾಬುಕೊಟ್ಟಿರುವರು.

ಮದ್ರಾಸು ಪ್ರಾಂತಿಕ ಕೋಆಪರೇಟಿವ್ ವಾರ್ಷಿಕ ಮಹಾಸಭೆಯು ,, ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಯ ಉಪಾಧ್ಯಕ್ಷರಾದ ಮ|| ವಿ. ಕೆ ದೇವಧರ್‌ರವರ ಅಧ್ಯಕ್ಷತೆಯಲ್ಲಿ ತಾ|| ೨೩-೧೨-೨೩ ರಲ್ಲಿ ಮದ್ರಾಸಿನ ಪೆಲ್ಲಿಸ್ಲಿ ಕಾಲೇಜಿನ ಹಾಲಿನಲ್ಲಿ ನಡೆಯಿತು.

ಇಂಡಿಯನ್ ನೇಶನಲ್ ಲಿಬರಲ್ ಫೆಡರೇಶನಿನ ಮಹಾಸಭೆಯು ಕಳೆದ ತಾ|| ೨೬ ರಲ್ಲಿ ಪೂನಾ ಪಟ್ಟಣದಲ್ಲಿ ಪ್ರಾರಂಭವಾಯಿತು. ಡಾಕ್ಟರ್ ಸರ್ ಟೇಜ್ ಬಹದ್ದೂರ್ ಸಪ್ರುರವರು ಪ್ರೆಸಿಡೆಂಟರಾಗಿದ್ದರು.

ಬೊಂಬಾಯಿ ಪ್ರಾಂತ್ಯದ ಬೋರ್ಸಾದ್ ಡಿಸ್ಟ್ರಿಕ್ಟಿನಲ್ಲಿ ಹೆಚ್ಚಿನ ಪೋಲೀಸ್ ತೆರಿಗೆ ಕೊಡುವುದಿಲ್ಲವೆಂದು ಜನರು ಸತ್ಯಾಗ್ರಹವನ್ನು ಆಚರಿಸುತ್ತಿರುವರು ಈ ವಿಷಯದಲ್ಲಿ ಬಹಳ ಹಿಂಸೆಯು ನಡೆಯುತ್ತಿದೆ ಎಂದು ಸರ್ಕಾರದವರು ಹೇಳುತ್ತಿರುವುದೂ ನಿಜವಲ್ಲವೆಂತಲೂ, ಜನರು ಬಹಳ ಮಟ್ಟಿಗೆ ಅಹಿಂಸೆಯ ತತ್ವವನ್ನೇ ಮುಂದಿಟ್ಟು ಕೆಲಸಮಾಡುತ್ತಿದ್ದಾರೆಂದೂ, ಕೆಲವರು ತುಂಟರು ಮಾಡಿದ ಅಲ್ಪ ಹಿಂಸೆಯ ಕಾರ್ಯಗಳಿಗೆ ಎಲ್ಲರೂ ಒಂದು ದಿವಸ ಉಪವಾಸವನ್ನು ಸಹ ಆಚರಿಸಿದರೆಂತಲೂ ವರ್ತಮಾನ

ಅಂಬಾಲ ಡಿಸ್ಟ್ರಿಕ್ಟಿನಲ್ಲಿ ಸಿಕ್ಖರು ಒಂದು ದೊಡ್ಡ ಮೇಳಾವನ್ನು ಹೊರಡಿಸಿದರು, ಅವರು ಒಂದು ಸ್ಥಳದಲ್ಲಿ ಅಡಿಗೆಗಾಗಿ ಒಲೆತೋಡಲು ಕೋವಿ ಮದ್ದಿನ ಗುಂಡುಗಳು ಕಾಣಬಂದವಂತೆ. ಇವು ಅವರ ಗುರುವಾದ ಗುರುಗೋವಿಂದ ಸಿಂಗ್‌ರವರದ್ದಾಗಿರಬಹುದೆಂದು ಯೋಚಿಸಿ ಅದನ್ನು ಭದ್ರವಾಗಿ ಇಡಲು ಏರ್ಪಾಡು ಮಾಡಿರುವರಂತೆ

ಬಂಗಾಳ ಸರ್ಕಾರದ ಮಂತ್ರಿಗಳನ್ನು ನೇಮಿಸಬೇಕೆಂದು ಗವರ್ನರ್ ಲಾರ್ಡ್ ಲಿಟ್ಟನ್‌ರವರು ಕೇಳಿದಕ್ಕೆ ಸ್ವರಾಜ್ಯಪಾರ್ಟಿಯ ಮುಂದಾಳಾದ ಮ|| ಸಿ ಆರ್ ದಾಸ್‌ರವರು ಅದು ಆಗುವುದಿಲ್ಲವೆಂದು ಜವಾಬು ಕೊಟ್ಟದ್ದು ಸರಿಯಷ್ಟೆ ನಂತರ ಇಂಡಿಪೆಂಡೆಂಟ್ ಪಾರ್ಟಿಯ ಮುಂದಾಳಾದ ಮ|| ಬಿ ಚಕ್ರವರ್ತಿಯವರನ್ನು ಮಂತ್ರಿಯಾಗಬೇಕೆಂದು ಗವರ್ನರವರು ಕೇಳಿಕೊಂಡದಕ್ಕೆ ಎಲ್ಲಾ ಮಂತ್ರಿಗಳ ಪದವಿಯೂ ತಮ್ಮ ಪಾರ್ಟಿಯವರಿಗೇ ಕೊಡುವುದಾದರೆ ಅದಕ್ಕೆ ಒಪ್ಪುತ್ತೇನೆಂದು ಚಕ್ರವರ್ತಿಯವರು ಜವಾಬುಕೊಟ್ಟರು. ಇದು ಸಾಧ್ಯವಲ್ಲವೆಂದು ಬೇರೆ ಪಂಗಡಗಳಿಂದ ಮ|| ಸುರೇಂದ್ರನಾಥ್ ಮಲ್ಲಿಕ್‌ರವರನ್ನು ಮತ್ತು [illegible] ಎ ಕೆ ಫಜುಲ್ ಹಕ್‌ರವರನ್ನು ಮಂತ್ರಿಗಳಾಗಿ ನೇಮಿಸಿರುವರು

ಈಗ ಹಿಂದೂ ದೇಶದಲ್ಲೆಲ್ಲಾ ಕೌನ್ಸಿಲು ಚುನಾವಣೆ ಮುಗಿದು ಹೋಗಿರುವುದರಿಂದ ಇನ್ನು ಮುಂದೆ ಕಾಂಗ್ರೆಸಿನಲ್ಲಿ ಎರಡು ಪಂಗಡದ ಅವಶ್ಯಕತೆ ಇಲ್ಲವೆಂತಲೂ, ಸ್ವರಾಜ್ಯಪಾರ್ಟಿಯ ಮೆಂಬರುಗಳು ಕೌನ್ಸಿಲಿನಲ್ಲಿ ಅವರ ತತ್ವಕ್ಕೆ ವಿರೋಧವಾಗಿ ಎಂದಿಗೂ ನಡೆಯಲಿಕ್ಕಿಲ್ಲವಾಗಿಯೂ ಕಾಂಗ್ರೆಸ್ಸಿನವರೆಲ್ಲಾ ಒಗ್ಗಟ್ಟಾಗಿ ಹೊರಗೆ ಕಾಂಗ್ರೆಸ್ಸಿನ ಕೆಲಸವನ್ನು ನಡೆಸಿದರೆ ಸ್ವರಾಜ್ಯ ಪಾರ್ಟಿಯ ಮೆಂಬರುಗಳು ಇವರಿಗೆ ಒತ್ತಾಸೆಯಾಗಿ ಕೌನ್ಸಿಲಿನ ಒಳಗೆ ವರ್ತಿಸಿದರೆ ಹಿಂದೂ ದೇಶದವರ ರಾಜಕೀಯ ಉದ್ದೇಶವು ಬೇಗನೆ ಕೈಗೂಡಲು ಅನುಕೂಲವೆಂದು ಮೆ|| ಸಿ ಆರ್, ದಾಸ್‌ರವರು ಹೇಳಿರುವರು.

ಸಂಯುಕ್ತ ಸರ್ಕಾರದ ವಿದ್ಯಾ ಇಲಾಖೆಯ ಮತ್ತು ಸ್ಥಳೀಯ ಸ್ವರಾಜ್ಯದ ಮಂತ್ರಿಯಾಗಿದ್ದ ರಾಜಾಪರಮಾನಂದರವರು ಕಾಯಿಲೆಯಿಂದ ಅಸ್ವಸ್ಥರಾಗಿದ್ದು ತಾ. ೨೬-೧೨-೨೩ ರಲ್ಲು ಲಕ್ನೋದಲ್ಲಿ ಮೃತಪಟ್ಟರು.

ಡಿಸೆಂಬರು ತಾ. ೨೬ ರಲ್ಲು ಕೋಕನಾಡದಲ್ಲಿ ಮೌಲಾನ ಮಹಮ್ಮದ್ ಅಲಿಯವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ಸಿನ ಸಬ್‌ಜೆಕ್ಟ್ ಕಮಿಟಿ ಮೀಟಿಂಗು ನಡೆದು ಕಾಂಗ್ರೆಸ್ಸಿನ ತತ್ವದಲ್ಲಿ ಏನೊಂದೂ ಬದಲಾವಣೆ ಮಾಡಕೂಡದೆಂದು ತೀರ್ಮಾನವಾದದ್ದಲ್ಲದೆ ಮ|| ದಾಸ್‌ರವರು ಮತ್ತು ಮೆ|| ರಾಜಗೋಪಾಲಚಾರಿಯವರು ಕೌನ್ಸಿಲಿನ ವಿಷಯ ಒಂದು ಒಪ್ಪಂದಕ್ಕೆ ಬಂದಿರುವರು. ಈ ಒಪ್ಪಂದವು ಜನರಲ್ ಕಾಂಗ್ರೆಸ್ಸಿನಲ್ಲಿಯೂ ಮಂಜೂರಾಗುವ ಸಂಭವವಿದೆಯಂತೆ

ಕಳೆದ ತಾ ೨೭-೨೮ ರಲ್ಲು ಕೋಕನಾಡದಲ್ಲಿ ಪಂಡಿತ ಜವಹರಿಲಾಲ್ ನೆಹರುರವರ ಅಧ್ಯಕ್ಷತೆಯಲ್ಲಿ ಆಲ್ ಇಂಡಿಯಾ ಸ್ವಯಂ ಸೇವಕರ ಕಾನ್‌ಫರೆನ್ಸು ನಡೆಯಿತು.

ಡಿಸೆಂಬರು ತಾ. ೩೦ ರಲ್ಲು ಕೋಕನಾಡದಲ್ಲಿ ನಡೆದ ಅಖಿಲಭಾರತ ವಿದ್ಯಾರ್ಥಿಗಳ ಕಾನ್‌ಫರೆನ್ಸಿನ ಅಧ್ಯಕ್ಷಸ್ಥಾನವನ್ನು ವಹಿಸಲು ಪ್ರೊಫೆಸರ್ ಗಿಡ್ವಾನಿಯವರಿಗೆ ಬರಲು ಅನಾನುಕೂಲವಾದುದರಿಂದ ಮೆ|| ಸಿ. ಆರ್ ದಾಸ್‌ರವರು ಒಪ್ಪಿಕೊಂಡಿರುವರು.

ತಾ ೨೬ ೧೨-೨೩ ರಲ್ಲು ಬೆಂಗಳೂರಿನಲ್ಲಿ ನಡೆದ ಆಲ್ ಇಂಡಿಯಾ ಕ್ರಿಶ್ಚಿಯನ್ ಕಾನ್‌ಫರೆನ್ಸ್ ಅಧ್ಯಕ್ಷರಾದ ಮೆ|| ಕೆ. ಟಿ. ಪಾಲ್‌ರವರು ಕ್ರೈಸ್ತರೆಲ್ಲರೂ ದೇಶಸೇವೆಗೆ ಹೊರಡಬೇಕೆಂದು ಬಹು ಸ್ವಾರಸ್ಯವಾಗಿ ತಮ್ಮ ಭಾಷಣದಲ್ಲಿ ಸೂಚಿಸಿದರು.

ವಿದೇಶ

ಇಂಗ್ಲೆಂಡಿನ ಪಾರ್ಲಿಮೆಂಟಿಗೆ ಹೊಸಚುನಾವಣೆಯಲ್ಲಿ ಕನ್‌ಸರ್ವೇಟಿವ್ ಪಂಗಡದವರು 257 ಮೆಂಬರುಗಳೂ, ಲೇಬರ್ ಪಾರ್ಟಿಯವರು 192 ಜನರೂ, ಲಿಬರಲ್ ಪಾರ್ಟಿಯವರು 158 ಜನರೂ, ಇಂಡಿಪೆಂಡೆಂಟ್ ಮೆಂಬರುಗಳು 8 ಚುನಾಯಿಸಲ್ಪಟ್ಟಿರುವರು.

ಡಿಸೆಂಬರು 23 ರಲ್ಲು ಗ್ರೀಸ್ ದೇಶದ ರಾಜರು ಮತ್ತು ರಾಣಿಯವರಿಗೆ ರೂಮೇನಿಯ ದೇಶದ ರಾಜ ಮತ್ತು ರಾಣಿಯವರು ಅವರ ದೇಶದಲ್ಲಿ ಸ್ವಾಗತವನ್ನೀಡಿದರು

ಗ್ರೀಸಿನಿಂದ ಹೊರಡಿಸಲ್ಪಟ್ಟಿದ್ದ ಮುಂದಾಳು ವೆನಿಜೆಲಾಸ್‌ರವರನ್ನು ಹಿಂತಿರುಗಿ ಗ್ರೀಸಿಗೆ ಕರೆಯಬೇಕೆಂದೂ, ಅವರು ಬಂದು ಏನೊಂದೂ ಅಡ್ಡಿಯಿಲ್ಲದೆ ರಾಜಕೀಯ ಕೆಲಸವನ್ನು ಕೈಕೊಳ್ಳಬಹುದೆಂದೂ ಗ್ರೀಸಿನ ಮಂತ್ರಿಮಂಡಲಿಯವರು ತೀರ್ಮಾನಿಸಿರುವರು

ವೆನಿಜಲಸ್‌ರವರು ವಾಪಾಸು ಬರುವಾಗ್ಗೆ ಗ್ರೀಸ್ ರಾಜವಂಶದವರ ಬೀಳುವಿಕೆಯು ಪೂರ್ಣವಾಗದೆಯೆಂದು ತಿಳಿದುಕೊಳ್ಳಬೇಕೆಂದು ಅವರಿಗೆ ತಿಳಿಸಿರುವರು. ಅವರು ಗ್ರೀಸಿಗೆ ಜನವರಿ 22 ರಲ್ಲಿ ಬರುವರೆಂದೂ ತಾನು ದೇಶದ ಸಾಮಾನ್ಯ ಸ್ಥಿತಿಯನ್ನು ನೆಲೆಗೊಳಿಸಲಿಕ್ಕೆ ಬರುವುದಲ್ಲದೆ ಮಂತ್ರಿಮಂಡಲಿಯನ್ನು ಏರ್ಪಡಿಸಲಿಕ್ಕಲ್ಲವೆಂದು ಸೂಚಿಸಿರುವರು.

ಕರ್ನಲ್ ಗೊನಟಾಸ್‌ರವರು ಗ್ರೀಸಿನ ಮುಖ್ಯ ಮಂತ್ರಿತ್ವಕ್ಕೆ ರಾಜಿನಾಮೆ ಕೊಟ್ಟಿರುವರು

ಬ್ರಿಟಿಶ್ ಸರ್ಕಾರದವರು ಅಫ್ಘಾನಿಸ್ತಾನದ ಅದಿವಾಸಿಗಳಿಗೆ ಕಳುಹಿಸಿರುವ ಬೆದರಿಕೆಯ ಪತ್ರಿಕೆಗಳ ಪ್ರತಿಫಲವಾಗಿ ಆ ಜನರು ಸೇರಿ ಬ್ರಿಟಿಷರಿಗೆ ವಿರೋಧವಾಗಿ ಬಂದ. ವೆ ದಂಗೆಯನ್ನು ಮಾಡಿದರಂತೆ

ಹಾಲೆಂಡಿನ ರಾಣಿಯವರು ಬಲಸಂಗಡದ ಮುಂದಾಳತ್ವ ಮಂತ್ರಿಮಂಡಲಿಯನ್ನು ಏರ್ಪಡಿಸುವಂತೆ ಕೇಳಿರುವರು

ಕಪ್ಪುರಾಣಿಯು.

ಬಹಳ ಕಾಲಕ್ಕೆ ಹಿಂದೆ ಬಸವರಾಜನೆಂಬ ಒಬ್ಬ ಅರಸನಿದ್ದನು ಅವನಿಗೆ ಸುಂದರಿ ಎಂಬ ಒಬ್ಬ ಮಗಳಿದ್ದಳು. ಈ ಸುತ್ತಳ್ಳಿ ಹರಿಯುವ ಬಳ್ಳಿ ಆಗಿದ್ದಳು. ಅದರಿಂದ ಇವಳನ್ನು ಸುಂದರಿ ಎಂದು ಕರೆಯುತ್ತಿದ್ದರು

ಅರಮನೆಯ ಹತ್ತಿರದಲ್ಲಿಯೇ ಒಂದು ತೋಟವಿದ್ದು ಆ ತೋಟದೊಳಗೆ ಒಂದು ಸಣ್ಣ ಕೊಳ ಆ ಕೊಳದಲ್ಲಿ ಅನೇಕ ಕಪ್ಪೆಗಳೂ ಮೀನುಗಳೂ ಇದ್ದುವು ಕೊಳದ ನೀರು ಬಹಳ ತಿಳಿಯಾಗಿತ್ತು ನೀರಿನ ಮುಖದಲ್ಲಿ ಬಿದರೆ, ಕನ್ನಡಿಯಲ್ಲಿ ತೋರುವಂತೆ ನಿನ್ನ ಮುಖವು ತೋರುತಿತ್ತು

ಅದಿನ ಕೆಲವರ ಸಾಯಂಕಾಲ ಸಮಯದಲ್ಲಿ ಸುಂದರಿಯು ಕೊಳದ ಸಮೀಪದಲ್ಲಿ ಆಡುತ್ತಾ ಇದ್ದಳು ಆಡಲಿಕ್ಕೆ ಅವಳಿಗೆ ಚಿನ್ನದ ಚೆಂಡನ್ನು ಅವಳ ತಂದೆಯು ಕೊಟ್ಟಿದ್ದನು ಕೊಳದ ನೀರು ತಂಪು ಇದ್ದುದರಿಂದ ಅಲ್ಲಿಯೇ ಆಡಲಿಕ್ಕೆ ಅವಳಿಗೆ ಪ್ರೀತಿ ಅವಳು ತನ್ನ ಚೆಂಡನ್ನು ಮೇಲಕ್ಕೆ ಎಸೆದು ಆಡುತಿದ್ದಳು ಹೀಗೆ ಆಡುತಿದ್ದಾಗ ಚೆಂಡು ಕೊಳದೊಳಕ್ಕೆ ಉರುಳಿಹೋಯಿತು

ಚೆಂಡು ಉರುಳಿ ಕೊಳದ ತಳದಲ್ಲಿ ಅಡಗಿತು ಸುಂದರಿಯು ಕೆರೆಯ ಸಮೀಪದಲ್ಲಿ, ಮತ್ತು ಮೆಟ್ಟಿಲುಗಳ ಸಂದಿನಲ್ಲಿ, ಹುಡುಕಿದಳು ಅದು ಅವಳಿಗೆ ಕಾಣಲಿಲ್ಲ ಕೆರೆಯ ಒಳಕ್ಕೆ ಬಗ್ಗಿ ಬಗ್ಗಿ ನೋಡಿದಳು ಚೆಂಡು ಕಾಣಿಸಿಕೊಳ್ಳಲೆ ಇಲ್ಲ ಅದು ಆಳವಾದ ನೀರಿನಲ್ಲಿದೆ ಹೇಗೆ ಕಂಡೀತು !

"ಚೆಂಡು ಹೋಯಿತಲ್ಲಾ ! ಚೆಂಡು ಹೋಯಿತಲ್ಲಾ" ಎಂದು ಗಟ್ಟಿಯಾಗಿ ಸುಂದರಿಯು ಅಳುತ್ತಿದ್ದಳು ಅವಳ ಗಂಟಲು ಆರ್ಭಟಕ್ಕೆ ಒಡೆದುಹೋಗುವುದೋ ಎನ್ನುವಂತೆ ತೋರುತ್ತಿತ್ತು "ಅಯ್ಯೋ ! ನನ್ನ ಚೆಂಡನ್ನು ಯಾರಾದರೂ ತಂದುಕೊಟ್ಟರೆ ಅವರಿಗೆ ನನ್ನ ಒಡ್ಡಿಣಿ, ನನ್ನ ನಗನಾಣ್ಯ ಇವೆಲ್ಲಾ ಕೊಡುವೆನು ; ನನ್ನಲ್ಲಿ ಏನೇನು ಉಂಟೋ ಅದೆಲ್ಲಾ ಕೊಡುವೆನು" ಎಂದು ಕೂಗಿ ಹೇಳಿದಳು

ಹೀಗೆ ಹೇಳಿದ್ದನ್ನು ಕೇಳಿ ಒಂದು ದೊಡ್ಡ ಕಪ್ಪೆಯು ಕೊಳದಿಂದ ಮೇಲಕ್ಕೆ ಬಂದು 'ಅಮ್ಮಾ ! ನೀನು ಏಕೆ ಹೀಗೆ ಕೂಗುತ್ತೀಯೆ ನಿನಗೇನು ಆಯಿತು ಹೇಳು" ಎಂದು ಸುಂದರಿಯನ್ನು ವಿಚಾರಿಸಿತು

ಅದಕ್ಕೆ ಸುಂದರಿಯು "ಅಯ್ಯೋ ! ಓ ಕಪ್ಪೆಯೇ ! ನಿನ್ನಿಂದೇನು ಆದೀತು, ನನ್ನ ಚಿನ್ನದ ಚೆಂಡು ಈ ಕೊಳದೊಳಗೆ ಬಿದ್ದಿದೆ ನೀನು ಅದನ್ನು ತೆಗೆಯುವೆಯಾ ?" ಎಂದಳು

ಆಗ ಕಪ್ಪೆಯು "ಚಿಂತೆಯಿಲ್ಲ, ನೀನು ಹೆದರಬೇಡ ಕಣ್ಣೀರು ಬರಿಸಿಕೊಳ್ಳಬೇಡ ನಾನು ನಿನ್ನ ಚೆಂಡನ್ನು ತಂದು ಕೊಡುವೆನು ಆದರೆ ನೀನು ನನಗೆ ಏನು ಕೊಡುವಿಯಾ" ಎಂದುಕೇಳಿತು

ಅದಕ್ಕೆ ಸುಂದರಿಯು "ಅದಕ್ಕೇನು ! ನಿನಗೆ ಬೇಕಾದುದನ್ನು ಕೇಳಿ ತೆಗೆದುಕೋ, ನನ್ನ ಒಡ್ಡಿ ಬಿರನ್ನ ನಗನಾಣ್ಯ ಇವೆಲ್ಲಾ ಕೊಡುವೆನು ; ನನ್ನಲ್ಲಿ ಏನೇನು ಉಂಟೋ ಅದೆಲ್ಲಾ ಕೊಡುವೆನು" ಎಂದಳು

ಆಗ ಕಪ್ಪೆಯು "ನನಗೆ ನಿನ್ನ ಚಿನ್ನ ಬೆಳ್ಳಿ ಮುತ್ತು ಮಾಣಿಕ್ಯ ಬೇಕಿಲ್ಲ, ನಿನ್ನ ಒಡ್ಡಿಣಿ ಬೇಡ, ನಿನ್ನ ಕರುಣೆಯು ನನ್ನ ಮೇಲಿದ್ದರೆ ಸಾಕು ನಾನು ನಿನ್ನ ಜತೆಯಲ್ಲಿರುವ ಸಾಕು, ನೀನು ತಿನ್ನುವ ತಿಂಡಿ ನನಗೆ ಸಿಕ್ಕಿದರೆ ಸಾಕು ಮತ್ತು ನಿನ್ನ ಹಾಸಿಗೆಯ ಮೇಲೆ ಮಲಗಬೇಕೆಂದು ನನಗೆ ಆಸೆ ಇದಕ್ಕೆಲ್ಲಾ ನೀನು ಒಪ್ಪುವುದಾದರೆ ನಾನು ನಿನ್ನ ಚೆಂಡನ್ನು ನಿನಗೆ ತಂದುಕೊಡುವೆನು" ಎಂದಿತು

ಸುಂದರಿಗೆ ಕಪ್ಪೆಯ ಮಾತನ್ನು ಕೇಳಿ ಧೈರ್ಯ ಬಂತು "ನೀನು ನನ್ನ ಚೆಂಡನ್ನು ತಂದುಕೊಟ್ಟರೆ, ನೀನು ಕೇಳಿದ್ದನ್ನೆಲ್ಲಾ ಕೊಡುವೆನು" ಎಂದು ಅವಳು ನುಡಿದಳು

ನಂತರ ಸುಂದರಿಗೆ ಸ್ವಲ್ಪ ಅನುಮಾನವಾಗಿ ಕೇಳಿತು "ಕಪ್ಪೆಯು ಎಂಥ ಕುರೂಪಿ, ಇದು ಏನೆಲ್ಲಾ ಹೇಳುತ್ತಿದೆ ನನ್ನ ಚೆಂಡನ್ನು ಇದು ತಂದು ಕೊಡಬಲ್ಲದೇ ? ಇರಲಿ, ಇದು ಚೆಂಡನ್ನು ತರುವುದಾದರೆ ! ನೋಡುವೆನು" ಎಂದು ಸುಮ್ಮನೆ ಮಾತಾಡಿಕೊಂಡಳು

ಸುಂದರಿಯು ಮಾತುಕೊಟ್ಟ ನಂತರ, ಕಪ್ಪೆಯು ಕೊಳದೊಳಕ್ಕೆ ದುಮುಕಿತು, ಅದರ ತಳಕ್ಕೆ ಮುಟ್ಟಿತು ಚೆಂಡು ಹೊತ್ತಿನ ಮೇಲೆ ತನ್ನ ಬಾಯಿಯಲ್ಲಿ ಚೆಂಡನ್ನು ಹಿಡಿದುಕೊಂಡು ಮೇಲಕ್ಕೆ ಬಂದು "ಸುಂದರಿ ! ಇಗೋ ನಿನ್ನ ಚೆಂಡು, ಇದನ್ನು ತೆಗೆದುಕೋ" ಎಂದು ಹೇಳಿ ಕಳಗೆ ಇಟ್ಟಿತು

ಚೆಂಡು ನೀರಿನಿಂದ ಹೊರಕ್ಕೆ ಬಂತು ಸುಂದರಿಗೆ ಬಹಳ ಸಂತೋಷವಾಯಿತು ಕೂಡಲೆ ಆ ಚೆಂಡನ್ನು ಹೆಕ್ಕಿಕೊಂಡು, ಒಂದು ಮಾತನ್ನು ಕಪ್ಪೆಗೆ ಹೇಳದೆ, ಗುಡು ಗುಡನೆ ತನ್ನ ಮನೆಗೆ ಓಡಿಹೋದಳು

ಕಪ್ಪೆ ಗಾಬರಿಯಾಯಿತು "ಸುಂದರಿ ! ಸುಂದರಿ ! ನಿಲ್ಲು ನಿಲ್ಲು, ನಾನು ನಿನ್ನೊಡನೆ ಬರುವೆನು ನಿನ್ನ ಹಾಗೆ ಓಡುವುದಕ್ಕೆ ನಾನು ಶಕ್ತನಲ್ಲ, ನೀನು ನನ್ನನ್ನು ನಿನ್ನ ಸಂಗಡ ಕರೆದುಕೊಂಡು ಹೋಗುತ್ತೇನೆಂದು ಹೇಳಿಲ್ಲವೇ ? ಮೆಲ್ಲನೆ ಇಬ್ಬರೂ ಹೋಗೋಣ" ಎಂದು ಕಪ್ಪೆಯು ಕೂಗಿ ಹೇಳಿತು ಸುಂದರಿಯು ಕೇಳಿಸದವಳಂತೆ ಓಡಿಹೋದಳು

ನಂತರದ ದಿನ ಆದಿತ್ಯವಾರ ಸುಂದರಿಯು, ಅವಳ ಅಕ್ಕಂದಿರೂ, ತಾಯಿತಂದೆಗಳೂ ಊಟಕ್ಕೆ ಕುಳಿತಿದ್ದರೆ ಮೆಟ್ಟಲಿನ ಮೇಲೆ ಸಪ್ಪಳವಾಯಿತು ಕಪ್ಪೆಯು ಹತ್ತಿಕೊಂಡು ಬಂದು ಮನೆಗೆ ಬಂದು "ಸುಂದರಿ ! ಸುಂದರಿ ! ಬಾಗಿಲು ತೆರೆ ! ನೀನು ನನ್ನೊಡನೆ ಕೊಳದ ಹತ್ತಿರ ಮಾತುಕೊಟ್ಟೆಯಲ್ಲ, ಒಳಗೆ ಬರಬಹುದೇ ! ನೀನು ಕೊಟ್ಟ ಮಾತು ಸುಳ್ಳಾಯಿತೇ ? ಹೊರಗೆ ಬಾ ! ನನ್ನನ್ನು ಒಳಕ್ಕೆ ಕರೆದುಕೊಂಡು ಹೋಗು" ಎಂದು ಹೇಳುತ್ತಾ ಬಾಗಿಲನ್ನು ತಟ್ಟಿತು

ಸುಂದರಿಯು ಕೂಡಲೆ ಬಂದು ಬಾಗಿಲು ತೆರೆದಳು "ಓಹೋ ! ಕಪ್ಪೆ ! ಇದೇ ಬಾಗಿಲನ್ನು ತಟ್ಟಿದ್ದು. ಯಾರೋ ಎಂದು ನಾನು ಎಣಿಸಿದ್ದೆ ನೀನು ಇಲ್ಲಿಗೆ ಯಾಕೆ ಬಂದೆ? ಹಾಕಿಹೋಗು" ಎಂದು ಹೇಳಿ, ಬಾಗಿಲನ್ನು ಜೋರಾಗಿ ಮುಚ್ಚಿ ಒಳಕ್ಕೆ ಹೋದಳು

ಅರಸನು ತನ್ನ ಮಗಳನ್ನು ನೋಡಿ "ಸುಂದರಿ ! ನಿನಗೇಕೆ ಇಷ್ಟು ಭಯ" ಎಂದನು ಅದಕ್ಕೆ ಸುಂದರಿಯು "ನಿನ್ನೆ ನಾನು ಕೊಳದ ಸಮೀಪದಲ್ಲಿ ಆಡುತ್ತಾ ಇದ್ದೆ ಆಗ ನನ್ನ ಚೆಂಡು ಕೊಳದೊಳಕ್ಕೆ ಬಿತ್ತು ಒಂದು ಕಪ್ಪೆಯು ನನ್ನ ಚೆಂಡನ್ನು ತಂದು ಕೊಟ್ಟಿತು. ಅದು ನನ್ನೊಂದಿಗೆ ಇರಬೇಕೆಂದು ಮಾತುಕೊಟ್ಟಿದ್ದೆನು ಅದು ಕೊಳವನ್ನು ಬಿಟ್ಟು ಎಂದಿಗೂ ಬರಲಾರದೆಂದು ನಾನು ನಂಬಿದ್ದೆ ಈಗ ಅದು ಬಾಗಿಲಿಗೆ ಬಂದು, ಬಾಗಿಲನ್ನು ತಟ್ಟುತ್ತಾ ಇದೆ" ಎಂದಳು

ಸುಂದರಿಯು ತಂದೆಗೆ ಹೀಗೆ ಹೇಳುತ್ತಿರುವಾಗ ಪುನಃ ಕಪ್ಪೆಯು ಈ ನುಡಿಯು ರಾಜನಿಗೆ ಕೇಳಿಸಿತು "ಸುಂದರಿ ! ಸುಂದರಿ ! ಬಾಗಿಲು ತೆರೆ ನೀನು ನನ್ನೊಡನೆ ನನ್ನ ಕೊಳದ ಹತ್ತಿರ ಬಿಟ್ಟು ಓಡಬಹುದೇ ? ನೀನು ಕೊಟ್ಟಮಾತು ಸುಳ್ಳಾಯಿತೇ ? ಹೊರಗೆ ಬಾ ! ನನ್ನನ್ನು ಒಳಕ್ಕೆ ಕರೆದುಕೊಂಡು ಹೋಗು"

ಕಪ್ಪೆಯನ್ನು ರಾಜನು ಆಲಿಸಿ "ಮಗಳೇ ? ನೀನು ಹೇಳಿದಂತೆ ನಡೆ ? ಮಾತಿಗೆ ತಪ್ಪಬೇಡ ಮಾತಿಗೆ ತಪ್ಪಿದರೆ ನಿನ್ನನ್ನು ಇನ್ನು ಮುಂದೆ ಯಾರೂ ನಂಬುವುದಿಲ್ಲ , ಬೇಗನೆ ಕಪ್ಪೆಯನ್ನು ಒಳಕ್ಕೆ ಕರೆ" ಎಂದು ಹೇಳಿದನು ಕೂಡಲೆ ಸುಂದರಿಯು ಹೋಗಿ ಬಾಗಿಲು ತೆರೆದಳು , ಕಪ್ಪೆಯು ಒಳಕ್ಕೆ ಬಂತು

ಸುಂದರಿಯು ಕುಳಿತು ಊಟಮಾಡುತ್ತಿದ್ದ ಎಲೆಯ ಹತ್ತಿರ ಬಂದು ಕುಳಿತು ಮೇಜಿನ ಮೇಲೆ ಮಹಾರಾಜರ ತಿಂಡಿಗಳು ಬಡಿಸಿದ್ದವು ಕಪ್ಪೆಯು ಅದರ ಹತ್ತಿರಕ್ಕೆ ಹೋಗಿ "ನನ್ನನ್ನು ನಿನ್ನ ಕುರ್ಚಿಯ ಮೇಲೆ ಕೂರಿಸು" ಎಂದು ಹೇಳಿತು ಸುಂದರಿಯು ಕಪ್ಪೆಯನ್ನು ಎತ್ತಿ ತನ್ನ ಕುರ್ಚಿಯ ಮೇಲೆ ಕೂರಿಸಿದಳು ಕಪ್ಪೆಯು "ನನಗೆ ಅನ್ನಬೇಕು ಆಗೋ ಆ ಎಲೆಯನ್ನು ತಿನ್ನಿಸು" ಎಂದು ಹೇಳಿತು

ಹೊಟ್ಟೆ ತುಂಬುವಂತೆ ಕಪ್ಪೆಯು ತಿಂದಿತು ಕಪ್ಪೆಗೆ ತಿಂದು ನಿದ್ರೆಬಾರದಾಗಿ "ಸುಂದರಿ ! ನನ್ನನ್ನು ಮಲಗಿಸುತ್ತೀಯ ನಿನ್ನ ಹಾಸಿಗೆಯ ಮೇಲೆ ಮಲಗಿಸು ನಾನು ಸ್ವಲ್ಪ ನಿದ್ರೆ ಮಾಡುವೆನು" ಎಂದಿತು

ಸುಂದರಿಗೆ ಈ ನುಡಿಯನ್ನು ಕೇಳಿ ಬಹಳ ಕೋಪ ಬಂತು ಆದರೂ ಕಪ್ಪೆಯನ್ನು ಎತ್ತಿಕೊಂಡು ಹೋಗಿ ತನ್ನ ಹಾಸಿಗೆಯಲ್ಲಿ ಮಲಗಿಸಿದಳು ಕಪ್ಪೆ ಇಡೀ ರಾತ್ರಿ ಸುಂದರಿ ಜತೆಯಲ್ಲಿ ಸುಖವಾಗಿ ಮಲಗಿತ್ತು

ಮುಂಜಾನೆಗೆ ಎದ್ದು ಮನೆಯಿಂದ ಹೊರಕ್ಕೆ ಹೊರಟುಹೋಯಿತು. ಆಗ ಸುಂದರಿಗೆ ಬಹಳ ಸಂತೋಷವಾಯಿತು "ಆ ಹೇಸಿಗೆ ಕಪ್ಪೆಯೊಡನೆ ಮಲಗಿ ನನಗೆ ಬಹಳ ಬೇಸರವಾಗಿತ್ತು ಹೇಗೂ ಅದು ನನ್ನ ಮನೆಯಿಂದ ಹೋಯಿತಲ್ಲಾ ! ಸಾಕು ನನಗೆ ಈಗ ತುಂಬ ಸಂತೋಷ" ಎಂದು ಅದಿನ ಸುಖವಾಗಿ ಇದ್ದಳು

ತಿರುಗಿ ಸಾಯಂಕಾಲಕ್ಕೆ ಕಪ್ಪೆಯು ಬಂದೆ ಬಂತು. ಆದರೆ ಸುಂದರಿಯು ತಾನುಕೊಟ್ಟ ಮಾತಿಗೆ ಸರಿಯಾಗಿ ನಡೆಯಬೇಕು ಇಲ್ಲವಾದರೆ ತಂದೆಯು ಸುಮ್ಮನಿರಲಾರನು ಎಂದು ತಿಳಿದು ಕಪ್ಪೆಯ ಸೇವೆಯನ್ನು ನಡೆಸುತ್ತಿದ್ದಳು ಅವಳು ಮೂರುದಿನಗಳ ತನಕ ಕಪ್ಪೆಯ ಸೇವೆ ನಡೆಸಿದಳು

ನಾಲ್ಕನೆದಿನದ ಹೊತ್ತಾರೆ ಕಪ್ಪೆಯು ಮಾಯವಾಗಿ ಒಬ್ಬರಾಜನು ಬಂದು ನಿಂತನು ಯುವರಾಜನು ಸುಂದರಿಗೆ ,, ನಾನು ಒಬ್ಬರಾಜನ ಮಗನು ಒಬ್ಬ ಕಟ್ಟಿನಸ ದೇವತೆಯು ನಾನು ಕಪ್ಪೆಯಾಗಬೇಕೆಂದು ಶಾಪಕೊಟ್ಟಳು ಆಕೂಡಲೇ ನಾನು ಕಪ್ಪೆಯಾದನು ಮತ್ತು ಯಾವಾಗ ರಾಜನ ಮಗಳೊಬ್ಬಳು ನನ್ನನ್ನು ಅರಮನೆಗೆ ಕರಕೊಂಡುಹೋಗಿ, ಮೂರುರಾತ್ರಿ ತನ್ನ ಹಾಸಿಗೆಯಲ್ಲಿ ಮಲಗಿಸುವಳೋ ಆಗ ನನಗೆ ಮುಂದಿನ ರೂಪ ಬರಲಿ ಎಂದು ಹೇಳಿ ಹೊರಟುಹೋದಳು ,, ಎಂದನು.

ಈ ಸಮಾಚಾರವು ಬಸವರಾಜನಿಗೆ ತಿಳಿಯಿತು. ಅವನಿಗೆ ಬಹಳಸಂತೋಷವೂ ಆಯಿತು ಅನಂತರ ಹೆಚ್ಚು ಹೇಳ ಬೇರ್ಪಡಿಸಿ ಸುಂದರಿಗೂ ಆ ಯುವರಾಜನಿಗೂ ಲಗ್ನ ನಡೆಸಿದನು ಯುವರಾಜನು ತನ್ನ ಹೆಂಡತಿಯಾದ ಸುಂದರಿಯನ್ನು ಕಟ್ಟಿಕೊಂಡು ತನ್ನ ಊರಿಗೆ ಹೋದನು

ಲಗ್ನಪತ್ರಿಕೆಯಲ್ಲಿ ,, ಸುಂದರಿಯನ್ನು ಕಪ್ಪೆರಾಯನು ಮದುವೆಯಾಗುವನು ಎಂದು ಬರೆದಿದ್ದಕಾರಣ, ಯುವರಾಜನಿಗೆ ಕಪ್ಪೆರಾಯ ಎಂಬ ಹೆಸರು ಬಂತು.

FIRST APPEAL

ದೇಶಭಾಂಧವರೇ

ಸ್ವಶಕ್ತಿ, ಸ್ವರಾಜ್ಯ ಚಳವಳಿಗಳು ಇಂಡಿಯಾ ದೇಶದಲ್ಲಿ ಹೆಚ್ಚಾಗಿ ಬೇರೂರುವ ಮೊದಲೇ ಆ ಮನ್ನಕೆ ಅವು ಮಹನೀಯರುಗಳು ಈ ನೇಶನಲ್ ಶಾಲೆಯನ್ನು ಏರ್ಪಡಿಸಿದ್ದಾರೆ ಈಗ ಅದು ಹದಿನೆಂಟು ವರುಷಪ್ರಾಯದಲ್ಲಿದೆ ಸ್ವದೇಶಾಭಿಮಾನದ ಈ ಹದಿನೆಂಟು ವರುಷಗಳಲ್ಲಿ ಬೆಳೆಯುತ್ತಾ ಬಂದಿರುವುದು ನೋಡಿದರೆ ಈ ಶಾಲೆಯು ಉನ್ನತಸ್ಥಿತಿಯಲ್ಲಿ ಇರಬೇಕಾಗಿದೆಯೆಂದು ಊಹಿಸಬೇಕಾಗಿದೆ ಆದರೆ ಈ ಚಳವಳಿಯನ್ನು ಈ ಶಾಲೆಯು ಹಿಂಬಾಲಿಸಿದ್ದಂತೆ ತೋರುವುದಿಲ್ಲ ರಾಷ್ಟ್ರೀಯ ಶಾಲೆಗಳು ಮತ್ತು ಆಲಯಗಳು ದೇಶಾಭಿವೃದ್ಧಿಗೆ ಮುಖ್ಯವಾದುದೆಂದು ಮತ್ತು ಮೊದಲನೆ ಮೆಟ್ಟಿಲು ಎಂದು ನನಗೆ ತೋರಿದದರಿಂದ ನನ್ನ ಸ್ವಯಿಚ್ಛೆಯ ದೇಶಸೇವೆ ಮಾಡಬೇಕೆಂದು ಈ ಎಳೆಯ ಕೆಲಸಕ್ಕೆ ಕೈ ಹಾಕಿದೆನು ದೇಶದ ಒಬ್ಬ ಯುವಕನು ರಾಷ್ಟ್ರೀಯ ಶಾಲೆಯಲ್ಲಿ ತಿರುಗಿ ಮಹಾ ಶಾಲೆಯ ಕಾರ್ಯವನ್ನು ಕೈಕೊಂಡಲ್ಲಿ ಈ ಪ್ರೋತ್ಸಾಹದಿಂದ ಶಾಲೆಯು ವೃದ್ಧಿಯಾದೀತೆಂದು, ದೇಶ ಭಾಂಧವರು ಹೆಚ್ಚಿನ ಉತ್ಸಾಹ ಕೊಡುವರೆಂದು ಭಾವಿಸಿದಾಯಿತು ದೇಶ ಭಕ್ತ ಶಿರೋಮಣಿಗಳು ದೇಶದ ಅನೇಕ ಶಾಲೆಗಳಿಗೆ ಪ್ರೋತ್ಸಾಹ ಕೊಡುವುದರ ಎಳ್ಳಷ್ಟು ಪಾಲು ಈ ಉನ್ನತ ಶಾಲೆಗೆ ಕೊಟ್ಟದ್ದಲ್ಲಿ ಶಾಲೆಯು ಈಗಿನ ಸ್ಥಿತಿಯಲ್ಲಿ ಇರುತ್ತಿರಲಿಲ್ಲ ಇತ್ತೀಚೆಗೆ ಶಾಲೆಯ ಅಭಿವೃದ್ಧಿಯು ಅವಶ್ಯಕವಲ್ಲವೋ ಎಂಬ ಚರ್ಚೆಯನ್ನು ಮಾಡಿ ನೋಡಿದೆನು ಹಿಂದೂಸ್ಥಾನದ ಶಿರೋಮಣಿಗಳ ಆಲೋಚನೆಯನ್ನು ಕೇಳಲಾಯಿತು ಯಾವ ಚಳವಳಿಯಿಂದಲೂ ರಾಷ್ಟ್ರೀಯ ಶಾಲೆಗಳ ಚಳವಳಿಯೇ ಬಹು ಮುಖ್ಯವಾದುದೆಂದು ಸಾರಿದರು ನಮ್ಮಲ್ಲಿ ಯಾವ ಚಳವಳಿಯೂ ಯಾಕೆ ಸರಿಯಾಗಿ ವೃದ್ಧಿಗೊಳಲಿಲ್ಲವೋ ಎಂಬುದನ್ನು ಈ ಚಿಕ್ಕ ಪತ್ರಿಕೆಯಲ್ಲಿ ವಿವರಿಸುವುದು ಅವಶ್ಯಕವಾಗಿ ತೋರುವುದಿಲ್ಲ. ದೇಶ ಭಾಂಧವರೇ ಯಾವ ಚಳವಳಿ ಫಲಿತಾಂಶವು ವಿವಿ ಸಮಾಚಾರಗಳಲ್ಲೇ ಪ್ರತಿಬಿಂಬಿಸುವುದಿಲ್ಲ ಚಳವಳಿಗಳನ್ನು ಕೈಕೊಂಡ ಮಹಾನಿಯರು ಅದರ ಫಲಿತಾಂಶವನ್ನು ಅನುಭವಿಸಿ ಜೀವಿಸಿರುವರು ದೊಡ್ಡ ಕಾರ್ಯಗಳಲ್ಲಿ ಕಮ್ಮಿಯಾಗಿದ್ದಾಗ ಆದರೆ ಆ ಥಾ ಚಳವಳಿಗಳನ್ನು ಬೆಳೆಸಿಕೊಳ್ಳತಕ್ಕವುಗಳನ್ನು ಕೈಕೊಳ್ಳಲು ಯೋಗ್ಯರಾದ ಜನಾಂಗವನ್ನು ತಯಾರಿಸುವುದು ದೇಶವಾಸಿಗಳ ಕರ್ತವ್ಯವಾಗಿದೆ ಹೀಗೆ ಮಾಡದಿದ್ದರೆ ಮೆಲಗಾಲದ ಪ್ರವಾಹವನ್ನು ಯೋಜಿಸದೆ ಬೇಸಿಗೆ ಕಾಲಕ್ಕೆ ಹೊಳೆಗೆ ಸೇತುವೆ ಕಟ್ಟಿದಂತಾಗುತ್ತದೆ ಇಂಥಾ ಅಭಿಪ್ರಾಯಗಳನ್ನು ಈ ಮೊದಲೇ ಸೂಚಿಸಬೇಕೆಂದಿದ್ದೆನು ಶ್ರೀ ಭಗವಂತನಿಗೂ ಸಹ ಸ್ವಸ್ಥ ಬೋಧನಾರ್ಥಕವಾದ ಕಾರ್ಯ ಮಾಡತಕ್ಕದ್ದೆಂದು ಅ

ಕೆಳ ಅಭಿಪ್ರಾಯವು ಇರುವುದರಿಂದ ಈವರೆಗೂ ಕಾಯು ಲಾಯಿತು. ದೇಶಸೇವೆಗಲ್ಲದೆ ಬೇರೆ ಉದ್ದೇಶದಿಂದ ನಾನು ಈ ಶಾಲೆಯು ಕೆಲಸವನ್ನು ವಹಿಸಿರುವದಿಲ್ಲವೆಂಬುದಾಗಿ ದೇಶದವರಿಗೆ ಧೃಢಕರಿಸಿ ಹೇಳುತ್ತೇನೆ. ದೇಶದವರೆಲ್ಲರು ಈ ವಿಷಯವನ್ನು ಭಿನ್ನಭೇದವಿಲ್ಲದೆ ತಮ್ಮಲ್ಲಿ ತಾವೇ ಚರ್ಚಿಸಿ ಈ ಶಾಲೆಯನ್ನು ಪ್ರೋತ್ಸಾಹಪಡಿಸುವರಾಗಿ ಕೋರುತ್ತೇನೆ. ಈಗ ತಾನೆ ಸ್ವಲ್ಪ ದಿವಸಗಳ ಕೆಳಗೆ ವಿಂಧ್ಯ ತಿಮ್ಮಯ್ಯನವರು ಈ ಶಾಲೆಗೆ ಉಪಯೋಗಾರ್ಥವಾಗಿ ಕೊಟ್ಟಿರುವದು ಶ್ಲಾಘನೀಯವಾಗಿದೆಯೆಂದು ಹೇಳಬೇಕಾದುದಿಲ್ಲ. ವಿಕ್ಟೋರಿಯಾ ಫಂಡ್ ಹ್ಯಾಗೆ ಒಂದು ಅದರಿಂದ ಪ್ರಯೋಜನ ಹೊಂದಿದ ಕೊಡಗಿನ ಮಿತ್ರರು ಇಂಥ ಕಾರ್ಯಗಳನ್ನು ತುಂಬಾ ಯೋಚಿಸಬೇಕಾಗಿ ಕೋರುತ್ತೇನೆ. ಈ ಶಾಲೆಯಲ್ಲಿ ಕಲಿತ ಹುಡುಗರು ಈಗ ಸ್ಕೂಲ್ ಫೈನಲ್ ತೇರ್ಗಡೆಯಾಗಿ ಮುಂದರಿಸಿದ್ದಾರೆ. ಬಡ್ಡು ವಿದ್ಯಾರ್ಥಿಯು ತಿಂಗಳಿಗೆ ೪೦ ರೂಪಾಯಿ ಪಗಾರಿಯಲ್ಲಿ ಇರುತ್ತಾನೆಂದು ತಿಳಿದು ಸಂತೋಷಪಡುತ್ತೇನೆ. ಬಡ್ಡನು ಆದರೆ ಮೈ. ಚೆಕೇರಿರ ಕಾಮಯ್ಯನೆಂಬವರು ೩೯ ಮಂಗಳವಾರ ಸಾಲಿನಲ್ಲಿ ವಿದ್ಯಾಭಿವೃದ್ಧಿ ಮತ್ತು ದೇಶಾಭಿವೃದ್ಧಿ ಬಳವಳಿಕ್ಕೆ ತನ್ನ ಜೀವನವನ್ನೇ ಅರ್ಪಿಸಿರುವದಾಗಿಯು ತಿಳಿಯಲು ಸಂತೋಷಪಡುತ್ತೇನೆ. ಇದರಿಂದಲೇ ರಾಷ್ಟ್ರೀಯ ಶಾಲೆಯ ಪ್ರಯೋಜನಗಳನ್ನು ಊಹಿಸಬಹುದು. ಇಂತಿ

ಬಿ ಬೆಳ್ಯಪ್ಪ. B. A.
ಹೆಡ್ ಮಾಸ್ಟರ್ ನೇಶನಲ್ ಸ್ಕೂಲ್ ಅಮ್ಮತ್ತಿ.

ಕೌನ್ಸಿಲು ಚುನಾವಣೆ

ಓಟರುಗಳಲ್ಲಿ ಒಂದು ವಿಜ್ಞಾಪನೆ ಮತ್ತು ಎಚ್ಚರಿಕೆ.

ಮಹನೀಯರೆ,

ಐದುವರ್ಷಗಳ ಬಲವಾದ ಹೋರಾಟದ ಸಂಕಟ ನಿಮಗೆ ಪ್ರಾಂತಿಕ ಸ್ವಾತಂತ್ರ ಹಕ್ಕು ನಿಮಗೆ ನ್ಯಾಯವಿಧಾಯಕ ಸಭೆಯ ಮೂಲಕ ಸಿಕ್ಕಿರುವದನ್ನು ದಯವಿಟ್ಟು ಜ್ಞಾಪಕಕ್ಕೆ ತಂದುಕೊಳ್ಳಿ. ಇದು ಮುಖ್ಯವಾಗಿ ಜವಾಬ್ದಾರರ ಸಂಘದ ಕೆಲಸದಿಂದ ಆಯಿತೆಂದು ದಯವಿಟ್ಟು ಜ್ಞಾಪಕಕ್ಕೆ ತಂದುಕೊಳ್ಳಿ. ಈ ಸಂಘವು ಹಗಲಿರುಳು ಕೆಲಸ ಮಾಡದಿದ್ದಲ್ಲಿ ದೇಶದಲ್ಲಿ ಒಡಕು ಹುಟ್ಟಿಸಲು ಹೊರಡಿಸಲ್ಪಟ್ಟ ಪಂಗಡ ಸಂಘಗಳನ್ನು ಒಡೆದು ಹಾಕಿತ್ತೆಂಬದನ್ನು ದಯವಿಟ್ಟು ಜ್ಞಾಪಕಕ್ಕೆ ತಂದುಕೊಳ್ಳಿ. ಒಂದು ಜನಾಂಗವಾಗಲಿಕ್ಕೂ ಮತ್ತು ಒಗ್ಗಟ್ಟಾಗಿರಲಿಕ್ಕೂ ಉದ್ದೇಶವು ಒಂದೇ ಆಗಿರಬೇಕೆಂಬುದನ್ನು ಮರೆತು ಬಿಡಬೇಡಿರಿ. ಒಗ್ಗಟ್ಟಾದರೆ ನಾವು ನಿಲ್ಲುತ್ತೇವೆ. ಪಂಗಡವಾದರೆ ನಾವು ಬೀಳುತ್ತೇವೆ ಆದರೆ ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ಮರೆತುಬಿಡಬೇಡಿರಿ. ನಿಮ್ಮ ಓಟುಕೊಡುವ ಕಾರ್ಯಕುಶಲತೆಯಲ್ಲಿ ಸಂಘವನ್ನು ಮರೆಯಬೇಡಿರಿ. ಹೆಚ್ಚಿನ ಸುಧಾರಣೆಗಳೂ ಕೂಡ ಈ ಸಂಘದ ಮೂಲಕವೇ ಸಾಧ್ಯವು. ಆದುದರಿಂದ ಈ ಸಂಘಕ್ಕೆ ಎಡೆಬಿಡದೆಯೂ ಮನಃಪೂರ್ತಿಯಾಗಿಯೂ ಕೆಲಸಮಾಡಿರುವ ಮತ್ತು ಸಂಘಕ್ಕೆ ತಮಗಿರುವ ಸಹಾನುಭೂತಿಯನ್ನೂ ಕಾರ್ಯದಕ್ಷತೆಯನ್ನೂ ತೋರಿಸಿ ಸಂಘದ ಮೂಲಕ ಪ್ರಕಾಶಕ್ಕೆ ಬಂದಿರುವಂಥ ಉಮೇದ್ವಾರರುಗಳಿಗೇನೇ ನಿಮ್ಮ ಓಟುಗಳನ್ನು ಕೊಡಿರಿ. ಟೊಳ್ಳುಪ್ರಮಾಣಗಳಿಂದಲೂ, ದೇಶದ ಕೆಲಸಮಾಡುತ್ತೇನೆಂಬ ಸಾಮಾನ್ಯ ಪ್ರಕಟಣೆಗಳಿಂದಲೂ ಮೋಸಹೋಗಬೇಡಿರಿ. ಖುದ್ದಾಗಿ ಒಂದು ಕೇಳಿದಾಗ ಆಗುವುದಿಲ್ಲವೆಂದು ಹೇಳಬಾರದು ಎಂಬ ಒಳ್ಳೇ ಗುಣದಿಂದ ಸುಲಭದಲ್ಲಿಯೇ ಭಾಷೆಕೊಟ್ಟು ಬಿಡುವುದು ನಮ್ಮ ಜನರ ಒಂದು ತಪ್ಪು ಸ್ವಭಾವವಾಗಿದೆ. ದೇಶಕ್ಕೂ ಮತ್ತು ಅದರ ಹಿತಕ್ಕೂ ಓಟುಕೊಡುವ ಸಮಯದಲ್ಲಿ ಐದು ನಿಮಿಷವಾದರೂ ಈ ತಪ್ಪುಸ್ವಭಾವವನ್ನು ಮರೆಯಿರಿ. ನಿಮ್ಮ ಚಿಕ್ಕ ಚಿಕ್ಕ ಕೃತಜ್ಞತೆಗಳನ್ನು ಮರೆತು ಎಲ್ಲಾದಕ್ಕಿಂತಲೂ ಮುಖ್ಯವಾದ ನಿಮ್ಮ ದೇಶವನ್ನು ಯೋಚಿಸಿರಿ. ಈಗ ನೀವು ಒಂದು ತಪ್ಪು ಹೆಜ್ಜೆ ತೆಗೆದದ್ದಾದರೆ ನಿಮ್ಮ ಅಭಿವೃದ್ಧಿಗೆ ಬಹಳ ಕುಂದಕವುಂಟಾಗುವುದಲ್ಲದೆ ನಿಮ್ಮ ಮುಂದಿನ ಜನಾಂಗಗಳಿಂದ ನೀವು [illegible] ಬಡ್ಡನು [illegible] ಕೇಳ ಎಂದು ಯೋಚಿಸಬೇಡಿ [illegible] ಯೇ ನಿಮ್ಮ ಮುಖ್ಯಪಥದರ್ಶಕವಾಗಲಿ. ಈ [illegible] ಉಮೇದ್ವಾರರು ಮಾಡಿದ ಕಾರ್ಯದಿಂದಲೇ [illegible] ನಿರ್ಣಯವಾಗಬೇಕು. ಜಾತಿಮತ ಭೇದಗಳಿಗೆ ಪ್ರೋತ್ಸಾಹ ಕೊಟ್ಟು ದೇಶದಲ್ಲಿ ಪಂಗಡಗಳಾಗಲಿಕ್ಕೆ ಪ್ರಯತ್ನಿಸುವವರನ್ನು ವಿಷದಂತೆ ದೂರಮಾಡಿರಿ. ನಿಮ್ಮ ಮೇಲೆ ಉದ್ಯೋಗಸ್ಥರ ಮಾತೇನಾದರೂ [illegible] ತಿಳಿಯದೆಯೋ ನಡೆಯಲಿಕ್ಕೆ ಬಂದರೆ ಅದಕ್ಕೆ ಎಡೆಗೊಡಬೇಡಿರಿ. ಜನಾಂಗದ ಕಾರ್ಯದಲ್ಲಿ ಭಾಗಿಗಳಾಗಬೇಕೆಂಬದೊಂದು ಪ್ರಕಟಣೆಯು ಉದ್ಯೋಗಸ್ಥರಿಗೆ ಈಗಾಗಲೇ ಕೊಡಲ್ಪಟ್ಟಿರ [illegible] ನೆನಪಿನಲ್ಲಿಟ್ಟಿದ್ದರೂ ದೇಶದ ಕೆಲಸಮಾಡುತ್ತೇನೆಂತ ಹೇಳುವ ಕೂಡಲೇ ಮೆಂಬರಾಗಿ ದೇಶದ ಜನರನ್ನು ಸ್ವರಾಜ್ಯ ಕೆಲಸಕ್ಕೆ ತಯಾರುಮಾಡುವ ಕೆಲಸಮಾಡಿ ಅರ್ಹತೆಯನ್ನು ಪಡೆಯಿರಿ ಎಂತ ಹೇಳಿ. ಕೌನ್ಸಿಲಿನಲ್ಲಿ ಕೇವಲ ಮಾರು ಪ್ರತಿನಿಧಿತ್ವವಲ್ಲವೆಂತ ಜ್ಞಾಪಕದಲ್ಲಿಡಿರಿ. ದೇಶದ ಪ್ರತಿಯೊಬ್ಬನೂ ಸಂಘದ ಮೆಂಬರಾಗಬಹುದಾದ್ದರಿಂದ ದೇಶವೆಲ್ಲಾ ಸುಲಭದಲ್ಲೇ ಒಂದಾಗಬಹುದು. ಅದರಮೂಲಕ ಹೌಸ್ ಆಫ್ ರಿಪ್ರೆಸೆಂಟೇಟಿವ್ ಎಂಬ ಪ್ರತಿನಿಧಿಗಳ ಉಪಸಭೆಯೊಂದನ್ನು ಮಾಡಿಕೊಂಡು ಅದರಮೂಲಕ ಕೌನ್ಸಿಲ ಮೆಂಬರುಗಳನ್ನು ಸುಲಭದಲ್ಲಿ ಆರಿಸಿಕೊಳ್ಳಬಹುದು. ನ್ಯಾಯವಿಲ್ಲದೆ ಕಟ್ಟಡವಾಗುವದಿಲ್ಲ. ಆದರಲ್ಲೂ ನ್ಯಾಯ ಛತ್ರವಾಗಿರಬೇಕು. ಜವಾಬ್ದಾರರ ಸಂಘವೇ ನ್ಯಾಯವಾಗಿದೆ. ಎಡರುಗಳನ್ನು ಎಣಿಸದೆ ಸಂಘಕ್ಕಾಗಿ ಕೆಲಸಮಾಡಿ ಇನ್ನು ಮುಂದಕ್ಕೂ ಮಾಡುತ್ತೇವೆಂತ ಭರವಸೆ ಕೊಡುವವರಿಗೇನೇ ಓಟುಕೊಟ್ಟು ಸಂಘವನ್ನು ಬಲಪಡಿಸಿರಿ. ಈ ಪ್ರಿಯದೇಶದ ರಾಜಕೀಯ ಸಾಮಾಜಿಕ ಮತ್ತು ಧಾರ್ಮಿಕ ಉನ್ನತಿಯೇ ಶಸ್ತ್ರ ಕಾರ್ಯಗಳ ಮೂಲಾಧಾರವಾಗಿರುವವನ ಈ ಕೋಟೆಕೆಯನ್ನು ನೆರವೇರಿಸಲಿಕ್ಕೆ ಸಂಶಯ ಪಡಬೇಡಿರಿ. ದುರ್ದೈವದಿಂದ ಚುನಾವಣೆಯು ಕೆಲಸದ ತಂಗಾಮಿನಲ್ಲೇ ಬಂದು ಬಿಟ್ಟಿದೆ. ದೇಶಕ್ಕಾಗಿ ಒಂದುದಿವಸದ ಕೆಲಸವನ್ನು ತ್ಯಾಗಮಾಡಿ ಓಟುಕೊಡುವ ಸ್ಥಳಕ್ಕೆ ಹೋಗಿ ಓಟುಕೊಡಿರಿ. ಈ ದೇಶದ ರಿವಾಜಿನಂತೆ ತಿಳಿದ ಕೆಲವರೇ ಕೆಲಸಮಾಡಲಿ ಎಂಬ ಪದ್ಧತಿಯನ್ನು ಅನುಸರಿಸಬೇಡಿರಿ. ಓಟರುಗಳೆಲ್ಲಾ ಓಟನ್ನು ನಿಗಾ ತೆಗೆದುಕೊಳ್ಳುವ ಮೂಲಕ ದೇಶವು ಹೆಚ್ಚಿನ ಸುಧಾರಣೆಗೂ ಮಾತ್ರವಲ್ಲ ಸ್ವರಾಜ್ಯಕ್ಕೂ ಅರ್ಹವಾಗಿದೆಯೆಂದು ಸರಕಾರಕ್ಕೆ ತೋರಿಸಿರಿ.

ಕೋದಂಡ ಉತ್ತಯ್ಯ

ಬ್ರಹ್ಮಚರ್ಯ.

ಬಲಹೀನತೆಯೇ ಪಾಪ. ಅವಿವೇಕತನದಿಂದ ಪಾಪವು ಸಂಭವಿಸುವುದು. ಆದುದರಿಂದ ಈಗಲಾದರೂ ವಿವೇಕವನ್ನು ತಂದುಕೊಳ್ಳಿರಿ. ನಮ್ಮ ಶರೀರವೆಂಬ ಅಮಾನುಷಕೃತವಾದ ಯಂತ್ರದ [illegible] ನಡೆಯತಕ್ಕ ಕೆಲಸಗಳು ಸರಿಯಾಗಿ ನಡೆಯಬೇಕಾದರೆ ಆ ಯಂತ್ರದ ವಿಚಾರವನ್ನು ಸಂಪೂರ್ಣವಾಗಿ ವಿಮರ್ಶೆಮಾಡಿ ತಿಳಿದುಕೊಂಡು ಅದರಿಂದ ನಿರ್ವಹಿಸಲ್ಪಡಬೇಕಾದ ಕಾರ್ಯಕ್ರಮದ ಸಂವಿಧಾನವನ್ನು ಚೆನ್ನಾಗಿ ತಿಳಿಯುವುದು ಅತ್ಯಂತಾವಶ್ಯಕ. ಆರೋಗ್ಯವಿರಬೇಕಾದರೆ ಸಮೃದ್ಧವಾಗಿಯೂ ಪರಿಶುದ್ಧವಾಗಿಯೂ ಇರುವ ರಕ್ತಸಂಚಲನೆಯಾಗುತ್ತಿರಬೇಕು.

ಮಾನುಷ—ಶರೀರವು ಹುಟ್ಟುವುದು, ಬೆಳೆಯುವುದು ಸಾವು ಎಂಬ ಮೂರು ಅವಸ್ಥೆಗಳನ್ನು ಹೊಂದುತ್ತದೆ. ಆಯಾ ಅವಸ್ಥೆಗಳು ಪ್ರಾಪ್ತವಾದಾಗ ಬೇರೆಬೇರೆ ಬದಲಾವಣೆಯನ್ನು ಹೊಂದುತ್ತದೆ. ಹೇಗೆಂದರೆ ಋತುವಾಗುವ ಕಾಲ (Puberty) ಬಂದರೆ ಪುಂಸ್ತ್ರೀಗಳಿಗನುಗುಣವಾದ ಗ್ರಂಥಿಗಳು ತ್ವರೆಯಾಗಿ ಬೆಳೆಯುತ್ತಾ ಬಂದು ಅಂಗಾಂಗಗಳೂ ಅಭಿವೃದ್ಧಿಸ್ಥಿತಿಗೆ ಬರುವುವು. ಈ ಕಾಲದಲ್ಲಿ ಅನೇಕ ದುರ್ಯೋಚನೆಗಳು ಮನಸ್ಸಿಗೆ ತಂದುಕೊಳ್ಳುವುದರಿಂದ ಶಾರೀರ ಸಂಪತ್ತು ನಷ್ಟವಾಗಿ ಬುದ್ಧಿಶಕ್ತಿಯು ಮಂಕಾಗುವುದು. ಧೀಮಂತರಾಗಿ ಉದಾತ್ತಪರಾಕ್ರಮ ಮತ್ತು ಕೀರ್ತಿಯನ್ನು ಸಂಪಾದಿಸಬಹುದಾದ ಈ ದೇಹವನ್ನು ಮಣ್ಣಿಗೂ ಕಡೆಯಾಗಿ ಭಾವಿಸಿ ಹೇಯವಾದ ಕಲಸಗಳ [illegible] ಕೊಂಡು ಬಾಳುವ ಜನರು ಯಾತಕ್ಕೆ ಕೆಲಸಕ್ಕೆ ಬರುವರು? ಬುದ್ಧಿಶಕ್ತಿಯು ಮಾಲಿನ್ಯವನ್ನು ಹೊಂದಿ ಇದಗೆ [illegible] ಮಾರ್ಗಗಳ ತಾರತಮ್ಯವೇ ತಿಳಿಯದೆ ಇನ್ನಷ್ಟು [illegible] ನೆಂತಲ್ಲಯೇ ನಿಮಗ್ನರಾಗುವರು. ಈ ದುಷ್ಟ [illegible] ರಣವು ಶೀಘ್ರವಾಗಿ ಸಂಧಿಸುವುದರಲ್ಲಿ [illegible] ಇರುವುದಿಲ್ಲ. ಬ್ರಹ್ಮಚರ್ಯವೇ ಜೀವಕ್ಕೆ [illegible] ಬನ್ನು ಪೂರ್ವದಲ್ಲಿ ನೂರು ವರ್ಷಕ್ಕೆ ಮುಂಚೆ ಸಾ[illegible] ಮೃತ್ಯುತ್ತರವಾದ ಸಾವವೆಂದು ನಮ್ಮ ಹಿರಿಯರು [illegible] ಈಗಲೂ ಪ್ರಪಂಚದಲ್ಲಿ ನೂರುವರ್ಷಕ್ಕೆ ಮೇಲೆ [illegible] ವರು ಇರುವರೆಂದು ನಾವು ಆಗಾಗ್ಗೆ ಕೇಳುತ್ತಿರುವೆವು.

(ಶೇಷ)

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [illegible]

MEDICAL RELIEF IN COORG

ಈ ಸಂಗ್ತಿಯಾಗಿ ನಮ್ಮ ಸಿವಿಲ್ ಸರ್ಜನವರು [illegible] ಬಾತ್ಮಿಯನ್ನು ಕಳುಹಿಸಿದ್ದರು. ಇದು, ನಾವು ದೇಶದರು [illegible] ರಿಗೆ ಸಮ[illegible] ಅನಕ್ಕೆ ಸರಿ [illegible] ಕೆಲಸವಾಗಿ[illegible] ನನ್ನ ಮನಸ್ಸಿಗೆ [illegible] ಇದಕ್ಕಿಂತಲೂ ಅವಶ್ಯವಾದ ಸಹಾಯವೇನೆಂದರೆ ಈ ವರಿಗೆಗೆ ಮೊದಲು [illegible] ತಿಂಗಳು ಗರ್ಭಿಣಿಯರು ಮಲೇರಿಯಾ ಜ್ವರ [illegible] ಹಳಿಗಳಿಂದ ಕಷ್ಟಪಡುತ್ತಿರುವರು. ಇಂಥವರು ಸೂಲಗಿತ್ತಿಯರ ಸಹಾಯದಿಂದ ಪ್ರಸವಿಸಿದರೂ [illegible] ತಾಯಿ, ಮಗು ಇಬ್ಬರೂ ಸಾಯುತ್ತಾರೆ. ಇಲ್ಲವಾದರೆ ಒಬ್ಬರಾದರೂ ಸಾಯುತ್ತಾರೆ. ಈ ಕಾಯಿಲೆ ನಿವಾರಣೆಗಾಗಿ ನಮ್ಮ ದೇಶದ ಹೆಂಗಸರಿಗೆ ಘನಹೊಂದಿದ ಸರಕಾರದವರು ಒಂದು Lady graduate doctor ನ್ನು ಕೊಟ್ಟಲ್ಲಿ ತುಂಬಾ ಉಪಕಾರವಾಗುತ್ತಿತ್ತು. ಅದ್ರೆ ಈ ಸರ್ಜನ ಜೊತೆ ವಿಷಯವಾಗಿ ಬಹಳ ಚಳವಳಿಯಿರು[illegible] ಇದ್ದರೂ ಕೂಡಾ ನನ್ನ ಈ ಕೆಳಗಿನ ಅಭಿಪ್ರಾಯದ ರೀತಿ ಮಾಡಿದಲ್ಲಿ ಹಣ ದೊರೆಯುತ್ತೆ. ಇದು ಈ ನಮ್ಮ ಸಿವಿಲ್ ಸರ್ಜನ್ ಮಡಿಕೇರಿಯಲ್ಲಿ ಅಸಿಸ್ಟೆಂಟ್ ಸರ್ಜನ್ ವೀರರಾಜೇಂದ್ರ ಪೇಟೆ, ಸಿವಿಲ್ ಅಪೋತಿಕರಿ ಇವರ ಸಂಬಳಕ್ಕೆ ಸರಕಾರದವರು ಸುಮಾರು ಮಾಹೆಯಾನ ಎರಡು ಸಾವಿರ ರೂಪಾಯಿಗಳವರೆಗೆ ಕೊಡುತ್ತಾರೆ. ನಮ್ಮ ದೇಶಕ್ಕೆ I. M. S. ಸರ್ವಿಸ್ಸಿನಿಂದ ಹೆಚ್ಚು ಸಂಬಳದ ಡಾಕ್ಟರು ಅವಶ್ಯವಿರುವುದಿಲ್ಲ. ಅದ್ರೆ ನಮ್ಮ ದೇಶದ ಯುರೋಪಿಯನ್ ಅಫೀಸರುಗಳು ಅವರ ಸಂಸಾರಗಳು ಇವರ ಯುರೋಪಿಯನರಿಗೆ ಯುರೋಪಿನ ವೈದ್ಯರೇ ಬೇಕು. ಇದಕ್ಕೆ ಸಿವಿಲ್ ಸರ್ವಿಸ್ಸು ವೈದ್ಯರನ್ನು ದೊರಕಿಸಿಕೊಳ್ಳಬಹುದು. ಇದಕ್ಕೆ ದೃಷ್ಟಾಂತರ. [illegible] ಇಲ್ಲದ ನಮ್ಮ ಪ್ಲಾಂಟರ್ ಯುರೋಪಿನ ಘನ [illegible] ಆಸ್ಪತ್ರೆಗೆ ಯೋಗರಾದ ವೈದ್ಯರು ಸಿಕ್ಕುತ್ತಾರೆ. ಹೀಗಿರುವಾಗ [illegible] ಇರುವ ಘನಪಟ್ಟ ಸರಕಾರ ಉದ್ಯೋಗಕ್ಕೆ ವೈದ್ಯರು ದೊರಕುವುದು ಕಷ್ಟವಲ್ಲ. ಸಿವಿಲ್ ಸರ್ಜನ್ [illegible] ಹೀಗಾದ್ಯು ಬೇರೆ ಎರಡು ಕೆಲಸಗಳಿಗೆ ಯೋಗ್ಯರಾದ ಮದ್ರಾಸು L. M. S. & M. B. C. M. ಇಲ್ಲವೆ ವಿಲಾಯತಿಯ L. R. C. P. & S. M. R. C. S. ಪರೀಕ್ಷೆ ತೇರ್ಗಡೆಯಾದ ವೈದ್ಯರು 300-400 ರೂಪಾಯಿ ಸಂಬಳಕ್ಕೆ ಸಿಕ್ಕುತ್ತಾರೆ. ಇದು ಮದ್ರಾಸು ಮೆಡಿಕಲ ಸರ್ವಿಸಿನಿಂದಲೇ ತಿಳಿಯುತ್ತೆ. ಹೀಗೆ ಮಾಡಿದಲ್ಲಿ ಬಾಕಿಯಾಗುವ ಹಣಕ್ಕೆ L. M. S. ಪರೀಕ್ಷೆ ತೇರ್ಗಡೆಯಾದ ಎರಡು ಲೇಡಿ ಡಾಕ್ಟರುಗಳು ದೊರೆಯಬಹುದು. ಉತ್ತರ ಕೊಡಗಿಗೊಂದು, ದಕ್ಷಿಣ ಕೊಡಗಿಗೊಂದು ಏರ್ಪಾಡು ಮಾಡಬಹುದು. ಈ ಏರ್ಪಾಡು ಮಾಡಿದಲ್ಲಿ ಈಗ ನಾವು ಕೊಡುವ ಮೂರುಜನರ ಸಂಬಳಕ್ಕೇನೇ 5 ಜನ ದೊರೆಯಬಹುದು. ಅಗ್ಗೆ ಕೆಲಸವು ಜಾಗರೂಕತೆಯಿಂದಲೂ, ಹೆಚ್ಚು ಮುತುವರ್ಜಿಯಿಂದಲೂ ನಡೆಯುವಲ್ಲಿ ಏನೂ ಸಂದೇಹವಿಲ್ಲ. ಇದು ಸರಕಾರದವರು ಒಂದೆ ಯಾವ ಸಂಕೋಚವಿಲ್ಲದೆ ಆರಂಭಿಸಿದಲ್ಲಿ ಇದರ ಪ್ರಯೋಜನವು ಕಂಡುಬರುವುದು.

ಸಿ ಐ ತಿಮ್ಮಯ್ಯ

ಅಯ್ಯಾ,

ಸೋಮವಾರಪೇಟೆ ಕೊಡಗು ಮಹನೀಯರು, ಹರದಾಸರಾದ ಅಪ್ಪಚ್ಚ ಕವಿಯನ್ನು ಸಭೆಕರೆ ಉದ್ದೇಶ್ಯ ಕರೆಸಿ ತಾರೀಖು ೨೪ ರಲ್ಲಿ [illegible] ಸಭೆನೇರಿದ್ದಾಯಿತು. ಜನಸಮೂಹವು ಯಥಾವಾಗ್ಯ ಯಿದ್ದು ತೋಭಿಸಲಿಲ್ಲವಾಗಿ ಹೇಳುತ್ತಿದ್ದರು. ಪಟ್ಟದ ಪ್ರಧಾನ ನಾಯಕರಾದ ನಾಯಕ [illegible] ಮತ್ತು ಇತರ ನಾಯಕರುಗಳು, ಪತ್ನಿಗಳ ಸಮೇತರಾಗಿ ಆ [illegible] ಕೊಡಗು ಪ್ರಮುಖ ಉದ್ಯೋಗಸ್ಥರಲ್ಲೂ, ಪತ್ನಿಯರೊಡಗೂಡಿ ಒಂದು ಸಭೆಯನ್ನು [illegible] ಹರದಾಸರು ನವೀನ [illegible] ಸಭಿಕರ [illegible] ತೋರಿದರು. ಎರಡು ಗಂಟೆ ಕಾಲ [illegible] ಅತಿ ಸ್ವಾರಸ್ಯ [illegible] ರೀತಿಯಲ್ಲು ಹೇಳಿ ಸರ್ವರೂ ಮೆಚ್ಚಿ [illegible] ಮಾಡಿದ ಪ್ರಸಂಗವನ್ನು ಎಷ್ಟು ಶ್ಲಾಘಿಸಿದರೂ [illegible] ಇವರ ಕಥೆ [illegible] ಮತ್ತು [illegible] ಉತ್ಸಾಹ [illegible] ಮತ್ತು [illegible] ನಿದ್ದಸುಬ್ಬಯ್ಯ [illegible] ಬೀಷ್ಮ ಉಪನ್ಯಾಸ [illegible] ಜನಾಂಗಕ್ಕೆ ಭೂಷಣರಾಗಿರುವ [illegible] ದೇಶಸೇವೆ [illegible] ಕೊಟ್ಟು ಕಾಪಾಡಲೆಂದೂ, ತಕ್ಕ ದ್ರವ್ಯ [illegible] ಸಭೆಯನ್ನು ಮುಕ್ತಾಯ [illegible] ಸಿದರು.

ಎ ಸಿ ಕುಟ್ಟಪ್ಪ

ಸ್ವಾಮಿಗಳೇ,

ತಾರೀಖು ೧೪-೭-೨೩ ರಲ್ಲಿ ಲೇಖಿಸಿದ [illegible] ದಾರರು ನಾಡುಕೋಟಿ [illegible] ಎಲ್ಲಿಯೊ ಬಂದು [illegible] ಹೀಗಿದ್ದರಂತೆ [illegible] ಹೋಲಿಸಿಂತು [illegible] ತೋರಬಂತೆ ಕಳೆದ ನಾಲ್ಕು ವರುಷಗಳಿಂದ ನಡೆಯುತ್ತಿದೆ. [illegible] ಜನರು [illegible] ಇಂತಿ ಎಂಬ ತಂತ್ರಗಳ ಬಿಚ್ಚಿ ಹೇಳಿ [illegible] ಸಾಧ್ಯವಾಗಿದೆ? [illegible] ಹೀಗೆ [illegible] ಸಿ ಐ ಟಿ [illegible] ವಾಗಿ ಊಹಿಸಬೇಕಾಗಿದೆ. [illegible] ಕ್ಷೇಮಕ್ಕೋಸ್ಕರವಾಗಿ ಮುಂದಕ್ಕೆ ನಾಯಕರು [illegible] ತೀರ್ಮಾನಿಸಿ [illegible] ನಡಿಸುವಂತೆ ಈಗ ತಾನೆ ಜೀವಕ್ಕೆ [illegible] ಕೊಂಡುಹೋಗಬಹುದೆಂದೂ ಇಲ್ಲವಾದರೆ ಬರುವ [illegible] ನಡೆಯಬಹುದೆಂದೂ ಅವರ [illegible] ನಸ್ಸಿಗೆ ತೋರುವದಾಗಿ ಸೂಚಿಸುತ್ತಾರೆ.

ಕೊಡಗಿನ ಗೌಡುಗಳ ಹೀನಸ್ಥಿತಿ.

ಮಹನೀಯರೆ,

ಗೌಡುಗಳೆಂದು ಕರೆಯುವ ನಮ್ಮ ಪಂಗಡಕ್ಕೆ ಸೇರಿದ ಜನಗಳು ಕೊಡಗಿನಲ್ಲಿ ⅕ ನೆ ಸಂಖ್ಯೆಯಾಗಿರುತ್ತದೆ. ಆದರೆ ನಮ್ಮವರಲ್ಲಿ ವಿದ್ಯಾವಂತರಾಗಿರು ವವರು ಶೇಕಡ ೨ರಷ್ಟು ಇರಲಾರದೆಂದೂ, ಸರ್ಕಾರಿ ಕೆಲಸಗಳಲ್ಲಿ ಶೇಕಡ ೧ ಇಲ್ಲವೆಂದೂ ನಂಬುತ್ತೇನೆ. ಇದರಿಂದ ನಮ್ಮ ಮತವು ವಿದ್ಯೆಯಲ್ಲಿ ಎಷ್ಟು ಹೀನಸ್ಥಿತಿಯಲ್ಲಿದೆ ಎಂಬುದು ಚೆನ್ನಾಗಿ ವ್ಯಕ್ತಪಡುತ್ತದೆ. ನಾವುಗಳು ರಾಜ್ಯದ ⅕ ಪ್ರಜಾಸಂಖ್ಯೆಯಾಗಿಯೂ ಕಂದಾಯ ಕೊಡುವುದರಲ್ಲಿ ½ ನೇ ಸಂಖ್ಯೆಯಾಗಿಯೂ ಇರುವಾಗ ನಾವುಗಳು ಹಿಂಗಿರುವುದು ತುಂಬಾ ನಾಚಿಕೆಯಲ್ಲವೆ? ಹಾ! ಕುಲಬಾಂಧವರೇ ನಮ್ಮ ವಿದ್ಯಾಭಿವೃದ್ಧಿ ಸಂಘವು ಸ್ಥಾಪಿತವಾಗಿ ಕೆಲವು ವರ್ಷಗಳಾದರೂ ದೊಡ್ಡ ಪದವಿಯಲ್ಲಿ ಒಬ್ಬನಾದರೂ ಬರಲಿಲ್ಲವಲ್ಲ! ಇದು ನಮ್ಮ ಬುದ್ಧಿ ಸೋಮಾರಿತನವಲ್ಲವೇ? ಅನೇಕರು ತಮ್ಮ ಮಕ್ಕಳನ್ನು ಒಂದು ಎರಡನೆ ತರಗತಿಗಳವರೆಗೆ ಓದಿಸಿ ಅವರ ವ್ಯಾಸಂಗವು ಮುಗಿಯಿತೆಂದು ಬಿಡಿಸುತ್ತಾರೆ. ಇಂಥಾ ಮೂಢರಿಗೆ ಏನು ಉಪದೇಶಮಾಡೋಣ? ಅದಷ್ಟು ಕಷ್ಟಪಟ್ಟು ಓದಿಸಿದರೆ ಅವರ ಪ್ರತಿಫಲವನ್ನು ಮುಂದಕ್ಕೆ ಪಡೆಯಬಹುದಲ್ಲವೇ? ನಮ್ಮ ಮಕ್ಕಳನ್ನು ಶಾಲೆ ಬಿಡಿಸಬಾರದು. ಸರ್ಕಾರಿ ಕೆಲಸಕ್ಕೆ ನಾನು ಮುಂದು ತಾನು ಮುಂದು ಎಂದು ಯಾಕೆ ಸೇರಬಾರದು? ಕೌನ್ಸಿಲ್ಲಿಗೆ ಮೆಂಬರುಗಳಾಗಲು ಬುದ್ಧಿವಂತರು ಯಾಕೆ ಮುಂದಕ್ಕೆ ಬಾರದೆ ಹಿಂದುಳಿಯುತ್ತೀರಿ? ಎಲ್ಲರೂ ಮುಂದಕ್ಕೆ ಬಾರದೆ ಹಟಸ್ಥರಾದಮೇಲೆ ದೇವರು ಮುಂದೆ ಉದ್ಧಾರ ಮಾಡುವುದಕ್ಕೆ ಬದಲಾಗಿ ಕುಲನಾಶನವಾಗುವ ಹಾಗೆ ನಮ್ಮ ನಡತೆಯಿಂದ, ಇದುವರೆಗೆ ನಾವೇ ಸಾಕ್ಷಿಹೇಳಬೇಕಾಗುತ್ತದೆ. ದೇವರು ಎಲ್ಲರನ್ನೂ ಶ್ರೀಮಂತನಾಗಿಯೂ, ವಿದ್ಯಾವಂತನ್ನಾಗಿಯೂ ಮಾಡಲಿಲ್ಲ. ಕೆಲವರನ್ನು ಮಾತ್ರ ಹಾಗೆ ಮಾಡಿ ಕುಲ ಮತ್ತು ರಾಜ್ಯಾಭಿವೃದ್ಧಿಯಾಗುವುದಕ್ಕೆ ಸಕಲ ಸೌಕರ್ಯಗಳನ್ನು ಒದಗಿಸಿರುತ್ತಾನೆ. ಅಂಥ ಸೌಕರ್ಯಗಳನ್ನು ಹೊಂದಿರತಕ್ಕವರು ಕುಲ ಮತ್ತು ರಾಜ್ಯದೇಳಿಗೆಯಲ್ಲಿ ಪ್ರಯತ್ನಪಡದೆ ತಮ್ಮ ಐಶ್ವರ್ಯಮದದಿಂದ ಕುಲ ಮತ್ತು ರಾಜ್ಯವನ್ನೇ ಮರೆತಿರುವ ಈ ಮಂದಾಂಧರು ಯಾವ ನರಕಕ್ಕೆ ಹೋಗಬೇಕೆಂಬುದನ್ನು ನೀವೇ ಯೋಚಿಸಬೇಕಾಗಿದೆ. ಇನ್ನು ಮುಂದೆಯಾದರೂ ಕುಲಬಾಂಧವರೆಲ್ಲರೂ ಮುಂದಕ್ಕೆ ಬರುವ ಪ್ರಯತ್ನಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

೨೪-೧೨-೨೩. ತಮ್ಮ ವಿಧೇಯ,

ಸಿ. ಡಿ. ಮುತ್ತಣ್ಣಗೌಡ, ಬಲ್ಲಮಾವಟ್ಟಿ

ಸಂಪಾದಕರೇ,

ಈ ಕೆಳಗಿನ ವಿಷಯವನ್ನು ತಮ್ಮ ಅಮೂಲ್ಯ ಪತ್ರಿಕೆಯಲ್ಲಿ ಪ್ರಕಟಿಸಿ ಪೆರ್ಮಾಡ್‌ಪುರದ ಮುತ್ತಪ್ಪದೇವರ ಭಕ್ತರು ಇನ್ನು ಮುಂದಾದರೂ ಮುತ್ತಪ್ಪದೇವರ ದೇವಸ್ಥಾನದ ಪ್ರತಿನಿಧಿಯಂತ ಬರುವ ಮೋಸಗಾರರ ಬಲೆಗೆ ಬೀಳದಂತೆ ಮಾಡಬೇಕಾಗಿ ಕೋರುತ್ತೇನೆ.

ಕೆಲವು ವರ್ಷಗಳಿಂದ ಕೊಡಗು ದೇಶದ ಎಲ್ಲಾ ಭಾಗಗಳಿಂದಲೂ ಒಬ್ಬರಿಬ್ಬರು ಮಲೆಯಾಳಿಗಳು ಮುತ್ತಪ್ಪದೇವರ ಪೂಜಾರಿಗಳೆಂತ ಹೇಳಿಕೊಂಡು ಮುತ್ತಪ್ಪದೇವರಿಗೆ ಸಲ್ಲತಕ್ಕ ಹರಿಕೆಗಳನ್ನೆಲ್ಲಾ ತೆಗೆದುಕೊಳ್ಳುತ್ತಿದ್ದಾರೆಂತ ನನಗೆ ತಿಳಿದು ಆಶ್ಚರ್ಯವಾಗಿದೆ. ಪೆರ್ಮಾಡುವಿನ ಮುತ್ತಪ್ಪದೇವರ ಪೂಜೆಯನ್ನು ನಡಿಸುವ ಜವಾಬ್ದಾರಿಯುಳ್ಳ ನಾವು ಸಮುದಾಯಕ್ಕೂ ತಿಳಿಸುವದೇನೆಂದರೆ, ನಾವು ಹೊರನಾಡಿಗೆ ಏಜೆಂಟರುಗಳನ್ನು ನೇಮಿಸಿರುವದಿಲ್ಲ. ಅಂಥಾವರು ವಸೂಲ್ ಮಾಡಿದ ಹಣವು ನಮ್ಮ ದೇವಸ್ಥಾನಕ್ಕೆ ತಲುಪುವದೂ ಇಲ್ಲ.

ಪೆರ್ಮಾಡುವಿನ ಜವಾಬ್ದಾರಿ ಇರುವ ಮೇನೇಜರಾದ ಮಾವಯ್ಯ ನಾನು ಕೇಳಿಕೊಳ್ಳುವದೇನೆಂದರೆ ಮುತ್ತಪ್ಪದೇವರ ಏಜೆಂಟರೆಂತ ಯಾರಾದರೂ ಹೇಳಿಕೊಂಡು ಬಂದರೆ ಅವರು ಖಂಡಿತವಾಗಿಯೂ ಮೋಸಗಾರರು. ಅವರನ್ನು ಕೂಡಲೇ ಪೋಲೀಸಿಗೆ ಕೊಟ್ಟು ಬಿಡಬೇಕು. ಇಂಥಾ ಪಾಪ ಕೆಲಸ ಮಾಡುವ ಮೋಸಗಾರರಿಗೆ ಮುತ್ತಪ್ಪದೇವರೇ ಶಿಕ್ಷೆ ಕೊಡಬೇಕು.

ಇದನ್ನು ಪ್ರಕಟಿಸಿ ಮುತ್ತಪ್ಪದೇವರ ಭಕ್ತರಿಗೆ ಸಹಾಯಮಾಡಬೇಕೆಂತ ನಂಬುತ್ತೇನೆ.

ಕಳಪರಂಬು ಪೋಸ್ಟ್, ಪಿ. ಎಂ. ಕುಂಞಿರಾಮಯ್ಯ,

೧೯-೧೨-೨೩. ಪೆರ್ಮಾಡುಮಾವಯ್ಯ.

ಮಹನೀಯರೆ!

ನಮ್ಮ ಮಾತೃಭೂಮಿ ಭಾರತಖಂಡವು ಸರ್ವ ಭಾಗಗಳಲ್ಲಿ ಸ್ವದೇಶ ಮತ್ತು ಸ್ವಜನ ಪ್ರೀತಿಯು ದಿನೇ ದಿನೇ ವೃದ್ಧಿಹೊಂದುವಲ್ಲಿ ಕೊಡಗಿಗೊಂದು ಮೂಲೆಯಲ್ಲಿ ... ಅಹಾ! ಜಾತಿ, ಮತದ್ವೇಷಗಳನ್ನು ಇನ್ನು ಎತ್ತಿ ಹಿಡಿಯುತ್ತಲಿರುವ ಜನರಿಗೆ ಏನೆಂದು ಹೇಳಬೇಕು! ಪಶ್ಚಾತ್ಯನಾಗರಿಕರ ನಾಡುಮಣ್ಣಿನ ಕೋಲಿನ ಕಥೆಯು ವಿಚಾರಕರವೇ ಸರಿ! ವಿದ್ಯೆ, ಜೀವನಕ್ರಮ, ಆಹಾರ, ವಿಹಾರಾದಿಗಳಲ್ಲಿ ಕೀಳುಹಂತದಲ್ಲಿರುವ ಜಂತುಗಳನ್ನು ಉತ್ತಮ ತರಗತಿಯವರಲ್ಲಿ ಮಿಳಿತವಾಗುವಂತೆ ಮಾಡಬೇಕೆಂದು ದೇಶವತ್ಸಲರು ವಿಶ್ವಪ್ರಯತ್ನವನ್ನು ಮಾಡುತ್ತಿರುವಲ್ಲಿ ಇವರದೇನೊಂದು ಹಾಳುಗಳಿಗೆ!

ಪ್ರಾಚೀನ ಕಾಲದಿಂದಲೇ ಆದಿದ್ರಾವಿಡ ಜನಗಳು ಕೊಡಗಿನ ಹಿಂದು ಮನಸಿಗಳಲ್ಲಿ ನಿರಾತಂಕವಾಗಿ ಮಿಳಿತವಾಗುತ್ತಿದ್ದರೆಂಬುದು ನಿರ್ವಿವಾದದ ಮಾತು. ಯಾಕೆಂದರೆ, ಹಾಗಿಲ್ಲದಿದ್ದರೆ ನಾಡುಮಂದುಗಳಲ್ಲಿ ಕೆಲವು ಕಡೆ ಜಂಜಮರಿಗೆ ಇರುವಂತೆ ಇವರಿಗೂ ಮಂದುಗಳ ರೀತಿ ದಲಿತ್ತೋ?

ಹಾಗೂ ಪೃಥ್ವಿಯ ಜನರನ್ನೆಲ್ಲಾ ಒಂದೇ ಜನಾಂಗವಾಗಿ, ಏಕಕುಟುಂಬವನ್ನಾಗಿ ಮಾಡಬೇಕೆಂದು ಮಹಾತ್ಮರು ಪ್ರಯತ್ನಪಡುವಲ್ಲಿ ಇದೊಂದು ವಿಭೇದಗಳನ್ನು ಹೆಚ್ಚಿಸುವ ಪ್ರಯತ್ನವಂತೆ! ಜಾನಪದನ್ನು ಎಂಬ ಪಂಡಿತನೆಂದಂತೆ ಜನರು ತಮಗಿಂತ ಮೇಲಿನ ತರಗತಿಯುವರನ್ನು ತಮ್ಮ ತರಗತಿಗೆ ಎಳೆಯಲಿಕ್ಕೆ ಬಹಳ ಆತುರಪಡುವರು; ಆದರೆ ಕೆಳಗಿನ ತರಗತಿಯುವರನ್ನು ತಮ್ಮ ತರಗತಿಗೆ ಸೇರುವದೆಂದರೆ ವಿಷಾದಪಡುತ್ತಾರೆ. ಇದಲ್ಲವೆ ಸ್ವಾರ್ಥಪರತೆ! ಇಂಥಾ ಅಜ್ಞಾನಪೀಡಿತ ಸ್ವಾರ್ಥಪರರು ತವು ಬೇರೆಯವರನ್ನು ದೂರೀಕರಿಸುವ ಬದಲು ತಾವೇ ತೊಲಗುವುದಲ್ಲವೆ ಲೇಸು? ಆದುದರಿಂದ ಮಾರ್ಗದಲ್ಲಿ ನಾಲಿಸಲಿದ್ದರೆ ಭಕ್ತಿ, ಭೂತದಯೆಗೆ ನೆಲೆಯಾದ ಭರತ ಭೂಮಿಯನ್ನು ಅವರು ತ್ಯಜಿಸಲಿ!

ಸ್ವಜನಪ್ರೀತ

ಅರಾಜಪೇಟೆ ನಾಡೋಕ್ಕಲ್ಲ ಅಮ್ಮತ್ತಿ

ನಾಡಿಗಳ ಸೇರಿನ ಓಟರುಗಳೆಲ್ಲಾ ತಮ್ಮ

ಓಟನ್ನು ದಯವಿಟ್ಟು

ಎಸ್. ಎಂ. ಪಿಂಟೊ

ರವರಿಗೆ ಕೊಡಲು

ಎಂದಿಗೂ ಮರೆ

ತು ಬಿಡಬೇಡಿರಿ.

“ಪ್ರಕಟಣೆ”

[2—1]

ಆರೋಗ್ಯ ಚಂದ್ರಿಕೆ.

ಇದು ಪ್ರಜಾಕ್ಷೇಮಕ್ಕಾಗಿ ಆರೋಗ್ಯಮಾರ್ಗವನ್ನೂ ಶುಚಿತ್ವವನ್ನೂ ಬೋಧಿಸುವ ಒಂದು ಮಾಸಪತ್ರಿಕೆ. ಇದರ ಸಂಪಾದಕರು ಮದ್ರಾಸಿನಲ್ಲಿ ಪ್ರಸಿದ್ಧರಾದ ಡಾಕ್ಟರ್ ಯು. ರಾಮರಾವ್ ಎಮ್. ಎಲ್. ಸಿ. ಯವರು. ಇದರಲ್ಲಿ ಅನೇಕ ಪ್ರಸಿದ್ಧ ಡಾಕ್ಟರುಗಳ ಮತ್ತು ಆಯುರ್ವೇದ ಪಂಡಿತರುಗಳ ಲೇಖನಗಳು ಆಗಿಂದಾಗ ಪ್ರಕಟವಾಗುವವು.

ಟಪಾಲುಹಾಸಲು ಸೇರಿ ಈ ಪತ್ರಿಕೆಯ ವಾರ್ಷಿಕ ಚಂದ 1—8—0 ರೂ. ಮಾತ್ರ. ಬಿಡಿ ಪತ್ರಿಕೆ ಒಂದಕ್ಕೆ 0—2— ಆಣೆ

ಏಜೆಂಟರು —
ಮ|| ರಾ|| ಎಸ್. ಕೆ.
ಈಶ್ವರಪ್ಪ,
ನಾಗಮಂಗಲ,
ಕೊಡಗು.

ವಿಳಾಸ :—
ಮೇನೇಜರ್,
ಆರೋಗ್ಯಚಂದ್ರಿಕೆ ಆಫೀಸು,
323, ತಂಬುಚೆಟ್ಟಿಬೀದಿ,
ಮದ್ರಾಸು

[12—3]

ಪೊನ್ನಂಪೇಟೆ ಶ್ರೀಮಂಗಲನಾಡಿನ ಜಮ್ಮದ

ಓಟರುಗಳು ತಮಗಿರುವ ಮೂರು

ಓಟರುಗಳ ಪೈಕಿ ಒಂದನ್ನು

ದಯವಿಟ್ಟು

ಮನೆಯಪಂಡ

ಚಿಣ್ಣಪ್ಪನವರಿಗೆ

ಕೊಡಿರಿ.

“ಪ್ರಕಟಣೆ”

[2—2]

ಸುಲಭದ ರೀತಿ! ಲಾಭದ ದಾರಿ!!

ರೇಶ್ಮೆ ಸೀರೆಗಳನ್ನೂ, ವಸ್ತ್ರಗಳನ್ನೂ, ಬನಾರಸ್ ಶಾಲು ಕಲಾಬತ್ತು, ಕೊಡಾವಾರ್. ಸೊಂಟಕ್ಕೆ ಕಟ್ಟುವ ರೇಶ್ಮೆ ಪಟ್ಟಿ, ತಲೆಗೆ ಕಟ್ಟುವ ವಸ್ತ್ರ, ಕೈವಸ್ತ್ರ, ಮುಂತಾದವುಗಳಿಗೆ ಬಣ್ಣ ಕೊಟ್ಟು ಕಂಬ ವಗೈರೆಯಿಂದ ಹಳೇದನ್ನು ಹೊಸತಾಗಿ ತಯಾರಿಸುತ್ತೇವೆ. ಎಲ್ಲಾ ರೇಶ್ಮೆ ಬಟ್ಟೆಗೆ ಅವರವರ ಇಷ್ಟದಂತೆ ಬಣ್ಣ ಕೊಡಲು ತಯಾರಿದ್ದೇವೆ. ಹೊದಿಕೆ ಬಿಳೇ ಬಟ್ಟೆಗಳಿಗೆ ಗುಲಾಬಿ ಮತ್ತು ಕಪ್ಪು ಬಣ್ಣ ಕೊಡುತ್ತೇವೆ. ಮೋಟ್ಟಿನ ಬಣ್ಣಗಳು ಜಾತ್ರೆಯಾದರ್ದಾಗಿರುತ್ತೆ. ಕಲಾಬತ್ತು ಸೀರೆ ವಗೈರೆಗಳನ್ನು ವಾಷ್ (ಕ್ಲೀನ್) ಮಾಡಲಿಕ್ಕೂ ಚೆನ್ನಾಗಿ ಗೊತ್ತಿದೆ. ಮಡಿಕೇರಿಯಲ್ಲಿರುವ ಅನೇಕರ ಹಳೇ ಬಟ್ಟೆಗಳಿಗೆ ಬಣ್ಣ ಕೊಟ್ಟು ಹೊಸತಾಗಿ ಮಾಡಿಕೊಟ್ಟಿರುತ್ತೇವೆ.

ಚಾರ್ಜುಗಳು

ಸೀರೆಗಳಿಗೆ		ಶಾಲು ಚೌಕಗಳಿಗೆ	
1 ನೇ ನಂಬರ್	5—0—0	1 ನೇ ನಂಬರ್	1—8—0
2 ನೇ ನಂಬರ	4—8—0	2 ನೇ ನಂಬರ್	1—4—0
3 ನೇ ನಂಬರ್	4—0—0	3 ನೇ ನಂಬರ್	1—0—0

ಹೆಚ್ಚಿನ ಸಂಗತಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಪಿ. ಯಂ. ಮುರುಗೇಶನೊಡ್ಡಿಯಾರ್,

(ಕ್ಲಾತ್ ಮತ್ತು ಡೈಯಿಂಗ್ ವ್ಯಾಪಾರಿ)

[4—4] ಗೌಳಿಬೀದಿ, ಮಡಿಕೇರಿ, ಕೊಡಗು.

ವೀರಾಜಪೇಟೆ ನಾಡೋಕ್ಕಲ್ಲ ಅಮ್ಮತ್ತಿ

ನಾಡುಗಳ ಜಮ್ಮದ ಓಟರುಗಳೆಲ್ಲಾ

ತಮಗಿರುವ ಮೂರು ಓಟುಗಳಲ್ಲಿ

ಒಂದನ್ನು ದಯವಿಟ್ಟು

ಕೋಳುಮಂಡ ತಿಮ್ಮಯ್ಯನವರಿಗೆ

ಕೊಡಲು ನೆನಪಿಡಿರಿ.

“ಪ್ರಕಟಣೆ”

[2—1]

HEALTH IS WEALTH.

WANTED all to improve health strength and vitality and thus save our nation from physical degeneracy. Send half-anna stamp and get 13 specimen photographs with full particulars from

Director Physical Culture,

P.O. Basavanagudi,

BANGALORE CITY.

ಪೊನ್ನಂಪೇಟೆ ಶ್ರೀಮಂಗಲ ನಾಡಿನ ಜಿಲ್ಲೆಯ
ಓಟರುಗಳು ತಮಗಿರುವ ಮೂರು
ಓಟುಗಳ ಪೈಕಿ ಒಂದನ್ನು
ದಯವಿಟ್ಟು

ಪಾರ್ವಂಗಡ ಕೇಶವ
ಅಪ್ಪನವರಿಗೆ
ಕೊಡಲು ಖಂಡಿತ
ಮರೆಯಬೇಡಿರಿ.

"ಪ್ರಕಟಣೆ"

ಮಡಿಕೇರಿ ತಾಲೋಕಿನ ಸಾಗಿನ
ಓಟರುಗಳೆಲ್ಲಾ
ಭಾಗಮಂಡ್ಲ
ಶ್ರೀಪತಿ ರಾಯರಿಗೆ
ಓಟು ಕೊಡಿರಿ.

"ಪ್ರಕಟಣೆ"

[3—3]

ಜೀವವಿಮೆ

ಸಾವಿರಾರು ಕುಟುಂಬಗಳಲ್ಲಿ ಸಂಪಾದನೆಯ ಯಜಮಾನನು ಮೃತಪಟ್ಟರೆ ಉಂಟಾಗಬಹುದಾದ ತೊಂದರೆಗಳನ್ನು ನಿವಾರಿಸುವುದೇ ಜೀವವಿಮೆ.

ವೃದ್ಧಾಪ್ಯಕಾಲದಲ್ಲಿ ಮತ್ತು ಕುಟುಂಬದ ಜೀವನಾಧಾರಕ್ಕೆ ಸೌಕರ್ಯವನ್ನು ಒದಗಿಸುವುದೇ ಜೀವವಿಮೆ.

ಅತಿ ಕಡಮೆ ದರದಲ್ಲಿ ಯಾವ ಲೋಪವೂ ಬಾರದಂತೆ ಕ್ಷಿಪ್ರದಲ್ಲಿ ಹಣವನ್ನು ಒದಗಿಸುವ ಸಂಸ್ಥೆಯಾದರೂ ಮೈಸೂರಿನ ಸರಕಾರದ ಭದ್ರತೆಯುಳ್ಳ ಜೀವವಿಮೆ ಕಂಪೆನಿ

ಬದುಕಿರುವಾಗಲೇ ಕುಟುಂಬದ ಜೀವನಾಧಾರಕ್ಕೆ ಸಾಲವಾಗಿ ಹಣವನ್ನು ಒದಗಿಸಿ ಸ್ವಿರಾಸ್ತಿಗಳನ್ನೂ ಕೊಂಡುಕಟ್ಟಿ ದೇಶದ ಆರ್ಥಿಕ ಸಂಪತ್ತನ್ನು (Economic Condition) ವೃದ್ಧಿಗೊಳಿಸುವ ಸಂಸ್ಥೆಯಾದರೂ ಇದೊಂದೆ!

ಲೈಫ್ ಇನ್ಶೂರೆನ್ಸ್ ಆಕ್ಟಿನ ಮೇರೆ ಇಂಡಿಯಾ ಗವರ್ನಮೆಂಟ ಸೆಕ್ಯೂರಿಟಿಗಾಗಿ ಸಲ್ಲಬೇಕಾದ 12 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಗೆ ಸಲ್ಲಬೇಕಾದ 1 ಲಕ್ಷ ರೂಪಾಯಿ ಸೆಕ್ಯೂರಿಟಿಗಾಗಿಯೂ ಇಂಪೀರಿಯಲ್ ಬ್ಯಾಂಕ ಆಫ್ ಇಂಡಿಯಾ ಬ್ಯಾಂಕಿನ ಮದ್ರಾಸಿನ ಶಾಖೆಯಲ್ಲು 1 ಲಕ್ಷ ಗವರ್ನಮೆಂಟ್ ಆಫ್ ಇಂಡಿಯ ಸೆಕ್ಯೂರಿಟಿಯನ್ನು ಅರ್ಧಲಕ್ಷ ಮೈಸೂರು ಸೆಕ್ಯೂರಿಟಿಯನ್ನು ಡಿಪಾಜಿಟ್ಟಾಗಿ ಇಟ್ಟಿದೆ. ಬಾಕಿ ಒಂದು ಲಕ್ಷ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗೆ ಬ್ಯಾಂಕ್ ಮೂಲಕ ಏರ್ಪಾಡು ಮಾಡಿರುತ್ತೆ.

ಬಿ. ಎಸ್. ಅರಾಧ್ಯ,
ಲೈಫ್ ಅಂಡ್ ಪ್ರಾಪರ್ಟೀಜ್ ಆಫೀಸ್ ಮಡಿಕೇರಿ.

ಪ್ರಸಿದ್ಧ ಪತ್ರಿಕೆ.

ಇದೇ ಬರುವ ಜನವರಿ ತಿಂಗಳ 18 ನೇ ಶುಕ್ರವಾರದಿನ ಮಡಿಕೇರಿ ಕೋಟೆಯಲ್ಲಿ ಶಿಶುಗಳ ಪ್ರದರ್ಶನ (BABY SHOW) ಒಂದು ನಡೆಯಲಿರುತ್ತೆ. ಒಂದು ತಿಂಗಳಿಂದ ಮೂರು ವರುಷಗಳ ಪ್ರಾಯದ ಒಳಗೆ ಇರುವ ಶಿಶುಗಳ ಪೈಕಿ ಅರ್ಹರಾದವರಿಗೆ ಇನಾಮುಗಳನ್ನು ಕೊಡೋಣವಾಗುತ್ತೆ. ಪ್ರದರ್ಶನದಲ್ಲಿ ಉಪನ್ಯಾಸಗಳು, ಮ್ಯಾಜಿಕ್ ಲ್ಯಾಂಟ್ರನ್, ಇನ್ನೂ ಅನೇಕ ತರದ ವಿನೋದಗಳು ನಡೆಸಲ್ಪಡುತ್ತವೆ. ಎಲ್ಲರೂ ತಮ್ಮ ಶಿಶುಗಳ ಸಮೇತ ಪ್ರದರ್ಶನಕ್ಕೆ ಬರಬೇಕಾಗಿ ಕೇಳಿಕೊಳ್ಳೋಣವಾಗಿದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಪ್ರದರ್ಶನದ ಗೌರವ ಕಾರ್ಯದರ್ಶಿಯವರಿಗೆ ಮಡಿಕೇರಿಗೆ ಬರೆದು ತಿಳಿದುಕೊಳ್ಳಬಹುದು.

ತಾರೀಕು 13-12-23. A. B. Cariappa,
[3—2] ಗೌರವ ಕಾರ್ಯದರ್ಶಿ.

For your requirements of high grade Arms, Ammunition, Wine and Spirits,

APPLY TO:-

Mc. DOWELL & Co., Ltd.,

24—10 **MERCARA.**

ಶರೀರ ವ್ಯಾಯಾಮ.

ಬೆಂಗಳೂರು ಸಿಟಿ.

ಸಂಪಾದಕರು:—ಪ್ರೊಫೆಸರ್ ಎಸ್. ವಿ. ಕೃಷ್ಣರಾಯರು ಡೈರೆಕ್ಟರ್ ಫಿಜಿಕಲ್ ಕಲ್ಚರ್ ಇನ್‌ಸ್ಟಿಟ್ಯೂಟ್, ಬೆಂಗಳೂರು.

ಉತ್ತಮ ತರದ ಕನ್ನಡ ಮಾಸಪತ್ರಿಕೆ.

ಕರ್ನಾಟಕ ಜನಸಾಮಾನ್ಯಕ್ಕೆ ಸುಲಭವಾಗಿ ತಿಳಿಯುವ ಹಾಗೆ ಈ ಮಾಸಪತ್ರಿಕೆಯಲ್ಲಿ, ದೇಹಾರೋಗ್ಯ ವಿಚಾರ ವ್ಯಾಯಾಮ ಕ್ರಮ, ಮತ್ತು ಆರೋಗ್ಯ ಶಾಸ್ತ್ರಗಳೂ, ಔಷಧಗಳಿಲ್ಲದ ಚಿಕಿತ್ಸೆ ಮುಂತಾದ ಅನೇಕ ಉಪಯುಕ್ತವಾದ ವಿಷಯಗಳು ಗರ್ಭೀಕರಿಸಲ್ಪಟ್ಟಿರುತ್ತವೆ.

ಶಾರೀರಕ, ಮಾನಸಿಕ ಮತ್ತು ಆರೋಗ್ಯ ಸಂಪತ್ತನ್ನು ಹೊಂದಬೇಕೆಂಬ ಆಸೆಯುಳ್ಳ ಪ್ರತಿಯೊಬ್ಬ ಮಾನವನೂ ಓದಬೇಕಾದ ಉತ್ತಮತರದ ಮಾಸಪತ್ರಿಕೆ. ಅಂಚೆಕೂಲಿ ಸೇರಿ ಈ ಪತ್ರಿಕೆಯ ವಾರ್ಷಿಕ ಚಂದಾ ೧-೮-೦ ಬಿಡಿಪತ್ರಿಕೆ ೦-೨-೦ ಮೊದಲನೆಯ ಸಂಚಿಕೆಯು ಇದೇ ಡಿಸೆಂಬರ ತಿಂಗಳು ೧ ನೇ ತಾರೀಖು ಹೊರಟಿದೆ. ಮುಂದಿನ ಸಂಚಿಕೆಗಳು ಪ್ರತಿ ತಿಂಗಳ ೧ ನೇ ತಾರೀಖಿನ ಲ್ಲಿ ಪ್ರಕಟವಾಗುತ್ತವೆ.

ಸೂಚನೆ:—ಚಂದಾದಾರರಾಗುವವರು ವಿ. ಪಿ. ಮೂಲಕವಾಗಿ ತರಿಸಿಕೊಳ್ಳುವುದಕ್ಕಿಂತಲೂ ಹಣವನ್ನು ಮುಂಗಡವಾಗಿ ಕಳುಹಿಸುವುದು ಲಾಭಕರ.

ಅಡ್ರೆಸ್:—ಎಡಿಟರ್ "ಶರೀರ ವ್ಯಾಯಾಮ"
ಪಿ. ಓ. ಬಸವನಗುಡಿ
[4—4] ಬೆಂಗಳೂರು ಸಿಟಿ

ಪ್ರಾಸ್ಪೆಕ್ಟಸ್.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

	ರೂ
ಶೇರ್ ಬಂಡವಾಳ	50 000
ವಸೂಲಾದ ಶೇರ್ ಮೊಬಲಗು	6 870
ಜಮಾ ಬಂದ ಠೇವಣಾತಿ	30 849

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಚೆನ್ನಾಗಿ ಸಾಲ ಕೊಡತಕ್ಕದ್ದು.

ಒಂದು ವರುಷ ವಾಯಿದೆ ಅಥವಾ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲ್ಕೂವರೆಯಷ್ಟು ಬಡ್ಡಿ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲ್ಕರಿಂದ 5 ರ ಬಡ್ಡಿ ದೊರೆಯುತ್ತೆ.

ಡೆಪ್ಯೂಟಿ ರಿಜಿಸ್ಟ್ರಾರ್ ಕೋ ಆಪರೇಟಿವ್ ಸೊಸೈಟೀಸ್ ರವರು ಬ್ಯಾಂಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು ಡೈರೆಕ್ಟರ್.
ಕೊಡಂದೆರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್ ಬಿ. ಎ. ಬಿ. ಎಲ್.

ಸೆಕ್ರೆಟರಿ
ಸಿ. ಯಮ್. ವೆಂಕಪ್ಪಯ್ಯನವರು ಬಿ. ಎ. ಬಿ. ಎಲ್.
ತಾರೀಕು 1—9—23.

ಪಾಕೆಟ್ ಡೈರಿ ಉಚಿತ.



ಈ ಪೆನ್ನಿನಲ್ಲಿ ಕಂಡ ಹೋಲ್ಡರ್ ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಬಂಗಾರದಂತ ಮುಳ್ಳು ಇರುವದು. ಈ ಪೇನಾವಿನಲ್ಲಿ ಬರೆಯುವುದರಿಂದ ಅಕ್ಷರಗಳು ಹೆಚ್ಚು ಕಡಿಮೆಯಿಲ್ಲದೆ ಮುದ್ದಾಗಿ ಬರೆಯುವದು. ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಹೊಸ ವರುಷದ ಪಾಕೆಟ್ ಡೈರಿ ಒಂದನ್ನು ಇನಾಮಾಗಿ ಕೊಡುವೆವು.

ಕ್ರಯ ಡೈರಿ ಸಹಿತ ಪೇನಾ 1 ಕ್ಕೆ 1—12—0

ಜರ್ಮನ್ ಅಲಾರಂ ಟೈಂಪೀಸ್‌ಗಳು.



ಈ ಗಡಿಯಾರಗಳು ಜರ್ಮನ್ ದೇಶದಲ್ಲಿ ತಯಾರಾದವು. ಮೇಲುಗಡೆ ಬೆಳ್ಳಿಯಂತಿರುವ ನುಣ್ಣಗೆ ಕವಚವುಳ್ಳವು. ಎಂದಿಗೂ ಕಪ್ಪಾಗದು. ಸರಿಯಾದ ಗಂಟೆಯನ್ನು ತೋರಿಸುವದು. ಗಡಿಯಾರದ ಎತ್ತರವು 7 ಅಂಗುಲ ಇರುವದು ಮತ್ತು ಗಂಟೆಯನ್ನು ಸಹ ಬಾರಿಸುವದು. ಬಹು ದೂರದವರೆಗೆ ಗಂಟೆಯನ್ನು ಕೇಳಬಹುದು. ಅಂಗಡಿ, ಸ್ಕೂಲು, ಮನೆ, ಗುಡಿಗಳಲ್ಲಿ ಇಡಲು ಬಹು ಚೆನ್ನಾಗಿರುವದು. ಇದಕ್ಕಿಂತ ಮುಂಚಿತವಾಗಿ ಈ ಮಾದರಿ ಗಡಿಯಾರಗಳು ಮಾರಾಟಕ್ಕೆ ಬಂದಿಲ್ಲ. ಇವಕ್ಕೆ 3 ವರುಷಗಳ ಗ್ಯಾರಂಟಿ ಇದೆ.

ಕ್ರಯ 1 ಕ್ಕೆ 5—0—0 ರೂಪಾಯಿ.
ಅಲಾರಂ ಇಲ್ಲದ "ಬೀ" ಟೈಂಪೀಸ್ 3—8—0 ರೂ

ವಿಳಾಸ.—ಎಸ್. ಆರ್. ಕೃಷ್ಣ ಅಂಡ್ ಕೊ.,
ನಂ. 1 ತಂಬುನಾರಾಯಣಕನಬೀದಿ,
[4—2] ಮದರಾಸು.

ಶ್ರೀ ಕಾವೇರ್ಯೈ ನಮಃ
ಕೊಡಗು ನ್ಯಾಯವಿಧಾಯಕ ಸಭೆಗೆ ಮೆಂಬರುಗಳ ಚುನಾವಣೆ.

ಭಾಗಮಂಡ್ಲ ಶ್ರೀಪತಿರಾಯನ ವಿನಂತಿ.

ಮಹನೀಯರೇ,

ನಾನು ಮಡಿಕೇರಿ ತಾಲೋಕು ಸಾಗು ಪರವಾಗಿ ನ್ಯಾಯವಿಧಾಯಕ ಸಭೆಗೆ ಉಮೇದ್ವಾರನಾಗಿ ನಿಂತಿರುವದು ಈ ಮೊದಲೇ ನಿಮಗೆ ಗೊತ್ತಿರಬಹುದು. ಮಡಿಕೇರಿ ತಾಲೋಕು ಸಾಗು ಯಾ ಜಮ್ಮೇತರರ ಪರವಾಗಿ ಒಬ್ಬ ಪ್ರತಿನಿಧಿಯು ಚುನಾಯಿಸಲ್ಪಡುವನು. ನಿಮ್ಮಲ್ಲಿ ಪ್ರತಿ ಒಬ್ಬ ಸಾಗು ಓಟುದಾರನಿಗೂ ಒಂದು ಓಟು ಮಾತ್ರ ಕೊಡುವ ಹಕ್ಕಿರುವದು. ಅದನ್ನು ನನಗೆ ಕೊಡಬೇಕಾಗಿ ವಿನಯದಿಂದ ಪ್ರಾರ್ಥಿಸುತ್ತೇನೆ.

ನಾನು ಅನೇಕ ವರ್ಷಗಳಿಂದಲೂ ದೇಶಸೇವೆಯೇ ಈಶಸೇವೆಯೆಂದೆಣಿಸಿ ಕಾರ್ಯಕ್ಷೇತ್ರದಲ್ಲಿ ನಿರತನಾಗಿ ವರ್ತಕರ ಸಂಘದ ಮೂಲಕ ಸುಧಾರಣೆಯ ವಿಚಾರದಲ್ಲಿ ಇಂಡಿಯಾ ಸ್ಟೇಟ್ ಸೆಕ್ರಟರಿಯವರಲ್ಲಿಯೂ ಸ್ಥಳೀಯ ಸರಕಾರದವರಲ್ಲಿಯೂ ತುಂಬಾ ವಾದವನ್ನು ಮಾಡಿರುತ್ತೇನೆ. ಮಾಲಿಂಪಿ ಫಾರೆಸ್ಟ್ ಕಮಿಟಿಯ ಮೆಂಬರನಾಗಿ ಕಮಿಟಿಯವರ ಶೋಧನೆಯಿಂದ ಬಾಣೆ ಒಪ್ಪೋಟಿಯಿಂದ ಫಾರೆಸ್ಟ್ ಇಲಾಖೆಯವರಿಂದ ರೈತರಿಗೆ ಉಂಟಾಗುತ್ತಿದ್ದ ಕಷ್ಟಗಳು ತಕ್ಕಮಟ್ಟಿಗೆ ಪರಿಹಾರವಾಗಿರುವೆ. ಯಾಲದ ಮಲೆಗಳ 7 ವರ್ಷದ ಅವಧಿಯನ್ನು 21 ಹೆಚ್ಚಿಸುವದಕ್ಕೆ ಕೆಲವು ವರ್ಷಗಳ ಹಿಂದೆ ನಾನು ಪಟ್ಟ ಪ್ರಯತ್ನಗಳು ತಮಗೆ ತಿಳಿದಿರಬಹುದು. ಈಚೆಗೆ ಗದ್ದೆಗಳ ಕಂದಾಯ ಮಾಫಿ ಯಾಗುವ ಬಗ್ಗೆ ... ಕಡೆಯಿಂದ ನಾನು ಮಾಡಿದ ಪ್ರಯತ್ನದ ಫಲವನ್ನು ... ವೆಲ್ಲರೂ ಅನುಭವಿಸುತ್ತಿರುವದರಿಂದ ಇದನ್ನು ಪ್ರತ್ಯೇಕವಾಗಿ ವಿವರಿಸುವದಿಲ್ಲ. ಈಗಲೂ ಸಂದರ್ಭ ದೊರೆತಂತೆ ದೇಶ... ... ತೀರುವ ... ಕೆಲಸಗಳ ... ಯೋಗ್ಯನಾಗಿ ತಿಳಿದವನು. ದೇಶೀಯನಾಗಿ ಹಳ್ಳಿಯಲ್ಲಿದ್ದು ರೈತರ ... ದುಃಖದ ಅನುಭವವೂ ನನಗಿರುವುದರಿಂದ ... ಗಿರುತ್ತೇನೆ.

ನೀವುಗಳು ದಯವಿಟ್ಟು ಓಟು ಕೊಟ್ಟು ನನ್ನನ್ನು ನಾಯಿಸಿದರೆ ನನ್ನ ಎಲ್ಲಾ ವಿಧದ ಹಕ್ಕು ಮತ್ತು ಸ್ವಾತಂತ್ರ್ಯ ಅಭಿವೃದ್ಧಿಯಾಗುವಂತೆಯೂ ನಮ್ಮೊಳಗಿರುವ ಜಾತಿ ಭೇದಗಳನ್ನು ಹೋಗಲಾಡಿಸಿ ಸಹೋದರಭಾವದಿಂದ ಸಮುದಾಯಾಭಿವೃದ್ಧಿಯಾಗುವಂತೆಯೂ, ... ಪ್ರಾಂತ್ಯಗಳಿಗೆ ದೊರೆತಿರುವ ಸುಧಾರಣೆಯು ಅದಷ್ಟು ಬೇಗನೇ ನಮಗೂ ದೊರಕುವಂತೆಯೂ ಎಲ್ಲಾ ವಿಧವಾದ ... ಯವಾದ ರೀತಿಯಲ್ಲಿ ಹೊಸ ಕೊಡಗು ಕೌನ್ಸಿಲಿನಲ್ಲಿ ಕೆಲಸ ಮಾಡಲು ದೀಕ್ಷೆಯನ್ನು ಕೈಗೊಳ್ಳುವೆನು.

ಇತಿ ನಿಮ್ಮ ಸೇವಾತುರ,
[4—3] ಭಾಗಮಂಡ್ಲ ಶ್ರೀಪತಿರಾವ್

Printed & Published by D. S. Krishnaswami Iyengar Proprietor, at Sreenivas Electric Press, Mysore "for Kodagu" Ltd., Mercara—4-1-1924.